k. Lit.

ಪೊನ್ನಕವಿ ವಿರಚಿತ

ಶಾಂತಿಪುರಾಣಂ

120

ಗದ್ಯಾನುವಾದ

ಹಂಪ. ನಾಗರಾಜಯ್ಯ

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ : : ಬೆಂಗಳೂರು – ೫೬೦ ೦೧೮
೧೯೮೨

2nd copy from MHR

ಪಂಚವಾರ್ಷಿಕ ಯೋಜನೆಯ ಪುಸ್ತಕಮಾಲೆ

ಪೊನ್ನಕವಿ ವಿರಚಿತ

ಶಾಂತಿಪುರಾಣಂ

ಗದ್ಯಾನುವಾದ
ಹಂಪ. ನಾಗರಾಜಯ್ಯ

ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ : : ಬೆಂಗಳೂರು – ೫೬೦ ೦೧೮
೧೯೮೨

SaantipuraaNam, Poet Ponna, original text with prose rendering in kannada by hampa. naagaraajayya; Published by Kannada Saahitya Parisat, chamarajapet, Bangalore-18; Size : Crown 1/4; Pages : ೦-೯೯ + 1-554; Price : Rs. 50-00

ಮೊದಲ ಮುದ್ರಣ
1982

ಬೆಲೆ
ಐವತ್ತು ರೂಪಾಯಿಗಳು

ಪ್ರಕಾಶಕರು
ಕನ್ನಡ ಸಾಹಿತ್ಯ ಪರಿಷತ್ತು

ಮುದ್ರಕರು
ರವಿ ಪ್ರಿಂಟರ್ಸ್, ರಾ'ನಗರ, ಬೆಂಗಳೂರು

ಪರಿವಿಡಿ

ಅನುವಾದದ ಯೋಜನೆ

ಕನ್ನಡದ ಪ್ರಾಚೀನ ಕಾವ್ಯಸಂಪತ್ತು ಅಮೂಲ್ಯವಾಗಿದೆ. ಈ ಸಂಪತ್ತನ್ನು ಈಗಿನ ಕನ್ನಡ ಜನತೆ ಓದಿ ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಆದರೆ ಈ ಕಾವ್ಯಗಳು ಜನಸಾಮಾನ್ಯರಿಗೆ ಕಠಿಣವಾಗಿ ತೋರುವುದರಿಂದ ಇವುಗಳ ವ್ಯಾಸಂಗದಲ್ಲಿ ಉತ್ಸಾಹಪೂರ್ಣವಾದ ಪ್ರವೃತ್ತಿ ಕಂಡುಬರುತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಮೂಲಗ್ರಂಥಗಳೂ ದೊರೆಯುವುದಿಲ್ಲ. ಎಷ್ಟೋವೇಳೆ ವಿಶ್ವವಿದ್ಯಾನಿಲಯದವರು ಪ್ರಾಚೀನ ಕಾವ್ಯಗಳನ್ನು ಕನ್ನಡ ಬಿ.ಎ., ಎಂ.ಎ. ಪದವಿ ಪರೀಕ್ಷೆಗಳಿಗೆ ಪಠ್ಯಪುಸ್ತಕಗಳಾಗಿ ಇಟ್ಟಾಗಲಂತು ಮೂಲಗ್ರಂಥಗಳ ಅಭಾವ ವಿಶೇಷವಾಗಿ ಕಂಡುಬರುತ್ತದೆ.

ಆದ್ದರಿಂದ ಈ ಕೊರತೆಯನ್ನು ನಿವಾರಣೆ ಮಾಡಲು ಕನ್ನಡ ಸಾಹಿತ್ಯ ಪರಿಷತ್ತು ತನ್ನ ಪಂಚವಾರ್ಷಿಕ ಯೋಜನೆಯಲ್ಲಿ ಹಳಗನ್ನಡ ಕಾವ್ಯಗಳ ಪುನರ್ಮುದ್ರಣಕ್ಕೆ ವಿಶೇಷ ಗಮನಹರಿಸಿ ಅದಕ್ಕಾಗಿ ಪ್ರತ್ಯೇಕ ಯೋಜನೆಯನ್ನು ಹಾಕಿಕೊಂಡಿತು. ಆರಿಸಿದ ಹಳಗನ್ನಡ ಹಾಗೂ ನಡುಗನ್ನಡ ಕಾವ್ಯಗಳನ್ನ ಹೊಸಗನ್ನಡ ಗದ್ಯದಲ್ಲಿ ಅನುವಾದಿಸಿ ಆ ಅನುವಾದದೊಡನೆ ಮೂಲಪಾಠವನ್ನು ಪ್ರಕಟಿಸಿ ಪುಸ್ತಕರೂಪದಲ್ಲಿ ಹೊರತರುವುದು ಮತ್ತು ಸರಕಾರದ ಸಹಾಯ ಪಡೆದು ಆ ಪುಸ್ತಕಗಳು ಸಾಧ್ಯವಾದ ಮಟ್ಟಿಗೆ ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡುವುದು—ಇವು ಆ ಯೋಜನೆಯ ಮುಖ್ಯಾಂಶಗಳು.

೧. ಭಾರತೀಯ ಜ್ಞಾನಪೀಠದವರು, ವಿಶ್ವವಿದ್ಯಾನಿಲಯದವರು, ಖಾಸಗಿ ಪ್ರಕಾಶಕರು ಪರಿಷತ್ತಿನ ಉದ್ದೇಶದಂತೆ ಈಗಾಗಲೆ ಕನ್ನಡ ಕಾವ್ಯಗಳನ್ನು ಅನುವಾದ ಮಾಡಲು ಕಾರ್ಯ ಕೈಗೊಂಡಿದ್ದಾರೆ. ಅಂಥ ಕಾವ್ಯಗಳನ್ನು ಪರಿಷತ್ತು ಅನುವಾದಕ್ಕೆ ತೆಗೆದುಕೊಳ್ಳಬೇಕಾಗಿಲ್ಲ.

೨. ಅಗತ್ಯ ಕಂಡ ಕಡೆ ಮೂಲವನ್ನು ಪರಿಷ್ಕರಿಸಿ ಅನುವಾದವನ್ನು ಕೈಗೊಳ್ಳತಕ್ಕದ್ದು.

೩. ಈ ಕೆಳಗೆ ಕಾಣಿಸಿದ ಹಳಗನ್ನಡ ಮತ್ತು ನಡುಗನ್ನಡ ಕಾವ್ಯಗಳನ್ನು ಸದ್ಯದಲ್ಲಿ ಅನುವಾದಕ್ಕೆ ಆರಿಸಿಕೊಳ್ಳತಕ್ಕದ್ದು:

ಹಳಗನ್ನಡ : ವಿಕ್ರಮಾರ್ಜುನ ವಿಜಯ, ಆದಿಪುರಾಣ, ಗದಾಯುದ್ಧ, ನೇಮಿನಾಥಪುರಾಣ (೧. ಕರ್ಣ ಪಾರ್ಯ, ೨. ನೇಮಿಚಂದ್ರ), ಯಶೋಧರ ಚರಿತೆ, ಅನಂತನಾಥಪುರಾಣ, ಧರ್ಮಾಮೃತ, ಕಾದಂಬರಿ, ಪಂಚತಂತ್ರ, ನಳಚಂಪು, ವಡ್ಡಾರಾಧನೆ, ಗಿರಿಜಾಕಲ್ಯಾಣ, ಜಗನ್ನಾಥ ವಿಜಯ, ಕಬ್ಬಿಗರ ಕಾವ, ಶಬರಶಂಕರ ವಿಳಾಸ, ಹರಿಹರನ ರಗಳೆಗಳು, ಕೆಳದಿ ನೃಪವಿಜಯ, ದಮಯಂತೀ ಸ್ವಯಂವರ, ಶಾಂತಿಪುರಾಣ, ಚಂದ್ರಪ್ರಭ ಪುರಾಣ, ಉದ್ಭಟಕಾವ್ಯಂ, ಕುಸುಮಾವಳಿ ಕಾವ್ಯ, ಅಭಿನವ ದಶಕುಮಾರ ಚರಿತೆ, ಮಲ್ಲಿನಾಥಪುರಾಣ, ರಾಜಶೇಖರ ವಿಳಾಸ, ಚಿಕ್ಕದೇವರಾಜ ವಂಶಾವಳಿ, ದಿವ್ಯಸೂರಿ ಚರಿತೆ.

ನಡುಗನ್ನಡ : ಸಿದ್ಧರಾಮಚಾರಿತ್ರ, ಬಸವಪುರಾಣ, ಪ್ರಭುಲಿಂಗಲೀಲೆ, ತೊರವೆ ರಾಮಾಯಣ, ರಾಮನಾಥ ಚರಿತೆ, ಭರತೇಶ ವೈಭವ, ಅನುಭವಾಮೃತ, ಗೀತಗೋಪಾಲ, ಹದಿಬದೆಯ ಧರ್ಮ, ನಳಚರಿತ್ರೆ,

ಅದ್ಭುತರಾಮಾಯಣ, ಚನ್ನಬಸವಪುರಾಣ, ಭಾಗವತ, ಹರಿಕಥಾಮೃತಸಾರ, ಭಿಕ್ಷಾಟನ ಚರಿತೆ, ಮೋಹನತರಂಗಿಣಿ.

ಅ. ಒಬ್ಬೊಬ್ಬ ಅನುವಾದಕನಿಗೆ ಒಂದೊಂದು ಕಾವ್ಯವನ್ನು ಪೂರ್ತಿಯಾಗಿ ಅನುವಾದಿಸುವ ಕಾರ್ಯವನ್ನು ವಹಿಸಿಕೊಡಬೇಕು. ವಿಶೇಷ ಸಂದರ್ಭದಲ್ಲಿ ಒಂದು ಪುಸ್ತಕವನ್ನು ಇಬ್ಬರು, ಮೂವರು ಅನುವಾದಕರಿಗೆ ವಹಿಸಿಕೊಡಬಹುದು.

ಆ. ಅನುವಾದದಲ್ಲಿ ಏಕರೂಪತೆ ಇರಬೇಕು. ಮಧ್ಯದಲ್ಲಿ ವಿಚ್ಛಿನ್ನತೆ ಕಾಣಬಾರದು, ಕಥೆಯಂತೆ ಓದಿಸಿ ಕೊಂಡು ಹೋಗಬೇಕು.

ಇ. ಅನುವಾದವು ಆಧುನಿಕರಿಗೆ ಪ್ರಿಯವಾಗುವ ಹೊಸಗನ್ನಡ ಗದ್ಯದಲ್ಲಿ ಇರಬೇಕು.

ಈ. ಭಾಷೆಯು ಸರಳವಾಗಿಯೂ ಶುದ್ಧವಾಗಿಯೂ ಇರಬೇಕು. ಅನುವಾದವು ಮೂಲದಿಂದ ದೂರ ಹೋಗಬಾರದು ಮತ್ತು ಮೂಲವನ್ನು ಬಿಡಲೂಬಾರದು.

ಉ. ಇದು ಪ್ರಾಚೀನ ಕಾವ್ಯಗಳ ಅನುವಾದವಾದ್ದರಿಂದ ವಿಷಯದ ಗಂಭೀರತೆ ಪವಿತ್ರತೆಗಳಿಗೆ ಅನುಗುಣವಾಗಿ ಭಾಷೆಯು ಲಲಿತ ಗಂಭೀರವಾಗಿ ಇರಬೇಕು.

ಊ. ಪ್ರತಿಯೊಬ್ಬ ಅನುವಾದಕನೂ ತಾನು ಅನುವಾದಿಸಿದ ಗ್ರಂಥಕ್ಕೆ ಒಂದು ಉಪೋದ್ಘಾತ, ಶಬ್ದಾರ್ಥಕೋಶ, ಅನುಬಂಧಗಳನ್ನು ತಯಾರಿಸಿಕೊಡಬೇಕು. ಉಪೋದ್ಘಾತದಲ್ಲಿ ಪ್ರಸ್ತುತ ಕವಿಯ ದೇಶ ಕಾಲಾದಿ ಪರಿಚಯ, ಪ್ರಸ್ತುತ ಕಾವ್ಯದ ವಿಮರ್ಶೆ ಮುಂತಾದವು ಸಂಕ್ಷೇಪವಾಗಿ ಇರಬೇಕು. ಕಾವ್ಯದಲ್ಲಿ ಬಂದಿರುವ ನ್ಯಾಯಗಳು, ಗಾದೆಗಳು, ಪೂರ್ವಕತೆಗಳು ಮುಂತಾದವುಗಳ ವಿವರಣೆ ಅನುಬಂಧವಲ್ಲಿ ಇರಬೇಕು. ವಿವರಣೆ ಸಂಕ್ಷಿಪ್ತವಾಗಿದ್ದರೆ ಆಯಾಪುಟದ ಅಡಿಟಿಪ್ಪಣಿಯಲ್ಲಿ ಬರಬಹುದು.

ಋ. ಅನುವಾದಕನು ಮೂಲ ಪರಿಷ್ಕೃತ ಪಾಠವನ್ನೂ ಅದರ ಕೆಳಗಡೆ ಅನುವಾದವನ್ನೂ ಕೊಡಬೇಕು.

ೠ. ಉಪೋದ್ಘಾತದಲ್ಲಿ ಅನುವಾದಕನು ತನ್ನ ಸ್ವಂತ ವಿಷಯವೇನನ್ನೂ ಪ್ರಸ್ತಾಪಿಸಕೂಡದು.

ಎ. ಯಾವೊಬ್ಬ ಅನುವಾದಕನ ಅನುವಾದನ ಕಾರ್ಯಮಂಡಲಿಗೆ ತೃಪ್ತಿಕರವಾಗಿ ಕಂಡುಬಾರದಿದ್ದಲ್ಲಿ ಅಥವಾ ಅನುವಾದಕ ತಾನಾಗಿ ಒಪ್ಪಿಸಿದ ಕಾರ್ಯಮಾಡಲು ತನ್ನಿಂದ ಸಾಧ್ಯವಿಲ್ಲವೆಂದು ತಿಳಿಸಿದ ಸಂದರ್ಭದಲ್ಲಿ ಆ ಅನುವಾದಕ ಮಂಡಲಿ ಅಧ್ಯಕ್ಷರು ಪರಿಷತ್ತಿನ ಅಧ್ಯಕ್ಷರಿಗಾಗಲೀ ಅಥವಾ ಪರಿಷತ್ತಿನ ಪ್ರಕಟಣಾ ಸಮಿತಿ ಪ್ರಧಾನ ಸಂಪಾದಕರಿಗಾಗಲೀ ಆ ವಿಷಯವನ್ನು ತಿಳಿಸಿ ಆ ಕಾರ್ಯಕ್ಕೆ ಬೇರೊಬ್ಬ ವಿದ್ವಾಂಸರನ್ನು ಗೊತ್ತುಮಾಡಬಹುದು. ಹಾಗೆಯೇ ಅನುವಾದಕ ಮತ್ತು ಅನುವಾದಕ ಮಂಡಲಿ ಅಧ್ಯಕ್ಷರ ಮಧ್ಯೆ ಉದ್ಭವಿಸಬಹುದಾದ ಸಮಸ್ಯೆಗಳನ್ನು ಪರಿಷತ್ತಿನ ಅಧ್ಯಕ್ಷರು ಅಥವಾ ಪ್ರಕಟಣಾ ಸಮಿತಿಯ ಪ್ರಧಾನ ಸಂಪಾದಕರು ಪರಿಹರಿಸತಕ್ಕದ್ದು.

ಏ. ನಿಯಮದಂತೆ ಗ್ರಂಥದ ಅನುವಾದ ಕಾರ್ಯ ಮುಗಿದ ಕೂಡಲೆ ಮಂಡಲಿಯ ಅಧ್ಯಕ್ಷರು ಅದನ್ನು ಅನುವಾದಕರಿಂದ ಪಡೆದು ತಮ್ಮ ಸಲಹೆಯೊಡನೆ ಪರಿಷತ್ತಿನ ಅಧ್ಯಕ್ಷರಿಗೆ ಕಳುಹಿಸಿ ಕೊಡತಕ್ಕದು.

೪. ಹೀಗೆ ಅನುವಾದ ಕಾರ್ಯವನ್ನು ವಿದ್ವಾಂಸರಿಂದ ಮಾಡಿಸಿದಾಗ ಅವರಿಗೆ ಯುಕ್ತ ಸಂಭಾವನೆಯನ್ನು ಕೊಡುವ ಬಗ್ಗೆ ಸಭೆ ತೀರ್ಮಾನ ಕೈಗೊಂಡು, ಸಂಭಾವನೆ ಗ್ರಂಥದ ಮುಖಬೆಲೆಯ ಮೇಲೆ ಶೇಖಡ ೧೫ ಯಂತೆ, ಪರಿಷತ್ತಿನ ಇತರ ಪ್ರಕಟನೆಗೆ ಲೇಖಕರಿಗೆ ಕೊಡುವ ರೀತಿಯಲ್ಲಿಯೇ ನೀಡಬೇಕೆಂದೂ ನಿಶ್ಚಯಿಸಲಾಗಿದೆ. ಮತ್ತು ಅನುವಾದಕ ಮಂಡಲಿಯ ಅಧ್ಯಕ್ಷರಿಗೆ ಅನುವಾದಕರಿಗೆ ಸಲ್ಲುವ ಸಂಭಾವನೆಯ ಶೇಕಡ ೧೫ರಷ್ಟನ್ನು ಸಂಭಾವನೆಯಾಗಿ ಕೊಡತಕ್ಕದ್ದೆಂದೂ ನಿರ್ಣಯಿಸಿತು. ಮತ್ತು ಅವರು ಮೂಲಪಾಠ, ಪರಿಷ್ಕಾರ, ಮುನ್ನುಡಿ, ಉಪೋದ್ಘಾತ, ಶೋಧನೆ, ಮೇಲ್ವಿಚಾರಣೆ ಇತ್ಯಾದಿ ಕಾರ್ಯಗಳನ್ನು ಗಮನದಲ್ಲಿಟ್ಟುಕೊಂಡು ಹಸ್ತಪತ್ರಿಯನ್ನು ಸಿದ್ಧಮಾಡಿ ಪರಿಷತ್ತಿಗೆ ಒಪ್ಪಿಸತಕ್ಕದ್ದೆಂದೂ ಗೊತ್ತು ಪಡಿಸಲಾಗಿದೆ.

೫. ಅನುವಾದಕರಿಗೆ ಅನುವಾದ ಕಾರ್ಯಕ್ಕಾಗಿ ಹಣ ಸಂದಾಯವಾದ ಮೇಲೆ ಆ ಗ್ರಂಥದ ಪೂರ್ಣ ಹಕ್ಕು ಪರಿಷತ್ತಿಗೆ ಸೇರುತ್ತದೆ. ಪುಸ್ತಕ ಪ್ರಕಟಣೆಯಾದ ಮೇಲೆ ಅನುವಾದಕರಿಗೆ ಈ ಗ್ರಂಥದ ೨೫ ಪ್ರತಿಗಳನ್ನು, ಅನುವಾದಕ ಮಂಡಲಿ ಅಧ್ಯಕ್ಷರಿಗೆ ಎರಡು ಪ್ರತಿಗಳನ್ನು ಉಚಿತವಾಗಿ ಕೊಡತಕ್ಕದ್ದು.

ಮೇಲ್ಕಂಡ ತೀರ್ಮಾನದಂತೆ ಅನುವಾದ ಕಾರ್ಯ ಕೈಗೊಳ್ಳಲು ಪರಿಷತ್ತು ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಅನುವಾದಕ ಮಂಡಲಿಗಳನ್ನು ರಚಿಸಿ ಅದಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಟ್ಟಿದೆ. ಯೋಜನೆಯ ಪ್ರಕಾರ ಅನುವಾದ ಕಾರ್ಯ ಎರಡು ಕಡೆಯೂ ನಡೆಯುತ್ತಿದೆ. ಈಚೆಗೆ ಧಾರವಾಡದಲ್ಲೂ ಅನುವಾದ ಕಾರ್ಯ ಏರ್ಪಾಟಾಗಿದೆ. ವಿದ್ವಾಂಸರು ಅನುವಾದಕ ಮಂಡಲಿ ಅಧ್ಯಕ್ಷರೊಡನೆ ಸಹಕರಿಸುತ್ತಿದ್ದಾರೆ. ಅನುವಾದಕ ಮಂಡಲಿ ಅಧ್ಯಕ್ಷರು ವಿಶೇಷ ಆಸಕ್ತಿ ವಹಿಸಿ ಅನುವಾದ ಕಾರ್ಯ ಕಚ್ಚುಕಟ್ಟಾಗಿ ನಡೆಯುವಂತೆ ಶ್ರಮಿಸುತ್ತಿದ್ದಾರೆ.

ಈ ಅನುವಾದ ಗ್ರಂಥಗಳು ಕನ್ನಡ ಜನತೆಗೆ ಸುಲಭ ಬೆಲೆಯಲ್ಲಿ ದೊರೆಯಬೇಕೆಂಬ ಪರಿಷತ್ತಿನ ಆಸೆಯು ಸರ್ಕಾರದ ನೆರವಿನಿಂದ ಕೈಗೂಡಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ.

ಕನ್ನಡಿಗರು ಈ ಅಮೂಲ್ಯವಾದ ಕೃತಿಗಳನ್ನು ಉತ್ಸಾಹದಿಂದ ಬರಮಾಡಿಕೊಂಡು ಇವುಗಳ ಪೂರ್ಣ ಪ್ರಯೋಜನ ಪಡೆಯಬೇಕೆಂದು ಪರಿಷತ್ತು ಬಯಸುತ್ತದೆ.

ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಪ್ರಸ್ತಾವನೆ

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಚಟುವಟಿಕೆಗಳಲ್ಲಿ ಗ್ರಂಥ ಪ್ರಕಟಣೆ ಪ್ರಮುಖ ಚಟುವಟಿಕೆ. ಪ್ರಾರಂಭದಲ್ಲಿ ಪರಿಷತ್ತು ತನ್ನ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿ ಕೆಲವೇ ಪುಸ್ತಕಗಳನ್ನು ಪ್ರಕಟಿಸಿತು. ಅನಂತರ ೧೯೬೯ರಿಂದ ಈಚೆಗೆ ಇದು ಯೋಜನಾಬದ್ಧ ಸ್ವರೂಪದಿಂದ ವ್ಯಾಪ್ತಿ ಮತ್ತು ವೇಗವನ್ನು ಪಡೆಯಿತು. ೧೯೭೦ರಿಂದ ಇದಕ್ಕೆ ಮತ್ತಷ್ಟು ಹುರುಪು ಮಹತ್ವ ದೊರೆಯಿತು.

ಪರಿಷತ್ತು ಈಗ ಎರಡನೆಯ ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮಗಳನ್ನು ಆರಂಭಿಸಿದೆ. ಈ ಯೋಜನೆಯಲ್ಲೂ ಪುಸ್ತಕ ಪ್ರಕಟಣೆಯ ಚಟುವಟಿಕೆಯನ್ನೇ ಪ್ರಧಾನ ಕಾರ್ಯವನ್ನಾಗಿ ರೂಪಿಸಿಕೊಂಡಿದೆ. ಆದರೆ ಕಾಲವನ್ನು ಅನುಸರಿಸಿ ಆಯಾ ಕಾಲದ ಕನ್ನಡ ಸಾಹಿತ್ಯದ ಎಲ್ಲಾ ಆಯಾಮಗಳನ್ನೂ ಸಾಹಿತ್ಯ ಧೋರಣೆಯನ್ನೂ ಗಮನದಲ್ಲಿಟ್ಟುಕೊಂಡು ಪ್ರಕಟಣೆಗೆ ಪುಸ್ತಕಗಳನ್ನು ಆಯ್ದುಕೊಳ್ಳುತ್ತಿದೆ. ಅದೆಂದರೆ ಪರಿಷತ್ತು ಪ್ರಕಟಿಸುವ ಗ್ರಂಥಗಳನ್ನು ಒಂದು ಗ್ರಂಥ ಪ್ರಕಟಣಾ ಸಲಹಾ ಸಮಿತಿ ಪರಿಶೀಲಿಸಿ ನಿರ್ಧರಿಸುತ್ತದೆ. ಹಾಗೆ ನಿರ್ಧರಿಸುವಾಗ ಪುಸ್ತಕಗಳ ವಿಷಯವನ್ನು ಕುರಿತು ಕೆಲವೊಮ್ಮೆ ಆಯಾ ವಿಷಯದಲ್ಲಿ ತಜ್ಞರಿಂದ ಅಭಿಪ್ರಾಯವನ್ನು ಪಡೆಯುತ್ತದೆ.

ಕನ್ನಡ ಜನತೆಗೆ ಒಳ್ಳೆಯ ಸಾಹಿತ್ಯವನ್ನು ಸುಲಭ ಬೆಲೆಗೆ ಒದಗಿಸಬೇಕು, ಕಾಲಕಾಲಕ್ಕೆ ಜನತೆಯ ಆಶೋತ್ತರಗಳನ್ನು ಪೂರೈಸುವಂತೆ ವೈಚಾರಿಕ ವೈಜ್ಞಾನಿಕ ಸಾಹಿತ್ಯವನ್ನು ನೀಡಬೇಕು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶ್ರೇಷ್ಠ ಕೊಡುಗೆಗಳನ್ನು ಪರಿಷತ್ತು ಜನತೆಗೆ ನೀಡಬೇಕು ಎಂಬ ಪರಿಷತ್ತಿನ ಧ್ಯೇಯ ಧೋರಣೆಗಳನ್ನು ಗಮನಿಸಿ, ಕರ್ನಾಟಕ ರಾಜ್ಯ ಸರ್ಕಾರದವರು ಉದಾರ ಸಹಾಯ ನೀಡಿದ್ದಾರೆ.

ಆಯ್ದ ಹಳಗನ್ನಡ-ನಡುಗನ್ನಡ ಕಾವ್ಯಗಳನ್ನು ಹೊಸಗನ್ನಡ ಗದ್ಯಾನುವಾದದೊಡನೆ ಪ್ರಕಟಿಸುವ ಯೋಜನೆಯನ್ನು ಡಾ|| ಆ. ನೇ. ಉಪಾಧ್ಯೆಯವರ ಸಲಹೆಯಿಂದ ಕೈಗೆತ್ತಿಕೊಂಡಿತು. ಮೊದಲು ಜ್ಞಾನಪೀಠದವರು ಮಾಡುತ್ತಿದ್ದ ಈ ಕಾರ್ಯವನ್ನು ಇತ್ತೀಚೆಗೆ ನಿಲ್ಲಿಸಿ ಪರಿಷತ್ತಿಗೇ ತಾನು ಒಪ್ಪಿಕೊಂಡ ಕೃತಿಗಳನ್ನೂ ವಹಿಸಿಕೊಟ್ಟಿತು. ಅದಕ್ಕೆ ನೆರವಾದ ಉಪಾಧ್ಯೆಯವರು ಜ್ಞಾನಪೀಠಕ್ಕೂ ಪರಿಷತ್ತಿಗೂ ಸೇತುವೆಯಾಗಿದ್ದರು. ಜ್ಞಾನಪೀಠ ಪ್ರಕಟಿಸಿದ ಕನ್ನಡ ಪುಸ್ತಕಗಳ ಸಗಟು ಮಾರಾಟ ಕಾರ್ಯವನ್ನೂ ಪರಿಷತ್ತಿಗೇ ಅಧಿಕೃತವಾಗಿ ವಹಿಸಿಕೊಟ್ಟರು.

ಹಳಗನ್ನಡ ಕಾವ್ಯಗಳನ್ನು ಹೊಸಗನ್ನಡಕ್ಕೆ ಅನುವಾದಿಸುವ ಯೋಜನೆಯನ್ನೂ ಯೋಚನೆಯನ್ನೂ ಸ್ವಾಗತಿಸುವವರು ಇರುವಂತೆ ವಿರೋಧಿಸುವವರೂ ಇದ್ದಾರೆ. ಈ ವಿಚಾರದಲ್ಲಿನ ಭಿನ್ನಾಭಿಪ್ರಾಯ ಹೊಸದಲ್ಲ. ಸಂಸ್ಕೃತ ಕಾವ್ಯಗಳಿಗೆ ಮಲ್ಲಿನಾಥಾದಿಗಳು ವ್ಯಾಖ್ಯಾನ ಬರೆಯತೊಡಗಿದಾಗಿನಿಂದಲೂ ಪ್ರತಿಭಟನೆ ಬಂದಿದೆ. ಶಕ್ತಿಯಿರುವವರು ಮೂಲವನ್ನೇ ಓದಿಕೊಳ್ಳಬೇಕೆಂಬ ಹೇಳಿಕೆಯ ಹಿಂದೆ ದುರುದ್ದೇಶವಿದೆಯೆಂದು ಇನ್ನೊಂದು ವರ್ಗ ಖಂಡಿಸಿದೆ. ವಿದ್ಯೆ ಜ್ಞಾನ ಕೆಲವರ ಗುತ್ತಿಗೆಯಾಗದೆ ಮುಕ್ತವಾಗಿ ತೆರೆದಿರಬೇಕು. ಹಳಗನ್ನಡ ಕಾವ್ಯಗಳನ್ನು ಹೊಸಗನ್ನಡ ಅನುವಾದದೊಡನೆ ಅವಶ್ಯ ಪ್ರಕಟಿಸಲೇಬೇಕು ಎಂಬ ಒತ್ತಾಯ ಹೆಚ್ಚುತ್ತಿದೆ.

ಈ ಬಗೆಯ ಎರಡು ಅನ್ನಿಸಿಕೆಗಳು ಇರುವಾಗ ಯಾವ ದಾರಿ ಹಿಡಿಯುವುದೆಂದು ಯೋಚಿಸಲಾಯಿತು. ಗದ್ಯಾನುವಾದ ಗ್ರಂಥಗಳಿಗೆ ಬೇಡಿಕೆಯಿದೆ, ಮಾರಾಟ ಚೆನ್ನಾಗಿದೆ, ಪುನರ್ ಮುದ್ರಣಗಳಾಗುತ್ತಿವೆ, ವಿದ್ಯಾವಂತ ಮತ್ತು ವಿಮರ್ಶಕ ಜನ ಮೆಚ್ಚಿಕೊಂಡಿದ್ದಾರೆ, ಪ್ರತಿಕ್ರಿಯೆ ಒಳ್ಳೆಯದಿದೆ. ಅದರಿಂದ ಈ ಮಾಲೆಯನ್ನು ಮುಂದುವರಿಸುವುದೆಂದು ತೀರ್ಮಾನಿಸಲಾಯಿತು. ಮೂಲವನ್ನೇ ಓದಬೇಕೆನ್ನುವ ಶಕ್ತರಾದ ಕೆಲವರು ಸಂತೋಷದಿಂದ ಹಾಗೆ ಮಾಡಲಿ, ಇದರಲ್ಲಿ ಮೂಲವೂ ಇದೆ. ಅನುವಾದವೂ ಬೇಕೆಂದು ಬಯಸುವ ಹಲವರು ಹಾಗೇ ಮಾಡಲಿ, ಇದರಲ್ಲಿ ಹೊಸಗನ್ನಡ ಗದ್ಯಾನುವಾದವೂ ಇದೆ. ಎಲ್ಲರಿಗೂ ಎಟಕುವ ಸುಲಭ ಬೆಲೆಯೂ ಇದೆ.

ಇದುವರೆಗೆ ಈ ಮಾಲೆಯ ಪುಸ್ತಕಗಳನ್ನು ಡೆಮಿ ಆಕಾರದಲ್ಲಿ ಪ್ರಕಟಿಸುತ್ತಿದ್ದವು. ಜ್ಞಾನಪೀಠದವರು ಪ್ರಕಟಿಸುವ ದೊಡ್ಡ ಕ್ರೌನ್ ಆಕಾರದಲ್ಲಿ ಹೊರತಂದರೆ ತನ್ನ ವಿಶಿಷ್ಟ ಆಕಾರದಿಂದ ಇನ್ನೂ ಮುದ್ದಾಗಿರುತ್ತದೆಂದು ಹಿತೈಷಿಗಳಾದ ವಿದ್ವದ್ ಜನ ಸೂಚಿಸಿದರು. ಒಮ್ಮೆ ಪ್ರಯೋಗಿಸಿ ನೋಡೋಣವೆಂದು ಇದನ್ನು ಅಚ್ಚಿಸಿದ್ದೇವೆ. ಇದು ನಮ್ಮ ಓದುಗರಿಗೆ ಮೆಚ್ಚಿಗೆಯಾದರೆ ಸಂತೋಷ. ಇದು ಬೇಡವಾದರೆ, ಹಿಂದಿನ ಡೆಮಿ ಅಳತೆಯ ಪ್ರಕಟಣ ಮಾದರಿಯನ್ನೇ ಮುಂದುವರಿಸಬೇಕೆನಿಸಿದರೆ, ಓದುಗರು ದಯವಿಟ್ಟು ಹಾಗೆ ಬರೆದು ತಿಳಿಸಬೇಕು. ಅಭಿಪ್ರಾಯಗಳಿಗೆ ಸ್ವಾಗತವಿದೆ.

ಇದನ್ನು ಎರಡು ಸಂಪುಟಗಳಲ್ಲಿ ಪ್ರಕಟಿಸಬೇಕಾಗಿತ್ತು. ಈ ಗಾತ್ರದ ಗ್ರಂಥಕ್ಕೆ ಹಾಗೆ ಮಾಡುವುದು ವಾಡಿಕೆ. ಈ ದೊಡ್ಡ ಅಳತೆಯಲ್ಲಿ ಪ್ರತಿ ಸಂಪುಟಕ್ಕೆ ಎಷ್ಟು ಕಡಮೆ ಎಂದರೂ ಮೂವತ್ತು ರೂಪಾಯಿ ಬೆಲೆ ಇಡಬೇಕಾಗುತ್ತಿತ್ತು. ಆದರೆ ಇದನ್ನು ಒಂದೇ ಸಂಪುಟದಲ್ಲಿ ಕೂಡಿಸಿ, ಗಟ್ಟಿ ರಟ್ಟು ಹಾಕಿಸಿ, ರಕ್ಷಾಕವಚ ಹೊದಿಸಿ ಕೇವಲ ಐವತ್ತು ರೂಪಾಯಿ ಬೆಲೆ ಇಡಲಾಗಿದೆ. ಹಳಗನ್ನಡ ಸಾಹಿತ್ಯ ಪ್ರಿಯರಾದ ಓದುಗರು ಇದನ್ನು ಪ್ರೀತಿಯಿಂದ ಬರಮಾಡಿಕೊಳ್ಳುತ್ತಾರೆಂದು ನಂಬಿದ್ದೇನೆ.

ಹಂಪನಾ
ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತು

ಮುನ್ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸುತ್ತಿರುವ ಹಳಗನ್ನಡ ಗದ್ಯಾನುವಾದ ಕೃತಿಗಳ ಪ್ರಕಟನೆ ಮಾಲೆಯಲ್ಲಿ ಪೊನ್ನಕವಿಯ ಶಾಂತಿಪುರಾಣವನ್ನು ಇದೀಗ ಪ್ರಥಮ ಬಾರಿಗೆ ಪ್ರಕಟಣೆ ಮಾಡಲಾಗುತ್ತಿದೆ. ಈ ಗ್ರಂಥವನ್ನು ಈ ಮಾಲೆಯಲ್ಲಿ ಪವಣಿಸುತ್ತಿರುವುದು ಸಂತೋಷದ ವಿಷಯ.

ಹಳಗನ್ನಡ ಕವಿಗಳಲ್ಲಿ ಪೊನ್ನಕವಿಯೂ ಪಂಪ ರನ್ನರಂತೆ ಪ್ರೌಢನಾಗಿದ್ದಾನೆ, ಜನಪ್ರಿಯನಾಗಿದ್ದಾನೆ. ಆದರೆ ಅದೇಕೋ ಪೊನ್ನನ ಕಾವ್ಯವನ್ನು ಈ ಶತಮಾನದಲ್ಲಿ ಅಷ್ಟು ಆಳವಾಗಿ ಅಭ್ಯಾಸಮಾಡುತ್ತಿಲ್ಲ. ಇವನ ಕಾವ್ಯದ ವಿಮರ್ಶೆಯೂ ಎಷ್ಟು ಹೊರಬೀಳಬೇಕಿತ್ತೋ ಅಷ್ಟು ಪ್ರಚುರವಾಗಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಸ್ವಯಂ ಪ್ರಸಿದ್ಧ ಲೇಖಕರೂ ಹಳಗನ್ನಡ ಸಂಶೋಧನೆಯಲ್ಲಿ ಪರಿಣತರೆಂದು ಹೆಸರು ಗಳಿಸಿದವರೂ ಆದ ಹಂಪ. ನಾಗರಾಜಯ್ಯನವರು ಒಂದು ದೊಡ್ಡ ಸಾಹಸವನ್ನು ಇಲ್ಲಿ ಮಾಡಿದ್ದಾರೆ. ಪೊನ್ನಕವಿಯ ಶಾಂತಿಪುರಾಣ ಕಾವ್ಯವನ್ನು ಹಲವು ಪಾತಳಿಗಳಲ್ಲಿ ಹಿಡಿದು ಅಲುಗಾಡಿಸಿದ್ದಾರೆ. ಹಲವು ಪದರಗಳನ್ನು ವಿಶ್ಲೇಷಿಸಿ ಅಲ್ಲಿ ಅಡಗಿದ್ದ ಸ್ವಾರಸ್ಯಗಳನ್ನು ಎಳೆದು ತೆಗೆದಿದ್ದಾರೆ. ಸಂಸ್ಕೃತ ಪ್ರಾಕೃತ ಕನ್ನಡ ಕಾವ್ಯ-ಶಾಸನಗಳಿಂದ ಇನ್ನೂ ಅನ್ಯ ಮೂಲಗಳಿಂದ ನೂತನ ಪರಿಕರಗಳನ್ನು ಅವಲಂಬಿಸಿ ಈ ಕಾವ್ಯದ ನೆಲೆಬೆಲೆಗಳನ್ನು ನಿರ್ಧರಿಸಿದ್ದಾರೆ. ತೆರೆದ ಮನಸ್ಸಿನ ನಿಷ್ಪಕ್ಷಪಾತದ ವಿಮರ್ಶೆಗೆ ಶಾಂತಿಪುರಾಣವನ್ನು ಒರೆಹಚ್ಚಿದ್ದಾರೆ. ಇಂಥ ವಿದ್ವತ್ಪೂರ್ಣ ಪ್ರಯತ್ನದಿಂದ ಪ್ರಾಚೀನ ಕನ್ನಡ ಕಾವ್ಯಗಳನ್ನು ಬೆಲೆ ಕಟ್ಟಲು ಬೇಕಾದ ಸಿದ್ಧತೆಯುಳ್ಳ ಹಂಪನಾರವರಂಥ ಸಂಶೋಧಕರು ನಮ್ಮ ತರುಣರಲ್ಲಿ ತಯಾರಾಗಬೇಕು. ಹಳಗನ್ನಡ ಕಾವ್ಯಗಳ ಮೌಲ್ಯಮಾಪನಕ್ಕೆ ಮಾರ್ಗದರ್ಶನ ಬಯಸುವ ಯುವ ಪೀಳಿಗೆಗೆ ಒಂದು ಮಾದರಿ ಹಾಕಿಕೊಟ್ಟಿರುವ ಈ ಕೃತಿಯನ್ನು ನಾವೆಲ್ಲ ಪ್ರೀತ್ಯಾದರಗಳಿಂದ ಬರಮಾಡಿಕೊಳ್ಳಬೇಕು. ಹಂಪನಾರವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಬೇಕು. ಇದರಿಂದ ಕನ್ನಡ ಸಾಹಿತ್ಯದ ಅಭ್ಯಾಸಿಗಳಿಗೆ ಹೆಚ್ಚಿನ ಪ್ರಯೋಜನವಾಗುವುದಲ್ಲದೆ ಈ ಕಾವ್ಯವನ್ನು ಒಟ್ಟಾರೆ ಸವಿಯುವ ಹವ್ಯಾಸವುಳ್ಳ ಜನಸಾಮಾನ್ಯರಿಗೂ ಒಂದು ರಾಜಮಾರ್ಗ ಸಿದ್ಧವಾಗಿದೆ.

೧೯೮೧
ಬೆಂಗಳೂರು

ಡಾ|| ವಿ. ಕೃ. ಗೋಕಾಕ
ಪ್ರಧಾನ ಸಂಪಾದಕರು

ಬಿನ್ನಹ

ಕವಿಚಕ್ರವರ್ತಿ ಪೊನ್ನನ 'ಪುರಾಣಚೂಡಾಮಣಿ' ಎನಿಸಿದ ಶಾಂತಿಪುರಾಣ ೧೯೫೧ರಲ್ಲಿ ಮೊದಲ ಸಲ ಮುದ್ರಿತವಾಗಿದ್ದರೂ, ಪುನರ್ಮುದ್ರಣವನ್ನು ಕಾಣದೆ ಹೋದುದರಿಂದ ಅದರ ಪ್ರತಿಗಳು ಈಗ ದುರ್ಲಭವೆನಿಸಿದ್ದುವು. ಇಂತಹ ಸಂದರ್ಭದಲ್ಲಿ ಅನುವಾದ ಸಹಿತವಾಗಿ ಪ್ರಕಟವಾಗುತ್ತಿರುವ ಈ ಗ್ರಂಥವನ್ನು ಅಭ್ಯಾಸಿಗಳು ಸಂತೋಷದಿಂದ ಸ್ವಾಗತಿಸುವರೆಂದು ಹಾರೈಸುತ್ತೇವೆ. ಅನುವಾದಕರಾದ ಶ್ರೀ ಹಂಪ. ನಾಗರಾಜಯ್ಯನವರು ಕಾವ್ಯಾಭ್ಯಾಸದಲ್ಲಿ ಸೂಕ್ಷ್ಮವಾದ ಪರಿಜ್ಞಾನವುಳ್ಳವರು; ಆಳವಾದ ಪಾಂಡಿತ್ಯವನ್ನು ಸಂಪಾದಿಸಿಕೊಂಡವರು. ಈ ಗ್ರಂಥಕ್ಕೆ ಬರೆದ ಸುದೀರ್ಘವಾದ ಮುನ್ನುಡಿಯಲ್ಲಿ ತಮ್ಮ ಅನೇಕ ವರ್ಷಗಳ ಅಭ್ಯಾಸದ ಫಲವನ್ನು ಅವರು ನೀಡಿದ್ದಾರೆ. ಯೋಗ್ಯವೆನಿಸಿದ ಪಾಠವನ್ನು ಒದಗಿಸುವುದರ ಜೊತೆಗೆ ಲಭ್ಯವಾದ ಪಾಠಾಂತರಗಳನ್ನೂ ಗುರುತಿಸಿರುವುದು ಗಮನಾರ್ಹವಾಗಿದೆ. ಅನುವಾದ ಕಾರ್ಯವನ್ನು ಅವರು ಕೆಲವು ವರ್ಷಗಳಷ್ಟು ಹಿಂದೆಯೆ ಆರಂಭಿಸಿ ಮೊದಲಿನ ಮೂರು ಆಶ್ವಾಸಗಳಷ್ಟು ಭಾಗವನ್ನು ಮುದ್ರಿಸಿಯೂ ಇಟ್ಟಿದ್ದರು. ಕಾವ್ಯದ ಪದ್ಯಗಳನ್ನು ಪದಕ್ಕೆ ಪದವೆಂಬಂತೆ ಅನುಸರಿಸಿರುವುದರಿಂದ ಅನುವಾದ ಕೆಲವುಟ್ಟಿಗೆ ಗಂಟುಗಂಟಾಗಿ ತೋರಬಹುದು. ಆಮೇಲೆ ಪೊನ್ನನ ಪದ್ಯಗಳಿಗೆ ಬಹುಮಟ್ಟಿಗೆ ಆಕರವಾದ ಅಸಗನ ಸಂಸ್ಕೃತ ಶಾಂತಿಪುರಾಣ ಹಾಗು ಕಾಳಿದಾಸನ ರಘುವಂಶ—ಈ ಎರಡನ್ನೂ ಪೊನ್ನನ ಪದ್ಯಗಳ ಪಕ್ಕದಲ್ಲಿಟ್ಟು ನೋಡುವ ಅವಕಾಶ ದೊರೆತುದರಿಂದಲೂ ಹಾಗು ಕನ್ನಡ ಸಾಹಿತ್ಯ ಪರಿಷತ್ತಿನ ಅನುವಾದ ಗ್ರಂಥಗಳ ಮಾರ್ಗದಲ್ಲಿ ಅನುವಾದ ಶೈಲಿಯನ್ನು ಮಾರ್ಪಡಿಸಿಕೊಂಡುದರಿಂದಲೂ ಮುಂದಿನ ಭಾಗ ತೊಡಕಿಲ್ಲದೆ ಸಾಗಿದೆ. ಕಾವ್ಯಪಾಠದಲ್ಲಿ ಕೆಲವು ಕ್ಲೇಶಗಳು ಕಂಡಾಗ ಅವುಗಳನ್ನು ದಾಟಿಹೋಗುವ ಅಥವಾ ಏನಾದರೊಂದು ಊಹೆಯ ಅರ್ಥವನ್ನು ಹೇಳಿಕೊಂಡುಹೋಗುವ ಪ್ರವೃತ್ತಿ ಕೆಲವರಲ್ಲಿ ಇರುವುದುಂಟು. ಶ್ರೀ ಹಂಪ. ನಾಗರಾಜಯ್ಯನವರು ಹಾಗೆ ನಡೆದುಕೊಳ್ಳದೆ ಪ್ರಾಮಾಣಿಕವಾಗಿ ಇಂತಹ ಎಡೆಗಳಲ್ಲಿ ಪ್ರಶ್ನಚಿಹ್ನೆ ಹಾಕಿ ಅರ್ಥ ತಿಳಿದಿಲ್ಲವೆಂದು ಸ್ಪಷ್ಟಪಡಿಸಿರುವುದು ಮೆಚ್ಚತಕ್ಕುದಾಗಿದೆ. ತಜ್ಞರಾದವರು ಇಂತಹ ಕ್ಲೇಶಗಳಿಗೆ ಗಮನಕೊಟ್ಟು ಪರಿಹಾರವನ್ನು ಒದಗಿಸುವರೆಂದು ಹಾರೈಸಲಾಗಿದೆ. ಗ್ರಂಥಕ್ಕೆ ಅಳವಡಿಸಿದ ಶುದ್ಧಪತ್ರಿಕೆ ಹಾಗು ಇತರ ಅನುಬಂಧಗಳನ್ನು ಓದುಗರು ದಯವಿಟ್ಟು ಗಮನಿಸಬೇಕೆಂದು ಬಿನ್ನಹ.

ಆರ್. ನಿ. ಕುಲಕರಣಿ
ಅಧ್ಯಕ್ಷರು
ಬೆಂಗಳೂರು ಅನುವಾದಕ ಮಂಡಲಿ
ಕನ್ನಡ ಸಾಹಿತ್ಯ ಪರಿಷತ್ತು

ಕವಿ ವಿಭೂತಿಗೆ ನಮೋ

ಕವಿಜನದೊಳ್ ರತ್ನತ್ರಯ
ಪವಿತ್ರಮೆನೆ ನೆಗಟ್ದ ಪಂಪನುಂ ಪೊನ್ನಿಗನುಂ
ಕವಿರತ್ನನುಮಿಾ ಮೂವರ್
ಕವಿಗಳ್ ಜಿನಸಮಯ ದೀಪಕರ್ ಪೆಱರೊಳರೆ

—ರನ್ನ

ಪೊನ್ನಂ ನಯವಿದ ನಯಸಂ
ಪನ್ನಂ ಮಂದರಗಿರೀಂದ್ರದನ್ನಂ ನಿಜಧೈ
ರ್ಯೋನ್ನತಿಯೊಳ್ ಬಲ್ಮೆಯೊಳಜ
ನನ್ನಂ ಧರ್ಮಕ್ಕೆ ಧರ್ಮನಂದನನನ್ನಂ

—ರನ್ನ

ನಿರುಪಮ ನವರಸ ರಸಿಕತೆ
ದೊರೆವೆತ್ತಿರೆ ದೇಸಿ ದೇಸಿವೆತ್ತಿರೆ ಪರಮಾ
ದರದಿಂ ಶಾಂತಿಜಿನೇಶ್ವರ
ಪುರಾಣಮುಂ ಪೇಟ್ದ ಪೊನ್ನನಂ ಪೊಗೞದರಾರ್

—ಶಾಂತಿನಾಥ

ಚದುರರೆನಿಸಿದರ ಚಿತ್ತ
ಕ್ಕಿದು ಪೊಸತೆನಿಸಿರ್ದ ರೀತಿಯಂ ನಿರ್ವಹಿಪ
ಗ್ಗದ ಬಲ್ಮೆ ಬಗೆಯೆ ತನಗ
ಲ್ಲದೆ ಪೆಱರ್ಗಿಲ್ಲೆನಿಪ ಪೊನ್ನನಂ ಪೊಗೞದರಾರ್

— ಪಾರ್ಶ್ವ ಪಂಡಿತ

ಪೀಠಿಕೆ

ಪೊನ್ನಸ್ತವ ಪದ್ಯ ಕುಸುಮಾಂಜಲಿ

ಪೊನ್ನ ಹಳಗನ್ನಡ ಕವಿಗಳಲ್ಲಿ ನತದೃಷ್ಟ. ತನ್ನ ಜೀವಿತ ಕಾಲದಲ್ಲೇನೋ ಅವನು 'ಉಭಯ ಕವಿ ಚಕ್ರವರ್ತಿ' ಬಿರುದು ಬಾವಲಿ ಪಡೆದು ಸುಖ ಜೀವನ ನಡಸಿದ. ಅನಂತರದಲ್ಲೂ ಅವನಿಗೆ ಜನಮನ್ನಣೆ, ಕವಿ ಸ್ತವ ತಪ್ಪಲಿಲ್ಲ, ಕುಂದಲಿಲ್ಲ. ಆದರೆ ಈ ಶತಮಾನದಲ್ಲಿ ಮಾತ್ರ ಆಧುನಿಕ ವಿಮರ್ಶಕರು ಪೊನ್ನನಿಗೆ ನ್ಯಾಯವಾಗಿ ಸಲ್ಲಬೇಕಾದ ಕವಿ-ಕೃತಿ ಗೌರವಗಳನ್ನು ತೋರಲಿಲ್ಲ. ಈ ಅನಾದರಕ್ಕೆ ಮುಖ್ಯ ಕಾರಣ ಪೊನ್ನನ ಕಾವ್ಯವನ್ನು ವಸ್ತು ನಿಷ್ಠವಾದ ಸಂಪೂರ್ಣವಾದ ಅಧ್ಯಯನ ವಿಶ್ಲೇಷಣಕ್ಕೆ ಒಳಗಾಗಿಸದಿದ್ದುದು.

ಪೊನ್ನಕವಿಯನ್ನು, ಅವನ ಕಾವ್ಯವನ್ನು ಕಳೆದ ಒಂದು ಸಾವಿರ ವರ್ಷದ ಸಾಹಿತ್ಯ ಚರಿತ್ರೆಯಲ್ಲಿ ಸುಮಾರು ಐವತ್ತು ಜನ ಕವಿಗಳು ಮನಸಾರೆ ನೆನೆದಿದ್ದಾರೆ. ಅವರೆಲ್ಲರ ಹೇಳಿಕೆಗಳನ್ನು ಒಂದೆಡೆ ಸೇರಿಸಿ 'ಪೊನ್ನಕವಿ-ಸ್ತವ ಕುಸುಮಾಂಜಲಿ' ಎಂದು ಕರೆಯಬಹುದು. ಕೇವಲ ಮೂವರು ಕವಿಗಳ (ಕೋಟೀಶ್ವರ, ದೇವರಸ ಮತ್ತು ಬ್ರಹ್ಮಕವಿ) ಹಸ್ತಪ್ರತಿಗಳು ಸಿಗದ ಕಾರಣ ಇಲ್ಲಿ ಅವರ ಪದ್ಯಗಳನ್ನು ಉದಾಹರಿಸಲಾಗಿಲ್ಲ. ಉಳಿದಂತೆ (ಶಾಂತಿಪುರಾಣದ) ಪೊನ್ನಕವಿಯನ್ನು ಸ್ಮರಿಸಿದ ಪದ್ಯಗಳು ಕೆಳಗೆ ಉದಾಹರಿಸಿದ ರೀತಿಯಲ್ಲಿವೆ. ಇದು ಬಹುವಾಗಿ ಕನ್ನಡ ಕಾವ್ಯ ಪದ್ಧತಿಯಲ್ಲಿ ರೂಢಿಯಾಗಿರುವ ಪೂರ್ವಕವಿ ಸ್ಮರಣೆ ರೀತಿಯದಾದರೂ ಇಲ್ಲಿರುವ ಸಹೃದಯತೆಯನ್ನು ಗಮನಿಸಬೇಕು. ಇವರಲ್ಲಿ ಹೆಚ್ಚಿನ ಕವಿಗಳು ಜೈನರಾದುದರಿಂದ ಪೊನ್ನನ ಶಾಂತಿಪುರಾಣವನ್ನು ಮೆಚ್ಚಿದ್ದಾರೆ. ಪೊನ್ನನನ್ನು ತುಂಬ ಕೊಂಡಾಡಿ ಬಹು ಪದ್ಯಗಳಲ್ಲಿ ಪ್ರಸ್ತಾಪಿಸಿದ, ಅವನ ಸಮೀಪ ಕಾಲದವನೇ ಆದ ಕವಿಯೆಂದರೆ ರನ್ನ. ಈ ಎಲ್ಲ ಕವಿಗಳ ಉಲ್ಲೇಖಗಳೂ ಬಹುವಾಗಿ ಸಾಂಪ್ರದಾಯಿಕ ಪ್ರಶಂಸೋದ್ಗಾರಗಳಾಗಿ ಮುಗಿಯುತ್ತವೆಯೇ ಹೊರತು ಪೊನ್ನನ ಕಾವ್ಯದ ಮೌಲಿಕತೆಯನ್ನು ತಿಳಿಸುವ ವಿಮರ್ಶೆಯ ಮಾತುಗಳಾಗಿ ನಿಲ್ಲುವುದಿಲ್ಲ.

1 ಪೊನ್ನಂ ನಯವಿದನಯಸಂ
ಪನ್ನಂ ಮಂದರಗಿರೀಂದ್ರಸನ್ನಿಭಂ ನಿಜಧೈ
ರ್ಯೋನ್ನತಿಯೊಳ್ ಬಲ್ಮೆಯೊಳಜ
ನನ್ನಂ ಧರ್ಮಕ್ಕೆ ಧರ್ಮನಂದನನನ್ನಂ — ರನ್ನ, 993, ಅಜಿತನಾಥಪುರಾಣ, 1.32

2 ಗುರು ಜಿನಚಂದ್ರ ಮುನೀಂದ್ರರ
ಪರೋಕ್ಷದೊಳ್ ತಂಮುತಿರ್ವರುಂ ಪೊನ್ನಿಗನಿಂ
ಬರೆಯಿಸಿದರ್ ಸಕಳೊರ್ವಿಗೆ
ಪರೆಯಿಸಿದರ್ ಸಲೆ ಪುರಾಚೂಡಾಮಣಿಯಂ — ರನ್ನ, 993, ಅಜಿತನಾಥಪುರಾಣ, 1.34

3 ಭ್ರಾಂತೇನಾದಿಪುರಾಣದ
ಶಾಂತಿಪುರಾಣದ ಸಮಾನಮೆನೆ ಕೃತಿಯಂ ಕ
ಲ್ಪಾಂತಸ್ಥಾಯಿಯನಾಶ್ರಿತ
ಚಿಂತಾಮಣಿಗತ್ತಿಮಬ್ಬೆಗಬ್ಬಿಯೆ ಪೇಟ್ಸಿಂ — ರನ್ನ, 993, ಅಜಿತನಾಥಪುರಾಣ, 1 77

4 ಪೊನ್ನಿಗನಿಂ ಮಲ್ಲಪನುಂ
ಪೊನ್ನನುಮುಟ್ಟಿಯೆ ಪುರಾಣಚೂಡಾಮಣಿಯುಂ
ಮುನ್ನಂ ಪೇಟಿಸಿದಂತೆ ಗ
ಣೋನ್ನತ ಕವಿರತ್ನನಿಂದಿದಂ ಪೇಟಿಸಿದಳ್ —ರನ್ನ, 993, ಅಜಿತನಾಥಪುರಾಣ, 1.77

5 ಜಗದೊಳಗಾದಿಪುರಾಣಂ
ನೆಗಟ್ದುದು ಮುಂ ಪಂಪನಿಂದೆ ಪೊನ್ನಿಗನಿಂದಂ
ನೆಗಟ್ದುದಾ ಶಾಂತಿಪುರಾಣಂ
ನೆಗಟ್ದುದು ಕವಿರತ್ನನಿಂದಮಜಿತಪುರಾಣಂ —ರನ್ನ, 993, ಅಜಿತನಾಥಪುರಾಣ, 12-36

6 ಉಪಮಾತೀತಮೆನಿಪ್ಪಾ
ದಿಪುರಾಣದ ರೇಖೆಗಂ ಬರಲ್ ನೆಱೆಗುಮೆ ಶಾಂ
ತಿಪುರಾಣದ ರೇಖೆಗಮಜಿ
ತಪುರಾಣದ ರೇಖೆಗಂ ಪುರಾಣದ ಕೃತಿಗಳ್ —ರನ್ನ, 993, ಅಜಿತನಾಥಪುರಾಣ, 12-37

7 ಕವಿಜನದೊಳ್ ರತ್ನತ್ರಯ
ಪವಿತ್ರಮೆನೆ ನೆಗಟ್ದ ಪಂಪನುಂ ಪೊನ್ನಿಗನುಂ
ಕವಿರತ್ನನುಮಿಾ ಮೂವರ್
ಕವಿಗಳ್ ಜಿನಸಮಯದೀಪಕರ್ ಪೆಱರೊಳರೆ —ರನ್ನ, 993, ಅಜಿತನಾಥಪುರಾಣ, 12-38

8 ಸುಭಗಕವಿ ಪಂಪನಿಂ ವಾ
ಗ್ವಿಭವೋನ್ನತಿ ನೆಗಟ್ದದವನ ಗುಣಗಣನೆಯೊಳೆಸೆದಿ
ರ್ದುಭಯಕವಿಚಕ್ರವರ್ತಿಗ
ಮಭಿನವ ಕವಿಚಕ್ರವರ್ತಿಗಂ ದೊರೆಯೊಳರೆ —ರನ್ನ, 993, ಅಜಿತನಾಥಪುರಾಣ, 12-39

9 ಧರಣಿಗೆ ನೆಗಟ್ದರ್ ಸಲೆ ರ
ಟ್ಟರಾಜ್ಯದೊಳ್ ಮುನ್ನೆ ಪಂಪನುಂ ಪೊನ್ನಿಗನುಂ
ನರಪತಿಪೂಜ್ಯಂ ಚಾಳು
ಕ್ಯರಾಜ್ಯದೊಳ್ ನೆಗಟ್ದನುಭಯಕವಿ ಕವಿರತ್ನಂ —ರನ್ನ, 993, ಅಜಿತನಾತಪುರಾಣ, 12-42

10 ಪೆಱವೊಳವುಳ್ಳುವಿಲ್ಲಿಯೊಳವಾಗಮ ಭಾಷೆಗಳಲ್ಲಿಯುಳ್ಳವಂ
ಪೆಱವುಳಿಕಾಣಲಾಗದೆನೆ ಪಂಪನ ಪೊನ್ನನ ಪೇಟ್ದ ಕಬ್ಬದೊಳ್
ನೆಱೆಯೆ ಪರಿಸ್ಫುಟಂ ನೆಱೆಯದಿರ್ದುದುಮಂ ನುಡಿದೆಯ್ದೆ ಬಲ್ಮೆಕ
ಣ್ದೆಱೆಯೆ ನೆಗಟ್ಚಿದಂ ಕವಿಚತುರ್ಮುಖನಾಗಮವೇದಿಯುಪ್ಪುದಂ
—ರನ್ನ, 993, ಅಜಿತನಾಥಪುರಾಣ, 12-33

11 —..........................——
..............ಪಡೆದಂ ವಿಶ್ವಾ
ವನಿಪಾಲಂ ಕೃಷ್ಣನರೇಂ
ದ್ರನೀಯ ಕವಿಚಕ್ರವರ್ತಿವೆಸರಂ ಪೊನ್ನಂ
—ದುರ್ಗಸಿಂಹ, 1031, ಪಂಚತಂತ್ರ, ಪೀಠಿಕಾ ಪ್ರಕರಣ ಪದ್ಯ 24

12 ಧರೆಯೊಳಗೆ ನೆಗಟ್ತೆ ಶಾಂತೀ
ಶ್ವರವರ ಕಥೆಯಂ ಪುರಾಣಚೂಡಾಮಣಿಯಂ
ವಿರಚಿಸಿದ ಪೊನ್ನಮಯ್ಯನೆ
ಚರಿತಾರ್ಥಂ ಕೃತಿ ಕವೀಂದ್ರ ಚೂಡಾರತ್ನಂ —ನಾಗವರ್ಮಕವಿ, 1042, ವರ್ಧಮಾನಪುರಾಣ, 1-5

13 ಕನ್ನಡದೊಳ್ ನೆಗಟ್ತೆಯಸಗಂ ಗಜಗಂ ಗುಣನಂದಿ ಪೊನ್ನನೆಂ
ಬನ್ನನೆ ಸಂಸ್ಕೃತೋಕ್ತಿಗೆ ಮಯೂರನ ಬಾಣನ ಕಾಳಿದಾಸನೋ
ರನ್ನನೆ ಬೇೞ್ಪ ಮತ್ತಿನಟಿಗಬ್ಬಿಗರೋಳಿಗರೊಳ್ ಪೊಣರ್ಚೆ ಪೇ
ೞ್ವನ್ನನೆ ಬಲ್ಮೆವೆತ್ತ ಕವಿತಾದ್ವಯದೊಳ್ ಕವಿತಾಗುಣೋದಯಂ
—ನಾಗವರ್ಮ, 1042, ವರ್ಧಮಾನಪುರಾಣ, 1-27

14 ನಿರುಪಮ ನವರಸ ರಸಿಕತೆ
ದೊರೆವೆತ್ತಿರೆ ದೇಸಿ ದೇಸೆವೆತ್ತಿರೆ ಪರಮಾ
ದರದಿಂ ಶಾಂತಿಜಿನೇಶ್ವರ
ಪುರಾಣಮಂ ಪೇೞ್ದ ಪೊನ್ನನಂ ಪೊಗೞದರಾರ್
—ಶಾಂತಿನಾಥಕವಿ, 1060, ಸುಕುಮಾರ ಚರಿತೆ, 1-38

15 ಮನ್ನಿಸುಗೆ ಕೃತಿಗೆ ಸೌಭಾ
ಗ್ಯೋನ್ನತಿಯಂ ಸುಕವಿಪಂಪನಾದಿಪುರಾಣಂ
ಪೊನ್ನನ ಶಾಂತಿಪುರಾಣಂ
ರನ್ನನ ಕೃತಿರತ್ನಮೆನಿಸಿದಜಿತಪುರಾಣಂ —ನಾಗಚಂದ್ರ, 1105, ಮಲ್ಲಿನಾಥಪುರಾಣ, 1-25

16 ಅಸಗನ ದೇಸಿ ಪೊನ್ನನ ಮಹೋನ್ನತಿವೆತ್ತ ಬೆಡಂಗು ಪಂಪನೊಂ
ದಸದೃಶಮಪ್ಪಪೂರ್ವರಸಮೆಯ್ದೆ ಗಜಾಂಕುಶನೊಳ್ಪುವೆತ್ತು ರಂ
ಜಿಸುವ ಸದರ್ಥದೃಷ್ಟಿ ಗುಣವರ್ಮನ ಜಾಣ್ಕವಿರತ್ನನೋಜೆ ಶೋ
ಭಿಸೆ ನೆಲಸಿರ್ಕೆ ಧಾರಿಣಿ ಮನಂಗೊಳೆ ಮತ್ಕೃತಿಯೊಳ್ನಿರಂತರಂ —ನಯಸೇನ, 1112, ಧರ್ಮಾಮೃತ, 1-39

17 ಪೊನ್ನನ ರನ್ನನ ಪಂಪನ
ಸನ್ನುತಕವಿತಾಗುಣಕ್ಕೆ ಸರಿದೊರೆ ಸಮನ
ಪ್ಪನ್ನರ್ ಕಾವ್ಯಕಳಾಸಂ
ಪನ್ನರ್ ಪೆಱರೊಳರೆ ಧರೆಯೊಳಿನ್ನುಂ ಮುನ್ನುಂ
—ಕರ್ಣಪಾರ್ಯಕವಿ, 1165, ನೇಮಿನಾಥಪುರಾಣ, 1-21

18 ಇನಿತುಮವಿರ್ಕೆ ಮತ್ಕೃತಿಯೊಳೀಧರೆ ಬಣ್ಣಿಸೆ ಸಂದ ಶಂಖವ
ರ್ಮನ ಬಗೆ ಶಾಂತಿವರ್ಮನ ನಯಂ ಗುಣವರ್ಮನ ಬಂಧಗೌರವಂ
ಮನಸಿಜನೋಜೆ ಕಣ್ಣಮನ ಜಾಣ್ನುಡಿ ಪಂಪನ ರೀತಿ ಚಂದ್ರಭ
ಟ್ಟನ ಜತಿ ಪೊನ್ನಮಯ್ಯನ ಬೆಡಂಗು ಗಜಾಂಕುಶನುಳ್ಳ ಬಿನ್ನಣಂ
—ರುದ್ರಭಟ್ಟ, 1185, ಜಗನ್ನಾಥವಿಜಯ, 1-10

19 ನಯದಿಂ ಪಂಪನೊಱಲ್ದು ನಿರ್ಮಿಸಿದ ಪೊನ್ನಂ ಪ್ರೀತಿಯಿಂ ಪೇೞ್ದ ಭ
ಕ್ತಿಯಿನಾ ರತ್ನಕವೀಶ್ವರಂ ಸಮೆದ ತತ್ಕಾವ್ಯತ್ರಯಕ್ಕಂ ಜಗ
ತ್ತ್ರಯಮುಂ ಮುಂ ಬೆಲೆಯಾಗಿ ಪೋಯ್ತನೆ ಬೞಿಕ್ಕಾಂ ಪೇೞ್ದ ಚಂದ್ರಪ್ರ
ಭೋದಯವಿಸ್ತಾರಿಯೆನಿಪ್ಪ ಕಾವ್ಯಮಿದಮೂಲ್ಯತ್ವಕ್ಕೆ ಪಕ್ಕಾಗದೇ
—ಅಗ್ಗಳಕವಿ, 11[illegible], ಚಂದ್ರಪ್ರಭಪುರಾಣ, 1-66

20 ಶ್ರೀವಿಜಯಂ ಗಜಾಂಕುಶನುದಾತ್ತಯಶಂ ಗುಣವರ್ಮನಾ ಜಗ
ತ್ಪಾವನ ನಾಗವರ್ಮನಸಗಂ ರಸಿಕಾಗ್ರಣಿ ಹಂಪದೇವನಾ
ಭಾವಕ ಚಕ್ರಿ ಹೊನ್ನಿಗನಿಳಾನುತ ರನ್ನಿಗನಗ್ಗದಗ್ಗಳಂ
ದೀವಿಭು ಬೊಪ್ಪನೆಂಬ ಕವಿದರ್ಶಕರಿಂದೆಸೆದತ್ತು ಭೂತಳಂ

—ಆಚಣ್ಣಕವಿ, 1190, ವರ್ಧಮಾನಪುರಾಣ, 1-18

21 ಪೊನ್ನಂ ವಿನೇಯರತ್ನಂ
ರನ್ನಂ ಭವ್ಯಾಬ್ಜಮುಖವಿಕಾಸನಮಿತ್ರಂ
ಪೊನ್ನನೆನಲ್ನೇರಾಣೆಯು
ಪೊನ್ನನ್ನನಮೂಲ್ಯ ರತ್ನದನ್ನಂ ಪೊನ್ನಂ

—ಬ್ರಹ್ಮಶಿವಕವಿ, ಸು. 1200, ಸಮಯಪರೀಕ್ಷೆ, 1-34

22 ಪೊನ್ನನೆ ಪಂಪನೆ ರಜಕನೆ
ರನ್ನನೆ ಕವಿತಾಗುಣೋದಯನೆ ದರ್ಶನ ಸಂ
ಪನ್ನತೆಯೊಳ್ಕವಿತೆಯೊಳವ
ರನ್ನನೆ ವಿದಿತಾತ್ಮಭಾವನಗ್ಗಳದೇವಂ

—ಬ್ರಹ್ಮಶಿವಕವಿ, ಸು. 1200, ಸಮಯಪರೀಕ್ಷೆ, 1-35

23 ಚದುರರೆನಿಸಿದರ ಚಿತ್ರ
ಕ್ಕಿದು ಪೊಸತೆನಿಸಿರ್ದ ರೀತಿಯುಂ ನಿರ್ವಹಿಪ
ಗ್ಗದ ಬಲ್ಮೆ ಬಗೆಯೆ ತನಗ
ಲ್ಲದೆ ಪೆಱರ್ಗಿಲ್ಲೆನಿಪ ಪೊನ್ನನಂ ಪೊಗಟದರಾರ್

—ಪಾರ್ಶ್ವಪಂಡಿತ, 1205, ಪಾರ್ಶ್ವನಾಥಪುರಾಣ, 1-58

24 ಕನ್ನರನಾದರದಿಂ ಕುಡೆ
ಹೊನ್ನಂ ಮನಮೊಸೆದು ತೈಲಪಂ ಕುಡೆ ರನ್ನಂ
ಮನ್ನಿಸಿ ಬಲ್ಲಾಳಂ ಕುಡೆ
ಜನ್ನಂ ಕವಿಚಕ್ರವರ್ತಿಪೆಸರಂ ಪಡೆದರ್

—ಜನ್ನ, 1209, ಯಶೋಧರಚರಿತೆ, ಬಿಟ್ಟಿರುವ ಭಾಗ ಪದ್ಯ 19

25 ಎನಗನುಕೂಲಮಕ್ಕೆ ಗುಣವರ್ಮನ ಜಾಣ್ನುಡಿ ಪಂಪನೀಪ್ಪು ಪೊ
ನ್ನನ ಬಗೆ ನಾಗವರ್ಮನ ಬಹುಜ್ಞತೆ ರನ್ನನ ಕಾಂತಿ ನಾಗಚಂ
ದ್ರನ ರಸಭಾವಮಗ್ಗಳನ ವಕ್ರತೆ ನೇಮಿಯ ದೇಸೆ ಪುಪ್ಪಬಾ
ಣನ ಮೃದುಬಂಧಮಿಾ ಕವಿಗಳಲ್ತೆ ಜಿನೇಂದ್ರಪುರಾಣಕರ್ತೃಗಳ್ —ಜನ್ನ, ಅನಂತನಾಥಪುರಾಣ, 1-35

26 ರನ್ನಂ ವಯ್ಯಾಕರಣಂ
ಜನ್ನಂ ಮೇಣ್ ಕವಿಗಳೊಳಗೆ ವಯ್ಯಾಕರಣಂ
ಹೊನ್ನನಸಹಾಯಕವಿ ಮೇಣ್
ಜನ್ನಿಗನಸಹಾಯ ಸುಕವಿ ಕವಿಚಕ್ರಿಗಳೊಳ್ —ಜನ್ನ, ಅನಂತನಾಥಪುರಾಣ, 14-77

27 ಅನುಗುಣಮಾಗಿ ಕೂಡೆ ಗುಣವರ್ಮನ ಮೆಯ್ಸಿರಿ ಪಂಪನೋಜೆ ಪೊ
ನ್ನನ ಪೊಸ ದೇಸೆ ರನ್ನನ ಗುಣೋನ್ನತಿಯಗ್ಗಳನೊಳ್ಪು ನಾಗವ
ರ್ಮನ ಬಹುರೀತಿ ನೇಮಿಯ ಚಮತ್ಕೃತಿ ಜನ್ನಿಗನಿಂಪು ನಾಗಚಂ
ದ್ರನ ರಸವೃತ್ತಿ ರಂಜಿಸುಗೆ ನಿರ್ಣಯಮೆನ್ನಯ ನವ್ಯಕಾವ್ಯದೊಳ್

—ಗುಣವರ್ಮಕವಿ, 1215, ಪುಷ್ಪದಂತಪುರಾಣ, 1-36

28 ಜಿನಸಮಯಪ್ರಕಾಶಕೃತಸತ್ಕವಿ ಪಂಪನ ಪೆಂಪುವೆತ್ತ ಪೊ
ನ್ನನ ಕವಿನಾಗಚಂದ್ರನ ನೆಗಟ್ತೆಯ ರನ್ನನ ಸಂದ ಬಂಧುವ
ರ್ಮನ ಬುಧನೇಮಿಚಂದ್ರನ ಜಗನ್ನುತ ಜನ್ನನ ಶಂಜಿಪಗ್ಗಳ
ಯ್ಯನಕೃತಿಸೌಂದರೀಸುಭಗಮಾವಗಮಿರ್ಕೆ ಮದೀಯಕಾವ್ಯದೊಳ್

—ಕಮಲಭವ, 1235, ಶಾಂತೀಶ್ವರಪುರಾಣ, 1-62

29 ಜನ್ನನ ದೇಸೆ ಪಂಪನ ಗುಣಂ ಗುಣನಂದಿಯ ತೊಂಡು ಪೊನ್ನನೊಳ್
ಸನ್ನಿದನೂದ ಜಾಣ್ನುಡಿ ಗಜಾಂಕುಶ ರಾಜನ ಚಿತ್ರವೃತ್ತಿ ತಾ
ನುನ್ನತವಾಗಿ ಸಂದ ಗುಣವರ್ಮನ ಜಾತಿ ಸಮಾನುರಕ್ತಿಯಿಂ
ದೆನ್ನಲಸಿರ್ಪುವೀ ಸುಕವಿಮಲ್ಲನ ಕಾವ್ಯವಿಳಾಸಗೇಹದೊಳ್

—ಮಲ್ಲಿಕಾರ್ಜುನ, 1245, ಸೂಕ್ತಿಸುಧಾರ್ಣವಂ, ಪೀಠಿಕಾ ಪ್ರಕರಣ ಪದ್ಯ 26

30 ಗಜಗನ ಗುಣನಂದಿಯ ಮನ
ಸಿಜನಸಗನ ಚಂದ್ರಭಟ್ಟ ಗುಣವರ್ಮ ಶ್ರೀ
ವಿಜಯರ ಹೊನ್ನನ ಹಂಪನ
ಸುಜನೋತ್ತಂಸನ ಸುಮಾರ್ಗಮಿದಱೊಳೆ ಲಕ್ಷ್ಯಂ —ಕೇಶಿರಾಜ, 1260, ಶಬ್ದಮಣಿದರ್ಪಣ, ಅನುಬಂಧ 5

31 ಅನುನಯದಿಂ ಗುಣವರ್ಮನ ಜಯಬಂ
ಧುವರ್ಮನ ಗಜಗನ ಗುಣನಂದಿಯ ನಯವ
ರ್ಮನ ಹೊನ್ನನ ಹಂಪನ ರನ್ನನ ಸುಮನೋಬಾಣನ ಜನ್ನಯನ
ಜಿನಗುಣವರ್ಣಿಮಯಕಾವ್ಯಕಥಾವ
ರ್ಣನಸೌವರ್ಣಪದಕವೆಮ್ಮಯ ಮತಿ
ವನಿತೆಗೆ ಕಂಠಾಭರಣತೆಯಂ ತಳೆದಿರ್ಕೆ ಕವೀಂದ್ರ ಪರಂಪರೆಯ

—ಕುಮುದೇಂದುಕವಿ, ಸು. 1275, ಕುಮುದೇಂದು ರಾಮಾಯಣ, 1-33

32 ಪೊಗಟ್ವೆಂ ಲಕ್ಷಣಲಕ್ಷಿತಾದ್ಭುತವಚೋನಿಷ್ಪಂಪನಂ ಪಂಪನಂ
ಜಗತೀಪ್ರೀತಿಕರ ಪ್ರಸಿದ್ಧ ಕವಿತಾಸಂಪನ್ನಂ ಪೊನ್ನನಂ
ಸುಗಮಾರ್ಥಸ್ಫುಟಶಬ್ದ ಸುಂದರಕಿರದ್ವಾಕ್ಸಾಂದ್ರನಂ ಚಂದ್ರನಂ
ಭಗವದ್ವಿಷ್ಣು ಕಥಾವತಾರರಚಿತಶ್ರೀಭದ್ರನಂ ರುದ್ರನಂ

—ಚೌಂಡರಸಕವಿ, 1300, ಅಭಿನವ ದಶಕುಮಾರಚರಿತೆ, 1. 12

33 ಪೊನ್ನಿಗನೋಜೆ ಪಂಪರಸನೊಪ್ಪುವ ಕಾವ್ಯದ ರೀತಿಯಾವಗಂ
ರನ್ನನಲಂಪುವೆತ್ತ ಪೊಸಮಾತು ಗಜಾಂಕುಶನರ್ಥಗೌರವಂ
ಮುನ್ನಿನ ಬಂಧುವರ್ಮ ಗುಣವರ್ಮರ ಜಾಣ್ನುಡಿ ನಾಗಚಂದ್ರನ
ತ್ಯುನ್ನತಿವೆತ್ತ ದೇಸೆ ನೆಲಸಿರ್ಕೆ ಮದೀಯ ಕಥಾಪ್ರಬಂಧದೊಳ್

—ನಾಗರಾಜಕವಿ, 1331, ಪುಣ್ಯಾಸ್ರವ, 1-1[illegible]

34 ಬಿನ್ನಣದ ಕುಸುರಿ ಪಸರಿಸು
ವನ್ನಂ ಗುಣಜಾತಿಬಂಧಮಳವಡೆ ನೆಗಳ್ದಾ
ಪೊನ್ನಂ ರನ್ನಂ ಕೂಡಿದೊ
ಡ್ನೀ ಪಾಗ್ವಧುಗೆ ಭೂಷಣಂ ಪೆಜತುಂಟೇ —ಮಧುರಕವಿ, ಸು. 1385, ಧರ್ಮನಾಥಪುರಾಣ, 1-3

35 ವಿನಂತನೇಮಿಯ ರೀತಿ ಗುಣವ
ರ್ಮನ ಚಮತ್ಕೃತಿ ನಾಗವರ್ಮನ
ಕೆನಹು ಹೊನ್ನನ ದೇಸಿ ವಿಜಯನ ಭಾವವಗ್ಗಳನ
ಸನುನಯೋಕ್ತಿ ಗಜಾಂಕುಶನ ಬಿ
ನ್ನಣ ಯಶಶ್ಚಂದ್ರನ ಬಹುಜ್ಞತೆ
ಯನುಕರಿಸಲೀ ಕಾವ್ಯದೊಳಗೆನಗವರ ಕರುಣದಲೆ —ಭಾಸ್ಕರಕವಿ, 1424, ಜೀವಂಧರಚರಿತೆ, 1-31

36 ಶಾಂತೀಶನ ಪೊಗಳಿದ ಪೊನ್ನನ ರಘು
ಕಾಂತನ ಮಲ್ಲಿತೀರ್ಥಕರ
ಸಂತಸದಿಂ ವರ್ಣಿಸಿದ ನಾಗಚಂದ್ರನ
ಸಂತತಮಭಿವಂದಿಸುವೆನು —ಮಂಗರಸಕವಿ, 1508, ನೇಮಿಜಿನೇಶಸಂಗತಿ, 1-26

37 ಗಜಗನ ಗುಣವರ್ಮನ ಶಾಂತಿವರ್ಮನ
ವಿಜಯನ ಪೊನ್ನನಗ್ಗಳನ
ಸುಜನೋತ್ತಂಸ ರನ್ನನ ಮಧುರನ ಮನ
ಸಿಜನಿವರನು ಸ್ತುತಿಸುವೆನು —ದೇವಪ್ಪಕವಿ, 1525, ರಾಮವಿಜಯಕಾವ್ಯ, 1-44

38 ಜನ್ನನೊಡಗು ಗುಣವರ್ಮನ ಚಾತುರ್ಯ
ರನ್ನನ ಗುಣ ಪೊನ್ನನಿಂಪು
ಎನ್ನಯ ಮತಿಮಣಿದರ್ಪಣವನು ಪ್ರ
ಸನ್ನವೃತ್ತಿಯನೆಯ್ದಿಸುಗೆ —ಬಾಹುಬಲಿ, 1560, ನಾಗಕುಮಾರಚರಿತಂ, 1-26

39 ರನ್ನನ ಹೊನ್ನನ ಜನ್ನಮಯನ ಚತು
ರೋನ್ನತ ಕವಿತಾರ್ಣವನ
ಸನ್ನುತಕವಿ ಪಂಪರಾಜ ಮೊದಲಾದವರ
ವೆನ್ನಡಿಗಳಿಗೆರಗುವೆನು —ಶಿಶುಮಾಯಣ, ಸು. 1500, ಅಂಜನಾಚರಿತೆ, 12-32

40 ವರಶಾಂತಿನಾಥನ ಪೊಗಳಿದ ಹೊನ್ನನ
ಸ್ಮರಹರ ನೇಮಿಚರಿತವ
ದುರಿತಾರಿ ವೀರೇಶನ ಚರಿತವ ಪೇಳ್ದ
ಗರುವ ಕಣ್ಣಪನ ನುತಿಪೆನು —ದೊಡ್ಡಯ್ಯಕವಿ, 1550, ಚಂದ್ರಪ್ರಭಸಾಂಗತ್ಯ

41 ಜನ್ನಮಧುರನು ನಾಗವರ್ಮನು
ಪೊನ್ನನಗ್ಗಳ ನೇಮಿಚಂದ್ರನು
ರನ್ನ ಪಂಪನು ಶಾಂತಕವಿ ಗುಣವರ್ಮ ಮೊದಲಾದ
—ನಿಟ್ಟೂರ ದೊಡ್ಡಣಾಂಕ, 1578, ಚಂದ್ರಪ್ರಭಷಟ್ಪದಿ, 1-15

42 ವಿನುತಕವಿವರ ನೇಮಿಚಂದ್ರನು
ಘನಕವೀಶ್ವರನೆನಿಪ ಹೊನ್ನನು
ಸನುನಯದ ಕವಿ ರನ್ನ ಕರ್ಣಾನಂದರಸಕವಿತಾ

ಧನಿಕ ಹಂಪನು ನಾಗವರ್ಮಾ
ದ್ಯನುಪಮಿತಕವಿಗಳನು ನುತಿಸುವೆ
ಮನಕೆ ಬಂದಂತೆನಗೆ ಕವಿತಾವರವ ಕೊಡಲೆಂದು

—ಧರಣಿಪಂಡಿತಕವಿ, ಸು. 1650, ಬಿಜ್ಜಳಚರಿತ್ರೆ

43 ಕವಿಚಕ್ರವರ್ತಿ ಜನ್ನಯ್ಯನ ಪೊನ್ನವ
ಕವಿ ಸುಜನೋತ್ತಂಸನನು
ಕವಿನುತ ಮನಸಿಜ ಮಧುರ ಕವೀಂದ್ರರ
ಸುವಿನಯದಿಂ ಬಲಗೊಂಬೆ —ಚಿಕ್ಕಪದ್ಮಣಸೆಟ್ಟಿ, 1580, ಅನಂತನಾಥಚರಿತೆ, 1-29

44 ನೆಲಸುಗೆನ್ನೆಯ ಕೃತಿಯೊಳಗೆ ಕವಿ
ತಿಲಕ ಪಂಪನ ರೀತಿ ಪೊನ್ನನ
ಪಲವು ಬಿನ್ನಣದಿಂಪು ನೇಮಿಯ ಬಗೆ ಗಜಾಂಕುಶನ
ಲಲಿತ ಪದರಚನಾತಿಶಯಮು
ಗ್ಗಳನ ಶಬ್ದದ ನಿಪುಣ ಜನ್ನವ
ನಲಘುರಸ ಭಾವಾರ್ಥಮಭಿನವ ಪಂಪನೊಳ್ಬೆಡಗು

—ಚಿಕ್ಕಣಪಂಡಿತಕವಿ, ಸು. 1600, ಬಾಹುಬಲಿಚರಿತೆ, 1-7

45 ಜನ್ನನಗ್ಗದ ಹಂಪರಾಜನು
ಹೊನ್ನನಭಿನವಹಂಪ ಗುಣಸಂ
ಪನ್ನ ಕುಮುದೇಂದುಗಳು ಜಯಕೀರ್ತಿಗಳು ಗುಣವರ್ಮ
ರನ್ನನುಪಮ ನಾಗವರ್ಮ ಪ್ರ
ಸನ್ನಕವಿಗಳ ಚರಣವೀಗೆಮ
ಗುನ್ನತೋನ್ನತ ಶಬ್ದಪದ್ಧತಿಗಳನು ಒಲವಿಂದ

—ಪಾರ್ಶ್ವಕವಿ, ಸು. 1670, ನಿಂಬಸಾಮಂತಚರಿತೆ, 1-7

46 ಅತಿಶಯದ ಶ್ರೀ ಶಾಂತಿನಾಥನ
ಕೃತಿಯ ಪೇಳಿದ ಹೊನ್ನಕವಿ............

—ಬೊಮ್ಮಣ್ಣಕವಿ, 1749, ನಾಗಕುಮಾರಷಟ್ಪದಿ, 1-36

ಇವರಲ್ಲದೆ 1445ರಲ್ಲಿದ್ದ ಕೋಟೀಶ್ವರಕವಿ ತನ್ನ ಜೀವಂಧರ ಷಟ್ಪದಿಯೆಂಬ ಕಾವ್ಯದಲ್ಲೂ, ಸುಮಾರು 1600ರಲ್ಲಿದ್ದ ಬ್ರಹ್ಮಕವಿ ತನ್ನ ವಜ್ರಕುಮಾರಚರಿತೆ ಕಾವ್ಯದಲ್ಲೂ, ಸುಮಾರು 1650ರಲ್ಲಿದ್ದ ದೇವರಸಪಂಡಿತಕವಿ ತನ್ನ ಗುರುದತ್ತಚರಿತೆ ಕಾವ್ಯದಲ್ಲೂ (ಒಂದು ಪ್ರತಿಯಲ್ಲಿ ಈ ಪದ್ಯ ಇಲ್ಲವೆಂದು ಕವಿಚರಿತೆಕಾರರು ನಮೂದಿಸಿದ್ದಾರೆ) ಪೊನ್ನಕವಿಯನ್ನು ಸ್ಮರಿಸಿದ್ದಾರೆ. ಇನ್ನೂ ಕೆಲವು ಕವಿಗಳು ಪೊನ್ನನನ್ನು ನೆನೆದಿರಬಹುದು.

ಇಷ್ಟೊಂದು ಕವಿಗಳು ಪೊನ್ನನನ್ನು ಜ್ಞಾಪಿಸಿಕೊಂಡಿರುವುದರ ಒಟ್ಟು ಸಾರಾಂಶವೇನೆಂಬುದು ಮುಖ್ಯವಾಗಿ ಚಿಂತನೀಯವಾಗುತ್ತದೆ. 1. ಇದು ಪೊನ್ನನ (ಕವಿ) ಜನಪ್ರಿಯತೆಯನ್ನು ತೋರಿಸುತ್ತದೆ; ಪಂಪನನ್ನು ಬಿಟ್ಟರೆ ಪೊನ್ನ ತುಂಬ ಆದರಣೀಯ ಕವಿ. 2. ಇದು ಪೊನ್ನಕವಿಯ ಪ್ರಭಾವ ಎಷ್ಟು ಗಾಢ, ಎಷ್ಟು ವ್ಯಾಪಕ, ಎಷ್ಟು ದೀರ್ಘಕಾಲದ ವರೆಗೆ ಉಳಿದುಬಂದಿದೆ ಎಂಬುದನ್ನು ಬಿಂಬಿಸುತ್ತದೆ. 3. ತಮ್ಮ ಸ್ವಧರ್ಮ ಮಮತೆಯಿಂದಾಗಿ ಈ ಕವಿಗಳೆಲ್ಲ ಪೊನ್ನನ ಶಾಂತಿಪುರಾಣವನ್ನು ಮಾತ್ರ ಉಲ್ಲೇಖಿಸಿದ್ದಾರೆ. 4. ಬಹಳ ಹಿಂದೆಯೇ, ಜೈನಕವಿಗಳ ಉಪೇಕ್ಷೆಯೂ ಬೆರೆತು,

ಭುವನೈಕ ರಾಮಾಭ್ಯುದಯ ಕಾವ್ಯ ಕವಿಜನ ರೂಢಿಯಿಂದ ತಪ್ಪಿಹೋಯಿತೆಂದು ತೋರುತ್ತದೆ. 5. ಇವರಲ್ಲಿ ಕೆಲವು ಕವಿಗಳು ಪೊನ್ನನನ್ನು ಕೇವಲ ತತ್ಪೂರ್ವ ಜೈನಕವಿಗಳನ್ನು ಸ್ಮರಿಸುವ ಸಂಪ್ರದಾಯಕ್ಕೆ ಬದ್ಧರಾಗಿ ಉಲ್ಲೇಖಿಸಿದ್ದಾರೆ. 6. ಜೈನೇತರ ಕವಿಗಳಾದ ರುದ್ರಭಟ್ಟ (ಜಗನ್ನಾಥವಿಜಯ), ದುರ್ಗಸಿಂಹ (ಪಂಚತಂತ್ರ) ಮತ್ತು ಚೌಂಡರಸ (ಅಭಿನವ ದಶಕುಮಾರಚರಿತೆ)—ಈ ಕವಿಗಳು ತಮಗೆ ಅನ್ಯಧರ್ಮದವನಾದ ಜೈನನಾದ ಪೊನ್ನನನ್ನು ಮುಕ್ತಕಂಠದಿಂದ ಉಲ್ಲೇಖಿಸಿರುವುದು ಮನನೀಯ, ಗಮನಾರ್ಹ. ಇದು ಪೊನ್ನನ ಕಾವ್ಯೋನ್ನತಿಗೆ ಸಂದ ಗೌರವ. 7. ಇವರಲ್ಲಿ ಯಾವ ಕವಿಯೂ ಪೊನ್ನನ ಗತಪ್ರತ್ಯಾಗತ ಕುರಿತು ಏನನ್ನೂ ಹೇಳುವುದಿಲ್ಲ. 8. ಪೊನ್ನನಲ್ಲಿ ಪ್ರಮುಖವಾಗಿ ಈ ಕವಿಗಳು ಮೆಚ್ಚಿಕೊಂಡಿರುವ ಕಾವ್ಯಗುಣಗಳು ಹೀಗಿವೆ :

ಪೊನ್ನಂ ನಯವಿದಂ, ಧರಣಿಗೆ ನೆಗಟ್ದನ್
ಕನ್ನಡದೊಳ್ ನೆಗಟ್ತೆಯ ಕವಿ ಪೊನ್ನಂ
ನಿರುಪಮ ನವರಸ ರಸಿಕತೆ ದೊರೆವೆತ್ತ ಕವಿ
ಪೊನ್ನಂ ಸೌಭಾಗ್ಯೋನ್ನತ ಕವಿ
ಪೊನ್ನನ ಮಹೋನ್ನತಿವೆತ್ತ ಬೆಡಂಗು
ಪೊನ್ನನ ಸನ್ನುತ ಕವಿತಾಗುಣಕ್ಕೆ ಸರಿದೊರೆಯಿಲ್ಲ
ಇವನಿಗೆ ಸಮನಪ್ಪ ಕಾವ್ಯಕಳಾ ಸಂಪನ್ನರಿಲ್ಲ
ಪೊನ್ನಮಯ್ಯನ ಬೆಡಂಗು
ದೇಸಿ ದೇಸಿವೆತ್ತ ಕವಿ
ಪೊನ್ನಂ ವಿನೇಯ ರತ್ನಂ
ಪೊನ್ನನ್ ಎನಲ್ ನೇರಾಣೆಯ ಪೊನ್ನನ್ನನ್
ಪೊನ್ನನೆ ಕವಿತಾಗುಣೋದಯನ್
ಪೊನ್ನನ ಹೊಸದೇಸೆ (ಹೊನ್ನನ ದೇಸಿ)
ಭಾವಕ ಚಕ್ರಿ ಹೊನ್ನಿಗನ್
ಪೊನ್ನನ ಬಗೆ
ಪೊನ್ನನೊಳ್ ಸನ್ನಿದಮಾದ ಜಾಣ್ನುಡಿ
ಹೊನ್ನನ ಸುಮಾರ್ಗಂ
ಹೊನ್ನನ ಕಾವ್ಯಕಥಾವರ್ಣನ ಸೌವರ್ಣ ಪದಕಂ
ಪೊನ್ನಂ ಜಗತೀ ಪ್ರೀತಿಕರ ಪ್ರಸಿದ್ಧ ಕವಿತಾ ಸಂಪನ್ನಂ
ಪೊನ್ನಿಗನೋಜೆ
ಪೊನ್ನನಿಂಪು
ಪೊನ್ನನಸಹಾಯ ಕವಿ
ಪೊನ್ನನ ಪಲವು ಬಿನ್ನಣದಿಂಪು

9. ಈ ಕಾವ್ಯಗುಣಗಳು ಪೊನ್ನನಲ್ಲಿ ಮಾತ್ರ ಇವೆಯೆಂದು ಅರ್ಥೈಸಿಕೊಳ್ಳಬೇಕಾಗಿಲ್ಲ. ಈ ಗುಣಗಳು ಕನ್ನಡದ ಇನ್ನೂ ಕೆಲವು ಕವಿಗಳಲ್ಲಿವೆ. ಆದರೆ ಪೊನ್ನನಲ್ಲಿದ್ದ ಇನ್ನೂ ಇತರ ಗುಣಗಳಲ್ಲಿ ಈ ಕವಿಗಳು ಮೆಚ್ಚಿರುವ ಕಾವ್ಯಶಕ್ತಿ ಹೀಗಿದೆಯೆಂದು ತಿಳಿಯಬಹುದಾಗಿದೆ. 10. ಕನ್ನಡ ಭಾಷೆಯ ಸ್ಥಿತ್ಯಂತರ ಹಂತಗಳಲ್ಲಿ ಸಂಭವಿಸಿದ ಧ್ವನಿ ವ್ಯತ್ಯಾಸಗಳಲ್ಲಿ ಪಕಾರ ಹಕಾರವಾಗಿ ಮಾರ್ಪಾಟು ಪಡೆದಿದೆ. ಅದರಂತೆ ಪೊನ್ನ ಎಂಬ ರೂಪ ಹೊನ್ನ ಎಂದಾಗಿದೆ. ಆದರೆ ಇದು ಮತ್ತೆ ಪೊನ್ನ ಎಂದೇ ಬಳಕೆ ಪಡೆದುಕೊಂಡಿದೆ. 11. ಇಲ್ಲಿನ ಕೆಲವು ವಿಶೇಷಣಗಳು ಕೇವಲ ಪ್ರೀತಿ ಅಭಿಮಾನದಿಂದ ಬಂದ ಉತ್ಪ್ರೇಕ್ಷಿತ ನುಡಿಗಳಾಗಿವೆ—ಪೊನ್ನನ ಸನ್ನುತ ಕವಿತಾಗುಣಕ್ಕೆ ಸರಿದೊರೆಯಿಲ್ಲ,

ಸಮನಪ್ಪ ಕಾವ್ಯಕಳಾಸಂಪನ್ನರಿಲ್ಲ, ಅಸಹಾಯ ಕವಿ. 12. ಪೊನ್ನನಲ್ಲಿ ಪೊನ್ನಾನಂತರದ ಈ ಅನ್ಯಕವಿಗಳು ಮೆಚ್ಚಿಕೊಂಡಿರುವ ಕಾವ್ಯಾಂಶಗಳು ಪೊನ್ನನ ಭುವನೈಕ ರಾಮಾಭ್ಯುದಯದಲ್ಲಿ ಹೇಗೆ ಎಲ್ಲಿ ಎಷ್ಟೆಷ್ಟು ವ್ಯಕ್ತಿದೋರಿವೆ ಯೆಂಬುದನ್ನು ಮನಗಾಣಲು ಅವಕಾಶವಿಲ್ಲವಾಗಿದೆ. ಶಾಂತಿಪುರಾಣದಲ್ಲಿ ಈ ಗುಣಗಳು ಸುವ್ಯಕ್ತವಾಗಿರುವ ಸಂದರ್ಭಗಳಲ್ಲಿ ಕೆಲವನ್ನು ವಿಮರ್ಶೆಯಿಂದ ಮನವರಿಕೆ ಮಾಡಿಕೊಳ್ಳಬಹುದು—ಮುಖ್ಯವಾಗಿ ಪೊನ್ನನ ದೇಸಿ, ಬೆಡಂಗು, ಬಗೆ, ಜಾಣ್ನುಡಿ, ಓಜೆ, ಇಂಪು—ಇವನ್ನು ಸೋದಾಹರಣವಾಗಿ ಪರಿಶೀಲಿಸಬೇಕಾಗುತ್ತದೆ.

ಅಂತೂ ಜೈನಕವಿಗಳೊಳಗೆಯಲ್ಲಿ ಎಲ್ಲರ ಕಣ್ಣಿನಲ್ಲಿ ಪೊನ್ನ ಉನ್ನತವಾದ ಸ್ಥಾನ ಗಳಿಸಿಕೊಂಡು ಬಹು ಪುರಸ್ಕೃತ ಪಾತ್ರನಾಗಿದ್ದಾನೆ. ಅವನ ಉನ್ನತ ವ್ಯಕ್ತಿತ್ವದ ಅಯಸ್ಕಾಂತತೆಗೆ ಇವರೆಲ್ಲ ಆಕರ್ಷಿತರಾಗಿ ತಲೆಬಾಗಿ ಕೈಜೋಡಿಸಿದ್ದಾರೆ. ಒಬ್ಬೊಬ್ಬರು ಪೊನ್ನನಲ್ಲಿ ಒಂದೊಂದು ಗುಣವನ್ನು, ಅವರವರಿಗೆ ಪ್ರಿಯವಾದುದನ್ನು ಮೆಚ್ಚಿಕೊಂಡಿದ್ದಾರೆ. ಅವೆಲ್ಲವನ್ನೂ ಒಟ್ಟಿಗೆ ಸೇರಿಸಿ ನೋಡಿದಾಗ ಪೊನ್ನನ ಕಾವ್ಯದ ಹಲವು ವೈಶಿಷ್ಟ್ಯಗಳ ದರ್ಶನವಾಗುತ್ತದೆ.

ಪೊನ್ನನ ಉಸಿರು ತಾಕುವಷ್ಟು ತೀರ ಹತ್ತಿರದವನಾದ ಕವಿ ರನ್ನ. ಅಲ್ಲದೆ ಪೊನ್ನನಿಗೆ ಅನ್ನ ನೀರು ನೆರಳು ನೀಡಿ ನೆರವಾದ ವಂಶದವರೇ ರನ್ನನ ಕೈಹಿಡಿದಿದ್ದಾರೆ. ಪೊನ್ನ ರಾಷ್ಟ್ರಕೂಟ ಸಾಮ್ರಾಜ್ಯದ ಅತ್ಯುನ್ನತಿ ನೋಡಿ ಅದರ ಇಳಿಗಾಲದ ಸುಳಿವುಗಳನ್ನು ಗುರುತಿಸಿರಬಹುದು. ಆದರೆ ಶಾಂತಿಪುರಾಣ ಬರೆಸಿದ ಮನೆತನದ ಅತ್ಯುನ್ನತ ಸ್ಥಿತಿಯ ನೆತ್ತಿಯಲ್ಲಿ ನಿಂತು ನೋಡುವ ಅವಕಾಶ ಪೊನ್ನನಿಗೆ ದೊರೆತಿತ್ತು. ರನ್ನನಿಗೆ ಚಾಲುಕ್ಯ ಸಾಮ್ರಾಜ್ಯದ ಶಿಖರ ಸ್ಥಿತಿಯಲ್ಲಿ ನಿಂತು ಕಾವ್ಯ ರಚಿಸುವ ಆನಂದ ದೊರೆಯಿತು. ಆದರೆ ಅಜಿತಪುರಾಣ ಬರೆಯುವ ವೇಳೆಗೆ ಅತ್ತಿಮಬ್ಬೆ ಮನೆತನದ ಇಳಿಗಾಲ ಆರಂಭವಾಗಿತ್ತು. ಈ ಚಾರಿತ್ರಿಕ ಪರಿಸ್ಥಿತಿ ಒಂದು ಸಾಮ್ರಾಜ್ಯದ್ದು, ಇನ್ನೊಂದು ಸಾಮಂತ ಶ್ರೀಮಂತರದ್ದು, ಕನ್ನಡ ನಾಡಿನ ಒಂದು ಪಾರ್ಶ್ವಚಿತ್ರ ಕಟ್ಟಿಕೊಡುತ್ತದೆ. ಪೊನ್ನ-ರನ್ನರು ಕಾವ್ಯ ರಚಿಸಿದ ಕಾಲ ಪರಿಸರದ ಆವರಣವನ್ನು ಕಲ್ಪಿಸಿಕೊಡುತ್ತದೆ. ಈ ಸಾಮಾಜಿಕ, ಸಾಹಿತ್ಯಕ ಹಾಗೂ ರಾಜಕೀಯ ಹಿನ್ನೆಲೆಯಲ್ಲಿರಿಸಿಯೇ ರನ್ನನೇಕೆ ಪೊನ್ನನನ್ನು ಕುರಿತು ಅಷ್ಟೊಂದು ಬಗೆಯಲ್ಲಿ ಪದ್ಯಗಳಲ್ಲಿ ಪ್ರಸ್ತಾಪಿಸುತ್ತಾನೆಂಬುದನ್ನು ಅರಿತುಕೊಳ್ಳಬೇಕಾಗಿದೆ. ಪೊನ್ನನನ್ನು ರನ್ನಕವಿ ಹತ್ತಾರು ಪದ್ಯಗಳಲ್ಲಿ, ಬಗೆ ಬಗೆಯಲ್ಲಿ ನೆನೆದಿರುವುದಕ್ಕೆ ಈ ರೀತಿಯದಾದ ಚಾರಿತ್ರಿಕ ಕಾರಣಗಳಿವೆ. ಯಾವ ಒಬ್ಬ ಕವಿಯೂ ಇನ್ನೊಬ್ಬ ಕವಿಯನ್ನು ಎಷ್ಟೇ ಗೌರವಾದರಗಳಿಂದ ಹೆಸರಿಸಿದರೂ ಇಷ್ಟೊಂದು ಪದ್ಯಗಳಲ್ಲಿ ನೆನೆಯುವುದಿಲ್ಲ. ಅಂಥ ನಿದರ್ಶನಗಳು ನನಗೆ ನೆನಪಿಲ್ಲ. ಕವಿಗೆ ಕವಿಮುನಿವಂ ಎಂಬ ಮಾತು ಮರೆಯಾಗಿ ಕವಿಗೆ ಕವಿ ನೆನೆವಂ ಎಂಬಂತಾಗಿದೆ ರನ್ನನ ಮಾದರಿ.

ಪೊನ್ನನ ವ್ಯಕ್ತಿತ್ವ

ಪೊನ್ನಕವಿ ತನ್ನ ವಿಚಾರವಾಗಿ ಬಿಟ್ಟುಕೊಟ್ಟಿರುವ ಜೀವನ ವಿವರಗಳು ಕಡಮೆ. ಇದು ಬಹುಮಟ್ಟಿನ ಕನ್ನಡ ಕವಿಗಳಿಗೆ, ಅಷ್ಟೇಕೆ ಭಾರತೀಯ ಕವಿಗಳಿಗೆ, ಅನ್ವಯಿಸುವ ಮಾತು. ತಮ್ಮ ಜೀವಿತ ಕಾಲದ ದೇಶದ ಪರಿಸ್ಥಿತಿಯ ಹಾಗೂ ಸಂಸ್ಕಾರದ ವಿವರಗಳನ್ನು ಕೊಡುವ ಸಂದರ್ಭ ಬಂದಾಗಲೆಲ್ಲಾ ಸಾಹಿತಿಗಳು ಜಿಪುಣರಾಗುತ್ತಾರೆ. ಕಾಳಿದಾಸ ಹೀಗೆ ಮಾಡಿದ್ದರಿಂದ ಕಲ್ಪನೆಯ ಬಂಡವಾಳ ಹೂಡಿ ನೂರಾರು ಲೇಖನಗಳೂ ಕೃತಿಗಳೂ ಸಿದ್ಧವಾದುವು. ಕವಿರಾಜಮಾರ್ಗದ ಕರ್ತೃ ಯಾರೆಂದು ಚರ್ಚೆ ಹುಟ್ಟಿತು. ಕುಸುಮಾವಳೀಕಾವ್ಯದ ಕವಿ ಅಜ್ಞಾತನಾಗಿಯೇ ಉಳಿದುಬಿಟ್ಟಿದ್ದಾನೆ. ಇಂತಹ ಇನ್ನೂ ಹತ್ತಾರು ನಿದರ್ಶನಗಳು ಸಿಗುತ್ತವೆ. ಇವುಗಳಿಗೆ ಹೋಲಿಸಿದರೆ ಪಂಪ ಪೊನ್ನ ರನ್ನ ಜನ್ನರು ಎಷ್ಟೋ ವಾಸಿ. ಅಲ್ಪಸ್ವಲ್ಪ ಮಾಹಿತಿಗಳನ್ನಿತ್ತಾದರೂ ಉಪಕರಿಸಿದ್ದಾರೆ. ತನಗಿರುವ ಕಾವ್ಯಸಾಮರ್ಥ್ಯವನ್ನು ಉಬ್ಬಿ ಉಗ್ಗಡಿಸುವುದರಲ್ಲಿ ತೋರುವ ಅದಮ್ಯ ಉತ್ಸಾಹದ ಅತಿಪಾಲನ್ನು ಕೂಡ ಪೊನ್ನಕವಿ

ತನ್ನ ಮನೆ ಮಠ ಮಡದಿ ಮಕ್ಕಳು ತಾಯಿ ತಂದೆ ಬಂಧು ಬಳಗ ಕುರಿತು ಹೇಳುವಾಗ ತೋರುವುದಿಲ್ಲ. ಬಹುಶಃ ಸವಣನಾದುದರಿಂದಾಗಿ ಕವಿ ತಳೆದ ಈ ಕರ್ತೃಮೌನದಿಂದಾಗಿ ಅವನ ಜೀವನ ವಿವರಗಳು ಕಡೆಗೂ ಅನಾವರಣಗೊಳ್ಳುವುದಿಲ್ಲ. ಇದರಿಂದಾಗಿ ಶಾಂತಿಪುರಾಣದ ಕೆಲವು ಆಯ್ದ ಹೇಳಿಕೆಗಳನ್ನೂ ಇತರ ಬಾಹ್ಯ ಸಾಕ್ಷ್ಯಗಳನ್ನೂ ಸಂಕಲಿಸಿ ಪೊನ್ನನ ವ್ಯಕ್ತಿತ್ವದ ಸ್ಥೂಲಚಿತ್ರವನ್ನು ರಚಿಸಿಕೊಳ್ಳಬೇಕಾಗಿದೆ. ಸಹಜವಾಗಿಯೇ ಈ ರೀತಿಯಿಂದ ರೂಪಿತವಾದ ಚಿತ್ರಕ್ಕೆ ಅದೆಷ್ಟೋ ಸ್ವಾರಸ್ಯವೆನಿಸಿದರೂ ಇತಿಮಿತಿಗಳ ಚೌಕಟ್ಟು ಕಟ್ಟಿರುತ್ತದೆ. ಚಾರಿತ್ರಿಕ ಸತ್ಯಕ್ಕಿರುವ ಬೆಲೆ ಈ ಕಲ್ಪಿತ ಚಿತ್ರಕ್ಕೆ ಖಂಡಿತಾ ಇರುವುದಿಲ್ಲ. ಆದರೆ ಇವಕ್ಕೊಂದು ಪರಿಮಿತ ಔಚಿತ್ಯವಿರುತ್ತದೆ. ಪೊನ್ನ ತನ್ನ ವಿಚಾರವಾಗಿ ತಿಳಿಸಿರುವ ಸಂಗತಿಗಳನ್ನು ಹೆಕ್ಕಿನೋಡುವುದರಿಂದ ಅವನ ವ್ಯಕ್ತಿತ್ವದ ಸ್ಥೂಲಚಿತ್ರ ಮೂಡಿಬರುತ್ತದೆ. ಮೊದಲ ಸಲಕ್ಕೆ ಅವನು ತನ್ನ ಬಗ್ಗೆ ಬಾಯಿಬಿಡುವುದು, ಕಾವ್ಯದರ್ಪಣದಲ್ಲಿ ತನ್ನ ವ್ಯಕ್ತಿತ್ವವನ್ನು ಪ್ರತಿಫಲಿಸುವುದು ಹೀಗೆ:

ಅತಿಗಂಭೀರ ಮೃದೂಕ್ತಿ ವಕ್ತ್ರದೊಳೊಡಂಬಟ್ಟೊಪ್ಪೆ ಕೇಳ್ದಂ ಬಹು
ಶ್ರುತನಲ್ಪಶ್ರುತನೆನ್ನದಾರ ಕಿವಿಗಂ ನುಣ್ಪಿಂಪಿನೊಳ್ ಕೂಡೆ ಪಂ
ಡಿತರುಂ ಮೂರ್ಖರುಮೆಕ್ಕಯಿಂ ಪೊಗೞೆಪೇೞಲ್ ಬಾಜಿಸಲ್ಮಂ ಸರ
ಸ್ವತಿಯುಂ ಸಾಧಿಸೆ ಸಂದ ಸಯ್ಪು ಸವಣಂಗಕ್ಕುಂ ಪೆಱರ್ಗಕ್ಕುಮೇ ॥ 1-8

ಪೊನ್ನನ ಮುಖ ತುಂಬ ಗಾಂಭೀರ್ಯದ ಮಂಡಲ. ಆ ಮುಖಮಂಡಲದಲ್ಲಿ ಮೆಲ್ಮಾತು ಬೆರೆತು ಕಂಗೊಳಿಸುತ್ತದೆ. ಅವನ ಮೃದುವಾದ ಮಾತುಗಳನ್ನು ಕೇಳುವಾತ ತುಂಬ ತಿಳಿದವನಿರಲಿ, ಕಡಿಮೆ ಕಲಿತವನಿರಲಿ ಯಾವ ತಾರತಮ್ಯವೂ ತಲೆದೋರದೆ ಎಲ್ಲರ ಕಿವಿಗೂ ಹಿತಮಿತವಾದ ಶುಭ ಪರಿಣಾಮವನ್ನುಂಟುಮಾಡುತ್ತಿತ್ತು. ಹೀಗಾಗಿ ಕಲಿತವರೂ ಕಲಿಯದವರೂ ಪೊನ್ನನನ್ನು ಒಟ್ಟಿಗೆ ಹೊಗಳುತ್ತಿದ್ದರು. ವಿದ್ವಾಂಸರಿಗೂ ಕುರಿತೋದದವರಿಗೂ ತಿಳಿಯಹೇಳಲೂ ಕಾವ್ಯವಾಚನ ಮಾಡಲೂ ಇರಬೇಕಾದ ಶಕ್ತಿ ಚಾತುರ್ಯವನ್ನು ವಾಗ್ದೇವಿಯಿಂದ ಸಾಧನೆ ಮಾಡಿ ಈ ಕವಿ ಪಡೆದಿದ್ದಾನೆ. ಇಂಥ ಸಾಧನೆ ಸಿದ್ಧಿ ಪಡೆವ ಪುಣ್ಯ ಸವಣನಾದ ಪೊನ್ನನಿಗೆ ಸಾಧ್ಯವೇ ಹೊರತು ಇತರರಿಗೆ ಅಲ್ಲ. ಸಮಾಧಾನವೆಂದರೆ, ಈ ಸ್ವಪ್ರಶಂಸೆಯಲ್ಲಿ ಸ್ವಲ್ಪವಾದರೂ ಸತ್ಯವಿದೆ.

ಈ ಪದ್ಯದಲ್ಲಿ (1–8) ಪೊನ್ನ ತನ್ನ ವಾಕ್ ಪ್ರೌಢಿಮೆಯನ್ನೂ, ತನಗಿರುವ ಉಪನ್ಯಾಸವೈಭವವನ್ನೂ, ವಚೋವಿಲಾಸವೈಖರಿಯನ್ನೂ ಪರ್ಯಾಯವಾಗಿ ಪ್ರಶಂಸೆ ಮಾಡಿಕೊಂಡಿದ್ದಾನೆ. ಇದು ಕೇವಲ ಆತ್ಮಪ್ರಶಂಸೆಯಲ್ಲ, ಆತ್ಮಪ್ರತ್ಯಯವೂ ಹೌದು. ಗಂಭೀರತೆ ಹಾಗೂ ಮೃದೂಕ್ತಿ ಸ್ವಭಾವವನ್ನು, ಪಂಪನೂ ತನ್ನ ಪರವಾಗಿ ಹೇಳಿಕೊಂಡಿದ್ದಾನೆ. ಪೊನ್ನ ಇಲ್ಲಿ ಪಂಪನಲ್ಲಿ ಇಲ್ಲದ ಇನ್ನೂ ಹೆಚ್ಚಿನ ಗುಣಗಳು ತನ್ನಲ್ಲಿ ಮನೆಮಾಡಿಕೊಂಡಿವೆಯೆಂಬುದನ್ನು ಮೊನೆಮಾಡಿ ನುಡಿದಂತೆ ತೋರುತ್ತದೆ. ಅಲ್ಲದೆ ತಾನು ವಾಗ್ದೇವಿಯ ಕೃಪಾಪಾತ್ರನಾಗುವ ಪುಣ್ಯ ಕಟ್ಟಿಕೊಂಡಿರುವಂತೆ ಬೇರೆಯವರು ಆಗಲು ಸಾಧ್ಯವೆ ಎಂಬ ಬಿಂಕೋಕ್ತಿ ಇಲ್ಲಿ ಬೆರೆತಿದೆ. ಈ ಬಗೆಯ ಬಿಗುಮಾನ ಬಿಂಕಬಿಬ್ಬೋಕಗಳನ್ನು ಹೊಸೆದು ಮಸೆಯಲು ಅವನಿಗೆ ಇತರರ ಪಾಲಿಗೆ ಇಲ್ಲದ ಒಂದು ಕೋಡು ಬೇರೆ ಮೂಡಿದೆ:

ಭುವನದ ಕನ್ನಡ ಸಕ್ಕದ
ಗವಿಗಳ್ ಸಲೆ ಸಾಲೆ ಸೋಲೆ ಸವಣಂಗಿತ್ತಂ
ಸವಿವೇಕಮುಭಯಕವಿ ಚ
ಕ್ರವರ್ತಿ ವೆಸರಂ ನಿಜಾಹಿತೋಷ್ಣಂ ಕೃಷ್ಣಂ ॥ 1-9

ಈ ನೆಲದ ಮೇಲಿರುವ ಕನ್ನಡ ಹಾಗೂ ಸಂಸ್ಕೃತ ಕವಿಗಳು ಪೂರ್ಣವಾಗಿ ಸವಣಕವಿ ಪೊನ್ನನಿಗೆ ಶರಣಾದರು. ಎಲ್ಲರ ಮೇಲೂ ತನ್ನ ವಿಜಯಪತಾಕೆ ನೆಟ್ಟ ಪೊನ್ನನಿಗೆ ದೊಡ್ಡ ಬಿರುದು ಕೊಡಬೇಕೆಂಬ ಸದ್ಬುದ್ಧಿ

ರಟ್ಟರ ಹಿರಿಯ ದೊರೆ ಕೃಷ್ಣನಿಗೆ ಉಂಟಾಯಿತು. ಆತ (ಕೃಷ್ಣ) ಕೂಡ ತನ್ನ ಹಗೆಗಳಿಗೆ ಉರಿವ ಬೆಂಕಿಯಂತೆ ಇರುವವನು. ಹೀಗೆ ಹಗೆಗಳನ್ನು ಗೆದ್ದ ಕೃಷ್ಣನು ಎರಡೂ ಭಾಷೆಯ ಕವಿಗಳನ್ನು ಗೆದ್ದ ಪೊನ್ನನಿಗೆ "ಉಭಯಕವಿಚಕ್ರವರ್ತಿ" ಎಂಬ ಪ್ರಶಸ್ತಿಯನ್ನು ನೀಡಿದನು. ರಾಜರಲ್ಲಿ ಚಕ್ರವರ್ತಿ ಶ್ರೇಷ್ಠನಾದವನು ಕವಿಗಳಲ್ಲಿ (ಉಭಯ) ಕವಿಚಕ್ರವರ್ತಿ ಶ್ರೇಷ್ಠನು. ಯೋಗ್ಯರು ಯೋಗ್ಯರನ್ನು ಪುರಸ್ಕರಿಸುತ್ತಾರೆಂಬುದು ಒಳಧ್ವನಿ. ತಾನು ಕವಿ, ಉಳಿದವರು 'ಗವಿ' ಎಂಬ ಗೇಲಿಯೂ ಬಹುಶಃ ಇಲ್ಲಿ ಬೆರೆತಿರಬಹುದು. ಇಲ್ಲಿನ ಕಂದಪದ್ಯದ ಎರಡನಯ ಸಾಲು ಗವಿಗಳ್ ಎಂದು ಆರಂಭವಾಗಿದೆ. ಅಘೋಷಧ್ವನಿ ವ್ಯಾಕರಣ ನಿಯಮಾನುಸಾರ ಘೋಷತ್ವ ಪಡೆದು ಕೊಂಡಿದೆಯೆಂಬ ಸರಳ ವಿವರಣೆ ಇಲ್ಲಿಗೆ ನಿಲ್ಲುವಂತೆ ತೋರುತ್ತಿಲ್ಲ. ತನ್ನ ಸಾಮಾಜಿಕ ಎತ್ತರ ಬಿತ್ತಿಗಳನ್ನು ಹೊತ್ತ ಕುತ್ತಿಗೆಯನ್ನು ಬೀಗಿ ಠೇಂಕಾರದಿಂದ ಅವಲೋಕನ ಮಾಡುವ ಪೊನ್ನನ ಆತ್ಮಾಭಿಮಾನದ ಗತ್ತು ಕೂಡ ಇಲ್ಲಿ ಒತ್ತು ಪಡೆದು ಹೊಳಲುಗೊಡುವಂತಿದೆ ಈ ಅನುಮಾನವನ್ನು ಇದರ ಮುಂದಿನ ಪದ್ಯ ಪುಷ್ಟೀಕರಿಸಿ ಹರಿತಗೊಳ್ಳುತ್ತದೆ:

ದೊರೆಯಿಲ್ಲೆನೆ ಪೊರೆಯಿಲ್ಲೆನೆ
ನೆರಮಿಲ್ಲೆನೆ ಸಮಱೆ ಸಕ್ಕದಂ ಕನ್ನಡಮೊ
ಬೆರಡುಂ ಕವಿತೆಯನಮಳ್ವೆ
ತ್ತುರಂತಿರೊಡ ನಡಪಿದಂ ಕುರುಳ್ಗಳ ಸವಣಂ ॥ 1-10

"ಕುರುಳಗಳ ಸವಣ" ನೆಂದು ಹೆಸರುವಾಸಿಯಾದ ಪೊನ್ನಕವಿ ಸಂಸ್ಕೃತ ಮತ್ತು ಕನ್ನಡವೆಂಬ ಎರಡು ಭಾಷೆಗಳಲ್ಲೂ ಕವಿತೆ ಕಟ್ಟಿದ್ದಾನೆ. ಎರಡೂ ಭಾಷೆಗಳಲ್ಲಿ ಅವನ ಕವಿತೆ ಅವಳಿಜವಳಿಯಂತೆ ಹೊಂದಿಕೊಂಡಿವೆ. ಇವನ ಕವಿತೆಗೆ ಹೆಗೆಲೆಣೆಯಾದದ್ದು ಇನ್ನೊಂದಿಲ್ಲ; ಇದರಲ್ಲಿ ತಪ್ಪುಗಳಿಲ್ಲ. ಇನ್ನೊಬ್ಬರ ಸಹಾಯ ಪಡೆದಿಲ್ಲ—ಅಷ್ಟರ ಮಟ್ಟಿಗೆ ಒಪ್ಪವಾದ ಕಾವ್ಯ ಬರೆದಿದ್ದೇನೆ ಎನ್ನುತ್ತಾನೆ. 12–75 ನೆಯ ಪದ್ಯ ಪೊನ್ನ ತನ್ನನ್ನು ಕುರಿತು ಈ ಪದ್ಯದಲ್ಲಿ ಬೆನ್ನುತಟ್ಟಿಕೊಂಡಿರುವುದು ಮುಖ್ಯವಾಗಿ ಭಾಷಾಪ್ರೌಢಿಮೆಗಾಗಿ, ತನಗಿರುವ ಉಭಯಭಾಷಾ ವಿದ್ವತ್ತಿಗಾಗಿ, ತಾನು ಅಸಹಾಯಕವಿ ಎಂಬುದಕ್ಕಾಗಿ. ಇದು ಸಾಕಷ್ಟು ಸತ್ಯಕ್ಕೆ ಸಮೀಪ ಹೇಳಿಕೆ. ಈಗ ಉಪಲಬ್ಧವಿರುವ ಶಾಂತಿಪುರಾಣವನ್ನಷ್ಟೇ ವಿಮರ್ಶಿಸಿದಾಗ ಪೊನ್ನನಲ್ಲಿರುವ ಕನ್ನಡ ಮತ್ತು ಸಂಸ್ಕೃತ ಭಾಷಾಶಕ್ತಿ ಪ್ರಭುತ್ವ ಮೇಲ್ಮಟ್ಟದ್ದಾಗಿದೆ (ಸಂಸ್ಕೃತದಲ್ಲಿ ಅಂಥ ಹೇಳಿಕೊಳ್ಳುವ ಕಾವ್ಯ ಬರೆದಿಲ್ಲ). ಕನ್ನಡ ಸಕ್ಕದ ಭಾಷೆಗಳಲ್ಲಿ ಅವನಿಗಿರುವ ಪ್ರವೇಶ, ಪ್ರಾವೀಣ್ಯ ಅಗಾಧ. ಆದರೆ ಆತ ಬೇರೆ ಕವಿಗಳಿಂದ ಬಯಸಿ ಪಡೆಯುವಂತಹ ಅಗತ್ಯದವನಲ್ಲ. ಅವನ ಮಟ್ಟಕ್ಕೆ ಬರುವ ಕವಿಗಳು ಇಲ್ಲ ಎಂಬ ವಿಶೇಷಣ ಮಾತ್ರ ಅಪಾತ್ರ, ಸತ್ಯದೂರವಾದುದು. ಹೀಗಿದ್ದೂ ಪೊನ್ನನು 'ಅಸಹಾಯಕವಿ' ಎಂಬುದನ್ನು ಜನ್ನಕವಿ ತನ್ನ ಅನಂತನಾಥಪುರಾಣದಲ್ಲಿ ಪ್ರಶಂಸಿಸಿರುವುದು ಸೋಜಿಗವಾಗಿದೆ.

ಪೊನ್ನನಿಗಿರುವ ಸ್ವಾಭಿಮಾನದ ಆಧಿಕ್ಯವನ್ನು ಮೇಲಿನ ಪದ್ಯದಲ್ಲಿ ನೋಡುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಮುಂದಿನ ಪದ್ಯದಲ್ಲಿ ನೋಡಬಹುದು:

ಕನ್ನಡಗವಿತೆಯೊಳಸಗಂ
ಗನ್ನೂರ್ಮಡಿರೇಪೆನಗ್ಗಳಂ ಸಕ್ಕದದೊಳ್
ಮುನ್ನುಳ್ಳ ಕಾಳಿದಾಸಂ
ಗನ್ನಾಲ್ವಡಿ ರಚನೆಯೊಳ್ ಕುರುಳ್ಗಳ ಸವಣಂ ॥ 1-11

ತಾನು ಉಭಯಭಾಷಾ ವಿಶಾರದನಾದ ಕವಿ ಎಂಬುದನ್ನು ಮತ್ತೊಮ್ಮೆ ಇಲ್ಲಿ ನೆನಪಿಸುತ್ತಾನೆ. 'ಕುರುಳ್ಗಳ ಸವಣ' ನೆಂಬ ಬಿರುದಿನ ಕವಿ ಪೊನ್ನ, ಚಿನ್ನದಂತಹವನು. (ಯಾರೊ ಆತ ಪೊನ್ನ, 'ಪೊನ್' ಎಂಬುದು ಚಿನ್ನ, ಬೆಲೆಬಾಳುವ ಲೋಹವಿಶೇಷ. ಸಂಸ್ಕೃತದಲ್ಲಿ ಇದು ಸುವರ್ಣ. ಸವಣ ಎಂಬುದನ್ನೂ ಸುವರ್ಣ ಎಂಬುದನ್ನೂ ಸಮೀಪ ಶಬ್ದಗಳ ಧ್ವನಿ ಸಾದೃಶ್ಯವಿರುವುದನ್ನು ಪೊನ್ನ ಸೂಚಿಸುತ್ತಾನೆಯೊ ಎಂಬುದು ಅಸ್ಪಷ್ಟ.) ಈತನು ಕನ್ನಡ ಭಾಷೆಯಲ್ಲಿ ಬರೆದ ಕಾವ್ಯಗಳ ಮಹತ್ತಿನಿಂದ ಕನ್ನಡ ಕವಿತೆಯಲ್ಲಿ ತನಗಿಂತ ಮೊದಲು ಆಗಿ ಹೋದ ಅಸಗಕವಿಗಿಂತ ನೂರುಪಟ್ಟು ಮಿಗಿಲಂತೆ. ಇದು ಕನ್ನಡ ಕವಿತೆಯ ವಿಚಾರವಾಯಿತು. ಈತ ಹೇಗೂ ಉಭಯ ಭಾಷೆಯಲ್ಲಿ ಗಟ್ಟಿಗನಾದವನಲ್ಲವೆ! ಸಂಸ್ಕೃತ ಭಾಷೆಯ ಕಾವ್ಯರಚನಾ ಸಾಮರ್ಥ್ಯದಲ್ಲಿ ಕಾಳಿದಾಸನಿಗಿಂತ ನಾಲ್ಕುಪಾಲು ಮೇಲಾದವನಂತೆ. ಇದಪ್ಪಾ ವರಿಸೆ! ಉತ್ಪ್ರೇಕ್ಷಾಲಂಕಾರಕ್ಕೆ ಉತ್ತಮ ಉದಾಹರಣೆ.

ಪೊನ್ನನ ಈ ಉದ್ಧಟತನದಲ್ಲೂ ಒಂದು ಸದ್ಗುಣವಿದೆ. ಆತ ತಾನು ಯಾರಿಂದ ಉಪಕೃತನಾಗಿದ್ದಾನೆಯೊ ಅವರ ಹೆಸರನ್ನಾದರೂ ಹೇಳಿದ್ದಾನೆ, ನಹಿ ಕೃತಮುಪಕಾರಂ ಸಾಧವೋ ವಿಸ್ಮರಂತಿ ಎಂಬಂತೆ. ಏಕೆಂದರೆ ಕೃತಂ ಸ್ಮರಂ ಎಂಬ ಕೃತಜ್ಞ ಸ್ವಭಾವಕ್ಕೆ ಹೊರತಾದವರೂ ಇದ್ದಾರೆ. ಜನ್ನಕವಿ ತನ್ನ ಯಶೋಧರಚರಿತೆಯಲ್ಲಿ ಉದ್ದಕ್ಕೂ ವಾದಿರಾಜನನ್ನು ಹಿಂಬಾಲಿಸಿದ್ದರೂ ಮರೆತುಕೂಡ ವಾದಿರಾಜನನ್ನು ಹೆಸರಿಸಿಲ್ಲ. ರನ್ನ ತನ್ನ ಸಾಹಸಭೀಮವಿಜಯ ಕಾವ್ಯದಲ್ಲಿ ಹೆಜ್ಜೆ ಹೆಜ್ಜೆಗೂ ಪಂಪನನ್ನು ಅನುಸರಿಸಿದ್ದರೂ ಪಂಪನ ಹೆಸರನ್ನೇ ಹೇಳಿಲ್ಲ, ಹೀಗೆ ಕವಿಋಣವನ್ನೂ ಕೃತಿಮೂಲವನ್ನೂ ತಿಳಿಸದಿರುವ ಅಸೌಜನ್ಯ ಕೂಡ ಕವಿಸಮಯದ ಪಟ್ಟಿಗೇ ದಾಖಲಾಗಿಬಿಟ್ಟಿದೆ. ಪೊನ್ನ ಮಾತ್ರ ಅಸಗ ಕಾಳಿದಾಸರಿಗಿಂತ ಹಲವುಪಟ್ಟು ತಾನು ಮಿಗಿಲೆಂದು ತನ್ನ ಬೆನ್ನನ್ನು ತಾನೇ ತಟ್ಟಿಕೊಂಡು ಆತ್ಮಪ್ರತ್ಯಯಾತಿರೇಕವನ್ನು ತೋರಿದ್ದರೂ ಹೆಸರು ಹೇಳುವುದರಲ್ಲಿ ಚೌಕಾಶಿಸಿಲ್ಲ. ಜನ್ನನೇನೋ ಅನಂತನಾಥ ಪುರಾಣದಲ್ಲಿ ಪೊನ್ನನನ್ನು "ಹೊನ್ನನಸಹಾಯಕವಿ ಮೇಣ್ ಜನ್ನಿಗನಸಹಾಯ ಸುಕವಿ ಕವಿಚಕ್ರವರ್ತಿಗಳೊಳ್" (14–77) ಎಂದು ಉಲ್ಲೇಖಿಸಿ, ಪೊನ್ನನೂ ತನ್ನ ತಮ್ಮಟೆ ಹೊಡೆದಿರುವುದನ್ನು ಅನುಮೋದಿಸಿ 'ಅನುಮೋದನ ಪುಣ್ಯ' ಕಟ್ಟಿಕೊಂಡಿದ್ದಾನೆ. ಇದು ಸತ್ಯದೂರವಾದ ಕವಿಸಮಯ. ಪೊನ್ನನು 'ಅಸಹಾಯ ಕವಿ' ಅಲ್ಲ, 'ಅತಿಸಹಾಯ ಕವಿ'.

ವಾಸ್ತವವಾಗಿ ಪೊನ್ನ ತನ್ನ ಕನ್ನಡ ಕಾವ್ಯರಚನೆಗೆ, ಅದರ ಯಶಸ್ವೀ ನಿರ್ವಹಣೆಗೆ ಮಹಾಪುರಾಣವನ್ನು ಬಿಟ್ಟರೆ ಬಹುವಾಗಿ ಆಶ್ರಯಿಸಿರುವುದೇ ಅಸಗ ಮತ್ತು ಕಾಳಿದಾಸರನ್ನು. (ಅಗಸ ಶಬ್ದವನ್ನು ರಜಕ ಎಂಬರ್ಥದ ಅಗಸ ಶಬ್ದಕ್ಕೆ ವರ್ಣಪಲ್ಲಟ ಶಬ್ದವೆಂದು ವಿವರಿಸುವುದುಂಟು. ಆದರೆ 'ಅಸಂಗ' ಎಂಬುದರಿಂದ ಅಸಗ ಶಬ್ದ ಬಂದಿದೆಯೆಂಬುದನ್ನೂ ಗಮನಿಸಬೇಕು.) ಅಸಗಕವಿ ಕನ್ನಡದಲ್ಲಿ ಏನು ಬರೆದಿರುವನೊ ಅದು ದೊರೆತಿಲ್ಲ. ಜಯಕೀರ್ತಿಯು ಸಂಸ್ಕೃತದಲ್ಲಿ ಬರೆದಿರುವ ಛಂದೋನುಶಾಸನದಲ್ಲಿ ಅಸಗಕವಿಯ ಕನ್ನಡಕಾವ್ಯ ಕುಮಾರಸಂಭವ ವನ್ನು ಉದಾಹರಣೆ ಕೊಟ್ಟಿದ್ದಾನೆ. ಅಸಗಕವಿ ಬರೆದ ಸೊಗಸಾದ ಸಂಸ್ಕೃತ ಕಾವ್ಯಗಳು ಸಿಕ್ಕಿವೆ. ಪೊನ್ನ ನಂತೂ ಈ ಅಸಗನ ಸಂಸ್ಕೃತ ಶಾಂತಿಪುರಾಣದ ಕನ್ನಡ ಅವತರಣಿಕೆ ಸಿದ್ಧಪಡಿಸಿಕೊಟ್ಟಿದ್ದಾನೆ. ಕಾಳಿದಾಸನ ರಘುವಂಶದಿಂದ ನೂರಾರು ಪದ್ಯಗಳನ್ನು ಕನ್ನಡಕ್ಕಿಳಿಸಿದ್ದಾನೆ.

ಕಾಳಿದಾಸನಿಂದ ಇಂದುಮತಿ ಸ್ವಯಂವರ ವರ್ಣನೆಯನ್ನೂ ರಘುಮಹಾರಾಜನ ದಿಗ್ವಿಜಯ ಭಾಗವನ್ನೂ ಪೊನ್ನ ಸ್ವೀಕರಿಸಿರುವುದು ಕೃತಘ್ನತನವೇನೂ ಅಲ್ಲ. ಒಬ್ಬ ಕವಿ ಇನ್ನೊಬ್ಬ ಕವಿಯಿಂದ ಭಾಗವನ್ನೊ ಭಾವನೆ ಯನ್ನೊ ಎತ್ತಿಕೊಳ್ಳುವುದು ಅಪಹರಣವಲ್ಲ, ಸ್ವೀಕರಣ ಎಂದು ಕಾವ್ಯಮೀಮಾಂಸೆ ತಿಳಿಸಿದೆ. ಜಗತ್ತಿನ ಕವಿಗಳನ್ನು ಸಾಲಾಗಿ ನಿಲ್ಲಿಸಿದರೆ ಒಬ್ಬನ ಕೈ ಇನ್ನೊಬ್ಬನ ಜೇಬಿನಲ್ಲಿ ಎಂಬ ಮಾತು ಹುಟ್ಟಿದ್ದೇ ಹೀಗೆ. ಆದರೆ ಪೊನ್ನ ತಾನು ಸ್ವೀಕರಿಸಿದ ಭಾಗವನ್ನು ಹೇಗೆ ಉಪಯೋಗಿಸಿದ್ದಾನೆಂಬುದು ಮುಖ್ಯ. ಎಷ್ಟರಮಟ್ಟಿಗೆ

ಸ್ವೀಕೃತಕಥಾಂಶಗಳು ಕಾವ್ಯದ ಬಂಧದಲ್ಲಿ ಬೆಸೆದುಕೊಳ್ಳುತ್ತವೆಂಬುದು ಪರಿಶೀಲನಾರ್ಹ. ಸ್ವಯಂವರ ವರ್ಣನಾ ಭಾಗ ಪೊನ್ನನಲ್ಲಿ ಉಚಿತವಾಗಿ ಬಂದಿದೆ.

ನಿಜಸಂಗತಿ ಇಷ್ಟಿದ್ದೂ ಪೊನ್ನಕವಿ ಎನ್ನ ನುಡಿ ಟಾಠಡಾಥೆಣಮ್ ಎಂಬಂಥ ದಾಷ್ಟಿಕತನದಿಂದ ತಾನು ಅಸಗ ಕಾಳಿದಾಸರಿಗಿನ್ನ ಮೇಲಿನವನೆಂದು ಸಾರಿಕೊಂಡಿರುವುದು ಸ್ವಾರಸ್ಯವಾಗಿದೆ. ತಾನು ಅವರ ಹೆಗಲಮೇಲೆ ಅವರಿಗಿಂತ ದೊಡ್ಡವನೆಂದು ಕರೆದುಕೊಂಡಂತಾಗಿದೆ. ಈ ಬಗೆಯ ಘನಸ್ತಿಕೆಗೆ ಕೋಡು ಮೂಡುವಂತೆ ಶಾಂತಿ ಪುರಾಣ ಕಾವ್ಯವನ್ನು ರಚಿಸಲು ಕವಿಚಕ್ರವರ್ತಿ ಪೊನ್ನನೇ ತಕ್ಕ ಕವಿಯೆಂದೂ, ವ್ರತ ಮಾಡಿ ಈ ಪುರಾಣ ಚೂಡಾಮಣಿಯನ್ನು ಬರೆಯಲು ಬೇಕಾದ ಪುಣ್ಯ ಸಂಚಯಿಸಿಕೊಂಡಿರುವುದಾಗಿಯೂ 1-12 ರಲ್ಲಿ ನಿವೇದಿಸಿ ಕೊಂಡಿದ್ದಾನೆ:

ಶಾಂತಿಜಿನ ಜನ್ಮಜಲಧಿಗೆ
ಶಾಂತಿಪುರಾಣಮೆ ಪರಾರ್ಥ್ಯರತ್ನಮಿದಂ ಪೇ
ಳ್ವಂತು ಕವಿ ಚಕ್ರವರ್ತಿಯೆ
ನೋಂತಂ ಪೆಸರಿಂ ಪುರಾಣಚೂಡಾಮಣಿಯಂ ॥ 1-12

ಶಾಂತಿಪುರಾಣ ಕಾವ್ಯವನ್ನು ಹೇಳುವ ಕವಿಯೆಂದರೆ ಸಾಮಾನ್ಯನಲ್ಲ, ಆತ ಸ್ವಯಂ ಕವಿಚಕ್ರವರ್ತಿಯಾದ ಪೊನ್ನ. ಶ್ರೇಷ್ಠ ಆಚಾರ್ಯರಾದ ಜಿನಚಂದ್ರದೇವರೇ (—ಶಾಂತಿತೀರ್ಥಕರರೇ) ಕಥಾನಾಯಕ. ಇವರ ಉತ್ಸವ ನಿಧಿ ಮಲ್ಲಪಾರ್ಯ, ಯಶೋನಿಧಿ ಪುನ್ನಮಾರ್ಯ—ಈ ಇಬ್ಬರು ಸೋದರರು ಈ ಕಾವ್ಯವನ್ನು ಸವಿಕುಂದದಂತೆ, ನವರಸಗಳು ತುಂಬುವಂತೆ, ಮೃದುಬಂಧ ಪ್ರಸನ್ನತೆ ತುಳುಕುವಂತೆ ಪೊನ್ನನಿಂದ ಹೇಳಿಸಿದ್ದಾರೆ (1-37). ಈ ಕೃತಿ ಪುರಾಣಗಳಲ್ಲಿ ಪುರಾಣಚೂಡಾಮಣಿ, ಹೋಲಿಕೆಗೆ ಅಳವಡದ ಉಪಮಾತೀತವಾದ ಕೃತಿ (1-38, 39). ಈ ಭೂಮಿಗೆ ನಿಜವಾದ ಕಾವ್ಯರತ್ನವೆಂದರೆ ಪೊನ್ನಕವಿ ಬರೆದ ಈ ಅನರ್ಘ್ಯವಾದ ಶಾಂತಿಪುರಾಣ (1-51). ಇದಿಷ್ಟೂ ಪೊನ್ನಕವಿ ಹೇಳಿಕೊಂಡಿರುವ ತನ್ನ ಕಾವ್ಯದ ಮೇಲ್ಮೆ. ತಾನು ಬರೆದ ಕಾವ್ಯವೆಂಬ ಅಭಿಮಾನ ಅವನಿಂದ ಇಂಥ ಮಾತುಗಳನ್ನು ಹೇಳಿಸಿದೆ. ತಂದೆತಾಯಿಗಳು ತಮ್ಮ ಮಕ್ಕಳ ಸಮಾನ ಯಾರೂ ಇಲ್ಲವೆಂದು ಹೇಳಿಕೊಳ್ಳುವಂತೆ, ಈ ಕವಿ ತನ್ನ ಕಾವ್ಯದ ಮಹತಿಗೆ ಸರಿಗಟ್ಟುವ ಕಾವ್ಯ ಹಿಂದೆಯಾಗಲಿ ಮುಂದಾಗಲಿ ಮತ್ತೊಂದಿಲ್ಲವೆಂದು ನಿರೂಪಿಸಿದ್ದಾನೆ:

ಜಿನಚಂದ್ರಕೃತಿನಾಥನಾದನವನುಂ ತಾಂ ಶಾಂತಿನಾಥಂ ಪುರಾ
ತನ ಕಾವ್ಯಂಗಳುಮಿಾಗಳಾದ ಕುಕಥಾಕಾವ್ಯಂಗಳುಂ ಪೋಲ್ವುವಿ
ಲ್ಲ ನ ಭೂತೋ ನ ಭವಿಷ್ಯತಿ ಕ್ರಮನುದಕ್ಕೀ ಪ್ರೌಢಿಯುಂ ಮಲ್ಲಪ
ಯ್ಯನುಮತ್ತುನ್ನತ ಪುನ್ನಮಯ್ಯನುಮಧೀಶಪ್ರೀತಿಯಂ ಮಾಡಿದರ್ ॥ 12-59

ಹಿಂದಿಲ್ಲ ಮುಂದಿಲ್ಲ ಎಂಬಂಥ, ಹೋಲಿಕೆಯೇ ಇಲ್ಲದ ಈ ಶಾಂತಿಪುರಾಣವನ್ನು ಪೊನ್ನಕವಿ ಮತ್ತೆ ಮತ್ತೆ ಜಿನ ಪುರಾಣಗಳಿಗೆ ತಿಲಕಪ್ರಾಯ, ನೆತ್ತಿಯಮಣಿ, ಮುಡಿಯ ಮಾಣಿಕ್ಯ ಎಂಬ ಧ್ವನಿಹೊರಡುವಂತೆ ಪ್ರಸ್ತಾಪಿಸಿದ್ದಾನೆ:

ಶಾಂತಜಿನಾಂತರದೊಳ್ ಸಲೆ
ಶಾಂತಿಪುರಾಣಮೆ ಪುರಾಣಚೂಡಾಮಣಿಯೆಂ
ದಿಂತು ಪೆಸರಿಡುಗಮೇ ಮತಿ
ವಂತಂ ಕವಿಚಕ್ರವರ್ತಿ ಸಮೆದೀಕೃತಿಯಂ ॥ 12-56

...ನು ಪೊನ್ನನ ವ್ಯಕ್ತಿತ್ವದಲ್ಲಿ ಬೆಸೆದು ಎದ್ದುಕಾಣುವ ಅಭಿಮಾನ ಹೆಡೆಯಾಡುತ್ತದೆ. ಪೊನ್ನಕವಿಯನ್ನು ಅವನ ಅನಂತರದ ಅನೇಕ ಕವಿಗಳು ಬಗೆಬಗೆಯಾಗಿ ಕೊಂಡಾಡಿದ್ದಾರೆ. ಅವರಲ್ಲಿ ಕೆಲವರು ಪೊನ್ನನ ...ಂತಿಪುರಾಣವನ್ನು 'ಪುರಾಣಚೂಡಾಮಣಿ' ಯೆಂದೇ ಕರೆದು ಗೌರವಿಸಿದ್ದಾರೆ. ರನ್ನ ಮತ್ತು ನಾಗವರ್ಮ ...ಬ್ಬರೂ ಇದೇ ವಿಶೇಷಣವಿತ್ತು ಶಾಂತಿಪುರಾಣವನ್ನು ನಿರ್ದೇಶಿಸಿದ್ದಾರೆ. ಪೊನ್ನ ಈ ಭಾವನೆಯನ್ನು ಮುಂದು ...ರಿಸುತ್ತಾ ಕವಿಚಕ್ರವರ್ತಿಯ ಈ ಪುರಾಣವು ಮಹೀರತ್ನವಾಗಿದೆ (12–61) ಯೆಂದು ಬೇರೆ ಉದ್ಘೋಷಿಸುತ್ತಾನೆ. ...ದು ತನ್ನ ಪರಮಾವಧಿ ಮುಟ್ಟುವುದನ್ನು ಕೆಳಗಿನ ಎರಡು ಪದ್ಯಗಳಲ್ಲಿ ನೋಡುತ್ತೇವೆ:

ಶಾಂತಿಪುರಾಣದ ರೇಖೆಗ
ಳಂತುಱಿದಱಿಗವಿಯ ರೇಖೆ ಬಕ್ಕುಂಮೆ ಶಶಭೃ
ತ್ಕಾಂತಿಗೆ ಮಿಂಚುಂಬುಬುಸಮ
ನೆಂತಕ್ಕುಮೊ ದೊರೆಗಮೊರೆಗಮೆಣೆಗಂ ತೊಣೆಗಂ ॥ 12 67

ಪನ್ನೆರಡಾಶ್ವಾಸಂಗಳ
ಬಿನ್ನಣದ ತೆರಳ್ಕೆಯಿಂಪಿನೊಳ್ಪಿನ ರಸಮುಂ
ಭಿನ್ನರಸಂಗಳ ಸಮಕ
ಟ್ಟುನ್ನೆಟ್ಟನೆ ಮೆಱೆಗುಮಱಿಯ ಶಾಂತಿಪುರಾಣಂ ॥ 12-68

ಸೂರ್ಯನ ತೇಜಸ್ಸಿನೆದುರಲ್ಲಿ ಮಿಂಚುಹುಳುಗಳು ಮಂಕುಮಂಕಾಗುವಂತೆ ಶಾಂತಿಪುರಾಣದ ರೇಖೆಗಳು ...ನ್ಯಾಸಗೊಳ್ಳುವ ಹಾಗೆ ಉಳಿದ ಕ್ಷುಲ್ಲಕ ಕವಿಗಳ ಕಾವ್ಯರೇಖೆಗಳು ನಿರಿಗೊಳ್ಳವು; ಹನ್ನೆರಡು ಆಶ್ವಾಸಗಳ ...ಪ್ಪವಾದ ಮಾಟದ ಇಂಪು ಒಳ್ಪುರಸಗಳ ಸಮಕಟ್ಟಿಗೆ ಸಮನಾರುಂಟೆಂಬಂತೆ ಪ್ರಕಟತರವಾಗಿಯೇ ಶಾಂತಿಪುರಾಣ ...ಭಿಸುತ್ತದೆ ಎಂಬುದಾಗಿ ಪೊನ್ನ ಎದೆತಟ್ಟಿಕೊಂಡಿದ್ದಾನೆ. ಕವಿಗಳಲ್ಲಿ ಕವಿಚಕ್ರವರ್ತಿಯಾದ ತಾನು ...ತೇಜನೆಂದೂ, ಉಳಿದ ಅಳಿಗವಿಗಳೆಲ್ಲ ಇರುಳಲ್ಲಿ ಮಿಣುಕು ಮಿಣುಕೆನ್ನುವ ಮಿಂಚುಹುಳಗಳೆಂದೂ ಲೇವಡಿ ...ಡಿದ್ದಾನೆ. ಇಲ್ಲಿರುವುದು ಹೊರನೋಟಕ್ಕೆ ಶಾಂತಿಪುರಾಣದ ಹಿರಿಮೆಯೇ ಆದರೂ ಒಳನೋಟಕ್ಕೆ ಅದು ...ಯ ಕೊಂಡಾಟವೇ ಆಗಿದೆ. ಉದ್ದಕ್ಕೂ ಶಾಂತಿಪುರಾಣದ ಉದ್ಘೋಷದೊಡನೆ ಸ್ವಂತಪರಾಕು ಕೂಡ ...ಪದಿಹಾಕಿದೆ. ಇನ್ನು ಭುವನೈಕ ರಾಮಾಭ್ಯುದಯ ಸಿಕ್ಕಿದರೆ ಅಲ್ಲೆಷ್ಟು ಪ್ರಶಂಸೋದ್ಗಾರಗಳ ಸುರಿಮಳೆ ...ಗುತ್ತಿತ್ತೋ ಎಂಬ ಸಂದೇಹ ಮೂಡುತ್ತದೆ. ಅದಕ್ಕೆ ಸರಿಯಾಗಿ ಇಲ್ಲಿಯೂ ಅಂಥ ಸ್ವಪ್ರಶಂಸೆ ...ಣಿಸಿಕೊಂಡಿದೆ:

ವಿದಿತ ಭುವನೈಕ ರಾಮಾ
ಭ್ಯುದಯಕ್ಕಂ ಬೆಲೆಗಮಾವುದಂತರಮಿಂತೀ
ಪದಿನಾಲ್ಕುಂ ಭುವನಂಗಳ್
ಪದಿನಾಲ್ಕಾಶ್ವಾಸ ರಚನೆಗಂ ಬೆಲೆಯಕ್ಕುಂ ॥ 12-66

ಪ್ರಕಟಂ ಲೋಕೋತ್ತರ ಲೌ
ಕಿಕ ಪರಿಣತಿ ಪುನ್ನಿಗಂಗೆ ಶಾಂತೀಶ್ವರ ರಾ
ಮಕಥಾ ಪ್ರಶಸ್ತಿಯಿಂದಾ
ದ ಕೃತಿಗಳಿಂ ಕೃತಿಯುಗಂಗಳನ್ನವುಮೊಳವೇ ॥ 12-65

14 ಅಶ್ವಾಸಗಳ ಭುವನೈಕ ರಾಮಾಭ್ಯುದಯ ಕಾವ್ಯಕ್ಕೆ 14 ಲೋಕಗಳೂ ಬೆಲೆ ಬಾಳುತ್ತವೆಯೆಂದ ಮೇಲೆ ಆ ಮಹಾಕಾವ್ಯದ ಮಹೋನ್ನತಿಯನ್ನು ಏನೆಂದು ಹೇಳುವುದು? ಆದರೆ ಇಂದು 14 ಲೋಕಗಳಲ್ಲಿ ಆ ಕಾವ ಎಲ್ಲಿ ಅಡಗಿಕುಳಿತಿದೆಯೋ ತಿಳಿಯದು. ಅಲ್ಲಿ ಇಲ್ಲಿ ಉಳಿದುಬಂದಿರುವ ಆ ಕಾವ್ಯದ ಬೆರಳೆಣಿಕೆಯ ಪದ್ಯಗಳ ಸ್ವಾರಸ್ಯವಾಗಿವೆ. ಪೂರ್ತಿಯಾಗಿ ಆ ಕಾವ್ಯ ದೊರೆತ ಹೊರತು ಅದರ ವಿಮರ್ಶೆಗೆ ತೊಡಗುವುದ ಅಪೂರ್ಣವಾಗಿಬಿಡುತ್ತದೆ.

ಪೊನ್ನ ಪ್ರಶಂಸಾಪ್ರಿಯ; ಸ್ವಪ್ರಶಂಸೆ ಅವನಿಗೆ ಮುಜುಗರವೆನ್ನಿಸದು. ತನ್ನ ಬೆನ್ನನ್ನು ತಾನೇ ತಟ್ಟಿ ಕೊಳ್ಳುವುದು ನಾಚಿಕೆಯ ಕೆಲಸವೆಂದೇನೂ ಅವನಿಗೆ ಅನ್ನಿಸುವುದಿಲ್ಲ. ಎಲ್ಲರ ಕಿವಿಗೂ ಕೇಳುವಂತೆ, ಕಣ್ಣಿಗೆ ಕಾಣುವಂತೆ ಸಾರಿಹೇಳುತ್ತಾನೆ, ಬೆರಳೆತ್ತಿ ತೋರಿಸುತ್ತಾನೆ:

ಎರೆದೆಡೆವರ್ಪವನುಂ ಮ
ಚ್ಚರಿಸುವನುಂ ನುಡಿಗೆ ಸಕ್ಕದಂ ಕನ್ನಡಮೆಂ
ಬೆರಡುಂ ಕವಿತೆಯ ಬಲ್ಮೆಗೆ
ಬೆರಲೆತ್ತಿದನಿಳೆಯೊಳೀ ಕುರುಳ್ಗಳ ಸವಣಂ ॥ 12-70

ಇದೇ ರೀತಿಯ ಹೆಮ್ಮೆಯಿಂದ ಬೀಗಿದ ನಿರ್ಲಜ್ಜೋಕ್ತಿಗಳು 12-80, 12-81ನೆಯ ಪದ್ಯಗಳಲ್ಲಿ ಹೊಳಲ ಗೊಟ್ಟಿವೆ. ಇವಿಷ್ಟೇ ಸಾಲದೆಂಬಂತೆ ಪೊನ್ನ ಅನ್ಯ ಕವಿಗಳನ್ನು ಹೀಯಾಳಿಸಿಯೂ ಬರೆದಿದ್ದಾನೆ:

ಎಸೆಯದೆ ಪೂಟ್ಟುಕಟ್ಟಿ ಪಟಿಗಬ್ಬಮನಾವಗಮೆಮ್ಮವೆಂದು ಬಾ
ಚಿಸಿ ಪೆಱರ್ಗಿತ್ತುದಲ್ಲದೆ ಬಹುಶ್ರುತಮೆಂಬಿನಮೆಕ್ಕಲಾವಣಂ
ಪೊಸಯಿಪ ಕಮ್ಮಯಿಪ್ಪ ಸಮಕಟ್ಟುವ ಬಿನ್ನಣಮಿಲ್ಲದಕ್ಕೆ ರಂ
ಜಿಸುವೆರ್ದೆಗೊಳ್ಳದೀಗಡಿನ ಕಬ್ಬಿಗವಂದಿಗಳೊಂದವಿಂದಿಗಳ್ ॥ 12-76

ಪೊನ್ನಕವಿ ತನ್ನ ಅಗ್ಗಳಿಕೆ ಹೆಗ್ಗಳಿಕೆ ಹಿರಿಮೆಗಳನ್ನು ವೆಗ್ಗಳಿಸಿ ತಾನೇ ಹೇಳಿಕೊಂಡಿರುವುದು ಸರಿಯಲ್ಲ. ಆಭಾಸಕರ ಎಂದು ಇಂದಿನವರಿಗೆ ಭಾಸವಾಗುವುದು ತೀರ ಸಹಜ. ಆದರೆ ಪೊನ್ನನನ್ನು ಈ ಸ್ವಭಾವಕ್ಕಾಗಿ ಮೂಗು ಮುರಿಯುವ ಮೊದಲು ಇದಕ್ಕೆ ಒಂದು ದೀರ್ಘ ಪರಂಪರೆಯಿರುವುದನ್ನು ಮರೆಯಬಾರದು. ನಮ್ಮ ಹಿಂದಿನ ಎಲ್ಲ ಕಾವ್ಯಗಳಲ್ಲೂ ಈ ಬಗೆಯ ಸ್ವಪ್ರಶಂಸೆ ಹಾಗೂ ಅನ್ಯಕವಿನಿಂದನೆ ಸಾಮಾನ್ಯ. ಇದೊಂದು ಶಿಷ್ಟಮಾನ್ಯ ರೂಢಿ, ಪ್ರಚಲಿತವಾಗಿದ್ದ ಕಾವ್ಯ ಪದ್ಧತಿ, ಮಾನ್ಯವಾಗಿದ್ದ ಕವಿಮಾರ್ಗ. ಅದರಂತೆ ಪೊನ್ನನೂ ಪೂರ್ವಕವಿಗಳ ಹಾಗೂ ತನ್ನ ಕಾಲದ ಪದ್ಧತಿಗೆ ಹೆಜ್ಜೆ ಹಾಕಿದ್ದಾನೆ. ಆದ್ದರಿಂದ ಪೊನ್ನನ ಆತ್ಮಪ್ರಶಂಸೆಯ ಪದ್ಯಗಳಲ್ಲಿ ಆತ್ಮವಿಶ್ವಾಸದ ಜತೆಗೆ ಪೂರ್ವಕವಿದತ್ತವಾದ ಕಾವ್ಯಮಾರ್ಗದ ಅನುಸಂಧಾನವಿರುವುದನ್ನು ಗುರುತಿಸಬೇಕಲ್ಲದೆ ಅದಕ್ಕಿಂತ ಹೆಚ್ಚಗಿನ ಹೊಸಹುರುಳನ್ನೂ ಕೊಂಕುಕಾಕುಗಳನ್ನೂ ಅರಸಿ, ಆರೋಪ ಹೊರಿಸಿ ಹಿಂಸಿಸಬೇಕಾಗಿಲ್ಲವೆಂದೂ ರಿಯಾಯಿತಿ ತೋರಬಹುದು. ಇದೂ ಅಲ್ಲದೆ ಇಲ್ಲಿಯೇ ಹೇಳಿಬಿಡಬೇಕಾದ ಇನ್ನೂ ಒಂದು ಮಾತಿದೆ. ಈ ಪದ್ಯಗಳೆಲ್ಲ ಪೊನ್ನ ರಚಿತವಾದವುಗಳೆ, ಪ್ರಕ್ಷಿಪ್ತವೆ? ಸ್ವರಚಿತವಾಗಿದ್ದರೂ, ಯಾರೋ ಮೂರನೆಯವರು ಬರೆದು ಸೇರಿಸಿದ್ದಾದರೂ ಇದರಲ್ಲಿ ವಾಸ್ತವಾಂಶವೆಷ್ಟು, ಎಳ್ಳು ನೀರು ಸುರಿದು ಹರಿಯ ಬಿಡಬೇಕಾದ ಜಳ್ಳೆಷ್ಟು ಎಂಬುದನ್ನೂ ಒರೆಹಚ್ಚಬೇಕು, ತೂಗಿನೋಡಬೇಕು. ಒಟ್ಟು ಕಾವ್ಯವನ್ನು ವಿಮರ್ಶೆಯ ಬಿಗಿಮುಷ್ಟಿಯಲ್ಲಿ ಹಿಡಿದು ಹಿಂಡಿದಾಗ ಚಿಟ್ಟನೊಡೆವ ಕಾವ್ಯಧ್ವನಿಯನ್ನು ಕೇಳಬೇಕು, ಸ್ವಾರಸ್ಯಗಳನ್ನು ಕಾಣಬೇಕು, ರಸವನ್ನು ಸವಿಯಬೇಕು. ಪೊನ್ನನನ್ನು ಆ ಬಗೆಯ ಅಗ್ನಿದಿಬ್ಬಕ್ಕೆ ಒಡ್ಡದೆ ಬಿಡುವುದು ಹೇಗ

ಸಾಧ್ಯ. ಪೊನ್ನ ಕೂಡ ಸುವರ್ಣಕಾರನ ಕುಲುಮೆಯಲ್ಲಿ ಕರಗಿ ತನ್ನ ನಿಜಸತ್ವದಿಂದ ನಿಲ್ಲುತ್ತದೆ. ಪೊನ್ನ ಕೂಡ ವಿಮರ್ಶಕರ ಕಮ್ಮಟದಲ್ಲಿ ತನ್ನ ನಿಜಮಹಿಮೆಯಿಂದಲೇ ಹೊರಬರಬೇಕಾಗುತ್ತದೆ ಇದಕ್ಕೆ ಅಪವಾದ ಅಗತ್ಯವಿಲ್ಲ.

ಪೊನ್ನನ ವ್ಯಕ್ತಿತ್ವದ ಇನ್ನೊಂದು ಮುಖ ಆತನ ಸವಣತನ. ತಾನು ಸವಣನೆಂದೂ, ಕುರ್ಳ್ಗಳ ಸವಣನೆಂದೂ ಹತ್ತಾರು ಕಡೆ ಹೇಳಿಕೊಂಡಿದ್ದಾನೆ (1–8, 9, 10, 11, 12–69, 70, 71, 72, 74, 75). ಸವಣ ಎಂಬುದು ಪ್ರಾಕೃತ ರೂಪ. ಪ್ರಾಕೃತದಿಂದ ಬಂದು ಕನ್ನಡದಲ್ಲಿ ಬಹಳ ಹಿಂದಿನಿಂದಲೂ ಬಳಕೆಗೆ ಬಂದಿವೆ. ಇದು ಪ್ರಾಕೃತಕ್ಕೆ ಸಂಸ್ಕೃತದಿಂದ ಹೋಗಿವೆ. ಸಂಸ್ಕೃತ ಭಾಷೆಯ ಶ್ರಮಣ ಎಂಬುದು ಇದರ ಮೂಲರೂಪ. ಶ್ರಮಣ ಎಂದರೆ ಜೈನಯತಿ. ಸ್ರಮಣ ಮತ್ತು ಶ್ರವಣ ಎಂಬ ಎರಡೂ ರೂಪಗಳಿವೆ; ಇದಕ್ಕೆ ಸಮನಾಗಿ ಸಮಣ, ಸವಣ ಎಂಬ ರೂಪಾಂತರಗಳಿವೆ. ಶ್ರಮಣಃ ಅಮೋಘ ವಚನಃ ಎಂಬ ಸಂಸ್ಕೃತ ವಾಕ್ಯ ಪ್ರಾಕೃತದಲ್ಲಿ ಸಮ(ವ)ಣೋ ಅಮೋಘ ವಯಣೋ ಎಂದಾಗಿದೆ. ಜಿನಮುನಿಯ ಮಾತು ನಿಶ್ಚಿತ ವಾದುದು ಎಂಬುದು ಇದರ ಅರ್ಥ. ಪೊನ್ನಕವಿ ತಾನು 'ಸವಣ' ನೆಂದು ವಿಶೇಷಣೆಸಿಕೊಂಡಿರುವುದರಿಂದ ಮುನಿಯಾಗಿದ್ದನೆಂದು ತಿಳಿಯಬಹುದು. ಜೈನಯತಿಧರ್ಮಕ್ಕನುಸಾರವಾಗಿ ಐಲಕ, ಕ್ಷುಲ್ಲಕ, ನಿರ್ಗ್ರಂಥ ಎಂದು ಕ್ಷಪಣಕ ಶ್ರೇಣಿಗಳಿವೆ. ಬ್ರಹ್ಮಚರ್ಯ ಸ್ವೀಕಾರ, ಕಾವಿ ವಸ್ತ್ರಧಾರಣೆ ಕೇವಲ ಒಂದು ಕೌಪೀನ ಮತ್ತು ಮೇಲುಡೆ (ಒಂದು ಮುಂಡು, ಒಂದು ತುಂಡು ಎಂಬಂತೆ), ಅಂತಿಮವಾಗಿ ನಿರ್ಗ್ರಂಥ ಧಾರಣೆ (ಗ್ರಂಥ—ನೂಲು, ನಿರ್‌ಗ್ರಂಥ—ಬಟ್ಟೆಯೇ ಇಲ್ಲದಿರುವಿಕೆ, ನಿರ್ವಾಣತ್ವ, ದಿಗಂಬರತ್ವ)—ಇದು ಆರೋಹಣ ಕ್ರಮ.

ಸುಕರತರಂ ವಚೋನಿಚಯಮಾರಯೆ ದುಷ್ಕರಮರ್ಥವಾರ್ತಮು
ತ್ಯಕುಟಿಲಮಾಸ್ಯದೊಡ್ಡಭಿಮತಂ ಕುಟಿಲಂ ಋಜು ಬಾಹ್ಯವೃತ್ತಿ ವ
ಕ್ರ ಕಲುಷಮಂತರಂಗಮೆನೆ ಮೆಲ್ನುಡಿ ಪೊಣ್ಮಿರೆ ದಂತ ಸಾಂದ್ರ ಚಂ
ದ್ರಿಕೆ ಪರಿಷತ್ಕುಮುದ್ವತಿಗೆ ಕಾಂತಿಯನಾಂತುದನಂತವೀರ್ಯನಾ ॥ 2–52

ಮಾತಿನಲ್ಲಿಯ ನುಡಿಗಳೇನೊ ತುಂಬ ಸುಲಭ, ಆದರೆ ಅರ್ಥ ಮಾತ್ರ ಕಷ್ಟಸಾಧ್ಯ. ಮುಖಮುದ್ರೆಯನ್ನು ನೋಡಿದರೆ ಅದು ನಿಷ್ಕಪಟ, ಆದರೆ ಅಭಿಪ್ರಾಯ ಕುಟಿಲವಾದುದು. ಹೊರಗಿನ ವರ್ತನೆ ಅತ್ಯಂತ ಋಜು, ಆದರೆ ಅಂತರಂಗವೊ ವಕ್ರ ಹಾಗೂ ಉದ್ವಿಗ್ನವಾದುದು. ಹೀಗಿರುವ ತನ್ನ ಮಾತುಗಳನ್ನು ಆಡುತ್ತಿರುವಾಗ ಆತನ ಶುಭ್ರವಾದ ಹಲ್ಲುಗಳ ಕಾಂತಿಯು ಸಭೆಯೆಂಬ ಕುಮುದ ಸರೋವರಕ್ಕೆ ಬೆಳ್ದಿಂಗಳೊ ಏನೊ ಎಂಬಂತೆ ಹರಡಿತು. ಇದು ರಾಜಕೀಯ ವಾತಾವರಣದಲ್ಲಿ ಅಲ್ಲೋಲಕಲ್ಲೋಲಗೊಳಿಸುವ ಗಂಭೀರ ಪ್ರಸಂಗಗಳಲ್ಲಿ ವ್ಯಕ್ತಿಯ ಸೂಕ್ಷ್ಮ ವರ್ತನೆ ಕುರಿತು ಕೊಟ್ಟ ಪೊನ್ನನ ವ್ಯಾಖ್ಯಾನವೆಂದು ತೋರುತ್ತದೆ. ಇದರ ಮುಂದಿನ ಪದ್ಯವೂ ಈ ಹೇಳಿಕೆಗೆ ಪೋಷಕವಾಗಿದೆ; 'ಮಳೆಗಾಲದ ಹೊಸ ಮೋಡವೆ ಗರ್ಜಿಸುತ್ತಿದೆ. ಆ ಗರ್ಜನೆಯನ್ನು ಕೇಳಿ ಗಂಡು ನವಿಲು ಕೂಗುತ್ತಿದೆ' ಎಂದೆನಿಸುವಂತೆ ಮೃದುಮಧುರವಾಗಿಯೂ ಗಂಭೀರವಾಗಿಯೂ ವಾಸುದೇವನು ನುಡಿದನಂತೆ (2–53). ಇವಕ್ಕೆ ಪೂರಕವಾದ ಮಾತುಗಳು ಮತ್ತೆ ಹೀಗಿವೆ:

ಅತಿಶಯ ವರ್ಣಕ್ರಮಮೊಂ
ದುತೆಜಂ ಪದರಚನೆಯೊಂದು ತೆಜನರ್ಥಮದೊಂ
ದುತೆಜಂ ಬೆಡಂಗು ಬೇಜೊಂ
ದುತೆಜಂ ನುಡಿಗೆನೆ ಮನಕ್ಕಿವರೆ ಪಳಿ ನುಡಿದಂ ॥ 2-64

ಭುವನೈಶ್ವರ್ಯದಿನರ್ಥಶಾಸ್ತ್ರ ಪರಿಪಾಟೀ ವಾದ ವಾಚಾಟ ಪಾ
ಟವದಿಂ ಗೊಟ್ಟಿಗೆಯಲ್ಕೆ ನಮ್ಮ ಸಭೆಯೆಲ್ಲಂ ಜೀಯಜೀಯೆಂಬ ಕೈ
ತವವಾದಿಚ್ಛೆಯಿನಾನದಿಂ ನುಡಿಯೆನೆನ್ನೆಂಬುಕ್ತಿಗಳ್ ಮೆಚ್ಚಲ
ಪ್ಪುವೊ ಮೇಣಾಗವೊ ಮುನ್ನೆ ಕೇಳ್ದು ಬಿಸುಡಿಂ ಕೈಕೊಳ್ಳಿಮೆಂ ಮಾತಣಂ ॥ 2-65

ಉತ್ತಮವಾದ ಅಕ್ಷರ ಕ್ರಮವೊಂದು ಬಗೆ, ಪದರಚನೆಯೊಂದು ಬಗೆ, ಅರ್ಥವದೊಂದು ಬಗೆ, ಆಮೇಲೆ ನುಡಿವ ಬೆಡಗು ಬೇರೊಂದು ಬಗೆ. ಈ ಪ್ರಕಾರವಾಗಲು ಮನಕ್ಕೆ ಮುಟ್ಟುವಂತೆ ಬಲರಾಮನು ನುಡಿದದ್ದು ಹೀಗೆ: "ಐಶ್ವರ್ಯ ಬಲದಿಂದಲೂ ಅರ್ಥಶಾಸ್ತ್ರಪರಂಪರೆಯುಲ್ಲಿ ವಾದಮಾಡುವ ವಾಕ್ ಚಾತುರ್ಯದಿಂದಲೂ ಮಾತನಾಡಿ ನನ್ನ ಸಭಾಸದರೆಲ್ಲ ಸೈ ಸೈ ಎನ್ನಬೇಕೆಂಬ ಅಪೇಕ್ಷೆಯಿಂದ ನಾನು ಈ ಮಾತನ್ನು ಹೇಳುತ್ತಿಲ್ಲ. ನನ್ನ ಮಾತುಗಳು ಮೆಚ್ಚುವುದಕ್ಕೆ ಯೋಗ್ಯವಾಗಿದ್ದರೆ ಅಂಗೀಕರಿಸಿ, ಅಲ್ಲವಾದರೆ ಕಡೆಗಣಿಸಿಬಿಡಿ." ಇಲ್ಲೆಲ್ಲಾ ಪೊನ್ನನ ಮನಸ್ಸು ಮಾತನಾಡುತ್ತಿರುವಂತೆ ಭಾಸವಾಗುತ್ತದೆ. ತನ್ನ ವಿಚಾರವಾಗಿ, ತನ್ನ ಧೋರಣೆ ಕುರಿತು ಕವಿ ಧ್ವನಿಸುತ್ತಿರುವಂತಿದೆ.

ಸಮವೃತ್ತ ಸಂಧಿ ಲಕ್ಷಣ
ಸಮನ್ವಿತಂ ಜಾತ್ಯಲಂಕೃತಿ ಭ್ರಾಜಿತಮು
ತ್ತಮ ಕಾವ್ಯಬಂಧದಂತಾ
ದಮಿತಾರಿಗೆ ಸಾಜಮೊಪ್ಪುಗುಂ ಕಿಱುದೊಡೆಗಳ್ ॥ 3-46

ಎಂಬಲ್ಲಿಯೂ ಕಾವ್ಯಕ್ಕೂ, ದಮಿತಾರಿಗೂ, ಕವಿಗೂ ಅನ್ವಯಿಸುವ ಶ್ಲೇಷೆಯಿರಬಹುದು. ಇದೇ ರೀತಿ 3-93 ರಲ್ಲಿ ಬರುವ ಅಪರಾಜಿತನ ಮಾತಿನಲ್ಲಿ ಕವಿಯ ಆಶಯವೂ ಹೊಸೆದುಕೊಂಡಿರಬಹುದೆನಿಸುತ್ತದೆ. ಇಂಥಲ್ಲೆಲ್ಲಾ ಊಹಾಂಶವಿದೆಯೆಂಬುದು ನಿಜ. ಆದರೆ ನಿಜಾಂಶವೇ ನಿಂತು ಮಾತನಾಡಿದ ಭಾಗಗಳೂ ಕಾವ್ಯದಲ್ಲಿವೆ. ಉದಾಹರಣೆಗೆ ಈ ಪದ್ಯವನ್ನು ತೆಗೆದುಕೊಳ್ಳೋಣ:

ಪದದಪ್ಪದೆಯುಂ ಬಗೆ ಬೆದ
ಱದೆಯುಂ ಕತೆ ಕಿಡದೆಯುಂ ಭವಾವಳಿ ತಡಮಾ
ಗದೆಯುಂ ಸವಿ ತವದೆಯುಮಂ
ಬುದ ನಿನದನತಂದ್ರನಿಂದ್ರನಾ ಜಿನಚಂದ್ರಂ ॥ 5-10

ಪದ ತಪ್ಪದಂತೆಯೂ, ಮನ ಬೆದರದಂತೆಯೂ, ಕತೆ ಕೆಡದಂತೆಯೂ, ಭವಾವಳಿ ತೊಡಕಾಗದಂತೆಯೂ, ರುಚಿ ಕುಗ್ಗದಂತೆಯೂ ಆ ಜಿನ(ಮತ)ಚಂದ್ರನು ಮೇಘಧ್ವನಿಯಂತೆ ಗಂಭೀರವಾದ ನುಡಿಗಳಿಂದ ವಿವರಿಸತೊಡಗಿದ ಎಂದು ಪೊನ್ನಕವಿ ಹೇಳಿರುವುದನ್ನು ನಾವು ಕವಿಗೇ ಅನ್ವಯಿಸಬೇಕಾಗುತ್ತದೆ. ತನ್ನ ಕಾವ್ಯದ ಧಾಟಿಯನ್ನೂ, ಧೋರಣೆಯನ್ನೂ, ಮಾತಿನ ರೀತಿಯನ್ನೂ, ಕತೆ ಹೇಳುವ ಕ್ರಮವನ್ನೂ ಕವಿ ತನ್ನ ಗುರುವಾದ ಜಿನಚಂದ್ರರಿಗೆ ಅನ್ವಯಿಸಿರುವುದು ಸ್ವಾರಸ್ಯಪೂರ್ಣವಾಗಿದೆ.

ಕವಿತೆಗೆ ವಾಗ್ದೇವತೆ ಕಿ
ಟ್ಟವಳಿಗೆ ವಿಡುವಂತೆ ತಂಬುಲಂದೀವಿದ ಪೊಂ
ಗವಳಿಗೆಯುಂ ಪಿಡಿದಂಬಿಕೆ
ಗವಟಯ್ಸಿದಳೊರ್ವಳಿಂದ್ರವಧು ತಂಬುಲಮಂ ॥ 9-180

ಕವನರಚನೆಗೆ ಸರಸ್ವತೀದೇವಿಯು ಓಲೆಯ (ತಾಳೆ) ಗರಿಯನ್ನು ಹಿಡಿಯುವಂತೆ ತಾಂಬೂಲ ತುಂಬಿದ ಚಿನ್ನದ ಕವಳಿಗೆಯನ್ನು ನೀಡಿ ಇಂದ್ರಕನ್ಯೆಯೊಬ್ಬಳು ಆ ತಾಯಿಗೆ ತಂಬುಲವಿತ್ತಳು—ಎಂಬ ಈ ವಿವರಣೆಯಲ್ಲಿ ವಾಗ್ದೇವತೆ ವಿಚಾರ, ಓಲೆಗರಿಯ ವಿಚಾರ ಸ್ವಾರಸ್ಯಪೂರ್ಣವಾಗಿ ಬಂದಿದೆ. ತನ್ನ ಕಾವ್ಯರಚನೆಯ ಕಾಲದಲ್ಲೂ ಪೊನ್ನಕವಿ ಹೇಗೆ ತಾಳೆ(ಓಲೆ)ಗರಿಯನ್ನು ಹಿಡಿದು ಕಾವ್ಯರಚನೆಗೆ ತೊಡಗಿದ್ದಿರಬಹುದೆಂಬುದನ್ನು ಕಲ್ಪಿಸಿ ಸುಖಿಸಬೇಕು. ಹೀಗೆ ಪೊನ್ನನಿಗೂ, ಕಾವ್ಯಕ್ಕೂ, ಕಥಾಸೂತ್ರಕ್ಕೂ ಶ್ಲೇಷೆಯಿಂದ ಅನ್ವಯವಾಗಬಹುದಾದ ಪದ್ಯಗಳು ಸಾಕಷ್ಟು ಶಾಂತಿಪುರಾಣದ ನಡುವೆ ಸೇರಿಕೊಂಡಿವೆ. ಪೊನ್ನಕವಿ 'ಸವಣ' ನಾದರೂ 'ಕುರುಳುಗಳ ಸವಣ' (ಗುಂಗುರು ಕೂದಲಿನ ಮುನಿ) ಆಗಿರುವುದರಿಂದ ನಿಶ್ಚಯವಾಗಿಯೂ ಆತ ನಿರ್ಗ್ರಂಥ (ದಿಗಂಬರ) ಮುನಿಯಾಗಿರಲಿಲ್ಲ. ಆತ ಬಹುಮಟ್ಟಿಗೆ ಬ್ರಹ್ಮಚರ್ಯ ಸ್ವೀಕರಿಸಿ ಕಾವಿವಸ್ತ್ರಧಾರಣೆಯ ಪ್ರಾಥಮಿಕ ಹಂತಕ್ಕೆ ಏರಿರಬೇಕು ಹೊರತಾಗಿ, ಅದಕ್ಕಿಂತ ಮುಂದಿನ ಅಂತಸ್ತೇರಿಲ್ಲವೆಂದು ತಿಳಿಯಲು ಅವಕಾಶಗಳಿವೆ. ದಿಗಂಬರಯತಿ ಚಾತುರ್ಮಾಸದ (ವರ್ಷಾಕಾಲ) ಹೊರತು ಉಳಿದ ದಿನಗಳಲ್ಲಿ ಒಂದೇಕಡೆ ಇರುವುದಿಲ್ಲ. ಸಂಸಾರಿಗಳ ನಿಕಟಸಂಪರ್ಕದಲ್ಲಿ ಇರುವುದಿಲ್ಲ. ಪೊನ್ನಕವಿ ಪುನ್ನಮಯ್ಯ ಮಲ್ಲಪಾರ್ಯರ ಮನೆತನದೊಡನೆ ಆತ್ಮೀಯ ಸಂಪರ್ಕ ಹೊಂದಿದ್ದ; ಅವರ ಮೊರೆ ಕೇಳಿ ಕಾವ್ಯ ಬರೆದುಕೊಟ್ಟ; ರಾಷ್ಟ್ರಕೂಟ ಕನ್ನರ ದೊರೆಯಿಂದ ಕವಿಚಕ್ರವರ್ತಿ ಬಿರುದು ಪಡೆದ; 'ಭುವನೈಕ ರಾಮಾಭ್ಯುದಯ' ಲೌಕಿಕ ಕಾವ್ಯ ಬರೆದ — ಇತ್ಯಾದಿ ಆಧಾರಗಳು ಮೇಲಿನ ಹೇಳಿಕೆಯನ್ನು ಸಮರ್ಥಿಸುತ್ತವೆ.

ಶ್ರಮಣಧರ್ಮ ಕಾವ್ಯಧರ್ಮಕ್ಕೆ ಪೂರಕವಾಗಿತ್ತೇ ಹೊರತು ವಿರುದ್ಧವಾಗಿರಲಿಲ್ಲ. ಅನೇಕ ಜೈನ ಮುನಿಗಳು ಭಾರತೀಯ ವಾಙ್ಮಯಕ್ಕೆ ಕೊಟ್ಟಿರುವ ಕೊಡುಗೆ ದೊಡ್ಡದು. ಸಂಸ್ಕೃತ, ಪ್ರಾಕೃತ, ತಮಿಳು, ಹಿಂದಿ, ಕನ್ನಡ ಮೊದಲಾದ ಭಾಷೆಗಳಿಗೆ ಅವರ ಸೇವೆ ಅಗಾಧವಾದುದು. ಕುಂದಕುಂದಾಚಾರ್ಯ, ವೀರಸೇನ, ಧರಸೇನ, ಸಮಂತಭದ್ರ, ಅಕಳಂಕ, ಅಜಿತಸೇನ, ಜಿನಸೇನ, ಗುಣಭದ್ರ ಮೊದಲಾದವರನ್ನು ಹೆಸರಿಸಬಹುದು. ಜೈನ ಯತಿಯಾದ ಶ್ರೀವಿಜಯ, ವಾದಿರಾಜ, ವಿದ್ಯಾನಂದ, ಮಾಘಣಂದಿ, ಪಾಯಣವರ್ಣಿ, ಚಂದ್ರಸಾಗರವರ್ಣಿ ಮುಂತಾದ ಕರ್ನಾಟಕದ ಜೈನಾಚಾರ್ಯರ ಸಾರಸ್ವತೋಪಾಸನೆ ನಿರಂತರವಾಗಿ ನಡೆದುಬಂದಿದೆ. ಈ ಯತಿಗಳು ಕಾವ್ಯರಚನೆಯೇ ಅಲ್ಲದೆ ಅನೇಕ ಶಾಸ್ತ್ರಕೃತಿಗಳ ರಚನೆಯನ್ನೂ ಹೆಸರಿಸಬೇಕಾಗುತ್ತದೆ. ಪೊನ್ನ ಕೂಡ ಈ ಮಾದರಿಗೆ ಸೇರಿದ ಕವಿಯಾಗಿದ್ದಾನೆ.

ಪೊನ್ನನಿಗೆ ಜಿನದೀಕ್ಷೆಗೆ ಆಚಾರ್ಯರಾಗಿದ್ದವರು ಆ ಕಾಲದ ಕೀರ್ತಿಶಾಲಿಗಳಾದ ಜಿನಚಂದ್ರರು. ಪೊನ್ನನಿಗೆ ಇವರ ವಿಚಾರದಲ್ಲಿ ಅಗಾಧವಾದ ಗುರುಗೌರವ. ಇದರ ಆಧಿಕ್ಯ ಪರವಶತೆಯಿಂದ ಆತ ಜಿನಚಂದ್ರರನ್ನು ಶಾಂತಿ ತೀರ್ಥಂಕರನಿಗೇ ಸಮೀಕರಿಸಿ ಅಭೇದಭಾವ ಕಲ್ಪಿಸಿದ್ದಾನೆ. ಇದು ಗೌರವ ತೋರಿಸುವಿಕೆಯ ಪರಮಾವಧಿ. ಪೊನ್ನಕವಿ ತನ್ನ ಗುರು ಜಿನಚಂದ್ರರಲ್ಲಿ ತಳೆದ ಪೂಜ್ಯ ಭಾವದ ತುತ್ತತುದಿಯನ್ನು ಮುಂದೆ ವಿವರಿಸಲಾಗುವುದು. "ಅಂತಾ ಕುರುವಂಶ ಶಿಖಾಮಣಿ ಜಿನಚಂದ್ರದೇವಂ ಬಳೆಯುತ್ತುಂ" (10-81ವ) ಎಂಬಲ್ಲಿ ಶಾಂತಿ ತೀರ್ಥಂಕರರೇ ತನ್ನ ಗುರು, ತನ್ನ ಗುರುವೇ ಶಾಂತಿ ತೀರ್ಥಂಕರ ಎಂದು ಸಮೀಕರಿಸಿದ್ದಾನೆ. ಪೊನ್ನನ ಈ ಮಾದರಿಯನ್ನು ಸ್ಫೂರ್ತಿಯಿಂದ ಮುಂದುವರಿಸಿದ ರನ್ನಕವಿ ತನ್ನ ಆಶ್ರಯದಾತೆಯನ್ನು ತೀರ್ಥಂಕರನ ತಾಯಿಗೆ ಹೋಲಿಸಿದ್ದಾನೆ. ಅಂತೂ ಜಿನಚಂದ್ರರ ಪ್ರಭಾವಪೂರದಲ್ಲಿ ಪೊನ್ನ ತೇಲಿಹೋಗಿದ್ದಾನೆ. ಅವನು ಆಚಾರ್ಯ ವಂದನೆಗಾಗಿ ಸಮರ್ಪಿಸಿದ ಪದ್ಯಾಂಜಲಿ, ಅದನ್ನು ಪ್ರತ್ಯೇಕವಾಗಿ ಪೃಥಕ್ಕರಿಸಿ ಕೂಡ ಪರಿಭಾವಿಸುವಷ್ಟು ಅಭ್ಯಾಸಯೋಗ್ಯ ಭಾಗವಾಗಿದೆ, ಇದರಿಂದ ನಿಷ್ಪನ್ನವಾಗುವ ಪೊನ್ನನ ಸ್ವಭಾವದ ಒಂದು ಸ್ವರೂಪಾಂಶವೆಂದರೆ ಆತ ಹಿರಿಯರಲ್ಲಿ ಅಂತಃಕರಣಪೂರ್ವಕವಾದ ಮನ್ನಣೆಯಿತ್ತು ಭಕ್ತಿಯಿಂದ ನಡೆದುಕೊಳ್ಳುತ್ತಿದ್ದನೆಂಬುದು. ಇದರಿಂದಾಗಿ ಅಸಗ

ಕಾಳಿದಾಸ ಕವಿಗಳ ವಿಚಾರದಲ್ಲಿ ಆತ ಉಚ್ಚಾಯಿಸಿ ತನ್ನ ಮೇಲ್ಮೆ ಸ್ಥಾಪಿಸುವ ಬಡಾಯಿ ಕೊಚ್ಚಿದ ಹೇಳಿಕೆ ಯಿತ್ತಿರುವುದು ಒಂದು ರೂಢಿಬದ್ಧ ಪರಂಪರೆಯ ಪಾಲನೆಗಾಗಿ ಎಂದು ತಿಳಿಯಲವಕಾಶವಿದೆ. ಆ ವಿಚಾರದಲ್ಲಿ ಪೊನ್ನ ಸಂಪ್ರದಾಯವಾದಿಯೆಂದೂ ಸಂಪ್ರದಾಯವನ್ನು ಗೌರವಿಸುವವನೆಂದೂ ಭಾವಿಸಬಹುದು.

ಪೊನ್ನ, ಆತ ಸವಣನೂ ಆಗಿರುವುದರಿಂದ ಸಹಜವಾಗಿಯೇ ಜೈನಧರ್ಮದ ಪರವಾಗಿ ಧ್ವನಿಯೆತ್ತುವ, ಜಿನನ ಸಂದೇಶ ಪ್ರಸಾರಕ್ಕಾಗಿ ಲೇಖನಿ ಹಿಡಿದ ಕವಿ. ಅಹಿಂಸಾಧರ್ಮದ ಮಹತ್ವವನ್ನು ಪುರಾಣಚೂಡಾಮಣಿ ಯುದ್ದಕ್ಕೂ ಪ್ರತಿಪಾದಿಸಲೆತ್ನಿಸಿದ್ದಾನೆ ಜೈನ ಪಾರಿಭಾಷೆ, ಮತೀಯ ಪ್ರತಿಕ್ರಿಯೆಗಳ ವರ್ಣನೆ ಸಮೃದ್ಧವಾಗಿದೆ ಜಿನಭಕ್ತಿ ಕಾವ್ಯೋಕ್ತಿಯಾಗಿ ವ್ಯಕ್ತವಾಗಿರುವುದು ಕಡಮೆ. ಪೊನ್ನ ಜಿನೋಪಾಸಕನೇ ಹೊರತು ಕಲೋಪಾಸಕನೂ ಅಲ್ಲ, ಕಾವ್ಯೋಪಾಸಕನೂ ಅಲ್ಲ. ಜೀವನ ಶ್ರದ್ಧೆಗಿಂತ, ಕಾವ್ಯನಿಷ್ಠೆಗಿಂತ ಪೊನ್ನನಿಗೆ ಜೀವದಯಾಮೂಲ ತ್ಯಾಗಲಿಪ್ತ ಮೋಕ್ಷಗಮ್ಯ ಆತ್ಮನನ್ನು ಊರ್ಧ್ವಗಾಮಿತ್ವಕ್ಕಾಗಿ ಪ್ರಬೋಧಿಸುವುದರಲ್ಲೆ ಅನುರಕ್ತಿ. ಪೊನ್ನನ ಪ್ರತಿಕ್ರಿಯೆಗಳನ್ನು ಸ್ಪಷ್ಟವಾಗಿ ಈ ಪುರಾಣಕಾವ್ಯದಲ್ಲಿ ಗುರುತಿಸುವುದು ಕಷ್ಟ. ವಾಸ್ತವವಾಗಿ ಇಂಥ ವಸ್ತುನಿಷ್ಠ ಕಾವ್ಯಗಳಲ್ಲಿ ಕವಿಯ ವ್ಯಕ್ತಿತ್ವವಾಗಲಿ, ಉದ್ದೇಶ ಸಂದೇಶ ಆಶಯಗಳು ನೇರವಾಗಿ ಹೊಳಲುಗೊಡುವುದಾಗಲಿ ವಿಮರ್ಶಕ ಅದನ್ನು ಗುರುತಿಸುವುದಾಗಲಿ ಸುಲಭಸಾಧ್ಯವಲ್ಲ. ವ್ಯಕ್ತಿನಿಷ್ಠ ಕಾವ್ಯದಲ್ಲಿ ಅದು ಸುಲಭ. ಅದರಿಂದಾಗಿ ಇಂಥ ಕಾವ್ಯಗಳಲ್ಲಿ ಎಲ್ಲೆಲ್ಲಿ ಅತ್ಯಂತ ಉತ್ಕಟವಾದ ಭಾಗಗಳೂ, ಭಾವಗಳೂ, ಸಂಘರ್ಷಗಳೂ ವ್ಯಕ್ತಗೊಳ್ಳುತ್ತವೆಯೊ ಅಂತಹ ಕಡೆಗಳಲ್ಲಿಯೇ ಕವಿ ಸಾಮಾನ್ಯವಾಗಿ ತನ್ನ ಅಂತರಂಗದ ಅನ್ನಿಸಿಕೆಗಳನ್ನೂ ರವಾನಿಸುತ್ತಾನೆಂದು ಭಾವಿಸಬಹುದು. ಪೊನ್ನ ತನ್ನ ಕನ್ನಡನಾಡ ಪ್ರೇಮವನ್ನು ಒಂದೆಡೆ ತುಂಬ ಮೊಗುಂ ಆಗಿ ಸೂಚಿಸಿದ್ದಾನೆ: "ಜನನಿಯುಮಂ ಜನ್ಮಭೂಮಿಯುಮಂ ಕಂಡಾಗಿನಿವಿರಿದು ರಾಗೋದಯಮದೇವಿರಿದು" (3–11ವ) ಎಂಬುದು ಕವಿಯ ಎದೆನುಡಿ. ಬಹುಶಃ ಕವಿಗೆ ಮಾತೃಭೂಮಿಯ ಭಕ್ತಿಯಂತೆ ಮಾತೃಭಕ್ತಿಯೂ ಅತಿಯಾಗಿದ್ದಿರಬೇಕು. ಇದನ್ನು ಕೇವಲ ಸಂಸ್ಕೃತೋಕ್ತಿಯಾದ " ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ "—ಎಂಬುದರ ಕನ್ನಡಾನುವಾದವೆಂದು ಹೇಳಿ ಕೈವಾರಿಸಲಾಗದು.

ಪೊನ್ನನ ಒಟ್ಟು ವ್ಯಕ್ತಿತ್ವ ಮತ್ತು ಸಾಮಾಜಿಕ ಪ್ರತಿಷ್ಠೆ ರೂಪಗೊಳ್ಳುವುದರಲ್ಲಿ ಯಾರು ಪಾತ್ರ ವಹಿಸಿದ್ದಾರೆಂಬುದನ್ನು ಕೂಡ ಪೊನ್ನಕವಿ ಕೆಳಗಿನ ಪದ್ಯದಲ್ಲಿ ಸ್ಪಷ್ಟವಾಗಿ ನಮೂದಿಸಿದ್ದಾನೆ:

ತತ್ವಮನಾದಿನಾಥ ಮತದಿಂ ಸಿರಿಯುಂ ನೃಪರಿಂ ಮಹಾಪ್ರಸಿ
ದ್ಧತ್ವಮನಗ್ಗದಕ್ಕರಿಗರಿಂ ಕವಿತಾ ರಸಮುಂ ಸದರ್ಥ ವಾ
ದಿತ್ವಮನಿಂದ್ರನಂದಿ ಮುನಿಯಿಂ ಪಡೆದೊಂ ದೊರೆಯಾರ್ ಕವಿತ್ವವಾ
ದಿತ್ವಫಲಂ ಹಿ ಶಾಸ್ತ್ರಮೆನಿಪುನ್ನತಿಯಾ ಕವಿಚಕ್ರವರ್ತಿಯಾ ॥ 12-80

ಹೀಗೆ ಆದಿನಾಥನಾದ (ಪ್ರಥಮ ತೀರ್ಥಂಕರ—ಬಹುಮಟ್ಟಿನ ತೀ॥ ರರು—ನಾಥ ಎಂಬ ರೂಪದಿಂದಿ ಅಂತ್ಯವಾಗುವ ಹೆಸರು ಪಡೆದಿರುವುದನ್ನೂ ವಿಶೇಷವಾಗಿ ಗಮನಿಸಬೇಕು) ಋಷಭದೇವನ ಮತವಾದ ಜೈನಧರ್ಮದಿಂದ ಪೊನ್ನ ತತ್ವಗಳನ್ನು ತಿಳಿದಿದ್ದಾನೆ. ರಾಜರಿಂದ ಸಿರಿಯನ್ನು ಪಡೆದಿದ್ದಾನೆ. ಶ್ರೇಷ್ಠರಾದ ವಿದ್ವಾಂಸರ ಮೂಲಕ ಹಿರಿಯ ಕೀರ್ತಿ ಸಂಪಾದಿಸಿದ್ದಾನೆ. ಕಾವ್ಯಾಸ್ವಾದನ ಶಕ್ತಿಯನ್ನೂ ಸದರ್ಥಯುಕ್ತವಾದಿತ್ವವನ್ನೂ ಇಂದ್ರನಂದಿ ಮುನಿಯಿಂದ ಗಳಿಸಿಕೊಂಡಿದ್ದಾನೆ. ಇಂಥ ಅಪರೂಪ ಭಾಗ್ಯ ಉನ್ನತಿ ಕವಿಚಕ್ರವರ್ತಿ ಪೊನ್ನನಿಗಲ್ಲದೆ ಬೇರೆ ಯಾರಿಗಿದೆ ಎಂದು ಕವಿ ಬೀಗಿಹೋಗಿದ್ದಾನೆ. ಈ ಇಂದ್ರನಂದಿ ಮುನಿ ರಾಷ್ಟ್ರಕೂಟರ ರಾಜಧಾನಿಯಾದ ಮಳಖೇಡ (ಮಾನ್ಯಖೇಟ)

ದಲ್ಲಿ 939 ರಲ್ಲಿ ಜ್ವಾಲಿನೀಕಲ್ಪ ಎಂಬ ಮಂತ್ರಗ್ರಂಥ ರಚಿಸಿದ್ದಾನೆ. ಪ್ರಸಿದ್ಧವಾದ ದ್ರಾವಿಡ ಸಂಘದ ಹೇಲಾಚಾರ್ಯನ ಅನಂತರ ಬಂದ ನಾಲ್ಕನೆಯ ಗುರುವೇ ಇಂದ್ರನಂದಿ (ಹೇಲಾಚಾರ್ಯ, ಗಂಗಮುನಿ, ನೀಲಗ್ರೀವ, ಕಂದರ್ಪ, ಗುಣನಂದಿ); ಪೊನ್ನನ ಕಾಲವನ್ನು ನಿರ್ಧರಿಸುವಲ್ಲಿ ಇದು ಬಹಳ ಪ್ರಬಲವಾದ ಆಧಾರವಾಗಿದೆ. ಇಂದ್ರನಂದಿ 939ರಲ್ಲಿ ಜ್ವಾಲಿನೀಕಲ್ಪ ರಚಿಸಿರುವುದರಿಂದಲೂ ಅವನ ಶಿಷ್ಯ ಪೊನ್ನನ ಕೃತಿರಚನೆ 955ರ ಸುಮಾರಿಗೆ ಸಲ್ಲುವುದು ತರ್ಕಬದ್ಧವೂ ಆಧಾರಪೂರ್ವಕವೂ ಆಗುತ್ತದೆ. ಉಭಯ ಕವಿಚಕ್ರವರ್ತಿ ಕುರುಳ್ಗಳ ಸವಣಂ ಪೊನ್ನಂ, ಪೊನ್ನಿಗಂ, ಪುನ್ನಮಾರ್ಯಂ, ಪಾಪೇಭ ಕಂಠೀರವಂ, ಸವಣಂ, ಸರ್ವದೇವ ಕವೀಂದ್ರಂ, ಸೌಜನ್ಯಕಂದಾಂಕುರಂ ಮೊದಲಾದ ಹೆಸರು–ಬಿರುದು ಕವಿಗೆ ಇದ್ದುವು. ಇವುಗಳಲ್ಲಿ ಇವನಿಗೆ ತಂದೆ ತಾಯಿ ಇಟ್ಟ ಹೆಸರು ಪುನ್ನಮಾರ್ಯ ಎಂದಿರಬೇಕು. ಅದರ ರೂಪಪ್ರಭೇದಗಳು ಪೊನ್ನಿಗ, ಪೊನ್ನ ಎಂಬುವು. ಜನರೂಢಿಯಲ್ಲಿ ನಿಂತಿರಬಹುದಾದ ಪೊನ್ನ ಎಂಬ ನಾಮರೂಪವನ್ನು ಕವಿ ವಿಶೇಷವಾಗಿ ಬಳಸಿದ್ದಾನೆ.

ಕವಿ ಪೊನ್ನ ತನಗಿರುವ ಬಿರುದುಬಾವಲಿಗಳನ್ನು ಕಾವ್ಯ(ಕಥಾ)ನಾಯಕನಾದ ಶಾಂತಿನಾಥ ತೀರ್ಥಂಕರನಿಗೆ, ಜಿನನ ಹಲವು ಭವಗಳಿಗೆ ಹೇಗೆ ತೊಡಿಸುತ್ತಾನೆಂಬುದನ್ನು ನೋಡಬಹುದು. ಇದು ಕವಿಗೆ ತೃಪ್ತಿ ಹಾಗೂ ಸುಖೋಷ್ಣಾನಂದವನ್ನುಂಟುಮಾಡುವ ಭಾಗ. ತನ್ನ ಪ್ರಶಸ್ತಿಗಳನ್ನು ತೀರ್ಥಕರನಿಗೆ ಅರ್ಪಿಸಿದ ಭಕ್ತಿ ನಿವೇದನೆಯೂ ಆಯಿತು, ತನ್ನ ಪ್ರಶಸ್ತಿಮಾಲಿಕೆಯನ್ನು ಕಾವ್ಯಸೌಧದ ಶಿಖರಭಾಗಗಳಲ್ಲಿ ಅಲ್ಲಲ್ಲಿ ಕೀಲಿಸಿದಂತೆಯೂ ಆಯಿತು. ಇದೇ ಸ್ವಾಮಿಕಾರ್ಯ, ಸ್ವಕಾರ್ಯ ಎರಡನ್ನು ಒಟ್ಟಿಗೆ ಪೂರೈಸುವ ಕವಿಕಾರ್ಯ. ಅಲ್ಲದೆ ಅನೇಕ ಕಡೆ (4–59 ಇತ್ಯಾದಿ) ತನ್ನ ಗುರು ಜಿನಚಂದ್ರನ ಹೆಸರನ್ನು ತೀರ್ಥಂಕರನ ಭವದ ಹೆಸರಿನ ವ್ಯಕ್ತಿಗೆ ಬದಲಾಗಿ ಅಭೇದಿಸಿ ಹೇಳುತ್ತಾನೆಂಬುದು ಪೊನ್ನನಿಗೆ ಗೌರವ ತರುವ ಮಾತಾಗಿದೆ, ಕಾವ್ಯದ ಔಚಿತ್ಯ ಏನಾಯಿತು ಎಂಬ ಮಾತಂತಿರಲಿ. ನನ್ನ ತಿಳಿವಳಿಕೆಯ ಬೆಳಕಿನಲ್ಲಿ ನಿಲ್ಲಿಸಿ ಹೇಳುವುದಾದರೆ ಹತ್ತನೆಯ ಶತಮಾನದ ನಟ್ಟ ನಡುವಿನ ಅವಧಿಯನ್ನು ಪೊನ್ನನ ಬದುಕಿನ ಕಾಲವನ್ನಾಗಿ ಸ್ವೀಕರಿಸಬೇಕು. ಆತ ಅತ್ತ ಪಂಪನಿಗೂ ಇತ್ತ ರನ್ನನಿಗೂ ನಡುವೆ ಸಾಹಿತ್ಯ ಸೇತುವೆಯಂತಿದ್ದಾನೆ, ಪಂಪನಿಗೂ ಸಮೀಪದ ಕಿರಿಯನಾಗಿ ರನ್ನನಿಗೂ ಸಮೀಪದ ಹಿರಿಯನಾಗಿದ್ದಾನೆ. ಇದೇ ಭಾವವನ್ನು ಮತ್ತಷ್ಟು ಬೆಳಸಿ ಬೇರೆಯಾಗಿ ಹೇಳುವುದಾದರೆ, ಪಂಪನ ವೃದ್ಧಾಪ್ಯದಲ್ಲಿ ಪೊನ್ನ ತರುಣನಾಗಿಯೂ, ರನ್ನ ತಾರುಣ್ಯದಲ್ಲಿದ್ದಾಗ ಪೊನ್ನ ವಾರ್ಧಕ್ಯದಲ್ಲೂ ಕಾಣುತ್ತಾನೆ. ಇದನ್ನು ಅಲ್ಲಗಳೆಯಲಾಗದ ವಸ್ತುಸ್ಥಿತಿಗೆ ಸಮೀಪತಮವಾದ ಹೇಳಿಕೆಯೆಂದು ಬಹುಮಟ್ಟಿಗೆ ಒಪ್ಪಿಕೊಳ್ಳಬಹುದು. ತಿಥಿ ವಾರ ನಕ್ಷತ್ರ ದಿನಾಂಕ ಇಸವಿಗಳನ್ನಿತ್ತು ಪೊನ್ನನ ಬದುಕಿನ ಅವಧಿಯನ್ನು ನಿರ್ದೇಶಿಸಲು ಬೇಕಾದ ಖಚಿತ ಆಧಾರಗಳ ಕೊರತೆಯಿದೆಯೆಂಬುದನ್ನು ಒಪ್ಪಿಕೊಂಡು ಅದನ್ನು ಸ್ಥೂಲವಾಗಿ 925 ರಿಂದ 975ರ ವರೆಗೆ ಎಂದು ಸೂಚಿಸಬಹುದು. ಕಾವ್ಯರಚನೆಯ ಕಾಲ ಹೀಗಿದ್ದಿರಬಹುದು: ಭುವನೈಕ ರಾಮಾಭ್ಯುದಯ 960ರ ಸುಮಾರಿನಲ್ಲೂ ಶಾಂತಿಪುರಾಣ 970ರ ಸುಮಾರಿನಲ್ಲೂ ರಚಿತವಾಗಿದ್ದಿರಬೇಕೆಂದು ಪರಿಗಣಿಸಬಹುದು. ಈ ಸ್ಥೂಲ ಸೂಚನೆಗಳನ್ನು ಕದಲಿಸುವ ತಳ್ಳಿಹಾಕುವ ಪ್ರಬಲ ವಿಶ್ವಸನೀಯ ಆಧಾರಗಳು ದೊರೆಯುವ ತನಕ ಇಷ್ಟನ್ನು ಅಂಗೀಕರಿಸುವುದರಲ್ಲಿ ಅಪಾಯವಿಲ್ಲ, ಅಪಚಾರವೂ ಆಗುವುದಿಲ್ಲ.

ಪೊನ್ನನ ಶಾಂತಿಪುರಾಣ ಕಾರಣಪುರುಷರು

ಪೊನ್ನನ ಶಾಂತಿಪುರಾಣ ಕಾವ್ಯದ ರಚನೆಗೆ ಪ್ರಮುಖ ಕಾರಣಗಳು ಮೂರು :

1. ಪೊನ್ನಕವಿಗೇ ಒಳಗೊಳಗೇ ಇರುವ ಜೈನಪುರಾಣವನ್ನು ಬರೆಯಬೇಕೆಂಬ ಅಪೇಕ್ಷೆ. ಇದನ್ನು ಸ್ವಪ್ರೇರಣೆ ಅಥವಾ ಅಂತಃಪ್ರೇರಣೆ ಎಂದು ಕರೆಯೋಣ.

2. ಪೊನ್ನನ ಧರ್ಮಗುರುಗಳಾದ ಜಿನಚಂದ್ರಮುನಿಯ ಆಶೀರ್ವಚನ ಪೂರ್ವಕವಾಗಿ ದೊರೆತ ಪ್ರೇರಣೆ. ಇದನ್ನು ಪರ ಇಲ್ಲವೇ ಹೊರ ಪ್ರೇರಣೆಯೆನ್ನೋಣ.

3. ಮಲ್ಲಪ-ಪುನ್ನಮಯ್ಯರೆಂಬ ಅಗ್ರಜ-ಅನುಜರ ಪೋಷಣೆ, ಪ್ರಾರ್ಥನೆ, ಹರಕೆ—ಇದು ಮೊದಲೆರಡು ಪ್ರಧಾನ ಕಾರಣಗಳನ್ನು ಉದ್ದೀಪಿಸಿದ ಅನುಷಂಗಿಕ ಕಾರಣ.

ಮೇಲಿನ ಮೂರು ಮುಖ್ಯ ಕಾರಣಗಳು ಮುಪ್ಪುರಿಗೊಂಡು ಪೊನ್ನನಿಂದ ಶಾಂತಿಪುರಾಣಚೂಡಾಮಣಿ ಕಾವ್ಯ ಉಪಮಾತೀತ ಕೃತಿಯಾಗುವಂತೆ ರಚಿತವಾಗಲು ಸುಲಭಸಾಧ್ಯವಾಯಿತೆಂಬುದು ಕವಿಯ ನಿಶ್ಚಲ ಪ್ರಬಲ ನಂಬಿಕೆ.

ಕವಿ ಕವಿಚಕ್ರವರ್ತಿ ಕೃತಿನಾಯಕನಾ ಜಿನಚಂದ್ರದೇವನು
ತ್ಸವ ನಿಧಿ ಮಲ್ಲಪಾರ್ಯನುಮುದಾತ್ತ ಯತೋನಿಧಿ ಪುನ್ನಮಾರ್ಯನುಂ
ಸವಿ ತವದಂತು ಪೇಳಿಸಿದರೆಂದೊಡೆ ಶಾಂತಿಪುರಾಣಮೇಂ ಕರಂ
ನವರಸಮೇಂ ಸಮರ್ಥಯುತಮೇಂ ಮೃದುಬಂಧನಮೇಂ ಪ್ರಸನ್ನಮೋ ॥ 1-37

ಉಪಮಾತೀತಂ ಕೃತಿ ಶಾಂ
ತಿಪುರಾಣಂ ಸಲೆ ಪುರಾಣಚೂಡಾಮಣಿಯೆಂ
ದುಪಶಮದಿಂ ಬರೆಯಿಸಿ ಮ
ಲ್ಲಪಯ್ಯನುಂ ಪುನ್ನಮಯ್ಯನುಂ ಪರೆಯಿಸಿದರ್ ॥ 1-38

ಹೀಗೆ ಬೇರೆ ಬೇರೆ ಮೂರು ಕಾರಣಗಳು ಬೆರೆತು ಪೊನ್ನನಿಂದ ಶಾಂತಿಪುರಾಣ ರಚಿತವಾಯಿತು. ಕಾರಣ ಅಥವಾ ಕಾರಣಗಳು ಯಾವುದೇ ಇರಲಿ, ಒಟ್ಟು ಕಾವ್ಯ ಹೇಗಿದೆಯೆಂಬುದೇ ನಮಗೆ ಮುಖ್ಯ. ಅದರ ವಿಮರ್ಶಾತ್ಮಕ ಅನುಸಂಧಾನಕ್ಕೆ ತೊಡಗುವ ಮೊದಲು ಈ ಕಾವ್ಯರಚನೆಗೆ ಕಾರಣರಾದ ಮೂವರು ಮಹನೀಯರ ಪರಿಚಯ ಪಡೆಯೋಣ. ಮೊದಲ ಮಹಾನುಭಾವರು ಕವಿಯ ಗುರುಗಳಾದ ಜಿನಚಂದ್ರಾಚಾರ್ಯರು.

ತನ್ನ ಅಚ್ಚುಮೆಚ್ಚಿನ ನಚ್ಚಿನ ಗುರುಗಳಾದ ಜಿನಚಂದ್ರರನ್ನು ಪೊನ್ನಕವಿ ಒಬ್ಬ ಶಿಲ್ಪಿ ಕಡೆದು ನಿಲ್ಲಿಸುವಂತೆ, ಒಬ್ಬ ಕಲಾವಿದ ವರ್ಣಕುಂಚದಲ್ಲಿ ಕಂಡರಿಸುವಂತೆ, ಒಬ್ಬ ಗಾನಯೋಗಿ ನಾದದಲ್ಲಿ ಸಾಕ್ಷಾತ್ಕರಿಸುವಂತೆ ಶಾಂತಿಪುರಾಣದಲ್ಲಿ ಜೀವಂತಗೊಳಿಸಿದ್ದಾನೆ. ನಿಜವಾಗಿಯೂ ಪೊನ್ನನ ಕಾವ್ಯಶಕ್ತಿ, ಸ್ವಂತ ಕಲ್ಪನೆ, ಸ್ವಂತ ಆಲೋಚನಾ ಶಕ್ತಿ ಸಾಕಾರಗೊಂಡಿರುವ ಭಾಗಗಳಲ್ಲಿ ಇದು ಪ್ರಮುಖವೆನಿಸುತ್ತದೆ. ಇದು ಅನ್ಯಮೂಲದಿಂದ ತಂದ, ಬಂದ ಎರವಲು ಸರಕಲ್ಲ ಅಥವಾ ಅನ್ಯರನ್ನು ಮೆಚ್ಚಿಸಲು ಬರೆದದ್ದೂ ಅಲ್ಲ. ಪೊನ್ನನ ಎದೆಯಾಳದಿಂದ ಹರಿದುಬಂದ ಭಕ್ತಿಗಂಗೆ, ಕಾವ್ಯಗಂಗೆ. ಅದರಿಂದಲೂ ಜಿನಚಂದ್ರನನ್ನು ಕುರಿತು ಬರೆದ ಪದ್ಯಮಾಲಿಕೆಗೆ ಮಹತ್ವವಿದೆ.

ಪೊನ್ನ ಚಿತ್ರಿಸಿದ ಜಿನಚಂದ್ರರ ಚಿತ್ರಣವನ್ನು ಪರಿಚಯಿಸಿಕೊಳ್ಳುವುದಕ್ಕೆ ಮುನ್ನ ಜಿನಚಂದ್ರರು ಚಾರಿತ್ರಿಕವಾಗಿ ಆಗಿಹೋದ ಆಚಾರ್ಯರೆಂಬುದನ್ನು ತಿಳಿದುಕೊಳ್ಳಬೇಕು. ಈ ಹೆಸರಿನ ಗುರುಗಳು ಜೈನರ ಆಚಾರ್ಯ ಪರಂಪರೆಯಲ್ಲಿ ಇನ್ನೂ ಒಬ್ಬಿಬ್ಬರು ಇದ್ದಾರೆ.

1. ಶ್ರವಣಬೆಳಗೊಳ 251 (166) ನೆ ಸಂಖ್ಯೆಯ ಶಾಸನ ಹನ್ನೊಂದನೆಯ ಶತಮಾನಕ್ಕೆ ಸೇರಿದ್ದು ನಾಗರ ಲಿಪಿಯಲ್ಲಿದೆ. ಅದರಲ್ಲಿ ಶ್ರೀ ಭದ್ರಬಾಹುಸ್ವಾಮಿಯ ಪಾದಮಂ ಜಿನಚಂದ್ರ ಪ್ರಣಮತಾಂ.... ಮುಂತಾಗಿ ವರ್ಣನೆಯಿದೆ.

2. ಇದೇ ಶ್ರವಣಬೆಳಗೊಳದ ಕತ್ತಲೆ ಬಸದಿಯ ಬಾಗಿಲ ಬಲಗಡೆ ಕಂಬದ ಮೇಲಿರುವ ಹನ್ನೊಂದನೆಯ ಶತಮಾನಕ್ಕೆ ಸೇರಿದ 79 (69) ನೆ ಸಂಖ್ಯೆಯ ಶಾಸನವಲ್ಲೂ ಒಬ್ಬ ಜಿನಚಂದ್ರಮುನಿಯ ಸ್ತೋತ್ರವಿದೆ. ಈ ಜಿನಚಂದ್ರಮುನಿ ಮಾಘನಂದಿ ಸಿದ್ಧಾಂತ ದೇವರ ಸಧರ್ಮರು. ಇವರೇ ಪೊನ್ನ ಸ್ತುತಿಸುವ ಜಿನಚಂದ್ರಮುನಿ. ಇವರನ್ನು ಕುರಿತ ಪದ್ಯ ಹೀಗಿದೆ :

> ಜೈನೇಂದ್ರೇ ಪೂಜ್ಯ ಸಕಳಸಮಯ ತರ್ಕೇಚ ಭಟ್ಟಾಕಳಂಕಃ
> ಸಾಹಿತ್ಯೇ ಭಾರವಿಸ್ಯಾತ್ಕವಿಗಮಕ ಮಹಾವಾದ ವಾಗ್ಮಿತ್ವರುಂದ್ರಃ (ಸ್ಥೇ)
> ಗೀತೇ ವಾದ್ಯೇ ಚ ನೃತ್ಯೇ ದಿಶಿವಿದಿಶಿ ಚ ಸಂವರ್ತಿ ಸತ್ಕೀರ್ತಿಮೂರ್ತಿಃ
> ಸ್ಥೇಯಾಶ್ಶ್ರೀಯೋಗಿ ಬೃನ್ದಾರ್ಚಿತಪದ ಜಿನಚಂದ್ರೋವಿತಂದ್ರೋ ಮುನಿಃ ॥

ಇದರಲ್ಲಿಯೇ ಇವರ ಸಧರ್ಮರಾದ ದೇವೇಂದ್ರಮುನಿಯನ್ನೂ ಹೊಗಳಿದೆ :

> ಬಂಕಾಪುರ ಮುನೀಂದ್ರೋಭೂ । ದ್ದೇವೇಂದ್ರೋ ರುಂದ್ರ ಸದ್ಗುಣಃ
> ಸಿದ್ಧಾಂತಾದ್ಯಾಗಮಾರ್ಥಜ್ಞೋ । ಸಜ್ಞಾನಾದಿ ಗುಣಾನ್ವಿತಃ ॥ 24

ಇಲ್ಲಿ ಹೇಳಿರುವ ದೇವೇಂದ್ರಮುನಿಯೇ ಪಂಪನ ಗುರುಗಳೆಂದೂ ಭಾವಿಸಲಾಗಿದೆ. ಇದೇ ಶಾಸನವಲ್ಲಿ ಮುಂದೆ ಇನ್ನೊಂದು ಕಡೆ ಕನ್ನಡದಲ್ಲಿ ಜಿನಚಂದ್ರಪಂಡಿತ ದೇವರು (ಸಾಲು 142–145) ಎಂದೂ ಹೇಳಿದೆ.

3. ಸಿದ್ಧರ ಬಸದಿಯಲ್ಲಿನ ಬಲಗಡೆ ಕಂಬದ ಮೇಲಿರುವ 360 (254) ನೆಯ ಶಾಸನವಲ್ಲೂ ಜಿನಚಂದ್ರರೆಂಬ ಮುನಿಯ ಹೆಸರಿದೆ. ಇದು 1398 ರ ತೇದಿಯಲ್ಲಿ ರಚಿತವಾದ ಶಾಸನ. ಇದರಲ್ಲಿ ಮುನಿ ಪರಂಪರೆಯನ್ನೂ ಹೇಳಿದೆ.

4. ನನಗೆ ಅನುಮಾನಾತೀತವಾದ ರೀತಿಯಲ್ಲಿ ಪೊನ್ನಕವಿ ಸ್ತುತಿಸುವ ಆಚಾರ್ಯ ಜಿನಚಂದ್ರರನ್ನು ಸ್ಮರಿಸಿರುವುದು ರನ್ನಕವಿ. ರನ್ನನ ಅಜಿತಪುರಾಣದಲ್ಲಿ ಜಿನಚಂದ್ರಮುನಿಯ ಪ್ರಸ್ತಾಪ ಎರಡು ಕಡೆ ಹೀಗಿದೆ :

> 1. ಗುರು ಜಿನಚಂದ್ರ ಮುನೀಂದ್ರರ
> ಪರೋಕ್ಷದೊಳ್ ತಂಮುತಿರ್ವರುಂ ಪೊನ್ನಿಗನಿಂ
> ಬರೆಯಿಸಿದರ್ ಸಕಳೋರ್ವಿಗೆ
> ಪರೆಯಿಸಿದರ್ ಸಲೆ ಪುರಾಣ ಚೂಡಾಮಣಿಯಂ ॥ 1–34

2. ಮಲ್ಲಪನನ್ನು ಪರಿಚಯಿಸುತ್ತಾ "...ಆರಾಧಿತ ರತ್ನತ್ರಯನುಮಖಿಲ
ಜಗತ್ರಯ ಪ್ರಸಿದ್ಧ ದಿಗಂಬರ ವೈರೋಚನ ಶ್ರೀಜಿನಚಂದ್ರದೇವ
ಚರಣಾರವಿಂದಾರಾಧನಾವಿಧಿ ಕೃತಾಂತಃಕರಣನು...." (1–37 ವಚನ)

ಎಂಬುದಾಗಿ ರನ್ನ ಬಣ್ಣಿಸಿರುವನು. ರನ್ನನ ಹೇಳಿಕೆಯಿಂದ ಜಿನಚಂದ್ರರು ದಿಗಂಬರಯತಿಗಳಾಗಿದ್ದರೆಂದು ತಿಳಿದುಬರುತ್ತದೆ.

ಪೊನ್ನಕವಿ ತನ್ನ ಶಾಂತಿಪುರಾಣದಲ್ಲಿ ತನಗೆ ಆಚಾರ್ಯರಾಗಿ ಬಾಳಬಟ್ಟೆಗೆ ಪರಮಾಗಮೋಕ್ತ ಜಿನಶಾಸನ ಮಾರ್ಗವನ್ನು ತೋರಿದ ಜಿನಚಂದ್ರರನ್ನು ಕುರಿತು ಬರೆದ ಪದ್ಯಗಳು ವಿದ್ಯಾಗುರುವಿಗೆ ಸಮರ್ಪಿಸಿದ ಶಿಷ್ಯಕವಿ ವಿರಚಿತ ಪದ್ಯಪುಷ್ಪಾಂಜಲಿ.

ತನ್ನ ಧರ್ಮಗುರುವನ್ನು ಸ್ಮರಿಸಿ ಆನಂದಿಸುತ್ತಿರುವುದು ಪೊನ್ನನ ಹೊಸತನವಾಗಲಿ ವಿಶಿಷ್ಟತೆಯಾಗಲಿ ಅಲ್ಲ. ಬೇರೆ ಜೈನ ಕವಿಗಳೂ ಅವರವರ ಗುರುಗಳ ಬಗೆಗೆ ವಿವರಗಳನ್ನು ಒದಗಿಸಿ ಗೌರವ ತೋರಿದ್ದಾರೆ. ಆದಿಕವಿ ಪಂಪ ಆದಿಪುರಾಣದಲ್ಲಿ ತನ್ನ ಗುರು ದೇವೇಂದ್ರಮುನೀಂದ್ರರನ್ನು ಭಕ್ತಿಯಿಂದ ಸ್ಮರಿಸಿದ್ದಾನೆ.

ರನ್ನ ತನ್ನ ಅಜಿತಪುರಾಣದಲ್ಲಿ ಅಜಿತಸೇನಮುನಿಪತಿಯನ್ನು ಹಾಡಿ ಆನಂದಿಸಿದ್ದಾನೆ. ನೇಮಿಚಂದ್ರ ತನ್ನ ನೇಮಿನಾಥಪುರಾಣದಲ್ಲಿ ಮಲಧಾರಿ ದೇವರನ್ನು ಕೊಂಡಾಡಿದ್ದಾನೆ. ಶಾಂತಿನಾಥಕವಿ ಸುಕುಮಾರಚರಿತೆಯಲ್ಲಿ ಗುರು ವರ್ಧಮಾನನನ್ನು ಸ್ತುತಿಸಿದ್ದಾನೆ. ಬಹುಮಟ್ಟಿಗೆ ಎಲ್ಲ ಜೈನಕವಿಗಳೂ ಅವರವರ ಗುರುಗಳನ್ನು ಕೊಂಡಾಡಿದ್ದಾರೆ. ಇವರೆಲ್ಲರಿಗಿಂತ ಚೆನ್ನಾಗಿ ತನ್ನ ಶಾಂತಿಪುರಾಣದಲ್ಲಿ ಪೊನ್ನ ಜಿನಚಂದ್ರಮುನೀಂದ್ರರನ್ನು ಸ್ತೋತ್ರಮಾಡಿದ್ದಾನೆ. ಕನ್ನಡ ಕವಿಗಳಲ್ಲಿ ಒಬ್ಬ ಗುರುವಿನ ವಿಚಾರವಾಗಿ ಇಷ್ಟೊಂದು ಪದ್ಯಗಳನ್ನು ಮೀಸಲಿಟ್ಟಿರುವವರು ಕಡಮೆ.

ಪೊನ್ನ ಶಾಂತಿಪುರಾಣದ ಮೊದಲನೆಯ ಮತ್ತು ಕಡೆಯ ಆಶ್ವಾಸಗಳಲ್ಲಿ ಜಿನಚಂದ್ರಮುನೀಂದ್ರರ ಪ್ರಸ್ತಾಪ ಮಾಡಿದ್ದಾನೆ. ಒಂದೇಕಡೆ ಒಟ್ಟು ಹದಿನೆಂಟು ಕಂದವೃತ್ತಗಳಲ್ಲಿ ಆ ಗುರುವರೇಣ್ಯನ ಪಾತ್ರವನ್ನು ಕಂಡರಿಸಿದ್ದಾನೆ. ಇನ್ನೂ ಅಲ್ಲಲ್ಲಿ ಅನೇಕ ಪದ್ಯಗಳಲ್ಲಿ ಪ್ರಸ್ತಾಪಿಸಿದ್ದಾನೆ. ಕಾನೂರ್ಗಣ ಮುನಿಪತಿ – ಅರ್ಹಣಂದಿ ಯೋಗಿಗಳು – ಪುರಿಮುಂಡಲ – ವೀರಣಂದಿ – ಬೆಟ್ಟದ ದಾಮನಂದಿ – ಚಂದಿನಂದಿಗಳು— ಇದು ಜೈನಾಚಾರ್ಯ ಪರಂಪರೆ. ಈ ಪರಂಪರೆಯ ಚಂದಿನಂದಿಮುನಿಗಳ ಶಿಷ್ಯರೇ ಅಮಲ ಜಿನಚಂದ್ರಮುನೀಂದ್ರಾಚಾರ್ಯರು. ಇವರು ಮೂರು ಲೋಕಗಳ ಚರ ಅಚರ ಜೀವಿಗಳ ರಕ್ಷಾಕ್ಷಣೈಕಕಾರಣರು, ಭೂತದಯೆಯಲ್ಲಿ ನಿರತರು.

ಮುನಿಪ ಸಹಸ್ರ ಭೋಜನಕರಂ ಬುಧಭವ್ಯ ಜನೌಘಸೇವ್ಯನ
ತ್ಯನುಪಮ ಚಕ್ರವರ್ತಿ ಯತಿರಾಜ ಗಣಾಗ್ರಣಿ ದತ್ತ ವಿತ್ತ ಭಾ
ಜನ ಕವಿವಾದಿವಾಗ್ಮಿ ಗಮಕಂ ವಸುಧೈಕ ಕುಟುಂಬಕಂ ಸಭಾ
ಜನ ಸುಜನೈಕ ಭಾಜನಮುಖಂ ಜಿನಚಂದ್ರ ಮುನೀಂದ್ರನುರ್ವಿಯೊಳ್ ॥ 1-26

ಈ ಭೂಮಂಡಲದಲ್ಲಿ ಜಿನಚಂದ್ರ ಮುನೀಂದ್ರರ ಯಶಶ್ರೀಯ ಔನ್ನತ್ಯ ವಿಸ್ತಾರಗಳು ಮಾತಿಗೆ ಸಿಲುಕದುದು. ಸಹಸ್ರಾರು ಮುನಿ ಸಂಕುಲಕ್ಕೆ ಆಹಾರದಾನದ ಸೌಕರ್ಯ ಒದಗಿಸಿಕೊಟ್ಟವರು. ವಿದ್ವಾಂಸರ, ಭವ್ಯಜನರ

ಸಮೂಹದ ಸೇವೆಗೆ ಪಾತ್ರರು ಸುಯೋಗ್ಯರಾದ ಕವಿವಾಗ್ಮಿ ಗಮಕಿಗಳಿಗೆ ಅಪಾರವಾದ ಹಣವಿತ್ತು ದಾನಗುಣದ ಗಣಿಗಳೆನಿಸಿಕೊಂಡವರು. ಭೂಮಂಡಲವನ್ನೇ ತಮ್ಮ ಕುಟುಂಬವೆಂದು ತಿಳಿದುಕೊಂಡ ಉದಾರಿಗಳು. ಸಭೆಯ ಸುಜನರ ಸುಮನಸ್ಸಿಗೆ ಪ್ರಸನ್ನಗೊಳಿಸುವ ಮುಖಚಂದ್ರವನ್ನು ಪಡೆದವರು.

ಜಿನಚಂದ್ರರನ್ನು ಕವಿ ಪುರಾಣಪುರುಷರ ಗುಣಾವಳಿಯೊಡನೆ ಹೋಲಿಸಿ, ಅವರಿಗಿಂತ ಇವರೇ ಮಿಗಿಲು ಎನ್ನುತ್ತಾನೆ; ಇಹಲೋಕದಲ್ಲಿ ಹುಟ್ಟಿದ ಶಿಬಿ, ಕರ್ಣ, ರಾಮಚಂದ್ರ, ಶಕವಂಶದವರ ವೈರಿಗಳಾದ ಗುಪ್ತದೊರೆಗಳ ಚಾರು (—ಚಲುವಾದ) ಗುಪ್ತಗುಣಗಳನ್ನು ಉಳ್ಳವರೂ, ವೃತ್ರಹಯಶರೂ, ಅಶಾಂಬರ ರಾಜಹಂಸರೂ, ನಿರ್ಮಲ ಚಂದ್ರರೂ ಆದವರು ಆ ಜಿನಚಂದ್ರರು. ಜಿನಚಂದ್ರರು ದೀನದಲಿತ ಜನರಿಗೆ ದಾನಮಾಡುವುದರಲ್ಲೆ ನಿರಂತರವಾಗಿ ನಿರತರಾಗಿರುವವರು. ಉತ್ತಮ ಗುಣ ಸತ್ಯ ಇವುಗಳಿಂದ ಕೂಡಿದ ತಾಪಸರು—ತಪಸ್ಸು ನಡೆಸಿದವರು ಹಣವನ್ನು ಬೇಡುವವರಿಗೆ 'ಯಾರು ಯಾಚಿಸುವರು, ಯಾರು ಬಡವರು' ಎಂದು ಸಂತೋಷದಿಂದ ದಾನಕೊಡುವರು.

ಆದಿಜಿನೇಂದ್ರಪಾದಕಮಲ ಭ್ರಮರಂ ಜಿನಚಂದ್ರದೇವನು
ತ್ಪಾದಿತ ಪೂಜ್ಯಪಾದಚರಿತಂ ಜಯವಾದ್ಯಕಳಂಕ ಸನ್ನಿಭಂ
ಭೀದುರಿತಾತಿದೂರನನವದ್ಯ ಜಿನಾಗಮ ವಿದ್ಯನಿದ್ಧದು
ಗ್ಧೋದಧಿ ಧೌತ ಕೀರ್ತಿ ವಿಶದಂ ಭರತಾವನಿ ರಾಜಪೂಜಿತಂ ॥ 1-29

ಆದಿತೀರ್ಥಂಕರರಾದ ಪುರುದೇವನ ಪಾದಪದ್ಮಗಳಲ್ಲಿನ ತುಂಬಿಯಂತೆ ಇರುವ ಜಿನಚಂದ್ರಸ್ವಾಮಿಗಳು ಪೂಜ್ಯಪಾದ ಮುನಿಗಳ ಚಾರಿತ್ರ್ಯವನ್ನು ಪಡೆದವರು. ಮಂಗಳವಾದ್ಯದಂತಿರುವ ಅಕಳಂಕ ಮುನಿಸಮಾನರೂ, ಪಾಪದಿಂದ ಬಹುದೂರರೂ, ದೋಷರಹಿತರೂ, ಜೈನಧರ್ಮದ ಪವಿತ್ರ ಗ್ರಂಥಗಳಾದ ಆಗಮಗಳನ್ನು ಚೆನ್ನಾಗಿ ತಿಳಿದವರೂ, ಕ್ಷೀರಸಮುದ್ರದಂತೆ ಧವಳವರ್ಣದ ಕೀರ್ತಿಶಾಲಿಗಳೂ, ಭರತಭೂಮಿಯ ರಾಜರುಗಳಿಂದ ಪೂಜಿತರೂ ಆದವರು ಜಿನಚಂದ್ರಯತಿಗಳು. ಕವಿವಾದಿಗಮಕಿಗಳಿಗೆ ನೆರಳಾಗಿರುವ ಅವರು ನವೀನ ಸಮಂತಭದ್ರರು, ಹೊಸ ಪೂಜ್ಯಪಾದರು, ಅಭಿನವ ಅಕಳಂಕಾಚಾರ್ಯರು.

ಶ್ರೇಷ್ಠರಾದ ಸಮಂತಭದ್ರಮುನಿಗಳಂತೆ ಇರುವ ಜಿನಚಂದ್ರರು ವಿನಯಗುಣದ ನಿಧಿಗಳು. ಅತ್ಯುನ್ನತವೂ ಮನೋಹರವೂ ಆದ ಜೈನಧರ್ಮದ ಒಳತಿರುಳೆಲ್ಲವನ್ನೂ ಅರಿತ ಈ ವಿನೂತನ ಸಮಂತಭದ್ರ ಮುನಿಗಳಾದ ಜಿನಚಂದ್ರರು, ವಿದ್ವಾಂಸರೆಂಬ ತಾವರೆಗಳ ತೋಟದಲ್ಲಿ ರಾಜಹಂಸನಂತೆ ಶೋಭಿಸುವರು. ಒಂದು ದಿಗ್ದಂತಿಯು ಮತ್ತೊಂದು ದಿಕ್ಕರಿಗೆ ಮುಖ ಮಾಡುವಂತೆ ಕೋಶಾಗಾರ (ಸಂಚಿವಾರ) ದಿಂದಲೂ ಐಶ್ವರ್ಯದಿಂದಲೂ ಮಿಗಿಲು ಅವರು ನೀಡುವ ಶ್ರೇಷ್ಠವಾದ ದಾನ. ದಿಕ್ಕಿನ ಆನೆಯ ಮದೋದಕಕ್ಕಿಂತಲೂ (ದಾನ) ಹೆಚ್ಚಿನದಾದುದು ಆ ಮುನಿಪತಿಯ ಔದಾರ್ಯ. ಅವರ ದಾನ ಅಷ್ಟು ಶ್ರೇಷ್ಠ, ಅತಿಶಯ. ಪ್ರಶಂಸನೀಯವಾದ ಜಿನಪತಿಯ ನಿಯಮಗಳನ್ನು ಪರಿಪಾಲಿಸಿ ಬೋಧಿಸಿದ ಚೂಡಾರತ್ನ. ವಿದ್ವಾಂಸರಿಗೆ ದೊಡ್ಡ ಕಲ್ಪವೃಕ್ಷ. ಕೈನೀಡಿ ಬೇಡುವ ಯಾಚಕರ ಗುಂಪಿಗೆ ತಡಮಾಡದೆ ಬಿಡುವಿಲ್ಲದೆ ಒಡನೆಯೇ ನೀಡುವ ಉದಾತ್ತ ಗುಣಿ ಆ ಜಿನಚಂದ್ರ ಯತಿಪತಿ.

ಎನಗೆ ಜಿನೇಂದ್ರಧರ್ಮಮೆ ಶರಣ್ ಮೊನೆಗೊಡ್ಡಿದ ಭೂರಿವೈರಿ ಸಾ
ಧನ ಹರಣಂ ದಲೆಂದೆ ಜಿನಚಂದ್ರ ಮುನೀಂದ್ರರ ಪಾದಮೂಲದೊ
ಳ್ವಿನಮಿತರಾಗಿ ಕೊಂಡು ಕೊನೆವರ್ ಸಲೆ ಮಾಣಿಯವಾಡಿಯೊಳ್ ಮಹಾ
ವನಿಪರದೇನಗಣ್ಯ ಕೃತಪುಣ್ಯಮೊ ಭಾವಿಸೆ ತನ್ಮುನೀಂದ್ರನಾ॥ 1-33

ಜಿನಚಂದ್ರಮುನೀಂದ್ರರ ಮಹಿಮೆಗಳು ವರ್ಣನಾತೀತ, ದೊಡ್ಡ ದೊಡ್ಡ ದೊರೆಗಳೂ ಕೂಡ "ನಮಗೆ ಜೈನಧರ್ಮವೇ ಶರಣು" ಯುದ್ಧದಲ್ಲಿ ಒಡ್ಡಿದ ಅನಂತ ಶತ್ರುಗಳ ಸಾಧನದ ಹರಣ ವರ್ಜ್ಯ—ಎಂದು ನಿಶ್ಚೈಸಿದವರಾಗಿ ಜಿನಚಂದ್ರಮುನೀಂದ್ರ ಪಾದಪದ್ಮಗಳ ಬಳಿಯಲ್ಲಿ ವಿನಯದಿಂದ ತಲೆಬಾಗಿ ಕುಳಿತು ಸರಸ್ವತಿ ಪ್ರಸನ್ನತು ನೂಡುವ ಬಗೆ ಬಗೆಯ ಸ್ತುತಿಮಾಲಿಕೆಗಳಿಂದ ಕೊಂಡಾಡುತ್ತಿದ್ದಾರೆ. ಹೀಗಿರಬೇಕಾದರೆ ಇನ್ನೂ ಆ ಮುನಿಶ್ರೇಷ್ಠನ ಅಗಣ್ಯ ಪುಣ್ಯವನ್ನು ಪರಿಭಾವಿಸಿಯೇ ತಿಳಿಯಬೇಕು.

ಮುಕ್ತಿಮಾರ್ಗದಲ್ಲಿರುವ ಪಾಪಗಳೆಂಬ ಕೋಟೆಗಳನ್ನು ನೆಲಸಮ ಮಾಡಿರುವ ನಿಷ್ಣಾತರಿವರು. ಅಲ್ಲದೆ ಪರಮ ಪವಿತ್ರರಾದ ಜಿನಮತದೆಂಬ ಅಂಬುಧಿಗೆ ಚಂದ್ರನಂತೆ ಇರುವವರು. ಕೆಟ್ಟಮಾರ್ಗದಲ್ಲಿ ಅನ್ಯಾಯದ ಹಾದಿಯಲ್ಲಿ ಇರುವ ಕೊಳೆಯನ್ನು ನಾಶಗೈದವರೂ ಅರ್ಹಂತರು, ಸಿದ್ಧರು, ಆಚಾರ್ಯರು, ಉಪಾಧ್ಯಾಯರು, ಸರ್ವಸಾಧುಗಳು ಎಂಬ ಪಂಚ ಪರಮೇಷ್ಠಿಗಳ ಪ್ರಾರ್ಥನೆಯಲ್ಲಿ ಪೂರ್ಣವಾಗಿ ನಿರತರೂ ಆದ ಜಿನಚಂದ್ರಮುನಿ ಅದ್ವಿತೀಯರು. ಜಿನಶಾಸನವನ್ನು ಬೆಳಗಿದವರೂ ಮುನಿವೈರೋಚನರೂ (ಬಲಿ) ಆದ ಜಿನಚಂದ್ರಮುನೀಂದ್ರರು ಭೂದೇವಿಯ ಮುಖಕ್ಕೆ ತಿಲಕಪ್ರಾಯರು ನ್ಯೂನವಿಲ್ಲದೆ ಗುಣಗಳೆಂಬ ರತ್ನದ ರಾಶಿಯಿಂದ ಅಲಂಕಾರಗೊಂಡು ಹೊಳೆಯುವ ದೇಹವುಳ್ಳವರು.

ಆ ಜಿನಚಂದ್ರರು ಅಯನಯ ಭಾಜನರು. ಮಿಗಿಲಾಗಿ ಪುರಾಣಚೂಡಾಮಣಿ ಇನಿತು ಪವಿತ್ರ ಚರಿತ್ರರಾದ ಜಿನಚಂದ್ರಮುನಿಗಳಿಗೆ ಈ ಪ್ರಕಾಶದಿಂದ ಕೂಡಿದ ಶಾಂತೀಶ್ವರ ಜಿನನ ಕಥೆಯನ್ನು ಹೇಳುವೆನು. ಜಿನಪತಿಯಾದ ಶಾಂತೀಶ್ವರನ ಕಥೆಯನ್ನು ಯತಿಪತಿಯಾದ ಜಿನಚಂದ್ರಮುನಿಗಳಿಗೆ ಅವರೇ ಈ ಲೋಕದಲ್ಲಿ ಪ್ರಭು ಎಂಬಂತೆ ಹೇಳುತ್ತೇನೆ.

ಕವಿ ಚಕ್ರವರ್ತಿ ಕೃತಿನಾಯಕನಾ ಜಿನಚಂದ್ರದೇವನು
ತ್ಸವ ನಿಧಿ ಮಲ್ಲಪಾರ್ಯನ ಮುದಾತ್ತ ಯಶೋನಿಧಿ ಪುನ್ನಮಾರ್ಯನುಂ
ಸವಿ ತವದಂತು ಟಿಸಿದರೆಂಬೊಡನೆ ಶಾಂತಿಪುರಾಣಮೇಂ ಕರಂ
ನವರಸಮೇಂ ಸಮರ್ಥಯುಕ್ತಮೇಂ ಮೃದುಬಂಧನಮೇಂ ಪ್ರಸನ್ನಮೋ ॥ 1-37

ಈ ಕಾವ್ಯದ ವೈಶಿಷ್ಟ್ಯವನ್ನು ಸ್ವಲ್ಪ ಕೇಳಿ; ಕೃತಿಯನ್ನು ಹೇಳುವ ಕವಿ, ಕವಿಚಕ್ರವರ್ತಿ ಬಿರುದಾಂಕಿತ ಪೊನ್ನ. ಜಗನ್ನುತರಾದ ಜಿನಚಂದ್ರಮುನಿದೇವರು ಕೃತಿನಾಯಕರು. ಉತ್ಸವನಿಧಿ ಮಲ್ಲಪಾರ್ಯನೂ, ಉದಾತ್ತ ಯಶೋನಿಧಿ ಪುನ್ನಮಾರ್ಯನೂ ಈ ಕಾವ್ಯವನ್ನು ಅದರ ಸವಿ ಸ್ವಲ್ಪವೂ ಸವೆಯದಂತೆ ಹೇಳಿಸಿದರು ಎಂದ ಮೇಲೆ ಹೆಚ್ಚಿಗೆ ಹೇಳುವುದು ಇನ್ನೇನು ತಾನೆ ಉಳಿದಿದೆ? ಶಾಂತಿಪುರಾಣದಲ್ಲಿ ಬರುವ ನವರಸಗಳ ಸಮರ್ಥವಾದ ಪ್ರತಿಪಾದನೆ, ಪ್ರಸನ್ನವಾದ ಮೃದುಬಂಧರಚನೆ ಕಾವ್ಯದ ಮಹೋನ್ನತಿಗೆ ಕಾರಣವಾಗಿದೆ.

ಜಿನಚಂದ್ರರೇ ಆ ವಿಭು ಶಾಂತಿನಾಥ, ಮುಪ್ಪಿಲ್ಲದ ಶ್ರೀ ಶಾಂತಿತೀರ್ಥೇಶ್ವರನು ಜಿನನಾಥರು. ಭವಾಂತರದ ಹೆಸರುಗಳು ಶ್ರೀಷೇಣನೆಂದು ಈ ಜಿನೇಂದ್ರರ ಜನ್ಮ ಪರ್ಯಂತ ಆ ವಿಶೇಷಣ ವಿಶೇಷ್ಯದ ಸ್ವಾರಸ್ಯಗಳು ಜೋಡಿಯಲ್ಲೇ ಬಂದು ಆ ಜಿನಚಂದ್ರ ಪ್ರಭುವಿಗೂ ಈ ಜಿನೇಶ್ವರರಿಗೂ ಭೂಲೋಕ ಮತ್ತು ಸ್ವರ್ಗಲೋಕದಲ್ಲಿ ಏಕತೆಯುಂಟಾಯಿತು. (1–36 ರಲ್ಲಿ ಆಗಲೇ ಹೇಳಿರುವ ಅಭಿಪ್ರಾಯದ ಸಮರ್ಥನೆಯ ವಿಸ್ತೃತ ವಿವರಣೆಯಿತ್ತು. ಈ ಹೇಳಿಕೆಯನ್ನು ಮತ್ತೆ 12–60 ರಲ್ಲಿ ತಿಳಿಸಿದ್ದಾನೆ.)

ಜಿನಚಂದ್ರಂ ಕೃತಿನಾಥನಾದನವನುಂ ತಾಂ ಶಾಂತಿನಾಥಂ ಪುರಾ
ತನ ಕಾವ್ಯಂಗಳುಮೀಗಳಾದ ಕುಕಥಾ ಕಾವ್ಯಂಗಳುಂ ಪೋಲ್ವುವಿ
ಲ್ಲ ನ ಭೂತೋ ನ ಭವಿಷ್ಯತಿ ಕ್ರಮಮುದಕ್ಕೀ ಪ್ರೌಢಿಯಂ ಮಲ್ಲಪ
ಯ್ಯನುಮತ್ಯುನ್ನತ ಪುನ್ನಮಯ್ಯನುಮಧೀಶ ಪ್ರೀತಿಯಿಂ ಮಾಡಿದರ್ ॥ 12-59

ಈ ಕೃತಿನಾಥ ಸಾಕ್ಷಾತ್ ಜಿನಚಂದ್ರರೇ. ಅವರೂ ಶಾಂತಿನಾಥರೇ. ಹಳೆಯ ಕಾವ್ಯಗಳೂ ಈಚೆಗೆ ಆಗಿರುವ ಮಿಥ್ಯಾ ಕಾವ್ಯಗಳೂ ನನ್ನೀ ಕಾವ್ಯಕ್ಕೆ ಹೋಲುವುದಿಲ್ಲ. ಏಕೆಂದರೆ ನನ್ನ ಕಾವ್ಯದಂತಹ ಕಾವ್ಯ ಹಿಂದೆ ಆಗಲಿಲ್ಲ; ಇರಲಿಲ್ಲ; ಮುಂದೆ ಆಗುವುದಿಲ್ಲ; ಇರುವುದಿಲ್ಲ; ಮಲ್ಲಪಯ್ಯನೂ ಉನ್ನತನಾದ ಪುನ್ನಮಯ್ಯನೂ ಕಾವ್ಯದ ಈ ಪ್ರೌಢಿಮೆಯನ್ನು ಉಂಟುಮಾಡಿದರು. ಜಿನಚಂದ್ರರಲ್ಲಿ ಅವರಿಗಿದ್ದ ಅಧೀಶ ಪ್ರೀತಿಯೇ ಈ ಕಾವ್ಯ ಬರೆಸಲು ಕಾರಣ.

ಸಕಲಜ್ಞಂ ಕವಿಚಕ್ರವರ್ತಿ ಜಿನಚಂದ್ರೇಂದ್ರುಂಗೆ ಸದ್ಭಕ್ತಿಪೂ
ರ್ವಕದಿಂದಮ್ಮನ ಭಕ್ತನುಂ ತದನುಜಾತ ಪುನ್ನನುಂ ಪೇಟ್ವುದೆಂ
ದು ಕರಂ ಪ್ರಾರ್ಥಿಸೆ ಶಾಂತಿನಾಥಕಥೆಯಂ ಲೇಸಪ್ಪಿನಂ ಸರ್ವದೇ
ವ ಕವೀಂದ್ರಂ ಬರೆದಂ ಬುಧರ್ ಪೊಗಟ್ವಿನಂತನ್ನಂ ಮಹೋತ್ಸಾಹದಿಂ ॥ 12-81

ಎಲ್ಲವನ್ನೂ ಬಲ್ಲ ಕವಿಚಕ್ರವರ್ತಿ ಬಿರುದಿನ ಪೊನ್ನಕವಿ ಜಿನಚಂದ್ರ ಇಂದ್ರರಿಗೆ ಒಳ್ಳೆಯ ಭಕ್ತಿಯಿಂದ ಕೂಡಿದವನಾಗಿ ಅಮ್ಮನ ಭಕ್ತನೂ (ಮಲ್ಲಪಾರ್ಯ) ಆತನ ಮಗನಾದ ಪುನ್ನಮಯ್ಯನೂ ಹೇಳಬೇಕೆಂದು ಲೇಸಾಗಿ ಬೇಡಿದರು. ಅದರಂತೆ ಶಾಂತಿನಾಥನ ಕಥೆಯನ್ನು ಲೇಸಾಗುವಂತೆ ಸರ್ವದೇವಕವೀಂದ್ರ ಪೊನ್ನನು ಮೇಲಾದ ಉತ್ಸಾಹದಿಂದ ಬರೆದಿದ್ದಾನೆ, ವಿದ್ವಾಂಸರು ಹೊಗಳುವಂತೆ.

ಪೊನ್ನನ ಇದುವರೆಗಿನ ನಿರೂಪಣೆಯಿಂದ ತಿಳಿದುಬರುವ ಕೆಲವು ಮುಖ್ಯಾಂಶಗಳು : ಜಿನಚಂದ್ರರು ಚಾರಿತ್ರಿಕ ವ್ಯಕ್ತಿಗಳು, ಅವರು ಕವಿಯ ಕಾಲದಲ್ಲಿ ಆಗಿಹೋದ ಶ್ರೇಷ್ಠ ಮುನಿವರೇಣ್ಯರು, ಅವರಲ್ಲಿ ಕವಿಪೊನ್ನನಿಗೆ ಎಣೆಯಿಲ್ಲದ ಭಕ್ತಿಗೌರವ; ಅವರನ್ನು ಕಾವ್ಯನಾಯಕನಿಗೆ ಹೋಲಿಸುವಷ್ಟು ಭಕ್ತಿ. ಅವರು ಕಾವ್ಯನಾಯಕ ತೀರ್ಥಂಕರನಿಗೆ ಸರಿದೊರೆಯಾಗಬಲ್ಲ ಭವ್ಯ ವ್ಯಕ್ತಿತ್ವ ಪಡೆದವರು. ಅವರಿಗೆ ಆ ಕಾಲದ ದೊರೆಗಳು ಕೂಡ ಶಿಷ್ಯರಾಗಿದ್ದುಕೊಂಡು ಮರ್ಯಾದೆ ತೋರಿದರು (ಬಹುಶಃ ರಾಷ್ಟ್ರಕೂಟರು ಮತ್ತು ಗಂಗರಾಜರು). ಅವರಿಗಾಗಿಯೇ ಈ ಕಾವ್ಯವನ್ನು ಅವರಲ್ಲಿ ಅತುಳ ಭಕ್ತಿ ತಳೆದ ಮಲ್ಲಪ–ಪುನ್ನಮಯ್ಯರು ಪ್ರಾರ್ಥಿಸಿ ಪೊನ್ನಕವಿಯಿಂದ ಹೇಳಿಸಿದರು. ಪೊನ್ನ ಬಹುಶಃ ತಮ್ಮ ಹಿಂದಿನ ಭವದಲ್ಲಿ ಜಿನಚಂದ್ರ ಶಾಂತಿನಾಥ ತೀರ್ಥಂಕರರಾಗಿದ್ದಿರಬಹುದೆಂಬ ತುಂಬು ನಂಬುಗೆಯನ್ನು ಹೊಂದಿದ್ದಾನೆ.

ಜಿನಚಂದ್ರ ಮುನೀಂದ್ರನೆ ಶಾಂ
ತಿನಾಥನೀ ಶಾಂತಿನಾಥನಾ ಜಿನಚಂದ್ರಂ
ಜಿನಚಂದ್ರ ಮುನೀಂದ್ರನೆ ಶಾಂ
ತಿನಾಥನಾದೊಂ ಭವಾವಳೀವಿರಮಣದೊಳ್ ॥ 12-60

ತೀರ್ಥಂಕರರೊಡನೆ ಅಭೇದ ಕಲ್ಪಿಸಿ ಕವಿ ಕಡೆದು ನಿಲ್ಲಿಸಿದ ಜಿನಚಂದ್ರರ ಮೂರ್ತಿ ಮುಕ್ಕಿಲ್ಲದ ಅರುಹನ ಮೂರ್ತಿಯಂತಿದೆ. ಸಾಹಿತ್ಯ ರಚನೆಗೆ ಪ್ರೋತ್ಸಾಹಕರಾಗಿದ್ದ ಜಿನಚಂದ್ರರು ಕೂಡ ಸ್ವಯಂ ಲೇಖಕರಾಗಿದ್ದು ಕೃತಿಯನ್ನೂ ರಚಿಸಿದ್ದರೆಂದು ತಿಳಿದುಬರುತ್ತದೆ. ಇವರಲ್ಲದೆ ಕಾವ್ಯ ರಚನೆಯ ಕ್ರಮವನ್ನು ಪೊನ್ನನಿಗೆ ಇಂದ್ರನಂದಿಮುನಿಯೂ ಮಾರ್ಗದರ್ಶನ ಮಾಡಿದ್ದರೆಂದು (12–80) ತಿಳಿದುಬರುತ್ತದೆ.

ಪೊನ್ನನ ಶಾಂತಿಪುರಾಣ ರಚನೆಗೆ ಕಾರಣಪುರುಷರಲ್ಲಿ ಇದುವರೆಗೆ ವರ್ಣಿಸಿದ ಜಿನಚಂದ್ರಾಚಾರ್ಯರು ಎಷ್ಟು ಪ್ರಮುಖರೋ ಅಷ್ಟೇ ಮುಖ್ಯರಾದವರು ಮಲ್ಲಪ-ಪುನ್ನಮಯ್ಯ ಎಂಬ ಒಡಹುಟ್ಟಿದವರು. ಮಲ್ಲಪ-ಪುನ್ನಮಯ್ಯರೆಂಬೀ ಸೋದರರು ಪೊನ್ನಕವಿಯಿಂದ ಶಾಂತಿಪುರಾಣ ಬರೆಸಿದ ಭವ್ಯಜೀವರು. ಈ ಇಬ್ಬರು ಶ್ರಾವಕ ಶ್ರೇಷ್ಠ ಸೋದರರ ಜೀವನ ಗಾಥೆಯ ವಿವರಗಳನ್ನು ಪೊನ್ನ ಸಾಕಷ್ಟು ಕೊಟ್ಟು ಚೆನ್ನಾಗಿ ಪರಿಚಯಿಸಿದ್ದಾನೆ. ಇವರಿಬ್ಬರೂ ಅಪೂರ್ವ ಸೋದರರು. ಕನ್ನಡನಾಡಿನ ರಾಜಕೀಯ ಚರಿತ್ರೆಯಲ್ಲೂ ಸಾಹಿತ್ಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲೂ ಇವರದೂ ಮಾಸದ ಮಹತ್ವದ ಪಾತ್ರವಿದೆ. ಇವರದು ರಾಜನಿಷ್ಠೆ–ಧರ್ಮಪ್ರೇಮವನ್ನು ವಂಶ ಪಾರಂಪರ್ಯವಾಗಿ ನಡೆಸಿಕೊಂಡುಬಂದ ಮನೆತನ. ಲೌಕಿಕ-ಅಲೌಕಿಕಗಳನ್ನು, ಇಹಪರಗಳನ್ನು ವರ್ತಮಾನದ ಬದುಕಿನಲ್ಲಿ ಮೇಳೈಸಿಕೊಂಡು ಇವರ ಕುಟುಂಬ ನಡೆಸಿದ ಅರ್ಧ ಶತಮಾನ ಕಾಲದ ಆದರ್ಶಜೀವನ ಕವಿಗಳ, ಶಾಸನಕಾರ ಪ್ರಭು ಪ್ರಜೆಗಳ, ಧರ್ಮಗುರುಗಳ ಪ್ರಶಂಸೆಗೆ ಪಾತ್ರವಾಗಿದೆ. ಕರ್ನಾಟಕದಲ್ಲಿ ಆಗಿಹೋದ 10 ನೆಯ ಶತಮಾನದ ಒಂದು ಮಹಾನ್ ಕೀರ್ತಿಶಾಲಿ ಕುಟುಂಬದ ಕಥೆ ಹೀಗೆ ಆಚಂದ್ರಾರ್ಕಸ್ಥಾಯಿಯಾಗುವಂತೆ ಕವಿಗಳಿಂದ ಕಾವ್ಯಗಳಲ್ಲಿ ದಾಖಲಾಗಿರುವುದು ಪ್ರಾಚೀನ ಕನ್ನಡ ಕಾವ್ಯ ವಿಮರ್ಶಕರೂ ಕೂಡ ಗಮನಿಸಬೇಕಾದ ವಿಚಾರ. ಇಷ್ಟು ಮುಖ್ಯವಾದ ಈ ಕುಟುಂಬದ ಹಿನ್ನಲೆ ಮತ್ತು ಆ ಕಾಲದ ಕರ್ನಾಟಕದ ಭೌಗೋಳಿಕ ಕಲ್ಪನೆ ಕುರಿತು ವಿಸ್ತಾರವಾಗಿಯೇ ಪರಿಚಯಿಸಿಕೊಳ್ಳಲು ಸಮೃದ್ಧ ಸಾಮಗ್ರಿ ಸಿಗುತ್ತದೆ.

ಸಾಹಿತ್ಯಾಭಿಮಾನಿಗಳೂ ಸಾಹಿತ್ಯಪೋಷಕರೂ ಆದ ಮಲ್ಲಪ-ಪುನ್ನಮಯ್ಯರ ಜೀವನ ಚಿತ್ರವನ್ನೂ ಅಂದಿನ ಸಾಮಾಜಿಕ ಹಿನ್ನೆಲೆಯನ್ನೂ ಕಟ್ಟಿಕೊಳ್ಳಲು ಪೊನ್ನಕವಿಯ ಶಾಂತಿಪುರಾಣದ ಜತೆಗೆ ಅವಶ್ಯ ಅವಲಂಬಿಸಬೇಕಾದ ಹಾಗೂ ಅವಲೋಕಿಸಬೇಕಾದ ಇತರ ಕನ್ನಡ ಕಾವ್ಯಗಳು ಇಂತಿವೆ :

1. ಪಂಪನ ಕಾವ್ಯಗಳು
2. ರನ್ನಕವಿಯ ಅಜಿತಪುರಾಣ
3. ನಾಗವರ್ಮನ ಛಂದೋಂಬುಧಿ

ಪೊನ್ನಕವಿ ತನ್ನ ಶಾಂತಿಪುರಾಣ ಕಾವ್ಯಾರಂಭದಲ್ಲಿ ವೆಂಗೀವಿಷಯದ ವಿಖ್ಯಾತಿಯನ್ನು ಹೇಳಿದ್ದಾನೆ :

ವೆಂಗೀವಿಷಯಂ ತ್ರೈಭುವ
ನಂಗಳೊಳಗ್ಗಳದ ವಿಷಯಮುಪಮಾತೀತಂ
ಸಂಗತ ಸಮಸ್ತಮತ್ರ್ಯ
ತ್ತುಂಗ ಫಲದ್ರುಮಮಮೂಲ್ಯ ವಸ್ತು ನಿಧಾನಂ ॥ 1-42

ವೆಂಗೀದೇಶವೆಂಬುದು ಮೂರು ಲೋಕಗಳಲ್ಲಿಯೇ ಅತಿಶಯವೆನಿಸಿದ ದೇಶವಾಗಿದ್ದು ಇದಕ್ಕೆ ಸಮನಾದುದು ಇನ್ನೊಂದು ನಾಡು ಇಲ್ಲ. ಈ ವೆಂಗೀದೇಶ ಅತ್ಯುತ್ತಮವಾದ ಎಲ್ಲ ಹಣ್ಣುಮರಗಳನ್ನೂ ಬೆಲೆಬಾಳುವ ಪದಾರ್ಥಗಳ ಸಂಪತ್ತನ್ನೂ ಪಡೆದಿದೆಯೆಂದು ಇಲ್ಲಿನ ನಿಸರ್ಗಸಿರಿಯನ್ನು ಪೊನ್ನಕವಿ ಸೆರೆಹಿಡಿದಿದ್ದಾನೆ.

ಆ ಧರಣೀವಧೂತಿಳಕಮಾಧರಣೀ ಲಲನಾ ಮುಖಾಬ್ಜಮಂ
ತಾ ಧರಣೀರಮ್ಯೈಕನವಯೌವನಮಾಧರಣೀ ಪ್ರಿಯಾ ಕಟಾ
ಕ್ಷಾದರ ವಿಭ್ರಮ ಭ್ರಮಣಮಗ್ಗಳದಗ್ಗದ ಕಮ್ಮನಾಡು ವಿ
ದ್ಯಾಧರ ಲೋಕಮೇನದಱ ಪೋಲ್ವೆಗೆ ಬರ್ಕುಮೆ ಸೋಲದಿರ್ಕುಮೇ ॥ 1-43

ಆ ಭೂದೇವಿಯ ಹಣೆಯ ತಿಲಕದಂತೆ, ಆ ಭೂಮಾತೆಯ ಮುಖಕಮಲದಂತೆ, ಆ ಧರಣೀನಾರಿಯ ಹೊಸ ಪರೆಯುದಂತೆ, ಆ ನೆಲಲಲನೆಯ ಕಡೆಗಣ್ಣ ನೋಟ ಹಾಗೂ ಅದರ ತುಂಬಿದ ಲಾವಣ್ಯದ ಚಲನೆ ಶ್ರೇಷ್ಠವಾದುದಾಗಿರುವಂತೆ ಹಿರಿದಾದ ಕಮ್ಮೆನಾಡು ಇದೆ. ಈ ಕಮ್ಮೆನಾಡಿನೊಳಗೆ ಹೋಲಿಕೆಗೆ ವಿದ್ಯಾಧರಲೋಕತಾನೆ ಸಮನಾದೀತೆ? ಈ ಕಮ್ಮೆನಾಡನ್ನು ನೋಡಿ ಸೋಲದಿರುವವರು ಯಾರು ಎಂದು ಪೊನ್ನಕವಿ ತನ್ನ ನಾಡಿನ ಪ್ರೇಮವನ್ನು ತೋಡಿಕೊಂಡಿದ್ದಾನೆ.

ವೆಂಗಿವಿಷಯ ಮತ್ತು ಕಮ್ಮೆನಾಡು ಪೊನ್ನನಿಗೆ ಮಾತ್ರ ಪ್ರಿಯವಾಗಿತ್ತು, ಅದರಿಂದ ಸಹಜವಾಗಿಯೇ ಅತ ಕೊಂಡಾಡಿದ್ದಾನೆಂದು ಭಾವಿಸಬೇಕಾದುದಿಲ್ಲ. ಇದೇ ಪ್ರದೇಶ ಕುರಿತು ರನ್ನನೂ ಪ್ರಶಂಸಾಪರವಾದ ಪದ್ಯಗಳನ್ನು ಬರೆದಿದ್ದಾನೆ. ಇನ್ನೂ ಹೆಚ್ಚಿನ ಹಾಗೂ ಪೋಷಕ ವಿವರಗಳನ್ನು ಒದಗಿಸಿದ್ದಾನೆ:

ದಿಗಿಭದೊಳಗಮರಕರಿ ದಾ
ನಿಗಳೊಳಗಗ್ಗಳದ ದಾನಚಿಂತಾಮಣಿ ಚ
ಕ್ರಿಗಳೊಳಗಾಹವಮಲ್ಲಾ
ಮಿಗಿಲೆನಿಕುಂ ವಿಷಯದೊಳಗೆ ವೆಂಗೀವಿಷಯಂ ॥ 1-20

ದಿಕ್ಕಾನೆಗಳಲ್ಲಿ ದೇವಾನೆಯಾದ ಐರಾವತವೂ, ದಾನಿಗಳೊಳಗೆ ಅಗ್ಗಳಿಯಾದ ದಾನಚಿಂತಾಮಣಿ ಅತ್ತಿಮಬ್ಬೆಯೂ, ಚಕ್ರವರ್ತಿಗಳೊಳಗೆ ಚಾಲುಕ್ಯರ ಆಹವಮಲ್ಲನೂ, ದೇಶಗಳಲ್ಲಿ ವೆಂಗೀದೇಶವೂ ಶ್ರೇಷ್ಠವೆನಿಸುತ್ತವೆ. ತಾಯಿನಾಡಿನ ವೈಭವವನ್ನು ರನ್ನಕವಿ ಹೀಗೆ ಮುಂದುವರಿಸಿದ್ದಾನೆ:

ತುಂಗಮತಂಗಜೇಂದ್ರವನದಿಂ ಫಲಭಾರವಿನಮ್ರನಾಳಿಕೇ
ರಂಗಳಿನದ್ರಿ ಕಾನನದಿನುತ್ತಮ ಶಾಳಿವನಂಗಳಿಂ ಚಳ
ದ್ಭೃಂಗಕುಳಾಕುಳೀಕೃತ ಸರೋರುಹಷಂಡದಿನಿಕ್ಷುಪುಷ್ಪವಾ
ಟಂಗಳಿನಾವ ಮಂಡಲಮುಮಂ ಗೆಲೆವಂದುದು ವೆಂಗಿಮಂಡಲಂ ॥ 1-21

ಎತ್ತರವಾದ ಆನೆಗಳಿರುವ ಕಾಡುಗಳಿಂದಲೂ, ತುಂಬಿದ ಫಲಭಾರದಿಂದ ಬಾಗಿದ ತೆಂಗಿನಮರಗಳಿಂದಲೂ, ಬೆಟ್ಟ ಕಾಡುಗಳಿಂದಲೂ, ಒಳ್ಳೆಯ ಭತ್ತದ ಗದ್ದೆಗಳಿಂದಲೂ, ಚಲಿಸುವ ತುಂಬಿಗಳಿಂದಲೂ ಕೂಡಿದ ವೆಂಗಿಮಂಡಲ ಬೇರೆ ಪ್ರದೇಶಗಳಿಗಿಂತ ಉತ್ತಮತರವಾಗಿತ್ತು. (ಇಲ್ಲಿಂದ ಮುಂದೆ ಹನ್ನೊಂದು ಸಾಲಿನ ಗದ್ಯದಲ್ಲಿ ಕವಿರೂಢಿಗನುಗುಣವಾದ ಪದ್ಧತಿಯಲ್ಲಿ ಅಲ್ಲಿನ ವೈಶಿಷ್ಟ್ಯಗಳನ್ನು ಪಟ್ಟಿಮಾಡಿಕೊಟ್ಟಿದ್ದಾನೆ.)

ಸಕಲವಿನೇಯ ಸಂಹತಿಗಳೊಲ್ಲದವಗ್ರಹಮೆಂಬುದಿಲ್ಲ ದೈ
ವಕೃತಮದಾದೊಡಂ ಕಳೆಯ ಕಟ್ಟಡ ಕಾಲ್ಗಳನೀರೆ ಸಾರ್ವಕಾ
ಲಿಕಫಲದಾಯಿಯಗ್ಗಳದ ಬತ್ತದ ಪೆರ್ವೆಳಸಿಂದೆ ದೇವಮಾ
ತೃಕಮುಮಕೃಷ್ಟಪಚ್ಯಮುಮೆನಲ್ದೊರೆವೆತ್ತುದು ವೆಂಗೀಮಂಡಲಂ ॥ 1-22

ಅಳಿಗೀತಕುಸುಮ ಪರಿಮಳ
ಫಲರಸ ಮಂದಾನಿಲಾದ್ರಿ ಕಾನನಲೀಲಾ
ವಿಲಸನದಿಂ ಭೋಗಮಹೀ
ತಳಮೆನಿಪುದು ವಿಷಯ ಜನಕೆ ವೆಂಗೀವಿಷಯಂ ॥ 1-23

ಇಷ್ಟು ವರ್ಣನೆಯನ್ನು ಗಮನಿಸಿದಾಗ ಮನದಟ್ಟಾಗುವ ಮುಖ್ಯ ಸಂಗತಿಯೆಂದರೆ ವೆಂಗಿಮಂಡಲ ಪ್ರಕೃತಿಯ ಅನುಗ್ರಹಕ್ಕೆ ಪಾತ್ರವಾಗಿತ್ತೆಂಬುದು, ಮಳೆ ಬೆಳೆ ಚೆನ್ನಾಗಿತ್ತೆಂಬುದು. ಪೊನ್ನನ ಹೇಳಿಕೆಗೂ ರನ್ನನ ಹೇಳಿಕೆಗೂ ಸಮಾನಾಂಶಗಳಿವೆ. ಒಟ್ಟಿನಲ್ಲಿ

ಜಳಧಿತರಂಗತಾಡಿತಮಹೀತಳದೊಳ್ ನೆಗಳ್ದಿತ್ತು ವೆಂಗೀಮಂ
ಡಲಮದರೊಳ್ ಜಿತಾನ್ಯ ವಿಷಯಂ ನೆಗಳ್ದಿರ್ದುದು ಕಂಮೆದೇಶಮ
ಗ್ಗಳಿಕೆಯ ಕಂಮೆದೇಶಮನಲಂಕರಿಸಿರ್ದುದು ಪುಂಗನೂರ್ ಜಗ
ತ್ತಿಲಕಮದರ್ಕೆ ಮುಖ್ಯಮೆನೆ ಪೆಂಪೆಸೆದಿರ್ದುದು ನಾಗಮಯ್ಯನಾ ॥ 1–24

ಕಡಲತೀರದ ಅಲೆಗಳಿಂದ ಮುಟ್ಟಿಸಿಕೊಂಡ ನೆಲದಲ್ಲಿ ವೆಂಗಿಮಂಡಲ ಹೆಸರುವಾಸಿಯಾಗಿದೆ. ಅದರಲ್ಲಿ ಕೀರ್ತಿಗಳಿಸಿರುವುದು ಕಮ್ಮೆನಾಡು. ಈ ಹಿರಿಮೆಯ ಕಮ್ಮೆನಾಡಿಗೆ ಅಲಂಕಾರಪ್ರಾಯವಾದುದು ಪುಂಗನೂರು. ಪುಂಗನೂರಿನ ಮುಖ್ಯ ವ್ಯಕ್ತಿ ನಾಗಮಯ್ಯ ಎಂಬ ಸಾರಾಂಶ ರನ್ನನಲ್ಲಿದೆ. ಪುಂಗನೂರು ಹಾಗೂ ನಾಗಮಯ್ಯ ಮತ್ತು ಇತರ ಆ ಮನೆತನದ ವಿಚಾರದಲ್ಲಿ ಪೊನ್ನ ರನ್ನಾದಿಗಳ ಪರಿಚಯವನ್ನು ಅರಿಯುವುದಕ್ಕೆ ಮುಂಚೆ ಈ ವೆಂಗಿಮಂಡಲ ಮತ್ತು ಕಮ್ಮೆನಾಡಿನ ಬಗ್ಗೆ ಆ ಪ್ರದೇಶ ಬಲ್ಲ ಇತರ ಕವಿಗಳ ಹೇಳಿಕೆಗಳನ್ನು ಅವಲೋಕಿಸಬಹುದು.

ಛಂದೋಂಬುಧಿಯ ನಾಗವರ್ಮಕವಿಯ ಪದ್ಯ :

ಜಗದೊಳಗಿದೊಂದು ಮಿಗಿಲೆನೆ
ನೆಗಳ್ದುದು ವೆಂಗಿವಿಷಯಮಾ ವಿಷಯದೊಳೊ
ಳ್ಪುಗಣಿತಮೆನೆ ಸಪ್ತಗ್ರಾ
ಮಗಳೊಳಮಾ ವೆಂಗಿಪಳು ಕರಂ ಸೊಗಯಿಸುಗುಂ ॥ 1–12

ವೆಂಗಿವಿಷಯದ ಏಳು ಹಳ್ಳಿಗಳಲ್ಲಿ ವೆಂಗಿಪಳು ಸೊಗಯಿಸುತ್ತಿತ್ತೆಂಬುದು ಛಂದೋಂಬುಧಿಕಾರನ ಅನ್ನಿಸಿಕೆ. ಇದರ ಅನುಮೋದನೆಯನ್ನು ನಾಗವರ್ಮ ರನ್ನರಿಗಿಂತ ಮೊದಲೇ ಪಂಪನ ಹೇಳಿಕೆಯಲ್ಲಿ ಕಾಣುತ್ತೇವೆ :

ಆ ಮಳೆಯಾಚಳ ಹಿಮಗಿರಿ
ಸೀಮಾವನಿತಳಕೆ ಬೆಂಗಿಮುಂಡಲದೊಳ್ ಚೆ
ಲ್ವಾವಗಮೆ ತನಗನೊಂದೂರೆ
ನಾಮದೊಳಂ ವೆಂಗಿಪಳುಕರಂ ಸೊಗಯಿಸುಗುಂ ॥ 14–40

ಅದುವೆ ವಸಂತಂ ಕೊಟ್ಟೂ
ರೊದವಿದ ನಿಡುಗುಂದಿ ಮಿಕ್ಕ ವಿಕ್ರಮಪುರಮೆಂ
ಬುದುಮಗ್ರಹಾರ ಸಂಪ
ತ್ಪದವಿಗಳೊಳಮಗ್ರಗಣ್ಯಮೂರ್ಜಿತ ಪುಣ್ಯಂ ॥ 14–41

ದಕ್ಷಿಣದ ಮಲಯಪರ್ವತದಿಂದ ಉತ್ತರದ ಹಿಮವತ್ ಪರ್ವತಗಳು ಸೀಮೆಯಾಗಿರುವ ಅವನಿತಳಕ್ಕೆ ವೆಂಗಿಮಂಡಲದೊಳಗೆ ವೆಂಗಿಪಳು ಎಂಬ ಹೆಸರಿನ ಊರು ಹೆಸರಿನಲ್ಲೂ ನಿತ್ಯ ಜಲ-ವಿನಲ್ಲೂ ಚೆನ್ನಾಗಿ ಸೊಗಯಿಸುತ್ತಿದೆಯಂತೆ. "ವೆಂಗಿಪಳು ಕರಂ ಸೊಗಯಿಸುಗುಂ" ಎಂಬ ಪದಪುಂಜ ಪಂಪ-ನಾಗವರ್ಮ ಇಬ್ಬರೂ ಬಳಸಿದ್ದಾರೆ. ವೆಂಗಿವಿಷಯಕ್ಕೆ ಸೇರಿದ ಸಪ್ತಗ್ರಾಮಗಳಲ್ಲಿ ವೆಂಗಿಪಳು ಶೋಭಾಯಮಾನವೆಂದು ನಾಗವರ್ಮ ಹೇಳಿದ್ದಾನೆ.

ಪಂಪ ವೆಂಗಿಳುವಿಗೆ ಸೇರಿದ ವಸಂತ, ಕೊಟ್ಟೂರು, ನಿಡುಗುಂದಿ, ವಿಕ್ರಮಪುರ ಎಂಬ ನಾಲ್ಕು ಸುಪ್ರಸಿದ್ಧ ಅಗ್ರಹಾರಗಳನ್ನು ಹೆಸರಿಸಿದ್ದಾನೆ.

ಕಮ್ಮೆನಾಡಿನ ಕೇಂದ್ರ ಹೃದಯ ಪುಂಗನೂರು—'ಅಗ್ಗಳಿಕೆಯ ಕಾಮೆದೇವಮನಲಂಕರಿಸಿರ್ದುದು ಪುಂಗನೂರ್ ಜಗತ್ತಿಲಕಂ' ಎಂಬುದು ರನ್ನೋಕ್ತಿ (1–24). ಪೊನ್ನ

ಪುಟ್ಟಿದುದು ಪುಂಗನೂರೊಡ
ಪುಟ್ಟಿದುದಪರಿಮಿತ ಪುರುಷಗುಣಗಣಮೆರ್ದೆಯೊಳ್
ಪುಟ್ಟಿದುದು ಜಿನಮತಂ ಗುಡಿ
ಗಟ್ಟಿದುದಿಳೆಪುಟ್ಟೆ ನಾಗಮಯ್ಯನಜಯ್ಯಂ ॥ 1–45

ನಾಗಮಯ್ಯ ಹುಟ್ಟಿದ ಪುಂಗನೂರನ್ನು ಪ್ರಸ್ತಾಪಿಸಿದ್ದಾನೆ. ಪೊನ್ನ ಹೇಳುವ ಪುಂಗನೂರೆಂಬುದು ಈಗಿನ ಆಂಧ್ರ ಪ್ರದೇಶಕ್ಕೆ ಸೇರಿರುವ ಕರ್ನಾಟಕದ ಗಡಿ ಜಿಲ್ಲೆಯಾದ ಅನಂತಪುರ ಜಿಲ್ಲೆಯಲ್ಲಿ ಇರುವ ಪುಂಗನೂರೇ ಆಗಿದೆ. ಈಗಿನ ಆಂಧ್ರದ ಅನಂತಪುರ, ಚಿತ್ತೂರು ಮೊದಲಾದ ಪ್ರದೇಶಗಳೂ ಪೊನ್ನನ ವರ್ಣನೆಗೆ ಸೇರಿದ ಭಾಗ. ಪುಂಗನೂರಿನ ಸುತ್ತಲಿನ ಪ್ರದೇಶಕ್ಕೆ ಪುಲಿನಾಡು ಎಂದೂ ಹೆಸರಿತ್ತು. ಹತ್ತನೆಯ ಶತಮಾನದಲ್ಲಿ ಇದನ್ನು ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನ ಸಾಮಂತನಾಗಿದ್ದ ವಜ್ಜಳ ಎಂಬ ಹೆಸರಿನ ನಾಯಕನು ಆಳುತ್ತಿದ್ದ. ಈತ (ಇನ್ನೊಬ್ಬ ವಜ್ಜಳನೂ ಇದ್ದಾನೆ, ಆತ ಶಿಲಾಹಾರ ಮನೆತನಕ್ಕೆ ಸೇರಿದ ಒಬ್ಬ ಮಾಂಡಲಿಕ) ಸ್ವತಂತ್ರನಾಗಲು ಹವಣಿಸಿದ್ದರಿಂದ ಇಮ್ಮಡಿ ಮಾರಸಿಂಹನಿಂದ ಹತನಾದನೆಂದು ತಿಳಿದುಬರುತ್ತದೆ. ಚಾವುಂಡರಾಯನೂ ಈ ವಜ್ಜಳನ ವಿರುದ್ಧ ಹೋರಾಡಿದ್ದನೆಂದೂ ಹೇಳಿಕೆಯಿದೆ. ಪುಂಗನೂರಿನ ನಾಗಮಯ್ಯ ಸುಸಂಸ್ಕೃತ ಜೈನ ಬ್ರಾಹ್ಮಣ. (ಇವನ ಪುತ್ರರತ್ನರು) ಆ ಭೂಸುರನಾದ ನಾಗಮಯ್ಯನ ಇಬ್ಬರು ಶ್ರೇಷ್ಠರಾದ ಮಕ್ಕಳೆಂದರೆ ಮಲ್ಲಮಯ್ಯ ಮತ್ತು ಪುನ್ನಮಯ್ಯ. ಅವರಿಬ್ಬರೂ ಅತ್ಯಪೂರ್ವಶ್ರುತರು, ಭೂಭಾರವನ್ನು ಭರಿಸುವ ಸಮರ್ಥರು, ತುಂಬ ಕಾಂತಿಯುಕ್ತವಾದ ದೇಹದವರು. ಮಲ್ಲಪ ಹಿರಿಯ ಮಗ. ಇವನು ತುಂಬ ಬಲ್ಲಿದನೂ ಹೌದು. ಪೊನ್ನಕವಿಗೆ ಇವನಲ್ಲಿ ಕಂಡ ಗುಣಗಳಿವು :

ಅಮಿತ ಜ್ಯೋತಿಷ ಶಾಸ್ತ್ರೋ
ಕ್ತಿ ಮಲ್ಲಪಂ ಜಿನಮತಜ್ಞನಾ ಹಿಮಸೇತು
ಪ್ರಮಿತ ಯಶಂ ಬಭ್ರುವರಾ
ಹಮಿಹಿರ ಶೌನಕ ಸುನಂದ ಗಾರ್ಗ್ಯ ಸಮಾನಂ ॥ 1–47

ಒಬ್ಬ ಲೌಕಿಕ ವ್ಯಕ್ತಿಯಾದ ಶ್ರಾವಕ ಶ್ರೇಷ್ಠನಿಗೆ ಇಲ್ಲಿ ಕೊಟ್ಟಿರುವ ವಿಶೇಷಣಗಳು ಅಸಮಾನ್ಯವಾದುವು. ಜೈನಧರ್ಮೀಯನಾದ ಮಲ್ಲಪನ ಕೀರ್ತಿಶ್ರೀ ರಾಮೇಶ್ವರದಿಂದ ಹಿಮಾಲಯದವರೆಗೆ ಹಬ್ಬಿತ್ತು; ಇವನ ಈ ಯಶವೆಂಬುದು ಬಭ್ರು ವರಾಹಮಿಹಿರ ಶೌನಕ ಸುನಂದ ಗಾರ್ಗ್ಯರಿಗೆ ಸಮತುಲ್ಯವಾಗಿತ್ತು ಎಂಬ ನಿರೂಪಣೆಯಲ್ಲಿ ಉತ್ಪ್ರೇಕ್ಷೆಗೆ ರಿಯಾಯಿತಿ ಕೊಟ್ಟಮೇಲೂ ಉಳಿಯುವ ಸತ್ಯಸಮೀಪವಾದ ಐತಿಹಾಸಿಕ ವಸ್ತುಸ್ಥಿತಿ ನಿಜಕ್ಕೂ ಮೇಲ್ಮಟ್ಟದ್ದಾಗಿರಬೇಕು. ಇಂಥ ಒಂದು ನಂಬುಗೆಯನ್ನು ಇನ್ನೂ ಪುಷ್ಕಳವಾಗಿ ಪುಷ್ಟೀಕರಿಸುವ ಪದ್ಯಗಳಿವೆ:

ಮಲ್ಲಪನಲ್ಲದೊಂ ಪ್ರಭುವೆ ಮಲ್ಲಪನಲ್ಲದೊನತ್ಯುದಾತ್ತನೇ
ಮಲ್ಲಪನಲ್ಲದೊಂ ಶುಚಿಯೆ ಮಲ್ಲಪನಲ್ಲದೊನಿಷ್ಟದಾನಿಯೇ
ಮಲ್ಲಪನಲ್ಲದೊಂ ಗುಣಿಯೆ ಮಲ್ಲಪನಲ್ಲದೊನೇಕ ವಾಕ್ಯನೇ
ಮಲ್ಲಪನಲ್ಲದೊಂ ಸ್ಥಿರನೆ ಮಲ್ಲಪನಲ್ಲದೊನಾರ್ಯ ಪೂಜ್ಯನೇ ॥ 1–48

ಈ ನೆಲದೊಳ್ ಮಲ್ಲಪನ ಸ
ಮಾನರ್ ನರರೀಗಳಿಲ್ಲ ಮುನ್ನುಳ್ಳೊಡೆ ಕಾ
ನೀನಂ ದಧೀಚಿ ಶಿಬಿ ನೃಪ
ಸೇನಂ ಯಮತನಯನಕ್ಕುಮಲ್ಲದೊನಲ್ಲಂ ॥ 1–49

ಇವೆರಡೂ ಪದ್ಯಗಳು ಮಲ್ಲಪನ ವ್ಯಕ್ತಿಚಿತ್ರಣಕ್ಕಿಟ್ಟ ಪೊನ್ನ ಕಳಶಗಳು, ಬರೆದ ಮಹಾಭಾಷ್ಯಗಳು, ಸೊಗಸಾದ ಭರತವಾಕ್ಯಗಳು. ಇನ್ನು ಇದಕ್ಕಿಂತ ಹೆಚ್ಚಾಗಿ ಬಿಚ್ಚಳಿಸಿ ಹೊಗಳಲು ಸಾಧ್ಯವಿಲ್ಲ, ಇದಕ್ಕೂ ಮಿಗಿಲಾಗಿ ಒಬ್ಬನ ಕಲ್ಯಾಣಗುಣಗಳನ್ನು ಬಿಚ್ಚಿಡಲು ಸಾಧ್ಯವಿಲ್ಲ. ಇವು ಮಲ್ಲಪನ ಸಮಾಧಿಯ ಮೇಲೆ ಕೆತ್ತಲು ಸುಯೋಗ್ಯೋಕ್ತಿಗಳು. ಇಂಥ ಚರಮವಾಕ್ಯಗಳಲ್ಲಿ ಕೇವಲ ಪೊನ್ನಕವಿ ತನಗೆ ಸಂದ ಉಪಕಾರಕ್ಕೆ ಪ್ರತ್ಯುಪಕಾರ ಬುದ್ಧಿಯನ್ನಾಗಲೀ ವಾಗ್ರೂಪದಲ್ಲಿ ನಿಂತ ಕೃತಜ್ಞತೆಯನ್ನಾಗಲೀ ಅರಸುವುದು ಸರಿಯಾಗದು. ಇದು ಕಾಸಿಗೆ ತಕ್ಕಂತೆ ಕೊಟ್ಟ ಕಜ್ಜಾಯ ಕಜ್ಜವಲ್ಲ. ಕವಿಯ ಎದೆಯಾಳದಿಂದ ಭಾವನಿರ್ಭರತೆಯಿಂದ ಮೂಡಿಬಂದ ಉದ್ಗಾರಗಳಿವು. ರನ್ನಕವಿ ಅತ್ತಿಮಬ್ಬೆಯನ್ನು ಕುರಿತು ಬರೆದ, ಭಾವಗೀತೆಯಾಗಿ ಹರಿದ ವ್ಯಕ್ತಿಗೀತದಂತೆ ಇಲ್ಲಿ ಪೊನ್ನಕವಿ ಅತ್ತಿಮಬ್ಬೆಯ ಹಿರಿಯರನ್ನು ಕಡೆದು ಕಾವ್ಯಶಿಲ್ಪದಲ್ಲಿ ನಿಲ್ಲಿಸಿದ್ದಾನೆ. ಪೊನ್ನ ನಿಜವಾಗಿಯೂ ತನ್ನ ಸ್ವಂತಿಕೆಯನ್ನೂ, ಅನ್ಯಕಾವ್ಯನಿಷ್ಪನ್ನವಲ್ಲದ ಸ್ವಶಕ್ತಿ ನಿರ್ಮಿತವೆನ್ನುವ ಕಾವ್ಯವನ್ನೂ, ಕಾವ್ಯಶಕ್ತಿಯನ್ನೂ ಬಿಟ್ಟು ಕೊಟ್ಟಿರುವುದು ಈ ಭಾಗದಲ್ಲೇ ಎನ್ನಬಹುದು. ಏಕೆಂದರೆ ಮಲ್ಲಪನನ್ನೇ ಅಲ್ಲದೆ ಮಲ್ಲಪನ ಒಡಹುಟ್ಟಿದವನಾದ ಪುನ್ನಮಯ್ಯನನ್ನೂ ಕವಿ ಅದ್ಭುತವಾಗಿ ಕಂಡರಿಸಿದ್ದಾನೆ.

ಮಲ್ಲಪಾರ್ಯನು ಉತ್ಸವನಿಧಿಯಾದರೆ ಪುನ್ನಮಾರ್ಯನು ಉದಾತ್ತಯಶೋನಿಧಿ (1–37). ಶೀಲಸಂಪನ್ನ ಸೋದರರಾದ ಇವರಿಬ್ಬರೂ ಸೇರಿ ಪೊನ್ನಕವಿಯಿಂದ ಶಾಂತಿಪುರಾಣ ಕಾವ್ಯ ಬರೆಯಿಸಿದರು; ಪರೆಯಿಸಿದರು (1–38).

ಶಾಂತಿಪುರಾಣಮನಿದನೋ
ರಂತಿರೆ ಬರೆಯಿಸುವ ಕೂಡೆ ಪರೆಯಿಸುವ ಜಸ
ಕ್ಕಿಂತಾರ್ ನೋಂತರಿದೇಂ ಗುಣ
ವಂತನಿದೇಂ ಪುರುಷ ರನ್ನನೋ ಗಡ ಪುನ್ನಂ ॥ 1-39

ಉದಾತ್ತ ಯಶೋನಿಧಿಯಾದ ಪುನ್ನನು ಪುರುಷರತ್ನನಂತೆ. ಸ್ತ್ರೀರತ್ನವೆಂದು ಹೆಣ್ಣನ್ನು ವಿಶೇಷಿಸುವುದು ಕವಿ ಬಣ್ಣನೆಗೆ ಅಷ್ಟೇನೂ ಹೊಸದಲ್ಲ, ಗಂಡಸನ್ನು ಪುರುಷರತ್ನವೆನ್ನುವುದು ತುಸು ಹೊಸದು. ಅಣ್ಣನಿಗೆ ತಕ್ಕ ತಮ್ಮ ಪುನ್ನಮಯ್ಯ. ಅಣ್ಣತಮ್ಮದಿರಿಬ್ಬರೂ ಒಂದೇ ಬಗೆಯಾದ ಹಿರಿತನವನ್ನು ಹೊಂದಿ ಮನೆತನದ ಹೆಸರನ್ನು ಎತ್ತಿಹಿಡಿದು ಕೀರ್ತಿಸ್ತಂಭವನ್ನು ನಿರಿಸುವುದೂ ಸ್ವಲ್ಪ ಅಪರೂಪವೇ. ಎತ್ತು ಏರಿಗೆ ಎಳೆದರೆ ಕೋಣ ನೀರಿಗೆ ಎಳೆಯುವುದು ಲೋಕರೂಢಿ. ಅಣ್ಣ ಒಂದು ದಾರಿ ಹಿಡಿದರೆ ತಮ್ಮ ಇನ್ನೊಂದು ಕಡೆ ಹೊರಡುವುದನ್ನು ಜೀವನಪಾಠ ತಿಳಿಸುವುದುಂಟು. ಇದಕ್ಕೆ ಅಪವಾದಗಳೂ ಇವೆ ಎಂಬುದನ್ನು ಮಲ್ಲಪ ಪುನ್ನಮರು ಸಾರಿ ಹೇಳುತ್ತಿದ್ದಾರೆ. ಬಲದೇವ ವಾಸುದೇವರಂತೆ, ರಾಮ ಲಕ್ಷ್ಮಣರಂತೆ, ಭೀಮ ಅರ್ಜುನರಂತೆ ಇವರದು ಅಪೂರ್ವ ಸೋದರ್ಯತನ. ಹಿಂದಿನವರೆಲ್ಲ ಪುರಾಣಪುರುಷರಾದರೆ ಇವರು ನಮ್ಮಂತೆ ಚಾರಿತ್ರಿಕ ಶಕಪುರುಷರು.

ಮಲ್ಲಪಯ್ಯನುದಗ್ರಬೋಧ ಸಮಗ್ರನಗ್ರಜನುಂ ಸಮು
ತ್ಫುಲ್ಲ ಪಂಕಜ ಲೋಚನಂ ಗುಣಿ ಪುನ್ನಮಯ್ಯನಜಯ್ಯನಾ
ಮಲ್ಲಪಯ್ಯನ ತಮ್ಮನಮ್ಮನ ಭಕ್ತನಾಮಮುದಾತ್ತವೀ
ಮಲ್ಲಪಯ್ಯನೊಳೊಪ್ಪುಗುಂ ಪಿತೃಭಕ್ತಿಯುಂ ವಿನಯೋಕ್ತಿಯುಂ ॥ 1-40

ಹಿರಿಯನಾದ ಮಲ್ಲಪಯ್ಯನಾದರೊ ಮೇಲುಮಟ್ಟದ ಅಷ್ಟೂ ಅರಿವನ್ನು ಅರಿತ ಬಲ್ಲಿದನು. ಪಿತೃಭಕ್ತಿ ಹಾಗೂ ವಿನಯೋಕ್ತಿಗಳಿಂದ ಒಪ್ಪುವಾತನೇ ಮಲ್ಲಪಯ್ಯ. ಅರಳಿದ ತಾವರೆಯಂತಹ ಕಣ್ಣಿನವನಾದ ಗುಣವಂತ ಅಜೇಯ ಪುನ್ನಮಯ್ಯ ಕೂಡ ಮಲ್ಲಪಯ್ಯನ ತಮ್ಮ ಮತ್ತು ತಂದೆಯ ಭಕ್ತ, ಉದಾತ್ತ ಚರಿತ. ಹೀಗೆ ತಂದೆಯಲ್ಲಿ ಭಕ್ತಿ, ವಿದ್ಯೆಯಲ್ಲಿ ಅನುರಕ್ತಿ, ಸಂಪತ್ತಿನಲ್ಲಿ ಕುಬೇರತನ—ಇವನ್ನು ಪಡೆದ ಇವರ ಮನೆತನ ವೆಂಗಿವಿಷಯದ ಕಮ್ಮೆನಾಡಿನ ಪುಂಗನೂರಿನಲ್ಲಿ ವೈಭವೋನ್ನತಿಯ ಆಗರವಾಗಿತ್ತು. ಆ ವಂಶದ ಹಿರಿಯ ನಾಗಮಯ್ಯ. ಆತ ಕೂಡ ಬಹುಜನ ಬಹುಗುಣ ಮಾನ್ಯ.

ಅತಿ ವಿಖ್ಯಾತಿಯ ಕಮ್ಮೆನಾಡನುದಾತ್ತಂ ಕಾವನೀವಂ ದ್ವಿಜೋ
ನ್ನತ ವಿದ್ಯಾನಿಧಿಗಗ್ಗನೂನುಪಮಾನಾತೀತ ಧೈರ್ಯಂ ಬಹು
ಶ್ರುತನಾಜ್ಞಾನಿಧಿ ಯಾಜ್ಞವಲ್ಕ್ಯ ಸದೃಶಂ ಕೌಂಡಿನ್ಯಗೋತ್ರಂ
ನಿರಾಕೃತದೋಷಸ್ಥಿತಿ ನಾಗಮಯ್ಯನನಘಂ ಶ್ರೀಭೂಮಿದೇವೋತ್ತಮಂ ॥ 1-44

ಪುಟ್ಟಿದುದು ಪುಂಗನೂರೊಡ
ವುಟ್ಟಿದುದಪರಿಮಿತ ಪುರುಷ ಗುಣಗಣಮೆರ್ದೆಯೊಳ್
ಪುಟ್ಟಿದುದು ಜಿನಮತಂ ಗುಡಿ
ಗಟ್ಟಿದುದಿಳೆಪುಟ್ಟೆ ನಾಗಮಯ್ಯನಜಯ್ಯಂ ॥ 1-45

(ಅಜ+ಅಯ್ಯ — ಆರ್ಯ?) ಅಜಯ್ಯನಾದ ನಾಗಮಯ್ಯ ಹುಟ್ಟಿದ್ದು ಪುಂಗನೂರು. ಅವನು ಪುಂಗನೂರಿನಲ್ಲಿ ಹುಟ್ಟಿದಾಗ ಅವನ ಜತೆಜತೆಯಲ್ಲೆ ಅಮಿತವಾದ ಸತ್ಯಶೌಚಾದಿ ಪುರುಷಗುಣಗಣವೂ ಹುಟ್ಟಿದುವು. ಅವನ ಎದೆಯಲ್ಲಿ ಜಿನಮತ ಹುಟ್ಟಿತು. ಇಂಥ ನಾಗಮಯ್ಯ ಹುಟ್ಟಿದ್ದರಿಂದ ಇಳೆಕೂಡ ಪುಳಕಪಡೆಯಿತು. (ಶ್ಲೇಷೆ ಯಿದ್ದರೆ ಇಲ್ಲಿ ಆತ ಹುಟ್ಟಿದ್ದರಿಂದ ಕೀರ್ತಿಧ್ವಜ ಹುಟ್ಟಿತೆಂಬ ಅರ್ಥ ಹೊರಡುತ್ತದೆ.) ಇಂಥ ಕೀರ್ತಿವಿವನಾದ ನಾಗಮಯ್ಯ ಬ್ರಾಹ್ಮಣನ ಶ್ರೇಷ್ಠ ಮಕ್ಕಳೇ ಮಲ್ಲಪಯ್ಯ-ಪುನ್ನಮಯ್ಯ. ಇವರಿಬ್ಬರೂ ಜ್ಞಾನಸಂಪಾದನೆಯಲ್ಲಿ ಎಣೆಯಿಲ್ಲದಂತಹ ಅತಿಶ್ರುತರು, ಸಮರದುರಂಧರತೆಯಲ್ಲಿ ಭೂಭಾರವನ್ನು ಭರಿಸುವ ಸಮರ್ಥರು. ಅಂಗಸೌಷ್ಠವದಲ್ಲಿ ತುಂಬ ತೇಜಸ್ವಿಯಾದ ತನುವಿನವರು. ಇವರಲ್ಲಿ ಹಿರಿಯ ಮಲ್ಲಪ, ಕಿರಿಯ ಪುನ್ನಮಯ್ಯ (1–46). ವಯಸ್ಸಿನಿಂದಾಗಿ ಹಿರಿಯ ಕಿರಿಯನೆಂಬ ವ್ಯತ್ಯಾಸವಿತ್ತೇ ಹೊರತು ಗುಣಗಳ ಆಧಿಕ್ಯದಲ್ಲಿ ಇಬ್ಬರೂ ಸಮಾನರು. ವಿನಯ ಗುಣದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷ ವಿನಯ ಎಂದು ಎರಡು ಬಗೆ. ಇವರ ಮನೆತನದ ಗುರುವಾದ ಜಿನಚಂದ್ರ ಗುರುವಿನ ಪರೋಕ್ಷ ವಿನಯವನ್ನು (ಮುನಿಗಳು ದಿವಂಗತರಾಗಿದ್ದರು) ಅಜಾತರಿಪುವಾದ ಮಲ್ಲಪನೂ, ತಮ್ಮನಾದ ಪುನ್ನಮಯ್ಯನೂ, ದೊರೆಗಳೂ, ದ್ವಿಜರೂ, ಮುನಿಗಳೂ ತಿಳಿಯುವಂತೆ ಪ್ರಕಟಿತವಾಗಿ 'ಭೂಮಿಗೆ ರತ್ನಚಿತ್ರಮಿದೆ ಸಾರಮೆನಿಸಲ್ ನೆಗಳ್ದೀ ಪುರಾಣ ಚೂಡಾಮಣಿಗೆ ಅಭ್ಯರ್ಥಿಯಿಂದ ಕಳಸವಿಟ್ಟು ಗುರುಸ್ಥಿರಭಕ್ತಿ' ಯನ್ನು ಪ್ರಕಟಿಸಿದರು (1–51).

ಶಾಂತಿಪುರಾಣದ ನಿರ್ವಾ
ಣಂ ತಕ್ಕುದೆ ಮಲ್ಲಪಯ್ಯನಿಂ ತದನುಜನಿಂ
ಶಾಂತಿಧನ ಪುನ್ನಮಯ್ಯನಿ
ನೇಂ ತಮ್ಮಿರ್ವರುಂ ಕೃತಾರ್ಥರೊ ಜಗದೊಳ್ ॥ 1-52

ಅವರಿರ್ವರ ಪುಣ್ಯಂ ತ್ರೈ
ಭುವನದೊಳಮಗಣ್ಯಮಂತು ಸಲೆ ನೋಂತವರಾರ್
ಭವಜಲನಿಧಿಜಲದೊಳ್ ಮೂ
ಡುವ ಮುೞುಗುವ ನಡೆವ ನುಡಿವ ಸಂಸೃತಿಗತರೊಳ್ ॥ 1-53

ಪೊನ್ನಕವಿ ವಿರಚಿತ 'ಪುರಾಣಚೂಡಾಮಣಿ' ಶಾಂತಿಪುರಾಣದ ನಿರ್ವಾಣವು ಮಲ್ಲಪಯ್ಯನಿಗಿಂತಲೂ ಆವನ ತಮ್ಮ ಶಾಂತಿಧನ ಪುನ್ನಮಯ್ಯನಿಗಿಂತಲೂ ದೊಡ್ಡದೇ ಎನ್ನುವಂತೆ ಲೋಕವಂದ್ಯರಾದ ಅಣ್ಣತಮ್ಮಂದಿರು ಅದೇನು ಕೃತಾರ್ಥರೊ! ಅವರಿಬ್ಬರ ಪುಣ್ಯ ಮೂರು ಲೋಕಗಳಲ್ಲಿ ಎಣಿಕೆಗೆ ಮೀರಿದ್ದು. ಸಂಸಾರ ಸಾಗರದಲ್ಲಿ ಹುಟ್ಟುವ ಸಾಯುವ ಜೀವರಾಶಿಯಲ್ಲಿ ಈ ಒಡಹುಟ್ಟಿದವರ ಹಾಗೆ ಚೆನ್ನಾಗಿ ನೋಂತವರು ಯಾರಿದ್ದಾರೆ.

ಅವರ ಪೊಗೞ್ತೆಗತ್ಯಧಿಕಮಪ್ಪ ನೆಗೞ್ತೆಗೆ ನೋಂತನಾವೊನಿ
ನ್ನವರ ಬುಧೋಕ್ತಮಪ್ಪ ಗುರುಭಕ್ತಿಗೆ ಸೂಕ್ತಿಗೆ ತಕ್ಕನಾವೊನಾ
ರವರ ಜಿನಾಗಮ ಕ್ರಮದಣುವ್ರತಮಂ ಸಲಿಸುತ್ತುಮಿರ್ಪರಂ
ದವಿರತಮಗ್ರಜಾನುಜರನೇಂ ಪೊಗೞ್ದಪ್ಪುದೊ ಮೂಱುಲೋಕಮುಂ ॥ 1-54

ತವದ ಪಿರಿದೞ್ತಿಯಿಂದಿದ
ನವರಿರ್ವರುಮಱಿಯೆ ನೆಱಿಯೆ ಪೇೞಿಸಿ ಜಿನಚಂ
ದ್ರವರ ಮುನೀಂದ್ರರ ಪೆಸರೊಳ್
ಸವೆಯಿಸಿದರ ನೆಗೞ್ದಖಂಡ ಭೂಮಂಡಳದೊಳ್ ॥ 1-55

'ಮಲ್ಲಪ – ಪುನ್ನಮಯ್ಯರ ಹೊಗಳಿಕೆಗೆ, ಅತಿ ಹೆಚ್ಚಿನದಾದ ನೆಗಳಿಕೆಗೆ ನೋಂಪಿ ಹಿಡಿವವರಾರು? ಇನ್ನು ಬಲ್ಲಿದರು ಸಾರುವ ಅವರ ಗುರುಭಕ್ತಿಗೆ, ಒಳ್ಳೆಯ ಮಾತಿಗೆ ತಕ್ಕವರು ಯಾರು? ಅವರಂತೆ ಜಿನಾಗಮಗಳಲ್ಲಿ ಹೇಳಿದ ಕ್ರಮದಂತೆ ಅಣುವ್ರತಗಳನ್ನು ಸಲ್ಲಿಸುತ್ತಿರುವವರು ಯಾರು?'—ಎಂಬುದಾಗಿ ಅಣ್ಣತಮ್ಮಂದಿರನ್ನು ಮೂರು ಲೋಕವೂ ಅದೇನು ಕೀರ್ತಿಸುತ್ತಿದೆಯೋ! ಬತ್ತದಿರುವ ಹೆಚ್ಚಾದ ಒಲವಿನಿಂದ ಇದನ್ನು ಅವರಿಬ್ಬರೂ ಅಖಂಡ ಭೂಮಂಡಲವೂ ತಿಳಿಯಲು ಪೂರ್ಣವಾಗಿ ಹೇಳಿಸಿ ಜಿನಚಂದ್ರಮುನೀಂದ್ರರ ಹೆಸರಿನಲ್ಲಿ ಮಾಡಿಸಿದರು.

ಅಮ್ಮನ ಭಕ್ತನುಂ ಗುಣಗಣಾಶ್ರಯನಾತನ ತಮ್ಮನಪ್ಪ ಪು
ನ್ನಮ್ಮನುಮೞ್ತಿಯಿಂದ ಗುರುಸಮಕ್ಷಪರೋಕ್ಷ ವಿನಯ ವೃತ್ತಿಯಿಂ
ದಮ್ಮನದುಕ್ಕೆವಂ ತಗುೞ್ಚೆ ನಿರ್ವಹಣ ಸ್ಥಿತಿಗುಯ್ದರೀ ಪುರಾ
ಣಮ್ಮಣಿರತ್ನಮಿಂತಿದೆಯಳಂಕೃತಿ ತಾಂ ಕವಿಚಕ್ರವರ್ತಿಯಾ ॥ 12-61

ತಂದೆಯ ಭಕ್ತಂ ಬುಧಜನ
ವೃಂದಾರಕನೆನಿಪನಾವೊನಾತನ ತಮ್ಮಂ
ಸಂದವಿಭು ಪುನ್ನಮಯ್ಯನಿ
ವಂ ದುಗ್ಧಾಂಬುಧಿಯನೆಯ್ದೆ ಪರಿಯಿಸಿ ನೆಗೞ್ದಂ ॥ 12-62

ದ್ವಿಜಕುಲತಿಲಕೋಪಮರ
ಗ್ರಜಾನುಜರ್ ಮಲ್ಲಪಯ್ಯಪುನ್ನಮಯಂಗಳ್
ನಿಜಗುರು ಪರೋಕ್ಷವಿನಯದಿ
ನಜಿತಲ್ ಜಿನಚಂದ್ರಕೃತಿಗೆ ಕಲಶಮನಿಟ್ಟರ್ ॥ 12-63

ತಂದೆಯ ಭಕ್ತನೆಂದು ಖ್ಯಾತನಾದ ಗುಣವಂತ ಮಲ್ಲಪಯ್ಯನೂ ಆತನ ತಮ್ಮನಾದ ಪುನ್ನಮಯ್ಯನೂ ಪ್ರೀತಿಯಿಂದ ಗುರುಗಳ ಸಮಕ್ಷಮದಲ್ಲಿಯೂ ಪರೋಕ್ಷದಲ್ಲಿಯೂ ಭಕ್ತಿಯುಕ್ತರಾಗಿದ್ದ ಆತ್ಮೀಯವಾಗಿಯೂ ಉತ್ಸಾಹದಿಂದಲೂ ಕವಿಚಕ್ರವರ್ತಿಗೆ ಅಲಂಕಾರವಾದ ಭೂಮಿಗೆ ರತ್ನವೆನಿಸಿದ ಈ ಪುರಾಣವನ್ನು ರಚಿಸಿದರು. ತಂದೆಯ ಭಕ್ತನೆಂದೂ ವಿದ್ವಾಂಸರ ದೇವನೆಂದೂ ಹೆಸರು ಪಡೆದ ಮಲ್ಲಪಯ್ಯನ ತಮ್ಮನಾದ ಪ್ರಭು ಪುನ್ನಮಯ್ಯನು ಇದರ ಪ್ರಸಿದ್ಧಿಯನ್ನು ಹಾಲುಗಡಲಿನವರೆಗೆ ಹಬ್ಬಿಸಿ ಮನೆಮಾತಾದನು. ದ್ವಿಜಕುಲಕ್ಕೆ ಭೂಷಣಪ್ರಾಯರಾದ ಈ ಮಲ್ಲಪಯ್ಯ–ಪುನ್ನಮಯ್ಯ ಸಹೋದರರು ತಮ್ಮ ಗುರುವಿಗೆ ಪರೋಕ್ಷ ವಿನಯ ತೋರುವ ಸಲುವಾಗಿ ಈ ಜಿನಪುರಾಣಕ್ಕೆ ಕಲಶವಿಟ್ಟಿದ್ದಾರೆ.

ಪೊನ್ನಕವಿ ಈ ಮನೆತನದ ಮಗನಾಗಿ ಉಪ್ಪುಂಡು ಬೆಳೆದಂತೆ ತೋರುತ್ತದೆ. ಜೋಳದ ಪಾಳಿಗೆ ಅಷ್ಟು ಸ್ಪಂದಿಸಿದ್ದಾನೆ. ಜತೆಗೆ ಪ್ರತಿ ಆಶ್ವಾಸಾಂತ್ಯದಲ್ಲೂ 'ಇದು ಜಿನೇಶ್ವರನ ಚರಣ ಕಮಲದ ದುಂಬಿಯಂತಿರುವ ಶ್ರೀಮದುಭಯಕವಿಚಕ್ರವರ್ತಿಯೆಂಬ ಬಿರುದಾಂಕಿತನಿಂದ ನಿರ್ವರ್ತಿತವೂ ಅಮ್ಮನ ಭಕ್ತಾಭಿದಾನ ಮಲ್ಲಪಾರ್ಯ, ಅವನ ತಮ್ಮ ಹೊಸ ಸಾರಸ್ವತ ಪುನ್ನಮಾರ್ಯ ಹೇಳಿಸಿದ ಪುರಾಣಚೂಡಾಮಣಿ' – ಎಂದು ನಮೂದಿಸಿದ್ದಾನೆ. ಇದು ಕೃತಜ್ಞತೆಗೂ ಮೀರಿದ್ದು, ಕೇವಲ ಹೃತ್ಸಂವೇದ್ಯವಾದದ್ದು. ಆ ವಂಶದ ಘನತೆ ಗೌರವಗಳು ಕವಿ ಹೃದಯದಲ್ಲಿ ಬೇರುಬಿಟ್ಟಿವೆ.

ಇದರೊಡನೆ ರನ್ನಕವಿಯ ಅಜಿತಪುರಾಣ ಕಾವ್ಯದ ಪದ್ಯಗಳಲ್ಲಿ ಸದೃಶ ಸಮರೇಖೆಯಲ್ಲಿ ಸಾಗುವ ಈ ಆದರ್ಶ ಸಂಸಾರ ಚಿತ್ರದ ವಿವರವನ್ನು ಸೇರಿಸಿ ಸಮನ್ವಯಗೊಳಿಸಿದರೆ, ಆ ವಿಖ್ಯಾತ ಮನೆತನದ ಧವಳೋನ್ನತಿ ಮತ್ತಷ್ಟು ಉಜ್ವಲವಾಗುತ್ತದೆ, ಸಮಗ್ರವಾಗುತ್ತದೆ. ರಾಜನಿಷ್ಠೆ ಧರ್ಮಶ್ರದ್ಧೆ ಸಾಹಿತ್ಯಾನುರಾಗ ವಿದ್ವಜ್ಜನಪ್ರೇಮ —ಇವೆಲ್ಲ ಇದ್ದ ಜನರಿಂದ ಕೂಡಿದ ಈ ವಂಶದವರು ಅತ್ತ ಕಣದಲ್ಲಿ ಕಲಿಗಳು, ಇತ್ತ ಮನದಲ್ಲಿ ಮನೆಯಲ್ಲಿ ಜಿನದಾಸರು. ಇವರ ಕುಟುಂಬ ವರ್ಗದವರು ಯುದ್ಧಗಳನ್ನು ಗೆದ್ದರೆಂಬುದು, ದೇಶಪ್ರೇಮ ಬೆಳಗಿದರೆಂಬುದು ಒಳ್ನುಡಿ ಒಳ್ನುಡಿಗಳಿಂದ ಕೂಡಿ ನಲ್ಬಾಳಿನಿಂದಲೇ ಸಾಗಿ ಮೇಲಾಗಿ ಬದುಕಿದರೆಂಬುದು ಪೊನ್ನ–ರನ್ನರ ಹೃದಯಗಳನ್ನು ಗೆದ್ದಿದೆ. ತನ್ನ ಅಜಿತಪುರಾಣದಲ್ಲಿ ಈ ಇತಿಹಾಸ ಪ್ರಸಿದ್ಧ ಮನೆತನದ ಚಿತ್ರ ಕೊಡುವಾಗ ಪೊನ್ನನಂತೆ ರನ್ನನೂ ನಾಗಮಯ್ಯನಿಂದಲೇ ಆರಂಭಿಸುತ್ತಾನೆ :

ನಾಗಮನರ್ಥಿಮಯಾರಘು
ನಾಗಮನಧಿಗತವಿನೇಯ ಜನ ಹಿತಕರ ಜೈ
ನಾಗಮನಧಿಕರಿಪೊಂದಿ
ಗ್ನಾಗಮನಕ್ಷೂಣ ಭದ್ರಲಕ್ಷಣಗುಣದಿಂ ॥ 1-25

ಆ ನೆಗಟ್ದ ನಾಗಮಯ್ಯನ
ಸೂನುಗಳಿರ್ವರೆದಲವರೊಳಗ್ರಸುತಂ ವಿ
ದ್ಯಾನಿಧಿಮಲ್ಲಪನನುಜನ
ಮೂನಗುಣಂ ಪೊನ್ನಮಯ್ಯನಣ್ಣನ ಭಕ್ತಂ ॥ 1-26

ನಾಗಮಯ್ಯ ಎಂಬಾತ ಬೇಡುವ ನವಿಲಿನಂತಹ ಜನರಿಗೆ ಮೋಡಗಳ ಆಗಮನದಂತೆ, ಪ್ರಾಸ್ತರಾದ ವಿನೇಯ ಜನಕ್ಕೆ ಹಿತಕರನು, ಜೈನಾಗಮವನ್ನು ಗುರಿಯಲ್ಲಿಟ್ಟುಕೊಂಡಿರುವವನು, ಕುಂದಿಲ್ಲದ ಶುಭಲಕ್ಷಣಗುಣಗಾತ್ರದಿಂದಾಗಿ ದಿಗ್ಗಜದಂತೆ ಇರುವವನು – ಎಂಬಲ್ಲಿ ನಾಗ (ಮಯ್ಯ) ಶಬ್ದದ ಮೇಲೆ ರನ್ನಕವಿ ಆಟವಾಡುವುದಲ್ಲದೆ ವ್ಯಕ್ತಿಯ ವ್ಯಕ್ತಿತ್ವವನ್ನೂ ಮೂರ್ತಗೊಳಿಸಿದ್ದಾನೆ. ಹೆಸರುಮಾಡಿದ ನಾಗಮಯ್ಯನಿಗೆ ಇಬ್ಬರೇ ಮಕ್ಕಳು. ಅವರಲ್ಲಿ ಹಿರಿಯನಾದ ಮಲ್ಲಪ ವಿದ್ಯೆಗಳಿಗೆ ಆಗರ, ಕಿರಿಯನಾದ ಪೊನ್ನಮಯ್ಯ ದೋಷಗಳಿಲ್ಲದ ಗುಣದವನು ಮತ್ತು ಅಣ್ಣನಲ್ಲಿ ಗೌರವವಿರುವಾತ.

ನೃಪಶಾಸ್ತ್ರಜ್ಞತೆಗಿಲ್ಲ ಮಲ್ಲಪನೊಳಶ್ವೇಭಾಗಮಕ್ಕಿಲ್ಲ ಮ
ಲ್ಲಪನೊಳ್ ಶೂರತೆಗಿಲ್ಲ ಮಲ್ಲಪನೊಳಾರ್ತೀವೊಳ್ಗುಣಕ್ಕಿಲ್ಲ ಮ
ಲ್ಲಪನೊಳ್ ಭವ್ಯತೆಗಿಲ್ಲ ಮಲ್ಲಪನೊಳಾಚಾರ ಕ್ರಮಕ್ಕಿಲ್ಲಮ
ಲ್ಲಪನೊಳ್ ನೋಟ್ಪೊಡೆ ಕಾಣಲಾಗದು ಸಮಾನಂ ಮಾನವಾನೀಕಮುಂ ॥

ರಾಜನೀತಿವಿಶಾರದ, ಆಶ್ವಶಾಸ್ತ್ರವಿದ, ಯುದ್ಧವಿದ್ಯಾಪಾರಗ, ಮಹಾದಾನಿ, ಭವ್ಯವ್ಯಕ್ತಿತ್ವವುಳ್ಳಾತ, ಆಚಾರ ಸಂಪನ್ನ—ಇಂಥ ಗುಣಗಳ ಸಮುದಾಯಶೋಭೆಯಿಂದ ಮಲ್ಲಪ ಅನ್ಯಾದೃಶನಾಗಿದ್ದಾನೆ. ರನ್ನನ ಈ ಪದ್ಯವನ್ನು ಲಯದಲ್ಲಿ ಭಾವದಲ್ಲಿ ಪೊನ್ನನ ಪದ್ಯದೊಡನೆ ಹೋಲಿಸಬಹುದು :

ಪಂಡಿತ ಮಂಡಳಿಗಂ ಕವಿ
ಮಂಡಳಿಗಂ ತನ್ನ ಮನೆ ತವರ್ಮನೆಯೆನೆ ಕೆ
ಯ್ಕೊಂಡು ಪೊಗಟ್ದಪುದು ಭುವನಂ
ಕೌಂಡಿನ್ಯಕುಲಪ್ರದೀಪನಂ ಮಲ್ಲಪನಂ ॥ 1-28

ಮಲ್ಲಪನ ಕುಲಗೋತ್ರದ ವಿಚಾರವಿಲ್ಲಿದೆ. ಕೌಂಡಿನ್ಯಕುಲಪ್ರದೀಪನೆಂದು ಮಲ್ಲಪನನ್ನು ನಿರ್ದೇಶಿಸಿ ವಿಶೇಷಣಿಸಿದೆ. 'ಕೌಂಡಿನ್ಯಗೋತ್ರ' ವನ್ನು ಛಂದೋಂಬುಧಿಯಲ್ಲೂ ಉಲ್ಲೇಖಿಸಿದೆ. ಕೌಂಡಿನ್ಯಕುಲವನ್ನು ಬೆಳಗಿನ ಮಲ್ಲಪನ ಮನೆ ಪಂಡಿತ ಮಂಡಲಿಗೂ, ಕವಿ ಮಂಡಲಿಗೂ ತವರುಮನೆಯಾಗಿತ್ತೆಂದು ಜನರೆಲ್ಲ ಕೊಂಡಾಡುತ್ತಿದ್ದರೆಂಬುದು ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿ. ಪೊನ್ನ–ರನ್ನರೇ ಅಲ್ಲದೆ ಇನ್ನೂ ಕೆಲವು ಪಂಡಿತರೂ ಕವಿಗಳೂ ಈ ಮನೆಯ ನೆರವಿನಲ್ಲಿದ್ದರೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ರನ್ನಕವಿ ಈ ವಿಖ್ಯಾತ ಕುಲವನ್ನು ಕೀರ್ತಿಸುವ ಕ್ರಮವಷ್ಟೂ ಪೊನ್ನನ ಮಾದರಿಯನ್ನೇ ಮುಂದುವರಿಸಿದಂತಿದೆ. ಮಲ್ಲಪನನ್ನು ಮತ್ತಷ್ಟು ಪದ್ಯಗಳಲ್ಲಿ ಮೂಡಿಸಿ ಅನಂತರ ಅವನ ತಮ್ಮ ಪುನ್ನಮಯ್ಯನ ಪಾತ್ರ ಚಿತ್ರಣಕ್ಕೆ ರನ್ನಕವಿ ತೊಡಗಿದ್ದಾನೆ. ಈತ ಕೊಡುವ ವಿವರಗಳಲ್ಲಿ ಯಾವುದನ್ನೂ ಬಿಡುವಂತಿಲ್ಲ ಎಂಬಷ್ಟು ಕೆನೆಗಟ್ಟಿದ ಗಟ್ಟಿ ಚಿತ್ರಣವಿದೆ.

ಪಡೆವೆಂ ಪುತ್ರನನೊರ್ವನಂ ಪಡೆವೆನಾನೊಂದೇಸಿನಕ್ಕುಂ ಜಯಂ
ನುಡಿದೆಂ ಕೇಳ್ದಿರಿಮೆಂದು ಮುನ್ನಱಿಪಿ ತತ್ತದ್ವಿದ್ಯನಾಚಾರದೊಳ್
ಗುಡಿಯಂ ಕಟ್ಟಿ ಕುಮಾರಲೋಧ್ರಸಮರ ಪ್ರಾರಂಭದೊಳ್ ಬಲ್ಮೆನೇ
ರ್ಪಡೆ ಭೂವಲ್ಲಭನಂ ಮನಂಗೊಳಿಸಿದಂ ಶೌರ್ಯೋರ್ಜಿತಂ ಮಲ್ಲಪಂ ॥ 1-30

ಅಱಿಪೆಡೆಯೊಳ್ ಕಾಲತ್ರಯ
ವಿಱಿಪೆಡೆಯೊಳ್ ತನ್ನ ಶೌರ್ಯಮಂ ಬಲ್ಮೆಯುಮಂ
ಮೆಱೆದಂ ಮಲ್ಲಪನಲ್ಲದೆ
ಪೆಱನಾವನೊ ಶಾಸ್ತ್ರ ಶಸ್ತ್ರ ವಿದ್ಯಾ ಕುಶಲಂ ॥ 1-31

ಪೊನ್ನಂ ನಯವಿದನಯುಸಂ
ಪನ್ನಂ ಮಂದರಗಿರೀಂದ್ರದನ್ನಂ ನಿಜಧೈ
ರ್ಯೋನ್ನತಿಯೊಳ್ ಬಲ್ಮೆಯೊಳಜ
ನನ್ನಂ ಧರ್ಮಕ್ಕೆ ಧರ್ಮನುದನನನ್ನಂ ॥ 1-32

ಬಳದೇವ ವಾಸುದೇವರ
ನಿಱಿಪುದು ಗುಣದೊಳ್ಪುರಾಮಲಕ್ಷ್ಮಣರಂ ಪೆಂ
ಪಿಱಿಪುದು ಭೀಮಾರ್ಜುನರುಮ
ನಿಱಿಪುದು ಮಲ್ಲಪನ ಪೊನ್ನಮಯ್ಯನ ಚರಿತಂ ॥ 1-33

ಗುರುಜಿನಚಂದ್ರ ಮುನೀಂದ್ರರ
ಪರೋಕ್ಷದೊಳ್ ತಂಮುತಿರ್ವರುಂ ಪೊನ್ನಿಗನಿಂ
ಬರೆಯಿಸಿದರ್ ಸಕಳೋರ್ವಿಗೆ
ಪರೆಯಿಸಿದರ್ ಸಲೆ ಪುರಾಣ ಚೂಡಾಮಣಿಯಂ ॥ 1-34

ಜಿನಭಕ್ತಂ ಮಲ್ಲಪನ
ಣ್ಣನ ಭಕ್ತಂ ಪೊನ್ನಮಯ್ಯನವರಿರ್ವರ ಮಾಂ
ತನದಳವನಳೆಯಲಜನಾ
ಱನೆನಿಸಿ ಕೌಂಡಿನ್ಯಗೋತ್ರ ಮಂಡನರಾದರ್ ॥ 1-35

ಮಲ್ಲಪ–ಪುನ್ನಮಯ್ಯರು ಕೇವಲ ಜಿನಧರ್ಮಪರಾಯಣರಾಗಿ ಅಹಿಂಸೆಯ ಜಪಮಣಿ ಎಣಿಸುತ್ತಾ ಮನೆಯೊಳಗೆ ಕುಳಿತವರಲ್ಲ. ಜೀವದಯೆ ಎದೆಯೊಳಗೆ ಕುಳಿತಿದ್ದರೂ ರಾಷ್ಟ್ರಧರ್ಮದ ಕರೆಗೆ ಹಿಂದೆಗೆದವರಲ್ಲ. ನಾಡಿನ ಕಾಪಿಗಾಗಿ ಸದಾ ಮುನ್ನುಗ್ಗಿ ಮುಂಚೂಣಿಯಲ್ಲಿ ಟೊಂಕಕಟ್ಟಿ ನಿಂತವರು. ಮಲ್ಲಪ ಕುಮಾರ ಲೋಧ್ರ ಸಮರ (?) ಪ್ರಾರಂಭದಲ್ಲಿ ತೋರಿದ ಕಲಿತನದುರ್ಕಿಗೆ ಭೂವಲ್ಲಭನೂ ಮೆಚ್ಚಿ ತಲೆದೂಗಿದನು. ಮಲ್ಲಪನು ಜ್ಞಾನನಿಧಿಯೆ ಎಂದರೆ ತ್ರಿಕಾಲಜ್ಞಾನಿ, ಸಾಹಸಿಯೆ ಎಂದರೆ ಶೌರ್ಯ ನಿದಾನಿ! ಅದರಿಂದ ಆತ ಶಾಸ್ತ್ರವಲ್ಲೂ ನಿಪುಣ, ಶಸ್ತ್ರವಿದ್ಯೆಯಲ್ಲೂ ಕುಶಲ. ಅವನ ತಮ್ಮನಾದ ಪೊನ್ನನೂ (ಕವಿಪೊನ್ನನಿಗೆ ಸಮನಾದ ಹೆಸರು. ಆಶ್ರಿತ ಪುನ್ನನಿಗೂ ಇದೆ.) ಅಯನಯ ಸಂಪನ್ನನಾಗಿದ್ದಾನೆ, ಸ್ಥಿರತೆಯಲ್ಲಿ ಮಂದರಗಿರಿಗೆ ಸಮನಾಗಿದ್ದಾನೆ, ತನ್ನ ಧೈರ್ಯದ ಉನ್ನತಿಯಲ್ಲಿ ಬ್ರಹ್ಮಸದೃಶನಾಗಿದ್ದಾನೆ, ಧರ್ಮಕ್ಕೆ ಆಶ್ರಯವಿತ್ತು ಧರ್ಮನಂದನನಾದ ಯುಧಿಷ್ಠಿರನಂತಿದ್ದಾನೆ.

ಹೀಗೆ ಈ ಅಪೂರ್ವ ಸೋದರರ ಜೋಡಿ ಕಮ್ಮೆನಾಡಿನಲ್ಲೇ ಒಂದು ದೊಡ್ಡ ಪಡೆಮಾತಾಗಿ ಆದರ್ಶವಾಗಿತ್ತು. ಪುರಾಣ ಪ್ರಪಂಚದ ಜೋಡಿಗಳಾದ ಬಲದೇವ-ವಾಸುದೇವ, ರಾಮ-ಲಕ್ಷ್ಮಣ, ಭೀಮ-ಅರ್ಜುನ ಮೊದಲಾದವರ ಕೀರ್ತಿಯನ್ನು ಪಕ್ಕಕ್ಕೆ ತಳ್ಳಿ ಶೀಲಗುಣಸಾಹಸಹಿರಿಮೆಗಳಲ್ಲಿ ಮಲ್ಲಪ–ಪುನ್ನಮಯ್ಯರ ಮೇಲ್ಪಂಕ್ತಿ ಎತ್ತರಕ್ಕೇರಿದೆ. ಆ ಪುರಾಣ ಪುರುಷರನ್ನು ಕಂಡವರಾರು ? ಈ ಇತಿಹಾಸ ಪುರುಷರನ್ನು ಪುಂಗನೂರಿನ ಜನರೆಲ್ಲ ಕಂಡಿದ್ದಾರೆ, ಕೇಳಿದ್ದಾರೆ, ಕೊಂಡು ಕೊನೆದಾಡಿದ್ದಾರೆ. ಇವರಿಬ್ಬರಿಗೂ ತಮ್ಮ ಧರ್ಮಗುರು ಜಿನಚಂದ್ರಮುನೀಂದ್ರರ ಪರೋಕ್ಷದಲ್ಲಿ ಕವಿಪೊನ್ನಿಗನಿಂದ ಶಾಂತಿಪುರಾಣ ಕಾವ್ಯ ಬರೆಸಿದ್ದಾರೆ. ಇಲ್ಲಿ 'ಪರೋಕ್ಷದೊಳ್' ಎಂದಿರುವುದರಿಂದ ಜಿನಚಂದ್ರಮುನೀಂದ್ರರು ನಿಧನರಾದಮೇಲೆ ಪೊನ್ನನ ಕಾವ್ಯರಚನೆಯಾಗಿದೆಯೆಂದು ತಿಳಿಯಬಹುದು. ಮಲ್ಲಪ ಜಿನಭಕ್ತನಾದರೆ, ಪೊನ್ನಮಯ್ಯ ಈ ಅಣ್ಣನ ಭಕ್ತನಾಗಿದ್ದಾನೆ. ಇವರಿಬ್ಬರೂ ತಮ್ಮ ಹಿರಿತನದಿಂದ ಸಾಮಾಜಿಕ ಪ್ರತಿಷ್ಠೆಯಿಂದ ಕೌಂಡಿನ್ಯಗೋತ್ರಕ್ಕೆ ಅಲಂಕಾರಪ್ರಾಯರಾಗಿದ್ದರು.

ಈ ಮನೆತನ ತನ್ನ ಅನೇಕ ದಾನ, ಧರ್ಮ, ಸಾಹಸ, ಕಾವ್ಯರಚನೆಗೆ ಪ್ರೋತ್ಸಾಹ, ಪಂಡಿತರಿಗೆ ಆಶ್ರಯ, ಯುದ್ಧಗಳಲ್ಲಿ ಭಾಗವಹಿಸಿ ನಾಡಿನ ಮರ್ಯಾದೆ ಕಾಪಾಡುವಿಕೆ, ಗುರುಸೇವೆ, ಜಿನಧರ್ಮ ಪ್ರಸಾರ—ಹೀಗೆ ಹಲವು ಅಗ್ಗಳಿಕೆಯಿಂದ ಹತ್ತನೆಯ ಶತಮಾನದಲ್ಲಿ ಉನ್ನತಸ್ಥಾನದಲ್ಲಿತ್ತು. ಇವರ ಸಂಸಾರ ಕಮ್ಮನಾಡಿನ ವೆಂಗಿಪಳು ಪುಂಗನೂರು ಪ್ರದೇಶದಲ್ಲಿ ಎಲ್ಲರ ಗೌರವಕ್ಕೆ ಪಾತ್ರವಾಗಿತ್ತು. ಇವರ ಕುಟುಂಬ ಸದಾ ಈ ರೀತಿಯ ಸಂತೋಷ ಸಡಗರಗಳ ಹಬ್ಬದ ಉಬ್ಬಿನಲ್ಲೇ ಇರಲಿಲ್ಲ. ಇವರಿಗೂ ದುಃಖ ದುಮ್ಮಾನಗಳ ದುರ್ದಿನಗಳಿದ್ದವು. ಸುಖದ ಹಿಂದೆಯೇ ದುಃಖವೂ ಇವರನ್ನು ಆವರಿಸಿಕೊಂಡಿದ್ದುದನ್ನು ಕೂಡ ರನ್ನಕವಿ ಮಾರ್ಮಿಕವಾಗಿ ಹರಳುಗೊಳಿಸಿಟ್ಟಿದ್ದಾನೆ.

ಪರಮದ್ರೋಹರೊಳೊಂದಿ ತನ್ನೊಳಿಱಿಯಲ್ಗೋವಿಂದರಂ ಬರ್ಪುದುಂ
ಸೆರಗಂ ಪಾರದೆ ತಾಗಿ ತೈಲಪನೃಪಂ ಬಾೞ್ಗೆಂದು ಬಾಳ್ಗಿತ್ತು ಮ
ಚ್ಚರದಿಂ ಸಾರ್ಚಿದರಂ ಪಡಲ್ವಡಿಸಿ ಕಾವೇರೀ ಸರಿತ್ತೀರದೊಳ್
ಸುರಲೋಕಾತಿಥಿಯಾದ ಪೊನ್ನನೆವಲಂ ಗಂಡಂ ಪೆಱರ್ ಗಂಡರೇ ॥ 1-36

ತಲೆ ಪಗೆವರ ಕಯ್ಯೊಳ್ ಸುರ
ಲಲನೆಯ ತೋಳೊಳಗೆ ಪತಿಯ ಭಂಡಾರದೊಳಂ
ನೆಲಸೆ ಸುಭಟರ್ಕಳೊಳ್ ಮೂ
ದಲೆ ನೆಗೞ್ದುದು ಪೊನ್ನನನ್ನನಾವನೊ ಮೊನೆಯೊಳ್ ॥ 1-37

ಒಮ್ಮೆ ಪೊನ್ನನ ಮೇಲೆ ಹಗೆ ಸಾಧಿಸಿ ಪರಮದ್ರೋಹಿಗಳೊಡಗೂಡಿ ಗೋವಿಂದರನು (ಗಂಗರ ಮಾರಸಿಂಹನ ತಮ್ಮನಾದ ಗೋವಿಂದರಸ) ಇರಿಯಲು ಅಣಿಯಾಗಿ ಆಕ್ರಮಣ ಮಾಡಿದ. ಪೊನ್ನ ಭೀತನಾಗಿ ಪಲಾಯನ ಮಾಡುವ ಹೇಡಿಯಲ್ಲ. ತನ್ನ ಪ್ರಭು ತೈಲಪನೃಪನು ಬಾಳಲಿ ಎಂದು ರಾಜನಿಷ್ಠೆ ಘೋಷಿಸಿ ಕತ್ತಿ ಹಿಡಿದು ಹಗೆಯಮೇಲೇರಿಹೋದ. "ಗೋವಿಂದರನಂ ಗಿರಿಕಂದರದೊಳ್ ಪುಗಿಸಿದುದಱಿಂ ವೈರಿಕುಳ ಕಾಳದಂಡನುಂ" ಎಂದು ಚಾವುಂಡರಾಯಪುರಾಣದ ಅಂತಿಮ ಭಾಗದಲ್ಲೂ, ಹುಂಚದ ಶಾಸನದಲ್ಲೂ ಗೋವಿಂದರನ ಪ್ರಸ್ತಾಪವಿದೆ. ಮಚ್ಚರದಿಂದ ಮೇಲೆ ಹಾಯ್ದವರನ್ನು ದಿಕ್ಕುದಿಕ್ಕಿಗೆ ಬಲಿಕೊಟ್ಟ. ಆದರೆ ಕಡೆಗೆ ಶತ್ರುಗಳ ಏಟಿಗೆ ಕಾವೇರಿ ನದಿಯ ದಡದಲ್ಲಿ ದಿಂಡುರುಳಿಬಿದ್ದನು. ಆದರೇನು? ಪುನ್ನಮಯ್ಯನ ಸಾವು ಸಾಮಾನ್ಯವಾದುದಾಗಿರಲಿಲ್ಲ. ಅದೊಂದು ವೀರಮರಣವಾಗಿತ್ತು. 'ಪೊನ್ನನೆ ವಲಂ ಗಂಡಂ ಪೆಱರ್ ಗಂಡರೇ' ಎಂದು ಸುರಲೋಕ ಅತಿಥಿಯಾದ ಪೊನ್ನ (ಪುನ್ನ) ಮಯ್ಯನನ್ನು ಗುಂಡೆಲ್ಲ ಕೊಂಡಾಡಿತು. ಅವನ ರುಂಡ ಹಗೆಗಳ ಕೈಯೊಳಗೆ, ಅಪ್ಸರೆಯರ ತೋಳೊಳಗೆ, ಪ್ರಭು ಬಂಡಾರದೊಳಗೆ—ಹೀಗೆ ಮೂರೂ ಕಡೆ ನೆಲಸಿತ್ತಂತೆ!

ಕೊಲ್ಲದುದೆ ಧರ್ಮವೆಂದು ತಿಳಿಸುವ ಜಿನಧರ್ಮ ಪಾಲಕರು ರಾಷ್ಟ್ರಧರ್ಮವನ್ನು ಪಾಲಿಸುವುದರಲ್ಲಿ ಎಂದೂ ಹಿಂದೆಬಿದ್ದವರಲ್ಲ. ನಾಡಿಗಾಗಿ ಪ್ರಾಣಾರ್ಪಣೆಗೂ ಸಿದ್ಧರು, ಪ್ರಸಿದ್ಧರು. ಅಂಥ ರಣರಂಗಸಿಂಗರ ಓಳಿಯಲ್ಲಿ ಪುನ್ನಮಯ್ಯ ರನ್ನಮಣಿ. ಇನ್ನೂ ತನ್ನ ಅಣ್ಣ ಮಲ್ಲಪನಿರುವಂತೆಯೇ ತಮ್ಮನಾದ ಪುನ್ನಮಯ್ಯ ಮರಣಕ್ಕೆ ಮುನ್ನಡೆದನು. ಈ ವಿವರ ಪೊನ್ನಕವಿಯ ಶಾಂತಿಪುರಾಣದಲ್ಲಿ ಸಿಗುವುದಿಲ್ಲ. ಅದರಿಂದ ಪೊನ್ನ ಶಾಂತಿಪುರಾಣ ಬರೆದ ಕಾಲದಲ್ಲಿ ಪುನ್ನ ಇನ್ನೂ ಜೀವಿಸಿದ್ದು ಅನಂತರದಲ್ಲಿ ಈ ವೀರಮರಣವನ್ನು ಅಪ್ಪಿರಬೇಕೆಂದು ತೀರ್ಮಾನಿಸಬಹುದು.

ಇಲ್ಲಿಂದ ಮುಂದೆ ರನ್ನಕವಿ ಮತ್ತೆ ಮಲ್ಲಪನ ವ್ಯಕ್ತಿತ್ವದ ಮೇಲೆ ಬೆಳಕು ಹಾಯಿಸುವ ವಿಶೇಷಣಗಳ ಸರಮಾಲೆ ತೊಡಿಸುತ್ತಾನೆ. ಈ ಗುಣಗಳು ಮಲ್ಲಪನ ಬಹುಮುಖ ವ್ಯಕ್ತಿತ್ವವನ್ನು ಬೆಳಗುತ್ತವೆ. "ಅಪ್ರತಿಮ

ವಿಪ್ರಕುಲದೀಪನುಂ ಅಸಹಾಯ ಸಾಹಸೋತ್ಸಾಹ ಸಮುದಿತ ಸಂಪತ್ಸಂಪನ್ನನುಂ ಶರಣಾಗತ ವಜ್ರಪ್ರಾಕಾರನುಂ ಅಭಿಮಾನತುಂಗನುಂ ಅಹಿತಗಜಘಟಾಸಿಂಹನುಂ ಪತಿಹಿತಾಚಾರ್ಯನುಂ ಅಭಿನವಕೃಪಾಚಾರ್ಯನುಂ ಅವಲೋಕಿತಕಾಲತ್ರಯನುಂ ಆರಾಧಿತರತ್ನತ್ರಯನುಂ ಅಖಿಲ ಜಗತ್ರಯ ಪ್ರಸಿದ್ಧ ದಿಗಂಬರ ವೈರೋಚನ ಶ್ರೀ ಜಿನಚಂದ್ರದೇವ ಚರಣಾರವಿಂದ ಆರಾಧನಾವಿಧಿ ಕೃತಾಂತಃಕರಣನುಂ ಚಾಳುಕ್ಯಾಭರಣನುಂ ಶ್ರೀಮದಾಹವಮಲ್ಲದೇವ ಸಾಮ್ರಾಜ್ಯಲಕ್ಷ್ಮೀ ಪ್ರವರ್ಧಮಾನ ಹೇತುಭೂತ ನಿಜಾದೇಶ ಪರಂಪರಾ ಪ್ರಕಾಶಿತ ಪರಿಜ್ಞಾನಾತಿಶಯನುಂ ಅಪ್ರತಿಮಮಲ್ಲನುಂ" ಎನಿಪ ಮಲ್ಲಪಂಗೆ

ವಿನಯವತಿ ನಾಗಿಯಬ್ಬೆಗ
ಮನೂನಗುಣನೆನಿಪ ನಾಗಮಯ್ಯಂಗಂ ನಂ
ದನೆಯೆನಿಸಿದಪ್ಪಕಬ್ಬೆಯೆ ಜಿನಪಾದ
ಪಯೋಜಭೃಂಗಿ ಕುಲವಧುವಾದಳ್ ॥ 1-38

ಎಣೆಯಿಲ್ಲದೆ ಬ್ರಾಹ್ಮಣ ಕುಲ ಬೆಳಗಿದವನು, ಇತರ ನೆರವಿಲ್ಲದೆ ಹುರುಪಿನಿಂದ ಹೋರಾಡುವವನು, ಅದರಿಂದ ಬಂದ ಐಶ್ವರ್ಯ ಸಂಪನ್ನನು, ತನ್ನಲ್ಲಿ ಶರಣಾಗತರಾಗಿ ಬಂದವರನ್ನು ಏನೇ ಬಂದರೂ ವಜ್ರದ ಕೋಟೆ ಕಟ್ಟಿ ಬಿಟ್ಟುಕೊಡದವನು, ಶ್ರೇಷ್ಠ ಸ್ವಾಭಿಮಾನಿ, ಹಗೆಗಳೆಂಬ ಆನೆಗಳಿಗೆ ಸಿಂಹಸ್ವರೂಪನು, ಸ್ವಾಮಿಹಿತಕ್ಕಾಗಿ ಕಟಕಾಚಾರ್ಯನಾಗಿರುವವನು, ತನ್ನ ಕಾಲದ ಕೃಪಾಚಾರ್ಯನು, ಮೂರೂ ಕಾಲಗಳನ್ನು ಗಮನಿಸಿರುವವನು, ಸಮ್ಯಗ್‌ದರ್ಶನ ಜ್ಞಾನ ಚಾರಿತ್ರ್ಯಗಳನ್ನು ಆರಾಧಿಸಿರುವಾತ, ಲೋಕವಂದ್ಯ ದಿಗಂಬರ ಯತಿ ಜಿನಚಂದ್ರರ ಪಾದಕಮಲಗಳನ್ನು ಪೂಜಿಸಿರುವವನು, ಚಾಲುಕ್ಯರಾಜವಂಶಕ್ಕೆ ಆಭರಣದಂತೆ ಇರುವಾತ, ಆಹವಮಲ್ಲದೇವನ ಸಾಮ್ರಾಜ್ಯಶ್ರೀಯ ಏಳಿಗೆಗೆ ಕಾರಣನಾದವನು—ಹೀಗೆ ಅಪ್ರತಿಮನಾದ ಮಲ್ಲಪನ ಗುಣಾವಳಿಯನ್ನು ಅವಲೋಕಿಸುವಾಗ ಅವನ ಮೇರು ಸದೃಶ ವ್ಯಕ್ತಿತ್ವ ಧುತ್ತೆಂದು ಕಣ್ಣೆದುರು ಬಂದು ನಿಲ್ಲುತ್ತದೆ. ಐತಿಹಾಸಿಕ ಸತ್ಯ ಕೂಡ ಇದರಲ್ಲಿ ಸಾಕಷ್ಟಿಲ್ಲ. ಇಂದು ನಮ್ಮೆದುರು ಆತ ನಡೆಸಿದ ಭಾಗವಹಿಸಿದ ಕಾಳಗಗಳ ಪಟ್ಟಿಯಿಲ್ಲ, ಅವನಲ್ಲಿ ಶರಣಾಗತರಾಗಿ ಸುರಕ್ಷಿತರಾದವರ ಹೆಸರುಗಳಿಲ್ಲ, ಅವನ ಹಗೆಗಳ ವಿವರ ತಿಳಿದಿಲ್ಲ—ಇದೆಲ್ಲ ನಿಜವೇ. ಆದರೂ ನಿಜಾಂಶವಿಲ್ಲದ ಚಾರಿತ್ರಿಕ ವ್ಯಕ್ತಿಯ ಬಗೆಗೆ ಇಬ್ಬರು ಸಮಕಾಲೀನ ಶ್ರೇಷ್ಠ ಕವಿಗಳು ಇಷ್ಟೊಂದು ಸಮಾನಾಂಶಗಳನ್ನು ದಾಖಲಿಸುತ್ತಿರಲಿಲ್ಲ. ಯೋಗ್ಯರು ಯೋಗ್ಯರನ್ನು ಗುರುತಿಸುತ್ತಾರೆ, ಗೌರವಿಸುತ್ತಾರೆ, ಪರಿಚಯಿಸುತ್ತಾರೆ. ಪೊನ್ನ-ರನ್ನರು ಮಲ್ಲಪ-ಪುನ್ನಮಯ್ಯರನ್ನು ಮೆಚ್ಚಿಕೊಂಡಿರುವುದು ಇಂಥ ಕಾರಣಗಳಿಗಾಗಿ.

ರನ್ನಕವಿಯ ಕಾಲಕ್ಕಾಗಲೇ ಈ ಮನೆತನದ ಬದುಕಿನಲ್ಲಿ ಒಂದು ತಲೆಮಾರು ಸಂದಿತ್ತು. ಅದರಂತೆ ಪೊನ್ನ ಕೊಟ್ಟ ಮಲ್ಲಪ ಕುಟುಂಬದ ಅರೆಚಿತ್ರ ಪೂರ್ಣವಾಗುವುದು ರನ್ನನಿತ್ತಿರುವ ವಿವರಗಳನ್ನು ಅದಕ್ಕೆ ಬೆಸೆದು ಕೂಡಿದಾಗಲೇ. ಮಲ್ಲಪನ ಮಡದಿ ಅಪ್ಪಕಬ್ಬೆ. ಆಕೆ ನಾಗಮಯ್ಯ–ನಾಗಿಯಬ್ಬೆಯರ ಮಗಳು. ಮಲ್ಲಪನ ಹೆಂಡತಿ, ಅತ್ತೆ, ಮಾವ ಎಲ್ಲ ಹೊಸದಾಗಿ ಇಲ್ಲಿ ಪರಿಚಿತರಾದವರು. ಮಲ್ಲಪನ ಬಳಗ ಹೆಚ್ಚಿತು. ಅವನಿಗೆ ಗುಂಡಮಯ್ಯ, ಎಳಮಯ್ಯ, ಪೊನ್ನಮಯ್ಯ (ಸತ್ತ ತನ್ನ ತಮ್ಮನ ಹೆಸರನ್ನು ಪ್ರೀತಿಯಿಂದ ಮಗನಿಗೂ ಇಟ್ಟಿದ್ದಾನೆ), ಆಹವಮಲ್ಲ, ವಲ್ಲ ಎಂಬ ಐದು ಜನ ಗಂಡುಮಕ್ಕಳಾದರು. ಅತ್ತಿಮಬ್ಬೆ, ಗುಂಡಮಬ್ಬೆ, ನಾಗಿಯಬ್ಬೆ ಎಂಬ ಮೂವರು ಹೆಣ್ಣುಮಕ್ಕಳಾದರು. ಮಗಳಿದಿರು ಬೆಳೆದು ಮದುವೆಗೆ ಒದಗಿದರು. ಅವರನ್ನು ಕೊಟ್ಟು ವಿವಾಹ ವೆಸಗಲು ಒಳ್ಳೆಯ ಅನುರೂಪ ಸಂಬಂಧ ಅಯಾಚಿತವಾಗಿಯೇ ಹುಡುಕಿಬಂತು.

ರಾಷ್ಟ್ರಕೂಟರ ಹಗೆತನವನ್ನು ಹೊಂದಿ ಆ ಸಾಮ್ರಾಜ್ಯದ ಪತನಕ್ಕೆ ಕಾರಣರಾದವರಲ್ಲಿ ಪಶ್ಚಿಮ ಚಾಲುಕ್ಯರೂ ಇದ್ದಾರೆ. ಆಹವಮಲ್ಲನಾದ ತೈಲಪನೃಪ ಮತ್ತು ಅವನ ಮಗ ಆಹವಮಲ್ಲ ಇರಿವಬೆಡಂಗ ಸತ್ಯಾಶ್ರಯ (ಇವರಿಬ್ಬರ ವಿವರಗಳನ್ನು ಶಾಸನಗಳಿಂದ ಮತ್ತು ರನ್ನನ ಸಾಹಸಭೀಮವಿಜಯ ಕಾವ್ಯದಿಂದ ಸಂಗ್ರಹಿಸಬೇಕು.) ರಟ್ಟರನ್ನೂ ಇತರ ವೈರಿಗಳನ್ನೂ ಬಗ್ಗುಪಡೆಯಲೆಂದೇ ಹುಟ್ಟಿದರು. ತೈಲಪನೃಪನ ಬಲಗೈ ಬಂಟನಾಗಿ ವಿಶೇಷ ಕೃಪೆಗೆ ಪಾತ್ರನಾಗಿದ್ದವನು ದಲ್ಲಪ. ರಾಷ್ಟ್ರಕೂಟರಿಗೆ ಅವಸಾನಕಾಲದಲ್ಲಿಯೂ ಇಂಬಾಗಿ ನೆತ್ತರು ನೀಡಿ ಕಾಪಾಡಲೆತ್ನಿಸಿದವರು ಗಂಗರು, ಮುಖ್ಯವಾಗಿ ಗಂಗರ ಮಾರಸಿಂಹ. ಹೀಗಾಗಿ ಮಾರಸಿಂಹ, ಚಾವುಂಡರಾಯ ಮೊದಲಾದ ಗಂಗವಾಡಿಯವರೂ ಮುಮ್ಮಡಿ ಕೃಷ್ಣ, ಖೊಟ್ಟಿಗ ಇಂಪ್ರ ಮೊದಲಾದ ರಟ್ಟ ದೊರೆಗಳೂ ಚಾಲುಕ್ಯರ ಮತ್ತು ಚಾಲುಕ್ಯರ ಪರವಾಗಿ ಆಯುಧ ಹಿಡಿದು ಬಂದ ದಲ್ಲಪ–ಪುನ್ನಮಯ್ಯ–ನಾಗದೇವಾದಿಗಳೂ ಎದುರುಬದುರಾಗಿ ನಿಂತು ವಿರೋಧಿಗಳಾಗಿ ಹೋರಾಟ ಮಾಡುವ ಅನಿವಾರ್ಯತೆ ಉಂಟಾಯಿತು. ಪೊನ್ನಕವಿ ಮಾತ್ರ ಭುವನೈಕ ರಾಮಾಭ್ಯುದಯ ಕಾವ್ಯ ಬರೆದು ಅತ್ತ ಕೃಷ್ಣನಿಂದ ಕವಿಚಕ್ರವರ್ತಿ ಬಿರುದು ಪಡೆದ. ಇತ್ತ ಕೃಷ್ಣ ಪ್ರಭುವಿನ ವೈರಿ ಮನೆತನದ ಮಲ್ಲಪ-ಪುನ್ನಮಯ್ಯರಿಂದ ಬಹು ಉಪಕೃತನಾಗಿ ಶಾಂತಿಪುರಾಣವನ್ನು ಬರೆದ. ಕವಿಗಳು ಪಕ್ಷಾತೀತರು ತಾನೆ! ಅಲ್ಲದೆ ತೀರ ಲೌಕಿಕದಲ್ಲಿದ್ದಾಗ ಪೊನ್ನ ಭುವನೈಕ ರಾಮಾಭ್ಯುದಯ ಬರೆದು ಆಸ್ಥಾನಕವಿಯಾಗಿದ್ದರೆ, ಸಂಸಾರ ಹರಿದು ಬಿಸುಟು ಸವಣನಾದಾಗ, ರಾಗದ್ವೇಷಗಳ ಸುಳಿಯಿಂದ ಪಾರಾಗಿ ದೂರನಿಂತಾಗ ಶಾಂತಿಪುರಾಣ ಬರೆದಿದ್ದಾನೆ.

1007 ರಲ್ಲಿ ರಚಿತವಾದ ಲಕ್ಕುಂಡಿಯ ಶಾಸನ (ಮಲ್ಲಪ–ಪುನ್ನಮಯ್ಯ) ಅತ್ತಿಮಬ್ಬೆ ವಿಚಾರವನ್ನೇ ಅಲ್ಲದೆ ದಲ್ಲಪ–ನಾಗದೇವರ ಪರಿಚಯವನ್ನೂ ಕೊಡುತ್ತದೆ. ದಲ್ಲಪನು ವಾಜಿ ಕುಳತಿಳಕ, ಆಹವಮಲ್ಲತೈಲನ ಭುಜಾದಂಡ. (ಕನ್ನಡದ ಜೈನಕವಿಗಳಲ್ಲಿ ಒಬ್ಬನಾದ ಮಧುರಕವಿಯೂ ವಾಜಿ ವಂಶದವನು.) ಈ ದಲ್ಲನ ವಿಚಾರವಾಗಿ ಶ್ರವಣ ಬೆಳಗೊಳದಲ್ಲಿನ ಶಾಸನದಲ್ಲಿ, ಲಕ್ಕುಂಡಿಯ ಶಾಸನದಲ್ಲಿ, ರನ್ನನ ಅಜಿತಪುರಾಣದಲ್ಲಿ ಸಾಕಷ್ಟು ಮಾಹಿತಿಗಳು ಸಿಗುತ್ತವೆ. ದಕ್ಷಿಣ ಭಾರತದ ಹನ್ನೊಂದನೆಯ ಶಾಸನ ಸಂಪುಟದ ಮೊದಲನೆಯ ಭಾಗದಲ್ಲಿ ಬರುವ 52ನೆಯ ಶಾಸನ ದಲ್ಲಪನ ಬಗೆಗೆ ಬಹಳ ಮುಖ್ಯವಾದ ಸಂಗತಿಗಳನ್ನೊಳಗೊಂಡಿದೆ (ಕಾಲ 1007):

"ಸ್ವಸ್ತಿ ಸಮಸ್ತಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಸತ್ಯಾಶ್ರಯ ಕುಳತಿಳಕ ಚಾಳುಕ್ಯಾಭರಣ ಶ್ರೀಮದಾಹವಮಲ್ಲದೇವರ ರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ಧಮಾನಮಾಚಂದ್ರಾರ್ಕತಾರಂಬರಂ ಸಲುತ್ತುಮಿರೆ ತತ್ಪಾದಪದ್ಮೋಪಜೀವಿಯುಮಖಿಳ ರಾಜ್ಯಭರನಿರೂಪಿತ ಮಹಾಮಂತ್ರಾಕಪಟಳಾಧಿಪತಿಯುಮೆನಿಸಿ—

ಮಲ್ಲಾಮಲ್ಲಿಯೊಳಾನ್ತರಿ
ಮಲ್ಲರನಾಹವದೊಳೊತ್ತಿ ಗೋಳ್ಕುರಿಗೊಳ್ವೀ
ಬಲ್ಲಾಳ್ತನದಿಂದಾಹವ
ಮಲ್ಲನ ಭುಜಾದಂಡಮೆನಿಸಿ ಧಲ್ಲಂನೆಗಟ್ಟಂ ॥

ಪೊಣರ್ದಿದಿರಾಗಿ ತಾಗಿದೊರನಾನೆಯೊಳೊಕ್ಕುವನೆಂದು ಬೆರ್ಚಿ ಕೊಂ
ಕಣಮೆಟ್ಟಿಯಿಕ್ಕೆ ಬೆಂಗಿ ಬೆಱಗಾಗೆ ತಿವುಳ್ಗಿಲನಳ್ಕೆ ಮಾಳವ
ಮಣಿಯೆ ಪೊವಳ್ದುದಿರ್ಕೆಲದ ಮುಂದಣ ಪಿಂದಣ ಮಂಡಲಕ್ಕೆ ಭೀ
ಷಣಮತಿ ರೌದ್ರಮದ್ಭುತಮಗುರ್ವಿನೆ ತೇಜದಳುರ್ಕೆ ಧಲ್ಲನ ॥

ಧಲ್ಲಂಗಂ ನೆಗಳ್ದಾಹವ
ಮಲ್ಲಂಗಂ ಭೇದಮುಂಟೆ ವಿಭವದೊಳದವೆ
ನೆಲ್ಲರುಮಱಿಯರ್ ಧರಣೀ
ವಲ್ಲಭ ಸಿಂಹಾಸನೈಕ ಭೇದಮೆ ಭೇದಂ ॥

ಅಂತು ಮಂಡಳ ಸಿದ್ಧಿಯುಂ ವಿವೇಕ ಬೃಹಸ್ಪತಿಯುಮೆನಿಸಿ ನೆಗಳ್ದ ಧಲ್ಲನ ಪಿರಿಯ ಮಗಂ

ಭರದಿಂ ರಾವಣ ಸೇನೆಯಂ ತವಿಸಿ ಗೆಲ್ದಾಗಂಡರುಂ ಭಂಡಣಾ
ಜಿರದೊಳ್ ಕೌರವಸೇನೆಯುಂ ತುಳಿದು ಗೆಲ್ದಾಗಂಡರುಂ ಗಂಡಮ
ಚ್ಚರದಿಂ ಶಕ್ತಿಯ ಬೀರರಂ ಪೊಣರ್ದು ಗೆಲ್ದಾ ಗಂಡರುಂ ವೀತಮ
ತ್ಸರದಿಂ ಭಾವಿಸುವಾಗಳೀ ಸಮರಕೊಳ್ಗಂಡಂ ಬರಂ ಗಂಡರೇ ॥

ಆ ವಾಜಿಕುಳತಿಳಕನುಂ ತೇಜೋ ಭಾಸ್ಕನುಂ ವೀರತ್ರಿಣೇತ್ರನುಂ ನನ್ನಿಮಹಾರ್ಣವನುಂ ಕಂದುಕ ಪುರಂದರನುಮೆನಿಸುವ ವೀರಾಗ್ರಣಿಯ ಪರಾಕ್ರಮಮೇದೊರೆಂತೆನೆ

ಧಾಳಿಯೊಳಂಧ್ರನಂ ಪಡಿದಪೆಂ ಮಗಧೇಶನನಿಕ್ಕಿಮೆಟ್ಟಿಪೆಂ
ಲಾಳನ ಗಂಟಲಂ ಮುರಿದಪೆಂ ಖಸನಂ ಪುಡಿಯೊಳ್ಪೊರಳ್ಚಿಪೆಂ
ಕೋಳದೊಳಿಕ್ಕಿಪೆಂ ಮಲೆವ ಪಾಂಡ್ಯನನಾಹವಮಲ್ಲದೇವನಿಂ
ಪೇಳೆನುತಿರ್ಪನೀ ದೊರೆತು ಶೌರ್ಯಗುಣೋನ್ನತಿ ನಾಗದೇವನಾ ॥

ಆ ಮಹೀದೇವಕುಳ ಗಗನ ಗಭಸ್ತಿಮಾಳಿಗೆ ಮಹಾಸತೀರತ್ನಂ ಕುಳಪತ್ನಿಯಾಗಿ ಗುಣದಂಕಕಾರ್ತಿಯುಂ ಕವಿವರ ಕಾಮಧೇನುವುಂ ಕಟಕ ಪವಿತ್ರೆಯುಂ ಜಿನಧರ್ಮ ಪತಾಕೆಯುಮೆನಿಸಿದ ದಾನಚಿಂತಾಮಣಿಯ ಮಹಾಪ್ರಭಾವಮೇದೊರೆಂತೆನೆ . . ."

ಲಕ್ಕುಂಡಿ ಶಾಸನ ಹೀಗೆಯೇ ಸಾಗುತ್ತದೆ. ಬಹುಶಃ ಈ ಶಾಸನಕರ್ತೃವೂ ಆದ ರನ್ನಕವಿ ಇದನ್ನು ಅಜಿತಪುರಾಣದಲ್ಲಿ ಸಂಕ್ಷೇಪಿಸಿ ಪ್ರಾರಂಭಿಸಿದ್ದಾನೆ. ಧಲ್ಲನನ್ನು ಕುರಿತ ನಾಲ್ಕು ಪದ್ಯಗಳನ್ನು ಕೈಬಿಟ್ಟಿದ್ದಾನೆ.

"ಸಚಿವೋತ್ತಮನುಂ ಉತ್ತಮ ಜಾತಿಯುಂ ಸಕಲ ಚಕ್ರವರ್ತಿಯ ಸಭಾ ಸಂವಾಪ ಚತುರನುಂ ಚತುರುಪಧಾ ವಿಶುದ್ಧನುಂ ಎನಿಸಿದ ಚಾಳುಕ್ಯ ಚಕ್ರವರ್ತಿಗೆ ಮಹಾಮಂತ್ರಿಯುಂ ಆದ ದಲ್ಲಪಂಗೆ ಪುಟ್ಟಿ ನಿಜಮಹೀಪತಿಯ ಮಹೀ ಭಾಗಕ್ಕೆ ದಿಗ್ಭಾಗನುಂ ನಾಗರಾಜನುಮೆನಿಸಿದ ನಾಗದೇವನೆಂಬ ಪುರುಷರತ್ನಕ್ಕೆ" ಅತ್ತಿಮಬ್ಬೆ-ಗುಂಡಮಬ್ಬೆಯರನ್ನಿತ್ತು ಮದುವೆ ಮಾಡಿದ್ದಾಯಿತು. ನಾಗದೇವ ಒರಟರಮಲ್ಲ. ಬಲ್ಲಾಳುತನದಲ್ಲಿ, ರೂಪಿನಲ್ಲಿ ಅಭಿನವ ಕಾಮದೇವ. ಕುದುರೆ ಪಳಗಿಸುವುದರಲ್ಲಿ ಹಯವತ್ಸರಾಜ, ಸುಭಟರಿಗೆ ಚೂಡಾಮಣಿ, ರಾಜನಿಷ್ಠೆಯಲ್ಲಿ ಆಹವಮಲ್ಲದೇವಪಾದಪಂಕಜ ಭ್ರಮರ ಮಲ್ಲಪನ ಮಗಳುದಿರು ದಲ್ಲಪ ಮಂತ್ರಿಯ ಮಗ ನಾಗದೇವನನ್ನು ಮದುವೆಯಾದರು. ಅನಿಬರೂ ಸುಖ ವಿದ್ದರು. ಆದರೆ ಸುಖವೇನು ಆಕಲ್ಪಾಂತ ಸ್ಥಾಯಿಯೆ? ಸುಖಸ್ಯಾನಂತರಂ ದುಃಖಂ. ಚಕ್ರಾರ ಪಂಕ್ತಿರಿವ ಗಚ್ಛತಿ ಭಾಗ್ಯ ಪಂಕ್ತಿಃ. ಅದರಂತೆ ಇವರ ಮನೆಯಲ್ಲೂ ನಲವಿನ ಬೆನ್ನಲ್ಲೇ ನೋವೂ ಕಾಣಿಸಿಕೊಂಡಿತು. ಮಲ್ಲಪನ ಮಕ್ಕಳಲ್ಲಿ ಒಬ್ಬನಾದ (ಹಿರಿಯನಾದ) ಗುಂಡಮಯ್ಯನು ಅತಿ ಪ್ರಚಂಡನಾಗಿ ಅಪ್ರತಿಮನಾಗಿದ್ದ—

ನರನೆನಿಪ ಶೌರ್ಯದಿಂ ಗೋ
ನರನಂ ಪೆಣೆದಿಱಿದು ಗೆಲ್ದು ನಿಜವಿಜಯಯಶಂ
ಪರೆಯೆ ನೆಗಟ್ಟಿದನವನೀ
ಭರೆಯೊಳ್ ಮಲ್ಲಪನ ತನಯನೆಂಬುನ್ನತಿಯಂ ॥ 1-39

ಆ ಗುಂಡಮಯ್ಯ ತಾನೇ ಅರ್ಜುನನೆಂದು ತಿಳಿದು ಸಾಹಸಭರಿತನಾಗಿ ಗೋನರನನ್ನು ಹೆಣೆದು ಇರಿದು ಗೆಲಿದು ತನ್ನ ವಿಜಯಕೀರ್ತಿ ಹಬ್ಬಿಸಿ 'ಮಲ್ಲಪನ ಮಗ ಪರಾಕ್ರಮಿ' ಯೆಂಬ ಮಾತನ್ನು ನೆಲವೆಲ್ಲೆಡೆಯಲ್ಲೂ ಉಂಟುಮಾಡಿದ. ತನ್ನ ತಂದೆ ಚಿಕ್ಕಪ್ಪನಂತೆ ಈತನೂ ಯುದ್ಧೋತ್ಸಾಹಿ. ಈ ವಂಶಕ್ಕೆ ಹೊಸದಾಗಿ ಬಂದುಸೇರಿದ ಮನೆಯಳಿಯ

ನಾಗದೇವನೂ ಸೇರಿಗೆ ಸವ್ವಾಸೇರು. ಮಲ್ಲಪ ವೀರಾವತಾರನೆಂದು ಬಿರುದುಬಾವಲಿ ಪಡೆದ ಮಹಾವೀರ, ಮಲ್ಲಪನ ತಮ್ಮ ಪುನ್ನಮಯ್ಯನಂತೂ ಬಾಳಿನಲ್ಲೂ ಸಾವಿನಲ್ಲೂ ಸಾಹಸವನ್ನೇ ಮೆರೆದ ವೀರಾಗ್ರಣಿ, ಮಲ್ಲಪನ ಮಕ್ಕಳೂ ಸಿಂಹದ ಮರಿಗಳು, ವೀರ (ಮಲ್ಲಪ)ನ ಅಳಿಯ ನಾಗದೇವ ಕೂಡ ಒರಟರಮಲ್ಲ. ಶೂರಾಧಿಶೂರನಾದ ನಾಗದೇವ–ಅತ್ತಿಮಬ್ಬೆಯರ ದಾಂಪತ್ಯ ವಲ್ಲರಿ ಬಿಟ್ಟ ಫಲವೇ ಅಣ್ಣಿಗದೇವ. ಈ ಯುದ್ಧವೀರರ ಮನೆಯಲ್ಲಿ ಹುಟ್ಟಿದ ಕಿಶೋರ ಅಣ್ಣಿಗದೇವನಿಗೂ ರಣರಂಗವೇ ಕ್ರೀಡಾಂಗಣವಾಯಿತು. ಕಾಳಗದ ಕಳವೇ ಆಡುಂಬೊಲವಾಗಿಸಿಕೊಂಡು ಬೆಳೆದ ಕುಲತಿಲಕನಾದ ಅಣ್ಣಿಗದೇವ ಬಹುಬೇಗ 'ಪಡೆವಳ ತೈಲ', 'ವಿನಯಾಲಂಕಾರ', 'ನನ್ನಿನಾರಾಯಣ'—ಎಂಬ ಬಿರುದುಗಳಿಗೆ ಒಡೆಯನಾದ.

ದಿನಗಳು ಉರುಳಿದುವು. ಕಾಳಗಗಳು ಕಾಲು ಕೆರೆದು ಕರೆದುವು. ನಾಗದೇವ ಹೆಂಡಿರೊಡನೆ ಅನುರಾಗ ದೋಕುಳಿಯಲ್ಲಿ ಕಾಲ ಕಳೆಯುವುದನ್ನು ಬಿಟ್ಟು ರಣರಂಗದಲ್ಲಿ ರಕ್ತದೋಕುಳಿಯಲ್ಲಿ ಕೇಳಿಯಾಡಬೇಕಾಯಿತು.

ಕುಮರರ ಕಾಳಗದೊಳ್ ಪತಿ
ಯಮುಂದೆ ತಱಿಸಂದು ನಿಂದು ಕಡಿತಲೆಗೊಂಡ
ನ್ಯಮತಂಗಜಂಗಳಂ ವಿ
ಕ್ರಮಸಿಂಹ ದಲ್ಲನಂದನಂ ಪೊಣರ್ದಿಱಿದಂ ॥ 1.42

ಜನಪತಿ ಮೆಚ್ಚಿ ತನ್ನಯ ಚಮೂಪತಿ ಮಾಡಿದನಾಪ್ತ ಮಂತ್ರಿದ
ಲ್ಲನ ಮಗನೀತನಂತಧಟರುಂ ಪತಿಭಕ್ತರುಮಿಾಗಳಾರುಮಿ
ಲ್ಲೆನಿಸಿದ ನಾಗದೇವನಣಮುಟ್ಟೆ ಧುರಂಧರ ನಾಗದೇವನಂ
ಬಿನಮಿಱಿದಿಕ್ಕಿದಂ ಸೆಣಸಿ ಪೊಕ್ಕರನಾಜಿಯೊಳಂಗರಕ್ಕಸಂ ॥ 1.43

ಕಳಕುಳಮಾಗೆ ಪಂಚಲನ ಬಿಲ್ವಡೆ ಪಂಚಲನಶ್ವಸಂಕುಲಂ
ಕಳಕುಳಮಾಗೆ ಪಂಚಲನದಂತಿ ಘಟಾವಳಿಯುದ್ಧರಂಗದೊಳ್
ಕಳಕುಳಮಾಗೆ ಗಾತ್ರಕರದಂತಿ ವಿಘಾತದೊಳುಗ್ರದಂತಿ ಮ
ಕ್ಕಳಕರುವಾಗರಂ ಪರಿದುದುದ್ಭಟನಿಂ ಸುಭಟ ತ್ರಿನೇತ್ರನಿಂ ॥ 1.44

ಬಲ್ಲಹನ ಬೆಸದೊಳೊಜಟರ
ಮಲ್ಲಂ ದಲ್ಲನ ತನೂಭವಂ ಕರಹಟದಿಂ
ಮಲ್ಲಮನಂ ಬೆನ್ನಟ್ಟಿದ
ಬಲ್ಲಾಳ್ತನದಿಂ ನಿಜೇಶನಂ ಮೆಚ್ಚಿಸಿದಂ ॥ 1.45

ತನಗೆ ಸ್ಥಾನಮಾನಗಳನ್ನಿತ್ತು ಪೋಷಿಸಿದ ತೈಲಪನೃಪ(ಆಹವಮಲ್ಲ)ನ ಸಮ್ಮುಖದಲ್ಲಿ ಹಗೆಗಳನ್ನು ಕುದುರೆ ಕಾಳಗದಲ್ಲಿ ಸದೆಬಡಿದೋಡಿಸುವುದಾಗಿ ಪ್ರತಿಜ್ಞೆಮಾಡಿ ನಾಗದೇವನು ಕಡಿತಲೆ (ಕತ್ತಿ)ಯನ್ನು ಕೈಗೆತ್ತಿಕೊಂಡ ಕೂಡಲೆ ಎದುರಾಳಿಗಳಲ್ಲಿದ್ದ ಮದಿಸಿದ ಆನೆಯಂತಹವರಿಗೂ ಸಿಂಹಸ್ವಪ್ನವಾಯಿತಂತೆ. ದಲ್ಲಪನ ಮಗ ನಾಗದೇವ ಹೋರಾಡಿ ಹಗೆಗಳನ್ನು ಇರಿಯತೊಡಗಿದ. ಜನಪತಿ ತೈಲಪನೃಪನಿಗೆ ದಲ್ಲಪ ಕೇವಲ ಕಾರ್ಯನಿಮಿತ್ತದ ಮಂತ್ರಿಯಾಗಿರಲಿಲ್ಲ, ಆಪ್ತ ಮಂತ್ರಿಯೂ ಆಗಿದ್ದ. ದಲ್ಲಪನೂ ಸ್ವಾಮಿಸೇವಾದುರಂಧರನಾಗಿದ್ದುದರಿಂದ ಯುದ್ಧಭೂಮಿಗೆ ಮೃತ್ಯುಸಮ್ಮುಖಕ್ಕೆ ಕೆಂಡವನ್ನು ಸೆರಗಲ್ಲಿ ಕಟ್ಟಿಕೊಂಡು ಹೋರಾಡುವ ಕಾರ್ಯವನ್ನು ಬೇರೆ ಯಾರಿಗೂ ವಹಿಸದೆ ತನ್ನ ಸ್ವಂತ ಮಗನಿಗೇ ಕೊಟ್ಟಿದ್ದಾನೆ. ಮಂತ್ರಿಮಾನ್ಯನಾಗಿದ್ದುದರಿಂದ ಕಂಡವರ ಮಕ್ಕಳನ್ನು ಬಾವಿಗೆ ತಳ್ಳಿ ಆಳನೋಡಬಹುದಿತ್ತು! ಅದು ಅಧಿಕಾರದಲ್ಲಿದ್ದ ದಲ್ಲಪನಿಗೆ ಸುಲಭಸಾಧ್ಯವಿತ್ತು. ಆದರೆ ದೊರೆ ತನ್ನಲ್ಲಿರಿಸಿದ

ನಂಬಿಕೆಯನ್ನು ಉಳಿಸಿಕೊಳ್ಳಬೇಕಾಗುತ್ತದೆ. ನಾಗದೇವನನ್ನೇ ಚಮೂಪತಿಯನ್ನಾಗಿ ಮಾಡಿ 'ಈತನಂತೆ ಅಧಟರೂ ಪತಿಭಕ್ತಿಪರಾಯಣರೂ ಈಗ ಯಾರೂ ಇಲ್ಲ' ಎಂದು ಪಡೆಯೆಲ್ಲ ಒಂದೇ ಕೊರಳಿಂದ ನಾಗದೇವನನ್ನು ಮೆಚ್ಚಲು ಕಾರಣ ದೊರಕಿಸಿಕೊಟ್ಟ. ಮಗ ನಾಗದೇವನೂ ಸಾವಿನೊಡನೆ ಸರಸವಾಡಲು ಸಿದ್ಧನಾಗಿಯೇ ಹೊರಟ ಅಮ್ಮನ ಭಕ್ತ. ಸಮರದುರಂಧರ ನಾಗದೇವ ಆಜಿಯೊಳಗೆ ಹೊಕ್ಕು ಲೆಕ್ಕವಿಲ್ಲದ ಶತ್ರುಪಡೆಯೊಡನೆ ಸೆಣಸಿದ, ಅಗ್ರಗಾಮಿಯಾಗಿ ಇರಿದಿಕ್ಕಿದ. ಇವನನ್ನು ಇದಿರಿಸಿದ ಪಂಚಲನ ಬಿಲ್ಲುಗಾರಪಡೆ ಚೆಲ್ಲಾಪಿಲ್ಲಿಯಾಯಿತು. ಕುದುರೆ ಗುಂಪು ಚದುರಿಹೋಯಿತು. ಆನೆ ಹಿಂಡು ದಿಕ್ಕಾಪಾಲಾಯಿತು. ಇಲ್ಲಿ ಹೇಳಿರುವ ಪಂಚಲನು ಮತ್ತಾರೂ ಆಗಿರದೆ ಮಾರಸಿಂಹನ ಅಧಿಕಾರಿ ಪಾಂಚಾಲದೇವನೇ ಆಗಿದ್ದಾನೆ. ಕದನತ್ರಿಣೇತ್ರನಂತೆ ಆವೇಶತಾಳಿ ಕಾಳಗದ ಕಣವನ್ನು ಕಳಕುಳವಾಗಿಸಿ ಕೋಲಾಹಲವನ್ನುಂಟುಮಾಡಿದ ನಾಗದೇವನ ಉಪಟಳ ಅರಿಭಯಂಕರವಾಯಿತು. ತನ್ನ ಆಳ್ದನ ಅಪ್ಪಣೆ ಹೊತ್ತು, ಒರಟರಮಲ್ಲನೂ ದಲ್ಲಪ ಮಂತ್ರಿಯ ಮಗನೂ ಆದ ನಾಗದೇವನು ಕರಹಾಟದೇಶದಿಂದ ಮಲ್ಲಮನನ್ನು ಬಲ್ಲಾಳುತನದಿಂದ ಬೆನ್ನಟ್ಟಿದ್ದು ನಿಜೇಶನ ನಚ್ಚನ್ನು ಸಂಪಾದಿಸಿ ಕೊಟ್ಟಿತು.

ಆದರೆ ಈ ಗೆಲುವಿನ ವೈಭವ ಬಹುದಿನ ಬಾಳಲಿಲ್ಲ. ಈ ವಿಜಯೋತ್ಸವ ಮರಣದ ಮಹಾನವಮಿಯಾಗಿ ಪರಿಣಮಿಸಿತು. ಅನೇಕ ಸಂಗ್ರಾಮರಂಗಗಳಿಂದ ಬಂದ ವಿಜಯಶ್ರೀ ಸಮಾಗಮ, ಆಹವಮಲ್ಲದೇವನ ಪ್ರಸಾದದಿಂದ ಬಂದ ಸೇನಾಧಿಪತ್ಯ ಸಂಪತ್ತಿನ ಸಮಾಗಮ, ತನ್ನ ಇಬ್ಬರು ಮಡದಿಯರ ಸಮಾಗಮ, ಉದ್ದಾಮ ಯೌವನ ಲಕ್ಷ್ಮೀ ಸಮಾಗಮ—ಇವೆಲ್ಲದರಿಂದ ನಾಗದೇವನನ್ನು ಬಿಡಿಸಿ ದೇವಾಂಗನಾರಾಜನ ತಮ್ಮ ಸಮಾಗಮಕ್ಕೆ ಕರೆದೊಯ್ದರು. ಸಾವಿನ ಮನೆಗೆ ನಗುನಗುತ್ತಾ ನಾಗದೇವನೇನೊ ನಡೆದುಬಿಟ್ಟ, ಆದರೆ ಅದು ಅವನ ಕುಟುಂಬದ ಜನರ ಮೇಲೆ ಸಾಕಷ್ಟು ನೋವಿನ ನೆರಳನ್ನು ಚೆಲ್ಲಿತು. ಸಂಸಾರ ನಲುಗಿಹೋಯಿತು. ಒಬ್ಬ ಮಡದಿ ಗುಂಡಮಬ್ಬೆ ಗಂಡ ನಾಗದೇವನ ಚಿತೆಯೊಡನೆ ಜೀವಂತ ಸಮಾಧಿಯಾಗಿ ಮಹಾಸತಿಯಾದಳು, ಜೈನರಲ್ಲಿರುವ ಸಲ್ಲೇಖನ ಸಮಾಧಿ ಮರಣಗಳನ್ನು ಬಿಟ್ಟು ಸತೀಮರಣವನ್ನೇರಿದಳು. ಇನ್ನೊಬ್ಬ ಹೆಂಡತಿ ಅತ್ತಿಮಬ್ಬೆಯಂತೂ ತನ್ನೆಲ್ಲ ನೋವನ್ನು ನುಂಗಿಕೊಂಡು ಮಗ 'ಪಡೆವಳತ್ತೈಲ ಅಣ್ಣಿಗದೇವ'ನ ಅಭ್ಯುದಯ ಸಾಕ್ಷಿಯಾಗಿ ದಾನಧರ್ಮ ನೋಂಪಿಗಳ ಆಚರಣೆಯಿಂದ ಲೋಕವಿಖ್ಯಾತಳಾದಳು; ತನ್ನ ಹಿರಿಯರು ಬರೆಸಿದ ಪೊನ್ನನ ಶಾಂತಿಪುರಾಣದ ಸಹಸ್ರ ಓಲೆಗರಿ ಪ್ರತಿಗಳನ್ನು ಪ್ರತಿಮಾಡಿಸಿ ಶಾಸ್ತ್ರದಾನ ಮಾಡಿದಳು; ಬಸದಿಗಳನ್ನು ಕಟ್ಟಿಸಿದಳು; ರನ್ನನಿಂದ ಅಜಿತಪುರಾಣ ಬರೆಸಿ ಹಂಚಿದಳು. ವಿನಯಾರ್ಣವನೂ ಊರ್ಜಿತ ಶೌರ್ಯನಿದಾನನೂ ಆದ ಮಗ ಅಣ್ಣಿಗದೇವ ಚಕ್ರವರ್ತಿಯ ಸೈನ್ಯಕ್ಕೆ ಸೇನಾನಾಯಕನಾದ. ಮತ್ತೆ ತನ್ನ ವಂಶದ ಕೀರ್ತಿಲತೆಯನ್ನು ದಾಂಗುಡಿಯಿಡಿಸಿ ಬೆಳಗಿದ—

ಶ್ರೀ ನೇಮಿಚಂದ್ರ ಮುನಿಗಳ್
ಜ್ಞಾನಾರ್ಣವ ತಿಲಕರವರ ಶಿಷ್ಯರ್ ಸದ್ವಿ
ದ್ಯಾನಿಳಯರುಣಯ್ಯಣಯ್ಯಂ
ತಾನೋದಿಸೆ ಕುಶಲನಾದನಣ್ಣಿಗದೇವಂ ॥ 12-21

ಪದಯಿದನೆನೆ ಪದುಳಿದನೆನೆ
ಪದಸ್ಥನೆನೆ ಸತ್ಯಶೌರ್ಯಶೌಚಾದಿಗುಣಾ
ಸ್ಪದನೆನೆ ನೆಗಟ್ದಾಹವಮ
ಲ್ಲದೇವನಂ ಮನದೆಗೊಂಡನಣ್ಣಿಗದೇವಂ ॥ 12-23

ವಿನುತಾರ್ಥಿಗೆ ಗತ ಮಾಣಿಕ
ಮೆನೆ ನಚ್ಚುವ ನಾಗದೇವನಗ್ರಸುತಂ ಮಾಂ
ತನದಿಂ ಮಕ್ಕಳ ಮಾಣಿಕ
ಮೆನಿಸಿದನಭಿಮಾನಿ ದಾನಿ ಪಡೆವಳತೈಲಂ ॥ 12-24

ಅದಿರದ ಗಂಡನೆಂಬುದುದಿತೋದಿತನೆಂಬುದಗಣ್ಯ ಪುಣ್ಯನೆಂ
ಬುದು ಗುಣವಂತನೆಂಬುದು ದಯಾಪರನೆಂಬುದು ಧರ್ಮಚಿತ್ತನೆಂ
ಬುದು ಶುಭವೃತ್ತನೆಂಬುದು ಮಹೋದಯನೆಂಬುದು ದೇವಭಕ್ತನೆಂ
ಬುದು ಪತಿಭಕ್ತನೆಂಬುದು ಜಗದ್ವಳಯಂ ಪಡೆವಳ್ತೈಲನಂ ॥ 12-25

ದಿನಕರ ಸುತ ವಚನಂ ರಾ
ಮನೇಸು ಕಂಡರಸಿ ಕಲ್ಲೊಳಿಟ್ಟಕ್ಕರಮೆಂ
ಬಿನೆಗಮೆಸೆದಪುದು ನೃಪರ ಶಾ
ಸನಮೆನಿಸುವ ನನ್ನಿ ನನ್ನಿ ನಾರಾಯಣನ ॥ 12-26

ಜಗತೀ ಚಕ್ರಮನಾಳ್ಗೆ ತೈಲನೃಪನೇಕಚ್ಛತ್ರದಿಂ ಚಕ್ರವ
ರ್ತಿಗೆ ದಿಗ್ಭಿತ್ತಿವರಂ ನಿಮಿರ್ಗೆ ನೆಲನಾಸ್ವಾಮಿ ಪ್ರಸಾದೋದಯಂ
ಮಿಗೆ ತೈಲಂ ನೆಗಟ್ದತ್ತಿಮಬ್ಬೆಯ ಮಗಂ ಮತ್ಕಾವ್ಯಮಂ ಮೆಚ್ಚಿಕೇ
ಳ್ವಗುಣಂಗೊಳ್ವ ಜನಕ್ಕಮಕ್ಕೆ ವಿಭವಂ ಭದ್ರಂ ಶುಭಂ ಮಂಗಳಂ ॥ 12-27

ರನ್ನಕವಿಯ ಈ ದಾಖಲೆಗಳು ಕೂಡ ಪ್ರಸ್ತುತದ ವಿವರಣೆಯಲ್ಲಿರುವ ಪೊನ್ನನ ಶಾಂತಿಪುರಾಣ ಬರೆಸಲು ಕಾರಣರಾದ ಮಲ್ಲಪನ ಮನೆತನದವರ ಮಹೋನ್ನತಿಯನ್ನು ಬಿತ್ತರಿಸುವಲ್ಲಿ ಪ್ರಮುಖವಾಗುತ್ತವೆ. ಮಲ್ಲಪನ ತಂದೆಯ ತಲೆಮಾರಿನಿಂದ ಪ್ರಾರಂಭವಾಗುವ ಈ ಮನೆತನದ ಕಥೆ ಒಂದು ನಿಲುಗಡೆಗೆ ಬರುವುದು ಅಣ್ಣಿಗದೇವನ ವಿವರದೊಡನೆ. ಅಣ್ಣಿಗದೇವನ ವ್ಯಕ್ತಿತ್ವವೂ ಉದಾತ್ತವಾಗಿತ್ತೆಂಬುದು ಇಲ್ಲಿ ಬಹು ಮುಖ್ಯವಾಗುತ್ತದೆ. ಅವನ ವಿನಯಾದಿ ಗುಣಗಳು ಒಂದು ಕಡೆ, ಸಾಹಸಾದಿ ಶೌರ್ಯೋಕ್ತ ಮುಖ ಇನ್ನೊಂದು ಕಡೆ, ಧಾರ್ಮಿಕ ಪ್ರೇಮ ಮತ್ತೊಂದು ಕಡೆ—ಹೀಗೆ ಮುಮ್ಮೊಗನಾದ ಅವನ ವ್ಯಕ್ತಿತ್ವ ದರ್ಶನವಾಗುತ್ತದೆ ರನ್ನನ ಪದ್ಯ ಕಟ್ಟಿಕೊಡುವ ಅನುಭವದಿಂದ. ಕಿರಿಯ ವಯಸ್ಸಿಗೇನೆ ಅವನದು ಹಿರಿಯ ಸಾಧನೆಯಾಗಿತ್ತು. ಚಕ್ರವರ್ತಿಯ ಅನುಗ್ರಹವಿತ್ತು. ಸೈನ್ಯಾಧೀಶನಾಗಿ ನೇಮಕಗೊಂಡು ಪರಾಕ್ರಮಕ್ಕೆ ಪ್ರತೀಕವಾಗಿದ್ದ. ಕಾಣೂರ್ಗಣವೆಂಬ ಜೈನ ಯತಿಗಳ ಗುಂಪಿಗೆ ಸೇರಿದ ನೇಮಿಚಂದ್ರಮುನಿಗಳ ಶಿಷ್ಯರಾದ ಉತ್ತಮ ಜಿನವಿದ್ಯಾನಿಲಯರಾಗಿದ್ದ ಅಯ್ಯಣಯ್ಯ (ಅಣ್ಣಯ್ಯ?) ಅಣ್ಣಿಗನ ಧರ್ಮಗುರುಗಳಾಗಿ ಓದಿಸಿದರು. ಅದರಿಂದ ಕುಶಲನಾಗಿ ಬೆಳೆದ ಅಣ್ಣಿಗ ಅಭಿನವ ಬ್ರಹ್ಮನಾಗಿ ಬೆಳೆದ. ಶಬ್ದಗಳ ಸಂಚಾರ ಅರಿತು, ಸತ್ಯ ಶೌರ್ಯ ಶೌಚ ಮೊದಲಾದ ಒಳ್ಳೆಯ ನಡವಳಿಕೆಗಳನ್ನು ಅಳವಡಿಸಿಕೊಂಡು ಸೈ ಎನಿಸಿದ ಅಣ್ಣಿಗನ ವ್ಯಕ್ತಿತ್ವ ಆಹವಮಲ್ಲ ಪ್ರಭುವಿಗೂ ಅಯಸ್ಕಾಂತವಾಗಿತ್ತು. ತನ್ನ ಮಹಂತತನದಿಂದ ಮಕ್ಕಳ ಮಾಣಿಕವೆನಿಸಿದ ಅಭಿಮಾನಿ ದಾನಿ, ಪಡೆವಳತೈಲನಾದ ಅಣ್ಣಿಗದೇವ. ಕಮ್ಮೆನಾಡು ಅವನ ಗುಣಗಳನ್ನು ಹೊಗಳಿ ಹೆಸರಿಸಿ ಮೆಚ್ಚಿಕೊಂಡಿತು. ಅವನ ಮಾತೆಂದರೆ ಕರ್ಣನ ಮಾತಿನಂತೆ, ಅವನ ಬಾಣದ ಗುರಿಯೆಂದರೆ ರಾಮನ ಬಾಣಪ್ರಯೋಗದಂತೆ ಕಂಡರಿಸಿ ಕಲ್ಲೊಳಗೆ ಇಟ್ಟ ಅಕ್ಷರವೆಂಬಂತೆ ಕಂಗೊಳಿಸುತ್ತವೆ. ಈ ನನ್ನಿ ನಾರಾಯಣನಾದ ಅಣ್ಣಿಗದೇವನ ನನ್ನಿ (ಸತ್ಯ) ರಾಜಶಾಸನದಂತೆ ನಿಕರವಾದುದಾಗಿತ್ತು. ಇಂಥ ಗುಣಗಣ್ಯನಾದ ಅಣ್ಣಿಗದೇವ ಕೂಡ ರನ್ನನ ಕಾವ್ಯವನ್ನು ಓದಿ ಕೇಳಿ ಮೆಚ್ಚಿದ್ದ.

ರನ್ನನ ಪದ್ಯಗಳು ಉರುಳಿಸುವ ವಿವರಗಳೆಲ್ಲವನ್ನೂ ಪರಿಶೀಲಿಸಿದಾಗ ಹೊರಬರುವ ಇನ್ನೊಂದು ಹುರುಳಿದೆ. ರನ್ನ ತನ್ನ ಅಜಿತಪುರಾಣ ಕಾವ್ಯ ರಚಿಸುವ ವೇಳೆಗೆ ಅಣ್ಣಿಗದೇವ ಮಧ್ಯಪ್ರಾಯದವನಾಗಿದ್ದನೆನ್ನಬಹುದು. ಆ ವೇಳೆಗಾಗಲೇ ಅಣ್ಣಿಗನ ತಾತ ಮಲ್ಲಪಯ್ಯ, ಅಣ್ಣಿಗನ ಚಿಕ್ಕ ತಾತ ಪುನ್ನಮಯ್ಯ ಸತ್ತು, ಜತೆಗೆ ಅಣ್ಣಿಗನ ತಂದೆ ನಾಗದೇವನೂ ಮಡಿದು ಸಾಕಷ್ಟು ವರ್ಷಗಳು ಸಂದಿದ್ದುವೆನ್ನಬಹುದು. ಅತ್ತಿಮಬ್ಬೆಯ ಬದುಕು ಬಿಸಿಲು ಬೆಳದಿಂಗಳಿನ ಎಲ್ಲ ಏರಿಳಿತಗಳನ್ನೂ ಅನುಭವಿಸಿ ಒಂದು ಸ್ಥಾಯಿಗೆ ಬಂದು ನಿಂತಿದ್ದಿರಬೇಕು. ಹೀಗೆ ಗತಿಸಿದ ಇತಿಹಾಸ ಇನ್ನೂ ಹಸಿಹಸಿಯಾಗಿದ್ದ ಆ ಐತಿಹಾಸಿಕ ಘಟನೆಗಳನ್ನು ಮೆಲುಕುಹಾಕುತ್ತಾ ಕುಳಿತ ಸ್ಥಿತಿಯನ್ನು ಈ ಬರವಣಿಗೆ ನೆನಪಿಸುತ್ತದೆ. ಆಗಿಹೋದ ಕಾಲದ ಅನುಭವಗಳು ಚೆನ್ನಾಗಿ ಮಾಗಿದ ಮೇಲೆ ಆ ಮಧುರಸ್ಮೃತಿಯ ಸುರುಳಿ ಬಿಚ್ಚಿದ ಬೆಚ್ಚನೆಯ ಸುಖೋಷ್ಣ ಅನುಭವ ಒದಗುಗರಿಗಾಗುತ್ತದೆ.


ಪೊನ್ನನ ಕಾವ್ಯದಲ್ಲಿ ಅಂಕುರಿಸಿದ ಒಂದು ವಂಶವೃಕ್ಷ ತನ್ನ ವಿರಾಡ್‌ರೂಪವನ್ನು ರನ್ನನ ಕಾವ್ಯ ತಳೆದಿರುವುದು ಕಾಣುತ್ತದೆ. ಪೊನ್ನ–ರನ್ನರಿಂದ ಶಾಂತಿಪುರಾಣ ಅಜಿತಪುರಾಣ ಹೇಳಿಸಿದ ಕಾವ್ಯ ಕಾರಣಪುರುಷರು, ಅವನ ಒಟ್ಟು ಒಂದು ಸುದೀರ್ಘ ಮನೆತನ ಅಸಾಮಾನ್ಯವಾದುದೆಂಬುದೂ ಇದರಿಂದ ಶೋಧಿತವಾಗಿ ನಿಲ್ಲುತ್ತದೆ. ಅಲ್ಲದೆ ಪೊನ್ನ-ರನ್ನರು ಮಲ್ಲಪ-ಪುನ್ನಮಯ್ಯಾದಿಗಳಿಗೆ ಕೊಟ್ಟಿರುವ ವಿಶೇಷಣಗಳು ಕೇವಲ ಕವಿರೂಢಿಗೆ ಒಳಗಾಗಿ ಉದಾರವಾಗಿ ಕೊಟ್ಟಂತಹವುಗಳಲ್ಲವೆಂಬುದೂ ಇಲ್ಲಿ ಮುಖ್ಯವಾಗುತ್ತದೆ. ತಮ್ಮ ಕಾಲದ ಸಮಾಜದಲ್ಲಿ ತುಂಬ ಅರ್ಹರಾದವರಿಗೆ ಈ ಕವಿಗಳು ತಮ್ಮ ಕಾವ್ಯಶಕ್ತಿಯ ಒಂದು ಭಾಗವನ್ನು ಧಾರೆಯೆರೆದಿದ್ದಾರೆ, ಕನ್ನಡನಾಡಿನ ಒಂದು ಭವ್ಯ ಮನೆತನದ ಕಥೆಯನ್ನು ಕಾವ್ಯಮಂದಿರದಲ್ಲಿ ಅಮರಗೊಳಿಸಿದ್ದಾರೆ. ಅರಿಕೇಸರಿ, ಮೂರನೆಯ ಕೃಷ್ಣ, ಇರಿವಬೆಡಂಗ ಮೊದಲಾದ ದೊರೆಗಳ ವಿಚಾರವಾಗಿ ಸಿಗುವ ವಿವರಗಳಿಗಿಂತ ಈ ಮಲ್ಲಪನ ಮನೆತನದ ವರ್ಣನೆ ಹೆಚ್ಚು ಆತ್ಮೀಯವೂ ಹೃದ್ಯವೂ ಆಗಿದೆ. ಸಹೃದಯರಿಗೆ ಇಲ್ಲಿನ ಜೀವಂತಿಕೆ ಕೂಡ ಪ್ರಿಯವಾಗುತ್ತದೆ. ಇದು ಪುರಾಣಪುರುಷರ ರಾಮಾಯಣ ಮಹಾಭಾರತಗಳ ಕಾಗಮ್ಮನ ಗೂಗಮ್ಮನ ಕಟ್ಟುಕಥೆಯಲ್ಲ. ನಮ್ಮಂಥ ಜನ ನಮಗಿಂತ ದೊಡ್ಡ ಬದುಕನ್ನು, ತ್ಯಾಗ ಬಲಿದಾನಗಳ ಉದಾತ್ತ ಜೀವನವನ್ನು ಬಾಳಿ ಹೇಗೆ ಹಿರಿಯರಾದರೆಂಬುದನ್ನು ಇವರಲ್ಲಿ ಕಾಣುತ್ತೇವೆ. ಇವರ ನೋವುನಲಿವುಗಳಿಗೆ ಬಹುಬೇಗ ಸ್ಪಂದಿಸುತ್ತೇವೆ. ನಮ್ಮ ಹೃದಯಗಳಲ್ಲಿ ಇವರಿಗೆ ಮರ್ಯಾದಿತ ಸ್ಥಾನ ಕಲ್ಪಿಸಿ ಕೊಡುತ್ತೇವೆ. ಪೊನ್ನ-ರನ್ನರ ಕಾವ್ಯ ಈ ನೆಲದ ಮೇಲೆ ನಡೆದಾಡಿ ನುಡಿದಾಡಿ ಜೀವಂತಿಕೆಯಿಂದ ವರ್ತಮಾನದ ಬದುಕಿಗೂ ಹತ್ತಿರವಾಗುವುದು ಕೂಡ ಈ ಕುಟುಂಬದ ಕಥೆ ವರ್ಣಿಸುವ ಭಾಗದಲ್ಲೇ ಎಂಬುದು ಗಣನೀಯವಾಗಿದೆ. ಎಲ್ಲಿಯವರೆಗೆ ಪೊನ್ನ–ರನ್ನರ ಈ ಎರಡು ಕಾವ್ಯಗಳು ಇರುತ್ತವೆಯೊ ಅಲ್ಲಿಯವರೆಗೂ ಮಲ್ಲಪ, ಪುನ್ನಮಯ್ಯ, ದಲ್ಲಪ, ನಾಗದೇವ, ಅತ್ತಿಮಬ್ಬೆ, ಅಣ್ಣಿಗದೇವ ಚಿರಂಜೀವಿಗಳು.

ಇದುವರೆಗೆ ಒಂದು ದೊಡ್ಡ ಅವಿಭಕ್ತ ಕುಟುಂಬದ ವೈಭವ ವರ್ಣಿತವಾಗಿರುವುದನ್ನು ನೋಡಿ ರಸಾರ್ದ್ರಗೊಂಡ ಕಾವ್ಯಚೇತನಕ್ಕೆ ದಕ್ಕಿದ ಒಟ್ಟು ಚಿತ್ರ ಮುಂದಿನ ಪುಟದಲ್ಲಿರುವಂತಿದೆ.

ಅಣ್ಣಿಗದೇವ, ಅಣ್ಣಿಗದೇವನ ತಾಯಿ ಅತ್ತಿಮಬ್ಬೆ, ತಾತ ಮಲ್ಲಪಯ್ಯ, ಮುತ್ತಾತ ನಾಗಮಯ್ಯ–ಹೀಗೆ ನಾಲ್ಕು ತಲೆಮಾರು ತಾಯಿಯ ಕಡೆಯಿಂದಲೂ ಮತ್ತು ಇದರ ಜತೆಗೇನೆ ಅಣ್ಣಿಗದೇವ, ಅಣ್ಣಿಗದೇವನ ತಂದೆ ನಾಗದೇವ, ತಾತ ದಲ್ಲಪ-ಹೀಗೆ ಮೂರು ತಲೆಮಾರು ತಂದೆಯ ಕಡೆಯಿಂದಲೂ ಚಿತ್ರಗೊಂಡಿರುವುದನ್ನು ಸಾಹಿತ್ಯದ ವಿದ್ಯಾರ್ಥಿಗಳೂ ಚರಿತ್ರೆಯ ವಿದ್ಯಾರ್ಥಿಗಳೂ ಗುರುತಿಸಿಕೊಳ್ಳಬೇಕಾಗುತ್ತದೆ. ಪೊನ್ನ–ರನ್ನರು ತಮ್ಮ ಕೃತಿಗಳನ್ನೇ ಅಲ್ಲದೆ ಕನ್ನಡ ನಾಡಿನ ಒಂದು ಮಹಾನ್ ಮನೆತನವನ್ನೂ ಬಿಡಿಸಿ ಉಲ್ಲೇಖಿಸಿ ವಿವರಿಸಿ ಹೋಗಿದ್ದಾರೆ. ಜಗತ್ತಿನ ವಾಙ್ಮಯದಲ್ಲಿ ಇದೊಂದು ವಿಶಿಷ್ಟ ಉಲ್ಲೇಖವೆಂದು ದಾಖಲೆಗೊಳ್ಳುತ್ತದೆ. ಪಂಪಯ್ಯನು ನಾಗಮಯ್ಯನ ತಂದೆಯೆಂಬುದು ಇನ್ನೂ ಖಚಿತಾಧಾರಗಳಿಂದ ದೃಢಗೊಂಡರೆ ಆಗ ಮತ್ತೊಂದು ತಲೆಮಾರಿನ ಹಿರಿಯನ ವಿಚಾರ ಇದಕ್ಕೆ ಸೇರ್ಪಡೆಯಾಗುತ್ತದೆ

ಮಲ್ಲಪ–ಪುನ್ನಮಯ್ಯರ ವಂಶವೃಕ್ಷ

(ಪೊನ್ನ–ರನ್ನರ ಕಾವ್ಯಗಳ ಆಧಾರ)



ಹೀಗೆ ಒಂದು ಮನೆತನದ ನಾಲ್ಕೈದು ತಲೆಮಾರಿನ ವಿವರ ಸಿಗುವುದಷ್ಟೇ ಇದರ ಮಹತ್ವವಾಗಿಲ್ಲ; ಪ್ರತಿಯೊಂದು ತಲೆಮಾರಿನವರೂ ತಾಯ್ನಾಡಿಗಾಗಿ ತೋರಿದ ತ್ಯಾಗ, ತಾಯ್ನುಡಿಗಾಗಿ ಮಾಡಿದ ಸೇವೆ, ಇತರ ಸಾಹಸಾದಿ ಗುಣಗಳಿಂದ ಅವರು ಗೌರವಾರ್ಹರೂ ಪ್ರತಿವಂದ್ಯರೂ ಆಗುತ್ತಾರೆ. ಧರ್ಮ ಅರ್ಥ ಕಾಮ ಭಯಗಳಲ್ಲಿ ಶೋಧಿತರಾಗಿ ಚತುರುಪಧಾವಿ ಶುದ್ಧರಾಗಿ ಗಣ್ಯರಾದ ಇವರ ಚರಿತ್ರೆ ಧ್ರುವವಾದದ್ದು, ಅನನ್ಯವಾದದ್ದು. ಇದುವರೆಗೂ ಬೇರೆ ಯಾರೂ ಹೇಳದಿರುವ ಹೊಸ ಸಂಗತಿಯೊಂದನ್ನು ನಾನು ಇಲ್ಲಿಯೇ ಹೇಳಬೇಕಾಗುತ್ತದೆ. ಪೊನ್ನಕವಿ ತನಗೆ ಪ್ರಿಯರಾದ, ತನ್ನ ಗೌರವವನ್ನು ಸೂರೆಗೊಂಡ ಮೂವರು ಐತಿಹಾಸಿಕ ವ್ಯಕ್ತಿಗಳನ್ನು ಶಾಂತಿಪುರಾಣದ ಪುರಾಣಪುರುಷರೊಡನೆ ತಗುಳ್ಚಿ ಅಭೇದ ಭಾವ ಕಲ್ಪಿಸಿದ್ದಾನೆ:

1. ತನ್ನ ಗುರುವಾದ ಜಿನಚಂದ್ರರನ್ನು ತೀರ್ಥಂಕರರೊಡನೆ ಸಮೀಕರಿಸಿರುವುದು. ಇದನ್ನು ಕವಿಯೇ ಸ್ಪಷ್ಟಪಡಿಸಿದ್ದಾನೆ.

2. ತನಗೆ ಆಶ್ರಯಕೊಟ್ಟ ಪುನ್ನಮಯ್ಯ–ಮಲ್ಲಪಯ್ಯ ಎಂಬ ಸೋದರರನ್ನು ಶಾಂತಿಪುರಾಣದ ಅಪರಾಜಿತ-ಅನಂತವೀರ್ಯ ಎಂಬ ಅಣ್ಣತಮ್ಮಂದಿರೊಡನೆ ಸಮೀಕರಿಸಿದ್ದಾನೆ. ಅದರಿಂದಲೇ ಈ ಕಾವ್ಯವನ್ನು ಅಪರಾಜಿತ ಭವಾವಳಿಯಿಂದ ಪ್ರಾರಂಭಿಸಿದ ಅಸಗನ ಕಾವ್ಯವನ್ನು ಅನುಸರಿಸಿರುವುದು, ಉತ್ತರ ಪುರಾಣದ ಹೆದ್ದಾರಿಯನ್ನು ಕೈಬಿಟ್ಟದ್ದು.

3. ತನಗೆ ಹಿಂದೆ ಚಕ್ರವರ್ತಿ ಮುಮ್ಮಡಿ ಕೃಷ್ಣ ಆಶ್ರಯಕೊಟ್ಟು ಉಭಯ ಕವಿಚಕ್ರವರ್ತಿ ಎಂಬ ಬಿರುದು ಕೊಟ್ಟು ನೀಡಿದ ಮರ್ಯಾದಿತ ಜೀವನವನ್ನು ಕವಿ ಇಲ್ಲಿಯೂ ಧ್ವನಿಸಿರುವಂತೆ ತೋರುತ್ತದೆ. ಬಹುಶಃ ಕನ್ನರ ಚಕ್ರಿಯನ್ನು ದಮಿತಾರಿ ಚಕ್ರವರ್ತಿಗೂ (ಇಬ್ಬರೂ ಚಕ್ರವರ್ತಿಗಳು) ಆತನ ದೂತನಲ್ಲಿ ತನ್ನನ್ನೂ ಕವಿ ಸಮೀಕರಿಸಿಕೊಂಡಿರುವ ಸಾಧ್ಯತೆಯನ್ನು ಸುಲಭವಾಗಿ ತಳ್ಳಿಹಾಕಲು ಬರುವುದಿಲ್ಲ. ಇದಕ್ಕೆ

ಚರಿತ್ರೆಯ ಘಟನೆಗಳು ಪುಷ್ಟಿಕೊಡುತ್ತವೆ. ಪೊನ್ನನ ಜೀವಿತದ ಉತ್ತರಾರ್ಧದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯದ ಅಸ್ತಮಾನ ಆರಂಭವಾಗಿದ್ದಿರಬೇಕು. ಅಲ್ಲದೆ ಪೊನ್ನ ರಾಷ್ಟ್ರಕೂಟರನ್ನು ಬಿಟ್ಟು ಚಾಲುಕ್ಯರ ರಾಜಮನ್ನಣೆಯ ಆಶ್ರಯ ಒಪ್ಪಿಕೊಂಡಿರುವುದನ್ನು ಗಂಭೀರವಾಗಿ ಪರಿಭಾವಿಸಬೇಕಾಗುತ್ತದೆ. ರಟ್ಟರೂ ಚಾಲುಕ್ಯರೂ ಎಣ್ಣೆ ಸೀಗೆಕಾಯಿ ಸಂಬಂಧವುಳ್ಳವರು. ರಟ್ಟರನ್ನು ನಿರ್ನಾಮ ಮಾಡುವುದರಲ್ಲಿ ಚಾಲುಕ್ಯರದು ಸಿಂಹಪಾಲು. ದಮಿತಾರಿಯ ದೂತ ತನ್ನ ಚಕ್ರವರ್ತಿಗೆ ನಿಷ್ಠನಾಗಿಯೂ ಅಪರಾಜಿತನ ಬಹು ಬೆಲೆಯ ಉಡುಗೊರೆಗಳಿಗೆ ಒಲಿದು ಪ್ರಸನ್ನನಾಗಿ ಅಪರಾಜಿತ–ಅನಂತವೀರ್ಯರ ಸದ್ಗುಣಾದಿಗಳಿಗೆ ಸಂಪ್ರೀತನಾಗುತ್ತಾನೆ. ದಮಿತಾರಿಯು ಗುಣಾಧಿಕ್ಯದ ಚಕ್ರವರ್ತಿಯಾದರೂ ಅಪರಾಜಿತನಿಗೆ ಪರಾಜಿತನಾಗುತ್ತಾನೆ. ಅವನ ಮಗಳನ್ನು ಈ ಸಹೋದರರು ಅಪಹರಿಸುತ್ತಾರೆ, ಯುದ್ಧಕ್ಕೆ ಅದುವೆ ನಾಂದಿಯಾಗುತ್ತದೆ.

ಹೀಗೆ ಜಾಡುಹಿಡಿದು ಹೊರಟಾಗ ಪೊನ್ನನ ಶಾಂತಿಪುರಾಣದಲ್ಲಿ ಚಾರಿತ್ರಿಕ ಧ್ವನಿಯೂ ಇರುವುದು ಕಂಡುಬರುತ್ತದೆ. ಲೌಕಿಕ ಕಾವ್ಯಗಳಲ್ಲಿ ಮಾತ್ರ ಚಾರಿತ್ರಿಕ ವ್ಯಕ್ತಿಗಳನ್ನು ಕಾವ್ಯದ ಪ್ರಧಾನ ಪಾತ್ರಗಳೊಡನೆ ಅಭೇದ ಕಲ್ಪಿಸಿ ಕಾವ್ಯ ಬರೆಯುವ ಪಂಪಾದಿಗಳ ಪ್ರಯತ್ನವನ್ನು ಇಲ್ಲಿ ಪೊನ್ನ ಆಗಮಿಕ ಕಾವ್ಯದಲ್ಲೂ ಮುಂದುವರಿಸಿದ್ದಾನೆ. ಇದು ಶಾಂತಿಪುರಾಣ ವಿಮರ್ಶೆಯಲ್ಲಿ ಗುರುತಿಸಬೇಕಾಗಿರುವ ಹೊಸ ಅಂಕವಾಗಿದೆ. ಭುವನೈಕ ರಾಮಾಭ್ಯುದಯದಲ್ಲಿ ಇಂಥ ಕೆಲಸವನ್ನು ಪೊನ್ನ ಮಾಡಿದ್ದರೂ, ಸವಣಕವಿಯಾಗಿ ಆತ ಶಾಂತಿಪುರಾಣ ಪಾರಮಾರ್ಥಿಕ ಕಾವ್ಯದಲ್ಲಿ ಮಾಡಿರುವುದು ಮಹತ್ವದ್ದಾಗಿದೆ. ಜಿನಧರ್ಮ ಮನೋಧರ್ಮ ಕೆಳಗಾಗಿ ಕವಿ ಸ್ವಭಾವ ಇಲ್ಲಿ ಮೇಲುಗೈ ಸಾಧಿಸಿದೆ. ಅದರಿಂದಲೇ ಇಡೀ ಶಾಂತಿಪುರಾಣದಲ್ಲಿ ಮೊದಲ ಮೂರು ಆಶ್ವಾಸಗಳು ಕಾವ್ಯದ ದೃಷ್ಟಿಯಿಂದ ಮೌಲಿಕವಾಗಿರುವುದು.

ಶಾಂತಿಪುರಾಣ ಕಾವ್ಯದ ಪಾತ್ರಗಳೊಂದಿಗೆ ಐತಿಹಾಸಿಕ ವ್ಯಕ್ತಿಗಳ ಸಮೀಕರಣಮಾಡಬೇಕಾದ ಜರೂರು ಹೇಗೆ ಅನಿವಾರ್ಯವಾಗಿ ಒದಗಿಬಂದಿತೆಂಬುದನ್ನು ವಿಶದೀಕರಿಸಬೇಕಾಗುತ್ತದೆ. ಕವಿಗೆ ಒಂದು ವಿಶಿಷ್ಟ ಹಿನ್ನಲೆ ಇರುವಂತೆ ಈ ಕೃತಿಗೂ ನಿರ್ದಿಷ್ಟ ಹಿನ್ನೆಲೆಯಿದೆ. ಅಂದಿನ ಸಾಮಾಜಿಕ ರಾಜಕೀಯ ಪರಿಸರವನ್ನು ಗುರುತಿಸಿ ಪೊನ್ನನ ರಾಜೀ ಮನೋಭಾವವನ್ನು ಈಗಾಗಲೇ ನಿರೂಪಿಸಿದ್ದೇನೆ. ಇದು ಬದಲಾಗುತ್ತಿದ್ದ ಸಮಕಾಲೀನ ಚಾರಿತ್ರಿಕ ಸ್ಥಿತಿಗತಿಗಳಿಗೆ ಕವಿಯ ಆಂತರಿಕ ಪ್ರತಿಕ್ರಿಯೆಯೆಂದು ಭಾವಿಸಬಹುದು. ಪ್ರತಿಕೂಲ ಪರಿಸ್ಥಿತಿಯಲ್ಲಿ ಹಗೆಗಳ ಏಟು ಮಾರೇಟು ಎದಿರೇಟುಗಳಿಂದ ಸಿತ್ತರಿಸಲಾಗದೆ ಅಸ್ಥಿರತೆಯಿಂದ ರಟ್ಟರಾಜ್ಯ ತತ್ತರಿಸಿ ಹೋಗತೊಡಗಿತ್ತೆಂದು ಹಿಂದೆ ಹೇಳಿದ್ದೇನೆ. ಸಾಮ್ರಾಜ್ಯ ಈ ಒಳಹೊರ ಹೋರಾಟಗಳಿಂದ ಕಲಕಿದ್ದ ಸ್ತಬ್ಧತೆಯನ್ನು ಬೇಗ ನೀಗಿಕೊಂಡು ತಿಳಿಯಾದ ವಾತಾವರಣ ನೆಲಸುವ ಸೂಚನೆಗಳು ತೆಳ್ಳಗಿದ್ದುವು. ಭವಿಷ್ಯದರ್ಶಿಯಾದ ಕವಿ ಒಳಹೊರಗಿನ ಉಪಟಳಗಳಿಂದ ಗ್ರಹಣಹಿಡಿದ ನಾಡು ಅಭದ್ರಸ್ಥಿತಿಗೆ ತಲಪುತ್ತಿದೆಯೆಂದು ಶೀಘ್ರವಾಗಿ ಗ್ರಹಿಸಿದ್ದಾನೆ. ದಕ್ಷರ ಪರೋಕ್ಷದಲ್ಲಿ ರಾಜ್ಯ ಅರಾಜಕತೆಗೆ ಸರಿಯುತ್ತಿದೆಯೇ ಹೊರತು ಶಾಂತಿಸ್ಥಾಪನೆ ಸದ್ಯದಲ್ಲಿ ಸಾಧ್ಯವಾಗುವುದಿಲ್ಲ, ಅಷ್ಟೇ ಅಲ್ಲ ಒಟ್ಟು ಜನಪದದ ಸಾಂಸ್ಕೃತಿಕ ಜೀವನ ಹದಗೆಡುತ್ತಾ ಹೋಗುತ್ತದೆ. ಜೀವನದಂತೆ ಅದರ ಅವಿಭಾಜ್ಯ ಭಾಗವಾದ ಧರ್ಮವೂ ಶಿಥಿಲಗೊಳ್ಳುತ್ತದೆ. ಅದರಿಂದ ಸಮಗ್ರ ದೇಶ ಪರಿಸ್ಥಿತಿಯನ್ನು ಪೊನ್ನ ತೂಗಿನೋಡಿ ಪೂರ್ವಾಪರಗಳನ್ನು ಚಿಂತಿಸಿರಬಹುದು. ತನ್ನ ಸ್ವತಂತ್ರ ಕವಿಮನೋಧರ್ಮ ಹಾಗೂ ವೈಯಕ್ತಿಕ ಜಿನಧರ್ಮ—ಇವೆರಡರ ರಕ್ಷಣೆ ಸಂವರ್ಧನೆ ದೃಷ್ಟಿಯಿಂದ ಅಸ್ಥಿರತೆಯಿಂದ ಇಳಿಗಾಲದ ಅವರೋಹಣ ಕ್ರಿಯೆಯಲ್ಲಿ ಚಲಿಸತೊಡಗಿದ್ದ ರಾಷ್ಟ್ರಕೂಟ ಸಾಮ್ರಾಜ್ಯದ ಆಶ್ರಯಕ್ಕೆ ವಿದಾಯ ಹೇಳಿರಬೇಕು. ಇದರ ತದ್ವಿರುದ್ಧ ಪರಿಸ್ಥಿತಿಯಲ್ಲಿದ್ದು ಏರುಗಾಲದ ಆರೋಹಣ ಕ್ರಿಯೆಯಲ್ಲಿ ಚಲನಶೀಲವಾಗಿದ್ದ ಚಾಲುಕ್ಯ ಸಾಮ್ರಾಜ್ಯದ ನೆರಳು ನೆಮ್ಮದಿಗೆ ಮನಸ್ಸು ಒಡಂಬಟ್ಟಿರಬೇಕು. ರಾಷ್ಟ್ರಕೂಟ ಚಕ್ರವರ್ತಿಯ ಆಸ್ಥಾನ ಮರ್ಯಾದೆ ಪಡೆದು ಒಮ್ಮೆಲೇ ಅವರು ಕಡುಹಗೆಗಳಾದ ಚಾಲುಕ್ಯ ರಾಜಾಶ್ರಯ ಒಪ್ಪಿ

ಒಡ್ಡೋಲಗದಲ್ಲಿ ಕುಳಿತುಕೊಳ್ಳುವಷ್ಟು ಕಾಠಿಣ್ಯಕ್ಕೆ ಕವಿ ಒಳಗಾಗಿಲ್ಲ. ಚಾಲುಕ್ಯರ ರಾಜಕೀಯ ಅಧಿಕಾರ ಶ್ರೇಣಿಯ ಮುಂಚೂಣಿಯಲ್ಲಿ ನಿಂತ ಮಹಿಮಾ ವ್ರತ ಶ್ರಾವಕ ಶ್ರೇಷ್ಠರ ಕರೆಗೆ ಕವಿ ಓಗೊಟ್ಟ. ಅರಮನೆಯ ಮರ್ಯಾದೆಗಿಂತ ಇದೇನೂ ಕಡಮೆಯದಲ್ಲ, ಕಿಂಚಿದೂನವಿ ಬಹುದಷ್ಟೆ. ಆದರೆ ಸ್ವಧರ್ಮೇ ನಿಧನಂ ಶ್ರೇಯಃ! ತನ್ನ ಧರ್ಮ ಹಾಗೂ ಮನೋಧರ್ಮದ ಲಾಲನೆಪಾಲನೆಗೆ ಈ ಹೊಸ ಆವರಣ ಪ್ರಿಯವಾಗಿತ್ತು. ಆತಂಕ ಚಿಂತೆ ದೂರವಾಗಿತ್ತು. ತನ್ನ ಧರ್ಮವಾಗಲಿ ಸಾಹಿತ್ಯ ಚಟುವಟಿಕೆಯಾಗಲಿ ಸ್ಥಗಿತಗೊಳ್ಳದೆ ಬಾಳು ಬರವಣಿಗೆ ನಿರಾತಂಕವಾಯಿತು–ಎಂಬುದು ಕವಿಗೆ ಸಮಾಧಾನ ತಂದ ಅಂಶವಿರಬೇಕು. ಈ ವಿಶಿಷ್ಟ ಧ್ವನಿಯನ್ನು ಶಾಂತಿಪುರಾಣ ಕೇಳಿಸುವಂತಿದೆ.

ಪೊನ್ನನ ಶಾಂತಿಪುರಾಣದ ಕಥಾಸಾರ (ಸಂಕ್ಷಿಪ್ತ ಸಮೀಕ್ಷೆ)

ಪೂರ್ವವಿದೇಹ ಕ್ಷೇತ್ರದ ವತ್ಸಕಾವತಿ ದೇಶದಲ್ಲಿ ಪ್ರಭಾಕರಿಯೆಂಬ ಪಟ್ಟಣವುಂಟು. ಅದಕ್ಕೆ ದೊರೆಯಾದವನು ಸ್ತಿಮಿತಸಾಗರ ರಾಜ. ವಸುಂಧರೆ ಮತ್ತು ವಸುಮತಿ ಎಂಬಿಬ್ಬರು ಆತನ ರಾಣಿಯರು. ವಸುಂಧರೆಗೆ ಅಪರಾಜಿತನೆಂಬ ಹಾಗು ವಸುಮತಿಗೆ ಅನಂತವೀರ್ಯನೆಂಬ ಮಕ್ಕಳಾದರು. ಅವರು ಆ ಕಾಲದ ಬಲದೇವ-ವಾಸುದೇವರು. ಅವರು ಸುಖದಿಂದ ಇರುತ್ತಿರಲು ಒಮ್ಮೆ ಸ್ವಯಂಪ್ರಭರೆಂಬ ತೀರ್ಥಂಕರರು ಬರಲಾಗಿ ಸ್ತಿಮಿತಸಾಗರನು ಅವರಿಂದ ಧರ್ಮ ಶ್ರವಣ ಮಾಡಿ ದಿಗಂಬರ ವ್ರತವನ್ನು ಕೈಕೊಂಡನು. ಧರಣೇಂದ್ರನನ್ನು ನೋಡಿ ಅವನಂತೆ ಆಗಬೇಕೆಂದು ನಿಧಾನ ಮಾಡಿ ಸತ್ತು ಧರಣೇಂದ್ರ ಪದವಿಯನ್ನು ಪಡೆದನು. ಅಪರಾಜಿತನು ಅರಸನಾಗಿಯೂ ಅನಂತವೀರ್ಯನು ಯುವರಾಜನಾಗಿಯೂ ರಾಜ್ಯವನ್ನು ಆಳುತ್ತಿರಲಾಗಿ ಒಂದು ದಿನ ಅವರ ಒಡ್ಡೋಲಗಕ್ಕೆ ದೂತನೊಬ್ಬನು ಬಂದನು. ತಾನು ಶಿವಮಂದಿರಪುರದ ದಮಿತಾರಿ ರಾಜನಿಂದ ಸಂದೇಶ ತಂದಿರುವುದಾಗಿ ತಿಳಿಸಿ ಹೀಗೆಂದನು: "ನಮ್ಮ ದೊರೆಯ ಆಸ್ಥಾನಕ್ಕೆ ನಾರದಮುನಿಗಳು ಬಂದು, ನಿಮ್ಮಲ್ಲಿ ಬರ್ಬರೆ–ಕಿರಾತೆಯರೆಂಬ ಶ್ರೇಷ್ಠ ಗಾಯಕಿಯರು ಇರುವುದಾಗಿ ತಿಳಿಸಿದರು. ಅವರಿಬ್ಬರನ್ನು ನೀವು ನಮ್ಮ ರಾಜನಿಗೆ ಕೊಡಬೇಕೆಂದು ಹೇಳಿಕಳಿಸಿದ್ದಾನೆ." ಹೀಗೆ ನುಡಿದ ಬಳಿಕ ದಮಿತಾರಿ ಕಳುಹಿದ ಹಾರವನ್ನು ಒಪ್ಪಿಸಿದನು. ಅದನ್ನು ಕಂಡೊಡನೆ ಪೂರ್ವಭವ ಸ್ಮರಣೆಯಿಂದ ಬಲದೇವನು ಮೂರ್ಛೆಹೋದನು. ಎಚ್ಚೆತ್ತಾಗ ಪೂರ್ವಜನ್ಮದಲ್ಲಿ ಆತನು ಸಂಪಾದಿಸಿದ ವಿದ್ಯಾಧರ ವಿದ್ಯೆಗಳು ಪ್ರತ್ಯಕ್ಷವಾಗಿ ಬಂದೊದಗಿದುವು. ಅಪರಾಜಿತನು ಸಚಿವರೊಡನೆ ಮಂತ್ರಾಲೋಚನೆ ನಡೆಸಿದನು. ದಮಿತಾರಿಯೊಡನೆ ಸಾಮೋಪಾಯದಿಂದಲೆ ವರ್ತಿಸಬೇಕೆಂದು ಸಚಿವರು ತಿಳಿಸಿದರು. ಅನಂತವೀರ್ಯನು ಅದನ್ನು ಒಪ್ಪದೆ ತಮ್ಮ ಗಾಯಿಕೆಯರನ್ನು ದಮಿತಾರಿಗೆ ಕೊಟ್ಟ ಪಕ್ಷದಲ್ಲಿ ತಾನು ಸಂನ್ಯಾಸದೀಕ್ಷೆ ವಹಿಸುವೆನೆಂದನು. ಅಪರಾಜಿತನು ಈ ಎರಡೂ ಅಭಿಪ್ರಾಯಗಳನ್ನು ತೂಗಿ ನೋಡಿ, ಬಳಿಕ ರೂಪಪರಾವರ್ತನ ವಿದ್ಯೆಯಿಂದ ತಾನು ಹಾಗು ಅನಂತವೀರ್ಯ ಇಬ್ಬರೂ ಗಾಯಿಕೆಯರ ವೇಷದಿಂದ ದಮಿತಾರಿಯ ಬಳಿ ಹೋಗುವುದಾಗಿಯೂ ತಮ್ಮ ಅನುಪಸ್ಥಿತಿಯಲ್ಲಿ ಸಚಿವರು ರಾಜ್ಯವನ್ನು ನೋಡಿಕೊಳ್ಳಬೇಕೆಂದೂ ತಿಳಿಸಿದನು. ಆ ಮೇರೆಗೆ ಸ್ತ್ರೀರೂಪ ತಾಳಿದ ಅವರಿಬ್ಬರೊಡನೆ ದಮಿತಾರಿಯ ದೂತನು ಸಂತೋಷದಿಂದ ವಿಮಾನವೇರಿ ಶಿವಮಂದಿರಪುರಕ್ಕೆ ಹೋದನು. ದಮಿತಾರಿಯು ಪ್ರಸನ್ನನಾಗಿ, ಈ ಗಾಯಿಕೆಯರನ್ನು ಸಖಿಯರಾಗಿರಲೆಂದು ತನ್ನ ಮಗಳಾದ ಕನಕಶ್ರೀಯ ಅಂತಃಪುರದಲ್ಲಿ ಇರಿಸಿದನು. ಅವರು ಆಕೆಯ ಮನಸ್ಸನ್ನು ಗೆದ್ದುಕೊಂಡು ಒಂದು ದಿನ ವಿಮಾನದಲ್ಲಿ ಅವಳೊಡನೆ ಹೊರಬಿದ್ದು ಹೋಗಿ, ಅಡ್ಡಗಟ್ಟಿದ ಅಂತಃಪುರದ ಅಧಿಕಾರಿಗಳನ್ನು ಹಿಮ್ಮೆಟ್ಟಿಸಿ "ನಿಮ್ಮ ರಾಜನಿಗೆ ಸೈನ್ಯಸಹಿತವಾಗಿ ಬರಲು ತಿಳಿಸಿ, ನಾವು ಇಲ್ಲಿಯೆ ಕಾದಿರುವೆವು" ಎಂದು ಹೇಳಿಕಳಿಸಿದರು. ಅರಸನ ಸೈನಿಕರು ಉಗ್ರಕೋಪದಿಂದ ನುಗ್ಗಲು ಹೊರಟಾಗ ಸುಮತಿಯೆಂಬ ಮಂತ್ರಿ ಅವರನ್ನು ತಡೆದು, "ಒಬ್ಬ ದೂತನ ಮೂಲಕ ಅಪರಾಜಿತನ ಮನಸ್ಸನ್ನು ಮೊದಲು ತಿಳಿದುಕೊಳ್ಳುವುದು ವಿಹಿತ" ಎಂದು ತಿಳಿಸಿದನು. ರಾಜನು ಅದಕ್ಕೊಪ್ಪಿ ಪ್ರೀತಿವರ್ಧನನೆಂಬ ದೂತನನ್ನು ಕಳಿಸಿದನು. ಪ್ರೀತಿವರ್ಧನನು

ಅಪರಾಜಿತನನ್ನು ಕಂಡು "ನೀವು ಸದ್ವಂಶದವರಾಗಿ ಈ ಕೆಲಸ ಮಾಡತಕ್ಕುದಲ್ಲ. ಏನೋ ಆಗಿಹೋಯಿತು. ದಮಿತಾರಿಗೆ ಶರಣಾಗಿ ಕನಕಶ್ರೀಯನ್ನು ಮರಳಿ ಒಪ್ಪಿಸಿಬಿಡಿ. ನಿಮಗೆ ಕ್ಷಮೆ ದೊರೆಯುವುದು" ಎಂದು ಉಪಾಯವಾಗಿ ಉಪದೇಶ ಬೆದರಿಕೆಗಳೆರಡನ್ನೂ ಬೆರಸಿ ಮಾತಾಡಿದನು. ಅಪರಾಜಿತನು ಅವನಿಗೆ ಯೋಗ್ಯವಾದ ಉತ್ತರಕೊಟ್ಟು ನಿಮ್ಮ ರಾಜನನ್ನೇ ಕಳಿಸೆಂದು ಅವನನ್ನು ಮರಳಿ ಅಟ್ಟಿದನು. ಅಪಶಕುನಗಳಾಗುತ್ತಿದ್ದರೂ ಲೆಕ್ಕಿಸದೆ ದಮಿತಾರಿ ರಾಜನು ಸೈನಸಹಿತನಾಗಿ ಏರಿಬಂದನು. ಅಪರಾಜಿತನ ಬಾಣಗಳಿಂದ ಆತನ ಸೈನವೆಲ್ಲ ನಾಶವಾಯಿತು. ಅನಂತ ವೀರ್ಯನು ಆಗ ಅಣ್ಣನನ್ನು ಪ್ರಾರ್ಥಿಸಿಕೊಂಡು, ಉಳಿಗಾಳಗವನ್ನು ತಾನು ವಹಿಸಿಕೊಂಡನು. ದಮಿತಾರಿಯ ಅಸ್ತ್ರಗಳೆಲ್ಲ ನಿರುಪಯೋಗಿಯಾದಾಗ ಆತನು ತನ್ನ ಚಕ್ರರತ್ನವನ್ನು ಪ್ರಯೋಗಿಸಿದನು. ಆದರೆ ಆ ಚಕ್ರವು ಅನಂತ ವೀರ್ಯನಿಗೆ ವಶವಾಗಿ ಅವನ ಭುಜದ ಮೇಲೆ ನಿಂತಿತು. ಅನಂತವೀರ್ಯನು ಆ ಚಕ್ರದಿಂದಲೆ ದಮಿತಾರಿಯ ಶಿರಸ್ಸನ್ನು ಕತ್ತರಿಸಿ ಕಾಳಗವನ್ನು ಗೆದ್ದನು. ಬಳಿಕ ಅಳಿದುಳಿದವರಿಗೆ ಅಭಯವಿತ್ತು ದಮಿತಾರಿಯ ಶರೀರಕ್ಕೆ ಗೌರವದಿಂದ ಸಂಸ್ಕಾರ ಮಾಡಿಸಿ ಸೋದರರಿಬ್ಬರೂ ಕನಕಶ್ರೀಯೊಡನೆ ವಿಮಾನವೇರಿ ತಮ್ಮ ಪುರಕ್ಕೆ ಹೊರಟರು. ನಡುದಾರಿಯಲ್ಲಿ ಕೀರ್ತಿಧರ ಕೇವಲಿಯ ಸಮವಸರಣವನ್ನು ಕಂಡು, ಅಲ್ಲಿ ಇಳಿದು ಅವರನ್ನು ಅರ್ಚಿಸಿ ಧರ್ಮಶ್ರವಣ ಮಾಡಿದರು. ಕೇವಲಿಗಳು ಕನಕಶ್ರೀಗೆ ಅವಳ ಭವಾವಳಿಯನ್ನು ತಿಳಿಸಿದರು. ಪುನಃ ವಿಮಾನವೇರಿ ತಮ್ಮ ರಾಜಧಾನಿಯ ಒಳಗೆ ಬರಲಾಗಿ, ದಮಿತಾರಿಯ ಮಕ್ಕಳಾದ ವಿದ್ಯುದ್ದಂಷ್ಟ್ರ ಮತ್ತು ಸುದುಂಷ್ಟ್ರರೆಂಬವರು ದಾಳಿಮಾಡುತ್ತಿರುವುದನ್ನು ಕಂಡರು. ಅನಂತವೀರ್ಯನು ಬಾಣಗಳಿಂದ ಅವರಿಬ್ಬರನ್ನು ಕೊಂದನು. ಮುಂದೆ ಕೆಲ ದಿನಗಳಲ್ಲಿ ಅನಂತವೀರ್ಯನೊಡನೆ ತನ್ನ ಮದುವೆಯಾಗುವ ಮಾತನ್ನು ಕೇಳಿ ತಿಳಿದ ಕನಕಶ್ರೀ ಅದಕ್ಕೆ ಒಪ್ಪದೆ, ಅಪರಾಜಿತ–ಅನಂತವೀರ್ಯರಿಬ್ಬರನ್ನೂ ಒಪ್ಪಿಸಿ ತಪೋದೀಕ್ಷೆಯನ್ನು ಕೈಕೊಂಡು ಹೊರಟುಹೋದಳು. ಕೆಲಕಾಲಾನಂತರ ಅಪರಾಜಿತನಿಗೆ ಸುಮತಿಯೆಂಬ ಮಗಳಾದಳು. ಅವಳು ವಿವಾಹ ವಯಸ್ಕಳಾಗಲು ಸ್ವಯಂವರವೇರ್ಪಟ್ಟಿತು. ಆಕೆ ಹೂಮಾಲೆ ಹಿಡಿದು ಸ್ವಯಂ ವರಕ್ಕೆ ಹೊರಟಾಗ ಆಕಾಶದಲ್ಲಿ ವಿಮಾನರೂಢೆಯಾದ ದೇವತೆಯೊಬ್ಬಳು "ಅಕ್ಕಾ, ನೀನೂ ನಾನೂ ಪೂರ್ವಭವದ ಸೋದರಿಯರು. ಅನಶನವ್ರತದಿಂದ ಮರಣಹೊಂದಿ ದೇವಲೋಕದಲ್ಲಿ ಹುಟ್ಟಿದೆವು. ಮುಂದೆ ಒಂದು ದಿನ ನಾವು ಪರಸ್ಪರರನ್ನು ಕಂಡಾಗ ಮನುಷ್ಯ ಲೋಕದಲ್ಲಿ ನೀನಾಗಲಿ ನಾನಾಗಲಿ ಒಬ್ಬರು ಹುಟ್ಟಿ ಸಂಸಾರದಲ್ಲಿ ಮುಳುಗಿದ್ದರೆ, ಇನ್ನೊಬ್ಬರು ಬಂದು ಎಚ್ಚರಿಸಬೇಕು ಎಂದು ಪ್ರತಿಜ್ಞೆ ಮಾಡಿದ್ದೆವು. ಆ ಮೇರೆಗೆ ನಾನು ನಿನ್ನನ್ನು ಎಚ್ಚರಿಸು ತ್ತಿದ್ದೇನೆ. ಸಂಸಾರಕ್ಕೆ ಕಟ್ಟುಬಿದ್ದು ಕೆಡಬೇಡ" ಎಂದು ಹೇಳಿ ಮಾಯವಾದಳು. ಸುಮತಿಗೆ ವಿವೇಕೋದಯವಾಗಿ ಆಕೆ ತಂದೆತಾಯಿಗಳ ಅನುಮತಿ ಪಡೆದು ತಪೋದೀಕ್ಷೆಯನ್ನು ಪಡೆದಳು. ಅನಂತವೀರ್ಯ ಚಕ್ರವರ್ತಿಯು ಎಂಬತ್ತು ನಾಲ್ಕು ಲಕ್ಷ ಪೂರ್ವಕಾಲದ ವರೆಗೆ ಬದುಕಿದ್ದು ಒಂದು ದಿನ ನಿದ್ದೆಯಲ್ಲಿ ಮರಣಹೊಂದಿದನು. ಅದನ್ನು ಕಂಡು ವೈರಾಗ್ಯದಿಂದ ಅಪರಾಜಿತನು ಮಗಳಿಗೆ ರಾಜ್ಯವೊಪ್ಪಿಸಿ ದಿಗಂಬರ ವ್ರತವನ್ನು ಹಿಡಿದನು. ತಪೋಬಲದಿಂದ ಆತನು ಅಚ್ಯುತೇಂದ್ರನಾದನು. ಅನಂತವೀರ್ಯನು ನರಕವಾಸವನ್ನು ಹೊಂದಿದನು. ಅಚ್ಯುತೇಂದ್ರನಾದ ಬಲದೇವನು ಒಮ್ಮೆ ಮಂದರಗಿರಿಯ ಅಕೃತ್ರಿಮ ಜಿನಾಲಯ ಪೂಜೆಗೆ ಬಂದಾಗ, ಕೊನೆಯ ಜಿನಾಲಯದಲ್ಲಿ ಖೇಚರನೊಬ್ಬನನ್ನು ಕಂಡನು. ಪೂರ್ವಭವ ಸ್ನೇಹದಿಂದ ಪರಸ್ಪರರಲ್ಲಿ ಆಸಕ್ತಿ ಹುಟ್ಟಿತು. ಖೇಚರನು "ನಿನ್ನನ್ನು ಕಂಡೊಡನೆ ನನಗೆ ಪ್ರೇಮವೇಕೆ ಉಂಟಾಯಿತು? ಜ್ಞಾನಿಯಾದ ನೀನು ತಿಳಿಸಬೇಕು" ಎಂದು ಬೇಡಿಕೊಳ್ಳಲಾಗಿ ಅಚ್ಯುತೇಂದ್ರನು ಪೂರ್ವಜನ್ಮದ ವೃತ್ತಾಂತವನ್ನು ಹೀಗೆಂದು ವಿವರಿಸಿದನು:

ರಥನೂಪುರಚಕ್ರವಾಳಪುರಕ್ಕೆ ಜ್ವಲನಜಟಿಯೆಂಬ ಅರಸನಿದ್ದನು. ಆತನ ಹೆಂಡತಿ ವಾಯುವೇಗೆ. ಅವರಿಗೆ ಅರ್ಕಕೀರ್ತಿಯೆಂಬ ಮಗನೂ ಸ್ವಯಂಪ್ರಭೆಯೆಂಬ ಮಗಳೂ ಹುಟ್ಟಿದರು. ಜ್ಯೋತಿರ್ಮಾಲೆಯೆಂಬವಳು ಅರ್ಕಕೀರ್ತಿಯನ್ನು ಮದುವೆಯಾದಳು. ಮಗಳು ಯೌವನವತಿಯಾಗಲು ಆಕೆಗೆ ವರನಾರೆಂಬುದನ್ನು ವಿಚಾರಿಸಲು ರಾಜನು ಮಂತ್ರಿಗಳೊಡನೆ ಚರ್ಚಿಸಿದನು. ಪೌದನಪುರದ ದೊರೆಯಾದ ಪ್ರಜಾಪತಿರಾಜನ ಮಗ ತ್ರಿಪೃಷ್ಠನೇ ಈಕೆಗೆ

ವರನೆಂದೂ ಹಾಗೆ ಭವಿಷ್ಯವಾಣಿಯುಂಟೆಂದೂ ಅವರು ತಿಳಿಸಿದರು. ಜ್ವಲನಜಟಿರಾಜನು ಅದಕ್ಕೆ ಒಪ್ಪಿ ಇಂದುವೆಂಬ ದೂತನನ್ನು ಪೌದನಪುರಕ್ಕೆ ಸಂದೇಶದೊಡನೆ ಕಳಿಸಿದನು. “ನಮ್ಮ ನಿಮ್ಮ ವಂಶಗಳಿಗೆ ಪ್ರಾಚೀನ ಕಾಲದಿಂದಲೂ ನಂಟು ಇದ್ದು ಕೆಲಕಾಲದಿಂದ ತಪ್ಪಿ ಹೋಗಿದೆ. ಈಗ ನನ್ನ ಮಗಳನ್ನು ನಿಮ್ಮ ಮಗ ತ್ರಿಪೃಷ್ಠನಿಗೆ ಕೊಟ್ಟು ನಂಟನ್ನು ಮುಂದುವರಿಸಬಯಸುತ್ತೇವೆ” ಎಂಬ ಓಲೆಯನ್ನು ಇಂದುವಿನಿಂದ ಸ್ವೀಕರಿಸಿ ಪ್ರಜಾಪತಿ ಮಹಾರಾಜನು ಕೂಡಲೆ ಸಂತೋಷದಿಂದ “ಕನ್ಯೆಯೊಡನೆ ತಡಮಾಡದೆ ಹೊರಟುಬನ್ನಿ” ಎಂದು ಹೇಳಿಕಳಿಸಿದನು. ಅವೇರಿಗೆ ಜ್ವಲನಜಟಿ ಮಹಾರಾಜನು ಬಂದು ವೈಭವದಿಂದ ಮಗಳನ್ನು ಧಾರೆಯೆರೆದನು. ಈ ವಿವಾಹ ಸಂಭ್ರಮದ ಸಮಾಚಾರವನ್ನು ಕರ್ಣೋಪಕರ್ಣವಾಗಿ ತಿಳಿದ ಅರ್ಧಚಕ್ರವರ್ತಿ ಅಶ್ವಗ್ರೀವನು ಕ್ರುದ್ಧನಾಗಿ ತನಗೆ ಕೊಡಬೇಕಾದ ಕನ್ನೆಯನ್ನು ಇವನಿಗೇಕೆ ಕೊಟ್ಟನು? ಇವನು ಕೊಟ್ಟರೆ ಕೊಡಲಿ, ಒಪ್ಪಿಕೊಳ್ಳುವವನು ತನ್ನ ಯೋಗ್ಯತೆಯನ್ನು ತಿಳಿಯಬೇಡವೆ? ಇವರಿಬ್ಬರನ್ನೂ ಒಂದು ಕೈ ನೋಡಿಬಿಡುತ್ತೇನೆಂದು ತನ್ನೆಲ್ಲ ಸೈನ್ಯದೊಡನೆ ಹೊರಟುಬಂದನು. ರಥಾವರ್ತ ಪರ್ವತದ ಬಳಿ ನಿಕರವಾದ ಯುದ್ಧದಲ್ಲಿ ಆತನ ಸೈನ್ಯವೆಲ್ಲ ಸೋತಿತು. ಅಶ್ವಗ್ರೀವನು ತನ್ನ ಅಸ್ತ್ರ, ಶಸ್ತ್ರ ವಿದ್ಯೆಗಳೆಲ್ಲವೂ ನಿರುಪಯೋಗಿಯೆಂದು ಕಂಡಾಗ ಚಕ್ರಾಯುಧವನ್ನು ಪ್ರಯೋಗಿಸಿದನು. ತ್ರಿಪೃಷ್ಠನು ಆ ಚಕ್ರವನ್ನು ಹಿಡಿದು ಅದರಿಂದಲೇ ಅಶ್ವಗ್ರೀವನ ತಲೆಯನ್ನು ಕತ್ತರಿಸಿದನು. ರಣರಂಗದಿಂದ ಮರಳಿಬಂದ ತ್ರಿಪೃಷ್ಠನು ತನ್ನ ಮಾವನಾದ ಜ್ವಲನಜಟಿಗೆ ದಕ್ಷಿಣಶ್ರೇಣಿ, ಉತ್ತರಶ್ರೇಣಿಗಳೆರಡರ ಆಧಿಪತ್ಯವನ್ನು ನೀಡಿದನು. ತಾನು ತ್ರಿಖಂಡಾಧಿಪತಿಯಾದನು. ಮುಂದೆ ಕೆಲಸಮಯಾನಂತರ ಜ್ವಲನಜಟಿರಾಜನು ವೈರಾಗ್ಯದಿಂದ ತಪೋದೀಕ್ಷೆ ವಹಿಸಿದನು. ಅದನ್ನು ಕೇಳಿ ಪ್ರಜಾಪತಿರಾಜನೂ ಜೈನದೀಕ್ಷೆಯನ್ನು ಕೈಕೊಂಡನು. ಅರ್ಕಕೀರ್ತಿಗೆ ಅಮಿತತೇಜನೆಂಬ ಮಗನಾದನು (ಹಾಗೆ ಆ ಹೆಸರಿನ ಹುಟ್ಟಿದವನು ನಾನೇ). ಸುತಾರೆಯೆಂಬವಳು ನನಗೆ ತಂಗಿಯಾಗಿದ್ದಳು. ಅತ್ತ ತ್ರಿಪೃಷ್ಠ–ಸ್ವಯಂಪ್ರಭೆಯರಿಗೆ ಶ್ರೀವಿಜಯ ಮತ್ತು ವಿಜಯ ಎಂಬಿಬ್ಬರು ಪುತ್ರರೂ ಜ್ಯೋತಿಃಪ್ರಭೆಯೆಂಬ ಮಗಳೂ ಹುಟ್ಟಿದರು. ತ್ರಿಪೃಷ್ಠನು ಎಂಬತ್ತೊಂದು ಲಕ್ಷ ವರ್ಷ ಬದುಕಿ ಒಂದು ದಿನ ನಟ್ಟಿರುಳಲ್ಲಿ ಸತ್ತು ಏಳನೆಯ ಅಧೋಲೋಕಕ್ಕೆ ಇಳಿದನು. ತಮ್ಮನ ವಿಯೋಗದಿಂದ ದುಃಖಿತನಾದ ವಿಜಯರಾಜನು ಸಂನ್ಯಾಸವನ್ನು ಕೈಕೊಂಡನು. ಅರ್ಕಕೀರ್ತಿರಾಜನೂ ನನಗೆ ರಾಜ್ಯವೊಪ್ಪಿಸಿ ದಿಗಂಬರವ್ರತಿಯಾದನು. ಆ ಜನ್ಮದಲ್ಲಿ ಶ್ರೀವಿಜಯನೆನಿಸಿದವನೇ ನೀನು. ಚಕ್ರವರ್ತಿಯ ಮಗನಾದ ನೀನು ಜ್ಯೋತಿಃಪ್ರಭೆಯ ಸ್ವಯಂವರವನ್ನು ಏರ್ಪಡಿಸಿ ಅನೇಕ ರಾಜಪುತ್ರರೊಡನೆ ನನ್ನನ್ನೂ ಕರೆಯಿಸಿಕೊಂಡೆ. ಸ್ವಯಂವರದಲ್ಲಿ ಜ್ಯೋತಿಃಪ್ರಭೆ ನನಗೇ ಮಾಲೆಯಿಕ್ಕಿದಳು. ವೈಭವದಿಂದ ವಿವಾಹ ಕಾರ್ಯವಾದ ಬಳಿಕ ನಾನು ಮರಳಿ ನಮ್ಮ ರಾಜಧಾನಿಗೆ ಬಂದು ನನ್ನ ತಂಗಿ ಸುತಾರೆಯ ಸ್ವಯಂವರವನ್ನು ಏರ್ಪಡಿಸಿದೆನು. ಆಕೆ ಶ್ರೀವಿಜಯನೆನಿಸಿದ್ದ ನಿನಗೇ ಮಾಲೆಯಿಕ್ಕಿದಳು. ವೈಭವದಿಂದ ವಿವಾಹ ಮಾಡಿ ಉಡುಗೊರೆಗಳೊಡನೆ ನಿಮ್ಮನ್ನು ನಾನು ಕಳುಹಿಸಿಕೊಟ್ಟೆನು. ಅನಂತರ ಒಂದು ದಿನ ನಾನು ಒಡ್ಡೋಲಗದಲ್ಲಿರುವಾಗ ಅಮೋಘಜಿಹ್ವನೆಂಬ ನಿಮಿತ್ತಜ್ಞನೊಬ್ಬನು ಬಂದು, “ಇಂದಿಗೆ ಏಳನೆಯ ದಿನದಂದು ಪೌದನಪುರಾಧಿಪತಿಯ ತಲೆಗೆ ಸಿಡಿಲು ಬಂದು ಅಪ್ಪಳಿಸುವುದು” ಎಂದು ಭವಿಷ್ಯ ಹೇಳಿದನು. ಈ ಅಪಾಯದಿಂದ ತಪ್ಪಿಸಿಕೊಳ್ಳಲು ಉಪಾಯವೇನೆಂದು ನಾನು ಮಂತ್ರಾಲೋಚನೆ ನಡಸಿದೆನು. ನೆಲಮನೆಯಲ್ಲಿಯೊ, ಪೆಟ್ಟಿಗೆಯಲ್ಲಿಯೊ ಅಡಗಿರಬೇಕೆಂದು ಕೆಲವರು ಸೂಚಿಸಿದರು. ಮಣಿಭೂಷಣನೆಂಬ ಸಚಿವನು ಎಲ್ಲವನ್ನೂ ವಿರೋಧಿಸಿ “ಮುಂಡಕೌಶಿಕನೆಂಬ ಹಾರುವರ ಹುಡುಗನನ್ನು ಕುಂಭನೆಂಬ ರಕ್ಕಸನಿಂದ ಉಳಿಸಿಕೊಳ್ಳಲು ಬೆಟ್ಟದ ಗವಿಯಲ್ಲಿಟ್ಟಾಗ ಅದರೊಳಗಿನ ಹೆಬ್ಬಾವಿಗೆ ಆತನು ತುತ್ತಾದನು.” ಎಂಬ ಕತೆಯನ್ನು ಹೇಳಿ “ಪೌದನಪುರದ ಆಧಿಪತ್ಯವನ್ನು ಒಂದು ಯಕ್ಷ ಪ್ರತಿಮೆಗೆ ಒಪ್ಪಿಸಿ ನೀನು ಇನ್ನೇಳು ದಿನ ಜಿನಾಲಯದಲ್ಲಿ ಅರ್ಚನಾದಿಗಳನ್ನು ಮಾಡುತ್ತ ಇರು” ಎಂದು ತಿಳಿಸಿದನು. ಹಾಗೆ ಮಾಡಲಾಗಿ ಭವಿಷ್ಯವಾಣಿಯ ಮೇರೆಗೆ ಏಳನೆಯ ದಿನ ಸಿಡಿಲೆರಗಿ ಸಿಂಹಾಸನದಲ್ಲಿದ್ದ ಯಕ್ಷ ಪ್ರತಿಮೆ ನಾಶವಾಯಿತು. ಶ್ರೀವಿಜಯನು ಜಿನಾಲಯದಿಂದ ಸುರಕ್ಷಿತನಾಗಿ ಒಂದು ಅಮೋಘಜಿಹ್ವನಿಗೆ ಉಂಬಳಿಸಹಿತವಾಗಿ ಸತ್ಕಾರಮಾಡಿದನು. ಆ ಬಳಿಕ ಒಂದು ದಿನ ಸುತಾರೆಯೊಡನೆ ವನವಿಹಾರಕ್ಕೆ ಹೋದನು. ನಗರದಲ್ಲಿ ಉತ್ಪಾತಗಳನ್ನು ಕಂಡು ಸ್ವಯಂಪ್ರಭೆ ಹಾಗೂ

ಮಂತ್ರಿಗಳು ಗಾಬರಿಗೊಂಡಿರುವಾಗ ಖೇಚರನೊಬ್ಬನು ಆಕಾಶದಿಂದ ಇಳಿದುಬಂದು ನಮಸ್ಕರಿಸಿ, "ನಾನು ಸಂಭಿನ್ನನೆಂಬ ಜ್ಯೋತಿಷಿಯ ಮಗ. ನಾವು ಅಮಿತತೇಜನನ್ನು ಓಲೈಸಿ ಮರಳಿ ಬರುತ್ತಿರುವಾಗ ಆರ್ತಸ್ತ್ರೀಯೊಬ್ಬಳು ವಿಮಾನದಲ್ಲಿಂದ 'ರಕ್ಷಿಸಿ, ರಕ್ಷಿಸಿ' ಎಂದು ಹುಯ್ಯಲಿಡುವುದನ್ನು ಕೇಳಿದೆವು. ಆಕೆ ಸುತಾರೆಯೆಂದು ಅರಿತು, ಅವಳನ್ನು ಅಪಹರಿಸುತ್ತಿದ್ದ ಖೇಚರನೊಡನೆ ಕಾಳಗಕ್ಕೆ ಅಣಿಯಾದೆವು. ಆಗ ಸುತಾರೆಯು 'ಅಶನಿಘೋಷನೆಂಬ ವಿದ್ಯಾಧರ ಜ್ಯೋತಿರ್ವನದಲ್ಲಿ ವಿದ್ಯಾಬಲದಿಂದ ನನ್ನ ಪತಿಯನ್ನು ಮೋಸಗೊಳಿಸಿ ನನ್ನನ್ನು ಅಪಹರಿಸಿದ್ದಾನೆ. ಮೊದಲು ನನ್ನ ಪ್ರಾಣೇಶ್ವರನಲ್ಲಿಗೆ ನೀವು ಧಾವಿಸಿ. ನನ್ನ ವಿಯೋಗದಿಂದ ಆತನು ಪ್ರಾಣ ಬಿಡಬಹುದು' ಎಂದಳು. ಕೂಡಲೆ ಶ್ರೀವಿಜಯನಿದ್ದೆಡೆಗೆ ಹೋದೆವು. ಅಶನಿಘೋಷನ ಬಹುರೂಪಿಣಿ ವಿದ್ಯೆಯು ಅಲ್ಲಿ ಸುತಾರೆಯ ರೂಪತಾಳಿ ತನಗೆ ಕುಕ್ಕುಟಸರ್ಪ ಕಚ್ಚಿತೆಂದು ಹೇಳಿ ವಿಷದಿಂದ ಸತ್ತಂತೆ ಬಿದ್ದುಕೊಂಡಿತ್ತು. ಶ್ರೀವಿಜಯನು ಪ್ರೇಮದಿಂದ ಆ ದೇಹದೊಡನೆ ಚಿತೆಯೇರಿದನು. ಆದರೆ ಬೆಂಕಿ ತಗುಲುವ ಮುನ್ನ ನಾವು ಅಲ್ಲಿಗೆ ತಲುಪಿ ಅವನನ್ನು ಹೊರಗೆಳೆದೆವು. ಬಹುರೂಪಿಣಿ ವಿದ್ಯೆಯನ್ನು ನಮ್ಮ ತಂದೆ ಹೊಡೆದೋಡಿಸಿದನು. ಸುತಾರೆಯ ಅಪಹರಣವನ್ನು ನಮ್ಮಿಂದ ತಿಳಿದ ಆತನು ನಿಮಗೆ ತಿಳಿಸಲೆಂದು ನನ್ನನ್ನು ಇತ್ತ ಕಳಿಸಿ ತಾನು ನನ್ನ ತಂದೆಯೊಡನೆ ಅಮಿತತೇಜನ ಬಳಿಗೆ ಹೋದನು." ಈ ಮಾತನ್ನು ಕೇಳಿದ ಸ್ವಯಂಪ್ರಭೆ ಕೂಡಲೆ ರಥನೂಪುರಚಕ್ರವಾಳಪುರಕ್ಕೆ ಧಾವಿಸಿ, ಅಳಿಯನನ್ನು ಹರಸಿ, ಮಗನನ್ನು ಸಂತೈಸಿ ಹೀಗೆ ನುಡಿದಳು : "ಶ್ರೇಷ್ಠ ವಂಶದಲ್ಲಿ ಹುಟ್ಟಿದ ನೀವು ಶತ್ರುವಿನ ಸ್ಥಾನವನ್ನು ಅರಿತಮೇಲೆಯೂ ತಟಸ್ಥರಾಗಿರುವುದು ಭೂಷಣವಲ್ಲ. ಸತ್ಕುಲಪ್ರಸೂತರು ಅಪಮಾನವನ್ನು ಸಹಿಸುವರೆ?" ಅಮಿತತೇಜನು ಶ್ರೀವಿಜಯನನ್ನು ವಿದ್ಯಾಬಲ ಸೈನಿಕಬಲದೊಂದಿಗೆ ಶತ್ರುವಿನ ಮೇಲೇರಲು ಕಳಿಸಿ ಮಹಾಜಾಲವೆಂಬ ವಿದ್ಯೆಯನ್ನು ಅಗ್ರಿಮಂತಗಿರಿಗೆ ಹೋಗಿ ಸಾಧಿಸಿಕೊಂಡು ಬಂದನು. ಅನಂತ ರೂಪಗಳನ್ನು ಧರಿಸಿ ಕಾದಾಡುತ್ತಿದ್ದ ಅಶನಿಘೋಷನ ಮಾಯಾ ವಿದ್ಯೆಯನ್ನು ತನ್ನ ಮಹಾವಿದ್ಯೆಯಿಂದ ಸೋಲಿಸಿದೊಡನೆ ಅಶನಿಘೋಷನು ಓಡಿಹೋದನು. ಇವರು ಅವನನ್ನು ಬೆನ್ನಟ್ಟಿದರು. ಅವನು ಗಜಧ್ವಜಗಿರಿಯಮೇಲಿರುವ ವಿಜಯಕೇವಲಿಯ ಮೊರೆಹೊಕ್ಕನು. ಬೆನ್ನಟ್ಟಿದವರೂ ಅಲ್ಲಿಗೆ ಬಂದರು. ಅಷ್ಟರಲ್ಲಿ ಸುತಾರೆಯೊಡನೆ ಸ್ವಯಂಪ್ರಭೆಯೂ ಅಲ್ಲಿಗೆ ಬಂದಳು. ಕೇವಲಿಗಳಿಂದ ಧರ್ಮಶ್ರವಣ ಮಾಡಿದ ಬಳಿಕ ಅಮಿತತೇಜನು "ನನ್ನ ತಂಗಿಯನ್ನು ಅಪಹರಿಸುವ ಬುದ್ಧಿ ಅಶನಿಘೋಷನಿಗೆ ಏಕೆ ಹುಟ್ಟಿತು?" ಎಂದು ಕೇವಲಿಗಳನ್ನು ಕೇಳಿದನು. ಆಗ ಕೇವಲಿಗಳು ಪೂರ್ವಭವವನ್ನು ಹೀಗೆ ತಿಳಿಸಿದರು : "ಮಲಯವಿಷಯದ ರತ್ನಪುರಕ್ಕೆ ಶ್ರೀಷೇಣನೆಂಬ ದೊರೆಯಿದ್ದನು. ಆತನಿಗೆ ಸಿಂಹನಂದೆ ಮತ್ತು ಅನಿಂದಿತೆಯೆಂಬಿಬ್ಬರು ಹೆಂಡರು. ಆ ರಾಜನಿಗೆ ಇಂದ್ರ ಹಾಗೂ ಉಪೇಂದ್ರರೆಂಬ ಇಬ್ಬರು ಮಕ್ಕಳಾದರು. ಹಿರಿಯನಾದ ಇಂದ್ರನಿಗೆ ಚಂದ್ರನೆಂಬ ಮಗನಾದನು. ಮಕ್ಕಳು ಮೊಮ್ಮಕ್ಕಳೊಡನೆ ಶ್ರೀಷೇಣನು ಸುಖದಿಂದ ರಾಜ್ಯವಾಳುತ್ತಿರಲಾಗಿ ಒಂದು ದಿನ ಸುಂದರಿಯೊಬ್ಬಳು 'ಕಾಪಾಡಿ, ಕಾಪಾಡಿ' ಎಂದು ಒಡ್ಡೋಲಗಕ್ಕೆ ಧಾವಿಸಿ ಬಂದು ಹೀಗೆ ಮೊರೆಯಿಟ್ಟಳು: 'ನಿಮ್ಮ ಪುರೋಹಿತನ ಮಗಳಾದ ನನಗೆ ಸತ್ಯಭಾಮೆಯೆಂದು ಹೆಸರು. ಕಪಿಳನೆಂಬವನಿಗೆ ನನ್ನನ್ನು ಮದುವೆಮಾಡಿದರು. ಆತನ ಆಚರಣೆಯಿಂದ ನನಗೆ ಜುಗುಪ್ಸೆಯಾಯಿತು. ಅವನ ತಂದೆ ಅಕಸ್ಮಾತ್ತಾಗಿ ನಮ್ಮ ಮನೆಗೆ ಅತಿಥಿಯಾಗಿ ಬರಲು ನಾನು ಅವನ ಮನವೊಲಿಸಿ ಕಪಿಳನ ಪೂರ್ವವೃತ್ತಾಂತವನ್ನು ತಿಳಿಸಬೇಕೆಂದು ಬೇಡಿಕೊಂಡೆನು. ಕಪಿಲನು ತನ್ನ ದಾಸೀಪುತ್ರನೆಂದೂ ಏಕಪಾಠಿಯಾಗಿರುವುದರಿಂದ ತಾನು ನನ್ನ ಮಕ್ಕಳಿಗೆ ಪಾಠ ಹೇಳುವಾಗ ಎಲ್ಲವನ್ನು ಕೇಳಿ ಕಲಿತುಕೊಂಡನೆಂದೂ ಅಲ್ಲಿಂದ ಅವನನ್ನು ಹೊರದೂಡಿದ ಬಳಿಕ ಇಲ್ಲಿಗೆ ಬಂದು ಬ್ರಾಹ್ಮಣನೆಂದು ಹೇಳಿಕೊಂಡು ಬದುಕಿರುವನೆಂದೂ ಆತನು ತಿಳಿಸಿದನು. ಈ ಕಪಟ ಬ್ರಾಹ್ಮಣನಿಂದ ನನ್ನನ್ನು ರಕ್ಷಿಸಿ." ರಾಜನು ಕಪಿಲನನ್ನು ಅಪಮಾನಗೊಳಿಸಿ ಊರಿಂದ ಹೊರತಳ್ಳಿದನು. ಸತ್ಯಭಾಮೆ ಅರಸಿಯರ ಬಳಿಯಲ್ಲಿಯೆ ಉಳಿದುಕೊಂಡಳು. ಮುಂದೆ ಶ್ರೀಷೇಣನು ರಾಜ್ಯವಾಳುತ್ತ ಧರ್ಮನಿರತನಾಗಿದ್ದು ಆದಿತ್ಯಗತಿ ಮತ್ತು ಅಮಿತಗತಿಯೆಂಬ ಮುನಿಗಳಿಗೆ ಪಾತ್ರದಾನ ಮಾಡಿ ಭೋಗಭೂಮಿಯ ಪುಣ್ಯವನ್ನು ಸಂಪಾದಿಸಿದನು. ಹೀಗಿರುತ್ತಿರಲಾಗಿ ಆತನ ಹಿರಿಯ ಮಗನ ಹೆಂಡತಿ ತನ್ನೊಡನೆ ಬಳುವಳಿಯಾಗಿ ವಸಂತಸೇನೆಯೆಂಬ ದಾಸಿಯನ್ನು ಕರೆತಂದಿದ್ದಳು. ಉಪೇಂದ್ರನು ಅವಳಿಗೆ ಮರುಳಾಗಿ

ಅವಳನ್ನು ಕೂಡಿಕೊಂಡನು. ಇಂದ್ರನು ಅವಳನ್ನು ಬಿಟ್ಟುಕೊಡೆಂದು ಹೇಳಿದರೂ ಆತನು ಕೇಳಲಿಲ್ಲ. ಇಬ್ಬರೂ ಈರ್ಷೆಯಿಂದ ಕಾಳಗಕ್ಕೆ ತೊಡಗಿದರು. ಆಗ ಮಣಿಕುಂಡಲನೆಂಬ ಖೇಚರನೊಬ್ಬನು ಆಕಾಶದಿಂದ ಅವರ ನಡುವೆ ಇಳಿದುಬಂದು "ವಸಂತಸೇನೆ ನಿಮಗಿಬ್ಬರಿಗೂ ಒಡಹುಟ್ಟಿದವಳು" ಎಂದು ಅವರನ್ನು ತಡೆದು ಪೂರ್ವಜನ್ಮದ ಕಥೆಯನ್ನು ಹೀಗೆ ವಿವರಿಸಿದನು: "ಆದಿತ್ಯಪುರದ ದೊರೆಯಾದ ಸುಕುಂಡಲನಿಗೆ ಮಣಿಕುಂಡಲನೆಂಬ ಮಗನಾಗಿ ನಾನು ಹುಟ್ಟಿದೆನು. ಒಂದು ದಿನ ಪುಂಡರೀಕಿಣೀಪುರಕ್ಕೆ ಬಂದು ನಾನು ಅದರ ಹೊರವಲಯದಲ್ಲಿದ್ದ ಅಮಿತಕೇವಳಿಗಳನ್ನು ವಂದಿಸಿ ನನ್ನ ಪೂರ್ವಭವಾವಳಿಯನ್ನು ಕೇಳಿದೆನು. ಅವರು ತಿಳಿಸಿದ ಮೇರೆಗೆ ವಿದೇಹ ರಾಜ್ಯದ ವೀತಶೋಕ ನಗರಕ್ಕೆ ಚಕ್ರಧರನೆಂಬುವನು ಅರಸಾಗಿದ್ದನು. ವಿದ್ಯುನ್ಮತಿ ಹಾಗು ಕನಕಶ್ರೀ ಎಂಬಿಬ್ಬರು ಆತನ ಅರಸಿಯರು. ವಿದ್ಯುನ್ಮತಿಗೆ ಪದ್ಮಾವತಿಯೆಂಬ ಮಗಳಾದಳು. ಕನಕಶ್ರೀಗೆ ಪದ್ಮಲತೆ ಮತ್ತು ಕನಕಲತೆಯೆಂಬಿಬ್ಬರು ಮಕ್ಕಳಾದರು. ಇಬ್ಬರು ಅರಸಿಯರೂ ಮೂವರು ಮಕ್ಕಳೂ ಶ್ರಾವಕವ್ರತವನ್ನು ಆಚರಿಸುತ್ತಿದ್ದು ಕನಕಶ್ರೀಯೂ ಕನಕಲತೆ ಪದ್ಮಲತೆಯರೂ ಸಲ್ಲೇಖನದಿಂದ ಮರಣಹೊಂದಿ ಸೌಧರ್ಮಕಲ್ಪದಲ್ಲಿ ಸಾಮಾನಿಕದೇವರಾದರು. ಪದ್ಮಾವತಿ ಮೊದಲನೆಯ ಸ್ವರ್ಗದಲ್ಲಿ ಅಪ್ಸರೆಯಾದಳು. ಆ ಕನಕಶ್ರೀ ಎಂಬುವಳೆ ನಾನು, ಈಗ ಮಣಿಕುಂಡಲನಾಗಿದ್ದೇನೆ. ಕನಕಲತೆ ಮತ್ತು ಪದ್ಮಲತೆಯೆಂಬವರೆ ಇಲ್ಲಿಗೆ ಈಗ ಇಂದ್ರ ಮತ್ತು ಉಪೇಂದ್ರರೆಂಬ ನೀವು ಮತ್ತು ಪದ್ಮಾವತಿಯೆ ವಸಂತಸೇನೆಯಾಗಿ ಹುಟ್ಟಿದ್ದಾಳೆ ಎಂದೂ ನೀವಿಬ್ಬರೂ ಅವಳಿಗಾಗಿ ಈಗ ಕಾದಾಡುತ್ತಿರುವಿರೆಂದೂ ಆ ಮುನಿಗಳು ತಿಳಿಸಿದರು. ಕೂಡಲೆ ಪೂರ್ವಜನ್ಮದ ಋಣಾನುಬಂಧಕ್ಕೆ ಒಳಗಾಗಿ ನಾನು ನಿಮ್ಮ ಅವಿವೇಕವನ್ನು ತಡೆಯಲು ಬಂದೆನು. ನೀವು ಕಾದಾಟವನ್ನು ಬಿಟ್ಟುಬಿಡಿ."

ಈ ವೃತ್ತಾಂತವನ್ನು ತಿಳಿದು ಸೋದರರಿಬ್ಬರೂ ಪಶ್ಚಾತ್ತಾಪದಿಂದ ಮರುಗಿದರು. ಮತ್ತೆ ತಕ್ಷಣ ಸುಧರ್ಮ ಮುನೀಶ್ವರರ ಬಳಿ ಸಂನ್ಯಾಸದೀಕ್ಷೆ ವಹಿಸಿದರು. ಒಮ್ಮಿಂದೊಮ್ಮೆಲೆ ತನ್ನ ಮಕ್ಕಳು ಅಗಲಿಹೋದುದರಿಂದ ಶ್ರೀಷೇಣನು ತುಂಬ ದುಃಖಿತನಾಗಿ ವಿಷತುಂಬಿದ ಕನ್ನೈದಿಲೆಯನ್ನು ಆಘ್ರಾಣಿಸಿ ಮರಣಹೊಂದಿದನು. ಆತನ ರಾಣಿಯರೂ ಅದೇ ಹೂವನ್ನು ಆಘ್ರಾಣಿಸಿ ಪ್ರಾಣಬಿಟ್ಟರು. ಸತ್ಯಭಾಮೆಯು ಕೂಡ ಹಾಗೆಯೆ ಮಾಡಿದಳು. ಪಾತ್ರದಾನದ ಫಲವಾಗಿ ಶ್ರೀಷೇಣನು ಉತ್ತರಕುರುವೆಂಬ ಭೋಗಭೂಮಿಯಲ್ಲಿ ಹುಟ್ಟಿದನು. ಅನುಮೋದನ ಫಲದಿಂದ ಆತನ ರಾಣಿಯರೂ ಸತ್ಯಭಾಮೆಯೂ ಕೂಡ ಅಲ್ಲಿಯೆ ಹುಟ್ಟಿದರು. ಶ್ರೀಷೇಣ-ಸಿಂಹನಂದೆಯರು ದಂಪತಿಗಳಾದರು. ಅನಿಂದಿತೆ ಅಲ್ಲಿ ಆರ್ಯನಾಗಿ ಸತ್ಯಭಾಮೆ ಆತನ ಹೆಂಡತಿಯಾದಳು. ಅಲ್ಲಿಯ ಆಯುಸ್ಸು ಮುಗಿದಾಗ ಶ್ರೀಷೇಣನು ಮೊದಲನೆಯ ಕಲ್ಪದಲ್ಲಿ ಶ್ರೀದೇವನಾದನು. ಸಿಂಹನಂದೆಯು ಶ್ರೀಪ್ರಭೆಯೆಂಬ ಆತನ ಹೆಂಡತಿಯಾದಳು. ಅನಿಂದಿತನೆಂಬ ಆರ್ಯನು ಅಮಿತಪ್ರಭನಾಗಿಯೂ ಸತ್ಯಭಾಮೆ ಆತನ ಹೆಂಡತಿ ಸುಪ್ರಭೆಯಾಗಿಯೂ ಅದೇ ಕಲ್ಪದಲ್ಲಿ ಜನಿಸಿದರು. ಅಲ್ಲಿ ಜಿನಪೂಜಾದಿ ಧರ್ಮಕಾರ್ಯನಿರತರಾಗಿದ್ದು ಆಯುಷ್ಯಾಂತದಲ್ಲಿ ಶ್ರೀದೇವನು ಅಮಿತತೇಜನಾದನು (ಎಂದರೆ ನೀನು). ಶ್ರೀಪ್ರಭೆ ಜ್ಯೋತಿಃಪ್ರಭೆಯಾಗಿ ನಿನ್ನ ಹೆಂಡತಿಯಾದಳು. ಅಮಿತಪ್ರಭನು ಶ್ರೀವಿಜಯನಾದನು. ಸುಪ್ರಭೆಯೆ ಈ ಸುತಾರೆಯಾದಳು. ನೀನು ಶ್ರೀಷೇಣನಾಗಿದ್ದ ಕಾಲದಲ್ಲಿ ಸತ್ಯಭಾಮೆಯನ್ನು ಮದುವೆಯಾಗಿದ್ದ ಕಪಿಲನೆಂಬವನನ್ನು ಧಿಕ್ಕರಿಸಿ ಹೊರದೂಡಿದ್ದೆಯಷ್ಟೆ. ಆ ಕಪಿಲನು ಸತ್ತು ಸಂಸಾರಚಕ್ರದಲ್ಲಿ ಸುತ್ತುತ್ತಿದ್ದು ಅಶನಿಘೋಷನಾಗಿ ಹುಟ್ಟಿದನು. ಸುತಾರೆಯನ್ನು ಕಂಡಾಗ ಪೂರ್ವಜನ್ಮದ ವಾಸನೆ ಜಾಗ್ರತವಾಗಿ ಅವಳನ್ನು ಅಪಹರಿಸಿದನು. ನಿನ್ನೊಡನೆ ಕಾದಾಡಲಾರದೆ ಓಡಿಬಂದನು. ಇದು ಆತನ ಕರ್ಮಫಲ.

ಹೀಗೆ ತನ್ನ ಪೂರ್ವಭವವನ್ನು ತಿಳಿದ ಅಶನಿಘೋಷನು ಕೂಡಲೆ ತಪೋದೀಕ್ಷೆಯನ್ನು ಕೈಕೊಂಡನು. ಸ್ವಯಂಪ್ರಭೆಯೂ ದೀಕ್ಷೆವಹಿಸಿದಳು. ಅಮಿತತೇಜ-ಶ್ರೀವಿಜಯರು ಶ್ರಾವಕವ್ರತಗಳನ್ನು ಕೈಕೊಂಡು ಮರಳಿ ತಂತಮ್ಮ ರಾಜಧಾನಿಗಳಿಗೆ ಹೋಗಿ ಸುಖವಾಗಿದ್ದರು. ಹೀಗಿರಲಾಗಿ ಒಂದು ದಿನ ಇಬ್ಬರು ಚಾರಣಮುನಿಗಳನ್ನು ಕಂಡು

ಶ್ರೀವಿಜಯನು "ನಮ್ಮ ತಂದೆಗೆ ಚಕ್ರವರ್ತಿತ್ವ ಹೇಗೆ ಲಭಿಸಿತು?" ಎಂದು ಕೇಳಿದನು. ಅವರು ಹೀಗೆ ತಿಳಿಸಿದರು:

"ಮಗಧರಾಜ್ಯದ ರಾಜಗೃಹಕ್ಕೆ ವಿಶ್ವಭೂತಿಯೆಂಬವನು ಅರಸನಾಗಿದ್ದನು. ಆತನಿಗೆ ವಿಶ್ವನಂದಿಯೆಂಬ ಮಗನಾದನು. ವಿಶ್ವಭೂತಿಯು ತಮ್ಮನಾದ ವಿಶಾಖಭೂತಿಗೆ ವಿಶಾಖನಂದಿಯೆಂಬ ಮಗ ಹುಟ್ಟಿದನು. ವೈರಾಗ್ಯದಿಂದ ತಪಕ್ಕೆ ಹೊರಟ ವಿಶ್ವಭೂತಿ ತಮ್ಮನಿಗೇ ಪಟ್ಟವನ್ನು ಬಿಟ್ಟುಕೊಟ್ಟನು. ಯುವರಾಜನಾದ ವಿಶ್ವನಂದಿ ಚೆಲುವಾದೊಂದು ಉದ್ಯಾನವನ್ನು ನಿರ್ಮಿಸಿ ಅದರಲ್ಲಿ ಸಂತೋಷಪಡುತ್ತಿದ್ದನು. ಹೀಗಿರುತ್ತ ಒಂದು ದಿನ ವಿಶಾಖಭೂತಿ ಯುವರಾಜನನ್ನು ಕರೆಸಿಕೊಂಡು 'ಶತ್ರುಗಳು ಬಲವಾಗುತ್ತ ಇರುವುದರಿಂದ ಅವರನ್ನು ನಿಗ್ರಹಿಸಲು ಹೋಗುವೆನು. ನೀನು ರಾಜ್ಯವನ್ನು ವಹಿಸಿಕೊ' ಎಂದನು. ಆಗ ವಿಶ್ವನಂದಿ ತಾನೆ ಶತ್ರುಮರ್ದನಕ್ಕೆ ಹೊರಡುವುದಾಗಿ ತಿಳಿಸಿ ಸೈನ್ಯದೊಡನೆ ಹೊರಟುಹೋದನು. ಆತನು ಇಲ್ಲದ ಸಮಯ ಸಾಧಿಸಿ ವಿಶಾಖನಂದಿ ವನಪಾಲಕರನ್ನು ಹೊಡೆದಟ್ಟಿ ವಿಶ್ವನಂದಿಯ ಉದ್ಯಾನವನ್ನು ವಶಪಡಿಸಿಕೊಂಡರು. ವಿಶ್ವನಂದಿ ಮರಳಿ ಬಂದು ವಿಶಾಖನಂದಿಯನ್ನು ತೊಲಗಿಸಿ ತನ್ನ ಉದ್ಯಾನವನ್ನು ಮರಳಿ ತೆಗೆದುಕೊಂಡನು. ಅರಸನು ವಿಶ್ವನಂದಿಯನ್ನು ಕರೆಸಿಕೊಂಡು 'ನನ್ನ ಮಗನೊಬ್ಬ ಮೂರ್ಖ. ನೀನಿಲ್ಲದಾಗ ನಮಗೆ ತಿಳಿಸದೆ ಆಕಾರ್ಯ ಮಾಡಿದ್ದಾನೆ. ಆತನನ್ನು ಕ್ಷಮಿಸು' ಎಂದು ತನ್ನ ಮಗನನ್ನು ಆತನ ಕಾಲಿಗೆ ಎರಗಿಸಿದನು. ಆಮೇಲೆ ರಾಜ್ಯವಾಳುತ್ತ ಹಲಗಾಲ ಕಳೆದ ಮೇಲೆ ವಿಶ್ವನಂದಿಗೆ ಆತನು 'ನೀನು ರಾಜ್ಯವನ್ನು ವಹಿಸಿಕೊ, ನಾನು ಜಿನದೀಕ್ಷೆ ವಹಿಸುವೆನು' ಎಂದನು. ವಿಶ್ವನಂದಿಯು ಅದಕ್ಕೊಪ್ಪದೆ ನಿಮ್ಮೊಡನೆ ನಾನೂ ಜಿನದೀಕ್ಷೆ ವಹಿಸುವೆನೆಂದು ತಿಳಿಸಿದನು. ಇಬ್ಬರೂ ದೀಕ್ಷಾಗ್ರಹಣ ಮಾಡಿ ತಪೋನಿರತರಾದರು. ವಿಶಾಖನಂದಿ ರಾಜನಾದನು. ಅಸಮರ್ಥನಾದ ಈತನನ್ನು ಶತ್ರುರಾಜರು ಸೋಲಿಸಿ ಓಲೆಕಾರನ ಕೆಲಸಕ್ಕೆ ನಿಯಮಿಸಿದರು. ವಿಶಾಖಭೂತಿ ತಪಃಫಲದಿಂದ ಶತಾರಕಲ್ಪದಲ್ಲಿ ಸಾಮಾನಿಕದೇವನಾದನು. ವಿಶ್ವನಂದಿ ವಿಹಾರಮಾಡುತ್ತ ಉತ್ತರ ಮಧುರೆಗೆ ಬಂದನು. ಮಾಸೋಪವಾಸದ ನಂತರ ಚರಿಗೆಗೆ ಹೊರಟಾಗ ಒಂದು ಹಸು ಬಂದು ಇರಿದು ಅವನನ್ನು ಬೀದಿಯಲ್ಲಿ ಕೆಡಹಿತು. ಅಲೆಯುತ್ತಿದ್ದ ವಿಶಾಖನಂದಿ ಅಲ್ಲಿಗೆ ಬಂದು 'ಕೋಪದಿಂದ ನನ್ನನ್ನು ಕೊಲ್ಲುವುದಕ್ಕೆ ಬಂದು ಆ ದಿನ ಕಲ್ಲಿನ ಕಂಬವನ್ನು ಕೈಗೆತ್ತಿಕೊಂಡು ಮರವನ್ನು ಕಿತ್ತು ಹೊಡೆದೆಯಲ್ಲವೆ? ಅಂದಿನ ನಿನ್ನ ಶಕ್ತಿ, ಅರ್ಭಟ ಈಗ ಏನಾಯಿತು?' ಎಂದು ಹಂಗಿಸಿದನು. ವಿಶ್ವನಂದಿಮುನಿ 'ಮುಂದಿನ ಒಂದು ಜನ್ಮದಲ್ಲಿ ನಿನ್ನನ್ನು ಕೊಲ್ಲದೆ ಬಿಡೆನು' ಎಂದು ರೌದ್ರಧ್ಯಾನದಲ್ಲಿ ಮರಣಹೊಂದಿ, ಶತಾರಕಲ್ಪದಲ್ಲಿ ಸಾಮಾನಿಕದೇವನಾಗಿ ಹುಟ್ಟಿದನು. ಅಲ್ಲಿ ತನ್ನ ಚಿಕ್ಕಪ್ಪನೊಡನೆ ದೀರ್ಘವಾದ ಆಯುಷ್ಯವನ್ನು ಕಳೆದನು. ಅಲ್ಲಿಂದ ಬಂದು ಅವರು ಪ್ರಜಾಪತಿರಾಜನಿಗೆ ವಿಜಯ ಮತ್ತು ತ್ರಿಪೃಷ್ಠರೆಂಬ ಮಕ್ಕಳಾದರು. ವಿಶಾಖನಂದಿ ಅನೇಕ ಜನ್ಮಗಳಲ್ಲಿ ಹಾಯ್ದು ಅಶ್ವಗ್ರೀವನೆಂಬ ವಿದ್ಯಾಧರನಾದನು. ಪೂರ್ವವೈರದಿಂದ ತ್ರಿಪೃಷ್ಠನ ಕೈಯಲ್ಲಿ ಅವನಿಗೆ ಮರಣವೊದಗಿತು."

ಹೀಗೆ ತಂದೆಯ ವೃತ್ತಾಂತವನ್ನು ಕೇಳಿತಿಳಿದ ಬಳಿಕ ಆತನು ಉಪವಾಸ ವ್ರತದ ಆಯಾಸವನ್ನು ಪರಿಹರಿಸಿಕೊಂಡನು. ಒಂದು ದಿನ ಅಮಿತತೇಜನೊಡನೆ ವನಕ್ರೀಡೆಯಾಡುತ್ತಿರುವಾಗ ಇಬ್ಬರು ಮುನಿಗಳನ್ನು ಕಂಡು ವಂದಿಸಿ "ನಮಗೆ ವೈರಾಗ್ಯಬಾರದಿದೆ ಏಕೆ? ನಮಗಿನ್ನೂ ಎಷ್ಟು ಆಯುಷ್ಯವುಳಿದಿದೆ?" ಎಂದು ಕೇಳಲಾಗಿ ಅವರು "ಇನ್ನು ಇಪ್ಪತ್ತಾರು ದಿನ ಮಾತ್ರ ಬದುಕುವಿರಿ. ಧರ್ಮದಲ್ಲಿ ತೊಡಗಿ ಕಲ್ಯಾಣಮಾಡಿಕೊಳ್ಳಿ" ಎಂದು ಎಚ್ಚರಿಸಿದರು. ಇಬ್ಬರೂ ತಂತಮ್ಮ ಮಕ್ಕಳಿಗೆ ರಾಜ್ಯವೊಪ್ಪಿಸಿ, ಉಪವಾಸವ್ರತದಿಂದ ಸೊರಗಿ ಕಾಡಿನ ಮಧ್ಯದ ಬೆಟ್ಟವೊಂದರ ಶಿಖರದಲ್ಲಿ ನೆಲಸಿದರು. ಸಿಂಹವೊಂದು ಅಮಿತತೇಜನನ್ನು ಕೊಂದಿತು. ಶ್ರೀವಿಜಯನು ತನ್ನ ತಂದೆಯಂತೆ ವಾಸುದೇವನಾಗಬೇಕೆಂದು ನಿದಾನಮಾಡಿ ಪ್ರಾಯೋಪವೇಶದಿಂದ ದೇಹವನ್ನು ತೊರೆದನು. ಅಮಿತತೇಜನು ಮಣಿಚೂಳನೆಂಬ ದೇವೇಂದ್ರನಾದನು. ಶ್ರೀವಿಜಯನು ಸಾಮಾನಿಕದೇವನಾದನು. ಅಲ್ಲಿಯ ಆಯುಷ್ಯ ತೀರಿದಾಗ ಅವರು ಭೂಮಿಗೆ ಬಂದು, ಸ್ತಿಮಿತಸಾಗರರಾಜನಿಗೆ ಅಪರಾಜಿತ–ಅನಂತವೀರ್ಯರೆಂಬ ಮಕ್ಕಳಾದರು. ಅಪರಾಜಿತ

ನಾದವನು ನಾನು. ಅನಂತವೀರ್ಯ ನೀನು. ನೀನು ಲೋಭಿಯಾಗಿ ಮತಿಗೆಟ್ಟು ತಂದೆಯಾಗುವ ಬಯಕೆಯಿಂದ ವಾಸುದೇವನಾದೆ. ಸ್ತಿಮಿತಸಾಗರನು ಸತ್ತು ಧರಣೇಂದ್ರನಾದನು. ಬಳಿಕ ಗಾಯಿಕೆಯರ ವೇಷದಲ್ಲಿ ನಾವಿಬ್ಬರೂ ದಮಿತಾರಿಯ ರಾಜ್ಯಕ್ಕೆ ಹೋಗಿ ಆತನ ಮಗಳಾದ ಕನಕಶ್ರೀಯನ್ನು ಅಪಹರಿಸಿದೆವು. ನಮ್ಮನ್ನು ಎದುರಿಸಿದ ದಮಿತಾರಿಯ ತಲೆಯನ್ನು ಆತನ ಚಕ್ರದಿಂದಲೇ ನೀನು ಕತ್ತರಿಸಿದೆ. ಅರ್ಧಚಕ್ರವರ್ತಿಯಾದ ನೀನು ಆಯುಷ್ಯಾಂತದಲ್ಲಿ ನರಕಕ್ಕೆ ಹೋದೆ. ನಿನ್ನ ಅಗಲಿಕೆಯಿಂದ ಜಿನದೀಕ್ಷೆ ವಹಿಸಿ ನಾನು ಪ್ರಾಯೋಪಗಮನದಿಂದ ದೇಹ ತೊರೆದು ಅಚ್ಯುತೇಂದ್ರನಾದೆನು. ನೀನು ನರಕದಲ್ಲಿ ದುಃಖಪಡುವುದನ್ನು ಅರಿತು ಸ್ತಿಮಿತಸಾಗರ ಧರಣೇಂದ್ರನು ನಿನ್ನಲ್ಲಿಗೆ ಬಂದು ಉಪದೇಶಮಾಡಿ ಸಮ್ಯಗ್ದರ್ಶನವೊದಗಿಸಿದನು. ನರಕವಾಸವನ್ನು ಮುಗಿಸಿಕೊಂಡು ಬಂದು ನೀನು ಗಗನವಲ್ಲಭಪುರದ ಸಿಂಹನಾದರಾಜನಿಗೆ ಮೇಘನಾದನೆಂಬ ಮಗನಾದೆ. ತಂದೆಯ ತರುವಾಯ ಚಕ್ರವರ್ತಿಯಾಗಿ ರಾಜ್ಯವಾಳುತ್ತಿರುವ ನೀನು ಮಂದನಾಭಕ್ತಿಗೆಂದು ಬಂದಾಗ ನನ್ನನ್ನು ಕಂಡೆ. ನಮ್ಮಿಬ್ಬರಿಗೂ ಪೂರ್ವ ಋಣಾನುಬಂಧವಿದೆ. ಇಬ್ಬರೂ ಒಡಹುಟ್ಟುಗಳಾಗಿಯೆ ಬಂದವರು. ನಡುವೆ ಬೇರೆಯಾಗಿದ್ದೆವು. ಕಡಿದುಹೋದ ಆ ಬಾಂಧವ್ಯವನ್ನು ನೀನು ಮರಳಿ ಸಂಪಾದಿಸಬೇಕು. ದೀಕ್ಷೆವಹಿಸಿ ತಪಸ್ಸಿನಿಂದ ಪುಣ್ಯಗಳಿಸಿಕೊ, ಮತ್ತೆ ಕಲೆಯೋಣ. ನಿನಗೆ ಶ್ರೇಯಸ್ಸಾಗಲಿ.

ಹೀಗೆ ತಿಳಿಸಿ ಅಚ್ಯುತೇಂದ್ರನು ತನ್ನ ನಿವಾಸಕ್ಕೆ ಹೋದನು. ಮೇಘನಾದನು ಮಗನಿಗೆ ಪಟ್ಟಗಟ್ಟಿ ಜಿನದೀಕ್ಷೆ ವಹಿಸಿದನು. ತಪಸ್ಸುಮಾಡಿ ಸಲ್ಲೇಖನ ವಿಧಿಯಿಂದ ಪ್ರಾಣತ್ಯಾಗಮಾಡಿ ಅಚ್ಯುತೇಂದ್ರನ ಕಲ್ಪದಲ್ಲಿಯೆ ಪ್ರತೀಂದ್ರನಾದನು. ಮರಳಿ ಜೊತೆಯಾದ ಸೋದರರಿಬ್ಬರೂ ಅಲ್ಲಿ ಜೊತೆಯಾಗಿ ಸುಖಿಸಿದರು. ಅಲ್ಲಿಯ ಆಯುಷ್ಯ ತೀರಿದಾಗ ಅಚ್ಯುತೇಂದ್ರನು ರತ್ನಸಂಚಯಪುರದ ದೊರೆ ಕ್ಷೇಮಂಕರನೆಂಬ ತೀರ್ಥಕರ ರಾಜನಿಗೆ ವಜ್ರಾಯುಧನೆಂಬ ಮಗನಾಗಿ ಲಕ್ಷ್ಮೀಮತಿಯೆಂಬವಳನ್ನು ಮದುವೆಯಾದನು. ಅಚ್ಯುತಕಲ್ಪದಲ್ಲಿ ಪ್ರತೀಂದ್ರನಾಗಿದ್ದ ದೇವನು ಈ ದಂಪತಿಗಳಿಗೆ ಮಗನಾಗಿ ಹುಟ್ಟಿ ಸಹಸ್ರಾಯುಧನೆಂಬ ಹೆಸರನ್ನು ಪಡೆದನು. ವಸಂತಕಾಲದಲ್ಲೊಮ್ಮೆ ವಜ್ರಾಯುಧನು ತನ್ನ ಅಂತಃಪುರದೊಂದಿಗೂ ಮಿತ್ರಪರಿವಾರದೊಂದಿಗೂ ವನವಿಹಾರ ಮಾಡಿ ಜಲಕ್ರೀಡೆಗೆ ತೊಡಗಿದನು. ನೀರಾಟದ ಸಂಭ್ರಮದಲ್ಲಿ ಅವನು ತೊಡಗಿರುವಾಗ ಆಕಾಶಮಾರ್ಗವಾಗಿ ಹೋಗುತ್ತಿದ್ದ ವಿದ್ಯುದ್ದಂಷ್ಟ್ರನೆಂಬ ಅಸುರನು ಅವನನ್ನು ಕಂಡು ಪೂರ್ವಜನ್ಮ ವೈರದಿಂದ ಕ್ರುದ್ಧನಾಗಿ ಒಮ್ಮೆಲೆ ಎರಗಿ ನಾಗಪಾಶದಿಂದ ವಜ್ರಾಯುಧನ ತೋಳುಗಳನ್ನು ಕಟ್ಟಿದನು. ಮತ್ತು ಒಂದು ದೊಡ್ಡ ಬೆಟ್ಟವನ್ನು ಹೇರಿ ಕೊಳವನ್ನು ಪೆಟ್ಟಿಗೆಯಂತೆ ಮುಚ್ಚಿಬಿಟ್ಟನು. ವಜ್ರಾಯುಧನು ಪಾಶವನ್ನು ಕಿತ್ತೆಸೆದು ಎಡಗೈಯಿಂದ ಬೆಟ್ಟವನ್ನು ಚಿಮ್ಮಿ ಒಗೆದನು. ಅಸುರನು ಹೆದರಿ ಓಡಿಹೋದನು. ಆ ಬಳಿಕ ಮರಳಿ ಬಂದು ವಜ್ರಾಯುಧನು ಸಂತೋಷದಿಂದ ಇರುತ್ತಿದ್ದನು. ಸಹಸ್ರಾಯುಧನಿಗೆ ಕನಕಶಾಂತಿಯೆಂಬ ಮಗ ಹುಟ್ಟಿದನು. ಕ್ಷೇಮಂಕರರಾಜನು ವೈರಾಗ್ಯತಾಳಿ ತಪಸ್ಸಿಗೆ ಹೊರಟನು. ಇಂದ್ರಾದಿ ದೇವತೆಗಳು ಬಂದು ದೇವನಿರ್ಮಿತವಾದ ಸಿವಿಗೆಯಲ್ಲಿ ವೈಭವದಿಂದ ಆತನನ್ನು ದೇವಾರಣ್ಯವನಕ್ಕೆ ಕರೆದೊಯ್ದರು. ಕ್ಷೇಮಂಕರನಿಗೆ ತೃತೀಯ ಕಲ್ಯಾಣವನ್ನು ನೆರವೇರಿಸಿದರು. ವಜ್ರಾಯುಧನು ಧರ್ಮದಿಂದ ರಾಜ್ಯವಾಳುತ್ತಿರಲಾಗಿ ವಟುವೇಷಧಾರಿಯೊಬ್ಬನು ಅವನ ಬಳಿಗೆ ಬಂದು ಜಿನಧರ್ಮವನ್ನು ವಿರೋಧಿಸಿ ವಾದಮಾಡಿದನು. ವಜ್ರಾಯುಧನು ಅವನ ವಾದವನ್ನು ಸಮರ್ಥವಾಗಿ ಖಂಡಿಸಿ ಅವನನ್ನು ನಿರುತ್ತರಗೊಳಿಸಿದನು. ಆಗ ಆ ವೇಷಧಾರಿ ತನ್ನ ನಿಜವಾದ ದಿವ್ಯರೂಪವನ್ನು ತೋರಿ ನಮಸ್ಕರಿಸಿ ಹೋದನು. ಸಭಾಸದರು ವಿಸ್ಮಯದಿಂದ ಆವನಾರೆಂದು ಕೇಳಲಾಗಿ, "ನಾನು ಅಪರಾಜಿತನಾಗಿದ್ದಾಗ ನನ್ನ ಕೈಯಿಂದ ಮಡಿದ ಮಹಾಬಲನೆಂಬ ವಿದ್ಯಾಧರನೆ ಇವನು. ಈಗ ಈಶಾನಕಲ್ಪದಲ್ಲಿ ದೇವನಾಗಿದ್ದು, ಅಲ್ಲಿ ನನ್ನ ಸಮ್ಯಗ್ದರ್ಶನದ ಹೊಗಳಿಕೆಯನ್ನು ಕೇಳಿ ನನ್ನನ್ನು ಸೋಲಿಸಲು ಬಂದಿದ್ದನು" ಎಂದು ವಿವರಿಸಿದನು. ಕೆಲಕಾಲಾನಂತರ ಆಯುಧಾಗಾರದಲ್ಲಿ ಚಕ್ರಾಯುಧ ಉತ್ಪತ್ತಿಯಾಯಿತು. ಅದೇ ಕಾಲಕ್ಕೆ ಕ್ಷೇಮಂಕರಮುನಿಗೆ ಕೇವಲಜ್ಞಾನ ಪ್ರಾಪ್ತವಾದ ಸಮಾಚಾರವೂ ಬಂದಿತು. ವಜ್ರಾಯುಧನು ಸಮವಸರಣಕ್ಕೆ ಹೋಗಿ ಕೇವಲಿಯನ್ನು

ಪೂಜಿಸಿ ಮರಳಿದನು. ಬಳಿಕ ಚಕ್ರರತ್ನವನ್ನು ಪೂಜಿಸಿ, ಪೂರ್ವಸಂಪ್ರದಾಯಾನುಸಾರವಾಗಿ ದಿಗ್ವಿಜಯ ಮಾಡಿ ಷಟ್ಖಂಡಗಳಿಗೂ ಅಧಿಪತಿಯಾದನು. ಒಂದು ದಿನ ಆತನು ಓಲಗದಲ್ಲಿರುವಾಗ ಖೇಚರನೊಬ್ಬನು "ದೇವಾ ರಕ್ಷಿಸು, ರಕ್ಷಿಸು" ಎಂದು ಆಕಾಶದಿಂದ ಧಾವಿಸಿಬಂದನು. ಅವನನ್ನು ಬೆನ್ನಟ್ಟಿ ಒಬ್ಬ ಖೇಚರಿಯೂ ಆಕೆಯನ್ನು ಹಿಂಬಾಲಿಸಿ ಒಬ್ಬ ವೃದ್ಧ ಖೇಚರನೂ ಬಂದರು. ಈ ಖೇಚರಿ ವಿದ್ಯಾಸಾಧನೆ ಮಾಡುತ್ತಿರುವಾಗ ಮೊದಲನೆಯ ಖೇಚರನು ವಿಘ್ನ ವೊದಗಿಸುತ್ತಿದ್ದನೆಂದೂ, ಅಷ್ಟರಲ್ಲಿ ವಿದ್ಯೆಯನ್ನು ಸಾಧಿಸಿದ ಅವಳು ಅವನನ್ನು ಬೆನ್ನಟ್ಟಿಬಂದಳೆಂದೂ, ಅದನ್ನು ಅರಿತು ಅವಳ ತಂದೆಯಾದ ತಾನು ಬಂದನೆಂದೂ ವೃದ್ಧನು ತಿಳಿಸಿದನು. ವಜ್ರಾಯುಧನು ಈ ಘಟನೆಗೆ ಕಾರಣವಾದ ಅದರ ಪೂರ್ವಭವ ಸಂಬಂಧವನ್ನು ಹೀಗೆ ವಿವರಿಸಿದನು :

"ವಿಂಧ್ಯಪುರದರಸನಾದ ವಿಂಧ್ಯಸೇನನಿಗೆ ನಳಿನಕೇತುವೆಂಬ ಮಗನಿದ್ದನು. ಅದೇ ಊರಲ್ಲಿ ದತ್ತನೆಂಬ ವರ್ತಕ ಪುತ್ರನು ತನ್ನ ಹೆಂಡತಿ ಪ್ರಿಯಕಾರಿಣಿಯೊಡನೆ ವನಕ್ರೀಡೆಗೆಂದು ಉದ್ಯಾನಕ್ಕೆ ಹೋದಾಗ ಅಲ್ಲಿ ನಳಿನಕೇತು ಅವಳನ್ನು ಕಂಡು ಮನಸೋತು ಬಲಾತ್ಕಾರವಾಗಿ ಎಳೆದೊಯ್ದನು. ದತ್ತನು ವಿಷಾದದಿಂದ ದಿಗಂಬರ ವ್ರತವನ್ನು ಕೈಕೊಂಡು, ತಪಮಾಡಿ ಸತ್ತು, ಕಾಂಚನಪುರವೆಂಬ ಪಟ್ಟಣದ ದೊರೆಗೆ ಮಗನಾಗಿ ಹುಟ್ಟಿದನು. ಇತ್ತ ನಳಿನಕೇತುವೂ ವೈರಾಗ್ಯದಿಂದ ದೀಕ್ಷೆವಹಿಸಿ ತಪಸ್ಸಿನಿಂದ ನಿರ್ಮೋಹನಾದನು. ಪ್ರಿಯಕಾರಿಣಿಯೂ ಚಾಂದ್ರಾಯಣ ವ್ರತಾಚರಣೆ ಮಾಡಿ ಮುಡುಪಿ ಬಂದು ಪ್ರಭಂಜನನೆಂಬ ಈ ಖೇಚರನಿಗೆ ಈಗ ಮಗಳಾಗಿರುವಳು. ಈಕೆ ಮುಂದೆ ಈಶಾನಕಲ್ಪದಲ್ಲಿ ದೇವನಾಗಿ ಮರಳಿ ಇಲ್ಲಿ ಹುಟ್ಟಿ ಮುಕ್ತಿಹೊಂದುವಳು."

ಈ ವೃತ್ತಾಂತವನ್ನು ಕೇಳಿ ತಿಳಿದ ಆ ಮೂವರು ಖೇಚರರೂ ನಿರ್ವೇಗಪರರಾಗಿ ಜಿನದೀಕ್ಷೆಯನ್ನು ಹೊಂದಿದರು. ಹೀಗೆ ತನ್ನ ತ್ರಿಕಾಲಜ್ಞಾನವನ್ನು ಪ್ರಕಟಿಸಿ, ವಜ್ರಾಯುಧನು ಜನರನ್ನು ಸಂತೋಷಪಡಿಸಿದನು. ಮಗನಾದ ಕನಕಶಾಂತಿಗೆ ಕನಕಮಾಲೆ ಮತ್ತು ಸಂತಸೇನೆಯೆಂಬ ಇಬ್ಬರನ್ನು ತಂದು ಮದುವೆ ಮಾಡಿದನು. ಕನಕಶಾಂತಿ ಕುಮಾರನು ಸುಖದಿಂದ ಸಂಸಾರ ಮಾಡುತ್ತಿದ್ದು ಒಮ್ಮೆ ವಿನೋದಾರ್ಥವಾಗಿ ಹೆಂಡಿರೊಡನೆ ಹಿಮಪರ್ವತಕ್ಕೆ ಹೋದನು. ಅಲ್ಲಿ ವಿಪುಳಮತಿಮುನಿಗಳಿಂದ ಧರ್ಮಶ್ರವಣ ಮಾಡಿದೊಡನೆ ವೈರಾಗ್ಯ ತಾಳಿ ದೀಕ್ಷೆ ಹೊಂದಿದನು. ಅವನ ಹೆಂಡಿರಿಬ್ಬರೂ ಕೂಡ ದೀಕ್ಷೆಯನ್ನು ಪಡೆದರು. ಕನಕಶಾಂತಿ ತಪಸ್ಸುಮಾಡಿ ಕೇವಲಜ್ಞಾನಿಯಾದನು. ಅದನ್ನು ತಿಳಿದು ವಜ್ರಾಯುಧಚಕ್ರವರ್ತಿ ಕೇವಲಿಪೂಜೆಗೆ ಬಂದು, ತನ್ನ ಸಂಸಾರ ವ್ಯಾಮೋಹಕ್ಕೆ ಜುಗುಪ್ಸೆ ತಾಳಿದನು. ಮಗನಿಗೆ ಪಟ್ಟಗಟ್ಟಿ ಕ್ಷೇಮಂಕರ ತೀರ್ಥಕರರ ಬಳಿ ದಿಗಂಬರ ವ್ರತವನ್ನು ಸ್ವೀಕರಿಸಿದನು. ತಪಮಾಡಿ ಏಕವಿಹಾರಿಯಾಗಿ ಸಂಚರಿಸುತ್ತ ಬಂದು ಸಿದ್ಧಾಚಲದ ಮೇಲೆ ಒಂದು ವರ್ಷದವರೆಗೆ ಪ್ರತಿಮಾಯೋಗದಲ್ಲಿ ನಿಂತನು. ಪೂರ್ವಜನ್ಮದ ಶತ್ರುಗಳು ಬಂದು ತಪಸ್ಸಿಗೆ ವಿಘ್ನವೊಡ್ಡಿದರೂ ಆತನು ಅಚಲನಾಗಿದ್ದನು. ಆತನ ತಪಃಪ್ರಭಾವವನ್ನು ಕೇಳಿ ದರ್ಶನಕ್ಕೆ ಬಂದ ಸಹಸ್ರಾಯುಧನು ಕೂಡಲೆ ವೈರಾಗ್ಯತಾಳಿ ತಪೋವ್ರತವನ್ನು ಧರಿಸಿ ಮುನಿಗಳಿಗೆ ಆದರ್ಶನಾದನು. ಪ್ರಾಯೋಪಗಮನದಿಂದ ವಜ್ರಾಯುಧಮುನಿ ಮುಡುಪಿ ಅಹಮಿಂದ್ರನಾದನು. ಸಹಸ್ರಾಯುಧ ಮುನಿಯೂ ಸಲ್ಲೇಖನದಿಂದ ಮುಡುಪಿ ವಜ್ರಾಯುಧನ ವಿಮಾನದಲ್ಲಿಯ ಅಹಮಿಂದ್ರನಾದನು. ಆ ಲೋಕದ ಆಯುಷ್ಯ ಮುಗಿಯುತ್ತ ಬಂದುದನ್ನು ಅರಿತು ಅವರಿಬ್ಬರೂ ಜಿನತತ್ವನಿಷ್ಠರಾಗಿದ್ದು ನಿರಾತಂಕವಾಗಿ ಆ ಭವವನ್ನು ಕಳೆದರು. ಪುಷ್ಕಲಾವತಿದೇಶದ ಪುಂಡರೀಕಿಣಿಗೆ ದೊರೆಯಾದ ಘನರಥನೆಂಬ ಅರಸನಿಗೆ ಈ ಇಬ್ಬರೂ ಮಕ್ಕಳಾಗಿ ಹುಟ್ಟಿ ಮೇಘರಥ ಮತ್ತು ದೃಢರಥ ಎಂಬ ಹೆಸರನ್ನು ಪಡೆದರು. ಮೇಘರಥನಿಗೆ ಪ್ರಿಯಮಿತ್ರೆಯೆಂಬ ಪರಮ ಸುಂದರಿ ರಾಣಿಯಾದಳು. ದೃಢರಥನು ಸುಮತಿಯೆಂಬುವಳನ್ನು ಮದುವೆಯಾದನು. ಅವರೆಲ್ಲರೂ ಸುಖದಿಂದ ಇರುತ್ತಿರಲಾಗಿ ಒಂದು ದಿನ ಬೀದಿಯ ಬಳಿ ಎರಡು ಕೋಳಿಗಳು ರಭಸದಿಂದ ಕಾದಾಡುವುದನ್ನು ಘನರಥನು ಕಂಡನು. ಅವಧಿಜ್ಞಾನದಿಂದ ಅವುಗಳ ಪೂರ್ವಕಥೆಯನ್ನು ತಾನು ಅರಿತವನಾದರೂ ಹಿರಿಯ ಮಗನಾದ ಮೇಘರಥನ ಅವಧಿಜ್ಞಾನವನ್ನು ಎಲ್ಲರೂ

ಅರಿಯಲೆಂಬ ಉದ್ದೇಶದಿಂದ "ಈ ಕೋಳಿಗಳಿಗೆ ಇಷ್ಟೊಂದು ಬಲ ಹಾಗೂ ಸಹಿಷ್ಣುತೆ ಹೇಗೆ ಬಂದುವು?" ಎಂದು ಕೇಳಿದನು. ಮೇಘರಥನು ಹೀಗೆ ವಿವರಿಸಿದನು :

"ರತ್ನಪುರದಲ್ಲಿ ಸೌದೆ ಮಾರಿ ಜೀವಿಸುವ ಧನ್ಯ ಮತ್ತು ಭದ್ರ ಎಂಬಿಬ್ಬರು ಕುಡಿಯರಿದ್ದರು. ಇಕ್ಕಟ್ಟಾದ ಹಾದಿಯಲ್ಲಿ ಇಬ್ಬರ ಬಂಡಿಗಳೂ ಒಂದಕ್ಕೊಂದು ತಾಗಲಾಗಿ ಇಬ್ಬರೂ ಕ್ರುದ್ಧರಾಗಿ ಪರಸ್ಪರರನ್ನು ಇರಿದು ಸತ್ತರು. ಅಮೇಲೆ ಗಂಧಗಜಗಳಾಗಿಯೂ, ಹೋರಿಗಳಾಗಿಯೂ, ತಗರುಗಳಾಗಿಯೂ ಹುಟ್ಟಿ ಪ್ರತಿ ಜನ್ಮದಲ್ಲಿ ಪರಸ್ಪರರನ್ನು ಕೊಂದುವು. ಈಗ ಕೋಳಿಗಳಾಗಿ ಹೋರಾಡುತ್ತಿವೆ. ಇನ್ನು ಇವಕ್ಕೆ ದಣಿವೇ ಆಗದಿರುವುದಕ್ಕೆ ಕಾರಣವೆಂದರೆ ವಿದ್ಯಾಧರರಿಬ್ಬರೂ ಗುಪ್ತವಾಗಿ ನಿಂತು ಅವುಗಳಿಗೆ ಶಕ್ತಿ ನೀಡಿದ್ದಾರೆ. ಅವರ ಕಥೆಯನ್ನೂ ಹೇಳುತ್ತೇನೆ. ಹಿರಣ್ಯಪುರದ ಗರುಡವೇಗನೆಂಬ ಅರಸನಿಗೆ ಇಂದ್ರತಿಲಕ ಮತ್ತು ನಭಸ್ತಿಲಕ ಎಂಬಿಬ್ಬರು ಮಕ್ಕಳಾದರು. ಇವರು ಒಮ್ಮೆ ಸಾಗರ ಚಂದ್ರಮುನಿಗಳನ್ನು ಕಂಡು ತಮ್ಮ ಭವಾವಳಿಯನ್ನು ತಿಳಿಸಲು ಬಿನ್ನವಿಸಿದರು. ಆ ಮುನಿಗಳು ಹೀಗೆ ಹೇಳಿದರು : 'ಐರಾವತ ಕ್ಷೇತ್ರದ ಪೃಥ್ವೀತಿಲಕನಗರಕ್ಕೆ ಅಭಯಘೋಷನೆಂಬ ದೊರೆಯಿದ್ದನು. ಕನಕಲತೆಯೆಂಬ ಮಡದಿಯಿಂದ ಅವನಿಗೆ ಜಯಂತ ಮತ್ತು ವಿಜಯರೆಂಬ ಮಕ್ಕಳಾದರು. ಆಮೇಲೆ ಅರಸನು ಪೃಥ್ವೀಸೇನೆಯೆಂಬವಳನ್ನು ಮದುವೆಯಾಗಿ ಅವಳಲ್ಲಿಯೇ ಹೆಚ್ಚಾಗಿ ಆಸಕ್ತನಾದನು. ಕನಕಲತೆ ಮಂತ್ರವಾದಿಗಳ ಸಹಾಯದಿಂದ ಅವನನ್ನು ವನವಿಹಾರಕ್ಕೆ ಒಲಿಸಿಕೊಂಡಳು. ತನ್ನನ್ನು ಅನಾದರಿಸಿದನೆಂದು ಜುಗುಪ್ಸೆಗೊಂಡ ಕಿರಿಯ ಹೆಂಡತಿ ದೀಕ್ಷಾಗ್ರಹಣ ಮಾಡಿದಳು. ಆತನ ಮಕ್ಕಳು ಕೂಡ ವೈರಾಗ್ಯದಿಂದ ದಿಗಂಬರ ವ್ರತಧಾರಿಗಳಾದರು. ಆಗ ರಾಜನು ತಾನೂ ದೀಕ್ಷೆವಹಿಸಿ ಮಕ್ಕಳೊಡನೆ ತಪಸ್ಸಿಗೆ ತೊಡಗಿದನು. ಬಳಿಕ ಸಮಾಧಿವಿಧಿಯಿಂದ ಮುಡುಪಿ ಅಚ್ಯುತೇಂದ್ರನಾದನು. ಅಲ್ಲಿಯ ಸುಖವನ್ನು ಅನುಭವಿಸಿ ಆದ ಬಳಿಕ ಇಲ್ಲಿ ಘನರಥರಾಜನಾದನು (ನೀವೇ ಅವರು). ಜಯಂತ ಮತ್ತು ವಿಜಯರು ತಪಸ್ಸಿನಿಂದ ಸಾಮಾನಿಕದೇವರಾಗಿ ಅಲ್ಲಿಂದ ಬಂದು ಗರುಡನಾಭನಿಗೆ ಚಂದ್ರತಿಲಕ ಹಾಗು ನಭಸ್ತಿಲಕರೆಂಬ ಮಕ್ಕಳಾದರು. ಮುನಿಗಳಿಂದ ಇದನ್ನು ತಿಳಿದ ಅವರು ತಮ್ಮ ಪೂರ್ವಭವದಲ್ಲಿ ತಂದೆಯಾಗಿದ್ದ ನಿಮ್ಮನ್ನು ಕಾಣಲೆಂದು ಬಂದಿದ್ದು, ರಸಭಂಗವಾಗಬಾರದೆಂದು ಅದೃಶ್ಯರಾಗಿ ನಿಂತಿರುವರು. ಕೋಳಿಗಳಿಗೆ ಅವರೇ ಶಕ್ತಿಯಿತ್ತವರು' ".

ಈ ವಿವರಣೆಯನ್ನು ಕೇಳಿದೊಡನೆ ಅದೃಶ್ಯರಾಗಿ ನಿಂತಿದ್ದ ಅವರಿಬ್ಬರೂ ಪ್ರತ್ಯಕ್ಷವಾಗಿ ಬಂದು ಘನರಥನ ಕಾಲಿಗೆರಗಿದರು. ಅರಸನು ಅವರನ್ನು ಸತ್ಕರಿಸಿ ಕಳಿಸಿಕೊಟ್ಟನು. ಮುಂದೆ ಕೆಲವು ಕಾಲಾನಂತರ ಘನರಥನು ಮಗನಿಗೆ ರಾಜ್ಯವೊಪ್ಪಿಸಿ ದೇವೇಂದ್ರನು ತಂದ ಸಿವಿಗೆಯನ್ನೇರಿ ತಪಕ್ಕೆ ಹೊರಟನು. ತಪಸ್ಸಿನಿಂದ ಆತನಿಗೆ ಕೇವಲಜ್ಞಾನ ಪ್ರಾಪ್ತವಾಗಲಾಗಿ ಮೇಘರಥನು ಬಂದು ಪೂಜಿಸಿ ಧರ್ಮಶ್ರವಣ ಮಾಡಿ ಮರಳಿಹೋದನು. ರಾಜ್ಯವಾಳುತ್ತ ಇರಲಾಗಿ ಈ ಹಿಂದೆ ಕೋಳಿಗಳಾಗಿ ಕಾದಾಡುತ್ತಿದ್ದ ಜೀವಗಳೆರಡೂ ಸಂನ್ಯಸನದಿಂದ ಪ್ರಾಣತ್ಯಾಗಮಾಡಿ ವ್ಯಂತರದಲ್ಲಿ ಕಾಳ ಮತ್ತು ಮಹಾಕಾಳರೆಂಬ ಇಂದ್ರಪ್ರತೀಂದ್ರರಾಗಿ, ಮೇಘರಥನ ಬಳಿಗೆ ಬಂದು, ಮಾನುಷೋತ್ತರ ಲೋಕವನ್ನು ತೋರಿಸುವೆವೆಂದು ತಿಳಿಸಿದುವು. ಆ ಮೇರೆಗೆ ಅವನನ್ನು ವಿಮಾನದಲ್ಲಿ ಕರೆದೊಯ್ದು ತೋರಿಸಿಕೊಂಡು ಬಂದುವು. ಮರಳಿ ಬಂದ ಮೇಲೆ ಒಂದು ದಿನ ಮೇಘರಥನು ಉದ್ಯಾನದಲ್ಲಿ ವಿಹಾರಮಾಡುತ್ತ ಬಂದು ತನ್ನ ದೇವಿಯರೊಡನೆ ಒಂದು ಚಂದ್ರಕಾಂತ ಶಿಲೆಯ ಮೇಲೆ ಕುಳಿತಿರುವಾಗ ಖೇಚರನೊಬ್ಬನು ಕೆಳಗಿನಿಂದ ಆ ಶಿಲೆಯನ್ನು ಎತ್ತತೊಡಗಿದನು. ರಾಜನು ಅಂಗುಷ್ಠದಿಂದ ಅಮುಕಲಾಗಿ ಅವನು ಇರುಕಿನಲ್ಲಿ ಸಿಕ್ಕಿ ಕಿರುಚಿಕೊಂಡನು. ಆ ಖೇಚರನ ಹೆಂಡತಿ ಪತಿಭಿಕ್ಷೆಗಾಗಿ ಪ್ರಾರ್ಥಿಸಿಕೊಂಡುದರಿಂದ ಘನರಥನು ಅವನನ್ನು ಉಳಿಸಿದನು. ಖೇಚರನು ನಮಸ್ಕರಿಸಿ ದೀಕ್ಷಾಗ್ರಹಣ ಮಾಡಿ ತಪಕ್ಕೆ ಹೊರಟನು. ಅವನ ಹೆಂಡತಿಯೂ ಅವನನ್ನು ಅನುಕರಿಸಿದಳು.

ಬಳಿಕ ಒಂದು ದಿನ ಒಂದು ಪಾರಿವಾಳ ಬಂದು "ರಾಜನೇ ನನ್ನನ್ನು ಕಾಪಾಡು" ಎಂದು ಮೊರೆಯಿಟ್ಟಿತು. ಅದರ ಹಿಂದಿನಿಂದಲೆ ಒಂದು ಗಿಡುಗ ಬಂದು, "ಅದನ್ನು ನೀನು ರಕ್ಷಿಸಿದರೆ ನಾನು ಆಹಾರವಿಲ್ಲದೆ ಸಾಯುತ್ತೇನೆ.

ಇದು ನಿನಗೆ ಕಲಂಕವಲ್ಲವೆ?" ಎಂದಿತು. ಅರಸನು ಗಿಡುಗನಿಗೆ ಹೀಗೆಂದನು: "ಹಸಿವೆಗಾಗಿ ನೀನು ಪಾರಿವಾಳದ ಮೇಲೆ ಎರಗಿಲ್ಲ. ಪೂರ್ವಜನ್ಮದ ವೈರದಿಂದ ಹೀಗೆ ಮಾಡುತ್ತಿರುವೆ." ಎಂದು ನುಡಿದು ಅವುಗಳ ಪೂರ್ವಕಥೆಯನ್ನು ಹೀಗೆ ವಿವರಿಸಿದನು :

"ಪದ್ಮಿನೀಖೇಡವೆಂಬ ಪಟ್ಟಣದಲ್ಲಿ ದತ್ತ ಮತ್ತು ನಂದಿಷೇಣರೆಂಬ ವರ್ತಕಪುತ್ರರು ತಂದೆಯ ಮರಣಾನಂತರ ವ್ಯಾಪಾರಮಾಡುತ್ತಾ ಇದ್ದು ಒಂದು ದಿನ ಧನ ನಿಮಿತ್ತವಾಗಿ ಮನಸ್ತಾಪಗೊಂಡು ಒಬ್ಬರನ್ನೊಬ್ಬರು ಇರಿದು ಸತ್ತರು. ಆ ದತ್ತನೇ ಈ ಪಾರಿವಾಳ. ನಂದಿಷೇಣನೇ ಈ ಗಿಡುಗ. ಜನ್ಮಬದ್ಧ ವೈರದಿಂದ ಈ ಕೋಪ ನಿನಗುಂಟಾಗಿದೆ." ಮನುಷ್ಯರಂತೆ ಮಾತಾಡಲು ಈ ಪಕ್ಷಿಗಳಿಗೆ ಹೇಗೆ ಸಾಧ್ಯವಾಯಿತು? ಎಂಬ ದೃಢರಥನ ಪ್ರಶ್ನೆಗೆ ಉತ್ತರವಾಗಿ ಅರಸನು ಹೀಗೆ ತಿಳಿಸಿದನು :

"ದಮಿತಾರಿಯೊಡನಾದ ಯುದ್ಧದಲ್ಲಿ ನನ್ನಿಂದ ಹತನಾದ ಹೇಮರಥನೆಂಬ ಖೇಚರನು ಭವಚಕ್ರದಲ್ಲಿ ಸುತ್ತುತ್ತ ಈಶಾನಕಲ್ಪದಲ್ಲಿ ದೇವನಾದನು. ಈಶಾನೇಂದ್ರನು ನನ್ನನು ಹೊಗಳಲಾಗಿ ಸಹಿಸಲಾರದೆ ನನ್ನ ಗುಣ ಪರೀಕ್ಷೆ ಮಾಡಲು ಬಂದು ಈ ಗಿಡುಗ ಪಾರಿವಾಳಗಳಲ್ಲಿ ಹೊಕ್ಕು ನುಡಿಯುತ್ತಿರುವನು."

ಈ ಮಾತನ್ನು ಕೇಳಿದೊಡನೆ ಗುಪ್ತನಾಗಿದ್ದ ಆ ದೇವನು ಪ್ರತ್ಯಕ್ಷವಾಗಿ ಬಂದು ಅರಸನನ್ನು ಪೂಜಿಸಿ ತನ್ನ ಪೂರ್ವದ್ವೇಷ ಹೊರಟುಹೋಯಿತೆಂದು ನುಡಿದು ಸ್ವಸ್ಥಾನಕ್ಕೆ ಮರಳಿದನು. ಆ ಗಿಡುಗ–ಪಾರಿವಾಳಗಳು ಆಹಾರ ತ್ಯಾಗದಿಂದ ದೇಹತೊರೆದು ಭವನಾಮರರಾದುವು. ಮೇಘರಥನು ಚಾರಣಮುನಿಗೆ ಆಹಾರ ದಾನ ಮಾಡಿ ಪಂಚಾಶ್ಚರ್ಯಗಳನ್ನು ಪಡೆದನು. ನಂದೀಶ್ವರ ಮಹಾಪೂಜೆ ಮಾಡಿ ಉಪವಾಸದಿಂದ ರಾತ್ರಿ ಪ್ರತಿಮಾಯೋಗದಲ್ಲಿ ಧ್ಯಾನಾಸಕ್ತನಾಗಿರಲು, ಈಶಾನೇಂದ್ರನು ದೇವಸಭೆಯಲ್ಲಿ ಆತನ ದಿಕ್ಕಿಗೆ ನಮಸ್ಕರಿಸಿ ಹೊಗಳಿದನು. ಅದನ್ನು ಕೇಳಿ ಗರ್ವಿಷ್ಠೆಯರೂ ಅಪೂರ್ವ ಸುಂದರಿಯರೂ ಆದ ಇಬ್ಬರು ದೇವಾಂಗನೆಯರು "ಆತನ ಯೋಗಶಕ್ತಿಯೆಷ್ಟೆಂದು ನೋಡುವೆವು" ಎಂದು ಬಂದು ಅವನ ತಪೋಭಂಗಕ್ಕೆ ಪ್ರಯತ್ನಿಸಿದರೂ ಸಾಧ್ಯವಾಗದೆ ಮರಳಿಹೋದರು. ಮತ್ತೊಂದು ಸಲ ಈಶಾನೇಂದ್ರನು ಮೇಘರಥನ ಪತ್ನಿಯಾದ ಪ್ರಿಯಮಿತ್ರೆಯ ಪರಮಸುಂದರಿಯೆಂದು ಹೊಗಳಿದನು. ಇಬ್ಬರು ದೇವಿಯರು ಪ್ರತ್ಯಕ್ಷವಾಗಿ ಕಾಣಬೇಕೆಂದು ಅದೃಶ್ಯರಾಗಿ ಸ್ನಾನಕಾಲದಲ್ಲಿ ಅವಳನ್ನು ಕಂಡು ಬಳಿಕ ದ್ವಾರಪಾಲಕನ ಮೂಲಕ ಹೇಳಿಕಳಿಸಿ ಪ್ರತ್ಯಕ್ಷವಾಗಿ ನೋಡಬಯಸಿದರು. ರಾಣಿ ಅಲಂಕರಿಸಿಕೊಂಡು ಬಂದು ಕಾಣಿಸಿಕೊಂಡಾಗ "ಮೊದಲು ಕಂಡಾಗಿನ ರೂಪ ಈಗ ಉಳಿದಿಲ್ಲ" ಎಂದು ಹೇಳಿ ತಾವು ಅದೃಶ್ಯವಾಗಿ ಕಂಡುದನ್ನು ತಿಳಿಸಿ, ಆಕೆಯ ಚೆಲ್ವಿಕೆಯನ್ನು ಹೊಗಳಿಹೋದರು. ಈ ವಿಷಯವನ್ನು ಆಕೆ ಪತಿಗೆ ತಿಳಿಸಲಾಗಿ ಆತನು ಸಂಸಾರದ ಅಸ್ಥಿರತೆಯನ್ನು ನೆನೆದು ಕೂಡಲೆ ತಪೋದೀಕ್ಷೆಯನ್ನು ವಹಿಸಿದನು. ದೃಢರಥನೂ ದೀಕ್ಷೆಯನ್ನು ಕೈಕೊಂಡು ಅಣ್ಣನೊಡನೆ ತಪೋನಿರತನಾದನು. ಅವರಿಬ್ಬರೂ ಕ್ರಮವಾಗಿ ತಪಗಳನ್ನಾಚರಿಸಿ ಪ್ರಾಯೋಪಗಮನದಿಂದ ಮುಡುಪಿ ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರರಾದರು.

ಇತ್ತ ಕುರುಜಾಂಗಲವೆಂಬ ಸುಂದರವಾದ ಹಾಗು ಸಮೃದ್ಧವಾದ ನಾಡಿನಲ್ಲಿ ಹಸ್ತಿನಪುರಕ್ಕೆ ವಿಶ್ವಸೇನನೆಂಬ ರಾಜನಿದ್ದನು. ಆತನ ಹೆಂಡತಿಯಾದ ಐರಾಮಹಾದೇವಿಯ ಗರ್ಭದಲ್ಲಿ ಈ ಅಹಮಿಂದ್ರನೆ ಜಿನನಾಗಿ ಅವತರಿಸುವನೆಂದು ತಿಳಿದು ದೇವೇಂದ್ರನು ಕುಬೇರನಿಂದ ಆ ಪಟ್ಟಣದಲ್ಲಿ ರತ್ನವೃಷ್ಟಿಯನ್ನು ಸುರಿಸಿದನು ಮತ್ತು ಐರಾದೇವಿಯ ಸೇವೆ ಹಾಗೂ ಗರ್ಭಶೋಧನೆಗಾಗಿ ಹಲವಾರು ದೇವಾಂಗನೆಯರನ್ನು ನಿಯಮಿಸಿ ಕಳಿಸಿದನು. ಬೆಳಗಿನಜಾವದಲ್ಲಿ ಆಕೆ ಹದಿನಾರು ಸ್ವಪ್ನಗಳನ್ನು ಕಂಡು ಪತಿಯಿಂದ ಅವುಗಳ ಫಲವನ್ನರಿತಳು. ಯಥಾಕಾಲದಲ್ಲಿ ಗರ್ಭಧರಿಸಿ ಜಿನನನ್ನು ಹೆತ್ತಳು. ಚತುರ್ನಿಕಾಯಾಮರರು ಬಂದು ವೈಭವದಿಂದ ಜನ್ಮಾಭಿಷೇಕವನ್ನು ನೆರವೇರಿಸಿ ಜಿನಶಿಶುವಿಗೆ ಶಾಂತಿಯೆಂದು

ಹೆಸರಿಟ್ಟರು. ಇನ್ನೊಬ್ಬ ಅಹಮಿಂದ್ರನಾಗಿದ್ದ ದೃಢರಥನೂ ವಿಶ್ವಸೇನರಾಜನ ಕಿರಿಯ ರಾಣಿಯ ಗರ್ಭದಿಂದ ಉದಿಸಿ ಚಕ್ರಾಯುಧನೆಂದು ಹೆಸರಾದನು. ಶಾಂತೀಶನು ಯುವಾವಸ್ಥೆಗೆ ಬಂದಮೇಲೆ ಅವನಿಗೆ ರಾಜ್ಯಭಾರವೊದಗಿತು. ಚಕ್ರರತ್ನವೆ ಮೊದಲಾದ ಹದಿನಾಲ್ಕು ರತ್ನಗಳೂ ನವನಿಧಿಗಳೂ ಪ್ರಾಪ್ತವಾದುವು. ದಿಗ್ವಿಜಯದಿಂದ ಶಾಂತೀಶನು ಷಟ್ಖಂಡಾಧಿಪತಿಯಾದನು.

ಬಳಿಕ ಇಪ್ಪತ್ತೈದು ಸಾವಿರ ವರ್ಷಗಳ ವರೆಗೆ ವೈಭವದಿಂದ ರಾಜ್ಯವಾಳಿದಮೇಲೆ ಶಾಂತೀಶನಿಗೆ ಈ ಸಂಸಾರವನ್ನು ತೊರೆಯುವ ಹಂಬಲುಂಟಾಯಿತು. ಲೋಕಾಂತಿಕದೇವರು ಬಂದು ಅವನ ನಿಷ್ಕ್ರಮಣವನ್ನು ಅನುಮೋದಿಸಿ ಹೋದರು. ದೇವತೆಗಳು ಸರ್ವಾರ್ಥಸಿದ್ಧಿಯೆಂಬ ಸಿವಿಗೆಯಲ್ಲಿ ಶಾಂತೀಶನನ್ನು ಸಹಸ್ರಾಮ್ರವನಕ್ಕೆ ಕರೆದೊಯ್ದರು. ಅಲ್ಲಿ ಶಾಂತೀಶನು ವ್ರತಧಾರಿಯಾಗಿ ತಪಸ್ಸಿನಿಂದ ಕೇವಲಜ್ಞಾನವನ್ನು ಪಡೆದನು. ಸಮವಸರಣದಲ್ಲಿ ಸಕಲರಿಗೆ ಧರ್ಮವನ್ನು ವಿವರಿಸಿದನು. ಆಮೇಲೆ ಲೋಕೋಪಕಾರಕ್ಕಾಗಿ ವಿಹಾರಮಾಡುತ್ತ ಹೊರಟು ಇನ್ನು ಒಂದು ತಿಂಗಳು ತನಗೆ ಆಯುಷ್ಯ ಉಳಿದಾಗ ಸಮ್ಮೇದ ಶಿಖರಕ್ಕೆ ಬಂದು ಕಾಯೋತ್ಸರ್ಗಕ್ಕೆ ನಿಂತನು. ಅಘಾತಿಕರ್ಮಗಳನ್ನು ನಾಶ ಮಾಡಿಕೊಂಡು ಔದಾರಿಕ ದೇಹವನ್ನು ತೊರೆದು ಲೋಕಾಗ್ರವನ್ನು ಸೇರಿದನು. ಚತುರ್ವಿಧ ದೇವತೆಗಳು ಬಂದು ಆ ದೇಹವನ್ನು ಗೌರವದಿಂದ ಅರ್ಚಿಸಿ ದಹಿಸಿ ನಿರ್ವಾಣ ಕಲ್ಯಾಣವನ್ನು ನೆರವೇರಿಸಿದರು.

ಪೊನ್ನನ ಶಬ್ದಭಂಡಾರ

ಪೊನ್ನ ಕೆಲವು ಕಡೆ ಒಂದು ಶಬ್ದಕ್ಕಿರುವ ವಿವಿಧ ಅರ್ಥಗಳನ್ನೂ ಅರ್ಥ ಛಾಯೆಗಳನ್ನೂ ಗುರುತಿಸಿ ಪ್ರಯೋಗಿಸುವುದೂ ಉಂಟು. ಉದಾಹರಣಾರ್ಥವಾಗಿ ಕವಳಿಗೆ ಶಬ್ದವನ್ನು ಮೂರು ಬೇರೆ ಹುರುಳಿನಲ್ಲಿ ಬಳಸಿರುವುದನ್ನು ನೋಡಬಹುದು :

ಕವಳಿಗೆ :	(i)	ಓಲೆ ಪುಸ್ತಕ	8–134 ವ
	(ii)	ಭಿಕ್ಷಾಪಾತ್ರೆ	8–126
	(iii)	ಕರಂಡಕ	9–180

ಗೊಟ್ಟಿ (2–21 ಗೋಷ್ಠೀ), ಗೊಟ್ಟಿಗೆ (2–21 ಗೋಷ್ಠಿಕಾ), ಗೊಟ್ಟಿಗೇಯ (2–21), ಕಣ್ಣಱಿದು ಗೊಟ್ಟಿಗೆಯ್ವ (3–59 ವ ಹರಟೆ, ಮಾತುಕತೆ, ಸರಸಸಲ್ಲಾಪ ಎಂಬರ್ಥ) ಎಂಬ ಪ್ರಯೋಗಗಳೂ ಗಮನಾರ್ಹ.

ಕಡಿತ (9–147) ಬಳಪದಿಂದ ಬರೆಯುವುದಕ್ಕಾಗಿ ಕಪ್ಪು ಲೇಪನ ಬಳಿದು ಮಾಡಿದ ಬಟ್ಟೆಯ ಪಟ್ಟಿ. ಅಂದು ಇದು ಲೆಕ್ಕದ ಪುಸ್ತಕವಾಗಿತ್ತು. ಪೊನ್ನನ ಕಲ್ಪನಾ ಶ್ರೀ ವಿಲಾಸವನ್ನು ಹೊಳೆಯಿಸುವ ಸ್ವಂತಿಕೆಯ ಸೊಗಸಿನಿಂದ ಗಮನಸೆಳೆಯುವ ಪದ್ಯಗಳಲ್ಲಿ ಇದೂ ಒಂದಾಗಿದೆ.

ಕಡಿತ (11–84 ವ) ಅಧೀನ, ವಶವಾಗುವುದು, ಹತೋಟಿ ಎಂಬ ಅರ್ಥದಲ್ಲಿ ಇಲ್ಲಿ ಕಡಿತ ಶಬ್ದ ಬಂದಿದೆ.

ಹೀಗೆ ಎರಡು ಬೇರೆ ಅರ್ಥಗಳಿರುವ ಈ ಎರಡೂ 'ಕಡಿತ' ಗಳಲ್ಲಿ ಪೊನ್ನನ ಪ್ರಯೋಗಗಳೇ ಅತ್ಯಂತ ಪ್ರಾಚೀನವಾಗಿವೆಯೆಂಬುದು ಶಬ್ದಾರ್ಥಶಾಸ್ತ್ರಕಾರರಿಗೆ ಮೆಲುಕುಹಾಕುವ ವಿಷಯವಾಗುತ್ತದೆ.

ಒಂದೇ ಅರ್ಥದ ಹಲವು ಶಬ್ದಗಳನ್ನು ಆಯಾ ಸಂದರ್ಭದ ಹೊಂದಾಣಿಕೆಗೆ, ಧ್ವನಿಗೆ ಮತ್ತು ಛಂದಸ್ಸಿನ ಅನುಕೂಲಕ್ಕೆ ತಕ್ಕಂತೆ ಪೊನ್ನ ಬಳಸುವುದು ಹಲವಾರು ಕಡೆ ಕಂಡುಬರುತ್ತದೆ.

1. ಬಲರಾಮನಿಗೆ ಕವಿ ಕೊಡುವ ಬೇರೆ ಬೇರೆ ಸಮಾನಾರ್ಥಕ ನಾಮರೂಪಗಳನ್ನು ನೋಡಬಹುದು: ಬಲದೇವಂ, ಲಾಂಗಲಹಸ್ತಂ, ಸೀರಪಾಣಿ, ಸೀರಾಸ್ತ್ರಂ, ಹಲಧರ, ಹಲಹಸ್ತಂ, ಇತ್ಯಾದಿ.

2. ರಾಜಸಿಂಹಾಸನವನ್ನು ಎಷ್ಟೆಷ್ಟು ಪರಿಗಳಲ್ಲಿ ಪೊನ್ನ ಹೇಳುತ್ತಾನೆಂದರೆ ಅದರಲ್ಲಿ ಅವನ ಪ್ರಯೋಗಶೀಲತೆಗಿಂತ ಹೆಚ್ಚಾಗಿ ಶಬ್ದಪಾಂಡಿತ್ಯ, ಭಾಷಾಪ್ರಭುತ್ವ ಕಂಡುಬರುತ್ತದೆ:

ಏಣರಿಪುಪೀಠ	3–49	ಸಿಂಹವಿಷ್ಟರ	
ಮದೇಭರಿಪುವಿಷ್ಟರ	5–98	ಸಿಂಹಾಸನ	3–47
ಮೃಗರಿಪುವಿಷ್ಟರ	6–23 ವ	ಹರಿಪೀಠ	
ಮೃಗೇಂದ್ರವಿಷ್ಟರ	3–41	ಹರಿವಿಷ್ಟರ	5–94 ವ
ಮೃಗೇಂದ್ರಾಸನ			

3. ರಾಜರಿಗೆ ಒಸಗೆ ಉಕ್ಕಿಸುವ ಉಲ್ಲಾಸದ ವಾರ್ತೆ ತಂದವನಿಗೆ ಸಂತೋಷ ಪ್ರೀತ್ಯರ್ಥವಾಗಿ ಉಡುಗೊರೆ ಕೊಡುವುದುಂಟು ಅದನ್ನು ಕವಿ ಅಂಗಚಿತ್ತಮನಿತ್ತು, ಉಚಿತಪ್ರತಿಪತ್ತಿಗಳಿಂ, ಮೆಚ್ಚುಗೊಟ್ಟು (1–83) ಮುಂತಾಗಿ ಬೇರೆ ಬೇರೆ ಮಾತುಗಳಲ್ಲಿ ಹೇಳಿದ್ದಾನೆ.

4. ಕನ್ನೆವಾಡ–ಕನ್ನೆಮಾಡ, ದಿವಸ–ದೆವಸ, ಬಾಗಿಲ್ವಾಡ–ಬಾಗಿಲ್ಮಾಡ— ಹೀಗೆ ಎರಡೆರಡು ರೂಪಗಳನ್ನು ಪೊನ್ನ ಅನೇಕ ಶಬ್ದಗಳಿಗೆ ಕೊಟ್ಟಿದ್ದಾನೆ.

5. ಯುವರಾಜ–ಯೌವರಾಜ್ಯ, ನಿಮಿತ್ತಜ್ಞ–ನೈಮಿತ್ತಿಕ (5–37 ವ), ಮಂಗಲತೂರ್ಯ–ಮಾಂಗಳ್ಯತೂರ್ಯ (5–97), ವಿಪರೀತ–ವೈಪರೀತ್ಯ, ವಿವಾಹ–ವೈವಾಹ, ಶರದಂ–ಶಾರದ ಎಂಬಂತೆ ಛಂದಸ್ಸಿನ ಸೌಲಭ್ಯ ಅಥವಾ ಇತರ ಕಾರಣವನ್ನಾಶ್ರಯಿಸಿ ಪೊನ್ನ ಎರಡೆರಡು ರೂಪಗಳನ್ನು ಬಳಸಿಬಿಡುತ್ತಾನೆ.

6. ಯುಗಳ, ಯುಗ್ಮ, ದ್ವಂದ್ವ— ಇಂಥ ಸಮಾನಾರ್ಥಕ ರೂಪಗಳನ್ನು ಒಂದೇಕಡೆ (1–80 ವ) ಬಳಸಿದ್ದಾನೆ.

7. ವೈಶ್ರಮಣ (— ವಿಶ್ರಾಂತಿ); ವಿಶ್ರಾಮ, ವಿಶ್ರಮಣ—ಎಂಬ ಸಂಸ್ಕೃತ ಶಬ್ದಗಳನ್ನು ಆಧಾರವಾಗಿರಿಸಿ ಕೊಂಡು ಅವುಗಳ ಭಾವನಾಮರೂಪವೆಂಬಂತೆ ವೈಶ್ರಮಣ ಎಂಬ ಹೊಸ ರೂಪಮಾಡಿ ಬಳಸಿದ್ದಾನೆ. ಇದು ಪೊನ್ನನ ಸ್ವೋಪಜ್ಞತೆ, ಶಬ್ದಪಾರಮ್ಯತೆಗೊಂದು ಸಾಕ್ಷಿ.

* * * * *

ಇದುವರೆಗಿನ ಶಬ್ದಾರ್ಥ ವಿವೇಚನೆಯಲ್ಲಿ ಕೇವಲ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿರುವ ಅತ್ತಪರ, ಉಸುರ್, ಕರೇಣು, ಕೀರ್ತಿ, ಬಿಚ್ಚಳಿಸು, ಬೂತು, ಮಾಸರ, ಮೊಲಗಟ್ಟಿಲೆ, ಸೂಯಿಯಾಣ ಮೊದಲಾದ ಶಬ್ದಗಳ ನಿಷ್ಪತ್ತಿ, ಅರ್ಥವಿವರಣೆ, ಮಹತ್ವ ಕುರಿತು ವಿಸ್ತಾರವಾಗಿ, ಸಾಧಾರವಾಗಿ ಚರ್ಚಿಸಿ ನಾನು ಹಲವು ವರ್ಷಗಳ ಹಿಂದೆಯೇ ಬರೆದು ಪ್ರಕಟಿಸಿದ ಲೇಖನಗಳು "ಕನ್ನಡದ ಕಿಡಿಗಳು" ಎಂಬ ಸಂಶೋಧನ ಲೇಖನಸಂಕಲನದಲ್ಲಿ ಸೇರಿವೆ (1981). ಹೆಚ್ಚಿನ ವಿವರಣೆಗೆ ಅಲ್ಲಿ ನೋಡಬಹುದು.

ಅಗ್ರಸ್ಥಿತ

'ಕ.ಸಾ.ಪ.ಕ.ನಿ.' ನಲ್ಲಿ ಈ ಶಬ್ದವೇ ಇಲ್ಲ. ಇದು ಮುಖ್ಯ ಉಲ್ಲೇಖವಾಗಿ ದಾಖಲಾಗಬೇಕು. ಪೊನ್ನನ ಪದ್ಯ :

ರಥಿಗಳನಗ್ರಸ್ಥಿತ ಸಾ
ರಥಿಗಳನಿಸೆ ಸೀರಪಾಣಿ ಸಲೆ ರಥದ ಮನೋ
ರಥದೊಡನೆ ಮಡಿದರಂದತಿ
ರಥಸಮರಥರಾ ಮಹಾರಥಾರ್ಧರಥರ್ಕಳ್ ॥ 114-12

ಅಗ್ರಸ್ಥಿತವೆಂದರೆ "ಮುಂದೆ ಕುಳಿತಿರುವ" ಎಂದು ಅರ್ಥ. ಇದು ಸಂಸ್ಕೃತ ಶಬ್ದ ಅಗ್ರ+ಸ್ಥಿತ. ನಿಘಂಟನ್ನು ಪರಿಷ್ಕರಿಸುವ ಕಾಲದಲ್ಲಿ ಇದನ್ನು ಗಮನಿಸಬೇಕು.

ಅನೇಕ ಸಮಯ

ಸಾಪೇಕ್ಷಕಂಠೀರವನಾದ ಅಪರಾಜಿತನು ಹಗೆಗಳ ಬಲ್ಗಾರರು ಬಿಟ್ಟ "ಶರಾಸಾರಮಂ ಮಂಜಿನ ಮಟ್ಟಿಯನ್+ ಅಹಿಮಕಿರಣನ್+ಅತ್ಮಕಿರಣಂಗಳಿಂ ಕಿಡಿಸುವಂತೆ ತನ್ನಂಬುಗಳಿಂ ಕಡಿಕಡಿದು ಕಡಿಸಿ ಶೀಘ್ರನೆಚ್ಚೆಚ್ಚೇಕಸಮಯ ದೊಳನೇಕಧನ್ವಿಗಳನ್+**ಅನೇಕ ಸಮಯ**ದೊಡನಾ ಚಾಪಧರರಂ ಬಿದಿಯು ಸಮುಕಟ್ಟಿಂಗೆ ಕೊಲ್ವಂತೆ ಪೇಸೇಱಿ ತವೆ ಕೊಲೆ" (4–14 ವ) ಯುದ್ಧವನ್ನು ಮುಂದುವರಿಸಿದನು. ಇಲ್ಲಿ ಬರುವ **ಅನೇಕ ಸಮಯ** ಎಂಬುದು 'ಕ.ಸಾ.ಪ.ಕ.ನಿ' ನಲ್ಲಿ ಹೊಸದಾಗಿ ಸೇರಬೇಕಾದ ಮತ್ತೊಂದು ಮುಖ್ಯ ಉಲ್ಲೇಖವಾಗಿದೆ. ಬಹುಶಃ ಇದು ಶಾಂತಿ ಪುರಾಣ ಕಾವ್ಯದ ಶಬ್ದಸಂಗ್ರಹಕಾರರ ಕಣ್ಣು ತಪ್ಪಿಸಿಕೊಂಡಿದೆಯಾಗಿ ನಿಘಂಟಿನ ಹೊರಗೇ ಉಳಿದುಬಿಟ್ಟಿದೆ.

ಅಮಾನಿತ

ಇದು ಕೂಡ 'ಕ.ಸಾ.ಪ.ಕ.ನಿ.' ನಲ್ಲಿ ಮುಖ್ಯ ಉಲ್ಲೇಖವಾಗಿ ಸೇರ್ಪಡೆಯಾಗಬೇಕಾದ ಮಗದೊಂದು ನೂತನ ಶಬ್ದ. ಈಗಾಗಲೇ "ಗೌರವವಿಲ್ಲದ, ಮರೆಯಾದ, ಹೊರಟುಹೋದ" ಎಂಬರ್ಥವಿತ್ತು ಅದಕ್ಕೆ ಪೊನ್ನನಿಂದಲೇ ಪ್ರಯೋಗ ವಿತ್ತು (1–93 ವ) ಅಮಾನಿತ ಎಂಬ ಶಬ್ದ ಕೊಟ್ಟಿದ್ದಾರೆ (ಪುಟ 345). ಆದರೆ "ಅಳತೆಮೀರಿದ, ಅಸಾಧ್ಯವಾದ" ಎಂಬರ್ಥದಲ್ಲಿಯೂ ಅಮಾನಿತ ಪದವನ್ನು ಪೊನ್ನ ಬಳಸಿದ್ದಾನೆ :

ಆ ದಿನದೊಳ್ ಹಸ್ತಿನಪುರ
ದಾದುತ್ಸವಮೆಳೆಯೊಳನಿತೆನಲ್ಕೆಡೆಗಾಣ
ಲ್ಕೋದಿದಗಾಳುಗಮಾನಿತ
ಮಾದುದಸಂಜಾತಪೂರ್ವ ವಿಸ್ಮಯದಿಂದಂ ॥ 10–74

ಅಮಾನಿತ ಎಂಬುದು ಸಂಸ್ಕೃತ ಶಬ್ದ.

ಅಪರಣ

ಯಕ್ಷಂ ಸ್ವವಾರಣಕಾಧೋರಣನಾದನುಂತಪರಣಂಗೇ ಕಾರಣಂ ವಾರಣಂ (1–7) ಎಂಬಲ್ಲಿ ಪ್ರಯೋಗವಾಗಿರುವ ಅಪರಣ ಎಂಬ ಶಬ್ದ ಮಹತ್ವದ್ದಾಗಿದೆ. ಯಕ್ಷನು ತನ್ನ ಆನೆಗೆ ಆಧೋರಣನಾದನು (ಆಧೋರಣನೆಂದರೆ ಆನೆಯ ಸವಾರ, ಮಾವುತ ಎಂದರ್ಥ. ಈ ಶಬ್ದಕ್ಕೂ ಪೊನ್ನನದೇ ಅತ್ಯಂತ ಪ್ರಾಚೀನ ಪ್ರಯೋಗವಾಗಿದ್ದು ನಿಘಂಟಿನಲ್ಲಿ

ಸೇರಿಲ್ಲ); ಅವನ ಎಮರಿನಲ್ಲಿ ಇದ್ದ ಪಾಪವೆಂಬ ಸೈನ್ಯ ಕೂಡಲೆ ಪಲಾಯನಮಾಡಿತು. ಹೀಗೆ ಯುದ್ಧವೇ ಇಲ್ಲದೆ ಗೆದ್ದ ಯಕ್ಷನಿಗೆ ಇನ್ನು ಆನೆ ತಾನೆ ಏಕೆ ಬೇಕು? (ಸರ್ವಾಹ್ಣ ಯಕ್ಷನನ್ನು ಯಾರೂ ಇಷ್ಟು ಅದ್ಭುತವಾಗಿ ಕಾವ್ಯಮಯವಾಗಿ ಸ್ತುತಿಯಿಸಿಲ್ಲ. ಕನ್ನಡ ವಾಙ್ಮಯದಲ್ಲಿ ಸರ್ವಾಹ್ಣ ಯಕ್ಷನಿಗೆ ಇದು ಮೊದಲ ಸ್ತುತಿಪದ್ಯ, ಪ್ರಥಮ ಕಾವ್ಯಕುಸುಮ.)

ಇಲ್ಲಿ 'ಅಪರಣಂಗೆ' ಎಂಬುದು ತುಂಬ ಅಪರೂಪವಾದ ಪ್ರಯೋಗ, ನಿಘಂಟಿನಲ್ಲಿ ಈ ಶಬ್ದವೇ ಇಲ್ಲ. ಇದನ್ನು ಉಂತು+ಅಪರಣನ್+ಗೆ ಎಂಬಂತೆ ಪದಚ್ಛೇದಮಾಡಿಕೊಳ್ಳಬೇಕು.

ಪಯಗರಡಿ

ಪೊನ್ನನಲ್ಲಿ ಸಿಗುವ ಅಪೂರ್ವ ಶಬ್ದಗಳಲ್ಲಿ ಪಯಗರಡಿ ಎಂಬುದೂ ಒಂದು :

ಹರಿ ನೀಳೋಪಳಮುಂ ಪಯ
ಗರಡಿಯುಮಿರೆ ನೀಳಯುಗಳಮೆಂದೆಳಸೆ ಷಭ
ಟ್ಚರಯುಗಳಮದಕೆನಗೆಯೋಳ್
ಬಿರಿವಂತಿರೆ ಬಿಟವುಪಲ್ಲಿ ಪೊಸಮಲ್ಲಿಗೆಗಳ್ ॥ 2–97

(ಇಂದ್ರನೀಲಶಿಲೆಯೂ ಪಯಗರಡಿಯೂ ಒಂದೇ ಎಡೆಯಲ್ಲಿದ್ದುವು. ಅದನ್ನು ಕಂಡು ಮೀಚರಿಬ್ಬರು ಇವು ಎರಡು ನೀಲರತ್ನಗಳೆಂದು ಭ್ರಮಿಸಿ ತೆಗೆದುಕೊಳ್ಳಲು ಬಯಸಿದರು. ಅವರ ಎಗ್ಗತನವನ್ನು ಕಂಡು ನಗುವವೊ ಎನೊ ಎಂಬಂತೆ ಅಲ್ಲಿಯ ಹೊಸ ಮಲ್ಲಿಗೆಗಳು ಬಿರಿಯುವವು.) ಇಲ್ಲಿ ಬಳಕೆಯಾಗಿರುವ ಪಯಗರಡಿ (ಈದ ಕರಡಿ) ವಿರಳ ಶಬ್ದವಾಗಿದ್ದು ಮಹತ್ವದ್ದಾಗಿದೆ; ಕನ್ನಡದಲ್ಲಿ ಹೆಚ್ಚು ಪ್ರಯೋಗಗಳಿಲ್ಲ.

ಅಸಂಜಾತ

ಹಿಂದಿನ ಶಬ್ದವಾದ ಅಮಾನಿತಕ್ಕೆ ವಿವರಿಸುವಾಗ ಉದಾಹರಿಸಿದ 10–74ನೆಯ ಪದ್ಯದಲ್ಲೇ ಬರುವ ಅಸಂಜಾತ ಕೂಡ 'ಕ.ಸಾ.ಪ.ಕ.ನಿ.' ನಲ್ಲಿ ಮುಖ್ಯ ಉಲ್ಲೇಖವಾಗಿ ಬರಬೇಕಾದ ಇನ್ನೊಂದು ಹೊಸ ಶಬ್ದ. ಇದೂ ಕೂಡ ಸಂಸ್ಕೃತ ಭಾಷೆಯ ಶಬ್ದ. (ಅದುವರೆಗೂ) ಹುಟ್ಟದಿರುವ, ಅಪೂರ್ವವಾದ ಎಂಬುದು ಇದರ ಹುರುಳು.

ಆತ್ಮಕಿರಣ

ಇನ್ನೊಂದು ಸೇರ್ಪಡೆಯಾಗಿ 'ಕ.ಸಾ.ಪ.ಕ.ನಿ.' ನಲ್ಲಿ ಮುಖ್ಯ ಉಲ್ಲೇಖವಾಗಿ ಬರಬೇಕಾದ ಶಬ್ದ ಆತ್ಮಕಿರಣ (1–14 ವ). ಶಾಂತಿಪುರಾಣದ 'ಅನೇಕ ಸಮಯ' ಶಬ್ದ ಸೇರಬೇಕಾಗಿದೆಯೆಂದು ತಿಳಿಸಿರುವ ಕಡೆ ಉದಾಹರಿಸಿರುವ ಪ್ರಯೋಗ ಭಾಗದಲ್ಲೇ ಈ ಶಬ್ದವೂ ಬಂದಿದೆ. ಇದೂ ಸಂಸ್ಕೃತ ಶಬ್ದವೇ.

ಉಗ್ರಾಹಿ

ಪೊನ್ನನ ಶಾಂತಿಪುರಾಣದಲ್ಲಿ ಭಾಷಾವಿಜ್ಞಾನ, ಶಬ್ದಾರ್ಥವಿಜ್ಞಾನ, ಸಮಾಜವಿಜ್ಞಾನ, ಸಾಂಸ್ಕೃತಿಕ ಅಧ್ಯಯನ, ಕನ್ನಡ ಕವಿಕಾವ್ಯಪರಂಪರೆ ಮೊದಲಾದ ದೃಷ್ಟಿಗಳಿಂದ ಪರಾಮರ್ಶೆಗೆ ಯೋಗ್ಯವಾದ ಪದ್ಯಗಳು ಸಾಕಷ್ಟಿವೆ. ಅವುಗಳಲ್ಲಿ ಪಂಚಮಾಶ್ವಾಸದ ಇಪ್ಪತ್ತೇಳನೆಯ ಪದ್ಯವೂ ಒಂದು. ಇದನ್ನು ಮುಂದೆ ವಿವರವಾಗಿ ವಿವೇಚಿಸಿದೆ. 5-27ರಲ್ಲಿ ಬರುವ 'ಉಗ್ರಾಹಿ' ಶಬ್ದ ನಿಘಂಟಿನಲ್ಲಿ ಮುಖ್ಯ ಉಲ್ಲೇಖವಾಗಿ ಬರಬೇಕು.

ಎಯ್ಯಪಿಂಡು

ಶಾಂತಿಪುರಾಣ (4–16 ವ) ದಲ್ಲಿ ಬರುವ ಈ ಶಬ್ದಕ್ಕೆ ವಿಶೇಷತೆ ಬರಲು ಕಾರಣ ನಿಘಂಟಿನಲ್ಲಿ ಈ ಶಬ್ದ ದಾಖಲಾಗಿಲ್ಲದಿರುವುದು. 'ಮುಳ್ಳುಹಂದಿಗಳ ಹಿಂಡು' ಎಂಬುದು ಇದರ ಅರ್ಥ. ಇದು ದೇಶ್ಯ ಶಬ್ದ; ಎಯ್ + ಅ + ಪಿಂಡು (→ ಹಿಂಡು).

ಏಕಸಮಯ

ನಿಘಂಟಿನಲ್ಲಿ ಮುಖ್ಯ ಉಲ್ಲೇಖವಾಗಿ ನೂತನವಾಗಿ ಸೇರಬೇಕಾದ ಇನ್ನೂ ಒಂದು ಶಬ್ದ **ಏಕಸಮಯ** ಎಂಬುದು. ಶಾಂತಿಪುರಾಣದಲ್ಲಿ 4–14ರಲ್ಲಿ ಇದು ಪ್ರಯೋಗವಾಗಿದೆ. ಇದು ಸಂಸ್ಕೃತ ಶಬ್ದ. ಏಕರೂಪ, ಏಕವಚನ, ಏಕವರ್ಣ, ಏಕವಸ್ತು, ಏಕವಾಕ್ಯ, ಏಕಸಂಧಿ—ಮುಂತಾದ ಶಬ್ದರೂಪಗಳನ್ನು ಈಗ ಮುಖ್ಯ ಉಲ್ಲೇಖವಾಗಿ ಕೊಟ್ಟಿರುವಂತೆ 'ಏಕಸಮಯ' ವೂ ಬರಬೇಕು.

ಒಕ್ಕಲಕೂಸು

ನಿಘಂಟಿನಲ್ಲಿ ಮುಖ್ಯ ಉಲ್ಲೇಖವಾಗಿ ಸೇರಬೇಕಾದ ಶಬ್ದಗಳ ಪಟ್ಟಿಯಲ್ಲಿ **ಒಕ್ಕಲಕೂಸು** ಎಂಬುದೂ ಒಂದು (4–66). ಇದು ದೇಶ್ಯ ಶಬ್ದ—ಒಕ್ಕಲ್ + ಅ + ಕೂಸು, ಬೇಸಾಯಗಾರನ ಮಗು ಎಂಬುದು ಇದಕ್ಕೆ ಕೊಡಬೇಕಾದ ಅರ್ಥ. ಪೊನ್ನನ ಪ್ರಯೋಗ ಏಕೈಕವೆಂದು ತೋರುತ್ತದೆ. ಬಿಡುವೇಳೆ ಇದನ್ನು 'ಒಕ್ಕಲ್' ಎಂಬ ಶಬ್ದದ ಕೆಳಗೆ ನುಡಿಗಟ್ಟಾಗಿ ಕೊಟ್ಟರೂ ಆದೀತು.

ಒಳಗಿಡು

'ಕ.ಸಾ.ಪ.ಕ.ನಿ.' ನಲ್ಲಿ ಮುಖ್ಯಉಲ್ಲೇಖವಾಗಿ ಕೊಡಬೇಕಾಗಿ ಬರುವ ಮಗದೊಂದು ಶಬ್ದ **ಒಳಗಿಡು** ಎಂಬುದು. ಪೊನ್ನನು ಶಾಂತಿಪುರಾಣದಲ್ಲಿ ಎರಡುಕಡೆ 6–62 ವ ಮತ್ತು 6–75 ರಲ್ಲಿ ಇದನ್ನು ಬಳಸಿದ್ದಾನೆ. ಇದು ದೇಶ್ಯ ಶಬ್ದವಾಗಿದ್ದು ವಶಪಡಿಸಿಕೊ, ಮಡಗಿಕೊ, ಉಪಪತ್ನಿಯಾಗಿ ಇಟ್ಟುಕೊಳ್ಳುವುದು ಎಂಬ ಅರ್ಥ ಪಡೆದಿದೆ. ಪಂಪ ಭಾರತ ಮೊದಲಾದ ಕೆಲವು ಕಾವ್ಯಗಳಲ್ಲಿ ಪ್ರಯೋಗವಾಗಿರುವ ಒಳಕೆಯ್, ಒಳಕೊಳ್, ಒಳಗೊಳ್ ಎಂಬ ಶಬ್ದಗಳೊಡನೆ ಈ ಒಳಗಿಡು ಎಂಬ ಶಬ್ದವನ್ನೂ ತುಲನಾತ್ಮಕವಾಗಿ ಪರಾಮರ್ಶಿಸಬಹುದು.

ಕಱಂಪು

ಪೊನ್ನನ ಶಾಂತಿಪುರಾಣ 7–95 ವ ದಲ್ಲಿ ಕಱಂಪುನಾಱುವ ಎಂಬೊಂದು ಪ್ರಯೋಗವಿದೆ. ಇದೊಂದು ನುಡಿಗಟ್ಟು ಇದ್ದಂತೆ. ಮಹಾಬಲಕವಿಯ ನೇಮಿನಾಥಪುರಾಣದಲ್ಲಿ ಕರೆಂಬುನಾರ್ಪ (6–118 ವ) ಎಂಬ ಮಾತಿದೆ (ಎಪಿಗ್ರಾಫಿಯಾ ಕರ್ನಾಟಿಕಾದ ಐದನೆಯ ಸಂಪುಟ). ಬೇಲೂರು ಶಾಸನದಲ್ಲಿ (ಕಾಲ 1160) ಕರಂಪುನಾರ್ಪಿನಂ ಎಂದಿದೆ. ಇವೆರಡನ್ನೂ ನಿಘಂಟಿನಲ್ಲಿ ಉದಾಹರಿಸಲಾಗಿದೆ. ಆದರೆ ಪೊನ್ನನ ಪ್ರಯೋಗವೇ ಪ್ರಾಚೀನವೂ ಪ್ರಮುಖವೂ ಆಗಿದ್ದು ನಿಘಂಟಿನಲ್ಲಿ ಬಂದಿಲ್ಲ. ಪೊನ್ನನ ನುಡಿ ಹಳೆಯದಾಗಿರುವುದರ ಜತೆಗೆ ಮಹತ್ವದ್ದೂ ಹೇಗೆ ಎಂಬುದನ್ನು ಸ್ವಲ್ಪ ವಿವರಿಸಬೇಕಾಗುತ್ತದೆ. ಮಹಾಬಲಕವಿಯ ಮತ್ತು ಶಾಸನದ ಪ್ರಯೋಗಗಳಲ್ಲಿ ಸಾಮಾನ್ಯರೇಫವಿದೆ. ಆದರೆ ಪೊನ್ನನಲ್ಲಿ ಶಕಟರೇಫವಿದೆ. 'ಸುಟ್ಟುವಾಸನೆ ಬರುವ' ಎಂಬರ್ಥದ ಈ ಹೇಳಿಕೆಯಲ್ಲಿ ಕಱಂಪು ಎಂಬುದೂ ಶುದ್ಧರೂಪವೇ. ಏಕೆಂದರೆ ಕಪ್ಪು, ಕರಿಕು ಎಂಬರ್ಥದಲ್ಲಿ ಸಾಮಾನ್ಯರೇಫದ ಜತೆಗೆ ಶಕಟರೇಫದ ರೂಪಗಳು ತಮಿಳಿನಲ್ಲೂ ಸಿಗುತ್ತವೆ. ಹೀಗೆ ಜ್ಞಾತಿರೂಪಗಳು ಉಪಲಬ್ಧವಿರುವ ಕಱಂಪು ಶಬ್ದವನ್ನು ಮುಖ್ಯ ಉಲ್ಲೇಖವಾಗಿಯೇ ಪ್ರತ್ಯೇಕವಾಗಿ ಕೊಡಬೇಕು.

ಕಾನೂರ್ಗಣ

ಈಗ ಪ್ರಕಟವಾಗಿರುವ 'ಕ.ಸಾ.ಪ.ಕ.ನಿ.' ನಲ್ಲಿ ಮುಖ್ಯ ಉಲ್ಲೇಖವಾಗಿ ಅಳವಡಬೇಕಾದ ಮತ್ತೊಂದು ಶಬ್ದವಿದೆ, ಪೊನ್ನನ ಶಾಂತಿಪುರಾಣದಲ್ಲಿ. 'ಕಾನೂರ್ಗಣ ಮುನಿಪತಿ' (1–17) ಎಂಬಲ್ಲಿ ಬರುವ ಕಾನೂರ್ಗಣ ಶಬ್ದ ನಿಘಂಟಿನ ಕಣ್ಣಿಂದ ತಪ್ಪಿಸಿಕೊಂಡಿದೆ. ದೇಸಿಗಣ, ದೇಸಿಗಗಣ ಶಬ್ದಗಳನ್ನು ಪುಟ 4079ರಲ್ಲಿ ಕೊಟ್ಟಿದ್ದಾರೆ. ಆದರೆ ಕಾನೂರ್ಗಣ ಕಾಣೆಯಾಗಿದೆ. 'ಜೈನಮುನಿಗಳ ಸಂಘ' ಎಂಬುದು ಈ ಶಬ್ದದ ಅರ್ಥ. ಕುವೆಂಪುರವರ 'ಕಾನೂರು ಹೆಗ್ಗಡಿತಿ' ಎಂಬ ಕಾದಂಬರಿಯ ಹೆಸರು ನೆನಪಿಗೆ ತಂದುಕೊಂಡರೆ ಕಾನೂರ್ಗಣ ಎಂಬುದು ಕಾನೂರು ಎಂಬ ಸ್ಥಳದಿಂದ ಪ್ರಾರಂಭವಾದ ಗಣ ಇರಬಹುದೆಂಬ ಸಂದೇಹ ಸಹಜವಾಗಿಯೇ ಬರುತ್ತದೆ. ಕಾಣೂರು ಎಂಬ ರೂಪವೂ ಉಂಟು.

ಕುಷ್ಮಿನಿ

ಪೊನ್ನನ ಶಾಂತಿಪುರಾಣದ 4–66 ನ ದಲ್ಲಿ ಬರುವ ಕುಷ್ಮಿನಿ ಎಂಬುದು ಮತ್ತೂ ಒಂದು ಹೊಸ ಶಬ್ದ. ನಿಘಂಟಿನಲ್ಲಿ ಮುಂದಾನೊಂದು ಕಾಲದಲ್ಲಿ ಪರಿಷ್ಕೃತ ಸಂಪುಟ ಹೊರಬರುವಾಗ ಇದು ಮುಖ್ಯ ಉಲ್ಲೇಖವಾಗಿ ಸೇರ್ಪಡೆಯಾಗಬೇಕು.

ಗಜಪ್ರಿಯತೆ ಮತ್ತು ಗಜಮಸ್ತಕ

ಪೊನ್ನಕವಿ ಗಜಶಾಸ್ತ್ರದಲ್ಲಿ ಸಾಕಷ್ಟು ಪರಿಶ್ರಮ ಪಡೆದಿದ್ದಂತೆ ತೋರುತ್ತದೆ. ಈ ಹೇಳಿಕೆಯನ್ನು ಒಪ್ಪಿಕೊಳ್ಳಲು ನೆರವಾಗುವ ಮಾತುಗಳು ಶಾಂತಿಪುರಾಣದಲ್ಲಿ ಸೂರೆಹೋಗಿವೆ. ವಿಸ್ತಾರವಾದ ವರ್ಣನೆಗಳು ಆನೆಗೂ, ಆನೆಯ ಬದುಕಿಗೂ, ಗುಂಪಿಗೂ ಸಂಬಂಧಪಟ್ಟಂತೆ ಕಾವ್ಯದುದ್ದಕ್ಕೂ ಬರುತ್ತವೆ. ಮೂಲ ಕೃತಿಯಾದ ಗುಣಭದ್ರಾಚಾರ್ಯನ ಉತ್ತರಪುರಾಣ ಹಾಗೂ ಅಸಗನ ಶಾಂತಿಪುರಾಣದಲ್ಲಿ ಅಲ್ಲದೆ ಪೊನ್ನನೇ ಕಲ್ಪಿಸಿಕೊಟ್ಟಿರುವ ಸ್ವೋಪಜ್ಞ ಸಂದರ್ಭಗಳಲ್ಲೂ ಆನೆಯನ್ನು ಕುರಿತ ಚಿತ್ರಣ ಸಮೃದ್ಧವಾಗಿ ಸಿಗುತ್ತದೆ. ಗಂಧದ್ವಿಪಂ (4–20), ಗಂಧಸಿಂಧುರ (4-20ವ), ಗಂಧಹಸ್ತಿ (5–96), ಗಜಘಂಟಾರವ (3 97), ಗಜಘಟೆ(2–9), ಗಜರಾಜ (1–84ವ), ಗಜವಶೆ(8–63 ವ), ಗಜಾರಿ (4–19), ಗಜೇಂದ್ರ (4–21), ಗಜೋಪಜೀವಿ (3–72 ವ), ಗಜೋನ್ಮೀಲನ (2–22 ವ) ಮೊದಲಾದ ಪೊನ್ನನ ಪ್ರಯೋಗಗಳಲ್ಲಿ ಬಹುಮಟ್ಟಿನವು ಆಯಾ ಶಬ್ದದ ಪ್ರಾಚೀನ ಪ್ರಯೋಗ ಮಾತ್ರವಲ್ಲದೆ ಏಕೈಕ ಪ್ರಯೋಗವೂ ಆಗಿರುವುದುಂಟು. ಇವುಗಳಲ್ಲದೆ ನಿಘಂಟಿನಲ್ಲಿ ಈಗ ಹೊಸದಾಗಿ ಮುಖ್ಯ ಉಲ್ಲೇಖವಾಗಿ ಸೇರಬೇಕಾದ ಇನ್ನೆರಡು ಶಬ್ದಗಳು ಗಜಪ್ರಿಯತೆ (4–19) ಮತ್ತು ಗಜಮಸ್ತಕ (4–18). ಪೊನ್ನನ ಗಜಪ್ರಿಯತೆಯನ್ನು ಮಸ್ತಕಕ್ಕೇರಿಸುವ ಈ ಎರಡು ಹೊಸ ಮಾತುಗಳು ನಿಘಂಟಿಗೆ ಕೊಟ್ಟ ಪೊನ್ನನ ಕಾಣಿಕೆಯೂ ಆಗಿವೆ. ಇವೆರಡೂ ದೇಶ್ಯ ಶಬ್ದಗಳಲ್ಲ, ಸಂಸ್ಕೃತ ಶಬ್ದಗಳು.

ಜರದಜಗರ

ಕನ್ನಡ ಪದಕೋಶಕ್ಕೆ ಪೊನ್ನನ ಇನ್ನೊಂದು ಶಬ್ದದೇಣಿಗೆ 'ಜರದಜಗರ' ವೃದ್ಧಸರ್ಪ, ಮುದಿ ಹೆಬ್ಬಾವು ಎಂಬರ್ಥದ ಈ ಸಂಸ್ಕೃತ ಶಬ್ದವನ್ನು ಮುಖ್ಯ ಉಲ್ಲೇಖವಾಗಿ ಕೊಟ್ಟು ಇದಕ್ಕೆ ಪೊನ್ನನ ಶಾಂತಿಪುರಾಣದಲ್ಲಿ 6-26ರಲ್ಲಿ ಬರುವ ಪ್ರಯೋಗ ಕೊಡಬೇಕು.

> ಪರಮಾರ್ಥತೆ ಹಿತಮಹಿತಮ
> ಪರಮಾರ್ಥತೆಯೆನ್ನದಾತ್ಮಜನಕಜ್ಞಾನ
> ಸ್ಥಿರತೆಯೊಡನೊಡನೆ ಜರದಜ
> ಗರಗರಳಗತಾಯು ಮುಂಡಕೌಶಿಕನಬಿದಂ ॥ 6–26

ಈ ಪದ್ಯದಲ್ಲಿ ಬರುವ ಜರದಜಗರ ಎಂಬ ಶಬ್ದ ನಿಘಂಟಿನಲ್ಲಿ ಬಿಟ್ಟುಹೋಗಿರುವುದಲ್ಲದೆ **ಗಿಶಾಯು** ಎಂಬ ಸಂಸ್ಕೃತ ಶಬ್ದಕ್ಕೆ ಪೊನ್ನನ ಈ ಏಕೈಕ ಪ್ರಯೋಗವನ್ನೂ ಉದಾಹರಿಸಬೇಕು. ನಿಘಂಟಿನ ಪುಟ 2408ರಲ್ಲಿ ಗಿಶಾಯು ಶಬ್ದಕ್ಕೆ ಆಯುಸ್ಸು ತೀರಿಹೋದ ಎಂಬರ್ಥ ಹೇಳಿ ಪ್ರಯೋಗ ಇಲ್ಲವೆಂದು ಕೈಯಾಡಿಸಿದ್ದಾರೆ; ಪೊನ್ನನಲ್ಲಿ ಭರ್ಜರಿ ಪ್ರಯೋಗವಿದೆ. ಅದರಂತೆ ಗತಿಕ ಶಬ್ದಕ್ಕೆ ಸಿಗುವ ಪೊನ್ನನ ಈ ಅತ್ಯಂತ ಪ್ರಾಚೀನ ಪ್ರಯೋಗವನ್ನೂ ಸೇರಿಸಬೇಕು (ಪುಟ 2426).

ಜಿನಮದನ

ನಿಘಂಟಿನಲ್ಲಿ ಜಿನಗೃಹ, ಜಿನಚೈತ್ಯ, ಜಿನದಾಸಿ, ಜಿನದೀಕ್ಷಿತ, ಜಿನಮಂದಿರ, ಜಿನಪತಿ ಮೊದಲಾದ ಶಬ್ದಗಳನ್ನು ಮುಖ್ಯ ಉಲ್ಲೇಖವಾಗಿ ಪುಟ 3059–3060 ರಲ್ಲಿ ಕೊಟ್ಟಿದ್ದಾರೆ. ಆದರೆ ಜಿನಮದನ ಎಂಬ ಇನ್ನೊಂದು ಮುಖ್ಯ ಉಲ್ಲೇಖ ಕೈಬಿಟ್ಟುಹೋಗಿದೆ. ಪೊನ್ನ ತನ್ನ ಶಾಂತಿಪುರಾಣ 1–13 ರಲ್ಲಿ ಅದನ್ನು ಉಳಿಸಿಕೊಟ್ಟಿದ್ದಾನೆ. ಸತ್ಪುರುಷ, ಜೈನಯತಿ, ಮನ್ಮಥನನ್ನು ಗೆದ್ದವನು ಎಂಬರ್ಥವಿತ್ತು ನಿಷ್ಪತ್ತಿ ಭಾಗದಲ್ಲಿ ಸಂಸ್ಕೃತ ಎಂದು ತೋರಿಸಬೇಕು.

ಜಿನನಾಥರೂಪ

ಜಿನನಾಥ ಎಂಬ ಶಬ್ದವನ್ನು ಕೊಟ್ಟಿದ್ದಾರೆ. ಹಾಗೆಯೇ ಜಿನನಾಥ ರೂಪ ಎಂಬ ಇನ್ನೊಂದು ಹೊಸ ಮುಖ್ಯ ಉಲ್ಲೇಖವನ್ನೂ ಕೊಡಬೇಕು; ಅರ್ಥ 'ದಿಗಂಬರತ್ವ', ನಿಷ್ಪತ್ತಿ ಸಂಸ್ಕೃತ. ಜಿನನಾಥ ಶಬ್ದಕ್ಕೆ ಪೊನ್ನನ ಪ್ರಯೋಗ 4–108 ವ ಉದಾಹರಿಸಿದ್ದಾರೆ. ಆದರೆ ಇಲ್ಲಿರುವುದು 'ಜಿನನಾಥರೂಪ' ಎಂಬ ಸಮಷ್ಟಿ ಶಬ್ದರೂಪ ಎಂಬುದನ್ನು ವಿಶೇಷವಾಗಿ ಗಮನಿಸಬೇಕು, ಇದನ್ನು ಬೇರೆ ಪ್ರಯೋಗಗಳಿಂದ ಬೇರ್ಪಡಿಸಬೇಕು.

ಕಾರೋಹಣ

ಕಾಲದ ಕರೆಯಲ್ಲಿ ಮರೆಯಾಗದಂತೆ ಪೊನ್ನಕವಿ ಕಾದಿರಿಸಿದ ಮಾತುಗಳಲ್ಲಿ ಕಾರೋಹಣ ಎಂಬುದೂ ಒಂದು :

> ಮಣಿಕುಟ್ಟಿಮ ಭೂಮಿಗೆ ಕೆ
> ಲ್ಲೆಣಿಯದಿದೆನೆ ಪೋಲೆ ನಿಮಿರೆ ಪಾಸಿದ ಕಾರೋ
> ಹಣದಿಂ ನೃಪೇಂದ್ರಭವನಾಂ
> ಗಣಮೊಪ್ಪಿದುದುರ್ವರಾಸ್ಯತಿಲಕನ ಬರವಿಂ ॥ 10–71

ಇದರ ತಾತ್ಪರ್ಯಾರ್ಥ; ರತ್ನಮಯವಾದ ನೆಲಗಟ್ಟಿಗೆ ಇದೇನು ಕಡಮೆಯದಲ್ಲವೆಂಬಂತೆ ಅಗಲವಾಗಿ ಹಾಸಿದ 'ಕಾರೋಹಣ' ವೆಂಬ ಬಟ್ಟೆಯಿಂದ ಒಪ್ಪುವ ಅರಮನೆಯ ಅಂಗಳವು ಭೂಲೋಕಭೂಷಣನಾದ ಶಾಂತಿನಾಥನ ಆಗಮನಕ್ಕೆ ಅಣಿಯಾಗಿತ್ತು. ಇಲ್ಲಿ ಬರುವ ಕಾರೋಹಣ ಶಬ್ದಕ್ಕೆ ಅರ್ಥವೇನೆಂದು ಹುರುಳನ್ನು ಅರಸಬೇಕಾಗಿದೆ. 'ಕ.ಸಾ.ಪ.ಕ.ನಿ.' ನಲ್ಲಿ ಈ ಶಬ್ದವೇ ದಾಖಲಾಗಿಲ್ಲದಿರುವುದು ಪರಮಾಶ್ಚರ್ಯಗಳಲ್ಲೊಂದಾಗಿದೆ. ಅದು ಎಲ್ಲಿಯೋ ಪರಪಾಟಿನಿಂದ ಬಿಟ್ಟುಹೋಗಿರಬಹುದು. ಇದು ಸಹಜವೇ! ಶಬ್ದ ಪಾರಮಾರ್ಗಮಶಕ್ಯಂ ಎಂಬ ಕೇಶಿರಾಜನ ಮಾರ್ಗೋಕ್ತಿಯಿದೆ.

ಈ ಅಪರೂಪದ ನುಡಿಯನ್ನು ಇನ್ನಿಬ್ಬರು ಕನ್ನಡ ಕವಿಗಳು ಬಳಸಿರುವುದನ್ನೂ ಇದರ ಅರ್ಥನಿಷ್ಪತ್ತಿಯನ್ನೂ ಡಾ॥ ಜೊಲನರವರು 'ಕಾರೋಹಣದ ಪಟ' ಲೇಖನದಲ್ಲಿ ದಾಖಲಿಸಿದ್ದಾರೆ. ಆದರೆ ಅವರಿಗೆ ಪೊನ್ನನ ಪ್ರಯೋಗ ಕಣ್ಣಿಗೆ ಬಿದ್ದಿಲ್ಲ, ಇದನ್ನು ನಾನು ಹೊಸದಾಗಿ ಗುರುತಿಸಿ ಸೇರಿಸಿದ್ದೇನೆ. ಪೊನ್ನನಲ್ಲದೆ ಪಂಪ ಮತ್ತು ಶಾಂತಿನಾಥ ಕವಿ ಈ ಪದವನ್ನು ಬಳಸಿರುವ ಭಾಗವಿದು :

1. ಪಂಪ : ಆದಿಪುರಾಣ 4–34 ಗದ್ಯ

2. ಶಾಂತಿನಾಥ : ಸುಕುಮಾರಚರಿತೆ 10–91 ಗದ್ಯ

ಪಂಪನ ವಿವರಣೆಯನ್ನು ಅನುಸರಿಸಿ ಅನುಕರಣನಗೊಳಿಸಿರುವ ಶಾಂತಿನಾಥನಲ್ಲಿ ಕಾರೋಹಣದ ಪಟ್ಟೆಯು ಎಂಬ ರೂಪ ಕಾಲೋಹಣದ ಪಟ್ಟೆಯು ಎಂದಾಗಿದೆ. ಕಾರೋ (ಲೋ) ಹಣ ಎಂಬುದು ಒಂದು ಊರಿನ ಹೆಸರು. ಇದೇ ಇಂದಿನ ಕರ್ವಾನ್ ಎಂಬ ಸ್ಥಳ. ಪಾಶುಪತವ್ರತಸ್ಥಾಪಕ ಲಕುಲೀಶನು ಇಲ್ಲಿ ವಾಸಿಸುತ್ತಿದ್ದನೆಂದು ತಿಳಿದುಬರುತ್ತದೆ. ಕಾರೋಹಣವೆಂಬ ಊರಿನಲ್ಲಿ ನೇಯುತ್ತಿದ್ದ ಬಟ್ಟೆಯೇ ಕಾರೋಹಣದ ಪಟ್ಟೆ. ಇದರ ನಿಷ್ಪತ್ತಿ ಹೀಗಿದೆ: ಕಾಯಾವರೋಹಣ→ಕಾರೋಹಣ→ಕಾಲೋಹಣ→ಕಾ (ಕ) ರ್ವಾನ್. ರಕಾರ ಮತ್ತು ಲಕಾರ ಸಮೀಪಸ್ಥಾನೀಯ ಧ್ವನಿಗಳಾದುದರಿಂದ ಧ್ವನಿಪಲ್ಲಟವಾಗುವುದುಂಟು. ಪೊನ್ನನಿಗೆ ಆಶ್ರಯಕೊಟ್ಟು 'ಉಭಯಕವಿ ಚಕ್ರವರ್ತಿ' ಪ್ರಶಸ್ತಿಯಿತ್ತು ಗೌರವಿಸಿದ ಮುಮ್ಮಡಿ ಕೃಷ್ಣದೊರೆಯ ಕಾಲದಲ್ಲಿ ರಾಷ್ಟ್ರಕೂಟರು ಲಾಟ (ಲಾಟ್) ದೇಶದವರೆಗೂ ವಿಜಯ ಸಂಪಾದಿಸಿದ್ದರೆಂಬುದು ಇಲ್ಲಿ ಸ್ಮರಣೀಯವಾದುದು. ಉತ್ತರದ ಕಾರೋಹಣದ ವಸ್ತ್ರ ಕನ್ನಡನಾಡಿಗೆ ಪ್ರವೇಶಿಸಿದ್ದು ರಾಷ್ಟ್ರಕೂಟರ ಕಾಲದಲ್ಲಿ ಎಂಬ ಐತಿಹಾಸಿಕ ಸಂಗತಿ ಮಹತ್ವ ಪಡೆಯುತ್ತದೆ. ಪಂಪ–ಶಾಂತಿನಾಥರು ಕಾರೋಹಣದ ಪಟ್ಟೆ ಎಂದು ಹೇಳಿದರೆ ಪೊನ್ನನು ಕೇವಲ 'ಕಾರೋಹಣದಿಂ' ಎಂದು ಹೇಳುತ್ತಾನೆ. ಇದೂ ಕೂಡ ಮುಖ್ಯವೇ. ಏಕೆಂದರೆ ಕೇವಲ 'ಕಾರೋಹಣ' ವೆಂದರೇನೆ ವಸ್ತ್ರವಿಶೇಷ, ಶ್ರೇಷ್ಠವಾದ ಬಟ್ಟೆ, ಬೆಲೆಬಾಳುವ ಬಟ್ಟೆ— ಎಂಬಿತ್ಯಾದಿ ಅರ್ಥ ಬರುತ್ತಿತ್ತೆಂಬುದು ಪೊನ್ನನ ಪ್ರಯೋಗದಿಂದ ಪ್ರತೀತಿಗೊಳ್ಳುತ್ತದೆ. ಆದರಿಂದಲೇ ಅವನ ಪ್ರಯೋಗ ಪ್ರಮುಖವೆನಿಸುತ್ತದೆ. 'ಕ.ಸಾ.ಪ.ಕ.ನಿ.' ಯ ಮುಂದಿನ ಮುದ್ರಣದಲ್ಲಿ ಈ ಶಬ್ದ ಅವಶ್ಯ ಸೇರಬೇಕು.

ಖದಿರಯುಗಳ

ಪೊನ್ನಕವಿ ಇಂದು ನಮಗೆ ಅಪರೂಪವೆಂದೆನಿಸಬಹುದಾದ ನೂರಾರು ಶಬ್ದಗಳನ್ನು ಕಾಸಿಗೊಂದು ಕೊಸರಿಗೆರಡು ಎಂಬಂತೆ ಶಾಂತಿಪುರಾಣದ ತುಂಬ ಚೆಲ್ಲಾಡಿದ್ದಾನೆ. ಅವುಗಳಲ್ಲಿ ಎಲ್ಲವನ್ನೂ ದಾಖಲಿಸಬೇಕಾದ ನಿಘಂಟು ಕಾರ್ಯದಲ್ಲಿ ಅಕ್ಷಮ್ಯ ಅಪರಾಧ ಹಾಗೂ ವಿಫಲತೆ ಉಂಟಾಗಿದೆ. ಇದಕ್ಕೆ ಕಾರಣ ಹುಡುಕಿ ಅಪರಾಧಿಗಳನ್ನು ಗುರುತಿಸುವುದು ನನ್ನ ಉದ್ದೇಶವಲ್ಲ. ಶಬ್ದಪಾರಾವಾರಗರ್ನಾಮಶಕ್ಯಂ ಎಂಬುದನ್ನು ನೆನಪಿಡಬೇಕು. ಪೊನ್ನನಿಗಂತೂ ಪಂಗನಾಮವಾಗಿರುವುದು ನಿಜ.

ಪೊನ್ನನ ಶಬ್ದಬತ್ತಳಿಕೆಯಲ್ಲಿ ಹೊಳೆಯುವ ಇನ್ನೊಂದು ಶಬ್ದ ಖದಿರಯುಗಳ. ನಿಘಂಟಿನಲ್ಲಿ ಖದಿರ ಎಂಬ ಶಬ್ದ ಕೊಟ್ಟಿದ್ದಾರೆ, ಅದಕ್ಕೂ ಪ್ರಾಚೀನವಾದ ಪೊನ್ನನ ಪ್ರಯೋಗ ಕೊಟ್ಟಿಲ್ಲ. ಖದಿರಯುಗಳ (3–66 ವ) ಎಂಬುದನ್ನು ಮುಖ್ಯ ಉಲ್ಲೇಖವಾಗಿ ಕೊಡಬೇಕು—ಈ ಸಂಸ್ಕೃತ ಶಬ್ದಕ್ಕೆ ಅರ್ಥ ಕಾಚಿನ ಜೋಡಿಮರ ಎಂದು.

ಅನೂಪವಿಷಯ

ಇದೊಂದು ಅಪರೂಪವಾಗಿ ಕನ್ನಡದಲ್ಲಿ ಉಪಯೋಗವಾಗಿರುವ ಸಂಸ್ಕೃತ ಶಬ್ದ. ಪಂಪನ ಆದಿಪುರಾಣದಲ್ಲಿ (8–63 ವ) 'ದೇವ ಮಾತೃಕ ಸಾಧಾರಣಾನೂಪ ಜಾಂಗಲ ಭೇದಂಗಳೂ' ಎಂಬ ವಾಕ್ಯದಲ್ಲಿ ಅನೂಪ ಶಬ್ದ ಪ್ರಯೋಗವಾಗಿದೆ. ಅನೂಪವೆಂದರೆ ಜೌಗುಪ್ರದೇಶ, ನೀರು ತುಂಬಿರುವ ಎಡೆ ಎಂದು ಅರ್ಥ. ಇದರ ನಿಷ್ಪತ್ತಿ ಹೀಗಿದೆ ;

ಅನೂಪ—ಸಂಸ್ಕೃತ ರೂಪ; ಇದು ಅಪ್ (ನೀರು) ಎಂಬುದರಿಂದ ಬಂದಿದೆ. ಇದಕ್ಕೆ ಬೇರೆ ಆರ್ಯಭಾಷೆಗಳಲ್ಲಿ ಜ್ಞಾತಿರೂಪಗಳಿವೆ. ಪರಾ: ಪಾಲಿ, ಅನೂಪ (ವಿಶೇಷಣ ರೂಪ); ಪ್ರಾಕೃತ, ಅಣೂವ (ಜೌಗುಪ್ರದೇಶ); ಹಿಂದಿ: ಅಣೂಅ, ಸಿಂಹಳೀ: ಅನು, ಅನುಪ. ಪೊನ್ನಕವಿ ಬಳಸಿರುವ ಅನೂಪ ವಿಷಯ (ಶಾಂತಿಪುರಾಣ, 5-121) ಕನ್ನಡದಲ್ಲಿ ಸಿಗುವ ಏಕೈಕ ಪ್ರಯೋಗ—ತಗುಳ್ದು ನುಡಿದಳ್ ಪ್ರಪಂಚಮ**ನನೂಪವಿಷಯಾ**ಧಿಪನಾ (5-121). ಅನೂಪದೇಶ ಎಂದು ಬೇರೆ ಕವಿಯ ಪ್ರಯೋಗವೂ ಉಂಟು.

ಒಟ್ಟಜೆ

ಪೊನ್ನಕವಿ ಒಟ್ಟಜೆ ಎಂಬ ರೂಪವನ್ನು ಶಾಂತಿಪುರಾಣದಲ್ಲಿ ಬಳಸಿದ್ದಾನೆ: 'ಬರ್ಪುದಿಲ್ಲ ಬರ್ಬರೆಯ ಕಿರಾತ್ ಯೊಟ್ಟಜೆಗೆ ಕಿನ್ನರರೊಟ್ಟಜೆಯುಂ ತೆರಬಿೞ್ಕೆಯುಂ' (2-22). ಇದಕ್ಕೆ ಅತಿಶಯತೆ ಎಂಬುದು ಅರ್ಥ. ಒಟ್ಟಜೆ ಶಬ್ದಕ್ಕೆ ಸಮೂಹ, ಪರಾಕ್ರಮ, ಆವೇಶ ಎಂಬರ್ಥಗಳೂ ಸಂದರ್ಭವಶದಿಂದ ಹೊರಡುತ್ತವೆ. ನಿಘಂಟಿನಲ್ಲಿ ಪೊನ್ನನ ಈ ಪ್ರಯೋಗ ದಾಖಲಾಗಿಲ್ಲ. ಒಟ್ಟಜೆ ಶಬ್ದಕ್ಕೆ ನಿಷ್ಪತ್ತಿಭಾಗದಲ್ಲಿ ಪ್ರಶ್ನೆಯೂ ಇದೆ (ಪುಟ 1198). ಒಟ್ಟಜೆ, ಒಟ್ಟಜ, ಒಟ್ಟಜಿ ಎಂಬ ಮೂರು ರೂಪಗಳು ಬಳಕೆಯಾಗಿವೆ. ಕೊಟ್ಟಜ ಎಂಬ ಶಬ್ದದ ಆದಿಯಲ್ಲಿನ ವ್ಯಂಜನ ಲೋಪವಾಗಿ ಒಟ್ಟಜ (ಜೆ) ಎಂಬ ರೂಪ ಬಂದಿರಬಹುದೆಂದು ಭಾವಿಸಲು ಅವಕಾಶವಿದೆ. ಇದರಂತೆಯೇ ಇನ್ನೊಂದು ಬಗೆಯಲ್ಲಿ ನೋಡಿದರೆ ಒಟ್ಟು (ರಾಶಿಮಾಡು) ಎಂಬುದರಿಂದ ಒಟ್ಟಜೆ ಶಬ್ದ ರೂಪಗೊಂಡಿರಬಹುದೆಂಬ ಸಂದೇಹಕ್ಕೆ ಅವಕಾಶವಿದೆ.

ಒರೆ—ಒರೆಗಂ ದೊರೆಗಂ

ಕನ್ನಡ ಚಂಪೂ ಕವಿಗಳಿಗೆ ಪ್ರಿಯವಾದ ನುಡಿಗಟ್ಟುಗಳಲ್ಲಿ 'ಒರೆಗಂ ದೊರೆಗಂ' ಎಂಬುದೂ ಒಂದು—ದೀಕ್ಷಾಬೋಧೆ, ಅಂಜನಾಚರಿತೆ, ಹರಿಶ್ಚಂದ್ರ ಕಾವ್ಯ, ತ್ರಿಪುರ ದಹನ ಸಾಂಗತ್ಯ ಮೊದಲಾದ ಕಾವ್ಯಗಳಲ್ಲಿ ಇದು ಬಳಕೆಯಾಗಿದೆ. ಪೊನ್ನನಲ್ಲಿ (11-89) ಇದರ ಅತ್ಯಂತ ಪ್ರಾಚೀನ ಪ್ರಯೋಗ ಸಿಗುತ್ತದೆ. ಒರೆದೊರೆಯಾಗು, ಒರೆದೊರೆಯೆನಿಸು ಮುಂತಾದ ಮಾತುಗಳನ್ನೂ ನೆನೆಯಬಹುದು. ಒರೆಗೆ ಎಂದೂ, ದೊರೆಗೆ ಎಂದೂ ಪ್ರತ್ಯೇಕವಾಗಿಯೂ ಬಳಸುವುದುಂಟು. ಚತುರಾಸ್ಯ ನಿಘಂಟಿನಲ್ಲಿ ತೋಡೊರೆ ದೊರೆ ತೊಣೆಯೆಣೆ ಪಾಸಟಿ ಪರಿಸಟಿ ಸಾಮ್ಯಾರ್ಥಮಪ್ಪುದು (25) ಎಂದು ವಿವರಣೆಯಿದೆ.

ನಿಘಂಟಿನಲ್ಲಿ (ಪುಟ 1247) ಒರೆ (7) ಶಬ್ದಕ್ಕೆ ಸಮಾನ, ಸಾಟಿ, ಸಾದೃಶ್ಯ, ಸಾಮ್ಯ ಎಂಬ ಅರ್ಥಕೊಟ್ಟು ನಿಷ್ಪತ್ತಿಗೆ ಪ್ರಶ್ನಾರ್ಥಕ ಚಿಹ್ನೆ ಹಾಕಿದ್ದಾರೆ. ಆದರೆ ನಿಷ್ಪತ್ತಿಗೆ ಪ್ರಶ್ನೆ ಹಾಕುವ ಅಗತ್ಯವಿಲ್ಲ. ಇದು ದೇಶ್ಯ ಶಬ್ದವೆಂದು ತೋರಿಸಬೇಕು. ತಮಿಳಿನಲ್ಲಿ ಉಜ್ರ್ಪ್ಪೈ ಎಂಬ ಜ್ಞಾತಿರೂಪವಿದೆ. ಗಟ್ಟಿತನ, ದೃಢತೆ ಎಂಬುದು ಅರ್ಥ. ಮಲೆಯಾಳದಲ್ಲಿ ಉಱಿಯುಕ, ತೆಲುಗಿನಲ್ಲಿ ಒಱಪು ಎಂಬ ಜ್ಞಾತಿರೂಪಗಳಿವೆ. ಉಱೆಯ ಎಂಬ ಶಬ್ದವೂ ವೀರ ಎಂಬರ್ಥದಲ್ಲಿ ಬಳಕೆಯಾಗಿದೆ. ಕನ್ನಡದ ಒರೆ ಎಂಬುದೂ ಇದೇ ಮೂಲಕ್ಕೆ ಸೇರಿದ ಶಬ್ದ. ಅದರಿಂದ ಒರೆ ಶಬ್ದಕ್ಕೆ ಅರ್ಥ ಕೊಡುವಾಗಲೂ ವೀರತನ ಎಂಬರ್ಥವನ್ನೂ ಸೂಚಿಸಬೇಕು. ಹೀಗೆ ಹೊಸ ಹುರುಳಿನ ಬೆಳಕಿನಲ್ಲಿ ನೋಡುವಾಗ ಒರೆ ಎಂಬ ಶಬ್ದ ಬಳಕೆಯಾಗಿರುವ ಸಂದರ್ಭಗಳ ಅರ್ಥಸ್ಫುರಣೆ ಇನ್ನೂ ಸ್ಫುಟಗೊಳ್ಳುತ್ತವೆ. ದೊರೆ(ಗಂ) ಎಂಬ ಶಬ್ದಕ್ಕೂ ಇದೇ ಅರ್ಥವನ್ನು ಹಚ್ಚಬೇಕು. ಒರೆದೊರೆ, ಒರೆಗಂ ದೊರೆಗಂ ಎಂಬುದು ದ್ವಿರುಕ್ತಿಯೆನಿಸುತ್ತದೆ. ಒರೆ ಎಂಬ ಶಬ್ದವೇ ಪುನರುಕ್ತಗೊಂಡು (ಒರೆ + ಒರೆ =) ಒರೆದೊರೆ ಆಗಿರಬಹುದೆ? ಅಥವಾ ದೊರೆ ಎಂಬ ಶಬ್ದದ ಆದಿವ್ಯಂಜನ ಹೋಗಿ ಒರೆ ಆಯಿತೆ? ಖಚಿತವಾಗಿ ತಿಳಿಯದು. ಅಂತೂ ಒರೆ ಎಂಬ ಶಬ್ದಕ್ಕೆ ನಿಷ್ಪತ್ತಿ ಭಾಗದಲ್ಲಿ ಹಾಕಿರುವ ಪ್ರಶ್ನೆಯನ್ನು ಕಿತ್ತುಹಾಕಿ ದೇಶ್ಯ ಎಂದು ಸೂಚಿಸಿ ಜ್ಞಾತಿರೂಪಗಳನ್ನು ಕೊಡಬೇಕೆಂದು ತೋರುತ್ತದೆ. ಇದೂ ಅನುಮಾನವೆಂದು ತೋರಿಸುವುದಾದರೆ ಇಷ್ಟು ಕೊಡುವುದರೊಂದಿಗೆ ಒಂದು ಪ್ರಶ್ನೆಯನ್ನೂ ಹಾಕಿದರೆ ಹೆಚ್ಚು ಯೋಗ್ಯ.

ಕಪ್ಪಂಗವಿಯಾಗು

'ಕ.ಸಾ.ಪ.ಕ.ನಿ.' ನಲ್ಲಿ (ಪುಟ 1501) ಕಪ್ಪಂಗವಿಯಾಗು ಎಂಬ ಶಬ್ದಕ್ಕೆ ಅರ್ಥ ಹೇಳುತ್ತಾ, ದಟ್ಟೈಸಿ ಕವಿ, ಕತ್ತಲಿಸಿ ಕವಿ ಎಂದು ಕೊಟ್ಟು ಈ ಅರ್ಥದಲ್ಲಿ ಸಂದೇಹವಿದೆಯೆಂದು ಸೂಚಿಸಿ ಪ್ರಶ್ನಾರ್ಥಕ ಚಿಹ್ನೆ ಹಾಕಿ ಪಂಪಭಾರತ (12–20 ವ) ಮತ್ತು ಶಾಂತಿಪುರಾಣದ (10–62 ವ) ಪ್ರಯೋಗ ಉದಾಹರಿಸಿದ್ದಾರೆ. ನಿಷ್ಪತ್ತಿ ಹೇಳುವಾಗ ಕಪ್ಪು$_2$?+ಕವಿ$_1$+ಆಗು$_1$—ಎಂದು ಸೂಚಿಸಿದ್ದಾರೆ. ಆದರೆ ಇಲ್ಲಿ ಕೊಟ್ಟಿರುವ ಅರ್ಥವಾಗಲಿ, ನಿಷ್ಪತ್ತಿಯಾಗಲಿ ಎರಡೂ ಸರಿಯಾಗಿರುವಂತೆ ತೋರುವುದಿಲ್ಲ. ಇಲ್ಲಿ ಇರಬೇಕಾದ ಅರ್ಥ "(ಹಡಗಿನಂತೆ) ಪಾತ್ರೆಯಂತೆ ಕವಿದು, ಪಾತ್ರೆಯಂತೆ ಮುಚ್ಚಿ" ಎಂದು. ಏಕೆಂದರೆ ತಮಿಳಿನಲ್ಲಿ ಕಪ್ಪಲ್ ಎಂಬ ಶಬ್ದವಿದೆ. ಅದರ ಅರ್ಥ ಹಡಗು, ತೇಲುವ ಪಾತ್ರೆ ಎಂದು. ಕಪ್ಪಲ್ + ಕವಿ + ಆಗು ಎಂದು ನಿಷ್ಪತ್ತಿ ಸೂಚಿಸಬೇಕು. ಇದು ಸಮಂಜಸವಾದ ವಿವರಣೆ ಯಾಗುತ್ತದೆ. ಕಪ್ಪಂಗವಿಯಾಗು ಎಂಬ ಪದಪುಂಜವನ್ನು ಪಂಪ, ಪೊನ್ನ ಇಬ್ಬರೂ ಬಳಸಿ ಕನ್ನಡಕ್ಕೆ ಉಳಿಸಿ ಕೊಟ್ಟಿದ್ದಾರೆ. ಈ ದೇಶ್ಯ ಶಬ್ದಕ್ಕೆ ತಮಿಳು, ಮಲೆಯಾಳಂ ಭಾಷೆಗಳಲ್ಲಿ ಕಪ್ಪಲ್, ತೊದ ಭಾಷೆಯಲ್ಲಿ ಕೊಪ್ಪೊಲ್, ತುಳು ಭಾಷೆಯಲ್ಲಿ ಕಪ್ಪಲು, ತೆಲುಗಿನಲ್ಲಿ ಕಪ್ಪಲಿ ಎಂಬ ಜ್ಞಾತಿಭಾಷಾರೂಪಗಳಿವೆ (ನೋಡಿ ಡಿ.ಇ.ಡಿ. 1022).

ಕಪ್ಪುರ (ವಳ್ಳಿ) 1 ಕರ್ಪುರ (ವಳ್ಳಿ)

ಪೊನ್ನಕವಿ ಸುಗಂಧ ದ್ರವ್ಯವಾದ ಕರ್ಪೂರದ ಪರಿಮಳವುಳ್ಳ ವೀಳೆಯದೆಲೆ (ಸಾಂಬ್ರಾಣಿಯೆಲೆ) ಎಂಬರ್ಥದ ಕರ್ಪುರವಳ್ಳಿ (9–59) ಮತ್ತು ಕಪ್ಪುರವಳ್ಳಿ (10–95) ಎಂಬ ಎರಡೂ ರೂಪಗಳನ್ನು ಬಳಸಿದ್ದಾನೆ. ಕಪ್ಪುರ ಶಬ್ದದ ಮೂಲ ಆಕೃತಿ ಹೇಗೆ ವಿಕೃತರೂಪಗಳನ್ನು ತಳೆದಿದೆ ನೋಡಿ : (ಸಂಸ್ಕೃತ) ಕರ್ಪೂರ— ಕರ್ಪುರ—ಕಪ್ಪುರ—ಕಪ್ಪರ—ಕಪರ (ಹೋ. ಕಪರಬಾಳೆ)—ಇಲ್ಲಿ ಎರಡು ರೇಫಧ್ವನಿಗಳಲ್ಲಿ ಒಂದು ಮರೆಯಾಗಿ ವಿಜಾತೀಯ ಸಂಯುಕ್ತತೆ ಸಜಾತೀಯಗೊಂಡಿದೆ, ದೀರ್ಘಸ್ವರ ಹ್ರಸ್ವಗೊಂಡಿದೆ.

ಕುಡಗೂಸು

ಇನ್ನೂ ಮದುವೆಯಾಗದ, ಆದರೆ ಮದುವೆಗೆ ಒದಗಿಬಂದಿರುವ ಎಳೆಯಳನ್ನು ಕನ್ನಡ ಕಾವ್ಯಗಳು ಕೊಡಗೂಸು, ಕುಡಗೂಸು ಎಂದು ಕರೆದಿವೆ. ಕುಡಗೂಸು ಎಂಬ ರೂಪವನ್ನು ಕನ್ನಡ ನಿಘಂಟಿನಲ್ಲಿ ದಾಖಲುಮಾಡಿದ್ದರೂ ಪ್ರಾಚೀನ ತಮವಾದ ಪೊನ್ನನ ಪ್ರಯೋಗವನ್ನಾಗಲಿ, ಪ್ರಾಚೀನತರವಾದ ಚಾವುಂಡರಾಯನ ಪ್ರಯೋಗವನ್ನಾಗಲಿ ಕೊಟ್ಟಿಲ್ಲ.

> ಪಂಡಿತ ವಿರೋಧಿ ಕುಳನೇ
> ಗೊಂಡೇಗಳ ಗೆಯ್ವುದರಿದು ಕುಡೆ ಕುಡುಗೂಸಂ
> ಕೋಡೊಯ್ವುದುಚಿತವಿಾಯದೆ
> ಕೊಂಡೊಯ್ವುದನುಚಿತಮೆಂಬ ನುಡಿಯುಂ ನುಡಿದಂ ॥ 3–81

ಪಾಣಿಗ್ರಹಣಪುರಸ್ಸರವಾಗಿ ಧಾರೆಯೆರೆದುಕೊಡಲು ಕನ್ಯೆ ಅಣಿಯಾಗಿದ್ದಾಗ ಅವಳು ಕುಡುಗೂಸು. ಪೊನ್ನನು 4–46 ರಲ್ಲೂ ಈ ರೂಪವನ್ನು ಬಳಸಿದ್ದಾನೆ. ಕೊಡು ಎಂಬುದಕ್ಕಿಂತ ಕುಡು ಎಂಬ ಆಕೃತಿ ಪೊನ್ನನಲ್ಲಿ ವಿಶಿಷ್ಟವಾಗಿದೆ. ಆತ ಕುಡು ರೂಪ ಬಳಸುತ್ತಾನೆಂಬುದಕ್ಕೆ 5–63 ರಲ್ಲೂ ಆಧಾರ ಸಿಗುತ್ತದೆ. ಕೇವಲ ಮಗು (ಲಿಂಗಭೇದವಿಲ್ಲದೆ) ಎಂಬರ್ಥ ದಲ್ಲಿಯೂ ಈ ಶಬ್ದ ಚಾಲ್ತಿಯಲ್ಲಿರುವಂತೆ ತೋರುತ್ತದೆ.

ಕೊಟ್ಟಜ

ಪೊನ್ನಕವಿ ಶಾಂತಿಪುರಾಣದಲ್ಲಿ ಒಂದುಕಡೆ 'ತುಂಗ ತುರಂಗಮ ಭೂಯಿಷ್ಠಂಗಳ್ **ಕೊಟ್ಟಜದ** ಕೊಟ್ಟ ಕಪ್ಪದ ಭಂಡಾರಂಗಳ್ ನಿಂದುವು' (11–28) ಎಂದು ತಿಳಿಸಿದ್ದಾನೆ. ಇಲ್ಲಿ ಬರುವ ಕೊಟ್ಟಜ ಶಬ್ದಕ್ಕೆ ಪೊನ್ನನ ಪ್ರಯೋಗವೇ ಅತ್ಯಂತ ಪ್ರಾಚೀನವಾಗಿದೆ. ಇದಲ್ಲದೆ ಈ ಶಬ್ದ ಚರಿತ್ರೆ ಸ್ವಾರಸ್ಯವೂ ಆಗಿದೆ. ಏಕೆಂದರೆ ಇದರ ಆದಿಯಲ್ಲಿನ ಕ್ ಎಂಬ ವ್ಯಂಜನ ಲೋಪವಾಗಿ ಕೊಟ್ಟಜ ಶಬ್ದ ಒಟ್ಟಜ (ಜೆ) ಎಂಬಂತೆ ಪರಿವರ್ತನೆಯನ್ನೂ ಪಡೆದುಕೊಂಡಿರಬಹುದು. ಅದರಿಂದ ನಿಘಂಟಿನಲ್ಲಿ ಕೊಟ್ಟಜ ಎಂಬ ಶಬ್ದಕ್ಕೆ 'ಪರಾ. ಒಟ್ಟಜೆ' ಎಂದೂ ಸೂಚಿಸಬೇಕಾದುದು ಅನಿವಾರ್ಯ. ಇನ್ನು ಇದರ ನಿಷ್ಪತ್ತಿ ವಿಚಾರ : ನಿಷ್ಪತ್ತಿ ಭಾಗದಲ್ಲಿ ಪ್ರಶ್ನೆಹಾಕಿದ್ದಾರೆ. ಕೊಡು ಎಂಬ ಧಾತುವಿನಿಂದ ಕೊಟ್ಟಜ ಎಂಬ ಶಬ್ದ ರೂಪಗೊಂಡಿರಬಹುದು ; ಕೊಟ್ಟದ್ದು ಕೊಟ್ಟಜ.

ಜಟ್ಟಿಗೆ

ಪೊನ್ನಕವಿಯ ಅಪೂರ್ವ ಪ್ರಯೋಗಗಳಲ್ಲಿ ಇದೂ ಒಂದು. 'ಬೆನ್ನನಟ್ಟಿ ನಟ್ಟ **ಜಟ್ಟಿಗೆಯಿಂ** ಮಿಟ್ಟಿಗೊಂ [ಡಜಿ]ಟ್ಟಿಯಂತೆಯುಂ ಬಡಿಗೊಂಡ ಪೊಲದಂತೆಯುಂ ತಲೆ ಕೆಟಿಗಾಗಿ ಬಿಬ್ದರ್' (4–30 ವ). ಚಳ್ಳಕೆರೆ 8–4, ಕಾಲ 810ರ ಒಂದು ಶಾಸನ (ಎಪಿಗ್ರಾಫಿಯಾ ಕರ್ನಾಟಕಾದ X। ಸಂಪುಟದ) ಪ್ರಯೋಗ ಬಿಟ್ಟರೆ ಪೊನ್ನನ ಪ್ರಯೋಗವೊಂದೇ ಸಿಗುವುದು. ಇವೆರಡೂ ಪ್ರಯೋಗಗಳನ್ನು ಉದಾಹರಿಸಿ 'ಕ.ಸಾ.ಪ.ಕ.ನಿ.' ನಲ್ಲಿ 'ಒಂದು ಬಗೆಯ ಬಾಣ' ಎಂಬ ಸ್ಥೂಲ ಅರ್ಥ ಕೊಟ್ಟು ನಿಷ್ಪತ್ತಿ ಭಾಗದಲ್ಲಿ ಏನೂ ತಿಳಿಯದೆಂದು ಪ್ರಶ್ನೆ ಹಾಕಿದ್ದಾರೆ. ವಾಸ್ತವವಾಗಿ ಇದು ಸಂಸ್ಕೃತ ಭಾಷೆಯ ಯಷ್ಟಿಕಾ ಎಂಬ ಶಬ್ದದ ತದ್ಭವ ರೂಪ. ಎತ್ತುಂಗೋಲ್ (10–164 ವ) ಶಬ್ದ ಮತ್ತು ಅರ್ಥ ಇಲ್ಲಿಗೆ ಪ್ರಸ್ತುತವಾಗುತ್ತದೆ; ಅದೂ ಕೂಡ ಕೋಲಿನಿಂದ ಮಾಡಿದ ಕೂರಂಬು. ಜಟ್ಟಿಗೆಯೂ ಕೂಡ ಕೋಲಿನಿಂದ ಮಾಡಿದ ಹರಿತವಾದ ಬಾಣ. ನಿಘಂಟಿನ ಮರುಮುದ್ರಣ ಕಾಲದಲ್ಲಿ ನಿಷ್ಪತ್ತಿ ಭಾಗದಲ್ಲಿ ಇದನ್ನು ಸೇರಿಸಿಕೊಳ್ಳಬೇಕು. ಸಂಸ್ಕೃತದ ಯಷ್ಟಿ ಎಂಬುದು ಪ್ರಾಕೃತದಲ್ಲಿ ಜಟ್ಠಿ ಎಂದಾಗುತ್ತದೆಯೆಂಬುದನ್ನೂ ಗಮನಿಸಬೇಕು. ಪ್ರಶ್ನಾರ್ಥಕ ಚಿಹ್ನೆಯನ್ನು ತೆಗೆದು ಸಂಸ್ಕೃತ ಪ್ರಾಕೃತ ಮೂಲರೂಪಗಳನ್ನು ತಿಳಿಸಬೇಕು.

ಜನ್ನಿವರ (4–96 ವ)

ಈಗ ಜನಬಳಕೆಯಲ್ಲಿರುವ ಜನಿವಾರ ಎಂಬ ಶಬ್ದರೂಪದ ಶಬ್ದಾರ್ಥ ವಿವೇಚನೆ ಸ್ವಾರಸ್ಯಪೂರ್ಣವಾಗಿದೆ. ಸಂಸ್ಕೃತದ ಯಜ್ಞೋಪವೀತ ಎಂಬುದು ಮೂಲ ಶಬ್ದ. ವೇದ ಪೂರ್ವಕಾಲದಿಂದ ಭಾರತದಲ್ಲಿ ರೂಢಿಯಲ್ಲಿದ್ದ ಆರ್ಯಾಚರಣೆಗಳಲ್ಲಿ ಯಜ್ಞಯಾಗಾದಿಗಳನ್ನು ನಡೆಸುವುದೂ ಒಂದಾಗಿತ್ತು. ಯಜ್ಞಾಚರಣೆಗೆ ಕುಳಿತುಕೊಳ್ಳುವಾಗ ಮಡಿಯುಟ್ಟು ಬ್ರಹ್ಮಸೂತ್ರ ಧರಿಸಿ ಕುಳಿತುಕೊಳ್ಳಬೇಕಾಗುತ್ತಿತ್ತು. ಈ ಬ್ರಹ್ಮಸೂತ್ರವೇ ಯಜ್ಞೋಪವೀತ. ವಾಸ್ತವವಾಗಿ ಯಜ್ಞೋಪವೀತ ಎಂಬುದಕ್ಕೆ 'ಯಜ್ಞಾಚರಣೆಯ ಕಾಲದಲ್ಲಿ ಧರಿಸುವ ಉಪವೀತ' ಎಂದೇ ಅರ್ಥ ಯಜ್ಞದ ಹತ್ತಿರ ಕೂತಾಗ ಹಾಕಿಕೊಳ್ಳುವುದು ಯಜ್ಞೋಪವೀತ. ಉಪವೀತ ಶಬ್ದಕ್ಕೆ ಜನಿವಾರ ಎಂಬರ್ಥವಿದೆ (ಜನ್ನಿವಾರಂ ಬ್ರಹ್ಮಸೂತ್ರಮುಮುಪವೀತಮೆನಿಕು—ಮಂಗರಾಜ ನಿಘಂಟು, 75–8). ಕಾದಂಬರಿಯಲ್ಲಿ (ಪೂರ್ವಾರ್ಧ) ಕಮಲಿನಿಯೊಳಗುಣ್ಮಿದ ನವಮೃಣಾಳಮೆನಲಿಸೆದುದು ಮುನಿಗತ್ಯಂತ ಧವಳಮೆನಿಪುಪವೀತಂ (335). ಅದರಿಂದ ಯಜ್ಞೋಪವೀತ ಎಂಬ ರೂಪ ಒಂದು ರೀತಿಯಿಂದ 'ತಲೆಶಿರೋಭಾರ' ವಿದ್ದಂತೆ ಎಂದೂ ಹೇಳಬಹುದು. ಆದರೆ ಉಪವೀತ ಶಬ್ದಕ್ಕಿರುವ ಇನ್ನೊಂದು ವಿಶೇಷಾರ್ಥವನ್ನು ಮರೆಯಬಾರದು. ಹಲಾಯುಧದಲ್ಲಿ (68–253) 'ಜನ್ನವಿರಮಂ ಬಲಂದೊಡುವುದು ಉಪವೀತಮೆಂಬುದು ಎಡದೊಡುವುದು ಪ್ರಾಚೀನಾವೀತಮೆಂಬುದು' ಎಂಬ ಹೇಳಿಕೆಯಿದೆ. ಎಡದ ಹೆಗಲಮೇಲೆಯೂ ಬಲದ ತೋಳಿನ ಕೆಳಗೆ ಕಂಕುಳ ಹತ್ತಿರದಲ್ಲಿ ಬರುವಂತೆ ಜನಿವಾರವನ್ನು ಧರಿಸುವುದಕ್ಕೆ

ಉಪವೀತವೆಂದು ಹೆಸರು ; ಇದು ಜನಿವಾರ ಧಾರಣೆ ವಿಧಿಯನ್ನು ಕುರಿತ ಮಾತಾಯಿತು. ಮುಖ್ಯವಾಗಿ ಉಪವೀತ ಎಂಬುದು ಸಾಮಾನ್ಯ ಶಬ್ದ. ಅಯಜ್ಞದ ಕಾಲವಲ್ಲಿಯೂ ಧಾರ್ಮಿಕರು ಧರಿಸುತ್ತಿದ್ದುದು 'ಉಪವೀತ'. ಯಜ್ಞಕಾಲದಲ್ಲಿ ಮಾತ್ರ ಧರಿಸುತ್ತಿದ್ದ ವಿಶಿಷ್ಟ ಉಪವೀತಕ್ಕೆ 'ಯಜ್ಞೋಪವೀತ' ವೆಂದು ಹೇಳುತ್ತಿದ್ದಿರಬೇಕು. ಇಲ್ಲಿ ಇನ್ನೂ ಒಂದು ಸಂಭಾವ್ಯತೆಯನ್ನು ಪರ್ಯಾಲೋಚಿಸಬಹುದು.

ಬಹುಶಃ ಯಜ್ಞಾಚರಣೆ ವಿಧಿಗೆ ಅಣಿಯಾಗಬೇಕಾದವರು ಆ ಸೀಮಿತ ಸಮಯಕ್ಕೆ ಮಾತ್ರ ಒಂದು ಬಳ್ಳಿಯನ್ನೊ ಸೂತ್ರಸೆಳೆಯನ್ನೊ ಧರಿಸುತ್ತಿದ್ದು ಕ್ರಮೇಣ ಅದೇ ಒಂದು ಪದ್ಧತಿಯಾಗಿ ವೈದಿಕ ವರ್ಗದಲ್ಲಿ ಬಳಕೆಗೆ ಬಂದಿರಬಹುದು. ಬ್ರಾಹ್ಮಣರನ್ನು ಅನುಕರಣೆ ಮಾಡಲು ಹೊರಟು ಜೈನ (ಬ್ರಾಹ್ಮಣ) ರೂ, ಶೈವ-ವೀರಶೈವರೂ ಜನಿವಾರ ಹಾಕಿಕೊಳ್ಳ ತೊಡಗಿದರೆಂದು ತೋರುತ್ತದೆ. ಆಮೇಲೆ ಇದು ಆಳವಾಗಿ ಬೇರುಬಿಟ್ಟಿತು. ಮೂರೆಳೆ, ಆರು ಎಳೆ—ಹೀಗೆ ಇದರಲ್ಲಿ ವಿವಾಹಪೂರ್ವದಲ್ಲಿ (ಮೂರು ಎಳೆ) ಇಂತಿಷ್ಟು, ವಿವಾಹಾನಂತರ (ಆರು ಎಳೆ) ಇಂತಿಷ್ಟು ಎಂದು ಜನಿವಾರದ ಕಟ್ಟು ಪಾಡುಗಳುಂಟಾದುವು. ವರ್ಷಕ್ಕೆ ಒಮ್ಮೆ ಹಳೆಯ ಜನಿವಾರ ತೆಗೆದು ಹೊಸ ಜನಿವಾರ ಧರಿಸುವ ಶಾಸ್ತ್ರವಿಧಿಯೂ ಏರ್ಪಾಟಾಯಿತು. ಇದು ಜನಿವಾರದ ಹಬ್ಬ, ಉಪಾಕರ್ಮ, ಋಜುರುಪಾಕರ್ಮ, ಯಜುರ್‌ಉಪಾಕರ್ಮ—ಇತ್ಯಾದಿ ಹೆಸರುಗಳಿಂದ ಚಾಲ್ತಿಯಲ್ಲಿ ಇಂದಿಗೂ ಇದೆ. ಪ್ರತಿ ವರ್ಷ ಶ್ರಾವಣಮಾಸದ ಹುಣ್ಣಿಮೆಯಂದು ಆಚರಿಸುವ ಕರ್ಮ (ಶ್ರಾವಣಿ) ಇದೇ ಆಗಿದೆ. ಹಳೆಯ ಜನಿವಾರವನ್ನು ಎಲ್ಲೆಂದರಲ್ಲಿ ಬಿಸಾಡುವಂತಿಲ್ಲ. ಅದನ್ನು ಯಾರೂ ತುಳಿಯದ, ಮೈಲಿಗೆ ಮಾಡದ ರೀತಿಯಲ್ಲಿ ವಿಸರ್ಜಿಸಬೇಕಾಗುತ್ತದೆ. ಸ್ತ್ರೀಯರಿಗೆ ಜನಿವಾರವನ್ನು ಅಷ್ಟಾಗಿ ಮಾನ್ಯಮಾಡಿಲ್ಲ.

ವೈದಿಕರಲ್ಲಿ ಜನಿವಾರದ ಬಳಕೆಯಲ್ಲಿದ್ದುದು ಬಸವಣ್ಣನವರ ಕಾಲದವರೆಗೂ ಶೈವ ಪ್ರಭೇದಗಳಲ್ಲೂ ಬಳಕೆಯಲ್ಲಿತ್ತು. ಕರ್ಮಲತೆಯಂತಿರ್ದ ಜನ್ನಿವಾರಮಂ ಕಳೆದು ಬಿಸುಟು (ಬಸವರಾಜ ರಗಳೆ, 2–42) ಬಸವಣ್ಣ ವೀರಶೈವ ಧರ್ಮವನ್ನು ಪ್ರವರ್ತನಗೊಳಿಸಿದ ಮೇಲೆ 'ಜನಿವಾರ' ಹೋದರೂ ಅದರ ಸಾಮ್ಯ ಹೊತ್ತುಕೊಂಡು 'ಶಿವದಾರ' ಹುಟ್ಟಿಕೊಂಡಿತು. ಜೈನರಲ್ಲಿ ಪ್ರತಿ ಶ್ರಾವಕನಿಗೆ ಮೂರು ಲಿಂಗಗಳು ಇರಬೇಕೆಂದು ಹೇಳಿದ್ದಾರೆ : 1. ಶಿರೋಲಿಂಗ ಅಂದರೆ ಜುಟ್ಟು, ಕುಡುಮು, ಚಂಡಿಕೆ. 2. ಉರೋಲಿಂಗ ಎಂದರೆ ಜನಿವಾರ, ಎದೆಯಮೇಲಿನ ಲಿಂಗ. 3. ಕಟೀಲಿಂಗ ಅಂದರೆ ಉಡಿದಾರ. ಉಡಿದಾರ, ಶಿವದಾರ ಎಂಬ ಶಬ್ದರೂಪಗಳ ಉತ್ತರಾರ್ಧದಲ್ಲಿ ದಾರ ಎಂಬ ಸ್ವತಂತ್ರ ರೂಪ (ಮುಕ್ತಾಕೃತಿ) ಇದೆ; ಜನಿವಾರ ಎಂಬುದು ಈ ಸಾಮ್ಯದ ಮೇಲೆ ಜನಿದಾರ ಎಂದಾಗಲಿಲ್ಲ—ಅದು ಉಚ್ಚಾರಕ್ಕೆ ಸುಭಗವಲ್ಲವೆಂದಿರಬಹುದು.

ಈಗ ಕನ್ನಡದಲ್ಲಿ ಸಿಗುವಂತೆ ಅತ್ಯಂತ ಪ್ರಾಚೀನ ರೂಪಗಳಲ್ಲಿ ಜನ್ನವಿರವೂ ಒಂದು. ಸಂಸ್ಕೃತದ ಯಜ್ಞೋಪವೀತ ಎಂಬುದು ಪ್ರಾಕೃತದಲ್ಲಿ ಜಣ್ಣೋವಈಯ, ಜಣ್ಣೋವವೀಯ ಎಂಬ ರೂಪ ವ್ಯತ್ಯಾಸಗಳನ್ನು ತಳೆದು ಕನ್ನಡಕ್ಕೆ ಪ್ರಾಕೃತದಿಂದ ಜನ್ನವಿರ ಎಂದು ಬಳಕೆಗೆ ಬಂದಿದೆ. ಶೂದ್ರಕ ಕಾವ್ಯದಿಂದ ಕಾವ್ಯಸಾರದಲ್ಲಿ ಉದಾಹೃತವಾಗಿರುವ 535ನೆಯ ಪದ್ಯದಲ್ಲೂ, ಪಂಪಭಾರತಲ್ಲೂ (6-8), ವರ್ಧಮಾನಪುರಾಣದಲ್ಲೂ (16-4) **ಜನ್ನವಿರ** ಶಬ್ದವಿದೆ. ಚಾವುಂಡರಾಯಪುರಾಣ, ಕಾದಂಬರಿ ಉತ್ತರಾರ್ಧ (606), ಧರ್ಮಾಮೃತ ಮುಂತಾದ ಕೃತಿಗಳಲ್ಲಿ **ಜನ್ನಿವರ** ಎಂಬ ರೂಪ ಸಿಗುತ್ತದೆ. ಚಾವುಂಡರಾಯಪುರಾಣ, ಬಸವರಾಜ ರಗಳೆ ಮುಂತಾದವುಗಳಲ್ಲಿ **ಜನ್ನಿವಾರ** ಎಂಬ ರೂಪವಿದೆ. **ಜನ್ನುರ** ಎಂಬ ಪ್ರಯೋಗವೂ ಶಾಸನದಲ್ಲಿ ಉಲ್ಲೇಖವಾಗಿದೆ (ಎಪಿಗ್ರಾಫಿಯಾ ಕರ್ನಾಟಿಕಾ 5, ಅರಸೀಕೆರೆ ಶಾಸನ 1184). ನೇಮಿನಾಥಪುರಾಣದಲ್ಲಿ **ಜನ್ನವರ** ಎಂದೂ (5-21) ಹೇಳಿದೆ. **ಜನಿವಾರ** ಎಂಬುದು ನಡುಗನ್ನಡಾನಂತರದ ಇತ್ತೀಚಿನ ಪ್ರಯೋಗವಾಗಿದೆ. ಹಳಗನ್ನಡ ಕಾವ್ಯಗಳಲ್ಲಿ ಜನಿವಾರ ಎಂಬ ರೂಪ ಸಿಗುವುದಿಲ್ಲ. ಯಜ್ಞೋಪವೀತ ಎಂಬ ರೂಪವೂ ಕೇವಲ ಶಿಷ್ಟವರ್ಗದಲ್ಲಿ ವಿಶಿಷ್ಟ ಸಂದರ್ಭದಲ್ಲಿ ಕನ್ನಡದಲ್ಲಿ ಈಗಲೂ ಹೇಳುತ್ತಾರೆ. ಅದರ ಜತೆಗೆ ಕನ್ನಡದ ಸಂದರ್ಭದಲ್ಲಿ ಜನ್ನವಿರ, ಜನ್ನವರ, ಜನ್ನಿವರ, ಜನಿವಾರ, ಜನ್ನುರ—ಎಂಬ ರೂಪಗಳು ಕಾಣಿಸಿ

ಕೊಂಡಿವೆ. ಈ ವಿವಿಧ ರೂಪಗಳ ಒಟ್ಟು ಹುಟ್ಟು ಹರಹು ಹೀಗಿರಬಹುದು : ಸಂ. ಯಜ್ಞೋಪವೀತ——→ಪ್ರಾ. ಜಣ್ಣೋವವೀಯ——→ ಕ. ಜನ್ನವಿರ——→ ಜನ್ನವರ——→ಜನ್ನಿವರ——→ ಜನ್ನಿವಾರ——→ಜನಿವಾರ——→ಜನ್ನುರ. ಭಾಷಾವಿಜ್ಞಾನದ ದೃಷ್ಟಿಯಿಂದಲೂ ಇಲ್ಲಿ ಸಂಭವಿಸಿರುವ ಧ್ವನಿವ್ಯತ್ಯಾಸಗಳು ಅಷ್ಟು ಸಮರ್ಥನೀಯವಾಗಿವೆಯೆನಿಸಿದರೂ ಸಮಾಧಾನವಾಯಿತೆನಿಸುವುದಿಲ್ಲ. ಉಚ್ಚಾರಕ್ಕೆ ಸೌಕರ್ಯಕಾಂಕ್ಷೆಯಿಂದ ಇಂಥ ವ್ಯತ್ಯಾಸಗಳು ನಡೆಯುತ್ತಲೇ ಇರುತ್ತವೆಂಬುದು ನಿಜ. ಆದರೆ ಒಟ್ಟು ಸಾಮಂಜಸ್ಯ ಹಾಗೂ ಚಾರಿತ್ರಿಕ ದೃಷ್ಟಿಯನ್ನು ಕೈಬಿಡಬಾರದು. ಹಾಗೆ ಐತಿಹಾಸಿಕ ಸಮೀಕ್ಷೆಗೆ ತೊಡಗಿದಾಗ ಇನ್ನೊಂದು ಸಾಧ್ಯತೆ ಈ ಶಬ್ದದ ಬೆಳವಣಿಗೆಯಲ್ಲಿ ಕಂಡುಬರುತ್ತದೆ.

ಜನಿವಾರಕ್ಕೆ ಸಂಬಂಧಿಸಿದ ಒಟ್ಟು ಜ್ಞಾತಿರೂಪಗಳಲ್ಲಿ ಕನ್ನಡದಲ್ಲಿ ಈಗ ಸಿಗುವ ಪ್ರಾಚೀನ ರೂಪ ಯಾವುದೆಂಬುದನ್ನು ಮೊದಲು ಹೆಕ್ಕಿ ನೋಡಬೇಕಾಗುತ್ತದೆ. ಜನ್ನವಿರ ಎಂಬುದು ನಮಗೆ ಮೊದಲ ಆಕೃತಿ. ಇದೊಂದು ಸಮಷ್ಟಿರೂಪ. ಇದರಲ್ಲಿ ಎರಡು ಮುಕ್ತ ಆಕೃತಿಗಳಿವೆ : ಜನ್ನ+ನವಿರ. ಪೂರ್ವಾರ್ಧವಾದ ಜನ್ನ ಎಂಬುದು ಸಂಸ್ಕೃತ ಯಜ್ಞ ಎಂಬ ಮೂಲಶಬ್ದದಿಂದ ಪ್ರಾಕೃತದ ಮೂಲಕ ಬಂದಿದೆ. ನಾವೀಗ ಪರಿಶೀಲಿಸಬೇಕಾದುದು ಉತ್ತರಾರ್ಧವಾಗಿರುವ ನವಿರ ಎಂಬ ಆಕೃತಿಯನ್ನು. ಇದರ ಮೂಲರೂಪ ನವಿರ್ ಎಂಬುದು. ನವಿರುಡೆ, ನವಿರೆಳೆ ಮೊದಲಾದ ಪ್ರಯೋಗಗಳನ್ನು ನೆನೆದಾಗ ಇದರ ಸೂಕ್ಷ್ಮತೆ ಭಾಸವಾಗುತ್ತದೆ. ಕೂದಲೆಳೆಯಂತೆ ತೆಳುವಾದ ಸೂಕ್ಷ್ಮ ಸೂತ್ರದಿಂದ ಮಾಡಿದುದನ್ನು ಯಜ್ಞಕಾಲದಲ್ಲಿ ಧರಿಸುತ್ತಿದ್ದುದೇ ಜನ್ನವೀರ [←ಜನ್ನವಿರ್←ಜನ್ನ (←ಯಜ್ಞ)+ನವಿರ್]. ಉಚ್ಚಾರಣೆಯ ಸೌಕರ್ಯಾಪೇಕ್ಷೆಯಿಂದ ಜನ್ನಿವಿರ, ಜನ್ನಿವರ, ಜನಿವಾರ—ಹೀಗೆ ವ್ಯತ್ಯಾಸಗಳು ಘಟಿಸಿರಬೇಕು. ಉತ್ತರಾರ್ಧವಾದ ವರ ಎಂಬುದು ವಾರ ಎಂದಾಗುತ್ತದೆ. ಸ್ಥಳನಾಮಗಳಲ್ಲಿ ಇದಕ್ಕೆ ಉದಾಹರಣೆಗಳಿವೆ (ಆದರೆ ಇಲ್ಲಿರುವುದು ನವಿರ್ ಮೂಲದಿಂದ ಬಂದಿರುವ ರೂಪ). ಶ್ರವಣಬೆಳಗೊಳದ ತೀರ ಸಮೀಪದಲ್ಲಿ ಜನಿವಾರ ಎಂಬ ಹೆಸರಿನ ಹಳ್ಳಿಯಿದೆ. ಅದು ವಾಸ್ತವವಾಗಿ ಜಿನವಾಡಿ ಎಂಬ ಶಬ್ದರೂಪ ಜನ ಬಳಕೆಯಲ್ಲಿ ವಿಕೃತಗೊಂಡು ಜನಿವಾರ ಎಂದಾಗಿದೆ. 'ಕ.ಸಾ.ಪ.ಕ.ನಿ.' ನ ಮೂರನೆಯ ಸಂಪುಟದಲ್ಲಿ ಜನ್ನ$_3$ ಶಬ್ದಕ್ಕೆ ಒಂದು ಬಗೆಯ ಕುದುರೆ ಎಂಬ ಅರ್ಥವಿತ್ತು ಪ್ರಯೋಗ ಕೊಟ್ಟು (ಪುಟ 2976) ನಿಷ್ಪತ್ತಿಗೆ ಪ್ರಶ್ನೆಹಾಕಿದ್ದಾರೆ. ಇದೂ ಕೂಡ ವಾಸ್ತವವಾಗಿ ಯಜ್ಞ ಶಬ್ದದ ತದ್ಭವವೇ. ಯಜ್ಞಕಾಲದ ಕುದುರೆಯೇ ಜನ್ನ (ಗುದುರೆ). ಜನ್ನ+ಗುದುರೆ, ಜನ್ನಗುದಿರೆ ಎಂಬ ರೂಪಗಳು ಇದರ ಮುಂದಿನ ಪುಟದಲ್ಲೇ (2977) ಬಂದಿವೆ. ಅದರಂತೆ ಜನ್ನ$_4$ ಶಬ್ದಕ್ಕೆ ಮಾನ್ಯ, ದಾನಕೊಟ್ಟ ಭೂಮಿ (ಪುಟ 2976) ಎಂಬರ್ಥ-ಪ್ರಯೋಗ ಹೇಳಿ ನಿಷ್ಪತ್ತಿಗೆ ತಿಳಿಯದೆಂದು ಸಂದೇಹಚಿಹ್ನೆ ಹಾಕಿದ್ದಾರೆ. ಮೂಲದಲ್ಲಿ ಯಜ್ಞಕ್ಕಾಗಿ ಕೊಟ್ಟ, ಯಜ್ಞ ನಡೆಸಿದವರಿಗೆ ಕೊಟ್ಟ ದಾನಭೂಮಿಯೇ ಜನ್ನ$_4$. ಇಲ್ಲಿಯೂ ಪ್ರಶ್ನೆ ಸಂಕೇತ ಹೋಗಿ ಯಜ್ಞ ಎಂಬ ನಿಷ್ಪತ್ತಿಯೇ ಇರಬೇಕು. ಇದೇ ರೀತಿ ಜನ್ನಿ ಶಬ್ದಕ್ಕೆ ಗ್ರಾಮದ ಮಹಾಜನ ಧರ್ಮದರ್ಶಿಗಳ ಸಭೆ ಎಂಬರ್ಥ ನೀಡಿ (ಪುಟ 2977) ನಿಷ್ಪತ್ತಿ ಭಾಗದಲ್ಲಿ ಸಂಶಯಾತ್ಮಕ ಪ್ರಶ್ನೆಚಿಹ್ನೆ ಹಾಕಿರುವುದನ್ನು ತೆಗೆದು ಯಜ್ಞಿಕ ಎಂದು ತೋರಿಸಬೇಕು : ಸಂ. ಯಾಜ್ಞಿಕ ← ಪ್ರಾ. ಜಣ್ಣಿಯ ← ಕ. ಜನ್ನಿಗ ← ಕ. ಜನ್ನಿ ಎಂದಾಗಿದೆಯಲ್ಲದೆ ಅರ್ಥದಲ್ಲಿಯೂ ಅಧ್ವರ್ಯು ಎಂದಿದ್ದುದು ಮರ್ಯಾದೆಯ ವ್ಯಕ್ತಿ, ಮಾನ್ಯ, ಮಹಾಜನ, ಧರ್ಮದರ್ಶಿ ಎಂಬ ಅರ್ಥಭೇದಗಳನ್ನೂ ಪಡೆದುಕೊಂಡಿದೆ.

'ಕ.ಸಾ.ಪ.ಕ.ನಿ.' ನಲ್ಲಿ ಪೊನ್ನಕವಿ ಬಳಸಿರುವ ಜನ್ನಿವರ (4-96 ವ) ಎಂಬ ರೂಪದ ಪ್ರಯೋಗ ದಾಖಲಾಗಿಲ್ಲ. ಈ ಶಬ್ದರೂಪಕ್ಕೆ ಸಿಗುವ ಪ್ರಾಚೀನ ಪ್ರಯೋಗ ಪೊನ್ನನದು ಎಂಬುದು ಚಾರಿತ್ರಕ ಸತ್ಯ. ಇದರಿಂದ ಪೊನ್ನನ ಪ್ರಯೋಗಕ್ಕೆ ಪ್ರಮುಖ ಸ್ಥಾನವಿದೆ. ಪಂಪ-ಪೊನ್ನರ ಕಾಲದಲ್ಲೇ ಜನ್ನವಿರ ಎಂಬುದರ ಜತೆಗೆ ಜನ್ನಿವರ ಎಂಬುದೂ ಬಳಕೆಗೆ ಬಂದಿತ್ತೆಂಬುದು ಗಮನಾರ್ಹವಾಗಿದೆ : "ವಜ್ರಮಾಳಿನಿ ಕಂಡು ಪುರುಡುಮುಟ್ಟಲುಮೊಡವಳೆಯೆ ನಿಶಿತಾಸಿ ಧೇನುವಂ ಕಿಱ್ತು ಬೆನ್ನಟ್ಟಿ ಮುಟ್ಟೆ ಬೆಜಗಿಲ್ಲದಾತನ ಬೆನ್ನಂ ಜನ್ನಿವರವಿಕ್ಕಿದಂತಿರೆ ಪೊಯ್ಯೆನೊಂದು" (4-96 ವ).

ತೆಗಳಿಗೆ (3-21, 9-94)

ಪದರ, ಪೊರೆ, ಹೆಕ್ಕಳೆ, ನಿರಿಗೆ ಎಂಬರ್ಥ. ಇದಕ್ಕಿರುವ ಅನ್ಯಪ್ರಯೋಗಗಳು ವರ್ಧಮಾನಪುರಾಣ (6-36) ಮತ್ತು ಚಂದ್ರಪ್ರಭಪುರಾಣ (12-11 ವ). 'ಮುಗಿಲ ತೆಗಳಿಗೆ' ಎಂಬುದು ನುಡಿಗಟ್ಟು. ತೆಗಳಿಕೆ (ಕುಸುಮಾವಳಿ. 13-79) ಎಂಬ ರೂಪವೂ ಉಂಟು, ತೆಗಳ್ (+ — ಕೆ ಂ — ಕೆ) ಮೂಲ ರೂಪ. ಇದು ದೇಶ್ಯ ಶಬ್ದವೆಂದು ಧಾರಾಳವಾಗಿ ಹೇಳಬಹುದು. ಇದಕ್ಕೆ ನೆಗಳಿ ಎಂಬ ಜ್ಞಾತಿರೂಪವಿರುವುದೇ ಪ್ರಬಲ ಆಧಾರ.

ದುಂದುಮೆ

ಪೊನ್ನ 9-59 ರಲ್ಲಿ ಒಂದು ಅಪೂರ್ವ ಶಬ್ದ ಮತ್ತು ಪ್ರಯೋಗ ಉಳಿಸಿಕೊಟ್ಟಿದ್ದಾನೆ. 'ದುಂದುಮೆಗಾಲಮಂ ಘನರಥ + ಅವನಿಪಾಲನ ರಾಜ್ಯಕಾಲಮುಂ' ಆರದನೆಯ್ದೆ ಬಣ್ಣಿಪರ್ ಎಂದು ಕೇಳಿದ್ದಾನೆ. ಇಲ್ಲಿ ಬಂದಿರುವ ದುಂದುಮೆ ಎಂಬುದು ಒಂದು ಬಗೆಯ ಡೋಲು, ಚರ್ಮವಾದ್ಯ ಡಂಗುರ. ಈ ವಾದ್ಯ ನುಡಿಸುವ ಸಂತೋಷದ ಕಾಲವೇ ದುಂದುಮೆಗಾಲ. ಇದನ್ನು ದುಂದು, ದುಂದುಭಿ ಎಂಬ ಜ್ಞಾತಿ ಶಬ್ದದೊಡನೆ ಸಮೀಕರಿಸಬಹುದು. ಇದು ದುಮು ದುಮು ಎಂದು ಧ್ವನಿ ಮಾಡುವುದರಿಂದ ಈ ವಾದ್ಯಕ್ಕೆ ಅನುಕರಣವಾಚಕವಾಗಿ ದುಂದುಮೆ ಎಂಬ ಹೆಸರು ಬಂದಿರಬಹುದು.

ನೇಲವತ್ತಿ

ಇದು ಕೆಲವು ಕನ್ನಡ ಕಾವ್ಯಗಳಲ್ಲಿ ಪ್ರಯೋಗವಾಗಿರುವ ಶಬ್ದವಾದುದರಿಂದ ಪೊನ್ನನ ವಿಶೇಷ ಬಳಕೆಯಲ್ಲಿ ಪೊನ್ನನದೂ ಪ್ರಾಚೀನ ಪ್ರಯೋಗಗಳಲ್ಲೊಂದು ಎಂಬುದರ ಹೊರತು ಅಪೂರ್ವವೆನಿಸುವಂತಹುದು ಹೆಚ್ಚು ಇಲ್ಲ. ಆದರೆ ಈ ಶಬ್ದರೂಪದ ಬಗೆಗೆ ಒಂದೆರಡು ಹೆಚ್ಚಿನ ಮಾಹಿತಿಗಳನ್ನು ಕೊಡುವುದಷ್ಟೇ ಈ ವಿಸ್ತಾರದ ಉದ್ದೇಶ.

> ಅಡಸಿದ ಪಾರಿಜಾತಕದ ಕಪ್ಪುರವಳ್ಳಿಯ **ನೇಲವತ್ತಿಯಾ**
> ಯ್ದಡಕೆಯ ಭೀಮಸೇನಿಕದ ತಂಬುಲದಿಂ ವಿಭು ಪೋಲ್ತನೋಲಗಂ
> ಗುಡುವೆಡೆಯೊಳ್ ಮುಖಾರ್ಪಿತಮದಂ ಕಟಶೋಧನದಿಂ ಪ್ರಭೇದಮ
> ಕ್ಕಡಸಿದ ಬೇರನಾಮದ ಕಳಂಬೆರಸಿರ್ದಮರೇಂದ್ರ ದಂತಿಯಂ ॥ 10-95

ಕಾವ್ಯನಾಯಕನು ನೇಲವತ್ತಿಯ ಆಯ್ದ ಅಡಕೆ ಮತ್ತು ಪಚ್ಚಕರ್ಪೂರ (ಭೀಮಸೇನಿಕ—ಇದೊಂದು ಪೊನ್ನ ಬಳಸಿದ ಅಪರೂಪ ಶಬ್ದ) ಕೂಡಿದ ತಾಂಬೂಲ ಚರ್ವಣಮಾಡುತ್ತಿರುವುದರ ಹೃದ್ಯ ದೃಶ್ಯವನ್ನು ಪೊನ್ನಕವಿ ಮನೋಹರವಾಗಿ ಚಿತ್ರಿಸಿದ್ದಾನೆ. ಈ ಪ್ರಯೋಗದೊಡನೆ ಇನ್ನೂ ನಾಲ್ಕು ಪ್ರಯೋಗಗಳನ್ನಿತ್ತು ಈ ಶಬ್ದದ ಅರ್ಥನಿಷ್ಪತ್ತಿ ಕುರಿತು ಮೊದಲ ಸಲ ಡಾ॥ ದೊಲನ ಸಮಗ್ರವಾಗಿ ಚರ್ಚಿಸಿದ್ದಾರೆ. ನೆಲವತ್ತಿ ಎಂಬುದು ಒಂದು ಊರೆಂದು ಸರಿಯಾಗಿ ಊಹಿಸಿದ್ದಾರೆ: 'ಆ ಊರು ಮಾತ್ರ ಈಗ ಇಲ್ಲ. ಆ ಊರು, ಅದರ ಹೆಸರು, ಅಲ್ಲಿನ ಅಡಕೆ—ಈ ಮೂರು ಮಾಯವಾಗಿವೆ' ಎಂದಿದ್ದಾರೆ (ಪೀಠಿಕೆಗಳು, ಪುಟ 925). ಆದರೆ ಆ ಊರು ಮಾಯವಾಗಿಲ್ಲ, ಇಂದಿಗೂ ಇದೆ. ಶಿವಮೊಗ್ಗ ಜಿಲ್ಲೆಯ ಈಗಿನ ನ್ಯಾಮತಿ ಎಂಬುದೇ ಆ ಊರು. ಅದರ ಆಕೃತಿಕ ವ್ಯತ್ಯಾಸಗಳು ಘಟಿಸಿರುವುದು ಹೀಗೆ:

ನೇಲವತ್ತಿ — ನೆಲವತ್ತಿ — ನೇಲವತಿ — ನೇವತಿ — ನೇಮತಿ— ನ್ಯಾಮತಿ—ನ್ಯಾಮ್ತಿ. ಈಗ ಈ ಸ್ಥಳ ಅಡಕೆಗೆ ಅಷ್ಟೇನೂ ಹೆಸರಾಗಿಲ್ಲ, ಇದರ ಸುತ್ತ ಅಡಕೆ ತೋಟಗಳೂ ಅಷ್ಟಿಲ್ಲ. ಒಂದು ಸಾವಿರ ವರ್ಷದ ಹಿಂದಿನ ಅಡಿಕೆ ವೈಭವ ಮಾಯವಾಗಿದೆ, ಊರು ಮಾತ್ರ ಉಳಿದಿದೆ.

ಇದೇ ಪದ್ಯದಲ್ಲಿ ಬಳಕೆಯಾಗಿರುವ ಇನ್ನೆರಡು ಅಪರೂಪ ಶಬ್ದಗಳನ್ನು ಇಲ್ಲಿಯೇ ವಿವೇಚಿಸುವುದುಚಿತ. 'ಭೀಮಸೇನಿಕ' ಎಂಬುದು ಪ್ರಾಚೀನ ಹಾಗೂ ಕನ್ನಡ ಸಾಹಿತ್ಯದಲ್ಲಿ ಅಪೂರ್ವವಾದ ಮಾತು ಪೊನ್ನ ಉಳಿಸಿಕೊಟ್ಟಿದ್ದಾನೆ. ಪಚ್ಚಕರ್ಪೂರ (a kind of camphor) ಎಂಬುದು ಈ ಸಂಸ್ಕೃತ ಶಬ್ದದ ಅರ್ಥ. ಇದರ ಇನ್ನಿತರ ಪ್ರಯೋಗಗಳು ನನಗೆ ದೊರೆತಿಲ್ಲ. ಪೊನ್ನನ ಶಾಂತಿಪುರಾಣದಲ್ಲೇ 7–113 ರಲ್ಲಿ 'ಭೀಮಸೇನಿಕದ ನಂದದೀವಿಗೆ' ಎಂಬ ಇನ್ನೊಂದು ಉಲ್ಲೇಖ ಸಿಗುತ್ತದೆ.

ಇನ್ನು ಎರಡನೆಯ (ನೇಲವತಿಯೂ ಸೇರಿದರೆ ಮೂರನೆಯ) ಅಪೂರ್ವ ಶಬ್ದ ಬೇರ ಎಂಬುದು. ಇದಕ್ಕೆ ಆಕಾಶ ಎಂಬರ್ಥ. ಶಾಂತಿನಾಥ ಕುಮಾರನು ತಂಬುಲದಿಂದ ಬಾಯೆಲ್ಲ ಕೆಂಪಾಗಿರುವಾಗ 'ಕಟಶೋಧನ' ಮಾಡಿ (ಅಂದರೆ ಬಾಯಿ ತುದಿಗಳನ್ನು ಒರಸಿಕೊಂಡು) ಇರುವುದರಿಂದ ಹೊರಸೂಸದೆ ಒಳಗೆ ಮಾತ್ರ ಇದ್ದು ಇನ್ನೇನು ಹೊರಬರುವುದೂ ಏನೊ ಎಂಬಂತೆ ತಂಬುಲದ ರಸ ತುಂಬಿಕೊಂಡಿದೆ. ಈ ಸ್ಥಿತಿಯಲ್ಲಿರುವ ಕಥಾನಾಯಕನನ್ನು ಮದ ಆರಂಭವಾಗುವ ಸ್ಥಿತಿಯ ಐರಾವತಕ್ಕೆ ಪೊನ್ನಕವಿ ಹೋಲಿಸಿದ್ದಾನೆ. ಪ್ರಭೇದಮಕ್ಕಡಸಿದ ಅಮರೇಂದ್ರದಂತಿ ಒಂದು ಕಳವನ್ನು ಹೊಗುತ್ತದೆ. ಅದು **ಬೇರ**ವೆಂಬ ಕಳ, ಆಗ ಐರಾವತದ ಮದೋದಕ ಇನ್ನು ಹೊರಹೊಮ್ಮುವ ಅವಸ್ಥೆಯಲ್ಲಿದೆ—ಅದೇ ಹೋಲಿಕೆಯ ಸ್ವಾರಸ್ಯ. ಆನೆಗೆ ಕಳವಿದ್ದಂತೆ ಕುಮಾರನಿಗೆ ಓಲಗಶಾಲೆ. ಬೇರ ಶಬ್ದಕ್ಕೆ ಆಕಾಶ ಎಂಬರ್ಥವನ್ನು ನಿರ್ದಿಷ್ಟಗೊಳಿಸುವಲ್ಲಿ ಪುಷ್ಪದಂತಪುರಾಣ ಕಾವ್ಯದ (13-22) ಈ ಪದ್ಯ ನೆರವಿಗೆ ನಿಲ್ಲುತ್ತದೆ :

> ಬೇರದಿನಕರನಸ್ತಮಿಸಿದಂ ಸುಗಿವತ್ತು ತದಿಷ್ಟಶೋಕ ಪಂ
> ಕೇರುಹಮೆಂದು ಬೀಗದಿರು ಗೂಗೆ ಮಲಂಗದಿರುಳ್ಪಳಾಳಿಸಂ
> ಸಾರಿಗೆ ನಿಟ್ಟೆಯಲ್ಲದು ಸುಖಂ ನಿಮಗಂ ಮಗುಳಂತೆ ನಾಳೆದಲ್
> ದಾರುಣ ದುಃಖಮೆಂದುಲಿವವೋಲ್ ಕೊಳರ್ವಕ್ಕಿಬಿನಾದುದುಬ್ಬರಂ ॥

ಬೇರ ಎಂಬ ಶಬ್ದದ ಬಗ್ಗೆ, ಜ್ಞಾತಿರೂಪಗಳ ಬಗೆಗೆ ಇನ್ನೂ ಸಂಶೋಧನೆ ಆಗಬೇಕು.

ಚೊಂದರಿಗೆ (8–4)

ಬೆಳ್ಳಿಮಾಡ, ಹಾಸಿಗೆ, ಚಪ್ಪರ ಎಂಬರ್ಥವಿದೆ. ಇದಕ್ಕೆ ಪಂದರ್, ಪಂದಲ್ ಎಂಬ ಶಬ್ದಗಳು ಜ್ಞಾತಿರೂಪಗಳು. ಪಂಪಭಾರತ (4-43 ವ), ಆದಿಪುರಾಣ (11-78) ಮುಂತಾದ ಕಾವ್ಯಗಳಲ್ಲಿ ಇದರ ಪ್ರಯೋಗ ವಿದೆ. ದೇಶ್ಯ ಶಬ್ದ.

ಮಸೂರಿಕ

ಕಾಡುಕಡಲೆ ಎಂಬರ್ಥದ ಈ ಶಬ್ದವನ್ನು ಮೊದಲು ಪ್ರಯೋಗಿಸಿರುವ ಕವಿ ಪೊನ್ನ (10-94 ವ). ಈ ಪ್ರಾಚೀನ ಪ್ರಯೋಗ ಈಗಿನ ಮೈಸೂರುಪಾಕು ಎಂಬ ತಿನಿಸು ಹೇಗೆ ಬಂತೆಂಬ ವಿಚಾರಕ್ಕೂ ಉದಾಹರಣೆಯಾಗಿದೆ. ಮೈಸೂರಿಗೂ ಮೈಸೂರುಪಾಕಿಗೂ ಸಂಬಂಧವಿಲ್ಲ. ಜನಪ್ರಿಯ ನಿಷ್ಪತ್ತಿಗಾಗಿ ಸಾದೃಶ್ಯವಿರುವ ಶಬ್ದಗಳನ್ನು ಹೊಂದಿಸಿದ್ದಾರೆ. ಮೈಸೂರುಪಾಕಿನಲ್ಲಿರುವ 'ಮೈಸೂರು' ಶಬ್ದ ಈ 'ಮಸೂರಿಕ' ದಿಂದ ಬಂದಿದ್ದು. ಕಡಲೆಹಿಟ್ಟಿನ ಪಾಕದಿಂದ ಮಾಡಿದ್ದು ಯಾವುದೊ ಅದು ಮಸೂರುಪಾಕು (ಮೈಸೂರುಪಾಕು).

ಸಾಲಭಂಜಿಕೆ

ಪೊನ್ನ 3-22 ಮತ್ತು 3-104 ರಲ್ಲಿ ಸಾಲಭಂಜಿಕೆ ಶಬ್ದವನ್ನು ಬಳಸಿ ಬರೆದಿದ್ದಾನೆ. ಮದನಿಕೆ, ಶಿಲಾಬಾಲಿಕೆ ಗೊಂಬೆ ಎಂಬರ್ಥದ ಈ ಸಂಸ್ಕೃತ (ಶಾಲಭಂಜಿಕೆ) ಶಬ್ದವನ್ನು ಪಂಪನೂ ಪಂಪಭಾರತದಲ್ಲಿ ಹೇಳಿದ್ದಾನೆ. ಸಾಲಭಂಜಿಕೆ

ಗಳಟ್ಟಿತ್ತವು (3-104) ಎಂಬುದು ಆ ಕಾಲದ ನಂಬಿಕೆಯೊಂದನ್ನು ನುಡಿಯುವ ಹೇಳಿಕೆಯಾಗಿದೆ. ಸಾರಭಂಜಿಕೆ ಎಂಬ ರೂಪವೂ ಶಬ್ದಮಣಿದರ್ಪಣದ ಪಾಠಾಂತರದಲ್ಲಿದೆ (ಸೂತ್ರ 285 ರ ಪ್ರಯೋಗ). ಮೊದಲಿಗೆ ಮರದ ಬೊಂಬೆಯನ್ನು ಶಾಲಭಂಜಿಕೆ ಎಂದು ಕರೆಯುತ್ತಿದ್ದರೆಂದು ತಿಳಿದುಬರುತ್ತದೆ. ಸಾಲವೃಕ್ಷದಿಂದ ಮಾಡುತ್ತಿದ್ದುದರಿಂದ ಸಾಲಭಂಜಿಕೆ (ಸಾಲವೃಕ್ಷದಿಂದ ತಯಾರಿಸಿದ ಭಂಜಿಕೆ) ಎಂದೂ ಆಗಿರಬಹುದು. ಅಂತೂ ಇದೊಂದು ಅಪರೂಪದ ಪದವಾಗಿದೆ.

ಸುಟ್ಟುಂಬೆ (4-82 ವ)

ತೋರುಬೆರಳು ಎಂಬರ್ಥವಿರುವ ಈ ಶಬ್ದವನ್ನು ಸುಟ್ಟುಂಬೆಕ್ಕ (= ಮುಟ್ಟಿದರೆ ಮುರುಟುವುದೆಂಬ ಗಿಡ) ಎಂಬ ಶಬ್ದದ ಜತೆ ಹೋಲಿಸಿ ಅರ್ಥೈಸಬಹುದು.

ಸೂಸಕ

ಪಂಪಭಾರತದಲ್ಲಿ (2-41 ವ) ವಸ್ತ್ರದುಳ್ಳುಡೆಯೊಳುಲಿವ **ಸೂಸಕದ** ನೂಲ ತೊಂಗಲ್ವೆರಸು ಎಂಬ ಪ್ರಯೋಗವಿದೆ. ಅದೇ ರೀತಿ ಚಂದ್ರಪ್ರಭಪುರಾಣದಲ್ಲಿ 6-47, 7-92 ವ, 9-95 ವ ಮತ್ತು ಇನ್ನೂ ಕೆಲವು ಕಾವ್ಯಗಳಲ್ಲಿ ಇದನ್ನು ಬಳಸಿದೆ. ಪೊನ್ನಕವಿ 1-66 ರಲ್ಲಿ ಸೂಸಕ ಶಬ್ದವನ್ನು ಉಲ್ಲೇಖಿಸಿದ್ದಾನೆ. ಅದು ಪಟ್ಟಣವನ್ನು ಸೊಗಸಾಗಿ ಅಲಂಕಾರಿಕವಾಗಿ ವರ್ಣಿಸಿರುವ 1-66ನೆಯ ಉತ್ತಮವಾದ ಪದ್ಯ. ಸೂಸಕವೆಂದರೆ ಬೈತಲೆಮಣಿ (ಲಲಾಟಿಕೆ) ಎಂದರ್ಥ. ಇದು ದೇಶ್ಯ ಶಬ್ದವಾಗಿದ್ದು ತಮಿಳಿನಲ್ಲಿ ಇದಕ್ಕೆ ಚೂಟ್ಟು ಎಂಬ ಜ್ಞಾತಿರೂಪವಿದೆ. ಕನ್ನಡದ ಸೂಡು ಎಂಬುದು ಇದೇ ಮೂಲಕ್ಕೆ ಸೇರುತ್ತದೆ.

ಪೊನ್ನನ ಕೆಲವು ಇಡೀ ಪದ್ಯಗಳನ್ನು ಶಬ್ದಾರ್ಥ ದೃಷ್ಟಿಯಿಂದ ಚರ್ಚಿಸಬೇಕಾಗುತ್ತದೆ. ಇಲ್ಲಿ ಮಾದರಿಗಾಗಿ 5-27ನೆಯ ಪದ್ಯವನ್ನು ನಿಘಂಟು ಶಾಸ್ತ್ರದ ದೃಷ್ಟಿಯಿಂದ ವಿಶೇಷವಾಗಿ ಪರಿಶೀಲನೆಗೆ ಒಳಗುಮಾಡಿದೆ:

> **ವನನಾಗಾರಿಯನಾಂತ ದಂತಿಶಿಶುವೊಲ್ ದಿಗ್ದಂತಿಯೊಳ್ಪೋರ್ದ ಹೇ**
> **ನನವೋಲ್ಗಾಳಿಯ ಕೋಟಿೞೊಳಿಟ್ಟ ಸೊಡರ್ವೋಲ್ದಾವಾಗ್ನಿಗೊಡ್ಡಿರ್ದ ಕಾ**
> **ನನ ಕುಂಜಂಬೊಲಿನಂಗೆ ನಿಂದ ತಿಮಿರವ್ರ್ಯೂಹಂಬೊಲುಗ್ರಾಹಿ ಮ**
> **ರ್ದನದೊಳ್ ಮಚ್ಚರವುಳ್ಳ ಬಾಳ ಫಣಿವೋಲ್ ನೀಡಿಲ್ಲದಳ್ಳಾಡುಗುಂ ॥** 5-27

ಈ ವೃತ್ತಪದ್ಯದಲ್ಲಿ ನಿಘಂಟು ದೃಷ್ಟಿಯಿಂದ ಒಂಬತ್ತು ಶಬ್ದಗಳು ವಿಚಾರಣೀಯವಾಗಿವೆ: 1. ಪದ್ಯಾರಂಭದಲ್ಲಿ ಬರುವ 'ನಾಗಾರಿ' ಶಬ್ದ; ನಾಗಾರಿಯೆಂದರೆ ಸಿಂಹ (ನಾಗ+ಅರಿ), ಸಂಸ್ಕೃತ ಶಬ್ದ. ಪೊನ್ನ ಕವಿಯ ಈ ಪ್ರಯೋಗವೇ ಇಡೀ ಹಳಗನ್ನಡ ವಾಙ್ಮಯದಲ್ಲಿ ಸಿಗುವ ಏಕೈಕ ಹಾಗೂ ಪ್ರಾಚೀನ ಕಾವ್ಯಪ್ರಯೋಗ. ಆದರೆ 'ಕ.ಸಾ.ಪ.ಕ.ನಿ.' ನಲ್ಲಿ ಇದು ಕೈಬಿಟ್ಟುಹೋಗಿದೆ. 2. 'ದಂತಿಶಿಶು' (ಸಂಸ್ಕೃತ) ಎಂಬುದಕ್ಕೆ ಪೊನ್ನನದೇ ಸಿಗುವ ಏಕೈಕ ಕಾವ್ಯಪ್ರಯೋಗವಾಗಿದ್ದು ಶಬ್ದಕೋಶದಲ್ಲಿ ದಾಖಲಾಗಿದೆ. 3. 'ದಿಗ್ದಂತಿ' ಎಂಬುದಕ್ಕೂ ಪೊನ್ನನ ಮೇಲಿನ ಪದ್ಯದಲ್ಲಿ ಬರುವ ಪ್ರಯೋಗವೇ ಏಕೈಕ ಹಳಗನ್ನಡ ಕಾವ್ಯಪ್ರಯೋಗವಾಗಿದ್ದು ದಾಖಲಾಗಿದೆ. 4. ಕೋಟ್ಟೆ ಎಂಬುದು ಸ್ವಲ್ಪ ಚರ್ಚಿಸಬೇಕಾದ ಶಬ್ದ. 'ಗಾಳಿಯ ಕೋಟೞೊಳ್' ಎಂಬುದಕ್ಕೆ ಗಾಳಿಯ ಏಟಿನಲ್ಲಿ, ಗಾಳಿಯ ಹೊಡೆತದಿಂದ ಎಂಬರ್ಥ ಸಮಂಜಸವಾಗಿದೆ. ಆದರೆ ಹೊಡೆತ ಎಂಬರ್ಥದಲ್ಲಿ ಬರುವ ಶಬ್ದ ೞಳಸಹಿತವಾದ ಕೋೞ್ ಎಂಬ ರೂಪವಾಗಿದ್ದು ಅದು ಶಬ್ದಕೋಶದಲ್ಲಿ ಉಲ್ಲೇಖಗೊಂಡಿದೆಯಲ್ಲದೆ ಪಂಪ ಮೊದಲಾದ ಕವಿಗಳ ಪ್ರಯೋಗಗಳೂ ಸಿಗುತ್ತವೆ. ಅಷ್ಟೇಕೆ ಪೊನ್ನನಲ್ಲೇ ಶಾಂತಿಪುರಾಣದ 2–84 ರಲ್ಲಿ ಕೋೞ್ ಎಂಬ ೞಳಸಹಿತವಾದ ರೂಪ ಬಳಕೆಯಾಗಿದೆ—'ವಿಮಾನ ಕೇತನದ

ಕೋಳೊಳ್'. ಆದರೆ 5–27ರಲ್ಲಿ ರಳಸಹಿತವಾದ 'ಕೋೞ್' ಎಂಬ ರೂಪ ಬಂದಿದೆ. ಇದನ್ನು ನಿಘಂಟಿನಲ್ಲಿ ತೋರಿಸಿಲ್ಲ. ಈ ರೂಪ ಪ್ರಾಚೀನವೆ, ರಳ ಇರುವುದನ್ನು ಅಂಗೀಕರಿಸಬೇಕೆ—ಇದನ್ನು ಪುನರ್ ಪರಿಶೀಲಿಸಬೇಕಾಗುತ್ತದೆ. 5. ಇದೇ ಪದ್ಯದಲ್ಲಿ ಬರುವ ದಾವಾಗ್ನಿ ಎಂಬ ಸಂಸ್ಕೃತ ಶಬ್ದಕ್ಕೆ ಕಾಲದ ದೃಷ್ಟಿಯಿಂದ ಪೊನ್ನನದೇ ಪ್ರಾಚೀನ ಪ್ರಯೋಗ, 'ಕ.ಸಾ.ಪ.ಕ.ನಿ.' ನಲ್ಲಿ ಪೊನ್ನನ ಪ್ರಯೋಗ ಸೇರಿಲ್ಲ. 6. ಕಾನನ ಎಂಬುದು ಬಹುಬಳಕೆಯ ರೂಢಿ ಶಬ್ದ (ಸಂಸ್ಕೃತ). ಈ ಶಬ್ದಕ್ಕೆ ಸಿಗುವ ಹಳೆಯ ಹಾಗೂ ತುಂಬ ಹಿಂದಿನ ಉಲ್ಲೇಖ ಪೊನ್ನನದೇ, ನಿಘಂಟಿನಲ್ಲಿ ಪೊನ್ನನ ಪ್ರಯೋಗವೂ ಇಲ್ಲ, ಇತರ ಕಾವ್ಯಪ್ರಯೋಗವೂ ಬಂದಿಲ್ಲ. ಜಾತಕತಿಲಕದ ಶಾಸ್ತ್ರಕೃತಿಯ ಪ್ರಯೋಗ ಮಾತ್ರ ಬಂದಿದೆ. 7. ಇದರ ಮುಂದಿನ ಶಬ್ದವಾದ ಕುಂಜ ಎಂಬುದೂ ಆಲೋಚಿಸತಕ್ಕ ಶಬ್ದವೇ. ಕುಂಜ ಎಂದರೆ ಪೊ (ಹೊ) ದರು ಎಂದರ್ಥ—ಕುಂಜಃ, ಕುಂಜುಃ, ಕುಂಜನಂ ಈ 3 ಹೊದರ್ (ಕಾ.ಶ.ಕೃ. 65). ಕನ್ನಡದಲ್ಲಿ ಸಿಗುವ ಏಕೈಕ ಪ್ರಯೋಗ ಪೊನ್ನನ ಶಾಂತಿಪುರಾಣದ ಈ ಪದ್ಯದಲ್ಲಿದೆ, ಆದರೆ ನಿಘಂಟಿನಲ್ಲಿ ಇದೂ ದಾಖಲಾಗಿಲ್ಲ. 8. **ತಿಮಿರವ್ಯೂಹ**: ಮೇಲೆ 1 ರಿಂದ 2 ರವರೆಗೆ ಹೇಳಿದ ಶಬ್ದಗಳ ರೀತಿಯೇ ಬೇರೆ, ಅವುಗಳಲ್ಲಿ 2 ಮತ್ತು 3ನೆಯ ಶಬ್ದಗಳು ತಮ್ಮ ಪ್ರಾಚೀನ ಪ್ರಯೋಗಕ್ಕೆ ಪೊನ್ನನನ್ನು ಆಶ್ರಯಿಸಿದ್ದು ನಿಘಂಟಿನಲ್ಲೂ ಪ್ರವೇಶ ಪಡೆದಿವೆ; 1, 4, 5, 6 ಮತ್ತು 7ನೆಯ ಶಬ್ದಗಳಿಗೆ ಪೊನ್ನನವೇ ಪ್ರಾಚೀನ ಪ್ರಯೋಗವಾಗಿದ್ದು ನಿಘಂಟಿನಲ್ಲಿ ದಾಖಲಾಗಿಲ್ಲ. ಆದರೆ ಈ 'ತಿಮಿರವ್ಯೂಹ' ಎಂಬ ಶಬ್ದವೇ 'ಕ.ಸಾ.ಪ.ಕ.ನಿ.'ನಲ್ಲಿ ಮುಖ್ಯ ಉಲ್ಲೇಖವಾಗಿ ಬಂದಿಲ್ಲ. ತಿಮಿರಪಟಲ, ತಿಮಿರಪೂಗ, ತಿಮಿರರೋಗ, ತಿಮಿರವಾತ ಕೊಟ್ಟಿದ್ದಾರೆ, 'ತಿಮಿರವ್ಯೂಹ' ಕೊಟ್ಟಿಲ್ಲ. 'ಕತ್ತಲೆಯ ಮೊತ್ತ, ಕತ್ತಲೆಯ ಆವರಣ, ದಟ್ಟವಾದ ಕತ್ತಲೆ' ಎಂಬರ್ಥವಿತ್ತು 'ತಿಮಿರವ್ಯೂಹ' ಎಂಬ ಮುಖ್ಯ ಉಲ್ಲೇಖ ಕೊಟ್ಟು ಪೊನ್ನನ ಈ ಪ್ರಯೋಗ ಕೊಡಬೇಕು. ನಿಷ್ಪತ್ತಿ ಭಾಗದಲ್ಲಿ [ಸಂ] ಎಂದು ತೋರಿಸಬೇಕು. ಈ ಶಬ್ದದಲ್ಲಿ ಬರುವ ತಿಮಿರ ಎಂಬ ರೂಪವೊಂದನ್ನೇ ತೆಗೆದುಕೊಂಡರೂ ಪೊನ್ನನದೇ ಪ್ರಾಚೀನ ಪ್ರಯೋಗವಾಗಿ ಕೊಡಬೇಕಾಗುತ್ತದೆ. 9. ಉಗ್ರಾಹಿ: ನಿಘಂಟಿನಲ್ಲಿ ಬಿಟ್ಟುಹೋಗಿರುವ ಇನ್ನೊಂದು ಮುಖ್ಯ ಉಲ್ಲೇಖ. ಈ ಉಗ್ರಾಹಿ ಎಂಬುದು ಸಂಸ್ಕೃತ ಶಬ್ದಕ್ಕೆ ಭಯಂಕರ ಸರ್ಪ ಎಂಬರ್ಥವಿತ್ತು ಪೊನ್ನನ ಪ್ರಯೋಗ ಕೊಡಬೇಕು.

ಇಷ್ಟು ವಿವರಣೆಯಿಂದ ಪೊನ್ನನ ಈ ಒಂದು ವೃತ್ತಪದ್ಯದ ಪ್ರಾಮುಖ್ಯ ಮನವರಿಕೆಯಾಗುತ್ತದೆ.

ಸಂಚಿವಾರ

ಪೊನ್ನಕವಿ ಶಾಂತಿಪುರಾಣದಲ್ಲಿ ಪ್ರಯೋಗಿಸಿರುವ ಬಹು ಅಪರೂಪದ ಶಬ್ದಗಳಲ್ಲಿ ಸಂಚಿವಾರ ಎಂಬುದೂ ಒಂದು. ಈ ಶಬ್ದವನ್ನು ಒಟ್ಟು ಎರಡು ಕಡೆ ಶಾಂತಿಪುರಾಣದಲ್ಲಿ ಬಳಸಿದ್ದಾನೆ :

1. ದಿಗಿಬರ್ ದಿಗಿಭಕ್ಕೆ ಪೊಗಂ
ಬುಗುವಂತಿರೆ **ಸಂಚಿವಾರ**ದಿಂ ಧನದಿಂದರ್
ಮಿಗಿಲುದ್ದಾನಿಯ ದಾನಂ
ದಿಗಿಭದ ದಾನಕ್ಕಮಗ್ಗಳಂ ಮುನಿಪತಿಯಾ ॥ 1–31

2. ಬೇಡಿದೊಡೀಯನೆಂದೆಮಗೆ ಪಾಗುಡಮಟ್ಟಿ ಮನಕ್ಕೆ ವಂದುದರ್
ಬೇಡಿದನೋ ಸಮರ್ಥನದನದೇವನೊ ದೈನ್ಯದ **ಸಂಚಿವಾರ**ಮಂ
ನೋಡಿರೆ ನಾಲ್ಕುಪಾಯಮಿರೆ ಗರ್ವದಿನಕ್ಕುಮೆ ಸಿದ್ಧಿ ನಾಲ್ಕುಮೊ
ಳ್ಗೋಡುಗಳಿಲ್ಲದೇಂ ಮದದೊಳಾಯ್ತೊ ಬಲಂ ದಿಗಿಭಕ್ಕೆ ಮೊಕ್ಕಳಂ ॥ 2–32

ಮೇಲಿನ ಎರಡು ಪದ್ಯಗಳ ಸಾರಾಂಶವಿಷ್ಟು :

1. ಒಂದು ದಿಕ್ಕಿನ ಆನೆಯು ಮತ್ತೊಂದು ದಿಕ್ಕಿನ ಆನೆಯು ಸಮ್ಮುಖಕ್ಕೆ ಹೋಗುವ ಹಾಗೆ ಸಂಚಿವಾರದಿಂದಲೂ ಧನದಿಂದಲೂ ಮಿಗಿಲು. ಅವರು ನೀಡುವ ಶ್ರೇಷ್ಠವಾದ ದಾನ, ದಿಕ್ಕಿನ ಆನೆಯ 'ದಾನ'ಕ್ಕಿಂತ ಅಗ್ಗಳವಾದದ್ದು ಆ ಮುನಿಪತಿಯ ದಾನ.

2. ಸುಮ್ಮನೆ ಬೇಡಿದರೆ ನಾವು ಕೊಡಲಿಕ್ಕಿಲ್ಲವೆಂದುಕೊಂಡು ನಮಗೆ ಕಾಣಿಕೆಯನ್ನು ಒಪ್ಪಿಸಿ ತನ್ನ ಇಷ್ಟಾರ್ಥವನ್ನು ಬೇಡಿದನೊ? ಸಮರ್ಥನಾದವನಿಗೆ ದೈನ್ಯದ (ಸಂಚಿವಾರ) ಅವಲಂಬನವೇಕೆ? ನಾಲ್ಕು ಉಪಾಯಗಳು ಇರುವಾಗ ಕೇವಲ ಗರ್ವದಿಂದ ಕಾರ್ಯವನ್ನು ಸಾಧಿಸಲಾದೀತೆ? ದಿಗ್ಗಜಕ್ಕೆ ಬಲಬಂದಿರುವುದು ಅದಕ್ಕೆ ನಾಲ್ಕು ಕೋರೆಗಳಿಂದಲ್ಲವೆ ಕೇವಲ ಮರದಿಂದ ಬಂದೀತೆ?

ಈ ಎರಡು ಪದ್ಯಗಳ ತಾತ್ಪರ್ಯ ಬಲದಿಂದ ಹೊರಡುವ ಮಸುಕಾದ ಅರ್ಥವಲ್ಲದೆ ಸಂಚಿವಾರ ಎಂಬ ಮಾತಿಗೆ ಖಚಿತವಾದ ಅರ್ಥವೇನೆಂದು ಸರಿಯಾಗಿ ತಿಳಿಯುವುದಿಲ್ಲ. ಈ ಶಬ್ದವನ್ನು ಹಿಂಜಿ ನೋಡಿದರೆ ಇದರಲ್ಲಿ ಒಟ್ಟು ಎರಡು ಶಬ್ದಗಳಿರುವುದು ತೋರುತ್ತದೆ. ಸಂಚಿ ಮತ್ತು ವಾರ ಎಂಬುವೇ ಆ ಎರಡು ಶಬ್ದಗಳು. ಸಂಚಿ ಎಂದರೆ ಚೀಲ, ಹಣದ ಚೀಲ, ಥೈಲಿ ಎಂಬರ್ಥ ಉಂಟು. ಆದರೆ ಈ ಅರ್ಥದಲ್ಲಿ ಇದು ಈಚಿನ ಕಾಲದ ಕನ್ನಡದಲ್ಲಿ ದೊರೆಯುತ್ತವೆ. ನಡುಗನ್ನಡ ಕಾಲದಿಂದ ಈಚೆಗೆ ಬಂದ ಇದರ ಪ್ರಯೋಗಕ್ಕೆ 'ಸಂಚಿಯ ಹೊನ್ನಮ್ಮ' ಎಂಬುದನ್ನು ಹೆಸರಿಸಬಹುದು. ಅಂತೂ ಇದು ತೆಲುಗಿನಿಂದ ಕನ್ನಡಕ್ಕೆ ಎರವಲಾಗಿ ಬಂದ ಮಾತೆಂದು ತೋರುತ್ತದೆ. ಹಳಗನ್ನಡ ಸಾಹಿತ್ಯದಲ್ಲಿ ಇದರ ಪ್ರಯೋಗಗಳಿರುವುದು ನನಗೆ ಕಂಡುಬಂದಿಲ್ಲ.

ಈಗ ಪೊನ್ನಕವಿ ಪ್ರಯೋಗಿಸಿರುವ ಸಂಚಿವಾರ ಶಬ್ದಕ್ಕೆ ಬರೋಣ. ಇದರ ಪೂರ್ವಾರ್ಧದಲ್ಲಿರುವ ಸಂಚಿ ಶಬ್ದಕ್ಕೆ (ತೆಲುಗಿನಲ್ಲಿರುವಂತೆ) ಚೀಲ, ಹಣದ ಚೀಲ ಎಂದು ಅರ್ಥ ಹಚ್ಚುವುದು ಅಸಮಂಜಸವೆನಿಸುತ್ತದೆ. ಹಾಗಾದರೆ ಇದರ ಅರ್ಥವೇನು ? ಉತ್ತರ ಸ್ಪಷ್ಟವಾಗಿ ತಿಳಿಯದು. ಪೊನ್ನನ ಎರಡೂ ಪ್ರಯೋಗಗಳಿಂದ ನಿವೃತ್ತಿ ಮತ್ತು ಅರ್ಥ ಸ್ಫುಟವಾಗಲಿಲ್ಲ. ಈಗಿರುವ ದಾರಿಯೆಂದರೆ ಇದರ ಇನ್ನಿತರ ಪ್ರಯೋಗಗಳನ್ನು ಹುಡುಕುವುದು. ಪೊನ್ನನಲ್ಲಿ ಹೊರತಾಗಿ ಸಂಚಿವಾರ ಶಬ್ದವನ್ನು ನಾನು ಬೇರೆ ಕಡೆ ಕಂಡಿರುವುದು ಇನ್ನೊಂದೇ ಒಂದು ಪ್ರಯೋಗ. ಇದು ಕನ್ನಡ ಭಾಷೆಯಲ್ಲಿ ಹೆಚ್ಚಾಗಿ ಬಳಕೆಯಾದಂತಿಲ್ಲ. ನಾನು ಗಮನಿಸಿರುವ ಇದರ ಇನ್ನೊಂದು ಪ್ರಯೋಗ ಹುಂಚದ ಶಾಸನದಲ್ಲಿದೆ (ಎಪಿಗ್ರಾಫಿಯಾ ಕರ್ನಾಟಿಕಾದ ಎಂಟನೆಯ ಸಂಪುಟ). ಹುಂಚದ ಪಂಚಬಸ್ತಿ ಅಂಗಳದಲ್ಲಿರುವ 35ನೆಯ ಕಲ್ಲಿನ ಶಾಸನದಲ್ಲಿ ಇದರ ಉಲ್ಲೇಖ 36–37ನೆಯ ಸಾಲುಗಳಲ್ಲಿದೆ :

3. ತಾಸಿರದಂದು ಕೊಂದಪುದು ಮೂಡಲವಂ ಪೆಱರೊಳ್ಸ
ಮಾನಮೆಂಬೀ ನುಡಿವೇಡ ಕೋಳ್ಕೊಡೆಗೆ ಬಲ್ಲಹನಾತನ ಸಂಚಿವಾರದು
ದ್ಧಾನಿಗೆ ರಾಜನಾಪೆಡೆಗೆ ಚೋಳನಿವಂ ದೊರೆಯೆನ್ದೊ
ಡಿನ್ನಭೂತೋ ನಭವಿಷ್ಯಮೆನ್ನದಪರಾರಳವಂ ಜಯದುತ್ತರಂಗನಾ ॥

ಇದೊಂದು ವೃತ್ತಪದ್ಯ. ಇದರ ಕಾಲ 1077. ಪೊನ್ನನಂತೆ ಇಲ್ಲಿಯೂ ಉದ್ದಾನಿ (ಯದಾನಂ) ಶಬ್ದ ಸಂಚಿವಾರ ಶಬ್ದದ ಜತೆಗೆ ಬಂದಿದೆ. ಉದ್ದಾನಿ ಎಂದರೆ ಅತಿಶಯ, ಹೆಚ್ಚಳ ಇತ್ಯಾದಿಯಾದ ಅಭಿಪ್ರಾಯ. ಸಂಚಿವಾರದ ಅತಿಶಯ ಎಂದರೇನು ? ಸರಿಯಾದ ಅರ್ಥಬೋಧೆ ಆಗುವುದಿಲ್ಲ. ಪೊನ್ನನಲ್ಲಿ ಇರುವ ಎರಡು ಪ್ರಯೋಗಗಳ ಜತೆಗೆ ಹುಂಚದ ಶಾಸನ ಪ್ರಯೋಗವೊಂದನ್ನು ಹೆಚ್ಚಿಗೆ ಗುರುತಿಸಿದಂತೆ ಆಯಿತೇ ಹೊರತು ಶಬ್ದದ ತೊಡಕುಗಳನ್ನು ಬಿಡಿಸಿದಂತೆ ಆಗುವುದಿಲ್ಲ.

ಸಂಚಿವಾರ ಶಬ್ದದ ಪೂರ್ವಾರ್ಧದಲ್ಲಿ ಇರುವ ಸಿಕ್ಕು ಏನೆಂಬುದನ್ನು ತಿಳಿದದ್ದು ಆಯಿತು. ಇನ್ನು ಇದರ ಉತ್ತರಾರ್ಧದಲ್ಲಿ ಏನಾದರೂ ಕ್ಲಿಷ್ಟತೆ ಇದೆಯೇ ನೋಡೋಣ. ವಾರ ಎಂಬುದು ಉತ್ತರಾರ್ಧದಲ್ಲಿರುವ ಪದ. ಸಂಚಿ ಎಂಬಂತೆ ವಾರ ಎಂಬುದೂ ಮುಕ್ತ ಆಕೃತಿ. ವಾರ ಎಂಬುದು ಸಂಸ್ಕೃತ ಶಬ್ದ. ಅದರ ಅರ್ಥ 'ಸಮೂಹ' ಎಂಬುದು. ಸಂಚಿವಾರಕ್ಕೆ ಸಂಚಿಯ ರಾಶಿ, ಸಂಚಿಯ ಸಮೂಹ ಎಂದು ಅರ್ಥ ಬರುತ್ತದೆ ಸರಿಯೆ; ಹಾಗೆಂದರೇನು? ಗೊತ್ತಿಲ್ಲ. ನಮ್ಮ ಮುಂದೆ ಇರುವ ಮೂರು ಪ್ರಯೋಗಗಳಿಂದಲೂ ನಿಜಾರ್ಥವನ್ನು ನಿರ್ಧರಿಸಿ ಹೇಳುವುದು ಸಾಧ್ಯವಾಗುತ್ತಿಲ್ಲ. ಇದರ ಪ್ರಯೋಗಗಳನ್ನು ಗಮನಿಸಿ ಆಯಾ ಸಂದರ್ಭವಶದಿಂದ ಅರ್ಥ ಹೇಳಬಹುದೇ ಹೊರತು ಶಬ್ದಾರ್ಥ ಮತ್ತು ನಿಷ್ಪತ್ತಿ ನಿರುಕಾಗುವುದಿಲ್ಲ. ಸಾಂದರ್ಭಿಕವಾಗಿ ಇಲ್ಲಿ ಇದಕ್ಕೆ ಐಶ್ವರ್ಯ, ಕೋಶಾಗಾರ, ಕಪ್ಪಕಾಣಿಕೆ ರೂಪದಲ್ಲಿ ದೊರೆ ಸಂಗ್ರಹಿಸಿಟ್ಟ ನಿಧಿ—ಎಂಬಂಥ ಅರ್ಥವನ್ನು ಹೇಳಬಹುದಾಗಿದೆ. ಇದಕ್ಕೆ ಉಪಷ್ಟಂಬಕವಾಗಿ ಇದೇ ಶಾಂತಿಪುರಾಣದ ಕೆಳಗಿನ ಪದ್ಯವನ್ನು ಅವಲೋಕಿಸಬಹುದು :

ಕೇಣಮನೊಕ್ಕು ತಕ್ಕನಱಿದುಕ್ಕೆವಮಂ ಪೆಱಗಿಕ್ಕಿ ದಕ್ಷಿಣ
ಶ್ರೇಣಿಯ ರಾಜ್ಯಲಕ್ಷ್ಮಿ ದಮಿತಾರಿಯ ಪೋರ್ಕುಳಿಗಿರ್ದೊಡುತ್ತರ
ಶ್ರೇಣಿಯ ರಾಜ್ಯಲಕ್ಷ್ಮಿ ಪುರುಡಾಕೆಯೊಳಾವಗಮಾಗೆ ಲಂಚಮಂ
ಮಾಣದೆ ಕೊಟ್ಟಪೋಲ್ ಸೊಗಯಿಸಿರ್ಪುವು ಕಪ್ಪದ ಪೊನ್ನ ರಾಶಿಗಳ್ ॥ 3–13

(ಗರ್ವವನ್ನು ಬಿಟ್ಟು, ಯೋಗ್ಯತೆಯನ್ನು ತಿಳಿದು, ಉತ್ಸಾಹವನ್ನು ಹಿಂದೆ ಹಾಕಿ, ದಕ್ಷಿಣ ಭಾಗದ ರಾಜ್ಯಲಕ್ಷ್ಮಿಯು ದಮಿತಾರಿಯ ಪ್ರಣಯಕಲಹಕ್ಕೆ ಇರುತ್ತಿರಲು ಉತ್ತರ ಶ್ರೇಣಿಯ ರಾಜ್ಯಲಕ್ಷ್ಮಿಯೊಡನೆ ಸ್ಪರ್ಧೆಯು ಯಾವಾಗಲೂ ಆಗುತ್ತಿರಲು ಲಂಚವನ್ನು ಬಿಡದೆ ಕಪ್ಪಕಾಣಿಕೆಯ ಸುವರ್ಣ ರಾಶಿಗಳು ಮನೋಹರವಾಗಿದ್ದವು.) ದೊರೆಯಾದವನು ತನ್ನ ಅಧೀನ ಸಾಮಂತ ಮನ್ನೆಯರಿಂದ ಕಪ್ಪಕಾಣಿಕೆ ಸಂಗ್ರಹಿಸಿ ಭಂಡಾರವನ್ನು ಹೆಚ್ಚಿಸಿಕೊಳ್ಳುವುದು ಒಪ್ಪಿತ, ವಾಡಿಕೆಯ ಕ್ರಮ. ಇವಕ್ಕೆ ಪುಷ್ಟಿಕೊಡುವ ಶಬ್ದಾರ್ಥ ಹಿನ್ನೆಲೆಯನ್ನೂ ಸಮಾನ ಸಂದರ್ಭಗಳನ್ನೂ ಮತ್ತಷ್ಟು ಹೆಕ್ಕಿನೋಡಬಹುದು.

ಸಂಚಿವಾರ ಎಂಬುದಕ್ಕೆ ಸಂಚಿವರ ಎಂಬ ರೂಪವೂ ಸಂಭಾವ್ಯವೇ. ಏಕೆಂದರೆ ಉತ್ತರಾರ್ಧವಾಗಿ ಬರುವ ಭಾಗದಲ್ಲಿ ವರ, ವಾರ ಎಂಬ ಹ್ರಸ್ವಸ್ವರದಿಂದ ಹಾಗೂ ದೀರ್ಘಸ್ವರದಿಂದ ಕೂಡಿದ ಎರಡೂ ರೂಪಗಳು ಸಿಗುತ್ತವೆ (ವಿಶೇಷವಾಗಿ ಸ್ಥಳನಾಮ ರೂಪಗಳಲ್ಲಿ ನಾಗವಾರ, ಬಾಣಾವರ). ದೀರ್ಘ ಹ್ರಸ್ವಸ್ವರ ವ್ಯತ್ಯಾಸ ಸಂಭವಿಸುತ್ತದೆ. ಆದರೆ ಈಗ ಸಂಚಿವಾರ ಎಂಬ ರೂಪಗಳು ದೊರೆತಿವೆಯೇ ಹೊರತು ಸಂಚಿವರ ಎಂಬ ರೂಪದ ಪ್ರಯೋಗ ದೊರೆತಿಲ್ಲ. ಸಂಚಿ ಎಂಬ ರೂಪ ಸಂಚ (← ಸಂಚಯ) ಎಂಬುದಕ್ಕೆ ಸಂಬಂಧಿಸಿದೆ. ಸಂಚ ಎಂದರೆ ಒಟ್ಟುಗೂಡಿಸು, ಚೀಲ ಎಂದರ್ಥ (ಸಂಚಿಸು—ಒಟ್ಟುಗೂಡಿಸು). ಈ ದಿಕ್ಕಿನಲ್ಲಿ ಸಂಶೋಧಿಸಿಕೊಂಡು ಚಿಂತನಶೀಲರಾಗಿ ಹೊರಟಾಗ ಒಂದು ಶಬ್ದಶ್ರೇಣಿಯೇ ಸಿಗುತ್ತದೆ. ಸಂಚಕ, ಸಂಚಗಾರ, ಸಂಚಕಾರ, ಸಂಚಕರ ಇತ್ಯಾದಿ ಶಬ್ದಗಳು ಸಂಚಿವಾರ ಶಬ್ದದ ಅರ್ಥದತ್ತ ಹೊಸ ಬೆಳಕು ಹಾಯಿಸುವಂತಿದೆ. ವಸ್ತುಕೋಶದಲ್ಲಿ (1-11-64) ಸತ್ಯಂಕಾರಂ ಪರ್ಣಾಪರ್ಣಂ ಸಂಚಕರಂ ಎಂದು ಹೇಳಿದೆ. ಸಂಚ—ಸಂಚಯ, ಸಂಚಕಾಲ—ಸತ್ಯಂಕಾರ ಎಂದು ತದ್ಭವಕೋಶದಲ್ಲಿದೆ (41-42). ಮುಂಗಡಹಣ, ಅಗಾವು, (ದೊರೆಗೆ) ಹಣವನ್ನು ಒಪ್ಪಿಸುವುದು—ಎಂಬುದು ಇವೆಲ್ಲದರ ಅರ್ಥ. ಪಂಪನ ಆದಿಪುರಾಣದಲ್ಲಿ ಬರುವ ಈ ಪದ್ಯ ಪ್ರಸ್ತುತ ಶಬ್ದಾರ್ಥ ನಿರ್ಣಯಕ್ಕೆ ನೆರವಿಗೆ ಬರುವಂತಿದೆ:

ತ್ರಿಕರಣಶುದ್ಧಿಯೊಳಾ ರಾ
ಜಕುಮಾರಂ ಮಾರಮಥನನಂ ಸ್ತುತಿಯಿಸಿ ತೆ
ತ್ತ್ರಕಟ ಫಲಪ್ರಾಪ್ತಿಗೆ ಸಂ
ಚಕರಂಗೊಳ್ವಂತೆ ಸಿದ್ಧಶೇಷೆಯನಾಗಳ್ ॥ 4–2

ತ್ರಿಕರಣಶುದ್ಧಿಯಿಂದ ಆ ರಾಜಕುಮಾರನು ಕಂದರ್ಪ ವಿಜೇತನಾದ ಜಿನನನ್ನು ಭಕ್ತಿಯಿಂದ ಸ್ತುತಿಸಿದನು. ಜಿನಸೇವೆಯಿಂದ ಲಭ್ಯವಾಗುವ ಫಲಪ್ರಾಪ್ತಿಗೆ ಮುಂಗಡ ಹಣವೋ (ಸಂಚಕರಂ) ಎಂಬಂತೆ ಸಿದ್ಧಶೇಷೆಯನ್ನು ಪರಿಗ್ರಹಿಸಿದನು. ನಾಗಚಂದ್ರನ ಪಂಪರಾಮಾಯಣದಲ್ಲಿ 'ದೇವರ ದೇವ **ಸಂಚಕರಮು**ಕ್ಷಯ ಮೋಕ್ಷ ಸುಖಕ್ಕೆನಲ್' (5-2) ಎಂದಿದೆ. ಇಲ್ಲಿಯೂ ಮುಂಗಡ ಕೊಟ್ಟದ್ದು ಎಂದೇ ಅರ್ಥ. ಪುಷ್ಪದಂತಪುರಾಣದಲ್ಲಿಯೂ 'ಪಂಚಶರಪ್ರಮಾದವಿಜಯಿ ಪಂಚಗತಿ ಪ್ರಾಪ್ತಿಗೆ ಸಂಚಕರಮಂಕೊಳ್ವಂತೆ (13–113 ವ) ಎಂಬ ಪ್ರಯೋಗ ಸಿಗುತ್ತದೆ. ಅಗ್ಗಳನ ಚಂದ್ರಪ್ರಭಪುರಾಣದಲ್ಲಿ ಶಕಟರೇಫಯುಕ್ತವಾದ **ಸಂಚಕಱ** ರೂಪ ಬಳಕೆಗೊಂಡಿದೆ: 'ಇವು ಮುನ್ನಮೆ **ಸಂಚಕಱ** ಮಾಗಿ ಬಂದುವು' (14–30); ಅರ್ಥವಂತೂ ಇಲ್ಲಿ ಸ್ವಯಂ ಸ್ಪಷ್ಟವಾಗಿದೆ. ಆಚಣ್ಣನ ವರ್ಧಮಾನಪುರಾಣದಲ್ಲೂ (8–64 ವ) ಇನ್ನೂ ಒಂದೆರಡು ಕಾವ್ಯಗಳಲ್ಲೂ ಇದರ ಪ್ರಯೋಗಗಳಿವೆ. ಎಷ್ಟೇ ಪ್ರಯೋಗಗಳಿದ್ದರೂ ಸಾರಾಂಶವಿಷ್ಟು:

ಸಂಚಕರ, ಸಂಚಕಾರ ಎಂಬ ಶಬ್ದ ಮತ್ತು ಅವಕ್ಕಿರುವ ಅರ್ಥವನ್ನು ಸಂಚಿವಾರ ಎಂಬ ಶಬ್ದ ಮತ್ತು ಅದಕ್ಕಿರುವ ಅರ್ಥವನ್ನು ಸಮೀಕರಿಸಲು ಸಾಧ್ಯವೆ ಎಂಬುದು ಪರಿಭಾವನಾರ್ಹ ಪ್ರಶ್ನೆ. ಶಬ್ದರೂಪ ಮತ್ತು ಅರ್ಥದಲ್ಲಿ ಸಾದೃಶ್ಯವಿದೆ. ಆದರೆ ಇವೆಲ್ಲಾ ಒಂದೇ ಮೂಲದಿಂದ ಬಂದಿವೆಯೋ ಹೇಗೆ ಎಂಬುದನ್ನು ಈಗಿರುವ ಆಧಾರಗಳ ಬಲದಿಂದ ಹೇಳಲು ಬರುವುದಿಲ್ಲ. ಸಂಚಕರ (ಕಾರ) ಎಂಬುದು ಸಂಚಿವಾರ ಹೇಗಾಯಿತು? ಅಥವಾ ಸಂಚಿವಾರ ಎಂಬುದು ಸಂಚಕಾರ ಎಂದು ಹೇಗೆ ಪರಿವರ್ತಿತವಾಯಿತು? ಈ ವ್ಯತ್ಯಾಸ ಹೇಗೆ ಘಟಿಸಿತೆಂಬ ವಿಚಾರದಲ್ಲಿ ಸಮಾಧಾನಕರವಾದ ಉತ್ತರ ಸಿಗುತ್ತಿಲ್ಲವಾದುದರಿಂದ ಇದನ್ನು ಹೀಗೆಯೇ ಒಂದು ತೆರೆದ ವಿಷಯವಾಗಿಡುವುದು ಲೇಸು. ಈ ಎಲ್ಲ ಶಬ್ದಗಳ ಪೂರ್ವಾರ್ಧದಲ್ಲಿ ಇರುವ ರೂಪ ಮಾತ್ರ ಸಮಾನ ಮೂಲದ್ದಾಗಿದೆ.

ಇನ್ನೂ ಹೆಚ್ಚಿನ ಪ್ರಯೋಗಗಳು ದೊರೆತರೆ, ಸಂಶೋಧಕರು ಬೆಳಕು ಚೆಲ್ಲಿದರೆ ಉಪಕಾರವಾದೀತು. ಅಲ್ಲಿಯವರೆಗೆ ಸಂಚಿವಾರ ಶಬ್ದಕ್ಕೆ (ನಿಸ್ಸಂದೇಹವೆನಿಸುವ ಅರ್ಥ ತಿಳಿಯದಿದ್ದರೂ) ನಿಧಿ ಸಂಗ್ರಹ ಭಂಡಾರ, ಮುಂಗಡ ಹಣದ ರಾಶಿ, ಕಪ್ಪಕಾಣಿಕೆಯಾಗಿ ಬಂದ ನಿಧಿ—ಎಂಬರ್ಥವನ್ನು ಸೂಚಿಸಿ ಅದರ ಜತೆಗೆ ಒಂದು ಪ್ರಶ್ನೆಯನ್ನೂ ಹಾಕಬಹುದು. ನಿಷ್ಪತ್ತಿ ಹೇಳುವಾಗಲೂ ಸಂಚಿ + ವಾರ ಎಂದು ಹೇಳಿ ಅದರ ಪಕ್ಕದಲ್ಲೂ ಒಂದು ಪ್ರಶ್ನೆ ಹಾಕಬಹುದು. ಇದೊಂದೇ ಈಗ ಉಳಿದಿರುವ ದಾರಿ. ಅಪರೂಪದ ಶಬ್ದವೊಂದನ್ನು ಕನ್ನಡನುಡಿ ಭಂಡಾರಕ್ಕೆ ಉಳಿಸಿಕೊಟ್ಟಿರುವ ಪೊನ್ನನಿಗೆ, ಹುಂಚದ ಶಾಸನಕವಿಗೆ ನಮ್ಮ ಕೃತಜ್ಞತೆಗಳು.

ಚೀರಘುಟ್ಟಿ

ಚೀರಘುಟ್ಟಿ ಎಂಬ ಒಬ್ಬ ವ್ಯಕ್ತಿಯ ಹೆಸರನ್ನು ಪೊನ್ನಕವಿ ಶಾಂತಿಪುರಾಣದಲ್ಲಿ ಎರಡುಕಡೆ ಹೇಳಿದ್ದಾನೆ:

1. ನಯವುಳವಟ್ಟೆ ಪಟ್ಟೆ ಸಹಕಾರದೊಳಿಂಗುಳಿಕಂ ತಳಿರ್ತಶೋ
ಕೆಯೊಳರಿದಾಳವುಳ್ಳಲರ್ದ ಸಂಪಗೆಯೊಳ್ ಕಡುಗರ್ಪು ಭೃಂಗ ಕೋ
ಟಿಯೊಳೆಸೆದಿರ್ದ ನೀಲಗಿರಿ ಮಲ್ಲಿಕೆಯೊಳ್ ಸಮನಾಗೆ ಚೀರಘು
ಟ್ಟಿಯೆ ಬರೆದಿಟ್ಟ ಚಿತ್ರದ ಬನಕ್ಕೆಣೆಯಾಯ್ತುಪವನಂ ವಿದೇಹದೊಳ್ ॥ 1–64

2. ಬಯಸುವ ನಾಣಜಾಣನು ದಂತೆ ದುಕೂಲದ ನಾಂದ ವಸ್ತ್ರಶೋ
ಭೆಯೊಳಮರ್ದುಟ್ಟಳೋ ನಿರುತಮೇನುಡಳೋ ಬಗೆ ಪೋಗದಂಬ ಸಂ
ದೆಯದೆ ಜನಕ್ಕೆ ಪೋಲೆ ಬರೆಗುಂ ಬರೆಯುಂ ದೊರೆವೆತ್ತ ಚೀರಘು
ಟ್ಟಿಯುಮೆನೆ ಭಿತ್ತಿವೆತ್ತ ತೆಱನೊಪ್ಪಿದುದೊರ್ವಳಪೂರ್ವರೂಪೆಯಾ ॥ 8–41

1. ಕ್ರಮವಾಗಿ ಹೊಂದಿಕೊಳ್ಳುವ ಹಸಿರು ಬಣ್ಣವು ಮಾವಿನಗಿಡದಲ್ಲಿಯೂ, ಕೆಂಪು ಬಣ್ಣವು ಚಿಗುರಿದ ಅಶೋಕ ಮರದಲ್ಲಿಯೂ, ಹೆಚ್ಚಾಗಿ ಅರಳಿದ ಸಂಪಿಗೆಯಲ್ಲಿ ಹಳದಿ ಬಣ್ಣವೂ, ಭ್ರಮರಗಳ ಸಮೂಹದಲ್ಲಿ ವಿಶೇಷ ಕೆಂಬಣ್ಣವೂ, ಉತ್ತಮವಾದ ನೀಲಿ ಬಣ್ಣವು ಬೆಟ್ಟದ ಮಲ್ಲಿಗೆಗಳಲ್ಲಿಯೂ ಸಮನಾಗಿರಲು ಚೀರಘಟ್ಟಿಯು ವಿವೇಹದಲ್ಲಿ ಬರೆದಿಟ್ಟ ಚಿತ್ರದ ವನಕ್ಕೆ ಆ ವನವು ಸಮಾನವಾಗಿತ್ತು.

2. ಅಪೇಕ್ಷಣೀಯವಾದ ಲಜ್ಜೆ ಹಾಗೂ ಜಾಣ್ಮೆ ಇವೆರಡನ್ನೂ ಮರೆತು ಈಕೆ ಒದ್ದೆಯಾದ ರೇಷ್ಮೆ ಸೀರೆಯನ್ನು ಮೈಗೆ ಹತ್ತಿಯಾಗುವಂತೆ ಬಿಗಿದುಟ್ಟಿರುವಳೋ ಇಲ್ಲವೋ ಏನನ್ನೂ ಉಟ್ಟೇ ಇಲ್ಲವೋ ಎಂಬ ಅನುಮಾನ ಪರಿಹಾರವಾಗುವಂತಿಲ್ಲ ಎಂದು ಜನಕ್ಕೆ ತೋರುವಂತೆ ಇಂತಹ ಒಂದು ಚಿತ್ರವನ್ನು ಚೀರಘಟ್ಟಿಯಾದರೂ ಬರೆಯಬಲ್ಲನೊ ಬರೆಯಲಾರನೊ ಎಂಬ ಮಟ್ಟಿಗೆ ಅಪೂರ್ವ ರೂಪವತಿಯಾದೊಬ್ಬಳು ಕಂಗೊಳಿಸಿದಳು.

ಪೊನ್ನನ ಎರಡು ಪ್ರಯೋಗಗಳಿಂದ ಈ ಚೀರಘಟ್ಟಿ ಒಬ್ಬ ಶ್ರೇಷ್ಠ ಪ್ರಖ್ಯಾತ ವಸ್ತ್ರ (ಚೀರೆ) ಚಿತ್ರಕಾರನಾಗಿದ್ದನೆಂದು ತಿಳಿದುಬರುತ್ತದೆ. ಪಂಪ, ರನ್ನ, ಜನ್ನ ಮೊದಲಾದ ಅನೇಕ ಕವಿಗಳು ಈ ಚಿತ್ರಕಾರನ ಹೆಸರನ್ನು ಹೇಳಿಲ್ಲ. ಪೊನ್ನನೇ ಚೀರಘಟ್ಟಿಯನ್ನು ಪರಿಚಯಿಸಿದ ಮೊದಲ ಕವಿ. ಪೊನ್ನನ ತರುವಾಯ ಇನ್ನೂ ಕೆಲವು ಕನ್ನಡ ಕವಿಗಳು ಚೀರಘಟ್ಟಿಯನ್ನು ಹೆಸರಿಸಿದ್ದಾರೆ. ನನ್ನ ಗಮನಕ್ಕೆ ಬಂದ ಐದು ಉಲ್ಲೇಖಗಳು ಹೀಗಿವೆ :

1. ಬರೆವವರಿಲ್ಲ ಪೋಲ್ವೆ ಬರೆಯಲ್ ಮೃದುಕರ್ಮದೊಳೋಜೆವೆತ್ತು ಕಂ
ಡರಿಸುವ ವಿಶ್ವಕರ್ಮನೆಣೆಯಾಗಿರೆ ಕಂಡರಿಸಲ್ವಿಳಾಸದಿಂ
ಕರುವನೊಡರ್ಚಿ ಬರ್ಚಿಸುವ ಬಲ್ಮೆಗೆ ಬೀಗುವ **ಚೀರಘಟ್ಟಿ** ತಾಂ
ಸರಿಯೆನಿಪಂದದಿಂ ಕರುವಿಡಲ್ ನೆಱಿಯಂ ದ್ವಿಜರಾಜಕನ್ನೆಯಂ ॥

— ಶಾಂತಿನಾಥ, ಸುಕುಮಾರಚರಿತೆ, 5–56

2. ಅರಸಿಯರ ಬಳ್ಳಿಮಾಡದ
ಕರುಮಾಡದ ಮಾಡಮಿರ್ಕೆ ಬಾಗಿಲ್ವಾಡಂ
ಬರೆಯಲ್ಕೆ **ಚೀರಘಟ್ಟಿಗ**
ಮರಿದೆನಿಪುದು ಘಟಿತರತ್ನ ಘಂಟಾಜಾಲಂ ॥

—ನಾಗಚಂದ್ರ, ಮಲ್ಲಿನಾಥಪುರಾಣ, 2–54

3. ಇನಿಸಂ ಪೋಲೆ ಸಮಸ್ತಜಾತಿಗಳ ರೂಪಂ ಚಿತ್ರಿಸರ್ ವಿಶ್ವ ಕ
ರ್ಮನ ಮಾಂಡವ್ಯನ **ಚೀರಘಟ್ಟಿ**ಯುಳವಲ್ಲೆಂದಳ್ಕರಿಂ ಚಿನ್ನಪೂ
ವಿನ ಚೆಂಬೊನ್ನ ಮಯೂಖಲೇಖೆಗಳನಂತಾ ಚಿತ್ರನಿರ್ವಾಹರೇ
ಖೆನೆರಂಬೆತ್ತಿರೆ ನೋಡಿನೋಡಿ ತಲೆದೂಗಿತ್ತಂಗನಾ ಸಂಕುಲಂ ॥

—ರುದ್ರಭಟ್ಟ, ಜಗನ್ನಾಥವಿಜಯ, 17–117

4. ಕಡೆಪದ ಕಾಂತಿ ಕಂಡರಣೆಯುನ್ನತಿ ಚಿತ್ರದ ಚಿತ್ರವೃತ್ತಿ ಬೇ
ಗಡೆವೆಸದೇಟಿಯಲ್ಲಿ ಪೊಸತಾದುದೆನುತ್ತದುಗಂಡು ವಿಸ್ಮಯಂ
ಬಡನೆ ಮಯಂ ಚಿರಲ್ಮಿಡೆಯನೇ ಸುರವರ್ಧಕಿರೋಮಹರ್ಷದೊಳ್
ತೊಡರನೆ **ಚೀರಘಟ್ಟಿ** ನಲವಿಂ ತಲೆದೂಗನೆ ಪದ್ಮಸಂಭವಂ ॥

—ಅಗ್ಗಳ, ಚಂದ್ರಪ್ರಭಪುರಾಣ, 1–44

5. ಬರೆವೊಡೆ ಚೀರಘಟ್ಟಿಕರುವಿಟ್ಟಪನೆಂದೊಡೆ ಪದ್ಮಯೋನಿ ಕಂ
ಡರಿವೊಡೆ ವಿಶ್ವಕರ್ಮನಱಿಗುಂ ನಱಿಯಂ ಪೆಱನಿಂತಿದಂ ಸುರೇ
ಶ್ವರ ಭವನಕ್ಕೆ ತಾನೆ ಪಡಿಚಂದಮಿದೆಂಬಿನಮಚ್ಚರಕ್ಕೆ ತಾ
ಯ್ಗರು ಕರುಮಾಡಪೊಪ್ಪುವುದಳಂಕೃತಸಪ್ತತಳಂ ನಿರಾಕುಳಂ ॥

—ಗುಣವರ್ಮ, ಪುಷ್ಪದಂತಪುರಾಣ, 2-92

ಪೊನ್ನ, ಶಾಂತಿನಾಥ, ರುದ್ರಭಟ್ಟ, ನಾಗಚಂದ್ರ, ಅಗ್ಗಳ, ಗುಣವರ್ಮ—ಈ ಆರೂ ಜನ ಕವಿಗಳು ಚೀರಘಟ್ಟಿಯ ಬಗೆಗೆ ಹೇಳಿರುವ ಮಾಹಿತಿ ಸಮಾನಾಂತರವಾಗಿದೆ. ಇವರ ಪ್ರಕಾರ ಚೀರಘಟ್ಟಿ ಒಬ್ಬ ಹೆಸರಾಂತ ಚಿತ್ರಗಾರ, ವರ್ಣ ಶಿಲ್ಪಿ; ಆತ ಬರೆದ ಚಿತ್ರಗಳು ಅತ್ಯುತ್ಕೃಷ್ಟ ಮಾದರಿಯವು, ಆತನ ಚಿತ್ರಗಳಲ್ಲಿ ರೇಖಾ ವಿನ್ಯಾಸ ಅನ್ಯಾದೃಶ ರೀತಿಯಲ್ಲಿ ಮನಸೆಳೆಯುತ್ತಿತ್ತು; ನೋಡಿ ನೋಡಿ ಜನ ತಲೆದೂಗುತ್ತಿದ್ದರು.

ಈ ಚೀರಘಟ್ಟಿ ಯಾರು, ಯಾವ ಕಾಲದವನು, ಯಾವ ಭಾಗದವನು—ಮೊದಲಾದ ಕುತೂಹಲ ಸಹಜ. ಈ ವಿಚಾರವಾಗಿ ಮೊದಲು ತಲೆಕೆಡಿಸಿಕೊಂಡವರು ಕವಿ ದ. ರಾ. ಬೇಂದ್ರೆಯವರು; ಅವರು ಚೀರಘಟ್ಟಿ ಯಾರು ಎಂಬೊಂದು ಪುಟ್ಟ ಟಿಪ್ಪಣಿ ಬರೆದು ಈತ ರಾಷ್ಟ್ರಕೂಟರ ಕಾಲದಲ್ಲಿ ಆ ದೊರೆಗಳ ನೆರಳಲ್ಲಿ ಇದ್ದಿರಬಹುದಾದ ಒಬ್ಬ ಐತಿಹಾಸಿಕ ವ್ಯಕ್ತಿಯೆಂದು ಕವಿಸಹಜ ಕಲ್ಪನೆ ಹಬ್ಬಿಸಿದ್ದಾರೆ.

ಭಿತ್ತಿಚಿತ್ರಕಾರನೂ ವಸ್ತ್ರಚಿತ್ರಕಾರನೂ ಆದ ಚೀರಘಟ್ಟಿಯ ಹೆಸರು ವೈದಿಕ ಪುರಾಣ-ಕಾವ್ಯಗಳಲ್ಲಿ ಬರುವುದಿಲ್ಲ ವೆಂಬುದನ್ನು ಮುಖ್ಯವಾಗಿ ನೆನಪಿಡಬೇಕು. ಇಲ್ಲಿ ಕೊಟ್ಟಿರುವ ಉದಾಹರಣೆಗಳಲ್ಲಿ ರುದ್ರಭಟ್ಟನೊಬ್ಬನೇ ಜೈನೇತರ ಕವಿ, ಆತ ಕೂಡ ಜೈನ ಚಂಪೂ ಚೌಕಟ್ಟಿಗಳನಟ್ಟು ಅವರ ಮಾದರಿಯನ್ನು ಮುಂದುವರಿಸಿ ಅವರ ಗುಹಾಧ್ವನಿಯಾಗಿ ದ್ದಾನೆ. ಅದರಿಂದ ಈ ಚಿತ್ರಕಾರ ಜೈನ ಕವಿಗಳ ಕಾಣಿಕೆಯೆಂದು ತಾತ್ಕಾಲಿಕವಾಗಿ ತಿಳಿಯಬಹುದು.

ಬಹುಶಃ ಚೀರಘಟ್ಟಿ ಒಬ್ಬ ಕಾಲ್ಪನಿಕ ಆದರ್ಶ ಚಿತ್ರಗಾರನೆಂದು ತೋರುತ್ತದೆ. ಈತನನ್ನು ಒಬ್ಬ ಪ್ರಸಿದ್ಧ ದೇವ ಚಿತ್ರಕನೆಂದರೂ ಆದೀತು. ರುದ್ರಭಟ್ಟ ಕೊಡುವ ಮಾಂಡವ್ಯನೂ ಅಂಥ ಇನ್ನೊಬ್ಬ ಚಿತ್ರಕಾರ. ವಿಶ್ವಕರ್ಮ, ಮಾಂಡವ್ಯ, ಚೀರಘಟ್ಟಿ, ಮಯ, ಸುರವರ್ಧಕಿ, ಪದ್ಮಯೋನಿ (ಪದ್ಮಸಂಭವ = ಬ್ರಹ್ಮ)—ಇವರೆಲ್ಲಾ ಚಿತ್ರಕಲೆ, ಶಿಲ್ಪಕಲೆ, ಎರಕಹಾಕುವ ಕಲೆ, ಗೃಹನಿರ್ಮಾಣ ಕಲೆ ಮೊದಲಾದ ಕಲೆಗಳಿಗೆ ಮೂಲಪುರುಷರು. ಎಲ್ಲದಕ್ಕೂ ದೈವ ಮೂಲವನ್ನು ಹೇಳುವಂತೆ ಈ ಕಲೆಗಳಿಗೂ ಋಷಿಪುಂಗವರು ಇಲ್ಲವೇ ದೈವಾಂಶಸಂಭೂತರಾದ ಮೇಲೆ ಹೇಳಿದ ಶ್ರೇಷ್ಠ ಶಿಲ್ಪಿಗಳನ್ನು ಕಲ್ಪಿಸಿಕೊಳ್ಳಲಾಗಿದೆಯೆನ್ನಬಹುದು.

ಅಲ್ಲದೆ ವಿಶ್ವಕರ್ಮನನ್ನೂ ಒಬ್ಬ ಶ್ರೇಷ್ಠ ಚಿತ್ರಗಾರನೆಂದೂ ನಮ್ಮ ಕವಿಗಳು ಕಲ್ಪಿಸಿದ್ದಾರೆ. ಪೊನ್ನನ ಈ ಪದ್ಯವೇ ಅದಕ್ಕೆ ಉತ್ತಮ ಉದಾಹರಣೆ:

ಧಾತ್ರಿಪ ಫಣಿಪರ್ ಖೇಚರ
ಪತ್ರಿದಶಪರೆಯ್ದೆ ವಿಶ್ವಕರ್ಮಂ ಬರೆದಂ
ಚಿತ್ರಪಟಮಂ ದಲೆನೆಭುವ
ನತ್ರಿತಯಂ ಕಾಣಲಾದುದಭವನ ಸಭೆಯೊಳ್ ॥ 9-69

ಇನ್ನೂ ಹೆಚ್ಚಿನ ಆಧಾರಗಳು ಸಿಗುವವರೆಗೆ ಚೀರಘಟ್ಟಿಯ ವಿಚಾರವಾಗಿ ಇವಕ್ಕಿಂತ ಹೆಚ್ಚಿಗೆ ಹೇಳಲು ಬರುವಂತಿಲ್ಲ.

ಪೊನ್ನ ಮತ್ತು ಶಾಸ್ತ್ರಕೃತಿಗಳು

ಪೊನ್ನನಲ್ಲಿ ಸಿಗುವ ಎಷ್ಟೋ ಶಬ್ದಗಳ ಅರ್ಥಕ್ಕೆ ಸಂಬಂಧಿಸಿದಂತೆ ನಾಗವರ್ಮನ (ಸು. 1145) ಅಭಿಧಾನ ರತ್ನಮಾಲಾ ಕರ್ಣಾಟಕ ಟೀಕೆ (ಹಲಾಯು), ಅಭಿನವ ಮಂಗರಾಜನ (1398) ಅಭಿನವಾಭಿದಾನಂ (ಮಂಗರಾ), ಅಜ್ಞಾತ ಕವಿಕರ್ತೃಕಗಳಾದ (ಸು. 1400) ಕರ್ಣಾಟಕ ನಿಘಂಟು (ಕರ್ಣಾ.ನಿ.) ಮತ್ತು ಕರ್ಣಾಟಕ ಶಬ್ದಸಾರ (ಕ.ಶ.ಸಾ.), ಕೇಶಿರಾಜನ (ಸು. 1238) ಶಬ್ದಮಣಿದರ್ಪಣ (ಶ.ಮ.ದ.), ನಾಚಿರಾಜನ (ಸು. 1300) ನಾಚಿರಾಜೀಯ (ನಾಚಿರಾ.), ನಾಗವರ್ಮನ (ಸು. 1145) ಅಭಿಧಾನ ವಸ್ತುಕೋಶಂ (ವಸ್ತುಕೋ.), ತೋಂಟದಾರ್ಯನ (ಸು. 1540) ಶಬ್ದಮಂಜರಿ (ಶಬ್ದಮಂ.), ಲಿಂಗಮಂತ್ರಿ (ಸು. 1530) ಕಬ್ಬಿಗರ ಕೈಪಿಡಿ (ಕಬ್ಬಿ.ಕೈ.), ಸೂರ್ಯಕವಿಯ (ಸು. 1640) ಕವಿಕಂಠಹಾರ (ಕವಿಕಂ.), ಶೃಂಗಾರಕವಿಯ (ಸು. 1600) ಕರ್ಣಾಟಕ ಸಂಜೀವನಂ (ಸಂಜೀವ), ಚತುರಾಸ್ಯ ಬೊಮ್ಮರಸನ (ಸು. 1450) ಚತುರಾಸ್ಯ ನಿಘಂಟು (ಚತು.ನಿ.)—ಮುಂತಾದ ಕೃತಿಗಳಲ್ಲಿ ವಿವರಣೆಗಳು ಸಿಗುತ್ತವೆ. ಇವೆಲ್ಲಾ ಪೊನ್ನಾನಂತರ ರಚಿತವಾದ ನಿಘಂಟುಗಳು. ಮಾದರಿಗಾಗಿ ಇಲ್ಲಿಂದ ಕೆಲವು ದುಷ್ಟಾಂತಗಳನ್ನು ನೋಡಬಹುದು :

ಅಂಕೆಯುಮಡರ್ಪೆಂಡು ನೆಮ್ಮುಗೆಗೆ ನಾಮಮಕ್ಕುಂ : ಶಬ್ದಮಂ. 67

ಅನೇಡಮೂಕ (8–132 ವ) ಅಂಧ, ಅನೇಡಮೂಕ ಈ 2 ಕುರುಡಂ : ಹಲಾಯು. 100–455

ಅವಸ್ಕಂದನ (6–39 ವ) ಶಿಬಿರ ಜಿಗೀಷುಣ, ನಿವೇಶಸ್ಥಾನಂ

ಅಡರ್ಪು (5–67) ಅಂಕೆಯುಮಡರ್ಪೆಂದು ನೆಮ್ಮುಗೆಗೆ ನಾಮಮಕ್ಕುಂ : ಕಬ್ಬಿ.ಕೈ. 73

ಅತ್ರಪರ (39, 159–8, 225–41)

ಅಳವಿ (127–167, 3–113 ವ)

ಅಳಿಪು (4-104, 83-45, 16)

ಅಟ್ಟೊಡು (4-36, 12)

ಆಕೂತ (2-51 ವ) ಆಕೂತಂ, ಅಭಿಪ್ರಾಯ ಈ 2 ಬಗೆ : ಹಲಾಯು 125–77

ಆನಕ (4–56) ಆನಕ, ಪವಹ ಈ 2 ಪಡಡಕ್ಕೆ: ಹಲಾಯು 17–97

ಆಸಂದಿ (10-67) ವೇತ್ರಾಸನಂ, ಆಸಂದೀ ಈ 2 ಬೆತ್ತದ ಜಕ್ಕಳಂ : ಹಲಾಯು 52–156, ಆಸಂದಿ ವೇತ್ರಾಸನಂ ಜಕ್ಕಳಮಕ್ಕುಂ: ಮಂಗರಾ. 62–21

ಉಪಜಾಪ (1-71 ವ) ಉಪಜಾಪ, ಭೇದ ಈ 2 ಒಳಗುಗುಡುವುದು : ಹಲಾಯು 128-95

ಎಡಱು (3–72, 24, 71–612, 131–189)

ಎತ್ತುಂಗೋಲ್ (9-23 ವ) ಎತ್ತುಂಗೋಲೆಂದು ಕೂರಂಬು : ಕ.ಶ.ಸಾ. 23-485

ಎಱಕ (11-30, 62-390, 155–67, 228-56, 483-173)

ಐರಾವರಣ (10-155) ಐರಾವತ, ಅಭ್ರಮಾತಂಗ, ಐರಾವಣ ಈ 3 ಇಂದ್ರನ ಆನೆ : ಹಲಾಯು 11-61

ಒಟ್ಟಜೆ (2–22) ಒಟ್ಟಜೆಯೆಂದತಿಶಯಂ : ಕ.ಶ.ಸಾ. 29-615, ಒಟ್ಟಜೆಯೆನಲತಿಶಯಾರ್ಥಮಕ್ಕುಂ : ಕವಿಕಂ. 230

ಓಸರಿಸು (5–102, 6–9, 23, 497–252)

ಕಣೆಯ (6–9)ನಾರಿಯರ್ಕಳ ಜಘನಾಂಶುಕಗ್ರಂಥಿ ಕಣಯಮಂತದು ನೀವಿಯೆಂಬುದಕ್ಕುಂ: ವಸ್ತುಕೋ. 78-21, ನೀವೀ, ಉಚ್ಚ್ಯಯ ಈ 2 ಕಣಯಂ: ಹಲಾಯು 90–393, ಸ್ತ್ರೀಯ ಉಡಿಯ ಸೀರೆಯ ಕಣೆ: ನಾಚಿರಾ.

ಕಳಭ (3–66 ವ) ಕರಿಪೋತಮೆನೆ ಕಳಭಮೆನಲು ವಜೆಗಳ್: ಮಂಗರಾ. 4–61

ಕಾನನ (5–27) ಕಾನನದಲ್ಲಿ ಕಾಡುಪಳುಬಿಂಜಮಡವಿಯುಮೆಂದು: ಶಬ್ದಮಂ. 22

ಕುಂಜ (5–27) ಕುಂಜ, ಕುಂಜು, ಕುಂಜನಂ ಈ 3 ಹೊದರ್: ಕಾ.ಶ.ಕೃ. 65

ಕುಡುಗೂಸು (3–81) ಕುಮಾರೀ, ಕನ್ಯಾ ಈ 2 ಕೊಡಗೂಸು: ಹಲಾಯು 79–329

ಕುಶಾಗ್ರೀಯಮತಿ (2–66 ವ) ಕುಶಾಗ್ರೀಯಮತಿ, ಸೂಕ್ಷ್ಮದರ್ಶೀ ಈ 2 ಸೂಕ್ಷ್ಮಬುದ್ಧಿಯನುಳ್ಳವಂ: ಹಲಾಯು 61–218

ಕೇಗು (2–53) ಕೇಗು ಮಯೂರಸ್ವನೇ : ಶಮದ ಧಾತು

ಕೊಟ್ಟಜ (11–28) ಕೊಟ್ಟಜಮೆಂದು ಕಪ್ಪದೊಳ್: ಕರ್ಣಾನಿ 29, ಕೊಟ್ಟಜಮೆಂದು ಕಪ್ಪಂ : ಶಮದ

ಕೊಡಗೂಸು—ಕನ್ನೆ ಕೊಟ್ಟಾಕೂಸುವರ್ಯೆ: ಮಂಗರಾ. 89–2

ಕ್ಷೌದ್ರ (11–24) ಸಾರಘಂ, ಮಾಕ್ಷಿಕಂ, ಕ್ಷೌದ್ರಂ, ಮಧು, ಪುಷ್ಪರಸ ಈ 5 ಜೇನುತುಪ್ಪಂ: ಹಲಾಯು 36–61

ಗಜ (4–21) ಮಾತಂಗ, ದ್ವಿರದ, ದ್ವಿಪ, ಕರೀ, ಗಜ, ಸ್ತಂಬೇರಮ, ಅನೇಕಪ, ಕುಂಭೀ, ಕುಂಜರ, ವಾರಣ, ಇಭ, ರದೀ, ಸಾಮೋದ್ಭವ, ಸಿಂಧುರ ಈ 14 ಆನೆಯ ಪೆಸರ್: ಹಲಾಯು 36–61

ಗರಳ (6–26) ವಿಷಂ, ಅರಳಂ, ಗರ ಈ 3 ಹಾವಿನ ವಿಷಂ: ಹಲಾಯು 105–19

ಚಂಚರೀಕ (5–96) ಮಧುಕರ, ಚಂಚರೀಕ, ಅಳೀ ದ್ವಿರೇಫ, ತುಂಬಿ: ಹಲಾಯು 43–101

ಚೆಂಬೊನ್ (3–29) ಸೊನ್ನೆ, ಕಸವರಂ, ಚೆಂಬೊನ್, ಮಿಸುನಿ ಈ 4 ಸುವರ್ಣಂ: ಕ.ಶ.ಸಾ. 5–61

ಜೀರ್ಕೊಳವಿ (8–31) ಜಳಯಂತ್ರಮದು ಜೀರ್ಕೊಳವಿಂ, ಸಂಜೀವ 2, ಕರ್ಣಾಟಕ ಸಂಜೀವನಂ

ಡಾವರ (6–102 ವ) ಡಾವರಮಾ ಕ್ಷಾಮಮುದಕ್ಕುಂ: ಕವಿಕಂ. 269

ತತ (11–60 ವ) ತತಮೆಂಬುದು ತಂತ್ರಿಯೊಳನ್ವಿತಂ: ವಸ್ತುಕೋ. 79–25

ತವುಕಲ್ (4–32 ವ) ತವುಂಕಲ್ ಕ್ಷಯ: ಶಬ್ದಮಂ. 65

ತವೆ (11–60) ನೆಜೆಸಲೆತವೆಮಿಗೆಯೊಗುಮಿಗೆಯುಜ್ಜೆಯೆಂಬಿವು ಪಾದಪೂರಣಾರ್ಥಂ: ಚತುನಿ. 34

ದೇವಾಂಗವಸ್ತ್ರ (8–83 ವ) ದೇವಾಂಗಮೆಂದು ಪಟಭೇದಮುಕ್ಕುಂ: ಮಂಗರಾ. 101–28

ನಸೆ (7–29) ನಸೆಕಾಮವಿಕಾರ ವೃದ್ಧಿಯೊಳ್: ಕರ್ಣಾ.ನಿ. 90

ಲಾಳವಿಂಡಿಗೆ—ಆವುಜದ ಮುಟ್ಟಿನೊಳ್ ಲಾಳವಿಂಡಿಗೆಯೊಳಂ ಬಲ್ಲರಿಂವಗುಟಿಯಕ್ಕುಂ: ಸಂಜೀವ 13

ಸಲ್ಲಕೀ (5–29) ಸಲ್ಲಕೀ

ಏಕೈಕ ಪ್ರಯೋಗಗಳು

ಪೊನ್ನನ ಶಾಂತಿಪುರಾಣದಲ್ಲಿ ಎಷ್ಟೋ ಶಬ್ದಗಳು ಕೇವಲ ಕನ್ನಡ ಕಾವ್ಯಗಳಲ್ಲಿ ಸಿಗುವ ಪ್ರಾಚೀನ ಪ್ರಯೋಗವೇ ಅಲ್ಲದೆ ಏಕೈಕ ಪ್ರಯೋಗವೂ ಆಗಿವೆ. ಇಲ್ಲಿ ಕೆಲವನ್ನು ಹೆಸರಿಸಲಾಗಿದೆ :

ಅಕ್ಲೇಶ	6–63	ಅಗ್ರಜ	4–32	ಅಚ್ಚಗಡಿ	7–36
ಅನ್ವಯು	4–17 ವ	ಅಪಕ್ಷ್ಮಪಾತ	4–11 ವ	ಅಪನೋದಿತ	8–83 ವ
ಅಭಿರೂಪ	1–22	ಅಮೋಘ	9–212 ವ	ಅವದಾನ	4–11 ವ
ಅವಸ್ಕಂದನ	6–39 ವ	ಅವಾಗ್ವಿಷಯ	3–11 ವ	ಆಧಾನ	6.12 ವ
ಇಟಿವಿಟಿ	6–102 ವ	ಊರ್ಜಕಕುದ	4–62 ವ	ಕಟ್ಟುಂಗವಳ	10–164
ಒಳ್ತು	8–91, 4–61	ಕನ್ನಡಗಳಿತೆ	1–11	ಕುಚಂದನ	2–112
ಕುಬ್ಜೆ	4–66 ವ	ಕುಡುಪು	6–8	ಕುಶಾಗ್ರೀಯಮತಿ	2–66 ವ
ಕೇಶೋತ್ಪಾಟನ	1–2	ತಂದ್ರ	5–1	ನಾಡಮಾನಸ	4–49
ತಳಮುಳಗು	2–98 (ನಾಮಪದ)	ಉಪಾಧ್ಯಾಯತೆ	2–101		

ಪ್ರಯೋಗ ಕೊಡದಿರುವ ಶಬ್ದ ಶ್ರೇಣಿ

ಇದುವರೆಗೆ ಪ್ರಕಟವಾಗಿರುವ 'ಕ.ಸಾ.ಪ.ಕ.ನಿ.'ನಲ್ಲಿ ಪೊನ್ನನ ಪ್ರಯೋಗ ಕೊಡದಿರುವ ಶಬ್ದಗಳು ಸಾಲುಸಾಲಾಗಿ ನಿಲ್ಲುತ್ತವೆ. ಸಾಕಷ್ಟಿರುವ ಅಂಥ ಶಬ್ದಗಳ ಮಾಲೆಯಿಂದ ಕೆಲವನ್ನು ಮಾತ್ರ ಆಯ್ದು ಇಲ್ಲಿ ಕೊಟ್ಟಿದೆ. ಹತ್ತಾರು ಪ್ರಯೋಗಗಳು ಒಂದು ಶಬ್ದಕ್ಕೆ ದೊರೆತಾಗ ಕೆಲವನ್ನು ಮಾತ್ರ, ಅದೂ ಕಾಲಕ್ರಮದಲ್ಲಿ ನೋಡಿ, ಪ್ರಾತಿನಿಧ್ಯ (ಹಳಗನ್ನಡ, ನಡುಗನ್ನಡ, ಹೊಸಗನ್ನಡ, ಚಂಪೂಷಟ್ಪದಿ, ಸಾಂಗತ್ಯ ಹೀಗೆ) ಬರುವಂತೆ ಕವಿ ಸೂಕ್ತಿಗಳನ್ನು ಉದಾಹರಿಸುವುದು ನಿಘಂಟಿನ ಶಿಷ್ಟಪದ್ಧತಿ. ಈ ಕ್ರಮಕ್ಕೆ ಬದ್ಧರಾಗಿ ಅವಲೋಕಿಸಿದಾಗಲೂ ಪೊನ್ನನ ಶಾಂತಿಪುರಾಣದಿಂದ ಇನ್ನೂ ಸುಮಾರು ಒಂದು ನೂರು ಪ್ರಯೋಗಗಳನ್ನು ಅವಶ್ಯ ಕೊಡಬೇಕಾಗಿತ್ತೆಂಬುದು ತುಂಬ ಧಾರಾಳವಾಗಿ ಹೇಳಬಹುದಾದ ಹೇಳಿಕೆ :

ಅಂತಕ ಮುಖ	4–26	ಅಂತರ್ವಣ	2–91 ವ	ಅಂಬೇಱು	4–30 ವ
ಅದ್ಭುತ	4–61 ವ	ಅನಿವ	4–66 ವ	ಅಪಾಕೃತ	1–71 ವ
ಅಕ್ಷೂಣ	1–71 ವ	ಅವನದ್ಧ	4–56	ಅವಿತಥ	3–40
ಅವಿವೇಕಿ	4–100	ಅವಲೇಪ	3–41	ಅಪುಂಕು	3–41
ಅಶ್ವನಿಕರ	4–34	ಅಶ್ವನಿಕಾಯ	4–34	ಅಸಿಚ್ಛುರಿತ	4–15
ಅಳ್ಳೆವಿಳ್ಳೆ	2–22 ವ	ಆಂದೋಳಿತ	4–17 ವ	ಆಕಸ್ಮಿಕ	4–61 ವ
ಆಚರಣ	4–57 ವ	ಆಸವ	4–62	ಆಸ್ಥಾಯಿಕೆ	3–29, 30
ಇನ (ಗಂಡ ಎಂಬರ್ಥದಲ್ಲಿ ಏಕೈಕ ಕಾವ್ಯ ಪ್ರಯೋಗ)	3–14	ಈಡಿತ	1–32	ಉಗ್ರಾಹವ	4–32
ಉತ್ಪಾತ	4–15	ಉದಂತ	2–18 ವ	ಉರುಳಿಚ್ಚು	4–19
ಉಪ್ಲವ	10–78	ಒರ್ಕೈಸಿ	4–33 ವ	ಒಟ್ಟಜೆ	2–22

ಓರೊಂದು	4–57 ವ	ಕೃತಾಂತ	4–16 ವ	ಕಿಡಿಗುಟ್ಟು	4–30 ವ
ಕುರುಡಿ	4–66 ವ	ಕೋಪಾಗ್ನಿ	4–50 ವ	ಘನ	4–61
ಘಳಿಗೆಯ ಮನೆ	3–19 ವ	ಚೆಂಬೊನ್	3–29	ಚಕ್ರವಾಳ	4–67
ತತ್ಪ್ರಾಯ	4–57 ವ	ತತ್ವಾಲೋಚಿತ	4–59 ವ	ತೂಗಿತೊನೆ	4–61 ವ
ತುಱಿಲಸಂದ	4–30 ವ	ದರಿದ್ರ	4–66 ವ	ದೇಹಾರ	4–67 ವ
ಧೈರ್ಯ	4–66 ವ	ನಟ್ಟುವ	10–60 ವ		

ಅಷ್ಟೇನೂ ಅಪರೂಪ ಶಬ್ದಗಳಲ್ಲದಿದ್ದರೂ ಪೊನ್ನನಲ್ಲೂ ಪ್ರಯೋಗವಿದ್ದರೂ ಕೊಡದೆ ಕೇವಲ ಬೇರೆ ಕಾವ್ಯಗಳಿಂದ ಉದಾಹರಿಸಿರುವ ಕೆಲವು ಶಬ್ದಗಳು:

ಅನೂನ 1-71 ವ, ಅಳಜು 2-68, ಆನಕ 4-56, ಅಳ್ಳೆವಿಳ್ಳೆ 2-22 ವ (ಈ ಶಬ್ದಕ್ಕೆ ಆದಿಪುರಾಣದಿಂದ ಎರಡು ಪ್ರಯೋಗ ಮತ್ತು ವಿಕ್ರಮಾರ್ಜುನವಿಜಯದಿಂದ ಒಂದು ಪ್ರಯೋಗ—ಹೀಗೆ ಒಟ್ಟು ಪಂಪನಿಂದ ಮೂರು ಪ್ರಯೋಗ ಕೊಟ್ಟಿದ್ದರೂ ಪೊನ್ನನಿಂದ ಒಂದು ಪ್ರಯೋಗವನ್ನೂ ಕೊಟ್ಟಿಲ್ಲದಿರುವುದು ಸರಿಯಲ್ಲ). ಏವುದು 2-67—ಇದಕ್ಕೂ ಪಂಪಭಾರತದಿಂದ ಎರಡು ಉದಾಹರಣೆ ತೆಗೆದುಕೊಂಡಿದೆ, ಪೊನ್ನನಿಗೆ ತಿಲಾಂಜಲಿ ಕೊಡಲಾಗಿದೆ.

ಪ್ರಾಚೀನ ಪ್ರಯೋಗಗಳು .

ಪೊನ್ನನ ಶಾಂತಿಪುರಾಣದಲ್ಲಿ ಅನೇಕ ಶಬ್ದಗಳಿಗೆ ಅತ್ಯಂತ ಪ್ರಾಚೀನತಮ ಪ್ರಯೋಗಗಳು ಸಿಗುತ್ತವೆ. ಅವುಗಳಲ್ಲಿ ಸಾಕಷ್ಟನ್ನು ನಿಘಂಟಿನಲ್ಲಿ ದಾಖಲಿಸಿದ್ದಾರೆ. ಕೆಲವು ಬಿಟ್ಟುಹೋಗಿರಬಹುದು.

ಅನುಚಿತ	4–57 ವ	ಅನುಭಾವ	7–117	ಅನ್ವಯಾಗತ	4–33 ವ
ಅವಜ್ಞೆ	4–98 ವ	ಅನಿವ	4–66 ವ	ಅನಿವಂಗೆಯ್	4–66 ವ
ಅನೇಡಮೂಕ	8–132 ವ	ಅಪಹಾಸ	8–77 ವ	ಅವನೀತಳ	3–31, 33
ಅವಿತಥ	1–19	ಅವಿರಳ	4–60	ಅಷ್ಟಾಪದ	4–30
ಅಹೀನ	5–27	ಆಸಂದಿ	10–67	ಇದ್ಧ	4–95
ಈಡಿತ	1–32	ಇನ	3–14	ಉಪಚಯ	11–72
ಎಡೆವೊಕ್ಕು	4–30 ವ	ಕವಚ	4–23	ಕೊಪ್ಪು	8–22
ಗದೆ	10–90 ವ	ಘನ	4–56	ಗುಂಡು	4–45 ವ
ಚಾಮೀಕರ	3–19 ವ	ಚೀವರ	8–146	ಜಡತೆ	2–96

ಪೊನ್ನಕವಿ ದೂತತ್ವ, ದೂತನಾಗಿ ಇಲ್ಲವೇ ರಾಯಭಾರಿಯಾಗಿ ಹೋಗಿಬರುವುದು ಎಂಬರ್ಥದಲ್ಲಿ 'ಪೆರ್ಗಡೆತನ' ಎಂಬ ಮಾತನ್ನು (2–74 ವ, 3–93) ಎರಡು ಕಡೆ ಪ್ರಯೋಗಿಸಿದ್ದಾನೆ. ಅರಮನೆಯ ಅಧಿಕಾರಿಗಳಲ್ಲಿ ಹೆಗ್ಗಡೆಯೂ ಒಬ್ಬ. ಆತ ಅರಮನೆಯ ಆತ್ಮೀಯ, ನಂಬುಗೆಯವ. ಅರಮನೆಯ ಆಂತರಿಕ ಹಾಗೂ ಗೃಹಕೃತ್ಯ ವಿಚಾರಗಳನ್ನು ಸಾಮಾನ್ಯವಾಗಿ ಹೆಗ್ಗಡೆ ನೋಡಿಕೊಳ್ಳುವುದುಂಟು. ರಾಜವಂಶ ವೈವಾಹಿಕ ಮಾತುಕತೆಗಳಿಗೂ ಹೆಗ್ಗಡೆ ಮುಂದಾಳುವಾಗಿರುತ್ತಾನೆ. ಆದರೆ ಪೊನ್ನನ ಈ ಎರಡು ಪ್ರಯೋಗಗಳಿಂದ ಪೆರ್ಗಡೆಯ ಪಾತ್ರ ಯುದ್ಧ ಸಂಬಂಧ ವ್ಯವಹಾರದಲ್ಲೂ ಇದ್ದಿತೆಂಬ ಹೊಸ ಸಂಗತಿ ತಿಳಿದುಬರುತ್ತದೆ.

ಅಪರೂಪ ಪ್ರಯೋಗಗಳು

ಪೊನ್ನನ ಶಾಂತಿಪುರಾಣದಲ್ಲಿ ಶಬ್ದಾರ್ಥ ದೃಷ್ಟಿಯಿಂದ ಇನ್ನೂ ವಿಶದವಾಗಿ ಹೆಕ್ಕಿನೋಡಬೇಕಾದ ನೂರಾರು ಶಬ್ದಗಳಿವೆ. ಮುಂದೆ ಈ ದಿಕ್ಕಿನಲ್ಲಿ ಪ್ರಯತ್ನಶೀಲರಾಗುವ ಅನ್ವೇಷಕರಿಗೆ ಕೈಕಂಬವಾಗಿ ಕೆಲವು ಅಪರೂಪ ಶಬ್ದಗಳನ್ನು ಇಲ್ಲಿ ಕೊಟ್ಟಿದೆ:

ಅಜ್ಜಪಜ್ಜ	3–76	ಅನುಜೀವಿ	4–25 ವ	ಅಪಕ್ಷ್ಮಪಾತ	4–11 ವ
ಅಪಹಾಸ್ಯಂಗೆಯ್	3–2	ಅಪಹಿಂಸ	7–4	ಅಪಹಿಂಸೆ	8–132
ಅರದ	3–110	ಅವಗಯಿಸು	3–8	ಅಹಿನಾಯಕ	4–113
ಅಹಿಮಕಿರಣ	4–14 ವ	ಅಸಂದಿ	10–67	ಈೞಿಲ್	6–106
ಉಪಜಾಪ	1–71 ವ	ಉತ್ತರ್ಯ	4–106	ಎನ್ನಾಣೆ	4–3
ಕಣಯ	6–9	ಕಟ್ಟಾಯಕಾರ	4–8 ವ	ಕಾಪುವೇೞ್	4–32 ವ
ಕಿೞುವೆಸ	6–59	ಕುಡುಪು	6–8	ಕುಹರಣ	2–92
ಕೂಂಟ	4–66 ವ	ಕೃತಾನುಶಯ	4–59 ವ	ಕೃತಾವದಾನ	4–11 ವ
ಕೋದಂಡಕಾಂಡ	4–34 ವ	ಕ್ರೋಡಶಾಲೆ	3–19 ವ	ಕ್ಷೌದ್ರಪಟಳ	11–24
ಗಾವಣಜೇವಣ	8–87	ಚಂಚರೀಕ	5–96, 152	ಚಾಪಧರ	4–14 ವ
ಚಿತ್ರನ್ಯಸ್ತ	4–11 ವ	ಛುರಿತ	4–15	ಜೋನ	4–30 ವ
ತವುಕಲ್	4–32 ವ	ತ್ರಿಪದಿ	11–5	ತೋರ್ಪುಗೆಡು	4–32 ವ
ದರ್ದುರ	4–79 ವ	ಬಿಕ್ಕಪೋತಕಳಭ	3–66 ವ	ನಲಿವಾೞುವಾೞು	2–48

ಸಬಿಂದುಕ ಅಬಿಂದುಕ ರೂಪಗಳು

ಶಾಂತಿಪುರಾಣ ಕಾವ್ಯದಲ್ಲಿ ಕೆಲವು ಸಬಿಂದುಕ ರೂಪಗಳು ದೊರೆಯುತ್ತವೆ. ಅಬಿಂದುಕಗಳು ಕಡಮೆ ಇವೆ:

ಇಱುಂಕಿ	6–65	ಇಱುಕಿ, ಇರುಕಿ
ಎಱಂಕೆ	2–116 ವ	ಱೆಂಕೆ, ರೆಕ್ಕೆ
ಕರಂಡಗೆ	9–139	ಕರಡಗೆ
ಕೂರಗೆ	7–64	ಕೂರಂಗಿ 'ಪ್ರಾಣಿ' ಅಬಿಂದುಕ
ಕೋಂಟೆ	9–143	ಕೋಟೆ
ತುಱುಂಬು	7–145	ತುಱುಬು, ತುರುಬು
ತೋಂಟ	8–36	ತೋಟ
ದಾಂಟು	3–65	ದಾಟು
ಪೊಸಗೋಂಟೆ (ಪೊಸ+ಕೋಂಟೆ)—ಪೊಸಕೋಟೆ—ಹೊಸಕೋಟೆ		
ಬೆಡಂಗು	6–6	ಬೆಡಗು
ಮುೞುಗು	1–53	ಅಬಿಂದುಕ

ಮುೞುಂಕು — ಮುೞುಂಗು — ಮುೞುಗು — ಮುಳುಗು

ಪೊನ್ನನ ವಾಕ್ಯಮಾಣಿಕ್ಯ ಕೋಶ

ಪೊನ್ನನಲ್ಲಿ ಅವನ ಪ್ರತಿಭೆ, ವ್ಯುತ್ಪತ್ತಿ, ಲೋಕಾನುಭವ ಮೊದಲಾದುವನ್ನು ವ್ಯಕ್ತಪಡಿಸುವ ಪದ್ಯಗಳು, ವಾಕ್ಯ ವೇಷ್ಟನಗಳು, ಲೋಕೋಕ್ತಿಗಳು ಸಾಕಷ್ಟು ಇವೆ. ಒಮ್ಮೊಮ್ಮೆ ಒಂದು ಇಡೀ ಪದ್ಯ ಸುಭಾಷಿತ ಸತ್ವವನ್ನು ವ್ಯಕ್ತಪಡಿಸುವುದೂ ಉಂಟು. ಉದಾಹರಣೆಗೆ ಕೆಳಗಿನ ಎರಡು ಪದ್ಯಗಳನ್ನು ಗಮನಿಸಿ :

ಅಕ್ಕಟ ಬಡವನೊಳೀತನೊ
ಳಕ್ಕುಮೆ ಚಲವಿಹಾನಿಂದಮಧಿಕನೊಳಕ್ಕುಂ
ತಕ್ಕುದೆ ಮುಳಿಸು ಜಿನೇಂದ್ರನ
ಪಕ್ಕದೆ ಪೊತ್ತಿಸೆಯುಮನಲನುರಿಗುಮೆ ಜಲದೊಳ್ ॥ 6-42

ಕನಿತು ಮದವಾರಣಂ ಕ್ರೋ
ಧಿನಿ ಪೊಕ್ಕುಂ ಸಿಂಹಪೋತಮಂ ಗೆಲ್ಗುಮೆ ಮಾ
ತಿನೊಳೇನೊ ಕರುಡ್ಡುಗೆಯ್ ಬಲು
ವನನಾಜಿ ಶ್ರಾಂತಸಂ ಯಶೋಧನನಿಜಿಯುಂ ॥

ಹಾಗೆಯೇ ಒಮ್ಮೊಮ್ಮೆ ಇಡೀ ಪದ್ಯ ರೂಪಕವಾಗಿ ಚೆಲುವಿನ ಸರೋವರದಂತೆ ಮನಸೆಳೆಯುವುದೂ ಉಂಟು. ಅದಕ್ಕೆ ನಿದರ್ಶನವಾಗಿ ಈ ಪದ್ಯವನ್ನು ನೋಡಬಹುದು :

ಆರಂಭಿಗನಾತ್ಮಂ ಸಂ
ಸಾರಂ ಕೆಯ್ ಬಿತ್ತಿಯುಣ್ಬ ಫಲಮುಭಯಭವೋ
ದಾರಂ ಬಿತ್ತು ಶುಭಾಶುಭ
ಮೋರಂತಿರೆ ಬೆಳಪ ಬೆಳಸು ಸುಖದುಃಖಂಗಳ್ ॥ 8-141

ಇಂತಹ ಭಾಗಗಳಲ್ಲದೆ ಬಿಡಿಯಾಗಿ ಆಯಾ ಸಂದರ್ಭದ ಬಲದಿಂದ ನಿಂತು ತನಿಯಾಗಿ ತೆಗೆದು ತೋರಿಸಿದಾಗಲೂ ತನ್ನ ಸತ್ವವನ್ನು ಬಿಟ್ಟುಕೊಡದೆ ಉಳಿಸಿಕೊಡಬಲ್ಲ ಅನೇಕ ಪಂಕ್ತಿಗಳು ಪೊನ್ನನ ಶಾಂತಿಪುರಾಣದಲ್ಲಿ ಗಮನಕ್ಕೆ ಬರುತ್ತವೆ. ಅಂಥ ಸಾಲುಗಳನ್ನು ಆಯಾ ಪದ್ಯದ ಒಟ್ಟು ಚೌಕಟ್ಟಿನಲ್ಲಿ ಇಟ್ಟು ನೋಡುವುದು ಸರಿಯಾದ ಕ್ರಮವಾದರೂ ಅವುಗಳಿಗಿರುವ ಸ್ವತಂತ್ರ ಕಾಂತಿಯನ್ನು ಗುರುತಿಸಿ-ಪೃಥಕ್ಕರಿಸಿ ಪರಿಭಾವಿಸಲೂ ಸಾಧ್ಯ ಎಂಬುದನ್ನು ತೋರಿಸುವುದಕ್ಕೆ ಇಲ್ಲಿ ನನ್ನ ಗಮನಕ್ಕೆ ಬಂದ ಕೆಲವು ಪದ್ಯಗಳ ಸಾಲುಗಳನ್ನು ಎತ್ತಿಕೊಟ್ಟಿದ್ದೇನೆ :

ಅಂಗಜಗಜವೈರಿ ಗೆಲ್ದುದದು ಚೋದ್ಯಮೆ
ಭೂಮಿಪಸಾಮಜಂಗಳಂ 11-67

ಅಂಬರಿಗುಂ ಆಯು ತಪ್ಪರಸ್ 4-30 ವ

ಅಣ್ಮಿದರುಂ ಪುಣ್ಣಂ ಪೆಣನುಂ ಆಗೆ 4-30 ವ

ಅನಿಮಿತ್ತಂ ಮೃಗಾಳಿ ಪೋರದು 3-64

ಅಜ್ಞಾನಿಗಳ ಬುದ್ಧಿ ಪೌರುಷಹೀನಂ 8-131

ಅತಿರಿಕ್ತರನಾರ್ ವಾರಿಸುವರ್ 6-76

ಅಧಿಕಂಗಶಕ್ಯಮೆಂಬರುಮೊಳರೇ 10-161

ಅಪಸ್ಮಾರ ಗ್ರಹಕ್ಕೆ ಮಂತ್ರಮುನಿಗುಮೆ
ಅಜವಂಜವ ಭಯಂ ಗೆಲಲಾರ್ಕುಮೊ
ಮೀರಲಾರ್ಕುಮೊ 7-79

ಆನೆದಿಂಬಗಾಡೇವಳಿಗೆ 3-66
(ಆನೆಯನ್ನೇ ತಿನ್ನುವವನಿಗೆ ಆಕಳು ನೈವೇದ್ಯ ಯಾವ ಲೆಕ್ಕ)

ಆರನಜ಼ಿಯುಮೊ ರಾಗಂ 8-61

ಆರ್ ಕಾವರಂತಕರಾಜಂ ಬಲಗರ್ವಿತಂ
ಮುಳಿದೊಡಂ ತಾಂಪ್ಪಾಲೆ ನಂಜಾದೊಡಂ 6-93

(ನಿಜಸ್ವಭಾವವನ್ನು ಗ್ರಹಿಸುವಾಗ ಮರೆಯಾಗುವುದು
ತಪ್ಪಿಹೋಗುವುದು ಸಾಧ್ಯವೇ)
ನಿರಪವಾದಮನಾರ್ ಕಳೆದಪರವರೆ ಮಹಾತ್ಮರ್ 4–7 ವ
ನಿರಪಾಯನೆ ಅಂತಕಂ 7–95
ನೊ (ಳ) ವಿಂಗೆ ಕುಪ್ಪೆವರಂ 3–72 ವ
ಪರಗುಣಹಾರಿಗೆ ನಿಜಗುಣಮದೇಕೆ
ಸಮನಿಸಿದಪುದು 5–85
ಪುಟ್ಟುಳ್ಳಂತೆ ಕಯ್ ಬೇಗುಮೇ 7–55, 3–72 ವ
(ಪುಟ್ಟುಗಮಿರ್ದು ಕೈಯ ಬೇಯಿಸಿಕೊಂಬುದು
ಅನುವೆ—ರಾಮನಾಥಚರಿತೆ) 7–116
ಪೊತ್ತಿಸೆಯುಮನಲನುರಿಗುಮೆ ಜಲದೊಳ್ 6–42
ಬಱುವನನಾಜಿಶ್ರಾಂತನಂ ಯಶೋಧನನಿಱಿಯಂ 4–51
ಬಿಲ್ಲಿತ್ತರ ಕೋಡು ಕೂರಿತು 4–45
ಬಱಿವಱಿಯೆಂಬುದು ಬಡವಂಗಱಿಪಂಗೆ 6–20
ಭೀರುತ್ವಂ ಏಗೆಯ್ಯುಗೆ: 7–59
ಬೇಱಿನಯಮಿರೆ ವಿರೋಧಿಗೆ ಮಾಱಾಂತೊಂ
ತನ್ನ ಮೇಲೆ ತಾಂ ಮರಗಡಿವೋನ್ 2–41
ಭವ್ಯರಿರರೇ ಭವಾರಣ್ಯದೊಳ್ 5–67
ಮರದಾವಕೊಂಬು ಪಣ್ತೊಡಮೇಂ 9–24
ಮನಸ್ವಿಗೇ ಮೂಱು ಲೋಕಮುಂ ಕಿಱಿದೆವಲಂ 4–8
ಮಱಿದುಂಬಿ ಪೂತಚೂತದೊಳ್ ಎಱಗುಗು
ಮೆಱಗುಗುಮೆ ಸಲ್ಲಕೀ ಪಲ್ಲವದೊಳ್ 5–29
ಮಾರ್ಗಂದಪ್ಪಿದ ಕುರುಡರನಱದ ಬಟ್ಟೆಗುಯ್ವರೆ
ಪಿರಿಯರ್ 4–101
ಮಾನ್ಯರನೆ ಖಲನುಮೇಂ ಮನ್ನಿಸನೇ 2–76
ಮಾನಿಸರ್ ಸಾಮರ್ಥ್ಯಮುಳ್ಳೊಡೆ
ಕಿಱಿದಱೊಳ್ ಮಾಣರೆ 9–13 ವ
ಮಿಱ್ತುಗಾಡಿಯುಂ ಬರ್ದುಂಕಲಾಗದು 4–30 ವ
ಮಿತ್ರ ಬಲದಿನಾಗಮದುಂಟೇ 7–147
ಮುಟ್ಟದು ಗುಣಿಗೆ ದೋಷಿಗಕ್ಕುಂ ದೋಷಂ 3–99
ಮುನ್ನೀರೊಳೆ ನೆಲಸುಗುಮಲ್ಲದೆ ನೀರೊಳ್
ನೆಲಸುಗುಮೆ ಸಾರರತ್ನಾವಳಿಗಳ್ 2–6
ಮುನಿಗೆ ಕಿನಿಸುವ್ವೋದಿರಿ 10-102 ವ
ಮೊಲಕ್ಕೊಡ್ಡಿದ ಬಲೆಯೊಳಗೆ ಮೃಗರಾಜಂ
ತೊಡರ್ಗುಮೇ 3–93 ವ
ಯತ್ನಪರರ್ ದೇಸಿಗಂಗೆ ಕೂಸಂ ಕೊಟ್ಟರ್ 5–43
ಯೌವನಶ್ರೀಯುಂ ನಿರಪವಾದಮನಾರ್
ಕಳೆದಪರವರೆ ಮಹಾತ್ಮರ್ 4–79 ವ
ವಿಭಿನ್ನತರರುಚಿ ಕೆಳೆಯೋ 7–111
ರಾಗೋದಯಮದೇವಿರಿದು 3–11 ವ
ಶಶಭೃತ್ಕಾಂತಿಗೆ ಮಿಂಚುಂಬುಱು
ಸಮನೆಂತಕ್ಕುಮೊ 12–67
ಸಂಸರ್ಗಂ ಜನಿಯಿಸುಗುಂ ಗುಣದೋಷೋತ್ಪನ
ತತ್ವಮನ್(ಪಂಚತಂತ್ರ) 3–79
(ಸಂಸರ್ಗದಿಂ ದೋಷ ಗುಣಂಗಳಹವು—
(ಪಂಚತಂತ್ರ) 121–18
ಸಮಾಲೋಚನ ಗೋಚರ ಚರಾಚರಂಗೆ
ಪರೋಕ್ಷಮೆ ಪ್ರತ್ಯಕ್ಷಮಲ್ತೆ 2–70 ವ
ಸಯ್ಪು ಸವಣಂಗಕ್ಕುಂ ಪೆಱಂಗಕ್ಕುಮೇ
ಸಾಮಾನ್ಯ ಮಣಿಯುಂ ಪಸುರ್ಮಣಿಯುಂ
ದೊರೆಯುಲ್ಲ 4–84 ವ
ಹರಿ ಕರಿಗೆ ಮುಳಿಗುಮಲ್ಲದೆ ನರಿಗಂ
ಕೋಱಿಗಮೇಂ ಮುಳಿಗುಮೆ 3–62

ಉಪಮಾಲೋಲ ಕವಿ ಪೊನ್ನ

ಪೊನ್ನ ತನ್ನನ್ನು ಶಾಂತಿಪುರಾಣದ ಆರಂಭದಲ್ಲಿಯೇ ಸಂಸ್ಕೃತ ಕವಿ ಶ್ರೇಷ್ಠರುಗಳಾದ ಕಾಳಿದಾಸ ಮತ್ತು ಅಸಗರಿಗಿಂತ ಹಲವು ಪಟ್ಟು ಸಮರ್ಥನೆಂದು ಬೆನ್ನು ತಟ್ಟಿಕೊಂಡಿದ್ದಾನೆ (1–11). ಇದರ ಸಾರಾಸಾರ ಹಾಗೂ ಔಚಿತ್ಯದ ಚರ್ಚೆ ಹಾಗಿರಲಿ. ಇದರಿಂದ ಸ್ಪಷ್ಟವಾಗಿ ತಿಳಿದುಬರುವ ಮೊದಲ ಮಾತೆಂದರೆ ಪೊನ್ನ ಈ ಕವಿಗಳ ಕಾವ್ಯಗಳನ್ನು ಓದಿನೋಡಿ ಮೆಚ್ಚಿದ್ದಾನೆಂಬುದು. ತೌಲನಿಕ ಅಧ್ಯಯನದಿಂದ ಪೊನ್ನನು ಈ ಕವಿಗಳಿಗೆ ಋಣಿಯಾಗಿದ್ದಾನೆಂಬುದು ಸ್ಥಾಪಿತವಾಗುತ್ತದೆ. ಹೀಗೆ ಈ ಕವಿಗಳಿಂದ ಗಾಢವಾಗಿ ಪ್ರಭಾವಿತನಾದ ಪೊನ್ನನು ಇವರ ಕಾವ್ಯಗಳಲ್ಲಿ ವಿಶೇಷವಾಗಿರುವ ಕೆಲವು ಕಾವ್ಯಗುಣ

ಗಳನ್ನು ತನ್ನ ಕಾವ್ಯದಲ್ಲಿ ತರಲೆತ್ನಿಸುವುದು ಸಹಜ. ಶಾಂತಿಪುರಾಣದಲ್ಲಿ ಸಾಕಷ್ಟು ಅಸಗ-ಕಾಳಿದಾಸರ ಪ್ರತಿಧ್ವನಿ ಅನುರಣನವಾಗಿದೆ. ಆದರೆ ಈ ಆದ್ಯರ, ಕಾವ್ಯ ಮಾದರಿಯ ಮೇಲ್ಪಂಕ್ತಿಯನ್ನು ದಾಟಿ ತನ್ನ ಸ್ವಂತಿಕೆಯನ್ನೂ ಅಭಿಜಾತತೆಯನ್ನೂ ಪೊನ್ನ ಅಲ್ಲಲ್ಲಿ ತೋರಿಸಿದ್ದಾನೆಂಬುದು ದಿಟ. ಕನ್ನಡ ಶಾಂತಿಪುರಾಣದಲ್ಲಿ ಸ್ವತಂತ್ರವೆನಿಸುವ ಹಲವಾರು ಕಾವ್ಯಾಲಂಕಾರಗಳಿವೆಯಾದರೂ ಕಾವ್ಯದ ಆರಂಭದಿಂದ ಅಂತ್ಯದವರೆಗೆ ಅನುಸ್ಯೂತವಾಗಿ ಪ್ರಮುಖವಾಗಿ ಎದ್ದು ಕಾಣುವ ಅಲಂಕಾರವೆಂದರೆ ಉಪಮಾಲಂಕಾರ. ಪೊನ್ನನ ಶಾಂತಿಪುರಾಣ ಉಪಮೆಗಳ ಸರೋವರ. ಶಾಂತಿಪುರಾಣದುದ್ದಕ್ಕೂ ಕಮಾನು ಕಟ್ಟಿದಂತೆ ಉಪಮೆಗಳ ಕಾಮನಬಿಲ್ಲು ಕೈಬೀಸಿ ಕರೆಯುವಂತೆ ರಸಿಕರ ಮನಸೆಳೆಯುತ್ತದೆ. ಅದರ ಜಿಲುಪು ಬಹುಕಾಲ ಚಿತ್ತಭಿತ್ತಿಯಲ್ಲಿ ನಿಕ್ಷಿಪ್ತವಾಗಿರುತ್ತದೆ. ಪರಿಭಾವಿಸಿದಷ್ಟೂ ಚೇತೋಹಾರಿಯಾದ ಸೌಂದರ್ಯನಿಧಿಯಾಗಿ ಅನೇಕ ಉಪಮೆಗಳು ಗಮನಾರ್ಹವಾಗಿವೆ. ನೂರಾರು ಸಂಖ್ಯೆಯಲ್ಲಿ, ಪುಂಖಾನುಪುಂಖವಾಗಿ ಪೊನ್ನನ ಶಾಂತಿಪುರಾಣ ಶರನಿಧಿಯಿಂದ ತೂರಿಬರುವ ಈ ಉಪಮೆಗಳ ಮಾಲೆಯಲ್ಲಿ ಈಗ ನಾವು ಪೃಥಕ್ಕರಿಸಿ ಪರಿಶೀಲನೆಮಾಡಬೇಕಾದುದು ಮುಖ್ಯವಾಗಿ ಮೂರು ಅಂಶಗಳನ್ನು:

1. ಇವುಗಳಲ್ಲಿ ಅಸಗ ಕಾಳಿದಾಸರಿಂದ ಪೊನ್ನ ಸ್ವೀಕರಿಸಿದ್ದೆಷ್ಟು?
2. ಪೊನ್ನನ ಸ್ವಂತದ್ದೆಷ್ಟು?
3. ಪೊನ್ನನದೇ ಆದ ಉಪಮಾಲಂಕಾರಗಳ ಕಾವ್ಯಶಕ್ತಿಯೇನು?

ಕಾಳಿದಾಸ (ಅಂಶತಃ) ಅಸಗರಿಂದ (ಪೂರ್ಣವಾಗಿ) ಕಾವ್ಯವಸ್ತುವನ್ನು ಸ್ವೀಕರಿಸುವಂತೆ ಉಪಮಾಲಂಕಾರಗಳನ್ನೂ ಪೊನ್ನಕವಿ ಯಥೇಚ್ಛವಾಗಿ ಕಡಪಡೆದಿದ್ದಾನೆ. ಶಾಂತಿಪುರಾಣದಲ್ಲಿ ವ್ಯಕ್ತಗೊಂಡಿರುವ ಉಪಮಾಲಂಕಾರಗಳಲ್ಲಿ ನಾಲ್ಕನೆಯ ಒಂದಂಶವಷ್ಟೇ ಪೊನ್ನನದು; ಇನ್ನುಳಿದ ಮುಕ್ಕಾಲಂಶದಲ್ಲಿ ಎರಡು ಭಾಗ ಅಸಗನದು, ಇನ್ನೊಂದು ಭಾಗ ಕಾಳಿದಾಸನದು. ಆಶ್ವಾಸ 5, 6, 10 ಮತ್ತು 11—ಈ ನಾಲ್ಕು ಆಶ್ವಾಸಗಳಲ್ಲಿ ಕಾಳಿದಾಸೋಚ್ಛಿಷ್ಟರೂಪಿಯಾದ ಉಪಮಾಸಮೂಹ ಕೆನೆಗಟ್ಟಿದೆ. ಅಲ್ಲದೆ ಈ ಕಾವ್ಯದ ಹನ್ನೆರಡೂ ಆಶ್ವಾಸಗಳಲ್ಲಿ ಅಸಗ ಅನುಗ್ರಹಿಸಿದ ಉಪಮೆಗಳು ಲಾಸ್ಯವಾಡಿವೆ. ಆದರೆ ಪೊನ್ನನೇ ಕಂಡುಕೊಂಡ, ಕವಿಯ ಸ್ವಾನುಭವ ಸ್ವಪ್ರತಿಭೆಗಳಿಂದ ಸ್ಫುರಿಸಿ ಸಾಕಾರಗೊಂಡ ಉಪಮೆಗಳೂ ಎರವಲು ತಂದ ಉಪಮೆಗಳ ನಡುವೆ ಕೋದುಕೊಂಡಿವೆ. ಹೂವಿನಹಾರದಲ್ಲಿ ಹೆಚ್ಚಾಗಿ ಮಲ್ಲಿಗೆಯೋ, ಸುಗಂಧರಾಜವೋ, ಮತ್ತೊಂದೋ ಪ್ರಧಾನವಾಗಿದ್ದು ನಡುನಡುವೆ ಅದಕ್ಕೆ ಮರುಗ ಇಲ್ಲವೇ ಪನ್ನೀರುಪಚ್ಚೆಯನ್ನು ಸ್ವಲ್ಪಮಾತ್ರ ಅಂತರವಿಟ್ಟು ಸೇರಿಸುವಂತೆ ಪೊನ್ನನೂ ಅಸಗ-ಕಾಳಿದಾಸರ ಮಲ್ಲಿಗೆ ಸುಗಂಧರಾಜ ಸಮೃದ್ಧಿಗೆ ಅಲ್ಲೊಮ್ಮೆ ಇಲ್ಲೊಮ್ಮೆ ತನ್ನ ಮರುಗ ಸೇರಿಸಿ ಶಾಂತಿಪುರಾಣ ಸಿದ್ಧಪಡಿಸಿದ್ದಾನೆ. ಪೊನ್ನನ ಸ್ವಂತ ಸೇರ್ಪಡೆ ಎಲ್ಲೆಲ್ಲಿ ನಡೆದಿದೆ, ಅದರ ಪ್ರಮಾಣವೆಷ್ಟು ಎಂಬುದನ್ನು ಕೇವಲ ಸಮಗ್ರವೂ ಸೂಕ್ಷ್ಮವೂ ಆದ ತೌಲನಿಕ ಅಧ್ಯಯನದಿಂದಲೇ ಪ್ರಕಾಶಪಡಿಸಬೇಕಾಗುತ್ತದೆ. ಪ್ರಸ್ತುತ ನಾನು ಇಲ್ಲಿ ಆ ಸಮಗ್ರ ಪರಿಶೀಲನೆಗೆ ತೊಡಗದೆ ಕೇವಲ ಒಂದು ವಿಹಂಗಮ ನೋಟಕ್ಕೆ ಸೀಮಿತಗೊಂಡಿದ್ದೇನೆ. ಸಾರಾಂಶ ರೂಪವಾಗಿ ಹೇಳುವುದಾದರೆ, ಇಷ್ಟಂತೂ ನಿಜ, ಶಾಂತಿಪುರಾಣ ಉಪಮೆಗಳ ಉದ್ಯಾನ. ದೃಷ್ಟಿ ಹೊರಳಿದಲ್ಲೆಲ್ಲಾ, ನೋಡುವಷ್ಟು ದೂರ ಉಪಮೆಗಳ ನಕ್ಷತ್ರದೀಪ್ತಿ ಕಾಣುತ್ತದೆ. ಬೆಳುದಿಂಗಳ ಸ್ನಿಗ್ಧಹಿತ ಮೊರೆಯುತ್ತದೆ. ಕಂದವೃತ್ತಗದ್ಯದ ಮಧ್ಯಮಧ್ಯ ಉಪಮೆಗಳ ಕಾರಂಜಿ ಪುಟಿಪುಟಿದು ರಸಿಕರೆದೆಗಳನ್ನು ಆರ್ದ್ರಗೊಳಿಸುತ್ತವೆ. ಈ ಆಹ್ಲಾದದನುಭವ ಇಲ್ಲವಾಗಿದ್ದರೆ ಪೊನ್ನನ ಶಾಂತಿಪುರಾಣದ ವ್ಯಾಸಂಗ ಮರಳುಗಾಡಿನ ಸಂಚಾರದ ಅನುಭವವಾಗುತ್ತಿತ್ತು. ಹಲವು ಕಾವ್ಯಾಲಂಕಾರಗಳಲ್ಲಿ ಉಪಮಾಲಂಕಾರವೆಂಬುದು ಪೊನ್ನಕವಿಗೆ ಉಸಿರಾಟದಂತೆ. ಉಪಮಾಲಂಕಾರದಲ್ಲಿ ಪೊನ್ನ ಹೇಗೆ, ನೀರಿಗೆ ಬಿಟ್ಟ ಮೀನಿನಂತೆ ವಿಜೃಂಭಿಸುತ್ತಾನೆಂಬುದನ್ನು ಶಾಂತಿಪುರಾಣದಲ್ಲಿ ನೂರಾರು ನಿದರ್ಶನಗಳಿಂದ ನಿಘಂಟು ಮಾಡಿಕೊಳ್ಳಬಹುದು. ನನಗೆ ಹೆಕ್ಕಿದಲ್ಲಿ ಸಿಕ್ಕಿದ ಕೆಲವನ್ನು ಮಾತ್ರ ಇಲ್ಲಿ ಸರಕಟ್ಟಿ ಕೊಟ್ಟಿದ್ದೇನೆ. ಇದು ಆದಷ್ಟೂ ಅಕಾರಾದಿಯಾಗಿರುವಂತೆ ನೋಡಿಕೊಳ್ಳಲಾಗಿದೆ:

ಮುತ್ತುಂ ಮೆಟ್ಟಿಸುಂಗೋದಂತೆ 19-181
(ಇದು ಕಾವ್ಯಾವಲೋಕನ 55ರಲ್ಲೂ, ಕವಿರಾಜಮಾರ್ಗದಲ್ಲೂ ಬರುತ್ತದೆ)
ಮುಳಿಸೆ ರೂಪುಗೊಂಡವೊಲ್ 3-67
ಮೂಗುರ್ಚಿದೆಮ್ಮೆ ಮೋರಿಯುಂ ಪೆಱಮೆಟ್ಟಿದ ತಗರುಂ ತಾಗುವಂತೆ 6-82 ವ
ಮೂಲಬಲಮಿಲ್ಲದ ತುಳಿಲಸಂದನಂತೆ 4-30 ವ
ಮೊೞಗಿ ಮಾಣ್ದ ಮುಗಿಲಂತೆ 2-62
ಮೊಗಕ್ಕೆ ಮೂಗುಂ ಆಭರಣಕ್ಕೆ ನಾಯಕ ಮಣಿಯುಮೆಂಬಂತೆ 3-2 ವ
ಮೊೞಗಿನ ಬಳಿಯ ಮಿಂಚಿನಂತೆ 2-63
ರವಿರಥ ಪಾಂಸು ಪರಿಗತಂಬೋಲ್ 8-112
ರಾಹುಶಶಿಯೊಳೊಡನಿರೆ ಬೆರೆಸಿದ ದೇಹರುಚಿಯಂತೆ 3-37
ವನಜವಲ್ಲಿಗೆಱಗುವ ಝುಷದ್ವಯಂಗಳವೆನೆ 3-53
ವಜ್ರಮುಂ ಮಸೆದಂತೆ 2-27 ವ
ಶಾರದ ನೂತನ ದಿನಪನಂತೆ 1-3
ಶೀತಕರನಂ ನವಚಂದ್ರಿಕೆ ಪೊರ್ದುವಂತೆ 6-2
ಸಾಲಭಂಜಿಕೆ ಸಂಭಾಷಿಸುವಂತೆ 3-22
ಸಿರಿ ಸತ್ತ್ರಿಗೆತ್ತಿಸಿದವೋಲ್ 7-127
ಸುಧಾಸಮುದ್ರಲಲಿತ ಲಹರಿಕಾ ಸಮಾನಮುಮ್ 1-62 ವ
ಸುಪ್ತಮೀನಾಕ್ಷೋಭದಮಾನಸ ಸರೋವರೋಪಮಾನಂ 2-63
ಸೊಡರೊಳ್ ಬತ್ತಿಯುಮೆಣ್ಣೆಯುಮೊಡನೆಱಿದವೊಲ್ 9-118
ಸೊಯಂಬರದ ಕುಡುಗೂಸಿನಂತೆ 4-46
ಸೊಗಯಿಸುಗುಂ ತಾರಾಳಿಯೊಳೆಸೆವ ಹಿಮದ್ಯುತಿ ಮಾಳ್ಕೆವೋಲ್ 2-44
ಹಿಮಕರ ಕಿರಣಂ ನೆಲಸದವೋಲ್ ಜಲಜ ನಿಬಿಡ ಕೋಶೋದರದೊಳ್ 1-91

ಇವು, ಇನ್ನೂ ಕೆಲವು, ಪುಟ್ಟ ಪುಟ್ಟ ಪದಪುಂಜಗಳಂತೆ ಬರುವ ಉಪಮೋಕ್ತಿಗಳು ಮನಸೆಳೆಯುತ್ತವೆ: ಎಮ್ಮೆ ಹಿಂಡಿನಂತೆ, ಕನ್ನಗಳ್ಳನಂತೆ, ಕೆಕ್ಕರಿಕೆ ಬಿರಿವಂತೆ, ತರಗೆಲೆಯಂತೆ, ತೋಂಟಿಗನಂತೆ, ಪುರ್ವಿನ ರೋಮದಂತೆ, ಬಿಸಿಲ ಬೆಣ್ಣೆಯಂತೆ, ಮಂಜು ಕರಗುವಂತೆ, ಹುರಿಗಡಲೆಯಂತೆ—ಮುಂತಾದ ದಿನಬಳಕೆಯ, ಜನರೂಢಿಯ ಹೋಲಿಕೆಗಳು ಪೊನ್ನ ಕಾವ್ಯಕ್ಕೆ ಅರ್ಥಸರಳತೆಯನ್ನೂ ಆತ್ಮೀಯ ವಾತಾವರಣವನ್ನೂ ತಂದುಕೊಡುವಲ್ಲಿ ತುಂಬ ನೆರವಾಗಿವೆ. ಇದುವರೆಗೆ ಸುಮಾರು 125 ಉಪಮೆಗಳನ್ನು ಪೊನ್ನನ ಶಾಂತಿಪುರಾಣದಿಂದ ಅಶ್ರಮಪೂರ್ವಕವಾಗಿ ಆರಿಸಿಕೊಡಲಾಗಿದೆ. ಇವು ಇಡೀ ಪದ್ಯದ ಸಂದರ್ಭದಲ್ಲಿ ಚಿಮ್ಮುವ ಚೆಲುವಿಗೂ, ತನಿಯಾಗಿ ತೆಗೆದಿರಿಸಿರುವಾಗ ತೋರುತ್ತಿರುವ ಮಾಸರಕ್ಕೂ ಅಂತರವಿರುವುದು ಸಹಜ. ವಾಸ್ತವವಾಗಿ ಈ ಹೋಲಿಕೆಗಳು ಎಷ್ಟರಮಟ್ಟಿಗೆ ಕವಿಯ ಉದ್ದೇಶವನ್ನು ಮೊನಚುಗೊಳಿಸುವಲ್ಲಿ ಸಫಲವಾಗಿವೆಯೆಂಬುದನ್ನು ಆಯಾ ಪದ್ಯದಲ್ಲಿರಿಸಿಯೇ ತೂಗಿನೋಡಬೇಕಾಗುತ್ತದೆ. ಹಾಗೆ ಪರಾಮರ್ಶಿಸುವಾಗ ಇವುಗಳಲ್ಲಿ ಬಹುಮಟ್ಟಿನ ಉಪಮೆಗಳು ಸಾರ್ಥಕವಾಗಿವೆಯೆಂಬುದು ಕಂಡುಬರುತ್ತದೆ. ಚರ್ವಿತ ಚರ್ವಣವಾಗಿರುವ ಉಪಮಾಲಂಕಾರಗಳಲ್ಲೂ ಒಮ್ಮೊಮ್ಮೆ ಪೊನ್ನ ಬಳಸಿರುವ ಔಚಿತ್ಯಪೂರ್ಣ ಆವರಣದಲ್ಲಿ ಮರುಹುಟ್ಟು ಪಡೆದ ಅರ್ಥವಂತಿಕೆಯಿದೆ.

ಉಪಮೆಕೊಡುತ್ತಿದ್ದೇನೆಂದು ಕವಿ ತೀರ ವಾಚ್ಯವಾಗಿ ಹೇಳಿದ ಸಂದರ್ಭಗಳೂ ಇವೆ. 'ಉಪಮೆ ಕೊಡೋಣವೆಂದರೆ ಇದು ಯಾವುದೇ ಬಗೆಯ ಉಪಮೆಗೆ ಮೀರಿದ್ದು' ಎಂದು ಕೂಡ ಪೊನ್ನ ಒಮ್ಮೊಮ್ಮೆ ಉದ್ಗರಿಸುತ್ತಾನೆ: 'ಉಪಮಾತೀತಮೆನಿಪ್ಪ ಗಾಣತಿಯರೊಂದಾಕಾರಮುಂ ತಾಳ್ದಿ....' (2-66). ಇದರಿಂದ ತನ್ನ ಮಿತಿಯನ್ನೂ ಆತ ಅರಿತಿದ್ದಾನೆಂದು ತಿಳಿಯಬಹುದು. ಪೊನ್ನ ಕೊಟ್ಟಿರುವ ಉಪಮೆಗಳನ್ನು ಒಟ್ಟಾಗಿಟ್ಟು ವಿಂಗಡಿಸಿಕೊಂಡು ನೋಡಿದಾಗ ಕೆಲವು ಹೊಸ ಅಂಶಗಳು ಹೊರಬರುತ್ತವೆ:

1. ಈ ಉಪಮೆಗಳಲ್ಲಿ ಸಂಸ್ಕೃತ ಶಬ್ದಪ್ರಯೋಗ ಹೇರಳವಾಗಿದೆ : 5–159, 8–126 ವ, 2–8, 2–23 ವ
2. ವಾಸ್ತವತೆ ಕಡಮೆಯಾದ ಉಪಮೆಗಳೂ ಇವೆ : 9–57, 1–60
3. ಪ್ರಾಣಿಗಳಿಗೆ ಸಂಬಂಧಿಸಿದ ,, : ಆನೆ, ಸಿಂಹ, ಎಮ್ಮೆ ಪೋರಿ
4. ಪ್ರಕೃತಿಗೆ ಸಂಬಂಧಿಸಿದ ,, : ಗಂಗಾನದಿ, ಮಿಂಚು, ಚಂದ್ರ, ಸೂರ್ಯ, ನದಿ, ಬೆಟ್ಟ
5. ಮನುಷ್ಯನಿಗೆ ಸಂಬಂಧಿಸಿದ ,, : 5–159, 9–3
6. ಜೈನಧರ್ಮಕ್ಕೆ ಸಂಬಂಧಿಸಿದ ,, : 8–88
7. ಪುನರುಕ್ತಗೊಳ್ಳುವ ಕೆಲವು ಹೋಲಿಕೆಗಳುಂಟು. ಮಿಂಚಿಗೆ ಸಂಬಂಧಿಸಿದಂತೆ ಅಯ್ದಾರು ಉಪಮೆಗಳಿವೆ :

ಎಳೆಮಿಂಚೊಂದೆಡೆವುಗುವ ತೆಱದಿನ್	ಕಾರ್ಮುಗಿಲ ಮಿಂಚಿನಿರವಿನ ತೆಱದಿಂ
ಮಿಂಚಂ ತೞ್ಕೈಸಿದ ಕಾರ್ಮುಗಿಲಂತೆ	ಮಿಂಚಿನ ಗೊಂಚಲ್ ನೆಗೆದಂತೆ
ಮಿಂಚಿನ ಬೞಿಯು ಮೊೞಗುವೋಲ್	ಮೊೞಗಿನ ಬೞಿಯ ಮಿಂಚಿನಂತೆ

ಅಂತೆ, ವೊಲ್, ವೋಲ್, ಪೋಲೆ, ಪೋಲ್ತು, ತೆಱದಿನ್, ಪೋಲ್ಗುಂ, ಅಂದದೆ—ಮುಂತಾದ ಪ್ರತ್ಯಯಗಳು ಬಂದು, ಇದು ಉಪಮೆಯೆಂದು ತೋರುತ್ತವೆ. ಈ ರೀತಿಯಲ್ಲೂ ಇನ್ನೂ ಬೇರೆ ದೃಷ್ಟಿಗಳಿಂದಲೂ ಪೊನ್ನನ ಉಪಮೆಗಳನ್ನು ಪರಿಶೀಲಿಸಬಹುದು. ವಾಕ್ಯವೇಷ್ಟನಗೊಳಿಸಿ ತೆಗೆದಿರಿಸಿದ ಉಪಮೆಗಳ ಸಾಲುಗಳನ್ನು ಇಲ್ಲಿ ಹೇಗೆ ಸಮೀಕ್ಷಿಸಿದೆಯೋ ಹಾಗೆಯೇ ಇಡೀ ಪದ್ಯ ಉಪಮೆಯ ಪ್ರಭೆಯಲ್ಲಿ ಬೆಳಗುತ್ತಿರುವುದನ್ನು ಸೋದಾಹರಣವಾಗಿ ನೋಡಬಹುದು. ಅಂಥ ಜೇಕಿನ ಪದ್ಯಗಳು ಶಾಂತಿಪುರಾಣದಲ್ಲಿ ಸುಮಾರು ಐವತ್ತಿವೆ. ಕೇವಲ ದಿಗ್ದರ್ಶನರೂಪಿಯಾಗಿ ಇಲ್ಲಿ ಹನ್ನೆರಡು ಪದ್ಯಗಳನ್ನು ಉಲ್ಲೇಖಿಸಿದೆ :

ವಿದಳಿತ ಹೇಮತಾಮರಸ ಸಾಂದ್ರ ಲಸನ್ಮಕರಂದ ಸಕ್ತ ಷ
ಟ್ಪದತತಿ ಪಾಯ್ದು ಪಾಯ್ದು ಸರಸೀರುಹದಿಂ ಸರಸೀರುಹಕ್ಕೆ ಪೋ
ಲ್ತುದು ಮಧುವುಂ ಮನೋಭವನುಮಟ್ಟಿಯೊಳಾಡುವ ಪೊನ್ನಬಟ್ಟನೊ
ರ್ವದಲೆ ಮನೋಜಕಾಂತೆ ಮುಳಿಸಿಂ ದೆಸೆಗೋವದೆ ಸೂಸುವಂದದಿಂ ॥ 1–58

ಅದನೊಳಕೊಂಡ ಪೊನ್ನ ಪೊಸಗೋಂಟೆ ಪುರಾಂಗನೆಯುಟ್ಟ ಹೇಮವ
ರ್ಣದ ವಸನಂ ತದೀಯರುಚಿ ವಿಚ್ಛುರಿತಂ ಪರಿಖಾಚ್ಛವಾರಿ ಕ
ಟ್ಟಿದ ಕಟಿಸೂತ್ರಮಂಬು ವಿಹಗಾವಳಿ ಸೂಸಕಮಾಗೆ ಗೆಲ್ದು ನಾ
ಕದ ನರಲೋಕದೊಳ್ಪನದು ಪೇೞ್ ಸೆಱೆಗೊಂಡುದೊ ಸೂಱೆಗೊಂಡುದೊ ॥ 1–66

ಎರಡುಂ ಕೆಲದೊಳುಮಿರ್ವರು
ಮರಸಿಯರಿರೆ ಸೊಗಯಿಸಿರ್ದನವನಿಪನೆರಡುಂ
ಕರಿಣಿಗಳ ನಡುವಣಾಶಾ
ಕರೀಂದ್ರನೊಪ್ಪವಪೊಲೊಪ್ಪುವೊಡ್ಡೋಲಗದೊಳ್ ॥ 1–75

ನವ ಮಾಲತಿಗು ನವವಾ
ಧವಿಗಂ ನಡುವಾದ ನವನಮೇರು ಮಹೀಜ
ಕ್ಕವನೀಶಂ ದೊರೆಯೆನಿಸಿದ
ನವರಿರ್ವರುಮರಸಿಯರ್ಕಳೋತಿರೆ ಕೆಲದೊಳ್ ॥ 1–76

ಸುತ್ತಿರ್ದುತ್ತಮ ರಾಜಯೂಥದ ಮನಕ್ಕಾನಂದಮಪ್ಪಂತು ಯೋ
ಷಿತ್ಕಾಮ್ಯತ್ಕರಿಣೀ ಗಣಕ್ಕೆ ಪಿರಿದೊಂದೌತ್ಸುಕ್ಯಮಪ್ಪಂತು ಮಾ
ಡುತ್ತುಂ ಚೇತನೆ ಪುಟ್ಟೆ ಮೂರ್ಛೆ ತಿಳಿದೆಟ್ದಿಂತಾನುಮೆಂತಾನುಮೆ
ಟ್ಚಿತ್ತಿರ್ದಂ ಮದದಂತಿ ಸೆಜ್ಜರದಿನೆಟ್ಚಿತ್ತಿರ್ದವೋಲ್ ಭೂಭುಜಂ ॥ 2-25

ಪೊಳೆವಳೆಯುಂ ಸಿತಚ್ಛವಿಯುಮೊಪ್ಪುವ ದಂಡಿಗೆಯುಂ ನಿಕಾಮನಿ
ರ್ಮಳ ದಶನಂಗಳುಂ ಸೆಣೆಸೆ ಕೇಸರದೊಳ್ ಸಿತವರ್ಣದೊಳ್ ಸಮು
ಜ್ವಳತರ ಲೋಲವಾಲಧಿಯೊಳಾ ಕುಡುದಾಡೆಯೊಳಾವನುಂ ನಿರಾ
ಕುಳಮಱಿವನ್ನನಿಲ್ಲವಱಿನೀ ಹರಿಗಂ ಹರಿಗಂ ವಿಭೇದಮಂ ॥ 3-16

ಕಟಿತಟದ ಸುರಿಗೆ ಪಟ್ಟಿಕೆ
ಕಟಿಸೂತ್ರದೊಳೆಸೆದುವೆಸೆವ ಸಾನಂದಕದಿಂ
ದಿಟಮಮರ್ದ ಪಾರಿಜಾತದ
ವಿಟಪಿಗೆ ಕೌಸ್ತುಭದ ಸುತ್ತು ಸೊಗಯಿಪ ತೆಱದಿಂ ॥ 3–43

ರವಿಗು ಸಂಜೆಗವೊಪ್ಪಿ ತೋಱುವುದಯಾದ್ರೀಂದ್ರಾಗ್ರದೊಳ್ ದೀಪ್ತಿ ಪು
ಟ್ಟುವವೋಲ್ ಕಾರ್ಗಮುದಗ್ರ ಮೇಘತತಿಗಂ ಕಾರ್ಗಾಲದೊಳ್ ಮಿಂಚು ಪು
ಟ್ಟುವವೋಲಿಂದುಗವೊಂದಿನಿಂದ ಕಳೆಗಂ ಸಂದೂರ್ಜದೊಳ್ ಕಾಂತಿ ಪು
ಟ್ಟುವವೋಲ್ ನಂದನೆ ಸಿರಿಗಂ ವಿಜಯೆಗಂ ತದ್ವಂಶದೊಳ್ ಪುಟ್ಟಿದಳ್ ॥ 4-85

ವನನಾಗಾರಿಯನಾಂತ ದಂತಿಶಿಶುವೊಲ್ ದಿಗ್ದಂತಿಯೊಳ್ ಪೋರ್ದ ಪೀ
ನನವೋಲ್ ಗಾಳಿಯ ಕೋಟಲೆಯೊಳಿಟ್ಟ ಸೊಡರ್ವೋಲ್ ದವಾಗ್ನಿಗೊಡ್ಡಿರ್ದ ಕಾ
ನನ ಕುಂಜ ಬೊಲಿನಂಗೆ ನಿಂದ ತಿಮಿರವ್ಯೂಹಂಬೊಲಾಗ್ರಾಹಿ ಮ
ರ್ದನದೊಳ್ ಮಚ್ಚರವುಳ್ಳ ಬಾಳಫಣಿವೋಲ್ ನೀಡಿಲ್ಲದಳ್ಕಾಡುಗಂ ॥ 5–27

ಕರಗವದವರಂತೆ ಸೂಳಾ
ಯ್ತರಂತೆ ಕಂಚುಕಿಗಳಂತೆ ಪಡಿಯಱರಂತ
ಜ್ಜರಗ ಜ್ಜರಂತೆ ಮನದಣ
ಗರಂತೆ ಮೇಳದವರಂತೆ ನೆರೆದೋಲಗಿಕುಂ ॥ 6-119

ಉತ್ತಮ ನಿಮಿತ್ತಂ ನೈ
ಮಿತ್ತಿಕಮುಂ ಪೋಲ್ಕುಮೆನಿಸಿ ಸೊಡರಿಂ ಸೊಡರಂ
ಪೊತ್ತಿಸಿ ತಂದುಪಮೆಯೊಳ
ಚ್ಚೊತ್ತಿದುವವರಂತರಂಗ ಬಹಿರಂಗಂಗಳ್ ॥ 7-122

ಕೆರಡಿಯ ತೋಲಂ ಕಜ್ಜಲ
ಪರಾಗದಿಂ ಪೊರೆದು ಪಿರಿದು ಜೇನೆಯ್ದೊಳ್ ತು
ದಿರಿಸಿದವೊಲರಸನಂ ವಚ
ನರಚನೆ ಬಳಸಿದುದತೀವ ತಮವೊಡವೃವಿನಂ ॥ 8–127

ಲಲಿತಾಮ್ರ ತರುಗೆ ಪೊಸಗೊಂ
ಚಲಂತೆ ಗಗನಕ್ಕೆ ಶಿಶಿರನಂತೆ ಕೊಳಕ್ಕು
ಳ್ಪಲದಬ್ಜದಂತೆ ನಿರುಜಾಂ
ಗಲ ವಿಷಯಂ ನಯನ ವಿಷಯ ಸುಖಮಂ ಪಡೆಗುಂ ॥ 9–132

ಅವಿರಳ ಪಾಣಿಪಲ್ಲವೆ ಕುಚೋನ್ನತಮಂಜರಿ ಬಾಹುಶಾಖೆ ಸು
ಚ್ಛವಿ ದಶನಾವಳೀ ಮುಕುಳೆ ಷಟ್ಪದ ಕುಂತಳೆ ಪತ್ರಭಂಗ ಪ
ಲ್ಲವಿತ ಕಪೋಲಪತ್ರೆ ತನುಮಧ್ಯೆ ವಚಃಪರಪುಷ್ಪನಾದೆ ಪು
ಣ್ಯವತಿ ನೃಪೇಂದ್ರಕಾಂತೆ ನವಕಲ್ಪಲತಾಕೃತಿಯಿಂದಮೊಪ್ಪಿದಳ್ ॥ 9–200

ಶ್ರೀರಮಣೀಪ್ರಿಯಂಗಮೃತ ವಾಗೆಳ ಮಜ್ಜನಮಂ ಜಿನಂಗೆ ವಿ
ಸ್ತಾರಿಸೆ ಪೊನ್ನ ಪೊಚ್ಚ ಪೊಸವಪ್ಪ ಕೊಡಂಬೆರಸಾಳಿಗಟ್ಟಿ ಭೋರ್
ಭೋರೆನೆ ಪೋಪ ಒರ್ವಮರಸಂಹತಿ ಪೋಲ್ತುದು ಮಂದರಾದ್ರಿಗಂ
ಕ್ಷೀರಪಯೋಧಿಗಂ ಹರಿಯ ಕಟ್ಟಿದ ಜಂಗಮ ಸೇತುಬಂಧಮಂ ॥ 10–45

ಈ ವಿಮರ್ಶಾತ್ಮಕ ಸಮೀಕ್ಷೆಯನ್ನು ಸಮಾರೋಪಗೊಳಿಸುವ ಮೊದಲು ಸಾರಾಂಶ ರೂಪವಾಗಿ ಹೇಳಬೇಕಾದ್ದಿಷ್ಟು: ಹಳಗನ್ನಡ ಕಾವ್ಯಗಳನ್ನು ವಿಪುಲವಾಗಿಯೂ ವಿಶೇಷವಾಗಿಯೂ ಅಧ್ಯಯನಮಾಡಿ ಆರ್ದ್ರಗೊಂಡ ರಸಚೇತನಗಳನ್ನು ಕವಿ ಎಷ್ಟರ ಮಟ್ಟಿಗೆ ಮಿಡಿಯುತ್ತಾನೆ, ತಣಿಸುತ್ತಾನೆ ಎಂಬುದೂ ಒಂದು ಪರೀಕ್ಷೆಯೆ, ಕಾವ್ಯದ ಮೌಲ್ಯವನ್ನು ನಿರ್ಧರಿಸಲು. ನಮ್ಮ ಹಿಂದಿನ ಕಾವ್ಯಗಳಲ್ಲಿ ಅದ್ದಿ ತೆಗೆದ ಮನಸ್ಸುಗಳನ್ನು ಪೊನ್ನನ ಉಪಮೆಗಳು ಬಹುವಾಗಿ ಬಹುಬೇಗ ಸೆಳೆದುಕೊಳ್ಳುತ್ತವೆ. ಉಪಮಾಲಂಕಾರ ಕವಿಗಳಿಗೂ ಪ್ರಿಯ, ಓದುಗರಿಗೂ ಇಷ್ಟ. ಪೊನ್ನಕವಿಗೆ ಉಪಮೆ ಉಸಿರಾಟ. ಪೊನ್ನನ ಉಪಮೆಗಳು ಎಷ್ಟು ಸ್ವೋಪಜ್ಞ, ಅಭಿಜಾತ, ಅದ್ಭುತ, ಮನೋಹರ ಎಂಬುದನ್ನು ಅವಶ್ಯ ಪರಿಭಾವಿಸಬೇಕು. ಏಕೆಂದರೆ ಪೊನ್ನನ ಸಾದೃಶ್ಯ ಪ್ರಪಂಚ ದೊಡ್ಡದು, ಜೀವಕಳೆಯಿಂದ ತುಂಬಿ ತುಳುಕುವಂತಹುದು. ಯಾವ ನವೀನಾಂಶವೂ ಇಲ್ಲದೆ ಶುದ್ಧ ಸಾಂಪ್ರದಾಯಿಕವೆನಿಸುವ ಸಮೆದ ಉಪಮೆಗಳೂ ಕೆಲವಿವೆ. ಆದರೆ ವಿನೂತನವೆನಿಸುವ ಪೊನ್ನತನದ ಛಾಪು ಹೊತ್ತು ಮನಸೆಳೆಯುವ ಉಪಮೆಗಳು ಹಲವಾರಿವೆ. ಇಷ್ಟು ನಿಜ, ಉಪಮೆಗಳ ಉಪಯೋಗದಲ್ಲಿ ಪೊನ್ನ ಎಷ್ಟು ಧಾರಾಳಿಯೊ ಅಷ್ಟೇ ಗಟ್ಟಿಗ, ನಿಷ್ಣಾತ.

ಉಪಮೆಗಳ ಸಾರ್ಥಕ್ಯವನ್ನು ಕಾವ್ಯದ ಆಯಾ ಸಂದರ್ಭದ ಕಊದಣವಲ್ಲಿಟ್ಟು ತೂಗಿ ಅಳೆದು ನೋಡಬೇಕಾದುದು ಸಮಂಜಸವಾದ ಕ್ರಮವೆಂಬುದು ನಿಜ. ಹಾಗೆ ಪರಿಶೀಲಿಸಿ ನೋಡಿ ಪೊನ್ನನ ಉಪಮೆಗಳ ಸಫಲತೆಯನ್ನು ಸಾಕಷ್ಟು ಮನಗಾಣಬಹುದು. ಆಯಾ ಸಂದರ್ಭದ ಕಾವ್ಯನಿರ್ವಹಣೆಗೆ, ಭಾವಾಭಿವ್ಯಕ್ತಿಗೆ ಈ ಉಪಮೆಗಳು ಮೂರ್ತರೂಪ ಕೊಟ್ಟಿವೆ, ಚೆಲುವನ್ನೂ ಅರ್ಥವಂತಿಕೆಯನ್ನೂ ದ್ವಿಗುಣಿಸಿವೆ. ಒಟ್ಟು ಕಾವ್ಯದ ಸತ್ವವನ್ನು ಉದ್ದೀಪಿಸುವಲ್ಲಿ ಈ ಉಪಮೆಗಳು ಸಹಕರಿಸಿವೆ, ದುಡಿದಿವೆ. ಪೊನ್ನನ ಉಪಮೆಗಳಲ್ಲಿ, ಮಾಲೋಪಮೆಗಳಲ್ಲಿ ಕ್ರೀಡಿಸಿದ ನಯಸೇನಕವಿ ಇವನ್ನು ಒಂದು ಆದರ್ಶವಾಗಿ ಅಂಗೀಕರಿಸಿ ತನ್ನ ಧರ್ಮಾಮೃತದಲ್ಲಿ ಅಳವಡಿಸಿಕೊಂಡಿರುವುದು ಪೊನ್ನನಿಗೆ ಸಂದ ಕವಿ–ಕಾವ್ಯ ಗೌರವ. ಪೊನ್ನನಿಗೆ ಉಪಮಾಲಂಕಾರದಂತೆ ಹತ್ತಿರವಾದ ಇನ್ನೊಂದು ಅಲಂಕಾರ ಉತ್ಪ್ರೇಕ್ಷೆ. ಶಾಂತಿ

ಪುರಾಣವಲ್ಲಿ ಸಾದ್ಯಂತವಾಗಿ ಇದಕ್ಕೆ ಉದಾಹರಣೆಗಳು ಸಿಗುತ್ತವೆ. ಉತ್ಪ್ರೇಕ್ಷೆ ಪೊನ್ನನ ಸ್ವತ್ತೇನು ಅಲ್ಲ. ಅದು ಎಲ್ಲ ಕವಿಗಳ ಉಸಿರು. ಪೊನ್ನ ಈ ಉತ್ಪ್ರೇಕ್ಷಾಲಂಕಾರವನ್ನು ಹೇಗೆ ದುಡಿಸಿಕೊಂಡಿದ್ದಾನೆಂಬುದಕ್ಕೆ ಮಾದರಿಗಾಗಿ ಆರೇಳು ಪದ್ಯಗಳನ್ನು ಶಾಂತಿಪುರಾಣದ ಎರಡನೆಯ ಆಶ್ವಾಸದಿಂದ ಆರಿಸಿಕೊಟ್ಟಿದ್ದೇನೆ:

ಈ ನಗದ ನೆಗೆದ ಶಶಿಮಣಿ
ಸಾನುಗಳಿಂದೊಱೆತು ಪರಿವ ಪರಿವೊನಲನಿರುಳ್
ತ ನೆಡೆಯಱಿಯದೆ ಶಿಖಿ ಸಂ
ತಾನಂ ಫಣಿಗೆತ್ತು ಕಚ್ಚಿ ಬೆಚ್ಚನೆ ಸುಯ್ಗುಂ ॥ 2–95

ಎಸೆವ ಕಿಸುಗಲ್ಲ ತೇಜಃ
ಪ್ರಸರಂ ದಾವಾಗ್ನಿ ಶಂಕೆಯಂ ಮನದೊಳ್ ಪು
ಟ್ಟಿಸೆ ಮೃಗ ಯೂಥಂಗಳ್ ಬೆ
ರ್ಚಿ ಸಾರವೇಂ ಜಡತೆ ತಿರಿಕರೊಡವುಟ್ಟಿದುದೋ ॥ 2–96

ಒಳಗಱಿಯದೆ ಪಚ್ಚೆಯ ಸೆಲೆ
ಗಳನಂಚೆಯ ಪಿಂಡು ಕಂಡು ಪಾವಸೆಗೆತ್ತು
ಪ್ಪಳಿಸಿ ಕರ್ದುಕುತ್ತುಮೇಂ ತಳ
ಮಳಗಪ್ಪುವೊ ನಗೆ ಖಗೇಂದ್ರ ಮಿಥುನಚಯಂಗಳ್ ॥ 2–98

ತಳತಳಿಪ ಸೂರ್ಯಕಾಂತದ
ಬೆಳಗಿರುಳಿದು ಪಗಲಿದೆಂಬ ಭೇದಮನೆತ್ತಂ
ಕಳೆಯೆ ರಥಾಂಗಯುಗಂ ನಿ
ಶ್ಚಳಮಿರುಳುಂ ಪಗಲುಮಗಲವೀ ಗಿರಿವರದೊಳ್ ॥ 2–99

ಸ್ಫುರಯಿಸುವ ಮಾಣಿಕಂಗಳ
ಕಿರಣಂ ಸುರಚಾಪ ರುಚಿಯನಂಬರ ತಲದೊಳ್
ವಿರಚಿಸೆ ಕಾರ್ಗೆತ್ತು ನಿರಂ
ತರಮಿಲ್ಲಿ ಶಿಖಂಡಿ ತಾಂಡವಕ್ಕೊಡರಿಸುಗುಂ ॥ 2–100

ಆ ಪೊಟ್ಟುಂ ಮಮಪ ಕಳಾ
ಳಾಪಮೆ ಮೃದುಗೀತ ಮರ್ಮರಧ್ವನಿ ಪಱಿಯಾ
ಗೀ ಪವನಂ ಲತಿಕಾ ಲಾ
ಸ್ಯೋಪಾಧ್ಯಾಯತೆಯನಱಿಪಿ ತೀಡುಗುಮಗದೊಳ್ ॥ 2–101

ಸಾರಾಂಶ:

95. ಈ ಬೆಟ್ಟದ ಉನ್ನತವಾದ ಶಿಖರ ಪ್ರದೇಶದಲ್ಲಿರುವ ಚಂದ್ರಕಾಂತ ಶಿಲೆಗಳು ಒಸರುವುದರಿಂದ ಉಂಟಾಗಿ ಹರಿಯುತ್ತಿರುವ ಹೊನಲುಗಳನ್ನು ಕಂಡು, ಇವು ಹಾವುಗಳೆಂಬ ತಪ್ಪುನಂಬುಗೆಯಿಂದ ಅಲ್ಲಿಯ ನವಿಲುಗಳು ಕಚ್ಚಿ ನಿರಾಶೆಯಿಂದ ನಿಟ್ಟುಸಿರು ಬಿಡುವುವು.

96. ಹೊಳೆಯುತ್ತಿರುವ ಮಾಣಿಕದ ಕೆಚ್ಚನೆಯ ಬೆಳಕನ್ನು ಕಂಡು ಕಾಡುಗಿಚ್ಚು ಹೊತ್ತಿಕೊಂಡು ಬಂತೆಂಬ ಸಂದೇಹದಿಂದ ಜಿಂಕೆಯ ಹಿಂಡುಗಳು ಹೆದರಿ ದೂರವಾಗುವುವು. ಏನು ಜಡತೆಯೂ ತಿರ್ಯಕ್ ಪ್ರಾಣಿಗಳೂ ಒಡಹುಟ್ಟಿದುವೇನು ?

98. ಪಚ್ಚೆಯ (ಮರಕತದ) ಕಲ್ಲುಗಳನ್ನು ಕಂಡು ಅವು ಹಾವಸೆಯೆಂಬ ಭ್ರಮೆಗೆ ಒಳಗಾಗಿ ಹಂಸಗಳು ಹುರುಪಿನಿಂದ ಅವುಗಳನ್ನು ಕೊಕ್ಕಿನಿಂದ ಕುಕ್ಕುವುವು. (ಚೂಚುನೊಂದಾಗ) ಕಳವಳಕ್ಕೆ ಈಡಾಗುವುವು. ಅದನ್ನು ನೋಡಿ ಖೇಚರ ದಂಪತಿಗಳು ನಗುವರು.

99. ಆ ಬೆಟ್ಟದಲ್ಲಿರುವ ಸೂರ್ಯಕಾಂತ ಕಲ್ಲುಗಳ ಹೊಳಪಿನಿಂದ ಇರುಳಾವುದು ಹಗಲಾವುದು ಎಂಬ ತಾರತಮ್ಯ ತಿಳಿಯದೆ ಚಕ್ರವಾಕ ಜೋಡಿ ಒಂದನ್ನೊಂದು ಅಗಲದೆ ನಿರಾತಂಕವಾಗಿ ಇರುವುವು.

100. ಅಲ್ಲಿಯ ಮಾಣಿಕದ ಕಿರಣಗಳು ಮೇಲಕ್ಕೆ ಚಿಮ್ಮಿ ಬಾನಿನಲ್ಲಿ ಕಾಮನಬಿಲ್ಲಿನ ಕಾಂತಿಯನ್ನು ಹೊಮ್ಮಿಸುವುವು. ಅದನ್ನು ನೋಡಿದ ನವಿಲುಗಳು ಮಳೆಗಾಲವೆ ಉಂಟೆಂದು ಸದಾಕಾಲ ಅಲ್ಲಿ ಕುಣಿಯತೊಡಗುವುವು.

101. ಯಾವೊತ್ತೂ ಅಲ್ಲಿ ಮೊರೆಯುತ್ತಿರುವ ತುಂಬಿಗಳ ಮೊರೆತವೇ ಇನಿದಾದ ಹಾಡಾಗಿ, ಗಿಡಮರಗಳ ಎಲೆಗಳಿಂದಾಗುವ ಮರ್ಮರ ಸದ್ದೇ ಹರೆಯ ನುಡಿತವಾಗಿ ಗಾಳಿಯೆಂಬ ಗುರುವು ಬಳ್ಳಿಗಳಿಗೆ ಕುಣಿಯುವ ಕಲೆಯನ್ನು ಕಲಿಸಿಕೊಡುತ್ತಿರುವಂತೆ ಅಲ್ಲಲ್ಲಿಗೆ ಮೆಲ್ಲಮೆಲ್ಲನೆ ಸುಳಿಯುತ್ತಿರುವನು.

ಈ ಪದ್ಯಗಳ ಉತ್ಪ್ರೇಕ್ಷಾಲಂಕಾರದ ಸೊಗಸನ್ನು ಓದುಗರು ಓದಿಯೇ ಅನುಭವಿಸಬೇಕು. ಇದರಿಂದ ಕಾವ್ಯಕ್ಕೆ ಬರುವ ರಮ್ಯತೆ ಏನೆಂಬುದನ್ನೂ ಆಲೋಚಿಸಬೇಕು. ಶಾಂತಿಪುರಾಣದಲ್ಲಿ ಮಾಮೂಲಿಯಾಗಿರುವ ಕವಿಸಮಯಕ್ಕೆ ಸಂಬಂಧಿಸಿದ ಪದ್ಯಗಳು ಕೆಲವು ಇವೆ. ಒಂದು ನಿದರ್ಶನ:

ಪೊಸವಳಿಕಿನ ಸೆಲೆಯೊಳ್ ನೆಟಿ
ಲೆಸೆಯೆ ಮೊಗಂಬೊಕ್ಕು ಪಾಯ್ದ ಕರಿಯುಂ ಹರಿಯುಂ
ಪೊಸ ಪೋರ್ತಮನಱಿಯಮೆ ಪು
ಟ್ಟಿಸೆ ನೆಟಿಲೊಳ್ ಪೋರ್ದು ಸೇದೆಗಿಡುವುವು ನಗದೊಳ್ ॥ 2–103

ಆನೆ ಹಾಗೂ ಸಿಂಹ ಸದಾ ಎದುರಾಳಿಗಳು, ಹಗೆಗಳು ಎಂಬೊಂದು ನಂಬಿಕೆ ಹಿಂದಿನಿಂದಲೂ ಕಾವ್ಯಗಳಲ್ಲಿ ನಿರೂಪಿತವಾಗುತ್ತಾ ಬಂದಿದೆ. ಸಸ್ಯಾಹಾರಿಯಾದ. ಬೃಹತ್ ಗಾತ್ರದ ಪ್ರಾಣಿ ಆನೆಗೂ, ಮಾಂಸಾಹಾರಿಯಾದ ಸಿಂಹಕ್ಕೂ ಕೆಳೆತನ–ಸಹ ಬಾಳ್ವೆಹೇಗೆ ಸಾಧ್ಯ ? ಆದರೆ ಆನೆಯನ್ನು ಸಿಂಹವೇ ಏಕೆ ಹುಲಿ, ಚಿರತೆಗಳೂ ಎದುರಿಸುತ್ತವೆ. ಸಿಂಹಸಿಗೆ ಮೃಗರಾಜ ಪಟ್ಟ ಕಟ್ಟಿರುವುದರಿಂದ ದದರ ಪರಾಕ್ರಮಕ್ಕೆ ಹೆಚ್ಚಿನ ಹಿರಿಮೆ ಬಂದಿದೆ. ಕವಿಸಮಯವನ್ನು ಪೊನ್ನಕವಿ ಎಷ್ಟು ಸಮುಚಿತ ಸಫಲ ರೀತಿಯಲ್ಲಿ ಅಳವಡಿಸಿಕೊಳ್ಳುತ್ತಾನೆಂಬುದೂ ಗಮನಾರ್ಹ. ಈ ಹಿನ್ನೆಲೆಯಿರಿಸಿಕೊಂಡು ನೋಡಿದಾಗ

ಆ ವನಿತೆಯರ್ ವ ಸೋಜನ
ದೀವದ ಪುಲ್ಲಿಗಮನಂಗರಾಜನ ನವರಾ
ಜ್ಞೀವಾಸಕ್ಕಂ ದೊರೆ ಪೆಱ
ನಾವೊಂ ಪೆಱತ.ವುದಂ ಜಡಂ ಪೋಲಿಸುವೊಂ ॥ 3-19

ಎಂಬ ಪದ್ಯದಲ್ಲಿರುವ ಶ್ಲೇಷೆ ಮಹತ್ವ ಪಡೆದುಕೊಳ್ಳುತ್ತದೆ: 1. ಜಡವಸ್ತುಗಳೊಡನೆ ಹೋಲಿಸಲು ಸಾಧ್ಯವಿಲ್ಲ, ೨. ಜಡನಾದವನು ಬೇರೆ ಯಾವುದನ್ನು ಹೋಲಿಕೆಗೆ ಆರಿಸಿಕೊಳ್ಳುತ್ತಾನೆ? ಎಂಬ ಧ್ವನಿಗಳಿರಬಹುದು. ಆದರೆ ಪೊನ್ನ ಜಡಕವಿಯೂ ಅಲ್ಲ, ಅವನ ಹೋಲಿಕೆಗಳು ಜಡವಾಗಿಯೂ ಇಲ್ಲ.

ಪೊನ್ನಕವಿಯ ವಿಶಿಷ್ಟ ಪದ್ಯಗಳು

ಪೊನ್ನಕವಿಯ ಕಾವ್ಯಕ್ಕಿರುವ ಅಥವಾ ಯಾವುದೇ ಒಬ್ಬ ಕವಿಯ ಕಾವ್ಯಕ್ಕಿರುವ ಕಾವ್ಯಧ್ವನಿ ಮತ್ತು ಕಾವ್ಯಾರ್ಥಗಳನ್ನು ಅದರ ಒಟ್ಟಂದದಲ್ಲಿಯೇ ಪರಿಭಾವಿಸಿ ಸುಖಿಸಬೇಕಾಗುತ್ತದೆ. ಅದರ ಬಿಡಿ ಪದ್ಯಗಳನ್ನು ಇಲ್ಲವೇ ಪದ ಪದ್ಯಪುಂಜಗಳನ್ನು ಸಮಗ್ರ ಕಾವ್ಯಬಂಧದಿಂದ ಬೇರ್ಪಡಿಸಿ ಅವುಗಳ ತನಿಸೊಗಸನ್ನು ಚಪ್ಪರಿಸುವುದು ತಪ್ಪಲ್ಲವಾದರೂ ಇಂಥ ಚಪ್ಪರಣೆಗೆ ಕೆಲವು ಇತಿಮಿತಿಗಳೂ ಇರುತ್ತವೆ. ಪ್ರತಿಯೊಂದು ಕವಿಪ್ರಯೋಗಕ್ಕೂ ಆಯಾ ಕಾವ್ಯನಲ್ಲಿ ಒಂದು ನಿಯೋಜಿತಕ್ರಿಯೆ ಹಾಗೂ ಕಾರ್ಯವಿರುತ್ತದೆ. ಆ ರೀತಿಯ ಕಾರ್ಯಾಂಗ ನಿಯೋಗವನ್ನು ಗಮನದಲ್ಲಿರಿಸಿಕೊಳ್ಳುವುದು ಮುಖ್ಯ. ತನ್ನ ನಿರ್ದಿಷ್ಟ ಗುರಿಯನ್ನು ಮುಟ್ಟುವೆಡೆಗೆ ಆಯಾ ಪ್ರಯೋಗದ ಔಚಿತ್ಯವಿರುತ್ತದೆ. ಅಲ್ಲದೆ ವಾಚ್ಯಾರ್ಥದ ಆಚೆಗೆ ಚಾಚಿಕೊಂಡಿರುವ ಪ್ರತೀಯಮಾನಾರ್ಥವನ್ನು ಗಮನಿಸುವುದು ಕೂಡ ಕಾವ್ಯವಿಮರ್ಶಕರ ಕರ್ತವ್ಯ ಹಾಗೂ ಹೊಣೆಗಾರಿಕೆಯಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪೊನ್ನನ ಶಾಂತಿಪುರಾಣ ಕಾವ್ಯದ ಕೆಲವು ಪದ್ಯಗಳು ವಿಶೇಷ ಮಹತ್ವವನ್ನು ಗರ್ಭೀಕರಿಸಿ ಕೊಂಡಿರುವುದನ್ನೂ ಮನಗಾಣಬಹುದು. ಜೈನ ಕಾವ್ಯಪರಂಪರೆಯನ್ನೂ ಪರಿಸರವನ್ನೂ ಚೆನ್ನಾಗಿ ಬಲ್ಲ ಬುದ್ಧಿ ಮನಸ್ಸು ಮಾತ್ರ ಗುರುತಿಸಬಲ್ಲ ಕಾವ್ಯಸ್ವಾರಸ್ಯಗಳಲ್ಲಿ ಒಂದೆರಡನ್ನು ಬಯಲಿಗೆಳೆಯಲು ಇಲ್ಲಿ ಪ್ರಯತ್ನಿಸಲಾಗಿದೆ.

ಇಂಥ ವಿಶಿಷ್ಟ ಪದ್ಯಗಳಿಗೆ ಅತ್ಯುತ್ತಮ ಉದಾಹರಣೆಯೆಂದರೆ ಮೊದಲನೆಯ ಆಶ್ವಾಸದ ಆರನೆಯ ಪದ್ಯ. ಪೊನ್ನಕವಿಯ ಶಾಂತಿಪುರಾಣದ ಮೊದಲನೆಯ ಅಶ್ವಾಸದಲ್ಲಿ ಬರುವ ಆರನೆಯ ಪದ್ಯ ಹೀಗಿದೆ:

ಗುರು ವರದತ್ತ ದಿವ್ಯಮುನಿ ಪುತ್ರರುದಾತ್ತ ಶುಭಂಕರ ಪ್ರಭಂ
ಕರರವರೈಶ್ವರ್ಯಂ ನೆಗಟ್ದ ನೇಮಿಜಿನೇಶ್ವರ ಶಾಸನಕ್ಕೆ ಭಾ
ಸುರ ಪರಿರಕ್ಷಣ ಸ್ಥಿತಿಯನಿತ್ತಜಿವುರ್ವಿಗಭೂತಪೂರ್ವಮಾ
ಗಿರೆ ದೊರೆವೆತ್ತ ಯಕ್ಷಿ ಬಿಳಿದೀಕ್ಷಿಸಿ ರಕ್ಷಿಸುಗೆಮ್ಮನೇಗಳುಂ ॥

ಈ ಪದ್ಯದ ಸ್ವಾರಸ್ಯವನ್ನು ತಿಳಿಯಬೇಕಾದರೆ ಜೈನಪುರಾಣಗಳ ಹಾಗೂ ಯಕ್ಷಯಕ್ಷಿಯರ ಪರಿಚಯ ಇರಬೇಕಾಗುತ್ತದೆ. ಅಲ್ಲದೆ ವಿಸ್ತಾರವಾದ ಜೈನ ಜಾನಪದ ಕಥೆಯೊಂದು ಇಲ್ಲಿ ಹರಳುಗೊಂಡು ಕುಳಿತುಬಿಟ್ಟಿದೆ. ಅದರ ಹಿನ್ನಲೆ ತಿಳಿದಾಗ ಈ ಪದ್ಯದ ಸೊಗಸು ಸುರುಳಿ ಬಿಚ್ಚಿಕೊಳ್ಳುತ್ತದೆ.

ಮೇಲಿನ ಪದ್ಯದ ಸಾರಾಂಶ: ದಿವ್ಯಮುನಿಗಳಾದ ವರದತ್ತರು ಗುರುಗಳು. ಉದಾತ್ತ ಚರಿತರಾದ ಶುಭಂಕರ ಮತ್ತು ಪ್ರಭಂಕರರು ಅವರ ಶಿಷ್ಯರು. ಅವರ ಸಂಪತ್ತೆಲ್ಲವೂ ಶ್ರೇಷ್ಠ ನೇಮಿನಾಥ ತೀರ್ಥಂಕರನ ಧರ್ಮೋಪದೇಶದ ಪ್ರಚಾರಕ್ಕೆ. ಅವರು ನೀಡಿದ ಪ್ರಕಾಶಯುಕ್ತವಾದ ಧರ್ಮರಕ್ಷಣ ಸ್ಥಿತಿಯ ಜ್ಞಾನ ಲೋಕಕ್ಕೇ ಅಪೂರ್ವ. ಪ್ರಸಿದ್ಧಳಾದ ಯಕ್ಷಿಯು ವಿಚಾರಮಾಡಿ ನೋಡಿ ನಮ್ಮನ್ನು ಸದಾ ಕಾಪಾಡಲಿ.

ಈ ಪದ್ಯದಲ್ಲಿ 'ಯಕ್ಷಿ' ಎಂಬುದು ಯಾವುದೇ ಯಕ್ಷಿಗೆ ಅನ್ವಯವಾಗಬಹುದಾದ ರೀತಿಯಲ್ಲಿ ಸಾಮಾನ್ಯವಾಚಕದಂತೆ ತಟ್ಟನೆ ತೋರುತ್ತವೆ. ಆದರೆ ಒಟ್ಟು ಪದ್ಯದ ಅರ್ಥವನ್ನು ಹಿಡಿದಾಗ ಇದು 22ನೆಯ ತೀರ್ಥಂಕರನಾದ ನೇಮಿನಾಥನ ಯಕ್ಷಿಗೆ ಸಲ್ಲಿಸಿದ ಪ್ರಾರ್ಥನೆಯೆಂದು ಸ್ಪಷ್ಟವಾಗುತ್ತದೆ. ಇದರ ಮುಂದಿನ ಪದ್ಯ ಈ ಸಂಗತಿಯನ್ನು ನಿರ್ದಿಷ್ಟಗೊಳಿಸುತ್ತದೆ. ಅದರಲ್ಲಿ (1-7) ಸರ್ವಾಹ್ಣ ಯಕ್ಷನನ್ನು ಸ್ತುತಿಸಿದೆ. ಜೈನರ ಪ್ರತಿಯೊಬ್ಬ ತೀರ್ಥಂಕರನಿಗೂ ಒಬ್ಬೊಬ್ಬ ಯಕ್ಷಯಕ್ಷಿಯರು ಇರುತ್ತಾರೆ. ಅಂಬಿಕೆ ಮತ್ತು ಸರ್ವಾಹ್ಣರು 22ನೆಯ ತೀರ್ಥಂಕರ ನೇಮಿನಾಥನ ಯಕ್ಷಯಕ್ಷರು.

ನೇಮಿನಾಥನ ಯಕ್ಷಿಯಾದ ಅಂಬಿಕೆಗೆ ಅನೇಕ ಹೆಸರುಗಳಿವೆ : ಅಂಬಾ, ಅಂಬಿಕೆ, ಆಮ್ರಾ, ಆಮ್ರಕೂಷ್ಮಾಡೀ, ಕೂಷ್ಮಾಂಡಿ, ಚಾಮುಂಡಾ, ಅಂಬಿಲಾ, ತಾರಾ, ವಜ್ರಾ, ಧರ್ಮಾದೇವಿ, ಅಂಬಿಕಾಕಲ್ಪ (ಶುಭಚಂದ್ರ). ತಿಲೋಯ ಪಣ್ಣತ್ತಿ (ಜದಿ ಉಸಹ-ಯುಕಿ ವೃಷಭ), ಪ್ರವಚನ ಸಾರೋದ್ಧಾರ (ಆಶಾಧರ), ಅಪರಾಜಿತ ಪೃಚ್ಛ, ತ್ರಿಷಷ್ಟಿಶಲಾಕಾ ಪುರುಷ ಚರಿತ್ರೆ, ಪ್ರತಿಷ್ಠಾತಿಲಕ ಮುಂತಾದ ಗ್ರಂಥಗಳಲ್ಲಿ ಈಕೆಯ ವರ್ಣನೆ ಸಿಗುತ್ತದೆ. ಕನ್ನಡದಲ್ಲಿಯೂ ಪೊನ್ನಕವಿ ಯಲ್ಲದೆ ರನ್ನ, ಕರ್ಣಪಾರ್ಯ, ಮಂಗರಸ ಮೊದಲಾದ ಕವಿಗಳು ಈಕೆಯನ್ನು ಸ್ತುತಿಸಿದ್ದಾರೆ. ಈಕೆಯನ್ನು ದ್ವಿಭುಜೆ, ಚತುರ್ಭುಜೆ, ಅಷ್ಟಭುಜೆ ಎಂದು ವಿಶೇಷಣಿಸಿದ್ದಾರೆ (ಹಂಪನಾ: ಯಕ್ಷ–ಯಕ್ಷಿಯರು, ಪುಟ 136–138). ಜೈನ ಪರಂಪರೆಯಲ್ಲಿ ಈಕೆಗೆ ವಿಶೇಷ ಮಾನ್ಯತೆ : ಮಹಾಮಾತ್ಯ ವಾಸ್ತುಪಾಲ ವಿರಚಿತ ಅಂಬಿಕಾಸ್ತವನ, ಜಿನೇಶ್ವರದತ್ತ ಸೂರಿಕೃತ ಅಂಬಿಕಾದೇವಿಸ್ತುತಿ ಮುಂತಾದ ಸ್ವತಂತ್ರ ಸ್ತೋತ್ರ ಸಾಹಿತ್ಯವಿದೆ.

ಅಂಬಿಕಾದೇವಿಯ ಪ್ರಾಚೀನವೂ ವಿಖ್ಯಾತವೂ ಆದ ಮೂರ್ತಿ ಗಿರಿನಾರ ಪರ್ವತದ (ಊರ್ಜಯಂತಗಿರಿ) ಅಂಬಾದೇವಿ ಶಿಖರದ ಮೇಲಿದೆ. ಈ ಮೂರ್ತಿಯನ್ನು ಸಮಂತಭದ್ರರು ಸ್ವಯಂಭೂಸ್ತೋತ್ರದಲ್ಲಿ (ಪದ್ಯ 127) ಖಚರಯೋಷಿತೆ ಯೆಂದು ಹೇಳಿದ್ದಾರೆ. ಕನ್ನಡ ನಾಡಿನಲ್ಲಿಯೂ ಈ ಯಕ್ಷಿಯ ಸ್ವತಂತ್ರ ಮೂರ್ತಿಗಳು ವಿಪುಲವಾಗಿವೆ. ಇವುಗಳಲ್ಲಿ ಐಹೊಳೆಯ ಮೇಗುತಿ ದೇವಾಲಯದ ಮೂರ್ತಿ ಪ್ರಾಚೀನತಮ. ಶ್ರವಣಬೆಳಗೊಳದ ಚಂದ್ರಗಿರಿ ಮೇಲಿನ ಎರಡುಕಟ್ಟೆ ಚಾವುಂಡರಾಯನ ಬಸದಿ, ಕತ್ತಲೆ ಬಸದಿ, ಶಾಂತೀಶ್ವರ ಬಸದಿ, ಸವತಿ ಗಂಧವಾರಣ ಬಸದಿ ಮತ್ತು ಶಾಸನ ಬಸದಿಗಳಲ್ಲಿ ಈಕೆಯ ಮೂರ್ತಿಗಳಿವೆ. ಜಿನನಾಥಪುರದ ಶಾಂತೀಶ್ವರ ಬಸದಿಯ ಹೊರಗೋಡೆಯಲ್ಲಿರುವ ಸಮಭಂಗ ನಿಲುವಿನ ಮೂರ್ತಿ ಗಮನಾರ್ಹವಾಗಿದೆ.

ಅಂಬಿಕಾಯಕ್ಷಿಯ ಕಥೆ ಕನ್ನಡದಲ್ಲಿ, ಕಾವ್ಯರೂಪದಲ್ಲಿ ಮೊಟ್ಟಮೊದಲು ದಾಖಲಾಗಿರುವುದು ಪೊನ್ನಕವಿಯ ಶಾಂತಿಪುರಾಣದಲ್ಲಿ. ಅನಂತರ ಇದರ ವಿಸ್ತೃತರೂಪ ಪುಣ್ಯಾಸ್ರವ ಕಥಾಕೋಶದಲ್ಲೂ (ಸಂಸ್ಕೃತ--ರಾಮಚಂದ್ರ ಮುಮುಕ್ಷು), ಪುಣ್ಯಾಸ್ರವ ಚಂಪುವಿನಲ್ಲೂ (ಕನ್ನಡ–ನಾಗರಾಜಕವಿ), ಪ್ರತಿಷ್ಠಾಸಾರದಲ್ಲೂ (ಆಶಾಧರಸೂರಿ) ಕಂಡು ಬರುತ್ತದೆ. ಹೀಗಾಗಿ ಪೊನ್ನನ ಉಲ್ಲೇಖಕ್ಕೆ ಚಾರಿತ್ರಿಕ ಮಹತ್ವವಿದೆ. ಸಂಸ್ಕೃತದಲ್ಲಿ ಜಿನಸೇನಕವಿಯ ಹರಿವಂಶ ಪುರಾಣದಲ್ಲಿ ಈಕೆಯ ಸ್ಮರಣೆಯಿದೆ (ಗೃಹೀತ........); ಇದು ಪೊನ್ನನಿಗಿಂತ ಒಂದು ನೂರು ವರ್ಷ ಹಿಂದಿನದು.

ಅಂಬಿಕಾಯಕ್ಷಿಯ ಕಥೆ ಹೀಗಿದೆ: ಗಿರಿನಗರ (ಗಿರ್ನಾರ್) ಭರತಖಂಡದ ಸೌರಾಷ್ಟ್ರ (ಗುಜರಾತ್) ದೇಶದ ರಾಜಧಾನಿ. ಭೂಪಾಲ ಅಲ್ಲಿನ ರಾಜ. ವೈದಿಕ ಸೋಮಶರ್ಮನು ಪುರೋಹಿತ, ಈತನ ಮಡದಿ ಅಗ್ನಿಲಾದೇವಿ ಜೈನ ಧರ್ಮೀಯಳು. ಇವರಿಗೆ ಮಕ್ಕಳು ಶುಭಂಕರ ಮತ್ತು ಪ್ರಭಂಕರ. ಸೋಮಶರ್ಮನು ತನ್ನ ತಂದೆಯ ತಿಥಿಯ ದಿನದಂದು ಪಿಂಡದಾನಕ್ಕಾಗಿ ನದಿಯ ಬಳಿಗೆ ಹೋದನು. ಗಿರಿನಗರದ ಸಮೀಪದ ಊರ್ಜಯಂತಗಿರಿಯಲ್ಲಿ ತಿಂಗಳ ಉಪವಾಸಾನಂತರ ವರದತ್ತ ಮುನಿಗಳು ಪಾರಣೆಗಾಗಿ ಚರ್ಯಾಮಾರ್ಗದಿಂದ ಬಂದರು. ವ್ರತಶುದ್ಧಳಾದ ಅಗ್ನಿಲಾದೇವಿ ಆಹಾರದಾನವನ್ನು ನೀಡಿದಳು. ವರದತ್ತರು ಆಶೀರ್ವದಿಸಿ ತೆರಳಿದರು.

ಆ ಸಮಯಕ್ಕೆ ಪಿಂಡದಾನ ಮಾಡಿದ ತಂಡ ಹಿಂತಿರುಗಿತು. ಜೈನಯತಿಗೆ ತಮಗಿಂತ ಮೊದಲು ಆಹಾರದಾನ ಸಿಕ್ಕಿರುವುದನ್ನರಿತು ಅವರೆಲ್ಲ ಕ್ರೋಧೋನ್ಮತ್ತರಾದರು. ಹಸಿದಿದ್ದರಿಂದ ಕೋಪ ಕಿಚ್ಚಾಯಿತು. 'ಸೋಮಶರ್ಮನೆ, ನಿನ್ನ ಮನೆಯಲ್ಲಿನ ಅನ್ನ ಎಂಜಲಾಗಿದೆ. ಅದನ್ನು ತಿಂದು ನಿನ್ನ ಪಿತೃಗಳನ್ನು ನರಕಕ್ಕೆ ಕಳಿಸಿ ನಮ್ಮ ಬ್ರಾಹ್ಮಣ್ಯವನ್ನು ಹಾಳುಮಾಡೆವು' ಎಂದು ಹೊರಟುನಿಂತರು. ಸೋಮಶರ್ಮನು 'ಅಪರಾಧ ಮನ್ನಿಸಿರಿ, ನನ್ನ ಅರಿವಿಗೆ ಬರದಂತೆ ಅಚಾತುರ್ಯ ನಡೆದಿದೆ. ಪ್ರಾಯಶ್ಚಿತ್ತ ವಿಧಿಸಿದರೆ ಪಾಲಿಸುತ್ತೇನೆ' ಎಂದು ಅಂಗಲಾಚಿದ.

ಅವನ ವಿನಯಕ್ಕೆ ಕೆಲವರು ಮನಕರಗಿದರು. ಇನ್ನೊಂದು ಗುಂಪು ವಿರೋಧಿಸಿತು. ಕಡೆಗೆ ಎಲ್ಲ ಸೇರಿ ಕೆಂಡಕಾರಿ ಹೊರಟುಹೋದರು. ಈತನಿಗೆ ಹೆಂಡತಿಯಮೇಲೂ, ಜೈನಮುನಿಯಮೇಲೂ ರೋಷ ಉಕ್ಕಿತು. ಹೆಂಡತಿಯನ್ನು ನಿಂದಿಸಿದ. ತೃಪ್ತಿಯಾಗಲಿಲ್ಲ. ಚೆನ್ನಾಗಿ ಥಳಿಸಿದ. ಏಟು ತಾಳಲಾರದೆ ಆಕೆ ಪ್ರಜ್ಞಾಶೂನ್ಯಳಾದಳು. ಅವಳನ್ನು ಅಂಥ ದೈನ್ಯಾವಸ್ಥೆಯಲ್ಲೇ ಬಿಟ್ಟು ಗಂಡ ತನ್ನಪಾಡಿಗೆ ತಾನು ನಿರ್ಗಮಿಸಿದ.

ಅಗ್ನಿಲೆಗೆ ಪ್ರಜ್ಞೆ ಮರಳಿತು. ಆಹಾರ ದಾನಮಾಡಿದ್ದಕ್ಕೆ ಆನಂದಿಸದೆ ಕ್ರೂರವಾಗಿ ವರ್ತಿಸಿದ ಗಂಡನ ನಡವಳಿಕೆಯಿಂದ ನೊಂದಳು. ಮನೆಯ ಋಣ ಮುಗಿಯಿತೆಂದು ಮಕ್ಕಳೊಡನೆ ಹೊರಟಳು. ಊರ್ಜಯಂತಗಿರಿಗೆ ಹೋಗಿ ವರದತ್ತಮುನಿಗಳಲ್ಲಿ ದೀಕ್ಷೆ ಬೇಡಿದಳು. ಆದರೆ ಯತಿಗಳು 'ಆತುರದಲ್ಲಿ ಮಾಡಿದ ತೀರ್ಮಾನ ಮತ್ತೂ ಹೆಚ್ಚಿನ ನೋವಿಗೆ ಕಾರಣವಾಗಬಹುದು. ಸಹನೆ ತಂದುಕೊ ತಾಯಿ. ಮಕ್ಕಳು ಬೇರೆ ಇದ್ದಾರೆ. ಮನೆಗೆ ಹೋಗು ತಾಯಿ, ನಿನ್ನ ಪತಿ ನಿನಗಾಗಿ ಹುಡುಕುತ್ತಿರಬಹುದು' ಎಂದು ತಿಳಿಸಿದರು.

ಅಗ್ನಿಲೆಗೂ ಮುನಿಗಳ ಹಿತವಚನ ಸರಿಕಂಡಿತು. ಹತ್ತಿರದ ಮಾವಿನಮರದ ನೆರಳಲ್ಲಿ ಕುಳಿತಳು. ಮಕ್ಕಳಿಗೆ ನೀರು ಕುಡಿಸಿದಳು, ಹಣ್ಣುಗಳನ್ನಿತ್ತಳು. ಅತ್ತ ಗಿರಿನಗರದಲ್ಲಿ ಕೋಲಾಹಲವೆದ್ದಿತು. ಎಲ್ಲೆಲ್ಲೂ ಬೆಂಕಿಯ ಅನಾಹುತ. ಹಾಹಾಕಾರ, ಊರೆಲ್ಲ ಭಸ್ಮವಾಗಿತ್ತು. ಸೋಮಶರ್ಮನ ಮನೆ ಮತ್ತು ದೊರೆಯ ಅರಮನೆ ಮಾತ್ರ ಸುರಕ್ಷಿತವಾಗಿತ್ತು. ಅಂದು ಊಟ ಬಿಟ್ಟು ಬಂದಿದ್ದ ಬ್ರಾಹ್ಮಣರು ಗಾಬರಿಗೊಂಡರು; 'ಅಗ್ನಿಲಾದೇವಿಯ ದುಃಖವೇ ಅಗ್ನಿಯಾಗಿ ನಮ್ಮೆಲ್ಲರ ಮನೆಗಳನ್ನು ಸುಟ್ಟುಬೂದಿಮಾಡಿ ಆಹುತಿತೆಗೆದುಕೊಂಡಿದೆ' ಎಂದು ನೊಂದರು. 'ಸಾಕ್ಷಾತ್ ಶ್ರೀಮನ್ ನಾರಾಯಣನೇ ನಗ್ನ ಸಾಧುವಿನ ರೂಪದಲ್ಲಿ ಆಹಾರ ಪಡೆದುಹೋಗಿರಬೇಕು' ಎಂದರು. ತಕ್ಷಣವೇ ಎಲ್ಲ ದ್ವಿಜರೂ ಬಂದು ಕ್ಷಮೆ ಕೇಳಿದರು. ಆಹಾರ ಪಡೆಯಲು ಕುಳಿತರು. ಬಡಿಸಿದಷ್ಟೂ ಆಹಾರವೆಲ್ಲಾ ಅಕ್ಷಯವಾಗುತ್ತಿತ್ತು. ಊರಿನವರೆಲ್ಲಾ ಉಂಡರು. ಅರಮನೆ ಸೈನ್ಯಕ್ಕೂ ಆಹಾರ ಕೊಟ್ಟರು. ಈ ಅಮಾನುಷ ಘಟನೆಯಿಂದ ಅಗ್ನಿಲೆಯ ಗಂಡನಿಗೂ ಪಶ್ಚಾತ್ತಾಪವಾಯಿತು. ಸೋಮಶರ್ಮ ಅಗ್ನಿಲೆಯನ್ನು ಹುಡುಕಲು ಹೊರಟ.

ಬೆಟ್ಟ ಹತ್ತಿ ಬರುತ್ತಿರುವ ಗಂಡನನ್ನು ಅಗ್ನಿಲೆ ದೂರದಿಂದ ನೋಡಿದಳು. ಆತನ ರುದ್ರಾವತಾರದ ರೂಪ ಕಣ್ಮುಂದೆ ಕಟ್ಟಿತು. ಚಿತ್ತಕ್ಷೋಭೆಯಿಂದ ಮತ್ತೆ ತತ್ತರಿಸಿದಳು. ಗಂಡ ಬಂದು ಪುನಃ ಹೊಡೆದರೆ ಏನುಗತಿ ಎಂದು ನಡುಗಿದಳು. ಆಗಲೇ ಬಿದ್ದಿರುವ ಏಟುಗಳ ನೆನಪಾಗಿ ತೀವ್ರ ವೇದನೆಯಿಂದ ಪಂಚನಮಸ್ಕಾರ ಮಂತ್ರ ಪಠಿಸುತ್ತಾ ನೆಲಕ್ಕೆ ಒರಗಿದಳು. ಅಗ್ನಿಲೆಯ ದೇಹ ಮತ್ತೆ ಮೇಲೇಳಲಿಲ್ಲ. ಆತ್ಮ ಬೇರೆಯಾಗಿ ದೂರ ಹೋಗಿತ್ತು. ಆಹಾರದಾನದ ಹಾಗೂ ಪಂಚನಮಸ್ಕಾರ ಮಂತ್ರದ ಉಚ್ಚಾರದ ಮಹಿಮೆಯಿಂದ ಶುಭ ಫಲ ದೊರೆಯಿತು. ಅಗ್ನಿಲೆ ವ್ಯಂತರಲೋಕದ ದಿವ್ಯಪ್ರಾಸಾದವೊಂದರ ಉಪಪಾದಶಯ್ಯೆಯಲ್ಲಿ ಅಂತರ್ಮುಹೂರ್ತದೊಳಗೆ ತೇಜಸ್ವಿನಿಯಾದ ಯಕ್ಷಿಯಾಗಿ ಉದ್ಭವಿಸಿದಳು. ಈಕೆಯೇ ಕೂಷ್ಮಾಂಡಿನೀದೇವಿ.

ಕೂಷ್ಮಾಂಡಿನೀದೇವಿ ಯಕ್ಷಿಗೆ ಜನಪ್ರಿಯವಾದ ಹೆಸರು ಅಂಬಿಕಾದೇವಿ. ಅಸದೃಶವಾದ ದೇಹಸೌಂದರ್ಯ, ಅಪೂರ್ವವಾದ ವಿದ್ಯೆಗಳ ಒಡತಿ ಅಂಬಿಕೆ. ಈಕೆಗೆ ಸಪ್ತಧಾತುರಹಿತವೂ, ಸುಗಂಧಯುಕ್ತವೂ, ನಿರ್ಮಲವೂ ಆದ ಶರೀರಕಾಂತಿ ಉಂಟಾಯಿತು. ಸ್ವಾಭಾವಿಕವಾದ ಆಭರಣಗಳಿಂದ ಅಲಂಕೃತಳಾದಳು. ಅಣಿಮಾ ಮಹಿಮಾದಿ ಅಷ್ಟ ಸಿದ್ಧಿಗಳಾದುವು. ಭವ ಪ್ರತ್ಯಯಜ್ಞಾನ, ಅವಧಿಜ್ಞಾನ ದೊರೆತುವು. ಇಷ್ಟಪಟ್ಟಕೂಡಲೆ ಜಗದಗಲದಲ್ಲಿ ಎಲ್ಲಿಗೆಂದರಲ್ಲಿಗೆ ಕ್ಷಣಾರ್ಧದಲ್ಲಿ ಹೋಗುವ ಶಕ್ತಿ ಪ್ರಾಪ್ತವಾಯಿತು. ಇಷ್ಟೆಲ್ಲಾ ದಿವ್ಯಶಕ್ತಿಗಳ ಕೂಷ್ಮಾಂಡಿನಿ ಯಕ್ಷಿ ತನ್ನ ಪರಿವಾರ ದೇವತೆಗಳೊಡನೆ ನೇಮಿನಾಥ ತೀರ್ಥಂಕರನ ಶಾಸನ ದೇವತೆಯಾಗಿ ಪ್ರಸಿದ್ಧಳಾದಳು.

ಕೂಷ್ಮಾಂಡಿನಿಗೆ ಧರ್ಮದಿಂದ ಉಂಟಾದ ವೈಭವ ತಿಳಿದು ಬೆರಗುಮೂಡಿತು. ಅತ್ತ ಊರ್ಜಯಂತಗಿರಿಯಲ್ಲಿ ತನ್ನ ಪೂರ್ವಜನ್ಮದ ಶರೀರವನ್ನು ಅಪ್ಪಿ ರೋಧಿಸುತ್ತಿರುವ ಮಕ್ಕಳನ್ನು ಸಂತೈಸಬೇಕೆನ್ನಿಸಿತು. ಹಾಗೆ ಅನಿಸಿದ್ದೇ ತಡ ವೈಕ್ರಿಯಕ ಶಕ್ತಿಯಿಂದ ತಿರುಗಿ ಅಗ್ನಿಲಾದೇವಿಯ ರೂಪವನ್ನು ತಳೆದು ಊರ್ಜಯಂತಗಿರಿಗೆ ಬಂದಳು. ಅಮ್ಮಾ ಎಂದು ಮಕ್ಕಳು ಅಕ್ಕರೆ ತುಂಬಿ ಸರಸರನೆ ಬಂದರು. ತಂದವಮ್ಮಗಳಿಗೆ ಏನನ್ನಾದರೂ ಕೊಡಬೇಕೆನಿಸಿತು. ಕಲ್ಪವೃಕ್ಷವಾಗಿ ನಿಂತಿದ್ದ ಮಾವಿನಮರದಿಂದ ಅಮೃತೋಪಮವಾದ ಎರಡು ಹಣ್ಣುಗಳನ್ನು ಕಿತ್ತು ವಾತ್ಸಲ್ಯದಿಂದ ಕೊಟ್ಟಳು. ಅಲ್ಲಿಯೇ ಇದ್ದ ಗಂಡ ಸೋಮಶರ್ಮನೂ 'ನನ್ನ ಅಪರಾಧ ಮರೆತುಬಿಡು. ನಾನು ನಿನಗೆ ಚಿತ್ರಹಿಂಸೆ ಕೊಟ್ಟ ಪಾಪಿ. ನಿನಗೆ ಮುಖ ತೋರಿಸಲೂ ಅರ್ಹನಲ್ಲ. ಯಾವ ತಪ್ಪೂ ಮಾಡದ ನಿನ್ನಮೇಲೆ ಮುಳಿದು ನನ್ನ ಕಾಲಮೇಲೆ ನಾನೇ ಕಲ್ಲು ಹಾಕಿಕೊಂಡೆ. ಯಾವುದನ್ನೂ ಮನಸ್ಸಿಗೆ ಹಚ್ಚಿಕೊಳ್ಳದೆ ಮನೆಗೆ ಹೋಗೋಣ ಬಾ' ಎಂದು ಅಂಗಲಾಚಿದ.

ಆಗ ಕೂಷ್ಮಾಂಡಿನಿಯಕ್ಷಿಯು ಮನುಷ್ಯಾಸಕ್ತಿಯಲ್ಲುಂಟಾಗುವ ಅಜ್ಞಾನಕ್ಕೆ ಅಚ್ಚರಿಪಟ್ಟು ಹೇಳಿದಳು : 'ನಾನು ನಿನ್ನ ಮಡದಿಯಲ್ಲ. ನಿನ್ನ ಮಡದಿ ಅಲ್ಲಿ ಮಲಗಿದ್ದಾಳೆ ನೋಡು--ನನ್ನ ಪೂರ್ವಭವದ ಶರೀರ ಅಲ್ಲಿದೆ.' ಅಲ್ಲಿ ಶವವಾಗಿ, ಇಲ್ಲಿ ಜೀವಂತವಾಗಿ ಇರುವ ಇಬ್ಬರು ಅಗ್ನಿಲೆಯರನ್ನೂ ನೋಡಿ ಅವನಿಗೆ ದಿಗ್ಭ್ರಮೆಯೇ ಆಯಿತು. ಅವನಿಗೆ ಉಂಟಾದ ಚಿಂತೆ ನಿವಾರಿಸುವಂತೆ ಯಕ್ಷಿಯು ದಿವ್ಯಾಲಂಕಾರ ಸಹಿತಳಾಗಿ ಭೂಸ್ಪರ್ಶ ಮಾಡದಹಾಗೆ ನಿಂತಳು. ತನ್ನ ವೃತ್ತಾಂತವನ್ನೆಲ್ಲಾ ಹೇಳಿದಳು. ಅದನ್ನು ಕೇಳಿದ ಸೋಮಶರ್ಮನು ತಾನೂ ಪ್ರವೃತ್ತಿಮಾರ್ಗ ತೊರೆದು ನಿವೃತ್ತಿಮಾರ್ಗ ಹಿಡಿದುದನ್ನು ಹೇಳಿದನು. ಅದಕ್ಕೆ ಆಕೆ 'ವಿರಕ್ತ ಜೀವನಕ್ಕೆ ನಿನಗಿನ್ನೂ ಕಾಲಲಬ್ಧಿಯುಂಟಾಗಿಲ್ಲ. ಮಕ್ಕಳಿಬ್ಬರನ್ನೂ ಮನೆಗೆ ಕರೆದುಕೊಂಡುಹೋಗು. ಇವರು ಅಸಾಮಾನ್ಯರು, ಉದಯಿಸುವ ಸೂರ್ಯ ಚಂದ್ರರ ಹಾಗಿರುವರು. ಈ ತೇಜಸ್ವಿಗಳಿಂದ ಭವಿಷ್ಯದಲ್ಲಿ ಧರ್ಮ ಪ್ರಭಾವನೆ ಹಾಗೂ ಲೋಕಕಲ್ಯಾಣವಾಗುವುದು. ನಿನಗೆ ಅನುಮೋದನ ಪುಣ್ಯ ಲಭಿಸುವುದು' ಎಂದು ತಿಳಿಸಿ ಅದೃಶ್ಯಳಾಗಿ ನೇಮಿತೀರ್ಥಂಕರರ ಸಮವಸರಣ ಸೇರಿದಳು.

ಸೋಮಶರ್ಮ ಕೂಷ್ಮಾಂಡಿನಿಯಕ್ಷಿಯ ಆಜ್ಞೆ ಪಾಲಿಸಿದ. ಮಕ್ಕಳಾದ ಶುಭಂಕರ ಪ್ರಭಂಕರರು ದೊಡ್ಡ ವಿದ್ವಾಂಸರಾದರು. ಸೋಮಶರ್ಮನು ಊರ್ಜಯಂತಗಿರಿಯಲ್ಲಿ ತಪಸ್ಸುಮಾಡಿ ನೀರಿನ ಋಣ ನೀಗಿಕೊಂಡ. ಮರಣ ಕಾಲದಲ್ಲಿ ಕೂಷ್ಮಾಂಡಿನಿಯ ಭಕ್ತಿಯೇ ಮನಸ್ಸಿನಲ್ಲಿ ತುಂಬಿತ್ತು. ಆದರಿಂದ ಆ ದೇವಿಯ ವಾಹನವಾಗುವುದಕ್ಕಾಗಿ ವ್ಯಂತರಲೋಕದಲ್ಲಿ ಸಿಂಹಜಾತಿಯ ದೇವತೆಯಾಗಿ ಹುಟ್ಟಿದ. ಪ್ರಭಂಕರ ಶುಭಂಕರರು ಜೈನಸಿದ್ಧಾಂತ ಭಾಸ್ಕರರಾದರು. ಮುಂದೆ ಜಿನಮುನಿಗಳಾದರು. ದೇಶಸಂಚಾರ ಶ್ರೀ ವಿಹಾರ ಮಾಡುತ್ತಾ ಧರ್ಮಪ್ರಭಾವನೆ ಉಂಟುಮಾಡಿದರು. ಕೂಷ್ಮಾಂಡಿನಿಯ ಮಹಿಮೆಯನ್ನು ಹರಡಿದರು. ಧರ್ಮಚಕ್ರ ಪ್ರವರ್ತನೆಯನ್ನು—ನೇಮಿತೀರ್ಥಂಕರರ ಸಮವಸರಣ ಸೇರಿ—ಕೇವಲ ಜ್ಞಾನವನ್ನು ಸಂಪಾದಿಸಿದರು. ಕೇವಲ ಜ್ಞಾನೋತ್ಪತ್ತಿಯಾದ ಮೇಲೆ ದಿವ್ಯವಾಣಿಯಿಂದ ಸಮಸ್ತ ಜೀವಕೋಟಿಗೂ ಉದ್ಧಾರವಾಗುವ ಧರ್ಮವನ್ನು ಬೋಧಿಸಿ ಕಡೆಗೆ ಅನನ್ಯವಾದ ಮೋಕ್ಷಪದವಿ ಪಡೆದರು. ಇದಿಷ್ಟು ಅಂಬಿಕಾಯಕ್ಷಿಯ ಕಥೆ.

ಅಂಬಿಕಾ ಯಕ್ಷಿಯ ಕಥೆಯಲ್ಲಿ ಚಾರಿತ್ರಿಕ ಸತ್ಯ ಎಷ್ಟೆಂಬುದು ತಿಳಿಯದು. ಮೊದಲಿಗೆ ಇದೊಂದು ಜನಪದ ಮೂಲಕ್ಕೆ ಸೇರಿದ ಕಥೆಯಾಗಿದ್ದಂತೆ ತೋರುತ್ತದೆ. ಪೊನ್ನಕವಿ ಜಾನಪದ ಸಾಮಗ್ರಿಯನ್ನು ಹೇಗೆ ಬಳಸಿಕೊಂಡಿದ್ದಾನೆಂಬುದನ್ನು ಬೇರೊಂದು ಲೇಖನದಲ್ಲಿ (ಪೊನ್ನ ಮತ್ತು ಜಾನಪದ, ಸನ್ಮತಿ, ಡಿಸೆಂಬರ್ 1977) ತಿಳಿಸಿದ್ದೇನೆ. ಈ ಪದ್ಯ (1–6) ಕೂಡ ಅಲ್ಲಿನ ಮಾಹಿತಿಯನ್ನು ಪುಷ್ಟೀಕರಿಸುತ್ತದೆ. ವಾಸ್ತವವಾಗಿ ಸಂಸ್ಕೃತ ಭಾಷೆಯ ಮೂಲ ಮಹಾಪುರಾಣದಲ್ಲಿಯೇ ಅಂತರ್ಗತವಾಗಿರುವ ಅನೇಕ ಜಾನಪದ ಸಂಗತಿಗಳಿವೆ.

ಅಂಬಿಕಾ ಯಕ್ಷಿಯ ಕಥೆ ಪೊನ್ನನ ಕಾಲಕ್ಕಾಗಲೇ ಹೇಗೆ ಕನ್ನಡ ನಾಡಿನಲ್ಲೂ ಜೈನಸಮಾಜದಲ್ಲೂ ಜನಜನಿತವಾಗಿತ್ತೆಂಬುದು ಶಾಂತಿಪುರಾಣದ 1–6 ಪದ್ಯದಿಂದ ಸ್ಪಷ್ಟವಾಗುತ್ತದೆ. ಇಲ್ಲಿ ಇನ್ನೂ ಒಂದು ಗಮನಿಸೀಯ ಅಂಶವಿದೆ. ಪೊನ್ನನ ಶಾಂತಿಪುರಾಣಕಾವ್ಯ 16ನೆಯ ತೀರ್ಥಂಕರನಾದ ಶಾಂತಿನಾಥನ ಚರಿತೆ. ಆದರಿಂದ ಈ ಕಾವ್ಯದಲ್ಲಿ ಸಹಜವಾಗಿಯೇ ಶಾಂತಿನಾಥನ ಯಕ್ಷಯಕ್ಷಿಯರಾದ ಗರುಡ ಯಕ್ಷ ಮತ್ತು ಮಾನಸೀ ಯಕ್ಷಿಯರ ಸ್ತುತಿ ಇರಬೇಕಿತ್ತು. ಆದರೆ ಅವರ ಪ್ರಸ್ತಾಪವೇ ಇಲ್ಲ. ಈ ಅಂಶ ಕೂಡ ಅಂಬಿಕೆಯ ಮಹತ್ವವನ್ನು ಸಾರುತ್ತದೆ.

ಹಿಂದೂ ಧರ್ಮೀಯರು ಪೂಜಿಸುವ ಅಂಬಾ (ಭವಾನಿ) ಪಾರ್ವತಿಗೂ ಈ ಅಂಬಿಕಾ ಯಕ್ಷಿಗೂ ಬಹುವಾದ ಅಭೇದ ಕಂಡುಬರುತ್ತದೆ. ಜೈನ ಮತ್ತು ಹಿಂದೂ ಧರ್ಮಗಳಲ್ಲಿ ಪೂಜೆಗೆ ಪಾತ್ರಳಾದ ಅಂಬಿಕೆ ಸಾಮಾನ್ಯ ಲೋಕ ವ್ಯವಹಾರದಲ್ಲಿ ಒಬ್ಬಳೇ ದೇವಿಯೆಂದೂ ತೋರುತ್ತದೆ. ಅಂಬಿಕೆಯ ಪೂಜೆಯಂತೆ ಅಂಬಾಜಿಯ ಪೂಜೆ ಧ್ಯಾನ ಸ್ತೋತ್ರ ನಡೆಯುತ್ತವೆ. ಅಂಬಿಕೆಯ ಎರಡು ಪಕ್ಕಗಳಲ್ಲಿ ಇಬ್ಬರು ಮಕ್ಕಳಿರುವಂತೆ ಪಾರ್ವತಿಯ ಎಡಬಲಗಳಲ್ಲಿ ವಿನಾಯಕ, ಕಾರ್ತಿಕೇಯ ಇದ್ದಾರೆ; ಇಬ್ಬರ ವಾಹನವೂ ಸಿಂಹ; ಇಬ್ಬರ ಧ್ಯಾನ ಧೋರಣೆಗಳಲ್ಲಿ ಸಮಾನತೆಯಿದೆ.

ಅಂಬಿಕೆಯ ವಿಚಾರದಲ್ಲಿ ಮತ್ತಷ್ಟು ಮಾಹಿತಿ ನೇಮಿಚಂದ್ರನಲ್ಲಿ ಸಿಗುತ್ತದೆ. ಆವನು ತನ್ನ ಲೀಲಾವತಿ ಕಾವ್ಯದಲ್ಲಿ 'ಅಂಬಿಕೆಯ ಬಸ' ವನ್ನೂ, ಅಂಬಿಕೆಯ ಬಿರುದನ್ನು ಹಾಡುವ ಭಕ್ತರನ್ನೂ ಉಲ್ಲೇಖಿಸಿದ್ದಾನೆ. ಅಂಬಿಕೆಯನ್ನು ಪೂರ್ಣವಾಗಿ ವರ್ಣಿಸಿರುವ ನೇಮಿಚಂದ್ರಕವಿಯ ಎರಡು ಪದ್ಯಗಳೂ ಮನನೀಯವಾಗಿವೆ:

ನೆಱೆದ ಮೃಗನೇಱಿ ಸಿಂಗದ
ಮಱಿಯಂ ಕರಮೊಪ್ಪೆ ತೋಱುವನಿಂದಂ ನೇ
ರ್ಗಱಿಯುಮಗಂ ಪನೆಗೊನೆ-ಳ
ಕಿಱುವೊಳೆಯೊನೆ ನಗುತಸೋಂಕಿ ಸೋಗಿಲೊಳೆಸೆಯಲ್ ॥ 8–56

ತೊಳಗುವ ವಜ್ರದೋಲೆ ಪೊಸಮುತ್ತಿನ ಲಂಬಣಮಾಯ್ದ ಮಾಣಿಕಂ
ಗಳ ಮಿಸುಪ್ಪೆಸರಂ ಪಣೆಯ ನೇತ್ರದ ಬಲ್ಲಿಱಿ ತೋರ್ಪ ಮಿಂಚುವ
ಲ್ಗಳ ಬೆಳಗಳ್ ಬಾಯ್ದೆಱೆ ಬಟ್ಟಲ್ಮುಡಿ ಸಾಂದಿನ ಬೊಟ್ಟು ಚೆಲ್ವಿನ
ಗ್ಗಳಿಕೆಯನೀಯೆ ಕಣ್ಗೆಸೆವ ಯಕ್ಷಿಯನಬ್ಜದಳಾಯತಾಕ್ಷಿಯುಂ ॥ 8–57

ಸಾರಾಂಶವಿಷ್ಟೆ: ಮೇಲಿನ ಎಲ್ಲ ಹಿನ್ನಲೆಯ ಪರಿಚಯವಿಲ್ಲದ ಹೊರತು ಪೊನ್ನನ 1–6ನೆಯ ಪದ್ಯ ಪೂರ್ಣವಾಗಿ ಅರ್ಥವಾಗುವುದಿಲ್ಲ, ಅದರ ಸಾಹಿತ್ಯಕ, ಸಾಂಸ್ಕೃತಿಕ, ಧಾರ್ಮಿಕ ಮಹತ್ವ ಮನವರಿಕೆಯಾಗುವುದಿಲ್ಲ.

ಇದರಂತೆ ವಸಂತಸೇನೆಯ ಪ್ರಸ್ತಾಪವಿರುವ ಆರನೆಯ ಆಶ್ವಾಸದ ಎಂಡು ಪದ್ಯಗಳಿಗೂ ದೊಡ್ಡ ಹಿನ್ನೆಲೆಯಿದೆ. ಶಾಂತಿಪುರಾಣದ ಆರನೆಯ ಆಶ್ವಾಸದಲ್ಲಿ ಬರುವ ಭಾಗವಿದು: ಜಂಬೂದ್ವೀಪದ ದಕ್ಷಿಣ ಭಾರತದ ಮಳೆಯದೇಶದ

ರತ್ನಪುರಮನಾಳ್ವೊಂ ಶ್ರೀಷೇಣನರಸಿಯಪ್ಪ ಸಿಂಹನಂದೆಗಮನಿಂದಿತೆಗಂ ಕನಕಲತೆಯಪ್ಪಂದಿನ ದಿವಿಜನುಮೀ ಪದ್ಮಲತೆಯಪ್ಪ ದೇವನುಮಿಂದ್ರನುಮುಪೇಂದ್ರನುಮೆಂಬ ಮಕ್ಕಳಾದರಿನ್ನಾ ಪದ್ಮಾವತಿಯೆಂಬಚ್ಚರಿಸಿಯೆ ತತ್ಪುರದೊಳ್ ವಸಂತಸೇನೆಯೆಂಬ ಪಣ್ಯಾಂಗನೆಯಾಗಿರೆ ತದೀಯಾಗ್ರಹಸ್ತ ಗ್ರಹಗ್ರಹಗ್ರಸ್ತರಿಂದ್ರನು ಮುಪೇಂದ್ರನು ಮಾಗಳ್ ಕಾದಿಪರೆಂಬುದಂ ಬೆಸಸಿದ ಜಿನೇಂದ್ರ ಪಾದಾರವಿಂದಂಗಳ್ಗೆಱಗಿ ಸ್ನೇಹಪಾಶಪಾಶಿತನೆನಾಗಿ ನಿಮ್ಮಜ್ಞಾನ ವಿಳಸನಮುಂ ಬಾರಿಸಲ್ ಬಂದೆನಲ್ಲದೆಯುಂ

ಮಗಳಕ್ಕಂ ತಂಗೆ ತಾಯ್ಮಾದಿನಿ ಸೊಸೆ ಮದವಳ್ಳಜ್ಜಿ ಮುತ್ತಬ್ಬೆ ಮತ್ತ
ತ್ತಿಗೆ ಕೂೞತ್ತತ್ತೆಯೆಂಬೀ ಮೊರೆಯ ವನಿತೆಯರ್ ಜನ್ಮಜನ್ಮಂಗಳೊಳ್ ತೊ
ಮೆಗಡಂ ಬೇಱಾಗಿ ಪಟ್ಟಿರ್ದನುಭವಿಸುವರೆಂದಂದೆ ಸಂಸಾರದೊಳ್ ಪೇ
ಸುಗೆಗೆಟ್ಟೀ ನಾಣಪುತ್ರಪ್ಪಟಿಜಗಳದೊಳೇನಮ್ಮ ತಕ್ಕೂರ್ಮೆಯುಂಟೇ ॥ 6-87

ಎಂಬಿನಿತನಾತನಱಿಪಲೊ
ಡಂ ಬಿಲ್ಲುಂಬೆಱಗುವವಾಗಿ ತನ್ನ ಮನಂ ಕ
ಯ್ಯಂಬೇಱಿನಥಟುಮಸ್ತ್ರ ಕ
ದಂಬಕಮುಂ ಸೋರೆ ತಮ್ಮುತಿರ್ವರುಮಾಗಳ್ ॥ 6-88

ಇಲ್ಲಿ ಪ್ರಸ್ತಾಪವಾಗಿರುವ ವಸಂತಸೇನೆ ಜೈನಪುರಾಣಗಳಲ್ಲಿ ಸಾಕಷ್ಟುಕಡೆ ಪ್ರಯೋಗವಾಗಿದೆ. ಇದರ ಹಿಂದೆ ಇರುವ ಹಿನ್ನೆಲೆಯನ್ನು ಅರಿತ ಹೊರತು ಇದಕ್ಕೆ ಮಹತ್ವವೆಷ್ಟಿದೆಯೆಂಬುದು ಮನವರಿಕೆಯಾಗುವುದಿಲ್ಲ. ವಸಂತಸೇನೆ ಎಂಬುದೇ ಜೈನಕಾವ್ಯಗಳಲ್ಲಿನ ಆಶಯಗಳಲ್ಲೊಂದು. ಹೆಂಗಸು ಭೋಗದವಸ್ತುವಲ್ಲ, ಸಂಸಾರ ಹೇಯವೇ ಹೊರತು ಉಪಾದೇಯವಲ್ಲ ಎಂಬ ಸಂಸಾರಾನುಪ್ರೇಕ್ಷೆಯ ಕಥೆಯನ್ನು ಇದು ಗರ್ಭೀಕರಿಸಿಕೊಂಡಿದೆ. ಕನ್ನಡ ಕಾವ್ಯಗಳಲ್ಲಿ ವಸಂತಸೇನೆ ಮೊತ್ತ ಮೊದಲಿಗೆ ಪ್ರಸ್ತಾಪವಾಗಿರುವುದು ಕೂಡ ಪೊನ್ನನ ಶಾಂತಿಪುರಾಣದಲ್ಲಿಯೇ. ಮೃಚ್ಛಕಟಿಕ ನಾಟಕದ ವಸಂತಸೇನೆಗೂ ಇಲ್ಲಿ ಬರುವ ಇದೇ ಹೆಸರಿನ ವ್ಯಕ್ತಿಗೂ ಯಾವ ಸಂಬಂಧವೂ ಇಲ್ಲ; ಇಬ್ಬರೂ ವೇಶ್ಯೆಯರು ಎಂಬುದಷ್ಟೇ ಇರುವ ಏಕೈಕ ಸಾದೃಶ್ಯ. ಇನ್ನುಳಿದಂತೆ ಇವರಿಬ್ಬರೂ ಎರಡು ಧ್ರುವಗಳು.

ವಸಂತತಿಲಕೆ ಜೈನಕವಿಗಳಿಗೆ ಪ್ರಿಯವಾದ ಪಾತ್ರ, ವೈರಾಗ್ಯ ಪ್ರತಿಪಾದನೆಗೆ ಹೇಳಿಮಾಡಿಸಿದ ಹೆಣ್ಣು. ದಿಗಂಬರ ಹಾಗೂ ಶ್ವೇತಾಂಬರ ಆಮ್ನಾಯಗಳಲ್ಲಿ ಈಕೆಯ ಕಥೆ ಉಲ್ಲೇಖಗೊಂಡಿದೆ (ಸು. 4 ನೆ ಶತಮಾನ). ವಸುದೇವ ಹಿಂಡಿ, ಜಂಬೂಚರಿಯ, ಸ್ವಾಮಿಕುಮಾರನ ಕತ್ತಿಗೆಯಾಣುಪೆಕ್ಖಾ (ಕಾರ್ತಿಕೇಯಾನುಪ್ರೇಕ್ಷೆ) ಮೊದಲಾದ ಪ್ರಾಕೃತ ಗ್ರಂಥಗಳಲ್ಲಿ ಈ ಕಥೆ ಕುಡಿಯಿಟ್ಟಿದೆ. ಶ್ರೀಚಂದ್ರನ (ಅಪಭ್ರಂಶ) ಕಹಕೋಸುವಿನಲ್ಲೂ ಪ್ರಭಾಚಂದ್ರನ ಕಥಾಕೋಶದಲ್ಲೂ ಪಲ್ಲವಿಸಿದೆ. ಹರಿಷೇಣನ ಬೃಹತ್ಕಥಾಕೋಶ (10 ನೆಯ ಶತಮಾನ) ಹಾಗೂ ಹೇಮಚಂದ್ರನ ತ್ರಿಷಷ್ಟಿಶಲಾಕಾ ಪುರುಷಚರಿತದ (12 ನೆಯ ಶತಮಾನ) ಕಡೆಯ ಭಾಗವಾದ ಪರಿಶಿಷ್ಟಪರ್ವದಲ್ಲೂ (ಸ್ಥವಿರಾವಲಿಚರಿತ) ಹೊಳಲುಗೊಟ್ಟಿದೆ. ಈ ಕಥೆಯಲ್ಲಿನ ಮುಖ್ಯಪಾತ್ರಗಳು ತಾಯಿ, ಮಗ ಮತ್ತು ಮಗಳು; ವಸಂತಸೇನೆ (ಕುಬೇರಸೇನಾ, ಕುಬೇರಸೇನೆ, ಧನದೇವ (ಕುಬೇರದತ್ತ) ಮತ್ತು ಕಮಲೆ (ಕುಬೇರದತ್ತೆ). ಹೆಸರುಗಳಲ್ಲಿ, ವಿವರಗಳಲ್ಲಿ ಕೃತಿಯಿಂದ ಕೃತಿಗೆ ಕೊಂಚ ವ್ಯತ್ಯಾಸಗಳಿವೆ. ಇದೇ ಕಥೆ ಟಿಬೆಟನ್ ಟೇಲ್ಸ್‌ನಲ್ಲಿ (ಇದರ ಇಂಗ್ಲೀಷ್ ಅನುವಾದ ರಾಲ್‌ಸ್ಟೊನ್, 1882) ಬರುವ ಉತ್ಪಲವರ್ಣಾಳ ಕಥೆಗೆ ಚೆನ್ನಾಗಿ ಹೋಲುತ್ತದೆ. ವಸಂತತಿಲಕೆ, ಕುಬೇರಸೇನಾ, ಉತ್ಪಲವರ್ಣಾ— ಇವೆಲ್ಲಾ ಒಂದೇ ಆಶಯದ ತ್ರಿಮೂರ್ತಿಗಳು. ಕನ್ನಡದಲ್ಲಿ ಚಂದ್ರಸಾಗರವರ್ಣಿನೆಂಬ (ಬ್ರಹ್ಮಣಾಂಕ) ಕವಿ ವಸಂತತಿಲಕೆ ಎಂಬ ಕೃತಿಯನ್ನೇ ಬರೆದಿದ್ದಾನೆ.

ಈ ಜನಪ್ರಿಯ ಕಥೆ ಇನ್ನೂ ಆರಂಭದ ಅವಸ್ಥೆಯಲ್ಲಿದ್ದಾಗಿನ ಪ್ರಸ್ತಾಪ ಪೊನ್ನನ ಮೂಲಕ ಕನ್ನಡಕ್ಕೆ ಕಾಲಿಟ್ಟಿದೆ. ತರುವಾಯ ಬಂಧುವರ್ಮ (1200) ತನ್ನ ಜೀವಸಂಬೋಧನೆಯಲ್ಲಿ ಇದನ್ನು ನಿರೂಪಿಸಿದ್ದಾನೆ. ವಿಸಂಗತವೂ

ವಿಪರೀತವೂ, ಅನೈತಿಕವೂ ಆದ ದೇಹಸಂಬಂಧದ ವೈಪರೀತ್ಯವನ್ನು ನಿರ್ವೇಗಭಾವನೆ ನೆಲೆಗೊಳ್ಳಲು ನೆರವಾಗುವಂತೆ ಈ ಕಥೆ ರಚಿತವಾಗಿದೆ. ಕಥೆಯ ಸಂಕ್ಷಿಪ್ತರೂಪ: ಉಜ್ಜಯಿನಿಯ ಹೆಸರಾಂತ ಸೂಳೆ ವಸಂತತಿಲಕೆ (ವಸಂತಸೇನೆ, ಕುಬೇರಸೇನೆ, ಕುವೇರಸೇಣಾ). ಆಕೆಗೆ ಗಂಡು ಮತ್ತು ಹೆಣ್ಣು ಅವಳಿಮಕ್ಕಳು ಹುಟ್ಟಿದರು. ಆಕೆ ಅವಳಿಗಳನ್ನು ದಾಸಿಗೆ ಕೊಟ್ಟು ಊರಾಚೆ ಪ್ರತ್ಯೇಕ ಕಡೆಗಳಲ್ಲಿ ಇಟ್ಟುಬರಲು ಕಳಿಸಿದಳು. ಮಕ್ಕಳನ್ನು ಮುದ್ರಿಕೆಗಳೊಡನೆ ತೊಟ್ಟಿಲಲ್ಲಿಟ್ಟು ಜಮುನಾ (ಜಉಣಾ) ನದಿಯಲ್ಲಿ ಮಕ್ಕಳನ್ನು ತೇಲಿಬಿಟ್ಟಳೆಂದು ಜಂಬೂಚರಿಯದಲ್ಲಿ ಹೇಳಿದೆ. ಹಾಗೆ ಬೇರೆಯಾಗಿ ಹೊರಟು ಎಲ್ಲೋ ಸೇರಿ ಬೆಳೆದವರು ಕಮಲೆ (ಕುಬೇರದತ್ತೆ) ಮತ್ತು ಧನದೇವ (ಕುಬೇರದತ್ತ). ಮುಂದೆ ಇವರು ಅಣ್ಣತಂಗಿಯ ರೆಂದು ತಿಳಿಯದೆ ಗಂಡಹೆಂಡತಿಯಾದರು. ಒಮ್ಮೆ ಧನದೇವ ವ್ಯಾಪಾರಕ್ಕಾಗಿ ಅಲ್ಲಿ ಇಲ್ಲಿ ಹೊರಟು ಉಜ್ಜಯಿನಿಗೇ ಬಂದನು. ಗಣಿಕೆ ವಸಂತತಿಲಕೆಯನ್ನು ಕಂಡು ಸೋತು ಅವಳ ಒಡೆಯನಾಗಿ ಅವಳಲ್ಲೇ ಇರತೊಡಗಿದ. ತಾಯಿಮಗನ ಈ ದಾಂಪತ್ಯದಿಂದ ಒಂದು ಮಗು ಹುಟ್ಟಿತು. ಜೈನಯತಿಯಿಂದ ಈ ಸಂಗತಿ ತಿಳಿದ ಕಮಲೆಯೂ ಗೊರವಿತ್ತಿ ವೇಷದಿಂದ ವಸಂತತಿಲಕೆ ಮನೆಗೆ ಬರುತ್ತಾಳೆ. ಆಗ ಅಲ್ಲಿ ತೊಟ್ಟಿಲಲ್ಲಿ ಮಲಗಿದ್ದ ಮಗುವನ್ನು ತೂಗುತ್ತಾ ಕಮಲೆ ಜೋಗುಳ ಹಾಡುತ್ತಾ ಒಂದು ಒಡಪು ಹೇಳುತ್ತಾಳೆ. ಆ ಒಗಟಿನಲ್ಲಿ ಮೂವರ ಸಂಬಂಧವೂ ಧ್ವನಿತವಾಗುತ್ತದೆ. ಸತ್ಯದ ಸ್ಫೋಟವಾದಮೇಲೆ ಮೂವರೂ ದೀಕ್ಷೆ ತೆಗೆದುಕೊಳ್ಳುತ್ತಾರೆ. ಈ ಹಿನ್ನೆಲೆಯರಿತರೆ ಪದ್ಯದರ್ಥ ಸ್ಫುಟವಾಗುತ್ತದೆ.

ಪೊನ್ನನೆದುರು 1–9 ರಲ್ಲಿ ಎರಡು ಕ್ರಿಯೆಗಳನ್ನು ಏಕಕಾಲದಲ್ಲಿ ಈಡೇರಿಸುವ ಹೊಣೆಯನ್ನು ನಿರ್ವಹಿಸುವ ಆಶಯವಿದೆ: ಒಂದು ತನ್ನ ಕಾಲದ ರಾಷ್ಟ್ರಕೂಟ ಚಕ್ರವರ್ತಿಯ ವೈಭವ ನಿರೂಪಣೆ, ಇನ್ನೊಂದು ತನ್ನ ಸ್ವಂತ ಮಹತಿ ಯನ್ನು ದಾಖಲಿಸುವ ಉದ್ದೇಶ. ಅದಕ್ಕಾಗಿ ಈ ಪದ್ಯದ ಅನ್ವಯವನ್ನು ರಾಜನ ಪರವಾಗಿಯೂ ಕವಿಯ ಪರವಾಗಿಯೂ ಮಾಡಿಕೊಳ್ಳಬೇಕು:

1. ಪೊನ್ನನೆದುರು ಬೇರೆ ಕವಿಗಳು ನಿಸ್ತೇಜರು.
2. ಕೃಷ್ಣನೆದುರು ಬೇರೆ ರಾಜರು ನಿರ್ವಿಣ್ಣರು.

ಇಂಥ ಅಲಂಕಾರ, ಅನ್ವಯ ಬಯಸುವ ಇನ್ನೂ ಹತ್ತಾರು ಪದ್ಯಗಳು ಶಾಂತಿಪುರಾಣದಲ್ಲಿವೆ. ಆದರೆ ಉಳಿದ ಕಡೆಗಳಲ್ಲಿ ಕವಿ ಇಟ್ಟಿರುವ ಎರಡು ಅಥವಾ ಹೆಚ್ಚಿನ ನುಚ್ಚಿಸ್ಟೋದ ಗೂಡಾರ್ಥಗಳು ಸುಲಭವಾಗಿಯೇ ಗೊತ್ತಾಗುತ್ತವೆ. ಆದರೆ ಮೇಲಿನ ಪದ್ಯದಂತಹ ಕೆಲವು ಪದ್ಯಗಳಲ್ಲಿ ಮಾತ್ರ ಈ ಅಂತರ್ನಿಹಿತಾರ್ಥ ಧ್ವನಿ ಸುಲಭಗಮ್ಯವಾಗಿಲ್ಲ. ಇನ್ನೊಂದು

ಉದಾ : ಪದ್ಯ 1–16 ರಲ್ಲಿ ' ಧರ್ಮಚಕ್ರ ನಿಯುಕ್ತಂ ಭರತೋರ್ವಿಗಿಂತು ' ಎಂದಿದೆ. ಇಲ್ಲಿ ಭರತೋರ್ವಿ ಎಂದರೆ ಒಮ್ಮೆ ಭಾರತ ಭೂಮಿ ಎಂದೂ ಇನ್ನೊಮ್ಮೆ ಆದಿತೀರ್ಥಂಕರನಾದ ಭರತ ಚಕ್ರವರ್ತಿಯಾಳಿದ ಭೂಮಿ ಎಂದೂ ಎರಡು ಅರ್ಥಗಳಿವೆ. ಭಾರತದೇಶಕ್ಕೆ ಆ ಹೆಸರು ಬರಲು ಕಾರಣ ಈ ಆದಿನಾಥ ಪುತ್ರ ಭರತನು ಆಳಿದ್ದರಿಂದ ಎಂಬುದು ಪುರಾಣೋಕ್ತ ಹೇಳಿಕೆಯೂ ಹೌದು. ಇಂಥ ಪದ್ಯಗಳು ಶಾಂತಿಪುರಾಣದಲ್ಲಿ ಇನ್ನೂ ನಾಲ್ಕೈದುಂಟು ; ಇತರ ಜೈನಪುರಾಣಗಳಲ್ಲೂ ಸಾಕಷ್ಟಿವೆ .

ಪೊನ್ನಕವಿ ಮತ್ತು ಸಂಸ್ಕೃತ

ಪೊನ್ನಕವಿ ಕನ್ನಡವಲ್ಲಿ ನಿಷ್ಣಾತನಾಗಿದ್ದಂತೆ ಸಂಸ್ಕೃತ ಭಾಷೆಯಲ್ಲೂ ಪರಮ ಪಂಡಿತ. ನಿಸ್ಸಂಶಯವಾಗಿಯೂ ಆತ ಉಭಯ ಭಾಷಾ ವಿಶಾರದ. ಕನ್ನಡ ಶಾಂತಿಪುರಾಣಕಾವ್ಯದಲ್ಲಿ ಎಲ್ಲೆಲ್ಲೂ ಕೋದುಕೊಂಡಿರುವ ಸಂಸ್ಕೃತ ಶಬ್ದ ಪ್ರಯೋಗ ಗಳಂಥ ಅನೇಕ ಕಡೆಗಳಲ್ಲಿ ಬಹು ಸೂಕ್ಷ್ಮ ಶ್ಲೇಷಗಳನ್ನು ಚಲನೆಮಾಡುತ್ತಾನೆ. ಆತುರದ ತರಾತುರಿ ಓದಿಗೆ ಅದು ನಮಗೆ ಸಿಗದೆ ನುಸುಳಿಹೋಗಬಹುದು. ಅದರಿಂದ ಅವನು ಮಾಡಿರುವ ವರ್ಣನಾಭಾಗಗಳನ್ನು ಚಪ್ಪರಿಸಿ ಮೆಲಕು ಹಾಕಬೇಕು, ನಿಧಾನವಾಗಿ ಪೃಥಕ್ಕರಿಸಿ ವಿಶ್ಲೇಷಿಸಬೇಕು, ಅಲ್ಲಲ್ಲಿನ ಧ್ವನಿ ಸೂಕ್ಷ್ಮಗಳನ್ನೂ ಕಾಕು ವ್ಯಂಗ್ಯಗಳನ್ನೂ ಹಿಡಿಯಬೇಕು. ಒಟ್ಟಿನಲ್ಲಿ ಈ ಕಾವ್ಯ ನಮಗೆ ಚೆನ್ನಾಗಿ ದಕ್ಕಬೇಕು, ಅದಕ್ಕಾಗಿ ಇವೆಲ್ಲ ಪ್ರಯತ್ನವೂ ಅವಶ್ಯ ಆಗಬೇಕು.

ಕನ್ನಡಕ್ಕೂ ಸಂಸ್ಕೃತಕ್ಕೂ ತುಂಬ ಹಳೆಯ ನಂಟು. ಪೊನ್ನನ ಕಾಲಕ್ಕಾಗಲೇ ಕನ್ನಡ ಭಾಷೆಯ ಮೇಲೆ ಸಂಸ್ಕೃತ ಪ್ರಾಕೃತ ಭಾಷೆಗಳು ಸಾಕಷ್ಟು ಪ್ರಭಾವ ಬೀರಿ ತಮ್ಮ ಕೆಲಸ ಪೂರೈಸಿದ್ದುವು. ಅವು ತಮ್ಮ ಕಾವ್ಯ–ಭಾಷೆ ಹಾಗೂ ಶಬ್ದಸಾರ ಸಂಪತ್ತನ್ನು ಕನ್ನಡಕ್ಕೆ ಬಿಟ್ಟುಕೊಟ್ಟು ಕೊಡು–ಕೊಳ್ಳುವುದೆಲ್ಲಾ ಮುಗಿದುಹೋಗಿತ್ತು. ಹೀಗೆ ಕನ್ನಡ ಪುಷ್ಟವಾದ ಮೇಲೆ ನಮ್ಮ ಕವಿಗಳ ಕಾವ್ಯರಚನೆ ವೀರ್ಯವತ್ತಾಗಿದೆ. ಸಂಸ್ಕೃತ–ಪ್ರಾಕೃತಗಳಿಂದ ಕನ್ನಡ ಸ್ವೀಕರಿಸಿದ ಶಬ್ದಗಳು ಯಾವ ನಿಯಮಕ್ಕೆ ಬದ್ಧವಾಗಿ ವರ್ತಿಸಿದೆಯೆಂಬುದನ್ನು ಬಹಳ ಹಿಂದೆಯೇ ಕವಿಗಳೂ ವೈಯಾಕರಣರೂ ಗುರುತಿಸಿದ್ದಾರೆ. ಸಂಸ್ಕೃತ ಶಬ್ದಗಳು ಕನ್ನಡದೊಡನೆ ಬೆರೆಯುವ ಹದ ಯಾವುದೆಂಬುದನ್ನು ಕವಿರಾಜಮಾರ್ಗದಲ್ಲೇ ಗುರುತಿಸಲಾಗಿದೆ (1–49):

ನುಡಿಗಳೊಡಂಬಡಲ್ ಬಗೆದವೋಲ್ ಬಗೆಯಂ ಮಿಗಲೀಯದೊಂದೆ ನಾ
ಟ್ನುಡಿಯ ಬೆಡಂಗೆ ಕನ್ನಡದ ಮಾತಿನೊಳಾ ವಿಕಟಾಕ್ಷರಂಗಳೊಳ್
ತೊಡರದೆ ಸಕ್ಕದಂಗಳ ಪದಂ ಪವಣಾಗಿರೆ ಮೆಲ್ಪುವೆತ್ತು ದಾಂ
ಗುಡಿವಿಡುವಂತೆ ನೀಳ್ದು ನಿಲೆ ಪೇಟ್ವುದು ನೀತಿ ನಿರಂತರ ಕ್ರಮಮಂ ॥

ಮೊದಲ ಪರಿಚ್ಛೇದದಲ್ಲಿ 51 ರಿಂದ 61ರ ವರೆಗಿನ ಪದ್ಯಗಳಲ್ಲಿ ಕವಿರಾಜಮಾರ್ಗಕಾರ ಕನ್ನಡ ಕಾವ್ಯಗಳಲ್ಲಿ ಸಂಸ್ಕೃತ ಮಾತುಗಳು ಹೇಗೆ ಬಂದು ಕೂಡಬೇಕು ಎಂಬುದನ್ನು ತಿಳಿಸಿದ್ದಾನೆ. ಇದಕ್ಕೆ ಪಡಿನುಡಿಯೆಂಬಂತೆ ಧರ್ಮಾಮೃತ ಕಾವ್ಯದಲ್ಲಿ ನಯಸೇನಕವಿ ಕನ್ನಡ ಕಾವ್ಯಗಳಲ್ಲಿ ಸಂಸ್ಕೃತದ ಆರ್ಭಟ–ಆಧಿಕ್ಯಗಳನ್ನು ವಿರೋಧಿಸಿದ್ದಾನೆ:

ಪೊಸಗನ್ನಡದಿಂ ವ್ಯಾವ
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ
ತಿಸಿ ಕೂಡಲಾಜಿದಕ್ಕಟ
ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ ॥ 1–41

ಸಕ್ಕದಮಂ ಪೇಟ್ವೊಡೆ ನೆಱ
ಸಕ್ಕದಮಂ ಪೇಟ್ಗೆ ಸುದ್ದಗನ್ನಡದೊಳ್ತಂ
ದಿಕ್ಕುವುದೇ ಸಕ್ಕದಮಂ
ತಕ್ಕುದೆ ಬೆರೆಸಲ್ಕೆ ಘೃತಮುಮಂ ತೈಲಮುಮಂ ॥ 1-42

ಇದೇ ವಿಚಾರದಲ್ಲಿ ಮುಂದುವರಿದು ಕನ್ನಡ ಸಕ್ಕದಗಳ ಹವಣನ್ನು ನಾಗವರ್ಮ ಶಬ್ದಸ್ಮೃತಿಯಲ್ಲಿ ಸೂತ್ರ 11ಕ್ಕೂ, ಕೇಶಿರಾಜ ಶಬ್ದಮಣಿದರ್ಪಣದಲ್ಲಿ ಸೂತ್ರ 75ಕ್ಕೂ ಒಂದೇ ಸಮಾನ ಪದ್ಯವನ್ನು ಉದಾಹರಣೆಯಾಗಿ ಕೊಟ್ಟಿದ್ದಾರೆ. ಆ ಸಮಾನ ಪದ್ಯವಿದು:

ಪಟಿಗನ್ನಡದೆ ಪುದುಂಗೊಳೆ
ಕೊಟೆ ಸಕ್ಕದಮಂ ತುಗುಳ್ಚಿ ಜಾಣ್ಕೆಡೆ ಮುತ್ತುಂ
ಮೆಟಸುಂಗೋದಂತಿರೆ ಪೇ
ಟ್ವೆಟಿಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ ॥

ಈ ಹಿನ್ನೆಲೆಯನ್ನರಿತು ಪೊನ್ನ ತನ್ನ ಕಾವ್ಯದಲ್ಲಿ ಸಂಸ್ಕೃತ ಭಾಷಾಬಾಹುಳ್ಯದಿಂದ ವಿಜೃಂಭಿಸಿರುವ ಪರಿಯನ್ನು ಪರಿಶೀಲಿಸ ಬೇಕಾಗುತ್ತದೆ. ಮೊದಲೇ ಪೊನ್ನ ಉಭಯ ಭಾಷೆಯಲ್ಲೂ ಕವಿಚಕ್ರವರ್ತಿ, ಸಂಸ್ಕೃತದಲ್ಲಿ ಅಗಾಧ ಪಾಂಡಿತ್ಯವಿರುವಾತ, ಜತೆಗೆ ಆತ ಮೂಲವಾಗಿರಿಸಿಕೊಂಡ ಆಕರ ಗ್ರಂಥವೂ ಸಂಸ್ಕೃತದಲ್ಲಿದೆ. ಅಂದಮೇಲೆ ಇನ್ನು ಕೇಳಬೇಕೆ! ಸಂಸ್ಕೃತದ ಹೊನಲು ಉಕ್ಕಿ ಹರಿಯುತ್ತದೆ. ಸಂದರ್ಭ ಸಿಕ್ಕಾಗಲೆಲ್ಲಾ ಆತ ತನ್ನ ಉಭಯ ಭಾಷಾ ಪ್ರಭುತ್ವ ವೈಭವವನ್ನು ತೋರಿಸದೆ ಬಿಡುವುದಿಲ್ಲ. ಪೊನ್ನಕವಿ ತನ್ನ ಕೆಲವು ಕಾವ್ಯ ಸಾಮರ್ಥ್ಯಗಳನ್ನು ಶಾಂತಿಪುರಾಣದಲ್ಲಿ ಅಲ್ಲಲ್ಲಿ ದಾಖಲಿಸಿದ್ದಾನೆ. ಅವುಗಳಲ್ಲಿ ಭಾಷಾಸಾಮರ್ಥ್ಯ ಕುರಿತದ್ದು:

ಎರಡೆಪ್ಪವರ್ಷವನುಂ ಮ
ಚ್ಚರಿಸುವನುಂ ನುಡಿಗೆ ಸಕ್ಕದಂ ಕನ್ನಡಮೆಂ
ಬೆರಡುಂ ಕವಿತೆಯ ಬಲ್ಮೆಗೆ
ಬೆರಲೆತ್ತಿದನಿಳೆಯೊಳೀ ಕುರುಳ್ಗಳ ಸವಣಂ ॥ 12-70

ಕವಿತಾವಿಳಾಸಮಂ ಚ
ಕ್ರವರ್ತಿ ತಾನಿರ್ದು ಮೆಚ್ಚಿ ಪೆಸರ್ಗೊಂಡೆರಡುಂ
ಕವಿತೆಯೊಳಮುಭಯ ಕವಿಚ
ಕ್ರವರ್ತಿಯೆನೆ ನೆಗಟ್ದನೀ ಕುರುಳ್ಗಳ ಸವಣಂ ॥ 12-72

ಪೊನ್ನ 'ಉಭಯಕವಿ ಚಕ್ರವರ್ತಿ' ಬಿರುದಾಂಕಿತ ಕವಿವರೇಣ್ಯ. ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಮೇಲೆ ಆವನಿಗಿದ್ದ ಪ್ರಭುತ್ವವನ್ನು ಈಗ ದೊರೆತಿರುವ ಶಾಂತಿಪುರಾಣಕಾವ್ಯ ಸ್ಪಷ್ಟಪಡಿಸುತ್ತದೆ. ಹಳಗನ್ನಡ ಕವಿಕಾವ್ಯ ಪರಂಪರೆಯನ್ನು ಸಿಂಹಾವಲೋಕನ ಮಾಡಿದರೆ, ನಮ್ಮ ಬಹುಪಾಲು ಕವಿಗಳಿಗೆ ಸಂಸ್ಕೃತ–ಕನ್ನಡ ಭಾಷೆಗಳಲ್ಲಿ ಪ್ರವೇಶ ಪರಿಶ್ರಮ ಮತ್ತು ಪ್ರಭುತ್ವ ವಿಶೇಷವಾಗಿರುವುದು ಕಂಡುಬರುತ್ತದೆ. ಕೆಲವು ಜೈನ ಕವಿಗಳಿಗೆ ಈ ಎರಡು ಭಾಷೆಗಳ ಜತೆಗೆ ಪ್ರಾಕೃತದ ಪರಿಚಯವೂ ಇದ್ದುದಾಗಿ ತಿಳಿದುಬರುತ್ತದೆ. ಜೈನಧರ್ಮದ ಸಿದ್ಧಾಂತಕ್ಕೆ ಸಂಬಂಧಿಸಿದ ಮೂಲಕೃತಿಗಳು ಅರ್ಧಮಾಗಧಿ ಪ್ರಾಕೃತದಲ್ಲಿ ರಚಿತವಾಗಿರುವುದರಿಂದ ಈ ಕವಿಗಳಿಗೆ ಪ್ರಾಕೃತದ ಪರಿಚಯ ಅನಿವಾರ್ಯವಾಗಿತ್ತು. ವಡ್ಡಾರಾಧನೆ, ಚಾವುಂಡರಾಯಪುರಾಣ, ಅರ್ಧನೇಮಿಪುರಾಣ ಮುಂತಾದ ಕೃತಿಗಳು ಈ ಮಾತಿಗೆ ಸಾಕ್ಷಿ ಹೇಳುತ್ತವೆ.

ಪೊನ್ನಕವಿ ಶಾಂತಿಪುರಾಣ ರಚನೆಯಲ್ಲಿ ಗುಣಭದ್ರಾಚಾರ್ಯರ ಉತ್ತರಪುರಾಣಕ್ಕಿಂತ ಅಸಗಕವಿಯ ಸಂಸ್ಕೃತ ಶಾಂತಿಪುರಾಣವನ್ನು ಅನುಸರಿಸಿದ್ದಾನೆ. ಅಸಗ ಕವಿಯ ನೂರಾರು ಪದ್ಯಗಳನ್ನು ನೇರವಾಗಿ ಕನ್ನಡಕ್ಕೆ ಭಾಷಾಂತರಿಸಿದ್ದಾನೆ. ಇದರ ಜತೆಗೆ ಕಾಳಿದಾಸನ ರಘುವಂಶದಿಂದ ಬೇರೆ ಹಲವಾರು ಪದ್ಯಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾನೆ. ಇದರಿಂದ

ಸ್ಪಷ್ಟವಾಗುವ ಸಂಗತಿಯೆಂದರೆ, ಪೊನ್ನಕವಿ ಸಂಸ್ಕೃತ ಕಾವ್ಯಗಳ ವಿಪುಲವಾದ ವ್ಯಾಸಂಗ ಮಾಡಿದ್ದನೆಂಬುದು. ಪೊನ್ನಕವಿ ಹೀಗೆ ಸಂಸ್ಕೃತದಿಂದ ಪದ್ಯಗಳನ್ನು ಕನ್ನಡಕ್ಕಿಳಿಸುವುದರ ಜತೆಗೆ ತನ್ನ ಕಾವ್ಯಗಳಲ್ಲಿ ಸಂಸ್ಕೃತ ಭಾಷೆಯ ಮೇಲೆ ತನಗಿರುವ ಹಿಡಿತವನ್ನು ಉದ್ದಕ್ಕೂ ಬಿಂಬಿಸಿದ್ದಾನೆ ಎಂಬುವನ್ನು ಗಮನಿಸಬೇಕು. ಇದಲ್ಲದೆ ಹನ್ನೆರಡು ಆಶ್ವಾಸಗಳ ಈ ಶಾಂತಿಪುರಾಣ ಕಾವ್ಯದಲ್ಲಿ ಅನೇಕ ಸಂಸ್ಕೃತ ಸೂಕ್ತಿಗಳನ್ನು ಬಳಸಿದ್ದಾನೆ. ಅವುಗಳಲ್ಲಿ ನನ್ನ ಗಮನಕ್ಕೆ ಬಂದ ಕೆಲವು ಸಂಸ್ಕೃತೋಕ್ತಿಗಳನ್ನು ಇಲ್ಲಿ ಅಕಾರಾದಿಯಾಗಿ ಎತ್ತಿಕೊಟ್ಟಿದ್ದಾನೆ. ಈ ಸೂಕ್ತಿಗಳನ್ನು ಪೊನ್ನನಲ್ಲದೆ ಇನ್ನೂ ಕೆಲವು ಕನ್ನಡ ಕವಿಗಳೂ, ಶಾಸನ ಕವಿಗಳೂ, ಸಂಸ್ಕೃತ ಕವಿಗಳೂ ಬಳಸಿರುವುದುಂಟು; ಅಲ್ಲಲ್ಲಿ ಅದನೂ ಕೂಡ ನನಗೆ ತಿಳಿದಷ್ಟನ್ನು ನಮೂದಿಸಿದ್ದೇನೆ:

ಅಜಾತರಿಪು (1–50)
ಅರ್ಥೀ ದೋಷಂ ನ ಪಶ್ಯತಿ (10–74)
ಆಬಾಲಗೋಪಾಲ ಜನಂ (4–79 ವ)
ಆಹಿಮಸೇತು ಪ್ರಮಿತ ಯಶಂ (1–47)
ಈಶಾನರಸುರ ರಾಜಾದೇಶಂ ನವಿಕಲ್ಪಂ (3–58)
ಕಃ ಕೇನಾರ್ಥೀ ಕೋ ದರಿದ್ರಃ (1–28)

[(1) ಕರ್ಣಪಾರ್ಯ, ನೇಮಿನಾಥಪುರಾಣ 4–39 ವ; (2) ಪಂಪ, ವಿಕ್ರಮಾರ್ಜುನವಿಜಯ 6–40; (3) ನನ್ನ ಗಮನಕ್ಕೆ ಬಂದಿರುವಂತೆ ಇದು ಶಾಸನದಲ್ಲೂ ಪ್ರಯೋಗವಾಗಿದೆ. ಶ್ರವಣಬೆಳಗೊಳ 532 (384) ರಲ್ಲಿ ಹೀಗಿದೆ: "ಲೋಕದ ವಂದಿ ಪ್ರಕರಂಗಳಂ ತಣಿಸಿ ಕಃ ಕೇನಾರ್ಥಿಯೆಂದಿತ್ತು ಚಾಗದ ಪೆಂಪಿಂದಮೆ ಗಂಗರಾಜನೆಸೆದಂ."]

ಕವಿತ್ವವಾದಿತ್ವ ಫಲಂ ಹಿ ಶಾಸ್ತ್ರ (12–80)
ಖನತೀ ಸರ್ಪಂ ಖನತಿ (8–39) (ಸರ್ಪಂ ಎಂಬುದು ಸರ್ವಂ ಎಂದಿರಬಹುದು)
ದ್ರಷ್ಟವ್ಯ ದರ್ಶನಂ ಫಲಂ ಲೋಚನಂ (8–77) ವ
ನಖಮಾಂಸ ಪ್ರೀತಿ
ನಭೂತೋ ನಭವಿಷ್ಯತಿ (12–59) (ಈ ಪ್ರಯೋಗ ನಗರ ತಾಲೂಕಿನ ಹುಂಚದ ಶಾಸನ ಸಂಖ್ಯೆ 35 ರಲ್ಲೂ ಶಾಂತಿನಾಥಕವಿಯ ಸುಕುಮಾರಚರಿತೆ ಕಾವ್ಯದಲ್ಲೂ ಇದೆ)
ನಮಃ ಸಿದ್ದೇಭ್ಯಃ (8–123, 9–64 ವ, 11–104)
ನಿವೇದ್ಯ ದುಃಖಂ ಸಖೀ ಭವತು (8–78 ವ)
ನೀರ ಕ್ಷೀರ ನ್ಯಾಯ (ಸುಕುಮಾರಚರಿತೆ ಕಾವ್ಯದಲ್ಲೂ ಇದೆ)
ಯತ್ರಾಕೃತಿಸ್ತತ್ರ ಗುಣಾವಸಂತಿ (3–57 ವ)
ಯಥಾ ರಾಜಾ ತಥಾ ಪ್ರಜಾಃ (10–67) [ಪಂಪ, ಆದಿಪುರಾಣ (16–40), ಜನ್ನ, ಯಶೋಧರಚರಿತೆ (4–65)
ಯಾ ಮತಿಃ ಸಾಗತಿಃ (7–82)
ವಿಷಂ ವಿಷಸ್ಯೌಷಧಂ (5–62)
ಸಪ್ತಭಿರ್ಜಾಯತೇ ವಿದ್ಯಾ (2–27) (ಇದು ಶಾಂತಿನಾಥಕವಿಯ ಸುಕುಮಾರಚರಿತೆ ಕಾವ್ಯದಲ್ಲೂ ಇದೆ)
ಸ್ವಮತೇ ಸಿವಾರಕಾಭಾವಾತ್ (10–120)
ವಸುಧೈಕ ಕುಟುಂಬಕಂ (1–26)

ಸಾಮಂ ಪ್ರಿಯಜನ ಪ್ರಯೋಜ್ಯಂ (3–93 ವ)
ಸುಪುತ್ರಃ ಕುಲದೀಪಕ (2–10) (ಕರ್ಣಪಾರ್ಯ, ನೇಮಿನಾಥಪುರಾಣಃ ಅಪುತ್ರೋಗತಿರ್ನಾಸ್ತಿ)
ಹಸ್ತಿಮಶಕಾಂತರ (5–72)

ನಾವು ಇಂದು ರೂಢಿಯ ಮಾತಿನಲ್ಲಿ ಬಹು ಸಲೀಸಾಗಿ ಹೇಳುವ ಅಜಾತಶತ್ರು (ಅಜಾತರಿಪು 1–50), ಆಸೇತು ಹಿಮಾಚಲ (ಆಹಿಮಸೇತು 1–47), ನ ಭೂತೋ ನ ಭವಿಷ್ಯತಿ (12–59), ಯ ಥಾರಾಜಾ ತಥಾಪ್ರಜಾ (10–67), ಕರತಲಾಮಲಕ (ಹಸ್ತಾಮಳಕ 9–103) ಎಂಬಂಥ ಪ್ರಯೋಗಗಳ ಪ್ರಥಮ ಬಳಕೆ ಹಾಗೂ ದಾಖಲೆ ಪೊನ್ನನ ಶಾಂತಿ ಪುರಾಣದಲ್ಲಿ ಸಿಗುತ್ತದೆ. ಪೊನ್ನ ತನ್ನ ಕಾಲದಲ್ಲಿ ಬಳಕೆಯಲ್ಲಿದ್ದ ಸಂಸ್ಕೃತ ಸುಭಾಷಿತಗಳನ್ನು ಚೆನ್ನಾಗಿ ಮನನ ಮಾಡಿದ್ದಾನೆ. ಅದಕ್ಕೆ ಸಾಕ್ಷಿ ಹೇಳುತ್ತದೆ ಈ ಸಾಲು : "ಸ್ವಾಗತ ಸಂಭಾಷಣ ಪೂರ್ವಕಮಪೂರ್ವ ಪ್ರವಾಳ ಕರ್ಣ ಪೂರ ಪರಿಭ್ರಂಶಂ ಸುಂದರಮಾಗೆ ತಲೆಯಂ ತೂಗಿ ಯತ್ರಾಕೃತಿಸ್ತತ್ರ ಗುಣಾ ವಸಂತಿ ಎಂಬೊಂದು ಸುಭಾಷಿತಾರ್ಥಮ ವ್ಯಭಿಚಾರಮೆಂದಮಿತಂಗಿಂತೆಂದಳ್" (3–57 ವ). ಆ ಕಾಲಕ್ಕೂ ಸುಭಾಷಿತಗಳು ವಿದ್ವದ್ವಲಯದಲ್ಲಿ ಜನಪ್ರಿಯ ವಾಗಿದ್ದುವು. ಇದು ಪೂರ್ವದ ಅಭ್ಯಾಸ ಪದ್ಧತಿಯಲ್ಲಿ ಚಾಲ್ತಿಯಲ್ಲಿತ್ತು.

ಶಾಂತಿಪುರಾಣದ ಆರಂಭದ ಪದ್ಯದಿಂದ ತೊಡಗಿ ಅಂತ್ಯದ ಪದ್ಯದವರೆಗೆ ಸಂಸ್ಕೃತದ ಮಹಾಪೂರ ಶಬ್ದಗಳ ಅಲೆ ಗಳನ್ನು ದಡಕ್ಕೆ ಅಪ್ಪಳಿಸುತ್ತಾ ಘೂರ್ಣಿಸಿದೆ; ಆದರೆ ಎಲ್ಲಿಯೂ ಕನ್ನಡದ ಹಡಗು ಮುಳುಗುವುದಿಲ್ಲ. ಅಷ್ಟೇ ಅಲ್ಲ, ಕನ್ನಡ ಹಡಗಿನ ಜೀಳ್ಕುಪ್ರ ತುಳುಕುವ ನಡಿಗೆ ಬೆಡಗು ಉದ್ದಕ್ಕೂ ಕಾಣುತ್ತಿರುತ್ತದೆ. ಅಲಂಕಾರದ ಪರಿಭಾಷೆಯಲ್ಲಿ ಈ ಮಾತುಗಳನ್ನು ಹೇಳಿರುವುದರಲ್ಲಿ ಅರ್ಥ–ಔಚಿತ್ಯ ಮೀರಿದಂತಾಗಿಲ್ಲ, ಒಟ್ಟು ಪೊನ್ನಕವಿಯ ಭಾಷಾಧೋರಣೆಯನ್ನು ಬಿಂಬಿಸಿದಂತಾಗಿದೆ.

ಪೊನ್ನ ಸಂಸ್ಕೃತೋಕ್ತಿಗಳ ವಾಗ್ವಿಲಾಸವನ್ನು ಪ್ರದರ್ಶಿಸಿರುವುದಕ್ಕೆ ನೂರಾರು ನಿದರ್ಶನಗಳಿವೆ, ಈ ವಿಮರ್ಶೆಯಲ್ಲಿ ಅದನ್ನು ಕುರಿತು ಸಾಕಷ್ಟು ಪ್ರಸ್ತಾಪಿಸಿದ್ದಾಗಿದೆ. ಅದರಿಂದ ಹೆಚ್ಚು ವಿಸ್ತರಿಸದೆ ಒಂದೆರಡು ಉದಾಹರಣೆಗಳನ್ನಿತ್ತು ಮುಂದೆ ಹೋಗಬಹುದು.

ವಿಘು ವಿದ್ಯಾಧರ ಚಕ್ರವರ್ತಿ ವಿಜಯಾರ್ಧಾದ್ರೀಂದ್ರ ಚೂಡಾಮಣಿ
ಪ್ರಭಮಪ್ರವೃತ್ತ ಸರೇಂದ್ರ ಕಂಠ ಕದಳೀಚ್ಛೇದೈಕ ದಕ್ಷಾಸಿ ಭಾ
ವಿಭವಮ್ಬೂತ ನೃಪಾಗ್ರಗಣ್ಯನಮರ ಪ್ರಸ್ಪರ್ಧಿ ಪುಣ್ಯಂ ವಿರೋ
ಧಿ ಭವಾಷ್ಟಾದಶ ತೀರ್ಥ ನಿಷ್ಠಿತ ಚರ ವ್ಯಾಪಾರ ಪಾರಾಯಣಂ ॥ 2–20

ಔಷಧಿಗೆ ಜೀಕು ಎಂಬ ದುರ್ಬೀನು ಹಾಕಿ ಹುಡುಕಿದರೂ ಕನ್ನಡ ಪದ–ಪ್ರತ್ಯಯ ಸಿಗದ ಇಂಥ ಪದ್ಯ ರಚನೆ ಶಾಂತಿಪುರಾಣದಲ್ಲಿ ಇನ್ನೂ ಹಲವಾರುಂಟು. ಕೇವಲ ಹೀಗೆ ಪದ್ಯಗಳಲ್ಲಷ್ಟೇ ಪೊನ್ನ ಸಂಸ್ಕೃತಕ್ಕೆ ದುಂಬಾಲು ಬೀಳು ತ್ತಾನೆಂಬ ತೀರ್ಮಾನಕ್ಕೆ ತೊಡಗಬಾರದು. ಈ ಪ್ರವೃತ್ತಿ ಆತ ಬರೆಯುವ ಗದ್ಯದಲ್ಲೂ ಮೈದೋರಿದೆ, ಗದ್ಯದಲ್ಲಿ ಸಂಸ್ಕೃತ ಶಬ್ದಾಡಂಬರಕ್ಕೆ ಎರಡು ಉದಾಹರಣೆ :

1. ಅಂತಖಿಳ ಭುವನತಲ ತಿಲಕ ವಿಲಸಿತನಿಲಯಮನುಪಹಸಿತ ಭೂಚರ ಖೇಚರ ರಾಜಲೀಲಾ ವಿಲಾಸ ವಿಭವನುಪ ಹಸಿತ ಸನತ್ಕುಮಾರ ನಳಕೂಬರ ಮಕರ ಕೇತು ಸೌಂದರ್ಯನುಂ ವಿನಿರ್ಜಿತ ನಿರವಶೇಷ ನಿಳಿಂಪನಾಥ ವಿಭವನು ಮಪಾಕೃತ ಪ್ರಕೃಷ್ಟಾಷ್ಟ ಲೋಕಪಾಲ ಪರಿಪಾಲಿತ ಸಾಹಸನುಮುಪಾಸ್ತ ಸಮಸ್ತ ರಾಜನ್ಯಕ ಧವಳಾತಪತ್ರ

ಪುಂಡರೀಕಷಂಡಮನವನತ ನಾನಾನೂನ ದೇಶಾಧೀಶ ಮಣಿಮುಕುಟ ಮಕರಿಕಾಚ್ಛುರಿತ ಚರಣನಖ ಮಯೂಖ ಚಂದ್ರಿಕಾ ಪ್ರಸರಮಭಿಭೂತ ನೂತನ ಪುರಾತನ ಪುರುಷ ಚರಿತಮುಂ ಅನಲುಪ್ತ ಸಪ್ತ ಸಪ್ತಿ ದೀಪ್ತಿ ಪ್ರತಾಪ ವಿಧಾನ ನಿರತಮಪಾಕೃಷ್ಟ ಸುಂದರ ಸುಂದರೀ ಕಟಾಕ್ಷ ವಿಕ್ಷೇಪಮುಮವಜ್ಞಾಪ್ರೋಪಗೃಹೀತ ವಿರೋಧಿ ನರೇಂದ್ರಾಸ್ಪದತ ತೀರ್ಥಮುಮನುಕೂಲ ಕುಲಶೀಲಮಂತ್ರಿನೀಯಮಾನ ಗೋಮಿನೀ ಕಾಮಿನೀ ನಿಬಿಡಾಲಿಂಗಿತಾಕ್ಷೂಣ ವಕ್ಷಸ್ಥಲಮುಮವಿರುದ್ಧ ವಿಜಯಶ್ರೀ ಕೇಯೂರ ವಿಘಟ್ಟಿತ ವಾಮೇತರ ಭುಜ ಭುಜಂಗಮುಮವತೀರ್ಣವರ್ಣ ಪದವಾಕ್ಯ ನ್ಯಾಯ ನಯ ಪ್ರಮಾಣ ಕಾವ್ಯನಾಟಕ ನಿಕಾಯ ಕೋಮಳ ರುಚಿರ ಶರೀರ ಸರಸ್ವತೀರೂಪ ಪೀನ ಕ್ಷೀರ ಸುಧಾಸ್ಯಂದಿ ಪಂಡಿತವನ ಸರಸೀರುಹಮುಮಪಾರಾ ಪಾರಾವಾರ ಸಮುತ್ತಾರಿತ ಕುಂದೇಂದು ಕುಮುದ್ವತೀ ತರಳ ತರತಾರಹಾರ ನೀಹಾರರೋಚಿರ್ಮಂಜರೀ ನಿಚಯ ವಿಶದ ಯಶೋರಾಶಿ ವಳಯಮುಂ ಜಿತಾಜಿತ ಭೂಮಂಡಲಮುಮಪ್ಪ ಸ್ತಿಮಿತಸಾಗರ ಮಹೀವಲ್ಲಭಂಗೆ (1–71 ವ).

2. ಅಂತು ಬಲದೇವ ವಾಸುದೇವರನಲ್ಪಕಲ್ಪ ಮಹೀಜಾಂಕುರ ಯುಗಳಮುಂ ಶೃಂಗಾರಸಾಗರ ಸಂಭೂತ ಸುಧಾಸೂತಿ ಲೇಖಾಂಕುರ ದ್ವಂದ್ವಮುಂ ಪವಿತ್ರ ಕ್ಷತ್ರಧರ್ಮ ಕಂಠೀರವ ದಂಷ್ಟ್ರಾಂಕುರ ಯುಗ್ಮಮುಂ ಮದನ ಮಾರ್ಗಣ ಸಮುತ್ಥಿತ ನೂತನ ಚೂತಾಂಕುರದ್ವಂದ್ವಮುಮಮರಾಜ ಕರಿ ಕಲಭ ಸುಕುಮಾರ ರದನಾಂಕುರ ದ್ವಿತಯಮುಮೆನಿಸೆ ಸೌಂದರ್ಯಕ್ಕೆ ಕುಲನಿಲಯಮುಮೌದಾರ್ಯಕ್ಕೆ ನಿವಾಸಮುಂ ಸೌಭಾಗ್ಯಕ್ಕೆ ಜನ್ಮಭೂಮಿಯುಂ ಸೌಶೀಲ್ಯಕ್ಕುತ್ಪತ್ತಿ ಸ್ಥಾನಮುಮಾಗಿ ಪುಣ್ಯಪುಂಜದಂತೆಯುಂ ಸುಖದ್ರುಮ ಪ್ರರೋಹದಂತೆಯುಂ ಶೌರ್ಯ ಮೂಲ ಸ್ತಂಭದಂತೆಯುಂ ಸಾಹಸ ಪ್ರವೀಣ ಸಾಧನದಂತೆಯುಂ ಗುಣಗಣ ಮಣಿಗಣ ಕೋಶಗೃಹದಂತೆಯುಮಾಗಿ ಮಾತಾಪಿತೃಗಳನುರಾಗ ದೊಡನೊಡನೆ ಪ್ರಮೋದ ಪ್ರವರ್ಧನಮಾಗೆ ಸುಖಮಿರ್ಪನ್ನೆಗಂ (1–81 ವ).

ಈ ಎರಡು ಗದ್ಯಮಾದರಿ ತುಣುಕುಗಳಲ್ಲೂ ಕೇವಲ ಪೊನ್ನನ ಸಂಸ್ಕೃತ ವಾಗಾಡಂಬರವನ್ನೇ ಅಲ್ಲದೆ ಅವನಲ್ಲಿದ್ದ ಸಂಸ್ಕೃತ ಭಾಷಾಪ್ರಜ್ಞೆ, ಭಾಷಾಮರ್ಯಾದೆಯೂ ಸುವ್ಯಕ್ತವಾಗಿದೆ. ಸಂಸ್ಕೃತ ಭಾಷೆಯ ಲಯ, ವಿಲಾಸ, ಭಗ ಗತಿ ಸಿರಿಗೆ—ಇವನ್ನೂ ಕವಿ ಹಿಡಿದಿದ್ದಾನೆ. ಬಾಣಕವಿಯ ಗದ್ಯಕ್ಕೆ ಮಾರುಹೋಗದ ಕವಿಗಳು ಕಡಮೆ. ಸಂಸ್ಕೃತ ಸಾಹಿತ್ಯ ಪ್ರೇಮಿಗಳೆಲ್ಲ ಅದಕ್ಕೆ ವಶರಾಗಿದ್ದಾರೆ. ಪೊನ್ನನೂ ತನ್ನ ಕಾವ್ಯದಲ್ಲಿ ಅಲ್ಲಲ್ಲಿ ಬಾಣನ ಗದ್ಯಕ್ಕೆ ತಾನು ಸೋತಿದ್ದೇನೆಂಬುದನ್ನು ತೋರಿಸಿದ್ದಾನೆ. ಅಂಥಲ್ಲೆಲ್ಲ ಭಾಷೆಯ ಕ್ಲಿಷ್ಟತೆಯಿದೆಯೆನಿಸಿದರೂ ಜೋರಾಗಿ ಆಯಾ ಭಾಗಗಳನ್ನು ಓದಿದರೆ ಅದರ ಬಂಧ–ನಾದದ ಸೊಗಸಿಗೆ ಮೆಚ್ಚಿ ತಲೆದೂಗದಿರಲು ಸಾಧ್ಯವಿಲ್ಲ.

ಪೊನ್ನ ಕೆಲವೆಡೆಗಳಲ್ಲಿ ಭಾಷಾ ಚಮತ್ಕಾರ ಮಾಡಿದ್ದಾನೆ. ತನಗೆ ಸಂಸ್ಕೃತ–ಕನ್ನಡ ಎರಡೂ ಭಾಷೆಗಳ ಸಮಾನಾರ್ಥಕ ರೂಪಗಳು ಚಿರಪರಿಚಯವಿದೆ ಎಂಬುದನ್ನು ಹೀಗೆ ಸೂಚಿಸಿಬಿಡುತ್ತಾನೆ ನೋಡಿ :

ಕಿಱುವಡಿಗಾಲದ ಕೆಳೆಯರ್ (8–11); ಸಹಪಾಂಸು ಕ್ರೀಡಿತರ್ (8–11 ವ). ಈ ಬಗೆಯ ಇನ್ನೂ ಎಷ್ಟೋ ದೃಷ್ಟಾಂತಗಳು, ಇನ್ನಿತರ ಮಾಹಿತಿಗಳು ಪೊನ್ನಕವಿಯ ಭಾಷಾ ಪ್ರಭುತ್ವವನ್ನು ಸ್ಥಾಪಿಸುತ್ತವೆ.

ಪೊನ್ನಕವಿ ಸಂಸ್ಕೃತ ಭಾಷೆಯಲ್ಲಿಯೂ ಕನ್ನಡದಲ್ಲಿಯೂ ನಿಷ್ಣಾತನಾಗಿದ್ದಾನೆಂಬುದನ್ನು ಶಾಂತಿಪುರಾಣದ ಉದ್ದಕ್ಕೂ ನೋಡಬಹುದು. ಸಂಸ್ಕೃತ ಉಪಯೋಗಿಸುವಾಗ ಅವನು ಹಿಂದುಮುಂದು ನೋಡದೆ ಮುನ್ನುಗ್ಗುತ್ತಾನೆ, ಅಲ್ಲೆಲ್ಲ ಗೀರ್ವಾಣವಾಣಿ ಅವತರಿಸುತ್ತಾಳೆ. ಕನ್ನಡವನ್ನೇ ಬಳಸುವಾಗ ಅದಕ್ಕೂ ಅವನ ಪಾಂಡಿತ್ಯ ಸರಿಮೊರೆಯಿಲ್ಲದೆ ಸುರಿಯತೊಡಗುತ್ತದೆ. ಕನ್ನಡ ನುಡಿ ಮನೆ ಸೊಗಸುಗಳೆಲ್ಲ ಬೆಳಗತೊಡಗುತ್ತವೆ. ಇವೆರಡರ ನಡುವೆ ಒಂದು ಸಂಕವೂ ಇದೆ. ಸಂಸ್ಕೃತ ಶಬ್ದಗಳನ್ನು ಕನ್ನಡಕ್ಕೆ ತರುವಾಗ ಅವು ಕನ್ನಡ ನುಡಿಯ ಪ್ರಕೃತಿ ಆಕಾರಕ್ಕೆ ತಕ್ಕಂತೆ ಮಾರ್ಪಾಟು ಪಡೆದು ಇಲ್ಲಿನ

ಬಳಕೆಗೆ ಸಲುವಳಿಯಾಗುವುದು. ಇದೇ ತದ್ಭವ ಕಾರ್ಯ. ನಮ್ಮ ಕವಿಗಳೆಲ್ಲ ತದ್ಭವ ರೂಪಗಳನ್ನು ಬಳಸುತ್ತಾ ಬಂದಿದ್ದಾರೆ. ಪೊನ್ನನ ಕಾಲಕ್ಕಾಗಲೇ ಸಂಸ್ಕೃತದಿಂದ ಕನ್ನಡ ಭಾಷೆ ತತ್ಸಮ–ತದ್ಭವಗಳನ್ನು ಸ್ವೀಕರಿಸುವ ಕಾರ್ಯ ಬಹುಮಟ್ಟಿಗೆ ಕೈಗೂಡಿತ್ತೆಂಬುದನ್ನು ತೌಲನಿಕ ಅಧ್ಯಯನದಿಂದ ತಿಳಿದುಕೊಳ್ಳಬಹುದಾಗಿದೆ.

ಪೊನ್ನನ ಶಾಂತಿಪುರಾಣದಲ್ಲಿಯೂ ಸಾಕಷ್ಟು ತದ್ಭವ ರೂಪಗಳಿವೆ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಅಕಾರಾದಿಯಾಗಿ ಉದಾಹರಿಸಿ ಕೊಟ್ಟಿದೆ :

ಓಲಗ 2–18 ವ ಅವಲೋಕನ	ಅಜ್ಜ 6–119 ಆರ್ಯ
ಅಸುಗೆ 7–53 ಅಶೋಕ	ಉಜ್ಜವಣೆ 4–108 ಉದ್ಯಾಪನೆ
ಕಜ್ಜ 2–80 ಕಾರ್ಯ	ಕಾತಲಿಸಿ 1–88 ಕಾತರಿಸಿ
ಗೊಟ್ಟಿ 2–21 ಗೋಷ್ಠೀ	ಗೊಟ್ಟಿಗೆ 2–21 ಗೋಷ್ಠಿಕಾ
ಗೋಸನೆ 7–18 ಘೋಷಣೆ	ಜತ್ತ 8–94 ವ ಯತ್ರ
ಜಸ 1–39 ಯಶ	ಜೇವಣ 8–87 ಜೇಮನ
ಜೋಹ 8–88 ಯೋಗ	ಪಂಜಿಕೆ 7–33 ಪಂಚಿಕಾ
ಪಡಿಚಂದ 9–29 ವ ಪ್ರತಿಚ್ಛಂದ	ಪಸಾಯ 2–21 ಪ್ರಸಾದ (→ಪ್ರಾಕೃತ: ಪಸಾಯ)
ಪುರುಸರನ್ನ 1–39 ಪುರುಷರತ್ನ	ಬಣ್ಣಿಸು 4–9 ವರ್ಣಿಸು
ಬಾಜಿಸು 1–8 ವಾಚಿಸು	ಬಿತ್ತರ 2–22 ವ ವಿಸ್ತಾರ
ಬಿನ್ನಪ 2–22 ವ ವಿಜ್ಞಾಪನ	ಬೂತು 5–47 ವ ಭೃತ್ಯ
ಮನಕತ 1–93 ಮನಃಕ್ಷತ	ಮುಚ್ಚೆ 4–99 ಮೂರ್ಛೆ
ರಿತು 9–135 ಋತು	ಲಕ್ಕೆ 4–27 ಲಕ್ಷ
ಸಂಕಲೆ 8–51 ಶೃಂಖಲಾ	ಸಕ್ಕದ 1–9 ಸಂಸ್ಕೃತ
ಸವಣ 1–10 ಶ್ರವಣ (ಶ್ರಮಣ)	ಸಿರಿವಂತಿಗೆ 7–69 ಶ್ರೀಮಂತಿಕೆ
ಸೀಯಬಾರ 9–47 ವ ಶ್ರೀದ್ವಾರ (–ಸಿರಿಯಬಾರ)	ಸುದ್ದಿಗೆ 1–2 ಶುದ್ಧಿಗೆ

ಸಂಸ್ಕೃತದ ಲಕಾರ ಯಥಾಪ್ರಕಾರ ಳಕಾರವಾಗುತ್ತದೆ :
ಕಮಳ ಮಳಯ (2–24 ವ), ಹಳಿ (2–23)

ಶಾಂತಿಪುರಾಣದಲ್ಲಿ ಪ್ರಯೋಗವಾಗಿರುವುದು ಇವಿಷ್ಟೇ ತದ್ಭವ ರೂಪಗಳೆಂದಲ್ಲ, ಇನ್ನೂ ಅನೇಕ ರೂಪಗಳಿವೆ. ತತ್ಸಮ ಮತ್ತು ತದ್ಭವ ಕಲ್ಪನೆಯ ಹಿನ್ನೆಲೆಯಲ್ಲಿ ಪೊನ್ನಕವಿಯ ಭಾಷಾಜ್ಞಾನ ಯಾವ ಸ್ವರೂಪದಲ್ಲಿ ಕೆಲಸಮಾಡಿದೆಯೆಂಬುದಕ್ಕೆ ದಿಕ್‌ಸೂಚಿಯೆಂಬಂತೆ ಈ ಮಾಹಿತಿಗಳನ್ನು ಸಂಕಲಿಸಲಾಗಿದೆ. ಸಂಸ್ಕೃತ ಶಬ್ದಗಳೇ ಸಾಲುಗಟ್ಟಿ ನಿಂತಿದ್ದರೂ ಒಟ್ಟು ಓಟ ಓಘ ಹೇಗೆ ಓದುಗರ ತಲೆದೂಗಿಸುತ್ತದೆಂಬುದಕ್ಕೆ 5–112 ನೆಯ ಪದ್ಯ ಉದಾಹರಣೆಯಾಗುತ್ತದೆ. ಇದಕ್ಕಿಂತ ಇನ್ನೂ ಒಂದೆರಡು ಕನ್ನಡ ಶಬ್ದಗಳು ಸೇರಿ, ಒಟ್ಟು ಸಂಸ್ಕೃತವೇ ಹೆಚ್ಚಾಗಿದ್ದರೂ, ಅರ್ಥ ಶಯ್ಯೆಗಳಿಂದ ಪದ್ಯ ಹೇಗೆ ಮೋಹಕವಾಗಬಹುದೆಂಬುದಕ್ಕೆ ನಿದರ್ಶನವಾಗಿ ಓಡಿಬರುತ್ತದೆ 7–77 ನೆಯ ಪದ್ಯ. ಸುಖವಿಸ್ಮಯಜನ್ಯ ಉದ್ಗಾರಗಳಿಂದ ಎರ್ದೆಗೊಳಿಸುತ್ತದೆ 7–15 ನೆಯ ಪದ್ಯ. ಬೇಟೆಗಾರರ ಬೇಟದ ಕೂಟಗಳಲ್ಲಿ ಏಳಿಯುವ ಭಾವತರಂಗಗಳನ್ನು ಬಿಡಿಸಿ ಬಣ್ಣಿಸುವ ಕಲೆ 8–108ರಲ್ಲಿ ವ್ಯಕ್ತಗೊಂಡಿದೆ. ಇವೆಲ್ಲ ಪೊನ್ನನಿಗಿರುವ ಅಗಾಧ ಸಂಸ್ಕೃತ

ಭಾಷಾಜ್ಞಾನದ ಜತೆಗೆ ಕನ್ನಡದ ನೆಯ್ಗೆಯಲ್ಲಿ ಹೊರೆಯಾಗದೆ, ಹೊರಗಾಗದೆ ಹೊಂದಿಕೊಂಡುಬರುವಂತೆ ಸಂಸ್ಕೃತವನ್ನು ಕನ್ನಡದ ಜತೆಗೆ ಬೆಸೆದು ಕೂಡಿಸಿದ ಸಾಮರ್ಥ್ಯವನ್ನೂ ತೋರಿಸುತ್ತವೆ. ಸಾರಾಂಶ: ಪೊನ್ನ ಸಂಸ್ಕೃತ ಭಾಷೆಯ ಕಸಿಮಾಡಿ ಕನ್ನಡಕ್ಕೆ ಕಳೆಕಟ್ಟುವಂತೆ ಪ್ರಯತ್ನಿಸಿದ್ದಾನೆ, ತನಗಿದ್ದ ಉಭಯ (ಭಾಷಾ) ಕವಿಚಕ್ರವರ್ತಿ ಎಂಬ ಬಿರುದನ್ನು ಸಾರ್ಥಕಪಡಿಸಿದ್ದಾನೆ, ಹಲವುಕಡೆ ಅದನ್ನು ಧನ್ಯವಾಗಿಸಿದ್ದಾನೆ.

ಆನೆ ಮತ್ತು ಶಾಂತಿಪುರಾಣ

ಹಳಗನ್ನಡ ಕಾವ್ಯಗಳಲ್ಲಿ ಬರುವ ಅನೇಕ ಪ್ರಾಣಿಗಳ ವರ್ಣನೆಗಳಲ್ಲಿ ಹೆಚ್ಚಿನ ಭಾಗ ಆನೆಯನ್ನು ಕುರಿತದ್ದಾಗಿರುತ್ತವೆ. ಪೊನ್ನನ ಶಾಂತಿಪುರಾಣದಲ್ಲಿ ಆನೆಯ ವರ್ಣನೆಯಷ್ಟು ವಿಸ್ತಾರವಾಗಿ ಬೇರೆ ಯಾವ ಪ್ರಾಣಿಯ ವರ್ಣನೆಯೂ ಬಂದಿಲ್ಲ. ಆನೆಯ ವರ್ಣನೆ ಅಷ್ಟುಸಮೃದ್ಧವಾಗಿ ವೈವಿಧ್ಯಪೂರ್ಣವಾಗಿ ಬರಲು ಚಾರಿತ್ರಿಕ ಕಾರಣವೂ ಇರಬಹುದು: ಪೊನ್ನನಿಗೆ ನಿಕಟವಾದ ಆನೆ ಜೀವನ ಪರಿಚಯವೂ ಇರಬಹುದು. ಕೇವಲ ಕವಿಸಮಯವಾಗಿ, ರೂಢಿಯ ಮಾತಾಗಿ ಪ್ರಾಸಂಗಿಕವಾಗಿ ಆನೆಯ ವರ್ಣನೆ ಬರದೆ ಅನೇಕ ಕಡೆ ಉದ್ದೇಶಪೂರ್ವಕವಾಗಿ ಬಂದಿವೆ. ಕೆಲವು ಕಡೆ ತುಂಬ ಆತ್ಮೀಯವಾಗಿ ಸಮುಚಿತವಾಗಿ ಬಂದಿದೆ. ಮೂಲ ಅಸಗನ ಶಾಂತಿಪುರಾಣದಲ್ಲಾಗಲೀ ಗುಣಭದ್ರಾಚಾರ್ಯನ ಉತ್ತರಪುರಾಣದಲ್ಲಾಗಲೀ ಪ್ರಸ್ತಾಪ ಇಲ್ಲದ ಸಂದರ್ಭಗಳಲ್ಲಿಯೂ ಪೊನ್ನನೇ ವಿಶೇಷವಾಗಿ ಆನೆಯ ವಿವರಣೆಯನ್ನು ಹಲವಾರು ಕಡೆ ತಂದಿರುವುದರಿಂದ ಈ ಬಗೆಯ ತೀರ್ಮಾನಕ್ಕೆ ಪುಷ್ಟಿಯೂ ಇದೆ. ಪೊನ್ನ ಹೇಳಿಕೇಳಿ ಅರಮನೆಯ ಪರಿಸರದ ಪರಿಚಯ ಪಡೆದವನು. ಯುದ್ಧಗಳ ತಿಳಿವಳಿಕೆಯೂ ಇದ್ದಹಾಗೆ ಕಾಣುತ್ತದೆ. ಗಜಶಾಸ್ತ್ರದ ಪರಿಜ್ಞಾನವಂತೂ ಚೆನ್ನಾಗಿಯೇ ಇದೆ. ಗಜಶಿಕ್ಷಾ ಸೂತ್ರದ ಪ್ರಸ್ತಾಪ 5–113 ರಲ್ಲಿದೆ. ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನ ಗಜಸೈನ್ಯ ದೊಡ್ಡದಿತ್ತು, ಪ್ರಬಲವಾಗಿಯೂ ಇತ್ತು.

ಚತುರಂಗಸೈನ್ಯದಲ್ಲಿ ಆನೆಯ ವಿಭಾಗ ಅತ್ಯಂತ ಬಲಾಢ್ಯವಾದುದು. ಆನೆಯಿಲ್ಲದ ಸೈನ್ಯಕ್ಕೆ ಬೆಲೆಯಿರಲಿಲ್ಲ. ಅರಮನೆ, ಗುರುಮನೆ, ದೇವಾಲಯ—ಎಲ್ಲ ಕಡೆಯೂ ಆನೆಗೆ ಪ್ರಾಶಸ್ತ್ಯ. ಸರ್ಕಸ್ಸಿನಲ್ಲಿ, ಪ್ರಾಣಿಸಂಗ್ರಹಾಲಯದಲ್ಲಿ ಆನೆಗೆ ಆದ್ಯತೆ; ಮಕ್ಕಳಿಗೂ ದೊಡ್ಡವರಿಗೂ ಅದರಲ್ಲಿ ಭಯಮಿಶ್ರಣವಾದ ಕುತೂಹಲ, ಅಕ್ಕರೆ. ದೈವಸಂಬಂಧವಾಗಿಯೂ ಆನೆಗೆ ಅರ್ಹಸ್ಥಾನ ದೊರೆತಿದೆ. ಪೊನ್ನನ ಶಾಂತಿಪುರಾಣದಲ್ಲಿ 1–7 ರಲ್ಲಿ ಯಕ್ಷನ ಆನೆಯ ಪ್ರಸ್ತಾಪವಿದೆ: 'ಸರ್ವಾಹ್ಣಯಕ್ಷಂ ಸ್ವವಾರಣಕಾಘೋರಣನಾದ ನುಂತಪರಣಂಗೇ ಕಾರಣಂ ವಾರಣಂ'. ಆನೆಯೊಡೆಯ ಕುಳಿತಿರುವುದನ್ನು ನೋಡಿ ಕವಿಗೆ ತಕ್ಷಣವೇ ಸ್ಫುರಿಸಿದ್ದು: 'ಗಣಪನಂತಿಭಪತಿ ಕುಳ್ಳಿರ್ಕುಂ' (3–27) ಎಂದು. ಐರಾವತ (8–46), ಪುಂಡರೀಕ (3–44) ಮೊದಲಾದ ದೇವಗಜದ (4–116) ಸುರೇಂದ್ರ ಕರೀಂದ್ರ ಪೃಷ್ಠಗತನಪ್ಪ ಅಮರೇಂದ್ರ (5–94 ವ) ಉಲ್ಲೇಖವೂ ಬರುತ್ತದೆ. ಆಕಾಶಗಜ (8–70), ಮನ್ಮಥಗಜ (8–89) ಮುಂತಾದ ಹೋಲಿಕೆಯೂ ಇದೆ. ಲಕ್ಷ್ಮಿಯ ಆನೆ ಕುರಿತ ವರ್ಣನೆ 9–202 ರಲ್ಲಿದೆ. ಐರಾವತ ಕುಂಭ (5–153) ಐರಾವತದ ಪತ್ನಿ ಅಭ್ರಮು (6–2). ರೂಪಕ ವೈಭವದಿಂದ ಕವಿ ಕಲ್ಪನೆಯಲ್ಲಿ ಮೂಡಿಬಂದ ಮನ್ಮಥಗಜದ ಲಕ್ಷಣವೂ ಅನುಲಕ್ಷಿಸುವಂತಿದೆ.

ಹೇಮಂತದಲ್ಲಿ ಮದವೇರಿ, ಶಿಶಿರದಲ್ಲಿ ಮದವಿಳಿದು, ವಸಂತದಲ್ಲಿ ಹುಚ್ಚೆದ್ದು ಋತುಮಾನಕ್ಕನುಸಾರವಾಗಿ ಮದಾವಸ್ಥೆಗಳನ್ನು ಹೊಂದಿ ಹೊರಡುವ ಮನ್ಮಥಗಜಕ್ಕೆ ಉಪಚಾರಗಳು ಹದಿಮೂರು:

> ಮದನೇಭಕ್ಕಾಮ್ರಮೋದಂಬುಜಮೆರಡು ಕೊಳಂ ಮೂಱು ತೆಂಗಾಳಿ ನಾಲ್ಕ
> ಭ್ಯುದಿತಂ ಹಿಂದೋಳಮಯ್ದುದ್ಧತ ಪಿಕಕುಳಮಾಱುನ್ನತಾಶೋಕ ಮೇೞು
> ನ್ಮದ ಕೀರವ್ರಾತಮೆಂಟುಚ್ಛ್ರಿತ ವಕುಳಮೊಂಭತ್ತಲರ್ ಪತ್ತು ತಕ್ಕ
> ಮುದಿ ಪನ್ನೊಂದುತ್ಪಳಂ ಪನ್ನೆರಡಳಿ ಪದಿಮೂಱಪ್ಪ ಮತ್ತೋಪಚಾರಂ॥ 8–89

ಭಾರತೀಯ ಪೌರಾಣಿಕ ಪ್ರಜ್ಞೆ ಕಲ್ಪಿಸಿಕೊಂಡ ಮತ್ತೊಂದು ಸಂಗತಿ ಎಲ್ಲ ದಿಕ್ಕುಗಳಲ್ಲೂ ಭೂಮಿಯನ್ನು ಆನೆ ಹೊತ್ತು ನಿಂತಿದೆ ಎಂಬುದು. ಹೀಗೆ ದಿಕ್ಕುಗಳಲ್ಲಿರುವ ಆನೆ ದಿಗ್ಗಜ (2–28). ಈ ದಿಕ್ಕರಿಗೆ ಬೆಲೆ ಮತ್ತು ಬಲ ಬಂದಿರುವುದು ಅದಕ್ಕೆ ನಾಲ್ಕು ಕೋರೆಗಳಿಂದಲ್ಲದೆ ಕೇವಲ ಮದದಿಂದ ಅಲ್ಲ (2–32). ದಿಗ್ಗಜಗಳ ಯುದ್ಧವನ್ನು ಪೊನ್ನಕವಿ ದಿಙ್ನಾಗ ಯುದ್ಧ ಎಂದು ಹೆಸರಿಸಿದ್ದಾನೆ (3–19 ವ). ಪೊನ್ನ ಕೊಡುವ ಉಪಮೆಗಾದೆಗಳಲ್ಲಿ ಕೆಲವು ಆನೆಗೆ ಸೇರಿದ್ದಾಗಿವೆ. ಉದಾಹರಣೆಗಾಗಿ ಇವನ್ನು ನೋಡಬಹುದು :

ಆನೆದಿಂಬಂಗಾಡೇವಳಿಗೆ (3–66ವ)
ಆನೆಯ ನೋಟದಂತೆ ಕಿರುಗಣ್ಣ ನೋಟ (2–22ವ)
ಕರಿಹರಿಯೊಳ್ ಸೆಣಸಿ ಪೋರ್ದು ನಿರ್ವಹಿಸುಗುಮೇ (3–85)
ಕೈಪಿಡಿಗೆ ಪೊಕ್ಕ ಗುಬ್ಬಿ (2–111)
ಮತ್ತಹಸ್ತಿಗೆ ಪಕ್ಕಾದ ಗುಬ್ಬಿ (3–60 ವ)
ವನಕರಿ ಕವಡೆ ತಿಳಿದ ಸರೋವರದಂತೆ (5–148)
ವಸಂತವನ್ನು ಆನೆಗೆ ಹೋಲಿಸಿರುವುದು (7–137)
ಹರಿಕರಿಗೆ ಮುಳಿಗುಮಲ್ಲದೆ ನರಿಗಂ ಕೋಟಿಗಮೇಂ (3–62)

ಆನೆಯ ಕಾಲಿಗೆ ಸಿಕ್ಕ ಗುಬ್ಬಿ ಪಚಡ (2–111) ಎಂಬುದಷ್ಟೇ ಆನೆಯ ದೇಹಪ್ರಮಾಣ ಶಕ್ತಿಪ್ರಮಾಣ ಸಾರುವುದಿಲ್ಲ. ವಾಸ್ತವವಾಗಿ ಅದರ ಶಕ್ತಿ ದೊಡ್ಡದು. ತಪ್ಪುಮಾಡಿದವರನ್ನು ಆನೆಯ ಕಾಲ ತುಳಿತಕ್ಕೆ ಒಳಗುಮಾಡಿ ಕೊಲ್ಲಿಸುತ್ತಿದ್ದ ಪದ್ಧತಿ ಹಳೆಯದು (6–81). ಆನೆಯ ತುಳಿದಾಟದಿಂದ ಸಸ್ಯಬಳ್ಳಿ ಮರಗಿಡಗಳು ಛಿದ್ರವಾಗುತ್ತಿದ್ದುದು ಅಪರೂಪವಲ್ಲ (6–96, 8–50 ವ). ಆನೆಯ ಆಕಾರ ದೊಡ್ಡದೇ, ಆನೆಗೂ ಆಡಿಗೂ ಇರುವ ಅಂತರ ಗಾದೆ ಮಾತು (5–72). ಆನೆಯ ಆಹಾರವೂ ದೊಡ್ಡದೇ (8–143). ಆದರೆ ಆನೆ ಪರಾಕ್ರಮಿಯಾದರೂ ಸಸ್ಯಾಹಾರಿ (9–140) ಎಂಬುದು ಗಮನಾರ್ಹ. ಮಾಂಸಾಹಾರಕ್ಕೂ ವೀರ್ಯವರ್ಧನೆಗೂ ತಾಳೆಹಾಕುವುದು ಅಸಮಂಜಸ. ನಿಜವಾಗಿ ಆನೆಯ ಗರಿಷ್ಠ ಶಕ್ತಿಯನ್ನು ಅದು ಮದಿಸಿದಾಗ ನೋಡಬೇಕು (3–66). ಮದ್ದಾನೆ (9–142), ಪೊಸಮದದಾನೆ (7–29), ಕೊಲ್ಲುವ ಮದದಾನೆ (5–97), ಮಾವುತನ ಮೇಲೆ ಕೋಪಗೊಂಡ ಆನೆ (5–159), ಮದಗಜಗಳ ಹೋರಾಟ (2–104, 110), ಬೃಂಹಿತ ಧ್ವನಿ ಮಾಡುವ ಆನೆಗಳ ಸಮೂಹ (2–16), ಮದದಂತಿದಂತ ಖಂಡನೆಗೆ ಸಮಾರೋಹಿತ ಕೃಪಾಣ (1–67), ನಿದ್ರೆಯಿಂದೆದ್ದ ಆನೆಗಳು (5–91), ಆನೆಯ ಕರಿಯ ಶರೀರ ಕಾಂತಿ (3–37)—ಮೊದಲಾದುವನ್ನು ಪೊನ್ನ ಗಮನಿಸಿ ಹಿಡಿದಿಟ್ಟಿದ್ದಾನೆ. ಅವನ ಗಜಚಿತ್ರಶಾಲೆ ದೊಡ್ಡದು, ವಿವಿಧತೆಯನ್ನು ಒಳಗೊಂಡಿರುವಂತಹುದು. ಮದಗಜಗಳನ್ನು ಚಾಟುವಚನಗಳಿಂದ ಒಲಿಸುವುದನ್ನು ಕೂಡ ವಿವರಿಸಿದ್ದಾನೆ (5–39). ದುಂಬಿ ಮದೋದಕ ಪ್ರಿಯ (5–96, 849). ಮದಿಸಿದ ಆನೆ ತನ್ನ ಮದೋದಕವನ್ನು ಕಾಡಿನಲ್ಲಿ ಹೊಕ್ಕು ಕಳೆದುಕೊಳ್ಳುತ್ತದಂತೆ (8–149). ಕುಶಲ ಗಜೋಪಜೀವಿ (3–72 ವ), ಆಲಾನಸ್ತಂಭ (2–8), ಆನೆಯ ಲಾಯಾಧಿಕಾರಿ (9–83), ಅಂಗರಕ್ಷಕರ ಬಳಸಿನಲ್ಲಿ ಆನೆಯನ್ನೇರಿ ಬರುವುದು (8–60 ವ), ಆನೆಯ ಬಂಧನ ಮತ್ತು ಅದರ ಸ್ವಾತಂತ್ರ್ಯಾಪೇಕ್ಷೆ (4–108) ಆನೆಗಳ ವಿಶಿಷ್ಟ ವಾರಿನಿಹಾರ (8–25)—ಮೊದಲಾದ ಸೂಕ್ಷ್ಮಾವಲೋಕನ ಪರಿಣಾಮದ ಪದ್ಯಗಳು ಶಾಂತಿಪುರಾಣದಲ್ಲಿವೆ.

ಕಾಡಿನಲ್ಲಿ ಆನೆಗಳು ಒಂಟಿಯಾಗಿರುವುದು ಅಪರೂಪ. ಅವುಗಳ ವಾಸ ಹಿಂಡಿನಲ್ಲಿಯೇ. ಆನೆಯ ಸಮೂಹಕ್ಕೆ ಪ್ರಭು ಯೂಥಪತಿ, ಅತ ಗಜಘಟೆಯ ನಾಥ (2–9). ಧೀರ ಗಂಭೀರ ನಡೆಯ, ನಡಿಗೆಯ ಆನೆ ದೇವತೆಗಳೂ ಒಮ್ಮೆ

ನೋಡಬೇಕಾದ ದೃಶ್ಯ. ಕಾಡಿನ ಸಲಗ ಹೆಣ್ಣಾನೆಯನ್ನು ಮುಂದಿರಿಸಿ ಹೊರಡುವುದೂ ಉಂಟು (7–12). ಆನೆಗಳ ರತಿಜೀವನವನ್ನೂ ಕಾವ್ಯದಲ್ಲಿ ಕನ್ನಡಿಸಲಾಗಿದೆ. ಕಣ್ಬೇಟಕ್ಕೆ ಪಕ್ಕಾದ ಕರೇಣುವಿದೆ (4–66 ವ). ಪ್ರೇಯಸಿಯೊಡನೆ ಮಳಲ ಹಾಸುಗೆಯಲ್ಲಿ ಮಲಗಿದ ಗಂಡಾನೆಯ ಚಿತ್ರವಿದೆ (5–92 ವ). ಹೆಣ್ಣಾನೆಗಾಗಿ ಹೋರಾಟ ನಾಡುವ ವಿಚಾರ 9–47ರಲ್ಲಿದೆ. ಎರಡು ಹೆಣ್ಣಾನೆಗಳ ನಡುವಣ ಗಂಡಾನೆಯ ಗಾಂಭೀರ್ಯದ ಚಿತ್ರವಿದೆ (1–75). ಇಂಥ ಆನೆಗಳನ್ನು ಹಿಡಿದು ಪಳಗಿಸಿ ಅರಮನೆಗೆ ಸಾಗಿಸುತ್ತಾರೆ. ಶ್ರೇಷ್ಠ ಗಜವೊಂದನ್ನು ಆರಿಸಿ ಪಟ್ಟದಾನೆಯನ್ನಾಗಿ ಮಾಡುತ್ತಾರೆ; ಅದೇ ಪಟ್ಟವರ್ಧನ (8–155 ವ). ಎಲ್ಲ ಆನೆಗಳೂ ಪಟ್ಟದಾನೆಗಳಾಗುವುದಿಲ್ಲ. ಸಾಹಣಕೆ ಹುಲ್ಲು ಅಡಕುವ ಕೆಲಸವನ್ನು ಕೂಡ ಪಳಗಿದ ಆನೆಯಿಂದ ಮಾಡಿಸುತ್ತಾರೆ (2–33). ಅಕೃತ್ರಿಮವಾದ ಅಗುಣಿ ಬಂಧಿ ವಿವರ 3–19 ವ ದಲ್ಲಿದೆ. ಅಲಂಕರಿಸಿದ ಆನೆಯ ಪ್ರಸ್ತಾಪ 5–38 ರಲ್ಲಿದೆ. ಮಲಗಿದ್ದ ಸಲಗ! ಎಚ್ಚೆತ್ತ! ಕ್ಷಣದ ಪರಿಣಾಮವೇ ಬೇರೆ (2–25).

ಚತುರಂಗ ಸೈನ್ಯದಲ್ಲಿ ಆನೆಯ ಬಲವೇ ಬಲ. ಆನೆಯ ಭಯಂಕರ ಸೈನ್ಯ ನಡುಕ ಮೂಡಿಸುವಂತಹುದು (3–12). ಯುದ್ಧಭೂಮಿಗೆ ಆನೆಯನ್ನು ತಿವಿದು ನಡಸುವುದು, ಅದರ ಮುಖಕ್ಕೆ ಬಾಣ! ಬಿಟ್ಟು ಬೆದರಿಸುವುದು ಮೊದಲಾದ ವರ್ಣನೆ 5–55, 58, 59, 60 ನೆಯ ಪದ್ಯಗಳಲ್ಲಿದೆ. ದಿಗ್ವಿಜಯಕ್ಕೆ ಹೊರಡುವ ದೊರೆ ಗಜಸೈನ್ಯದೊಡನೆ ಮುನ್ನಡೆಯುತ್ತಾನೆ (5–133). ಆನೆಯುದ್ಧದ ಸೊಗಸಾದ ವರ್ಣನೆಯೊಂದನ್ನು ಪೊನ್ನಕವಿ ಶಾಂತಿಪುರಾಣದ ನಾಲ್ಕನೆಯ ಆಶ್ವಾಸದಲ್ಲಿ 18ನೆಯ ಪದ್ಯದಿಂದ 22ನೆಯ ಪದ್ಯದವರೆಗೆ ಕೊಟ್ಟಿದ್ದಾನೆ.

ಆನೆಗೆ ಸಂಬಂಧಿಸಿದಂತೆ ಮತ್ತೊಂದು ನಂಬಿಕೆಯ ಮಾತಿದೆ. ದೇಹ ಗಾತ್ರದಲ್ಲಿ ಆನೆ ದೊಡ್ಡದಾದರೂ ಪರಾಕ್ರಮದಲ್ಲಿ ಆನೆಗಿಂತ ಸಿಂಹಕ್ಕೆ ಪಟ್ಟಕಟ್ಟಲಾಗಿದೆ. ಆನೆಗೆ ಸಿಂಹದ ಭಯ ಎಷ್ಟಿದೆಯೆಂದರೆ 'ಸಿಂಹಸ್ವಪ್ನ' ವಾದರೂ ಆನೆ ಪ್ರಾಣಕಳೆದುಕೊಳ್ಳುತ್ತದಂತೆ. ಆನೆ–ಸಿಂಹ ಸಂಬಂಧವಾದ ಭಾವನೆಗಳನ್ನು ಪೊನ್ನಕವಿ 2–103, 105 ರಿಂದ 109 ಮತ್ತು 3–41 ರಲ್ಲಿ ಹರಳುಗೊಳಿಸಿಟ್ಟಿದ್ದಾನೆ. ಅಲ್ಲದೆ ಹಿಂದೆ ಉದಾಹರಿಸಿದ 3–62, 3–85 ನೆಯ ಪದ್ಯಗಳನ್ನೂ ತೌಲನಿಕವಾಗಿ ನೋಡಬಹುದು.

ಒಟ್ಟಿನಲ್ಲಿ ಪೊನ್ನನಿಗೆ ಆನೆಯ ವಿಚಾರವಾದ ಒಲವು ಮತ್ತು ಮಾಹಿತಿ ಸಾಕಷ್ಟಿದೆ. ಆನೆಗೆ ಪರ್ಯಾಯವಾಗಿ ನಿಘಂಟಿನಲ್ಲಿ ಸಿಗುವ ಶಬ್ದಗಳಲ್ಲಿ ಬಹ್ವಂಶ ಪೊನ್ನನಲ್ಲಿ ಬಳಕೆಯಾಗಿದೆ. ಉದಾಹರಣೆಯಾಗಿ ಈ ಕೆಲವನ್ನು ನೋಡಬಹುದು: ಆನೆ (5–97), ಇಭಪತಿ (3–27), ಐರಾವತ (3–44), ಕರೀಂದ್ರ (3–19 ವ), ಗಜ (3–27 ವ), ದಿಙ್ನಾಗ (3–19 ವ), ದ್ವಿಪಂ (4–20), ನಾಗ (3–12), ಮದಕರಿ (31–19 ವ), ಮದಸ್ತಂಭೇರಮ (3–19 ವ) ಮೃಗರಾಜ, (3–41), ಸಾಮಜ (3–41), ಸಿಂಧುರ (4–20 ವ) ಇತ್ಯಾದಿ. ದಿಙ್ನಾಗಯುದ್ಧ, ಮದಸ್ತಂಭೇರಮ ಯುದ್ಧ, ಹಸ್ತಿಸಿಯುದ್ಧ—ಮೊದಲಾದುವನ್ನೂ ಹೇಳಿದ್ದಾನೆ.

ಶಾಂತಿಪುರಾಣದಲ್ಲಿ ವ್ಯಕ್ತವಾಗಿರುವ (ರಾಜ–) ರಾಜನೀತಿ (–ರಾಜದೂತ)

ಯಾವುದೇ ಒಂದು ಸಾಹಿತ್ಯಕೃತಿ ತನ್ನಿಂದ ತಾನೆ ಶೂನ್ಯದಿಂದ ಸೃಷ್ಟಿಯಾಗುವುದಿಲ್ಲ. ಕವಿಯೂ ಎಲ್ಲರಂತೆ ಒಬ್ಬ ಸಮಾಜಜೀವಿ, ಸಾಮಾಜಿಕ ವ್ಯವಸ್ಥೆಯ ಒಂದು ಭಾಗ. ಅವನು ಬಯಸಲಿ ಬಯಸದಿರಲಿ ಅವನ ಮೇಲೆ ಆತನ ಸಮಕಾಲೀನ ಸಮಾಜದ ಒಟ್ಟು ಪರಿಣಾಮ ಆಗಿಯೇ ಆಗುತ್ತದೆ. ಅದರಂತೆ ಅವನ ಕೃತಿಯೂ ಅದು ರಚಿತವಾದಂದಿನ ಚರಿತ್ರೆಯನ್ನೂ, ಸಂಸ್ಕೃತಿಯನ್ನೂ, ಸಂಘರ್ಷಗಳನ್ನೂ ಒಳಗೊಂಡಿರುತ್ತದೆ. ಕವಿಯ ಬರವಣಿಗೆಯಲ್ಲಿ ಅಂದಿನ ಸಮಾಜಿಕ

ರಾಜಕೀಯ ಪ್ರಜ್ಞೆ ಹೊಳಲುಗೊಡುವುದಲ್ಲದೆ ಆತನ ಕೃತಿ ಒಂದು ಸಾಂಸ್ಕೃತಿಕ ದಾಖಲೆಯಾಗಿ ರೂಪಗೊಳ್ಳಬಹುದಾದ ಸಾಧ್ಯತೆಯಿರುತ್ತದೆ. ಕೃತಿಕಾರನ ಕಾಲದಲ್ಲಿ ಹರಳುಗೊಂಡು ಸುಳಿಯುವ ವಿಚಾರಗಳು ಸಾಧಾರಣೀಕರಣಗೊಂಡು ಕೃತಿಯಲ್ಲಿನ ಪಾತ್ರಗಳ ಮೂಲಕ ಸೃಷ್ಟಿಯಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಜನಾಭಿಮುಖದ ವಾಣಿಯಾಗಿ ಕವಿವಾಣಿ ಹೊಳಲುಗೊಡುವುದರಿಂದ ಆತ ಮೂಕರಿಗೆ ಮಾತಾಗುತ್ತಾನೆ. ತನ್ನ ಸಮಾಜದ ಒಟ್ಟು ಚಿಂತನೆಯ ಅಭಿವ್ಯಕ್ತಿಯಾಗುತ್ತಾನೆ. ಹಾಗಾದಲ್ಲಿ ಅಂದಿನ ಸಾಂಸ್ಕೃತಿಕ ಅಧ್ಯಯನಕ್ಕೆ ಅವನ ಕೃತಿ ಆಕರವೂ ಆಕಾರವೂ ಆಗಿರುತ್ತದೆ.

ಒಂದು ಮಹತ್ವದ ಸಾಹಿತ್ಯಕೃತಿ ಜನಜೀವನದ ಬಹು ಮುಖಗಳನ್ನೂ, ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಆಶಯಗಳನ್ನೂ ಒಳಗೊಂಡಿರುವುದರಿಂದ ಸಾಂಸ್ಕೃತಿಕ ದಾಖಲೆಯಾಗಿ ಅಂಥ ಸಾಹಿತ್ಯ ಕೃತಿಗಳನ್ನು ನೋಡುವಾಗ ಅಂತರ್ ಪ್ರಕ್ರಿಯೆಗಳನ್ನೂ ಇನ್ನೂ ಒಳಸಂಬಂಧಗಳನ್ನೂ ಪರಿಶೀಲಿಸಬೇಕಾಗುತ್ತದೆ. ಅಂಥದೊಂದು ಸಾಹಿತ್ಯ ಕೃತಿಯ ರೂಪದ ಜತೆಗೆ ಆ ಕೃತಿಯಲ್ಲಿನ ಸೂಕ್ಷ್ಮಗಳನ್ನೂ, ಅಲ್ಲಿ ತೆಕ್ಕೆಹಾಕಿಕೊಂಡಿರುವ ಹಲವು ಸ್ತರಗಳನ್ನೂ, ಆಯಾ ಸ್ತರದ ರಚನೆಯನ್ನೂ ವಿಶ್ಲೇಷಿಸಬೇಕಾಗುತ್ತದೆ. ಜೀವನದ ವ್ಯವಸ್ಥೆ, ವ್ಯಕ್ತಿಯ ಸಂಘರ್ಷ, ಚಲನಶೀಲ ಸಮಾಜದ ಸಂವೇದನೆಗಳು—ಇವನ್ನು ಬಿಡುಗಣ್ಣಿನಿಂದ ಕವಿ ನೋಡಿ ದಾಖಲಿಸಿದ ರೀತಿ ಕೂಡ ಕಾವ್ಯವಿಮರ್ಶೆಯಲ್ಲಿ ಮುಖ್ಯವಾಗುತ್ತದೆ, ವಿಮರ್ಶಿಸಲು ಆರಿಸಿಕೊಂಡ ಕೃತಿ ಹೊಸಗನ್ನಡ ಕಾವ್ಯವಿರಲಿ ಹಳಗನ್ನಡ ಕಾವ್ಯವಿರಲಿ ಜತೆಗೆ ಮನುಷ್ಯ ಸ್ವಭಾವದ ವಿಚಿತ್ರ ಮನಸ್ಸಿನ ಸೂಕ್ಷ್ಮ ಸಂವೇದನೆಗಳಿಗೆ ಕವಿ ಹೇಗೆ ಸ್ಪಂದಿಸುತ್ತಾನೆಂಬುದನ್ನೂ ಪರಿಭಾವಿಸಬೇಕಾಗುತ್ತದೆ.

ಈ ಬಗೆಯ ಮೌಲ್ಯಶೋಧನೆಗೆ ಪೊನ್ನನ ಶಾಂತಿಪುರಾಣವನ್ನು ತೊಡಗಿಸಿದಾಗ ಅದೊಂದು ಮಧ್ಯಮ ಮಟ್ಟದ ಕೃತಿಯಾಗಿ ನಿಲ್ಲುತ್ತದೆ. ಕಾವ್ಯೇತರ ಕಾರಣಗಳಿಗಾಗಿ ಶಾಂತಿಪುರಾಣ ಇನ್ನೂ ಕೆಲವು ಕಾಲ ಒಂದು ಪ್ರಮುಖ ಕೃತಿಯಾಗಿ ರುತ್ತದೆ. ಆದರೆ ಶುದ್ಧ ಕಾವ್ಯವಾಗಿ, ಇದನ್ನು ಪಂಪನ ಆದಿಪುರಾಣಕ್ಕೆ ಹೋಲಿಸಿದಾಗ ಆ ಮೇಲ್ಮಟ್ಟವನ್ನು ಶಾಂತಿ ಪುರಾಣ ಮುಟ್ಟುವುದಿಲ್ಲ. ಹೇಳಿಕೇಳಿ ಪೊನ್ನ ಜಿನೋಪಾಸಕನೇ ಹೊರತು ಕಾವ್ಯೋಪಾಸಕನೂ ಅಲ್ಲ, ಕಲಾರಾಧಕನೂ ಅಲ್ಲ. ರಾಜನಿಷ್ಠೆಯ ಈ ಕವಿ ತನಗೆ ದೊರೆತ ರಾಜಾಶ್ರಯ ಒಂದು ಭಗವದನುಗ್ರಹವೆಂದು ತಿಳಿದಿದ್ದಾನೆ. ಪ್ರಭುನಿಷ್ಠೆ ತೀರ ಇತ್ತೀಚಿಗಿನವರೆಗೂ ನಮ್ಮ ಲೇಖಕರಿಗೆ ಒಪ್ಪಿಗೆಯಾಗಿದ ಮೌಲ್ಯವಾಗಿತ್ತು. ಅದನ್ನು ನಿರಾಕರಿಸಿದ ಕವಿಗಳು ಇಲ್ಲ ವೆಂದಲ್ಲ, ಅಂಥವರು ಕಡಮೆ. ಹಾಗೆ ನಿರಾಕರಣೆ ಮಾಡಿದವರಲ್ಲಿ ಕೂಡ ಕೆಲವರು ಪ್ರಭುನಿಷ್ಠೆ ತಿರಸ್ಕರಿಸಿ ದೈವನಿಷ್ಠೆಗೆ ಶರಣಾದರು; ದೊರೆಯ ಸ್ಥಳದಲ್ಲಿ ದೈವ ಕುಳಿತಂತಾಯಿತು, ಈ ಒಡ್ಡೋಲಗ ಬಿಟ್ಟು ಆ ಆಲಯಗಳಿಗೆ ತಲೆಬಾಗಿದರು. ನಿಷ್ಠೆಯಲ್ಲಿ ಸ್ಥಳಾಂತರವಾಯಿತೇ ಹೊರತು ಮಹತ್ತರ ಮಾರ್ಪಾಟೇನೂ, ಪರಿಣಾಮದಲ್ಲಿ ಕೂಡ, ಕಂಡುಬರಲಿಲ್ಲ. ರಾಜಲೀಲೆಯ (ದೊರೆಯ) ಪರಾಕು ಹೋಗಿ ದೈವಲೀಲೆಯ ಕೊಂಡಾಟ ಕಾಣಿಸಿಕೊಂಡಿತು. ಕಾವ್ಯಕ್ಕೆ ಪಟ್ಟಕಟ್ಟುವ ಕೇವಲ ಕಾವ್ಯನಿಷ್ಠ ಧೋರಣೆಯಿಂದಲೇ ಹೊರಟ ಕವಿಗಳು ಯಾವ ಕಾಲಕ್ಕೂ ಕಡಮೆಯೇ.

ಅಲ್ಲದೆ ಮಾನವ ಸಮಾಜ ಕೂಡ ಚಲನಶೀಲವಾದುದರಿಂದ ಒಂದು ಕಾಲದಲ್ಲಿದ್ದ ರೂಢಿ ನಂಬಿಕೆ ಮೌಲ್ಯ ನಿಷ್ಠೆ ಎಲ್ಲ ಕಾಲಕ್ಕೂ ಇರುವುದು ಕಷ್ಟವೇ. ಪ್ರಭುನಿಷ್ಠ ಸಮಾಜ ದೂಷ್ಯ–ತ್ಯಾಜ್ಯ ಎಂದೇನೂ ಅರ್ಥೈಸುತ್ತಿಲ್ಲ. ರಾಜರು ಜನತೆಯನ್ನು ಬಹಳ ಪ್ರೀತ್ಯಾದರಗಳಿಂದ ಆದರ್ಶಪ್ರಾಯವಾಗಿ ನೋಡಿಕೊಂಡ ನಿದರ್ಶನಗಳು ನೂರಾರಿವೆ. ಪ್ರಜಾ ಪ್ರಭುತ್ವ ಪದ್ಧತಿಯಲ್ಲೂ ಅರೆಕೊರೆಗಳಿವೆ ಎಂಬುದು ಬೇರೆ ಮಾತು. ಹಿಂದೆ ಪ್ರಜೆಗಳಿಗೆ ಕಷ್ಟಬಂದಾಗ ತಮ್ಮ ದೊರೆಗೆ ದೂರುಕೊಟ್ಟು ತೊಂದರೆ ನಿವಾರಣೆಗೆ ನಿವೇದಿಸಿಕೊಳ್ಳುತ್ತಿದ್ದರು. ದೊರೆತನಕ ದೂರು ಎಂಬ ಗಾದೆಯೇ ಇದೆ. ಶಾಂತಿ ಪುರಾಣದಲ್ಲಿ ಶ್ರೀಷೇಣನ ಪ್ರಕರಣದಲ್ಲಿ ಇಂಥದೊಂದು ಸ್ವಾರಸ್ಯವಾದ ಪ್ರಕರಣವಿದೆ. ಅಂತೂ ನಮ್ಮ ಕೆಲವು ಕಾವ್ಯಗಳು ಮತ್ತು ಇತಿಹಾಸ ಪ್ರಭುತ್ವದ ಚರಿತ್ರೆ ಅಥವಾ ಭಾಷ್ಯಗಳೆಂಬುದು ಬಹುಮಟ್ಟಿಗೆ ನಿಜ. ಹೀಗೆ ರಚಿತವಾದ ರಾಜನಿಷ್ಠ

ಕನ್ನಡ ಕಾವ್ಯಗಳಲ್ಲಿ ಜನಪರವಾದ, ಜೀವನಮುಖವಾದ ಧೋರಣೆ ಎಲ್ಲೆಲ್ಲಿ ಅನುರಣನವಾಗಿದೆಯೆಂಬುದನ್ನು ಕಷ್ಟಪಟ್ಟು ಹುಡುಕಬೇಕಾಗುತ್ತದೆ. ಈ ಕಾವ್ಯಗಳಲ್ಲಿ ಸಿಗುವ ಶ್ರೀಮಂತ ಸಮಾಜ–ಕುಟುಂಬದ ಚಿತ್ರಣದಲ್ಲೂ ಊಳಿಗಮಾನ್ಯ ವ್ಯವಸ್ಥೆಯನ್ನು ಹೇರಿರುವುದು ಕಾಣಬರುತ್ತದೆ.

ಈ ಹಿನ್ನೆಲೆಯಿಂದ ಪೊನ್ನನ ಶಾಂತಿಪುರಾಣ ಸಾಕಾರಗೊಳಿಸುವ ಅರಮನೆ, ಅರಸ–ಅರಸಿ, ಅರಸುತನ—ಇವುಗಳ ಚಿತ್ರಣವನ್ನು ಪರಿಚಯಿಸಿಕೊಳ್ಳಬಹುದು.

ರಾಜನಲ್ಲಿ ಮುಖ್ಯವಾಗಿ ಇರಬೇಕಾದ್ದು ಕ್ಷಾತ್ರಗುಣ ಸಂಪನ್ನನಾದ ಆಕರ್ಷಕ ಮೈಕಟ್ಟು :

ಕ್ಷಿತಿಪ ಶ್ರೀ ವಿಭವ ವಿಲಾ
ಸತೆಯಂ ಪೇರುರಮೆ ಪೇಱ್ಗುಮಭ್ಯಸ್ತ ಮಹಾ
ಸ್ತ್ರತೆಯಂ ಶ್ರಮವಶ ತನುಮ
ಧ್ಯತೆ ಪೇಱ್ಗುಂ ಬೇಱೆ ಪೇೞ್ವುದದು ಪುನರುಕ್ತಂ ॥ 3–42

ರಾಜನ ಸಂಪದ ವೈಭವವನ್ನು ಆತನ ಎದೆಯೇ ಹೇಳುತ್ತದೆ. ಆತನ ಸೊಂಟವು ಆತ ಅಭ್ಯಾಸಮಾಡಿರುವ ಅಸ್ತ್ರಗಳ ವಿಷಯವನ್ನು ಸೂಚಿಸುತ್ತದೆ. ದೇಹದಾರ್ಢ್ಯತೆ ದೊರೆಗೆ ಗೌರವ ಗಾಂಭೀರ್ಯಗಳನ್ನು ಹೊರನೋಟಕ್ಕೆ ತಂದು ಕೊಡುತ್ತದೆಂಬುದು ಸ್ವಲ್ಪಮಟ್ಟಿಗೆ ನಿಜ. ಆದರೆ ಚಕ್ರವರ್ತಿಗೆ ದೈಹಿಕವಾಗಿ ಕೆಲವು ಶುಭಲಕ್ಷಣಗಳು ಸಂಕೇತಿಸುತ್ತವೆಂಬ ಸಾಮುದ್ರಿಕಾ ನಿರೂಪಣೆ ಮೂಢನಂಬಿಕೆಯೆಂದು ತೋರುತ್ತದೆ :

ಮೀನಾಬ್ಜ ಶಂಖ ಚಕ್ರ ವಿ
ತಾನಾಂಕಿತ ದಕ್ಷಿಣಾಂಘ್ರಿ ತಲ ಪಲ್ಲವಮು
ತ್ತಾನಂ ರತ್ನಾಕರದ ವೊ
ಲೇನಮರ್ದುದೊ ಸಾರ್ವಭೌಮ ಗಗನೇಚರನಾ ॥ 3–48

ಮೀನು ಕಮಲ ಶಂಖ ಚಕ್ರ ಇವುಗಳಂತೆ ಗುರುತಾಗಿರುವ ಬಲದ ಅಂಗಾಲು—ಇವು ಚಕ್ರವರ್ತಿಯಾಗುವವನ ಚಿಹ್ನೆಗಳಂತೆ.

ರಾಜನಾದವನು ಕಲಿಯಲೇ ಬೇಕಾದ 'ರಾಜವಿದ್ಯೆಗಳು' (2–5) ಬೇರೆ ಪ್ರತ್ಯೇಕವಾಗಿ ಇರುತ್ತಿದ್ದುವು. ಇದರಿಂದ ಭೂಪತಿಯ ಬುದ್ಧಿ ಮತ್ತೂ ಹರಿತವಾಗುತ್ತಿತ್ತು. ಕೆಲವೊಮ್ಮೆ ಕೇವಲ ಅರ್ಥಶಾಸ್ತ್ರ ಓದಿ ಅದರ ನೀತಿನಿಯಮಗಳನ್ನಷ್ಟೆ ಕುರುಡುಪಾಶದಂತೆ ಕಟ್ಟುನಿಟ್ಟಾಗಿ (ಈಗಿನ ಕೆಲವು ಐ.ಎ.ಎಸ್. ಅಧಿಕಾರಿಗಳಂತೆ) ಪಾಲಿಸಿದರೆ ಮನುಷ್ಯನಿಗೆ ಮೂಲಭೂತವಾಗಿರಬೇಕಾದ ಮನಸ್ಸು–ಮಾನವೀಯತೆಗಳ ನೆಲೆಸೆಲೆಗಳು ಬತ್ತಿಹೋಗುವ ಅಪಾಯ ಸಂಭವಿಸುತ್ತದೆ. ಉತ್ತಮ ನಾಯಕರಾದ ನೃಪತಿಗಳು ಅಂಥ ದೋಷದಿಂದ ಪಾರಾಗುತ್ತಿದ್ದರು :

ಆದರದಿನರ್ಥಶಾಸ್ತ್ರಮ
ನೋದೆಯುಮಪರಾಜಿತಂಗೆ ದಯೆ ಮನದಿನದೇಂ
ಪೋದುದೆ ನಿಜಸ್ವಭಾವಮ
ನೋದೆಡೆಯೊಳ್ ಮಟ್ಟುಮರಿಗುಮೆಂಬುದುಮುಂಟೇ ॥ 2–7

ಸಿರಿಯೊಡೆಯನಾಗಿಯುಂ ದ
ರ್ಪರಹಿತನೋದೊಡೆಯನಾಗಿಯುಂ ವಿಗಳಿತ ಮ
ತ್ಸರನಧಿಕನಾಗಿಯುಂ ನ್ಯಾ
ಯರಕ್ಷನೇಂ ಪಿರಿಯನೊ ಖಗೇಂದ್ರಾಧೀಶಂ ॥ 3–86

ತಮ್ಮ ಆಶ್ರಿತರ ಬಗೆಗೆ ಎಷ್ಟು ಅನುಗ್ರಹ ತೋರಬೇಕೊ ಅಷ್ಟನ್ನು ಮಾತ್ರ ಪ್ರಭುಗಳು ವ್ಯಕ್ತಪಡಿಸುತ್ತಿದ್ದರು. ಒಮ್ಮೊಮ್ಮೆ ಅನಿರೀಕ್ಷಿತವಾಗಿ ಅರಸರು ಪರಮಾನುಗ್ರಹ ತೋರಿದರೆಂದರೆ ಅದು ಅಕಾಲದಲ್ಲಿ ಮರ ಹಣ್ಣು ಹೂ ಬಿಟ್ಟಂತೆ— 'ಆಕಸ್ಮಿಕ ನೃಪ ಕರುಣೋದ್ರೇಕಕ್ಕಮಕಾಲ ತರುಫಲಕ್ಕಂ ವಿಬುಧಾನೀಕಂ ಬೆರ್ಚುಗುಂ' (2–35). ರಾಜನ ವಾತ್ಸಲ್ಯವೂ ಕಷ್ಟ, ವಿರೋಧವೂ ಕಷ್ಟ. ಇದನ್ನು ಪುಷ್ಟೀಕರಿಸುವ ಮಾತುಗಳು ಸಂಸ್ಕೃತದಲ್ಲೂ ಕನ್ನಡದಲ್ಲೂ ಅನೇಕ ಕಡೆ ಸಿಗುತ್ತವೆ. ಪಂಪ ಮೊದಲಾದ ಕನ್ನಡ ಕವಿಗಳ ಹೇಳಿಕೆಗಳ ಜತೆಗೆ ಸಂಸ್ಕೃತ ಸುಭಾಷಿತಗಳನ್ನೂ ಹೋಲಿಸಿನೋಡಬಹುದು.

"ರಾಜನೀತಿಶಾಸ್ತ್ರದ ವಿಧಾನದಲ್ಲಿಯೂ ಹನ್ನೆರಡು ಜನ ರಾಜರಲ್ಲೂ ಸಮರ್ಥನಾಗಿ ಪ್ರಾಜ್ಯನೆನಿಸಿಕೊಂಡಿರುವ ವಿಜಯಾಪೇಕ್ಷಿಯು ನಯೋಪಾಯವನ್ನು ಬಯಸುವುದಿಲ್ಲ"(2–35 ವ). ರಾಜನು ರಾಜನೀತಿಶಾಸ್ತ್ರವಿಶಾರದನಾಗಿರುವುದರ ಜತೆಗೆ ವೈದ್ಯಶಾಸ್ತ್ರ ಸಂಪನ್ನನಾಗಿದ್ದು ತ್ರಿದೋಷಗಳು ಸಮಪ್ರಮಾಣದಲ್ಲಿರುವ ಹಾಗೂ ಸಪ್ತಧಾತುಗಳನ್ನು ಸಮನಾಗಿಟ್ಟು ಕೊಂಡಿರುವ ಆರೋಗ್ಯಶಾಲಿಯೂ ಆಗಿರಬೇಕು (–ಅದೇ–). ಚತುಃಷಷ್ಟಿಕಲೆಗಳನ್ನು (64 ವಿದ್ಯೆಗಳನ್ನು) ನೃಪವಿದ್ಯೆಗಳೆಂದೂ ಹೇಳಿರುವುದುಂಟು; ಅಷ್ಟು ಕಲೆಗಳನ್ನು ಕಲಿಯಲು ಬೇಕಾದ ಅನುಕೂಲಗಳು ನರಪತಿಗೇ ಸಾಧ್ಯವೆನಿಸುತ್ತವೆ.

ಆಳುವವನ ಅರ್ಧ ಯಶಸ್ಸು ಅವನು ಆರಿಸಿಕೊಳ್ಳುವ ಸಚಿವನನ್ನು ಅವಲಂಬಿಸಿರುತ್ತದೆ. ವಾಸ್ತವವಾಗಿ ರಾಜನ ಜಾಣ್ಮೆ ಅವನ ಮಂತ್ರಿಯ ಮೇಲಿರುತ್ತದೆ; 'ದೊರೆಯ ಮಾತೆಲ್ಲವನ್ನೂ ಸರಿಯಾಗಿ ಅರಿತು ಸವಿಸ್ತಾರವಾಗಿ ವ್ಯಾಖ್ಯಾನಿಸಬಲ್ಲ, ಸಕಲ ಸಚಿವ ಸಭೆಗಳನ್ನೂ ತನ್ನ ಅಪ್ರತಿಹತ ಬುದ್ಧಿಶಕ್ತಿಯಿಂದ ಚಕಿತಗೊಳಿಸಬಲ್ಲ, ರಾಜನೀತಿಶಾಸ್ತ್ರದ ಅನೇಕ ಬೀಜಗಳನ್ನು ಬಿತ್ತಿ ಸಮಸ್ತ ಶತ್ರು ಸಚಿವರ ಬುದ್ಧಿವಂತಿಕೆಯನ್ನು ಸೋಲಿಸಬಲ್ಲ' ಸನ್ಮತಿಯುಳ್ಳವನನ್ನು ಸಚಿವನನ್ನಾಗಿ ತೆಗೆದುಕೊಳ್ಳಬೇಕು (–ಅದೇ–). ಅದರಿಂದಲೇ ಕಾವ್ಯಗಳಲ್ಲಿ ಬಹುಶ್ರುತ, ಸುಮತಿ, ಸನ್ಮತಿ, ನಿಶಿತಮತಿ, ಸುಬುದ್ಧಿ— ಎಂಬಂಥ ಹೆಸರುಗಳನ್ನು ಮಂತ್ರಿಗಳಿಗೆ ಹೇಳಿದ್ದಾರೆ. ಇವು ಕೇವಲ ಸಾಂಕೇತಿಕ ಹೆಸರುಗಳು.

ದೊರೆಗೆ ಧಡೂತಿ ದೇಹವಿದ್ದರೆ ಸಾಲದು, ಧೈರ್ಯವೂ ಬೇಕು, ವಿಜಗೀಷುತ್ವ ಇರಬೇಕು, ಪೂರ್ವಾಪರ ಫಲಗಳನ್ನು ಹವಣರಿತು ಹದವರಿತು ಅರಿಯಬಲ್ಲ ವಿವೇಕವೂ ಬೇಕು:

ತಾಱವಱಾಗೆ ಜಯಂ ಜೊ
ಮ್ಮೆಱೆಸುವ ಟೆಂಟಣಿಸುವರಸನರಸನೆ ವಿರಸಂ
ಬೇಱೆ ನಯಮಿರೆ ವಿರೋಧಿಗೆ
ಮಾಱಾಂಪೊಂ ತನ್ನಮೇಲೆ ತಾಂ ಮರಗಡಿಪೊಂ ॥ 2–41

ತನಗೆ ಬರಬೇಕಾದ ಗೆಲುವು ಸ್ವಲ್ಪ ಹೆಚ್ಚು ಕಡಮೆಯಾದಾಗ ಹೆದರಿ ಹಿಂದೆಗೆಯುವ ದೊರೆ ದೊರೆಯಲ್ಲ, ಆತ ಅಯೋಗ್ಯನೇ ಸರಿ. ಬೇರೆಯ ಉಪಾಯಗಳು ಇರುವಾಗ ನೇರವಾಗಿ ಹಗೆಯ ಮೇಲೆ ದಂಡೋಪಾಯವನ್ನು ಕೈಕೊಂಡರೆ ಅದು ಮರವನ್ನು ಕಡಿದು ಮೈಮೇಲೆ ಹಾಕಿಕೊಂಡಂತೆ, ಹಗೆಯ ಒಡ್ಡನ್ನು ಒಡಿದು ಚೂರುಮಾಡಬಲ್ಲ ಕಸುವು ಇರುವ ರಾಜನೇ ಗಟ್ಟಿಗ, ಗೆಲುವಿಗೆ ಈಡು:

ಒದವಿದ ರಿಪುವಂ ಸೂೞ್
ಳದಿಕ್ಕಿಗೆಲ್ದ ತುಳ ಬಲದ ಮಲ್ಲನುಮೆೞ್ಚಾ
ಡಿದ ಬಿಲ್ಲುಮಿರ್ದ ತೆಱನಿ
ರ್ದುದನಱಿಪುಗೆಮುವನವಾರ್ಯ ವೀರ್ಯಂ ಶೌರ್ಯಂ ॥ 2–45

ತನ್ನ ಮೇಲೆ ಏರಿಬಂದ ಹಗೆಯನ್ನು ತಿರುಗಿ ಏಳದಂತೆ ಮೆಟ್ಟಿಗೆದ್ದ ಎಸೆಯಿಲ್ಲದ ಮಲ್ಲನೂ, ಕಾಳಗದಲ್ಲಿ ಆತನು ಬಳಸಿದ ಬಿಲ್ಲೂ ಸುಭದ್ರವಾಗಿರುವ ಸ್ಥಿತಿಯನ್ನು ನೋಡಿದರೇನೇ ಅವನೆಂತಹ ಅಜೇಯ ವೀರನೆಂಬುದು ತಾನೇ ಸ್ಪಷ್ಟವಾಗುತ್ತದೆ. ಪ್ರಭುಶಕ್ತಿಯೂ ಜತೆಗೆ ಮಂತ್ರಶಕ್ತಿಯೂ ರಾಜನಿಗಿರಬೇಕು :

ಪೊಱಗಣರಿವರ್ಗಮು ತ
ಳ್ತಱಿದು ಗೆಲಲ್ಬರ್ಕುಮೊಳಗಣರಿಷಡ್ವರ್ಗಂ
ನೆಱೆದಿರೆ ಬಾರದು ಗೆಲಲದ
ನಱಿದೀ ಬಲದೇವನಂತು ಗೆಲ್ದರುಮೊಳರೇ ॥ 2–17

ಹೊರಗಣ ಹಗೆಗಳನ್ನು ಅಡಗಿಸುವುದು ಸುಲಭವಾದರೂ ಒಳಗಿರುವ ಅರಿಷಡ್ ವರ್ಗವನ್ನು ಹತೋಟಿಯಲ್ಲಿಡುವುದು ಕಡು ಕಷ್ಟವೆಂಬುದು ಮನನೀಯವಾದ ಮಾತು (ಭಾಸನ ಪ್ರತಿಮಾ ನಾಟಕದಲ್ಲೂ ಅನ್ಯತ್ರವೂ ಇದಕ್ಕೆ ಸಂವಾದಿಯಾದ ಹೇಳಿಕೆಗಳಿವೆ). ಒಮ್ಮೊಮ್ಮೆ ಬಂಧುಗಳ ಮಾತು ಕೇಳುವುದೊ, ಸಚಿವರ ಸಲಹೆ ಸ್ವೀಕರಿಸುವುದೊ ಎಂಬುದು ತಿಳಿಯದೆ ಒಡೆಯನಿಗೇ ಪೇಚಿಗೆ ಸಿಕ್ಕಿದಂತಾಗಿ ಒಳತೋಟಿ ಬರುತ್ತದೆ. ಭಿನ್ನಾಭಿಪ್ರಾಯಗಳು ಬಂದಾಗ ಅಂತರ್ಮುಖತೆಯೊಂದೇ ಆತನಿಗೆ ಆತ್ಮೀಯ ಸಲಹೆಗಾರನಾಗಬೇಕಾಗುತ್ತದೆ:

ಈ ಕುಲವೃದ್ಧ ಮಂತ್ರಿಯ ಮತಂ ನೃಪನೀತಿಯೊಳೊಂದಿ ನಿಂದುದ
ವ್ಯಾಕುಲಮೀ ಕುಮಾರನ ಮತಂ ಚಲಮು ಪುದಿದಿರ್ದುದಿಂತಿವೇ
ಕೈಕ ವಿರುದ್ಧಮೆಂದುಭಯ ಪಕ್ಷ ವಿಲಂಬನದಿಂ ವಿಲೋಲ ಡೋ
ಲಾಕುಲ ವೃತ್ತಿಯಾದುದಪರಾಜಿತ ರಾಜ ವಿರಾಜ ಮಾನಸಂ ॥ 2–63

ವ॥ ಅಂತು ಸುಪ್ತಮೀನಾನಚ್ಛೋದಮಾನಸ ಸರೋವರೋಪಮಾನಂ ನಿಮೀಲಿತಲೋಚನಂ ಪ್ರಸನ್ನಾದ್ರಾಶಯಂ ಕಿಱಿದು ಬೇಗಮನಿರ್ದು ತನ್ನ ಮನಮೆ ಮಧ್ಯಸ್ಥ ಮಂತ್ರಿಯಾಗಾಳೋಚಿಸಿ ನಿಶ್ಚಯಿಸಿ (2–63)

ಕಾರ್ಯಪ್ರವೃತ್ತರಾಗುವುದುಂಟು. ಮೀನುಗಳೆಲ್ಲ ಮಲಗಿ ಶಾಂತವಾಗಿರುವುದರಿಂದ ತಿಳಿಯಾಗಿರುವ ಮಾನಸಸರೋವರದಂತೆ ತನ್ನ ಕಣ್ಣುಗಳನ್ನು ಮುಚ್ಚಿಕೊಂಡು ಮನಸ್ಸಿನಲ್ಲಿ ಪ್ರಸನ್ನತೆಯುಂಟಾಗುವಂತೆ ಸ್ವಲ್ಪ ಸಮಯದವರೆಗೆ ಮೌನವಾಗಿದ್ದು ತನ್ನ ಮನದೊಡನೆಯೆ ಮಂತ್ರಾಲೋಚನೆ ಮಾಡಿಕೊಂಡು ಒಂದು ನಿರ್ಧಾರಕ್ಕೆ ಬಂದನಂತೆ—ಇದೇ ರಾಜನಿಗೆ, ರಾಜನೀತಿಗೆ, ಪ್ರಜಾಧರ್ಮಕ್ಕೆ ಒಪ್ಪುವ ರಾಜಮಾರ್ಗ, ಋಜುಮಾರ್ಗ. 'ಆತನು ನವಯುವಕನಾಗಿದ್ದರೂ ಯಾವುದೇ ಏಳು ವ್ಯಸನಗಳಿಗೆ ಒಳಗಾಗಿಲ್ಲ. ಶೂರನಾಗಿದ್ದರೂ ತನ್ನ ದೇಹ ರಕ್ಷಣೆಗೆ ಮಾತ್ರ ಪರಾಕ್ರಮವನ್ನು ಬಳಸುತ್ತಾನೆ. ರಾಜನೀತಿಶಾಸ್ತ್ರ ಪ್ರವೀಣನಾಗಿದ್ದರೂ ವಾಕ್ ಸಂಪತ್ತಿಯಿದ್ದರೂ ಮಂತ್ರಿಗಳ ಸಲಹೆ ಪಡೆಯುತ್ತಾನೆ' (2–43) ಎಂಬುದು ಗಮನಾರ್ಹವಾಗಿದೆ. ಯೋಗ್ಯವಾದ ಮಾತುಗಳನ್ನು ಮಂತ್ರಿಯೇ ಅಲ್ಲದೆ ಚಿಕ್ಕ ಮಕ್ಕಳು ಹೇಳಿದರೂ ವಿರೋಧಿಸದೆ ಒಪ್ಪಿಕೊಳ್ಳಬೇಕು (2–80).

ಅರಮನೆ ರಾಜಧಾನಿಯ ಕೇಂದ್ರಬಿಂದು. ಇಡೀ ನಗರಕ್ಕೆ, ರಾಜ್ಯಕ್ಕೆ ಅದೇ ಶಿಖರ. ರಾಜಮಂದಿರ ಕೇವಲ ರಾಜ ರಾಣಿಯರ ವಿಲಾಸ ಕೇಳೀ ನಿಲಯವಲ್ಲ. ರಾಜ್ಯದ ಸಮಸ್ತ ಆಗುಹೋಗುಗಳ ನಿಯಂತ್ರಣ ಅಲ್ಲಿಂದಲೇ. ರಾಜಭವನವೆಂಬುದು ಒಂದು ಪುಟ್ಟ ಸಂಕ್ಷಿಪ್ತ ಪ್ರಪಂಚ. ಅರಮನೆಯ ಮುಖ್ಯಭಾಗ ಸಭಾಭವನ. ಅದರೊಳಗೆ ಎದ್ದು ಕಾಣುವುದು 'ಚೆಂಬೊನ್ನ ಸಿಂಹಪೀಠ' (3–29). ಆಸ್ಥಾನಕ್ಕೆ ರಾಜನೇ ಹೃದಯ, ಶೋಭೆ. ಸಿಂಹಾಸನದಲ್ಲಿ ಕುಳಿತ ರಾಜನಿಗೆ ಇಕ್ಕೆಲಗಳಲ್ಲಿ ನಿಂತವರು ಚಾಮರಬೀಸುವರು :

ವಿಣರಿಪು ಪೀಠ ಪಾರ್ಶ್ವ
ಕ್ಷೋಣಿಯೊಳಿಂದೀವರಕ್ಕೆ ಮುಸುಱುವ ಹಂಸ
ಶ್ರೇಣಿಗಳೆನಿಸಿದುವುಭಯ
ಶ್ರೇಣೀಪತಿಗಿಕ್ಕೆ ಪೊಳೆವ ಚಮರರುಹಂಗಳ್ ॥ 3–49

ವಂದಿಮಾಗಧರು ಸಮಯವರಿತು ರಾಜನಿಗೆ ಹುರಿದುಂಬಿಸುತ್ತಾರೆ (3–50). ಆಸ್ಥಾನದಲ್ಲಿರಿಸಿರುವ ಸಾಲಂಕೃತ ಲೋಹಾಸನಗಳಲ್ಲಿ ಅವರವರ ಅಧಿಕಾರ ಸ್ಥಾನಮಾನಾದಿಗಳಿಗೆ ಅನುಗುಣವಾದ ಸ್ಥಳ ನೋಡಿ ಕುಳಿತುಕೊಳ್ಳಬೇಕಾಗುತ್ತದೆ. ರಾಜನನ್ನು ಕಾಣಲು ಬಂದವರು 'ವಿನಯ ವಿನಮಿತರಾಗಿ ಅವನೀತಳದೊಳ್ ಮೆಯ್ಯಿಕ್ಕಿ ನೊಸಲ್ ನೆಲಸಂ ಮುಟ್ಟೆ ವಿನೆಗಂ ಪೊಡಮಟ್ಟು ಮುಕುಳಿತಕರಕಮಳರಾಗಿ' (3–31) ಇರಬೇಕು, 'ದೌವಾರಿಕ ನಿರ್ದಿಷ್ಟ ಪ್ರದೇಶ'ದಲ್ಲಿ (3–31 ವ) ಕುಳಿತುಕೊಳ್ಳಬೇಕು. ರಾಜಸಭೆಯ ಸದ್ದುಗದ್ದಲಗಳನ್ನು ಹತೋಟಿಯಲ್ಲಿಡಲು ಕೋಲುಕಾರರು 'ಪರ ವೇತ್ರಾಯತಕರರ್' (3–30) ಸಿದ್ಧರಾಗಿರುತ್ತಾರೆ. ದೊರೆಯನ್ನು ಕಾಣಲು ಬಂದವರನ್ನು ಒಳಗೆ ಬಿಡಬಹುದೆ ಎಂಬುದನ್ನು ದ್ವಾರಪಾಲಕರು ರಾಜನ ಅನುಕೂಲ–ಸಮಯ ಅರಿತು ಹೇಳುತ್ತಾರೆ. ಮಂತ್ರಶಾಲೆ, ನೃತ್ಯಶಾಲೆ, ಸಂಗೀತಶಾಲೆ, ವ್ಯಾಯಾಮಶಾಲೆ, ಚಿತ್ರಶಾಲೆ, ಆಯುಧಶಾಲೆ, ಅಶ್ವ–ಗಜಶಾಲೆ––ಹೀಗೆ ವಿವಿಧ ವಿಭಾಗಗಳು ಅರಮನೆಯ ಭಾಗಗಳು. ಮಂತ್ರಿ, ಸೇನಾನಿ, ಕೋಶಾಧ್ಯಕ್ಷ (2–70 ವ), ಪೆರ್ಗಡೆ (3–93)—ಹೀಗೆ ರಾಜನ ಪರಿವಾರ ಶ್ರೇಣಿ ಇರುತ್ತದೆ. ಕನ್ನೆಮಾಡ, ಪೆಂಡವಾಸ (3–54), ಕನ್ಯಾಂತಃಪುರ (3–60 ವ) ಪ್ರತ್ಯೇಕ. ಕಿರಿಯರಸಿ, ಪಿರಿಯರಸಿ (5–23 ವ) ಎಲ್ಲಾ ಇರುತ್ತಾರೆ. ರಾಜನದು ದೊಡ್ಡ ಕುಟುಂಬ. ಆ ಅಪಾರ ಸಂಸಾರದ ಕಷ್ಟಸುಖ ಅವನಿಗೇ ಗೊತ್ತು (3–80 ರಿಂದ 83). ನೆಲದೊಡೆಯನಿಗೆ ಬೇಟೆಯ ಬಿನದಗಳುಂಟು (7–91 ವ, 102), ವಾರಿವಿಹಾರ ಕೇಳಿಗಳುಂಟು (8–25). ಆದರೆ ಇವು ಅವನ ಬಿಡುವಿನ ವೇಳೆಯ ವಿನೋದ ವಿಲಾಸಗಳು. ರಾಜನ ಪ್ರಮುಖ ಕರ್ತವ್ಯ ಪ್ರಜಾಪಾಲನೆ (5–25).

ಇದುವರೆಗೆ ಕೊಟ್ಟಿರುವ ಮಾಹಿತಿಗಳಿಂದಾಗಿ ಪೊನ್ನನಿಗೆ ಇದ್ದ ರಾಜಜೀವನದ ಪರಿಚಯ, ಮಾಹಿತಿ, ಪ್ರಜ್ಞೆ ಎಷ್ಟೆಂಬುದು ತಿಳಿದುಬರುತ್ತದೆ. ಅರಮನೆಯ ಸೂಕ್ಷ್ಮಗಳನ್ನು ಪೊನ್ನ ಗ್ರಹಿಸಿದ್ದಾನೆಂಬುದಷ್ಟೇ ನಮಗೆ ಬೇಕಾದ್ದು. ಇದರ ಜತೆಗೆ ಇಲ್ಲಿ ಹೇಳಿ ಮುಗಿಸಬೇಕಾದ ಮತ್ತೊಂದು ಹೆಚ್ಚಿನ ಮಾತಿದೆ. ಅದೆಂದರೆ ದೂತನ ಕರ್ತವ್ಯ ಕುರಿತ ಭಾಗ. ಪೊನ್ನ ಇದನ್ನು ಸ್ವಲ್ಪ ತಾದಾತ್ಮ್ಯದಿಂದ ತಂದಿದ್ದಾನೆಂಬ ಕಾರಣಕ್ಕಾಗಿಯೂ, ಅಸಗ–ಗುಣಭದ್ರರಲ್ಲಿರುವುದಕ್ಕಿಂತ ಆತ್ಮೀಯ ವಿವರಗಳಿಂದ ಮೈತುಂಬಿಕೊಂಡು ವ್ಯಕ್ತವಾಗಿರುವುದರಿಂದಲೂ ಇದಕ್ಕೆ ಮಹತ್ವ ಒದಗಿದೆ.

ರಾಜನ ರಾಜ್ಯಪಾಲನೆಯ ಯಶಸ್ವೀ ನಿರ್ವಹಣೆಗೆ ಸಾಕಷ್ಟು ಸವಾಲುಗಳಿರುತ್ತವೆ. ಹೆಜ್ಜೆ ಹೆಜ್ಜೆಗೆ ಎಡರು ತೊಡರುಗಳು ಅಡರಿಕೊಳ್ಳುತ್ತವೆ. ಅವನ್ನು ಉಪಾಯಗಳಿಂದ ನಿವಾರಿಸಿಕೊಳ್ಳಬೇಕು. ಸಮಸ್ಯೆ ಎಷ್ಟೇ ಗಂಭೀರ ಸ್ವರೂಪದ್ದಾದರೂ ಪರಿಹಾರ ಇದ್ದೇ ಇರುತ್ತದೆ, ಸಂಧಾನದ ದಾರಿ ತೆರೆದಿರುತ್ತದೆ. ಶತ್ರುರಾಜನ ಕಡೆಯಿಂದ ಬಂದ ರಾಜದೂತನನ್ನು ಕೂಡ ಹಲವು ರೀತಿಗಳಲ್ಲಿ ತನ್ನ ವಶಕ್ಕೆ ತಂದುಕೊಳ್ಳಲು ಸಾಧ್ಯವಿದೆ. ದೂತನ ಪಾತ್ರ ಮಹತ್ತರವಾದುದು. ಶ್ರೇಷ್ಠ ಬಹುಶ್ರುತ ಸಚಿವನಿಗೆ ಸರಿದೊರೆಯಾದುದು ದೂತನ ಸ್ಥಾನಮಾನ. ದೂತರ ತಂಡವೇ ಹೊರಟಾಗ ದೂತಮುಖ್ಯನಿರುತ್ತಾನೆ (3–73 ವ). ದಮಿತಾರಿಚಕ್ರವರ್ತಿಯ ಪರವಾಗಿ ಬಂದ ಒಬ್ಬ ದೂತನ ಪಾತ್ರವನ್ನು ಸೂಕ್ಷ್ಮವಾಗಿ ಅರ್ಥ ಹಾಗೂ ಧ್ವನಿ ಪೂರ್ಣವಾಗಿ ಪೊನ್ನ ತಂದಿದ್ದಾನೆ. ದೂತನ ಮಾತು, ಕೃತಿ, ಆತ ಪ್ರತಿನಿಧಿಸುವ ದೊರೆಯ ಮರ್ಯಾದೆ, ರಹಸ್ಯ, ಮನಸ್ಸು—ಇವನ್ನು ಬಿಟ್ಟುಕೊಡಬಾರದು. ನಡೆನುಡಿಗಳು ಗಾಂಭೀರ್ಯ ಗೌರವ ಘನತೆಗಳ ಎತ್ತರದಲ್ಲೇ ಇರಬೇಕು. ದೂತನು ರಾಜನೀತಿಯ ಸಾರವನ್ನು ಅರಿತಿರಬೇಕು. ಶಾಸ್ತ್ರಗಳ ಪರಿಚಯ ಪಡೆದಿರಬೇಕು. ಅರಸರ ಅಂತರಂಗ ತಿಳಿದಿರಬೇಕು. ಪೂಜ್ಯನೆನಿಸಿಕೊಂಡಿರಬೇಕು. ಪಂಡಿತನಾಗಿರಬೇಕು (2–54, 55, 56). ಗಂಭೀರ ನುಡಿ ನಡೆಯವನಾಗಿರಬೇಕು :

ಆದಿಯ ದಂಡದ ನುಡಿಗಳ
ನಾದೂತಂ ಮುನ್ನೆ ನುಡಿದು ಬಟಿಯುಂ ಸಾಮ
ಪ್ರಾದುರ್ಭಾವಂ ಗೆಯ್ದುದ
ನೇದೊರೆಯರುಮಱಿಯರೇನವಂ ಪರಿಣತನೋ ॥ 2–57

ಇನಿವಿಱಿದು ಸಭೆಯೊಳಾವನ
ಮನೋಭಿಮತಮಾವುದದನೆ ವದನೇಂಗಿತದಿಂ
ಮನದಿಂ ಮುನ್ನಱಿವನದೇ
ನನೂನ ನಿಶಿತಾಗ್ರಮತಿ ವಿನೂತನೊ ದೂತಂ ॥ 2–58

" ಮೊದಲು ದಂಡೋಪಾಯದ ನುಡಿಗಳನ್ನು ಆಡಿ ಆ ಬಳಿಕ ಸಾಮೋಪಾಯವನ್ನು ನುಡಿದ ಆ ದೂತನ ಚಾತುರ್ಯ ಎಂತಹುದು. ಎಂಥವರಿಗೂ ಅವನ ಈ ವಿಧಾನ ಹೊಳೆಯಲಾರದು. ಇಷ್ಟು ದೊಡ್ಡ ಸಭೆಯಲ್ಲಿ ಯಾರು ಯಾರ ಮನಸ್ಸು ಏನೆಂಬುದನ್ನು ಅವರವರ ಮುಖಮುದ್ರೆಯಿಂದಲೇ ಮನೋವೇಗಕ್ಕಿಂತಲೂ ತೀವ್ರತರವಾಗಿ ದೂತನು ತಿಳಿಯ ಬಲ್ಲವನು. ಆ ದೂತನು ಇನ್ನೆಂತಹ ಸೂಕ್ಷ್ಮವಾದ ಕುಶಾಗ್ರಬುದ್ಧಿಯವನು"—ಇದು ಒಬ್ಬ ದೂತಶ್ರೇಷ್ಠನಿಗೆ ಸಂದ ನುಡಿಗೌರವ. ದೂತನು ನಿಶಿತಮತಿಯಾದವನಾದರೂ ಅವನನ್ನು ತನ್ನ ಕಡೆಗೆ ತಂದುಕೊಳ್ಳಬೇಕಾದದ್ದು ರಾಜನ ಜಾಣ್ಮೆಗೆ ಬಿಟ್ಟದ್ದು. ದಾನ ಸನ್ಮಾನಾದಿಗಳಿಂದ ದೂತನ ಮನ ಒಲಿಸಿಕೊಳ್ಳಬೇಕು (2–69). ದಾನಕ್ಕೆ ಸನ್ಮಾನಕ್ಕೆ ಉಡುಗೊರೆಗಳಿಗೆ ವಶರಾಗದವರು, ಪ್ರಸನ್ನರಾಗದವರು ಯಾರು (2–72)? ಪೊನ್ನಕವಿ ದೂತನ ಕರ್ತವ್ಯ, ಹೊಣೆಗಾರಿಕೆ ಕುರಿತು ಸೊಗಸಾದ ಮಾಹಿತಿಗಳನ್ನು ಇನ್ನೂ ಸಾಕಷ್ಟು ಕೊಟ್ಟಿದ್ದಾನೆ (2–77 ವ, 2–80 ಇತ್ಯಾದಿ).

ಪೊನ್ನ ಮತ್ತು ಜೈನಧರ್ಮ

ಧರ್ಮದ ವಲಯ–ವ್ಯಾಪ್ತಿ ಬಹು ದೊಡ್ಡದು. ಅದರ ನೆರಳು ಇಡೀ ಸಮಾಜದ ಮೇಲೆ ಬಿದ್ದಿರುತ್ತದೆ. ಮನುಷ್ಯನ ಬದುಕಿಗೂ ಧರ್ಮಕ್ಕೂ ಒಂದು ಬಗೆಯ ಆಂತರಿಕ ಸಂಬಂಧವಿರುತ್ತದೆಂಬ ಕಾರಣದಿಂದಾಗಿ ಧರ್ಮವನ್ನು ನಿರಾಕರಿಸು ವಂತಿಲ್ಲ, ಧರ್ಮ ಜನತೆಯ ಉಸಿರಾಗಿರುವ ಸಂದರ್ಭದಲ್ಲಿ; ಸಮಾಜವೇ ಸಾಹಿತ್ಯದ ಸಾಹಿತಿಯ ವಸ್ತುವಾಗಿರುತ್ತದೆ ಯಾಗಿ ಧರ್ಮವನ್ನು ಸಾಹಿತ್ಯ (ತಿ) ಅಲಕ್ಷಿಸುವಂತಿಲ್ಲ. ಆದರೆ ಒಬ್ಬ ಲೇಖಕ ಧರ್ಮದ ವಸ್ತುವೊಂದನ್ನು ಆಯ್ದು ಕೊಂಡ ಮಾತ್ರಕ್ಕೇ ಆತ ಧರ್ಮಪ್ರಚಾರಕನಾಗಬೇಕಾಗಿಲ್ಲ. ಧರ್ಮಪ್ರಚಾರವೇ ಆ ಕೃತಿಯ ವಸ್ತುವಾದರೆ ಅದು ಕೇವಲ ಧರ್ಮಪ್ರಚಾರದ ಕೃತಿಯಾಗುತ್ತದೆ ಹೊರತು ಉತ್ತಮ ಸೃಜನಶೀಲ ಸಾಹಿತ್ಯ ಕೃತಿಯಾಗದು. ಧರ್ಮ ಸಾಹಿತ್ಯದೊಡನೆಯೇ ಅಲ್ಲದೆ ಕಲೆಯ ಜತೆಯೂ ಸಂಗೀತದ ಜತೆಯೂ ಸಂಬಂಧ ಹೊಂದಿರುತ್ತದೆ; ಅಜಂತ ಎಲ್ಲೋರದ ದೇವಾಲಯಗಳಿವೆ. ಅಲ್ಲಿಯೂ ಶ್ರೇಷ್ಠವಾದ ಕಲೆ ಧರ್ಮ ಅಪೇಕ್ಷಿತವಾದ ನಿರ್ದಿಷ್ಟ ಸಂಗತಿಯಷ್ಟನ್ನೇ ಸಾರದೆ ಅದಕ್ಕೂ ಮೀರಿದ ಮಾನವೀಯ ಸಂಘರ್ಷದ ಸತ್ವವನ್ನು ಪ್ರತಿಪಾದಿಸುತ್ತದೆ.

ಸಾಹಿತ್ಯದ ಸಂದರ್ಭದಲ್ಲೂ ಅಷ್ಟೆ. ಪಂಪನ ಆದಿಪುರಾಣ ಜೈನಧರ್ಮದ ಕಾವ್ಯ, ಆದರೂ ಅದು ಜೈನಮತವನ್ನು ಮಾತ್ರ ಪ್ರತಿಪಾದಿಸಲಿಲ್ಲ. ರಾಜತ್ವದ ವೈಭವ ವಿಲಾಸಗಳಂತೆ ಅಲ್ಲಿನ ಕೊಳಕು ಅಸಹ್ಯ ಭೋಗ ಪ್ರದರ್ಶಿಸಿ ರಾಜತ್ವಕ್ಕೆ ಸರ್ವಾಧಿಕಾರಕ್ಕೆ ಘಾತಕೊಡುವ ಧ್ವನಿಯೂ ಹೊಳಲಿಟ್ಟಿದೆ.

ಪೂರ್ಣವಾಗಿ ಮಹಾಭಾರತ ರಾಮಾಯಣಗಳಷ್ಟಲ್ಲದಿದ್ದರೂ ಅದಕ್ಕೆ ದ್ವಿತೀಯ ಸ್ತರದಲ್ಲಿ ಮಹಾಪುರಾಣ ನಿಲ್ಲುತ್ತದೆ. ಇದು ಧಾರ್ಮಿಕ ಕೃತಿಯೆಂಬುದು ನಿಜ. ಆದರೆ ಅಷ್ಟರಲ್ಲೇ ಇದು ಪರ್ಯವಸಾನವಾಗಿಲ್ಲ. ಮಹಾಪುರಾಣ ಏಕ ಕವಿ

ಕೃತವಲ್ಲ. ಇಬ್ಬರ ಕೈವಾಡವಿದೆ. ಆದರೆ ಆಳವಾಗಿ ಇನ್ನೂ ಒಳಹೊಕ್ಕು ನೋಡಿದರೆ ಇದರ ಕಥೆ ಹಳೆಯದು, ಪರಂಪರೆಯಿಂದ ಹರಿದುಬಂದಿರುವುದು. ಹಲವು ತಲೆಮಾರಿನ ಜನ ತಮ್ಮ ಆಶೋತ್ತರಗಳನ್ನು, ದುಃಖ ದುಮ್ಮಾನ ಕನಸುನನಸುಗಳನ್ನು ತೋಡಿಕೊಂಡ ಕತೆಗಳು ಹೆಣೆದುಕೊಂಡಿವೆ.

ಧರ್ಮ ಮನುಷ್ಯನನ್ನು ಒಂದು ನೈಷ್ಠಿಕ ವಲಯಕ್ಕೆ ಹಿಡಿದು ನಿಲ್ಲಿಸುತ್ತದೆ; ಹಾಗೆ ಆತ ಅದಕ್ಕೊಳಪಟ್ಟಾಗ ಸಹಜ ಸ್ವಭಾವಗಳು ವಿಕಸನಗೊಳ್ಳದಿರುವ ಅಪಾಯವಿರುತ್ತದೆ. ಆದರೆ ಸಾಹಿತ್ಯ ಮಾನವನ ಜೀವನವನ್ನು ನಿರುಪಾಧಿಕವಾಗಿ ಮಾನವೀಯವಾಗಿ ಮೂಡಿಸುವ ಸಾಧ್ಯತೆಯನ್ನು ತೆರೆಯುತ್ತದೆ. ಧರ್ಮ ಆತ್ಯಂತಿಕ ಸತ್ಯ ನಿರೂಪಿಸುತ್ತದೆ. ಸಾಹಿತ್ಯ ಎಲ್ಲ ವಿವರಗಳನ್ನಿತ್ತು ಫಲಿತಾಂಶ ತೀರ್ಪು ಆಯ್ಕೆಗಳನ್ನು ವ್ಯಾಸಂಗಶೀಲರಿಗೆ ಬಿಡುತ್ತದೆ. ಧಾರ್ಮಿಕ ಪರಿಭಾವನೆಯಲ್ಲಿ 'ದೇವರು' ಒಬ್ಬನೇ ಪೂಜನೀಯ, ಪರಮಪೂಜ್ಯ. ಆದರೆ ಸಾಹಿತ್ಯಕ್ಕೆ ಮನುಷ್ಯನ ಎಲ್ಲ ಚಟುವಟಿಕೆಗಳ ಜತೆಗೆ ದೇವರೂ ಇರುತ್ತಾನೆ. ಧರ್ಮ ಮನುಷ್ಯನ ಸ್ವಾತಂತ್ರ್ಯಗಳನ್ನು ಕಿತ್ತುಕೊಂಡು ಕಟ್ಟುಪಾಡುಗಳನ್ನು ಹೇರುವುದೂ ಉಂಟು. ಸಾಹಿತ್ಯದಲ್ಲಿ ಬಂಧನಗಳು ಕಳಚಿಬೀಳುತ್ತವೆ, ಇಲ್ಲಿ ಧರ್ಮಶೋಧನೆ ಮನುಷ್ಯ ಸಮಾಜದ ನೆಲೆಯಲ್ಲೇ ನಡೆಯುತ್ತದೆ. ಆಗ ಅವನ ಬರವಣಿಗೆ ಧಾರ್ಮಿಕ ಕೃತಿಯಾಗದೆ ಮಾನವಿಕ ಕೃತಿಯಾಗುತ್ತದೆ.

ಕಳೆದ ಹಲವಾರು ಶತಮಾನಗಳಿಂದಲೂ ಭಾರತದ ಬದುಕಿನಲ್ಲಿ ಮತಧರ್ಮಗಳು ಅತ್ಯಂತ ಗಾಢವಾಗಿ, ಗೂಢವಾಗಿ ಕಾಡುತ್ತಾ ಬಂದಿವೆ. ಕನ್ನಡ ಸಾಹಿತ್ಯವನ್ನು ಉದ್ದಕ್ಕೂ ನಿಯಂತ್ರಿಸಿಕೊಂಡು ಬಂದಿರುವ ಶಕ್ತಿ ಸಂಗತಿಗಳಲ್ಲಿ ಮತಧರ್ಮ ಗಣ್ಯ, ಗಮನಾರ್ಹ. ಕನ್ನಡ ಸಾಹಿತ್ಯದ ಏರುಪೇರುಗಳ ಮೇಲೆ ಮತದ ಪ್ರಭಾವ ತುಂಬ ದಟ್ಟವಾಗಿ ಹೆಪ್ಪುಗಟ್ಟಿದೆ. ಮತದ ಮುಂದೆ ಅದನ್ನು ಹತ್ತಿಕ್ಕುವ ಎಲ್ಲ ಪ್ರಯತ್ನಗಳೂ ಸೋತಿವೆ, ಅದರ ಎದುರಿನಲ್ಲಿ ಎಲ್ಲ ಚಳುವಳಿಗಳೂ ಕರಗಿ ಹೋಗಿವೆ. ಇವೆಲ್ಲ ವೈಫಲ್ಯದ ಸಾರಾಂಶವಿಷ್ಟು—ಸಾಹಿತ್ಯವನ್ನು ಇನ್ನೂ ಮತ ತನ್ನ ಭದ್ರಮುಷ್ಟಿಯಲ್ಲೇ ಹಿಡಿದಿದೆ. ಅದರ ಬಿಗಿಹಿಡಿತದಿಂದ ಬಿಡಿಸಿಕೊಳ್ಳಲು ಹೆಣಗಾಡಿದವರು ಕಡಮೆ. ಅದರಿಂದ ಧರ್ಮಕ್ಕೆ ಅಧೀನವಾಗಿ ಎರಡನೆಯ ಸಾಲಿನಲ್ಲಿ ಸಾಹಿತ್ಯ ನಡೆದುಕೊಂಡು ಬಂದಿದೆ. ಕನ್ನಡದಲ್ಲಿ ಎಲ್ಲ ಧರ್ಮದ ಕವಿಗಳೂ, ಸಾಹಿತ್ಯವೂ ಇದನ್ನೇ ಪುಷ್ಟೀಕರಿಸಿದ್ದಾಗಿದೆ.

ಜೈನಕವಿಗಳನ್ನು ತೆಗೆದುಕೊಂಡರೆ, ಅವರು ಕೂಡ ಹೇಗೆ ಈ ಧರ್ಮಪಾಲನೆ ನಿಯಮಕ್ಕೆ ಹೊರತಾಗದೆ ನಡೆದುಕೊಂಡಿದ್ದಾರೆಂಬುದು ಸ್ವಯಂಸ್ಪಷ್ಟ. ಪೊನ್ನನಲ್ಲಿ ನಾವು ನಿರೀಕ್ಷಿಸುವ ಅಂಥ ಕಾಳಜಿ, ಸಂಘರ್ಷ ಇಲ್ಲ. ಪರಂಪರೆಯ ಕಟ್ಟುಪಾಡುಗಳು ಕಟ್ಟಿಕೊಟ್ಟ ಇಲ್ಲವೇ ಹೇರಿದ ಮಿತಿಗಳಿಂದ ಹೊರಬರಲು ಆತ ಮಿಸುಕಾಡಿಲ್ಲ. ಪೊನ್ನ ಸುಮ್ಮನೆ ಕಣ್ಮುಚ್ಚಿಕೊಂಡು ಧರ್ಮದ ಮೇಲ್ಮೆ ಒಪ್ಪಿಕೊಂಡವನು. ಧಾರ್ಮಿಕ ವಿಚಾರ ಬಂತೆಂದರೆ ಸಾಕು ಅಲ್ಲಿಗೆ ಅವನ ಸ್ವತಂತ್ರ ವಿಜಿಗೀಷು ಆಲೋಚನಾಶಕ್ತಿ ಸ್ಥಗಿತ. ಪುರಾಣಗಳ ಉಕ್ತಿ ವಿಚಾರಗಳನ್ನು ಗುಹಾಧ್ವನಿಯಾಗಿ ಅನುರಣಿಸುತ್ತಾನೆ, ಅರಗಿಳಿಯಾಗಿ ಪುನರುಕ್ತಿಸುತ್ತಾನೆ. ಅಪ್ರತಿಹತ ಕಾವ್ಯಪ್ರತಿಭೆಗೆ ಇಂಥ ಕಡೆಗಳಲ್ಲಿ ಪರ್ವತಾರಣ್ಯಗಳ ಸ್ವಚ್ಛಂದವಿಲ್ಲ, ಸ್ವೇಚ್ಛೆಯಿಲ್ಲ. ಅಂದಚಂದಗಳು ಅಲ್ಲಲ್ಲಿ ಕಂಡರೂ ಅದು ಅರಮನೆ ಗುರುಮನೆಗಳ ಶಿಸ್ತುಸಂಯಮ ಕಟ್ಟುಪಾಡುಗಳಿಗೆ ಒಳಪಟ್ಟ ಒಪ್ಪ ಓರಣವಾಗಿರುತ್ತದೆ. ನಗರ ನಗರಿ ನದು ರಾಜೂಕುಗಳಿವೆಯಾದರೂ ನಿಸರ್ಗದೊಡಲಿನಲ್ಲಿ ಅನಿರ್ಬಂಧಿತವಾಗಿ ಉಸಿರಾಡುವ ಸಹಜ ಧಾರಾಳತೆ ಶಾಂತಿಪುರಾಣದಲ್ಲಿ ಮಾಯವಾಗಿದೆ. ಅಕುಟಿಲ ಆನಂದ ಎಷ್ಟು ಮರೆಯಾಗಿದೆ ಎಂಬುದನ್ನು ವಿಮರ್ಶೆಯಿಂದ ಮನಗಾಣಬಹುದು. ಇಂಥ ಮತೀಯ ಕಾವ್ಯರಚನೆಗೆ ತೊಡಗುವ ಕವಿಕ್ರಿಯೆ ಮೊದಲೇ ಕೈ ಕಟ್ಟಿಸಿಕೊಂಡು ಕಸರತ್ತು ಮಾಡಿದಂತೆ, ಜೈನಪುರಾಣ ಬರೆಯುವ ಕವಿಯ ಕೆಲಸವೂ ಅಷ್ಟೆ. ಜೈನರು ಭೋಗವನ್ನು ನಿರಾಕರಿಸಿದವರಲ್ಲ, ಭೋಗವನ್ನು ಒಪ್ಪಿಕೊಂಡೂ ವೈರಾಗ್ಯಕ್ಕೆ ಮಹತ್ವ ಕೊಟ್ಟವರು.

ಶಾಂತಿಪುರಾಣ : ಜೈನಧರ್ಮ ಕೈಪಿಡಿ

ಕರ್ನಾಟಕ ಜೈನಧರ್ಮಕ್ಕೆ ಆಗರ, ತವರುಮನೆ. ಇಲ್ಲಿನ ಒಂದು ಶಾಸನ ಹೇಳುವಂತೆ ಕನ್ನಡನಾಡು 'ಜಿನಧರ್ಮಾವಾಸಮಾದತ್ತು'. ಕ್ರಿ.ಪೂ. ಆರು–ಐದನೆಯ ಶತಮಾನದಿಂದಲೂ ಇಲ್ಲಿ ಜಿನಧರ್ಮ ಅಂಕುರಿಸಿ ಪಲ್ಲವಿಸಿದಂತೆ ತೋರುತ್ತದೆ. ಕ್ರಿಸ್ತಶಕ ಆರಂಭದ ವೇಳೆಗಂತೂ ಅದು ಇಲ್ಲಿ ಚೆನ್ನಾಗಿ ನೆಲೆಯೂರಿತ್ತು. ಅಲ್ಲಿಂದ ಇಲ್ಲಿಯವರೆಗೆ ಈ ಅಹಿಂಸಾಧರ್ಮದ ವಿಕಾಸ ಚರಿತ್ರೆ ತಿಳಿಸುವ ದಾಖಲೆಗಳು ಅನಂತವಾಗಿ, ಅವಿರತವಾಗಿ ಸಿಗುತ್ತವೆ.

ಪೊನ್ನನ ಕಾಲಕ್ಕಾಗಲೆ ಜೈನಧರ್ಮ ಕರ್ನಾಟಕದಲ್ಲಿ ತನ್ನ ಶಿಖರ ಸ್ಥಿತಿಗೇರಿತ್ತು. ಮೌರ್ಯರ ಮೂಲಕ ಕರ್ನಾಟಕಕ್ಕೆ ಪ್ರಸರಿಸಿದ ಜಿನಧರ್ಮ ಅನಂತರ ಕದಂಬರು ಶಾತವಾಹನರ ಪರಿಮಿತ ನೆರವಿನಲ್ಲಿ ಉಸಿರಾಡುತ್ತಾ ಗಂಗರ ಕಾಲದಲ್ಲಿ ತೋರವಾಗಿ ಬೆಳೆದು ನಿಂತಿತು. ಎಲ್ಲರ ಮನೆಮಾತಾಗಿ ನೋಡುವವರ ಕಣ್ಣು ಕೋರೈಸುವ ಕಾಂತಿಯಿಂದ ರಾಷ್ಟ್ರಕೂಟರ ಬೆಂಬಲ ಪಡೆದು ಅಹಿಂಸಾಧ್ವಜ ಹಾರಾಡತೊಡಗಿತು. ಜಿನಧರ್ಮದ ಆಕರಗ್ರಂಥ ಧವಳದ ರಚನೆಗೆ ಕಾರಣನಾದ ಅತಿಶಯಧವಳ ರಾಷ್ಟ್ರಕೂಟ ಚಕ್ರವರ್ತಿ ನೃಪತುಂಗನ ಕಾಲದಲ್ಲೇ! ಕನ್ನಡದ ಎಲ್ಲ ಜೈನಪುರಾಣಗಳ ತಲಕಾವೇರಿ ಮಹಾಪುರಾಣವೂ ಸಿದ್ಧವಾಯಿತು. ನೃಪತುಂಗನ ಮೊಮ್ಮಗನೇ ಮುಮ್ಮಡಿ ಕೃಷ್ಣ, ಈತ ಪೊನ್ನನಿಗೆ ಉಭಯ ಭಾಷಾ ಕವಿಚಕ್ರವರ್ತಿ ಎಂಬ ಬಿರುದುಕೊಟ್ಟು ಸನ್ಮಾನಿಸಿದ ಚಕ್ರವರ್ತಿ. ಜೈನಕಾವ್ಯಗಳು, ಕವಿಗಳು, ರಾಜಮಹಾರಾಜ ಸಾಮಂತ ಆಶ್ರಿತ ಮನ್ನೆಯರು, ಶಿಲ್ಪ ವಾಸ್ತು ಚಿತ್ರ—ಹೀಗೆ ಎಲ್ಲೆಲ್ಲೂ ಜೈನ ವಾತಾವರಣ ಶ್ರೀಮಂತವಾಗಿ ಕರ್ನಾಟಕದ ಚೂಡಾಮಣಿಯಾಗಿ ತೂಗಿ ತೊನೆಯುತ್ತಿದ್ದ ಅನುಕೂಲಕರವಾದ ಆನಂದದ ವೇದಿಕೆ ಅಣಿಯಾಗಿದ್ದಾಗ ಅದರ ಮೇಲೆ ಪೊನ್ನ ಕಾಣಿಸಿಕೊಂಡ.

ಜೈನಧರ್ಮದ ಸಿದ್ಧಾಂತವನ್ನು ಜನಸಾಮಾನ್ಯರ ಬಳಿಗೆ ತೆಗೆದುಕೊಂಡುಹೋಗಲು ಆಯಾ ಭಾರತೀಯ ಭಾಷಾಮಾಧ್ಯಮಗಳನ್ನು ಸ್ಥಳೀಯ ಕವಿಗಳು ಅಳವಡಿಸಿಕೊಂಡರು. ಇದರಿಂದ ಅವರು ಅನಿವಾರ್ಯವಾಗಿ ಸ್ಥಳೀಯ ಭಾಷಿಕ, ಸಾಂಸ್ಕೃತಿಕ, ಸಾಮಾಜಿಕ, ಚಾರಿತ್ರಿಕ ಲಕ್ಷಣಗಳನ್ನು ಚೆನ್ನಾಗಿ ಮೈಗೂಡಿಸಿಕೊಂಡರು. ಇಲ್ಲಿನ ಭಾಷೆ ಬಣ್ಣ ಬದುಕುಗಳನ್ನು ಒಪ್ಪಿಕೊಂಡು ಈ ಪರಿಸರದಲ್ಲಿ ಹಾಸುಹೊಕ್ಕಾಗಿ ಬೆರೆತರು. ಕ್ರೈಸ್ತಧರ್ಮ ಪ್ರಚಾರಕರು ಸಾವಿರ ವರ್ಷದ ಮೇಲೆ ಮಾಡತೊಡಗಿದ ಕೆಲಸದ ಮಾದರಿಯನ್ನು ಜೈನರು ಬಹಳ ಹಿಂದೆಯೇ ಭಾರತದಲ್ಲಿ ಮಾಡಿ ಮುಗಿಸಿದ್ದರೆಂದು ಸ್ಥೂಲವಾಗಿ ಹೇಳಬಹುದು. ಕನ್ನಡ ಜೈನಪುರಾಣ ಲಕ್ಷಣ ಸ್ವರೂಪ ಹೇಗಿರಬೇಕೆಂಬುದಕೂ ಪೊನ್ನನ ಶಾಂತಿಪುರಾಣದ ವೇಳೆಗೆ ಸಿದ್ಧ ಚೌಕಟ್ಟು ಏರ್ಪಟ್ಟಿತ್ತು. ಶಾಂತಿಪುರಾಣದಲ್ಲಿ ಸಾಮಾನ್ಯರ ಬದುಕಿನ ಚಿತ್ರಗಳು ಕಡಮೆ. ಕಪಿಲ, ಸತ್ಯಭಾಮೆ, ಪೃಥಿವಿಶ್ರೀ ಮುಂತಾದ ಕೆಲವು ಪಾತ್ರಗಳನ್ನು ಬಿಟ್ಟರೆ ಹೆಚ್ಚಿನ ಪಾತ್ರಗಳೆಲ್ಲ ಅರಮನೆ ಸುಖಜೀವನಕ್ಕೆ ಸೇರಿದವರು. ತೀರ ಇತ್ತೀಚಿನವರೆಗೂ ಭಾರತದೇಶದ ಎಲ್ಲ ಪ್ರಾಂತಗಳಲ್ಲೂ ರಾಜರ ಆಳಿಕೆಯಿತ್ತು. ನಮ್ಮ ದೇಶ ಪ್ರಭುಪಾಲನೆ ಪದ್ಧತಿಯನ್ನು ಮೊದಲಿಂದಲೂ ಗೌರವದಿಂದ ಸ್ವೀಕರಿಸಿದೆ. ದೊರೆಯನ್ನು ಜಂಗಮ ದೇವರೆಂದೇ ತಿಳಿದು ಭಕ್ತಿ ತೋರುತ್ತಿದ್ದರು. ರಾಜಾ ಪ್ರತ್ಯಕ್ಷ ದೇವತಾ ಎಂಬುದು ಆಸೇತುಹಿಮಾಚಲ ಅನುರಣನವಾದ ಅಭಿಪ್ರಾಯ. ಒಂದು ಕಡೆ ರಾಜನನ್ನು, ಇನ್ನೊಂದು ಕಡೆ ದೈವವನ್ನು ಒಪ್ಪಿಕೊಂಡೇ ಈ ದೇಶದ ಬದುಕು ಮುಂದುವರಿದುಕೊಂಡು ಬಂದಿದೆ. ಇದನ್ನು ಇಂದು ನಾವು ಒಪ್ಪುವುದು ಬಿಡುವುದು ಇಲ್ಲಿಗೆ ಅಪ್ರಸ್ತುತ. ಕೇವಲ ಚಾರಿತ್ರಿಕ ದೃಷ್ಟಿಯಿಂದ ಪರಿಶೀಲಿಸುವುದು ಒಂದು ಪರಿಮಿತ ಉದ್ದೇಶವಾಗಿರುವ ಈ ವಿವೇಚನೆಯಲ್ಲಿ ಪ್ರಧಾನವಾಗಿ, ಸಮೀಕ್ಷೆಯಷ್ಟೇ ಅಡಕಗೊಂಡಿದೆ.

ಶಾಂತಿಪುರಾಣ ತೀರ ಸಾಮಾಜಿಕವೂ ಅಲ್ಲ, ಚಾರಿತ್ರಿಕವೂ ಅಲ್ಲ. ಜತೆಗೆ ಇದು ಶುದ್ಧಾಂಗವಾಗಿ ಪೌರಾಣಿಕವೂ ಅಲ್ಲ. ಇವೆಲ್ಲದರ ಒಂದು ಪರಿಪಾಕರೂಪದಲ್ಲಿ ಇರುವ ಆದರೆ ಪ್ರಮುಖವಾಗಿ ಅಲೌಕಿಕವಾಗಿರುವ ಪುರಾಣಕಾವ್ಯ,

ಇದರಲ್ಲಿ ನರರೂ, ಭೂಚರರೂ, ಖೇಚರರೂ, ವಿದ್ಯಾಧರರೂ, ಮುಕ್ತರೂ, ಬದ್ಧರೂ, ಎಲ್ಲರೂ ಬರುತ್ತಾರೆ. ಪ್ರಾಣಿಪಕ್ಷಿಗಳೂ ಬರುತ್ತವೆ. ಒಟ್ಟು ಕಥೆಯ ಕಲ್ಪನೆಗೆ, ಚೌಕಟ್ಟಿಗೆ, ಕವಿಯ ಆಶಯಕ್ಕೆ, ವಸ್ತುವಿನ ವ್ಯಾಪ್ತಿಗೆ ಒಳಪಡುವ ಎಲ್ಲ ವ್ಯಕ್ತಿಗಳೂ ಪಾತ್ರಗಳಾಗಿ ಕಾವ್ಯದ ಸಮಷ್ಟಿ ನೆಯ್ಗೆಯಲ್ಲಿ ಸಮಾವೇಶಗೊಂಡಿವೆ. ತೀರ್ಥಂಕರ ಜೀವದ ಊರ್ಧ್ವಯಾತ್ರೆ ಇಲ್ಲಿನ ಕೇಂದ್ರ ಬಿಂದು. ಅದರ ಸುತ್ತ ಆನುಷಂಗಿಕ ಜೀವವ್ಯಾಪಾರ ಚಿತ್ರಣ. ಹಲವು ಭವಗಳಲ್ಲಿ ಹಾದುಬರುವ ತೀರ್ಥಂಕರನೂ ಮಾನವನಾಗಿದ್ದಾಗ ದೇವನಾಗಿದ್ದಾಗ ರಾಜನಾಗಿ ಚಕ್ರವರ್ತಿಯಾಗಿ ವಿಜೃಂಭಿಸಿದ್ದೇ ಹೆಚ್ಚು. ಅದರಿಂದಲೂ,ಇತರ ಗೌಣಪತ್ರಗಳೂ ಹೆಚ್ಚಾಗಿ ಅರಮನೆಯ ಮೂಲಕವೇ ತಮ್ಮ ಜೀವನವ್ಯಾಪಾರ ನಡೆಸಿದವರಾದುದರಿಂದಲೂ ಇಲ್ಲಿ ಒಂದು ಪ್ರಭುನಿಷ್ಠ ಸಮಾಜದ ಚಿತ್ರವನ್ನು ದಟ್ಟವಾಗಿ ಕಾಣುತ್ತೇವೆ. ಇದರ ಇನ್ನೊಂದು ತುದಿಯಾಗಿ ತಪೋನಿಷ್ಠರಾದ ತ್ಯಾಗಸಂಯಮ ಜೀವನಕ್ಕೆ ಒಲಿದ ಮಹಾತ್ಮರ ಜೀವನೋನ್ನತಿಯನ್ನು ಕಾಣುತ್ತೇವೆ. ಈ ಎರಡು ತುದಿಗಳೂ ಎರಡು ಧ್ರುವಗಳು. ಭೋಗವನ್ನು ಅದರ ತುತ್ತತುದಿಯಲ್ಲಿರುವಷ್ಟು ಗಾಢವಾಗಿ, ತೀವ್ರವಾಗಿ, ಸಾಂದ್ರವಾಗಿ ಅನುಭವಿಸುವ ಜೀವವೊಂದು ಒಮ್ಮೆಲೇ ಅನಿರೀಕ್ಷಿತಗತಿಯಲ್ಲಿ ಭೋಗಸಮಸ್ತವನ್ನೂ ತೃಣಸದೃಶವೆಂದು ತಿಳಿದು ತ್ಯಜಿಸಿಬಿಡುವುದೂ ಅಲ್ಲಿಂದ ಒಮ್ಮೆಲೇ ವೈರಾಗ್ಯದ ಬದುಕಿಗೆ ತನ್ನನ್ನು ಪೂರ್ಣವಾಗಿ ಅರ್ಪಿಸಿಕೊಳ್ಳುವುದೂ ಶಾಂತಿಪುರಾಣವಲ್ಲೇ ಏಕೆ ಎಲ್ಲ ಜೈನಪುರಾಣಗಳಲ್ಲೂ ಸರ್ವೇಸಾಮಾನ್ಯವಾದ ವಿವರಣೆ.

ಭೋಗದ ಬದುಕು ಭೂಮಿಜರಿಗೆ ಮಾತ್ರ ಸೀಮಿತವಾದುದಲ್ಲ, ದೇವತೆಗಳಿಗೂ ಉಂಟು. ಭೋಗವೆಂದಾಗ ಅದು ಕೇವಲ ಹೆಣ್ಣುಗಂಡಿನ ನಡುವಣ ಶಾರೀರಕ ಇಲ್ಲವೇ ದಾಂಪತ್ಯ ರತಿಸುಖವಷ್ಟೇ ಎಂದು ಪರಿಮಿತಾರ್ಥದಲ್ಲಿ ಅನ್ವಯಿಸಿಕೊಳ್ಳಬೇಕಾದ್ದಿಲ್ಲ. ಲೌಕಿಕದಲ್ಲಿ ಎಷ್ಟೆಷ್ಟು ಪರಿಯಲ್ಲಿ ಸಂಪತ್ತು ಸುಖಗಳ ಸಮೃದ್ಧತೆಯನ್ನು ಪಂಚೇಂದ್ರಿಯಗಳ ಮೂಲಕ ಆಸ್ವಾದಿಸಿ ಅನುಭವಿಸಿ ಆನಂದಿಸಬಹುದೋ ಅದಷ್ಟನ್ನೂ ಒಳಗೊಂಡ ಭೋಗದ ಬದುಕಿಗೆ ವಿದಾಯ ಹೇಳುವುದು ಅಷ್ಟು ಸುಲಭದ ಮಾತಲ್ಲ. ಅದಕ್ಕೆ ಬೇಕು ಸ್ಖಲನೆಯಿಲ್ಲದ ಚಿತ್ತಸ್ಥೈರ್ಯ, ದೃಢನಿರ್ಧಾರ, ಅದ್ಭುತ ಪ್ರಮಾಣದ ಸಂಕಲ್ಪ. ತಪಸ್ಸಿನ ತೀವ್ರತೆಯೂ ಅಷ್ಟೇ ಕಠಿಣತರ. ದೇಹ ಸಂಬಂಧಿಯಾದ ಎಲ್ಲ ಮಮಕಾರಗಳ ಗ್ರಂಥಿಯನ್ನೂ ಕಿತ್ತೊಗೆದು ಇಲ್ಲಗೊಳಿಸಿ ನಿರ್ಗ್ರಂಥನಾಗುವುದು ಮಾಗಿ ಹಣ್ಣಾದ ಶಕ್ತಿಶಾಲಿ ಜೀವಕ್ಕಷ್ಟೇ ಸಾಧ್ಯ.

ಜೈನಧರ್ಮದ ಮಹಾನ್ ಮಾರ್ಗದರ್ಶಕರು ತೀರ್ಥಂಕರರು. ಚವ್ವೀಸ ತೀರ್ಥಂಕರರಲ್ಲಿ 16ನೆಯವನಾದ ಶಾಂತಿನಾಥನ ಚರಿತೆಯ ಕಾವ್ಯ ಪೊನ್ನನ ಶಾಂತಿಪುರಾಣ. 63 ಜನ ಮಹಾಪುರುಷರನ್ನು ತ್ರಿಷಷ್ಟಿ ಶಲಾಕಾಪುರುಷರೆಂದು ಜೈನಪುರಾಣಗಳು ಕೀರ್ತಿಸಿವೆ. ವಾಸ್ತವವಾಗಿ ಆ ಸಂಖ್ಯೆಯಲ್ಲಿ ಅರೆಕೊರೆಯೂ ಸೇರಿದೆ. 63ರ ಲೆಕ್ಕ ಹೀಗೆ: ತೀರ್ಥಂಕರರು 24, ಚಕ್ರವರ್ತಿಗಳು 12, ಬಲದೇವರು 9, ವಾಸುದೇವರು 9, ಪ್ರತಿವಾಸುದೇವರು 9—ಹೀಗೆ ಒಟ್ಟು 63 ಜನ. ಇವರಲ್ಲಿ ಕೆಲವರು (ಉದಾಹರಣೆಗೆ ಈ 16ನೆಯ ತೀರ್ಥಂಕರನಾದ ಶಾಂತಿನಾಥ) ತೀರ್ಥಂಕರರೂ ಹೌದು, ಚಕ್ರವರ್ತಿಯರೂ ಹೌದು, ಅದರಿಂದ 36 ಎಂಬ ಸಂಖ್ಯೆ ಸಮರ್ಪಕವಾಗಿಲ್ಲ. ಅದು ಹಾಗಿರಲಿ. ಜೈನಧರ್ಮದ ಅಹಿಂಸಾ ಸಿದ್ಧಾಂತ ಪ್ರತಿಪಾದನೆ ಶಾಂತಿಪುರಾಣದಲ್ಲಿ ಯಥೇಚ್ಛವಾಗಿದೆ. ಶಾಂತಿಪುರಾಣದಲ್ಲಿ ಎಲ್ಲೆಲ್ಲಿ ಜೈನಧರ್ಮ ಪ್ರತಿಪಾದನೆ ಬಂದಿದೆ ಎಂದು ಪಟ್ಟಿ ಮಾಡುವುದು ಸರಿಯಾಗುವುದಿಲ್ಲ. ಅದು ಕಾವ್ಯಾಭ್ಯಾಸಿಗಳಿಗೆ ಗೌಣ ವಿಚಾರ. ಜೈನಪುರಾಣವೆಂದ ಮೇಲೆ ಎಲ್ಲ ಕಡೆಯೂ ಅದು ಇದ್ದೇ ಇರುತ್ತದೆ. ಆದರೆ ಧಾರ್ಮಿಕ ತತ್ವ ಎಷ್ಟರ ಮಟ್ಟಿಗೆ ಕಾವ್ಯವಾಗಿ ಮೂಡಿಬಂದಿದೆ ಎಂಬುದು ನಮಗೆ ಬಹುಮುಖ್ಯ.

ದಯಾಧರ್ಮದ ಹಲವು ಶತಮಾನಗಳ ಪರಂಪರೆಯ ಪ್ರಸಾರಕನಾಗಿ ಪೊನ್ನ ತನ್ನ ಕ್ಲುಪ್ತ ಪಾತ್ರವನ್ನು ನಿರ್ವಂಚನೆಯಿಂದ ತನ್ಮಯತೆಯಿಂದ ನಿರ್ವಹಿಸಿದ್ದಾನೆ. ಆತನದು ಜಿನತತ್ವನಿಷ್ಠವಾದ ಸೌಮ್ಯ ವ್ಯಕ್ತಿತ್ವ. ಕವಿಯ ಧರ್ಮಪರವಾದ ಧೋರಣೆಯಿಂದ ನಾವು ಗುರುತಿಸಲು ಸಾಧ್ಯವಿರುವಂತೆ ಆತನ ಜಿನನಿಷ್ಠೆಯಲ್ಲಿ ಅರೆಕೊರೆಗಳಿಲ್ಲ. ಆತನ ಕಾಲದಲ್ಲಿ ಅಂಥ ಧಾರ್ಮಿಕ ನಿಷ್ಠೆ ಒಪ್ಪಿತ ಹಾಗೂ ಮರ್ಯಾದಿತ ಮೌಲ್ಯವಾಗಿತ್ತು.

ಶಾಂತಿಪುರಾಣದಲ್ಲಿ ಪಕ್ಷಿನೋಟಕ್ಕೆ ಅಳವಟ್ಟಂತೆ ಎದ್ದುಕಾಣುವ ಜೈನಧರ್ಮ ಹೆಪ್ಪುಗಟ್ಟಿದ ಕೆಲವು ಭಾಗಗಳನ್ನು ಇಲ್ಲಿ ಪರಿಚಯಿಸಿದೆ. ಹೇಳಿಕೇಳಿ ಪೊನ್ನ ಸವಣ, ಅದರಿಂದ ಆತ ತನ್ನ ಧರ್ಮ ಕುರಿತು ಹೇಳುವ ಅವಕಾಶ ಸಿಕ್ಕಿದರೆ ಉಪಯೋಗಿಸದೆ ಬಿಡುವುದಿಲ್ಲ. ಪಂಚಪರಮೇಷ್ಠಿಗಳನ್ನು ಪರಿಚಯಿಸುವಾಗಲೂ ಈ ಕೆಲಸ ಮಾಡುತ್ತಾನೆ:

ಕ್ಷಾಯಿಕ ದೃಷ್ಟಿ ತುಷ್ಟಿಯೊಳೊಡಂಬಡೆ ಜೈನ ವಚೋಮೃತಂ ಮುಖ
ಶ್ರೀಯ ಪೊದಟ್ಕೆಯಿಂ ಬೆಳಗೆ ಸೌಗತ ಸಾಂಖ್ಯ ಶಿವಾಗಮಂಗಳಂ
ನ್ಯಾಯ ನಯ ಪ್ರಮಾಣ ಸುವಚಃ ಕ್ರಮದಿಂ ಸಲೆ ಸೋಲೆ ಗೆಲ್ದುಪಾ
ಧ್ಯಾಯರಜೇಯರೀಗೆಮಗೆ ಮುಕ್ತಿ ನಿವೇಶಮನಪ್ರಣಾಶಮಂ ॥ 1–4

(ಕ್ಷಾಯಿಕ ದೃಷ್ಟಿಯು ಸಂತೋಷ ಸಮಾಧಾನಗೊಳ್ಳಲು ಜೈನವಾಣಿಯೆಂಬ ಅಮೃತವು ಮುಖಲಕ್ಷ್ಮಿಯ ವ್ಯಾಪಕತೆಯನ್ನು ಬೆಳಗಲು ಬೌದ್ಧ–ಸಾಂಖ್ಯ–ಶಿವಾಗಮಗಳನ್ನು ನ್ಯಾಯ–ನಯ ಪ್ರಮಾಣಗಳ ಒಳ್ಳೆಯ ಮಾತಿನ ರೀತಿಯಿಂದ ಸಂಪೂರ್ಣವಾಗಿ ಸೋಲಿಸಿ ಗೆದ್ದವರು ಉಪಾಧ್ಯಾಯರು. ಅವರನ್ನು ಗೆಲ್ಲುವುದು ಅಸಾಧ್ಯ. ಅಂಥ ಅಜೇಯರಾದ ಉಪಾಧ್ಯಾಯರು ನಮಗೆ ಶಾಶ್ವತವಾದ ಮುಕ್ತಿಯನ್ನು ದಯಪಾಲಿಸಲಿ.) ಇಲ್ಲಿ ಜೈನಗುರುಗಳು ಹೇಗೆ ಪರಸಮಯ ವಿಜಯಿಗಳಾಗಿದ್ದಾರೆಂಬುದರತ್ತ ಕವಿ ಓದುಗರ ಗಮನ ಸೆಳೆದಿದ್ದಾನೆ. ಶಾಸನಗಳಲ್ಲೂ ಅನೇಕ ಜೈನಾಚಾರ್ಯರಿಗೆ ವಾದಿಭಯಂಕರ, ಪರವಾದಿಶ್ರೇಷ್ಠ ಎಂಬಂಥ ವಿಶೇಷಣಗಳು ಬಳಕೆಯಾಗಿವೆ.

ಪೊನ್ನ ಜೈನರಲ್ಲಿ ಪ್ರಚಲಿತವಾಗಿರುವ ಪವಿತ್ರ ಶ್ರಾವಕ ಪಂಚಾಣುವ್ರತಗಳನ್ನು ತಿಳಿಗನ್ನಡದಲ್ಲಿ ತಿಳಿಸಿದ್ದಾನೆ.

ಕೊಲೆಯೊಳ್ ಪೊರೆಯಿಲ್ಲದ ಪರ
ಲಲನೆಗೆ ಬಗೆಗುಡದ ಕಳ್ಳದ ಉಜಿಪುಸಿಯದ ಕಾ
ದಲಿಸಿ ವಿಷಯಂಗಳೊಳ್ ಪಂ
ಬಲಿಸದ ಗುಣಮೈದಣುವ್ರತಂ ಜಿನಮತದೊಳ್ ॥ 1–88

ಇದರ ಮುಂದಿನ ಎರಡು ಪದ್ಯಗಳಲ್ಲಿ (1–89, 1–90) ಕ್ರಮವಾಗಿ ಮೂರು ಗುಣವ್ರತಗಳನ್ನೂ ನಾಲ್ಕು ಶಿಕ್ಷಾವ್ರತಗಳನ್ನೂ ಪರಿಚಯಿಸಿದ್ದಾನೆ. ಜೈನೇತರರ ದೃಷ್ಟಿಯಿಂದ ಹಾಗೂ ಸಾಮಾಜಿಕ ಅಧ್ಯಯನದ ನಿಟ್ಟಿನಿಂದ ಈ ಗುಣ–ಶಿಕ್ಷಾವ್ರತಗಳಲ್ಲಿ ಇಂದಿಗೂ ಪ್ರಸ್ತುತವೆನಿಸುವ ಒಂದೆರಡು ವಿಶೇಷ ಅಂಶಗಳನ್ನು ಇಲ್ಲಿ ಪ್ರಸ್ತಾಪಿಸಬಹುದು. ಭೋಗೋಪಭೋಗಗಳನ್ನು ಅನುಭವಿಸುವುದರಲ್ಲಿ ಆಸಕ್ತಿ ತಗ್ಗಿಸಿ, ಮಿತಭೋಗಕ್ಕೆ ಸೀಮಿತವಾಗಬೇಕೆಂಬುದೂ ಗುಣವ್ರತಗಳಲ್ಲಿ ಒಂದು. ರತಿಸುಖಕ್ಕೆ ಕಡಿವಾಣ ಹಾಕುವುದು ಆರೋಗ್ಯ ಜೀವನಕ್ಕೆ ಸಹಕಾರಿಯೆಂದು ಆಧುನಿಕ ವೈದ್ಯವಿಜ್ಞಾನವೂ ಒಪ್ಪಿಕೊಂಡಿದೆ. ಹಿಂಸೆಗೆ ಕಾರಣವಾದ ಅಸ್ತ್ರಶಸ್ತ್ರಗಳು, ನೇಣು (ಹಗ್ಗ), ಮತ್ತು ಇತರ ಕೋಲು ಮೊದಲಾದ ಯಾವುದೇ ಆಯುಧವನ್ನು ಕೊಡಬಾರದೆಂಬುದು ಗುಣವ್ರತಗಳಲ್ಲಿ ಮತ್ತೊಂದು. ಇದು ಸಾಮಾಜಿಕ ಕ್ರೌರ್ಯಗಳನ್ನು ನಿವಾರಿಸುವಲ್ಲಿ ತುಂಬ ಸಹಕಾರಿಯಾಗುವ ಸಂಗತಿ. ದೇವಾಲಯ, ಮಸೀದಿ, ಚರ್ಚುಗಳಲ್ಲಿ ಕೂಡ ಇಂದು ಆಯುಧ ಸಂಗ್ರಹ ಕಂಡುಬಂದಿದೆ. ತನ್ನಲ್ಲಿ ಆಯುಧವಿದೆ ಎಂಬುದು ಪರೋಕ್ಷವಾಗಿ ಹಿಂಸೆಯನ್ನು ಉದ್ದೀಪಿಸುವ ಸಾಧನವಾಗುತ್ತದೆ. ಅದರಿಂದ ಸಾಮಾಜಿಕ ಸೌಹಾರ್ದಕ್ಕೆ ಈ ಧೋರಣೆ ಸಹಕಾರಿಯಾಗಿದೆ. ಹಾಗೆಂದು ನಾವು ಹೇಡಿಗಳಂತೆ ಬಾಳಬೇಕೆಂಬ ಪರೋಕ್ಷಧ್ವನಿ ಇಲ್ಲಿದೆಯೆಂದು ತಪ್ಪಾದ ವಿವರಣೆ ಹೊಂದಬಾರದು. ಏಕೆಂದರೆ ಸ್ವರಕ್ಷಣೆಗೆ ತಾಯ್ನಾಡಿನ ತಾಯ್ನುಡಿಯ, ಆಶ್ರಯ ಕೊಟ್ಟವರ ಕಾಪಾಡುವಿಕೆಗೆ ಜೈನಧರ್ಮ ಪ್ರಾಶಸ್ತ್ಯ ಕೊಟ್ಟಿದೆ. ಶ್ರೇಷ್ಠ ಸೇನಾಪತಿಗಳು, ಯುದ್ಧವೀರರು ಜೈನರಲ್ಲಿ ಆಗಿಹೋಗಿದ್ದಾರೆ.

ಪೊನ್ನ ಶಾಂತಿಪುರಾಣದ ಉದ್ದಕ್ಕೂ, ವಿಶೇಷವಾಗಿ ಹತ್ತನೆಯ ಆಶ್ವಾಸದವರೆಗೆ ಅಸಗಕವಿಯನ್ನೇ ಅನುಸರಿಸಿರುವುದು. ಹಾಗೆಂದು ಗುಣಭದ್ರ ಆಚಾರ್ಯರ ಉತ್ತರ ಪುರಾಣವನ್ನು ಕೈಬಿಟ್ಟಿಲ್ಲ. ಉತ್ತರ ಪುರಾಣದಲ್ಲಿ ಬರುವ ಶಾಂತಿನಾಥ ತೀರ್ಥಂಕರರ ಚರಿತೆಯನ್ನೂ ತನ್ನ ಕಣ್ಣಳತೆಯಲ್ಲಿರಿಸಿಕೊಂಡೇ ಪುರಾಣರಚನೆಗೆ ತೊಡಗಿದ್ದಾನೆ. ಅವನ ಮಾರ್ಪಾಟುಗಳೇನಿದ್ದರೂ ತೀರ ಅಗತ್ಯವೆನಿಸಿದ ಭಾಗಗಳಿಗೆ ಮಾತ್ರ ಸೀಮಿತ.

ಉತ್ತರ ಪುರಾಣದ 62–63ನೆಯ ಪರ್ವದಲ್ಲಿ 16ನೆಯ ತೀರ್ಥಂಕರನಾದ ಶಾಂತಿನಾಥನ ಚರಿತೆ 1021 ಶ್ಲೋಕ ಪ್ರಮಾಣದಲ್ಲಿದೆ. ಪೊನ್ನ ಅಪರಾಜಿತ—ಅನಂತವೀರ್ಯ ಭವದಿಂದ, ಅಸಗನ ರೀತಿಯಲ್ಲಿ ಶಾಂತಿಪುರಾಣವನ್ನು ಉದ್ಘಾಟಿಸಿದ್ದಾನೆ. ಉತ್ತರ ಪುರಾಣದಲ್ಲಿ ಈ ಭವ ಬರುವುದು 410ನೆಯ ಶ್ಲೋಕದಿಂದ :

ದ್ವೀಪೇಸ್ಮಿನ್ ಪ್ರಾಗ್ವಿದೇಹಸ್ಥ ವಿಲಸದ್ವತ್ಸಕಾವತೀ
ದೇಶೇ ಪ್ರಭಾಕರೀ ಪುರ್ಯಾಂ ಪತಿ ಸ್ಥಿಮಿತಸಾಗರಃ ॥ 410

ದೇವೀ ವಸುಂಧರೀ ಜಾತಸ್ತಯೋರಾದಿತ್ಯಚೂಲವಾಕ್
ದೇವೋಪರಾಜಿತಃ ಸೂನುರ್ನಂದ್ಯಾವರ್ತಾದ್ದಿವಶ್ಚ್ಯುತಃ ॥ 411

ಸತ್ಮ್ಯಾನುಮತೋ ದೇವ್ಯಾಂ ಮಣಿಚೂಲೋಪ್ಯಭೂತ್ಸುತಃ
ಶ್ರೀಮಾನನಂತವೀರ್ಯಾಖ್ಯೋ ದಿವಿಜಃ ಸ್ವಸ್ತಿಕಾಚ್ಚ್ಯುತಃ ॥ 402

ಈ ಜಂಬೂದ್ವೀಪದಲ್ಲಿ ಪ್ರಕಾಶಮಾನವಾದ ವತ್ಸಕಾವತೀ ದೇಶದಲ್ಲಿರುವ ಪ್ರಭಾಕರಿಯೆಂಬ ನಗರಿಯಲ್ಲಿ ಸ್ತಿಮಿತಸಾಗರನು ದೊರೆ, ಆತನ ಪತ್ನಿ ವಸುಂಧರೆ. ಆ ದಂಪತಿಗಳಿಗೆ ಸ್ವರ್ಗದಿಂದ ನಂದ್ಯಾವರ್ತವಿಮಾನದಿಂದ ಆಯುಷ್ಯಾವಸಾನದಲ್ಲಿ ಚ್ಯುತನಾದ ರವಿಚೂಲದೇವನು ಅಪರಾಜಿತನೆಂಬ ಮಗನಾದನು. ಆ ಸ್ತಿಮಿತಸಾಗರನಿಗೇ ಅನುಮತಾದೇವಿಯಲ್ಲಿ ಸ್ವಸ್ತಿಕವಿಮಾನದಿಂದ ಚ್ಯುತನಾದ ಮಣಿಚೂಲದೇವನು ಶ್ರೀಮಂತನಾದ ಅನಂತವೀರ್ಯನೆಂಬ ಪುತ್ರನಾದನು (410–412).

ಉತ್ತರ ಪುರಾಣದಲ್ಲಿ ಗುಣಭದ್ರಾಚಾರ್ಯನು ಮೇಲಿನ ಮೂರು ಶ್ಲೋಕಗಳಲ್ಲಿ ಹೇಳಿರುವ ವಿಷಯವನ್ನು ಪೊನ್ನನು ಇಪ್ಪತ್ತೊಂದು ಪದ್ಯಗಳಲ್ಲಿಯೂ ಇಪ್ಪತ್ತು ಸಾಲು ಗದ್ಯದಲ್ಲಿಯೂ ವಿಸ್ತರಿಸಿ ಹೇಳಿದ್ದಾನೆ; 1–56 ರಿಂದ 1–77ರ ವರೆಗೆ. ಇಲ್ಲಿ ಮುಖ್ಯವಾಗಿ ಅತಿ ವಿಸ್ತರಿಸಿರುವ ಭಾಗ ಜಂಬೂದ್ವೀಪ, ಮೇರುಪರ್ವತ, ಪೂರ್ವವಿದೇಹ, ವತ್ಸಕಾವತೀ ದೇಶ, ಪ್ರಭಾಕರೀಪುರ, ಸ್ತಿಮಿತಸಾಗರ, ಅವನ ರಾಣಿಯರು—ಈ ವರ್ಣನೆಗೆ ಪದ್ಯಗಳು ಹಂಚಿಹೋಗಿವೆ. ವತ್ಸಕಾವತೀ ದೇಶದ ವರ್ಣನೆಯ ವಿಸ್ತಾರ, ಪಂಪ ವಿಕ್ರಮಾರ್ಜುನ ವಿಜಯದಲ್ಲಿ ಕೊಡುವ ಕುರುಜಾಂಗಣ ಬಣ್ಣನೆಯನ್ನು ಸ್ಮರಣೆಗೆ ತರುತ್ತದೆ. ಶಾಂತಿಪುರಾಣಕ್ಕೆ ಅಸಗನ ಒಟ್ಟು ಚೌಕಟ್ಟು ಇಟ್ಟುಕೊಂಡು, ಉತ್ತರ ಪುರಾಣದ ಮಾರ್ಗದರ್ಶನ ಪಡೆದು, ಪಂಪನ ಮಾದರಿಯನ್ನು ಕಣ್ಮುಂದಿರಿಸಿಕೊಂಡು ಪೊನ್ನನು ಕಾವ್ಯರಚನೆಯನ್ನು ಮುಂದುವರಿಸಿದ್ದಾನೆಂದು ತೋರುತ್ತದೆ. 1–80 ಇದಕ್ಕೆ ಮೂಲ ಅಸಗ, ಅದಕ್ಕೆ ಮೂಲ ಉಪು. ಉಪುದ ಆಶಯವನ್ನು ಅಸಗ ವಿಶದೀಕರಿಸಿ ಹುರಿಗೊಳಿಸಿದ್ದಾನೆ. ಅಸಗನ ಕಲ್ಪನೆಯನ್ನು ತಿದ್ದಿ ಸಾಣೆಯಿಟ್ಟು ಪೊನ್ನ ಇನ್ನೂ ಹೊಳೆಯುವಂತೆ ಹರಳುಗೊಳಿಸಿದ್ದಾನೆ.

ಉತ್ತರ ಪುರಾಣದಲ್ಲಿ ಅನಂತವೀರ್ಯನ ತಾಯಿಯ ಹೆಸರು ಅನುಮತೀದೇವಿ ಎಂದಿದ್ದರೆ ಪೊನ್ನನಲ್ಲಿ ವಸುಮತಿ ಎಂದಿದೆ. ಈ ಬದಲಾವಣೆಗೆ ಮೂಲ ಅಸಗನಲ್ಲಿದೆ. ಗುಣಭದ್ರಾಚಾರ್ಯ ಕೃತ ಸಂಸ್ಕೃತ ಉತ್ತರ ಪುರಾಣದೊಡನೆ ಪೊನ್ನ ಕೃತ ಕನ್ನಡ ಶಾಂತಿಪುರಾಣವನ್ನು ಹೋಲಿಸಿದಾಗ ಕಂಡುಬರುವ ಕೆಲವು ಪ್ರಮುಖ ವ್ಯತ್ಯಾಸಗಳು ಉತ್ತರ

ಪುರಾಣದಲ್ಲಿ ಸಂಗ್ರಹವಾಗಿರುವ ಕಥೆ ಇಲ್ಲಿ ವಿಸ್ತಾರಗೊಂಡಿದೆ. ಒಟ್ಟು 24 ಜನ ತೀರ್ಥಂಕರರ ಪುರಾಣಗಳಲ್ಲಿ ಹೆಚ್ಚು ವ್ಯಾಪ್ತಿಗೆ ಒಳಪಟ್ಟ ತೀರ್ಥಂಕರರು ಆದಿತೀರ್ಥಂಕರ, ಶಾಂತಿನಾಥ, ನೇಮಿನಾಥ, ಪಾರ್ಶ್ವನಾಥ ಮತ್ತು ಮಹಾವೀರ. ಇಡೀ ಪೂರ್ವಪುರಾಣ ಆದಿತೀರ್ಥಂಕರರ ಚರಿತೆಗೆ ಮೀಸಲು. ಅಲ್ಲದೆ ಪೂರ್ವಪುರಾಣ ಉಳಿದೆಲ್ಲಾ ತೀರ್ಥಂಕರ ಪುರಾಣಗಳಿಗೆ ಬೇಕಾದ ಪೀಠಿಕೆಯನ್ನು ಒದಗಿಸಿಕೊಟ್ಟಿದೆ. ಪುರಾಣ ಲಕ್ಷಣಗಳೂ, ತ್ರಿಲೋಕಾಕೃತಿ ಸಂಬಂಧ ವಿಷಯಗಳೂ, ಮನುಗಳ ವಿಚಾರ, ಜೈನಧರ್ಮದ ಸೈದ್ಧಾಂತಿಕ ಸ್ವರೂಪ—ಇತ್ಯಾದಿಯಾದ ಇತರ ಎಲ್ಲ ತೀರ್ಥಂಕರ ಪುರಾಣಗಳಿಗೂ ಹಿನ್ನಲೆಯಾದ ಭೂಮಿಕೆ ಪೂರ್ವಪುರಾಣದಲ್ಲಿದೆ. ಮೇಲುನೋಟಕ್ಕೆ ಇಡೀ ಪೂರ್ವಪುರಾಣ ಆದಿ ತೀರ್ಥಂಕರನೊಬ್ಬನಿಗೆ ಮೀಸಲು, ಉತ್ತರ ಪುರಾಣದಲ್ಲಿ ಉಳಿದ 23 ಜನ ತೀರ್ಥಂಕರರ ಚರಿತೆ ಅಡಕವಾಗಿದೆ ಎಂದು ಮಹದಂತರ ಎದ್ದು ಕಾಣುತ್ತದೆ. ಒಳನೋಟಕ್ಕೆ ಇತರ ಇಂಥ ಸೂಕ್ಷ್ಮಗಳು ತೆರೆದುಕೊಳ್ಳುತ್ತವೆ.

ಜೈನಪುರಾಣಗಳಿಗೂ ವೈದಿಕ ಪುರಾಣಗಳಿಗೂ ಸಾಮ್ಯಗಳಿಗಿಂತ ವೈಷಮ್ಯಗಳೇ ಹೆಚ್ಚು (ನೋಡಿ: ಹಂಪನಾ, ಜೈನಪುರಾಣಗಳು, ವಿಶ್ವಕೋಶ, 1976). ಒಂದೆರಡು ಜೈನಪುರಾಣಗಳನ್ನು ಓದಿದರೆ ಸಾಕು, ಉಳಿದೆಲ್ಲ ಪುರಾಣಗಳ ಚೌಕಟ್ಟು ಒಟ್ಟಿನಲ್ಲಿ ಏಕಪ್ರಕಾರವಾಗಿ ಸಮಾನವೆನಿಸುತ್ತದೆ: ಹೆಸರುಗಳು, ಭವಾವಳಿಗಳು, ಸ್ಥಳನಾಮಗಳು, ಉಪ ಕಥೆಗಳು ಬೇರೆಯೆನಿಸಿದರೂ ಮೂಲಪುರಾಣ ತಿರುಗಮುರುಗ ಅದೇ ಬಂದಿರುತ್ತದೆ. ಪೊನ್ನನಲ್ಲಿ ಪುರಾಣ ವಿಷಯ ಗಂಭೀರವಾಗಿ ಬಂದಿದೆ, ಎಲ್ಲೂ ಲಘುವಾಗುವುದಿಲ್ಲ. ಕೀಳು ಭಾವಗಳಿಲ್ಲ, ಸಡಿಲ ಸಂಗತಿಗಳಿಲ್ಲ. ಜೈನಪುರಾಣ ಪದ್ಧತಿಗೆ ಶಾಂತಿಪುರಾಣ ಮೇಲ್ಪಂಕ್ತಿಯಾಗಿದೆ, ನಿಜ; ಆದರೆ ಕನ್ನಡ ಕಾವ್ಯಪರಂಪರೆಗೆ ಮೇಲ್ಪಂಕ್ತಿಯಾಗುವುದಿಲ್ಲ. ಎಲ್ಲ ಜೈನ ಪುರಾಣಗಳಂತೆ ಇಲ್ಲಿಯೂ ತೀರ್ಥಂಕರನ ನೇರ ಪ್ರಸ್ತಾಪ ಬರುವುದು ಕಾವ್ಯದ ಕಡೆಕಡೆಗೆ. ಅದರ ಹಿಂದಿನ ಭವಗಳು, ಮೂಗಿಗಿಂತ ಮೂಗುತಿಯೇ ಮಹಾಭಾರ ಎನುವಂತಿವೆ, ನೆಪಮಾತ್ರಕ್ಕೆ ಕಾವ್ಯನಾಯಕನಿದ್ದಾನೆ. ವರ್ಣನೆಗಳೂ ಧರ್ಮೋಪದೇಶಗಳೂ ಸ್ವಲ್ಪ ಹಿಗ್ಗಿ ಬಿಟ್ಟಿವೆ, ಉಪಕಥೆಗಳೂ ತೂರಿಕೊಂಡಿವೆ. ಉಪಕಥೆಗಳ ಹೊರೆ ಮುಖ್ಯ ಕಥೆಯನ್ನು ಕುಗ್ಗಿ ಕುಸಿಯುವಂತೆ ಮಾಡಿಲ್ಲ, ಕವಿಗೆ ಏನಾದರೂ ಒಂದು ಗೊತ್ತುಗುರಿ ಇದೆಯೊ ಇಲ್ಲವೊ ಎಂದು ಅನುಮಾನಿಸುವಂತಹ ಪರಿಸ್ಥಿತಿ ಬರುವುದಿಲ್ಲ—ಇವೆಲ್ಲ ಸರಿಯೆ. ಆದರೂ ಆದಿಪುರಾಣದಂತೆ ರಸೈಕ್ಯ ಕೇಂದ್ರ ಪ್ರಜ್ಞೆಯನ್ನು ವಿಚಕ್ಷಣ ಬುದ್ಧಿಯಿಂದ ಕಲಾತ್ಮಕವಾಗಿ ಕಾಪಾಡಿದ್ದರೆ ಶಾಂತಿಪುರಾಣದ ಪರಿಣಾಮ ಮತ್ತೂ ಗಾಢವಾಗುತ್ತಿತ್ತು, ಗಂಭೀರವಾಗುತ್ತಿತ್ತು.

ಅಹಿಂಸಾ ಮಹತ್ವ, ಜಿನಬೋಧೆಯ ನಿರೂಪಣೆ ಓದುಗರನ್ನು ಮುಟ್ಟುತ್ತದೆ; ಕಾವ್ಯಧರ್ಮ ಮತ್ತು (ಜಿನ) ಧರ್ಮದ ಬೆಸುಗೆ ಅಲ್ಲಲ್ಲಿ ಸೀಳಿಕೊಂಡಿದೆಯೆಂಬುದನ್ನು ಒಪ್ಪಿಕೊಳ್ಳಬೇಕು. ಲೋಕಕಾರುಣ್ಯ, ಭೂತಾನುಕಂಪ ಕಾವ್ಯದುದ್ದಕ್ಕೂ ತೋರಲುಗೊಟ್ಟಿವೆ. ತಾನು ಅನುಭವಿಸಿದ ಆನಂದವನ್ನು, ಕಂಡ ಶಾಶ್ವತ ಸತ್ಯವನ್ನು ಇತರರಿಗೂ ಹಂಚಿಕೊಡುವ ಉದಾರ ಹೃದಯದ ಕರುಣಾಳುವಿನ ಸ್ನಿಗ್ಧ ಪರಿಸರ ಮನಸ್ಸನ್ನು ಆರ್ದ್ರಗೊಳಿಸುತ್ತದೆ.

ಕಾವ್ಯವಾಗಿ ಬಂದ ವೈರಾಗ್ಯ

ಜೈನಪುರಾಣಗಳಲ್ಲಿ ಪ್ರಮುಖ ಪಾತ್ರಗಳಾಗಲಿ ಸಾಮಾನ್ಯ ಪಾತ್ರಗಳಾಗಲಿ ವೈರಾಗ್ಯಭಾವ ಉದಯಿಸಿದೊಡನೆ ಸಂನ್ಯಾಸಿಗಳಾಗುವುದು ವಾಡಿಕೆ. ಇಂಥ ನಿರ್ವೇಗ ಭಾವನೆ ವ್ಯಕ್ತಿಗಳಲ್ಲಿ, ಸಂಸಾರಿಗಳಲ್ಲಿ ಉದ್ದೀಪಿಸಲು ಕಾರಣಗಳೂ ಒದಗಿಬರುತ್ತವೆ. ಬಿಳಿಯ ಕೂದಲು ಕಾಣಿಸುವುದು, ಚೆಲುವಾದ ಮುಗಿಲು ಕರಗುವುದು, ಮರ ಬೀಳುವುದು, ಉಲ್ಕಾಪಾತ—ಇತ್ಯಾದಿ ಪ್ರಸಂಗಗಳು ಸಾಮಾನ್ಯವಾಗಿ ಪುನರುಕ್ತಿಗೊಳ್ಳುತ್ತವೆ. ನೀಲಾಂಜನೆಯ ನೃತ್ಯ ಸಂದರ್ಭ ಕಾವ್ಯಧ್ವನಿಯಿಂದ ರಸಿಕರೆದೆಯನ್ನು ಸೂರೆಗೊಂಡಿದೆ. ಇದು ವೈರಾಗ್ಯ ಮೂಡಿಸುವ ಭಾಗ ಹೇಗೊ ಹಾಗೆ ಕಾವ್ಯ

ಸರೋವರವಾಗಿರುವ ಭಾಗ್ಯವೂ ಹೌದು. ವೈರಾಗ್ಯದ ಉತ್ಕಟತೆಯನ್ನು ಕಾವ್ಯಮಯವಾಗಿಸಿರುವ ಇಂಥ ವರ್ಣನೆಗಳು ಕಡಮೆ. ಇಂಥ ಅಪರೂಪವೂ ಧ್ವನಿರಮ್ಯವೂ ಆದ ಇನ್ನೊಂದು ಸಂದರ್ಭ ಪೊನ್ನನ ಶಾಂತಿಪುರಾಣದಲ್ಲಿ ಒಂಬತ್ತನೆಯ ಆಶ್ವಾಸದಲ್ಲಿ ಬಂದಿದೆ. ಈ ಸಂದರ್ಭಕ್ಕೆ ಸದೃಶವಾದ ಸಂದರ್ಭ ಮತ್ತು ವರ್ಣನೆ ವಡ್ಡಾರಾಧನೆಯಲ್ಲೂ ಚಾವುಂಡರಾಯ ಪುರಾಣದಲ್ಲೂ ಕಂಡುಬರುತ್ತದೆಂಬುದು ಸ್ವಾರಸ್ಯಕರವಾಗಿದೆ. ವಡ್ಡಾರಾಧನೆ ಮತ್ತು ಚಾವುಂಡರಾಯಪುರಾಣದಲ್ಲಿ ಸಮಾನವಾಗಿರುವ ಭಾಗವನ್ನು ಉಲ್ಲೇಖಿಸಿ ಈಗಾಗಲೇ ನಾನು ಬರೆದ ಲೇಖನ ಪ್ರಕಟವಾಗಿದೆ (ಕ.ಸಾ.ಪ.ಪ.,-66-1). ಶಾಂತಿಪುರಾಣದ ಉದಾಹರಣೆಯನ್ನೂ ಅವುಗಳ ಜತೆಯಲ್ಲಿರಿಸಿ ಸಮೀಕ್ಷೆ ಕೈಗೊಳ್ಳಬಹುದು. ಇವು ಮೂರರ ತೌಲನಿಕ ಅಧ್ಯಯನದಿಂದ ಹೊರಪಡುವ ಸಂಗತಿಯೆಂದರೆ ಇದೊಂದು ಜೈನಪುರಾಣ (ಕಥೆ) ಗಳ ಆಶಯವಿರಬೇಕೆಂಬುದು. ಇವನ್ನು ಒಂದೊಂದಾಗಿ ಈಗ ಪರಿಶೀಲಿಸಬಹುದು.

ಪೊನ್ನಕವಿಯ ಶಾಂತಿಪುರಾಣದ ಒಂಬತ್ತನೆಯ ಆಶ್ವಾಸದ ಒಂದು ಭಾಗವನ್ನು ತುಲನಾತ್ಮಕವಾಗಿ ವಿವೇಚಿಸಿ ಅಧ್ಯಯನ ನಡಸಲು ಸೂಕ್ತವಾಗಿದೆ. ಏಕೆಂದರೆ ಇದಕ್ಕೆ ಸಮಾನವಾದ ಸಂದರ್ಭಗಳನ್ನು ಇನ್ನೂ ಎರಡು ಮೂರು ಕಡೆ ಕಾಣಬಹುದು. ಆ ಸಂನಿವೇಶ ಹೀಗಿದೆ :

ದಯಿತಾ ಸೌಂದರ್ಯದ ಲೀ
ಲೆಯ ಕಾಂತೆಯ ಮಾತು ಪುಟ್ಟೆ ಮೇಘರಥಮನಃ
ಪ್ರಿಯೆಯಾಗಿರ್ದಾ ಪ್ರಿಯಮಿ
ತ್ರೆಯ ರೂಪಂ ಸಭೆಗೆ ಪೊಗಟ್ದನೀಶಾನೇಂದ್ರಂ ॥ 9-101

ವ॥ ಅಂತಿಂದ್ರನ ಪೊಗಟ್ತೆಯಂ ಕೇಳ್ದಟ್ತಿಯಿಂದಿರ್ವರ್ ದೇವಿಯರಾಕೃತಿಯ ಪರಾವರ್ತನದಿಂ ಮಾನವಸ್ತ್ರೀರೂಪದಿಂ ಪ್ರಿಯಮಿತ್ರೆಯಂ ನೋಡಲ್ಬಂದರಮನೆಯ ಬಾಗಿಲೊಳ್ ನಿಂದು ದೌವಾರಿಕ ನಿವೇದಿತನಿಜಾಗಮನೆಯರ್ ಪ್ರಿಯಮಿತ್ರೆ ಮಜ್ಜನಂಬುಗುವಿನಮಿರ್ದು ತದವಸಾನದೊಳಶೇಷಭೂಷಣಭೂಷಿತೆಯಂ ಪಡಿಯಱಿಂ ಕಾಣಿಸೆಯುಂ ಕಂಡೀಶಾನೇಂದ್ರನ ಪೇಟ್ದ ವಿವರಮಿಾಕೆಯ ರೂಪಕ್ಕುಂಬ ಮಾದೊಡಂ ನಮ್ಮ ಮುನ್ನ ನೋಡಿದಾಲಿಗೀಗಳ್ ಕಿಂಚಿನ್ಮಾತ್ರಂ ಕುಂದಿರ್ದುದೆಂದು ತಮ್ಮೊಳ್ ನುಡಿವರನದೇನೆಂದಱಿಪಿರೆಂದರಸಿ ಬೆಸಗೊಳೆ ಮುಗುಳ್ನಗೆ ನುಡಿದೊಡೆ ನೀಮೊಂದಂ ಮುನ್ನೇಗಳ್ ಕಂಡಿರೆಂಬುದಮಿಾಶಾನೇಂದ್ರಂ ಬಣ್ಣಿಸೆ ತಮ್ಮ ಬಂದುದನದೃಶ್ಯರೂಪದಿ ನಭ್ಯಂಗನ ಕಾಲದೊಳ್ ಕಂಡುದುಮಂ ಸಪ್ರಪಂಚಮಱಿಪಿ ರೂಪಂ ಬಣ್ಣಿಸಿ ಪೋಪುದುಮಲ್ಲಿ—

ಮಾಸನೊಳ್ಪಂ ಬಾಟಿಮ
ದೇನಲ್ಪಮದೇನಸಾರವಿಸ್ತಾರಮದೇಂ
ಮಾನಮದೇಂ ವಿಪುಳಮದೇಂ
ದೀನಮದೇಂ ಸ್ತೋಕಸುಖಮದೇನಧ್ರುವಮೋ ॥ 102

ವ॥ ಎಂದು ದೀನಜನ ದುರ್ಲಭ ಬುದ್ಧಿಯಪ್ಪ ಪ್ರಿಯಮಿತ್ರೆ ತನ್ನಂ ರಂಗದೊಳ್ ಬಗೆದನುವೆ ಪೊಟ್ತಗೆ ಪೋಗಿ ......

ನಿರ್ವೇಗ ಪರಾಯಣೆಯಾಗುತ್ತಾಳೆ. ಇನ್ನು ಮುಂದಿನದು ಮಾಮೂಲೀ ಕಥೆ. ಇಲ್ಲಿ ಧ್ವನಿತವಾಗಿರುವುದು ಮುಖ್ಯವಾಗಿ ಸೌಂದರ್ಯ ಕೂಡ ಅಧ್ರುವ ಎಂಬ ಜಿನಧರ್ಮ ಪ್ರಣೀತ ತತ್ವ. ಮನುಷ್ಯ ಐಶ್ವರ್ಯ, ಸೌಂದರ್ಯ, ಪದವಿ ಮೊದಲಾದವುಗಳಿಗೆ ಮಹತ್ವಕೊಡುತ್ತಾನೆ. ಲೌಕಿಕ ವ್ಯವಹಾರದಲ್ಲಿ ಇದು ಸಾಮಾನ್ಯ, ಸಹಜ. ಆದರೆ ಪಾರಮಾರ್ಥಿಕ ದೃಷ್ಟಿಯಿಂದ ಇದಕ್ಕೆ ಗಣನೆಯೇ ಇಲ್ಲ. ಶ್ರೀರೂಪಲೀಲಾಧನವಿಭವ ಮೊದಲಾದುವು ಯಾರಿಗೂ ಆಚಂದ್ರಾರ್ಕ ತಾರಂಬರಂ ನಿಲ್ಲುವುದಿಲ್ಲ. ಇವೆಲ್ಲ ನಶ್ವರ, ಕ್ಷಣಿಕ, ಚಲುವು ಕೂಡ ಚಂಚಲ—ಎಂಬ ವಿರಾಗ ಭಾವನೆಯನ್ನು ನೆಲೆಯೂರಿಸಲು ಈ ಸಂದರ್ಭವನ್ನು ಕಲ್ಪಿಸಲಾಗಿದೆ. ಇದಕ್ಕೆ ಸಮಾನವಾದ ಸಂದರ್ಭ ವಡ್ಡಾರಾಧನೆ ಮತ್ತು

ಚಾವುಂಡರಾಯಪುರಾಣದಲ್ಲೂ ಬರುತ್ತದೆ. ವಡ್ಡಾರಾಧನೆ ಮತ್ತು ಚಾವುಂಡರಾಯಪುರಾಣ ಕನ್ನಡದಲ್ಲಿ ರಚಿತವಾಗಿರುವ ಹಳೆಯ ಗದ್ಯಕೃತಿಗಳು. ಕಾಲದ ದೃಷ್ಟಿಯಿಂದ ಇವು ಪ್ರಾಚೀನವಾಗಿರುವಂತೆ ಭಾಷೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಅಧ್ಯಯನದ ದೃಷ್ಟಿಯಿಂದಲೂ ಇವೆರಡು ಮಹತ್ವದ ಕೃತಿಗಳಾಗಿವೆ.

19 ಕಥೆಗಳ ಸಂಕಲನವಾದ ವಡ್ಡಾರಾಧನೆಗೆ ಮೂಲ ಆಕರ ಇಂದಿಗೂ ಅಸ್ಪಷ್ಟವಾಗಿಯೇ ಉಳಿದಿದೆ. ಪ್ರಾಕೃತದಲ್ಲಿರುವ ಭಗವತಿ ಆರಾಧನೆಯಲ್ಲಿ ಬರುವ ಕೆಲವು ಗಾಹೆಗಳನ್ನು ಕನ್ನಡ ವಡ್ಡಾರಾಧನಕಾರ ಉತ್ತಮ ಕಥೆಗಳಾಗಿ ವಿಸ್ತರಿಸಿರುವುದು ಗಮನಾರ್ಹವಾಗಿದೆ. ವಿಸ್ತಾರವಾದ ಕಥೆಯನ್ನು ಸೂತ್ರಪ್ರಾಯವಾಗಿ ಸಂಗ್ರಹಿಸಿರುವ ಗಾಹೆಗಳಿಗೆ ವಿಸ್ತಾರವಾದ ವಿವರಣೆ ಕೊಡುವಾಗ ಕನ್ನಡ ವಡ್ಡಾರಾಧನಕಾರ ಉತ್ತಮ ಕಥೆಗಳಾಗಿ ವಿಸ್ತರಿಸಿರುವುದು ಗಮನಾರ್ಹವಾಗಿದೆ. ವಿಸ್ತಾರವಾದ ಕಥೆಯನ್ನು ಸೂತ್ರಪ್ರಾಯವಾಗಿ ಸಂಗ್ರಹಿಸಿರುವ ಗಾಹೆಗಳಿಗೆ ವಿಸ್ತಾರವಾದ ವಿವರಣೆ ಕೊಡುವಾಗ ಕನ್ನಡ ವಡ್ಡಾರಾಧನಕಾರನಿಗೆ ಮೂಲ ಯಾವುದೆಂಬುದು ಸಮಸ್ಯೆಯಾಗಿಯೇ ಉಳಿದಿದೆ.

ಚಾವುಂಡರಾಯಪುರಾಣಕ್ಕೆ ಮೂಲ ಆಕರ ಸಂಸ್ಕೃತದಲ್ಲಿರುವ ಮಹಾಪುರಾಣ. ಮಹಾಪುರಾಣ ಪದ್ಯದಲ್ಲಿದೆ. ಚಾವುಂಡರಾಯಪುರಾಣ ಗದ್ಯದಲ್ಲಿದೆ. ಮಹಾಪುರಾಣದ ವಿಸ್ತಾರ, ವಿಲಂಬಶೈಲಿ ಚಾವುಂಡರಾಯಪುರಾಣದಲ್ಲಿ ಇಲ್ಲ. ಇಲ್ಲಿಯದು ಸಂಕ್ಷಿಪ್ತವಾದ ತ್ವರಿತಗತಿಯ ಶೈಲಿ. ಕಾವ್ಯದೃಷ್ಟಿ ಗೌಣ; ಶಾಸ್ತ್ರದೃಷ್ಟಿ, ಪುರಾಣದೃಷ್ಟಿ ಮತ್ತು ಕಥಾದೃಷ್ಟಿ ಪ್ರಧಾನವಾಗಿದೆ. ಮೂಲಭೂತವಾಗಿ ಸಂಸ್ಕೃತ ಮಹಾಪುರಾಣದ ಕಥೆ ಮತ್ತು ವಸ್ತುವನ್ನು ಯಥಾವತ್ತಾಗಿ ಕನ್ನಡಕ್ಕೆ ಇಳಿಸುವುದು ಚಾವುಂಡರಾಯನ ಮುಖ್ಯ ಉದ್ದೇಶ. ಇದು ಬಹುಮಟ್ಟಿಗೆ ಯಶಸ್ವಿಯಾಗಿ ಈಡೇರಿದೆ ಎನ್ನಬಹುದು. ತನ್ನ ಕಾವ್ಯರಚನೆಯನ್ನು ಇನ್ನೂ ಕಾವ್ಯವನ್ನಾಗಿಸುವ ಅಥವಾ ಸಾಹಿತ್ಯವನ್ನಾಗಿಸುವ ಪ್ರಯತ್ನಕ್ಕೆ ತೊಡಗಿದ್ದಲ್ಲಿ ಚಾವುಂಡರಾಯಪುರಾಣ ಇನ್ನೂ ಸ್ವಾರಸ್ಯವಾದ ಕೃತಿಯಾಗುತ್ತಿತ್ತು. ಲೇಖಕನಿಗೆ ಕವಿಯ ಕಣ್ಣು ಇಲ್ಲದಿರುವುದು ಕೃತಿಯ ದೌರ್ಬಲ್ಯವಾಗಿರುವಂತೆ ಗುಣವೂ ಆಗಿದೆ. ಗುಣ ಯಾವುದೆಂದರೆ, ಚಾವುಂಡರಾಯ ಸ್ವತಂತ್ರ ವಹಿಸದೆ ಮೂಲವನ್ನು ಕನ್ನಡಕ್ಕೆ ಇಳಿಸುವ ಲಿಪಿಕಾರನ ಕೆಲಸ ಮಾಡಿರುವುದು. ಇದರಿಂದ ಅವನವರೆಗೂ ಬಂದ ಒಂದು ಪರಂಪರೆಯ ವಿಶ್ವಸನೀಯವೆನ್ನಬಹುದಾದ ಕಥೆ ಕನ್ನಡದಲ್ಲಿ ಅವತರಿಸಿರುವುದು. ಲೇಖಕ ತನ್ನ ಇತಿಮಿತಿಗಳನ್ನು ಅರಿತಿರುವುದು ಮೆಚ್ಚಬೇಕಾದ ಅಂಶ. ಕೆಟ್ಟ ಕಾವ್ಯ ಬರೆಯದೆ ತನಗೆ ತಿಳಿದಿರುವಷ್ಟನ್ನು ತಾನು ಕೇಳಿ, ಓದಿ ತಿಳಿದಂತೆ ತಿಳಿಗನ್ನಡದಲ್ಲಿ ಅಣಿಗೊಳಿಸಿಕೊಟ್ಟಿದ್ದಾನೆ.

ವಸ್ತು, ವ್ಯಾಪ್ತಿ ಮತ್ತು ನಿರೂಪಣೆಯ ದೃಷ್ಟಿಯಲ್ಲೂ ವಡ್ಡಾರಾಧನೆಗೂ ಚಾವುಂಡರಾಯಪುರಾಣಕ್ಕೂ ಸಾಕಷ್ಟು ಅಂತರಗಳಿವೆ. ಈ ವೈದೃಶ್ಯವನ್ನು ಬಿಟ್ಟು ಈ ಎರಡೂ ಕೃತಿಗಳಲ್ಲಿ ಇರುವ ಸಾದೃಶ್ಯಗಳನ್ನು ಕೂಡ ಗುರುತಿಸಬಹುದು:

1. ಇವೆರಡು ಜೈನಧರ್ಮಕ್ಕೆ ಸಂಬಂಧಿಸಿದ ಕೃತಿಗಳು.
2. ಇವೆರಡರಲ್ಲೂ ಧರ್ಮ ಪ್ರತಿಪಾದನೆಗೆ ಒಳಸಿಕೊಂಡ ಅನೇಕ ಕಥೆಗಳಿವೆ.
3. ಇವೆರಡು ಗದ್ಯ ಗ್ರಂಥಗಳಾಗಿವೆ.
4. ಇವೆರಡರಲ್ಲೂ ಸಂಸ್ಕೃತ, ಪ್ರಾಕೃತ ಮತ್ತು ಕನ್ನಡ ಪದ್ಯಗಳನ್ನು ಅನ್ಯ ಕಾವ್ಯಗಳಿಂದ ಆರಿಸಿ ಉದಾಹರಿಸಲಾಗಿದೆ.
5. ಇವೆರಡರಲ್ಲೂ ಪಡಿಗಹಮುಚ್ಚಠ್ಠಾಣಂ .... ಎಂಬ ಪ್ರಾಕೃತ ಗಾಹೆ ಉದಾಹರಿಸಿದೆ.

ಈ ರೀತಿಯ ಇನ್ನೂ ಕೆಲವು ಸಮಾನ ಅಂಶಗಳನ್ನು ಗುರುತಿಸಬಹುದಾಗಿದೆ. ಇದನ್ನು ಪ್ರಸ್ತಾಪಿಸುವುದರ ಮೂಲಕ ಸಂಶೋಧಕರ ಗಮನವನ್ನು ಸೆಳೆಯಬೇಕಾದ ಭಾಗ ಒಂದಿದೆ. ಅದು ಎಂದರೆ ಜೈನಕಾವ್ಯಗಳಲ್ಲಿನ ಪ್ರಧಾನಪಾತ್ರಗಳಲ್ಲಿ ವೈರಾಗ್ಯ ಮೂಡಲು ಬರುವ ಒಂದು ಅಪರೂಪ ಪ್ರಸಂಗವನ್ನು ಈ ಎರಡೂ ಕೃತಿಗಾರರೂ ಹೇಗೆ ಬಳಸಿಕೊಂಡಿದ್ದಾರೆ

ಎಂಬುದು. ಇದಕ್ಕೆ ಪೊಯ್‌ಕೈಯಾಗಿ ನಿಲ್ಲುವ ಒಂದು ಪ್ರಸಂಗವನ್ನು ಉದಾಹರಣೆಯಾಗಿ ಸನತ್‌ಕುಮಾರ ಕಥೆಯಲ್ಲಿ ಕಾಣುತ್ತೇವೆ. ಅದಕ್ಕೆ ಸಮಾನಾಂತರವಾದ ಸಮಾನ ಸಂದರ್ಭವನ್ನು ಚಾವುಂಡರಾಯಪುರಾಣದಲ್ಲಿಯೂ ಕಾಣುತ್ತೇವೆ. ಪೊನ್ನನ ಶಾಂತಿಪುರಾಣದಲ್ಲಿ ಈಗಾಗಲೇ ಉದಾಹರಿಸಿ ಗಮನಿಸಿರುವ ಭಾಗಕ್ಕೆ ಹೊಂದಿಕೊಂಡಿರುವುದರಿಂದ ತೌಲನಿಕ ಅಭ್ಯಾಸಕ್ಕೆ ಅನುಕೂಲವಾಗಲೆಂದು ಇನ್ನೆರಡನ್ನು ಇಲ್ಲಿ ಕೇವಲ ಉದಾಹರಿಸಿದ್ದೇನೆ. ಇವನ್ನು ತನಿಯಾಗಿ ತೆಗೆದುಕೊಂಡು ಆಸಕ್ತ ವಿದ್ವಾಂಸರು ಸಂಶೋಧನೆ ಮುಂದುವರಿಸಬಹುದು.

ವಡ್ಡಾರಾಧನೆಯ " ಸನತ್ಕುಮಾರ ಚಕ್ರವರ್ತಿ " ಕಥೆಯಲ್ಲಿ ಬರುವ ಒಂದು ಭಾಗ ಹೀಗಿದೆ :

ಮತ್ತೊಂದು ದಿವಸಂ ಸೌಧರ್ಮ ಕಲ್ಪದೊಳ್ ಸೌಧರ್ಮೇಂದ್ರಂ ತನ್ನ ದೇವಸಭೆಯ ನಡುವೆ ಸಿಂಹಾಸನ ಮಸ್ತಕಸ್ಥಿತಂ ದೇವರ್ಕ್ಕಳಿಂ ಪರಿವೇಷ್ಟಿತನಾಗಿ ಸೌದಾಮಿನಿಯೆಂಬ ನಾಟಕಮಂ ನೋಡುತ್ತಿರ್ಪ್ಪನ್ನೆಗಂ ಈಶಾನಕಲ್ಪದಿಂದಂ ಸಹೋತ್ಪನ್ನ ಸಂಗಮದೇವಂ ಬಂದು ಸೌಧರ್ಮೇಂದ್ರನ ಸಭೆಯನವಯವದಿಂ ಪೊಕ್ಕಿರ್ದ್ದಾಗಳ್ ಸಭೆಯೊಳಿರ್ದ್ದ ದೇವರ್ಕಳ ರೂಪುಂ ತೇಜಮುಂ ಲಾವಣ್ಯಮುಮೆಲ್ಲಮಂ ಮಾಸಿಸಿ ತನ್ನ ತೇಜಮೆಯಗ್ಗಳಮಾಗಿರ್ದ್ದೊಡೆಂತು ಚಂದ್ರನುದಯಂಗೆಯ್ದಾಗಳ್ ಗ್ರಹನಕ್ಷತ್ರತಾರೆಗಳ ತೇಜಮಂ ಕುಂದುಗುಮಂತೆಲ್ಲರ ತೇಜಮುಮಂ ಕುಂದಿಸಿ ತಾನೆಯಗ್ಗಳಮಾಗೆ ಬೆಳಗುತ್ತಿರ್ದ್ದೊನಂ ದೇವರ್ಕ್ಕಳೆಲ್ಲಂ ವಿಸ್ಮಯಂಬಟ್ಟು ನೋಡಿ ಸೌಧರ್ಮೇಂದ್ರನನಿಂತೆಂದು ಬೆಸಗೊಂಡರ್ ಸ್ವಾಮಿ ಈ ಸಂಗಮನೆಂಬ ದೇವನತಿಶಯಮಪ್ಪ ರೂಪುಂ ಲಾವಣ್ಯಮುಂ ತೇಜಮುಂ ದ್ವಾದಶಾದಿತ್ಯರ್ಕ್ಕಳೊರ್ಮೊದಲೆ ಉದಯಂಗೆಯ್ದಂತೆ ಬೆಳಗಿದಪ್ಪುದೇಕಾರಣದಿಂದಾದುದೆಂದು ಬೆಸಗೊಂಡೊಡಿಂತೆಂದು ಸೌಧರ್ಮೇಂದ್ರಂ ಪೇೞಲ್ ತೊಡಗಿದನ್.

ಈತಂ ಮುನ್ನಿನ ಭವದೊಳ್ ಈ ಜಂಬೂದ್ವೀಪದ ಪೂರ್ವವಿದೇಹದೊಳ್ ಸೀತೆಯೆಂಬ ತೊಱೆಯ ಬಡಗಣ ದೆಸೆಯೊಳ್ ಪುಷ್ಕಳಾವತಿಯೆಂಬುದು ನಾಡಲ್ಲಿ ಪುಂಡರೀಕಿಣಿಯೆಂಬುದು ಪೊೞಲದನಾಳ್ವೊಂ ಸಕಳ ಚಕ್ರವರ್ತಿ ವಿಮಳವಾಹನನೆಂಬರ ಸನಾತನ ಮಹಾದೇವಿ ವಿಮಳಮತಿಯೆಂಬೊಳಾ ಇರ್ವ್ವರ್ಗ್ಗಂ ಪುಟ್ಟಿದೊಂ ಮಗಂ ಕ್ಷೀರಕುಮಾರನೆಂಬೊನಾತಂ ವೈರಾಗ್ಯಮನೊಡೆಯನಾಗಿ ತಪಂಬಡಲ್ಕೆಂದು ಬಗೆದಿರ್ದ್ದೊಡೆ ತಾಯ್ ತಪಂಬಡಲೀಯದೆನಿತಾನುಂ ತೆಱದಿಂ ನುಡಿದು ತಗುಳ್ದೊಡೆ ತಾಯ ವಚನಮನತಿಕ್ರಮಿಸಲಾಱದೆ ಮನೆಯೊಳಿರ್ದ್ದಂತೆ ಬ್ರಹ್ಮಚರ್ಯಂ ಮೊದಲಾಗೊಡೆಯ ವ್ರತಂಗಳಂ ಪ್ರತಿಪಾಳಿಸಿ ಆಚಾಮ್ಲವರ್ಧನಮೆಂಬ ನೋಂಪಿಯಂ ಪನ್ನೆರಡು ವರ್ಷಂ ಬರಂ ನೋಂತು ಸಮಾಧಿಮರಣದಿಂದಂ ಮುಡಿಪೆ ಇಂತಪ್ಪ ರೂಪುಂ ತೇಜಮುಂ ಲಾವಣ್ಯಮುಮದಱಿಂದೀತಂಗಾದುದೆಂದು ಸೌಧರ್ಮೇಂದ್ರಂ ಪೇೞ್ದೊಡೆ ಮತ್ತಂ ದೇವರ್ಕ್ಕಳಿಂತೆಂದು ಬೆಸಗೊಂಡರ್ ಸ್ವಾಮಿ ಈತನಂತಪ್ಪ ರೂಪುಂ ತೇಜಮುಂ ಲಾವಣ್ಯಮುಮನೊಡೆಯರ್ ಪೆಱರಾರಾನುಮೊಳರೆ ಎಂದು ಬೆಸಗೊಂಡೊಡೆ ಸೌಧರ್ಮೇಂದ್ರನೆಂದನೊಳನ್ ಹಸ್ತಿನಾಪುರದೊಳ್ ಕುರುವಂಶದಾತಂ ಸನತ್ಕುಮಾರನೆಂಬೊಂ ಚಕ್ರವರ್ತಿಯಾತಂ ದೇವರ್ಕಳರೂಪುಂ ಲಾವಣ್ಯಮುಂ ತೇಜಮುಮನೊಡೆಯನಾದಮಾನುಮಗ್ಗಳಮೆಂದುಪೇೞ್ದೊಡೆ.

ಇಂದ್ರನ ಮಾತಂ ನಂಬದೆ ವಿಜಯ ವೈಜಯಂತರೆಂಬಿರ್ವರ್ ದೇವರ್ಕ್ಕಳ್ ಪಾರ್ವರರೂಪಂ ಕೈಕೊಂಡು ಹಸ್ತಿನಾಪುರಕ್ಕೆ ಸನತ್ಕುಮಾರ ಚಕ್ರವರ್ತಿಯ ರೂಪಂ ನೋಡಲೆಂದು ಬಂದು ಬಾಗಿಲೊಳಿರ್ದ್ದ ಪಡಿಯಱರನೆಂದರ್ ನಿಮ್ಮರಸಂಗಿಂತೆಂದು ಪೇೞಿಂ ಗೆಂಟಱಿಂ ಬಂದೆವು ನಿಮ್ಮ ರೂಪನಱಿತ್ತವಟ್ಟು ನೋಡಲ್ಕೆಂ ಬಂದವರುಂ ಪೋಗಿ ತಮ್ಮರಸಂಗಱಿಪಿದೊಡೆ ಅರಸನನುಮತದಿಂದವರರಮನೆಯಂ ಪೊಕ್ಕರಸನ ಸಾರೆವೋಗಿ ನೋೞ್ಪಾಗಳರಸಂ ಸುಗಂಧ ತೈಲದಿಂ ಮೆಯ್ಯನಭ್ಯಂಗನಂಗೆಯ್ದು ಮಜ್ಜನಂಬುಗಲೆಂದಿರ್ದ್ದವಸರದೊಳ್ ದೇವರ್ಕ್ಕಳ್ ಸನತ್ಕುಮಾರ ಚಕ್ರವರ್ತಿಯ ರೂಪಂ ವಾಳಾಗ್ರದಿಂ ತೊಟ್ಟು ನಖಾಗ್ರಂಬರೆಗಂ ನಖಾಗ್ರದಿಂ ತೊಟ್ಟು ವಾಳಾಗ್ರಂಬರೆಗಂ ಏಱಿಯುಮಿೞಿಯೆಯುಂ ನೀಡುಂ ಭಾವಿಸಿ ನೋಡಿ ಚೋದ್ಯಂಬಟ್ಟಿಂತು ರೂಪುಂ ತೇಜಮುಂ ಗಾಡಿಯುಂ ಯೌವನಮುಂ ದೇವರ್ಕ್ಕಳ್ಗಮಿಲ್ಲೆಂದು ಚಕ್ರವರ್ತಿಯ ರೂಪಂ

ಪೊಗೞುತ್ತಿರ್ದರಸನಿಂತೆಂದಂ ನೀವಾರ್ಗೇನೆಂಬರೆಲ್ಲಿಂ ಬಂದಿರೆಂದು ಬೆಸಗೊಂಡವರೆಂದರ್ ದೇವಲೋಕದಿಂ ಬಂದೆವು ದೇವರ್ಕಳೆವು ಸೌಧರ್ಮಕಲ್ಪದೊಳ್ ದೇವರ್ಕಳ ಸಭೆಯ ನಡುವೆ ಸೌಧರ್ಮೇಂದ್ರಂ ನಿಮ್ಮ ರೂಪಸಾದನಾನುಂ ನಚ್ಚಿ ಬಣ್ಣಿಸಿದೊಡಿಂದ್ರನ ಮಾತಂ ನಂಬದೆ ನಿಮ್ಮಂ ನೋಡಲ್ ಬಂದೆವಿಂದ್ರನ ವ್ಯಾವರ್ಣಿಸುವುದರ್ಕ್ಕಗ್ಗಳಮೆ ನಿಮ್ಮ ರೂಪುಂ ಜವ್ವನಮುಂ ಲಾವಣ್ಯಮುಮಂ ಕಂಡೆವೆಂದು ಪೇೞ್ದು ಮಿನ್ನೆಮ್ಮ ದೇವಲೋಕಕ್ಕೆ ಪೋಪೆವೆಂದೊಡರಸಂ ಮನಂ ಪೆರ್ಚಿ ತನ್ನೊಳ್ ತನ್ನ ರೂಪಂ ನಚ್ಚಿ ಕಿಱಿದುಬೇಗಂ ಮಾಣಿಮಭ್ಯಂಗನಂ ಗೆಯ್ದು ರೂಪಂ ಕಂಡಿರಿಂ ಮಜ್ಜನಂಬೊಕ್ಕು ಪಸದನಂ ಗೊಂಡಿರ್ದ ರೂಪಂ ನೋಡಿ ಪೋಗಿಮೆಂದರಸಂ ನುಡಿದೊಡಂತೆ ಗೆಯ್ವೆಮೆಂದು ದೇವರ್ಕ್ಕಳಿರ್ದ್ದರಸನುಂ ಮಜ್ಜನಂ ಬೊಕ್ಕು ಬೇಗಂ ಸರ್ವಾಭರಣಭೂಷಿತನಾಗಿ ಆಸ್ಥಾನ ಮಂಟಪದೊಳ್ ಸಿಂಹಾಸನ ಮಸ್ತಕಸ್ಥಿತನಾಗಿ ಸಾಮಂತ ಮಹಾಸಾಮಂತರ ಮೂವತ್ತಿರ್ಛಾಸಿರ್ವರ್ ಮಕುಟಬದ್ಧರ್ಕಳುಂ ವಿದ್ಯಾಧರರ್ಕಳುಂ ಯಕ್ಷದೇವರ್ಕಳುಂ ಬಳಸಿಯು ಮಿರ್ದೋಲಗಿಸೆ ಮೂವತ್ತೆರಡುಂ ಚಾಮರಂಗಳಿಕ್ಕೆ ಸೌಧರ್ಮೇಂದ್ರನಿಪ್ಪಂತಿರ್ದು ದೇವರ್ಕಳ್ಗೆ ಬಱಿಯಟ್ಟಿ ಬರಿಸಿ ನೋಡಿಮಿನ್ನೆನ್ನ ರೂಪನೆಂದು ತನ್ನಂ ತೋಱಿದೊಡೆ ದೇವರ್ಕಳ್ ನೋಡಿ ವಿಸ್ಮಯಂ ಬಟ್ಟದೇಂ ಚೋದ್ಯಮೊ

ಅನೇಕ ರಾಗ ಸಂಕೀರ್ಣಂ ಘನಲಗ್ನಮಪಿ ಕ್ಷಣಾತ್
ಮಾನುಷಂ ಯೌವನಂ ಕಷ್ಟಂ ನಶ್ಯತೀಂದ್ರ ಧನುರ್ಯಥಾ ॥

ಎಂದೀ ಕ್ಷಣಮಾತ್ರದೊಳೆ ಮನುಷ್ಯರ ರೂಪುಂ ಗಾಡಿಯುಂ ಚೆಲ್ವುಂ ತೇಜಮುಂ ಯೌವನಮುಂ ಕುಂದಿತ್ತೆನೆ ಚಕ್ರವರ್ತಿ ಯೆಂದನೆನ್ನ ರೂಪಂ ಮುನ್ನೆ ನೀಮೆ ಪೊಗೞ್ದರೀಗಳೇಕೆ ಪೞಿದಪ್ಪಿರೆನೆ ದೇವರೆಂದರ್ ಕೇಳರಸಾ ದೇವರ್ಕಳ ತೇಜಮುಂ ಲಾವಣ್ಯಮುಂ ಮುಟ್ಟಿದಪ್ರಥಮ ಸಮಯದಿಂ ತೊಟ್ಟು ಪೆರ್ಚುತ್ತುಂ ಪೋಕುಮಾಯುಷ್ಯದ ನಡುವರೆಗಮಲ್ಲಿಂದತ್ತ ಕುಂದುತ್ತುಂ ಪೋಕುಮಾಯುಷ್ಯಾಂತಂಬರೆಗಂ ಮತ್ತಾಮುಂ ನಿಮ್ಮ ರೂಪಂ ಯೌವನ ಭರದೊಳಿರ್ದುದುಮಂ ಕಂಡೆ ಮೀಗಳಾಯುಷ್ಯಮುಂ ತೇಜಮುಂ ರೂಪುಂ ಲಾವಣ್ಯಮುಂ ಯೌವನಮುಂ ಕಿಱಿದು ಕುಂದಿದುದಂ ಕಂಡೆಮೆನೆ ಚಕ್ರವರ್ತಿ ನೀಮೆಂತಱಿದಿರೆಂದು ಬೆಸಗೊಂಡೊಡೆ ದೇವರ್ಕ್ಕಳೆಂದರೆಮಗವಧಿ ಜ್ಞಾನಮುಂಟಪ್ಪುದಱಿಂದಱಿದೆವು ಮನುಷ್ಯರ್ಗ್ಗಱಿಯ ಲಾಗದೆಂದೊಂದು ದೋಣಿಕೊಂಡಮಂ ತರಿಸಿ ನೀರಂ ತೆಕ್ಕನೆ ತೀವಿಯದಱೊಳಗೆ ಚಮರಿಯನದ್ದಿ ತೆಗೆದು ಬಳಸಿಯುಂ ಬೀಸಿದಾಗಳ್ ಸಭೆಯೊಳಿರ್ದ ಮಾನಸಂ ಮೇಗೆಲ್ಲಂ ನೀರ್ ಪನಿತುದಂ ತೋಱಿ ದೇವರೆಂದರ್ ಪೇೞಿಮೀ ಚಮರಿಯೊಳ್ ತಗುಳ್ದು ಬಿಯಮಾದೆನಿತು ನೀರಂ ಕೊಂಡದೊಳ್ ಕುಂದಿದುದಂ ತೋಱಿಮೆಂದೊಡವರುಮಱಿಯ ದಿರ್ದ್ದೊಡೆಂತಿದಂ ನೀಮಱಿಯಲಾಗದಂತೆ ಮಾನಸರಾಯುಷ್ಯಮುಂ ತೇಜಮುಂ ಲಾವಣ್ಯಮುಂ ಯೌವನಮುಂ ಪ್ರತಿಸಮಯಂ ಕುಂದುತಿರ್ಕುಮಾ ವೀಚಿಮರಣಮಂ ನಿಮಗಱಿಯಲಾಗದೆಂದು ಪೇೞ್ದು ಹೇತು ದೃಷ್ಟಾಂತಂಗಳಿಂದಂ ಪ್ರತ್ಯಕ್ಷಮಂ ತೋಱಿ ಚಕ್ರವರ್ತಿಯಂ ನಂಬೆ ನುಡಿದು ದೇವರ್ಕ್ಕಳ್ ತಮ್ಮ ಸೌಧರ್ಮಕಲ್ಪಕ್ಕೆ ಪೋದರ್.

ಮತ್ತಿತ್ತ ಸನತ್ಕುಮಾರ ಚಕ್ರವರ್ತಿಗದುವೆ ನಿರ್ವೇಗಕ್ಕೆ ಕಾರಣಮಾಗಿ ಶರೀರ ಭೋಗಕ್ಕೆ ಪೇಸಿ ಇಂತೆಂದು ಮನದೊಳ್ ಬಗೆಗುಂ.

ಚಾವುಂಡರಾಯಪುರಾಣದ "ಶಾಂತಿನಾಥಚರಿತ್ರೆ"ಯ ಕಥೆಯಲ್ಲಿ ಇದೇ ರೀತಿಯಲ್ಲಿ ಬರುವ ಒಂದು ಭಾಗ ಹೀಗಿದೆ:

ಈ ಜಂಬೂದ್ವೀಪದೈರಾವತಕ್ಷೇತ್ರದ ಪದ್ಮಿನೀಖೇಟದ ಸಾಗರಸೇನನೆಂಬ ಪರದಂಗಂ ಅಮಿತಮತಿಗಂ ಧನಮಿತ್ರನುಂ ನಂದಿಷೇಣನುಮೆಂಬ ಮಕ್ಕಳಾಗಿ ದ್ರವ್ಯಸಂಬಂಧದಿನೊರ್ವನೊರ್ವರ ನಿಱಿದು ಸತ್ತು ಪಕ್ಕಿಗಳಾಗಿ ಪುಟ್ಟಿದುವುಂ ಈ ಗೃಧ್ರನ ಮೇಗೊರ್ವದೇವಂ ಸನ್ನಿಹಿತನಾಗಿ ನುಡಿದಪನಾತನಾರ್ಗೆಂದೊಡೆ ದಮಿತಾರಿ ಶಕ್ತಿಯ ಕಾಳಗದೊಳ್ ಎನ್ನಕಂಪ್ಯೆಯ್ಸತ್ತ ಕನಕರಥನೆಂಬೊಂ ಸಂಸಾರದೊಳ್ತೊಱಲ್ದು ಬಂದು ಕೈಲಾಸಗಿರಿಯ ತಟದ ಪರ್ಣಕಾಂತೆಯೆಂಬ ತೊಱೆಯ ಸೋಮನೆಂಬ ತಾಪಸಂಗಂ ಶ್ರೀದತ್ತೆಗಂ ಚಂದ್ರನೆಂಬ ಮಗನಾಗಿ ತಪದೊಳ್ ನೆಗೞ್ದು ಕಾಲಾಂತರದೊಳ್

ಜ್ಯೋತಿರ್ಲೋಕದೊಳ್ ದೇವನಾಗಿರ್ದೀಶಾನಕಲ್ಪಕ್ಕೆ ಪೋಗಿ ಸಭೆಯೊಳಿರ್ದೀಶಾನೇಂದ್ರ ಮೇಘರಥನೊಲ್ ದೊರೆಯ
ರಾರುಂ ದಾನಶೂರರಿಲ್ಲೆಂದು ದೇವರ್ಕಳ್ಗೆ ಪೇೞೆ ಕೇಳ್ದು ಸೈರಿಸದೆನ್ನಂ ಪರೀಕ್ಷಿಸಲೆಂದು ಬಂದಾದೇವಸೀ ಗೃಧ್ರನ ಮೆಯ್ಯೊ
ಳಿರ್ದಾ ಪಕ್ಷಿಯನಾಹಾರ ದಾನಮೀಯೆಂದು ನುಡಿದನಿದು ದಾನಯೋಗ್ಯಮಲ್ಲ ದಾನಲಕ್ಷಣಮಪ್ಪಡೆ ದಾತೃವೆಂದುಂ
ದೇಯಮೆಂದುಂ ಪಾತ್ರಮೆಂದುಂ ತ್ರಿವಿಧಮಕ್ಕುಮಲ್ಲಿ ಶ್ರದ್ಧಾದಿ ಸಪ್ತಗುಣಸಂಪನ್ನಂ ದಾತೃವಕ್ಕುಂ ಆಹಾರಾಭಯ ಭೈಸಜ್ಯ
ಶಾಸ್ತ್ರವಸತಿ ಸಂಯಮೋಪಕರಣಾದಿಗಳ್ಗುಪಯೋಗಮಪ್ಪವಸ್ತು ದೇಯಮಕ್ಕುಂ ಪ್ರಕೃಷ್ಟ ಸಮ್ಯಗ್ದರ್ಶನ ಜ್ಞಾನಚಾರಿತ್ರ
ಸಹಿತತ್ವಮುಂ ಸ್ವಪರಹಿತ ವಿಸ್ತಾರಕ ಗುಣಾತಿಶಯ ತತ್ವಮುಮುಳ್ಳೊಡೆ ಪಾತ್ರಮಕ್ಕುಂ ಅದಱಿಂ ಈ ದೇವನ
ಮೆಯ್ಯೊಳ್ ಪಾತ್ರಗುಣಮಿಲ್ಲದುದೀ ದೇಯಮಪ್ಪ ವಸ್ತುವಲ್ಲದಲ್ಲದೆಯುಮಾಹಾರದಾನಂ ಪಾರಂಪರ್ಯಾಯದಿಂ
ಮೋಕ್ಷಕಾರಣಮೆಂದು ದೃಢರಥಂಗೆ ಪೇೞ್ವುದುಂ ಕೇಳ್ದಾದೇವಂ ತನ್ನ ಸ್ವರೂಪಮಂ ತೋಱಿ ನಿನ್ನ ಮೆಯ್ಯೊಳೀಶಾನೇಂದ್ರಂ
ಪೇೞ್ದನಿತು (ಉದಾರ) ದಾನ ಶೂರತ್ವಗುಣಂ ನೆಱವುದೆಂದು ಮೇಘರಥನಂ ಪೊಗೞ್ದು ಪೂಜಿಸಿ ಪೋದನಾ ಪಕ್ಕಿಗಳುಂ
ತಮ್ಮ ಭವಮಂ ಕೇಳ್ದು ಅನ್ಯೋನ್ಯ ವೈರಮಂ ಪತ್ತುವಿಟ್ಟು ತೊಱೆದು ಸತ್ತು ದೇವರಮಣವನದೊಳ್ ಸರೂಪ
ಅತಿರೂಪನೆಂಬ ವ್ಯಂತರ ದೇವರಾಗಿ ಪುಟ್ಟಿ ಕೃತೋಪಕಾರಮಂ ನೆನೆದು ಮೇಘರಥನಂ ಪೂಜಿಸಿ ಪೋದರ್ ಇತ್ತ ಮೇಘ
ರಥನುಂ ದಮವರರೆಂಬ ಚಾರಣಋಷಿಯರ್ಗಾಹಾರದಾನಮಂ ವಿಧಿಪೂರ್ವಕಂ ಕುಡೆ ಪಂಚಾಶ್ಚರ್ಯಂ ನೆಗೞೆ ಮತ್ತೊಂದು
ದಿವಸಂ ಸಂದೀಶ್ವರ ಮಹಾಮಹಿಮೆಯೋ ಮೇಘರಥನುಪಾವಾಸಂಗೆಯ್ದು ಜಿನಪೂಜೆಯಂ ಮಾಡಿ ರಾತ್ರಿಪ್ರತಿಮಾ
ಯೋಗಧಾರಿಯಾಗಿರ್ಪಿನಮೀಶಾನೇಂದ್ರಂ ತನ್ನ ಸಭೆಯೊಳ್ ನಮೋ ಮೇಘರಥಾಯ ದಾನಶೂರಾಯಯೆಂದು ಪ್ರಕಾಶ
ವಚನದಿಂ ನಮಸ್ಕಾರಂಗೆಯ್ಯೆ ದೇವರೆಂದರೆಲ್ಲರ್ಗಂ ನೀಂ ಸ್ತುತ್ಯನೈ ನೀನಾರಾಂ ಸ್ತುತಿಯಿಸಿದಪ್ಪೆಯೊಂದೊಡೀಶಾನೇಂದ್ರ
ನೆಂದಂ ಮೇಘರಥಂಗೆ ನಮಸ್ಕಾರಂಗೆಯ್ದ ಸುರೂಪೆಯುಮೆಂಬ ದೇವಿಯರ್ಬಂದಾಮೇಘರಥಂಗೆ ಚಿತ್ತಕ್ಷೋಭಮನೆಂತುಂ
ಮಾಡಲಾಱದೀಶಾನೇಂದ್ರನುಂ ಪೇೞ್ದುದು ತಪ್ಪದೊಂದೊರ್ವರೊರ್ವರೊಳ್ ನುಡಿದು ದೇವಲೋಕಕ್ಕೆ ಪೋದರ್ ಇತ್ತ
ಮತ್ತೊಂದು ದಿವಸಂ ಈಶಾನೇಂದ್ರಂ ಸುರಸಭೆಯೊಳ್ ಮೇಘರಥನರಸಿ ಪ್ರಿಯಮಿತ್ರೆಯಂ ರೂಪು ಸೌಂದರ್ಯಕೆ
ಸಮಾನಮಪ್ಪ ಸ್ತ್ರೀಯರಿಲ್ಲೆಂದು ಪೊಗೞೆ ರತಿಯುಂ ರತಿಷೇಣೆಯುಮೆಂಬರಾದೇವಿಯರಾಕೆಯ ರೂಪಂ ನೋಡಲೆಂದು
ಮಜ್ಜನಾವಸರದೊಳ್ ಸುಗಂಧತೈಲಾಭ್ಯಂಗನಂಗೆಯ್ದಿರ್ದ ಪ್ರಿಯಮಿತ್ರೆಯಂ ಕಂಡಿಂದ್ರನೆಂತು ಪೊಗೞ್ದನಂತುಂಟೀ
ರೂಪೆಂದು ತಮ್ಮೊಳ್ ಪೊಗೞ್ದು ಮತ್ತಂ ಪರದರಕನ್ಯಕೆಯರ ರೂಪುಗೊಂಡು ಪರಿಚಾರಕಿಯರ್ಗೆಂದರ್ ಅರಸಿಯ ರೂಪಂ
ನೋಡಲ್ ಬಂದೆವೆಂದೊಡಾಮಾತಂ ಪರಿಚಾರಕಿಯರರಸಿಗಱಿಪದೊಡವರನನ್ನೆಗಂ ಪೊರಗೆ ಕುಳ್ಳಿರಿಸಿಮೆಂದು ಮಜ್ಜನ
ವಿಧಿಯಂ ನಿರ್ವರ್ತಿಸಿ ನೆಱೆಯೆ ಕೆಯ್ಗೆಯ್ದು ಆ ಕನ್ಯೆಕೆಯರಂ ಬರವೇೞ್ದೊಡಾಕೆಗಳ್ ಬಂದು ನೋಡಿ ನಿನ್ನ ರೂಪಂ
ಮುನ್ನಮತೆ ರಮಣೀಯಮೀಗಳಿನಿಸಾನುಂ ಕಾಂತಿವಿಹೀನಮಾಗಿರ್ದುದೆಂದೊಡಾಕೆಗಳ ಮಾತಂ ಕೇಳ್ದು ಪ್ರಿಯಮಿತ್ರೆ
ಮನಕ್ಷತಂ ಬೆರಸರಸನ ಮೊಗಮಂ ನೋಡಿದಾಗಳರಸನೆಂದಂ ನಿನ್ನ ರೂಪನೀಶಾನೇಂದ್ರಂ ಪೊಗೞೆ ನೋಡಲೆಂದೇವಿಯ
ರಿರ್ವರುಂ ಬಂದು ನಿನ್ನ ರೂಪಂ ಮುನ್ನಂ ಕಂಡಾಗಡಿನ ಜೌವನಮುಂ ಕಾಂತಿಯುಂ ಬೞಿಕ್ಕೆ ನೋೞ್ಪಾಗಳ್ ಕಾಣದೆ
ಯೌವನಮುಂ ಇನಿಸಾನುಂ ಕಂದಿದುದಂ ಕಂಡು ನುಡಿದರೆಂದೊಡಾ ದೇವಿಯರ್ತಮ್ಮಭಿಪ್ರಾಯಮನರಸನಱಿವಡೆ
ನಿಜಸ್ವರೂಪಂ ತೋಱಿ ಪೂಜಿಸಿ ದೇವಲೋಕಕ್ಕೆ ಪೋದರ್.

ಹೀಗೆ ಶಾಂತಿಪುರಾಣ, ವಡ್ಡಾರಾಧನೆ ಮತ್ತು ಚಾವುಂಡರಾಯಪುರಾಣ—ಈ ಮೂರೂ ಕೃತಿಗಳಲ್ಲಿ ಕಾಣುವ ಸದೃಶವಾದ ಸಂದರ್ಭಗಳನ್ನಿರಿಸಿಕೊಂಡು ಮತ್ತೆ ಅನ್ವೇಷಣೆ ನಡಸುವುದರಲ್ಲಿ ಔಚಿತ್ಯವಿದೆ, ಸ್ವಾರಸ್ಯವಿದೆ. ಇವೆಲ್ಲಕ್ಕೂ ಮೂಲವಾದ ಆಕರವನ್ನು, ಪ್ರಾಚೀನ ದಾಖಲೆಯನ್ನು ಗುರುತಿಸಿಕೊಳ್ಳಬೇಕಾದ ಅಗತ್ಯವೂ ಇದೆ.

ಪೊನ್ನನ ಕಾವ್ಯಶೈಲಿ

ಪೊನ್ನನ ಚಂಪೂಕಾವ್ಯವಾದ ಶಾಂತಿಪುರಾಣದ ಒಟ್ಟು ಶೈಲಿಯು ಲಕ್ಷಣ, ವಿನ್ಯಾಸ ಸಂಪಾದಿಗಳಿಂದ ಪ್ರಣೀತವಾಗಿ ಕಾಣುತ್ತಿರುವ ಕನ್ನಡ ಚಂಪೂಶೈಲಿಗೆ ಅನುಗುಣವಾಗಿದೆ. ದ್ವಿತೀಯಾಕ್ಷರ ಪ್ರಾಸವಿರಿಸಿಕೊಂಡು ಹೆಣೆದ ಕಂದ ಮತ್ತು ವಿವಿಧ ವೃತ್ತಪದ್ಯಗಳ ಬಂಧ, ಮಧ್ಯೆ ಮಧ್ಯೆ ಹೊಂದಿಕೊಂಡುಬರುವ ಗದ್ಯ, ಅಲ್ಲೊಂದು ತ್ರಿಪದಿ, ಇಲ್ಲೊಂದು ರಗಳೆ, ಉಲ್ಲೊಂದು ಪಿರಿಯಕ್ಕರ—ಇವೆಲ್ಲಾ ಮಾಮೂಲೀ ಸಿದ್ಧಶೈಲಿಯ ವರಸೆಗಳೇ; ಜತೆಗೆ ಕನ್ನಡವನ್ನು ಇಕ್ಕಿಮೆಟ್ಟಿದ ಸಂಸ್ಕೃತ ವಾಗಾಡಂಬರದ ಪಟ್ಟುಗಳು ಬೇರೆ. ಪೊನ್ನ ಈ ಹಳಸಲು ಸರಕಿನ ಜತೆಗೆ ಹೊಸತನ ಹಾಗೂ ಪೊನ್ನತನ ಎಷ್ಟು ತೋರಿದ್ದಾನೆ, ಎಲ್ಲಿ ತೋರಿದ್ದಾನೆ, ಅದರ ಬಗಿಬನಿ ಏನು, ಗುಣಾಂಶಗಳು ಯಾವುವು—ಎಂಬ ಪರಾಮರ್ಶೆಯನ್ನು, ಶೈಲಿಯನ್ನೇ ಮುಖ್ಯ ಕೇಂದ್ರ ಬಿಂದುವಾಗಿರಿಸಿಕೊಂಡು, ನಡಸಬಹುದು. ಲೇಖಕನ ವ್ಯಕ್ತಿತ್ವವನ್ನೂ ಧೋರಣೆಯನ್ನೂ ಶೈಲಿ ಕೂಡ ಪ್ರತಿನಿಧಿಸುವ ಸಾಧ್ಯತೆಯಿದೆಯೆಂಬುದನ್ನು ನೆನಪಿಟ್ಟಾಗ, ಶೈಲಿಯ ವಿವೇಚನೆಗಿರುವ ಮಹತ್ವ ಮನವರಿಕೆಯಾಗುತ್ತದೆ. ತನ್ನ (ಕಾವ್ಯದ) ಮಾತಿನ ರೀತಿ ಎಂತಹುದೆಂಬುದನ್ನು ಕವಿ ಒಂದು ಕಡೆ ಹೀಗೆ ಧ್ವನಿರಮ್ಯತೆಯಿಂದ ಕಣ್ ಸನ್ನೆಮಾಡಿ ಬೆರಳಿಟ್ಟು ಸೂಚಿಸಿದ್ದಾನೆ:

> ಒದವಿದ ನವ ಜಲದಮೆ ಮೊಳ
> ಗಿದಪುದು ನವಜಲದರುತಿಗೆ ಶಿಖಿಕಳಭಮೆ ಕೇ
> ಗಿದಪುವನಿಸಿದುದು ಮಧುರಂ
> ಮೃದು ಗಂಭೀರಂ ರಥಾಂಗಪಾಣಿ ನಿನಾದಂ ‖ 2–53

ಆದಿಕವಿ ಪಂಪ ಹೇಳಿಕೊಂಡ ಸ್ವವಿಚಾರೋಕ್ತಿಗಳಿಗೆ ಇದು ಪೊನ್ನನ ಪಡಿನುಡಿ. ಪಂಪ ದುಂದುಭಿಗಭೀರನಿನದ, ಹಿತಮಿತಮೃದು ವಚನ ರಚನನಾದರೆ ಈತನೇನು ಕಡಮೆಯಲ್ಲವೆಂಬ ಒಳಕೂಗೂ ಹೊಳಲುಗೊಡುತ್ತಿದೆ.

ಪೊನ್ನನ ಒಟ್ಟು ಶೈಲಿಯ ಧೋರಣೆಯಲ್ಲಿ ಎದ್ದುಕಾಣುವ ಮೊದಲ ಗುಣ ಪ್ರಸನ್ನತೆ. ಅದನ್ನು ಕಾವ್ಯದುದ್ದಕ್ಕೂ ಏಕಪ್ರಕಾರವಾಗಿ ಕಾಪಾಡಿದ್ದಾನೆಂಬುದು ಅವನಿಗೆ ನ್ಯಾಯವಾಗಿ ಸಲ್ಲುವ ಪ್ರಶಸ್ತಿ. ಇದಕ್ಕೆ ಪೂರಕವಾಗಿ ಕವಿ ಅತ್ತ ವಿಸ್ತಾರ, ಇತ್ತ ಸಂಕ್ಷಿಪ್ತತೆ, ಉತ್ತ ಉಚಿತಕ್ಕೆ ತಕ್ಕಷ್ಟು ಪೇಳುವ ಔಚಿತ್ಯ—ಹೀಗೆ ಕಾವ್ಯನಿರ್ವಹಣೆಗೆ ತನ್ನ ಬುದ್ಧಿ ಬಯಸಿದ ವೈವಿಧ್ಯ ತಂದುಕೊಂಡಿದ್ದಾನೆ. ಒಮ್ಮೊಮ್ಮೆ ಅಕ್ಷರಗಳ ಮೇಲೆ ಆಟ ಆಡುತ್ತಾನೆ:

> ವಿತತನರ್ಹದ್ಬಲಂ ಯತಿ
> ಪತಿ ಮಹಿಪತಿ ಮಕುಟ ನಿಕಟತಾಟಿತ ಚರಣಂ
> ಕ್ಷಿತಿ ಪೂಜ್ಯಂ ಜಿತ ದುರಿತಂ
> ನುತ ಸಂಪ್ರತಿ ಭೂತಭಾವಿ ಪರಿಣತ ತತ್ವಂ ‖ 1–18

ತಕಾರ, ಟಕಾರಗಳು ಕ್ರಮವಾಗಿ ದಂತ್ಯ ಹಾಗೂ ಪ್ರತಿವೇಷ್ಟಿತ ಧ್ವನಿಗಳು. ಇವೆರಡನ್ನೂ ಕವಿ ಇಲ್ಲಿ ಘೋಷ–ಅಘೋಷ ಉಭಯ ಓಷ್ಠ್ಯಧ್ವನಿಗೆ (ಪ್, ಬ್, ಮ್) ಅಧೀನವಾಗಿ ನಿಂತು ನರ್ತಿಸುವಂತೆ ಧ್ವನ್ಯಂಗಗಳಿಗೆ ಚೆನ್ನಾಗಿ ಕಸರತ್ತು ಕೊಟ್ಟಿದ್ದಾನೆ.

> ಚಾಗದ ತೋರ್ಕೆಗಂ ನೆಗೞ್ದ ಬೀರದೆಳುರ್ಕೆಗಮೊಳ್ಪನೆಪ್ಪಿದು
> ದ್ಯೋಗದಮುರ್ಕೆಗಂ ಸಿರಿಯ ಸಾರ್ಕೆಗಮಾಯತಿಯಿರ್ಕೆಗಂ ಪೆಜರ್
> ಮೇಗೆನಲಿಲ್ಲದಂತು ನೆಗೞ್ದಿರ್ದುದಜಿಂ ಮನುಜೇಂದ್ರಕೋಟಿ ಕೋ
> ಟೀಗುಣಕೋಟಿಗಾ ಸ್ತಿಮಿತಸಾಗರನಾಗರಮಾಗದಿರ್ಕಮೆ ‖ 1–68

ಈ ಉತ್ಪಲಮಾಲಾವೃತ್ತದ ಓಟ, ಒಟ್ಟು ಪದ್ಯದ ಲಯ ವಾಚ್ಯಾರ್ಥವನ್ನು ಸ್ಪಷ್ಟೀಕರಿಸುವ ಕ್ರಿಯೆಯಲ್ಲಿ ಸಕ್ರಿಯ ಪಾಲುಗಾರಿಕೆ ಪಡೆದಿದೆ. ತೊರ್ಕೆ, ಅಳುರ್ಕೆ, ಅಮರ್ಕೆ, ಇರ್ಕೆ, ಸಾರ್ಕೆ—ಇವು ಸಾಭಿನಯಪೂರ್ವಕವಾಗಿ ಪದ್ಯದ ಅರ್ಥವನ್ನು ಉದ್ದೀಪಿಸುವಲ್ಲಿ ಸಾರ್ಥಕವಾಗಿವೆ, ಇದರ ಜತೆಗೆ 'ಕೋಟಿ ಕೋಟಿ ಗುಣಕೋಟಿ' ಯೂ ಸೇರಿ ಸ್ತಿಮಿತ ಸಾಗರನ ಗುಣಾಧಿಕ್ಯ ವ್ಯಕ್ತಿತ್ವ ಉತ್ಕರ್ಷಗೊಂಡಿದೆ. ಶೈಲಿಯ ಸಾಮರ್ಥ್ಯ ಎಷ್ಟೆಷ್ಟು ಎಂಬುದು ಆಯಾ ಕವಿ ಅದನ್ನು ಹೇಗೆ ದುಡಿಸಿಕೊಳ್ಳುತ್ತಾನೆಂಬುದರ ಮೇಲೆ ಹೋಗುತ್ತದೆ.

ಉದಾತ್ತ ಪಾತ್ರಗಳ ಉತ್ತಮಿಕೆಯನ್ನು ತುಂಬ ಗಂಭೀರವಾದ ಶೈಲಿಯಲ್ಲಿ ನೆಲೆಗೊಳಿಸುವುದು ಪೊನ್ನನ ಅಗ್ಗಳಿಕೆ :

ತನು ಸೌಂದರ್ಯದಿನನ್ನನಿನ್ನನೆನಲುದ್ಯಚ್ಚಾರದಿಂದನ್ನನಿ
ನ್ನನೆನಲ್ ಬೋಧದಿನನ್ನನಿನ್ನನೆನಲಾತ್ಮೈಶ್ವರ್ಯದಿಂದನ್ನನಿ
ನ್ನನೆನಲ್ ಸೌಖ್ಯದಿನನ್ನನಿನ್ನನೆನಲಕ್ಷೂಣತ್ವದಿಂದನ್ನನಿ
ನ್ನನೆನಲ್ಬಾರದು ನಿನ್ನನೇಂ ಪಿರಿಯಯೋ ತ್ರೈಲೋಕ್ಯರಕ್ಷಾಮಣೀ ॥ 1–85

ಮೆಯ್ಯ ಚೆಲುವಿನಿಂದ ಅಂಥವನು ಇಂಥವನು ಎಂದು ಹೇಳಲು, ಒಳ್ಳೆಯ ನಡೆಯಿಂದ ಅಂಥವನು ಇಂಥವನು ಎಂದಾಗಲಿ, ಬೋಧೆ ಮತ್ತು ಆತ್ಮಶ್ರೀಯಿಂದಾಗಲಿ, ಸೌಖ್ಯದಿಂದಾಗಲಿ, ಅಕ್ಷೂಣತ್ವದಿಂದಾಗಲಿ ನಿನ್ನನ್ನು ಹೋಲಿಸಿ ಹೇಳಲು ಸಾಧ್ಯವಿಲ್ಲ. ನೀನು ಅಷ್ಟು ಹಿರಿಯ, ನೀನು ಮೂರು ಲೋಕಗಳನ್ನು ಕಾಪಾಡುವಾತ—ಇದು ಸ್ವಯಂಪ್ರಭ ತೀರ್ಥೇಶನನ್ನು ಕುರಿತ ಪದ್ಯ. ದೇಹ ಶೋಭೆಯ ಜತೆಗೆ ಆತ್ಮಶುದ್ಧಿ ಶೋಭೆಯೂ ಶುಭ್ರಶೀಲವೂ ಇದ್ದಾಗ ಇಡೀ ವ್ಯಕ್ತಿತ್ವ ಹೇಗೆ ತಾನಾಗಿ ಗೌರವಭಾಜನವಾಗುತ್ತದೆಂಬ ನಿತ್ಯಸತ್ಯವನ್ನು ಪೊನ್ನ ಇಲ್ಲಿ ಚೆನ್ನಾಗಿ ಸ್ಥಾಪಿಸಿದ್ದಾನೆ. ಇದಕ್ಕೆ ತೆಕ್ಕೆ ಹಾಕಿಕೊಂಡಂತೆ ಕಾಣುವ ಈ ಪದ್ಯ ನೋಡಿ :

ಸುಕರತರಂ ವಚೋನಿಚಯಮಾರಯೆ ದುಷ್ಕರಮರ್ಥವಾರ್ತಮ
ತ್ಯಕುಟಿಲಮಾಸ್ಯದೊಡ್ಡಭಿಮತಂ ಕುಟಿಲಂ ಋಜು ಬಾಹ್ಯವೃತ್ತಿವ
ಕ್ರಕಲುಷಮಂತರಂಗಮೆನೆ ಮೆಲ್ನುಡಿ ಪೊಣ್ಮರೆ ದಂತ ಸಾಂದ್ರ ಚಂ
ದ್ರಿಕೆ ಪರಿಷತ್ಕುಮುದ್ವತಿಗೆ ಕಾಂತಿಯನಾಂತುದನಂತವೀರ್ಯನಾ ॥ 2-52

ಆಡುವ ಮಾತಿನಲ್ಲಿ ಶ್ಲೇಷೆಯನ್ನಿಟ್ಟು ನುಡಿಯುವುದು, ರಾಜಠೀವಿಯಿಂದ ಕೂಡಿದ ಬೆಡಗು ಬಿಂಕ--ಇವನ್ನು ಅನಂತ ವೀರ್ಯನ ಚತುರೋಕ್ತಿ ಒಳಗೊಂಡಿತ್ತೆಂಬ ಸೂಚನೆಯನ್ನು ಪೊನ್ನಕವಿ ಕೊಟ್ಟಿದ್ದಾನೆ. ಇದರ ಪ್ರತಿಧ್ವನಿಯಾಗಿ ಕೇಳಿಬರುವ ಪದ್ಯ :

ಪಿಕಕೋಳಾಹಳಮಲ್ಲದಿಲ್ಲ ಪೆಱತುಂ ಕೋಳಾಹಳಂ ನಾಗಚಂ
ಪಕ ಗಂಧೋದ್ಗಮಮಲ್ಲದಿಲ್ಲ ಪೆಱತುಂ ಗಂಧೋದ್ಗಮಂ ಭೃಂಗಗಾ
ಯಕ ಗೀತಸ್ವನಮಲ್ಲದಿಲ್ಲ ಪೆಱತುಂ ಗೀತಸ್ವನಂ ರಾಜಕೀ
ರಕ ವಾಕ್ಪಾಟವಮಲ್ಲದಿಲ್ಲ ಪೆಱತುಂ ವಾಕ್ಪಾಟವಂ ಸುತ್ತಲುಂ ॥ 3–3

ಕೋಗಿಲೆಗಳ ಕೂಗಾಟದ ಕೋಲಾಹಲ, ದುಂಬಿಗಳ ಗಾಯನದ ಝೇಂಕಾರ, ಅರಗಿಳಿಗಳ ಮಾತಿನ ಚಾತುರ್ಯ— ಇದಿಷ್ಟೂ ಈ ಪದ್ಯ ಲಯದಲ್ಲಿ ಅಭಿನಯಗೊಂಡು ಪ್ರತಿಧ್ವನಿಸುತ್ತಿರುವ ಅನುಭವ ಓದುಗರಿಗೆ ಉಂಟಾಗುತ್ತದೆ. ಘೋಷ--ಅಘೋಷ ಧ್ವನಿಗಳ ಅನುರಣನದ ಒಡಲಲ್ಲಿ ಹ್ರಸ್ವ–ದೀರ್ಘ ಸ್ವರಗಳು ನಾದಮಾಡುತ್ತಾ ಅಂತ್ಯಾಕ್ಷರೀಘಾಟಿಯ ಓಟದಲ್ಲಿ ನಡೆಯುವ ರೀತಿ ಕಪಿಗೆ ಕಿರೀಟವಿಡುವಂತಿದೆ. 3–6 ರಿಂದ ಬರುವ ರಗಳೆ ಹಾಗೂ ಅದರ ಅನಂತರ ಬರುವ ನಾಲ್ಕು ಪದ್ಯಗಳ ಶೈಲಿ ಕೂಡ ಪೊನ್ನನ ಕವಿಚಕ್ರವರ್ತಿ ಬಿರುದನ್ನು ಉಳಿಸುವಲ್ಲಿ ನೆರವಿಗೆ ಬರುತ್ತವೆ. ಅದರ ವಿಚಾರ

ಛಂದಸ್ಸು ಕುರಿತು ಬರೆದಿರುವ ವಿವರಣೆಯಲ್ಲಿ ಪ್ರಸ್ತಾಪಗೊಂಡಿರುವುದರಿಂದ ಇಲ್ಲಿ ಪುನರುಕ್ತಿ ಮಾಡುವ ಅಗತ್ಯವಿಲ್ಲ.

ಪುನರುಕ್ತಿ ಎಂದೊಡನೆ ನೆನಪಾಯಿತು, ಪೊನ್ನ ಹಲವಾರು ಪದ್ಯಗಳಲ್ಲಿ ಶಬ್ದಗಳ ಪುನರುಕ್ತಿ ಮಾಡಿ ಸುಖಿಸಿದ್ದಾನೆ. ಪದ್ಯಗಳಲ್ಲಿ ಪದಗಳ ಪುನರಾವೃತ್ತಿ ಮಾಡುವುದು ಪೊನ್ನನಿಗೆ ಪ್ರಿಯವಾದ ಕಾವ್ಯಕ್ರಿಯೆ. ಈಗಾಗಲೇ ಉದಾಹರಿಸಿರುವ ಪದ್ಯಗಳಲ್ಲೂ ಇದು ಕಂಡುಬಂದಿದೆ. ಇಂಥ ಸುಮಾರು ಐವತ್ತು ಪದ್ಯಗಳು ಶಾಂತಿಪುರಾಣದಲ್ಲಿವೆ, ಪೊನ್ನನ ಅನುಪಲಬ್ಧ ಕಾವ್ಯ ಭುವನೈಕ ರಾಮಾಭ್ಯುದಯದಿಂದ ಉಲ್ಲೇಖವಾಗಿ ದೊರೆತಿರುವ ಪದ್ಯಗಳಲ್ಲೂ ಪೊನ್ನಕವಿ ಶೈಲಿಯಲ್ಲಿನ ಈ ಸ್ವಭಾವ ಕಂಡುಬರುತ್ತದೆ. ಶಾಂತಿಪುರಾಣದಿಂದ ಆಯ್ದ ಪದ್ಯಗಳನ್ನು ಮಾತ್ರ ಮಾದರಿಗಾಗಿ ಆಯ್ದು ಮುಂದಿಟ್ಟಿದೆ :

ಬಗೆ ಧರ್ಮೋತ್ಸವಮೆಲ್ಲಿತಲ್ಲಿಗೆ ಜಿನಪ್ರೀಗೇಹದೊಳ್ಪೆಲ್ಲಿತ
ಲ್ಲಿಗೆ ಯೋಗಿವ್ರಜಮೆಲ್ಲಿತಲ್ಲಿಗೆ ಮಹಾತೀರ್ಥೌಘದಿಂಬೆಲ್ಲಿತ
ಲ್ಲಿಗೆ ದೇವಾಗಮಮೆಲ್ಲಿತಲ್ಲಿಗೆ ಮಹಾಪೂಜಾಂಗದೊಳ್ಪೆಲ್ಲಿತ
ಲ್ಲಿಗೆ ತನ್ನಂ ತಡವಿಲ್ಲದುಯ್ಯೆ ಪಲವುಂ ಕಾಲಂ ಸಲುತ್ತಿರ್ಪಿನಂ ॥ 7–77

ಅದದೇ ಮಾತುಗಳನ್ನು ಮತ್ತೆ ಮತ್ತೆ ಬಳಸಿ ಬಳಸಿ ಹೊಸ ಹೊಸ ಹುರುಳನ್ನು ಹೊರಡಿಸುವುದು ಪೊನ್ನನಿಗೆ ತುಂಬ ಪ್ರಿಯವಾದ ಕಾವ್ಯೋದ್ಯೋಗ. ಪುನರುಕ್ತಿ ಪುನರಾವೃತ್ತಿಯಂತೆ ಪ್ರಾಸ ಅನುಪ್ರಾಸಗಳಿಂದಲೂ ಓದುಗಾರಿಕೆಗೆ ಅರ್ಥವಂತಿಕೆ ಅಭಿವ್ಯಕ್ತಿಗೆ ಒಟ್ಟು ರಸಧ್ವನಿಗೆ ಹೇಗೆ ಹೇಗೆ ನೆರವು ಪಡೆದುಕೊಳ್ಳುತ್ತಾನೆಂಬುದಕ್ಕೆ ಸಾಕ್ಷಿಗಳು ಸಾಕಷ್ಟಿವೆ :

ಸುಮತಿಗತಿ ಸುಮತಿ ಪುನರು
ಕ್ತಮೆನ್ನದರೆ ಸುಮತಿಯೆನಿಪ ದೃಢರಥನುಮನಾ
ಸುಮತಿಯೊಡನೆರಪಿದಂ ಗುರು
ಸುಮತಿಯ ಮತಿ ದೃಢರಥಂಗಮಿರ್ಮಡಿಸುವಿನಂ ॥ 9–44

ಒಂದು ಮಾತನ್ನು ಮತ್ತೆ ಮತ್ತೆ ಬಳಸಿ ತರುವುದರ ಮೂಲಕ ಹೊಸ ಹುರುಳನ್ನು ಹೊರಪಡಿಸುವ ಮಾತುಗಾರಿಕೆಗೆ ನೋಡಬೇಕಾದ್ದು 4–79, 5–33 ಮುಂತಾದ ಪದ್ಯಗಳು.

ಬಗೆಯಲ್ಬಾರದ ದೇವರಾಜಬಲಂ ಭೋರೆಂದು ಪೋಪೋಪುಗಲ್
ಪುಗಲಿತ್ತತ್ತ ದಿವೌಕದಿಂ ಪೊಱಗೆ ನಿಲ್ ನಿಲ್ ಪಿಂಗು ನೀನೆಂಬ ದಂ
ದುಗದಿಂ ದೇವರ ದಂಡಧಾರರೆಡುಂ ಪಕ್ಷಂಗಳೊಳ್ ಸಾಱೆ ನೂ
ಲ್ದೆಗೆದಂತಿಂದ್ರ ಗಿರೀಂದ್ರಮೆಯ್ದುವಿಸಗಂ ಪೋಯ್ತಾಗಳಿಂದ್ರದ್ವಿಪಂ 10–24

ಸುಮತಿ ಶಬ್ದದ ಅರ್ಥದ ಮೇಲೆ ಪೊನ್ನಕವಿ ಸಾಕಷ್ಟು ಆಟವಾಡಿ ಚಮತ್ಕಾರಮಾಡಿದರೂ ಒಟ್ಟು ಪದ್ಯದ ಆಶಯ ಹುಸಿಯಾಗಿಲ್ಲ, ಅರ್ಥ ಮತ್ತಷ್ಟು ಹರಳುಗೊಂಡಿದೆ (9–44). ದೇವಲೋಕದ ಆನೆ ಐರಾವತದ ಮುನ್ನಡೆ ಕಾಲದಲ್ಲಿ ಭೂಲೋಕದಲ್ಲಿ ಆನೆ ಬೀದಿಯಲ್ಲಿ ಬರುವಾಗ ಜನ ತೋರುವ ಮುನ್ನೆಚ್ಚರ ಪ್ರತಿಕ್ರಿಯೆಗಳ ಪರಿಯನ್ನೇ ದೇವಲೋಕದ ಕೋಲುಕಾರರು ತೋರಿದ್ದಾರೆ. ಹೀಗೆ ದೇವೇಂದ್ರನ ಸೇನೆ ಎರಡು ಸಾಲಾಗಿ ನಡುವೆ ದಾರಿಮಾಡಿ ಅಕ್ಕಪಕ್ಕಕ್ಕೆ ಸರಿದು ನಿಂತಾಗ ನೂಲು ತೆಗೆದಂತೆ ಐರಾವತ ನೆಟ್ಟನೆ ನಡೆಯಿತಂತೆ (10–24). ಪೊನ್ನನ ಕಲ್ಪನೆ, ಹೋಲಿಕೆ, ದೇಸಿ—ಇವು ಅಲ್ಲಿ ಕೂಡುಕೊಂಡು ಮಹತ್ವ ಪಡೆದಿವೆ. ಎಲ್ಲೆಲ್ಲಿ ಧರ್ಮೋತ್ಸವವೊ, ಎಲ್ಲೆಲ್ಲಿ ಜಿನಾಲಯಗಳ ಶೋಭೆಯೊ, ಎಲ್ಲೆಲ್ಲಿ ಮುನಿಸಮೂಹವೊ, ಎಲ್ಲೆಲ್ಲಿ ಮಹಾತೀರ್ಥಗಳೊ, ಎಲ್ಲೆಲ್ಲಿ ದೇವಾಗಮವೊ, ಎಲ್ಲೆಲ್ಲಿ ಮಹಾಪೂಜೆಯೊ ಅಲ್ಲಲ್ಲಿಗೆಲ್ಲ

ತಡವಿಲ್ಲದೆ ಹೋಗಿಬರುತ್ತಾ ಇದ್ದು ಹಲವು ಕಾಲ ಸ್ವಪ್ನವರೆಗೆ ಸಮಯಕಳೆದನು (7-77) ಎಂಬ ಧರ್ಮಾಸಕ್ತಿಯನ್ನು ವ್ಯಕ್ತಪಡಿಸುವಾಗ ಪದ್ಯದಲ್ಲಿಯೇ ಒಂದು ರೀತಿಯ ಪೂಜಾಭಕ್ತಿಗೀತೆ ಪಠನದ ಆವರಣ ಸೃಷ್ಟಿಮಾಡಿದಂತಿದೆ. ಪೊನ್ನ ತನ್ನ ಅಂತರಂಗವನ್ನು ಬಿಚ್ಚಿ ಹಾಸಿದಂತೆಯೂ ತೋರುತ್ತದೆ; ಇದು ಅವನದೇ ಮಾತು, ಅವನದೇ ಭಾವ, ಅವನದೇ ಭಕ್ತಿ.

ಶೂರ್ಪಕವೈರಿ ಕಾಲುಗುರ್ಗೆವೆರ್ಪನೊ ಶೀತ ಮರೀಚಿ ಕಾಂತಿಗೇಂ
ವರ್ಪನೊ ವಾಸವಂ ಸಿರಿಗೆ ವರ್ಪನೊ ವೃತ್ರುಸ ಮಂತ್ರಿ ಜಾಣ್ಗೆ ಮೇಣ್
ವೆರ್ಪನೊ ಪೇಟಿಮೆಂಬ ಬಗೆ ಭಾವಿಸಿ ನೋಟ್ಟರ ಕಾಣ್ಕೆಗೆಯ್ದೆ ವಂ
ದಿರ್ಪುದು ತತ್ಕುಮಾರ್‌ತನು ಪುಣ್ಯದ ಪಿಂಡಮೊ ಭಾಗ್ಯಭಾಂಡಮೊ ॥ 7-118

ಆಡುವ ಮಾತಿನ ಗತ್ತು ಈ ಪದ್ಯದ ತುಂಬ ನೀರಿಗೆ ಬಿಟ್ಟ ತುಪ್ಪದಂತೆ ಆವರಿಸಿಕೊಂಡಿವೆ. ವಜ್ರಾಯುಧನು ಜನರ ಕಣ್ಣಿಗೆ ಹೇಗೆ ಕಂಡ, ಜನರ ಬಾಯಿ ಅವನ ವಿಚಾರದಲ್ಲಿ ಹೇಗೆ ಆಡಿತು ಎಂಬುದು ಇಲ್ಲಿ ವರ್ಣಿತವಾದ ವಿಷಯ: ಮದನನು ಇವನ ಕಾಲುಗುರಿಗಾದರೂ ಸಮನಾದಾನೆಯೆ? ತಿಂಗಳಮಾಮ ಇವನನ್ನು ತೇಜದಲ್ಲಿ ಸರಿಗಟ್ಟ್ಯಾನೆಯೆ? ಜಾಣತನದಲ್ಲಿ ಬೃಹಸ್ಪತಿ ಇವನಿಗೆ ಸಮನೆನಿಸಿಯಾನೆಯೆ?—ಎಂಬುದು ಇವನನ್ನು ಕಂಡವರಿಗೆ ಎದುರಾದ ಸಂದೇಹ–ಸಂದೋಹ. ಈ ತೆರನಾಗಿ ಕಂಗೊಳಿಸಿ ಬೆಳೆದ ಆತನ ಶರೀರ 'ಪುಣ್ಯದ ಪಿಂಡ' ಮತ್ತು 'ಭಾಗ್ಯದ ಭಂಡಾರವಾಗಿ' ಬೆಳೆಯಿತೆಂದು ಕವಿ ಕಂಡರಿಸುವಾಗ ಆಡುಮಾತಿನಿಂದ ಕೂಡಿದ ದೇಸಿ ರಸಿಕರೆದೆಯಲ್ಲಿ ಸರೋವರವಾಗಿ ನಿಲ್ಲುತ್ತದೆ.

ಕೆತ್ತುವ ಮಿಸೆ ಕೆಂಪಡರ್ದ ಕಣ್ಮಲರೊಪ್ಪುವ ಮೂಗು ಕೋಪದ
ತ್ತೆತ್ತಿದ ಭೀಷಣಭ್ರುಕುಟಿ ಘುರ್ಘುರ ಘೋರ ರವಂ ಮೊಗಕ್ಕೆಮೆ
ಯ್ಯೆತ್ತ ಬೆಮರ್ ಮನಂಗೊಳಿಸೆ ಭೂಪತಿಯಂ ಬೆಸವೇಟ್ಟುಗುರ್ವು ಲೋ
ಕೋತ್ತರಮಾಗೆ ವೀರಭಟನೇಂ ಕದನ ಕ್ಷಮನಕ್ಕೆ ಪೊಣ್ದನೋ ॥ 3-68

ಇದು ಯುದ್ಧಮಾಡುವ ದೃಢ ಸಂಕಲ್ಪಮಾಡಿದ ವೀರಭಟನ ವಿಚಾರ ಬರುವ ಪದ್ಯ. ಕುಣಿಯುತ್ತಿರುವ ಮೀಸೆ, ಕೆಂಪಡರಿದ ಕಣ್ಣು, ಅರಳಿ ಬಿರಿಯುವಂತೆ ಶೋಭಿಸುವ ಮೂಗು, ಕೋಪದಿಂದ ಎದ್ದುನಿಂತಿರುವ ಭಯಂಕರ ಹುಬ್ಬು, ಮುಖದಲ್ಲಿ ಘೋರವಾದ ಧ್ವನಿ, ಮೈಯಿಂದ ಹೊರಟ ಬೆವರು—ಇವೆಲ್ಲ ಮನಂಗೊಳಿಸುತ್ತಿರುವಾಗ ಆ ಸುಭಟ ಯುದ್ಧಕ್ಕೆ ಅಪ್ಪಣೆಯೆ ಎಂದು ಭೂಪೋತ್ತಮನನ್ನು ಕೇಳುತ್ತಿದ್ದಾನೆ. ಕೋಪಾವೇಶಗಳು ಸ್ಫುರಿಸುವಾಗ ಒತ್ತಿಕೊಂಡು ಭಾವನಿರ್ಭರವಾಗಿ ಹೊರಬರಲು ಪೌರುಷ ಸಿಡಿಮಿಡಿಗೊಂಡಾಗ ಯೋಧನ ದೇಹದಲ್ಲಿ ಆಗುವ ವೀರ ವಿದ್ಯುತ್ ಸಂಚಾರದ ಪರಿಣಾಮಗಳು ಪೊನ್ನನ ಶೈಲಿಯಲ್ಲಿ ಚೆನ್ನಾಗಿ ಮೂರ್ತಗೊಂಡಿವೆ.

ಪೊನ್ನ ಸಂಸ್ಕೃತದಲ್ಲಿ ನಿಸ್ಸೀಮ; ಸಮಯ ಸಿಕ್ಕರೆ ಸಾಕು ಅದರಲ್ಲಿ ತನಗಿರುವ ಪ್ರಭುತ್ವ ಪ್ರವೇಶ ವೈಖರಿಗಳನ್ನು ಪ್ರದರ್ಶಿಸುವ ಚಪಲಿ. ಹಾಗೆಂದು ಕನ್ನಡ ಪ್ರೇಮಕ್ಕೆ ಅವನಲ್ಲಿ ಕೊರತೆಯಿಲ್ಲ, ಅದು ಬತ್ತದ ತಲಪರಿಗೆ (1-10). ಕನ್ನಡ ಊಟೆಯಾಗಿ ನುಗ್ಗಿಬರುವ ನೂರಾರು ಪದ್ಯಗಳಿವೆ. ಪೊನ್ನನಿಗೆ ನಲ್ನುಡಿ ಕನ್ನಡದ ಮಾತುಗಳು ಎದೆಗೆ ಹತ್ತಿರವೆಂಬುದನ್ನು ಓದುಗರು ಕೆಲವೇ ಪದ್ಯಗಳ ಓದಿನಿಂದ ಮನಗಾಣಬಹುದು. ಕನ್ನಡದ ಮಾತುಗಳು ಧುಮುಧುಮು ಧುಮುಕುವ ಕೆಲವು ಪದ್ಯಗಳನ್ನು ಹೆಸರಿಸೋಣ :

ಆವೊಂ ಕುದುವೊಂ ಕುಡಿಸುವ
ನಾವೊಂ ಕುಡೆ ಪಡೆವನಾವೊನಿರ್ವರುಮೇಕೀ
ಭಾವದಿನಿರೆ ನಿಮ್ಮೊಳಗಿನಿ
ತಾವುದು ಭೇದಕ್ಕೆ ಪಕ್ಕು ಪೆಱತೇಂ ನೃಪತೀ ॥ 2–79

ತೊಡೆ ತೋಳ್ ಮುಯ್ಯು ಕದಂಪುರಂ ಪರಡು ಕಯ್ ಮುಂಗಯ್ ಪೊಗಂ ಪೊರ್ಕುಳ್ ಕಿ
ಬ್ಬೊಡೆ ಮೇಗಾಲ್ ವೆರಲುಂಗುಟಂ ಬರಿನೊಸಲ್ ನಿಟ್ಟೆಲ್ವುಗೋನಾಳಿ ಬೆನ್
ಮಡಕಾಲ್ ಕಣ್ ಕಿವಿ ಮೂಗು ಬಾಯ್ ಬಸಿಱುಗುರ್ ಪುರ್ವಳ್ಳೆಪಲ್ ಕೆಕ್ಕಿಕಾ
ಲಡಿಯೆಂದಿಂತಿವನುರ್ಚಿ ಪೋದುವಿಸೆ ತತ್ಸೌಜನ್ಯ ಕಂದಾಂಕುರಂ ॥ 4–17

ಇಡೀ ಮನುಷ್ಯ ದೇಹದ ವಿವಿಧ ಭಾಗಗಳನ್ನು, ಅವುಗಳಿಗೆ ಇರುವ ಕನ್ನಡದ ಹೆಸರುಗಳನ್ನು ಪೊನ್ನಕವಿ ಇಲ್ಲಿ ಕಣ್ಣಿಗೆ ಕಟ್ಟುವಂತೆ ಪಟ್ಟಿಮಾಡಿದ್ದಾನೆಂಬಂತೆ ಸಾಲಾಗಿ ಹೆಸರಿಸಿದ್ದಾನೆ.

ಕೊಟ್ಟೊಡಮೇಂ ಕನ್ನಿಕೆಯಂ
ಕೊಟ್ಟೊಂಗಮಿದಾಗದೆಂದಾ ಕುಡೆ ಕೊಂಡೆನಗೇ
ಗೆಟ್ಟಪುದೆಂದು ಮನಂ ಪೊಲೆ
ಗೆಟ್ಟಿರೆ ಕೊಂಡಂಗಮೆನಗಮುಱಿಯಲ್ಕಕ್ಕುಂ ॥ 5–44

ಕಣ್ಬಟತನದಿಂ ಪೇಟಲ್
ನಾಣ್ಬರೆ ತನ್ನೊಳಗನಟಲೆ ಪೊಱಪೊಣ್ಮೆದುದಾ
ಕಣ್ಬೊಲ್ಲದ ಬಳಸುವ ಕಡೆ
ಗಣ್ಬಪಳತೆಯೊಡನಲಂಪು ಪೊಱಪೊಣ್ಮುವಿನಂ ॥ 5–160

ಒಡನಾಡಿಗಳೆನಿಬರ್ ಕಿಱು
ವಡಿಗಾಲದ ಕಳೆಯರೆನಿಬರೊಡವರೆಯುವ ತ
ನ್ನೆಡೆಗಳೆನಿಬರ್ ಪಸಾಯಂ
ಬಡೆವರಸರ ಮಕ್ಕಳೆನಿಬರನಿಬರುಮೆಟ್ದರ್ ॥ 8–11

ಸಂಸ್ಕೃತದ 'ಬಾಲ್ಯ ಸ್ನೇಹಿತರು' ಎಂಬುದಕ್ಕೆ ಕನ್ನಡದ 'ಕಿಱುವಡಿಗಾಲದ ಕೆಳೆಯರ್' ಎಂಬ ಮಾತು ಎಷ್ಟು ಹೃದ್ಯವಾಗಿ ಹೊಂದಿಬಂದಿದೆ! ಎನಿಬರ್, ಅನಿಬರ್ ಎಂಬ ಪರಿಮಾಣವಾಚಕಗಳು (ಕ.ಸಾ.ಪ.ನಿ.ನಲ್ಲಿ ಇವೆರಡೂ ಪೊನ್ನನ ಪ್ರಯೋಗ ದಾಖಲಾಗಿಲ್ಲ) ಇಲ್ಲಿ ಪರಿಣಾಮಕಾರಿಯಾಗಿ ಬಳಕೆಯಾಗಿವೆ. ಪೊನ್ನ ಇದೇ ರೀತಿಯಾಗಿ ನಿರ್ದೇಶಕ ಸರ್ವನಾಮ ರೂಪವನ್ನು ಬಳಸಿ ಅರ್ಥದ ಸೊಗಸು ಹೆಚ್ಚಿಸಿರುವುದಕ್ಕೆ ಒಂದು ಉದಾಹರಣೆ ಕೊಡಬಹುದು :

ಅದು ನಿಸ್ಸಂಗತೆಯಿಂದ
ಲ್ಲದಾಗದದು ಜಾತರೂಪದಿಂದಲ್ಲದೆ ತೀ
ರದದು ಶುಭದುದಯದಿಂದ
ಲ್ಲದೆ ಬಾರದದಕ್ಕೆ ತಡೆಯದುದ್ಯತನಃಗಾ ॥ 7–105

ತನ್ನ ಶೈಲಿಯನ್ನು ನಾಟಕೀಯಕ್ಕೆ ತಕ್ಕಂತೆ ಅನುಗೊಳಿಸುವ ಕಲೆ ಪೊನ್ನನಿಗೆ ಅಡಿಯಾಳು. ಸಂಭಾಷಣೆಯ ಸೊಗಸನ್ನು ಪೊನ್ನನ ಶೈಲಿ ಹೇಗೆ ಬಿಂಬಿಸಿದೆಯೆಂಬುದನ್ನು ತೋರಿಸಲು ಕೆಲವು ಪದ್ಯಗಳು ಸಾಕು !

ಬಂದ ಬರವಾವುದೆಲ್ಲಿಂ
ಬಂದಿರ್ ಭವದೀಯ ನಾಮಮೇನೆಂಬುದಿದೆಂ
ತೆಂದೆಮಗೆ ಪೇೞ್ವುದವಿತಥ
ಮೆಂದೊಡೆ ಖಚರೇಂದ್ರ ದೂತನಿರ್ದು ವಿನೀತಂ ॥ 2-19

ಏೞ್ಮಿದಂ ದಮಿತಾರಿಗೆ
ಪೇೞಿಂ ಹರಿಕರಿಗೆ ಮುಳಿಗುಮಲ್ಲದೆ ನರಿಗಂ
ಕೋೞಿಗಮೇಂ ಮುಳಿಗುಮೆ ಬರ
ವೇೞಿಂ ನಿಜಸೈನ್ಯ ಸಹಿತಮಹಿತನನೀಗಳ್ ॥ 3-62

ನಾಲ್ಕುಮುಪಾಯದ ನುಡಿಗಳ
ಸಿಲ್ಕಾಸಿಲ್ಕಿಗಳನೆಯ್ದೆ ನುಡಿದೈ ಕ್ರಮದಿಂ
ಬಲ್ಕಣೆಯ್ಯೆ ನಯದೊಳ್ನುಡಿ
ಯಲ್ಕೊಂಕಂ ಕಲ್ವುದಲ್ತೆ ನಿನ್ನೊಂದಿಗರೊಳ್ ॥ 3-91

ಎನ್ನುದ್ಯೋಗಂ ಪ್ರಕಟಮಱಿಯಲ್ಬರ್ಕುಮಾವಂಗಮೊತುಂ
ಮುನ್ನಂ ಪೇೞ್ದಿಟ್ಟೆನೆ ನೆಱೆಯೆ ಪೇೞ್ವೇೞ್ ನೀಂ ಸೌವಿದಾ ಕೇಳ್
ನಿನ್ನೀ ವಾಚಾಳತೆಯ ಬಲದಿಂದಂತರಾಳಂಗಳಂ ಸಂ
ಭಿನ್ನಾಳಪಂಗಳನಲಸದೇ ಕಾರಣಕ್ಕೆತ್ತಿಕೊಂಡಯ್ ॥ 3-92

ಈ ಪದ್ಯಗಳನ್ನು ಧ್ವನಿಯೆತ್ತಿ ವಾಚಿಸಿದರೆ ಅದನ್ನು ದೂರದಿಂದ ಕೇಳುವವರಿಗೆ ಯಾರೊ ಇಬ್ಬರು ಕುಳಿತು ಸಂಭಾಷಿಸುತ್ತಿರುವಂತೆ ಭಾಸವಾಗುತ್ತದೆ. ಮಾತು ತನ್ನ ಉದ್ದೇಶಿತ ಗುರಿ ಮುಟ್ಟಿಸಯೆಂಬುದಕ್ಕೆ ಅದು ನಿರ್ವಚನವಾಗುತ್ತದೆ.

ತನಯೆ ತಪದಿಂದೆ ನೀಂ ನಿ
ನ್ನನೆಯಲ್ಲದೆ ನಮ್ಮ ಕುಲಮುಮಂ ಬೆಳಗಿದೆಯೆಂ
ತೆನೆ ಮುಗಿಲ ಮುತ್ತು ಮುಗಿಲಂ
ನೆನೆಯಿಸಿ ಮಂಡಲಿಯುಂ ನಿಪುಣರಿಂ ಪೊಗೞಿಸದೇ ॥ 4-105

ಇಂಥ ತೀರ ಗಂಭೀರ ಧೀರೋದಾರ ಸಾರೋಕ್ತಿಗಳು ತೆನೆತೆನೆಯಾಗಿ ಇನ್ನೂ ಹತ್ತಾರುಕಡೆ ಅನುರಣನವಾಗಿವೆ. ತಂದೆ ಮಗ ಇಬ್ಬರೂ ಜಿನದೀಕ್ಷೆಗೆ ಮನತೆತ್ತು ನಗುನಗುತ್ತಾ ತಪಸ್ಸಿಗೆ ತೆರಳಿದ ಹೃದ್ಯ ಮಾತುಕತೆ ಹೆಪ್ಪುಗಟ್ಟಿವೆ: ತಂದೆ ಮಗನಿಗೆ 'ನಾನು ತಪೋಭಿಮುಖನಾಗುವೆ, ನೀನು ನೆಲವನ್ನು ಆಳು' ಎಂದರೆ—

ಮೇದಿನಿಯಂ ಕೆಯ್ಕೊಳ್ ಪದ
ನಾದುದು ಜಿನದೀಕ್ಷೆಗೆನಗೆ ಮಗನೇ ಎನೆ ನಿಂ
ಮಾದುದನಪ್ಪೆಂ ದುರ್ಜನ
ನಾದುದನಪ್ಪಂತು ಕಲ್ತೆನೇ ಜಿನಮತಮಂ ॥ 7-58

ಎಂದು ಉತ್ತರಿಸಿ ತಂದೆಯಾದುದನ್ನು ತಾನೂ ಆಗುತ್ತಾನೆ. ಹೀಗೆ ಕೇವಲ ಪದ್ಯಶೈಲಿಯಲ್ಲೇ ಅಲ್ಲದೆ ಗದ್ಯಶೈಲಿಯಲ್ಲೂ ಪೊನ್ನ ಆತ್ಮೀಯ ಮಾತುಕತೆಯ ವಾತಾವರಣ ತರುತ್ತಾನೆ. ಇದನ್ನು ಎರಡೇ ಎರಡು ಸಂದರ್ಭಗಳನ್ನಿತ್ತು ಸಾಬೀತು ಪಡಿಸಬಹುದು : ಧಾರ್ಮಿಕ ಸಿದ್ಧಾಂತದಂಥ ಗಂಭೀರ ವಿಚಾರವನ್ನು ಎಷ್ಟು ತಿಳಿಗೊಳಿಸಿ ಸಾಮಾನ್ಯರಿಗೆ ಎಟುಕಿಸಲು ಯತ್ನಿಸಿದ್ದಾನೆ ನೋಡಿ—

ಅವಮ್ಮಾ ಕೇಳ್

ನಿಮ್ಮ ಸಮ್ಮತಮಪ್ಪ ಪೃಥಿವ್ಯಾದಿ ತತ್ತ್ವಚತುಷ್ಟಯ ಸನ್ನಿಪಾತವೆ ಚೈತನ್ಯಮಂ ಪುಟ್ಟಿಸುಗುಂ

ಅಪ್ಪೊಡೆ + ಒಲೆಯ ಕಿಚ್ಚಿನ ಮೃದ್ಭಾಜನದೆಸಜಿ ನೀರ ಬಾಣಸಿಗರುರಿಪುವ ಗಾಳಿಯ ಸಂಯೋಗದೊಳ್ ಚೈತನ್ಯಮದೇಕೆ ಪುಟ್ಟದು ?

ಅಂತಲ್ತು

ಕಾಯಾಕಾರಪರಿಣತ ಭೂತಸನ್ನಿಪಾತಂ ಚೈತನ್ಯಜನಕಂ

ಎಂಬೆಯಪ್ಪೊಡೆ

ಸಂಸ್ಕಾರ ನಿಮಿತ್ತದಿಂದಿೞಿಪಿದ ಶಬದ ನೆಲದ ಪೊತ್ತಿಸಿದ ಕಿಚ್ಚಿನ, ತಳಿದ ನೀರ, ತೀಡುವ ಗಾಳಿಯ ಸಂಯೋಗದೊಳ್ ಚೈತನ್ಯೋತ್ಪತ್ತಿ +

ಆಗಲೆವೇೞ್ಕುಂ

ಈ ಮಾತಮೋಘಂ

ಮಂದರಾಚಳ ನಿಶ್ಚಳಂ

ಇದಂ ಚಳಯಿಸಲ್ ನಿಮ್ಮ ನಚ್ಚಿನ ವಾಚಸ್ಪತಿಗಮಶಕ್ಯಂ (8-137 ವ)

ಗರಿಗರಿಯಾದ ಇಲ್ಲಿನ ಲಯದ ನಡಿಗೆಯ ನಿರಿಗೆ, ಭಾಷೆಯ ಸಿರಿಗೆ ಕನ್ನಡಿ ಹಿಡಿದಂತಿದೆ. ಅಷ್ಟು ಗಹನವಲ್ಲದ ಸುಲಭಗನ್ಯ ವಿಚಾರ ಕುರಿತ ಸಂಭಾಷಣೆಗೊಂದು ಉದಾಹರಣೆ :

ನಿನ್ನ ಬಂದ ಬರವಿಂಗೆ + ಎಮ್ಮ ಮನಂ ಮೊದಲಾಗಿ ನಾಣ್ಚಿದಪುದು
ಈ ವಿದ್ಯಾಧರಶ್ರೇಣಿಯ ಪರಿಭಾಷೆಗಳ್ ನಿನ್ನವಾಗದೆ ?
ಸಾಮಂ ಪ್ರಿಯಜನಪ್ರಯೋಜ್ಯಂ, ಅಲ್ಲದೆಡೆಯೊಳ್ + ಉನ್ಮತ್ತವಿಳಸಿತಂ
ದಾನಂ ದುರ್ಬಲ ಲುಬ್ಧಪ್ರಸ್ತುತಂ
ಭೇದಂ ಕೃತ್ಯಪ್ರೇಕ್ಷೋಪೇತ ಭೂಪಾಲ ಪ್ರಾಪ್ತಂ
ದಂಡಂ ಪೌರುಷಾತ್ಮಯೋಚಿತಂ—
ಈ ಪೇೞ್ದನಿಬರೊಳೆವೊರ್ವರುಮ್ + ಅಲ್ಲೆವು +
ಈ ನುಡಿಯುಪಾಯಂಗಳನೆನಗೆ ಪೇೞ್ವುದಂ
ನಿನ್ನೆಯ್ದಿದ ನವಕವಿತ್ವಮಂ ನೀನಭಿನಯಿಸಿದಂತಾಗಿರ್ದಪುದು
ಪೊಲಕ್ಕೊಡ್ಡಿದ ಬಲೆಯೊಳ್ ಮೃಗರಾಜಂ ತೊಡರ್ಗುಮೆ ?
ನಿಮ್ಮರಸಂ ಸುಕುಮಾರಚಕ್ರವರ್ತಿ
(ನಿಮ್ಮರಸಂ) ನಡೆದೊನ್ ಇಲ್ಲಿ ಇಲ್ಲಿವರಂ ಬಳಲಾಜಿನ್ +
ಅದಱಿಂದವಾತನೆಲ್ಲಿರ್ದನಲ್ಲಿವರಂ +
ಆನೆ ಪೋಗಿ ಕಾದುವೆನು........ (3–93 ವ)

ಇಲ್ಲಿ ಸಂಭಾಷಣೆಯ ಸೊಗಸಿನ ಜತೆಗೆ ಆಡುಮಾತಿನ ಘಾಟಿಯೂ, ರೂಢಿಯ ನುಡಿಕಟ್ಟೂ ಹೊಸೆದುಕೊಂಡು ಮಾತು ಹುರಿಗೊಂಡಿದೆ. ಕಥೆಯ ಚಿತ್ರಗತಿಯೂ, ಸಂಕ್ಷಿಪ್ತವೂ ಅಡಕವೂ ಆದ ಸಂದರ್ಭ ನಿರ್ಮಾಣವೂ ಶೈಲಿಯಲ್ಲಿ ಚೆನ್ನಾಗಿ ಆವಿರ್ಭವಿಸಿದೆ. ಒಡಹುಟ್ಟಿದವರು ಒಬ್ಬರಿಗೊಬ್ಬರು ಆಸರೆಯಾಗಿ ನಿಂತು, 'ಅಣ್ಣತಮ್ಮಂದಿರೆಂದರೆ ಹೀಗಿರಬೇಕು' ಎಂಬೊಂದು ಮಾದರಿ ಹಾಕಿಕೊಟ್ಟ ಸಂಗತಿಯನ್ನು ಪೊನ್ನನ ಶೈಲಿ ಗ್ರಹಿಸಿರುವುದು ಹೀಗೆ :

ತಮ್ಮನನಾಗಳಂಬರಚರೇಶ್ವರಕನ್ನೆಗೆ ಕಾಪ್ರವೇಟ್‌ ತ
ಮ್ಮಮ್ಮನದೊಳ್ ಬಿಗುರ್ತುರ್ ನಗೆ ಕೆಯ್ಮಿಗಲೀ ಬೆಸಕಣ್ಣ ನೀನೆಯಾರ
ತಮ್ಮನೆ ನಾಳಿನಾಳ್ವೆಯೆನಗಪ್ಪೊಡೆ ನೀನೆನಗತ್ತಲಗ್ಗಮೆಂ
ದಾಮ್ಮಗುಟ್ಟಿಂದು ನಿಮ್ಮಡಿಗೆ ಸೂಟಿದಱಿಂ ಬೆಸಸೆನ್ನನನ್ನೆಗಂ ॥ 4-2

ಪೊನ್ನನ ಕವಿಚಕ್ರವರ್ತಿತ್ವವನ್ನು ಸಮರ್ಥಿಸುವ ಪದ್ಯಗಳಲ್ಲಿ ಇದೂ ಒಂದು. ಇದರ ಅರ್ಥವಿಸ್ತಾರ ಮತ್ತು ಚೆಲುವನ್ನು ಓದಿಯೋದಿ ಚಪ್ಪರಿಸಬೇಕು. ಇಂದು ಹೊಸ ಸಾಮಾಜಿಕ ವ್ಯವಸ್ಥೆ ಸ್ಥಾಪಿತವಾಗಿದೆ. ಪುಟ್ಟ ಸಂಸಾರಗಳು ತಲೆಯೆತ್ತಿವೆ. 'ಪುದುವಾಳು' ಇಂದು ಕಷ್ಟವೆನಿಸಿದೆ. ಅವಿಭಕ್ತಕುಟುಂಬಗಳಲ್ಲಿ ಒಡಹುಟ್ಟಿದವರು ಒಟ್ಟಿಗೆ ಬಾಳಿ, ಒಬ್ಬರಿಗೊಬ್ಬರು ಆಸರೆಯಾಗಿ ನೆರವಿಗೆ ನಿಲ್ಲುತ್ತಿದ್ದ ದೃಶ್ಯ ಬಲ್ಲ ಜನಕ್ಕೆ ಇಲ್ಲಿ ಬೆರಗೂ ಇಲ್ಲ, ಉತ್ಪ್ರೇಕ್ಷೆಯೂ ಇಲ್ಲ, ಕೇವಲ ಸಹಜೋಕ್ತಿ ಸ್ವಭಾವೋಕ್ತಿ ಕಾಣುತ್ತದೆ. ಪೊನ್ನಕವಿ ತನಗೆ ಆಶ್ರಯ ಕೊಟ್ಟ ಮಲ್ಲಪಯ್ಯ–ಪುನ್ನಮಯ್ಯ ಸೋದರರ ಆದರ್ಶ ಹೊಂದಿಕೆಯ ಬಾಳನ್ನು ಇಲ್ಲಿ ನೆನಪಿಸಿರುವ ಸಾಧ್ಯತೆಯಿದೆ.

ಸಕ್ಕದ ಕನ್ನಡ ಭಾಷೆಯ ನುಡಿಗಳು ಒಂದಕ್ಕೊಂದು ಹದವರಿತು, ಹವಣರಿತು ಹೊಂದಿಕೊಂಡು ಬರುವ ಸಂದರ್ಭವಲ್ಲಿ ಹೊರಹೊಮ್ಮುವ ಭಾಷಾಸಾಮರಸ್ಯ ಅನುರೂಪ ದಾಂಪತ್ಯವನ್ನು ನೆನಪಿಸುತ್ತದೆ. ಹಳಗನ್ನಡ ಕವಿಗಳಂತೂ ಇದನ್ನು ಬಹುವಾಗಿ ಸಾಧಿಸಿ ತೋರಿಸಿದ್ದಾರೆ. ಪೊನ್ನನಲ್ಲಿ ಅನೇಕ ಕಡೆ ಇದಕ್ಕೆ ತಕ್ಕ ನಿದರ್ಶನಗಳು ಮಡುಗಟ್ಟಿ ನಿಂತಿವೆ :

ಉಲಿವ ವಿಮಾನಕಿಂಕಿಣಿಯ ಮೆಲ್ಲುಲಿಗಳ್ ಕಿವಿಗೆಯ್ದೆ ಮಟ್ಟಿದ
ಗ್ಗಲಿಸೆ ತಗುಳ್ವ ಗೇಯರಸವಚ್ಚಿಱಿದಂತಿರೆ ಬೆಚ್ಚು ಚಿತ್ತದೊಳ್
ನಿಲೆ ಮೃದು ನೃತ್ತದೊಳ್ ಪುದಿದು ನಾಟ್ಯರಸಂ ದ್ರುತತಾಳದೊಳ್ ಪಳಂ
ಚಲೆಯೆ ವಿಯಚ್ಚರದ್ವಯದ ಪೋಪುದನಚ್ಚಿಯೆ ನಿಂದು ನೋಡಿದೈ ॥ 4-68

ಇದು ಪಂಪನ ಆದಿಪುರಾಣದ (2–41) ಪದ್ಯ ಮತ್ತು ಸಂದರ್ಭಕ್ಕೆ ಸಮಾನಾಂತರವಾಗಿದೆ (7–24.) ಇದೇ ರೀತಿ 7–73, 74, 75 ಮತ್ತು 76ನೆಯ ಪದ್ಯಗಳ ಶೈಲಿ ಚಿತ್ತದಲ್ಲಿ ಅಚ್ಚೊತ್ತಿ ನಿಲ್ಲುತ್ತದೆ. ಕನ್ನಡ ವರ್ಣಮಾಲೆಯಿಂದ ಕೆಲವು ವರ್ಣಗಳನ್ನು ಬಲವಾಗಿ ಬಳಸುವುದು ಪೊನ್ನನಿಗೆ ಬಲು ಇಷ್ಟ. ವ್ಯಂಜನಗಳನ್ನೇ ಅಲ್ಲದೆ ಕೇವಲ ಸ್ವರಗಳನ್ನು ತೆಗೆದುಕೊಂಡು ಅವನ್ನು ಎಷ್ಟೆಷ್ಟು ಅರ್ಥಗಳಿಗೆ, ಭಾವಗಳಿಗೆ ಹೊರಳಿಸುತ್ತಾನೆಂಬುದನ್ನು ತೋರಿಸುವ ಸಾಲುಗಳು :

ಆ ದೊರೆಯ ತಂದೆ ಸಾಯೆಯು
ಮಾದೊರೆಯ ಕುಲಾಪವಾದವಾಗೆಯುಮೆನಗಾ
ನ್ನೇದೊರೆ ವಿವಾಹಮಯ್ಯದೊ
ಳಾದೀ ಕಟು ಕರ್ಜ ಪೋಗದೀ ಕೆಯ್ಸಾರೊಳ್ ॥ 4-78

ಆ ಈ ಏ ಓ ದೀರ್ಘಸ್ವರಗಳು ಕವಿತೆ ತಿಳಿಸಿ ಬೇಕಾದ ದುಃಖ ಭಾವದ ತೀವ್ರತೆಯನ್ನು ಮಸೆಯುತ್ತವೆ.

ಏಂ ಬಸಂತರ ಸಮಯಂ ಸೌಖ್ಯೈಕ ಸರ್ವಸ್ವಮೋ (3–128)
ಏಂ ಶಾಂತತೆ ಬಹುಗುಣಮೋ ನೀತಿ ಶಾಸ್ತ್ರೋಪದಿಷ್ಟಂ (10–110)
ಏಂ ಸಫಲಮೋ ಸತ್ಪಾತ್ರ ದಾನೋದಯಂ
ಏಂ ಸೊರ್ಕು ಸ್ಥೈತಿರ್ಕುಮೋ (9–142)
ಒರ್ವರೋ ಏನಲುಮಿಲ್ಲ (4–36)

ಇವರಂತೆ ಏಂ, ಅದೇಂ, ಓ—ಇವುಗಳನ್ನು 'ಉಂ' ಎಂಬ ಸಮುಚ್ಚಯದೊಡನೆ ಕೂಡಿಸಿ ತಂದಿರುವ ಸೊಗಸನ್ನು ನೋಡಿ

ಮಾನಿಸರೊಳ್ಪುಂ ಬಾಟುಮ
ದೇನಲ್ಪಮದೇನಸಾರವಿಸ್ತಾರಮದೇಂ
ಮಾನಮದೇಂ ವಿಪುಳಮದೇಂ
ದೀನಮದೇಂ ಸ್ತೋಕಸುಖಮದೇನಧ್ರುವಮೋ ॥ 9-102

ಆಯ್ದು ಕನ್ನಡ ಸ್ವರಗಳನ್ನು, ಅವುಗಳ ಹ್ರಸ್ವ–ದೀರ್ಘ ಸ್ಥಿತಿಯಲ್ಲಿ ಒಂದಾದಮೇಲೊಂದರಂತೆ ತಂದು 'ಒರ್ಮೆ' ಎಂಬ ರೂಪದ ಪುನರಾವೃತ್ತಿಯೊಡಗೂಡಿ ಮೂಡಿಸಿರುವ ಒಟ್ಟು ನಾದಸುಖ, ಅರ್ಥಸುಖ, ಭಾವಪುಷ್ಟಿ, ಗಂಭೀರ ಪರಿಸರ ನಿರ್ಮಾಣ—ಇವನ್ನು ಈ ಪದ್ಯದಲ್ಲಿ ಒಟ್ಟಿಗೆ ಕಾಣಬಹುದು :

ಒರ್ಮೆ ಹಿಮಾದ್ರಿಗೊರ್ಮೆ ರಜತಾದ್ರಿವನಾವಳಿಗೊರ್ಮೆ ವಾರ್ಧಿಗೋ
ರೊರ್ಮೆ ಪಯೋಧಿಗೊರ್ಮೆ ಜಿನಮಂದಿರ ಸುಂದರಮೆಂದಿರಕ್ಕೆ ಮ
ತ್ತೊರ್ಮೆ ಮನುಷ್ಯಲೋಕ ಜಿನಪೂಜೆಗೆ ಪೋಗೆ ದಲಟ್ಟಿಗೊರ್ಮೆ ಸೌ
ಧರ್ಮದೊಳಿರ್ದುದಿಲ್ಲ ಮನಮಾ ದಿವಿಜೇಶ್ವರನೇಂ ಸಧರ್ಮನೋ ॥ 7-35

9–17, 9–75 ಮೊದಲಾದ ಇನ್ನೂ ಹತ್ತಾರು ಪದ್ಯಗಳು ಪೊನ್ನನ ಶೈಲಿಯ ಮೇಲ್ಮೆಯನ್ನು ಸಮರ್ಥವಾಗಿ ಪ್ರತಿಸಿಧಿಸುತ್ತವೆ, ಪ್ರತಿಷ್ಠಾಪಿಸುತ್ತವೆ. ಅವನ ಕಾವ್ಯಶೈಲಿಯ ವರಸೆ ಗತ್ತು ಸ್ವಾರಸ್ಯಗಳನ್ನು ಹಿಡಿದುಕೊಡುವ ರಮ್ಯ ಚಿತ್ರಗಳು ಅನೇಕವಾಗಿವೆ. ಪೊನ್ನನ ಚಿತ್ರಶಾಲೆಯೂ ಶ್ರೀಮಂತವಾದುದು, ಅವನ ಚಿತ್ರಕ ಶಕ್ತಿಯೂ ಅದ್ಭುತವಾದುದು. ಪ್ರಸನ್ನತೆ, ಲಾಲಿತ್ಯ, ಸುಕುಮಾರತೆ, ವೀರ, ಓಜೋಗುಣ, ಗಾಂಭೀರ್ಯ ಮೊದಲಾದ ಗುಣಗಳು ಶಾಂತಿಪುರಾಣ ಕಾವ್ಯದಲ್ಲಿ ಮುಖ್ಯವಾಗಿವೆ. 1–75ರಲ್ಲಿ ಇರುವ ಸೊಗಸು 1–76ದಕ್ಕಿಂತ ಭಿನ್ನವಾದುದು; 76ನೆಯ ಪದ್ಯ ಮಾಮೂಲಿ, ಕವಿಸಮಯಕ್ಕೆ ಬದ್ಧ; ಹಳೆಗನ್ನಡ ಕಾವ್ಯಾಭ್ಯಾಸಿಗಳಿಗೆ ಇವೆರಡೂ ಹೊಸದೆನಿಸುವುದಿಲ್ಲ, ವಿಶೇಷವೆನಿಸುವುದಿಲ್ಲ. ಹಾಗೆ ನೋಡುವುದಾದರೆ ಇಡೀ ಶಾಂತಿಪುರಾಣದಲ್ಲಿ ಮೊದಲ ಓದಿಗೇ ನಮ್ಮ ಮನಸ್ಸು ಬುದ್ಧಿ ಭಾವ ವಿಚಾರಗಳನ್ನುಸೆರೆಹಿಡಿದು ಚಿಂತನಶೀಲರನ್ನಾಗಿಸುವ ಒಟ್ಟು ಪದ್ಯಗಳು ನೂರೈವತ್ತಕ್ಕೂ ಹೆಚ್ಚು ಕಾಣಲಿಲ್ಲ.

3–18, 35, 36—ಇವು ಕ್ರಮವಾಗಿ ಪುತ್ಥಳಿಗಳಂತೆ ನಿಂತ ವಿಲಾಸಿನಿಯರ, ತೋಳಿಗೆ ಹಾಕಿದ ಆಭರಣದ ಮಹಿಮೆಯ, ರಾಜನ ಕೀರ್ತಿ ಮಹಿಮೆಯ ವರ್ಣನೆಯನ್ನು ಛಾಯಾಚಿತ್ರದಂತೆ ಕೊಟ್ಟಿವೆ. 3–114ರಲ್ಲಿ ಒಟ್ಟು ಚತುರಂಗ ಸೈನ್ಯ ಇರುತಿರುವ ಕ್ರಮವನ್ನು ಸೆರೆಹಿಡಿದು ಕೊಟ್ಟಿದೆ. 4–103, 104ರಲ್ಲಿ ಬಿಟ್ಟಬಾಯಿ ಬಿಟ್ಟಂತೆ ಇದ್ದು ಕನ್ಯೆಯನ್ನು ಕಾಣುವ ಜನರನ್ನು ತೋರಿಸಿದೆ. ಸ್ವಯಂಪ್ರಭೆಯ ಸೌಂದರ್ಯೋನ್ನತಿಯನ್ನು 5–17ರಲ್ಲಿ ಕೆನೆಗಟ್ಟದಂತಿಟ್ಟಿದೆ. ತಂದೆಯ ವಾತ್ಸಲ್ಯದ ಕಣ್ಣಿಗೆ ಮಗಳ ಏಜ್ಯುಂಜವ್ವನ 5–19ರಲ್ಲಿ ಹೇಗೆ ಕಂಡಿತೆಂಬುದರ ಹೃದ್ಯಚಿತ್ರವಿದೆ. ಕೋಪಿಸಿಕೊಂಡು ಮುಂದೆ ಬಂದು ನಿಂದವನ ಚಿತ್ರ 5–45ರಲ್ಲಿದೆ. ತನಗೆ ಇದ್ದಕ್ಕಿದ್ದಂತೆ ಒದಗಿಬಂದ ಭೋಗದ ತುತ್ತತುದಿಯಲ್ಲಿ ಆ ಅಪೂರ್ವ ಸುಖವಿಸ್ಮಯದಿಂದ 'ಇದು ಕನಸೊ ನನಸೊ' ಎಂದು ನಿಬ್ಬೆರಗುಗೊಳ್ಳುವುದು :

ಭೋರ್ಗರೆವಪ್ಪತೂರ್ಯರವಮಾರ್ಗೆ ಜಯಧ್ವನಿಯಾರ್ಗೆ ಪೇಟಿಮಾ
ನಾರ್ಗೆ ವಿಮಾನಮಾರ್ಗಲಿವ ಮೆದಿಗಳಾರ್ಗೆ ಸುಖಾಮೃತಾಬ್ಧಿ ತಾ
ನಾರ್ಗಿದಭೂತಪೂರ್ವಮೆನಗೆಂದಮರಂ ಬಗೆದಂ ವಿಮೋಹಮಾ
ರಾರ್ಗೆ ಭವಾಂ ರಾಗಮದೊಳಾಗಳೆ ಪುಟ್ಟವೆ ಗರ್ಭಸಂಧಿಯೊಳ್ ॥ 7-15

ಜೈನಪುರಾಣ ಕಾವ್ಯಗಳನ್ನು ಓದಿದವರಿಗೆ ಇಂಥ ಪದ್ಯಗಳು ಬಳಕೆಯಾಗಿರುತ್ತವೆ. ಆದರೆ 8-10, 41, 42, 72, 76, 92, 95 ಪದ್ಯಗಳಷ್ಟೂ ರಂಗವಲ್ಲಿ ಬಿಡಿಸುವಂತೆ ಚಿತ್ತಾರ ಬಿಡಿಸಿರುವ ಪದ್ಯಗಳಾಗಿವೆ. ಏಳನೆಯ ಆಶ್ವಾಸದ 10, 61, 124, 125 ಮತ್ತು 134 ನೆಯ ಪದ್ಯಗಳೂ ಪೊನ್ನನ ಹಿರಿಮೆಯನ್ನು ಸಾರುತ್ತವೆ.

ನಡೆಯೆ ನಡೆದುಂ ಕುಳ್ಳಿರೆ ಕುಳ್ಳಿರ್ದುಂ ನಿಲೆ ನಿಂದುಂ ಪವಡಿಸೆ ಪಕ್ಕದಿರ್ದುಂ
ನುಡಿಯೆ ಜೀಯೆಂದುಂ ಬಾಯ್ಗುಳಂ ಮುಚ್ಚಿರ್ದು ದಿವ್ಯನಿನಾದಮನಾಲಿಸಿಯುಂ
ಮಿಡುಕದುಸಿರದೆ ನುಡಿಯದೆ ಮೋನಂಗೊಂಡಿನಿಸಿರ್ದಧಿಪತಿಗೆ ನಿಚ್ಚಂ ಮೆಚ್ಚಂ
ಪಡೆದು ನಚ್ಚಿನ ನಾಕಿ ನಿಕಾಯಮುಮಂಗೇದಹೋರಾತ್ರಮೋಲಗಿಕುಂ ॥ 10-87

ಪಿರಿಯಕ್ಕರದ ಈ ಪದ್ಯ ಚೆಲುವಿನ ಪುಟ್ಟ ಬಟ್ಟಲು. ಹೆಚ್ಚು ಕನ್ನಡದ ಮಾತುಗಳಿಂದ ಮನೋಹರವಾಗಿದೆ, ಗಟ್ಟಿಯಾಗಿ ಓದಿದಂತೆಲ್ಲಾ ಕಿವಿಗೆ ಇನಿದಾಗಿ ಕೇಳಿಸುತ್ತದೆ, ಅರ್ಥಸ್ವಾರಸ್ಯವೂ ಸ್ಫೋಟಗೊಳ್ಳುತ್ತದೆ. ಎರಡು ಮೂರು ಶಬ್ದಗಳಿಗೊಮ್ಮೆ ತಪ್ಪದೆ ಶಬ್ದಾಂತ್ಯದಲ್ಲಿ ಬರುವ ಅನುನಾಸಿಕ ಮತ್ತು ಬಿಂದು ಕಿವಿಗೆ ಓಂಕಾರದ ಧ್ವನಿಯಾಗಿ ಮೊಳಗಿ ಹೊಳಲಿಡುತ್ತದೆ. ಮಿಡುಕದೆ + ಉಸಿರದೆ + ನುಡಿಯದೆ--ಎಂಬಂತೆ ವಾಕ್ಯ ಸಾಗುವಾಗ ತಲೆತೂಗದೆ ಓದುಗ ಕುಳಿತಿರಲಾರ. ಕಾವ್ಯ ಇಂಥಲ್ಲಿ ಹೆಚ್ಚು ಕ್ರಿಯಾಶೀಲವಾಗಿರುತ್ತದೆ. ಪೊನ್ನನ ಶೈಲಿಯ ಮೂಲಧಾತುವಾದ ಪ್ರಸನ್ನತೆಯ ಜತೆಗೆ ಸುಕುಮಾರತೆ ಲಾಲಿತ್ಯವೂ ಇಲ್ಲಿ ಬೆಸೆದುಕೊಂಡಿದೆ.

ಉತ್ಪ್ರೇಕ್ಷೆಯಿಂದ ಕಲ್ಪನೆ ದಾಂಗುಡಿಯಿಟ್ಟಿದ್ದರೂ ಅದರ ಒಡಲಲ್ಲಿ ಚೆಲುವಿನ ನಾಟವೂ ಇರುವುದುಂಟು. ಅಂಥ ಒಂದು ಪದ್ಯ :

ಏಱಿ ವಿಮಾನಮಂ ಕೃತಕ ಗಾಯಿಕೆಯರ್ ಧವಳಾಭ್ರ ಕೂಟದೊಳ್
ತೋಱುವ ಮಿಂಚಿನಂತೆ ಮುಗಿಲೊಡ್ಡೊಡೆದಿಬ್ಬಗಿಯಾಗಿ ನಿರ್ಭರಂ
ಪಾಱಿ ಪತಾಕೆಗಳ್ ಮುಗುಱ್ದು ಮಿಳ್ಳಿಸಿದಳ್ಳಿಱಿದಾಡೆ ಯಾನಮೇಂ
ಸೇಱಿದುದೋ ನಭಃಪ್ರಸ್ಥಿತಿಗೆಟ್ಟೆಡೆಯಿಟ್ಟೆಡೆಯಾದುದೇಱಿನಂ ॥ 2-82

ಬಿಳಿಯ ಮೋಡಗಳ ಒಡಲಲ್ಲಿ ಮಿಂಚಿನೋಪಾದಿಯಲ್ಲಿ ಸಂಚಳಿಸುತ್ತಾ ಮೋಡಗಳ ಗುಂಪನ್ನು ಸೀಳಿಕೊಂಡು ವೇಗವಾಗಿ ಸಾಗುತ್ತ ಹೊರಟ ವಿಮಾನದ ಚಲನೆಯನ್ನು ಪೊನ್ನಕವಿ ಇಲ್ಲಿ ಸೆರೆಹಿಡಿದಿದ್ದಾನೆ, ಛಾಯಾಚಿತ್ರದಂತೆ.

ಕೊರಗಿದರೆ ಮೆಯ್ಯನಿನಿಸಗಿ
ದಿರೆ ಅವರ್ಗಳ್ ದೇವಲೋಕ ಸುಖದೊಳ್ ಮನಮಿ
ಟ್ಟರೆ ಮಱುಭವಕ್ಕೆ ಕಣ್ಣಿ
ಟ್ಟರೆ ಮುಡುಪಿದರಮರರಿರ್ವರುಂ ನಿರಪೇಕ್ಷರ್ ॥ 9-38

ಯಾವ ಆಸೆ ಅಪೇಕ್ಷೆಗಳೂ ಇಲ್ಲದೆ ಮುಡುಪಿದ ಇಬ್ಬರು ಅಮರರು ಸಾವಿನಲ್ಲಿ ತೋರಿದ ಸಂಯಮಕ್ಕೆ ಕವಿ ಬರೆದ ಭಾಷ್ಯ. ಈ ಪದ್ಯ ಕೇವಲ ಪ್ರಶ್ನೆಗಳ ರೂಪದಲ್ಲಿ ಅಮರರ ಹಿರಿಮೆಯನ್ನು ಸಾಕಾರಗೊಳಿಸಲಾಗಿದೆ. ಅವರು ಕೊರಗಿದರೆ ? ಜಡವಾದರೆ ? ಕೊಂಚವಾದರೂ ಅಂಜಿದರೆ ? ದೇವಲೋಕ ಸುಖ ಬಯಸಿದರೆ ? ಮರುಹುಟ್ಟಿಗೆ ಕಣ್ಣಿಟ್ಟರೆ?—ಎಂದು ಕೇಳುವಲ್ಲಿ ಅನಿರೀಕ್ಷಿತ ಅರ್ಥವಿಸ್ತಾರ ಹೊರಬರುತ್ತದೆ. ಹತ್ತು ಪದ್ಯಗಳಲ್ಲಿ ಹಂಜಬಹುದಾದ ಅರ್ಥವ್ಯಾಪ್ತಿಯನ್ನು ಒಂದು ಕಂದ ಪದ್ಯಕ್ಕೆ ಅಳಕಗೊಳಿಸಿ ಕವಿ ಕಾವ್ಯಶಕ್ತಿಯನ್ನು ತೋರಿಸಿದ್ದಾನೆನ್ನಿಸುತ್ತದೆ. ಪ್ರಶ್ನೆಗಳ ಮಾಲೆಯಿಂದ ವ್ಯಕ್ತಿಗಳ ವ್ಯಕ್ತಿತ್ವಕ್ಕೆ ಬೆಳಕುಬೀರಿದ್ದಾನೆ.

ಪೊನ್ನ ಮಾರ್ಗಕವಿಯಾದರೂ ವರ್ಣಕವಿಯ ಮನೋಧರ್ಮದವನು. ವರ್ಣನೆಗೆ ತವಕಿಸುವ ಅವನ ಕಂಟಕ್ಕೆ ಒಮ್ಮೊಮ್ಮೆ ಹಿಂಜರಿತವೂ ಒದಗುತ್ತಿತ್ತು. ತನ್ನ ಕಾವ್ಯದ ಓತಪ್ರೋತವಾದ ಸ್ರೋತಕ್ಕೆ ಇತಿಮಿತಿಗಳೂ ಇವೆ ಯೆಂಬುದನ್ನು ಆತನೇ ಒಪ್ಪಿಕೊಂಡಿದ್ದಾನೆ.

ಆ ವನಿತೆಯರ್ ಮನೋಜನ
ದೀವದ ಪುಲ್ಲೆಗಮನಂಗರಾಜನ ನವರಾ
ಜ್ಞೀವಾಸಕ್ಕಂ ದೊರೆ ಪೆಱ
ನಾವೊಂ ಪೆಱತಾವುದಂ ಜಡಂ ಪೋಲಿಸುವೊಂ ॥ 3-19

ಯಾರುತಾನೆ ಜಡವಸ್ತುಗಳೊಡನೆ ಹೋಲಿಸಲು ಸಾಧ್ಯ ಎನ್ನುವಾಗ ಇರುವ ಕವಿಯ ಧೋರಣೆಗೂ

ಏ ಮಾತೊ ಮೊಱೆದು ಪಾಱುವ
ಕಾಮಶರ ಸ್ಥಿತಿಯೊಳಿರ್ಪ ನೆಱಗೊಳ್ವೆಡೆಗಂ
ಕಾಮಶಿಳೀಮುಖಮಲ್ತೆ ಶಿ
ಳೀ ಮುಖಮಾರೆಯ್ದೆ ಪೊಗೞ್ವರುತ್ತರ ಕುರುವಂ ॥ 6-99

ಎಂಬಲ್ಲಿರುವ ಮಾತಿನ ರೀತಿಗೂ ಅಂತರವಿದೆ. ಕಾಮಾವಸ್ಥೆಯಿಂದ ಗುಂಯಿಗುಡುತ್ತ ತಂತಮ್ಮ ಇನಿಯರನ್ನು ಬೆರೆಯ ಹೊರಟ ದುಂಬಿಗಳ ಪ್ರತ್ಯಕ್ಷ ಕಾಮಬಾಣಗಳೆಂದು ಹೇಳಿಯೂ ಕವಿ ಒಮ್ಮೆಲೇ 'ಉತ್ತರ ಕುರುಭೂಮಿಯನ್ನು ಹೊಗಳಿ ಮುಗಿಸಬಲ್ಲವರಾರೆಂದು' ನುಡಿಯುತ್ತಾನೆ. ಇದರಲ್ಲಿ ಕೇವಲ ಉತ್ಪ್ರೇಕ್ಷೆಗಿಂತ ಕವಿ ಎಲ್ಲವನ್ನೂ ಹೇಳಲಾರನೇನೊ ಎಂಬ ಧ್ವನಿಯಿದೆ. ಕವಿಗೂ ಅವನ ಪ್ರತಿಭೆ ಶಕ್ತಿಗೂ ಒಂದು ಎಲ್ಲೆಯಿದೆಯೆಂಬ ಪ್ರಜ್ಞೆ ಪೊನ್ನನಿಗೆ ಚೆನ್ನಾಗಿದೆ. ಉತ್ತರ ಕುರುಭೂಮಿಯನ್ನು ಭೂದೇವಿಯ ಹಣೆ ತಲೆ ಕಸ್ತೂರಿ ಮಕರಿಕಾಪತ್ರ, ಭೂಲಲನೆಯ ಕೈಯಲ್ಲಿರುವ ಚಿನ್ನದ ಲೀಲಾಕಮಲ —ಹೀಗಲ್ಲದೆ 'ಎಂದಿನಿತಲ್ಲದೆ ಬಣ್ಣಿಪನೆಂತು ಬಣ್ಣಿಪ್ಪೊಂ' (6–121) ಎಂದು ಪೊನ್ನಕವಿ ಪ್ರಶ್ನಿಸುವಾಗಲೂ ಇದೇ ಅಂತರಾರ್ಥ ಹೊರಬರುತ್ತದೆ. ಇದಕ್ಕೆ ಉಪಸ್ಟಂಭಕವಾಗಿದೆ ಈ ಕೆಳಗಣ ಪದ್ಯ :

ನಡೆ ನೋಡಲ್ ದಿವಿಜೇಂದ್ರನೆಯ್ದೆ ಪೊಗೞಲ್ ವಾಗಾಧಿಪಂ ಭಾವದೊಂ
ದೆಡೆಯಂ ಭಾವಕನಾಗಿ ಪೋಲೆ ಬರೆಯಲ್ಕಾ ವಿಶ್ವಕರ್ಮಂ ದಲಾ
ರ್ಪೊಡೆ ನಾಮಾರ್ಪೆಮೆನುತ್ತುಮಂದು ವಿಬುಧರ್ ಮೌನವ್ರತಂಗೊಂಡರೆಂ
ದೊಡೆ ಪೇೞ್ ಮಾನಿಸರಣ್ಣ ಬಣ್ಣಿಸುವರಾರ್ರೈರಾಮಹಾದೇವಿಯಂ ॥ 9-157

ತಿಳಿದವರೂ ಮೌನತಾಳಿದರೆಂದಮೇಲೆ ಅಣ್ಣ ಇನ್ನು ವರ್ಣಿಸಬಲ್ಲವರು ಯಾರು ಎಂದು ಕೇಳಿರುವುದು ಕವಿಯ ಭಾವನೆಯನ್ನು ದಟ್ಟವಾಗಿಟ್ಟಿದೆ. ಇದನ್ನು ಇನ್ನೂ ಸ್ಫಟಿಕಸಲಾಕೆಯಾಗಿ ಹಿಡಿದಿರುವ ಪದ್ಯವಿದು :

ಸುರಪತಿ ಸೂತ್ರಧಾರನಮರಾವಳಿ ಶಿಲ್ಪಿಗಣಂ ಧನೇಶ್ವರಂ
ಬರೆದು ಪವಣ್ಗೆ ಜಾಣ್ಗೆವರೆ ನಿರ್ಮಿಸಿದಂ ಪುರಮಂ ನೃಪಂ ಜಗ
ದ್ಗುರುಜನಕಂ ನೃಪಾಂಗನೆ ಜಿನಾಂಬಿಕೆ ಬಣ್ಣಿಸಲಾರ್ಪೊನಾವೊನಾ
ಪುರಮುಮನಾ ನೃಪೇಂದ್ರನುಮನಾ ನೃಪಕಾಂತೆಯುಮಂ ಕವೀಶ್ವರಂ ॥ 9-158

ಆ ಪಟ್ಟಣವನ್ನಾಗಲೀ, ಅರಸರನ್ನಾಗಲೀ, ಅರಸಿಯರನ್ನಾಗಲೀ ಬಣ್ಣಿಸಬಲ್ಲ ಕವಿಸಾರ್ವಭೌಮನು ಯಾರು ಎಂಬ ಸವಾಲು ಕವಿಗಿರುವ ಮಿತಿಗೆ ಕೆತ್ತಿದ ಮಾತು, ಎತ್ತಿದ ಸತ್ತಿಗೆ ಎಂದೆನಿಸುತ್ತದೆ. 9–190 ರಲ್ಲೂ 'ಇದಕ್ಕಿಂತ ನಾನು ಇನ್ನೇನೂ

ಹೇಳಲಾರೆ' ಎಂದು ಕವಿ ಶರಣಾಗಿದ್ದಾನೆ; 'ದೇವಸಮಿತಿಯ ವಿಳಾಸಮಂ ನೆಱೆಯೆ ಪೊಗೞಲಾರ್ಪೊಂ ನೆಱೆಪೊಂ' (10–3) ಎಂಬಲ್ಲೂ ಇದೇ ಪ್ರತಿಧ್ವನಿಯಿದೆ. ತನ್ನ ಅಳವು ಎಷ್ಟು, ತನ್ನ ಮಿತಿ ಯಾವುದು ಎಂಬುದರ ಅರಿವು ಕವಿಗೆ ಇರುವುದು ಒಳ್ಳೆಯದೆಂದು ತೋರುತ್ತದೆ.

ಚಂಪೂರೂಪ ಮತ್ತು ಒಟ್ಟು ಮಾರ್ಗ ಕಾವ್ಯಪದ್ಧತಿಗೆ ಮೂರ್ಧನ್ಯವಾಗಿರುವ ಪಂಪಕವಿ ಆ ಮಾಧ್ಯಮದ ಸಾಧ್ಯತೆಗಳನ್ನು ಹೀರಿ ಸೂರೆಮಾಡಿ ಬಯಲುಗೊಳಿಸಿದ್ದಾನೆ. ಪೊನ್ನ ಪಂಪನಂತೆ ಹೊಸ ಕಾವ್ಯಪದ್ಧತಿಯ ರೂವಾರಿಯಾಗಲಿಲ್ಲ. ಆದರೆ ಪೊನ್ನ ತನ್ನ ಕಾಲದ ಕಾವ್ಯಪದ್ಧತಿಯ ಪ್ರಾತಿನಿಧಿಕ ಕವಿ ಎಂಬುದನ್ನು ನೆಲೆಗೊಳಿಸಿದ್ದಾನೆ. ಅವನದು ಹೆಚ್ಚು ಚಪಲಗಳಿಲ್ಲದ ಹೆಬ್ಬಯಕೆಯಿಲ್ಲದ ಸರಳಮಾರ್ಗ ಪದ್ಧತಿ. ಎಷ್ಟೇ ಉತ್ಕಟ ತೀವ್ರ ತೀಕ್ಷ್ಣ ಭಾವವಾಗಿರಲಿ ಅದನ್ನು ಭರಿಸಿ ಸಂವಹನಿಸುವ ಅಸಂದಿಗ್ಧವಾಗಿ ಅಭಿವ್ಯಕ್ತಿಸುವ ಶಕ್ತಿ ಪೊನ್ನನ ಶೈಲಿಗಿದೆ. ಅವನದು ವ್ಯಾಖ್ಯಾನ ನಿರಪೇಕ್ಷ ಶೈಲಿ, ರಸಾಭಿಜ್ಞತೆಯಿಂದೊಪ್ಪುವ ಶೈಲಿ.

ಪೊನ್ನನ ಗದ್ಯ

ಇದುವರೆಗೆ ಪೊನ್ನಕವಿಯ ಪದ್ಯಗಳ ನಡಿಗೆಯ ಬೆಡಗನ್ನು ನೋಡಿದೆವು. ಆ ಶೈಲಿಯ ಸುಕರತೆ, ಸುಭಗತೆ, ಪ್ರಸನ್ನತೆ, ಲಲಿತತೆ, ಸುಕುಮಾರತೆ—ಮೊದಲಾದ ಗುಣಗಳ ಜತೆಜತೆಗೇ ಅದರ ಇತಿಮಿತಿಯನ್ನು ಗುರುತಿಸಲಾಗಿದೆ. ಪೊನ್ನನ ಶೈಲಿಯ ಆ ಪದ್ಯಮುಖದ ಜತೆಗೆ ಅದರ ಗದ್ಯಮುಖವನ್ನು ಇಲ್ಲಿ ವಿವೇಚಿಸುತ್ತೇನೆ.

ಪೊನ್ನನ ಗದ್ಯ ಅವನ ಪದ್ಯ ಬಂಧಕ್ಕಿಂತ ಹೆಚ್ಚು ಮೆಚ್ಚುಗೆ ಪಡೆಯುತ್ತದೆ. ಅದರ ಓಟ್ಟು ಓಟದಲ್ಲೇ ಒಂದು ಚೆಲುಪಿನ ಸೆಳೆತವಿದೆ. ಇಲ್ಲಿನ ಗದ್ಯ ಬಹುತರವಾಗಿ ಕನ್ನಡನಾಡಿನ ಹಳ್ಳಿಗಾಡಿನ ಪಳೆಯುಳಿಕೆಗಳನ್ನು ಹಿಡಿದುಕೊಡುವಂತಹುದಾಗಿದೆ: ಅಂದರೆ ಇದು ಕನ್ನಡದ ಸೊಗಡು ಸೂಸುವ ಗದ್ಯ. ದೇಸಿಯ ನುಡಿಗಟ್ಟುಗಳು ಕುಣಿವಂತೆ ಕೋದ ಜೀವಂತ ಮಾತುಗಳು ತೆಕ್ಕೆಹಾಕಿಕೊಂಡು ಗುತ್ತಿಗುತ್ತಿಯಾಗಿ ಬರುತ್ತವೆ. ಅಂಥ ಒಪ್ಪವಾದ ಗದ್ಯಭಾಗಕ್ಕೊಂದು ನಿದರ್ಶನ:

" ಕಿಡಿಗುಟ್ಟಿದಂತೆ ವಿದ್ಯಾದೇವತಾಧಿಷ್ಠಿತಮಪ್ಪಂಬಂಬಿನೊಳ್ ಪಳಂಚೆ ಪುಟ್ಟಿದ ಕಿಚ್ಚಿನ ನಟ್ಟನಡುವೆ ನಿಂದುರಿವನುವರಮಂ ಬಾರಿಸಲೆಂದೊಡೆವೊಕ್ಕಗ್ನಿಕುಮಾರನಂತಿರಾತನ ಶರಪಾತನ ಭಯದಿಂ ಕೆಲರ್ ನೆಲದೊಳ್ ನಿಲ್ಲದಾಕಾಶಕ್ಕೊಗೆದೊಳ್ತೊಡಗೆ ನೆಗೆದಂಬರಿಗುಮಾಯು ತಪ್ಪರನೆಂಬ ನುಡಿಯುಂ ನನ್ನಿ ಮಾಡಿ ಸುರುಳ್ದುರುಳ್ವಿನಂ ಕೊಳೆ ಕೆಡೆದರ್ ಕೆಲರ್ ಮುತ್ತಗಾಡಿಯುಂ ಬರ್ದುಂಕಲಾಗದೆಂಬ ಮಾತಂ ಕಿಟ್ಟಂ ಮಾಡಿ ಸೌಜನ್ಯಕಂದಾಂಕುರನ ಶರಕ್ಕಳ್ಕಿ ಬೆಟ್ಟತೋರ್ಗೋಡೆಯುಂ ಬೆನ್ನನಟ್ಟ ನಟ್ಟ ಜಟ್ಟಿಗೆಯಿಂ ಮಿಟ್ಟೆಗೊಂಡಚಿಟ್ಟೆಯಂತೆಯುಂ ಬಡಿಗೊಂಡ ಮೊಲದಂತೆಯುಂ ತಲೆಕೆಳಗಾಗಿ ಬಿಟ್ಟರ್ ಕೆಲಂಬರದೊಳ್ ನಟ್ಟಂಬನಾಳ್ದೊಂ ಮುನ್ನಂ ಮೂದಲಿಸಿದೊಡಾ ಹೃಚ್ಛಲ್ಯಮಂ ಕಳೆವಂತೆ ಕಿತ್ತು ಕಳೆದು ಸತ್ತರ್ ಕೆಲರ್ ನೆತ್ತರೊಳ್ ಮಿಂದು ತಮಗೆ ದೋಷಮಿಲ್ಲೆಂದದರ್ಕೆ ದಿವ್ಯಂಬಿಡಿವಂತೆ ನಂಬಿಸಲ್ ಚಲಂಬಿಡಿದು ನಿಂದಾಂತರ್ ಕೆಲರ್ ನೋಡೆ ನೋಡೆ ತಮ್ಮೊಟ್ಟಕ್ಕೆ ತಾಮೆ ಸಾಣ್ಟೆದರ್ ಕೆಲರೋಡುವಾಗಳಾಳ್ದಂ ಮೂದಲಿಸಿ ಮಗುಳ್ದು ನಡೆದು ಸತ್ತರ್ ಕೆಲರ್ ತಮ್ಮ ಮನೋನಯನ ವಲ್ಲಭೆಯರನಗಲ್ದು ಮನೋಭವನಂಬೇಱಿಂಗಳ್ಕಿದರ್ ಅರೆಬರ್ ಜೈನಶಾಸನ ಚೂಡಾಮಣಿಯಂ ಬೇಱಿಮುಗುಂಟೆಂದು ಸತ್ತರ್ ಕೆಲರ್ ಪುಣ್ಣ ಕೆಂಪೆ ಕಣ್ಗೆವಂದಂತೆ ಪಾಪೇಭಕಂಠೀರವನ ದೆಸೆಯನೆ ನೋಡಿ ನೋಡಿ ಗತಜೀವಿತರಾದರ್ ಅಂತಣ್ಮಿದರುಮಂಜಿದರುಂ ಪುಣ್ಣುಂ ಪೆಣನುಮಾಗಿ ದಮಿತಾರಿಯ ಬಲಂ ಚಂದ್ರಬಲಮಿಲ್ಲದಂಕಕಾಜನಂತೆ ಸೋಲ್ತು ಮೂರ್ತಿಬಲಮಿಲ್ಲದ ಮಲ್ಲನಂತಿಕ್ಕುಪಟ್ಟು ಬಾಹುಬಲಮಿಲ್ಲದ ರಾಜಪುತ್ರನಂತೆ

ತಕ್ಕುಗೆಟ್ಟು ನೆಲಬಲಮಿಲ್ಲದ ನೆಲವತ್ತಿಗನಂತೆ ಕಟ್ಟು ಕೞಲ್ದು ದೈವಬಲಮಿಲ್ಲದ ಸೇವಕನಂತೆ ಮುಟ್ಟುಗೆಟ್ಟು ಗ್ರಹಬಲಮಿಲ್ಲದ ಜನ್ಮಿಗನಂತೆ ಪೆರ್ಚಿಲ್ಲದೆ ಅನುಬಲಮಿಲ್ಲದ ಪ್ರೋಕ್ತಜೀವನಂತೆ ಮನಂಗುಂದಿ ಮೂಲಬಲಮಿಲ್ಲದ ತುೞಿಲಸಂದನಂತೆ ಬಿಲ್ಲೊಳಿಮ್ಮೊಟ್ಟನಾಗಿ ಚಾತುರ್ಬಲಮಿಲ್ಲದರಸನಂತೆ ಕಣ್ಗೆಟ್ಟಿದನಾಗಿ ಬೆಂಬಲಮಿಲ್ಲದ ಕನ್ನಗಳ್ಳನಂತೆ ಜೋವಂ ಬೊತ್ತಿರ್ಪಿನಂ ಪರಪರಿವಾರ ಸ್ತಿಮಿತಂ ಸ್ತಿಮಿತಸಾಗರ ತನೂಜನಿಸೆ" (4–30 ವ).

ಪೊನ್ನನಲ್ಲಿ ಕನ್ನಡತನ, ದೇಸಿ ಎಲ್ಲೆಲ್ಲಿದೆ ಎಂದು ಹೀಗೆ ಹುಡುಕಲು ಹೊರಟರೆ ದೊಡ್ಡ ಭಂಡಾರವೇ ಕಣ್ಮುಂದೆ ನಿಲ್ಲುತ್ತದೆ. ಪೊನ್ನನ ಶಬ್ದಸಂಪತ್ತು ಸಮೃದ್ಧವಾಗಿರುವಂತೆ ವಿಸ್ತಾರವಾಗಿಯೂ ಇದೆ. ಅವನ ನುಡಿಭಂಡಾರದಲ್ಲಿ ಕನ್ನಡ, ಸಂಸ್ಕೃತ, ಪ್ರಾಕೃತ ಎಲ್ಲ ಹರಳುಗಳೂ ಸರಗಟ್ಟಿ ಹೊಳೆಯುತ್ತ ಮನಸೆಳೆಯುತ್ತವೆ. ಅವನ ಭಾಷಾಜ್ಞಾನ ಕುರಿತು ಹೇಳುವಾಗ ಕನ್ನಡ ಸಂಸ್ಕೃತ ಸಂಬಂಧವಾಗಿ ಪ್ರಸ್ತಾಪಿಸಿದ್ದಾಗಿದೆ. ಸಂಸ್ಕೃತವೇ ಮೂಲವೂ, ಸ್ಫೂರ್ತಿಯೂ, ಪ್ರೇರಣವೂ ಆಗಿರುವ ಶಾಂತಿಪುರಾಣದಲ್ಲಿ ಕನ್ನಡ, ಸಂಸ್ಕೃತ, ಸಕ್ಕದ–ಪಾಗದ–ಕನ್ನಡ ಇವುಗಳ ಮಿಶ್ರಣ ಪ್ರಮಾಣ ಕುರಿತು ಕವಿರಾಜಮಾರ್ಗ ಕಾಲದಿಂದಲೂ ಪ್ರತಿಕ್ರಿಯೆಯಿದೆ, ಪ್ರತಿಭಟನೆಯೂ ಇದೆ. ಚಂಪೂಕಾವ್ಯಗಳ ಚೌಕಟ್ಟೇ ಅಂತಹುದು. ಆ ಆಧಾರ ಆಕರಗಳ ವಿವರಣೆ ಪ್ರಕೃತಕ್ಕೆ ಅಪ್ರಸ್ತುತ. ಇಷ್ಟು ನಿಜ, ಕನ್ನಡಕ್ಕೆ ಸಮಾನವಾದ ಸಂಸ್ಕೃತ ಪಾಂಡಿತ್ಯ, ಇದಕ್ಕೆ ಎಡಪಡೆಯದಲ್ಲದ ಪಾಕೃತ ಪರಿಚಯದಿಂದ ಹದಗೊಂಡ ಪೊನ್ನನ ಶೈಲಿ ಗದ್ಯರಚನೆಯ ಸಂದರ್ಭದಲ್ಲೂ ಅದೇ ಹಿರಿಮೆಯನ್ನು ತೆರೆದಿದೆ: ಕರಿಮಣಿಯ ಸರದಲ್ಲಿ ಕೆಂಪು ಹವಳ ಸೇರಿಸಿ ಪೋಣಿಸಿ ಪವಣಿಸಿದ ಚೆಲುವು ತುಳುಕುವ ಸುಪುಷ್ಟವಾದ ಪೆಡಸಿಲ್ಲದ ಬರವಣಿಗೆ.

ಪೊನ್ನನ ಗದ್ಯ ಓದುವುದು ಒಂದು ಆಹ್ಲಾದ. ಉಪಮೆಗಳು, ಮಾಲೋಪಮೆಗಳು ಸರಣಿಯಾಗಿ ಬರುತ್ತವೆ. ಬಿಚ್ಚಿದ ಸುರುಳಿಯಾಗಿ ಉರುಳುವ ಮಾಲೋಪಮೆಗಳನ್ನು ಅನೇಕ ಗದ್ಯಭಾಗಗಳಲ್ಲಿ ಕಾಣಬಹುದು ; ಒಂದೆರಡು ಉದಾಹರಣೆಗಳು ಸಾಕು :

1. "ಗುಹಾಮುಖದಿಂ ಪೊಱಮಡುವ ಶಿಶುಮೃಗರಾಜನಂತೆ ವಿಮಾನದಿಂ ಪೊಱಮಟ್ಟು...................... ತನ್ನ ಚಾತುರ್ದಂತ ಬಲಮೞಿಗೊಡಂ ಮನೋಬಲಮೞಿಯದೆ ಕಾಳೆಗಮಂ ಸೋಲ್ತೊಡಂ ಚಲಮಂ ಸೋಲದೆ ತನ್ನ ಪಕ್ಷಂ ಸತ್ತೊಡಂ ಮಾತು ಸಾಯದೆ ತೋರ್ಪುಗೆಟ್ಟೊಡಂ ಕೂರ್ಪುಗಿಡದೆ ತೇಜಂ ತೊಲಗೆಯುಮಾಯು ತೊಲಗದೆ ಶ್ರೀಗೆ ಗಂಟಾಗಿಯುಂ ಯಶಶ್ರೀಗೆ ಗಂಟಾಗದೆ ಸಾಮ್ರಾಜ್ಯಪಟ್ಟಂ ಪದುಳಮಾಗದೆಯುಂ ಬೀರಪಟ್ಟಂ ಪದುಳಮಾಗೆ......." (4–32 ವ).

2. "ಅದಱಿನಾನೀ ನಿಕೃಷ್ಟದಾಸೆಯಂ ಕೆಯ್ಕೊಂಡು ನಿರ್ವೇದಮಂ ಪೆಱಗಿಕ್ಕಿ ಸಂಸಾರನಿಸ್ಸಾರಭೋಗಕಾಂಕ್ಷೆಯಿಂ ಮಮವೆಗೆ ಮನಂದಂದಬಲಾಬಾಲಗೋಪಾಲಜನಂ ಮೊದಲಾಗೆನ್ನಂ ಪುಲ್ಲಿಂದಂ ನೊಚ್ಚಿದಳಂ ಕಲ್ಲಿಂದಂ ಬೆಟ್ಟದಳುಮಾಗಿ ಬಗೆವರುಂತುಂ ಯೌವನಶ್ರೀಯಂ ನಿರಪವಾದಮನಾರ್ ಕಳೆದಪರವರೆ ಮಹಾತ್ಮರ್ ಅಲ್ಲದೆಯುಂ ವಾಂಛೆಯಿಲ್ಲದ ಜೀವಿತಮುಂ ಮುನ್ನೆಂಬುದಿಲ್ಲದ ವಿಕ್ರಮಮುಂ ಓಗಡಿಸದನುಭವಮುಂ ಪಗೆಯಿಂ ಪೊಗೞಿಸುವ ಧೈರ್ಯಮುಂ ಪುರಾಕೃತ ಸುಕೃತ ಫಲಂಗಳವಂ ನೆನೆದನವರತಮುಣ್ಮುತ್ತ ಬಾತ ಕಣ್ಗಳುಂ ಚಿಂತಾನಿದ್ರೆಯಿಂ ದರ್ದುರಮಾದ ಮೊಗಮುಂ ಬಿಸುಸುಯ್ಯ ಬೆಂಕೆಯಿಂ ಬಿರಸೆ ನಗೆ ಪಸದನಮಿನ್ನೆನಸ್ಸುದು ಶೋಕಪಿಕಳದಿಂ ಶೂನ್ಯಮಾದ ಮನದಿಂ ಧೈರ್ಯಮುಂ ಪಱಿಪಟ್ಟುಮ ತಂದೆಯ ಬೆನ್ನನೆ ಪೋಪಂತವಧಾನಂ ಗೆಂಟುವೋದುದಿನಿಪಿರಿದನ್ವಯ ಕ್ಷಯದಪವಾದದ ಪೆರ್ವೊಱೆಯುಂ ಆನೊರ್ವಳೆನಗಂ ಪೊತ್ತು ನಿತ್ತರಿಸಲಾರ್ಪುದೆ" (4–79 ವ).

ಈ ಬಗೆಯ ಮಾಲೋಪಮೆಗಳ ಸುರಿಮಳೆಯಿಂದ ತನ್ನ ಶೈಲಿಗೆ ಮಾದರಿಯನ್ನು ಕಂಡುಕೊಂಡವನು ನಯಸೇನ ಕವಿ. ಪೊನ್ನನ ಅನಂತರದ ನಯಸೇನ ಪೊನ್ನನಲ್ಲಿ ಕಂಡುಕೊಂಡ ಜಾಣ್ಮೆಗುಣ ಗದ್ಯಶೈಲಿಯ ಈ ಜೀವಂತಿಕೆ ಮಾತ್ರ

ಎಂದು ತಿಳಿಯಬಾರದು. 'ಪೊನ್ನನ ಮಹೋನ್ನತಿವೆತ್ತ ಬೆಡಂಗು' ತನ್ನ ಮನಸ್ಸಿಗೆ ಒಪ್ಪಿಗೆಯಾಗಿದೆಯೆಂದು ನಯಸೇನನೇ ಪೊನ್ನನಲ್ಲಿರುವ ತನಗೆ ಪ್ರಿಯವಾದ ವಿಶೇಷವೊಂದನ್ನು ಗುರುತಿಸಿ ಗೌರವಿಸಿದ್ದಾನೆ.

ಯಾವುದೊ ಒಂದು ಪ್ರಸಂಗ ನಿರೂಪಣೆ ಇಲ್ಲವೇ ಕಥಾರಂಭಕ್ಕೆ ತಾನು ತೊಡಗುತ್ತಿರುವುದರ ಸೂಚನೆಯನ್ನು ಪೊನ್ನ ಹೇಗೆ ಕೊಡುತ್ತಾನೆ ನೋಡಿ :

" ಒಂದು ದೆವಸವೋಲಗದೊಳೊರ್ವನಪೂರ್ವಂ ನಿಸ್ಸೃಷ್ಟನವಗತಾರ್ಥಶಾಸ್ತ್ರನಾಕೃತಿವಂತನುದಾತ್ತೋದಂತ ಸಂಭಾಷಣ ಸಮುತ್ಪಾದಿತ ತೋಷಣಂ ಸ್ವವಿಚಾರ ವಿಭೂಷಣಂ ಸಪ್ತೋಪಾಯ ಪರಿಗೋಚರಂ ಖೇಚರಂ ಬಂದು ದೌವಾರಿಕ ನಿವೇದಿತ ವೃತ್ತಾಂತನಾಗಿ ಕಂಡಪರಾಜಿತಾನಂತವೀರ್ಯರ್ಕಳ್ಗೆಱಗಿ ಪೊಡವಟ್ಟುಚಿತ ಪ್ರದೇಶನ್ಯಸ್ತ ಭದ್ರಾಸನಮೊಳ್ ಕುಳ್ಳಿರೆ ಲಾಂಗಲಹಸ್ತಂ ವಿದ್ಯಾಧರರಾಜದೂತನ ಮೊಗಮಂ ನೋಡಿ (4–18 ವ).

ಬಂದ ಬರವಾವುದೆಲ್ಲಿಂ
ಬಂದಿರ್ ಭವದೀಯ ನಾಮಮೇನೆಂಬುದಿದೆಂ
ತೆಂದೆಮಗೆ ಪೇಳ್ವುದವಿತಥ
ಮೆಂದೊಡೆ ಖಚರೇಂದ್ರ ದೂತನಿರ್ದು ವಿನೀತಂ ॥ 4-19

ಶಾಂತಿಪುರಾಣದಲ್ಲಿ ಹಲವಾರುಕಡೆಗಳಲ್ಲಿ ಕಥಾಭಾಗದ ಸಂಗ್ರಹಕಾರ್ಯಕ್ಕೆ ತುಂಬ ಸಹಕಾರಿಯಾಗಿ ಕವಿಯ ನೆರವಿಗೆ ಹೇಳಿದಂತೆ ಕೇಳುವಹಾಗೆ ಗದ್ಯ ಒದಗಿಬರುತ್ತದೆ. ನಾಟಕೀಯತೆ, ಸಂಭಾಷಣೆಯ ಸೊಗಸು, ಆತ್ಮೀಯ ಧಾಟಿ ಮೊದಲಾದ ಗುಣಗಳು ಪೊನ್ನನ ಗದ್ಯದಲ್ಲಿ ಎದ್ದುಕಾಣುತ್ತವೆ. ಸಂಭಾಷಣೆ ಸೊಗಸು ಮತ್ತು ಒಳ್ಳೆಯ ಚಿತ್ರಗತಿಯ ವಿಲಾಸ ಪ್ರಕಟವಾಗಿರುವುದಕ್ಕೆ ಎರಡು ದೃಷ್ಟಾಂತಗಳನ್ನು ಕೊಟ್ಟಿದೆ:

1. "ನಿನ್ನ ಬಂದ ಬರವಿಂಗೆಮ್ಮ ಮನಂ ಮೊದಲಾಗಿ ನಾಣ್ಚಿದಪ್ಪುದು ಈ ವಿದ್ಯಾಧರಶ್ರೇಣಿಯ ಪರಿಭಾಷೆಗಳ್ ನಿನ್ನವಾಗಮೆ ಸಾಮಂ ಪ್ರಿಯಜನಪ್ರಯೋಜ್ಯಂ ಅಲ್ಲಿಪೆಡೆಯೊಳುನ್ಮತ್ತವಿಳಸಿತಂ ದಾನಂ ದುರ್ಬಲ ಲುಬ್ಧಪ್ರಸ್ತುತಂ ಭೇದಂ ಕೃತ್ಯಪ್ರೇಕ್ಷೋಪೇತ ಭೂಪಾಲ ಪ್ರಾಪ್ತಂ ದಂಡಂ ಪೌರುಷಾತ್ಯಯೋಚಿತಂ ಈ ಪೇಳ್ದ ನಿಬಂಧನೆಗಳೊರ್ವರು ಮಲ್ಲಿನೀನುಡಿಯಪರಾಯಣನೆನಗೆ ಪೇಳ್ವುದಂ ನಿನ್ನೊಳಿರ್ದ ನವಕವಿತ್ವಮುಂ ನೀನಭಿನಯಿಸಿದಂತಾಗಿರ್ದಪ್ಪುದು ಮೊಲಕ್ಕೊಡ್ಡಿದ ಬಲೆಯೊಳ್ ಮೃಗರಾಜಂ ತೊಡರ್ಗುಮೆ ನಿಸ್ಮರಸಂ ಸುಕುಮಾರಚಕ್ರವರ್ತಿ ನಡೆದೂನಿ[ಲ್ಲಿ]ೕವರಂ ಬರಲಾಜನದಱಿಂದಮಾತನೆಲ್ಲಿರ್ದನಲ್ಲಿವರಮಾನೆ ಪೋಗಿ ಕಾಣುವೆನೆಂದು ತಱಿಸಂದು ಕಟ್ಟಾಳಾಗಿ ನಿನ್ನ ಬರ್ಪಾಗಳೆ ಬರಲೆಂದಿರ್ದನೆನ್ನ ತಮ್ಮನನತ್ಯಾಗ್ರಹದಿಂದಂ ಮಾಣಿಸಿದೆನೆಂದೆನಿತಾನುಂ ತೆಱದಿಂ ಸೌಜನ್ಯಕಂದಾಂಕುರಂ ಗರ್ಜಿಸಿ ದೂತನಂ ವಿಸರ್ಜಿಸಿ" (3–93 ವ).

2. " ಅಮ್ಮಾ ಕೇಳ್ ನಿಮ್ಮ ಸಮ್ಮತಮಪ್ಪ ಪೃಥಿವ್ಯಾದಿ ತತ್ವಚತುಷ್ಟಯ ಸನ್ನಿಪಾತಮೆ ಚೈತನ್ಯಮುಂ ಪುಟ್ಟಿಸಗು ಮಪ್ಪೊಡೊಲೆಯ ಕಿಚ್ಚಿನ ಮೃದ್ಭಾಜನದ ನೀರ ಬಾಣಸಿಗನುರಿಪ್ಪುವ ಗಾಳಿಯ ಸಂಯೋಗದೊಳ್ ಚೇತನ್ಯಮುಪೇಕೆ ಪುಟ್ಟದು ಅಂತಲ್ತು ಕಾಯಾಕಾರಪರಿಣತಭೂತಸನ್ನಿಪಾತಂ ಚೈತನ್ಯಜನಕಮೆಂಬೆಯಪ್ಪೊಡೆ ಸಂಸ್ಕಾರ ನಿಮಿತ್ತದಿಂ ದಿಬ್ಬಿಸಿದ ಶಬದ ನೆಲದ ಪೊತ್ತಿಸಿದ ಕಿಚ್ಚಿನ ತಳಿದ ನೀರ ತೀಡುವ ಗಾಳಿಯ ಸಂಯೋಗದೊಳ್ ಚೈತನ್ಯೋತ್ಪತ್ತಿಯಾಗಲೆ ವೇಳ್ಕುಂ ಈ ಮಾತಮೋಘಂ ಮುಂದರಾಚಲ ನಿಶ್ಚಳಮಿಮಂ ಚಳಿಯಿಸಲ್ ನಿಮ್ಮ ನಚ್ಚಿನ ವಾಚಸ್ಪತಿಗಮಶಕ್ಯಮದ ಱಿಂದಂ ಪೃಥಿವ್ಯಾದಿ ಸಂಬಂಧಮಲ್ಲದೆ ಹೇತು ದರ್ಶನ ಜ್ಞಾನಲಕ್ಷಣಂ ಜೀವಾಭಿಧಾನಂ ತತ್ವಾಂತರಮೆಲ್ಲಾ ಕಾಲ ಮುಂಟೆಂಬುದರ್ಕುಪಪತ್ತಿಯಾವುದೆನೆ" (8–137 ವ). ಇದರ ಜೊತೆಯಲ್ಲಿ 4–66 ವ ಮೊದಲಾದ ಸಂದರ್ಭಗಳನ್ನು ತೂಗಿನೋಡಬಹುದು.

ಪೊನ್ನನ ಗದ್ಯ ಸಶಕ್ತವಾಗಿದೆ, ಸಜೀವವಾಗಿದೆ. ಕನ್ನಡ ಭಾಷೆಯ ಬಿಗಿಬನಿಗಳು ಕವಿಯ ಗದ್ಯದಲ್ಲಿ ಅದ್ಭುತ ಸಿದ್ಧಿಯನ್ನು ಪಡೆದಂತೆ ಸಾಕಾರವಾಗಿರುವುದಕ್ಕೆ ಸಾಕಷ್ಟು ಸಾಕ್ಷಿಗಳು ಸಿಗುತ್ತವೆ. ಓದುಗರಿಗೆ ಓದುತ್ತ ಓದುತ್ತಾ ತನ್ಮಯತೆ ತಂದುಕೊಡುವ ಸಾರ್ಥಕ ಸಂದರ್ಭಗಳೂ ಸಾಕಷ್ಟಿವೆ :

"ಅಂತು ಬಂದು ಮುನ್ನಮೆ ಸಮೆದ ನಾಯಕಮನೋಳಗುಮಾಡೆ ಪರಿವೇಷ್ಟಿಸಿ ರಚನಾ ವಿಶೇಷಂ ಬಳೆದು ಪರಿವ
ರುಚಕರಚನೆಯುರ್ಪಂತೆ ಪ್ರಾಪಮಂ ಪತ್ತಿ ಸುತ್ತಿಱಿದ ಕರಗಡಪದ ಡವಕೆಯ ಮಡಿಯ ಪರಿಯಣದ ಬಾಣಸಿನ ಗುಣ
ಣೆಯ ಮಜ್ಜನದ ದೇಹಾರದ ಱಿಂಚೆಯ ಕೊಂಚೆಯದ ಕೂರವದ ಕೊಟ್ಟಗೆಯ ಗುಡಿಯ ಜಳಗುಡಿಯ ಗೊಲ್ಲಣಿಗೆಯ
ಮಂಡವಿಗೆಯ ವಿಳಾಸನಿವಾಸಂಗಳಿಂದಂ ಎರಡೋಳಿಯ ರಾಣೀವಾಸದ ಬಳ್ಳಿಗಾವಣಂಗಳಿಂದಮುವಱ ಮುಂದೆ ಸಾಹಫ
ದೊಳಗಿರಿಸುವ ಪಂಚಕಲ್ಯಾಣದ ಸೂಚೀಯಾನಗಳ್ಗೆಂದು ನಿಱಿಸಿದ ನಡೆಮಾಡ ಸಾಲೆಗಳಿಂದಂ ಅಲ್ಲಿಂದಂ ಮತ್ತೊಂದು
ಬಾಗಿಲಿಂ ಪೊಱಗೆ ವಂಕದಾರವೆರಡುಂ ದೆಸೆಯೊಳಂ ತುರಗಾಸುರನ ಪಡೆದೋರ್ಕೆಯಂತಿರ್ದ ದಿವ್ಯಾಶ್ವಂಗಳ ಕಟ್ಟುವ
ದೀರ್ಘಪಟ ಮಂಡಪಂಗಳಿಂದಮತಿ ಮನೋಹರಮಾದವನಿಪತಿಯ ಭವನನಿವೇಶದಿಂದಮುಂದಂಬಡೆದ ಪೊಱವೀಡಂ
ಸೋಮಾನ್ವಯ ಪ್ರದೀಪಂ ಪುಗುವಾಗಳ್" (10–147ವ).

ಪೊನ್ನಕವಿ ಶಾಂತಿಪುರಾಣದ ಗದ್ಯದಲ್ಲಿ ಕಸರತ್ತೂ ನಡಸಿದ್ದಾನೆ, ಚಮತ್ಕಾರವನ್ನೂ ಮಾಡಿದ್ದಾನೆ. ಜಿನತತ್ತ್ವ ಬೋಧೆ ಹೃದ್ಯವಾಗಿ ಬರಬಹುದಾದ ಕಡೆ ಅದಕ್ಕೆ ಪದ್ಯಕವಚ ತೊಡಿಸಿದ್ದಾನೆ. ಎಲ್ಲೆಲ್ಲಿ ಜಿನಬೋಧೆ ತೀರ ಪಾರಿಭಾಷಿಕ ಹಾಗೂ ಕೇವಲ ವರದಿಯಾಗಿದೆಯೆಂದು ಭಾಸವಾಗುವುದೊ ಅಲ್ಲೆಲ್ಲಾ ಗದ್ಯದಲ್ಲಿ ಅದನ್ನು ತೇಲಿಸಿ ದಾಟಿಸಿಬಿಡುತ್ತಾನೆ. ಇದಕ್ಕೆ ಅತ್ಯುತ್ತಮ ಪುರಾವೆಯೆಂದರೆ 11–84 ವ, 11–111 ವ, 12–11 ವ ಮುಂತಾದ ಭಾಗಗಳು. ಪೊನ್ನ ಗದ್ಯ ಬಂದಾಗ ವಾಚಾಳಿಯಾಗುವುದುಂಟಾದರೂ ಅದು ಪರಿಮಿತ, ಬಹಳ ಕಡಮೆ. ಒಮ್ಮೊಮ್ಮೆ ತನ್ನ ಪ್ರಾಸಾನುಪ್ರಾಸ ಪ್ರಿಯತೆಯನ್ನೂ ಭಾಷಾವೈಖರಿಯನ್ನೂ ಪ್ರದರ್ಶಿಸುವ ಚಪಲಕ್ಕೆ ವಶನಾಗುವುದೂ ಉಂಟು :

"ನಿಖಿಲ ದಿವಿಜ ದನುಜ ವಿನಮ್ರ ಕಮ್ರ ಶಿರೋಮಣಿ ದ್ವಿಗುಣ ಪಾಟಳಮಣಿ ಭೂಮಿ ಭಾಗಾಭೋಗ ಸಭಾ
ಮಂಡಳನಂ ನಿರಸ್ತ ಸಮಸ್ತ ದುಸ್ತಮೋ ವಿಸ್ತಾರನಂ, ಪ್ರಾತಿಹಾರ್ಯಾಷ್ಟಕಾವಿರ್ಭೂತ ಪ್ರಭಾತಿವಿಳಸಿತಾಂಗ ಪ್ರಭನಂ,
ಸ್ವಯಂಪ್ರಭ ಜಿನೇಂದ್ರನಂ ಸ್ತುತಿಯಿಸಿ ಬೞಿಯಿಂ ತದನುಮತೋಪ ವಿಶದ ಶೇಷ ವಸ್ತೂತ್ಪಾದ ದ್ರವ್ಯ ವಿಳಯ ವಿಕಲ್ಪ
ಪ್ರತಿಪಾದನ ಸಮಯ ಸಮುತ್ಪನ್ನ ಸಹಸ್ರ ರಸನಾನನಾಂಬುರುಹ ನಿರ್ಯದ್ವಚನರಚನಾಮೃತನಂ ...." (1–85 ವ).

ಪೊನ್ನಕವಿ ಕೇವಲ ವಾಗಾಡಂಬರದ ಡೊಂಬರಾಟ ಮಾಡುವ ಕಸರತ್ತು ಮಾಡಿದ್ದಾನೆ. ಸಪ್ಪೆಯಾಗಿದೆಯೆಂದು ತಳ್ಳಿಹಾಕಬಹುದಾದ ಜಳ್ಳು ಗದ್ಯಭಾಗವೂ ಬಂದಿದೆ. ಇಂಥ ಅರೆಕೊರೆಗಳನ್ನು ಪರಿಹರಿಸಲು ನೆರವಾಗುವುದು ಯಥೇಚ್ಛವಾಗಿರುವ ಉತ್ತಮ ಗದ್ಯದ ಭಾಗಗಳು. ಒಳ್ಳೆ ಅಡಕವಾದ ಬರವಣಿಗೆಯೆಂಬ ಅಗ್ಗಳಿಕೆಗೆ ಅನೇಕ ಉದಾಹರಣೆಗಳಿವೆ. ಅನೇಕ ಸ್ವಾರಸ್ಯಗಳನ್ನು ಸ್ವಲ್ಪದರಲ್ಲೇ ಸಂಗ್ರಹಿಸಿಕೊಡುತ್ತಾನೆ :

"........... ತನ್ನ ಪರಾಕ್ರಮಮೊಂದಱಿಂದಮೆ ವೆಂಪ್ವಣರ್ಚಿ ಗೆಲ್ವ ತನ್ನ ಚಾಗದ ಭೋಗದ ಯಶೋರಾಶಿ
ಯುಮಂ ಪಸುಗೆವೋಗದ ಶೌರ್ಯಮುಮಂ ಸೂಱೆವೋಗದ ದೇಜಮುಮಂ ಪೊರೆವೋಗದ ಕಟ್ಟಾಯಮುಮಂ ಓರೆವೋಗದ
ಚಲಮುಮಂ ಮುಕ್ಕುವೋಗದುತ್ಕರ್ಷಮುಮಂ ನೋಟಕರಪ್ಪಿನಮಪ್ಪವರಿಂ ಪೊಗೞಿಸುವೆನೆಂದು ತಱಿಸಂದು ತಮ್ಮುತಿರ್ದರು
ಮಸಿಕ್ಕುವ ತಕ್ಕು ಕೈಮಿಕ್ಕು ನಿಲೆ" (4–36 ವ).

ಪೊನ್ನನ ಗದ್ಯಕ್ಕೆ ಕಸುವಿದೆ; ನಕ್ಷತ್ರಗಳನ್ನು ಬಿಡಿಸುವ ಚಿತ್ರಕ ಶಕ್ತಿ, ಕುಸುರಿ ಕೆಲಸಮಾಡುವ ಬನಿ ಇದೆ:

"ಅಂತು ನೋಡಿ ವಿಸ್ಮಯಾಕ್ರಾಂತಚಿತ್ತನತ್ಯಂತ ಹೃಷ್ಟೋತ್ಕೃಷ್ಟ ಸಂತುಷ್ಟಾಂತರಂಗನವರ ನವಯೌವನಕ್ಕೆ ನೆಱಿಮಾದ ರೂಪಾತಿಶಯಕ್ಕಂ ಅವಯವ ಶೋಭೆಗೆ ಬೆಂಬಲಮಾದ ಸಮುದಾಯ ಶೋಭೆಗಂ ಲಕ್ಷಣಕ್ಕಮನುರೂಪಮಾದ ವ್ಯಂಜನಕ್ಕಂ ಹಾವಕ್ಕನುರೂಪಮಾದ ಭಾವಕ್ಕಂ ವಿಭ್ರಮಕ್ಕಾಯತ್ತಮಾದ ವಿಲಾಸಕ್ಕಂ ಲೀಲೆಗಾಲಯಮಾದ ಮುದ್ದುಗೆಯ್ತಕ್ಕಂ ಗಾಡಿಗೆ ಪಾಡಾದ ಪಸದನಕ್ಕಂ ತೇಜಕ್ಕೋಜಾದ ಕಾಂತಿಗಂ ಬೆಡಂಗಿಂಗೆ ಪಾಂಗಾದ ದೇಸಿಗಂ ಮಾಸಱಿಗೆಕ್ಕೆಲಾವಣಮಾದ ಸೌಷ್ಠವಕ್ಕಂ ಕಣ್ಬೇಟಕ್ಕಿದಿರಾದ ದೊಡ್ಡಿಂಗಂ ಸೌಂದರ್ಯಕ್ಕೆ ನೆಲೆಯಾದಂದಕ್ಕಂ ಚಿತ್ತಸಂಬಟ್ಟಾಸ್ಥಾಯಿಕಾ ಜನಕ್ಕೆ ಲಕ್ಕತೆಱದಿಂ ಪೊಗೞ್ದು ಸಾರೆ ಕರೆದೇಱಲಿಕ್ಕಲ್ಪೇೞ್ದು ಕುಳ್ಳಿರಿಸಿ ದೇವತಾಸ್ತ್ರೀಯರಲ್ಲದೆ ಮಾನವ ಕನ್ಯೆಯರಲ್ಲವೆಂದು ಪರಿಚ್ಛೇದಿಸಿ ತದೀಯಾಮಾನುಷ ವೃತ್ತಿಗೆ ಸಭೆಯುಂ ತಾನುಂ ಚೋದ್ಯಂಬಟ್ಟು ಮತ್ತಮುತ್ತರೋತ್ತರ ಪ್ರತಿಪತ್ತಿ ವಿಧಾನಾನಂತರಮುದ್ಭೂತಮುಂ ಕುತೂಹಲಮುಮುಮ್ಮಳಿಸಂತೊಡನೊಡನೆ ಮನದೊಳ್ ಬಳೆಯೆ ಪರಿತೋಷದ ಪರಮಕೋಟಿಯನೆಯ್ದಿ ತನ್ನ ದೂತಂಗೆ ಪ್ರಮೋದಪುಳಕಿತಾಂಗನಂಗಚಿತ್ತಂ ಗೊಟ್ಟು" (3–53 ವ).

ಅನೇಕಸಲ ಗದ್ಯದಲ್ಲಿ ಏಕತಾನವೂ ಕಾಣುತ್ತದೆ, ಪುನರುಕ್ತಿಯೂ ಬರುತ್ತದೆ, ಸಂಸ್ಕೃತದ ಪೆಡಸು ಇರುತ್ತದೆ—ಇತ್ಯಾದಿಯಾದ ಮಿತಿಗಳನ್ನೂ ಗಮನಿಸಬಹುದು. ಅದರಂತೆ ಅರ್ಥವಿಸ್ತಾರವನ್ನು ಸಂಗ್ರಹಿಸಿಕೊಡುವ ರೀತಿಯನ್ನು ಪ್ರಶಂಸಿಸಬೇಕಾಗುತ್ತದೆ. ಒಂದು ತುಂಡು ಗದ್ಯದಲ್ಲಿ ವಿಸ್ತೃತಾರ್ಥವನ್ನು ಸಂಕ್ಷೇಪಿಸುವಾಗ ಪೊನ್ನ ತೋರುವ ಕಲಾತ್ಮಕತೆ ಮನಸೆಳೆಯುತ್ತದೆ. ಅಷ್ಟೇಕೆ, ಒಮ್ಮೊಮ್ಮೆ ಆತ ಪದ್ಯದೊಳಗೆ ಗದ್ಯದ ಓಟ ತರುವುದುಂಟು. ಗದ್ಯವನ್ನು ಪದ್ಯದ ಹಂತಕ್ಕೆ ಕೊಂಡೊಯ್ಯುವುದು ವಾಡಿಕೆಯಾದರೆ ಇಲ್ಲಿ ಪೊನ್ನ ಮಾಡಿರುವ ಚಮತ್ಕಾರ ನೋಡಿ:

ಇನಿತೆನಗಿಂಬುಕೆಯ್ದಿನಿತು ಬೆಳ್ಪಿನಿತೊಳ್ಪಿದೆನ್ನನಿನ್ನುಮೊ
ರ್ವನೊಳಿವಳಿಂದೊಡಂಬಡುವಳೆಲ್ಲಿಯ ಬಾರ್ತೆನಗೆಂಬ ಪಂಬಲಿಂ
ಮನದೊಳೞಲ್ದು ಚಿಂತಿಸಿ ಕೞಲ್ದು ಬೞಲ್ದು ಕನಲ್ದೊನಲ್ದು ಬೆ
ಳ್ಳೆನಿಸುವ ಬೆಳ್ಳಬೇರನಗುಬ್ಬಾಗಸಕೆತ್ತದೆ ಸೂಳೆ ಮಾಣ್ಗುಮೇ ॥ 8–98

ತುರೀಯ ಸ್ಥಿತಿಯನ್ನು ಚಿತ್ರಿಸುವ ಈ ಪದ್ಯದಲ್ಲಿನ ಮಾತಿನ ಬೆಡಗು ಗಮನಾರ್ಹವಾದದ್ದು. ಇದು ಓದುಗರ ಚಿತ್ತವನ್ನು ಕ್ಷಣಕಾಲ ಸೆರೆಹಿಡಿದು ನಿಲ್ಲಿಸುತ್ತದೆ. ಒಂದು ಬಗೆಯ ವಿಷಾದ ಛಾಯೆ, ವ್ಯಕ್ತಿಗತ ದುರಂತ ತುಂಬಿತುಳುಕುವ ಇಲ್ಲಿನ ಲಯನಿರೂಪಣೆ ಅರ್ಥವಂತಿಕೆ ನಮ್ಮನ್ನು ಆರ್ದ್ರಗೊಳಿಸುತ್ತದೆ. ನೋವಿನ ಹಿಡಿತದಲ್ಲಿ ನರಳುತ್ತಿರುವ ಆತನ ಅಸಮಾನ ವ್ಯಕ್ತಿತ್ವಕ್ಕಿಂತ ತಳಮಳವನ್ನು ತೋರಿಸುವುದರಲ್ಲಿ ಕವಿ ಆ ಪಾತ್ರದ ಅಂತರಂಗ ನಿರೀಕ್ಷಣೆ ಮಾಡುತ್ತಿರುವನೆಂಬಂತೆ ಆಡು ಮಾತಿನ ಗದ್ಯದ ನಡಿಗೆಯಲ್ಲಿ ಪದ್ಯದ ಬಟ್ಟಲಲ್ಲಿ ಹಿಡಿದಿಟ್ಟಿದ್ದಾನೆ. 4–46, 9–17 ಮುಂತಾದ ಪದ್ಯಗಳಲ್ಲೂ ವರ್ಣನೆ ಸಾರ್ಥಕತೆಯನ್ನು ಪಡೆದಿರುವಂತೆ ಗದ್ಯದ ಗತಿ ಹೊಳಲುಗೊಳ್ಳುತ್ತದೆ.

ವಾಸ್ತವವಾಗಿ ಇವೆಲ್ಲ ಕಾವ್ಯದ ಹೊರಮೈ ವಿವರಗಳು. ನಿಜವಾದ ಕಾವ್ಯಸ್ವಾದಕ್ಕೆ ಈ ವ್ಯೂಹರಚನೆಯ ಅರಿವು ಸಹಕಾರಿಯೇ ಹೊರತು ಇದೇ ಸ್ವಯಂಪೂರ್ಣವಲ್ಲ. ಆದರೆ ನೆನಪಿರಲಿ, ಪೊನ್ನ ಗದ್ಯವನ್ನು ತನ್ನ ಕಾವ್ಯದಲ್ಲಿ ಚೆನ್ನಾಗಿ ದುಡಿಸಿಕೊಂಡಿದ್ದಾನೆ. ವಾಚ್ಯಾರ್ಥದ ಆಚೆಗೆ ಮತ್ತೇನನ್ನೊ ಹೊಳೆಸಿ ಸೂಚಿಸುವುದರಲ್ಲಿ ಪರ್ಯವಸಾನವಾಗುವ ಅಂಥ ಗದ್ಯಭಾಗಗಳು ಯಾವುದೇ ಕವಿಯ ಶ್ರೇಷ್ಠ ಗದ್ಯಕ್ಕೆ ಹೆಗಲೆಣೆಯಾಗಿ ನಿಲ್ಲುತ್ತದೆ. ಸರಸವಾದ ಮಾತುಗಾರಿಕೆ, ಉತ್ಕೃಷ್ಟವಾದ ಸಂಭಾಷಣೆ, ಲವಲವಿಕೆಯ ಚಲನೆ, ಹೃದ್ಯವಾದ ನಾಟಕೀಯತೆ, ಪಾತ್ರದ ಗುಣಸ್ವಭಾವಗಳಿಗೆ ಒಪ್ಪುವ ಒಪ್ಪವಿಡುವ ಅನಾಸಕ್ತ ವಸ್ತುನಿಷ್ಠ ಕಲಾವಂತಿಕೆ—ಈ ಗುಣ ಶಾಂತಿಪುರಾಣದ ಗದ್ಯದಲ್ಲಿ ಹಲವು ಕಡೆ ವ್ಯಕ್ತವಾಗಿದೆ.

ಪೊನ್ನ ಮತ್ತು ಅಸಗ

ಶಾಂತಿಪುರಾಣದ ವಸ್ತು ಹೊಸದಲ್ಲ. ಪೊನ್ನನಿಗಿಂತ ಪೂರ್ವದಲ್ಲಿ ಕೆಲವು ಜೈನಮಹಾಕವಿಗಳು ಸಂಸ್ಕೃತದಲ್ಲಿ, ಪ್ರಾಕೃತದಲ್ಲಿ ಈ ವಸ್ತುವನ್ನು ಸಿದ್ಧಮಾಡಿಕೊಟ್ಟಿದ್ದರು. ನೆಗಬ್ದಿಕೂಚಿಭಟ್ಟಾರಕರು, ಪರಮಶ್ರೀನಂದಿಮುನೀಶ್ವರರು, ಕವಿಪರಮೇಶ್ವರರು (ವಾಗರ್ಥಸಂಗ್ರಹ), ಗುಣಭದ್ರಾಚಾರ್ಯರು (ಉತ್ತರ ಪುರಾಣ), ಅಸಗಕವಿ—ಮೊದಲಾದವರು ಶಾಂತಿತೀರ್ಥಂಕರನ ಕಥೆಯನ್ನು ರಚಿಸಿದ್ದರೆಂದು ತಿಳಿದುಬರುತ್ತದೆ. ಇವರಲ್ಲಿ ಮೊದಲ ಮೂವರ (ಮಹಾ) ಪುರಾಣಗಳು ಇದುವರೆಗೆ ದೊರೆತಿಲ್ಲ. ಗುಣಭದ್ರಾಚಾರ್ಯರು ಶಾಂತಿನಾಥನ ಚರಿತೆಯನ್ನು ಹೇಳಿರುವರಾದರೂ ಉತ್ತರ ಪುರಾಣದಲ್ಲಿ ಇದೇ ಪ್ರಧಾನವಾಗಿರಲಿಲ್ಲ, ಅಲ್ಲಿರುವ ಇನ್ನಿತರ 23 ತೀರ್ಥಂಕರರಲ್ಲಿ ಇದೂ ಒಂದಾಗಿದೆ. ಅಸಗ ಇದನ್ನೇ ಪ್ರಧಾನ ವಾಗಿರಿಸಿಕೊಂಡು ಸಂಸ್ಕೃತದಲ್ಲಿ ಶ್ರೇಷ್ಠಕಾವ್ಯ ಬರೆದು ಕೀರ್ತಿಶಾಲಿಯಾದ. ಸಂಸ್ಕೃತದಲ್ಲಿ ಹೀಗೆ ಶಾಂತಿತೀರ್ಥಂಕರನನ್ನು ಕುರಿತು ಒಂದು ಸ್ವತಂತ್ರ ಪುರಾಣಕಾವ್ಯ ಬರೆದವನು ಅಸಗನೆಂದೇ ತೋರುತ್ತದೆ.

ಕನ್ನಡದಲ್ಲಿ ಶಾಂತಿಪುರಾಣವನ್ನು ಬರೆದ ಆದ್ಯಕವಿ ಪೊನ್ನನೇ. ಶಾಂತಿಪುರಾಣಗಳ ಶ್ರೇಣಿಗೆ ಇವನೇ ಆದಿಕವಿ. ಪೊನ್ನನಿಗೆ ಅಸಗನ ಶಾಂತಿಪುರಾಣವೇ ಮೂಲ, ಆಕರ, ಮಾರ್ಗದರ್ಶಿ, ಮೇಲ್ಪಂಕ್ತಿ—ಎಲ್ಲ. ಇದನ್ನು ಮತ್ತಷ್ಟು ಸ್ಪಷ್ಟೀ ಕರಿಸಿ ಸ್ಥಾಪಿಸುವ ಪೂರ್ವದಲ್ಲಿ ಹೇಳಬೇಕಾದ ಮಾತುಗಳಿವೆ. ಪೊನ್ನ ತನ್ನ ಕಾವ್ಯವಸ್ತು ಮತ್ತು ಚೌಕಟ್ಟನ್ನು ಪ್ರಧಾನ ವಾಗಿ ಅಸಗನಿಂದ ಆರಿಸಿಕೊಂಡಿದ್ದರೂ ಆನುಷಂಗಿಕವಾಗಿ ಉತ್ತರ ಪುರಾಣದಿಂದಲೂ ಸ್ವೀಕರಿಸಿರುವುದು ನಿಜ, ಸ್ವಯಂ ಸ್ಪಷ್ಟ. ಪೊನ್ನಕವಿ ಅನ್ಯಕವಿಗಳ ಕಾವ್ಯಸೌಧಗಳಿಗೆ ಕನ್ನಹಾಕಿದ ಕಳ್ಳ. ಬರಿಯ ಸಣ್ಣಪುಟ್ಟ ಕಳ್ಳನಲ್ಲ, ಭಾರೀ ಹಗಲು ದರೋಡೆ ಮಾಡುವ ಪಕ್ಕಾಕಳ್ಳ. ಕಾಳಿದಾಸನಿಂದ ಒಂದೆರಡು ಆಶ್ವಾಸಗಳನ್ನು ಅನಾಮತ್ತು ಕನ್ನಡಕ್ಕೆ ಎತ್ತಿ ಹಾಕಿದರೆ ಅಸಗನಿಂದ ಇಡೀ ಕಾವ್ಯ ಸೂರೆಮಾಡಿ ಬರಿದಾಗಿಸಿದ್ದಾನೆ. ಶಾಂತಿಪುರಾಣದ ಮೂಲ ಕಟ್ಟಡ ಕಥೆ ನಡಿಗೆಯೆಲ್ಲ ಅಸಗನ ಪಡಿನೆರಳು. ಕನ್ನಡದ ಧ್ವನಿಸಂಚಾರ ಮತ್ತು ಕೆಲವು ವರ್ಣನೆಗಳಲ್ಲಷ್ಟೆ ಸ್ವಂತಿಕೆಯ ಬೆಳಕಿನಾಟ.

ಪೊನ್ನನ ಮೇಲೆ ಗಾಢತರವಾಗಿ ಆಗಿರುವ ಅಸಗನ ದಟ್ಟಪ್ರಭಾವವನ್ನು ಕುರಿತು ಬರೆಯುವ ಮೊದಲು ಅಸಗ ಕವಿಯ ವಿಚಾರವಾಗಿ ತಿಳಿದುಬರುವ ಮಾಹಿತಿಗಳನ್ನು ಅರಿಯಬೇಕಾಗುತ್ತದೆ. ಅಸಗ ಸಂಸ್ಕೃತದಲ್ಲಿ ಬರೆದಿದ್ದರೂ ಕನ್ನಡಕ್ಕೆ ದೂರದವನಲ್ಲ, ಆತ ಕನ್ನಡಿಗನೇ ಆಗಿದ್ದಾನೆಂಬುದು ನಮಗೆ ಪ್ರಿಯವಾಗುವ ವಿಚಾರ. ಪಂಪ ಪೂರ್ವಯುಗದ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಮಾತನಾಡುವಾಗ ಅಸಗನಿಗೂ ಅವನ ಕೃತಿಗಳಿಗೂ ಹಿರಿದಾದ ಸ್ಥಾನವಿದೆ. ಅವನಿಗಿರುವ ಈ ಮಿಗಿಲಾದ ಹಿರಿಮೆಯನ್ನು ಗುರುತಿಸುವುದಕ್ಕೆ ಪೂರಕವಾದ ಸಾಮಗ್ರಿಯೂ ಸಾಕಷ್ಟಿದೆ. ಈಗ ಉಪಲಬ್ಧವಾಗುವ ದಾಖಲೆಯಂತೆ ಅಸಗನ ಬಗೆಗೆ, ಕೃತಿಗಳ ವಿಚಾರವಾಗಿ ತಿಳಿದುಬರುವ ಸಹಾಯಕ ಮಾಹಿತಿಯನ್ನು ಇಲ್ಲಿ ಸಂಕ್ಷೇಪಿಸಿ ಕೊಡುತ್ತಿದ್ದೇನೆ.

ಅಸಗ ಎಂಟು ಕಾವ್ಯಗಳನ್ನು ಬರೆದನೆಂಬುದು ಖಚಿತವಾಗಿ ಗೊತ್ತಿದೆ. ವರ್ಧಮಾನ ಚರಿತ್ರ (ಸನ್ಮತಿ ಚರಿತ್ರ, ಮಹಾವೀರ ಚರಿತ್ರ ಎಂಬ ಇನ್ನೆರಡು ಹೆಸರುಗಳೂ ಇದೇ ಪುರಾಣಕ್ಕೆ ಇವೆ), ಶಾಂತಿಪುರಾಣ, ಚಂದ್ರಪ್ರಭಪುರಾಣ—ಇವು ಸಂಸ್ಕೃತದಲ್ಲೂ, ಕರ್ಣಾಟ ಕುಮಾರಸಂಭವಂ ಎಂಬುದು ಕನ್ನಡದಲ್ಲೂ ರಚಿತವಾದ ಅಸಗಕೃತ ಕಾವ್ಯಗಳೆನ್ನ ಲಾಗಿದೆ. ಇವುಗಳಲ್ಲಿ ಚಂದ್ರಪ್ರಭಪುರಾಣ ಮತ್ತು ಕುಮಾರಸಂಭವ ಇದುವರೆಗೆ ದೊರೆತಿಲ್ಲ. ವರ್ಧಮಾನ ಚರಿತೆಯಲ್ಲಿ ತನ್ನ ಕಾಲವನ್ನು ಅಸಗಕವಿ 'ಸಂವತ್ಸರೇ ದಶನವೋತ್ತರ ವರ್ಷಯುಕ್ತೇ' ಎಂದು ತಿಳಿಸಿದ್ದಾನೆ. ಅಂದರೆ ವರ್ಷ 910 ಎಂದಾಯಿತು. ಪ್ರಾಕೃತ ಹಾಗೂ ಭಾರತೀಯ ವಾಙ್ಮಯ ವಿಶಾರದ ಡಾ॥ ಹೀರಾಲಾಲ್ ಜೈನರು ಇದನ್ನು ಶಕವರ್ಷವೆಂದು ಪರಿಗಣಿಸಿ 910ಕ್ಕೆ 78 ಸೇರಿಸಿ ಕ್ರಿಸ್ತಶಕ 988 ಎಂಬುದು ಅಸಗನ ಕಾಲವೆಂದು ಹೇಳಿದರು.

ಕನ್ನಡ, ಪ್ರಾಕೃತ, ಸಂಸ್ಕೃತ ಭಾಷೆಗಳ ತಲಸ್ಪರ್ಶಿ ಪಾಂಡಿತ್ಯ ಪಡೆದ ಡಾ|| ಆ. ನೇ. ಉಪಾಧ್ಯೆಯವರು ಇದನ್ನು ವಿಕ್ರಮ ಸಂವತ್ ಎಂದು ನೇರ್ಪಡಿಸಿ, ಅಸಗನ ಕಾಲ 910—57=853 ಎಂಬುದಾಗಿ ನಿರ್ಧರಿಸಿದರು. ಇದೀಗ ಉಚಿತ ಹಾಗೂ ವಿಶ್ವಸನೀಯವೆಂದು ಮಾನ್ಯವಾಗಿದೆ. ಡಾ|| ಆ. ನೇ. ಉಪಾಧ್ಯೆಯವರಿಗೆ ಕನ್ನಡ ಭಾಷೆಯ ನಿಕಟ ಪರಿಚಯವಿದ್ದುದ ರಿಂದ, ಪೊನ್ನನ ಕಾಲಕ್ಕಿಂತ ಅಸಗನ ಕಾಲ ಹಿಂದಿನದು ಆಗಿರಲೇಬೇಕೆಂಬ ಆಲೋಚನೆ ಮಾಡಲು ನೆರವಾಯಿತೆಂದು ತೋರುತ್ತದೆ.

ಅಸಗಕವಿ ವೃತ್ತಾಂತ ಭಾಗ ವರ್ಧಮಾನ ಚರಿತ್ರದಲ್ಲಿ ಬಂದಿರುವುದು ಇಷ್ಟು :

ಕೃತಂ ಮಹಾವೀರ ಚರಿತ್ರಮೇ ತನ್ಮಯಾ ಪರಸ್ವ ಪ್ರತಿಬೋಧನಾರ್ಥಮ್
ಸಪ್ತಾಧಿಕ ತ್ರಿಂಶಭವ ಪ್ರಬಂಧಂ ಪುರೂರವಾದ್ಯಂತಿಮ ವೀರನಾಥಮ್ ॥ 102

ವರ್ಧಮಾನ ಚರಿತ್ರಂ ಯಃ ಪ್ರತ್ಯಾಖ್ಯಾತಿ ಶೃಣೋತಿ ಚ
ತಸ್ಯೇಹ ಪರಲೋಕಸ್ಯ ಸೌಖ್ಯಂ ಸಂಜಾಯತೇತರಾಮ್ ॥ 103

ಸಂವತ್ಸರೇ ದಶನವೋತ್ತರ ವರ್ಷಯುಕ್ತೇ
ಭಾವಾದಿ ಕೀರ್ತಿ ಮುನಿನಾಯಕ ಪಾದಮೂಲೇ
ಮೌದ್ಗಲ್ಯ ಪರ್ವತ ನಿವಾಸ ವನಸ್ಥ ಸಂಪತ್
ಸಚ್ಛ್ರಾವಿಕಾ ಪ್ರಜನಿತೇ ಸತಿ ವಾ ಮಮತ್ವೇ ॥ 104

ವಿದ್ಯಾಮಯಾ ಪ್ರಪಠಿತೇತ್ಯಸಗಾಹ್ವಯೇನ
ಶ್ರೀನಾಥರಾಜ್ಯಮಖಿಲಂ ಜನತೋಪಕಾರಿ
ಪ್ರಾಪ್ಯೈವ ಚೋಡ ವಿಷಯೇ ವಿರಲಾನಗಾರ್ಯಾಂ
ಗ್ರಂಥಾಷ್ಟಕಂ ಚ ಸಮಕಾರಿ ಜಿನೋಪದಿಷ್ಟಂ ॥ 105

ಪೂರೂರವ ಭವದಿಂದ ಆರಂಭವಾಗಿ (ಮಹಾ) ವೀರನಾಥ ಭವದವರೆಗೆ 37 ಭವಗಳನ್ನು ವರ್ಣಿಸುವ ಮಹಾವೀರ ಚರಿತೆಯನ್ನು, ನನ್ನನ್ನು ಹಾಗೂ ಇತರರನ್ನು ಪ್ರತಿಬೋಧನೆಗೊಳಿಸುವ ಸಲುವಾಗಿ ರಚಿಸಿದ್ದೇನೆ. (ಇದನ್ನು) 910ನೆಯ ಸಂವತ್ಸರದಲ್ಲಿ ಭಾವಕೀರ್ತಿಯೆಂಬ ಮುನಿನಾಯಕರ ಪಾದಮೂಲದಲ್ಲಿ ರಚಿಸಿದ್ದೇನೆ. ಮೌದ್ಗಲ್ಯಪರ್ವತ ಸಮೀಪ ದಲ್ಲಿದ್ದ ಶ್ರಾವಕಶ್ರೇಷ್ಠನೂ ಇದರಲ್ಲಿ ಆಸಕ್ತಿ ತೋರಿಸಿದನು. (ನಾನು) ಹಲವು ಜ್ಞಾನಶಾಖೆಗಳನ್ನು ಪಡೆದಿದ್ದೇನೆ. ಎಲ್ಲ ಜನರಿಗೂ ಪ್ರಯೋಜನಕಾರಿಯಾಗಿದ್ದ ಶ್ರೀನಾಥನ ರಾಜ್ಯ ತಲಪಿದ ಮೇಲೆ ಜಿನತತ್ವಗಳನ್ನು ಗರ್ಭೀಕರಿಸಿಕೊಂಡ ಎಂಟು ಕೃತಿಗಳನ್ನು ಚೋಡ (ಚೋಳ) ವಿಷಯದ (ದೇಶದ) ವಿರಲಾ (ಪಾ ವರಲಾ ಪಾ ಧರಲಾ) ದಲ್ಲಿ (ನಾನು) ರಚಿಸಿದೆ—ಎಂದು ಅಸಗ ಅರಿಕೆಮಾಡಿದ್ದಾನೆ.

ಅಸಗಕವಿ ಇಲ್ಲಿ ಉಲ್ಲೇಖಿಸಿರುವ ಭಾವಕೀರ್ತಿಮುನಿ, ಮೌದ್ಗಲ್ಯಪರ್ವತ, ಶ್ರಾವಕಶ್ರೇಷ್ಠ (ಈತ ಶಾಂತಿಪುರಾಣದಲ್ಲಿ ಅಸಗ ಹೇಳಿರುವ ಜಿನಾಪ ಎಂಬುವನೆ ?), ಶ್ರೀನಾಥ (ನ ರಾಜ್ಯ?), ವಿರಲಾನಗರ—ಕುರಿತು ಮತ್ತಷ್ಟು ಅಧಿಕೃತ ಮಾಹಿತಿ ದೊರೆತಾಗ ಕವಿಯ ಇತಿವೃತ್ತ ನಿರ್ದೇಶನಕ್ಕೆ ನಿರ್ದಿಷ್ಟ ನೆರವು ದೊರೆತಂತಾದೀತು. ಪೊನ್ನನ ಶಾಂತಿಪುರಾಣ ಕಾವ್ಯದಲ್ಲಿ ಒಂದೆಡೆ ಬರುವ ಕೆಳಗಿನ ಪದ್ಯದಲ್ಲಿ ಅಸಗ ಹೇಳುವ ಶ್ರೀನಾಥನಿಗೆ ಸಂಬಂಧಿಸಿದ ಧ್ವನಿಯೂ ಇದೆಯೇನೊ ನೋಡಬೇಕು :

ಶ್ರೀನಾಥ ನಿನ್ನ ಬರವಿಂ
ಗೇನುಂ ಚಕ್ರಪ್ರಸೂತಿ ಕಾರಣಮಲ್ತು
ದ್ದಾನಿಯ ಪುಣ್ಯಮೆ ಜಗದೊಳ್
ತಾನೆ ಮೊದಲ್ ಕಾರಣಕ್ಕಕಾರಣಬಂಧೂ ॥ 10–175

ಹದಿನೆಂಟು ಆಶ್ವಾಸಗಳ ವರ್ಧಮಾನ ಚರಿತ್ರದ ಒಂದು ಪ್ರತಿಯಲ್ಲಿ, ಅಯ್ದನೆಯ ಆಶ್ವಾಸದ ಕಡೆಯ ಗದ್ಯವೆಡೆ, "ಅಸಗ ಭೂಪ ಕೃತೇ ವರ್ಧಮಾನ ಚರಿತೇ" ಎಂದೂ ಹೇಳಿದೆ. ಇವನ್ನು ನೋಡಿ ಅಸಗನು ದೊರೆಯೂ ಆಗಿದ್ದನೇ ಎಂದು ಶಂಕಿಸಿದ್ದಾರೆ. ಇದು ವರ್ಧಮಾನ ಚರಿತ್ರದ ಉಳಿದ ಪ್ರತಿಗಳಲ್ಲಿಲ್ಲ. ಇದ್ದಿದ್ದರೂ ಇಷ್ಟರಿಂದಲೇ ಭೂಪ ಎಂಬುದಕ್ಕೆ ರಾಜ ಎಂದೇ ಅರ್ಥೈಸಬೇಕಾಗಿಲ್ಲ. ಇದೇ ವರ್ಧಮಾನ ಚರಿತ್ರದ ಸಂವತ್ 1679 ರ ಒಂದು ಪ್ರತಿಯ ಕಡೆಯಲ್ಲಿ ಮೇಲೆ ಉಲ್ಲೇಖಿಸಿದ 102 ರಿಂದ 104 ರವರೆಗಿನ ನಾಲ್ಕು ಶ್ಲೋಕಗಳ ಜತೆಗೆ ಮತ್ತೊಂದು ಶ್ಲೋಕವಿರುವುದನ್ನು 1886–1892 ರ ತಮ್ಮ ವರದಿಯಲ್ಲಿ ಪೀಟರ್ ಸನ್ ನಮೂದಿಸಿದ್ದಾರೆ :

ಸದ್ವೃತ್ತಂ ದಧತಾ ಸ್ವಭಾವ ಮೃದುನಾ ನಿಃಶ್ರೇಯಸ ಪ್ರಾರ್ಥಿನಾ
ಸಾಧೂನಾಂ ಹೃದಯೋಪಮೇನ ಶುಚಿನಾ ಸಂಪ್ರೇರಿತಃ ಪ್ರೇಯಸಾ
ಏತತ್ಸಾದರಮಾರ್ಯನಂದಿ ಗುರುಣಾ ಸಿದ್ಧ್ಯೈವ್ಯಧಾತ್ತ್ಽಗಃ
ಕೀರ್ತ್ಯುತ್ಕೀರ್ತನ ಮಾತ್ರ ಚಾರುಚರಿತಂ ಶ್ರೀಸನ್ಮತೇಃ ಸನ್ಮತೇಃ ॥

ಇಲ್ಲಿ ಅಸಗಕವಿ ತನ್ನ ಸನ್ಮತಿ (ಮಹಾವೀರ = ವರ್ಧಮಾನ) ಚರಿತ್ರದ ರಚನೆಗೆ ಗುರು ಆರ್ಯನಂದಿಯೇ ಪ್ರೇರಕನೆಂದು ಸ್ಮರಿಸಿದ್ದಾನೆ. ವರ್ಧಮಾನ ಚರಿತ್ರದಲ್ಲಿ ಸಿಗುವ ಕವಿಸಂಬಂಧಿಯಾದ ಜೀವನವಿವರಗಳ ಜತೆಗೆ ಪೋಣಿಸಲು ಬೇಕಾದ ಮತ್ತಷ್ಟು ಮಾಹಿತಿ ಶಾಂತಿಪುರಾಣದಲ್ಲಿದೆ. ಅಲ್ಲಿ ಬರುವ ಕವಿವೃತ್ತಾಂತ ಭಾಗ ಹೀಗಿದೆ :

ಮುನಿಚರಣರಜೋಭಿಃ ಸರ್ವದಾ ಭೂತ [ಪೂತ?] ಧಾತ್ರ್ಯಂ
ಪ್ರಣತಿ ಸಮಯ ಲಗ್ನೈಃ ಪಾವನೀ ಭೂತ ಮೂರ್ಧಾ
ಉಪಶಮ ಇವ ಮೂರ್ತಃ ಶುದ್ಧ ಸಮ್ಯಕ್ತ್ವಯುಕ್ತಃ
ಪಟುಮತಿರಿತಿ ನಾಮ್ನಾ ವಿಶ್ರುತಃ ಶ್ರಾವಕೋಽಭೂತ್ ॥ 1

ತನುಮಪಿ ತನುತಾಂ ಯಃ ಸರ್ವಪರ್ವೋಪವಾಸೈ
ಸ್ತನುಮನುಪಮಧೀಃ ಸ್ಮಪ್ರಾಪಯನ್ ಸಂಚಿನೋತಿ
ಸತತಮಪಿ ವಿಭೂತಿಂ ಭೂಯಸೀಮನ್ನದಾನ
ಪ್ರಭೃತಿಭಿರುರು ಪುಣ್ಯಂ ಕುಂದ ಶುಭ್ರಂ ಯಶಶ್ಚ ॥ 2

ಭಕ್ತಿಂ ಪರಾಮವಿರತಂ ಸಮಪಕ್ಷಪಾತಾ
ದಾತನ್ವತೀ ಮುನಿನಿಕಾಯ ಚತುಷ್ಟಯೇಽಪಿ
ವೈರೇತಿ [ವೇರತ್ತಿ] ರಿತ್ಯನುಪಮಾ ಭುವಿ ತಸ್ಯ ಭಾರ್ಯಾ
ಸಮ್ಯಕ್ತ್ವಶುದ್ಧಿರಿವ ಮೂರ್ತಿಮತೀ ಪರಭೂತ್ ॥ 3

ಪುತ್ರಸ್ತಯೋರಸಗ ಇತ್ಯವದಾತ ಕೀರ್ತ್ಯೋ
ರಾಸೀನ್ಮನೀಷಿ ನಿವಹ ಪ್ರಮುಖಸ್ಯ ಶಿಷ್ಯಃ
ಚಂದ್ರಾಂಶು ಶುಭ್ರಯಶಸೋ ಭುವಿನಾಗನಂದ್ಯಾ
ಚಾರ್ಯಸ್ಯ ಶಬ್ದ ಸಮಯಾರ್ಣವ ಪಾರಗಸ್ಯ ॥ 4

ತಸ್ಯಾಭವದ್ಭವ್ಯ ಜನಸ್ಯ ಸೇವ್ಯಃ
ಸಖಾ ಜಿನಾಪೋ ಜಿನಧರ್ಮಸಕ್ತಃ
ಖ್ಯಾತೋಽಪಿ ಶೌರ್ಯಾತ್ಪರಲೋಕಭೀರು
ರ್ದ್ವಿಜಾದಿ ನಾಥೋಽಪಿ ವಿಪಕ್ಷಪಾತಃ ॥ 5

ವ್ಯಾಖ್ಯಾನ ಶೀಲತ್ವಮವೇಕ್ಷ್ಯತಸ್ಯ
ಶ್ರದ್ಧಾಂ ಪುರಾಣೇಷು ಚ ಪುಣ್ಯಬುದ್ಧೇಃ
ಕವಿತ್ವಹೀನೋಽಪಿ ಗುರೌ ನಿಬಂಧೇ
ತಸ್ಮಿನ್ನಧಾಸೀದಸಗಃ ಪ್ರಬಂಧಂ ॥ 6

ಚರಿತಂ ವಿರಚಯ್ಯ ಸನ್ಮತೀಯಂ
ಸದಲಂಕಾರ ವಿಚಿತ್ರ ವೃತ್ತಬಂಧಮ್
ಸ ಪುರಾಣಮಿದಂ ವ್ಯಧತ್ತ ಶಾಂತೋ
ರಸಗಃ ಸಾಧುಜನ ಪ್ರಮೋಹ ಶಾಂತ್ಯೈ ॥ 7

ಮೇಲಿನ ಏಳು ಶ್ಲೋಕಗಳಲ್ಲಿ ಅಡಕವಾಗಿರುವ ಸಾರಾಂಶವಿದು: ಪಟುಮತಿ ಹೆಸರಿನ ಪ್ರಸಿದ್ಧ ಶ್ರಾವಕನು ಮುನಿಗಳ ಪಾದಸ್ಪರ್ಶ ಪುನೀತ ಪೃಥ್ವಿಯನ್ನು ತನ್ನ ತಲೆಯಿಂದ ಮುಟ್ಟಿ ಗೌರವ ಸೂಚಿಸುತ್ತಿದ್ದ. ಪಟುಮತಿ ಮೃದು ಸ್ವಭಾವಿ, ಸಮ್ಯಕ್ತ್ವ ಹೊಂದಿದವನು. ಬುದ್ಧಿಶಾಲಿಯಾದ ಆತ ಮೊದಲೇ ತೆಳ್ಳಗಿದ್ದರೂ ಪೂರ್ವಾಚರಣೆಯಿಂದ ಮತ್ತಷ್ಟು ಕೃಶಾಂಗನಾಗಿ ಗೌರವಕ್ಕೆ ಪಾತ್ರನಾಗಿದ್ದ. ಆಹಾರಾದಿ ದಾನದಿಂದ ಧವಳಕೀರ್ತಿ ಪಡೆದಿದ್ದ. ಸಮ್ಯಕ್ತ್ವವೇ ಮೈವೆತ್ತಂತಿದ್ದ ಅನುಪಮಳಾದ ವೈರೇತಿ (ವೇರತ್ತಿ) ಆತನ ಹೆಂಡತಿ. ಆಕೆ ಶ್ರಮಣ ಸಂಘಕ್ಕೆ ಗೌರವ ತೋರಿಸುತ್ತಿದ್ದಳು. ಈ ಪ್ರಸಿದ್ಧ ದಂಪತಿಗಳ ಮಗನೇ (ಕವಿಯಾದ) ಅಸಗ. ಪ್ರಾಜ್ಞರಲ್ಲಿ ಪ್ರಸಿದ್ಧರಾದ ಆಚಾರ್ಯ ನಾಗನಂದಿಯವರ ಅಕಳಂಕ ಕೀರ್ತಿ ಎಲ್ಲೆಡೆ ಹಬ್ಬಿತ್ತು. ಅವರು ಶಬ್ದಸಮಯ ಪಾರಂಗತರು. ಅಸಗಕವಿ ಅವರ ಶಿಷ್ಯನಾಗಿದ್ದ. ಜಿನ ಧರ್ಮದಲ್ಲಿ ಶ್ರದ್ಧೆ ಹೊಂದಿದವನಾದ ಜಿನಾಪ ಎಂಬುವನು ಅಸಗನ ಸ್ನೇಹಿತ. ಜಿನಾಪನು ಸಾಹಸಿಯಾದರೂ ಪರಲೋಕ ಭೀರು. ಉನ್ನತಕುಲಪ್ರಸೂತನಾದ ಆತ ಪೂರ್ವಾಭಿಪ್ರಾಯ ಪೂರ್ವಾಗ್ರಹ ಪಕ್ಷಪಾತಗಳಿಂದ ಮುಕ್ತನಾಗಿದ್ದ. ಆ ಕೆಳೆಯನ ಆಸಕ್ತಿಯರಿತು ವಿಶ್ವಾಸದಿಂದ ಅಸಗಕವಿ ತನ್ನ ಶಾಂತಿಪುರಾಣ ಕಾವ್ಯವನ್ನು ಸಾಧುಜನರ ಪ್ರಮೋಹಶಾಂತಿಗಾಗಿ ಬರೆದಿದ್ದಾನೆ. ಕವಿಗೆ ತನ್ನ ಕಾವ್ಯಶಕ್ತಿಯ ಇತಿಮಿತಿಗಳ ಅರಿವಿದೆ. ಅಸಗ ಶಾಂತಿಪುರಾಣವನ್ನು ಸನ್ಮತಿ (ವರ್ಧಮಾನ/ಮಹಾವೀರ) ಚರಿತ ಕಾವ್ಯ ಬರೆದ ಮೇಲೆ ಬರೆದಿದ್ದಾನೆ.

ಮೇಲಿನ ನಿರೂಪಣೆಯಿಂದ ತಿಳಿದುಬರುವಂತೆ ಅಸಗಕವಿಗೆ ಮೂವರು ಗುರುಗಳು :

ಅ. ಭಾವಕೀರ್ತಿ : ಸನ್ಮತಿ ಚರಿತ್ರ ಇವರ ಪದತಲದಲ್ಲಿ ಮುಗಿಯಿತು
ಆ. ಆರ್ಯನಂದಿ: ಅಸಗನನ್ನು ಸನ್ಮತಿ ಚರಿತ್ರ ಕಾವ್ಯರಚನೆಗೆ ಪ್ರೋತ್ಸಾಹಿಸಿದವರು
ಇ. ನಾಗನಂದಿ : ಶಬ್ದಸಮಯಾರ್ಣವಪಾರಗರಾದ ಇವರು ಕವಿಯ ವಿದ್ಯಾಗುರುಗಳು

ಹೀಗೆ ಮೂರು ಜಿನಮುನಿಗಳ ಮಾರ್ಗದರ್ಶನ ಅಸಗಕವಿಯ ಬದುಕ ಬರೆಹಗಳನ್ನು ತಿದ್ದಿ ನಡಸಿತು. ರತ್ನತ್ರಯರಂತಿರುವ ಈ ತ್ರಿಗುರುಗಳ ಆಶೀರ್ವಾದ ಬಲದಿಂದ ಅಸಗಕವಿ ಒಬ್ಬ ಶ್ರೇಷ್ಠ ಕವಿಯೆನಿಸಿದನು. ಸುಮಾರು ಹತ್ತನೆಯ ಶತಮಾನದಲ್ಲಿ ಇದ್ದಿರಬಹುದಾದ ಪ್ರಾಕೃತ ಕವಿಯಾದ ಧವಳನು ತನ್ನ ಅಪಭ್ರಂಶ ಕಾವ್ಯವಾದ 'ಹರಿವಂಶಪುರಾಣ' ದಲ್ಲಿ ಅಸಗನನ್ನೂ ಸನ್ಮತಿ ಚರಿತ್ರ ಕಾವ್ಯವನ್ನೂ ಉಲ್ಲೇಖಿಸಿದ್ದಾನೆ:

ಅಸಗು ಮಹಾಕಇ ಜೇಂ ಸುಮಣೋಹರು
ವೀರಜಿಣೇಂದ ಚರಿಉ ಕಿಉ ಸುಂದರು ॥

ಕೇತ್ತಿಯ ಕಹಮಿ ಸುಕಇ ಗುಣ ಆಯರ
ಗೇಯ ಕವ್ವಜಹಿಂ ವಿಇಯ ಸುಂದರ ॥

ಅಸಗನು ಸುಂದರ ಆಕರ್ಷಕ ವೀರಜಿಣೇಂದ್ರ ಚರಿತ ಕಾವ್ಯ ಬರೆದ ಮಹಾಕವಿ. ಅವನ ಕಾವ್ಯದಲ್ಲಿ ಚಲುವಿನ ಪದ್ಯಗಳ ನೆಯಿಗೆಯಿದೆ. ಅದರ ಗುಣ ಅವರ್ಣನೀಯ.

ಅಸಗ ಕನ್ನಡದಲ್ಲೂ ಕಾವ್ಯ ರಚಿಸಿದ್ದಾನೆಂಬುದಕ್ಕೆ, ಅದನ್ನು ನಿರ್ವಿವಾದವಾಗಿ ಸ್ಥಾಪಿಸುವುದಕ್ಕೆ ಬೇಕಾದ ಸಾಕ್ಷ್ಯಾಧಾರಗಳು ವಿಪುಲವಾಗಿ ಸಿಗುತ್ತವೆ. ಪಂಪ-ರನ್ನರು ಅಸಗನನ್ನು ಹೆಸರಿಸುವುದಕ್ಕೆ ಹಿಂದೆಗೆದುದು, ಕೈಬಿಟ್ಟುದೇಕೆ ಎಂಬುದು ಯಕ್ಷ ಪ್ರಶ್ನೆ. ಅಂತೂ ಅಸಗನನ್ನು ಹೆಸರಿಸಿದ ಕನ್ನಡದ ಮೊದಲ ಕವಿ ಪೊನ್ನನೇ. ಕನ್ನಡಗವಿತೆಯೊಳ್ + ಅಸಗಂಗಂ + ನೂರ್ಮಡಿ ರೇಖೆಗಗ್ಗಳಂ—ಎಂಬುದಾಗಿ 1–11 ರಲ್ಲಿ ಬೀಗಿನುಡಿದಿದ್ದಾನೆ (12–73ರಲ್ಲೂ ಪರ್ಯಾಯವಾಗಿ ಅಸಗನನ್ನು ಸೂಚಿಸಿದ್ದಾನೆ). ಅದೇನೇ ಇರಲಿ, 'ಕನ್ನಡ ಕವಿತೆಯಲ್ಲಿ ಅಸಗನಿಗಿಂತ' ಎಂದು ಸ್ಪಷ್ಟಪಾಗಿಟ್ಟಿರುವುದು ಮುಖ್ಯವಾಗಿದೆ. ಪೊನ್ನಾನಂತರದ ಕವಿಗಳಲ್ಲಿ ದುರ್ಗಸಿಂಹನು (1031) ಪಂಚತಂತ್ರ ಕಾವ್ಯದಲ್ಲಿ ಕನ್ನಡ ಕವಿಗಳ ಸಾಲಿನಲ್ಲಿರಿಸಿ ಅಸಗನನ್ನು ಮನಸಾರೆ ನೆನೆದಿದ್ದಾನೆ :

ಪೊಸತೆನಿಸಿ ದೇಸೆಯಿಂ ನವ
ರಸಮೆಸೆಯಲ್ಕೊಳ್ಪುವೆತ್ತ ಮಾರ್ಗದಿನಿಳಿಗೇ
ನೆಸೆದುವೊ ಸುಕವಿಗಳೆನೆ ನೆಗ
ೞ್ದಸಗನ ಮನಸಿಜನ ಚಂದ್ರಭಟ್ಟನ ಕೃತಿಗಳ್ ॥ 23

ಮನಸಿಜ ಮತ್ತು ಚಂದ್ರಭಟ್ಟ ಕವಿಗಳಂತೆ ಅಸಗನೂ ದೇಸಿ ಮತ್ತು ಮಾರ್ಗಕಾವ್ಯಗಳ ರಚನೆಯಲ್ಲಿ ಸೇರಿರುವುದು ಅತ್ಯಂತ ಗಮನಾರ್ಹವಾಗಿದೆ. ಅಸಗ ಕವಿರಾಜಮಾರ್ಗ ರಚಿತವಾದ ಕಾಲದವನೆಂಬುದನ್ನು ನೆನಪಿಟ್ಟರೆ ಇದರ ಹಿರಿಮೆ ಮಿಗಿಲೆನಿಸುತ್ತದೆ. ನಾಗವರ್ಮಕವಿ (1042) ವರ್ಧಮಾನಪುರಾಣದಲ್ಲಿ 'ಕನ್ನಡದೊಳ್ ನೆಗೞ್ತೆಯ + ಅಸಗಂ' (1–27) ಎಂದು ಹೆಸರಿಸಿದ್ದಾನೆ. ಅನಂತರದಲ್ಲಿ ಜಯಕೀರ್ತಿ (1050) ತನ್ನ ಛಂದೋನುಶಾಸನದಲ್ಲಿ ಎರಡು ಕಡೆ ಅಸಗ ಮತ್ತು ಅವನ ಕುಮಾರಸಂಭವ ಕಾವ್ಯದ ಬಗೆಗೆ ಹೇಳಿದ್ದಾನೆ :

ಅಸಗಾಖ್ಯ ಕವಿನಾ ಪ್ರತಿಪಾದಿತಂ ನನು
ಕರ್ಣಾಟ ಕುಮಾರಸಂಭವ ಕಾವ್ಯೇ ॥ 7–7

ಛಂದೋವತಂಸನಾಮೇತಿ ಚತುಷ್ಪದಿಕಾ
ಸಂದೃಷ್ಟಾಸೌ ಕುಮಾರಸಂಭವಾದೌ ॥ 7–16

ಜಯಕೀರ್ತಿಯ ಈ ಏಕೈಕ ಹೇಳಿಕೆಯೂ ಸಿಗದಿದ್ದರೆ ಅಸಗನ ಕರ್ಣಾಟ ಕುಮಾರಸಂಭವ ಕಾವ್ಯದ ಹೆಸರೇ ನಮ್ಮವರೆಗೂ ಉಳಿದುಬರುತ್ತಿರಲಿಲ್ಲ. 'ಸಮಾನಾಕ್ಷರ' ಎಂಬ ಹೆಸರಿನ ಕನ್ನಡ ಛಂದಸ್ಸಿಗೆ ಸೇರಿದ ವೃತ್ತ ಲಕ್ಷಣವನ್ನು ಹೇಳುವಾಗ 'ಅಸಗನ ಕವಿಯ ಕರ್ನಾಟ ಕುಮಾರಸಂಭವ ಕಾವ್ಯದಲ್ಲಿ ಅದು ಪ್ರದಿಪಾದಿತವಾಗಿದೆ' ಎನ್ನುತ್ತಾನೆ. ಈ ಕಾವ್ಯ ದೊರೆತಲ್ಲಿ ಅಸಗನ ಕನ್ನಡ ಕಾವ್ಯದ ಸ್ವರೂಪವೇ ಅಲ್ಲದೆ ಒಂಬತ್ತನೆಯ ಶತಮಾನದ ಕನ್ನಡ ಸಾಹಿತ್ಯದ ಸ್ವರೂಪವೂ ಚೆನ್ನಾಗಿ ತಿಳಿದುಬರಲು ಸಾಧ್ಯವಾಗುತ್ತದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮತ್ತೊಂದು ಹೊಸ ಅಧ್ಯಾಯವನ್ನು ಬರೆಯಬೇಕಾಗುತ್ತದೆ. ಬಹುಶಃ ಅದೇ ಕನ್ನಡದಲ್ಲಿ ಮೊಟ್ಟಮೊದಲ ಚಂಪೂಕಾವ್ಯವಾಗಿರಬಹುದು.

ಕನ್ನಡವಲ್ಲಿ ಅಸಗನನ್ನು ಹೆಸರಿಸಿರುವ ಇನ್ನೊಬ್ಬ ಕವಿ ನಯಸೇನ (1112). ತನ್ನ ಧರ್ಮಾಮೃತದಲ್ಲಿ (1–39) ನಯಸೇನನು '**ಅಸಗನ ದೇಸಿ** ಪೊನ್ನನ ಮಹೋನ್ನತಿ ವೆತ್ತಬೆಡಂಗು .. .. ಶೋಭಿಸೆ ನೆಲಸಿರ್ಕೆ ಧಾರಿಣಿ ಮಸಂಗೊಳೆ ಮತ್ಕೃತಿಯೊಳ್ + ನಿರಂತರಂ' ಎಂದು ತಿಳಿಸಿದ್ದಾನೆ. ದುರ್ಗಸಿಂಹನಂತೆ ನಯಸೇನನೂ ಅಸಗನ ದೇಸಿಗೇ ಪಟ್ಟಗಟ್ಟಿದ್ದಾನೆ; ಜಯಕೀರ್ತಿಯೂ ದೇಸೀ ಛಂದಸ್ಸಿಗೆ ಅಸಗನೇ ಲಕ್ಷ್ಯವೆಂದಿದ್ದಾನೆ. ಇದರಿಂದ ಅಸಗನ ಕನ್ನಡ ಕಾವ್ಯದಲ್ಲಿ ದೇಸಿಗುಣ ವಿಶೇಷವಾಗಿ ಪ್ರಕಟವಾಗಿರಬೇಕೆಂದು ಊಹಿಸಬಹುದಾಗಿದೆ. ಪಂಪ ಪೂರ್ವಯುಗದ ಒಬ್ಬ ಮಹತ್ವದ ಕವಿಯಿರಬೇಕೆಂದು ಅಸಗನ ವಿಚಾರವಾಗಿ ಕಲ್ಪಿಸಿಕೊಳ್ಳಲು ಇಂಥ ಸೂಚನೆಗಳು ಕಣ್‌ಸನ್ನೆ ಮಾಡುತ್ತವೆ. ಹಿಂಡನಗಲಿದ ಒಂಟಿ ಸಲಗನಂತಿರುವ ಬ್ರಹಶಿವಕವಿ (ಸು. 1200) ತನ್ನ ಸಮಯಪರೀಕ್ಷೆ ಕಾವ್ಯದಲ್ಲಿ (1–35) 'ರಜಕ' (= ಅಸಗ ~ ಅಗಸ) ಎಂಬ ಸಂಸ್ಕೃತ ಸಮಾನಾರ್ಥಕ ಶಬ್ದದಿಂದ 'ಪೊನ್ನನೆ, ಪಂಪನೆ, ರಜಕನೆ....' ಎಂದು ಅಸಗನನ್ನು ನೆನೆದಿದ್ದಾನೆ. ಆಚಣ್ಣಕವಿ (1190–1220) ವರ್ಧಮಾನಪುರಾಣದಲ್ಲಿ (1–18) ಯೂ, ನಂಜುಂಡಕವಿ (1525) ರಾಮನಾಥ ಚರಿತೆಯಲ್ಲೂ (1–34) ಅಸಗನನ್ನು ಜ್ಞಾಪಿಸಿಕೊಂಡಿದ್ದಾರೆ. ಸೂಕ್ತಿಸುಧಾರ್ಣವದ ಮಲ್ಲಿಕಾರ್ಜುನ ಅಸಗನನ್ನು ಹೆಸರಿಸಿಲ್ಲ. ಅವನ ಮಗ ಶಾಸ್ತ್ರಕಾರ ಕೇಶಿರಾಜ (1260) ಶಬ್ದಮಣಿದರ್ಪಣದಲ್ಲಿ (ಸೂತ್ರ 5) ಅಸಗನನ್ನು ಹೆಸರಿಸಿ ಆವನ 'ಸುಮಾರ್ಗಮಿದಱೊಳೆ ಲಕ್ಷ್ಯಂ' ಎಂದು ನಿವೇದಿಸಿಕೊಂಡಿದ್ದಾನೆ. ಇದರಿಂದಲೂ ಅಸಗ ಕನ್ನಡ ಕವಿಯೆಂದು ನೆಲೆಗೊಳ್ಳುತ್ತದೆ. ಅವನ ದೇಸಿಗುಣ ಚೆಲ್ಲುವ, ಸುಮಾರ್ಗ ತೋರುವ ಪದ್ಯಗಳು ಶಬ್ದಮಣಿದರ್ಪಣದಲ್ಲಿ ಯಾವುವೆಂಬುದು ಪತ್ತೆಯಾಗಿಲ್ಲ. ಕಾವ್ಯಾವಲೋಕನದಲ್ಲಿ 'ಕುಮಾರಸಂಭವ ಕಾವ್ಯ' ದ್ದು ಎಂದು ಹೇಳಬಹುದಾದ ಕೆಲವು ಪದ್ಯಗಳು ಉದಾಹೃತವಾಗಿವೆ. ಅವು ಅಜ್ಞಾತಕರ್ತೃಕವೂ ಹೌದು, ತಾತ್ಕಾಲಿಕವಾಗಿಯಾದರೂ. ಶಿವ–ಪಾರ್ವತಿ ಸಂಬಂಧವಾದ ಪದ್ಯಗಳು ಒಟ್ಟು ಹದಿಮೂರು ಕಾವ್ಯಾವಲೋಕನದಲ್ಲಿವೆ. ಅವು ಕ್ರಮವಾಗಿ ಹೀಗಿವೆ:

ಅಯ್ಯನೆನೆ ಬಳ್ಕ ತಾಮುಂ
ಬೊಯ್ಯನೆ ನುಡಿದೆೞ್ದು ಗಿರಿಜೆ ಪೋಪುದುಮಿತ್ತ್ರೇ
ನಯ್ಯನವಜಲದ ಕಂಠನ
ಜಯ್ಯಾತ್ಮಂ ನೆನೆದನಮಳ ಸುರಮುನಿವರರಂ ॥ —ಕಾವ್ಯಾವ., 19

ಎಱಲದೆನಸುಂ ಕಾಮವ್ಯಾಮೋಹದಿಂದಿರೆ ನೀಳ್ದ ತ
ಣ್ಬುಱಿಲ ತಳದೊಳ್ ರುದ್ರಂ ಕಂಡಲ್ಲಿ ಕಣ್ಬೊಲನಾಗಿ ಕೆ
ಯ್ಗೞಿದ ಮುಳಿಸಿಂ ಪೆರ್ಮಾವಾಗೆಂದು ಶಾಪಮನಿತ್ತ್ರನಂ
ದಱಲೆ ಮನದೊಳ್ ತಾಪಂಬೆತ್ತ್ರಂ ವಿಯೋಗವಿಷಣ್ಣನಂ ॥ 57

ಮೃಡನಾ ಗಂಗಾಬುಧಾರಾ ಜಟಿಲಿತಜಟನಾ ಪಾದಪದ್ಮಕ್ಕೆ ಮುನ್ನಂ
ಪೊಡೆವಟ್ಟಿಂದ್ರಂ ಬಱಿಕ್ಕೀಕೆಗೆ ಪೊಡೆವಡೆ ತನ್ಮೌಲಿರತ್ನಪ್ರತಾನಂ
ಪೊಡರ್ದ್ಯದ್ದ್ಯೋತಿ ತಟ್ಟುತ್ತಡಿದಳಿರ್ಗಳವಿನ್ನೂಡಿದಂತಪ್ಪುವೀಗಳ್
ಮುಡಿದತ್ತಿಂದ್ರಂಗಮುಗ್ರಾಸುರಬಲಪೃಥನೋದ್ಯೋಗಯೋಗಪ್ರಯೋಗಂ ॥ 137

ಅಂತಂತೆನೆ ಪರಿಚಾರಕಿ
ಗಿಂತೆಂದಂ ಬ್ರಹ್ಮಚಾರಿ ಕಳಿಕಳಿ ಸಿತಗಂ
ಗಿಂತು ಕಿಡಿಸುವುದೆ ತಪಮನ
ದೆಂತುಗ ಗಿರಿಸುತೆಯ ಬಯಸಲಾತಂ ದೊರೆಯೇ ॥ 295

ಆಡಿದನಿಂದ್ರನಿಂದ್ರಗಣಿಕಾಗಣಮಟ್ಕಿಱೊಳೊಲ್ದು ಮಂಗಳಂ
ಪಾಡಿದುದಬ್ಜಜಂ ಪರಸಿ ಸೇಸೆಯನಿಕ್ಕಿದನದ್ರಿ ತಾನೆ ಮುಂ
ಡಾಡಿ ವಿಭೂತಿಯಿಂದೊಸಗೆಮಾಡಿದನಂಗಜನಂಗಲಕ್ಷ್ಮಿಯೊಳ್
ಕೂಡಿದನೆಂದೊಡೇವೊಗಟ್ಟುದೋ ಭವಶೈಲಭವಾವಿವಾಹಮುಂ ॥ 387

ಪತ್ರಂ ಭುಜಂಗಸಮಿತಿ ಕ
ಳತ್ರಂ ದಳ್ಪುರಿ ವಿಭೂಷಣಾವಳಿ ಭೂಭೃ
ತ್ಪುತ್ರಿಗವಾಧಿಪನ ಜಿನಂ
ನೇತ್ರಂ ನಿವಸನಮೆನಿಪ್ಪನೊಸೆಗೆಮಗಭವಂ ॥ 458

ಚಾರೂರೂರೂದ್ಧರೂರೂರುರು ಭುಜಶಿಖರೋದ್ಭಾಸಮಾನಾವಲೋಕಂ
ಕ್ರೂರಾರಾರಾತಿರಾ ರಾಚಮಪಡಿನುಡಿಯುತ್ತುಂ ಮುರಧ್ವಂಸಿಯೊಳ್ ಸ
ದ್ಧಾರಾರಾರಾಜಿ ರಾರಾಜಿತಭುಜನೊಳವಷ್ಟಂಭದಿಂ ಚೆಲ್ವು ಕೈಮಿ
ಕ್ಕಾರಾರಾರಾಧ್ಯರಾರಾರವರವರವರ್ಗಂತೊಪ್ಪಿದಂ ನೀಲಕಂಠಂ ॥ 545

ಪಿಂಗಿದುದಿಲ್ಲಿನ್ನುಂ ಮನ
ದಿಂ ಗೋವರ ಗಡಣದೊಳ್ ದನಂಗಾಹಿತನಂ
ನೀಂಗಳದೆತ್ತಱಿವಿರ್ ಬ
ಮ್ಮಂಗಂ ಬಗೆದಱಿವುದರಿದನಂಗಾಹಿತನಂ ॥ 553

ಕಱೆ ಕೊರಲೊಳ್ ಕಣ್ ನೊಸಲೊಳ್
ಪೆಱೆ ಮಕುಟದೊಳಹಿ ವಿಭೂಷಣಾವಳಿ ತೋಳೊಳ್
ನೆಱೆದಿರೆ ಕರಮೆಸೆದಂ ಪಲ
ತೆಱದ ಮರುಳ್ವಡೆಯ ನಡುವುಮಾಪತಿ ರುದ್ರಂ ॥ 611

ಸರಿಗೆಗೆ ಕೊರಲ್ ಕೊರಲ್ಗಂ
ಸರಿಗೆಯಲಂಕರಿಸೆ ಸರಿಗೆವಂದುದು ಮುಯ್ಯು
ಟ್ಟಿರಡಱ ಬೆಡಂಗುಮೆಂಬಂ
ತಿರೆ ಕರಮೊಪ್ಪಿದುದು ಕೊರಲಗೇಂದ್ರಾತ್ಮಜೆಯಾ ॥ 659

ರೂಪರ್ಧನಾರಿಯಾಯ್ತು ವಿ
ರೂಪಾಕ್ಷಂಗೆಂತು ಶಾಂತರೌದ್ರಾತ್ಮಕಮಾ
ರೂಪು ನಿನಗಾದುದಂತೆ ಮ
ಹಾಪುರುಷರ ಚರಿತಮುಪರತಂತ್ರಮಚಿಂತ್ಯಂ ॥ 724

ಪಿಂಗೆ ಪೂಸಿದ ಭಸ್ಮಪರಾಗಂ ಪೊಣ್ಮುವ ಘರ್ಮಜಲಂಗಳಾ
ಪಾಂಗು ಗಂಗೆಯ ಶೀಕರವೆಂಬಂತಾಗಿರೆ ಕಂಡುಮೆ ಶಂಭುವಂ
ಗಂಗೆ ದಲ್ ಬಿಗಿದಪ್ಪಿದಳೆಂದಾ ಶಂಕೆಗೆ ಭೋಂಕನೆ ಮೋದೆ ಮು
ದ್ದಿಂಗೊಱಲ್ದಮರ್ದಪ್ಪಿದನೀಶಂ ನಲ್ಲಳನಲ್ಲೆ ರತಾಂತದೊಳ್ ॥ 804

ಮೃಡನುಡುರಾಜ ಪನ್ನಗವಿರಾಜಿ ಜಟಾಮಕುಟಂ ಕಪರ್ದಿ ನೂ
ರ್ಮಡಿ ಧವಳಂ ಸುರಾಸುರಕದಂಬಕಸೇವ್ಯಪದಾಂಬುಜದ್ವಯಂ
ಅಡರೆ ಮೃಡಾನಿಗನ್ಯಕುಳಶೈಳಕುಳಂಗಳ ನಾಡೆ ರಯ್ಯಮ
ಪ್ಪೆಡೆಗಳನೆಲ್ಲಮಂ ನೆಱೆಯೆ ತೋರ್ಪುದು ಬೇಳ್ಪಿಯೆ ಬಂದನೀಶ್ವರಂ ॥ 936

ಇವುಗಳು ಅಸಗಕವಿಯ 'ಕರ್ಣಾಟ ಕುಮಾರಸಂಭವ' ಕಾವ್ಯದ ಪದ್ಯಗಳೇ ಹೌದೆಂದು ಶಿವನಾಣೆಯಿಟ್ಟು ಹೇಳಲು ಬರುವುದಿಲ್ಲ. ಸಂಶೋಧಕರ ಪರಿಶೀಲನೆಗೆ ಇವನ್ನು ಒಪ್ಪಿಸಿದೆ. ಜೈನಕವಿಗಳು ಶಿವಪಾರ್ವತಿಯರ ಪಾರಮ್ಯ ಸಾರುವ ಅಜೈನ ವಸ್ತುವನ್ನು ಅಳವಡಿಸಿಕೊಂಡಿರಲಾರರು, ಅಸಗನ ಕುಮಾರಸಂಭವ ಕಾವ್ಯದ ವಸ್ತು ಇದಾಗಿರದೆ ಭರತನ ಜನನ ಸಾರುವ ಕಾವ್ಯವೇ ಅದಾಗಿರಬೇಕು—ಎಂಬ ಊಹೆಗಳು ಸೂರೆಯಾಗಿವೆ. ಒಂದುವೇಳೆ ಅಸಗನ ಕುಮಾರಸಂಭವ ಅನುವಾದ ಕಾವ್ಯವಾಗಿದ್ದರೆ, ಅದಕ್ಕೇ ಕರ್ಣಾಟ ಎಂಬ ಆದಿಯ ವಿಶೇಷಣವಿದೆ, ಮೇಲಿನ ಊಹೆ ಟುಸ್ಸೆಂದು ಎಗರಿ ಹೋಗುತ್ತದೆ. ಕಾವ್ಯದ ಪರೋಕ್ಷದಲ್ಲಿ ಹೆಚ್ಚಿಗೆ ಹೇಳುವುದು ಅಪಾಯಕಾರಿ. ಅದರಿಂದ ಇಷ್ಟು ಸಾಕು.

ಅಸಗನ ವರ್ಧಮಾನ ಚರಿತ್ರದ ಹಸ್ತಪ್ರತಿಗಳು ಆರಾ, ಕಾರಂಜ, ವರಾಂಗ, ಹುಂಚ, ಇಟಾರ, ಮುಂಬಯಿ, ಮೈಸೂರು, ಪುಣೆ, ಸ್ವಾದಿ, ಮೂಡಬಿದ್ರಿ, ಮದರಾಸು, ಹಲಗಿ ಮೊದಲಾದ ಕಡೆ ದೊರೆತಿವೆ; ಶಾಂತಿಪುರಾಣದ ಪ್ರತಿಗಳು ಪುಣೆ, ಲಿಂಬಡಿ, ಅಜ್ಮೀರ್, ಮುಂಬಯಿ ಮುಂತಾದೆಡೆಗಳಲ್ಲಿ ಸಿಕ್ಕಿವೆ (ಅಲ್ಲದೆ ಇಂಗ್ಲೆಂಡಿನ ಬೊಡ್ಲಿಯನ್ ಗ್ರಂಥಭಂಡಾರದಲ್ಲೂ ಇದರ ಪ್ರತಿಯಿದೆ). ಇದರಿಂದ ಅಸಗನ ಕೃತಿಗಳ ವ್ಯಾಪಕ ಪ್ರಸಾರವನ್ನು ತಿಳಿಯಬಹುದು. ಸಂಸ್ಕೃತ ವ್ಯಾಖ್ಯಾನಗಳು ದೊರೆತಿಲ್ಲ. ಶಾಂತಿಪುರಾಣಕ್ಕೆ ಕನ್ನಡ ವ್ಯಾಖ್ಯಾನವಿದೆಯೆಂದು ತಿಳಿದುಬಂದಿದೆ; ಬೆಳುಗುಳ ವಾಸಿಷ್ಠಗೋತ್ರದ ವಿಜೆ (ಯ) ರಾಜ, 1480. ಹಿಂದಿ ಮತ್ತು ಮರಾಠಿ ಗದ್ಯಾನುವಾದಗಳಿವೆ. ವರ್ಧಮಾನ ಚರಿತೆ ಮತ್ತು ಶಾಂತಿಪುರಾಣದ ಮುದ್ರಿತ ಪ್ರತಿಗಳು ಸಿಗುತ್ತವೆ (ನೋಡಿ: ಆಧಾರಗ್ರಂಥ ಸೂಚಿ). ಕನ್ನಡದಲ್ಲಿ ಅಸಗ ಎಷ್ಟು ದೊಡ್ಡ ಕವಿ ಎಂಬುದನ್ನು ವಿಮರ್ಶಿಸಿ ಗುರುತಿಸಲು ಸಾಧ್ಯವಾಗದೇ ಹೋದರೂ, ಪ್ರಕಟಿತ ಸಂಸ್ಕೃತ ಕಾವ್ಯಗಳಿಂದ ಆತ ಉತ್ತಮ ಮೇಲ್ಮಟ್ಟದ ಕವಿಯೆಂದು ಧಾರಾಳವಾಗಿ ಹೇಳಬಹುದು.

ಪೊನ್ನನ ಶಾಂತಿಪುರಾಣಕ್ಕೆ ಅಸಗನ ಸಂಸ್ಕೃತ ಶಾಂತಿಪುರಾಣವೇ ಮೂಲಾಧಾರ. ಕನ್ನಡ ಶಾಂತಿಪುರಾಣ ಅಸಗೋಚ್ಛಿಷ್ಟ. ಸಂಸ್ಕೃತದಿಂದ ಕನ್ನಡಕ್ಕಿಳಿಸುವ ಅನುವಾದಕನ ಕೆಲಸ ಮಾತ್ರ ಪೊನ್ನನದು. ಹಾಗೆಂದು ಅವನು ಎಲ್ಲ ವಿಧದಲ್ಲೂ ಮೂಲಕ್ಕೇ ಮುಗಿಬಿದ್ದಿಲ್ಲ. ಕುರುಡಾಗಿ ಹಿಂಬಾಲಿಸಿಲ್ಲ. ಮಕ್ಕೀಕಾಮಕ್ಕಿ ಭಾಷಾಂತರಿಸದೆ, ಭಾವವನ್ನು ಕೆಡಿಸದೆ ಭಾವಾನುವಾದ ಮಾಡಿದ್ದಾನೆ. ತನ್ನ ಕಾವ್ಯಶಕ್ತಿಯನ್ನು ಮಾರಿಕೊಂಡಿಲ್ಲ. ಉದ್ದಕ್ಕೂ ಅಸಗನಿಗೆ ಅಧೀನನಾಗಿ ಅಡಿಯಾಳಾಗಿ ಹೆಜ್ಜೆಯ ಮೇಲೆಯೇ, ಹೆಜ್ಜೆ ಹಾಕಿಲ್ಲ. ಅಲ್ಲಲ್ಲಿ ಬುದ್ಧಿ, ಮನಸ್ಸು, ಕಲ್ಪನೆ, ಪ್ರತಿಭೆ, ಸ್ಫೂರ್ತಿ ಕೆಲಸಮಾಡಿವೆ. ಕಾವ್ಯದಲ್ಲಿ ಹತ್ತನೆಯ ಆಶ್ವಾಸದವರೆಗೂ ಅಸಗನ ಶ್ವಾಸವೇ ಉಸಿರಾಡುತ್ತದೆ. ಹೀಗಾಗಿ ಪೊನ್ನನ ಶಾಂತಿಪುರಾಣಕ್ಕೆ ಇರಬಹುದಾದ ಹಿರಿಮೆಯ ಮುಕ್ಕಾಲು ಮೂರು ವೀಸ ಪಾಲು ಮೂಲದ ಅಸಗನಿಗೇ ಸಲ್ಲುತ್ತದೆ. ಆದರೆ ಅದನ್ನು ಕಲಾತ್ಮಕವಾಗಿ ಮರುಹುಟ್ಟು ಪಡೆದಂತೆ ಕನ್ನಡಕ್ಕಿಳಿಸಿದ, ಅಲ್ಲಲ್ಲಿ ಓರೆಕೋರೆಗಳನ್ನು ತಿದ್ದಿ ಸವರಿ ನಯನುಣುಪು ನಾಜೂಕುಗಳನ್ನು ಸೇರಿಸಿದ ಕರ್ತವ್ಯಪ್ರಜ್ಞೆ, ಕಾವ್ಯನಿಷ್ಠೆ ಪೊನ್ನನಿಗೆ ಸೇರುತ್ತದೆ. ತನಗೆ ಸರಿಕಾಣಿಸಿದ್ದನ್ನು ಸ್ವೀಕರಿಸಿದ್ದಾನೆ. ತನ್ನ ಕವಿಪ್ರತಿಭೆಗೆ ಒಪ್ಪದ್ದನ್ನು ನಿರಾಕರಿಸಿದ್ದಾನೆ. ಅಗತ್ಯವೆನಿಸಿದೆಡೆಗಳಲ್ಲಿ ಸ್ವತಂತ್ರನಾಗಿ ಸ್ವೇಚ್ಛೆಯಿಂದ ಉಡ್ಡೀನ ಮಾಡಿದ್ದಾನೆ. ಹೀಗೆ ಎಲ್ಲೆಲ್ಲಿ ಪೊನ್ನ ಸ್ವಾತಂತ್ರ್ಯ ವಹಿಸಿದ್ದಾನೆಂಬುದನ್ನು ಗುರುತಿಸಿ, ಅಂಥ ಕಡೆಗಳಲ್ಲಿ ಕಾವ್ಯದ ಕಾಂತಿಯೂ ಕಂಡರೆ, ಅದೇ ನಿಜಕ್ಕೂ ಪೊನ್ನನಿಗೆ ಸಂದ ಕಾವ್ಯಗೌರವ.

ಅಸಗ ಸೂರ್ಯನಾದರೆ ಪೊನ್ನ ಚಂದ್ರನಾಗಿ ಪಡಿನೆಳಲನ್ನು ಪೊಳೆಯಿಸಿದ್ದಾನೆ. ಉದಾಹರಣೆಗೆ ಚಕ್ರರತ್ನ ಉದ್ಭವಿಸಿದ ಪ್ರಸಂಗವೊಂದರಲ್ಲಿ ಪೊನ್ನತನವನ್ನು ಚೆನ್ನಾಗಿ ಕಾಣಬಹುದು. 10–117 ರಿಂದ 121 ರ ವರೆಗಿನ ಭಾಗವೂ ಪೊನ್ನನಿಗೇ ಹೆಚ್ಚು ಅಂಕ ಕೊಡುತ್ತದೆ. ಕಡೆಯ ಎರಡೂವರೆ ಆಶ್ವಾಸಗಳನ್ನು ಪೊನ್ನ ಅಸಗನಿಂದ ಆರಿಸಿಕೊಂಡಿಲ್ಲ. ಕನ್ನಡ ಆದಿಪುರಾಣ ಮತ್ತು ಉತ್ತರ ಪುರಾಣದಲ್ಲಿನ ಶಾಂತಿಪುರಾಣ ಭಾಗಗಳಿಂದ ತನಗೆ ಸೂಕ್ತವೆನಿಸಿದಂತೆ ಅಳವಡಿಸಿಕೊಂಡಿದ್ದಾನೆ. ಪೊನ್ನ ಕೇವಲ ಗುಹಾಧ್ವನಿಯಲ್ಲ. ವರ್ಣನೆಗಳಲ್ಲಿ ಪೊನ್ನನ ಸ್ವೋಪಜ್ಞತೆಯಿದೆ. ಅಸಗನ

ಸಂಸ್ಕೃತ ಶ್ಲೋಕಗಳ ಕನ್ನಡಾನುವಾದವನ್ನು ಪದ್ಯಗಳಲ್ಲೇ ಮಾಡುತ್ತಾನೆಂದೇನೂ ಅಲ್ಲ. ಹಲವು ಕಡೆ ಗದ್ಯದಲ್ಲೂ ಮೂಲವನ್ನು ಸಂಗ್ರಹಿಸಿ ಮುಂದೆ ಸಾಗುತ್ತಾನೆ.

ಪೊನ್ನನ ಶಾಂತಿಪುರಾಣದ ಮೇಲೆ ಅಸಗನ ಪೂರ್ಣ ಪ್ರಭಾವದ ವ್ಯಾಪ್ತಿಯನ್ನು ಕುರಿತು ಮೊದಲು ಪ್ರಸ್ತಾಪಿಸಿದವರು ಡಾ॥ ಆ. ನೇ. ಉಪಾಧ್ಯೆ 1932 ರಲ್ಲಿ. ಅನಂತರ ಈ ಭಾವನೆಯನ್ನು ಇನ್ನೂ ಪ್ರಬಲವಾಗಿ ಸೋದಾಹರಣವಾಗಿ ಭಾವನೆ, ವರ್ಣನೆ, ಕಲ್ಪನೆ, ಅಭಿವ್ಯಕ್ತಿಗಳಲ್ಲಿ ಅಸಗನಿಗೆ ಪೊನ್ನ ಋಣಿಯಾಗಿರುವುದನ್ನು ಪ್ರತಿಪಾದಿಸಿ ಸ್ಥಾಪಿಸಿದವರು ಎ. ಪಿ. ಚೌಗುಲೆ 1952 ರಲ್ಲಿ. ಅನಂತರದವರು ಇದನ್ನು ಹೆಚ್ಚು ಉದಾಹರಣೆ ಪದ್ಯಗಳೊಡನೆ ವಿಸ್ತರಿಸಿದ್ದಾರೆ, ಪುಷ್ಟೀಕರಿಸಿದ್ದಾರೆ. ಅದರಿಂದ ನಾನು ಕೇವಲ ಕೆಲವೇ ಕೆಲವು **ಸಮನಾರ್ಥಕ ಪದ್ಯಗಳನ್ನು** ಇಲ್ಲಿ ಉದಾಹರಿಸಿ ಕೊಡುತ್ತೇನೆ :

ಅಸಗನ ಶಾಂತಿಪುರಾಣ	ಪೊನ್ನನ ಶಾಂತಿಪುರಾಣ
ಸತ್ಯತ್ಯಾಗ ಧಿಮಾನಾನಾಂ ಪರಾಂ ಕೋಟಿಮಧಿಷ್ಠಿತಃ ಯಸ್ಸದಾಧಾರಭೂತೋऽಪಿ ಚಿತ್ರಮೇತದ್ವಿಚೇಷ್ಟಿತಮ್ ॥ 1–32	ಮದ ವಿರಹಿತನೆನಿಸಿಯುಮಮಿ 1–70
ಪ್ರಸನ್ನ ದುರ್ನಿರೀಕ್ಷಾಭ್ಯಾಂ ತಾಭ್ಯಾಂ ರೇಜೇಸೆ ಭೂಪತಿಃ ಪೂರ್ಣೇಂದು ಭಾಸ್ಕರೋಪೇತಃ ಪೂರ್ವಾಚಲ ಇವಾಪರಃ॥ 1–64	ಬಲದೇವ ವಾಸುದೇವರೊ 1–80
ಕುಂದಗೌರಃ ಪ್ರಸನ್ನಾತ್ಮಾ ವಿತನ್ವನ್ ಕುಮುದಾಯತಿಂ ಜಾತಮಾತ್ರೋऽಪಿ ಯಚ್ಚಿತ್ರಂ ಪ್ರವೃದ್ಧೇಂದುರಿವಾಭವತ್॥ 1-45	ಕುಂದದಳಚ್ಛವಿ ಮಮುದಾ 2–2
ಸಹಜೈವ ದಯಾಯಸ್ಯ ನೀತಿಮಾರ್ಗವಿದೋऽಪ್ಯಭೂತ್ ಸ್ವಭ್ಯಸ್ತೇನಾऽಪಿ ಶಾಸ್ತ್ರೇಣ ನ ಸ್ವಭಾವೋಪನೀಯತೇ ॥ 1–48	ಆದರದಿನರ್ಥಶಾಸ್ತ್ರಮ 2–7
ಲಕ್ಷ್ಮೀಕರೇಣು ಕಾಲಾನಸ್ತಂಭೋ ಯಸ್ಯ ನ ದಕ್ಷಿಣಃ ಭುಜೋऽರಾಜತ್ 1–53	ಶುಂಭ ದ್ವಿಪುಲಾಲಾನ ಸ್ತಂಭಂ ಲಕ್ಷ್ಮೀ ಕರೇಣುಗೆನಿಸುದುದು ಭುಜ ಸ್ತಂಭಂ 2–8
ಅನೇಕಪಪತಿರ್ಭೂತ್ವಾ ಮದಲೀಲಾ ವಿವರ್ಜಿತಃ ರರಾಜ ರಾಜಸಿಂಹೋಯಃ ಕ್ಷಾಂತ್ಯಾಲಂಕೃತವಿಕ್ರಮಃ॥ 1-54	ಗಜಘಟೆಗೆ ನಾಥನಾಗಿಯು 2–9
ಅನಂತವೀರ್ಯೋ ನಾಮ್ನೈವ ನಾ ಭೂದ್ ಭೂರಿ ಪರಾಕ್ರಮಃ ಯಃ ಸಮುನ್ಮೀಲಿತಾ ಶೇಷಭೂಭೃದ್ವಂಶೇನ ಚೌಜಸಾ॥ 1–56	ಅನುಜಂ ನಾಮಾಕ್ಷರದಿಂ 2–11
ಪಾಲಯಿಷ್ಯತಿ ಮೇ ಬಾಹುರ್ದಕ್ಷಿಣಃ ಸಕಲಾಂ ಧರಾಮ್ ಇತ್ಯಮನ್ಯತ ಯಃ ಸೈನ್ಯಂ ಪೃಥುಕೋऽಪಿ ವಿಭೂತಯೇ॥	ಧರಣಿಯನವಯವದಿಂದಮ 2–13
ಶರನ್ನಭಸ್ತಂ ಶ್ಯಾಮೋ ಯಃ ಪ್ರಾಂಶುಃ ಶುಶುಭೇ ಪರಂ ಇಂದ್ರನೀಲಮಯೋ ಲಕ್ಷ್ಮ್ಯಾಃ ಪ್ರಾಸಾದ ಇವ ಜಂಗಮಃ॥ 1-63	ಭೃಂಗ ಯಮುನಾಸಭಃಶ್ಯಾ 2–14

ಇದೇ ರೀತಿ ಪೊನ್ನ ಒಬ್ಬ ಉತ್ತಮ ಆದರ್ಶ ಭಾಷಾಂತರಕಾರನೆಂಬುದನ್ನು ಕಾಳಿದಾಸ ಮಹಾಕವಿಯ ರಘುವಂಶದ ಕೆಲವು ಪದ್ಯಗಳನ್ನು ಯಶಸ್ವಿಯಾಗಿ ಕನ್ನಡಿಸಿರುವ ಕಲೆಗಾರಿಕೆಯಲ್ಲಿ ಕಂಡುಕೊಳ್ಳಬಹುದು. ಪೊನ್ನನ ಶಾಂತಿಪುರಾಣದ

ಘನ ಸಮಯದೊಳಿರ್ದು ಶಿಲಾ
ಸನದೊಳ್ ಶೈಳೇಯ ಸುರಭಿತಳದೊಳ್ ಗೋವ
ರ್ಧನ ಕಂದರದೊಳ್ ಶಿಖಿ ನ
ರ್ತನಂಗಳಂ ನೋಡು ಮದನಗಜಗಮನೇ ॥ 5–131

ಎಂಬ ಪದ್ಯವನ್ನು ಅದು ರಘುವಂಶದ 6–51 ರ ಅನುವಾದವೆಂದು ಮೊತ್ತಮೊದಲು ಸಂಶೋಧಿಸಿ ತಿಳಿಸಿದವರು ರಾ. ನರಸಿಂಹಾಚಾರ್ 1902ರಲ್ಲಿ (ಕಾವ್ಯಾವಲೋಕನಕ್ಕೆ ಅವರು ಬರೆದಿರುವ ಇಂಗ್ಲಿಷ್ ಪೀಠಿಕೆ ನೋಡಿ). ಇದರ ಜಾಡು ಹಿಡಿದು ಹೊರಟ ಡಿ.ಎಲ್.ಎನ್. ರವರು 1930ರಲ್ಲಿ ದೀರ್ಘಲೇಖನ ಬರೆದರು. ಅದನ್ನು ಮತ್ತೆ ಇಲ್ಲಿ ಚರ್ವಿತ ಚರ್ವಣಗೊಳಿಸಲು ನನಗೆ ಆಸೆಯಿಲ್ಲ. 5–114ರಲ್ಲಿ ಪೊನ್ನ 'ವೀರಭೋಜ್ಯ' ಎಂಬ ಒಂದೇ ಒಂದು ಹೊಸ ಮಾತು ಹಾಕಿ, ಮೂಲಾರ್ಥದ ಸೊಗಸನ್ನು ಆಸ್ವಾದಿಸಿ ಕನ್ನಡಕ್ಕಿಳಿಸುವಾಗ ತೋರುವ ಸ್ವಂತಿಕೆಗೊಂದು ನಿದರ್ಶನವಾಗಿದೆ. ಭಾಷಾಂತರ ಸಾರ್ಥಕತೆಗೆ ಮತ್ತೆ ಕೆಲವು ಉದಾಹರಣೆಗಳನ್ನು ಕೊಟ್ಟು ಹೇಳಬಹುದು. ಸಾರವತ್ತಾಗಿ ಹೇಳುವುದಾದರೆ, ಪೊನ್ನನ "ಗಂಭೀರ ಧೀರೋದಾರ ಸಾರೋಕ್ತಿಗಳು" ಕಾಳಿದಾಸನ ಅನುವಾದವೆಂದು ಗೊತ್ತಾಗುವುದು ಪರಸ್ಪರ ಅಕ್ಕಪಕ್ಕದಲ್ಲಿಟ್ಟು ನೋಡಿದಾಗಲೇ. ಅಷ್ಟುಮಟ್ಟಿಗೆ ಇದು ಕನ್ನಡದ ಬೆಳಸು ಎಂಬಂತೆ ಪೊನ್ನ ಕಾಳಿದಾಸನ ಕೆಲವು ಪದ್ಯಗಳನ್ನು ಕನ್ನಡಕ್ಕೆ ಅಚ್ಚುಕಟ್ಟಾಗಿ ಪರಿವರ್ತಿಸಿದ್ದಾನೆ.

ಪೊನ್ನ ಮತ್ತು ಕಮಲಭವ

ಕಮಲಭವಕವಿ (1235) ತನ್ನ ಶಾಂತೀಶ್ವರಪುರಾಣವೆಂಬ ಇದೇ ವಸ್ತುವನ್ನಾಧರಿಸಿ ಬರೆದ ಚಂಪೂಕಾವ್ಯದಲ್ಲಿ ತನಗಿಂತ ಹಿರಿಯ ಹಾಗೂ ಹಳೆಯ ಕಬ್ಬಿಗನಾದ ಪೊನ್ನನನ್ನು ಅನುಸರಿಸಿರಬೇಕೆಂದೂ, ಪೊನ್ನನಿಂದ ಆತ ಸಾಕಷ್ಟು ಪ್ರಭಾವಿತನಾಗಿರಬೇಕೆಂದೂ ವಿಮರ್ಶಕರು ನಿರೀಕ್ಷಿಸುವುದು ಸಹಜ. ಇಬ್ಬರೂ ಜೈನಕವಿಗಳು. ಪೊನ್ನನ ಕಾವ್ಯ ಶಾಂತಿಪುರಾಣ, ಕಮಲಭವನ ಕಾವ್ಯ ಶಾಂತೀಶ್ವರಪುರಾಣ; ಎರಡೂ ಚಂಪೂಕಾವ್ಯಗಳು. 16ನೆಯ ತೀರ್ಥಂಕರನಾದ ಶಾಂತಿಪುರಾಣದ ಬದುಕು ಕುರಿತ ವಸ್ತು ಮತ್ತು ಕಾವ್ಯರಚನೆಯ ಸ್ವರೂಪ ಸಮಾನ. ಅದರಿಂದ ಪೊನ್ನನ ಪಡಿನೆರಳನ್ನು ಕಮಲಭವನಲ್ಲಿ ಕಾಣಲೆಳಸುವುದುಂಟು. ಮೇಲುಮೇಲಿನ ತೇಲುನೋಟಕ್ಕೆ ಪೊನ್ನನ ನೆರಳು, ಹೆಜ್ಜೆಗುರುತು ಇರುವಂತೆ ಕಂಡರೂ ಸೂಕ್ಷ್ಮ ಹಾಗೂ ತೌಲನಿಕ ವ್ಯಾಸಂಗದಿಂದ ಹೊರಬರುವ ಸಂಗತಿಯೇ ಬೇರೆ. ಸಮಾನ ವಸ್ತು ಹೊತ್ತ ಪೊನ್ನನ ಉತ್ತಮ ಕಾವ್ಯ ತನ್ನ ಕಣ್ಣೆದುರಿದ್ದರೂ ವಸ್ತು ನಿರ್ವಹಣೆಯಲ್ಲಿ ಕಮಲಭವ ಪೊನ್ನನ ನಿಜಪ್ರತಿಯಾಗದ ಒಂದು ಸ್ವತಂತ್ರ ಮಾರ್ಗ ಅನುಸರಿಸಿದ್ದಾನೆ.

ಪೊನ್ನನಿಗೂ (965) ಕಮಲಭವನಿಗೂ (1235) ಸುಮಾರು ಮುನ್ನೂರು ವರ್ಷಗಳ ಅಂತರವಿದೆ. (ಈ ಅವಧಿಯ ನಡುವೆ ಪೊನ್ನನ ಶಾಂತಿಪುರಾಣ ಒಂದು ಸಾವಿರ ಪ್ರತಿಗಳನ್ನು ಅತ್ತಿಮಬ್ಬೆ ಬರಸಿದ ಪ್ರಯತ್ನವೂ ನಡೆಯಿತು.) ಇಬ್ಬರೂ ಸಮಾನ ವಸ್ತುವನ್ನಾರಿಸಿಕೊಂಡಿದ್ದರೂ ಹೇಗೆ ಸಮಾನಾಂತರಗತಿಯಲ್ಲಿ ಹತ್ತಿರವಾಗೇ ಸಾಗುತ್ತಾರೆಂಬುದನು ಮುಂದೆ ವಿವರಿಸಲಾಗುವುದು. ಪೊನ್ನನ ಕಾವ್ಯವನ್ನು ಈ ಕವಿ ಓದಿದ್ದಾನೆ, ಅಲ್ಲಲ್ಲಿ ಪ್ರಭಾವಿತನೂ ಆಗಿದ್ದಾನೆ— ಎಂಬುದನ್ನು ಅಲ್ಲಗಳೆಯುತ್ತಿಲ್ಲ. ವ್ಯತ್ಯಾಸಗಳೂ ಹೇಗೆ ಉಳಿದುಬಂದಿವೆ ಎಂಬುದನ್ನು ಪೊನ್ನನ ಕಾವ್ಯವನ್ನೊಮ್ಮೆ ಕಮಲಭವನ ಕಾವ್ಯವನ್ನೊಮ್ಮೆ ಪ್ರತ್ಯೇಕವಾಗಿ ಓದಿ, ಅನಂತರ ಒಟ್ಟಿಗೆ ಜತೆಯಲ್ಲಿಟ್ಟು ಎಚ್ಚರಿಕೆಯಿಂದ ಪರಿಶೀಲಿಸಿದರೆ ಇದು ಮನದಟ್ಟಾಗುತ್ತದೆ.

ಪೊನ್ನ ಶಾಂತಿತೀರ್ಥಂಕರನ ಆರನೆಯ ಭವವಾದ ಅಪರಾಜಿತ ಭವದಿಂದ ತನ್ನ ಕಾವ್ಯ ಪ್ರಾರಂಭಿಸಿದ್ದಾನೆ. ಕಮಲಭವನ ಕಾವ್ಯದಲ್ಲಿ ಅಪರಾಜಿತನ ವರ್ಣನೆ ಬರುವುದು ಏಳನೆಯ ಆಶ್ವಾಸದಲ್ಲಿ, ಅಲ್ಲಿಗೆ ಸುಮಾರು ಅರ್ಧ ಕಾವ್ಯವೇ ಅವನಲ್ಲಿ ಮುಗಿದಿರುತ್ತದೆ. ಕಮಲಭವಕವಿಯ ಕಾವ್ಯ ಆರಂಭವಾಗುವುದು ಜ್ವಲನಜಟ ಮಹಾರಾಜನ ರಾಜ್ಯಲಕ್ಷ್ಮೀ ವಿಲಾಸ ವರ್ಣನೆಯಿಂದ (ಆಶ್ವಾಸ 1). ಸ್ವಯಂಪ್ರಭಾದೇವಿ—ತ್ರಿಪಿಷ್ಟ ಯುವರಾಜ ವಿವಾಹ ಕಲ್ಯಾಣ ವರ್ಣನೆ ಎರಡನೆಯ ಆಶ್ವಾಸದಲ್ಲಿದೆ. ಮುಂದಿನ ಮೂರನೆಯ ಆಶ್ವಾಸದಲ್ಲಿ ತ್ರಿಪಿಷ್ಟ ಯುವರಾಜ ವಿವಾಹ, ಸಿಂಹವಿಜಯ ವರ್ಣನೆ, ಬಲಭದ್ರ ಅಶ್ವಗ್ರೀವ ವಿಧ್ವಂಸನ, ಕಾಲಚಕ್ರ ಲಬ್ಧ ವರ್ಣನೆಗಳು, ನಾಲ್ಕನೆಯ ಆಶ್ವಾಸದಲ್ಲಿ ಅಮಿತತೇಜ ಕುಮಾರೋದಯ ವರ್ಣನೆ ಬರುತ್ತವೆ. ಪೊನ್ನನಲ್ಲಾದರೋ ಈ ತ್ರಿಪೃಷ್ಠ, ಜ್ವಲನಜಟ, ಸ್ವಯಂಪ್ರಭಾದೇವಿ—ಇವರೆಲ್ಲರ ಕಥೆ ಬರುವುದು ಅಯ್ದನೆಯ ಆಶ್ವಾಸದಲ್ಲಿ, ಕಾವ್ಯದ ಮೂರನೆಯ ಒಂದು ಭಾಗ ಪೂರ್ತಿ ಮುಗಿದಮೇಲೆ.

ಕಮಲಭವನ ಕಾವ್ಯದಲ್ಲಿ ತೀರ್ಥಂಕರ ಜೀವದ ಒಂದೊಂದು ಭವದ ವರ್ಣನೆ ಕಾಲಾನುಕ್ರಮ ಗತಿಯಲ್ಲಿ ಮೆಟ್ಟಿಲೇರಿ ದಂತೆ ಸಾಗಿದೆ. ಚಾವುಂಡರಾಯಪುರಾಣದಲ್ಲೂ ಹೀಗಿಯೇ ಇದೆ. ಪೊನ್ನಕವಿಯ ಕಾವ್ಯ ಮಾತ್ರ ಅಪರಾಜಿತ–ಅನಂತವೀರ್ಯ ಭವದಿಂದ, ಅಂದರೆ ಶಾಂತಿತೀರ್ಥಂಕರ ಜೀವದ ತೃತೀಯ ಭವದಿಂದ ಅನಾವರಣವಾಗುತ್ತದೆ. ಪೊನ್ನ ಹೀಗೇಕೆ ಮಾಡಿದನೆಂಬುದನ್ನು ಸ್ವಲ್ಪ ಗಂಭೀರವಾಗಿ ಕಾವ್ಯವಿಮರ್ಶಕರು ಚಿಂತಿಸಬೇಕು, ಆಗ ಸ್ಫೋಟವಾಗುತ್ತದೆ ಈ ವ್ಯತ್ಯಾಸಕ್ಕಿದ್ದ ಕಾರಣ. ಶಾಂತಿತೀರ್ಥಂಕರನ ಭವಾವಳಿ ಶ್ರೇಣಿಯಲ್ಲಿ ಅಪರಾಜಿತ ಭವವೇ ರಸದ ಮಡು, ತುಂಬ ಸ್ವಾರಸ್ಯವಾದ ಭಾಗ. ಇದು ರಾಮಾಯಣದಲ್ಲಿ ಸುಂದರಕಾಂಡವೂ, ಮಹಾಭಾರತದಲ್ಲಿ ಉದ್ಯೋಗಪರ್ವವೂ ಇದ್ದಂತೆ. ಇಲ್ಲಿನ ವಿವರಣೆ ಹೃದಯಂಗಮವಾಗಿ ಬರಲು ಕಾರಣ ದಮಿತಾರಿ–ಕನಕಶ್ರೀಯ ಮಾನವೀಯ ಗುಣ, ಉನ್ನತ ಮೌಲ್ಯಗಳ ಅಭಿವ್ಯಕ್ತಿ. ಮನುಷ್ಯ ಸ್ವಭಾವದ ಸಹಜತೆಯಲ್ಲಿ ಅದ್ದಿ ತೆಗೆದ ಈ ಸಂನಿವೇಶದ ಜೀವನಾಡಿಯನ್ನು ಹಿಡಿದ ಪೊನ್ನಕವಿ ತನ್ನ ಕಾವ್ಯವನ್ನು ಈ ಮೂರನೆಯ ಜನ್ಮಾಂತರದಿಂದಲೇ ಉದ್ಘಾಟಿಸುವುದರಲ್ಲಿ, ಅಸಗನನ್ನೇ ಒಪ್ಪಿಕೊಳ್ಳುವುದರಲ್ಲಿ ಔಚಿತ್ಯ ಪ್ರಜ್ಞೆ ತೋರಿದ್ದಾನೆ. ಸವೆದ ಜಾಡನ್ನು ಹಿಡಿಯದೆ ಪೊನ್ನ ಸ್ವತಂತ್ರ ಕಾವ್ಯಪಥ ಅನುಸರಿಸಿದ್ದಾನೆ.

ಪೊನ್ನಕವಿಗೂ ಕಮಲಭವಕವಿಗೂ ಸಾದೃಶ್ಯಗಳಿರುವಂತೆ ವೈದೃಶ್ಯಗಳೂ ಇವೆ. ಇಬ್ಬರ ಕಾವ್ಯವಸ್ತು ಸಮಾನ ವಾದರೂ ಕಾವ್ಯನಿರ್ವಹಣೆ ಮತ್ತು ಧೋರಣೆಗಳಲ್ಲಿ ವ್ಯತ್ಯಾಸಗಳಿವೆ. ಇವರಿಬ್ಬರ ದೃಷ್ಟಿಯಲ್ಲಿರುವ ಭಿನ್ನತೆ ಕಾವ್ಯಾರಂಭ ದಿಂದಲೇ ಗೊತ್ತಾಗುತ್ತದೆ. ಪೊನ್ನನ ಕಾವ್ಯ ಹತ್ತನೆಯ ಶತಮಾನದ್ದು, ಹನ್ನೆರಡು ಆಶ್ವಾಸಗಳ ಕಾವ್ಯ. ಕಮಲಭವ ಹದಿಮೂರನೆಯ ಶತಮಾನದವನು, ಅವನ ಕಾವ್ಯದಲ್ಲಿ ಹದಿನಾರು ಆಶ್ವಾಸಗಳಿವೆ. 16ನೆಯ ತೀರ್ಥಂಕರನಾದ ಶಾಂತಿನಾಥನನ್ನು ಕುರಿತು ಸರಿಯಾಗಿ 16 ಆಶ್ವಾಸಗಳ ಕಾವ್ಯವನ್ನು ಕಮಲಭವಕವಿ ರಚಿಸಿದ್ದಾನೆನ್ನಬಹುದು. ಶಾಂತಿ ತೀರ್ಥಂಕರನಿಗೆ ಇರುವ ಭವಗಳು ಒಟ್ಟು ಹನ್ನೆರಡು, ಆದರಿಂದಲೇ ಏನೊ ಪೊನ್ನಕವಿ ಸರಿಯಾಗಿ 12 ಆಶ್ವಾಸಗಳ ಕಾವ್ಯ ಬರೆದಿದ್ದಾನೆ. ಇದು ಕೇವಲ ಆಕಸ್ಮಿಕವೊ ಅಥವಾ ಕವಿಗಳು ಉದ್ದೇಶಪೂರ್ವಕವಾಗಿ ಮಾಡಿದ ಲೆಕ್ಕಾಚಾರವ ಏರ್ಪಾಟೊ ತಿಳಿಯದು.

ಶಾಂತಿನಾಥನ ಭವಗಳು

1.	ಶ್ರೀಷೇಣ	ಸಿಂಹನಿಂದೆ
2.	ಭೋಗಭೂಮಿಜ	ಆರ್ಯೆ
3.	ಶ್ರೀದೇವ	ಶ್ರೀಪ್ರಭು
4.	ಅಮಿತತೇಜ	ಶ್ರೀವಿಜಯ
5.	ಮಣಿಚೂಳ	ಮಣಿಚೂಳ

6.	ಅಪರಾಜಿತ	ಅನಂತವೀರ್ಯ
7.	ಅಚ್ಯುತೇಂದ್ರ	ಪ್ರತೀಂದ್ರ
8.	ವಜ್ರಾಯುಧ	ಸಹಸ್ರಾಯುಧ
9.	ಅಹಮಿಂದ್ರ (ಅಮಿತವಿಕ್ರಮ)	ಅಹಮಿಂದ್ರ (ಕಾಂತಿಪ್ರಭ)
10.	ಮೇಘರಥ	ಧೃತರಥ
11.	ಮಹೇಂದ್ರ	ಇಂದ್ರಚಂದ್ರ
12.	ಶಾಂತಿನಾಥ	ಚಕ್ರಾಯುಧ

(ಆಯಾ ಭವದಲ್ಲಿ ಮಡದಿಯಾಗೊ, ಭಾವನ್ಮೈದುನರಾಗೊ, ಸೋದರನಾಗೊ, ಭೋಗಭೂಮಿಜನಾಗೊ, ದೇವತೆಯಾಗೊ ಈ ಒಂದು ಜೀವ ಉದ್ದಕ್ಕೂ ಬೆನ್ನುಹತ್ತಿದಂತೆ ಹಿಂಬಾಲಿಸಿ ಬಂದಿರುವುದು ಗಮನಾರ್ಹ ಸಂಗತಿ.)

ಈ ಹನ್ನೆರಡು ಭವಗಳ ಭವಾವಳಿಯ ಏರಿಳಿತಗಳ ಸುಳಿಯಲ್ಲಿ ಪರಿಭ್ರಮಿಸಿ ಬಂದ ತೀರ್ಥಂಕರ ಜೀವ ಶ್ರೀಷೇಣನಲ್ಲಿ ಅಂಕುರಿಸಿ, ಆಕಾರ ಪಡೆದು ಶಾಂತಿನಾಥನಲ್ಲಿ ಪಲ್ಲವಿಸುತ್ತದೆ, ಪೂರ್ಣತ್ವ ಪಡೆದುಕೊಳ್ಳುತ್ತದೆ. ಈ ಎಲ್ಲಾ ಭವಗಳೂ ಮಣ್ಣಿನ ನೆಲದಲ್ಲಿ ನಡೆಯುವುದಿಲ್ಲ; ಆರು ಈ ನೆಲದಲ್ಲೂ, ಇನ್ನಾರು ಮೇಲಿನ ಕಲ್ಪನೆಗಳಲ್ಲೂ ಸಾಗುತ್ತವೆ. ಮೇಲಿನ ಪಟ್ಟಿಯಲ್ಲಿ ತೋರಿಸಿರುವ ಪ್ರಕಾರ, ಆಗಲೇ ತಿಳಿಸಿರುವಂತೆ ಪೊನ್ನ ಶಾಂತೀಶನ ಆರನೆಯ ಭವದಿಂದ ಕಾವ್ಯ ಆರಂಭಿಸಿದ್ದರೆ ಕಮಲಭವ ನಾಲ್ಕನೆಯ ಭವದಿಂದ ಪ್ರಾರಂಭಿಸುತ್ತಾನೆ. ಈ ಹನ್ನೆರಡು ಭವಗಳಲ್ಲಿ ಶ್ರೀಷೇಣ, ಅಮಿತತೇಜ, ಅಪರಾಜಿತ, ವಜ್ರಾಯುಧ, ಮೇಘರಥ ಮತ್ತು ಶಾಂತಿನಾಥನಾದಂದು—ಈ ಭವಗಳಷ್ಟೇ ಜೀವಕಳೆಯಿಂದ ಇಬ್ಬರೂ ಕವಿಗಳ ಕಾವ್ಯ ಶರೀರದಲ್ಲಿ ಸ್ಪಷ್ಟ ದಾಖಲೆ ಪಡೆದು ಚಿತ್ತಕ್ಕೆ ಹತ್ತಿರವಾಗುತ್ತವೆ.

	ಪೊನ್ನನ ಶಾಂತಿಪುರಾಣ	ಕಮಲಭವನ ಶಾಂತೀಶ್ವರಪುರಾಣ
1.	ಆಶ್ವಾಸ 1 ರಿಂದ 4ರ ವರೆಗೆ ಅಪರಾಜಿತ ಭವದ ವರ್ಣನೆ.	ಆಶ್ವಾಸ 4 ರಲ್ಲಿ ಅಮಿತತೇಜ ಭವದ ವರ್ಣನೆ ಬರುತ್ತದೆ.
2.	ಆಶ್ವಾಸ 4 ರಲ್ಲಿ ಅಚ್ಯುತೇಂದ್ರ ಭವ.	ಆಶ್ವಾಸ 7 ರಲ್ಲಿ ಅಪರಾಜಿತ ಭವದ ಪ್ರಸ್ತಾಪ ಬರುತ್ತದೆ.
3.	ಆಶ್ವಾಸ 6 ರಲ್ಲಿ ಶ್ರೀಷೇಣ ಭೋಗಭೂಮಿಜ ಉಲ್ಲೇಖ.	ಆಶ್ವಾಸ 9 ರಿಂದ 12ರ ವರೆಗೆ ವಜ್ರಾಯುಧ ಭವದ ಉಲ್ಲೇಖ.
4.	ಆಶ್ವಾಸ 7 ಮತ್ತು 8ರಲ್ಲಿ ಶ್ರೀದೇವ, ಮಣಿಚೂಳ, ಅಮಿತತೇಜ, ವಜ್ರಾಯುಧ ಭವಾವಳಿ ಬಂದಿದೆ.	ಆಶ್ವಾಸ 12 ರಲ್ಲಿ ಅಹಮಿಂದ್ರ ಭವದ ಪ್ರಸ್ತಾಪವಿದೆ.
5.	ಆಶ್ವಾಸ 9 ರಲ್ಲಿ ಅಹಮಿಂದ್ರ, ಮೇಘರಥ ಮತ್ತು ಮಹೇಂದ್ರ ಭವಾವಳಿಯಿದೆ.	ಆಶ್ವಾಸ 12 ರಿಂದ13ರ ವರೆಗೆ ಮೇಘರಥ ಭವಾವಳಿಯಿದೆ.
6.	ಆಶ್ವಾಸ 9 ರಿಂದ 12ರ ವರೆಗೆ ಶಾಂತಿನಾಥ ತೀರ್ಥಂಕರ ಚರಿತೆಯಿದೆ.	ಆಶ್ವಾಸ 14 ರಿಂದ 16ರ ವರೆಗೆ ಶಾಂತಿನಾಥ ತೀರ್ಥಂಕರರ ಚರಿತೆಯಿದೆ.

ಈ ವಿವರಣೆಯಿಂದ ಸ್ಪಷ್ಟವಾಗುವ ಸಂಗತಿಯೆಂದರೆ, ಕಾವ್ಯದ ಮುಕ್ಕಾಲು ಭಾಗದವರೆಗೆ ಭವಾವಳಿಗಳಲ್ಲಿ ಕವಿಗಳು ಹಿಂಚು ಮುಂಚು ಮಾಡುವ ಸ್ವಾತಂತ್ರ್ಯವಹಿಸಿದ್ದರೂ ಕಡೆಯ ಕಾಲುಭಾಗದಲ್ಲಿ ಇಬ್ಬರೂ ಏಕಪ್ರಕಾರವಾಗಿ ಸಾಗಿದ್ದಾರೆ.

ಪೊನ್ನಸಿಗೂ ಕಮಲಭವನಿಗೂ ಇರುವ ಒಂದು ಪ್ರಮುಖ ವ್ಯತ್ಯಾಸವೆಂದರೆ ಪೊನ್ನ ಸಂಕ್ಷಿಪ್ತತೆಗೆ ಗಮನ ಕೊಟ್ಟರೆ ಕಮಲಭವ ವಿಸ್ತಾರಕ್ಕೆ ಮನಸೋತಿದ್ದಾನೆ. ಪೊನ್ನನಲ್ಲಿ 12 ಆಶ್ವಾಸಗಳಿದ್ದರೆ, ಕಮಲಭವನಲ್ಲಿ 16 ಆಶ್ವಾಸಗಳಿವೆ ಎಂಬುದಷ್ಟೇ ಈ ತೀರ್ಮಾನಕ್ಕಿರುವ ಕಾರಣವಲ್ಲ. ಕಮಲಭವನಲ್ಲೂ ಸಂಸ್ಕೃತದ ಸಡಗರ ವೈಭವ ಅಧಿಕವಾಗಿವೆ. ಅನಾವಶ್ಯಕ ಶಬ್ದಪ್ರಯೋಗ ಅವನ ರಸಾರ್ದ್ರ ಕವಿಹೃದಯವನ್ನು ಮರೆಮಾಡಿದೆ. ವ್ಯರ್ಥ ಶಬ್ದಾಡಂಬರದಿಂದಾಗಿ ಮಾತು ಹೆಚ್ಚಿ ಆರ್ಭಟ ಜೋರಾಗಿದೆ. ಮುಖ್ಯಾರ್ಥ ಗೌಣವಾಗಿ ಸೊರಗಿಬಿಡುತ್ತದೆ, ಸಿಕ್ಕಾಪಟ್ಟೆ ಮಾತುಗಳನ್ನು ಚೆಲ್ಲಿಬಿಟ್ಟಿರುವುದರಿಂದ ನೇರವಾಗಿ ಸರಳವಾಗಿ ಹೇಳಬಹುದಾದುದನ್ನು ಬಳಸಿ ತಿಳಿಸುತ್ತಾನೆ. ಈ ಹೊರೆಯಿಂದ ಕಳಚಿ ಕಮಲಭವನ ಸೊಗಸಾದ ಸಂಗ್ರಹಕಾವ್ಯವನ್ನು ಅಣಿಗೊಳಿಸಬಹುದು. ಕಮಲಭವಕವಿ ಸಂಗ್ರಹಿಸಬಹುದಾದ ನೀರಸ ವಾದ ಭಾಗಗಳನ್ನು ವಿಸ್ತರಿಸುವಂತೆ ಒಮ್ಮೊಮ್ಮೆ ವಿಸ್ತರಿಸಬಹುದಾದ ಭಾಗಗಳನ್ನು ಮತ್ತು ಸ್ವಾರಸ್ಯವಾದ ಭಾಗಗಳನ್ನು ಸಂಗ್ರಹಿಸುತ್ತಾನೆ. ಪೊನ್ನಕವಿ ಧ್ವನಿಗಳಲ್ಲಿ ಮಾತಾಡಿದರೆ, ಸೂಚ್ಯಾರ್ಥಗಳಲ್ಲಿ ಸಂಚರಿಸಿದರೆ ಕಮಲಭವ ಅದನ್ನು ತೀರ ವಾಚ್ಯವಾಗಿಸುತ್ತಾನೆ. ಇದಕ್ಕೊಂದು ಉತ್ತಮವಾದ ಉದಾಹರಣೆಯೆಂದರೆ ಕನಕಶ್ರೀಯನ್ನು ಅಪರಾಜಿತ–ಅನಂತ ವೀರ್ಯರು ಅಪಹರಿಸುವ ಪೂರ್ವದಲ್ಲಿ ಆಕೆಯನ್ನು ಪ್ರಸನ್ನಿಸಿ ಗೆಲ್ಲುವ ವರ್ಣನೆಯಲ್ಲಿರುವ ಸಂಗ್ರಹಶೀಲತೆ. ಕಮಲಭವನಿಗೂ ಭಾಷೆಯ ಮೇಲಿನ ಹಿಡಿತ ಚೆನ್ನಾಗಿದೆ. ಆ ಭಾಷಾಪ್ರಭುತ್ವ ಇನ್ನೂ ಸದ್ವಿನಿಯೋಗವಾಗಬಹುದಿತ್ತು. ತಂತ್ರದ ದೃಷ್ಟಿಯಿಂದ ಹೇಳುವುದಾದರೆ, ಪೊನ್ನಕವಿ ಹಿನ್ನೆಲೆ ತಂತ್ರ ಹಾಯಿಸಿದ್ದಾನೆ. (ಇದು ಮುಂದೆ ರನ್ನನಿಗೊಂದು ಸಿಂಹಾವ ಲೋಕನ ಕ್ರಮದ ತಂತ್ರಕ್ಕೆ ಪೊನ್ನ ಕೊಟ್ಟ ಸ್ಫೂರ್ತಿಯಿರಬಹುದು.)

ಕಮಲಭವನೂ ಮೇಲ್ಮಟ್ಟದ ಕವಿಯೆಂಬುದನ್ನು ನೆನಪಿಡಬೇಕು. ಆತ ಎರಡು ಚಂಪೂಕಾವ್ಯ ಬರೆದಿದ್ದಾನೆ. ಒಂದು ಈ ಶಾಂತೀಶ್ವರಪುರಾಣ, ಇನ್ನೊಂದು ಕುಸುಮಾವಳೀ ಕಾವ್ಯ. ಕುಸುಮಾವಳೀ ಕಾವ್ಯ ಕಮಲಭವನದೇ ಎಂದು ಆಂತರಿಕ ಪ್ರಮಾಣ ಆಧಾರಗಳಿಂದ ಹೇಳಬಹುದೆಂದು ನಾನು ಅನ್ಯತ್ರ ಸೂಚಿಸಿದ್ದೇನೆ (ನೋಡಿ, ಹಂಪನಾ, ಕಮ್ಮಟದ ಕಿಡಿಗಳು, 1980). ದೇವಕವಿ ಎಂಬ ಹೆಸರೇ ಸರಿಯಲ್ಲ; ಕಮಲಭವನೇ ದೇವಕವಿ. ಕಮಲಭವ ಎಂದರೆ ಬ್ರಹ್ಮ. ಬ್ರಹ್ಮ ಜೈನರಲ್ಲಿ ರೂಢಿಯ ಹೆಸರು (ಒಬ್ಬ ಯಕ್ಷನ ಹೆಸರಾದುದರಿಂದ). ಅದರಿಂದ ಕವಿಯ ನಿಜವಾದ ಹೆಸರು ಬ್ರಹ್ಮ ಎಂದಿರಬಹುದು. ಈ ಬಗ್ಗೆ ಇನ್ನೂ ವಿಚಾರ ಮಂಥನ ಆಗಬೇಕು. ನೂರಾರು ಸಮಾನ ಪದ್ಯಗಳು ಶಾಂತೀಶ್ವರಪುರಾಣ ಮತ್ತು ಕುಸುಮಾವಳೀ ಕಾವ್ಯಗಳಲ್ಲಿವೆ. ಒಬ್ಬ ಕವಿಯ ಶೈಲಿಯೆಂದು ಶೈಲಿವಿಜ್ಞಾನ ದೃಷ್ಟಿಯಿಂದಲೂ ನಾವು ಗುರುತಿಸಬಹುದು. ಸಾಹಿತ್ಯ ಚರಿತ್ರೆಯಲ್ಲಿ ಇನ್ನು ಮುಂದೆ ಹಳಗನ್ನಡದ ವಿಮರ್ಶಕರು ಕಮಲಭವ–ದೇವಕವಿ ಅಭಿನ್ನರೆಂಬುದನ್ನು ನೆನಪಿಡಬೇಕು.

ಕಮಲಭವಕವಿಯ ಕಾವ್ಯವನ್ನು ಸಾರಾಸಗಟು ಕಳಪೆಯೆಂದು ಗುಡಿಸಿಹಾಕಿದರೆ ತಪ್ಪಾಗುತ್ತದೆ, ಕವಿಗೆ ವಂಚನೆ ಮಾಡಿದಂತೆ ಆಗುತ್ತದೆ. ಆತನಿಗೂ ಸೊಗಸಾಗಿ ಚಂಪೂಕಾವ್ಯ ಬರೆಯುವ ಕಾವ್ಯಶಕ್ತಿಯಿದೆ, ಪ್ರತಿಭೆಯಿದೆ. ಕಮಲ ಭವನ ಕಾವ್ಯದಲ್ಲಿ ಕಾರಯಿತ್ರೀ ಪ್ರತಿಭೆ ಹೇಗೆ ಕೆಲಸಮಾಡಿದೆಯೆಂಬುದನ್ನು ಸಮಾನವಸ್ತುವನ್ನು ಆರಿಸಿಕೊಂಡು ಪರಾಮರ್ಶಿಸಬಹುದು. ಪೊನ್ನನ ಮೇಲ್ಮೆ ಸ್ಥಾಪಿತವಾಗುವ ಹಾಗೆ ಕಮಲಭವನ ಸ್ವೋಪಜ್ಞತೆ ಪ್ರಕಟವಾಗುವ ಸಂದರ್ಭ ಗಳೂ ಇವೆ. ಪೊನ್ನನ ಕಾವ್ಯದಿಂದ ಕಮಲಭವಕವಿ ಎಲ್ಲೆಲ್ಲಿ ಪ್ರಭಾವಿತನಾಗಿದ್ದಾನೆ ಎಂಬ ಒಂದು ಪಟ್ಟಿ ಮಾಡಿಕೊಡು ವುದಕ್ಕಿಂತ ಪೊನ್ನನ ಪ್ರಸಿದ್ಧ ಕಾವ್ಯವೊಂದು ತನ್ನ ಕಣ್ಣೆದುರಿಗಿದ್ದೂ ಕಮಲಭವ ಅದರ ಗಾಢ ಪ್ರಭಾವದಿಂದ ತನ್ನನ್ನು

ಬಿಡಿಸಿಕೊಂಡು ಸ್ವಂತಿಕೆಯನ್ನು ಹೇಗೆ ಮೆರೆದಿದ್ದಾನೆಂಬುದನ್ನು ಮನಗಾಣುವುದು ಲೇಸು. ಇದಕ್ಕಾಗಿ ಎರಡೂ ಕಾವ್ಯಗಳಿಗೂ ಸಮಾನವಾಗಿರುವ ಯಾವುದಾದರೂ ಕೆಲವು ಸಂದರ್ಭಗಳನ್ನು ಆರಿಸಿಕೊಂಡು ಪರಿಶೀಲಿಸಬಹುದು. ಉದಾಹರಣೆಗಾಗಿ ದಮಿತಾರಿ ಮತ್ತು ಅವನ ಮಗಳು ಕನಕಶ್ರೀಯ ಕಥಾನಕ ಭಾಗವನ್ನು ತುಲನಾತ್ಮಕ ಪರಿಶೀಲನೆಗಾಗಿ ಎತ್ತಿಕೊಳ್ಳಬಹುದು.

ಪೊನ್ನ-ಕಮಲಭವರ ನಡುವೆ ಕೇವಲ ಭವಾವಳಿಗಳ ನಿರೂಪಣೆಯಲ್ಲಷ್ಟೇ ಏರುಪೇರುಗಳಿವೆಯೆಂಬ ಕಾರಣದಿಂದ ಇಬ್ಬರೂ ಸ್ವತಂತ್ರ ಮಾರ್ಗ ಅಥವಾ ಭಿನ್ನಮೂಲ ಆಶ್ರಯಿಸಿದ್ದಾರೆಂದು ತೀರ್ಮಾನಿಸುತ್ತಿಲ್ಲ. ಈ ತೀರ್ಮಾನವನ್ನು ಬೆಂಬಲಿಸುವ ಇನ್ನೂ ಕೆಲವು ಪ್ರಬಲ ಆಧಾರಗಳಿವೆ. ಪ್ರಸಂಗಗಳ, ಕಥಾವಸ್ತುವಿನ ನಿರೂಪಣೆಯಲ್ಲಿ, ವರ್ಣನೆಗಳಲ್ಲಿ, ಪಾತ್ರಚಿತ್ರಣದಲ್ಲಿ ಭಿನ್ನತೆ ಒಡಮೂಡಿರುವುದುಂಟು. ಇದನ್ನು ಪುಷ್ಟೀಕರಿಸಲೂ ಮೇಲೆ ಹೇಳಿದ ದಮಿತಾರಿ-ಕನಕಶ್ರೀ ಪ್ರಸಂಗ ನಿರ್ವಹಿಸಿರುವ ರೀತಿಯೇ ಸಾಕು. ಏಕೆಂದರೆ ಖೇಚರೇಂದ್ರ ದಮಿತಾರಿ ದೊರೆಯ ಮತ್ತು ಅವನ ಮಗಳು ಕನಕಶ್ರೀಯ ಕಥಾಪ್ರಸಂಗ ಶಾಂತಿಪುರಾಣದಲ್ಲಿ ಸ್ವಾರಸ್ಯತರವಾದ ಭಾಗ. ಆತ ಅಪರಾಜಿತನ ಹಗೆಯಾದುದೇ ಒಂದು ವಿಚಿತ್ರ ಪ್ರಸಂಗ. ಅಪರಾಜಿತ-ಅನಂತವೀರ್ಯ ಸೋದರರು ಒಂದು ದಿನ ಲೀಲೆಯಿಂದ ಓಲಗದಲ್ಲಿರುವಾಗ ಅವರ ಎದುರಿನಲ್ಲಿ ಬರ್ಬರಕಿರಾತ (ಚಿಲಾತ) ರೆಂಬ ಇಬ್ಬರು ಸುಶ್ರಾವ್ಯವಾಗಿ ಹಾಡಿದರು—ಸೊಗಸಾಗಿ ನರ್ತಿಸಿದರು. ಅಲ್ಲಿಂದ ಮುಂದೆ ನಡೆದ ಕಥೆಯನ್ನು ಈ ಇಬ್ಬರು ಕವಿಗಳು ನಿರ್ವಹಿಸಿದ, ನಿಭಾಯಿಸಿದ ಕ್ರಮ ತುಲನಾತ್ಮಕ ಅಧ್ಯಯನಕ್ಕೆ ಹೇಳಿ ಮಾಡಿಸಿದಂತಿದೆ.

ಪೊನ್ನನ ಶಾಂತಿಪುರಾಣದ 3-69, 3-62 ರಿಂದ 65, 6-56ವ 4-17, 7-96, 98, 9-193, 194 ಪದ್ಯಗಳಿಗೆ ಸಂವಾದಿಯಾಗಿ ಕಮಲಭವನ ಶಾಂತೀಶ್ವರಪುರಾಣದ 8-41, 8-32, 7-2ವ, 8-67, 9-92, 96, 13-208 ವ—ಇವನ್ನು ಹೋಲಿಸಿನೋಡಬಹುದು. ಕಮಲಭವನ 7-93ರಿಂದ 7-137ರ ವರೆಗಿನ ಭಾಗವನ್ನೂ, ಇದಕ್ಕೆ ಸಮಾನವಾಗಿ ಬರುವ ಪೊನ್ನನ ಶಾಂತಿಪುರಾಣದ 2-18ವ ದಿಂದ 3-40ರ ವರೆಗಿನ ಭಾಗವನ್ನು ಪಕ್ಕದಲ್ಲಿಟ್ಟು ಸೂಕ್ಷ್ಮವಾಗಿ ಪರಿಶೀಲಿಸಬೇಕು. ಆಗ ಅವೆರಡರ ನಡುವೆ ಇರುವ ಅಜಗಜಾಂತರವೇನೆಂಬುದು ನಿಚ್ಚಳವಾಗುತ್ತದೆ. ನಾರದಾಶಯ ಎಂಬುದೊಂದು ಇದ್ದಂತೆ ತೋರುತ್ತದೆ. ನಾರದನು ಯುದ್ಧ ದೃಶ್ಯಾವಲೋಕನ ಮಾಡಿ ಆನಂದಿಸುವ ಪ್ರಸ್ತಾಪ ಪಂಪಭಾರತದಲ್ಲೂ ಬರುತ್ತದೆ; ಪೊನ್ನ ಮತ್ತು ಕಮಲಭವ ಕವಿಗಳಲ್ಲೂ ಬಂದಿದೆ. ಕಮಲಭವನ ಕಾವ್ಯ ಕೇವಲ ಉತ್ತರ ಪುರಾಣ, ಪೊನ್ನ, ಚಾವುಂಡರಾಯರನ್ನೇ ಆಶ್ರಯಿಸದೆ ಅನ್ಯಮೂಲಗಳಿಂದ ಆಕರ ತೆಗೆದುಕೊಂಡಂತೆ ತೋರುತ್ತದೆ. ತಮಿಳಿನ ಶ್ರೀಪುರಾಣ ಪರಂಪರೆಗೂ ಕಮಲಭವನ ಶಾಂತೀಶ್ವರಪುರಾಣಕ್ಕೂ ಸಮಾನ ಮೂಲವಿರುವಂತೆ ವಿದ್ವಾಂಸರು ಭಾವಿಸಿದ್ದಾರೆ. ಹೆಚ್ಚಿನ ಸಂಶೋಧನೆ ಇದನ್ನು ದೃಢಪಡಿಸಬೇಕು. ಅಂತೂ ಕಮಲಭವನ ಕಾವ್ಯ ಪೊನ್ನನ ಶಾಂತಿಪುರಾಣದ ಪ್ರತಿಕೃತಿಯಲ್ಲ ಎಂಬುದು ಗಮನಿಸಬೇಕಾದ ಸಂಗತಿ.

ಶಾಂತಿಕೀರ್ತಿಮುನಿಯ (1732) ಶಾಂತಿನಾಥ ಚರಿತೆಯೆಂಬ ಸಾಂಗತ್ಯ ಕಾವ್ಯ ಪೊನ್ನನ ಕಾವ್ಯ ಕಥೆಯನ್ನು, ಕಾವ್ಯ ವೈಭವವನ್ನು ಕಳೆದು, ಚಂಪುವಿನಿಂದ ಸಾಂಗತ್ಯಕ್ಕೆ ಪರಿವರ್ತಿಸಿ, ಚಾವುಂಡರಾಯಪುರಾಣದಂತೆ ಕೇವಲ ಕಥಾಭಾಗವನ್ನು ಮಾತ್ರ ಉಳಿಸಿಕೊಂಡು ನಿರೂಪಿಸಿರುವ ಸಾಮಾನ್ಯ ಕೃತಿ. ಆದರೊಡನೆ ತೌಲನಿಕ ವ್ಯಾಸಂಗ ಮಾಡುವಷ್ಟು ಹಿರಿಮೆ ಆ ಕಾವ್ಯದಲ್ಲಿ ಇಲ್ಲವಾದುದರಿಂದ ಅಂಥ ಪ್ರಯತ್ನಕ್ಕೆ ತೊಡಗುವುದಿಲ್ಲ.

ಪೊನ್ನ ಮತ್ತು ಛಂದಸ್ಸು

ಛಂದಸ್ಸು ಕಾವ್ಯದ ಅನಿವಾರ್ಯ ಅಂಗ; ಕಾವ್ಯರಚನೆಗೆ ಛಂದಸ್ಸು ಅಗತ್ಯ ಎಂದು ಕವಿಗಳು ಗಟ್ಟಿಯಾಗಿ ನಂಬಿದ್ದ ಕಾಲದಲ್ಲಿ ಶಾಂತಿಪುರಾಣ ರಚನೆಯಾಗಿದೆ. ಕವಿಯ ಕಣ್ಣಿನ ಬೆಳಕಾಗಿ, ಕಾವ್ಯವನ್ನು ಕಟ್ಟುವ ಬಂಧದ ಜಾಣ್ಮೆಯಾಗಿ

ಛಂದಸ್ಸು ಕೆಲಸಮಾಡಿರುವುದುಂಟು. ಇದರ ನೃತ್ಯಗತಿ ಪೊನ್ನನಲ್ಲಿ ಹೇಗೆ ಸಾಗಿದೆಯೆಂಬುದರ ಸಮೀಕ್ಷೆ ಈ ದೃಷ್ಟಿಯಿಂದ ಉಪಯುಕ್ತವಾಗಬಹುದು. ಕಾವ್ಯಕ್ಕೆ ಉಲ್ಲಾಸ ತಂದುಕೊಡುವಲ್ಲಿ ಛಂದಸ್ಸನ್ನು ಪೊನ್ನ ಹೇಗೆ ದುಡಿಸಿಕೊಂಡಿದ್ದಾನೆಂಬುದೂ ಮುಖ್ಯವಾಗಿ ಪರಿಶೀಲನೆಯಾಗಬೇಕು. ಅಶೃಂಖಲವಾಗಿ ಹರಿದುಬರುವ ಮಾನವ ಭಾವನೆಗಳ ಅಭಿವ್ಯಕ್ತಿಗೆ ಧ್ವನಿ ಶರೀರದ ಭಾಷೆಯೇ ಒಂದು ಮಿತಿಯ ಮಾಧ್ಯಮ. ಇದಕ್ಕೆ ಛಂದಸ್ಸು ಮತ್ತಷ್ಟು ಮಿತಿಯನ್ನು ಹೇರುತ್ತದೆ. ವಸ್ತುನಿಷ್ಠ ಧಾರ್ಮಿಕ ಪುರಾಣರಚನೆಯೂ ಒಂದು ನಿರ್ದಿಷ್ಟ ಚೌಕಟ್ಟು. ಹೀಗೆ ಮಿತಿಗಳಲ್ಲಿ ಸಂಚರಿಸಿಯೂ ಪೊನ್ನಕವಿ ಶಾಂತಿಪುರಾಣಕ್ಕೆ ದೊರಕಿಸಿಕೊಟ್ಟಿರುವ ಲಾಘವತೆ, ಆಯಾಮ, ಸೊಗಸು ಕುರಿತು ವಿವೇಚಿಸಬೇಕಾಗುತ್ತದೆ.

ಶಾಂತಿಪುರಾಣ ಕಾವ್ಯವನ್ನು ಛಂದಸ್ಸಿನ ದೃಷ್ಟಿಯಿಂದ ಅಭ್ಯಸಿಸಿ ವಿಶೇಷಗಳನ್ನು ಅರಿಯುವಾಗ ಮುಖ್ಯವಾದ ಕೆಲವನ್ನು ಸಂಗ್ರಹರೂಪದಲ್ಲಿ ಇಲ್ಲಿ ತಿಳಿಸಿದ್ದೇನೆ. ಮೂರನೆಯ ಆಶ್ವಾಸದಲ್ಲಿ ಆರನೆಯ ಪದ್ಯವಾದ ಮೇಲೆ ಬರುವ ತ್ವರಿತರಗಳೆ ಮಹತ್ವಪೂರ್ಣವಾದದ್ದು. ಕನ್ನಡ ಚಂಪೂಕಾವ್ಯಗಳಲ್ಲಿ ಕಂಡುಬರುವ ರಗಳೆಗೆ ಒಟ್ಟು ರಗಳೆಯ ಉಗಮ, ವಿಕಾಸ ವಿವರಣೆಯಲ್ಲಿ ಒಂದು ವಿಶಿಷ್ಟತೆಯಿದೆ. ಪ್ರಾಕೃತ ಪಜ್ಝಟಿಕೆಯ, ಸಂಸ್ಕೃತ ರಘಟಾ ಬಂಧದ ಹಿನ್ನೆಲೆಯಲ್ಲಿ ಕನ್ನಡ ರಗಳೆ ಪಡೆದುಕೊಂಡ ವ್ಯಕ್ತಿತ್ವ ಎಂತಹುದು, ಅದರಿಂದ ಚಂಪೂಪ್ರಬಂಧಕ್ಕೆ, ಬಂಧಕ್ಕೆ ಬಂದ ಲಾಘವ ವಿವಿಧತೆ ಎಂತಹುದು ಎಂಬುದನ್ನು ಈಗಾಗಲೇ ತೌಲನಿಕ ಅಧ್ಯಯನದ ಮೂಲಕ ವಿದ್ವಾಂಸರು ಸಾದರಪಡಿಸಿದ್ದಾರೆ, ಅದನ್ನು ಮತ್ತೆ ಇಲ್ಲಿ ವಿವರಿಸುವುದಾಗಲಿ ವಿಸ್ತರಿಸುವುದಾಗಲಿ ಅಗತ್ಯವಿಲ್ಲ. ರಗಳೆಯ ಇತಿಹಾಸದಲ್ಲಿ ಪೊನ್ನನ ರಗಳೆಗೆ ಇರುವ ಚಾರಿತ್ರಿಕ ಮಹತ್ವವನ್ನು ಗುರುತಿಸಿಕೊಂಡರೆ ಪ್ರಕೃತಕ್ಕೆ ಅಷ್ಟು ಸಾಕು.

ಅದಱೊಳಗಣ ಗಣನಾತೀತ ರಮ್ಯ
ಮಣಿಕನಕ ರಜತ ಪರಿಖಚಿತ ಹರ್ಮ್ಯ
ಪ್ರಾಕಾರಕ‍ಮೊಪ್ಪುಗುಮಪ್ಪುಕಯ್ದು
ಚೆಲ್ವಂ ಸುರಪುರಮನವಜ್ಞೆಗೆಯ್ದು
ಗಣಿಕಾವಾಟಂಗಳ ನೆರೆದ ಲೀಲೆ
ಮದನಾಧಿರಾಜ ವಾಸಮನೆ ಪೋಲೆ
ದೇವೋತ್ತರ ಕುರುದಂಪತಿ ಶತಕ್ಕೆ
ದೊರೆ ಚದುರೆ ಮಿಥುನಮೆನ್ನಭಿಮತಕ್ಕೆ
ವಿಪಣಿ ಪ್ರಕರಂ ಧನದಾಲಯಕ್ಕೆ
ಮಿಗಿಲೆನಿಪುದು ಬಹುಧನ ಸಂಚಯಕ್ಕೆ
ದೇವಾಲಯ ತತಿಯ ಬೆಡಂಗಳುಂಬ
ಮಾಱದದಂ ಲಂಘಿಸಲರ್ಕ ಬಿಂಬ
ಮೆಱೆಗೆಱೆಕೆಱೆ ಮಾವಿಮ್ಮಾವೆ ನೋಡೆ
ತರುಸುರತರು ಕೊಡುವುವು ಬಂದು ಬೇಡೆ
ತಾಮರೆ ಪೊಂದಾಮರೆ ಕಲ್ಪ ಲತೆಯೆ
ಲತೆಯೆಲ್ಲಂ ನೋೞ್ಪೊಡದೊಂದು ಕತೆಯೆ
ಮದಕರಿಗಳ್ ವಿಜಿತೈರಾವತಂಗ
ಳಶ್ವಂಗಳಧಿಕ ಸತ್ವಾನ್ವಿತಂಗ
ಳಧ್ವ ಬಾಷ್ಪ ಮೃಗ್ಯುಲೂಕ ಭವಂಗ
ಳತಿಗರುಡ ವಿಮಾನಮರುಜ್ಜವಂಗ
ಳಿದಱಳಿವಿಗೆ ಬಾರದು ರಿತುವಿಮಾನ
ಮೆನಿಪುದು ಕರುಮಾಡದ ಬೆಸನನೂನ

ಮದುಕೃತ ಮಣಿ ಕಟ್ಟಿಮ ಮಧ್ಯಭೂಮಿ
ಪೆಱಗಣ ಬನಮುಪಚಿತ ಮಾತುಳುಂಗ
ಮಪರಿಮಿತಾ ಗುರುಮಲಯಜ ಲವಂಗ
ಮಾಮ್ರಾಮ್ರಾತಕ ಕೇತನ ನಿಕೇತ
ಮಳಿ ಶುಕಪಿಕ ವಿರಚಿತ ಪಕ್ಷಪಾತ
ಮಂಬರಚರ ರಾಜನ ಸಿರಿಯ ಪೆಂಪ
ನಾಂ ನೆಱೆಯೆ ಪೊಗೞ್ವೆನೆಂಬವನೆ ಗಾಂಪ
ನದಱಿಂ ಶಿವಮಂದಿರ ದೊಳ್ಪು ಪಿರಿದು
ಪೊಗೞಲ್ಕದನಹಿರಾಜಂಗಮರಿದು ॥

ರಗಳೆ ಚಂಪೂಕಾವ್ಯಗಳಲ್ಲಿ ಇನ್ನೂ ಆಗತಾನೆ ಕಾಲಿರಿಸಿತ್ತು. ಪಂಪ–ಪೊನ್ನರಲ್ಲೇ ಅದು ಮೊದಲು ಕಾಣಿಸಿಕೊಂಡಿರುವುದು. ಹೀಗೆ ಅಂಬೆಗಾಲಿಡತೊಡಗಿದ ಪ್ರಾರಂಭದ ಹಂತದಲ್ಲಿ ಅದು ಹೇಗೆ ಮುಖಮುದ್ರೆಗಳೊಡನೆ ಸ್ಪಷ್ಟ ಆಕಾರ ತಳೆಯಲು ಹವಣಿಸುತ್ತಾ ಕಸುವು ಪಡೆದುಕೊಂಡಿತೆಂಬ ಅಧ್ಯಯನದ ಹಂತದಲ್ಲಿ ಪೊನ್ನನ ತ್ವರಿತರಗಳೆಗೊಂದು ಸ್ಥಾನವಿದೆ. ಇದರೊಳಗಣ ಓಟ, ಕುಣಿತ, ಲಯವಿನ್ಯಾಸ, ಆದಿಪ್ರಾಸ ತೊರೆದರೂ ಅಂತ್ಯಪ್ರಾಸ ತೊರೆಯದಿರುವ ಸದಗತಿ ಇವನ್ನು ಗಮನಿಸಬೇಕು. ಒಂದೊಂದು ಪಾದವೂ ರಗಳೆಯಲ್ಲಿ ಒಂದೊಂದು ಸ್ವಯಂಪೂರ್ಣ ಘಟಕವಾಗಿರುತ್ತದೆ. ಇಲ್ಲಿ ಒಂದು ಪಾದ ಇನ್ನೊಂದು ಪಾದವನ್ನು ಹೆರುವಂತೆ ಸಾಲು ಸಾಲು ತೆಕ್ಕೆಹಾಕಿಕೊಂಡು ನಡೆಯುವ ಅನುಭವ ಅದ್ಭುತವಾಗಿ ಹೊಮ್ಮಿದೆ. ಕಂದ ವೃತ್ತಗಳಲ್ಲಿ ನಿಯತವಾಗಿ ಬರುವ ಆದಿಪ್ರಾಸದ ಏಕತಾನತೆಯನ್ನು ಹೋಗಲಾಡಿಸಿ ಆದಿಪ್ರಾಸ ರಹಿತತೆಯ ಜತೆಗೆ, ಪ್ರಾಸಸ್ಥಾನವನ್ನು ಸ್ಥಳಾಂತರಿಸಿದಂತೆ ಅಂತ್ಯಪ್ರಾಸ ನಿಯತತೆ ತಂದುಕೊಡುವ ಹೊಸ ಹಿತಾನುಭವ ಸುಖೋಷ್ಣವಾದುದು.

ಪೊನ್ನನ ರಗಳೆ ತಟ್ಟನೆ ಪಂಪನ ವಿಕ್ರಮಾರ್ಜುನವಿಜಯದ ರಗಳೆಯನ್ನು ನೆನಪಿಸುತ್ತದೆ. ಅದಱ ಪೊರವೊೞಲ ವಿಶಾಳ ಕನಕ ಕೃತಕ ಗಿರಿಗಳಿಂ ಎಂದು ಪ್ರಾರಂಭವಾಗುವ (1–57ರ ಅನಂತರದ) ರಗಳೆಯ ವಿಸ್ತಾರ ವಿಲಾಸವೇ ಬೇರೆ, ಇದರ ಚೆಲುವೇ ಬೇರೆ. ರ–ಱಕಾರಗಳ ಅನುಪ್ರಾಸದ ಕರ್ಣ ಸುಖ 13–14 ನೆಯ ಸಾಲುಗಳಲ್ಲಿದೆ. ಅರ್ಥಸಂಪತ್ತಿನೊಂದಿಗೆ ಲಯದ ಬೆಡಗೂ ಶಬ್ದಗಳ ಸುಕರ ಜೋಡಣೆಯೂ ಕೂಡಿಕೊಂಡು ಪ್ರತಿ ಪಂಕ್ತಿಯೂ ರಸೋದಯವಾಗಿದೆ. ಕೆಲವು ಸಾಲುಗಳಲ್ಲಿ ಅಂತ್ಯ ಪ್ರಾಸ ಮುಗಿದರೂ ಅರ್ಥವಾಗಲಿ, ಶಬ್ದರೂಪವಾಗಲಿ ಅಲ್ಲಿಗೇ ನಿಲ್ಲದೆ ಮುಂದಿನ ಸಾಲಿನ ಮೊದಲಕ್ಷರಕ್ಕೆ ಮುಗಿಬಿದ್ದಂತೆ ಕೊಕ್ಕೆಹಾಕಿರುತ್ತದೆ. ಪೊನ್ನಕವಿಗೂ ಈ ಸಾಲುಗಳು ಶ್ರುತಿ ವಸಂತವಾಗಿ ತೃಪ್ತಿಕೊಟ್ಟಿರಬೇಕು. ಏಕೆಂದರೆ ಈ 32 ಸಾಲುಗಳ ತ್ವರಿತರಗಳೆಯ, ಪಾದವೊಂದಕ್ಕೆ 16 ಮಾತ್ರೆಗಳ ಕುಣಿತ ಜಗಿತಗಳಿಂದ ಉಲ್ಲಾಸಗೊಂಡು ಪೊನ್ನಕವಿ ಅದೇ ಗುಂಗಿನಲ್ಲಿ ಮುಂದಿನ ಎರಡು ಕಂದಪದ್ಯಗಳಲ್ಲೂ ಉತ್ಸಾಹದಿಂದೋಡುವ ಚಿಗರೆ ನಡಿಗೆಯ ಬೆಡಗನ್ನು ಕಂದಪದ್ಯಗಳಿಗೆ ಕಸಿಮಾಡಿದ್ದಾನೆ :

ವಾಸವ ಪುರಮಿದಱೀ ವಿ
ನ್ಯಾಸಮನಿದಱೀ ಗೃಹಾಧಿವಾಸಮನಿದಱೀ
ದೇಸೆಯನಿದಱೀ ನೆಱೆದ ವಿ
ಲಾಸಮನಿದಱೀ ಬೆಡಂಗ ನವಗಯಿಸುಗಮೇ ॥ 3–8

ಆಡುವ ನಡೆ ನೋಡುವ ನಡೆ
ಪಾಡುವ ಕೊಳೆ ಪಾಡುವುಡುವ ತುಡುವಱಿನಂ ಕೊಂ
ಡಾಡುವ ಜನದಿಂ ಪುಣ್ಯದ
ಬೀಡೆನಿಪುದು ಪುರಮಿದಂಬರೇಚರ ಪತಿಯಾ ॥ 3–9

ಛಂದಸ್ಸೆಂಬುದು ಕೇವಲ ಪದ್ಯಕ್ಕೆ ಅನ್ವಯಿಸುತ್ತದೆಂದು ತಿಳಿಯಬೇಕಾಗಿಲ್ಲ. ಗದ್ಯದಲ್ಲೂ ಒಂದು ವಿಶಿಷ್ಟಲಯವಿರುತ್ತದೆ, ಬಂಧವಿರುತ್ತದೆ. ಶೈಲಿವಿಜ್ಞಾನವನ್ನಾಧರಿಸಿ ಪ್ರತಿಯೊಬ್ಬ ಲೇಖಕನ ಗದ್ಯಲಯ ಏನೆಂಬುದನ್ನು ಅರಿಯಬಹುದು: ಶಾಂತಿಪುರಾಣದಲ್ಲಿ ಹೆಕ್ಕಿವೆಡೆಗಳಲ್ಲಿ ಸಿಕ್ಕುವ ಉದಾಹರಣೆಗಳು ಚಂಪೂಗದ್ಯಲಯಜ್ಞಾನಕ್ಕೆ, ಪೊನ್ನನ ಉತ್ತಮ ಶ್ರುತಜ್ಞಾನಕ್ಕೆ ಸಾಕ್ಷಿಗಳಾಗುತ್ತವೆ : ಉತ್ತರ ದಿಗ್ಭಾಗದೊಳುತ್ತರ ಕುರುವೆಂಬುತ್ತಮ ಭೋಗಭೂಮಿ ಸಮುತ್ಪತ್ತಿ ಸ್ಥಾನ (6–97 ವ).

ಛಂದಸ್ಸಿನಲ್ಲಿ ವೈದಿಕ–ವೈದಿಕೇತರವೆಂದು ಎರಡು ಬಗೆ. ಪೊನ್ನ ವೈದಿಕ ಛಂದಸ್ಸಿನ ದಾಸನೇನೂ ಅಲ್ಲ. ಅವೈದಿಕವಲ್ಲಿ ಒಂದಾದ ದ್ರಾವಿಡ ಛಂದಸ್ಸಿಗೆ ಸೇರಿದ ತ್ರಿಪದಿಯನ್ನೂ ಬರೆದಿದ್ದಾನೆ. ಅಂಶಗಣದ ಮೂಲಾಂಶವನ್ನೊಳಗೊಂಡಿದ್ದರೂ ಮಾತ್ರಾಲಯದ ಸ್ವರೂಪ ಹೊತ್ತಿರುವ ಈ ಎರಡು ತ್ರಿಪದಿಗಳನ್ನು ನೋಡಿ :

> **ಸಹಕಾರ ಸಾರನೋಕಹ ತರುವನ್ಮದ ಪಿಕ**
> **ಬಹುಭಾಷಣಂಗಳುಮೆಸೆದುವು ಕಿನ್ನರ**
> **ಕುಹರಣದೊಡನೆ ಸೆಣಸುತ್ತುಂ ॥** 2-92
>
> **ಮದನ ದಾವಾಗ್ನಿಯುಂ ನದಿಪ ಮಾಡಿದ ಕಾಮ**
> **ನದಿಯೆನಿಸುವುವು ದಿವಿಜ ದಂಪತಿ ಶತ**
> **ದೊದವಿದ ರತದ ಪದನಲ್ಲಿ ॥** 2–93

ಇದೇ ರೀತಿ 10–91, 92 ತ್ರಿಪದಿ ಪದ್ಯಗಳನ್ನೂ ಪರಿಶೀಲಿಸಬಹುದು.

ಛಂದಸ್ಸಿನ ಅನುಕೂಲಕ್ಕಾಗಿ, ಪ್ರಾಸ ಸೌಕರ್ಯಕ್ಕಾಗಿ ಹ್ರಸ್ವವನ್ನು ದೀರ್ಘವನ್ನಾಗಿಯೂ, ದೀರ್ಘವನ್ನು ಹ್ರಸ್ವವನ್ನಾಗಿಯೂ ಗುರುಲಘು ವ್ಯತ್ಯಾಸಮಾಡಿ ಶಬ್ದಗಳ ನಿಜರೂಪವನ್ನು ವಿರೂಪಗೊಳಿಸಿ ಪೊನ್ನನೂ ಪ್ರಯೋಗಿಸಿರುವುದುಂಟು. ಇದು ನಿಯಮಪಾಲನೆಗಾಗಿ ಮಾಡಿದ ನಿಯಮೋಲ್ಲಂಘನೆ. ಇದಕ್ಕೆ ಕೆಲವು ಉದಾಹರಣೆಗಳು:

1. 9–89ನೆಯ ಪದ್ಯದ ನಾಲ್ಕನೆಯ ಪಾದದಲ್ಲಿ ಒಂದು ಮಾತ್ರೆ ಹೆಚ್ಚಾಗುತ್ತದೆಂಬ ಕಾರಣಕ್ಕೆ ಸಾಯೆ ಎಂಬ ರೂಪಕ್ಕೆ ಸಯೆ ಎಂಬ ರೂಪ ಬಳಸಿದ್ದಾನೆ.
2. 9–72 ಇಲ್ಲಿ ಒಂದು ಮಾತ್ರೆ ಕಡಮೆಮಾಡಲು (ಎರಡೂವರೆ ದ್ವೀಪ ಎಂಬುದರಲ್ಲಿ) ಡೂ ಎಂಬ ದೀರ್ಘವನ್ನು (ಎರಡುವರೆ) ಡು ಎಂಬ ಹ್ರಸ್ವವನ್ನಾಗಿಸಿದ್ದಾನೆ.
3. ರಾಜತ (ಶೈಲೇಂದ್ರ) ಎಂಬುದಾಗಿ 4–59 ರಲ್ಲಿ ಗುರು ಬರಬೇಕೆಂದು ರಜತ ಎಂಬ ರೂಪವನ್ನು ಆದಿ ದೀರ್ಘಕ್ಕೆ ತಿದ್ದಿಕೊಂಡಿದ್ದಾನೆ.
4. 2–104 ರಲ್ಲಿ, ಒಂದು ಮಾತ್ರೆ ಹೆಚ್ಚಿಗೆ ಬೇಕಾಗಿದ್ದ ಕಾರಣ, ಲಾಳವಿಂಡಿಗೆ ಎಂಬುದನ್ನು ಲಾಳಾವಿಂಡಿಗೆ ಎಂದು ಬದಲಾಯಿಸಿಕೊಂಡಿದ್ದಾನೆ.
5. 6–94ರಲ್ಲೂ ಪ್ರಾಸ ಕಾಪಾಡಲು ಆಘ್ರಾಣಿಸು ಎಂಬ ರೂಪಕ್ಕೆ ಆಘ್ರಾಯಿಸು ಎಂಬಂತೆ ವಿರೂಪವನ್ನು ಪ್ರಯೋಗಿಸಿದ್ದಾನೆ.
6. ಉಪಮಾನಾತೀತ ಎಂದು ಛಂದಸ್ಸಿನ ಸೌಕರ್ಯಕ್ಕಾಗಿ 1–44ರಲ್ಲಿ ಬಳಸಿದ್ದಾನೆ. ವಾಸ್ತವವಾಗಿ ಪೊನ್ನ ಕವಿಗೆ ಪ್ರಿಯವಾದ ಪ್ರಯೋಗ ಉಪಮಾತೀತ (1–38, 42).

3–6ರ ಅನಂತರ ಬರುವ, ಹಿಂದಿನ ಪುಟದಲ್ಲಿ ಉದಾಹರಿಸಿರುವ, ರಗಳೆಯಲ್ಲಿ ಒಂದು ಕಡೆ ಹೀಗಿದೆ:

ದೇವಾಲಯ ತತಿಯ ಬೆಡಂಗಳುಂಬ
ಮಾಱಿದದುಂ ಲಂಘಿಸಲರ್ಕ ಬಿಂಬ

ವಾಸ್ತವವಾಗಿ ಇಲ್ಲಿ ಎರಡನೆಯ ಸಾಲಿನ ಕಡೆಯ ಶಬ್ದ, ಪೊನ್ನನ ಕಾಲದ ಪ್ರಯೋಗವಾದುದರಿಂದ ಬಿಂಬಂ ಎಂದಿರಬೇಕಿತ್ತು. ಆದರೆ ಅಂತ್ಯ ಪ್ರಾಸಸ್ಥಾನದಲ್ಲಿ ಮೇಲಿನ ಸಾಲಿನ ಕಡೆಯಲ್ಲಿ ಅಳುಂಬ ಎಂದಿರುವದರಿಂದ ಇಲ್ಲಿಯೂ ಬಿಂಬ ಎಂದಿಟ್ಟಿದ್ದಾನೆ. ಆದರೆ ಅದರ ಮುಂದಿನ ವ್ಯಂಜನಾಕ್ಷರದಲ್ಲಿರುವ ಅನುನಾಸಿಕತ್ವ ಹಿಂದಿನದಕ್ಕೇ ಬಂದು (ಮೇಲಿನದು ಅಳುಂಬಮ್) ಆದಂತೆ ಇದೂ ಬಿಂಬಮ್ ಎಂದಾಗಿರುವುದನ್ನು ಗಮನಿಸಬೇಕು. 7–4 ರಲ್ಲಿ ಸಮೀಪ ಪ್ರಾಸದ ಸೊಗಸಿದೆ. 7–88, 6–117ರಲ್ಲಿ ಳ–ೞ ಪ್ರಾಸವಿದೆ; 8–52ರಲ್ಲಿ ರ–ಱ ಪ್ರಾಸವಿದೆ.

ಪೊನ್ನನ ಶಾಂತಿಪುರಾಣದಲ್ಲಿರುವ ಪದ್ಯಗಳು ಯಾವ ಯಾವ ವೃತ್ತಜಾತಿಗೆ ಸೇರಿವೆಯೆಂಬುದನ್ನು ಹಿಂದಿನ ಸಂಪಾದಕರು ಪಟ್ಟಿಮಾಡಿರುವುದನ್ನು ಗಮನಿಸಿದರೆ ವೈವಿಧ್ಯದ ಒಂದು ಚಿತ್ರಕ್ಕೆ ಕನ್ನಡಿ ಹಿಡಿದಂತೆ ಆದೀತು (ಮುಂದಿನ ಪುಟದಲ್ಲಿ ಕೊಟ್ಟಿದೆ). ಪೊನ್ನನ ಕಾಲಕ್ಕಾಗಲೇ ಚಂಪೂರೂಪ ತನ್ನ ಶಿಖರಸ್ಥಿತಿಯಲ್ಲಿ ಉಡ್ಡೀನ ಮಾಡುತ್ತಿತ್ತು. ಅದರ ಛಂದಸ್ ಶರೀರ ನಿರ್ಧಾರವಾಗಿತ್ತು. ಪಂಪ–ರನ್ನರಿಗೆ ಹೋಲಿಸಿದಾಗ ಪೊನ್ನನಲ್ಲಿ ವೃತ್ತಗಳ ಜಾತಿ ವೈವಿಧ್ಯ ಹೆಚ್ಚಿದೆ. ಆಶ್ವಾಸಗಳಲ್ಲಿ ವ್ಯತ್ಯಾಸವಿದ್ದರೂ ಒಟ್ಟು ಗಾತ್ರದಲ್ಲಿ ಶಾಂತಿಪುರಾಣ ಕಾವ್ಯ ಆದಿಪುರಾಣಕ್ಕೆ ಸರಿಸಮಾನವಾಗಿದ್ದು, ಆಶ್ವಾಸ ಸಂಖ್ಯೆಯಲ್ಲಿ ಸಮನಾಗಿದ್ದರೂ ಅಜಿತಪುರಾಣದ ಗಾತ್ರಕ್ಕಿಂತ ಶಾಂತಿಪುರಾಣ ಎರಡರಷ್ಟಿದೆ. ಶಾಂತಿಪುರಾಣದಲ್ಲಿ ಕಂದಗಳ ಸಂಖ್ಯೆ ಆದಿಪುರಾಣ–ಅಜಿತಪುರಾಣಗಳಿಗಿಂತ ಹೆಚ್ಚಿದೆ, ಅಜಿತಪುರಾಣದ ದುಪಟ್ಟಿದೆ.

ಪೊನ್ನನ ಕೃತಿ–ಕಾಲ

ಪೊನ್ನನ ಭುವನೈಕರಾಮಾಭ್ಯುದಯ ಚಂಪೂಕಾವ್ಯದ ಒಂದು ಹಸ್ತಪ್ರತಿಯಾದರೂ ಇಂದಿನವರೆಗೂ ಸಿಗದಿರುವುದು ಕನ್ನಡ ಸಾಹಿತ್ಯದ ದೊಡ್ಡ ನಷ್ಟಗಳಲ್ಲೊಂದು. ಇದರ ಸಂಬಂಧವಾಗಿ ಒಂದೇ ಒಂದು ಸ್ವಲ್ಪ ಸಮಾಧಾನದ ವಿಷಯವೆಂದರೆ 'ಭುವನೈಕರಾಮಾಭ್ಯುದಯ ಕಾವ್ಯದ ಪದ್ಯಗಳು' ಎಂದು ಹೇಳಬಹುದಾದ ಕೆಲವು ಪದ್ಯಗಳು ದೊರೆತಿವೆಯೆಂಬುದು. ಈ ಕಾವ್ಯದ ಹೆಸರಿನಿಂದ ದೊರೆತ ಪದ್ಯಗಳ ಆಧಾರದಿಂದ ಭುವನೈಕರಾಮಾಭ್ಯುದಯದ ವಸ್ತು ರಾಮಾಯಣಕ್ಕೆ ಸೇರಿದ್ದು ಎಂದು ನಿಶ್ಚಯವಾಗುತ್ತದೆ. ಈ ಅನುಪಲಬ್ಧ ಕಾವ್ಯದ ವಿಚಾರವಾಗಿಯೂ ಲಬ್ಧ ಪದ್ಯಗಳನ್ನು ಆಧರಿಸಿ ಕೆಲವಷ್ಟು ವಿಚಾರ, ವಿವಾದ, ವಿಮರ್ಶೆ ನಡೆದಿದೆ; ಚರ್ಚೆಯ ಮುಖ್ಯಾಂಶಗಳು ಸುತ್ತುವರಿದಿರುವುದು ಇವುಗಳ ಸುತ್ತ:

ಅ. ಭುವನೈಕರಾಮಾಭ್ಯುದಯ ಜೈನರಾಮಾಯಣವೊ
ಆ. ಜೈನೇತರ ರಾಮಾಯಣವೊ
ಇ. ಕಥಾನಾಯಕ ಯಾರು
ಈ. ರಚನೆಯ ಕಾಲಾವಧಿ
ಉ. ವಸ್ತುವೈಶಿಷ್ಟ್ಯ
ಊ. ಕಾವ್ಯಸ್ವರೂಪ

ಶಾಂತಿಪುರಾಣದಲ್ಲಿನ ವೃತ್ತಗಳ ಜಾತಿ ಮತ್ತು ಸಂಖ್ಯೆ

	ವೃತ್ತಗಳ ಹೆಸರು		ಆಶ್ವಾಸ ಸಂಖ್ಯೆ												
			I	II	III	IV	V	VI	VII	VIII	IX	X	XI	XII	ಒಟ್ಟು
1.	ಉತ್ಪಲಮಾಲೆ	....	9	6	7	8	8	9	10	13	9	10	6	12	107
2.	ಶಾರ್ದೂಲವಿಕ್ರೀಡಿತಂ	....	1	2	—	—	3	—	1	1	2	—	—	—	10
3.	ಸ್ರಗ್ಧರೆ	....	—	—	—	—	2	2	1	1	—	—	—	1	7
4.	ಮತ್ತೇಭವಿಕ್ರೀಡಿತಂ	....	8	12	8	11	14	8	24	15	15	16	13	3	147
5.	ಮಹಾಸ್ರಗ್ಧರೆ	....	1	2	—	1	1	1	1	4	6	2	1	1	21
6.	ಚಂಪಕಮಾಲೆ	....	9	5	6	6	6	7	21	33	17	7	7	4	128
7.	ಮಲ್ಲಿಕಾಮಾಲೆ	....	1	—	—	—	1	—	—	—	—	—	—	1	3
8.	ಮಂದಾಕ್ರಾಂತ	....	—	—	1	—	—	—	—	—	—	1	1	—	3
9.	ಹರಿಣಿ	....	—	—	2	2	3	2	3	—	1	2	4	1	20
10.	ಶಿಖರಿಣಿ	....	—	—	—	—	—	1	—	—	—	—	1	—	2
11.	ಮಾಲಿನಿ	....	—	—	1	—	1	—	1	1	—	—	—	—	4
12.	ಪೃಥ್ವಿ	....	—	—	—	—	1	—	—	1	1	—	1	1	5
13.	ತ್ರಿಪದಿ	....	—	2	—	—	—	—	—	—	—	2	—	—	4
14.	ತರಳ	....	—	—	—	—	—	—	—	—	—	—	—	1	1
15.	ಕಂದ	....	67	90	90	88	121	96	86	89	164	142	80	56	1169
16.	ಅಕ್ಕರ	....	—	—	—	—	—	—	—	—	1	4	—	—	5
17.	ರಗಳೆ	....	—	—	1	—	—	—	—	—	—	—	—	—	1
	ಆಶ್ವಾಸದಲ್ಲಿರುವ ವೃತ್ತಗಳು	....	96	119	116	116	161	126	148	158	216	186	114	81	1637

ಭುವನೈಕರಾಮಾಭ್ಯುದಯ ಬಹುತರವಾಗಿ ಜೈನರಾಮಾಯಣ. ಕನ್ನಡದಲ್ಲಿ ರಚಿತವಾದ ಮೊದಲ ಸಮಗ್ರ ರಾಮಾಯಣವನ್ನು ಬರೆದ ಹಿರಿಮೆ ಪೊನ್ನನದು; ಕನ್ನಡದಲ್ಲಿ ಸ್ವತಂತ್ರ ಸಮಗ್ರ ಶಾಂತಿಪುರಾಣ ಬರೆದು ಮನ್ನಣೆಯೂ ಪೊನ್ನನದೇ. ಇದೇ ಸಮಯದಲ್ಲಿ, ಕವಿರಾಜಮಾರ್ಗದಲ್ಲಿಯೂ ಕನ್ನಡ ರಾಮಾಯಣಕ್ಕೆ ಸೇರಿದ ಕೆಲವು ಪದ್ಯಗಳಿರುವುದನ್ನು ನೆನಪಿಡಬೇಕು. ಅಭಿನವ ಪಂಪ ನಾಗಚಂದ್ರನ ರಾಮಚಂದ್ರಚರಿತಪುರಾಣ (ಪಂಪರಾಮಾಯಣ)ದ ಮೇಲೆ ಇದರ ಪ್ರಭಾವವೇನು. ಇವೆರಡೂ ಕಾವ್ಯಗಳ ಸಾದೃಶ್ಯ ವೈದೃಶ್ಯಗಳೇನು ಎಂಬುದನ್ನು ಈಗ ಏನನ್ನೂ ಹೇಳಲು ಸಾಧ್ಯವಿಲ್ಲ.

ಪಂಪನ ವಿಕ್ರಮಾರ್ಜುನವಿಜಯದಲ್ಲಿ ಅರ್ಜುನನಿಗೂ ಪಂಪನ ಆಶ್ರಯದಾತನಾದ ಇಮ್ಮಡಿ ಅರಿಕೇಸರಿಗೂ ಅಭೇದ ಭಾವ ಕಲ್ಪಿಸಲಾಗಿದೆ. ಅದರಂತೆ ಪೊನ್ನನ ಭುವನೈಕರಾಮಾಭ್ಯುದಯದಲ್ಲಿ ರಾಮನೊಡನೆ ಪೊನ್ನಕವಿ ತನ್ನ ಸಮಕಾಲೀನ ಮಹಾವ್ಯಕ್ತಿ ಒಬ್ಬನನ್ನು ಸಮೀಕರಿಸಿರುವುದು ತೀರ ಸಂಭಾವ್ಯವಾಗಿದ್ದು ಆ ಅರ್ಹತೆಗೆ ಪಾತ್ರನಾದವರು ಯಾರೆಂಬುದರ ವಿಚಾರವಾಗಿ ಜಿಜ್ಞಾಸೆಯಾಗಿದೆ. ರಾಷ್ಟ್ರಕೂಟರ ಮುಮ್ಮಡಿ ಕೃಷ್ಣ ಅಥವಾ ಅವನ ಸಾಮಂತ ಅಧಿಪತಿ ಶಂಕರಗಂಡ—ಈ ಇಬ್ಬರಲ್ಲಿ ಯಾರೆಂಬುದು ಸಂಶೋಧನೆಯ ಪ್ರಮುಖ ಕೇಂದ್ರ ವಿಷಯ. ಶಂಕರಗಂಡನಿಗೂ ಬಿರುದಾವಲಿಗಳಿದ್ದು ಉನ್ನತ ವ್ಯಕ್ತಿತ್ವ ಪಡೆದಿದ್ದನು: ಭುವನೈಕರಾಮ, ಅಭಿಮಾನಧವಳ, ರಾಜಭೂರಿಶ್ರವ, ವಿದ್ವಿಷ್ಟನಾರಾಯಣ, ರಟ್ಟರಮೇರು, ಸತ್ಯಾರ್ಣವ, ಧರ್ಮರತ್ನಾಕರ, ಜಯಧೀರ, ಇತ್ಯಾದಿ. ಆದರೆ ಭುವನೈಕ ಎಂಬುದು ಬೇರೆಯವರಿಗೂ ಇದ್ದ ಬಿರುದಾಗಿತ್ತೆಂಬುದನ್ನೂ ಗಮನಿಸಬೇಕು. ಉದಾಹರಣೆಗೆ ಗಂಗರ ದೊರೆ ಎರೆಯಪ್ಪನಿಗೂ 'ಭುವನೈಕವೀರ' ಎಂಬ ಬಿರುದಿತ್ತು (ನೋಡಿ ಎಕ 8, ನಗರ 35). ಅದರಿಂದ ಕೆಲವು ಜಿಜ್ಞಾಸುಗಳು ಭಾವಿಸಿರುವಂತೆ ರಾಷ್ಟ್ರಕೂಟರ ಚಕ್ರವರ್ತಿ ಹಾಗೂ ಪೊನ್ನನಿಗೆ 'ಕವಿಚಕ್ರವರ್ತಿ' ಎಂಬ ಬಿರುದು ಕೊಟ್ಟವನೂ ಆದ ಮುಮ್ಮಡಿ ಕೃಷ್ಣನೇ (939–968) ಭುವನೈಕರಾಮ ಎಂಬುದನ್ನು ಹೆಚ್ಚು ಸಂಭಾವ್ಯ ವಿಶ್ವಾಸಾರ್ಹ ಹೇಳಿಕೆಯೆಂದು ಸ್ವೀಕರಿಸಬಹುದು. ಈ ದಿಕ್ಕಿನಲ್ಲಿ ಹೆಚ್ಚು ತಿಳಿದುಕೊಳ್ಳಲು ಅಪೇಕ್ಷೆಯಿರುವವರಿಗೆ ಅವರ ಜಯಕೆಯನ್ನು ತಣಿಸಲೊ ಎಂಬಂತೆ ಇರುವ ಪ್ರಾಕೃತ ಪದ್ಯದ ಸಾಲುಗಳು ಹೀಗಿವೆ :

ತಂ ಕಹಮಿ ಪುರಾಣು ಪ್ರಸಿದ್ಧಣಾಮು
ಸಿದ್ಧತ್ಥವರಿಸಿ ಭುವಣಾಹಿ ರಾಮು
ಭುವಣೆಕ್ಕರಾಮು ರಾಯಾಹಿರಾಉ
ಜಹಿಂ ಅಚ್ಛಇ ತುಡಿಗು ಮಹಾಣುಭಾಉ
ತಂದೀಣ ದಿಣ್ಣ ಘಣ ಕಣೆಯ ಪಯರು
ಮಹಿ ಪರಿಭಮಂತು ಮೇಪಾಡಿ ಣಯರು ॥

ಅಪಭ್ರಂಶ ಭಾಷೆಯಲ್ಲಿನ ಈ ಪಜ್ಝಟಿಕೆಯ ಸಾಲುಗಳು ಪುಷ್ಪದಂತಮಹಾಕವಿಯ 'ತಿಸಟ್ಠಿ ಮಹಾಪುರಿಸ ಗುಣಾಲಂಕಾರ' ಎಂಬ (ಮಹಾಪುರಾಣ) ಮಹಾಕಾವ್ಯದಿಂದ, ಅದರ ಮೊದಲನೆಯ ಸಂಧಿ ಮೂರನೆಯ ಕಡವಕದಿಂದ ಆರಿಸಲಾಗಿದೆ. ಹೆಚ್ಚುಕಡಮೆ ಪೊನ್ನನ ಸಮಕಾಲೀನನಾದ ಪುಷ್ಪದಂತನು ಇದೇ ರಾಷ್ಟ್ರಕೂಟ ಆಶ್ರಯದಲ್ಲಿ ತನ್ನ (ಮಹಾಪುರಾಣ) ಮಹಾಕಾವ್ಯವನ್ನು ಬರೆದವನು. ಇದರಲ್ಲಿ ಪುಷ್ಪದಂತನು ತುಡಿಗ, ಸಹತುಂಗರಾಯ (ಶುಭತುಂಗರಾಜ), ವಲ್ಲಭನೃಪ ಭುವನೈಕರಾಮ—ಎಂಬ ಹೆಸರುಗಳನ್ನು ಮುಮ್ಮಡಿ ಕೃಷ್ಣನಿಗೇ ಅನ್ವಯಿಸಿ ಅನುಮಾನಗಳನ್ನು ನಿವಾರಿಸಿ ಸ್ಪಷ್ಟ ಆಧಾರಗಳನ್ನು ಒದಗಿಸಿ ನೆರವಾಗಿದ್ದಾನೆ. ಅದರಿಂದ ಪೊನ್ನನು ಭುವನೈಕರಾಮಾಭ್ಯುದಯ ಕಾವ್ಯದಲ್ಲಿ, ಕನ್ನಡ ಚಂಪೂ ಲೌಕಿಕ ಕಾವ್ಯ ಮರ್ಯಾದೆಯನ್ನನುಸರಿಸಿ, ರಟ್ಟರ ಮೇರು ಮುಮ್ಮಡಿ ಕನ್ನರನನ್ನು ಚಾರಿತ್ರ ಮೇರು ಶ್ರೀರಾಮನಿಗೆ ಹೋಲಿಸಿ, ಪಂಪನಂತೆ ತಾನೂ ಸಮಕಾಲೀನ (ಆಯ್ದ ಕೆಲವು) ಚಾರಿತ್ರಿಕ ಅಂಶಗಳನ್ನು ರಾಮಾಯಣದ ಕಥಾಭಿತ್ತಿಯಲ್ಲಿ ಕೀಲಿಸಿ ರಚಿಸಿರಬೇಕೆಂಬ ನಿರೀಕ್ಷೆಯಲ್ಲಿ ಹುರುಳಿದೆ. ರಟ್ಟರ ಮೇರು ಚಕ್ರವರ್ತಿಗೂ ಧೀಮಂತ ಸಾಮಂತನಿಗೂ ಪ್ರಯೋಗ

ವಾಗಿರಬಹುದು. ಕಾವ್ಯಾವಲೋಕನದ ಪದ್ಯ 620ರಲ್ಲೂ, ಉಪ್ಪಿನ ಬೆಟಗೇರಿಯ ಶಾಸನದಲ್ಲೂ ಪ್ರಯೋಗವಾಗಿರುವ 'ರಟ್ಟರ ಮೇರು' ಎಂಬ ಪ್ರಶಸ್ತಿಯನ್ನೂ ನೆನೆಯಬಹುದು. ಆದರೆ 'ಭುವನೈಕರಾಮ'ನು ಶಂಕರಗಂಡ ಅಲ್ಲ ಎಂಬುದು ಸ್ಪಷ್ಟ. ನೊಳಂಬರ ಮಹೇಂದ್ರನನ್ನು ಕೊಂದು ಮಹೇಂದ್ರಾಂತಕನಾದ. ಎರೆಯಪ್ಪನನ್ನು ಶೂದ್ರಕನಿಗೆ ಹೋಲಿಸಿ ಒಂದನೆಯ ಗುಣವರ್ಮನು 'ಶೂದ್ರಕ' ಲೌಕಿಕ ಕಾವ್ಯವನ್ನು ರಚಿಸಿರುವ ಸಾಧ್ಯತೆಯನ್ನೂ ಇಲ್ಲಿಯೇ ಉಲ್ಲೇಖಿಸಬಹುದು. ಲೌಕಿಕ ಕಾವ್ಯಗಳಲ್ಲಿ ಆಶ್ರಿತ ದೊರೆಗಳನ್ನು ಪುರಾಣಪಾತ್ರದೊಂದಿಗೆ ಅಭೇದಭಾವನೆಯಿಂದ ಸಮೀಕರಿಸಿ ಕಾವ್ಯ ರಚಿಸಿದ ಪರಂಪರೆಯೇ ಇದೆ:

ಅ.	ಗಂಗರ ಎರೆಯಪ್ಪ	ಶೂದ್ರಕ	ಶೂದ್ರಕ	ಒಂದನೆಯ ಗುಣವರ್ಮ
ಆ.	ಇಮ್ಮಡಿ ಅರಿಕೇಸರಿ	ಅರ್ಜುನ	ವಿಕ್ರಮಾರ್ಜುನವಿಜಯ (ಪಂಪಭಾರತ)	ಪಂಪ
ಇ.	ಮುಮ್ಮಡಿ ಕೃಷ್ಣ	ಶ್ರೀರಾಮ	ಭುವನೈಕರಾಮಾಭ್ಯುದಯ	ಪೊನ್ನ
ಈ.	ಸತ್ಯಾಶ್ರಯ ಇರಿವಬೆಡಂಗ	ಭೀಮ	ಸಾಹಸಭೀಮವಿಜಯ (ಗದಾಯುದ್ಧ)	ರನ್ನ

ಕೋದಂಡರಾಮ, ಚಲದಂಕರಾಮ, ಕುವರಂಕರಾಮ ಮುಂತಾದ ಬಿರುದುಗಳು ಪರಿಚಿತವಾಗಿವೆ. ಭುವನೈಕರಾಮ ಬಿರುದಿನ ಚಕ್ರವರ್ತಿಯ ಚರಿತೆಯನ್ನು ತಗುಳ್ಚಿದ ಕಾವ್ಯಕ್ಕೆ ಕವಿ ಅದೇ ಹೆಸರಿಟ್ಟಿದ್ದಾನೆ. ಪೊನ್ನನನ್ನು ಹೆಸರಿಸುತ್ತಾ ಆತ ರಟ್ಟರಾಜ್ಯದಲ್ಲಿ ಖ್ಯಾತಿವೆತ್ತ ಕವಿಯೆಂದು ರನ್ನನು ಹೇಳಿರುವುದನ್ನೂ ವಿಶೇಷವಾಗಿ ಗಮನಿಸಬಹುದು.

ಇಷ್ಟು ಚರ್ಚಿಸಿದಮೇಲೂ ಭುವನೈಕರಾಮಾಭ್ಯುದಯ ಕಾವ್ಯದ ಕಥಾನಾಯಕ ಯಾರೆಂಬ ವಿಚಾರವನ್ನು ತೆರೆದ ವಿಷಯವಾಗಿಯೇ, ಮುಕ್ತವಾಗಿಯೇ ಇಡಬಹುದು. ಸಾಮಂತ ಅಥವಾ ಆಶ್ರಿತನನ್ನು ಕಾವ್ಯನಾಯಕನನ್ನಾಗಿ ಮಾಡಿಕೊಳ್ಳಬಾರದೆಂಬ ನಿರ್ಬಂಧ ಕವಿಗಳಿಗೆ ಯಾರೂ ಹೇರಿಲ್ಲ. ಸಮರ ಪರಶುರಾಮ ಬಿರುದಾಂಕಿತ ಚಾವುಂಡರಾಯನನ್ನು ಕಥಾನಾಯಕನನ್ನಾಗಿರಿಸಿಕೊಂಡು ರನ್ನನು 'ಪರಶುರಾಮಚರಿತೆ' ಕಾವ್ಯ ಬರೆದಿರಬಹುದೆಂಬ ಅಭಿಪ್ರಾಯಕ್ಕೆ ಅವಕಾಶವಿದೆ. ತನಗೆ ಆಶ್ರಯಕೊಟ್ಟ ಸತ್ಯಾಶ್ರಯನಿಗೆ ಸಾಹಸಭೀಮವಿಜಯ ಬರೆದಂತೆ, ಅತ್ತಿಮಬ್ಬೆಗೆ ಅಜಿತಪುರಾಣ ಬರೆದಂತೆ, ಚಾವುಂಡರಾಯನಿಗೆ ಪರಶುರಾಮಚರಿತೆಯನ್ನೂ ತೈಲಪನಿಗೆ ಚಕ್ರೇಶ್ವರಚರಿತೆಯನ್ನೂ ಬರೆದು ಪ್ರತಿ ಪೋಷಕನಿಗೂ ಕಾವ್ಯಧಾರೆ ಎರೆದಿರಬಹುದು—ಹೀಗೆ ಹೇಳುತ್ತಾ ಹೊರಟರೆ ಅದಕ್ಕೆಲ್ಲಿ ಕಡೆ !

ಪೊನ್ನನ ಅನುಪಲಬ್ಧ ಭುವನೈಕರಾಮಾಭ್ಯುದಯದ ಕೆಲವು ಪದ್ಯಗಳನ್ನು ಕಾವ್ಯಾವಲೋಕನ, ಸೂಕ್ತಿಸುಧಾರ್ಣವ ಮತ್ತು ಶಬ್ದಮಣಿದರ್ಪಣ (ಕಾವ್ಯಸಾರ) ಕೃತಿಗಳಿಂದ ಪತ್ತೆಮಾಡುವ ಪ್ರಯತ್ನ ನಡೆದಿದೆ. ಇವುಗಳಲ್ಲಿ ನಾನು ಕಾವ್ಯಾವಲೋಕನದ ಕೆಲವು ಪದ್ಯಗಳನ್ನು ಮಾತ್ರ ಇಲ್ಲಿ ಉದಾಹರಿಸಿದ್ದೇನೆ. ಇದರ ಜತೆಗೆ ಕಾವ್ಯಾವಲೋಕನದ 318 ಮೊದಲಾದುವನ್ನೂ, ಸೂಕ್ತಿಸುಧಾರ್ಣವದ ಚಂದ್ರೋದಯ ವರ್ಣನೆ 130ನೆಯ ಪದ್ಯ ಮತ್ತು ಯಾತ್ರಾಂಗ 5ನೆಯ ಪದ್ಯ ಮುಂತಾದುವನ್ನೂ, ಶಬ್ದಮಣಿದರ್ಪಣದ ಸೂತ್ರ 181 ಎರಡನೆಯ ಪ್ರಯೋಗ—ಹೀಗೆ ಇನ್ನೂ ಹತ್ತಾರು ಪದ್ಯ-ಪದ್ಯ ಭಾಗಗಳನ್ನೂ ಭುವನೈಕರಾಮಾಭ್ಯುದಯದ್ದೆಂದು ತಿಳಿಯಲು ಅವಕಾಶಗಳಿವೆ. ಆ ದಿಕ್ಕಿನಲ್ಲಿ ಪ್ರಯತ್ನ ಮುಂದುವರಿಸಿ ಒಂದು ವಿದ್ವತ್ಪೂರ್ಣ ಪ್ರಬಂಧವನ್ನು ಅಣಿಗೊಳಿಸಬಹುದು.

ಭುವನೈಕರಾಮಾಭ್ಯುದಯ ಕಾವ್ಯದ ಸ್ವರೂಪ ಕುರಿತೂ ಮೂರು ಮಾತು ಇಲ್ಲಿಯೇ ಹೇಳಿ ಮುಗಿಸಬಹುದು. ಅದೊಂದು ಚಂಪೂಕಾವ್ಯ. ವಾಲ್ಮೀಕಿರಾಮಾಯಣಕ್ಕೆ ಜೈನರಾಮಾಯಣ ಪರಂಪರೆಯನ್ನೂ ಕಸಿಮಾಡಿ 'ಮಿಶ್ರತಳಿ' ಯನ್ನು ಸಿದ್ಧಪಡಿಸಿರಬಹುದು. ಅದರಲ್ಲಿ ಹದಿನಾಲ್ಕು ಆಶ್ವಾಸಗಳಿದ್ದು, ಒಂದೊಂದು ಆಶ್ವಾಸವೂ ಒಂದೊಂದು ಲೋಕಕ್ಕೆ ಸಾಸಟಿಯಾಗಿತ್ತೆಂದು ಕವಿಯ ಕಲ್ಪನೆ :

ವಿದಿತ ಭುವನೈಕ ರಾಮಾ
ಭ್ಯುದಯಕ್ಕಂ ಬೆಲೆಗವಾವುದಂತರವಿಂತೀ
ಪದಿನಾಲ್ಕುಂ ಭುವನಂಗಳ್
ಪದಿನಾಲ್ಕಾಶ್ವಾಸ ರಚನೆಗಂ ಬೆಲೆಯಕ್ಕುಂ ॥ 12–66

ಪೊನ್ನಕವಿಯ 'ಭುವನೈಕರಾಮಾಭ್ಯುದಯ'ವೆಂಬ ಕಾವ್ಯಕ್ಕೆ ಸೇರಿದ ಪದ್ಯಗಳೆಂದು ವಿದ್ವಾಂಸರು ಭಾವಿಸಿರುವ ಕೆಲವು ಪದ್ಯಗಳನ್ನು ಇಲ್ಲಿ ಉದಾಹರಿಸಲಾಗಿದೆ. ಈ ಕಂದ–ವೃತ್ತ ಪದ್ಯಗಳನ್ನು 'ಕಾವ್ಯಾವಲೋಕನ' ದಿಂದ ಆಯಲಾಗಿವೆ :

ಹರನಗಮಿಂತಿದು ಲಂಕೇ
ಶ್ವರನೀ ಗಿರಿವರಮನೊತ್ತಿ ಕಿಟ್ಕಿತ್ತಿದನ
ಚ್ಚರಿವಟ್ಟು ಸುರವಿಯಚ್ಚರ
ಗರುಡೋರಗಸಮಿತಿ ನೆರೆದು ನಡೆ ನೋಡುವಿನಂ ॥ 100

ಮನದಿಂ ಬೇಗು ಮುಟ್ಟಿದ
ನನೂನಫಲಕುಸುಮಪಲ್ಲವಭ್ರಾಜಿತಮಂ
ಬನದೊಳಗೆ ಪವನನಂದನ
ನನಿಂದ್ಯಗುಣನೆಸೆವಶೋಕಧಾತ್ರೀರುಹಮಂ ॥ 106

ಕೈಲಾಸಾದ್ರಿಯನೆತ್ತಿ ನೊಂದ ಭುಜಸಂದೋಹಂಗಳುಂ ಕೃಷ್ಣಕೀ
ಲಾಲಂ ಸೋರ್ವಿನಮೆಯ್ದೆ ನೀಳ್ದನಿತುಮಾ ಗ್ರೀವಂಗಳಂ ರಾಗದಿಂ
ನೀಲಗ್ರೀವನಳುಂಬಮಪ್ಪ ದಯೆಯಿಂದಂ ನೀವಿ ರಾಗಾಬ್ಧಿಕ
ಲ್ಲೋಲಂ ಪೆರ್ಚೆ ದಶಾನನಂಗೆ ಪಿರಿದೊಂದುತ್ಸಾಹಮಂ ಮಾಡಿದಂ ॥ 168

ಜ್ಯಾಯನರಣ್ಯದೊಳ್ ನೆಲಸುಗುಂ ಗಡ ಮಯ್ಯ ಕನೀಯನನ್ವಯ
ಶ್ರೀಯೊಳಧಿಷ್ಠಿತಂ ಗಡಮಿನಾನ್ವಯಜಾತರೊಳಿನ್ನವಿನ್ನವ
ನ್ಯಾಯಮವಿನ್ನವಿನ್ನವಬಳಾಮುಖರತ್ವಮವಿನ್ನವಿನ್ನವ
ಶ್ರೇಯಮವಿನ್ನವಿನ್ನವಕೃತಕ್ರಮವೃತ್ತಿಯನಾರೊ ಸೈರಿಪರ್ ॥ 189

ಅದಱಿಂದಮೊಪ್ಪಿಸೊಪ್ಪಿಸು
ಸುದತಿಯನಣ್ಣಣ್ಣ ಸಾರ್ಚು ಸಾರ್ಚೆಲೆ ಎಲೆ ನೀ
ನದಿರದೆ ನಿಲ್ನಿಲ್ನೀನಿ
ಲ್ಲಿದಿರ್ಚಿದಿರ್ಚೆಸೆ ಜಟಾಯು ರಾವಣನೆಂಗುಂ ॥ 288

ಪೇಱಿರ್ದಿಪ್ಪತ್ತು ತೋಳುಂ ದಶಮುಖ ಮುಖರಾಟೋಪಮುಂ ಮಿಟ್ಟಿ ರೂಪಂ
ತೋಱಿರ್ದಂ ತಿರ್ದ ರೂಪುಂ ಹರನಿದಿರೊಳಗುರ್ವಪ್ಪಿನಂ ಪೊಣ್ಮಿದಣ್ಮಿಂ
ಬೀಱುತ್ತುಂ ದೇವನಂ ಪೂಜಿಸಲವಯವದಿಂದೊಂದೆರಟ್ಯೊಱು ನಾಲ್ಕ
ಯಾ ಱೇಟಿಂಟೊಂಬತ್ತೆಂದಿಂತರಿಗುಮೆ ತಲೆ ಯೊಂಬತ್ತುಮಂ ದೈತ್ಯರಾಜಂ ॥ 301

ತಂದೆಯ ನನ್ನಿಗಿತ್ತನನುಜಂಗೆಳೆಯುಂ ರಘುವಂಶನೆಂದು ಜೀ
ಯೆಂದಪುದೀ ಜಗಜ್ಜನಮಿದಂ ಸಿರಿಗೆಂಬುದೊ ಲೋಭಮೆಂಬುದೋ
ಪಂದೆತನಕ್ಕೆ ಮೊತ್ತಮೊದಲೆಂಬುದೊ ಮತ್ತಿನ ನೆಂಬೊಡೂನ ನೆಂ
ಗುಂ ದೊರೆವೆತ್ತನೆಂಗುವೊ ಕುಲೋದ್ಗತನೆಂಗುವೊ ತಕ್ಕನೆಂಗುವೋ ॥ 319

ಗಗನಾಧ್ವರ್ ಶರಣಾಗಿಮಾಗಿಮಮರರ್ ನಿಂದಾನಿಮಾನಿಂ ದಿಶಾ
ಳಿಗಧೀಶರ್ ನೆರೆದೊಡ್ಡಿ ಮೊಡ್ಡಿ ಮುರಗರ್ ಬಂದೆಯ್ದಿ ಮೆಯ್ದಿಂ ಮನ
ಸ್ವಿಗಳೀ ದೈತ್ಯನನಿಕ್ಕಿ ಮಿಕ್ಕಿ ಮದಟರ್ ಪೂಣ್ದಿ ಣ್ಮಿ ಮಣ್ಮಿಂ ಯಶೋ
ರ್ಥಿಗಳೆನ್ನಂ ನೆಲೆಗುಯ್ಯಿ ಮುಯ್ಯಿಮೆನುತುಂ ತನ್ವಂಗಿ ಪುಯ್ಯಲ್ಚಿದಳ್ ॥ 461

ದಶರಥನಾಗಿಯುಂ ದಶಸಹಸ್ರರಥಂ ರವಿವಂಶನಾಗಿಯುಂ
ಶಶಧರಕೀರ್ತಿರೂಪನಿನನಾಗಿಯುಮಸ್ತಮಯಾಪವರ್ಜಿ ಕ
ರ್ಕಶಬಲನಾಗಿಯುಂ ಮೃದುವಪುಃಪ್ರಸರಂ ಮತಿತೀವ್ರನಾಗಿಯುಂ
ಪ್ರಶಮಿತಚಿತ್ತನೆಂತುಮವಿರುದ್ಧಗುಣಂ ಗುಣವಜ್ಜನಸ್ತುತಂ ॥ 730

ಸಂದಿಸೆ ಗಱಿ ಸಂದಿಸೆ ರಘು
ನಂದನನೆಡೆಗಿಱಿದು ಕವಿವ ಕಣೆಯಿಂ ಮುನ್ನಂ
ಬಂದುದು ನೆಲಕ್ಕೆ ರಿಪುಭಟ
ವೃಂದಂ ಬೞಿಯಂ ನಿಶಾತವಿಶಿಖ ಪ್ರಸರಂ ॥ 742

ಅೞಲನೆರ್ದೆಯೊಳ್ ತಿಣ್ಣಂ ತೞ್ಕೈಸಿ ಪುತ್ರವಿಮೋಹದಿಂ
ದೞವಿ ತನುವಂ ಹಾಹಾ ಹಾ ವತ್ಸಯೆಂದಮರ್ದಪ್ಪಿಕೊಂ
ಡೞುತುಮೞುತುಂ ನಟ್ಟಿರ್ದಂಬಂ ಮುನೀಶನಿಳೀಶನಿಂ
ಕಿೞಿಸೆ ಸೆರಲಿಂ ಮುನ್ನಂ ತದ್ದ್ವಾರದಿಂದಸು ಪೋಪುದುಂ ॥ 815

ತ್ರಿದಶೇಂದ್ರಾರ್ಜಿತಶೌರ್ಯವೊರ್ಮೆ ಕಿೞಿ ಪೋಯ್ತಾಭೀಳದಿಕ್ಪಾಲರೊ
ಡ್ಡಿದ ಸೈನ್ಯೋದ್ಧತಿ ಮತ್ತಮೊರ್ಮೆ ಕಿೞಿ ಕೇಳ್ ನಿರ್ಮೂಲಮಾಯ್ತಿನ್ನುಮೊ
ರ್ಮೆ ದಲೆನ್ನೊಳ್ ಸಮನಪ್ಪವಂ ಪೊಣರೆ ಕೀೞ್ಪಂದೊಪ್ಪುಗುಂ ಬೆಂಗಿಯೇ
ಮುದುವರ್ದೇ ನಿನಗೆಂತು ಕೀೞ್ಪಿನತುಳ ಶ್ರೀಚಂದ್ರಹಾಸಾಸಿಯುಂ ॥ 817

ಸಂಗತನಿಜಹಸ್ತಕ ನಿ
ಷ್ಟ್ರಾರಗುಲಿಧೃತಮುಂ ಪ್ರಿಯಾಮನಃಖೇದಲತಾ
ಭಂಗುರಮುಂ ರವಿಮಂಡಳ
ದುಂಗುರಮುಂ ರಘುಜನಿತ್ತನಣುವನ ಕೆಯ್ಯೊಳ್ ॥ 946

ಉದಯಾಸ್ತೋನ್ನತ ಶೈಲಸೇತು ಹಿಮವತ್ಕುತ್ಕೀಲ ಪರ್ಯಂತಂ ಸಂ
ಪದೆಯುಂ ವಾರ್ಧಿತರತ್ನರಂಗ ನಿನದತ್ಕಾಂಚೀಕಳಾಪಾಂಚಿತಾ
ಸ್ಪದೆಯುಂ ಸಾಧಿಸಿ ಕಬ್ಬಿಗಂಗೆ ನೆಲನಂ ನಿರ್ವ್ಯಾಜದಿಂದಂ ನಿಮಿ
ರ್ಚಿದ ಗೆಲ್ಲಂ ಭುವನೈಕರಾಮ ಮಹಿಪಂಗಕ್ಕುಂ ಪೆಱರ್ಗಕ್ಕುಮೇ ॥—ಕಾವ್ಯಾವಲೋಕನ, ಸೂತ್ರ 9ಕ್ಕೆ
ಶಬ್ದಮಣಿದರ್ಪಣ, ಸೂತ್ರ 167

ಜವನೇಱಿದೊಂದು ಜ
ಕ್ಕಂದೊಟಿಲಂತೆ ಕಣ್ಗೆಸೆದುದೇರಿದಿಭಂ ಭುವನೈಕರಾಮನಾ ॥
—ಶಬ್ದಮಣಿದರ್ಪಣ, ಸೂತ್ರ 183. ಪ್ರಯೋಗ 2

....ಆನೆಯ ಮೇಲೆಯುಮಾಳ ಮೇಲೆಯುಂ
ಕುದುರೆಯ ಮೇಲೆಯುಂ ಪರಿದುದೊಂದೆ ಗಜಂ ಭುವನೈಕರಾಮನಾ ॥
—ಶಬ್ದಮಣಿದರ್ಪಣ, ಸ. 130 ಪ್ರಯೋಗ

ಪೆಡಂ ಮೆಟ್ಟದೆ ಸೂಟಿಱಿದುದೇಱಿದಿಭಂ ಭುವನೈಕರಾಮನಾ ॥ — ಶಮದ, 84–1

ಮೇಲೆ ಉದಾಹರಿಸಿರುವ ಪದ್ಯಗಳಿಂದ ಪೊನ್ನಕವಿಯ ಕಾವ್ಯಶಕ್ತಿಯನ್ನು ಅಥವಾ ಇಡೀ ಕಾವ್ಯದ ದರ್ಶನವನ್ನು ಪಡೆಯಲು ಸಾಧ್ಯವಾಗುವುದಿಲ್ಲ, ನಿಜ. ಆದರೆ ಒಟ್ಟು ಕಾವ್ಯದ ಒಂದು ಊಹಾತ್ಮಕ ಸ್ವರೂಪ ಚಿತ್ರಣಕ್ಕೆ ಸ್ವಲ್ಪಮಟ್ಟಿಗೆ ಇಣುಕು ನೋಟ ಪಡೆಯಲು ಸಾಧ್ಯವಿದೆ. ಆಗಲೇ ತಿಳಿಸಿರುವಂತೆ ಇನ್ನೂ ಅನ್ಯತ್ರ ಭುವನೈಕರಾಮಾಭ್ಯುದಯಕ್ಕೆ ಸೇರಿದ ಪದ್ಯಗಳೂ, ಪದ್ಯಭಾಗಗಳೂ ಕೆಲವು ಸಿಗಬಹುದು. ಈಗ ಇಲ್ಲಿ ಉದಾಹೃತವಾಗಿರುವ ಪದ್ಯಗಳಲ್ಲಿ ಕೆಲವಂತೂ ಆಯಾ ಪದ್ಯರಚನೆಗೆ ಕಾರಣವಾಗಿರಬಹುದಾದ ಇಡೀ ಸಂನಿವೇಶವನ್ನು ಕಲ್ಪಿಸಿಕೊಳ್ಳಲು ಸಹಕಾರಿಯಾಗಿವೆ. ಶಬ್ದಗಳ ಪುನರಾವೃತ್ತಿಯು ಪೊನ್ನನಿಗೆ ಪ್ರಿಯವಾದುದೆಂಬುದನ್ನು ಇಲ್ಲಿನ ಪದ್ಯಗಳಿಂದ ತಿಳಿಯಬಹುದಾಗಿದೆ; 189, 288, 461 ಸಂಖ್ಯೆಯ ಪದ್ಯಗಳು ಈ ಹೇಳಿಕೆಯನ್ನು ಅನುಮೋದಿಸುತ್ತವೆ. ಕಾವ್ಯಾವಲೋಕನ ಉದಾಹೃತ 815 ನೆಯ ಪದ್ಯ ಪ್ರಾಣೋತ್ಕ್ರಮಣಾವಸ್ಥೆಯಲ್ಲಿ ಮಗನ ನೆನಪು ತರುವ ನೋವಿನ ಆಳವನ್ನು ಚೆನ್ನಾಗಿ ನಾಟಿಸುವಂತೆ ವರ್ಣನೆ ಮೂಡಿ ಬಂದಿದೆ. ಈ ಎಲ್ಲ ಪದ್ಯಗಳ ಸಮೀಕ್ಷೆಯಿಂದ ಪೊನ್ನನ ಕಾವ್ಯಶೈಲಿ ಉತ್ತಮತರವಾಗಿದೆಯೆಂದು ಮನವಟ್ಟಾಗುತ್ತದೆ. ಇಲ್ಲಿ ಒಂದು ಹಿಡಿಗಷ್ಟೇ ಸಿಗುವ ಕೇವಲ ಕೆಲವೇ ಬಿಡಿ ಪದ್ಯಗಳಲ್ಲಿ ಚೆಲುವು ಚೆಲ್ಲಿದಂತೆ ಸೂಸಾಡಿರುವ ಸೊಗಸನ್ನು ಮೊಗೆದು ಪೊನ್ನಕವಿಯ ಯೋಗ್ಯತೆಯನ್ನು ಅಳೆಯುವುದು ವಿಮರ್ಶಕನ ಧಾರ್ಷ್ಟ್ಯಕ್ಕೂ ಕವಿಗೆ ಮಾಡಿವ ಅಪಚಾರಕ್ಕೂ ಉದಾಹರಣೆಯಾದೀತು !

ಪೊನ್ನ ರತ್ನತ್ರಯರಲ್ಲಿ ಒಬ್ಬ, ಜಿನಸಮಯದೀಪಕರಲ್ಲಿ ಒಬ್ಬ. ಇನ್ನಿಬ್ಬರು ಪಂಪ, ರನ್ನ. ಕಾಲದ ದೃಷ್ಟಿಯಿಂದ ಮಾತ್ರವಲ್ಲದೆ ಕಾವ್ಯ ಮೌಲ್ಯದ ದೃಷ್ಟಿಯಿಂದಲೂ ಕೊಡಬಹುದಾದ ಕ್ರಮ ಇದು--ಪಂಪ, ಪೊನ್ನ, ರನ್ನ. ಆದ್ದರಿಕೆ ಒಮ್ಮೊಮ್ಮೆ ಇವರ ಯೋಗ್ಯತೆಗನುಗುಣವಾಗಿ, ಒಮ್ಮೊಮ್ಮೆ ಪಂಪ, ರನ್ನ, ಪೊನ್ನ ಎಂಬ ಕ್ರಮದಲ್ಲೂ ಇಡಬಹುದೆಂದೂ ಅನಿಸುವುದುಂಟು. ಆಗಮವನ್ನು ಬೆಳಗಿದ ಶಾಂತಿಪುರಾಣ ಮಾತ್ರ ದೊರೆತು, ಲೌಕಿಕವನ್ನು ಬೆಳಗಿದ ಭುವನೈಕರಾಮಾಭ್ಯುದಯ ದೊರೆಯದಿರುವಾಗ ಹೀಗೆ ನಿರ್ಧಾರಗಳನ್ನು ತಳೆಯುವುದು ಆರೋಗ್ಯಕರ ವಿಮರ್ಶೆಯ ಲಕ್ಷಣವಲ್ಲ.

ಪುರಾಣಚೂಡಾಮಣಿ ಶಾಂತಿಪುರಾಣ ರಚನೆಗೆ ಪ್ರೇರಕರಾದ ಮಲ್ಲಪ-ಪುನ್ನಮಯ್ಯ ಸೋದರರನ್ನು ವಿಸ್ತಾರವಾಗಿ ಪರಿಚಯಿಸಿದ ಪೊನ್ನಕವಿ ತನ್ನ ವಿಚಾರಕ್ಕೆ ಕೃಪಣನಾಗಿದ್ದಾನೆ (ನೇಮಿಚಂದ್ರನಂತೆ). ಪೊನ್ನನು ಮೂಲತಃ ತೆಲುಗು ನಾಡಿನವನೆಂದೂ, ಅಲ್ಲಿ ಆತನಿಗೆ ಸರ್ವದೇವ ಎಂಬ ಹೆಸರಿದ್ದಿತೆಂದೂ, ಈ ಸರ್ವದೇವನು ತೆಲುಗು ಭಾಷೆಯಲ್ಲಿ 'ಆದಿ ಪುರಾಣಮು' ಕಾವ್ಯ ರಚಿಸಿದ್ದನೆಂದೂ ಸಂಶಯ ವ್ಯಕ್ತಪಟ್ಟಿರುವುದುಂಟು. ಇವೆಲ್ಲ ರೆ ರಾಜ್ಯದ ಹೇಳಿಕೆಗಳು. ಪೊನ್ನನಂತೆ ಪಂಪನೂ ಈಗಿನ ಆಂಧ್ರಪ್ರದೇಶಕ್ಕೆ ಸೇರಿದ ವೆಂಗಿಮಂಡಲದವನು, ಪಂಪನ ವಿಚಾರದಲ್ಲಿಯೂ ಇಂತಹುದೊಂದು

ಹೇಳಿಕೆಯಿದೆ. ಪದ್ಮಕವಿ ಎಂಬ ಹೆಸರಿನ ತೆಲುಗು ಕವಿ ತೆಲುಗು ಭಾಷೆಯಲ್ಲಿ 'ಜಿನೇಂದ್ರಪುರಾಣ'ವೆಂಬ ಹೆಸರಿನ ಕಾವ್ಯ ಬರೆದಂತೆ ತಿಳಿದುಬರುತ್ತದೆ. ಈ ಪದ್ಮಕವಿ ಬೇರೆ ಯಾರೂ ಆಗಿರದೆ ಕನ್ನಡದ ಆದಿಕವಿ ಪಂಪನೇ ಇರಬೇಕೆಂದೂ, ಈ ಜಿನೇಂದ್ರಪುರಾಣ ಪಂಪನ ಗುರುವಾದ ಜಿನೇಂದ್ರ (=ದೇವೇಂದ್ರ) ಮುನಿಯ ಚರಿತೆಯೇ ಇರಬೇಕೆಂದೂ ಊಹಿಸಲಾಗಿದೆ. ಈ ಕಲ್ಪನೆಗೆ ಕಿರೀಟವಿಟ್ಟು, ಪಂಪನು ಮೊದಲಿಗೆ ತೆಲುಗುನಾಡಿನವನೂ ತೆಲುಗು ಮಾತೃಭಾಷೆಯವನೂ ಆಗಿದ್ದು, ಅಲ್ಲಿ ಆತನಿಗೆ ಯೋಗ್ಯವಾದ ರಾಜಾಶ್ರಯ ಪುರಸ್ಕಾರ ಪ್ರೋತ್ಸಾಹಗಳು ಸಿಗದಿದ್ದ ಕಾರಣ ಆತ ಕನ್ನಡ ರಾಜರ ಒಡ್ಡೋಲಗಕ್ಕೆ ಬಂದನೆಂದೂ ಹೇಳಿಕೆ ಕೊಟ್ಟಿದ್ದಾರೆ. ಇದು ಕೂಡ ಪೊನ್ನ ತೆಲುಗು ಭಾಷೆಯಲ್ಲಿ ಕಾವ್ಯ ಬರೆದಿರಬೇಕೆಂಬ ಭಾವನೆಯಷ್ಟೇ ಬೆಲೆಯುಳ್ಳ ತಿಳಿವಳಿಕೆ. ಇದರಂತೆ ಪೊನ್ನನು ಗತಪ್ರತ್ಯಾಗತ, ಅಲಂಕಾರ ಎಂಬ ಇನ್ನೆರಡು ಕೃತಿಗಳನ್ನು ಬರೆದಿರುವ, ಇವೆರಡೂ ಒಂದೇ ಕೃತಿಯ ಬೇರೆ ಹೆಸರುಗಳೆಂಬ, ಇದು ಸಂಸ್ಕೃತದಲ್ಲಿತ್ತೆಂಬ ಹೇಳಿಕೆಯೂ ಊಹೆಯನ್ನೇ ಅವಲಂಬಿಸಿ ನಿಂತಿದೆ. ಇನ್ನೂ 39 ಕಂದಪದ್ಯಗಳ ಸ್ತೋತ್ರ ಕೃತಿ "ಜಿನಾಕ್ಷರಮಾಲೆ" ದೊರೆತಿದ್ದು, ಅದರಲ್ಲಿ

ಟಾಂತಂಬರಂ ಬುಧರ್ ಪೊಗ
ಟ್ವಂತಕ್ಕರಂ ಮಾಲೆಯಂ ಜಿನಸ್ತವನದೊಳೋ
ರಂತಿರೆ ಪೇಟ್ದಿಂ ಹಿಮಸೇ
ತ್ವಂತವರಂ ಪರೆವಿನಂ ಕುರುಳ್ಗಳ ಸವಣಂ ॥

ಎಂಬ ಪದ್ಯಾಂತದಲ್ಲಿ 'ಕುರುಳ್ಗಳ ಸವಣಂ' ಎಂದು ಸ್ಪಷ್ಟವಾಗಿರುವುದರಿಂದ ಇದನ್ನು ಪೊನ್ನಕೃತವೆಂದು ಭಾವಿಸಲು ಪುಷ್ಟಿಯಿದೆ. ಅಸ್ವರಗಳಾದ ವ್ಯಂಜನಾಕ್ಷರಗಳಿಂದ ಪ್ರತಿ ಪದ್ಯ ಪ್ರಾರಂಭವಾಗುವ ಇಲ್ಲಿನ ಸ್ತೋತ್ರಗಳಲ್ಲಿ ಸ್ತುತಿಯೇನೋ ಇದೆ, ಕಾವ್ಯ ಇಲ್ಲ. ಆಂತರಿಕ ಪ್ರಮಾಣಾಧಾರಗಳಿಂದ ಇಲ್ಲಿನ ಎರಡು ಮೂರು ಪದ್ಯಭಾಗಗಳಿಗೆ ಹೋಲುವ ಮಾತುಗಳನ್ನು ಶಾಂತಿಪುರಾಣದಲ್ಲಿ ಗುರುತಿಸಬಹುದು.

ಪೊನ್ನಕವಿಯ ಕಾಲ ಯಾವುದು ಎಂಬ ವಿಚಾರದಲ್ಲೂ ಸಾಕಷ್ಟು ಭಿನ್ನಾಭಿಪ್ರಾಯವಿದೆ. ಪೊನ್ನನ ಕಾಲ 933, 945, 950, 958, 960, 973—ಹೀಗೆ ಬೇರೆಬೇರೆ ಸೂಚನೆಗಳಿವೆ. ಈತ ಪಂಪನಿಗಿಂತ ಮುಂಚಿನವನೊ ಅನಂತರದವನೊ ಎಂಬುದು ಬಹಳ ಮುಖ್ಯ ವಿಚಾರ. ಪೊನ್ನನು ಪಂಪ ಪೂರ್ವಕಾಲದವನೆಂದೂ ಅಭಿಪ್ರಾಯ ವ್ಯಕ್ತಪಡಿಸಿದವರುಂಟು, ಪಂಪನ ಅನಂತರದವನೆಂದು ಹೇಳಿದವರುಂಟು; ಪಂಪ–ಪೊನ್ನರನ್ನು ಸ್ಮರಿಸಿರುವ, ಇವರಿಬ್ಬರಾದ ಮೇಲೆ ಬಂದ, ಕವಿಗಳಲ್ಲಿ ಇವರಿಬ್ಬರ ಹೆಸರುಗಳನ್ನು ಹೇಳಿರುವ ಕ್ರಮವನ್ನು ಬೆನ್ನುಹತ್ತಿ ಕಾಲಹಿಡಿಯಲು ಪ್ರಯತ್ನಿಸಿದವರುಂಟು. ಪಂಪನಿಗಿಂತ ಮೊದಲು ಪೊನ್ನನ ಹೆಸರು ಹೇಳಿದರೆ, ಅಷ್ಟಕ್ಕೇ ಪೊನ್ನನು ಪಂಪನಿಗಿಂತ ಮೊದಲಿನವನಿರಬೇಕೆಂದೂ ಮತ್ತಿತರರು ಇದರ ತದ್ವಿರುದ್ಧವಾದ ಉಲ್ಲೇಖಗಳತ್ತ ಗಮನ ಸೆಳೆದು ಬೇರೆಯಾದ ತೇದಿಯನ್ನು ಊಹಿಸಿ ತಿಳಿಸಿದ್ದಾರೆ. ಈ ಪಂಪ ತನ್ನ ಕಾವ್ಯಗಳಲ್ಲಿ ಪೊನ್ನನನ್ನಾಗಲಿ, ಪೊನ್ನ ತನ್ನ ಕಾವ್ಯಗಳಲ್ಲಿ ಪಂಪನನ್ನಾಗಲಿ ಹೆಸರಿಸಿಲ್ಲದಿರುವುದೂ ಈ ಸಮಸ್ಯೆ ಮತ್ತಷ್ಟು ಸಿಕ್ಕಾಗಲು ಕಾರಣವಾಗಿದೆ. ಹೀಗೆ ಇವರು ಒಬ್ಬರನ್ನೊಬ್ಬರು ಹೆಸರಿಸದಿರುವುದನ್ನೇ ವ್ಯಾಜವಾಗಿರಿಸಿ, ಇವರಿಬ್ಬರಿಗೂ ಮತ್ಸರವಿತ್ತೆಂದೂ ಇವರಿಬ್ಬರೂ ಪರಸ್ಪರ ಪೈಪೋಟಿಯಿಂದ ಕಾವ್ಯ ಬರೆದರೆಂದೂ ಮತ್ತೊಂದು ತರ್ಕ ತಲೆಹಾಕಿತು.

ನಿಜ ಸಂಗತಿಯೆಂದರೆ ಈ ಬಗೆಯ ಪ್ರಯತ್ನಗಳು ವಿಶ್ವಸನೀಯವಾಗುವುದಿಲ್ಲ. ಪೊನ್ನ ತನ್ನ ಕೃತಿಗಳನ್ನು ಹೆಸರಿಸಿದ್ದಾನೆಯೇ ಹೊರತು ತನ್ನ ತಂದೆ, ತಾಯಿ, ಮಡದಿ, ಮಕ್ಕಳ ಬಗೆಗೆ ಹಾಗೂ ತನ್ನ ಕಾಲ ಕುರಿತು ಏನನ್ನೂ ಹೇಳಿಲ್ಲವೆಂದು ಈ ಹಿಂದೆಯೇ ಎರಡು ಕಡೆ ತಿಳಿಸಿದ್ದೇನೆ. ವಾಸ್ತವವಾಗಿ ಪೊನ್ನನ ಕಾಲನಿರ್ಧಾರಕ್ಕೆ ಬೇಕಾಗುವ ಅಂತರ ಬಾಹ್ಯ ಪ್ರಮಾಣಗಳನ್ನು ಹುಡುಕಿದರೆ ವಿಪುಲವಾದ ಸಾಮಗ್ರಿ ಸಿಗುತ್ತದೆ. ಕೊಂಕಣ ಸುತ್ತಿ ಮೈಲಾರಕ್ಕೆ ಬರುವುದಕ್ಕಿಂತ ಪೊನ್ನ

ತನ್ನ ಕಾವ್ಯದಲ್ಲಿ ಹೇಳಿರುವ ರಾಷ್ಟ್ರಕೂಟರ ಕೃಷ್ಣಮಹಾರಾಜ, ಮಲ್ಲಪ, ಪುನ್ನಮಯ್ಯ—ಇವರ ಕಾಲವನ್ನು ಗೊತ್ತು ಮಾಡಿದರೆ ಪೊನ್ನನ ಕಾಲ ತಾನಾಗಿ ನಿರ್ಧಾರಕ್ಕಿಳಿಯುತ್ತದೆ. ಈ ಪೀಠಿಕೆಯಲ್ಲಿ ಇದನ್ನು ಅತಿ ಸಂಗ್ರಹವಾಗಿ ಪುಟ 31–32 ರಲ್ಲಿ ಸೂಚಿಸಿದ್ದೇನೆ. ಪೊನ್ನ ಸಂಸಾರ ತೊರೆದು ಬಂದು ಸಂನ್ಯಾಸ ಸ್ವೀಕರಿಸಿರುವ ಸವಣನಾದುದರಿಂದ ಗೃಹಸ್ಥಾಶ್ರಮ ಸಂಬಂಧವಾದ ತಂದೆ ತಾಯಿ ಹೆಂಡತಿ ಮಕ್ಕಳು ಊರು ಕೇರಿ ಮೊದಲಾದ ಸ್ವವಿಷಯ ನಿರೂಪಣೆಗೆ ತೊಡಗದೆ ಮೂಕನಾಗುವುದನ್ನು ಅರ್ಥಮಾಡಿಕೊಳ್ಳಬಹುದು. ಆ ಎತ್ತರದಲ್ಲಿರುವಾಗ ಅವನದು ಅದು ಮರೆತ ಬಾಳು, ನಮಗೂ ಅದು ಗತ ಪ್ರತ್ಯಾಗತವೇ. ಆದರೆ ಭುವನೈಕರಾಮಾಭ್ಯುದಯ ಬರೆದಾಗ ಆತ ಗೃಹಸ್ಥನಿದ್ದು ಆ ಕಾವ್ಯದಲ್ಲಿ ಪೊನ್ನನ ಬದುಕಿನ ಮಾಹಿತಿಗಳು ದಾಖಲಾಗಿರುವ ಸಾಧ್ಯತೆಯೇ ಹೆಚ್ಚಾಗಿ ಕಾಣುತ್ತದೆ. ಕನ್ನಡನಾಡಿನ ಉನ್ನತಿ ವೈಭವ ವಿಸ್ತಾರಗಳನ್ನು ಶಿಲ್ಪ ಸಾಹಿತ್ಯ ಸಂಸ್ಕೃತಿ ಕಲೆಗಳನ್ನು ಭೌಗೋಳಿಕವಾಗಿ ಕೂಡ ಈಗಿನ ಭಾರತದ ಬಹುಭಾಗಕ್ಕೆ ಹಬ್ಬಿಸಿದ ಹಿರಿಮೆ ಸೇರಬೇಕಾದದ್ದು ಗಂಗರಿಗೆ, ರಾಷ್ಟ್ರಕೂಟರಿಗೆ.

ರಾಷ್ಟ್ರಕೂಟರೆಂಬ (ರಟ್ಟರು) ವಂಶಗಳು ಇನ್ನೂ ಇವೆಯಾದರೂ ಭರತಖಂಡಕ್ಕೇ ಸಾಮ್ರಾಟವಂಶದವರೆಂದು ಹೆಸರುವಾಸಿಯಾದ ಮನೆತನ ಮಾನ್ಯಖೇಟದ ರಾಷ್ಟ್ರಕೂಟರದು. ಈಗಿನ ಕಲಬುರ್ಗಿ ಜಿಲ್ಲೆಯಲ್ಲಿ ಒಂದು ಸಾಮಾನ್ಯ ಕುಗ್ರಾಮವಾಗಿ ಹಾಳುಬಿದ್ದು ಬಿಕೋ ಎಂದೆನಿಸುವ ಮಳಖೇಡ ಹಳ್ಳಿಯೇ (ಸಂಸ್ಕೃತ ರೂಪಾಂತರ ಮಾನ್ಯಖೇಟ) ಇವರ ಅಂದಿನ ರಾಜಧಾನಿ. ಈಗಿನ ಮಹಾರಾಷ್ಟ್ರದ ಉಸ್ಮಾನಾಬಾದು ಜಿಲ್ಲೆಯಲ್ಲಿರುವ ಲಟ್ಟನೂರು (ಲಟ್ಟನ ಸ್ಥಳ ಲಾತೂರು) ಇವರ ಮೂಲಸ್ಥಳವೆಂದು ತಿಳಿಯಲಾಗಿದೆ—ಲಟ್ಟನೂರ ಪುರವರಾಧೀಶ್ವರ. ಲಾಟೂರು ಎಂಬುದೂ ರಟ್ಟ (→ಲಟ್ಟ→ಲಾಟ—) ಶಬ್ದಕ್ಕೆ ಸೇರಿದ ಒಂದು ರೂಪಾಂತರವಾಗಿದೆ. ತುಂಗ ಮತ್ತು ರಟ್ಟ ಎಂಬ ಇಬ್ಬರು ಹಳಬರಿಂದ, ಯದು ವಂಶದವರಿಂದ ಈ ರಾಜ ಮನೆತನ ಬೆಳವಣಿಗೆ ಹೊಂದಿತೆಂಬ ಅಭಿಪ್ರಾಯಕ್ಕೆ ಪುಷ್ಟಿಕೊಡುವ ಆಧಾರಗಳಿಲ್ಲ.


ದಂತಿದುರ್ಗ, ಒಂದನೆಯ ಕೃಷ್ಣ, ಧ್ರುವ, ಗೋವಿಂದ, ಅಮೋಘವರ್ಷ, ನೃಪತುಂಗ (ಶರ್ವ), ಮೂರನೆಯ ಕೃಷ್ಣ—ಈ ರಾಷ್ಟ್ರಕೂಟ ದೊರೆಗಳು ಜಗತ್ತುಂಗರಾಗಿ ಶ್ರೀ ಪೃಥಿವೀವಲ್ಲಭರಾಗಿ ಮೆರೆದರು; ಮಾಳವ, ಕೋಸಲ, ಕಳಿಂಗ, ವೆಂಗಿ, ಓಡ್ರ, ದಹಲ, ಪಲ್ಲವ, ಚೋಳ, ಪಾಂಡ್ಯ ರಾಜ್ಯಗಳ ಮೇಲೆ ತಮ್ಮ ಮಾರ್ಮೊಳೆವ ವಿಜಯಗಳಿಂದ ಕನ್ನಡ ಬಾವುಟವನ್ನು ಹಾರಿಸಿದರು. ಸಂಜನ್ ಫಲಕಗಳು ಸಾರಿಹೇಳುವುದನ್ನು ಕೇಳಿದರೆ ಪುಳಕವೇಳುತ್ತದೆ—"ಗೋವಿಂದನ ಕುದುರೆಗಳು ಹಿಮಾಲಯದ ತೊರೆಗಳಲ್ಲಿ ಗುಳುಗುಳು ಎಂದು ಧ್ವನಿಮಾಡುವ ತಣ್ಣೀರನ್ನು ಕುಡಿದುವು ಮತ್ತು ಅವನ ಯುದ್ಧದ ಮದ್ದಾನೆಗಳು ಗಂಗಾನದಿಯ ಪುಣ್ಯತೀರ್ಥದ ರುಚಿ ನೋಡಿದುವು. ಅವನ ಮಂಗಳಸ್ನಾನ ಕಾಲದಲ್ಲಿ ನುಡಿಸಿದ ತುತೂರಿಗಳ ನಿನಾದವು ಆ ಮಹಾಪರ್ವತದ ಕಣಿವೆಗಳಲ್ಲಿ ಅತೀವವಾಗಿ ಹೊಳಲುಗೊಟ್ಟಿತು."

ಇಂತಹ ವಿಜಯದ ಪರಾಕಾಷ್ಠೆಯಿಂದ ಬೀಗಿದ ಮಹಾಸಾಮ್ರಾಜ್ಯಕ್ಕೆ 939ರಲ್ಲಿ ಸಿಂಹಾಸನಾಧಿಕಾರಿಯಾದವನು ಮುಮ್ಮಡಿ ಕೃಷ್ಣ (939–966). ಈ ಮೂರನೆಯ ಕೃಷ್ಣನು ವಿಜಿಗೀಷುವಾಗಿ ಹೊರಟು ತನ್ನ ಕಾಲಕ್ಕೆ ಸ್ವಲ್ಪ ತೇಜ ಪುಡುಗಿ ಮ್ಲಾನವಾಗುತ್ತಿದ್ದ ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ಮತ್ತೆ ವೈಭವೋನ್ನತಿಗಳನ್ನು ಇಡೀ ಇಂಡಿಯಾದ ದೊರೆಗಳು ಅರಿಯುವಂತೆ ತಂದುಕೊಟ್ಟನು. ನೆರೆಯ ನಾಡಾದ ತಮಿಳುನಾಡನ್ನು 943 ರ ಕಾಳೆಗದಲ್ಲಿ ತನ್ನ ಹಿಡಿತಕ್ಕೆ ತೆಗೆದುಕೊಂಡನು; ಕಾಂಚಿ, ತಂಜಾವೂರುಗಳನ್ನು ಹಿಡಿದನು. ಚೋಳದೊರೆ ಪರಾಂತಕನು 943 ರಲ್ಲೂ, 949 ರ ತಕ್ಕೋಲಂ ಕದನದಲ್ಲೂ ಶೋಚನೀಯವಾಗಿ ಸೋತನು. ದಕ್ಷಿಣದ ತುದಿ ರಾಮೇಶ್ವರದವರೆಗೆ ಜೈತ್ರಯಾತ್ರೆ ಹೊರಟ ಕೃಷ್ಣದೊರೆ ತನ್ನ ಜಯಸ್ತಂಭವನ್ನು ರಾಮೇಶ್ವರದಲ್ಲಿ ನೆಟ್ಟನು.

ದಕ್ಷಿಣದ ಯಶಸ್ಸಿನಿಂದ ಹುರುಪು ಹೊಂದಿ ಅಕಾಲವರ್ಷ ಕೃಷ್ಣನು ಉತ್ತರಕ್ಕೆ ಹೊರಟ ಮೇಲೆ ಇದೇ ಬಗೆಯ ಗೆಲುವು ದೊರೆಯಿತು. ಗೂರ್ಜರ ಪ್ರತೀಹಾರ, ಕಲಚೂರಿ, ಮಾಳವ, ಗಜರಾತು--ಎಲ್ಲ ಇವನ ಅಧೀನದಲ್ಲಿ ತಲೆ ಬಾಗಿದ್ದಾಯಿತು. ಈಗಿನ ಜಬ್ಬಲಪುರದ ಬಳಿಯ ಜೂರದಲ್ಲಿ ಸಿಕ್ಕಿರುವ ಕನ್ನಡ ಶಾಸನ ಕೂಡ ಇವನ ಸಾಹಸ ಕೃತ್ಯಗಳಿಗೆ ಸಾಕ್ಷಿನುಡಿಯುತ್ತಿವೆ. ರಾಷ್ಟ್ರಕೂಟ ಸಾಮ್ರಾಜ್ಯ ಮೂರನೆಯ ಕೃಷ್ಣನ ತರುವಾಯ (967) ಮತ್ತೆ ವಿನಾಶಕ್ಕೆ ಇಳಿದು ಬೀಳುಗಾಲ ಕಂಡಿತು, ಎಂದೆಂದಿಗೂ ಇದು ತಲೆಯೆತ್ತದಂತೆ ಉಡುಗಿಹೋಯಿತು.

ಕನ್ನಡನಾಡಿನ ಬಹುಮುಖವಾದ ಏಳಿಗೆಗೆ ಈ ರಾಷ್ಟ್ರಕೂಟರು ನೆರವಾಗಿದ್ದಾರೆ, ನೆರಳಾಗಿದ್ದಾರೆ. ಮುಖ್ಯವಾಗಿ ಜಿನಸೇನ ಗುಣಭದ್ರರ ಮಹಾಪುರಾಣ, ಪುಷ್ಪದಂತನ ಪ್ರಾಕೃತ ಮಹಾಪುರಾಣ, ಜಿನಸಮಯ ದೀಪಕರಾದ ಪಂಪ-ಪೊನ್ನ-ರನ್ನರ ಸಾಹಿತ್ಯ ಸೃಷ್ಟಿ, ಪೊನ್ನನ ಸಮಕಾಲೀನ ಸೋಮದೇವನ ಯಶಸ್ತಿಲಕ ಚಂಪೂ ರಚನೆ—ಇವಿಷ್ಟೂ ರಾಷ್ಟ್ರಕೂಟರ ಆಶ್ರಯದಲ್ಲಿ ಮುಂದುವರಿಯಿತು. ಇವರ ರಾಜಧಾನಿಯಾದ ಮಾನ್ಯಖೇಟ ಹೇಗಿತ್ತೆಂಬುದನ್ನು (ಅಪಭ್ರಂಶ) ಪ್ರಾಕೃತ ಕವಿ ಪುಷ್ಪದಂತನು ತನ್ನ "ತಿಸಟ್ಠಿ ಮಹಾಪುರಿಸಿ ಗುಣಾಲಂಕಾರ" ಎಂಬ ಕಾವ್ಯದಲ್ಲಿ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ; ಅದು ಹಗೆಗಳ ದಳ್ಳುರಿಗೆ ಸಿಕ್ಕಿ ಸುಟ್ಟು ಬೂದಿಯಾದುದನ್ನು ಹೇಳಿದ್ದಾನೆ.

ರಾಷ್ಟ್ರಕೂಟ ರಾಜವಂಶವೃಕ್ಷ



ಈ ಎಲ್ಲ ಚಾರಿತ್ರಿಕ ಕಾರಣಗಳನ್ನು ಚೆನ್ನಾಗಿ ಮನಗಂಡು ಪೊನ್ನಕವಿಯ ಕಾಲವನ್ನು ನಿರ್ಧರಿಸಬೇಕಾಗುತ್ತದೆಂಬ ಕಾರಣಕ್ಕಾಗಿ ಇದನ್ನು ವಿವರಿಸಬೇಕಾಯಿತು. ಕವಿಚರಿತೆಕಾರರು ಕೊಟ್ಟಿರುವ ಕಾಲವನ್ನು ಕದಲಿಸುವುದು ಕಷ್ಟವೆಂದು ಮೊದಲು ಮನಗಾಣಬೇಕು. ಒಂದು ಮಾತಂತೂ ಗಟ್ಟಿ: ಪೊನ್ನನು ಪಂಪನ ಅನಂತರದವನು; ವಯಸ್ಸಿನಲ್ಲೂ ಅಷ್ಟೆ, ಕೃತಿರಚನೆಯಿಂದಲೂ ಅಷ್ಟೆ, ಕಾವ್ಯಸತ್ವದ ದೃಷ್ಟಿಯಿಂದಲೂ ಅಷ್ಟೆ—ಪಂಪಾನಂತರಂ ಪೊನ್ನಂ!

ಪೊನ್ನನ ಭುವನೈಕರಾಮಾಭ್ಯುದಯ ಕಾವ್ಯದ ರಚನೆ 955 ರಿಂದ 960 ಎಂದೂ, ಶಾಂತಿಪುರಾಣದ ರಚನೆಯ ಕಾಲ 960 ರಿಂದ 968 ಎಂದೂ ಧಾರಾಳವಾಗಿ ಹೇಳಬಹುದು. ಹತ್ತನೆಯ ಶತಮಾನದ ಪೂರ್ವಾರ್ಧಕ್ಕೆ ಸರಿಯಾಗಿ ಪಂಪನು ಅಸ್ತಂಗತನಾಗಿ, ನಡುಗಾಲದಿಂದ ಪೊನ್ನನ ಉದಯ ಆರಂಭವಾಗಿದೆ. ಅದು ಬಾಲ್ಯಾವಸ್ಥೆಯಲ್ಲಿದ್ದ ವಾದಿರಾಜರು ಸೋಮದೇವಸೂರಿ ಅಭ್ಯುದಯಕ್ಕೆ ಬರುವ ಸಂನಿವೇಶವಾಗಿತ್ತು; ಪುಷ್ಪದಂತಕವಿ ಕೃತಿರಚನೆಗೆ ತೊಡಗಲು ಅಣಿಯಾಗುತ್ತಿದ್ದ ಗಳಿಗೆ, ಗೊಮ್ಮಟಸಾರ ಕರ್ತೃ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿ ಕನ್ನಡನಾಡಿಗೆ ಕಾಲಿಟ್ಟ ವೇಳೆ, ಅಜಿತಸೇನಾಚಾರ್ಯರು ವಟುವಾಗಿ ಆಚಾರ್ಯ ಪದವಿಗೆ ಪಾದಾರ್ಪಣಕ್ಕೆ ಸಜ್ಜಾಗುತ್ತಿದ್ದ ಕಾಲ, ರನ್ನ ಗರಿಯೊಡೆದು ಉದಿತೋದಿತನಾಗಲು ಹವಣಿಸುತ್ತಿದ್ದ ಸಮಯ, ಪಂಪಮಹಾಕವಿಯ ಕೀರ್ತಿ ಶಿಖರ ಎಲ್ಲರಿಗೂ ಮನೆಮಾತಾಗಿ ಮೇಲ್ಪಂಕ್ತಿಯಾಗಿದ್ದ ಸಂದರ್ಭ—ಇಂಥ ಹೊತ್ತಿನಲ್ಲಿ ಪೊನ್ನನ ಕಾವ್ಯಗಳು ಜನಪ್ರಿಯತೆ ಗಳಿಸಿದ್ದಿರಬಹುದೆಂದು ಊಹಿಸಬಹುದು. ಇಂಥ ಊಹೆಗಳಿಗೆ ಬಹಳ ಮಿತಿಗಳು ಇರುತ್ತವೆಂಬುದನ್ನು ಮರೆಯಬಾರದು.

ಇನ್ನು ಪೊನ್ನನ ಕಾವ್ಯಗಳಿಂದ ಅವನ ಅನಂತರದ ಸಂಕಲನಕಾರರು, ಶಾಸ್ತ್ರಕಾರರು ಹೇಗೆ ಪದ್ಯಗಳನ್ನು ಆಯ್ಕೆ ಮಾಡಿದ್ದಾರೆಂಬುದನ್ನು ಶೋಧನೆಮಾಡಿ ನೋಡಬಹುದು.

ಪೊನ್ನನ ಕಾವ್ಯಗಳಿಂದ ಆಯ್ದ ಪದ್ಯಗಳೂ ಪದ್ಯಭಾಗಗಳೂ ನಾಗವರ್ಮ, ಕೇಶಿರಾಜ, ಭಟ್ಟಾಕಲಂಕ, ಸಾಳ್ವ—ಇವರ ಕಾವ್ಯಾವಲೋಕನ, ಶಬ್ದಮಣಿದರ್ಪಣ, ಶಬ್ದಾನುಶಾಸನ ಮತ್ತು ರಸರತ್ನಾಕರ ಈ ಲಕ್ಷಣ ಶಾಸ್ತ್ರಗ್ರಂಥಗಳಲ್ಲಿ ಉದಾಹೃತವಾಗಿವೆ. ಅಲ್ಲದೆ ಮಲ್ಲಿಕಾರ್ಜುನಕವಿಯ ಸೂಕ್ತಿಸುಧಾರ್ಣವ, ಮಲ್ಲಕವಿಯ ಕಾವ್ಯಸಾರ ಮೊದಲಾದ ಸಂಕಲನಗಳಲ್ಲಿಯೂ ಪೊನ್ನನ ಪದ್ಯಗಳು ಸಂಕಲನವಾಗಿವೆ. ನಾಗವರ್ಮ ತನ್ನ ಕಾವ್ಯಾವಲೋಕನದಲ್ಲಿ ಪೊನ್ನಕವಿಯ ಹೆಸರನ್ನು ಹೇಳಿಲ್ಲವಾದರೂ ಕೇಶಿರಾಜಾದಿಗಳು ಹೆಸರಿಸಿದ್ದಾರೆ. ಅಭಿನವವಾದಿ ವಿದ್ಯಾನಂದನ ಕಾವ್ಯಸಾರದಲ್ಲಿ ಶಾಂತಿಪುರಾಣದ ಪದ್ಯಗಳು ಇಲ್ಲ. ಮಲ್ಲಕವಿಯ ಕಾವ್ಯಸಾರದಲ್ಲಿ ಶಾಂತಿಪುರಾಣದ ಮೂರು ಪದ್ಯಗಳು ಪ್ರಯೋಗವಾಗಿವೆ. ಈ ಮೂರೂ ಪದ್ಯಗಳು ಯಾವುವು, ಇವು ಕ್ರಮವಾಗಿ ಶಾಂತಿಪುರಾಣದ ಯಾವ ಆಶ್ವಾಸದಲ್ಲಿ ಬರುವ ಎಷ್ಟನೆಯ ಪದ್ಯಗಳು ಎಂಬುದನ್ನು ಇಲ್ಲಿ ಲಗತ್ತಿಸಲಾದ ಪ್ರತ್ಯೇಕ ಪಟ್ಟಿಯಲ್ಲಿ ತಿಳಿಸಿದೆ. ಇದರಿಂದ ಒಂದು ಸಂಗತಿ ಸ್ಪಷ್ಟವಾಗಬಹುದು. ಅಭಿನವ ವಾದಿವಿದ್ಯಾನಂದನಿಗೆ ಶಾಂತಿಪುರಾಣ ಕಾವ್ಯ ದೊರೆತಿಲ್ಲ; ಮಲ್ಲಕವಿಗೂ ಬಹುಶಃ ದೊರೆತಿರಲಾರದು, ಆದರೂ ತಲೆ ಸೂಕ್ತಿಸುಧಾರ್ಣವವನ್ನೇ ಆಕರವಾಗಿರಿಸಿಕೊಂಡಿರುವುದರಿಂದ ಈ ಮೂರು ಪದ್ಯಗಳು ಸೇರಿಕೊಂಡಿವೆ.

ಕಾವ್ಯಸಾರ, ರಸರತ್ನಾಕರ ಮತ್ತು ಕಾವ್ಯಾವಲೋಕನ—ಈ ಮೂರು ಕೃತಿಗಳಲ್ಲಿ ಉದಾಹೃತ ಪದ್ಯಗಳನ್ನು ಶಾಂತಿಪುರಾಣಕ್ಕೂ ಆ ಇತರ ಕೃತಿಗಳಿಗೂ ಸಂವಾದಿ ಆಶ್ವಾಸ ಮತ್ತು ಪದ್ಯ ಸಂಖ್ಯೆಯಿತ್ತು ಮುಂದೆ ಕೊಟ್ಟಿದೆ. ಸೂಕ್ತಿಸುಧಾರ್ಣವದಲ್ಲಿಯೂ ಕಾವ್ಯಸಾರದಲ್ಲೂ ಸಮಾನ ಪದ್ಯಗಳಿರುವುದರಿಂದ ಅದನ್ನು ಮತ್ತೆ ಹೇಳಲಾಗಿಲ್ಲ. ಅನಂತರ ಶಬ್ದಮಣಿದರ್ಪಣದಲ್ಲಿ ಉದಾಹೃತವಾಗಿರುವ ಪೊನ್ನನ ಕೃತಿಗಳಿಂದಾಯ್ದ ಪದ್ಯಗಳು ಬರುವ ಸೂತ್ರ ಮತ್ತು ಪ್ರಯೋಗವನ್ನು ಕೊಟ್ಟಿದೆ. ನನ್ನ ಗಮನಕ್ಕೆ ಬರದಿರುವ ಇನ್ನೂ ಕೆಲವು ಇರಬಹುದು; ಇಲ್ಲವೇ, ಇನ್ನು ಮುಂದೆ ನಡೆಯುವ ಹೊಸ ಸಂಶೋಧಕರ ಪ್ರಯತ್ನದಿಂದ ಮತ್ತಷ್ಟು ತಿಳಿದುಬರಬಹುದು.

ಶಾಂತಿಪುರಾಣ	ಕಾವ್ಯಸಾರ
1. 3–3	4–19
2. 7–142	4–451
3. 7–143	4–377
(ಇವೆಲ್ಲ ಸೂಕ್ತಿಸು. 2 ರಲ್ಲಿವೆ)	
4. 9–26	ರಸ ರತ್ನಾಕರ, 119ನೇ ಪದ್ಯ
	ಕಾವ್ಯಾವಲೋಕನ
5. 1–13	369
6. 7–124	486
7. 1–56	493
8. 1–61	517
9. 8–85	641
10. 5–85	645
11. 3–46	670
12. 2–115	852
13. 3–67	867
14. 5–131	893

ಶಬ್ದಮಣಿದರ್ಪಣ

ಪೊನ್ನನ ಭುವನೈಕರಾಮಾಭ್ಯುದಯದಿಂದ ಆಯ್ದ ಭಾಗಗಳು ಸಿಗುವುದು:

ಸೂತ್ರ ಸಂಖ್ಯೆ	ಪ್ರಯೋಗ ಸಂಖ್ಯೆ
130	1
167	1 (ಇದು ಕಾವ್ಯಾವಲೋಕನದಲ್ಲೂ ಇವೆ)
183	2
184	1

ಶಾಂತಿಪುರಾಣದಿಂದ ಕೇಶಿರಾಜ ಮಾಡಿರುವ ಆಯ್ಕೆ ಹೀಗಿದೆ.

ಸೂತ್ರ	ಪ್ರಯೋಗ	ಶಾಂತಿಪುರಾಣ
77	7	1–63
208	1	12–77
257	4	9–52

ನಾಗವರ್ಮ ಮತ್ತು ಪೊನ್ನ

ವರ್ಧಮಾನಪುರಾಣದ ನಾಗವರ್ಮಕವಿ (1042) ಪೊನ್ನನನ್ನು 'ಚರಿತಾರ್ಥ' ಕವಿಯೆಂದು ಮೆಚ್ಚಿದ್ದಾನೆ(1-5). ತಾನು ಓದಿ ಮೆಚ್ಚಿದ ಕವಿಯ-ಕೃತಿಯ ಪ್ರಭಾವವೂ ಆಗಿರುವುದು ಸಾಧ್ಯವೆಂದು ಭಾವಿಸಿ ಒಳಹೊಕ್ಕು ನೋಡಿದರೆ ಅದಕ್ಕೆ ತಕ್ಕ ನಿದರ್ಶನ ಸಿಕ್ಕಿದೆ. ನಾಗವರ್ಮ ತನ್ನ ವರ್ಧಮಾನಪುರಾಣದ ಎರಡನೆಯ ಆಶ್ವಾಸದಲ್ಲಿ ವಿಶ್ವಭೂತಿ-ವಿಶಾಖಭೂತಿ ಮತ್ತು ವಿಶ್ವನಂದಿ-ವಿಶಾಖನಂದಿಯರ ಪ್ರಸಂಗದಲ್ಲಿ ಪೊನ್ನನ ಏಳನೆಯ ಆಶ್ವಾಸದ ಇದೇ ಕಥಾಭಾಗದ ಸ್ಪಷ್ಟ ಪ್ರಭಾವ ಪ್ರಕಟವಾಗಿದೆ. ಇದು ಜೈನಪುರಾಣಗಳಲ್ಲಿ ಬರುವ ವೈರಾಗ್ಯಾಶಯಕ್ಕೆ (ವೈರಾಗ್ಯವನ್ನು ಒಂದು ಆಶಯ ಎಂದು ಕರೆಯಬಹುದೆಂದು ತೋರುತ್ತದೆ) ಒಂದು ನಿದರ್ಶನ, ಇದು ಶಾಂತಿಪುರಾಣದಲ್ಲೂ ಬರುತ್ತದೆ, ವರ್ಧಮಾನಪುರಾಣದಲ್ಲೂ ಬರುತ್ತದೆ, ಇನ್ನೂ ಒಂದೆರಡು ತೀರ್ಥಂಕರಚರಿತೆಯಲ್ಲೂ ಬರುತ್ತದೆ. ಇದಕ್ಕೆ ಮೂಲ ಉತ್ತರಪುರಾಣ, ಗುಣಭದ್ರ ಆಚಾರ್ಯರ ನಿರೂಪಣೆ. ಈ ಆಖ್ಯಾನವನ್ನು ತುಂಬ ಸುಂದರವಾಗಿ, ಕಾವ್ಯಮಯವಾಗಿ ನಿರೂಪಿಸಿದ ಹಿರಿಮೆ ಕಾವ್ಯ ಕಂಜಾಸನನಾದ ಪೊನ್ನನಿಗೇ ಸಲ್ಲುತ್ತದೆ. ಪೊನ್ನನ ಕಾವ್ಯರೇಖೆ ಈ ಭಾಗದಲ್ಲೂ ಹೇಗೆ ಪಳಂಚಿದೆಯೆಂಬುದನ್ನು ಅತಿ ಕಿರಿದರಲ್ಲಿ ಇಲ್ಲಿ ಅಡಕಗೊಳಿಸಿದ್ದೇನೆ. ಕಥೆ ಗೊತ್ತಿರುವುದರಿಂದ, ಈ ಕಾವ್ಯದಲ್ಲಿ ಗದ್ಯಾನುವಾದದೊಡನೆ ಅದನ್ನು ಕೊಟ್ಟಿರುವುದರಿಂದ ಮತ್ತೆ ಕಥಾಸಾರ ಕೊಡದೆ ನೇರವಾಗಿ ತೌಲನಿಕ ವಿಮರ್ಶೆಗೇ ತೊಡಗುತ್ತೇನೆ.

ಪೊನ್ನ: ಶಾಂತಿಪುರಾಣ	ನಾಗವರ್ಮ: ವರ್ಧಮಾನಪುರಾಣ
1. ಪೊಗಟ್ಟಿಗೆ ವಿಶ್ವನಂದಿ ಮಾಡಿಸಿದನನದೊಂದು ನಂದನವನ್, 7-53	1. ನೆಗೆರ್ತೆ ಕೂಡೆ ಮಾಡಿಸಿದನದೊಂದು ನಂದನವನ್, 2-13
2. ಸಮೆಯಿಸಿ...ವನಕೇಳೀ ಲೀಲೆಯಿನಿರ್ಪುದುಂ, 7-53 ವ	2. ಸಮೆಯಿಸಿ....ವನಕೇಳೀ ವಿಳಾಸ ನಿರತನ್....ಸುಖದಿನಿರೆ, 2-17 ವ
3. ಸಂಸಾರ ನಿರ್ವೇಗಮುಂ ಪುಟ್ಟೆ....ವಿಶಾಖಭೂತಿಯುಮನಧಿರಾಜ ಪದವಿಯೊಳ್ ವಿಶ್ವನಂದಿಯುಂ ಯುವರಾಜ ಪದವಿಯೊಳ್ ನಿಯೋಜಿಸಿ ಶ್ರೀಧರ ಗುರುಗೆ ಶಿಷ್ಯನಾಗಿ, 7-51 ವ	3. ಸಂಸಾರ ನಿರ್ವೇಗ ಪರನಾಗಿ ವಿಶಾಖಭೂತಿ ಗಧಿರಾಜ್ಯಮಂ ಕೊಟ್ಟು....ವಿಶ್ವನಂದಿಯಂ ಯುವರಾಜ್ಯದೊಳ್ ನಿಜಿಸಿ....ಶ್ರೀಧರ ಗುರುಗಳ ಸಮಕ್ಷದೊಳ್, 2-17 ವ
4. ವಿಶಾಖಭೂತಿ ಮಂತ್ರಾಲೋಚನೆಯೊಳ್ ಯುವರಾಜಂಗೆ ಬಟಿಯನಟ್ಟೆ, 7-53 ವ	4. ವಿಶಾಖಭೂತಿ....ನಿಶ್ಚಿತ ಮಂತ್ರನಾಗಿ ಯುವರಾಜನಪ್ಪ ವಿಶ್ವನಂದಿಕುಮಾರಂಗೆ ಬಟಿಯನಟ್ಟೆ, 2-17 ವ
5. ಆನಿರೆ ದೇವರ್ ಏವರ್ ಇನಿತೇಸ್, 7-55	5. ಆನಿರೆ ದೇವರ್ ನಡೆವಿರೆ, 2-19
6. ಕಾಪಿನವರ ನಿಜೆದು ಬನಮಂ ಕೆಯ್ಕೊಂಡಿರ್ದ, 7-57 ವ	6. ಕಾಪಿನವರಂ ಕೊಂದು....ಬನಮಂ ಕೆಯ್ಕೊಂಡು, 2-30 ವ
7. ನಿಮ್ಮಾದುದನಪ್ಪೆಂ, 7-58	7. ನಿಮ್ಮಾದುದನಾನಪ್ಪೆಂ, 2-38
8. ವಿಶಾಖಭೂತಿಯುಂ ಭೂರಿ ತಪೋಭಾರಮಂ ನಿರ್ವಹಿಸಿ ಶತಾರಕಲ್ಪದೊಳ್ ಸಾಮಾನಿಕ ದೇವನಾದೊಂ, 7-59 ವ	8. ವಿಶಾಖಭೂತಿ ನಿಜಶರೀರಭಾರಮನಿಳಿಪಿ ಶತಾರ ಕಲ್ಪದೊಳ್ ಸಾಮಾನಿಕದೇವನಾದೊಂ, 2-42 ವ
9. ವಿಶ್ವನಂದಿಯುಂ....ವಿಹಾರಿಸುತ್ತುಮುತ್ತರ ಮಧುರೆಗೆ ವಂದು....ಚರಿಗೆವುಗೆ, 7-59 ವ	9. ವಿಶ್ವನಂದಿ....ವಿಹಾರತ್ವಮನೆತ್ತಿಕೊಂಡು ಮಧುರಾಪುರಾಂತಮಂ__ಬಂದು, 2-42 ವ, 43 ವ

10. ಮುನಿದೆಮ್ಮಂ ಕೊಲಲೊಡ್ಡಿದಂದಿನ ಶಿಲಾಸ್ತಂಭಕ್ಕೆ ಕೆಯ್ನೀಡಿದಂ ದಿನ ಕಿಟ್ಟಿಂದಿನ ಕಾದಿದಂದಿನ ಕಪಿತ್ಥೋರ್ವೀಜದಿಂ ಮೋದಿದಂ ದಿನ ಗೆಲ್ದಂದಿನ ಗೆಲ್ದು ಬಂದು ಬನಮಂ ಕೊಂಡಂದಿನಾ ನಿನ್ನ ಗ ರ್ಜನೆಯುಂ ಬೀರಮುಮಿಾಗಳಿಂತು ಪುಡಿಯೊಳ್ ಚೀ ಸೀ ಪೊರಳ್ದಿರ್ಪುದೇ ॥ 7-60	10. ಮುನಿಸಿಂ ಮೇಲೆರ್ದು ಬರ್ಪಂದಿನ ವಿಪುಳ ಶಿಲಾಸ್ತಂಭಮಂ ಕೇಳಿ ಕೀಳ್ವಂ ದಿನ ಬೆಂಕೊಂಡಟ್ಟಿಗೆಲ್ವಂದಿನ ತಿರಿಪಿ ಕಪಿತ್ಥಾವನೀಜಾತ ದಿಂದಂ ಬನದೊಳ್ ಮೆಯ್ಬಿಟ್ಟು ಪೊಯ್ವಂದಿನ ನಿಜಭುಜ ವಿಕ್ರಾಂತಮೇನಾದುದಿಂತೀ ಜನಮೆಲ್ಲಂ ನೋಡೆ ಚೌವಟ್ಟದ ಬಿಸುಪುಡಿಯೊಳ್ ಬಿರ್ದು ಸಾವಂತುಟಾಯ್ತೇ ॥ 2-47 (ಈ ಪದ್ಯವನ್ನು ಕಾವ್ಯಾವಲೋಕನದಲ್ಲೂ ಉದಾಹರಿಸಿದೆ)
11. ಎಂದು....ನೆಜನೆತ್ತೆ, 7–60 ವ	11. ಎಂದು ನೆಜನನೆತ್ತಿ, 2–47 ವ
12. ಇನ್ನೆಲ್ಲಿ ಪುಟ್ಟಿಯುಂ ನಿನ್ನಂ ಕೊಲ್ಲದಿರೆನೆಂದು, 7–61 ವ	12. ಇನೆಲ್ಲಿ ಪುಟ್ಟಿದೊಡಂ ಕೊಲ್ಲದಿರೆನೆಂದು, 2-47 ವ
13. ವಿಶಾಖಭೂತಿಯೆ ಪುಟ್ಟಿದಾ ಶತಾರಕಲ್ಪದೊಳ್ ಸಾಮಾನಿಕದೇವನಾಗಿ ಪುಟ್ಟಿ, 7–61 ವ	13. ವಿಶಾಖಭೂತಿ ಪುಟ್ಟಿದ ಶತಾರಕಲದೊಳ್ ಸಾಮಾನಿಕ ದೇವನಾಗಿ ಪುಟ್ಟಿ, 2-48 ವ

ಪೊನ್ನನಾದ ನೂರು ವರ್ಷದಲ್ಲಿ ಬಂದ ನಾಗವರ್ಮ (1042) ತನ್ನ ವರ್ಧಮಾನಪುರಾಣದಲ್ಲಿ ಬರುವ ಅಣ್ಣತಮ್ಮಂದಿರ ರಾಗದ್ವೇಷವನ್ನು ಚಿತ್ರಿಸುವ ಕಥಾನಕವನ್ನು ಶಾಂತಿಪುರಾಣದ ಪ್ರಭಾವದಿಂದ ಹೇಗೆ ವಿಸ್ತರಿಸಿದ್ದಾನೆಂಬುದನ್ನು ಮತ್ತಷ್ಟು ವಿವರವಾದ ತುಲನಾತ್ಮಕ ಅಧ್ಯಯನದಿಂದ ತಿಳಿದುಕೊಳ್ಳಬಹುದು. ನಾಗವರ್ಮ ಕೆಲವು ವ್ಯತ್ಯಾಸಗಳನ್ನೂ ಮಾಡಿಕೊಂಡಿದ್ದಾನೆ. ಪೊನ್ನನಲ್ಲಿ ಸಂಕ್ಷಿಪ್ತವಾಗಿರುವ ಈ ಭಾಗ ನಾಗವರ್ಮನಲ್ಲಿ ಹಿಗ್ಗಿಕೊಂಡಿದೆ. ಪೊನ್ನನ ಬಿಗಿಯಾದ ಬಂಧ, ಕಾವ್ಯವಿಲಾಸಕ್ಕೆ ಎರಡನೆಯ ಮಟ್ಟದಲ್ಲಿ ನಾಗವರ್ಮನ ನಿರೂಪಣೆ ಸಾಗುತ್ತದೆ; ಅಂದರೆ, ಇಲ್ಲಿಯೂ ಪೊನ್ನನ ಮೇಲ್ಮೆಯೇ ಸ್ಥಾಪಿತವಾಗುತ್ತದೆ. ಆ ದಿಕ್ಕಿನಲ್ಲಿ ಪ್ರಯತ್ನಿಸುವವರಿಗೆ ಇದೊಂದು ದಿಕ್ಸೂಚಿ.

ಪಂಪನಿಗೂ ಪೊನ್ನನಿಗೂ ಅನೇಕ ಸಮಾನ ಕಾವ್ಯ ಗುಣಸ್ವಭಾವಗಳನ್ನು ಕಾಣಬಹುದು. ಪಂಪನ ಆದಿಪುರಾಣ ಮತ್ತು ಪೊನ್ನನ ಶಾಂತಿಪುರಾಣಗಳ ನಡುವೆ ಸದೃಶ ಪದ್ಯ (ಭಾಗ) ಗಳು ಸಿಗುವಂತೆ ವಿಕ್ರಮಾರ್ಜುನವಿಜಯ ಮತ್ತು ಶಾಂತಿಪುರಾಣಗಳಲ್ಲಿ ಸಮಾನವೆನಿಸುವ ಹೆಚ್ಚು ಸಂದರ್ಭಗಳಿಲ್ಲ. ಇದರಿಂದ ನನಗೆ ಹೊಳೆಯುವ ವಿಚಾರವೆಂದರೆ, ವಿಕ್ರಮಾರ್ಜುನವಿಜಯಕ್ಕೆ ತಾಳೆಯಾಗುವ ಪದ್ಯಗಳು ಭುವನೈಕರಾಮಾಭ್ಯುದಯದಲ್ಲಿ ಇದ್ದಿರಬಹುದು. ಲೌಕಿಕ ಕಾವ್ಯದಲ್ಲಿ ಲೌಕಿಕ ಕಾವ್ಯದ ಪಡಿನೆರಳು, ಆಗಮಿಕ ಕಾವ್ಯದಲ್ಲಿ ಆಗಮಿಕ ಕಾವ್ಯದ ಪ್ರಭಾವ—ಇದು ಉದ್ದೇಶವಿರಬಹುದು.

ಪಂಪ ತನ್ನ ಆದಿಪುರಾಣದಲ್ಲಿ ಆಶ್ವಾಸದ ಆರಂಭ ಅಥವಾ ಮುಕ್ತಾಯದ ಪದ್ಯದಲ್ಲಿ ತನ್ನ ಬಿರುದೂ, ತೀರ್ಥಂಕರನಾಗುವ ಜೀವದ ವಿವಿಧ ಭವಗಳ ವ್ಯಕ್ತಿಯ ಬಿರುದೂ ಹೊಂದಿಕೊಳ್ಳುವಂತೆ ಸಮಾವೇಶಿಸಿ ಬರೆಯುವುದುಂಟು. ಆ ವ್ಯಕ್ತಿಗೆ, ಪುರಾಣಪುರುಷನಿಗೆ ಅಂಥದೊಂದು ಪ್ರಶಸ್ತಿಯಿರದಿದ್ದರೂ ಕವಿಪ್ರಶಸ್ತಿಯನ್ನೇ ಕಥಾನಾಯಕನ ಗುಣಸ್ವಭಾವಕ್ಕೆ ಹೊಂದಿಕೊಳ್ಳುವಂತೆ ಬೆಸುಗೆಹಾಕುತ್ತಾನೆ. ಮೂರು ನಿದರ್ಶನಗಳು ಆದಿಪುರಾಣದಿಂದ :

ಅ.	ಸರಸ್ವತೀ ಮಣಿಹಾರಂ	12–1	ಆಶ್ವಾಸಾರಂಭ
ಆ.	ಸಂಸಾರ ಸಾರೋದಯ	11–155	ಮುಕ್ತಾಯ
ಇ.	ಸುಕವಿಜನಮನೋಮಾನಸೋತ್ತಂ ಸಹಂಸಂ	11–154	ಮುಕ್ತಾಯದ ಹಿಂದಿನ ಪದ್ಯ

ಕುರುಳ್ಗಳ ಸವಣನಾದ ಪೊನ್ನನಿಗೆ ಕವಿಚಕ್ರವರ್ತಿ, ಉಭಯಕವಿಚಕ್ರವರ್ತಿ, ಸರ್ವದೇವ ಕವೀಂದ್ರ ಮೊದಲಾದ ಮಾಮೂಲಿ ಪ್ರಶಸ್ತಿಗಳಲ್ಲದೆ ಮತ್ತೆ ಕೆಲವು ವಿಶಿಷ್ಟ ಪದವಿ ಪ್ರಶಸ್ತಿ ಪರಾಕುಗಳೂ ಇದ್ದಂತೆ ತೋರುತ್ತದೆ. ಶಾಂತಿಪುರಾಣದ ಆಶ್ವಾಸಾಂತ್ಯದ ಬಹುಮಟ್ಟಿನ ಪದ್ಯಗಳು ಮುಕ್ತಾಯಗೊಳ್ಳುವುದು 'ಸೌಜನ್ಯ ಕಂದಾಂಕುರ' ಎಂಬುದರಿಂದ. ಆಶ್ವಾಸಾಂತ್ಯವಲ್ಲೇ ಅಲ್ಲದೆ ಅನ್ಯತ್ರವೂ ಇದರ ಪ್ರಯೋಗ ಬಾಹುಳ್ಯವಿದೆ: 1–28, 4–25 ವ, 4–30 ವ, 4–104 ವ, 6–11 ವ, 8–47 ವ, 8–62 ವ, 9–70 ವ, 9–88 ವ, 9–99 ವ, 12–185 ಇತ್ಯಾದಿ. ಇದರಂತೆ ಇನ್ನೂ ಕೆಲವು ಪ್ರಿಯ ಪದಗಳಿವೆ, ಅವೆಲ್ಲಾ ವಿಶೇಷವಾಗಿ ಗದ್ಯದಲ್ಲಿಯೇ ಪ್ರಯೋಗವಾಗಿವೆ. ಅನೇಕ ಹಳಗನ್ನಡ ಕವಿಗಳಿಗೆ ಇಂಥ ಪರಿಪಾಟಿ ತುಂಬ ಪ್ರಿಯವಾಗಿತ್ತೆಂದು ತೋರುತ್ತದೆ, ಬೇರೆ ಕೆಲವು ಕವಿಗಳಲ್ಲೂ ಈ ಬಗೆಯ ಪ್ರಯೋಗಗಳಿವೆ. ಪೊನ್ನನಿಗೆ ಇಷ್ಟವಾದ ಇಂಥ ಪ್ರಶಸ್ತಿಗಳು ಇನ್ನೂ ಕೆಲವು ಇವೆ:

ಪಾಪೇಭ ಕಂಠೀರವ: 4–7 ವ, 4–11 ವ, 4–17 ವ, 4–24 ವ, 4–30 ವ, 7–68 ವ
ಜೈನಶಾಸನ ಚೂಡಾಮಣಿ: 4–30 ವ, 4–104 ವ, 7–31 ವ, 8–155 ವ, 9–69 ವ
ಧರ್ಮಕಂಠೀರವ: 1–80 ವ
ಉದಾತ್ತ ಜೀಮೂತವಾಹನ: 4–61 ವ
ಸಮರೈಕ ಸಾಹಸಂ: 5–49
(ರತ್ನತ್ರಯ ಪರೀಕ್ಷೆಗೆ) ಮಾಣಿಕ ಚೆಟ್ಟನ್ : 8–143 ವ (ಈ ಪ್ರಯೋಗ ನಯಸೇನ, ಬಂಧುವರ್ಮ ಮೊದಲಾದ ಕವಿಗಳಲ್ಲೂ ಉಂಟು)

ತೀರ್ಥಂಕರ ಭವಕ್ಕೆ ಬರುವ ಜೀವದ ವಿವಿಧ ಭಾವಾವಳಿಯ ಪಾತ್ರಗಳಿಗೆ ಸಮುಚಿತವಾದ ರೀತಿಯಲ್ಲಿ ಪೊನ್ನನ ಸೌಜನ್ಯ ಕಂದಾಂಕುರ, ಪಾಪೇಭ ಕಂಠೀರವ, ಜೈನಶಾಸನ ಚೂಡಾಮಣಿ, ಉದಾತ್ತ ಜೀಮೂತವಾಹನ ಮೊದಲಾದುವನ್ನು ತೊಡಿಸಿದ್ದಾನೆ.

ಪಂಪನಿಗೆ ಪ್ರಿಯವಾದ 'ಅನಂಗ ಜಂಗಮಲತೆ'ಯ ಪ್ರಯೋಗ ಪೊನ್ನನಲ್ಲೂ 1–72, 5–19 ರಲ್ಲಿ ಸಿಗುತ್ತದೆ; 'ಅಬ್ಬೆಯೆಂದತ್ತಿಗೆಯೆಂಬೊಡೆ' ಎಂಬ ಪಂಪನ ಪ್ರಯೋಗಕ್ಕೆ ಸಂವಾದಿಯಾಗಿ ಪೊನ್ನನಲ್ಲೂ 6–80 ರಲ್ಲಿ ಅದೇ ಮಾತಿದೆ; ಸಾಲಭಂಜಿಕೆಗಟ್ಟುವು ಎಂಬುದು ಪೊನ್ನನ 3–104 ರಲ್ಲಿ ಪ್ರಯೋಗವಾಗಿದೆ. ಸಂಸ್ಕೃತದ ರಥ ಎಂಬ ಶಬ್ದ (ತಮಿಳು ಭಾಷೆಯಲ್ಲಾಗುವಂತೆ) ಒಂದು ಕಾಲಕ್ಕೆ ಕನ್ನಡದಲ್ಲಿ ಅರದ ಎಂದಾಗಿದ್ದು ಪಂಪಭಾರತ 11–12 ರಲ್ಲಿ ಪ್ರಯೋಗವಾಗಿದೆ (ಕಣ್ಣಪನ ನೇಮಿನಾಥಪುರಾಣ, 12–220) ಪೊನ್ನನ 3–110 ರಲ್ಲೂ 'ಅದರ' ರೂಪವಿದೆ. ಅಸಗನೊಯ್ಯಲ್ಲ 5–25, ಅತಿ ಗಂಭೀರ ಮೃದೂಕ್ತಿ 1–8 ರಲ್ಲಿದೆ. ಶಾಂತಿಪುರಾಣದ 2–79, 7–142, 10–14, 10–45 ಮೊದಲಾದ ಪದ್ಯಗಳಿಗೆ ಪಂಪನಲ್ಲೂ ಪ್ರತಿಧ್ವನಿಗಳಿವೆ. ಪಂಪನ ಆದಿಪುರಾಣಕ್ಕೆ ಪೊನ್ನನ ಮಾರ್ಪಾಟಿನ ಉತ್ತರವೋ ಎಂಬಂತೆ 11–63ನೆಯ ಪದ್ಯವಿದೆ. ನೊಳವಿಂಗೆ ಕುಪ್ಪೆವರಂ (ಪಂಪಭಾ. 2–50, ಶಾಂತಿಪು. 3–72 ವ), ಪೊಳ್ಳುಮರನಂ ಕಿರ್ಚಳುರ್ವಂತೆ (ಪಂಪಭಾ. 2–88, ಶಾಂತಿಪು. 4–52 ವ), ಮುತ್ತುಂಮೆಚ್ಚುಸುಂ ಕೋದಂತೆ (ಪಂಪಭಾ. 7–92, ಶಾಂತಿಪು. 10–181), ಬಲ್ಲಿತ್ತುಜಿ ಕೋಡು ಕೂರಿತು (ಆದಿಪುರಾಣ 1–25, ಶಾಂತಿಪು. 4–45)—ಮೊದಲಾದುವು ನೆನಪಾಗುತ್ತವೆ. ಇನ್ನಿತರ ಕೆಲವು ಪದ್ಯಗಳನ್ನು ತೂಗಿನೋಡಬಹುದು :

ಆದಿಪುರಾಣ	ಶಾಂತಿಪುರಾಣ
1. 1–52, 1–25	1. 6–102 ವ, 4–45
2. 2–9 ವ	2. 8–128 ವ
3. 3–79 ವ	3. 7–13
4. 9–98	4. 7–142
5. 5–41, 5–70	5. 6–107, 7–13
6. 7–53, 54	6. 10–14, 15
7. 11–16	7. 6–6
8. 7–56	8. 10–16

(ಶಾಂತಿಪುರಾಣದ 9–96 ರಿಂದ 105 ವ ದವರೆಗೂ, 9–81, 82 ರಲ್ಲೂ ಹಿಂದೂಪುರಾಣ ಪ್ರಭಾವವಾಗಿರುವಂತಿದೆ; 9–201 ರಿಂದ 212 ರವರೆಗೆ ಮಹಾಪುರಾಣದ ಛಾಯೆಯಿದೆ; 9–133 ರಲ್ಲಿ ಶಿಷ್ಟಕಾವ್ಯಪರಂಪರೆಯ ಪ್ರಭಾವವಿದೆ.) ಇನ್ನೂ ಕೆಲವು ಸಮಾನ ಉಕ್ತಿಗಳು ಪಂಪ–ಪೊನ್ನರಲ್ಲಿವೆ: ತೋಡುಂ ಬೀಡುಂ ಕಾಣಲಾಗದಂತಿಸೆ, ಪಂಪಭಾರದ 5–91 ವ, ಶಾಂತಿಪುರಾಣ 4–23 ವ, ಕಪ್ಪಂಗವಿಯಾಗು, ಪಂಪಭಾರತ 12–20 ವ, ಶಾಂತಿಪುರಾಣ 10–62 ವ. ಪೊನ್ನನ 1–63, 68 ನೆಯ ಪದ್ಯ, ಪಂಪನ ಭಾರತ ಕಾವ್ಯದ 1–56 ಮೊದಲಾದ ಪದ್ಯಗಳನ್ನು ನೆನಪಿಸುತ್ತದೆ. ಈ ಪಟ್ಟಿಯನ್ನು ಬೆಳೆಸಿ ಮುಂದುವರಿಸುವುದಕ್ಕಿಂತ ತೌಲನಿಕವಾಗಿ ನೋಡಿದಾಗ ವಿಮರ್ಶನ ಪ್ರಜ್ಞೆಗೆ ಸ್ಫುರಿಸುವ ಸಾರಾಂಶವಿಷ್ಟು: ಪಂಪನ ಆದಿಪುರಾಣದ ಬಿಗಿ ಬನಿ, ರುಚಿ ಕಾಂತಿ, ಪ್ರತಿಭೆ ಪ್ರಸನ್ನತೆ ಲಾಲಿತ್ಯ, ಹಿತಮಿತ ಮೃದುತೆ, ಕಾವ್ಯಸ್ಫೂರ್ತಿ ಪ್ರಕಾಶ ಪೊನ್ನನ ಶಾಂತಿಪುರಾಣದಲ್ಲಿ ಆ ಪ್ರಮಾಣದಲ್ಲಿ ಇಲ್ಲ. ಸ್ವತಂತ್ರ ದೀಪ್ತಿಗಿಂತ ಪ್ರತಿಫಲನ ಶಕ್ತಿಯಿದೆ. ಪಂಪನ ಕಾವ್ಯ ಪ್ರತಿಭೆ ಸೂರ್ಯಕಾಂತಿ ರೀತಿಯದು, ಹಗಲಿನ ಹೊಳಪು ಸ್ಫುಟತೆ ನಿಚ್ಚಳತೆಯಿದೆ. ಪೊನ್ನನದು ಚಂದ್ರಕಾಂತಿ, ಇಲ್ಲಿ ಇರುಳಿನ ತಂಪು ಇದೆ, ಆದರೆ ಬೆಳದಿಂಗಳ ಚೆಲುವು ಕಡಮೆ. ಪೊನ್ನನ ಶಾಂತಿಪುರಾಣಕ್ಕೆ ತನ್ನದೇ ಆದ ಒಂದು ಸ್ವತಂತ್ರ ಸ್ನಿಗ್ಧ ಕಾಂತಿಯಿರುವುದನ್ನೂ ಮರೆಯುವಂತಿಲ್ಲ.

ಸಮಾರೋಪ

ಪೊನ್ನಕವಿಯ ಶಾಂತಿಪುರಾಣ ಕೃತಿಯ ನೆಲೆಬೆಲೆಯ ನಿರ್ದೇಶನ ಮಾಡುವಾಗ ಸಮಷ್ಟಿ ದೃಷ್ಟಿಯ ವಿಮರ್ಶೆ ಮಾಡಬೇಕಾಗುತ್ತದೆ. ಅವನ ಕಾಲದ ಕಾವ್ಯಪದ್ಧತಿ, ಅವನವರೆಗೆ ಬೆಳೆದುಬಂದಿದ್ದ ಕಾವ್ಯಪರಂಪರೆ, ಒಟ್ಟು ಭಾರತೀಯ ಹಾಗೂ ಜೈನ ಪರಿಸರ, ಇತಿಹಾಸದ ಚೌಕಟ್ಟು—ಇವಿಷ್ಟನ್ನೂ ಅನುಸಂಧಾನಿಸಿಯೇ ಮುಂದೆ ಹೊರಡಬೇಕಾಗುತ್ತದೆ. ನಮ್ಮ ತೀಕ್ಷ್ಣ ದೃಷ್ಟಿಯ ಪಾರದರ್ಶಕ ಪ್ರಜ್ಞೆಗೆ ಹಿಡಿದಾಗ ಕವಿಯ ಕೃತಿ ತೋರಿಸುವ ಸೂಕ್ಷ್ಮ ಕಲಾವಂತಿಕೆಯನ್ನು ಪರಾಮರ್ಶಿಸೋಣ. ಈ ಬಗೆಯ ಕಾವ್ಯಾವಲೋಕನ ಮಾಡುವಾಗ ಯಾವ ಪೂರ್ವಗ್ರಹಿಕೆಯೂ ಮುಲಾಜೂ ಇಟ್ಟಿಲ್ಲ, ಇಡಬೇಕಾಗಿಲ್ಲ.

ಪೊನ್ನನ ಕಾವ್ಯಶಕ್ತಿ, ಪಂಪ–ಕುಮಾರವ್ಯಾಸರ ಮಟ್ಟದಲ್ಲಿ ನಿಲ್ಲಬಲ್ಲ ಅಪ್ರತಿಹತ ಜೀವಕಳೆಯಿಂದ ಕೂಡಿಲ್ಲ. ಓದುಗರ ಆಸಕ್ತಿಯನ್ನು ಸೆಳೆದುಕೊಳ್ಳಲು ಶಕ್ತವಾಗದ ಸನ್ನಿವೇಶಗಳು, ಕಾಂತಿಹೀನವಾದ ಭಾಗಗಳು ಬೇಕಾದಷ್ಟಿವೆ. ಹಲವು ಆಶ್ವಾಸಗಳ, ಸಹಸ್ರಾರು ಪದ್ಯಗಳ ದೊಡ್ಡ ಕಾವ್ಯದಲ್ಲಿ ಶ್ರೇಷ್ಠ ಕಾವ್ಯಾಂಶ ಕಾವ್ಯರೇಖೆ ಎಲ್ಲೆಡೆಗಳಲ್ಲೂ ಅವಿಚ್ಛಿನ್ನವಾಗಿ ವ್ಯಕ್ತವಾಗುವುದು ಅಸಾಧ್ಯವೆಂಬುದನ್ನು ಒಪ್ಪಿಯೂ ಕೂಡ, ಒಟ್ಟು ಕಾವ್ಯದ ಮಹತಿಯನ್ನು ಅಳೆಯಲೇಬೇಕಾಗುತ್ತದೆ.

ಪದ್ಯದಲ್ಲೂ ಗದ್ಯದಲ್ಲೂ ಪೊನ್ನನ ಮೃದುಪದವಿಲಾಸಗತಿಯನ್ನು, ದೇಸಿಯ ಸೊಗಡನ್ನು, ವರ್ಣಕ ಶಕ್ತಿಯನ್ನು, ಅರ್ಥವಂತಿಕೆಯನ್ನು ಗುರುತಿಸುವುದಕ್ಕೆ ಹತ್ತಾರು ಉದಾಹರಣೆಗಳಿವೆ. ಪೊನ್ನ ಸೂಕ್ಷ್ಮಜೀವಿ ಕಾವ್ಯಜ್ಞ. ಅವನ ಕಣ್ಣು ಸೂಕ್ಷ್ಮತಮ. ಕವಿ ಅಷ್ಟೇ ಸಂವೇದನಶೀಲ. ಪ್ರಕೃತಿಗೆ ಬಹು ಬೇಗ ಸ್ಪಂದಿಸುತ್ತಾನೆ, ತನ್ಮಯನಾಗಿಯೂ ಬರೆಯುತ್ತಾನೆ, ಸ್ಥಿತಪ್ರಜ್ಞನಾಗಿಯೂ ದೂರ ನಿಂತು ಸಾಕ್ಷೀಪ್ರಜ್ಞೆಗೆ ಕೆಲಸಕೊಡುತ್ತಾನೆ. ಚಿತ್ತಾಕರ್ಷಕವೆನಿಸುವ ಶಬ್ದಚಿತ್ರಗಳನ್ನು ಕೊಡುತ್ತಾನೆ. ಅಂಥ ಸಂದರ್ಭಗಳಲ್ಲಿ ಆತ ತೋರುವ ಬರವಣಿಗೆಯ ನಯ, ಭಾಷೆಯ ಮೇಲಿನ ಹಿಡಿತ, ಔಚಿತ್ಯಪ್ರಜ್ಞೆ ಸ್ತುತ್ಯಾರ್ಹವೆನಿಸುತ್ತದೆ. ತನ್ಮಯತೆಯ ಜತೆಗೇ ಹೆಜ್ಜೆಹಾಕುವ ಗಂಭೀರತೆಯ, ಸಾಧಾರಣೀಕರಣಗೊಳ್ಳದ ಜೀವನಮೌಲ್ಯವೂ ವಿಮರ್ಶಕರ ಗಮನ ಸೆಳೆಯುತ್ತದೆ.

ಆದರೆ ಪೊನ್ನನ ಸಮಗ್ರ ವಿಮರ್ಶೆಯ ಹಿನ್ನೆಲೆಯಲ್ಲಿ ಅವನ ಕಾವ್ಯಶಿಲ್ಪವನ್ನು ಪರಿಶೀಲಿಸತೊಡಗಿದಾಗ ಕೆಲವು ಕೊರತೆಗಳು ಕಾಣುತ್ತವೆ. ಔಚಿತ್ಯಪ್ರಜ್ಞೆ ಒಮ್ಮೊಮ್ಮೆ ಕೈಕೊಟ್ಟಿರುವುದು ಕಂಡುಬರುತ್ತದೆ. ನೇರವಾಗಿ, ಮನಮುಟ್ಟುವ ಸರಳ ಮಾತುಗಾರಿಕೆಯಿದ್ದರೂ, ಕ್ಲಿಷ್ಟತೆಗೆ ಎಡೆಗೊಡುವ ಉಸಿರುಕಟ್ಟಿಸುವ ದೀರ್ಘ ಸಮಾಸಗಳಿವೆಯೆಂಬುದನ್ನೂ ನೆನಪಿಡಬೇಕು.

ಇಲ್ಲಿ ಹೆಚ್ಚು ಸಂಘರ್ಷಗಳಿಲ್ಲ; ಹೇಳಿ ಕೇಳಿ ಶಾಂತಿಪುರಾಣ. ವ್ಯಕ್ತಿನಿಷ್ಠವಾದ ಯಾವ ತುಡಿತ ಜರೂರು ಕಾಳಜಿ ಕಳಕಳಿಯೂ ಸಾಂದ್ರತರವಾಗಿ ಕೆನೆಗಟ್ಟಿ ನಿಲ್ಲುವುದಿಲ್ಲ. ಹೊಸ ಜೀವಕಳೆ ತಳೆದು ಪದ್ಯ ಸಾರ್ಥಕತೆ ಪಡೆದುಕೊಂಡಿದೆ ಎಂದು ರಸಿಕ ಉದ್ಗಾರಗಳಿಂದ ಶಿಫಾರಸು ಗಿಟ್ಟಿಸುವ ಪದ್ಯಗಳಿವೆಯಾದರೂ ಅಂಥ ತುಂಬು ಜೀವ ಪಡೆದ ಅಖಂಡ ಪ್ರಸಂಗಗಳು ಕಡಮೆ. ಸಂಘರ್ಷಗಳಿಲ್ಲದ್ದರಿಂದಲೇ ರೂಢಿಗತವಾದ ಸಂಸ್ಕೃತಿಗೆ ಮುಖವಾಣಿಯಾಗಿದ್ದಾನೆ. ಅದರಿಂದಾಗಿ ಕೆಲವು ವರ್ಣನೆಗಳು ತೀರ ಸಂಪ್ರದಾಯಿಕವಾಗಿಬಿಡುತ್ತವೆ. ಅಲ್ಲಲ್ಲಿ ಚರ್ವಿತಚರ್ವಣವೆನಿಸುವ ಹೇಳಿಕೆಗಳಿವೆ. ಪುನರುಕ್ತಿ ವ್ಯಾಮೋಹದಿಂದ ಬಿಡಿಸಿಕೊಳ್ಳಲಾಗಿಲ್ಲ. ಶಬ್ದಗಳನ್ನು ಕಸರತ್ತು ಮಾಡಿಸುವುದರಲ್ಲಿ ಅನುರಕ್ತವೆನಿಸುವ ಹೇಳಿಕೆಗಳಿವೆ. ಹೆಚ್ಚು ಕಾವ್ಯರಚನೆಯಲ್ಲಿರುವ ಸೌಮ್ಯತೆಯನ್ನು ಎಷ್ಟೋ ಸಲ ಈ ನೀರಸತೆ ನುಂಗಿಹಾಕುವುದುಂಟು. ಸವಕಳಿ ನಾಣ್ಯವನ್ನು ನೆನಪಿಸುವ ಸಪ್ಪೆ ಹಾಗೂ ಶಾಸ್ತ್ರ ಜಡ ಸಂದರ್ಭಗಳು ಪೊನ್ನನ ಮಿತಿಗಳಿಗೆ ಉದಾಹರಣೆಯಾಗಿವೆ. ನಿಸ್ತೇಜವಾದ ಈ ಬಗೆಯ ಉದಾಹರಣೆಗಳು ಪೊನ್ನನಲ್ಲೇ ಅಲ್ಲ, ಎಲ್ಲ ಕವಿಗಳ ಕಾವ್ಯಗಳಲ್ಲೂ ಸಿಗುತ್ತವೆಂಬುದು ನಿಜ.

ನಮ್ಮ ಹಳಗನ್ನಡ ಕಾವ್ಯಗಳ ವಿಮರ್ಶಕರು ಪೊನ್ನನನ್ನು ಶ್ರದ್ಧೆಯಿಂದ ಆಳವಾಗಿ, ಅದರ ವಿವಿಧ ಪದರ ಪಾತಳಿಗಳಲ್ಲಿ ಅಭ್ಯಾಸಮಾಡಿಲ್ಲ. ಬಹು ಜನರು ಪೊನ್ನನ ಕಾವ್ಯದ ತಡಿತಡಿಯಲ್ಲೇ ಆಡಿಹೋಗಿದ್ದಾರೆ. ಈ ಅಭಿನಯದಿಂದ ಪೊನ್ನನಿಗೆ ಅಪಚಾರ, ವಿಮರ್ಶೆಗೆ ಅನ್ಯಾಯ. ಪೊನ್ನನ ಸ್ಥಾನ ಸಾಹಿತ್ಯ ಚರಿತ್ರೆಯಲ್ಲಿ ಈಗ ದೊರೆತಿರುವುದಕ್ಕಿಂತ ಹೆಚ್ಚಿನದಾಗಿದೆ, ಎತ್ತರದ್ದಾಗಿದೆ. ಇಷ್ಟಾಗಿಯೂ ಪಂಪ ನಮ್ಮ ಕಣ್ಮುಂದೆ ಸದಾ ಕೋರೈಸುವ ಕಾಂತಿ ಹೊತ್ತು ಸುಳಿಯುವುದರಿಂದ, ಪೊನ್ನ ತುಸು ಮಂಕಾಗಿಯೇ ತೋರುತ್ತಾನೆ, ಇದು ವಸ್ತುಸ್ಥಿತಿ. ಸಾವಿರ ಕ್ಯಾಂಡಲ್ ವಿದ್ಯುತ್ ದೀಪದ ಬೆಳಕಿನಲ್ಲಿ ಏಳುನೂರೈವತ್ತು ಕ್ಯಾಂಡಲ್ ದೀಪ ತೆಳುವಾಗುತ್ತದೆ. ಬೆಳಗಾದಾಗ ಆಗತಾನೆ ಹೊಲದಿಂದ ಕಿತ್ತು ತಂದ ತಾಜಾ ತನಿ ಅವರೇಕಾಯಿಯ ಸೊಗಡು ಎಲ್ಲಿ? ದೂರದ ಹಳ್ಳಿಯ ಹೊಲದಿಂದ ಬಿಡಿಸಿ ತಂದು ಮೂಟೆಗಟ್ಟಿಸಿಕೊಂಡು ಮರುದಿನ ಲಾರಿ ಹತ್ತಿ ಮಾರನೆಯ ದಿನ ಪೇಟೆ ಸೇರಿ ಮಾರುಕಟ್ಟೆಯಲ್ಲಿ ಬಿಕರಿಯಾಗುವ ಅವರೇಕಾಯಿಯ ಸೊಗಡೆಲ್ಲಿ? ಪಂಪ ಪಂಪನೇ, ಪೊನ್ನ ಪೊನ್ನನೇ. ಅವರವರ ದರ್ಶನ ಸಂಸ್ಕಾರ ಪ್ರತಿಭೆ ಸ್ಫೂರ್ತಿಗೆ ತಕ್ಕಂತೆ ಆಯಾ ಕಾವ್ಯದ ಹದ ಮತ್ತು ಕಾವ್ಯಸ್ವರೂಪ ಆಕಾರತಳೆಯುತ್ತದೆ.

ಈ ಸಮಾರೋಪ ಅಧ್ಯಾಯದ ಆರಂಭದಲ್ಲಿಯೇ ಅಂದಂತೆ, ಆಧುನಿಕ ಸಾಹಿತ್ಯದ ಸಂದರ್ಭದಲ್ಲಿ ನಿಂತ ನಾವು ಹತ್ತನೆಯ ಶತಮಾನದ ಪೊನ್ನಕವಿಯನ್ನೂ ಅವನ ಕೃತಿಯನ್ನೂ ಹೇಗೆ ನೋಡುತ್ತೇವೆ ಎಂಬುದೂ ಮುಖ್ಯವಾಗುತ್ತದೆ. ಅಂದಿನ ಕೃತಿಗೆ, ಕೃತಿರಚನೆಗೆ ಕಾರಣವಾದ ಹಿನ್ನೆಲೆಯನ್ನೂ ಮೊದಲು ಪರಾಮರಿಕೆಮಾಡಿ ನೋಡಬೇಕಾಗುತ್ತದೆ.

ಅಂದಿನ ಸಾಮಾಜಿಕ ಆರ್ಥಿಕ ರಾಜಕೀಯ ಚಾರಿತ್ರಿಕ ಪರಿಸರವನ್ನೂ, ಧ್ಯೇಯ ಧೋರಣೆ ಒಲವುಗಳನ್ನೂ ಅವಲೋಕಿಸಿ ಸೂಕ್ಷ್ಮವಾಗಿ ಪರಿಶೋಧಿಸಬೇಕಾಗುತ್ತದೆ. ಹೀಗೆ ಹಲವು ಹಿನ್ನೆಲೆ ಮುನ್ನೆಲೆಗಳನ್ನು ಕೂಲಂಕಷವಾಗಿ ವೀಕ್ಷಿಸಿನೋಡುವುದರಿಂದ ಕಾವ್ಯಾಭ್ಯಾಸಕ್ಕೆ ಆಯಾಮ ಬರುತ್ತದೆ. ಕೃತಿಯ ಹಿಂದೆ ಕೃತಿಕಾರನ ವ್ಯಕ್ತಿತ್ವವಿದ್ದಂತೆ ಪ್ರತಿಯೊಂದು ಸಾಹಿತ್ಯದ (ಕೃತಿಯ) ಹಿಂದೆ ಒಂದು ಪರಂಪರೆಯೂ ಇರುತ್ತದೆ.

ಪೊನ್ನ ತನ್ನ ಕಲಾಸ್ವಾತಂತ್ರ್ಯವನ್ನು ರಾಜಭಕ್ತಿಗೆ, ಶ್ರೀಮಂತರ ನಿಷ್ಠೆಗೆ ಹೊಂದಿಸಿಕೊಳ್ಳಲು ಹಿಂಜರಿಯಲಿಲ್ಲ. ಇವನಲ್ಲೂ ಪಂಪನ ದಾರಿಯೇ ಮುಂದುವರಿದಿದೆ. ಅರಮನೆ ಗುರುಮನೆ ದೇವಾಲಯ ಎಲ್ಲವೂ, ಎಷ್ಟೇ ಉನ್ನತವಾಗಿರಲಿ, ಮಾನವ ಸಂಸ್ಥೆಗಳೇ. ಪಂಪ ಪೊನ್ನ ರನ್ನಾದಿಗಳು ಆಶ್ರಯಿಸಿದ ಪ್ರಭುತ್ವವನ್ನು ಧಿಕ್ಕರಿಸಿದ ಹರಿಹರ ನಾರಣಪ್ಪಾದಿಗಳು ತಮ್ಮನ್ನು ರಾಜನ ಬದಲು ದೇವರಿಗೆ ಸಮರ್ಪಿಸಿಕೊಂಡರು. ಒಂದು ಆಶ್ರಯದ ಸ್ಥಾನದಲ್ಲಿ ಇನ್ನೊಂದು ಬಂತು, ಅಷ್ಟೆ. ರಾಜತ್ವವನ್ನು ವಿರೋಧಿಸಿದಂತೆ ತೋರಿದರೂ ದೈವತ್ವವನ್ನು ಸ್ವೀಕರಿಸಿದ್ದರಲ್ಲೇ ಕಲಾಸ್ವಾತಂತ್ರ್ಯಕ್ಕೆ ಮಿತಿಗಳೂ ಪ್ರಾಪ್ತವಾದುವು. ಅಪಾಯ ಎಂದು ಹೇಳುವುದಾದರೆ, ಇವೆರಡೂ ಅಪಾಯಕಾರಿಗಳೇ.

ಅಲ್ಲದೆ ಒಬ್ಬ ಕವಿ ರಾಜನಿಷ್ಠ ಸಾಹಿತ್ಯ ಸೃಷ್ಟಿಸಿದ್ದಾನೆಂದು ಕೇವಲ ಆಶ್ರಯ ಆಶ್ರಿತ ಸಂಬಂಧದ ಮೂಲಕ ರಾಜನ ಬಿರುದುಬಾವಲಿಗಳನ್ನು ಹೆಸರಿಸಿದ ಅಥವಾ ತಾನು ಪಡೆದ ಮಾತ್ರಕ್ಕೆ ಕವಿ ತನ್ನ ನಾಲಗೆಯನ್ನು ಪರರಿಗೆ ಮಾರಿಕೊಂಡನೆಂದು ತೀರ್ಮಾನಿಸುವುದು ಸರಿಯಾಗಲಾರದು. ಅಷ್ಟರಿಂದಲೇ ಕಾವ್ಯಸಿದ್ಧಿ ಅಳೆಯಬಾರದು. ಅಂಥ ಆತುರದ ಹೇಳಿಕೆಗಳಿಗಿಂತ, ಒಂದು ಕಾಲದ ಸಾಮಾಜಿಕ ಪ್ರಕ್ರಿಯೆಗಳ ಹಿನ್ನೆಲೆಯಲ್ಲಿ ಕವಿ ಕಾವ್ಯಗಳ ವಿಶ್ಲೇಷಣೆ ಮಹತ್ವದ್ದಾಗುತ್ತದೆ. ಕವಿಯು ಕಾಲದ ಅಂತರ್ಯದಲ್ಲಿ ನಡೆಯುತ್ತಿದ್ದ ಕ್ರಿಯಾವರ್ತನೆಯ ನಿರೂಪಣೆಯ ಮೂಲಕ ಆ ಕಾಲದ ವಾಸ್ತವಿಕ ನೆಲೆಯನ್ನೂ, ಸೂಕ್ಷ್ಮ ಸಂಬಂಧಗಳನ್ನೂ ಪ್ರಕಟಿಸಿರುವುದನ್ನು ವಿಶ್ಲೇಷಿಸಬೇಕು. ಇದು ಸಾಂಸ್ಕೃತಿಕ ಆರೋಗ್ಯಕ್ಕೆ ಹತ್ತಿರವಾಗುವ ವಿಧಾನ, ಕಾವ್ಯವನ್ನು ಅದರ ಹಲವು ಪದರಗಳಲ್ಲಿ ಅರ್ಥೈಸಲಿರುವ ಸಾಧನ. ಪೊನ್ನನ ಕಾಲಕ್ಕಾಗಲೇ ಕನ್ನಡದಲ್ಲಿ ಹತ್ತಾರು ಗದ್ಯ ಪದ್ಯ ಧಾರ್ಮಿಕ ಕಾವ್ಯಗಳು ರಚಿತವಾಗಿದ್ದುದಲ್ಲದೆ ಚಂಪೂ ಪ್ರಕಾರ ಬೇರುಬಿಟ್ಟಿತ್ತು. ಚಾರ್ವಾಕ ಬೌದ್ಧರನ್ನು ನಿಗ್ರಹಿಸಿ ಜೈನಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿತ್ತು, ಅದಕ್ಕೆ ರಾಜಾಶ್ರಯದ ಜತೆಗೆ ಮಂತ್ರಿ ಸಾಮಂತ ಶ್ರೀಮಂತ ಮನ್ನೆಯರ ವಾಣಿಜ್ಯ ವರೇಣ್ಯರ ಉತ್ತೇಜನವಿತ್ತು. ಕನ್ನಡನಾಡಿನ ಕಲೆ ಸಾಹಿತ್ಯ ಧರ್ಮಗಳ ಉತ್ಕರ್ಷಕ್ಕೆ ನೀರೆರೆದು ಪೋಷಿಸಿದ ಬಹುಪಾಲು ರಾಜರು ಜೈನಧರ್ಮ ಸಾಹಿತ್ಯಕ್ಕೆ ನೆರಳು ನೀಡಿ ಪುರಸ್ಕರಿಸಿದ್ದರು. ಈ ಪರಂಪರೆಯ ಶಾಂತಿಪುರಾಣದ ವಸ್ತು ಧಾರ್ಮಿಕ, ಇದನ್ನು ಬರೆದದ್ದು ಧರ್ಮಪ್ರೇಮ ಸಮಾಜಕ್ಕೆ, ಇದನ್ನು ಬರೆಸಿದವರು ಧರ್ಮಶ್ರದ್ಧೆಯವರು. ಹೀಗೆ ಧರ್ಮದ ವಾತಾವರಣವೇ ಪ್ರಧಾನವಾಗಿ, ಕಾವ್ಯದ ಒಟ್ಟು ಧೋರಣೆಯೇ ಆಗಿ ಕೆಲಸಮಾಡಿರುವುದರಿಂದ ಅದೇ ಕಾವ್ಯವನ್ನು ನಡೆಸುವ ನಿಯಂತ್ರಿಸುವ ಶಕ್ತಿಯಾಗಿದೆ. ಪೊನ್ನಕವಿ ತನ್ನೆಲ್ಲ ಕೇಂದ್ರ ಪ್ರಜ್ಞೆಯನ್ನು ತಾನು ಶಾಶ್ವತ ಚಿರಂತನ ಎಂದು ತಿಳಿದು ನಂಬಿದ ಈ ಧಾರ್ಮಿಕ ಮೌಲ್ಯಕ್ಕೇ ಅಧೀನಗೊಳಿಸಿ ತಂದು ನಿಲ್ಲಿಸಿದ್ದಾನೆ. ಧರ್ಮಕ್ಕೆ ತಲೆಬಾಗಿ ಸಾಗಿರುವ ಶಾಂತಿಪುರಾಣದಲ್ಲಿ ಕಾವ್ಯಧ್ವನಿಮಯವಾದ ದೃಶ್ಯಗಳು ಸಿಗುವುದು ಕಡಿಮೆಯೇ ಎಂಬುದನ್ನು ಸೋದಾಹರಣವಾಗಿ ತೋರಿಸಿದ್ದೇನೆ.

ಮನುಷ್ಯ ಸಮಾಜ ಹಲವು ಚಟುವಟಿಕೆಗಳ ಕೇಂದ್ರ. ಯುದ್ಧ ಕೂಡ ಜೀವನದ ಚಟುವಟಿಕೆಗಳಲ್ಲೊಂದು. ನಮ್ಮ ದೇಹದಲ್ಲಿಯೇ ಹೊರಗಿನದನ್ನು ಎದುರಿಸುವ, ತನ್ನ ಸ್ಥಿತಿಗೆ ಹೊಂದಿಸಿ ನಡೆಸುವ ಘರ್ಷಣೆ ನಡೆದಿರುತ್ತದೆ. ನಿತ್ಯದ ಸಾಮಾಜಿಕ ಜೀವನದಲ್ಲೂ ಪರವಿರೋಧಗಳ ತಿಕ್ಕಾಟ ಆಗುತ್ತಲೇ ಇರುತ್ತದೆ. ಇದರ ಸಾಮೂಹಿಕ ಪ್ರಮಾಣದಲ್ಲಿ ಇದು ಇನ್ನೂ ಬೃಹದಾಕಾರವಾಗಿ ಘೋರವಾಗಿ ಕಾಣುತ್ತದೆ. ಜಗಳ ವ್ಯಕ್ತಿಗಳ ನಡುವೆ, ಯುದ್ಧ ರಾಷ್ಟ್ರಗಳ ನಡುವೆ. ಕರ್ನಾಟಕದ ಚರಿತ್ರೆಯಲ್ಲಿ ಹತ್ತನೆಯ ಶತಮಾನ ವೀರಯುಗವೆಂದು ಪ್ರಸಿದ್ಧಿ ಪಡೆದಿದೆ. ಈ ಕ್ಷಾತ್ರ ಯುಗದ ದಾಖಲೆಗಳನ್ನು ಶಾಸನಗಳು ಕಾವ್ಯಗಳು ಸಮೃದ್ಧವಾಗಿ ಒದಗಿಸಿವೆ. ಶಾಂತಿಪುರಾಣವೂ ಇದಕ್ಕೆ ಅಪವಾದವಲ್ಲ.

ಮಾನವನ ಬುದ್ಧಿ ಶಕ್ತಿ ವಿಕಾಸಗೊಂಡಂತೆ ಅವನಲ್ಲಿ ವಿವಿಧ ಕಲೆಗಳು ಬೆಳೆದುಬಂದುವು. ಆದರೆ ಹೋರಾಡುವ ಕಲೆ ಮಾತ್ರ ಅವನು ಹುಟ್ಟಿದಂದಿನಿಂದಲೇ ಬಂದಿದೆ. ಆದ್ದರಿಂದಲೇ ಹೋರಾಟದ ಪ್ರವೃತ್ತಿಯನ್ನು ಮನೋವಿಜ್ಞಾನಿಗಳು ಮಾನವನ ಮೂಲಭೂತ ಪ್ರವೃತ್ತಿಗಳೊಂದಿಗೆ ಸೇರಿಸಿದ್ದಾರೆ. ಈ ಪ್ರವೃತ್ತಿಗೆ ಪ್ರಚೋದನೆಯೆಂದರೆ ಆತ್ಮರಕ್ಷಣೆಯ ಆಕಾಂಕ್ಷೆ ಮತ್ತು ಸ್ವಸುಖ ಸ್ಥಾಪನೆ. ಇದೇ ಮಾನವನ ವೀರಜೀವನದ ಉಗಮಕೇಂದ್ರ, ಮೂಲಸೆಲೆ. ಈ ಹೋರಾಟಕ್ಕೆ ಅಗತ್ಯವಾದ ಮಾನಸಿಕ ಸ್ಥೈರ್ಯ ಮತ್ತು ದೈಹಿಕ ದಾರ್ಢ್ಯಗಳನ್ನು 'ವೀರತನ' ಎನ್ನುತ್ತಾರೆ. ಪ್ರಬಲ ಜೀವಿಗಳು ತಮಗಿಂತ ದುರ್ಬಲ ಜೀವಿಗಳನ್ನು ಕೊಂದು, ಕೆಲವೊಮ್ಮೆ ತಿಂದು ತಮ್ಮ ಉದರ ನಿರ್ವಹಣ ಮಾಡುವುದು ವಿಕಾಸವಾದ ಸಿದ್ಧಾಂತಕ್ಕೆ ಅನುಗುಣವಾದುದು.

ಮಾನವನೂ ಅಧಿಕಾರ, ಅಂತಸ್ತು, ಐಶ್ವರ್ಯ ಮೊದಲಾದ ಕಾರಣಗಳಿಂದಾಗಿ ದುರ್ಬಲರನ್ನು ಹತ್ತಿಕ್ಕುತ್ತಾ ಬಂದಿರುವ ನಗ್ನಸತ್ಯವನ್ನು ಇತಿಹಾಸ ಸಾರಿದೆ. ಮಾನವನಿಗೆ ಆಧುನಿಕತೆಯ ಸ್ಪರ್ಶವಾಗದಿದ್ದಾಗ ಈ ಹೋರಾಟ ಕೇವಲ ಪರಿಮಿತವಾಗಿತ್ತು, ಬಹುವಾಗಿ ಸ್ವಾರ್ಥಪರವಾಗಿತ್ತು. ಮುಂದೆ ಅವನು ಸಂಸ್ಕೃತಿ ನಾಗರೀಕತೆಗಳತ್ತ ಹೆಜ್ಜೆ ಹಾಕಿದಾಗ ಈ ಹೋರಾಟ ಸ್ವಾರ್ಥಪರ ವಲಯದಿಂದ ನಿಸ್ವಾರ್ಥ ವಲಯವನ್ನೂ ಹೊಕ್ಕು 'ವೀರತನ' ಎಂಬೊಂದು ಗೌರವಾರ್ಹ ಮೌಲ್ಯವನ್ನು ಪಡೆಯಿತು. ಅಂದರೆ ವೀರತನದ ಅರ್ಥವ್ಯಾಪ್ತಿ ಹಿಗ್ಗಿ 'ಅದು ಸದುದ್ದೇಶದಿಂದ ಕೂಡಿದ ಅನಿವಾರ್ಯ ಹೋರಾಟ' ಎಂಬ ಅರ್ಥವಿಕಾಸ ಪಡೆದುಕೊಂಡಿತು. ಅಂದರೆ ಉದ್ದೇಶ ಆಧಾರದಿಂದಲೇ ವೀರತನ ಒಪ್ಪಿತ ಮೌಲ್ಯವೋ ಅಪಮೌಲ್ಯವೋ ಎಂದು ನಿರ್ಧಾರವಾಗುವ ಈ ಘಟ್ಟ ಮಾನವನ ಸಂಸ್ಕೃತಿ ಬೆಳವಣಿಗೆಯಲ್ಲಿ ಮಹತ್ವದ ಹಂತ, ರಾಜನಿಗಾಗಿ, ನಾಡಿಗಾಗಿ, ಇತರ ಸಾಮಾಜಿಕ ಕಾರ್ಯಗಳಿಗಾಗಿ ವೀರ ಪ್ರವೃತ್ತಿಯನ್ನು ಮೆರೆಯುವ ಈ ಕಲೆ 'ಯುದ್ಧ ಕಲೆ'ಯೂ ಆಯಿತು.

ಈ ಯುದ್ಧಕಲೆಯ ವರ್ಣನೆ ದೊಡ್ಡ ಕಾವ್ಯಗಳಲ್ಲಿ ಇದ್ದದ್ದೇ. ಎಲ್ಲ ದೇಶಗಳ ಭಾಷೆಗಳ ಮಹಾಕಾವ್ಯಗಳಲ್ಲೂ ಯುದ್ಧವರ್ಣನೆಗಳುಂಟು. ಕಡೆಗೆ ಶಾಂತಿಪುರಾಣದಂಥ ಧಾರ್ಮಿಕ ಅಹಿಂಸಾತ್ಮಕ ಕಾವ್ಯವೂ ಇದಕ್ಕೆ ಹೊರತಲ್ಲ. ಪೊನ್ನನೂ ಸೈನ್ಯ, ಕತ್ತಿ, ಈಟಿ ಮೊದಲಾದ ಆಯುಧ, ಬಿಲ್ವಿದ್ಯೆ, ಗದೆ, ರಥ, ವಾಹನ, ಗಜಸೇನೆ, ತುರಗ ಅಥವಾ ಅಶ್ವಸೇನೆ, ಪದಾತಿ, ಶತ್ರುನಿಗ್ರಹ ದಮನ, ರಾಜ್ಯವಿಸ್ತರಣೆ, ಕಪ್ಪಕಾಣಿಕೆ, ಗೋವು, ಸ್ತ್ರೀ, ಗಡಿ ರಕ್ಷೆಗಾಗಿ ಕಾಳಗ— ಮೊದಲಾದ ವರ್ಣನೆ ಲೌಕಿಕ ಕಾವ್ಯದಂತೆಯೇ ಮಾಡಿದ್ದಾನೆ. ಆತ್ಮರಕ್ಷಣೆಗೂ ಆತ್ಮಪ್ರತಿಷ್ಠೆಗೂ ಚಕ್ರವರ್ತಿ ರಣರಂಗ ಕ್ಕಿಳಿದಾಗ ಸಾಮಂತರು ನೆರವಿಗೆ ಧಾವಿಸುವುದೂ, ಇಷ್ಟವಿಲ್ಲದಿದ್ದರೂ ಭಯ ಭೀತಿಯಿಂದ ಭಾಗವಹಿಸುವುದೂ, ಜೋಳದ ಪಾಳಿ—ಎಲ್ಲ ವಿಷಯಗಳೂ ಕ್ರಮವಾಗಿ ಬಂದಿವೆ. ಇಂಥ ಕ್ರೂರ ಯುದ್ಧದಲ್ಲೂ ಹುತ್ತ ಹತ್ತಿದವನನ್ನು, ದೇವ ಮೂರ್ತಿಯನ್ನು ಅಪ್ಪಿದವನನ್ನು, ಶಸ್ತ್ರಹೀನನನ್ನು, ನೀರಲ್ಲಿ ಮುಳುಗಿದವನನ್ನು ಕೊಲ್ಲಬಾರದೆಂಬ ಧರ್ಮವೂ ಇದೆ. ಈ ಯುದ್ಧವರ್ಣನೆಗಳಲ್ಲಿ ಪೊನ್ನ ತೀರ ವಸ್ತುನಿಷ್ಠತೆಯಿಂದ ವರ್ತಿಸುತ್ತಾನೆಯೇ ಹೊರತು ಸೃಜನಶೀಲತೆಯಿಂದ ವಿಮರ್ಶನ ಪ್ರಜ್ಞೆ ತೋರಿ ಬರೆದಿರುವುದು ಅತ್ಯಲ್ಪ.

ಮಾನವ ಮತ್ತು ಕಾಮದ ಸಂಬಂಧ ಸೃಷ್ಟಿಯಷ್ಟೇ ಅನಾದಿ. ಈ ರಹಸ್ಯ ಅಷ್ಟು ಸುಲಭವಾಗಿ ವಶವಾಗುವುದಿಲ್ಲ. ಶಾಂತಿಪುರಾಣದ ಒಂಬತ್ತನೆಯ ಆಶ್ವಾಸದಲ್ಲಿ ಬರುವ ವೇಶ್ಯಾವಾಟಿಯ ವರ್ಣನೆಗೆ ಹೆಚ್ಚಿನ ಮನ್ನಣೆಯಿರುವುದು ಈ ಕಾರಣಕ್ಕಾಗಿಯೇ. ಕವಿ ಸಾಮಾಜಿಕ ಜವಾಬ್ದಾರಿ ಹೊತ್ತು, ಬದುಕಿಗೆ ಬದ್ಧನಾಗಿ, ಸಮಕಾಲೀನ ಪ್ರಜ್ಞೆಗೆ ತೆರೆದು ಕೊಳ್ಳುವುದು ಅಗತ್ಯವೆಂಬ ಹೇಳಿಕೆ ಆಗಾಗ್ಗೆ ಕೇಳಿಬರುತ್ತಿರುತ್ತದೆ. ಪೊನ್ನ ಆ ಕೆಲಸವನ್ನು ಯಶಸ್ವಿಯಾಗಿ ನಿರ್ವಹಿ ಸಿರುವ ಭಾಗಗಳಲ್ಲಿ ಸೂಳೆಗೇರಿಯ ಚಿತ್ರಣವೂ ಒಂದು. ಕೇವಲ ಜಡವಸ್ತು ನಿಷ್ಠತೆಯಿಂದ ಕ್ಷಣಕಾಲ ಬಿಡಿಸಿಕೊಂಡು ಸ್ಪಷ್ಟವಾಗಿ ವ್ಯಕ್ತಿವಿಶಿಷ್ಟ ಅನುಭವ ವಿಶೇಷಕ್ಕೆ ಅಭಿವ್ಯಕ್ತಿಗೆ ಪೊನ್ನ ತನ್ನನ್ನು ಇಲ್ಲಿ ತೊಡಗಿಸಿಕೊಂಡಿರುವಂತೆ ತೋರುತ್ತದೆ.

ಶಾಂತಿಪುರಾಣದ ಒಂಬತ್ತನೆಯ ಆಶ್ವಾಸದಲ್ಲಿ ಬರುವ ವೇಶ್ಯಾವಾಟಿಯ ವರ್ಣನೆ ಸಂಸ್ಕೃತ ಮೂಲದಲ್ಲಿ, ಅಸಗ ಇಲ್ಲವೇ ಉತ್ತರಪುರಾಣದಲ್ಲಿ (ಅಥವಾ ಚಾವುಂಡರಾಯಪುರಾಣದಲ್ಲಿ) ಇಲ್ಲದ್ದು, ಕನ್ನಡದಲ್ಲಷ್ಟೇ ಪೊನ್ನ ಹೊಸದಾಗಿ ಸೇರಿಸಿದ್ದು. ಇದರಲ್ಲಿ ಉದ್ದಕ್ಕೂ ಪೊನ್ನಕವಿ ತನ್ನ ಪಚ್ಚಪಸಿಯ ಪೊನ್ನತನವನ್ನು, ಸ್ವಂತಿಕೆ ಸ್ವೋಪಜ್ಞತೆಗಳನ್ನು ಮೆರೆದಿರುವುದು ಕಂಡುಬರುತ್ತದೆ. ಆದರೂ ಒಂದು ಮಾತು ನೆನಪಿರಬೇಕು; ಈ ವೇಳೆಗೆ ಪಂಪನಲ್ಲಿ ಇದು ರೂಢಿಗೆ ಬಂದಿತ್ತು. ಕನ್ನಡದಲ್ಲಿ ಒಂದು ಕಾವ್ಯಪದ್ಧತಿಯಾಗಿ, ಸಂಪ್ರದಾಯವಾಗಿ ಸ್ಥಾಪಿತವಾಗಿತ್ತು. ಅಲ್ಲದೆ ಶೂದ್ರಕ ಮತ್ತು ಹರಿವಂಶ ಕಾವ್ಯಗಳಲ್ಲೇ, ಪಂಪಪೂರ್ವ ಚಂಪೂಕೃತಿಗಳಲ್ಲೇ ವೇಶ್ಯಾವಾಟ ವರ್ಣನೆ ಬಳಕೆಯಾಗಿದ್ದಿರಲೂ ಬಹುದು. ಒಂದನೆಯ ಗುಣವರ್ಮನ ಕಾವ್ಯಸ್ವರೂಪವನ್ನು ಊಹಿಸಿಯೇ ಕಲ್ಪಿಸಿಕೊಳ್ಳಬೇಕಾಗಿದೆ.

ಕಲ್ಪನಾಶ್ರೀ, ಶೈಲಿ, ವಸ್ತು, ನಿರೂಪಣೆ, ಭಾವ, ಸಂದರ್ಭ—ಎಲ್ಲದರಲ್ಲೂ ಪೊನ್ನನ ಸ್ವತಂತ್ರ ಕಾವ್ಯಶಕ್ತಿಯ ಉದ್ದೀನ ವಿಲಾಸ ನೋಡಬೇಕಾದರೆ ಶಾಂತಿಪುರಾಣದ ಎಂಟನೆಯ ಆಶ್ವಾಸಕ್ಕೆ ಬರಬೇಕು. ಅಷ್ಟಮಾಶ್ವಾಸದ ಬಹುಭಾಗ ವೇಶ್ಯಾವಾಟಿಯ ಜೀವನಕ್ಕೊಂದು ಗವಾಕ್ಷ. ದೇಹವಿಕ್ರಯದ, ರತಿ ರಾತ್ರಿ ಸುಖ ಜೀವನದ ಸ್ವಾರಸ್ಯವಾದ ಮುಖದರ್ಶನ ಮಾಡಿಸುವಾಗ ಪೊನ್ನ ಕೂಡ ಪಂಪನ ಸಮಕ್ಕೆ ಬರುತ್ತಾನೆ. ಮೈಮಾರುವ ಪಡಿವಾಟನಲ್ಲಿ ಅಡಗಿಕುಳಿತ ಅರಳಿದ–ಬಾಡಿದ, ನೊಂದ–ನಲಿದ ಮನಸ್ಸುಗಳ ರಾಗದ ಏರಿಳಿತವನ್ನು ಅದರ ಸ್ಪಂದನ ಕೂಡ ಕಾಣುವಷ್ಟು ಕೇಳುವಷ್ಟು ಸಾವಯವತೆಯಿಂದ ಪೊನ್ನ ಸಾಕ್ಷಾತ್ಕರಿಸಿದ್ದಾನೆ. ಅವನ ಶೈಲಿಯ ಸಿರಿಗೆಗಳು ತುಂಬ ನವಿರಾಗಿ ಈ ಭಾಗದಲ್ಲಿ ಗರಿಗೆದರಿರುವುದನ್ನು ಕಂಡು ಆಸ್ವಾದಿಸಿ ಆನಂದಿಸಬಹುದು. ಸೂಳೆಗೇರಿಯ ಪದ್ಯಗಳಾವರೂ ಪರಿಭಾವಿಸಿದಷ್ಟೂ ಅರ್ಥಬಿಡುವ ಸಾಲುಗಳು, ಸಂದರ್ಭಗಳು ಹತ್ತಾರಿವೆ. ಕವಿ ಇಲ್ಲಿ ತನ್ನ ಕಾಲಕ್ಕೆ ಸ್ಪಂದಿಸಿದ್ದಾನೆ. ಎಷ್ಟರಮಟ್ಟಿಗೆ ತನ್ನ ಸುತ್ತಿನ ಬದುಕಿನೊಡನೆ ಬೆರೆತಿದ್ದಾನೆಂಬುದಕ್ಕೊಂದು ಕಿಂಡಿ ತೆರೆದಿದ್ದಾನೆ. ಸಮಕಾಲೀನ ಸಮಾಜದ ಒಂದು ಅವಿಭಾಜ್ಯ ಅಂಗವಾಗಿದ್ದ, ಅರಮನೆ ಗುರುಮನೆ ಸೆರೆಮನೆಗಳಂತೆ ಸೂಳೆಮನೆಗಳೂ ಸಾಮಾಜಿಕ ಸ್ಥಾನಮಾನಗಳಿಂದ ಪ್ರತಿಷ್ಠಿತವಾಗಿದ್ದುದರಿಂದ ಸವಣನಾದ ಪೊನ್ನ ಕೂಡ ಕಾವ್ಯನಾಯಕನನ್ನು ಸೂಳೆಗೇರಿಯಲ್ಲಿ ಕರೆದು ಹೊರಡಲು ಹಿಮ್ಮೆಟ್ಟುವುದಿಲ್ಲ. ಆ ಗ–ಕಾಳಿದಾಸರಲ್ಲಾಗಲಿ, ಮಹಾಪುರಾಣದ ಪೂರ್ವಾರ್ಧ–ಉತ್ತರಾರ್ಧಗಳಲ್ಲಾಗಲಿ ಇಲ್ಲದ, ಕೇವಲ ಪೊನ್ನನವೇ ಎನ್ನಬಹುದಾದ ಸ್ವಂತ ಕಾಣಿಕೆ ತುಳುಕುವ ಭಾಗವಿದು. ಅದರಿಂದ ಇದಕ್ಕೆ ಮಹತ್ವ ಹೆಚ್ಚಿದೆ. ಜತೆಗೆ ಪಂಪ ವಿಕ್ರಮಾರ್ಜುನವಿಜಯದಲ್ಲಿ, ಲೌಕಿಕ ಕಾವ್ಯದಲ್ಲಿ ಮಾತ್ರ ಹೇಳಿದರೆ ಪೊನ್ನ ಶಾಂತಿಪುರಾಣದಲ್ಲೂ, ಆಗಮಿಕ ಕಾವ್ಯದಲ್ಲೂ ಇದನ್ನು ಅಳವಡಿಸಿ ಪಂಪನಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದಾನೆ. ಪಂಪ–ಪೊನ್ನರಿಗಿಂತ ಹಿಂದೆ ಗುಣವರ್ಮ–ಗುಣನಂದಿಯರ ಕಾಲಕ್ಕಾಗಲಿ ಕನ್ನಡ ಕಾವ್ಯಗಳಲ್ಲಿ ವೇಶ್ಯಾವಾಟಿಕೆಗೊಂದು ವಿಶಿಷ್ಟ ಸ್ಥಾನ, ಕೆಲವು ಪದ್ಯಗಳನ್ನು ರಚಿಸುವ ಪದ್ಧತಿ ಶಿಷ್ಟಮಾನ್ಯತೆ ಗಳಿಸಿಕೊಂಡಿದ್ದಿರಬಹುದು, ಖಚಿತವಾಗಿ ತಿಳಿಯದು. ಆದರೆ ಈಗ ಅನುಮಾನವಿಲ್ಲದಂತೆ ತಿಳಿದು ಬಂದಿರುವುದು, ಪಂಪನೇ ಇದಕ್ಕೆ ಆದ್ಯಗುರು. ಪಂಪನನ್ನು ಹೆಸರಿಸದಿದ್ದರೂ, ಪರೋಕ್ಷವಾಗಿ ಆತನನ್ನು ಮಾದರಿಯೆಂದು ಗುರುವಿನ ಸ್ಥಾನದಲ್ಲಿರಿಸಿಕೊಂಡೇ ಹೊರಟಿರುವ ಪೊನ್ನ, ಈ ವಿಚಾರದಲ್ಲೂ ಪಂಪನಿಗೆ ಸಮನಾಗಲೂ ಅದೇ ಧಾಟಿ–ರಾಗ ಹಿಡಿದಿದ್ದಾನೆ. ಸುಮಾರು 32 ಪದ್ಯಗಳಲ್ಲಿ (ಬಹುವಾಗಿ ಎಲ್ಲ ವೃತ್ತಗಳು) ಮತ್ತು ಸ್ವಲ್ಪವೇ ಬರುವ ಗದ್ಯದಲ್ಲಿ ಮನ್ಮಥ ಪಾಳೆಯದ ಪಟ್ಟುಪಾಡುಗಳನ್ನು ಹುಟ್ಟುಹಾಡಾಗಿಸಲು ಪೊನ್ನಕವಿ ಪ್ರಾಮಾಣಿಕವಾದ ಪ್ರಯತ್ನ ಮಾಡಿದ್ದಾನೆ. ಈ ವಿಚಾರದಲ್ಲಿ (ಸಮಾಜ ಮತ್ತು ಕಾವ್ಯ) ಸಂಪ್ರದಾಯವನ್ನು ಪುರಸ್ಕರಿದಂತೆಯೂ ಆಯಿತು, ತನ್ನತನವನ್ನು ತೋರಿದಂತೆಯೂ ಆಯಿತು—ಎಂಬ ಸಮಾಧಾನ ಮತ್ತು ಸಂತೋಷ ಕವಿಗಿರುವಂತಿದೆ. ಈ ವರ್ಣನೆಗಳಲ್ಲಿರುವ ಉತ್ಕಟತೆ, ಮುಕ್ತತೆ, ರಸಿಕತೆ, ತನ್ಮಯತೆ, ರಸಾರ್ದ್ರತೆ—ಇವೆಲ್ಲ ಮೇಲಿನ ಹೇಳಿಕೆಯನ್ನು ದೃಢಪಡಿಸುತ್ತವೆ.

ಪೊನ್ನನದು ಪ್ರೌಢವೂ ಪ್ರಕಾಂಡವೂ ಆದ ಪಾಂಡಿತ್ಯ. ಹಲವು ಜ್ಞಾನ ಶಾಖೆಗಳಲ್ಲಿ ಆತನಿಗೆ ಅಗಾಧವಾದ ತಿಳಿವಳಿಕೆಯಿದೆ. ಪೊನ್ನ ಜಡಪಂಡಿತನಲ್ಲ, ಉತ್ತಮ ರಸಗ್ರಾಹಿ. ಜೈನಧರ್ಮದಲ್ಲಿ ಆಳವಾಗಿ ಬೇರುಬಿಟ್ಟ ನಂಬಿಕೆ ಯಿದ್ದರೂ, ಧಾರ್ಮಿಕ ಮೌಲ್ಯದ ಜತೆಗೆ ಸಾಹಿತ್ಯ ಮೌಲ್ಯವನ್ನೂ ಕಾಪಾಡಿದ್ದಾನೆ. ಪೊನ್ನ ವಸ್ತುಸ್ವರೂಪವನ್ನೂ

ರಚನೆಯ ಸಂವಿಧಾನವನ್ನೂ ಎತ್ತಿಕೊಳ್ಳುವುದರಲ್ಲಿ ಅಸಗನಿಗೆ ಋಣಿಯಾಗಿದ್ದರೂ ಅಲ್ಲಿ ಆಂಶಿಕವಾಗಿ ಪ್ರಸ್ತಾಪವಾದ ಕೆಲವು ಪರಿಕಲ್ಪನೆಗಳನ್ನು ಸುಸ್ಪಷ್ಟವಾಗಿ ಸಾವಯವ ಸೌಷ್ಠವದಿಂದ ಉಪಯುಕ್ತವೂ ಮನನೀಯವೂ ಆಗಿ ಕಾಣುವಂತೆ ಸಾಂಗವಾಗಿ ಕಥೆಯನ್ನು ತಿದ್ದಿ ಬೆಳಸಿ ಮುಂದುವರಿಸಿರುವ ಮತ್ತು ಸಮರ್ಥವಾಗಿ ನಿರ್ವಹಿಸಿರುವ ರೀತಿ ಪ್ರಾಯಃ ಪೊನ್ನನ ಶಕ್ತಿಗೆ ಕೊಟ್ಟ ಸುವರ್ಣಪದಕ. ಮೂಲ ಆಕರದಲ್ಲಿದ್ದ ಸ್ವಾರಸ್ಯವಾದ ಮೂಲ ರೇಖೆಗಳನ್ನು ಸ್ವಾರಸ್ಯತಮವಾದ ಕಾವ್ಯರೇಖೆಗಳಾಗಿ ತೊಳಗಿ ಬೆಳಗುವಂತೆ ಮಾಡಿರುವುದನ್ನು ವಿಶೇಷವಾಗಿ ವಿಮರ್ಶಕರು ಲಕ್ಷಿಸತಕ್ಕದ್ದು. ಈ ಪರಿವರ್ತನೆಯಲ್ಲಿ, ಸ್ವಂತಿಕೆಯ ತೆಳುಲೇಪ ಹಾಕುವಲ್ಲಿ ಪೊನ್ನ ತೋರಿರುವ ಕಲಾಕೌಶಲ ಕುತೂಹಲಕರವಾದುದು. ವಸ್ತು ಸಾದೃಶ್ಯಗಳಿದ್ದೂ ಇಂಥ ಸೂಕ್ಷ್ಮಗಳಿಂದಾಗಿ ಪೊನ್ನ ಮಾಡಿರುವ ವ್ಯತ್ಯಾಸಕ್ಕೆ ಮಹತ್ವಬಂದಿದೆ. ಇವನ ಕಾವ್ಯ ಪುನರಾವೃತ್ತಿಯಲ್ಲ, ಪುನರ್ ಸೃಷ್ಟಿ. ಸ್ವಾನುಭವ ಬೆರಸಿ ಹೊಸ ಹೊಳಪು ಹೊಳಯಿಸಿದ್ದಾನೆ; ಹೆಚ್ಚು ಹೊಸ ವಿಷಯಗಳಿಲ್ಲವಾದರೂ ಚರ್ವಿತಚರ್ವಣ ಚೌಕಟ್ಟಿಗೂ ಒಳಗಿನ ಚಿತ್ರಕ್ಕೂ ಹೊಗರು ಹೊಮ್ಮಿಸಿದ್ದಾನೆ. ಪರಂಪರೆಯ ಮೇಲೆ ಸ್ವಂತ ವ್ಯಕ್ತಿತ್ವದ ಛಾಪು ಕಾಣಿಸಿದ್ದಾನೆ, 'ಉಭಯಭಾಷಾ ಕವಿಚಕ್ರವರ್ತಿ' ಎಂಬ ತನ್ನ ಪ್ರಶಸ್ತಿಯನ್ನು ಉಳಿಸಿಕೊಂಡಿದ್ದಾನೆ. ಪೊನ್ನನ ಈ ಉನ್ನತ ಕಾವ್ಯಶಕ್ತಿಯನ್ನು ಗಮನಿಸಿ, ಗೌರವಿಸಿ ಪೊನ್ನಾನಂತರದ ಬಹುಜನ ಕವಿಗಳು ಈತನ ಕಾವ್ಯದ ಮುಡಿಗೆ ಬೊಗಸೆ ಹೂ ಏರಿಸಿದ್ದಾರೆ, ಕವಿಯ ಅಡಿಗೆ ತಮ್ಮ ಮಣಿಹದ ನುಡಿ ಹೂ ಇರಿಸಿದ್ದಾರೆ. "ಧರಣಿಗೆ ನೆಗಟ್ದನ್, ಕನ್ನಡದೊಳ್ ನೆಗಟ್ತೆಯ ಕವಿಪೊನ್ನಂ; ಪೊನ್ನಂ ನೇರಾಣಿಯ ಪೊನ್ನನ್ನನ್."

ಇಷ್ಟೆಲ್ಲಾ ಗುಣ–ದೋಷಗಳ ಸಮ್ಮಿಶ್ರಣವಾದ ಪೊನ್ನನ ಶಾಂತಿಪುರಾಣ ಒಂದು ಮುಪ್ಪಿಲ್ಲದ ಕೃತಿಯೆಂಬುದು ಮಹತ್ವದ ಮಾತು. ಅದಕ್ಕೆ ಸನತ್ಕುಮಾರತುಲ್ಯವಾದ ಚಿರಯೌವನವನ್ನು ಕಾವ್ಯದ ಇತರ ಗುಣಾಂಶಗಳು ತಂದು ಕೊಟ್ಟಿವೆ. ನ್ಯೂನತೆಗಳಿದ್ದರೂ ಅವನ್ನು ಇಕ್ಕಿಮೆಟ್ಟಿ ನಿಲ್ಲುವ ಪ್ರಖರವಾದ ಕಾವ್ಯಾಂಶವೂ ಇದೆ. ಮನುಷ್ಯನ ಎಲ್ಲ ಚಿಂತನೆ ಹಾಗೂ ಭಾವನೆ ಭಾಷೆಯಲ್ಲೇ ಸಂಭವಿಸಬೇಕು. ಪೊನ್ನನ ಭಾಷೆ ಕವಿಯ ಕಲ್ಪನೆಗಳನ್ನು ಚೆನ್ನಾಗಿ ಕನ್ನಡಿಸಿದೆ. ಸಮಕಾಲೀನ ಇತಿಹಾಸ, ಸ್ವಕೀಯ ವೃತ್ತಾಂತ ಇವನ್ನು ತೆಕ್ಕೆಹಾಕಿಕೊಂಡಿರುವ ಶಾಂತಿಪುರಾಣಕ್ಕೆ ಹೊಸ ಆಯಾಮ ಬಂದಿದೆ. ಹೀಗಾಗಿ ಶಾಂತಿಪುರಾಣವನ್ನು ಒಂದು ಸಮನ್ವಯ ಕಾವ್ಯವೆನ್ನಬಹುದು. ಅದರ ಪ್ರೇರಣೆ, ಪ್ರಚೋದನೆ, ದಟ್ಟವಾದ ಪ್ರಭಾವ—ಇವನ್ನು ಪರೀಕ್ಷಿಸಿ ಈ ಹೇಳಿಕೆಯನ್ನು ಒಪ್ಪಿಕೊಳ್ಳಬಹುದು.

ಕವಿಯ ಇತಿಮಿತಿಗಳನ್ನು ಒಂದು ನಿಷ್ಪಕ್ಷಪಾತವಾದ, ಆದರೆ ವಿಚಾರ ಪರಿಪ್ಲುತವಾದ, ವಿಚಿಕಿತ್ಸಕ ಬುದ್ಧಿಯಿಂದ ಪರಿಶೀಲಿಸಿದ್ದೇನೆ. ಅದರಂತೆ ಕಾವ್ಯದ ಉತ್ತಮಾಂಶಗಳನ್ನು ಸ್ವೀಕರಿಸಿದ್ದೇನೆ. ಇದರಿಂದ ಪೊನ್ನನ ಸಮಗ್ರ ದರ್ಶನ, ವ್ಯಕ್ತಿತ್ವದ ರುಚಿ ಮತ್ತು ಕಾಂತಿ ಗುರುತಿಸಿ ದಾಖಲಿಸಲು ಸಾಧ್ಯವಾಗಿದೆ ಎಂದು ತಿಳಿದಿದ್ದೇನೆ. ಹಳಗನ್ನಡ ಕಾವ್ಯಜ್ಞರು ಮಾತ್ರವಲ್ಲದೆ ಹೊಸಗನ್ನಡ ಕಾವ್ಯವಿದರೂ ಪೊನ್ನನ ಶಾಂತಿಪುರಾಣವನ್ನು ಆಸ್ವಾದಿಸಬಹುದು. ಕಾವ್ಯಾಂತರಾಳವನ್ನು ಹೊಕ್ಕು ಹೊರಬಂದಮೇಲೆ ಪರಿಭಾವಿಸಿದಾಗ, ಕಾವ್ಯಾನುಭವದಿಂದ ಸಹೃದಯರನ್ನು ತಳಮಳಗೊಳಿಸಿ ಸೆರೆಹಿಡಿದು ಕಾವ್ಯಸಮಾಧಿಗೆ ಕೊಂಡೊಯ್ಯುವ ಕೆಲವು ಭಾಗಗಳಿವೆ ಎಂಬುದು ಪೊನ್ನನ ಕವಿಚಕ್ರವರ್ತಿ ಬಿರುದಿಗೆ ಸಾರ್ಥಕತೆ ತಂದುಕೊಡುವ ಮಾತು.

ಗ್ರಂಥ ಸಂಪಾದನೆ

ಇನ್ನು ಗ್ರಂಥಸಂಪಾದನೆ ವಿಚಾರವಾಗಿ ಹೇಳಬೇಕಾದ ಕೆಲವು ಮಾತುಗಳಿವೆ. ಪೊನ್ನಕವಿಯ ಶಾಂತಿಪುರಾಣವನ್ನು ಮೊದಲಸಲ ಸಂಪಾದಿಸಿ ಶ್ರಮಪಟ್ಟು 1929ರಲ್ಲಿ ಪ್ರಕಟಿಸಿದವರು ಎ. ವೆಂಕಟರಾವ್ ಮತ್ತು ಹೆಚ್. ಶೇಷಯ್ಯಂಗಾರ್. ಅರ್ಧಶತಮಾನದ ಹಿಂದೆ ಮದರಾಸು ವಿಶ್ವವಿದ್ಯಾಲಯದಲ್ಲಿ ಕನ್ನಡ ಇಲಾಖೆಯ ಶಿಕ್ಷಕರಾಗಿದ್ದ ಈ ಇಬ್ಬರು ಮಹನೀಯರು ಕನ್ನಡನಾಡಿನ ಹೊರಗೆ ಉದ್ಯೋಗದಲ್ಲಿದ್ದರೂ ಹಳಗನ್ನಡ ಕಾವ್ಯ ಪ್ರೇಮದಿಂದ, ತಮಗಿದ್ದ ಪಾಂಡಿತ್ಯದಿಂದ ಪೊನ್ನನ

ಶಾಂತಿಪುರಾಣವನ್ನು ಚೆನ್ನಾಗಿ ಸಂಪಾದಿಸಿ ಮದರಾಸಿನಲ್ಲಿಯೇ ಮುದ್ರಿಸಿದ್ದಾರೆ. (ಅವರ ಮುದ್ರಿತ ಪ್ರತಿಯಲ್ಲಿ ಬಹುಮಟ್ಟಿಗೆ ಪ್ರತಿ ಪದ್ಯದಲ್ಲಿಯೂ ಕಂಡುಬರುವ ಶಬ್ದಗಳ ನಡುವೆ ಅನಗತ್ಯವಾಗಿ ಕೊಡುವ ಅಥವಾ ಬಿಡುವ ಸ್ಥಳದಿಂದಾಗಿ ಪದ್ಯಗಳನ್ನು ಅರ್ಥೈಸಲು ಉಂಟಾದ ತೊಡಕುಗಳನ್ನು ಸಾಧ್ಯವಾದಷ್ಟು ಇಲ್ಲಿ ನಿವಾರಿಸಿದ್ದೇನೆ; ಬಹುಶಃ ತೆಲುಗು ಕಾವ್ಯಗಳ ಮುದ್ರಣ ವಿಧಾನವನ್ನು ಅವರು ಅನುಸರಿಸಿರಬೇಕು.) ಆ ಕಾಲಕ್ಕೆ ಅವರು ಮಾಡಿದ ಕೆಲಸ ತುಂಬ ದೊಡ್ಡದು. ನಮ್ಮೆಲ್ಲರ ಗೌರವಗಳಿಸುವಂತಹುದು. ತಾವು ಬಹು ಶ್ರದ್ಧೆಯಿಂದ ಸಂಪಾದಿಸಿದ ಶಾಂತಿಪುರಾಣಕ್ಕೆ, ಆಗ್ಗೆ ಪಶ್ಚಿಮ ಗೋದಾವರಿ ಭಾಗಕ್ಕೆ ಜಿಲ್ಲಾ ವಿದ್ಯಾಧಿಕಾರಿಗಳಾಗಿದ್ದು, ಕನ್ನಡ ಕಾವ್ಯಗಳನ್ನು ವಿಶೇಷವಾಗಿ ವ್ಯಾಸಂಗಮಾಡಿ ಪ್ರಭುತ್ವ ಪಡೆದಿದ್ದ ಪ್ರಾಧ್ಯಾಪಕ ಆರ್. ತಾತಾರವರಿಂದ ಇಂಗ್ಲೀಷು ಮತ್ತು ಕನ್ನಡದಲ್ಲಿ ಸೊಗಸಾದ ವಿದ್ವತ್‌ಪೂರ್ಣ ಮುನ್ನುಡಿಯನ್ನೂ ಬರೆಸಿದ್ದಾರೆ. (1927ರ ಮೇ 19–21ರ ವರೆಗೆ ಮಂಗಳೂರಲ್ಲಿ ನಡೆದ 13ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆರ್. ತಾತಾ ಅಧ್ಯಕ್ಷರಾಗಿದ್ದರು.)

ಎ. ವೆಂಕಟರಾಯರು ಮತ್ತು ಹೆಚ್. ಶೇಷಯ್ಯಂಗಾರ್ಯರು ಪೊನ್ನನ ಶಾಂತಿಪುರಾಣವನ್ನು ಸಿದ್ಧಪಡಿಸಲು ಆಧರಿಸಿದ ಹಸ್ತಪ್ರತಿಗಳ ವಿವರ :

1. ಮೈಸೂರು ಪ್ರಾಚ್ಯ ಕೋಶಾಗಾರದಲ್ಲಿದ್ದ ಹಸ್ತಪ್ರತಿ.

2. ಮೈಸೂರಿನ ಬೊಮ್ಮರಸ ಪಂಡಿತರ ಕಡೆಯಿಂದ ಬಂದ ಹಸ್ತಪ್ರತಿ (ಜನ್ನಕವಿಯ ಯಶೋಧರ ಚರಿತೆ ಕಾವ್ಯವನ್ನು ಗದ್ಯಾನುವಾದ ಸಹಿತ ಮಹಾವೀರ ಶಕ 2613ರಲ್ಲಿ, ಅಂದರೆ 1951ರಲ್ಲಿ ಈ ಎಸ್. ಬೊಮ್ಮರಸ ಪಂಡಿತರು ಸಿದ್ಧಪಡಿಸಿ ಪ್ರಕಟಿಸಿದ್ದಾರೆ.)—ಇವೆರಡು ಹಸ್ತಪ್ರತಿಗಳ ಆಧಾರದಿಂದ ಮುದ್ರಣ ಪ್ರತಿಯನ್ನು ಅಣಿಗೊಳಿಸಿ ಸಮಗ್ರ ಶಾಂತಿಪುರಾಣ ಪದ್ಯಭಾಗ ಅಚ್ಚಾಗುವ ವೇಳೆಗೆ ಇನ್ನೊಂದು ಹಸ್ತಪ್ರತಿ ಹೊಸದಾಗಿ ಅವರಿಗೆ ದೊರೆಯಿತು.

3. ಬಿಹಾರಿನ ಆರಾದ ಜೈನ ಪ್ರಾಚ್ಯಗ್ರಂಥಭಂಡಾರ ಎಂಬಲ್ಲಿಂದ (ಬಹುಶಃ ಕೆ. ಭುಜಬಲಿಶಾಸ್ತ್ರಿಗಳ ಮೂಲಕ) ದೊರೆತ ಹಸ್ತಪ್ರತಿ ಆರಾ ಹಸ್ತಪ್ರತಿ ತಲಪುವ ವೇಳೆಗೆ ಪದ್ಯಭಾಗ ಮುದ್ರಣವಾಗಿದ್ದ ಪ್ರಯುಕ್ತ ಸಂಪಾದಕರು ಈ ಹೊಸ ಪ್ರತಿಯಲ್ಲಿ ಸಿಗುವ ಪಾಠಾಂತರಗಳನ್ನು ಅನುಬಂಧ ರೂಪದಲ್ಲಿ ಪುಸ್ತಕದ ಕಡೆಯಲ್ಲಿ ಕೊಟ್ಟಿದ್ದಾರೆ. ಉಪಯುಕ್ತವಾದ ಮುನ್ನುಡಿ, ಉತ್ತಮ ಗ್ರಂಥ ಸಂಪಾದನೆ, ಓದುಗರಿಗೆ ನೆರವಾಗುವ ಪದ್ಯಗಳ ಅಕಾರಾದಿ ಪಟ್ಟಿ, ವೃತ್ತಗಳ ಜಾತಿ ಮತ್ತು ಸಂಖ್ಯೆ, ತ್ರಿಷಷ್ಟಿ ಶಲಾಕಾಪುರುಷರು, ಪರಿಗ್ರಹಗಳು ಹೀಗೆ ಐದು ಪರಿಶಿಷ್ಟಗಳು—ಇವೆಲ್ಲವನ್ನೂ ಸಿದ್ಧಪಡಿಸಿ ಮುದ್ದಾಗಿ ಹೊರತಂದಿದ್ದಾರೆ, ಕನ್ನಡಿಗರ ಕೃತಜ್ಞತೆಗೆ ಪಾತ್ರರಾಗಿದ್ದಾರೆ.

ಈಗ ನಾನು ಸಂಪಾದಿಸಿ ಹೊರತರುತ್ತಿರುವ ಈ ಹೊಸ ಮುದ್ರಣಕ್ಕೆ ಹಿಂದಿನ 1929ರ ಮೇಲೆ ಹೆಸರಿಸಿದ ಮುದ್ರಿತ ಪ್ರತಿಯೇ ಮುಖ್ಯ ಆಧಾರ ಮತ್ತು ಆಕರ. ಹಿಂದಿನ ಸಂಪಾದಕರಿಗೆ ದೊರೆಯದ ಯಾವ ಓಲೆಗರಿ ಅಥವಾ ಕಾಗದದ ಹೊಸ ಹಸ್ತಪ್ರತಿಯೂ ನನಗೆ ಈ ಮುದ್ರಣಕ್ಕೆ ಸಿಗಲಿಲ್ಲ. ಆದರೆ ಇಂದು ಲಭ್ಯವಾಗುವ ಕೆಲವು ಹೊಸ ಅವಕಾಶಗಳನ್ನು ಬಳಸಿಕೊಂಡು ಅನುಕೂಲಗಳನ್ನು ಅಳವಡಿಸಿಕೊಂಡು ಪ್ರಸ್ತುತ ಸಂಪಾದನೆಯನ್ನು ಸಂಯೋಜಿಸಲಾಗಿದೆ.

1. ಮುದ್ರಿತ ಶಾಂತಿಪುರಾಣ, 1929, ಇದಕ್ಕೆ ಕೊಟ್ಟಿರುವ ಸಂಕೇತ (ಮ). ಮದರಾಸು ಪ್ರತಿಯಲ್ಲಿ ಸಮಾಸ ಶಬ್ದಗಳ ನಡುವೆ ಅನಾವಶ್ಯಕವಾಗಿ ಹೆಚ್ಚು ಜಾಗ ಖಾಲಿಬಿಟ್ಟಿದ್ದು ಅಪಾರ್ಥಗಳಿಗೆಡೆಕೊಡುವಂಥ ಭಾಗಗಳನ್ನು ಆದಷ್ಟೂ ಇಲ್ಲಿ ಸರಿಪಡಿಸಲಾಗಿದೆ.

2. ಆರಾದ ಪಾಠಭೇದಗಳನ್ನು ಮುಖ್ಯ ಪದ್ಯಭಾಗವಲ್ಲಿ ಆಯಾ ಸ್ಥಳದಲ್ಲಿ ಸೇರಿಸಿದೆ. ಇದಕ್ಕೆ (ಆ) ಸಂಕೇತ ಕೊಟ್ಟಿದೆ. ವಾಸ್ತವವಾಗಿ ಆರಾ ಪ್ರತಿಯಲ್ಲಿ ಕೆಲವು ಉತ್ತಮ ಪಾಠಾಂತರಗಳು ದೊರೆಯುತ್ತವೆ.

3. ನಾಗವರ್ಮನ ಕಾವ್ಯಾವಲೋಕನದಲ್ಲಿ ಉದಾಹೃತ ಶಾಂತಿಪುರಾಣ ಪದ್ಯಗಳಿಗೆ ಪಾಠಭೇದಗಳಿದ್ದಲ್ಲಿ ಅವನ್ನೂ ಗುರುತಿಸಿದೆ. ಇದಕ್ಕೆ ಇತ್ತಿರುವ ಸಂಕೇತ (ಕಾ). ಪುಟ 4, 14, 15, 58, 73, 258 ನೋಡಬಹುದು.

4. ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಉದಾಹೃತ ಶಾಂತಿಪುರಾಣ ಪದ್ಯಭಾಗಗಳಲ್ಲಿ ಪಾಠಾಂತರಗಳಿದ್ದಾಗ (ಶ) ಎಂಬ ಸಂಕೇತದೊಡನೆ ನಮೂದಿಸಿದೆ. ಪುಟ 16 ನೋಡಬಹುದು.

5. ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿ ಉದಾಹೃತ ಶಾಂತಿಪುರಾಣ ಪದ್ಯಭಾಗದಲ್ಲಿ ಕಂಡುಬರುವ ಪಾಠಭೇದವನ್ನು (ಸೂ) ಸಂಕೇತದಿಂದ ಗುರುತಿಸಿದೆ. ಪುಟ 60, 80, 81, 221 ನೋಡಬಹುದು. ಕಾವ್ಯಸಾರದಲ್ಲೂ ಇವೇ ಪದ್ಯಗಳು ಪುನರುಕ್ತವಾಗಿರುವುದರಿಂದ ಅಲ್ಲಿನ ಪಾಠಭೇದವನ್ನು ಗುರುತಿಸಿಲ್ಲ.

6. ಅಲ್ಲದೆ ನನಗಿರುವ ಹಳಗನ್ನಡ ಕಾವ್ಯಾಭ್ಯಾಸದತ್ತವಾದ ತಿಳಿವಳಿಕೆಯಿಂದ ಎಲ್ಲೆಲ್ಲಿ ೞಕಾರ, ಱಕಾರ ಇರಬೇಕಾಗಿತ್ತು ಅಥವಾ ಇರಬಾರದಾಗಿತ್ತೆಂಬುದನ್ನು ಅರಿತು ಆಯಾ ಸೂಕ್ತ ಸ್ಥಳಗಳಲ್ಲಿ ಅದನ್ನು ಅಳವಡಿಸಿದ್ದೇನೆ ಮತ್ತು ಅದನ್ನು ಚೌಕಕಂಸದಿಂದ ಸೂಚಿಸಿ, ಮುದ್ರಿತ ಪ್ರತಿಯಲ್ಲಿ ಯಾವುದಿತ್ತೆಂಬುದನ್ನು ಅಡಿಟಿಪ್ಪಣಿಯಲ್ಲಿರಿಸಿ ತೋರಿಸಿದ್ದೇನೆ. ಇಂಥ ಮಾರ್ಪಾಡುಗಳು ಸುಮಾರು ಐವತ್ತಾದರೂ ಇವೆ. ಕೆಲವು:

	ಮದರಾಸು ಮುದ್ರಿತ ಪ್ರತಿಯಲ್ಲಿರುವುದು		ಸೇರ್ಪಡೆ/ಮಾರ್ಪಾಡು
(1)	ಅಱಿದೇ	1–15	ಅ [ರಿ] ದೇ
(2)	ಇರ್ಕುಳಿ	2–81	ಇರ್ಕು[ೞಿ]
(3)	ಇೞಿವಿಗಮುಗಿಮುೞ್ಗಿದೞ್ವ	6–89	ಇೞಿವಿ [ನೆಗಂ] ಮುೞ್ಗಿದೞ್ವ
(4)	ಏಕಿಕ್ಕುಮೊ	2–35	ಏಕಿ [ರ್ಕ್ಕು] ಮೊ
(5)	ಕೀಱಿಪಾಱುವ	2–83 ವ	ಕೀಱಿಪಾಱುವ [ವಿಮಾನದೊಳ್]
(6)	ತಿಂಬಿ	1–102	[ತು] ಂಬಿ 'ಪೂರಣೇ'
(7)	ತುರಿತದಿನ್	2–24	ತುರಿ [ಪ] ದಿನ್
(8)	ನೆಱೆದೋಲಗಿಸು	2–25 ವ	ನೆ [ರೆ] ದೋಲಗಿಸು
(9)	ಪೊರಮಟ್ಟು	1–93 ವ	ಪೊ [ಱ] ಮಟ್ಟು
(10)	ಮಗುಳ್ದು	2–81 ವ	ಮಗು [ೞ್ದು]
(11)	ಮರೆಗೆರೆಕೆರೆ	3–7	[ಮಱೆಗೆಱೆಕೆಱೆ]
(12)	ಮಳ್ಕುಮಱಿಗುವ್	2–7	ಮ [ೞ್ಕು] ಮರಿ [ಗುವ್]: ಹೋ. ತ. ಮೞುಕ್ಕು = ಶೂರ್ ಕೆಡಿ ಮಂಕುಶೆಯ್
(13)	ಮಿಟ್ಟಿಗೊಂಬಿಟ್ಟಯುಂತೆ	4–30 ವ	ಮಿಟ್ಟಿಗೊಂ [ಡಚಿ] ಟ್ಟಯುಂತೆ
(14)	ಮುನ್ನೆರನ	4–8 ವ	ಮು [ನ್ನೇಜನ]
(15)	ಮುಳುಗು	1–53	ಮು [ೞು] ಗು (ಮುೞುಂಕು → ಮುೞುಂಗು)
(16)	ಸಾಱಿಲ್	1–84	ಸಾ [ರ] ಲ್
(17)	ಸೊಗಸಿತು	3–35	ಸೊಗ [ಯಿಸೆ]

7. ಸಾಳ್ವಕವಿಯ ರಸರತ್ನಾಕರದಲ್ಲಿ ಉದಾಹೃತ ಪದ್ಯಕ್ಕೆ ಹೋಲಿಸಿದಾಗ ಕಂಡುಬರುವ ಪಾಠಭೇದವನ್ನು (ರ) ಎಂಬ ಸಂಕೇತದೊಡನೆ ಸೂಚಿಸಿದ್ದೇನೆ. ಪುಟ 331 ನೋಡಬಹುದು.

8. ಮುದ್ರಿತ ಮದರಾಸು ಪ್ರತಿಯಲ್ಲಿದ್ದ ಕೆಲವು ಮುದ್ರಣ ಸ್ಖಾಲಿತ್ಯಗಳನ್ನು ಇದರಲ್ಲಿ ಸರಿಪಡಿಸಲೆತ್ನಿಸಿದ್ದೇನೆ ಈಗ ಮುದ್ರಣವಾಗಿರುವ ಪ್ರಸ್ತುತ ಗ್ರಂಥದಲ್ಲೂ ಕೆಲವು ಮುದ್ರಣ ದೋಷಗಳಿವೆ, ಅವನ್ನು ಶುದ್ಧಾಶುದ್ಧ ಪತ್ರಿಕೆಯಲ್ಲಿ ಕೊಡಲೆತ್ನಿಸಿದ್ದೇನೆ. (ಮ) ಪ್ರತಿಯಲ್ಲಿ "--" ಹೀಗೆ ಉದ್ಧರಣ ಚಿಹ್ನೆಗಳನ್ನು ಕೆಲವು ಕಡೆ ಬಳಸಿದ್ದುದನ್ನು ಇಲ್ಲಿ ಅವಷ್ಟೂ ತೆಗೆದಿದ್ದೇನೆ. ಇದು ಮೂಲ ಓಲೆಗರಿ ಗ್ರಂಥದಲ್ಲಿ ಇಲ್ಲ.

9. ಅಸಗ ಕವಿಯ ಸಂಸ್ಕೃತ ಶಾಂತಿಪುರಾಣದೊಡನೆ ಹೋಲಿಸಿ ಪೊನ್ನನ ಶಾಂತಿಪುರಾಣದಲ್ಲಿ ಕೆಲವು ಕಡೆ ಸಂದೇಹಗಳಿದ್ದ ಭಾಗಗಳನ್ನು ಸರಿಪಡಿಸಲೂ ಪ್ರಯತ್ನಿಸಿ ಅಂಥದನ್ನು ಸ್ಪಷ್ಟವಾಗಿ ಅಡಿಟಿಪ್ಪಣಿಯಲ್ಲೊ, ಗದ್ಯಾನುವಾದ ದಲ್ಲೊ ಸೂಚಿಸಿದ್ದೇನೆ. ಪುಟ 83, 92, 139, ೭63 ನೋಡಬಹುದು.

10. ಮುದ್ರಿತ ಮದರಾಸು ಪ್ರತಿಯಲ್ಲಿ ತೀರ ಅನಿವಾರ್ಯವೆನಿಸಿದ ಕೆಲವು ಕಡೆ ನನ್ನ ಜ್ಞಾನಕ್ಕೆ ಎಟಕುವಂತೆ ತಿದ್ದುಪಡಿ ಮಾಡಿದ್ದೇನೆ, ಮತ್ತು ಅದನ್ನು ಆಯಾ ಜಾಗದಲ್ಲಿಯೇ ಹಾಗೆಂದು ನಿರ್ದೇಶಿಸಿದ್ದೇನೆ. ತಿದ್ದುಪಡಿಯಾದ ಭಾಗವನ್ನು ಕಂಸದೊಳಗಿರಿಸಿ ತೋರಿಸಿದ್ದೇನೆ. ನನಗೂ ಅನುಮಾನವಿದ್ದ ಕಡೆಗಳಲ್ಲಿ ಗದ್ಯಾನುವಾದ ಭಾಗದಲ್ಲಿ 'ಇಂಥ ತಿದ್ದುಪಡಿಯಿರಬೇಕಲ್ಲವೆ' ಎಂಬ ಸಂದೇಹ ವ್ಯಕ್ತಪಡಿಸಿ ಪ್ರಾಜ್ಞರ ನಿರ್ಧಾರಕ್ಕೆ ಬಿಟ್ಟಿದ್ದೇನೆ. ಪುಟ 101, ಪದ್ಯ 21ರ ಗದ್ಯಾನುವಾದ ನೋಡಿ. ಪುಟ 181, ಪದ್ಯ 11ರ ಗದ್ಯಾನುವಾದ, ಪುಟ 222ರಲ್ಲಿ ಪದ್ಯ 13ರ ಗದ್ಯಾನುವಾದ, ಪುಟ 336, ಪದ್ಯ 43ರ ಗದ್ಯಾನುವಾದ ಭಾಗವನ್ನು ವಿದ್ವಾಂಸರು ಗಮನಿಸಬಹುದು.

11. ಪಾಠದೋಷವಿರಬಹುದೆಂಬ ಸಂದೇಹ ಬಂದ ಕೆಲವು ಸ್ಥಳಗಳನ್ನು ಹಾಗೆಂದು ಸೂಚಿಸಿದ್ದೇನೆ. ಪುಟ 259, 263, 334 ಅದಕ್ಕೆ ಸರಿಯಾದ ಅಥವಾ ಇದ್ದಿರಬಹುದಾದ ಅನ್ಯಪಾಠವೇನೆಂದು ನನಗೂ ಹೊಳೆಯದ ಕಾರಣ ಹಾಗೇ ಬಿಡಲಾಗಿದೆ. ಕೆಲವು ಕಡೆ ಅನುಮಾನ ತಲೆದೋರಿದಾಗಲೂ ಸರಿಯಾದ ಆಧಾರಗಳ ಪರೋಕ್ಷದಲ್ಲಿ ಹೆಚ್ಚು ಸ್ವಾತಂತ್ರ್ಯ ವಹಿಸುವುದು ತರವಲ್ಲವೆಂದು ತೆಪ್ಪಗಾಗಿದ್ದೇನೆ. ಉದಾ : 11–94ರಲ್ಲಿ ಮೂರನೆ ಸಾಲಿನಲ್ಲಿರುವ ಚೂರ್ಣೆನೆ ಎಂಬುದು ಕೂರ್ನೆನೆ ಎಂದಿರಬಹುದೆನಿಸಿತಾದರೂ ತಿದ್ದುವ ಸ್ವಾತಂತ್ರ್ಯಕ್ಕೆ ಹೋಗಲಿಲ್ಲ.

12. ಒಟ್ಟಿನಲ್ಲಿ ನನ್ನ ಬುದ್ಧಿಯಳತೆಗೆ ಎಟುಗಿದಷ್ಟನ್ನು ನಾನು ಪ್ರಾಮಾಣಿಕವಾಗಿ ಇಲ್ಲಿ ಸಿದ್ಧಮಾಡಿಕೊಟ್ಟಿದ್ದೇನೆ. ಇದರಲ್ಲಿಯೂ ಅನೇಕ ಅರೆಕೊರೆಗಳಿರಬಹುದು. ಅವನ್ನು ಸರಿಪಡಿಸಿ ನಮ್ಮ ಹಳಗನ್ನಡ ಕಾವ್ಯಪರಂಪರೆ ಅಚ್ಯುತವಾಗಿ ಮುಂದುವರಿಸಿಕೊಂಡುಹೋಗುವುದು ಮುಂದಿನ ತಲೆಮಾರಿಗೆ ಸೇರಿದ್ದು.

ಹಂಪ. ನಾಗರಾಜಯ್ಯ

ಪೊನ್ನನನ್ನು ಕುರಿತು (ಕನ್ನಡದಲ್ಲಿ: ಇತರ ಭಾಷೆಗಳಲ್ಲಿ) ಅಧ್ಯಯನಕ್ಕೆ ಸಿಗುವ ಸಹಾಯಕ ಲೇಖನಗಳು : ಕೃತಿಗಳು

ಕೃತಿಗಳು :

1. ಅಸಗನ ವರ್ಧಮಾನ ಚರಿತಂ :
   ಸಂ. 1. ಜೆ. ಪಿ. ಫಡಕುಲೆ, 1932
   ಸಂ. 2. ಪಂಡಿತ ಪನ್ನಾಲಾಲ ಜೈನ, 1974
2. ಅಸಗನ ಶಾಂತಿಪುರಾಣಂ : ಸಂ. ಜೆ. ಪಿ. ಫಡಕುಲೆ, 1935
3. ಕನ್ನಡ ಸಾಹಿತ್ಯ ಚರಿತ್ರೆ : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ಸಂಪುಟ 3, 1976
4. ಕವಿಚಕ್ರವರ್ತಿ ಪೊನ್ನ—ಆತನ ಕೃತಿಗಳು : ಡಾ|| ಎಂ. ಆರ್. ಉಮಾದೇವಿ, 1979
5. ಕನ್ನಡ ಸಾಹಿತ್ಯ ಚರಿತ್ರೆ : ಡಾ|| ರಂ. ಶ್ರೀ ಮುಗಳಿ, ಪರಿಷ್ಕೃತ 6ನೇ ಮುದ್ರಣ, 1978
6. ಕರ್ನಾಟಕ ಕವಿಚರಿತೆ : ಪ್ರಥಮ ಸಂಪುಟ ಮತ್ತು ಅದರ ಪರಿಷ್ಕೃತ ಮುದ್ರಣದ ಅನುಬಂಧ
7. ಕನ್ನಡ ಕೈಪಿಡಿ, ಸಂಪುಟ 2, 1970 (ಹೊಸ ಮುದ್ರಣ)
8. ಜನಪ್ರಿಯ ಕನ್ನಡ ಸಾಹಿತ್ಯ ಚರಿತ್ರೆ : ತ. ಸು. ಶಾಮರಾಯ
9. ಪೊನ್ನನ ಶಾಂತಿಪುರಾಣ : ಸಂ. ಎ. ವೆಂಕಟರಾವ್, ಹೆಚ್. ಶೇಷಯ್ಯಂಗಾರ್, 1929
10. ಪೊನ್ನ : ಎನ್. ಅನಂತರಂಗಾಚಾರ್, ಮೈಸೂರು, 1971
11. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ : ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು, ಸಂಪುಟ 2, 1975
12. ಕನ್ನಡ ಸಾಹಿತ್ಯಕ್ಕೆ ಜೈನಕವಿಗಳ ಕಾಣಿಕೆ : (ಹಿಂದಿ) ಪಂ. ಕೆ. ಭುಜಬಲಿಶಾಸ್ತ್ರಿ
    (ಕನ್ನಡ) ಎಸ್. ಪಿ. ಪಾಟೀಲ, 1974
13. ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ : ಮರಿಯಪ್ಪ ಭಟ್ಟ
14. ಕಮಲಭವ : ಶಾಂತೀಶ್ವರಪುರಾಣ, ಸಂ.
15. ಶಾಂತಿಕೀರ್ತಿಮುನಿ : ಶಾಂತಿನಾಥ ಚರಿತೆ, ಸಂ. ಎಂ. ನೇಮಿರಾಜಶಾಸ್ತ್ರಿ, 1938
    (ಇದಕ್ಕೆ ಕೆ. ಭುಜಬಲಿಶಾಸ್ತ್ರಿ ಮುನ್ನುಡಿ ಇದೆ)

ಲೇಖನಗಳು :

1. Dr. A. N. Upadhye: "Asaga, his Works and Date," Karnataka Historical Quarterly, 11, Dharwada, 1932
2. K. M. Sharma: "Date of Asaga's Vardhamana Charite," New Indian Antiquary, IV, Bombay, 1941-44
3. ವಿ. ಬಿ. ಲೋಕಾಪುರ :
   (ಅ) "ಅಸಗನ ಖ್ಯಾತಿ," ಪ್ರ. ಕ., 1954–55
   (ಆ) "ಅಸಗನ ವರ್ಧಮಾನ ಪುರಾಣದ ಕನ್ನಡ ವ್ಯಾಖ್ಯಾನ," ಜಯಂತಿ, ಜುಲೈ 1955
   (ಇ) "ಅಸಗನ ಕನ್ನಡ ಕುಮಾರಸಂಭವ," ಕನ್ನಡನುಡಿ, ಡಿಸೆಂಬರ್ 1952
4. ಚಂದ್ರಕಾಂತ ನಿಂಗರಾಜ ಪಾಟೀಲ : "ಅಸಗ – ಪಂಪ – ಪೊನ್ನ," ಕ.ಸಾ.ಪ.ಪ., 17–3, 1932
5. ಎ. ಪಿ. ಚೌಗುಲೆ : "ಪೊನ್ನನ ಮೇಲೆ ಅಸಗನ ಪ್ರಭಾವ, ಪೊನ್ನನ ಕಾಲ ವಿಚಾರ," ಜನಸಿಜಯ, 21–1, ಬೆಳಗಾವಿ, ಜನವರಿ 1952

6. ಡಿ. ಎಲ್. ನರಸಿಂಹಾಚಾರ್ :

(ಅ) "ಪೊನ್ನನ ಭುವನೈಕರಾಮಾಭ್ಯುದಯ," ಪ್ರ. ಕ., 15-2

(ಆ) "ಪೊನ್ನನೂ ಕಾಳಿದಾಸನೂ," ಪ್ರ. ಕ., 12-2

ಈ ಎರಡು ಲೇಖನಗಳೂ "ಪೀಠಿಕೆಗಳು ಲೇಖನಗಳು" ಪುಸ್ತಕದಲ್ಲಿವೆ.

7. ಎಲ್. ಆರ್. ಹೆಗ್ಗಡೆ: "ಭುವನೈಕರಾಮಾಭ್ಯುದಯದ ಭುವನೈಕರಾಮ," ಕಾವ್ಯ ಪ್ರಸಂಗ, ಧಾರವಾಡ, 1967

8. ದ. ರಾ. ಬೇಂದ್ರೆ :

(ಅ) "ಚೀರಘಟ್ಟ ಯಾರು—ಒಂದೂಹೆ"

(ಆ) "ಪೊನ್ನನ ಭುವನೈಕರಾಮಾಭ್ಯುದಯ," ಸಾಹಿತ್ಯ ಸಂಶೋಧನೆ, ಧಾರವಾಡ, 1940

9. ಡಾ|| ಎಂ. ಬಿ. ಭೋಯಿ : "ಪೊನ್ನನ ಭುವನೈಕರಾಮಾಭ್ಯುದಯ," ಕರ್ನಾಟಕ ಭಾರತಿ, 3-2

10. ಹಂಪ ನಾಗರಾಜಯ್ಯ :

(1) "ಶಾಂತಿಪುರಾಣದಲ್ಲಿ ಜಿನಚಂದ್ರಮುನಿ," ವಿವೇಕಾಭ್ಯುದಯ, 1974

(2) "ಪೊನ್ನ ಮತ್ತು ಬ್ರಹ್ಮಶಿವ," ಗುರುದೇವ, ಡಿಸೆಂಬರ್ 1977

(3) "ಪೊನ್ನ ಮತ್ತು ಜಾನಪದ," ಸನ್ಮತಿ, ಡಿಸೆಂಬರ್ 1977

(4) "ಪೊನ್ನ ಮತ್ತು ಶ್ರೀಷೇಣನ ಕಥೆ," ಸನ್ಮತಿ, ಜನವರಿ 1978

(5) "ಪೊನ್ನನ ಎರಡು ಹೊಸ ಶಬ್ದಗಳು," ಗುರುದೇವ, ಜನವರಿ 1978

(6) "ಪೊನ್ನ ಮತ್ತು ಕನ್ನಡ ನಿಘಂಟು," ಕರ್ನಾಟಕ ಭಾರತಿ, 1978

(7) "ಪೊನ್ನ ಮತ್ತು ಕನ್ನಡ ಭಾಷೆ,' ಶಂಬಾ ಸಂಭಾವನೆ ಗ್ರಂಥ ಅಧ್ಯಯನ, 1980

(8) "ಚೀರಘಟ್ಟ—ಒಂದು ಟಿಪ್ಪಣಿ," ಮಾರ್ಚ್ 1982

(9) "ಪೊನ್ನನ ವ್ಯಕ್ತಿತ್ವ," ಗುರುದೇವ, ಏಪ್ರಿಲ್ 1982, 26-7; ಮೇ 1982, 26-8

(10) "ಸಂಚಿವಾರ—ಶಬ್ದಾರ್ಥ ಜಿಜ್ಞಾಸೆ," ಕ.ಸಾ.ಪ.ಪ., 1982

(11) "ಪೊನ್ನ ಮತ್ತು ಸಂಸ್ಕೃತ," ಕನ್ನಡನುಡಿ, ಜೂನ್ 1982

11. ಡಾ|| ಬಾ. ರಾ. ಗೋಪಾಲ್ : "ದಲ್ಲಪ ಮತ್ತು ಗೋವಿಂದರ," ಪ್ರ. ಕ., 41

12. ತೀ. ನಂ. ಶ್ರೀಕಂಠಯ್ಯ : "ದಾನಚಿಂತಾಮಣಿ ಅತ್ತಿಮಬ್ಬೆ," ಸಮಾಲೋಕನ, 1974

ಶ್ರೀ

ಕವಿರತ್ನ

ಪೊನ್ನ ಮಹಾಕವಿ ವಿರಚಿತಂ

ಪುರಾಣಚೂಡಾಮಣಿ

ಎನಿಪ

ಶಾಂತಿಪುರಾಣಂ

—o—

ಪ್ರಥಮಾಶ್ವಾಸಂ

ಮ॥ ಸ್ರ॥ ಪರಮ ಶ್ರೀ ಸ್ನೇಹ ಗೇಹಾಯತ ಪದ ಕಮಲಂ ಚೇತನಾಚೇತನಾಂಗ
ಸ್ಫುರಿತಾಘೌಘಚ್ಛಿದಂ ಭಾಸುರ ಸುರನರ ಸದ್ಭವ್ಯ ಸೇವ್ಯಂ ವಚೋ ವಿ
ಸ್ತರ ತೃಪ್ತಿ ವ್ಯಾಪ್ತ ಲೋಕ ತ್ರಿತಯನಪಗತಾಶೇಷ ದೋಷಾಳಿ ಮುಕ್ತಿ
ಸ್ಥಿರ ಸೌಖ್ಯಾಂಭ ಸ್ಸ್ವಯಂಭೂ ರಮಣ ಜಲಧಿ ರಕ್ಷಿಕ್ಕೆ ಶಾಂತೀಶನೆಮ್ಮಂ ॥ ೧ ॥

ಶಾ॥ ಕೇಶೋತ್ಪಾಟನದಂದು ಭಾವಿಸೆ ನಮಸ್ಸಿದ್ಧೇಭ್ಯ ಎಂದಾದಿ ತೀ
ರ್ಥೇಶರ್ ವಂದಿಸಿ ದೀಕ್ಷೆಗೆಯ್ದ [1][ರದಜಿಂ][1] ಸಿದ್ಧಂ [2]ನ[2]ಮಾದ್ಯಂ ಜಗ
ಕ್ಕಾ ಶುದ್ಧಾಕ್ಷರಮೆಂಬ ಸುದ್ದಗೆಯುಮಿಂತಾರ್ ಪೂಜ್ಯರೆಂದಾಂ ಭವ
ಕ್ಲೇಶೋಚ್ಛಿತ್ತಿ ನಿಮಿತ್ತದಿಂದೆಱಗುವೆಂ ಸಿದ್ಧಾಂಘ್ರಿ ಪದ್ಮಂಗಳೊಳ್ ॥ ೨ ॥

ಆಶ್ವಾಸ ೧

೧. ಯಾರ ಪರಮ ಪವಿತ್ರ ಪಾದಪದ್ಮಗಳು ವಿಸ್ತಾರವಾಗಿದ್ದು ಶ್ರೇಷ್ಠವಾದ ಮುಕ್ತಿಯೆಂಬ ಲಕ್ಷ್ಮಿಯು ಸದಾ ವಾಸಿಸುವ ಮನೆಯಾಗಿದೆಯೋ, ಚೇತನ ಹಾಗೂ ಅಚೇತನವಾದವರಿಂದ ಉಂಟಾದ ಪಾಪಸಮೂಹ ಸಂಪೂರ್ಣವಾಗಿ ತೊಳೆದು ಹೋಗಿದೆಯೋ, ಹೊಳೆಯುವ ದೇವ-ಮಾನವರ ಮತ್ತು ಉತ್ತಮರಾದ ಭವ್ಯರ ಗುಂಪಿನ ಪೂಜೆ ಪುರಸ್ಕಾರಗಳಿಗೆ ಪಾತ್ರವಾಗಿವೆಯೋ, ಯಾರ ದಿವ್ಯಧ್ವನಿ ಅಮೃತ ಸದೃಶವಾಗಿದ್ದು ಮೂರು ಲೋಕಗಳನ್ನು ಅಪಾರವಾಗಿ ವ್ಯಾಪಿಸಿ ಸಂತೃಪ್ತಿಯನ್ನು ಒದಗಿಸಿದೆಯೋ ಮತ್ತು ಯಾರು ದೋಷ ಸಂದೋಹವನ್ನು ಸಮಿಾಪಿಸಿದಂತೆ ಓಡಿಸಿದ್ದಾರೋ, ಯಾರು ಮುಕ್ತಿಯ ಪರಮ ಪದವಿಯಲ್ಲೇ ಸ್ಥಿರವಾಗಿ ನೆಲಸಿ ಸ್ವಯಂಭೂರಮಣ ಸಮುದ್ರದಂತೆ ಸುಖಕ್ಕೆ ಪಾತ್ರವಾಗಿದ್ದಾರೋ ಅಂಥ ಶಾಂತಿನಾಥ ತೀರ್ಥಂಕರರು ಅನವರತವೂ ನಮ್ಮನ್ನು ಕಾಪಾಡಲಿ.

೨. ಪ್ರಥಮ ತೀರ್ಥಂಕರರಾದ ಪುರುದೇವರು ಕೂಡ ಲುಂಚನಕ್ರಿಯೆ ನಡೆಯುವ ಸಮಯದಲ್ಲಿ ಸಿದ್ಧರಿಗೆ ನಮಸ್ಕಾರ ಎಂದು ಸಿದ್ಧರ ಸ್ತೋತ್ರಗೈದು ವಂದಿಸಿ ತರುವಾಯ ದೀಕ್ಷೆಯನ್ನು ಸ್ವೀಕರಿಸಿದರು. ಅಂದಮೇಲೆ ಸಿದ್ಧರಿಗೆ ನಮೋಸ್ತು ಎಂಬುದು ಜಗತ್ತಿಗೆ ಪರಮ ಪವಿತ್ರವಾದ ವರ್ಣಮಾಲೆಯಾಗಿದೆ. ನಾನು ಕೂಡ ಸಂಸಾರದ ಕಷ್ಟ ಪರಂಪರೆಯನ್ನು ಕಿತ್ತೊಗೆಯುವ ಕಾರಣದಿಂದ ಆ ಶಕ್ತಿಯುಳ್ಳ ಪೂಜ್ಯರಾದ ಸಿದ್ಧರ ಪಾದ ಕಮಲಗಳಿಗೆ ಪ್ರಣಾಮ ಮಾಡುವೆನು.

---

1. ರಜರರ್ (ಮ) 2. ನು (ಅ)

ಉ॥ ವೀರಜಿನೇಂದ್ರನಿಂ ಗಣಧರಾಗ್ರಣಿಯಿಂ ಕ್ರಮದಿಂದೆ ಬಂದ ವಿ
ಸ್ತಾರದ ಜೈನ ಧರ್ಮದ ಮೊದಲ್ ಪರಮೇಶ್ವರರೆಂಬಿನಂ ಸದಾ
ಚಾರ ಸಮೇತರಾದರೆಮಗೀಗೆ ಶಿವಾಸ್ಪದ ಮುಖ್ಯ ಸೌಖ್ಯಮಂ
ಸೂರಿಗಳಂಗಜಾರಿಗಳತತ್ವ ವಿದಾರಿಗಳುದ್ಧ್ವಚಾರಿಗಳ್ ॥ ೩ ॥

ಕ್ಷಾಯಿಕ ದೃಷ್ಟಿ ತುಷ್ಟಿಯೊಳೊಡಂಬಡೆ ಜೈನ ವಚೋಮೃತಂ ಮುಖ
ಶ್ರೀಯ ಪೊದಟ್ಕೆಯುಂ ಬೆಳಗೆ ಸೌಗತ ಸಾಂಖ್ಯ ಶಿವಾಗಮಂಗಳಂ
ನ್ಯಾಯ ನಯ ಪ್ರಮಾಣ ಸುವಚಃ ಕ್ರಮದಿಂ ಸಲೆ ಸೋಲೆ ಗೆಲ್ದುಪಾ
ಧ್ಯಾಯರಜೇಯರೀಗೆಮಗೆ ಮುಕ್ತಿ ನಿವೇಶಮನಪ್ರಣಾಶಮಂ ॥ ೪ ॥

ಮ॥ ಬಗೆ ಶುದ್ಧಂ ತನು ಶುದ್ಧಮಾಸ್ತುತಿ ಪದಾರ್ಥಂ ಶುದ್ಧಮಿಂತೀ ತ್ರಿಶು
ದ್ಧಿಗಳಿಂ ಧ್ಯಾನಿಸುವೆಮ್ಮನೋತೆಱಗುವೆಮ್ಮಂ ಬಂದಿಪೆಮ್ಮಂ ತ್ರಿಕಾ
ಲಗಯೋಗರ್ ಪರಮೇಶ್ವರರ್ ಪರಸುಗಿಂ ವಾತ್ಸಲ್ಯದಿಂ ಸರ್ವ ಸಾ
ಧುಗಣಂ ಸಾಧುಗಳಪ್ಪೆಮಾ ಪರಕೆಯಿಂದಾಮುಂ ವ್ರತ ವ್ರಾತದೊಳ್ ॥ ೫ ॥

ಚಂ॥ ಗುರು ವರದತ್ತ ದಿವ್ಯಮುನಿ ಪುತ್ರರುದಾತ್ತ ಶುಭಂಕರ ಪ್ರಭಂ
ಕರರವರೈಶ್ವರಂ ನೆಗಟ್ದ ನೇಮಿಜಿನೇಶರ ಶಾಸನಕ್ಕೆ ಭಾ
ಸುರ ಪರಿರಕ್ಷಣಸ್ಥಿತಿಯನಿತ್ತ [1]ರಿದು[1]ರ್ವಿಗಭೂತಪೂರ್ವಮಾ
ಗಿರೆ ದೊರೆವೆತ್ತ ಯಕ್ಷಿ ಬಗೆದೀಕ್ಷಿಸಿ ರಕ್ಷಿಸುಗೆಮ್ಮನೇಗಳುಂ ॥ ೬ ॥

---

೩. 'ವರ್ಧಮಾನ ಮಹಾವೀರ ತೀರ್ಥಂಕರರಿಂದಲೂ, ಗೌತಮ ಗಣಧರರೇ ಮೊದಲಾದ ಗಣಧರರಿಂದಲೂ ಕ್ರಮವಾಗಿ ಒಂದೇ ಸಮನೆ ಹರಿದು ಬಂದಿರುವ ಜೈನಧರ್ಮಕ್ಕೆ ಪ್ರಥಮ ಪರಮೇಶ್ವರರು' ಎಂಬ ಹೊಗಳಿಕೆಗೆ ಭಾಜನರಾದ, ಒಳ್ಳೆಯ ನಡತೆಯಿಂದ ಕೂಡಿದವರಾದ ಪಂಡಿತರೂ ಮದನ ವಿರೋಧಿಗಳೂ ಕುತತ್ವವನ್ನು ಓಡಿಸಿದವರೂ ಉನ್ನತ ಚಾರಿತ್ರರೂ ಆದ ಆಚಾರ್ಯರು ಮಂಗಳಕರವಾದ ಮಹಿಮೆಗಳನ್ನೊಳಗೊಂಡ ಸುಖವನ್ನು ನಮಗೆ ದಯಪಾಲಿಸಲಿ.

೪. 'ಕ್ಷಾಯಿಕ ದೃಷ್ಟಿ'ಯು ಸಂತೋಷ ಸಮಾಧಾನಗೊಳ್ಳಲು ಜೈನವಾಣಿಯೆಂಬ ಅಮೃತವು ಮುಖ ಲಕ್ಷ್ಮಿಯ ವ್ಯಾಪಕತೆಯನ್ನು ಬೆಳಗಲು, ಬೌದ್ಧ ಸಾಂಖ್ಯ ಶಿವಾಗಮಗಳನ್ನು ನ್ಯಾಯ-ನಯಪ್ರಮಾಣಗಳ ಒಳ್ಳೆಯ ಮಾತಿನ ರೀತಿಯಿಂದ ಸಂಪೂರ್ಣವಾಗಿ ಸೋಲಿಸಿ ಗೆದ್ದವರು ಉಪಾಧ್ಯಾಯರು. ಅವರನ್ನು ಗೆಲ್ಲಲು ಸಾಧ್ಯವಿಲ್ಲ. ಅಂಥ ಅಜೇಯರಾದ ಉಪಾಧ್ಯಾಯರು ನಮಗೆ ಶಾಶ್ವತವಾದ ಮುಕ್ತಿಯನ್ನು ದಯಪಾಲಿಸಲಿ.

೫. ಮೂರು ಕಾಲಗಳನ್ನೂ ಅರಿತ ಯೋಗಿಗಳೂ ಪರಮೇಶ್ವರರೂ ಆದ ಸರ್ವ ಸಾಧುಗಳು ನಿರ್ಮಲವಾದ ಮನಸ್ಸು, ದೇಹ ಮತ್ತು ಸ್ತೋತ್ರ ಪದಾರ್ಥಗಳೆಂಬ ಈ ಮೂರು ಬಗೆಯ ಶುದ್ಧಿಗಳಿಂದ ಸದಾ ಧ್ಯಾನ ಮಾಡುತ್ತಾ, ಪ್ರೀತಿಯಿಂದ ನಮಸ್ಕಾರ ಮಾಡುವ ನಮ್ಮನ್ನು, ನಾವು ಕೂಡ ವ್ರತಗಳ ಅನುಷ್ಠಾನದಿಂದ ಸಾಧುಗಳೇ ಆಗುವಂತೆ ಆಶೀರ್ವದಿಸಲಿ.

೬. ದಿವ್ಯಮುನಿಗಳಾದ ವರದತ್ತರೇ ಗುರುಗಳು. ಉದಾತ್ತ ಚರಿತರಾದ ಶುಭಂಕರ ಮತ್ತು ಪ್ರಭಂಕರರು ಅವರ ಪುತ್ರರು. ಅವರ ಸಂಪತ್ತೆಲ್ಲವೂ ಶ್ರೇಷ್ಠ ನೇಮಿನಾಥ ತೀರ್ಥಂಕರರ ಧರ್ಮೋಪದೇಶದ ಪ್ರಚಾರಕ್ಕೆ. ಲೋಕಕ್ಕೇ ಅಪೂರ್ವವಾದದ್ದು ಅವರು ನೀಡಿದ ಪ್ರಕಾಶಯುಕ್ತವಾದ ಧರ್ಮರಕ್ಷಣ ಸ್ಥಿತಿಯ ಜ್ಞಾನ. ಪ್ರಸಿದ್ಧಳಾದ ಯಕ್ಷಿಯು ವಿಚಾರಮಾಡಿ ನೋಡಿ ನಮ್ಮನ್ನು ಸದಾ ಕಾಪಾಡಲಿ.

---

1. ಜೀವೃ (ಮ)

ಮ॥ ಅಣಿಮಾದ್ಯಷ್ಟ ಗುಣಂಗಳಂ ಪಡೆವುದುಂ ಜೈನೋಕ್ತಿ ವಾರಾಶಿ ವಾಃ
ಕಣದಿಂದಂ ಪಡೆದಿರ್ದ ಸಿದ್ಧಪದಮಂ ಕೆಯ್ಕೊಳ್ವುವರ್ಕಡ್ಡಮೊ
ಡ್ಡಣಮೊಡ್ಡಿರ್ದಘಸೈನ್ಯಮಂ ತುಟಿಯಿಸಲ್ ಸರ್ವಾಹ್ಣ ಯಕ್ಷಂ ಸ್ವವಾ
ರಣಕಾಧೋರಣನಾದನುಂತಪರಣಂಗೇ ಕಾರಣಂ ವಾರಣಂ ॥ ೭ ॥

ಅತಿ ಗಂಭೀರ ಮೃದೂಕ್ತಿ ವಕ್ತ್ರದೊಳೊಡಂಬಟ್ಟೊಪ್ಪೆ ಕೇಳ್ದಂ ಬಹು
ಶ್ರುತನಲ್ಪ ಶ್ರುತನೆನ್ನದಾರ ಕಿವಿಗಂ ನುಣ್ಪಿಂಪಿನೊಳ್ ಕೂಡೆ ಪಂ
ಡಿತರುಂ ಮೂರ್ಖರುಮೆಕ್ಕೆಯಿಂ ಪೊಗಟೆ ಪೇಟಲ್ ಬಾಜಿಸಲ್ಕುಂ[1] ಸರ
ಸ್ವತಿಯಂ ಸಾಧಿಸೆ ಸಂದ ಸಯ್ಪು ಸವಣಂಗಕ್ಕುಂ ಪೆಱಂಗಕ್ಕುಮೇ ॥ ೮ ॥

ಕಂ॥ ಭುವನದ ಕನ್ನಡ ಸಕ್ಕದ
ಗವಿಗಳ್ ಸಲೆ ಸಾಲೆ ಸೋಲೆ ಸವಣಂಗಿತ್ತಂ
ಸವಿವೇಕಮುಭಯಕವಿ ಚ
ಕ್ರವರ್ತಿವೆಸರಂ ನಿಜಾಹಿತೋಷ್ಣಂ **ಕೃಷ್ಣಂ** ॥ ೯ ॥

ದೊರೆಯಿಲ್ಲೆನೆ ಪೊರೆಯಿಲ್ಲೆನೆ
ನೆರಮಿಲ್ಲೆನೆ ಸಮಱಿ ಸಕ್ಕದಂ ಕನ್ನಡಮಂ
ಬೆರಡುಂ ಕವಿತೆಯನಮಳ್ವೆ
ತ್ತರಂತಿರೊಡ ನಡಪಿದಂ **ಕುರುಳ್ಗಳ ಸವಣಂ** ॥ ೧೦ ॥

---

೭. ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಕಾಮ್ಯ, ಈಶಿತ್ವ, ವಶಿತ್ವ ಎಂಬ ಎಂಟು ಸಿದ್ಧಿಗುಣಗಳನ್ನು ಹೊಂದುವುದೂ, ಜೈನರ ಮಾತೆಂಬ ಕಡಲಿನ ನೀರ ಹನಿಗಳಿಂದ ಹೊಂದಿದ್ದ ಸಿದ್ಧ ಪದವಿಯನ್ನು ಸ್ವೀಕರಿಸುವುದಕ್ಕೆ ಅಡ್ಡಿಯಾಗಿ ಸೈನ್ಯವನ್ನು ಒಡ್ಡಿದಂತೆ ಇರುವ ಪಾಪವೆಂಬ ಸೈನ್ಯವನ್ನು ಇಲ್ಲದಂತೆ ಮಾಡಲು ಸರ್ವಾಹ್ಣಯಕ್ಷನು ಸ್ವಾವಾರಣಕ್ಕೆ ಮಾವುತನಾದನು. ಹೀಗೆ ಯುದ್ಧವಿಲ್ಲದವನಿಗೆ ಯಾವ ಕಾರಣದಿಂದ ಆನೆ ಅಡ್ಡಿಯಾಗಬಲ್ಲುದು ?

೮. ತೀರ ಗಂಭೀರವಾದ ಮತ್ತು ಮೃದುವಾದ ಮಾತುಗಳು ಮುಖದಲ್ಲಿ ಕೂಡಿಕೊಂಡು ಶೋಭಿಸುತ್ತಿರುವುದರಿಂದ ಅವರ ಉಪದೇಶವನ್ನು ಕೇಳುವವನು ಪಂಡಿತನಾಗಿರಲಿ ಪಾಮರನಾಗಿರಲಿ ಯಾವ ತಾರತಮ್ಯವೂ ತೋರದೆ ಎಲ್ಲರ ಕಿವಿಗೂ ನುಣುಪು ಇಂಪಿನೊಡನೆ ಬೆರೆತು ಕೇಳಿಸುತ್ತದೆ. ವಿದ್ವಾಂಸರೂ ದಡ್ಡರೂ ಒಟ್ಟಿಗೆ ಹೊಗಳುವಂತೆ ವಿವರಿಸಲೂ ಓದಲೂ ತಕ್ಕ ಸಾಮರ್ಥ್ಯವನ್ನು ಸರಸ್ವತಿಯ ಅನುಗ್ರಹಕ್ಕೆ ಪಾತ್ರವಾಗುವಂತೆ ಸಾಧಿಸಿರುವದರಿಂದ ಪ್ರಾಪ್ತವಾದ ಪುಣ್ಯ ಇತರರಿಗೆ ಸಾಧ್ಯವಿಲ್ಲ. ಅದು ಜೈನಮುನಿಗಳಿಗೇ ಮೀಸಲು.

೯. ಭೂಮಂಡಲದಲ್ಲಿರುವ ಕನ್ನಡ ಮತ್ತು ಸಂಸ್ಕೃತ ಕವಿಗಳು ಚೆನ್ನಾಗಿ ಸಂಪೂರ್ಣವಾಗಿ ಸೋತುಹೋಗಲು, ವಿರೋಧಿಗಳಿಗೆ ಬೆಂಕಿಯಂತಿರುವ ಕೃಷ್ಣನು ಸದಸದ್ವಿವೇಕದಿಂದ ಈ ಸವಣನಾದ ಪೊನ್ನಕವಿಗೆ "ಉಭಯಕವಿ ಚಕ್ರವರ್ತಿ" ಎಂಬ ಹೆಸರನ್ನು ನೀಡಿದನು. (ಈ ವಿಷಯವನ್ನು ಜನ್ನ ಕವಿಯೂ ತಿಳಿಸಿದ್ದಾನೆ.)

೧೦. ಕುರುಳುಗಳ ಸವಣನೆಂದು ಕೀರ್ತಿಶಾಲಿಯಾದ ಪೊನ್ನಕವಿ ಸಂಸ್ಕೃತ ಮತ್ತು ಕನ್ನಡ ಎಂಬ ಎರಡೂ ಭಾಷೆಗಳಲ್ಲಿನ ತನ್ನ ಕಾವ್ಯಗಳನ್ನು ಅವಳಿಗಳನ್ನು ಹೆತ್ತಂತೆ ಹೊಂದಿಕೊಂಡಿರುವ ರೀತಿಯಲ್ಲಿ ರಚಿಸಿದ್ದಾನೆ. ಇದನ್ನು ನೋಡಿದವರಿಗೆ "ಇಂಥ ಜೋಡಣೆಗೆ ಸಮನಾದ ಕೃತಿ ಮತ್ತೊಂದಿಲ್ಲ, ಇದರಲ್ಲಿ ತಪ್ಪುಗಳಿಲ್ಲ, ಇದು ಇತರರ ಸಹಾಯ ಪಡೆಯದೆ ಆದದ್ದು" ಎಂದು ಅನ್ನಿಸುವಹಾಗೆ ಓರಣಗೊಳಿಸಿ ಕಾವ್ಯ ಬರೆದಿದ್ದಾನೆ.

---

1. ಲ್ಕುಂ (ಅ)

ಕನ್ನಡಗವಿತೆಯೊಳ**ಸಗಂ**
ಗನ್ನೂರ್ಮಡಿ**ಕೇ**ಳೆಗಗ್ಗಳಂ ಸಕ್ಕದದೊಳ್
ಪುನ್ನುಳ್ಳ **ಕಾಳಿದಾಸಂ**
ಗನ್ನಾಲ್ವಡಿ ರಚನೆಯೊಳ್ **ಕುರುಳ್ಗಳ ಸವಣಂ** ॥ ೧೧ ॥

ಶಾಂತಿಜಿನ ಜನ್ಮ ಜಲಧಿಗೆ
ಶಾಂತಿಪುರಾಣಮೆ ಪರಾರ್ಥ್ಯ ರತ್ನಮಿದಂ ಪೇ
ಳ್ವಂತು ಕವಿ ಚಕ್ರವರ್ತಿಯೆ
ನೋಂತಂ ಪೆಸರಿಂ ಪುರಾಣ ಚೂಡಾಮಣಿಯಂ ॥ ೧೨ ॥

ಜಿನ ಮದನರೊಳಗೆ ಪದಿನಾ
ಱನೆಯಂ ತತ್ಸಕ[1]ಳ[1] ಚಕ್ರವರ್ತಿಗಳೊಳಗ
ಯ್ದನೆಯನೆನೆ ಪುಣ್ಯಪುಂಜಾ
ರ್ಜವಕ್ಕೆ **ಶಾಂತೀಶ**ನಂತು ನೋಂ[2]ತರುಮೊ[2]ಳರೇ ॥ ೧೩ ॥

ಆ ತೀರ್ಥಕರನ ಪೆಂಪುಪ
ಮಾತೀತಮದರ್ಕೆ ಬಯಸಿ ಕಣ್ಣುಂ ಕಾಲುಂ
ಬಾತೊಡೆ ಬರ್ಕುಮೆ ಪುಣ್ಯಮ
ನಾತನ ನೆರಪಿದುದನೆಯ್ದೆ ನೆರಪದೆ ಮೊದಲೊಳ್ ॥ ೧೪ ॥

ಆ ಜಿನ ಪುರಾಣಮುಮನಮ
ರೀಜನ ಮೃದು ಮಧುರ ನಿನದ ಗೀತ [3]ಮುಮಂ ರಾ[3]
ರಾಜಿತಮಂ ತ್ರಿಜಗಜ್ಜನ
ಪೂಜಿತಮಂ ಪೇೞೆ ದುರಿತ ಹರಣಮುಮ[ರಿ]ದೇ ॥ ೧೫ ॥

---

೧೧. ಪೊನ್ನಕವಿ 'ಕುರುಳುಗಳ ಸವಣ' ಎಂಬ ಬಿರುದು ಗಳಿಸಿದವನು. ಈತನು ಕನ್ನಡ ಭಾಷೆಯಲ್ಲಿ ಬರೆದ ಕಾವ್ಯಗಳ ಮಹತ್ತಿನಿಂದ ಹಿಂದೆ ಆಗಿಹೋದ ಅಸಗ ಕವಿಗಿಂತಲೂ ನೂರುಪಟ್ಟು ಮೇಲಾದವನು ; ಸಂಸ್ಕೃತ ರಚನೆಯಲ್ಲಿ ಕಾಳಿದಾಸ ಕವಿಗಿಂತಲೂ ನಾಲ್ಕುಪಟ್ಟು ಮೇಲಾದವನು.

೧೨. ಶಾಂತಿನಾಥ ತೀರ್ಥಂಕರರ ಜನ್ಮ ಸಮುದ್ರಕ್ಕೆ ಶಾಂತಿಪುರಾಣವೆ ಇತರರಿಗೆ ಲಾಭವನ್ನುಂಟುಮಾಡುವ ಅನರ್ಘ್ಯ ರತ್ನ. ಕೇವಲ ಹೆಸರಿನಿಂದಲೇ ಪುರಾಣ ಚೂಡಾಮಣಿಯಾದ ಶಾಂತಿಪುರಾಣ ಕಾವ್ಯವನ್ನು ಹೇಳಲು ಪೊನ್ನ ಕವಿಯೇ ನೋಂಪಿ ಮಾಡಿದ್ದಾನೆ.

೧೩. ಮನ್ಮಥನಂತೆ ಚೆಲುವರಾದ ೨೪ ತೀರ್ಥಂಕರರಲ್ಲಿ ಶಾಂತಿನಾಥನು ೧೬ನೆಯವನು. ೬೩ ಜನ ಶಲಾಕಾ ಪುರುಷರಲ್ಲಿ ಬರುವ ೧೨ ಜನ ಚಕ್ರವರ್ತಿಗಳಲ್ಲಿ ಐದನೆಯವನು. ಎಂದಮೇಲೆ ಪುಣ್ಯಪುಂಜವನ್ನು ಪಡೆಯಲು ಶಾಂತಿನಾಥರ ಹಾಗೆ ವ್ರತ ಮಾಡಿದವರಿಲ್ಲ.

೧೪. ಶಾಂತಿನಾಥರ ಮಹಿಮೆ ಉಪಮಾತೀತವಾದುದು. ಅದಕ್ಕಾಗಿ ಹಂಬಲಿಸಿ ಕಣ್ಣು ಕಾಲು ಊದಿಕೊಂಡರೂ ಆ ಪುಣ್ಯ ಪ್ರಾಪ್ತಿಯಾಗುವುದಿಲ್ಲ. ಆ ಜಿನನಾಥನು ಸಂಪಾದಿಸಿದುದನ್ನು ಚೆನ್ನಾಗಿ ಮೊದಲಿನಿಂದಲೂ ಸಂಪಾದಿಸಿದರೆ ಮಾತ್ರ ಅದು ಸಿಗುತ್ತದೆ.

೧೫. ದೇವತೆಗಳು ಮೃದುಮಧುರವಾಗಿ ಧ್ವನಿಮಾಡುವ ಗೀತವನ್ನೂ, ಅತಿಯಾಗಿ ಪ್ರಕಾಶಿಸುವುದನ್ನೂ ಮೂರು ಲೋಕದ ಜನರಿಂದ ಪೂಜಿತವಾದುದನ್ನೂ ಆದ ಆ ಶಾಂತಿನಾಥರ ಪುರಾಣವನ್ನು ಹೇಳುವುದರಿಂದ ಪಾಪನಾಶವಾಗುವುದು ಅಸಾಧ್ಯವಲ್ಲ.

---

1. ಲ (ಕಾ) 2. ತವರೊ (ಕಾ) 3. ಮದಾರಾ (ಅ)

ಮ॥ ಜಿನ ತತ್ವಂ[1]ಮದನತತ್ವ[1] ಮೆಂಬಿವೆರಡುಂ ದೂರಸ್ಥಮೆಂತೆನ್ನ[2]ಲಾ
ಜಿನ[2] ತತ್ವಂ ಗತರಾಗಮಾ ಮದನ ತತ್ವಂ ರಾಗ ಸಂಪೂರ್ಣ ಮ
ಯ್ದನೆಯಂ ತಜ್ಜಿನ ಚಕ್ರವರ್ತಿ ಜಿನನಾಥಂ ಷೋಡಶಂ ಧರ್ಮ ಚ
ಕ್ರನಿಯುಕ್ತಂ ಭರತೋರ್ವಿಗಿಂತು ಸಲೆ ನೋಂತಂ ಶಾಂತಿತೀರ್ಥೇಶ್ವರಂ ॥ ೧೬ ॥

ಕಂ॥ ಕಾನೂರ್ಗಣ ಮುನಿಪತಿ ವಿ
ದ್ಯಾನಿಧಿ ಗುಣನಿಧಿ ದಯೈಕನಿಧಿ ಶುದ್ಧ ಯಶ
ಶ್ರೀನಿಧಿ ತಪೋಂಬುನಿಧಿ ಭುವ
ನಾನತ ಪದ ಕನಕ ಕಮಳನಮಳಿನ ಚರಿತಂ ॥ ೧೭ ॥

ವಿತತನ[3]ರ್ಹ[3]ದ್ಬಲಂ ಯತಿ
ಪತಿ ಮಹಿಪತಿ ಮಕುಟ ನಿಕಟ ತಾಟಿತ ಚರಣಂ
ಕ್ಷಿತಿ ಪೂಜ್ಯಂ ಜಿತ ದುರಿತಂ
ನುತ ಸಂಪ್ರತಿ ಭೂತ ಭಾವಿ ಪರಿಣತ ತತ್ವಂ ॥ ೧೮ ॥

ನೆಗಟ್ದರ್ಹಣಂದಿ ಯೋಗಿಗ
ಳಗಾಧ ಬೋಧರ್ ತದೀಯ ಶಿಷ್ಯರ್ ಖ್ಯಾತಾ
ಧಿಗತ ಜಿನ ತತ್ವರನುಪಮ
ರಗಣ್ಯ ಪುಣ್ಯಾಗ್ರಗಣ್ಯರವಸರ್ಪಿಣಿಯೊಳ್ ॥ ೧೯ ॥

---

೧೬. ಜಿನತತ್ವ ಹಾಗೂ ಸ್ಮರತತ್ವಗಳೆಂಬ ಎರಡು ತತ್ವಗಳು ಒಂದಕ್ಕೊಂದು ದೂರವಾಗಿವೆ. ಹೇಗೆಂದರೆ ಜಿನ ತತ್ವವೆಂಬುದು ಕಾಮಭಾವನೆಗಳಿಂದ ಪೂರ್ಣ ಬಿಡುಗಡೆ ಪಡೆದಿದೆ. ಆ ಮದನ ತತ್ವವಾದರೊ ಇದಕ್ಕೆ ತದ್ವಿರುದ್ಧ, ಅದು ಸಂಪೂರ್ಣವಾಗಿ ರಾಗದಿಂದ ತುಂಬಿದೆ. ಐದನೆಯ ಚಕ್ರವರ್ತಿಯಾದ ಶಾಂತಿನಾಥನು ತೀರ್ಥಂಕರರಲ್ಲಿ ಹದಿನಾರನೆಯವನು. ಆತನಲ್ಲಿ ಚಕ್ರವಿದ್ದರೂ ಅದು ಧರ್ಮಚಕ್ರ. ಭರತ (ಚಕ್ರವರ್ತಿಯ) ಭೂಮಿಗೆ ಶಾಂತಿ ತೀರ್ಥಂಕರರ ಹಾಗೆ ಚೆನ್ನಾಗಿ ವ್ರತಮಾಡಿದವರಿಲ್ಲ.

೧೭. ಕಾನೂರುಗಣಕ್ಕೆ ಸೇರಿದ (ಅರ್ಹನಂದಿ) ಮುನಿಪತಿಗಳು ವಿದ್ಯಾನಿಧಿಗಳು. ಗುಣಸಾಗರರೂ, ದಯಾಪರರೂ, ನಿರ್ಮಲವಾದ ಕೀರ್ತಿಗೆ ಆಕರರೂ, ತಪೋಧನರೂ ಆದ ಅವರ ಚಿನ್ನದ ತಾವರೆಯಂತಹ ಕಾಲಿಗೆ ಇಡೀ ಭೂಮಂಡಲವೇ ನಮಸ್ಕರಿಸಿದೆ. ಅವರು ಅಮಲವಾದ ಚರಿತೆಯನ್ನು ಹೊಂದಿದ್ದಾರೆ.

೧೮. (ಆ ಕಾನೂರುಗಣ ಮುನಿಪತಿಯು) ವಿಸ್ತಾರನಾದವನು, ಅರ್ಹಂತನಂತೆ ಬಲಶಾಲಿ, ಮುನಿಗಳೊಡೆಯ, ಆತನ ಕಾಲುಗಳಿಗೆ ಭೂಪತಿಗಳ ಕಿರೀಟಗಳು ತಾಕಿವೆ. ಅವರು ಪಾಪವನ್ನು ಗೆದ್ದಿದ್ದಾರೆ, ಕ್ಷಿತಿಗೆ ಸಂಪೂಜ್ಯರಾಗಿದ್ದಾರೆ. ಭೂತ ಭವಿಷ್ಯತ್ ವರ್ತಮಾನವೆಂಬ ಮೂರು ಕಾಲವನ್ನೂ ತಿಳಿಯುವ ಜ್ಞಾನಿಗಳಾಗಿ ಹೊಗಳಿಕೆಗೆ ಪಾತ್ರರಾಗಿದ್ದಾರೆ.

೧೯. ಸುಪ್ರಸಿದ್ಧರಾದ ಅರ್ಹಣಂದಿ ಮುನೀಶ್ವರರು ಅಗಾಧವಾದ ಜ್ಞಾನಿಗಳು. ಅವರ ಶಿಷ್ಯರು ಪ್ರಖ್ಯಾತ ಜಿನ ತತ್ವವನ್ನು ತಿಳಿದವರು, ಎಣೆಯಿಲ್ಲದವರು. ಅವರು ಈ ಅವಸರ್ಪಿಣಿ ಕಾಲದಲ್ಲೂ ಗಣನಾತೀತವಾದ ಪುಣ್ಯ ಪಡೆದವರಲ್ಲಿ ಪ್ರಮುಖರು.

---

1. ಸ್ಮರತತ್ವ (ಮ) 2. ತಜ್ಜಿನ (ಅ) 3. ರುಹ (ಮ)

ಆ ಯತಿನಾಥರ ಶಿಷ್ಯರ
ಜೇಯ ಜಿನಾಗಮ ಪಯೋಧಿ ಪಾರೋತ್ತೀರ್ಣ
ಕ್ಷಾಯಿಕ ಸಮ್ಯಗ್ದೃಷ್ಟಿಗ
ಳಾಯತ ಪುರಿಮಂಡಲಾಭಿಧಾನಾನೂನರ್ ॥ ೨೦ ॥

ನೆಗಟ್ದ **ರ್ಹಣಂದಿ** ಸಿದ್ಧಾಂ
ತಿಗಳಧಿಗತ ಸಕಳ ತತ್ವರಾಯತ ಲವಣಾ
ಬ್ಧಿ ಗಭೀರ ಭೂರಿ ವಾರಿಧಿ
ನಿಗೂಢ[1]ಮಹರುದ್ಧ[1]ಸತ್ವ ಸಿದ್ಧಿ ಸಮೇತರ್ ॥ ೨೧ ॥

ಆ ಪರಮೇಶ್ವರರಾಶಾ
ತಪೋಪಶಮ್ಯೈಕಮತರಸಂಸಾರ ಸಮು
ದ್ರಾಪರ ಪಾರೋತ್ಸುಕರಭಿ
ರೂಪರ ಶಿಷ್ಯರ್ **ಸುವೀರಣಂದಿ** ಮುನೀಂದ್ರರ್ ॥ ೨೨ ॥

ಅನಘರ್ ತ್ರಿಕಾಲ ಯೋಗಿಗ
ಳನುಪಮ ಚಾರಿತ್ರರದ್ವಿತೀಯರಮೇಯರ್
ಮುನಿಮುಖ್ಯರ್ ಬೆಟ್ಟದ **ದಾ**
ಮ[2]**ನಂ**[2]**ದಿ** ಮುನಿ***ವೀರಣಂದಿ**ಮುನಿಪರ ಶಿಷ್ಯರ್ ॥ ೨೩ ॥

ಮುನಿ ಮುಖ್ಯರ್ ಬೆಟ್ಟದ **ದಾ**
ಮನಂದಿಗಳ ಶಿಷ್ಯರಿಂದು ಕುಂದೋಜ್ಜ್ವಳ ನೂ
ತನ ಕೀರ್ತಿ ಮೂರ್ತಿಗಳ್ **ಚಂ**
ದಿನಂದಿಗಳ್ ಗಣಧರಾಗ್ರಗಣ್ಯ ಸಮಾನರ್ ॥ ೨೪ ॥

---

೨೦. ಆ ಮುನಿನಾಥರ ಶಿಷ್ಯರು ಗೆಲ್ಲಲು ಅಸಾಧ್ಯವಾದ ಜಿನಶಾಸ್ತ್ರ ಸಾಗರದ ಎಲ್ಲೆಯನ್ನು ದಾಟಿದವರು, ಕರ್ಮಗಳು ನಾಶವಾಗುವುದರಿಂದ ಲಭಿಸುವ ಕ್ಷಾಯಿಕ ಸಮ್ಯಗ್ ದೃಷ್ಟಿಯವರು, ವಿಸ್ತಾರವಾದ ಪುರಿಮಂಡಲವೆಂಬ ಹೆಸರನ್ನು ಹೊಂದಿ ದೋಷದೂರವಾದವರು.

೨೧. ಸುಪ್ರಸಿದ್ಧರಾದ ಅರ್ಹಣಂದಿ ಸಿದ್ಧಾಂತಿಗಳು ಸಮಸ್ತ ತತ್ವಗಳನ್ನು ತಿಳಿದವರು. ವಿಸ್ತಾರವಾದ ಉಪ್ಪು ಕಡಲಿನಂತೆ ಅವರು ಗಂಭೀರರೂ, ಶ್ರೇಷ್ಠವಾದ ಕೀರ್ತಿಯನ್ನು ಸಂಪಾದಿಸಿದವರೂ ಆಗಿದ್ದಾರೆ.

೨೨. ಆ ಪರಮೇಶ್ವರರು ಆಸೆಯೆಂಬ ತಾಪವನ್ನು ಉಪಶಮನಗೊಳಿಸಿದವರು. ಅವರು ಸಂಸಾರವೆಂಬ ಸಮುದ್ರದ ತಡಿಯನ್ನು ಉತ್ಸಾಹದಿಂದ ಮುಟ್ಟಿದವರು. ಅಂತಹ ಅರ್ಹನಂದಿಯತಿಗಳ ಸಮಾನ ರೂಪಿಗಳಾದ ಶಿಷ್ಯರು ಆ ಶ್ರೇಷ್ಠ ವೀರಣಂದಿ ಮುನೀಂದ್ರರು.

೨೩. ಆ ವೀರಣಂದಿ ಮುನಿಪರ ಶಿಷ್ಯರು ಬೆಟ್ಟದ ದಾಮಣಂದಿ ಮುನಿಗಳು. ಇವರು ಪಾಪರಹಿತರು, ಪರಿಶುದ್ಧರು, ತ್ರಿಕಾಲಯೋಗಿಗಳಲ್ಲಿ ಶ್ರೇಷ್ಠರು, ಎಣೆಯಿಲ್ಲದ ಶೀಲಸಂಪನ್ನರು, ಅದ್ವಿತೀಯರು, ಅಳತೆಗೆ ಮೀರಿದವರು, ಮುನಿಗಳಿಗೆ ಮುಖ್ಯರಾದವರು.

೨೪. ಮುನಿಮುಖ್ಯರಾದ ಬೆಟ್ಟದ ದಾಮನಂದಿಗಳ ಶಿಷ್ಯರು ಚಂದಿನಂದಿ ಮುನಿಗಳು. ಇವರು 'ಇಂದು ಕುಂದೋಜ್ವಲ'ವಾದ ಹೊಸ ಯಶಸ್ಸಿನ ಮೂರ್ತಿಗಳು, ಗಣಧರರಲ್ಲಿ ಅಗ್ರಗಣ್ಯರಾದ ಗೌತಮರಿಗೆ ಸಮಾನರು.

---

1. ಮಹಿರುದ್ಧ (ಅ) 2. ಣ (ಅ) * ಗಳ್ (ಅ)

ಆ ಚಂದಿನಂದಿ ಮುನಿಪ ಸ
ದಾಚಾರಕ ಶಿಷ್ಯರಮಲ **ಜಿನಚಂದ್ರ** ಮುನೀಂ
ದ್ರಾಚಾರ್ಯರ್ ತ್ರೈಲೋಕ್ಯ ಚ
ರಾಚರ ರಕ್ಷಾಕ್ಷಮೈಕ ಕಾರಣ ನಿರತರ್ ॥ ೨೫ ॥

ಚಂ॥ ಮುನಿಪ ಸಹಸ್ರ ಭೋಜನ ಕರಂ ಬುಧ ಭವ್ಯ ಜನೌಘ ಸೇವ್ಯ ನ
ತ್ಯನುಪಮ ಚಕ್ರವರ್ತಿ ಯತಿರಾಜ ಗಣಾಗ್ರಣಿ ದತ್ತ ವಿತ್ತ ಭಾ
ಜನ ಕವಿ ವಾದಿ ವಾಗ್ಮಿ ಗಮಕಂ ವಸುಧೈಕ ಕುಟುಂಬಕಂ ಸಭಾ
ಜನ ಸುಜನೈಕ ಭಾಜನ ಮುಖಂ **ಜಿನಚಂದ್ರ** ಮುನೀಂದ್ರನುರ್ವಿಯೊಳ್ ॥ ೨೬ ॥

ಕಂ॥ ಇಹಭವ **ಶಿಬಿ ಕರ್ಣ ರಘೂ**
ದ್ವಹ ಶಕರಿಪು ಗುಪ್ತ ಚಾರುಗುಪ್ತ ಗುಣಂ ವೃ
ತ್ರಹ ಯಶನಾಶಾಂಬರ ರಾ
ಜಹಂಸನಕಳಂಕ ಚಂದ್ರನಾ **ಜಿನಚಂದ್ರಂ** ॥ ೨೭ ॥

ದೀನ ಜನ ದಾನ ನಿರತನ
ನೂನ ಗುಣೋತ್ತಮ ಸುಸತ್ಯ ತಾಪಸ ಲೋಕಾ
ದಾನಂ ವಿತ್ತಾರ್ಥಿಗೆ "ಕಃ
ಕೇನಾರ್ಥೀ ಕೋ ದರಿದ್ರ" [1]ಎ[1]ಂದಾರ್ತೀವಂ ॥ ೨೮ ॥

---

೨೫. ಸದಾಚಾರದಿಂದ ಕೀರ್ತಿಶಾಲಿಗಳಾಗಿರುವ ಆ ಚಂದಿನಂದಿ ಮುನಿಪರ ಶಿಷ್ಯರು ನಿರ್ಮಲ ಮೂರ್ತಿಗಳಾದ ಜಿನ ಚಂದ್ರ ಮುನೀಂದ್ರಾಚಾರ್ಯರು. ಇವರು ಮೂರೂ ಲೋಕಗಳ ಚರಾಚರಗಳಿಗೆ ರಕ್ಷಾಕವಚದಂತೆ ಕ್ಷಮೆಯೆಂಬ ಒಂದೇ ಕಾರಣದಲ್ಲಿ ನಿರತರಾಗಿದ್ದಾರೆ.

೨೬. ಜಿನಚಂದ್ರ ಮುನೀಂದ್ರರು ಈ ಭೂಮಂಡಲದಲ್ಲಿ ಸಹಸ್ರಾರು ಮುನಿಸಂಕುಲಕ್ಕೆ ಆಹಾರದಾನದ ಸೌಕರ್ಯ ಒದಗಿಸಿದವರು, ವಿದ್ವಾಂಸರ ಭವ್ಯಜನರ ಸಮೂಹದ ಸೇವೆಗೆ ಪಾತ್ರರು, ಅನುಪಮ (ಮುನಿ) ಚಕ್ರವರ್ತಿ ಮತ್ತು ಯತಿ ರಾಜರು, ಮುನಿಗಣದಲ್ಲಿ ಪ್ರಮುಖರು, ಕವಿ ಗಮಕಿ ವಾದಿ ವಾಗ್ಮಿ ಆದವರು, ಸಂಪತ್ತನ್ನು ದಾನವಾಗಿ ನೀಡಿದವರು, ಪೃಥ್ವಿಯೇ ತಮ್ಮ ಕುಟುಂಬವೆಂದು ಭಾವಿಸಿಕೊಂಡವರು, ಸಭೆಯ ಸುಜನರ ಸುಮನಸ್ಸಿಗೆ ಹಿಡಿಸುವ ಮುಖ (ಚಂದ್ರ) ಪಡೆದವರು.

೨೭. ಇಹಭವದಲ್ಲಿ (ಈ ಲೋಕದಲ್ಲಿ) ಹುಟ್ಟಿದ ಶಿಬಿ ಕರ್ಣ ರಾಮಚಂದ್ರ ಮತ್ತು ಶಕಶತ್ರುಗಳಾದ ಗುಪ್ತರ ಉತ್ತಮ ಗುಣಗಳನ್ನು ಗುಪ್ತವಾಗಿ ಪಡೆದವರೂ, ವೃತ್ರಹಯಶರೂ, ಆಶಾಂಬರ ರಾಜಹಂಸರೂ, ಕಳಂಕವಿಲ್ಲದ ಚಂದ್ರರೂ ಆದವರು ಆ ಜಿನಚಂದ್ರರು.

೨೮. ಬಡಜನರಿಗೆ ದಾನ ಮಾಡುವುದರಲ್ಲಿ ನಿರತರು, ಕುಂದಿಲ್ಲದ ಗುಣಗಳಲ್ಲಿ ಉತ್ತಮರು, ಒಳ್ಳೆಯ ಸತ್ಯದ ತಪೋಧನರು. ಹಣವನ್ನು ಬೇಡುವವರಿಗೆ 'ಯಾರು ಯಾಚಿಸುವವರು, ಯಾರು ದರಿದ್ರರು' ಎಂದು ಸಂತೋಷದಿಂದ ದಾನ ಕೊಡುವರು.

---

1. ಯೆ (ಅ)

ಉ॥ ಆದಿ ಜಿನೇಂದ್ರ ಪಾದ ಕಮಲ ಭ್ರಮರಂ **ಜಿನಚಂದ್ರ** ದೇವನು
ತ್ಪಾದಿತ **ಪೂಜ್ಯಪಾದ** ಚರಿತಂ ಜಯ ವಾದ್ಯ **ಕಳಂಕ** ಸನ್ನಿಭಂ
ಭೀ ದುರಿತಾತಿದೂರನನವದ್ಯ ಜಿನಾಗಮ ವಿದ್ಯನಿದ್ಧ ದು
ಗ್ಧೋದಧಿ ಧೌತಕೀರ್ತಿ ವಿಶದಂ ಭರತಾವನಿ ರಾಜಪೂಜಿತಂ ॥ ೨೯ ॥

ಕಂ॥ ವಿಸಯ [1]ನಿ[1]ಧಾನಂ ಜಿನಸಮ
ಯ ನಿರತಿಶಯ ಸಾರ ಚಾರು ಸರ್ವಸ್ವ ವಿನೂ
ತನ **ಸಮಂತಭದ್ರಂ**
ಜಿನ ಚಂದ್ರಂ [2]ವಿಬುಧ ವನಜ[2] ವನ ಕಳಹಂಸಂ ॥ ೩೦ ॥

ದಿಗಿಭಂ ದಿಗಿಭಕ್ಕೆ ಮೊಗಂ
ಬುಗುವಂತಿರೆ ಸಂಚಿವಾರದಿಂ ಧನದಿಂದಂ
ಮಿಗಿಲುದ್ದಾನಿಯ ದಾನಂ
ದಿಗಿಭದ ದಾನಕ್ಕಮಗ್ಗಳಂ [3]ಮುನಿಪತಿಯಾ[3] ॥ ೩೧ ॥

ಈಡಿತ ಜಿನವರ ಶಾಸನ
ಚೂಡಾಮಣಿ ಬುಧರ್ಗನಲ್ಪ ಕಲ್ಪ ಕುಜಂ ಕೆ
ಯ್ನೀಡಿದ ಬೇಟ್ಪರ ನೆರವಿಗೆ
ನೀಡಿಲ್ಲದೆ ಕುಡುವುದಾತ್ತನಾಜಿನಚಂದ್ರಂ ॥ ೩೨ ॥

---

೨೯. ಆದಿ ತೀರ್ಥಂಕರರಾದ ಪುರುದೇವನ ಪಾದಪದ್ಮಗಳಲ್ಲಿ ದುಂಬಿಯಂತೆ ಇರುವ ಜಿನಚಂದ್ರರು ಪೂಜ್ಯಪಾದ ಮುನಿಗಳ ಚಾರಿತ್ರ್ಯವನ್ನು ಪಡೆದವರು, ಮಂಗಳವಾದ್ಯದಂತಿರುವ ಅಕಳಂಕಮುನಿ ಸಮಾನರು, ಪಾಪದಿಂದ ಬಹುದೂರರು, ದೋಷರಹಿತರು, ನಿರ್ದೋಷವಾದ ಜಿನಾಗಮಗಳನ್ನು ಚೆನ್ನಾಗಿ ತಿಳಿದವರು, ವೃದ್ಧಿಹೊಂದಿದ ಹಾಲ್ಗಡಲಿನಂತೆ ಶುಭ್ರಕೀರ್ತಿವಿಶದರು, ಭರತದೇಶದ ರಾಜರಿಂದ ಪೂಜಿತರು.

೩೦. ವಿನಯಗುಣದ ನಿಧಿಗಳೂ, ಅತ್ಯುನ್ನತವೂ ಮನೋಹರವೂ ಆದ ಜೈನಧರ್ಮದ ಒಳತಿರುಳೆಲ್ಲವನ್ನೂ ಅರಿತವರೂ ಆದ ಈ ವಿನೂತನ ಸಮಂತಭದ್ರಮುನಿಗಳಾದ ಜಿನಚಂದ್ರರು ವಿದ್ವಾಂಸರೆಂಬ ತಾವರೆಗಳ ತೋಟದಲ್ಲಿ ರಾಜಹಂಸನಂತೆ ಶೋಭಿಸುವರು.

೩೧. ಒಂದು ದಿಕ್ಕಿನ ಆನೆಯು ಮತ್ತೊಂದು ದಿಕ್ಕಿನ ಆನೆಯ ಸಮ್ಮುಖಕ್ಕೆ ಹೋಗುವ ಹಾಗೆ 'ಸಂಚಿವಾರ' ದಿಂದಲೂ ಧನದಿಂದಲೂ ಮಿಗಿಲು ಅವರು ನೀಡುವ ಶ್ರೇಷ್ಠವಾದ ದಾನ, ದಿಕ್ಕಿನ ಆನೆಯ 'ದಾನ'ಕ್ಕಿಂತ ಅಗ್ಗಳವಾದದ್ದು ಆ ಮುನಿಪತಿಯ ದಾನ.

೩೨. ಪ್ರಶಂಸನೀಯವಾದ ಜಿನಪತಿಯ ಬೋಧನೆಗೆ ಚೂಡಾರತ್ನದಂತಿರುವವರು, ವಿದ್ವಾಂಸರಿಗೆ ಮಹತ್ತಾದ ಕಲ್ಪವೃಕ್ಷದಂತಿರುವವರು, ಕೈಚಾಚಿ ಬೇಡುವ ಯಾಚಕರ ಗುಂಪಿಗೆ ತಡಮಾಡದೆ ಒಡನೆಯೇ ಕೊಡುವ ಉದಾತ್ತಗುಣಿ ಆ ಜಿನಚಂದ್ರರು.

---

1. ಪಿ (ಅ) 2. ಬುಧವನೇಜ (ಮ) 3. ತನ್ಮುನಿಯಾ (ಅ)

ಚಂ॥ ಎನಗೆ ಜಿನೇಂದ್ರ ಧರ್ಮಮೆ ಶರಣ್ ಮೊನೆಗೊಡ್ಡಿದ ಭೂರಿ ವೈರಿ ಸಾ
ಧನ ಹರಣಂ ದಲೆಂದೆ ಜಿನಚಂದ್ರ ಮುನೀಂದ್ರರ ಪಾದ ಮೂಲದೊ
ಳ್ವಿನಮಿತರಾಗಿ ಕೊಂಡುಕೊನೆವರ್ ಸಲೆ [1]ವಾ[1]ಣಿಯವಾಡಿಯೊಳ್ ಮಹಾ
ವನಿಪರದೇನಗಣ್ಯಕೃತಪುಣ್ಯಮೊ ಭಾವಿಸೆ ತನ್ಮುನೀಂದ್ರನಾ ॥ ೩೩ ॥

ಕಂ॥ ಅಪವರ್ಗಮಾರ್ಗ ದುರ್ಗಾ
ಘಪಾತಪಟು ಪರಮ ಜಿನಮತಾಂಬುಧಿ ಚಂದ್ರಂ
ಕುಪಥ ಮಲ ವಿಲಯನಂ ಪಂ
ಚಪರಮ ಗುರು ಭಕ್ತಿನಿರತನಾ ಜಿನಚಂದ್ರಂ ॥ ೩೪ ॥

ಜಿನಶಾಸನ ದೀಪಕನುಂ
ಮುನಿ ವೈರೋಚನನುಮಪ್ಪ ಜಿನಚಂದ್ರ ಮುನೀಂ
ದ್ರನನುರ್ವರಾಸ್ಯ ತಿಲಕನ
ನನೂನ ಗುಣ ಮಣಿ ಗಣ ಪ್ರಭೂಷಿತ ತನುವಂ ॥ ೩೫ ॥

ಆ ಜಿನಚಂದ್ರನನಯ ನಯ
ಭಾಜನನಂ ಸಲೆ ಪುರಾಣ ಚೂಡಾಮಣಿ[2]ಯಂ[2]
ಭ್ರಾಜಿತ ಶಾಂತೀಶ್ವರ ಕಥೆ
ಗೀ ಜಗದೊಳ್ ಪತಿಯೆನಲ್ಕೆ ಪೇಟ್ವೆಂ ಕೃತಿಯಂ ॥ ೩೬ ॥

ಚಂ॥ ಕವಿ ಕವಿಚಕ್ರವರ್ತಿ ಕೃತಿನಾಯಕನಾ ಜಿನಚಂದ್ರ ದೇವನು
ತ್ಸವ ನಿಧಿ ಮಲ್ಲಪಾರ್ಯನುಮುದಾತ್ತ ಯಶೋನಿಧಿ ಪುನ್ನಮಾರ್ಯನುಂ
ಸವಿ ತವದಂತು [3]ಪೇಟ್ದಿ[3]ಸಿದರೆಂದೊಡೆ ಶಾಂತಿಪುರಾಣಮೇಂ ಕರಂ
ನವರಸಮೇಂ ಸಮರ್ಥಯುತಮೇಂ ಮೃದು ಬಂಧನಮೇಂ ಪ್ರಸನ್ನಮೋ ॥ ೩೭ ॥

---

೩೩. ಸರಸ್ವತಿಯ ವಾಸಸ್ಥಳದಂತಿರುವ ಆ ಜಿನಚಂದ್ರ ಮುನೀಂದ್ರರ ಪಾದಮೂಲದಲ್ಲಿ ಬಂದು ಹಿರಿಯರಾದ ರಾಜರುಗಳು, 'ನಮಗೆ ಯುದ್ಧದಲ್ಲಿ ಒಡ್ಡಿದ ಅನಂತ ಶತ್ರುಗಳ ಸಾಧನದ ವಿನಾಶಕ್ಕಿಂತಲೂ ಜಿನೇಂದ್ರ ಧರ್ಮವೇ ಶರಣು' ಎಂಬುದಾಗಿ ನಿಶ್ಚೈಸಿ, ವಿನಯದಿಂದ ತಲೆಬಾಗಿ ಸ್ತುತಿಮಾಲಿಕೆಗಳಿಂದ ಕೊಂಡಾಡುತ್ತಿದ್ದಾರೆ. ಹೀಗಿರ ಬೇಕಾದರೆ ಇನ್ನು ಆ ಮುನಿಪತಿಯು ಮಾಡಿದ ಪುಣ್ಯವು ಅದೆಷ್ಟು ಗಣನಾತೀತವೋ !

೩೪. ಆ ಜಿನಚಂದ್ರರು ಮೋಕ್ಷಮಾರ್ಗದಲ್ಲಿ (ಅಡ್ಡಿಯಾಗಿ ಕಟ್ಟಿರುವ) ಪಾಪಗಳೆಂಬ ಕೋಟೆಗಳನ್ನು ಕೆಡವಿ ನೆಲಸಮ ಮಾಡಿದ ನಿಷ್ಣಾತರು, ಪರಮ ಪವಿತ್ರವಾದ ಜಿನಮತವೆಂಬ ಕಡಲಿಗೆ ಚಂದ್ರನಂತೆ ಇರುವವರು, ಕೆಟ್ಟಮಾರ್ಗ ದಲ್ಲಿರುವ ಕೊಳೆಯನ್ನು ತೊಳೆದವರು, ಪಂಚಪರಮೇಷ್ಠಿಗಳ ಪ್ರಾರ್ಥನೆಯಲ್ಲಿ ಭಕ್ತಿ ನಿರತರು.

೩೫. ತೀರ್ಥಂಕರರ ಬೋಧನೆಯನ್ನು ಬೆಳಗಿದವರೂ, ಮುನಿ ವೈರೋಚನರೂ ಆದ ಜಿನಚಂದ್ರ ಮುನೀಂದ್ರರು ಭೂದೇವಿಯ ಮುಖಕ್ಕೆ ತಿಲಕಪ್ರಾಯರು, ಕುಂದಿಲ್ಲದ ಗುಣಗಳೆಂಬ ರತ್ನದ ರಾಶಿಯಿಂದ ಅಲಂಕಾರಗೊಂಡಿರುವ ದೇಹವುಳ್ಳವರು.

೩೬. ಆ ಜಿನಚಂದ್ರರು 'ಅಯನಯ' ಭಾಜನರು, ಮಿಗಿಲಾಗಿ ಪುರಾಣ ಚೂಡಾಮಣಿ ಅವರಿಗೆ, ಈ ಪ್ರಕಾಶ ದಿಂದ ಕೂಡಿದ ಶಾಂತೀಶ್ವರ ಜಿನನ ಕಥೆಗೆ ಈ ಲೋಕದಲ್ಲಿನ ಪ್ರಭುವೆಂಬಂತೆ, ಕೃತಿಯನ್ನು ಹೇಳುತ್ತೇನೆ.

೩೭. ಈ ಕಾವ್ಯವನ್ನು ಹೇಳುವ ಕವಿ ಕವಿಚಕ್ರವರ್ತಿ (ಪೊನ್ನ), ಜಿನಚಂದ್ರದೇವನೇ ಕೃತಿನಾಯಕ, ಉತ್ಸವನಿಧಿ ಮಲ್ಲಪಾರ್ಯ ಮತ್ತು ಯಶೋನಿಧಿ ಪುನ್ನಮಾರ್ಯರು (ಈ ಕಾವ್ಯವನ್ನು) ಸವಿ ಕಡಮೆಯಾಗದಂತೆ ಹೇಳಿಸಿದರು—ಎಂದ ಮೇಲೆ ಶಾಂತಿಪುರಾಣ ಅದೇನು ವಿಶೇಷ, ನವರಸಗಳು ಏನು ಸಮರ್ಥಯುತ, ಏನು ಮೃದು ಬಂಧ, ಏನು ಪ್ರಸನ್ನತೆ !

---

1. ಪಾ (ಅ) 2. ಗೀ (ಮ) 3. ಪೇಟಿಸಿ (ಮ)

ಕಂ॥ ಉಪಮಾತೀತಂ ಕೃತಿ ಶಾಂ
ತಿಪುರಾಣಂ ಸಲೆ "ಪುರಾಣಚೂಡಾಮಣಿ"ಯಿಂ
ದುಪಶಮದಿಂ ಬರೆಯಿಸಿ ಮ
ಲ್ಲಪಯ್ಯನುಂ ಪುನ್ನಮಯ್ಯನುಂ ಪರೆಯಿಸಿದರ್ ॥ ೩೮ ॥

ಶಾಂತಿಪುರಾಣಮನಿದನೋ
ರಂತಿರೆ ಬರೆಯಿಸುವ ಕೂಡೆ ಪರೆಯಿಸುವ ಜಸ
ಕ್ಕಿಂತಾರ್ ನೋಂತರಿದೇಂ ಗುಣ
ವಂತನಿದೇಂ ಪುರುಸರನ್ನನೋ ಗಡ ಪುನ್ನಂ ॥ ೩೯ ॥

ಮಲ್ಲಿಕಾಮಾಲೆ॥ ಮಲ್ಲಪಯ್ಯನುದಗ್ರ ಬೋಧ ಸಮಗ್ರನಗ್ರಜನುಂ ಸಮು
ತ್ಫುಲ್ಲ ಪಂಕಜ ಲೋಚನಂ ಗುಣಿ ಪುನ್ನಮಯ್ಯನಜಯ್ಯನಾ
ಮಲ್ಲಪಯ್ಯನ ತಮ್ಮನಮ್ಮನಭಕ್ತನಾಮಮುದಾತ್ತ[1]ವೀ[1]
ಮಲ್ಲಪಯ್ಯನೊಳೊಪ್ಪುಗುಂ ಪಿತೃಭಕ್ತಿಯುಂ ವಿನಯೋಕ್ತಿಯುಂ ॥ ೪೦ ॥

ಕಂ॥ ಆ ತಂದೆಯ ಭಕ್ತನ ವಿ
ದ್ಯಾತಿಶಯ ಮಹಾ ನಿಧಾನನನ್ವಯ ಮುಪಮಾ
ತೀತಮದಂ ಪೇೞ್ವೆಂ ವಿ
ಖ್ಯಾತಮದೆಂತೆಂದೊಡುಂಟು **ವೆಂಗೀ ವಿಷಯಂ** ॥ ೪೧ ॥

ವೆಂಗೀ ವಿಷಯಂ ತ್ರೈಭುವ
ನಂಗಳೊಳಗ್ಗಳದ ವಿಷಯಮುಪಮಾತೀತಂ
ಸಂಗತ ಸಮಸ್ತ ಮತ್ಯು
ತ್ತುಂಗ ಫಲ ದ್ರುಮಮಮೂಲ್ಯ ವಸ್ತು ನಿಧಾನಂ ॥ ೪೨ ॥

---

೩೮. ಇಂಥ ಕೃತಿ ಇನ್ನೊಂದಿಲ್ಲವೆಂಬಂತೆ ಶಾಂತಿಪುರಾಣ ಹೋಲಿಕೆಗೆ ನಿಲುಕದಂತಿದೆ, ಪುರಾಣಗಳಲ್ಲಿ ಇದು ಚೂಡಾಮಣಿ—ಇದನ್ನು ಬಲ್ಲ ಮಲ್ಲಪಯ್ಯನೂ ಪುನ್ನಮಯ್ಯನೂ ಇಂದ್ರಿಯ ನಿಗ್ರಹದಿಂದ ಈ ಕಾವ್ಯವನ್ನು ಬರೆಸಿದರು, ಲೋಕದಲ್ಲಿ ಹಬ್ಬಿಸಿದರು.

೩೯. ಈ ಶಾಂತಿಪುರಾಣವನ್ನು ಒಂದೇ ಸಮನಾಗಿ ಚೆನ್ನಾಗಿ ಬರೆಯಿಸುವ ಹರಡಿಸುವ ಯಶಸ್ಸಿಗೆ ಪುನ್ನನಂತೆ ಹೀಗೆ ನೋಂತವರು ಯಾರು? ಇದೇನು ಗುಣವಂತನೋ! ಇದೇನು ಪುರುಷರತ್ನನೋ ಈ ಪುನ್ನನು?

೪೦. ಮಲ್ಲಪಯ್ಯನು ಶ್ರೇಷ್ಠವಾದ ಜ್ಞಾನ ಸಮಸ್ತವನ್ನೂ ಬಲ್ಲವನು, ಅಗ್ರಜನು, ಅರಳಿದ ತಾವರೆಯಂತಹ ಕಣ್ಣುಗಳುಳ್ಳವನು, ಗುಣವಂತ. ಪುನ್ನಮಯ್ಯನೂ ಅಜೇಯನು, ಆ ಮಲ್ಲಪಯ್ಯನ ತಮ್ಮ, ತಂದೆಯಲ್ಲಿ ಭಕ್ತಿಯಿಟ್ಟವನು, ಉದಾರಿ. ಈ ಮಲ್ಲಪಯ್ಯನಲ್ಲೂ ಪಿತೃಭಕ್ತಿ ಮತ್ತು ವಿನಯೋಕ್ತಿಗಳು ಒಪ್ಪುತ್ತವೆ.

೪೧. ತಂದೆಯಲ್ಲಿ ಭಕ್ತಿಯಿಟ್ಟವನೂ ವಿದ್ಯಾತಿಶಯವೆಂಬ ಹಿರಿಯ ಸಂಪತ್ತು ಪಡೆದವನೂ ಆದ ಇವನ ವಂಶವು ಉಪಮಾತೀತವಾದುದು ವಿಖ್ಯಾತವಾದುದು. ಅದನ್ನು ಹೇಳುತ್ತೇನೆ. ಅದು ಹೇಗೆಂದರೆ ವೆಂಗೀದೇಶವೆಂಬುದೊಂದು ಇದೆ.

೪೨. ವೆಂಗೀದೇಶ ಮೂರು ಲೋಕಗಳಲ್ಲಿ ಅತಿಶಯವಾದುದು, ಹೋಲಿಕೆಯಿಲ್ಲದುದು. ಅದು ಅತ್ಯುತ್ತಮವಾದ ಎಲ್ಲ ಫಲವೃಕ್ಷಗಳನ್ನೂ ಅಮೂಲ್ಯವಾದ ವಸ್ತುಸಂಪತ್ತನ್ನೂ ಪಡೆದಿದೆ.

---

1. ನೀ (ಮ)

ಉ॥ ಆ ಧರಣೀವಧೂ ತಿಳಕಮಾಧರಣೀ ಲಲನಾ ಮುಖಾಬ್ಜ ಮಂ
ತಾ ಧರಣೀ ರಮ್ಯೈಕ ನವ ಯೌವನಮಾಧರಣೀ ಪ್ರಿಯಾ ಕಟಾ
ಕ್ಷಾದರ ವಿಭ್ರಮ ಭ್ರಮಣಮಗ್ಗಳದಗ್ಗದ **ಕಮ್ಮೆನಾಡು** ವಿ
ದ್ಯಾಧರ ಲೋಕಮೇನದಱ ಪೋಲ್ವೆಗೆ ಬರ್ಕುಮೆ ಸೋಲದಿರ್ಕುಮೇ ॥ ೪೩ ॥

ಮ॥ ಅತಿವಿಖ್ಯಾತಿಯ ಕಮ್ಮೆ ನಾಡದನುದಾತ್ತಂ ಕಾವ ನೀವಂ ದ್ವಿಜೋ
ನ್ನತ ವಿದ್ಯಾನಿಧಿಗಳ್ಗನೂನನುಪಮಾನಾತೀತ ಧೈರ್ಯಂ ಬಹು
ಶ್ರುತನಾಜ್ಞಾನಿಧಿ ಯಾಜ್ಞವಲ್ಕ್ಯ ಸದೃಶಂ ಕೌಂಡಿನ್ಯ ಗೋತ್ರಂ ನಿರಾ
ಕೃತ ದೋಷ ಸ್ಥಿತಿ **ನಾಗಮಯ್ಯ**ನನಘಂ ಶ್ರೀಭೂಮಿ ದೇವೋತ್ತಮಂ ॥ ೪೪ ॥

ವ॥ ಅಲ್ಲಿಯುಂ

ಕಂ॥ ಪುಟ್ಟಿದುದು **ಪುಂಗನೂರೊಡ**
ವುಟ್ಟಿದುದಪರಿಮಿತ ಪುರುಷ ಗುಣಗಣಮೆರ್ದೆಯೊಳ್
ಪುಟ್ಟಿದುದು ಜಿನ ಮತಂ ಗುಡಿ
ಗಟ್ಟಿದುದಿಳೆಪುಟ್ಟೆ **ನಾಗಮಯ್ಯ**ನಜಯ್ಯಂ ॥ ೪೫ ॥

ಆ ಭೂಮಿ ದೇವ ತನಯರ್
ಪ್ರಾಭವ ಪರರಿರ್ವರತ್ಯಪೂರ್ವ ಶ್ರುತರು
ರ್ವೀ ಭಾರ ಭರಣ ಸಪರತಿ
ಶೋಭಾಸ್ಪದ ತನುಗಳವರೊಳಗ್ರ ತನೂಜಂ ॥ ೪೬ ॥

---

೪೩. ಆ ಭೂದೇವಿಯ ಹಣೆಯ ತಿಲಕದಂತೆ, ಆ ಭೂನಾರಿಯ ಮುಖಕಮಲದಂತೆ, ಆ ಧರಣೀನಾರಿಯ ನವ ತಾರುಣ್ಯದಂತೆ, ಆ ಧರಣೀಲಲನೆಯ ಕಡೆಗಣ್ಣ ನೋಟ ಮತ್ತು ಅಧರದ ಲಾವಣ್ಯದ ಚಲನೆ ಶ್ರೇಷ್ಠವಾದುದಾಗಿರುವಂತೆ ಹಿರಿದಾದ ಕಮ್ಮೆನಾಡು ಇದೆ. ಕಮ್ಮೆನಾಡಿನ ಹೋಲಿಕೆಗೆ ವಿದ್ಯಾಧರ ಲೋಕತಾನೆ ಸಮನಾಗುವುದೆ? ಆ ನಾಡನ್ನು ನೋಡಿ ಸೋಲದವರು ಯಾರು?

೪೪. ಅತಿ ವಿಖ್ಯಾತವಾದ ಈ ಕಮ್ಮೆನಾಡನ್ನು ಉದಾತ್ತನೂ, ರಕ್ಷಕನೂ, ದಾನಿಯೂ, ಬ್ರಾಹ್ಮಣರಿಗೂ ವಿದ್ವಾಂಸರಿಗೂ ಕಡಮೆಯಿಲ್ಲದವನೂ, ಉಪಮಾನಕ್ಕೆ ಮೀರಿದ ಧೈರ್ಯಶಾಲಿಯೂ, ಬಹುಶ್ರುತನೂ, ಆಜ್ಞಾನಿಧಿಯೂ, ಯಾಜ್ಞವಲ್ಕಸದೃಶನೂ, ಕೌಂಡಿನ್ಯ ಗೋತ್ರೋದ್ಭವನೂ, ಪಾಪದೋಷವಿಲ್ಲದವನೂ ಆದ ನಾಗಮಯ್ಯನೆಂಬ ದೇವೋತ್ತಮನು ಪ್ರಸಿದ್ಧನು.

ವ॥ ಅಲ್ಲಿಯೂ

೪೫. ಅಜೇಯನಾದ ನಾಗಮಯ್ಯ ಹುಟ್ಟಿದ್ದು ಪುಂಗನೂರಿನಲ್ಲಿ. ಅವನ ಜತೆಯಲ್ಲಿ ಅಪರಿಮಿತವಾದ ಪುರುಷ ಗುಣಗಣವೂ, ಎದೆಯಲ್ಲಿ ಜಿನಮತವೂ ಹುಟ್ಟಿದುವು. ಅವನು ಹುಟ್ಟಲು ಇಳೆಕೂಡ (ಗುಡಿಕಟ್ಟಿತು) ರೋಮಾಂಚನ ಗೊಂಡಿತು.

೪೬. ಆ ಬ್ರಾಹ್ಮಣನ ಮಕ್ಕಳು ಶ್ರೇಷ್ಠರಾದವರು ಇಬ್ಬರು (ಮಲ್ಲಪಯ್ಯ, ಪುನ್ನಮಯ್ಯ) ಅವರಿಬ್ಬರೂ ಅತ್ಯಪೂರ್ವ ಶ್ರುತರು, ಭೂಭಾರವನ್ನು ಭರಿಸುವ ಸಮರ್ಥರು, ತುಂಬ ಕಾಂತಿಯುಕ್ತವಾದ ದೇಹದವರು. ಅವರಲ್ಲಿ ಹಿರಿಯ ಮಗನಾದ (ಮಲ್ಲಪನು)

ಅಮಿತ ಜ್ಯೋತಿಷ ಶಾಸ್ತ್ರೋ
ಕ್ತಿ ಮಲ್ಲಪಂ ಜಿನಮತಜ್ಞನಾಹಿಮಸೇತು
ಪ್ರಮಿತ ಯಶಂ ಬಭ್ರುವರಾ
ಹಮಿಹಿರ ಶೌನಕ ಸುನಂದ ಗಾರ್ಗ್ಯ ಸಮಾನಂ ॥ ೪೭ ॥

ಉ॥ ಮಲ್ಲಪನಲ್ಲದೊಂ ಪ್ರಭುವೆ ಮಲ್ಲಪನಲ್ಲದೊನತ್ಯುದಾತ್ತನೇ
ಮಲ್ಲಪನಲ್ಲದೊಂ ಶುಚಿಯೆ ಮಲ್ಲಪನಲ್ಲದೊನಿಷ್ಟದಾನಿಯೇ
ಮಲ್ಲಪನಲ್ಲದೊಂ ಗುಣಿಯೆ ಮಲ್ಲಪನಲ್ಲದೊನೇಕ ವಾಕ್ಯನೇ
ಮಲ್ಲಪನಲ್ಲದೊಂ ಸ್ಥಿರನೆ ಮಲ್ಲಪನಲ್ಲದೊನಾರ್ಯ ಪೂಜ್ಯನೇ ॥ ೪೮ ॥

ಕಂ॥ ಈ ನೆಲದೊಳ್ **ಮಲ್ಲಪನ** ಸ
ಮಾನರ್ ನರರೀಗಳಿಲ್ಲ ಮುನ್ನುಳ್ಳೊಡೆ ಕಾ
ನೀನಂ ದಧೀಚಿ ಶಿಬಿ ವೃಷ
ಸೇನಂ ಯಮತನಯನಕ್ಕುಮಲ್ಲದೊನಲ್ಲಂ ॥ ೪೯ ॥

ನಿಜ ಗುರು ಪರೋಕ್ಷ ವಿನಯಮ
ನಜಾತ ರಿಪು ತನ್ನ ತಮ್ಮನುಂ ತಾನುಂ ಭೂ
ಭುಜರಱಿವಿನಂ ಸಮಸ್ತ
ದ್ವಿಜರಱಿವಿನಮಖಿಳ ಮುನಿಪರಱಿವಿನಮಿಾಗಳ್ ॥ ೫೦ ॥

ಉ॥ ಭೂಮಿಗೆ ಕಾವ್ಯರತ್ನಮಿದೆ ಸಾರಮೆನಲ್ ನೆಗಳ್ದೀ **ಪುರಾಣಚೂ
ಡಾಮಣಿ**ಗೆಳ್ತಿಯಿಂ ಕಳಸಮಿಟ್ಟು ಗುರು ಸ್ಥಿರ ಭಕ್ತಿ ಪೂರ್ವಕಂ
ಪ್ರೇಮದೆ ಮಲ್ಲಪಯ್ಯನುಮುದಾತ್ತ ಯಶೋ ನಿಧಿ ಪುನ್ನಮಯ್ಯನುಂ
ತಾಮುಪಕಾರಮಂ ನೆರಪಿದರ್ ಜಗದೊಳ್ ಜಿನಚಂದ್ರದೇವರಾ ॥ ೫೧ ॥

---

೪೭. ಅಮಿತವಾದ ಜ್ಯೋತಿಷ ಶಾಸ್ತ್ರೋಕ್ತಿಯಂತೆ 'ಮಲ್ಲಪನು ಜಿನಮತವನ್ನು ಅರಿತವನು, ಆಸೇತು ಹಿಮಾಚಲದವರೆಗೆ ಹರಡಿದ ಯಶಸ್ಸು ಪಡೆದವನು, ಬಭ್ರುವರಾಹಮಿಹಿರ ಶೌನಕ ಸುನಂದ ಗಾರ್ಗ್ಯ ಸಮಾನನು'.

೪೮. ಮಲ್ಲಪನಲ್ಲದವನು ಪ್ರಭುವೆ? ಮಲ್ಲಪನಲ್ಲದವನು ಅತ್ಯುದಾತ್ತನೆ? ಮಲ್ಲಪನಲ್ಲದವನು ಶುಚಿಯೆ? ಮಲ್ಲಪನಲ್ಲದವನು ಗುಣಿಯೆ? ಮಲ್ಲಪನಲ್ಲದವನು ಒಂದೇ ಮಾತಿನವನೆ? ಮಲ್ಲಪನಲ್ಲದವನು ಸ್ಥಿರ ಸಂಕಲ್ಪನೆ? ಮಲ್ಲಪನಲ್ಲದವನು ಆರ್ಯರಿಂದ ಪೂಜಿಸಿಕೊಳ್ಳುವನೆ? ಮಲ್ಲಪನಲ್ಲದವನು ಇಷ್ಟದಾನಿಯೆ?

೪೯. ಈ ನೆಲದಲ್ಲಿ ಹೆಸರುವಾಸಿಯಾದ ಮಲ್ಲಪನ ಸಮನಾದ ಮಾನವರು ಯಾರೂ ಇಲ್ಲ. ಹಿಂದೆ ಇದ್ದುದಾದರೆ ಕರ್ಣ, ದಧೀಚಿ, ಶಿಬಿ, ವೃಷಸೇನ, ಧರ್ಮರಾಯ–ಅವರುಗಳಾಗಬೇಕೆ ಹೊರತು ಬೇರೆಯವನು ಅಲ್ಲ.

೫೦. ತನ್ನ ಗುರುವಿನ ಪರೋಕ್ಷದಲ್ಲಿ ವಿನಯವನ್ನೂ, ಹಗೆಗಳೇ ಹುಟ್ಟಿಲ್ಲವೆಂದು ಹೆಸರಾಂತ ಮಲ್ಲಪನು ತನ್ನ ತಮ್ಮನೂ ತಾನೂ ದೊರೆಗಳು ತಿಳಿಯುವಂತೆ ಸಮಸ್ತ ಬ್ರಾಹ್ಮಣರೂ ಅರಿಯುವಂತೆ, ಎಲ್ಲ ಮುನಿಗಳೂ ಅರಿಯುವ ಹಾಗೆ ಈಗಲೂ (ಮೆರೆಯುತ್ತಿದ್ದಾನೆ).

೫೧. ಭೂಮಿಗೆ ನಿಜವಾದ ಕಾವ್ಯರತ್ನವೆಂದರೆ ಈ ಅನರ್ಘ್ಯವಾದ ಶಾಂತಿಪುರಾಣವೆಂಬ ಪುರಾಣ ಚೂಡಾಮಣಿ. ಇದು ಅತ್ಯಂತ ಸಾರವತ್ತಾದ ಕಾವ್ಯವೆಂದು ಪ್ರಸಿದ್ಧವಾಗಿದೆ. ಜಿನಚಂದ್ರದೇವರ ಶಿಷ್ಯರಾದ ಮಲ್ಲಪಯ್ಯ ಮತ್ತು ಅವನ ತಮ್ಮನಾದ ಪುನ್ನಮಯ್ಯ–ಇವರಿಬ್ಬರೂ ಗುರುಗಳ ಉಪಕಾರವನ್ನು, ಈ ಕಾವ್ಯರತ್ನವಾದ ಪುರಾಣವನ್ನು ಪ್ರೀತಿಯಿಂದ ಕಳಶವಿಟ್ಟು ಗುರುವಿನಲ್ಲಿದ್ದ ಸ್ಥಿರವಾದ ಭಕ್ತಿಯಿಂದಲೂ ಪ್ರೇಮದಿಂದಲೂ ಪೂಜಿಸಿ ಹೇಳಿಸುವುದರ ಮೂಲಕವಾಗಿ ತೋರಿಸಿದ್ದಾರೆ.

ಕಂ॥ **ಶಾಂತಿಪುರಾಣದ** ನಿರ್ವಾ
ಣಂ ತಕ್ಕುದೆ ಮಲ್ಲಪಯ್ಯನಿಂ ತದನುಜನಿಂ
ಶಾಂತಿ ಧನ ಪುನ್ನಮಯ್ಯನಿ
ನೇಂ ಕಮ್ಮಿತ್ತಿರ್ವರುಂ [1]ಕೃತಾರ್ಥರೊ[1] ಜಗದೊಳ್ ॥ ೫೨ ॥

ಅವರಿರ್ವರ ಪುಣ್ಯಂ ತ್ರೈ
ಭುವನದೊಳಮಗಣ್ಯಮಂತು ಸಲೆ ನೋಂತವರಾರ್
ಭವ ಜಲನಿಧಿ ಜಲದೊಳ್ ಮೂ
ಡುವ ಮು[ಟು]ಗುವ ನಡೆವ ನುಡಿವ ಸಂಸೃತಿಗತರೊಳ್ ॥ ೫೩ ॥

ಚಂ॥ ಅವರ ಪೊಗೞ್ತೆಗತ್ಯಧಿಕಮಪ್ಪ ನೆಗೞ್ತೆಗೆ ನೋಂತನಾವೊನಿ
ನ್ನವರ ಬುಧೋಕ್ತಮಪ್ಪ ಗುರು ಭಕ್ತಿಗೆ ಸೂಕ್ತಿಗೆ ತಕ್ಕನಾವೊನಾ
ರವರ ಜಿನಾಗಮ ಕ್ರಮದಣುವ್ರತಮಂ ಸಲಿಸುತ್ತುಮಿರ್ಪರೆಂ
ದವಿರತಮಗ್ರಜಾನುಜರನೇಂ ಪೊಗೞ್ದಿಪ್ಪುದೊ ಮೂಱು ಲೋಕಮುಂ ॥ ೫೪ ॥

ತವದ ಪಿರಿದಱ್ತಿಯಿಂದಿದ
ನವರಿರ್ವರುಮಱಿಯೆ ನೆಱೆಯೆ ಪೇೞಿಸಿ ಜಿನಚಂ
ದ್ರವರಮುನೀಂದ್ರರ ಪೆಸರೊಳ್
[2]ಸವೆಯಿಸಿ[2]ದರ್ ನೆಗೞ್ದಖಂಡ ಭೂಮಂಡಳದೊಳ್ ॥ ೫೫ ॥

(ಇಂತು ಪೀಠಿಕೆ)

---

೫೨. ಶಾಂತಿಪುರಾಣದ ನಿರ್ವಾಣವು ಮಲ್ಲಪಯ್ಯನಿಗಿಂತಲೂ ಅವನ ತಮ್ಮನಾದ ಶಾಂತಿಧನನಾದ ಪುನ್ನಮಯ್ಯನಿಗಿಂತಲೂ ದೊಡ್ಡದೇ ಎನ್ನುವಂತೆ ಅವರಿಬ್ಬರೂ ಜಗತ್ತಿನಲ್ಲಿ ಅದೇನು ಕೃತಾರ್ಥರೋ !

೫೩. ಅವರಿಬ್ಬರ ಪುಣ್ಯ ಮೂರು ಲೋಕಗಳಲ್ಲಿ ಲೆಕ್ಕಕ್ಕೆ ಮೀರಿದ್ದು. ಸಂಸಾರ ಸಾಗರದಲ್ಲಿ ಹುಟ್ಟುವ ಸಾಯುವ ನಡೆಯುವ ನುಡಿಯುವ ಜೀವಗಳಲ್ಲಿ ಅವರ ಹಾಗೆ ಚೆನ್ನಾಗಿ ನೋಂತವರು ಯಾರು ?

೫೪. ಅವರ ಹೊಗಳಿಕೆಗೆ, ಅತಿ ಹೆಚ್ಚಿನದಾದ ಕೀರ್ತಿಗೆ ವ್ರತಗೈದವನು ಯಾರು ? ಇನ್ನು ಅವರ ಬಲ್ಲಿದರು ಸಾರುವ ಗುರುಭಕ್ತಿಗೆ ಒಳ್ಳೆಯ ಮಾತಿಗೆ ತಕ್ಕವನು ಯಾರು ? ಅವರಂತೆ ಜಿನಗಮಗಳಲ್ಲಿ ಹೇಳಿದ ಕ್ರಮದಂತೆ ಅಣುವ್ರತಗಳನ್ನು ಸಲಿಸುತ್ತಿರುವವರು ಯಾರು ? — ಎಂಬುದಾಗಿ ಅಣ್ಣನನ್ನೂ ತಮ್ಮನನ್ನೂ ಮೂರು ಲೋಕವೂ ಅದೇನು ಹೊಗಳುತ್ತಿದೆಯೋ !

೫೫. ಬತ್ತದಿರುವ ಹೆಚ್ಚಾದ ಪ್ರೀತಿಯಿಂದ ಇದನ್ನು ಅವರಿಬ್ಬರೂ ತಿಳಿಯಲು ಪೂರ್ಣವಾಗಿ ಹೇಳಿಸಿ ಜಿನಚಂದ್ರ ಮುನೀಂದ್ರರ ಹೆಸರಿನಲ್ಲಿ ಮಾಡಿಸಿದರು ಈ ಪ್ರಸಿದ್ಧವಾದ ಅಖಂಡ ಭೂಮಂಡಲದಲ್ಲಿ.

(ಇಲ್ಲಿಗೆ ಪೀಠಿಕೆ)

ಇನ್ನು ಕಥೆಯ ಪ್ರಾರಂಭ

---

1. ಕೃತಜ್ಞರೊ (ಅ) 2. ನೆಮಿ (ಅ)

ಕಥಾಪ್ರಾರಂಭಂ

ಕಂ॥ ಆ ಕಥೆ [1]ಮತ್ತೆಂತೆಂ[1]ದೊಡೆ
ಭೀಕರ ಕರಿ ಮಕರ [2]ನಿಕರ ಭಿನ್ನ ತರಂಗಾ[2]
ನೀಕ ಲವಣಾಂಬುರಾಶಿ [3]ಪ್ರ
ತಾಕೃತಿ[3] ಕಮನೀಯಮುಂಟು **ಜಂಬೂದ್ವೀಪಂ** ॥ ೫೬ ॥

ತನ್ಮಧ್ಯದೊಳಿರ್ಪುದು ರುಚಿ
ವನ್ಮೇರು ನಗೇಂದ್ರಮದಱ ಮೂಡಣ ದೆಸೆಯೊಳ್
ಮನ್ಮಥ ನೃಪಾಭಿನವ ರಾ
ಜ್ಯೋನ್ನದ ಮಹಿ ದೇಹಮುಂಟು ಪೂರ್ವವಿದೇಹಂ ॥ ೫೭ ॥

ವ॥ ಎಂಬಿನಂ ನೆಗೞ್ದ ಪೂರ್ವವಿದೇಹದೊಳ್ ಕಾಮರಾಗ ಕಮನೀಯ ಮನೋರಥ ಜನ್ಮಭೂಮಿಯಪ್ಪ ವತ್ಸಕಾವತೀವಿಷಯ ದಾವಾವೆಡೆಯೊಳಂ ನಿಮ್ನ ಪ್ರದೇಶಂದಪ್ಪದೆ ಪಥಿಕ ಜನದ ಕಣ್ಗಂ ಮನಕ್ಕಂ ಪಸರಂ ಬಡೆದು ನೆಱೆ ಸೊಗಯಿಸುವ ಸರಸ ಸರಸೀರುಹಾಕರಂಗಳೊಳ್—

ಚಂ॥ ವಿದಳಿತ ಹೇಮ ತಾಮರಸ ಸಾಂದ್ರ ಲಸನ್ಮಕರಂದ ಸಕ್ತ ಷ
ಟ್ಪದತತಿ ಪಾಯ್ದು ಪಾಯ್ದು ಸರಸೀರುಹದಿಂ ಸರಸೀರುಹಕ್ಕೆ ಪೋ
ಲ್ಪುದು ಮಧುವುಂ ಮನೋಭವನುಮಟ್ಟಿಯೊಳಾಡುವ ಪೊನ್ನಬಟ್ಟನೊ
ರ್ಮೊದಲೆ ಮನೋಜ ಕಾಂತೆ ಮುಳಿಸಿಂ ದೆಸೆಗೋವದೆ ಸೂಸುವಂದಮಂ ॥ ೫೮ ॥

ವ॥ ಮತ್ತಮಾನಾಡೂರೂರ್ದಪ್ಪದೆ ವಿಚಿತ್ರ ಕ್ಷೇತ್ರಂಗಳೊಳ್ ಪವಿತ್ರ ಪುಣ್ಯಬೀಜ ಪ್ರರೋಹದ ಬೆಳಸಿನ ಸಿರಿಯ ಕಣ್ಬೊಲಂಗಳೆನಿಸುವ ಕೆಯ್ವೊಲಂಗಳೊಳ್ —

---

೫೬. ಆ ಕಥೆಯು ಮತ್ತೆ ಹೇಗೆಂದರೆ, ಭಯಂಕರವಾದ ಆನೆ ಮೊಸಳೆಗಳ ಸಮೂಹದಿಂದ ಭೇದಿಸಿದ ತೆರೆಮಾಲೆಗಳ ಸಮೂಹದಿಂದ ಕೂಡಿರುವ ಲವಣ ಸಮುದ್ರದಿಂದ ಸುತ್ತುವರಿದ ಮನೋಹರವಾದ ಜಂಬೂದ್ವೀಪವಿದೆ.

೫೭. ಅದರ ಮಧ್ಯಭಾಗದಲ್ಲಿ ಮನೋಹರವಾದ ಮೇರುಪರ್ವತವಿದೆ. ಅದರ ಮೂಡಣ ದಿಕ್ಕಿನಲ್ಲಿ ಮನ್ಮಥನ ಹೊಸ ಸಾಮ್ರಾಜ್ಯದಿಂದ ವೈಭವವನ್ನು ಹೊಂದಿರುವ ಪೂರ್ವವಿದೇಹವೆಂಬ ದೇಶವಿದೆ.

ವ॥ ಈ ರೀತಿ ಪ್ರಸಿದ್ಧವಾದ ಪೂರ್ವವಿದೇಹ ಕ್ಷೇತ್ರದಲ್ಲಿ ಶೃಂಗಾರ ರಸಕ್ಕೆ ಮನೋಹರವಾದ ಮತ್ತು ಮನೋರಥಕ್ಕೆ ನೆಲೆಯಾದ ವತ್ಸಕಾವತೀ ದೇಶವಿದೆ. ಅದರ ಎಲ್ಲಾ ಕಡೆಯಲ್ಲಿಯೂ, ತಗ್ಗಾದ ರಮ್ಯಪ್ರದೇಶಗಳಿದ್ದು ಪ್ರಯಾಣಿಕರ ಕಣ್ಣಿಗೂ, ಮನಸ್ಸಿಗೂ ಆನಂದವನ್ನುಂಟುಮಾಡಿ ಅತಿಮನೋಹರವಾಗಿರುವ ಕಮಲ ಸರೋವರಗಳಲ್ಲಿ

೫೮. ಅರಳಿದ ಸುವರ್ಣ ಕಮಲದ ದಟ್ಟವಾದ ಹೂವಿನ ರಸದಲ್ಲಿ ಆಸಕ್ತಿಯುಳ್ಳ ಭ್ರಮರಗಳ ಸಮೂಹವು ಮೇಲೆಯೆರಗಿ ಕಮಲದಿಂದ ಕಮಲಕ್ಕೆ ಹಾರಾಡುತ್ತಿದ್ದುವು. ಇದು ಮನ್ಮಥನು ಪ್ರೀತಿಯಿಂದ ಆಡುವ ಚಿನ್ನದ ಚಂಡನ್ನು ಒಂದೇ ಸಮನೆ ರತೀದೇವಿಯು ಕೋಪದಿಂದ ದಿಕ್ಕು ದಿಕ್ಕಿಗೆ ಎಸೆಯುತ್ತಿರುವಳೋ ಎಂಬಂತೆ ಕಾಣುತ್ತದೆ.

ವ॥ ಮತ್ತು ಆ ದೇಶದ ಗ್ರಾಮಗಳಲ್ಲಿ ತಪ್ಪದೆ ವಿಚಿತ್ರವಾದ ಕ್ಷೇತ್ರಗಳಲ್ಲಿ ಪವಿತ್ರವಾದ ಪುಣ್ಯಾಂಕುರದ ಬೆಳಸಿನ ಸಂಪತ್ತಿನಿಂದ ಕಣ್ಣಿಗೆ ಆನಂದವನ್ನುಂಟುಮಾಡುವ ಗದ್ದೆಗಳಲ್ಲಿ

---

1. ಯೆಂತೆ (ಕಾ) 2. ದಯುಕ್ಕೀಕರ ತುಂತುತ್ತುರ್ಗಷಾ (ಕಾ) 3. ಕೃತಾಕೃತ (ಕಾ)

ಕಂ॥ ಅಮಿತ ಗುಣವರ್ಣನ ಪ್ರ
ಕ್ರಮಕ್ಕೆ ಸಲೆ ನಾಣ್ಚಿ ತಲೆಯನೆಱಗಿದ ಸುಜನೋ
ತ್ತಮರಂತೆ ಭರದಿನೆಱಗಿದು
ವಮೇಯ ಪರಿಪಕ್ವ ಗಂಧಶಾಲಿ ವನಂಗಳ್ ॥ ೫೯ ॥

ತತ್ಕಳಮ ಕಣಿಶ ಕಬಳ ಸ
ಮುತ್ಕ ಶುಕ ಪ್ರಕರಮೆಸೆಯೆ ಪೊಸ ನೇತ್ರದ ಚಂ
ಚತ್ಕಂಚುಕಮನಿಳಾವಿಳ
ಸತ್ಕಾಮಿನಿ ತೊಟ್ಟ ಪೋಲ್ವೆಯಂ ಪುಟ್ಟಿಸುಗುಂ ॥ ೬೦ ॥

ವ॥ ಮತ್ತಂ [1]ತದುಪಾಂತ[1]ದೊಳ್—
ಬಹು[2]ಪೋಷಣದಿಂ ಮಾ[2]ವಿನ
ಸಹಕಾರದ ಸೊನೆಯ ಸೋನೆ ಬಳೆಯಿಸೆ [3]ಬ[3]ಳೆಗುಂ
ಮಹಿಯೆನೆ ಬಣ್ಣಿಸುವ ಪಿತಾ
ಮಹಂಗಮರಿದೆಗ್ಗ ಮೊಗ್ಗೆ ನಿನಗಮದೆನಗಂ ॥ ೬೧ ॥

ವ॥ ಅದಲ್ಲದೆಯುಂ—
ನವ ಶಶಿ ಕಳೆಗಳನಮೃತ
ದ್ರವಂಗಳೊಳ್ ತೀವಿ ತೀವಿ ನಿಱಿಸಿದರೆನೆ ತ
ದ್ಧವಳೇಕ್ಷು ಲಕ್ಷ್ಮಿ ನಡೆ ನೋ
ಡುವ ಜನಪದ ಜನದ ಮನಮನುಱೆ ಸೆಱೆವಿಡಿಗುಂ ॥ ೬೨ ॥

ವ॥ ಎನಿಸಿ ದುಗ್ಧಾಬ್ಧಿ ಫೇನ ಪಿಂಡೋಪಮಾನಮುಂ ಸುಧಾಸಮುದ್ರಲಲಿತಲಹರಿಕಾ ಸಮಾನಮುಮಪ್ಪ ಬಿಳಿಯ ಕಬ್ಬಿನ ಕೆಯ್ಗಳೊಳೆರಡುಂ ದೆಸೆಗಳೊಳಂ ಮನೋಜ ರಾಜ ರಾಜದ್ರಾಜಧಾನೀ ನೀಕಾಶಮಪ್ಪುದ್ಯಾನಂಗಳೊಳ್—

---

೫೯. ಹೆಚ್ಚಾದ ಗುಣಗಾನದ ಸರಣಿಗೆ ಬಹುವಾಗಿ ನಾಚಿಕೊಂಡು ತಲೆಯನ್ನು ತಗ್ಗಿಸಿದ ಉತ್ತಮ ಜನರಂತೆ ತುಂಬಿ ಪರಿಪಕ್ವವಾದ ಗಂಧಶಾಲಿ ಭತ್ತವು ಬೆಳೆದು ನೆಲದವರೆಗೂ ಬಗ್ಗಿದ್ದಿತು.

೬೦. ಈ ಗಂಧಶಾಳಿಯ ತೆನೆಗಳ ಸಮೂಹವನ್ನು ತಿನ್ನುವುದಕ್ಕೆ ಆಸೆಪಟ್ಟ ಗಿಳಿಗಳು ಮನೋಹರವಾಗಿರಲು ಹೊಸ ಕಣ್ಣಿನ ಚಂಚಲವಾದ ಕಂಚುಕವನ್ನು ಮನೋಹರಳಾದ ಭೂದೇವಿಯು ತೊಟ್ಟ ಕುಪ್ಪಸದಂತೆ ಹೋಲುತ್ತಿತ್ತು.

ವ॥ ಅದರ ಸಮೀಪದಲ್ಲಿ

೬೧. ಹೆಚ್ಚಾಗಿ ರಕ್ಷಿಸಿದ ಸಿಹಿಮಾವಿನ ರಸದ ಮಳೆಯು ಸುತ್ತಲೂ ಆವರಿಸುತ್ತಿರಲು ಬೆಳೆಯುತ್ತಿರುವ ಆ ಭೂಮಂಡಲವನ್ನು ವರ್ಣಿಸುವುದಕ್ಕೆ ಬ್ರಹ್ಮನಿಗೂ ಸಾಧ್ಯವಿಲ್ಲ. ಎಂದಮೇಲೆ ನಮಗೂ ನಿಮಗೂ ಅದು ಸಾಧ್ಯವೇ ?!

ವ॥ ಅದಲ್ಲದೆ

೬೨. ಹೊಸದಾದ ಚಂದ್ರನ ಕಲೆಗಳ ಕಾಂತಿಯನ್ನು ಅಮೃತದ ರಸದಲ್ಲಿ ತುಂಬಿ ತುಂಬಿ ನಿಲ್ಲಿಸಿರುವರೋ ಎಂಬಂತೆ ಆ ಬಿಳಿಯ ಕಬ್ಬಿನ ಗದ್ದೆಯೆಂಬ ಲಕ್ಷ್ಮಿಯು ಚೆನ್ನಾಗಿ ನೋಡುತ್ತಿರುವ ಹಳ್ಳಿಯ ಜನರ ಮನಸ್ಸನ್ನು ಹೆಚ್ಚಾಗಿ ಸೆರೆಹಿಡಿಯುತ್ತಿದೆ.

ವ॥ ಎನ್ನಿಸಿ ಕ್ಷೀರಸಮುದ್ರದ ನೊರೆಯ ಸಮೂಹದಂತಿರುವ ಅಮೃತ ಸಮುದ್ರದ ಕೋಮಲವಾದ ತೆರೆ ಮಾಲೆಗಳ ಸಮಾನವೆನಿಸುವ ಬಿಳಿಯ ಕಬ್ಬಿನ ಗದ್ದೆಗಳಲ್ಲಿ ಎರಡು ಕಡೆಗಳಲ್ಲಿಯೂ ಮನ್ಮಥ ರಾಜನ ಪ್ರಕಾಶಮಾನವಾದ ರಾಜಧಾನಿಯ ಸಮೀಪದಲ್ಲಿರುವ ಉದ್ಯಾನವನಗಳಲ್ಲಿ

---

1. ತದನುಪಾಂತರ (ಅ) 2. ಷೋಷಣಮನಿಮ್ಮಾ (ಅ) ಪೋಷವಾನಿಂ, ವರ್ಷಮನಿಂ (ಕಾ) ಪೋಷಣದಿಮ್ಮಾ (ಮ) 3. ಬೆ (ಕಾ)

ಉ॥ ಮೆಯ್ವಸ[1]ಮೊ[1]ಂದೆ ಪೂವಿನೊಳೆ ಪೋ[2]ಗಿ ಮೊಗಂ ಮುರಿ[2]ದಳ್ಳೆಗೊಂಬಿನೊಳ್
ಪಾಯ್ವುದುಮೊಂದೆ ಪಣ್ಣ ರಸಮಂ ಸವಿದಾಱದೆ ಚಂಚುವಂ ಕೆಲ
ಕ್ಕುಯ್ವುದುಮೊಂದೆ ಕೋರಕದೊಳಟ್ಕಮೆ ವೆತ್ತವಚತ್ತು ಲಂಘನಂ
ಗೆಯ್ವುದುಮಾದುದಾ ಮಧುಪ ಕೀರ ಪಿಕಾಳಿಗೆ ನಂದನಂಗಳೊಳ್ ॥ ೬೩ ॥

ಚಂ॥ ನಯಮಳವಟ್ಟ ಪಚ್ಚೆ ಸಹಕಾರದೊಳಿಂಗುಳಿಕಂ ತಳಿರ್ತಶೋ
ಕೆಯೊಳರಿದಾಳ ಮುಳ್ಳಲರ್ದ ಸಂಪಗೆಯೊಳ್ ಕಡುಗರ್ಪು ಭೃಂಗ ಕೋ
ಟಿಯೊಳೆಸೆದಿರ್ದ ನೀಲಿ ಗಿರಿಮಲ್ಲಿಕೆಯೊಳ್ ಸಮನಾಗೆ **ಚೀರಘು**
ಟ್ಟಯೆ ಬರೆದಿಟ್ಟ ಚಿತ್ರದ ಬಸಕ್ಕೆಣೆಯಾಯ್ತು ಬನಂ ವಿದೇಹದೊಳ್ ॥ ೬೪ ॥

ಕಂ॥ ಇಂತಿನಿವಿರಿದಗ್ಗಳದ ದ
ಗುಂತಿಯ ನೊಳಕೊಂಡು ವಿಷಯ ವರ ವನಿತೆಯ ಸೀ
ಮಂತದ ಮಣಿ ಕಾಂತಿಗೆ ಮು
ಯ್ಯಾಂತುದು ಚೆಲ್ವಿಂ **ಪ್ರಭಾಕರೀ**ನಾಮಪುರಂ ॥ ೬೫ ॥

ಚಂ॥ ಅದನೊಳಕೊಂಡ ಪೊನ್ನ ಪೊಸಗೋಂಟೆ ಪುರಾಂಗನೆಯುಟ್ಟ ಹೇಮವ
ರ್ಣದ ವಸನಂ ತದೀಯ ರುಚಿ ವಿಚ್ಛುರಿತಂ ಪರಿಖಾಚ್ಛವಾರಿ ಕ
ಟ್ಟಿದ ಕಟಿಸೂತ್ರಮಂಬುವಿಹಗಾವಳಿ ಸೂಸಕಮಾಗೆ ಗೆಲ್ದು ನಾ
ಕದ ನರಲೋಕದೊಳ್ಪನದು ಪೇಟ್ ಸೆಱೆಗೊಂಡುದೊ ಸೂಱೆಗೊಂಡುದೊ ॥ ೬೬ ॥

ಕಂ॥ ಆಪೊಲಲನಾಳ್ದನಖಿಳಮ
ಹೀಪತಿ ಮದದಂತಿ ದಂತ ಖಂಡನೆಗೆ ಸಮಾ
ರೋಪಿತ ಕೃಪಾಣ ಧಾರಾ
ವ್ಯಾಪಾರಂ **ಸ್ತಿಮಿತಸಾಗರಂ** ಮಂಡಳಿಕಂ ॥ ೬೭ ॥

---

೬೩. ಒಂದೇ ಹೂವಿನಲ್ಲಿ ತನ್ನ ಶರೀರದ ಆಲಸ್ಯವೆಲ್ಲವೂ ಹೋಗುತ್ತಿರಲಾಗಿ ಅಲ್ಲಿ ನಿಲ್ಲದೆ ಕವಲುಕೊಂಬೆಯಲ್ಲಿ ದುಂಬಿಯು ಹಾರಿಹೋಗುತ್ತದೆ. ಒಂದೇ ಹಣ್ಣಿನ ರಸವನ್ನು ಸವಿದು ಬೇಸರಪಟ್ಟು ತನ್ನ ಕೊಕ್ಕನ್ನು ಗಿಳಿಯು ಒಂದು ಪಕ್ಕಕ್ಕೆ ಹಾಕುತ್ತದೆ. ಒಂದೇ ಚಿಗುರಿನಲ್ಲಿ ತುಷ್ಟಿಯನ್ನು ಹೊಂದಿ ಕೋಗಿಲೆಯು ಅದೇ ನಂದನವನದಲ್ಲಿ ಬೇರೆ ಕಡೆಗೆ ಹಾರುತ್ತಿರುತ್ತದೆ.

೬೪. ಕ್ರಮವಾಗಿ ಹೊಂದಿಕೊಳ್ಳುವ ಹಸರು ಬಣ್ಣವು ಮಾವಿನ ಗಿಡದಲ್ಲಿಯೂ, ಕೆಂಪು ಬಣ್ಣವು ಚಿಗುರಿದ ಅಶೋಕ ಮರದಲ್ಲಿಯೂ, ಹೆಚ್ಚಾಗಿ ಅರಳಿದ ಸಂಪಿಗೆಯಲ್ಲಿ ಹಳದಿ ಬಣ್ಣವೂ, ಭ್ರಮರಗಳ ಸಮೂಹದಲ್ಲಿ ಹೆಚ್ಚು ಕೆಂಪು ಬಣ್ಣವೂ, ಉತ್ತಮವಾದ ನೀಲಿ ಬಣ್ಣವು ಬೆಟ್ಟದ ಮಲ್ಲಿಗೆಗಳಲ್ಲಿಯೂ ಸಮನಾಗಿರಲು ಚಿತ್ರಕಾರನು ವಿದೇಹದಲ್ಲಿ ಬರೆದಿಟ್ಟ ಚಿತ್ರದ ವನಕ್ಕೆ ಈ ವನವು ಸಮಾನವಾಗಿತ್ತು.

೬೫. ಹೀಗೆ ಇಷ್ಟು ಹಿರಿದಾಗಿ ಹೆಚ್ಚಾದ ವೈಭವವನ್ನು ಒಳಗೊಂಡು ದೇಶವೆಂಬ ಮನೋಹರ ಸ್ತ್ರೀಯ ತಲೆಯ ರತ್ನದ ಕಾಂತಿಗೆ ಮುಯ್ಯನ್ನು ಪಡೆದಂತೆ ಪ್ರಭಾಕರಿಯೆಂಬ ಹೆಸರಿನ ಪಟ್ಟಣವು ಮನೋಹರವಾಗಿತ್ತು.

೬೬. ಈ ಪಟ್ಟಣವನ್ನು ಸುತ್ತುವರಿದ ಹೊನ್ನಿನ ಹೊಸ ಕೋಟೆಯು ಪಟ್ಟಣವೆಂಬ ಸ್ತ್ರೀಯು ಉಟ್ಟ ಚಿನ್ನದ ಬಣ್ಣದ ಬಟ್ಟೆಯಂತೆಯೂ, ಇದರ ಕಾಂತಿಯಿಂದ ಪ್ರಜ್ವಲಿಸುತ್ತಿರುವ ಅಗಳಿನ ಸ್ವಚ್ಛವಾದ ನೀರು ಡಾಬನ್ನೂ ನೀರಿನ ಪಕ್ಷಿಗಳ ಸಮೂಹವು ಚಿತ್ರವರ್ಣದ ಮೇಲ್ಮುಸುಕಾಗಿಯೂ ಇರಲು ಸ್ವರ್ಗದ ಮತ್ತು ಮನುಷ್ಯಲೋಕದ ಸೌಂದರ್ಯ ವನ್ನು ಗೆದ್ದು ಸೂರೆಗೊಂಡಿತೋ ಅಥವಾ ಸೆರೆಗೊಂಡಿತೋ ಹೇಳಿ ಎನ್ನುವಂತೆ ಇತ್ತು.

೬೭. ಆ ಪಟ್ಟಣವನ್ನು ಸಮಸ್ತರಾಜರೆಂಬ ಮದಿಸಿದ ಆನೆಗಳ ಕೊಂಬುಗಳನ್ನು ಕತ್ತರಿಸುವುದಕ್ಕೆ ಎತ್ತಿ ಹಿಡಿದ ಕತ್ತಿಯ ಬಾಯಿಗೆ ಸಮಾನವಾದ "ಸ್ಥಿಮಿತಸಾಗರ" ಎಂಬ ಮಂಡಲಿಕನು ಆ ಪಟ್ಟಣವನ್ನು ಆಳುತ್ತಿದ್ದನು.

---

1. ಪೊ (ಶ) 2. ಗೆತೞಂದಿರಿ (ಮ)

ಉ॥ ಚಾಗದ ತೋರ್ಕೆಗಂ ನೆಗಟ್ದ ಬೀರದಳುರ್ಕೆಗವೊಳ್ಪನಪ್ಪುದು
ದ್ಯೋಗದಮರ್ಕೆಗಂ ಸಿರಿಯ ಸಾರ್ಕೆಗಮಾಯತಿಯಿರ್ಕೆಗಂ ಪೆಱರ್
ಮೇಗೆನಲಿಲ್ಲದಂತು ನೆಗಟ್ದಿರ್ದುದಱಿಂ ಮನುಜೇಂದ್ರ ಕೋಟಿ ಕೋ
ಟೀ ಗುಣ ಕೋಟಿಗಾ ಸ್ತಿಮಿತಸಾಗರನಾಗರಮಾಗದಿರ್ಕುಮೇ ॥ ೧೮ ॥

ಕಂ॥ ಪರಿಜನಮನಳವಿಯಱಿದಾ
ಳರಸೆಂಬುದನಱಿಯಲಾಗದಂತಿರೆ ಪೊರೆದಾ
ನರಪತಿಯ ಗುಣಾಗುಣದಂ
ತರಮುಱಿವುದನಾಳ ಸಿರಿಯ ಲೀಲೆಯೆ [1]ಪೇಟ್ಗುಂ[1] ॥ ೧೯ ॥

ಮದ ವಿರಹಿತನೆನಿಸಿಯುಮಮಿ
ತ ದಾನಿ ಗುಣಗಣದ ಪರಮಪದವಿಗೆ ಮೊದಲೆಂ
ಬುದನೆನಿಸಿ ನೆಗಟ್ದಮಾ ನೃಪ
ನುದಾತ್ತ ಗುಣಗಣ[2]ದ[2] ತುತ್ತತುದಿಯೊಳನೂನಂ ॥ ೨೦ ॥

ತನುವೆನಿತನಿತುಂ ಮನವೆನಿ
ತನಿತುಂ ಮೃದು ಮಧುರ ವಚನಮೆನಿತನಿತುಂ ತೆ
ಕ್ಕನೆ ತೀವಿ ಸುಧರ್ಮ ರಸಾ
ಯನವೊದವಿದಂದಮನಾ ನೃಪೇಂದ್ರಂ ಪೋಲ್ತಂ ॥ ೨೧ ॥

---

೧೮. ದಾನದ ಪ್ರಶಂಸೆಯಲ್ಲಿಯೂ ಪ್ರಸಿದ್ಧವಾದ ಪರಾಕ್ರಮದ ಆಧಿಕ್ಯಕ್ಕೂ, ಸೌಜನ್ಯದಿಂದ ಕೂಡಿದ ಉದ್ಯೋಗದ ಹೆಚ್ಚಿಕೆಗೂ, ಸಂಪತ್ತಿನ ಸಂಭಾವ್ಯತೆಗೂ, ವರಮಾನದ ರೀತಿಗೂ, ಬೇರೆಯವರು ತನಗಿಂತಲೂ ಹೆಚ್ಚಿನವರಲ್ಲ ಎಂಬಂತೆ ಪ್ರಸಿದ್ಧನಾಗಿರುವುದರಿಂದ ಕೋಟ್ಯಾನುಕೋಟಿ ರಾಜರ ಗುಣ ಸಮೂಹಕ್ಕೆ ಆ ಯತಿ ಸ್ತಿಮಿತಸಾಗರನು ಆಕರನಾಗದೇ ಇರುತ್ತಾನೆಯೇ ?

೧೯. ಪರಿಜನರ [ಸುತ್ತಲೂ ಇರುವವರು] ಶಕ್ತಿಯನ್ನು ತಿಳಿದು ಇವನು ಸೇವಕ, ಇವನು ದೊರೆ ಎಂಬುದನ್ನು ತಿಳಿಯಲಾಗದಂತೆ ರಕ್ಷಿಸಿದ ಆ ರಾಜನ ಗುಣಾನುಗುಣದ ಅಂತರವನ್ನು ತಿಳಿಯುವುದಕ್ಕೆ ಬೇರೆ ಆಧಾರ ಬೇಡ. ಸೇವಕರ ಸಂಪತ್ತಿನ ವೈಭವವೇ ತೋರುತ್ತದೆ.

೨೦. ಅಹಂಕಾರರಹಿತನೆನಿಸಿಕೊಂಡರೂ ಹೆಚ್ಚು ದಾನಮಾಡತಕ್ಕವನೂ, [ಮದಜಲವಿಲ್ಲದಿದ್ದರೂ ಹೆಚ್ಚು ಮದದಾರೆ ಇರುವುದು] ಗುಣ ಸಮೂಹದ ಉತ್ತಮವಾದ ಸಂಪತ್ತಿಗೆ ಮೊದಲಿಗನೆನಿಸಿಕೊಂಡು ಪ್ರಸಿದ್ಧಿ ಪಡೆದು ಆ ರಾಜನು ಉದಾತ್ತ ಗುಣಗಳುಳ್ಳವರ ಶ್ರೇಣಿಯಲ್ಲಿ ಕುಂದಿಲ್ಲದೆ ಮೊಟ್ಟಮೊದಲಿಗನಾಗಿದ್ದನು.

೨೧. ಶರೀರದ ಕಾರ್ಯವು ಎಷ್ಟಿರುತ್ತದೆಯೋ ಅಷ್ಟು ಮನಸ್ಸಿನಿಂದ ಕೂಡಿ ಮೃದುಮಧುರವಾದ ವಚನ ವಿನ್ಯಾಸಗಳಿಂದ ಪೂರ್ಣವಾಗಿ ತುಂಬಿ ಶ್ರೇಷ್ಠವಾದ ಧರ್ಮ ರಸಾಯನವು ಕೂಡಿರುವಂತೆ ಆ ರಾಜನು ಇದ್ದನು. [ತ್ರಿಕರಣ ಶುದ್ಧಿಯನ್ನು ಹೊಂದಿದ್ದನು.]

---

1. ತೋರ್ಕುಂ (ಮ)   2. ರ (ಮ)

ವ॥ ಅಂತಖಿಳ ಭುವನ ತಲ ತಿಲಕ (ವಿಲಾಸ) ವಿಲಸಿತ ನಿಲಯನುಮುಪಹಸಿತ ಭೂಚರ ಖೇಚರ ರಾಜಲೀಲಾ ವಿಲಾಸ ವಿಭವನು ಮುಪಹಸಿತ ಸನತ್ಕುಮಾರ ನಳಕೂಬರ ಮಕರಕೇತು ಸೌಂದರ್ಯನುಂ, ವಿಸರ್ಜಿತ ನಿರವಶೇಷ ನಿಳಿಂಪನಾಥ ವಿಭವನುಮಪಾಕೃತ ಪ್ರಸೃಷ್ಟಾಷ್ಟ ಲೋಕಪಾಲ ಪರಿಪಾಲಿತ ಸಾಹಸನುಮುಪಾಸ್ತ ಸಮಸ್ತ ರಾಜನ್ಯಕ ಧವಳಾತಪತ್ರ ಪುಂಡರೀಕ ಷಂಡನುಮವನತ ನಾನಾಸೂನ ದೇಶಾಧೀಶ ಮಣಿ ಮಕುಟ ಮಕರಿಕಾ ಚ್ಚುರಿತ ಚರಣ ನಖ ಮಯೂಖ ಚಂದ್ರಿಕಾ ಪ್ರಸರನುಮಭಿಭೂತ ನೂತನ ಪುರಾತನ ಪುರುಷ ಚರಿತನುಂ ಅವಲುಪ್ತ ಸಪ್ತಸಪ್ತಿ ದೀಪ್ತಿ ಪ್ರತಾಪ ವಿಧಾನ ನಿರತನುಮಾಕೃಷ್ಟ ಸುಂದರ ಸುಂದರೀ ಕಟಾಕ್ಷ ವಿಕ್ಷೇಪನುಮುಪಜಾಪೋಪಗೃಹೀತ ವಿರೋಧಿ ನರೇಂದ್ರಾಷ್ಟಾದಶ ತೀರ್ಥನುಮನುಕೂಲ ಕುಲ ಸೀಮಂತಿ[1]ನಿ[1]ೀಯಮಾನ ಗೋಮಿನೀ ಕಾಮಿನೀ ನಿಬಿಡಾಲಿಂಗಿತಾಕ್ಷೂಣ ವಕ್ಷಸ್ಥಳನುಮವಿರುದ್ಧ ವಿಜಯಶ್ರೀ ಕೇಯೂರ ವಿಘಟ್ಟಿತ ವಾಮೇತರ ಭುಜಭುಜಂಗನುಮುಪಶೀರ್ಣ ವರ್ಣ ಪದ ವಾಕ್ಯ ನ್ಯಾಯ ನಯ ಪ್ರಮಾಣ ಕಾವ್ಯ ನಾಟಕ ನಿಕಾಮ ಕೋಮಳ ರುಚಿ[1]ರ[2] ಶರೀರ ಸರಸ್ವತೀ ರೂಪ ನೀರ[3]ಕ್ಷೀರ[3] ಸುಧಾ ಸ್ಯಂದಿ ಪಂಡಿತ ವನ ಸರಸೀರುಹನು ಮಪಾರಾ ಪಾರಾವಾರ ಸಮುತ್ಸಾರಿತ ಕುಂದೇಂದು ಕುಮುದ್ವತೀ ತರಳತರ ತಾರಹಾರ ನೀಹಾರ ರೋಚಿರ್ಮಂಜರೀ ನಿಚಯ ವಿಶದ ಯಶೋ ರಾಶಿ ವಳಯನುಂ ಜಿತಾಖಂಡ ಭೂಮಂಡಲನುಮಪ್ಪ **ಸ್ತಿಮಿತಸಾಗರ** ಮಹೀವಲ್ಲಭಂಗೆ—

ಕಂ॥ ನಿರತಿಶಯ ರೂಪ ಯೌವನ
ವಿರಾಜಿತಾಂಗಿಯರನಂಗ ಜಂಗಮ ಲತಿಕೋ
ತ್ಕರ ತನುಗಳ್ ನೆಗಟ್ದ **ವಸುಂ**
ಧರೆಯುಂ ವಸುಮತಿಯುಮೆಂಬರರಸಿಯರಾದರ್ ॥ ೭೨ ॥

ವ॥ ಹೀಗೆ ಸಮಸ್ತ ಭೂಮಂಡಲಕ್ಕೆ ತಿಲಕಪ್ರಾಯನಾದ ವಿಲಾಸವುಳ್ಳವನೂ, ಭೂಚರ ಮತ್ತು ಖೇಚರ ರಾಜರ ವಿಲಾಸವನ್ನು ಹಾಸ್ಯಮಾಡುವ ವೈಭವವುಳ್ಳವನೂ, ಸನತ್ಕುಮಾರ, ನಳಕೂಬರ, ಮತ್ತು ಮನ್ಮಥರ ಸೌಂದರ್ಯವನ್ನು ಹಾಸ್ಯಮಾಡುವವನೂ, ಇತರರನ್ನು ಜಯಿಸಲ್ಪಟ್ಟ ಎಲ್ಲಾ ರಾಜರನ್ನೂ ಜಯಿಸಿ ದೇವೇಂದ್ರನಂತೆ ವೈಭವವುಳ್ಳವನೂ, ಅಷ್ಟದಿಕ್ಪಾಲಕರ ರಕ್ಷಣೆಯ ಸಾಹಸವನ್ನು ಕಡಮೆ ಮಾಡಿದವನೂ, ಬೇರೆ ರಾಜರ ಶ್ವೇತಚ್ಛತ್ರಿಯನ್ನು ಮುಚ್ಚುವಂತೆ ಮಾಡುವವನೂ, ನಮಸ್ಕರಿಸುವ ಎಲ್ಲಾ ರಾಜರ ಕಿರೀಟದ ರತ್ನದ ಕಾಂತಿಯಿಂದ **ಆಚ್ಛಾ**ದಿತವಾದ ಕಾಲಿನ ಉಗುರಿನಿಂದ ಹೊರಡುವ ಚಂದ್ರಕಾಂತಿಯಿಂದ ಕೂಡಿರುವವನೂ, ಹಿಂದೆ ಆಗಿಹೋದ ಮತ್ತು ನೂತನವಾದ ಚಾರಿತ್ರಿಕ ಪುರುಷನಂತಿರುವವನೂ, ತನ್ನ ಪ್ರತಾಪದಿಂದ ಸೂರ್ಯನ ಪ್ರಕಾಶವನ್ನು ಕಡಮೆ ಮಾಡುವವನೂ, ಸುಂದರವಾದ ಸ್ತ್ರೀಯರ ಕಡೆಗಣ್ಣಿನ ನೋಟದಿಂದ ಆಕರ್ಷಿತನೂ, ವಿಜಯಿಗಳಾದ ಶತ್ರುರಾಜರಿಂದ ಹದಿನೆಂಟು ತೀರ್ಥಪ್ರಭಾವವುಳ್ಳವನೂ, ಅನುಕೂಲವಾದ ಉತ್ತಮ ಜಾತಿಯ ಮನೋಹರವಾದ ಕಾಮಿನೀಜನರಿಂದ ಆಲಿಂಗನಗೊಂಡ ಎದೆಯುಳ್ಳವನೂ, ಯಾವಾಗಲೂ ವಿಜಯಲಕ್ಷ್ಮಿಯ ಕೇಯೂರದಿಂದ ತಾಡಿತವಾದ ಎಡಬಲ ಭುಜಬಲವುಳ್ಳವನೂ, ವರ್ಣ, ಪದ, ವಾಕ್ಯ, ನ್ಯಾಯ, ನಯ, ಪ್ರಮಾಣ, ಕಾವ್ಯ, ನಾಟಕ—ಇವುಗಳ ಸಮೂಹದಿಂದ ಕೋಮಲವಾದ ಶರೀರ ಕಾಂತಿಯಿಂದ ಕೂಡಿರುವ ಸರಸ್ವತೀ ರೂಪವುಳ್ಳವನೂ, ಅಮೃತದ ಕೊಳವೆಂಬ ಪಂಡಿತ ಸಮೂಹಕ್ಕೆ ಕಮಲಪ್ರಾಯನೂ, ಸಮುದ್ರದ ಅಲೆಗಳಂತೆ ವಿಶಾಲವಾದ ಸಮುದ್ರದ ಉಬ್ಬರವಿಳಿತದಂತೆ ಕೂಡಿರುವ ಯಶೋವಂತನೂ, ಮಲ್ಲಿಗೆ, ಚಂದ್ರ, ಬಿಳಿಯ ಕಮಲ, ಹೆಚ್ಚು ಪ್ರಕಾಶಮಾನವಾದ ಮುತ್ತಿನಮಣಿಗಳಂತಹ ನಕ್ಷತ್ರಗಳ ಗುಂಪುಳ್ಳವನೂ, ಹೆಚ್ಚಾದ ಕಾಂತಿಯ ಸಮೂಹದಿಂದ ವಿಶಾಲವಾದ ವ್ಯಕ್ತಪಟ್ಟ ಯಶಸ್ಸಿನಿಂದ ಕೂಡಿದವನೂ, ಸಮಸ್ತ ಭೂಮಂಡಲವನ್ನು ಗೆದ್ದವನೂ ಎನ್ನಿಸಿಕೊಂಡ ಆ ಸ್ತಿಮಿತಸಾಗರ ಮಹಾರಾಜನಿಗೆ—

೭೨. ಎಣೆಯಿಲ್ಲದ ಚೆಲುವಿನಿಂದಲೂ, ಏರುಂಜವ್ವನದಿಂದ ಕಂಗೊಳಿಸುವವರೂ, ಮನ್ಮಥನು ಸಂಚರಿಸುವ ಕೋಮಲ ಶರೀರವುಳ್ಳವರೂ, ಪ್ರಸಿದ್ಧರೂ ಆದ ವಸುಂಧರೆ ಮತ್ತು ವಸುಮತಿ ಎಂಬುವರು ರಾಣಿಯರಾದರು.

---

1. × (ಅ) 2. × (ಮ) 3. ಶ್ರಿತ (ಅ)

ಅಗ್ರಮಹಿಷೀ ಪದಕ್ಕಮು
ದಗ್ರ ಪ್ರೇಮಾಸ್ಪದಕ್ಕಮವರಿರೆ ನೃಪನ
ವ್ಯಗ್ರತೆಯಿನಿತರ ವನಿತೆಯ
ರಾಗ್ರಹಮಂ ಬಿಟ್ಟನೇನವರ್ ಸೊಬಗಿಯರೋ ॥ ೭೩ ॥

ವ॥ ಆ ಮಹಾದೇವಿಯರಿರ್ವರುಂ ಬೆರಸು ಅನೇಕಾಂತಃಪುರ ವಿವಿಧ ವಿನೋದ ಸಮೇತಂ ಸ್ತಿಮಿತಸಾಗರ ಧರಾಧೀಶ್ವರನವಿನಶ್ವರ ಸುಖಾನುಭವ ನಿರತನನವರತಾಭ್ಯುದಯ ಪರಂಪರಾನ್ವಿತ ನಿಜಮನೋಜನಿತಾನಂದನೊರ್ಮೆ ಸಕಲ ಮಕುಟ ಬದ್ಧ ಮಣಿ ಕಿರೀಟ ಕೋಟಿ ವಿಟಂಕ ಸನಾಥ ಪದ್ಮ ರಾಗ ಮಣಿ ಕಿರಣಾರುಣಿತ ಮೌಕ್ತಿಕ ಮಂಡನೀಭೂತ ದುಕೂಲ ವಿತಾನನೊಡ್ಡೋಲಗಂಗೊಟ್ಟಿರ್ದಲ್ಲಿ ಸಿಂಹಾಸನೋಭಯ ಪಾರ್ಶ್ವ ಪ್ರದೇಶಂಗಳನಲಂಕರಿಸಿ ವಸುಂಧರೆಯುಂ ವಸುಮತಿಯುಮಿರೆ—

ಕಂ॥ ಕ್ಷಿತಿ ನಾಥಾಪಾಂಗ ವಿಲೋ
ಕಿತೆಯರ್ ಶ್ರೀಯೊರ್ವಳಾ ಜಯಶ್ರೀಯೊರ್ವಳ್
[1]ಪ್ರತಿಪತ್ನಿ[1]ಯರೊಳರೆನಿಸ
[2]ಲ್ಕತರ್ಕ್ಯ[2] ನೇಪಥ್ಯಮವರ್ಗದೇಂ ಸೊಗಯಿಸಿತೋ ॥ ೭೪ ॥

ಎರಡುಂ ಕೆಲದೊಳಮಿರ್ವರು
ಮರಸಿಯರಿರೆ ಸೊಗಯಿಸಿರ್ದನವನಿಪನೆರಡುಂ
ಕರಿಣಿಗಳ ನಡುವ[3]ಣಾಶಾ[3]
ಕರೀಂದ್ರನೊಪ್ಪುವವೊಲೊಪ್ಪುವೊಡ್ಡೋಲಗದೊಳ್ ॥ ೭೫ ॥

ನವ ಮಾಲತಿಗಂ ನವ ಮಾ
ಧವಿಗಂ ನಡುವಾದ ನವ ನಮೇರು ಮಹೀಜ
ಕ್ಕವನೀಶಂ ದೊರೆಯೆನಿಸಿದ
ನವರಿರ್ವರುಮರಸಿಯರ್ಕಳೋತಿರೆ ಕೆಲದೊಳ್ ॥ ೭೬ ॥

೭೩. ಪಟ್ಟಮಹಿಷಿಯ ಸ್ಥಾನಕ್ಕೂ, ಪ್ರೀತಿ ಮತ್ತು ಆದರಕ್ಕೂ ಅನುರೂಪರಾಗಿರುವ ಈ ಇಬ್ಬರು ರಾಣಿಯರಿರಲು ಮಹಾರಾಜನು ಇತರ ಸ್ತ್ರೀಯರ ಪ್ರೀತಿಯನ್ನು ಬಿಟ್ಟನು. ಇದರಿಂದ ಅವರು ಎಂತಹ ಸೊಬಗುಗಾತಿಯರೆಂದು ತಿಳಿಯಬಹುದು.

ವ॥ ಆ ಮಹಾದೇವಿಯರೊಡನೆ ಅನೇಕ ವಿಧವಾದ ಅಂತಃಪುರದ ವಿನೋದಗಳಿಂದ ಸ್ತಿಮಿತಸಾಗರ ಮಹಾರಾಜನು ನಾಶವಿಲ್ಲದ ಸುಖಾನುಭವವುಳ್ಳವನಾಗಿ ಯಾವಾಗಲೂ ಅಭ್ಯುದಯದ ಪರಂಪರೆಗಳಿಂದ ಕೂಡಿ, ತನ್ನ ಮನಸ್ಸಿನಲ್ಲಿ ಆನಂದಪಡುತ್ತಾ ಇರಲು ಒಂದು ಸಲ ಸಮಸ್ತ ಮಕುಟಬದ್ಧರ ಕಿರೀಟದಲ್ಲಿರುವ ಅನೇಕ ರತ್ನಗಳ ಕಾಂತಿಯಿಂದ ಪದ್ಮರಾಗ ಮಣಿಯ ಕಾಂತಿಯಂತೆ ಕೆಂಪು ಬಣ್ಣವುಳ್ಳದೂ, ಮುತ್ತಿನ ಮಣಿಗಳಿಂದ ಅಲಂಕೃತವಾದ ಒಳ್ಳೆಯ ಉತ್ತರೀಯವನ್ನು ಹೊಂದಿ ರಾಜಸಭೆಯನ್ನು ನಡೆಸುವಲ್ಲಿ ಸಿಂಹಾಸನದ ಎರಡು ಕಡೆಗಳನ್ನೂ [ಎಡಬಲ] ಅಲಂಕರಿಸಿ ವಸುಂಧರೆ ಮತ್ತು ವಸುಮತಿಯರಿರಲು

೭೪. ರಾಜನ ಕಟಾಕ್ಷವೀಕ್ಷಣೆಗೆ ಒಳಗಾದ ಅವರಲ್ಲಿ ಒಬ್ಬಾಕೆಯು ಸಂಪಲ್ಲಕ್ಷ್ಮಿಯಂತೆಯೂ ಮತ್ತೊಬ್ಬಳು ಜಯಲಕ್ಷ್ಮಿಯಂತೆಯೂ ಪ್ರತಿಪತ್ನಿಯರಾಗಿರುತ್ತಿರಲು ಮನೋಹರವಾಗಿತ್ತು.

೭೫. ಎರಡು ಕಡೆಗಳಲ್ಲಿಯೂ ಇಬ್ಬರು ರಾಣಿಯರು ಇರುತ್ತಿರಲು ಈ ರಾಜನು ರಾಜಸಭೆಯಲ್ಲಿ ಎರಡು ಹೆಣ್ಣಾನೆಗಳ ಮಧ್ಯೆ ಇರುವ ಗಜಪತಿಯಂತೆ ಒಪ್ಪುತ್ತಿದ್ದನು.

೭೬. ಇಬ್ಬರು ರಾಣಿಯರೂ ಸಮೀಪದಲ್ಲಿರಲು ಈ ರಾಜನು ಹೊಸ ಮಾಲತಿ ಮತ್ತು ಹೊಸ ಮಾಧವೀ ಲತೆಗಳ ಮಧ್ಯೆ ಇರುವ ಕಲ್ಪವೃಕ್ಷದಂತೆ ಇದ್ದನು.

1. ಪತಿಪತ್ನಿ (ಅ) 2. ಲ್ಪಿತಕ್ಕ (ಅ) 3. ಣೆಡೆಯೊಳ್ (ಮ)

ವ॥ ಇಂತನಂತ ಸುಖಪರಂಪರೆಯಿಂ ಪಲಕಾಲಂ ಸಲೆ—

ಕಂ॥ ಆ ಜಾಯಾ ದ್ವಯಕಂ ಕ್ಷಿತಿ
ರಾಜಂಗಮಪೂರ್ವ ತುಂಗಜಂಗಮ ದಿವಿಜೋ
ರ್ವೀಜಮಿವೆನೆ ಪುಟ್ಟಿದರಪ
ರಾಜಿತನುಮನಂತವೀರ್ಯನುಂ ಪ್ರಿಯತನಯರ್ ॥ ೭೭ ॥

ವ॥ ಅಂತು ವಸುಂಧರೆಗಪರಾಜಿತು ವಸುಮತಿಗನಂತವೀರ್ಯಂ ಪುಟ್ಟುವುದುಂ—

ಕಂ॥ ಜಯುವೊಡವುಟ್ಟಿದುದು ನಯೋ
ದಯುಮೊಡವಳೆದುದು ವಿಳಾಸವೊಡನಾಡಿದುದ
ನ್ವಯದೊದವು ತಾಯುಮಂ ತಂ
ದೆಯುಮಂ ತಣ್ಣಿದುದಪಾರ ರಾಗಾಮೃತದಿಂ ॥ ೭೮ ॥

ವ॥ ಅಂತು ಬಳೆಯೆ ವಳೆಯೆ—

ಚಂ॥ ದೊರೆವಡೆದಿರ್ದುದಿರ್ವರ ಮನೋರಥಮುಗ್ಗಳಮುಚ್ಚೈಪೋದುದಿ
ರ್ವರ ಮನದಟ್ಕಜಚ್ಚುಡಿದುದಿರ್ವರ ಮಚ್ಚು ಪೊದಟ್ಟು ನೀಳ್ದುದಿ
ರ್ವರ ಸಮಶೀಲಮಚ್ಚಿಱಿದುದಿರ್ವರನಚ್ಚಿನೊಡಂಬಡೇಂ ಭವಾಂ
ತರ ಗತ ಮೋಹ ಬಂಧ ಬಲಮೋ ಬಲದೇವನ ವಾಸುದೇವನಾ ॥ ೭೯ ॥

ಕಂ॥ ಬಲದೇವ ವಾಸುದೇವರೊ
ಳಲಂಘ್ಯಬಲನೊರ್ವನುಗ್ರಬಲನೊರ್ವನವರ್
ಕೆಲದೊಳಿರೆ ಚಂದ್ರ ರವಿಮಂ
ಡಲ ಮಧ್ಯದ ಕನಕಗಿರಿಗೆ ನೃಪನೆಣೆಯಾದಂ ॥ ೮೦ ॥

ವ॥ ಹೀಗೆ ಮಹತ್ತರವಾದ ಸುಖದಿಂದ ಕಾಲ ಕಳೆಯುತ್ತಿರಲು

೭೭. ಈ ಜೋಡಿ ಪತ್ನಿಯರಿಗೂ ರಾಜನಿಗೂ ಅತಿ ಉನ್ನತವಾದ ಅಪೂರ್ವವಾದ ಜಂಗಮ ವೃಕ್ಷಗಳೋ ಎಂಬಂತೆ ಅಪರಾಜಿತ ಮತ್ತು ಅನಂತವೀರ್ಯರೆಂಬ ಪ್ರೀತಿಪಾತ್ರರಾದ ಮಕ್ಕಳು ಹುಟ್ಟಿದರು.

ವ॥ ಹೀಗೆ ವಸುಂಧರೆಗೆ ಅಪರಾಜಿತನೂ, ವಸುಮತಿಗೆ ಅನಂತವೀರ್ಯನೂ ಹುಟ್ಟಲು —

೭೮. ಜಯವು ಜೊತೆಯಲ್ಲಿ ಹುಟ್ಟಿತು. ನೂತನವಾದ ಅಭ್ಯುದಯವು ಜೊತೆಯಲ್ಲಿ ಬೆಳೆಯಿತು. ವಿಳಾಸವು ಜೊತೆಯಲ್ಲಿ ಆಡಿತು—ಎಂಬಂತೆ ಈ ಜನನವು ತಾಯಿತಂದೆಗಳಿಗೆ ಹೆಚ್ಚು ಆನಂದವನ್ನುಂಟುಮಾಡಿತು.

ವ॥ ಹಾಗೆ ಅಭಿವೃದ್ಧಿಯನ್ನು ಹೊಂದುತ್ತಿರಲು—

೭೯. ಇಬ್ಬರ ಮನೋರಥವು ಕಾಣಿಸಿಕೊಂಡಿತು. ಹೆಚ್ಚಾಗಿ ಅಭಿವೃದ್ಧಿಯನ್ನು ಪಡೆಯಿತು. ಇಬ್ಬರ ಮನಸ್ಸಿನಲ್ಲಿ ಪ್ರೀತಿಯು ಅಚ್ಚೊತ್ತಿದಂತೆ ಆಯಿತು. ಇಬ್ಬರ ಅಭಿಲಾಷೆಯು ಹೆಚ್ಚಾಗಿ ವ್ಯಾಪಿಸಿತು. ಇಬ್ಬರ ಸಮಾನವಾದ ಶೀಲವು ವೃದ್ಧಿಯಾಯಿತು— ಎಂಬಂತೆ ಜನ್ಮಾಂತರದ ಪ್ರೀತಿಯ ಬಂಧದ ಶಕ್ತಿಯು ಈ ಬಲದೇವ ವಾಸುದೇವರಿಗೆ ಒಡಂಬಟ್ಟಿತು.

೮೦. ಈ ಬಲದೇವ ವಾಸುದೇವರಲ್ಲಿ ಒಬ್ಬನು ಅತುಲಬಲನೂ, ಮತ್ತೊಬ್ಬನು ಉಗ್ರಬಲನೂ ಆಗಿ ಈ ರೀತಿಯಾಗಿ ಇಬ್ಬರೂ ಸಮೀಪದಲ್ಲಿರಲು ಚಂದ್ರ ಸೂರ್ಯ ಮಂಡಲಗಳ ಮಧ್ಯೆ ಇರುವ ಮೇರುಪರ್ವತಕ್ಕೆ ಸಮಾನವಾಗಿ ಸ್ತಿಮಿತ ಸಾಗರ ದೊರೆಯು ಇರುತ್ತಿದ್ದನು.

ವ॥ ಅಂತು ಬಲದೇವವಾಸುದೇವರನಲ್ಪಕಲ್ಪಮಹೀಜಾಂಕುರ ಯುಗಳಮುಂ, ಶೃಂಗಾರ ಸಾಗರ ಸಂಭೂತ ಸುಧಾಸೂತಿ ಲೇಖಾಂಕುರ ದ್ವಂದ್ವಮುಂ, ಪವಿತ್ರ ಕ್ಷತ್ರ ಧರ್ಮ ಕಂಠೀರವ ದಂಷ್ಟ್ರಾಂಕುರ ಯುಗ್ಮಮುಂ, ಮದನ ಮಾರ್ಗಣ ಸಮುತ್ಥಿತ ನೂತನ ಚೂತಾಂಕುರ ದ್ವಂದ್ವಮುಮಾಶಾ ಕರಿ ಕಲಭ ಸುಕುಮಾರ ರದನಾಂಕುರದ್ವಿತಯಮುಮೆನೆ ಸೌಂದರ್ಯಕ್ಕೆ ಕುಲನಿಲಯಮುಮೌದಾರ್ಯಕ್ಕೆ ನಿವಾಸಮುಂ ಸೌಭಾಗ್ಯಕ್ಕೆ ಜನ್ಮಭೂಮಿಯುಂ ಸೌಶೀಲ್ಯಕ್ಕುತ್ಪತ್ತಿಸ್ಥಾನಮುಮಾಗಿ ಪುಣ್ಯಪುಂಜದಂತೆಯುಂ ಸುಖದ್ರುಮ ಪ್ರರೋಹದಂತೆಯುಂ ಶೌರ್ಯ ಮೂಲಸ್ತಂಭದಂತೆಯುಂ ಸಾಹಸ ದ್ರವಿಣ ಸಾಧನದಂತೆಯುಂ ಗುಣಗಣ ಮಣಿಗಣ ಕೋಶಗೃಹದಂತೆಯುಮಾಗಿ ಮಾತಾಪಿತೃಗಳನುರಾಗದೊಡನೊಡನೆ ಪ್ರಮೋದ ಪ್ರವರ್ಧಮಾನಮಾಗೆ ಸುಖಮಿರ್ಪನ್ನೆಗಂ

ಮ॥ ನಭದೊಳ್ ಪೂಮಟೆ ಭೂಮಿಯೊಳ್ ಮರುತಕಂ ದಿಗ್ಭಿತ್ತಿಯೊಳ್ ದೇವದುಂ
ದುಭಿನಾದಂ ಭುವನತ್ರಯಂಗಳೊಳನೂನಂ ವಂದನಾನಂದಕಂ
ಸಭೆಯೊಳ್ ದೇವ ನಿಕಾಯಮೊಪ್ಪುತಿರೆ ಬಂದಂ ಲೋಕನಾಥಂ ಸ್ವಯಂ
ಪ್ರಭ ತೀರ್ಥೇಶ್ವರನಾ ನೃಪೇಶ್ವರನ ರಾಜ್ಯಂ ಪೂಜ್ಯಮಪ್ಪನ್ನೆಗಂ ॥ ೮೧ ॥

ಕಂ॥ ಅಂತವತರಿಸಿದ ಘನ ದುರಿ
ತಾಂತಕನೆಟ್ಟುರವನಱಿಪೆ ವನಪಾಲಕನ
ತ್ಯಂತ ಪ್ರಿಯಂ ಪ್ರಶೀತ
ಸ್ವಾಂತಂ ನೃಪನೆಟ್ಟು ಸಿಂಹವಿಷ್ಟರದಿಂದಂ ॥ ೮೨ ॥

ನಡೆದೇಳಡಿಯಂ ಜಿನನಿ
ರ್ದೆಡೆಗೆಱಗಿ ಬೞಿಕ್ಕೆ ಮಚ್ಚುಗೊಟ್ಟಂ [1]ತೊ[1]ಟ್ಟೊ
ಳ್ದುಡುಗೆಗಳನುಟ್ಟ ದುಗುಲಮ
ನೆಡೆಯಱಿದಾ ಮುನಿನಿವೇದಕಂಗೆ ನೃಪೇಂದ್ರಂ ॥ ೮೩ ॥

ವ॥ ಹೀಗೆ ಬಲದೇವ ವಾಸುದೇವರು ಅಮೂಲ್ಯವಾದ ಕಲ್ಪವೃಕ್ಷದ ಅಂಕುರದ್ವಯಗಳಂತೆಯೂ, ಶೃಂಗಾರ ಸಮುದ್ರದಲ್ಲಿ ಹುಟ್ಟಿದ ಅಮೃತಾಂಕುರದ ಯುಗಳದಂತೆಯೂ, ಪವಿತ್ರವಾದ ರಾಜಧರ್ಮವೆಂಬ ಸಿಂಹದ ದಾಡೆಹಲ್ಲುಗಳ ಯುಗಳದಂತೆಯೂ, ಮನ್ಮಥನ ಬಾಣದಲ್ಲಿ ಹುಟ್ಟಿ ಮೇಲಕ್ಕೆ ಎದ್ದ ನೂತನವಾದ ಮಾವಿನ ಅಂಕುರ ದ್ವಯವಂತೆಯೂ, ದಿಕ್ಕರಿಗಳ ಮರಿಗಳ ಕೋಮಲವಾದ ಎರಡು ಕೊಂಬುಗಳೆಂಬ ಅಂಕುರದಂತೆಯೂ, ಸೌಂದರ್ಯರಾಶಿಗೆ ಆವಾಸಸ್ಥಾನವೂ, ಉದಾರ ಗುಣಕ್ಕೆ ಸ್ಥಾನವೂ, ಸೌಭಾಗ್ಯಕ್ಕೆ ಜನ್ಮಭೂಮಿಯೂ, ಶೀಲ ಗುಣಕ್ಕೆ ಉತ್ಪತ್ತಿಸ್ಥಾನವೂ ಆಗಿ ಪುಣ್ಯಪುಂಜದಂತೆಯೂ, ಸುಖವೆಂಬ ಮರದ ಮೊಡಿಕೆಯಂತೆಯೂ, ಪರಾಕ್ರಮಕ್ಕೆ ಮೂಲಸ್ಥಂಬದಂತೆಯೂ, ಸಾಹಸ ದ್ರವಿಣದಂತೆಯೂ, ಗುಣಸಮೂಹವೆಂಬ ರತ್ನಗಳ ಸಮೂಹಕ್ಕೆ ಕೋಶಗೃಹದಂತೆಯೂ ಆಗಿ ಮಾತಾಪಿತೃಗಳು ಪ್ರೀತಿಯಿಂದ ಸಂತೋಷದಿಂದ ವೃದ್ಧಿಯಾಗಿ ಸುಖವಾಗಿರುತ್ತಿರಲು—

೮೧. ಆಕಾಶದಲ್ಲಿ ಪುಷ್ಪವೃಷ್ಟಿಯೂ, ಭೂಮಿಯಲ್ಲಿ ರತ್ನವೃಷ್ಟಿಯೂ, ದಿಕ್ಕುಗಳಲ್ಲಿ ದೇವವಾದ್ಯ ಧ್ವನಿಯೂ, ಮೂರು ಲೋಕಗಳಲ್ಲಿಯೂ ಹೆಚ್ಚಾದ ವಂದನಾ ಧ್ವನಿಯೂ, ಸಭೆಯಲ್ಲಿ ದೇವಸಮೂಹವೂ ಒಪ್ಪಿರಲು, ಲೋಕನಾಥನಾದ ಸ್ವಯಂಪ್ರಭರೆಂಬ ತೀರ್ಥಂಕರರು ಆ ರಾಜನ ರಾಜ್ಯವನ್ನು ಪೂಜ್ಯವೆನಿಸುವಂತೆ ಅಲ್ಲಿಗೆ ಬಿಜಯಂಗೈದರು.

೮೨. ಈ ರೀತಿ ಪಾಪಗಳಿಗೆ ಅಂತಕರೆನಿಸಿದ ತೀರ್ಥಂಕರರ ಬರುವಿಕೆಯನ್ನು ವನಪಾಲಕನು ತಿಳಿಸಲು ಹೆಚ್ಚಾದ ಮನಃಪ್ರೀತಿಯಿಂದ ರಾಜನು ಸಿಂಹಾಸನದಿಂದ ಮೇಲಕ್ಕೆದ್ದು—

೮೩. ಜಿನೇಶ್ವರನು ಇದ್ದ ಕಡೆಗೆ ಏಳು ಅಡಿ ನಡೆದು ನಮಸ್ಕಾರ ಮಾಡಿ ಆ ಮುನಿ ನಿವೇದಕನಿಗೆ ತಾನು ಹೊದ್ದ ಬಟ್ಟೆಯನ್ನೇ ರಾಜನು ಬಹುಮಾನವಾಗಿ ಕೊಟ್ಟನು.

---

1. ಟೊ (ಮ)

ವ॥ ಸೇನಾಪತಿಯಂ ಬರಿಸಿ—

ಕಂ॥ ಪಡೆಯಂ ಸಾ[ರ]ಲ್ವೇಟ್ಬಾ
ಗಡೆ ಪುತ್ರ ಕಳತ್ರ ಮಿತ್ರಸಹಿತಂ ಮಹಿಪಂ
ನಡೆದಂ ನದೀ ಪ್ರವಾಹಂ
ನಡೆವಂತಿರೆ ಸಮವಸರಣ ವಾರಾಶಿವರಂ ॥ ೮೪ ॥

ವ॥ ಅಂತು ಬಂದು ದೂರಾಂತರದೊಳ್ ಮಾನಸ್ತಂಭ ನಿರೀಕ್ಷಣ ಕ್ಷಣದೊಳ್ ತನ್ನೇಱಿದ ಯಾನ ಗಜ ರಾಜನನಿೞಿದಾ ಜವಂಜವ ವಿಭಾವ ಭಯ ಭೀರು ವಿಶರಾರು ಭವ್ಯ [1]ಜನ[1] ನಿರ್ವ್ಯಾಜ ಶರಣಮಂ ಯಥಾಕ್ರಮದಿಂ ಪೊಕ್ಕು ಗಂಧಕುಟಿಯುಂ ತ್ರಿಃಪ್ರದಕ್ಷಿಣಂಗೆಯ್ದು ಭಗವದಭಿಮುಖನಾಗಿ ನಿಂದು ನಿಟಿಲ ತಟಘಟಿತ ಕರಪುಟ ಕಮಳಮುಕುಳಂ—

ಮ॥ ತನು ಸೌಂದರ್ಯದಿನನ್ನನಿನ್ನನೆನಲುದ್ಭಾಚಾರದಿಂದನ್ನನಿ
ನ್ನನೆನಲ್ ಬೋಧದಿನನ್ನನಿನ್ನನೆನಲಾತ್ಮೈಶ್ವರ್ಯದಿಂದನ್ನನಿ
ನ್ನನೆನಲ್ ಸೌಖ್ಯದಿನನ್ನನಿನ್ನನೆನಲಕ್ಷೂಣತ್ವದಿಂದನ್ನನಿ
ನ್ನನೆನಲ್ಪಾರದು ನಿನ್ನನೇಂ ಪಿರಿಯಯೋ ತ್ರೈಲೋಕ್ಯರಕ್ಷಾಮಣೀ ॥ ೮೫ ॥

ವ॥ ಎಂದು ನಿಖಿಲ ದಿವಿಜ ದನುಜ ವಿನಮ್ರ ಕಮ್ರ ಶಿರೋಮಣಿ ದ್ವಿಗುಣ ಪಾಟಳಮಣಿ ಭೂಮಿ ಭಾಗಾಭೋಗ ಸಭಾಮಂಡಳನಂ ನಿರಸ್ತ ಸಮಸ್ತದುಸ್ತಮೋ ವಿಸ್ತಾರನಂ, ಪ್ರಾತಿಹಾರ್ಯಾಷ್ಟಕಾವಿರ್ಭೂತ ಪ್ರಭಾತಿವಿಳಸಿತಾಂಗ ಪ್ರಭನಂ, ಸ್ವಯಂಪ್ರಭ ಜಿನೇಂದ್ರನಂ ಸ್ತುತಿಯಿಸಿ ಬೞಿಯಂ ತದನುಮತೋಪ ವಿಶದ ಶೇಷ ವಸ್ತೂತ್ಪಾದ ದ್ರವ್ಯ ವಿಳಯ ವಿಕಲ್ಪ ಪ್ರತಿಪಾದನ ಸಮಯ ಸಮುತ್ಪನ್ನ ಸಹಸ್ರ ರಸನಾನನಾಂಬುರುಹ ನಿರ್ಯದ್ವಚನರಚನಾಮೃತನಂ ಗಣನಾಥನಂ ಗುರು ಭಕ್ತಿ ಪೂರ್ವಕಂ ಬಂದಿಸಿ ಧರ್ಮಮಂ ಕೇಳ್ದು ಸಮುಪಜಾತ ನಿರ್ವೇಗಪರಂ ಪರಮೇಶ್ವರದೀಕ್ಷೆಯಂ ಸ್ತಿಮಿತಸಾಗರಂ ಕೆಯ್ಕೊಂಡು

ವ॥ ಸೇನಾಪತಿಯನ್ನು ಬರಮಾಡಿಕೊಂಡು

೮೪. ಸೈನ್ಯವನ್ನು ನಡೆಸುವಂತೆ ಹೇಳಿ ಆಗಲೇ ಪುತ್ರಮಿತ್ರಕಳತ್ರರೊಡನೆ, ನದಿ ಪ್ರವಾಹವು ಸಮವಸರಣವೆಂಬ ಸಮುದ್ರವನ್ನು ಕುರಿತು ಹೋಗುವಂತೆ, ರಾಜನು ಹೋದನು.

ವ॥ ಹೀಗೆ ಬಂದು ದೂರದಲ್ಲಿ ಮಾನಸ್ತಂಭವನ್ನು ನೋಡಿದ ಕ್ಷಣವೇ ತಾನು ಹತ್ತಿದ ಆನೆಯನ್ನುಳಿದು ಸಂಸಾರ ವೈಭವದ ಭಯದಿಂದ ಹೆದರಿ ಕಂಗೆಟ್ಟಿರುವ ಭವ್ಯ ಜನರಿಗೆ ಉಪೇಕ್ಷೆಯಿಲ್ಲದೆ ಶರಣುಹೊಕ್ಕು ಕ್ರಮವಾಗಿ ಗಂಧಕುಟಿಯನ್ನು ಮೂರು ಸುತ್ತು ಪ್ರದಕ್ಷಿಣೆ ಮಾಡಿ, ಭಗವಂತನಿಗೆ ಎದುರಾಗಿ ಹಣೆಯ ಸಮೀಪದಲ್ಲಿ ಜೋಡಿಸಿದ ಕೈಗಳೆಂಬ ಕಮಲದ ಮೊಗ್ಗುಳ್ಳವನಾಗಿ—

೮೫. ಶರೀರದ ಸೌಂದರ್ಯದಿಂದ ಅಲ್ಲಿಂದ ಇಲ್ಲಿಯವರೆಗೂ [ಯಾವಾಗಲೂ] ಎನ್ನುವಂತೆಯೂ, ಉತ್ತಮವಾದ ನಡೆಯಿಂದ ಅಲ್ಲಿಂದ ಇಲ್ಲಿಯವರೆಗೂ ಎನ್ನುವಂತೆಯೂ, ಸೌಖ್ಯದಿಂದ ಯಾವಾಗಲೂ ಕೂಡಿ ಮಹತ್ವದಿಂದಲೂ ಅಲ್ಲಿಂದ ಇಲ್ಲಿಯವರೆಗೂ ಬೇರೆ ಇಲ್ಲ ಎನ್ನುವಂತೆ ಮೂರು ಲೋಕಕ್ಕೆ ರಕ್ಷಾಮಣಿಯಂತಿರುವ ನೀನೇ ಮಹಾತ್ಮನು.

[ಸೌಂದರ್ಯ, ಉನ್ನತ ಜ್ಞಾನ, ಐಶ್ವರ್ಯದ ಸುಖ-ಮಹತ್ವ—ಇವುಗಳಲ್ಲಿ ನಿನ್ನಂತೆ ಮತ್ತೊಬ್ಬರಿಲ್ಲ ಎಂದ ಮೇಲೆ ಮೂರು ಲೋಕಕ್ಕೂ ರಕ್ಷಾಮಣಿಯಂತಿರುವ ನಿನ್ನ ಮಹತ್ವವು ಹಿರಿದಾದುದು.]

ವ॥ ಎಂದು ಸಮಸ್ತ ದೇವ ಅಸುರ ಇವರಿಂದ ನಮಸ್ಕರಿಸಿಕೊಂಡ ರತ್ನಕಿರೀಟದ ಕಾಂತಿಯಿಂದ ದ್ವಿಗುಣವಾದ ಕೆಂಪು ರತ್ನದ ಭೂಭಾಗದ ಸಭಾಮಂಟಪವನ್ನುಳ್ಳ ಪಾಪವೆಂಬ ಸಮಸ್ತ ಕತ್ತಲೆಯಿಂದ ಹೋಗಲಾಡಿಸಿಕೊಂಡವರೂ, ಅಷ್ಟ ಮಹಾ ಪ್ರಾತಿಹಾರ್ಯಗಳ ಹೆಚ್ಚು ಕಾಂತಿಯಿಂದ ಶರೀರ ಪ್ರಭೆಯುಳ್ಳವರೂ ಆದ ಸ್ವಯಂಪ್ರಭ ಜಿನೇಶ್ವರರನ್ನು ಸ್ತುತಿಸಿದ ನಂತರ ಅವರ ಅಭಿಮತದಂತೆ ಸಮಸ್ತ ವಸ್ತುಗಳ ಉತ್ಪತ್ತಿ ವ್ಯಯ ದ್ರವ್ಯವೆಂಬ ಪದಾರ್ಥಗಳ ಅರ್ಥ ಪ್ರತೀತಿಯಲ್ಲಿ ಒಂದು ಸಹಸ್ರ ನಾಲಿಗೆಗಳೆಂಬ ಕಮಲಗಳಿಂದ ಹೊರಸೂಸಿದ ಅಮೃತಮಯವಾದ ಗಣಧರರನ್ನು ಗುರುಭಕ್ತಿ ಪೂರ್ವಕವಾಗಿ ವಂದಿಸಿ ಧರ್ಮವನ್ನು ಕೇಳಿ ವೈರಾಗ್ಯಭಾವನೆಯಿಂದ ಸ್ತಿಮಿತಸಾಗರನು ದಿಗಂಬರ ದೀಕ್ಷೆಯನ್ನು ಸ್ವೀಕರಿಸಿ—

---

1. ಶರಣ (ಅ)

ಉ॥ ಮುಕ್ತಿಯೊಳಾದ ನಂಬುಗೆ ಮನಂಬುಗದಲ್ಪಸುಖಾ[1]ಶಿಗೆಂಬ ಲೋ
ಕೋ[1]ಕ್ತಿಯಿನಕ್ಕಟಾ ಸ್ತಿಮಿತಸಾಗರನಟ್ಟಿಯೊಳೆ[2]ಟ್ಟು[2] ವಂದನಾ
ಭಕ್ತಿಗೆ ವಂದನಂ ಭುಜಗ ನಾಯಕನಂ ನಡೆ ನೋಡಿ ತತ್ಸುಖಾ
ಸಕ್ತ ಮನಂ ಪರಾಸು ಫಣಿನಾಥತೆಯಂ ಮುನಿನಾಥನೆಯ್ದಿದಂ ॥ ೮೬ ॥

ಕಂ॥ ಅಪರಾಜಿತನಿತ್ತ ಪರಂ
ತಪನ ತಪಶ್ಚರಣಮೊಂದೆ ಪೂಜಿಗೆನೆ ನಿರ್ವೇ
ಗ ಪರಾಯಣಂ ಮನಂಗೊಂ
ಡು ಪವಿತ್ರ ಶ್ರಾವಕ ವ್ರತಂಗಳೊಳೊಣರ್ದಂ ॥ ೮೭ ॥

ವ॥ ಅವಾವುವೆನೆ—

ಕಂ॥ ಕೊಲೆಯೊಳ್ ಪೊರೆಯಿಲ್ಲದ ಪರ
ಲಲನೆಗೆ ಬಗೆಗುಡದ ಕಳ್ಳದುಜಿ಼ ಪುಸಿಯದ ಕಾ
ದಲಿಸಿ ವಿಷಯಂಗಳೊಳ್ ಪಂ
ಬಲಿಸದ ಗುಣಮೈದಣುವ್ರತಂ ಜಿನಮತದೊಳ್ ॥ ೮೮ ॥

ದೆಸೆಗಳನೆ ಮೇರೆಯಂ ನಿಯ
ಮಿಸಿದಲ್ಲದೆ ನಡೆಯದಮಿತ ಭೋಗಮನುಪಭೋ
ಗಿಸದಸ್ತ್ರ ಪಾಶ ದಂಡಮ
ನೊಸೆದೀಯದುದಿದು ಗುಣವ್ರತತ್ರಯಮಕ್ಕುಂ ॥ ೮೯ ॥

ತೀವ್ರೋಪವಾಸಮುಂ ದಾ
ನ ವ್ರತಮುಂ ನಿಖಿಲ ಸಮತೆಯುಂ ಸನ್ಯಾ
ಸ ವ್ರಜನಮುಮೆಂಬಿವು ಶಿ
ಕ್ಷಾ ವ್ರತಮಿದು ನಾಲ್ಕು ತೆಜಿನಸೂನಾಗಮದೊಳ್ ॥ ೯೦ ॥

೮೬. ಅಲ್ಪ ಸುಖದ ಆಸೆಗಾಗಿ ಮುಕ್ತಿ ಸುಖದ ನಂಬಿಕೆಯು ಮನಸ್ಸಿಗೆ ಬರಲಿಲ್ಲವೆಂಬ ಗಾದೆಯನ್ನನುಸರಿಸಿ ಸ್ತಿಮಿತಸಾಗರನು ಆ ಸಮವಸರಣಕ್ಕೆ ನಮಸ್ಕರಿಸಿ ಭಕ್ತಿಯನ್ನು ತೋರಿಸಲು ಬಂದ ಧರಣೇಂದ್ರನನ್ನು ದೃಷ್ಟಿಸಿ ನೋಡಿ, ಆತನ ಸುಖದಲ್ಲಿ ಆಸಕ್ತಿಯನ್ನು ಹೊಂದಿ ಮುನೀಶ್ವರನಾದ ಸ್ತಿಮಿತಸಾಗರನು ನಿಧಾನಶಲ್ಯದಿಂದ ಧರಣೇಂದ್ರ ಪದವಿಯನ್ನು ಪಡೆದನು.

[ನಿಧಾನಶಲ್ಯ, ಮಾಯಾಶಲ್ಯ, ಮಿಥ್ಯಾಶಲ್ಯ—ನಿಧಾನಶಲ್ಯ=ಇತರರನ್ನು ನೋಡಿ ಅವರಂತೆ ಹೆಚ್ಚು ಸಂಪತ್ತು ಸುಖಾದಿಗಳನ್ನಪೇಕ್ಷಿಸಿ ಆ ಸುಖಾದಿಗಳು ತನಗೂ ಲಭಿಸಲಿ ಎಂದು ಪ್ರಾರ್ಥಿಸುವುದು.]

೮೭. ಈ ಕಡೆಯಲ್ಲಿ ಅಪರಾಜಿತನು ದಿಗಂಬರ ದೀಕ್ಷೆಯನ್ನು ಬಿಟ್ಟು ನಿರ್ವೇಗಪರಾಯಣನಾಗಿ ಪವಿತ್ರವಾದ ಶ್ರಾವಕವ್ರತಗಳನ್ನು ಅಂದರೆ ಅಣುವ್ರತಗಳನ್ನು ಮನಸಾರೆ ಸ್ವೀಕರಿಸಿದನು.

೮೮. ಹಿಂಸೆಯಲ್ಲಿ ಆಸಕ್ತಿಯಿಲ್ಲದ, ಪರಸ್ತ್ರೀಗೆ ಎಳಸದ, ಕಳ್ಳತನವಿಲ್ಲದ, ಸುಳ್ಳಾಡದ, ಕಾತುರತೆಯಿಂದ ಪಂಚೇಂದ್ರಿಯಗಳ ವಿಷಯಾಭಿಲಾಷೆಯಲ್ಲಿ ಹಂಬಲಿಸದ ಐದು ಗುಣಗಳೇ ಜಿನಮತದಲ್ಲಿ ಅಣುವ್ರತಗಳೆನಿಸುತ್ತವೆ

೮೯. ದಿಕ್ಕುಗಳನ್ನೇ ಮೇರೆಯಾಗಿ ನಿಯಮದಿಂದ ನಡೆಯುವುದೂ, ಹೆಚ್ಚು ಭೋಗೋಪಭೋಗಗಳಲ್ಲಿ ವಿರತಿಯಿರುವುದೂ, ಹಿಂಸೆಗೆ ಕಾರಣವಾದ ಅಸ್ತ್ರ, ಶಸ್ತ್ರ, ನೇಣು ಮತ್ತು ಆಯುಧಗಳನ್ನು ಕೊಡದಿರುವುದೂ ಎಂಬ ಮೂರು ಗುಣವ್ರತ.

೯೦. ತೀವ್ರವಾದ ಉಪವಾಸ, ಆಹಾರ, ಅಭಯ, ಭೈಷಜಶಾಸ್ತ್ರ ಎಂಬ ದಾನಗಳಲ್ಲಿ ಆಸಕ್ತಿ, ಸಮತಾಭಾವ [ಸಾಮಾಯಿಕ], ಅತಿಥಿ ಸತ್ಕಾರ ಎಂಬ ನಾಲ್ಕು ಶಿಕ್ಷಾವ್ರತ

1. ನತಂ ನಿವಾಸೋ (ಅ) 2. ಂದು (ಮ)

ಬಲದೇವನ ಮನದೊಳ್ ಸಲೆ
ನೆಲಸಿದುವಿವು ನೆಱೆಯೆ ವಾಸುದೇವನ ಮನದೊಳ್
ನೆಲಸವೆ ಹಿಮಕರ ಕಿರಣಂ
ನೆಲಸದವೋಲ್ ಜಲಜ ನಿಬಿಡ ಕೋಶೋದರದೊಳ್ ॥ ೯೧ ॥

ತ್ರಿದಶ ಮಹೀಶ್ವರ ಖೇಚರ
ಸದಸ್ಸರೋಜಾಕರಾಬ್ಜ ಬಂಧುಗೆ ಮುದದಿಂ
ಪದೆದೆಱಗಿ ಹಲಧರಂ ತ್ರಿಃ
ಪ್ರದಕ್ಷಿಣಂಗೆಯ್ದು ಸೇಸೆಗೊಂಡಘಜಯದಿಂ ॥ ೯೨ ॥

ಕ್ಷಿತಿಪ ತಪೋ ಗ್ರಹಣದ ಮನ
ಕತಮುಂ ಜಿನತತ್ವ ದೇಶಮುಂ ಪೊರ್ದಿ ವಿಷಾ
ಮೃತದವೊಲಿರ್ದೆಯೊಳ್ ನಿಲೆ ತ
ಮ್ಮುತಿರ್ವರುಂ ಸಮವಸರಣದಿಂ ಪೊಱಮಟ್ಟರ್ ॥ ೯೩ ॥

ವ॥ ಅಂತು ಪೊ[ಱ]ಮಟ್ಟು ತಂತಮ್ಮ ವಾಹನಂಗಳನೇಱಿ ಪರಿಜನಂಬೆರಸು ಯೂಥಪತಿ ಪೊಱಗಾದ ಕರಿಕಲಭ ಸ್ಥಿತಿಯಿಂದಂ ಮೃಗಪತಿ ಪೊಱಗಾದ ಕಿಶೋರಕೇಸರಿವಿಧಿಯಿಂದಂ ರಾಜಹಂಸಂ ಪೊಱಗಾದ ಯುವರಾಜಹಂಸ ಪ್ರಕಾರದಿಂದಂ ಬಂದು ಪತಿವಿಯೋಗದಿಂ ನಿಜ ಜನನಿಯರನೆ ಪೋಲ್ತು ಪ್ರಸಾಧನವಿರಹಿತೆಯುಂ ನಿರಾನಂದ ಜನೋಪೇತೆಯುಮಮಾನಿತ ಹರ್ಷೋತ್ಕರ್ಷೆಯುಮಾಗಿರ್ದ ತನ್ನನ್ವಯ ರಾಜಧಾನಿಯನನುಜಸಮೇತನಪರಾಜಿತನೆಯ್ದೆವಂದು.

ಕಂ॥ ಕೃಶರಾಗಂ ವಿಗತ ಮನಃ
ಪ್ರಸರತೆಯಿಂ ಕಣ್ಣ ನೀರ್ಗಳಂ ತೀವಿ ನಿರಂ
ಕುಶ ಶೋಕ ಪರವಶಂ ಚಿ
ತ್ರಶೇಷ ನಿಜ ಜನಕ ನಿಳಯಮಂ ವಿಭು ಪೊಕ್ಕಂ ॥ ೯೪ ॥

---

೯೧. ಎಂಬ ಈ ಹನ್ನೆರಡು ವ್ರತಗಳು ಬಲದೇವನ ಮನಸ್ಸಿನಲ್ಲಿ ನೆಲಸಿದುವು. ಆದರೆ ಕಮಲದ ದಟ್ಟವಾದ ಕೋಶದ ಒಳಭಾಗದಲ್ಲಿ ಚಂದ್ರನ ಕಿರಣಗಳು ಬೀಳದಂತೆ ವಾಸುದೇವನ ಮನಸ್ಸಿನಲ್ಲಿ ಈ ಹನ್ನೆರಡು ವ್ರತಗಳು ನಿಲ್ಲಲಿಲ್ಲ.

೯೨. ದೇವತೆಗಳು, ಮನುಜರು ಮತ್ತು ಖೇಚರ ಸಭೆಯೆಂಬ ಕಮಲ ಸರೋವರಕ್ಕೆ ಬಂಧುವಂತಿರುವ ಜಿನೇಶ್ವರನಿಗೆ ಪ್ರೀತಿಯಿಂದಲೂ ಭಕ್ತಿಯಿಂದಲೂ ನಮಸ್ಕರಿಸಿ ವಾಸುದೇವನು ಮೂರು ಸುತ್ತು ಪ್ರದಕ್ಷಿಣೆಯನ್ನು ಮಾಡಿ ಪಾಪಗಳನ್ನು ಜಯಿಸುವುದರಲ್ಲಿ ಸಮರ್ಥನಾದನು.

೯೩. ಸ್ತಿಮಿತಸಾಗರನು ತಪಸ್ಸನ್ನು ಹೊಂದಿದುದಕ್ಕಾಗಿ ಉಂಟಾದ ಮನಃಕ್ಲೇಶವನ್ನು ಜಿನೇಶ್ವರನಿಂದ ಉಪದೇಶಿಸಲಾದ ತತ್ವವನ್ನು ಹೊಂದಿ ಮನಸ್ಸಿನಲ್ಲಿ ವಿಷವು ಅಮೃತದಂತಿರಲು ಈ ಇಬ್ಬರೂ ಸಮವಸರಣದಿಂದ ಹೊರಹೊರಟರು.

ವ॥ ಹೀಗೆ ಹೊರಬಂದು ತಮ್ಮ ವಾಹನಗಳನ್ನೇರಿ ಪರಿಜನರೊಡನೆ ಸೇರಿ ಗಜರಾಜನಿಂದ ಅಗಲಿದ ಆನೆಯ ಮರಿಯಂತೆಯೂ, ಸಿಂಹದಿಂದ ದೂರವಾದ ಸಿಂಹದ ಮರಿಯಂತೆಯೂ, ರಾಜಹಂಸನಿಂದ ದೂರವಾದ ಹಂಸ ಮರಿಯಂತೆಯೂ ಬಂದು ಪತಿ ವಿಯೋಗದಿಂದ ದುಃಖಪಡುವ ತಮ್ಮ ತಾಯಂದಿರಂತೆ ಇದ್ದು ಸಂತೋಷರಹಿತವಾಗಿಯೂ, ಉತ್ಸಾಹವಿಲ್ಲದ ಜನತೆಯಿಂದಲೂ, ಸಂತೋಷವಿಲ್ಲದೆಯೂ ಇದ್ದ ತನ್ನ ವಂಶಪಾರಂಪರ್ಯವಾದ ರಾಜಧಾನಿಯನ್ನು ಅಪರಾಜಿತನು ತಮ್ಮನೊಡನೆ ಸೇರಿ ಬಂದು

೯೪. ಉತ್ಸಾಹವಿಲ್ಲದೆ ಮನಸ್ಸಿನ ಖೇದದಿಂದ ಕಣ್ಣಿನಲ್ಲಿ ನೀರು ತುಂಬಿಕೊಂಡು ತಡೆಯಿಲ್ಲದ ಶೋಕದಿಂದ ಕೂಡಿ ಚಿತ್ರಮಯವಾದ ತನ್ನ ತಂದೆಯ ಅರಮನೆಯನ್ನು ಪ್ರವೇಶಿಸಿದನು.

ವ॥ ಅಲ್ಲಿ ತನ್ನಂ ಕಾಣಲೊಡನಿರ್ಮ್ಮಡಿಸಿದ ಶೋಕದಾವಾನಲನೆರ್ದೆಯೊಳ್ ಪೋೞ್ಮರದ ಕಿರ್ಚ್ಚಿನಂತಳುರೆ ತಳಮಳಗಾಗಿ ಸೈರಣೆಗೆಟ್ಟು ಬಾಯಱಿದಱುತುಂ ಪಳಯಿಸುವ ಮಾತೃವರ್ಗಕ್ಕೆಱಗಿ ಪೊಡವಟ್ಟು ಕುಳ್ಳಿರ್ದು ಸಂತೈಸಿ—

ಕಂ॥ ಪರಮಾರ್ಥಂ ಪರಿಪಾಲನ
ಕರದಿಂದಪರಾಜಿತಾಬ್ಜ ಮಿತ್ರಂ ಕಳೆದಂ
ನರಪತಿ ವಿಗಮದೊಳೊಡನೊಗೆ
ದರಸಿಯರ ಮುಖಾಬ್ಜ ಶೋಕ ಹಿಮಜಲ ಲವಮಂ ॥ ೯೫ ॥

ವ॥ ತದನಂತರಂ ನೈಮಿತ್ತಿಕ ನಿರೂಪಿತ ಶುಭ ದಿನ ಮುಹೂರ್ತದೊಳ್

ಮ॥ ಕಮಳಾಳಂಕರಣೈಕ ಕಾರಣನುದನ್ವದ್ವೇಷ್ಟಿತೋರ್ವೀ ಭರ
ಕ್ಷಮನೆಂದನ್ವಿತ ಮಂತ್ರಿವರ್ಗಮೊಡನೆಟ್ಟಾಳೋಚದಿಂದೀಯೆ ರಾ
ಜ್ಯಮನಿಂದ್ರಾಕೃತಿ ಸೀರಪಾಣಿ ಮಹಿಮಾವಷ್ಟಂಭದಿಂ ಸಿಂಹಪೀ
ಠಮನಂದೇಱಿದನುತ್ಸವೋದಯಕರಂ ಸೌಜನ್ಯಕಂದಾಂಕುರಂ ॥ ೯೬ ॥

— ಗದ್ಯ —

ಇದು

ಜಿನೇಂದ್ರ ಚರಣ ಸರಸೀರುಹ ಶಿಲೀಮುಖಾಯಮಾನ

ಶ್ರೀಮದುಭಯಕವಿ ಚಕ್ರವರ್ತಿ

ನಿರ್ವರ್ತಿತಮುಂ

ಅಮ್ಮನ ಭಕ್ತಾಭಿಧಾನ[1] ಮಲ್ಲಪಾರ್ಯ

ತದನುಜಾತಾಭಿಜಾತ ಸಾರಸ್ವತ

ಪುನ್ನಮಾರ್ಯ ಕಾರಿತಮುಮಪ್ಪ

ಪುರಾಣಚೂಡಾಮಣಿ[2]ಯೊಳ್[2]

ಪ್ರಥಮಾಶ್ವಾಸಂ

ವ॥ ಅಲ್ಲಿ ತನ್ನನ್ನು ನೋಡಿದ ಮಾತ್ರವೇ ಎರಡರಷ್ಟಾದ ದುಃಖವೆಂಬ ಕಾಳ್ಗಿಚ್ಚು ಎದೆಯಲ್ಲಿ ಹಾಳಾದ ಮರದಲ್ಲಿನ ಕಿಚ್ಚಿನಂತೆ ಹಬ್ಬಿಕೊಳ್ಳಲು ತಳಮಳವಾಗಿ ಸೈರಣೆಗೆಟ್ಟು ಬಾಯುಳಿದು ದುಃಖಪಡುತ್ತಾ ಸಂತಾಪಪಡುವ ತಾಯಿಯ ಸಮೂಹಕ್ಕೆ ನಮಸ್ಕರಿಸಿ ಸಮೀಪದಲ್ಲಿ ಕೂತು ಸಮಾಧಾನಪಡಿಸಿ

೯೫. ಉತ್ತಮವಾದ ರೀತಿಯಲ್ಲಿ ರಕ್ಷಣೆ ಮಾಡುವ ಅಪರಾಜಿತನೆಂಬ ಸೂರ್ಯನು ತನ್ನ ಕಿರಣಗಳಿಂದ ಕಮಲಿನಿಯ ದುಃಖವನ್ನು ಹೋಗಲಾಡಿಸುವಂತೆ ರಾಜನ ವಿಯೋಗದಿಂದುಂಟಾದ ರಾಣಿಯರ ಮುಖಕಮಲದ ದುಃಖವೆಂಬ ಹಿಮಜಲವನ್ನು ಹೋಗಲಾಡಿಸಿದನು.

ವ॥ ಅನಂತರ ನೈಮಿತ್ತಿಕನಿಂದ ಗೊತ್ತುಮಾಡಿದ ಶುಭದಿನ ಮುಹೂರ್ತದಲ್ಲಿ

೯೬. ಅರಳಿದ ಕಮಲದಂತೆ ಮನೋಹರನೂ, ಸಮುದ್ರದಿಂದ ಸುತ್ತುವರಿಯಲಾದ ಭೂಮಂಡಲವನ್ನು ಧರಿಸಲು ಶಕ್ತಿಯುಳ್ಳವನೂ ಆಗಿದ್ದಾನೆ ಎಂದು ಕುಲಕ್ರಮವಾಗಿ ಬಂದ ಮಂತ್ರಿವರ್ಗದವರು ಒಟ್ಟಿಗೆ ಸೇರಿ ಆಲೋಚಿಸಿ, ರಾಜ್ಯವನ್ನು ಕೊಡಲು, ದೇವೇಂದ್ರನಂತಿರುವ ಹಲಾಯುಧನಾದ ಅಪರಾಜಿತನು ಹೆಚ್ಚು ಮಹಿಮೆಯಿಂದ ಸುಜನರಿಗೆ ಆನಂದವನ್ನುಂಟು ಮಾಡುವ, ಉತ್ಸಾಹಶಾಲಿಯಾದ ಬಲದೇವನು ಸಿಂಹಪೀಠವನ್ನು ಏರಿದನು.

ಗದ್ಯ॥ ಇದು ಜಿನೇಶ್ವರನ ಚರಣಕಮಲದ ದುಂಬಿಯಂತಿರುವ, ಶ್ರೀಮದುಭಯಕವಿ ಚಕ್ರವರ್ತಿಯೆಂಬ ಬಿರುದಾಂಕಿತನಿಂದ ನಿರ್ವರ್ತಿತವೂ ಅಮ್ಮನ ಭಕ್ತಾಭಿದಾನ ಮಲ್ಲಪಾರ್ಯನ, ಅವನ ತಮ್ಮ ಹೊಸ ಸಾರಸ್ವತ ಪುನ್ನಮಾರ್ಯ ಹೇಳಿಸಿದ ಪುರಾಣಚೂಡಾಮಣಿಯಲ್ಲಿ ಮೊದಲನೆಯ ಆಶ್ವಾಸವು.

---

1. + ವಿದ್ಯಾನಿಧಾನ (ಅ) 2. ಯ (ಅ)

ಶ್ರೀ

ಶಾಂತಿಪುರಾಣಂ

—೦—

ದ್ವಿತೀಯಾಶ್ವಾಸಂ

ಕಂ॥ ಶ್ರೀ ರಮಣೀ ರಮಣೀಯಂ
ಸೀರಾಸ್ತ್ರಂ ನಿಂದನಾಧಿರಾಜ್ಯದೊಳರಿ ನಿ
ರ್ದಾರಣನನಂತವೀರ್ಯನ
ಪಾರ ಬಲಂ ಯೌವರಾಜ್ಯ ಪದದೊಳ್ ನಿಂದಂ ॥ ೧ ॥

ಕುಂದದಳಚ್ಛವಿ ಕುಮುದಾ
ನಂದನನಪರಾಜಿತಂ ಪ್ರಸನ್ನಂ ಶಿಶಿರಾ
ಜಂದಲೆನೆ ಸಂದು ಪರಿಪೂ
ರ್ಣೇಂದು ವಿಲಾಸದಿನದೇಂ ಪೊದಟ್ದೊದವಿದನೋ ॥ ೨ ॥

ಅನುಜಂ ರಿಪು ದುಸ್ಸಹ ತೇ
ಜನನುವಶಂ [1]ತಾನೆ[1] ನಡಪುತಿರೆ ಶಾರದ ನೂ
ತನ ದಿನಪನಂತೆ ಸೊಗಯಿಸಿ
ದನಮಲ ಕಮಲಾಭಿವೃದ್ಧಿಯಿಂ ಬಲದೇವಂ ॥ ೩ ॥

ವಿಳಸಿತ ಗುಣಗಣದಿಂ ನಿ
ರ್ಮಳ ತನುವಿಂ ಗೆಲ್ದು ಬೀಜದಿಂ ಬೆಳಸೆಂತ
ಗ್ಗಳಮಕ್ಕುಮಂತೆ ಗುರುಗ
ಗ್ಗಳಮಾದನಿದೇಂ ಸುಪುತ್ರನೋ ಬಲದೇವಂ ॥ ೪ ॥

ಆಶ್ವಾಸ ೨

೧. ಸಂಪಲ್ಲಕ್ಷ್ಮಿಯಂತೆ ಮನೋಹರನಾದ ಹಲಾಯುಧನು ರಾಜ್ಯಪದವಿಯಲ್ಲಿ ನಿಂತನು. ಶತ್ರುಗಳನ್ನು ದಮನ ಮಾಡುವುದರಲ್ಲಿ ಹೆಚ್ಚು ಬಲಶಾಲಿಯಾದ ಅನಂತವೀರ್ಯನು ಯುವರಾಜ ಪದವಿಯಲ್ಲಿ ನಿಂತನು.

೨. ಮಲ್ಲಿಗೆಯಂತೆ ಬಿಳುಪಾದವನೂ ನೈದಿಲೆಯನ್ನು ಅರಳಿಸುವ ಚಂದ್ರನಂತೆ ಇರುವವನೂ ಆದ ಅಪರಾಜಿತನು ನಕ್ಷತ್ರಗಳ ರಾಜನೋ ಎನ್ನುವಂತೆ ಪೂರ್ಣಚಂದ್ರನ ವೈಭವದಿಂದ ಕೂಡಿ ಇದ್ದನು.

೩. ತಮ್ಮ ಶತ್ರುರಾಜರಿಗೆ ಅಸಾಧ್ಯವೆನಿಸಿಕೊಂಡ ತೇಜಸ್ವಿಯಾಗಿ ಅಪರಾಜಿತನು ಕುಲಕ್ರಮಾಗತವಾದ ವರ್ಷ ದಿಂದ ಕೂಡಿರಲು, ಬಲದೇವನು ಶರತ್ಕಾಲದ ಸೂರ್ಯನಂತೆಯೂ, ಪರಿಶುದ್ಧವಾದ ಕಮಲಗಳನ್ನು ಅರಳಿಸುವ ಸೂರ್ಯ ನಂತೆಯೂ ಇದ್ದನು.

೪. ಹೆಚ್ಚಾದ ಗುಣಗಳಿಂದಲೂ ಪರಿಶುದ್ಧವಾದ ಶರೀರದಿಂದಲೂ ಉತ್ತಮವಾದ ಬೀಜದಿಂದ ಬೆಳೆಯು ಹೆಚ್ಚು ವಂತೆ ತಂದೆಗಿಂತಲೂ ಪ್ರತಿಭಾಶಾಲಿಯೂ ಆಗಿ ಬಲದೇವನು ಸುಪುತ್ರನೆನಿಸಿಕೊಂಡನು.

---

1. ತಾನಾಗಿ (ಅ)

ಪ್ರವಿಮಲ ಮತಿಗನಿತುಂ ರಾ
ಜ ವಿದ್ಯೆಗಳ್ ನೆಱೆಯುವಮಲ ಕೀರ್ತಿಗೆ ದಶದಿ
ಗ್ವಿವರಂ ನೆಱೆಯವು ಹಲಧರ
ನವೊಲಱಿವಿನ ಜಸದ ಪವಣನೆಯ್ದಿದರೊಳರೇ ॥ ೫ ॥

ಸಾರಗುಣಂ ತದ್ರಾಜ ಕು
ಮಾರನೊಳುಳ್ಳನಿತು ಪೆಱರೊಳಿಲ್ಲೆಂತೆನೆ ಮು
ನ್ನೀರೊಳ್ ನೆಲಸುಗುಮಲ್ಲದೆ
ನೀರೊಳ್ ನೆಲಸುಗುಮೆ ಸಾರರತ್ನಾವಳಿಗಳ್ ॥ ೬ ॥

ಆದರದಿನರ್ಥಶಾಸ್ತ್ರಮ
ನೋದೆಯುಮಪರಾಜಿತಂಗೆ ದಯೆ ಮನದಿನದೇಂ
ಪೋದುದೆ ನಿಜ ಸ್ವಭಾವಮ
ನೋದೆಡೆಯೊಳ್ [1]ಮ[ಟ್ಕು][1] ಮ[2][ರಿ][2]ಗುಮೆಂಬುದುಮುಂಟೇ ॥ ೭ ॥

ಶುಂಭದ್ದ್ವಿಪುಳಾಲಾನ
ಸ್ತಂಭಂ ಲಕ್ಷ್ಮೀ ಕರೇಣುಗೆನಿಸಿದುದು ಭುಜ
ಸ್ತಂಭಂ ಲಕ್ಷ್ಮೀ ಪ್ರಾಕಾ
ರಂ ಭುವನಕ್ಕೇಂ ಬಲಸ್ಥನೋ ಬಲದೇವಂ ॥ ೮ ॥

ಗಜಘಟೆಗೆ ನಾಥನಾಗಿಯು
ಮಜಾತ ಮದನಹಿತಸಿಂಹನಾಗಿಯುಮಾರ್ಗಂ
ನಿಜದಿಂ ಕ್ಷಮಾ ಪರನುಮಂ
ಗಜನ್ಮನಾಗಿಯುಮಮಾನುಷಂ ಹಲಹಸ್ತಂ ॥ ೯ ॥

---

೫. ಇವನ ಬುದ್ಧಿಗೆ ಯಾವ ರಾಜವಿದ್ಯೆಗಳೂ ಸರಿಸಮಾನವಾಗುತ್ತಿರಲಿಲ್ಲ. ಈತನ ಯಶಸ್ಸಿಗೆ ದಶದಿಕ್ಕುಗಳೂ ಸಾಲವು ಎನ್ನುವಂತೆ ಈ ಬಲದೇವನು ಹೆಚ್ಚಾದ ಜ್ಞಾನವನ್ನೂ ಯಶಸ್ಸನ್ನೂ ಗಳಿಸಿ ತನಗಿಂತ ಮಿಗಿಲಾದವರಿಲ್ಲ ವೆನ್ನುವಂತಾದನು.

೬. ರಾಜಕುಮಾರನಲ್ಲಿ ಇರುವಷ್ಟು ಉತ್ತಮ ಗುಣಗಳು ಮತ್ತೊಬ್ಬರಲ್ಲಿ ಇರುತ್ತಿಲ್ಲ. ಉತ್ತಮವಾದ ರತ್ನ ಸಮೂಹವು ಸಮುದ್ರದಲ್ಲಿರುತ್ತದೆಯೋ ವಿನಹ ಉಳಿದ ನೀರಿನಲ್ಲಿ ಇರುತ್ತದೆಯೇ ?

೭. ಪ್ರೀತಿಯಿಂದ ಅರ್ಥಶಾಸ್ತ್ರವನ್ನು ಓದಿದರೂ ಅಪರಾಜಿತನಿಗೆ ಮನಸ್ಸಿನಲ್ಲಿ ದಯೆಯೆಂಬುದು ಕಡಮೆಯಾಗ ಲಿಲ್ಲ. ಉತ್ತಮರಿಗೆ ತಮ್ಮ ಸ್ವಭಾವಗುಣವು ಹೋದ ಕಡೆಗಳಲ್ಲಿ ನಷ್ಟವಾಗುವುದುಂಟೇ.

೮. ಈತನ ಭುಜವೆಂಬ ಕಂಬವು ಲಕ್ಷ್ಮೀದೇವಿಯ ಆನೆಗೆ ಇರುವ ಪ್ರಕಾಶಮಾನವಾದ ಆನೆ ಕಟ್ಟುವ ಕಲ್ಲು ಕಂಬಕ್ಕೆ ಸಮಾನವಾಗಿತ್ತು. ಇದರಿಂದ ಬಲದೇವನು ಈ ಲೋಕದಲ್ಲಿ ಎಂತಹ ಪ್ರಬಲಶಾಲಿಯೋ !

೯. ಆನೆಗಳ ಸಮೂಹಕ್ಕೆ ಪ್ರಭುವಾದಾಗ್ಯೂ ಅಹಂಕಾರವಿಲ್ಲದವನು, ಶತ್ರುಗಳಿಗೆ ಸಿಂಹಪ್ರಾಯನಾದರೂ ಎಲ್ಲರಲ್ಲಿಯೂ ಸ್ವಭಾವವಾಗಿ ದಯಾಪರನು, ಮನ್ಮಥ ಸದೃಶನಾದರೂ ಬಲದೇವನು ಮನುಷ್ಯರ ಗುಣವನ್ನು ಮೀರಿದ್ದನು.

---

1. ಮಕ್ಕು (ಅ) 2. ಱಿ (ಮ)

ಬಲದೇವನಖಿಳ ರಿಪುಕುಲ
ವಿಲಯಾನಲನಾತ್ಮಕುಲ ಸಮುಜ್ವಲ ಗಗನ
ಸ್ಥಲ ಖರಕರಂ ಸುಪುತ್ರಃ
ಕುಲ ದೀಪಕ ಎನಿಸಿ ನೆಗಟ್ದನಖಿಲಾವನಿಯೊಳ್ ॥ ೧೦ ॥

ಅನುಜಂ ನಾಮಾಕ್ಷರದಿಂ
ದನಂತವೀರ್ಯಂ ಪರಾಕ್ರಮಕ್ರಮದಿಂ ತ
ನ್ನನೆ ತಾನೆ ಪೋಲ್ಗುಮೆಂಬಿನ
ಮನಂತವೀರ್ಯಂಗನಂತವೀರ್ಯತೆ ಸಾರ್ಥಂ ॥ ೧೧ ॥

ಈ ಭೂಮಿಗೆ ಮಿಗಿಲಾದೆ
ನ್ನೀ ಭೋಗಮೆ ಭೋಗಮೆಳೆಗೆ ಕಿಟ್ಟಿಟ್ಟ ಫಣೀಂ
ದ್ರಾಭೋಗಂ ಭೋಗಮೆ [1]ಪೆಜಿ
ದೇಭೋಗಂ[1] ಪೋಗಿಮೆಂಬನಂಬುಜನಾಭಂ ॥ ೧೨ ॥

ಧರಣಿಯನವಯವದಿಂದಮೆ
ಪರಿಪಾಲಿಸಲೆನ್ನ ಭುಜಮೆ ಸಾಲ್ವುದು ಹಸ್ತ್ಯ
ಶ್ವ ರಥ ಪದಾತಿ ಬಲಂ ನೃಪ
ಪರಿಕರಮೆಂಬಬ್ಜಜಠರನೇಂ ಮೆಯ್ಗಲಿಯೋ ॥ ೧೩ ॥

ಭೃಂಗ ಯಮುನಾ ನಭಃ ಶ್ಯಾ
ಮಾಂಗಂ ಹರಿ ಸಿರಿಗಿರಲ್ಕೆ ಮಾಡಿದ ಭಾಸ್ವ
ಜ್ಜಂಗಮ ಮಹೇಂದ್ರ ನೀಲೋ
ತ್ತುಂಗ ಪ್ರಾಸಾದಮೆನಿಸಿ ಸೊಗಯಿಸಿ ತೋರ್ಕುಂ ॥ ೧೪ ॥

---

೧೦. ಸಮಸ್ತ ಶತ್ರುರಾಜರನ್ನು ನಷ್ಟಮಾಡುವುದರಲ್ಲಿ ಸಮರ್ಥನಾದ ಬಲದೇವನು ವಂಶವೆಂಬ ಪ್ರಕಾಶಮಾನವಾದ ಆಕಾಶಕ್ಕೆ ಸೂರ್ಯನಂತೆಯೂ ಸುಪುತ್ರ ಮತ್ತು ಕುಲದೀಪಕನೆನಿಸಿ ಭೂಮಂಡಲದಲ್ಲೆಲ್ಲಾ ಪ್ರಕಾಶಿಸಿದನು.

೧೧. ತಮ್ಮನು ಹೆಸರಿನ ಅಕ್ಷರದಿಂದಲೇ ಅನಂತವೀರ್ಯನೆನಿಸಿಕೊಂಡು ಪರಾಕ್ರಮದಿಂದ ತನಗೆ ತಾನೇ ಹೋಲಿಕೆಯಾಗಿದ್ದನು. ಇದರಿಂದ ಅನಂತವೀರ್ಯನೆಂಬ ಹೆಸರು ಸಾರ್ಥಕವಾಯಿತು.

೧೨. ಈ ಲೋಕದಲ್ಲಿ ಅಧಿಕವಾದ ನನ್ನ ಭೋಗವೇ ಭೋಗ. ಧರಣೇಂದ್ರನ ಭೋಗವು ಈ ಭೂಮಿಯಲ್ಲಿ ಕೀಳುಮಾಡಿದಂತೆ ಆಗಿರುವುದರಿಂದ ಅದು ಭೋಗವೆನಿಸಿಕೊಳ್ಳುತ್ತದೆಯೇ? ಅಥವಾ ಮತ್ತಾವುದಾದರೂ ಭೋಗವುಂಟೇ? ಸುಮ್ಮನಿರಿ ಎಂದು ಹೇಳುವಂತಿತ್ತು.

೧೩. ಈ ವಸುದೇವನು ಈ ಭೂಮಂಡಲವನ್ನು ರಕ್ಷಿಸಲು ನನ್ನ ಭುಜಬಲಗಳೇ ಸಾಕು. ಆನೆ, ಕುದುರೆ, ರಥ ಮತ್ತು ಪದಾತಿ, ಸೈನ್ಯವು ರಾಜನ ಪರಿವಾರವೆಂದು ತಿಳಿದ ಈತನು ಎಂತಹ ಪರಾಕ್ರಮಿಯೋ!

೧೪. ಭ್ರಮರ ಯಮುನಾನದಿ ಅಂತರಿಕ್ಷದಂತೆ ನೀಲಿಯ ಬಣ್ಣ, ವಿಷ್ಣುವಿನ ಸಂಪತ್ತಿಗಾಗಿ ಮಾಡಿರುವ ಮನೋಹರವಾದ ಜಂಗಮ ಮಹೇಂದ್ರ ನೀಲಿಯ ಪರ್ವತಗಳ ಶಿಖರವೋ ಎಂಬಂತೆ ನೋಡುವುದಕ್ಕೆ ಸೊಗಸಾಗಿದ್ದನು.

---

1. ಮತ್ತೆ ಮುದದೇ (ಅ) ಮಳ್ಕು (ಮ)

ದೊರೆವೆತ್ತ ವಿಜಯ ವಾಮೇ
ತರ ಭುಜದೊಳ್ ನಿಂದ ಬೀರಸಿರಿಯೆ ಸೆವ ನೆಟಿಲ್
ಸ್ಫುರಿಯಿಸೆ ಮೆಯ್ಯೊಳ್ ಪೋಲ್ತಂ
ಹರಿ ನೀಳೋದ್ಯತ್ಪ್ರಸನ್ನ ಮಣಿದರ್ಪಣಮಂ ॥ ೧೫ ॥

ಬಂಹಿಮವತ್ಪಂಜರ ಶಿಶು
ಸಿಂಹಂಗಳೊಳಾದ ಬಾಳ ಕೇಳಿಯ ಕೆಳೆಯಂ
ಬೃಂಹಿತ ರಿಪು ದಂತಿ ಘಟಾ
ಸಂಹರಣದಿನೇನಧೋಕ್ಷಜಂ ನೆರ[1]ಪಿದನೋ ॥ ೧೬ ॥

ವ॥ ಮತ್ತಂ—

ಕಂ॥ ಪೊಱಗಣರಿವರ್ಗಮಂ ತ
ಳ್ತಿಱಿದು ಗೆಲಲ್ಬರ್ಕುಮೊಳಗಣರಿಷಡ್ವರ್ಗಂ
ನೆಱೆದಿರೆ ಬಾರದು ಗೆಲಲದ
ನಱಿದೀ ಬಲದೇವನಂತು ಗೆಲ್ದರುಮೊಳರೇ ॥ ೧೭ ॥

ಅಂತವರಿರ್ವರೊಳಂ ಭವ
ಸಂತತಿಯಿಂದೊಡನೆ ನಡೆವ ಮೋಹಂ ಮೊದಲಿಂ
ದಂ ತುದಿಯನೆಯ್ದೆ ಜಲರುಹ
ತಂತುವೊಲೆಡೆವಱಿಯದೊಲ್ದು ಸಲೆ ಪಲಕಾಲಂ ॥ ೧೮ ॥

ವ॥ ಒಂದು ದೆವಸಮೋಲಗದೊಳೊರ್ವನಪೂರ್ವಂ ನಿಸ್ಪಷ್ಟನವಗತಾರ್ಥಶಾಸ್ತ್ರನಾಕೃತಿ ವಂತನುದಾತ್ತೋದಂತ ಸಂಭಾಷಣಸಮುತ್ಪಾದಿತತೋಷಣಂ ಸ್ವವಿಚಾರ ವಿಭೂಷಣಂ ಸಪ್ತೋಪಾಯ ಪರಿಗೋಚರಂ ಖೇಚರಂ ಬಂದು ದೌವಾರಿಕ ನಿವೇದಿತ ವೃತ್ತಾಂತನಾಗಿ ಕಂಡ ಪರಾಜಿತಾನಂತವೀರ್ಯರ್ಕಳ್ಗೆಱಗಿ ಪೊಡವಟ್ಟುಚಿತ ಪ್ರದೇಶನ್ಯಸ್ತ ಭದ್ರಾಸನದೊಳ್ ಕುಳ್ಳಿರೆ ಲಾಂಗಲ[2]ಹಸ್ತಂ ವಿದ್ಯಾಧರರಾಜದೂತನ ಮೊಗಮಂ ನೋಡಿ—

---

೧೫ ಎದ್ದು ಕಾಣುವ ಜಯಲಕ್ಷ್ಮಿಯು ಎರಡು ಭುಜಗಳಲ್ಲಿ ಇರುವ ವೀರಲಕ್ಷ್ಮಿಯು ಮನೋಹರವಾದ ನೆಳಲಂತೆ ಪ್ರಕಾಶಿಸುತ್ತಿರಲು ವಾಸುದೇವನು ನೀಲರತ್ನದ ಕಾಂತಿಯುತವಾದ ರತ್ನಗನ್ನಡಿಯಂತೆ ಶರೀರವನ್ನು ಹೊಂದಿದ್ದನು.

೧೬. ಹಿಮವತ್ಪರ್ವತದ ಗುಹೆಯೆಂಬ ಪಂಜರಗಳಲ್ಲಿ ಆಡುವ ಸಿಂಹದ ಮರಿಗಳಂತೆ ಬಾಲಕೇಳಿಯಲ್ಲಿಯೂ ಮತ್ತು ಭೃಂಹಿತ ಧ್ವನಿಮಾಡುವ ಆನೆಗಳ ಸಮೂಹವನ್ನು ನಾಶಮಾಡುವುದರಲ್ಲಿ ವಾಸುದೇವನು ಬಹು ಪ್ರಸಿದ್ಧನಾಗಿದ್ದನು.

ವ॥ ಮತ್ತು

೧೭. ಹೊರಗಣ ಶತ್ರುವರ್ಗದವರನ್ನು ಗೆಲ್ಲುವುದು ಸುಲಭ. ಆದರೆ ಒಳಗಿರುವ ಅರಿಷಡ್ವರ್ಗಗಳನ್ನು ಗೆಲ್ಲುವುದು ಬಹಳ ಕಷ್ಟ ಎಂದು ಈ ವಿಷಯವನ್ನು ತಿಳಿದು ಬಲದೇವನಂತೆ ಗೆದ್ದವರು ಯಾರು? ಇತರರು ಯಾರೂ ಇಲ್ಲ.

೧೮. ಹೀಗೆ ಅವರಿಬ್ಬರಲ್ಲಿಯೂ ಭವಸಂಬಂಧದಿಂದ ಉಂಟಾದ ಮೋಹವು ಮೊದಲಿನಿಂದ ಕೊನೆಯವರಗೂ ಇರುತ್ತಿರಲು ತಾವರೆಯ ಎಳೆಯಂತೆ ಒಡನೆ ಹೊಂದಿಕೊಂಡು ಕೆಲವು ಕಾಲ ಕಳೆಯಲು—

ವ॥ ಒಂದು ದಿವಸ ಆಸ್ಥಾನದಲ್ಲಿ ಒಬ್ಬ ಅಪೂರ್ವನೂ, ಸ್ಪಷ್ಟವಾದ ನೂತನವಾದ ಅರ್ಥಶಾಸ್ತ್ರವುಳ್ಳವನೂ, ಸುಂದರನೂ, ಉದಾತ್ತವಾದ ಮತ್ತು ಗಂಭೀರವಾದ ಮಾತುಳ್ಳವನೂ, ತನ್ನ ವಿಚಾರದಲ್ಲಿ ಅಲಂಕೃತನೂ, ಸಂತೋಷವುಳ್ಳವನೂ, ಏಳು ವಿಧವಾದ ಉಪಾಯಗಳನ್ನು ತಿಳಿದವನೂ ಆದ ಖೇಚರನೊಬ್ಬನು ದ್ವಾರಪಾಲಕನ ಮೂಲಕ ತನ್ನ ಬರುವಿಕೆಯನ್ನು ನಿವೇದಿಸಿ, ಅಪರಾಜಿತ ಮತ್ತು ಅನಂತವೀರ್ಯರಿಗೆ ನಮಸ್ಕರಿಸಿ ತನಗೆ ಇಟ್ಟಿದ್ದ ಉಚಿತಾಸನದಲ್ಲಿ ಕುಳಿತಿರಲು ಬಲದೇವನು ವಿದ್ಯಾಧರ ರಾಜದೂತನ ಮುಖವನ್ನು ನೋಡಿ

---

1. ಱ (ಅ) 2. ಧರಂ (ಅ)

ಕಂ॥ ಬಂದ ಬರವಾವುದೆಲ್ಲಿಂ
ಬಂದಿರ್ ಭವದೀಯ ನಾಮಮೇನೆಂಬುದಿದೆಂ
ತೆಂದೆಮಗೆ ಪೇೞ್ವುದವಿತಥ
ಮೆಂದೊಡೆ ಖಚರೇಂದ್ರ ದೂತನಿರ್ದು ವಿನೀತಂ ॥ ೧೯ ॥

ವ॥ ವಿರಚಿತಾಂಜಲಿಪುಟಘಟಿತಕರನಿಂತೆಂದು ಬಿನ್ನಪಂ[1]ಗೆಯ್ದಂ[1]—

ಉ॥ ವಿಭು ವಿದ್ಯಾಧರಚಕ್ರವರ್ತಿ ವಿಜಯಾರ್ಧಾದ್ರೀಂದ್ರ ಚೂಡಾಮಣಿ
ಪ್ರಭನುದ್ವೃತ್ತ ನರೇಂದ್ರ ಕಂಠ ಕದಳೀ ಚ್ಛೇದೈಕ ದಕ್ಷಾಸಿ ಭಾ
ವಿಭವದ್ಭೂತ ನೃಪಾಗ್ರಗಣ್ಯನಮರ ಪ್ರಸ್ಪರ್ಧಿ ಪುಣ್ಯಂ ವಿರೋ
ಧಿ ಭವಾಷ್ಟಾದಶ ತೀರ್ಥ ನಿಷ್ಠಿತ ಚರ ವ್ಯಾಪಾರ ಪಾರಾಯಣಂ ॥ ೨೦ ॥

ಮ॥ ಪದ ನಮಿತಾಖಿಲಾರಿ ದಮಿತಾರಿ ಮದೀಶ್ವರನೆನ್ನನಿಲ್ಲಿಗ
ಟ್ಟಿದನಿದನೊಪ್ಪುಗೊಳ್ವುದು ಪಸಾಯಮನಾ ಮಹಿಪಂ ಮರಲ್ದು ಬೇ
ಡಿದುದನದಾಗದೆನ್ನದಿರದಟ್ಟುವುದಿನ್ನದನಾನದಾವುದೆಂ
ಬುದನಱಿವಂತು ಪೇೞ್ವೆನವಧಾರಿಸಿಮಿರ್ವರುಮೇಕ ಚಿತ್ತದಿಂ ॥ ೨೧ ॥

ವ॥ ಸಕಲ ಗಗನಚರ ಮಣಿಕಿರೀಟಮರೀಚಿ ಮೇಚಕಿತ ಚರಣನಖ ಮಯೂಖನನವರತ ನಿಪತಚ್ಚಾರುಚಾಮೀಕರ ದಂಡಮಂಡಿತ
ಧವಳಚಾಮರಪವಮಾನಾಂದೋಳಿತ ದುಕೂಲಾಂಶು ಕಾಂತನನಂತ ಕಾಂತ ವ್ಯೋಮಚರ ಕಾಂತಾ ಕಟಾಕ್ಷೈಕ ಲಕ್ಷಂ ದಮಿತಾರಿ ಮಹಾರಾಜಂ
ಮೃಗರಾಜಾಸನಾಸೀನನೊಡ್ಡೋಲಗಂಗೊಟ್ಟಿರೆ ವೈಣ ಶಾರೀರ ಗೀತ ವಿಶಾರದಂ ನಾರದನಭ್ರ ಪಥದಿನವನಿಗವತರಿಸೆ ಕಂಡು ಪವಮಾನ
ಮಾರ್ಗದಿನವನಿತಳದೊಳಡಿಯಿಡದಲ್ಲಿಂ ಮುನ್ನಮಿದಿರೆೞ್ದು ಭಕ್ತಿ ಪುರಸ್ಸರಂ ಮನದೆಱಕದಿನೆಱಗಿದ ಗಗನಚರಾಧೀಶನಂ ಯತಿ ಪರಷಿ
ಯಥೋದ್ದಿಷ್ಟ ವಿಷ್ಟರದೊಳ್ ಕುಳ್ಳಿರ್ದು ಸ್ವಾಗತ ಕುಶಲ ಸಂಭಾಷಣಾನಂತರಂ ಪಡೆಮಾತು ಮಾತುಗಳ್ ತಗುಳೆ ಮಾತುಮಾತಾಗೆ ನಾರದ
ನಿಂತೆಂದಂ ಎಮ್ಮಕಂಡುಂ ಕೇಳ್ದುಮಱಿಯದ ವಸ್ತುಗ[2]ಳುಮಿಲ್ಲ[2] ಗಾಂಧರ್ವಮೆಂಬುದೆಮ್ಮ ಬಾಳವಿದ್ಯೆಯದಱಿಂ[3]ದೆಮ್ಮಂ ರಂಜಿಸುವನ್ನರ್

೧೯. ಬಂದ ಕಾರಣವೇನು? ಎಲ್ಲಿಂದ ಬಂದಿರಿ? ನಿಮ್ಮ ಹೆಸರೇನು? ಎಂಬ ವಿಷಯವನ್ನು ವಿಶದವಾಗಿ
ನಮಗೆ ಹೇಳಿ ಎನಲು, ಖೇಚರದೂತನು ನಮ್ರತೆಯಿಂದ ಇದ್ದು

ವ॥ ತನ್ನ ಕೈಗಳನ್ನು ಹಣೆಯಲ್ಲಿ ಜೋಡಿಸಿ ಹೀಗೆಂದು ಅರಿಕೆಮಾಡಿದನು.

೨೦. ಪ್ರಭುವೂ, ವಿದ್ಯಾಧರ ಚಕ್ರವರ್ತಿಯೂ, ವಿಜಯಾರ್ಧ ಪರ್ವತಕ್ಕೆ ಶಿರೋಭರಣದ ಕಾಂತಿಯಿಂದ ಎದ್ದು
ಕಾಣುವ ಶತ್ರುರಾಜರ ಕುತ್ತಿಗೆಯೆಂಬ ಬಾಳೆಯ ಗಿಡವನ್ನು ಛೇದಿಸುವುದರಲ್ಲಿ ದಕ್ಷವಾದ ಕತ್ತಿಯುಳ್ಳವನೂ, ಮುಂದೆ
ಮಹಾ ಚಕ್ರವರ್ತಿಯಾಗತಕ್ಕವನೂ, ದೇವೇಂದ್ರನನ್ನು ಪುಣ್ಯಪ್ರಭಾವದಿಂದ ಸ್ಪರ್ಧಿಸುವವನೂ, ವಿರೋಧವುಳ್ಳ
ಭವವೆಂಬ ೧೮ ತೀರ್ಥಗಳಲ್ಲಿ ನಿಶ್ಚಿತವಾದ ಕಾರ್ಯದಲ್ಲಿ ನಿರತನೂ,

೨೧. ಸಮಸ್ತ ಶತ್ರುಗಳಿಂದ ಪಾದಕ್ಕೆ ಎರಗಿಸಿಕೊಳ್ಳುವವನೂ ನನ್ನ ಪ್ರಭುವೂ ಆದ ದಮಿತಾರಿ ಎಂಬ
ಖೇಚರೇಶ್ವರನು ನನ್ನನ್ನು ಇಲ್ಲಿಗೆ ಕಳುಹಿಸಿದ್ದಾನೆ. ಈ ಬಹುಮಾನವನ್ನು ಸ್ವೀಕರಿಸುವುದು. ಅಲ್ಲದೆ ಆ ರಾಜನು
ಪುನಃ ಬೇಡಿದುದನ್ನು ಅದು ಆಗುವುದಿಲ್ಲ ಎಂದು ಹೇಳದೆ ಅದನ್ನು ಕಳುಹಿಸುವುದು. ಅದು ಯಾವುದು ಎಂಬ ವಿಷಯ
ವನ್ನು ತಿಳಿಯುವಂತೆ ಹೇಳುತ್ತೇನೆ. ನೀವಿಬ್ಬರೂ ಒಂದೇ ಮನಸ್ಸಿನಿಂದ ಚಿತ್ತವಿಟ್ಟು ಕೇಳುವುದು.

ವ॥ ಸಮಸ್ತ ಖೇಚರ ರಾಜರ ರತ್ನ ಖಚಿತವಾದ ಕಿರೀಟದ ಕಾಂತಿಯಿಂದ ಪ್ರಕಾಶಮಾನವಾದ ಕಾಲಿನ ಉಗುರಿನ
ಕಾಂತಿಯುಳ್ಳವನೂ, ಯಾವಾಗಲೂ ಬೀಸುತ್ತಿರುವ ಮನೋಹರವಾದ ಚಿನ್ನದ ಹಿಡಿಗಳಿಂದ ಭೂಷಿತವಾದ ಬಿಳಿಯ
ಚಾಮರಗಳ ಬೀಸುವಿಕೆಯಿಂದ ಉಂಟಾದ ಗಾಳಿಯಿಂದ ಅಲ್ಲಾಡುತ್ತಿರುವ ರೇಷ್ಮೆ ಹೊದಿಕೆಯಿಂದ ಮನೋಹರನೂ,

1. ಗೈದಂ (ಮ) 2. ಳಿಲ್ಲ (ಮ)

ಪ್ರೌಢ[1]ಗೀತ[1]ರಿಲ್ಲಪ್ಪೊಂದು ಚೋದ್ಯಮಂ ಕಂಡೆವಾವುದೆನೆ ವತ್ಸಕಾವತೀ ವಿಷಯದ ಪ್ರಭಾಕರೀಪುರಮನಾಳ್ವನಪರಾಜಿತನೆಂಬೊಂ [2]ಮಹಾಮಂಡಳೇಶ್ವರಂ[2] ತನ್ನ ತಮ್ಮನಂ ಯುವರಾಜನನಂತವೀರ್ಯನಂ ರಾಜ್ಯಭಾರದೊಳ್ ನಿಯೋಜಿಸಿ ಸಮಸ್ತವಿಷಯಸುಖಮನನುಭವಿಸುತಿರ್ಪ ನಾಮುಮೊಂದುದಿವಸಮಾತನಂ ಪರಸಲ್ ಪೋಗಿ ಗೊಟ್ಟಿಗೆಯೊಳ್ ಕುಳ್ಳಿರೆ ಗೊಟ್ಟಿಗೇಯಮಾಗೆ—

ಚಂ॥ ಸ್ಮರ ಶರಮುಂ ತದೀಯ ಮೃದು ಗೇಯಮುಮುರ್ಚಿದ ಪುಣ್ಣನೊಕ್ಕನೆ
ತ್ತರನಱಿಸಲ್ಕೆವೇಡ ನೆಱಿಗೊಂಡುದನುಣ್ಮುವ ಕಣ್ಣ ನೀರಿನಂ
ಕುರಿಸಿದ ಮೆಯ್ಯರೋಮದೊದವಿಂದುಪಲಕ್ಷಿಸೆ ಬರ್ಪುದಿಲ್ಲ ಬ
ರ್ಬರೆಯ ಕಿರಾತೆಯೊಟ್ಟಜೆಗೆ ಕಿನ್ನರರೊಟ್ಟಜೆಯುಂ ತೆರಟ್ಕೆಯುಂ ॥ ೨೨ ॥

ವ॥ ಅಂತೊಂದೆ ಕೊರಲೊಳ್ ಕೊಳೆಪಾಡುವ ಬರ್ಬರಕಿರಾತಿಯರಿಂಗೊರಲೊಳೊದವಿಬಂದೆರ್ದೆಯನಳ್ಳೆವಿಳ್ಳೆಯಾಗಿ ಪಿಡಿದಲುಗುವೆತ್ತಲುಗೆ ತೊ[ಟ್ಟು]ಱಿಯುಮುಗಿಯುಂ ಬಗಿಯುಂ ಮಾಡಿ ಮಾನಮನುಱೆ ಸೆಱೆವಿಡಿದ ಸೀಯನಪ್ಪ ಗೇಯರಸಾಬ್ಧಿ ಪೂರದೊಳ್ ಮೂಡಿ ಮುೞುಗಾಡುತ್ತುಂ ನಿಮೀಳಿತ ನೇತ್ರನುಂ ರೋಮಾಂಚ ಕಂಚುಕಿತ ಗಾತ್ರನುಮಾಗಿರ್ದಪರಾಜಿತನೆಮ್ಮ ಬಂದು[3]ದುದುಮನಿ[3]ರ್ದುದುಮನಱಿಯದಿರೆಯುಂ ಕಿಱಿದು ಲೋಕಜ್ಞತೆಯೊಂದಿರ್ಪುದಱಿಂ ರಸಭಂಗಂ ಮಾಡದೆ ಗಜೋನ್ಮೀಲನಂಗೆಯ್ದು ವಿಷಯಾಸಕ್ತಪುರುಷೇಂದ್ರಿಯಪಂಚಕಂ ಚಿತ್ರಗತ ರೂಪೇಂದ್ರಿಯ ಪಂಚಕ ಪ್ರಪಂಚ[4]ಸಮಾನ[4]ಮಕ್ಕುಮೆಂದು ಬಗೆದೆಟ್ಟಿ ಬಂದೆವದಱಿಂದಮಾ ಗಾಯಿಕಾರತ್ನದ್ವಯಂ ಸರ್ವರತ್ನಭಾಜನನುಂ, ಚಕ್ರವರ್ತಿಯುಮಪ್ಪ ನಿನಗಲ್ಲದೆ ಯೋಗ್ಯಮಲ್ಲೆಮ್ಮಱಿವುದುಮನಿತೆ, ಮತ್ತುಮೞಿದುದನೆಮಗೇನೆಂದಱಿಯಲ್ಬಾರದು ಎಂದು ನುಡಿದು

ಅನೇಕ ಮನೋಹರರಾದ ಖೇಚರ ಸ್ತ್ರೀಯರ ಕಟಾಕ್ಷವೀಕ್ಷಣೆಗೆ ಗುರಿಯಾದ ದಮಿತಾರಿ ಮಹಾರಾಜನು ಸಿಂಹಾಸನಾಸೀನನಾಗಿ ಆಸ್ಥಾನದಲ್ಲಿ ಒಡ್ಡೋಲಗವನ್ನು ನಡೆಸುತ್ತಿರಲು, ವೀಣೆ ಮತ್ತು ಹಾಡುಗಾರಿಕೆಯಲ್ಲಿ ವಿಶಾರದನಾದ ನಾರದನು ಆಕಾಶಮಾರ್ಗದಿಂದ ಭೂಮಿಗೆ ಇಳಿಯಲು ನೋಡಿ ಆಕಾಶದಿಂದ ಅವನು ಭೂಮಿಗೆ ಅಡಿಯಿಡುವುದಕ್ಕೆ ಮೊದಲೇ ಎದುರಾಗಿ ಹೋಗಿ ಭಕ್ತಿಪೂರ್ವಕವಾಗಿ ಮನಸ್ಸಿನಲ್ಲಿ ಮೂಡಿದ ಪ್ರೀತಿಯಿಂದ ನಮಸ್ಕರಿಸಿದ ಖೇಚರೇಶ್ವರನನ್ನು ನಾರದನು ಆಶೀರ್ವದಿಸಿ, ಉಚಿತವಾದ ಆಸನದಲ್ಲಿ ಕೂತು ಸ್ವಾಗತ ಕುಶಲ ಸಂಭಾಷಣೆಯ ನಂತರ ಪರಸ್ಪರ ಮಾತನಾಡುವಲ್ಲಿ ಮಾತು-ಮಾತು ಮುಗಿಯಲು ನಾರದನು ಹೀಗೆ ಹೇಳಿದನು : ನಾವು ನೋಡಿ ಕೇಳಿ ತಿಳಿಯದ ವಸ್ತುಗಳಿಲ್ಲ. ಗಾಂಧರ್ವ ವಿದ್ಯೆ ಎಂಬುದು ನಮ್ಮ ಬಾಲವಿದ್ಯೆ. ಅದರಲ್ಲಿ ನಮ್ಮನ್ನು ರಂಜನೆಗೊಳಿಸುವಂತಹ ಪ್ರೌಢರು ಮತ್ತೊಬ್ಬರಿಲ್ಲ. ನಾವು ಒಂದು ಆಶ್ಚರ್ಯವಾದ ವಿಷಯವನ್ನು ನೋಡಿದೆವು. ಅದು ಯಾವುದೆಂದರೆ ವತ್ಸಕಾವತೀ ದೇಶದ ಪ್ರಭಾಕರೀ ಪಟ್ಟಣವನ್ನು ಆಳುವ ಅಪರಾಜಿತನೆಂಬುವನು ತನ್ನ ತಮ್ಮನಾದ ಅನಂತವೀರ್ಯನನ್ನು ರಾಜ್ಯಭಾರದಲ್ಲಿ ನಿಲ್ಲಿಸಿ ಸಮಸ್ತ ಸಂಸಾರ ಸುಖವನ್ನು ಅನುಭವಿಸುತ್ತಿರುತ್ತಾನೆ. ನಾವೂ ಕೂಡ ಒಂದು ದಿವಸ ಆತನನ್ನು ಹರಸಲು ಹೋಗಿ ಸಮೀಪದಲ್ಲಿರುತ್ತಿರಲು ಸಂಗೀತಗೋಷ್ಠಿಗಾನ ನಡೆಯುತ್ತಿತ್ತು.

೨೨. ಅವರ ಮೃದುಮಧುರವಾದ ಸಂಗೀತವೂ ಮನ್ಮಥ ಬಾಣವೂ ಉಜ್ಜಿದ ಹುಣ್ಣನ್ನೂ [ಗಾಯ] ಹೊರಸೂಸುವ ರಕ್ತವನ್ನೂ ಹೋಲುವಂತೆಯೂ, ಮನಸ್ಸಿನ ಉತ್ಸಾಹದಿಂದ ಹೊರಗೆ ಬರುವ ಆನಂದಬಾಷ್ಪದಿಂದ ಚಿಗುರಿದ ಶರೀರದ ರೋಮಾಂಚದಿಂದಲೂ ಬರ್ಬರ ಮತ್ತು ಕಿರಾತೆಯರ ಅತಿಶಯಕ್ಕೆ ಕಿನ್ನರರ ಅತಿಶಯ ಸಮನಾಗದು.

ವ॥ ಹೀಗೆ ಒಂದೇ ಕೊರಳಿನಿಂದ ಮನೋಹರವಾಗಿ ಹಾಡುವ ಬರ್ಬರ ಕಿರಾತೆಯರ ಇನಿದಾದ ಕೊರಳಿನಲ್ಲಿ ಮೂಡಿಬಂದು ಎದೆಯನ್ನು ಅಳ್ಳೆವಿಳ್ಳೆಯಾಗಿ ಹಿಡಿದು ಅಲ್ಲಾಡಿಸುವಂತೆ ಅಲುಗಲು ತೊಳ್ತುಳಿಯೂ ಉಗಿಬಗಿಯೂ ಮಾಡಿ ಒಟ್ಟಿಗೆ ಸೇರಿ ಮನಸ್ಸಿಗೆ ಆನಂದವನ್ನುಂಟುಮಾಡಿ ಮನಸ್ಸನ್ನು ಹೆಚ್ಚಾಗಿ ಸೆರೆಹಿಡಿದ ಮನೋಹರನಾದ ಸಂಗೀತ ರಸದ ಸಮುದ್ರದ ಉಬ್ಬರದಂತೆ ಮೂಡಿ ಮುಳುಗಾಡುತ್ತಾ (ನಿಮೀಲಿತನೇತ್ರನೂ) ಕಟಾಕ್ಷವೀಕ್ಷಣೆಯುಳ್ಳವನೂ, ರೋಮಾಂಚವುಳ್ಳ ಶರೀರವುಳ್ಳವನೂ ಆಗಿದ್ದ ಅಪರಾಜಿತನು ನಾವು ಬಂದಿರುವುದನ್ನು ಅಲ್ಲಿರುವುದನ್ನು ತಿಳಿಯದೇ ಇರಲು ಲೋಕವ್ಯವಹಾರವನ್ನು ಸ್ವಲ್ಪವಾಗಿ ತಿಳಿದಿರುವುದರಿಂದಲೂ ರಸಭಂಗವನ್ನುಂಟುಮಾಡದೆ, ಆನೆಯ ನೋಟದಂತೆ ಕಿರುಗಣ್ಣ ನೋಟದಿಂದ ನೋಡಿ ವಿಷಯಾಭಿಲಾಷೆಯುಳ್ಳ ಮನುಷ್ಯನು ಪಂಚೇಂದ್ರಿಯಗಳಿಂದ ಕೂಡಿ ಚಿತ್ರಗತವಾದ

---

1. × (ಮ) 2. × (ಮ) 3. ದನಿ (ಮ) 4. ಸಂಚಮಾವ (ಅ)

ಖಚರೇಂದ್ರನ ಮನಮ[1]ನಾವರ್ಜಿಸಿಯುಂ[1] ತನ್ನ ವಿಸರ್ಜಿಸಿಯುಂ ನಾರದಂ ಪೋದನಿತ್ತಲೆಮ್ಮರಸಂ ಬರ್ಬರಿಯುಂ ಕಿರಾತೆಯುಮೆಂಬಿರ್ವರ್ಗಾಣತಿಯರುಮಂ ಬೇಡಿಯಟ್ಟಿದನೆನ್ನ ಪೆಸ[2]ರುಮ[2]ಮಿತನೆಂಬುದೆಂದು ತನ್ನ ಬಂದಬರವನಱಿಯೆ ಬಿನ್ನಪಂಗೆಯ್ದು ತನ್ನತಂದ ಪಾಗುಡಮನಾಸನ್ನವರ್ತಿಯುಮಭಿರಾಮ ಮೂರ್ತಿಯುಮಪ್ಪಮಾತ್ಯೋತ್ತಮನ ಕೆಯ್ಯೊಳ್ ಕುಡುವುದುಮಪರಾಜಿತಂ ಯಥೋಕ್ತ ಪ್ರತಿಪತ್ತಿಯಿಂ ದೂತನಂ ಬೀಡಿಂಗೆ ಪೋಗಲ್ವೇೞ್ದುಮರಸಂಗೆ ಮನೆವೆರ್ಗಡೆ ಮುದ್ರಾಂಕಿತಮಪ್ಪ ಪಾಹುಣದ ಮುದ್ರೆಯಂ ಕಳೆದು ಸೂತ್ರಸಱಿದು ಬಿತ್ತರಿಸಿ ತೋಱುವುದುಂ

ಮ॥ ನಯನಾನಂದನಮಾಗಿಯುಂ ತನು ಮನಸ್ಸಂತೋಷ ಸಂಪಾದಿಯಾ
ಗಿಯುಮಾಶಾರುಚಿಯಾಗಿಯುಂ ವಿಶದ ರುಕ್ಛ್ರೀ ಚಂದ್ರಿಕಾ ಸಾಂದ್ರಿಯಾ
ಗಿಯುಮಿಂದುದ್ಯುತಿ ಪದ್ಮಮಂ ಕೊರಗಿಪಂತೊಡ್ಡೋಲಗಕ್ಕೆಯ್ದೆ ವಿ
ಸ್ಮಯಮಪ್ಪಂತಿರೆ ಹಾರ ರೋಚಿ ಹಳಿಯಂ ಮೂರ್ಛಾಸ್ಪದಂ ಮಾೞ್ಪುದುಂ ॥ ೨೩ ॥

ವ॥ [3]ಒಱಲ್ದು[3] ಕನಕಾಚಲೋಪತ್ಯಕದೊಳೊರಗಿದ ದಿವಿಜೇಂದ್ರಕರೀಂದ್ರದಂತೆ ಚಾರುಚಾಮೀಕರ ಮೃಗೇಂದ್ರಾಸನದ ಕೆಲದ ಮತ್ತವಾರಣ[4]ದೊಳ್[4] ನೆಮ್ಮಿ ನಿಶ್ಚೇತನನಪರಾಜಿತ ಮಹಾ ಮಹೀಶನಿರೆ—

ಕಂ॥ ತುರಿ[ಪ]ದಿನನಂತವೀರ್ಯಂ
ಬೆರಸು ನೃಪಾಸನ್ನವರ್ತಿಗಳ್ ಕರ್ಪೂರಾ
ಗುರು ಮಳಯರುಹ ವಿಮಿಶ್ರಿತ
ಕರಕಾಂಭಸ್ಸೇಕ ಪೂರ್ವಕಂ ಬೀಸುವುದುಂ ॥ ೨೪ ॥

ಪಂಚೇಂದ್ರಿಯಗಳ ಆಕಾರಕ್ಕೆ ಸಮಾನವಾಗುತ್ತಾನೆ ಎಂದು ಯೋಚಿಸಿ, ನಾವು ಎದ್ದು ಬಂದೆವು. ಇದರಿಂದ ಆ ಗಾಯಕ ರತ್ನದಂತಿರುವ ಇಬ್ಬರು ಎಲ್ಲಾ ರತ್ನಗಳಿಗೆ ಒಡೆಯನೂ, ಚಕ್ರವರ್ತಿಯೂ ಆಗಿರುವ ನಿನಗಲ್ಲದೆ ಬೇರೆಯವರಿಗೆ ಯೋಗ್ಯವಲ್ಲವೆಂದು ತಿಳಿಯುವುದು ಮತ್ತೆ ಉಳಿದ ವಿಷಯವನ್ನು ನಾವು ಏನೆಂದೂ ಕೇಳಲಾಗುವುದಿಲ್ಲ ಎಂದು ಮಾತಾಡಿದ ಖಚರೇಂದ್ರನ ಮನಸ್ಸನ್ನು ಆವರಿಸಿ ತಾನು ಆಸ್ಥಾನವನ್ನು ಬಿಟ್ಟು ನಾರದನು ಹೋದನು. ಈ ಕಡೆ ನಮ್ಮ ದೊರೆಯು ಬರ್ಬರೆ ಮತ್ತು ಕಿರಾತೆಯರೆಂಬ ಇಬ್ಬರು ಗಾಯಕಿಯರನ್ನು ಕರೆತರುವಂತೆ ನಮ್ಮನ್ನು ಕಳುಹಿಸಿದನು. ನನ್ನ ಹೆಸರು ಅಮಿತ. ಹೀಗೆಂದು ತಾನು ಬಂದ ಕಾರಣವನ್ನು ಅರಿಕೆಮಾಡಿ ತಂದ ಬಹುಮಾನವನ್ನು ಸಮೀಪದಲ್ಲಿರುವ ಮನೋಹರನಾದ ಮುಖ್ಯಮಂತ್ರಿಯ ಕೈಯಲ್ಲಿ ಕೊಡಲು ಅಪರಾಜಿತನು ಉಚಿತವಾದ ಬಹುಮಾನದಿಂದ ದೂತನನ್ನು ಬೀಡಿಗೆ ಹೋಗುವಂತೆ ಹೇಳಿ ರಾಜನಿಗೆ ಮನೆಯ ಹೆಗ್ಗಡೆಯು ಮುದ್ರೆಯಿಂದ ಆವರಿಸಿರುವ ಬಹುಮಾನದ ಕಟ್ಟನ್ನು ಸುತ್ತನೋಡಿ ತಿಳಿದು ಬಿಚ್ಚಿ ತೋರಿಸಲು—

೨೩. ಕಣ್ಣಿಗೆ ಆನಂದವನ್ನುಂಟುಮಾಡುವ ಶರೀರ ಮತ್ತು ಮನಸ್ಸಿಗೆ ಸಂತೋಷವನ್ನುಂಟುಮಾಡುವುದೂ, ಆಸೆಯನ್ನುಂಟುಮಾಡುವುದೂ, ವಿಶಾಲವಾದ ಚಂದ್ರನ ಬೆಳಕಿನಂತೆ ಇರುವುದು, ಚಂದ್ರನ ಕಾಂತಿಯು ತಾವರೆಯ ಕಾಂತಿಯನ್ನು ಕುಗ್ಗಿಸುವಂತೆ ಒಡ್ಡೋಲಗಕ್ಕೆ ಬಂದು ಆಶ್ಚರ್ಯಪಡುವಂತೆ ತನ್ನ ಹಾರದ ಕಾಂತಿಯು ಬಲರಾಮನನ್ನು ಮೂರ್ಛಾಕ್ರಾಂತನಾಗುವಂತೆ ಮಾಡಲು

ವ॥ ಕನಕಾಚಲದ ಸಮೀಪದಲ್ಲಿ ಮಲಗಿರುವ ದೇವಗಜದಂತೆ ಮನೋಹರವಾದ ಸುವರ್ಣದ ಸಿಂಹಾಸನದ ಸಮೀಪದ ದಿಂಬನ್ನು ಒರಗಿ ನಿಶ್ಚೇಷ್ಟಿತನಾಗಿ ಅಪರಾಜಿತ ಮಹಾರಾಜನು ಇರುತ್ತಿರಲು

೨೪. ಜಾಗ್ರತೆಯಾಗಿ ಅನಂತವೀರ್ಯನೊಡನೆ ರಾಜರ ಸಮೀಪವರ್ತಿಗಳು ಕರ್ಪೂರ ಅಗರು ಚಂದನ ಮಿಶ್ರವಾದ ಚಾಮರಗಳಿಂದ ಬೀಸುತ್ತಿರಲು

1, ಸಮಾಜ್ಞನಿಸೆಯುಂ (ಅ) 2. ರ (ಮ) 3. ಬಳಲ್ದು (ಅ) 4, ಮಂ (ಮ)

ಶಾ॥ ಸುತ್ತಿರ್ದುತ್ತಮ ರಾಜಯೂಥದ ಮನಕ್ಕಾನಂದಮಪ್ಪಂತು ಯೋ
ಷಿತ್ಕಾಮ್ಯತ್ಕರಿಣೀಗಣಕ್ಕೆ ಪಿರಿದೊಂದೌತ್ಸುಕ್ಯಮಪ್ಪಂತು ಮಾ
ಡುತ್ತುಂ ಚೇತನೆ ಪುಟ್ಟೆ ಮೂರ್ಛೆ ತಿಳಿದೆಟ್ಟಿಂತಾನುಮೆಂತಾನುಮೆ
ಚ್ಚುತ್ತಿರ್ದಂ ಮದದಂತಿ ಸೆಜ್ವರದಿನೆಚ್ಚುತ್ತಿರ್ದಪೋಲ್ ಭೂಭುಜಂ ॥ ೨೫ ॥

ವ॥ ಅಂತು ಮೂರ್ಛೆಯಿಂದೆಚ್ಚತ್ತು ಕದಡಿ ತಿಳಿದ ಮಾನಸಸರೋವರದಂತೆ ಸುಪ್ರಸನ್ನನುಮಾರ್ದ್ರಾಂತರಂಗನುಂ ವಿಕಸಿತಾಶಯಕುಶೇಶಯನುಂ ಪ್ರಮೋದಿತ ರಾಜಹಂಸನಿಷೇವಿತನುಮಾಗಿರ್ದ ಹಲಧರನಂ ಶಾರ್ಙ್ಗಧರನುಮಾಮಂತ್ರಿವರ್ಗಮುಂ ನೋಡಿ ರಾಗಿಸಿ ಕರ್ಣಜಪದೊಳ್ ಮೂರ್ಛಾವ್ಯಾಸಂಗಮಂ ಬೆಸಗೊಳೆ ನೆ[1][ರೆ][1]ದೋಲಗಿಸುವ ಮಕುಟಬದ್ಧರನುಚಿತಪ್ರತಿಪತ್ತಿಗಳಿಂ ವಿಸರ್ಜಿಸಿ ತತ್ಪ್ರಪಂಚಮಂ ಸಪ್ರಪಂಚಮಪರಾಜಿತನಿಂತೆಂದು ಪೇೞಲ್ತಗುಳ್ದಂ—

ಕಂ॥ ಹಾರಮಿದನ್ಯಭವಾಲಂ
ಕಾರಮನನುಕರಿಸಿ ಮದ್ದ್ವಿತೀಯನ ಗತಿ ಸಂ
ಸ್ಕಾರಮನಱಿಪಿದೊಡೆನ್ನ ಶ
ರೀರಕ್ಕಿನಿತಾಯ್ತು ವೈಪರೀತ್ಯಂ ಸಭೆಯೊಳ್ ॥ ೨೬ ॥

ವ॥ ಈ ಖೇಚರನ ಹಾರಮಪಥ್ಯಾಹಾರದಂತೆಯುಮಪರಿಣಾಮವಿಹಾರದಂತೆಯುಮೆನಗಿನಿತು ಬೇಗಂ ಪ್ರಮೋದಸಂಹಾರಮಂ ಮಾಡಿದ ಕಾರಣಂ ಇದು ಮೊದಲಾಗೀಭವಕ್ಕೆ ಮೂ[2][ಱ][2]ನೆಯ ಭವದೊಳಮಿತತೇಜನೆಂಬ ವಿದ್ಯಾಧರರಾಜನಾಗಿ ಪುಟ್ಟಿದೆನನಂತವೀರ್ಯನು ಮೆನ್ನ ಮುನ್ನಿನ ತಂದೆಗೆ ಸೋದರಳಿಯಂ ಶ್ರೀವಿಜಯನೆಂಬೊನಾದನೆಂದತೀತಭವವ್ಯಾಪಾರಮಂ ಪೇೞುತ್ತುಮಿರೆಯಿರೆ—

---

೨೫. ಮಲಗಿದ್ದ ಸಲಗನು ಎಚ್ಚತ್ತಾಗ, ಅದರ ಸುತ್ತಲೂ ಬಳಸಿಕೊಂಡಿರುವ ಆನೆಯ ಹಿಂಡಿಗೂ ಎದೆಗುದಿಗೊಳ್ಳುತ್ತಿರುವ ಹೆಣ್ಣಾನೆಗಳಿಗೂ ಉತ್ಸಾಹವುಂಟಾಗುತ್ತದೆ. ಅದೇ ಮೇರೆಗೆ ಮದದಾನೆಯಂತೆ ಇರುವ ಆ ರಾಜನು ಹೇಗೋ ಮೂರ್ಛೆಯಿಂದ ಎಚ್ಚತ್ತೊಡನೆ ಅವನ ಸುತ್ತಲೂ ನೆರೆದಿದ್ದ ರಾಜಸಮೂಹದ ಮನಸ್ಸಿಗೆ ಆನಂದವಾಯಿತು; ಸಂಕಟಪಡುತ್ತಿದ್ದ (ಅಂತಃಪುರದ) ಸ್ತ್ರೀಯರಿಗೆ ತುಂಬ ಉತ್ಸಾಹವುಂಟಾಯಿತು.

ವ॥ ಹೀಗೆ ಮೂರ್ಛೆಯಿಂದೆಚ್ಚತ್ತು ಕದಡು ತಿಳಿದು ಸ್ವಚ್ಛವಾದ ಮಾನಸಸರೋವರದಂತೆ "ಸುಪ್ರಸನ್ನ"ನೂ (೧. ಪ್ರಶಾಂತನಾದವನು, ೨. ಸ್ವಚ್ಛವಾದುದು), "ಆರ್ದ್ರಾಂತರಂಗ"ನೂ (೧. ಕೋಮಲವಾದ ಹೃದಯವುಳ್ಳವನು, ೨. ರಸಮಯವಾದ ಒಡಲುಳ್ಳುದು), "ವಿಕಸಿತಾಶಯ ಕುಶೇಶಯ"ನೂ (೧. ಆಶ್ರಿತಜನರ ಮನಸ್ಸನ್ನು ಅರಳಿಸಿದವನು, ೨. ತನ್ನಲ್ಲಿ ಅರಳಿದ ಕಮಲಗಳನ್ನು ಉಳ್ಳುದು), "ಪ್ರಮೋದಿತ ರಾಜಹಂಸ ಸೇವಿತ"ನೂ (೧. ಸಂತುಷ್ಟರಾದ ರಾಜಶ್ರೇಷ್ಠರಿಂದ ಸೇವೆ ಮಾಡಿಸಿಕೊಳ್ಳುವವನು, ೨. ತುಂಬ ಉಲ್ಲಾಸಗೊಂಡ ರಾಜಹಂಸಗಳಿಗೆ ಸುಖಾನುಭವವನ್ನು ಒದಗಿಸುವಂತಹುದು) ಆದ ಆ ಬಲದೇವನನ್ನು ವಾಸುದೇವನೂ ಆತನ ಮಂತ್ರಿವರ್ಗದವರೂ ನೋಡಿ ಸಂತೋಷಗೊಂಡರು; ಹಾಗೂ ಕಿವಿಮಾತಿನಲ್ಲಿ ಮೂರ್ಛೆಯಾದುದೇಕೆಂದು ಕೇಳಿದರು. ಆಗ ತನ್ನ ಸುತ್ತಲಿದ್ದು ಓಲೈಸುತ್ತಿದ್ದ ಅರಸುಗಳನ್ನೆಲ್ಲ ಅವರವರಿಗೆ ಉಚಿತವಾದ ಕ್ರಮದಲ್ಲಿ ಅಪ್ಪಣೆಕೊಟ್ಟು ಕಳಿಸಿ, ಮೂರ್ಛಾಪ್ರಸಂಗದ ವಿಷಯವನ್ನು ಅಪರಾಜಿತನು ಹೀಗೆಂದು ಹೇಳತೊಡಗಿದನು :

೨೬. "ಈ ಹಾರವು ಪೂರ್ವಜನ್ಮದ ಒಂದು ಅಲಂಕಾರಕ್ಕೆ ಸದೃಶವಾಗಿ ಆಗಿನ ನನ್ನ ಸಂಗಡಿಗನಿಗೆ ಒದಗಿದ ಗತಿಯನ್ನು ತಿಳಿಸಿತು. ಆದರಿಂದಾಗಿ ಈ ಸಭಾಮಧ್ಯದಲ್ಲಿ ನನ್ನ ದೇಹಕ್ಕೆ ಇಂತಹದೊಂದು ದುರವಸ್ಥೆಯುಂಟಾಯಿತು.

ವ॥ ಆ ಖೇಚರರಾಜನು ಕಳಿಸಿಕೊಟ್ಟ ಹಾರವು ಪಥ್ಯವಲ್ಲದ ಆಹಾರದಂತೆಯೂ ದುಷ್ಪರಿಣಾಮಕಾರಿಯಾದ ವಿಹಾರದಂತೆಯೂ ನನಗೆ ಇಷ್ಟೊಂದು ಸಮಯದವರೆಗೆ ಸಂತೋಷಹಾನಿಯನ್ನು ಒದಗಿಸಿತು. ಈ ಜನ್ಮಕ್ಕೆ ಹಿಂದೆ ಮೂರನೆಯ ಜನ್ಮದಲ್ಲಿ ನಾನು ಅಮಿತತೇಜನೆಂಬ ವಿದ್ಯಾಧರರಾಜನಾಗಿ ಹುಟ್ಟಿದ್ದೆನು. ಅನಂತವೀರ್ಯನು ಆಗಿನ ನನ್ನ ತಂದೆಯ ಸೋದರಳಿಯನಾಗಿ ಶ್ರೀ ವಿಜಯನೆಂಬ ಹೆಸರನ್ನು ಪಡೆದಿದ್ದನು." ಹೀಗೆ ತನ್ನ ಪೂರ್ವಜನ್ಮದ ವಿಷಯವನ್ನು ಅವನು ಹೇಳುತ್ತಿರುವಾಗಲೆ—

---

1. ರ (ಮ) 2. ರ (ಮ)

ಶಾ॥ ವಿದ್ಯಾಭೃತ್ಕುಲ ಜಾತಿ ಸಾಧಿತ ನಿಸರ್ಗೋದಗ್ರ ಸಾಮಗ್ರಿಯಿಂ
ವಿದ್ಯಾದೇವತೆಗಳ್ ನರರ್ಗೆ ನಯದಿಂ ಶ್ರೀ ಸಾರ್ವವೋಲ್ ಬಂದದೇಂ
ಚೋದ್ಯಂ ಸಾರ್ದುವೊ ತಮ್ಮುತಿರ್ವರುಮನಾಗಳ್ ಸಪ್ತಭಿರ್ಜಾಯತೇ
ವಿದ್ಯಾಯೆಂಬುದು ತಪ್ಪದಾಯ್ತೆನೆ ತಗುಳ್ದಿಂತೀ ಮಹೀಮಂಡಲಂ ॥ ೨೭ ॥

ವ॥ ಅಂತು ಮುನ್ನಿನ ತಮ್ಮ ವಿದ್ಯಾಧರರಾದಂದಿನ ಮಹಾವಿದ್ಯೆಗಳ್ ಮುಂ ನೆರಪಿದಗಣ್ಯ ಪುಣ್ಯಮುಂ ತನ್ನಂ ಪೊರ್ದುವಂತಾನುಂ ಮುಂ ಪೂಳ್ದ ನಿಧಾನಂ ಸುಕೃತಮನಂಗೆ ಕೋಳಿವಂತಾನುಂ ಸಮನಿಸೆ ವಜ್ರಮಂ ಮಸೆದಂತೆ [1]ತಿಣ್ಣು ಮನದೊಳ್ ಪೊಂಪುಳಿವೋಗೆ ವಾಸುದೇವಂ ಬೆರಸು—

ಮ॥ ದಿಗಿಭೇಂದ್ರಾಳಿಗೆ ತನ್ನ ನಿರ್ಮಳ ಯಶೋರಾಜೀವ ರಾಜಂ ಮೊಗಂ
ಬುಗೆ ನಾಲ್ಕುಂ ನೃಪ ವಿದ್ಯೆಯೊಂದು ಬಲದಿಂ ಪಂಚಾಂಗಮಂತ್ರಂ ಮನಂ
ಬುಗೆ ಬೇಱೊಂದೆಡೆಗಾಣದುದ್ಧತರಿಪುಶ್ರೀಕಾಂತೆ ತನ್ನಂ ಶರ
ಣ್ಬುಗೆ ಪೊಕ್ಕಂ ಯುತಮಂತ್ರಿ ಮಂತ್ರಗೃಹಮಂ ಸೌಜನ್ಯಕಂದಾಂಕುರಂ ॥ ೨೮ ॥

ಕಂ॥ ಶ್ರೀಜಾಯಾವಲ್ಲಭನಪ
ರಾಜಿತನಯವಿನಯಗುಣನಿದಾನಂ ಬುಧ ಸಾ
ಮಾಜಿಕ ಮತಮನೆ ಪೇೞ್ದು ವಿ
ರಾಜಿತಮನನಡರೆ ತೊಡರೆ ನುಡಿಗುಂ ನಯಮಂ ॥ ೨೯ ॥

ಮ॥ ಮನಸಂದಾ ದಮಿತಾರಿ ಗಾಣತಿಯರಂ ಬೇೞ್ಪಂದದಿಂದಟ್ಟಿ ದೂ
ತನನಿಂತೀತನನೊಯ್ಯನೆಮ್ಮೊಳಗನೇನಾರಯ್ವನೋ ಹಾರಮಂ
ತನಗುಂತಾವುದು ಕಜ್ಜಮಟ್ಟಲದಱಿಂದಂ ನಿಂಮ ನಿಮ್ಮೊಂದು ಚೇ
ತನದೊಳ್ ಪುಟ್ಟಿದ ಕಾರ್ಯಬೀಜಮನದಂ ನೀತಿಜ್ಞರಿರ್ ಪೇೞಿರೇ ॥ ೩೦ ॥

---

೨೭. ವಿವೇಕಯುಕ್ತವಾದ ವರ್ತನೆಯಿಂದ ಮನುಷ್ಯರಿಗೆ ಸಂಪತ್ತು ತಾನಾಗಿ ಒಂದು ಕೈ ಸೇರುವಂತೆ, ವಿದ್ಯಾಧರ ವಂಶದಲ್ಲಿ ಹುಟ್ಟಿದಾಗ ಸ್ವಾಭಾವಿಕವಾಗಿ ಪಡೆದುಕೊಂಡಿದ್ದ ಉನ್ನತವಾದ ಸಾಮಗ್ರಿಯ ಫಲವಾಗಿ ವಿದ್ಯಾದೇವತೆಗಳು ಈಗ ಆಶ್ಚರ್ಯಕರವಾಗಿ ಬಂದು ಅವರಿಬ್ಬರಿಗೂ ವಶವಾಗಿ ನಿಂತುವು. "ಏಳು ತಲೆಗಳಿಂದ ವಿದ್ಯೆ ತಾನಾಗಿ ಒದಗಿ ಬರುತ್ತದೆ" ಎಂಬ ಮಾತು ತಪ್ಪದೆ ನಿಜವಾಯಿತು ಎಂದು ಭೂಮಿಯ ಜನವೆಲ್ಲ ಮೆಚ್ಚಿ ಹೊಗಳುವಂತೆ ಆಯಿತು.

ವ॥ ಪೂರ್ವಜನ್ಮದಲ್ಲಿ ಗಳಿಸಿದ ಪುಣ್ಯವು ಈ ಜನ್ಮದಲ್ಲಿ ಬಂದೊದಗುವಂತೆಯೂ ಹಿಂದೊಮ್ಮೆ ಹೂಳಿಟ್ಟ ದ್ರವ್ಯವು ಪುಣ್ಯಶಾಲಿಗೆ ತಾನಾಗಿ ಪ್ರಾಪ್ತವಾಗುವಂತೆಯೂ ತಮ್ಮ ವಿದ್ಯಾಧರರಾದಂದಿನ ಮಹಾವಿದ್ಯೆಗಳು ಈಗ ವೈಗೂಡಿ ಬಂದುದರಿಂದ ಸಾಣೆ ಹಿಡಿದ ವಜ್ರದಂತೆ ಮನಸ್ಸಿನಲ್ಲಿ ಸ್ಥೈರ್ಯ ತುಂಬಿ ತುಳುಕಿತು. ಆಗ ವಾಸುದೇವನನ್ನೊಡಗೊಂಡು

೨೮. ದಿಗ್ಗಜಗಳಿಗೆ ತನ್ನ ಯಶಸ್ಸೆಂಬ ಗಜರಾಜನು ಸಮ್ಮುಖನಾಗಿರಲಾಗಿ, ಚತುರ್ವಿಧವಾದ ನೃಪವಿದ್ಯೆಯ ಬಲದಿಂದ ಐದು ಅಂಗಗಳ ಮಂತ್ರ ಮನೋಹರವಾಗಿರಲಾಗಿ, ಬೇರೆಲ್ಲಿಯೂ ನೆಲೆಗಾಣದೆ ಶತ್ರು ಸಂಪತ್ತಿನ ವೈಭವವೆಲ್ಲ ತನ್ನನ್ನೇ ಮರೆಹೊಕ್ಕಿರಲಾಗಿ, ಸುಜನಪ್ರಿಯನಾದ ಬಲರಾಮನು ತನ್ನ ಸಚಿವರೊಡನೆ ಮಂತ್ರಾಲೋಚನೆಯ ಮಂದಿರವನ್ನು ಪ್ರವೇಶಮಾಡಿದನು.

೨೯. ಐಶ್ವರ್ಯಕ್ಕೆ ಅಧಿಪತಿಯೂ ನೀತಿವಿನಯ ಗುಣಗಳಿಗೆ ಆಶ್ರಯನೂ ಆದ ಅಪರಾಜಿತನು ಪ್ರಾಜ್ಞರ ಮತವನ್ನು ಪ್ರಸ್ತಾಪಿಸಿ, ರಾಜನೀತಿಯ ಕ್ರಮವನ್ನು ಸ್ಪಷ್ಟವಾಗಿ ಹೀಗೆ ಮಂಡಿಸಿದನು :

೩೦. "ಆ ದಮಿತಾರಿಯು ಮನಸೋತು ಗಾಯಿಕೆಯರನ್ನು ನಮ್ಮಿಂದ ಕೇಳಿ ಪಡೆಯಲೆಂಬಂತೆ ದೂತನನ್ನು ನಮ್ಮ ಸನ್ನಿಧಿಗೆ ಕಳಿಸಿ ನಮ್ಮನ್ನು ಪರೀಕ್ಷಿಸುತ್ತಿರುವನೆ? ಇಲ್ಲವಾದರೆ ನಮಗೆ (ಕಾಣಿಕೆಯಾಗಿ) ಹಾರವನ್ನು ಕಳಿಸುವ ಕಾರಣವೇನಿತ್ತು? ಹೀಗಿರುವುದರಿಂದ ಇದನ್ನು ಯೋಚಿಸಿ, ನಿಮ್ಮ ನಿಮ್ಮ ಮನಸ್ಸಿಗೆ ಈ ಕಾರ್ಯದ ಮರ್ಮವೇನೆಂದು ತೋರುವುದೋ ಅದನ್ನು ಹೇಳಿ. ನೀವು ರಾಜನೀತಿಯನ್ನು ಬಲ್ಲವರು."

---

1. ತ (ಮ)

ವ॥ ಎಂದು ಸಚಿವೋತ್ತಮರೊಳ್ ರಾಜನೀತಿಶಾಸ್ತ್ರನಾಟಕಪ್ರಾರಂಭಕ್ಕೆ ಸೂತ್ರಧಾರನಾಗಿ ತತ್ಪೂರ್ವರಂಗ ಪ್ರಸಂಗಕ್ಕೆ ಪ್ರರೋಚನೆಯುಪ್ಪ ಪ್ರಥಮಪಾತನಿಕೆಯುಂ ಪ್ರಸ್ತುತಂ ಮಾಡಿ ಮತ್ತಮಾ ದಮಿತಾರಿಯನುದ್ದೇಶಿಸಿ ಬಲದೇವನಿಂತೆಂದಂ—

ಕಂ॥ ಅತಿಗುಪ್ತ ಗಭೀರಾಲಿಂ
ಗಿತನುಮತಿಪ್ರೌಢ ಗೂಢ ಮಂತ್ರನುಮಪ್ಪಾ
ಕ್ಷಿತಿಪನ ನೆಗೆಟ್ತೆಯುಂ ವಿಧಿ
ಯುತ ಕರ್ತವ್ಯತೆಯುಮಱಿಯಲರಿದಾವಂಗಂ ॥ ೩೧ ॥

ಉ॥ ಬೇಡಿದೊಡೀಯನೆಂದೆಮಗೆ ಪಾಗುಡಮಟ್ಟಿ ಮನಕ್ಕೆ ವಂದುದಂ
ಬೇಡಿದನೋ ಸಮರ್ಥನದನೇವನೊ ದೈನ್ಯದ ಸಂಚಿವಾರಮಂ
ನೋಡಿರೆ ನಾಲ್ಕುಪಾಯಮಿರೆ ಗರ್ವದಿನಕ್ಕುಮೆ ಸಿದ್ಧಿ ನಾಲ್ಕುಮೊ
ಳ್ಕೋಡುಗಳಿಲ್ಲದೇಂ ಮದದೊಳಾಯ್ತೆ ಬಲಂ ದಿಗಿಭಕ್ಕೆ ಮೊಕ್ಕಳಂ ॥ ೩೨ ॥

ಕಂ॥ ಆನೆಯುಮುಗುರ್ವುಗಿಡುಗುಮ
ದಾನಂ ಸಾಹಣಿಕೆ ಪುಲ್ಲಸಡುಕಗುಮದಱಿಂ
ದಾನೇತರನಪಮಾನ
ಸ್ಥಾನಮುಪಾಯದೊಳನೂನಮುತ್ತಮದಾನಂ ॥ ೩೩ ॥

ಈ ನೆವದಿಂದಂ ನಮ್ಮಂ
ತಾನಾರಯ್ಯಲ್ಕೆ ಬಗೆವನಲ್ಲದೊಡೊಳಪೊ
ಕ್ಕಾನೃಪನ ಮಂತ್ರಿ ಮಂತ್ರವಿ
ಧಾನದಿನುಯ್ಯಲ್ಕೆ ನಮ್ಮನೊಡರಿಪನಕ್ಕುಂ ॥ ೩೪ ॥

ವ॥ ಹೀಗೆಂದು ರಾಜನೀತಿಶಾಸ್ತ್ರವೆಂಬ ನಾಟಕವನ್ನು ಆರಂಭಿಸುವುದಕ್ಕೆ ತಾನೆ ಸೂತ್ರಧಾರನಾಗಿ, ತನ್ನ ಮಂತ್ರಿ ಪ್ರಮುಖರೆದುರಿಗೆ ಆ ನಾಟಕದ ಪೂರ್ವರಂಗಕ್ಕೆ ಯಥೋಚಿತವಾದ ಪ್ರಸ್ತಾವನೆಯನ್ನು ರಚಿಸಿದನು. ಮತ್ತು ಆ ದಮಿತಾರಿಯನ್ನು ಕುರಿತು ಬಲದೇವನು ಹೀಗೆಂದನು :

೩೧. "ಅತ್ಯಂತ ಗುಪ್ತವಾದ ಇಂಗಿತವನ್ನೊಳಗೊಂಡು ಗಂಭೀರನಾಗಿರುವ ಹಾಗೂ ಬಹು ಪ್ರೌಢವಾದ ಗುಪ್ತ ಮಂತ್ರೋಪಾಯವುಳ್ಳವನಾಗಿರುವ ಅರಸನ ವರ್ತನೆಯನ್ನಾಗಲಿ, ವಿಧಿನಿಯುಕ್ತವಾದ ಕಾರ್ಯವನ್ನಾಗಲಿ ತಿಳಿಯುವುದು ಯಾರಿಗಾದರೂ ದುಃಸಾಧ್ಯವೇ.

೩೨. ಸುಮ್ಮನೆ ಬೇಡಿದರೆ ನಾವು ಕೊಡಲಿಕ್ಕಿಲ್ಲವೆಂದುಕೊಂಡು ನಮಗೆ ಕಾಣಿಕೆಯನ್ನು ಒಪ್ಪಿಸಿ ತನ್ನ ಇಷ್ಟಾರ್ಥ ವನ್ನು ಬೇಡಿದನೊ? ಸಮರ್ಥನಾದವನಿಗೆ ದೈನ್ಯದ ಅವಲಂಬನವೇಕೆ? ನಾಲ್ಕು ಉಪಾಯಗಳು ಇರುವಾಗ ಕೇವಲ ಗರ್ವದಿಂದ ಕಾರ್ಯವನ್ನು ಸಾಧಿಸಲಾದೀತೆ? ದಿಗ್ಗಜಕ್ಕೆ ಬಲ ಬಂದಿರುವುದು ಅದಕ್ಕೆ ನಾಲ್ಕು ಕೋರೆಗಳಿಂದಲ್ಲದೆ ಕೇವಲ ಮದದಿಂದ ಬಂದಿತೆ?

೩೩. ದಾನ (ಮದ)ವಿಲ್ಲವೆ ಹೋದರೆ ಆನೆಯ ಅಗ್ಗಳಿಕೆ ತಗ್ಗಿ, ಅದು ಕಾಸ್ತಾರನ ಕೈಯಲ್ಲಿ ಸಿಕ್ಕಿ ಹುಲ್ಲು ಹೊರುವುದಕ್ಕೆ ಮಾತ್ರ ನಿಲ್ಲಬೇಕಾದೀತು. ದಾನವನ್ನು ವರ್ಜ್ಯಮಾಡಿದರೆ ಅಪಮಾನಕ್ಕೆ ಆಸ್ಪದವಾಗುತ್ತದೆ. ಚತುರು ಪಾಯಗಳಲ್ಲಿ ಉತ್ತಮ ದಾನವೆಂಬುದು ಮೇಲೆನಿಸಿದೆ.

೩೪. ಈ ನೆಪದಿಂದ ಆತನು ನಮ್ಮನ್ನು ಪರೀಕ್ಷಿಸುವುದಕ್ಕೆ ಹವಣಿಸುತ್ತಿದ್ದಾನೆ. ಅಲ್ಲವಾದರೆ ಆ ರಾಜನ ಮಂತ್ರಿ ಭೇದೋಪಾಯದಿಂದ ನಮ್ಮನ್ನು ಸೆಳೆದು ಒಯ್ಯುವುದಕ್ಕೆ ಹೊಂಚಿರಬಹುದು.

ಕಂ॥ ಆಕಸ್ಮಿಕ ನೃಪ ಕರುಣೋ
ದ್ರೇಕಕ್ಕಮಕಾಲತರುಫಲಕ್ಕಂ ವಿಬುಧಾ
ನೀಕಂ ಬೆರ್ಚುಗುಮಬುಧನ
ದೇಕಕ್ಕು[ಗೆ]ವೊ ಗೂಗೆವೊಂಗುವೊಂಗದೆ ರಜದಿಂ ॥ ೩೫ ॥

ವ॥ ಅದಱಿಂದಮರ್ಥಶಾಸ್ತ್ರದ ನಯದೊಳಂ ದ್ವಾದಶ ರಾಜರೊಳಂ ಸಮರ್ಥನುಮಭ್ಯರ್ಚಿತನುಮಪ್ಪ ವಿಜಿಗೀಷುವುಂ ವೈದ್ಯಶಾಸ್ತ್ರ ಸಾಮಗ್ರಿಯುಂ ಸಮದೋಷಿ[1]ಯುಂ[1] ಸಮಧಾತುವಪ್ಪ ನೀರೋಗನುಂ ಕ್ರಮಕರ್ತವ್ಯದಿಂ ನಯಮುಮನಾಪ್ತವರ್ತಿಯುಮನಾಸೆವಡುವರಲ್ಲರ್ ದಮಿತಾರಿಯಪ್ಪೊಡೆ ಖೇಚರ ಚಕ್ರವರ್ತಿಯುಮತಿವರ್ತಿಯುಮಸುರ ವಿಜಯಿಯುಮನೂನ ಮಂತ್ರಿ ಸಂಪನ್ನನುಮಕ್ಕುಮದಱಿಂದಾತನಿನ್ನೆವರೆಗಂ (ವ್ಯಾನರು) ಯಾತವ್ಯರುಮಾಜ್ಞಾವಿಧಾನಸ್ಥಾನರುಮಪ್ಪ ನಮ್ಮೊಳಾದುದುನಯೋಪಾಯಂ ವ್ಯವಹಾರಸಮಾನನುಮಸಮಾನನುಮಲ್ಲದಿರ್ಪ್ಪನೀಗಳಿಲ್ಲಿಗೇ ವಿಧೇಯಂ ಮಾಱ್ಪುದೆಂದು ಪೂರ್ವಪಕ್ಷದ ಪಕ್ಷ ಸಿದ್ಧಿಯ ವಿಸ್ತಾರಕ್ಕವಕಾಶಮಪ್ಪಂತು ನುಡಿದು ಪಾರ್ಥಿವನ ನುಡಿಯಂ ಸವಿಸ್ತರಮನುಪದಿಸಿ ಸಮಸ್ತಮಂತ್ರಿಸಭಾಭ್ರೂಲತಾಗ್ರಶಿಖಾನೇಕನೀತಿಬೀಜಾವಾಪವಿಜಿತಸಕಲಾರಾತಿ ಸಚಿವ*ನಿರಸ್ತಸನ್ಮತಿಯುಪ್ಪ ಸನ್ಮತಿಯಿಂತೆಂದಂ—

ಕಂ॥ ನೃಪನೀತಿಶಾಸ್ತ್ರಮಂ ನೀ
ನಪೂರ್ವಮಂ ನುಡಿಯೆ ನುಡಿಯೆ ಮತ್ತದನನುವ
ರ್ಣಿಪನ ನುಡಿಗಳ್ ಪ್ರತಿಧ್ವನಿ
ಯ ಪೋಲ್ವೆಗಳ್ ನಿನ್ನ ನುಡಿಗೆ ಸಮನಾದಪು[2]ವೇ ॥ ೩೬ ॥

---

೩೫. ಅನಿರೀಕ್ಷಿತವಾಗಿ ಅರಸನು ಪರಮಾನುಗ್ರಹವನ್ನು ತೋರಿದರೆ, ಅಕಾಲದಲ್ಲಿ ಮರ ಹಣ್ಣು ಬಿಟ್ಟರೆ ಅದನ್ನು ಕಂಡು ಬಲ್ಲವರು ಬೆಚ್ಚುತ್ತಾರೆ. ದಡ್ಡರಿಗೆ ಹಾಗಲ್ಲ. ಕತ್ತಲೆಯಿಂದ ಗೂಗೆಗೆ ಉತ್ಸಾಹವಾಗುವುದಿಲ್ಲವೆ?

ವ॥ ಆದುದರಿಂದ ರಾಜನೀತಿಶಾಸ್ತ್ರದ ವಿಧಾನದಲ್ಲಿಯೂ ಹನ್ನೆರಡು ಬಗೆಯ ರಾಜರಲ್ಲಿಯೂ ಸಮರ್ಥನಾಗಿ ಪೂಜ್ಯನೆನಿಸಿಕೊಂಡಿರುವ ವಿಜಿಗೀಷುವು (ವಿಜಯಾಪೇಕ್ಷಿಯು) ನಯೋಪಾಯವನ್ನು ಬಯಸುವುದಿಲ್ಲ; ಹಾಗೆಯೆ ವೈದ್ಯಶಾಸ್ತ್ರ ಸಂಪನ್ನನಾಗಿದ್ದು, ತ್ರಿದೋಷಗಳು ಸಮಪ್ರಮಾಣದಲ್ಲಿರುವ ಹಾಗು ಸಪ್ತಧಾತುಗಳನ್ನು ಸಮನಾಗಿಟ್ಟುಕೊಂಡಿರುವ ಆರೋಗ್ಯಶಾಲಿಯು (ತನ್ನ ಆರೈಕೆಗಾಗಿ) ಯಾರನ್ನಾದರೂ ಹಿತವಂತರನ್ನು ಬಳಿಯಲ್ಲಿಟ್ಟುಕೊಳ್ಳಲು ಬಯಸುವುದಿಲ್ಲ. ದಮಿತಾರಿಯಾದರೋ, ಖೇಚರರಲ್ಲಿ ಚಕ್ರವರ್ತಿ; ಶ್ರೇಷ್ಠನಾದವನು; ಅಸುರರನ್ನು ಗೆದ್ದವನು; ಉತ್ತಮರಾದ ಸಚಿವರನ್ನು ಇರಿಸಿಕೊಂಡವನು. ಆದುದರಿಂದ ಆತನು ಈವರೆಗೆ ಆತನ ದೃಷ್ಟಿಯಿಂದ "ಯಾತವ್ಯ"ರೂ (ಅಭಿಯೋಗಪಾತ್ರರೂ) ಆಜ್ಞಾವಿಧಿಗೆ ಪಾತ್ರರೂ ಆಗಿರುವ ನಮ್ಮಲ್ಲಿ ನಯೋಪಾಯವನ್ನು ಪ್ರಯೋಗಿಸಿವನು. ಆತನು ನಮಗೆ "ವ್ಯವಹಾರ ಸಮಾನ"ನೂ ಅಲ್ಲ; ಅಸಮಾನನೂ ಅಲ್ಲ. ಆದುದರಿಂದ ಈಗ ನಾವು ಯಾವ ರೀತಿಯಾಗಿ ನಡೆದುಕೊಳ್ಳಬೇಕು?" ಹೀಗೆಂದು ಪೂರ್ವಪಕ್ಷವನ್ನು ಮಂಡಿಸಿ, ಅದರ ಸಿದ್ಧಿಯನ್ನು ವಿವರಿಸುವುದಕ್ಕೆ ಅವಕಾಶವಾಗುವಂತೆ ನುಡಿದು ಮಾತನ್ನು ಮುಗಿಸಿದನು. ಆಗ ಆ ಅರಸನ ಮಾತೆಲ್ಲವನ್ನೂ ಸವಿಸ್ತರವಾಗಿ ವ್ಯಾಖ್ಯಾನಿಸಿ, ಸಕಲ ಸಚಿವ ಸಭೆಗಳನ್ನು ಚಕಿತಗೊಳಿಸಿದವನೂ, ರಾಜನೀತಿಶಾಸ್ತ್ರದ ಅನೇಕ ಬೀಜಗಳನ್ನು ಬಿತ್ತಿ (ಉಪಾಯಗಳನ್ನು ಪ್ರಯೋಗಿಸಿ) ಸಮಸ್ತ ಶತ್ರು ಸಚಿವರ ಬುದ್ಧಿವಂತಿಕೆಯನ್ನು ಸೋಲಿಸಿದವನೂ ಆದ ಸನ್ಮತಿಯೆಂಬ ಮಂತ್ರಿಯು ಹೀಗೆ ನುಡಿದನು:

೩೬. "ರಾಜನೀತಿಶಾಸ್ತ್ರವನ್ನು ಇಷ್ಟೊಂದು ಅಸದೃಶವಾಗಿ ನೀನು ನಿರೂಪಿಸಿಯೆ ಇರುವಾಗ ಮತ್ತೆ ಅದನ್ನು ವಿವರಿಸುವುದಕ್ಕೆ ಹೊರಟರೆ ಅದು ಕೇವಲ ಪ್ರತಿಧ್ವನಿಯಾದೀತೇ ವಿನಾ ನಿನ್ನ ನುಡಿಗೆ ಸರಿದೊರೆಯಾಗಲಾರದು.

---

1. ಮ (ಅ) * ನದಂ (ಅ) 2. ದೇ (ಮ)

ಕಂ॥ ಆದೊಡಮೇಂ ತ್ವದ್ವಚನ ಮ
ಹೋದಧಿಯೊಳ್ ಕಿಱಿದನಱಿವುದಂ ನುಡಿವೆಂ ಚಂ
ದ್ರೋದಯದ ಕೆಲದ ನಕ್ಷ
ತ್ರೋದಯಮೆಸೆಯದವೊಲೆನ್ನ ನುಡಿಯೆಸೆದಪುದೇ ॥ ೩೭ ॥

[1][ಮದನ][1]ಲ್ಲದೆ ತಿಲಕಂ ಖೇ
ಚರರ್ಗಂ ನೃಪನದಱ ಮೇಗೆ ಚಕ್ರಂ ಪುಟ್ಟಿ
ರ್ದಿರೆ ಮೊದಲಗಣ್ಯಪುಣ್ಯಾಂ
ತರಕ್ಕೆ ಪುನರುಕ್ತಮಾದುದೇಂ ವಿಸ್ಮಯಮೋ ॥ ೩೮ ॥

ಸಕಲಮಹೀಚರ ಖೇಚರ
ನಿಕಾಯ ಸೇವ್ಯತೆಗೆ ವೃದ್ಧಸೇವಿತ್ವಮೆ ಯೋ
ಜಕಮಾದುದನಿತು ವಿದ್ಯಾ
ಪ್ರಕಾಶನಕ್ಕಾತನಂತು ನೋಂತರುಮೊಳರೇ ॥ ೩೯ ॥

ಆದೊರೆಯೇದೊರೆಯೊಂ ತಾ
ನೇದೊರೆ ತದ್ದೇಶಕಾಲಮೇದೊರೆಯೋ ಮೇ
ಣೇದೊರೆ ತಾಂ ಕ್ಷಯವೃದ್ಧಿಗ
ಳಾದೊರೆಯವಿವೊರೆದು ಮುನ್ನೆ ಪರಿಕಿಪುದಱಿದೊಂ ॥ ೪೦ ॥

ತಾಱಿವಱಾಗೆ ಜಯಂ ಜೊ
ಮ್ಮೇಱುವ ಟೆಂಟಣಿಸುವರಸನರಸನೆ ವಿರಸಂ
ಬೇಱೆ ನಯಮಿರೆ ವಿರೋಧಿಗೆ
ಮಾಱಾಂಪೊಂ ತನ್ನ ಮೇಲೆ ತಾಂ ಮುರಗಡಿಪೊಂ ॥ ೪೧ ॥

---

೩೭. ಆದರೂ ನಿನ್ನ ಮಹಾಸಾಗರದಂತಹ ವಚನದಲ್ಲಿ ಅರಿತುಕೊಳ್ಳಬೇಕಾದ ಒಂದೆರಡು ಮಾತುಗಳನ್ನು ರೇಖಾಮಾತ್ರವಾಗಿ ನಾನು ಆಡುವೆನು. ಚಂದ್ರನು ಉದಯವಾದಾಗ ಆತನ ಪಕ್ಕದಲ್ಲಿ ಇರುವ ನಕ್ಷತ್ರದಂತೆ ನನ್ನ ಮಾತು ಶೋಭಿಸಲಾರದು.

೩೮. ಆತನು ಮರವಲ್ಲದಿದ್ದರೂ ಖೇಚರರಲ್ಲಿ 'ತಿಲಕ' (ಶ್ರೇಷ್ಠನಾದವನು); ಅದರ ಮೇಲೆ ಚಕ್ರರತ್ನವು (ಆತನ ಆಯುಧಶಾಲೆಯಲ್ಲಿ) ಹುಟ್ಟಿತು. ಮೊದಲೆ ಅಮಿತವಾದ ಪುಣ್ಯವಿದ್ದು, ಇನ್ನಷ್ಟು ಬಂದು ಸೇರಿಕೊಂಡುದರಿಂದ ಪುನರುಕ್ತವಾದಂತಾಯಿತು ಇದು ಏನು ವಿಸ್ಮಯ?

೩೯. ಸಮಸ್ತ ಭೂಚರಖೇಚರಸಮೂಹಕ್ಕೆ ಸೇವ್ಯನಾಗಿ, ಅಷ್ಟೊಂದು ವಿದ್ಯಾಪ್ರಕಾಶನವಾಗಬೇಕಾದರೆ ಅವನು ಮಾಡಿದ ಹಿರಿಯರ ಸೇವೆಯೆ ಕಾರಣವಾಗಿದೆ. ಆತನಂತೆ ಆಚರಿಸಿ ಕೃತಾರ್ಥರಾದವರು ಇನ್ನಾರಾದರೂ ಉಂಟೆ?

೪೦. ಆ ರಾಜನು ಎಂಥವನು, ಆ ದೇಶಕಾಲಗಳು ಎಂಥವು ಎಂಬುದಕ್ಕೆ ಅನುಗುಣವಾಗಿ ಆತನ ಕ್ಷಯವೃದ್ಧಿಗಳು ಉಂಟಾಗುವುವು. ಮತಿವಂತನಾದವನು ಇವುಗಳನ್ನು ಚೆನ್ನಾಗಿ ಒರೆಯಿಟ್ಟು ಪರೀಕ್ಷಿಸಬೇಕು.

೪೧. ತನಗೆ ಬರಬೇಕಾದ ಜಯ ಸ್ವಲ್ಪ ಅಸ್ತವ್ಯಸ್ತವಾದಾಗ ದಿಗಿಲುಗೊಂಡು ಹಿಂದೆಗೆಯುವ ಅರಸನು ಅರಸನೆ? ಅವನು ಅಯೋಗ್ಯನೆ ಸರಿ. ಬೇರೆಯ ಉಪಾಯಗಳು ಇರುವಾಗ ಶತ್ರುವಿನ ಮೇಲೆ ದಂಡೋಪಾಯವನ್ನು ಕೈಕೊಂಡರೆ ಅದು ಮರವನ್ನು ಕಡಿದು ಮೈಮೇಲೆ ಹಾಕಿಕೊಂಡಂತೆಯೆ.

---

1. ಮರರ್ಗ (ಅ)

ಉ॥ ಸಾಧಿತ ಶತ್ರು ಷಡ್ಬಲರನುಕ್ರಮದಿಂ ಚರರಂ ದ್ವಿಷನ್ನೃಪಾ
ಷ್ಟಾದಶ ತೀರ್ಥದೊಳ್ನಡೆಯಿಸಲ್ಕೆಱೆವರ್ ನಿಜ ವೈರಿ ವಾರ ಸಂ
[1]ಭೇದ[1]ನನೂನ ಶೌರ್ಯರತಿಧೈರ್ಯಯುತರ್ ವರ ಪಕ್ಷ ಕೃತ್ಯ ನಿ
ಷ್ಪೇದನರಾತ್ಮಕೃತ್ಯ ಪರಿಪಾಲನರಾ ದಮಿತಾರಿಯನ್ನರಾರ್ ॥ ೪೨ ॥

ಕಂ॥ ನವವಯಸನಾಗಿಯುಂ ವ್ಯಸ
ನ ವಿಹೀನಂ ಶೂರನಾಗಿಯುಂ ತನುರಕ್ಷೈ
ಕ ವಿಶಾರದಂ ಪ್ರಶಾಸ್ತ್ರ
ಪ್ರವೀಣ ವಾಗ್ವಿಭವನಾಗಿಯುಂ ಕೃತಮಂತ್ರಂ ॥ ೪೩ ॥

ಓಳಿಯೋಳಿರ್ದ ಮಹೀಭೃ
[2]ನ್ನ್ಯಾಳಿ[2]ಯೊಳೆಸೆದಾನತಾರಿ ಸೊಗಯಿಸುಗುಂ ತಾ
ರಾಳಿಯೊಳೆಸೆವ ಹಿಮದ್ಯುತಿ
ಮಾ[3]ಳೆ[3]ವೊಲಿನಿತಿಲ್ಲದಂ ಜಿಗೀಷುವೆ ನೃಪರೊಳ್ ॥ ೪೪ ॥

ಒದವಿದ ರಿಪುವಂ ಸೂಱೆ
ಲ್ಲದಿಕ್ಕಿ ಗೆಲ್ದತುಳಬಲದ ಮಲ್ಲನುಮೆಚ್ಚಾ
[4]ಡಿ[4]ದ ಬಿಲ್ಲುಮಿರ್ದ ತೆಱನಿ
ರ್ದುದನಱಿಪುಗುಮವನವಾರ್ಯವೀರ್ಯಂ ಶೌರ್ಯಂ ॥ ೪೫ ॥

ಆಱುಂ ಗುಣದೆಱ[3]ವೆಟ್ಟೀ
ರಾಱುಂ ಮಂಡಲದ ನಾಭಿ ಷಡ್ಬಲದ ಬಲಂ
ಮೂಱುಂ ಸಿದ್ಧಿಯ ನೆಲೆ ನಿಲೆ
ಮೂಱುಂ ಶಕ್ತಿಯ ವಿಪಾಕಭೂಮಿ ದಲಾತಂ ॥ ೪೬ ॥

---

೪೨. ಆ ದಮಿತಾರಿಯಂಥವರು ಇನ್ನಾರು ? ಅವನಂಥವರು ಶತ್ರುಗಳ ಆರು ವಿಧವಾದ ಬಲಗಳನ್ನೂ ಗೆದ್ದು, ವೈರಿ ರಾಜರ ಮಂತ್ರಿ ಮೊದಲಾದ ಅಷ್ಟಾದಶ ಅಧಿಕಾರಿಗಳಿಗೆ ತಮ್ಮ ಸೇವಕರನ್ನು ನಿಯಮಿಸಬಲ್ಲರು. ತಮ್ಮ ಶತ್ರು ಸಮೂಹವನ್ನು ಭೇದಿಸಬಲ್ಲ ಪರಾಕ್ರಮಶಾಲಿಗಳು, ಅತ್ಯಂತ ಧೈರ್ಯಶಾಲಿಗಳು, ತಮ್ಮ ಪಕ್ಷದ ಕಾರ್ಯದಲ್ಲಿ ನಿಪುಣರಾದವರು, ತಮ್ಮ ಕರ್ತವ್ಯವನ್ನು ಸಮಗ್ರವಾಗಿ ನೆರವೇರಿಸಬಲ್ಲವರು.

೪೩. ಆತನು ನವಯುವಕನಾಗಿದ್ದರೂ ಯಾವುದೇ ವ್ಯಸನಕ್ಕೆ ಒಳಗಾಗಿಲ್ಲ; ಶೂರನಾಗಿದ್ದರೂ ತನ್ನ ದೇಹ ರಕ್ಷಣೆಗೆ ಮಾತ್ರ ಆ ಶೌರ್ಯ ಬಳಕೆಯಾಗುತ್ತಲಿದೆ; ರಾಜನೀತಿಶಾಸ್ತ್ರದಲ್ಲಿ ಪ್ರಾವೀಣ್ಯವನ್ನು ಹಾಗು ವಾಕ್ಸಂಪತ್ತಿಯನ್ನು ಉಳ್ಳವನಾಗಿದ್ದರೂ ತನ್ನ ಮಂತ್ರಿಗಳಿಂದ ಸಲಹೆಗಳನ್ನು ಪಡೆಯುತ್ತಾನೆ.

೪೪. ಭೂಪತಿಗಳ ಸಮೂಹಕ್ಕೆ ಶಿಖರಪ್ರಾಯನಾಗಿದ್ದು, ಜಿತಶತ್ರುವಾದ ಆ ರಾಜನು ನಕ್ಷತ್ರರಾಶಿಯ ನಡುವೆ ಹೊಳೆಯುವ ಚಂದ್ರನಂತೆ ಶೋಭಿಸುವನು. ಇಂತಹ ಯೋಗ್ಯತೆಯಿಲ್ಲದ ರಾಜನು ವಿಜಿಗೀಷು (ಶತ್ರುಗಳನ್ನು ಗೆಲ್ಲುವ ಆಕಾಂಕ್ಷೆಯುಳ್ಳವನು) ಆದಾನೆಯೆ ?

೪೫. ಎದಿರುಬಂದ ವೈರಿಯನ್ನು ತಿರುಗಿ ಏಳದಂತೆ ಮೆಟ್ಟಿ ಗೆದ್ದ ಅಸಮಾನ ಮಲ್ಲನೂ ಹಾಗು ಯುದ್ಧದಲ್ಲಿ ಆತನು ಬಳಸಿದ ಬಿಲ್ಲೂ— ಇವೆರಡೂ ಸುಭದ್ರವಾಗಿ (ಇದ್ದಂತೆ ಇರುವ) ಸ್ಥಿತಿಯನ್ನು ನೋಡಿದರೆ ಅವನೆಂತಹ ಅಜೇಯ ವೀರನೆಂಬುದೂ, ಅವನ ಪರಾಕ್ರಮವೆಂಥದೆಂಬುದೂ ತಾನೇ ಸ್ಪಷ್ಟವಾಗುತ್ತದೆ.

೪೬. ಆತನು ಆರು ಗುಣಗಳಿಗೆ ಮೂಲಾಶ್ರಯನು; ಹನ್ನೆರಡು ರಾಜಮಂಡಲಗಳಲ್ಲಿ ಪ್ರಮುಖನಾದವನು; ಆರು ಬಗೆಯ ಬಲಗಳುಳ್ಳವನು; ಮೂರು ಬಗೆಯ ಸಿದ್ಧಿಗಳಿಗೆ ತವರು; ಮೂರು ಶಕ್ತಿಗಳಿಗೆ ವೃದ್ಧಿಸ್ಥಾನನು.

---

1. ವೇಧ (ಅ) 2. ನ್ಯಾಳಿ (ಅ) 3. ೞ (ಅ) 4. ಱ (ಅ)

ಕಂ॥ ಅವಯವದಿಂದಟಿಗುಂ ಪಂ
ಚವಿಧಾಹಿತವರ್ಗದುರ್ಗ ಪಂಚಕಮಂ ಶಾ
ತ್ರವ ಮಂತ್ರಪಂಚಕಮನೊ
ಪ್ಪುವ ತತ್ಪ್ರಭುಮಂತ್ರಶಕ್ತಿಗಳ್ ತೀವ್ರಂಗಳ್ ॥ ೪೭ ॥

ಚಂ॥ ಒಸಗೆಗಳಂದು ಬಿಟ್ಟ ಶುಕಶಾರಿಕೆಗಳ್ ನಲಿವಾಜುವಾಜ್ ರಾ
ಗಿಸಿ ದಮಿತಾರಿನಾಮ ಪರಿಪಾಟಿಯನೋಳಿಯಿನೋದೆ ಕೇಳ್ದು ಕೇ
ಳ್ದಸಿತಪಯೋಜನೇತ್ರೆಯ ರತಿಪ್ರಿಯಕಾಂತೆಯರಾಸೆವಟ್ಟು ವೀ
ಕ್ಷಿಸುವರಧೀಶ್ವರಾಗಮನಕಾಲಮನಿರ್ದು ದಿಗಂತರಂಗದೊಳ್ ॥ ೪೮ ॥

ಕಂ॥ ಕ್ಷಯವೃದ್ಧಿಸ್ಥಾನ ವಿಧಿ
ತ್ರಯಂಗಳೊಳ್ ಕ್ಷಯಮನಹಿತರೊಳ್ ಶೇಷವಿಧಿ
ದ್ವಯಮಂ ತನ್ನೊಳ್ ನಿಜಿಸುವು
ದು ಯಥಾವಿಧಿಯಿಂದಮಾದುದಯಮುಂ ಜಯಮುಂ ॥ ೪೯ ॥

ಅನುಕೂಲಮಿತ್ರನನುರ
ಕ್ತ ನಾಯಿಕಾನೀಕನನುಗತಪ್ರಕೃತಿ ಚಿರಂ
ತನರೆನಿಪ ಚಕ್ರವರ್ತಿಗ
ಳ ನೆಗಟ್ದ ನೆಗೞ್ತೆ ತನ್ನಖಚರಪತಿಯಾ ॥ ೫೦ ॥

[1]ಭೂ[1]ಜಾಂಗವೃತ್ತಿಗೊಂದಿ ಪ
ರಾಜಿತಮಂ ಕಾಣಲಾಗ ವೈತಸವೃತ್ತಿ
ವ್ಯಾಜಮನಿತಲ್ಲದಾರ್ಗ[2]ಪ
ರಾಜಿತದಮಿತಾರಿಯೊಳ್ ಮಹೀಮಂಡಳದೊಳ್ ॥ ೫೧ ॥

---

೪೭. ಐದು ಬಗೆಯ ಶತ್ರುಸಮೂಹವನ್ನೂ, ಪಂಚವಿಧವಾದ ದುರ್ಗಗಳನ್ನೂ, ಶತ್ರುಗಳ ಪಂಚ ಪ್ರಕಾರವಾದ ಮಂತ್ರೋಪಾಯಗಳನ್ನೂ ಸುಲಭವಾಗಿ ನಾಶಮಾಡಬಲ್ಲುವು ಆತನ ಪ್ರಭುಶಕ್ತಿ ಹಾಗು ಮಂತ್ರಶಕ್ತಿಗಳು; ಅವು ಅಷ್ಟು ಪ್ರಚಂಡವಾಗಿವೆ.

೪೮. ಉತ್ಸವಪ್ರಸಂಗಗಳಲ್ಲಿ ಹಾರಿಸಿಬಿಟ್ಟ ಗಿಳಿಗಳೂ ಶಾರಿಕೆಗಳೂ ಸಂತೋಷದಿಂದ ದಿಗ್ದಿಗಂತಗಳಿಗೆ ಹಾರಾಡುತ್ತ ಹೋಗಿ ದಮಿತಾರಿಯ ಪ್ರಶಸ್ತಿಯನ್ನು ನಿರಂತರವಾಗಿ ಹಾಡುತ್ತಲಿವೆ. ಅದನ್ನು ಕೇಳಿ ಕಿವಿವೇಟಗೊಂಡ ಕಾಂತೆಯರು ತಮ್ಮ ಬಿಳಿತಾವರೆಯಂತಹ ಕಣ್ಣುಗಳನ್ನು ಅರಳಿಸಿಕೊಂಡು ಆ ಅಧಿರಾಜನು ತಮ್ಮಲ್ಲಿಗೆ ಎಂದು ಬಂದಾನೋ ಎಂದು ದಿಗ್ವಲಯಗಳಲ್ಲಿ ನಿಂತುಕೊಂಡು ಆಸೆಯಿಂದ ನಿರೀಕ್ಷಿಸುತ್ತಿರುವರು.

೪೯. ಕ್ಷಯ, ವೃದ್ಧಿ ಮತ್ತು ಸ್ಥಿತಿ ಎಂಬ ಮೂರು ವಿಧಿಗಳಲ್ಲಿ, ಕ್ಷಯವನ್ನು ತನ್ನ ವೈರಿಗಳಿಗೆ ಅಳವಡಿಸಿ, ಉಳಿದೆರಡನ್ನು ತನ್ನಲ್ಲಿ ನೆಲೆಗೊಳಿಸಿಕೊಂಡಿರುವುದರಿಂದ ಆತನಿಗೆ ಶುಭವೂ, ಗೆಲವೂ ಯಥಾಪ್ರಕಾರವಾಗಿ ಒದಗಿ ಬಂದಿವೆ.

೫೦. ಚಿರಂತನರೆಂದು ಖ್ಯಾತರಾದ ಚಕ್ರವರ್ತಿಗಳಂತೆ ಆ ಖೇಚರರಾಜನು ಅನುಕೂಲಮಿತ್ರರುಳ್ಳವನು; ತನ್ನಲ್ಲಿ ಅನುರಕ್ತರಾದ ಅನೇಕ ನಾಯಿಕೆಯರುಳ್ಳವನು; ಆಜ್ಞಾಧಾರಕರಾದ ಪ್ರಜೆಗಳನ್ನುಳ್ಳವನು

೫೧. ಭೂಮಂಡಲದಲ್ಲಿ ಆ ದಮಿತಾರಿಯ ಎದುರಿಗೆ ಹುಲ್ಲಿನಂತೆ ಬಾಗಿ ಬದುಕುವವರನ್ನೇ ಕಾಣಬಹುದಲ್ಲದೆ, ಸೆಡೆದು ನಿಂತು ಬಿರುಗಾಳಿಯ ಹೊಡೆತಕ್ಕೆ ಕಡಿದುಬೀಳುವ ಮರಗಳಂತೆ ವರ್ತಿಸುವವರನ್ನು ಎಲ್ಲಿಯೂ ಕಾಣಲಾರೆವು.

---

1. ಭೋ (ಅ)　2. ಂ (ಅ)

ವ॥ ಅಂತುಂ ಪ್ರಕೃತಿಯೊಳ್ ನಿತ್ಯೋದಯನುಂ ನಿಸರ್ಗದೊಳ್ ರಿಪುವರ್ಗದುರ್ಗ ನಿರ್ಭೇದಿಯುಂ [1]ಸ್ವಭಾವದೊಳ್[1] ಭಾಸುರಾಸುರ ವಿಜಯಿಯುಂ [2]ಸಹಜದೊಳ್[2] ವೈರಿವೀರವಿದಾರಿಯುಂ ಅಜೇಯನುಮಪ್ಪ ದಮಿತಾರಿಗೆ ಷಾಡ್ಗುಣ್ಯದೊಳ್ ಯಾನಮುಮುಪಾಯ ಚತುಷ್ಟಯದೊಳ್ ದಂಡಮುಮಲ್ಲದುಳಿದ ಗುಣಪಂಚಕಮುಮುಪಾಯತ್ರಯಮುಂ ದೊರೆಯಲ್ಲವು ನೀನುಂ ತನ್ನೊಳ್ ಸಮಾನಸ್ಕಂಧನೆ ಯಪ್ಪುದಱಿಂ ನಿನ್ನೊಳ್ ಸಮಾನಗುಣಂಗಳುಮಂ ಸಾಮಾದ್ಯುಪಾಯಂಗಳುಮನೊಡರ್ಚಿ ತದ್ವ್ಯಾಜದಿನಂತರಂಗಗವೇಷಣನಿಮಿತ್ತಂ ದೂತ ಚ್ಛದ್ಮ ಪ್ರಣಿಧಿಯಂ ಗಾಯಿಕಾಪ್ರಾರ್ಥನಾದ್ವಾರದಿನಟ್ಟಿದನದಱಿಂ ನೀನುಮಾತಂಗೆ ಸಾಮಪುರಸ್ಸರಂ ಪ್ರತ್ಯುಪಾಯನಂಬೆರಸನುವೋದನು[3] ಮಾಪ್ತನುಮಧಿಗತ ಶಾಸ್ತ್ರನುಂ ಚತುರವಚನರಚನಾಪ್ರಪಂಚಕಂಚುಕಿತ ರೋಮಾಂಚ ಚುಂಚುಸಭಾಜನ ಶರೀರನುಮಪ್ಪ ದೂತಮುಖ್ಯನನಟ್ಟಿ ಬೞಿಯಂ ನೆಟಲೆಂತಾನುಂ ತಾನಾಡುವುದನಾಡುವುದೆಂದು ವಚನಸಂಕ್ಷೇಪಮುಮನಱಿಯೆ ನುಡಿದು ಮಾಣ್ದ ಸನ್ಮತಿಯ ನುಡಿಯಂ ಕೇಳ್ದು ಮುನಿದು ಸಂವೃತಾಕಾರನುಂ ನಿಭೃತೇಂಗಿತನುಮಾಗಿ ದಕ್ಷ ಜನೋಪಲಕ್ಷಿತಾಕೂತನಪರಾಜಿತಾನುಜನ್ಮಂ ನುಡಿವಾಗಳ್—

ಚಂ॥ ಸುಕರತರಂ ವಚೋನಿಚಯಮಾರಯೆ ದುಷ್ಕರಮರ್ಥವಾರ್ತಮ
ತ್ಯಕುಟಿಲಮಾಸ್ಯದೊಡ್ಡಭಿಮತಂ ಕುಟಿಲಂ ಋಜು ಬಾಹ್ಯವೃತ್ತಿ ವ
ಕ್ರ ಕಲುಷಮಂತರಂಗಮೆನೆ ಮೆಲ್ನುಡಿ ಪೊಣ್ಮಿರೆ ದಂತ ಸಾಂದ್ರ ಚಂ
ದ್ರಿಕೆ ಪರಿಷತ್ಕುಮುದ್ವತಿಗೆ ಕಾಂತಿಯನಾಂತುದನಂತವೀರ್ಯನಾ ॥ ೫೨ ॥

ಕಂ॥ ಒದವಿದ ನವ ಜಲದಮೆ ಮೊಱ
ಗಿದಪುದು ನವ ಜಲದರುತಿಗೆ ಶಿಖಿಕಳಭಮೆ ಕೇ
ಗಿದಪುದೆನಿಸಿದುದು ಮಧುರಂ
ಮೃದು ಗಂಭೀರಂ ರಥಾಂಗಪಾಣಿ ನಿನಾದಂ ॥ ೫೩ ॥

ವ॥ ಹಾಗೆ ಆ ದಮಿತಾರಿಯು ಸ್ವಾಭಾವಿಕವಾಗಿಯೆ ನಿತ್ಯ ನಿತ್ಯ ಅಭ್ಯುದಯಶಾಲಿಯೂ, ಸುಲಭವಾಗಿ ಶತ್ರು ಸಮೂಹದೊಡನೆ ಅವರವರ ದುರ್ಗಗಳನ್ನು ಭೇದಿಸಿದವನೂ, ಸಲೀಲವಾಗಿ ಅಸುರರನ್ನು ಸೋಲಿಸಿದವನೂ, ಅನಾಯಾಸ ವಾಗಿ ಶತ್ರುವೀರರನ್ನು ಸೀಳಿದವನೂ ಆಗಿ ದುರ್ಜಯನೆನಿಸಿರುವನು. ಷಡ್ಗುಣಗಳಲ್ಲಿ ಯಾನವೊಂದೇ ಅಲ್ಲದೆ ಉಳಿದ ಐದು ಗುಣಗಳಾಗಲಿ, ಚತುರೋಪಾಯಗಳಲ್ಲಿ ದಂಡೋಪಾಯವಲ್ಲದೆ ಇನ್ನುಳಿದ ಮೂರು ಉಪಾಯಗಳಾಗಲಿ ಆತನಿಗೆ ಅಳವಡುವುದಿಲ್ಲ. ನೀನು ಕೂಡ ತನಗೆ ಸರಿಸಮಾನನೆ ಆಗಿರುವುದರಿಂದ ಆತನು ನಿನ್ನೊಡನೆ ಸಮಾನವಾದ ಗುಣಗಳನ್ನು ಹಾಗು ಸಾಮಾದಿ ಉಪಾಯಗಳನ್ನು ಕೈಕೊಂಡು, ಆ ಮೂಲಕವಾಗಿ ಗಾಯಿಕೆಯರನ್ನು ಬೇಡುವ ನೆವದಿಂದ ದೂತನನ್ನು ಕಳಿಸಿ, ನಿನ್ನ ಅಂತರಂಗವನ್ನು ಪರೀಕ್ಷಿಸಲು ಹವಣಿಸಿರುವನು. ಆದುದರಿಂದ ನೀನಾದರೂ ಆತನಿಗೆ ಸಾಮೋಪಾಯದಿಂದ ಅವನ ಕಾಣಿಕೆಗೆ ಪ್ರತಿಯಾಗಿ ನಿನ್ನೊಂದು ಕಾಣಿಕೆಯೊಡನೆ, ನಿನ್ನ ಅಭಿಪ್ರಾಯಕ್ಕೆ ಒಗ್ಗಿದವನೂ, ಆಪ್ತನೂ, ಶಾಸ್ತ್ರ ಪರಿಣತನೂ, ವಾಕ್ಚತುರತೆಯಿಂದ ಸಭೆಗಳನ್ನು ರೋಮಾಂಚನಗೊಳಿಸಬಲ್ಲವನೂ ಆದ ಒಬ್ಬ ದೂತಶ್ರೇಷ್ಠನನ್ನು ಕಳಿಸಿ ಕೊಡು. ಆನಂತರ ತಾನು ಆಡಿದಂತೆ ನಡೆಯಲು ಆಡುವುದು." ಈ ಮೇರೆಗೆ ಸಂಕ್ಷಿಪ್ತವಾಗಿ ತನ್ನ ಮಾತನ್ನು ಮನಮುಟ್ಟು ವಂತೆ ಹೇಳಿ ಸನ್ಮತಿಯು ಮೌನವಾದನು. ಆ ಮಾತುಗಳನ್ನು ಕೇಳಿ ಅಪರಾಜಿತರಾಜನ ತಮ್ಮನು ಕುಪಿತನಾದನು. ಆದರೆ ತನ್ನ ಉದ್ವೇಗವನ್ನು ಹೊರಗೆಲ್ಲಿಯೂ ಪ್ರಕಟವಾಗದಂತೆ ನಿರ್ಬಂಧಿಸಿಕೊಂಡು ಗಂಭೀರನಾಗಿದ್ದನು. ಸೂಕ್ಷ್ಮ ದೃಷ್ಟಿಯ ಬುದ್ಧಿವಂತರಿಗೆ ಮಾತ್ರ ಆತನ ಅಂತರಂಗದ ಆಶಯವೇನೆಂಬುದು ಗೋಚರವಾಗಬಹುದಿತ್ತು. ಹೀಗೆ ಸೂಕ್ಷ್ಮೇಂಗಿತನಾದ ಆತನು ಮಾತನಾಡ ತೊಡಗಿದಾಗ —

೫೨. ಮಾತಿನಲ್ಲಿಯ ನುಡಿಗಳೇನೊ ಅತ್ಯಂತ ಸುಲಭ, ಆದರೆ ಅರ್ಥಮಾತ್ರ ಕಷ್ಟಸಾಧ್ಯ; ಮುಖಮುದ್ರೆಯನ್ನು ನೋಡಿದರೆ ಅದು ನಿಷ್ಕಪಟ, ಆದರೆ ಅಭಿಪ್ರಾಯ ಕುಟಿಲವಾದುದು; ಹೊರಗಿನ ವರ್ತನೆ ಅತ್ಯಂತ ಋಜು, ಆದರೆ ಅಂತರಂಗವೊ ವಕ್ರ ಹಾಗು ಉದ್ವಿಗ್ನವಾದುದು. ಹೀಗಿರುವ ತನ್ನ ಮಾತುಗಳನ್ನಾಡುತ್ತಿರುವಾಗ ಆತನ ಶುಭ್ರವಾದ ಹಲ್ಲುಗಳ ಕಾಂತಿಯು ಸಭೆಯೆಂಬ ಕುಮುದ ಸರೋವರಕ್ಕೆ ಬೆಳ್ದಿಂಗಳೊ ಏನೊ ಎಂಬಂತೆ ಹರಡಿತು.

೫೩. ಮಳೆಗಾಲದ ಹೊಸ ಮೋಡವೆ ಗರ್ಜಿಸುತ್ತಿದೆ; ಆ ಗರ್ಜನೆಯನ್ನು ಕೇಳಿ ಗಂಡು ನವಿಲು ಕೂಗುತ್ತಿದೆ ಎಂದೆನಿಸುವಂತೆ ಮೃದುಮಧುರವಾಗಿಯೂ ಗಂಭೀರವಾಗಿಯೂ ವಾಸುದೇವನು ನುಡಿದನು.

---

1. ಸಹಜದೊಳ್ (ಅ) 2. ಸ್ವಭಾವದೊಳ್ (ಅ) 3. ಸು ಅನುಮತನು (ಮ)

ಉ॥ ಭಾಸ್ವರಬೋಧ ನೀನಱಿದಿರ್ದ್ದೆ ನುಡಿಯೊಳ್ ನೃಪ ನೀತಿ ಸಾರ ಸ
ರ್ವಸ್ವಮನೋದುಗಳ್ ನಿನಗೆ ವಾಚಕಮಲ್ಲದುವಿಲ್ಲದೇಕೆ ಪೇ
ೞ್ ಸ್ವ ನೃಪಾಂತರಂಗಮನಿದೊಂದನೆ ಭಾವಿಸಲೊಲ್ದೆಯಿಲ್ಲ ಸಾ
ರಸ್ವತನಾದೆ ಚೋದ್ಯಮೆನಗಿಂತಿದೆ ರಾಜಸಮಾಜಪೂಜಿತಾ ॥ ೫೪ ॥

ಕಂ॥ ಉದಯಿಸಿದ ಚಕ್ರವರ್ತಿ
ತ್ವದ ಮದಮಂ ಬಂದ ದೂತನೊಯ್ಯನೆ ಮೊದಲೊಳ್
ವಿದಿತಂ ಮಾಡಿದನದನಱಿ
ವುದು ನಿನಗಮೆನಗಮಮರಮಂತ್ರಿಗಮ[1]ರಿ[1]ದೇ ॥ ೫೫ ॥

ಅಂತಃಕಲುಷಿತನಂತ
ಶ್ಶಾಂತಂ ದಮಿತಾರಿಯೆಂಬುದಂ ದೂತ ಮುಖೋ
ದಂತಂಗಳನಱಿವುದು ಮತಿ
ವಂತಂಗೆರ್ದೆಯಱಿದನಲ್ತೆ ಬಾಯ್ದೆಱೆದಾತಂ ॥ ೫೬ ॥

ಆದಿಯ ದಂಡದ ನುಡಿಗಳ
ನಾ ದೂತಂ ಮುನ್ನ ನುಡಿದು ಬೞಿಯಂ ಸಾಮ
ಪ್ರಾದುರ್ಭಾವಂ ಗೆಯ್ದುದ
ನೇರ್ದೊರೆಯರುಮಱಿಯರೇನವಂ ಪರಿಣತನೋ ॥ ೫೭ ॥

ಇನಿವಿಱಿಯ ಸಭೆಯೊಳಾವನ
ಮನೋಭಿಮತಮಾವುದದನೆ ವದನೇಂಗಿತದಿಂ
ಮನದಿಂ ಮುನ್ನಱಿವನದೇ
ನನೂನ ನಿಶಿತಾಗ್ರಮತಿ ವಿನೂತನೊ ದೂತಂ ॥ ೫೮ ॥

---

೫೪. "ಶ್ರೇಷ್ಠವಾದ ಜ್ಞಾನಸಂಪತ್ತಿನಿಂದ ಕೂಡಿದ ನೀನು ರಾಜನೀತಿಯ ಸಾರವನ್ನೆಲ್ಲ ತಿಳಿಸಿದೆ. ಶಾಸ್ತ್ರಗಳಲ್ಲಿ ನಿನಗೆ ತಿಳಿಯದೆ ಇರುವಂತಹವು ಯಾವುವೂ ಇಲ್ಲ. ಹಾಗಿದ್ದರೂ ಕೂಡ ನಿನ್ನ ಅರಸನ ಅಂತರಂಗವನ್ನು ಮಾತ್ರ ನೀನು ಅದೇಕೆ ಯೋಚಿಸದಾದೆ? ರಾಜಸಮೂಹದಲ್ಲಿ ಪೂಜ್ಯನೆನಿಸಿಕೊಂಡ ನೀನು ಪಂಡಿತನಾಗಿದ್ದು ಹೀಗೇಕೆ ವರ್ತಿಸಿದೆ? ಇದು ನನಗೆ ಸೋಜಿಗವೆನಿಸಿದೆ.

೫೫. ತನಗೆ ಹೊಸತಾಗಿ ಒದಗಿದ ಚಕ್ರವರ್ತಿಪದದ ದರ್ಪವನ್ನು ತಾನು ಕಳಿಸಿದ ಈ ದೂತನ ಮುಖಾಂತರವಾಗಿ ಆತನು ಆರಂಭದಲ್ಲಿಯೆ ವ್ಯಕ್ತಪಡಿಸಿರುವನು. ಇದನ್ನು ತಿಳಿಯುವುದು ನಿನಗಾಗಲಿ, ನನಗಾಗಲಿ, ಅಮರ ಸಚಿವನಿಗಾಗಲಿ ಅಸಾಧ್ಯವೇನೂ ಅಲ್ಲ.

೫೬. ದಮಿತಾರಿಯು ಶಾಂತನಂತೆ ತೋರಿದರೂ ಅಂತರಂಗದಲ್ಲಿ ಕಲುಷಿತನಾಗಿರುವನೆಂಬುದು ಆತನ ದೂತನ ಮಾತಿನ ರೀತಿಯಿಂದಲೆ ತಿಳಿಯುವುದು. ಮಾತಿಗೆ ಬಾಯ್ದೆರೆದವನು ತನ್ನ ಹೃದಯವನ್ನೇ ತೆರೆದಿಡುವನೆಂಬುದು ಮತಿವಂತನಿಗೆ ಗೊತ್ತು.

೫೭. ಮೊದಲು ದಂಡೋಪಾಯದ ನುಡಿಗಳನ್ನು ಆಡಿ ಆ ಬಳಿಕ ಸಾಮೋಪಾಯವನ್ನು ನುಡಿದ ಆ ದೂತನ ಚಾತುರ್ಯ ಎಂತಹುದು! ಎಂಥವರಿಗೂ ಅವನ ಈ ವಿಧಾನ ಹೊಳೆಯಲಾರದು.

೫೮. ಇಷ್ಟು ದೊಡ್ಡ ಸಭೆಯಲ್ಲಿ ಯಾರು ಯಾರ ಮನವೇನೆಂಬುದನ್ನು ಅವರವರ ಮುಖಮುದ್ರೆಯಿಂದಲೆ ಮನೋವೇಗಕ್ಕಿಂತ ತೀವ್ರವಾಗಿ ಆತನು ತಿಳಿಯಬಲ್ಲವನು. ಆ ದೂತನು ಎಂತಹ ಸೂಕ್ಷ್ಮವಾದ ಹಾಗು ಕುಶಾಗ್ರವಾದ ಬುದ್ಧಿಯುಳ್ಳವನು!

---

1. ಱ (ಮ)

ದಾನದೊಳಂ ಸಾಮದೊಳಮ
ನೂನಂ ನಿನಗರ್ಥಿ ಚಕ್ರವರ್ತಿಗಮದೆ ಚೇ
ತೋನಿಚಿತಮುಱಿಮುದಂ ನೃಪ
ನೀನಱಿವೈ ನಯಮನೊಂದೆ ಮಾಳ್ಪುದು ಚದುರಂ ॥ ೫೯ ॥

ಆತನು¹ರು ಸರದಿ¹ನಿನಿಸಾ
ಕೂತಮ ನಾಂ ಜಡನೆನಱಿವೆನೆಂದೊಡೆ ನೀತಿ
ಖ್ಯಾತರಿರಗಾಧ ಬೋಧ ಸ
ಮೇತರಿರಜ್ಞವವರಿನಿತನಱಿಯಲೆ ವೇಡಾ ॥ ೬೦ ॥

ಇದನಟ್ಟಲೆ ನೆಟ್ಟನೆ ವೇ
ಳ್ಪುದೆಂದು ಸಾಮೈಕಗರ್ಭದಂಡೋಕ್ತಿಯಿ ನ
ಟ್ಟಿದುದಿದುವೆ ಪೇೞದೇಂ ಪಡೆ
ಯದೊಡಾತನ ಮುನಿಸನಿನಿತನಱಿಯದರೊಳರೇ ॥ ೬೧ ॥

ಗಾಣತಿಯರಿರ್ವರುಂ ಮ
ತ್ಪ್ರಾಣದಿನಗ್ಗಳಮವಳ್ದಿರಂ ಭಯವಶದಿಂ
ಕ್ಷೋಣೀಶಂ ಕುಡೆ ಕೊಳ್ವದೆ
ಮಾಣೆಂ ಹ²ಳಿ²ಯಾಣೆ ಪರಮ ದೀಕ್ಷೆಯನಾಳ್ ॥ ೬೨ ॥

ವ॥ ಎಂದಿಂತು ಮುಳಿದು ಪ್ರಳಯ ವಿಳಸನ ಪ್ರೋಗ್ರ ಪೌರುಷ ವೃತ್ತಿ ವಿಷಣ್ಣನಾಗಿ ಮೊಳಗಿ ಮಾಣ್ದ ಮುಗಿಲಂತನಿತುಂ ನುಡಿದು ಮಾಣ್ದು³ ತಮ್ಮಣ್ಣನಭಿಪ್ರಾಯಮನಾರಯ್ಯಲೆಂದನಂತವೀರ್ಯನಿರ್ದನಿರೆ—

---

೫೯. ದಾನ ಹಾಗು ಸಾಮೋಪಾಯಗಳು ನಿನಗೆ ಇಷ್ಟವಾದುವು ಎಂದು ಚಕ್ರವರ್ತಿಯ ನಿಶ್ಚಿತವಾದ ಅಭಿಪ್ರಾಯ ಇದು ಸ್ಪಷ್ಟ. ಇನ್ನು ಉಳಿದುದೇನೆಂಬುವನ್ನು ರಾಜನೇ, ನೀನು ಬಲ್ಲೆ. ಚತುರನಾದವನು ನಯವೊಂದನ್ನೇ ಕೈಕೊಳ್ಳಬೇಕು.

೬೦. ದೂತನ ಗಂಭೀರವಾದ ವಾಣಿಯಲ್ಲಿ (ಹುದುಗಿದ್ದ) ಆತನ ಆಂತರಿಕ ಆಶಯವನ್ನು ಮಂದಬುದ್ಧಿಯಾದ ನಾನೇ ಅರಿತುಕೊಂಡೆನೆಂದ ಮೇಲೆ ನೀತಿವಿಶಾರದರೂ, ಅಗಾಧಜ್ಞಾನಿಗಳೂ ಆಗಿರುವ ನೀವು ಇಷ್ಟನ್ನು ತಿಳಿಯಬೇಡವೆ?

೬೧. ನಾನು ಕೇಳಿದುದನ್ನು ನೀವು ಕಳಿಸಲೇಬೇಕೆಂದು ಸಾಮೋಪಾಯದ ಮಾತಿನಲ್ಲಿ ಹೇಳಿದ್ದರೂ ಅದರಲ್ಲಿ ದಂಡೋಪಾಯದ ಧ್ವನಿಯುಂಟು. ಆತನ ಬೇಡಿಕೆ ಫಲಿಸದೆ ಹೋದರೆ ಅವನಿಗೆ ಕೋಪವುಂಟಾಗುವುದು ಖಚಿತ. ಆತನು ಹೇಳಿಕಳಿಸಿದ ಮಾತು ಇದನ್ನು ಸ್ಪಷ್ಟಪಡಿಸುತ್ತದೆ. ಇಷ್ಟನ್ನು ಕೂಡ ಅರಿಯದವರುಂಟೆ?

೬೨. (ಆತನು ಕೊಡಬೇಕೆಂದು ಕೇಳಿರುವ) ಗಾಯಕಿಯರಿಬ್ಬರೂ ನನಗೆ ನನ್ನ ಪ್ರಾಣಕ್ಕಿಂತಲೂ ಮಿಗಿಲಾದವರು. ಆತನಿಗೆ ಹೆದರಿಕೊಂಡು ನಮ್ಮ ಅರಸನೇನಾದರೂ ಅವರಿಬ್ಬರನ್ನೂ ಅವನಿಗೆ ಕೊಡುವುದಾದರೆ ಬಲದೇವನಾಣೆಯಾಗಿ ನಾನು ಸಂನ್ಯಾಸದೀಕ್ಷೆಯನ್ನು ವಹಿಸದೆ ಬಿಡುವುದಿಲ್ಲ."

ವ॥ ಈ ಪ್ರಕಾರವಾಗಿ ಪ್ರಳಯವಿಲಾಸದಲ್ಲಿಯೆ ಗುಡುಗುವ ಪ್ರವೃತ್ತಿಯುಳ್ಳ ಆ ಪೌರುಷಶಾಲಿ ಅನಂತವೀರ್ಯನು ಗುಡುಗುವ ಮೋಡದಂತೆ ನುಡಿದು ವಿಷಣ್ಣತೆಯಿಂದ ಮೌನವಾಗಿ ಅಣ್ಣನ ಅಭಿಪ್ರಾಯವನ್ನು ಅಪೇಕ್ಷಿಸುತ್ತಿರಲಾಗಿ—

---

1. ಉಸಱಮ (ಅ) 2. ಳಿ (ಮ) — 'ಅ' ಪ್ರತಿಯಲ್ಲಿ '(ಹಳಿ) ಬಲಭದ್ರ' ಎಂಬ ಟೀಕಿದೆ 3. ಣ್ಡ (ಅ)

ಉ॥ ಈ ಕುಲ ವೃದ್ಧ ಮಂತ್ರಿಯ [1]ಮ[1]ತಂ ನೃಪನೀತಿಯೊಳೊಂದಿ ನಿಂದುದ
ವ್ಯಾಕುಲಮಿಾ ಕುಮಾರನ ಮತಂ ಛಲಮಂ ಪುದಿದಿರ್ದು[2]ದಿ[2]ಂತಿವೇ
ಕೈಕ ವಿರುದ್ಧಮೆಂದುಭಯಪಕ್ಷ ವಿಲಂಭನದಿಂ ವಿಲೋಲ ದೋ
ಲಾಕುಲ ವೃತ್ತಿಯಾದುದಪರಾಜಿತ [3]ರಾಜ[3] ವಿರಾಜ ಮಾನಸಂ ॥ ೬೩ ॥

ವ॥ ಅಂತು ಸುಪ್ತಮಿಾನಾಚ್ಛೋದಮಾನಸ ಸರೋ[4]ವರೋ[4]ಪಮಾನಂ ನಿಮಿಾಲಿತಲೋಚನಂ ಪ್ರಸನ್ನಾದ್ರ್ರಾಶಯಂ ಕಿಱಿದುಬೇಗಮು ನಿರ್ದು ತನ್ನ ಮನಮೆ ಮಧ್ಯಸ್ಥ ಮಂತ್ರಿಯಾಗಾಳೋಚಿಸಿ ನಿಶ್ಚಯಿಸಿ—

ಕಂ॥ ಅತಿಶಯ ವರ್ಣಕ್ರಮ ಮೊಂ
ದು ತೆಱಂ ಪದರಚನೆಯೊಂದು ತೆಱನರ್ಥಮದೊಂ
ದು ತೆಱಂ [5]ಬೆಡಂಗು[5] ಬೇಱೊಂ
ದು ತೆಱಂ ನುಡಿಗೆನೆ ಮನಕ್ಕೆವರೆ ಹಳಿ ನುಡಿದಂ ॥ ೬೪ ॥

ಮ॥ ಭುವನೈಶ್ವರ್ಯದಿನರ್ಥಶಾಸ್ತ್ರ ಪರಿಪಾಟೀವಾದವಾಚಾಟ ಪಾ
ಟವದಿಂ ಗೊಟ್ಟಗೆಯಲ್ಕೆ ನಮ್ಮ ಸಭೆಯೆಲ್ಲಂ ಜೀಯ ಜೀಯೆಂಬ ಕೈ
ತವವಾದಿಚ್ಛೆಯಿನಾನಿದಂ ನುಡಿಯೆನೆನ್ನೆಂಬುಕ್ತಿಗಳ್ ಮೆಚ್ಚಲ
ಪ್ಪುವೊ ಪೇಱಾಗವೊ ಮುನ್ನೆ ಕೇಳ್ದು ಬಿಸುಡಿಂ ಕೈಕೊಳ್ಳಿಮೇಂ ಮಂತಣಂ ॥ ೬೫ ॥

ವ॥ ಅಂತು ವಿಯಚ್ಚರರಾಜನಾದಂದಿನ ವಿದ್ಯಾದೇವತೆಗಳ್ ಬಯ್ತಿಟ್ಟಂಗೆ ಪುಟ್ಟೆ ಕೊಳಿಪ ನಿಧಿಗಳಂತೀ ಭವದೊಳ್ ಎನಗೆ ಬೆಸಕ್ಕೆ [6]ನೀರ್ದೊಱೆ[6]ಗಳಾಗಿ ಬಂದು ನಿಂದುವನಂತವೀರ್ಯಂಗಂ ತಜ್ಜನ್ಮವಿದ್ಯಾದೇವತೆಗಳ್ ಮೊಟಗಿನ ಬಳಿಯ ಮಿಂಚಿನಂತೆ ಬೞಿವೞಿಯನೆ ಬಂದುವದು ಕಾರಣದಿಂದಾನುಮಾತನುಂ—

---

೬೩. ಕುಲವೃದ್ಧನಾದ ಈ ಮಂತ್ರಿಯ ಅಭಿಪ್ರಾಯವು ರಾಜನೀತಿಗೆ ಅನ್ವಯವಾಗಿದೆ. ತಮ್ಮನ ಅಭಿಮತ ವಾದರೋ ಛಲದಿಂದ ತುಂಬಿಕೊಂಡಿದೆ. ಇವೆರಡೂ ಪರಸ್ಪರ ವಿರುದ್ಧಪಕ್ಷಗಳಾಗಿ ನಿಂತುವು. ಎರಡರಲ್ಲಿ ಯಾವುದನ್ನು ಒಪ್ಪಲಿ ಯಾವುದನ್ನು ಬಿಡಲಿ ಎಂದು ಅಪರಾಜಿತನ ಮನಸ್ಸು ಹೊಯ್ದಾಡಿತು.

ವ॥ ಹೀಗೆ ಮೀನುಗಳೆಲ್ಲ ಮಲಗಿ ಶಾಂತವಾಗಿರುವುದರಿಂದ ತಿಳಿಯಾಗಿರುವ ಮಾನಸಸರೋವರದಂತೆ ತನ್ನ ಕಣ್ಣುಗಳನ್ನು ಮುಚ್ಚಿಕೊಂಡು, ಮನಸ್ಸಿನಲ್ಲಿ ಪ್ರಸನ್ನತೆಯುಂಟಾಗುವಂತೆ ಸ್ವಲ್ಪ ಸಮಯದವರೆಗೆ ಮೌನವಾಗಿದ್ದು ತನ್ನ ಮನದೊಡನೆಯೆ ಮಂತ್ರಾಲೋಚನೆ ಮಾಡಿಕೊಂಡು ಒಂದು ನಿರ್ಧಾರಕ್ಕೆ ಬಂದನು. ಆಮೇಲೆ—

೬೪. ಉತ್ತಮವಾದ ಅಕ್ಷರಕ್ರಮವೊಂದು ಬಗೆ; ಪದರಚನೆಯೊಂದು ಬಗೆ; ಅರ್ಥವದೊಂದು ಬಗೆ; ಆಮೇಲೆ ನುಡಿವ ಬೆಡಗು ಬೇರೊಂದು ಬಗೆ. ಈ ಪ್ರಕಾರವಾಗಲು ಮನಕ್ಕೆ ಮುಟ್ಟುವಂತೆ ಬಲರಾಮನು ಹೀಗೆ ನುಡಿದನು:

೬೫. "ಐಶ್ವರ್ಯ ಬಲದಿಂದಲೂ, ಅರ್ಥಶಾಸ್ತ್ರಪರಂಪರೆಯಲ್ಲಿ ವಾದವಾದವ ವಾಕ್ಚಾತುರ್ಯದಿಂದಲೂ ಮಾತನಾಡಿ, ನಮ್ಮ ಸಭಾಸದರೆಲ್ಲ ಸೈ ಸೈ ಎನ್ನಬೇಕೆಂಬ ಅಪೇಕ್ಷೆಯಿಂದ ನಾನು ಈ ಮಾತನ್ನು ಹೇಳುತ್ತಿಲ್ಲ. ನನ್ನ ಮಾತುಗಳು ಮೆಚ್ಚುವುದಕ್ಕೆ ಯೋಗ್ಯವಾಗಿದ್ದರೆ ಅಂಗೀಕರಿಸಿ; ಅಲ್ಲವಾದರೆ ಕಡೆಗಣಿಸಿಬಿಡಿ.

ವ॥ ಧನವನ್ನು ಹೂಳಿಟ್ಟವನಿಗೆ ಅದು ಮರಳಿ ದೊರೆಯುವಂತೆ ವಿದ್ಯಾಧರ ಜನ್ಮದಲ್ಲಿ ನನಗೆ ಸಾಧ್ಯವಾದ ದೇವತೆಗಳು ಈ ಜನ್ಮದಲ್ಲಿ ಬಂದು ನನ್ನ ಆಜ್ಞೆಯನ್ನು ನಿರೀಕ್ಷಿಸುತ್ತ ನಿಂತಿವೆ. ಗುಡುಗಿನ ಹಿಂದೆಯೆ ಬರುವ ಮಿಂಚಿನಂತೆ ಅನಂತವೀರ್ಯನಿಗೆ ಕೂಡ ಆತನ ಪೂರ್ವಜನ್ಮದ ವಿದ್ಯಾದೇವತೆಗಳು ಈಗ ಅವನಿಗೆ ಕೈವಶವಾಗಿ ನಿಂತಿವೆ. ಆದುದರಿಂದ ಆತನೂ ಹಾಗು ನಾನೂ

---

1. ಧು (ಅ) 2. ವಿ (ಮ) 3. ವೀರ (ಮ) 4. × (ಮ) 5. ಬೆಡಗುಂ (ಮ) 6. ನಿದ್ದೊರೆ (ಅ)

ಮ॥ ಉಪಮಾತೀತಮೆನಿಪ್ಪ ಗಾ[1]ಣತಿ[1]ಯರೊಂದಾಕಾರಮಂ ತಾಳ್ದಿ ರೂ
ಪ ಪರಾವರ್ತನಮೆಂಬ ವಿದ್ಯೆಯಿನಭಿಪ್ರಾಯಂ ವಿಯದ್ಗಾಮಿ ಭೂ
ಮಿಪನೊಳ್ [2]ತೊ[2]ಟ್ಟುದನಿಂತುಟೆಂಬಿನಿತನಾರಯ್ದೆನ್ನ ಬರ್ಪನ್ನಮಾ
ಜ್ಞೆ ಪುರಂ ಮಂಡಲಮೆಂಬಿವರ್ಕೆ ನಿಮುತಲ್ತೇ ಶಿಕ್ಷೆಯುಂ ರಕ್ಷೆಯುಂ ॥ ೬೬ ॥

ವ॥ ಪೋದೆಡೆಯೊಳಸ್ಮದೀಯಕುಶಲವಾರ್ತೆಗೆ ತಲ್ಲಣಿಸಲ್ವೇಡೆಂದು ತನ್ನ ಮನೋಹಿತ ಕಾರ್ಯ ನಿಶ್ಚಯಮನಱಿಯೆ ನುಡಿದು ಮಂತ್ರಿಗಣದ ಮಂತ್ರಮಂ ಮಾಣಿಸಿ ಕುಶಾಗ್ರೀಯಮತಿಪ್ರಭಾವಂ ಬಲದೇವಂ ನಿಜಾನುಜಸಮೇತಂ ಗಮನೋದ್ಯುಕ್ತನಾಗಿರೆ ತದೀಯ ಪ್ರಾಜ್ಯಸಾಮ್ರಾಜ್ಯ ನೌಕರ್ಣಧಾರಾಯಮಾಣನುಂ ಮಂತ್ರಿಸಂದೋಹವಿಶ್ರುತನುಮಪ್ಪ ಬಹುಶ್ರುತನೆಂಬ ಮಂತ್ರಿಯಿಂತೆಂದಂ—

ಮ॥ ಇದೆ ಮಂತ್ರೋಕ್ತಮವಶ್ಯಮಿನ್ನುಱಿದ ಮಾಲಾಮಂತ್ರದೊಳ್ ಬರ್ಪುದೇ
ವುದೊ ಪೇೞ್ ದೇವ ನಭಶ್ಚರೇಂದ್ರನೊಳಗಂ ನಿಶ್ಶೇಷಮಾಗಯ್ದು ಮಾ
ಣದೆ ತದ್ರಾಜಿತ ರಾಜ್ಯಲಕ್ಷ್ಮಿವೆರಸೆೞ್ದಾ ತಮ್ಮನುಂ ನೀನು ಮ
ಭ್ಯುದಯಕ್ಕಂ ವಿಜಯಕ್ಕಮಿರ್ವರೆ ವಿಶೇಷಸ್ಥಾನಮುರ್ವೀಶ್ವರಾ ॥ ೬೭ ॥

ಕಂ॥ ಮೊದಲೊಳೆ ದೈವಜ್ಞರಿನಾ
ನಿದನಱಿದೆನಶೇಷಖಚರನಿಕರಂ ನಿನ್ನ
ಭ್ಯುದಯದಿನೞಿಗುಂ ಚಂದ್ರಮ
ನುದಯದಿ[ನಳಜು]ವವೊಲತುಳತಿಮಿರಪ್ರಸರಂ ॥ ೬೮ ॥

---

೬೬. ರೂಪಪರಾವರ್ತನವಿದ್ಯೆಯಿಂದ ಅಸದೃಶಿಯರಾದ ಆ ಇಬ್ಬರು ಗಾಯಿಕೆಯರ ರೂಪವನ್ನು ತಾಳಿ, ಆ ಖೇಚರರಾಜನಿಗೆ ನಮ್ಮಿಂದ ಕಳಿಸಲ್ಪಟ್ಟವರಂತೆ ಅಲ್ಲಿಗೆ ಹೋಗುತ್ತೇವೆ. ಆತನ ಅಂತರಂಗ ಸ್ಥಿತಿಯನ್ನು ಪರೀಕ್ಷಿಸಿಕೊಂಡು ನಾವು ಮರಳಿ ಬರುವವರೆಗೆ ನಮ್ಮ ಪುರ, ರಾಜ್ಯ ಮೊದಲಾದುವುಗಳ ಸಮಗ್ರ ಆಡಳಿತವನ್ನು ನೀವು ನೋಡಿಕೊಳ್ಳಬೇಕು.

ವ॥ ನಾವು ಹೋದ ಸ್ಥಳದಲ್ಲಿ ನಮಗೆ ಕ್ಷೇಮವೆ ಹೇಗೆಂಬ ಬಗೆಗೆ ನೀವು ಚಿಂತಿಸಬೇಡಿ!" ಹೀಗೆಂದು ತನ್ನ ಮನಸ್ಸಿನಲ್ಲಿ ನಿರ್ಧರಿಸಿಕೊಂಡುದನ್ನು ಸ್ಪಷ್ಟವಾಗಿ ಹೇಳಿ, ಸಚಿವರೊಡನೆಯ ಮಂತ್ರಾಲೋಚನೆಯನ್ನು ಮುಕ್ತಾಯಗೊಳಿಸಿ ಕುಶಾಗ್ರಮತಿಯಾದ ಬಲದೇವನು ತನ್ನ ತಮ್ಮನೊಡನೆ ಹೊರಡುವುದಕ್ಕೆ ಸಿದ್ಧನಾದನು. ಆಗ ಆತನ ವಿಸ್ತಾರವಾದ ಸಾಮ್ರಾಜ್ಯವೆಂಬ ಹಡಗಿಗೆ ಕರ್ಣಧಾರನಂತಿರುವವನೂ ಮಂತ್ರಿಸಮೂಹದಲ್ಲಿ ಪ್ರಖ್ಯಾತನೂ ಆದ ಬಹುಶ್ರುತನೆಂಬ ಮಂತ್ರಿಯು ಹೀಗೆಂದನು :

೬೭. "ರಾಜನೇ, ಮಂತ್ರವಿಧಾನಕ್ಕೆ ಅನುಗುಣವಾದ ಅವಶ್ಯವಾದ ಮಾತನ್ನೇ ನೀನು ಹೇಳಿರುವೆ. ಇನ್ನು ಹಲವಾರು ಮಿಕ್ಕ ಮಂತ್ರಗಳಿಂದ ಬರುವ ಲಾಭವೇನು? ಆ ಖೇಚರರಾಜನ ಅಂತರಂಗವನ್ನು ಚೆನ್ನಾಗಿ ಒಳಹೊಕ್ಕು ತಿಳಿದುಕೊಂಡು, ಆತನ ವೈಭವಪೂರ್ಣವಾದ ರಾಜ್ಯಲಕ್ಷ್ಮಿ ಸಹಿತವಾಗಿ ನೀನೂ ನಿನ್ನ ಸಹೋದರನೂ ಬರುವಿರಿ. ಮಹಾರಾಜನೇ, ಅಭ್ಯುದಯಕ್ಕೂ ಜಯಕ್ಕೂ ಸ್ಥಾನವಿಶೇಷವೆಂದರೆ ನೀವಿಬ್ಬರೆ.

೬೮. ಅಸಾಮಾನ್ಯವೆನಿಸಿದ ಕತ್ತಲೆಯೆಲ್ಲವೂ ಚಂದ್ರೋದಯದಿಂದ ಹೊರಟುಹೋಗುವಂತೆ, ಸಮಸ್ತ ಖೇಚರ ಸಮೂಹವು ನಿನ್ನ ಅಭ್ಯುದಯದಿಂದ ನಾಶವಾಗಿಹೋಗುವುದು. ಹೀಗಾಗುವುದೆಂದು ಈ ಮೊದಲೆಯೆ ನಾನು ಭವಿಷ್ಯಜ್ಞರಿಂದ ಅರಿತುಕೊಂಡಿರುವೆನು.

---

1. ಣಿತಿ (ಅ) 2. ಕೊ (ಮ)

ಕಂ॥ ಜನಪತಿ ಬರವೇೞ್ದಾ ದೂ
ತನ ಮನಮಂ ಕೊಂಡು ದಾನಸನ್ಮಾನದಿನಿಂ
ದಿನ ದಿವಸಮೆ ಬೇಡುವುದಿರ
ದನಂತವೀರ್ಯಂಗೆ ಗಗನಚರಪತಿಸುತೆಯಂ ॥ ೧೯ ॥

ಇದಱ ತದನಂತರಂ ಮಾ
ಣದೆ ಬಿಜಯಂಗೆಯ್ವುದಿರ್ವರುಂ ತರ್ಪ ಮನಂ
ಚದುರುಳ್ಳೊಡೊರ್ವನಿಂದಱ
ವುದು ಮಾರ್ಬಲಮಿರ್ಬರಿಂದಮಾಗದುದುಂಟೇ ॥ ೨೦ ॥

ವ॥ ಎಂದಪರಾಜಿತಾನಂತವೀರ್ಯರ ಮಾತನೊಡಂಬಟ್ಟು ರಹಸ್ಯದೊಳ್ ನಿಶ್ಚಯಿಸಿದ ಬಹುಶ್ರುತನ ಮಂತ್ರನಿಶ್ಚಯಮುಮಂ ದೂರದರ್ಶಿತ್ವಮುಮಂ ಪ್ರತಿಭಾಗುಣಮುಮಂ ಪ್ರಾಜ್ಞರುಂ ನಿರ್ಮತ್ಸರರುಂ ಗುಣಗ್ರಾಹಿಗಳುಮಪ್ಪುದಱಿಂ ಸಚಿವಸಮೂಹಂ ಮೆಚ್ಚಿ ಸಮಾಲೋಚನಗೋಚರಚರಾಚರಂಗೆ ಪರೋಕ್ಷಮೆ ಪ್ರತ್ಯಕ್ಷಮಲ್ತೆಯೆಂದು ಪರಮಾನಂದದಿಂದಭಿವಂದಿಸಿ ನಿರ್ಣೀತಮಂತ್ರರಾದ ಮಂತ್ರಿಗಣಮಂ ಸನ್ಮಾನಪುರಸ್ಸರಂ ಕ್ರಮಂದಪ್ಪದೆ ವಿಸರ್ಜಿಸಿ ಮಂತ್ರಶಾಲೆಯುಂ ಪೊಱಮಟ್ಟು ಬಂದು ಸಭಾಭವನಮಂ ಪೊಕ್ಕು ಸಿಂಹವಿಷ್ಟರಾರೂಢನಾಗಿ ಕೋಶಾಧ್ಯಕ್ಷನಂ ಬರಿಸಿ ಕಿವಿಯೊಳ್ಪೇೞ್ದುದುಮಾತನವಗತಾದೇಶನಾಗಿ ಖೇಚರ ದೂತ ನಿವೇಶಮಂ ಪುಗೆ ದೂತನಾತಂಗಿದಿರೆೞ್ದು ನಿಜಾಸನಾರ್ಧದೊಳ್ಕುಳ್ಳಿರಿಸಿ ಕರ್ಪೂರವಾರಿಪರಿಮಿಶ್ರಿತತಾಂಬೂಲ ದಾನ ಸಮೇತಂ ಸಂಭಾಷಿಸುತ್ತುಮಿರೆ ತನ್ನ ತಂದ ದುಕೂಲಾಂಬರವಿಲೇಪನಮಾಲಪೂರ್ವಕಂ

ಕಂ॥ ತ್ರಿಜಗದ್ಭೂಷಣಮೆಂಬುದಿ
ದಜಾತಪೂರ್ವಾಂಶುಮಾಲಿ ಕಂಠಾಭರಣಂ
ವಿಜಿತಶಶಿತಪನರೋಚಿ
ರ್ವ್ರಜಂ ಪ್ರಭಾಸ್ಫುರಿತಗಗನದಿಗವನಿವಳಯಂ ॥ ೨೧ ॥

---

೧೯. ದೇವ, ಇಂದಿನ ದಿನವೇ ಆ (ದಮಿತಾರಿಯ) ದೂತನನ್ನು ಕರೆಕಳಿಸಿ. ದಾನಸನ್ಮಾನಗಳಿಂದ ಆತನ ಮನವನ್ನು ಒಲಿಸಿಕೊಂಡು ನಮ್ಮ ಅನಂತವೀರ್ಯನಿಗೆ ಆ ಖೇಚರರಾಜನ ಮಗಳನ್ನು ಕೊಡಬೇಕೆಂದು ಕೇಳು.

೨೦. ಇದಾದ ಮೇಲೆ ನೀವಿಬ್ಬರೂ ಅವನೊಡನೆ ಬಿಜಯಮಾಡಬಹುದು. ಬುದ್ಧಿಯೂ ಚಾತುರ್ಯವೂ ಉಳ್ಳ ನಿಮ್ಮಲ್ಲಿ ಒಬ್ಬನಾದರೂ ಸಾಕು, ಶತ್ರುಬಲ ನಾಶವಾಗುವುದು. ಈಗ ನೀವು ಇಬ್ಬರಿರುವಾಗ ಆಗಲಾರದೆ?"

ವ॥ ಹೀಗೆಂದು ಅಪರಾಜಿತ ಹಾಗು ಅನಂತವೀರ್ಯ ಇವರಿಬ್ಬರ ಮಾತನ್ನೂ ಸಮನ್ವಯಗೊಳಿಸುವಂತೆ ಮಾರ್ಮಿಕವಾಗಿ ನಿರ್ಣಯಿಸಿ ನುಡಿದ ಬಹುಶ್ರುತನ ಮಂತ್ರನಿರ್ಧಾರವನ್ನೂ, ದೂರದರ್ಶಿತ್ವವನ್ನೂ, ಪ್ರತಿಭಾಶಕ್ತಿಯನ್ನೂ ಅಲ್ಲಿ ನೆರೆದಿದ್ದ ನಿರ್ಮತ್ಸರ ಸ್ವಭಾವದ ಪ್ರಾಜ್ಞಮಂತ್ರಿಗಳೆಲ್ಲರೂ ಮೆಚ್ಚಿ, "ಸಮಾಲೋಚನ ಶಕ್ತಿಯುಳ್ಳವನಿಗೆ ಪರೋಕ್ಷವೆ ಪ್ರತ್ಯಕ್ಷವಲ್ಲವೆ?" ಎಂದು ತುಂಬ ಆನಂದದಿಂದ ಅಭಿನಂದಿಸಿದರು. ಹೀಗೆ ಮಂತ್ರನಿಶ್ಚಯ ಮಾಡಿದ ಬಳಿಕ ಮಂತ್ರಿಮಂಡಳವನ್ನು ರಾಜನು ಉಚಿತವಾದ ಮನ್ನಣೆಯೊಂದಿಗೆ ಕಳಿಸಿಕೊಟ್ಟು ಮಂತ್ರಶಾಲೆಯಿಂದ ಹೊರಟು, ಒಡ್ಡೋಲಗಕ್ಕೆ ಬಂದು ಸಿಂಹಾಸನದಲ್ಲಿ ಕುಳಿತನು. ಮತ್ತೆ ಕೋಶಾಧ್ಯಕ್ಷನನ್ನು ಬರಮಾಡಿಕೊಂಡು ಆತನಿಗೆ ಕಿವಿಮಾತಿನಲ್ಲಿ ಆಜ್ಞೆಮಾಡಲಾಗಿ ಆತನು ಆ ಆದೇಶವನ್ನು ಕೊಂಡು ಖೇಚರದೂತನ ನಿವಾಸಕ್ಕೆ ಹೋದನು. ದಮಿತಾರಿಯ ದೂತನು ಈತನನ್ನು ಎದುರುಗೊಂಡು ಅರ್ಧಾಸನದಲ್ಲಿ ಕುಳ್ಳಿರಿಸಿಕೊಂಡು ಕರ್ಪೂರದ ಹಳಕುಗಳೊಡನೆ ಬೆರೆತ ತಾಂಬೂಲವನ್ನು ನೀಡಿ ಕುಶಲ ಸಂಭಾಷಣೆಯನ್ನು ನಡೆಯಿಸುತ್ತಿರುವಾಗ ಅಪರಾಜಿತನ ಕೋಶಾಧ್ಯಕ್ಷನು ತಾನು ಜೊತೆಗೆ ತಂದಿದ್ದ ರೇಷ್ಮೆವಸ್ತ್ರ, ಲೇಪನದ್ರವ್ಯ, ಪುಷ್ಪಮಾಲೆ ಮೊದಲಾದುವುಗಳನ್ನು ನೀಡಿ—

೨೧. "ತ್ರಿಜಗದ್ಭೂಷಣವೆಂಬ ಈ ಕಂಠಾಭರಣವು ತನ್ನ ಪ್ರಭೆಯಿಂದ ಸಕಲ ದಿಕ್ಕುಗಳನ್ನೂ ಆಕಾಶವನ್ನೂ ಆವರಿಸುವಂತೆ ಅಪೂರ್ವವಾದ ಕಾಂತಿಯನ್ನು ಉಳ್ಳುದಾಗಿ ಚಂದ್ರಸೂರ್ಯರನ್ನು ಸೋಲಿಸುತ್ತದೆ."

ವ॥ ಎಂದು ಪಟಳನಿಹಿತ ಪರಾರ್ಘ್ಯ ರತ್ನಾಭರಣಮಂ ಮುಂದಿಟ್ಟಿದಪ್ಪೊಡೆಮ್ಮರಸನನ್ವಯಾಗತಂ ಕುಲಧನಮಾರ್ಗಮದೇಯುಮ ಮದ್ವಿತೀಯಮುಮಿದು ನಿನ್ನ ಬರವಿಂಗಂ ಚಕ್ರವರ್ತಿಯನುರಾಗಕ್ಕಂ ತಕ್ಕುದೆಂದು ಮದೀಯನಾಥನಟ್ಟಿದನವಱಿಂದಂ ಪ್ರಭುಗೆ ಪ್ರೀತಿಭಂಗಂ ಮಾಡದೆ ಕೊಳ್ವುದೆಂದು ನಿಜಕರಪಲ್ಲವದಿಂ ದೂತನ ಹಸ್ತಕಿಸಲಯಕ್ಕೆ ನೀಡುವುದುಮಾತನದಂ ಕೆಯ್ಕೊಂಡು ನೀಡುಂ ಭಾವಿಸಿ ನೋಡಿ—

ಮ॥ ಮನದೊಳ್ ಸಂತಸಮುಣ್ಮಿ ಪೂಣ್ಮೆ ಮೊಗದೊಳ್ ಕೈಗಣ್ಮೆ ರಾಗಂ ವಿಲೋ
ಚನಮಾನಂದಜಲಾರ್ದ್ರಮಾಗೆ ವಿಭು ಮುನ್ನಾವಂಗಿದಂ ಕೊಟ್ಟನಾ
ವನುದಾರಂ ಪೆಱನೀ ಧರಾಧಿಪತಿಯಿಂ ಮತ್ತೊರ್ವನಿಲ್ಲೆಂದಚೇ
ತನಭೂತಂ ಬೆಱಗಾಗಿ ತೂಗಿ ತಲೆಯಂ ಚೋದ್ಯಂಬಡುತ್ತಿರ್ದನಂ ॥ ೭೨ ॥

ಕಂ॥ ಕೊರಳೊಳಮರ್ದಿರ್ಕೆ ಕಂಠಾ
ಭರಣಂ ಮದಧೀಶಗುಣವಿಭೂಷಣಮೆರ್ದೆಯೊಳ್
ಸ್ಥಿರಮಿರ್ಕೆಂದಧ್ಯಕ್ಷದ
ಕರಣಂ ಬರೆ ದೂತನೊಡನೆ ಬಂದೋಲಗದೊಳ್ ॥ ೭೩ ॥

ವಿನಯ ಭರದಿಂದಮೆಱಗಿದ
ನೆನೆ ನರಪತಿಗೆಱಗೆ ವಿಭು ನಿಸೃಷ್ಟಾರ್ಥನನಾ
ಸನದೊಳ್ ಕುಳ್ಳಿರಿಮೆನೆ ದೂ
ತನುಮೊಸೆದು ಮಹಾಪ್ರಸಾದಮೆಂದಭಿಜಾತಂ ॥ ೭೪ ॥

ವ॥ ಎಂದು ನುಡಿದು ಕರಂಡಕದಲ್ಲಿಟ್ಟಿದ್ದ ರತ್ನಾಭರಣವನ್ನು ಆತನ ಮುಂದೆ ಇರಿಸಿ "ಇದು ನಮ್ಮ ಮಹಾರಾಜರಿಗೆ ವಂಶಪರಂಪರೆಯಿಂದ ಬಂದ ಕುಲಧನ; ಇದನ್ನು ಬೇರೆ ಯಾರಿಗೂ ಕೊಡತಕ್ಕುದಲ್ಲ; ನಿನ್ನ ಆಗಮನಕ್ಕೂ ನಿಮ್ಮ ಚಕ್ರವರ್ತಿಯ ಪ್ರೇಮಕ್ಕೂ ಇದು ಉಚಿತವೆಂದುಕೊಂಡು ಅದ್ವಿತೀಯವಾದ ಈ ಕಂಠಹಾರವನ್ನು ನಮ್ಮ ಅಧಿಪತಿಯು ಕಳುಹಿಸಿರುವನು. ಆದುದರಿಂದ ನಮ್ಮ ಪ್ರಭುಗಳ ಪ್ರೀತಿಗೆ ಭಂಗವಾಗದಿರಲೆಂದು ನೀನು ಇದನ್ನು ಸ್ವೀಕರಿಸಬೇಕು" ಎಂದು ತನ್ನ ಕೈಯಿಂದಲೆ ಆತನ ಕೈಗೆ ನೀಡಿದನು. ಆ ದೂತನು ಅದನ್ನು ಕೈಕೊಂಡು ಗಮನವಿಟ್ಟು ನೋಡಿದನು.

೭೨. ಆತನ ಮನಸ್ಸಿನಲ್ಲಿ ಅದರಿಂದ ಸಂತೋಷ ಉಕ್ಕಿ ಹರಿದು, ಮುಖದಲ್ಲಿ ಹರಡಿ, ಕಣ್ಣುಗಳಲ್ಲಿ ಆನಂದಾಶ್ರುಗಳಾಗಿ ಸೂಸಿತು. "ಪ್ರಭು ಮುಂಚೆ ಯಾವನಿಗೆ ಇದನ್ನು ಕೊಟ್ಟನು? ಈ ಮಹಾರಾಜನಂತೆ ಉದಾರನಾದವನು ಇನ್ನಾವನುಂಟು?" ಎಂದುಕೊಳ್ಳುತ್ತ ಆಶ್ಚರ್ಯಚಕಿತನಾಗಿ ತಲೆದೂಗುತ್ತಿದ್ದನು.

೭೩. "ನಿನ್ನ ಕೊರಳಲ್ಲಿ ಈ ಕಂಠಾಭರಣ ಸೇರಿಕೊಂಡಿರಲಿ; ಹೃದಯದಲ್ಲಿ ನಮ್ಮ ಪ್ರಭುಗಳ ಗುಣಾಭರಣವು ಸ್ಥಿರವಾಗಿ ನೆಲಸಿಕೊಂಡಿರಲಿ" ಎಂದು ಹೇಳಿ ಕೋಶಾಧ್ಯಕ್ಷನು ಹೊರಟು ತನ್ನ ಜೊತೆಯಲ್ಲಿ ಆ ದೂತನನ್ನು ಕರೆದುಕೊಂಡು ಓಲಗಕ್ಕೆ ಬಂದನು.

೭೪. ವಿನಯಭಾರದಿಂದಲೆ ಬಾಗಿದನೊ ಏನೊ ಎಂಬಂತೆ ಆತನು ರಾಜನಿಗೆ ಬಾಗಿ ವಂದಿಸಲಾಗಿ, ಮಹಾರಾಜನು ಆ ದೂತನಿಗೆ "ಪೀಠದಲ್ಲಿ ಕುಳಿತುಕೊಳ್ಳಿ" ಎಂದು ನುಡಿದನು. "ತಮ್ಮಿಂದ ಅನುಗ್ರಹೀತನಾದೆನು" ಎನ್ನುತ್ತ ಸಂತೋಷದಿಂದಲೂ ವಿನಯದಿಂದಲೂ ಆತನು

ವ॥ ಕುಳ್ಳಿರ್ದು ಕಿಱಿದು ಬೇಗದಿಂ ಭಕ್ತಿ ಭರಾನತೋತ್ತಮಾಂಗನಿಂತೆಂದು ಬಿನ್ನವಿಸಿದನಿನಿವಿರಿದು ಸತ್ಕಾರಮಂ ಪೆರ್ಗಡೆತನಂ ಬಂದ ನಾವನುಂ ದೇವರ ದೊರೆಯ ರಾಜಾಧಿರಾಜನೊಳ್ ಪಡೆಯನೌದಾರ್ಯಮಸಾಧಾರಣಮಿದೆಲ್ಲಂ ಚಕ್ರವರ್ತಿಯೊಳಪ್ಪ ನಿಮ್ಮ ನಿರತಿಶಯ ನಿರ್ಭರಾನುರಾಗಮೆಂತೆನೆ ತಂದೆಗೆ ಪುತ್ರಮೋಹಂ ಕಳತ್ರಸ್ನೇಹಮಂ ಪ್ರಕಟಿಸುವಪ್ಪೋಲೆಮ್ಮೊಳಪ್ಪ ಪರಮಾನುರಾಗಮೆ ಪೇೞ್ಗುಂ ನಿಮಗೆ ದಮಿತಾರಿಯೊಳವ್ಯವಚ್ಛಿನ್ನಪ್ರೀತಿಯಿಂ ದಮಿತಾರಿಗಂ ನಿಮಗಮಿನ್ನಖಿಮಾಂಸಪ್ರೀತಿಯುಮಂ ನೀರಕ್ಷೀರನ್ಯಾಯಮುಮಂ ಮಾಡಿ ತಡೆಯದೆನ್ನ ಬರ್ಪುದನುತ್ತಸಿದ್ಧಮೆಂದು ಬೀೞ್ಕೊಳ್ವುದುಂ ಬಹುಶ್ರುತನಿಂತೆಂದಂ—

ಕಂ॥ ಅರಸನಱಿದೇಂ ಮಹಾಪುರು
ಷ ರತ್ನದೊಳ್ ರತ್ನಮಂ ತಗುಳ್ಚಿದನೊ ಕರಂ
ದೊರೆವೆತ್ತಿವೆರಡುಮಿದೆ ಜೀ
ವರತ್ನಮಿದಜೀವರತ್ನಮೆಂಬಿನಿತೆ ವಲಂ ॥ ೭೫ ॥

ನೆಱಿದಿರೆ ಗೌರವಮಂ ಕಂ
ಡಱಿಯದ ಪುರುಷಂಗೆ ಮಾಟ್ಪನೊಳ್ ಸುಜನತೆ ಕ
ಣ್ದೆಱೆದುದು ಕಂಡಱಿದುಂ ಕೇ
ಳ್ದಱಿದುಂ ಮಾನ್ಯರನೆ ಖಲನುಮೇಂ ಮನ್ನಿಸನೇ ॥ ೭೬ ॥

ಖರಕಿರಣಂ ತೀವ್ರಂ ಶೀ
ತರೋಚಿ ಜಡಮೂರ್ತಿ ಕಲ್ಪವೃಕ್ಷಂ ಸ್ತಬ್ಧಂ
ನಿರತಿಶಯಗುಣಂಗೀ ನೃಪ
ವರಂಗೆ ದೊರೆಯಲ್ಲದಿರ್ಪುದೊಂದಚ್ಚರಿಯೇ ॥ ೭೭ ॥

ವ॥ ಕುಳಿತುಕೊಂಡು ಸ್ವಲ್ಪ ಸಮಯಾನಂತರ ಭಕ್ತಿಪೂರ್ವಕವಾಗಿ ತಲೆಬಾಗಿ ಹೀಗೆಂದು ಬಿನ್ನವಿಸಿದನು: "ದೂತನಾಗಿ ಬಂದ ಇನ್ನಾವನಾಗಲಿ ನಿಮ್ಮಂತಹ ರಾಜಾಧಿರಾಜರಿಂದ ಇಷ್ಟೊಂದು ಘನವಾದ ಸತ್ಕಾರವನ್ನು ಪಡೆಯಲಾರನು. ನೀವು ತೋರಿದ ಔದಾರ್ಯವು ಅಸಾಧಾರಣವಾದುದು. ಇದೆಲ್ಲಕ್ಕೂ ಕಾರಣವಾಗಿರುವುದು ಚಕ್ರವರ್ತಿಯ ಬಗೆಗಿರುವ ನಿಮ್ಮ ಅತ್ಯಂತ ನಿರ್ಭರವಾದ ಪ್ರೇಮ. ತಂದೆಗೆ ಮಗನ ಮೇಲೆ ಉಂಟಾಗುವ ಮೋಹವು ಆತನಿಗೆ ತನ್ನ ಹೆಂಡತಿಯ ಮೇಲಿನ ಪ್ರೇಮವನ್ನು ಪ್ರಕಟಿಸುವಂತೆ ನನಗೆ ನೀವು ಮಾಡಿದ ಹಿರಿಯ ಮನ್ನಣೆಯು ನಮ್ಮ ಪ್ರಭುವಿನ ಮೇಲಿರುವ ನಿಮ್ಮ ಅನುರಾಗವನ್ನು ತೋರುತ್ತದೆ. ದಮಿತಾರಿಗೂ ನಿಮಗೂ ಅವ್ಯವಚ್ಛಿನ್ನವಾಗಿ ಅನ್ಯೋನ್ಯ ಪ್ರೇಮವುಂಟಾಗುವಂತೆಯೂ, ನೀವು ನೀರಕ್ಷೀರಗಳಂತೆ ಒಬ್ಬರೊಡನೊಬ್ಬರು ಸಮರಸವಾಗಿ ಹೊಂದಿಕೊಂಡಿರುವಂತೆಯೂ ಏರ್ಪಡಿಸಿ ನಾನು ಮರಳಿ ಬರುವೆನು. ಇದು ಬಾಯಿಂದ ಹೇಳದೆ ಇದ್ದರೂ ಸ್ಪಷ್ಟವಾದ ವಿಷಯ''. ಹೀಗೆಂದು ಅವನು ಬೀಳ್ಕೊಳ್ಳಲಾಗಿ ಬಹುಶ್ರುತನು ಹೀಗೆ ನುಡಿದನು:

೭೫. "ನಮ್ಮ ಅರಸನು ತಿಳಿದುಕೊಂಡು ಮಹಾಪುರುಷರತ್ನವಾದ ನಿನ್ನಲ್ಲಿ (ಕಂಠಹಾರದ) ರತ್ನವನ್ನು ಎಷ್ಟು ಸಮಂಜಸವಾಗಿ ಅಳವಡಿಸಿರುವನು! ಇವೆರಡೂ ಸರಿಸಮನಾಗಿ ಶ್ರೇಷ್ಠವಾದುವು; ಒಂದು ಜೀವರತ್ನ, ಇನ್ನೊಂದು ಅಜೀವರತ್ನ ಎಂಬುದಷ್ಟೇ ಭೇದ.

೭೬. ಪ್ರತ್ಯಕ್ಷನಾಗಿ ಕಂಡು ಅರಿಯದ ಪುರುಷನಿಗೆ ಗೌರವವನ್ನು ನೀಡುವವನು ತನ್ನ ಸೌಜನ್ಯವನ್ನು ಪ್ರಕಟಗೊಳಿಸುತ್ತಾನೆ. ಕಂಡು, ಕೇಳಿ ಅರಿತುಕೊಂಡ ಮೇಲೆ ಮಾನ್ಯರನ್ನು ಸತ್ಕರಿಸುವುದೇನು ದೊಡ್ಡದು? ಖಳನಾದವನೂ ಅದನ್ನು ಮಾಡುತ್ತಾನೆ.

೭೭. ಸೂರ್ಯನು ತೀಕ್ಷ್ಣ, ಚಂದ್ರನು ಜಡಮೂರ್ತಿ, ಕಲ್ಪವೃಕ್ಷವು ಅಚಲ—ಹೀಗೆ ಅತ್ಯಧಿಕ ಗುಣವಂತನಾದ ಈ ರಾಜನಿಗೆ ಇವು ಯಾವುವೂ ಸಮನಾಗವೆಂದರೆ ಅದೇನು ಆಶ್ಚರ್ಯವೆ?

ವ॥ ಅದಱಿ ನಪರಾಜಿತಂಗೆ ಕಂಡಱಿವರೊಳಂ ಅಱಿಯದರೊಳಂ ಗುಣಸ್ವೀಕಾರಪರಿತ್ಯಾಗದೊಳೈಕರೂಪ್ಯಮಲ್ಲದನೈಕರೂಪ್ಯಮಿಲ್ಲ ಮಾತ್ಮಸ್ವಾಮಿಗುಣವರ್ಣನಮೆಮ್ಮಂದಿಗರ್ಗೆ ಪ್ರತ್ಯಕ್ಷದೊಳ್ ತಕ್ಕುದಲ್ತದಱೊಳ್ ಎಲ್ಲಮೇನಸ್ಮನ್ಮಹೀಪಾಲಾನ್ವಯಕ್ಕಂ ದಮಿತಾರಿ ಮಹಾರಾಜಾಧಿರಾಜವಂಶಕ್ಕಮನಂತವೀರ್ಯಸಂಬಂಧಮುಂಟದನಱಿದು ತದೀಯ ಕುಲವೃದ್ಧರ್ ನಿರ್ಮಿರ್ಚಲುಂ ನಿರ್ವಹಿಸಲುಂ ವೇೞ್ಪುದುಭಯಕುಲಸಹಾಯತ್ವಮಿತರೇತರೋಪಕಾರದಿಂ ಸಂಗತದೊಳಾದುದುಮನಲ್ಲಿಯ ವಯೋಧಿಕರೀಗಳುಮಾಗಳುಮಱಿವರಾದೊಡ ಮಿನಿಸೆವೆಯಾಗಿರ್ದ ಸಂಬಂಧಮಂ ನೀನಿರ್ದು ಪೊಸಯಿಸುವುದು. ಅನಂತವೀರ್ಯಕುಮಾರಂಗೆ ಚಕ್ರವರ್ತಿಸುತಾಪರಂಪರೆಯೊಳೊರ್ವಳ ನಪೂರ್ವಸರ್ವಾಂಗೀಣವಸ್ತುತ್ವಭಾಜನೆಯಂ ಕುಡಿಸುವುದುಂ ಚಕ್ರಯುದ್ಧಕ್ಕೆ ದುಸ್ಸಾಧ್ಯಮಪ್ಪುದೊಂದು ಮಂಡಳಮುಳ್ಳೊಡವಿವರಿರ್ವ ರಿಂದಮ ಸಾಧ್ಯಮಕ್ಕುಮದಱಿಂ ಖೇಚರರಾಜಂಗೆ ಕೃಛ್ರಾಸಾಧ್ಯಕ್ಕಮಿವರಿರ್ವರೆ ಅಪಾರಭುಜಾಯಮಾನರೆಂಬುದನೆ ನಂಬುವುದಿ ಲ್ಲಿಂದಿತ್ತಿವರ ಯೋಗಕ್ಷೇಮಚಿಂತಾಂತರಮಂ ನೀನಱಿವೆಯೆಂದು ಬಹುಶ್ರುತನುಸಿರದಿರ್ಪುದುಮದೆಲ್ಲಮನವಧಾರಿಸಿ ದೂತನಿಂತೆಂದಂ —

ಮ॥ ಇದು ಮಚ್ಚಿತ್ತದೊಳೆತ್ತಮಚ್ಚಱಿದವೋಲುತ್ಪನ್ನಮಾಯ್ತಿನ್ನು ತ
ನ್ನುದಯಪ್ರಾಪ್ತಿಗೆ ಚಕ್ರಿ ತಕ್ಕೆಡೆಗಳೊಳ್ ವೈವಾಹಿಕಂ ಕೂಡಿ ಬ
ರ್ಪುದನಾಪೇಕ್ಷಿಸುತುಂ ಸಹಾಯರುಚಿವಿಶ್ವಾಧಾರನುತ್ತುಂಗ ಭೂ
ಭೃದಪಾರಾಂಬುಧಿವಸ್ತುಗಳ್ ಬಗೆವೊಡೀ ಲೋಕಕ್ಕಸಾಧಾರಣಂ ॥ ೭೮ ॥

ಕಂ॥ ಆವಂ ಕುಡುವೊಂ ಕುಡಿಸುವ
ನಾವೊಂ ಕುಡೆ ಪಡೆವನಾವೊನಿರ್ವರುಮೇಕೀ
ಭಾವದಿನಿರೆ ನಿಮ್ಮೊಳಗಿನಿ
ತಾವುದು ಭೇದಕ್ಕೆ ಪಕ್ಕು ಪೆಱತೇಂ ನೃಪತೀ ॥ ೭೯ ॥

ವ॥ ಕಂಡು ಅರಿತವರೆ ಆಗಲಿ, ಅರಿಯದವರೆ ಆಗಲಿ ಅವರವರ ಗುಣಗಳನ್ನು ಮೆಚ್ಚಿ ಸ್ವೀಕರಿಸುವ ಅಥವಾ ತ್ಯಜಿಸುವ ವಿಷಯದಲ್ಲಿ ಅಪರಾಜಿತ ಮಹಾರಾಜನ ನಡವಳಿ ಏಕರೂಪವಲ್ಲದೆ, ಅನೇಕರೂಪವಲ್ಲ. ನಮ್ಮ ಅಧಿಪತಿಯ ಸದ್ಗುಣಗಳನ್ನು ಅವನ ಸಮಕ್ಷದಲ್ಲಿಯೆ ಬಣ್ಣಿಸುವುದು ನಮ್ಮಂಥವರಿಗೆ ತಕ್ಕುದಲ್ಲ. ಅದೆಲ್ಲ ಏತಕ್ಕೆ? ದಮಿತಾರಿ ಮಹಾರಾಜನ ವಂಶಕ್ಕೂ ನಮ್ಮ ಅರಸನ ವಂಶಕ್ಕೂ ಅನಂತವಾದ ಶೌರ್ಯಸಂಬಂಧವುಂಟು. ಅದನ್ನು ಅರಿತುಕೊಂಡು ಹಿರಿಯರಾದವರು ಆ ಸಂಬಂಧವನ್ನು ಉಳಿಸಿ ಬೆಳೆಸಲು ಹೇಳಬೇಕು. ಎರಡೂ ವಂಶಗಳು ಪರಸ್ಪರವಾಗಿ ಸಹಾಯ ಮಾಡಿ, ಅನ್ಯೋನ್ಯವಾಗಿ ಉಪಕೃತರಾಗಿ ನಡೆದುಕೊಂಡು ಬಂದಿರುವುದನ್ನು ನಿಮ್ಮಲ್ಲಿಯ ಕುಲವೃದ್ಧರು ಎಂದಿನಿಂದಲೂ ಬಲ್ಲರು. ಈ ನಡುವೆ ಸ್ವಲ್ಪ ನಿಂತುಹೋದಂತಾಗಿರುವ ಈ ಸಂಬಂಧವನ್ನು ನೀನು ಪುನಃ ಅಳವಡಿಸಿ ಮುಂದುವರಿಸ ಬೇಕು. ನಿಮ್ಮ ಚಕ್ರವರ್ತಿ ಸಂತಾನಪರಂಪರೆಯಲ್ಲಿ ಉತ್ತಮಳೆನಿಸಿದ ಒಬ್ಬ ಕುಮಾರಿಯನ್ನು ಅನಂತವೀರ್ಯನಿಗೆ ಕೊಡಿಸು. ನಿಮ್ಮ ಅಧಿಪತಿಗೆ ಚಕ್ರರತ್ನದಿಂದ ಕೂಡ ಗೆಲ್ಲಲಾಗದ ರಾಜಮಂಡಲಗಳಿದ್ದರೆ ನಮ್ಮ ಈ ಇಬ್ಬರು ಕುಮಾರ ರಿಂದಲೆ ಅವುಗಳನ್ನು ಗೆಲ್ಲುವುದು ಸಾಧ್ಯವಾಗುವುದು. ಖೇಚರಚಕ್ರವರ್ತಿಗೆ ಕಷ್ಟಸಾಧ್ಯವೆನಿಸಿದ ಸಾಹಸ ಕಾರ್ಯದಲ್ಲಿ ಈ ಇಬ್ಬರು ಆತನಿಗೆ ಅಪಾರ ಸಾಮರ್ಥ್ಯದ ಎರಡು ತೋಳುಗಳಿದ್ದಂತೆ ಎಂದು ನಂಬು. ಇಲ್ಲಿಂದ ಮುಂದೆ ಇವರ ಯೋಗಕ್ಷೇಮ ವಿಚಾರವೇನೆಂಬುದನ್ನು ನೀನು ಬಲ್ಲೆ.'' ಹೀಗೆ ಹೇಳಿ ಬಹುಶ್ರುತನು ಮಾತು ಮುಗಿಸಿದನು. ಅದೆಲ್ಲ ವನ್ನೂ ಚಿತ್ತವಿಟ್ಟು ಕೇಳಿ ದೂತನು ಹೀಗೆಂದನು:

೭೮. “ನಿಮ್ಮ ಮಾತು ನನ್ನ ಮನಸ್ಸಿನಲ್ಲಿ ಅಚ್ಚೊತ್ತಿದಂತೆ ನೆಲಸಿತು. ನಮ್ಮ ಚಕ್ರವರ್ತಿಯು ತನ್ನ ಅಭ್ಯುದಯ ಕ್ಕಾಗಿ ತನ್ನ ಮಗಳಿಗೆ ಯೋಗ್ಯವಾದ ಸಂಬಂಧವನ್ನು ಅಪೇಕ್ಷಿಸುತ್ತಲೆ ಇರುವನು. ಶ್ರೇಷ್ಠವಾದ ರಾಜಮಹಾಸಾಗರದಲ್ಲಿ ಅಸಾಧಾರಣವಾದ ರತ್ನಗಳಿರುವುದನ್ನು ಬಲ್ಲ ಆತನು ಸರಿಯಾಗಿ ಆಯ್ಕೆಮಾಡುವನು.

೭೯. ಇದರಲ್ಲಿ ಕೊಡುವವನು ಯಾರು, ಕೊಡಿಸುವವನು ಯಾರು, ಪಡೆಯುವವನು ಯಾರು? ನೀವಿಬ್ಬರೂ ಏಕೀಭಾವದಿಂದ ಹೊಂದಿಕೊಂಡಿದ್ದರೆ ಭೇದಭಾವಕ್ಕೆ ಅವಕಾಶವೆಲ್ಲಿ?

ಮ॥ ಸ್ರ॥ ಮೊದಲೊಳ್ ಪೂಣ್ದೊಂದು ಕಜ್ಜಕ್ಕಧಿಪನ ಬೆಸದಿಂ ಬಂದು ಬೇಱೊಂದು ಕಜ್ಜ
ಕ್ಕಿದನೀಗಳ್ಗೊಟ್ಟಿಗೆಯ್ವಂದನುಚಿತ ಮೆನಗಿನ್ನೀ ಕುಮಾರಂಗೆ ಲಕ್ಷ್ಮೀ
ಸದನಂಗಾಕನ್ನೆಯುಂ ಮುಂಕೊಡಿಸುವೆನದನಿಲ್ಲಿರ್ದು ಪೂಣ್ದೆಂ ನೃಪಂ ತ
ಕ್ಕುದನೇ ನಾಂ ಪೇೞ್ ಮಾರ್ಕೊಂಡಪನೆ ಶಿಶುಗಳುಂ ಪೇೞ್ ಮಾರ್ಕೊಳ್ಳದಾತಂ ॥ ೮೦ ॥

ವ॥ ಎಂದು ಮಾರ್ಕೊಂಡನಂ ವಿಸರ್ಜಿಸಿ ಕಿೞ್ದಾನುಂ ಬೇಗದಿಂ

ಕಂ॥ ಬಳದೇವ ವಾಸುದೇವರೆ
ವಿಳಾಸಿನೀ ಯುಗದ ರೂಪಮಂ ನಿಜ ವಿದ್ಯಾ
ಬಳದಿಂ ಕೆಯ್ಕೊಳೆ ಪರಿಜಿ
ರ್ಕುಳಿಗೊಂಡುದು ನೋಟ್ಟ ನೋಟಕರ್ಕಳ ಮನಮಂ ॥ ೮೧ ॥

ವ॥ ತದನಂತರಮೆ ಬಹುಶ್ರುತ ಮಂತ್ರಿ ಮಂತ್ರರೂಪ ನಿಷ್ಪಾದಿತ ಮಾಯಾ ಗಾಣಿತಿಯರನಮಿತಂಗೆ ತರಿಸಿಕೊಟ್ಟು ಇವರಪ್ಪೊಡೆ ವಿದ್ಯಾದೇವತಾತ್ಮಿಕೆಯರ್ ಶ್ರವಣೀಯೆಯರಲ್ಲದನುಭವನೀಯೆಯರಲ್ಲರ್ ಅತ್ಯಂತ ಶುಚಿಗಳೇಕಾಂತ ನಿವಾಸ ನಿರತೆಯರ್ ನಿರತಿಶಯ ಚರ್ಯಾನುಪೂರ್ವಕಮನುಗ್ರಾಹ್ಯೆಯರಾರ್ಗಮೆಱಗುವವರಲ್ಲರೀ ಸ್ಥಿತಿಯೊಳ್ ಮದೀಯ ಧರಣೀವಲ್ಲಭನುಂ ಪ್ರತಿಪಾಲಿಸುವ ನದಱಿಂ ಯಥೋಚಿತವಿಧಿಯಿಂದಮೆ ಕೈಕೊಳ್ವುದೆಂದಪ್ಪೈಸಿ ಕಳಿಪಿ ಮಗು[1][ಟ್ದು][1] ಬಂದು ನಿಜನೃಪರಾಜ್ಯರಕ್ಷಣದೊಳಿರ್ದಂ ದಮಿತಾರಿ ದೂತನುಂ ನಿಜವಿಮಾನಾರೂಢನಾಗಿ ಗಾಯಿಕಾದ್ವಯಮುಮಂ ಬಂದೇಱಿಮೆನೆ—

---

೮೦. ನಾನು ಮೊದಲು ನಿಯಮಿಸಲ್ಪಟ್ಟ ಒಂದು ಕೆಲಸಕ್ಕಾಗಿ ಬಂದವನು ; ಈಗ ಬೇರೊಂದು ಕಾರ್ಯವನ್ನು ಎತ್ತಿಕೊಂಡು ಮಾತಾಡುವುದು ಸರಿಯಲ್ಲ. ಆನರೆ ಈ ಕುಮಾರನಿಗೆ ಆ ಕನ್ಯೆಯನ್ನು ಕೊಡಿಸುವುದಾಗಿ ನಾನು ಇಲ್ಲಿಯೇ ವಚನ ಕೊಡುತ್ತೇನೆ. ಯೋಗ್ಯವಾದ ಮಾತನ್ನು ಚಿಕ್ಕಮಕ್ಕಳು ಹೇಳಿದರೂ ನಮ್ಮ ದೊರೆ ವಿರೋಧಿಸುವವನಲ್ಲ. ಇನ್ನು ನಾನು ಹೇಳಿದರೆ ವಿರೋಧಿಸುವನೆ ?''

ವ॥ ಹೀಗೆ ಮಾರುತ್ತರ ಕೊಟ್ಟ ದೂತನನ್ನು ಕಳಿಸಿ, ಕೆಲಸಮುಯದ ಬಳಿಕ—

೮೧. ಬಲದೇವ ವಾಸುದೇವರೇ (ಗಾಯಿಕೆಯರಾದ) ಆ ಇಬ್ಬರು ಸುಂದರಿಯರ ರೂಪವನ್ನು ತಮ್ಮ ವಿದ್ಯಾ ಬಲದಿಂದ ಕೈಕೊಂಡರು. ಆಗ ಅವರಿಬ್ಬರ ರೂಪವು ನೋಡುವರ ಮನವನ್ನು (ಮರುಳುಗೊಳಿಸಿ) ಸೆರೆಹಿಡಿಯಿತು.

ವ॥ ಆನಂತರ ಬಹುಶ್ರುತ ಮಂತ್ರಿಯು ಮಂತ್ರಾಲೋಚನೆಯ ನಿಷ್ಕರ್ಷೆಯ ಮೇರೆಗೆ ಆ ಮಾಯಾಗಾಯಿಕೆಯರನ್ನು ಅಮಿತನಿಗೆ ತರಿಸಿಕೊಟ್ಟು, "ಇವರು ವಿದ್ಯಾದೇವತೆಯ ಅಂಶವುಳ್ಳವರು. ಇವರಿಂದ ಶ್ರವಣಸುಖವನ್ನು ಮಾತ್ರ ಪಡೆಯಬಹುದಲ್ಲದೆ ಇನ್ನಿತರ ಸುಖವನ್ನು ಬಯಸಲಾಗದು. ಇವರು ಅತ್ಯಂತ ಶುದ್ಧರು ; ಯಾವಾಗಲೂ ಏಕಾಂತದಲ್ಲಿ ವಾಸಮಾಡತಕ್ಕವರು. ಅತ್ಯಧಿಕವಾದ ಗೌರವದಿಂದ ಇವರನ್ನು ಮನ್ನಿಸಬೇಕು. ಇವರು ಯಾರಿಗೂ ತಲೆಬಾಗುವವರಲ್ಲ. ನಮ್ಮ ರಾಜನು ಇವರನ್ನು ಇದೇ ರೀತಿಯಾಗಿ ಸಲಹಿಕೊಂಡು ಬಂದಿರುವನು. ಆದುದರಿಂದ ಇವರನ್ನು ಹೀಗೆಯೆ ಯೋಗ್ಯ ಕ್ರಮದಲ್ಲಿ ನಡಸಿಕೊಳ್ಳಿ'' ಎಂದು ಹೇಳಿ ಒಪ್ಪಿಸಿ ಕಳಿಸಿದನು. ಆಮೇಲೆ ಮರಳಿ ಬಂದು ತನ್ನ ಅರಸನ ರಾಜ್ಯ ರಕ್ಷಣೆಯಲ್ಲಿ ತೊಡಗಿದನು. ದಮಿತಾರಿ ರಾಜನ ದೂತನೂ ತನ್ನ ವಿಮಾನವನ್ನು ಏರಿ, ಗಾಯಿಕೆಯರಿಬ್ಬರಿಗೂ "ಬನ್ನಿ, ವಿಮಾನವನ್ನು ಏರಿ'' ಎಂದು ಹೇಳಿದನು.

---

1. ಳ್ದು (ಮ)

ಉ॥ ಏಱೆ ವಿಮಾನಮಂ ಕೃತಕ ಗಾಯಿಕೆಯರ್ ಧವಳಾಭ್ರ ಕೂಟದೊಳ್
ತೋಱುವ ಮಿಂಚಿನಂತೆ ಮುಗಿಲೊಡ್ಡೊಡೆದಿಬ್ಬಗಿಯಾಗಿ ನಿರ್ಭರಂ
ಪಾಱೆ ಪತಾಕೆಗಳ್ ಮುಗುಟ್ದು ಮಿಳ್ಳಿಸಿದಳ್ಳಿಱಿದಾಡೆ ಯಾನಮೇಂ
ಕೀಱಿದುದೋ ನಭಃಪ್ರಸ್ಯತಿಗಿಟ್ಟೆಡೆಯಿಟ್ಟೆಡೆಯಾದುದೆಂಬಿನಂ ॥ ೮೨ ॥

ಕಂ॥ ಮನಮನೞವಡಿಸಿ ಗರುಡನ
ಮನಿಲನುಮಂ ಜವಮನು[1][ಟಿ][1]ಯಿಮೆಂಬಂತೆ ನಭೋ
ವನ ನಿಧಿಯೊಳ್ ಪರಿದುದು ಪರಿ
ವ ನಾವೆಯಂತಿರೆ ವಿಭಾಸಮಾನ ವಿಮಾನಂ ॥ ೮೩ ॥

ವ॥ ಅಂತು ಪರಾರ್ಧ್ಯಮಪ್ಪ ಸ್ತ್ರೀರತ್ನಮಂ ಪೇಱಿದ ಪಾಱಸೆ ಪೋಲ್ತು ಕೀಱಿ ಪಾಱುವ

ಕಂ॥ ಅಮಿತ ರಯ ಗಮನ ಖೇಚರ
ವಿಮಾನ ಕೇತನದ ಕೋಳೊಳಂಬುದ ಮುಕ್ತಾ
ಸಮುದಯಮುದಿರ್ದೊಪ್ಪಿದುವ
ಭ್ರ ಮಾರ್ಗದಿಂ ಸುರಿವ ಕರಕ ವೃಷ್ಟಿವೊಲಿನಿಸಂ ॥ ೮೪ ॥

ಆ ವಿತತ ವಿಮಾನ ವಿಟಂ
ಕಾವಳಿ ಕೊಳೆ ಪಱಿದ ಮುಗಿಲ ಜಲ ಕಣ ಗಣ ಶೈ
ತ್ಯಾ ವಿಷ್ಕೃತ ಪವನಂ ನಾ
ನಾ ವಿಧದಿಂ ಕಳೆದುದವರ ಗಮನ ಶ್ರಮಮಂ ॥ ೮೫ ॥

---

೮೨. ಮಾಯಾಗಾಯಿಕೆಯರು ಏರಲಾಗಿ ಆ ವಿಮಾನವು ಆಕಾಶಕ್ಕೆ ಚಿಮ್ಮಿ ಹೊರಟಿತು. ಬಿಳಿಯ ಮೋಡಗಳ ಒಡಲಲ್ಲಿ ತೋರುವ ಮಿಂಚಿನಂತೆ ಅದು ಮೇಘಗಳ ಸಮೂಹವನ್ನು ಸೀಳಿಕೊಂಡು ವೇಗವಾಗಿ ಹಾರಿತು ; ಅವರ ಪತಾಕೆಗಳು ಪಟಪಟಿಸಿ ತಿವಿಯುತ್ತಿದ್ದುದರಿಂದ ಹಾಗು ವಿಮಾನದ ವೇಗದಿಂದ ಮೋಡಗಳ ಹಿಂಡಿಗೆ ತುಂಬ ಇಕ್ಕಟ್ಟಾಯಿತು.

೮೩. ಮನೋವೇಗವನ್ನು ಮೀರಿ ಗರುಡನಿಗೂ ವಾಯುವಿಗೂ "ನಿಲ್ಲಿಸಿ ನಿಮ್ಮ ವೇಗವನ್ನು" ಎಂದು ಹೇಳುತ್ತಿರುವುದೊ ಏನೊ ಎಂಬಂತೆ ಹೊಳೆಯುತ್ತಿರುವ ಆ ವಿಮಾನವು ಶೀಘ್ರವಾಗಿ ಆಕಾಶವೆಂಬ ಸಮುದ್ರದಲ್ಲಿ ನಾವೆಯಾಗಿ ಸರಸರನೆ ಹೋಯಿತು.

ವ॥ ಶ್ರೇಷ್ಠವಾದ ಸ್ತ್ರೀರತ್ನಗಳನ್ನು ತುಂಬಿಕೊಂಡು ಹೊರಟ ನಾವೆಗೆ ಸದೃಶವಾಗಿ ಮುನ್ನುಗ್ಗಿ ಹಾರುತ್ತಿರುವ

೮೪. ಅಪಾರ ವೇಗದ ಆ ಖೇಚರ ವಿಮಾನದ ಪತಾಕೆಗಳ ತಿವಿತದಿಂದ ಮೇಘಗಳ ಒಡಲಲ್ಲಿಯ ಮುತ್ತುಗಳು ಪಳಪಳನೆ ಉದಿರಿ, ಆಕಾಶದಿಂದ ಸುರಿಯುವ ಆಲಿಕಲ್ಲುಗಳಂತೆ ಶೋಭಿಸಿದುವು.

೮೫. ಭವ್ಯವಾದ ಆ ವಿಮಾನದ ಶಿಖರಗಳು ತಾಕಿ, ತಿವಿದಾಗ ಮೋಡಗಳು ಸೀಳಿದುವು ; ಆಗ ಅವುಗಳೊಳಗಿಂದ ನೀರಹನಿಗಳು ಚಿಮ್ಮಿ (ಪಕ್ಕದಿಂದ ನುಗ್ಗಿಬರುವ) ಗಾಳಿಯಲ್ಲಿ ಬೆರೆತು ಒಳಗೆ ಕುಳಿತವರಿಗೆ ತಂಪನ್ನುಂಟುಮಾಡಿ ಅವರ ಪ್ರವಾಸ ಶ್ರಮವನ್ನು ಪರಿಹರಿಸಿದುವು.

---

1. ಟಿ (ಪಾ)

ವ॥ ಅಂತಾಗಾಯಿಕಾಚ್ಛದ್ಮರ್ ಬಲದೇವ ವಾಸುದೇವರ್ ಬರವರೆ

ಕಂ॥ ಅಮರ ಮೃದಂಗಂ ತನ್ನಿಂ
ದಮೆ ತಾನುಲಿದತ್ತು ಸುರರ ಸುರಿಯದೆ ಸುರಿಯಿ
ತ್ತಮೃತದ ಸ[1][ರಿ][1] ಸಂತಾನಕ
ನಮೇರು ಮಂದಾರ ಪಾರಿಜಾತ ಸಮೇತಂ ॥ ೮೬ ॥

ಪಸೆದುವು ಪದಿಸೆ ಪಸನಂ
ಕಸವಂ ಕಸಗಳೆದು ಮೆಲ್ಲಮೆಲ್ಲನೆ ಕೀಡಿ
ತ್ತೊಸಗೆಯುಮುತ್ಸವಮುಂ ಸಂ
ತಸಮುಂ ಸಚರಾಚರಕ್ಕೆ ಪಿ[2][ರಿ][2]ದಾಯ್ತಾಗಳ್ ॥ ೮೭ ॥

ವ॥ ಅಂತಪೂರ್ವ ಮಂಗಳಾಶ್ಚರ್ಯಂಗಳಪರಾಜಿತಾನಂತವೀರ್ಯರ ಬರವನುಪಲಕ್ಷಿಸಿ ತಾಮುಮುಪಲಕ್ಷಿತಂ ಮಾಡೆ ಗಗನ ಗಮನಮಂ ಮನಃಪವನ ಜವದಿನೆಯ್ದಿ ರಚತಾಚಲದ ನಿತ್ಯಾಭಿನವ ನವಕೂಟ ಕೋಟಿ ವಿಟಂಕ ಕಮನೀಯ ಶೋಭಾ ಲಕ್ಷ್ಮಿಯನನತಿ ದೂರಾಂತರದೊಳ್ ಕಂಡಮಿತಂ ಕೃತ್ರಿಮ ಗಾಯಿಕಾ ಮುಖಕಮಲವಿಲೋಕನಾನಂತರಮಿಂತೆಂದಂ—

ಮ॥ ಗಗನಾಭಾಗಮನೆಯ್ದಿ ಮಾಣ್ಬುದದುಮಿಕ್ಕೆನ್ನಂತೆ ಪೂರ್ವಾಪರಾ
ಬ್ಧಿಗಳಂ ಮುಟ್ಟಿದುದಿಲ್ಲ ಶಕ್ರ ಭವನಾಧಿಷ್ಠಾನಮಾಗಿರ್ದುದಾ
ನಗರಾಜಂ ಜಿನಚೈತ್ಯಕೋಟಿಗಡಿಗಲ್ ತಾನೆಂದು ರೂಪ್ಯಾಕ್ಮ ರ
ಶ್ಮಿಗಳಿಂದಂ ನಗುವಂತುಟಾಯ್ತು ವಿಜಯಾರ್ಧಾದ್ರೀಂದ್ರನದ್ರೀಂದ್ರನಂ ॥ ೮೮ ॥

ವ॥ ಅದಲ್ಲದೆಯುಂ—

ವ॥ ಹೀಗೆ ಗಾಯಿಕೆಯರ ವೇಷದಲ್ಲಿದ್ದ ಬಲದೇವ ವಾಸುದೇವರು ಸಾಗುತ್ತಿರಲಾಗಿ—

೮೬. ದೇವಲೋಕದ ಮೃದಂಗವು ತಂತಾನೆ ನುಡಿಯಿತು ; ದೇವತೆಗಳ ಪ್ರಯತ್ನವಿಲ್ಲದೆ ಸಂತಾನಕ, ನಮೇರು, ಮಂದಾರ ಮತ್ತು ಪಾರಿಜಾತವೆಂಬ ದೇವಲೋಕದ ಪುಷ್ಪಗಳೊಡನೆ ಅಮೃತದ ವೃಷ್ಟಿಯೂ ಸುರಿಯಿತು.

೮೭. ಹತ್ತೂ ದಿಕ್ಕುಗಳು ಹಸನಾಗಿ ಶೋಭಿಸಿದುವು ; ಕಸವನ್ನೆಲ್ಲ ತೆಗೆದುಹಾಕಿ ಮಂದಗತಿಯಿಂದ ಗಾಳಿ ಬೀಸಿತು. ಸಮಸ್ತ ಚರಾಚರಕ್ಕೆ ಹೇರಳವಾದ ಸಂತೋಷವೂ ಉತ್ಸಾಹವೂ ತಾವಾಗಿ ಉಂಟಾದುವು.

ವ॥ ಅಪರಾಜಿತ ಹಾಗು ಅನಂತವೀರ್ಯ— ಈ ಇಬ್ಬರ ಆಗಮನ ನಿಮಿತ್ತವಾಗಿ ಶುಭಕರವಾದ ಈ ಆಶ್ಚರ್ಯಗಳು ಒದಗಿದ್ದರೂ, ಅವು ದೃಷ್ಟಿಗೆ ಬೀಳದಂತೆ ವಾಯುವೇಗದಿಂದಲೂ ಮನೋವೇಗದಿಂದಲೂ ವಿಮಾನವು ಸಾಗಿತು. ಮುಂದೆ ರಜತಾದ್ರಿಯ ನಿತ್ಯನೂತನವಾದ ಹಾಗು ಉನ್ನತವಾದ ಶಿಖರಗಳ ಸೌಂದರ್ಯವನ್ನು ಸಮೀಪದಲ್ಲಿಯೆ ಕಂಡು, ಅಮಿತನು ಆ ಕೃತ್ರಿಮ ಗಾಯಿಕೆಯರ ಚೆಲುವಾದ ಮುಖಗಳನ್ನು ದಿಟ್ಟಿಸಿ, ಹೀಗೆ ನುಡಿದನು :

೮೮. "ಪರ್ವತರಾಜನೆಂದು ಹೆಸರಾದ ಆ ಮೇರುಗಿರಿ ಆಕಾಶವನ್ನು ಮುಟ್ಟಿಬಿಟ್ಟಿತು ; ಆದರೆ ನನ್ನಂತೆ ಪೂರ್ವ ಪಶ್ಚಿಮ ಸಮುದ್ರಗಳನ್ನು ಮುಟ್ಟಲಿಲ್ಲ ; ಅದು ಇಂದ್ರಲೋಕಕ್ಕೆ ಆಧಾರವಾಯಿತು ; ನಾನು ಜಿನಚೈತ್ಯಗಳಿಗೆ ಅಡಿಗಲ್ಲಾಗಿರುವೆನು" ಎಂದು ಮೇರುಪರ್ವತವನ್ನು ಹೀಯಾಳಿಸಿ ನಗುತ್ತಿರುವುದೊ ಏನೊ ಎಂಬಂತೆ ತನ್ನಲ್ಲಿಯ ಬೆಳ್ಳಿಯ ಶಿಲೆಗಳಿಂದ ವಿಜಯಾರ್ಧಗಿರಿ ಶೋಭಿಸಿತು.

ವ॥ ಅಷ್ಟೇ ಅಲ್ಲದೆ—

---

1. ಜಿ (ಮ) 2. ಜಿ [ಮ]

ಕಂ॥ ಈಗಿರಿಯ ದಕ್ಷಿಣೋತ್ತರ
ಭಾಗಂಗಳೊಳಮರ ಪುರಮೆ ಬೀಡಲ್ವಿಟ್ಟಂ
ತಾಗಿರ್ದಂಬರ ಚರ ಪುರ
ಭಾಗಮೆ ಪರಭಾಗಮೆನಿಪುವುದ್ಯಾನಂಗಳ್ ॥ ೮೯ ॥

*[1]ವ॥ ಆ ಉದ್ಯಾನಗಳೊಳ್[1]—

ಕಂ॥ ಅಳಿ ಮತ್ತಾಳಿಯೆ ಗಿಳಿಯರ
ಗಿಳಿಯೆ ನವಿಲ್ ಸೋಗೆನವಿಲೆ ಸುಟಿದೆಸೆವನಿಲಂ
ಮಳಯಾನಿಳ[2]ನೆ[2] ಕೊಳಂ ತಿಳಿ
ಗೊಳನೆ ಕುಜಂ ಕಲ್ಪಕುಜಮೆ ಸುತ್ತಲುಮಗದಾ ॥ ೯೦ ॥

ಎಳನೀರುಂ ಶಶಿಕಾಂತ ಕಾಂತ ಜಲಮುಂ ತಳ್ಪೊಯ್ಯು ಕೇಳೀ ವನಾ
ವಳಿಗಂ ಶಾಳಿ ವನಾಳಿಗಂ ಪರಿಯೆ ಶೈಲೇಂದ್ರಾನಿಳಂ ತೀಡೆ ಬ
ಳ್ವಳನಿತ್ತೆಯ್ದೆ ಪೊದಟ್ದು ತಳ್ತೆಳಸಿ ಮೂಱುಂಕಾಲಮುಂ ಕುಂದದೇಂ
ಬೆಳೆಯುತ್ತುಂ ಬಳೆಯುತ್ತುಮಿರ್ಪವೊ ಗಿರೀಂದ್ರೋಪತ್ಯಕೋತ್ಸಂಗದೊಳ್ ॥ ೯೧ ॥

ವ॥ ಮತ್ತಮಲ್ಲಿಯೆ ವಿರಾಜಿತಾಮರೇಶ್ವರಾಂತರ್ವಣಂಗಳಪ್ಪ ನಂದನ ವನಂಗಳೊಳ್—

[3]ತ್ರಿಪದಿ[3]॥ ಸಹಕಾ[4]ರ[4]ಸಾ[4]ರ[4]ನೋಕಹ[5]ತರುವನ್ಮದಪಿಕ
ಬಹು[5] ಭಾಷಣಂಗಳುಮೆಸೆದುವು ಕಿನ್ನರ
ಕುಹರಣದೊಡನೆ ಸೆಣಸುತ್ತುಂ ॥ ೯೨ ॥

೮೯. ಈ ಬೆಟ್ಟದ ದಕ್ಷಿಣ ಹಾಗು ಉತ್ತರ ಭಾಗಗಳಲ್ಲಿ ಅಮರಾವತಿಯೆ ಬೀಳಿಲು ಬಿಟ್ಟಿರುವುದೊ ಏನೊ ಎಂಬಂತೆ ಖೇಚರ ನಗರದ ಶ್ರೇಷ್ಠಭಾಗವೆನಿಸಿ ಉದ್ಯಾನಗಳು ಶೋಭಿಸುವುವು.

ವ॥ ಆ ಉದ್ಯಾನಗಳಲ್ಲಿ

೯೦. ಈ ಬೆಟ್ಟದ ಸುತ್ತಲಿನ ಪ್ರದೇಶದಲ್ಲಿರುವ ಭೃಂಗಗಳೆಲ್ಲ ಮತ್ತಭೃಂಗಗಳೆ; ಗಿಳಿಗಳೆಲ್ಲ ಅರಗಿಳಿಗಳೆ; ನವಿಲೆಲ್ಲ ಸೋಗೆನವಿಲೆ; ಸುಳಿಗಾಳಿಯೆಲ್ಲ ಮಲಯಾನಿಲವೆ (ಸುಗಂಧವಾದ ತಂಗಾಳಿಯೆ); ಕೊಳಗಳೆಲ್ಲ ತಿಳಿನೀರಿನ ಕೊಳಗಳೆ; ಮರಗಳೆಲ್ಲ ಕಲ್ಪವೃಕ್ಷಗಳೆ.

೯೧. (ತೆಂಗಾಯಿಗಳು ತಂತಾವೆ ತಾಕಿ ಒಡೆದು ಸುರಿಯುತ್ತಿರುವ) ಎಳನೀರು ಹಾಗು ಚಂದ್ರಕಾಂತದಿಂದ ಒಸರುವ ನೀರು ಒಂದನೊಡನೊಂದು ಬೆರತು ಭರದಿಂದ ಹರಿದು ಅಲ್ಲಿಯ ಕ್ರೀಡಾವನಗಳಿಗೂ ಬತ್ತದ ಗದ್ದೆಗಳಿಗೂ ನೀರೂಡುತ್ತಿರುವುವು. ಅದರಿಂದಾಗಿ ಬೆಟ್ಟದ ಪಕ್ಕದಲ್ಲಿರುವ ಉದ್ಯಾನಗಳು ಎಲ್ಲ ಕಾಲದಲ್ಲಿಯೂ ಸಮೃದ್ಧವಾಗಿ ಬೆಳೆಯುತ್ತಿರುವುವು.

ವ॥ ಮತ್ತು ಅಲ್ಲಿಯ ದೇವೇಂದ್ರನ ಅಂತರ್ವನಗಳಾದ ನಂದನವನಗಳಲ್ಲಿ—

೯೨. ಮಾವಿನ ಮರಗಳಲ್ಲಿ ನೆಲಸಿ ಮತ್ತವಾಗಿ ನುಡಿಯುವ ಕೋಗಿಲೆಗಳ ಧ್ವನಿಗಳು ಕಿನ್ನರರ ಸುರತಧ್ವನಿಯೊಡನೆ ಪೈಪೋಟಿ ನಡೆಸುತ್ತ ಶೋಭಿಸುವುವು.

1. × (ಮ) 2. ಮೆ (ಮ) 3. ತ್ರಿವಿಧಿ (ಅ) 4. ರಾ (ಮ) 5. ದಮದಪಿಕನಿವಹ (ಮ) * ಇದು (ಮ) ಪ್ರತಿಯಲ್ಲಿಲ್ಲ; (ಅ) ಪ್ರತಿಯಲ್ಲಿ ಮಾತ್ರ ಇದೆ.

ತ್ರಿಪದಿ॥ ಮದನ ದಾವಾಗ್ನಿಯಂ ನದಿಪೆ ಮಾಡಿದ ಕಾಮ
ನದಿ ಯೆನಿಸುವುವು ದಿವಿಜ ದಂಪತಿ ಶತ
ದೊದವಿದ ರತದ ಪದನಲ್ಲಿ ॥ ೯೬ ॥

ವ॥ ಅಂತಲ್ಲದೆಯುಂ—

ಕಂ॥ ಕೆಲವೆಡೆಯೊಳಿಂದ್ರ ನೀಳೋ
ಪಲ ರುಚಿ ಕಾರಿರುಳ ತಿರುಳನನುಕರಿಸುವುವು
ಜ್ವಲ ಪದ್ಮರಾಗ ಕಿರಣಂ
ಕೆಲವೆಡೆಯೊಳ್ ಪಗಲ ಬೀಜಮಂ ಪೋಲ್ತಿರ್ಕುಂ ॥ ೯೭ ॥

ಈ ನಗದ ನೆಗೆಗ ಶಶಿಮಣಿ
ಸಾನುಗಳಿಂದೊಱೆತು ಪರಿವ ಪರಿವ್ರೋನಲನಿರುಳ್
ತಾನೆಡೆ[1]ಯುಜಿಯು[1]ದೆ ಶಿಖಿ ಸಂ
ತಾನಂ ಫಣಿಗೆತ್ತು ಕರ್ಚಿ ಬೆಚ್ಚನೆ ಸುಯ್ಯುಗುಂ ॥ ೯೮ ॥

ವ॥ ಓರೊಂದೆಡೆಯೊಳ್—

ಕಂ॥ ಎಸೆವ ಕಿಸುಗಲ್ಲ ತೇಜಃ
ಪ್ರಸರಂ ದಾವಾಗ್ನಿ ಶಂಕೆಯಂ ಮನದೊಳ್ ಪು
ಟ್ಟಿಸೆ ಮೃಗ ಯೂಥಂಗಳ್ ಬೆ
ರ್ಚಿ ಸಾರವೇಂ ಜಡತೆ ತಿರಿಕರೊಡವುಟ್ಟಿದುದೋ ॥ ೯೯ ॥

---

೯೬. ಮನ್ಮಥತಾಪವೆಂಬ ಕಾಡುಗಿಚ್ಚನ್ನು ಆರಿಸಲೆಂದು ನಿರ್ಮಿಸಿದ ಕಾಮನದಿಗಳೊ ಏನೊ ಎಂಬಂತೆ ಅಲ್ಲಿಯ ಹಲವಾರು ದೇವದಂಪತಿಗಳ ಸುರತದ್ರವದ ಪ್ರವಾಹ ಎಸೆಯುವುದು.

ವ॥ ಅಷ್ಟೆ ಅಲ್ಲದೆ—

೯೭. ಕೆಲವೆಡೆಯಲ್ಲಿ ಇಂದ್ರನೀಲದ ಶಿಲೆಗಳು ಕಗ್ಗತ್ತಲೆಯ ತಿರುಳನ್ನು ಹೋಲುವುವು; ತಳತಳಿಸುವ ಮಾಣಿಕದ ಕಿರಣಗಳು ಹಗಲಿನ ಬೀಜಗಳನ್ನು ಹೋಲುವುವು.

೯೮. ಈ ಬೆಟ್ಟದ ಉನ್ನತವಾದ ಶಿಖರ ಪ್ರದೇಶದಲ್ಲಿರುವ ಚಂದ್ರಕಾಂತ ಶಿಲೆಗಳು ದ್ರವಿಸುವುದರಿಂದ ಉಂಟಾಗಿ ಹರಿಯುತ್ತಿರುವ ಪ್ರವಾಹಗಳನ್ನು ಕಂಡು, ಇವು ಹಾವುಗಳೆಂಬ ಭ್ರಾಂತಿಯಿಂದ ಅಲ್ಲಿಯ ನವಿಲುಗಳು ಕಚ್ಚಿ, ನಿರಾಸೆಯಿಂದ ನಿಟ್ಟುಸಿರು ಬಿಡುವುವು.

ವ॥ ಒಂದೊಂದು ಪ್ರದೇಶದಲ್ಲಿ—

೯೯. ಪ್ರಕಾಶಮಾನವಾದ ಮಾಣಿಕದ ಕೆಚ್ಚನೆಯ ಬೆಳಕನ್ನು ಕಂಡು, ಕಾಡುಗಿಚ್ಚು ಹೊತ್ತಿಕೊಂಡು ಬಂತೆಂಬ ಸಂದೇಹದಿಂದ ಜಿಂಕೆಯ ಹಿಂಡುಗಳು ಬೆದರಿ ದೂರವಾಗುವುವು. ತಿರ್ಯಕ್ ಪ್ರಾಣಿಗಳೂ ಮೂಢತೆಯೂ ಒಡಹುಟ್ಟುಗಳೊ ಏನೊ!

---

1. ಜೊರಣ (ಅ)

ಕಂ॥ ಪರಿ ನೀಳೋಪಳಮುಂ ಪಯು
ಗರಡಿಯುಮಿರೆ ನೀಳಯುಗಳಮೆಂದೆಳಸೆ ನಭ
ಶ್ಚರಯುಗಳಮದಕೆ ನಗೆಯೊಳ್
ಬಿರಿವಂತಿರೆ ಬಿರಿವುವಲ್ಲಿ ಪೊಸಮಲ್ಲಿಗೆಗಳ್ ॥ ೯೭ ॥

ವ॥ ಪೇಱೊಂದೆಡೆಯೊಳ್—

ಕಂ॥ ಒಳಗಱಿಯದೆ ಪಚ್ಚೆಯ [1]ಸ[1]ಲೆ
ಗಳನಂಚೆಯ ಪಿಂಡು ಕಂಡು ಪಾವಸೆಗೆತ್ತ
ವ್ವಳಿಸಿ ಕರ್ದುಕುತ್ತ್ವಮೋಂ ತಳ
[2]ಮ[2]ಳಗಪ್ಪುವೊ ನಗೆ ಖಗೇಂದ್ರ ಮಿಥುನ [3]ಚಯ[3]ಂಗಳ್ ॥ ೯೮ ॥

ತಳತಳಿಪ ಸೂರ್ಯಕಾಂತದ
ಬೆಳಗಿರುಳಿದು ಪಗಲಿದೆಂಬ ಭೇದಮನೆತ್ತಂ
ಕಳಿಯೆ ರಥಾಂಗಯುಗಂ ನಿ
ಶ್ಚಳಮಿರುಳುಂ ಪಗಲುಮಗಲವೀ ಗಿರಿವರದೊಳ್ ॥ ೯೯ ॥

ಸ್ಫುರಯಿಸುವ ಮಾಣಿಕಂಗಳ
ಕಿರಣಂ ಸುರಚಾಪ ರುಚಿಯನಂಬರ ತಲದೊಳ್
ವಿರಚಿಸೆ ಕಾರ್ಗೆತ್ತು ನಿರಂ
ತರಮಿಲ್ಲಿ ಶಿಖಂಡಿ ತಾಂಡವಕ್ಕೊಡರಿಸುಗುಂ ॥ ೧೦೦ ॥

ಆ ಪೊಟ್ಟುಂ ಮಧುಪ ಕಳಾ
ಳಾಪಮೆ ಮೃದುಗೀ[4]ತ[4] ಮರ್ಮರಧ್ವನಿ ಪಱೆಯಾ
ಗೀಪವನಂ ಲತಿಕಾ ಲಾ
ಸ್ಯೋಪಾಧ್ಯಾಯತೆಯನಱಪಿ ತೀಡುಗುಮಗದೊಳ್ ॥ ೧೦೧ ॥

೯೭. ಇಂದ್ರನೀಲ ಶಿಲೆಯೂ ಪಯುಗರಡಿಯೂ ಒಂದೇ ಎಡೆಯಲ್ಲಿ ಇದ್ದುವು ; ಅದನ್ನು ಕಂಡು ಖೇಚರರಿಬ್ಬರು ಇವು ಎರಡು ನೀಲರತ್ನಗಳೆಂದು ಭ್ರಮಿಸಿ ತೆಗೆದುಕೊಳ್ಳಲು ಬಯಸಿದರು. ಅವರ ಎಗ್ಗತನವನ್ನು ಕಂಡು ನಗುವುವೊ ಏನೊ ಎಂಬಂತೆ ಅಲ್ಲಿಯ ಹೊಸ ಮಲ್ಲಿಗೆಗಳು ಬಿರಿಯುವುವು (ಅರಳುವುವು).

ವ॥ ಇನ್ನೊಂದು ಪ್ರದೇಶದಲ್ಲಿ—

೯೮. ಪಚ್ಚೆಯ (ಮರಕತದ) ಕಲ್ಲುಗಳನ್ನು ಕಂಡು ಅವು ಹಾವಸೆಯೆಂಬ ಭ್ರಮೆಗೊಳಗಾಗಿ ಹಂಸಪಕ್ಷಿಗಳು ಉತ್ಸಾಹದಿಂದ ಅವುಗಳನ್ನು ಕೊಕ್ಕಿನಿಂದ ಕುಕ್ಕುವುವು ; (ಚೂಚುಸೊಂದು ನಿರಾಶೆಯಿಂದ) ಕಳವಳಕ್ಕೀಡಾಗುವುವು. ಅದನ್ನು ನೋಡಿ ಖೇಚರ ದಂಪತಿಗಳು ನಗುವರು.

೯೯. ಆ ಬೆಟ್ಟದಲ್ಲಿರುವ ಸೂರ್ಯಕಾಂತ ಶಿಲೆಗಳ ಪ್ರಕಾಶದಿಂದಾಗಿ ಇರುಳಾವುದು ಹಗಲಾವುದು ಎಂಬ ಭೇದವನ್ನೇ ಅರಿಯದೆ ಚಕ್ರವಾಕ ದಂಪತಿಗಳು ಒಂದನ್ನೊಂದು ಅಗಲದೆ ನಿರಾತಂಕವಾಗಿರುವುವು.

೧೦೦. ಅಲ್ಲಿಯ ಮಾಣಿಕದ ಕಿರಣಗಳು ಮೇಲಕ್ಕೆ ಚಿಮ್ಮಿ ಆಕಾಶದಲ್ಲಿ ಕಾಮನಬಿಲ್ಲಿನ ಕಾಂತಿಯನ್ನು ಹೊಮ್ಮಿಸುವುವು. ಅದನ್ನು ಕಂಡ ನವಿಲುಗಳು ಮಳೆಗಾಲವೆ ಉಂಟೆಂದು ಸದಾಕಾಲ ಅಲ್ಲಿ ಕುಣಿಯುತೊಡಗುವುವು.

೧೦೧. ಯಾವೊತ್ತೂ ಅಲ್ಲಿ ಮೊರೆಯುತ್ತಿರುವ ದುಂಬಿಗಳ ಧ್ವನಿಯೆ ಮಧುರ ಗೀತವಾಗಿ (ಗಿಡಮರಗಳ ಎಲೆಗಳಿಂದಾಗುವ) ಮರ್ಮರ ಧ್ವನಿಯು ಹರೆಯ ನುಡಿತವಾಗಿ ವಾಯುವೆಂಬ ಉಪಾಧ್ಯಾಯನು ಬಳ್ಳಿಗಳಿಗೆ ನಾಟ್ಯಕಲೆಯನ್ನು ಕಲಿಸಿಕೊಡುತ್ತಿರುವಂತೆ (ಅಲ್ಲಲ್ಲಿಗೆ ಮೆಲ್ಲಮೆಲ್ಲನೆ) ಸುಳಿಯುತ್ತಿರುವನು.

1. ಸಿ (ಮ) 2. ವೆ (ಅ) 3. ಶತ (ಅ) 4. ತಿ (ಮ)

ಕಂ॥ ಅಂಬರ ಚರ ಮಿಥುನ ರತಾ
ಡಂಬರದೊಡನೊಗೆದ ನಗದ ಮಾರ್ದನಿ ಕಿವಿ[1]ಗಂ[1]
[2][ತು]ಱುಂಬಿ ಮನೋಜಾಗಮವು ಗುರು
ವೆಂಬುದನೊಡನೆಂಬ ಶಿಷ್ಯನಂ ಪೋಲ್ತಿರ್ಕುಂ ॥ ೧೧೨ ॥

ಪೊಸವಳಿಕಿನ ಸೆಲೆಯೊಳ್ ನೆಟ
ಲೆಸೆಯೆ ಮೊಗಂಬೊಕ್ಕು ಪಾಯ್ದು ಕರಿಯುಂ ಹರಿಯುಂ
ಪೊಸ[3][ಪೋ]ರ್ತ[3]ಮನಱಿಯಮೆ ಪು
ಟ್ಟಿಸೆ ನೆಟಲೊಳ್ ಪೋರ್ದು ಸೇದೆಗಿಡುವುವು ನಗದೊಳ್ ॥ ೧೧೩ ॥

ವ್ಯಾಳ ವನ ಗಜದ ಪೋರ್ತದ
ಕೇಳಿಗೆ ವಿಜಯಾರ್ಧ ಶೈಲಪತಿ ಸವೆಯಿಸಿ ತಂ
ದೋಳಿಯೆ ನಿಱಿಸಿದ ಬೆಳ್ಳಿಯ
ಲಾಳಾವಿಂಡಿಗೆವೊಲಿರ್ಪುವಿದಱ ಮಡಲ್ಗಲ್ ॥ ೧೧೪ ॥

ಚಂ॥ ವನಗಜಯೂಥಮಳ್ಕಿ ಪೆಱಗಿರ್ದಿರದೊಡ್ಡಱಿದೋಡುವಲ್ಲಿ ದಂ
ತಿನಿ ಮೊಲೆಯೂಡೆ ನಿಂದು ನಿಜಪೋತಮನಾಗಳೆ ಸಿಂಹಮೆಯ್ದೆ ಹ
ಸ್ತಿನಿಯುನವಜ್ಞೆಗೆಯ್ದು ಕರಿಯೂಥಮನಟ್ಟುವುದಿಲ್ಲಿ ತದ್ವಶಾ
ತನಯವಿಮೋಹಮುಂ ಹರಿಯ ವಿಕ್ರಮದಾಯಮುಮೇನುದಾತ್ತಮೋ ॥ ೧೧೫ ॥

ವ॥ ಮತ್ತಮಲ್ಲಿ—

ಕಂ॥ ಸುಟಿ[4]ಸುಟಿ[4]ದೆಳಸೆ ಭಯಂ ಬಱಿ
ವಱಿಯಿಸಣಂ ಬಿಡದೆ ಯೂಥಮಂ ಸಲೆ ಕಾದುಂ
ಕಱಿಪಿಯುಮಿಭರಿಪುವಂ ತ
ಕಱಿವಿನೆಗಂ ನೊಂದು ನಿಂದು ಕೊಂದುದಿಭೇಂದ್ರಂ ॥ ೧೧೬ ॥

---

೧೧೨. ಖೇಚರ ದಂಪತಿಗಳ ಸುರತೋತ್ಸಾಹದಲ್ಲಿ ಹೊಮ್ಮುವ ಅವರ (ಸೀತ್ಕಾರವೇ ಮೊದಲಾದ) ಧ್ವನಿ ಬೆಟ್ಟದಲ್ಲಿ ಪ್ರತಿಧ್ವನಿಯಾಗಿ ಪುನರುಕ್ತವಾಗುವುದು ಮನ್ಮಥ ವಿದ್ಯೆಯನ್ನು ಒಬ್ಬ ಗುರು ಹೇಳಿಕೊಡುತ್ತಿದ್ದು ಶಿಷ್ಯನು ಅದನ್ನು ಅವನಿಗೆ ಒಪ್ಪಿಸಿ ತೋರುವನೋ ಎಂಬಂತೆ ಭಾಸವಾಗುವುದು.

೧೧೩. ಬೆಟ್ಟದ ಸ್ಫಟಿಕಶಿಲೆಗಳಲ್ಲಿ ತಮ್ಮ ಪ್ರತಿಬಿಂಬ ಮೂಡಿದುದನ್ನು ಕಂಡ ಆನೆಗಳೂ ಸಿಂಹಗಳೂ (ತಮ್ಮ ಪ್ರತಿಸ್ಪರ್ಧಿಯಾದ ಆನೆಗಳು ಹಾಗೂ ಸಿಂಹಗಳು ತಮಗೆ ಎದುರಾಗಿವೆ ಎಂಬ ಭ್ರಾಂತಿಯಿಂದ) ತಂತಮ್ಮ ಪ್ರತಿಬಿಂಬಗಳೊಡನೆ ಹೋರಾಡಿ ಹೋರಾಡಿ ಆಯಾಸಗೊಳ್ಳುವುವು.

೧೧೪. ಇಲ್ಲಿಯ ವನಗಳಲ್ಲಿರುವ ಮದಗಜಗಳನ್ನು ಹೋರಾಡಿಸುದಕ್ಕಾಗಿ ಆ ವಿಜಯಾರ್ಧಗಿರಿಯ ಅಧಿಪತಿಯು ನಿರ್ಮಿಸಿದ ಕ್ರೀಡಾರಂಗದ ಸುತ್ತಲೂ ನಟ್ಟ ತಾಳುಗಳಂತೆ ಇದರ ಕೋಡುಗಲ್ಲುಗಳು ಇರುವುವು.

೧೧೫. ಸಿಂಹವು ಮೇಲೇರಿ ಬರುತ್ತಲೆ ಆನೆಗಳ ಹಿಂಡು ಭಯದಿಂದ ಹಿಮ್ಮೆಟ್ಟಿ ದಿಕ್ಕಿಗೊಂದು ಓಡತೊಡಗುವುವು; ತನ್ನ ಮರಿಗೆ ಮೊಲೆಯುಣಿಸಲೆಂದು ಒಂದು ಹೆಣ್ಣಾನೆ ಮಾತ್ರ ನಿಂತಾಗ, ಆ ಸಿಂಹ ಅಲ್ಲಿಗೆ ಬಂದರೂ, ಆ ತಾಯಿ ಆನೆಯನ್ನು ಕಣ್ಣೆತ್ತಿ ಕೂಡ ನೋಡದೆ, ಆನೆಯ ಹಿಂಡನ್ನೆ ಅಟ್ಟಿಕೊಂಡು ಹೋಗುವುದು. ಆ ಹೆಣ್ಣಾನೆಯ ಪುತ್ರವಾತ್ಸಲ್ಯ ಹಾಗು ಆ ಸಿಂಹದ ಶೌರ್ಯನೀತಿ ಎಂತಹ ಉದಾತ್ತವಾದುವು!

ವ॥ ಮತ್ತು ಅಲ್ಲಿ—

೧೧೬. ತನ್ನ ಹಿಂಡಿನ ಆನೆಗಳು ಭಯದಿಂದ ತನ್ನ ಮೊರೆಹೊಗಲಾಗಿ ಅವುಗಳನ್ನು ಕಾಪಾಡಿಯೂ, ಆಚೆಗೆ ಕಳಿಸಿಯೂ ಹಿಂಡಿನ ಸಲಗನು ಸಿಂಹಕ್ಕೆ ಎದುರಾಗಿ ನಿಂತು ಗಾಯಗಳಿಂದ ನೊಂದರೂ ಬಿಡದೆ ಹೋರಾಡಿ ಅದನ್ನು ಕೊಂದಿತು.

---

1. ಗೆಂ (ಅ) 2. ತಿ (ಮ) ತೆ (ಅ) 3. ಷೋ (ಮ) 4. ಪುಳಿ (ಮ)

ಕಂ॥ ನದೆ ನಖಮುಂ ಕೋಡುಂ ಕೊಳೆ
ಕುಡುದಾಡೆಯುಮುಗುರುಮಟಿಯೆ ಮುಳಿಸಿಂದೆರಡುಂ
ಕಡುಗಡುಪಿನಂಕ[1]ದ[1]ಂತೊಡ
ಮಡಿದುವು ಗಿರಿವರದೊಳುಗ್ರ ಕರಿಯುಂ ಹರಿಯುಂ ॥ ೧೦೭ ॥

[2]ವ॥ ಮತ್ತಂ[2]

ಕಂ॥ ಕುದಿದಿರದೆಡೆಯಿಂ [3]ಕೊಲಲೆಂ[3]
ಡ್ತಿದ ಪರಿಭವಪಂಕದಂತೆ ಪೊಕ್ಕಡಿಗಿಡೆ ಸಾ
ರ್ಚಿದಮದರದನಿಗೆ ಹರಿ ನಿ
ಲ್ಲದೆ ನಿಚ್ಚಟಗಲಿಗೆ ಪೆಸರ ಕಲಿ ನಿಂದಪನೇ ॥ ೧೦೮ ।

ವ॥ ಮತ್ತಂ ಕೆಲವೆಡೆಯೊಳ್ ನಾಗರಕ ಗಗನಚರಕ್ರೀಡನ ಶೀಲಕುಮಾರಕರ್ ಸುಕುಮಾರ ವಚನ ರಚನೆಗಳಿನುಪಲಾಲಿಸೆ ಗೆಯ್ದು—

ಕಂ॥ ಅಪ್ಪಳಿಸಣ್ಣನನಪ್ಪಳಿ
ಸಪ್ಪಳಿಸೆಂದಿರದೆ ತಮ್ಮ ತೊಡೆಯಂ ತಳದಿಂ
ದಪ್ಪಳಿಸೆ ಪೋರ್ದು ಪಜಿವಜಿ
ಯಪ್ಪುವು ವನಕರಿಗಳಟಿ್ತಗಂಬರಚರರಾ ॥ ೧೦೯ ॥

ವ॥ ಅಂತುಮಲ್ಲದೆಯುಂ—

ಮ॥ ಕರಮಂ ಪೇಟಿ ರದಂಗಳೊಳ್ ತೆಜಿದು ಕರ್ಣದ್ವಂದ್ವಮಂ ತಾಮ್ರ ಭೀ
ಕರಮಂ ಬಿಚ್ಚನೆ ಬಿಟ್ಟು ಕಣ್ಣನೆರಡುಂ ನೀಳಂಬಿಸುತ್ತೂಳ್ದೊಡಂ
ಬರದೊಳ್ ನಿಂದು ಗಜಪ್ರಿಯಾಂಬರ ಚರರ್ ಜೀಯಯ್ಯ ಭಾಪ್ಪೆಂದು ಜೀರ
ಕರಿಪನ್ನಂ ವನದಂತಿ ಪೋರ್ವುದು ನಿಷಾದ್ಯಾರೂಢದಿಂ ಪೋರ್ವವೊಲ್ ॥ ೧೧೦ ॥

೧೦೭. (ಇನ್ನೊಂದೆಡೆ) ಸಿಂಹ ಹಾಗು ಸಲಗಗಳು ಹೋರಾಡುತ್ತಿದ್ದುವು. ಸಿಂಹದ ಉಗುರುಗಳಿಂದ ಆನೆಗೂ ಆನೆಯ ಕೋರೆಗಳಿಂದ ಸಿಂಹಕ್ಕೂ ಚುಚ್ಚಿ ಚುಚ್ಚಿ ಗಾಯಗಳಾಗುತ್ತ ಆ ಉಗುರುಗಳೂ ಕೋರೆಗಳೂ ಪೂರ್ತಿ ಮುರಿದು ಬೀಳುವವರೆಗೆ ಅವೆರಡೂ ಶೌರ್ಯದಿಂದ ಹೋರಾಡಿ ಕೂಡಿಯೆ ಪ್ರಾಣಬಿಟ್ಟುವು.

೧೦೮. (ಬೇರೊಂದು ಪ್ರದೇಶದಲ್ಲಿ) ಕ್ರೋಧೋದ್ವೇಗದಿಂದ ಕೊಲ್ಲಲೆಂದು ಏರಿಬಂದ ಸಿಂಹವು ಎದುರಿಸಿ ನಿಂತ ಮದದಾನೆಯೊಡನೆ ಸೆಣಸಲಾರದೆ ಹಿಮ್ಮೆಟ್ಟಿತು. ಧೃಢನಿರ್ಧಾರದ ಸಹಜ ಶೂರನನ್ನು ಎದುರಿಸಿದಾಗ ಎಂತಹ ಖ್ಯಾತ ವೀರನಾದರೂ ಅದನ್ನು ತಡೆದು ನಿಂತಾನೆಯೆ?

ವ॥ ಇನ್ನು ಕೆಲವೆಡೆಗಳಲ್ಲಿ ನಗರದ ಕ್ರೀಡಾಪಟುಗಳಾದ ಕುಮಾರರು ಚಾಟುವಚನಗಳಿಂದ ತಮ್ಮ ಆಕ್ಸರತೆಯನ್ನು ತೋರಿ—

೧೦೯. "ಅಪ್ಪಳಿಸು, ಅಣ್ಣನನ್ನು ಅಪ್ಪಳಿಸು" ಎಂದು ತಮ್ಮ ತೊಡೆಗಳನ್ನು ಚಪ್ಪರಿಸಿಕೊಳ್ಳುತ್ತ ಅವುಗಳೊಡನೆ ಹೋರಾಡಲಾಗಿ, ವನಗಜಗಳು ಸೋತು ಓಡಿಹೋಗುವುವು ; ಆ ಖೇಚರರಿಗೆ ಸಂತೋಷವಾಗುವುದು.

ವ॥ ಅಷ್ಟೇ ಅಲ್ಲದೆ—

೧೧೦. ತನ್ನ ಸೊಂಡಿಲನ್ನು ಕೋರೆಗಳ ಮೇಲಿಟ್ಟುಕೊಂಡು, ಕಿವಿಗಳೆರಡನ್ನೂ ನಿಗುರಿಸಿ, ಕೆಂಪೇರಿದ ಕಣ್ಣುಗಳೆರಡನ್ನು ಭೀಕರವಾಗಿ ಬಿಟ್ಟುಕೊಂಡು ಗಟ್ಟಿಯಾಗಿ ಗರ್ಜಿಸುತ್ತ, "ಭಲೆ ಭಲೆ"ಯೆಂದು ಆಕಾಶದಲ್ಲಿರುವ ಖೇಚರರು ಹೊಗಳುತ್ತಿರಲಾಗಿ ವನಗಜವು ಮಾವುತನ ನಿರ್ದೇಶನದಲ್ಲಿ ಹೋರಾಡುವ ಆನೆಯಂತೆ ಹೋರಾಡುವುದು.

1. ದಾ (ಮ) 2. × (ಮ) 3. ಕೋಲೊ (ಅ)

ಕಂ॥ ಚಪಳಕಪಿ ವನ ಮದಾನೇ
ಕಪಕ್ಕೆ ಪಕ್ಕಾಗೆ ಪೊಕ್ಕು ತಾಂ ಭಸ್ತ್ರಿಕಮೆಂ
ದಪಹಸ್ತಮಿಱಿಯೆ ಕೈಪಿಡಿ
ಗೆ ಪೊಕ್ಕ ಗುಬ್ಬಿವೊಲುರುಳ್ದು ನಗಿಪುದು ನಗದೊಳ್ ॥ ೧೧೧ ॥

ವನಕರಿ ಘೇಯೆನೆಯುಂ ಹೋ
ಯೆನೆಯುಂ ಖೇಚರರಿನಱಿದು ಕೈಕೊಂಡು ಕುಚಂ
ದನದೊಳ್ ಶೀತದ ವಾರಿತ
ದನಿತುವ ದಾವದದ ತೆಱನನಱಿಪುವುದಗದೊಳ್ ॥ ೧೧೨ ॥

ವ॥ ಮತ್ತಮತ್ಯಂತ ಕಾಂತ ಮೇಖಲಾಘಾತಮಳಿನ ಪುಳಿನ ನಳಿನ ವಿರಾಜಮಾನಾನೂನ ಪ್ರದೇಶಂಗಳೊಳ್—

ಕಂ॥ ಕೆಲವೆಡೆಯ ತಮಾಳದ ಕ
ಟ್ಟಲೆಗರ್ಕಮರೀಚಿ ಮಾಲೆ ತಲೆದೋಱವು ಕ
ಣ್ಬೊಲದೊಳಮಿರುಳೊಳ್ ಮೊಲಗ
ಟ್ಟಲೆ ಚಂದ್ರದ್ಯುತಿಗೆ ಕಾಳ ತಾಳೀ ವನದೊಳ್ ॥ ೧೧೩ ॥

ಕೆಲಕೆಲವೆಡೆಯೊಳ್ ಕಾಂಚನ
ಶಿಲೆ ಸುರಗಿರಿ ಬೆಸಸೆ ಪರಿಮಿತಾರ್ಥಂ ಬಂದೇಂ
ನೆಲಸಿದುವೊ ಪೇೞಿಮಾ ತ
ಟ್ಟಲೊಳೆನಿಪುವು ಮಹಿಮೆಗಿಂತು ನೋಂತಗಮೊಳವೇ ॥ ೧೧೪ ॥

---

೧೧೧. ಚಂಚಲವಾದ ಕೋತಿಯೊಂದು ಮದವೇರಿದ ಆನೆಯನ್ನು ಪಕ್ಕದಿಂದ ನೋಡಿ, ಅದೊಂದು ತೊಗಲಿನ ತಿದಿಯೆಂದು ನುಗ್ಗಿ ತಿವಿಯಲಾಗಿ, ಕನ್ನಡಿಯನ್ನು ಒಳಹೊಗಲು ಪ್ರಯತ್ನಿಸಿದ ಗುಬ್ಬಿಯಂತೆ ಹೊಡೆಮರಳಿ ಬಿದ್ದು, ಆ ಬೆಟ್ಟದ ಪ್ರದೇಶದಲ್ಲಿ (ನೋಡುವವರನ್ನು) ನಗಿಸುವುದು.

೧೧೨. ಬೆಟ್ಟದಲ್ಲಿ ಕಾಡಾನೆ ಘೇಯೆನ್ನಲೂ ಹೋಯೆನ್ನಲೂ ಖೇಚರರಿಂದ ತಿಳಿದು ಕೈಗೊಂಡು ಕುಚಂದನದಲ್ಲಿ ತಂಪಾದ ನೀರಹನಿಗಳನ್ನು ಚಿಮುಕಿಸಿದ ಕಾಡುಕಿಚ್ಚಿನ ರೀತಿಯನ್ನು ತಿಳಿಸುತ್ತದೆ (?).

ವ॥ ಮತ್ತು ಆ ಬೆಟ್ಟದ ನಿತಂಬಪ್ರದೇಶದ ತಗ್ಗಾದ ಸ್ಥಳಗಳಲ್ಲಿ ಮರಳು ಧೂಳಿನಿಂದಲೂ, ತಾವರೆಗಳಿಂದಲೂ ಮನೋಹರವಾದ ಎಡೆಗಳುಂಟು. ಅಲ್ಲಿ—

೧೧೩. ತಮಾಲ ವೃಕ್ಷಗಳ ದಟ್ಟಣೆಯಿಂದಾಗಿ ಸೂರ್ಯಕಿರಣಗಳಿಗೆ ಕಾಲಿಡಲೂ ಅವಕಾಶವಿಲ್ಲ. ತಾಳವನಗಳಲ್ಲಿ ಬೆಳ್ದಿಂಗಳ ಕಾಲದಲ್ಲಿ ಕೂಡ ದೃಷ್ಟಿ ಹರಿಯುವವರೆಗೆ ಎತ್ತ ನೋಡಿದರೂ ಕಗ್ಗತ್ತಲೆಯೆ ಮುಸುಕಿರುವುದು.

೧೧೪. ಮಂದರ ಪರ್ವತದ ಅಪ್ಪಣೆಯ ಮೇರೆಗೆ ಚಿನ್ನದ ಶಿಲೆಗಳು ಇಲ್ಲಿಗೆ ಕೆಲಕಾಲದ ಮಟ್ಟಿಗೆ ಬಂದಿದ್ದು, (ಈ ಬೆಟ್ಟವನ್ನು ಮೆಚ್ಚಿ) ಇಲ್ಲಿಯ ತಪ್ಪಲು ಭೂಮಿಯಲ್ಲಿಯೆ ನೆಲೆನಿಂತುವೊ ಏನೊ ಎಂದೆನಿಸುವುದು. ಇಂತಹ ಮಹಿಮೆಯನ್ನು ಪುಣ್ಯದಿಂದ ಗಳಿಸಿಕೊಂಡವರು ಇನ್ನಾರಾದರೂ ಉಂಟೆ?

ಕಂ॥ ಅಂತಲ್ಲದೆಯುಂ ಧನದನ
ಗಂ ತನಗಟ್ಟಿದೊಡೆ ರಾಯಭಾರಿತನಂ ಬಂ
ದಂತಿರ್ಪುವಿದಱ ಕುಂಜೋ
ಪಾಂ[1]ತ[1]ಂ [2]ತಟತಟಿ[3]ಸಿ[2] [3]ಬೆಳಗೆ[3] ಕುಳಿಶಾ[4]ಶ್ಮ[4]ಂಗಳ್ ॥ ೧೧೫ ॥

ವ॥ ಅಂತಾಶ್ಚರ್ಯಭೂತೋಚ್ಚಾವಚೋಪಚಿತ ಸಚೇತನೇತರ ವಸ್ತು ವಿಸ್ತಾರ ಪರಂಪರೋದಾರಮಪ್ಪ—

ಕಂ॥ ಇದಱುಭಯ ಶ್ರೇಣಿಗಳೊಳ
ಮದಭ್ರ ರಜತಾಶ್ಮ ಕೂಟ ಕೋಟಿಗಳ ಬೆಡಂ
ಗೊದವಿ ನಿಲೆ ನೆಱೆಯೆ ಕಣ್ಗೊ
ಪ್ಪಿದುವು ಸುಧಾಚ್ಛುರಿತ ರಮ್ಯ ಹರ್ಮ್ಯಾವಳಿಗಳ್ ॥ ೧೧೬ ॥

ವ॥ ಈ ವಿಜಯಾರ್ಧ ಪರ್ವತ[5]ದ[5] ಱಂಕೆಗಳೆನಿಸಿದ—

ಮ॥ ಸ್ರ॥ ಎರಡುಂ ವಿದ್ಯಾಧರ ಶ್ರೇಣಿಯೊಳೆಡೆಯೆಡೆಯೊಳ್ ಜೈನಚೈತ್ಯಾಳಿ ತಳ್ತಂ
ಬರಮಂ ತ[6][ಚ್ಕ್ಕ್ಯ][6]ಸಿ ನಾನಾಮಣಿಕಿರಣ ಗಣ ಜ್ಯೋತಿಗಳ್ ಜ್ಯೋತಿರಂಗ
ಸ್ಫುರಣಕ್ಕಾಸ್ಫೋಟಿಸುತ್ತುಂ ಬೆಳಗೆ ರಜತ ಶೈಲೇಂದ್ರ[7]ಜಂ ಗೀತ[7] ಭಂಗಂ
ಗಿರಿರಾಜಂಗೊಟ್ಟಜಂ ಗೊಟ್ಟಪೊಲಸದುದದೇಂ ದಿವ್ಯಮೋ ಜೈನಗೇಹಂ ॥ ೧೧೭ ॥

ಕಂ॥ ಅಮರಾಭ್ಯರ್ಚ್ಯಂಗಳ್ ಸುರ
ವಿಮಾನ ಪರಿವೇಷ್ಟನಾಭಿರಾಮಂಗಳನು
ಕ್ರಮದಿಂದೆಸೆದಿರ್ದುವಕೃ
ತ್ರಿಮಂಗಳೀಗಿರಿಯ ಜೈನ ಚೈತ್ಯಾವಳಿಗಳ್ ॥ ೧೧೮ ॥

---

೧೧೫. ಕುಬೇರ ಪರ್ವತವು ರಾಯಭಾರಕ್ಕೆಂದು ಕಳಿಸಲಾಗಿ ಇಲ್ಲಿಗೆ ಬಂದಿರುವುದೊ ಏನೊ ಎಂಬಂತೆ ಗಿಡಬಳ್ಳಿಗಳ ಪಕ್ಕದ ಪ್ರದೇಶವನ್ನೆಲ್ಲ ಥಳಥಳಿಸಿ ಬೆಳಗುತ್ತಿರುವ ವಜ್ರದ ಶಿಲೆಗಳು ಶೋಭಿಸುವುವು.

ವ॥ ಹೀಗೆ ಎತ್ತರದ ಪ್ರದೇಶದಲ್ಲಾಗಲಿ, ತಗ್ಗುಗಳಲ್ಲಾಗಲಿ ಸಚೇತನ ಹಾಗೂ ಅಚೇತನವಾದ ಅನೇಕ ಆಶ್ಚರ್ಯಕರ ವಸ್ತುಗಳಿಂದ ಶ್ರೀಮಂತವಾಗಿರುವ—

೧೧೬. ಇದರ ಎರಡೂ ಪಕ್ಕಗಳಲ್ಲಿ ಉನ್ನತವಾದ ಬೆಳ್ಳಿಯ ಶಿಖರಾವಳಿಗಳಿಂದ ಶೋಭಿಸುವ ಸೌಧಗಳ ಸಾಲು ಸುಧಾಲೇಪನದಿಂದ ನಯನಮನೋಹರವಾಗಿರುವುವು.

ವ॥ ಈ ವಿಜಯಾರ್ಧ ಪರ್ವತದ ಎರಡು ರೆಕ್ಕೆಗಳೆನಿಸಿದ—

೧೧೭. ಎರಡೂ ವಿದ್ಯಾಧರ ಶ್ರೇಣಿಗಳಲ್ಲಿ ಅಲ್ಲಲ್ಲಿಗೆ ತಮ್ಮ ಅನೇಕಾನೇಕ ರತ್ನಗಳ ಕಾಂತಿಯಿಂದ ಆಕಾಶವನ್ನೆಲ್ಲ ಅಪ್ಪಿಕೊಂಡು, ಜ್ಯೋತಿರಂಗವೆಂಬ ಕಲ್ಪವೃಕ್ಷಗಳೊಡನೆ ಸ್ಪರ್ಧಿಸುತ್ತ ಬೆಳಗುವ ಜೈನ ಚೈತ್ಯಗಳ ಸಮೂಹವುಂಟು. ಮಂದರಗಿರಿಗೆ ಸೋತು ಈ ಬೆಟ್ಟವು ಒಪ್ಪಿಸಿದ ಕಪ್ಪಕಾಣಿಕೆಯೊ ಏನೊ ಎಂಬಂತೆ ಆ ಜಿನಾಲಯಗಳು ದಿವ್ಯವಾಗಿರುವುವು.

೧೧೮. ದೇವತೆಗಳು ರಚಿಸಿದ ಪೂಜಾಲಂಕಾರಗಳಿಂದಲೂ, ಸುತ್ತುವರಿದ ದೇವವಿಮಾನಗಳಿಂದಲೂ ಮನೋಹರವಾಗಿ ಇಲ್ಲಿಯ ಅಕೃತ್ರಿಮ ಜೈನ ಚೈತ್ಯಾಲಯಗಳು ಶೋಭಿಸುತ್ತಿರುವುವು."

---

1. ತವ (ಕಾ) 2. ಥಳಥಳಿಸಿ (ಮ) 3. ಪೊಳೆವ (ಕಾ) 4. ಸ್ತ (ಕಾ) 5. ಕೈ (ಅ) 6. ಚ್ಚ್ಯ (ಮ) ರ್ಕ (ಅ)
7. ಮುನ್ನೀತ (ಮ)

ಮ॥ ಎನೆ ರೂಪ್ಯಾಚಲ ರಮ್ಯ ಸೌಮ್ಯ ನವಕೂಟಾಗ್ರಂಗಳೊಳ್ ತೋರ್ಪ ಕಾಂ
ಚನ ವರ್ಣಾಂಚಿತ ಪಂಚರತ್ನಮಯ ಶೋಭಾಭಾಸಿಗಂಭೋದ ವೃಂ
ದ ನಿಕೀರ್ಣಧ್ವಜರಾಜಿಗತ್ಯಮಲ ಚೇತಶ್ಶಕ್ತಿ ಭಕ್ತಿ ಪ್ರಬೋ
ಧನೆಯಿಂ ಜೈನಗೃಹಾಳಿಗಂದೆಱಗಿದಂ ಸೌಜನ್ಯ ಕಂದಾಂಕುರಂ ॥ ೧೧೯ ॥

—ಗದ್ಯ—

ಇದು

ಜಿನೇಂದ್ರ ಚರಣ ಸರಸೀರುಹ ಶಿಲೀಮುಖಾಯಮಾನ

ಶ್ರೀಮದುಭಯಕವಿ ಚಕ್ರವರ್ತಿ

ನಿರ್ವರ್ತಿತಮುಂ

ಅಮ್ಮನ ಭಕ್ತಾಭಿದಾನ ಮಲ್ಲಪಾರ್ಯ

ತದನುಜಃ ತಾಭಿಜಾತ ಸಾರಸ್ವತ

ಪುನ್ನಮಾರ್ಯ ಕಾರಿತಮುಮಪ್ಪ

ಪುರಾಣಚೂಡಾಮಣಿಯೊಳ್

ದ್ವಿತೀಯಾಶ್ವಾಸಂ

---

೧೧೯. ಹೀಗೆಂದು ಆ ದೂತನು ಹೇಳಲಾಗಿ, ಬೆಳ್ಳಿಬೆಟ್ಟದ ರಮಣೀಯವಾದ ಶಿಖರಗಳಲ್ಲಿ ಚಿನ್ನದ ಕಾಂತಿಯಿಂದಲೂ, ಪಂಚರತ್ನಗಳ ಶೋಭೆಯಿಂದಲೂ, ಗಂಧೋದಕದ ಸಮೃದ್ಧಿಯಿಂದಲೂ, ಇಡಿಕಿರಿದ ಧ್ವಜ ಸಮೂಹಗಳಿಂದಲೂ ಶೋಭಿಸುತ್ತಿರುವ ಆ ಜೈನಗ್ರಹಗಳಿಗೆ ಸಜ್ಜನ ಪ್ರಿಯನಾದ ಅಪರಾಜಿತನು ನಿರ್ಮಲವಾದ ಭಕ್ತಿಭಾವದಿಂದ ನಮಸ್ಕರಿಸಿದನು.

ಗದ್ಯ॥ ಇದು ಜಿನೇಶ್ವರನ ಚರಣಕಮಲದ ದುಂಬಿಯಂತಿರುವ, ಶ್ರೀಮದುಭಯಕವಿ ಚಕ್ರವರ್ತಿಯೆಂಬ ಬಿರುದಾಂಕಿತನಿಂದ ನಿರ್ವರ್ತಿತವೂ ಅಮ್ಮನ ಭಕ್ತಾಭಿದಾನ ಮಲ್ಲಪಾರ್ಯನ, ಅವನ ತಮ್ಮ ಹೊಸ ಸಾರಸ್ವತ ಪುನ್ನಮಾರ್ಯ ಹೇಳಿಸಿದ ಪುರಾಣಚೂಡಾಮಣಿಯಲ್ಲಿ ಎರಡನೆಯ ಆಶ್ವಾಸವು.

ಶ್ರೀ

ಶಾಂತಿಪುರಾಣಂ

—o—

ತೃತೀಯಾಶ್ವಾಸಂ

ಕಂ॥ ಶ್ರೀ ರಮಣಂ ಜಿನಚಂದ್ರನು
ದಾರಂ ಜಿನಭವನ ಸಮಿತಿಗತ್ಯುತ್ಸವದಿಂ
ಸೀರಧರನೆಱಗೆ ಶೇಷ ವ
ಚೋ ರಚನೆಗೆ ಖಚರ ದೂತನುದ್ಯತನಾದಂ ॥ ೧ ॥

ಮತ್ತಿದಱಿರ್ಕೆಲದೊಳ್ ಸೆಣ
ಸುತ್ತುಂ ದಿವಮಂ ನಗುತ್ತುಮುಪಹಾಸ್ಯಂಗೆ
ಯ್ಯುತ್ತುಂ ಸೊಗಯಿಪ್ಪ ವಯ್ವ
ತ್ತಿತ್ತಱುವತ್ತತ್ತ ಖೇಚರೇಂದ್ರ ಪುರಂಗಳ್ ॥ ೨ ॥

ವ॥ ಅಂತುಭಯ ಶ್ರೇಣಿಗಳೊಳಂ ನೂಱುಪತ್ತುಂ ಪೊೞಲ್ಗಳನೊಳಕೊಂಡೆರಡುಂ ಕಲ್ಪೆಳ ವಿದ್ಯಾಧರಾಸ್ಪದಂಗಳೊಳ್ ಮೊಗಕ್ಕೆ ಮೂಗುಂ ಆಭರಣಕ್ಕೆ ನಾಯಕ ಮಣಿಯುಮೆಂಬಂತೆ ಖಚರ ಲೋಕಕ್ಕೆ ನಾಭಿಯಾಗಿರ್ದುದು ಚಕ್ರವರ್ತಿಯ ರಾಜಧಾನಿ ಶಿವಮಂದಿರಪುರ ನಾತಿದೂರ್ಪದೆ ನೋಡಿಮಿದಱುಪವನದೊಳ್—

ಮ॥ ಪಿಕ ಕೋಳಾಹಳಮಲ್ಲದಿಲ್ಲ ಪೆಱ[1]ತುಂ[1] ಕೋಳಾಹಳಂ ನಾಗಚಂ
ಪಕ ಗಂಧೋದ್ಗಮಮಲ್ಲದಿಲ್ಲ ಪೆಱ[1]ತುಂ[1] ಗಂಧೋದ್ಗಮಂ ಭೃಂಗ ಗಾ
ಯಕ ಗೀತಸ್ವನಮಲ್ಲದಿಲ್ಲ ಪೆಱ[1]ತುಂ[1] ಗೀತಸ್ವನಂ ರಾಜ ಕೀ
ರಕ ವಾಕ್ಪಾಟವಮಲ್ಲದಿಲ್ಲ ಪೆಱ[1]ತುಂ[1] ವಾಕ್ಪಾಟ[2]ವಂ[2] ಸುತ್ತಲುಂ ॥ ೩ ॥

ಆಶ್ವಾಸ ೩

೧. ಐಶ್ವರ್ಯಶಾಲಿಯೂ, ಜಿನಲೋಕಚಂದ್ರನೂ, ಶ್ರೇಷ್ಠನೂ ಆದ ಬಲರಾಮನು ಅತ್ಯಂತ ಸಂತೋಷದಿಂದ ಜಿನಬಸದಿಗಳ ಸಮುದಾಯಕ್ಕೆ ನಮಸ್ಕರಿಸಲಾಗಿ, ಆ ಖೇಚರ ದೂತನು ತನ್ನ ಮಾತನ್ನು ಹೀಗೆ ಮುಂದುವರಿಸಿದನು :

೨. "ಈ ಬೆಟ್ಟದ ಎರಡೂ ಪಕ್ಕಗಳಲ್ಲಿ ಸ್ವರ್ಗಲೋಕದೊಡನೆ ಸ್ಪರ್ಧಿಸಿ ಅದನ್ನು ಹೀಯಾಳಿಸಿ ನಗುವಂತೆ ಇರುವ ಖೇಚರರಾಜ ಪಟ್ಟಣಗಳು ಈ ಕಡೆಗೆ ಐವತ್ತೂ ಆ ಕಡೆಗೆ ಅರುವತ್ತೂ ಶೋಭಿಸುವುವು.

ವ॥ ಹೀಗೆ ಎರಡೂ ಶ್ರೇಣಿಗಳಲ್ಲಿ ನೂರಹತ್ತು ಪಟ್ಟಣಗಳನ್ನೊಳಗೊಂಡ ಈ ವಿದ್ಯಾಧರ ಪ್ರದೇಶಗಳಲ್ಲಿ ಮುಖಕ್ಕೆ ಮೂಗು ಹೇಗೊ, ಆಭರಣಕ್ಕೆ ನಾಯಕ ರತ್ನವು ಹೇಗೊ ಹಾಗೆ ಲೋಕಕ್ಕೇ ಶ್ರೇಷ್ಠವಾಗಿ ನಮ್ಮ ಚಕ್ರವರ್ತಿಯ ರಾಜಧಾನಿಯಾದ ಶಿವಮಂದಿರಪುರವು ಅಕೊ ! ಅಲ್ಲಿ ಕಾಣುತ್ತಿರುವುದು. ಅದರ ಉಪವನದಲ್ಲಿ —

೩. ಕೋಗಿಲೆಗಳ ಕೂಗಾಟದ ಕೋಲಾಹಲವಲ್ಲದೆ ಬೇರೆ ಕೋಲಾಹಲವಿಲ್ಲ ; ನಾಗಸಂಪಗೆಯ ಸುಗಂಧವಲ್ಲದೆ ಬೇರೆಯ ಸುಗಂಧವಿಲ್ಲ ; ದುಂಬಿಗಳ ಗಾಯನವಲ್ಲದೆ ಇತರ ಗಾಯನ ಧ್ವನಿಯಿಲ್ಲ ; ಅರಗಿಳಿಗಳ ಮಾತಿನ ಚಾತುರ್ಯವಲ್ಲದೆ ಇನ್ನಾವ ಮಾತಿನ ಚಾತುರ್ಯವೂ ಇಲ್ಲ.''

---

1. ಪ್ಪುಂ (ಅ) ದುಂ (ಮ) 2. ಪ್ಪುಂ (ಸೂ) ಪ್ಪುಂ (ಅ)

ಕಂ॥ ಎನೆ ಎನೆ ತಳರ್ದಿದಿರ್ವಂದು ಪ
ವನ ಪವನಂ ತದ್ವಿಮಾನ ಗತ ವದನ ಸ್ವೇ
ದ ನವಜಲ ಕಣಗಣಾಂಭಮ
ನಿನಿಸಾಱಿಸಿದುದು ಪಯೋದ ಮಾರ್ಗಾಗಮದೊಳ್ ॥ ೪ ॥

ವ॥ ಅಂತು ಬಂದು ಶಿವಮಂದಿರಪುರಮನೆಯ್ದೆ—

ಕಂ॥ ಅಗ[ಟಾ][1]ಭಾಗಂ ಲವಣಾ
ಬ್ಧಿಗೆ ಗುಣ್ಪಿನ ತಿಣ್ಪು ನೆಗಲ್ದ ಕಾಳೋದಕ ವಾ
ರ್ಧಿಗೆ ನೀರ ತೆಳ್ಪು ದುಗ್ಧಾ
ಬ್ಧಿಗೆ ದೊರೆ ಸರಿ ಪೋಲ್ವೆಯೆಂಬೆನಱಿಯೆಂ ಪೊಗಟಲ್ ॥ ೫ ॥

ಪ್ರಾಕಾರಂ ರಾಜಿತ ವ
ಜ್ರಾಕೀರ್ಣಂ ಲವಣ ಜಲಧಿ ವೇದಿಕೆಯದಱೊಂ
ದಾಕಾ[2]ರಂ ಗೋಪುರಮಚ
ಳಾಕಾರಂ ದ್ವಾರಮದು ಪವಣ್ಗಂ ಕಣ್ಗಂ ॥ ೬ ॥

ತ್ವ ರಿ ತ ರ ಗ ಳೆ

ಅದಱೊಳಗಣ ಗಣನಾತೀತ ರಮ್ಯ
ಮಣಿ ಕನಕ ರಜತ ಪರಿಖಚಿತ ಹರ್ಮ್ಯ ॥ ೧ ॥

[3]ಪ್ರಾಕಾರ [ಕರ][3] ಮೊಪ್ಪುಗು ಮಪ್ಪುಕೆಯ್ದು
ಚೆಲ್ವಂ ಸುರಪುರಮನವಜ್ಞೆಗೆಯ್ದು ॥ ೨ ॥

---

೪. ಹೀಗೆ ಅವನು ಹೇಳುತ್ತಿರುವಾಗಲೆ ಎದುರಿನಿಂದ ಬಂದ ಉಪವನದ ಗಾಳಿ ಬಂದು ತಾಗಿ, (ವಿಮಾನದೊಳಗೆ ಕುಳಿತವರ) ಮುಖಗಳಲ್ಲಿ ಪ್ರವಾಸ ಶ್ರಮದಿಂದ ಮೂಡಿದ್ದ ಬೆವರ ಹನಿಗಳನ್ನು ಆರಿಸಿತು.

ವ॥ ಹೀಗೆ ಬರುತ್ತ ಶಿವಮಂದಿರಪುರವನ್ನು ಅವರು ತಲ್ಪಿದರು.

೫. ಆ ಪುರದ ಸುತ್ತಲೂ ಇರುವ ಅಗಳ್ತೆಯ ವಿಸ್ತಾರದಲ್ಲಿ ಲವಣ ಸಮುದ್ರಕ್ಕೂ, ಆಳದಲ್ಲಿ ಕಾಳೋದಕ ಸಾಗರಕ್ಕೂ, ನೀರಿನ ತಿಳಿವಿನಲ್ಲಿ ಕ್ಷೀರಸಮುದ್ರಕ್ಕೂ ಸರಿಯೆಂದು ಹೇಳಬೇಕಲ್ಲದೆ ಬೇರೆ ಹೋಲಿಕೆಯನ್ನು ಕೊಡಲು ನನಗೆ ತೋಚದು.

೬. ವಜ್ರಮಯವಾದ ಆ ಪುರದ ಪ್ರಾಕಾರದ ಗೋಡೆಯು ಲವಣ ಸಮುದ್ರದ ತೀರದಂತೆಯೂ ಗೋಪುರ ದ್ವಾರವು ಬೆಟ್ಟದಂತೆಯೂ ಬೃಹದಾಕಾರವಾಗಿ ಕಂಗೊಳಿಸುವುವು.

ತ್ವ ರಿ ತ ರ ಗ ಳೆ

೧. ಅದರೊಳಗಿರುವ ಅಸಂಖ್ಯವಾದ ಹಾಗು ರತ್ನ ಖಚಿತ ಸುವರ್ಣದಿಂದ ನಿರ್ಮಿತವಾದ ಮನೋಹರ ೨. ಪ್ರಾಕಾರವು ಚೆಲುವಿನಲ್ಲಿ ಅಮರಾವತಿಯನ್ನು ಹೀಯಾಳಿಸುವುದು. ೩. ಅಲ್ಲಿಯ ವೇಶ್ಯಾವಾಟಗಳಲ್ಲಿ ನಡೆಯುವ

---

1. ಟಾ (ಮ) 2. ರಮೆ (ಅ) 3. ಕರಂಕರಮೊಪ್ಪುಗು (ಅ)

ಗಣಿಕಾ ವಾಟಂಗಳ ನೆರೆದ ಲೀಲೆ
ಮದನಾಧಿರಾಜ ವಾಸಮನೆ ಪೋಲೆ ॥ ೩ ॥

ದೇವೋತ್ತರಕುರು ದಂಪತಿ ಶತಕ್ಕೆ
ದೊರೆ ಚದುರ ಮಿಥುನಮೆನ್ನಭಿಮತಕ್ಕೆ ॥ ೪ ॥

ವಿಪಣಿ ಪ್ರಕರಂ ಧನದಾಲಯಕ್ಕೆ
ಮಿಗಿಲೆನಿಪುದು ಬಹುಧನ ಸಂಚಯಕ್ಕೆ ॥ ೫ ॥

ದೇವಾಲಯ ತತಿಯ ಬೆಡಂಗಳುಂಬ
ಮಾಜಿದದಂ ಲಂಘಿಸಲರ್ಕ ಬಿಂಬ ॥ ೬ ॥

[1][ಮಱೆಗೆಱೆಕೆಱೆ][1] ಮಾವಿಮ್ಮಾವೆ ನೋಡೆ
ತರು ಸುರತರು ಕೊಡುವುವು ಬಂದು ಬೇಡೆ ॥ ೭ ॥

ತಾಮರೆ ಪೊಂದಾಮರೆ ಕಲ್ಪಲತೆಯೆ
ಲತೆಯೆಲ್ಲಂ ನೋೞ್ಪೊಡದೊಂದು ಕತೆಯೆ ॥ ೮ ॥

ಮದಕರಿಗಳ್ ವಿಜಿತೈರಾವತಂಗ
ಳಶ್ವಂಗಳಧಿಕ ಸತ್ವಾನ್ವಿತಂಗ ॥ ೯ ॥

ಳಬ್ಜ ಬಾಷ್ಪ ಮೃಗ್ಯುಲೂಕ ಭವಂಗ
ಳತಿಗರುಡ [2]ವಿ[2]ಮಾನಮರುಜ್ಜವಂಗ ॥ ೧೦ ॥

ಳಿದಱಳವಿಗೆ ಬಾರದು ರಿತುವಿಮಾನ
ಮೆನಿಪುದು ಕರುಮಾಡದ ಬೆಸನನೂನ ॥ ೧೧ ॥

ಕ್ರೀಡೋತ್ಸವದಿಂದ ಆದ ಮನ್ಮಥರಾಜನ ಅರಮನೆಯನ್ನೆ ಹೋಲುವುದು. ೪. ಅಲ್ಲಿಯ ಒಂದು ದಂಪತಿಯೆಂದರೆ ದೇವೋತ್ತರ ಕುರುವಿನ ನೂರು ದಂಪತಿಗಳಿಗೆ ಸಮಾನವೆಂದು ನನ್ನ ಅಭಿಪ್ರಾಯ. ೫. ಅಲ್ಲಿಯ ಅಂಗಡಿಗಳ ಅಪಾರವಾದ ಐಶ್ವರ್ಯವನ್ನು ನೋಡಿದರೆ ಆ ಅಂಗಡಿಬೀದಿ ಕುಬೇರ ಭವನಕ್ಕೂ ಮಿಗಿಲು ಎಂದೆನಿಸುವುದು. ೬. ದೇವಾಲಯಗಳ ಸೌಂದರ್ಯವು ಅತಿಶಯವಾದುದು; ಅವುಗಳ ಉನ್ನತಿಯೆಷ್ಟೆಂದರೆ ಸೂರ್ಯಬಿಂಬ ಅವುಗಳನ್ನು ದಾಟಿ ಹೋಗಲಾರದು. ೭. ಅಲ್ಲಿಯ ಕೆರೆ ಸದಾಕಾಲ ಸಮೃದ್ಧ ಕೆರೆ; ಮಾವೆಲ್ಲ ಇಮ್ಮಾವೆ; ವೃಕ್ಷಗಳೆಲ್ಲ ಕಲ್ಪವೃಕ್ಷಗಳೆ—ಬಂದವರಿಗೆ ಬೇಡಿದೊಡನೆ ಕೊಡುವುವು. ೮. ತಾವರೆಗಳೆಲ್ಲ ಹೊಂದಾವರೆ; ಬಳ್ಳಿಗಳೆಲ್ಲ ಕಲ್ಪಲತೆಗಳೆ ನೋಡುವುದಕ್ಕೆ ಅಷ್ಟೊಂದು ವಿಸ್ಮಯಕರವಾಗಿವೆ. ೯. ಅಲ್ಲಿಯ ಮದಗಜಗಳು ಐರಾವತಕ್ಕೆ ಮಿಗಿಲಾದುವು; ಕುದುರೆಗಳು ಅತ್ಯಂತ ಸತ್ವಶಾಲಿಗಳು. ೧೦. ಬ್ರಹ್ಮನ ಅಶ್ರುಧಾರೆಯಿಂದಲೂ, ಜಿಂಕೆಗಳಿಂದಲೂ, ಗೂಗೆಗಳಿಂದಲೂ ತತ್ರಿಗಳಾಗಿ ಜನ್ಮತಾಳಿದ ದಿವ್ಯಜಾತಿಯ ಈ ಕುದುರೆಗಳು ವೇಗದಲ್ಲಿ ಗರುಡನನ್ನೂ, ವಿಮಾನವನ್ನೂ, ವಾಯುವನ್ನೂ ಮೀರಿವೆ. ೧೧. ಇದರ ಉಪ್ಪರಿಗೆಗಳ ಅದ್ಭುತವಾದ ರಚನಾಕೌಶಲವನ್ನು ನೋಡಿದರೆ ಋತುವಿಮಾನ ಇದರ ಮುಂದೆ ಏನೂ ಅಲ್ಲ.

---

1. ಮರೆಗೆರೆಕೆರೆ (ಮ) ಮರೆಗೆಱೆಕೆಱೆ (ಅ) 2. ಸ (ಅ)

ಮದು ಕೃತಮಣಿಕುಟ್ಟಿಮ ಮಧ್ಯಭೂಮಿ
ವಿದ್ಯಾಧರ ಭವನದ ಜನ್ಮಭೂಮಿ ॥ ೧೨ ॥

ಪೆಱಗಣ ಬನಮುಪಚಿತ ಮಾತುಳುಂಗ
ಮಪರಿಮಿತಾಗುರು ಮಲಯಜ ಲವಂಗ ॥ ೧೩ ॥

[1]ಮಾಮ್ರಾಮ್ರಾತಕ ಕೇತನ[1] ನಿಕೇತ
ಮಳಿ ಶುಕ ಪಿಕ ವಿರಚಿತ ಪಕ್ಷಪಾತ ॥ ೧೪ ॥

ಮಂಬರಚರ ರಾಜನ ಸಿರಿಯ ಪೆಂಪ
ನಾಂ ನೆಱೆಯೆ ಪೊಗೞ್ವೆನೆಂಬವನೆ ಗಾಂಪ ॥ ೧೫ ॥

ನದಱಿಂ ಶಿವಮಂದಿರದೊಳ್ಪು ಪಿರಿದು
ಪೊಗೞಲ್ಕದನಹಿರಾಜಂಗಮರಿದು ॥ ೧೬ ॥ ೭ ॥

ಕಂ॥ ವಾಸವ ಪುರಮಿದಱೀವಿ
ನ್ಯಾಸಮನಿದಱೀ ಗೃಹಾಧಿವಾಸಮನಿದಱೀ
ದೇಸೆಯನಿದಱೀನೆಱೆದ ವಿ
ಲಾಸಮನಿದಱೀಬೆಡಂಗನವಗಯಿಸುಗುಮೇ ॥ ೮ ॥

ಆಡುವ ನಡೆ ನೋಡುವ ನಡೆ
ಪಾಡುವ ಕೊಳೆ ಪಾಡುವುಡುವ ತುಡುವಱಿನಂ ಕೊಂ
ಡಾಡುವ ಜನದಿಂ ಪುಣ್ಯದ
ಬೀಡೆನಿಪುದು ಪುರಮಿದಂಬರೇಚರ ಪತಿಯಾ ॥ ೯ ॥

---

೧೨. ಅದರ ಮಧ್ಯಭೂಮಿ ರತ್ನಗಳಿಂದ ನಿರ್ಮಿಸಿದ ನೆಲಗಟ್ಟು; ವಿದ್ಯಾಧರರ ಭವನಗಳಿಗೆ ಜನ್ಮಭೂಮಿ.
೧೩. ಅದರ ಹೊರವಲಯದ ಉದ್ಯಾನದಲ್ಲಿ ಹೇರಳವಾಗಿ ಮಾದಳ, ಅಗುರು ಗಂಧದ ಮರ, ಲವಂಗ ಲತೆ,
೧೪. ಮಾವು, ಅಂಬಟೆ – ಈ ಮರಗಳಲ್ಲಿ ಮನೆಮಾಡಿರುವ ದುಂಬಿ, ಗಿಳಿ, ಕೋಗಿಲೆ ಇವುಗಳ ಹಾರಾಟ.
೧೫. ಈ ಖೇಚರರಾಜನ ಐಶ್ವರ್ಯದ ವೈಭವವನ್ನು ನಾನು ಸಮಗ್ರವಾಗಿ ಬಣ್ಣಿಸುವೆನೆಂಬುವನು ಶುದ್ಧ ಮೂರ್ಖನೆ ಸರಿ.
೧೬. ಹಾಗೆಯೆ ಶಿವಮಂದಿರಪುರದ ಸೌಂದರ್ಯವೂ ಅತಿಶಯವಾದುದು. ಆದಿಶೇಷನಿಗೂ ಕೂಡ ಅದನ್ನು ಹೊಗಳಿ ಮುಗಿಸಲಾಗದು.

೮. ಈ ಪುರದ ವಿನ್ಯಾಸವನ್ನಾಗಲಿ, ಗೃಹನಿರ್ಮಾಣದ ಈ ರೀತಿಯನ್ನಾಗಲಿ, ಈ ಶೋಭೆಯನ್ನಾಗಲಿ, ಈ ಪರಿಯ ವಿಲಾಸವನ್ನಾಗಲಿ, ಈ ವೈಭವವನ್ನಾಗಲಿ ಪಡೆಯುವುದು ಅಮರಾವತಿಗೆ ಸಾಧ್ಯವೆ?

೯. ಸಂಚರಿಸುವ, ಕಣ್ಣಿಟ್ಟು ನೋಡುವ, ಮನೋಹರವಾಗಿ ಹಾಡುವ, ಚೆನ್ನಾಗಿ ಉಟ್ಟುತೊಟ್ಟು ಚೆಲುವಾಗಿರುವ ಧರ್ಮವನ್ನು ಆಚರಿಸುವ ಜನರಿಂದ ತುಂಬಿ ತುಳುಕುವ ಈ ಪುರವು ಪುಣ್ಯದ ನೆಲೆಮನೆಯೆನಿಸುವುದು.

---

1. ಕಮ್ರಾಮ್ರಾತಕೇತಕ (ಅ)

ಕಂ॥ ಮುಳಿಯಿಸುವ ಮುಳಿವ ತಿಳಿ[1]ಪು[1]ವ
ತಿಳಿವೊಲಿ[1]ಸು[1]ವ ದೊರೆವ ನೆರೆವ ರಮಣೀ ರಮಣಾ
ಕುಳ ಕಳ ಕಳದಿಂದಂಗಜ
ವಿಳಾಸದೆಱೆವೆಟ್ಟು ನೆಟ್ಟನಿದೆ ಪೆಱತುಂಟೇ ॥ ೧೦ ॥

ಮನದಿಂ ಸೆಱೆಗೆಯ್ದುಂ ಲೋ
ಚನಂಗಳಿಂ ಬಂದಿವಿಡಿಗುಮೆಂದುಂ ವನಿತಾ
ಜನಮದಱಿಂದಂ ಸ್ತ್ರೀ ರಾ
ಜ ನಗರಮಿಾ ನಗರಮೆನೆ ಕರಂ ರಮಣೀಯಂ ॥ ೧೧ ॥

ವ॥ ಎನೆ ಪುರಶ್ರೀಯನಾತನಮಾನುಷಮುಮವಾಗ್ವಿಷಯಮುಮವರ್ಣನಾಗೋಚರಮುಮಾಗೆ ಬಣ್ಣಿಸುತ್ತುಂ ಪ್ರಮೋದೋದಂಚಿತ ರೋಮಾಂಚ ಕಂಚುಕಿತ ಶರೀರನಾದಂ ಜನನಿಯುಮಂ ಜನ್ಮಭೂಮಿಯುಮಂ ಕಂಡಾಗಳಿವಿರಿದು ರಾಗೋದಯಮದೇವಿರಿದೆನುತುಂ ಬಂದು ರಾಜಾಲಯಮಂ ತೋಱಿ—

ಚಂ॥ ಅನಿಮಿಷಲೋಕಮಂ ವಿಬುಧರಿಂ ಫಣಿಲೋಕಮನುಗ್ರನಾಗ ಸಾ
ಧನದಿನನಂಗಲೋಕಮನನೂನರತಿ ಪ್ರಮದಾಂಗದಿಂದದೇ
ನನುಕರಿಸಿತ್ತೊ ರಾಜಭವನಂ ಭುವನಾನನಮಾಶ್ರವತ್ಪರಾ
ವನಿಪ ನಿಸೃಷ್ಟ ದಂತಿ ಮದಕರ್ದಮ ಮರ್ದನ ದುರ್ದಿನಾಂಗಣಂ ॥ ೧೨ ॥

ವ॥ ಎಂದು ತೋಱಿ ಗಗನತಲ ಗಮನದಿಂ ಭುವನತಲಕ್ಕವತರಿಸಿ ಖಚರೇಂದ್ರ ರಾಜಮಂದಿರ ಸುಂದರ ಪ್ರಥಮ ದ್ವಾರ ಪುರೋಗತನಾಗಿ—

---

೧೦. ಕೋಪಗೊಳಿಸುವುದು, ಕೋಪಗೊಳ್ಳುವುದು, ಸಮಾಧಾನಪಡಿಸುವುದು, ತಾನೆ ಸಮಾಧಾನ ತಾಳುವುದು, ಒಲಿಸಿಕೊಳ್ಳುವುದು, ಬಳಿಸಾರುವುದು, ಕೂಡಿಕೊಳ್ಳುವುದು—ಹೀಗೆ ಪ್ರಣಯದ ವಿವಿಧ ಸನ್ನಿವೇಶಗಳಲ್ಲಿ ತೊಡಗಿರುವ ಪ್ರಾಯಕರ ಪ್ರೇಯಸಿಯರ ಸಂಭ್ರಮದ ಕೋಲಾಹಲದಿಂದಾಗಿ ಮನ್ಮಥ ವಿಲಾಸದ ಮೂಲಸ್ಥಾನವೆಂದರೆ ಈ ಪುರ ನಲ್ಲದೆ ಬೇರೊಂದುಂಟೆ?

೧೧. ಇಲ್ಲಿಯ ಹೆಣ್ಣುಗಳು ಮನಸ್ಸಿನಿಂದ ಸೆರೆಹಿಡಿಯುವರು; ಕಣ್ಣುಗಳಿಂದಲೆ ಮರುಳುಗೊಳಿಸುವರು. ಆದುದರಿಂದ ಈ ರಾಜ್ಯವು ಸ್ತ್ರೀರಾಜ್ಯವೊ ಏನೊ ಎಂಬಂತೆ ತುಂಬ ರಮ್ಯವಾಗಿದೆ.

ವ॥ ಹೀಗೆಂದು ಆ ಪಟ್ಟಣದ ವೈಭವವನ್ನು ಅಮಾನುಷವೆಂದೂ ವರ್ಣನಾತೀತವೆಂದೂ ಅಗ್ಗಳಿಕೆಯಿಂದ ಬಣ್ಣಿಸುತ್ತ ಆ ದೂತನು ಸಂತೋಷಾಧಿಕ್ಯದಿಂದ ರೋಮಾಂಚನಗೊಂಡನು. ತಾಯಿಯನ್ನು ತಾಯ್ನಾಡನ್ನೂ ಕಂಡಾಗ ಇಷ್ಟೊಂದು ಸಂತೋಷವಾಗುವುದು ಸಹಜವೇ ಅಲ್ಲವೆ? ಹೀಗೆ ನುಡಿಯುತ್ತ ಬಂದು ಅರಮನೆಯನ್ನು ತೋರಿ—

೧೨. ವಿದ್ಯಾವಂತರಿಂದ ಅಮರಾವತಿಯನ್ನೂ, ಭಯಂಕರವಾದ ಆನೆಯ ಸೈನ್ಯದಿಂದ ಭವನ ಲೋಕವನ್ನೂ, ಉತ್ತಮರಾದ ಸುಂದರ ಸ್ತ್ರೀಯರಿಂದ ಮನ್ಮಥಲೋಕವನ್ನೂ ಅರಮನೆಯು ಅನುಕರಿಸಿತ್ತು. ಅಲ್ಲದೆ ಭೂಮಂಡಲದ ಮುಖದೋಪಾದಿಯಲ್ಲಿ ಶತ್ರುರಾಜರಿಂದ ಕೊಡಲ್ಪಟ್ಟ ಮದಿಸಿದ ಆನೆಗಳ ಸಮೂಹದಿಂದ ಕೂಡಿತ್ತು.

ವ॥ ಎಂದು ತೋರಿಸಿ ಆಕಾಶದಿಂದ ಭೂಮಿಗೆ ಇಳಿದು ಖೇಚರರಾಜನ ಅರಮನೆಯ ಸುಂದರವಾದ ಮುಂಭಾಗ ವನ್ನು ಸೇರಿ

---

1. ಪು (ಅ)

ಉ॥ ಕೇಣಮನೊಕ್ಕು ತಕ್ಕನಱಿದುಕ್ಕೆವಮಂ ಪೆಱಗಿಕ್ಕಿ ದಕ್ಷಿಣ
ಶ್ರೇಣಿಯ ರಾಜ್ಯಲಕ್ಷ್ಮಿ ದಮಿತಾರಿಯ [1]ನೊಕ್ಕುಳಿದಿರ್ದುದು[1]ತ್ತರ
ಶ್ರೇಣಿಯ ರಾಜ್ಯಲಕ್ಷ್ಮಿ ಪುರುಡಾಕೆಯೊಳಾವಗಮಾಗೆ ಲಂಚಮಂ
ಮಾಣದೆ ಕೊಟ್ಟವೋಲ್ ಸೊಗಯಿಸಿರ್ಪುವು ಕಪ್ಪದ ಪೊನ್ನ ರಾಶಿಗಳ್ ॥ ೧೩ ॥

ಕಂ॥ ಸಮವಾಯಮಗಲ್ದಂ ಪ್ರಿಯ
ತಮೆಯ ಮನಂ ಧನಮಿನಂಗೆ ಪಕ್ಕಪ್ಪಂತಾ
ದಮಿತಾರಿಗೆ ಗೆಂಟರೊಳಿ
ರ್ದುಮುತ್ತರಶ್ರೇಣಿ ಸಾರೆ ಧನದಿಂ ಮನದಿಂ ॥ ೧೪ ॥

ಬಾಗಿಲ್ವಾಡದ ಮುಂದಣ
ಭಾಗಂಗಳ ಬಚ್ಚವಸರಮರ್ಥಿಗೆ ಕುಡುವು
ದ್ಯೋಗದ ಪಸರಮೆ ವಿತ್ತ ಸ
ಮಾಗಮದಿಂ ಗೆಯ್ವೊನಿಲ್ಲ ಪರದಂ ಪರದಂ ॥ ೧೫ ॥

ವ॥ ಎಂದನಿಂದ್ಯರಾಜಭವನ ಪುರೋಭಾಗದೊಳಿರ್ದು ನಡೆದೆರೆದರ (ದ) ಸರೆನಿಸಿ ಲೋಭಕ್ಕಸರಪಸರಮಿಲ್ಲದಿರ್ದ ಬಚ್ಚರ ಪಸರಂಗಳುಮಂ ವರುಣಾನಿಯ ತೊಡಪುಮಂ ತನ್ನ ಕೈಪಿಡಿಯುಮಂ ರತ್ನರಾಶಿಯೆಂಬ ಕೋಶಗೃಹದ ಬಸ್ಕೆಯುಂಬೆರಸು ವರುಣನೆ ಕೊಟ್ಟ ಜಂಗೊಟ್ಟಂತೆ ಪುಂಜಿಸಿರ್ದ ಪಂಚರತ್ನರಾಶಿಗಳುಮಂ ತೋಱುತ್ತುಂ ಬಂದು ದೌವಾರಿಕನಿವೇದಿತನಂಬರಚರೇಂದ್ರ ವಿದಿತಾತ್ಮೀಯ ವೃತ್ತಕನಾಗಿ ಮೊದಲ ಬಾಗಿಲಂ ಪೊಕ್ಕದಱೊಳಗಣ ಭಾಗದೆರಡುಂ ದೆಸೆಯೊಳಂ ಸುಧಾಧವಳಿತ ದೀರ್ಘಮಂದಿರ ಸಾಹಣಂಗಳಂ ತೋಱಿ—

೧೩. ಗರ್ವವನ್ನು ಬಿಟ್ಟು, ಯೋಗ್ಯತೆಯನ್ನು ತಿಳಿದು, ಉತ್ಸಾಹವನ್ನು ಹಿಂದೆ ಹಾಕಿ ದಕ್ಷಿಣ ಭಾಗದ ರಾಜ್ಯ ಲಕ್ಷ್ಮಿಯು ದಮಿತಾರಿಯ ಪ್ರಣಯಕಲಹಕ್ಕೆ ಇರುತ್ತಿರಲು ಉತ್ತರ ಶ್ರೇಣಿಯ ರಾಜ್ಯಲಕ್ಷ್ಮಿಯೊಡನೆ ಸ್ಪರ್ಧೆಯು ಯಾವಾಗಲೂ ಆಗುತ್ತಿರಲು ಲಂಚವನ್ನು ಬಿಡದೆ ಕಪ್ಪಕಾಣಿಕೆಯ ಸುವರ್ಣರಾಶಿಗಳು ಮನೋಹರವಾಗಿದ್ದುವು.

೧೪. ಆದಾಯವು ಸಮಾನವಾಯಿತು, ಪ್ರೀತಿಪಾತ್ರಳ ಮನಸ್ಸು ಗಂಡಸಿಗೆ ಭಾಗವಾಗಿರುವ ಹಾಗೆ ಉತ್ತರ ಶ್ರೇಣಿಯು ದಮಿತಾರಿಗೆ ದೂರದಲ್ಲಿದ್ದರೂ ಹತ್ತಿರದಲ್ಲೇ ಧನ ಮನಸ್ಸಿನಿಂದ ಸಮೀಪದಲ್ಲಿತ್ತು.

೧೫. ಬಾಗಿಲುವಾಡಗಳ ಮುಂದಲ ಭಾಗಗಳಿಂದ ಧನಿಕರ ಗುಂಪು ಯಾಚಕರಿಗೆ ದಾನಮಾಡುವ ಉದ್ಯೋಗದ ಅಂಗಡಿಯೋ ಅಥವಾ ವರ್ತಕನ ವ್ಯಾಪಾರವನ್ನು ಸಾಮಗ್ರಿಗಳನ್ನು ಮಾರಿ ಧನ ಸಂಪಾದನೆಯನ್ನು ಮಾಡುವುದಕ್ಕೆ ಇತ್ತೋ ಎನ್ನುವಂತೆ.

ವ॥ ಎಂದು ದೋಷವಿಲ್ಲದ ಅರಮನೆಯ ಮುಂಭಾಗದಲ್ಲಿದ್ದು ಗುರುತಿಲ್ಲದವರೆನ್ನಿಸಿ ದುರಾಶೆಗೆ ಅವಕಾಶವಿಲ್ಲದ ಧನಿಕರ ಗುಂಪುಗಳನ್ನು, ವರುಣನ ಹೆಂಡತಿಯ ಒಡವೆಗಳನ್ನು, ತನ್ನ ಕೈಗನ್ನಡಿಯನ್ನು ರತ್ನ ರಾಶಿಯೆಂಬ ಕೋಷಗೃಹದ ರಹಸ್ಯದವನು ಸೇರಿ ವರುಣನೇ ಭೂದಾನವನ್ನು ಕೊಟ್ಟಂತೆ ರಾಶಿಯಾಗಿದ್ದ ಪಂಚರತ್ನಗಳ ಸಮೂಹವನ್ನು ತೋರಿಸುತ್ತಾ ಬಂದು ಬಾಗಿಲು ಕಾಯುವವನಿಂದ ಹೇಳಲ್ಪಟ್ಟ ಖೇಚರೇಂದ್ರನಿಗೆ ತನ್ನ ವೃತ್ತಾಂತವನ್ನು ತಿಳಿಸಿದವನಾಗಿ ಮೊದಲ ಬಾಗಿಲಲ್ಲಿ ಪ್ರವೇಶಿಸಿ ಅದರೊಳಗಣ ಭಾಗದ ಎರಡು ದಿಕ್ಕುಗಳಲ್ಲಿಯೂ ಅಮೃತಶಿಲೆಯಿಂದ ರಚಿತವಾದ ಬಿಳುಪಾದ ಸುಣ್ಣದಿಂದ ಬಳಿದಿರುವ ಉದ್ದವಾದ ಮನೆಗಳನ್ನು ತೋರಿಸಿ

1. ಪೊರ್ಕುಳಿಗಿರ್ದೊಡು (ಅ)

ಚಂ॥ ಪೊಳೆವೊಳೆಯುರ ಸಿತಚ್ಛವಿಯುಮೊಪ್ಪುವ ದಂಡಿಗೆಯುಂ ನಿಕಾಮ ನಿ
ರ್ಮಳ ದಶನಂಗಳುಂ ಸಣಸೆ ಕೇಸರದೊಳ್ ಸಿತವರ್ಣದೊಳ್ ಸಮು
ಜ್ಜ್ವಳತರ ಲೋಲ ವಾಲಧಿಯೊಳಾ ಕುಡುದಾಡೆಯೊಳಾವನುಂ ನಿರಾ
ಕುಳಮಱಿವನ್ನನಿಲ್ಲವಱನೀ ಹರಿಗಂ ಹರಿಗಂ ವಿಭೇದಮಂ ॥ ೧೬ ॥

ವ॥ ಅಲ್ಲಿಂದತ್ತ ಗಂಗಾಯಮುನಾದೇವತೆಗಳ್ ಖಚರರಾಜನನೋಲಗಿಸಲ್ ಬಂದಾತಿರ್ದ ಗಂಗೆಜಮುನೆಗಳಿಂದೊಪ್ಪುವ ದ್ವಾರಜಗತೀತಳಂಗಳಂ ತೋಱುತ್ತುಂ ಎರಡನೆಯ ಬಾಗಿಲ್ವಾಡಮಂ ಪೊಕ್ಕಂತರಾಂತರಾಭಿರೋಭಮಾನಾಕ್ಷೂಣ ಕಕ್ಷ್ಯಾವಕಾಶಮಂ ತೋಱುತ್ತುಂ ಘಂಟಿಗೆಯ ಮನೆಯುನೆಯ್ದುವರೆ ತೊಟ್ಟನೆ ಕಟ್ಟಿದಿರೊಳ್—

ಕಂ॥ ಪಸರಿಸಿದಪ್ಪುದೊಸಗೆಯ ಮೇ
ಗೊಸಗೆಯೆ ಬಲದೇವ ವಾಸುದೇವರ್ಕಳ್ಗೀ
ದೆಸೆಯಿಂದೆಂಬಂತೆವೊಲೀ
ನೆಸೆದತ್ತೊ ಗಭೀರ ಭೂರಿ ಭೇರೀನಾದಂ ॥ ೧೭ ॥

ವ॥ ತದ್ಭೇರೀರವ ಶ್ರವಣ ಸಮಯ ಸಮಗ್ರಸಮುಪಜನಿತ ಮಂಗಳಗೀತ ಮನೋರಥ ಸಿದ್ಧಿ ಪ್ರೀತಿಮುಷಿತ ಮಾನಸರಾಗಿ ಬರ್ಪ ಮಾಯಾಗಾಣಿಕೆಯರಂ ಮುಂದಿಟ್ಟು ದೂತನರಮನೆಯಂ ಪುಗೆ—

ಕಂ॥ ಪುಗುವ ಪೊಱಮಡನಿವ ಜನದಿಂ
ಪುಗಲುಂ ಪೊಱಮಡಲುಮಲಸಿ ಬಾಗಿಲ ಕೆಲದೊಳ್
ಸೊಗಯಿಪ ಗುಣನೆಗಳೊಳ್ ನಿಂ
ದ ಗಾಡಿಕಾರ್ತಿಯರದೇಂ ಮನಂಗೊಳಿಸಿದರೋ ॥ ೧೮ ॥

---

೧೬. ಹೊಳೆಯುವ ಆ ಆಲಯವು ಬೆಳ್ಳಗಿರುವ ಕಾಂತಿಯೂ ಮನೋಹರವಾದ ಚಾಮರವೂ ದೀರ್ಘವಾದ ಪರಿಶುದ್ಧವಾದ ಹಲ್ಲುಗಳನ್ನು ಸ್ಪರ್ಧಿಸಲು ಕೇಸರದಲ್ಲಿಯೂ ಬಿಳಿಯ ಬಣ್ಣದ ಹೆಚ್ಚು ಪ್ರಕಾಶವುಳ್ಳ ಚಂಚಲವಾದ ಬಾಲದೊಡನೆಯೂ ದವಡೆಯ ಪಕ್ಕದಲ್ಲಿ ಪ್ರತಿಯೊಬ್ಬನೂ ಆಯಾಸವಿಲ್ಲದೆ ತಿಳಿಯುವವರಿಂದ ಸಿಂಹಕ್ಕೂ ಈ ರಾಜನಿಗೂ ಭೇದವು ಕಾಣುತ್ತಿರಲಿಲ್ಲ.

ವ॥ ಅಲ್ಲಿಂದ ಮುಂದೆ ಗಂಗಾಯಮುನಾ ದೇವತೆಗಳು ಖೇಚರರಾಜನನ್ನು ಓಲಗಿಸಲು ಬಂದಂತಿದ್ದ ಗಂಗಾಯಮುನೆಗಳಿಂದ ಒಪ್ಪುವ ಆ ಬಾಗಿಲ ಸಮೀಪದ ಜಗತಿಗಳನ್ನು ತೋರಿಸುತ್ತಾ ಎರಡನೆಯ ಬಾಗಿಲುವಾಡವನ್ನು ಸೇರಿ ಒಳಗಿನ ಒಳಭಾಗದಲ್ಲಿ ಮನೋಹರವಾಗಿರುವ ಕಡಿಮೆಯಿಲ್ಲದ ವಿಶಾಲ ಕೋಣೆಯನ್ನು ತೋರಿಸುತ್ತಾ ಗಂಟೆಯ ಮನೆಯ ಸಮೀಪಕ್ಕೆ ಬರಲು ಹಟಾತ್ತಾಗಿ ಎದುರಿನಲ್ಲಿ

೧೭. ಬಲದೇವವಾಸುದೇವರಿಗೆ ಹಬ್ಬದಮೇಲೆ ಹಬ್ಬವು ಹಸರಿಸುತ್ತದೆಯೆನ್ನುವಂತೆ ಗಂಭೀರವಾಗಿ ಹೆಚ್ಚಾದ ಭೇರಿಧ್ವನಿಯು ಎಲ್ಲಾ ಕಡೆಗೂ ಆವರಿಸಿತ್ತು.

ವ॥ ಈ ಭೇರಿಯ ಧ್ವನಿಯನ್ನು ಕೇಳುವ ಸಮಯದಲ್ಲಿ ಹೆಚ್ಚಾಗಿ ಉಂಟಾದ ಮಂಗಳ ಹಾಡುಗಳಿಂದ ಮನೋರಥ ಸಿದ್ಧಿಯಿಂದ ಸಂತೋಷವುಳ್ಳ ಮನಸುಳ್ಳವರಾಗಿ ಬರುವ ಮಾಯಾಗಾಣಿಕೆಯರನ್ನು ಮುಂದುಮಾಡಿಕೊಂಡು ದೂತನು ಅರಮನೆಯನ್ನು ಸೇರಲು

೧೮. ಒಳಗೆ ಹೋಗುವ ಹೊರಗೆ ಬರುವ ಜನಸಂದಣಿಯಿಂದ ಒಳಗೆ ಹೋಗಿಬರಲು ಸಾಧ್ಯವಿಲ್ಲವೆ ಬಾಗಿಲ ಸಮೀಪದ ಸೊಗಸಾದ ಚಡಿಯಮೇಲೆ ನಿಂತ ಈ ಗಣಿಕೆಯರು ಮನೋಹರವಾಗಿದ್ದರು.

ಆ ವನಿತೆಯರ್ ಮನೋಜನ
ದೀವದ ಪುಲ್ಲೆಗಮನಂಗರಾಜನನವರಾ
ಜ್ಞೀವಾಸಕ್ಕಂ ದೊರೆ ಪೆಱ
ನಾವೊಂ ಪೆಱ[1]ತಾ[1]ವುದಂ ಜಡಂ ಪೋಲಿಸುವೊಂ ॥ ೧೯ ॥

ವ॥ ಅನಂತರಂ ನೋಡುತ್ತುಂ ದಿಙ್ನಾಗಯುದ್ಧಕ್ಕೆ ಕೃತ್ರಿಮಾರ್ಗಳಾಬಂಧಮೆಂಬಳವನೊಳಕೊಂಡ ಹಿಮವದ್ವಿಜಯಾರ್ಧ ನೀಲ ನಿಷಧ ಮಹೀಧರಂಗಳಂ ಪೋಲ್ತು ಮದಸ್ತಂಬೇರಮಯುದ್ಧ ನಿಮಿತ್ತಂ ನಿಱಿಸಿದ ಲಾಳವಿಂಡಿಗೆಯುಮಂ ಪೂರ್ವಾಪರಪಾರಾವಾರಪತಿಗಳಿರ್ವರುಮೋರೊರ್ವರೊಳ್ ಗರ್ವದಿಂ ಹಸ್ತಿನಿಯುದ್ಧಕ್ಕೆಂದಣೆದು ಬಿಟ್ಟಿಕ್ಕೆ ಮೊಗಂಬೊಕ್ಕು ಮೆಯ್ಯಿಕ್ಕಿದ ಮದಕರಿಯುಗಳಮನೆ ಪೋಲ್ತು ವರುಣರೂಪಾರೂಢಮುಂ ಚಾಮೀಕರಮಯಮುಮಪ್ಪ ಮಕರ ತೋರಣಮಂ ನೋಡುತ್ತುಮದಱ ಪೊಱಗಣೊಳಗಣೆರಡುಂ ಭಾಗದೊಳಿರ್ದ ಮಹಾಕಾಳರೂಪಮಂ ನಿಂದು ನೋಡುತ್ತುಂ ಮಕರತೋರಣದ ಬಹಿರ್ಭಾಗದುಭಯಪಾರ್ಶ್ವದೊಳಮೋಳಿವಡೆಯೆ ಸುರಕರೀಂದ್ರಮನೆ ಕಟ್ಟಲ್ ನಟ್ಟ ಪಾರಿಜಾತದ ಮುಂಡಗಂಭಂಗಳಂ ಪೋಲ್ತೊಪ್ಪಿ ಸಾಹಣೌಘದೊಳ್ ನಿಚ್ಚಮೋಲಗಿಸುವ ಪಂಚಕಲ್ಯಾಣಂಗಳುಮಂ ಕಟ್ಟುವಾನೆಗಂಭಂಗಳುಮಂ ಅವಱ ಪಶ್ಚಿಮ ಭಾಗದೊಳ್ ದಿಕ್ಪಾಲಶಾಸನದಿನಾಶಾಕರೀಂದ್ರಂಗಳ್ಗೆಂದು ಸುಪ್ರತೀಕಪತಿ ಸಮೆಯಿಸಿದ ವಿಶಾಲಕ್ರೋಡಶಾಲೆಗಳೆನಿಸಿದ ಚೆಂಬೊನ್ನ ಕಲಶದ ಮಾಡಶಾಲೆಗಳುಮಂ ನೋಡಿ ಪೊಗಟ್ಟು ಮಕರತೋರಣಮಂ ನುಗುಳ್ದು ಪೋಗಿ ರಾಜಗೇಹಕ್ಕೆ ಲಲಾಮಲಕ್ಷ್ಮಿಯುಂ ಮುಖಶ್ರೀಯುಮಿರ್ಪಂತಿರ್ದ ಕರುಮಾಡದ ಬಾಗಿಲನೆಯ್ದೆವಂದು ಅದಱ [2]ಬಲದ ಕೆಲದ[2] ಚಿತ್ರಶಾಲೆಯ ಶೋಭಾಲೀಲೆಯನಚ್ಚರಿವಟ್ಟು ನೋಡಿ —

ಕಂ॥ ಕುಲಶೈಲವೇೞುಮೊಂದಡ
ಕಿಲಾದುವೆ[3]ನಿಪೇ[3]ೞುನೆಲೆಯುಮಭ್ರಕ್ಕಿದಿರಂ
ಮಲೆವಂತಿರೆ ದಿನಪಾವಳಿ
ಕಲಶಾವಳಿಯೆನಿಸೆ ಕನಕಕಲಶಾವಳಿಗಳ್ ॥ ೨೦ ॥

---

೧೯. ಈ ಸ್ತ್ರೀಯರು ಮನ್ಮಥನು ಸಾಕಿದ ಹುಲ್ಲೆಗೂ ಮನ್ಮಥನ ನೂತನವಾದ ರಾಣಿವಾಸಕ್ಕೂ ಸಮಾನರಾಗಿದ್ದರು. ಇವನ್ನು ಬಿಟ್ಟು ಬೇರೆ ಯಾರುತಾನೆ ಜಡವಸ್ತುಗಳೊಡನೆ ಇವರನ್ನು ಹೋಲಿಸಲು ಸಾಧ್ಯ.

ವ॥ ಅನಂತರ ನೋಡುತ್ತಾ ದಿಗ್ಗಜಗಳ ಯುದ್ಧಕ್ಕೆ ಅಕೃತ್ರಿಮವಾದ ಅಗುಣಿ ಬಂಧಿ ಎಂಬ ಪ್ರಮಾಣದಲ್ಲಿರುವ ಹಿಮವತ್ ವಿಜಯಾರ್ಧ, ನೀಲ, ನಿಷಧ ಪರ್ವತಗಳನ್ನು ಹೋಲುತ್ತಾ ಆನೆಗಳ ಯುದ್ಧಕ್ಕೆ ನಿರ್ಮಿಸಿದ ಲಾಳವುಂಡಿಗೆಯನ್ನು ಪೂರ್ವಪಶ್ಚಿಮ ಸಮುದ್ರರಾಜರಿಬ್ಬರೂ ಒಬ್ಬೊಬ್ಬರೊಡನೆ ಅಹಂಕಾರದಿಂದ ಆನೆಗಳ ಯುದ್ಧಕ್ಕೆಂದು ಜೋಡಿಸಿ ಎದುರು ಬದಿರಿಗೆ ಹೋರಾಡಲು ನಿಂತಿರುವ ಮದಕರಿಗಳನ್ನೇ ಹೋಲುತ್ತಾ ವರುಣನ ಆಕಾರವನ್ನು ಪಡೆದು ಸುವರ್ಣದಿಂದ ಮಾಡಿರುವ ಮಕರ ತೋರಣವನ್ನು ನೋಡುತ್ತಾ ಅದರ ಹೊರಗಣ ಒಳಗಣ ಎರಡು ಭಾಗದಲ್ಲಿದ್ದ ಮಹಾಕಾಳರೂಪವನ್ನು ನಿಂತು ನೋಡುತ್ತಾ ಮಕರ ತೋರಣದ ಹೊರಭಾಗದ ಎರಡು ಕಡೆಯಲ್ಲಿಯೂ ಸಾಲಾಗಿರಲು ದೇವಲೋಕದ ಆನೆಗಳನ್ನೇ ಕಟ್ಟುವುದಕ್ಕಾಗಿ ಹೂತಿರುವ ಪಾರಿಜಾತದ ಕಂಬಗಳನ್ನು ಹೋಲುತ್ತಾ ಕುದುರೆಯ ಶಾಲೆಯಲ್ಲಿ ಯಾವಾಗಲೂ ಪಂಚಕಲ್ಯಾಣದ ಕುದುರೆಗಳನ್ನು ಕಟ್ಟುವ ಆನೆಯ ಕಂಬಗಳನ್ನು ಅವುಗಳ ಪಶ್ಚಿಮಭಾಗದಲ್ಲಿ ದಿಕ್ಪಾಲಕರ ಅಪ್ಪಣೆಯಂತೆ ದಿಗ್ಗಜಗಳಿಗೆಂದು ಸುಪ್ರತೀಕವೆಂಬ ಆನೆಗಾಗಿ ಮಾಡಿಸಿದ ವಿಶಾಲವಾದ ಕೊಠಡಿಗಳೆನಿಸಿದ ಸುವರ್ಣಕಳಶದ ಮಹಡಿಗಳನ್ನು ನೋಡಿ ಹೊಗಳಿ ಮಕರ ತೋರಣವನ್ನು ನುಗ್ಗಿ ಹೋಗಿ ಅರಮನೆಗೆ ಹಗೆಯ ಲಕ್ಷ್ಮಿಯೂ ಮುಖಲಕ್ಷ್ಮಿಯೂ ಇರುವಂತಿದ್ದ ಕರುಮಾಡದ ಬಾಗಿಲ ಸಮೀಪಕ್ಕೆ ಬಂದ ಅದರ ಎಡಬಲದ ಚಿತ್ರಶಾಲೆಯ ಮನೋಹರವಾದ ಸೊಗಸನ್ನು ಆಶ್ಚರ್ಯಪಟ್ಟು ನೋಡಿ

೨೦. ಏಳು ಕುಲಾಚಲ ಪರ್ವತಗಳು ಏಳು ಮಹಡಿಯ ಅರಮನೆಯನ್ನು ಅಡಕಿದಂತೆ ಆಕಾಶವನ್ನು ಎದುರಿಸುವಂತೆ ಸೂರ್ಯನು ಗುಂಪಿನ ಸಾಲಿನಂತೆ ಸುವರ್ಣಕಳಶಗಳು

---

1. ವಾ (ಅ) 2. ಕೆಲದ ಬಲದ (ಮ) 3. ವೆನಲೆ (ಮ)

ಕಂ॥ ಸೊಗಯಿಪ ಕರುಮಾಡಮನೊಸೆ
ದು ಗಾಯಕಾಸಹಿತನಾಗಳಮಿತಂ ಪುಗೆ ಕೆ
ಮ್ಮುಗಿಲ ತೆಗಳಿಗೆಯ ಪೊಗೆಗಳ್
ನೆಗದಪುವೆನೆ ನೆಗೆದಪೊಗೆದು ಚಿತ್ರಪ್ರಭೆಗಳ್ ॥ ೨೧ ॥

ವ॥ ಅಲ್ಲಿಂ ಬಱಿಯಂ—

ಕಂ॥ ಅಂಭೋದನಿನದನಿಭ ಜನ
ಗಂಭೀರ ಪ್ರತಿನಿನಾದಮೆಸೆದುವು ವಿಜಯಾ
ರಂಭಮನೆ ಸಾಲಭಂಜಿಕೆ
ಸಂಭಾಷಿಸುವಂತೆ ದೂತನೊಡವಂದವಱೊಳ್ ॥ ೨೨ ॥

ಹರಿಣೀವೃತ್ತಂ॥ ಅಮಿತ ನಮಿತಾರ್ಥಾಲ್ಪವ್ಯಾಹಾರಿ ಗಾಣಿಯರ್ಗೆಂಗುಮು
ತ್ತಮ ಸಿತಮಣಿಕ್ಷ್ಮಾಪರ್ಯಸ್ತಂ ಹರಿನ್ಮಣಿಬಿಂಬಮ
ಪ್ರಮಿತಮಿರೆ ಹಂಸಂಗಳ್ ಸೇವಾಳಮಂಜರಿಗೆತ್ತು ಚಂ
ಚುಮು.. ॥ ೨೩ ॥

ವ॥ ...ವುದಕ್ಕಗ್ಗಳಮಾಗಿ ಕಾಲ್ಗಿಡಿಸಲುಂ ಮುಱಿ[1]ದು ಕಿಟ್ಟಿಡಂ ತಡಮೆಂಬಿವಱಿಂದಂ ಬಾಹು ಕೈಕೊಳ್ಳೆಯೆಪ್ಪ ಮೊದಲಾಗಿ ಗೋಮೂತ್ರ ಮಂಡಲಮುಮಾಕಾಶಂ ಪೇಜವಿತಿಯೆಂಬ ವಿಧಿಗಳೊಳ್ ಬಂದು ನೆಲೆಗಿಡಿಸಲುಂ ಪೊಲಗಿಡಿಸಲುಂ ಬಲ್ಲೆನೆನ್ನ ಕೆಯ್ಯೊಳ್—

ಕಂ॥ ಕಲ್ತಾನೆವಾಗು ಗೆಲೆ ಸಲೆ
[2]ಪೋ[2]ಲ್ತಾನೆಗೆ ಲೆಕ್ಕಮಿಲ್ಲ ಬೆನ್ನಣಮೆನ್ನೊಳ್
ನಿಲ್ತಳವಳವಿಗಟಿಯಲೆ ಕ
ವಲ್ತುದು ಬಿಡಿಸುವುದಿಭೇಂದ್ರಮಂ ಖಚರೇಂದ್ರಾ ॥ ೨೪ ॥

---

೨೧. ಆಗ ದೂತನಾದ ಅಮಿತನು ಗಾಯಕಿಯರೊಡನೆ ಸಂತೋಷದಿಂದ ಮನೋಹರವಾದ ಕರುಮಾಡವನ್ನು ಪ್ರವೇಶಿಸಲು ಕೆಂಪಾದ ಮೋಡದ ಸಾಲಿಗೆಗಳಂತೆ ಹೊಗೆಗಳು ಮೇಲಕ್ಕೆ ನೆಗೆಯುವಂತೆ ನೆಗೆದುವು.

ವ॥ ಇದಾದ ಮೇಲೆ

೨೨. ಮೇಘದ ಧ್ವನಿಗೆ ಸಮನಾದ ಜನಗಳ ಗಂಭೀರ ಮಹಿಮೆಯು ಪ್ರತಿಧ್ವನಿಯಂತೆ ಜಯದ ವಿಚಾರವನ್ನು ಗೊಂಬೆಗಳು ಪರಸ್ಪರ ದೂತನೊಡನೆ ಮಾತನಾಡುವಂತೆ ಮನೋಹರವಾಗಿದ್ದುವು.

೨೩. ಅಮಿತನೆಂಬ ಈ ದೂತನು ಹೆಚ್ಚಾದ ಹಣವುಳ್ಳ ಈ ಗಣಿಕೆಯರಿಗೆಂದು ಉತ್ತಮವಾದ ಸ್ಫಟಿಕಮಣಿಯು ಭೂಮಿಯಲ್ಲಿ ಅರಳಿರುವಂತೆಯೂ ಇಂದ್ರನೀಲಮಣಿಯ ಪ್ರತಿಬಿಂಬವು ತಡೆಯಿಲ್ಲದೆಯಿರಲು ಹಂಸಗಳು ಪಾಚಿಯ ಗುಂಪೆಂದು ತಿಳಿದು ಕೇಕೆಹಾಕಿದುವು.

ವ॥ ಯಾವುದಕ್ಕೂ ಹೆಚ್ಚಾಗಿ ಕಾಲುಕೆಡಿಸಲು ಮುರಿದು ನಾಶಮಾಡುವುದೆಂಬುದು ನಿಧಾನವೆಂಬ ಕಾರಣದಿಂದ ಸಿದ್ಧವಾಗಿ ಎಂದು ಮೊದಲಾಗಿ ಗೋಮೂತ್ರದಂತಿರುವ ಭೂಮಿಯೂ ಆಕಾಶವೂ (ಪೇಜ) ಎಂಬ ವಿಧಿಗಳಿಂದ ಬಂದು ಜಾಗವನ್ನು ತಪ್ಪಿಸಲು ಹಾಳುಮಾಡಲು ನನಗೆ ಗೊತ್ತು ನನ್ನ ಕೈಯಲ್ಲಿ.

೨೪. ಶಾಸ್ತ್ರವನ್ನು ಕಲಿತ ನಾನೇ ಗೆಲ್ಲುವುದಕ್ಕೆ ಬದಲಾಗಿ ಸೋತಿರುವ ನನಗೆ ವಿಜ್ಞಾನವು ನನ್ನಲ್ಲಿ ಲೆಕ್ಕವಿಲ್ಲದಷ್ಟಿದ್ದಾದರೂ ಸುಮ್ಮನಿದ್ದು ಪ್ರಮಾಣವು ಹದ್ದುಮೀರುತ್ತಿರಲು ಈ ಡಿಬೇಂದ್ರವೆಂಬ ಆನೆಯನ್ನೇ ಅಭಿವೃದ್ಧಿ ಹೊಂದಲು ಬಿಡಿಸಿಕೊಳ್ಳುವುದು.

---

1. ಟಿ (ಅ) 2. ಸೋ (ಮ)

ಕಂ॥ ಪ್ಲುತಲುಠಮನಗ್ರವಂಚನ
ಪತನ ವಿಮೋಕ್ಷ ಭ್ರಮಂಗಳೆಂಬಿವು ಮೊದಲಾ
ದತಿ ವಿತತ ಕರಣ ಚಾರಣ
ತತಿ ನಿಪುಣತೆಗಾನೆ ಲೋಕ ಗುರುವೆ ದಲರಸಾ ॥ ೨೫ ॥

ಪೊಸೆವಗ್ನಿಯಿನುಗಿದಿರ್ದಂ
ಕುಸದಿಂಡಂಜನದಿನಾ ಪ್ರಲೇಪದಿನಿದನಂ
ಜಿಸಲಿಕ್ಕಿದ ಧೂಪದಿನ
ಳ್ಕಿಸುವಾತಂ ಬೆಸ್ನ ತಕ್ಕಿನಾತನೆ ನೃಪತೀ ॥ ೨೬ ॥

ಒರ್ಕೋಲ್ ಪೊರಜೆಗೆ ಬಗೆವೊಡೆ
ದಿರ್ಕುಂ ಸಟ್ಟುಗಿಯೆ ಗಣಪನಂತಿಭಪತಿ ಕು
ಳ್ಳಿರ್ಕುಂ ಸರಕ್ಕೆ ನಡುಗು
ತ್ತಿರ್ಕುಂ ಸುಗಿದಿರ್ಕುಮುಂಗುಟಕ್ಕಂ ಮಡಕಂ ॥ ೨೭ ॥

ವ॥ ಎಂದು ತಮ್ಮ ತಕ್ಕಿನ ಮೂಱುಂ ತಕ್ಕುಗಳುಮನಡ[1]ರಿ[1]ಯುಂ ತೊಡ[1]ರಿ[1]ಯುಂ ನುಡಿದಂತೆ ತಂತಮ್ಮಾನೆ[2]ಯಾ[2]ಳ್ತನಮುಮಂ ಬಿನ್ನಣಮುಮಂ ಮೆಱೆ[3]ದಾನೆವಾಱುಗಳೊಳಮುಂಡಿಗೆವಾಡರೊಳಂ ಪುಗದೆ ಸಲೆ ಬರ್ದ ಗಜವಿಜಯಿಗಳಿಂ

ಮ॥ ಮನಮಂ ಕೆಯ್ವುಸಗೊಂಡು ಚೆಲ್ವನೊಳಕೊಂಡೀಟೆ[3]ಯ್ಕೊಂಡು ಮೂಱುಂ ಜಗ
ಜ್ಜನದೊಳ್ಪಂ ಗೆಡೆಗೊಂಡ ಲಕ್ಷ್ಮಿ[3]ಯವಳಂ[3] ಮುಂದಿರ್ದುದಂ ಬಂದ ದೂ
ತನುಮಾ ಕೃತ್ರಿಮಗಾಯಿಕಾದ್ವಯಮುಮೆತ್ತಂ ನೋಡೆ ಯಕ್ಷೇಂದ್ರನಿಂ
ದ್ರನ ನಾಗೇಂದ್ರನ ನಚ್ಚಿನೋಲಗದವೋಲೊಪ್ಪಿರ್ದುದೊಡ್ಡೋಲಗಂ ॥ ೨೮ ॥

[4]ವ॥ ಅಲ್ಲಿ —[4]

೨೫. ಮೋಸಮಾಡುವುದು ಬಿಡುಗಡೆಯನ್ನು ಹೊಂದುವುದು ಎಂದಿಗೂ ಬ್ರಾಂತಿವುಳ್ಳವು. ದೊಡ್ಡದಾದ ಸುತ್ತುವಿಕೆಗೆ ದೊಡ್ಡದಾದ ಭ್ರಮರಗಳಿಗೂ ಎಂಬಂತೆ ಈ ಕಾರ್ಯದ ಸುತ್ತಾಟಿಕೆಯ ನಿಪುಣರಿಗೆ ನಾನೇ ಲೋಕದಲ್ಲಿ ಅರ್ಹ.

೨೬. ಒಂದನ್ನು ಮತ್ತೊಂದರೊಡನೆ ಉಜ್ಜುವಾಗ ಉಂಟಾಗುವ ಬೆಂಕಿಯಿಂದಲೂ, ಆ ನಾಟುಹಾಕಿರುವ ಅಂಕುಶದಿಂದಲೂ ಮತ್ತು ಕಣ್ಣು ಕಾಡಿಗೆಯಿಂದಲೂ ಮೈಗೆ ಹಚ್ಚುವುದರಿಂದಲೂ ಇದನ್ನು ಹೆದರಿಸಲು ಮತ್ತು ಹಾಕಿದ ಧೂಪದಿಂದ ಹೆದರಿಸುವವನು ಹಿಂಭಾಗದಿಂದ ಯೋಗ್ಯತೆಯನ್ನು ಬೆಳೆದಿರುವವನೂ ಹಿಂಭಾಗದ ಯೋಗ್ಯತೆಗೆ ಸೂಕ್ತನಾದವನು.

೨೭. ಯೋಚಿಸುವುದಾದರೆ ಒಂದು ಕೋಲು ಒಂದು ಹಗ್ಗಕ್ಕೆ ಸಾಟಿ. ಉತ್ತಮವಾದ ಆನೆಯು ಗಣಪನಂತೆ ಕೂತಿರುತ್ತದೆ. ಆದರೆ ಕಾಲ ಸಪ್ಪಳಕ್ಕೆ (ಅಂಗುಷ್ಟದ ಧ್ವನಿಗೆ) ಕಪಿಯು ಕುಣಿದಾಡುತ್ತದೆ.

ವ॥ ಎಂದು ತಮ್ಮ ಮೂರು ವಂಚನೆಗಳನ್ನು ಹತ್ತಿಯೂ ತೊಡಗಿಯೂ ಮಾತಾಡಿದಂತೆ ತಮ್ಮ ತಮ್ಮ ಒಳ್ಳೆಯತನವನ್ನೂ ಬಿನ್ನಣವನ್ನೂ ಮೆರೆದು ಆನೆಯ ಬಾಗಿಲಲ್ಲಿಯೂ ಪ್ರವೇಶಿಸದೆ ಗಜಾರೋಹಣಗಳಲ್ಲಿಯೂ

೨೮. ಮನಸ್ಸಿಗೆ ಉಲ್ಲಾಸವನ್ನು ಹೊಂದಿ ಸೊಬಗಿನಿಂದ ಕೂಡಿ ಮೂರು ಲೋಕದ ಜನಗಳ ಸೌಜನ್ಯವನ್ನು ಹೊಂದಿದ ಮುಂದಿರುವ ಲಕ್ಷ್ಮಿಯ ವಿಲಾಸವನ್ನು ಮತ್ತು ಜೊತೆಯಲ್ಲಿ ಬಂದ ದೂತನು ವೇಷಧಾರಿಗಳಾದ ಗಾಯಕಿಯರೂ ಎಲ್ಲೆಡೆಯಲ್ಲಿಯೂ ನೋಡಲು ಯಕ್ಷರಾಜನ, ದೇವೇಂದ್ರನ ಮತ್ತು ಧರಣೇಂದ್ರನ ರಾಜಸಭೆಯಂತೆ ಒಡ್ಡೋಲಗವು ಮನೋಹರವಾಗಿತ್ತು.

ವ॥ ಅಲ್ಲಿ

1. ರೆ (ಅ) 2. ಯೊ (ಮ) 3. ಯಳವಂ (ಮ) 4. × (ಮ)

ಕಂ॥ ಸಕಲ ಖಗ ತಿಳಕನಾಸ್ಥಾ
ಯಿಕೆಯೊಳ್ ಚೆಂಬೊನ್ನ ಸಿಂಹಪೀಠ[1]ದೊಳಿ[1]ರ್ದಂ
ಪ್ರಕಟಿಸಿದನೊ ನೀೞದ ಚೂ
ೞಿಕೆ ವೆರಸಿದ ಮೇರುಗಿರಿಯ ಸಿರಿಯಂ ಸಿರಿಯಿಂ ॥ ೨೯ ॥

ವ॥ ಆಗಳ್—

ಕಂ॥ ಗಾಯಿಕೆಯರನಿರಿಸಿ ನೃಪಾ
ಸ್ಥಾಯಿಕೆಯಿಂ ಪೊಱಗೆ ದೂತನೊಳಪುಗೆ ವರವೇ
ತ್ರಾಯತಕರರ್ ಸಸಂಭ್ರಮ
ಮಾಯೆಡೆಯೊಳ್ ತಂದು ನಿಲಿಸಿ ಯೆಡೆವಿಡಿಸುವುದುಂ ॥ ೩೦ ॥

ಬಳೆ[2]ವಾ ನೃಪ[2]ತೇಜೋ ಮಂ
ಡಳಕ್ಕೆ ಕಣ್ಬುಳ್ಕೆ ವಿನಯ ವಿನಮಿತನವನೀ
ತಳದೊಳೆ ಮೆಯ್ಯಿಕ್ಕಿ ನೊಸಲ್
ನೆಲನಂ ಮುಟ್ಟುವಿನಮೆಱಗಿ ಪೊಡಮಟ್ಟಮಿತಂ ॥ ೩೧ ॥

ವ॥ ಮುಕುಳಿತಕರಕಮಳಂ ದೌವಾರಿಕನಿರ್ದಿಷ್ಟ ಪ್ರದೇ[3]ಶಾ[3]ಸನದೊಳ್ ಕುಳ್ಳಿರ್ದು ಗಗನೇಚರಾಧಿನಾಥನಾತನಮೊಗಮಂ ನೋಡಿ ಬೆಸಗೊಳೆ ನಿಜಾನೀತಗಾಯಿಕಾಯುಗಾಗಮನಮನಱಿಯೆ ಬಿನ್ನಪಂಗೆಯ್ವುದುಂ ತಡೆಯದೆ ತಂದು ತೋಱೆ[3]ನೆ ಬೇಗಂ ಪೋಗಿ ಮುಂದಿಟ್ಟು ತಂದು ತೋಱುವುದುಂ ಅಪರಾಜಿತಾನಂತವೀರ್ಯರಂಬರಚರಚಕ್ರವರ್ತಿಯಂ ನೋಡಿ—

---

೨೯. ಆ ಸಕಲ ಖೇಚರರಿಗೆ ತಿಲಕಪ್ರಾಯನಾದ ಖಚರೇಂದ್ರನು ಆ ರಾಜಸಭೆಯಲ್ಲಿ ಸುವರ್ಣದ ಪೀಠದಲ್ಲಿದ್ದ ಮಹಾಮೇರು ಪರ್ವತದ ನೀಲರತ್ನದ ಕುಂಬಿಯ ಹಾಗೆ ತನ್ನ ಸೊಬಗಿನಿಂದ ಮನೋಹರನಾಗಿದ್ದನು.

ವ॥ ಆಗ

೩೦. ಗಾಯಕಿಯರನ್ನು ಮೀರಿಸಿ ಒಡ್ಡೋಲಗದಿಂದ ಹೊರಭಾಗಕ್ಕೆ ದೂತನು ಒಳಗೆ ಪ್ರವೇಶಿಸಲು ಶ್ರೇಷ್ಠರಾದ ಕೋಲುಕಾರರು ಸಂಭ್ರಮದಿಂದ ಆ ಸ್ಥಳದಲ್ಲಿ ತಂದು ನಿಲ್ಲಿಸಿ ಸ್ಥಳವನ್ನು ಬಿಡಿಸುತ್ತಿರಲು

೩೧. ವೃದ್ಧಿಯಾಗುತ್ತಿರುವ ರಾಜನ ತೇಜಸ್ಸಿಗೆ ಕಣ್ಣು ಕೊಕ್ಕರಿಸುತ್ತಿರಲು ವಿನಯದಿಂದ ಬಗ್ಗುವವನಾಗಿ ನೆಲದ ಮೇಲೆ ಅಡ್ಡಬಿದ್ದು ಹಣೆಯು ನೆಲಕ್ಕೆ ಮುಟ್ಟುವಂತೆ ಅಮಿತನು ನಮಸ್ಕರಿಸಿದನು.

ವ॥ ಕೈಗಳನ್ನು ಜೋಡಿಸಿ ಸೇವಕನು ತೋರಿಸಿದ ಆಸನದಲ್ಲಿ ಕೂತಿದ್ದು ಖೇಚರರಾಜನು ಆತನ ಮುಖವನ್ನು ನೋಡಿ ಕೇಳಲು ತಾನು ಕರೆತಂದ ಇಬ್ಬರು ಗಾಯಕಿಯರ ಬರುವಿಕೆಯನ್ನು ಬಿನ್ನವಿಸಲು ನಿಧಾನಮಾಡದೆ ತಂದು ತೋರಿಸು ಎನ್ನಲು, ಬೇಗ ಹೋಗಿ ಮುಂದೆತಂದು ತೋರಿಸಲು ಅಪರಾಜಿತ ಅನಂತವೀರ್ಯರು ಅಂಬರಚರಚಕ್ರವರ್ತಿಯನ್ನು ನೋಡಿ

---

1. ದಿನಿ (ಅ) 2. ವನೃಪನ (ಅ) 3. ಶದಾ (ಮ)

ಕಂ॥ ಪಡೆದೆಱಗದ ತಲೆಗಂ ಮುಗಿ
ಯದ ಕೆಯ್ಗಂ ಜೀಯ ದೇವ ಬೆಸನೇನೆನಗೆ
ನ್ನದ ನಾಲಗೆಗಂ ಸೈರಿಸ
ದುದಗ್ರರಿದನಾತನೊಳ್ ಪ್ರಯೋಗಿಸಿದಪರೇ ॥ ೩೨ ॥

ತೇಜೋನಿಧಿ ಕರಹತ ಪರ
ರಾಜಕನವದೋಷ ದಿಗ್ಜಯಂ ಪದ್ಮರಜೋ
ರಾಜಪ್ರತಾಪನುಪಮಿತ
ತೇಜಸ್ಪತಿ ಖಚರರಾಜನವನೀತಲದೊಳ್ ॥ ೩೩ ॥

ತೊಳತೊಳ ತೊಳಗುವ ತೊಡವಿನ
ಬೆಳಗುವ ಬೆಳಗುಗಳ ಬಳೆದ ಬಳಗಂ ವಿದ್ಯು
ದ್ವಿಳಸನಮನಿಳಿಸೆ ನವಘನ
ವಿಳಾಸಮಂ ಖೇಚರೇಂದ್ರನೊಳಕೊಂಡಿರ್ದಂ ॥ ೩೪ ॥

ವೈರಿಜಯಶ್ರೀ ಸೆಱೆಯಿರೆ
ಭೂರಿ ಭುಜಾಂತರದೊಳಾಕೆ ಕಟ್ಟಿದ ಮುಕ್ತಾ
ಹಾರಮನೆ ಪೋಲ್ತು ನವ ಕೇ
ಯೂರಂ ಸೊಗ[1]ಯಿಸಿ[1]ನಭಶ್ಚರೇಂದ್ರನ ತೋಳೊಳ್ ॥ ೩೫ ॥

ಉ॥ ಮೌಳಿಯೊಳುದ್ಭ್ರಮದ್ಭ್ರಮರ ಭಾರ ವಿಭಗ್ನ ಮಧೂಳಿ ಮಾಲತೀ
ಮಾಳೆ ಮನಕ್ಕೆ ವಂದೆಸೆದುದಾ ದಮಿತಾರಿಯ ಕೀರ್ತಿ ಲೋಕಮಂ
ವ್ಯಾಳೆ ತೊಟಲ್ದು ತನ್ನ ಗಮನಶ್ರಮಮಂ ಕಳೆಯಲ್ಕೆ ತನ್ಮಹೀ
ಪಾಳ ಶಿರೋಜ ರಾಜಿ ಪರಭಾಗಮನಾಶ್ರಯಿಸಿರ್ದಳೆಂಬಿನಂ ॥ ೩೬ ॥

ಕಂ॥ ಕರಿಯ ತನುಚ್ಛವಿ ಮುತ್ತಿನ
ಬರ[ಗೆ]ಲೆಯಸಿತಾಂಶು ಪುದಿಯೆ ಸೊಗಯಿಸಿದುದು ಭಾ
ಸುರ ರಾಹು ಶಶಿಯೊಳೊಡನಿರೆ
ಬೆರಸಿದ ದೇಹ ರುಚಿಯಂತಿರಂಬರಚರನಾ ॥ ೩೭ ॥

೩೨. ನಮಸ್ಕರಿಸದ ತಲೆಗೂ ಜೋಡಿಸದ ಕೈಗೂ ಜೀಯಾ ದೇವಾ ನನಗೆ ಅಪ್ಪಣೆಯೇನೆನ್ನದ ನಾಲಗೆಯನ್ನು ಎಂದೂ ಸೈರಿಸದೆ ಉತ್ಕೃಷ್ಟರಾದ ಅವರು ಇವುಗಳನ್ನು ಆತನಲ್ಲಿ ಪ್ರಯೋಗಿಸುತ್ತಾರೆಯೇ.

೩೩. ತೇಜಃಪುಂಜನಾದ ಕಿರಣದಿಂದ ಹೊಡೆಯಲ್ಪಟ್ಟ ಚಂದ್ರನಂತೆ ಇರುವ ಜಯಶಾಲಿಯಾದ ಕಮಲದ ಕಾಂತಿಯನ್ನು ಕುಂದಿಸುವ ಅನುಪಮ ತೇಜಸ್ವಿಯಾದ ಖಚರೇಂದ್ರನು ಭೂಮಿಯಲ್ಲಿ

೩೪. ಥಳ ಥಳ ಹೊಳೆಯುತ್ತಿರುವ ಆಭರಣಗಳ ಮತ್ತು ಒರಗಿದ ವಸ್ತ್ರಗಳ ಗುಂಪಿನಿಂದ ಮಿಂಚಿನ ಅಂದವನ್ನೂ ಕೂಡ ತಿರಸ್ಕರಿಸುವಂತೆ ಖೇಚರನು ಪ್ರಕಾಶಿಸಿದನು.

೩೫. ಜಯಲಕ್ಷ್ಮಿಯನ್ನು ಸೆರೆಹಿಡಿಯಲು ಈತನ ತೋಳಿನಲ್ಲಿ ಆಕೆಯು ಕಟ್ಟಿದ ಮುತ್ತಿನ ಹಾರವನ್ನು ಹೋಲುವ ಹೊಸದಾದ ಭಾಪುರಿ (ತೋಳವಂಕಿ)ಯು ಖೇಚರನ ತೋಳಿನಲ್ಲಿ ಸೊಗಸಿತು.

೩೬. ತಲೆಯಲ್ಲಿ ಮನೋಹರವಾಗಿ ಹೊಳೆಯುವ ಮಾಧುರಿ ಮತ್ತು ಮಲ್ಲಿಗೆಯ ಹಾರಗಳು ಆ ದಮಿತಾರಿಗೆ ಯಶಸ್ಸು ಲೋಕದಲ್ಲಿ ಹರಡಿತೋಯೆನ್ನುವಂತೆ ಇರಲು ಕೊಬ್ಬಿದ ಆನೆಯು ಸುತ್ತಾಡಿ ತನ್ನ ನಡೆದ ಶ್ರಮವನ್ನು ಹೋಗಲಾಡಿಸಲು ಈ ಮಹಾರಾಜನ ಕೂದಲಿನ ಗುಂಪನ್ನು ಆಶ್ರಯಿಸಿತ್ತೋ ಎನ್ನುವಂತಿತ್ತು.

೩೭. ಆ ಖೇಚರನ ಶರೀರದ ಕಾಂತಿಯು ಆನೆಯ ಶರೀರದ ಕಾಂತಿಯನ್ನು ಮುತ್ತಿನ ಆಭರಣಗಳಿಂದ ಕೂಡಿದ ಕಾಂತಿ ವ್ಯಾಪಿಸಲು ರಾಹುವು ಚಂದ್ರನೊಡನೆ ಬೆರಸಿರುವಂತೆ ಕಾಣಿಸಿತು.

1. ಸಿತು (ಮ)

ಕಂ॥ ಪೊಸಮುತ್ತಂ ಪಾಲೊಳ್ ತೊಳೆ
ದೆಸೆದಿರೆ ದೆಸೆದೆಸೆಗೆ ಕೆದಱಿದಂತಾಗೆ ನಿರೀ
ಕ್ಷಿಸುವ ನಿರೀಕ್ಷಣನೆ ಮನಃ
ಪ್ರಸಾದಮಂ ಪೇೞದಱಿಪುಗುಂ ಖೇಚರನಾ ॥ ೩೮ ॥

ಸ್ಫುರಯಿಸುವ ಪದ್ಮರಾಗಾ
ಭರಣಂಗಳ ಬೆಳಗುಗಳ್ ಪ್ರತಾಪಾಗ್ನಿಯ ಕೇ
ಸುರಿಗಳೆನಿ[1]ಸಿದು[1]ವು ವಿಜಯಾ
ರ್ಧರುಚಿರ ಮಣಿಮಕುಟ ಶಿಖರ ಚೂಡಾಮಣಿಯಾ ॥ ೩೯ ॥

ಚಂ॥ ಇದು ಕೊರಲಿಂತಿದಾರಮಿದುಭೂಷ್ಯಮಿದರ್ಕಿದು ಭೂಷಣಂದಲೆಂ
ಬುದನೆನವೇಡಳಂಕರಣ [2]ಮಿಾಕೊರಲಾ[2]ರಮಣಂ ಕೃತಾರ್ಥಮೆಂ
ಬುದು ದೊರೆವೆತ್ತುಮಾವಿತತ ಹಾರಮಧಃಕೃತ ತಾರಕಾಂತಿ ಪೋ
ಲ್ತುದು ಖಚರಾನನಕ್ಕೆ ಹಿಮದೀಧಿತಿಯೆಂಬುದನುಂಟುಮಾಡುಗುಂ ॥ ೪೦ ॥

ಬಗೆ ಮೃಗರಾಜ ಶಬ್ದದನಿತರ್ಕೆ ವಿರೂಕ್ಷಿಸಿದಂದಮೋ ಮಹಾ
ಜಗೆ ಸೆ[ರ][3]ಮಾದ ಸಾಮಜಕೃತಂ ಮನದೊಳ್ ನಿಲೆ ತಂದು ತದ್ವಿರೋ
ಧಿಗಳನವುಂಕಿ ಮೆಟ್ಟಿ ಸೆಱೆಯಿಟ್ಟವಲೇಪಮೊ ಪೇೞಿಮೆಂಬ ಶಂ
ಕೆಗೆ ನೆಲೆಯಾದುದಂಬರಚರೇಶ್ವರನಿರ್ದ ಮೃಗೇಂದ್ರವಿಷ್ಟರಂ ॥ ೪೧ ॥

ಕಂ॥ ಕ್ಷಿತಿಪ ಶ್ರೀ ವಿಭವ ವಿಲಾ
ಸತೆಯಂ ಪೇ[4][ರು][4]ರಮೆ ಪೇೞ್ಗುಮಭ್ಯಸ್ತ ಮಹಾ
ಸ್ತ್ರತೆಯಂ ಶ್ರಮವಶತನುಮ
ಧ್ಯತೆ ಪೇೞ್ಗುಂ ಬೇಱೆ ವೇೞ್ಪುದದು ಪುನರುಕ್ತಂ ॥ ೪೨ ॥

---

೩೮. ಹೊಸ ಮುತ್ತನ್ನು ಹಾಲಿನಲ್ಲಿ ತೊಳೆದು ಪ್ರಕಾಶಿಸುವಂತೆ ಎಲ್ಲಾ ದಿಕ್ಕಿಗೂ ಹರಡಿದಂತೆ ಇರಲು ನೋಡಿ ದೊಡನೆಯೇ ಮನಸ್ಸಿಗೆ ಅನುಗ್ರಹವನ್ನುಂಟುಮಾಡುವಂತೆ ತಿಳಿಸುತ್ತದೆ.

೩೯. ಹೊಳೆಯುವ ಪದ್ಮರಾಗಮಣಿಯ ಆಭರಣಗಳ ಕಾಂತಿಗಳು ವಿಜಯಾರ್ಧಪರ್ವತದಂತೆ ಕಾಂತಿಯುತವಾದ ರತ್ನಸಿಂಹಾಸನದ ಮೇಲೆ ಮಂಡಿಸಿರುವ ಖೇಚರನ ಕಾಂತಿಯು ಆತನ ಪ್ರತಾಪದ ಕೆಂಪು ಜ್ವಾಲೆಯಂತೆ ಕಾಣುತ್ತಿತ್ತು.

೪೦. ಇದು ಕೊರಳು, ಇದು ಹಾರ, ಇದು ಒಡವೆಯೆಂದು ನಿಜವಾಗಲೂ ಹೇಳಲಾಗುವುದಿಲ್ಲ. ಈತನು ಧರಿಸಿದ ಹಾರಗಳ ಕಾಂತಿಯು ಚಂದ್ರನ ಪ್ರಕಾಶದ ವೇಳೆಯಲ್ಲಿ ನಕ್ಷತ್ರಗಳ ಕಾಂತಿ ಕಡಿಮೆಯಾಗುವಂತೆ ಈತನ ಶರೀರದ ತೇಜಸ್ಸು.

೪೧. ಖೇಚರನಿದ್ದ ಸಿಂಹಾಸನವು ಸಿಂಹದ ಆರ್ಭಟಕ್ಕೆ ಮಹಾಯುದ್ಧಕ್ಕೆ ಸಿದ್ಧವಾದ ಆನೆಗಳನ್ನು ನೋಡಿ ಕೋಪಿಸಿಕೊಂಡಂತೆ ಮನಸ್ಸಿನಲ್ಲಿಲ್ಲವಾಗಲು ಶತ್ರುಗಳನ್ನು ಮೆಟ್ಟಿ ಸೆರೆಯಿಟ್ಟ ಕ್ರಮವೋ ಹೇಳಿಯೆಂಬ ಅನುಮಾನದಂತೆ ಕಾಣುತ್ತಿತ್ತು.

೪೨. ರಾಜನ ಸಂಪದ್ವೈಭವವನ್ನು ಆತನ ಎದೆಯೇ ಹೇಳುತ್ತದೆ. ಆತನ ಸೊಂಟವು ಆತನು ಅಭ್ಯಾಸ ಮಾಡಿರುವ ಅಸ್ತ್ರಗಳ ವಿಷಯವನ್ನು ಸೂಚಿಸುತ್ತದೆ. ಬೇರೆ ಮಾತಾಡುವುದು ವ್ಯರ್ಥ.

---

1. ಸುವು (ಮ) 2. ಕಾರಣಮಾ (ಮ) 3. ಜ (ಮ) 4. ಱು (ಮ)

ಕಂ॥ ಕಟಿತಟದ ಸುರಿಗೆ ಪಟ್ಟಿ[1][ಗೆ][1]
ಕಟಿಸೂತ್ರದೊಳೆಸೆದುದೆಸೆವ ಸಾನಂದಕದಿಂ
ದಿಟಮಮರ್ದಾ ಪಾರಿಜಾತದ
ವಿಟಪಿಗೆ ಕೌಸ್ತುಭದ ಸುತ್ತು ಸೊಗಯಿಪ ತೆಱದಿಂ ॥ ೪೩ ॥

ಅತಿದೀರ್ಘ ಮಾಂಸಳಂ ವೃ
ತ್ತತರಂ ಧೃತ ವಿಜಯಲಕ್ಷ್ಮಿ ಮಾಡಿದುದೈರಾ
ವತ ಪುಂಡರೀಕ ಕರಯುಗ
ವಿತರ್ಕಮಂ ಭುಜಯುಗಂ ನಭಶ್ಚರ ಪತಿಯಾ ॥ ೪೪ ॥

ನಿಜದಿಂ ಗೂಢಂಗಳ್ ಗು
ಲ್ಫಜಾನುಗಳ್ ಮಂತ್ರದಂತೆ ರಕ್ತತರಂಗಳ್
ನಿಜ ಕರ ಪಾದ ತಲಂಗಳ್[2]
ಪ್ರಜೆಯಂತೆ ನಭಶ್ಚರಾನ್ವಯಾಂಬರ ರವಿಯಾ ॥ ೪೫ ॥

ಸಮವೃತ್ತ[3] ಸಂಧಿ ಲಕ್ಷಣ
ಸಮನ್ವಿತಂ ಜಾತ್ಯಲಂಕೃತಿ ಭ್ರಾಜಿತಮು
ತ್ತಮ ಕಾವ್ಯ ಬಂಧದಂ[4]ತಾ[4]
ದಮಿತಾರಿಗೆ ಸಾಜವೊಪ್ಪುಗುಂ [5]ಕಿಱುದೊಡೆಗಳ್[5] ॥ ೪೬ ॥

ಕನಕ ಮಣಿ ಖಚಿತ ಸಿಂಹಾ
ಸನದೊಳ್ ನೀಡಿರ್ದ ವಾಮಪದ ನಖರುಚಿ ಕಾಂ
ಚನ ಹರಿಪೀಠಮುಮಂ ಮು
ತ್ತಿನ ಪೀಠಮಿದೆನಿಸಿತವನಿಪತಿಯಡಿವೊದಲೊಳ್ ॥ ೪೭ ॥

೪೩. ಸೊಂಟದಲ್ಲಿರುವ ಕತ್ತಿಯು ಮತ್ತು ಒರೆಯು ಉಡಿದಾರದ ಬಳಿಯಿದ್ದು ಆನಂದವನ್ನುಂಟುಮಾಡುತ್ತಿತ್ತು. ಪಾರಿಜಾತದ ಮರಕ್ಕೆ ಕೌಸ್ತುಭಮಣಿಯು ಸುತ್ತಿ ಸೊಗಸುವಂತೆ ಕಾಣುತ್ತಿತ್ತು.

೪೪. ಖೇಚರನ ಎರಡು ಭುಜಗಳು ನೀಳವಾಗಿಯೂ, ಪುಷ್ಟವಾಗಿಯೂ, ಗುಂಡಾಗಿಯೂ ಹೊಂದಿದ ವಿಜಯ ಲಕ್ಷ್ಮಿ ಐರಾವತ ಮತ್ತು ಪುಂಡರೀಕ ಗಜಗಳ ಸೊಂಡಲುಗಳಿಗೆ ಹೋಲುತ್ತಿತು.

೪೫. ನಿಜವಾಗಿಯೂ ಗಾಢವಾಗಿರುವ ಮೊಣಕಾಲುಗಳು ಯಂತ್ರದಂತೆ ಕೆಂಪಾದ ತನ್ನ ಅಂಗಾಲು ಸೂರ್ಯೋದಯದ ಕೆಂಪಿನಂತೆ ಕಾಣುತ್ತಿತ್ತು.

೪೬. ಆ ದಮಿತಾರಿಯ ಕಿರಿದಾದ ತೊಡೆಗಳು ದುಂಡಗೆ ಕೂಡಿರುವ ಉತ್ತಮವಾದ ಅಲಂಕಾರದಿಂದ ಕೂಡಿರುವ ಉತ್ತಮವಾದ ಕಾವ್ಯರಚನೆಯಂತೆ ಕಾಣುತ್ತಿತ್ತು.

೪೭. ಚಿನ್ನದ ಸಿಂಹಾಸನದಲ್ಲಿ ನೀಡಿಕೊಂಡಿರುವ ಎಡಗಾಲಿನ ಕಾಂತಿಯು ಉಗುರಿನ ಕಾಂತಿಯ ಚಿನ್ನದ ಪೀಠವು ಮುತ್ತಿನ ಪೀಠವೋ ಎನ್ನುವಂತಿತ್ತು.

1. ಕೆ (ಮ) 2. ಪ್ರ (ಮ) 3. ತ್ತಿ (ಕಾ) 4. ದಾ (ಕಾ) 5. ಕಿಱಿದೆಡೆಯೊಳ್ (ಕಾ)

ಕಂ॥ ಮೀನಾಬ್ಜ ಶಂಖ ಚಕ್ರ ವಿ
ತಾನಾಂಕಿತ ದಕ್ಷಿಣಾಂಘ್ರಿ ತಲ ಪಲ್ಲವಮು
ತ್ತಾನಂ ರತ್ನಾಕರದವೊ
ಲೇನಮದುರ್ದದೊ ಸಾರ್ವಭೌಮ ಗಗನೇಚರನಾ ॥ ೪೮ ॥

ಏಣರಿಪು ಪೀಠ ಪಾರ್ಶ್ವ
ಕ್ಷೋಣಿಯೊಳಿಂದೀವರಕ್ಕೆ ಮುಸುಜುವ ಹಂಸ
ಶ್ರೇಣಿಗಳೆನಿಸಿದುವುಭಯ
ಶ್ರೇಣೀ ಪತಿಗಿಕ್ಕೆ ಪೊಳೆವ ಚಮರರುಹಂಗಳ್ ॥ ೪೯ ॥

ವ॥ ಅಂತು ಪುಣ್ಯೋಪಾರ್ಜಿತ ಲಕ್ಷ್ಮೀಲಕ್ಷಿತ ವಕ್ಷಃಸ್ಥಳ ಲೀಲೆಗಂ ವಿಶ್ವವಿಶ್ವಂಭರಾ ಧುರಂಧರತೆಗಂ ವೀರಶ್ರೀನಿವಾಸ ವಿಲಾಸಕ್ಕಂ ಸನ್ನಿಹಿತ ಮನ್ಮಥರೂಪ ನಿರೂಪಣಕ್ಕಂ ಸಮರ್ಪಿತ ನಳಕೂಬರ ಲಾವಣ್ಯಕ್ಕಂ ಆತ್ಮೀಕೃತ ದಿವಿಜೇಂದ್ರವಿಭವಕ್ಕಂ ಆಕೃಷ್ಟಲೋಕ ಪಾಲಪ್ರಭುತೆಗಂ ಆಯತ್ತ ಪರಿತ್ಯಕ್ತಿ ಮಹಿಮೆಗಂ ಏಕೀಕೃತ ಧರಾಧಿಪಾಭಿರಾಮತೆಗಂ ಸಂಪೂರ್ಣ ಶರನ್ನಿಶಾಕರ ಕಾಂತಿಗಂ ಸಮುದಿತ ನಿದಾಘ ಪತಂಗ ಪ್ರತಾಪಕ್ಕಂ ಪಿಂಡೀಭೂತ ದಂಡಧರಾಜ್ಞಾಪರಿಸ್ಫುರಣೆಗಂ ಸಹಜಾತ ಬಂಹಿಮವದ್ಬಲಾವಲೇಪಕ್ಕಂ ಸಮುಚಿತ ಶಾಸ್ತ್ರ ವೃತ್ತ ವರ್ತನಕ್ಕಂ ವಶೀಕೃತ ವಿಶದ ಯಶಸ್ಸುಧಾ ಪ್ರಸರಕ್ಕಂ ಪುಂಜಿತ ರಾಜ ಗುಣ ಮಣಿಗಣಕ್ಕಂ ತಾನೊರ್ವನೆ ನಿರುಪಮ ಜನ್ಮ ಭೂಮಿಯಾಗಿ—

ಕಂ॥ ಭಾವಿಸಿ ವಂದಿಜನಂ ಪ್ರ
ಸ್ತಾವದೊಳುಪಹಾಸಲವಮನೊಡರಿಸೆ ಕಿವಿಯಿ
ತ್ತಾವಚನಕ್ಕೆ ಮುಗುಳ್ನಗೆ
ದೀವಿದ ನಗೆಮೊಗದಿನವರನವಲೋಕಿಸುತುಂ ॥ ೫೦ ॥

---

೪೮. ಚಕ್ರವರ್ತಿಯಾದ ಖೇಚರನ ಮೀನು, ಕಮಲ, ಶಂಖ, ಚಕ್ರ ಇವುಗಳ ಸಮೂಹದಿಂದ ಗುರುತು ಮಾಡಲ್ಪಟ್ಟ ಆತನ ಚಿಗುರಿನಂತಿರುವ ಬಲದ ಅಂಗಾಲು ಮೇಲಕ್ಕೆ ಎತ್ತಿದ ಸಮುದ್ರದಂತೆ ಶೋಭಿಸುತ್ತಿತ್ತು.

೪೯. ಸಿಂಹಾಸನದ ಸಮೀಪದ ಸಾಲಿನಲ್ಲಿ ಕನ್ನೈದಿಲೆಗಳಿಗೆ ಮುಸುಕುವ ಹಂಸಪಕ್ಷಿಗಳಂತೆ ಎರಡು ಕಡೆಗಳಲ್ಲಿಯೂ ಬೀಸುತ್ತಲಿದ್ದ ಚಾಮರಗಳು ಕಾಣುತ್ತಲಿದ್ದುವು.

ವ॥ ಹೀಗೆ ಪುಣ್ಯದಿಂದ ಗಳಿಸಿದ ಸಂಪದ್ಯುಕ್ತವಾದ ಎದೆಯ ಅಟ್ಟಹಾಸಕ್ಕೂ, ಸಮಸ್ತ ಭೂಮಂಡಲದ ಆಧಿಪತ್ಯಕ್ಕೂ, ವೀರಲಕ್ಷ್ಮಿಯ ವಿಲಾಸಕ್ಕೂ, ಸಮೀಪವರ್ತಿಯಾದ ಮನ್ಮಥ ರೂಪಿಗೂ, ಸಮುಸ್ಥಿತವಾದ ನಳಕೂಬರನ ಸೌಂದರ್ಯಕ್ಕೂ, ತನಗಾದ ದೇವೇಂದ್ರ ವೈಭವಕ್ಕೂ, ಎಳೆದಿರುವ ಲೋಕಪಾಲ ಪ್ರಭುತ್ವಕ್ಕೂ, ವಿಶಾಲವಾದ ಮಹಿಮೆಗೂ, ಒಟ್ಟಿಗೆ ಸೇರಿದ ರಾಜನ ಪ್ರತಿಭೆಗೂ, ಪೂರ್ಣಚಂದ್ರನ ಕಾಂತಿಗೂ, ಒಟ್ಟಿಗೆ ಸೇರಿದ ಬೇಸಿಗೆಯ ಪತಂಗಗಳ ಪ್ರತಾಪಕ್ಕೂ, ಒಟ್ಟಿಗೆ ಸೇರಿದ ದಂಡಧರರ ಅಪ್ಪಣೆಯ ಪ್ರಕಾಶಕ್ಕೂ, ಪ್ರಭಾವವಾದ....ಸಮುಚಿತವಾದ ಶಾಸ್ತ್ರವಿತ್ತಾದ ನಡಾವಳಿಕೆಗೂ, ವಶವಾಗಿರುವ ಇತರ ಯಶಸ್ಸೆಂಬ ಚಂದ್ರಕಾಂತಿಗೂ, ಒಟ್ಟಿಗೆ ಸೇರಿರುವ ರಾಜಗುಣ ಸಮೂಹಕ್ಕೂ ತಾನೊಬ್ಬನೇ ಉಪಮಾತೀತನಾದ ಜನ್ಮಭೂಮಿಯಾಗಿ

೫೦. ಗೌರವವಾಗಿ ಧ್ಯಾನವಮಾಡಿ ವಂದಿಮಾಗಧರು ಸಮಯವರಿತು ಹಾಸ್ಯರಸವನ್ನುಂಟುಮಾಡಲು ಆಕಡೆಗೆ ಕಿವಿಗೊಟ್ಟು ಆ ಮಾತಿಗೆ ಮುಗುಳ್ನಗೆ ಬೀರುತ್ತಾ ನಗುಮುಖದಿಂದ ಅವರನ್ನು ನೋಡುತ್ತಲೂ

ಕಂ॥ ಪಲತೆಱದಿನೀಯುತುಂ ಕ್ರು
ದ್ಧ ಲುಬ್ಧ ಭೀತಾಪಮಿತ ಜನಕ್ಕಮಭೇದ್ಯಾ
ವಲಿಗಂ ಪರಮಾರ್ಥವಚೋ
ವಿಲಸನದಿಂ ಪರಮ ಸುಖಮನೊಸೆದೀಯುತ್ತುಂ ॥ ೫೧ ॥

ವ॥ ಸಿಂಹಾಸನದೆರಡೋಳಿಯೊಳಂ ಸಾರ್ಚಿದ ಲೋಹಾಸನದೊಳ್ ಕಟ್ಟಿದ ದೇವಾಂಗದ ಬೊಂವರಿಗೆಯೊಳವಿಟ್ಟ ನೇರಾಣಿಯ ಪಡಿಗಂಗಳೊಳಮಿಕ್ಕುವ ಚೆಂಬೊನ್ನ [1]ಕಾವಿನ[1] ಚಮರೀರುಹಂಗಳೊಳಂ ಪೊಂಪು[2][ಟಿ][2]ವೋದ ಮಹಿಮೆಯ ದಗುಂತಿ ಯುದ್ಭಾಸಿಯ ಮಕುಟ ಬದ್ಧರ ನತಿ ಶುದ್ಧ ಕಟಾಕ್ಷ ವಿಕ್ಷೇಪದಿನನುಗ್ರಹಿಸುತ್ತುಂ ಮತ್ತಮನೇಕ ರಾಜಲೀಲಾ ವಿಳಾಸ ನಿಳಯನಾ[3]ಗಿಪ್ಪೊ[3]ಡ್ಡೋಲಗಂ ಗೊಟ್ಟಿರ್ದ ದಮಿತಾರಿಯ ಮುಂದೆ ಕೃತಕ ಗಾಯಿಕೆಯರ್ ನಿಲೆ—

ಮ॥ ಅವನೀಸ್ವಾಮಿಗೆ ಚಕ್ರವರ್ತಿಗೆ ಬಟಿಕ್ಕಾದೂತನೀತೆಂದು ಬಿ
ನ್ನವಿಕುಂ ದೇವ ಭವತ್ಪ್ರಸಾದ ಸುಮನೋಮಾಲಾ ಪರೀತೋತ್ತಮಾಂ
ಗವ[4]ಲಂ[4] ತಾನಪರಾಜಿತಂ ಜಿತಮದಂ ಕೊಟ್ಟಟ್ಟಿದಂ ಗಾಯಿಕಾ
ನವರತ್ನಂಗಳನಿತ್ತ ನೋಟ್ಪುದೆನೆ ಲೀಲಾಲೋಕನಂ ಖೇಚರಂ ॥ ೫೨ ॥

ಕಂ॥ ಅವಲೋಕಿಪುದುಂ ನವ ವನ
ಜವಲ್ಲಿಗೆಱಗುವ ಝಷದ್ವಯಂಗಳವೆನೆ ಪಾ
ರ್ಥಿವನ ನಯನಂಗಳೆಱಗಿದು
ವವಯುವದಿಂ ನಿಂದ ಗಾಯಿಕಾ ಯುವತಿಯರೊಳ್ ॥ ೫೩ ॥

ವ॥ ಅಂತು ನೋಡಿ ವಿಸ್ಮಯಾಕ್ರಾಂತಚಿತ್ತನತ್ಯಂತ ಹೃಷ್ಟೋತ್ಕೃಷ್ಟ ಸಂತುಷ್ಟಾಂತರಂಗನವರ ನವಯೌವನಕ್ಕೆ ಸೆಱವಾದ ರೂಪಾತಿಶಯಕ್ಕಂ ಅವಯವ ಶೋಭೆಗೆ ಬೆಂಬಲವಾದ ಸಮುದಾಯ ಶೋಭೆಗಂ ಲಕ್ಷಣಕ್ಕಮನುರೂಪಮಾದ ವ್ಯಂಜನಕ್ಕಂ ಹಾವಕ್ಕನು[5]ರೂಪ[5]

---

೫೧. ಅನೇಕ ರೀತಿಯಿಂದ ಕೋಪಗೊಂಡಿರುವ ಜಿಪುಣತನದಲ್ಲಿರುವ ಹೆದರಿಕೆಯಿಂದ ಕೂಡಿರುವ ಅನೇಕ ಜನಗಳಿಗೆ ಮತ್ತು ಸಾಮಾನ್ಯ ಜನಗಳ ಗುಂಪಿಗೂ ಉತ್ತಮ ಮಾತಿನ ವಿಲಾಸದಿಂದ ಸುಖವನ್ನುಂಟುಮಾಡುತ್ತಾ

ವ॥ ಸಿಂಹಾಸನದ ಎರಡು ಪಕ್ಕದಲ್ಲಿ ಹಾಕಿರುವ ಲೋಹದ ಕುರ್ಚಿಗಳಲ್ಲಿ ರೇಷ್ಮೆಯ ಮೇಲ್ಕಟ್ಟನ್ನು ಕಟ್ಟಿರುವ ನೇತಾಡುವ ಮುತ್ತಿನ ಗೊಂಚಲುಗಳುಳ್ಳವೂ, ಚಿನ್ನದ ಹಿಡಿಗಳಿಂದ ಕೂಡಿದ ಚಾಮರಗಳಿಂದಲೂ ರೋಮಾಂಚಿತವಾದ ಮಹಿಮೆಯಿಂದ ಅತಿಶಯವಾದ ಮಕುಟಬದ್ಧರನ್ನೂ ಕಣ್ಣುಗಳ ಈಕ್ಷಣೆಯಿಂದ ಅನುಗ್ರಹಿಸುತ್ತಾ ಮತ್ತು ಅನೇಕ ರಾಜರ ವೈಭವದಿಂದ ಸದ್ಯ ನಿರೀಕ್ಷಿಸುತ್ತಿದ್ದ ದಮಿತಾರಿಯ ಮುಂಭಾಗದಲ್ಲಿ ಕೃತಕ ಗಾಯಕಿಯರು ನಿಲ್ಲಲು

೫೨. ವಿದ್ಯಾಧರ ಚಕ್ರವರ್ತಿಯಾದ ಆ ದಮಿತಾರಿಗೆ ದೂತನು ಹೀಗೆ ಬಿನ್ನವಿಸಿದನು : "ಎಲೈ ಸ್ವಾಮಿಯೇ ನಿನ್ನ ಅನುಗ್ರಹವೆಂಬ ಹೂವಿನ ಮಾಲೆಗಳಿಂದ ಸುತ್ತಲ್ಪಟ್ಟ ಅಪರಾಜಿತನು ಜಯಿಸಲಸದಳನಾಗಿ ಈ ಗಾಯಿಕೆಯರನ್ನು ಕೊಟ್ಟು ಕಳುಹಿಸಿದನು. ಈಕಡೆ ಅವಧಾನಿಸಬೇಕು" ಎನಲು

೫೩. ನೋಡಲು ಹೊಸದಾದ ಮಲ್ಲಿಗೆಗೆ ಎರಗುವ ಎರಡು ಮೀನುಗಳು ಎಂಬಂತೆ ರಾಜನ ಕಣ್ಣುಗಳು ಈ ಗಾಯಿಕೆಯರಾದ ಯುವತಿಯರಲ್ಲಿ ಕುತೂಹಲದಿಂದ ಎರಗಿದುವು.

ವ॥ ಹೀಗೆ ನೋಡಿ ಆಶ್ಚರ್ಯಚಕಿತನಾಗಿ ಅತ್ಯಂತ ಸಂತೋಷದಿಂದ ಅಂತರಂಗದಲ್ಲಿ ಪ್ರೀತಿಯನ್ನು ಹೊಂದಿ ಅವರ ಯೌವನಕ್ಕೂ, ಅದಕ್ಕನುರೂಪವಾದ ಸೌಂದರ್ಯಕ್ಕೂ, ಅವಯವಗಳ ಸೊಗಸಿಗೂ, ಅದನ್ನನುಸರಿಸುವ ಒಟ್ಟು

---

1. ಕಾವ (ಮ) 2. ಳ (ಮ) 3. ಗೊ (ಮ) 4. ರಂ (ಅ) 5. ಕೂಲ (ಅ)

ಮಾದ ಪೆಣ್ಬಾವಕ್ಕಂ ವಿಭ್ರಮಕ್ಕಾಯತ್ತಮಾದ ವಿಲಾಸಕ್ಕಂ ಲೀಲೆಗಾಲಯಮಾದ ಮುದ್ದುಗೆಯ್ತಕ್ಕಂ ಗಾಡಿಗೆ ಪಾಪಾದ ಪಸದನಕ್ಕಂ ತೇಜಕ್ಕೋಜಾದ ಕಾಂತಿಗಂ ಬೆಡಂಗಿಂಗೆ ಪಾಂಗಾದ ದೇಸಿಗಂ ಮಾಸರಿ[1]ಕೆ[1]ಗೆಕ್ಕಲಾವಣಮಾದ ಸೌಷ್ಠವಕ್ಕಂ ಕಣ್ಬೇಟಕ್ಕಿದಿ[2]ರಾ[2]ದೊಡ್ಡಿಂಗಂ ಸೌಂದರ್ಯಕ್ಕೆ ನೆಲೆಯಾದಂದಕ್ಕಂ ಬೆಕ್ಕಸಂಬಟ್ಟಾಸ್ಥಾಯಿಕಾ ಜನಕ್ಕೆ ಲಕ್ಕೆತೆಱದಿಂ ಪೊಗಟ್ದು ಸಾರೆ ಕರೆದೇಱಲಿಕ್ಕಲ್ವೇೞ್ದು ಕುಳ್ಳಿರಿಸಿ ದೇವತಾಸ್ತ್ರೀಯರಲ್ಲದೆ ಮಾನವಕನ್ಯೆಯರಲ್ಲವೆಂದು ಪರಿಚ್ಛೇದಿಸಿ ತದೀಯಾಮಾನುಷ ವೃತ್ತಿಗೆ ಸಭೆಯುಂ ತಾನುಂ ಚೋದ್ಯಂಬಟ್ಟು ಮತ್ತ ಮುತ್ತರೋತ್ತರ ಪ್ರತಿಪತ್ತಿ ವಿಧಾನಾನಂತರಮದ್ಭುತಮುಂ ಕುತೂಹಲಮುಮಮಳ್ಪಳಿವಂತೊಡನೊಡನೆ ಮನದೊಳ್ ಬಳೆಯೆ ಪರಿತೋಷದ ಪರಮಕೋಟಿಯನೆಯ್ದಿ ತನ್ನ ದೂತಂಗೆ ಪ್ರಮೋದಪುಳಕಿತಾಂಗಸಂಗಚಿತ್ತಂ ಗೊಟ್ಟು—

ಮ॥ ವಿಭು ಸಂಭಾಷಿಸಿ ಗಾಯಿಕಾಯುಗಳದೊಳ್ ದೂತಂಗೆ ಜಂಭಾರಿ ಸ
ನ್ನಿಭನೆಂಗುಂ ಸಖಿಯರ್ಕಳಕ್ಕೆ ಕನಕಶ್ರೀಗಿಂತಿವರ್ ಗೋಮಿನೀ
ನಿಭೆಯರ್ ಮಾಣದೆ ದೂತ ಬೇಗಮೊಡಗೊಂಡುಯ್ ಕನ್ನೆಮಾಡಕ್ಕೆ ಕೇ
ಳ್ದಭಿಯೋಗಂ ನಮಗಾದೊಡಲ್ಲಿ ಕಳಗೀತಾಳಾಪಮಂ ಕೇಳಮೇ ॥ ೫೪ ॥

ವ॥ ಎಂದು ತನ್ನ ಕೊಂಡಾಟದ ಮಗಳಲ್ಲಿಗಟ್ಟುವುದುಂ ಅಮಿತಂ ಪ್ರಸಿತಾಂತಃಪುರೋಚಿತಜನಂ ಗಾಣತಿಯರಂ ಮುಂದಿಟ್ಟು ರಾಣಿವಾಸದ ಮೊದಲ ಚೆಂಬೊನ್ನ ಕನ್ನೆವಾಡಕ್ಕೆ ವಂದು ಕನಕಶ್ರೀಗವನತೋತ್ತಮಾಂಗನಾಗಿ ಕಂಡಕ್ಕ ನಿಮ್ಮಮ್ಮಂ—

ಕಂ॥ ಸ್ತ್ರೀರತ್ನಂ ಸ್ತ್ರೀರತ್ನದೊ
ಳೋರಂತೊಡಗೂಡಿ ಕೂರ್ತು ಸುಖಮಿರ್ಕೆಂದಂ
ಭೋರುಹ ನಯನೇ ನಿನಗನು
ಸಾರಿಯನಟ್ಟಿದನಪೂರ್ವ ಕನ್ಯಾದ್ವಯಮಂ ॥ ೫೫ ॥

ಶೋಭೆಗೂ, ಲಕ್ಷಣಕ್ಕೂ, ಅನುರೂಪವಾದ ರೇಖಾವಿಶೇಷಕ್ಕೂ, ಹಾವಕ್ಕನುಸರಿಸಿದ ಹೆಣ್ಣಿನ ಭಾವದ ಸಿಂಗಾರಕ್ಕೂ, ಹೆಚ್ಚಾದ ವಿಲಾಸಕ್ಕೂ ಮತ್ತು ಲೀಲೆಗೆ ಆಕರವಾದ ಮುದ್ದಿನ ಕೆಲಸಕ್ಕೂ, ಗಾಡಿಗೆ ಸರಿಯಾದ ಅಲಂಕಾರಕ್ಕೂ, ತೇಜಸ್ಸಿಗೆ ಅನುರೂಪವಾದ ಕಾಂತಿಗೂ, ಬೆಡಗಿಗೆ ಆಕರವಾದ ತೊಡಿಗೆಗೂ, ಆಕರಕ್ಕೆ ಕಾರಣವಾದ ಸೌಂದರ್ಯದ ಸೊಬಗಿಗೂ, ಪ್ರೀತಿಗೆ ಕಾರಣವಾದ ಮಹತ್ವಕ್ಕೂ, ಸೌಂದರ್ಯಕ್ಕೆ ಸರಿಯಾದ ಚಲುವಿಗೂ ಆಶ್ಚರ್ಯಪಟ್ಟು ಅವರನ್ನು ಅನೇಕ ರೀತಿಯಲ್ಲಿ ಹೊಗಳಿ ಸಮೀಪಕ್ಕೆ ಕರೆದು ಕೂರುವಂತೆ ಹೇಳಿ ಇವರು ದೇವತಾಸ್ತ್ರೀಯಲ್ಲದೆ ಮನುಷ್ಯ ಕನ್ಯೆಯರಲ್ಲ ಎಂದು ಗೊತ್ತುಮಾಡಿ ಅವರ ಮನಃಪ್ರಕೃತಿಗೆ ಸಭಾಸದರು ಮತ್ತು ತಾನು ಆಶ್ಚರ್ಯಪಟ್ಟು ಮತ್ತು ಉತ್ತರೋತ್ತರ ಜ್ಞಾನದ ತರುವಾಯ ಅದ್ಭುತ ಮತ್ತು ಕುತೂಹಲದಲ್ಲಿ ಅವಯವಗಳೆಲ್ಲ ಬೆಳೆಯುವಂತೆ ಮನಸ್ಸಿನಲ್ಲಿ ವೃದ್ಧಿಯಾಗಲು ಮನಸ್ಸಿನಲ್ಲಿ ಸಂತೋಷವು ಹೆಚ್ಚಾಗಲು ಹೆಚ್ಚು ಸಂತೋಷವನ್ನು ಪಡೆದು ಆ ಸೇವಕನಿಗೆ ಸಂತೋಷದಿಂದ ಪುಲಕಿತನಾಗಿ ಬಹುಮಾನವನ್ನು ಕೊಟ್ಟು

೫೪. ಗಾಯಿಕೆಯರೊಡನೆ ಮಾತನಾಡಿ ಮನ್ಮಥಸದೃಶನಾದ ದಮಿತಾರಿಯು ಅಮಿತನನ್ನು ಕುರಿತು ಕನಕಶ್ರೀಗೆ (ಮಗಳಾದ) ಇವರು ಸಖಿಯರಾಗಿರಲಿ. ಇವರು ಭೂಮಿಗೆ ಸಮಾನರಾದವರು. ತಪ್ಪದೆ ಇವರನ್ನು ಕರೆದುಕೊಂಡು ಕನ್ಯಾಮಾಡಕ್ಕೆ ಹೋಗು. ಇವರು ಅಲ್ಲಿರುವುದರಿಂದ ಇವರ ಸಂಗೀತ ಕಲಾಪಗಳು ನಮಗೆ ಕೇಳದೇ ಇರುತ್ತವೆಯೇ.

ವ॥ ಎಂದು ತನಗೆ ಪ್ರೀತಿಪಾತ್ರಳಾದ ಮಗಳ ಸಮೀಪಕ್ಕೆ ಗಾಯಕಿಯರನ್ನು ಕಳುಹಿಸಲು ಅಮಿತನು ಮಿತ್ರರೂ ತಕ್ಕವರೂ ಆದ ಗಣಿಕೆಯರನ್ನು ಮುಂದುಮಾಡಿ ರಾಣಿವಾಸದ ಮೊದಲ ಸುವರ್ಣದ ಮಾಡಕ್ಕೆ ಬಂದು ಕನಕಶ್ರೀಗೆ ನಮಸ್ಕರಿಸಿ ನೋಡಿ ಅಕ್ಕ ನಿಮ್ಮ ತಂದೆಯು

೫೫. ಸ್ತ್ರೀರತ್ನವು ಸ್ತ್ರೀರತ್ನದೊಡನೆ ಸೇರಿ ಸುಖವಾಗಿ ಇರಲಿ ಎಂಬ ಹಾಗೆ ಕಮಲಮುಖಿಯಾದ ನಿನಗೆ ನನ್ನ ಹಾಗಿರುವ ಅಪೂರ್ವರಾದ ಇಬ್ಬರು ಕನ್ಯೆಯರನ್ನು ಕಳಹಿಸಿದ್ದಾನೆ.

---

1. × (ಮ) 2. ರಾದ (ಮ)

ಕಂ॥ ಸರ್ಬ ಕಳಾ ಕುಶಳೆಯು ರೀ
ಬರ್ಬರೆಯ ಕಿರಾತೆಯನ್ನರಾರಿವರೆ ಸಮ
ಸ್ತೋರ್ಬಿಯ ಗೀತ ರಸಾಮೃತ
ಸರ್ಬಸ್ವ ನಿಸರ್ಗ ಸದನರಂಬುಜ ವದನೇ ॥ ೫೬ ॥

ಎನೆ ಎನೆ ಮನೋನುರಾಗಮೆ
ತನುವಿಂ ಪೊಱಪೊಣ್ಮುವಂತೆ ಪುಳಕಕುಳಂ ಭೋಂ
ಕೆನೆ ನೆಗೆಯೆ ಖಚರ ನೃಪ ನಂ
ದನೆ ವಿನಯದಿನಾಸನಾದಿ ಪೂಜಾಸಹಿತಂ ॥ ೫೭ ॥

ವ॥ ಸ್ವಾಗತ ಸಂಭಾಷಣ ಪೂರ್ವಕಮಪೂರ್ವ ಪ್ರವಾಳ ಕರ್ಣಪೂರ ಪರಿಭ್ರಂಶಂ ಸುಂದರಮಾಗೆ ತಲೆಯಂ ತೂಗಿ ಯತ್ರಾಕೃತಿ ಸ್ತತ್ರ ಗುಣಾ ವಸಂತಿ ಎಂಬೊಂದು ಸುಭಾಷಿತಾರ್ಥಮವ್ಯಭಿಚಾರಮೆಂದಮಿತಂಗಿಂತೆಂದಳ್—

ಕಂ॥ [1]ಈಶಾ[1]ನರೆಸುರೆರಾಜಾ
ದೇಶಂ ನವಿಕಲ್ಪಯೆಂದೆನುತ್ತಿರ್ಪುಚಿತ
ಕ್ಲೇಶಮಿದದಱಿಂದೀ ಸಂ
ಕ್ಲೇಶಂ ಕರಮೊಳ್ಳಿತಿವರನಾಂ ಕೆಯ್ಕೊಂಡೆಂ ॥ ೫೮ ॥

ಅಱಿಯದ ಕಳಾಕಳಾಪಮ
ನಱಿಪು[2]ವ[2]ರಿವರೆನ್ನನೆನ್ನ ಪುಣ್ಯೋದಯದಿಂ
ದೆಱವೆಸನಾಗಿಯುಮಿಂತಿದು
[3]ಕಿಱು[3]ಮೆಸನೆನಗೆಂದು ನಿಶ್ಚಯಂ ಬಿನ್ನವಿಸಿಂ ॥ ೫೯ ॥

ವ॥ ಎಂದು ಕನ್ನೆ ವಿನಯಃಪುರಸ್ಸರಮಮಿತನಂ ವಿಸರ್ಜಿಸಿ ತದ್ಗಾಯಿಕಾ ನಾಯಿಕೆಯರ ಹೇಳಾಸ್ಥಾಯಿಕಾ ಸಮುಚಿತ ಕಥಾ ಕಥನ ವಿನೋದದಿನಿರ್ದವರ ಮನಮನೆಱಿದು ನುಡಿವ ನುಡಿಗಂ ಕಣ್ಣಱಿದು ಗೊಟ್ಟಿಗೆಯ್ವ ಗೊಟ್ಟಿಗಂ ಬಗೆಯಱಿದು ನಗುವ ನಗೆಗಂ ಮೆಚ್ಚಱಿ

---

೫೬. ಎಲ್ಲಾ ಕಲೆಗಳಲ್ಲಿ ಕುಶಲರಾದ ಈ ಬರ್ಬರೀ ಕಿರಾತೆಯರು ಎಲ್ಲಾ ಭೂಮಂಡಲದಲ್ಲೂ ಸಂಗೀತರಸದ ಅಮೃತಕ್ಕೆ ಸ್ವಭಾವವಾದ ಗೃಹದಂತಿದ್ದಾರೆ.

೫೭. ಹೀಗೆ ಹೇಳಲು ಮನಸ್ಸಿನ ಆನಂದವು ಶರೀರದಿಂದ ಹೊರಗೆ ಹೊರಡುವಂತೆ ರೋಮಾಂಚವುಂಟಾಗಲು ಖಚರನ ಮಗಳು ನಮ್ರತೆಯಿಂದ ಅವರಿಗೆ ಆಸನಗಳನ್ನು ಕೊಟ್ಟು

ವ॥ ಸ್ವಾಗತ ಭಾಷಣಾನಂತರ ಅಪೂರ್ವವಾದ ಹವಳದ ಕರ್ಣಾಭರಣಗಳಿಂದ ಸುಂದರಳಾಗಿ ತಲೆಯನ್ನು ತೂಗಿ ಆಕೃತಿಯಿರುವ ಕಡೆ ಗುಣವಿರುತ್ತದೆಯೆಂಬ ಸುಭಾಷಿತದ ಅರ್ಥವನ್ನು ಅಮಿತಾರಿಗೆ ಹೀಗೆ ಹೇಳಿದಳು :

೫೮. ವಿದ್ಯಾಧರರಾಜರ ಅಪ್ಪಣೆಯನ್ನು ಈ ಯೋಗ್ಯವಾದ ಕ್ಲೇಶ ಎಂಬುದಾಗಿ ಹೇಳುವುದರಿಂದ ಈ ತೊಂದರೆಯೂ ಒಳ್ಳೆಯದೇ. ಇವರನ್ನು ನಾನು ಇಲ್ಲಿಗೆ ಕಳುಹಿಸಿದ್ದೇನೆ.

೫೯. ಇವರು ತಿಳಿಯದೇ ಇರುವ ಕಲಾವಿಷಯಗಳನ್ನು ನನ್ನ ಪುಣ್ಯೋದಯದಿಂದ ತಿಳಿಸುವುದು. ಇದು ಚಿಕ್ಕವರು ಮಾಡುವ ಕೆಲಸವಾದರೂ ನಿನಗೆ ದೊಡ್ಡದೇ. ಇದರಿಂದ ನನಗೆ ಅಪ್ಪಣೆಮಾಡಿ.

ವ॥ ಎಂದು ದಮಿತಾರಿಯ ಮಗಳು ನಮ್ರತೆಯಿಂದ ಅಮಿತನನ್ನು ಕಳುಹಿಸಿ ಆ ಗಣಿಕಾನಾಯಕಿಯರನ್ನು ಆಸ್ಥಾನಕ್ಕೆ ತಕ್ಕ ಕಥೆಗಳನ್ನು ಹೇಳುವುದರಿಂದ ಸಂತೋಷದಿಂದಿದ್ದು ಅವರ ಮನಸ್ಸನ್ನು ತಿಳಿದು ಆಡುವ ಮಾತಿಗೂ,

---

1. + ನ (ಅ) 2. ಪೊ (ಅ) 3. ಕಿಱಿ (ಅ)

ದೋದುವೋದಿಂಗಂ ಇರ್ಪೆಯಱಿದು ತೆಗಟ್ವ ತೆಗೞ್ಕೆಗಂ [1]ಪದನ[1]ಱಿದು ಪತ್ತುವ ಪತ್ತುಗೆಗಂ ಇಂಬಱಿದು ಸೇವಿಸುವ ಸೇವೆಗಂ ನೆ[2]ಱೆ[2]ನಱಿದು ಪಾಡುವ ಪಾಟಕ್ಕಂ ಪೊೞ್ತಱಿದು ಸಾರ್ವ ಸಾರ್ಕೆಗಂ ಮನಂಬೆರ್ಚ್ಚು ಪತ್ತೆ ಪೊಯ್ದಂತಾಗಿರೆ ಮತ್ತೊಂದು ದೆವಸಂ—

ಕಂ॥ ವರ್ಗತ್ರಯ ನಿಧಿಯರಿನೃಪ
ಮಾರ್ಗಪರಂ ಸಭೆಯೊಳಿರೆ ಭಯೋತ್ಕಂಪಿತ ಸಂ
ಸರ್ಗಂ ರಾಣಿ[3]ಯ[3]ವಾಸದ
ಪೆರ್ಗಡೆ ತನ್ನಿಜ ನಿಯೋಗಮಂ ಬಿನ್ನವಿಕುಂ ॥ ೬೦ ॥

ವ॥ ದೇವ ಸಕಲ ಭುವನ ಕಳಾವಷ್ಟಂಭ ಸ್ತಂಭಾಯಮಾನ [4]ಭವದೀಯ[4]ಭುಜಸ್ತಂಭ ಪರಿಪಾಲಿತ ತ್ರಿಖಂಡಾವನೀಮಂಡಲದೊಳ್ ನೆಲದೊಂದು ಸೆ[5]ಱ[5]ಗಿನೊಳಪ್ಪೊಡಂ ಕೇಳಲಾಗದಪವಾದಮಿಂದು ನಮ್ಮ ಕನ್ಯಾಂತಃಪುರದೊಳ್ ಕಾಣಲಾದುದದಂ ಬಿನ್ನಪಂಗೆಯ್ವನ್ನ ಮೆಯ್ ಮತ್ತ ಹಸ್ತಿಗೆ ಪಕ್ಕಾದ ಗುಬ್ಬಿಯ ಮೆಯ್ಯಂತೆ ಗುರ್ಬಿಸಿದಪ್ಪುದು ಅಂತುಮೆನ್ನ ಕರ್ಮ ಗತಿಯಿಂ ಬಿನ್ನಪಂ ಗೆಯ್ಯಲ್ವೇೞ್ಕುಂ ಅಪರಾಜಿತಂ ತಾನೀಸೂೞಿನ ಎಂದ ಗಾಯಿಕಾ ರೂಪಮಂ ಕಯ್ಕೊಂಡು ತನ್ನ ತಮ್ಮನನಂತವೀರ್ಯಂಗೆಂದೊಡಂಬಡಿಸಿ ಕನಕಶ್ರೀಯುಮಂ ಗಗನಗಾಮಿನೀ ವಿದ್ಯೆಯಿನೊಯ್ದು ಗಗನ ತಲದೊಳ್—

ಚಂ॥ ವಿನುತ ವಿಮಾನಮಂ ಸುರವಿಮಾನಮನಾಗಳುಮೇಱವೇೞ್ದು ತ
ನ್ನನುಜನುಮಂ ಭವತ್ಸುತೆಯುಮಂ ಪೆಱಗಿಕ್ಕಿ ತಗುಳ್ದು ತಾಗಿದೆ
ಮ್ಮನಿಬರುಮಂ ವಯೋಧಿಕರಿರಾಯುಧಹೀನರಿರೆಂದು ನಕ್ಕು ಕೊ
ಲ್ಲನೆ ಕರುಣಾ ರಸಾರ್ದ್ರಮನನಂತಪರಾಜಿತನಾರ್ಯಪೂಜಿತಂ ॥ ೬೧ ॥

ಕಂ॥ ಏೞಿಮಿದಂ ದಮಿತಾರಿಗೆ
ಪೇೞಿಂ ಹರಿ ಕರಿಗೆ ಮುಳಿಗುಮಲ್ಲದೆ ನರಿ[6]ಗಂ
ಕೋ[6]ೞಿಗಮೇಂ ಮುಳಿಗುಮೆ ಬರ
ವೇೞಿಂ ನಿಜಸೈನ್ಯ ಸಹಿತಮಹಿತನ ನೀಗಳ್ ॥ ೬೨ ॥

ಕಣ್ಣುಸನ್ನೆಯಿಂದ ಮಾಡುವ ಕೆಲಸಕ್ಕೂ, ಮನಸ್ಸನ್ನು ತಿಳಿದು ನಗುವ ನಗೆಗೂ, ಅವರ ಮೆಚ್ಚಿಗೆಯಂತೆ ಓದುವ ಓದಿಗೂ, ಮನಸ್ಸನ್ನರಿತು ಮಾಡುವ ಕೆಲಸಕ್ಕೂ, ಹದವೆಂದು ತಿಳಿದು ನಡೆಸುವ ಕಾರ್ಯಕ್ಕೂ, ಅವಕಾಶವೊದಗಿದಾಗ ಮಾಡುವ ಸೇವೆಗೂ, ಸಮಯವನ್ನು ತಿಳಿದು ಹಾಡುವ ಪಾಠಕ್ಕೂ, ಕಾಲವರಿದು ಬರುವ ಗಮನಕ್ಕೂ ಮನಸ್ಸು ತಲ್ಲೀನವಾಗಲು ಮತ್ತೊಂದು ದಿವಸ

೬೦. ಧರ್ಮಾರ್ಥಕಾಮಗಳಿಗೆ ನಿಧಿಯೆನಿಸಿದ ಶತ್ರುಗಳ ರೀತಿಯನ್ನು ತಿಳಿಯುವ ರಾಜನ ಸಭೆಯಲ್ಲಿರಲು ಭಯಗೊಂಡು ನಡುಗುವ ಸಂಸರ್ಗವುಳ್ಳ ರಾಣಿವಾಸದ ಹೆಗ್ಗಡೆಯು ತನ್ನ ಅಧಿಕಾರವನ್ನು (ಕಾರ್ಯವನ್ನು) ವಿಜ್ಞಾಪಿಸಿದನು.

ವ॥ ಪ್ರಭುವು ಸಮಸ್ತ ಭೂಮಂಡಲದ ಕಲಾಶಾಸ್ತ್ರಕ್ಕೆ ಸ್ತಂಭದಂತಿರುವ ಭುಜಬಲದಿಂದ ಪರಿಪಾಲಿಸಿದ ಈ ಮೂರು ಖಂಡಗಳಲ್ಲಿ ಒಂದು ರೀತಿಯಿಂದಲೂ ಕೇಳಲಾಗದ ಒಂದು ಅಪವಾದವು ನಮ್ಮ ಕನ್ಯಾಂತಃಪುರದಲ್ಲಿ ಉಂಟಾಗಿದೆ. ಆ ವಿಷಯವನ್ನು ಎಣಿಕೆಮಾಡುವ ನನ್ನ ಶರೀರವು ಮದಿಸಿದ ಆನೆಗೆ ಸಿಕ್ಕಿದ ಗುಬ್ಬಿಯಂತೆ ಭಯಪಡುವುದು. ಹೀಗಿದ್ದರೂ ನನ್ನ ಕರ್ಮಗತಿಯಿಂದ ಅರಿಕೆಮಾಡಲೇಬೇಕು. ಅಪರಾಜಿತನು ಈಗ ಬಂದ ಗಣಿಕೆಯರ ಆಕಾರವನ್ನು ಹಾಕಿಕೊಂಡು ತನ್ನ ತಮ್ಮನಾದ ಅನಂತವೀರ್ಯನಿಗೆ ಒಡಂಬಡಿಸಿ ಕನಕಶ್ರೀಯನ್ನು ಗಗನಗಾಮಿನೀ ವಿದ್ಯೆಯಿಂದ ತೆಗೆದುಕೊಂಡು ಅಂತರಿಕ್ಷ ಮಾರ್ಗದಲ್ಲಿ

೬೧. ಸ್ತುತ್ಯವಾದ ದೇವವಿಮಾನಕ್ಕೆ ಸಮಾನವಾದ ವಿಮಾನದಲ್ಲಿ ಮೇಲಕ್ಕೆ ಏರಿಸಿ ನಿಮ್ಮ ಮಗಳು ಮತ್ತು ತನ್ನ ತಮ್ಮಂದಿರನ್ನು ಹಿಂಭಾಗದಲ್ಲಿಟ್ಟು ಪ್ರತಿಭಟಿಸಿದ ನಮ್ಮನ್ನು ವೃದ್ಧರು ಆಯುಧರಹಿತರು ಎಂದು ನಕ್ಕು ಕರುಣಾರಸದಿಂದ ಸ್ರಂಜಿತನಾದ ಆರ್ಯ ಪೂಜಿತನಾದ ಅಪರಾಜಿತನು ಕೊಲ್ಲಲಿಲ್ಲ.

೬೨. ಏಳಿ, ಈ ವಿಷಯವನ್ನು ದಮಿತಾರಿಗೆ ತಿಳಿಸಿ. ಸಿಂಹವು ಆನೆಗೆ ಕೋಪಿಸಿಕೊಳ್ಳುವುದಲ್ಲದೆ ನರಿ ಮತ್ತು ಕೋಳಿಗಳಿಗೆ ಕೋಪಿಸುತ್ತದೆಯೇ ? ಶತ್ರುವಾದ ಆತನನ್ನು ಸೈನ್ಯ ಸಮೇತ ಬರುವಂತೆ ತಿಳಿಸಿ.

1. + ನ (ಅ) 2. ರ (ಮ) 3. ಣೀ (ಮ) 4. × (ಮ) 5. ರ (ಮ) 6. ಟೊಂದೋ (ಅ)

ಕಂ॥ ಆಜಿಗರಕ್ತರನಧಿಕ ವ
ಯೋಜಿತರಿವರಂ ಪುರಾಣ ಪುರುಷರನಯ್ಯೋ
ಪೂಜಿಸದಪಕೃಪೆಯಿಂದಪ
ರಾಜಿತನುಱದಿಜಿಗುಮೆಂಬಿದಂ ನಂಬಿದಿರೇ ॥ ೬೩ ॥

ಗಗನೇಚರಸೊಳ್ ಕಾದುವ
ಬಗೆ ಕೈಮಿಗೆ ತಂದನೆಮ್ಮ ತಮ್ಮಂ ಪೆಱತೇಂ
ಮೃಗನಯನೆಯನನಿಮಿತ್ತಂ
ಮೃಗಾಳಿ ಪೋರದು ನೃಪಾಳಿ ಪೋರ್ಗುಮೆ ತಮ್ಮೊಳ್ ॥ ೬೪ ॥

ಮ॥ ಆದಱಿಂದಂ ವಿಜಯಾರ್ಧಪರ್ವತ ತಟೈಕೋದ್ದೇಶದಿಂದಿತ್ತಲೊ
ರ್ಪದಮಂ ದಾಂಟಿದೆನಪ್ಪೊಡಂ ಭವದಧೀಶಂಗಂಜಿದೆಂ ಪೋಗಿ ತ
ರ್ಪುದು ನೀಂ[1]ಆತನನೆಂದನೆಂಬ ನುಡಿಯಂ ಕಂಪೋತ್ಕರಂ ಭೀತಿ ಗ
ದ್ಗದಕಂಠಂ ತುದಿಗೆಯ್ದೆ ಬಿನ್ನವಿಸಿದಂ ವಾಕ್ಕೋವಿದಂ ಸೌವಿದಂ ॥ ೬೫ ॥

ಕಂ॥ ಆತನ ನುಡಿಯೆಂಬ ಲಯೋ
ದ್ಭೂತಾನಿಲನೆಸಗೆ ಮಸಗಿ ದಮಿತಾರಿ ಮನೋ
ಭೂತ ಪ್ರಭೂತ ಕೋಪೋ
ದ್ಭೂತಾಗ್ನಿ ಶಿಖಾಳಿ ಸಭೆಗೆ ತಲೆದೋಱುವುದುಂ ॥ ೬೬ ॥

ವ॥ ಅವಳಂಬಿತ ಕುಲೀನ ಧೀರತಾಜಲದಿನೊಯ್ಯನೊಯ್ಯನೆ ತದುದ್ರೇಕಮಂ ಪದಪಡಿಸಿ ಮುಳಿವೆಡೆಯೊಳಂ ಮುಳಿಸಂ ಮೊಗಕ್ಕೆ ತೋರದೆ ಗಂಭೀರ ಸಾರತರಕಟಾಕ್ಷವಿಕ್ಷೇಪಣಂಗಳಿಂದಂ ಪ್ರಸಿದ್ಧರುಂ ವೀರಾಗ್ರಗಣ್ಯರುಮಪ್ಪ ಸಭಾಸದರ ಮೊಗಮಂ ನೋಡುತ್ತುಮಿನಿವಿರಿದು ಪರಾಭವಂ ಪ್ರಾಕೃತಪುರುಷಂಗಂ ಕಾಪುರುಷಂಗಂಪೋತ್ತು ನಿಲ್ವುದರಿದು ಇನ್ನಿದಕ್ಕೆ ತಕ್ಕುದಂ ತಕ್ಕಂದದೊಳ್ ಪೇೞಿಮವಯವದಿಂದಮನಿತಾನುಂ

೬೩. ಯುದ್ಧಕ್ಕೆ ಶಕ್ತರಲ್ಲದವರನ್ನೂ, ವಯೋವೃದ್ಧರನ್ನೂ, ಪುರಾಣಪುರುಷರನ್ನೂ ಪುರಸ್ಕರಿಸದೆ ದಯೆಯಿಲ್ಲದೆ ಅಪರಾಜಿತನು ಜಾಗ್ರತೆಯಾಗಿರುತ್ತಾನೆಂದು ನೀವು ನಂಬುವಿರಾ.

೬೪. ಖೇಚರನಲ್ಲಿ ಯುದ್ಧಮಾಡುವ ರೀತಿ ಹೆಚ್ಚಿಸಲು ನನ್ನ ತಮ್ಮನು ಕಾರಣವಿಲ್ಲದೆ ವಿಶಾಲಾಕ್ಷಿಯನ್ನು ತಂದನು. ಮೃಗಗಳ ಸಮೂಹವು ಪ್ರತಿಭಟಿಸುವುದಿಲ್ಲ. ರಾಜನು ಪ್ರತಿಭಟಿಸುವನೇ.

೬೫. ಆದರಿಂದ ವಿಜಯಾರ್ಧಪರ್ವತ ತಪ್ಪಲಿನಿಂದ ಈಕಡೆಗೆ ಒಂದು ಹೆಜ್ಜೆಯಾದರೂ ದಾಟಿದನಾದರೆ ನಿಮ್ಮ ಪ್ರಭುವಿಗೆ ಹೆದರಿದನೇ, ನೀವೇ ಹೋಗಿ ಆತನನ್ನು ಕರೆತರುವುದು ಎಂಬ ಮಾತನ್ನು ಭೀತಿಯಿಂದ ಉದ್ಬದ ಕಂಠನಾಗಿ ಬುದ್ಧಿಶಾಲಿಯಾಗಿ ಅರಿಕೆಮಾಡಿಕೊಂಡನು.

೬೬. ಆತನ ಮಾತೆಂಬ ಪ್ರಳಯೋತ್ಕಾಲದಲ್ಲಿ ಹುಟ್ಟಿದಲ್ಲಿ ಗಾಳಿಯು ತಾಗುತ್ತಿರಲು ಮೇಲೆ ಬಿದ್ದ ದಮಿತಾರಿಯು ತನ್ನಲ್ಲಿ ಉಂಟಾದ ಹೆಚ್ಚು ಕೋಪದ ಅಗ್ನಿಯ ಜ್ವಾಲೆಯು ಪದಸೂಕ್ತದಂತೆ ಸಭೆಗೆ ತಿಳಿಯಲು

ವ॥ ಜಯಿಸಿದ ಸತ್ಕುಲದ ಧೀರತಮ ಸಮುದ್ರವನ್ನು ಜಾಗ್ರತೆಯಾಗಿ ಅದರ ಉದ್ರೇಕವನ್ನು ಹದಮಾಡಿ ಕೋಪಿಸುವ ಕಾಲದಲ್ಲಿ ಮುಖಕ್ಕೆ ಕೋಪವನ್ನು ತರದೆ ಗಂಭೀರವಾದ ಸಾರವತ್ತಾದ ಕಟಾಕ್ಷವೀಕ್ಷಣದಿಂದ ಪ್ರಸಿದ್ಧರೂ ವೀರಾಗ್ರಗಣ್ಯರೂ ಆದ ಸಭಾಸದರ ಮುಖವನ್ನು ನೋಡುತ್ತಾ ಇಷ್ಟು ತಿರಸ್ಕಾರವು ಪುರಾತನನೂ ಪ್ರಸಿದ್ಧನೂ ಆದವನಿಗೆ

1. ಮಾ (ಅ)

ಸ್ಥಾನಂಗಳೊಳನೇಕ ಮದಾನೇಕಪಾವಲೇಪ ನಿರ್ಯಾ[1]ಣ[1]ವಿದಾರಣ ನಖನಿಕರ ವಿಜಯ ಜನಿತಾನುದಾಹರಣಮಪ್ಪ ಹರಿಣಾರಿಪುಗೆ ಜಿಕ್ಕ ಪೋತ ಕಳಭ ಕುಳಮಾರಣ ಕೋಳಾಹಳಮಾನೆದಿಂಬಂಗಾ[2]ವೆಡೆ[2]ವಳಿಗೆ ಯೆಂಬಂತಕ್ಕುಮೆನಗಪರಾಜಿತಾನಂತವೀರ್ಯ ಹನನಮಾದೊರೆ ಕೇವಲ ಮಂತುಮಲ್ಲದುದ್ಧತಮುಂ ಸ್ತಬ್ಧಮುಮಪ್ಪ ಖದಿರ ಯುಗಳಮುಂ ತಱಿಪಂತೊಂದಿಸಿಲ್ಲದಿಂದೆ (ದಲ್) ತತ್ತ್[3]ಱ[3]ಂದಱಿವೆನೆಂದು ಮೊಱಗುವನಿತುಮಂ ಮೊಱಗಿ ಖಚರಾಧಿನಾಥ ವಿಳಯಜಳಧರಂ ಪೂಣ್ಬುದುಂ ಯುಗಾವಸಾನ ಮಹಾಂಭೋಧಿವೇಲಾಕಲ್ಲೋಲವಿಲಾಸ ಸಮುಲ್ಲಾಸ ಪ್ರತಿಭಾಸಮುಮಂ ಕಿಬ್ಬಡಿಸಿದ ವಿದ್ಯಾಧರರಾಜನ ಸಭಾಮಂಡಳಂ ಕ್ಷೋಭಕ್ಕೊಡರ್ಚಿದಾ ಪ್ರಸ್ತಾವದೊಳ್ ಒರ್ವ ವಿದ್ಯಾಧರ ವೀರಭಟಂ—

ಕಂ॥ ಅವತಂಸಾಶೋಕ ನವ
ಪ್ರವಾ[4]ಳ[4]ರುಚಿ ಮುಳಿಸೆ ರೂಪುಗೊಂಡ[5]ವೊಲ[5]ೆರಡುಂ
ಕಿವಿಗಳೊಳ[6]ಮಾಣು[6]ಮಂ ಪ
ರ್ಚುವಕ[7]ಲ್ಪಿಯ[7]ತೆಱದಿನೆಸೆದುದಾಸ್ಥಾಯಿಕೆಯೊಳ್ ॥ ೬೭ ॥

ವ॥ ಮತ್ತೊರ್ವಂ—

ಉ॥ ಕೆತ್ತುವ ಮೀಸೆ ಕೆಂಪಡರ್ದ[8]ಕಣ್ಮಲರೊ[8]ಪ್ಪುವ ಮೂಗು ಕೋಪ[9]ದ
ತ್ತ್[9]ತ್ತಿದ ಭೀಷಣಭ್ರುಕುಟಿ ಘರ್ಘರ ಘೋರ ರವಂ ಮೊಗಕ್ಕೆ[10]ಮೆ
ಯ್ಗೆ[10]ತ್ತ ಬೆಮರ್ ಮನಂಗೊಳಿಸೆ ಭೂಪತಿ[11]ಯಂ[11] ಬೆಸವೇ[12]ಟ್ಟಿಗುರ್ವ[12] ಲೋ
ಕೋತ್ತರಮಾಗೆ ವೀರಭಟನೇಂ ಕದನ[13]ಕ್ಷ[13] ಮನಕ್ಕೆ ಪೂಣ್ದನೋ ॥ ೬೮ ॥

ವ॥ ಮತ್ತಮಲ್ಲಿ—

ಇರುವುದು ಅಲ್ಲ. ಇಲ್ಲದಕ್ಕೆ ತಕ್ಕುದನ್ನು ತಕ್ಕ ರೀತಿಯಲ್ಲಿ ಕೇಳಿ ಅವಯವದಿಂದ ಎಷ್ಟೋ ಕಾಲದಲ್ಲಿ ಅನೇಕ ಮದಿಸಿದ ಆನೆಗಳ ಕುಂಭಸ್ಥಳವನ್ನು ಸೀಳುವ ತೆರದಿಂದ ಹರಿತವಾದ ಉಗುರಿನ ಸಮೂಹದ ವಿಧೇಯದಿಂದ ಉಂಟಾದ ಉದಾಹರಣೆಗಳಾದ ಸಿಂಹಕ್ಕೆ ತಕ್ಕ ಆನೆಗಳ ಮರಿಗಳ ಮರಣದಲ್ಲಿ ಕೋಲಾಹಲವುಳ್ಳಂತೆ ಆಗುತ್ತದೆ. ನನಗೆ ಅಪರಾಜಿತ ಅನಂತವೀರ್ಯರನ್ನು ಕೊಲ್ಲುವುದು ಅದರಂತೆಯೇ! ಅಲ್ಲದೆ ರೊಚ್ಚಿದ್ದುದು ಸುಮ್ಮನಿರುವುದು ಎಂಬ ಎರಡು ತಂತಿಗಳನ್ನು ಹರಿಯುವಂತೆ ಒಂದಿಷ್ಟಲ್ಲದೆ ಬೇರೆಂದು ತಿಳಿಯುವನು ಎಂದು ಧ್ವನಿಮಾಡುವಷ್ಟು ಗುಡುಗಿ ಖೇಚರೇಶ್ವರನೆಂಬ ಪ್ರಳಯಕಾಲದ ಮೋಡವು ಸುಮ್ಮನಿರಲು ಪ್ರಳಯಕಾಲದ ಸಮುದ್ರದ ತೆರೆಮಾಲೆಗಳ ಹೊಡೆತದ ಉಲ್ಲಾಸದ ಪ್ರತಿಭೆಯನ್ನು ಕೀಳುಮಾಡಿದ ವಿದ್ಯಾಧರರಾಜನ ಸಭಾಮಂಡಲವು ಸಡಗರದಿಂದ ಕೂಡಿರುವ ಸಮಯದಲ್ಲಿ ಒಬ್ಬ ' ವಿದ್ಯಾಧರ ವೀರಭಟನು

೬೭. ಕಿವಿಗೆ ಅಶೋಕೆ ಮತ್ತು ಹೊಸ ಹವಳದ ಕಾಂತಿ ಇರುವಂತೆ ಕೋಪವೇ ಆಕಾರವನ್ನು ಹೊಂದಿದ ಹಾಗೆ ಎರಡು ಕಿವಿಗಳಲ್ಲಿಯೂ ಅಪಾಯವನ್ನು ವಿಜ್ಞಾಪಿಸುವ ರೀತಿಯಲ್ಲಿ ಆ ಸಭೆಯಲ್ಲಿ

ವ॥ ಮತ್ತೊಬ್ಬನು

೬೮. ಕುಣಿಯುತ್ತಿರುವ ಮೀಸೆ, ಕೆಂಪಾದ ಕಣ್ಣು, ಅರಳಿ ಶೋಭಿಸುವ ಮೂಗು, ಕೋಪದಿಂದೆದ್ದು ನಿಂತಿರುವ ಭಯಂಕರವಾದ ಹುಬ್ಬು, ಮುಖದಲ್ಲಿ ಘೋರವಾದ ಧ್ವನಿ, ಶರೀರದಲ್ಲಿ ಬೆವರು ಮನೋಹರವಾಗಿರಲು ರಾಜನನ್ನು ಅಪ್ಪಣೆ ಕೇಳುವ ಪರಾಕ್ರಮವು ಮನೋಹರವಾಗಿರಲು ಯುದ್ಧ ಮಾಡಲು ಮನಸ್ಸಿನಲ್ಲಿ ಆ ವೀರಭಟನು ಸಂಕಲ್ಪಮಾಡಿದನು.

ವ॥ ಮತ್ತು ಅಲ್ಲಿ

---

1. ಪಣ (ಅ) 2. ವೇಡೇ (ಮ) 3. ರ (ಮ) 4. ಲ (ಕಾ) 5. ಪನೆ (ಕಾ) 6. ಮಾಂಸ (ಕಾ) 7. ಟ್ಟಿಪ (ಮ) 8. ಕಣ್ ಮಲರ್ದೊ (ಮ) 9. ಪಜ್ಜೊ (ಸೂ) 10. ಮೈ ಪೆ (ಸೂ) 11 ಯಾ (ಸೂ) 12. ಟ್ಟಿಗುರ್ಬ (ಸೂ) 13. ಕ್ಕೆ (ಮ)

ಉ॥ ಅಳ್ಕದೆ ಚಕ್ರವರ್ತಿಯ [1][ಕಳತ್ರ]ಯನೊಯ್ವನ[1] ಬೆನ್ನನೆ[2]ನ್ನ[2]ಕೂ
ರ್ವಾಳ್ಕೊಳೆ ಮದ್ವರೂಥಿನಿ ಮನಂಗೊಳೆ ನಾ[3]ರ[3]ದನೆಯ್ದೆ ನೋಡಿ ಬಾ
ನೊಳ್ಕುಣಿದಾಡೆ ದೇವತತಿ ನೋಡೆ ಕಱುತ್ತಿಱಿದಾಗಳಲ್ಲದೆ
ನ್ನೊಳ್ಕರೆಗಣ್ಮಿ ಪೊಣ್ಮುಗುಮೆ ವೀರರಸಂ ಖಚರೇಂದ್ರಲೋಕದೊಳ್ ॥ ೬೯ ॥

ವ॥ ಎಂದೆನಿತಾನುಂ ಗರ್ಜಿಸಿ ಸುಭಟವೃತ್ತಿಯನಾವರ್ಜಿಸಿ ಮಾಣೆ ಮತ್ತೊರ್ವನಾತನ ನುಡಿಯ ಪಡಿಸಾದಮುಂ ಭಿತ್ತಿಯುಮಾಗೆ ದಿಗ್ಭಿತ್ತಿವಿವರಮದೆಯ್ದೆಯೊಡೆವಿನಮಿಂತೆಂದಾಸ್ಫೋಟಿಸುಗುಂ—

ಕಂ॥ ಅಪರಾಜಿತನಂ ಮದ್ಬಾ
ಣಪಾತದಿಂ ಗೆಲ್ದು ರಾಜಸುತೆಯಂ ತಂದೀ
ನೃಪತಿಯ ಮುಂದಿಡವನ್ನೆಗ
ಮಪಾರ ಭುಜವಿಜಯಮೆನಗೆ ಮೆಯ್ವೆತ್ತಪುದೇ ॥ ೭೦ ॥

ವ॥ ಎಂಬುದುಂ ಪೆಱನೊರ್ವಂ—

ಚಂ॥ ಜಿತಗಗನೇಚರಾಧಿಪತಿಯೈ ನೃಪ ನೀಂ ನಿನಗಂ ಮನೋವಿರ
ಕ್ತತೆಯುಮನಕ್ಷಿರಕ್ತತೆಯುಮಂ ಪಡೆದಾ ರಿಪು ಮತ್ತೆ ಬಲ್ದಪೊಂ
ಕ್ಷಿತಿಯೊಳಗಿರ್ದಪೊಂ ಮುದದಿನೆಂದೊಡೆ ಜೋಳದೊಳಾದ ಪಾಟಿಗಂ
ಪತಿಹಿತವೃತ್ತಿಗಂ ಜಸಕಮಿನ್ನೆನಗಾಸೆವಡಲ್ಕೆ ಬರ್ಕುಮೇ ॥ ೭೧ ॥*

೬೯. “ಚಕ್ರವರ್ತಿಯ ಮಗಳನ್ನು ನಿಃಸಂಕೋಚವಾಗಿ ಎತ್ತಿಕೊಂಡು ಹೋದವನ ಬೆನ್ನಲ್ಲಿ ನನ್ನ ಹರಿತವಾದ ಖಡ್ಗ ನಟ್ಟು ನಿಲ್ಲುವಂತೆ, ನಮ್ಮ ಸೈನ್ಯ ಕಂಡು ಮೆಚ್ಚುವಂತೆ, ಕಣ್ತುಂಬ ನೋಡಿ ನಾರದನು ಆಕಾಶದಲ್ಲಿ ಸಂತೋಷದಿಂದ ಕುಣಿದಾಡುವಂತೆ, ದೇವತೆಗಳೆಲ್ಲ ಬಂದು ನೋಡುವಂತೆ ನಾನು ರಭಸದಿಂದ ಇರಿದಾಗಲ್ಲದೆ ನನ್ನಲ್ಲಿಯ ವೀರರಸ ಉಕ್ಕಿ ಹರಿದೀತೆ ?”

ವ॥ ಹೀಗೆ ಹಲವು ಪರಿಯಾಗಿ ಗರ್ಜಿಸಿ ಯೋಧರನ್ನು ಮೆಚ್ಚಿಸಿದನು. ಮತ್ತೊಬ್ಬನು ಈ ಮೊದಲಿನವನ ಮಾತೇ ಪ್ರತಿಧ್ವನಿಯಾಗಿಯೂ, ಪ್ರತಿಧ್ವನಿಸುವ ಗೋಡೆಯೂ ಆಗಲಾಗಿ, ದಿಗಂತರಗಳು ಸೀಳುವಂತೆ ಹೀಗೆಂದು ಆರ್ಭಟಿಸಿದನು:

೭೦. “ಆ ಅಪರಾಜಿತನನ್ನು ನನ್ನ ಬಾಣಕ್ಕೆ ಗುರಿಮಾಡಿ ಗೆದ್ದು, ರಾಜಪುತ್ರಿಯನ್ನು ಮರಳಿ ಕರೆತಂದು ಈ ನಮ್ಮರಸನ ಮುಂದೆ ನಿಲ್ಲಿಸದೆ ಹೋದರೆ ಅಪಾರವಾದ ನನ್ನ ತೋಳ್ಬಲಕ್ಕೆ ಜಯವೆಲ್ಲಿ ?”

ವ॥ ಆಗ ಇನ್ನೊಬ್ಬನು ಹೀಗೆಂದನು :

೭೧. “ಜಯಶಾಲಿಯಾದ ಖೇಚರಚಕ್ರವರ್ತಿ ನೀನು ; ಇಂತಹ ನಿನ್ನ ಮನಸ್ಸಿಗೆ ಬೇಸರವನ್ನೂ ಕಣ್ಣಿಗೆ ಕೆಂಪನ್ನೂ ಕೆರಳಿಸಿದ ಆ ಶತ್ರು ಇನ್ನೂ ಬದುಕುತ್ತಾನೆ, ಭೂಮಿಯ ಮೇಲೆ ನೆಮ್ಮದಿಯಿಂದ ಉಳಿಯುತ್ತಾನೆ ಎಂದರೆ ನಾನು ನಿನ್ನಲ್ಲಿ ಪಡೆದ ಅನ್ನದ ಋಣಕ್ಕೂ, ಸ್ವಾಮಿ ಭಕ್ತಿಗೂ, ಯಶಸ್ಸಿಗೂ ನಾನಿನ್ನು ಆಸೆಮಾಡುವುದೇಕೆ ? ಅದಕ್ಕೆ ಆಸ್ಪದವೆಲ್ಲಿ ?

1. ಕಳತ್ರಯುವೊಯ್ವನ (ಸೂ) ತನೂಜೆಯನೊಯ್ವನ (ಮ) 2. ಬ್ದಿ (ಸೂ) 3. ಸ (ಸೂ)

* ಇದರ ತರುವಾಯ ಕೆಳಗಿನ ಪದ್ಯ ಒಂದು ಪ್ರತಿಯಲ್ಲಿದೆ :

ಒಂದೆಡೆಯೊಳೋಡಿದೊಂ ಮ
ತ್ತೊಂದೆಡೆಯೊಳ್ ನಿಂದು ಬೆಸಕೆ ಗೆಂಟಪ್ಪಂತಾ
ಟಂದುಜದಿಱಿದರಿನೃಪರಂ
ಕೊಂದುಮಣಂ ನೀಗಲಾಱೆನೀ ಪರಿಭವಮುಂ ॥ ೭೧ ಅ ॥

ಕಂ॥ ಜಯಮಂ ಬಯಸುವೊಡರಿ ಮಾ
ರಿಯನಾವರ್ತಿಸಿದರೆಂಬ ನಾಣ್ನುಡಿಗಮಳು
[1]ರ್ಚಿ[1]ಯೆ ನಿನ್ನೊಳೆಡಱೆ ತನಗಱ
ಕೆಯ ಮಿೞ್ಪುವನಿಂತು ತಂದುಕೊಂಡರುಮೊಳರೇ ॥ ೭೨ ॥

ವ॥ ಅದಲ್ಲದೆಯುಮಿ[2]ರು[2]ಮು[3][ರಿ][3]ದೊಱೆಗಿದಿರೇೞಿದರೆಂಬಂತೆ ನಿನ್ನುಮಂ ಮುಳಿಯಿಸಿ ಬರ್ದುಂಕಲ್ಬಾರದಾದೊಡಂ ಪುಟ್ಟರೆ ಕಯ್ಪೀಗುಮೆ ದೇವರಡ್ಡತಗಮಱಿಯದೆಯುಂ ಕರುಮಾಡಮನಿೞಿಯದೆಯುಂ ಸುಖಮಿರ್ಪುದಾಮೆ ಸಾಲ್ವೆವೆಮಗೆ ಬೆಸಸುವುದೆಂದು ಕೆಯ್ಯೊಳೆ ಬೆಸನಂ ಬೇಡಿದಸಿಬರುಮಂ ನಿಮಗದುವೆ ತಕ್ಕುದಾದೊಡಮೆಮಗದೆನಿಪಿರಿದೆನಿಸಂ ಮಾಣಿಮೆಂದು ಪದವಡಿಸುವ ದಮಿತಾರಿಯು ಮನೋರೂರ್ವರಂ ಕಟಿಯೆ ಪರಿಯಲ್ಮಸಗುವ ಭೀರಭಟೋತ್ತಮರುಮಂ ಸರ್ವದೋಷಪ್ರದುಷ್ಟಗಜಂಗಳನುಪಲಾಲನೆಯೊಳಮಿಚ್ಛಾನುವರ್ತನದೊಳಮಳವಳಿಡುವ ಕುಶಲ ಗಜೋಪಜೀವಿಯಂತೆ ಪ್ರಸಂಗಾಭಿಪ್ರಾಯವಚನಂಗಳಿನಳವಡಿಸಿ ಸುಮತಿಯೆಂಬ ಮಂತ್ರಿ ಮಹತ್ತರ ನಿಂತೆಂದನಖಿಳಖಚರಪತಿಕಿರೀಟಕೋಟಿವಿಟಂಕಚೂಡಾಮಣಿಮರೀಚಿಮಂಜರೀರಂಜಿತಚರಣನಳಿನನ್ಯೆ ನೀಂ ನಿನಗೆ ಭೂಚರ ಕೀ(ರೀ)ಟ ಯುಗಳಕ್ಕೆ ಮುಳಿವುದುಂ ನೊ[4][ಳ][4]ವಿಂಗೆ ಕುಪ್ಪೆವರಮೆಂಬಂತಕ್ಕುಮಾದೊಡಂ ಮತ್ಸರಮಹೋರಗಕ್ಕಮಾಗ್ರಹಮಹಾಗ್ರಹಕ್ಕಂ ಕೋಪಮದಾನೇಕಪಕ್ಕಂ ಪಕ್ಕಾಗೆ ತನ್ನನೊಪ್ಪಿಸುವುದು ಮತಿವಂತಂಗೆ ಪುರುಷಾರ್ಥಮಲ್ತು ಸಕಳಕ್ಷಮಾಪತಿತ್ವಮೆ ಸಕಳಕ್ಷಮಾ ಪತಿತ್ವಮಂ ಮಾಡುಗುಂ—

ಮ॥ ಅದಱಿಂ ಸಂಪ್ರಣಿಧಾನನಂ ಪ್ರಣಿಧಿಯಂ ನೀಂ ದೇವ ಮುನ್ನಟ್ಟಿ ನೋ
ಟ್ಪುದು ತಚ್ಚೇತನೆಯೊಳ್ ಪೊದಟ್ಟ ನಯಮಂ ಮತ್ತಿತ್ತದೋಜಾಗೆ ಮಾ
ಟ್ಪುದು ಕಾಲೋಚಿತ ಸಂಧಿವಿಗ್ರಹದೊಳೊಂದಂ ಕಾರ್ಯಮಂ ಪ್ರಾಪ್ತಮ
ಪ್ಪುದನಾಪ್ತೋಕ್ತಮನುಂತೆ ರಾಭಸಿಕವಾಕ್ಪಾತಕ್ಕೆ ಮೆಯ್ಪುರ್ದದೇ ॥ ೭೩ ॥

೭೨. ಗೆಲವನ್ನು ಬಯಸಿ, ಮೃತ್ಯುವನ್ನೇ ಕರೆದರೆಂಬ ನಾಣ್ನುಡಿಯನ್ನು ಉದಾಹರಿಸಿ ತೋರುವಂತೆ ನಿನಗೆ ಎದುರುಬಿದ್ದು, ತಮಗೆ ತಾವೆ ಸಾವನ್ನು ತಂದುಕೊಳ್ಳುವವರೂ ಉಂಟೆ ?

ವ॥ ಅಷ್ಟೇ ಅಲ್ಲದೆ, ಒಸಸುಳಿಯಿರುವ ಹೊಳೆಗೆ ಇದಿರುಬಿದ್ದು ಹೋದರೆಂಬ ನಾಣ್ಣುಡಿಯಂತೆ ನಿನ್ನನ್ನು ಕೆರಳಿಸಿದ ಮೇಲೆ ಬದುಕಿ ಉಳಿಯುವುದು ಸಾಧ್ಯವೇ ಇಲ್ಲ. ಆದರೂ ನೀನೆ ಹೋರಾಡಬೇಕಿಲ್ಲ. ನೆವುಟು ಇರುವಾಗ ಕೈಸುಟ್ಟುಕೊಳ್ಳಬೇಕೆ? ನೀನು ನೆಮ್ಮದಿಯಿಂದ ಒರಗಿಕೊಂಡೆ ಇರು; ಉಪ್ಪರಿಗೆಯಿಂದ ಒಂದು ಮೆಟ್ಟಲೂ ಇಳಿಯಬೇಕಾಗಿಲ್ಲ. ನಿಶ್ಚಿಂತನಾಗಿರು. ಈ ಕೆಲಸಕ್ಕೆ ನಾವೇ ಸಾಕು. ನಮಗೆ ಅಪ್ಪಣೆಕೊಡು" ಹೀಗೆಂದು ಆಗಿಂದಾಗಲೆ ಯುದ್ಧಕ್ಕೆ ಹೊರಡಲು ಅನುಮತಿಯನ್ನು ಬೇಡುವ ಎಲ್ಲರಿಗೂ ದಮಿತಾರಿಯು "ನಿಮಗೆ ಈ ಮಾತು ತಕ್ಕುದೇ ಸರಿ. ನಮಗೆ ಆ ಕೆಲಸವೇನು ದೊಡ್ಡದಲ್ಲ. ಆದರೆ ಕೊಂಚ ನಿಲ್ಲಿ" ಎಂದು ತಡೆದನು. ಹೀಗೆ ತಡೆಯುವ ಅರಸನನ್ನೂ, ಸಾವನ್ನು ಎದುರಿಸಲು ಲವಲವಿಸುತ್ತಿರುವ ರಭಸದ ಪಟುಭಟರನ್ನೂ ಸುಮತಿಯೆಂಬ ಮಂತ್ರಿ ನೋಡಿದನು. ಮದವೇರಿ ತುಂಟಾಟಕ್ಕಿಳಿದ ಆನೆಗಳನ್ನು ಚಾಟುವಚನಗಳಿಂದಲೂ, ಅವುಗಳ ಇಚ್ಛೆಗೆ ಅನುಕೂಲವಾದ ನಡವಳಿಕೆಯಿಂದಲೂ ಪಳಗಿಸಿ ಕೈವಶ ಮಾಡಿಕೊಳ್ಳುವ ಜಾಣ ಮಾವುತನಂತೆ ಆ ಮಂತ್ರಿಮುಖ್ಯನು ಪ್ರಸಂಗೋಚಿತವಾದ ಮಾತುಗಳನ್ನು ಪ್ರಯೋಗಿಸುತ್ತ ಹೀಗೆಂದನು: "ಮಹಾರಾಜಾ, ಸಮಸ್ತ ಖೇಚರ ಭೂಪತಿಗಳನ್ನು ಎರಗಿಸಿಕೊಂಡು ಅವರ ಕಿರೀಟಗಳಲ್ಲಿಯ ರತ್ನ ಪ್ರಭೆಗಳಿಂದ ನಿನ್ನ ಪಾದಕಮಲಗಳು ಶೋಭಿಸುತ್ತಿವೆ. ಇಂತಹ ಮಹಿಮಾವಂತನಾದ ನೀನು ಭೂಚರರಾದ ಈ ಎರಡು ನರಕೀಟಗಳ ಮೇಲೆ ಕೋಪಿಸಿಕೊಳ್ಳುವುದೆಂದರೆ 'ನೊಣ ಹೊಡೆಯುವುದಕ್ಕೆ ಖಡ್ಗ ಹಿರಿದರು' ಎಂಬಂತಾದೀತು. (ಇಲ್ಲಿ 'ಕುಪ್ಪೆ' ಎಂಬುದರ ಅರ್ಥ ಸ್ಪಷ್ಟವಾಗಿಲ್ಲ.) ಮತ್ಸರವೆಂಬ ಮಹಾಸರ್ಪಕ್ಕೂ, ಹಠವೆಂಬ ಮಹಾಭೂತಕ್ಕೂ, ಕೋಪವೆಂಬ ಮದಗಜಕ್ಕೂ ಶರಣಾಗಿ ತನ್ನನ್ನು ಒಪ್ಪಿಸಿಕೊಳ್ಳುವುದು ಬುದ್ಧಿವಂತನಿಗೆ ಯೋಗ್ಯವಲ್ಲ. ಸಮಗ್ರ ಭೂಮಿಯ ಒಡೆತನವು ಎಲ್ಲವನ್ನೂ ಸೈರಿಸಿಕೊಳ್ಳುವ ಹಾಗು ಕ್ಷಮಿಸುವ ಅಧಿಕಾರವನ್ನು ಕೊಡುತ್ತದೆ (ಇಲ್ಲಿ 'ಕ್ಷಮಾ' ಎಂದರೆ ೧. ಭೂಮಿ ಮತ್ತು ೨. ಸೈರಣೆ ಎಂದು ಎರಡು ಅರ್ಥ).

೭೩. ಆದುದರಿಂದ ವಿವೇಕಶಾಲಿಯಾದ ಒಬ್ಬ ದೂತನನ್ನು ಅಪರಾಜಿತನ ಬಳಿಗೆ ಮೊದಲು ಕಳಿಸಿ ನೋಡು. ಆತನ ಮನಸ್ಸೇನು ಹಾಗು ಆತನ ನೀತಿಯೇನು ಎಂಬುದನ್ನು ತಿಳಿದುಕೊಂಡು ಅದಕ್ಕೆ ಅನುಸಾರವಾಗಿ ಸಂಧಿಯೊ,

1. ರ್ಕೆ (ಅ) 2. ಱು (ಮ) 3. ಱಿ (ಮ) 4. ಟ (ಅ, ಮ)

ವ॥ ಎಂದರ್ಥಶಾಸ್ತ್ರಾಭಿಪ್ರಾಯಪುರಸ್ಸರಂ ನುಡಿದು ಪದವಡಿಸಿದ ಸುಮತಿಯ ವಚಕ್ಕೆ ಪದವಟ್ಟು ದಮಿತಾರಿ ನೀತಿವರ್ಧನನಮಿತ್ರಂ ಪ್ರೀತಿವರ್ಧನನೆಂಬ ದೂತಮುಖ್ಯನನಟ್ಟಿದೊಡಾತಂ ತನ್ನಾಳ್ದನ

ಕಂ॥ ನೆಱೆದಾಯುಷ್ಯಮೆ ಮಿಟ್ಟುವ
ನಱಸುವ ತೆಱದಿಂದಮವರ ಪೋಪಟ್ಟಿಯನೆ ಬಂ
ದಱಸಿ ನಭಸ್ಥಳದೊದವಿದ
ತಱಂಬು ಕಳನಾಗಿ ಕಾದಲೆಂದಿರ್ದವರಂ ॥ ೭೪ ॥

ಪ್ರಿಯೆಯ ಬರಪಾರ್ವವೊಲ
ಪ್ರಿಯ ಗಗನಚರೇಂದ್ರರುಂದ್ರಸೇನೆಯ ಬರಪಾ
ರ್ವಯಮೂರ್ತಿಯುಮಂ ನಯಮೂ
ರ್ತಿಯುಮಂ ಪೋಲ್ವರನಪಾರ ಪೌರುಷಪರರಂ ॥ ೭೫ ॥

ವ॥ ವ್ಯಹಾಯಸಯುದ್ಧಸನ್ನದ್ಧರನಪರಾಜಿತಾನಂತವೀರ್ಯರಂ ಕಂಡು ಪೊಡವಟ್ಟು ಅಪರಾಜಿತನನಿತ್ತು ಪರ್ಮಿತ್ತು ಕೇಳ್ವು ದೇವಿಂತೆಂದಂ ಪ್ರತ್ಯಕ್ಷ ಪ್ರಮಾಣಮೆನಿಸಿದಾಸ್ಥಾಯಿಯಾಗಿಯುಂ ಲೋಕತ್ರಯ ಸಂಚಾರಿಯೆನಿಸಿದ ಕುವಳಯ ವಿಭ್ರಾಜಿಯಾಗಿಯುಂ ಕುಮುದ ದಳ ಧವಳನೆನಿಸಿದ ನಿನ್ನ ಜನೋತ್ಸಾಹಕರಣಂ ಜಗತ್ಕೃದಾಹರಣಮಾದುದು* ಮತ್ತಂ ವಿದ್ಯೋಪಶಮ ಗಂಭೀರ ಸ್ಥಿರವದಾನ್ಯತ್ವ ಸಾಧುಜನ ಸಹಾಯತಾದಿ ಗುಣನಿಧಾನನಂ ನಿನ್ನನ್ನನಂ ಮತ್ತೊರ್ವನನೆಲ್ಲಿಯುಂ ಕಂಡುಂ ಕೇಳ್ದುಮಱಿಯೆವದನ್ನೆಗಮಿರ್ಕೆ—

ಯುದ್ಧವೋ—ಎರಡರಲ್ಲೊಂದು ಯೋಗ್ಯವಾದ ಕ್ರಮವನ್ನು ಆಪ್ತಮಂತ್ರಿಗಳ ಸಲಹೆಯಂತೆ ಕೈಕೊಳ್ಳಬಹುದು. ಅದನ್ನೆಲ್ಲ ಬಿಟ್ಟು ಸುಮ್ಮನೆ ದುಡುಕಿನ ಮಾತಾಡಿ ಮುನ್ನುಗ್ಗುವುದೆ?"

ವ॥ ಹೀಗೆಂದು ರಾಜನೀತಿಶಾಸ್ತ್ರಕ್ಕೆ ಅನುಗುಣವಾಗಿ ನುಡಿದು ಸಮಾಧಾನ ಮಾಡಿದ ಸುಮತಿಯ ಮಾತಿಗೆ ಒಪ್ಪಿ ದಮಿತಾರಿರಾಜನು ನೀತಿಶಾಸ್ತ್ರವನ್ನನುಸರಿಸಿ ಪ್ರೀತಿವರ್ಧನನೆಂಬ ದೂತಮುಖ್ಯನನ್ನು ಕಳಿಸಿಕೊಟ್ಟನು. ಆ ದೂತನು ತನ್ನ ಒಡೆಯನ

೭೪. ಮುಗಿದುಹೋಗುತ್ತಿರುವ ಆಯುಷ್ಯವೇ ಮೃತ್ಯುವನ್ನು ಹುಡುಕಿಕೊಂಡು ಹೋದಂತೆ ಅಪರಾಜಿತಾನಂತ ವೀರ್ಯರು ಹೋಗ ಹಾದಿಯಲ್ಲಿಯೆ ನಡೆದು, ಹುಡುಕಾಡಿ ಆಕಾಶಕ್ಕೆ ಸಮೀಪವಾದ ಒಂದು ಉನ್ನತ ಪ್ರದೇಶವನ್ನೇ ಯುದ್ಧರಂಗಕ್ಕಾಗಿ ಆಯ್ದುಕೊಂಡು ನಿಂತ ಅವರನ್ನು

೭೫. ಪ್ರಿಯತಮೆಯ ಆಗಮನವನ್ನು ಎದುರುನೋಡುತ್ತಿರುವ ಪ್ರಿಯಕರನಂತೆ, ಖೇಚರರಾಜನ ಭೀಕರ ಸೈನ್ಯದ ಆಗಮನವನ್ನು ನಿರೀಕ್ಷಿಸುತ್ತ ನಿಂತು ನುದೈವ ಹಾಗು ಪೌರುಷಗಳೆರಡೂ ಮೈದಾಳಿದಂತಿರುವ ಆ ಅಸೀಮ ಪರಾಕ್ರಮಿಗಳಿಬ್ಬರನ್ನು

ವ॥ ಆಕಾಶ ಯುದ್ಧಕ್ಕೆ ಸಿದ್ಧರಾಗಿ ನಿಂತ ಅಪರಾಜಿತಾನಂತವೀರ್ಯರನ್ನು ಕಂಡನು. ಹಾಗು ಅವರಿಗೆ ನಮಸ್ಕರಿಸಿ ಅಪರಾಜಿತನಿಗೆ "ಇತ್ತ ಕೊಂಚ ಚಿತ್ತೈಸಿ, ನನ್ನ ಮಾತುಗಳನ್ನು ಗಮನವಿಟ್ಟು ಕೇಳಿ" ಎಂದು ಬಿನ್ನವಿಸಿ ಹೀಗೆ ನುಡಿದನು: "ರಾಜನೇ, ನಿನ್ನ ಯಶಸ್ಸು ಪ್ರತ್ಯಕ್ಷವಾಗಿದ್ದರೂ 'ಅಪ್ರಮಾಣ' (ಅಳೆಯಲಾಗದುದು); ಸ್ಥಿರವಾಗಿದ್ದರೂ ಮೂರು ಲೋಕಗಳಲ್ಲಿಯೂ ಸಂಚರಿಸುವಂತಹುದು; 'ಕುವಳಯ ವಿಭ್ರಾಜಿ' (೧. ಭೂಮಂಡಲವನ್ನೆಲ್ಲ ಬೆಳಗುವಂತ ಹುದು, ೨. ಕನ್ನೈದಿಲೆಯಂತೆ ಶೋಭಿಸುವುದು) ; ಜನಕ್ಕೆಲ್ಲ ಉತ್ಸಾಹ ಕಾರಣವಾಗಿ ಜನಕ್ಕೆ ಆದರ್ಶವಾಗಿದೆ. ವಿದ್ಯೆ, ಶಾಂತ ವೃತ್ತಿ, ಗಾಂಭೀರ್ಯ, ಸ್ಥೈರ್ಯ, ಔದಾರ್ಯ, ಸಜ್ಜನ ಸಹಾಯತೆ ಮೊದಲಾದ ಗುಣಗಳಿಗೆ ನೆಲೆವೀಡಾದ ನಿನ್ನಂತಹ ವ್ಯಕ್ತಿಯನ್ನು ನಾವು ಇನ್ನೆಲ್ಲಿಯೂ ಕಂಡು ಅಥವಾ ಕೇಳಿ ಅರಿಯೆವು. ಅದು ಹಾಗಿರಲಿ.

* ಈ ವಚನದಲ್ಲಿ 'ಪ್ರತ್ಯಕ್ಷ' ಶಬ್ದದ ಮುಂಚೆ "[ಮುಮಾಗಿಯುಮ]" ಎಂದೂ, ಮುಂದೆ 'ನಿನ್ನ' ಶಬ್ದದ ಮುಂದೆ "[ಜಸಂ]" ಎಂದೂ ಸೇರಿಸಬೇಕು. ಇದಕ್ಕೆ ಮೂಲವಾದ ಅಸಗನ ಪದ್ಯ ಹೀಗಿದೆ: "ಪ್ರತ್ಯಕ್ಷಮಪ್ರಮಾಣಂ ಚ ಸ್ಥಾಸ್ನು ಲೋಕತ್ರಯೇ ಭ್ರಮತ್ ಅವಿರುದ್ಧಾತ್ಮಕಥಂ ಪ್ರಾಭೂದ್ವಿರುದ್ಧಂ ಭವತೋ ಯಶಃ"

ಮಾಳಿನಿ॥ ಉಭಯಕುಲವಿಶುದ್ಧರ್ ನ್ಯಾಯವಂತರ್ ಜಿತಾತ್ಮರ್
ಪ್ರಭುಗಳಧಿಕಪುಣ್ಯರ್ ಮುನ್ನೆ ನಿಮ್ಮಜ್ಜಪಜ್ಜರ್
ಶುಭಚರಿತ ತವೀಯಾನೂನವಂಶಾಧಿಪತ್ಯ
ಪ್ರಭವನೆಯುದಜಿಂದೀ ದುರ್ಯಶಕ್ಕೆಂತು ನೋಂತೈ ॥ ೭೬ ॥

ಕಂ॥ ಮಾನೋನ್ನತ ನಿರವದ್ಯಕು
ಲೀನ ಮಹಾಪುರುಷ ಪರಧನಂಗಳ ದತ್ತಾ
ದಾನಂಗಳ್ ನಿನಗಾಗವ
ಮಾನುಷಮಿಾರೂಪಿದಕ್ಕಮರಿಯರ ಪೆಂಡಿರ್ ॥ ೭೭ ॥

ಏನಾನುಮೊಂದು ಹೇತುವಿ
ಧಾನದಿನವಿದಿತಮೆ ವಿದಿತವಲ್ಲದೆ ಭವದು
[1]ಧ್ಯಾ[1]ನಮುಮಪ್ಪುದನಱವಿ
ಜ್ಞಾನಿಗೆ ನಿನಗಾಗಲಾಗದೀ ವೃತ್ತಾಂತಂ ॥ ೭೮ ॥

ನಿನಗಂ ದೊರೆಕೊಂಡುದು ತ
ಮ್ಮನಿಂದಮಿಾ ಕಷ್ಟಚೇಷ್ಟಿತಂ ಸಂಸರ್ಗಂ
ಜನಯಿಸುಗುಂ ಗುಣದೋಷೋ
ಪನತತ್ವಮನೆಲ್ಲಿಯುಂ ಮಹೀಮಂಡಳದೊಳ್ ॥ ೭೯ ॥

ಆಗದ ನುಡಿಯನಿದಂ ಕೇ
ಳ್ದಾಗಡೆ ದಮಿತಾರಿ ನಾಣ್ಚಿ ಸಭೆಯೊಳ್ ತಲೆಯಂ
ಬಾಗಿ ಮದೀಯ ಕುಲಕ್ಕಿನಿ
ತಾಗ[2]ಲ[2]ವಳ್[3]ನೆ[3]ಟ್ಟ[4]ನೆ[4]ನಗೆ ಪುಟ್ಟಿದಳಲ್ಲಳ್ ॥ ೮೦ ॥

೭೬. ನಿಮ್ಮ ಅಜ್ಜ, ಮುತ್ತಜ್ಜರು ಮೊದಲಾಗಿ ನಿಮ್ಮ ವಂಶಸ್ಥರೆಲ್ಲರೂ ಉಭಯ ಕುಲ ಪವಿತ್ರರು, ನ್ಯಾಯವಾಗಿ ನಡೆದುಕೊಳ್ಳುವವರು, ಆತ್ಮನಿಗ್ರಹಿಗಳು, ಪ್ರಭುಗಳು, ಪುಣ್ಯಶಾಲಿಗಳು. ಶುಭಚರಿತ್ರನಾದ ನೀನು ಇಂತಹ ಅನಿಂದ್ಯವಾದ ವಂಶದಲ್ಲಿ ಜನ್ಮ ತಾಳಿದವನಾಗಿದ್ದೂ ಈಗ ಇಂತಹ ಅಪಯಶದ ಕಾರ್ಯಕ್ಕೆ ಅದು ಹೇಗೆ ಉದ್ಯುಕ್ತನಾದೆ?

೭೭. ನಿಷ್ಕಲ್ಮಷವಾದ ವಂಶದಲ್ಲಿ ಹುಟ್ಟಿ ಬಂದವನು ನೀನು ; ಅತ್ಯಂತ ಗೌರವಾಸ್ಪದನಾದವನು ; ಲೋಕೋತ್ತರವಾದ ರೂಪವುಳ್ಳವನು. ಪರಧನವಾಗಿರುವ ಸ್ತ್ರೀಯರನ್ನು (ಅವರ ತಂದೆತಾಯಿಗಳು) ಕೊಡದೆ ಇರುವಾಗ ಅಕ್ರಮವಾಗಿ ಎತ್ತಿಕೊಂಡು ಬರುವುದು ನಿನ್ನಂತಹವನಿಗೆ ಯೋಗ್ಯವಲ್ಲ. (ಈ ಪದ್ಯದ ಕೊನೆಯ ಚರಣದಲ್ಲಿ ಶ್ಲೇಷವಿದೆ.)

೭೮. ಯಾವುದೋ ಒಂದು ಉದ್ದೇಶದಿಂದ ಗುಪ್ತವೇಷ ಧರಿಸಿ ಬಂದ ನೀನು ಆ ಗುಪ್ತವೇಷದಲ್ಲಿಯೇ ಹೊರಟುಹೋಗಿದ್ದರೆ ಒಳ್ಳೆಯದಿತ್ತು. ಆದರೆ ಈಗ ನೀನು ತೋರಿದ ಈ ರೀತಿಯಾದ ಅನುಚಿತ ವರ್ತನೆ ನಿನಗೆ ಎಂದೆಂದಿಗೂ ಯೋಗ್ಯವಲ್ಲ.

೭೯. ನಿನ್ನ ತಮ್ಮನ ದುರಾಚರಣೆಯಿಂದಾಗಿ ನೀನೂ ದುರಾಚಾರಿಯಾಗಬೇಕಾಯಿತು. ಈ ಭೂಮಿಯಲ್ಲಿ ಎಲ್ಲಿಯಾದರೂ ಅಷ್ಟೇ—ಗುಣದೋಷಗಳು ಸಂಸರ್ಗದಿಂದಲೆ ಉದ್ಭವಿಸುತ್ತವೆ.

೮೦. ಎಂದೂ ನಡೆಯಲಾಗದಂತಹ ಈ ದುರಾಚಾರದ ವರದಿಯನ್ನು ಕೇಳಿದ ತಕ್ಷಣ ದಮಿತಾರಿರಾಜನು ನಾಚಿಕೆಯಿಂದ ಸಭೆಯಲ್ಲಿ ತಲೆತಗ್ಗಿಸಿದನು. ಹಾಗು "ನನ್ನ ವಂಶಕ್ಕೆ ಇಂತಹ ಕಲಂಕ ತಂದಳೆಂದರೆ, ಈ ಕನ್ಯೆ ನನಗೆ ಹುಟ್ಟಿದವಳೇ ಅಲ್ಲ."

1. ದ್ಯಾ (ಅ) 2. ಳ (ಮ) 3. ಕೆ (ಮ) 4 ಳೆ (ಮ)

ವ॥ ಎಂದು ಸೈರಿಸದಳವಲ್ಲದಳುರ್ದು ಕುಳಾಪವಾದನದ ನುಡಿಯೆಯ್ತರೆ ಕರಗಿ ಕೊರಗಿದಳ್ಕೆರ್ದೆಯನೆಂತಾನುಮೆಂತಾನುಮಾಱಿಸಿ—

ಕಂ॥ ದಂಡಿತವಿರೋಧಿಕುಳನೇ
ಗೊಂಡೆಂ ಗಳ ಗೆಯ್ವುದರಿದು ಕುಡೆ ಕುಡುಗೂಸಂ
ಕೊಂಡೊಯ್ವುದುಚಿತಮಾಯದೆ
ಕೊಂಡೊಯ್ವುದನುಚಿತಮೆಂಬ ನುಡಿಯಂ ನುಡಿದಂ ॥ ೮೧ ॥

ಉಡುಗದಜಡತ್ವಮುಡುಗದ
ಜಡತ್ವಮಮರ್ದಗುಣಮಮರ್ದ ಗುಣಮೆಂಬಿವಱಿಂ
ಬಿಡದೆ ಕುಳಂ ಮಸುಳ್ವೊಡಮೇಸೆ
ವೊಡಂ ಮಗಳ್ ಪುಟ್ಟೆ ಮಸುಳ್ಗುಮೆಸೆಗುಂ ಜಗದೊಳ್ ॥ ೮೨ ॥

ಏಕೆನೆ ಮಗಳಿತರಕುಳಾ
ನೀಕ ಸ್ತ್ರೀಸಂಗದೊಳ್ಗುಣಂ ಕಿಡುಗುಮೆ ಪು
ತ್ರೀಕುಳಮಾಗದೆ ಪರಪುರು
ಷಾಕುಳತೆಯಿನನ್ವಯಕ್ಕೆ ದೂ[1][ಱ][1]ಂ ತಂದಳ್ ॥ ೮೩ ॥

ವ॥ ಎಂಬನ್ನೆಗಂ—

ಕಂ॥ ಕೂಸಂ ತಂದುದನಱಿದಮ
ರಾಸುರ[2]ನಿಭ[2] ಬಲ ಖಗೇಂದ್ರಬಲ ಚತುರಂಗಂ
ಭಾಸುರ ವೀರಭಟಪ್ರವಿ
ಭಾಸಂ ವಾರಾಶಿ ಮೇರೆದಪ್ಪಿದ ತೆಱದಿಂ ॥ ೮೪ ॥

ವ॥ ಎಂದು ನುಡಿದು (ಅಪಮಾನವನ್ನು) ಸಹಿಸಲಾರದೆ ಸಂತಾಪದಲ್ಲಿ ಕುದಿದು, ತನ್ನ ಕುಲಕ್ಕೆ ಕೆಟ್ಟ ಹೆಸರು ಬಂದಿತೆಂದು ಕೊರಗಿ, ಮನನೊಂದು, ತನ್ನ ದೀನವಾದ ಹೃದಯವನ್ನು ಹೇಗೊ ಸಂತೈಸಿಕೊಂಡನು ಮತ್ತು

೮೧. ಶತ್ರುಮರ್ದನನಾದ ಆತನು ಹೀಗೆಂದನು : "ಒಪ್ಪಿಕೊಂಡು ಕನ್ಯೆಯನ್ನು (ಯಥಾವಿಧಿಯಾಗಿ) ಕೊಟ್ಟರೆ ಅವಳನ್ನು ಒಯ್ಯುವುದು ಯೋಗ್ಯವೇ. ಹಾಗೆ ಕೊಡದೆ ಇರುವಾಗ ಎತ್ತಿಕೊಂಡುಹೋಗುವುದು ಅಯೋಗ್ಯ."

೮೨. ಕುಗ್ಗದ (ಸ್ಥಿರವಾದ) ಮೂರ್ಖತನ ಹಾಗೂ ವಿವೇಕ, ಹಾಗೆಯೆ ಗಾಢವಾಗಿರುವ ದುರ್ಗುಣ ಹಾಗು ಸದ್ಗುಣ—ಇವುಗಳಿಂದಾಗಿ ವಂಶಕ್ಕೆ ಕಲಂಕವಾಗಲಿ, ಶೋಭೆಯಾಗಲಿ ಬರುವುದುಂಟು. ಮಗಳು ಹುಟ್ಟಿದರೆ, ವಂಶವನ್ನು ಬೆಳಗುವಳು ಇಲ್ಲವೆ ಕೆಡಿಸುವಳು.

೮೩. ಇತರ ವಂಶಗಳಲ್ಲಿ ಹುಟ್ಟಿದ ಸ್ತ್ರೀಯರ ಸಹವಾಸದಲ್ಲಿದ್ದರೂ ಮಗಳ ಗುಣ ಕೆಡುವುದುಂಟೆ? ಆದರೆ ಈ ನನ್ನ ಮಗಳಿಗೆ ಕನ್ಯೆಯರ ಸಹವಾಸವೆಂದುಕೊಂಡುದು ಪರಪುರುಷಸಹವಾಸವಾದುದರಿಂದ, ಆಕೆ ನನ್ನ ಕುಲಕ್ಕೆ ಅಪವಾದವನ್ನು ತಂದಳು.

ವ॥ ಅವನು ಹೀಗೆನ್ನುವಷ್ಟರಲ್ಲಿ,

೮೪. ಕನ್ಯಾಪಹರಣದ ವೃತ್ತಾಂತವನ್ನು ಅರಿತು, ದೇವದೈತ್ಯರಿಗೆ ಸಮನಾದ ಬಲವುಳ್ಳ ಖೇಚರರ ಚತುರಂಗ ರಾಜಸೈನ್ಯವು ಪ್ರಚಂಡರಾದ ವೀರಯೋಧರಿಂದ ಕೂಡಿಕೊಂಡು ಮೇರೆ ಮೀರಿ ಉಕ್ಕುವ ಸಾಗರದಂತೆ

---

1. ರ (ಮ) 2. ಬಲ (ಅ)

ಕಂ॥ ಬರೆ ಖಗವಂಶಶಿಖಾಮಣಿ
ಬರಲೀಯನೆ ವಿಭುವನಾತನಂ ನೋಯಿಪ್ಪದೇಂ
ಪುರುಷಾರ್ಥಮೆ ಮಂತದೊಳೇಂ
ಕರಿ ಹರಿಯೊಳ್ ಸೆಣಸಿ ಪೋರ್ದು ನಿರ್ವಹಿಸುಗುಮೇ ॥ ೮೫ ॥

ಸಿರಿಯೊಡೆಯನಾಗಿಯುಂ ದ
ರ್ಪರಹಿತನೋದೊಡೆಯನಾಗಿಯುಂ ವಿಗಳಿತಮ
ತ್ಸರನಧಿಕನಾಗಿಯುಂ ನ್ಯಾ
ಯರಕ್ತನೇಂ ಪಿರಿಯನೊ ಖಗೇಂದ್ರಾಧೀಶಂ ॥ ೮೬ ॥

ಆತನನಾರಾಧಿಸಿ ನೃಪ
ನೀತಿವಿದರ್ ಖೇಚರಾವನೀಚರರಾತ್ಮ
ಖ್ಯಾತಿಶ್ರೀಯಂ ಕಾದಭಿ
ಜಾತನೃಪಾನ್ವಯರನೆನಿಬರಂ ಪೆಸರ್ಗೊಳ್ವೆಂ ॥ ೮೭ ॥

ಗುರುವಲ್ಲನೆ ಪತಿ ಪರಮೇ
ಶ್ವರನಾತಂ ತ್ವತ್ಪ್ರಮಾದಮಂ ಸೈರಿಸಿದೊಂ
ನಿರು[1]ತಮಿದೊಂದಂ[1] ಶಂಕಿಸ
ದಿರು ಮುಟ್ಟದು ಗುಣಿಗೆ ದೋಷಿಗಕ್ಕುಂ ದೋಷಂ ॥ ೮೮ ॥

ಬಿಡು ಕನ್ಯಾರತ್ನಮನೀ
ಗಡೆ ಚಕ್ರಿ ಪದ[2]ದ್ವಯ[2]ಕ್ಕೆ ತಡೆದಿರದೆಱಗೇ
ಪಡೆಮಾತೊ ಬಂದು ಕಾಣ್ ಕಂ
ಡೊಡೆ ಪಥ್ಯಮಪಥ್ಯಮಿಾ ಕನಿಷ್ಠಾಚರಣಂ ॥ ೮೯ ॥

---

೮೫. ಎದ್ದು ಬಂದಿತು. ಆದರೆ ಖೇಚರವಂಶಕ್ಕೆ ಚೂಡಾಮಣಿಯಾದ ನಮ್ಮ ಪ್ರಭು ಅವರನ್ನು ಅಲ್ಲಿಯೆ ತಡೆದು ನಿಲ್ಲಿಸಿದನು. ಇಂತಹ ಮಹಾಪುರುಷನನ್ನು ನೋಯಿಸುವುದೇನು ಪುರುಷಾರ್ಥವೆ? ಆನೆ (ಎಷ್ಟೇ ಬಲಿಷ್ಠವಾದರೂ) ಸಿಂಹದೊಡನೆ ಹೋರಾಡಿ ನಿತ್ತರಿಸಬಲ್ಲುದೆ?

೮೬. ದಮಿತಾರಿ ಮಹಾರಾಜನು ಐಶ್ವರ್ಯಾಧಿಪತಿಯಾಗಿದ್ದರೂ ಗರ್ವಿಷ್ಠನಲ್ಲ; ವಿದ್ವಾಂಸನಾಗಿಯೂ ಮತ್ಸರಭಾವವಿಲ್ಲ; ಪರಮಾಧಿಕಾರವುಳ್ಳವನಾದರೂ ನ್ಯಾಯಮಾರ್ಗದಲ್ಲಿಯೆ ನಡೆಯತಕ್ಕವನು. ಎಂತಹ ಹಿರಿಯನೋ ನಮ್ಮ ಖೇಚರರಾಜನು!

೮೭. ಆತನನ್ನು ಓಲೈಸಿ, ತಮ್ಮ ಖ್ಯಾತಿಯನ್ನೂ ಸಂಪತ್ತನ್ನೂ ಉಳಿಸಿಕೊಂಡ ಉತ್ತಮ ರಾಜಕುಲೋತ್ಪನ್ನರಾದ ರಾಜನೀತಿಜ್ಞರನ್ನು ನಾನು ಎಷ್ಟೆಂದು ಹೆಸರಿಸಲಿ?

೮೮. ಆತನು ಹಿರಿಯನು; ಅಲ್ಲದೆ ಪರಮೇಶ್ವರನು; ನಿನ್ನ ತಪ್ಪನ್ನು ಕ್ಷಮಿಸಿದ್ದಾನೆ. ಇದು ನಿಶ್ಚಿತವಾದ ಮಾತು. ಇದರಲ್ಲಿ ನಿನಗೆ ಸಂಶಯ ಬೇಡ. ದೋಷವು ದೋಷಿಗಲ್ಲದೆ ಗುಣವಂತನಿಗೆ ತಗುಲುವುದಿಲ್ಲ.

೮೯. (ಆದುದರಿಂದ) ಈಗಿಂದೀಗಲೆ ಕನ್ಯಾರತ್ನವನ್ನು ಬಿಟ್ಟುಕೊಡು. ಚಕ್ರವರ್ತಿಯ ಪಾದಗಳಿಗೆ ತಡಮಾಡದೆ ಬಾಗು. ಬೇರೆ ಮಾತೇನು? ಬಂದು ಆತನನ್ನು ಕಾಣು. ನಾನು ಹೇಳಿದಂತೆ ಹೋಗಿ ಕಾಣುವುದು ನಿನಗೆ ಹಿತಕರ; ಹಾಗೆ ಮಾಡದೆ ಹೋದರೆ ನಿನ್ನ ಆಚರಣೆ ಕನಿಷ್ಠವೂ ಅಹಿತಕರವೂ ಆದೀತು.

---

1. ಪಮಮಿದೆಂದು (ಮ) 2. ದ್ವಿತಕ್ಕೆ (ಅ)

ವ॥ ಎಂದು ಸಾಮಪೂರ್ವಕಮಕ್ರಮಣಾವಸಾನಾನಂದಿತ ಗಂಭೀರೋದಾರಸಾರ ಭಿನ್ನನಯ ಸಂತತಿ ಸಮಸ್ವಿತಮನಱಿಯೆ ತೆಱಿಯೆ ನೆಱಿಯೆ ನುಡಿದು ಪ್ರೀತಿವರ್ಧನಂ ಮಾಣ್ಬುದುಂ—

ಕಂ॥ ಮುನಿದೊಡನೆ ಕೆಳರ್ದು ನುಡಿದನು
ಜನಂ ಕಷಾಯಾಕ್ಷನಂ ಸ್ಫುರತ್ಸೃಕ್ವನನೊ
ಯ್ಯನಿರೆಂದು ತಿತಿಕ್ಷಾನ್ವಿತ
ನನಾಕುಳಂ ನುಡಿಗುಮೆಸೆಯೆ ದಶನದ್ಯುತಿಗಳ್ ॥ ೯೦ ॥

ನಾಲ್ಕುಮುಪಾಯದ [1]ಎಳಗದ[1]
ಸಿಲ್ಕಾಸಿಲ್ಕಿಗಳನೆಯ್ದೆ ನುಡಿದೈ ಕ್ರಮದಿಂ
ಬಲ್ಕಣೆಯೈ ನಯದೊಳ್ನುಡಿ
ಯ[2]ಲ್ಕಲ್ವೊಂ[2] ಕಲ್ವುದಲ್ತೆ ನಿ[3]ನ್ನೊ[3]ಂದಿಗರೊಳ್ ॥ ೯೧ ॥

ಮಂದಾಕ್ರಾಂತಂ॥ ಎನ್ನುದ್ಯೋಗಂ ಪ್ರಕಟಮಱಿಯಲ್ಬರ್ಕುಮಾವಂಗಮೆಂತುಂ
ಮುನ್ನಂ ಪೇಟ್ದಟ್ಟೆನೆ ನೆಱಿಯೆ ಪೇಟ್ವೋ[4]ಟನೇ[4]ಸೌವಿದಂ ಕೇಳ್
ನಿನ್ನೀ ವಾಚಾಳತೆಯ ಬಲದಿಂದಂತರಾಳಂಗಳಂ ಸಂ
ಭಿನ್ನಾಳಾಪಂಗಳನಲಸದೇ ಕಾರಣಕ್ಕೆತ್ತಿಕೊಂಡಯ್ ॥ ೯೨ ॥

ಕಂ॥ ಅರಸರ ಮಗನಧಟಂ ಪಗೆ
ವರ ಚಿತ್ರಮನಱಿದುಮನುವರಕಹಿತಂ ಬಂ
ದಿರೆ ಪೆರ್ಗಡೆತನಮಟ್ಟುವ
ನರಾತಿ ಬೆನ್ನಟ್ಟೆ ನೆಟ್ಟನೋಡುವನಕ್ಕುಂ ॥ ೯೩ ॥

ವ॥ ಈ ಪ್ರಕಾರವಾಗಿ ಸಾಮೋಪಾಯದಿಂದಲೆ ಅಪರಾಜಿತನನ್ನು ಸಂಪೂರ್ಣವಾಗಿ ಆಕ್ರಮಿಸಿ, ಆನಂದಿತನಾಗಿ, ಗಂಭೀರವೂ ಸಾರಗರ್ಭಿತವೂ ಆದ ಹಾಗು ನೀತಿಮಾರ್ಗಕ್ಕೆ ಅನುಸಾರವಾದ ಮಾತುಗಳನ್ನು ಸುಸ್ಪಷ್ಟವಾಗಿಯೂ ನಿಃಸಂಕೋಚವಾಗಿಯೂ ನುಡಿದು ಪ್ರೀತಿವರ್ಧನನು ಸುಮ್ಮನಾದನು.

೯೦. ಈ ಮಾತನ್ನು ಕೇಳುತ್ತಲೆ ಕೆರಳಿ, ಅನಂತವೀರ್ಯನ ಕಣ್ಣು ಕೆಂಪಡರಿದುವು; ಅಬ್ಬರಿಸಿ ನುಡಿವ ಆತುರದಿಂದ ಕೆಳದುಟಿ ಸ್ಫುರಿಸತೊಡಗಿತು. ಆಗ ಶಾಂತಸ್ವಭಾವದ ಅಪರಾಜಿತನು ಸುಮ್ಮನಿರೆಂದು ಆತನಿಗೆ ಸೂಚಿಸಿ ದೂತನಿಗೆ ಹೀಗೆಂದು ಉತ್ತರಿಸಿದನು :

೯೧. "ಸಾಮದಾನಾದಿ ನಾಲ್ಕೂ ಉಪಾಯಗಳನ್ನು ಚನ್ನಾಗಿ ಅಳವಡಿಸಿಕೊಂಡು ಕ್ರಮವಾಗಿ ನುಡಿದ ನೀನು ಬಲು ಜಾಣನಾಗಿರುವೆ. ನಯವಾದ ನುಡಿಗಳನ್ನು ಕಲಿಯಬೇಕೆಂಬುವನು ನಿನ್ನಂಥವರಿಂದಲೆ ಕಲಿಯಬೇಕಲ್ಲವೆ?

೯೨. ನಾನು ಕೈಕೊಂಡ ಕ್ರಮಕ್ಕೆ ಉದ್ದೇಶವೇನೆಂಬುದು ಯಾವನಿಗಾದರೂ ತಿಳಿದುಬರುವಷ್ಟು ಸ್ಪಷ್ಟವಾಗಿದೆ. ಈ ಮುಂಚೆಯೆ ನಾನು ಹೇಳಿಕಳಿಸಲಿಲ್ಲವೆ? ನಿಮ್ಮ ಕಂಚುಕಿಯು ಬಂದು ಬಹಿರಂಗವಾಗಿ ಈ ಮಾತನ್ನು ತಿಳಿಸಿ ಹೇಳಿದ್ದರೂ ಕೂಡ, ನೀನು ಬಾಯ್ಬಡಿಕತನದ ಬಲದಿಂದ ಇಂತಹ ಅಸಂಬದ್ಧ ಪ್ರಲಾಪಕ್ಕೆ ಆತುರದಿಂದ ಹೊರಟು ಬಂದಿರುವೆ. ಇದೇತಕ್ಕೆ ಬೇಕಾಗಿತ್ತು?

೯೩. ಶತ್ರುವಿನ ಉದ್ದೇಶ ಸ್ಪಷ್ಟವಾಗಿ ತಿಳಿದುಬಂದಿದೆ. ಆತನು ಯುದ್ಧಕ್ಕೆಂದು ಬಾಗಿಲಿಗೇ ಬಂದಿದ್ದಾನೆ. ಹೀಗಿರುವಾಗ ಕ್ಷತ್ರಿಯ ಪುತ್ರನಾದವನು, ಶೂರನೆನಿಸಿಕೊಂಡವನು ಎಂದಾದರೂ ವೈರಿಯೆಡೆಗೆ ಮತ್ತೆ ದೂತನನ್ನು ಅಟ್ಟುವನೆ? ಹಾಗೆ ಮಾಡುವವನಾದರೆ, ಆತನು ಎದುರಾದವನಿಗೆ ಬೆನ್ನು ತೋರಿಸಿ ಓಡಿಹೋಗುವ ಹೇಡಿಯೇ ಸರಿ.

1. ನುಡಿಗಳ (ಮ) 2. ಲ್ಕೊಂಕಂ (ಮ) 3. ಮ್ಮ (ಅ) 4. ಟಿ ನೀಂ (ಮ)

ವ॥ ನಿನ್ನ ಬಂದ ಬರವಿಂಗೆಮ್ಮ ಮನಂ ಮೊದಲಾಗಿ ನಾಣ್ಚಿದಪುದು ಈ ವಿದ್ಯಾಧರಶ್ರೇಣಿಯ ಪರಿಭಾಷೆಗಳ್ ನಿನ್ನವಾಗದೆ ಸಾಮಂ ಪ್ರಿಯಜನಪ್ರಯೋಜ್ಯಂ ಅಲ್ಲದೆಡೆಯೊಳುನ್ಮತ್ತವಿಳಸಿತಂ ದಾನಂ ದುರ್ಬಲ ಲುಬ್ಧಪ್ರಸ್ತುತಂ ಭೇದಂ ಕೃತ್ಯ[1]ಪೇ[1]ಕ್ಷೋಪೇತ ಭೂಪಾಲ ಪ್ರಾಪ್ತಂ ದಂಡಂ[2] ಪೌರುಷಾತ್ಮಯೋಚಿತಂ ಈ ಪೇಟ್ದನಿಬರೊಳಪೊರ್ವರುಮಲ್ಲೆಮೆನುಡಿಯುಪಾಯಂಗಳನೆನಗೆ ಪೇಟ್ವಿಂದಂ ನಿನ್ನೆಯ್ದಿದ ನವ ಕವಿತ್ವಮಂ ನೀನಭಿನಯಿಸಿದಂತಾಗಿರ್ದಪುದು ಪೊಲಕ್ಕೊಡ್ಡಿದ ಬಲೆಯೊಳ್ ಮೃಗರಾಜಂ ತೊಡರ್ಗುಮೆ ನಿಮ್ಮರಸಂ ಸುಕುಮಾರಚಕ್ರವರ್ತಿ ನಡೆದೊನಿಲ್ಲಿವರಂ ಬರಲಾಱನದಱಿಂದಮಾತನೆಲ್ಲಿರ್ದನಲ್ಲಿವರಮಾನೆ ಪೋಗಿ ಕಾದುವೆನೆಂದು ತಱಿಸಂದು ಕಟ್ಟಾಳಾಗಿ ನಿನ್ನ ಬರ್ಪಾಗಳೆ ಪರ ಲೆಂದಿರ್ದನೆನ್ನ ತಮ್ಮನನತ್ಯಾಗ್ರಹದಿಂದಂ ಮಾಣಿಸಿದೆನೆಂದೆನಿತಾನುಂ ತೆಱದಿಂ ಸೌಜನ್ಯಕಂದಾಂಕುರಂ ಗರ್ಜಿಸಿ ದೂತನಂ ವಿಸರ್ಜಿಸಿದೊಡಾತನುಂ ಬಂದನಿತುಮಂ ದಮಿತಾರಿಗೆ ಸಭಾಮಧ್ಯದೊಳಱಿಪುವುದುಂ—

ಕಂ॥ ತದನಂತರಮರಿಯುದ್ಯೋ
ಗದ ಮಾತಂ ಕೇಳ್ದು ನಕ್ಕು ದಮಿತಾರಿ ಸಭಾ
ಸದರಂ ಪೋಗಲ್ವೇಟ್ದಿರ
ದುದಾತ್ತಮತಿ ಕರೆದು ಬೆಸಸೆ ಸೇನಾಧಿಪನಂ ॥ ೯೪ ॥

ಆತನ ಪೊಯ್ಸಿದ ಭೇರೀ
ಜಾತರವಂ ಖಚರಪತಿಯನಪರಾಜಿತನೇ
ಮಾತೊ ತಡೆದಿರದೆ ಗೆಲ್ದಪ
ನೀತಳಮಂ ತಳೆಗುಮೆಂದು ಸಾಱುವ ತೆಱದಿಂ ॥ ೯೫ ॥

ವ॥ ಹೀಗೆ ನೀನು ದೂತಕಾರ್ಯವನ್ನೆತ್ತಿಕೊಂಡು ಬಂದುದನ್ನು ಕಂಡು ನನಗೇ ನಾಚಿಕೆಯಾಗಿಸಿಸಿದೆ. ನೀನಾಡಿದ ಮಾತು ನಿಮ್ಮ ವಿದ್ಯಾಧರ ಶ್ರೇಣಿಯ ಪರಿಭಾಷೆಯಾಗಿರದೆ ನಿನ್ನದೇ ಆಗಿರಬೇಕು. ಪ್ರಿಯಜನರ ಮೇಲೆ ಸಾಮೋಪಾಯವನ್ನು ಪ್ರಯೋಗಿಸಬೇಕು ; ಹಾಗಲ್ಲದಲ್ಲಿ ಅದು ಉನ್ಮತ್ತ ಪ್ರಲಾಪವಾದೀತು. ದುರ್ಬಲನಾಗಿ ಲೋಭಿಯಾದವನ ವಿಷಯದಲ್ಲಿ ದಾನೋಪಾಯವೇ ಯೋಗ್ಯ. ಯಾರ ಮಂತ್ರಿ ಮೊದಲಾದ ಪ್ರಕೃತಿಗಳು ಅಸಂತುಷ್ಟರಾಗಿರುವರೊ ಅಂಥ ಅರಸನ ಮೇಲೆ ಭೇದೋಪಾಯವನ್ನು ಪ್ರಯೋಗಿಸಬೇಕು. ಪೌರುಷಹೀನನಾದವನಿಗೆ ದಂಡೋಪಾಯವನ್ನು ಅನ್ವಯಿಸಬೇಕು. ಈ ನಾಲ್ಕರಲ್ಲಿ ಯಾವ ವರ್ಗಕ್ಕೂ ನಾವು ಸೇರಿದವರಲ್ಲ. ಹೀಗಿರುವಾಗ ಈ ಚತುರುಪಾಯಗಳನ್ನು ನನಗೆ ಹೇಳಹೊರಟ ನೀನು ನಿನ್ನ ನವಕವಿತ್ವವನ್ನು ಅಭಿನಯಿಸಿ ತೋರಿಸಿದಂತಾಗಿದೆ. (ರಾಜನೀತಿಗೆ ನೀನು ಹೊಸಬನಾಗಿದ್ದು, ನಿನ್ನ ಮೂರ್ಖತನವನ್ನು ಹೀಗೆ ಸ್ಪಷ್ಟಗೊಳಿಸಿರುವೆ.) ಪೊಲಕ್ಕೆಂದು ಇಟ್ಟ ಬಲೆಯಲ್ಲಿ ಸಿಂಹವೆಂದಾದರೂ ಸಿಕ್ಕಿಕೊಂಡೀತೆ? ಪಾಪ! ನಿಮ್ಮ ಅರಸನು ಬಲು ನಾಜೂಕು ಪ್ರಕೃತಿಯ ಚಕ್ರವರ್ತಿ ; ಇಲ್ಲಿಯವರೆಗೆ ನಡೆದುಕೊಂಡು ಬರಲಾರನು. ಆದುದರಿಂದ ಆತನೆಲ್ಲಿರುವನೊ ಅಲ್ಲಿಗೆ ನಾನೇ ಬಂದು ಕಾಳಗ ಮಾಡುವೆನೆಂದು ನನ್ನ ತಮ್ಮನು ನಿಶ್ಚಯಿಸಿ, ನೀನು ಇಲ್ಲಿಗೆ ಬರುವಷ್ಟರಲ್ಲಿ ಹೊರಡಬೇಕೆಂದಿದ್ದನು. ತುಂಬ ಒತ್ತಾಯ ದಿಂದ ಆತನನ್ನು ನಾನು ತಡೆಹಿಡಿದಿರುವೆನು." ಈ ಪ್ರಕಾರವಾಗಿ ಅಪರಾಜಿತನು ಗಂಭೀರವಾಗಿ ನುಡಿದು ಆ ದೂತನನ್ನು ಮರಳಿ ಅಟ್ಟಿದನು. ಹೀಗೆ ಮರಳಿದ ದೂತನಾದರೂ ನಡೆದ ವಿಷಯವನ್ನೆಲ್ಲ ದಮಿತಾರಿಗೆ ಸಭಾಸ್ಥಾನದಲ್ಲಿ ಅರಿಕೆ ಮಾಡಿದನು.

೯೪. ಶತ್ರು ಹೇಳಿಕಳಿಸಿದ ಯುದ್ಧದ ಮಾತನ್ನು ಕೇಳಿ ನಕ್ಕು, ದಮಿತಾರಿಯು ಸಭೆಯನ್ನು ವಿಸರ್ಜಿಸಿದನು. ಹಾಗು ಸೇನಾಪತಿಗೆ ಯುದ್ಧಸನ್ನಾಹದ ಆಜ್ಞೆಯನ್ನು ಕಳಿಸಿದನು.

೯೫. ಆತನು ಹೊಡೆಯಿಸಿದ ಭೇರಿಯ ಧ್ವನಿ "ಈ ಖೇಚರರಾಜನು ಎಷ್ಟರವನು ? ಅದೇನು ಮಾತು ಬಿಡು. ಅತಿ ಸುಲಭವಾಗಿ ಅಪರಾಜಿತನು ಈತನನ್ನು ಗೆದ್ದು ಬಿಡುವನು" ಎಂದು ಸಾರುವ ಹಾಗೆ

---

1. ಪ್ರೇ (ಮ) 2. +ದೈವ (ಅ)

ಕಂ॥ ದೆಸೆದೆಸೆಗೆಸೆವುದುಮದನಾ
ಲಿಸಿ ಚಕ್ರಿಗೆ ಸುರನೊ ದನುಜನೋ ಮೇಣ್ ಪೇಟ್ ಮಾ
ನಸನೊ ರಥಾಂಗಾಯುಧದೇ
ರ್ವೆಸಕ್ಕೆ ಪಕ್ಕಾದನೆನುತು ಮಾಱುಂ ಬಲಮುಂ ॥ ೯೬ ॥

ವ॥ ಅಂಬುಧಿವೇಳಾವಿಳಾಸೋಪಹಾಸಿಯಾಗಿ ನೆರೆದರಮನೆಯ ಬಾಗಿಲ್ಗೆ ಬಂದು ಗಜತುರಗರಥಪದಾತಿಪ್ರಕಾರದಿನತಿಕುಪಿತಾಂತಕಾಟೋಪಮಂ ಕೆಯ್ಕೊಂಡು ನಿಲೆ—

ಕಂ॥ ಪೂರಿತ ರಣಶಂಖ ಗಭೀ
ರಾರಾವಂ ದೆಸೆಯ ಕೋಣ ಕುಸುಕುಜ ಗಜಘಂ
ಟಾರವಮನುಱದೆ ಪೆಱಗಿಡೆ
ಭೈರವಮೆಸೆದತ್ತು ಚರದ ಬಲಜಲನಿಧಿಯೊಳ್ ॥ ೯೭ ॥

ವ॥ ಮತ್ತಮಲ್ಲಿ—

ಮ॥ ನರಕೀಟದ್ವಯಸಂಗರಕ್ಕೆ ಖಚರೇಂದ್ರಾಧೀಶನಿಂತೇಕೆ ಕಾ
ತರನಪ್ಪಂ ಗಡಮೆಂದು ನಕ್ಕುಮದಟಂದಾನೊರ್ವನೊರ್ವಂ ವಿಯ
ಚ್ಚರನೀ ಸೈನ್ಯಮನಂತಮಿರ್ವರಹಿತರ್ [1]ಚೀ[1] ನಾಣ ಪುತ್ತೆಂದು ದು
ರ್ಧರ ಗಾತ್ರತ್ರಮನೊಲ್ದನಿಲ್ಲಿಱವರೇ ಬಲ್ಲಾಳ್ಗಳೇಕಾಕಿಯಂ ॥ ೯೮ ॥

---

೯೬. ದಿಕ್ಕುದಿಕ್ಕಿಗೆ ಹರಡಿತು. ಅದನ್ನು ಕೇಳಿ, "ಈ ಚಕ್ರವರ್ತಿಯನ್ನು ಎದುರಿಸಿ ಈತನ ಚಕ್ರಾಯುಧದ ಆಘಾತಕ್ಕೆ ಪಕ್ಕಾಗುವವನು ತಾನೇನು ದೇವತೆಯೊ, ದೈತ್ಯನೊ ಅಥವಾ ಮನುಷ್ಯನೊ—ಯಾವನವನು ?" ಎಂದು ಕೊಳ್ಳುತ್ತ ಆರು ಪ್ರಕಾರದ ಸೈನ್ಯಗಳೂ

ವ॥ ಸಾಗರ ತೀರದ ವಿಸ್ತಾರವನ್ನು ಹೀಯಾಳಿಸುವಂತೆ ಅಬ್ಬರಿಸಿ ನೆರೆದು, ಅರಮನೆಯ ಮಹಾದ್ವಾರಕ್ಕೆ ಬಂದು, ಆನೆ, ಕುದುರೆ, ರಥ ಪದಾತಿಗಳಿಂದೊಡಗೂಡಿ ಮುಳಿದ ಮೃತ್ಯುದೇವತೆಯಂತೆ ಆರ್ಭಟಿಸಿ ನಿಂತುವು.

೯೭. ಕಾಲಾಳುಪಡೆಯ ಸಾಗರಸದೃಶ ಸಮೂಹದಲ್ಲಿ ಊದುತ್ತಿರುವ ರಣಶಂಖಗಳ ಅದ್ಭುತವಾದ ಧ್ವನಿ, ದಿಕ್ಕುಗಳ ತುದಿವರೆಗೆ ನುಗ್ಗಿ, ದಿಗ್ಗಜಗಳ ಗಂಟೆಯ ನಿನಾದವನ್ನು ಅಡಗಿಸುವಂತೆ ಹಬ್ಬಿತು.

ವ॥ ಮತ್ತು ಅಲ್ಲಿ—

೯೮. "ಕೀಟಕಸಮಾನರಾದ ಇಬ್ಬರು ಮನುಷ್ಯಮಾತ್ರರ ಯುದ್ಧಕ್ಕೆ ಖೇಚರಚಕ್ರವರ್ತಿಯಾದವನು ಇಷ್ಟೇಕೆ ಕಾತರಗೊಳ್ಳಬೇಕು?" ಎಂದು ನಕ್ಕು ವೀರನಾದ ಯೋಧನೊಬ್ಬನು ನುಡಿದನು. "ಖೇಚರರಾಜನ ಈ ಸೈನ್ಯವಾದರೋ ಅನಂತವಾಗಿದೆ, ಶತ್ರುಗಳೆಂಬವರು ಇಬ್ಬರೇ ಇಬ್ಬರು. ಛೀ! ಇದು ನಾಚಿಕೆಗೇಡು" ಹೀಗೆನ್ನುತ್ತ ಇನ್ನೊಬ್ಬ ವೀರನು (ಈ ಕಾಳೆಗದಲ್ಲಿ) ತನಗೆ ಬಿಲಹತ್ತು ಕೂಡ ಬೇಡವೆಂದನು. ಪರಾಕ್ರಮಿಗಳಾದವರು ಏಕಾಕಿಯನ್ನು ಆಕ್ರಮಿಸಿ ಇರಿಯುವರೆ ?

---

1. ಚೀ (ಮ)

ಕಂ॥ ಅರಿಯಾವೊನವನ ಪೆಸರೇ
ನರಾತಿ ಬಳ ಜಳಧಿವಳಯಮೆನಿವಿರಿದು ಬಲಂ
ಪಿರಿದಪ್ಪ ಚಕ್ರವರ್ತಿಗ
ಮಿರದನಿತಂ ಮಾಡಿದಾತನಧಟೇವಿರಿದೋ ॥ ೯೯ ॥

ವ॥ ಎಂದೋರೊರ್ವರೊಂದೊಂದಂ ನುಡಿವುದುಂ ಮತ್ತೊಂದೆಡೆಯೊಳ್—

ಕಂ॥ [1]ಗಾ[1]ರಟಿಗೆಯುಃಕ್ಕಡದ ವಿಯ
ಚ್ಚರರಂ ಪೇಸೇ[2]ಱಿ[2] ಕೊಂದರೋ ಭೋಂಕನೆ ನೋ
ೞರೆ ಬೀದಿ ವೀದಿಯಂ ದೆಸೆ
ವರಿವರಿದಪರಿದರ ತೆಱಸನಱವಿರೆ ಪೇ[3][ಱಿ][3]ಂ ॥ ೧೦೦ ॥

ವ॥ ಎಂದತಿವಿಹಸ್ತ ನಗರನಾರೀಜನಂಗಳನಂಜದಿರಿಮಂಜದಿರಿಮೆನುತುಂ ರಾಜಮಂದಿರಾಂತಬಹಿರ್ಭಾಗ ಭೂಮಿತಳ ಪ್ರದೇಶದೊಳ್ ಮೇಳೈಸಿ ಬಂದು ನಿಂದ ಸೈನಿಕಪ್ರಧಾನರೊಳ್—

ಕಂ॥ ಕವಚ ನವರತ್ನ ದೀಧಿತಿ
ನಿವಹಾರುಣ ಧವಳ ಕಿರಣಮಪರಾಜಿತನು
ತ್ರವಳನಿಸೆ ದೂರಪಾತೇ
ಷುವೇಧದೊಳ್ ಪುಣ್ಣ ಸರಲ ಪುದಿವಂ ಪೋಲ್ತುಂ ॥ ೧೦೧ ॥

ವ॥ ಅಂತು ನೆಱೆದ ಚಾತುರ್ದಂತಬಲಜಲಧರರಭಸಂ ಪ್ರಭಿನ್ನಬ್ರಹ್ಮಾಂಡಖಂಡಶಂಕೆಯಂ ಪುಟ್ಟಿಸೆ ತೊಟ್ಟನೆ ಕೊಳೆ ತದ್ವಿಯಚ್ಚರ ಸೇನಾ ವ್ಯಾಜೃಂಭಣಮಾ ಪ್ರಸ್ತಾವದೊಳ್—

---

೯೯. "ಈ ಶತ್ರು ಯಾವನವನು ? ಅವನ ಹೆಸರೇನು ? ಶತ್ರುವಿನ ಸೈನ್ಯಸಮೂಹ ಎಷ್ಟು ದೊಡ್ಡದಾಗಿದೆ ? ಮಹಾಬಲಶಾಲಿಯಾದ ನಮ್ಮ ಚಕ್ರವರ್ತಿಗೆ ಕೂಡ ಇಷ್ಟೊಂದು ಆತಂಕವನ್ನುಂಟುಮಾಡಿದನೆಂದರೆ ಆತನ ಪರಾಕ್ರಮ ಅದೆಷ್ಟು ಘನವಾದುದು !"

ವ॥ ಹೀಗೆ ಒಬ್ಬೊಬ್ಬರು ಒಂದೊಂದು ರೀತಿಯಾಗಿ ನುಡಿಯುತ್ತಿದ್ದರು. ಇನ್ನೊಂದು ಕಡೆಗೆ—

೧೦೦. "ಕಾವಲುಪಡೆಯ ಹಾಗು ಪಹರೆಯ ಜನನನ್ನು ಯಾರಾದರೂ ಒಮ್ಮೆಲೆ ಅಜಿಗಿಜಿಯಾಗಿ ಕೊಂದು ಹಾಕಿದರೊ ಏನು ? ನೋಡಿ, ಬೀದಿಬೀದಿಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಓಡಿಹೋಗುತ್ತಿರುವರಲ್ಲ ಜನ ? ಅದುವಾದರೂ ಏನು ? ತಿಳಿದಿದ್ದರೆ ಹೇಳಿ."

ವ॥ ಹೀಗೆಂದು ಗಾಬರಿಗೊಂಡು ಕಕ್ಕಾವಿಕ್ಕಿಯಾದ ನಗರದ ಸ್ತ್ರೀಯರಿಗೆ "ಅಂಜಬೇಡಿ, ಅಂಜಬೇಡಿ" ಎಂದು ಹೇಳುತ್ತ ಅರಮನೆಯ ಅಂಗಳಕ್ಕೆ ಬಂದು ಗುಂಪುಗೂಡಿ ನಿಂತ ಸೇನಾಮುಖ್ಯರ ಪೈಕಿಯಲ್ಲಿ

೧೦೧. ತೊಟ್ಟುಕೊಂಡ ರತ್ನಖಚಿತವಾದ ಕವಚಗಳಿಂದ ಬಿಳಿಯ ಹಾಗು ಕೆಂಬಣ್ಣದ ಕಿರಣಗಳು ಹೊಮ್ಮುತ್ತಿದ್ದವು. ಅಪರಾಜಿತನು ದೂರದಿಂದಲೆ ಬಾಣಪ್ರಯೋಗ ಮಾಡಲಾಗಿ ಅವನ ಹೊಳೆಯುವ ಬಾಣಗಳು ಇವರ ಮೈಯಲ್ಲಿ ನಟ್ಟು ನಿಂತು, ಗಾಯಗಳಿಂದ ನೆತ್ತರು ಹೊಮ್ಮಿತೊ ಏನೊ ಎಂಬಂತೆ ಅದು ತೋರಿತು. (ಬಿಳಿಯ ಕಿರಣಗಳು ಬಾಣದಂತೆಯೂ, ಕೆಂಗಿರಣಗಳು ಗಾಯದ ರಕ್ತದಂತೆಯೂ ಒಂದರೊಡನೊಂದು ಬೆರೆತುಕೊಂಡಂತೆ ಇತ್ತು ಎಂಬುದು ಇದರ ಭಾವ.)

ವ॥ ನೆರೆದ ಗಜಸೈನ್ಯವೆಂಬ ಮೇಘಸಮೂಹದ ರಭಸವು ಬ್ರಹ್ಮಾಂಡವನ್ನೆ ಒಡೆಯುವುದೆಂಬ ಶಂಕೆಯನ್ನುಂಟು ಮಾಡುತ್ತಿತ್ತು. ಹೀಗೆ ಖೇಚರ ಸೇನಾಸಮೂಹವು ಕೂಡಲೆ ಸಿದ್ಧವಾಗಲು—

---

1. ಘ (ಅ) 2. ಱಿ (ಮ) 3. ಱಿಂ (ಮ)

ಕಂ॥ ಸ್ಯಂದನಮದಗಜಕೇತನ
ಸಂದೋಹದೊಳೆಯ್ದೆ ಸೆಣಸಿದಂತಿರೆ ನಭದೊಳ್
ಸಂಧಿಸಿ ನಿಂದುವು ಕೇತುಗ
ಳಂದಪಜಯಹೇತುಗಳ್ ಖಗೇಂದ್ರಾಧಿಪನಾ ॥ ೧೦೨ ॥

ಪೊತ್ತಿ ಪೊಗೆದುವು ದಶಾಶಾ
ಭಿತ್ತಿಗಳುರಿದುದು ನಭಂ ನೆಲಂ ಮೊಳಗಿದುದೊಂ
ಭತ್ತುಂ ಗ್ರಹಂಗಳ[1][ಲ್ಕಾ][1]
ಡುತ್ತಿರ್ದುವು ಬಿದ್ದುವಳ್ಕೆ ಪಗಲುಳ್ಕಂಗಳ್ ॥ ೧೦೩ ॥

ಉ॥ ನಾಗತರಂಗಳೊಂದೆ ಕಳಭಕ್ಕೆ ಮೊಗಂದಿರಿದತ್ತು ಶೋಕದು
ದ್ವೇಗದೆ ಸಾಲಭಂಜಿಕೆಗಳಟ್ಟುವು ಪಟ್ಟದ ದಂತಿ ಪಟ್ಟದಿಂ
ಪೋಗದೆ ಬಿಟ್ಟುದಟ್ಟುವಿಳೆಯೊಳ್ ನಿಧಿಗಳ್ ಕರುಮಾಡಮೋರೆವೋ
ಯ್ತೋಗಡಿಸಿತ್ತು ಚಿತ್ತದ ಮುದಂ ಗಗನೇಚರಚಕ್ರವರ್ತಿಯಾ ॥ ೧೦೪ ॥

ಕಂ॥ ಕುದುರೆಗಳ ಬಾಲದಿಂ ಕೆಂ
ಡದ ತಂಡಂ ಭೋಂಕನುದಿರ್ದುವದಿರ್ದತ್ತು ದಲೇ
ಱಿದ ಸಿಂಹಪೀಠಮಿರದೊ[2][ಱ]
ಲಿದು[2]ದು ಪುರಶ್ರೀ ತ್ರಿಖಂಡಭೂವಲ್ಲಭನಾ ॥ ೧೦೫ ॥

ಗಟಗಟ ಸುರಿದುವು ಕಣ್ಬನಿ
ಪಟಲೆಪ್ಪದ ರೂಪುಗಳ್ಗೆ ರಾಜ್ಯಾಂಗಂಗಳ್
ಕಟಕುಟಮಾಗಿರ್ದುವು ತ
ತ್ತಟಗುದಿದುವು ಭವನದೀರ್ಘಿಕಾಚ್ಛಜಲಂಗಳ್ ॥ ೧೦೬ ॥

---

೧೦೨. ರಥಗಳ ಹಾಗು ಆನೆಗಳ ಮೇಲೇರಿಸಿದ 'ಕೇತು' (ಧ್ವಜ)ಗಳ ಸಮೂಹದೊಡನೆ ಹೋರಾಡಲು ಬಂದುವೊ ಏನೊ ಎಂಬಂತೆ, ಆಕಾಶದಲ್ಲಿ ಅಪಜಯ ಸೂಚಕವಾದ 'ಕೇತು' (ಧೂಮಕೇತು)ಗಳು ನೆರೆದು ನಿಂತುವು.

೧೦೩. ಹತ್ತೂ ದಿಕ್ಕುಗಳಲ್ಲಿ ಬೆಂಕಿ ಹೊತ್ತಿ ಹೊಗೆಯೆದ್ದಿತು ; ಆಕಾಶ ಉರಿಯಿತು ; ಭೂಮಿ ಗುಡುಗಿತು ; ಒಂಬತ್ತೂ ಗ್ರಹಗಳು ಥರಥರ ನಡುಗಿದುವು ; ಭೀಕರವಾಗಿ ಹಗಲುಲ್ಕೆಗಳು ಬಿದ್ದುವು.

೧೦೪. ಶ್ರೇಷ್ಠವೆನಿಸಿದ ಆನೆ ಮರಿಯಾನೆಯನ್ನು ಎದುರಿಸಲಾರದೆ ಬೆನ್ನು ತೋರಿಸಿತು ; ಶೋಕೋದ್ವೇಗದಿಂದ ಪುತ್ಥಳಿಗಳು ಅತ್ತುವು ; ಪಟ್ಟದ ಆನೆ ಮುಂದೆ ಸಾಗದೆ ಕೆಳಕ್ಕೆ ಬಿದ್ದಿತು ; ನಿಧಿಗಳು ನೆಲದಲ್ಲಿಯೆ ಮುಳುಗಿದುವು ; ಉಪ್ಪರಿಗೆಯ ಗೋಡೆ ಕುಸಿದು ಓರೆಯಾಯಿತು ; ಖೇಚರಚಕ್ರವರ್ತಿಯ ಮನಸ್ಸಿನಲ್ಲಿ ಈವರೆಗಿದ್ದ ನೆಮ್ಮದಿ ನಷ್ಟವಾಗಿ ಹೋಯಿತು.

೧೦೫. ಕುದುರೆಗಳ ಬಾಲದಿಂದ ತಂಡತಂಡವಾಗಿ ಕೆಂಡಗಳು ಉದುರಿದುವು ; ಕುಳಿತುಕೊಂಡ ಸಿಂಹಾಸನ ಅದುರಿತು ; ತ್ರಿಖಂಡಾಧಿಪತಿಯ ರಾಜಧಾನಿ ನರಳಿತು.

೧೦೬. ಹಳೆಯ ಮೂರ್ತಿಗಳು ಗಳಗಳನೆ ಕಣ್ಣೀರಿಟ್ಟುವು ; ರಾಜ್ಯಾಂಗಗಳು ದಿಗಿಲುಗೊಂಡು ವ್ಯಾಕುಲವಾದುವು ; ಅರಮನೆಯ ಕೊಳಗಳಲ್ಲಿ ಸ್ವಚ್ಛವಾಗಿ ನಿಂತ ನೀರು ಸಳಮಳ ಕುದಿಯಿತು.

---

1. ಳ್ಯಾ (ಮ) 2. ರಲಿದು (ಮ) ಳ ಱಿದು (ಅ)

ವ॥ ಅಂತು ವೈಹಾಯಸಭೌಮದಿಗ್ಬವಸೈನ್ಯಜಗೃಹೋದ್ಭೂತಂಗಳಯ್ದು ತೆಱದುತ್ಪಾತಂಗಳೊಡನೊಡನೆ ನೆಗೆದುವಾಗಳ್—

ಉ॥ ಪಡೆವಳ್ಳಂಗೆ ರಥಾಂಗಹೇತಿ ನಡೆಯಲ್ವೇೞ್ ಬೇಗಮಿಾ ನಿನ್ನ ಪೆ
ರ್ವಡೆಯಂ ನೀನೆನೆ ನಮ್ರಮೂರ್ತಿ ಬೆಸವೆತ್ತಾ ಬೀರವಟ್ಟಕ್ಕೆ ಮೆ
ಟ್ಟಿಡೆ ಬೀರಾಂಗನೆ ಸೇಸೆಗೊಂಡ ಪಡೆಯಂ ಕೈಸನ್ನೆಗೆಯ್ದುದ್ಧತಂ
ನಡೆಯಲ್ವೇೞ್ದೊಡೆ ಮೇರೆದಪ್ಪಿದ ಲಯಾಂತ್ಯಾರ್ಣವಾಕಾರದಿಂ ॥ ೧೦೭ ॥

ವ॥ ಪೆರ್ವಡೆ ನಡೆವುದುಂ ಇತ್ತ ಚಕ್ರವರ್ತಿಕುಲಧನಂಗಳುಂ ರಾಜ್ಯಚಿಹ್ನಂಗಳುಮುೞಿದುೞಿದ ಮಣಿಕನಕಾದಿ ಸಾರ ದ್ರವ್ಯಂಗಳಂ ವ್ಯಯಸಾಧ್ಯಸಾಧುವಾದ ಪುಣ್ಯನಿಮಿತ್ತಮನೇಕಮಾಗಧವಂದಿಬೃಂದಾರಕಬೃಂದಕ್ಕಿತ್ತು ನಾನಾವಿಧದ ಪದಿರ ಪಱೆಗಳೆಸೆಯೆ ಪಲವುಂ ತೆರೆದ ನಿಜಾನ್ವವಾಯ ವಿಜಯಧ್ವಜಂಗಳನೆತ್ತಿಸಿ ಶೂರಾಂಗರಕ್ಷಪರಿವೃತನಾಗಿ ಪೆಸರ ಕರಿತುರಗ ವರೂಥಂಗಳಂ ಪದವಿಯ ಮಕುಟಬದ್ಧ ಮಹಾ ಸಾಮಂತ ವೀರಭಟಕೋಟಿಗಟ್ಟಿ ದೇವಗುರುಪೂಜಾವಿಧಾನಾನಂತರಂ ಜ್ಞಾನ ಕುಲ ವಯೋವೃದ್ಧರನನುಕ್ರಮದಿಂ ಯಥಾಕಾರಮಂ ತಣಿಪಿ ಪ್ರಬಲ ಲಕ್ಷಾಕ್ಷೌಹಿಣೀಲಕ್ಷ್ಯಬಲಂ ಮುಂದಂ ನಡೆಯೆ ಕರುಮಾಡದಿಂ ಪೊಱಮಟ್ಟು—

ಕಂ॥ ಧೃತಖಟ್ಗರಪ್ತವರ್ಗಿಗ
ಳತಿ ಚಟುಳರುಮೊಳಗಣೆರಡು ಕೆಲದೊಳ್ ಬರೆ ಭೂ
ಪತಿ ಪೋಲ್ತನುರಗಶಾಖಾ
ವೃತ ಜಂಗಮಸಾಂದ್ರ ರುಂದ್ರಚಂದನತರುವಂ ॥ ೧೦೮ ॥*

ವ॥ ಹೀಗೆ ಆಕಾಶ, ಭೂಮಿ, ದಿಕ್ಕು, ಸೈನ್ಯ, ಅರಮನೆ—ಐದು ಸ್ಥಳಗಳಲ್ಲಿಯೂ ಉತ್ಪಾತಗಳು ಒಟ್ಟಿಗೆ ಉಂಟಾದುವು. ಆಗ—

೧೦೭. ಚಕ್ರವರ್ತಿಯು ಸೇನಾಪತಿಗೆ "ನಿನ್ನ ಈ ಮಹಾಸೈನ್ಯವನ್ನು ಬೇಗ ಮುನ್ನಡೆಯಿಸು" ಎಂದು ಆಜ್ಞಾಪಿಸಿದನು. ವಿನಯಶಾಲಿಯಾದ ಪಡೆವಳನು ಕೈಸನ್ನೆಯಿಂದ ತನ್ನ ವೀರಸೇನೆಗೆ ಸಾಗಲು ಅಪ್ಪಣೆಮಾಡಿದನು. ಪ್ರಳಯಕಾಲದಲ್ಲಿ ಮೇರೆಮೀರಿದ ಮಹಾಸಾಗರದಂತೆ ಪ್ರಚಂಡವಾಗಿ—

ವ॥ ಆ ಮಹಾ ಸೈನ್ಯ ಹೊರಟಿತು. ಇತ್ತ ಚಕ್ರವರ್ತಿಯು ತನ್ನ ಕುಲಧನಗಳು ಹಾಗು ರಾಜ್ಯಚಿಹ್ನಗಳು ಇವೆರಡನ್ನು ಉಳಿಸಿಕೊಂಡು ಉಳಿದ ಬಂಗಾರ, ರತ್ನ ಮೊದಲಾದ ಬೆಲೆಯುಳ್ಳ ದ್ರವ್ಯಗಳನ್ನು, ಪುಣ್ಯನಿಮಿತ್ತವಾಗಿ ಹೊಗಳುಭಟ್ಟರು, ಸ್ತುತಿಪಾಠಕರು ಮೊದಲಾದವರಲ್ಲಿ ಮುಖ್ಯರಾದವರಿಗೆ ಉಚಿತವಾಗಿ ಕೊಟ್ಟನು. ಹಲವಾರು ಬಗೆಯ ಹರೆಗಳು ಧ್ವನಿಗೈಯುತ್ತಿರಲಾಗಿ, ಅನೇಕ ಪ್ರಕಾರವಾದ ಹಾಗು ತನ್ನ ವಂಶಕ್ಕೆ ವಿಶಿಷ್ಟವಾದ ವಿಜಯ ಧ್ವಜಗಳನ್ನು ಏರಿಸಿದನು; ಪರಾಕ್ರಮಿಗಳಾದ ಅಂಗರಕ್ಷರು ತನ್ನನ್ನು ಬಳಸಿಕೊಂಡಿರಲಾಗಿ ಹೆಸರಾದ ಆನೆ ಕುದುರೆ ರಥಗಳನ್ನು ಖ್ಯಾತರಾದ ಸಾಮಂತರಾಜರಿಗೂ, ಮನ್ನೆಯರಿಗೂ, ವೀರಯೋಧಸಮೂಹಕ್ಕೂ ಕೊಟ್ಟು ಕಳಿಸಿದನು; ದೇವರನ್ನೂ ಗುರುಗಳನ್ನೂ ಪೂಜೆ ಮಾಡಿ ಜ್ಞಾನವೃದ್ಧರು, ಕುಲವೃದ್ಧರು ಹಾಗು ವಯೋವೃದ್ಧರನ್ನು ಅನುಕ್ರಮವಾಗಿ ಗೌರವಿಸಿ ತೃಪ್ತಿಗೊಳಿಸಿದನು; ಆ ಬಳಿಕ ತನ್ನ ಸೌಧದಿಂದ ಹೊರಬಿದ್ದು ಪ್ರಚಂಡವಾದ ಒಂದು ಲಕ್ಷ ಅಕ್ಷೌಹಿಣೀ ಸೈನ್ಯ ಮುಂದೆ ನಡೆಯುತ್ತಿರಲಾಗಿ

೧೦೮. ಅತ್ಯಂತ ಚುರುಕಾದವರೂ ಮೂಲಬಲಕ್ಕೆ ಸೇರಿದವರೂ ಆದ ರಾಜನ ಆಪ್ತ ಸೈನಿಕರು ಖಡ್ಗಧಾರಿಗಳಾಗಿ ಆತನ ಎರಡೂ ಪಕ್ಕಗಳಲ್ಲಿ ಹೊಂದಿಕೊಂಡು ಅವನೊಡನೆ ಬಂದರು; ಕೊಂಬೆಕೊಂಬೆಗೆ ಸುತ್ತುಗಟ್ಟಿದ ಸರ್ಪಗಳಿಂದ ಭೀಕರವಾಗಿ ಕಾಣುವ ಮಹಾಚಂದನವೃಕ್ಷದಂತೆ ಅವರ ಮಧ್ಯದಲ್ಲಿರುವ ರಾಜನು ಶೋಭಿಸಿದನು.

---

* ಈ ಪದ್ಯದ ಮೊದಲನೆಯ ಚರಣದಲ್ಲೇನೂ ಪಾಠಕ್ಲೇಶವಿರುವಂತೆ ತೋರುತ್ತದೆ. ಇದಕ್ಕೆ ಸಂವಾದಿಯಾದ ಅಸಗನ ಪದ್ಯ ಹೀಗಿದೆ—"ವೇಷ್ಟಿತಃ ಪರಿತೋ ಮೌಲೈರಾತ್ತ ನಿಸ್ತ್ರಿಂಶ ಭೀಷಣೈಃ ಸಾಹಿಶಾಖಾಲತಾಕೀರ್ಣ ಪ್ರೇಪಯನ್ ಚಂದನದ್ರುಮಮ್"

ಹರಿಣೀ ವೃತ್ತಂ॥ ಕನಕರಥಮಂ ದ್ವಾತ್ರಿಂಶದ್ವಿಶ್ರುತಾಯುಧಪೂರ್ಣಮಂ
ಮನದ ಜವಮಂ ಗೆಲ್ದಿರ್ದಶ್ವಂಗಳಿಂ ವಿಭು ಮಾಡಿ ಕೇ
ತನದ ಹರಿಗಳ್ ವಾತವ್ರಾತಂಗಳಿಂ ಮಿಳಿರ್ದಾಡೆ ತ
ಕ್ಕನೆ ನುಡಿವುತುಂ ಶೌರ್ಯಪ್ರಖ್ಯಾತನೊಳ್ ರಥಸೂತನೊಳ್ ॥ ೧೦೯ ॥

ಕಂ॥ ಆರವದ ಪೊಂಗಾಲಿಯು ಜೇ
ರ್ಗರೆವಂದಮನಂತವೀರ್ಯನೇಱಿದ ನಿನಗಂ
ಪರಿವನಗಮೊಡನೆ ಕೇಡು
ತರೆ ನಿನ್ನುಮನೆನ್ನುಮಂ ಪೆಱಂ ಕಾದಪನೇ ॥ ೧೧೦ ॥

ಎಂದು ಭಯವಶದಿನಿರದಾ
ಕ್ರಂದಿಸುವಂತೆಸೆಯೆ ಬೇಱೆ ಶಂಖರವಂ ನಿ
ನ್ನೆಂದಂತೆ ನಿರುತಮೆಂಬೊಂ
ದಂದದಿನೊಡನೊಡನೆ ನೆಗೞೆ ಪೊಗೞೆ ಜಗಂಗಳ್ ॥ ೧೧೧ ॥

ಚಕ್ರಂ ಪ್ರಸನ್ನದಶದಿ
ಕ್ಚಕ್ರಂ ಮುಂದಾಗಿ ನಡೆಯೆ ನಭದೊಳ್ ರಥ ಚ
ಕ್ರಾಕ್ರಮಣ [1]ಮ[1]ಖಿಳ ವಸುಧಾ
ಚಕ್ರಂ ಪಡೆಗಳ್ಕೆಯಾಗಿ ನಡುಗೆ ಸುರರ್ಕಳ್ ॥ ೧೧೨ ॥

ವ॥ ಅಂತು ಬಂದೆರಡನೆಯ ಬಾಗಿಲ್ವಾಡಮಂ ಪೊಱಮಟ್ಟು ಪುರಂಧ್ರೀ ಜನ[2][ಮ][2]ಕ್ಕುವ ಸೇಸೆಯುಮಂ ಲಾಜಾವರ್ಷಮುಮನಾಂತು ಬರೆವರೆ—

ಕಂ॥ ಅರಸರ ಬರ ಪಾರುತ್ತಿ
ರ್ದ ರಾಜಕಂ ಬೇಗಮೆಱಗೆ ತನ್ಮಣಿಮುಕುಟ
ಸ್ಫುರಣೆಗಳಿಂದರೆ ರಾಗಂ
ಬೊರೆದಂತೆಸೆದತ್ತು ರಾಜ ಭವನಾಂಗಳದೊಳ್ ॥ ೧೧೩ ॥

---

೧೦೯. ಮೂವತ್ತೆರಡು ಬಗೆಯ ಆಯುಧಗಳಿಂದ ಕೂಡಿ ಸನ್ನದ್ಧವಾದ ಚಿನ್ನದ ರಥಕ್ಕೆ ಮನೋವೇಗಕ್ಕಿಂತಲೂ ಶೀಘ್ರವಾಗಿ ಓಡುವ ಕುದುರೆಗಳನ್ನು ಹೂಡಿ ಅದರ ಧ್ವಜದ ಕುಡಿಗಳು ಗಾಳಿಯ ಅಲೆಗೆ ಮಿಳಿದಾಡುತ್ತಿರಲಾಗಿ, ಪ್ರರಾಕ್ರಮದಿಂದ ಹೆಸರಾದ ಸಾರಥಿಯೊಡನೆ ಯೋಗ್ಯವಾದ ಮಾತುಗಳನ್ನು ಆಡುತ್ತ (ರಥವನ್ನು ಏರಿದನು).

೧೧೦. "ಹೀಗೆ ಏರಿ ಕುಳಿತಿರುವ ನಿನಗೂ, ಓಡುತ್ತಿರುವ ನನಗೂ ಅನಂತವೀರ್ಯನಿಂದ ಅಪಾಯವುಂಟಾಗಲಿದೆ. ಆಗ ನಿನ್ನನ್ನೂ ನನ್ನನ್ನೂ ಯಾವನಾದರೂ ಕಾಪಾಡುವನೆ?"

೧೧೧. ಎಂದು ಭಯಭರಿತವಾಗಿ ಒಂದೇ ಸಮನಾಗಿ ಅಳುತ್ತಿರುವುವೋ ಎಂಬಂತೆ ಗಾಲಿಗಳು ಜಿರುಗುಟ್ಟುತ್ತಿದ್ದುವು. "ನೀನು ನುಡಿದಂತೆಯೆ ಆಗುವುದು ನಿಶ್ಚಿತ" ಎಂದು ಅನುಮೋದಿಸುವಂತೆ ಶಂಖಧ್ವನಿ ಮೊಳಗಿತು. ಜಗವೆಲ್ಲ ಹೊಗಳುವಂತೆ

೧೧೨. ದಶದಿಕ್ಕುಗಳನ್ನೂ ಬೆಳಗುತ್ತಿರುವ ಚಕ್ರಾಯುಧವು ಆಕಾಶದಲ್ಲಿ ಮುಂದಾಗಿ ನಡೆಯಿತು. ರಥಚಕ್ರಗಳ ಆಕ್ರಮಣದಿಂದ ಭೂಮಿ ನುಗ್ಗಾಗಿ, ದೇವತೆಗಳು (ಭಯದಿಂದ) ನಡುಗಿದರು.

ವ॥ ಹೀಗೆ ಬಂದು ಎರಡನೆಯ ಮಹಾದ್ವಾರವನ್ನು ದಾಟಿ, ಹೊರಬಿದ್ದು ಪುರದ ಮುತ್ತೈದೆಯರು ಸೂಸುವ ಸೇಸೆಯನ್ನೂ ಅರಳು ಭತ್ತದ ಮಳೆಯನ್ನೂ ತಲೆಯಲ್ಲಿ ಧರಿಸಿ ಮುಂದೆ ಮುಂದೆ ಸಾಗಲಾಗಿ—

೧೧೩. ದೊರೆಯ ಆಗಮನದ ಪ್ರತೀಕ್ಷೆಯಲ್ಲಿದ್ದ ಸಾಮಂತರಾಜಸಮೂಹವು ಆತುರದಿಂದ ಬಂದು ಬಂದು ಕಾಲಿಗೆ ಎರಗಿತು; ಆಗ ಅವರ ಕಿರೀಟಗಳ ಪ್ರಭೆಯಿಂದಾಗಿ ಅರಮನೆಯ ಅಂಗಳದ ನೆಲವೆಲ್ಲ ಕೆಂಬಣ್ಣ ಬಳಿದಂತೆ ಶೋಭಿಸಿತು.

---

1. ಕ (ಮ) 2. ದಿ (ಮ)

ವ॥ ಅವರಂ ನೇತ್ರತ್ರಿಭಾಗಾಪಾಂಗಸಮಗ್ರೇಕ್ಷಣಸ್ಮಿತದರಹಸಿತಹಸಿತಭ್ರೂವಿಕ್ಷೇಪಾಳಾಪಪರಿಹಾಸವಚನಂಗಳಿಂದಮವರವರೞಿಗಳಿಂದೆ ಸಂತಸಂಬಡಿಸಿ ತದನುಗಮ್ಯಮಾನಂ ದಮಿತಾರಿ ರಾಜಮಂದಿರದಿಂ ಪೊಱಮಟ್ಟು ರಾಜಮಾರ್ಗದೊಳಗನೆ ಪೋಗಿ ಪೊಱಪೊೞಲೊಳೊಡ್ಡಣಮನೊಡ್ಡ ವೇೞ್ವುದುಂ ಸೇನಾನಾಯಕಂ—

ಉ॥ ಶೂರಪದಾತಿ ಮುಂದೆ ಘಟೆ ಪಿಂದೆ ರಥಂ ನಡು ಪೆರ್ಕಿಲಂಗಳೊಳ್
ಸಾರ ಹಯೋತ್ಕರಂ ನೆರೆದು ನಿಲ್ವಿನಮೊಡ್ಡಿ ನಿಜೇಶನಾಜ್ಞೆಯಂ
ಪಾರುತುಮಿರ್ದ ನಿತ್ತಲಪರಾಜಿತನೂರ್ಜಿತಕೋಪರಾಜಿತಂ
ದೂರದೆ ನಿಂದು ನೋಡಿ ರಿಪುಸೇನೆಯನಪ್ರಮಿತಾರಿಸೇನೆಯಂ ॥ ೧೧೪ ॥

ಮ॥ ಅಗರಾಜಾಕೃತಿವಿಭ್ರಮಾನುಕರಣೋದಗ್ರಂಗಳಿಂ ನೋಡಿ ಮು
ಯ್ವುಗಳಂ ಕಲ್ತ ಶರಾಸನಂ ಸಫಲಮಿಂದಾಯ್ತೆಂಬನಚ್ಚಿಂ ಮುಗು
ಳ್ನಗೆ ನಕ್ಕಂಕದ ವೀರಲಕ್ಷ್ಮಿ ಪೆಱರ್ಗಿಲ್ಲೆಂಬನ್ನೆಗಂ ತನ್ನನಾ
ವಗಮೊಲ್ದಿರ್ಪಿನಮೇರ್ವೆಸಕ್ಕೆಳಸಿದಂ ಸೌಜನ್ಯಕಂದಾಂಕುರಂ ॥ ೧೧೫ ॥

—ಗದ್ಯ—

ಇದು

ಜಿನೇಂದ್ರ ಚರಣ ಸರಸೀರುಹ ಶಿಲೀಮುಖಾಯಮಾನ

ಶ್ರೀಮದುಭಯಕವಿ ಚಕ್ರವರ್ತಿ

ನಿರ್ವರ್ತಿತಮುಂ

ಅಮ್ಮನ ಭಕ್ತಾಭಿದಾನ ಮಲ್ಲಪಾರ್ಯ

ತದನುಜಾತಾಭಿಜಾತ ಸಾರಸ್ವತ

ಪುನ್ನಮಾರ್ಯ ಕಾರಿತಮುಮಪ್ಪ

ಪುರಾಣಚೂಡಾಮಣಿಯೊಳ್

ತೃತೀಯಾಶ್ವಾಸಂ

ವ॥ ಆಗ ದಮಿತಾರಿಯು ಕುಡಿನೋಟ, ಓರೆನೋಟ, ಸಮಗ್ರದೃಷ್ಟಿ ಮೊದಲಾದ ದೃಷ್ಟಿಭೇದಗಳಿಂದ ಅವರನ್ನು ಅವರವರ ಯೋಗ್ಯತೆಗೆ ತಕ್ಕಂತೆ ನೋಡಿ, ನಗೆ, ಮುಗುಳ್ನಗೆ, ತುಂಬುನಗೆ, ಹುಬ್ಬಿನ ಸನ್ನೆ, ಮಾತು, ಪರಿಹಾಸ—ಹೀಗೆ ಯಾರುಯಾರಿಗೆ ಯಾವಯಾವುದು ಸಮುಚಿತವೆಂಬುದನ್ನು ತಿಳಿದು ಆಚರಿಸಿ, ಅವರನ್ನು ಸಂತೋಷಗೊಳಿಸಿದನು. ಅವರೆಲ್ಲ ಹಿಂಬಾಲಿಸಿ ಬರಲು, ಆತನು ಹೊರಹೊರಟು, ರಾಜಮಾರ್ಗದಿಂದ ಹೋಗುತ್ತ "ಪಟ್ಟಣದ ಹೊರಭಾಗದಲ್ಲಿ ಸೈನ್ಯವ್ಯೂಹವನ್ನು ರಚಿಸೆ"ಂದು ಸೇನಾಪತಿಗೆ ಅಪ್ಪಣೆಯಿತ್ತನು. ಆಗ ಸೇನಾಪತಿಯು—

೧೧೪. ಮುಂದೆ ಪರಾಕ್ರಮಿಗಳಾದ ಕಾಲಾಳುಗಳ ಪಡೆ; ಹಿಂದೆ ಗಜಸೈನ್ಯ; ನಡುವೆ ರಥಬಲ; ಎರಡೂ ಪಾರ್ಶ್ವಗಳಲ್ಲಿ ಶ್ರೇಷ್ಠವಾದ ಕುದುರೆಗಳ ದಳ—ಹೀಗೆ ವ್ಯೂಹವನ್ನು ರಚಿಸಿ, ತನ್ನ ಒಡೆಯನ ಅಪ್ಪಣೆಯನ್ನು ನಿರೀಕ್ಷಿಸುತ್ತ ನಿಂತನು. ಇತ್ತ ಅಪರಾಜಿತನು ದೂರದಲ್ಲಿಯೆ ನಿಂತಿದ್ದು ಅಗಣಿತವಾದ ಈ ಶತ್ರುಸೈನ್ಯವನ್ನು ನೋಡಿ ಅತ್ಯಂತ ಕೋಪಾವಿಷ್ಟನಾದನು.

೧೧೫. ಮಹಾ ಪರ್ವತದ ಶಿಖರಗಳಂತೆ ವಿಜೃಂಭಿಸುವ ತನ್ನ ಭುಜಾಗ್ರಗಳನ್ನು ನೋಡಿಕೊಂಡು, "ನಾನು ಕಲಿತ ಧನುರ್ವಿದ್ಯೆ ಇಂದು ಕೃತಾರ್ಥವಾಯಿತು" ಎಂಬ ವಿಶ್ವಾಸದಿಂದ ಮುಗುಳ್ನಕ್ಕು, ಯುದ್ಧದಲ್ಲಿ ವೀರಲಕ್ಷ್ಮಿ ತನಗಲ್ಲದೆ ಇನ್ನಾರಿಗೂ ಇಲ್ಲವೆಂಬಂತೆ ಯಾವಾಗಲೂ ಒಲಿದು ಬಂದಿರುವುದನ್ನು ಅರಿತು, ಸಜ್ಜನಾನಂದಕಾರಿಯಾದ ಅಪರಾಜಿತನು ಯುದ್ಧವನ್ನು ಬಯಸುತ್ತ ನಿಂತನು.

ಗದ್ಯ॥ ಇದು ಜಿನೇಶ್ವರನ ಚರಣಕಮಲದ ದುಂಬಿಯಂತಿರುವ, ಶ್ರೀಮದುಭಯಕವಿ ಚಕ್ರವರ್ತಿಯೆಂಬ ಬಿರುದಾಂಕಿತನಿಂದ ನಿರ್ವರ್ತಿತವೂ ಅಮ್ಮನ ಭಕ್ತಾಭಿದಾನ ಮಲ್ಲಪಾರ್ಯ, ಅವನ ತಮ್ಮ ಹೊಸ ಸಾರಸ್ವತ ಪುನ್ನಮಾರ್ಯ ಹೇಳಿಸಿದ ಪುರಾಣಚೂಡಾಮಣಿಯಲ್ಲಿ ಮೂರನೆಯ ಆಶ್ವಾಸವು.

ಶ್ರೀ

ಶಾಂತಿಪುರಾಣಂ

—೪—

ಚತುರ್ಥಾಶ್ವಾಸಂ

ಕಂ॥ ಶ್ರೀರಮಣಂ ಜಿನಚಂದ್ರನು
ದಾರಂ ಖೇಚರಬಲಾಬ್ಧಿಯಂ ತವೆ ಕಣ್ಣೊಳ್
ಪೀರಲ್ ಬಗೆವವೊಲೌರ್ವಾ
ಕಾರೇಕ್ಷಣನೀಕ್ಷಿಸುತ್ತುಮಿರ್ದವಯವದಿಂ ॥ ೧ ॥

ಉ॥ ತಮ್ಮನನಾಗಳಂಬರಚರೇಶ್ವರಕನ್ನೆಗೆ ಕಾಪುವೇಟಿಂ ತ
ಮ್ಮಮ್ಮನದೊಳ್ ಬಿಗುರ್ತು ನಗೆ ಕೆಯ್ಮಿಗಲೀ ಬೆಸಕಣ್ಣ ನೀನೆಯಾಂ
ತಮ್ಮನೆ ನಾಳಿನಾ[1]ಳ್ವೆ[1]ಯೆನಗಪ್ಪೊಡೆ ನೀನೆನಗತ್ತಲಗ್ಗಮೆಂ
ದಾಮ್ಮಗುಜ್ಜಿಂದು ನಿಮ್ಮಡಿಗೆ ಸೂಟಿಡಱಿಂ ಬೆಸಸೆನ್ನನನ್ನೆಗಂ ॥ ೨ ॥

ಕಂ॥ ಎನೆ ಜಿನಚಂದ್ರಂ ಮತ್ತಂ
ತೆನವೇಡೆನ್ನಾಣೆ ಮಾಣೆಯಪ್ಪೊಡೆ ನೀನೆಂ
ದಿನಿತಾನುಂ ಸೂಟ್ ಸೂರುಳಿ
ಸಿ ನಿರ್ಭಯಂ ಕೊಂಡು ಬಿಲ್ಲನಪ್ರತಿಮಲ್ಲಂ ॥ ೩ ॥

ಆಶ್ವಾಸ ೪

೧. ಸಂಪತ್ತಿಗೆಲ್ಲ ಒಡೆಯನೂ, ಜಿನಚಂದ್ರನೂ, ಉದಾರನೂ ಆದ ಅಪರಾಜಿತನು ಖೇಚರಸೈನ್ಯವೆಂಬ ಸಮುದ್ರವನ್ನು ತನ್ನ ಕಣ್ಣಿಂದಲೇ ಹೀರಿಬಿಡುವ ವಡಬಾನಲನಂತೆ ನೋಡುತ್ತಿದ್ದನು.

೨. "ಖೇಚರರಾಜಪುತ್ರಿಗೆ ನೀನು ಕಾವಲಾಗಿರು" ಎಂದು ತಮ್ಮನಿಗೆ ಆತನು ಹೇಳಿದನು. ಆಗ ಅನಂತವೀರ್ಯನು ಮನದಲ್ಲಿಯೇ (ತನಗೆ ಕಾಳೆಗವಿಲ್ಲವೆಂದು) ತಲ್ಲಣಿಸಿದನು. ಮತ್ತು ನಗುತ್ತ ಹೀಗೆಂದನು : "ಅಣ್ಣ, ಈ ಕೆಲಸಕ್ಕೆ ನೀನೇ ಹೋಗಬೇಕೆ ? ನಾನು ನಿನ್ನ ತಮ್ಮ ; ನಿನಗೆ ಆಳಿನಂತೆ ಸೇವೆ ಸಲ್ಲಿಸುವುದು ನನ್ನ ಧರ್ಮ. ನೀನು ನನಗಿಂತಲೂ ಬಲಿಷ್ಠನಾದವನು, ಹಿರಿಯನು. ನಾನು ಹಿಮ್ಮೆಟ್ಟಿದಾಗ ಮಾತ್ರ ನೀನು (ಕಾಳೆಗಕ್ಕೆ) ಹೊರಡುವ ಸರದಿ. ಆದುದರಿಂದ ನನಗೆ ಈಗ ಹೋರಾಡಲು ಅಪ್ಪಣೆಕೊಡು".

೩. ಈ ಮಾತಿಗೆ ಅಪರಾಜಿತನು "ಹಾಗೆನ್ನಬೇಡ. ನೀನು ಹಟಹಿಡಿದರೆ ನನ್ನ ಆಣೆಯಾಗಿದೆ ನೋಡು." ಎಂದು ಮುಂತಾಗಿ ಅನೇಕ ಬಗೆಯಾಗಿ ಅವನಿಗೆ ಶಪಥಪೂರ್ವಕ ನಿರ್ಬಂಧಪೊಡ್ಡಿದನು. ಮತ್ತು ಅಸಮಾನ ಶೂರನೂ, ನಿರ್ಭೀತನೂ ಆದ ಆತನು ತನ್ನ ಬಿಲ್ಲನ್ನು ಎತ್ತಿಕೊಂಡನು.

1. ಳ್ದ (ಅ)

ಉ॥ ಏಱಿಸಿ ನೀವಿ ಜೇವೊಡೆಯೆ ವೈರಿ ಗಜಂಗಳಜಂಗಳಂತೆ ಕಾ
ಯ್ಪಾಱಿದುವಾ ಖಗೇಶ್ವರನ ಕಟ್ಟು ಕಟಿಲ್ದುದು ಖೇಚರರ್ ಮನಂ
ಬೀಱಿದರೊರ್ವನೆಂದಗಿದ ಖೇಚರಕನ್ನೆಯ ಮೋನ ಸನ್ನೆಯುಂ
ಪಾಱಿದುದೇವದೊಳ್ ಪುದಿದ ತಮ್ಮನ ಚಿತ್ತದೊಳಾಯ್ತು ಸಂತಸಂ ॥ ೪ ॥

ವ॥ ಬಿಗಿದ ತವದೊಣೆಗೆ ಕೆಯ್ಯಂ ನೀಡಿ ನಿಶಿತಾಸ್ತ್ರಮನೊಂದನುರ್ಚಿ ಕೊಂಡು—

ಕಂ॥ ಕರದಿಂ ಸರಲಂ ಕಣ್ಣಿಂ
ದರಾತಿಯಂ ತೂಗಿದೂಗಿ ರಿಪುಬಲಮಂ ಸಂ
ಹರಿಸುವ ಬಗೆ ಬಗೆಯೊಳ್ ತ
[1][ೞ್ತಿ][1]ರೆ ನಿಂದಂ ನಮ್ರಬುಧಜನಂ ಜಿನಚಂದ್ರಂ ॥ ೫ ॥

ಖೇಚರಸೈನ್ಯಂ ವಿಜಯಾ
ರ್ಧಾಚಲತಟಧಾತುರೇಣುರಕ್ತಂ ಪುರಭೃ
ದ್ಗೋಚರ ಕೋಪಾಗ್ನಿಶಿಖಾ
ರೋಚಿಃಪಟಳೋಪಲಿಪ್ತಮೆನಿಸಿದುದಾಗಳ್ ॥ ೬ ॥

ಅಂತು ವಿಯದವನಿ ನಿಖಿಳದಿ
ಗಂತಂಗಳೊಳೆಯ್ದಲಱಿಯದೆನಿಸಿದ ಚಾತು
ರ್ದಂತಮನಪರಾಜಿತನೆೞೆ
ದಂ ತನ್ನ ಮನಃಪ್ರಸ್ತಾರಿ ಪೌರುಷಮತಿಯಿಂ ॥ ೭ ॥

---

೪. ಅದಕ್ಕೆ ಹೆದೆಯನ್ನು ಬಿಗಿದೇರಿಸಿ ಝೇಂಕರಿಸಲಾಗಿ, ಶತ್ರುಸೈನ್ಯದ ಆನೆಗಳು ಅಂಜಿದ ಆಡುಗಳಂತಾದುವು; (ಗಾಬರಿಯಿಂದ) ಆ ಖೇಚರಚಕ್ರಿಯ ನಿರ್ಧಾರ ಶಿಥಿಲವಾಯಿತು; ಖೇಚರರು ಎದೆಗುಂದಿದರು; (ಅಪಾರವಾದ ಸೈನ್ಯಕ್ಕೆದುರಾಗಿ ಹೋರಲು ಈತನು) ಒಬ್ಬನೆ ಹೊರಟಿರುವನಲ್ಲಾ ಎಂದು ಮೌನವಾಗಿ ಚಿಂತಿಸುತ್ತಿದ್ದ ಖೇಚರರಾಜ ಪುತ್ರಿಯ ಆತಂಕವೂ ಹಾರಿಹೋಯಿತು; ಹೇವದಿಂದ ತುಂಬಿದ ತಮ್ಮನ ಮನಸ್ಸಿಗೆ ಸಂತೋಷವುಂಟಾಯಿತು.

ವ॥ (ಬೆನ್ನಿಗೆ) ಬಿಗಿದುಕೊಂಡಿದ್ದ ಬತ್ತಳಿಕೆಗೆ ಕೈನೀಡಿ ಹರಿತವಾದೊಂದು ಬಾಣವನ್ನು ಹಿರಿದುಕೊಂಡು—

೫. ಕೈಯಿಂದ ಬಾಣವನ್ನೂ, ಕಣ್ಣಿಂದ ಶತ್ರುಸೈನ್ಯದ ಬಲವನ್ನೂ ತೂಗಿನೋಡಿದನು. ಶತ್ರುಬಲವನ್ನು ನಾಶ ಮಾಡುವ ಬಯಕೆ ಮನಸ್ಸನ್ನು ತುಂಬಿರಲಾಗಿ, ಜ್ಞಾನಿಗಳಿಗೆ ಪೂಜ್ಯನಾದ ಅಪರಾಜಿತನು ನಿರೀಕ್ಷಿಸುತ್ತ ನಿಂತನು.

೬. ವಿಜಯಾರ್ಧಪರ್ವತದ ತಪ್ಪಲುಭೂಮಿಯಿಂದೆದ್ದ ಕಾವಿಯ ಧೂಳು ಮುಸುಕಿ ಖೇಚರ ಸೈನ್ಯವೆಲ್ಲ ಮೈತುಂಬ ಕೆಂಪಾಯಿತು; ಅದರಿಂದಾಗಿ ಅಪರಾಜಿತನ ಕೋಪಾಗ್ನಿ ಪಸರಿಸಿದ ಉರಿಗಳ ಕೆನ್ನಾಲಗೆಗಳಿಂದ ಅವರು ಆವರಿಸಲ್ಪಟ್ಟಿರುವರೋ ಏನೋ ಎಂಬಂತೆ ತೋರಿತು.

೭. ಆಕಾಶವೂ, ಭೂಮಿಯೂ, ಸಕಲ ದಿಕ್ಕುಗಳೂ ಕೂಡ ಹಿಡಿಸಲಾರವೆಂಬಂತೆ ನೆರೆದ ಚತುರಂಗ ಸೈನ್ಯವನ್ನು ಅಪರಾಜಿತನು ತನ್ನ ಪೌರುಷದಿಂದ ಆಕರ್ಷಿಸಿದನು.

---

1. ೞ್ತಿ (ಮ)

ವ॥ ಅನ್ನೆಗಂ ವಿಪಕ್ಷೇಭಕಂಠೀರವನೆನಿಸಿದ ಪಾಪೇಭಕಂಠೀರವನೊರ್ವನೆ ನಿಂದುದಂ ಕಂಡಸಹಾಯನಂ ಗೆಲ್ದೊಡಂ ತೇಜಮಿಲ್ಲಾದೊಡಂ ಸೂೞಂ ಮಾಡಿದನೊಳ್ ಕಾದಲೆ ವೇೞ್ಕುಮೆಂದು ದಮಿತಾರಿ ಕೈವೀಸೆ ವಿಜಯಾನೀಕಂ ಬೀಸೆ ಮಸಗಿದ ಜಲನಿಧಿಯ ಕಲ್ಲೋಲದಂತೆ ಪಿರಿದುಮುಲ್ಲೋಳಂ ಬೆರಸು ಬಂದು ತಾಗುವಾಗಳ್—

ಕಂ॥ ಅಸಿತಿನಿತೆನಿಸದೆ ರಿಪುಬಲ
ಮೆನಗಿನಿಸುಂ ನೆಱೆಯದೆಂಬ ಬಗೆ ಬಳೆದಿರೆ ನಿ
ರ್ವಿನಿಸಿದನಾ ಜಿನಚಂದ್ರಂ
ಮನಸ್ವಿಗೀ ಮೂಱು ಲೋಕಮುಂ ಕಿಱಿದೆ ವಲಂ ॥ ೮ ॥

ವ॥ ಆಗಳಂಬರಚರಬಲದ ಧನುರ್ವಲಂ ತೆಗೆನೆಱೆದು ಪೊಕ್ಕ [1]ಕೂ[1]ಕಿಱಿದಾರ್ದು ಪರಿಕಲಿಸಿ ಬಂದೊಂದೆವುಲ್ಲೆಗಂಬುದೊಟ್ಟಂತೆಲ್ಲ [2]ವೊ[2]ರ್ವನನೆ ಲಕ್ಷ್ಯಂಮಾಡಿ ಶರಾಸಾರದಿಂ ದೂರಪಾತಮಿಸುವುದು[3](ಮಸ್ತ್ರಚಯಮನಂಬುಗಳ್ ಕೂಡೆರೆದಂ)[3] ಮುಂಬುವೀಡಿನಳವಿಗಗ್ಗಳ ಮಪ್ಪುದಱಿನೆಡೆಯೊಳ್ ಧನುರ್ಧರನ ಶರವರ್ಷಂ ನವಪಯೋ[4]ದಪ್ರಮೋದ[4]ಬಿಂದುವರ್ಷದಂತೆ [5]ಕಳೆಯೆ[5] ನಿಸರ್ಗಶೂರನುಂ ಕಟ್ಟಾಯ ಕಾ[6][ಱ][6]ನುಂ ಅಪ್ಪುದಱಿಂ ಪಾಪೇಭಕಂಠೀರವನಂತೆ ಮಾಣ್ದು ಮು[7][ನ್ನೇಜಿನ][7]ನವರ್ಗಿತ್ತು ಬೞಿಯಂ—

ಮ॥ ಇಸೆ ಪೊಕ್ಕೆಚ್ಚ ಧನುರ್ಧರಾಸ್ತ್ರಚಯಮಂ ತನ್ನಂಬುಗಳ್ ಕೂಡೆ ಖಂ
ಡಿಸೆ ಬಿಲ್ಲಂ ಬಿಸುಟೆಕ್ಕೆಯಿಂ ಸುರಿಗೆಗಿೞ್ತುಯ್ತುರ್ಪ[8]ವಂ[8] ಶಾತ ಭ
ಲ್ಲಸಹಸ್ರಂಗಳಿನಂಬರಕ್ಕೆ ತಲೆ ಭೂಭಾಗಕ್ಕೊಡಲ್ ಬೀೞ್ದು ಪೊಂ
ಗೆ ಸುರರ್ ಬಣ್ಣಿಸೆ ಬಿರ್ದ ಮೆಚ್ಚು ಮೆಱೆದಂ ಕೋದಂಡನೈಪುಣ್ಯಮಂ ॥ ೯ ॥

ವ॥ ಶತ್ರು ಸೈನ್ಯದ ಆನೆಗಳಿಗೆ ಸಿಂಹವಾಗಿಯೂ, ಪಾಪಗಜಕ್ಕೆ ಮೃಗರಾಜನಾಗಿಯೂ ಇರುವ ಅಪರಾಜಿತನು ಒಬ್ಬನೇ ನಿಂತುದನ್ನು ಕಂಡು, "ಅಸಹಾಯನಾದವನನ್ನು ಗೆದ್ದರೆ ಗೌರವವಿಲ್ಲ. ಆದರೆ ಕಾಳೆಗಕ್ಕೆ ಕರೆದು ನಿಂತವನೊಡನೆ ಹೋರಾಡಲೇಬೇಕು" ಎಂದುಕೊಂಡು ದಮಿತಾರಿಯು ತನ್ನ ಸೇನೆಗೆ ಕೈಬೀಸಿ (ಮುನ್ನುಗ್ಗಲು) ಸನ್ನೆಮಾಡಿದನು. ಪ್ರಳಯಕಾಲದ ಬಿರುಗಾಳಿ ಬೀಸಿದಾಗ ಕೆರಳಿ ಉಬ್ಬೇಳುವ ಮಹಾಸಾಗರದಂತೆ ಆ ಸೈನ್ಯವು ತರಂಗತರಂಗವಾಗಿ ಏರಿಬಂದು ತಾಗಿತು.

೮. ವೈರಿಗಳ ಈ ಎಲ್ಲ ಸೈನ್ಯ ಎಷ್ಟೇ ಆಗಿದ್ದರೂ ನನಗೆ ಸಾಲದು—ತೀರ ಅಲ್ಪವಾಯಿತು ಎಂದು ಅಪರಾಜಿತನ ಮನಸ್ಸಿಗೆ ಅಸಮಾಧಾನವಾಯಿತು. ಮಹಾತ್ಮರಾದವರಿಗೆ ಮೂರೂ ಲೋಕಗಳು ಒಟ್ಟಾಗಿ ಬಂದರೂ ಅದು ತೀರ ಕಿರಿದೇ ಸರಿ.

ವ॥ ಆಗ ಖೇಚರ ಸೈನ್ಯದ ಬಿಲ್ಗಾರರ ಪಡೆ ವೀರಾವೇಶದಿಂದ ಗರ್ಜಿಸುತ್ತ, ಗುಂಪುಗೂಡಿ ಬಂದು, ಬಾಣ ಹೂಡಿ, ತಮ್ಮ ಕಿವಿವರೆಗೆ ಹೆದೆಯನ್ನೆಳೆದು, ಒಂದೇ ಜಿಂಕೆಗೆ ಹಲವಾರು ಬೇಟೆಗಾರರು ಗುರಿಯಿಟ್ಟಂತೆ ಈತನೊಬ್ಬನನ್ನೇ ಗುರಿಯಿಟ್ಟು ದೂರದಿಂದಲೆ ಬಾಣಗಳ ಮಳೆಗರೆಯಿತು. ಆದರೆ ಬಾಣ ಹೋಗುವ ಅಂತರಕ್ಕೆ ಆ ದೂರ ಹೆಚ್ಚಾದುದ ರಿಂದ ಮಳೆಗಾಲದ ಪ್ರಾರಂಭದಲ್ಲಿ ಹೊಸ ಮೋಡ ಸುರಿಸುವ ತುಂತುರು ಹನಿಗಳಂತೆ ಅವು ಉದುರಿ ಬಿದ್ದುಹೋದುವು. ಸಹಜಶೂರನು, ಮಹಾಸಮರ್ಥನೂ ಆದುದರಿಂದ ಅಪರಾಜಿತನು ಮುಂದರಿಯುವುದಕ್ಕೆ ಅವರಿಗೆ ಅವಕಾಶ ನೀಡಿದನು. ಅನಂತರ—

೯. ಆ ಬಿಲ್ಲಾಳುಗಳು ಬಿಟ್ಟ ಬಾಣಸಮೂಹವನ್ನೆಲ್ಲ ತನ್ನ ಬಾಣಗಳಿಂದ ಕೊಚ್ಚಿಹಾಕಿ ಅವರ ಬಿಲ್ಲುಗಳನ್ನು ತುಂಡರಿಸಿಬಿಟ್ಟನು. ಅವರು ಬಿಲ್ಲುಗಳನ್ನು ಬಿಸಾಕಿ ಕಠಾರಿಗಳನ್ನು ಹಿರಿದುಕೊಂಡು ಮೇಲೇರಿ ಬರಲಾಗಿ, ತೀಕ್ಷ್ಣವಾದ ಸಾವಿರ ಬಾಣಗಳಿಂದ ಅವರನ್ನು ಹೊಡೆದನು. ಕೂಡಲೆ ತಲೆಗಳು ನಭಕ್ಕೆ ಚಿಮ್ಮಿ, ಭೂಮಿಗೆ ಅಟ್ಟೆಗಳು ಬಿದ್ದುವು. ಈ ರೀತಿಯಾಗಿ ವಿಜೃಂಭಿಸಿದ ಆತನ ಧನುರ್ವಿದ್ಯಾಕೌಶಲವನ್ನು ಕಂಡು ದೇವತೆಗಳು ಮೆಚ್ಚಿ ಬಣ್ಣಿಸಿದರು.

---

1. × (ಮ) 2. ಮಂತೂ (ಅ) 3. × (ಅ) 4. × (ಅ) 5. ಕಳಱ (ಅ) 6. ರ (ಮ) 7. ನ್ನರನ (ಮ) 8. ರಂ (ಮ)

ಕಂ॥ ಕೊರ್ಬಿದರಪ್ಪ ಧನುರ್ಧರ
ಬೀರರನಿದಿರೊಳ್ ನಿಶಾತ ಶರಹತಿಯಿಂ ನಿ
ರ್ದಾರಿಸೆ ಸಮರ ಪ್ರಥಮ
ಪ್ರಾರಂಭ[1]ಮೆ[1] ಪೋಲ್ತುದಂತಕಾಪೋಶನಮಂ ॥ ೧೦ ॥

ವ॥ ಅಂತು ಧನುರ್ವಲದ ಮೊನೆ ಮುಱಿವಂತೆ ಪಲವುಮಱಿಕೆಯ ಬಿಲ್ಲ ನಾಯಕರ್ಕಳುಗ್ರಸಾಯಕದಿಂ ಸಾಯೆ ಬಿಲ್ಲಕೊಪ್ಪನೂಱಿ ದೀನಜನತಾಕಲ್ಪದ್ರುಮಂ ರಥಿಗಳಂ ಗಱಿಸನ್ನೆಗೆಯ್ವುದುಂ ಅವರ್ ತಂತಮ್ಮ ಸೂತರಂ ರಥಮಂ ಚೋದಿಸಲ್ವೇೞ್ವುದುಮವರನಿಬರುಮೇಕಾಗ್ರಹ ಗ್ರಹಣ ನಿಯುಕ್ತರೆಂಬನ್ನೆಗಂ ಸ್ಯಂದನಾಶ್ವಂಗಳನೋದೆ ದೊರೆಯೊಳ್ ಪರಿಯೆ ಪರಿಚೋದಿಸಿ ಬಾಣಪಾತಪ್ರಮಾಣದೊಳ್ ನಿಱಿಸುವುದುಂ—

ಕಂ॥ ಅಪರಾಜಿತ ತೇಜೋರೂ
ಪ ಪಾವಕಂ ಕಣ್ಗೊಳುಳ್ಕೆ ಕಾದದೆ ಸೋಲ್ತಂ
ದುಪಸಂಹರಿಸುತೆ ನಿಜ ಶೌ
ರ್ಯ ಪರಮಕೋಟಿಯನುದಾತ್ತಕುಲರಧಿಕ ಬಲರ್ ॥ ೧೧ ॥

ವ॥ ಬಿಲ್ಲುಂ ಬೆಱಗುಮಾಗಿ ಚಿತ್ರನ್ಯಸ್ತರೂಪುಗಳಂತೆ ನಿಶ್ಚಳೀಭೂತರುಮಪಕ್ಷ್ಮಪಾತರುಮಾಗಿ ನೀಡುಂ ನೋಡಿ ಬೞಿಯಮೆಂತಾನುಂ ಕೃತಾವಧಾನರಾಗಿ ಪೆಱಗಿರ್ದ ತ[2][ಮ್ಮಾ][2]ಳ್ದನುಮನುಱದೆ ಮೇಂದಿರ್ದ ಪಾಪೇಭಕಂಠೀರವನುಮಂ ಬಗೆದು ತೆಗೆದಿಸುವುದುಂ ಮಾರ್ಕೊಂಡು ಬಿಲ್ವೊಯ್ದು—

ಕಂ॥ ರಥಿಗಳನಗ್ರಸ್ಥಿತ ಸಾ
ರಥಿಗಳನಿಸೆ ಸೀರಪಾಣಿ ಸಲೆ ರಥದ ಮನೋ
ರಥದೊಡನೆ ಮಡಿದರಂದತಿ
ರಥಸಮರಥ[3]ರಾ[3]ಮಹಾರಥಾರ್ಧರಥರ್ಕಳ್ ॥ ೧೨ ॥

---

೧೦. ಪರಾಕ್ರಮಿಗಳಾದ ಬಿಲ್ಗಾರರನ್ನು ಈ ರೀತಿಯಾಗಿ ತನ್ನ ಹರಿತವಾದ ಬಾಣಗಳಿಂದ ಕತ್ತರಿಸಿ ಮಾಡಿದ ಈ ಸಮರ ಪ್ರಾರಂಭವು (ಮುಂದಿನ ಭೂರಿ ಭೋಜನಕ್ಕೆ ನಾಂದಿಯಾಗಿ) ಮೃತ್ಯುದೇವತೆಗೆ ಆಪೋಶನವಿಕ್ಕಿದಂತಾಯಿತು.

ವ॥ ಹೀಗೆ ಬಿಲ್ಪಡೆಯ ಮೊನೆಯೆ ಮುಕ್ಕಾಗಿಹೋದಂತೆ ಹಲವಾರು ಹೆಸರಾದ ಧನುರ್ಧರನಾಯಕರು ಆತನ ಪ್ರಚಂಡ ಬಾಣಗಳಿಗೆ ಆಹುತಿಯಾದರು. ಆಗ ಆತನು ಬಿಲ್ಲಿನ ತುದಿಯನ್ನು ನೆಲಕ್ಕೆ ಊರಿ ನಿಂತು ತನ್ನ ಬಾಣದ ಗರಿಯಿಂದ ಸನ್ನೆಮಾಡಿ ರಥಸೈನ್ಯವನ್ನು ಕರೆದನು. ಆ ರಥಿಕರು ತಂತಮ್ಮ ಸಾರಥಿಗಳಿಗೆ ರಥಗಳನ್ನು ಮುಂದೆ ನಡೆಯಿಸಲು ಹೇಳಿದರು. ಅವರೆಲ್ಲರೂ ಒಂದೇ ಗುರಿಯತ್ತ ಧಾವಿಸಲು ಅಪ್ಪಣೆ ಪಡೆದವರಂತೆ, ಒಂದೇ ದಾರಿಯಲ್ಲಿ ಸಮನಾಗಿ ರಥಗಳನ್ನು ಸಾಗಿಸಿಕೊಂಡು ಬಂದು ಬಾಣ ಹೊಡೆಯುವ ಅಂತರದಲ್ಲಿ ನಿಲ್ಲಿಸಿದರು.

೧೧. ಅಪರಾಜಿತನ ತೇಜಸ್ಸೆಂಬ ಬೆಂಕಿಯಿಂದ ತಮ್ಮ ಕಣ್ಣು ಕುಕ್ಕಿ ಕುಲೀನರೂ ಅತ್ಯಂತ ಬಲಿಷ್ಠರೂ ಎನಿಸಿದ ಶತ್ರುನಾಯಕರು ಕಾಳಗ ಮಾಡುವುದಕ್ಕೆ ಮೊದಲೆ ತಮ್ಮ ಶೌರ್ಯಕ್ಕೆ ಉಪಶಮನವಾಯಿತೊ ಏನೊ ಎಂಬಂತೆ,

ವ॥ ನಿಬ್ಬೆರಗಾಗಿ ಚಿತ್ರದ ಬೊಂಬೆಗಳಂತೆ ನಿಶ್ಚಲರಾಗಿ, ರೆಪ್ಪೆ ಹೊಯ್ಯುವುದನ್ನೂ ಮರೆತು, ನೋಡುತ್ತ ಎಷ್ಟೊ ಹೊತ್ತು ನಿಂತುಬಿಟ್ಟರು. ಆಮೇಲೆ ಹೇಗೊ ಸುಧಾರಿಸಿಕೊಂಡು, ತಮ್ಮ ಹಿಂದಿದ್ದ ಒಡೆಯನನ್ನೂ ಮುಂದಿದ್ದ ಅಪರಾಜಿತನನ್ನೂ ನೆನೆದು, ಬಾಣಗಳನ್ನು ಹೂಡಿ ಹೊಡೆದರು. ಆಗ (ಬಲದೇವನು) ಅವರಿಗೆದುರಾಗಿ ಬಿಲ್ಲನ್ನು ಠೇಂಕರಿಸಿ—

೧೨. ರಥಿಗಳನ್ನೂ ಸಾರಥಿಗಳನ್ನೂ ಬಾಣಗಳಿಂದ ಹೊಡೆದನು. ಕೂಡಲೆ ಅತಿರಥ, ಸಮರಥ, ಅರ್ಧರಥ, ಮಹಾರಥ ಎಂಬ ಎಲ್ಲ ವೀರರೂ ನಾಶವಾದರು.

---

1. ರ (ಮ) 2. ನ್ನಾ (ಮ) 3. ರುಂ (ಅ)

ಕಂ॥ ಬಳಭದ್ರನನಿಸೆ ರಥಿಸಂ
ಕುಳಮಾತನ ಮೇಲೆ ಸರಲ ಸ[ರಿ][1] ಸುರಿದುವಸುಂ
ಗೊಳೆ [ನೀಳದ] ಬೆಟ್ಟದ ಮೇ
ಗಳವಲ್ಲದೆ ಸುರಿವ ಕಾರ ಸ[ರಿ][1]ಗಳ ತೆಱದಿಂ ॥ ೧೩ ॥

ವ॥ ಮತ್ತಮೆತ್ತಮಾವರಿಸೆ—

ಕಂ॥ ಮಂದೈಸಿ ಪಾಯ್ದ ಸಾಯಕ
ಸಂದೋಹದಿನಭ್ರಮಾರ್ಗಮಾರ್ಗಂ ಕಾಣಲ್
ಬಂದುದಣಮಿಲ್ಲ ಶರಭಯ
ದಿಂದೋಡಿದುದಕ್ಕುಮೆಂಬ ನುಡಿ ಪರೆವಿನೆಗಂ ॥ ೧೪ ॥

ವ॥ ಅಂತಿಸುವ ಚಾಪಧರನೀರದನಿಕರದ ಶರಾಸಾರಮಂ ಮಂಜಿನ ಮಱೆಯನಹಿಮಕಿರಣನಾತ್ಮಕಿರಣಂಗಳಿಂ ಕಿಡಿಸುವಂತೆ ತನ್ನಂಬುಗಳಿಂ ಕಡಿಕಡಿದು ಕಿಡಿಸಿ ಶೀಘ್ರಮೆಚ್ಚೆಚ್ಚೇಕಸಮಯದೊಳನೇಕ ಧ್ವನಿಗಳನನೇಕಸಮಯದೊಡನಾ ಚಾಪಧರರಂ ಬಿದಿಯ ಸಮಕಟ್ಟಿಂಗೆ ಕೊಲ್ವಂತೆ ಪೇಸೇಱೆ ತವೆ ಕೊಲೆ—

ಕಂ॥ ತುರಗಾಧಿರೂಢರಾರ್ದನಿ
ಬರುಮೋಳಿಯೊಳೊಂದೆ ದೆಶೆಯೊಳುತ್ಪಾತಾಸಿ
ಚ್ಛುರಿತ ಭುಜಪರಿಘರೋಂದೊ
ರ್ವರ ಸೆಣಸಿಂ ಲಗ್ಗೆಗೆಯ್ದು ಪಾಯಿಸೆ ಜವದಿಂ ॥ ೧೫ ॥

ಪರಿವುವು ತೊಡರ್ದೆಡೆಯೊಳ್ ಪಂ
ಜರದೊಳ್ ಸೆಱೆಯಿರ್ದ ಹರಿಗಳಂತಿರೆ [2]ತಾಂ[2] ಪಂ
ಜರದೊಳ್ ನೆಟ್ಟನೆ ಮಿಡುಕುವೆ
ಹರಿಗಳ್ ಬಹುವ್ಯಧ್ಮಿಸುವುದುಂ ಬಲದೇವಂ ॥ ೧೬ ॥

---

೧೩. ನೀಲಪರ್ವತದ ಮೇಲೆ ಅಗಣಿತವಾಗಿ ಸುರಿಯುವ ಮಳೆಗಾಲದ ಸೋನೆಗಳಂತೆ ರಥಿಕರು ಎಸೆದ ಬಾಣಗಳು ಅಪರಾಜಿತನ ಮೇಲೆ ಸುರಿದುವು.

ವ॥ ಪುನಃಪುನಃ ಹೀಗೆ ಆವರಿಸುತ್ತ—

೧೪. ದಟ್ಟವಾಗಿ ಸಂದಣಿಸಿದ ಬಾಣಗಳ ಸಮೂಹದಿಂದ ಆಕಾಶವೆ ಕಾಣದಂತಾಯಿತು ; ಈ ಬಾಣಗಳಿಗೆ ಅಂಜಿಕೊಂಡು ಅದು ಓಡಿಯೆ ಹೋಯಿತೊ ಏನೊ ಎಂದೆನಿಸಿತು.

ವ॥ ಮಂಜಿನ ಮಳೆಯನ್ನು ತನ್ನ ಕಿರಣಗಳಿಂದ ಸೂರ್ಯನು ಇಂಗಿಸಿಬಿಡುವಂತೆ ಬಿಲ್ಗಾರರೆಂಬ ಮೋಡದ ಗುಂಪು ಸುರಿಸುತ್ತಿರುವ ಬಾಣಗಳೆಂಬ ಮಳೆಯನ್ನು ತನ್ನ ಬಾಣಗಳಿಂದ ಕಡಿಕಡಿದು ಆತನು ನಿವಾರಿಸಿದನು. ಅತ್ಯಂತ ವೇಗದಿಂದ ಬಾಣಪ್ರಯೋಗ ಮಾಡುತ್ತ ಒಂದೊಂದು ಸಲಕ್ಕೆ ಹಲವಾರು ಬಿಲ್ಗಾರರಂತೆ ಅನೇಕ ಸಲ ಹೊಡೆದುಹಾಕಿ ಧನುರ್ಧಾರಿಗಳನ್ನೆಲ್ಲ ಯಮದೇವತೆಯಂತೆ ಏಕಪ್ರಕಾರವಾಗಿ ಕೊಂದನು.

೧೫. ಆಗ ಅಶ್ವಾರೋಹಿಗಳೆಲ್ಲರೂ ಗರ್ಜಿಸುತ್ತ ಒಟ್ಟಾಗಿ ಒಂದೇ ದಿಕ್ಕಿಗೆ ಗುರಿಯಿಟ್ಟು ಹಿರಿದ ಕತ್ತಿಗಳಿಂದಲೂ ಮಿರುಗುವ ಪರಿಘಗಳಿಂದಲೂ ಸಜ್ಜಾಗಿ ಮೈಮೇಲೆ ನುಗ್ಗಿಬಂದರು.

೧೬. ಪಂಜರದಲ್ಲಿದ್ದು ಹೊರಬಿದ್ದ ಸಿಂಹಗಳಂತೆ ಆರ್ಭಟಿಸುವ ಈ ಕುದುರೆಗಳನ್ನು ಅಪರಾಜಿತನು ಬಾಣಗಳಿಂದ ಮೈತುಂಬ ಹುಣ್ಣಾಗುವಂತೆ ಇರಿಯಲಾಗಿ ಪಂಜರದಲ್ಲಿ ಸಿಕ್ಕು ಒದ್ದಾಡುವಂತೆ ಅವು ಮಿಡುಕಿದುವು.

---

1. ಱ (ಮ) 2. ಶರ (ಅ)

ವ॥ ಅಂತು ಕೃಂತಸಂತಪಾಶ ಬಂಧಂಗಳಾದಂತೆತ್ತಲುಂ ತಳರದೆ ತೀವ್ರ ಪತತ್ರಿ ಭರಮಂ ಪೇಱೆ ವೊಗಮನೂಱೆ ಸುರಳ್ದಿಯ್ಯ ಪಿಂಡಿನಂತೆ ಕೂಡೆ ಕುದುರೆಯ ದೞಂ ಕೆಡೆವುದುಂ ಘೋ[1]ಟಾ[1]ಯ್ಲರ್ ಕಿೞ್ತ ಬಾಳ್ವೆರಸಿದಿರನದಿರದೆಯ್ದುರೆ—

ಮ॥ ತೊಡೆ ತೋಳ್ ಮುಯ್ಯು ಕದಂಪುರಂ ಪರಡು ಕಯ್ ಮುಂಗಯ್ ಮೊಗಂ ಪೊರ್ಕುೞಿ
ಟಿೞ್ಪೊಡೆ ಮೇಗಾಲ್ ವೆರಲುಂಗುಟಂ ಬಱಿ ನೊಸಲ್ ನಿಟ್ಟೆಲ್ಪು ಗೋನಾಳಿ ಬೆನ್
ಮಡಕಾಲ್ ಕಣ್ ಕಿವಿ ಮೂಗು ಬಾಯ್ ಬಸಿ[2][ಱು][2]ಗುರ್ ಪುರ್ವಳ್ಳೆ ಪಲ್[3]ಕೆಕ್ಕೆ[3]ಕಾ
ಲಡಿಯೆಂದಿಂತಿವನುರ್ಚಿ ಪೋದುವಿಸೆ ತತ್ಸೌಜನ್ಯಕಂದಾಂಕುರಂ ॥ ೧೭ ॥

ವ॥ ಅಂತು ತುರಗಬಲಮೆಲ್ಲಮಂ ತವಿಸಿ ಪಿಂತಪ್ಪರನಲ್ಲದೆ ಮುಂತಪ್ಪರಂ ಕಾಣದೆ ಮಂದ ಮಾರುತಾಂದೋಳಿತ ಲುಳಿತಾಳಕ ವಲ್ಲರೀ ಸಮುಲ್ಲಾಸನುಂ ಪರಿಸನ್ನಾದ್ವಯನುಂ ಪಾಪೇಭ ಕಂಠೀರವನಾ ವಿಜಯ ಶ್ರಮಮನಾಱಿಸುತ್ತುಮಿರೆ ದಮಿತಾರಿಯ ನೋಡುವುದುಮಂ ತಪ್ಪು ಬಲಮ[4][ಟ್ಕಾ][4]ಡುವುದುಮಂ [5]ಸೆಱೆ[5]ಯನೋಸರಿಸಿ ಮೊಗವಡಂದೆಱೆದು ನಾಗತರಂಗಳನಭಿನಿಷಾದಿಗಳ್ ಕೀಱಿಯುಮಣೆದು ತೋಱಿಯುಂ ಬಿಟ್ಟಕ್ಕಿದಾಗಳ್ ಪಕ್ಕರೆವೆರಸೆಱಂಕೆವೆರಸಿದ ಜಂಗಮಕುಳಾಚಳಂ ಬರ್ಪಂತೆ ಪಾಱಿಪರಿತರ್ಪಾನೆಯ ಘಟೆಯಂ ಕಂಡು ತಾಂ ಸಿಂಹವರ್ಣನುಂ ಸಿಂಹಾನೀಕನುಂ ಪಾಪೇಭಕಂಠೀರವನುಮಪ್ಪುದಱಿಂದ ಮೆಯ್ದೆ ಮುಳಿದು

ಕಂ॥ ಗಜವೈರಿಮುಖದ ಬಾಣ
ವ್ರಜಂಗಳಿಂ ತೆಗೆದು ಸೀರಧರನಿಸೆ ಮದವ
ದ್ಗಜಮಸ್ತಕದೊಳ್ ಪಾಯ್ದುವು
ಗಜಾರಿ ಪಾಯ್ವಂತೆ ನಿಶಿತ ಬಾಣಾವಳಿಗಳ್ ॥ ೧೮ ॥

ಆಯಸಮಣಮಲ್ತು ಪರರದ
ನಿಯನಿಕ್ಕುವುದಂತುಮಾನೆಯೊಳ್ ಕಾದೆ ನಿಷಾ
ದಿಯನುರುಳೆಚ್ಚ ಗಜಪ್ರಿಯ
ತೆಯನಹಿತರ್ ಪೊಗೞೆ ಸೀರಹಸ್ತಂ ಮೆಱೆದಂ ॥ ೧೯ ॥

ವ॥ ಹೀಗೆ ಎತ್ತೆತ್ತಲೂ ಮೃತ್ಯುವೊಡ್ಡಿದ ಪಾಶಗಳಂತೆ ಬಾಣಗಳು ಮುತ್ತಲಾಗಿ, ಮುಂದೆ ಅಡಿಯಿಡಲಾರದೆ ಬಾಣಗಳ ರಭಸಕ್ಕೆ ಬಾಗಿ, ಮುಖವನ್ನು ನೆಲಕ್ಕೆ ಊರಿ, ಉರುಳಿ (ಮೈತುಂಬ ನಟ್ಟು ನಿಂತ ಬಾಣಗಳ ಮೂಲಕ) ಮುಳ್ಳುಹಂದಿಗಳ ಹಿಂಡಿನಂತೆ ಕುದುರೆಯ ದಳವು ಸಮಗ್ರವಾಗಿ ಭೂಮಿಗೆ ಬಿದ್ದಿತು. ಆಗ ಕುದುರೆಸವಾರರಾದವರು ಕತ್ತಿಹಿಡಿದು ಧೈರ್ಯದಿಂದ ಮುನ್ನುಗ್ಗಿದರು. ಆಗ

೧೭. ಅಪರಾಜಿತನು ಹೊಡೆದ ಬಾಣಗಳು ಅವರ ತೊಡೆ, ತೋಳು, ಕೆನ್ನೆ, ಹರಡು, ಕೈ, ಮುಂಗೈ, ಮುಖ, ಕಿಪ್ಪೊಟ್ಟೆ, ಮೋಗಾಲು, ಬೆರಳು, ಉಂಗುಟ, ಪಕ್ಕೆ, ಹಣೆ, ಬೆನ್ನೆಲುವು, ಗೋಣು, ಬೆನ್ನು, ಹಿಮ್ಮಡಿ, ಕಾಲು, ಕಣ್ಣು, ಕಿವಿ, ಮೂಗು, ಬಾಯಿ, ಹೊಟ್ಟೆ, ಉಗುರು, ಹುಬ್ಬು, ಪಕ್ಕಡಿ, ಮೆಲುಕು, ಅಂಗಾಲು—ಹೀಗೆ ಮೈಯಲ್ಲಿ ಎಲ್ಲಾ ಅವಯವಗಳಲ್ಲಿಯೂ ನಟ್ಟು ಸೀಳಿಕೊಂಡುಹೋದುವು.

ವ॥ ಹೀಗೆ ಅಶ್ವದಳವೆಲ್ಲವನ್ನೂ ಸಂಪೂರ್ಣವಾಗಿ ನಾಶಗೊಳಿಸಿದ ಬಳಿಕ, ಹಿಂದಾಗುವವರನ್ನಲ್ಲದೆ ಮುಂದಾಗುವವರನ್ನು ಕಾಣದೆ, ಮೆಲುಗಾಳಿಯಲ್ಲಿ ತನ್ನ ತಲೆಗೂದಲು ಒಲೆದಾಡುತ್ತಿರಲಾಗಿ ಏಕಾಕಿಯಾಗಿ ಆ ಪಾಪನಾಶಕನಾದ ಅಪರಾಜಿತನು ಗೆಲುವನ್ನು ಪಡೆದ ಬಳಿಕ, ಶ್ರಮವನ್ನು ಆರಿಸಿಕೊಳ್ಳುತ್ತ ನಿಂತನು. ಅಷ್ಟರಲ್ಲಿ ದಮಿತಾರಿಯು ನೋಡುವುದನ್ನೂ ಆತನ ಸೈನ್ಯ ನಡುಗುತ್ತಿರುವುದನ್ನೂ ಬಂಧನವನ್ನು ಕಳಚಿ, ಮುಖವಾಡವನ್ನು ತೆರೆದು, ಮಹಾಗಜಗಳನ್ನು ಮಾವುತರು ತಿವಿದು, ಕೆರಳಿಸಿ, ಗುರಿತೋರಿ ನೂಕಲಾಗಿ, ರೆಕ್ಕೆ ಪಡೆದ ಕುಲಪರ್ವತಗಳಂತೆ ಹಾರಿ ಬರುವ ಆ ಗಜಸೈನ್ಯವನ್ನೂ ಕಂಡು ತಾನು ಸಿಂಹವರ್ಣನೂ, ಸಿಂಹದಂತೆ ಯುದ್ಧ ಮಾಡುವವನೂ, ಪಾಪಗಜಸಿಂಹನೂ ಆಗಿದ್ದುದರಿಂದ ಅತ್ಯಂತ ಕುಪಿತನಾಗಿ—

೧೮. ಬತ್ತಳಿಕೆಯಿಂದ ಸಿಂಹಮುಖದ ಬಾಣಗಳನ್ನು ಹಿರಿದುಕೊಂಡು ಹೂಡಿ ಹೊಡೆದನು; ಆ ಹರಿತವಾದ ಬಾಣಗಳು ಸಿಂಹದಂತೆ ನುಗ್ಗಿ ಆನೆಗಳ ಕುಂಭಸ್ಥಳದತ್ತ ಹಾರಿದುವು.

೧೯. ಶತ್ರುಗಳ ಆನೆಗನ್ನು ಹೊಡೆದು ಕೊಲ್ಲುವುದೇನು ಶ್ರಮದ ಕೆಲಸವಲ್ಲ. (ಅದು ಬೇಡವೆಂದು) ಆನೆಗಳ ಮೇಲಿದ್ದ ಮಾವುತರನ್ನು ಉರುಳಿಬೀಳುವಂತೆ ಹೊಡೆದು, ತನ್ನ ಗಜಪ್ರೇಮವನ್ನು ವೈರಿಗಳೂ ಹೊಗಳುವಂತೆ ಅಪರಾಜಿತನು ಶರವಿದ್ಯೆಯನ್ನು ತೋರಿದನು.

---

1. ಟ (ಅ) 2. ಱು (ಮ) 3. ನೆಕ್ಕ (ಅ) 4. ಟ್ಕಾ (ಮ) 5. × (ಮ)

ಕಂ॥ ಅಪರಾಜಿತನಿಸೆ ಗಂಧ
ದ್ವಿಪಂ ಮೊಗಂದಿ[1][ರಿ][1]ದು ತನ್ನ ಬಲಮನೆ ತು[2][ಳಿ][2]ದ
ತ್ತುಪಕಾರಿಗೆಮದದನೂಪಿತ
ನಪಕಾರಂಗೆಯ್ವನೆಂಬುದೊಂದಚ್ಚರಿಯೇ ॥ ೨೦ ॥

ವ॥ ಅಂತತಿ ಕುಪಿತ ಕಿಶೋರಕೇಸರಿಯಂತೆ ಪರಾಕ್ರಮೈಕಸಹಾಯನಾಗಿ ಮದಾಂಧಗಂಧಸಿಂಧುರಘಟೆಯಂ ಮೇಗಣ ನಿಷಾದಿ ಯೋಧಾಗ್ರಗಣ್ಯರುಮಂ ಮೊಗುದಿ[3][ರ][3]ದೆ ಮೊಗಂದಿ[4][ರಿ][4]ಸುವ ಬೆಸದೊಳ್ ತೊಡರ್ದು —

ಉ॥ ಖಗರಾಜೇಂದ್ರಗಜೇಂದ್ರರುಂದ್ರ ಘಟೆಗಂದೆಚ್ಚಂಬುಗಳ್ ರೋಮರಾ
ಜಿಗಳಂ ತಪ್ಪಿದೊಡಲ್ತೆ ತಪ್ಪುಗೆ ಮೃಗೇಂದ್ರಾಭಂಗಳಂ ವೈರಿದಂ
ತಿಗಳುಂ ನೆಟ್ಟನೆ ತೊಯ್ದನೆಚ್ಚೊಡೆ ಕೃತಾಸ್ತ್ರಂ ತಪ್ಪದಾ ಧನ್ವಿ ತ
ಪ್ಪುಗುಮೇಂ ಸಯ್ದನೊ ಸತ್ವದೊಳ್ ಶರದೊಳಾ ಪಾಪೇಭಕಂಠೀರವಂ ॥ ೨೧ ॥

ಕಂ॥ ಆ ನಾರಾಚಕೆ ಸಮದ ಘ
ಟಾನೀಕಂ ಸಾಲೆ ಸೋಲೆ ನೆರೆಯೆ [5]ನೆಱಿಂ ಚಿ
ತ್ರಾನೀಕ ನೆಂಬಗುರ್ಬಿನ
ಸೇನಾಪತಿಯೊಸೆದು ತಾಗೆ ಹಲಿ ನಿಂದಾಂತಂ ॥ ೨೨ ॥

ಅವರೊಂದೊರ್ವರನಿಸುವತಿ
ಜವದಿಂ[6]ದೊಂದೊರ್ವರ ರಥದೊಂದೊರ್ವರ ನ
ಚ್ಚುವ ಕೇತನವೊಂದೊರ್ವರ
ಕವಚಂ ಪೂಣ್ದುವು ನಿಶಾತ ಶರಕೋಟಿಗಳಿಂ ॥ ೨೩ ॥

---

೨೦. ಅಪರಾಜಿತನು ಬಾಣಪ್ರಯೋಗ ಮಾಡಲಾಗಿ ಗಂಧಗಜವೊಂದು ಮುಖ ತಿರುವಿ ತನ್ನವರ ಸೈನ್ಯವನ್ನೇ ತುಳಿಯಿತು. ಮದವೇರಿದವನು ಉಪಕಾರಿಗೆ ಅಪಕಾರ ಮಾಡುವನೆಂಬುದು ಆಶ್ಚರ್ಯದ ಮಾತೆ?

ವ॥ ಹೀಗೆ ತುಂಬ ಕ್ರುದ್ಧವಾದ ಸಿಂಹದ ಮರಿಯಂತೆ ತನ್ನ ಪರಾಕ್ರಮವೊಂದನ್ನಲ್ಲದೆ ಬೇರಾವ ಸಹಾಯವನ್ನೂ ಬಯಸದ ಆತನು ಮದವೇರಿದ ಗಂಧಗಜಗಳ ಪಡೆಯನ್ನೂ ಅವುಗಳನ್ನೇರಿಬಂದಿದ್ದ ವೀರಶ್ರೇಷ್ಠರನ್ನೂ ವಿಮುಖ ಗೊಳಿಸುವ ಕಾರ್ಯದಲ್ಲಿ ಮಗ್ನನಾದನು.

೨೧. ಖೇಚರಚಕ್ರವರ್ತಿಯ ಪ್ರಚಂಡವಾದ ಗಜಸೈನ್ಯಕ್ಕೆ ಆತನು ಎಸೆದ ಬಾಣಗಳು ಅವುಗಳ ಮೈಯಲ್ಲಿದ್ದ ಒಂದು ಕೂದಲಿಗೂ ತಪ್ಪದಂತೆ ನಾಟಿದುವು. ನಾಟುವುದಕ್ಕೆ ಜಾಗವಿಲ್ಲದ ಬಾಣಗಳು ಮಾತ್ರ ತಪ್ಪಿರಬಹುದು. ಅವನು ಹೂಡಿಹೊಡೆವ ಬಾಣಗಳು ಸಿಂಹಸದೃಶವಾದುವು; ಅವುಗಳಿಗೆ ಗುರಿಯಾಗಿದ್ದುವು ವೈರಿಪಕ್ಷದ ಆನೆಗಳು; ಚೆನ್ನಾಗಿ ಎಳೆದೆಳೆದು ಹೊಡೆಯುವವನು ಅಸ್ತ್ರವಿದ್ಯಾಪಾರಂಗತನಾದ ಬಿಲ್ಗಾರ- ಹೀಗಿರುವಾಗ ತಪ್ಪುವುದುಂಟೆ? ಸತ್ವದಲ್ಲಿಯೇ ಆಗಲಿ, ಶರಪ್ರಯೋಗದಲ್ಲಿಯೇ ಆಗಲಿ ಆತನ ಸ್ಥೈರ್ಯ ಎಂತಹುದು! (ಈ ಪದ್ಯದ ಮೂರನೆಯ ಚರಣದಲ್ಲಿ "ತೊಯ್ದನೆ" ಎಂಬುದು ಬಹುಶಃ "ತೊಯ್ದಿಸೆ" ಆಗಿರಬಹುದು.)

೨೨. ಆತನ ಬಾಣಘಾತಕ್ಕೆ ಮದಗಜಗಳ ಪಡೆಯೆಲ್ಲವೂ ಸಂಪೂರ್ಣವಾಗಿ ಸೋತುಹೋಗಲಾಗಿ ಚಿತ್ರಾನೀಕ ನೆಂಬ ಪ್ರಚಂಡನಾದ ಸೇನಾಪತಿಯು ಏರಿಬಂದು ತಾಗಿದನು. ಅಪರಾಜಿತನು ಅವನನ್ನು ಎದುರಿಸಿದನು.

೨೩. ಅವರಿಬ್ಬರೂ ಒಬ್ಬರೊಬ್ಬರನ್ನು ಗುರಿಮಾಡಿ ಎಸೆವ ತೀಕ್ಷ್ಣವಾದ ಬಾಣಗಳಿಂದ ಉಭಯತರ ಮೈಮೇಲಿನ ಕವಚಗಳೂ ರಥದ ಮೇಲಿನ ಧ್ವಜಗಳೂ ಮುಚ್ಚಿಹೋದುವು.

---

1. ಜಿ (ಮ) 2. ಳಿ (ಮ) 3. ಜ (ಮ) 4. ಜಿ (ಮ) 5. ನೆರಂ (ಅ) 6. ದೋರೊರ್ವರ (ಮ)

ವ॥ ಅಂತು ತೋಡುಂ ಬೀಡುಂ ಕಾಣಲಾಗದಂತಂದೊರ್ವರನಿಸುವಂಬನಂಬಿಂ ಕಡಿದು ನೀಡುಂ ಬೇಗಂ ಕಾದುತ್ತುಮಿರ್ಪಿನಂ ತೆಱಪು ವೆತ್ತು ಪಾಪೇಭಕಂಠೀರವನೆಚ್ಚೊಂದಪೂರ್ವಸಾಯಕಂ ಚಿತ್ರಾನೀಕನಂ ನೆ[1][ಱ][1]ಗೊಳ್ವುದುಂ ತದ್ದಮಿತಾರಿಯ ಬಲದ ತೋಳ್ಪಱಿದು ಬೀ[2][ೞ್ವ][2]ಂತಾತಂ ಬೀ[3][ೞ್ದ][3]ದುಮಂಬರಚರಶ್ರೀಕಾಂತೆಗೆ ಬಳಪುರ್ದಿಕ್ಕುವಂತಾತನಿಕ್ಕುವುದಂ ಕಂಡು ಸಂಪಾದಿತಸಮಸ್ತಬಲಂ ಮಹಾಬಲನೆಂಬೊಂ—

ಹರಿಣೀವೃತ್ತಂ॥ ಇಳಿಸಲಿಳಿಸಲ್ ಮಾರ್ಕೊಳ್ ಮಾರ್ಕೊಳ್ ಪುಗಲ್ ಪುಗಲೆಂದು ಸಂ
ಗಳಿಸಿ [4]ಸರದಿಂ[4] ಕೊಳ್ ಕೊಳ್ಳೆಂದೆಚ್ಚೊಡೆಚ್ಚ ಶರಂಗಳಂ
ಮುಳಿದು ಕಡಿದುಂ ಸೀಳ್ದುಂ ನೇರ್ದುಂ ನಿಜಾಸ್ತ್ರದಿನೇರಿ ಮನಂ
ಗೊಳಿಸಿದನೊ ಸೀರಾಸ್ತ್ರಂ ನೋಟ್ಪಿಂದ್ರ ರುಂದ್ರ ಸಭಾಳಿಯಂ ॥ ೨೪ ॥

ವ॥ ಅಂತು [5]ಮೇಲ್ವಾಯ್ದು[5] ಕಾದುತ್ತಿರ್ದ ಪಾಪೇಭಕಂಠೀರವನ ಮುನ್ನಿನ ಭವದ ವಿದ್ಯೆಗಳ್ ಬೆಸನಂ ಬೇಡಿ ಬಂದು ಮುಂದೆ ನಿಲೆ—

ಕಂ॥ ಆ ಗಗನೇಚರನುಂ ಧನು
ರಾಗಮವಿದ್ಯಾಗಮೈಕನಿಧಿ ವಿದ್ಯೆಗಳಿಂ
ಪೋಗದೆ ಕಾದುತ್ತಿರೆ ತೆಱ
ಪಾಗಲೊಡಂ ಹಲಧರಾಸ್ತ್ರಮುರ್ಚಿದುದವನಂ ॥ ೨೫ ||

ವ॥ ಅಂತಂಬು ಕೊಳೆಯುಂ ದಿವ್ಯಶರವ್ಯದಂತೆ ಬಟಲದೆ ಮಹಾಬಳಂ ತನ್ನ ವಿದ್ಯೆಗಳಂ ಬೆಸಸುವುದುಂ ಸೌಜನ್ಯಕಂದಾಂಕುರಂ ತನ್ನ ವಿದ್ಯೆಗಳಂ ಬೆಸಸದಿರೆಯುಂ ಆಳ್ದನ ಮನಮನಱಿವನುಜೀವಿಗಳಂತೆ ವಿದ್ಯಾದೇವತೆಗಳ್ ಮಹಾಬಳನ ವಿದ್ಯೆಗಳೊಳ್ಪೊಣರ್ವುದುಮವರೊಳ್ ಸೆಣಸಿದಂತೆ ವೈರಿಭೂರುಹಕುಠಾರನ ಶರಂಗಳವಱಿಂ ಮುನ್ನೆಮೆಯ್ದಿ—

ವ॥ ಬಾಣವನ್ನು ತೆಗೆದು ಬಿಲ್ಲಿಗೆ ಹೂಡುವುದಾಗಲಿ, ಎಳೆದು ಬಿಡುವುದಾಗಲಿ ಕಾಣದಂತೆ ವೇಗವಾಗಿ ಅವರಿಬ್ಬರೂ ಪರಸ್ಪರರನ್ನು ಗುರಿಮಾಡಿ ಬಾಣಬಿಡುವರು ; ಎದುರು ಬಂದ ಬಾಣಗಳನ್ನು ತಮ್ಮ ಬಾಣಗಳಿಂದ ಕತ್ತರಿಸುವರು. ಹೀಗೆ ಬಲುಹೊತ್ತು ಹೋರಾಡುತ್ತಿದ್ದು, ಸುಸಂದರ್ಭವೊದಗಿದಾಗ ಅಪರಾಜಿತನು ಬಿಟ್ಟ ಒಂದು ಅಪೂರ್ವವಾದ ಬಾಣ ಚಿತ್ರಾನೀಕನನ್ನು ನಾಟಿ ಭೇದಿಸಿತು. ದಮಿತಾರಿಯ ಬಲದೋಳೇ ಕತ್ತರಿಸಿ ಬೀಳುವಂತೆ ಆತನು ನೆಲಕ್ಕೆ ಬಿದ್ದನು. ಖೇಚರಲಕ್ಷ್ಮಿಗೆ ಇಕ್ಕುವುದ್ದಿಟ್ಟಂತೆ ಆತನನ್ನು ಇಕ್ಕಿ ಕೊಲ್ಲಲಾಗಿ, ಅದನ್ನು ಕಂಡು ಸಮಗ್ರ ಬಲಕ್ಕೆ ಧುರೀಣನಾದ ಮಹಾಬಲನೆಂಬವನು

೨೪. "(ನಮ್ಮ ಬಲವನ್ನು) ಧಿಕ್ಕರಿಸದಿರು ; ಎದುರಾಗು, ಎದುರಾಗು" ಎಂದು ಪಡೆಯನ್ನು ಕೂಡಿಸಿಕೊಂಡು, ಅಪರಾಜಿತನಿಗೆ "ಇಕೊ, ತೆಗೆದುಕೊ" ಎಂದು ಬಾಣಗಳನ್ನೆಸೆದನು. ಬಲರಾಮನು ಅದಕ್ಕೆ ಮುನಿದು ತನ್ನ ಅಸ್ತ್ರಗಳಿಂದ ಆ ಬಾಣಗಳನ್ನೆಲ್ಲ ಕತ್ತರಿಸಿ, ಸೀಳಿ, ತುಂಡು ತುಂಡು ಮಾಡಿದನು. ನೋಡುತ್ತ ನಿಂತ ದೇವತೆಗಳ ಸಮೂಹವು (ಅವನ ಬಿಲ್ಗಾರಿಕೆಯನ್ನು) ಕಂಡು ಮನಮೆಚ್ಚಿತು.

ವ॥ ಹೀಗೆ ರಭಸದಿಂದ ಕಾದಾಡುತ್ತಿದ್ದಾಗ ಆತನ ಪೂರ್ವಜನ್ಮದ ವಿದ್ಯೆಗಳು "ನಮಗೆ ಕಾದಾಡಲು ಅಪ್ಪಣೆ ನೀಡು" ಎಂದು ಮುಂದೆಬಂದು ನಿಂತುವು.

೨೫. ಧನುರ್ವಿದ್ಯೆಗೆ ನೆಲೆಯಾದ ಆ ಖೇಚರವೀರನು ತನ್ನ ವಿದ್ಯಾಬಲದಿಂದ ಕಾದಾಡುತ್ತಿರಲಾಗಿ, ಒಂದು ಸಂದರ್ಭದಲ್ಲಿ ಅವನ ಮೈ ತೆರವಾದುದನ್ನು ನೋಡಿ ಅಪರಾಜಿತನ ಬಾಣವು ಅವನನ್ನು ನಾಟಿತು.

ವ॥ ಹೀಗೆ ಬಾಣ ಒಂದು ನಾಟಲಾಗಿ, (ಬಾಣಪ್ರಯೋಗದ ಅಭ್ಯಾಸಕ್ಕಿಟ್ಟ) ಗುರಿತಟ್ಟೆಯಂತೆ ಬಳಲದೆ ಮಹಾಬಳನು ತನ್ನ ವಿದ್ಯೆಗಳಿಗೆ ಅಪ್ಪಣೆಯಿತ್ತು ಕಾಳಗಕ್ಕೆ ಬಿಟ್ಟನು. ಅಪರಾಜಿತನು ಮಾತ್ರ ತನ್ನ ವಿದ್ಯೆಗಳಿಗೆ ಹಾಗೆ ಅಪ್ಪಣೆಮಾಡಲಿಲ್ಲ. ಆದರೆ ಒಡೆಯನ ಮನವನ್ನು ಅರಿತ ಆಪ್ತ ಸೇವಕರಂತೆ ಆ ವಿದ್ಯೆಗಳು ತಾವಾಗಿ ಮುನ್ನುಗ್ಗಿ ಮಹಾಬಳನ ವಿದ್ಯೆಗಳೊಡನೆ ಹೋರಾಡತೊಡಗಿದುವು. ಆ ತನ್ನ ವಿದ್ಯೆಗಳೊಡನೆಯೆ ಸ್ಪರ್ಧಿಸುವಂತೆ ಶತ್ರುಸಂಹಾರಿಯಾದ ಅಪರಾಜಿತನ ಬಾಣಗಳು ಅವುಗಳಿಗಿಂತ ಮುಂಚಿತವಾಗಿ ಹೋಗಿ —

1. ರ (ಮ) 2. ಳ್ವ (ಮ) 3. ಳ್ದ (ಮ) 4. ಸರಲಿಂ (ಅ) 5. ಮೇಲ್ಗಾದು (ಅ)

ಕಂ॥ ಅವನುಮನಿರದಂತಕಮುಖ
ವಿವರಮನೆಯ್ದಿಪ್ಪುದುಮಿತ್ತ ರತ್ನಗ್ರೀವಾ
ದ್ಯವಶಿಷ್ಟಖಚರರೊಡನ
ರ್ಣವ ನಿನದದಿನಾರ್ದು ನೆರೆದು [1]ನೂಂಕಿದ[1]ರಾಗಳ್ ॥ ೨೬ ॥

ವ॥ ಅಂತು ಕಟ್ಟಿ ಬಾಳ್ಗಳ ಗೊಂದ[2][ಳ][2] ಬೆಳಗುಗಳ ಬಳಗಂಗ[3]ಳೊಳಾಗಸ[3]ವಳಯಮೆಲ್ಲಂ ಕುವಳಯಿತಮಾಗೆ ಬಂದು ತಾಗುವುದುಂ—

ಕಂ॥ ತುಡೆ ನೂಱಿಸೆ ಸಾಸಿರಮಾ
ಪಡೆಯಂ ಕೊಳೆ ಲಕ್ಕೆ ಲೆಕ್ಕಮಾಗುರ್ಚಿದುವ
ಟ್ಟಿಡಿದುವು ಕುಱಿದಱಿದಱಿದುವು
ಕಡುಪಿಂದಿಸೆ ವಿಬುಧವನಜವನಕಳಹಂಸಂ ॥ ೨೭ ॥

ಏಕಾಕಿಯಿನಟಿದುದು ಕೋ
ಟಾಕೋಟಿ ವಿಯಚ್ಚರೇಂದ್ರವಾಹಿನಿ ಪುಣ್ಯಾ
ನೀಕಂ ಪಡೆಗುಂ ಪಾಪಾ
ನೀಕಂ ಪಡೆಗುಮೆ ಜಯಾಂಗನಾ ಸಂಗಮುಮಂ ॥ ೨೮ ॥

ವ॥ ಎಂದಮರರಂಬರತಲದೊಳ್ ಚೋದ್ಯಂಬಟ್ಟು ಬಾಯಂ ಬಿಟ್ಟು ಬಣ್ಣಿಸೆಯುಮಕಲಂಕಾಚಾರಸಾರಂ ಖಚರಬಲಮನರೆದು ಸಣ್ಣಿಸೆಯುಂ ಅಂಬಿನ ಮೊನೆಯೊಳೆ ತವೆಯುಂ ರತ್ನಗ್ರೀವಾದಿಗಳ್ ವಿದ್ಯಾ ಸಾವ ಗ್ರೀ ಸಮಗ್ರರುದೆಗ್ರ ವಿದ್ಯೆಗಳಂ ಬೆಸಸುವುದುಮವು ಬೆಸಪೆತ್ತ ಕಟ್ಟಾಳಂತೆ ನಾನಾವಿಧೋಗ್ರ ರೂಪ ಗ್ರಹಣದಿನಗುರ್ವುಮದ್ಭುತಮುಮಾಗಿ—

---

೨೬. ಮಹಾಬಳನನ್ನು ಯಮನ ಬಾಯಿಗೆ ಸೇರಿಸಿದುವು. ಇತ್ತ ರತ್ನಗ್ರೀವನೇ ಮೊದಲಾಗಿ ಉಳಿದ ಖೇಚರ ವೀರರು ಸಮುದ್ರದಂತೆ ಅಬ್ಬರಿಸುತ್ತ ಒಟ್ಟಾಗಿ ಮುನ್ನುಗ್ಗಿ ಬಂದರು

ವ॥ ಹೀಗೆ ಅವರ ಬಿಚ್ಚುಗತ್ತಿಗಳ ಬೆಳಕುಗಳು ಅನೇಕಾನೇಕವಾಗಿ ಹೆಣೆದುಕೊಂಡು ಆಕಾಶವೆಲ್ಲ ಬೆಳ್ದಾವರೆಯ ಕೊಳದಂತೆ ಬೆಳ್ಳಗಾಯಿತು. ಅವರು ಬಂದು ತಾಗಿದಾಗ

೨೭. ಈತನು ಉಗ್ರವಾಗಿ ಬಾಣಪ್ರಯೋಗ ಮಾಡಿದನು. ಹೂಡುವಾಗ ನೂರು, ಬಿಡುವಾಗ ಸಾವಿರ, ಶತ್ರು ಪಕ್ಷವನ್ನು ತಾಗಿದಾಗ ಲಕ್ಷ ಎಂಬ ಲೆಕ್ಕದಿಂದ ಅಪರಾಜಿತನ ಅಸ್ತ್ರಗಳು ಅವರನ್ನು ನಟ್ಟುವು, ಮೈಯಲ್ಲಿ ಹೂಳಿಕೊಂಡುವು, ತುಂಬಿದುವು, ಚೂರುಚೂರಾಗುವಂತೆ ಕತ್ತರಿಸಿ ಒಗೆದುವು.

೨೮. "ಅನೇಕ ಕೋಟಿ ಸಂಖ್ಯೆಯ ಖೇಚರಸೈನವು ಒಬ್ಬನೇ ಒಬ್ಬನ ಕೈಯಲ್ಲಿ ನಾಶವಾಯಿತು. ಗೆಲುವಿನ ಸೌಖ್ಯ ವನ್ನು ಪಡೆಯುವುದು ಪುಣ್ಯಸಂಚಯದಿಂದಲ್ಲದೆ ಪಾಪಸಂಚಯದಿಂದಲ್ಲ."

ವ॥ ಹೀಗೆಂದು ಆಕಾಶದಲ್ಲಿ ನೆರೆದಿದ್ದ ದೇವತೆಗಳು ಸೋಜಿಗಬಟ್ಟು, ಬಾಯಿಬಿಟ್ಟು ಬಣ್ಣಿಸಿದರು. ನಿಷ್ಕಳಂಕ ಚರಿತ್ರನಾದ ಅಪರಾಜಿತನು ಖೇಚರ ಬಲವನ್ನು ಅರೆದು ಹುಡಿಹುಡಿಮಾಡಿ ತನ್ನ ಬಾಣಗಳಿಂದ ನಾಶಪಡಿಸಲಾಗಿ, ರತ್ನಗ್ರೀವನೇ ಮೊದಲಾದ ನಾಯಕರು ತಂತಮ್ಮ ಪ್ರಚಂಡ ವಿದ್ಯೆಗಳನ್ನು ಆಜ್ಞಾಪಿಸಿ ಕಾಳೆಗಕ್ಕೆ ನುಗ್ಗಿಸಿದರು. ಅವು ಒಡೆಯನ ಅಪ್ಪಣೆಯನ್ನು ಪಡೆದು ಹೊರಟ ಕಡುಗಲಿಗಳಂತೆ ಬಗೆಬಗೆಯಾದ ಭೀಕರ ರೂಪಗಳನ್ನು ತಾಳಿ, ಅದ್ಭುತ ವಾಗಿಯೂ ಉಚ್ಚಂಡವಾಗಿಯೂ ಹೊರಟುವು.

---

1. ನೂಕಿದ (ಮ) 2. ಣ (ಮ) 3. ಳೊಳ್ಗಗನ (ಅ)

ಉ॥ ಜಲದಾಡಂಬರ ರೂಪದಿಂ ಕೆಲವು ವೇತಾಳಾವಳೀ ವೇಷದಿಂ
ಕೆಲವದ್ರಿಪ್ರತಿರೂಪದಿಂ ಕೆಲವು ವಿದ್ಯುದ್ಧಾಮ ವಿಸ್ಫೂರ್ಜದಿಂ
ಕೆಲವರ್ಕಪ್ರತಿಭಾಸದಿಂ ಕೆಲವು ಸಿಂಹ ವ್ಯಾಘ್ರಸರ್ಪಂಗಳಿಂ
ಕೆಲವುಗ್ರಾನಳ ದೀಪ್ತಿಯಿಂ ಕೆಲವು ಸಯ್ತೆಯ್ತರ್ಪುದುಂ ವಿದ್ಯೆಗಳ್ ॥ ೨೯ ॥

ಹರಿಣೀವೃತ್ತಂ॥ ಪವನನಿನವಂ ಮಂತ್ರಪ್ರಧ್ವಾನದಿಂದವನಾ ಸುಹೃ
ತ್ಪವಿಗಳಿ ನವಂ ಸ್ತ್ರೀಸಂಘಾತಂಗಳಿಂದವನುಗ್ರ ರಾ
ಹುವಿನವನುದಗ್ರಾಪಿಷ್ಟಾಷ್ಟಾಪದ ದ್ವಿಜರಾಜರಿಂ
ದವನುದಕದಿಂ ಮಾರ್ಕಂಡಾಂತಾಂತವಂ ಹಳಿ ಗೆಲ್ವುದುಂ ॥ ೩೦ ॥

ವ॥ ಕಿಡಿಗುಟ್ಟಿದಂತೆ ವಿದ್ಯಾದೇವತಾಧಿಷ್ಠಿತಮಪ್ಪಂಬಂಬಿನೊಳ್ ಪಳಂಚಿ ಪುಟ್ಟಿದ ಕಿಚ್ಚಿನ ನಟ್ಟನಡುವೆ ಸಿಂದುರಿವನುವರಮಂ ಬಾರಿಸಲೆಂದೆಡೆವೊಕ್ಕಗ್ನಿಕುಮಾರನಂತಿರಾತನ ಶರಪಾತನ ಭಯದಿಂ ಕೆಲರ್ ನೆಲದೊಳ್ ನಿಲ್ಲದಾಕಾಶಕ್ಕೊಗೆದೊಳ್ಳೊಡಗೆ ನೆಗೆವಂಬರಿಗುಮಾಯು ತಪ್ಪರನೆಂಬ ನುಡಿಯಂ ನನ್ನಿ ಮಾಡಿ ಸುರುಳ್ದುರುಳ್ವಿನಂ ಕೊಳೆ ಕೆಡೆದರ್ ಕೆಲರ್ ಮಿಟ್ಟುಗಾಡಿಯುಂ ಬರ್ದುಂಕಲಾಗದೆಂಬ ಮಾತಂ ತಿಟ್ಟಂ ಮಾಡಿ ಸೌಜನ್ಯಕಂದಾಂಕುರನ ಶರಕ್ಕಳ್ಕಿ [1]ಬೆ[ಳ್ಳ][1]ರ್ತೋಡೆಯುಂ ಬೆನ್ನನಟ್ಟಿ ನಟ್ಟ ಜಟ್ಟಿಗೆಯಿಂ ಮಿಟ್ಟೆಗೊಂಡ[2]ಚಿಟ್ಟಿ[2]ಯಂತೆಯುಂ ಬಡಿಗೊಂಡ ಮೊಲದಂತೆಯುಂ ತಲೆಕೆಳಗಾಗಿ ಬಿಟ್ದರ್ ಕೆಲರುರದೊಳ್ ನಟ್ಟಂಬನಾಳ್ದೊಂ ಮುನ್ನಂ ಮೂದಲಿಸಿದೊಡಾ ಹೃಚ್ಛಲ್ಯಮಂ ಕಳೆವಂತೆ ಕಿಟ್ಟು ಕಳೆದು ಸತ್ತರ್ ಕೆಲರ್ ನೆತ್ತರೊಳ್ ಮಿಂದು ತಮಗೆ ದೋಷಮಿಲ್ಲೆಂದದರ್ಕೆ ದಿವ್ಯಂಬಿಡಿವಂತೆ ನಂಜಿಸಲ್ ಚಲಂಬಿಡಿದು ನಿಂದಾಂತರ್ ಕೆಲರ್ ನೋಡೆ ನೋಡೆ ತಮ್ಮೋಟಕ್ಕೆ ತಾಮೆ ನಾಣ್ಚಿದರ್ ಕೆಲರೋಡುವಾಗಳಾಳ್ದಂ ಮೂದಲಿಸೆ ಮಗುಟ್ದು ನಡೆದು ಸತ್ತರ್ ಕೆಲರ್ ತಮ್ಮ ಮನೋನಯನವಲ್ಲಭೆಯರನಗಲ್ದು ಮನೋಭವನಂಬೇಜಿಂಗಳ್ಕಿದರ್ ಅರೆಬರ್ ಜೈನಶಾಸನ ಚೂಡಾಮಣಿಯುಂಬೇಜಿ ಮಗಮುಂಟೆಂದು ಸತ್ತರ್ ಕೆಲರ್ ಪುಣ್ಣ ಕೆಂಪೆ ಕಣ್ಗೆವಂದಂತೆ ಪಾಪೇಭಕಂಠೀರವನ ದೆಸೆಯನೆ ನೋಡಿ ನೋಡಿ ಗತಜೀವಿತರಾದರ್ ಅಂತಣ್ಮಿದರುಮಂಜಿದರುಂ ಪುಣ್ಣುಂ ಪೆಣನುಮಾಗಿ ದಮಿತಾರಿಯ ಬಲಂ ಚಂದ್ರಬಲಮಿಲ್ಲದಂಕಕಾ[3][ಱ][3]ನಂತೆ ಸೋಲ್ತು ಮೂರ್ತಿಬಲಮಿಲ್ಲದ ಮಲ್ಲನಂತಿಕ್ಕುಪಟ್ಟು ಬಾಹುಬಲಮಿಲ್ಲದ ರಾಜಪುತ್ರನಂತೆ ತಕ್ಕುಗೆಟ್ಟು ನೆಲಬಲಮಿಲ್ಲದ ನೆಲವತ್ತಿಗನಂತೆ ಕಟ್ಟು ಕಟಿಲ್ದು ದೈಬಲಮಿಲ್ಲದ

೨೯. ಪ್ರಚಂಡವಾದ ಮೋಡಗಳಾಗಿ ಕೆಲವು, ಬೇತಾಳರೂಪವಾಗಿ ಕೆಲವು, ಇಬ್ಬಗೆಯ ರೂಪವಾಗಿ ಕೆಲವು, ಮಿಂಚುಗಳಾಗಿ ಸೆಳೆಯುತ್ತ ಕೆಲವು, ಸೂರ್ಯನ ಪ್ರತಿಕೃತಿಯಾಗಿ ಕೆಲವು, ಸಿಂಹ, ಹುಲಿ, ಹಾವು ಮುಂತಾದುವುಗಳಾಗಿ ಇನ್ನು ಕೆಲವು, ಉಗ್ರವಾದ ಅಗ್ನಿರೂಪದಿಂದ ಕೆಲವು—ಹೀಗೆ ಆ ವಿದ್ಯೆಗಳು ಘೋರವಾಗಿ ಎರಬಂದವು.

೩೦. ಅಪರಾಜಿತನು ಅವುಗಳನ್ನೆಲ್ಲ ಅನುಕ್ರಮವಾಗಿ ವಾಯು, ಮಂತ್ರ, ವಜ್ರ, ರಾಹು, ಶರಭ, ಗರುಡ, ಜಲ ಮುಂತಾದುವುಗಳಿಂದ ಎದುರಿಸಿ ಗೆದ್ದನು.

ವ॥ ಕಿಡಿಕುಟ್ಟಿದಂತೆ ವಿದ್ಯಾದೇವತೆಗಳನ್ನೇ ತಮ್ಮಲ್ಲಿರಿಸಿಕೊಂಡು ಹೊರಟ ಬಾಣಗಳು ಒಂದಕ್ಕೊಂದು ಅಪ್ಪಳಿಸಲಾಗಿ ಹೊತ್ತಿ ಉರಿಯುವ ಬೆಂಕಿಯ ಕಾಳಗ ನಿಲ್ಲಿಸಲೆಂದು ನಡುವೆ ಹೊಕ್ಕ ಅಗ್ನಿಕುಮಾರನೋ ಏನೋ ಎಂಬಂತೆ ತೋರುತ್ತಿದ್ದಿತು. ಆತನ ಬಾಣದ ಹೊಡೆತಕ್ಕೆ ಅಂಜಿ ಕೆಲವರು ಆಕಾಶಕ್ಕೆ ನೆಗೆದರು; ಆದರೆ "ಆಯುಷ್ಯ ತೀರಿದವರನ್ನು ಅಂಬೇ ಕತ್ತರಿಸುವುದು" ಎಂಬ ಮಾತನ್ನು ದಿಟಗೊಳಿಸಿ ಆ ಬಾಣಗಳು ಭೇದಿಸಲಾಗಿ ಅವರು ಉರುಳಿ ಮುದ್ದೆಯಾಗಿ ಬಿದ್ದರು; "ಹೆದರಿ ಓಡಿಹೋದರೂ ಮರಣ ತಪ್ಪದು" ಎಂಬ ಮಾತನ್ನು ದೃಢಪಡಿಸುವಂತೆ ಕೆಲವರು ಅಪರಾಜಿತನ ಬಾಣಕ್ಕೆ ಹೆದರಿ ಓಡಿಹೋದರೂ ಅವರನ್ನು ಬೆನ್ನಟ್ಟಿ ಬಂದ ಜಟ್ಟಿಗೆಯೆಂಬ ಬಾಣದಿಂದ ಚುಚ್ಚಿಸಿಕೊಂಡು, ಕಲ್ಲೆಸೆತಕ್ಕೆ ಗುರಿಯಾದ ಇಟ್ಟೆಯ ಹಣ್ಣಿನಂತೆಯೂ, ಬಡಿಗೆಯ ಹೊಡೆತಕ್ಕೆ ಸಿಕ್ಕಿದ ಮೊಲದಂತೆಯೂ ತಲೆಕೆಳಗಾಗಿ ಬಿದ್ದರು; ಕೆಲವರಿಗೆ ಎದೆಯಲ್ಲಿ ಬಾಣ ನಟ್ಟಿದ್ದುವು; ತಮ್ಮ ಅರಸನು ಈ ಮೊದಲು ತಮಗೆ ಆಡಿದ್ದ ಚುಚ್ಚುಮಾತುಗಳೆಂಬ ಶಲ್ಯಗಳನ್ನೆ ಹೃದಯದಿಂದ ಕಿತ್ತೊಗೆಯುವಂತೆ ಈ ಬಾಣಗಳನ್ನು ಕಿತ್ತು ಅವರು ಪ್ರಾಣಬಿಟ್ಟರು; ಕೆಲವರು ರಕ್ತದಲ್ಲಿ ಸ್ನಾನಮಾಡಿ, "ನಮಗಿನ್ನು ದೋಷವಿಲ್ಲ"ವೆಂದು ದಿವ್ಯವನ್ನು ಹಿಡಿದು ಪ್ರಮಾಣಿಸುವಂತೆ ಛಲವನ್ನು ಹಿಡಿದು ನಿಂತು ಹೋರಾಡಿದರು; ಕೆಲವರು ಎಲ್ಲರ ಕಣ್ಣೆದುರಿಗೆ ಓಡಿಹೋಗುತ್ತಾ ನಮ್ಮ ಪಲಾಯನಕ್ಕೆ ತಾವೇ ನಾಚಿಕೊಂಡರು; ಇನ್ನೂ ಕೆಲವರು ಓಡಿಹೋಗುತ್ತಿರುವಾಗ ತಮ್ಮ ಒಡೆಯನು ಮೂದಲಿಸಲಾಗಿ, ಮರಳಿ ನಡೆದು ಸಾವಿಗೀಡಾದರು; ಕೆಲವರು

1. ಟ್ಯ (ಮ) ಟ್ಯು (ಅ) 2. ಬಿಟ್ಟೆ (ಮ) 3. ರ (ಮ)

ಸೇವಕನಂತೆ ಮುಟ್ಟುಗೆಟ್ಟು ಗ್ರಹಬಲಮಿಲ್ಲದ ಜನ್ಮಿಗನಂತೆ ಪೆರ್ಚಿಲ್ಲದೆ ಅನುಬಲಮಿಲ್ಲದ ಪೊಕ್ಕಿಱಿವನಂತೆ ಮನಂಗುಂದಿ ಮೂಲಬಲಮಿಲ್ಲದ ತು[1][ಟಿ][1]ಲಸಂಡನಂತೆ ಜಿಲ್ಲೊಳ್ಳೊಟ್ಟನಾಗಿ ಚಾತುರ್ಬಲಮಿಲ್ಲದರಸನಂತೆ ಕಣ್ಗೆ[2][೪][2]ದನಾಗಿ ಬೆಂಬಲಮಿಲ್ಲದ ಕನ್ನಗಳ್ಳನಂತೆ ಜೋವಂ ಬೊತ್ತಿರ್ಪಿನಂ ಪರಪರಿವಾರ ಸ್ತಿಮಿತಂ ಸ್ತಿಮಿತಸಾಗರತನೂಜನಿಸೆ—

ಕಂ॥ ದೇವರೊಡವೊಗಟ[3] ರತ್ನ
ಗ್ರೀವನನೆಚ್ಚಂಬು ನೆಲಕೆ ವಾರದೆ ತಲೆ ರ
ತ್ನಾವಳಿಖಚಿತಕಿರೀಟಶಿ
ರೋವರ್ಣಂ ನೆಲಕೆ ವಂದು ತಂದುದಗುರ್ವಂ ॥ ೩೧ ॥

ಉಗ್ರಾಹವದೊಳ್ ಹಳಿ ರ
ತ್ನಗ್ರೀವನನಿಕ್ಕಿ ಸೈನ್ಯದೊಳ್ ನೆಱವಕ್ಕಂ
ದಗ್ರಜನಂ ಕೃತಚಾಪಶ
ರಗ್ರಹಣದನಂತವೀರ್ಯನಱಸುವ ಬಗೆಯಿಂ ॥ ೩೨ ॥

ವ॥ ಗುಹಾಮುಖದಿಂ ಪೊಱಮಡುವ ಶಿಶುಮೃಗರಾಜನಂತೆ ವಿಮಾನದಿಂ ಪೊಱಮಟ್ಟು ಕನಕಶ್ರೀಗಂ ವಿದ್ಯಾದೇವತೆಗಳಂ ಕಾಪುವೇೞ್ದು ಬರ್ಪನಂ ವಿಕ್ರಮೈಕರಸನನಪರಾಜಿತಂ ಸದೇಹಮಾದ ತನ್ನ ಪರಾಕ್ರಮಮನೆ ಕಾಣ್ಬಂತೆ ಕಂಡು ವಿಸ್ಮಯಾಕ್ರಾಂತಚಿತ್ತನಪ್ಪುದುಂ ಅನಂತವೀರ್ಯಂ ವಿನಯಾವನಮಿತೋತ್ತಮಾಂಗನಗ್ರಜಾತಪಾದಪಯೋಜಾತಂಗಳ್ಗೆಱಗಿ ಕತಿಪಯಾವಶೇಷಮಾದ ತವುಕಲ ಕಲಹಮನೆನಗೆ ದಯೆಗೆಯ್ವುದೆಂದು ಬೇಡಿಕೊಳ್ವುದುಮಣ್ಣನಿತ್ತಮಿತ್ತ ದಮಿತಾರಿ[3]ಯುಮಮಿತಾರಿ[3]ಪರಾಜಯವಿಜಯವಿರಾಜಿತನಪ್ಪಪರಾಜಿತನಿಂದಂ ತನ್ನ

ಪ್ರಾಣವಲ್ಲಭೆಯರನ್ನು ಅಗಲಿಬಂದಂದಿನಿಂದ ಮನ್ಮಥನ ಬಾಣಾಘಾತಕ್ಕೆ ಪಕ್ಕಾಗಿ ನಿರ್ವಿಣ್ಣರಾದರು ; ಹಲಕೆಲವರು ಜೈನಧರ್ಮಕ್ಕೆ ಚೂಡಾಮಣಿಯಾದವನ ಬಾಣದಿಂದ ಗಾಯವಾಯಿತಲ್ಲ— ಅಷ್ಟೇ ನಮ್ಮ ಭಾಗ್ಯ ಎಂದುಕೊಂಡು ಸತ್ತರು ; ಕೆಲವರು ತಮ್ಮ ಗಾಯಗಳ ಕೆಂಪೇ ಕಣ್ಣಿಗೆ ಅಡರಿತೆಂಬಂತೆ ಅಪರಾಜಿತನೆಡೆಗೆ (ದುರುಗುಟ್ಟಿಕೊಂಡು) ನೋಡುತ್ತ ಪ್ರಾಣಬಿಟ್ಟರು ; ಹೀಗೆ ಕಲಿತನದಿಂದ ಎದುರಿಸಿದವರೂ, ಅಂಜಿ ಓಡಿದವರೂ ಕೂಡಿಯೆ ಹುಣ್ಣುಹುಣ್ಣಾಗಿ ಹೆಣಗಳಾದರು. ದಮಿತಾರಿಯ ಸೈನ್ಯವು ಚಂದ್ರಬಲವಿಲ್ಲದ ಯುದ್ಧವೀರನಂತೆ ಸೋತು, ದೇಹಬಲವಿಲ್ಲದ ಜಟ್ಟಿಯಂತೆ ಪರಾಜಿತವಾಗಿ, ತೋಳ್ಬಲವಿಲ್ಲದ ರಾಜಪುತ್ರನಂತೆ ದೀನವಾಗಿ, ನೆಲಬಲವಿಲ್ಲದ ನೆಲವತ್ತಿಗನಂತೆ ಕಂಗೆಟ್ಟು, ದೈವಸಹಾಯವಿಲ್ಲದ ಸೇವಕನಂತೆ ತೇಜಗೆಟ್ಟು, ಗ್ರಹಬಲವಿಲ್ಲದ ಜಾತಕನಂತೆ ಅಭಿವೃದ್ಧಿಯನ್ನೆ ಕಾಣದೆ, ಬೆಂಬಲವಿಲ್ಲದೆ ಶತ್ರುಗಳ ಮೇಲೇರಿ ಹೋದ ಸಾಹಸಿಯಂತೆ (ಪಶ್ಚಾತ್ತಾಪದಿಂದ) ಮನಸ್ಸು ಕುಗ್ಗಿ, ಮೂಲಬಲವಿಲ್ಲದ ವೀರನಂತೆ ಬಿಲ್ಗಾರಿಕೆಯಲ್ಲಿ ಕೈಸಾಗದಾಗಿ, ಚತುರಂಗ ಸೈನ್ಯಬಲವಿಲ್ಲದ ರಾಜನಂತೆ ಕಣ್ಣಿಗೆ ಕ್ಷುದ್ರವಾಗಿ ಕಂಡು ಬೆಂಬಲವಿಲ್ಲದ ಕನ್ನಗಾರನಂತೆ ನಿಷ್ಕ್ರಿಯವಾಯಿತು. ಆಗ ಶತ್ರುಂಜಯನಾದ ಸ್ತಿಮಿತಸಾಗರಪುತ್ರನು (ಅಪರಾಜಿತನು) ಬಾಣಬಿಟ್ಟನು.

೩೧. ರತ್ನಗ್ರೀವನನ್ನು ಭೇದಿಸಿದ ಆ ಬಾಣವು ನೆಲಕ್ಕೆ ಬಾರದೆ ರತ್ನಖಚಿತವಾದ ಕಿರೀಟದ ಬೆಳಕಿನೊಡನೆ ತಲೆ ನೆಲಕ್ಕೆ ಬಿದ್ದಿತು ; ಅದನ್ನು ಕಂಡು ದೇವತೆಗಳು ಹೊಗಳಿದರು.

೩೨. ಹೀಗೆ ಆತನು ರತ್ನಗ್ರೀವನನ್ನು ಸಂಹರಿಸಿದಾಗ, ತನ್ನ ಅಣ್ಣನಿಗೆ ನೆರವಾಗಬೇಕೆಂಬ ಬಯಕೆಯಿಂದ ಬಿಲ್ಲು ಬಾಣಗಳನ್ನು ಹಿಡಿದುಕೊಂಡು ಅನಂತವೀರ್ಯನು—

ವ॥ ಗವಿಯ ಬಾಯಿಂದ ಹೊರಬೀಳುವ ಮರಿಸಿಂಹದಂತೆ ವಿಮಾನದಿಂದ ಹೊರಟು, ಕನಕಶ್ರೀಗೆ ಕಾವಲಾಗಿ ವಿದ್ಯಾದೇವತೆಗಳನ್ನು ನಿಯಮಿಸಿ ಬಂದನು. ತನ್ನ ಪರಾಕ್ರಮವೆ ಮೈದಾಳಿ ಬಂದಿತೊ ಏನೊ ಎಂಬಂತೆ ಬರುತ್ತಿರುವ ಕಡುಗಲಿ ಅನಂತವೀರ್ಯನನ್ನು ಕಂಡು, ಆತನ ಅಣ್ಣನು ವಿಸ್ಮಯಗೊಂಡನು. ಆಗ ಅನಂತವೀರ್ಯನು ನಮ್ರಭಾವದಿಂದ ತಲೆಬಾಗಿ, ಅಣ್ಣನ ಪಾದಗಳಿಗೆ ಎರಗಿ— "ಅಳಿದುಳಿದ ಸೈನ್ಯದೊಡನೆ ಕಾಳಗಮಾಡುವ ಅವಕಾಶವನ್ನು ದಯಮಾಡಿಸಿ ನನಗೆ ನೀಡು" ಎಂದು ಬೇಡಿಕೊಳ್ಳಲಾಗಿ ಆತನು ಒಪ್ಪಿ ಅನುಮತಿನೀಡಿದನು. ಇತ್ತ ದಮಿತಾರಿಯು ವಿಜಯ

---

1. ೪ (ಮ) 2. ಟಿ (ಮ) 3. ಯುಂ (ಮ)

ಚಾತುರ್ದಂತ ಬಲಮಟಿದೊಡಂ ಮನೋಬಲಮಟಿಯದೆ ಕಾಳೆಗಮಂ ಸೋಲ್ತೊಡಂ ಚಲಮಂ ಸೋಲದೆ ತನ್ನ ಪಕ್ಷಂ ಸತ್ತೊಡಂ ಮಾತು ಸಾಯದೆ ತೋರ್ಪುಗೆಟ್ಟೊಡಂ ಕೂರ್ಪುಗಿಡದೆ ತೇಜಂ ತೊಲಗೆಯುಮಾಯು ತೊಲಗದೆ ಶ್ರೀಗೆ ಗೆಂಟಾಗಿಯುಂ ಯಶಶ್ಶ್ರೀಗೆ ಗೆಂಟಾಗದೆ ಸಾಮ್ರಾಜ್ಯಪಟ್ಟಂ ಪದುಳಮಾಗದೆಯುಂ ಚೀರಪಟ್ಟಂ ಪದುಳವಾಗೆಯುಟಿದ ಮೊದಲ ಬಲಂಬೆರಸು—

ಚಂ॥ ತನಗಿದಿರಾದ ದಂತಿಹಯ ಮಾನವಸೇನೆಯನೆಚ್ಚನಂತವೀ
ರ್ಯನ ಶರವೃಷ್ಟಿಯೊಳ್ ಗಗನದಿಂ ನವಲೋಹಿತವೃಷ್ಟಿಗಳ್ ವಲು
ಮ್ಮನೆ ಕೊಳೆ ನಾಂದು ಕೆಂಪೆಸೆದು ತೊಟ್ಟನೆ ಬೆಳ್ಳಿಯ ಬೆಟ್ಟಮಲ್ತು ಜಾ
ದಿನ ನಗಮೆಂಬ ಶಂಕೆಯನೆ ಮಾಡಿದುದಾ ವಿಜಯಾರ್ಧಪರ್ವತಂ ॥ ೩೩ ॥

ವ॥ ಅಂತು ಬಲ್ಗಾಳೆಗಮೆನಿಪ ಬಿಲ್ಗಾಳೆಗಮಂ ನೀಡುಂ ಕಾದುವನ್ನೆಗಂ ಆ[1][ಬಿ][1]ಲಿಗರುಂ ವೇಗಾಯ್ಲರುಮಪ್ಪನ್ವಯಾಗತ ನಭೋಗತಿಗಳ್ ಬಿಲ್ಗಂ ಸರಳ್ಗಮಣ್ಮಗೆಟ್ಟುಮಿಟ್ಟೆಡೆಯುಮಾಗಿ ತೊಟ್ಟನೆ ನೆರೆದುರುಳೆ ನೂಂಕುವುದುಂ ಬಿಲ್ಲನಂಬುಮನೊರ್ಕೆಸಿ—

ಕಂ॥ ಮುನಿದಾನೆಯಿನಾನೆಯನ
ಶ್ವನಿಕಾಯದಿನಶ್ವನಿಕರಮಂ ಮಾನವರಿಂ
ಮನುಜರನಿಟ್ಟುಂ ಮೋದಿಯು
ಮನಂತವೀರ್ಯಮನನಂತವೀರ್ಯಂ ಮೆಱೆದಂ ॥ ೩೪ ॥

ವ॥ ಅನ್ನೆಗಂ ಪ್ರಾರ್ಥನಾಭಂಗಮಂ ಮಾಡದನುಜನನುಪರಮನನುನಯದೆ ನೋಡುತ್ತುಮಿರ್ದು ಬಱಿಕಮಪರಾಜಿತಂ ಕೋದಂಡಕಾಂಡಮಂ ಕೊಳೆ ತಮ್ಮನುಂ ನಿಜಾಗ್ರಜನೊಳ್ ಕೂಡಿ ದಮಿತಾರಿಗಿದಿರ್ಚಿ ತಳವರ್ಗಮಂ ನಿವಳಿಪಟ್ಟಂ ಮಾಱ್ಪಗಳ್—

ದಿಂದ ಶೋಭಿಸುವ ಅಪರಾಜಿತನಿಂದ ತನ್ನ ಚತುರಂಗಸೈನ್ಯ ನಿರ್ಮೂಲವಾದರೂ ಮನೋಬಲ ಅಳಿಯದೆ. ಕಾಳೆಗದಲ್ಲಿ ಸೋತರೂ ಚಲದಲ್ಲಿ ಸೋಲದೆ, ತನ್ನ ಪಕ್ಷದವರೆಲ್ಲ ಸತ್ತರೂ ತನ್ನ ಮಾತು ಸಾಯದೆ, ವಿಜೃಂಭಣೆಯೆಲ್ಲ ಕುಗ್ಗಿದರೂ ಶೌರ್ಯ ಕುಗ್ಗದೆ, ಬಲವೆಲ್ಲ ಮುಗಿದಿದ್ದರೂ ಆಯುಷ್ಯ ಮುಗಿಯದೆ, ಸಂಪತ್ತಿಗೆ ಸನ್ನಿಹಿತವಾಗಿದ್ದರೂ ಯಶಸ್ಸಿಗೆ ದೂರಾಗಿ, ಸಾಮ್ರಾಜ್ಯಪಟ್ಟವು ಸುಭದ್ರನಾಗಿ ಉಳಿಯದಿದ್ದರೂ ವೀರಪಟ್ಟವು ಭದ್ರವಾಗಿ ಅಳಿದುಳಿದ ತನ್ನ ಮೂಲ ಬಲವನ್ನು ಕೂಡಿಕೊಂಡು (ಕಾಳೆಗಕ್ಕೆ ಅನುವಾದನು).

೩೩. ತನಗೆ ಎದುರಾದ ಆನೆಗಳ, ಕುದುರೆಗಳ ಹಾಗು ಕಾಲಾಳುಗಳ ಪಡೆಗಳನ್ನೆಲ್ಲ ಅನಂತವೀರ್ಯನ ಬಾಣಗಳ ಮಳೆಯಲ್ಲಿ ಆಕಾಶದಿಂದ (ಕತ್ತರಿಸಿ ಮೇಲ್ನೆಗೆದು ರಕ್ತ ಸುರಿಸುತ್ತಿರುವ ವೈರಿಗಳ ಹಸಿತಲೆಗಳಿಂದಾಗಿ) ಬಿಸಿ ನೆತ್ತರಿನ ಮಳೆಗಳೂ ಒಮ್ಮೆಲೆ ಕೂಡಿಕೊಳ್ಳಲಾಗಿ, ರಕ್ತದಿಂದ ತೊಯ್ದುಹೋದ ಆ ವಿಜಯಾರ್ಧಪರ್ವತವು ಬೆಳ್ಳಿಯ ಬೆಟ್ಟವಲ್ಲ ಕಾವಿಯ ಬೆಟ್ಟವೊ ಏನೊ ಎಂಬ ಭ್ರಾಂತಿಯನ್ನುಂಟುಮಾಡಿತು.

ವ॥ ಹೀಗೆ ಮಿಗಿಲೆನಿಸುವ ಬಿಲ್ಗಾಳೆಗವನ್ನು ಬಲುಹೊತ್ತು ಮಾಡುತ್ತಿರಲಾಗಿ ತನಗೆ ಅತ್ಯಂತ ಪ್ರಿಯರೂ, ವೇಗಶಾಲಿಗಳೂ, ವಂಶಪರಂಪರವಾಗಿ ಅರಮನೆಯ ಸೇವೆಯಲ್ಲಿದ್ದವರೂ ಎನಿಸಿದ ಖೇಚರವೀರರು ಬಿಲ್ಲುಬಾಣಗಳ ಹೋರಾಟಕ್ಕೆ ಸೈರಿಸದೆ ಒಮ್ಮೆಲೆ ಒಟ್ಟುಗೂಡಿ ಮುನ್ನುಗ್ಗಿ ಬಂದರು. ಆಗ ತನ್ನ ಬಿಲ್ಲನ್ನೂ ಬಾಣಗಳನ್ನೂ ಬದಿಗಿಟ್ಟು—

೩೪. ಮುಳಿದೆದ್ದು ಆನೆಯಿಂದ ಆನೆಯನ್ನೂ, ಕುದುರೆಗಳಿಂದ ಕುದುರೆಗಳನ್ನೂ, ಮನುಷ್ಯರಿಂದ ಮನುಷ್ಯರನ್ನೂ ಅಪ್ಪಳಿಸಿ ಬಡಿದು ಅನಂತವೀರ್ಯನು ತನ್ನ ಅನಂತವಾದ ಶೌರ್ಯವನ್ನು ತೋರಿದನು.

ವ॥ ತಮ್ಮನ ಬೇಡಿಕೆಯನ್ನು ನಿರಾಕರಿಸದೆ, ಆತನ ಕಾಳೆಗವನ್ನು ಮೆಚ್ಚಿ ನೋಡುತ್ತ ನಿಂತಿದ್ದ ಅಪರಾಜಿತನು ಈಗ ತನ್ನ ಬಿಲ್ಲನ್ನು ಎತ್ತಿಕೊಂಡು ಬಂದು ಆತನಿಗೆ ನೆರವಾದನು. ಇಬ್ಬರೂ ಕೂಡಿಕೊಂಡು ದಮಿತಾರಿಯ ಸೈನ್ಯವನ್ನೆಲ್ಲ ನಿರ್ನಾಮಗೊಳಿಸುತ್ತಿರುವಾಗ—

---

1. ೪ (ಮ)

ಮ॥ ಇಡಿಪಾಱುವುರ್ಚುವ ನೇರ್ವ ಸೀ[1][ಳ್ವ][1]ರಿವ ನೇರ್ಗೊಲ್ವೋಪ ಪೋಟಿವ್ವಲ್ಲಿನೊಳ್
ನಡುವುದ್ದಂ ಬಿರಿವಂಬಿನೊಳ್ ಕಿಡೆ ಮರುಳ್ವಳ್ಳಾಡು ವ[2][ಜ್ಕಾ][2]ಡು[3][ವೆ][3]
ಲ್ಪಡಗಪ್ಪೊಡ್ಡಱಿವಟ್ಗಿ ತಟ್ಗುವಱಿವುರ್ಕಾಱಿರ್ಪ ಕೋದಿರ್ಪ ಮಾ
ರ್ಪಡೆ ಗೆಲ್ಲಂಗುಡೆ ತಮ್ಮುತಿರ್ವರುಮಗುರ್ವುರ್ವೇಱುವಿನಂ ಕಾದಿದರ್ ॥ ೩೫ ॥

ಧ್ವಜನೀ ಮಧ್ಯದೊಳೊರ್ವರೋ ಎನಲುಮಿಲ್ಲೆಂಬಂತು ವಿದ್ಯಾಧರ
ವ್ರಜಮ[4][ಜ್ಕಾ][4]ಡಿದುದುಗ್ರಶಸ್ತ್ರತತಿಯಿಂ ಸೀರಾಯುಧಂ ಕಾದೆ ನೋ
ಟ್ಪಿ ಜನಕ್ಕೊಪ್ಪಿದುದಬ್ಜಷಂಡಮಲರ್ದೊಂದುತ್ಪ್ರೇಕ್ಷೆಯಿಂ ಯುದ್ಧದೊಳ್
ವಿಜಯಾರ್ಧಾಚಲಮಂಬರೇಚರಶಿರಃಪದ್ಮಾವಳೀಲೀಲೆಯಿಂ ॥ ೩೬ ॥

ವ॥ ಅಂತು ಕಾದಿ ನಾರಾಚದಂತಸಿಯನುಂ ಕೂರಿದನುಮಾಗಿ ದಮಿತಾರಿ ತನ್ನ ಪರಾಕ್ರಮಮೊಂದಱಿಂದಮೆ ಮೆಯ್ವೊಣರ್ಚಿ ಗೆಲ ತನ್ನ ಚಾಗದ ಭೋಗದ ಯಶೋರಾಶಿಯುಮಂ ಪಸುಗೆವೋಗದ ಶೌರ್ಯಮುಮಂ ಸೂಱೆವೋಗದೇಱುಮಂ ಪೊರೆವೋಗದ ಕಟ್ಟಾಯ ಮುಮಂ ಓರೆವೋಗದ ಚಲಮುಮಂ ಮುಕ್ಕುವೋಗದಳುರ್ಕೆಮಂ ನೋಟಕರಪ್ಪಿನಮಪ್ಪವರಿಂ ಪೊಗೞಿಸುವೆನೆಂದು ತಱಿಸಂದು ತಮ್ಮುತಿರ್ವ ರುಮನಿಕ್ಕುವ ತಕ್ಕು ಕೈಮಿಕ್ಕು ನಿಲೆ—

ಕಂ॥ ನೊಂದಱಿದು ಕೆಟ್ಟ ಪಡೆಯಂ
ಪಿಂದಿಕ್ಕಿ ಜಸಂಬೊಲೆಸೆವ ಸಿತಕೇತನಮಂ
ಮುಂದಿಟ್ಟು ಶೂರ ಸಾರಥಿ
ಯಿಂದಂ ಶ್ವೇತಾಶ್ವತತಿಯಿನೆಸೆಯೆ ವರೂಥಂ ॥ ೩೭ ॥

---

೩೫. (ವೈರಿಯನ್ನೆಲ್ಲ) ಮುಸುಕುವ, ಒಳನಟ್ಟು ಹೂಳಿಕೊಳ್ಳುವ, ಕತ್ತರಿಸುವ, ಸೀಳುವ, ನೇರವಾಗಿ ಚುಚ್ಚಿ ಕೊಂಡು ಆಚೆಗೆ ಹಾದುಹೋಗುವ, ತುಂಡರಿಸುವ, ಮೂಳೆಗಳಲ್ಲಿ ನಾಟುವ, ಉದ್ದುದ್ದವಾಗಿ ಹೋಳುವ ಬಾಣಗಳ ಆಘಾತಕ್ಕೆ ಒಳಗಾಗಿ ಶತ್ರುಸೈನ್ಯ ಕಕ್ಕಾವಿಕ್ಕಿಯಾಯಿತು, ಗದಗುಟ್ಟಿ ನಡುಗಿತು, ಮೂಳೆಮಾಂಸಗಳ ಮುದ್ದೆಯಾಯಿತು, ಚೆಲ್ಲಾಪಿಲ್ಲಿಯಾಯಿತು, ಕರಗಿ ಕುಗ್ಗಿತು, ಸತ್ವಗುಂದಿತು, ಸಾಲುಸಾಲಾಗಿ ಬಿದ್ದು ಸೋತುಹೋಯಿತು. ಹೀಗೆ ಅವರಿಬ್ಬರೂ ಭೀಕರವಾಗಿ ಕಾಳೆಗನಮಾಡಿದರು.

೩೬. ಅಪರಾಜಿತನು ತನ್ನ ಪ್ರಚಂಡವಾದ ಬಾಣಸಮೂಹದಿಂದ ಪ್ರಹಾರ ಮಾಡುತ್ತಿರಲಾಗಿ, ಶತ್ರುಗಳ ಪಡೆಯಲ್ಲಿ ಓ ಎನ್ನಲು ಕೂಡ ಒಬ್ಬರೂ ಇಲ್ಲವೆಂಬಂತೆ ವಿದ್ಯಾಧರರೆಲ್ಲರೂ ನಿರ್ಮೂಲವಾಗಿ ನಾಶವಾದರು. ಕಡಿದುಬಿದ್ದ ಖೇಚರರ ಹಸಿತಲೆಗಳಿಂದ ತುಂಬಿದ ಆ ವಿಜಯಾರ್ಧಪರ್ವತ ಪ್ರದೇಶವು ಅರಳಿದ ಹೂಗಳಿಂದ ತುಂಬಿದ ಕಮಲ ಸರೋವರವೊ ಏನೊ ಎಂಬಂತೆ ತೋರಿತು.

ವ॥ ಹೀಗೆ ಕಾಳೆಗ ನಡೆದ ಬಳಿಕ 'ನಾರಾಚ'ವೆಂಬ ಬಾಣದಂತೆ ತೆಳುವಾಗಿಯೂ ತೀಕ್ಷ್ಣವಾಗಿಯೂ ಇರುವ ದಮಿತಾರಿಯು ತನ್ನ ಪರಾಕ್ರಮವೊಂದನ್ನುಳಿದು ಬೇರಾವ ಸಹಾಯವಿಲ್ಲದಿದ್ದರೂ ಅದೊಂದರ ಬಲದಿಂದಲೆ ಗೆಲ್ಲುವೆನೆಂದು ನಿರ್ಧರಿಸಿದನು. ತ್ಯಾಗಭೋಗಗಳೆರಡರಿಂದಲೂ ಗಳಿಸಿದ ಅಪಾರವಾದ ತನ್ನ ಯಶಸ್ಸನ್ನು, ಎಳ್ಳಷ್ಟೂ ಕುಗ್ಗದ ಕಲಿತನ ವನ್ನು, ಸೋಲದ ಸೆಣಸಾಟವನ್ನು, ಸೋರಿಹೋಗದ ಮಹಾಸತ್ವವನ್ನು, ಬಿಡದಿರುವ ಛಲವನ್ನು, ಮುಕ್ಕಾಗದ ವೈಬಲ ವನ್ನು ನೋಡುವವರಿಂದ ಹೊಗಳಿಸುವೆನೆಂದು ನಿರ್ಧರಿಸಿ, ಎದುರಾಳಿಗಳಿಬ್ಬರನ್ನೂ ಹೊಡೆದುಕೊಲ್ಲುವೆನೆಂದು ಹೊರಟನು.

೩೭. ಗಾಯಗೊಂಡು ಅಳಿದುಳಿದ ಸೈನ್ಯವನ್ನು ಹಿಂದಿಕ್ಕಿ, ತನ್ನ ಯಶಸ್ಸಿನಂತೆ ಶುಭ್ರವಾಗಿ ಹೊಳೆಯುವ ಧ್ವಜ ವನ್ನು ಮುಂದಿಕ್ಕಿ, ಬಿಳಿಕುದುರೆ ಹೂಡಿದ ರಥವು ಶೂರಸಾರಥಿಯೊಡನೆ ಶೋಭಿಸುತ್ತಿರಲಾಗಿ (ಅದನ್ನೇರಿ ಬಂದನು)

---

1. ಬ್ವ (ಮ) ರ್ವ (ಆ) 2. ಳ್ಕಾ (ಮ) 3. ವ (ಮ) 4. ಳ್ಕಾ (ಮ)

ಕಂ॥ ನೆರೆದಾಡುವಟ್ಟೆ ಬೆರ್ಚಿಸೆ
ಹರಿವ್ರಜಂ ತೊಲಗಿ ತೊಲಗಿ ಬರೆ ಗೋಮೂತ್ರಂ
ಬರಿಯೆ ರಥಂ ಮೆಯ್ಯಟಿವಂ
ತಿರೆ ರಥಮಂ ಪುದಿದು ಕುದಿದು ಬರೆ ಕೆಲರೆ ಭಲರ್ ॥ ೩೮ ॥

ಕರಮಟಿಯೆ ನೊಂದ ಭಟರೊಡ
ವರೆ ದಯೆಯಿಂದವರನಾಗಳಿರಿಮಿರಿಮೆಂದಾ
ತುರ ಘರ್ಮವ್ಯಾಜದಿನೋ
ಸರಿಸಿದ [1]ಪೊರೆ ಸುಲಿದ ಪಾವಿನಂತಾಕೃತಿಯಂ ॥ ೩೯ ॥

ಅಱಿಕೆಯ ತೇರ್ ಪಟಯಿಗೆ ಪೆ
ರ್ಬಱೆ ಚಕ್ರಂ ರಾಜ್ಯಚಿಹ್ನಮೆಂಬಿವಱಿಂ ಗೆಂ
ಟಱಿಯೊಳೆ ಬರವಂ ವಿರೋಧಿಗ
ಳಱಿಯೆ ಜಯೋದ್ಯೋ[2]ಗಂ ಖೇಚರೇಂದ್ರಂ ಬಂದಂ ॥ ೪೦ ॥

ಬಂದಿರದವರ್ಗಿದಿರಂ ನಡೆ
ತಂದೀತಂ ತಮ್ಮನಾತನಣ್ಣಂ ತಾಂ ನೋ
ಡೆಂದು ನಿಜಸೂತನಱಿಪೆ ಮು
ಕುಂದನ ಪರ್ಬರಿಕೆ ಮುನಿಸನೊದವಿಸೆ ಮನದೊಳ್ ॥ ೪೧ ॥

ಮ॥ ಸ್ರ॥ ಪೊಱಮುಯ್ವಂ ತಾಗೆ ತಿಣ್ಣಂ ತೆಗೆನೆಱೆದಿಸೆ ಬಿಲ್ಗಲ್ಪಿ ತನ್ನೇಱಿನೊಳ್ ಕ।
ಣ್ದೆಱೆದತ್ತೆಂಬಂತುಮಂಬಿಂ ಸಮೆದುದೆ ನಭಮೆಂಬಂತುಮಾ ಮಿಟ್ತು ಪೋ ಬಾ ॥
ಯ್ದೆಱೆದತ್ತೇಬಂತುಮೊಂದೊಂದೆಸೆವ ನಿಯತಮೆಂಬಂತುಮಿಾಲೋಕಮಂಬಿಂ।
ಪೊಱಗಲ್ತೆಂಬಂತುಮಾಗಳ್ ಖಚರಪತಿ ಭರಂಗೆಯ್ದು ಕೆಯ್ವೋಗದೆಚ್ಚಂ ॥ ೪೨ ॥

---

೩೮. ಕುಣಿದಾಡುತ್ತಿರುವ ರುಂಡಹೀನ ದೇಹಗಳು ಭೀಕರವಾಗಿ ಗುಂಪು ಗುಂಪಾಗಿ ಅಡ್ಡಬರುತ್ತಿದ್ದುದರಿಂದ, ಕುದುರೆಗಳು ಓರೆಯಾಗಿ ಸರಿಸರಿದು ದಾರಿಮಾಡಿಕೊಂಡು ಹೋಗಬೇಕಾಯಿತು. ಇದರಿಂದಾಗಿ ರಥ ಗೋಮೂತ್ರಗತಿಯಿಂದ (ಅಂಕುಡೊಂಕಾಗಿ) ಸಾಗಿತು. ಕೆಲವರು ಯೋಧರು ರಥವನ್ನು ಸುತ್ತುಗಟ್ಟಿ ಸಂತಾಪದಿಂದ ಕುದಿಯುತ್ತಾ ಬಂದರು.

೩೯. ಹೀಗೆ ತುಂಬ ನೊಂದು ಸುಸ್ತಾಗಿ ಬರುತ್ತಿರುವ ಭಟರನ್ನು ಕಂಡು ದಮಿತಾರಿಯು ಕನಿಕರಗೊಂಡು "ನೀವು ನಿಲ್ಲಿ" ಎಂದು ನಿಲ್ಲಿಸಿ, ಪರೆಗಳಚುವ ಹಾವಿನಂತೆ ಪೈಬೆವರನ್ನು ಒರಸಿಕೊಂಡು.

೪೦. ಪ್ರಸಿದ್ಧವಾದ ತನ್ನ ರಥ, ಧ್ವಜ, ಮಹಾರಣವಾದ್ಯ, ಚಕ್ರಾಯುಧ ಮತ್ತು ರಾಜ್ಯಚಿಹ್ನಗಳು ತನ್ನ ಆಗಮನವನ್ನು ಶತ್ರುಗಳಿಗೆ ತಿಳಿಸುತ್ತಿರಲಾಗಿ ಜಯಾಪೇಕ್ಷಿಯಾಗಿ ಮುಂದುವರಿದನು.

೪೧. ಹೀಗೆ ಅವರಿಗೆ ಇದಿರಾಗಿ ನಡೆದುಬಂದಾಗ "ನೋಡು, ಈತನು ತಮ್ಮ, ಆತನು ಅಣ್ಣ" ಎಂದು ಸಾರಥಿಯು ತೋರಿಸಿದನು. ಅನಂತವೀರ್ಯನ ಪ್ರಚಂಡತೆಯನ್ನು ಕಂಡು ದಮಿತಾರಿಯು ಕೋಪದಿಂದ ಉರಿದೆದ್ದನು.

೪೨. ತನ್ನ ಬಿಲ್ಲಿನ ಹೆದೆ ಹೆಗಲು ದಾಟಿಹೋಗುವಂತೆ ಎಳೆದೆಳೆದು ಬಾಣ ಬಿಡುತ್ತ, ಧನುರ್ವಿದ್ಯೆಯೆ ಕಣ್ದೆರೆಯಿತೆಂಬಂತೆ, ಆಕಾಶವೆಂಬುದು ಬಾಣಗಳಿಂದಲೆ ರಚಿತವಾದುದೊ ಏನೊ ಎಂದು ಭಾಸವಾಗುವಂತೆ, ಮೃತ್ಯುವೆ ಬಾಯ್ದೆರೆಯಿತೆಂಬಂತೆ, ಒಂದೊಂದು ಎಸೆತಕ್ಕೆ ಅಸಂಖ್ಯ ಬಾಣಗಳು ನುಗ್ಗುವುವೆಂಬಂತೆ, ಬಾಣಗಳಿಂದ ಆವರಿಸದ ಲೋಕವೆ ಇನ್ನಿಲ್ಲವೆಂಬಂತೆ ಖೇಚರಚಕ್ರವರ್ತಿಯು ಕೈಸೋಲದೆ ರಭಸದಿಂದ ಬಾಣ ಹೊಡೆದನು.

---

1. ನ (ಅ) 2. ಗ (ಅ)

ಕಂ॥ ದಿಂಕಿಂ ತೆಗೆನೆಱೆದಿಸೆ ಚಾ ।
ಪಂ ಕುಟಿಲತೆಗೆಟ್ಟು ಚಕ್ರವಳಯದ ಬಳಸಂ ॥
ಮಾಂಕರಿಸಿ ಬಿಲ್ಲ ಕೊಪ್ಪು ಕೊ ।
ಡಂಕೆಯ ಕೊಪ್ಪಿನವೊಲಮರೆ ಖೇಚರಪತಿಯಾ ॥ ೪೩ ॥

ವ॥ ಅಂತು ಮುಂಚಿದ ಕಾರ ಕಾರ್ಮುಗಿಲಂತೆ ಶರವರ್ಷಮಯಮಾಗೆ ದೆಸೆಯೆಲ್ಲಮಂ ಪರ್ಬಿರ್ಪ ದಮಿತಾರಿಯೆಟ್ಟುರಮಂ ಕಂಡು ಜಿನಚಂದ್ರಂ ತಮ್ಮನಂ ಪೇಟ್ದಲ್ಲ[1][ಟಿ][1]ಗೆಗಾಳೆಗಂಗಾದುತ್ತಿರ್ಪುದುಮನಂತವೀರ್ಯಂ ಜನ್ಮಾಂತರವೈರಂ ಕಾರಣಮಾಗೆ ವಿರೋಧಿಯನಾಂತು—

ಮ॥ ನವದಾವಾಗ್ನಿಶಿಖಾಳಿಗಳ್ ಭುವನಮಂ [2][ತಳ್ಪಟ್ಟು][2]ಕೊಳ್ವಂತೆ ಕೊ ।
ಳ್ವವನಾ ಖೇಚರ ರಾಜನಸ್ತ್ರತತಿಯಂ ತನ್ನಸ್ತ್ರಜಾಳಂಗಳಿಂ ॥
ತವೆ ನೇರ್ದಾರ್ದನನಂತವೀರ್ಯನಧಿಕಪ್ರಾಯಕ್ಕೆ ಸೀರಾಸ್ತ್ರನ ।
ಸ್ತ್ರವಿಶೇಷಕ್ಕೆ ಸಮಾನಮಿರ್ವರುಮೆನುತ್ತಿರ್ಪನ್ನಮಿಂದ್ರಾದಿಗಳ್ ॥ ೪೪ ॥

ವ॥ ಅಂತಿರ್ವರುಂ ದ್ವಂದ್ವಯುದ್ಧ[ದೊಳ್][3]ನೀಡುಂ[3]ತಟ್ಟು ಕಾದೆ ದಮಿತಾರಿಯ ರಥಚಕ್ರ ರಕ್ಷಕರಪ್ಪ ಖಟ್ಗಿವೃಂದಂ ಬ[4]ಳ[4]ಯೊಳ್ ತೊಡರ್ದ ಖಟ್ಗಿವೃಂದಮಂ ಕೂಡುವಿನಂ [5]ಗ[5]ಡುಗಡಿದಂತಿರುರ್ವರಾಸ್ಯತಿಲಕಂ ತನ್ನಂಬುಗಳಿಂ ಕಡಿದನಂತವೀರ್ಯನ ದಮಿತಾರಿಯ ಯುದ್ಧ]ಮಂ ನೋಡುವಂತೆ ನೋಡುತ್ತಿರ್ಪುದುಂ —

ಕಂ॥ ತಱಿಸಂದು ಚಕ್ರವರ್ತಿಗೆ ।
ನೆಱೆದಾಂತಂ ವಾಸುದೇವ [6]ನುಱೆದಿರು ಬಲ್ಲಿ ॥
ತ್ತಱಿಕೋಡು ಕೂರಿತಾ[7][ದು][7]ದ
ನಱಿಯದರಾರಳವನಂತವೀರ್ಯನ ಶೌರ್ಯಂ ॥ ೪೫ ॥

೪೩. ಜಗಿದು ನಿಂತು ಕಿವಿಯುವರೆಗೆ ಸೆಳೆಸೆಳೆದು ಬಾಣ ಬಿಡುತ್ತಿರಲಾಗಿ ದಮಿತಾರಿಯ ಬಿಲ್ಲು ತನ್ನ ಕೊಂಕನ್ನು ಕಳೆದುಕೊಂಡು, ಚಕ್ರದ ವರ್ತುಳಾಕೃತಿಯ ಅಂಚನ್ನು ಹೀಯಾಳಿಸುವಂತೆ ಮಣಿದು ಬಿಲ್ಲಿನ ತುದಿ ಕಿವಿಯ ಕೊಪ್ಪಿನಂತಾಯಿತು.

ವ॥ ಮುಂಗಾರಿನ ಮೋಡದಂತೆ (ರಣರಂಗವೆಲ್ಲ) "ಶರವರ್ಷಮಯ" (೧. ಬಾಣಗಳ ಮಳೆಯಿಂದ ಮುಸುಕಿದುದು. ೨. ನೀರ ಮಳೆಯಿಂದ ತುಂಬಿದುದು) ಆಗಲಾಗಿ, ದಿಕ್ಕುಗಳಲ್ಲೆಲ್ಲ ಹರಿದಾಡುತ್ತಿರುವ ದಮಿತಾರಿಯ ಉಬ್ಬರವನ್ನು ನೋಡುತ್ತ ಅಪರಾಜಿತನು ತಮ್ಮನನ್ನು ಯುದ್ಧಕ್ಕೆ ಬಿಟ್ಟು, ತಾನು ಕೇವಲ ವಿನೋದಕ್ಕೆಂಬಂತೆ ಕಾಳಗ ಮಾಡುತ್ತಿದ್ದನು. ಆದರೆ ಅನಂತವೀರ್ಯನು ಪೂರ್ವ ಜನ್ಮದ ವೈರದಿಂದಾಗಿ ಶತ್ರುವನ್ನು ಎದುರಿಸಿ—

೪೪. ಕಾಡುಗಿಚ್ಚಿನ ಉರಿಯ ನಾಲಗೆಗಳು ಹಬ್ಬುತ್ತ ಲೋಕವನ್ನೆ ಆವರಿಸಿ ಸುಡಲೆಂದು ಬರುವಂತೆ ನುಗ್ಗಿ ಬರುತ್ತಿದ್ದ ಖೇಚರರಾಜನ ಬಾಣಸಮೂಹವನ್ನು ತನ್ನ ಅಸ್ತ್ರಗಳಿಂದ ತುಂಡರಿಸಿಲಾಗಿ ಅಪರಾಜಿತನಿಗೆ ಅನಂತವೀರ್ಯನೂ ಅಸ್ತ್ರವಿದ್ಯೆಯಲ್ಲಿ ಸರಿಸಮಾನನೆಂದು ಇಂದ್ರಾದಿ ದೇವತೆಗಳು ಹೊಗಳುತ್ತಿದ್ದರು.

ವ॥ ಹಾಗೆ ಅವರಿಬ್ಬರು ಜೊತೆಗೂಡಿ ಕಾದುತ್ತಿರುವಾಗ ದಮಿತಾರಿಯ ರಥಕ್ಕೆ ಕಾವಲಾದ ಖಡ್ಗಧಾರಿಗಳೂ, ಚಕ್ರಾಯುಧದ ಬೆಂಬಳಿಯಾಗಿದ್ದ ಖಡ್ಗಧಾರಿಗಳೂ ಕೂಡಿಕೊಂಡರು. ಅಷ್ಟರಲ್ಲಿ ಅಪರಾಜಿತನು ಅವರನ್ನೆಲ್ಲ ಸೀಳಿ ಒಗೆದು ಅನಂತವೀರ್ಯ-ದಮಿತಾರಿಗಳ ದ್ವಂದ್ವವನ್ನು ಪ್ರೇಕ್ಷಕನಂತೆ ನೋಡುತ್ತ ನಿಂತನು.

೪೫. "ಧೃಢನಿರ್ಧಾರದಿಂದ ವಾಸುದೇವ (ಅನಂತವೀರ್ಯ)ನೆ ಚಕ್ರವರ್ತಿಯನ್ನು ಸಂಪೂರ್ಣವಾಗಿ ಆಕ್ರಮಿಸಿ ನಿಂತಿರುವನು. ನೋಡುತ್ತಿರು ಬಲಿಷ್ಠ (ಹೋರಿಯ) ಕೋಡು ಬಲು ಹರಿತವಾಗಿಯೇ ಇರುವುದು (ಎಂದರೆ ಬಲಶಾಲಿಯ ಪ್ರಹಾರಗಳು ಬಹು ಪ್ರಚಂಡವಾಗಿಯೆ ಇರುತ್ತವೆ). ಇದನ್ನು ಅರಿಯದವರಾರು ? ಅನಂತವೀರ್ಯನ ಪರಾಕ್ರಮವನ್ನು ತಡೆದುಕೊಳ್ಳುವುದು ಯಾರಿಗೆ ಸಾಧ್ಯ ?"

1. ಣ (ಮ) 2. ತಜ್ಜುಳ್ಳಿ (ಮ) 3. ಗ (ಮ) 4. ಳ (ಮ) 5. ನ (ಮ) 6. ನಿರ (ಅ) 7. ಠ (ಮ)

ವ॥ ಎಂದು ದೇವರ ಗುಂಡು ಗುಜಿಗುಜಿಗೊಂಡು ಪೊಗಟ್ ನ್ಯಾಯಪುರುಷಸಂತಾನಮಾನಸ ಸ್ಥಾನಂ ಬಿಲ್ಮುಟ್ಟ ಲಕ್ಷಣೋಪೇತಂ ಬಗೆ ಬಾಗವಸ ಮೆಂಬಿವನಱಿದು ಧನುರ್ವಿದ್ಯೆಯೇ ರೂಪುಗೊಂಡಂತಿರ್ವರುಂ ಕಾದೆ—

ಕಂ॥ ಸುರರ ಪಡೆ ನೆರವಿ ನೆರೆದಂ
ಬರದೊಳ್ ನಡೆ ನೋಡೆ ವರರನಱಸಲ್ಕೆ ಸೊಯಂ
ಬರದ ಕುಡುಗೂಸಿನಂತಿ
ರ್ವರುಮಂ ಜಯಲಕ್ಷ್ಮಿ ಬಯಸಿ ನೋಡಿದಳಾಗಳ್ ॥ ೪೬ ॥

ಬಯಸಿಯುಮೇಂ ಖಚರನನತಿ
ವಯಸಂ ಸುಕುಮಾರಕಂ ಕುಮಾರಕನೆಂದಾ
ಜಯವಧುಗನಂತವೀರ್ಯಂ
ಪ್ರಿಯನಾದೊಂ ಖೇಚರೆ[1][ೀ][1]ಂದ್ರನಪ್ರಿಯ ನಾದೊಂ ॥ ೪೭ ॥

ಮ॥ ಸಮಕೃಷ್ಟಂ ಸಮವೇಧನಂ ಸಮಭವತ್ಸಂಧಾನಮೆಂದಿರ್ವರೇ
ಸುಮನಾಗಳ್ ನಡೆನೋಡಿ ನೋಡಿ ಜಿನಚಂದ್ರಂ ದಿವ್ಯಚಿತ್ರಂ ಮಹೋ
[2][ತ್ರ][2]ಮಸತ್ವಂ ವಿಭು ಕೆಮ್ಮಗಿರ್ಪುದುಮಳುರ್ತೊಂದಂಬಿನಿಂದೆಚ್ಚನಾ
ದಮಿತಾರಿ ದ್ರುಮ ಶಾರ್ಙಚಾಪ ಜಯವಜ್ರಾಖ್ಯಪಾಶವಂ ಕೇಶವಂ ॥ ೪೮ ॥

ವ॥ ಹೀಗೆಂದು ದೇವತೆಗಳ ಗುಂಪು ಗುಜುಗುಜುಗುಟ್ಟುತ್ತಿರಲಾಗಿ ನ್ಯಾಯಪುರುಷರು (ಯಾವುದು ಸರಿ ಯಾವುದು ತಪ್ಪೆಂದು ನೋಡಿ ನಿರ್ಣಯ ಕೊಡುವ ನಿಷ್ಪಕ್ಷಪಾತಿ ವೀಕ್ಷಕರು) ಹೊಗಳುವಂತೆ ಆಸನ (ಬಿಲ್ಗಾರನು ಬಾಣ ಬಿಡುವಾಗ ಮಂಡಿಯೂರಿ ಕುಳಿತಿರುವ ಭಂಗಿ), ಸ್ಥಾನ. ಬಿಲ್ಮುಟ್ಟ (ಧನಸ್ಸನ್ನು ಹಿಡಿಯುವ ರೀತಿ)—ಇವುಗಳನ್ನು ಧನುರ್ವೇದದ ಲಕ್ಷಣಾನುಸಾರಿಯಾಗಿ ಪಾಲಿಸಿ 'ಬಗೆ' 'ಬಾಗವಸ' ಎಂಬುವುಗಳನ್ನು ಚೆನ್ನಾಗಿ ತಿಳಿದುಕೊಂಡು (ಈ ಎರಡೂ ಶಬ್ದಗಳು ಪಾರಿಭಾಷಿಕವಾಗಿದ್ದು ಅರ್ಥವೇನೂ ಗೊತ್ತಾಗಿಲ್ಲ) ಬಿಲ್ವಿದ್ಯೆಯೆ ಮೈದಾಳಿದಂತೆ ಇಬ್ಬರೂ ಕಾದಾಡುತ್ತಿದ್ದರು. ಆಗ—

೪೬. ಆಕಾಶದಲ್ಲಿ ದೇವತೆಗಳು ಪಡೆಯಂತೆ ನೆರೆದು ನೋಡುತ್ತಿರಲಾಗಿ, ತನಗೆ ಯೋಗ್ಯನಾದ ವರನಾರೆಂದು ಪರೀಕ್ಷಿಸಿ ನೋಡುತ್ತಿರುವ ಸ್ವಯಂವರದ ವಧುವಿನಂತೆ ವಿಜಯಲಕ್ಷ್ಮಿಯು ಆಸೆಯಿಂದ ಇಬ್ಬರನ್ನೂ (ತೂಗಿ) ನೋಡಿದಳು.

೪೭. "ಈ ಖೇಚರರಾಜನನ್ನು ಬಯಸಿ ಏನು ಪ್ರಯೋಜನ? ಈತನು ವಯಸ್ಸಾದವನು. ಆ ಕುಮಾರ ನಾದರೋ ಚೆಲುವನಾದ ತರುಣ"— ಈ ವಿಚಾರದಿಂದ ಜಯವಧುವಿಗೆ ಅನಂತವೀರ್ಯನು ಪ್ರಿಯನಾಗಿ, ಖೇಚರರಾಜನು ಅಪ್ರಿಯನೆನಿಸಿದನು.

೪೮. ಹೆದೆಯನ್ನು ಎಳೆಯುವ ಕ್ರಮ, ಗುರಿಯಿಡುವ ವಿಧಾನ, ಬಾಣವನ್ನು ಹೂಡುವ ಶೈಲಿ— ಇವೆಲ್ಲವುಗಳಲ್ಲಿ ಆ ಯೋಧರಿಬ್ಬರೂ ಸರಿಸಮಾನವಾಗಿರುವುದನ್ನು ಕಂಡು, ಅಪರಾಜಿತನು ಅವರ ಪರಸ್ಪರ ಪ್ರಹಾರಗಳನ್ನು ಸುಮ್ಮನೆ ನೋಡುತ್ತ ನಿಂತು ತಾನು ಮಹಾನುಭಾವನೆಂಬುದನ್ನು ತೋರಿದನು. ಆಗ ಉಗ್ರವಾದೊಂದು ಬಾಣದಿಂದ ಅನಂತ ವೀರ್ಯನು, 'ಶಾರ್ಙ'ಧನುವಿಗೆ ಮಿಗಿಲಾದ ದಮಿತಾರಿಯ ಬಿಲ್ಲಿನ ಹೆದೆಯನ್ನು ಕತ್ತರಿಸಿಬಿಟ್ಟನು.

---

1. × (ಮ) 2 ತ್ಸ (ಮ)

ವ॥ ಅಂತು ಶುದ್ಧವಂಶಧರ್ಮಗುಣಚ್ಛೇದಂ ತಕ್ಕುದಲ್ತೆನ್ನದನಂತವೀರ್ಯನಿಸೆ ದಮಿತಾರಿ ನಿರ್ಗುಣನಪ್ಪ ಸಹಾಯನಂ ಬಿಸುಟ್ಟಂತೆ ಬಿಲ್ಲಂ ಬಿಸುಟು ಬಲದ ಕೆಲದೊಳ್ ಮಿಱುಮಿಱು ಮಿಱುಗಿ ತನ್ನ ಪಡೆದೊಂಗಂ ತನ್ನ ಪೆಸರಿಂದಮೆ ದೊಡ್ಡಿವೆಸರಾಗಿ ನೆಗೞ್ದ ಚಕ್ರಮಂ ನೋಡೆ ನಿರಾಯುಧನನಿಸೆನೆಂದನಂತವೀರ್ಯನಂ ದಮಿತಾರಿಯಿಂತೆಂದಂ—

ಚಂ॥ ಪುಗದಿರು ಪೋಗುಪೋಗು ನಡೆಗೊಳ್ ನಡೆಗೊಳ್ ಭಯ[1]ದಿಂ[1]ವಿಮಾನಮಂ
ಪುಗು ಪುಗು ನಿಂದು ಸಾಯದಿರು ಸಾಯದಿರುಗ್ರ ರಣಾಗ್ರಕೇಳಿಲೀ
ಲೆಗೆ ದೊರೆಯ[2]ಲ್ಲಿ[2]ಯಲ್ಲಗಪರಾಜಿತನಣ್ಣನೆಯೆಂದು ಕೀರ್ತಿಲ
ಕ್ಷ್ಮಿಗೆ ಪದೆದಿರ್ಪಯ್ಯೆ ನಿನಗೆ ನಾಣ್ಚರೊ ನೆಟ್ಟನೆ ನಾಡ ಮಾನಸರ್ ॥ ೪೯ ॥

ಕಂ॥ ಅಸ್ಮತ್ಕೋಪಾಗ್ನಿಗೆ ನವ
ಭಸ್ಮತೆಗಂ ಶಲಭವೃತ್ತಿಗಂ ಪಡೆದೆಯಿದೇಂ
ವಿಸ್ಮಯಮೊ ನಿನಗೆ ಮುನಿಯೆನ
ಪಸ್ಮಾರಗ್ರಹಕ್ಕೆ ಮಂತ್ರಿ ಮುನಿಗುಮೆ ಮುನಿಯಂ ॥ ೫೦ ॥

ವ॥ ಎಂದು ತಿರಸ್ಕರಿಸಿ ನುಡಿದ ಚಕ್ರವರ್ತಿಯ ನುಡಿಗೆ ಮುನಿದತಿವರ್ತಿಯಪ್ಪ ಪಾಪೇಭಕಂಠೀರವಾನುಜಸವ್ಯಭಿಚಾರಿಮಿತ್ರಾನಕಾರಿಯಪ್ಪ ಬಿಲ್ಲನದಂ ಬಿಸುಟ್ಟನ್ನೆಗಮಾಂ ಬಿಲ್ಗಾಳೆಗಮೆಂದೇ ಬಗೆದೆಂ ಬಾಯ್ಗಾಳೆಗಮನೀಗಳಱಿದೆಂ—

ಕಂ॥ ಎನಿತು ಮದವಾರಣಂ ಕ್ರೋ
ಧಿನಿ ಪೊಕ್ಕುಂ ಸಿಂಪೋಹತಮಂ ಗೆಲ್ಗುಮೆ ಮಾ
ತಿನೊಳೇನೊ ಕಯ್ದುಗೆಯ್ ಬಱು
ವನನಾಜಿಶ್ರಾಂತನಂ ಯಶೋಧನನಿಱಿಯಂ ॥ ೫೧ ॥

ವ॥ ನಿರ್ದುಷ್ಟ ವಂಶದಲ್ಲಿ ಹುಟ್ಟಿದವರ ಧರ್ಮಗುಣವನ್ನು ನಾಶಮಾಡುವುದು ತರವಲ್ಲವೆಂದು ಭಾವಿಸದೆ ಅನಂತ ವೀರ್ಯನು ತುಂಡರಿಸಿ ಬಿಡಲಾಗಿ (ಇಲ್ಲಿ ಶ್ಲೇಷೆಯಿಂದ "ಅದು ಉತ್ತಮವಾದ ಬಿದಿರಿನಿಂದ ಸಿದ್ಧಪಡಿಸಿದ ಬಿಲ್ಲು; ಅದರ ಹೆದೆಯನ್ನು ಹೀಗೆ ಕತ್ತರಿಸುವುದು ಸರಿಯಲ್ಲ'' ಎಂಬರ್ಥವನ್ನೂ ಕವಿ ಸೂಚಿಸುತ್ತಾನೆ) ದಮಿತಾರಿಯು ಗುಣಹೀನನಾದ ಸಂಗಡಿಗನನ್ನು ಆಚೆಗೆ ತಳ್ಳಿಬಿಡುವಂತೆ 'ನಿರ್ಗುಣ'ವಾದ (ಹೆದೆಯಿಲ್ಲದ) ತನ್ನ ಬಿಲ್ಲನ್ನು ಬಿಸಾಡಿದನು. ತನ್ನ ಬಲ ಪಕ್ಕದಲ್ಲಿ ಮಿರಮಿರನೆ ಮಿರುಗುತ್ತ ತನ್ನನ್ನು ಪಡೆದವನಿಗೆ ತನ್ನ ಹೆಸರಿಂದಲೆ "ಚಕ್ರವರ್ತಿ'' ಎಂಬ ದೊಡ್ಡ ಹೆಸರನ್ನು ತಂದುಕೊಡುವ ಚಕ್ರಾಯುಧವನ್ನು ನೋಡಿದನು. ಆಗ "ನಿರಾಯುಧನನ್ನು ನಾನು ಇರಿಯುವವನಲ್ಲ'' ಎಂದ ಅನಂತ ವೀರ್ಯನಿಗೆ ದಮಿತಾರಿ ಹೀಗೆಂದನು :

೪೯. "ಇನ್ನು ಕಾಳೆಗಕ್ಕೆ ಕೈಯಿಕ್ಕಬೇಡ, ಬೇಡ. ಹೋಗು. ಓಡು, ಓಡಿಹೋಗಿ ವಿಮಾನದಲ್ಲಿ ಅಡಗಿಕೊ. ಇಲ್ಲಿ ನಿಂತು ಸಾಯಬೇಡ. ಬೇಡ ಹೋಗು. ಪ್ರಚಂಡವಾದ ರಣರಂಗಕೇಳಿಗೆ ಅಣ್ಣನ ಬಲವುಂಟೆಂದು ಉಬ್ಬಿ ಕೀರ್ತಿಗೆ ಬಾಯ್ತೆರೆದುಕೊಂಡು ಬಂದಿರುವೆಯಲ್ಲವೆ ? ನಾಡ ಮನುಷ್ಯರು ನಿನ್ನನು ಕಂಡು ಜುಗುಪ್ಸೆತಾಳರೆ ?

೫೦. ನನ್ನ ಕೋಪದ ಉರಿಗೆ ಸಿಕ್ಕಿ ಪತಂಗದ ಹುಳುವಿನಂತೆ ಸುಟ್ಟು ಬೂದಿಯಾಗುವ ಬಯಕೆಯೇ ನಿನಗೆ ? ಇದೇನು ಸೋಜಿಗ ! ನಿನ್ನಮೇಲೆ ನನಗೆ ಕೋಪವಿಲ್ಲ. ಮಂತ್ರವನ್ನು ಬಲ್ಲವನು ಅಪಸ್ಮಾರದ ಭೂತಕ್ಕೆ ಕೋಪಿಸಿಕೊಳ್ಳುವನೆ ?"

ವ॥ ಹೀಗೆ ಧಿಕ್ಕರಿಸಿ ನುಡಿದ ಚಕ್ರವರ್ತಿಯ ಮಾತಿಗೆ ಕ್ರುದ್ಧನಾಗಿ, ದುಡುಕಿನ ಸ್ವಭಾವದವನಾದ ಅನಂತ ವೀರ್ಯನು "ಸ್ಥಿರನಾದ ಮಿತ್ರನಂತಿದ್ದ ಬಿಲ್ಲನ್ನು ನೀನು ಬಿಸಾಡುವವರೆಗೆ, ಇದು ಬಿಲ್ಲಿನ ಕಾಳೆಗವೆಂದೇ ನಾನು ಭಾವಿಸಿದ್ದೆನು ; ಆದರೆ ನಿನ್ನದು ಬಾಯಿಕಾಳೆಗವೆಂಬುದನ್ನು ಈಗ ಅರಿತುಕೊಂಡೆನು.

೫೧. ಮದಗಜವು ಎಂತಹ ಕ್ರೋಧದಿಂದ ಏರಿಹೋದರೂ ಮರಿಸಿಂಹವನ್ನು ಸೋಲಿಸಬಲ್ಲುದೇ ? ಬಾಯಿ ಬಡಾಯಿಯಿಂದ ಏನು ಪ್ರಯೋಜನ ? ಆಯುಧವನ್ನು ಎತ್ತಿಕೊ. ನಿರಾಯುಧನನ್ನೂ ಕಾಳೆಗದಲ್ಲಿ ಬಳಲಿ ನಿಂತವನನ್ನೂ ಯಶೋವಂತನು ಇರಿಯುವುದಿಲ್ಲ.

1. ಮಾ (ಮ) 2. ಲ್ಲ (ಅ)

ಕಂ॥ ಬಲಮಿಲ್ಲ ನಿನಗೆ ಚಕ್ರದ
ಬಲಮೆ ದಲದನೀಗಳೆನ್ನ ಬಾಣಂ ರವಿ ಮಂ
ಡಲಮಂ ವಿಧುಂತುದಂ ಕೊ
ಳ್ವ ಲೀಲೆಯಿಂ ಕೊಂಡು ಖಂಡಖಂಡಂ ಮಾಳ್ಕುಂ ॥ ೫೨ ॥

ವ॥ ಎಂದು ನುಡಿದನಂತವೀರ್ಯನ ದೃಪ್ತೋದಾತ್ತ ಕರ್ಣಕಟುಕ ವಚೋನಿಚಯ ನಿಸಿತಾಸ್ತ್ರಂಗಳ್ ನೆಱನಱಿಂ ಪರ್ವಿದ ಕೋಪಾಗ್ನಿ ಪೋಟ್ರರದ ಕಿಚ್ಚಿನಂತಳುರ್ದು ಕೊಳೆ ಕನಲ್ದು ದಮಿತಾರಿ ಚಕ್ರಕ್ಕೆ ಕೆಯ್ಯಂ ನೀಡೆ—

ಮ॥ ಅದು ವಿಶ್ವಾಯುಧ ದಕ್ಷ ದಕ್ಷಿಣಭುಜಕ್ಕಾಸನ್ನ ಧಾರಾಗ್ರ ಮ
ಪ್ಪುದುಮಾಗಳ್ ದಮಿತಾರಿ ಕೊಂಡಿಡಲೊಡಂ ಕಂಜಾಕ್ಷನಂ ಪೂರ್ವ ಪು
ಣ್ಯದ ಪುಂಜಂ ನೆರೆದೆಯ್ದಿದಂತೆ ಬಲಗೊಂಡಾನಂದದಿಂ ದಕ್ಷಿಣಾಂ
ಸದ ಮೇಗಿರ್ದುದು ನೀಳಶೈಲ ತಟದೊಳ್ ತಿಗ್ಮಾಂಶುವಿರ್ಪಂದದಿಂ ॥ ೫೩ ॥

ವ॥ ಅಂತು ತನ್ನಿಟ್ಟ ಚಕ್ರಂ ಬಯ್ತಿಟ್ಟ ಚಕ್ರದಂತೆ ನಿಶ್ಚಲಮನಂತವೀರ್ಯನ ಬಲದ ಮುಯ್ವಿನ ಕೆಲದೊಳಿರ್ದುದಂ ಕಂಡು ಸೆ[1][ಱ][1]ಗಂ ಬಗೆಯದೆ ಚಕ್ರಂಬೆರಸು ಪಗೆವನಂ ತಱಿದೊಟ್ಟುವೆನೆಂದು ಬಾಳುಮತ್ತ್ರಪರಂಬೆರಸು ಮಿಂಚಂ ತಳ್ಕೈಸಿದ ಕಾರ ಕಾರ್ಮುಗಿಲಂತೆ ತಿಱ್ರನೆಯ್ತರ್ಪ ದಮಿತಾರಿಯಂ ನೋಡಿ ತದನಂತರಂ—

ಮ॥ ತಿರಿಪುತ್ತುಂ ಜವದಿಂ ಮುಕುಂದನಿಡೆ ವಿದ್ಯುದ್ಭೀಕರಂ ವೈರಿ ಕಂ
ಧರಮಂ ಕೊಂಡು ತದುತ್ತಮಾಂಗದೊಡನುದ್ಘಂ ಪಾಱಿ ಮೃತ್ಸ್ನಾಘಟಂ
ಬೆರಸುದ್ಯದ್ಭುಜದಂಡವರ್ತನದಿನುಗ್ರಾಡಂಬರಂ ಪೊಂಗೆ ಕೋ
ವರ ಚಕ್ರಂ ತಿರಿವಂದದಿಂ ತಿರಿದುದಾ ಚಕ್ರಂ ವಿಯಚ್ಚಕ್ರದೊಳ್ ॥ ೫೪ ॥

೫೨. ನಿನಗೀಗ ಯಾವ ಬಲವೂ ಉಳಿದಿಲ್ಲ. ಚಕ್ರಾಯುಧದ ಬಲವೇ ಬಲ. ಅದನ್ನು ಪ್ರಯೋಗಿಸಿ ನೋಡು. ಸೂರ್ಯಮಂಡಲವನ್ನು ರಾಹು ಹಿಡಿಯುವಂತೆ ಅದನ್ನು ನನ್ನ ಬಾಣವು ಹಿಡಿದು ತುಂಡರಿಸುವುದು."

ವ॥ ಅನಂತವೀರ್ಯನ ಕರ್ಣಕಠೋರವಾದ ಹಾಗು ದರ್ಪದ ಈ ನುಡಿಗಳು ತೀಕ್ಷ್ಣವಾದ ಬಾಣಗಳಂತೆ ಮರ್ಮಕ್ಕೆ ನಾಟಲಾಗಿ, ಹೊಳ್ಳುಮರದ ಬೆಂಕಿಯಂತೆ ಕೋಪವುರಿದೆದ್ದು ದಮಿತಾರಿಯು ತನ್ನ ಚಕ್ರಾಯುಧಕ್ಕೆ ಕೈನೀಡಿದನು.

೫೩. ಸಮಸ್ತ ಆಯುಧ ಪ್ರಯೋಗಗಳಲ್ಲಿ ನಿಷ್ಣಾತವಾದ ತನ್ನ ಬಲದೋಳಿಗೆ ಧಾರೆ ಮುಟ್ಟುವಂತೆ ಅದನ್ನು ಹಿಡಿದು, ಅನಂತವೀರ್ಯನಿಗೆ ಗುರಿಯಿಟ್ಟು ಬೀಸಿ ಎಸೆಯಲಾಗಿ, ವಾಸುದೇವನ ಪೂರ್ವಜನ್ಮಗಳ ಪುಣ್ಯವೆಲ್ಲವೂ ಗಟ್ಟಿಗೊಂಡು ಮೈದಾಳಿ ಬಂದಿತೊ ಏನೊ ಎಂಬಂತೆ ಆ ಚಕ್ರವು ಆತನಿಗೆ ಪ್ರದಕ್ಷಿಣೆ ಹಾಕಿ, ನೀಲಪರ್ವತದ ಶಿಖರದಲ್ಲಿ ಮೂಡಿ ನಿಂತ ಸೂರ್ಯಬಿಂಬದಂತೆ, ಅನಂತವೀರ್ಯನ ಬಲಭುಜದ ಮೇಲೆ ಸಂತೋಷದಿಂದ ನಿಂತುಕೊಂಡಿತು.

ವ॥ ಹೀಗೆ ತನ್ನ ಚಕ್ರವು ಆತನ ಹೆಗಲಮೇಲೆ ಅಲುಗಾಡದೆ ನೆಲಸಿರುವುದನ್ನು ಕಂಡು, ಹಿಂಜರಿಯದೆ, ದಮಿತಾರಿಯು ಆ ಚಕ್ರವನ್ನೂ ಶತ್ರುವನ್ನೂ ಕೂಡಿಯೆ ಕತ್ತರಿಸಿ ಒಗೆಯುವೆನೆಂದು ಖಡ್ಗವನ್ನೂ ಗುರಾಣಿಯನ್ನೂ ಹಿಡಿದುಕೊಂಡು ಮಿಂಚಿನೊಡನೆ ಬರುವ ಮಳೆಮೋಡದಂತೆ ರಭಸದಿಂದ ನುಗ್ಗಿದನು. ಹಾಗೆ ನುಗ್ಗುವ ಆತನನ್ನು ನೋಡಿ—

೫೪. ಚಕ್ರಾಯುಧವನ್ನು ವೇಗವಾಗಿ ತಿರುಗಿಸಿ, ಅನಂತವೀರ್ಯನು ದಮಿತಾರಿಗೆ ಗುರಿಯಿಟ್ಟು ಬೀಸಿದೊಡನೆ, ಸಿಡಿಲಿನಂತೆ ಭೀಕರವಾಗಿ ಎರಗಿ ಅದು ವೈರಿಯ ಕೊರಳನ್ನು ಕತ್ತರಿಸಿ ರುಂಡದೊಡನೆ ಎತ್ತರಕ್ಕೆ ನೆಗೆಯಿತು; ಮತ್ತು ಕೋಲಿನಿಂದ ತಿರುಗಿಸಿಬಿಟ್ಟೊಡನೆ ಕುಂಬಾರನ ಚಕ್ರವು ತನ್ನ ಮೇಲಿನ ಮಣ್ಣಿನ ಗಡಗೆಯೊಡನೆ ತಿರ್ರನೆ ತಿರುಗುವಂತೆ ಆ ಚಕ್ರವು ಅನಂತವೀರ್ಯನ ಭುಜದಂಡದಿಂದ ಪಡೆದ ಬಲದಿಂದಾಗಿ ಆಕಾಶಮಂಡಲದಲ್ಲಿ ಗಿರಿಗಿರನೆ ತಿರುಗುತ್ತ ಸುತ್ತಿತು.

1. ರ (ಮ)

ವ॥ ತದನಂತರಂ—

ಕಂ॥ ಉತ್ತಮವನಿತಾವದನೋ
ಪಾತ್ತ ರಸಾಯನದೊಳಧರದೊಳ್ ಶಂಖಮನಿ
ಟ್ಟೊತ್ತುವ ಕುಮಾರನಹಿತೋ
ದಾತ್ತಯಶೋರಸಮನಜಿತು ಪೀರ್ವಂತಾದಂ ॥ ೫೫ ॥

ಅದೆ ಸುಷಿರ ವಾದ್ಯಮೆನೆ ಮೊಟ
ಗಿದುವಮರರ ವಿತತ ತತ ಘನಾನಕಮವನ
ದ್ಧದೊಳಮರ್ದು ಪಾರಿಜಾತದ
ಪೊದಟ್ದ ಸ[1][ರಿ][1]ಸುರಿದುವಮಲ ಜಲಧರಪಥದಿಂ ॥ ೫೬ ॥

ತ್ರಿದಶಾನಕಲಯದಿಂ ನೀ
ರದಪಥದೊಳ್ ನಾರದಂಗೆ ತಾಂಡವದ ತಗು
ಳ್ದೊದವಿದುದು ತನ್ನ ಮಾಡಿದ
ಕದನದ ಸತ್ಫಲಮನಾಗಳನುಭವಿಸುವ ಪೋಲ್ ॥ ೫೭ ॥

ವ॥ ಅಂತುರ್ವರಾಸ್ಯತಿಲಕನಪಾರ ಸಂಗ್ರಾಮಪಾರಾವಾರಪಾರಮನೆಯ್ದಿ ಚಾಮೀಕರರಕ್ಷಾಭಿರಾಮ ಮದಾಂಧಗಂಧಸಿಂಧುರಂ ಬರ್ಪಂತೆ ರಥಾಂಗಪೀಠೀಭೂತ ಸಂಸ್ಪಷ್ಟನಾಗಿ ಬಂದೆಱಗಿದ ತಮ್ಮನನಕ್ಕಱಿಂದೆತ್ತಿ ತಳ್ಕಯ್ಸಿ ಕೊಂಡು ಪರಸಿ ವಿಸ್ಮಯದಿಂ ನೋಡುತ್ತುಮಿರ್ದು ಸಂಗ್ರಾಮದೊಳಂಜಿದ ವಿದ್ಯಾಧರರ್ಗಭಯಂಗೊಟ್ಟಣ್ಮಿ ಕಂಡರ ತಲೆಯೊಳ್ ಕೆಯ್ಯಿಟ್ಟು ಅಂಜದಿರಿಮಂಜದಿರಿಮೆಂದು ದಮಿತಾರಿಗೆ ಶರೀರ ಪೂಜೆಯಂ ಮಾಡಲ್ವೇೞ್ದು ಕೊಳ್ಗುಳಮಂ ಬಳಸಿ ಚಕ್ರಮಂ ಚಕ್ರವರ್ತಿಶ್ರೀಯುಮಂ ತಮ್ಮನೊಳ್ ನಿಯೋಜಿಸಿದಂ ಅತ್ತ ಕನಕಶ್ರೀ ಜನಕನ ಮರಣಮುಂ ನಿಜಾನುಚಿತಾಚರಣಮುಮೋರೊಂದಂ ಮಿಕ್ಕು ಮನಮನೊನಲಿಸೆ ಕಲ್ಲನೆ ಕನಲುತ್ತುಮಿರಲ್ ತತ್ವಪ್ರಾಯವಚನಂಗಳಿನವಳ ನಳವಡಿಸಿ ಜೈನಶಾಸನ ಚೂಡಾಮಣಿ—

ವ॥ ಆನಂತರ—

೫೫. ಸ್ತ್ರೀರತ್ನಗಳ ಅಧರಾಮೃತಪಾನ ಯೋಗ್ಯವಾದ ತನ್ನ ತುಟಿಗಳಲ್ಲಿ ವಿಜಯಶಂಖವನ್ನಿಟ್ಟು ಕುಮಾರನು ಊದಲಾಗಿ, ಶತ್ರುಗಳ ಯಶಸ್ಸಿನ ರಸವನ್ನೇ ಆತನು ಹೀರಿ ಕುಡಿಯುತ್ತಿರುವಂತೆ ತೋರಿತು.

೫೬. ಕೂಡಲೆ, ಆಕಾಶದಲ್ಲಿ ಸುಷಿರ, ಘನ, ತತ ಮತ್ತು ಅವನದ್ಧವೆಂಬ ನಾಲ್ಕೂ ಬಗೆಯ ದೇವ ವಾದ್ಯಗಳು ಮೊಳಗಿದುವು ; ಪಾರಿಜಾತಕುಸುಮಗಳ ಮಳೆ ಸುರಿಯಿತು.

೫೭. ಈ ದೇವವಾದ್ಯಗಳ ಲಯಕ್ಕೆ ಸರಿಯಾಗಿ ನಾರದನು ಆಕಾಶದಲ್ಲಿ ನೃತ್ಯಮಾಡಿದನು. ತಾನು ಪ್ರೇರಿಸಿದ ಯುದ್ಧಕ್ಕೆ ಹೀಗೆ ಸತ್ಫಲವಾದುದನ್ನು ಕಂಡು, ಅವನು ಆ ಸಂತೋಷವನ್ನು ಹೀಗೆ ಪ್ರಕಟಿಸುತ್ತಿದ್ದನೊ ಏನೊ !

ವ॥ ಭೂಮಂಡಲ ತಿಲಕನಾದ ಅನಂತವೀರ್ಯ ಕುಮಾರನು ಹೀಗೆ ಅಪಾರವಾದ ಸಮರಸಮುದ್ರದ ತೀರವನ್ನು ಮುಟ್ಟಿ, ಚಿನ್ನದ ಹಕ್ಕರಿಕೆಯನ್ನು ತೊಟ್ಟ ಗಂಧಗಜ ಬರುವಂತೆ ಚಕ್ರಾಯುಧವನ್ನು ಬೆನ್ನ ಹಿಂದಿಟ್ಟುಕೊಂಡು ಬಂದು ಅಣ್ಣನಿಗೆ ನಮಸ್ಕರಿಸಿದನು. ಅಪರಾಜಿತನು ತಮ್ಮನನ್ನು ಅಕ್ಕರೆಯಿಂದ ಎತ್ತಿ, ಅಪ್ಪಿಕೊಂಡು ಆಶೀರ್ವದಿಸಿದನು ; ಯುದ್ಧರಂಗದಲ್ಲಿ ಅಂಜಿ ನಿಂತ ವಿದ್ಯಾಧರರಿಗೆ ಅಭಯವನ್ನು ನೀಡಿ, ಧೈರ್ಯದಿಂದ ಬಂದು ಕಂಡವರ ತಲೆಯ ಮೇಲೆ ಕೈಯಿಟ್ಟು "ಅಂಜಬೇಡಿ" ಎಂದು ಆಶ್ವಾಸನೆ ನೀಡಿದನು; ಆ ಮೇಲೆ ದಮಿತಾರಿಯ ಶರೀರಕ್ಕೆ ಗೌರವಯುತವಾಗಿ ಸಂಸ್ಕಾರ ಮಾಡಲು ತಿಳಿಸಿ, ಚಕ್ರವನ್ನೂ ಚಕ್ರವರ್ತಿಯ ಸಂಪತ್ತನ್ನೂ ತಮ್ಮನಿಗೆ ಒಪ್ಪಿಸಿದನು. ಅತ್ತ ಕನಕಶ್ರೀಯು, ತನ್ನ ತಂದೆಯ ಸಾವನ್ನೂ, ತನ್ನ ಅಯೋಗ್ಯವಾದ ನಡತೆಯನ್ನೂ ಕಂಡು ಒಂದಕ್ಕಿಂತ ಒಂದು ಹೆಚ್ಚಾಗಿ ತನ್ನ ಮನಸ್ಸನ್ನು ನೋಯಿಸಲಾಗಿ, ಸಂತಾಪದಿಂದ ಕುದಿಯುತ್ತಿದ್ದಳು. ಆಗ ತತ್ವಗರ್ಭಿತವಾದ ಮಾತುಗಳಿಂದ ಅವಳ ದುಃಖವನ್ನು ಶಮನಗೊಳಿಸಿ ಜೈನಧರ್ಮ ಚೂಡಾರತ್ನನಾದ ಅಪರಾಜಿತನು—

---

1. ಜಿ (ಮ)

ಕಂ॥ ದಮಿತಾರಿಯ ಭುಜಬಲ ವಿ
ಕ್ರಮದಳವಿಗೆ ಮಚ್ಚಿ ಮಚ್ಚುಗುಡಿಸುವವೊಲನು
ಕ್ರಮದಿಂ ನೀರ್ಗುಡಿಸಿ ಯಥಾ
ಕ್ರಮದಿಂ ಪದವಡಿಸಿ ಪಾರಲೌಕಿಕವಿಧಿಯಂ ॥ ೫೮ ॥

ಓಜೆಗೊಳೆ ರಜತ ಶಾಸನ
ರಾಜತ್ಪತ್ರಕದೊಳೆಸೆಯೆ ಬರೆಯಿಸುವಂತಾ
ರಾಜತಶೈಲೇಂದ್ರದೊಳೆ ಮ
ಹಾ ಜಿನಚಂದ್ರಂ ಪ್ರಶಸ್ತಿಯಂ ಬರೆಯಿಸಿದಂ ॥ ೫೯ ॥

ವ॥ ಬಟಿಃಯಂ ತನ್ನ ನಿಸ್ತ್ರಿಂಶ ಕರ್ಮಕ್ಕೆ ತಾನೇ ಕೊಕ್ಕರಿಸಿ ಕೃತಾನುಶಯಂ ತತ್ಕಾಲೋಚಿತ ಪ್ರಾಯಶ್ಚಿತ್ತನಿರತನುಪವಾಸಪುರಸ್ಸರಂ ಭಗವದರ್ಹದರ್ಚನಾದಿ ಸತ್ಕಾರ ಕರಣಾನಂತರಂ ಕನ್ಯಾಚಕ್ರಾದ್ಯಭಿಧಾನ ಜೀವಾಜೀವರತ್ನಂಗಳಂ ಕೊಂಡು ತಮ್ಮನಂ ಮುಂದಿಟ್ಟು ವಿಮಾನಾರೂಢಂ ಪ್ರಭಾಕರೀಪುರಾಭಿಮುಖನಾಗಿ ಸೌದಾಮಿನೀಪತಿಮಾರ್ಗಪ್ರಸ್ಥಾನದಿಂ ಪೋಗೆ—

ಚಂ॥ ಅವಿರಳ ನೀರದಪ್ರಕರದೊಡ್ಡು ತೆರಳ್ವಿನಮಭ್ರದೊಳ್ ಮನಃ
ಪವನಜವಂ ವಿಮಾನಜವದುನ್ನತಿಯೆಂಬಿನಮಿಂಬುವೆತ್ತು ಪಾ
ಱುವ ಪಥದೊಳ್ ತದೀಯ ಸಿತಕೇತುಪಟಂ ಬರೆದಿಟ್ಟ ತಿಟ್ಟದೊ
ಪ್ಪುವ ಪಟದಂತೆ ನಿಶ್ಚಳಿತಮಾದುದು ವೇಗಮರುತ್ಪ್ರಯೋಗದಿಂ ॥ ೬೦ ॥

ವ॥ ಅಂತು—

---

೫೮. ದಮಿತಾರಿಯ ತೋಳ್ಬಲವನ್ನೂ ಆತನ ಪರಾಕ್ರಮವನ್ನೂ ಮೆಚ್ಚಿ, ಅದಕ್ಕೆ ಬಹುಮಾನವನ್ನು ಧಾರೆಯೆರೆಯುವಂತೆ ತರ್ಪಣ ಬಿಡಿಸಿ, ವಿಧಿಪೂರ್ವಕವಾಗಿ ಆತನ ಉತ್ತರಕ್ರಿಯೆಯನ್ನು ಸಾಂಗಗೊಳಿಸಿದನು.

೫೯. ಬೆಳ್ಳಿಯ ಫಲಕಗಳಲ್ಲಿ ರಾಜಶಾಸನವನ್ನು ಸುಂದರವಾಗಿ ಕೊರೆಯಿಸುವಂತೆ ಆ ಬೆಳ್ಳಿಯ ಬೆಟ್ಟದಲ್ಲಿ ತನ್ನ ವಿಜಯಪ್ರಶಸ್ತಿಯನ್ನು ಬರೆಯಿಸಿದನು.

ವ॥ ಆಮೇಲೆ (ಕಾಳೆಗದಲ್ಲಿಯ) ತನ್ನ ಕ್ರೂರ ಕರ್ಮಕ್ಕೆ ತಾನೇ ಜುಗುಪ್ಸೆ ತಾಳಿ, ಮನನೊಂದು, ಪ್ರಾಯಶ್ಚಿತ್ತವೆಂದು ಉಪವಾಸ ಪೂರ್ವಕವಾಗಿ ಅರ್ಹಂತನಿಗೆ ಅರ್ಚನೆಯೇ ಮೊದಲಾದ ಸತ್ಕಾರವೆಸಗಿದನು. ಕನ್ಯಾರತ್ನವೆಂಬ ಜೀವರತ್ನವನ್ನೂ, ಚಕ್ರಾಯುಧವೆಂಬ ಅಜೀವರತ್ನವನ್ನೂ ಒಡಗೊಂಡು ತಮ್ಮನನ್ನು ಮುಂದೆ ಇರಿಸಿಕೊಂಡು ವಿಮಾನವನ್ನೇರಿ ಪ್ರಭಾಕರೀನಗರಕ್ಕೆ ಹೊರಟು, ಆಕಾಶ ಮಾರ್ಗವಾಗಿ ಸಾಗಲು—

೬೦. ದಟ್ಟವಾಗಿ ಕವಿದಿದ್ದ ಮೋಡಗಳ ಸಮೂಹವನ್ನು ತನ್ನ ಗಾಳಿಯಿಂದ ಚದರಿಸುತ್ತ, ಮನೋವೇಗ ವಾಯುವೇಗಗಳನ್ನು ಮೀರುವಂತೆ ವಿಮಾನವು ತೀವ್ರಗತಿಯಲ್ಲಿ ಸಡಗರದಿಂದ ಹಾರಿತು ; ಆ ವೇಗದ ಮೂಲಕ ಉಂಟಾದ ಗಾಳಿಯಲ್ಲಿ ವಿಮಾನದ ಬಿಳಿಯ ಧ್ವಜವು ಚಿತ್ರವನ್ನು ಬರೆದು ಬಿಡಿಸಿಟ್ಟ ಸುಂದರ ವಸ್ತ್ರಪಟದಂತೆ (ನೀಳವಾಗಿ ಹರಡಿಕೊಂಡು) ನಿಶ್ಚಲವಾಗಿತ್ತು.

ವ॥ ಹೀಗೆ (ಸಾಗಿರುವಾಗ)—

ಕಂ॥ ಪಾಱುವ ವಿಮಾನದಣಿವಿಣಿ
ಗಾಱದೆ ಮೇಘಾಳಿ ದೇವರದನಂಬರದೊಳ್
ಕೀಱ್ ನಿಱಿಸಿದವೊಲತಿಜವ
ಮಾಱದೆ ನಿಂದವೊಲದೂರ್ಜ ಘನಘನಕತಳಂ ॥ ೬೧ ॥

ವ॥ ಅಂತಾಕಸ್ಮಿಕ ವಿಸ್ಮಯಮುಣ್ಮೆ ಪೊಣ್ಮುವಿನಂ ಏಱಿದರ ಮೆಯ್ಯಳ್ಳಾಡೆ ತೂಗಿ ತೊನೆವಿನಂ ನಿಂದ ವಿಮಾನ[1][ದ][1] ಗತಿಸ್ತಂಭಮಂ ಕಂಡದ್ಭುತಾರ್ಜಿತಚಿತ್ತಂ ಉದಾತ್ತಜೀಮೂತವಾಹನನಾರಯ್ವೆನೆಂದು ತದುರ್ವೀತಳಕ್ಕೆ ತಾನೊರ್ವನೆ ಸಮವತರಿಸಿ—

ಕಂ॥ ಝುಂಕಾರಮುಖರ ಮಧುರರ
ವಂ ಕುಸುಮಾಸವದಿನೆಸೆಯೆ ಸುಂದರತರಮಂ
ಭೋಂಕೆನೆ ನೋಟ್ಪನಭೂತಭ
ಯಂ ಕಂಡಂ ಭೂತರಮಣ ನಾಮಾಟವಿಯಂ ॥ ೬೨ ॥

ವ॥ ಅಂತು ಕಂಡದರ್ಕೆ ಕಕುದಮಿರ್ಪಂತಿರ್ದ ಕಾಂಚನಾಭಿಧಾನ ಗಿರಿವರದ ಮೇಲೆ—

ಚಂ॥ ಚಮರರುಹದ್ವಯಂ ಬೆಳಪ ಬೆಳ್ಗೊಡೆ ಪೂಮ[2][ಟೆ][2] ಭಾಪ್ರತಾನಮು
ತ್ತಮ ಮಣಿಪೀಠಮಿಂದ್ರಸಭೆಯೆಂಬಿವು ಘಾತಿಚತುಷ್ಕಘಾತದಿಂ
ಸಮನಿಸೆ ಕೇವಳಾಗಮಸುಲೋಚನನಾದೊಸನೆಯ್ದೆ ಕಂಡನ
ಶ್ರಮಗತಿವರ್ತಿ ಕೀರ್ತಿಧರ ಕೇವಳಿಯಂ ಹಳಿ ದೇವದೇವನಂ ॥ ೬೩ ॥

ವ॥ ಕಂಡಾ ತ್ರಿಭುವನಗುರುಗೆಱಗಿ ಪೊಡವಟ್ಟು ಪೋಗಿ ಕನ್ಯಾಸಮೇತಂ ತಮ್ಮನನೊಡಗೊಂಡು ಬಂದು ತ್ರಿಕರಣ ಶುದ್ಧಿಯಿಂ ಬಂದಿಸಿ ಭವ್ಯ ವ್ಯೂಹ ಸೇವ್ಯಮಾನನಂ ನಾನಾವಿಧ ದೇವನಾಯಕಾನೀಕ ನಿವೇದಿತ ದುರಿತಾರಿವಿಜಯನಂ [3]ಮೂಱುಂ[3]ಭಕ್ತಿಪೂರ್ವಕಂ ಭರಾನತ ಮಸ್ತ[4]ಕಂ[4] ಸ್ತುತಿಯಿಸಿ ಧರ್ಮಾಮೃತಾಸ್ವಾದನಾಸಕ್ತನಾಗಿರೆ ತದವಸಾನದೊಳ್—

---

೬೧. ಈ ವಿಮಾನದ ಬಾಧೆಯನ್ನು ಮೋಡಗಳು ತಡೆದುಕೊಳ್ಳಲಾರವೆಂದು ದೇವತೆಗಳು ಅದನ್ನು ಆಕಾಶದಲ್ಲಿ ಬಿರಿ ಹಾಕಿ ನಿಲ್ಲಿಸಿಬಿಟ್ಟರೋ ಏನೋ ಎಂಬಂತೆ, ವಿಮಾನ ಗಕ್ಕನೆ ನಿಂತುಬಿಟ್ಟಿತು.

ವ॥ ಒಳಗೆ ಕುಳಿತವರ ಮೈ ಅಲ್ಲಾಡಿ, ಜೋಲಿ ಹೊಡೆಯುವಂತೆ ವಿಮಾನ ಒಮ್ಮೆಲೆ ನಿಂತುದನ್ನು ಕಂಡು ವಿಸ್ಮಿತನಾದ ಅಪರಾಜಿತನು "ಇದೇಕೆ ಹೀಗಾಯಿತು? ನೋಡಿಬರೋಣ" ಎಂದುಕೊಂಡು ತಾನೊಬ್ಬನೆ ಭೂಮಿಗೆ ಇಳಿದನು.

೬೨. (ದುಂಬಿಗಳ) ಝೇಂಕಾರ ಧ್ವನಿಯಿಂದ ಕರ್ಣಾನಂದಕರವಾಗಿಯೂ, ಪುಷ್ಪರಸದಿಂದ ನಯನಮನೋಹರವಾಗಿಯೂ ಶೋಭಿಸುವ ಭೂತರಮಣವೆಂಬ ವನ ಒಮ್ಮೆಲೆ ಆ ಕುಮಾರನ ಕಣ್ಣಿಗೆ ಬಿದ್ದಿತು.

ವ॥ ಆ ವನಕ್ಕೆ ಇಣಿಯಂತಿದ್ದ ಕಾಂಚನನೆಂಬ ಬೆಟ್ಟವಿತ್ತು. ಅದರ ಮೇಲೆ—

೬೩. ಕೀರ್ತಿಧರನೆಂಬ ಕೇವಲಿಯು ಘಾತಿಕರ್ಮಗಳನ್ನು ಗೆದ್ದು ಕೇವಲಜ್ಞಾನವನ್ನು ಪಡೆದಿದ್ದನು; ಆದುದರಿಂದ ಆತನ ಸೇವೆಗಾಗಿ ತಾವಾಗಿ ಒದಗಿದ ಚಾಮರಯುಗ, ಥಳಥಳಿಸುವ ಬೆಳ್ಗೊಡೆ, ಪುಷ್ಪವೃಷ್ಟಿ, ಪ್ರಭಾವಲಯ, ಉತ್ತಮವಾದ ರತ್ನಸಿಂಹಾಸನ ಮತ್ತು ದೇವತೆಗಳ ಸಭೆ—ಇವುಗಳೊಡನೆ ಶೋಭಿಸುವ ಮುನಿಪೇಂದ್ರನನ್ನು ಅಪರಾಜಿತನು ಕಂಡನು.

ವ॥ ಆ ತ್ರಿಲೋಕಗುರುವಿಗೆ ಬಾಗಿ ನಮಸ್ಕರಿಸಿದನು; ಮರಳಿ ಹೋಗಿ ತಮ್ಮನನ್ನೂ, ಆ ಕನ್ಯೆಯನ್ನೂ ಒಡಗೊಂಡು ಬಂದು, ತ್ರಿಕರಣಪೂರ್ವಕವಾಗಿ ವಂದಿಸಿ, ಅನೇಕ ಭಕ್ತಜನಸಮೂಹದಿಂದಲೂ, ನಾನಾವಿಧ ದೇವತೆಗಳ ಸಮೂದಾಯದಿಂದಲೂ ಪೂಜೆಗೊಳ್ಳುತ್ತಿರುವ ಆ ಕರ್ಮವಿಜಯಿಯನ್ನು ತ್ರಿವಿಧಭಕ್ತಿಪೂರ್ವಕವಾಗಿ ತಲೆಬಾಗಿ ಸ್ತುತಿಸಿ, ಅವರಿಂದ ಅಮೃತಸಮಾನವಾದ ಧರ್ಮವನ್ನು ಕೇಳಿ ಸಂತೋಷಪಟ್ಟನು. ಆ ಬಳಿಕ—

---

1. × (ಅ, ಮ)　2. ಳೆ (ಮ)　3. ಮೂವರು (ಅ)　4. ಕರಾಗಿ (ಅ)

ಕಂ॥ ಕನಕಶ್ರೀ ಕನ್ನಿಕೆ ನೀ
ತನ ಜನಕವಿಯೋಗ ಶೋಕ ಹೃತಚೇತನೆ ತ
ಜ್ಜನನಂ ಬೆಸಗೊಂಡಳ್ ಮು
ನ್ನಿನ ತನ್ನನುಬಂಧ ಭವಲತಾವಂಜರಿಯಂ ॥ ೬೪ ॥

ಬೆಸಗೊಳೆ ದಶನದ್ಯುತಿ ದೆಸೆ
ದೆಸೆಯ ತಮಃಪಟಮನುಗಿಪಟಂಗೊಳೆ ದೇವಂ
ಬೆಸಸಿದನಾ ಕನ್ನೆಗೆ ಪಸ
ರಿಸೆ ಚಿತ್ರವಿಶೋಧಿ ಬೋಧಿಪರಿಣಾಮಂಗಳ್ ॥ ೬೫ ॥

ಮೊದಲಿದುವೆ ಧಾತಕೀಷಂ
ಡದೊಳುರ್ವಿಗೆ ತೊಡವು ಮೂಡಣೈರಾವತಮುಂ
ಟದಱೊಳಮಾ ಶಂಖಗ್ರಾ
ಮದೊಳೊಕ್ಕಲ ಕೂಸು ಸಾಧು ದೇವಕನೆಂಬೊಂ ॥ ೬೬ ॥

ವ॥ ಆತನ ಪೆಂಡಿತಿ ಪೃಥುಶ್ರೀಯೆಂಬಳ್ ನಿರ್ಧನೆ ತನ್ಮಿಥುನಕ್ಕೆ ಪುಟ್ಟಿದರೊರ್ಕಣ್ಗುರುಡಿಯುಂ ಪೊರಂಡಿಯುಂ ಕೊಂಟಿಯುಂ ಪೆಱವೆಯುಂ ಕುಷ್ಠಿನಿಯುಂ ಕುಬ್ಜೆಯುಮಪ್ಪ ಮಗಳ್ದಿರಱುವರನಿಬರಿಂ ಪಿ[ರಿ]¹ಯೈ ನೀಂ ಪರಿಪೂರ್ಣಾಂಗಿಯೈ ಶ್ರೀದತ್ತೆಯೆಂಬ ಮಗಳಾಗಿ ಪುಟ್ಟಿದೈ ದರಿದ್ರತಾದ್ರುಮದ ಪಣ್ಪಲಮಂ ಪಲಕಾಲಂ ಪಲರೊಳಂ ಸವಿದು ಮಕ್ಕಳ ಕಾಟಕ್ಕೆ ತದ್ದೇವಕಂ ದಿವ್ಯಂಬಿಡಿದು ಕಳಿವಂತೆ ಕಟಱಿವುದುಂ ತಂಗೆವಿರ ಭರಭಾರಕ್ಕಮಡಸಿದ ಬಡತನಕ್ಕಮೆಡರ್ಗಮಳ್ಕದೆ ನೀಂ ಪೊತ್ತು ನಿತ್ತರಿಸುತ್ತುಮಿರೆ ಬಡನಂಟರ್ ಮದುವೆ ಮಾಡೆಯುಂ ಮೊಲ್ಲದೆ ಕನ್ಯಾಬ್ರತದೊಳ್ ಪತ್ತಿ ಪೆಸಂಗೆಯ್ದು ಕಾಲಮಂ ಕಳಿವುತ್ತುಮರಿಷಡ್ವರ್ಗಂ ಕಾಡುವಂತುಗಿಬಗಿ ಮಾಡಿ ಕಾಡುವಱುವರ ಕಾಟಕ್ಕ

---

೬೪. ತನ್ನ ತಂದೆಯು ಮರಣದಿಂದಾದ ದುಃಖದಿಂದ ಚೈತನ್ಯವನ್ನು ಕಳೆದುಕೊಂಡಿದ್ದ ಕನಕಶ್ರೀಯು ಆ ಗುರುಗಳನ್ನು ಬಿನ್ನವಿಸಿ "ನನ್ನ ಪೂರ್ವಭವಗಳನ್ನು ತಿಳಿಸಿ" ಎಂದಳು.

೬೫. ದಿಕ್ಕುದಿಕ್ಕುಗಳಲ್ಲಿದ್ದ ಕತ್ತಲೆಯನ್ನು ಹೊಡೆದಟ್ಟುವಂತೆ ತಮ್ಮ ಬಿಳಿಹಲ್ಲುಗಳು ಕಾಂತಿಯನ್ನು ಬೀರುತ್ತಿರಲಾಗಿ ಆ ಮುನಿದೇವರು ಆ ಕನ್ಯೆಯ ಚಿತ್ತವನ್ನು ಬೆಳಗುವಂತೆ ಹೇಳತೊಡಗಿದರು :

೬೬. "ಧಾತಕೀಷಂಡದಲ್ಲಿ ಭೂಮಿಗೇ ಅಲಂಕಾರವೆನಿಸಿ ಪೂರ್ವದ ಐರಾವತವೆಂಬ ಕ್ಷೇತ್ರವುಂಟು. ಅದರಲ್ಲಿ ಶಂಖ ಗ್ರಾಮವೆಂಬುದೊಂದು ಊರು. ಅಲ್ಲಿ ದೇವಕನೆಂಬ ಒಬ್ಬ ಸಜ್ಜನನಾದ ಒಕ್ಕಲುಮಗನಿದ್ದನು.

ವ॥ ಆತನ ಹೆಂಡತಿ ಪೃಥುಶ್ರೀ ಎಂಬುವಳು (ಪೃಥುಶ್ರೀ ಎಂದರೆ ಮಹಾ ಐಶ್ವರ್ಯವತಿ—ಹೆಸರಿಗೆ ಮಾತ್ರ ಆದರೆ ನಿಜವಾಗಿ) ಬಡವೆ ಆ ದಂಪತಿಗಳಿಗೆ ಪರಿಪೂರ್ಣವಾದ ಅಂಗಾಂಗಗಳುಳ್ಳವಳೆಂದರೆ ನೀನೊಬ್ಬಳೆ ಎಂಬಂತೆ ಶ್ರೀ ದತ್ತೆಯೆಂಬ ಹೆಸರಿನ ಹಿರಿಯ ಮಗಳಾಗಿ ಹುಟ್ಟಿದೆ; ನಿನ್ನ ತಂಗಿಯರಲ್ಲಿ ಮೊದಲನೆಯವಳಿಗೆ ಒಂದು ಕಣ್ಣು ಕುರುಡು; ಎರಡನೆಯವಳಿಗೆ ಗೂನು ಬೆನ್ನು; ಮೂರನೆಯವಳು ಕುಂಟಿ; ನಾಲ್ಕನೆಯವಳು ಹೆಳವಿ; ಐದನೆಯವಳು ಕುಷ್ಠರೋಗಿ; ಕೊನೆಯವಳು ಕುಳ್ಳಿ. ದಾರಿದ್ರ್ಯದ ದುಃಖವನ್ನು ಹಲವಾರು ಕಾಲದವರೆಗೆ ಉಂಡುಂಡು. ಮಕ್ಕಳ ಕಾಟವನ್ನು ಸೈರಿಸಲಾರದೆ ಆ ದೇವಕನು ಪ್ರಾಣಬಿಟ್ಟನು. ತಂಗೆಂದಿರ ಪೋಷಣೆಯ ಭಾರಕ್ಕೂ, ಅಂಟಿ ಬಂದ ಬಡತನಕ್ಕೂ, ಕಷ್ಟಕಾರ್ಪಣ್ಯಗಳಿಗೂ ಅಳುಕದೆ ನೀನು ಎಲ್ಲವನ್ನೂ ಹೊತ್ತು ನಿಭಾಯಿಸುತ್ತ ಇರುವಾಗ, ನಿನ್ನ ಬಡವರಾದ ನಂಟರು ಬಂದುನಿನಗೆ ಮದುವೆ ಮಾಡುತ್ತೇವೆಂದು ಹೇಳಿದರು. ನೀನು ಅದಕ್ಕೆ ಒಪ್ಪದೆ, ಕನ್ಯಾವ್ರತದಲ್ಲಿಯೇ

---

1. ಱ (ಮ)

ಮಲಸದೆಯುಂ ಧೈರ್ಯಮಂ ಪತ್ತುವಿಡದೆಯುಂ ಇರ್ದೊಂದು ದೇವಸಂ ಕಣ್ಬೇಟಕ್ಕೆ ಪಕ್ಕಾದ ಕರೇಣುಗಳಂತೆ ಪಣ್ಬೇಟಮಾದಾಟಮೆ ನಿನ್ನಂ [1][ಅ][1]ನಿವಂಗೆಯ್ವುದುಂ ತಂಗೆವಿ[2]ರನಿವ[2]ಮಂ ತೀರ್ಚಲುಂ ಶಂಖಾಚಲಮನೆಯ್ದಿ ಪಣ್ಣಂ ಕೊಯ್ದು ಮಗುಳ್ದು ಬರ್ಪನ್ನೆಗಮಾ ಬಟ್ಟೆಯೊಳ್—

ಕಂ॥ ತಡೆಯದೆ ಭವ್ಯರನಱದೊಳ್
ತೊಡರ್ಚಿ ಕಯ್ಗೊಳಿಪ ಸರ್ವಯಶರಂ ನೀಂ ಕಂ
ಡಡಿಗೆಱಗಿ ನೋಂಪೆನೆಂದೆಡೆ
ಯುಡುಗದೆ ಸಲೆ ಧರ್ಮ ಚಕ್ರವಾಳಮನಾಗಳ್ ॥ ೬೭ ॥

ವ॥ [3]ಬೇಡಿ[3] ಸಕಳ ಶ್ರಾವಕವ್ರತಾರೋಹಣಸಮೇತಮಾ ಮುನೀಶ್ವರಂ ಕುಡೆ ಕೊಂಡು ಮನೆಗೆ ವಂದಿರ್ಪತ್ತೊಂದು ದೆವಸ ವೇ[4]ಕೋತ್ತ[4]ರವೃದ್ಧಿಯಿಂ ಮನಂ ತವದೆ ತನು ತವೆ ನೋನುತ್ತಿರ್ಪನಂ ಒಂದು ದೆವಸಂ ಮಾಸೋಪವಾಸಂಗೆಯ್ದನಗಾರಕೇವಲಿಯೊಳ್ ಚರಿಗೆವುಗುವ ಸುವ್ರತೆಯರೆಂಬಾರ್ಯಿಕೆಯರಂ ನಿಱಿಸಿ ನಿರತಿಶಯ ಭಕ್ತಿಪೂರ್ವಕಮಾಹಾರದಾನಮನೀಯೆ ವ್ಯೆಮ[5][ಱು][5]ಕದಿಂದುಚ್ಚಳಿಸಿದ ಪರಿ[6]ಕ್ಲಿನ್ನಾನ್ನಕ್ಕೆ[6] ಪೇಸಿ ಮನೆಯಿಂ ಪೊಱಮಟ್ಟು ಪೋದೆಯಾಗಣಿನೀ ಪ್ರಧಾನೆಯರಂ ನೆರೆಮನೆಯವರವ (ರ) ದೇಹಾರಕ್ಕೆ ಕಳಿಪಿದರ್ ಮತ್ತೊಂದು ದೆವಸಮಾ ಶಂಖಾದ್ರಿಯೊಳ್—

ಚಂ॥ ಉಲಿವ ವಿಮಾನಕಿಂಕಿಣಿಯ ಮೆಲ್ಲುಲಿಗಳ್ ಕಿವಿಗೆಯ್ದಿ ಮಟ್ಗಿದ
ಗ್ಗಲಿಸೆ ತಗುಳ್ವ ಗೇಯರಸವಚ್ಚಱಿದಂತಿರೆ ಬೆಚ್ಚು ಚಿತ್ತದೊಳ್
ನಿಲೆ ಮೃದು ನೃತ್ಯದೊಳ್ ಪುದಿದು ನಾಟ್ಯರಸಂ ದ್ರುತತಾ[7]ಳ[7]ದೊಳ್ ಪಳಂ
ಚಲೆಯೆ ವಿಯಚ್ಚರದ್ವಯದ ಪೋಪುದನಟ್ಟಿಯೆ ನಿಂದು ನೋಡಿದೈ ॥ ೬೮ ॥

ಉಳಿದು, ಕಾಲಕಳೆಯುತ್ತ, ಕಾಮಕ್ರೋಧಾದಿ ಅರಿಷಡ್ವರ್ಗದಂತೆ ಪೀಡಿಸುತ್ತಿರುವ ಆರು ಜನ ತಂಗೆಂದಿರ ಕಾಟಕ್ಕೆ ಬೇಸರದೆ, ಧೈರ್ಯಗೆಡದೆ ಇದ್ದೆ ; ಒಂದು ದಿವಸ ಕಣ್ಬೇಟಗೊಂಡು ಕದಬದಿಸುವ ಹೆಣ್ಣಾನೆಗಳಂತೆ ಹಣ್ಣಿನ ಹಂಬಲದಿಂದ ನಿನ್ನನ್ನು ಅವರು ಕಾಡಿದರು. ತಂಗೆಂದಿರ ಬಯಕೆಯನ್ನು ತೀರಿಸಲೆಂದು ನೀನು ಶಂಖಪರ್ವತಕ್ಕೆ ಬಂದು ಹಣ್ಣು ಕೊಯ್ದುಕೊಟ್ಟು ಮರಳಿ ಬರುತ್ತಿರುವಾಗ ಮಾರ್ಗಮಧ್ಯದಲ್ಲಿ—

೬೭. ಭಕ್ತರನ್ನು ಧರ್ಮಮಾರ್ಗದಲ್ಲಿ ನೆಲೆಗೊಳಿಸುವ 'ಸರ್ವಯಶ' ರೆಂಬ ಮುನಿಗಳನ್ನು ನೀನು ಕಂಡೆ. ಅವರ ಪಾದಗಳಿಗೆ ಎರಗಿ, "ನನಗೆ ವ್ರತವನ್ನು ನೀಡಿ" ಎಂದು ಬೇಡಿಕೊಳ್ಳಲಾಗಿ ಆ ಮುನೀಶ್ವರರು ಧರ್ಮಚಕ್ರವಾಳ ವೆಂಬ (ಉಪವಾಸ) ವ್ರತವನ್ನೂ—

ವ॥ ಶ್ರಾವಕ ಜನೋಚಿತವಾದ ಅಣುವ್ರತವೇ ಮೊದಲಾದ ವ್ರತಗಳನ್ನೂ ಅನುಗ್ರಹಿಸಿದರು. ಆ ವ್ರತಗಳನ್ನು ಸ್ವೀಕರಿಸಿ ಮನೆಗೆ ಬಂದು ಇಪ್ಪತ್ತೊಂದು ದಿವಸ, ಉತ್ತರೋತ್ತರವಾಗಿ ಉಪವಾಸವನ್ನು ಹೆಚ್ಚಿಸುತ್ತ ದೇಹ ಕುಗ್ಗಿದರೂ ಮನ ಕುಗ್ಗದೆ ಆಚರಿಸುತ್ತ ಇದ್ದೆ. ಹೀಗಿರುವಾಗ ಒಂದು ದಿನ ಮಾಸೋಪವಾಸ ಮಾಡಿ ಚರಿಗೆಗೆ ಹೊರಟ ಸುವ್ರತೆ ಎಂಬ ಆರ್ಯಿಕೆಯರನ್ನು ಬಿನ್ನವಿಸಿ ನಿಲ್ಲಿಸಿಕೊಂಡು, ಅತ್ಯಂತ ಭಕ್ತಿಸಮೇತವಾಗಿ ಆಹಾರದಾನ ಮಾಡಿದೆ. ಆಗ ಅವರಿಗೆ ಅನ್ನ ಮೈಗೆ ಒಗ್ಗದೆ, ಒಂದೆ ಸಮನೆ ಕಾರಿಕೊಂಡರು. ಅದಕ್ಕೆ ಹೇಸಿಕೊಂಡು ನೀನು ಮನೆಯಿಂದಾಚೆಗೆ ಹೋಗಿ ಬಿಟ್ಟೆ. ನೆರೆಮನೆಯ ಹಿರಿಯರು ಬಂದು ಈ ಆರ್ಯಿಕೆಯರನ್ನು ಅವರ ಆಶ್ರಮಕ್ಕೆ ಕಳಿಸಿಕೊಟ್ಟರು. ಮತ್ತೊಂದು ದಿವಸ ಆ ಶಂಖಪರ್ವತದಲ್ಲಿ—

೬೮. ಖೇಚರ ದಂಪತಿಗಳಿಬ್ಬರು ಸಂತೋಷದಿಂದ ಹಾಡಿ ಕುಣಿದು ತಮ್ಮ ವಿಮಾನವನ್ನೇರಿಹೋದುದನ್ನು ನೀನು ನೋಡಿದೆ; ವಿಮಾನದ ಗಂಟೆಗಳ ಮಧುರಧ್ವನಿ ದೂರ ಹೋಗಿ ಕೇಳದಂತಾದರೂ ಅವರು ಮಾಡಿದ ಗಾಯನ ಅಚ್ಚೊತ್ತಿದಂತೆ ನಿನ್ನ ಮನಸ್ಸಿನಲ್ಲಿ ಇನ್ನೂ ನೆಲಸಿತ್ತು ; ಸುಂದರವಾದ ಅವರ ನೃತ್ಯ ಕಣ್ಣಲ್ಲಿ ನಿಂತು, ಮನಸ್ಸನ್ನು ಸೆಳೆಯುತ್ತಿತ್ತು.

1. ಪ (ಮ) 2. ರವಪ (ಮ) 3. ಭೇದಿಸಿ (ಮ) 4. ಕಾಂತ (ಅ) 5. ರು (ಮ) 6. ಕ್ಲಿನ್ನಾಂಗಕ್ಕೆ (ಮ) 7. ರ (ಮ)

ವ॥ ಆಂತಂಚಿರಮಿಲ್ಲದ ಮಿಂಚಿನವಗಯಿಸ್ಸ ವಿಮಾನಾಕಾರದಿಂ ಶುಭ್ರಾಕಾರದ ಭ್ರಮೆ ಪರಿವಂತೆ ಪರಿಪ ವಿಮಾನವುಮನಲ್ಲಿಯ ವಿಳಾಸಕ್ಕೆ ನಿವಾಸಮಾದಂಬರ(ಚರ)ಲೀಲೆಯುಮನಟ್ಕರ್ತು ನೋಡಿ ಬಯಸಿ—

ಕಂ॥ ಇರುಳುಂ ಪಗಲುಂ ಜಾನಿಸಿ
ಸುರತ್ವಮಂ ಕೊಟ್ಟು ಮಗುಟಿ[3] ಕೊಂಡಟಿಭವಮಂ
ಪಿರಿದಂ ಕಿಱಿದಕ್ಕೀವಂ
ತಿರೆ ಖಚರಸುಖಕ್ಕೆ ನೀಂ ನಿಧಾನಂಗೆಯ್ದುಯ್ ॥ ೬೯ ॥

ವ॥ ಅಂತು [1][ನಿ][1]ಧಾನ ಪೂರ್ವಕಂ ಗತಜೀವೆಯಾಗಿ ಬಂದಿಲ್ಲಿ ದಮಿತಾರಿ[2][ಗಂ][2] ತತ್ಪುಂದರಿ ಮಂ[3]ಗಳೆ[3]ಗಂ ಕನಕಶ್ರೀಯಾಗಿ ಪುಟ್ಟಿದೈ ಶಿವಮಂದಿರಪುರಮನಾಳ್ವ ಕನಕಪುಂಗವಂಗಂ ಜಯದೇವಿಗಂ ಕೀರ್ತಿಧರನಾಮದಿಂ ನಾಮಗ್ರತನೂಜರೆಮೆಮಗಂ ಪವನವೇಗಿಗಂ ನಿಮ್ಮಮ್ಮಂ ದಮಿತಾರಿ ಮಗನಾದನಾಮುಮಾತನಮ[ಸ]ಸ್ಮದೀಯ ರಾಜ್ಯಭಾರದೊಳ್ ನಿಱಿಸಿ—

ಕಂ॥ ಶಾಂತಿಕಗುರುಪಾದಾಂಬುರು
ಹಾಂತಿಕದೊಳ್ ಜಾತರೂಪಧರರಾಗಿ ಶಮ
ಸ್ವಾಂತಕ್ಕೆ ಘಾತಿಗಳ್ ಬಲ
ವಂತಂಗಳ್ ಕಿಡೆ ಜಿನತ್ವಮೆಮಗಾಯ್ತಾಗಳ್ ॥ ೭೦ ॥

ವ॥ ನಿನಗತೀತಭವದಾಹಾರದಾನದೊಳಾದ ಜುಗುಪ್ಸೆಯುಮದನುಡಗದೆ ಪಿರಿದು ಬೇಗಮಿರೆ ಪರಪಿದ ಕೂಟ್ಗೆ ಮುಸುಱಿ ಮಡಿದ ಮಕ್ಷಿಕಾದಿ ಜೀವಸಾವದ್ಯಮುಮನಿವಿರಿದು ಪರಮ ಕರುಣಾಕಾರ ದಾರುಣ ತೀವ್ರದುಃಖಮಂ ಮಾಡಿದುದೆಂದು ಬೆಸಸಿದ ಜಿನೇಂದ್ರನ ಚರಣ

ವ॥ ಹೀಗೆ ಚಂಚಲವಾದ ಮಿಂಚಿನ ವೇಗದಿಂದ ಬೆಳ್ಳಗೆ ವ್ಯೈದಾಳಿ ಬಂದ ಭ್ರಾಂತಿಯೆ ಕಣ್ಣೆಳೆದು ಹೋದಂತೆ ವಿಮಾನವು ಹೋಗಲಾಗಿ, ಆ ಖೇಚರರ ವೈಭವವಿಲಾಸಗಳನ್ನು ನೋಡಿ, "ಇವು ನನಗೂ ಬರಬಾರದೇ" ಎಂದು ಕನವರಿಸುತ್ತ

೬೯. ಹಗಲೂ ಇರುಳೂ ಅದೇ ಧ್ಯಾನದಲ್ಲಿದ್ದು, ನೀನು ಆ ಬಯಕೆಯಲ್ಲಿಯೆ ತೀರಿಕೊಂಡೆ. ಅಗ್ಗದ ವಸ್ತುವನ್ನು ಕೊಳ್ಳಲು ಆನೆಯನ್ನೇ ಕೊಟ್ಟಂತೆ ನೀನು ದೇವತ್ವವನ್ನು ಬಿಟ್ಟು ಪುನಃ ಹೀನವಾದ ಸಾಂಸಾರಿಕ ಜೀವನವನ್ನು ಪಡೆದೆ. ಖೇಚರಸುಖವೇ ಬೇಕೆಂದು ನಿಧಾನಿಸಿದೆ (ಅಗಸನ ಶಾಂತಿಪುರಾಣ ಈ ಸಂದರ್ಭದಲ್ಲಿ ಆಕೆ ಸೌಧರ್ಮೇಂದ್ರನಿಗೆ ವಿದ್ಯುತ್‌ಪ್ರಭೆಯೆಂಬ ದೇವಿಯಾಗಿ ಸೌಧರ್ಮಕಲ್ಪದಲ್ಲಿ ಹುಟ್ಟಿದಳೆಂದೂ ಅಲ್ಲಿಯ ಆಯುಷ್ಯ ತೀರಿದ ಬಳಿಕ, ನಿಧಾನ ಮರಣದ ಮೂಲಕ ದಮಿತಾರಿಯ ಮಗಳಾಗಿ ಜನಿಸಿದಳೆಂದೂ ಹೇಳಿದೆ).

ವ॥ ಹೀಗೆ ನಿಧಾನಮರಣದಿಂದ ತೀರಿ, ನೀನು ಇಲ್ಲಿ ದಮಿತಾರಿಗೂ ಆತನ ಪತ್ನಿ ಮಂಗಳೆಗೂ ಕನಕಶ್ರೀಯೆಂಬ ಮಗಳಾಗಿ ಹುಟ್ಟಿದೆ. ಶಿವಮಂದಿರಪುರದ ದೊರೆ ಕನಕಪುಂಗವನಿಗೂ ಆತನ ರಾಣಿ ಜಯದೇವಿಗೂ ಕೀರ್ತಿಧರನೆಂಬ ಮಗನಾಗಿ ನಾವು ಜನಿಸಿದೆವು. ನಮಗೂ ಪವನವೇಗಿಯೆಂಬ ನಮ್ಮ ರಾಣಿಗೂ ನಿಮ್ಮ ತಂದೆಯಾದ ದಮಿತಾರಿ ಮಗನಾಗಿ ಹುಟ್ಟಿದನು. (ಯಥಾಕಾಲದಲ್ಲಿ) ನಾವು ಆತನಿಗೆ ನಮ್ಮ ರಾಜ್ಯಭಾರವನ್ನು ಒಪ್ಪಿಸಿ—

೭೦. ಶಾಂತಿಕರೆಂಬ ಗುರುಗಳ ಪಾದಸನ್ನಿಧಿಯಲ್ಲಿ ಸಂನ್ಯಾಸದೀಕ್ಷೆಯನ್ನು ಸ್ವೀಕರಿಸಿ ತಪಸ್ಸು ಮಾಡುತ್ತಿದ್ದೆವು. ಘಾತಿಕರ್ಮಗಳನ್ನು ಗೆದ್ದುದರಿಂದ ನಮಗೀಗ ಜಿನತ್ವ ಪ್ರಾಪ್ತವಾಯಿತು.

ವ॥ ಹಿಂದಿನ ಜನ್ಮದಲ್ಲಿ ನೀನು ಆಹಾರದಾನ ಮಾಡಿದರೂ, ಅಲ್ಲಿ ಜುಗುಪ್ಸೆಯನ್ನು ತೋರಿದೆ; ವಾಂತಿಯಾದ ಆಹಾರವನ್ನು ತೆಗೆದು ಹಸನುಗೊಳಿಸದೆ ಹೋದುದರಿಂದ ಅಲ್ಲಿ ಹರಡಿಬಿದ್ದ ಆಹಾರಕ್ಕೆ ಮುಸುರಿಕೊಂಡು ನೊಣಗಳೇ ಮೊದಲಾದ ಅನೇಕ ಜೀವಗಳು ಮಡಿದುವು. ಈ ನಿರ್ದಯ ಕೃತಿಯ ಪರಿಣಾಮವಾಗಿಯೆ ನಿನಗೆ ಈಗ ಇಂತಹ ಘೋರವಾದ ದುಃಖವುಂಟಾಯಿತು." 'ಹೀಗೆಂದು ತಿಳಿಸಿದ ಜಿನಯತೀಂದ್ರರ ಪಾದಗಳಿಗೆ ಎರಗಿ ಆ ಮೂವರೂ ಆಕಾಶಕ್ಕೆ

---

1. ವಿ (ಮ) 2. ಗೆ (ಮ) 3. ದಿರೆ (ಅ)

ಸರಸೀರುಹಂಗಳ್ಗೆಱಗಿ ಗಗನತಳಕ್ಕೆ ನೆಗೆದು ವಿಮಾನಮನೇಱಿ ಮೂವರುಂ ಮನೋವೇಗದಿನೆಯ್ದಿ ಪ್ರಭಾಕರೀಪುರಮನಮಂ ಕಾವ ಚಿತ್ರಸೇನಾದಿ ಸೇನಾನಾಯಕರುಮನೊಳಗುಮಾಡಿ ಮೂವಳಸಾಗಿ ಸುತ್ತಿ ಮುತ್ತಿ ಕಾದುತ್ತಿರ್ದ ವಿದ್ಯುದ್ದಂಷ್ಟ್ರನುಮಂ ಸುದಂಷ್ಟ್ರನುಮಂ ಕಂಡು ಕಡು ಮುನಿದು ಮಾಣದೆ ಕನಕಶ್ರೀ ಬಾರಿಸೆ ವಾರಿಸೆ—

ಕಂ॥ [1]ಎರಡೆ[1]ರಡೆ ಸರಳಿ[2]ನುಱಿ[2]ದೆರ
ಡೆರಲೆಗಳನೆ ಕೊಲ್ವ ತೆಱದಿನಿರ್ವರುಮಮಂ ಕೊಂ
ದೆರಡನೆಯ ದುಃಖಮಂ ಮಾ
ಣ್ದಿರದಾ ಕನ್ನಿಕೆಗನಂತವೀರ್ಯಂ ಪಡೆದಂ ॥ ೭೧ ॥

ಆಗಳರಿಸೈನ್ಯಮುವರೊಡ
ವಾಗಲೊಡಂ ತತ್ಪ್ರಭಾಕರೀಪುರಮೇನಿಂ
ಬಾಗಿರ್ದುದೊ ಘನವಿಗಮ ಸ
ಮಾಗಮ ಶರದಮಲಗಗನಸನ್ನಿಭ ವಿಭವಂ ॥ ೭೨ ॥

ವ॥ ಅಂತು ದಮಿತಾರಿಯ ತನಯರಿರ್ವರುಂ ಸಾಯೆ ಮಂಜು ಕರಗುವಂತೆ ವಿದ್ಯಾಧರ ಬಲಮೆಲ್ಲಂ ಕರಗೆ ನಿಜಾನ್ವಯ ರಾಜಧಾನಿಯಂ ಪುಗುವಾಗಳಿರ್ವರುಂ ಸೈನ್ಯಂ ಬೆರಸು ಪೌರ ನಾರೀಜನಂಗಳ್ ಗೀರ್ವಾಣಶಂಕೆಯಿನುತ್ತಂಭಿತಪಕ್ಷ್ಮಪಾಳಿ ವನಸರತ್ಯಂತವಿಸ್ಮಯಮಾನ ಮಾನಸರುರ್ವೀತಳಸ್ಥಿತರಂಬರತಳಾಗಮನ ನಿರತರಂ ರಾಮಕೇಶವರಂ ನೋಡೆ—

ಕಂ॥ ಎಸೆವ ಸಮರಾನಕಂ ಸೊಗ
ಯಿಸುವುತ್ಸವ ತೂರ್ಯಮೊಗೆಯೆ ಸಮರ ಪತಾಕಾ
ಪ್ರಸರಂಗಳಷ್ಟಶೋಭೆಯ
ಮಿಸುಗುವ ಪಱಿಯಿಗೆಗಳೊಳಗೆ ಪುಗೆ ಪುರವರಮಂ ॥ ೭೩ ॥

ನೆಗೆದು ವಿಮಾನವನ್ನೇರಿ, ಮನೋವೇಗದಿಂದ ಪ್ರಭಾಕರೀಪುರಕ್ಕೆ ಬಂದರು. ಆಗ ಪಟ್ಟಣಕ್ಕೆ ಕಾವಲಾಗಿದ್ದ ಚಿತ್ರಸೇನನೇ ಮೊದಲಾದ ಸೇನಾಪತಿಗಳನ್ನು ಪಟ್ಟಣದೊಳಗೇ ಹಿಡಿದಿಟ್ಟು, ಪಟ್ಟಣವನ್ನು ಸುತ್ತುಗಟ್ಟಿ, ವಿದ್ಯುದ್ದಂಷ್ಟ್ರ ಮತ್ತು ಸುದಂಷ್ಟ್ರ ಎಂಬಿಬ್ಬರೂ (ದಮಿತಾರಿಯ ಮಕ್ಕಳು) ಯುದ್ಧಮಾಡುತ್ತಿದ್ದರು, ಅದನ್ನು ಕಂಡು ಕೋಪಗೊಂಡ ಅನಂತ ವೀರ್ಯನು, "ಬೇಡ ಬೇಡ" ಎಂದು ಕನಕಶ್ರೀ ತಡೆಯುತ್ತಿದ್ದರೂ ಕೇಳದೆ—

೭೧. ಎರಡು ಜಿಂಕೆಗಳನ್ನು ಕೊಲ್ಲುವಷ್ಟೆ ಸುಲಭವಾಗಿ ಎರಡೇ ಬಾಣಗಳಿಂದ ಆ ಇಬ್ಬರನ್ನೂ ಕೊಂದು, ಆ ಕನ್ಯೆಗೆ ಎರಡನೆಯ ದುಃಖವನ್ನುಂಟುಮಾಡಿದನು.

೭೨. ಶತ್ರುಸೈನ್ಯವೂ ಅವರೊಡನೆ ಛಿನ್ನವಾಗಿ ಹೋರಟುಹೋಗಿ, ಎಲ್ಲ ತೆರವಾದುದರಿಂದ, ಮೋಡಗಳು ಕವಿದು ಕತ್ತಲೆ ಮುಸುಕಿದ್ದ ಮಳೆಗಾಲ ಹೊರಟುಹೋಗಿ, ಶರತ್ಕಾಲದ ಆಗಮನದಿಂದ ಸ್ವಚ್ಛವಾಗಿ ತೋರುವ ಆಕಾಶ ದಂತೆ ಪ್ರಭಾಕರೀನಗರವು ಶೋಭಿಸಿತು.

ವ॥ ಹೀಗೆ ದಮಿತಾರಿಯ ಮಕ್ಕಳಿಬ್ಬರೂ ಸಾಯಲಾಗಿ, ಹಾಗು ಮಂಜಿನಂತೆ ವಿದ್ಯಾಧರ ಸೈನ್ಯವೆಲ್ಲ ಕರಗಲಾಗಿ, ವಿಜಯಿಗಳಾದ ಅಣ್ಣತಮ್ಮಂದಿರಿಬ್ಬರೂ ತಮ್ಮ ರಾಜಧಾನಿಯ ಪ್ರವೇಶಕ್ಕೆ ಅಣಿಯಾದರು. ಆಕಾಶದಿಂದ ಇಳಿಯುತ್ತಿರುವ ಬಲದೇವ-ವಾಸುದೇವರನ್ನು ರೆಪ್ಪೆಹೊಯ್ಯದೆ ನಿಬ್ಬೆರಗಾಗಿ ನೋಡುತ್ತಿರುವ ಪುರದ ನಾರಿಜನರೂ ಸೈನ್ಯವೂ "ಇವರು ಭೂಮಿಗೆ ಇಳಿದುಬಂದ ದೇವತೆಗಳೊ ಏನೊ!" ಎಂದು ಶಂಕಿಸಿದರು.

೭೩. ವಿಜೃಂಭಿಸುವ ರಣವಾದ್ಯಗಳ ಜೊತೆಗೆ, ಉತ್ಸವವಾದ್ಯಗಳೂ ಬೆರೆತು ಧ್ವನಿಮಾಡುವುದು; ಸಮರಧ್ವಜ ಗಳೊಡನೆ, ಊರೊಳಗಿನ ಅಷ್ಟಶೋಭೆಗಳ ಅಂಗವಾಗಿ ಮಿರುಗುವ ಪತಾಕೆಗಳೂ ಶೋಭಿಸಿದುವು. ಹೀಗೆ ಇಮ್ಮಡಿಯಾಗಿ ಶೋಭಿಸುವ ಪುರವನ್ನು ಹೊಗುತ್ತಿರುವಾಗ

---

1. ಇರದೆ (ಮ) 2. ನಿರ (ಅ)

ಮ॥ ಅರಿಶಸ್ತ್ರಾ[ಹತಿಯಿಂ]ದಮಾದ ಪೊಸವುಣ್ಣೀತಂಗೆ ಮೆಯ್ಯೊಳ್ ನವಾ
ಭರಣಂ ಶೋಭಿಸುವಂತೆ ಶೋಭಿಸುವುದೀತಂ ತುಳ್ಕಿದೊಂ ಖೇಚರೇ
ಶ್ವರಸೈನ್ಯಾಬ್ಧಿಯನೀತನಿಂ ಧರೆಗೆ ಕೃಷ್ಣಂ ಚಕ್ರಿಯೆಂದಂದೆ ಭಾ
ಸುರ ಬೋಧಂಗೀಶ ಭೂತಭಾವಿಭವದುರ್ವೀನಾಥರಿಲ್ಲೆಲ್ಲಿಯುಂ ॥ ೭೪ ॥

ಕಂ॥ ಅಪರಾಜಿತ ಪ್ರಸಾದ
ಪ್ರಪನ್ನೆಯಾ ಕನ್ನೆ ಮುನ್ನೆ ಸಮರಕ್ಕಿದೆ ಹೇ
ತು ಪದಂ ಸುಕೃತಮಹೀರುಹ
ವಿಪಕ್ವಫಲಭುಕ್ತಿಗಿಂತು ನೋಂತರುಮೊಳರೇ ॥ ೭೫ ॥

ವ॥ ಎಂದಭೂತಪೂರ್ವಪ್ರಭಾವಮನಭಿವಂದಿಸುತ್ತುಂ ಅಶ್ರುತಪೂರ್ವಪ್ರತಿಜ್ಞಾಪಾರಗಮನಮಂ ಮೆಚ್ಚಿ ಬಿಚ್ಚಳಿಸುತ್ತು ಪುನ್ವೃಷ್ಟ ಪೂರ್ವ ಕೃತಕಮಂ ಬಣ್ಣಿಸುತ್ತುಂ ನೋಡುವ ಪುರವರಜನ ನಿನದಕ್ಕೆ ಮನದೊಳ್ ನಾಣ್ಚುತ್ತುಂ ನಿಜಾನುಜ ಕನ್ಯಾನ್ವಿತಮುತ್ಸವ ಧ್ವಜದ ಕೋಟಿಪರಿಬರ್ಹವಿರಾಜಮಾನ ರಾಜಮಂದಿರಮಂ ಮೆಚ್ಚಿ ಬಿಚ್ಚಳಿಸುತ್ತುಂ ಮೌಳಿಕುಳ ಮಂತ್ರಿ ಪರಿವೇಷ್ಟಿತಂ ಸೌಜನ್ಯಕಂದಾಂಕುರಂ ಪೊಕ್ಕನಂತರಮಷ್ಟಾಹ್ನಿಕ ಮಹಾಮಹಿಮೆಯಂ ಜಿನೇಶ್ವರಂಗೆ ನಿರ್ವರ್ತಿಸಿ ಬಳಿಯಂ ಚಕ್ರಪೂಜೆಯಂ ಮಾಡಿ ತಮ್ಮಂಗೆ ರಾಜ್ಯಾಭಿಷೇಕಮಂ ಮಾಡಿ ತಮ್ಮುತಿರ್ವರುಂ ದಿಗ್ವಿಜಯಾಭಿಲಾಷಿಗಳಾಗಿರೆ—

ಕಂ॥ ಅಮರ ನರಖಚರರುಳ್ಳ
ರ್ಥಮೆಲ್ಲಮಂ ಕೊಂಡು ಬಂದು ಕಂಡಜಿತಪರಾ
ಕ್ರಮಮನುಬಿದೆಱಗಿ ದಿಗ್ವಿಜ
ಯಮನುೞಿಪಿದರೆಱಗಮಾಯದಿರ್ಕುಮೆ ನಯಮಂ ॥ ೭೬ ॥

ವ॥ ಅಂತು ಪೊಟಲಿಂ ಪೊಱಮಡದೆ ಸಿದ್ಧದಿಗ್ವಿಜಯರಾಗಿರ್ದಱಿರೆ ಕನಕಶ್ರೀ ಕನ್ನೆ—

---

೭೪. "ವೈರಿಗಳ ಶಸ್ತ್ರಾಘಾತದಿಂದಾದ ಹೊಸ ಗಾಯಗಳು ಈತನ ಮೈಯಲ್ಲಿ ಹೊಸ ಆಭರಣಗಳಂತೆ ಶೋಭಿಸುವುವು ; ಖೇಚರರಾಜ ಸೈನ್ಯಸಮುದ್ರವನ್ನು ಈತನು ತುಳುಕಿ ಬರಿದುಗೊಳಿಸಿದನು ; ಈ ಭೂಮಿಯಲ್ಲಿ ಈತನಿಂದಲೆ 'ಕೃಷ್ಣ', 'ಚಕ್ರಿ' ಎಂಬ ಘನವಾದ ಹೆಸರುಗಳುಂಟಾದುವು. ಮಹಾಜ್ಞಾನಿಯಾದ ಈತನಿಗೆ ಸಮನಾದ ರಾಜನು ಹಿಂದೆ ಹುಟ್ಟಲಿಲ್ಲ, ಮುಂದೆ ಹುಟ್ಟಲಾರನು.

೭೫. ಅಪರಾಜಿತನ ಅನುಗ್ರಹಕ್ಕೆ ಪಾತ್ರಳಾದ ಆ ಕನ್ಯೆ ಇವಳೇ. ಖೇಚರಸಮರಕ್ಕೆ ಇವಳೇ ಕಾರಣವಾದಳು. ಪುಣ್ಯದ ಫಲವನ್ನು ಹೀಗೆ ಪಡೆದವರೂ ಉಂಟೆ ?"

ವ॥ ಈ ನೀರೆಗೆ ಅಭೂತಪೂರ್ವವಾದ ಯುದ್ಧಪರಾಕ್ರಮವನ್ನು ಹೊಗಳುತ್ತ, ಅಶ್ರುತಪೂರ್ವವಾದ ಈ ಬಗೆಯ ಪ್ರತಿಜ್ಞಾಪಾಲನೆಯನ್ನು ಬಣ್ಣಿಸುತ್ತ, ಹಿಂದೆಂದೂ ಕಾಣದಂತಹ ಅವರ ಈ ಕೃತಕವೇಷದ ಘಟನೆಯನ್ನು ಚಿತ್ರಿಸುತ್ತ, ಇರುವ ಪುರಜನರ ಮಾತುಗಳನ್ನು ಕೇಳಿ ಅಪರಾಜಿತನು ಮನದಲ್ಲಿಯೆ ನಾಚಿಕೊಂಡನು. ತನ್ನ ತಮ್ಮನನ್ನೂ ಆ ಕನ್ಯೆಯನ್ನೂ ಒಡಗೊಂಡು ಉತ್ಸವಧ್ವಜಗಳ ಸಮೂಹದಿಂದ ಶೋಭಿಸುವ ಅರಮನೆಯನ್ನು ಮೆಚ್ಚಿ ಹೊಗಳುತ್ತ, ತನ್ನ ಪರಿವಾರಜನರನ್ನೂ ಮಂತ್ರಿಗಳನ್ನೂ ಕೂಡಿಕೊಂಡು ಪ್ರವೇಶಮಾಡಿದನು. ಆನಂತರ ಜಿನೇಶ್ವರನಿಗೆ ಅಷ್ಟಾಹ್ನಿಕ ಮಹಾಪೂಜೆಯನ್ನು ಮಾಡಿ, ಬಳಿಕ ಚಕ್ರಪೂಜೆಯನ್ನೂ ನೆರವೇರಿಸಿ, ತಮ್ಮನಿಗೆ ರಾಜ್ಯಾಭಿಷೇಕ ಮಾಡಿದನು. ಇನ್ನು ದಿಗ್ವಿಜಯಕ್ಕೆ ಹೊರಡಬೇಕೆಂದು ಅವರು ಬಯಸುತ್ತಿರುವಾಗ—

೭೬. ದೇವ, ಖೇಚರ, ಮಾನವರಾಜರೆಲ್ಲ ತಮ್ಮ ಸರ್ವಸ್ವವನ್ನು ತೆಗೆದುಕೊಂಡು ತಾವಾಗಿ ಬಂದು, ವಿನಯಪೂರ್ವಕವಾಗಿ ನಮಸ್ಕಾರ ಮಾಡಿದರು. ಆದುದರಿಂದ ದಿಗ್ವಿಜಯಕ್ಕೆ ಹೊರಡಬೇಕಾದ ಪ್ರಮೇಯ ಉಳಿಯಲಿಲ್ಲ. ಎರಗಿದರೆ ಸಾಕು, ನಯ ತಾನಾಗಿ ಬರುತ್ತದೆ.

ವ॥ ಹೀಗೆ ಪುರದಿಂದ ಹೊರಬೀಳದೆಯೆ ಅವರಿಗೆ ದಿಗ್ವಿಜಯಪ್ರಾಪ್ತಿಯಾಗಿರಲಾಗಿ ಕನಕಶ್ರೀ ಕನ್ನಿಕೆಯು—

ಕಂ॥ ಒಂದು ದಿವಸಂ ಪುರಂಧ್ರೀ
ವೃಂದದ ಕೌತುಕದಿನಱಿದು ಪಾಣಿಗ್ರಹಣಾ
ನಂದಮನಟಲ್ದು ಚಿತ್ತದೊ
ಳೆಂದಳ್ ಪಿತೃಮರಣಕುಲವಿನಾಶವ್ಯಥೆಯಿಂ ॥ ೭೭ ॥

ಆ ದೊರೆಯ ತಂದೆ ಸಾಯೆಯು
ಮೀ ದೊರೆಯ ಕುಲಾಪವಾದವಾಗೆಯುಮೆನಗಿ
ನ್ನೇದೊರೆ ವಿವಾಹಮಯಸದೊ
ಳಾದೀ ಕಱೆ ಕರ್ಚೆ ಪೋಗದೀ ಕೆಯ್ನೀರೊಳ್ ॥ ೭೮ ॥

ತೊಳೆವೊಡದಂ ಜಿನಪತಿ ಮತ
ಸಳಿಲಂ ತೊಳೆಗುಂ ವಿಶೋಧಿ ತೊಳೆಗುಂ ನಿಯಮಂ
ತೊಳೆಗುಂ ದಯೆ ತೊಳೆಗುಮಱಿಂ
ತೊಳೆಗುಮಯಂ ತೊಳೆಗುಮುಚಿತಚರಿತಂ ತೊಳೆಗುಂ ॥ ೭೯ ॥

ವ॥ ಅದಱಿನೆನೀ [1]ನಿಕೃಷ್ಟ[1]ದಾಸೆಯಂ ಕೆಯ್ಕೊಂಡು ನಿರ್ವೇದಮಂ ಪೆಱಗಿಕ್ಕಿ ಸಂಸಾರನಿಸ್ಸಾರಭೋಗಕಾಂಕ್ಷೆಯಿಂ ಮದುವೆಗೆ ಮನಂದಂದಂದಬಲಾಬಾಲಗೋಪಾಲಜನಂ ಮೊದಲಾಗೆನ್ನಂ ಪುಲ್ಲಿಂದಂ ನೊಚ್ಚಿದಳಂ ಕಲ್ಲಿಂದಂ ಬೆಟ್ಟಿದಳುಮಾಗಿ ಬಗೆವರುಂತುಂ ಯೌವನಶ್ರೀಯಂ ನಿರಪವಾದಮನಾರ್ ಕಳೆದಪರವರೆ ಮಹಾತ್ಮರ್ ಅಲ್ಲದೆಯುಂ ವಾಂಛೆಯಿಲ್ಲದ ಜೀವಿತಮುಂ ಮುನ್ನೆಂಬುದಿಲ್ಲದ ವಿಕ್ರಮಮುಂ ಒಗಡಿಸದನುಭವಮುಂ ಪಗೆಯಿಂ ಪೊಗೞಿಸುವ ಧೈರ್ಯಮುಂ ಪುರಾಕೃತ ಸುಕೃತ ಫಲಂಗಳವಂ ನೆನೆದನವರತಮಟ್ಟು ಬಾತ ಕಣ್ಗಳುಂ

---

೭೭. ಒಂದು ದಿವಸ ಊರಿನ ಹಿರಿಯ ಮುತ್ತೈದೆಯರು ತನ್ನ ಮದುವೆಯ ವಿಷಯವಾಗಿ ಮಾತಾಡಿ ಸಂತೋಷಪಡುವುದನ್ನು ಕೇಳಿದಳು. ಅವಳ ಮನಸ್ಸಿಗೆ ವ್ಯಥೆಯಾಯಿತು. ತಂದೆಯ ಸಾವು, ಕುಲದ ನಾಶ ಇವೆರಡನ್ನೂ ನೆನೆದು ಮನಸ್ಸಿನಲ್ಲಿಯೆ ಹೀಗೆಂದುಕೊಂಡಳು :

೭೮. "ಅಂತಹ ಮಹಿಮಾವಂತ ತಂದೆಗೆ ಮರಣವೊದಗಿ, ಇಂತಹ ಘೋರವಾದ ಕುಲಾಪವಾದವನ್ನು ಹೊತ್ತು, ನನಗೆ ಇನ್ನೆಂತಹ ಮದುವೆ ? ದುರ್ಯಶದಿಂದಾದ ಕಳಂಕವು ಈ ಧಾರೆಯ ನೀರಿಂದ ತೊಳೆದುಹೋಗದು.

೭೯. ಅದನ್ನು ತೊಳೆವ ಪರಿ ಯಾವುದು ? ಅದನ್ನು ಜಿನಮತ ತೊಳೆಯುವುದು ; ಪಶ್ಚಾತ್ತಾಪ ತೊಳೆಯುವುದು ; ತಪಸ್ಸು ತೊಳೆಯುವುದು ; ದಯೆ ತೊಳೆಯುವುದು ; ಧರ್ಮ ತೊಳೆಯುವುದು ; ಅದೃಷ್ಟ ತೊಳೆಯುವುದು ; ಸಚ್ಚಾರಿತ್ರ ತೊಳೆಯುವುದು.

ವ॥ ಹೀಗಿರುವುದರಿಂದ ನಾನು ತುಚ್ಛವಾದ ಬಯಕೆಗೀಡಾಗಿ, ವೈರಾಗ್ಯವನ್ನು ಬಿಟ್ಟು ನಿಸ್ಸಾರವಾದ ಸಂಸಾರ ಭೋಗದ ಹಂಬಲದಿಂದ ಮದುವೆಗೆ ಮನಸ್ಸುಮಾಡಿದರೆ, ಹೆಣ್ಣುಗಳು, ಹುಡುಗರು, ದನಕಾಯುವವರು ಕೂಡ ನನ್ನನ್ನು ಹುಲ್ಲುಕಡ್ಡಿಗಿಂತ ಕಡೆಯೆಂದೆಣಿಸುವರು ; ಕಲ್ಲಿಗಿಂತ ಕರ್ಕಶಳೆನ್ನುವರು. ತಮ್ಮ ತಾರುಣ್ಯ ಕಾಲವನ್ನು ನಿಷ್ಕಳಂಕವಾಗಿ ಯಾರು ಕಳೆಯುವರೊ ಅವರೇ ಮಹಾತ್ಮರು. ನಿಸ್ಪೃಹವಾದ ಜೀವನ, ಅನನ್ಯವಾದ ಪರಾಕ್ರಮ, ಜುಗುಪ್ಸೆ ತಾರದ ಅನುಭವ, ಶತ್ರುಗಳಿಂದಲೂ ಹೊಗಳಿಸಿಕೊಳ್ಳುವಂತಹ ಧೈರ್ಯ—ಇವೆಲ್ಲ ದೊರೆಯಬೇಕಾದರೆ ಪೂರ್ವಜನ್ಮಗಳಲ್ಲಿ ಪುಣ್ಯಗಳಿಸಿರಬೇಕು. ಇವುಗಳನ್ನೆಲ್ಲ ನೆನೆನೆನೆದು ಸಂತತವಾಗಿ ಅತ್ತೂ ಅತ್ತೂ ನನ್ನ ಕಣ್ಣು ಬಾತಿವೆ; ಚಿಂತೆಯಿಂದ ನಿದ್ದೆಗೆಟ್ಟು ಮುಖ ದದ್ದರಿಸಿಕೊಂಡಿದೆ ; ಬೆಂಕಿಯಂತೆ ನಿಟ್ಟುಸಿರು ಹಾಯುತ್ತಿದೆ. ಇಂತಹ ಅವಸ್ಥೆಯಲ್ಲಿ ನನಗೆ

---

1. ಕನಿಷ್ಠ (ತ)

ಚಿಂತಾನಿದ್ರೆಯಿಂ ದರ್ದುರಮಾದ ಮೊಗಮುಂ ಬಿಸುಸುಯ್ಕೆ ಬೆಂಕಿಯಿಂ [1]ಕಂದಿದ ಬಾಯ್ಪೆ ಜಿ[1]ಯುಂ ಬೆರಸೆನಗೆ ಪಸದನಮಿನ್ನೇನಪ್ಪುದು ಶೋಕವಿಕಳದಿಂ ಶೂನ್ಯಮಾದ ಮನದಿಂ ಧೈರ್ಯಮುಂ ಪಱಿಪಟ್ಟುದು ತಂದೆಯ ಬೆನ್ನನೆ ಪೋಪಂತವಧಾನಂ ಗೆಂಟುವೋದುದಿನಿವಿರಿದಪ್ಪಯ ಕ್ಷಯದಪವಾದದ ಪೆರ್ಪೊಱೆಯಂ ಆನೊರ್ವಳೆನಗಂ ಪೊತ್ತು ನಿಸ್ತರಿಸಲಾರ್ಪುದೆ—

ಉ॥ ಎಂದುಪಶಾಂತಚಿತ್ತೆ ನವಶೋಕರಸಾಕುಳೆ ದೀಕ್ಷೆಗೆಟ್ಟಿಯುಂ
ತಂದು ಖಗೇಂದ್ರ ಕನ್ನಿಕೆ ನೃಪೇಶ್ವರನಿರ್ದ ಸಭಾಗೃಹಂಬರಂ
ಬಂದಿರದಾ ಲತಾಂಗಿ ಹಳಿಗಂ ಹರಿಗಂ ನುಡಿಗುಂ ಕವಲ್ತು ತ
[2][ಳ್ತ]ಿಂದು ಪೊದಟ್ದು ನೀಳ್ದು ಸಭೆಯಂ ಬೆಳಗುತ್ತಿರೆ ದಂತಕಾಂತಿಗಳ್ ॥ ೮೦ ॥

ಕಂ॥ ಅಸಮಾನಮೆನ್ನೊಳಿರ್ವರ
ಪಸಾಯಮಿರ್ವರ ಮಹತ್ವಮಿರ್ವರ ಕರುಣಾ
ಪ್ರಸರಣಮಿರ್ವರ ರಾಗದ
ರಸಮಿರ್ವರ ಮೋಹಮಿರ್ವರಾದರವುಂತುಂ ॥ ೮೧ ॥

ಜನಕವಧಜಾತಶೋಕಂ
ಮನದೊಳ್ ಸಂಸೃತಿ ಲತಾ [3]ಪ್ರತಾನದು[3]ಸುರ್ವಂ
ಜನಯಿಪುದಾನಾವಳೊಳಂ
ಗನೆ ಗಡ ಷೋಡಶಸಹಸ್ರಮಂತಃಪುರದೊಳ್ ॥ ೮೨ ॥

ವ॥ ಅದಲ್ಲದೆಯುಂ ಸದಾಚಾರಭೂಷಣರಪ್ಪ ನಿಮಗೆ ನಾಣ್ಚುವುದುಂ ಲೋಕಕ್ಕೆ ನಾಣ್ಚುವೆನಲ್ಲೆನಾನುಮೀ ಜನಾಪವಾದಮುಮಂ ಪೆಱಗಿಕ್ಕಿ ಕುಲೋದ್ಭೂತರುಂ ತತ್ವವೇದಿಗಳುಂ ಮನೆವಾಟನಾಸೆವಡಲಾಗದದಲ್ಲದೆಯುಂ ದಮಿತಾರಿಗೆ ಉಟ್ಟಿಸುಟ್ಟುಂಬೆಯ ನೆಟಿಲೊಳ್ಬಂದು ಮುಗುಳಿನೊಳ್ ಪೂಟ್ದಿಂ ಭ್ರೂಲತಾಪ್ರತಾನದೊಳ್ ಕಟ್ಟುಂ ಕಿಟ್ಟಿಟ್ಟುಮಿರ್ಪುದುಚಿತಮಲ್ತು ಅಸ್ಮದ್ಗುರುಗಳುಂ ತ್ರೈಲೋಕ್ಯಗುರುಗಳುಮಪ್ಪ

ಆಭರಣಾದಿ ಅಲಂಕಾರಗಳಿಂದಾಗುವುದೇನು ? ಶೋಕದಿಂದ ಮತಿಗೆಟ್ಟ ನನ್ನ ಮನಸ್ಸು ಧೈರ್ಯವನ್ನು ಕಳೆದುಕೊಂಡಿದೆ. ತಂದೆಯ ಬೆನ್ನ ಹಿಂದೆಯೆ ನಾನೂ ಹೋಗಬೇಕಾಗಿತ್ತು. ಆ ಅವಕಾಶ ಕಳೆದುಹೋಯಿತು. ಇಷ್ಟೊಂದು ಘೋರವಾದ, ಕಳೆಯಲಾಗದ ಅಪವಾದದ ಹೊರೆಯನ್ನು ನಾನೊಬ್ಬಳೆ ಹೊತ್ತು ನಿಸ್ತರಿಸಬಲ್ಲೆನೆ ?"

೮೦. ಹೀಗೆ ಶೋಕಾಕ್ರಾಂತೆಯಾದರೂ ಮನಸ್ಸನ್ನು ಸಂತೈಸಿಕೊಂಡು, ದೀಕ್ಷಾಗ್ರಹಣಕ್ಕೆ ಮನಸ್ಸುಮಾಡಿದ ಆ ಖೇಚರಕನ್ಯೆಯು ಅರಸನ ಆಸ್ಥಾನಕ್ಕೆ ಬಂದಳು. ತನ್ನ ದಂತಪ್ರಭೆ ಸಭೆಯನ್ನೆಲ್ಲ ಬೆಳಗುತ್ತಿರಲಾಗಿ, ಅಪರಾಜಿತನಿಗೂ ಅನಂತವೀರ್ಯನಿಗೂ ಹೀಗೆಂದು ನುಡಿದಳು :

೮೧. "ನೀವಿಬ್ಬರೂ ನನಗೆ ದಯಪಾಲಿಸಿದ ಅನುಗ್ರಹ, ಅಮಾನ್ಯಸಾಮಾದುದು ; ನಿಮ್ಮ ಮಹಿಮೆ ಅಪ್ರತಿಮ : ನಿಮ್ಮಿಬ್ಬರ ದಯೆ, ಅಕ್ಕರೆ, ಮೋಹ, ಆದರ—ಇವೆಲ್ಲ ಅಸದೃಶವೇ.

೮೨. ತಂದೆಯ ಸಾವಿನಿಂದಾದ ಶೋಕವು ಮನಸ್ಸಿನಲ್ಲಿನ್ನೂ ಕುದಿಯುತ್ತಿರುವಾಗ ಸಂಸಾರದ ಬಳ್ಳಿಯನ್ನು ಹಬ್ಬಿಸುವುದಕ್ಕೆ ನಾನೆಂತು ಹೊರಡಲಿ ? ನಿಮ್ಮ ಅಂತಃಪುರದಲ್ಲಿ ಇರುವ ಹದಿನಾರು ಸಾವಿರ ಕುಲಸ್ತ್ರೀಯರಲ್ಲಿ (ಕಲಂಕಿನಿಯಾದ) ನಾನು ಯಾವಳೆಂದು ಸೇರಲಿ ?

ವ॥ ಅದಲ್ಲದೆ, ಸಚ್ಚಾರಿತ್ರರಾದ ನಿಮಗೆ ನಾನು ನಾಚುವೆನಲ್ಲದೆ, ಲೋಕಕ್ಕೆ ನಾಚೆನು. (ಲೋಕಾಪವಾದದಿಂದ ನನಗೆ ಉಂಟಾದ ನಾಚಿಕೆ ದೊಡ್ಡದಲ್ಲ. ನನ್ನಂತಹ ಕಲಂಕಿನಿಯಿಂದ ನಿಮಗೆ ಅಪವಾದ ಬಂದೀತೆಂಬ ಯೋಚನೆಯಿಂದ ನಾನು ತಲೆ ತಗ್ಗಿಸುತ್ತೇನೆ.) ಕುಲೀನರೂ, ತತ್ವಜ್ಞರೂ ಆದವರು ಇಂತಹ ಜನಾಪವಾದವನ್ನು ಕಡೆಗಣಿಸಿ, ಬಾಳುವೆಮಾಡುವುದಕ್ಕೆ ಬಯಸಕೂಡದು. ದಮಿತಾರಿಯ ಮಗಳಾಗಿ ಹುಟ್ಟಿ, ಆತನ ನೆರಳಲ್ಲಿ, ಮಾರ್ಗದರ್ಶನದಲ್ಲಿ (ಗೌರವದಿಂದ) ಬೆಳೆದು ಬಂದ ನಾನು, ಈಗ ಕಂಡಕಂಡವರಿಂದ ಉಗುಳಿಸಿಕೊಂಡು, ಹುಬ್ಬುಗಂಟಿಕ್ಕಿ ನೋಡುವವರ

1. × (ಮ) 2. ಬ್ಬ (ಮ) 3. ಪ್ರಸಾರದು (ಮ)

ಕೀರ್ತಿಧರ ಗುರುಗಳ ಸಭಾಮಂಡಳಮಂ ಪೊಱಮಟ್ಟೊಂದಡಿಪೊರ್ಡಂ ತಕ್ಕುದಲ್ತು ಬಂದಬರವುಂ ನಿಮ್ಮಂ ಬಿಡಿಸಲುಮೊಡಂಬಡಿಸಲುಮೆಂದೆ ಬಂದೆನೆನ್ನಂ ಬಿಡುವುದೆಂದುದಾತ್ತಾಳಾಪಪ್ರಯೋಗಂಗಳಿಂ ತಜ್ಞತೆಯನಾ ಮಾನಧರರ ಮುಂದಿಡೆಯುಂ ಮನಮಂ ತಪೋಧನರ ಪಾದಾಂತಿಕದೊಳ್ ನಿಱಿಸಿ ವ್ಯಾಮೋಹದುಸುರ್ವಂ ಪತ್ತುವಿಡೆ ನುಡಿದು—

ಕಂ॥ ಅತಿ ಮೋಹದಿಂದೆ ಬಾರಿಸು
ವ ತಮ್ಮುತಿರ್ವರ ಮೃದೂಕ್ತಿ ಪುಗದೆ ತದೀಯ
ಶ್ರುತಿಯಂ ನಿರ್ವೇದಂ ನಿಲೆ
ಮತಿಯೊಳ್ ನಿಲ್ಕುಮೆ ಸರಾಗಮಾರ್ಗುಪಯೋಗಂ ॥ ೮೩ ॥

ಆ ಸಾಹಸಭೂಷಣೆ ನಾ
ಲ್ಸಾಸಿರ್ವರ್ ಕುಡದ ಕೂಸುಗಳ್ವೆರಸರ್ಹ
ಚ್ಛಾಸನ²[ದ]²ಱವಿಡಿದಘಮಂ
ತ್ರಾಸಿಸಲೆಂದಮಳದೀಕ್ಷೆಯಂ ಕೆಯ್ಗೊಂಡಳ್ ॥ ೮೪ ॥

ವ॥ ಅಂತಾ ಕನ್ನಿಕೆ ಸ್ವಯಂಪ್ರಭಜಿನೇಂದ್ರ ಪಾದಪದ್ಮೋಪಾಂತದೊಳ್ ಕನಕಶ್ರೀ ನಾಮಾರ್ಯಿಕಾಭಿಧಾನೆ ತಪಶ್ಚರಣನಿರತೆಯಾಗಿ ಸುರೇಂದ್ರಲೋಕಾತಿಥಿಯಾದಳ್ ಇತ್ತ ಪುರುಷರತ್ನಕ್ಕೆ ಸ್ತ್ರೀರತ್ನಮಲ್ಲದೆ ಸಾಮಾನ್ಯಮಣಿಯುಂ ಪಸುರ್ವಣಿಯುಂ ದೊರೆಯಲ್ಲವೆಂಬಂತೆ ಜೈನಶಾಸನಚೂಡಾಮಣಿಗೆ ವಿಜಯೆಯೆಂಬೊಳಗ್ರಮಹಿಷಿಯಾಗಿರೆ—

ಉ॥ ರವಿಗಂ ಸಂಜೆಗಮೊಪ್ಪಿ ತೋಱುವುದಯಾದ್ರೀಂದ್ರಾಗ್ರದೊಳ್ ದೀಪ್ತಿ ಪು
ಟ್ಟುವವೋಲ್ ಕಾರ್ಗಮುದಗ್ರ ಮೇಘತತಿಗಂ ಕಾರ್ಗಾಲದೊಳ್ ಮಿಂಚು ಪು
ಟ್ಟುವವೋಲಿಂದುಗಮೊಂದಿನಿಂದ ಕಳೆಗಂ ಸಂದೂರ್ಜದೊಳ್ ಕಾಂತಿ ಪು
ಟ್ಟುವವೋಲ್ ನಂದನೆ ಸೀರಿಗಂ ವಿಜಯೆಗಂ ತದ್ವಂಶದೊಳ್ ಪುಟ್ಟಿದಳ್ ॥ ೮೫ ॥

ತಿರಸ್ಕಾರಕ್ಕೆ ಗುರಿಯಾಗಿ, ಕ್ಷುದ್ರಳೆನಿಸಿ ಬದುಕುವುದು ಯೋಗ್ಯವಲ್ಲ. ನಮ್ಮ ವಂಶದ ಹಿರಿಯರೂ, ತ್ರಿಲೋಕ ಗುರುಗಳೂ ಆದ ಕೀರ್ತಿಧರಸ್ವಾಮಿಗಳನ್ನು ಕಂಡಮೇಲೆ, ಅವರ ಸಭಾಮಂಡಲದಿಂದ ಈಚೆಗೆ ಒಂದು ಹೆಜ್ಜೆ ಕೂಡ ಇಡಬಾರದಾಗಿತ್ತು. ನಿಮ್ಮನ್ನು ಒಡಂಬಡಿಸಿ ಬಿಡಿಸಿಕೊಳ್ಳಬೇಕೆಂಬ ಒಂದೇ ಒಂದು ಉದ್ದೇಶದಿಂದ ನಾನು ನಿಮ್ಮೊಡನೆ ಬಂದೆನು. ಈಗ ನನ್ನನ್ನು ಬಿಟ್ಟುಕೊಡಿ". ಈ ಮೇರೆಗೆ ಉದಾರವಾದ ಮಾತುಗಳಿಂದ ತನ್ನ ತಿಳಿವಳಿಕೆಯನ್ನು ಆ ಮಾನವಂತರ ಮುಂದಿಟ್ಟು, ತಪಸ್ವಿಗಳ ಪಾದಗಳಲ್ಲಿ ತನ್ನ ಮನವನ್ನಿರಿಸಿ, ವ್ಯಾಮೋಹವುಳಿಯದಂತೆ ನುಡಿದಳು.

೮೩. ಆಗ ಆ ಸೋದರರಿಬ್ಬರೂ ಮೋಹಾತಿಶಯದಿಂದ ಪರಿಪರಿಯಾಗಿ ಅವಳ ಮನಸ್ಸನ್ನು ವೈರಾಗ್ಯದಿಂದ ತಿರುಗಿಸುವುದಕ್ಕೆ ಪ್ರಯತ್ನಿಸಿದರು. ಆದರೆ ಅವರ ಮೃದುವಾದ ಮಾತುಗಳಾವವೂ ಆಕೆಯ ಕಿವಿಗೆ ಸೇರಲಿಲ್ಲ. ವೈರಾಗ್ಯ ಬುದ್ಧಿ ಸ್ಥಿರವಾದಾಗ ರಾಗದ ಮಾತಿಗೆ ಏನು ಬೆಲೆ?

೮೪. ಧೈರ್ಯಶಾಲಿನಿಯಾದ ಆ ವಧು ಅರ್ಹಂತಧರ್ಮದ ಆಸರೆಯಲ್ಲಿ ಪಾಪವನ್ನು ನಾಶಮಾಡಲೆಂದು ನಾಲ್ಕು ಸಾವಿರ ಕನ್ಯೆಯರೊಡನೆ (ಸಂನ್ಯಾಸ) ದೀಕ್ಷೆಯನ್ನು ಕೈಕೊಂಡಳು.

ವ॥ ಹೀಗೆ ಆಕೆ ಸ್ವಯಂಪ್ರಭಜಿನೇಶ್ವರನ ಪಾದಕಮಲಸಾಕ್ಷಿಯಾಗಿ, ಕನಕಶ್ರೀ ಎಂಬ ಆರ್ಯಿಕೆಯಾಗಿ, ತಪಸ್ಸುಮಾಡಿ ಸುರಲೋಕಕ್ಕೆ ಹೋದಳು. ಇತ್ತ, ಪುರುಷರಲ್ಲಿ ರತ್ನಪ್ರಾಯನಾದವನಿಗೆ ಸ್ತ್ರೀರತ್ನವೇ ಭೂಷಣವಲ್ಲದೆ ಸಾಮಾನ್ಯವಾದ ರತ್ನಗಳು ಭೂಷಣವಲ್ಲವೆಂಬಂತೆ, ಅಪರಾಜಿತನಿಗೆ ವಿಜಯೆಯೆಂಬ ಕನ್ಯಾಮಣಿ ಪಟ್ಟಮಹಿಷಿಯಾದಳು.

೮೫. ಸೂರ್ಯನಿಗೂ ಸಂಧ್ಯಾಕಾಲಕ್ಕೂ ಉದಯಪರ್ವತ ಶಿಖರದಲ್ಲಿ ಉಜ್ವಲವಾದ ಪ್ರಭೆ ಹುಟ್ಟುವಂತೆ, ಮಳೆಗೂ ಕಾರ್ಮೋಡಕ್ಕೂ ಮಳೆಗಾಲದಲ್ಲಿ ಮಿಂಚು ಹುಟ್ಟುವಂತೆ, ಚಂದ್ರನಿಗೂ ಆತನ ಕಲೆಗೂ ಶರತ್ಕಾಲದಲ್ಲಿ ಕಾಂತಿ ಹುಟ್ಟುವಂತೆ ಅಪರಾಜಿತನಿಗೂ ವಿಜಯೆಗೂ ಒಬ್ಬ ಮಗಳು ಹುಟ್ಟಿದಳು.

1. ದೊಡವ (ಅ)　2. ದೆ (ಮ)

ವ॥ ಅಂತು ಪುಟ್ಟಿ ನಾಮಕರಣದೊಳೇನಾನುಮೊಂದು ಪೆಸರೊಳ್ ಬಳೆಯೆ—

ಕಂ॥ ವಿಶದಮತಿಗಂ ನಿಕಾಮೋ
ಪಶಮಕ್ಕಂ ಮೆಚ್ಚಿ ತಾನುಮನುಜನುಮಿರ್ದಾ
ಕುಶದಳ ಸವರ್ಣವರ್ಣೆಗೆ
ಕುಶಾಗ್ರಮತಿ ಸುಮತಿಯೆಂದು ಹರಿ ಪೆಸರಿಟ್ಟಂ ॥ ೮೬ ॥

ಬಾಲತ್ವದೊಳಂ ಗುಣಮಣಿ
ಮಾಲಿನಿ ಶಿಶು ಸುಮತಿ ಸುರಕರಾರ್ಚಿತ ಸುಮನೋ
ಮಾಲಾಭ್ಯರ್ಚಿತ ಪದನಖ
ಮಾಲಿಗೆ ಜಿನಪತಿಗೆ ವಿನಯವಿನಮಿತೆಯಕ್ಕುಂ ॥ ೮೭ ॥

ವ॥ ಅಂತು ನಿಸರ್ಗದೊಳ್ ದೇವಗುರುಭಕ್ತೆಯುಂ ಮಾತಾಪಿತೃಶಿಕ್ಷಾನುರಕ್ತೆಯುಮಾಗಿ ಸ್ವಭಾವದೊಳ್ ಸಂಸಾರಶರೀರಭೋಗ ನಿಸ್ಸಾರತೆಯನಱಿ[1]ದು[1] ಕಳಾಕಳಾಪದೊಳ್ ನೆರೆದು ಜವ್ವನಂ ನೆಱೆಯೆ ನೆಱೆಯೆ—

ಕಂ॥ ನವವಯಸಮಯಸಮಂ ನೋ
ಡುವಂಗೆ ತರೆ ರೂಪು ನೆರೆಯೆ ಲಾವಣ್ಯ ರಸಂ
ಭುವನ ತ್ರಿತಯಂ ತೃಣದಿಂ
ದವಸ್ತುವೆನಿಸಿದುದು ಸುಮತಿ ಮೆಯ್ನೆ[2][ಱೆ][2]ಯಲೊಡಂ ॥ ೮೮ ॥

ವ॥ ಅಂತು ವರಯೋಗ್ಯೆಯಾದ ಪತಿಂವರೆಯನಱಿದು ಅಪರಾಜಿತನೀಕೆ [3][ನ್ಯಗ್ರೋಧ][3] ಪರಿಮಂಡಲೆಯುಮವಧೀರಿತ ಮಹೀಪಾಲ ಕುಮಾರ ಮಂಡಲೆಯುಮಾದಳ[4]ನ್ನೀ[4]ಕೆಯನಿನ್ನಾರ್ಗೆ ಕುಡುವೆಮೆಂದು ತದನುರೂಪ ವರಾನ್ವೇಷಣವ್ಯಾಪಾರ ಪಾರಾಯಣನಾಗಿ ಸಮಸ್ತ ಖೇಚರ ಭೂಮಿಗೋಚರ ಪರ್ಯವಸಾನಮಾಗಿ ರಾಜಕುಮಾರರೊಳಮಾಕೆಗನುರೂಪನಪ್ಪ ವರನನಱಿ ಪಡೆಯದೆ ಮಂತ್ರಿಮಂಡಳಸಮಾಲೋಚಿತ ಕಾರ್ಯ ಪರ್ಯವಸಾನನಾಗಿ—

ವ॥ ನಾಮಕರಣ ಪ್ರಸಂಗದಲ್ಲಿ ಅವಳಿಗೆ ಏನೊ ಒಂದು ಹೆಸರನ್ನು ಪಡೆದು ಆಕೆ ಬೆಳೆದಳು.

೮೬. ಆದರೆ ಆಕೆಯ ಉತ್ಕೃಷ್ಟವಾದ ಬುದ್ಧಿಗೂ ಅತಿಶಯವಾದ ಶಾಂತವೃತ್ತಿಗೂ ಮೆಚ್ಚಿ ತನ್ನ ಅಣ್ಣನ ಅನುಮತಿಯೊಡನೆ ಅನಂತವೀರ್ಯನು ಎಳಗರುಕೆ ಬಣ್ಣದ ಆ ಚೆಲುವೆಗೆ "ಸುಮತಿ"ಯೆಂದು ಹೆಸರಿಟ್ಟನು.

೮೭. ಗುಣರತ್ನಗಳ ಮಾಲೆಯಂತಿದ್ದ ಸುಮತಿಕುಮಾರಿಯು ಬಾಲ್ಯಕಾಲದಲ್ಲಿಯೆ ದೇವಪೂಜಿತನಾದ ಜಿನಪತಿಗೆ ಭಕ್ತಳಾದಳು.

ವ॥ ಹೀಗೆ ಸ್ವಾಭಾವಿಕವಾಗಿಯೆ ದೇವಗುರುಗಳಲ್ಲಿ ಭಕ್ತಿಯನ್ನು ತಾಳಿ, ತಂದೆತಾಯಿಗಳ ಶಿಕ್ಷೆಯಲ್ಲಿ ಅನುರಕ್ತಳಾಗಿ ಬೆಳೆಯುವ ಸುಮತಿಗೆ ಸಂಸಾರದಲ್ಲಿಯೂ ಭೋಗದಲ್ಲಿಯೂ ಸ್ವಾಭಾವಿಕವಾದ ಅನಾಸಕ್ತಿಯಿದ್ದರೂ ಸಮಸ್ತ ಕಲೆಗಳನ್ನು ಕಲಿತು ಯುವಾವಸ್ಥೆಯನ್ನು ಪಡೆದಳು.

೮೮. ನವತಾರುಣ್ಯ ನೋಡುವವರ ಕಣ್ಣನ್ನು ಸೆಳೆದು ಬಳಲಿಸಿತು. ಆಕೆ ಮೈನೆರೆದಾಗ ಅವಳಿಗೆ ಒದಗಿದ ರೂಪಲಾವಣ್ಯದ ಮುಂದೆ ಮೂರು ಲೋಕಗಳು ಹುಲ್ಲುಕಡ್ಡಿಗೆ ಸಮಾನವೆನಿಸಿದುವು.

ವ॥ ಹೀಗೆ ವಿವಾಹಯೋಗ್ಯಳಾದ ಮಗಳನ್ನು ನೋಡಿ ಅಪರಾಜಿತನು "ಈಕೆ 'ನ್ಯಗ್ರೋಧ ಪರಿಮಂಡಲೆ'ಯೂ (ಕಠಿನ ಕುಚಗಳೂ, ವಿಶಾಲ ನಿತಂಬಗಳೂ, ತೆಳುವಾದ ನಡುವೂ, ಕರುಕೆಯ ದೇಟಿನಂತೆ ವರ್ಣವೂ ಉಳ್ಳ ಸುಂದರಿ) ಸಮಸ್ತ ರಾಜಕುಮಾರ ಸಮೂಹವನ್ನು (ತನ್ನ ರೂಪಗುಣಗಳಿಂದ) ಧಿಕ್ಕರಿಸುವಂತಹಳೂ ಆದಳು. ಇನ್ನು ಈಕೆಯನ್ನು ಯಾರಿಗೆ ಕೊಟ್ಟು ಮದುವೆ ಮಾಡಲಿ?" ಎಂದು ಯೋಚಿಸಿ, ಅವಳಿಗೆ ಯೋಗ್ಯನಾದ ವರನನ್ನು ಹುಡುಕುವುದಕ್ಕೆ ತೊಡಗಿದನು. ಖೇಚರರಲ್ಲಿಯೂ ಭೂಚರರಲ್ಲಿಯೂ ತನ್ನ ಅರಿವಿಗೆ ಬಂದ ಎಲ್ಲ ರಾಜಕುಮಾರರನ್ನೂ ಪರಿಗಣಿಸಿ, ಅವಳಿಗೆ ಅನುರೂಪನಾದ ವರನನ್ನು ಕಾಣದೆ, ಮಂತ್ರಿಮಂಡಳದೊಡನೆ ಸಮಾಲೋಚನೆ ಮಾಡಿ—

---

1. ತುಂ (ಮ) 2. ರೆ (ಮ) 3. ಕನ್ಯಾಗ್ರಥ (ಮ) 4. × (ಮ)

ಕಂ॥ ವರರೊಳ್ ಮನೋಭವಂಗನು
ವರಮಂ ಪೊಸಯಿಸುವವೋಲ್ ಪತಿಂವರೆಗೆ ಸೊಯಂ
ಬರಮಂ ಪೊಸಯಿಸಿದಂ ನಿಖಿ
ಲರಾಜಕಂ ನೆರೆಯೆ ಸಾನುಜಂ ಬಲದೇವಂ ॥ ೮೯ ॥

ಅಂತಲ್ಲಿಗೆ ವಂದು ನೃಪರ್
ತಂತಮ್ಮಂ ಮೆಱೆದುಪೊಟಲ ಪೊಱವೊಟಲೊಳ್ ಬೀ
ಡಂ ತೀವಿ ಬಿಡಿಸೆ ಪುರವರ
ಕಾಂತೆಗದೊಂದಾದುದಭಿನವಂ ಕಟಿಸೂತ್ರಂ ॥ ೯೦ ॥

ವ॥ ಅದರ್ಕೆ ಸಂತಸಂಬಟ್ಟಕಲಂಕಾಚಾರಸಾರನುಮನಂತವೀರ್ಯನುಂ ಶುಭಮುಹೂರ್ತದೊಳ್ ಕನ್ನೆಯಂ ನೆರೆಯೆ ಕೈಗೆಯ್ಸ ಲ್ವೇೞ್ದು ಮನುಷ್ಯವಾಹ್ಯಮಪ್ಪ ಚತುರಂತಯಾನವನೇಱಿಸಿ ಸ್ವಯಂವರಸಭಾ ಭೂಮಿತಳಕ್ಕೆ ಕನ್ನೆಯಂ ಪೋಗಲ್ವೇೞ್ದಾಕೆ ಬರ್ಪುದು ಮೆರಡೋಳಿಯೊಳಂ ಮಂಚಸ್ಥರಾಗಿರ್ದ ರಾಜಕುಮಾರರ್ಕಳೊಳ್—

ಕಂ॥ ಶೃಂಗಾರಚೇಷ್ಟೆಗಳ್ ವಿವಿ
ಧಂಗಳ್ ನೆಗೞ್ದುವು ಮಹಾನಿಲಾಹತಿ ವಿವಿಧ
ತ್ವಂಗತ್ತರಂಗ ಲಹರೀ
ಭಂಗುರ ಗಂಭೀರಜಳಧಿವೇಳಾಕೃತಿಯಿಂ ॥ ೯೧ ॥

ವ॥ ಅಂತು ಚಂದ್ರೋದ್ಗತಿಯಿನುಚ್ಚಳಿಸಿದ ಸಮುದ್ರವೇಳೆಯಂತೆ ನೃಪವಾಳಿ ನಿಜಲೀಳೆಯಂಮೆಱೆದು [1]ಪಱಿಪಱಿ[1]ಯಾಗೆ ಮಂಚ ಮಧ್ಯ ವೀಥಿಯಂ ಕನ್ನೆ ಪುಗುವುದುಂ—

---

೮೯. ತನ್ನ ಕನ್ಯೆಗೆ ಸ್ವಯಂವರವನ್ನು ಏರ್ಪಡಿಸಿದನು. (ರೂಪಲಾವಣ್ಯಗಳಿಂದ) ಮನ್ಮಥನೊಡನೆ ಸೆಣಸುವುದಕ್ಕೋ ಬಂದರೊ ಏನೊ ಎಂಬಂತೆ ಸುಂದರಾಂಗರಾದ ಅನೇಕ ರಾಜಕುಮಾರರು ಅಲ್ಲಿಗೆ ಬಂದರು.

೯೦. ಹೀಗೆ ಬಂದ ರಾಜಕುಮಾರರು ತಂತಮ್ಮ ವೈಭವವಿಲಾಸದಿಂದ ಪಟ್ಟಣದ ಹೊರವಲಯದ ತುಂಬ ಬೀಡು ಬಿಟ್ಟಿರಲಾಗಿ, ರಾಜಧಾನಿಯೆಂಬ ಕಾಂತಿಗೆ ಹೊಸದೊಂದು ಒಡ್ಯಾಣವನ್ನು ತೊಡಿಸಿದಂತೆ ಆ ಬೀಡುಗಳ ರಚನೆ ಶೋಭಿಸಿತು.

ವ॥ ಅದಕ್ಕೆ ಸಂತೋಷಪಟ್ಟು ನಿಷ್ಕಳಂಕಚರಿತ್ರನಾದ ಅನಂತವೀರ್ಯನು ಶುಭಮುಹೂರ್ತದಲ್ಲಿ ಕನ್ಯೆಯನ್ನು ಚೆನ್ನಾಗಿ ಅಲಂಕರಿಸಲು (ನಿಯೋಗಿಗಳಿಗೆ) ಅಪ್ಪಣೆಕೊಟ್ಟನು. ಅನಂತರ ಮೇಣೆಯಲ್ಲಿ ಕುಳಿತುಕೊಂಡು ಸ್ವಯಂವರ ಮಂಟಪಕ್ಕೆ ಆ ಸ್ವಯಂವರಕನ್ಯೆ ಬಂದಳು. ಆಗ ಎರಡು ಸಾಲಾಗಿ ಪೀಠಗಳಲ್ಲಿ ಕುಳಿತ ರಾಜಕುಮಾರರಲ್ಲಿ—

೯೧. ಶಾಂತಗಂಭೀರವಾಗಿದ್ದ ಸಮುದ್ರವು ಬಿರುಗಾಳಿಯ ಹೊಡೆತಕ್ಕೆ ಸಿಕ್ಕೊಡನೆ, ಉದ್ಬುದ್ಧವಾಗಿ ಎದ್ದೆದ್ದು ಮುರಿದಾಡುವ ತರಂಗಗಳಿಂದ ಕ್ಷೋಭೆಗೊಳ್ಳುವಂತೆ (ಸ್ವಭಾವತಃ ಗಂಭೀರರಾಗಿದ್ದ ಆ ರಾಜಕುಮಾರರಲ್ಲಿ) ಬಗೆಬಗೆಯ ಶೃಂಗಾರಚೇಷ್ಟೆಗಳುಂಟಾಗಿ ಅವರ ಮನಸ್ಸಿನ ಉದ್ವೇಗವನ್ನು ಪ್ರಕಟಿಸಿದುವು.

ವ॥ ಚಂದ್ರೋದಯದಿಂದ ಉಕ್ಕೇರುವ ಸಮುದ್ರದ ತೀರದಂತೆ ರಾಜಪುತ್ರರ ಸಾಲು ತಮ್ಮ ವಿಲಾಸವನ್ನು ಮೆರೆದು ಪರಿಪರಿಯಾಗಿ ತೋರಲಾಗಿ, ಪೀಠಗಳ ಎರಡೂ ಸಾಲುಗಳ ಮಧ್ಯಮಾರ್ಗವನ್ನು ಸ್ವಯಂವರವಧು ಪ್ರವೇಶಿಸಿದಳು.

---

1. ಪರಿಪರಿ (ಮ)

ಕಂ॥ ಪ್ರಮದಾಮಿಷಕ್ಕೆ ಮುಸುಱುವ
ತಿಮಿಕುಳದವೊಲವನಿಪಾಲ ನಯನಚಯಂ ಸಂ
ಭ್ರಮದಿನೊಡ(ನ)ನಿತುಮಾ ನೃಪ
ಕುಮಾರಿಯಂ ಸುತ್ತಿಮುತ್ತಿ ಕೊಳ್ವವಸರದೊಳ್ ॥ ೯೨ ॥

ವ॥ ಒರ್ವಳ್ ವಿಮಾನ ಪರೀತ ಗಗನಸ್ಥಳದೊಳ್—

ಉ॥ ದೇವತೆ ನಿಂದಿದಂ ನುಡಿದಳಕ್ಕ ನೆಗೞ್ತೆಯ ಪುಷ್ಕರಾರ್ಧದೊಳ್
ಭಾವಿಸು ಪೂರ್ವಮಂದರದ ಭಾರತದೊಳ್ ಪುರಮುಂಟು ನಂದನಂ
ಭೂವನಿತೇಶನಾಳ್ವೊನದನಲ್ತೆ ಮಹೇಂದ್ರನೃಪಂ ನೃಪಂಗೆ ಮಾ
ದೇವಿ ದಲಂತನಂತಮತಿ ತನ್ಮಿಥುನಕ್ಕೆ ಮನಕ್ಕೆ ಸಂತಸಂ ॥ ೯೩ ॥

ಕಂ॥ ಪುಟ್ಟಿ ದಲಾನುಂ ನೀನುಂ
ಪುಟ್ಟಿದೆವಂದೆನ್ನ ಪೆಸರನಂತಶ್ರೀ ಶ್ರೀ
ಪುಟ್ಟೆ ಧನಶ್ರೀ ನಾಮವ
ನಿಟ್ಟರ್ ನಿನಗಲ್ಲಿ ಪಿರಿಯನಾಂ ನೀಂ ಕಿಱಿಯೈ ॥ ೯೪ ॥

ವ॥ ಆಗಿ ಸುಖದಿರ್ಪಿನಮೊಂದುದಿವಸಂ ವಸಂತಸಮಯದೊಳ್ ನಾಮಿರ್ವರುಂ ವನವಿಹಾರ ನಿಮಿತ್ತಂ ಪೋಗಿ—

ಕಂ॥ ಸದ್ಧರ್ಮವತ್ಸಳರ್ ಮತಿ
ಶುದ್ಧತೆ ನಿಲೆ ನಂದಗುಪ್ತರಿಕ್ಕೂಡೆ ಸುಖ ಸಂ
ವೃದ್ಧಿಗುಪವಾಸಮಂ ಕೊಂ
ಡಿದ್ದೆಂಬುರುಹಾಸ್ಯೆ ಬೇಡಿ ಸಿದ್ಧಾಚಳದೊಳ್ ॥ ೯೫ ॥

---

೯೨. (ಗಾಳದ ತುದಿಗಂಟಿರುವ) ಎರೆಯನ್ನು ಆವರಿಸಿ ಮುಕ್ಕುರಿಕ್ಕುವ ಮೀನುಗಳಂತೆ ಆ ರಾಜಸಮೂಹದ ಕಣ್ಣುಗಳೆಲ್ಲವೂ ರಾಜಕುಮಾರಿಯನ್ನು ಸುತ್ತಿಮುತ್ತಿಕೊಂಡುವು.

ವ॥ ಆಕಾಶದಲ್ಲಿ ವಿಮಾನಾರೂಢೆಯಾದ ಒಬ್ಬಳು—

೯೩. ದೇವಾಂಗನೆ ಹೀಗೆ ನುಡಿದಳು: "ಅಕ್ಕ, ಕೇಳು. ಪ್ರಸಿದ್ಧವಾದ ಪುಷ್ಕರಾರ್ಧ ದ್ವೀಪದ ಪೂರ್ವ ಭಾರತ ಕ್ಷೇತ್ರದಲ್ಲಿ ನಂದನವೆಂಬ ನಗರವುಂಟು. (ನಿನಗೆ ನೆನಪುಂಟೆ?) ಅದನ್ನು ಆಳುತ್ತಿದ್ದವನು ಮಹೇಂದ್ರನೆಂಬ ರಾಜನಲ್ಲವೆ? ಆತನ ಮಹಾರಾಣಿ ಅನಂತಮತಿ. ಆ ದಂಪತಿಗಳಿಗೆ ಸಂತೋಷವಾಗುವಂತೆ

೯೪. ನಾನೂ ನೀನೂ ಮಕ್ಕಳಾಗಿ ಹುಟ್ಟಿದೆವು. ಆಗ ನನಗೆ ಅನಂತಶ್ರೀಯೆಂದೂ ನಿನಗೆ ಧನಶ್ರೀಯೆಂದೂ ಹೆಸರಿಟ್ಟರು. ನಾನು ಅಕ್ಕ, ನೀನು ತಂಗಿ.

ವ॥ ಹೀಗೆ ಸುಖದಿಂದಿರುತ್ತ ಒಂದು ದಿವಸ ವಸಂತ ಕಾಲದಲ್ಲಿ ನಾವಿಬ್ಬರೂ ವನಕ್ರೀಡೆಗೆಂದು ಹೋಗಿ—

೯೫. ಸಿದ್ಧಾಚಲದಲ್ಲಿ ಸದ್ಧರ್ಮಪ್ರಿಯರಾದ ನಂದಗುಪ್ತರೆಂಬ ಮುನಿಗಳ ಬಳಿ ಸಾರಿ, ಚಿತ್ತಶುದ್ಧಿಯಿಂದ ಬೇಡಿ ಕೊಂಡು ಉಪವಾಸವ್ರತವನ್ನು ಸ್ವೀಕರಿಸಿದೆವು.

ವ॥ ಪ್ರೋಷಧವ್ರತಪವಿತ್ರಗಾತ್ರೆಯರೆಮಾಗಿ ಮತ್ತಮಲ್ಲಿಯೆ ಕಿಕ್ಕಿಱಿಗಿಱಿದು ಬೆಳೆದಡರೆ ಕೊಳೆ ಪೂತ ಚೂತವನಮೆ ಬಾಱ್ಸೇರಿಯಾಗೆ ಪೊದರ್ತುಗುಳ್ದು ಕವಲ್ತೆಳದಳಿಸುವ ಲಸದಶೋಕೋದ್ಯಾನಮಧ್ಯದೊಳ್ ನಾಲ್ಕುಂ ರಕ್ತಾಶೋಕಂಗಳ[1]ನಡುವಣ—

ಕಂ॥ ಲಲಿತ ಲತಾಮೃದುಶಾಖಾ
ವಲಿ ಮಿಳಿಯಾಗೊರ್ವರೊರ್ವರಂ ತೂಗಿ ಲತಾ
ಲಲಿತೇ ನಾ[2]ವಿರ್ವರು[3]ಮು
ಯ್ಯಲಾಡೆ ಮನಮುಯ್ಯಲಾಡೆ ಖೇಚರನೊರ್ವಂ ॥ ೯೭ ॥

ವ॥ ತ್ರಿಪುರವರೇಶ್ವರಂ ವಜ್ರಾಂಗನೆಂಬೊಂ ಪಿಡಿದೆಱೆದುಕೊಂಡು ಗಗನತಳಕೆ ನೆಗೆವುದುಮಾತನ ಪ್ರಾಣೇಶ್ವರಿ ವಜ್ರಮಾಳಿನಿ ಕಂಡು ಪುರುಡುಮಱಲುಮೊಡವಳೆಯೆ ನಿಶಿತಾಸಿಧೇನುವಂ ಕಿಱ್ತು ಬೆನ್ನಟ್ಟಿ ಮುಟ್ಟಿ ಬೆ[ರ]ಗಿಲ್ಲದಾತನ ಬೆನ್ನಂ ಜನ್ನಿವರವಿಕ್ಕಿದಂತಿರೆ ಪೊಯ್ಯೆ ನೊಂದು ನಿತ್ತರಿಸಲಾಱದೆ ಭೋಂಕನೆ ಬಿಟ್ಟು ತಾಂ ಮಹೀತಳಕೆ ಬೀಱುತ್ತುಂ ನಮ್ಮ ನೋವಿಂಗಾಱದೆ ಪರ್ಣಲಘುವೆಂಬ ವಿದ್ಯೆಯಂ ಬೆಸಸುವುದುಮಾ ವಿದ್ಯಾದೇವತೆ—

ಕಂ॥ ಜನನಿ ನಿಜೋತ್ಸಂಗದೊಳೊ
ಯ್ಯನೆ ತಂದಿರಿಸುವವೊಲಿಕ್ಕಿ ತೊಡೆಯೊಳ್ ಬೞಿಯಂ
ಮನಮೊಸೆದಿಕ್ಕಿರ್ದ ಸುಖಾ
ಸನದೊಳ್ ಕುಳ್ಳಿರಿಸುವಂತೆ ಸಿಕತಿಳ ತಳದೊಳ್ ॥ ೯೭ ॥

ವ॥ ಆ ಭೀಮಾಟವೀ ಸರಸ್ತೀರದೊಳಿರಿಸಿ ಪೋಪುದುಂ ನಾಮಲ್ಲಿ ಧೈರ್ಯಮನೆ ಮನದೊಳವಳಂಬಿಸಿ ಚತುರ್ವಿಧಾಹಾರ ಶರೀರ ಪ್ರತ್ಯಾಖ್ಯಾನ ಪೂರ್ವಕಂ ಸನ್ಯಸನದಿಂ ಮುಡಿಪಿ ಸೌಧರ್ಮೇಂದ್ರಂಗಾಂ ನವಮಿಕೆಯೆಂಬ ದೇವಿಯೆನಾದೆಂ ನೀನುಂ ಕುಬೇರಂಗೆ ರತಿಯೆಂಬ ಮನೋವಲ್ಲಭೆಯಾದೈ ಇಂತಿರ್ವರುಮೊರ್ಮೆ ನಂದೀಶ್ವರದ್ವೀಪದೊಳೋರೊರ್ವರಂ ಕಂಡು ಅಱಿದೊಡನೆ ಜಿನೇಂದ್ರಮಹಿಮೆಯಂ ಮಾಡಿ ಮನುಷ್ಯಲೋಕದೊಳ್ ನಮ್ಮೊಳಾರಾದೊಡಮೊಂದೊರ್ವರಂ ಪ್ರತಿಬೋಧಿಸುವಂತು ಪೂಣ್ದು ಪೋದೆವದಂ ನೀನೀಗಳ್—

ವ॥ ಪ್ರೋಷಧೋಪವಾಸದಿಂದ ಪವಿತ್ರಾಂಗರಾಗಿ ನಾವು ಅಲ್ಲಿಯೆ ಕಿಕ್ಕಿರಿದು ಬೆಳೆದ ಮಾವಿನಮರಗಳ ಬೇಲಿಯಾದಂತಿದ್ದ ಸುಂದರವಾದ ಅಶೋಕೋದ್ಯಾನ ಮಧ್ಯದಲ್ಲಿ ಆಟವಾಡುತ್ತಿದ್ದು ನಾಲ್ಕು ರಕ್ತಾಶೋಕ ವೃಕ್ಷಗಳ ನಡುವೆ—

೯೭. ಸುಂದರವೂ ಮೃದುವೂ ಆದ ಬಳ್ಳಿಗೊಂಬನ್ನೆ ಹಗ್ಗವಾಗಿ ಕಟ್ಟಿ ತೂಗಿಕೊಂಡು, ನನ್ನ ಮನಸ್ಸಿನೊಡನೆ ನಾವೂ ಉಯ್ಯಲಾಡುತ್ತಿದ್ದೆವು. ಆಗ

ವ॥ ತ್ರಿಪುರವೆಂಬ ಪುರದಧೀಶನಾದ ವಜ್ರಾಂಗನೆಂಬ ಖೇಚರನೊಬ್ಬನು ನಮ್ಮನ್ನು ಬಲಾತ್ಕಾರವಾಗಿ ಹಿಡಿದೆಳೆದು ಕೊಂಡು ಆಕಾಶಕ್ಕೆ ನೆಗೆದನು. ಆತನ ಪ್ರಾಣವಲ್ಲಭೆಯಾದ ವಜ್ರಮಾಳಿನಿಯು ಅದನ್ನು ಕಂಡು, ಕಾಮಬಿನೊಡನೆ ಮನೋವ್ಯಥೆಯೂ ಬೆಳೆಯಲಾಗಿ (ತನ್ನ ಪ್ರಿಯಕರನು ಪರಸ್ತ್ರೀಯರಿಗೆ ಮೋಹಿಸಿದನೆಂದು ಕೋಪವೂ ಪರಕನ್ಯಾಹರಣಕ್ಕೆ ತೊಡಗಿದನೆಂದು ವ್ಯಥೆಯೂ ಉಂಟಾಗಿ) ಹರಿತವಾದ ಖಡ್ಗವನ್ನು ಹಿರಿದುಕೊಂಡು ಅವನನ್ನು ಬೆನ್ನಟ್ಟಿ ಬಂದಳು. ಅವನನ್ನು ಆಕ್ರಮಿಸಿ ಆತನ ಬೆನ್ನನ್ನು ಖಡ್ಗದಿಂದಿರಿಯಲಾಗಿ, ಆಘಾತವನ್ನು ಸೈರಿಸಲಾರದೆ ಆತನು ನಮ್ಮಿಬ್ಬರನ್ನೂ ಕೈಬಿಟ್ಟು ಭೂಮಿಗೆ ಬೀಳುತ್ತಿರುವಾಗಲೆ ನಮ್ಮನ್ನು ನೋಯಿಸಬಾರದೆಂದು ಪರ್ಣಲಘುವಿದ್ಯೆಗೆ ಅಪ್ಪಣೆಯಿತ್ತನು. ಆ ವಿದ್ಯಾ ದೇವತೆಯು—

೯೭. ತಾಯಿ ಮಕ್ಕಳನ್ನು ತನ್ನ ತೊಡೆಯಮೇಲಿಟ್ಟುಕೊಳ್ಳುವಂತೆ ಮೃದುವಾಗಿ ಎತ್ತಿಕೊಂಡು ಬಂದು, ಸುಖಾಸನದಲ್ಲಿ ಕುಳ್ಳಿರಿಸುವಂತೆ ಮರಳಿನ ಹಾಸುಗೆಯಲ್ಲಿ (ಇರಿಸಿದಳು)

ವ॥ ಆ ಮಹಾರಣ್ಯದ ಒಂದು ಕೊಳದ ದಂಡೆಯಲ್ಲಿ ಹೀಗೆ ಅವಳು ನಮ್ಮನ್ನು ಇಳಿಸಿಹೋಗಲಾಗಿ, ನಮಗೆ ಇದ್ದ ಸಹಾಯವೆಂದರೆ ಮನೋಧೈರ್ಯವೊಂದೆ. ಅದನ್ನೇ ಅವಲಂಬಿಸಿ ನಾವು ನಾಲ್ಕು ಬಗೆಯ ಆಹಾರವನ್ನೂ ದೇಹವನ್ನೂ ಪ್ರತ್ಯಾಖ್ಯಾನಪೂರ್ವಕವಾಗಿ ತ್ಯಜಿಸಿ ಈ ಲೋಕವನ್ನು ಬಿಟ್ಟೆವು. ಅಲ್ಲಿಂದ ಹೊರಟು ನಾನು ಸೌಧರ್ಮೇಂದ್ರನಿಗೆ

---

1. + ದೊಳ್ (ಮ) 2. ವಿರ್ಮೆಮು (ಆ) 3. ■ (ಮ)

ಕಂ॥ ಮಱೆದು[1]ಱಿದೀ ಸಂಸಾರಮ
ನಱಿಯದರಂತೇನುಮಲ್ಲದಲ್ಪಸುಖಕ್ಕಂ
ತೆಱಗಿ ಮರುಳಕ್ಕ ಕನಸಿನ
ತೊಱೆಯೊಳ್ ನೀರ್ಗುಡಿದು ತಣಿವನಱಸಿದರೊಳರೇ ॥ ೯೮ ॥

ವ॥ ಅದಱಿಂದೆನ್ನ ನುಡಿಯೆಂಬುದು ನಿನಗೆ ಪರಿಪಾಕಪಥ್ಯಮಿದನವಜ್ಞೆಗೆಯ್ವುದುಂ ನಿರಾಕರಿಸುವುದುಂ ಕಿಂಪಾಕಪರಿಪಾಕಸೇವಾಸಮಾದೊರೆಯ ಪರಿಗ್ರಹಭಾರದಿಂ ಮುಳುಗಲ್ಕಲ್ಲದೆಂದಿಂಗಂ ನೆಗೆಯಲ್ಕಕ್ಕುಮೆ ಮೇಗಪ್ಪುದಂ ನೀನಱಿವೆಯೆಂದು ಮಾಣ್ಬುದುಮದೆಲ್ಲಮುಮನೆಯ್ದೆ ಕೇಳ್ದು ತದ್ದೇವೀರೂಪಮಂ ಕಂಡು—

ಕಂ॥ ಅಱಿವನೆಡೆವಱಿದು ಕೆಟ್ಟುದ
ನಱಿಸಲ್ ಪೋಪಂತೆ ಮುಚ್ಛೆವೋಪುದುಮೊಡನಿ
ರ್ದಱಿಕೆಯ ಪರಿಜನಮಿರದೆ ।
ಟ್ಟೆಱಿಸಲೊಡಂ ಸುಮತಿ ಮುಚ್ಛೆಯಿಂದೆಟ್ಟತ್ತಳ್ ॥ ೯೯ ॥

ವ॥ ಅಂತು ಮುಚ್ಛೆಯಿಂದೆಟ್ಟತ್ತು ಸುಮತಿ ತಮ್ಮಕ್ಕನನಂತಶ್ರೀಯಪ್ಪ ದೇವಿಗಿಂತೆಂದಳ್—

ನವಮಿಕೆಯೆಂಬ ದೇವಿಯಾದೆನು. ನೀನು ಕುಬೇರನಿಗೆ ರತಿಯೆಂಬ ಮನೋವಲ್ಲಭೆಯಾದೆ. ಹೀಗಿರುತ್ತ ನಂದೀಶ್ವರ ದ್ವೀಪದಲ್ಲಿ ಒಮ್ಮೆ ನಾವಿಬ್ಬರೂ (ಅಕಸ್ಮಾತ್ತಾಗಿ) ಪರಸ್ಪರರನ್ನು ಕಂಡು, ಗುರುತುಹಿಡಿದು, ಜೊತೆಯಾಗಿ ಜಿನೇಂದ್ರ ಪೂಜೆಯನ್ನು ನೆರವೇರಿಸಿದೆವು. ಆಮೇಲೆ 'ಮನುಷ್ಯ ಲೋಕದಲ್ಲಿ ನಮ್ಮಿಬ್ಬರಲ್ಲಿ ಯಾರೊಬ್ಬರಾದರೂ ಸಂಸಾರ ಮೋಹಕ್ಕೆ ಒಳಗಾಗಿದ್ದರೆ, ಇನ್ನೊಬ್ಬರು ಬಂದು ಅವರನ್ನು ಎಚ್ಚರಿಸಬೇಕು' ಎಂದು ಪ್ರತಿಜ್ಞೆಮಾಡಿ ನಮ್ಮನಮ್ಮ ಸ್ಥಾನಗಳಿಗೆ ಹೊರಟುಹೋದೆವು. ನೀನು ಈಗ—

೯೮. ಅದನ್ನೆಲ್ಲ ಮರೆತು, ಸಂಸಾರವೆಂದರೇನೆಂಬುದನ್ನೆ ಅರಿಯದವಳಂತೆ ನಿಸ್ಸಾರವಾದ ಅಲ್ಪಸುಖಕ್ಕೆ ಮೋಹಿಸಿ ಮರುಳಾದೆಯಲ್ಲ! ಅಕ್ಕ, ಕನಸಿನ ನದಿ ಸತ್ಯವೆಂದು ಭ್ರಮಿಸಿ, ಅದರಲ್ಲಿ ನೀರು ಕುಡಿದು ಬಾಯರಿಕೆಯನ್ನು ಹಿಂಗಿಸಿಕೊಳ್ಳಲು ಹವಣಿಸುವವರೂ ಉಂಟೆ?

ವ॥ ನನ್ನ ಮಾತು (ಈಗ ಕಹಿಯೆನಿಸಿದರೂ) ಪರಿಣಾಮದಲ್ಲಿ ಹಿತಾವಹವಾದುದು; ಇದನ್ನು ಕಡೆಗಣಿಸುವುದಾಗಲಿ, ಅಲ್ಲಗಳೆಯುವುದಾಗಲಿ, ಕಿಂಪಾಕಫಲ ಸೇವನೆಗೆ ಸಮಾನ (ವಿಷದ ಹಣ್ಣನ್ನು ಬೇಡವೆಂದರೂ ಹಠಮಾಡಿ ತಿಂದ ಹಾಗೆ). ಈ ಬಗೆಯ ಸಂಸಾರದಲ್ಲಿ ಬಿದ್ದಮೇಲೆ ಮುಳುಗುವುದಲ್ಲದೆ, ಮೇಲೇಳುವುದುಂಟೆ? (ನಾನು ಹೇಳಬೇಕಾದ ಮಾತನ್ನು ಹೇಳಿದೆ.) ಇನ್ನು ಮುಂದಿನ ಮಾತನ್ನು ನಿನ್ನ ವಿವೇಕಕ್ಕೆ ಬಿಟ್ಟಿದ್ದೇನೆ." ಹೀಗೆಂದು ಆಕೆ ತನ್ನ ಮಾತನ್ನು ಮುಗಿಸಿದಳು. ಈ ನುಡಿಗಳನ್ನೆಲ್ಲ ಚಿತ್ತಗೊಟ್ಟು ಕೇಳಿ, ಆ ದೇವಿಯ ರೂಪವನ್ನು ನೋಡಿ—

೯೯. ತನ್ನೊಡನೆ ಸಮನಾಗಿ ಬರುತ್ತಿದ್ದ ಅರಿವು ನಡುವೆಯೆಲ್ಲೊ ಕತ್ತರಿಸಿ ಎಳೆತಪ್ಪಿದ್ದರಿಂದ ಅದನ್ನು ಕಂಡುಹಿಡಿಯಲು (ತನ್ನ ಅಂತರಂಗದೊಳಗೆ) ಇಳಿದಳೊ ಏನೊ ಎಂಬಂತೆ ಸುಮತಿ ತಟ್ಟನೆ ಮೂರ್ಛೆಹೋದಳು. ಆಕೆಯ ಪರಿಜನರು ಕೂಡಲೆ ಉಪಚರಿಸಿ ಎಚ್ಚರಿಸಲಾಗಿ ಆಕೆ ಮರಳಿ ಎಚ್ಚತ್ತಳು.

ವ॥ ಹೀಗೆ ಮೂರ್ಛೆ ತಿಳಿದ ಬಳಿಕ ಸುಮತಿಯು ತಮ್ಮಕ್ಕನಾದ ಅನಂತಶ್ರೀದೇವಿಗೆ ಹೀಗೆಂದಳು:

---

1. ಱಿ (ಮ)

ಚಂ॥ ಅನುಭವಿಸುತ್ತುಮಿರ್ದು ಸುಖದಿಂ ಸುಖಮಂ ಸುರಲೋಕದೊಳ್ ಪುರಾ
ತನ ಭವ ಮೋಹದಿಂದನುಜೆಯೆಂದೆನಗಿಪ್ಪಮತಿ ಪ್ರಕಾಶಮಂ
ಜನಿಯಿಪ ನಿನ್ನದೊಂದು ದಯೆಗೇಂ ತೊದಟಿಕ್ಕ ಮಹಾಪ್ರಸಾದಮಾ
ಜಿನ ಮತಮಂ ಭವನ್ಮತಮುಮಂ ಮಱೆದಿಂದವಿವೇಕಿ ಯಪ್ಪೆನೇ ॥ ೧೦೦ ॥

ಕಂ॥ ಇದು ಭವದಮಳಿನ ಸೌಹಾ
ರ್ದ್ರದುದಯಮಲ್ಲದೆ ಮದೀಯ ಮಹಿಮೋನ್ನತಿಯ
ಲ್ಲದನಱಿದೆಂ ಮಾರ್ಗಂದ
ಪ್ಪಿದ ಕುರುಡರನಱಿದ ಬಟ್ಟೆಗುಯ್ವರೆ ಪಿರಿಯರ್ ॥ ೧೦೧ ॥

ವ॥ ಅದಱಿಂದಮೆಮಗೆ ನಿಮ್ಮ ನುಡಿ ಮರ್ದಿನ ಕೈಪೆಯಂತುಟೆ ಮತ್ತಮಾತುರನೌಷಧ ಭೀರುವಾದೊಡಂ ಭಿಷಗ್ದೋಷಮಾಗದಂತೆ ನಿಮ್ಮ ಪೇೞ್ದುದನಪೇಕ್ಷಿಸಿದೊಡೆನ್ನ ದೋಷಂ ಪುನರ್ದರ್ಶನಂ[1] ಯಥಾ[1]ಸ್ಥಾನಕ್ಕೆ ಬಿಜಯಂಗೆಯ್ಮಿಮೆಂದು ಮುಕುಳಿತ ಕರಕಮಳೆ ವಿಸರ್ಜಿಸುವುದುಮಾದೇವಿ—

ಕಂ॥ ಗಗನಂ ನಿಜಭೂಷಣ ದೀ
ಪ್ತಿಗಳಿಂ ತಟತಟಿಸಿ ಪೊಳೆಯೆ ಮಿಂಚಿನ ಗೊಂಚಲ್
ನೆಗೆದಂತೆ ನೆಗೆದು ಸುರಲೋ
ಕ ಗಮನಮಂ ಮನುಜ ಲೋಕದಿಂ ಪೊಗೞಿಸಿದಳ್ ॥ ೧೦೨ ॥

ವ॥ ಇತ್ತ ಸುಮತಿ ಸುಮತಿವೆಸರಂ ನನ್ನಿಮಾಡಿ ತನ್ನ ಸಖೀಜನಕ್ಕಿಂತೆಂದಳ್ ಪರಮಾರ್ಥಮಂ ಮಧ್ಯಸ್ಥತೆಯುಮನಧರಿಸದವಧಾರಿಸುವಾಗಳ್ ದೇವತೆಯ ನುಡಿದ ನುಡಿ ಸಾರಮಸಾರಂ ಉಪಾದೇಯಮನಾದೇಯಮೆಂಬಿನಿತಂ ನಿಮಗಱಿಯಲಕ್ಕುಮೆ ವಲಂ ವಿಷಯಾಸಕ್ತಿಯೊಳಾಯಾಸೈಕ ನಿರತರಾಗಿರ್ಪ ಪ್ರಾಕೃತ ಜನಂಗಳ ಗಮನಮೇ ಸಮಸ್ತ ವೇದಿಗೆ ಹೃದಯಂಗಮಮಾಗದದುಮಂ ನೀಮೆ ಪೇೞಿಮೆಂದವರೊಳ್ ಪರಿಕ್ಷಾಕ್ಷಮೋದಾರವೀರ ವಾಕ್ಯಂಗಳಂ ನುಡಿಯುತ್ತುಂ ರಥಮಂ ಮಗುೞ್ಚಲ್ವೇೞ್ದು—

---

೧೦೦ "ಅಕ್ಕ, ದೇವಲೋಕದ ಪರಮ ಸುಖದಲ್ಲಿ ತಲ್ಲೀನವಾಗಿ ನೆಮ್ಮದಿಯಿಂದ ಇರಬೇಕಾಗಿದ್ದ ನೀನು ಪೂರ್ವ ಜನ್ಮದ ತಂಗೆಯೆಂಬ ಮೋಹದಿಂದ ನನ್ನ ಬಳಿಗೆ ಬಂದು, ಬೋಧಿಸಿ ನನ್ನ ಬುದ್ಧಿಯನ್ನು ಬೆಳಗಿದೆ. ನಿನ್ನ ದಯೆ ನನಗೊಂದು ಮಹಾ ಅನುಗ್ರಹವಾಯಿತು ಪ್ರಸಿದ್ಧವಾದ ಜಿನಮತವನ್ನೂ ನಿನ್ನ ಮತವನ್ನೂ ಮರೆತು ನಾನಿನ್ನು ಅವಿವೇಕಿಯಾಗುವೆನೇ ?

೧೦೧. (ನನ್ನಲ್ಲಿ ಉಂಟಾದ ಈ ಜ್ಞಾನೋದಯವು) ನನ್ನ ಮಹಿಮೆಯಲ್ಲ, ನಿನ್ನ ಪರಿಶುದ್ಧ ಪ್ರೇಮದ ಮಹಿಮೆ. ಇದನ್ನು ನಾನು ಚೆನ್ನಾಗಿ ಬಲ್ಲೆ. ಕುರುಡನಂತೆ ಹಾದಿತಪ್ಪಿದವನನ್ನು ಧರ್ಮಮಾರ್ಗಕ್ಕೆ ಯಾರು ತಂದು ನಿಲ್ಲಿಸುವರೋ ಅವರೇ ಹಿರಿಯರು.

ವ॥ ಆದುದರಿಂದ ಈಗ ನಿಮ್ಮ ಮಾತು ನಮಗೆ ಕಹಿಯೆನಿಸಿದರೆ, ಅದು ಔಷಧಿಯ ಕಹಿಯಂತೆಯೆ. ರೋಗಿಯಾದವನು ಔಷಧಕ್ಕೆ ಹೆದರಿಕೊಂಡು ಅದನ್ನು ಬಿಟ್ಟುಕೊಟ್ಟರೆ, ಅದು ಆತನ ದೋಷವಲ್ಲದೆ ವೈದ್ಯನ ದೋಷವಾಗದು. ನೀವು ಹೇಳಿದ ಮಾತನ್ನು ಕಡೆಗಣಿಸಿದರೆ ಅದು ನನ್ನ ದೋಷ. ಸರಿ, ಮರಳಿ ನಾವು ಭೇಟಿಯಾಗೋಣ. ನೀವಿನ್ನು ನಿಮ್ಮ ಸ್ಥಾನಕ್ಕೆ ದಯಮಾಡಿ" ಹೀಗೆಂದು ಕೈಮುಗಿದು ಬಿನ್ನವಿಸಿ ನಿರೋಪಕೊಡಲಾಗಿ ಆ ದೇವಿಯು—

೧೦೨. ತನ್ನ ಆಭರಣಗಳ ಪ್ರಭೆಯಿಂದ ಮಿಂಚಿನ ಗೊಂಚಲೆ ಮೇಲೇರಿದಂತೆ ಆಕಾಶಕ್ಕೆ ನೆಗೆದು, ಜನರೆಲ್ಲ ಹೊಗಳುತ್ತಿರಲಾಗಿ ದೇವಲೋಕದತ್ತ ಹೊರಟುಹೋದಳು.

ವ॥ ಇತ್ತ ಸದ್ಬುದ್ಧಿಯಾದ ಸುಮತಿಯು ತನ್ನ ಹೆಸರನ್ನು ಸಾರ್ಥಕಗೊಳಿಸಿ ಸಖಿಯರಿಗೆ ಹೀಗೆಂದಳು : "ಉದಾಸೀನರಾಗದೆ ಚಿತ್ತಗೊಟ್ಟು ಕೇಳಿದ್ದಿರಾದರೆ, ಆ ದೇವಿಯ ಮಾತಿನಿಂದ ನಿಮಗೆ ಈಗಾಗಲೇ ಸಾರ ಯಾವುದು, ನಿಸ್ಸಾರ ಯಾವುದು, ಸ್ವೀಕಾರಯೋಗ್ಯವಾವುದು, ನಿರಾಕರಣಕ್ಕೆ ತಕ್ಕುದು ಯಾವುದು ಎಂಬುದು ಅರಿವಾಗಿರಲೇಬೇಕು. ವಿಷಯಸುಖದಲ್ಲಿಯೆ ಆಸಕ್ತರಾಗಿ ಬಳಲುತ್ತಿರುವ ಅಜ್ಞಜನರ ನಡೆವಳಿಕೆ ಜ್ಞಾನಿಗಳಿಗೆ ಒಪ್ಪಿಗೆಯಾಗಲಾರದು. (ತಿಳಿದವರು) ನೀವೇ ಹೇಳಿ"—ಹೀಗೆಂದು ಪರಾಮರ್ಶೆಗೆ ಯೋಗ್ಯವಾದ ವೀರವಾಕ್ಯಗಳನ್ನು ನುಡಿದು ತನ್ನ ವಾಹನವನ್ನು ಮರಳಿ ಅರಮನೆಗೆ ನಡೆಸಲು ಆಜ್ಞಾಪಿಸಿದಳು.

---

1. + ವ (ಅ)

ಕಂ॥ ಕಾಂತಾರತ್ನಮನೆಮಗ
ಪ್ಪಂತಾಗಿರೆ ಮಾೞ್ಪೆವೆಂದು ನೆರೆದ ಮಹೀಭೃ
ತ್ಸಂತತಿಯ ಬಿಟ್ಟವಾಯ್ ಬಿ
ಟ್ಟಂತಿರೆ ಬಂದಾಕೆ ಪೊಕ್ಕಳರದರಮನೆಯಂ ॥ ೧೦೩ ॥

ಉ॥ ಪೊಕ್ಕು ನಿಜಾಂಬಿಕಾ ಜನಕರಂ ಸುತೆ ಬೀೞ್ಕೊಳೆ ಕನ್ನೆ ಮುನ್ನೆ ತ
ತ್ವಕ್ಕತಿಲೌಲ್ಯೆ ಬಾಲ್ಯದೊಳಮಾಗದು ಮಾಣಿಸಲೆಂಬ ಚಿಂತೆಯಿಂ
ಬೆಕ್ಕಸರಾಗಿ ನಮ್ಮಳಿಪೆ ಸಾಲದೆ ಭವ್ಯರನಾರ್ಗೆ ಬಾರಿಸಲ್
ಬಕ್ಕುಮೆನುತ್ತಣಂ ಮಿಡುಕರಕ್ಕಟ ಲೆಪ್ಪದ ರೂಪಿಪೆಂಬಿನಂ ॥ ೧೦೪ ॥

ವ॥ ಬಿಲ್ಲುಂ ಬೆಱಗುಮಾಗಿರ್ದ ಜೈನ ಶಾಸನ ಚೂಡಾಮಣಿಯುಂ ವಿಜಯೆಯುಮೆಮ್ಮ ವಂಶಕ್ಕೀಕೆಯೆ ಪತಾಕೆಯೆಂದಭಿವರ್ಣಿಸಿ ಪುತ್ರೀವಿಯೋಗ ವಿಷಾದಮುಂ ತತ್ತಪೋಗ್ರಹಣ ಪ್ರಮೋದಮುಂ ಸೂೞ್ಸೂೞೊಳ್ ಪೆರ್ಚಿ ಬಂದೊೞ್ದುಗುವ ಶೋಕಬಾಷ್ಪಂಗಳುಮನಾನಂದಾಶ್ರುಜಲಂಗಳುಮಂ ತೊ[1]ಳೆ[1]ದು ಮಗಳ ಮೊಗಮನತಿ ಸ್ನೇಹ ಪಾಶಾಳಂಬಿತ ಮನಸ್ಕರಾಗಿ ನೋಡಿ—

ಕಂ॥ ತನಯೆ ತಪದಿಂದೆ ನೀಂ ನಿ
ನ್ನನೆಯಲ್ಲದೆ [2]ನಮ್ಮ ಕುಲಮುಮಂ ಬೆಳಗಿದೆ[2]ಯೆಂ
ತೆನೆ ಮುಗಿಲ ಮುತ್ತು ಮುಗಿಲಂ
ನೆನೆಯಿಸಿ ಮಂಡಲಿಯ ನಿಪುಣರಿಂ ಪೊಗೞಿಸದೇ ॥ ೧೦೫ ॥

ವ॥ ಎಂದು ಗಂಭೀರ ಧೀರೋದಾರ ಸಾರೋಕ್ತಿಗಳಂ ನುಡಿದೊಡಂಬಟ್ಟ ತಾಯುಂ ತಂದೆಯುಮಂ ಬಿಡಿಸಿ ತದನುಗಮ್ಯಮಾನೆ ರಾಜಮಂದಿರದಿಂ ಪೊಱಮಟ್ಟು ಸುಮತಿ ಸುವ್ರತಾಗಣಿನೀ ಸಮಕ್ಷದೊಳ್ ಪರಮ ದೀಕ್ಷೆಯನಯ್ನೂರ್ವರ್ ಮಹೀಪಾಲ ಕನ್ನೆಯರೊಡನೆ ಕೆಯ್ಕೊಂಡಳ್—

---

೧೦೩. ಈ ಸ್ತ್ರೀರತ್ನವನ್ನು ಪಡೆದುಕೊಳ್ಳುವೆವೆಂದು (ಉತ್ಸಾಹದಿಂದ) ನೆರೆದ ರಾಜಸಮೂಹವು ನಿಬ್ಬೆರಗಾಗಿ, ಬಿಟ್ಟ ಬಾಯಿ ಬಿಟ್ಟಂತೆಯೆ (ತೆರೆದ ಬಾಯನ್ನು ಮುಚ್ಚುವುದಕ್ಕೂ ಮರೆತು) ಕುಳಿತಿರಲಾಗಿ ಆಕೆ ಮರಳಿ ಅರಮನೆಯನ್ನು ಸೇರಿದಳು.

೧೦೪. ಹಾಗೆ ಸೇರಿದೊಡನೆ ತನ್ನ ತಾಯ್ತಂದೆಗಳನ್ನು ಕಂಡು "ನನ್ನನ್ನು ತಪಸ್ಸಿಗೆ ಬೀಳ್ಕೊಡಿ" ಎಂದಳು. ಆಗ ಅವರಿಬ್ಬರೂ, "ಚಿಕ್ಕಂದಿನಿಂದಲೆ ಈ ಕೂಸು ತತ್ವಕ್ಕೆ ಒಲಿಯಿತು. ಈ ಇವಳನ್ನು ನಿವೃತ್ತಿಗೊಳಿಸಲಾಗದು. ನಮ್ಮ ಸಂಸಾರ ವ್ಯಾಮೋಹವೆ ಸಾಲದೆ? ಭವ್ಯರಾಗಿ ಹೊರಟವರನ್ನು ತಡೆದು ನಿಲ್ಲಿಸುವುದಕ್ಕಾದೀತೆ?" ಎಂಬ ಯೋಚನೆಯಿಂದ ಏನು ಮಾಡಲು ಹೊಳೆಯದೆ ಎವೆಮಿಡಕದೆ ಬಣ್ಣದ ಬೊಂಬೆಗಳಂತೆ ತಟಸ್ಥರಾಗಿ ನಿಂತುಬಿಟ್ಟರು.

ವ॥ ಹೀಗೆ ನಿಬ್ಬೆರಗಾದ ಅಪರಾಜಿತನೂ ವಿಜಯ ಮಹಾರಾಣಿಯೂ "ನಮ್ಮ ವಂಶಕ್ಕೆ ಈಕೆಯೆ ಪತಾಕೆ" ಎಂದು ಹೊಗಳಿದರು. ಮಗಳು ತಮ್ಮನ್ನು ಅಗಲಿಹೋಗುವಳೆಂಬ ದುಃಖವೂ, ಆಕೆ ತಪಸ್ಸನ್ನು ಕೈಕೊಳ್ಳುವಳೆಂಬ ಸಂತೋಷವೂ ಒಂದಕ್ಕಿಂತ ಒಂದು ಹೆಚ್ಚಾಗಿ, ಜೊತೆ ಜೊತೆಯಾಗಿ ಮನಸ್ಸನ್ನು ತುಂಬಿ, ದುಃಖಾಶ್ರುಗಳೂ ಆನಂದಾಶ್ರುಗಳೂ ಒಡನೊಡನೆ ಉಕ್ಕಿಬರುತ್ತಿರಲಾಗಿ, ಅವುಗಳನ್ನು ಒರಸಿಕೊಂಡು ಅತ್ಯಂತ ವಾತ್ಸಲ್ಯ ಪೂರ್ಣವಾಗಿ ಮಗಳ ಮುಖವನ್ನು ನೋಡಿ—

೧೦೫. "ಮಗಳೆ, ತಪಸ್ಸಿನಿಂದ ನೀನು ನಿನ್ನೊಬ್ಬಳನ್ನೆ ಅಲ್ಲದೆ ನಮ್ಮ ವಂಶವನ್ನೆ ಬೆಳಗಿದೆ. ಮೋಡದಿಂದ ಹುಟ್ಟುವ ಮುತ್ತು ನಿಪುಣರಿಂದ ಆ ಮೋಡಗಳನ್ನು ಹೊಗಳಿಸುವುದಿಲ್ಲವೆ?"

ವ॥ ಹೀಗೆಂದು ಗಂಭೀರವೂ ಸಾರಗರ್ಭಿತವೂ ಆದ ಮಾತುಗಳನ್ನಾಡಿ, ಅನುಮತಿಯನ್ನು ನೀಡಿದ ತಾಯ್ತಂದೆಗಳನ್ನು ಬೀಳ್ಕೊಂಡು, ಅರಮನೆಯಿಂದ ಹೊರಟು ಸುಮತಿ ಕುಮಾರಿಯು ಸುವ್ರತೆಯೆಂಬ ಆರ್ಯಿಕೆಯರ ಸನ್ನಿಧಿಯಲ್ಲಿ ಐನೂರ್ವರು ರಾಜಕನ್ಯೆಯರೊಡನೆ ತಪೋದೀಕ್ಷೆಯನ್ನು ಕೈಕೊಂಡಳು.

---

1. ಡೆ (ಆ) 2. ಬೆಳಗಿದೆಯಲ್ಲೆಯೆಮ್ಮುಮಂ (ಆ)

ಕಂ॥ ಮತ್ತಿತ್ತ ಚಕ್ರಿಯುಂ ಚತು
ರುತ್ತರವದಶೀತಿ ಲಕ್ಷಪೂರ್ವಂ ಬಟ್ದ
ತ್ಯುತ್ತಮ ಸುಖಿ ಪವಡಿಸಿ ತ
ನ್ನುತ್ತರ್ಯ ದುಕೂಲ ವಿಶದ ಶಯ್ಯಾತಳದೊಳ್ ॥ ೧೦೬ ॥

ಇರೆ ಛಿದ್ರಿಸಿದೊಂ ಜವನನು
ವರಕ್ಕಮಿದಿರ್ಗಂ ಪೊಣರ್ಕೆಗಂ ಸುಗಿದವೊಲಾ
ಹರಿಯಂ ಮೂದಲಿಸಿ ಚಲಂ
ಬೆರಸಿ ನಿರಾಕರಿಸಿ ಹರಿಯನಿಱುವುದು ಮೊಗ್ಗೇ ॥ ೧೦೭ ॥

ವ॥ ಅಂತನಂತವೀರ್ಯಂ ಭವಾಂತರಿತನಪ್ಪುದುಂ—

ಮ॥ ಬಲದೇವಂ ಬಲದೇವ[1]ದುಙ್ಜವಣೆಯೊಳ್ ಮುಂದಾದರಂ ಕೊಂದ ಮೆ
ಯ್ಗಲಿ ತಮ್ಮಂ ಸಯೆ ಬಳ್ಳಿಯುಂ ನಿಗಳಮುಂ ತ[2][ಳ್ತ][2]ಂದುವುಂ ಬಳ್ಳಿ ಸಂ
ಕಲೆಯುಂ ಪೋದ ಗಜಂ ಬನಕ್ಕೆ ತಳರ್ವಂತುದ್ವೇಗದಿಂ ಮೋಹ ಶೃಂ
ಖಲೆ ಪಾಱೇಟ[3] ತಪೋವನಕ್ಕೆ ತಳರ್ದಾತ್ಮೀಯಾನ್ವಯೈಶ್ವರ್ಯದೊಳ್ ॥ ೧೦೮ ॥

ವ॥ ಅರಿಂಜಯನೆಂಬೊಂ ತನ್ನ ಕಿಱಿಯ ಮಗನನಭಿಷೇಕ ಪೂರ್ವಕಂ ನಿಱಿಸಿ ಸಪ್ತ ಶತ ಕ್ಷಿತಿಪಾಲ ಸಮನ್ವಿತಂ ಸ್ವಯಂಪ್ರಭ ತೀರ್ಥೇಶ್ವರ ಪಾದಾರವಿಂದ ಸಮಕ್ಷದೊಳ್ ಜಿನನಾಥ ರೂಪಮಂ ತಾಳ್ದಿ—

ಕಂ॥ ಧೀರತೆ ಗಿಡದೆ ಪರೀಷಹ
[3]ಧೀರರನುಗ್ರೋಗ್ರ ತಪದೊಳಂ ಗೆಲ್ದು ತಮೋ
ವೈರಿ ವಿಜಯಕ್ಕೆ ಮಸೆದಸಿ
ಧಾರೆವೊಲಪರಾಜಿತಂ ವಿರಾಜಿತನಾದಂ ॥ ೧೦೯ ॥

---

೧೦೬. ಇತ್ತ ಅನಂತವೀರ್ಯ ಚಕ್ರವರ್ತಿಯು ಎಂಬತ್ತುನಾಲ್ಕು ಲಕ್ಷ ಪೂರ್ವಕಾಲದವರೆಗೆ ಬದುಕಿ ಅತ್ಯುತ್ತಮವಾದ ಭೋಗಗಳನ್ನು ಅನುಭವಿಸಿದನು. ಹೀಗಿರುತ್ತ ಒಂದು ದಿವಸ ಶ್ರೇಷ್ಠವಾದ ದುಕೂಲದಿಂದ ಆಚ್ಛಾದಿತವಾದ ವಿಶಾಲ ಶಯ್ಯೆಯಲ್ಲಿ ಆತನು ಸುಖದಿಂದ ನಿದ್ರಿಸುತ್ತಿದ್ದನು.

೧೦೭. ಅವನನ್ನು ಇದಿರಿಸಿ ಹೋರಾಡಲು ಹೆದರಿ ಹಿಂಜರಿದಿದ್ದನೊ ಏನೊ ಎಂಬಂತೆ ಯಮದೇವನು ಬಂದು, ನಿದ್ದೆಹೋದಾಗಲೆ (ಗುಪ್ತವಾಗಿ) ಇರಿದು ಹೋದನು. ಎದುರಿಗೆ ನಿಂತು ಮೂದಲಿಸಿ ಛಲದಿಂದ ಈ ಹರಿ (ವಾಸುದೇವನಾದ ಅನಂತವೀರ್ಯ) ಯನ್ನಾಗಲಿ, ಆ ಹರಿ (ಸಿಂಹ) ವನ್ನಾಗಲಿ ಇರಿವುದು ಸುಲಭವೆ?

ವ॥ ಹೀಗೆ ಅನಂತವೀರ್ಯನು ಮರಣ ಹೊಂದಲಾಗಿ—

೧೦೮. ಸಮರಾಂಗಣದಲ್ಲಿ ಮುಂದಾದವರನ್ನೆಲ್ಲ ಕೊಂದ ಸಹಜ ಶೂರನಾದ ತನ್ನ ತಮ್ಮನು ಸಾಯಲಾಗಿ, ಬಲದೇವನಿಗೆ ಸಂಸಾರದಲ್ಲಿ ಯಾವ ಬಂಧನವೂ ಇಲ್ಲದಾಯಿತು. ತನ್ನನ್ನು ಕಟ್ಟಿಹಾಕಿದ ಹಗ್ಗಗಳೂ ಸರಪಳಿಯೂ ಕಳಚಿ ಬಿದ್ದೊಡನೆ, ಆನೆ ವನವನ್ನು ಹುಡುಕಿಕೊಂಡು ಹೋಗುವಂತೆ, ಮೋಹದ ಸಂಕೋಲೆ ತುಂಡರಿಸಿ ಹೋದುದರಿಂದ ಅಪರಾಜಿತನು ತಪೋವನಕ್ಕೆ ಹೊರಡಲು ಸಿದ್ಧನಾದನು. ತನ್ನೆಲ್ಲ ಐಶ್ವರ್ಯವನ್ನು

ವ॥ ಕಿರಿಯ ಮಗನಾದ ಅರಿಂಜಯನಿಗೆ ಪಟ್ಟಾಭಿಷೇಕ ಪೂರ್ವಕವಾಗಿ ಒಪ್ಪಿಸಿ, ಏಳುನೂರು ರಾಜರೊಡನೆ ಸ್ವಯಂಪ್ರಭ ತೀರ್ಥೇಶ್ವರರ ಪಾದಸನ್ನಿಧಿಯಲ್ಲಿ ದಿಗಂಬರ ದೀಕ್ಷೆಯನ್ನು ಸ್ವೀಕರಿಸಿದನು.

೧೦೯. ಎದೆಗೆಡದೆ ಉತ್ತರೋತ್ತರವಾಗಿ ಉಗ್ರವಾಗುತ್ತಿರುವ ತನ್ನ ತಪಸ್ಸಿನಿಂದ ಪರೀಷಹಗಳನ್ನೆಲ್ಲ ಗೆದ್ದು, ವಿಜಯಕ್ಕೆಂದು ಮಸೆದಿಟ್ಟ ಖಡ್ಗಧಾರೆಯಂತೆ ಅಪರಾಜಿತನು (ತೆಳುವಾಗಿಯೂ ಕಾಂತಿಯುಕ್ತನಾಗಿಯೂ) ಶೋಭಿಸಿದನು.

---

1. ಸು (ಮ) 2. ಟ್ಟ (ಮ) 3. ವಿ (ಮ)

ವ॥ ಅಂತು ತಪೋನಿಯಮದೊಳಮಾ ಜಿನಚಂದ್ರಮುನೀಂದ್ರಂ ಯೋಗೀಂದ್ರಚಂದ್ರರಿಂ ಪೊಗೞಿಸಿ ನಿರಾಕುಳಮೇಕವಿಹಾರಿಯಾದೊ ನನಂತವೀರ್ಯನುಂ ರತ್ನಪ್ರಭೆಯುಂ ಘರ್ಮೆಯುಮೆಂಬ ಮೊದಲ ನರಕದ ಪದಿಮೂಱಿಂದ್ರಕಂಗಳೊಳ್ ಸೀಮಂತಮೆಂಬ ಮೊದಲಿಂದ್ರ ಕದೊಳ್ ನಾಲ್ವತ್ತಿರ್ಛಾಸಿರ ಸಂವತ್ಸರಮಾಯುಷ್ಯಮಾಗಿ ಪುಟ್ಟಿದನಿತ್ತಲ್ ಉರ್ವರಾಸ್ಯ ತಿಲಕನಪ್ಪ ತಪೋಧನನುಂ ಸಿದ್ಧಗಿರಿಯೊಳಾತ್ಮಪರ ನಿರಾಪೇಕ್ಷಮಪ್ಪ—

ಕಂ॥ ಪ್ರಾಯೋಪಗಮನದಿರ ಮುನಿ
ನಾಯಕನಿರದ[1]ಱಿದು ತೊಱೆದು ನಿಜತನುವನೆಯ
ಶ್ರೀಯ ಬೆಳಗೆನಿಸುವಮರ
ಶ್ರೀಯೊಳ್ ನೆಗೞ್ದಚ್ಯುತೇಂದ್ರಪದಮಂ ಪಡೆದಂ ॥ ೧೧೦ ॥

ವ॥ ಅಂತು—

ಕಂ॥ ನೆರೆದಿರ್ದುಮೇಂತು ಮೂಲಾಂ
ಕುರಂಗಳೊಳಗೊಂದಧೋಗಮೊಂದೂರ್ಧ್ವಗಮಂ
ತಿರೆ ವಾಸುದೇವ ಬಲದೇ
ವರೊಳೊರ್ವನಧೋಗನೊರ್ವನೂರ್ಧ್ವಗನಾದೊಂ ॥ ೧೧೧ ॥

ವ॥ ಅಚ್ಯುತೇಂದ್ರಂ ಮೂನೂಱಯ್ವತ್ತು ಸಮಿಾಚೀನ ವಿಮಾನಂಗಳುಂ ಮೂವತ್ತುಮೂವರ್ ದಿವಿಜರುಂ ಪದಿಂಛಾಸಿರ್ವರ್ ಸಾಮಾನಿಕಾಮರರುಂ ನಾಲ್ವತ್ತುಸಾಸಿರ್ವರಂಗ ರಕ್ಷಕ ದೇವರುಂ ನಾಲ್ವರ್ ಲೋಕಪಾಲರುಂ ಗಜ ತುರಗ ರಥ ಪದಾತಿ ಮಹೋಕ್ಷ ಗಂಧರ್ವ ನಟೀ ವಿಕಲ್ಪಿತಮಾದೇೞುಂ ಪಡೆಯುಮೊಳಗಣ ನಡುವಣ ಪೊಱಗಣ ಮೂಱು ಸಭೆಯುಂ ಮೂವತ್ತಿರ್ವರ್ ಪ್ರಧಾನ ದೇವಿಯರುಂ ಅಱುವತ್ತುಮೂವರ್ ವಲ್ಲಭೆಯರುಂ ತನಗೆ ಪ್ರಸಿದ್ಧಮಾಗೆ—

ವ॥ ಹೀಗೆ ತಪಶ್ಚರಣೆಯಲ್ಲಿ ನಿರತನಾದ ಆ ಮುನೀಂದ್ರನು, ಯತಿಶ್ರೇಷ್ಠರಿಂದ ಹೊಗಳಿಸಿಕೊಳ್ಳುತ್ತ ಅನಾಯಾಸವಾಗಿ "ಏಕವಿಹಾರಿ"ಯಾದನು. (ಜೊತೆಗೆ ಯಾರನ್ನೂ ಒಡಗೊಳ್ಳದೆ ಒಬ್ಬಂಟಿಗನಾಗಿ ಲೋಕದಲ್ಲಿ ಧರ್ಮಮಾರ್ಗದಿಂದ ಸುತ್ತುವವನು.) ಅತ್ತ ಅನಂತವೀರ್ಯನು ರತ್ನಪ್ರಭೆ ಹಾಗು ಘರ್ಮೆ ಎಂಬ ಮೊದಲನೆಯ ನರಕದ ಹದಿಮೂರು ಇಂದ್ರಕಗಳಲ್ಲಿಯೂ ಸೀಮಂತವೆಂಬ ಮೊದಲನೆಯ ಇಂದ್ರಕದಲ್ಲಿಯೂ ನಾಲ್ವತ್ತೆರಡು ಸಾವಿರ ವರ್ಷಗಳ ಆಯುಷ್ಯವನ್ನು ಹೊಂದಿದನು. ಇತ್ತ ಭೂಮಂಡಲತಿಲಕನಾದ ಅಪರಾಜಿತ ಮುನಿಯು ಸಿದ್ಧಗಿರಿಯಲ್ಲಿ ಯಾವ ಪ್ರತಿ ಫಲಾಪೇಕ್ಷೆಯೂ ಇಲ್ಲದ—

೧೧೦. ಉಪವಾಸದಿಂದ ತನ್ನ ದೇಹವನ್ನು ತೊರೆದು, ಶುಭದ ಬೆಳಗೇ ಇದು ಎಂದೆನಿಸುವ ದೇವತ್ವವನ್ನು ಪಡೆದು ಅಚ್ಯುತೇಂದ್ರನಾದನು.

ವ॥ ಹಾಗೆ—

೧೧೧. ಸಸ್ಯದ ಅಂಕುರ ಹಾಗು ಬೇರುಗಳಲ್ಲಿ ಒಂದು ಮೇಲ್ಮೊಗವಾಗಿಯೂ ಇನ್ನೊಂದು ಕೆಳಮೊಗವಾಗಿಯೂ ಹಬ್ಬುವಂತೆ, ಬಲದೇವ ವಾಸುದೇವರಿಬ್ಬರಲ್ಲಿ ಒಬ್ಬನು ಊರ್ಧ್ವಗಾಮಿಯೂ ಇನ್ನೊಬ್ಬನು ಅಧೋಗಾಮಿಯೂ ಆದರು.

ವ॥ ಈ ಅಚ್ಯುತೇಂದ್ರನಿಗೆ ಮುನ್ನೂರ ಐವತ್ತು ಸಮೃದ್ಧ ವಿಮಾನಗಳು; ಮೂವತ್ತುಮೂವರು ದೇವತೆಗಳು; ಹತ್ತು ಸಾವಿರ ಸಾಮಾನಿಕ ದೇವತೆಗಳು; ನಾಲ್ವತ್ತು ಸಾವಿರ ಅಂಗರಕ್ಷಕ ದೇವರು; ನಾಲ್ವರು ಲೋಕಪಾಲರು; ಆನೆ, ಕುದುರೆ, ತೇರು, ಕಾಲಾಳು, ವೃಷಭ, ಗಂಧರ್ವ ಮತ್ತು ನಟಿ ಎಂಬ ಏಳು ಬಗೆಯ ಸೈನ್ಯ; ಒಳಗೆ, ಹೊರಗೆ, ಹಾಗು ನಡುವೆ— ಹೀಗೆ ಮೂರು ಒಡ್ಡೋಲಗಗಳು; ಮೂವತ್ತೆರಡು ಜನ ಪ್ರಧಾನ ದೇವಿಯರು; ಅರುವತ್ತುಮೂವರು ವಲ್ಲಭೆಯರು;

1. ರ (ಮ)

ಕಂ॥ ದೊರೆಯೆನೆ ಮಾದೇವಿಯರೆ
ಣ್ಬರಾಗೆ ತಣಿದಂ ಮನಃಪ್ರವೀಚಾರಂ ತ
ತ್ಸುರಪತಿ ಸುರಲೋಕ ಸುಖಾಂ
ಬುರಾಶಿಯೊಳ್ ಕೂಡಿ ಮೂಡುತುಂ ಮುಳುಗುತ್ತುಂ ॥ ೧೧೨ ॥

ವಿಕರಣ ಸಭಂವ ದೇವೀ
ನಿಕರಮುಮಚ್ಚರಸೆಯರ್ ಪಲರ್ ತದ್ದೇವೀ
ಪ್ರಕರಕ್ಕಳವಿಯನಹಿನಾ
ಯಕನಜಿಯಂ ಪೇಟಲುಟಿದನದನೆತ್ತಜಿವೊಂ ॥ ೧೧೩ ॥

ಸುರನಿಪ್ಪತ್ತಿರ್ಛಾಸಿರ
ಬರಿಸಕ್ಕೊರೊರ್ಮೆ ನೆನೆವನುಣಿಸಂ ಮಾಸಾಂ
ತರಿತಮೆನಿಪೊಂದು ಸಂವ
ತ್ಸರಕ್ಕೆ ಸುಯ್ವೊಂ ನಮೇರು ಸೌರಭ ನಿಭಮಂ ॥ ೧೧೪ ॥

ಪರಮ ಸುಖಾಮೃತ ಪಿಂಡದ
ದೊರೆ ಮೂಱು ಮೊೞಂ ಶರೀರ[1]ಮಾಗಿ[ರಲಿ]ಪ್ಪ[1]
ತ್ತೆರಡೆ ಸಮುದ್ರೋಪಮು ವ
ತ್ಸರಂಬರಂ ಬಾೞ್ಗುಮಚ್ಯುತೇಂದ್ರಂ ದಿವದೊಳ್ ॥ ೧೧೫ ॥

ವ॥ ಅಂತು ದಿವ್ಯ ಸುಖ ಪರಂಪರಾ ಪರೀತಾಂಗನನಂಗಶಾಗರಸಪೂರ ಪರಿಪ್ಲಾವಿತಾಂತರಂಗನಚ್ಯುತಾಮರೇಶ್ವರಂ ನಂದೀಶ್ವರ ದ್ವೀಪಕ್ಕೆ ಪರಿವಾರಾಮರೇಶ್ವರರ್ ಸಹಿತಂ ಪೋಗಿ ಜಗತ್ತ್ರಿತಯ ಚೂಡಾಮಣಿಗಂ ಜನದಧಿಮುಖಾದಿ ನಗಾಕೃತ್ರಿಮ ಚೈತ್ಯಾಲಯಂಗಳೊಳಷ್ಟಾಹ್ನಿಕ ಮಹಾಮಹಿಮೆಯಂ ಮಾಡಿ ಬಂದೊಂದು ದೆವಸಂ—

---

೧೧೨. ಆತನಿಗೆ ಯೋಗ್ಯರಾದ ಎಂಟು ಜನ ಮಹಾದೇವಿಯರು.—ಈ ಬಗೆಯ ವೈಭವವನ್ನು ಪಡೆದ ಅಚ್ಯುತೇಂದ್ರನು ಮನಃಪ್ರವೀಚಾರದಿಂದ ತೃಪ್ತಿಹೊಂದುತ್ತ, ದೇವಲೋಕದ ಸುಖಸಮುದ್ರದಲ್ಲಿ ಮೂಡಿ ಮುಳುಗಾಡುತ್ತಿದ್ದನು.

೧೧೩. "ವಿಕರಣ ಸಂಭವ" ದೇವಿಯರೂ ಅಪ್ಸರೆಯರೂ ಕೂಡಿಕೊಂಡು ಉಂಟಾಗುವ ದೇವಿಯರ ಸಂಖ್ಯೆ ಎಷ್ಟೆಂಬುದನ್ನು ಎಣಿಸಿ ಹೇಳಲು ಆದಿಶೇಷನಿಗೂ ಆಗದು. ಇನ್ನುಳಿದವರ ಮಾತೇನು ?

೧೧೪. ಈ ದೇವನು ಇಪ್ಪತ್ತು ಸಾವಿರ ವರ್ಷಕ್ಕೆ ಒಂದು ಸಲ ಆಹಾರವನ್ನು ನೆನೆಯುವನು ; ಹನ್ನೊಂದು ತಿಂಗಳಿಗೊಮ್ಮೆ ಉಸಿರನ್ನು ಎಳೆದು ಬಿಡುವನು ; ಆ ಉಸಿರು ನಮೇರು ಪುಷ್ಪಗಳಂತೆ ಸುಗಂಧವಾಗಿರುವುದು.

೧೧೫. ಪರಮ ಸುಖದ ಪಿಂಡವೆಂಬಂತೆ, ಮೂರು ಮೊಳದ ಶರೀರವನ್ನುಳ್ಳ ಅಚ್ಯುತೇಂದ್ರನು ಇಪ್ಪತ್ತೆರಡು ಸಮುದ್ರೋಪಮ ವರ್ಷಗಳವರೆಗೆ ದೇವಲೋಕದಲ್ಲಿ ಬಾಳುವನು.

ವ॥ ಹೀಗೆ ದೇವಲೋಕ ಸುಖಪರಂಪರೆಗಳ ಬಳಗದಿಂದ ಕೂಡಿಕೊಂಡು ಶೃಂಗಾರರಸದ ಮಹಾಪೂರದಲ್ಲಿ ಮನ ಮುಳುಗಿ ಇದ್ದ ಆ ಅಚ್ಯುತೇಂದ್ರನು ತನ್ನ ಪರಿವಾರ ದೇವತೆಗಳೊಂದಿಗೆ ನಂದೀಶ್ವರ ದ್ವೀಪಕ್ಕೆ ಹೋಗಿ ತ್ರಿಲೋಕ ಗುರುವಿಗೂ, ಜನದಧಿ ಮುಖವೇ ಮೊದಲಾದ ಗಿರಿಗಳಲ್ಲಿರುವ ಅಕೃತ್ರಿಮ ಚೈತ್ಯಾಲಯಗಳಿಗೂ ಅಷ್ಟಾಹ್ನಿಕ ಮಹಾ ಪೂಜೆಗಳನ್ನು ನೆರವೇರಿಸಿ ಬಂದನು. ಬಳಿಕ ಒಂದು ದಿವಸ—

---

1. ಮುಮಂ (ಅ) ಮಾಗಿಪ್ಪ (ಮ)

ವ॥ ಇಂತೆಂದನೀ ಜಂಬೂದ್ವೀಪದ ಭರತಕ್ಷೇತ್ರದೊಳುಂಟು—

ಮ॥ ವಿಜಯಾರ್ಧಂ ಗಿರಿಚಕ್ರವರ್ತಿ ವಿಜಯ ಪ್ರಾರಂಭದಿಂ ಗೆಯ್ವ ದಿ
ಗ್ವಿಜಯಾರ್ಧಂ ತನಗಿಕ್ಕೆಯಾಗೆ ಪೆಸರಂ ಪೋಲ್ತಿರ್ದುದಂಭೋಧಿಯು
ಗ್ಮ ಜಲಕ್ಷಾಳಿತಪಾದಮಲ್ಲಿ ದೊರೆವೆತ್ತಾ ದಕ್ಷಿಣ ಶ್ರೇಣಿಯೊಳ್
ತ್ರಿಜಗತ್ಸಾರತರಂ ವಿಯಚ್ಚರಪುರಂ ಚೆಲ್ವಿಂದವಾಗ್ಗೋಚರಂ ॥ ೧೧ ॥

ಕಂ॥ ವಿವಿಧ ವಿಯಚ್ಚರ ರಥಿನೀ
ನಿವಹ ರಥ ಪ್ರತತಿ ತನಗೆ ನೂಪುರಮಾಗೊ
ಪ್ಪುವುದೆನೆ ರಥನೂಪುರ ಚ
ಕ್ರವಾಳಮೆಳಿಗವಯುವಂಬೊಲತಿರಮಣೀಯಂ ॥ ೧೨ ॥

ವ॥ ಅದನಾಳ್ವೊಂ ಜ್ವಳನಜಟಿಯೆಂಬೊಂ ವಿದ್ಯಾಧರರಾಜನಾತಂಗೆ—

ಮ॥ ಕುಲವಿದ್ಯಾದಿ ನಿಜಾನ್ವಯ ಪ್ರಕೃತಿಯೊಳ್ ತಜ್ಜಾತಿ ವಿದ್ಯೋತ್ಕರಂ
ಕುಲವೆಣ್ಣೊಳ್ ವಿಧಿಪೂರ್ವ ಸಾಧಿತ ಮಹಾಮಂತ್ರವ್ರಜಂ ತನ್ನ ತೋ
ಳ್ವಲದಿಂ ಪೆರ್ಚಿಸಿಕೊಂಡಿಳಾ ಲಲನೆಯೊಳ್ ಮೇಗಿಂಗಮೆಕ್ಕೆಕ್ಕೆಗಂ
ಚಲಕಂ ಗೆಯ್ವುವೊಲಂಜಿ ಬೆರ್ಚಿ ಬೆಸಕೆಯ್ದಿರ್ದೇಂ ಮನಂಗೊಂಡುವೋ ॥ ೧೩ ॥

ಕಂ॥ ಅವನೀ ವಧುಗಂ ಶ್ರೀಗಂ
ಸವತಿಯೆನಲ್ ಜ್ವಳನಜಟಿಗೆ ವಾದೇವಿ ಮನೋ
ಭವನ ನನೆಗಣೆಗೆ ದೊಣೆ ವಾ
ಯುವೇಗೆ ಸುರ ಗಗನಚರ ನರ ಸ್ತ್ರೀರತ್ನಂ ॥ ೧೪ ॥

ವ॥ ಅಂತಾ ವಿಯಚ್ಚರೇಶ್ವರ ದಂಪತಿಗೆ ಸಮಸಂದ ಸಂತಸಂ—

ವ॥ "ಈ ಜಂಬೂದ್ವೀಪದ ಭರತ ಕ್ಷೇತ್ರದಲ್ಲಿ—

೧೧. ಪೂರ್ವ ಸಮುದ್ರದಿಂದ ಪಶ್ಚಿಮ ಸಮುದ್ರದವರೆಗೆ ವಿಸ್ತಾರವಾಗಿ ಚಾಚಿಕೊಂಡಿರುವ ವಿಜಯಾರ್ಧವೆಂಬ ಮಹಾಪರ್ವತವುಂಟು. (ಚಕ್ರವರ್ತಿಗಳ) ದಿಗ್ವಿಜಯಕ್ಕೆ ಸರಿಯಾದ ಅರ್ಧ ಸೀಮೆಯನ್ನು ಗುರುತಿಸುವುದರಿಂದ ಅದಕ್ಕೆ ಆ ಹೆಸರು ಸಾರ್ಥಕವಾಗಿದೆ. ಅದರ ದಕ್ಷಿಣ ಶ್ರೇಣಿಯಲ್ಲಿ ತ್ರಿಲೋಕಗಳ ಸಾರಸ್ವರೂಪವೆನಿಸುವ, ಅವರ್ಣನೀಯ ಸೌಂದರ್ಯವುಳ್ಳ ವಿದ್ಯಾಧರಪಟ್ಟಣವೊಂದು ಶೋಭಿಸುವುದು.

೧೨. ನಾನಾ ರೀತಿಯ ಖೇಚರರಥಗಳ ಸಮೂಹವೆ ನೂಪುರದಂತೆ ಒಪ್ಪುವುದರಿಂದ ಅದಕ್ಕೆ ಈ ಹೆಸರು ಬಂದಿತೊ ಏನೊ ಎಂಬಂತೆ ಅತಿ ಸುಂದರವಾದ ರಥನೂಪುರಚಕ್ರವಾಳವೆಂಬ ಪಟ್ಟಣವು ಶೋಭಿಸುವುದು.

ವ॥ ಅದನ್ನಾಳುವ ದೊರೆ ಜ್ವಳನಜಟಿಯೆಂಬ ವಿದ್ಯಾಧರರಾಜ; ಆತನಿಗೆ

೧೩. ವಿದ್ಯಾಧರ ಜಾತಿಗೆ ಸಹಜವಾಗಿ ಬರುವ ಸಮಸ್ತ ವಿದ್ಯೆಗಳೂ, ವಿಧಿಪೂರ್ವಕವಾಗಿ ಸಾಧನೆ ಮಾಡಿಕೊಂಡ ಮಹಾಮಂತ್ರಗಳೂ ಒಂದರೊಡನೊಂದು ಸ್ಪರ್ಧಿಸಿ, ನಾನು ಮುಂದು ನೀನು ಮುಂದೆಂದು ನುಗ್ಗಿಬಂದು, ಆಳುಗಳಂತೆ ಭಯಭಕ್ತಿಯಿಂದ ಸೇವೆಮಾಡಿಕೊಂಡಿದ್ದುವು. ಕುಲೀನನಾದ ಆತನು ತನ್ನ ಭುಜಬಲದಿಂದ ವಿಸ್ತರಿಸಿಕೊಂಡ ತನ್ನ ರಾಜ್ಯವನ್ನು ರಕ್ಷಿಸುತ್ತಿದ್ದನು. (ಪದ್ಯದ ಅನ್ವಯದಲ್ಲಿ ಕ್ಲೇಶವಿದೆ.)

೧೪. ಆತನ ರಾಜ್ಯಲಕ್ಷ್ಮಿಗೂ ಧನಲಕ್ಷ್ಮಿಗೂ ಸವತಿಯೆಂಬಂತೆ ವಾಯುವೇಗೆಯೆಂಬವಳು ಆತನಿಗೆ ಪಟ್ಟಮಹಿಷಿ; ನರ-ಖೇಚರ-ದೇವಸ್ತ್ರೀಯರಲ್ಲೆಲ್ಲ ರತ್ನಪ್ರಾಯಳೆನಿಸಿದ ಆಕೆ ಮನ್ಮಥನ ಹೂಬಾಣಕ್ಕೆ ಸಂಸಾಟಿಯಾಗಿದ್ದಳು.

ವ॥ ಹೀಗಿರುವ ಆ ಖೇಚರ ದಂಪತಿಗಳಿಗೆ ಪರಮಸಂತೋಷವೇ—

ಕಂ॥ ಪುಟ್ಟುವವೊಲಗ್ರತನಯಂ
ಪುಟ್ಟಿದನಾಮೂರ್ತಿ ಪೊಂಗಮಾದಿತ್ಯಂಗಂ
ಪುಟ್ಟಿದುದೆನಿಸಿದುದವನೊಡ
ಪುಟ್ಟಿದುದಂಬರಚರೇಂದ್ರ ಸಾಂದ್ರಂ ತೇಜಂ ॥ ೧೫ ॥

ವ॥ ಅಂತರ್ಕಕೀರ್ತಿಯೆಂಬ ಪಿರಿಯಮಗಂ ಬಳೆಯೆ—

ಕಂ॥ ಸಕಳ ಕಳಾವಿದನಪ್ಪ
ರ್ಕಕೀರ್ತಿಯಿಂ ಕಿಱಿಯಳಾಮ್ರಲಸದತಿ ಮೃದುಕೋ
ರಕದಿಂ ಬಳಿಯಂ ಮಂಜರಿ
ನಿಕಾಮ ಕೋಮಳ ವಿಲಾಸದಿಂ ಪುಟ್ಟುವವೋಲ್ ॥ ೧೬ ॥

ಚಂ॥ ಅಭಿನವರೂಪ ಹಾವ ನವಭಾವ ಸಮನ್ವಿತೆ ಪುಟ್ಟಿದಳ್ ಸ್ವಯಂ
ಪ್ರಭೆ ಮಗಳಾಕೆ ಪಾರ್ಶ್ವಚರ ಭೂಚರ ಖೇಚರ ನೇತ್ರ ಪುತ್ರಿಕಾ
ನಿಭೆ ಮದನಾವನೀಜನಿಭೆ ಮಾನವ ಮಾನಸ ಕಂಜ ಭಾನು ವ
ತ್ಪ್ರಭೆ ನಯನೋತ್ಪಲೇಂದುಕಿರಣಪ್ರಭೆಯಪ್ಪುದು ತಪ್ಪದೊಪ್ಪುಗುಂ ॥ ೧೭ ॥

ವ॥ ತದೀಯ ಜನಕಂ ಜ್ವಳನಜಟಿ ಮಹಾರಾಜಂ ಶುಭದಿನ ಮುಹೂರ್ತದೊಳ್ ಅರ್ಕಕೀರ್ತಿಗೆ ಗಗನಕೂಟ ಪುರಾಧೀಶನಪ್ಪ ಜ್ಯೋತಿರಥಂಗಂ ಸುಂದರಿದೇವಿಗಂ ಪುಟ್ಟಿದ ಜ್ಯೋತಿರ್ಮಾಲೆಯುಂ ತಂದು ಮದುವೆಯಂ ಮಾಡಿ ಮತ್ತಂ ಸ್ವಯಂಪ್ರಭೆಗಂ—

---

೧೫. ಹುಟ್ಟುವಂತೆ ಹಿರಿಯ ಮಗನು ಹುಟ್ಟಿದನು. ಖೇಚರರಾಜನಿಗೆ ಘನವಾದ ತೇಜಸ್ಸೂ ಅವನೊಡನೆ ಹುಟ್ಟಿತು. ("ಆ ಮೂರ್ತಿ ಪೊಂಗಮಾದಿತ್ಯಂಗಂ ಪುಟ್ಟಿದುದೆನಿಸಿದುದು"—ಎಂಬುದರಲ್ಲಿ ಅರ್ಥಕ್ಲೇಶವಿದೆ. ಈ ಪ್ರಸಂಗದಲ್ಲಿ ಅಸಗನ ಪದ್ಯ ಹೀಗಿದೆ: "ತಸ್ಯಾಮಜೀಜನತ್ಸೂನುಮರ್ಕಕೀರ್ತಿಂ ಪರಂತಪಂ ಪ್ರಭಾತ ಇವಸ ಪ್ರಾಚ್ಯಾಮರ್ಕಂ ಪದ್ಮೈಕವಲ್ಲಭಮ್")

ವ॥ ಅರ್ಕಕೀರ್ತಿಯೆಂಬ ಹೆಸರಿನಿಂದ ಈ ಹಿರಿಮಗನು ಬೆಳೆಯುತ್ತಿರಲಾಗಿ—

೧೬. ಮಾವಿನಮರದಲ್ಲಿ ಸುಂದರವಾದ ಎಳೆಯ ಮೊಗ್ಗು ಮೊದಲು ಹುಟ್ಟಿ, ಅದರ ತರುವಾಯ ಹೂಗೊಂಚಲು ಅರಳುವ ಹಾಗೆ, ಸಕಲ ಕಲಾಪ್ರವೀಣನಾದ ಅರ್ಕಕೀರ್ತಿಯ ತರುವಾಯ, ತುಂಬ ಕೋಮಲೆಯೂ ವಿಲಾಸವತಿಯೂ ಆದ,

೧೭. ನೂತನವಾದ ರೂಪ-ಹಾವ-ಭಾವಗಳಿಂದ ಸಂಪನ್ನಳಾದ ಸ್ವಯಂಪ್ರಭೆಯೆಂಬ ಮಗಳು ಹುಟ್ಟಿದಳು. ಸೇವಕರಾದ ಭೂಚರ-ಖೇಚರರ ಕಣ್ಣಗೊಂಬೆಯಂತೆ, ಮನ್ಮಥನ ವೃಕ್ಷದಂತೆ(?) ಇದ್ದ ಆ ಕನ್ಯೆಯ ದೇಹಕಾಂತಿ ಮಾನವರ ಮನಸ್ಸೆಂಬ ತಾವರೆಗಳನ್ನು ಅರಳಿಸುವಲ್ಲಿ ಸೂರ್ಯನಾಗಿಯೂ, ಕಣ್ಣುಗಳೆಂಬ ಬೆಳ್ದಾವರೆಗಳನ್ನು ಅರಳಿಸುವಲ್ಲಿ ಚಂದ್ರನಾಗಿಯೂ ಶೋಭಿಸುತ್ತಿತ್ತು.

ವ॥ ತಂದೆಯಾದ ಜ್ವಳನಜಟಿ ಮಹಾರಾಜನು ಒಂದು ದಿನ ಶುಭ ಮುಹೂರ್ತದಲ್ಲಿ ಗಗನಕೂಟ ಪುರಾಧಿಪತಿಯಾದ ಜ್ಯೋತಿರಥ ಹಾಗು ಅವನ ರಾಣಿ ಸುಂದರಿದೇವಿಯ ಮಗಳಾದ ಜ್ಯೋತಿರ್ಮಾಲೆಯೆಂಬವಳನ್ನು ತಂದು, ಅರ್ಕಕೀರ್ತಿಗೆ ಮದುವೆಮಾಡಿದನು. ಸ್ವಯಂಪ್ರಭೆಗೆ—

ಕಂ॥ ಬಂದಿಸಿ ಬಟಿಕೆ ಯಥಾಕ್ರಮ
ದಿಂದಮಳಾರ್ಚನೆಗಳಿಂದಮರ್ಚಿಸಿ ಪರಮಾ
ನಂದಂ ಕಡೆಯ ಜಿನೇಶ್ವರ
ಮಂದಿರದೋಳ್ ಕಂಡನೊರ್ವನಂಬರ ಚರನಂ ॥ ೪ ॥

ವ॥ ಕಂಡು—

ಕಂ॥ ಬಗೆ ಬೆಚ್ಚು[1] ನಟ್ಟ ದಿಟ್ಟಿಯ
ನುಗಿಯಲ್ಕಂ ಬಗೆಯ ತಾಱದೆ ವಿದ್ಧರ
—.................................— —
............ಬರೆದಂಬರ ಚರೇಂದ್ರ ಪ್ರತಿಕೃತಿರ್ದಂ ॥ ೫ ॥

ವ॥ ಅಂತು ಭಾವಾನುಬಂಧ ನಿಜಮೋಹದಿನಿರ್ವರು[2]ಮೋರೊರ್ವ[3]ರಂ—

ಉ॥ ಸಂತಸದಂತನೆಯ್ದೆ ನಡೆ ನೋಡುವುದುಂ ಖಚರೇಂದ್ರನೆಂದನೆ
ನ್ನಂ ತವೆ ಪುಣ್ಯಮೂರ್ತಿಯುತನ್ನೆ ಪರಮೇಶ್ವರ ನೀನುಮಿಂತು ನೋ
ಟ್ಟಂತಿರೆ ನೋಂತನೇ ಮನುಜ ಕೀಟಕನೊಳ್ ನಿನಗೆನ್ನೊಳಾವುದ
ತ್ಯಂತ ಮನೋ[3]ಹರಂ[3] ಸಕಳ ನಾಕಿನಿಕಾಯ ಸಭಾಭಿವಂದಿತಾ ॥ ೬ ॥

ವ॥ [4]ಎಂದತೀತಭವ[4] ಸೌಧರ್ಮಿಕೆಯ ಕೂರ್ಮೆಯ ಭರದಿಂದೆಱಗುವಂತೆಱಗಿ ಪೊಡವಡುವುದುಂ—

---

೪. ವಂದಿಸಿದನು ; ಆಮೇಲೆ ವಿಧ್ಯುಕ್ತವಾಗಿ ಅನೇಕ ವಿಧವಾದ ಅರ್ಚನ ದ್ರವ್ಯಗಳಿಂದ ಪೂಜೆಮಾಡಿ ತುಂಬ ಸಂತೋಷಪಟ್ಟು, ಕೊನೆಯ ಜಿನಾಲಯದಲ್ಲಿ ಖೇಚರನೊಬ್ಬನನ್ನು ಕಂಡನು.

ವ॥ ಹಾಗೆ ಕಂಡಾಗ—

೫. ಮನಸ್ಸು ಬೆಸೆದು, ನಟ್ಟ ದೃಷ್ಟಿಯನ್ನು ಕೀಳುವುದಕ್ಕೂ ಮನಸ್ಸಾಗದೆ ಚಿತ್ರದಲ್ಲಿ................ ಬರೆದಿಟ್ಟ ಖೇಚರನ ಆಕೃತಿಯಂತೆ ನಿಶ್ಚಲನಾಗಿ ನಿಂತನು.

ವ॥ ಹೀಗೆ ಪೂರ್ವಭವ ಸಂಬಂಧದಿಂದುಂಟಾದ ಮೋಹಕ್ಕೊಳಗಾಗಿ ಒಬ್ಬರೊಬ್ಬರನ್ನು—

೬. ಪರಮ ಸಂತೋಷದಿಂದ ನೋಡುತ್ತಿರಲಾಗಿ ಆ ಖೇಚರರಾಜನು ಹೀಗೆ ನುಡಿದನು : "ಪುಣ್ಯಮೂರ್ತಿಯೂ ಪರಮೇಶ್ವರನೂ ಆದ ನೀನು ನನ್ನನ್ನು ಹೀಗೆ ಕಣ್ಣಿಟ್ಟು ನೋಡಬೇಕಾದರೆ ಮನುಷ್ಯಕೀಟನಾದ ನಾನು ಅಷ್ಟು ಪುಣ್ಯಶಾಲಿಯೆ ? ಸಕಲ ದೇವಸಭೆಯಿಂದ ಪೂಜಿತನಾದ ದೇವನೆ, ನನ್ನಲ್ಲಿ ನಿನಗೆ ಅಂತಹುದೇನು ಕಂಡಿತು ?"

ವ॥ ಹೀಗೆಂದು ಯಾವುದೊ ಹಿಂದಿನ ಜನ್ಮದ ಋಣಾನುಬಂಧದ ಹಾಗೂ ಪ್ರೇಮದ ಅತಿಶಯ ಭಾರದಿಂದ ಬಾಗುವಂತೆ ಬಾಗಿ ನಮಸ್ಕರಿಸಿದನು.

---

1. ಟ್ಟು (ಅ) 2. ಮೊಂದೊರ್ವ (ಅ) 3. ಮುದಂ (ಅ) 4. ಎಂದತಿಭವ (ಮ)

ಕಂ॥ ದೇವೇಂದ್ರನುಮಾಗಳ್ ದೇ
ಶಾವಧಿಯಿಂ ಚಿತ್ತದೊಳ್ ಪ್ರಯೋಗಿಸಿ ನಿಜ ಜ
ನ್ಮಾವಳಿ ಸಮೇತಮಾತ್ಮೀ
ಭಾವಮನಱಿದಂ ವ್ಯತೀ [ತ] ಭವಸಂತತಿಯುಂ ॥ ೭ ॥

ವ॥ ಅಂತು ಭವಾಳಿಯನೋಳಿಯೆ ಪೂರ್ವಾಪರ ಪರಾಮರ್ಶಂಗೆಯ್ದು—

ಕಂ॥ ಕಂಡು ದಿವಿಜೇಶ್ವರಂ ಬಗೆ
ಗೊಂಡಿರೆ ನುಡಿದಂ ವಿಯಚ್ಚರಂ ಮುಂ ನಿನ್ನಂ
ಕಂಡಱಿಯದೆಯುಂ ಸ್ವಾಮಿ
ಕಂಡಂತಾದಪುದಖಂಡಿತ ವ್ಯಾಮೋಹಂ ॥ ೮ ॥

ನಿನ್ನ ದಯೆವೆರಸು ನೋಟ್ಟಿ ಮ
ಹೋನ್ನತಿಯುಂ [1]ಸತ್ಪ್ರ[1]ಸಾದಮುಂ ಕಿಱುಕುಳನೆ
ಪ್ಪೆನ್ನೊಂದಿಗನೊಳನುಚಿತಮಿ
[2]ದನ್ನಿ[2]ಮ್ಮಡಿ ಬೆಸಸಿ ಕಳೆಯ ಮತ್ಸಂಶಯಮಂ ॥ ೯ ॥

ವ॥ ಅದಱಿನವಧಿಬೋಧಲೋಚನನಪ್ಪ ನಿನಗೆ ಗೋಚರಮಲ್ಲದುದೊಂದುಮಿಲ್ಲ ರೂಪ ದರ್ಶನಮಾತ್ರದೊಳೆಲ್ಲಂ ವ್ಯಕ್ತಮಕ್ಕುಂ ಮತ್ಪ್ರೇಮಾನುಬಂಧ ಕಾರಣಮುಮಂ ಭವದ್ದಯಾ ವಿಶೇಷೋದಯ ನಿಮಿತ್ತಮುಮಂ ಕೇಳಲಟ್ಟಿಯಾದಪುದೆನೆ—

ಕಂ॥ ಪದದಪ್ಪದೆಯುಂ ಒಗೆ ಬೆದ
[3][ಱ][3]ದೆಯುಂ ಕತೆ ಕಿಡದೆಯುಂ ಭವಾವಳಿ ತಡಮಾ
ಗದೆಯುಂ ಸವಿ ತವದೆಯುಮಂ
ಬುದ ನಿನದನತಂದ್ರನಿಂದ್ರನಾ ಜಿನಚಂದ್ರಂ ॥ ೧೦ ॥

---

೭. ಅಚ್ಯುತೇಂದ್ರನು ಕೂಡ ಆಗ ದೇಶಾವಧಿಜ್ಞಾನವನ್ನು ಪ್ರಯೋಗಿಸಿ, ತನ್ನ ಪೂರ್ವ ಜನ್ಮಾವಳಿಯನ್ನೂ ಅದರಿಂದುಂಟಾದ ತನ್ನ ಈಗಿನ ಆತ್ಮೀಯತೆಯ ಭಾವವನ್ನೂ ಅರಿತುಕೊಂಡನು.

ವ॥ ಹೀಗೆ ಪೂರ್ವಭವಾವಳಿಯನ್ನೂ ಅದರ ಪೂರ್ವಾಪರ ಸಂಬಂಧವನ್ನೂ ಕ್ರಮವಾಗಿ ಪರಾಮರ್ಶಿಸಿ ನೋಡಿ—

೮. ಸಮಾಹಿತ ಚಿತ್ತನಾದನು. ಆಗ ಆ ಖೇಚರನು ಹೀಗೆಂದನು: "ಸ್ವಾಮಿ, ಈ ಮುನ್ನ ನಿನ್ನನ್ನು ಕಂಡರಿಯದಿದ್ದರೂ ಎಲ್ಲಿಯೊ ಕಂಡಂತೆ ನನಗೆ ವ್ಯಾಮೋಹವುಂಟಾಗುವುದು.

೯. (ಮಹಾತ್ಮನಾದ) ನೀನು ಕ್ಷುದ್ರನಾದ ನನ್ನನ್ನು ಹೀಗೆ ದಯಾಪೂರ್ಣವಾಗಿ ನೋಡುವೆಯಲ್ಲ! ಈ ಭಾಗ್ಯಕ್ಕೆ, ಈ ಅನುಗ್ರಹಕ್ಕೆ ನಾನು ಪಾತ್ರನೆ? ಇದೇನೆಂದು ನೀನು ತಿಳಿಸಿ, ನನ್ನ ಸಂಶಯವನ್ನು ನಿವಾರಿಸಬೇಕು.

ವ॥ ಅವಧಿಜ್ಞಾನವುಳ್ಳ ನಿನ್ನ ಕಣ್ಣಿಗೆ ಕಾಣದುದು ಯಾವುದೂ ಇಲ್ಲ. ರೂಪವನ್ನು ಕಂಡಾಕ್ಷಣಕ್ಕೇ ನಿನಗೆ ಎಲ್ಲವೂ ಸ್ಫುಟವಾಗಿ ತಿಳಿಯುವುದು. ನಿನ್ನಲ್ಲಿ ನನಗೇಕೆ ಪ್ರೇಮವುಂಟಾಗಿದೆ? ಹಾಗು ನೀನು ನನ್ನಲ್ಲಿ ಇಷ್ಟೊಂದು ದಯೆಯನ್ನು ಏಕೆ ತೋರುತ್ತಲಿರುವೆ? ಇದರ ಕಾರಣವನ್ನು ತಿಳಿಯಲು ನಾನು ಉತ್ಸುಕನಾಗಿದ್ದೇನೆ."

೧೦. ಹೀಗೆ ಕೇಳಲಾಗಿ ಹದ ತಪ್ಪದಂತೆಯೂ, ಮನಸ್ಸು ಬೆದರದಂತೆಯೂ, ಕತೆ ಕೆಡದಂತೆಯೂ, ಭವಾವಳಿ ತೊಡಕಾಗದಂತೆಯೂ, ಸವಿ ಕುಗ್ಗದಂತೆಯೂ ಆ ಜಿನಮತ ಚಂದ್ರನು ಮೇಘಧ್ವನಿಯಂತೆ ಗಂಭೀರವಾದ ನುಡಿಗಳಿಂದ ಹೀಗೆ ವಿವರಿಸತೊಡಗಿದನು:

---

1. ಸಪ್ರ (ಅ) 2. ದುನಿ (ಮ) 3. ರ (ಮ)

ಮ॥ ಅಮರಾನೀಕದ ಸುತ್ತು ಪೋಲೆ ದಿನನಾಥಾವಂಧ್ಯ ಸಂಧ್ಯಾಭ್ರ ವಿ
ಭ್ರಮಮಂ ವಾಹನ ದೇವ ದಂತಿ ಶಿರದೊಳ್ ಕೂರಂಕುಸಂ ಚಾರಣ
ಕ್ರಮದಿಂದಾದಱುವತ್ತು ನಾಲ್ಕು ಪೊಳೆಪಿಂ ಕಣ್ಗೊಪ್ಪೆ ಮೇಲಪ್ಪಕೃ
ತ್ರಿಮ ಚೈತ್ಯಾಲಯ ವಂದನಕ್ಕೆ ನಡೆದಂ ಸೌಜನ್ಯ ಕಂದಾಂಕುರಂ ॥ ೧೧೬ ॥

—ಗದ್ಯ—

ಇದು

ಜಿನೇಂದ್ರ ಚರಣ ಸರಸೀರುಹ ಶಿಲೀಮುಖಾಯಮಾನ

ಶ್ರೀಮದುಭಯಕವಿ ಚಕ್ರವರ್ತಿ

ನಿರ್ವರ್ತಿತಮುಂ

ಅಮ್ಮನ ಭಕ್ತಾಭಿದಾನ ವಿದ್ಯಾನಿಧಾನ ಮಲ್ಲಪಾರ್ಯ

ತದನುಜಾತಾಭಿಜಾತ ಸಾರಸ್ವತ

ಪುನ್ನಮಾರ್ಯ ಕಾರಿತಮುಮಪ್ಪ

ಪುರಾಣಚೂಡಾಮಣಿಯೊಳ್

ಚತುರ್ಥಾಶ್ವಾಸಂ

---

೧೧೬. ಸಂಧ್ಯಾಕಾಲದಲ್ಲಿ ಸೂರ್ಯನನ್ನು ಸುತ್ತುಗಟ್ಟಿದ ಮೋಡಗಳಂತೆ ಶೋಭಿಸುವ ದೇವತೆಗಳ ಪರಿವಾರದಿಂದ ಸುತ್ತುಗಟ್ಟಲ್ಪಟ್ಟು, ತನಗೆ ವಾಹನವಾದ ದೇವಗಜದ ಕುಂಭಸ್ಥಳದಲ್ಲಿ ಚಾರಣಕ್ರಮದಿಂದ ತೋರುವ ಅರುವತ್ತು ನಾಲ್ಕು ಹೊಳಪುಗಳು ನಯನಮನೋಹರವಾಗಲಾಗಿ (ಜಂಬೂದ್ವೀಪದ) ಅಕೃತ್ರಿಮ ಚೈತ್ಯಾಲಯ ವಂದನಕ್ಕೆಂದು ಆ ದೇವನು ನಡೆದನು.

ಗದ್ಯ॥ ಇದು ಜಿನೇಶ್ವರನ ಚರಣಕಮಲದ ದುಂಬಿಯಂತಿರುವ, ಶ್ರೀಮದುಭಯಕವಿ ಚಕ್ರವರ್ತಿಯೆಂಬ ಬಿರುದಾಂಕಿತನಿಂದ ನಿರ್ವರ್ತಿತವೂ ಅಮ್ಮನ ಭಕ್ತಾಭಿದಾನ ಮಲ್ಲಪಾರ್ಯ, ಅವನ ತಮ್ಮ ಹೊಸ ಸಾರಸ್ವತ ಪುನ್ನಮಾರ್ಯ ಹೇಳಿಸಿದ ಪುರಾಣಚೂಡಾಮಣಿಯಲ್ಲಿ ನಾಲ್ಕನೆಯ ಆಶ್ವಾಸವು.

ಶ್ರೀ

ಶಾಂತಿಪುರಾಣಂ

—o—

ಪಂಚಮಾಶ್ವಾಸಂ

ಕಂ॥ ಶ್ರೀ ಜಿನಚಂದ್ರಂ ವಿಬುಧಸ
ಮಾಜಂ ಬೆರಸಂದು ವಂದನಾಭಕ್ತಿಯೊಳೇಂ
ರಾಜಿಸಿದನೊ ಗಮನದೊಳಪ
ರಾಜಿತಚರನಚ್ಯುತೇಂದ್ರನಪಗತ ತಂದ್ರಂ ॥ ೧ ॥

ವ॥ ಬಂದು ಜಂಬೂದ್ವೀಪದ—

ಉ॥ ಮಂದರಶೈಲಮಂ ದಿವಿಜನಾಯಕನೆಯ್ತರೆ ಭದ್ರಶಾಲದಿಂ
ಸಂಧಿಸಿ ನಿಂದ ನಂದನದಿನೊಪ್ಪುವ ಸೌಮನಸಾಖ್ಯದಿಂ ಮನೋ
ನಂದನಮಪ್ಪ ಪಾಂಡುಕದಿನಾ ಗಿರಿರಾಜವಿಲಾಸಮಚ್ಚರಿಯುಂ
ತಂದುದು ಕಾಣ್ಕೆಯಂ ತನಗೆ ತರ್ಪ್ಪವೊಲಂತದನಿಂದ್ರನೆಯ್ದಿದಂ ॥ ೨ ॥

ವ॥ ಎಯ್ದಿ ಕ್ರಮದೊಳ್ ಮುಂ ಪೇೞ್ದ ನಾಲ್ಕುಂ ಬನಂಗಳೊಳಗೆ ನಾಲ್ಕು ನಾಲ್ಕಾ[1]ಗೆ[1]—

ಕಂ॥ ಬೇಱಿರ್ದು ವಿರಾಜಿಪ [2]ಪ[2]ದಿ
ನಾಱುಮಕೃತ್ರಿಮ ಜಿನಾಲಯಂಗಳ್ಗೆ ಮನಂ
ಬೇಱ[3] ನುಡಿ ಬೇಱ[3] ಕಾಯಂ
ಬೇಱ[3]ನಿಸದೆ ಕರಣ ಶುದ್ಧಿಯಿಂ ಪೊಡವಟ್ಟಂ ॥ ೩ ॥

ವ॥ ಅಂತು ದೂರದೊಳ್ ಪೊಡೆವಟ್ಟೆಯ್ದೆವಂದು ಬಲಗೊಂಡೊಳಗಂ ಪೊಕ್ಕು ಕ್ರಿಯಾಪೂರ್ವಕದಿಂ ದೇವರಂ—

ಆಶ್ವಾಸ ೫

೧. ದೇವತೆಗಳ ಪರಿವಾರದೊಂದಿಗೆ ನಿರಾಲಸನಾದ ಆ ಅಚ್ಯುತೇಂದ್ರನು ವಂದನಾಭಕ್ತಿಯಿಂದ ಆಕಾಶಮಾರ್ಗವಾಗಿ ಹೋಗುತ್ತ ಎಷ್ಟೊಂದು ಶೋಭೆಯನ್ನು ಪಡೆದಿದ್ದನು!

ವ॥ ಹಾಗೆ ಬಂದು ಜಂಬೂದ್ವೀಪದ—

೨. ಮಂದರಗಿರಿಯನ್ನು ತಲ್ಪಿದನು. ಸುಂದರವಾದ ಶಾಲವೃಕ್ಷಗಳ ವನದಿಂದಲೂ, ತನಗೆ ಸಾರ್ಥಕವಾದ ದೇವಪರ್ವತವೆಂಬ ಹೆಸರಿನಿಂದಲೂ, ಮನೋಹರವಾದ ಪಾಂಡುಕ ಶಿಲಾತಳದಿಂದಲೂ ಶೋಭಿಸುತ್ತಿರುವ ಆ ಮಹಾ ಗಿರಿಯು ಅಚ್ಯುತೇಂದ್ರನಿಗೆ ಕಾಣಿಕೆಯನ್ನೊಪ್ಪಿಸುವಂತೆ ತನ್ನ ಸೌಂದರ್ಯ ವಿಲಾಸದಿಂದ ಸಂತೋಷವನ್ನೊದಗಿಸಿತು.

ವ॥ ಹಾಗೆ ಬಂದು, ಅಲ್ಲಿಯ ನಾಲ್ಕು ವನಗಳಲ್ಲಿಯೂ ನಾಲ್ಕು ನಾಲ್ಕರಂತೆ—

೩. ಬೇರೆ ಬೇರೆಯಾಗಿದ್ದ ಹದಿನಾರು ಅಕೃತ್ರಿಮ ಜಿನಾಲಯಗಳಿಗೆ (ಮನೋವಾಕ್ಕಾಯವೆಂಬ) ತ್ರಿಕರಣ ಪೂರ್ವಕವಾಗಿ ವಂದಿಸಿದನು.

ವ॥ ಹಾಗೆ ದೂರದಿಂದಲೆ ವಂದಿಸಿ, ನಡೆದು ಬಂದು ಪ್ರದಕ್ಷಿಣೆ ಹಾಕಿ, ಒಳಗೆ ಪ್ರವೇಶಿಸಿ ಕ್ರಿಯಾಪುರಸ್ಸರವಾಗಿ ದೇವರನ್ನು—

---

1. ಗ (ಅ) 2. ಠ (ಮ)

ಕಂ॥ ಅತಿಶಯ ವಿಶದ ಕಲಾ ಪರಿ
ಣತಿಯೊಳ್ ಸೆಣಸಾಗೆ ನೆರೆವವೊಲ್ ಯೌವನದು
ನ್ನತಿ ನೆ[1][ೞೆ][1]ಯೆ ನೆ[1][ೞೆ][1]ಯೆ ಕನ್ಯಾ
ವ್ರತಮೊಡನೆಱೆದುದು ತದೀಯ ಗುರುಜನವಿನುತಂ ॥ ೧೮ ॥

ವ॥ ಅಂತು ಯೌವನಂ ನೆಱೆವಿನಂ ಒಂದು ದೇವಸಂ ಶ್ರೀ ಪಂಚಮಿಯೊಳುಪವಾಸನಿರತೆಯಾಗಿ ಸಿದ್ಧಕೂಟ ಜಿನೇಂದ್ರ ಮಂದಿರದೊಳ್ ತ್ರಿಭುವನೈಕ ಲಲಾಮನ (ಜಿನನ)ನಭಿಷೇಕಪೂರ್ವಕಮಷ್ಟ ವಿಧಾರ್ಚನೆಗಳಿಂದಮರ್ಚಿಸಿ ಬಂದು ನಿಜ ಜನಕಂಗಂ ಜನನಿಗಂ ತಮ್ಮಣ್ಣನಪ್ಪರ್ಕಕೀರ್ತಿಗಂ ಸೇಸೆಯನಿಕ್ಕಿ ತನ್ನ ಚೆಂಬೊನ್ನ ಕನ್ನೆವಾಡಕ್ಕೆ ಪೋಪಳಂ ಜ್ವಳನಜಟಿ ನೋಡಿ—

ಚಂ॥ ಅಮಿತ ಮದಾಲಸಾಂಗಜಮತಂಗಜವೋ ನಡೆಗೊಂಡನಂಗ ಜಂ
ಗಮಲತೆಯೋ ಮದೋತ್ಕ ಕಳಹಂಸೆಯೊ ಚೇತನವೆತ್ತ ಚಿತ್ರಮೋ
ಸಮೆದ ಮನೋಜ ಕೇತನಮೊ ಕಣ್ಮಸೆಯಿಟ್ಟರಲಂಬೊ ಕಾಮ ಚಾ
ಪಮೊ ಕುಸುಮಾಸ್ತ್ರಚಕ್ರಿಕರಚಕ್ರಮೊ ಕಾಂತೆ ಬಸಂತ ಕಾಂತೆಯೋ ॥ ೧೯ ॥

ವ॥ ಎಂದು ಬಗೆದು ಮಗಳೇೞುಂಜವ್ವನಮುಮಂ ಕನ್ಯಾವ್ರತ ನಿಯತಮಾದ ಪಾವನಮುಮಂ ಸೌಂದರ್ಯ ಸಂಪ್ರತಿಪತ್ತಿಯುಮಂ ಲಾವಣ್ಯಸದ್ಭಾವಮುಮಂ ಸಂಭೋಗಪ್ರಾವೀಣ್ಯಾಭಾವಮುಮಂ ವಿಭ್ರಮ [2]ಸಂಭಾವ[2]ಮುಮಂ ಕಾಮ ಸಂಭ್ರಮಾವಧೀರಣಮುಮಂ ವಿಲಾಸ ಸಮೇತತೆಯುಮಂ ಮಿಥುನಲೀಲಾ ವ್ಯಪೇತತೆಯುಮಂ ಬೇಱೆವೇಱೆ ಪೞ್ಚಿ ಪೞ್ಚಿ ಮಂತ್ರಿವರ್ಗದೊಳಾಲೋಚಿಸಿ—

ಕಂ॥ ಜನಪತಿ ಬೞಿಯಂ ಸಂಭಿ
ನ್ನನೆಂಬ ನೈಮಿತ್ತಿಕಂಗೆ ಬೞಿಯಟ್ಟಿ ಚಿರಂ
ತನರಿರ್ ದೃಷ್ಟ ಪರಂಪರ
ವಿನೂತ ವಿದ್ಯಾವಿಶೇಷವಿದರಿರ್ ಪೇೞಿಂ ॥ ೨೦ ॥

---

೧೮. ಆಕೆಯ ವಿಸ್ತಾರವಾದ ಕಲಾಪರಿಣತಿಯೊಡನೆ ಸ್ಪರ್ಧಿಸುವಂತೆ ಯೌವನವೂ ಅಭಿವೃದ್ಧಿಯಾಗಲಾಗಿ, ಆಕೆ ಗುರುಹಿರಿಯರಿಗೆ ಒಪ್ಪಿಗೆಯಾದ ಕನ್ಯಾವ್ರತವನ್ನು ಕೈಕೊಂಡು ನಡೆಯಿಸಿದಳು.

ವ॥ ಹೀಗೆ ಯೌವನಪೂರ್ಣೆಯಾಗಿ ಒಂದು ದಿನ ಆಕೆ ಶ್ರೀಪಂಚಮಿಯಲ್ಲಿ ಉಪವಾಸಮಾಡಿ, ಸಿದ್ಧಕೂಟ ಜಿನ ಮಂದಿರದಲ್ಲಿ ಜಿನೇಂದ್ರನಿಗೆ ಅಭಿಷೇಕ ಪುರಸ್ಸರವಾಗಿ ಅಷ್ಟವಿಧ ಪೂಜೆಯನ್ನು ನೆರವೇರಿಸಿ ಬಂದು, ತನ್ನ ತಂದೆತಾಯಿಗಳಿಗೂ ಅಣ್ಣನಾದ ಅರ್ಕಕೀರ್ತಿಗೂ ಶೇಷಾಕ್ಷತೆಗಳನ್ನು ಸೂಸಿ, ತನ್ನ ಚಿನ್ನದ ಅಂತಃಪುರಕ್ಕೆ ಹೊರಟಳು. ಹಾಗೆ ಹೋಗುತ್ತಿರುವ ಅವಳನ್ನು ಜ್ವಳನಜಟಿ ನೋಡಿ—

೧೯. ಇವಳೇನು ಮದಾತಿರೇಕದಿಂದ ಮಂದಗತಿಯಾದ ಮನ್ಮಥನ ಆನೆಯೊ, ನಡೆದಾಡಲು ಕಲಿತುಕೊಂಡ ಕಾಮನ ಬಳ್ಳಿಯೊ, ಮದವೇರಿದ ಕಲಹಂಸಿಯೊ, ಜೀವತಾಳಿದ ಚಿತ್ರವೊ, ಮದನನ ಪತಾಕೆಯೊ, ಸಾಣೆ ಹಿಡಿದಿಟ್ಟ ಪುಷ್ಪಬಾಣವೊ, ಮನ್ಮಥನ ಧನುಸ್ಸೊ, ಕಾಮನೆಂಬ ಚಕ್ರವರ್ತಿಯ ಕೈಯಲ್ಲಿರುವ ಚಕ್ರಾಯುಧವೊ, ಅಥವಾ ವಸಂತ ಲಕ್ಷ್ಮಿಯೊ!

ವ॥ ಎಂದುಕೊಂಡು "ಮಗಳಿಗೆ ಈಗ ತುಂಬು ಯೌವನ; ಸೌಂದರ್ಯ ಸಮೃದ್ಧಿಯಾಗಿದೆ; ವಿಭ್ರಮ-ವಿಲಾಸಗಳುಂಟು; ಕನ್ಯಾವ್ರತದಲ್ಲಿ ನಿರತಳಾಗಿ ಪವಿತ್ರಳಾಗಿದ್ದಾಳೆ; ಆದರೆ ಈಕೆಗೆ ಕಾಮಭಾವನೆಯ ಸಂಭ್ರಮವಾಗಲಿ, ದಾಂಪತ್ಯಸುಖದ ಸೊಗಸಾಗಲಿ ಇನ್ನೂ ದೊರೆತಿಲ್ಲ"—ಹೀಗೆ ಪರಾಮರ್ಶಿಸಿ ನೋಡಿ, ತನ್ನ ಮಂತ್ರಿಗಳೊಡನೆ ಆಲೋಚಿಸಿ

೨೦. ಸಂಭಿನ್ನನೆಂಬ ಭವಿಷ್ಯಜ್ಞನನ್ನು ಕರೆಯಿಸಿಕೊಂಡು "ನೀವು ಹಿರಿಯರು; ಅನೇಕ ನೂತನ ವಿದ್ಯೆಗಳಲ್ಲಿ ಪರಿಣತರಾದವರು. ಹೇಳಿ—

---

1. ರೆ (ಮ) 2. ಸಂಧಾರಣ (ಅ)

ಮ॥ ನರರೊಳ್ ಮತ್ಸುತೆಗೀ ಸ್ವಯಂಪ್ರಭೆಗೆ ಪೇೞಾರ್ ಧನ್ಯರಾರ್ ಮಾನ್ಯರಾರ್
ದೊರೆಯೆಂದಂದವನೀಶ[1]ನೆಬ್ದು[1] ಬೆಸಗೊಂಡಾಗಳ್ ನಿಮಿತ್ತಜ್ಞನಂ
ಬರ ಭೂಗೋಚರರೊಳ್ ಪರೀಕ್ಷಿಸಿ ನಿಮಿತ್ತಾಂಗಂಗಳೊಳ್ ನೋಡಿ ಕಂ
ಡರದಿಂತೆಂದನಧೀಶನಂ ಬಗೆದು ಕೇಳ್ ಪೇೞ್ವೆಂ ಖಗಾಧೀಶ್ವರಾ ॥ ೨೧ ॥

ಭರತಕ್ಷೇತ್ರ ಲಲಾಮಮಪ್ಪುದು ಸುರಮ್ಯಂ ನಾಡು ತತ್ಪೌದನಂ
ಪುರಮುಂಟಂತದುವಂ ಪ್ರಜಾಪತಿ ಮಹೀಪಾಲಂ ದಲಾಳ್ಗುಂ ಜಗ
ಕ್ಕೆರಡುದ್ಯನ್ಮದ ಲೇಖೆಯಂತಿರೆ ತದುರ್ವೀಪಾಲಕಂಗಿಷ್ಟ ಸುಂ
ದರಿಯರ್ ಸುಂದರರೂಪೆಯರ್ ಸೊಬಗೆಯರ್ [2]ಕೂರ್ತಿ[2]ರ್ಪರುರ್ವೀಶ್ವರಾ ॥ ೨೨ ॥

ಕಂ॥ ಆ ವಧುವಿರ್ವರೊಳೆ ವಿಜ
ಯಾವತಿಯೆಂಬಳ್ ವಿಳಾಸವತಿ ಪಿರಿಯ ಮಹಾ
ದೇವಿ ಮೃಗನಯನಯುಗೆ ಮೃಗ
ಯಾವತಿ ಕಿಱಿಯರಸಿಯಾಗಿ ಸಲೆ ಪಲಕಾಲಂ ॥ ೨೩ ॥

ವ॥ ಅಲ್ಲಿ ಪಿರಿಯರಸಿಯ ಮಗಂ ವಿಜಯನುಂ ಕಿಱಿಯರಸಿಯ ಮಗಂ ತ್ರಿಪೃಷ್ಠನುಮೆಂಬರ್ ಬಲದೇವ ವಾಸುದೇವರಾಗಿ ಪುಟ್ಟಿದರವರೊಳಗೆ—

ಕಂ॥ ವಿಜಯಂ ಲಕ್ಷ್ಮೀ ನಿಲಯಾಂ
ಬುಜಂ ಜಯಶ್ರೀ ಪ್ರಿಯಂ ತ್ರಿಪೃಷ್ಠನರಾತಿ
ಧ್ವ [ಜಿ]ನೀ ಸಮಸ್ತ ಮದಸಾ
ಮಜಕುಲನಗಕುಲಕೆ ಶನಿಯುಮಶನಿಯುಮಾದಂ ॥ ೨೪ ॥

---

೨೧. ಮಾನವಲೋಕದಲ್ಲಿ ನನ್ನ ಮಗಳಾದ ಸ್ವಯಂಪ್ರಭೆಗೆ ಅನುರೂಪರಾದ ಮಹಾತ್ಮರಾರು ? ಧನ್ಯರಾರು ?" ಹೀಗೆ ಆತನು ಕೇಳಲಾಗಿ ಭವಿಸ್ಯಜ್ಞನು ಖೇಚರರಲ್ಲಿಯೂ ಭೂಚರರಲ್ಲಿಯೂ ಪರೀಕ್ಷಿಸಿ ನೋಡಿ, ಜ್ಯೋತಿಷ ಕ್ರಮದಿಂದ ಗುಣಿಸಿ, ಕಂಡುಹಿಡಿದು ಕೂಡಲೆ ಹೀಗೆ ನುಡಿದನು : "ಖೇಚರರಾಜನೇ, ನಾನು ಹೇಳುವುದನ್ನು ಚಿತ್ತಗೊಟ್ಟು ಕೇಳು.

೨೨. ಭರತಕ್ಷೇತ್ರಕ್ಕೆ ಭೂಷಣವಾಗಿ ಸುರಮ್ಯವೆಂಬ ನಾಡುಂಟು. ಅದರ ರಾಜಧಾನಿ ಪೌದನಪುರ. ಅದಕ್ಕೆ ಅಧಿಪತಿಯಾದವನು ಪ್ರಜಾಪತಿರಾಜ. ಭದ್ರಗಜಕ್ಕೆ ಎರಡು ಮದರೇಖೆಗಳಿರುವಂತೆ ಆತನಿಗೆ ಸುಂದರಿಯರಾದ ಹಾಗು ಪರಮಪ್ರಿಯರಾದ ಇಬ್ಬರು ಹೆಂಡಿರು.

೨೩. ಅವರಲ್ಲಿ ವಿಜಯಾವತಿಯೆಂಬ ವಿಲಾಸಸಂಪನ್ನೆ ಹಿರಿಯ ಮಹಾರಾಣಿ; ಹರಿಣಾಕ್ಷಿಯಾದ ಮೃಗಯಾವತಿಯೆಂಬವಳು ಕಿರಿಯ ಅರಸಿ. ಹೀಗೆ ಅವರು ಹಲವಾರು ಕಾಲ ಇರಲಾಗಿ,

ವ॥ ಹಿರಿಯರಸಿಯಲ್ಲಿ ವಿಜಯನೆಂಬ ಹಿರಿಮಗನೂ, ಕಿರಿಯವಳಲ್ಲಿ ತ್ರಿಪೃಷ್ಠನೆಂಬ ಕಿರಿಮಗನೂ ಬಲದೇವ-ವಾಸುದೇವರಾಗಿ ಹುಟ್ಟಿದರು.

೨೪. ವಿಜಯನು ಸದಾ ಜಯವಂತನೂ ಸೌಭಾಗ್ಯವಂತನೂ ಆದನು ; ತ್ರಿಪೃಷ್ಠನು ಶತ್ರುಸೈನ್ಯದ ಸಮಸ್ತ ಮದಗಜಗಳೆಂಬ ಕುಲಪರ್ವತಗಳಿಗೆ ವಜ್ರಸ್ವರೂಪನೂ ಶನಿಸ್ವರೂಪನೂ ಆದನು.

---

1. ನಿರ್ದು (ಅ) 2. ಕೂಡಿ (ಅ)

ಕಂ॥ ಅ ಕಿಜಾಯನನಿಭರಿಪ್ರ ಕೊಲೆ
ಲೋಕವನಿಭರಿಪುವನಸಗವೊಯ್ಯೊಯ್ದು ಜಯ
ಶ್ರೀಕಬಲಿತ ವೈರಿ ನಿರಾ
ಲೋಕಂ ಮಾಡಿದನಖಂಡ ಭೂಮಂಡಲಮಂ ॥ ೨೫ ॥

ವ॥ ಅಂತು ಬಾಳಕೇಳೀಲೀಳೆಯುಂ ಪ್ರಜಾಪಾಲನಮನಪ್ಪುಕೆಯೆ ಸಿದ್ಧಾದೇಶದಿಂ ಮತ್ತೊಂದು ದಿವಸಂ ತಮ್ಮಯ್ಯನೋಲಗದೊಳ್ ಮಾತುಮಾತಾಗೆ ಕುಲವೃದ್ಧರನುಡಿಯಂವಿಜಯಂ ಕೇಳ್ದು ತಮ್ಮನುಂ ತಾನುಂ ಅನೇಕ ಕುಲರಾಜಸಮಾಜಂಬೆರಸು ಆಡುವನೆವದೊಳ್ಪೋಗಿ ಕೋಟಿಕ ಶಿಲೆಯಂ ತೋಱಿ—

ಮ॥ ಕ್ಷಿತಿನಾಥತ್ವಮನೊಲ್ವ ರಾಜತನಯರ್ ಪೂಣ್ದೆತ್ತಲೀ ಪ್ರಸ್ತರ
ಕ್ಕೆ ತಗುಳ್ವೆಂಬುದುಮೆತ್ತಿಕೊಂಡು ಗಗನಕ್ಕೀಡಾಡಿ ವಾಮೇತರಾ
ಯತ ಹಸ್ತಾಗ್ರದೊಳಾಂತು ತಾಳ್ದಿದುದಱಿಂ ಬಾಳತ್ವದೊಳ್ ಕೋಟಿಕಾಂ
ತಿತಮಾಕಲ್ ತಿರಿಕಲ್ ತ್ರಿಪೃಷ್ಠಮಹಿಪಂಗಕ್ಕುಂ [1]ಪೆಱಂಗಕ್ಕು[1]ಮೇ ॥ ೨೬ ॥

ವ॥ ಅದಲ್ಲದೆಯುಮಳಕಾಪುರವರೇಶ್ವರಂ ಮಯೂರಗ್ರೀವಂಗಂ ನೀಳಾಂಜನೆಗಂ ಪುಟ್ಟಿದ ನಿಖಿಳ ಖೇಚರ ಲಲಾಮಾಯಮಾನಂ ತ್ರಿಖಂಡಾಧಿಪಂ ಅರ್ಧಚಕ್ರವರ್ತಿಯ[2]ಪ್ಪಶ್ವ[2]ಗ್ರೀವಂ ಆ ತ್ರಿಪೃಷ್ಠಂಗಿದಿರ್ಚೆ—

ಮ॥ ವನನಾಗಾರಿಯನಾಂತ ದಂತಿಶಿಶುವೊಲ್ ದಿಗ್ದಂತಿಯೊಳ್ ಪೋರ್ದ ಹೀ
ನನವೋಲ್ ಗಾಳಿಯ ಕೋ[3][ಳೊ][3]ಳಿಟ್ಟ ಸೊಡರ್ವೋಲ್ ದಾವಾಗ್ನಿಗೊಡ್ಡಿರ್ದ ಕಾ
ನನಕುಂಜಂಬೊಲಿನಂಗೆ ನಿಂದ ತಿಮಿರವ್ಯೂಹಂಬೊಲುಗ್ರಾಹಿ ಮ
ರ್ದನದೊಳ್ ಮಚ್ಚರವುಳ್ಳ ಬಾಳಫಣಿವೋಲ್ ನೀಡಿಲ್ಲದ[4][ಟ್ಯಾ][4]ಡುಗುಂ ॥ ೨೭ ॥

ವ॥ ಈ ವಚನಮಾದೇಶವಚನಮಂತು—

---

೨೫. ರಾಜ್ಯದಲ್ಲಿ ಒಂದು ಸಿಂಹವು ಜನರನ್ನು ಕೊಂದು ಹಾವಳಿ ಮಾಡುತ್ತಿತ್ತು. ತ್ರಿಪೃಷ್ಠನು ಆ ಸಿಂಹವನ್ನು ಹಿಡಿದು, ಅಗಸನು ಬಟ್ಟೆಯನ್ನು ಎತ್ತಿ ಕುಕ್ಕಿದಂತೆ ಕುಕ್ಕಿ ಕೊಂದು ಜನತೆಗೆ ಉಪದ್ರವವಿಲ್ಲದಂತೆ ಮಾಡಿದನು.

ವ॥ ಹೀಗೆ ಆತನ ಬಾಲ್ಯಕಾಲದ ಆಟವೂ ಪ್ರಜಾಪಾಲನವನ್ನು ವಹಿಸಿಕೊಂಡಿತು. ಮತ್ತೊಂದು ದಿವಸ ತಮ್ಮ ತಂದೆಯ ಓಲಗದಲ್ಲಿ ಮಾತಾಡುತ್ತಿರುವ ತಮ್ಮ ಕುಲವೃದ್ಧರಿಂದ ಸಿದ್ಧಾದೇಶದ ನುಡಿಯನ್ನು ಕೇಳಿ ವಿಜಯನು ತನ್ನ ತಮ್ಮ ಹಾಗು ಅನೇಕ ರಾಜಕುಮಾರರೊಡನೆ ಆಡುವ ನೆವದಲ್ಲಿ ಹೋಗಿ, ಕೋಟಿಕ ಶಿಲೆಯನ್ನು ತೋರಿಸಿ—

೨೬. "(ಸಮಸ್ತ) ಭೂಮಿಯ ಒಡೆತನವನ್ನು ಬಯಸುವ ರಾಜಪುತ್ರರು ಇದ್ದರೆ, ಪ್ರತಿಜ್ಞೆಮಾಡಿ ಈ ಬಂಡೆಯನ್ನು ಹಿಡಿದೆತ್ತಲಿ" ಎಂದು ನುಡಿದನು. ಆಗ ತ್ರಿಪೃಷ್ಠನೇ ಮುಂದಾಗಿ ಅದನ್ನು ಎತ್ತಿ ಆಕಾಶಕ್ಕೆ ಎಸೆದನು; ಮತ್ತು ಅದು ಮರಳಿ ಬೀಳುವಾಗ ಬಲಗೈಯ ತುದಿಯಲ್ಲಿ ಹಿಡಿದು ನಿಲ್ಲಿಸಿದನು. ಎಳೆಯ ವಯಸ್ಸಿನಲ್ಲಿ ಇಂತಹ ಹೆಬ್ಬಂಡೆಯನ್ನು ತುದಿಗೈಯಲ್ಲಿ ಹಿಡಿದು, ತಿರಿಕಲ್ಲಿನಂತೆ ತೂರಾಡುವುದು ತ್ರಿಪೃಷ್ಠನಿಗಲ್ಲದೆ ಇನ್ನಾರಿಗಾದರೂ ಸಾಧ್ಯವೆ?

ವ॥ ಅದಲ್ಲದೆ, "ಅಳಕಾಪುರಾಧಿಪತಿಯಾದ ಮಯೂರಗ್ರೀವನಿಗೂ ನೀಳಾಂಜನೆಗೂ ಹುಟ್ಟಿ, ಸಮಸ್ತ ಖೇಚರ ಕುಲಕ್ಕೆ ಭೂಷಣವಾಗಿಯೂ ತ್ರಿಖಂಡಾಧಿಪತಿಯಾಗಿಯೂ ಅರ್ಧಚಕ್ರವರ್ತಿಯೆನಿಸಿದ ಹಯಗ್ರೀವನು ಪ್ರಸಿದ್ಧನಾದ ತ್ರಿಪೃಷ್ಠನನ್ನು ಎದುರಿಸಿ,

೨೭. ಸಿಂಹವನ್ನೆದುರಿಸಿದ ಮರಿಯಾನೆಯಂತೆ, ದಿಗ್ಗಜದೊಡನೆ ಹೋರಾಟಕ್ಕೆ ನಿಂತ ಹೀನ ಗಜದಂತೆ, ಗಾಳಿಯ ಹೊಡೆತಕ್ಕೆ ಗುರಿಯಾದ ದೀಪದಂತೆ, ದಾವಾಗ್ನಿಗೆ ಪಕ್ಕಾದ ಕಾಡಿನ ಹೊದರಿನಂತೆ, ಸೂರ್ಯನಿಗೊಡ್ಡಿದ ಕತ್ತಲೆಯ ಮೊತ್ತದಂತೆ, ಪ್ರಚಂಡವಾದ ಮಹಾಸರ್ಪದೊಡನೆ ಸ್ಪರ್ಧಿಸಹೊರಟ ಮರಿಹಾವಿನಂತೆ ತಡವಿಲ್ಲದೆ ನಾಶವಾಗುವನು."

ವ॥ ಹೀಗೆಂದು ಭವಿಷ್ಯವಾಣಿಯುಂಟು.

---

1. ಪೆಱರ್ಗಕ್ಕು (ಅ) 2. ಪ್ಪಹಯ (ಮ) 3. ಟೊ (ಮ) 4. ಟ್ಯಾ (ಮ)

ಚಂ॥ ತ್ರಿಭುವನ ಭೂಷಣೋಪಮೆಗೆ ಸಂಗಮದೊಳ್ ಪರಭಾಗವಿಸ್ಫುಯಂ
ಪ್ರಭೆಗೆ ಲುಲತ್ತಟಿತ್ಪ್ರಭೆಗೆ ಬಂಧುರ ಸಿಂಧುರ ನೀಲನೀರದ
ಪ್ರಭನಭಯಂ ತ್ರಿಪೃಷ್ಠನುೞಿದರ್ ನಿಲೆ ಕಲ್ಪಲತಾಶ್ರಯಕ್ಕೆ ನಿ
ಷ್ಪ್ರಭತನುವುಳ್ಳರಂ ದೊರೆಗೆವಾರದವೋಲ್ ದೊರೆಯಾಗಲಾರ್ಕುಮೇ ॥ ೨೮ ॥

ವ॥ ಅದಱಿಂ ನಿಮ್ಮ ಕೊಂಡಾಟದ ಮಗಳಪ್ಪ—

ಕಂ॥ ಕಿಱಿಯುವಳಾತನೊಳಲ್ಲದೆ
ಪೆಱರೊಳಸಂಪೂರ್ಣ ನಿಜಮನೋರಥೆ ಪೆಱದೇಂ
ಮಱಿದುಂಬಿ ಪೂತ ಚೂತದೊ
ಳೆಱಗುಗುಮೆಱಗುಗುಮೆ ಸಲ್ಲಕೀ ಪಲ್ಲವದೊಳ್ ॥ ೨೯ ॥

ಚಂ॥ ಎನೆ ಖಚರಾಧಿನಾಥನವಧಾರಿಸಿ ದೂತನನಿಂದುವೆಂಬೊನಂ
ಮನಮನಿಪನ್ನನಂ ನಯದಿನಟ್ಟಿದೊಡಾತನುಮೆಯ್ದಿ ಪೋಗಿ ಪೌ
ದನ ಪುರಮಂ ಪ್ರಜಾಪತಿ ಮಹೀಪತಿ ಮಂದಿರಮಂ ತದುರ್ವರೇ
ಶನ ಮತದಿಂದೆ ಪೊಕ್ಕು ಮಣಿಮಾಲೆಯ ಲೀಲೆಯ ಚಿತ್ರಶಾಲೆಯಾ ॥ ೩೦ ॥

ವ॥ ಮೃಗೇಂದ್ರವಿಷ್ಟರಾರೂಢನಾಗಿರ್ದ ಪ್ರಜಾಪತಿ[1]ಮಹೀಪಾಲನಂ[1] ದ್ವಾರಪಾಲಕ ಸಂದರ್ಶಿತಂ ಕಂಡು ಮಹೀತಳಾಶ್ಲಿಷ್ಟ ಲಲಾಟಪಟ್ಟನೆಱಗಿ ಪೊಡವಟ್ಟು ಯಥೋಪದಿಷ್ಟಾಸನದೊಳ್ ಕುಳ್ಳಿರ್ದು—

ಕಂ॥ ಭೂಪಂ ಬೆಸಗೊಳೆ ಮಧುರಾ
ಲಾಪಂ ಬಿನ್ನವಿಕುಮಿಂದು ಶರದಿಂದು ಯಶೋ
ರೂಪನಭಿರೂಪ ಶೀಳ ಕ
ಲಾಪಂ ಮತ್ಸ್ವಾಮಿ ನಿಮ್ಮ ಭಾವಂ ದೇವಾ ॥ ೩೧ ॥

---

೨೮. ಕಲ್ಪಲತೆಗೆ ಕಲ್ಪವೃಕ್ಷವಲ್ಲದೆ ನಾಡಾಡಿ ಮರಗಳು ಆಶ್ರಯವಾಗಬಲ್ಲುವೆ? ಮಿಂಚಿನಂತೆ ವೈಕಾಂತಿಯುಳ್ಳ ತ್ರಿಲೋಕಭೂಷಣವೆಂಬಂತಿರುವ ಈ ಸ್ವಯಂಪ್ರಭೆಯನ್ನು ವರಿಸಲು ನಿರ್ಭೀತನೂ, ಮೇಘಶ್ಯಾಮನೂ, ಸುಂದರವಾದ ಭದ್ರಗಜಸದೃಶನೂ ಆದ ತ್ರಿಪೃಷ್ಠನಲ್ಲದೆ ಬೇರೆಯವರು ಯೋಗ್ಯರಾದಾರೆಯೆ?

ವ॥ ಆದುದರಿಂದ ನಿಮ್ಮ ಮುದ್ದಿನ ಮಗಳಾದ

೨೯. ಈ ನವಯುವತಿಯ ಮನೋರಥಕ್ಕೆ ಪರಿಪೂರ್ಣವಾದ ತೃಪ್ತಿಯನ್ನೊದಗಿಸಬಲ್ಲವನು ಆತನಲ್ಲದೆ ಬೇರಾರೂ ಅಲ್ಲ. ಮರಿದುಂಬಿಯು ಹೂತ ಮಾಮರಕ್ಕೆ ಎರಗುವುದಲ್ಲದೆ ತದುಕಿನ ಸೊಪ್ಪಿಗೆ ಎರಗುವುದೆ?"

೩೦. ಈ ಮಾತನ್ನು ಕೇಳಿ ಖೇಚರರಾಜನು ತನ್ನ ಇಂಗಿತಜ್ಞನಾದ ಇಂದುವೆಂಬವನನ್ನು (ಈ ವಿಷಯದಲ್ಲಿ ವಿಚಾರಿಸಿ ವಿಜ್ಞಾಪಿಸಲು) ಕಳಿಸಿಕೊಟ್ಟನು. ಆ ದೂತನು ಪೌದನಪುರಕ್ಕೆ ಹೋಗಿ, ಪ್ರಜಾಪತಿ ಮಹಾರಾಜನ ಅಪ್ಪಣೆಯನ್ನು ಪಡೆದುಕೊಂಡು, ಚಿತ್ರಮಯವಾದ ಆತನ ರತ್ನಖಚಿತ ರಾಜಭವನವನ್ನು ಪ್ರವೇಶಿಸಿದನು.

ವ॥ ಸಿಂಹಾಸನದಲ್ಲಿ ಕುಳಿತ ಆ ಮಹಾರಾಜನ ಬಳಿಗೆ ದ್ವಾರಪಾಲಕನು ಕರೆದೊಯ್ದು ನಿಲ್ಲಿಸಲು, ನೆಲಕ್ಕೆ ಬಾಗಿ ನಮಸ್ಕರಿಸಿ ತೋರಿಸಿದ ಪೀಠದಲ್ಲಿ ಕುಳಿತನು.

೩೧. ರಾಜನು ವಿಚಾರಿಸಲಾಗಿ, ಮಧುರಸ್ವರದಿಂದ ಇಂದುವು ಹೀಗೆ ಬಿನ್ನವಿಸಿದನು: "ಮಹಾರಾಜಾ ಶರಚ್ಚಂದ್ರನಂತೆ ಧವಳವಾದ ಯಶಸ್ಸುಳ್ಳವನೂ, ನಿಷ್ಕಳಂಕಚರಿತ್ರನೂ, ನನ್ನ ದೊರೆಯೂ—

---

1. ಮಹಾರಾಜನಂ (ಅ)

ಕಂ॥ ಜ್ವಳನಜಟಿ ವೈರಿಭೂಭೃ
ಜ್ಜ್ವಳನಂ ನಮಿ ಬಾಹುಬಲಿ ಮಹೀಭುಜರಿಂದಂ
ತೊಲಗದದಾಮುಂ ತಾಮುಂ
ತೊಲಗಿಸೆ ತೊಲಗಿದುದು ತಮ್ಮ ವರ್ತನಮಿಾಗಳ್ ॥ ೩೨ ॥

ವ॥ ಎಂದು ಪಟ್ಟಸೂತ್ರದೆರಡೆಳೆಯುಮಂ ಗಂಟಿಕ್ಕುವಂತೆ ಪರಂಪರಮುಂ ಪೞ[1]ಮಜಿ[2]ವು[1]ಮಾದ ನಣ್ಪಂ ಪುನರ್ನವಂ ಮಾಳ್ಪ ಬಗೆಯಿಂ ಎನ್ನನಿಂತೆಂದಟ್ಟಿದನೆಮ್ಮರಸಂ ತನ್ನ ಮಗಳಪ್ಪ ಕನ್ಯಾರತ್ನಮುಂ ಸ್ವಯಂಪ್ರಭೆಯಂ—

ಉ॥ ಕಂಪಿನ ಪೆಂಪು ಪೊಂಪುೞ[2]ಯೆನಲ್ ದೊರೆವೆತ್ತ ನಮೇರು ಮಾಲೆಯಿಂ
ಪಂಪರಿ ಚುಂಬಿಸಲ್ ಬಯಸಿ ಬರ್ಪಳಿಮಾಳಿಕೆಯಂತೆ ನಿಚ್ಚ ನಿ
ಚ್ಚಂ ಪುನರುಕ್ತದಿಂ ಖಚರ ಭೂಚರ ಕೋಟಿ ಮರಲ್ದು ಬೇಡಿ ಬಾ
ಯಂ ಪೊೞೞಿಪುತ್ತುಮಿರ್ಪ್ಪುದು ಪುರೋಪವನಾಂತರ ಭೂಮಿಭಾಗದೊಳ್ ॥ ೩೩ ॥

ಕಂ॥ ಆ ಯುವತಿ ರತ್ನಮಂ ಭವ
ದೀಯಾತ್ಮಜ ಪುರುಷ ರತ್ನದೊಳ್ ಕೂಡುವಭಿ
ಪ್ರಾಯಂ ಪ್ರೀತಿಲತಾ ಶಾ
ಖಾಯಮನಡರ್ದ[3]ಪೆನೆಯೆಂದು ಖೇಚರರಾಜಂ ॥ ೩೪ ॥

ಒಸೆದಟ್ಟಿದನಟ್ಟಿದ ವಿಭು
ಗೆ ಸಂತಸಂ ಮಾಡಿ ಬರೆದ ಮಾಱೋಲೆಯನೆ
ಯ್ದಿಸಿದೊಡೆ ನಡೆಯುತ್ತುಂ ಬಾ
ಚಿಸಿ ತಡೆಯದೆ ಬರ್ಕುಮಿರ್ಕುಮೇ ಖಚರೇಂದ್ರಂ ॥ ೩೫ ॥

---

೩೨. ಶತ್ರುರಾಜಧ್ವಂಸಕನೂ ಆದ ಜ್ವಳನಜಟಿ ಮಹಾರಾಜನು ನಿಮಗೆ ಭಾವನಾಗಬೇಕು. ಬಾಹುಬಲಿ-ನಮಿರಾಜರ ಕಾಲದಿಂದಲೂ ಇದ್ದ ಈ (ಎರಡು ಮನೆತನಗಳ) ಬಾಂಧವ್ಯ ನಮ್ಮ ಹಾಗು ನಿಮ್ಮ ವರ್ತನೆಯಿಂದ (ದೂರ ದೂರ ಉಳಿದುದರಿಂದ) ತೊಲಗಿದಂತಾಗಿದೆ.

ವ॥ ಆದುದರಿಂದ ಮರೆತುಹೋದ ಈ ಹಳೆಯ ನಂಟುತನವನ್ನು ಮರಳಿ ನೆಲೆಗೊಳಿಸಬೇಕು. ರೇಷ್ಮೆಯ ಎರಡೆಳೆಗಳನ್ನು ಗಂಟಿಕ್ಕಿ ಕೂಡಿಸುವಂತೆ, ಈ ಎರಡೂ ಮನೆತನಗಳನ್ನು ಪುನಃ ಒಂದುಗೂಡಿಸಬೇಕೆಂಬ ಉದ್ದೇಶದಿಂದ ನಮ್ಮ ಅರಸನು ನನ್ನನ್ನು ನಿಮ್ಮೆಡೆಗೆ ಕಳಿಸಿರುವನು. ಆತನ ಮಗಳಾದ ಸ್ವಯಂಪ್ರಭೆ ಕನ್ಯಾರತ್ನವಾಗಿರುವಳು.

೩೩. ಪರಿಮಳ ಸಮೃದ್ಧಿಯಿಂದ ಸೊಗಸಾದ ನಮೇರು ಪುಷ್ಪಗಳ ಮಾಲೆಗೆ ಮರುಳಾಗಿ, ಅದರ ಸುಖವನ್ನು ಸವಿಯಲು ಹಿಂಡುಹಿಂಡಾಗಿ ಬರುವ ದುಂಬಿಗಳಂತೆ, ಆ ಕನ್ಯೆಯ ಪಾಣಿಗ್ರಹಣಕ್ಕಾಗಿ ಪುನಃಪುನಃ ಪ್ರಾರ್ಥಿಸಿ ಅನೇಕಾನೇಕ ಭೂಚರರೂ ಖೇಚರರೂ ಬಾಯಿಬಿಟ್ಟುಕೊಂಡು ನಮ್ಮ ರಾಜಧಾನಿಯ ಹೊರವಲಯದಲ್ಲಿ ಕಾಯುತ್ತಿರುವರು.

೩೪. ಆದರೆ ಆ ತರುಣೀರತ್ನವನ್ನು ನಿನ್ನ ಮಗನಾದ ಪುರುಷರತ್ನನಿಗೆ ಜೊತೆಮಾಡಬೇಕೆಂದು ನಮ್ಮರಸನ ಅಭಿಪ್ರಾಯವಾಗಿದೆ. ಪ್ರೇಮದ ಬಳ್ಳಿಯನ್ನು ಹೀಗೆ ಹಬ್ಬಿಸುವೆನೆಂದು ಖೇಚರರಾಜನು

೩೫. ಸಂತೋಷದಿಂದ ಹೇಳಿಕಳಿಸಿರುವನು. ಆತನು ಬರೆಯಿಸಿದ ಓಲೆಯನ್ನು ನೋಡಿ ನೀವು ಉತ್ತರವನ್ನು ಕಳಿಸಿದರೆ, ಅದನ್ನೋದಿ ನಮ್ಮರಸನು ತಡಮಾಡದೆ ಬರುವನು."

---

1. ಮಜಿಪು (ಅ) 2. ೞ (ಅ) 3. ಪ್ಪೆ (ಅ)

ಉ॥ ಎಂಬುದುಮಂಬುದ ಧ್ವನಿಗೆ ಪೆರ್ಚಿದ ಮತ್ತಮಯೂರದಂತೆ ರಾ
ಗಂ ಬಗೆಯಂ ಪಳಂಚಲೆಯೆ ತನ್ನೆರಡುಂ ಕೆಲದೊಳ್ ಮಗಂದಿರಿ
ರ್ದಿಂಬಿನಮರ್ಕೆಗಿರ್ಕೆಲದ ಬೀಟಲ ಕಲ್ಪ ಕುಜಂಬೊಲಪ್ಪಿ ನ
ಣ್ಪಂ ಬಗೆದಟ್ಟಿದೋಲೆವೆರಸಾಲಿಸಿ ದೂತನ ಮಾತನೆಲ್ಲಮಂ ॥ ೩೬ ॥

ವ॥ ಕೇಳ್ದು ಮೂಱು ಲೋಕಮನಾಳ್ದಂತೆ ಗೆಯ್ದು ಸಂತಸಂ ಬಟ್ಟು ಬಂದ ದೂತನಂ ದಾನ ಸನ್ಮಾನಾದಿಗಳಿಂ ಸಂತಸಂ ಬಡಿಸಿ ತ್ರಿಪೃಷ್ಠನೊಡಂಬಡಿಸಿ ಜ್ವಳನಜಟಿ ಮಹೀಪಾಲಂಗೆ ಬಟಿವೆರಸು ತನ್ನ ಮನೆಯೊಳಗ್ಗಳಮಪ್ಪಮೂಲ್ಯ ವಸ್ತುಗಳಂ ಪ್ರಜಾಪತಿ ಮಹಾರಾಜಂ ಪಾಗುಡಂಗಟ್ಟಿ ಸಂಪೂರ್ಣೇಂದು[1]ಮುಖಿಯ[1]ನಿಂದು ನಾಳೆನ್ನದೆ ಬಂದ ಪೊಟ್ಟಿ ಪೋಟ್ಪಾಗೆ ರಥನೂಪುರಚಕ್ರವಾಳಕ್ಕೆ ಬೇಗಮಟ್ಟುವುದು ಮಾತನುಂ ಗಗನ ಗಮನನಾಗಿ ವಿವಿಧ ನದನದೀ ನಗನಗರ ಜನಪದಾಸ್ಪದಂ ನಿಜನಾಥಪುರವರಮನೆಯ್ದಿ ರಾಜಕೇತನನಿವಿಷ್ಟನೊಡ್ಡೋಲಗಂ ಗೊಟ್ಟಿರ್ದ ಗಗನಚರೇಂದ್ರನಂ ದೂರಾ[2]ವ[2]ನತ ಮಸ್ತಕಂ ಕ್ಷಿತಿತಳ ನಿಪಾತಿ[3]ತ ಸಾ[3]ಷ್ಟಾಂಗನಾಗಿ ಕಂಡು—

ಹರಿಣೀವೃತ್ತಂ॥ ಮುಕುಳಿತ ಕರೋಪೇತಂ ದೂತಂ ಪ್ರಜಾಪತಿ ಪಾರಮಾ
ರ್ಥಿಕ ವಚನ ಸದ್ಭಾವಂ ಭಾವಂಗುಪಾಯನ ಭೂಷಣ
ಪ್ರಕರಮನಿವೆಂದೌತ್ಸುಕ್ಯಾಕ್ರಾಂತನಟ್ಟಿದೊನಾತ್ಮ ಪು
ತ್ರಕ ವಿವಹನ ಪ್ರೀತಂ ರೋಮಾಂಚ ಕಂಚುಕಿತಾಂಗಕಂ ॥ ೩೭ ॥

ವ॥ ಎಂದು ಬಿನ್ನಪಂ ಗೆಯ್ಯಲೊಡಂ ಬದ್ಧರಸನುಂ ಸಿದ್ಧರಸವೇದನುಮಾದ ರಸವಾದಿಯಂತೆ ಜ್ವಳನಜಟಿ ರಾಗಿಸಿ ನೈಮಿತ್ತಿಕನಂ ಬರಿಸಿ ತದಾತನಮುಮತ್ಯಂತ ನೂತನಮುಮಪ್ಪುದೊಂದು ಲಗ್ನಮಂ ಪೇಟೆಮೆಂಬುದುಂ ಆತಂ ತನ್ಮುಹೂರ್ತಮೆ ಶುಭಮುಹೂರ್ತ ಮೆಂಬುದುಂ ಅಂಬರ ಚರ ರಾಜಸಂಬರಚರ ಗೋಚರೋಚಿತ ಪ್ರಸ್ಥಾನದಿಂ ಪಯಣಂಬೋಗಿ ತನ್ನ ಬರಮನಱಿದು ಪುರವರಮೆನಾಗಳ

---

೩೬. ಅಕ್ಕಪಕ್ಕದಲ್ಲಿ ಬೀಳಲು ಬಿಟ್ಟು ಶೋಭಿಸುವ ಕಲ್ಪವೃಕ್ಷದಂತೆ, ತನ್ನ ಇಕ್ಕೆಲದಲ್ಲಿರುವ ಪುತ್ರರೊಡನೆ ವಿಜೃಂಭಿಸುವ ರಾಜನು ಮೇಘಧ್ವನಿಯನ್ನು ಕೇಳಿ ಮೈಯುಬ್ಬುವ ಮಯೂರದಂತೆ ಪರಮೋತ್ಸಾಹದಿಂದ ದೂತನ ಮಾತುಗಳೆಲ್ಲವನ್ನೂ ಕೇಳಿ, ನಂಟುತನವನ್ನು ಬಯಸಿ ಬರೆದ ಜ್ವಳನಜಟಿಯ ಪತ್ರವನ್ನೂ ಓದಿಸಿ ತಿಳಿದು—

ವ॥ ತನಗೆ ಮೂರು ಲೋಕಗಳ ಒಡೆತನವೆ ದೊರೆತಂತೆ ಸಂತೋಷಪಟ್ಟನು. ದೂತನಿಗೆ ಕಾಣಿಕೆ ಮೊದಲಾದುವು ಗಳಿಂದ ಮನ್ನಣೆಯಿತ್ತು, ತ್ರಿಪೃಷ್ಠನನ್ನು (ಮದುವೆಗೆ) ಒಡಂಬಡಿಸಿ, ತನ್ನ ಅರಮನೆಯಲ್ಲಿದ್ದ ಅಮೌಲ್ಯವಾದ ವಸ್ತು ಗಳನ್ನು ಕಾಣಿಕೆಯಾಗಿ ಜ್ವಳನಜಟಿಗೆಂದು ದೂತನ ಕೈಯಲ್ಲಿಟ್ಟು, "ಪೂರ್ಣಚಂದ್ರಮುಖಿಯಾದ ಕನ್ಯೆಯೊಡನೆ ತಡ ಮಾಡದೆ ಬನ್ನಿ"ಯೆಂದು ರಥನೂಪುರ ಚಕ್ರವಾಳಕ್ಕೆ ಹೇಳಿಕಳಿಸಿದನು. ಆ ದೂತನು ಆಕಾಶಮಾರ್ಗವಾಗಿ ಹೊರಟು, ಹಲವಾರು ನದನದಿಗಳನ್ನೂ ಹಳ್ಳಿಪಟ್ಟಣಗಳನ್ನೂ ದಾಟಿ ತಮ್ಮ ರಾಜಧಾನಿಗೆ ತಲುಪಿ, ಒಡ್ಡೋಲಗದಲ್ಲಿದ್ದ ಖೇಚರ ರಾಜನಿಗೆ ದೂರದಿಂದಲೆ ತಲೆಬಾಗುತ್ತ ಬಂದು ನೆಲದ ಮೇಲೆ ಸಾಷ್ಟಾಂಗ ನಮಸ್ಕಾರ ಹಾಕುತ್ತ—

೩೭. ಕೈಮುಗಿದು ಹೀಗೆಂದನು : "ದೇವ, ಪ್ರಜಾಪತಿ ಮಹಾರಾಜನು ತನ್ನ ಮಗನೊಡನೆ ನೀವು ವಿವಾಹ ಸಂಬಂಧ ಬೆಳಸುವ ವಿಚಾರವನ್ನು ತಿಳಿದು ಸಂತೋಷದಿಂದ ಪುಳಕಿತನಾದನು. ಹಾಗು ನಮ್ಮ ಭಾವನಿಗೆ ಕಾಣಿಕೆಯಾಗಿ ಈ ಭೂಷಣಪ್ರಾಯವಾದ ವಸ್ತುಗಳನ್ನು ಮುಟ್ಟಿಸು ಎಂದು ತಿಳಿಸಿ, ಇಕೋ, ಇವುಗಳನ್ನು ಅತ್ಯಂತ ಉತ್ಸುಕನಾಗಿ ಕಳಿಸಿದನು."

ವ॥ ಹೀಗೆಂದು ಆತನು ಬಿನ್ನವಿಸಲಾಗಿ ಜ್ವಳನಜಟಿರಾಜನು ರಸವಾದಿಯಂತೆ "ಬದ್ಧರಸನೂ" (೧. ಸ್ನೇಹಭಾವ ದಿಂದ ಕೂಡಿದವನು, ೨. ಪಾರಜವನ್ನು ಲೋಹದಲ್ಲಿ ಬೆರಸಿದವನು) "ಸಿದ್ಧರಸನೂ" (೧. ಬಯಕೆ ಈಡೇರಿದವನು, ೨. ಚಿನ್ನ ತಯಾರಿಸುವ ವಿದ್ಯೆಯಲ್ಲಿ ಪರಿಣತನು) ಆಗಿ ಸಂತೋಷಪಟ್ಟನು. ಜೋಯಿಸನನ್ನು ಕರೆಯಿಸಿ, "ಈ ಸಮಯಕ್ಕೇ ಇರುವ ಅತ್ಯಂತ ಪ್ರಶಸ್ತವಾದೊಂದು ಮುಹೂರ್ತವನ್ನು ಹೇಳಿ" ಎಂದು ಕೇಳಿದನು. ಆ ಜೋಯಿಸನು "ಈಗ ಇರುವ ಕಾಲವೇ ಶುಭಮುಹೂರ್ತ"ವೆಂದು ತಿಳಿಸಲಾಗಿ, ಖೇಚರರಾಜನು ಖೇಚರರಿಗೆ ಯೋಗ್ಯವಾದ ರೀತಿಯಲ್ಲಿ

---

1. ಮುಖಿನೀದುವ (ಅ) 2. × (ಅ) 3. ತಾ (ಅ)

ಷ್ಟಶೋಭೆಗೆಯ್ಸಿ ಬೇಗಮಿದಿರ್ವಂದ ಪ್ರಜಾಪತಿ ಮಹೀಪಾಲನಂ ಜ್ವಳನಜಟಿ ಮಹಾರಾಜಂ ಯಥಾರ್ಹ ಪ್ರತಿಪತ್ತಿಯಿಂ ಕಂಡು ಮೈದು[1]ನ[1] ನಿರ್ವರುಂ ಪುತ್ರಪುತ್ರೀ[2]ಸಹಿತಂ[2] ಪೊಟಲಂ ಪುಗುವಾಗಳ್ ವಿದ್ಯಾಧರ ಭೂಮಿಗೋಚರರೊಂದಾಗಿ ಭೂಮಿಮಾರ್ಗದಿಂ ರಾಜಮಾರ್ಗದೊಳಗನೆ ಬರ್ಪುದುಂ ಪೌರನರ ನಾರೀ ಜನಂಗಳುತ್ತುಂಗ ಪ್ರಾಸಾದ ಗೋಪುರಾಟ್ಟಾಳಕ ಕೋಟಿಗಳನೇಱಿ ನೋಡುತ್ತುಂ—

ಮ॥ ಎಸೆದೊಪ್ಪಿರ್ದ ವಿಮಾನಮಾಲೆ ಖಚರಾನೀಕಕ್ಕೆ ಚಿಹ್ನಂಗಳಾ
ಗಸದೊಳ್ ಪಣ್ಣಿದ ಪೊನ್ನ ಪಣ್ಣಗೆಯಿಭಂಗಳ್ ಚಿಹ್ನಮುರ್ವೀಚರ
ಪ್ರಸರಕ್ಕುರ್ವಿಯೊಳಂತರಾಳದೊಳನೇಕಸ್ತ್ರೀವೃತಾನೂನ ಯಾ
ನ ಸಮೂಹಂ ಖಗ ಕನ್ನೆಗಗ್ಗಳದ ಚಿಹ್ನಂ ನೋಡಿಮೆಂಬನ್ನೆಗಂ ॥ ೩೮ ॥

ವ॥ ಬರ್ಪಾಕೆಯನೀಕೆ ಸ್ವಯಂಪ್ರಭೆಯೆಂದಱಿದು—

ಮ॥ ಸ್ರ॥ ಎರಡುಂ ಭಾಗಂಗಳೊಳ್ ತನ್ನಣುಗಿನ ಸುತರುನ್ಮತ್ತನಾಗಂಗಳಂ ಜೇಂ
ಕರಿಸುತ್ತಿಂಬಾಗಿ ಬಂಬಲ್ವರಿಯಿಸೆ ತುರಗಾರೂಢನೀ ಬರ್ಪನಸ್ಮ
ದ್ಧರಣೀಶಂ ಮತ್ತುದಾತ್ತಂ ಜ್ವಳನಜಟಿ ದಲಾಬರ್ಪನುತ್ಸೇಧ ವತ್ಸಿಂ
ಧುರ ರಾಜಸ್ಕಂಧ ಸಂಬಂಧುರ ಲುಳಿತ ತಟಿದ್ದಾಮ ಶಂಕಾಂಕುಶಾಂಕಂ ೩೯ ॥

ವ॥ ಎಂದಜಾತಪೂರ್ವ ವಿಸ್ಮಯಸ್ಮೇರಮುಖರಾಗಿರೆ ಬಂದು ರಾಜಗೇಹಮಂ ಪೊಕ್ಕು ಕ[3][ರು][3] ಮಾಡದೊಳ್ ವಿದ್ಯಾಧರ ರಾಜನ ನಿರಿಸಿ ಸ್ವಯಂಪ್ರಭೆಗಂ ರಾಣೀವಾಸದ ಕನ್ನೆವಾಡದೊಳ್ ಪರಿವಾರಿಕಾ (ದೌವಾರಿಕಾ) ಸಮೇತಮಿರವಂ ಮಾಡಿ ಮಜ್ಜನ ಭೋಜನಾದಿ ದಾನ ಸನ್ಮಾನಂಗಳೊಳ್ ಜ್ವಳನಜಟಿಯುಂ ಸಂತಸಂ ಬಡಿಸಿ ಪ್ರಜಾಪತಿ ಮಹಾರಾಜಂ ವಿವಿಧ ವಿನೋದ ದರ್ಶನಾನಂತರಂ ಪುಣ್ಯದಿನದೊಳ್ ತ್ರಿಪೃಷ್ಠನಂ ಸ್ವಯಂಪ್ರಭೆಯೊಳ್ ನೆರಪಿ—

ಹೊರಟು, (ಆಕಾಶಮಾರ್ಗವಾಗಿ) ಪ್ರಯಾಣಮಾಡಿ ಪೌದನಪುರವನ್ನು ಮುಟ್ಟಿದನು. ಈತನ ಆಗಮನವನ್ನು ಅರಿತು ತನ್ನ ಪಟ್ಟಣವನ್ನು ತಳಿರುತೋರಣವೇ ಮೊದಲಾದ ಅಷ್ಟಶೋಭೆಗಳಿಂದ ಅಲಂಕರಿಸಿ, ಆತುರನಾಗಿ ಪ್ರಜಾಪತಿ ಮಹಾರಾಜನು ಇದಿರುಗೊಂಡು ಸ್ವಾಗತಿಸಿದನು; ಹಾಗು ತಕ್ಕ ಗೌರವದೊಡನೆ ತನ್ನ ಮೈದುನನನ್ನೂ ಅವನ ಮಕ್ಕಳನ್ನೂ ಒಡಗೊಂಡು ಪಟ್ಟಣದೊಳಗೆ ಪ್ರವೇಶಮಾಡಿದನು. ವಿದ್ಯಾಧರರೂ, ಭೂಚರರೂ ಹೀಗೆ ಜೊತೆಯಾಗಿ ರಾಜಮಾರ್ಗದಲ್ಲಿ ಬರುವಾಗ ಆ ಪುರದ ನರನಾರಿಯರು ತಂತಮ್ಮ ಭವ್ಯವಾದ ಮನೆಗಳ ಅಟ್ಟಗಳನ್ನೂ ಗೋಪುರಗಳನ್ನೂ ಏರಿನಿಂತು ಇವರನ್ನು ನೋಡುತ್ತಿದ್ದರು.

೩೮. ಆಕಾಶದಲ್ಲಿ ಶೋಭಿಸುತ್ತಿರುವ ಆ ವಿಮಾನಗಳ ಸಾಲು ಖೇಚರರಿಗೆ ಗುರುತು; ಚಿನ್ನದಾಭರಣಗಳಿಂದ ಅಲಂಕರಿಸಿದ ಆನೆಗಳು ಭೂಚರರಿಗೆ ಗುರುತು; ಅಕೋ, ಅಲ್ಲಿ ಅನೇಕ ಸ್ತ್ರೀಯರು ಪರಿವಾರವಾಗಿ ಹೊರಟಿರುವರಲ್ಲ— ಅದು ಆ ಕನ್ಯೆಗೆ ಗುರುತು ನೋಡಿ" ಎಂದು ಜನ ನುಡಿಯುತ್ತಿರುವಷ್ಟರಲ್ಲಿ

ವ॥ ಹಾಗೆ ಬರುತ್ತಿರುವವಳು ಸ್ವಯಂಪ್ರಭೆಯೆಂದು ಅರಿತು—

೩೯. "ಇಕ್ಕೆಲಗಳಲ್ಲಿ ತನ್ನ ಮುದ್ದಿನ ಮಕ್ಕಳು ಮದಗಜಗಳನ್ನು ಚಾಟುವಚನಗಳಿಂದ ಒಲಿಸಿ ಸಾಲಾಗಿ ನಡೆಸುತ್ತಿರಲಾಗಿ, ಇಕೋ, ಕುದುರೆಯೇರಿ ಬರುತ್ತಿರುವ ಈತನು ನಮ್ಮ ಅರಸನು. ಅಗೊ ಆ ಎತ್ತರವಾದ ಗಜರಾಜನ ಮೇಲೆ ಮಿಂಚಿನಂತೆ ಅಂಕುಶವನ್ನು ಜಳಪಿಸುತ್ತ ಕುಳಿತು ಬರುತ್ತಿರುವವನು ಜ್ವಳನಜಟಿರಾಜನು."

ವ॥ ಹೀಗೆಂದು ಜನರು ಅಪೂರ್ವವಾದ ಬೆರಗಿನಿಂದ ನುಡಿಯುತ್ತಿರಲಾಗಿ, (ರಾಜರಿಬ್ಬರೂ ತಮ್ಮ ಪರಿವಾರದೊಡನೆ) ಅರಮನೆಯನ್ನು ಸೇರಿದರು. ಅರಮನೆಯ ಸೌಧದಲ್ಲಿ ವಿದ್ಯಾಧರರಾಜನನ್ನು ಇಳಿಸಿ, ಸ್ವಯಂಪ್ರಭೆಗೆ ರಾಣಿವಾಸದ ಕನ್ಯಾಂತಃಪುರದಲ್ಲಿ ಪರಿವಾರ ಸಹಿತವಾಗಿ ಇರುವಂತೆ ಏರ್ಪಾಟುಮಾಡಿ, ಸ್ನಾನ-ಭೋಜನಾದಿಗಳಿಂದಲೂ ದಾನಸನ್ಮಾಗಳಿಂದಲೂ ಪ್ರಜಾಪತಿ ಮಹಾರಾಜನು ಜ್ವಳನಜಟಿಯನ್ನು ಸಂತೋಷಪಡಿಸಿದನು. ಬಗೆಬಗೆಯ ವಿನೋದಗಳಿಂದ ಕೆಲಸಮಯ ಕಳೆದ ಬಳಿಕ ಒಂದು ಶುಭದಿವಸದಂದು ತ್ರಿಪೃಷ್ಠನಿಗೂ ಸ್ವಯಂಪ್ರಭೆಗೂ ಮದುವೆಮಾಡಿ—

---

1. × (ಅ) 2. ಸಮನ್ವಿತಂ (ಅ) 3. ಋ (ಮ)

ಕಂ॥ ಸಾರತರ ಕಲ್ಪತರುಗಮು
ದಾರೋತ್ತಮ ಕಲ್ಪಲತೆಗಮಭಿವೃದ್ಧಿಗೆ ಪೊ
ಯ್ನಾರೆಱೆವಂತಾಗಿರೆ ಕೆ
ಯ್ನಾರೆಱೆದರ್ ಖಚರಪತಿಯುಮವನೀಪತಿಯುಂ ॥ ೪೦ ॥

ಪರಸಿದ ಪರಕೆಗಳಾದುವು
ನಿರುತಂ ದಂಪತಿಗೆ ಧರೆಗೆ ಪೂಣ್ದೀಯೆ ಧನೋ
ತ್ಕರಮಂ ಸಮನಾದರ್ ಬಡ
ವರೊಡೆಯರೆಲ್ಲರ್ ಸಲೀಲರಧನರ್ ಧನದರ್ ॥ ೪೧ ॥

ವ॥ ಎಂಬಿನಂ ಪೊಸಯಿಸಿದ ವಿವಾಹ ಕಲ್ಯಾಣ ವಿರಾಮದೊಳ್ ಜ್ವಳನಜಟಿಯುಮರ್ಕಕೀರ್ತಿಯುಂ—

ಕಂ॥ ತಲೆಬ[1][ಟಿ][1]ವ[1][ಟಿ][1] ಯೆಂಬೀಶ್ರವೆ
ನೆಲಕೆಲ್ಲಂ ಪರೆಯೆ ನುಡಿದು ವಿದ್ಯಾಸಹಿತಂ
ಕುಲಧನ ಸಹಿತಂ ಹರಿಕರಿ
ವಿಲಾಸಿನೀ ಸಹಿತಮಿತ್ತರುಳ್ಕೊಡಮೆಗಳಂ ॥ ೪೨ ॥

ವ॥ ಅಂತು ನಿರ್ವಹಿಸಿದ ವಿವಾಹವ್ಯತಿಕರದ ಪರೆದ ಪಡೆಮಾತನರ್ಧ ಚಕ್ರವರ್ತಿ ವಿಜಯಾರ್ಧ ಶೈಲಮೂರ್ಧವರ್ತಿ ರೇಖಾವಳೀ ವಿಲಾಸ ಸಮಗ್ರೀವನಶ್ವಗ್ರೀವಂ ಕೇಳ್ದು—

ಕಂ॥ ರತ್ನಂಗಳೆರಡರೊಳ್ ಸ್ತ್ರೀ
ರತ್ನಮನೆನಗೆಂಬ ಬಗೆಯಿ[2]ನಿರ್ದೆನ್ನೀ ಶ್ರೀ[2]
ಪತ್ನೀಶತೆಯುಂ ಬಗೆಯದೆ
ಯತ್ನಪರರ್ ದೇಸಿಗಂಗೆ ಕೂಸಂ ಕೊಟ್ಟರ್ ॥ ೪೩ ॥

---

೪೦. ಸಾರವತ್ತಾದ ಕಲ್ಪವೃಕ್ಷಕ್ಕೂ, ಉತ್ತಮವಾದ ಕಲ್ಪಲತೆಗೂ ಅವುಗಳ ಬೆಳವಣಿಗೆಗಾಗಿ ನೀರೆರೆಯುವಂತೆ ಖೇಚರರಾಜನೂ ಪ್ರಜಾಪತಿರಾಜನೂ (ವಧೂವರರಿಗೆ) ಧಾರೆಯೆರೆದರು.

೪೧. ನೂತನ ದಂಪತಿಗಳಿಗೆ ಅನೇಕ ಆಶೀರ್ವಾದಗಳಾದುವು. ಉಭಯ ರಾಜರು ಕೊಡುಗೈಯಿಂದ ನೀಡಿದ ಧನದಾನಗಳಿಂದಾಗಿ ನಿರ್ಧನರು ಶ್ರೀಮಂತರಾಗಿ, ಬಡವ-ಬಲ್ಲಿದರೊಳಗೆ ಭೇದವೇ ಉಳಿಯಲಿಲ್ಲ.

ವ॥ ಹೀಗೆ ನೆರವೇರಿದ ಮದುವೆಯ ಉತ್ಸವಾನಂತರ ಜ್ವಳನಜಟಿಯೂ ಅರ್ಕಕೀರ್ತಿಯೂ

೪೨. ಭೂಮಂಡಲವೆಲ್ಲ ಹೊಗಳುವಂತೆ ತಮ್ಮ ವಿದ್ಯೆಗಳೊಡನೆ ಆನೆ, ಕುದುರೆ, ವಿಲಾಸಿನಿಯರು, ವಸ್ತ್ರಾಭರಣ ಮೊದಲಾದ ಬೆಲೆಯುಳ್ಳ ಬಳವಳಿಯನ್ನು ಮದುಮಕ್ಕಳಿಗೆ ನೀಡಿದರು.

ವ॥ ಈ ವಿವಾಹ ಸಮಾರಂಭದ ವೈಭವವನ್ನು ಮೆಚ್ಚಿ ಹೊಗಳುತ್ತಿರುವ ಜನರ ಮಾತು ಹಬ್ಬುತ್ತ ಹೋಗಿ ವಿಜಯಾರ್ಧಪರ್ವತ ಪ್ರದೇಶದಲ್ಲಿ ವಿಲಾಸದಿಂದ ಆಳುತ್ತಿದ್ದ ಅರ್ಧಚಕ್ರವರ್ತಿ ಅಶ್ವಗ್ರೀವನ ಕಿವಿಯನ್ನು ಮುಟ್ಟಿತು.

೪೩. "(ಚಕ್ರವರ್ತಿಗೆ ತಾವಾಗಿ ಬಂದು ಸೇರಬೇಕಾದ ರತ್ನಗಳು ಎರಡು ಬಗೆಯುವು:೧. ಚಕ್ರ, ಖಡ್ಗ ಛತ್ರ ಮೊದಲಾದ ಏಳು ಅಜೀವರತ್ನಗಳು, ೨. ಗೃಹಪತಿ, ಸೇನಾಪತಿ, ಶಿಲ್ಪಿ, ಪುರೋಹಿತ, ಸ್ತ್ರೀ ಮೊದಲಾದ ಏಳು ಜೀವರತ್ನಗಳು.) ಹೀಗಿರುವ ಎರಡು ಬಗೆಯ ರತ್ನಗಳಲ್ಲಿ ಈ ಸ್ತ್ರೀರತ್ನವು ನನಗೇ ಬರುವುದೆಂದು ನಾನು ನಿರೀಕ್ಷಿಸಿದ್ದೆನು. ನನ್ನ ಚಕ್ರೇಶ್ವರ ಪದವಿಯನ್ನು ಕಡೆಗಣಿಸಿ, ಯಾವನೊ ಒಬ್ಬ ನಿರ್ಗತಿಕನಿಗೆ ಹೆಣ್ಣು ಕೊಟ್ಟರಲ್ಲವೆ ಇವರು ? ತೊಂದರೆಯನ್ನು ತಂದುಕೊಳ್ಳುವುದಕ್ಕೇ ಹೊರಟಿದ್ದಾರೆ.

---

1. ೞ (ಮ) 2. ನಿರ್ದಿರ್ ಸೀಶ್ರೀ (ಅ)

ಕಂ॥ ಕೊಟ್ಪೊಡಮೇಂ ಕನ್ನಿಕೆಯಂ
ಕೊಟ್ಪೊಂಗಮಿದಾಗದೆಂದು ಕುಡೆ ಕೊಂಡೆಸಗೇ
ಗೆಟ್ಟಪುದೆಂದು ಮನಂ ಪೊಲೆ
ಗೆಟ್ಟಿರೆ ಕೊಂಡಂಗಮೆನಗಮಱಿಯಲ್ಕಕ್ಕುಂ ॥ ೪೪ ॥

ಶಾ॥ ಎಂದಾಗಳ್ ವಿಳಯಾನಿಳೋಚ್ಚಳಿತ ಕೂಪಾರಾರವಂ ಖೇಚರೇಂ
ದ್ರಂ ದಪ್ಪಾಧರನಾತ್ಮಪೀಠ ತಳಮಂ ಪೊಯ್ದೆಟ್ದು ನಿಂದಾಗಳಂ
ತೊಂದುಗ್ರಂ ಕರಿ ಪಟ್ಟದಿಂ ನಡೆವವೋಲಾಸ್ಥಾನದಿಂ ಬಂದು ನಿಂ
ದಂ ದೌವಾರಿಕ ಭೂಮಿಯೊಳ್ ಸ್ಫುರದುರು ಶ್ಮಶ್ರೂತ್ಕರಂ ಭೀಕರಂ ॥ ೪೫ ॥

ವ॥ [1]ಅಂತಲ್ಲಿಂ[1] ಬಂದು ನಿಲ್ವುದುಂ ಸಂಭ್ರಮಾಕುಳನುಮವನತೋತ್ತಮಾಂಗನುಮಾಗಿ ಬಂದು ಮುಂದೆ ನಿಂದು ಸೇನಾಪಾಗ್ರಗಣ್ಯಂ ಬೆಸನಂ ಪಾರುತ್ತುಮಿರೆ—

ಕಂ॥ ಆ ಚಕ್ರಿಭ್ರೂಲತೆ ಸಚ
ರಾಚರಮಂ ನೆರಪವೇಟಿ ನೆರಪುವುದುಂ ರೂ
ಪ್ಯಾಚಳ ಗೋಚರ ಖಚರ ಮ
ಹೀಚರರೊರ್ಮೊದಲೆ ನೆರೆದರಪರಿಮಿತ ಬಲರ್ ॥ ೪೬ ॥

ನೆರೆದು ನಭೋ ಭೂವಳಯಾಂ
ತರಂಗದೊಳ್ ತಮ್ಮ [2]ಹಯಮೆ ಹಯ[2]ಮಾಗಿರೆ ಖೇ
ಚರರಾಜಂ ತಳರ್ದಂ ನೆಗ
ಟ್ದ ರಥಾವರ್ತಾದ್ರಿಗದ್ರಿ ತಳರ್ವಂತಾಗಳ್ ॥ ೪೭ ॥

೪೪. ಕೊಟ್ಟರೇನಾಯಿತು ? ಈ ಕನ್ಯೆಯನ್ನು ಕೊಟ್ಟವನು ಯಾವನೊ ನೋಡಿಕೊಳ್ಳುವೆನು. ಕೊಡುವವನು ಏನೇ ಆಗಲಿ, ಪಡೆಯುವವನು ಯೋಚಿಸಬೇಡವೆ ? ಇದಕ್ಕೆ ತಾನು ಯೋಗ್ಯನಲ್ಲವೆಂದು ಭಾವಿಸದೆ, "ಕೊಟ್ಟವನ್ನು ತೆಗೆದುಕೊಂಡರಾಯಿತು. ನನ್ನದೇನು ಹೋಗುವುದು ?" ಎಂದುಕೊಂಡು ಹೊಲಗೆಟ್ಟು ಮದುವೆಮಾಡಿಕೊಂಡವನು ಅವನು ಎಂಥವನೆಂಬುದನ್ನೂ ನಾನು ಎಂಥವನೆಂಬುದನ್ನೂ ಇನ್ನು ಕಾಣಬಹುದು.

೪೫. ಹೀಗೆ ಯೋಚಿಸುತ್ತ, ಪ್ರಳಯಕಾಲದ ಬಿರುಗಾಳಿಯಿಂದ ಹುಚ್ಚೆದ್ದು ಮೊರೆಯುವ ಹೆಗ್ಗಡಲಂತೆ ಆರ್ಭಟಿಸಿ, ಔಡುಗಚ್ಚಿ, ಸಿಂಹಾಸನವನ್ನು ಅಪ್ಪಳಿಸಿ ಎದ್ದು, ಕೆರಳಿದ ಆನೆಯಂತೆ ತನ್ನ ದರ್ಬಾರಿನಿಂದ ಹೊರಟುಬಂದು, ಸ್ಫುರಿಸುತ್ತಿರುವ ಮೀಸೆಗಳಿಂದ ಭಯಂಕರನಾಗಿ ಹೆಬ್ಬಾಗಿಲಿಗೆ ಬಂದು ನಿಂತನು.

ವ॥ ಆತನು ಹಾಗೆ ಅಲ್ಲಿಗೆ ಬಂದು ನಿಂತುದನ್ನು ಕಂಡು, ಸೇನಾಪತಿಯು ಆತುರದಿಂದ ಓಡಿಬಂದು, ವಿನಯದಿಂದ ತಲೆಬಾಗಿ, ಅಪ್ಪಣೆಯನ್ನು ನಿರೀಕ್ಷಿಸುತ್ತ ನಿಂತನು.

೪೬. ಯುದ್ಧಕ್ಕಾಗಿ ಸಚರಾಚರವಾದ ಸಮಸ್ತ ಸಾಮಗ್ರಿಗಳನ್ನು ಸಿದ್ಧಪಡಿಸೆಂದು ಚಕ್ರವರ್ತಿಯು ತನ್ನ ಹುಬ್ಬಿನ ಸನ್ನೆಯಿಂದಲೆ ತಿಳಿಸಿದನು. ಕೂಡಲೆ ಸೇನಾಪತಿಯ ಅಪ್ಪಣೆಯಿಂದ ಖೇಚರರೂ ಭೂಚರರೂ ಅಸಂಖ್ಯ ಬಲದೊಂದಿಗೆ ಬಂದು ನೆರೆದರು.

೪೭. ನೆಲದ ಮೇಲೂ ಆಕಾಶದಲ್ಲಿಯೂ ಎಲ್ಲಿ ನೋಡಿದಲ್ಲಿ ಕುದುರೆಗಳೇ ಕುದುರೆಗಳು. ಹೀಗೆ ಅಪಾರವಾದ ಸೈನ್ಯಸಮೇತನಾಗಿ ಖೇಚರರಾಜನು ಬೆಟ್ಟವೇ ನಡೆದು ಬರುವಂತೆ ರಥಾವರ್ತಪರ್ವತಕ್ಕೆ ಹೊರಟುಬಂದನು.

1. ಅಂತಲ್ಲಿ (ಅ) 2. ಮದುಮೊಮಾಸು (ಅ)

ವ॥ ಅಂತು ರಥಾವರ್ತಾಚಳಮನೆಯ್ದಿ ಬೀಡಂ ಬಿಟ್ಟು ಮದುವೆ ನೆಗೆದಿರ್ದ ವರನುಮಂ ನೆರೆದಿರ್ದ ನೃಪವರರುಮಂ ಮೂದಲಿಸಿ ಮಾತಂ ಬೂತುಮನಟ್ಟುವುದುಂ ದರ್ಪಿಷ್ಠನಪ್ಪ ತ್ರಿಪೃಷ್ಠ ಕುಮಾರಕಂ—

ಕಂ॥ ಕೊಲ್ವೆ ನರಾತಿಯನಿಂದೆ ಪೊ
ನಲ್ವರಿವಿನಮೆಯ್ದೆ ವೀರರಸಮೇ ಮಾತೊ
ಡ್ಡಲ್ವೇೞ್ಕುಡಿಂದೆ ತಱಿದು ಪ
ಡಲ್ವಡಿಸನೆ ಖಚರ ಸೈನ್ಯ ವಿಷಮಾಟವಿಯಂ ॥ ೪೮ ॥

ವ॥ ಎಂದು ಗರ್ಜಿಸಿ ಬಂದೋನಂ ಮುಹೂರ್ತಮಾತ್ರಮಪ್ಪೊಡಂ ತಡೆಯಲೀಯದೆ ಬೂತಿಂಗೆ ಧನಮುಮಂ ದೂತಂಗೆ ಪ್ರಸಾಧನಮುಮನಿತ್ತು ಪೋಗಲ್ವೇೞ್ದು ತಾನುಮಾತನ ಬೞಿವೞಿಯನೆ —

ಮ॥ ವಿಜಯಶ್ರೀ ರಣದೊಳ್ ಸ್ವಯಂಪ್ರಭೆ ಜಯಾರಂಭಂ ಮಹೋಗ್ರಾಜಿಯೊಳ್
ವಿಜಯಂ ವೀರರಸಂ ನಿಜಾಭಿಮುಖದೊಳ್ ಕಾಮಂ ಸಮಗ್ರಾಹವ
ಧ್ವಜ ನಮ್ರಂ ಸಮರೈಕ ಸಾಹಸಮದಂ ಭಾವಂ ತ್ರಿಪೃಷ್ಠಂಗರಿ
ಧ್ವಜಿನೀ ಮಾರಣಮೇನೊ ಯೂಥವಧದಿಂದ ಕ್ಲೇಶಮೇನಗ್ನಿಗಂ ॥ ೪೯ ॥

ವ॥ ಪಯಣದ ಮೇಲೆ ಪಯಣಂ ಬಂದು ರಥಾವರ್ತ ಮಹೀಧರಮನೆಯ್ದಿ ಬೀಡಂ ಬಿಟ್ಟು ಬೇಗದೊಳ್ ಬೇಗಮಣ್ಮುಟ್ಟಾಗಿಯುಂ ಅಡಿಗಿಡದೆಯುಂ ಇನಿಸೆಡೆಗುಡದೆಯುಂ ಸಾರ್ಚಿ ಸ್ತ್ರೈಣದಿಂ ಪೆರ್ಚಿದ ಕೋಪೋದ್ರೇಕಮನಾಱಲೀಯದೆಯುಂ ಬೇಗಮನುವರಮಂ ಸಾ[1] [ಜ][1]ಲ್ವೇೞ್ದಿರುಳೊಳ್ ಕೊಳ್ಳಿ[2]ವೀ[2]ಸಿಸಿಯುಂ ರವಳಿ ಘೋಷಿಸಿಯುಂ ನಾಲ್ಕುಜಾವಮುಮನುವರಮನೆ ಸಮಕಟ್ಟುತ್ತುಮಿರೆಯಿರೆ

ವ॥ ಹೀಗೆ ಅಲ್ಲಿಗೆ ಬಂದು ಪಾಳೆಯ ಊರಿ, ಮದುವೆಗೆ ನೆರೆದಿದ್ದ ರಾಜರನ್ನೂ ಮದುವೆಯಾದವನನ್ನೂ ಚುಚ್ಚುಮಾತಿನಿಂದ ಧಿಕ್ಕರಿಸುವ ಮಾತನ್ನು ತಿಳಿಸಲು ದೂತನನ್ನೂ ಯುದ್ಧದ ಆಹ್ವಾನವನ್ನು ಮುಟ್ಟಿಸುವುದಕ್ಕೊಬ್ಬ ವಿಶೇಷ ದೂತನನ್ನೂ ಕಳಿಸಿದನು. ದರ್ಪೋನ್ನತನಾದ ತ್ರಿಪೃಷ್ಠನು—

೪೮. "ನನ್ನ ಪರಾಕ್ರಮವನ್ನು ಹೊನಲಾಗಿ ಹರಿಯಿಸಿ, ಇಂದೇ ಶತ್ರುವನ್ನು ಸಂಹರಿಸುವೆನು. ಇನ್ನೇನು ಮಾತು ? ನಿಮ್ಮ ರಾಜನಿಗೆ ಇಂದೇ ಸೈನ್ಯವನ್ನು ಒಡ್ಡಹೇಳು. ಖೇಚರಸೈನ್ಯವೆಂಬ ಕಗ್ಗಾಡನ್ನು ಕಡಿದು ಕೆಡವಿಬಿಡದೆ ಇರುವೆನೆ ?"

ವ॥ ಎಂದು ಅಬ್ಬರಿಸಿ ನುಡಿದು, ಕ್ಷಣಮಾತ್ರವಾದರೂ ನಿಲ್ಲಿಸಿಕೊಳ್ಳದೆ ಆಹ್ವಾನ ಪುರುಷನಿಗೆ ಧನವನ್ನೂ ದೂತನಿಗೆ ಪಸಾಯಿತನವನ್ನೂ ಕೊಟ್ಟು ಮರಳಿ ಕಳಿಸಿದನು. ಮತ್ತು ಅವನ ಹಿಂದಿನಿಂದಲೆ ತಾನೂ (ಹೊರಟನು).

೪೯. ಈ ರಣರಂಗದಲ್ಲಿ ಜಯಾಂಗನೆ ತನಗೆ ಸ್ವಯಂಪ್ರಭೆ (ಈಗಾಗಲೆ ಕೈಹಿಡಿದವಳು); ಮಹಾ ಪ್ರಚಂಡವಾದ ಯುದ್ಧದಲ್ಲಿ ಆರಂಭದಿಂದಲೆ ಜಯಪಡೆಯುತ್ತ. ಶತ್ರು ಸೈನ್ಯದ ಸಮಸ್ತ ಧ್ವಜಗಳನ್ನು ನೆಲಕ್ಕೆ ಒರಗಿಸುವ ಸಾಹಸವು ತನಗೆ ಇನ್ನೊಬ್ಬ ಭಾವ (ಈಗ ಆತನಿಗೆ ಇರುವ ಭಾವನ ಹೆಸರು "ವಿಜಯ"); ಎದುರಾಗಿರುವವನು ಕಾಮ: (ಅಶ್ವಗ್ರೀವನ ಸೇನಾನಾಯಕರಲ್ಲಿ ಒಬ್ಬನ ಹೆಸರೂ ಅದೇ.) ವೈರಿಸೇನೆಯನ್ನು ಕಗ್ಗೊಲೆಗೈಯುವುದು ತ್ರಿಪೃಷ್ಠನಿಗೆ ತೀರ ಅನಾಯಾಸದ ಕಾರ್ಯ. (ತ್ರಿಪೃಷ್ಠನ ಮೈದುನರ ಹೆಸರು "ಶ್ರೀವಿಜಯ" ಮತ್ತು "ವಿಜಯ" ಎಂದಿದ್ದು, ಇಲ್ಲಿ ಶ್ಲೇಷೆಯನ್ನು ಬಳಸಿರುವ ಸಾಧ್ಯತೆಯಿದೆ; ಏನೆ ಆದರೂ ಪದ್ಯದ ಅನ್ವಯ ಕ್ಲಿಷ್ಟವಾಗಿದೆ).

ವ॥ ಹೀಗೆ ಪಯಣದ ಮೇಲೆ ಪಯಣ ಮಾಡುತ್ತ (ತ್ರಿಪೃಷ್ಠನೂ ಆತನ ಒಳಗಿನ ವೀರರೂ) ರಥಾವರ್ತಪರ್ವತವನ್ನು ಮುಟ್ಟಿ, ಅಲ್ಲಿ ಶಿಬಿರವನ್ನು ಸ್ಥಾಪಿಸಿದರು. ಹಗೆಗಳಿಗೆ ಹತ್ತಿರವಾಗಿಯೂ, ಹಿಂಜರಿಯದೆಯೂ, (ಒಳನುಗ್ಗಲು) ಅವಕಾಶವಿಲ್ಲದಂತೆಯೂ ವ್ಯೂಹವನ್ನು ಒಡ್ಡಿದರು. ಸ್ತ್ರೀಸಂಬಂಧವಾಗಿ ಹೊತ್ತಿಕೊಂಡ ಕೋಪದ ಬೆಂಕಿಯನ್ನು ಆರಗೊಡದೆ, ತ್ವರೆಯಿಂದ ಯುದ್ಧವನ್ನು ಸಾರಲು ಅಪ್ಪಣೆಯಿತ್ತು ರಾತ್ರಿಯಲ್ಲಿ ಯುದ್ಧಸನ್ನದ್ಧತೆಯ ಸೂಚನೆಯಾಗಿ ಕೊಳ್ಳಿಗಳನ್ನು ಬೀಸಿ, ವಾದ್ಯಗಳನ್ನು ನುಡಿಸಿ, ಇರುಳಿನ ನಾಲ್ಕು ಜಾವದ ಕಾಲದವರೆಗೆ ಕಾಳಗವನ್ನು ಅಣಿಗೊಳಿಸುತ್ತಿದ್ದರು.

---

1. ರ (ಮ) 2. ಏ (ಮ)

ಕಂ॥ ವನಿತೆ ಪರಸ್ತ್ರೀ ಪೆಱರ್ಗೆ
ತ್ತನಿತಱ[1]೦ೞಱಿ ದಱ[1]ದ ಮಱುಪನಾದಶ್ವಗ್ರೀ
ವನ ಮಿೞ್ತು ಪುಟ್ಟುವಾರ್ದಪು
ದೆನಗೇಂ ತಡಮೆಂಬ ತೆಱದಿನಿನನುದಯಿಪುದುಂ ॥ ೫೦ ॥

ವ॥ ಚಕ್ರವರ್ತಿ ಯುದ್ಧಸನ್ನದ್ಧನಾಗಿ ಸಮಸ್ತ ಸಾಮಗ್ರೀ ಸಹಿತಂ ಶಿಬಿರದಿಂ ಪೊಱಮಟ್ಟೋಡಿದಾಗಳ್—

ಕಂ॥ ಆಯು ತವೆ ಪಾರದರಿಗಪೆ
ಪಾಯಮನೆತ್ತಱಿಪಸುಚಿತ ವಾಕ್ಯಾರ್ಥಂ ಕೊ
ಳ್ಳೀಯೆ ಪರದಾರಗಮನಮ
ನಾಯು[2]ಷ್ಯಾಂತಮು[2]ಮೆನಲ್ ಮನಂದಂದಪನೇ ॥ ೫೧ ॥

ವ॥ ಇತ್ತ ತ್ರಿಪೃಷ್ಠನುಂ ವಿಜಯನುಮರ್ಕಕೀರ್ತಿಯುಂ ಪ್ರಜಾಪತಿಯುಂ ಜ್ವಳನಜಟಿಯುಂ ಸರಿಸ ಪಸಮುಕಟ್ಟಿ ಮೂಱು ಮೊಸೆಯಾಗೊಡ್ಡಿ ಸ್ವಯಂಪ್ರಭೆಗಂ ಬೀಡಿಂಗಂ ತಮ್ಮ ನಚ್ಚುವ ವಿದ್ಯೆಗಳಂ ಕಾಪುವೇೞ್ದು ಪರಿಚ್ಛೇದಕ್ಕೆವಂದು ನಿಂದಾಗಳ್—

ಕಂ॥ ಆ ಸಮಯದೊಳರಿಬಲ ಸಂ
ತ್ರಾಸಿ ಬಲಿಷ್ಠಂ ತ್ರಿಪೃಷ್ಠನಶ್ವಗ್ರೀವೋ
ದ್ಭಾಸಿ ಪ್ರದೀಪಮಂ ಕಿಡೆ
ಬೀಸುವವೋಲಸುವರಕ್ಕೆ ಕೆಯ್ವಾಸುವುದುಂ ॥ ೫೨ ॥

ಹರಿಣೀವೃತ್ತಂ॥ ಎರಡು ಬಲಮುಂ ಭೋರೆಂದಾರ್ದರ್ದು ಖೇಚರ ಭೂಮಿಗೋ
ಚರ ಸಮುದಿತಂ ಬಾನೊಳ್ ಭೂಭಾಗದೊಳ್ ಕಿಡಿಗುಟ್ಟಿದಂ
ತಿರ ಪೆಣದು ಬಿಲ್ವಿಲ್ಲಂ ತೇರ್ ತೇರನಾನೆಯುಮಾನೆಯಂ
ಹರಿ ಹರಿಯುನಾಂತಾಗಳ್ ನಿಂದಣ್ಮಿ ಮಣ್ಮುೞಿಯಪ್ಪುದುಂ ॥ ೫೩ ॥

---

೫೦. ಹೆರವರಿಗೆ ಕೊಟ್ಟ ಕೂಡಲೆ ಹೆಣ್ಣು ಪರಸ್ತ್ರೀಯೆನಿಸುತ್ತಾಳೆ. ಇದನ್ನು ತಿಳಿದೂ ತಿಳಿದೂ ಅಶ್ವಗ್ರೀವನು ಪರವನಿತೆಗೆ ಬಾಯ್ಬಿಡುವನೆಂದರೆ ಮೃತ್ಯು ಅವನನ್ನು ನುಂಗದಿರುವಳೆ? ಸಮಯ ಕಾಯುತ್ತಿದ್ದಾಳೆ ಅಷ್ಟೆ. ನಾನೇಕೆ ತಡಮಾಡಬೇಕು? ಎಂದುಕೊಂಡು ಸೂರ್ಯನು ಉದಯವಾದನು.

ವ॥ ಚಕ್ರವರ್ತಿಯಾದ ಅಶ್ವಗ್ರೀವನು ಯುದ್ಧಕ್ಕೆ ಸಿದ್ಧನಾಗಿ ಸಕಲ ಸೈನ್ಯ ಸಾಮಗ್ರಿಯಿಂದೊಡಗೂಡಿ ಶಿಬಿರದಿಂದ ಹೊರನುಗ್ಗಿದನು.

೫೧. ಆಯುಷ್ಯ ಮುಗಿದ ಹಾದರಿಗನು ಅಪಾಯವನ್ನೇನು ಬಲ್ಲನು? ಪರಸ್ತ್ರೀಗಮನದಿಂದ ಆಯುಷ್ಯಹಾನಿ ಎಂಬ ಸೂಕ್ತಿ ಅವನ ಮನಸ್ಸಿಗೆ ಹೊಗುವುದೆ?

ವ॥ ಇತ್ತ ತ್ರಿಪೃಷ್ಠನು ವಿಜಯ, ಅರ್ಕಕೀರ್ತಿ, ಪ್ರಜಾಪತಿ ಮತ್ತು ಜ್ವಳನಜಟಿಯರೊಂದಿಗೆ ಮೂರು ಕಡೆಯಿಂದಲೂ ವಿಸ್ತಾರವಾಗಿ ವ್ಯೂಹವನ್ನೊಡ್ಡಿ, ಸ್ವಯಂಪ್ರಭೆಗೂ ತಮ್ಮ ಶಿಬಿರಕ್ಕೂ ತಮ್ಮ ನಂಬುಗೆಯ ವಿದ್ಯಾದೇವತೆಗಳ ಕಾವಲಿಟ್ಟು ಯುದ್ಧಕ್ಕೆ ಅಣಿಯಾದರು.

೫೨. ಆಗ ಅಶ್ವಗ್ರೀವನೆಂಬ ದೀಪವನ್ನೆ ಕೈಬೀಸಿ ಆರಿಸುವಂತೆ ಪರಬಲಪೀಡಕನಾದ ತ್ರಿಪೃಷ್ಠನು ಕೈಬೀಸಿ ಯುದ್ಧಾರಂಭಕ್ಕೆ ಸೂಚನೆಯಿತ್ತನು.

೫೩. ಖೇಚರರೂ ಭೂಚರರೂ ಕೂಡಿಕೊಂಡ ಆ ಎರಡೂ ಸೈನ್ಯಗಳು ಭೀಕರವಾಗಿ ಗರ್ಜಿಸಿ, ಆಕಾಶದಲ್ಲಿಯೂ ಭೂಮಿಯ ಮೇಲೂ ಒಂದರೊಳಗೊಂದು ಹೆಣೆದುಕೊಂಡಂತೆ ತೊಡರಿ ಬಿಲ್ಗಾರರು ಬಿಲ್ಗಾರರೊಡನೆಯೂ, ರಥಿಕರು ರಥಿಕರೊಡನೆಯೂ, ಆನೆಪಡೆ ಆನೆಪಡೆಯೊಂದಿಗೂ, ಕುದುರೆದಳ ಕುದುರೆದಳದೊಂದಿಗೂ ಕಿಡಿಕಿಡಿಯಾಗಿ ಕಾದಾಡಿ, ಬಿದ್ದು ಮಣ್ಣುಪಾಲಾದುವು.

---

1. ಲಿಂದಱ (ಅ) 2. ಷ್ಯಂತಮ (ಮ)

ಕಂ॥ ತೊಟ್ಟನೆ ಕೊಳೆ ಚತುರಂಗದ
ಪುಟ್ಟಂ ಕೆನಱಿದವೊಲಂತಕಂ ಪೆಣನಂ ಸಾ
ಲಿಟ್ಟವೊಲಿರೆ ಸೈನ್ಯಂ ಪಡ
ಲಿಟ್ಟವೊಲಿರೆ ಪರಿವ ಪಿರಿಯ ಕರಿಯಂ ವಿಜಯಂ ॥ ೫೪ ॥

ಕಂಡಱದು ನೂಂಕಿ ಮದವೇ
ತಂಡಮನಿದಿರಾದ ವಿಪುಳ[1]ಕಂಠನನಿನಿಸಂ[1]
ಕೊಂಡಿರದೆ ಕೊಂದು ಗೆಲ್ಲಂ
ಗೊಂಡಂ ಬಗೆಗೊಳ್ವ ರೆಱಿದೆ ವಿಜಯಾಂಗನೆಯಂ ॥ ೫೫ ॥

ವ॥ ಅಂತು ವಿಜಯನಶ್ವಗ್ರೀವನ ಮಗನಪ್ಪ ವಿಪುಳಕಂಠನಂ ತನ್ನವಾರ್ಯವೀರ್ಯಕ್ಕೆ ಮುಡಿಗಿಕ್ಕುವಂತಿಕ್ಕೆ ಕೆಯ್ಯಿಕ್ಕಿ[2][ಟ][2]ಲೊಳ ನಿಬರುಮೊಂದಾಗಿ ಬಂದು ತಾಗೆ ದಿವ್ಯಚಾಪಂ ಪೊಱಮುಯ್ವಂ ತಾಗೆ—

ಕಂ॥ ತೆಗೆನೆಱೆದು ಚಿತ್ರಮೂಲಾ
ದಿಗಳುಮನೋರೊಂದೆ ಸರಲೊಳೋರೊರ್ವರನಾ
ವಗಮೆಚ್ಚಂತಕ ಮುಖಮಂ
ಪುಗಿಸಿದನಾರಾಂಪೊರುಱದೆ ಹಲಿಯಂ ಕಲಿಯಂ ॥ ೫೬ ॥

ವ॥ ಅಂತು ಬಲದೇವನಶ್ವಗ್ರೀವನ ತಮ್ಮನಪ್ಪ ಸುಕಂಠನುಮಂ ಮೃತ್ಯು ಕಂಠೀರವಕ್ಕೆ ಗ್ರಾಸಂ ಮಾಡಿ ಮಗುಳ್ದು ಹಲಾಯುಧಮ ನೆತ್ತಿಕೊಂಡು—

ಕಂ॥ ಧೃತವಿಷಮಬಾಣನಂ ಜಿನ
ಪತಿ ಗೆಲ್ದವೊಲಾತನಂ ಪ್ರಜಾಪತಿ ಧರಣೀ
ಪತಿ ಕಾಮದೇವನಂ ಗೆ
ಲ್ದು ತಳರದನಿವಾರ್ಯವೀರ್ಯಮಂ ಪೊಸಯಿಸಿದಂ ॥ ೫೭ ॥

೫೪. (ಚದುರಂಗದ ಕಾಯಿಗಳನ್ನು ಕೆದರಿ ಚೆಲ್ಲಾಪಿಲ್ಲಿ ಮಾಡಿದಂತೆ) ಮೃತ್ಯುದೇವತೆ ಚದುರಂಗ ಸೈನ್ಯವನ್ನು ಕೆದರಿತು; ಸಾಲುಸಾಲಾಗಿ ಹೆಣ ಬಿದ್ದುವು; ನುಗ್ಗಿಬಂದ ಮಹಾಗಜವನ್ನು ಕಂಡು ವಿಜಯಕುಮಾರನು

೫೫. ತನ್ನ ಆನೆಯನ್ನು ತಿವಿದು ನಡಸಿಕೊಂಡು ಹೋಗಿ, ವಿಪುಳಕಂಠನೆಂಬವನನ್ನು ಆಕ್ರಮಿಸಿ ತಕ್ಷಣವೆ ಕೊಂದು ಜಯಾಂಗನೆಯನ್ನು ಮೆಚ್ಚಿಸಿದನು.

ವ॥ ಅಶ್ವಗ್ರೀವನ ಮಗನಾದ ವಿಪುಳಕಂಠನನ್ನು ಹೀಗೆ ತನ್ನ ದುರ್ಧರ ಪರಾಕ್ರಮಕ್ಕೆ ಬಲಿಕೊಡುವಂತೆ ಕೊಂದಿಕ್ಕಲಾಗಿ, ಅವನ ಪಕ್ಷದವರೆಲ್ಲರೂ ಉರಿದೆದ್ದು ಒಟ್ಟಾಗಿ ನುಗ್ಗಿ ಮೇಲೆಬಿದ್ದರು. ಆಗ (ವಿಜಯನು) ತನ್ನ ದಿವ್ಯಧನುವಿನ ಹೆದೆ ಹೆಗಲನ್ನು ತೆಗುಲುವಂತೆ

೫೬. ಸೆಳೆದು ಚಿತ್ರಮೂಲನೇ ಮೊದಲಾದ ಎಲ್ಲರನ್ನೂ ಒಂದೊಂದೇ ಬಾಣದಿಂದ ಹೊಡೆದು ಯಮನ ಬಾಯಿಗೆ ತುರುಕಿದನು. ಶೂರನಾದ ಬಲದೇವನನ್ನು ಎದುರಿಸಿ ನಿಲ್ಲಬಲ್ಲವರು ಯಾರು ?

ವ॥ ಹೀಗೆ ಅಶ್ವಗ್ರೀವನ ತಮ್ಮನಾದ ಸುಕಂಠನನ್ನು ಮೃತ್ಯುವಿಗೆ ಬಲಿಕೊಟ್ಟು ಬಲದೇವನು ತನ್ನ ಹಲಾಯುಧ ವನ್ನು ಎತ್ತಿಕೊಂಡನು.

೫೭. ಅಸಮಾನ ಬಾಣಗಳುಳ್ಳ ಮನ್ಮಥನನ್ನು ಜಿನೇಶ್ವರನು ಗೆದ್ದಹಾಗೆ ಪ್ರಜಾಪತಿ ಮಹಾರಾಜನು ಕಾಮ ದೇವನೆಂಬವನನ್ನು ಗೆದ್ದು ತನ್ನ ಅಪ್ರತಿಹತವಾದ ಕಾರ್ಯವನ್ನು ಪ್ರಕಟಿಸಿದನು.

1. ಕಂಧರನನಿ (ಅ)   2. ಳ (ಮ)

ಸ್ರ॥ ಅಂತಾಸಂಗ್ರಾಮದೊಳ್ ತನ್ನನುಜ ತನುಜ ಜಾಮಾತೃವರ್ಗಂ ಪಡಲ್ವ
ಟ್ಟಂತಾಗಳ್ ವೊಟ್ಗಿ ತಟ್ಗಿ ಪುರ್ದುಮಣೆದಿಭಮಂ ಕೀೞ್ ಬಿಟ್ಟಿಕ್ಕಿ ಪಾಂಗ
ಪ್ಪಂತಶ್ವಗ್ರೀವನೆಟ್ಟಂದಹಿತನ ಮೊನೆ ಯತ್ತೆತ್ತಣಂ ಪೇೞ್ ತ್ರಿಪೃಷ್ಠಂ
ಭ್ರಾಂತಾತ್ಮಂ ತೋಱು ತೋಱೆಂದೊದಱಿ ಗಜಮಹಾಪೃಷ್ಠನಿಷ್ಠಂ ತ್ರಿಪೃಷ್ಠಂ ॥ ೫೮ ॥

ಕಂ॥ ಇದಿರಂ ಪರಿಯಿಸಿ ನಿಜಮದ
ರದನಿಯನಿತ್ತೆತ್ತ ಪರಿಯಿಸಣ್ಮಣ್ಮೆಂದಾ
ದೊರ್ದವಿಸೆ ಸೋನೆಯ ಕೋಲ್ಗಳ
ಪುದುವಿನ ಕಿಱುಮೊರಡಿಯನ್ನನಾದೊಂ ಖಚರಂ ॥ ೫೯ ॥

[1]ವ॥ ಆಗ[1]

ಕಂ॥ ಇಸುವಂಬನಂಬಿನಿಂ ಖರ
ಡಿಸಿ ಗರುಡಧ್ವಜನ ಗಜದ ಮೊಗಚರ್ಮವನ
ರ್ಬಿಸುವಿನಮಿಸೆ ಪೊಸ ಮೞೆಯಂ
ಬಸದಳಮೊಡನೆಱಗಿ ತುಱುಗಿ ಪಾಯ್ದುವು [2]ಕೆಲವುಂ ॥ ೬೦ ॥

ವ॥ ಅಂತು ಕಡುಗೆಯ್ಮೆನಾಗಿ ಶೀಘ್ರಸಂಧಾನಮಿಸುವಶ್ವಗ್ರೀವನ ತಕ್ಕುಂ ಬೇಗಯ್ಮೆಯುಂ ಕಿಡೆ –

ಕಂ॥ ಎನಿತೆನಿತಿಸುವಂಬುಗಳನಿ
ತನಿತಱಿನವನಱಿ[3]ದು ತಱಿದು ನೆರೆದಶ್ವಗ್ರೀ
ವನ ಬಿಲ್ಲ ಗೊಣೆಯುಮಂ ಭೋಂ
ಕನೆ ಕುಱಿದಱಿದಱಿದಸಬ್ಬ ಜಠರಂ ಧುರದೊಳ್ ॥ ೬೧ ॥

---

೫೮. ಹೀಗೆ ಆ ಯುದ್ಧದಲ್ಲಿ ತನ್ನ ಮಗ, ತಮ್ಮ ಮತ್ತು ಅಳಿಯಂದಿರೆಲ್ಲ ಕಡಿಮುಕೊಂಡು ಬಿದ್ದು ಸೈನ್ಯವೆಲ್ಲ ಚೆಲ್ಲಾಪಿಲ್ಲಿಯಾಗಿ ಹಾಳಾಗಲು ಗಜಾರೂಢನಾದ ಅಶ್ವಗ್ರೀವನು ತನ್ನ ಆನೆಯನ್ನು ಕಿವಿಮ ಓಡಿಸಿಕೊಂಡು ಬರುತ್ತ "ಎಲ್ಲಿದೆ ಹಗೆಯ ಸೈನ್ಯ? ಎಲ್ಲಿ ಆ ಮೂರ್ಖನಾದ ತ್ರಿಪೃಷ್ಠ? ತೋರಿಸು, ತೋರಿಸು" ಎಂದು ಆರ್ಭಟಿಸಿದನು.

೫೯. ಆಗ (ತ್ರಿಪೃಷ್ಠನು) ತನ್ನ ಮದಗಜವನ್ನು ಎದುರಿಗೆ ನಡೆಯಿಸಿ, "ಇತ್ತಿತ್ತ ಬಾ, ತೋರು ನಿನ್ನ ಬಲವನ್ನು" ಎಂದು ಗರ್ಜಿಸುತ್ತ ಬಾಣಗಳ ಮಳೆಯನ್ನು ಸುರಿಯಲಾಗಿ, ಮೈಯೆಲ್ಲ ಬಾಣಗಳಿಂದ ಮುಚ್ಚಿ ಅಶ್ವಗ್ರೀವನು ಬಿದಿರ ಕೋಲುಗಳಿಂದ ಕಿಕ್ಕಿರಿದ ಚಿಕ್ಕ ದಿಣ್ಣೆಯಂತಾದನು.

ವ॥ ಆಗ

೬೦. ತನ್ನಮೇಲೆ ಎರಗುವ ಬಾಣಗಳನ್ನು ತನ್ನ ಬಾಣಗಳಿಂದ ಕತ್ತರಿಸಿ, ವಾಸುದೇವನ ಆನೆಯ ಮುಂಒಕ್ಕೆ ಅದರ ಚರ್ಮವನ್ನೆಲ್ಲ ಹೂಳಿಬಿಡುವಂತೆ ಭೀಕರವಾಗಿ ಬಾಣಪ್ರಯೋಗ ಮಾಡಲಾಗಿ ಆತನ ತೀಕ್ಷ್ಣವಾದ ಬಾಣಗಳು ಹಿಂಡು ಹಿಂಡಾಗಿ ಎರಗಿ, ನಟ್ಟು, ಕೆಲವು ಆಚೆಗೂ ಹೊರಬಿದ್ದು ಹೋದುವು.

ವ॥ ಹೀಗೆ ಕೈಚಳಕದಿಂದ ವೇಗವೇಗವಾಗಿ ಬಾಣ ಬಿಡುತ್ತಿರುವ ಅಶ್ವಗ್ರೀವನ ಸಾಮರ್ಥ್ಯವನ್ನೂ ಶೀಘ್ರತೆಯನ್ನೂ ಮುಗಿಸಿಬಿಡುವಂತೆ—

೬೧. ಅವನು ಎಷ್ಟೆಷ್ಟು ಬಾಣಗಳನ್ನು ಬಿಡುವನೊ ಅಷ್ಟಷ್ಟು ಬಾಣಗಳಿಂದ ಅವುಗಳನ್ನು ತುಂಡರಿಸಿ ಬಗೆದು. ಎಳೆದು ಹಿಡಿದ ಆತನ ಬಿಲ್ಲಿನ ಹೆದೆಯನ್ನು ತ್ರಿಪೃಷ್ಠನು ತನ್ನ ಬಾಣದಿಂದ ಚೂರು ಚೂರಾಗಿ ಕತ್ತರಿಸಿಬಿಟ್ಟನು.

---

1. × (ಮ) 2. ಪ (ಅ) 3. ೦ (ಮ)

ವ॥ ಅಂತು ಬಿಲ್ಲ ಗೊಣೆಯುಮಂ ಪಱಿವುದುಂ ದೇವಚಾಪದಂತೆ ನಿರ್ಗುಣಮಪ್ಪ ಬಿಲ್ಲನೀಡಾಡಿ ನಾಡಾಡಿಯಲ್ಲದಣ್ಮು ಕೆಯ್ಗಣ್ಮೆ ಪೊಣ್ಮೆ ತನ್ನುಳ್ಳ ವಿದ್ಯೆಗಳಂ ಬೆಸಸಿ ಕಾದುವಾಗಳ್—

ಕಂ॥ ಅಂತಾ ವಿದ್ಯೆಗಳಂ ಸರ
ಕಾಂತಕನಲಸದೆ ವಿಷಂ ವಿಷಕ್ಕೌಷಧಮೆಂ
ಬಂತಿರೆ ವಿದ್ಯೆಗಳಿಂ ಗೆ
ಲ್ದಂ ತನ್ನಂ ಮುನ್ನೆ ಮೆಚ್ಚದೊರಂ ಮೆಚ್ಚುವಿನಂ ॥ ೬೨ ॥

ವ॥ ಅಂತಶ್ವಗ್ರೀವಂ ನಿರಾಯುಧನುಂ ನಿರ್ವಿದ್ಯನುಮಾಗಿ ಕೆಲನಂ ನೋಡಿ ತನ್ನ ದಕ್ಷಿಣ ಪಕ್ಷದೊಳಿರ್ದ ಚಕ್ರಮಂ—

ಕಂ॥ ಕೊಂಡಿದೆ ಶಾರ್ಙ್ಗಧರಂ ಕಡ
ಗೊಂಡೊಂ ಕುಡುವಂತೆ ಮುಗುಳ್ದುದಂ ಕೊಂಡಿಡೆ ತ
ಚ್ಚಂಡಾರಿಶಿರಂ [1]ಸಿಂದುರ
ದುಂಡಿಗೆ ಧರೆಗೆನಿಸಿ ಮುಂದೆ ಬಿಟ್ಟುದು ಹರಿಯಾ ॥ ೬೩ ॥

ವ॥ ಅಂತಶ್ವಗ್ರೀವನಂ ಕೊಂದು ತನ್ನ ಕೊಂದ ಕೊಳ್ಗುಳಕ್ಕೆ ಬಂದ ಸ್ವಯಂಪ್ರಭೆಗೆ ತ್ರಿಪೃಷ್ಠನಶ್ವಗ್ರೀವನ ಕಬಂಧಮಂ ಸುಟ್ಟಿ ತೋಱಿ ನೋಡು ನೋಡೆಂದು—

ಮಾಳಿನೀವೃತ್ತಂ॥ ಬಲದ ಮುದದ ಬಲ್ಲಾಳೆನ್ನ ಕೆಯ್ವೆಟ್ಟ ನಿನ್ನಂ
ಕೊಳಲುಮದಿರದೆನ್ನೊಳ್ ಕಾದಲುಂ ಬಂದು ಚಕ್ರಂ
ಕೊಳೆ ಕೆಡೆದಿವನಶ್ವಗ್ರೀವನೀಯಟ್ಟೆಯಿಂದು
ಚ್ಚಳಿಸಿದುದು ಶಿರೋಂಭೋಜಾತಮಂಭೋಜನೇತ್ರೇ ॥ ೬೪ ॥

ವ॥ ಹೀಗೆ ಬಿಲ್ಲಿನ ದಾರ ಹರಿದುಹೋಗಲಾಗಿ, ಕಾಮನಬಿಲ್ಲಿನಂತೆ "ನಿರ್ಗುಣ"ವಾದ (೧. ಹೆದೆಯಿಲ್ಲದ, ೨. ನಿಷ್ಪ್ರಯೋಜಕವಾದ) ಆ ಧನುಸ್ಸನ್ನು ಬಿಸಾಡಿ, ಅಸಾಧಾರಣವಾದ ಪರಾಕ್ರಮ ಉಕ್ಕೇರುತ್ತಿರಲಾಗಿ ಅಶ್ವಗ್ರೀವನು ತನ್ನ ವಿದ್ಯೆಗಳಿಗೆ ಯುದ್ಧಮಾಡಲು ಆಜ್ಞಾಪಿಸಿದನು.

೬೨. "ವಿಷಕ್ಕೆ ವಿಷವೇ ಔಷಧ"ವೆಂಬಂತೆ ಆ ವಿದ್ಯೆಗಳನ್ನು ತನ್ನ ಪ್ರತಿವಿದ್ಯೆಗಳಿಂದ ಗೆದ್ದು ವಾಸುದೇವನನು ಶತ್ರುಗಳಿಂದ ಹೊಗಳಿಸಿಕೊಂಡನು.

ವ॥ ಹೀಗೆ ಅಶ್ವಗ್ರೀವನಿಗೆ ಆಯುಧಗಳು ಉಳಿಯದೆ, ವಿದ್ಯೆಗಳೂ ಇಲ್ಲವಾಗಿ, ತನ್ನ ಬಲಗಡೆಗೆ ಇದ್ದ ಚಕ್ರಾಯುಧವನ್ನು—

೬೩. ತೆಗೆದುಕೊಂಡು ವಾಸುದೇವನ ಮೇಲೆ ಪ್ರಯೋಗಿಸಿದನು. ಕೈಗಡವನ್ನು ಮರಳಿ ಮುಟ್ಟಿಸುವಂತೆ ಅದೇ ಚಕ್ರವನ್ನು ಹಿಡಿದು ತ್ರಿಪೃಷ್ಠನು ಅಶ್ವಗ್ರೀವನ ಮೇಲೆ ಪ್ರಯೋಗಿಸಿದನು. ಭೂಮಿಗೆ ಒತ್ತಿದ ಕುಂಕುಮದ ಮುದ್ರೆಯಂತೆ ಶತ್ರುವಿನ ಶಿರಸ್ಸು ಕತ್ತರಿಸಿ ವಾಸುದೇವನ ಮುಂದೆ ಬಿದ್ದಿತು.

ವ॥ ಹೀಗೆ ಅಶ್ವಗ್ರೀವನನ್ನು ಕೊಂದು, ತ್ರಿಪೃಷ್ಠನು ರಣರಂಗಕ್ಕೆ ಸ್ವಯಂಪ್ರಭೆಯನ್ನು ಕರೆತಂದು ಆತನ ಅಟ್ಟೆಯನ್ನು ಬೆರಳಿಟ್ಟು ತೋರಿಸುತ್ತ, "ನೋಡು, ನೋಡು.

೬೪. ನನ್ನ ಕೈಗೆ ಬಿದ್ದ ನಿನ್ನನ್ನು ಕಿತ್ತುಕೊಳ್ಳಬೇಕೆಂದು ತನ್ನ ಬಲದ ಸೊಕ್ಕಿನಿಂದ ಎರಿಬಂದು ಚಕ್ರಾಯುಧದ ಪ್ರಹಾರಕ್ಕೆ ಸಿಕ್ಕಿ ಸತ್ತುಹೋದ ಪರಾಕ್ರಮಿ ಅಶ್ವಗ್ರೀವನ ಅಟ್ಟೆಯಿದು. ಅಕೊ, ಅಲ್ಲಿ ಆತನರುಂಡ ಹಾರಿಬಿದ್ದಿದೆ."

1. ಸಿಂಧುರ (ಅ)

ವ॥ ಎಂದು ಮಸ್ತಮುಣ್ಮೆ ಸತ್ತರ ಗಾಡಮಾತನುಪಮಾಶೀತಂ ಮಾಡಿ ಪೊಗಟ್ದು ಕೊಳ್ಗುಳನಂ ಬೆಳಸಿ ತದ್ವಿದ್ಯಾಧರ ರಾಜಂ ಮೊದಲಾಗೆ ಕಾದಿ ಸತ್ತ ನೆಟ್ಟನೆಯ ಖೇಚರರ್ಗೆಲ್ಲಂ ಶರೀರ ಪೂಜಾಪೂರ್ವಕಂ ಸಂಸ್ಕಾರವಿಧಿಯುಂ ನಿರ್ವರ್ತಿಸಿ ದಕ್ಷಿಣೋತ್ತರ ಶ್ರೇಣಿಗಳೆರಡುಮಂ ತಮ್ಮ ಮಾವಂ ಜ್ವಳನಜಟಿಗೆ ಕೊಟ್ಟು ತಾನುಂ ತ್ರಿಖಂಡ ಮಂಡಲಾಧಿಪತ್ಯಮಂ ತಾಳ್ದಿ ಪೌದನಪುರಮಂ ಪೊಕ್ಕು ಜಯಮೆಂಬ ಚಕ್ರರತ್ನಮಂ ಶಾರ್ಙಮೆಂಬ ಚಾಪಮುಮಮೋಘಮುಖಿಯೆಂಬ ಶಕ್ತಿಯುಮಂ ಜಯಾನಂದಮೆಂಬ ಖಡ್ಗಮುಮಂ ಕೌಮೋದಕಿಯೆಂಬ ಗದೆಯುಮಂ ಪಾಂಚಜನ್ಯಮೆಂಬ ಶಂಖಮುಮಂ ಕೌಸ್ತುಭಮೆಂಬ ಆಭರಣಮುಮಂ ಪೂಜಿಸಿ ತಾನುಂ ಚಕ್ರವರ್ತಿ ಪದದೊಳ್ ವಿರಾಜಿಸಿ ಸುಖಮರಸುಗೆಯ್ಯುತ್ತಿರ್ದನನ್ನೆಗಂ[1]—

ಕಂ॥ ಜ್ವಳನಜಟಿ ನಿಜ ಪುರೋಪವ
ನಳೀಳೆ ಮಧುಮಾಸ ವಿರತಿಯೊಳ್ ಮಸುಳ್ದಿರೆ ಕಂ
ಡಳಿಸಿದ ಮೆಯ್ವೆರಸಿನಿಸಾ
ಕುಳನಾದೊಂ ಬಗೆದು ನೋಡಿ ಸಂಸೃತಿ ವಿಧಿಯಂ ॥ ೬೫ ॥

ದೆವಸದೊಳೆ ತರುಗಳುಂ ಮಾ
ರ್ದವಮಂ ಕೆಯ್ಗೊಳ್ಗುಮಲ್ಲದಂದೊಣಗುಗುಮೀ
ಭವವಾರಿಧಿಯೊಳ್ ಮುಳುಗಿದ
ವಿವೇಕಶೂನ್ಯಂಗಸಾರಮಿಂತಿದೆ ಸಾರಂ ॥ ೬೬ ॥

ವ॥ ಎಂದು ತತ್ತ್ವಭಾವನೆಗೆ ಮನಂಮಾಡಿ ರಾಜ್ಯದೆ ಅರ್ಕಕೀರ್ತಿಯುಮನಭಿಷೇಕಪೂರ್ವಕಂ ನಿಱಿಸಿ ವಿನೇಯ ಜನಾಭಿನಂದರಪ್ಪಭಿನಂದನ ಗುರೂಪಾಂತದೊಳ್ ನಿಸ್ತುಳಿತತಪಶ್ಚರಣನಿರತನಾದೊಂ ತದಗ್ರ ಮಹಿಷಿ ವಾಯುವೇಗೆಯುಂ ಶ್ರೀಮತಿನಾಮಾರ್ಯಿಕಾ ಸಮೀಪದೊಳ್ ಮೋಕ್ಷ ಹೇತು ಭೂತ ಜೈನದೀಕ್ಷೆಯಂ ಕೆಯ್ಕೊಂಡಳದಂ ಕೇಳ್ದಿತ್ತ ವಿಜಯನನಾಧಿರಾಜ್ಯದೊಳ್ ನಿಱಿಸಿ—

ವ॥ ಎಂದು ನುಡಿದು, ವೀರಮರಣವನ್ನು ಹೊಂದಿದವರ ಪರಾಕ್ರಮವನ್ನು ಅಸಮಾನವಾಗಿ ಹೊಗಳಿ, ಕಾಳಗದಲ್ಲಿ ಮಡಿದ ಆ ವಿದ್ಯಾಧರರಾಜನೇ ಮೊದಲಾದವರಿಗೆಲ್ಲ ಗೌರವಪೂರ್ವಕವಾಗಿ ಅಂತ್ಯಸಂಸ್ಕಾರ ಮಾಡಿಸಿದನು. ದಕ್ಷಿಣ ಶ್ರೇಣಿ, ಉತ್ತರ ಶ್ರೇಣಿಗಳೆಂಬ ಎರಡೂ ರಾಜ್ಯಗಳನ್ನು ತಮ್ಮ ಮಾವನಾದ ಜ್ವಳನಜಟಿಗೆ ಅರ್ಪಿಸಿದನು. ಮತ್ತು ತಾನು ತ್ರಿಖಂಡ ಭೂಮಿಗೆ ಒಡೆಯನಾಗಿ ಪೌದನಪುರಕ್ಕೆ ಬಂದು, ತನಗೆ ಒದಗಿದ ಜಯವೆಂಬ ಚಕ್ರರತ್ನ, ಶಾರ್ಙವೆಂಬ ಬಿಲ್ಲು, ಅಮೋಘಮುಖಿಯೆಂಬ ಶಕ್ತಿ, ಜಯಾನಂದವೆಂಬ ಖಡ್ಗ, ಕೌಮೋದಕಿಯೆಂಬ ಗದೆ, ಪಾಂಚಜನ್ಯವೆಂಬ ಶಂಖ ಹಾಗು ಕೌಸ್ತುಭವೆಂಬ ಆಭರಣ—ಇವೆಲ್ಲವುಗಳನ್ನೂ ಪೂಜಿಸಿ, ಚಕ್ರವರ್ತಿ ಪದವಿಯಿಂದ ಶೋಭಿಸುತ್ತ ಸುಖದಿಂದ ಆಳುತ್ತಿದ್ದನು. ಅಷ್ಟರಲ್ಲಿ (ಅತ್ತ)—

೬೫. ಜ್ವಳನಜಟಿರಾಜನು (ರಾಜ್ಯವಾಳುತ್ತಿರಲಾಗಿ) ಒಂದು ಸಲ, ವಸಂತಮಾಸ ಕಳೆದೊಡನೆ ತನ್ನ ಪುರೋದ್ಯಾನವು ಬಾಡಿದುದನ್ನು ಕಂಡನು. ಮೈಗೆ ಮುಳ್ಳೇರಿ, "ಸಂಸಾರದ ಗತಿ ಇಷ್ಟೇ ತಾನೆ!" ಎಂದು ಭಾವಿಸಿ ಮನನೊಂದನು.

೬೬. "ವಸಂತಋತು ಬಂದಾಗ ಮರಗಳು ಮೃದುವಾಗಿ ಪಲ್ಲವಿಸುತ್ತವೆ; ಆ ಕಾಲ ಮುಗಿದಾಗ ಒಣಗುತ್ತವೆ. ಈ ಸಂಸಾರ ಸಾಗರದಲ್ಲಿ ಮುಳುಗಿದ ಅವಿವೇಕಿಗೆ ಅಸಾರವೇ ಸಾರವೆನಿಸುತ್ತದೆ."

ವ॥ ಹೀಗೆಂದು ತತ್ತ್ವಭಾವನೆಗೆ ಮನಸ್ಸುಮಾಡಿ, (ತನ್ನ ಮಗನಾದ) ಅರ್ಕಕೀರ್ತಿಗೆ ಪಟ್ಟಗಟ್ಟಿ ಆತನಿಗೆ ರಾಜ್ಯವನ್ನೊಪ್ಪಿಸಿ, ಭಕ್ತಜನಕ್ಕೆ ಸುಖದಾಯಕರಾದ ಅಭಿನಂದನರೆಂಬ ಗುರುಗಳ ಸನ್ನಿಧಿಯಲ್ಲಿ ದೀಕ್ಷೆವಹಿಸಿ ತಪಸ್ಸಿಗೆ ತೊಡಗಿದನು. ಆತನ ಪಟ್ಟದರಸಿ ವಾಯುವೇಗೆಯೂ ಶ್ರೀಮತಿಯೆಂಬ ಆರ್ಯಿಕೆಯ ಬಳಿ ಮುಕ್ತಿದಾಯಕವಾದ ಜೈನದೀಕ್ಷೆಯನ್ನು ಪಡೆದಳು. ಈ ಸಮಾಚಾರವನ್ನು ಕೇಳಿ, ವಿಜಯಕುಮಾರನಿಗೆ ತನ್ನ ರಾಜ್ಯಾಧಿಕಾರವನ್ನು ಒಪ್ಪಿಸಿ—

---

1. ಗಮಿತ್ತ (ಅ)

ಪೃಥ್ವೀವೃತ್ತಂ॥ ಪ್ರಜಾಪತಿ ನೃಪಂ ಜಗತ್ಪತಿ ಪದಕ್ಕಡರ್ಪಪ್ಪನೂ
ನಜೈನ ಶುಭದೀಕ್ಷೆಯುಂ ಮನದೆ ಕೊಂಡು ಕೈಕೊಂಡನಂ
ದಜೇಯ ಪಿಹಿತಾಸ್ರವಾಖ್ಯ ಮುನಿಮುಖ್ಯಪಾದದ್ವಯಾಂ
ಬುಜಾಂತಿಕದೊಳಂತೆ ಭವ್ಯರಿರರೀ ಭವಾರಣ್ಯದೊಳ್ ॥ ೬೭ ॥

ವ॥ ಅಂತು ಜಾತರೂಪಧರನುಮಭಿಜಾತರೂಪಮನೋಹರನುಮಾಗಿ ಮುಕ್ತ್ಯಂಗನಾಪಾಂಗ ಭ್ರೂಭಂಗ ಸಂಗಸಮಾಸನಪ್ಪುದುಂ—

ಕಂ॥ ಗಗನಚರ ಸಕಲ ಸಾಮ್ರಾ
ಜ್ಯಗಾಮಿಯಪ್ಪರ್ಕಕೀರ್ತಿಗಂ ಜ್ಯೋತಿರ್ಮಾ
ಲೆಗಮಮಿತತೇಜನೆಂಬೊಂ
ಮಗನಾದೊಂ ಖೇಚರೇಂದ್ರ ಬಗೆಗೊಳ್ವುದಿದಂ ॥ ೬೮ ॥

ಎನ್ನಿಂ ಕಿಱಿಯಳ್ ಸಗ್ಗದ
ಕನ್ನೆಯರಂ ಹಾವಭಾವ ವಿಭ್ರಮಗತಿಯಿಂ
ದನ್ನಗುವಳ್ ಮುದದಿಂ ಸಿರಿ
ಯನ್ನಳೆನೆ ಸುತಾರೆಯೆಂಬಳಂಬರಗಮನಾ ॥ ೬೯ ॥

ಶ್ರೀವಿಜಯಂ ವಿಜಯಂ ನವ
ಭಾವಜ್ಯೋತಿಃಪ್ರಭಾಖ್ಯೆಯೆಂಬರ್ ಮಕ್ಕಳ್
ಮೂವರ್ ಕೊಂಡಾಟದ ಮಾ
ದೇವಿಗಮಂದರ್ಧ ಚಕ್ರವರ್ತಿಗಮಾದರ್ ॥ ೭೦ ॥

ವ॥ ಆಗಿ ಸುಖದಿಂ ಬಳೆಯೆ—

---

೬೭. ಪ್ರಜಾಪತಿರಾಜನು ಪಿಹಿತಾಶ್ರವರೆಂಬ ಮುನೀಂದ್ರರ ಪಾದಸನ್ನಿಧಿಯಲ್ಲಿ ಪರಮಪದಕ್ಕೆ ಸಾಧನವಾದ ಜೈನದೀಕ್ಷೆಯನ್ನು ಕೈಕೊಂಡನು. ಜಿನಧರ್ಮ ಭಕ್ತರು ಅರಣ್ಯದಂತಹ ಈ ಸಂಸಾರದಲ್ಲಿ ತೊಡಕಿಕೊಂಡು ಉಳಿಯ ಬಯಸುವುದಿಲ್ಲ.

ವ॥ ಹೀಗೆ ಆತನು ದಿಗಂಬರ ವ್ರತದಿಂದ ಅತ್ಯಂತ ಮನೋಹರನಾಗಿ ಮೋಕ್ಷಾಂಗನೆಯ ಕುಡಿನೋಟಕ್ಕೆ ಹತ್ತಿರವಾದನು.

೬೮. ಸಮಸ್ತ ಖೇಚರ ಸಾಮ್ರಾಜ್ಯಕ್ಕೆ ಅಧಿಪತಿಯಾದ ಅರ್ಕಕೀರ್ತಿಗೂ ಜ್ಯೋತಿರ್ಮಾಲೆಗೂ ಅಮಿತತೇಜನೆಂಬ ಮಗನಾದನು. ಖೇಚರೇಂದ್ರನೇ ಇದನ್ನು ಚಿತ್ತವಿಟ್ಟು ಕೇಳು.

೬೯. (ಅಮಿತತೇಜನೆಂಬ ಹೆಸರಿನಿಂದ ಹುಟ್ಟಿದವನು ನಾನೇ) ನನಗೆ ಸುತಾರೆಯೆಂಬ ತಂಗಿಯಾದಳು. ತನ ಹಾವಭಾವಗಳಿಂದಲೂ ವಿಲಾಸವಿಭ್ರಮಗಳಿಂದಲೂ ದೇವಕನ್ಯೆಯರನ್ನು ಹೀಯಾಳಿಸುವ ಆಕೆ ಸಾಕ್ಷಾತ್ ಲಕ್ಷ್ಮಿಯಂತೆಯೆ ಇದ್ದಳು.

೭೦. ಅತ್ತ, ಅರ್ಧಚಕ್ರವರ್ತಿಯಾದ ತ್ರಿಪೃಷ್ಠನಿಗೆ ಆತನ ಮಹಾರಾಣಿಯಾದ ಸ್ವಯಂಪ್ರಭೆಯಲ್ಲಿ ಶ್ರೀವಿಜಯ ಮತ್ತು ವಿಜಯ ಎಂಬಿಬ್ಬರು ಪುತ್ರರೂ ಹಾಗೂ ಜ್ಯೋತಿಃಪ್ರಭೆಯೆಂಬ ಪುತ್ರಿಯೂ ಹುಟ್ಟಿದರು.

ವ॥ ಅವರು ಸುಖದಿಂದ ಬೆಳೆಯುತ್ತಿರಲಾಗಿ—

ಕಂ॥ ಧರೆಯಂ ಪಾಲಿಸಿ ಪದ್ಮೋ
ದರನೆಣ್ಬತ್ತೊಂದು ಲಕ್ಕ ಬರಿಸಂ ಬಟಿಕ್ಕಾ
ಪರಮಾಯುಪ ಶೌಕಲಿೊಳ
ರ್ಧರಾತ್ರದೊಳ್ ಕಟಿದು ಸಪ್ತಮಾವನಿಗಿಟಿದೊಂ ॥ ೨೧ ॥

ವ॥ ತದ್ವಿಯೋಗ ದುಃಖದೊಳ್ ಮಗಂ ಶ್ರೀವಿಜಯಂಗೆ ಪಟ್ಟಮಂ ಕಟ್ಟಿ ಪಿಹಿತಾಸ್ರವ ಗುರುಗಳ ಚರಣನಳಿನ ಸಮೀಪದೊಳ್—

ಕಂ॥ ರಾಜ್ಯಕ್ಕಂ ತ್ರಿಭುವನ ಸಾ
ಮ್ರಾಜ್ಯಕ್ಕಂ ಬಗೆಯೆ ಹಸ್ತಿಮಶಕಾಂತರಮೆಂ
ದಿಜ್ಯಾಪುರಸ್ಸರಂ ಪ್ರ
ವ್ರಜ್ಯಮನವಯುವದೆ ಹಲಧರಂ ಧರಿಯಿಪುದುಂ ॥ ೨೨ ॥

ವರಮುಕ್ತಿಪ್ರಮದೆ ಪತಿಂ
ವರೆ ಪುರುಷನನಱಸಿ ಕೊಳ್ವವೋಲ್ ವಿಜಯಮುನೀ
ಶ್ವರನಂ ಕೆಯ್ಕೊಂಡಳ್ ದೇ
ವರ ಪಲವುಂ ತೆಱದ ಪಱೆಗಳೊಡನೆಸೆವಿನೆಗಂ ॥ ೨೩ ॥

ವ॥ ಅಂದರ್ಕಕೀರ್ತಿಯುಮಮಿತತೇಜನಪ್ಪೆನಗೆ ತನ್ನ ರಾಜ್ಯಮನಿತ್ತಭಿನಂದನ ಮುನಿ ಪ್ರಧಾನ [1]ಪಾದ[1] ಪಾರ್ಶ್ವದೊಳಾಶಾಂಬರನಾದೊನಂದಿನ ಶ್ರೀವಿಜಯನ್ನೆ ನೀಂ (ನಿನ್ನ) ಚಕ್ರೇಶ್ವರರಾಜ್ಯದೊಳ್ ನಿಂದು ಶ್ರೀಗಂ ವಿಜಯಕ್ಕಂ [2]ಮೊತ್ತ[2]ಮೊದಲಿಗನಾಗಿಯೆ ಸಮಸ್ತರಾಜಕಮನೆಱಗಿಸಿ ಶ್ರೀವಿಜಯನೆಂಬ ಪೆಸರನನ್ವರ್ಥಂ ಮಾಡಿಯಂದಿನ ವಿನ್ನಪ್ಪ ಚಕ್ರವರ್ತಿಯ ತನಯಂ—

ಕಂ॥ ಜ್ಯೋತಿಃಪ್ರಭಾಸ್ವಯಂವರ
ಜಾತೋತ್ಸವ ವಿಧಿಗೆ ಸಾನುಜಂ ಶ್ರೀವಿಜಯಂ
ಖ್ಯಾತಿಯ ರಾಜಕುಮಾರ
ವ್ರಾತರ್ಕಳ್ಗಟ್ಟಿವೆರಸು ಬಟಿಯಟ್ಟುವುದುಂ ॥ ೨೪ ॥

---

೨೧. ವಾಸುದೇವನಾದ ತ್ರಿಪೃಷ್ಠನು ರಾಜ್ಯವಾಳುತ್ತ ಎಂಬತ್ತೊಂದು ಲಕ್ಷ ವರ್ಷ ಬದುಕಿ, ಆಯುಸ್ಸು ಮುಗಿಯಲು ಒಂದು ದಿನ ನಟ್ಟಿರುಳಲ್ಲಿ ಸತ್ತು ಏಳನೆಯ ಅಧೋಲೋಕಕ್ಕೆ ಹೋದನು.

ವ॥ ತಮ್ಮನ ವಿಯೋಗದಿಂದ ದುಃಖಿತನಾದ (ಬಲದೇವ) ವಿಜಯುರಾಜನು ತನ್ನ ಮಗನಾದ ಶ್ರೀವಿಜಯನಿಗೆ ಪಟ್ಟಗಟ್ಟಿ ಪಿಹಿತಾಸ್ರವ ಗುರುಗಳ ಪಾದಸನ್ನಿಧಿಯಲ್ಲಿ—

೨೨. "ಈ ರಾಜ್ಯವೆಲ್ಲಿ? ತ್ರಿಭುವನ ಸಾಮ್ರಾಜ್ಯವೆಲ್ಲಿ? ಒಂದಕ್ಕೊಂದು ಆನೆ-ಸೊಳ್ಳೆಗಳ ಅಂತರ" ಎಂದು ಯೋಚಿಸಿ ವಿಧಿಪೂರ್ವಕವಾಗಿ ಸಂನ್ಯಾಸ ದೀಕ್ಷೆಯನ್ನು ವಹಿಸಿದನು.

೨೩. ಸ್ವಯಂವರ ಕನ್ಯೆ ತನಗೆ ಯೋಗ್ಯನಾದ ವರನನ್ನು ಆಯ್ದುಕೊಳ್ಳುವಂತೆ ಮೋಕ್ಷಾಂಗನೆ ವಿಜಯ ಮುನೀಶ್ವರನನ್ನು ಒಪ್ಪಿ ಸ್ವೀಕರಿಸಿದಳು. ಹಲವಾರು ಬಗೆಯ ದೇವವಾದ್ಯಗಳು ಮೊಳಗಿದುವು.

ವ॥ ಅರ್ಕಕೀರ್ತಿರಾಜನೂ ಅಮಿತತೇಜನಾಗಿದ್ದ ನನಗೆ ತನ್ನ ರ ಜ್ಯವನ್ನೊ ಪ್ಪಿಸಿ ಅಭಿನಂದನ ಮುನೀಂದ್ರರ ಬಳಿಯಲ್ಲಿ ದಿಗಂಬರ ವ್ರತಿಯಾದನು. ಆ ಜನ್ಮದಲ್ಲಿ ಶ್ರೀವಿಜಯನೆನಿಸಿದವನೇ ನೀನು. ಚಕ್ರಾಧಿಪತ್ಯವನ್ನು ವಹಿಸಿಕೊಂಡು ವೈಭವಕ್ಕೂ ವಿಜಯಕ್ಕೂ ಮೊತ್ತಮೊದಲಿಗನೆನಿಸಿ ರಾಜರನ್ನೆಲ್ಲ ನಿನ್ನ ಪಾದಗಳಿಗೆ ಎರಗಿಸಿಕೊಂಡು "ಶ್ರೀವಿಜಯ"ನೆಂಬ ಹೆಸರನ್ನು ಸಾರ್ಥಕಗೊಳಿಸಿದೆ. ಚಕ್ರವರ್ತಿಯ ಮಗನಾದ ನೀನು—

೨೪. ಜ್ಯೋತಿಃಪ್ರಭೆಯ ಸ್ವಯಂವರಕ್ಕೆಂದು ನಿನ್ನ ತಮ್ಮನೊಡನೆ ಯೋಚಿಸಿ ಪ್ರಖ್ಯಾತರಾದ ರಾಜಕುಮಾರರಿಗೆಲ್ಲ ಆಮಂತ್ರಣವನ್ನು ಕಳಿಸಿಕೊಟ್ಟೆ.

---

1. × (ಮ) 2. ಮೊಟ್ಟ (ಅ)

ಮ॥ ಕುಲಮಂ ನಾಭಿತನೂಭವಂ ಮಹಿಮೆಯಂ ಸತ್ಪಾತ್ರದಾನಂ ನಿರಾ
ಕುಲಮಂ ಜೀವದಯಾರಸಂ ವಿಭವಮಂ ಪಂಚಾಂಗಮಂತ್ರಂ ಚತು
ರ್ಬಲಮಂ ಪ್ರಾಭವಮೆಯ್ದೆ ಮಾಡೆ ಪಡೆದಂ ನ್ಯಾಯಾನ್ವಿತಂ ತೊಟ್ಟನಾ
ಬಲೆಯೊರ್ವಂ ತೆಗೆದಂತೆ ಬಂದದು ವಯೋವಿಭ್ರಾಜಕಂ ರಾಜಕಂ ॥ ೭೫ ॥

ಕಂ॥ ಎರೆಗೆಱಗುವ ಕಿಱುಮೀನಂ
ತಿರೆ ಕನ್ಯಾಮಿಷಕೆ ರಾಜನಿಕುರಂಬಂ [ಬಂ]
ದಿರೆ ಬಯಸಿ ಬರಿಸಿದೊಂ ಸೋ
ದರ ಮಯ್ದುನನಮಿತ ತೇಜನಂ ಶ್ರೀವಿಜಯಂ ॥ ೭೬ ॥

ಬಂದಮಿತತೇಜನುಪವನ
ದೊಂದೆಡೆಯೊಳ್ ಬೀಡುವಿಡುವುದುಂ ಶ್ರೀವಿಜಯಂ
ಬಂದನಿದಿರಂ ಹಿಮಾಂಶುಗೆ
ಮಾಂದಿರದಿದಿರಪ್ಪ ತೆಱದಿನಂಬುಧಿ ಸಲಿಲಂ ॥ ೭೭ ॥

ವ॥ ಅಂತಿದಿರ್ವಂದೊಡಗೊಂಡು—

ಹರಿಣೀವೃತ್ತಂ॥ ಪುಗಿಸೆ ಪೊೞಲಂ ಮುಂದಿಟ್ಟಾನಂದತೂರ್ಯರವಂ ವಿಯ
ದ್ದಿಗವನಿ ತಟೋಪಾಂತಕ್ಕಭ್ಯರ್ಣಮಾಗೆ ಸಮುದ್ರವಾ
ರ್ಧಿಗಳೆರಡೆನಲ್ ಮೆಯ್ವೆತ್ತಾ[1]ಮ್ಮೈದು[1]ನಿರ್ವರುಮೊಪ್ಪೆ ಬೀ
ದಿಗಳೊಳಗಣಿಂ ಬಂದುರ್ವೀಪಾಲ ಗೇಹಮನೆಯ್ದಿದರ್ ॥ ೭೮ ॥

ವ॥ ಅಂದು ಬಂದಮಿತತೇಜಂ ಬೆರಸು ಶ್ರೀವಿಜಯಂ ರಾಜಭವನಮಂ ಪುಗುವುದುಂ ಆದಱ ಕೆಲದೊಳ್ ಸಮ್ಮೇದ ಶಿಖರ ನಿವೇಶದೊಳಂಬರೇಚರರಾಜಂ—

---

೭೫. ನಾಭಿರಾಜನಿಂದ ಬಂದ ಶ್ರೇಷ್ಠವಾದ ವಂಶ, ಸತ್ಪಾತ್ರರಿಗಿತ್ತ ದಾನದಿಂದ ಉಂಟಾದ ಮಹಿಮೆ, ಜೀವದಯೆಯಿಂದಾದ ಸಮೃದ್ಧಿ, ಪಂಚಾಂಗ ಮಂತ್ರದಿಂದ (೧. ಕಾರ್ಯೋದ್ಯೋಗೋಪಾಯ, ೨. ಪುರುಷದ್ರವ್ಯಸಂಪತ್ತಿ ೩. ದೇಶಕಾಲ ಪರಿಜ್ಞಾನ, ೪. ವಿಘ್ನಪ್ರತೀಕಾರ ಮತ್ತು ೫. ಕಾರ್ಯಸಿದ್ಧಿ —ಎಂಬಿವು ಮಂತ್ರದ ಐದು ಅಂಗಗಳು) ವೈಭವ, ಸಾರ್ವಭೌಮತೆಯಿಂದ ಚತುರ್ಬಲ—ಇವೆಲ್ಲ ತನಗೆ ಶೋಭಿಸುತ್ತಿರಲಾಗಿ ನ್ಯಾಯಮಾರ್ಗದಿಂದ ಆಳುತ್ತಿರುವ ಶ್ರೀವಿಜಯನು ಹೇಳಿಕಳಿಸಿದೊಡನೆ, ಬಲೆಯೊಡ್ಡಿ ತೆಗೆದ ಮೀನುಗಳಂತೆ ರಾಜಕುಮಾರರ ಸಮೂಹ ಬಂದು ನೆರೆಯಿತು.

೭೬. ಗಾಳದ ಆಮಿಷಕ್ಕೆ ಎರಗುವ ಕಿರಿ ಮೀನುಗಳಂತೆ ಈ ಕನ್ಯೆಗೆ ಹಂಬಲಿಸಿ ರಾಜಸಮುದಾಯವು ಬರುತ್ತಿರಲು ಶ್ರೀವಿಜಯನು ಮೈದುನನಾದ ಅಮಿತತೇಜನನ್ನು ಕರೆಯಿಸಿಕೊಂಡನು.

೭೭. ಅಮಿತತೇಜನು ಬಂದು ಉಪವನದ ಒಂದು ಪ್ರದೇಶದಲ್ಲಿ ಇಳಿದುಕೊಳ್ಳಲಾಗಿ ಚಂದ್ರನನ್ನು ಕಂಡು ಉಕ್ಕೇರುವ ಸಮುದ್ರ ಜಲದಂತೆ, ಶ್ರೀವಿಜಯನು ಉತ್ಸಾಹದಿಂದ ಬಂದು ಇದಿರುಗೊಂಡನು.

ವ॥ ಹಾಗೆ ಸ್ವಾಗತಿಸಿ ತನ್ನೊಡನೆ ಕರೆತಂದು—

೭೮. ದಿಕ್ಕುಗಳನ್ನೂ ಆಕಾಶವನ್ನೂ ತುದಿವರೆಗೆ ತುಂಬುವಂತೆ ನುಡಿಯುವ ಉತ್ಸವವಾದ್ಯಗಳೊಂದಿಗೆ ಪಟ್ಟಣದಲ್ಲಿ ಪ್ರವೇಶಮಾಡಿದನು. ಎರಡು ಸಮುದ್ರಗಳು ಮೈದಾಳಿ ಜೊತೆಗೂಡಿ ಬರುತ್ತಿರುವಂತೆ ಆ ಮೈದುನರಿಬ್ಬರೂ ಬೀದಿಗಳಲ್ಲಿ ಹಾಯ್ದು ಅರಮನೆಗೆ ಬಂದರು.

ವ॥ ಹಾಗೆ ಅಮಿತತೇಜನೊಡನೆ ಶ್ರೀವಿಜಯನು ರಾಜಭವನವನ್ನು ಸೇರಲಾಗಿ, ಅದರ ಪಕ್ಕದಲ್ಲಿ ಸಮ್ಮೇದ ಶಿಖರ ಪ್ರದೇಶದಲ್ಲಿ ಖೇಚರರಾಜನು—

---

1. ಮೆಯ್ದು (ಅ)

ಮಲ್ಲಿಕಾಮಾಲೆ॥ ಬಗ್ಗವಳ್ಳಿಯ ಬಳ್ಳಿಗಾವಣದೋಳಿಯಿಂ ಸೊಗಯಿಪ್ಪ ಸ
ಮ್ಮಗ್ಗವಾಕ್ಷದ ವಂಕದಾರದ ಕೇತಕಿರ್ಗಯಿನೊಂದಿನಿಂ
ದಗ್ಗಳಿಕ್ಕೆಯ [1]ನೀಟ್ದು[1] ನೀಳ್ದ ನಿವೇಶದೊಳ್ ಮದನಂ ಮನ
ಕ್ಕೆಗ್ಗು ಪೊರ್ದದ ರೂಪಿನೊಳ್ ನೆಲಸಿರ್ಪವೋಲ್ ಸುಖ[2]ಮಿರ್ಪಿನಂ[2] ॥ ೭೯ ॥

ಕಂ॥ ಮನೆಗಾ ಶ್ರೀವಿಜಯಂ ಬಿ
ದ್ದಿನನಲ್ಲಿಗೆ ರಾಜನಮಿತತೇಜಂ ವಲಮೆಂ
ಬಿನೆಗಂ ಶ್ರೀವಿಜಯಂ ಮೈ
ದುನಂಗೆ ನಿಜಲಕ್ಷ್ಮಿಯಂ ನಿವೇದಿಸಿ ನೆಗಟ್ದಂ ॥ ೮೦ ॥

ಶಾ॥ ಆನೀತಾಖಿಳ ರಾಜಲೋಕಮನನರ್ಘಾಕಾರಮಂ ಮಿಕ್ಕ ಕ
ನ್ಯಾನೂನೋಚಿತ ರತ್ನಮಂ ತನಗೆ ಮಾಡಲ್ಕೆಂದು ಬಂದಿರ್ದನೀ
ಶ್ರೀನಾಥಂ ದಲಮೋಘವೆಂಬಬಗೆಯಿಂ ಕಣ್ಣೊಳ್ ತೊಳಲ್ವಂದದಿಂ
ದಾ ನಿದ್ರಾಂಗನೆ ಸೂಟ್ಗೆವಂದಳಿರುಳೊಳ್ ತತ್ಖೇಚರಾಧೀಶನಾ ॥ ೮೧ ॥

ಕಂ॥ ಕರ್ಣಾಭರಣ ನಿಪೀಡಿತ
ಪೂರ್ಣಾಂಸನುಪಚ್ಛದಾಪಹೃ[3]ತಕುಂಕುಮ ನ
ಭ್ಯರ್ಣ ಪ್ರತ್ಯೂಷಂ ನಿ
ದ್ರಾರ್ಣವದಾ ತಡಿಯನಮಿತತೇಜಂ ಕಂಡಂ ॥ ೮೨ ॥

ವ॥ ಆಗಳ್

೭೯. ಬಳ್ಳಿಮಂಟಪಗಳ ಸಾಲುಗಳಿಂದಲೂ ಸುಂದರವಾದ ಕಿಟಿಕಿ ಬಾಗಿಲುಗಳಿಂದಲೂ ಯುಕ್ತವಾಗಿ ವಿಸ್ತಾರವಾಗಿರುವ ತನ್ನ ನಿವಾಸದಲ್ಲಿ ನೆಮ್ಮದಿಯಿಂದಿರುವ ಮನ್ಮಥನಂತೆ ತುಂಬ ಸಂತೋಷದಿಂದ ಇದ್ದನು.

೮೦. ಈ ಮನೆಗೆ ಅಮಿತತೇಜನೆ ಒಡೆಯ, ತಾನು ಅತಿಥಿ ಎಂಬ ಹಾಗೆ ಶ್ರೀವಿಜಯನು ತನ್ನ ಮೈದುನನ ಸೇವೆಗೆ ತನ್ನ ಸಂಪತ್ತನ್ನೆಲ್ಲ ಅರ್ಪಿಸಿದನು.

೮೧. "(ಸ್ವಯಂವರಕ್ಕೆ) ಆಮಂತ್ರಿತವಾಗಿ ಪರಮವೈಭವದಿಂದ ರಾಜಸಮುದಾಯ ನೆರೆದಿದೆ. ಈ ಸಮೂಹಕ್ಕೆಲ್ಲ ಮಿಗಿಲಾದವನೆನಿಸಿ ಕನ್ಯಾರತ್ನವನ್ನು ತಾನೇ ಪಡೆದುಕೊಳ್ಳಲು ಈ ಶ್ರೀಪತಿ ಬಂದಿರುವನು; ಇದು ನಿಶ್ಚಯ." ಎಂಬ ಯೋಚನೆಯಿಂದ ಕಣ್ಣಲ್ಲಿಯೇ ಸುಳಿದಾಡುತ್ತಿರುವಂತೆ ನಿದ್ರಾಂಗನೆ ಬಂದು ಆ ಖೇಚರರಾಜನನ್ನು ಕೂಡಿಕೊಂಡಳು.

೮೨. ಉಷಃಕಾಲ ಹತ್ತಿರವಾಯಿತು; (ನಿದ್ದೆಯಲ್ಲಿ) ಹೊದಿಕೆಯ ಸೆರಗಿನಿಂದ ಕುಂಕುಮಲೇಪ ಕದಡಿ, ಕರ್ಣಕುಂಡಲಗಳು ಹೆಗಲಮೇಲೆ ಜಾರುತ್ತಿರಲಾಗಿ, ಅಮಿತತೇಜನು ನಿದ್ರಾಸಮುದ್ರದ ದಂಡೆಯನ್ನು ಕಂಡನು (ಗಾಢನಿದ್ರೆಯಿಂದ ಎಚ್ಚತ್ತನು).

ವ॥ ಆ ಸಮಯದಲ್ಲಿ—

1. ನಾಳ್ದು (ಅ) 2. ನಿರ್ಪದುಂ (ಅ) 3. ಕ್ಕು (ಅ)

ಕಂ॥ ಉಪ್ಪವಡಿಸುವುದುಮಱಿಕೆಯ
ಪಪ್ಪ[1]ವ[1]ರೊಡನಾಡಿಗಳ್ ಪ್ರಬೋಧಿಸಿದರ್ ಮೇ
ಲಪ್ಪ ಪದರಚನೆಯಿಂ ದೊರೆ
ಯಪ್ಪ ಮಹಾಮಂಗಳ ಪ್ರಬೋಧನೆಯಿಂದಂ ॥ ೮೩ ॥

ಓರ್ವಂ ಶ್ರೀವಿಜಯಂ ನೀ
ನೊರ್ವಯ್ ಖಚರೇಶ ಪೊ[2]ತ್ತು[2]ನಿಂದಿರ್ ದೊರೆವೆ
ತ್ತುರ್ವೀಭರಮಂ ಪೋದುದು
ಶರ್ವರಿ ಬೆಳಗಾದುದೇಟ ಶಯ್ಯಾತಳದೊಳ್ ॥ ೮೪ ॥

ವಾರಿಜಗಂಧಿ ವಿಭಾತ ಸ
ಮೀರಂ ನಿಜಸುರಭಿ ನಿನ್ನ ಸು[3]ಯ್ಯ[3]ದಱ[3]ೞ[4]ದಂ[4]
ತೋ[5]ರಗೆಯಕ್ಕುಮೆ[5] ಪರಗುಣ
ಹಾರಿಗೆ ನಿಜಗುಣ[6]ಮದೇಕೆ[6] ಸಮನಿಸಿದಪು[7]ದೋ[7] ॥ ೮೫ ॥

ಇರುಳಿನ ಸೂೞಿಂ ನಿದ್ರೆಗೆ
ಸಿರಿ ಕೊಟ್ಟು ವಿಯೋಗಭರದಿನಿರೆ ಪಗಲಿನ ಸೂೞ್
ಸಿರಿಗಾಗಲೆ ವೇಟ್ಪುದು ತಡ
ದಿರದುಪ್ಪವಡಿಸು ವಿಯಚ್ಚರಾಂಬರ ಭಾನೂ ॥ ೮೬ ॥

ಪ್ರತಿಬುದ್ಧಂ ತ್ವನ್ಮುಖಮುಚಿ
ತತಾರಕಂ ತುಂಬಿವೆರಸಿದಂಬುಜಮೆಂಬೀ
ದ್ವಿತಯಮುಮೋರೊಂದಂ ಪೋ
ಲ್ತು ತೋಱೆ[8] ಗತನಿದ್ರನಾಗು ನೀಂ ಜಿನಚಂದ್ರಾ ॥ ೮೭ ॥

೮೩. ಪ್ರಭಾತಕಾಲದಲ್ಲಿ ಬೆಳಗಾಯಿತೆಂದು ತಿಳಿಸುವ ವಾಡಿಕೆಯಂತೆ ವಂದಿಮಾಗಧರು ಬಂದು ಮನೋಹರವಾದ ಪದರಚನೆಯುಳ್ಳ ಮಂಗಳ ಸ್ತುತಿಯನ್ನು ಹೀಗೆ ಹಾಡಿದರು :

೮೪. "ಒಬ್ಬ ಶ್ರೀವಿಜಯ, ಒಬ್ಬ ಖೇಚರಾಧಿಪತಿಯಾದ ನೀನು— ನೀವಿಬ್ಬರೇ ಈ ಮಹಾಭೂಮಿಯ ಭಾರವನ್ನು ಹೊತ್ತು ನಿಂತಿರುವಿರಿ. ಇರುಳು ಹೊರಟುಹೋಯಿತು, ಬೆಳಗಾಯಿತು. ನಿದ್ದೆ ಮುಗಿಸಿ ಎದ್ದೇಳು.

೮೫. ಬೆಳಗಿನ ಗಾಳಿ ಸುಗಂಧಿಯಾದರೂ ಅದು ಕಮಲಗಳಿಂದ ಎತ್ತಿಕೊಂಡು ಬಂದ ಪರಿಮಳದಿಂದ ನಿನ್ನ ಉಸಿರು ಸ್ವಾಭಾವಿಕ ಸುಗಂಧಿ. ಒಂದಕ್ಕೊಂದು ಹೋಲಿಕೆಯೇ ? ಪರರ ಗುಣವನ್ನು ಅಪಹರಿಸುವವನಿಗೆ ನಿಜವಾದ ಗುಣ ಎಲ್ಲಿಂದ ಬಂದೀತು ?

೮೬. ರಾತ್ರಿಯ ಸಮಯದಲ್ಲಿ ನಿನ್ನ ಸಹವಾಸ ಯೋಗವನ್ನು ನಿದ್ರಾಂಗನೆಗೆ ಬಿಟ್ಟುಕೊಟ್ಟು ವಿರಹವನ್ನು ಅನುಭವಿಸುತ್ತಿದ್ದ ಐಶ್ವರ್ಯಲಕ್ಷ್ಮಿಗೆ ನಿನ್ನ ಹಗಲಿನ ಸಹವಾಸ ದೊರೆಯಬೇಕು. ಆದುದರಿಂದ ಖೇಚರ ಶ್ರೇಷ್ಠನೇ ತಡಮಾಡದೆ ಎಚ್ಚರಾಗು.

೮೭. ಅರಳುಗಣ್ಣುಗಳಲ್ಲಿ ಶೋಭಿಸುವ ಕರಿಯ ಕಣ್ಣಾಲಿಗಳಿಂದ ಪ್ರಫುಲ್ಲವಾದ ನಿನ್ನ ಮುಖ, ಹಾಗು ದುಂಬಿಗಳೊಡನೆ ಕಂಗೊಳಿಸುವ ತಾವರೆ—ಈ ಎರಡೂ ಒಂದಕ್ಕೊಂದು ಸದೃಶವಾಗಿ ತೋರಲಾಗಿ ಜಿನಚಂದ್ರನೇ ಉಪ್ಪವಡಿಸು.

1. ಕ (ಮ) 2. ಳ್ತು (ಅ) 3. ಯ್ಯ (ಕಾ) 4. ಗಂ (ಕಾ) ದಂ (ಮ) 5. ರಂತಕ್ಕುಮೊ(ಮ) 6. ದೊಳಂತೆ, ನೊಳಕ್ಕೆ (ಕಾ)
7. ದೇ (ಕಾ)

ಕಂ॥ ಭವದಾನನಕ್ಕೆ ಸೋಲ್ತಾ
ತ್ಮ ವಿಲಾಸಮನುೞಿದ ತೆಱದೆ ರುಚಿಗೆಟ್ಟು ದಿಗಂ
ತ ವಿಲಂಬಿಬಿಂಬನಂಬುರು
ಹವೈರದಿಂದುಡುಪನುಡುಪನಾದಂತಾದಂ ॥ ೮೮ ॥

ದ್ರುಮಪಲ್ಲವ ತಳನಿಪತಿತ
ಹಿಮಾಂಬು [1]ಘುಟಿ[1]ಕಾಳಿ ನಾಡೆ ಸೊಗಯಿಸಿದಪುದು
ತ್ತಮ ಭವದಧರ ಸ್ಥಿತದಂ
ತ ಮರೀಚಿ ವಿಲಾಸ ಸರಸ ದರಹಸಿತ ನಿಭಂ ॥ ೮೯ ॥

ಮುದದಿಂ ದಿನನುದಯಂಗೆ
ಯ್ಯುದೆಯುಂ ಕತ್ತಲೆಯನರುಣನಲೆದೋಂ ನಿನ್ನ
ಭ್ಯುದಯದೊಳಾಂತರಿ ಸೇನೆಯ
ನಿದಿರ್ಚಿ ತಲೆವಿಲ್ಲನೆೞೆದು ತವಿಸುವ ತೆಱದಿಂ ॥ ೯೦ ॥

ಉ॥ ಬಾಳಮರೀಚಿಮಾಳಿ ಕಿರಣಾವಳಿಗಳ್ ಪೊಳೆವೀ ಸುಧಾತು ಶೈ
ಲಾಳಿ ತಟಾಭಿಘಾತಮನೊಡಂಬಡಿಸುತ್ತಿರೆ ಪಕ್ಷಯುಗ್ಮನಿ
ದ್ರಾಳುತೆ [2]ಬಿ[2]ರ್ಚಿ ಬಳ್ಳಿಯುಲಿ ಪೆರ್ಚೆ ಮನಂಬಿಡೆ ಪೊಯ್ದು ಕರ್ಣಮಂ
ಲೀಳೆಯಿನೀಶ ನಿನ್ನ ಗಜರಾಜಿಗಳೆಟ್ಟಿಪುವಲ್ತೆ ಸೆಜ್ಜೆಯಿಂ ॥ ೯೧ ॥

ಕಂ॥ ಭವದೀಯ ವನಾಯುಜ ಹಯ
ನಿವಹಂ ಕೇಳ್ ಮೂರಿ[3]ವಿ[3]ಟ್ಟು ನಿಶ್ವಾಸಂ ಸೈಂ
ಧವಮಂ ಮಾಸಿಸೆ ಸೊಗಯಿಸಿ
ತು ವಿನಿದ್ರಂ ದೇವ ದೀರ್ಘ ಪಟಮಂಡಪದೊಳ್ ॥ ೯೨ ॥

---

೮೮. ನಿನ್ನ ಮುಖಕ್ಕೆ ಸರಿಬಾರದೆ ಸೋತುಹೋದನೋ ಎಂಬಂತೆ ಚಂದ್ರನು ತನ್ನ ಸೊಬಗನ್ನೆಲ್ಲ ಕಳೆದು ಕೊಂಡು ಕಳೆಗುಂದಿ ದಿಗಂತದಲ್ಲಿ ಆಶ್ರಯ ಪಡೆದನು. ತಾವರೆಯೊಡನೆ ಹಗೆತನ ಮಾಡಿ ಉಡುಪ (ಚಂದ್ರ)ನು ಉಡುಪ (ಭಂಗಕ್ಕೊಳಗಾದವ)ನಾದನು.

೮೯. ಸರಸವಾಗಿ ನೀನು ಕಿರುನಗೆ ಬೀರಿದಾಗ ನಿನ್ನ ಕೆಂದುಟಿಯ ಮೇಲೆ ಹಲ್ಲುಗಳ ಪ್ರಭೆ ಹೇಗೆ ಶೋಭಿಸುವುದೋ ಹಾಗೆ, ಮರದ ಚಿಗುರಿನ ಮೇಲೆ ನಿಂತ ಮಂಜಿನ ಹನಿ ಜಲ ಸುಂದರವಾಗಿ ತೋರುವುದು.

೯೦. ನಿನ್ನ ಅಭ್ಯುದಯದಲ್ಲಿ ನಿನ್ನನ್ನು ಆಕ್ರಮಿಸಲೆಂದು ಬಂದ ಶತ್ರುಸೈನ್ಯವನ್ನು ನಿನ್ನ ಮುಂಚೂಣಿಯ ಬಿಲ್ಗಾರರೇ ಮುಗಿಸಿಬಿಡುವಂತೆ, ಸೂರ್ಯನಿನ್ನೂ ಉದಯವಾಗುವಷ್ಟರಲ್ಲಿ ಅರುಣನು ಕತ್ತಲೆಯನ್ನು ಹೊಡೆದಟ್ಟಿದನು.

೯೧. ಹೊಳೆಯುತ್ತಿರುವ ಈ ಬೆಟ್ಟಗಳ ಪಕ್ಕದಲ್ಲಿರುವ ಗೈರಿಕ ಭೂಮಿಯನ್ನು ಬಡಿದು ದೂಳೆಬ್ಬಿಸಿದಂತೆ ಬಾಲಸೂರ್ಯನ ಕೆಂಗಿರಣಗಳು ಕಂಗೊಳಿಸುತ್ತಿರಲಾಗಿ, ತಮ್ಮ ಎವೆಗಳಲ್ಲಿಯ ನಿದ್ರಾಭಾರವನ್ನು ತೊಲಗಿಸುವಂತೆ ಕಣ್ದೆರೆದು, ಕಿವಿಗಳನ್ನು ಜಾಡಿಸುತ್ತ ನಿನ್ನ ಗಜಗಳ ಸಮೂಹವು ನಿದ್ದೆಯಿಂದ ಎದ್ದೇಳುತ್ತಲಿದೆ.

೯೨. ವನಾಯು ಜಾತಿಯ ನಿನ್ನ ಕುದುರೆಗಳು ತಮ್ಮ ವಿಸ್ತಾರವಾದ ಲಾಯಗಳಲ್ಲಿ ಇದೀಗ ನಿದ್ದೆ ತಿಳಿದು. ಮುಖಗಳನ್ನು ಚಾಚಿ, ಲವಣವನ್ನು ಸೂಚಿಸುವಂತಹ ಉಸಿರನ್ನು ಹೊರದೂಡುತ್ತವೆ.

---

1. ಗುಳಿ (ಅ) 2. ವೆ (ಅ) 3. ಪ (ಅ)

ವ॥ ಎಂದು ವಂದಿವೃಂದಾರಕವೃಂದಂ ಅಭಿನಂದಿಸುವ ಮಂಗಳವಚನರಚನೆಗಳಿಂದಂ ಕುಮಾರನುರ್ವರಾಸ್ಯತಿಲಕಂ ಗಂಗಾಸಿಕತಿಳತಳದೊಳೊಱಗಿ ತದುದ್ದೇಶದಿಂ ಕಪಿಲಾಕರೇಣುವೆರಸಿ ಪುಂಡರೀಕ ಗಜಮೇೞ್ವಂತೆ ಸೂೞಿರಸಿವೆರಸು ಸೆಜ್ಜೆಯಿನೆೞ್ದು ಕುಳ್ಳಿರ್ದು ಪ್ರಾಭಾತಿಕ ಕ್ರಿಯೆಯಂ ನಿರ್ವರ್ತಿಸಿ ಶ್ರೀವಿಜಯನ ಬೞಿ ಬರ್ಪುದುಂ ಕುಶಲವಿರಚಿತಾನುರೂಪ ವೇಷಭೂಷಣನಾಗಿ ರಾಜ ಸಮಾಜ ವಿರಾಜಮಾನಮಂ ಸ್ವಯಂವರಪ್ರದೇಶಮನೆಯ್ದೆವಂದು ಎರಡೋಳಿಯ ಚೌಪಳಿಕೆಗಳೊಳವೋಳಿಯೊಳೆಯ್ದೆ—

ಕಂ॥ ಹರಿಪೀಠಸ್ಥಿತರಂ ಭಾ
ಸುರ ರತ್ನಮರೀಚಿ ಮೇಚಕಿತ ತನುಗಳನಾ
ವರಜಿನಚಂದ್ರಂ ಕಂಡಂ
ಸುರೇಂದ್ರ ವಿಭವರನಿಳಾಧಿರಾಜಾತ್ಮಜರಂ ॥ ೯೩ ॥

ವ॥ ಕಂಡು ಮಂಚೋಭಯಾಂತರ ವೀಥಿಯೊಳಗನೆ ಬರ್ಪ ದೀನಜನತಾ ಕಲ್ಪಾಂಘ್ರಿಪನಂ—

ಕಂ॥ ನನೆಯ ಸರಲ್ಗಳುಮಂ ಕ
ರ್ಬಿನ ಬಿಲ್ಲುಮನೊಲ್ಲದಿಲ್ಲಿಗವತರಿಸಿದನಂ
ಗನನೆಯ್ದೆ ಕಾಣ್ಬಪೋಲ್ ಕಂ
ಡು ನೃಪಕುಮಾರರ್ ಸ್ವಯಂವರಾಶೆಯನುೞಿದರ್ ॥ ೯೪ ॥

ವ॥ ಅಂತನಿಬರ ಮನಕ್ಕೆ ತಲ್ಲಣಂ ಬರ್ಪಂತೆ ಬಂದು ತನ್ನಂ ಮುಂದಿಟ್ಟು ಶ್ರೀವಿಜಯನೇಱಿಸೆ ಮೊತ್ತಮೊದಲ ಚೌಪಳಿಗೆಯಂ ಮಣಿಮಯ ಸೋಪಾನ ಪಙ್ಕ್ತಿಯಿಂದಮೇಱಿ ಶಿಲಾತಲಂಗಳಿಂದಮುತ್ತುಂಗ ನಗೋತ್ಸಂಗಮನೇಱುವ ಮೃಗರಾಜನಂ ಪೋಲ್ತು ಅಲ್ಲಿ ಪರಾರ್ಥ್ಯ ರತ್ನ ರಚಿತಾನೇಕ ಹರಿವಿಷ್ಟರದ ಮೇಗೆ ಸಮೀಚೀನ ನಾನಾವರ್ಣೋಪಚಿತಾಸ್ತರಣೋಪಪನ್ನ ಪ್ರಚ್ಛದಾಚ್ಛಾದಿತಾಸನದೊಳ್ ಕುಳ್ಳಿರ್ದು [1]ರತ್ನ[1] ಮಂಡನಾಯೋಗ ಪರಿಗೃಹೀತ ಸುರೇಂದ್ರ ಕರೀಂದ್ರ ಪೃಷ್ಠಗತನಪ್ಪಮರೇಂದ್ರನನೆ ಪೋಲ್ತುಂ ಸೌಜನ್ಯ ಕಂದಾಂಕುರನಿರ್ಪುದುಂ—

ವ॥ ಈ ಮೇರೆಗೆ ವಂದಿಗಳ ಸಮೂಹವು ಹೊಗಳಿ ಹಾಡಿದ ಪ್ರಭಾತ ಮಂಗಳವನ್ನು ಕೇಳಿ, ಭೂಮಂಡಲ ತಿಲಕನಾದ (ಅಮಿತತೇಜ) ಕುಮಾರನು ದೇವಗಂಗಾತೀರದ ಮಳಲ ಹಾಸುಗೆಯಲ್ಲಿಮಲಗಿದ್ದ ಐರಾವತವು ತನ್ನ ಪ್ರೇಯಸಿಯಾದ ಕಪಿಲೆಯೊಡನೆ ಎದ್ದೇಳುವಂತೆ ತನ್ನ ಅರಸಿಯೊಡನೆ ಹಾಸುಗೆಯಿಂದ ಎದ್ದು ಕುಳಿತು, ಬೆಳಗಿನ ಕಾರ್ಯಕ್ರಮವನ್ನು ತೀರಿಸಿಕೊಂಡು ಶ್ರೀವಿಜಯನ ಬಳಿಗೆ ಬಂದನು; ಆಮೇಲೆ ತನಗೆ ಅನುರೂಪವಾದ ವೇಷಭೂಷಣಗಳನ್ನು ಚೊಕ್ಕತನದಿಂದ ಅಳವಡಿಸಿಕೊಂಡು ರಾಜಸಮುದಾಯದಿಂದ ಶೋಭಿಸುತ್ತಿದ್ದ ಸ್ವಯಂವರ ಮಂಡಪವನ್ನು ಪ್ರವೇಶಿಸಿದನು. ಇಕ್ಕೆಲದ ಮಂಚದ ಸಾಲುಗಳಲ್ಲಿ—

೯೩. ರತ್ನಾಭರಣಗಳ ಪ್ರಭೆಯಿಂದ ಶೋಭಿಸುತ್ತ ತಂತಮ್ಮ ಸಿಂಹಾಸನಗಳಲ್ಲಿ ಇಂದ್ರವೈಭವದಿಂದ ಕುಳಿತುಕೊಂಡಿರುವ ಸಮಸ್ತ ರಾಜಕುಮಾರರನ್ನು ನೋಡಿದರು.

ವ॥ ಹಾಗೆ ನೋಡುತ್ತ, ಈ ಎರಡೂ ಸಾಲುಗಳ ನಡುವಿನ ಮಾರ್ಗದಲ್ಲಿ ಆತನು ನಡೆದುಬರುತ್ತಿರಲಾಗಿ—

೯೪. ಕಬ್ಬಿನ ಬಿಲ್ಲನ್ನೂ ಹೂವಿನ ಬಾಣಗಳನ್ನೂ ಒಲ್ಲದೆ, ಬರಿಗೈಯಿಂದ ಬಂದ ಮನ್ಮಥನೊ ಏನೊ ಎಂಬಂತಿರುವ ಈ ಸುಕುಮಾರನನ್ನು ಕಂಡು, ರಾಜಪುತ್ರರು ಸ್ವಯಂವರದಲ್ಲಿ ತಮಗಿನ್ನೇನೂ ಆಸೆಯಿಲ್ಲವೆಂದುಕೊಂಡರು.

ವ॥ ಹೀಗೆ ಎಲ್ಲ ಕುಮಾರರ ಮನಕ್ಕೆ ಚಿಂತೆಯೇ ಬಂದೊದಗುವಂತೆ ಬಂದು, ತನ್ನನ್ನು ಮುಂದೆ ಮಾಡಿಕೊಂಡು ಕರೆತಂದ ಶ್ರೀವಿಜಯನು ಕೈಹಿಡಿದು ಏರಿಸಲಾಗಿ ಮೊದಲನೆಯ ಮಂಡಪದ ರತ್ನಖಚಿತ ಸೋಪಾನ ಮಾರ್ಗವನ್ನೇರಿ, ಬಂಡೆಗಳನ್ನು ಮೆಟ್ಟುತ್ತ ಉನ್ನತವಾದ ಗಿರಿಶಿಖರವನ್ನೇರುವ ಸಿಂಹದಂತೆ ತೋರಿದನು. ಅಲ್ಲಿ ಅಮೌಲ್ಯವಾದ ರತ್ನಗಳಿಂದ ನಿರ್ಮಿಸಿದ ವಿಸ್ತೃತ ಸಿಂಹಾಸನದ ಮೇಲೆ ಬಗೆಬಗೆಯ ಬಣ್ಣದ ಬಟ್ಟೆಗಳಿಂದ ಸಮೃದ್ಧವಾಗಿ ಹೊಚ್ಚಿದ ಮೆತ್ತೆಯ ಆಸನದಲ್ಲಿ ಕುಳಿತುಕೊಂಡಾಗ ಆತನು ರತ್ನಾಭರಣಗಳಿಂದಲಂಕೃತವಾದ ಐರಾವತವನ್ನೇರಿ ಕುಳಿತ ದೇವೇಂದ್ರನಂತೆ ಕಂಡನು.

---

1. + ಮಯ (ಅ)

ಕಂ॥ ಆ ರಾಜ ಪರಂಪರೆಯ ಶ
ರೀರಂಗಳೊಳುರ್ವರಾಸ್ಯತಿಲಕನ ತೇಜಂ
ರಾರಾಜಿಸಿ ಪೊಲ್ತುದು ನವ
ವಾರಿದ ನಿಕುರುಂಬದೊಳಗೆ ಪೊಳೆವೆಳಮಿಂಚಂ ॥ ೯೫ ॥

ವ॥ ಅಂತನೇಕ ಸಿಂಹಾಸನ ಮಸ್ತಕಸ್ಥಿತ ರಾಜಕುಮಾರ ಮಧ್ಯದೊಳಧರೀಕೃತ ಸನತ್ಕುಮಾರ ಕುಬೇರ ವಿದ್ಯಾಧರ ಕುಮಾರಂ ಶ್ರೈಗಟಿಯೆ ಸೊಗಯಿಸಿ ನಾನಾವಿಧ ಕಲ್ಪಮಹೀರುಹಾರಾಮದೊಳಗಣ ಪಾರಿಜಾತಮಿರ್ಪಂತಿರ್ಪಿನಂ—

ಕಂ॥ ನೆರವಿಯ ಕಣ್ಗಳ್ ನೃಪರನಿ
ಬರುಮಂ ಬಿಸುಟುರ್ವರಾಸ್ಯ ತಿಲಕನೊಳಿರೆ ನೀ
ರರುಹಂಗಳನೊಲ್ಲದೆ ಚಂ
ಚರೀಕತತಿ ಗಂಧಹಸ್ತಿಯೊಳ್ ನೆಲಸುವವೋಲ್ ॥ ೯೬ ॥

ಸ್ರ॥ ಆಗಳ್ ಸೂತರ್ ಸ್ವಕೀಯಾನ್ವಯದರಸುಗಳಂ ಬಣ್ಣಿಸುತ್ತಿರ್ಪಿನಂ ದಿ
ಗ್ಭಾಗಂ ಮಾಂಗಳ್ಯತೂರ್ಯಸ್ವನದೊಳೆ ಬಧಿರೀಭೂತಮಪ್ಪನ್ನೆಗಂ ಪೊ
ತ್ತೀಗಳ್ಬರ್ಕೆಂಬುದುಂ ಶ್ರೀವಿಜಯನ ಮತದಿಂದೆಯ್ದೆ ಕೆಯ್ಗೆಯ್ದುಮಾಗಳ್
ಬೇಗಂ ಜ್ಯೋತಿಃಪ್ರಭಾಕನ್ನಿಕೆ ಮಸಕದೆ ಕೊಲ್ವಾನೆ ಬರ್ಪಂತೆ ಬಂದಳ್ ॥ ೯೭ ॥

ವ॥ ಅಂತು ರಥಮುಂ ಮನೋರಥಮುಂ ನಿಮಿರೆ ವಿವಾಹ ಮಂಗಳವೇಷ ಸನಾಥೆಯಾಗಿ ಮಂಚಾಂತರ ರಾಜಮಾರ್ಗಮಂ ಪೊಕ್ಕು ಪ್ರತಿವರರುಮಂ ನೋಡಿ—

ಕಂ॥ ಆದಿಬ್ರಹ್ಮವಿಧಾನದಿ
ನಾದತಿಶಯ ಸೃಷ್ಟಿ[1]ಯೆನಿ[1]ಸಿದಾ ಕನ್ನಿಕೆಗಿಂ
ದ್ರಾದಿ ನೃಪಮತಿಗಳಿರದಿದಿ
ರ್ಪೋದುವು ತನುವಿರೆ ಮದೇಭರಿಪುವಿಷ್ಟರದೊಳ್ ॥ ೯೮ ॥

---

೯೫. ಹೊಸ ಮೋಡಗಳ ಸಮೂಹದಲ್ಲಿ ಹೊಳೆಯುವ ಮಿಂಚಿನಂತೆ ಆ ರಾಜಸಮುದಾಯದ ದೇಹಗಳಲ್ಲಿ ಈ ಭೂಮಂಡಲಭೂಷಣನ ತೇಜಸ್ಸು ಹರಡಿತು.

ವ॥ ಹೀಗೆ ಸಿಂಹಾಸನಸ್ಥ ರಾಜಕುಮಾರರನೇಕರ ಮಧ್ಯದಲ್ಲಿ ಸನತ್ಕುಮಾರ-ಕುಬೇರಾದಿಗಳನ್ನು ಧಿಕ್ಕರಿಸುವಂತಿದ್ದ ಈ ವಿದ್ಯಾಧರ ಕುಮಾರನು ಮಿತಿಮೀರಿದ ಶೋಭೆಯಿಂದ ಕುಳಿತಾಗ ನಾನಾ ಬಗೆಯ ಕಲ್ಪವೃಕ್ಷಗಳ ತೋಪಿನ ಮಧ್ಯೆ ಇರುವ ಪಾರಿಜಾತದಂತೆ ಒಪ್ಪಿದನು.

೯೬. ತಾವರೆಗಳನ್ನು ಮೆಚ್ಚದೆ ಗಂಧಗಜವನ್ನು ಆವರಿಸುವ ದುಂಬಿಗಳ ಹಿಂಡಿನಂತೆ ಆ ಮಂಡಪದಲ್ಲಿ ನೆರೆದ ಜನರ ಕಣ್ಣುಗಳು ಸಮಸ್ತ ರಾಜಕುಮಾರರನ್ನು ಕಡೆಗಣಿಸಿ ಈ ಕುಮಾರನಲ್ಲಿಯೆ ನೆಲಸಿದುವು.

೯೭. ಆಗ ಸ್ತುತಿಪಾಠಕರು ತಂತಮ್ಮ ಅರಸರನ್ನು ಹೊಗಳಿ ಹಾಡುತ್ತಿರಲಾಗಿ, ಉತ್ಸವವಾದ್ಯಗಳ ಧ್ವನಿಯಿಂದ ದಿಕ್ಕುಗಳು ಕಿವಿ ಗಡಚಿಕ್ಕುತ್ತಿರಲಾಗಿ, "ಸ್ವಯಂವರ ಕನ್ಯೆಯನ್ನು ಕರೆತನ್ನಿ" ಎಂದು ಶ್ರೀವಿಜಯನು ಆಜ್ಞಾಪಿಸಿದನು. ಪರಿಪೂರ್ಣವಾಗಿ ಅಲಂಕೃತಳಾದ ಜ್ಯೋತಿಃಪ್ರಭಾ ಕನ್ನಿಕೆಯು ಕೊಲ್ಲುವ ಮದದಾನೆ ಬರುವಂತೆ ಅಲ್ಲಿಗೆ ಬಂದಳು.

ವ॥ ಹಾಗೆ ರಥದೊಡನೆ ತನ್ನ ಮನೋರಥವೂ ಸನ್ನದ್ಧವಾಗಿ ವಿವಾಹಕ್ಕೆ ಯೋಗ್ಯವಾದ ಮಂಗಳ ವೇಷವನ್ನು ತೊಟ್ಟು ರಾಜಮಂಚಗಳ ಎರಡೂ ಸಾಲುಗಳ ನಡುವಿನ ಮಾರ್ಗವನ್ನು ಹೊಕ್ಕು ಪ್ರತಿಯೊಬ್ಬ ವರನನ್ನೂ ನೋಡುತ್ತಿರಲಾಗಿ—

೯೮. ಆದಿಬ್ರಹ್ಮನ ಸೃಷ್ಟಿಯಲ್ಲಿಯೆ ಅತಿಶಯವೆನಿಸಿದ ಆ ವಧುವನ್ನು ಕಂಡು, ಅಲ್ಲಿಯ ರಾಜಪ್ರಭೃತಿಗಳು ದೈಹಿಕವಾಗಿ ತಂತಮ್ಮ ಸಿಂಹಾಸನಗಳಲ್ಲಿಯೇ ಉಳಿದಿದ್ದರೂ, ಅವರ ಮನಸ್ಸುಗಳು ಅವಳನ್ನು ಇದಿರುಗೊಳ್ಳಲು ಎದ್ದು ಬಂದುವು.

---

1. ಯೊಳೆನಿ (ಅ)

ಕಂ॥ ಆರಾಜಕುಮಾರರ ಶೃಂ
ಗಾರಾಭಿನಯಂಗಳೊಡನೆ ನೆಗೞ್ದುವು ಪಲವುಂ
ಮಾರುತಹತ ಮಹಿರುಹ ಶೋ
ಭಾರುಚಿರಂಗಳ್ ಸ್ವಯಂವರಾಸ್ಥಾಯಿಕೆಯೊಳ್ ॥ ೯೯ ॥

ವ॥ ಅಂತು ನಾನಾವಿಧ ಲೀಲಾವಿಲಾಸ ಸೌಂದರ್ಯ ಸಮನ್ವಿತ ವಿಭ್ರಮಾಭಿನಯಂಗಳನಂಗ ಶೈಲೂಷನುಪಾಧ್ಯಾಯನಾಗೆ ರಾಜಪುತ್ರಪಾತ್ರಂ ತಗುೞ್ದುದನ್ನತೆಯಂ ಕೊಂಡಾಡಲೆತ್ತಿಕೊಂಡಲ್ಲಿ—

ಕಂ॥ ಲೀಲಾಬ್ಜಮಂ ಕರೋದ್ಧೃತ
ನಾಲಮ[1]ನಂತಃ[1]ಪರಾಗ ಪರಿವೇಷಮನಾ
ಲೋಲದಲ ನಿಹತ ಮಧುಕರ
ಮಾಲೆಯನೊರ್ವಂ ತಗುೞ್ದು ತಿರಿಪಿದನಾಗಳ್ ॥ ೧೦೦ ॥

ವ॥ ಆತನುಮಲ್ಲದೆ—

ಕಂ॥ ಸೊಗಯಿಪ ನಲ್ಲಳ ಘನಕುಚ
ಯುಗಲಕಮೊಳ್ತೊಡೆಗಮೊದವಿದುಗುರೊಳ್ ಪೊಂಗೇ
ದಗೆಯ ಪೊಸಗಱಿಗಳಂ ಲೀ
ಲೆಗೆ ಸೂಟಿೞ್ದೊಳ್ ಸೀಳಲೊರ್ವನುದ್ಯತನಾದಂ ॥ ೧೦೧ ॥

ವ॥ ಆ ವಿಳಾಸ ವಿಶೇಷ ರಸರಾಶಿಯುಮಲ್ಲದೆ—

---

೯೯. ಮರ ಸ್ಥಿರವಾಗಿದ್ದರೂ ಗಾಳಿಯ ಬೀಸಿನಿಂದ ಅದರ ಚಿಗುರೆಲೆಗಳಲ್ಲಿ ಉಂಟಾಗುವ ಸಂಚಲನೆಯಂತೆ ಆ ರಾಜಕುಮಾರರು (ಸ್ಥಿರ ಪ್ರಕೃತಿಯವರಾಗಿದ್ದರೂ) ಶೃಂಗಾರರಸದ ಉದ್ದೀಪನೆಯಿಂದ ಅವರಲ್ಲಿ ಉಂಟಾದ ವಿಭಾವಗಳೂ ಅಭಿನಯಗಳೂ ಶೋಭಿಸಿದುವು.

ವ॥ ಮನ್ಮಥನೇ ಉಪಾಧ್ಯಾಯನಾಗಿ ನಿಂತು, ಆ ರಾಜಕುಮಾರರೇ ಪಾತ್ರಧಾರಿಗಳಾಗಿ ಅನೇಕ ವಿಧದ ಲೀಲಾವಿಲಾಸದಿಂದ ಸುಂದರವಾದ ಅಭಿನಯಗಳು ಅಲ್ಲಿ ಕಂಡುಬಂದುವು.

೧೦೦. ರಾಜಕುಮಾರನೊಬ್ಬನು ವಿನೋದಕ್ಕಾಗಿ ಹಿಡಿದುಕೊಂಡಿದ್ದ ತಾವರೆಯನ್ನು ಚಕ್ರಾಕಾರವಾಗಿ ತಿರುವಿ, ಪರಾಗಮಂಡಲವನ್ನು ನಿರ್ಮಿಸುತ್ತ ಅದರ ಸುಗಂಧಕ್ಕೆ ಮುತ್ತಿ ಬರುವ ದುಂಬಿಗಳನ್ನು ಚೆದರಿಸುತ್ತಿದ್ದನು.

ವ॥ ಅವನಲ್ಲದೆ ಇನ್ನೊಬ್ಬನು—

೧೦೧. ತನ್ನ ನಲ್ಲೆಯ ಸೊಗಸಾದ ಬಲ್ಮೊಲೆಗಳಿಗೂ ಒಳದೊಡೆಗಳಿಗೂ ಮೀಸಲಾದ ತನ್ನ ಉಗುರುಗಳಿಂದ ಹೊಂಗೇದಗೆಯ ಹೊಸಗರಿಗಳನ್ನು ಸೀಳುವ ಆಟಕ್ಕೆ ತೊಡಗಿದನು.

ವ॥ ಆ ವಿಲಾಸದ ರಾಸಾತಿಶಯನಲ್ಲದೆ, ಇನ್ನೊಬ್ಬನು—

---

1. ನನ್ನಃ (ಅ)

ಕಂ॥ ಇಂಬಾಗಿರೆಯುಂ ಮಕುಟಮ
ದಂ ಬಿಣ್ಪನೊಳೋರೆವೋದೊಡೋಸರಿಪವೊಲೊ
ರ್ವಂ ಬಹಳ ನಖಮಯೂಖ ಕ
ದಂಬಕಮಂ ಕರಮನುತ್ತಮಾಂಗಕ್ಕೊಯ್ದಂ ॥ ೧೦೨ ॥

ವ॥ ಆ ಮನೋಜರಾಗ ಹೇತುಭೂತ ರಾಜವಿದ್ಯಾ[1]ವಿವೇಕ[1]ನೆನಿಸಿದ ಮಹಾಪುರುಷನುಮಲ್ಲದೆ—

ಕಂ॥ ಎಡಗೆಯ್ಯನೂಱಿ ಪೀಠದ
ಕಡೆಯೊಳ್ ಮುಯ್ಯುದ್ದಮಾಗೆ ಮುರಿದ ಬೆಡಂಗ
ಚ್ಚುಡಿದಿರೆ ಹಾರಂ ಕೆಲಕೋ
ರ್ಗುಡಿಸೆ ನಿಜಾನುಗರೊಳಾಗಳೊರ್ವಂ ನುಡಿದಂ ॥ ೧೦೩ ॥

ವ॥ ಆ ಲೀಲಾಶುಂಭದಂಭೋಧಿಯಲ್ಲದೆ—

ಕಂ॥ ಹಾರದ ಲಂಬಣಮಂ ಕೇ
ಯೂರ ಶಿಖಾಕೋಟಿಯೊಳ್ ತಗುಳ್ದುದನಿಭಹ
ಸ್ತೋರುಭುಜಂ [2]ಸಾಚೀ[2]ಕೃತ
ಚಾರುವದನನೊರ್ವನಿರದುರಕ್ಕದನುಯ್ದಂ ॥ ೧೦೪ ॥

ವ॥ ಆ ಹೃದಯಾಂಗಭೂಷಣನುಮಲ್ಲದೆ—

ಕಂ॥ ಬಗೆ ಮತ್ತೊಂದೆನೆಯುಂ ಗೆ
ಯ್ಮೆಗಮಿತ್ತೊಂದೆನೆಯುಮಂಗುಳೀ ನಖಚಯಕಾಂ
ತಿಗಳನವಗಯ್ಸಿ ಸಲೆ ಪಾ
ಸಗೆ[3]ಯ[3] ದೆಸೆದೆಸೆ[4]ಗೆ[4] ಪೊರಳ್ಚಿದಂ ಮತ್ತೊರ್ವಂ ॥ ೧೦೫ ॥

೧೦೨. ತನ್ನ ಕಿರೀಟವು ಸರಿಯಾದ ಸ್ಥಾನದಲ್ಲಿದ್ದರೂ ಅದೇನೋ ಓರೆಯಾಗಿದೆಯೆಂಬಂತೆ ಸರಿಪಡಿಸಲೋಸುಗ ಉಗುರುಗಳ ಪ್ರಭೆಯಿಂದ ಹೊಳೆಯುತ್ತಿರುವ ಕೈಯನ್ನು ತಲೆಯ ಬಳಿ ಒಯ್ದನು.

ವ॥ ಆ ಮನ್ಮಥ ವಿದ್ಯಾವಿಶಾರದನಾದ ಮಹಾಪುರುಷನಲ್ಲದೆ

೧೦೩. ಇನ್ನೊಬ್ಬನು ತನ್ನ ಕೊರಳ ಹಾರ ಓರೆಯಾಗಿ ಒಂದು ಮಗ್ಗುಲಿಗೆ ನೇಲುವಂತೆ ಎಡಗೈಯನ್ನು ಬೆಡಗಿನಿಂದ ಪೀಠದ ಮೇಲೆ ಊರಿ, ಹೆಗಲನ್ನೆತ್ತರಿಸಿ (ಪಕ್ಕದವನೊಡನೆ) ಮಾತಿಗೆ ತೊಡಗಿದನು.

ವ॥ ಆ ಲೀಲಾಸಮುದ್ರನಲ್ಲದೆ—

೧೦೪. ಕೊರಳಲ್ಲಿಯ ಪುಷ್ಪಹಾರವು ತನ್ನ ತೋಳ್ಬಳೆಯ ಕೊಂಡಿಗೆ ತೊಡಕಿಕೊಂಡಿರುವುದನ್ನು ಕಂಡು, ಆನೆಯ ಸೊಂಡಿಲಂತೆ ಭುಜಗಳುಳ್ಳ ರಾಜಕುಮಾರನೊಬ್ಬನು ಮುಖವನ್ನು ಪಕ್ಕಕ್ಕೆ ಹೊರಳಿಸಿ, ಆ ಹಾರವನ್ನು ಎದೆಗೆ ಸರಿಸಿ ಕೊಂಡನು.

ವ॥ ಆ ಹೃದಯ ಭೂಷಣನಲ್ಲದೆ—

೧೦೫. ಮನಸ್ಸು ಒಂದು ರೀತಿ, ಕ್ರಿಯೆ ಇನ್ನೊಂದು ರೀತಿ ಎಂಬಂತೆ ತನ್ನ ಬೆರಳು ಉಗುರುಗಳ ಪ್ರಭೆಯನ್ನು ಹರಡುತ್ತಾ ಇನ್ನೊಬ್ಬನು ಎತ್ತೆತ್ತಲೋ ಹಾಸಂಗಿಗಳನ್ನು ಉರುಳಿಸಿದನು.

1. ವೇಪಕ (ಅ) 2. ಶೋಭೀ (ಅ) 3. ಯಂ (ಅ) 4. × (ಅ)

ವ॥ ಅನ್ನೆಗಮನವರತ ಸಂಧುಕ್ಷ್ಯಮಾಣ ಕಾಲಾಗುರುಧೂಪಧೂಮ್ರ ಸುರಭಿ ಪರಿಮಳ ಮಿಳದಳಿಕುಳಾಕುಳೀಕೃತ ಕನ್ಯಾಪರಿವಾರ ವಿಲಾಸ ವಿಲಾಸಿನೀ ವಿನೋದ್ಯಮಾನೆಯನಾಭರಣ ಪ್ರಭಾ ಪರಿಭೂತ ಪ್ರಭೂತ ಜ್ಯೋತಿಃಪ್ರಭೆಯಂ ಜ್ಯೋತಿಃಪ್ರಭೆಯಂ ಪ್ರತೀಹಾರಂ ಮಗಧಾಧಿರಾಜಾಭಿಮುಖಂ ಮಾಡಿ—

ಮ॥ ಶರಣಾಯಾತಶರಣ್ಯನಪ್ರತಿರಥಂ ರಾಜಾನ್ವವಾಯೈಕ ವಿ
ಸ್ತರಣಂ ಮಾಗಧ ಕಲ್ಪ[1]ಶಾಖಿ[1] ಮಗಧಾಧೀಶಂ ಸಿತಚ್ಛತ್ರ ಚಾ
ಮರ ಸಿಂಹಾಸನ ಪಾಳಿಕೇತನ ಸಮುದ್ಯದ್ರಾ[2]ಜ[2] ಚಿಹ್ನಂ ಕರಂ
ದೊರೆ ನೋಡೀತನ ನಿನ್ನ ರೂಪ ಕುಲ ಸೌಂದರ್ಯಂಗಳಬ್ಜಾನನೇ ॥ ೧೧೬ ॥

ಕ್ಷಿತಿನಾಥರ್ ಪಲರುಳ್ಳೊಡಂ ಬಗೆದು ಕೇಳ್ ನೀನಕ್ಕ ರಾ[3]ಜಾ[3]ನ್ವಯ
ಸ್ಥಿತಿ ವಿಶ್ವಾವನಿಗೀತನಿಂದೆ ದೊರೆಯಾಯ್ತೆಂತೆನ್ನ ಸಜ್ಯೋತಿರು
ನ್ನತಿ ಋಕ್ಷಗ್ರಹ ತಾರಕಾನಿಕರದಿಂದೇನಾದುದೇ ರೋಹಿಣೀ
ಪತಿಯಿಂದಾದುದು ರಾತ್ರಿಗಂಬುಜದಳವ್ಯಾಲೋಲ ಲೀಲೇಕ್ಷಣೇ ॥ ೧೧೭ ॥

ಕಂ॥ ಅನುದಿನಮಿಾಗತ ವೃಜಿನಂ
ಜಿನೇಂದ್ರ ಪೂಜಾವಿಧಾನಮಂ ಮಾಡಿ ಮಹೇಂ
ದ್ರನುಮನೊಡನಿ[4][ರಿ][4]ಸಿ ನಾಕಮ
ನನಾಥವೆನಿಸಿದನನೂನ ಪೀನ ನಿತಂಬೇ ॥ ೧೧೮ ॥

ನೆರೆದೀತನೊಳವನಿಪ ಸುಂ
ದರನೊಳ್ ಪುಗೆ ರಾಜಗೃಹ ಗೃಹಾಳಿ ಗವಾಕ್ಷಾಂ
ತರ ಕೃತ ಸರೋಜಮೆನಿಸುವ
ಪುರಾಂಗನಾ ನಯನ ಸುಖಮನೊದವಿಸು ಸುದತೀ ॥ ೧೧೯ ॥

ವ॥ ಅಷ್ಟರಲ್ಲಿ ಸತತವಾಗಿ ಹೊಗೆ ಏಳುತ್ತಿರುವ ಧೂಪದ ಪರಿಮಳಕ್ಕೆ ಎರಗಿದ ದುಂಬಿಗಳು ತಮ್ಮನ್ನು ಕಾಡುತ್ತಿದ್ದರೂ, ಕನ್ಯಾಪರಿವಾರದ ವಿಲಾಸಿನಿಯರು ವಿನೋದಗಳಿಂದ ವಧುವನ್ನು ರಂಜಿಸುತ್ತಿದ್ದರು; ಹೀಗೆ ವಿನೋದದಲ್ಲಿದ್ದು, ಆಭರಣಗಳ ಪ್ರಭೆಯಿಂದ ಜ್ಯೋತಿರ್ಮೂರ್ತಿಯಂತೆ ಒಪ್ಪುವ ಜ್ಯೋತಿಃಪ್ರಭೆಯನ್ನು ಕರೆತರುತ್ತ ಪ್ರತೀಹಾರಿಯು ಮಗಧ ರಾಜ್ಯಾಧಿಪತಿಯ ಬಳಿ ನಿಲ್ಲಿಸಿ (ಹೀಗೆ ನುಡಿದಳು)—

೧೧೬. "ಇಕೋ ಈತನು ಮಗಧರಾಜ್ಯಾಧೀಶನು; ಮೊರೆಹೊಕ್ಕವರನ್ನು ಕಾಪಾಡತಕ್ಕ ಮಹಾಬಲಶಾಲಿ ತನ್ನ ವಂಶದ ಅಭ್ಯುದಯಕ್ಕೆ ಕಾರಣೀಭೂತನಾದ ಏಕೈಕ ಮಹಾಪುರುಷ; (ಬೇಡುವವರಿಗೆ) ಕಲ್ಪವೃಕ್ಷ ; ಶ್ವೇತಛತ್ರ; ಚಾಮರ, ಸಿಂಹಾಸನ, ಪಾಳಿಧ್ವಜ ಮೊದಲಾದ ಸಮಸ್ತ ರಾಜಚಿಹ್ನೆಗಳೊಂದಿಗೆ ಶೋಭಿಸುವ ಈತನು ರೂಪ, ಕುಲ, ಸೌಂದರ್ಯಗಳಲ್ಲಿ ನಿನಗೆ ಅನುರೂಪನಾಗಿರುವನು.

೧೧೭. ಈ ಭೂಮಿಯಲ್ಲಿ ಭೂಪತಿಗಳೆನಿಸಿಕೊಳ್ಳುವವರು ಎಷ್ಟೋ ಜನರಿರಬಹುದು; ಆದರೆ ಈ ಸಮಸ್ತ ಭೂಮಂಡಲಕ್ಕೆ 'ರಾಜಾನ್ವಯ ಸ್ಥಿತಿ' (ಪ್ರಶಸ್ತರಾಜನುಳ್ಳುದು ಎಂಬ ಸ್ಥಿತಿ) ಈತನಿಂದಲೆ ಬಂದಿತು. ಜ್ಯೋತಿರ್ಮಯವಾದ ನಕ್ಷತ್ರ, ತಾರಾಗ್ರಹಗಳು ಎಷ್ಟಿದ್ದರೇನು ? ರಾತ್ರಿಗೆ ಬೆಳಕು ಬರುವುದು ಚಂದ್ರನೊಬ್ಬನಿಂದಲೆ.

೧೧೮. ಪಾಪವರ್ಜಿತನಾದ ಈ ಮಹಾತ್ಮನು ಪ್ರತಿದಿನ ಜಿನಪೂಜೆ ಮಾಡುತ್ತ, ದೇವೇಂದ್ರನನ್ನು ತನ್ನ ಒಡನೆಯೆ ಇರಿಸಿಕೊಂಡಿರುವುದರಿಂದ ದೇವಲೋಕ ಅನಾಥವೆನಿಸಿದೆ.

೧೧೯. ಈ ಚೆಲುವನನ್ನು ಮದುವೆಯಾಗಿ, ನೀನು ರಾಜಧಾನಿಯನ್ನು ಪ್ರವೇಶಿಸು ; ಅರಮನೆಯ ಗವಾಕ್ಷಗಳಲ್ಲಿ ಅರಳಿದ ಕಮಲಗಳಂತೆ ಮುಖವಿಟ್ಟು ನೋಡುವ ಪುರಾಂಗನೆಯರ ಕಣ್ಣುಗಳಿಗೆ ಹಬ್ಬವನ್ನುಂಟುಮಾಡು."

---

1. ವೃಕ್ಷ (ಅ) 2. ಜ್ಯ (ಅ) 3. ಜ್ಯಾ (ಅ) 4. ಟಿ (ಮ)

ವ॥ ಎಂದ ಧಾತ್ರೀ ಪುತ್ರಿಯ ಮಾತನೆಯ್ದೆ ಕೇಳ್ದಾತನಂ ನೋಡಿ—

ಕಂ॥ ಪೊಲವನೆ ಭಾವಿಸದೇೞಿಯು
ಮಿಱಿಯೆಯುಮಾಗಳ್ ನಖಾಗ್ರ ವಾಲಾಗ್ರದಿನೊಂ
ದುೞಿಯದವಯವಮನವಯವ
ಮುೞಿಯದುಮೆನಿಸದೆ ಕುಮಾರಿ ನೋಡಿದಳಿನಿಸಂ ॥ ೧೧೦ ॥

ವ॥ ನೋಡಿ—

ಕಂ॥ ವರನ ಕೊರಲಳವಿಗೆತ್ತಿ
ರ್ದ ರತ್ನ ನವಮಾಲೆ ನೇಲೆ ನೆಲನಂ ನೋಡು
ತ್ತಿರೆ ಕನ್ನಿಕೆ ಧಾತ್ರಿಜೆಯಂ
ತಿರದೆ ಕುಮಾರಿಕೆಯ ಮನದ ಪರಿಚಾರಿಕೆಯಂ ॥ ೧೧೧ ॥

ವ॥ ರಥಮಂ ನಡೆಯಿಸೆಂಬುದುಂ—

ಚಂ॥ ತಡೆಯದೆ ಚಿತ್ರವೇತ್ರಧರೆಯುಂ ರಥಮಂ ಕ್ಷಿತಿಪಾಂತರಕ್ಕದಂ
ನಡೆಯಿಸಿದಳ್ ಸಮೀರಣ ಸಮುತ್ಥವಿಲೋಲ ತರುಗಲೇಖೆ ಚಿ
ಲ್ವಿಡಿದ ಸರೋರುಹಾಂತರಕೆ ಮಾನಿತ ಮಾನಸ ರಾಜಹಂಸಿಯಂ
ನಡೆಯಿಸುವಂತೆ ಸುಂದರ ನತಾಂಸೆಯನಲ್ಪಕಪೋಲಮಾಂಸೆಯಂ ॥ ೧೧೨ ॥

ಶಾ॥ ಮತ್ರಿತ್ರಂ ಲಲಿತಾಂಗ[ನಂಗ]ವಿಷಯಾಧೀಶಂ ಸುರಸ್ತ್ರೀಜನೋ
ದಾತ್ತಪ್ರಾರ್ಥಿತ ಯೌವನಂ ದಿವಿಜರಾಜತ್ವಂ ತರಾಸ್ಥಕ್ಕೆ ಮೆ
ಯ್ವೆತ್ತತ್ರೀ ಪರಮೇಶ್ವರಂಗೆ ಗಜಶಿಕ್ಷಾಸೂತ್ರದಿಷ್ಟಕ್ಕೆ ಮೂ
ವತ್ತಿರ್ವರ್ ನಯಕಾ[1][ಲ][1]ರೀ[2]ತ[2]ನ ಗಜವ್ರಾತಂಗಳಂ ತಿರ್ದುವರ್ ॥ ೧೧೩ ॥

ವ॥ ಹೀಗೆಂದ ದಾದಿಯ ಮಗಳ ನುಡಿಯನ್ನು ಚೆನ್ನಾಗಿ ಕೇಳಿ, ಆತನನ್ನು

೧೧೦. ಕಾಲ್ಬೆರಳಿನಿಂದ ನಡುನೆತ್ತಿಯವರೆಗೆ ಸಮಗ್ರವಾಗಿ, ಆದರೆ ನಿರ್ವಿಕಾರಭಾವದಿಂದ, ಆ ಕುಮಾರಿ ಒಂದಿಷ್ಟು ನೋಡಿದಳು.

ವ॥ ಹಾಗೆ ನೋಡಿ—

೧೧೧. ವರನ ಕೊರಲಳತೆಗೆ ಎತ್ತಿದ ರತ್ನಮಾಲೆ ನೇತಾಡುತ್ತಿರಲಾಗಿ ಆ ಕನ್ನಿಕೆ ನೆಲಕ್ಕೆ ದೃಷ್ಟಿಯಿಟ್ಟು ತನ್ನ ಮನಸ್ಸನ್ನು ತಿಳಿದ ದಾದಿಯ ಮಗಳಿಗೆ

ವ॥ "ರಥವನ್ನು ಮುಂದೆ ನಡೆಯಿಸು" ಎಂದು ಸೂಚಿಸಿದಳು.

೧೧೨. ಮಾನಸರೋವರದಲ್ಲಿ ಗಾಳಿಯಿಂದೆದ್ದ ತೆರೆ ಹಂಸಿಯನ್ನು ಒಂದು ಕಮಲದಿಂದ ಇನ್ನೊಂದು ಕಮಲದ ಬಳಿಗೆ ತೇಲಿಸಿಕೊಂಡು ಹೋಗುವಹಾಗೆ, ವೇತ್ರಧಾರಿಣಿಯಾದ ಆ ಕನ್ಯೆ ಸುಂದರವಾಗಿ ಬಾಗಿದ ಹೆಗಲುಳ್ಳವಳೂ ತೆಳುವಾದ ಕೆನ್ನೆಗಳುಳ್ಳವಳೂ ಆದ ಜ್ಯೋತಿಃಪ್ರಭೆಯನ್ನು ಇನ್ನೊಬ್ಬ ರಾಜನ ಬಳಿಗೆ ಕರೆತಂದು (ಹೀಗೆ ನುಡಿದಳು):

೧೧೩. "ಇತ್ತ ನೋಡು, ಈತನು ಅಂಗರಾಜ್ಯದ ಅಧಿಪತಿ; ದೇವಕನ್ಯೆಯರೂ ಬಯಸಿ ಬಾಯ್ಬಿಡುವಂತಹ ಯೌವನ ಸಂಪತ್ತುಳ್ಳವನು. ಭೂಲೋಕದಲ್ಲಿದ್ದರೂ ಈತನಿಗೆ ಇಂದ್ರಪದವಿ ಪ್ರಾಪ್ತವಾಗಿದೆ. ಮೂವತ್ತೆರಡು ಗಜವಿದ್ಯಾವಿಶಾರದರು ಈತನ ಆನೆಗಳನ್ನು ಪಳಗಿಸುತ್ತಿರುವರು.

---

1. ಠ (ಮ) 2. ವ (ಅ)

ಕಂ॥ ಅರಿಯುವತಿ ಬಾಷ್ಪಬಿಂದೂ
ತ್ಕರಂಗಳವಸೂತ್ರಹಾರಮಂ ಸ್ತನದೊಳ್ ಪೋ
ಲ್ತಿರೆ ತವಿಸೆ ಪಗೆವರಂ ಸಕ
ಳ ರಾಜ್ಯಮಂ ವೀರಭೋಜ್ಯನೆನಿಸಿದನೀತಂ ॥ ೧೧೪ ॥

ಈತಂ ನಿಸರ್ಗಭಿನ್ನ ನಿ
ಕೇತನಮಂ ಶ್ರೀ ಸರಸ್ವತೀದ್ವಯಮಂ ತಂ
ದೋತೊಂದೆ ಮೆಯ್ಗೊಳಿಸಿದ
ನೇತಡವವರೊಳ್ ತೃತೀಯೆಯಾಗಿರು ನಿರುತಂ ॥ ೧೧೫ ॥

ಉ॥ ಎಂಬುದುಮಂಗರಾಜನೊಳಿದಿರ್ಚಿದ ಭಾವನೆ ಪೊಚ್ಚಮಾಗೆ ಹೇ
ಮಾಂಬುರುಹಾಸ್ಯೆ ಸೋಲ್ವುದೆನೆ ಕನ್ನಿಕೆ ಜನ್ಯೆಯನೊತ್ತೆ ಪೋಯ್ತು ಯಾ
ನಂ ಬಿಡದಾತನೊಳ್ ಸಹಸಮಾಗದು ಭಾವಕೆ ಕೂಟಮಾದುದಿ
ಲ್ಲೇಂ ಬಗೆ ನಾಡೆ ಭಿನ್ನ ರುಚಿಯೋ ರಮಣೀ ರಮಣೀಯ ಸೃಷ್ಟಿಯಾ ॥ ೧೧೬ ॥

ಕಂ॥ ದಾದಿಯುಮಾ ಸುಕುಮಾರಿಕೆ
ಗಾದರದಿನವಂತಿ ನಾಥನಂ ತೋಱಿದಳಿಂ
ದೂದಯ ಕಾಂತನನಹಿತನಿ
ಷೂದನನಂ ದಿವಿಜರಾಜಲೀಲಾಸ್ಪದನಂ ॥ ೧೧೭ ॥

ಈತನ ಯಾನದೊಳಗ್ರ ಪ
ದಾತಿ ಪದೋದ್ಧೂತ ಧೂಳಿ ಸಾಮಂತ ಶಿಖಾ
ನೂತಮಣಿ ತರಣಿ ಕಿರಣ
ವ್ರಾತಕ್ಕಸ್ತಮಯ ಸಮಯಮಂ ಪುಟ್ಟಿಸುಗುಂ ॥ ೧೧೮ ॥

---

೧೧೪. ಈತನ ಹಗೆಗಳನ್ನೆಲ್ಲ ಧ್ವಂಸಮಾಡಲಾಗಿ ಶತ್ರು ಸ್ತ್ರೀಯರು (ಮಾಂಗಲ್ಯ ಸೂಚಕವಾದ) ಮುತ್ತಿನ ಹಾರಗಳನ್ನು ಕಳೆದುಹಾಕಿ, ಅವುಗಳ ಸ್ಥಾನದಲ್ಲಿ ತಮ್ಮ ಕಂಬನಿಗಳ ಹಾರವನ್ನೆ ಧರಿಸುವಂತೆ ಆಯಿತು. 'ರಾಜ್ಯವೆಂಬುದು ವೀರನಿಗೆ ಮಾತ್ರ ಯೋಗ್ಯ' ಎಂದೆನಿಸಿದವನು ಈತನೇ.

೧೧೫. ಸ್ವಾಭಾವಿಕವಾಗಿ ಹೊಂದಿಕೊಂಡಿರಲಾರದ ಲಕ್ಷ್ಮಿ-ಸರಸ್ವತಿಯರಿಬ್ಬರನ್ನೂ ಜೊತೆಗೊಳಿಸಿ ಈತನು ಮೈಗೂಡಿಸಿಕೊಂಡಿರುವನು. ಅವರೊಡನೆ ಮೂರನೆಯವಳಾಗಿ ನೀನೂ ಇರು".

೧೧೬. ಹೀಗೆನ್ನಲಾಗಿ ಅಂಗರಾಜನ ವಿಷಯದಲ್ಲಿ ಒಳ್ಳೆಯ ಅಭಿಪ್ರಾಯ ತಾಳಿ, ಆತನಿಗೆ ಸೋಲುವಳೆಂಬಷ್ಟರಲ್ಲಿ ಆ ಕಮಲಮುಖಿ ಸಖಿಯನ್ನು ತಿವಿದು ತನ್ನ ರಥವನ್ನು ಮುಂದೆ ಸಾಗಿಸಲು ತಿಳಿಸಿದಳು. ಆತನನ್ನು ಆಕೆಯ ಮನಸ್ಸು ಅದೇಕೊ ಒಪ್ಪಲಿಲ್ಲ. ಸುಂದರಿಯರ ಅಭಿರುಚಿ ಅದೆಷ್ಟು ಭಿನ್ನವಾಗಿರುವುದು ?

೧೧೭. ಆಮೇಲೆ ದಾದಿಯು ಆ ಸುಕುಮಾರಿಗೆ ಅವಂತಿನಾಥನನ್ನು ತೋರಿದಳು. (ಮತ್ತು ಹೀಗೆ ನುಡಿದಳು) "ನೋಡು, ಈತನು ಬಾಲಚಂದ್ರನಂತೆ ಕಾಂತಿಮಯನು; ಶತ್ರು ವಿಧ್ವಂಸಕನು; ಇಂದ್ರನಂತೆ ವಿಲಾಸವುಳ್ಳವನು.

೧೧೮. ಈತನ ದಿಗ್ವಿಜಯದಲ್ಲಿ ಮುಂಚೂಣಿಯ ಪದಾಘಾತದಿಂದ ಎದ್ದ ಧೂಳಿಯೆ ಸಾಕು, ಸಾಮಂತ ರಾಜರ ಕಿರೀಟರತ್ನಗಳೆಂಬ ಸೂರ್ಯಸಮೂಹಕ್ಕೆ ಅಸ್ತವುಂಟಾಗುವುದು. (ಈತನ ಮುಂಚೂಣಿಯ ಬಲದಿಂದಲೇ ಶತ್ರುಗಳು ಸೋತುಹೋಗುವರು.)

ಕಂ॥ ಈ ನವಯೌವನನೊಡನೆ ಮ
ನೋನಯನ ಶರೀರ ಸುಖಮನನುಭವಿಸುಗೆ ಶಿ
ಪ್ರಾನದಿಯೆರಡುಂ ತಡಿಯು
ದ್ಯಾನಪರಂಪರೆಯೊಳತನುತನು ತನುಲತಿಕೇ ॥ ೧೧೯ ॥

ವ॥ ಎನೆಯುಂ—

ಕಂ॥ ಜ್ಯೋತಿಃಪ್ರಭೆ ಖರಕಿರಣ
ಜ್ಯೋತಿಯೊಳೆಳಸದವೊಲೆಳಸಲೊಲ್ಲಳೆ ಸಮಭ
ದ್ಯೋತಿತ ಮಿತ್ರಾಬ್ಜನೊಳಭಿ
ಜಾತಹಿತೋದಯನೊಳಂತವಂತೀಶ್ವರನೊಳ್ ॥ ೧೨೦ ॥

ತದನಂತರ[1]ಮಿರದಾಕೆಯ
ನು[1]ದಾತ್ತ ಧಾತ್ರೀತನೂಜೆ ಪರಿವಿಡಿಯೊಳ್ ತಂ
ದಿದಿರೊಳ್ ನಿಱಿಸಿ ತಗುಳ್ದು ನು
ಡಿದಳ್ ಪ್ರಪಂಚಮನನೂ[2]ಪ[2]ವಿಷಯಾಧಿಪನಾ ॥ ೧೨೧ ॥

ಎರಡೆ ಭುಜಂ ಮನೆಯೊಳ್ ಸಾ
ಸಿರಮೆ ಭುಜಂ ಮೊನೆಯೊಳೀ ಮಹೀಪತಿಗರಸೆಂ
ಬೆರಡಕ್ಕರಮನ್ಯರೊಳ
ರ್ಥರಹಿತಮನ್ವರ್ಥಮೀತನೊಳ್ ಮೃಗನಯನೇ ॥ ೧೨೨ ॥

ಬಗೆಯೊಳ್ ತನಗಹಿತಮನಾರ್
ಬಗೆದೊಡಮಾಗಳೆ ಕೃತಾಸ್ತ್ರನವರಿದಿರೊಳ್ ತೊ
ಟ್ಟಗೆ ನಿಂದು ಕಿಡಿಸುಗುಂ ಪ್ರಜೆ
[3]ಬಗೆ ಕಿಡೆ[3] ದುರ್ಮತಿಯಿನಿಂತು ಪಿರಿಯರುಮೊಳರೆ ॥ ೧೨೩ ॥

೧೧೯. ಈ ನವಯುವಕನನ್ನು ನೀನು ಮೆಚ್ಚುವುದಾದರೆ, ಸಿಪ್ರಾನದಿಯ ಇಕ್ಕೆಲಗಳಲ್ಲಿರುವ ಸಾಲುಸಾಲು ಉದ್ಯಾನಗಳಲ್ಲಿ ಇವನೊಡನೆ ವಿಹಾರ ಮಾಡುತ್ತ ನಿನ್ನ ಕಣ್ಣುಗಳಿಗೂ, ದೇಹಕ್ಕೂ ನೀನು ಸುಖವನ್ನು ಪಡೆಯಬಹುದು."

ವ॥ ಹೀಗೆನ್ನಲು—

೧೨೦. (ಸುಕುಮಾರ ಪ್ರಕೃತಿಯ) ಜ್ಯೋತಿಃಪ್ರಭೆ ಪ್ರಖರಕಿರಣದ ಸೂರ್ಯನನ್ನು ಮೆಚ್ಚದಂತೆ ಮಿತ್ರರೆಂಬ ತಾವರೆಗಳನ್ನು ಅರಳಿಸುವವನೂ ವಿದ್ವಾಂಸರಿಗೆ ಅಭ್ಯುದಯಕಾರಿಯೂ ಆದ (ಸೂರ್ಯನಂತಿರುವ) ಅವಂತಿರಾಜನನ್ನು ಮೆಚ್ಚದಾದಳು.

೧೨೧. ಆಮೇಲೆ ದಾದಿಯು ಮುಂದುವರಿದು ಅನೂಪರಾಜ್ಯಾಧಿಪನೆದುರಿಗೆ ಆಕೆಯನ್ನು ತಂದು ನಿಲ್ಲಿಸಿ, ಆತನ ವಿಷಯವನ್ನು ಹೀಗೆ ತಿಳಿಸಿದಳು :

೧೨೨. "ಈ ಭೂಪತಿಗೆ ಮನೆಯಲ್ಲಿ ಎರಡೇ ತೋಳು; ಕಾಳೆಗದಲ್ಲಿ ಸಾವಿರ ತೋಳು. 'ರಾಜ'ನೆಂಬ ಹೆಸರಿನ ಎರಡಕ್ಷರಗಳು ಇತರರಲ್ಲಿ ನಿರರ್ಥಕ; ಆದರೆ ಈತನಲ್ಲಿ ಅವು ಸಾರ್ಥಕವೆನಿಸುತ್ತವೆ.

೧೨೩. ತನಗೆ ಯಾರಾದರೂ ಕೆಡುಕನ್ನು ಮಾಡಬೇಕೆಂದು ಯೋಚಿಸುವಷ್ಟರಲ್ಲಿ ಈತನು ಅಸ್ತ್ರಧಾರಿಯಾಗಿ ಅವರೆದುರಿಗೆ ನಿಂತು ಆ ಯೋಚನೆಯನ್ನು ಧ್ವಂಸಗೊಳಿಸುವನು. ಪ್ರಜೆಗಳಲ್ಲಿ ಹೀಗೆ ದುಷ್ಟಯೋಚನೆಗೂ ಕೂಡ ಅವಕಾಶವಿಲ್ಲದಂತೆ ಅವರನ್ನು ಕಾಪಾಡುವ ಇಂತಹ ಹಿರಿಯರು (ಇನ್ನಾರಾದರೂ) ಉಂಟೆ? (ಪ್ರಜೆಗಳು ಪ್ರತ್ಯಕ್ಷವಾಗಿ ಅಕಾರ್ಯಮಾಡುವುದು ಒತ್ತಟ್ಟಿಗಿರಲಿ ಮಾನಸಿಕವಾಗಿ ಕೂಡ ಅಪರಾಧವೆಸಗುವುದಕ್ಕೆ ಆಗದಂತೆ ಪ್ರಜೆಗಳನ್ನು ಈವನು ಶಿಕ್ಷಿಸಿ ನಡೆಸಿಕೊಳ್ಳುತ್ತಾನೆ.)

1. ಮಾಕೆಯನಿರದು (ಅ) 2 ನ (ಅ) 3. ಗ ಕುಡದೆ (ಅ)

ಕಂ॥ ಕ್ಷಿತಿಪತಿಸುತೆ ನೀನೀ ಮಹಿ
ಪತಿಯುತ್ಸಂಗಸ್ಥೆಯಾಗಿ ವಾತಾಯನ ಪ
ದ್ಧತಿವಿಡಿದು ನೋಡು ಮಾಹಿ
ಷ್ಮತಿಗೆ ಕಟೀಸೂತ್ರಮಾದ ರೇವಾನದಿಯಂ ॥ ೧೨೪ ॥

ವ॥ ಎನೆ—

ಕಂ॥ ಅತಿಸುಂದರ ನಿರತಿಶಯಾ
ಕೃತಿಯಾಗಿಯುಮಾತನಾಕೆಯೆರ್ದೆವುಗನೆ ಶರ
ದ್ಗತ ಜಲದ ಗಗನತಳ ವಿಲ
ಸಿತೇಂದು ಸೊಗಯಿಸದ ತೆಱದಿನಬ್ಜನಿಗಿನಿಸಂ ॥ ೧೨೫ ॥

ನೃಪಪುತ್ರಿ ಶೂರಸೇನಾ
ಧಿಪನಿದಿರೊಳ್ ರಥಿನಿ ನಿಲ್ವುದುಂ ಚತುರಕಳಾ
ಲಪನೆ ನೃಪೇಶ್ವರ ವರ್ಣನ
ನಿಪುಣೆ ಪತಿಂವರೆಯ ಮುಂದೆ ನಿಂದಿಂತೆಂದಳ್ ॥ ೧೨೬ ॥

ವ॥ ನಿನ್ನೀ ಪಯೋಧರ ಚಕ್ರವಾಕಯುಗಳಕ್ಕೀತನ ಭುಜೋರು ಪಂಜರಮೆ ನಿನ್ನೀ ರಂಭಾ ಸ್ತಂಭೋರುದಂತಿಗೀತನ ಕುಸುಮಶರ ಶರಧಿ ಪ್ರತಿನಿಧಿಯಾದೂರುಯುಗ[1]ಲಾಲಾನ[1]ಸ್ತಂಭಮೆ ನಿನ್ನ ಸಕಳ ಕಳಾಧರ ಮಂಡಳೋಪಮಾನ ಗಂಡಭಿತ್ತಿಗೀತನ ದಿಙ್ನಾಗ ಕಪೋಲಫಲಕ ಪರಿಹಾಸಿಪ ನಿಸಿದ ಕಪೋಲ ಯುಗಳೋದಯಾಚಳಮೆ ನಿನ್ನ ರಕ್ತಾಶೋಕ ಪಲ್ಲವೋಲ್ಲಾ[2]ಸಿತ[2] ನಿವಾಸಿಯಪ್ಪಧರ ಪಲ್ಲವರುಚಿಗೀತನ ಕುಂದ ಕುಟ್ಮಳಾವಳಿ ಲೀಲಾವಲೇಪ ಲೋಪಿಯಪ್ಪ ಸುಲಿಪಲ್ಲೋಳಿಯೆ ನಿನ್ನ ಹೇಮಲತಾ ವಿತಾನೋಪಮಾನತನು ಲತಾಪ್ರತಾನದ ತಗುಳ್ಪಿಂಗೀತನನಲ್ಪಕಲ್ಪ ಪಾದಪೋಪಮಾನಾನೂನಾಂಗಯಷ್ಟಿಯೆ ದೊರೆ ಮತ್ತಮೀತಂ—

---

೧೨೪. ರಾಜಕುಮಾರಿಯೆ, (ನಿನಗೆ ಇಷ್ಟವಿದ್ದರೆ) ಈ ಭೂಮೀಶ್ವರನ ತೊಡೆಯ ಮೇಲೆ ಕುಳಿತುಕೊಂಡು ಅರಮನೆಯ ಕಿಟಕಿಯ ಮೂಲಕ ಮಾಹಿಷ್ಮತೀನಗರಕ್ಕೆ ಒಡ್ಯಾಣದಂತಿರುವ ರೇವಾ ನದಿಯ (ಸೌಂದರ್ಯವ)ನ್ನು ನೋಡು."

ವ॥ ಹೀಗೆನ್ನಲಾಗಿ—

೧೨೫. ಶರತ್ಕಾಲದ ನಿರಭ್ರವಾದ ಆಕಾಶದಲ್ಲಿ ಸುಂದರನಾಗಿ ಶೋಭಿಸುತ್ತಿದ್ದರೂ ಚಂದ್ರನನ್ನು ಕಮಲವನ ಮೆಚ್ಚದಂತೆ ಅಸಮಾನ ಸುಂದರನಾಗಿದ್ದರೂ ಆ ರಾಜಕುಮಾರನನ್ನು ಆಕೆ ಮೆಚ್ಚಲಿಲ್ಲ.

೧೨೬. ಅನಂತರ, ಶೂರಸೇನರಾಜನ ಎದುರಿಗೆ ರಥ ಬಂದು ನಿಂತಿತು. ಚತುರ ಭಾಷಿಣಿಯೂ ವರ್ಣನ ವಿಶಾರದೆಯೂ ಆದ ದಾದಿ ಮುಂದೆ ನಿಂತು ಹೀಗೆ ನುಡಿದಳು:

ವ॥ ನಿನ್ನ ಸ್ತನಗಳೆಂಬ ಚಕ್ರವಾಕಗಳ ಜೊತೆಗೆ ಈತನ ಭುಜಗಳೇ ಶ್ರೇಷ್ಠವಾದ ಪಂಜರ; ಬಾಳೆಕಂಬಗಳಂತಿರುವ ನಿನ್ನ ತೊಡೆಗಳೆಂಬ ಆನೆಗಳಿಗೆ ಮನ್ಮಥನ ಬತ್ತಳಿಕೆಯಂತಿರುವ ಈತನ ತೊಡೆಗಳೇ ಕಟ್ಟುಕಂಬಗಳು; ನಿನ್ನ ಕೆನ್ನೆಗಳೆಂಬ ಪೂರ್ಣಚಂದ್ರ ಬಿಂಬಗಳಿಗೆ ದಿಗ್ಗಜದ ಕುಂಭಸ್ಥಲವನ್ನು ಧಿಕ್ಕರಿಸುವ ಈತನ ಕಪೋಲಗಳೆ ಉದಯಪರ್ವತಗಳು; ಕೆಂಬಣ್ಣದ ಅಶೋಕ ಪಲ್ಲವದಂತೆ ಕಂಗೊಳಿಸುವ ನಿನ್ನ ತಳಿರುದುಟಿಯ ಕಾಂತಿಗೆ ಕುಂದಪುಷ್ಪಗಳ ಮೊಗ್ಗುಗಳಂತೆ ಮನೋಹರವಾದ ಈತನ ಬಿಳಿಯ ಹಲ್ಲುಗಳ ಸಾಲೇ ಯೋಗ್ಯ; ಚಿನ್ನದ ಬಳ್ಳಿಯಂತಿರುವ ನಿನ್ನ ದೇಹಕ್ಕೆ ಅಪ್ಪಿಕೊಂಡು ಆಶ್ರಯಿಸಲು ಮಹಾ ಕಲ್ಪವೃಕ್ಷದಂತಿರುವ ಈತನ ದೇಹವೇ ಯೋಗ್ಯ ಮತ್ತು ಈತನು

---

1. ಲಮಾಲಾನ (ಅ) 2. ಸ (ಮ)

ಕಂ॥ ನೀಪಕುಲನಾಗಿ ನೃಪತಿಲ
ಕೋಪಮನೀತನನೆ ಸಾರ್ದು ಗುಣಗಣಮುಱಿದ
ಕ್ಪಾಪೊಸಪೋರ್ತಮನಘಕುಲ
ಲೋಪಕನಂ ಪೊರ್ದಿ ಪಗೆಯ ನು[ಱಿ]ದಂತೆ ಜಗಂ ॥ ೧೨೭ ॥

ಅಂಗದ ತೊಲಗದ ಕಾಂತಿ ಮ
ನಂಗೊಳಿಸುವುದೀತನೋಲಗಂಗೊಟ್ಟಿರೆ ಸ
ಪ್ತಾಂಗದ ರಾಜ್ಯದ ತೇಜಮ
ಸುಂಗೊಳಿಸುವುದನ್ಯಮಂಡಲಾಧೀಶ್ವರರಂ ॥ ೧೨೮ ॥

ಈತನರಸಿಯರ ಕುಚಪರಿ
ಧೂತ ಶ್ರೀಖಂಡಮುದುರೆ ಮಧುರೆಯೊಳಾ ಪೆ
ರ್ಮಾತಿನ ಕಳಿಂಗಸುತೆ ಗಂ
ಗಾತರಳತರತ್ತರಂಗೆಯೆನೆ ಸೊಗಯಿಸುಗುಂ ॥ ೧೨೯ ॥

ಈ ವರನುಂ ನೀನುಂ ನಾ
ನಾವಿಧ ನವಕುಸುಮ ಶಯ್ಯೆಯೊಳ್ ರಮಿಯಿಸು ಬೃಂ
ದಾವನದೊಳಿಂದ್ರವನಪರಿ
ಭಾವಿಯೊಳಗಲದೆ ಸುಗಂಧ ಪಾಟಳಗಂಧೀ ॥ ೧೩೦ ॥

ಘನಸಮಯದೊಳಿರ್ದು ಶಿ[1]ಲಾ[1]
ಸನದೊಳ್ ಶೈಲೇಯ ಸುರಭಿತಳದೊಳ್ ಗೋವ
ರ್ಧನ ಕಂದರದೊಳ್ ಶಿಖಿ ನ
ರ್ತ[2]ನಮಂ ನೀಂ ನೋಡ[2] [3]ಮದನ ಮದಗಜಗಮನೇ[3] ॥ ೧೩೧ ॥

೧೨೭. ನೀಪವಂಶದಲ್ಲಿ ಹುಟ್ಟಿದವನು; ರಾಜರಿಗೆ ತಿಲಕಪ್ರಾಯನು; ಸರ್ವಸದ್ಗುಣಗಳಿಗೂ ಆಶ್ರಯನಾಗಿ ಪಾಪಸಮೂಹವನ್ನು ನಾಶಮಾಡಿದವನು; ಈತನ ಪ್ರಭಾವದಿಂದಾಗಿ ಜಗತ್ತಿನ ಜೀವರಲ್ಲಿ ಪರಸ್ಪರ ಹಗೆತನ-ಹೋರಾಟಗಳು ಇಲ್ಲದಂತಾದುವು.

೧೨೮. ಒಡ್ಡೋಲಗದಲ್ಲಿ ಕುಳಿತಿರುವಾಗ ಇವನ ದೇಹಕಾಂತಿ ಹೃದಯಂಗಮವಾಗಿರುವುದು; ಸಪ್ತಾಂಗಗಳಿಂದೊಡಗೂಡಿದ ಈತನ ರಾಜ್ಯತೇಜಸ್ಸು ಶತ್ರುಮಂಡಲದ ರಾಜರನ್ನು ಹೆದರಿಸಿ ನಡುಗಿಸುವುದು.

೧೨೯. (ರಾಜಧಾನಿಯಾದ) ಮಧುರೆಯ ಬಳಿ ಈ ರಾಜನ ಅರಸಿಯರು ಸ್ನಾನಮಾಡುತ್ತಿರುವಾಗ ಅವರ ಸ್ತನಗಳಿಂದ ಉದುರಿದ ಚಂದನದಿಂದ ಯಮುನಾನದಿಯ ಕಪ್ಪುನೀರು ಬೆಳ್ಳನೆಯ ವಾರಿಧಾರೆಯಿಂದ ಕೂಡಿಕೊಂಡು ಗಂಗಾಯಮುನೆಯರ ಸಂಗಮ ಇಲ್ಲಿಯೆ ಆಯಿತೋ ಏನೋ ಎಂಬಂತೆ ಕಂಗೊಳಿಸುವುದು.

೧೩೦. ಪಾಟಲಕುಸುಮದಂತೆ ಪರಿಮಳವುಳ್ಳ ನೀನು ಈ ವರನೊಂದಿಗೆ ಕೂಡಿಕೊಂಡು ಇಂದ್ರನ ನಂದನವನಕ್ಕೆ ಸಮಾನವಾದ ಈತನ ವೃಂದಾವನವೆಂಬ ಉದ್ಯಾನದಲ್ಲಿ ಬಗೆಬಗೆಯ ಹೊಚ್ಚಹೊಸ ಹೂಗಳ ಹಾಸುಗೆಯಲ್ಲಿದ್ದು ನಿರಂತರವಾಗಿ ಸುಖಿಸು.

೧೩೧. ಮನ್ಮಥನ ಮದಗಜದಂತೆ ಮಂದಗತಿಯುಳ್ಳ ಸುಂದರಿಯೆ ಮಳೆಗಾಲ ಬಂದಾಗ ಗೋವರ್ಧನ ಪರ್ವತದ ಕಂದರಗಳಲ್ಲಿ ಶಿಲಾಜಿತುವಿನಿಂದ ಸುಗಂಧವಾದ ಬಂಡೆಗಲ್ಲುಗಳನ್ನೇರಿ ನರ್ತಿಸುತ್ತಿರುವ ನವಿಲುಗಳನ್ನು ನೋಡು."

1. ಶಾ (ಅ) ಶಾ (ಕಾ) 2. ನಂಗಳಂ ನೋಡು (ಮ) 3. ಲಲಿತ ಕೇಕಾಸ್ಮಿತಮಂ (ಕಾ)

ವ॥ ಎನೆ ಮನಂದಾರದೆ—

ಕಂ॥ ಅಂಗದವಿರಾಜಿ ಭುಜನ ಕ
ಳಿಂಗೇಶನ ಮುಂದೆ ನಿಱಿಸಿ ನೃಪಕನ್ನೆಯನಿಂ
ತೆಂಗುಂ ಭುಜಿಷ್ಯೆ ಮದನನ
ಭೃಂಗೀಧ್ವನಿ ತನ್ನ ದನಿಗೆ ಸಮನೆನಿಸುವಿನಂ ॥ ೧೩೨ ॥

ಖ್ಯಾತಂ ಮಹೇಂದ್ರಗಿರಿ ಸಾ
ರಾತಿಶಯಂ ಪತಿ ಮಹೇಂದ್ರಗಿರಿಗಂ ಪ್ರಾಚೀ
ಸ್ರೋತಃಪತಿ ಪ್ರಯಾಣದೊ
ಳೀತಂ ಜಂಗಮ ಮಹೇಂದ್ರಮೆನಿಕುಂ ಘಟೆಯಿಂ ॥ ೧೩೩ ॥

ಗುಣಹತ ಕರಯುಗ ಕಾಳಿಮ
ಕಿಣಂಗಳೆಸೆದೀತನೊಳ್ ರಿಪುಶ್ರೀ ಪಿಡಿವೆ
ತ್ತ್ರಣೆಯರಮಟಲೆ ಪನಿತಶೋ
ಷಣ ಸಾಂಜನ ಬಿಂದುವೆಂಬ ಬಗೆಯಂ ಪಡೆಗುಂ ॥ ೧೩೪ ॥

ಚಂ॥ ರವಜಿತ ಯಾಮತೂರ್ಯರವಮಿಾಶನನಬ್ಧಿ[1]ಯೆ ನಿದ್ರೆಯ[1]ತ್ತಲು
ಪ್ಪವಡಿಸುವಂತು ಮಾಟ್ಪುದು ಗವಾಕ್ಷ ನಿರೀಕ್ಷಿತ ವೀಥಿಮಾರ್ಗದೊಳ್
ನವಯುವನೀತನೊಳ್ ನೆರೆದುವಂದುಪವಾಂತ ಲವಂಗ ಪುಷ್ಪವ
ತ್ಪವನವಿದಾರ್ಯಘರ್ಮಲವೆಯಾಗಿ ವಿಹಾರಿಸು ವಾರ್ಧಿತೀರದೊಳ್ ॥ ೧೩೫ ॥

ವ॥ ಈ ಮಾತುಗಳಿಗೆ ಕುಮಾರಿ ಮೆಚ್ಚಲಿಲ್ಲ. ಆದುದರಿಂದ—

೧೩೨. ಕೇಯೂರಗಳಿಂದ ಶೋಭಿಸುವ ಕಳಿಂಗರಾಜನ ಮುಂದೆ ಅವಳನ್ನು ನಿಲ್ಲಿಸಿ ಸೇವಕಿಯಾದ ಆ ದಾದಿ ಮನ್ಮಥನ ಹೆಣ್ದುಂಬಿಯ ಧ್ವನಿಗೆ ಸಾಟಿಯೆನಿಸುವ ಮಧುರ ಧ್ವನಿಯಿಂದ ಹೀಗೆ ನುಡಿದಳು:

೧೩೩. "ಮಹೇಂದ್ರಪರ್ವತಕ್ಕೆ ಸಮಾನವಾದ ಸತ್ವವುಳ್ಳ ಈ ರಾಜನು ಮಹೇಂದ್ರಗಿರಿಗೂ ಪೂರ್ವ ಸಮುದ್ರಕ್ಕೂ ಅಧಿಪತಿಯಾಗಿರುವನು; ಈತನು ತನ್ನ ಗಜಸೈನ್ಯದೊಡನೆ ದಿಗ್ವಿಜಯಕ್ಕೆ ಹೊರಟಾಗ ಮಹೇಂದ್ರಗಿರಿಯೆ ನಡೆದುಬರುವಂತೆ ತೋರುವನು.

೧೩೪. ಬಿಲ್ಲಿನ ಹೆದೆ ಬಡಿದೂ ಬಡಿದೂ ಈತನ ಎರಡೂ ಮುಂಗೈಗಳ ಮೇಲಾದ ಕರಿಯ ಕಲೆಗಳನ್ನು ನೋಡು; ಈತನ ಕೈಸೆರೆಗೆ ಬಿದ್ದ ಶತ್ರುಲಕ್ಷ್ಮಿಯು ಕಣ್ಣೀರು ಕಣ್ಣಕಾಡಿಗೆಯೊಂದಿಗೆ ಇಳಿದಿಳಿದು ಉಂಟಾದ ಕರಿಯ ಗೆರೆಗಳೊ ಏನೊ ಎಂಬಂತೆ ಅವು ಮನೋಹರವಾಗಿರುವುವು.

೧೩೫. ಕಿಟಕಿಗಳ ಮೂಲಕ ಕಾಣುವ ಪೂರ್ವಸಮುದ್ರವೆ ತನ್ನ ಗಂಭೀರವಾದ ಧ್ವನಿಯಿಂದ ಪ್ರಭಾತ ಮಂಗಲದ ವಾದ್ಯಗಳಿಗಿಂತ ಮೇಲಾಗಿ ಈತನನ್ನು ನಿದ್ರೆಯಿಂದ ಎಚ್ಚರಿಸುವುದು; ಈತನೊಡನೆ ಕೂಡಿಕೊಂಡು ನೀನು ಸಮುದ್ರತೀರದಲ್ಲಿ ವಿಹಾರಿಸುತ್ತ ದ್ವೀಪಾಂತರಗಳಿಂದ ತಂದ ಲವಂಗಪುಷ್ಪಗಳ (ಸುಗಂಧದಿಂದೊಡನೆ ಬೆರೆತ) ಮೆಲ್ಲ ಗಾಳಿಯಿಂದ ಬೆವರನ್ನು ಆರಿಸಿಕೊ."

---

1. ಯಸಿಂದ್ರನ (ಅ)

ಕಂ॥ ದೌವಾರಿಕೆ ಬಣ್ಣಿಸಿದೊಡ
ಮಾವಧು ತನ್ನೃಪನನುಳಿದೆ ಪೋದಳ್ ಸಿರಿಯಂ
ಜೀವದ ಮತಿ ತರೆ ಪುಣ್ಯಾ
ಭಾವದಿನದು ನೆಲಸಿ ತೊಲಗಿ ಪೋದಂತಾಗಳ್ ॥ ೧೩೬ ॥

ಆರಾಜಕನ್ನೆಯಂ ಪ್ರತಿ
ಹಾರರವಸ್ಥಿತೆಯನುಯ್ದು ದಕ್ಷಿಣ [1]ದಿಗಕೂ[1]
ಪಾರಪತಿಯಿದಿರೊಳಿರಿಸಿ ಚ
ಕೋರಾಕ್ಷಿಯನಿತ್ತ ನೋಡು ನೋಡೆಂದಾಗಳ್ ॥ ೧೩೭ ॥

ಹರಿಚಂದನ ವಿಚ್ಛುರಿತಾಂ
ಗರಾಗನತಿ ರುಚಿರಹಾರನೇನೆಸೆದನೊ ನಿ
ರ್ಝರಮುಂ ಬಾಲಾತಪಮುಂ
ಬೆರಸಿರ್ದದ್ರೀಂದ್ರನಂತೆ ಪಾಂಡ್ಯನೃಪೇಂದ್ರಂ ॥ ೧೩೮ ॥

ಭವದೀಯ ಪರಮಗುರು ಚ
ಕ್ರವರ್ತಿ ದಿಗ್ವಿಜಯದೊಳ್ ಕರಂ ತಡೆವುದನೀ
ಭುವನೇಶಂ ಬಾಯ್ಕೇಳದೊ
[2]ಡವಂ ತಡೆಯದೊಂ[2] ತ್ರಿಪೃಷ್ಠನಂಬುಧಿ ತಟದೊಳ್ ॥ ೧೩೯ ॥

ಎಂಕಾನುಂ ಸ್ಥಳಜಳದು
ರ್ಗಂ ತವೆ ಬಾಯ್ಕೇಳ್ದೊನೀತನದೆ ದಿಗ್ವಿಜಯಾ
ತ್ಯಂತೋತ್ಸವಮದೆ ರುಚಿ ಚತು
ರಂತಾವನಿಗದೆ ರಥಾಂಗ ವಿಜಯಾಂಗ ಫಲಂ ॥ ೧೪೦ ॥

---

೧೩೬. ದೌವಾರಿಕೆಯು ಹೀಗೆ ಬಣ್ಣಿಸಿ ಮುಗಿಸಿದಳು. ಪೌರುಷದಿಂದ ಗಳಿಸಿ ತಂದರೂ (ಅನುಭವಿಸುವ) ಪುಣ್ಯವಿಲ್ಲದ ಜೀವಕ್ಕೆ ಅದು ದಕ್ಕದೆಹೋಗುವಂತೆ, ಆ ವಧು ಆ ರಾಜನನ್ನು ತೊರೆದು ಮುಂದೆ ಹೋದಳು.

೧೩೭. ಚಕೋರ ಪಕ್ಷಿಯ ನೇತ್ರಗಳಂತೆ ಚೆಲುವಾದ ಕಣ್ಣುಗಳುಳ್ಳ ಆ ರಾಜಪುತ್ರಿಯನ್ನು ಪ್ರತಿಹಾರಿಯು ದಕ್ಷಿಣಸಮುದ್ರಾಧಿಪತಿಯ (ಪಾಂಡ್ಯರಾಜನ) ಎದುರಿಗೆ ನಿಲ್ಲಿಸಿ, "ನೋಡು, ಇತ್ತ ನೋಡು" ಎಂದು ಹೀಗೆ ನುಡಿದಳು:

೧೩೮. "ಮೈಗೆ ಲೇಪಿಸಿಕೊಂಡ ಗೋಶೀರ್ಷದಿಂದಲೂ ಕೊರಳಲ್ಲಿ ಧರಿಸಿರುವ ಉಜ್ವಲವಾದ (ಮುತ್ತಿನ) ಹಾರದಿಂದಲೂ ಸುಂದರನಾದ ಈ ಪಾಂಡ್ಯರಾಜನು ಹೊಂಬಿಸಿಲಿಂದಲೂ ನಿರ್ಝರದಿಂದಲೂ ಕಂಗೊಳಿಸುವ ಪರ್ವತರಾಜನಂತೆ ಎಷ್ಟು ಮನೋಹರವಾಗಿರುವನು !

೧೩೯. ನಿನ್ನ ಪರಮಪೂಜ್ಯನಾದ ತಂದೆ ಚಕ್ರವರ್ತಿ ತ್ರಿಪೃಷ್ಠಮಹಾರಾಜನ ದಿಗ್ವಿಜಯ ಯಾತ್ರೆಯಲ್ಲಿ ಈ ಭೂಪತಿ ತಲೆಬಾಗದೆ ಸಮುದ್ರತೀರದಲ್ಲಿ ನಿಂತುಕೊಂಡು ಎದುರಾದನು.

೧೪೦. ಆದರೂ ಕೊನೆಗೆ ಸ್ಥಳದುರ್ಗ ಜಲದುರ್ಗಗಳೆರಡೂ ಕೈಬಿಟ್ಟುದರಿಂದ ಈತನು ಶರಣಾಗಬೇಕಾಯಿತು. ದಿಗ್ವಿಜಯಕ್ಕೆ ಅದೇ ಕೊನೆಯ ಉತ್ಸವ ; ಈ ಚತುಃಸಮುದ್ರಾಂತವಾದ ಭೂಮಿಗೆ ಅಲಂಕಾರಪ್ರಾಯವಾದ ಚಕ್ರರತ್ನದ ವಿಜಯ ಫಲವೂ ಅದೇ.

---

1. ದಿಕ್ಕೂ (ಅ) 2. ಡೆವಲಂ ತಡೆದೊಂ (ಅ)

ಕಂ॥ ಶ್ರೀಮಜ್ಜಿನಬಿಂಬಂ ಚೂ
ಡಾಮಣಿ ಮಣಿಮಕುಟದೊಳ್ ಕುಳಂ ವೃಷಭಜಿನ
ಸ್ವಾಮಿಕೃತಂ ನವವಯ[1]ನಾಭಿ
ರಾಮಂ ಸಮನೆಂಬರೇಂ ಸುಪುಣ್ಯನೊ ಪಾಂಡ್ಯಂ ॥ ೧೪೧ ॥

ಮ॥ ಮೃದುತಾಂಬೂಲ ಲತಾಪಿನದ್ಧ ವಿಲಸತ್ಪೂಗದ್ರುಮೌಘಂ ಸಮು
ಚ್ಛಿದುರೇಲಾವ್ರತತೀಪರೀತ ವಿಪುಲ ಶ್ರೀಖಂಡಭೂಜಂ ತಮಾ
ಳದಳ ಪ್ರಸ್ತರಣಂ ಲತಾಂಗಿ ಮಳಯಕ್ರೀಡಾಚಳಂ ನೀನುಮಿ
ಮದನಾಕಾರನುಮಲ್ಲಿ ನಿಚ್ಚಲುಮಿರಿಂ ಕೇಳೀ ವಿನೋದಂಗ[2]ಳಿ[2]ಂ ॥ ೧೪೨ ॥

ಕಂ॥ ಹರಿನೀಲವರ್ಣನೀ ಸುಂ
ದರತನು ನೀಂ ರೋಚನಾಭೆಯೊಳ್ ನೆರೆಯಲೊಡಂ
ಪರಭಾಗಮಾಗಿ ನಿಮ್ಮಿ
ರ್ವರಿರವು ಕಾರ್ಮುಗಿಲ ಮಿಂಚಿನಿರವಿನ ತೆಱದಿಂ ॥ ೧೪೩ ॥

ಅತಿ ದಿವಿಜೇಂದ್ರ ವಿಳಾಸನೊ
ಳ[3][ತ್ಯ][3]ಂತಮಿಾತನೊಳಡಂಗಿ ರತ್ನಾಕರಭೂ
ಷಿತೆಯಾದ ದಕ್ಷಿಣ[4]ದಿಶಾ
ಸತಿಗೆ[4] ವಿಳಾಸವತಿ ಸವತಿಯಾಗಿರು ಸುಖದಿಂ ॥ ೧೪೪ ॥

ವ॥ ಎಂದೊಡಂ—

೧೪೧. ಕಿರೀಟದ ಚೂಡಾಮಣಿಯಲ್ಲಿ ಜಿನನ ಪೂಜ್ಯಬಿಂಬ; ವಂಶವೋ ಆದಿತೀರ್ಥಂಕರನಿಂದ ನಿರ್ಮಿತವಾದುದು; ನವೋನವವಾದ ಯೌವನ; ಸುಂದರವಾದ ರೂಪ—ಹೀಗಿರುವ ಈ ಪುಣ್ಯಶಾಲಿ ಪಾಂಡ್ಯರಾಜನಿಗೆ ಸಮನಾದವರು ಯಾರು?

೧೪೨. ವೀಳ್ಯದೆಲೆ ಬಳ್ಳಿಗಳು ಸುತ್ತಿಕೊಂಡು ಸುಂದರವಾದ ಅಡಕೆಮರಗಳಿಂದಲೂ ಏಲಕ್ಕಿ ಬಳ್ಳಿಗಳ ಅಪ್ಪುಗೆಯಲ್ಲಿರುವ ಚಂದನವೃಕ್ಷ ಸಮೂಹದಿಂದಲೂ ಮನೋಹರವಾಗಿ ತಮಾಲ ಪಲ್ಲವಗಳ ಹಾಸುಗೆಯಿಂದ ಸುಖಮಯವಾದ ಮಲಯಗಿರಿಯ ಕ್ರೀಡಾವನದಲ್ಲಿ ಮನ್ಮಥರೂಪನಾದ ಈತನೊಡನೆ ಕೂಡಿಕೊಂಡು ಪ್ರತಿನಿತ್ಯ ವಿನೋದಗಳಿಂದ ಸುಖಿಸು.

೧೪೩. ಇಂದ್ರನೀಲದಂತೆ ಶ್ಯಾಮವರ್ಣದ ಈ ಚೆಲುವನೂ ಗೋರೋಚನದಂತೆ ಗೌರವರ್ಣದ ನೀನೂ ಕೂಡಿಕೊಂಡರೆ ಕಾರ್ಮುಗಿಲು-ಮಿಂಚುಗಳ ಸಂಯೋಗವಾದಂತೆ ಶೋಭಿಸುವುದು.

೧೪೪. ಇಂದ್ರನಿಗೂ ಮಿಗಿಲಾದ ವೈಭವ ವಿಲಾಸಗಳುಳ್ಳ ಈತನೊಡನೆ ಬೆರೆತು ನೀನು ಸಮುದ್ರಭೂಷಿತೆಯಾದ ದಕ್ಷಿಣ ದಿಕ್ಕನ್ಯೆಗೆ ಬೆಡಗಿನ ಸವತಿಯಾಗಿ ಸುಖಪಡು. (ಈತನು ದಕ್ಷಿಣ ಭೂಮಿಗೆಲ್ಲ ಏಕೈಕ ಅಧಿಪತಿಯಾಗಿರುವುದರಿಂದ ಆ ದಿಕ್ಕಿಗೇ ಪತಿಯಾಗಿರುವನು.)"

ವ॥ ಹೀಗೆ ನುಡಿಯಲಾಗಿ—

1. ಮ (ಅ) 2. ಳಂ (ಅ) 3. ತಾ (ಮ) 4. ದಿಕ್ಸತಿಗೆ (ಅ)

ಕಂ॥ ದಿವಸಕರಾದರ್ಶನ ಬ
ದ್ಧವಿವರ ನವವನಜದೊಳೆಡೆವಡೆಯದ ವರಕೈ
ರವಮಿತ್ರಕಿರಣದಂತವ
ಳ ವಚನಮೊಳ ಪುಗದೆ ತನ್ಮನಃಪದ್ಮಿನಿಯೊಳ್ ॥ ೧೪೫ ॥

ಆವರ್ತನಾಭ ನಸು ನ
ಕ್ಕಾ[1]ವಗನಿ[1]ಂದತ್ತಪೋದಳಧಿಕೇಚ್ಛೆಯೊಳ
ನ್ನಾವನಿಪತಿಯೊಳ್ ತಡೆಗುಮೆ
ದೇವಾಪಗೆ ತಡೆಯದೆಡೆಯೊಳಂಭೋಧಿವರಂ ॥ ೧೪೬ ॥

ಆ ವಧುವೊಲ್ಲದೆ ಬರೆ ಸಕ
ಳಾವನಿಪರ್ ತಮ್ಮರಾಗ[2]ಮೋಗ[2]ಡಿಸಿರೆ ಕೆ
ಯ್ದಾವಿಗೆ ಬರೆ ಪೆಱಗಣ ಭವ
ನಾವಳಿ ಮಸುಳ್ದಂತೆ ಮಸುಳ್ದರೆರಡೋಳಿಯೊಳಂ ॥ ೧೪೭ ॥

ಮ॥ ಸುದತೀ ಸ್ಯಂದನಮಾತ್ಮಮಂಚ ನಿಕಟಾಗ್ರೋದ್ದೇಶಮಂ ಮುಟ್ಟೆ ವ
ರ್ಪುದುಮಿನ್ನೆನ್ನುಮನೊಲ್ಗುಮೊಲ್ಲಳಿವಳೆಂಬಾಶಂಕೆ ಪುಟ್ಟಿತ್ತು ಚಿ
ತ್ತದೊಳಾ ಬೇಗದೊಳುರ್ವರಾಸ್ಯ ತಿಲಕಂಗತ್ಯುನ್ನತಂ ದಕ್ಷಿಣಾಂ
ಸದ ಬದ್ಧಶ್ಲಥ ಬಾಹುಕೀರ್ತಿ ಕಳೆದತ್ತಂದಾದ ಸಂದೇಹಮಂ ॥ ೧೪೮ ॥

ವ॥ ಅಂತು ದೀನಜನತಾಕಲ್ಪಾಂಘ್ರಿಪಂ ವನಕರಿ ಕದಡೆ ತಿಳಿದ ಸರೋವರದಂತೆ ಪ್ರಸನ್ನಾಂತರಂಗನಾಗಿರ್ಪನ್ನೆಗಂ ಕನಕ ದಂಡಹಸ್ತೆಯಾಗಳಿಂತೆಂದಳ್—

---

೧೪೫. ಸೂರ್ಯನ ದರ್ಶನವಿಲ್ಲದೆ ಮುಖ ಮುಚ್ಚಿಕೊಂಡ ಹೊಸ ತಾವರೆಯಲ್ಲಿ ಚಂದ್ರನ ಕಿರಣಗಳು ಹೇಗೆ ಸೇರಲಾರವೋ ಹಾಗೆ ಆ ದಾದಿಯ ಮಾತು ಈಕೆಯ ಮನದೊಳಗೆ ಸೇರದಾದುವು.

೧೪೬. ಸುಳಿನಾಭಿಯಿಂದ ಶೋಭಿಸುವ ಸ್ವಯಂವರೆ ನಸುನಕ್ಕು, ಆ ವರನನ್ನು ದಾಟಿ, ಇನ್ನೊಬ್ಬ ರಾಜನೆಡೆಗೆ ನಡೆದಳು. ಸಮುದ್ರದಲ್ಲಿ ಬೆರೆಯ ಹೊರಟ ಗಂಗಾನದಿಯನ್ನು ನಡುವೆ ತಡೆದು ನಿಲ್ಲಿಸಹೊರಟರೆ ಅದು ನಿಂತೀತೆ?

೧೪೭. ರಾಜಮಾರ್ಗವಾಗಿ ಕೈದೀವಿಗೆಯೊಂದು ರಾತ್ರಿ ಕಾಲದಲ್ಲಿ ಹಾಯ್ದುಹೋಗುವಾಗ ಅದು ಹತ್ತಿರ ಬಂದಾಗ ಬೆಳಗಿ, ದಾಟಿದೊಡನೆ ಕಪ್ಪಿಡುವ ಒಂದೊಂದೇ ಮಹಡಿಮನೆಯಂತೆ ಆ ಪತಿಂವರೆ ಒಲ್ಲೆನೆಂದು ಉಳಿದು ಹೋದ ರಾಜರು ಒಬ್ಬರಾದನಂತರ ಒಬ್ಬರು ಬಣ್ಣಗುಂದುತ್ತ ಇದ್ದರು.

೧೪೮. ಆ ಸುಂದರಿಯ ರಥ ತನ್ನ ಪೀಠದ ಬಳಿ ಬರಲಾಗಿ "ನನ್ನನ್ನೇನು ಇವಳು ಒಪ್ಪುವಳೋ ಇಲ್ಲವೋ" ಎಂದು ಅಮಿತತೇಜನಿಗೆ ಮನಸ್ಸಿನಲ್ಲಿ ಅನುಮಾನವಾಯಿತು. ಆದರೆ ತೋಳ್ಬಳೆ ನಸುವೆ ಸಡಿಲುವಂತೆ ಬಲದೋಳು ಸ್ಫುರಿಸಿ ಸಂಶಯವನ್ನು ಕಳೆಯಿತು.

ವ॥ ಆನೆ ಕದಡಿಹೋದ ಕೊಳ ಆಮೇಲೆ ತಿಳಿಯಾದಂತೆ ದೀನಜನಕ್ಕೆ ಕಲ್ಪವೃಕ್ಷದಂತೆ ಇದ್ದ ಆ ಕುಮಾರನು ಪ್ರಸನ್ನಚಿತ್ರನಾದನು. ಚಿನ್ನದ ಬೆತ್ತವನ್ನು ಹಿಡಿದ ಆ ಪ್ರತೀಹಾರಿ ಆಗ ಹೀಗೆಂದು ನುಡಿದಳು :

---

1. ವಧುವಿಂ (ಅ) 2. ಮೊಗನೊ (ಅ)

ಉ॥　ಕ್ಷೋಣಿಗೆ ಹಾರಮಲ್ತೆ ರಜತಾದ್ರಿ ತದದ್ರಿಗೆಪಿಂಕೆ ನೋಡುಭ
ಶ್ರೇಣಿಗಳಂತವಂ ವಿನಮಿಯುಂ ನಮಿಯುಂ ನಯದಾಳ್ದರುತ್ತರ
ಶ್ರೇಣಿಗಧೀಶನೊರ್ವನಹಿತ ಪ್ರತಿಪಾಲಕ ದತ್ತ ದಕ್ಷಿಣ
ಶ್ರೇಣಿಯನಾಳ್ದನೊರ್ವನವರೊಳ್ ನಮಿವಂಶನಪಾರ ಪೌರುಷಂ　॥ ೧೪೯ ॥

ಕಂ॥　ಜ್ವಳನಜಟಿಯೆಂಬೊನಹಿತ
ಜ್ವಳನಂ ಜಾಜ್ವಲ್ಯಮಾನ ಮಣಿಮಕುಟಾಂಶೂ
ಜ್ಜ್ವಳ ಖೇಚರೇಂದ್ರ ಪರಿಷ
ದ್ವಳಯಂ ನೋಡಳಸಮೀಳಿತ ಮುಗ್ಧಾಪಾಂಗೇ　॥ ೧೫೦ ॥

ಉ॥　ಆ ಗಗನೇಚರೇಂದ್ರನ ಮಗಂ ಪೆಸರಿಂ ನೆಗಟ್ದರ್ಕಕೀರ್ತಿವಂ
ಶಾಗತ ಖೇಚರೇಂದ್ರವಿಭವಂ ಭವದೀಯ ವಿನೂತ ಮಾತುಳಂ
ಭೋಗಪರಂಪರಾಪರಿಗತಂ ಮಗನಾ [1]ವಿಭುಗೀತನಾಳ್ಗುಮು[1]
ದ್ಯೋಗಿ ವಿರೋಧಿ ದರ್ಪಮಥನಂ ರಥನೂಪುರ ಚಕ್ರವಾಳಪಂ　॥ ೧೫೧ ॥

ಕಂ॥　ಅಪಗತ ಪತ್ರಲತಾವಳಿ
ರಿಪುಯುವತಿ ಕಪೋಲಪಾಳಿ ಪೇಟ್ಗುಂ ನೆಗಟ್ದೀ
ನೃಪನ ನಿರತಿಶಯ ಶೌರ್ಯ
ಪ್ರಪಂಚಮಂ ಚಂಚರೀಕ ಸಮ ಚಿಕುರಚಯೇ　॥ ೧೫೨ ॥

ವ॥　ಮತ್ತಮಿಾದಿವ್ಯಾನುಭಾವಂ—

---

೧೪೯. "ರಜತಾದ್ರಿಯೆಂಬುದು ಭೂದೇವಿಯ ಕೊರಳ ಹಾರವಲ್ಲವೆ? ಆ ಬೆಟ್ಟಕ್ಕೆ ಇರುವ ಎರಡು ರೆಕ್ಕೆಗಳಂತಿವೆ ಉತ್ತರ ಮತ್ತು ದಕ್ಷಿಣ ಶ್ರೇಣಿಗಳು. ಉತ್ತರ ಶ್ರೇಣಿಗೆ ವಿನಮಿಯೆಂಬವನೂ ದಕ್ಷಿಣ ಶ್ರೇಣಿಗೆ ನಮಿಯೆಂಬವನೂ ಅಧಿಪತಿಗಳಾಗಿ ನ್ಯಾಯದಿಂದ ಆಳಿದರು.

೧೫೦. ಅವರೊಳಗೆ ನಮಿವಂಶದವನೂ, ಅಸೀಮ ಪರಾಕ್ರಮಿಯಾದವನೂ, ಶತ್ರುಧ್ವಂಸಕನೂ, ಖೇಚರರಾಜ ಸಮೂಹಕ್ಕೆ ಉಜ್ವಲವಾದ ಚೂಡಾಮಣಿಯೂ ಆದವನು ಜ್ವಳನಜಟಿಯೆಂಬವನು. (ಮುಗ್ಧವಾದ ಕಡೆಗಣ್ಣುಳ್ಳವಳೇ ನೋಡು) —

೧೫೧. ಆ ಖೇಚರೇಂದ್ರನ ಮಗ ಅರ್ಕಕೀರ್ತಿ ನಿಮ್ಮ ಸೋದರಮಾವ. ವಂಶಪರಂಪರೆಯಾಗಿ ಬಂದ ವೈಭವದಿಂದಲೂ ಅನೇಕ ರಾಜಭೋಗಗಳಿಂದಲೂ ಸುಖದಿಂದಾಳುತ್ತಿದ್ದ ಆತನಿಗೆ ಉದ್ಯೋಗಶೀಲನೂ ರಿಪುದರ್ಪಭಂಜಕನೂ ಎನಿಸಿದ ಮಗನಾದನು. ಆತನೇ ಈ (ಅಮಿತತೇಜನೆಂಬ) ರಾಜಕುಮಾರ ರಥನೂಪುರ ಚಕ್ರವಾಳವನ್ನು ಆಳುತ್ತಿರುವನು.

೧೫೨. ದುಂಬಿಗುರುಳಿನ ಚೆಲುವೆಯೇ ಕೇಳು. (ಸೌಭಾಗ್ಯ ಸೂಚಕವಾದ) ಮಕರಿಕಾಪತ್ರಗಳಿಲ್ಲದೆ ಭಣಗುಡುತ್ತಿರುವ ಶತ್ರು ಪತ್ನಿಯರ ಕೆನ್ನೆಗಳೇ ಈತನ ಅಪ್ರತಿಮ ಶೌರ್ಯದ ಕಥೆಯನ್ನು ಹೇಳುತ್ತವೆ.

ವ॥　ಅಲ್ಲದೆ ಮಹಾ ಸತ್ತ್ವಶಾಲಿಯು—

---

1. ವಿಭುಗಾಳ್ದಮು (ಮ)

ಕಂ॥ ಐರಾವತ ಗಜಕುಂಭ
ಸ್ಫಾರಣ ವಿಶ್ಲಥ ವಿಕಾಸಿ ಕೇಯೂರಂ ಕೇ
ಯೂರದೊಳೊರಸೆ ಸುರೇಂದ್ರನೊ
ಳೋರಾಸನಮಿರ್ಪನರ್ಹದಾಸ್ಥಾಯಿಕೆಯೊಳ್ ॥ ೧೫೩ ॥

ಕುಲನಗಮನಡರ್ವ ಜಲನಿಧಿ
ಜಲಮಂ ಪಾಯ್ವಹಿನಿವಾ[1]ಸ[1]ಮಂ ಪುಗುವ ಮರು
ನ್ನಿಲಯಕ್ಕೊಗೆವೀತನ ಕೀ
ರ್ತಿಲತಾಂಗಿ ಚಲಾಂಗಿ ಖಚರನಚಳಿತನಬಲೇ ॥ ೧೫೪ ॥

ಬಾಲೆಗೆ ಗುಣಕಾಂತಿ ವಯೋ
ಲೀಲೆಗೆ ವಿನಯಪ್ರಧಾನ ಗುಣಗಣೆಗೆಣೆ ಭೂ
ಪಾಲಂ ನಿನಗದಱಿಂದನು
ಕೂಲಂ ಬಿದಿ ಬಿಸುಗೆ ಸಿಂಧುವೊಲ್ ಮಾನದಿಯೊಳ್ ॥ ೧೫೫ ॥

ವ॥ ಎಂದಿಂತಾಕಾರಾನುರೂಪ ದೌವಾರಿಕಾ ವಚನರಚನಾಶ್ರವಣ ಸಮುಪಜಾತ ಸಾಧ್ವಸಭಯಮುಮೆಱಕಮುಂ ಪೆರ್ಚೆ ಸಂಜಾತಪೇಪಥುः ಕರಪಲ್ಲವ ಪರಿಚ್ಯುತಸ್ವೇದೋದಬಿಂದು ಸಂದೋಹಸಿಕ್ತಾ ಪೂರ್ವಪ್ರವಾಳಾಂಕ ಮಧೂಕಮಾಲಾ[2](ಭಾ)[2]ಪರಿಷ್ಕೃತಪಂಚರತ್ನಮಯ ದಾಮಾಭಿರಾಮಭಾಸ್ವಜ್ಜಿನಚಂದ್ರ[3]ಚಂದ್ರ[3]ಪ್ರಭೆಗೆ ಜ್ಯೋತಿ ಸೋಲ್ವಂತೆ ಜ್ಯೋತಿःಪ್ರಭೆ ಸೋಲ್ತು—

ಕಂ॥ ಅವಯವ ಸಮುದಯ ಶೋಭಾ
ನವದ್ಯನಪ್ಪುರ್ವರಾಸ್ಯ ತಿಲಕೇತರನಂ
ನವವಧುವೊಲ್ಲಳೆ ಮಧುಕರಿ
ನಘಾವಪ್ರದೊಳ್ ಪಾ[4]ಯ್ಗು[4]ಮೆಲವದೊಳ್ ಪಾಯ್ದಪುದೇ ॥ ೧೫೬ ॥

---

೧೫೩. ಐರಾವತದ ಕುಂಭವನ್ನು ತಿವಿಯುತ್ತ ಸಡಿಲವಾದ ಮಹೇಂದ್ರನ ಕೇಯೂರಕ್ಕೆ ತನ್ನ ಕೇಯೂರವು ಉಜ್ಜುವಂತೆ, ಆತನೊಡನೆ ಅರ್ಧಾಸನದಲ್ಲಿ ಕುಳಿತು ಅರ್ಹಂತನ ಆಸ್ಥಾನದಲ್ಲಿ ಕಂಗೊಳಿಸುವನು.

೧೫೪. ಈತನ ಕೀರ್ತಿವಧು ಸಿಂತಲ್ಲಿ ನಿಲ್ಲುವವಳಲ್ಲ; ಕುಲಪರ್ವತಗಳನ್ನು ಏರುತ್ತಾಳೆ. ಸಮುದ್ರಗಳನ್ನು ದಾಟುತ್ತಾಳೆ; ಪಾತಾಳವನ್ನು ಭೇದಿಸುತ್ತಾಳೆ; ದೇವಲೋಕಕ್ಕೂ ಹೋಗುತ್ತಾಳೆ.

೧೫೫. ವಿನಯ ಪ್ರಧಾನವಾದ ಗುಣಗಳಿಗೆ ನೆಲೆಯಾದವಳು ನೀನು; ಶ್ರೇಷ್ಠವಾದ ಕಾಂತಿಯುಳ್ಳವಳು; ಯೌವನ ವಿಲಾಸಗಳುಳ್ಳವಳು. ಈ ರಾಜನು (ಎಲ್ಲದರಲ್ಲಿಯೂ, ನಿನಗೆ ಅನುರೂಪನಾಗಿರುವನು. ಸಮುದ್ರಕ್ಕೆ ಮಹಾ ನದಿಯನ್ನು ಸೇರಿಸಿದಂತೆ, ವಿಧಿ ನಿನ್ನನ್ನು ಈತನೊಡನೆ ಕೂಡಿಸಲಿ."

ವ॥ ಹೀಗೆ ದೌವಾರಿಕೆಯಾಡಿದ ಅನುರೂಪ ವಾಕ್ಯಗಳನ್ನು ಕೇಳಿ, ಉದ್ವೇಗದೊಡನೆ ಮನದ ಅನುರಾಗವೂ ಉಕ್ಕುತ್ತಿರಲಾಗಿ ಆ ಕುಮಾರಿಗೆ ನಡುಕ ಹುಟ್ಟಿತು; ಚಿಗುರೆಲೆಗಳಂತಹ ಕೈಬೆರಳುಗಳಲ್ಲಿ ಬೆವರು ತೊಟ್ಟಿಕ್ಕತೊಡಗಿತು; ಅಪೂರ್ವವಾದ ಪಲ್ಲವಗಳಿಂದಲೂ ಮಧೂಕ ಪುಷ್ಪಗಳಿಂದಲೂ ಕೂಡಿಕೊಂಡು ಸುಂದರವಾದ ಪಂಚರತ್ನ ಮಾಲೆಯನ್ನು ಧರಿಸಿ "ಅಭಿರಾಮ"ವಾಗಿ (೧. ಚಂದ್ರನಾಗಿ, ೨. ಮನೋಹರನಾಗಿ) ಕಂಗೊಳಿಸುತ್ತಿರುವ ಜಿನಚಂದ್ರನನ್ನು ನೋಡಿ, ಬೆಳ್ದಿಂಗಳೆದುರಿಗೆ ದೀವಿಗೆಯ ಬೆಳಕು ಸೋತುಹೋಗುವಂತೆ ಆತನ ಕಾಂತಿಗೆ ಜ್ಯೋತಿःಪ್ರಭೆ ಸೋತಳು.

೧೫೬. ಸರ್ವಾಂಗ ಸುಂದರವಾದ ಇಂತಹ ಭೂತಿಲಕನನ್ನು ಕಂಡಮೇಲೆ ಆ ನವವಧು ಬೇರೆಯವರನ್ನು ಮೆಚ್ಚುವುದುಂಟೆ? ಹೊಸ ಮಾವಿನಮರಕ್ಕಲ್ಲದೆ ಬೂರುಗದ ಮರಕ್ಕೆ ಎರಗುವುದೆ ಹೆಣ್ದುಂಬಿ ?

---

1. ಹ (ಅ) 2. + ಪೂರ್ವ (ಅ) 3. × (ಅ) 4. ಯ್ದು (ಅ)

ಕಂ॥ ಆಕೆಯ ಮನಮಱಿದಖಿಳ ಕ
ಳಾಕೋವಿದೆ ಮಾನ್ಕೆ ಜನ್ಕೆ ವಿಸ್ತರವಚನ
ವ್ಯಾಕುಳತೆ ತಗುಳೆ ಪೊಗೞ್ದಳ
ನೇಕೋಕ್ತಿಯಿನುರ್ವರಾಸ್ಯ ತಿಲಕನ ರೂಪಂ ॥ ೧೫೭ ॥

ಪೊಗೞ್ದಾಕೆ ಮಾಣೆ ನಾಣನಿ
ಸಗಲೆ ನಯಂ ಬೀಱಿ ದಿಟ್ಟಿ ನೆಯ್ದಿಲ [1]ಪೊಸವಾ[1]
ಸಿಗದೊಳೆಸೆಯೆನೆ ಕುಮಾರನ
ಪೆಗಲೊಳ್ ನೆಲೆ ನೆ[2][ಱ[3]][2]ಯೆ ಮಾಲೆ ಮೂಡಿದ ತೆಱದಿಂ ॥ ೧೫೮ ॥

ವ॥ ಅಂತೆಯ್ದೆ ಸೋಲ್ತುಮಧಿಕಲಜ್ಜಾಭಾವದಿಂ ಮಾಲೆವೂಡಲಱಿಯದೆ ಕುಮಾರ ಗ್ರೀವಾಳೋಕನೆಯಾಗಿರೆ [3]ಧಾತ್ರೀಪುತ್ರಿಯುಂ[3]

ಕಂ॥ ಮನಮಱಿದು ನಗೆಯೊಳಾ ನೃಪ
ತನಯೆಯ ರಥಮಂ ನೃಪಾಂತರಕ್ಕುಯ್ವುದೊ ಪೇೞ್
ಎನೆ ನೊಂದು ನಿಷಾದಿಗೆ ಮುಳಿ
ದನಂಗ ನೃಪಯಾನ ನಾಗಮಂ ವಧು ಪೋಲ್ತಳ್ ॥ ೧೫೯ ॥

ಕಣ್ಬ[4]ಟ[4]ತನದಿಂ ಪೇೞಲ್
ನಾಣ್ಚುರೆ ತನ್ನೊಳಗನಬಲೆ ಪೊಱ ಪೊಣ್ಮದುದಾ
ಕಣ್ಚೆಲ್ಲದ ಬಳಸುವ ಕಡೆ
ಗಣ್ಬ ಪಳತೆಯೊಡನಲಂಪು ಪೊಱಪೊಣ್ಮುವಿನಂ ॥ ೧೬೦ ॥

ವ॥ ತದನಂತರಮಿರೆ—

೧೫೭. ಕುಮಾರಿಯು ಮನದಿಂಗಿತವನ್ನರಿತು, ಸರ್ವಕಲಾಪರಿಣತೆಯಾದ ಧಾತ್ರೀಪುತ್ರಿಯು ಆ ಭೂಮಂಡಲ ತಿಲಕನ ರೂಪವನ್ನು ವಿಸ್ತಾರವಾಗಿ ಬಣ್ಣಿಸಿದಳು.

೧೫೮. ಆಕೆ ಹಾಗೆ ಹೊಗಳಿ ಮುಗಿಸಿದೊಡನೆ, ಕುಮಾರಿಗೆ ಲಜ್ಜಾಭಾವ ನಸುವೆ ಹುಟ್ಟಿ, ಅನುರಾಗಪೂರ್ವಕವಾಗಿ ಆಕೆ ವರನನ್ನು ನೋಡಿದಾಗ ಬಿಳಿತಾವರೆಗಳ ಹೊಸ ಮಾಲೆಯನೆ ಆತನ ಕೊರಳಿಗೆ ಆಕೆ ತೊಡಿಸುತ್ತಿರುವಂತೆ ತೋರಿತು.

ವ॥ ಹಾಗೆ ಪೂರ್ಣವಾಗಿ ಮನಸೋತು, ತುಂಬ ನಾಚಿಕೆಯಾಗಿ ಮಾಲೆ ಹಾಕಲಾರದೆ ಆತನ ಕೊರಳನ್ನೆ ನೋಡುತ್ತ ನಿಂತಿರಲಾಗಿ

೧೫೯. ಆ ದಾದಿ ಅವಳ ಮನವನ್ನರಿತುಕೊಂಡರೂ ಹಾಸ್ಯದಿಂದ "ರಥವನ್ನು ಇನ್ನೊಬ್ಬ ರಾಜನ ಬಳಿಗೆ ಸಾಗಿಸಲೆ" ಎಂದು ಕೇಳಿದಳು. ಮಾವುತನ ಮೇಲೆ ಕೋಪಗೊಂಡ ಮನ್ಮಥನ ಮದದಾನೆಯೊ ಏನೊ ಎಂಬಂತೆ ಸ್ವಯಂವರ ಕುಮಾರಿ ಆಕೆಯನ್ನು ಕೋಪದಿಂದ ನೋಡಿದಳು.

೧೬೦. ತನ್ನ ಮನೋರಥವನ್ನು ಬಾಯ್ಬಿಟ್ಟು ಹೇಳಲು ಆಕೆ ನಾಚಿಕೊಂಡರೂ ಚಂಚಲವಾದ ಕಡೆಗಣ್ಣಿನಿಂದ ಸೂಸುವ ಸರಸದೃಷ್ಟಿ ಅವಳ ಒಳಬಯಕೆಯನ್ನೂ ಸಂತೋಷವನ್ನೂ ಚೆನ್ನಾಗಿ ಪ್ರಕಟಗೊಳಿಸಿತು.

ವ॥ ಅನಂತರ ಇರಲು—

1. ಪೂವಾ (ಅ) 2. ರೆ (ಮ) 3. × (ಮ) 4. ಟಿ (ಅ)

ಮ॥ ನಯನಾನಂದನ ದಾಮಮಂ ಹಿಮಕರಾಂಶೂದ್ದಾಮಮಂ ಕನ್ನೆ ತ
ನ್ನಯ ಕೆಯ್ಯೊಳ್ ಕುಡೆ ಮಾಲೆವೂಡೆ ಸಮದಂ ಕಂಠಸ್ಥ ನಕ್ಷತ್ರಮಾ
ಲೆಯಿನೈರಾವತದಂತೆ ತತ್ಕರತಳಾಯಾತ ಸ್ಫುರದ್ರತ್ನ ಮಾ
ಲೆಯಿನುದ್ಭಾಸಿಸಿದಂ ಸ್ವಯಂವರದೊಳಾ ಸೌಜನ್ಯಕಂದಾಂಕುರಂ ॥ ೧೬೧ ॥

—ಗದ್ಯ—

ಇದು

ಜಿನೇಂದ್ರ ಚರಣ ಸರಸೀರುಹ ಶಿಲೀಮುಖಾಯಮಾನ

ಶ್ರೀಮದುಭಯಕವಿ ಚಕ್ರವರ್ತಿ

ನಿರ್ವರ್ತಿತಮುಂ

ಅಮ್ಮನ ಭಕ್ತಾಭಿಧಾನ ವಿದ್ಯಾನಿಧಾನ ಮಲ್ಲಪಾರ್ಯ

ತದನುಜಾತಾಭಿಜಾತ ಸಾರಸ್ವತ

ಪುನ್ನಮಾರ್ಯ ಕಾರಿತಮುಮಪ್ಪ

ಪುರಾಣಚೂಡಾಮಣಿಯೊಳ್

ಪಂಚಮಾಶ್ವಾಸಂ

---

೧೬೧. ಬೆಳ್ದಿಂಗಳಂತೆ ಶೋಭಿಸುವ ನಯನಮನೋಹರವಾದ ವರಣಮಾಲೆಯನ್ನು ದಾದಿ ತನ್ನ ಕೈಗೆ ನೀಡಲಾಗಿ. ಆಕೆ ಆತನಿಗೆ ಮಾಲೆ ಹಾಕಿದಳು; ಹೀಗೆ ಸ್ವಯಂವರದಲ್ಲಿ ಆಕೆ ತೊಡಿಸಿದ ಪ್ರಜ್ವಲ ರತ್ನಮಾಲೆಯನ್ನು ಧರಿಸಿ, ಆ ಕುಮಾರನು ನಕ್ಷತ್ರ ಮಾಲೆಯನ್ನು ಧರಿಸಿದ ಐರಾವತವೊ ಏನೊ ಎಂಬಂತೆ ಶೋಭಿಸಿದನು.

ಗದ್ಯ॥ ಇದು ಜಿನೇಶ್ವರನ ಚರಣಕಮಲದ ದುಂಬಿಯಂತಿರುವ, ಶ್ರೀಮದುಭಯಕವಿ ಚಕ್ರವರ್ತಿಯೆಂಬ ಬಿರುದಾಂಕಿತನಿಂದ ನಿರ್ವರ್ತಿತವೂ ಅಮ್ಮನ ಭಕ್ತಾಭಿಧಾನ ಮಲ್ಲಪಾರ್ಯ ಅವನ ತಮ್ಮ ಹೊಸ ಸಾರಸ್ವತ ಪುನ್ನಮಾರ್ಯ ಹೇಳಿಸಿದ ಪುರಾಣಚೂಡಾಮಣಿಯಲ್ಲಿ ಐದನೆಯ ಆಶ್ವಾಸವು.

ಶ್ರೀ

ಶಾಂತಿಪುರಾಣಂ

—o—

ಷಷ್ಠಾಶ್ವಾಸಂ

ಕಂ॥ ಶ್ರೀಪತ್ನೀಮೃದು ಭುಜಲತಿ
ಕೋಪಮಮಾಮಾಲೆ ಕೊರಲೊಳಿರೆ ಕರಮೆಸೆದಂ
ಭೂಪತಿ ಕನ್ಯಾಬಾಹುಲ
ತಾಪಾಶಾಶ್ಲೇಷತೋಷದಿಂ ಜಿನಚಂದ್ರಂ ॥ ೧ ॥

ಉ॥ ನೀರದ ಮುಕ್ತ ಶೀತಕರನಂ ನವಚಂದ್ರಿಕೆ ಪೊರ್ದುವಂ[1]ತೆ[1]ಕೂ
ಪಾರಮನಿಂದ್ರಸಿಂಧು ಪುಗುವಂತೆ ಸುರೇಭಮನಭ್ರಮೂಗಜ
ಸ್ತ್ರೀ ರಮಣೇಚ್ಛೆಯಿಂದೆಳಸುವಂತೆ ಸಮಾನವರಂಗೆ ಕನ್ನೆ ಕೆ
ಯ್ಯಾನರೆ ಕನಲ್ದೊನಲ್ದುದು ಮನಂ ನೆರೆದಿರ್ದ ಸುರೇಂದ್ರಯೂಥದಾ ॥ ೨ ॥

ಕಂ॥ ಪರಸುವ ಪೌರರ ಪರಕೆಯ
ಸರಂ ಶ್ರವಣಶೂಲಮಾಗಿ ಕಿವಿಯೊಳ್ ಪುಗುವಂ
ತಿ[ರೆ] ಕಿವಿಯುಂ ಪುಗೆ ನೆರೆದರ
ಸರ ಮಕ್ಕಳ್ ವಿರಸರಾದರಾ ಸಂಕಟದೊಳ್ ॥ ೩ ॥

ವ॥ ಅಂತು ನಡುವಗಲ (ಕಂಜ) ಕುಮುದವನ[2]ದ ವಿಕಾಸಕ್ಕಮವಿಕಾಸಕ್ಕಂ[2] ನೆಲೆಯಾದುಭಯ ಪಕ್ಷರಾಜಲೋಕದನುಜೀವಿಲೋಕದ ಪುರನಾರೀಜನಂಗಳೊಳ್[ಪು]ಳ್ಳೊಳಂ ಪಾಣ್ಬುದುಂ ಮಂಚಸ್ಥರಾಜನ್ಯಕಮುಂ ಶ್ರೀವಿಜಯುಂ ವಿಸರ್ಜಿಸೆ ಪ್ರತ್ಯೂಷತಾರಕಾಕಾರದಿಂ ಮಂದಮಂದಾಯಮಾನಪ್ರಭಾಪ್ರಸರಂ ತಮ್ಮ ತಮ್ಮ ಶಿಬಿರ ನಿವೇಶಂಗಳ್ಗೆ ಪರೆದು ಶ್ರೀವಿಜಯನೊಳಮುರ್ವರಾಸ್ಯ ತಿಲಕನೊಳಮನಿಬರ್

ಆಶ್ವಾಸ ೬

೧. ಲಕ್ಷ್ಮಿಯ ಮೃದುವಾದ ಬಳ್ಳಿದೋಳಂತಿರುವ ಆ ಮಾಲೆ ತನ್ನ ಕೊರಳಲ್ಲಿರಲಾಗಿ, ಆ ರಾಜಕನ್ನೆಯ ನಳಿದೋಳುಗಳೆ ತನ್ನನ್ನು ಅಪ್ಪಿಕೊಂಡಿವೆಯೊ ಏನೊ ಎಂಬಂತೆ ಅರ್ಕಕೀರ್ತಿತೇಜಕುಮಾರನು ಸಂತೋಷಪಟ್ಟನು.

೨. ಮೇಘ ಮತ್ತು ಚಂದ್ರನನ್ನು ಬೆಳ್ದಿಂಗಳು ಕೂಡಿಕೊಂಡಂತೆ, ಸಮುದ್ರರಾಜನನ್ನು ದೇವಗಂಗೆ ಬೆರೆತಂತೆ, ಐರಾವತವನ್ನು ಅದರ ಪತ್ನಿ ಅಭ್ರಮು ಸೇರಿದಂತೆ ಅನುರೂಪನಾದ ವರನನ್ನು ಕನ್ಯೆ ಕೈಹಿಡಿದಳು. ಆದರೆ ಸ್ವಯಂವರಕ್ಕೆ ನೆರೆದಿದ್ದ ರಾಜಕುಮಾರ ಸಮೂಹವು (ನಿರಾಸೆಯಿಂದ) ಕುದಿಯಿತು.

೩. ನವದಂಪತಿಗಳನ್ನು ಹರಸುವ ಪುರಜನರ ಧ್ವನಿ ಕರ್ಣಶೂಲವೆನಿಸಿ ಆ ಅರಸುಮಕ್ಕಳು ಸಂಕಟಪಟ್ಟರು.

ವ। ನಡುಹಗಲು ಹೊತ್ತಿಗೆ ಕೆಂದಾವರೆಯ ವನಕ್ಕೆ ವಿಕಾಸವೂ ಕುಮುದವನಕ್ಕೆ ಮ್ಲಾನತೆಯೂ ಏಕಕಾಲಕವಾಗಿ ಒದಗುವಂತೆ ವರಪಕ್ಷದ ಪರಿವಾರಕ್ಕೂ ಇತರ ರಾಜರ ಪರಿವಾರಕ್ಕೂ ಸುಖ-ದುಃಖಗಳುಂಟಾದುವು. ಮಂಡಪದಲ್ಲಿದ್ದ ರಾಜರನ್ನೆಲ್ಲ ಬೀಳ್ಕೊಡಲಾಗಿ, ಉಷಃಕಾಲ ಸಮೀಪಿಸಿದಂತೆಲ್ಲ ಮಸುಕುಮಸುಕಾಗುತ್ತಾ ಹೊರಟುಹೋಗುವ

---

1. ತ (ಮ) 2. ವಿಳಾಸಕ್ಕದು ವಿಳಾಸಂ (ಅ)

ನೆರೆಪುಂ ಕಾದಿಯುಪೊನವಲಾಜಿದುದಜ಼ಿನೊಜ಼ಿಯೊಳಗಣ ಕೂರಸಿಯಂತೆ ಕೂರ್ಪುಗಿಡದೆ ಸೌಜನ್ಯಮನುಂಟುಮಾಡಿ ನಿಜದೇಶ ಪ್ರಸ್ಥಾನಾಭಿಮುಖರ್ ಅಂತಸ್ಥ ಕೋಪಾವಲೇಪರ್ ಬಹಿಃಪ್ರಮೋದಂಗಳಿಂ ಸಂಭೃತಾಕಾರರ್ ಗೂಢ ನಕ್ರ ಪ್ರಸನ್ನ ಹ್ರದಗಳಂತೆ ಪಯಣಂ [1]ಬೋದರ್। ಇತ್ತ ಪಾಪೇಭಕಂಠೀರವಂ ಕಂಠೀರವ ವಧೂಪ್ರಭೆಯುಂ ಜ್ಯೋತಿಃಪ್ರಭೆಯನುಪಾಯನ ಸಮೇತೆಯಪ್ಪ ನೃಪಸಿದ್ಧಿಯುಂ ಮುಂದಿಟ್ಟು ಪುಗುವಂತೆ ಪ್ಪೊಜಲಂ ಪುಗೆ—

ವೃ॥ ಆಯತ ರಂಗವಲ್ಲಿ ಪರಿಶೋಭೆಯನಂಚಿತ ಚಾರು ಕೀರ್ಣ ಪ
ರ್ಣಾಯುಧ ಪಾಳಿತೋರಣ ವಿರಾಜಿತಮಂ ಬಹುನೂತ್ನ ಕೇತನ
ಚ್ಛಾಯ ನಿವಾರಿತೋಷ್ಣಮೆನನಿಂದಿತ ಸುಂದರ ರಾಜಮಾರ್ಗಮಂ
ಶ್ರೀಯ ನಿವಾಸಮಂ ಪುಗೆ ನೃಪೇಶ್ವರ ಕನ್ಯಕೆಯುಂ ಕುಮಾರನುಂ ॥ ೪ ॥

ಕಂ॥ ಆತನನಾಗಳ್ ನೋಡುವ
ಕೌತೂಹಳದಿಂ ಸುಧಾಗೃಹಾಗ್ರಂಗಳೊಳ್
ದ್ಭೂತತರಳೇಕ್ಷಣೆಯರ್ಕಳ್
ವಾತಗವಾಕ್ಷಂಗಳೆಡೆಗೆ ತಡೆಯದೆ ನಡೆದರ್ ॥ ೫ ॥

ವ॥ ಅಂತು ವಿಶ್ವಕರ್ಮನಿರ್ಮಿತ ನವಕರ್ಮ ಜಾಳಾಂತರಂಗಳೊಳ್ ಕುವಳಯಿತಂಗಳಾಗಿ ತೊಳಗಿ ಪೊಳೆವ ಜಳಿಯ ನಿಡಿಯ ತುಱುಗೆವೆಗಣ್ಗಳಿಂ ಪೌರಪಾರ ವಿಳಾಸಿನೀ ಜನಂಗಳ್ ಪರಿತ್ಯಕ್ತಾನ್ಯವ್ಯಾಪಾರರಾಗಿ ಬಹಿರಂತಃಕರಣಂಗಳಿನಕಳಂಕಾಚಾರ ಸಾರಸನೆ ಅಕ್ಷ್ಯಂ ಮಾಡಿ ನೋಡುವಲ್ಲಿಯೊರ್ವಳ್—

ಕಂ॥ ಮುಡಿ ಬಿಟ್ಟೊಡದುವನವಯವ
ದೆಡೆಗೆಯ್ಯೊಳ್ ಪಿಡಿದು ಮುಡಿಯಲುಂ ಮಱೆದು ನಯಂ
ಕಡೆಗೋಡಿವೋಗೆ ಕಣ್ಣೊಳ್
ಬೆಡಂಗೊಡಂಬಡೆ ಮೃಗಾಕ್ಷಿ ಪರಿ[2]ದೀ[2]ಕ್ಷಿಸಿದಳ್ ॥ ೬ ॥

ನಕ್ಷತ್ರಗಳಂತೆ ಅವರು ತಂತಮ್ಮ ಶಿಬಿರಗಳಿಗೆ ತೆರಳಿದರು. ತಾವೆಲ್ಲರೂ ಕೂಡಿಕೊಂಡು ಶ್ರೀವಿಜಯನೊಡನೆಯೂ ಅಮಿತತೇಜನೊಡನೆಯೂ ಕಾಳೆಗವಮಾಡಿದರೂ ಕೂಡ ಗೆಲವಾಗದೆಂದು ತಿಳಿದು, ಒರೆಯೊಳಗೇ ಅಡಗಿಕೊಂಡ ತೀಕ್ಷ್ಣವಾದ [illegible] ಒಳಗೆ ಉರಿಯಿದ್ದರೂ ಹೊರಗೆ ತೋರದೆ ಸೌಜನ್ಯವನ್ನು ಆಚರಿಸಿದರು. ಹೊಟ್ಟೆಯೊಳಗೆ ಮೊಸಳೆಯನ್ನು ಮುಚ್ಚಿಟ್ಟುಕೊಂಡು ಮೇಲೆ ಮಾತ್ರ ಶಾಂತವಾಗಿ ತೋರುವ ಕೊಳಗಳಂತೆ ಆ ರಾಜಕುಮಾರರು ಮನದೊಳಗೆ ಸಂತಾಪವಿದ್ದರೂ ಹೊರಗೆ ಸಂತೋಷವನ್ನು ಪ್ರಕಟಿಸುತ್ತ ತಂತಮ್ಮ ಸ್ಥಳಗಳಿಗೆ ಪಯಣ ಬೆಳಸಿದರು. ಅಮಿತತೇಜ ಕುಮಾರನು ಉಪಾಯನ ಸಹಿತಳಾದ ರಾಜಸಿದ್ಧಿಯಂತೆ ಜ್ಯೋತಿಃಪ್ರಭೆಯನ್ನು ಮುಂದಿಟ್ಟುಕೊಂಡು ಪಟ್ಟಣದೊಳಗೆ ನಡೆದನು.

[illegible] ಉತ್ತಮವಾದ ರಂಗವಲ್ಲಿಯಿಂದಲೂ ಪಾಳಿತೋರಣವೆ ಮೊದಲಾದ ಅನೇಕ ಬಗೆಯ ತೋರಣಗಳಿಂದಲೂ ಸುಂದರವಾಗಿ [illegible] ಧ್ವಜಗಳ ನೆಳಲಿನಿಂದ ಉಷ್ಣವನ್ನು ಆರಿಸುವ ರಾಜಮಾರ್ಗದಲ್ಲಿ ಆ ರಾಜೇಂದ್ರಕನ್ಯೆಯೂ ಕುಮಾರರೂ ಹೊರಟರು.

[illegible] ನೋಡುವ ಆತುರದಿಂದ ಸೌಧಗಳಲ್ಲಿದ್ದ ಚಂಚಲಾಕ್ಷಿಯರು ಗಡಿಬಿಡಿಯಿಂದ ಕಿಟಕಿ [illegible]

ವ॥ ವಿಶ್ವಕರ್ಮನ ಕುಸುರಿಗೆಲಸದಿಂದ ಶೋಭಿಸುವ ಜಾಲಂದರಗಳಲ್ಲಿ ಕುಮುದಗಳ ಒಳ್ಳಿಯೆ ಅರಳಿಸಿಂತಂತೆ, ದಟ್ಟವಾದ ಎಹೆಗೂದಲಿನ ನೀಳವಾದ ಕಣ್ಣುಗಳನ್ನು ಅರಳಿಸಿ ನಗರದ ಬೆಡಗಿಯರು ಎಲ್ಲ ಕೆಲಸಗಳನ್ನೂ ಬಿಟ್ಟು, ಅಂತಃಕರಣವನ್ನೂ ಬಹಿರಿಂದ್ರಿಯಗಳನ್ನೂ ಏಕತ್ರವಾಗಿ ಕಣ್ಣಲ್ಲಿಯೆ ಕೇಂದ್ರೀಕರಿಸಿಕೊಂಡಂತೆ ನಿಷ್ಕಳಂಕ ಚರಿತ್ರನಾದ [illegible] ಒಬ್ಬಳು—

[illegible] ಬೀಳಲಾಗಿ, ಅಲಕ್ಷ್ಯದಿಂದ ಅದನ್ನು ಎಡಗೈಯಲ್ಲಿ ಹಿಡಿದು [illegible] ರಸಕ್ಕೆ ಕೋಡಿಬಿದ್ದಂತೆ ಕಡೆಗಣ್ಣಿಂದ ನೋ[illegible] ಬೀಳುತ್ತ [illegible] ನೋಡಿದಳು.

---

1. [illegible]ೋದತರಿಪಾಪೇಭಕಂಠೀರವವಧೂ (ಅ) 2. ವೀ (ಅ)

ಕಂ॥ ಇಂಬಿನೊಳಡಿಯೂಡುವ ಸಖಿ
ಯುಂ ಬಾರಿಸಿ ತೆಗೆದು ಕಾಲನೊರ್ವಳ್ ಸೋಟ್ಬಾ
ಡಂಬರನಡಿಯಿಟ್ಟು ಗವಾ
ಕ್ಷಂಬರಮಲತಗೆಯ ಪಜ್ಜೆಯಂ ಪಸರಿಸಿದಳ್ ॥ ೭ ॥

ಎಡಗಣ್ಣೊಳೆಚ್ಚಿದಂಜನ
ಮೊಡಂಬಡೆನೆ ಬಲದ ಕಣ್ಣೊಳೆಚ್ಚದೆ ಕುಡುಪಂ
ಪಿಡಿದು ಗವಾಕ್ಷಕ್ಕೊರ್ವಳ್
ನಡೆದಳ್ ನೋಡಲ್ಕೆ ವಿನಯ ಕಲ್ಪಾಂಘ್ರಿಪನಂ ॥ ೮ ॥

ನಡೆಯೆ ಚಟುಳತೆಗೆ ಕಣೆಯಂ
ಸಡಿಲ್ದೊಡದನೆಡದ ಕೆಯ್ಯೊಳೋಸರಿಸುತ್ತುಂ
ನಡೆದು ಗವಾಕ್ಷಾಂಬರಮೋ
ಗಡಿಸದೆ ನವವರವನಬಲೆ ನೋಡಿದಳೊರ್ವಳ್ ॥ ೯ ॥

ಅರೆಗಟ್ಟಿ ತುರಿಪದಿಂ ಪರಿ
ತರೆ ಮೇಖಲೆ ಸೋರ್ದು ಕಾಲ್ಗೆವರೆ ಮದನಮದೋ
ದ್ಧುರಗಂಧಗಜಂ ನಿಗಳಂ
ಬೆರಸಿಪ್ಪಂತಿರ್ದು ನೋಡಿದಳ್ ಪೆಱಳೊರ್ವಳ್ ॥ ೧೦ ॥

ಕನದಖಿಳ ಕನಕ ವಾತಾ
ಯನಂಗಳೊಳ್ ಸುರಭಿ ಗಂಧಗರ್ಭಂಗಳ್ ನೂ
ತನ ನಯನ ಪದಯುಗಂಗಳ್
ಕನಕ ಸರೋಜಂಗಳಾದುವವರ ಮೊಗಂಗಳ್ ॥ ೧೧ ॥

---

೭. ಅಂಗಾಲಿಗೆ ಅರಗಿನ ರಸವನ್ನು ಲೇಪಿಸುವ ಸಖಿಯನ್ನು ಪಕ್ಕಕ್ಕೆ ತಳ್ಳಿ, ಇನ್ನೊಬ್ಬಳು ವರನನ್ನು ನೋಡುವ ಆತುರದಲ್ಲಿ ಹಸಿಗಾಲಿಂವಲೆ ದಡದಡನೆ ಬಂದು, ಗವಾಕ್ಷಿಯವರೆಗೆ ಅಲತಿಗೆಯ ಹೆಜ್ಜೆಗಳನ್ನು ಮೂಡಿಸಿದಳು.

೮. ಎಡಗಣ್ಣಿಗೆ ಕಾಡಿಗೆ ಹಚ್ಚಿ ಮುಗಿಸಿ, ಇನ್ನು ಬಲಗಣ್ಣಿಗೆ ಹಚ್ಚಬೇಕೆಂಬಷ್ಟರಲ್ಲಿ ವರನ ಮೆರವಣಿಗೆ ಬಂದುದನ್ನು ಕೇಳಿ ಕಾಡಿಗೆಯ ಕಡ್ಡಿಯನ್ನು ಕೈಯಲ್ಲಿ ಹಿಡಿದುಕೊಂಡೆ ಕಿಟಕಿಯ ಬಳಿ ಓಡಿದಳು ಇನ್ನೊಬ್ಬಳು.

೯. ಮತ್ತೊಬ್ಬಳು ಲಗುಬಗೆಯಿಂದ ಎದ್ದು ಬರುವಾಗ ಸೀರೆಯ ನೀವಿ ಸಡಿಲಿ ಬಿಚ್ಚಲು, ಅದನ್ನು ಎಡಗೈಯಲ್ಲಿ ಹಿಡಿದು, ಸಾವರಿಸಿಕೊಳ್ಳುತ್ತಲೆ ಕಿಟಕಿಗೆ ಬಂದು ನವವರನನ್ನು ನೋಡಿದಳು.

೧೦. ಇನ್ನೊಬ್ಬಳು ಕಟಿಸೂತ್ರವನ್ನು ಅರ್ಧಕಟ್ಟಿದ್ದಳೊ ಇಲ್ಲವೋ ಅಷ್ಟರಲ್ಲಿ ಆತುರದಿಂದ ಹೊರಟುದರಿಂದ ಅದು ಜಾರಿ ಕಾಲಿಗೆ ಇಳಿಯಿತು. ಹೀಗೆ ಕಾಲಸರಪಳಿ ತೊಡಸಿದ ಮನ್ಮಥನ ಮದದಾನೆಯಂತೆ ನಿಂತು ಆಕೆ ವರನನ್ನು ನೋಡಿದಳು.

೧೧ ಮಿರುಗುವ ಸುವರ್ಣವಾತಾಯನಗಳಲ್ಲಿ (ಇಣುಕಿ ನೋಡುತ್ತಿರುವ ಆ ಚೆಲುವೆಯರ) "ಸುರಭಿಗಂಧಗರ್ಭ"ವಾದ ಮುಖಗಳು, (ಎರಡೆರಡು ದುಂಬಿಗಳನ್ನೊಳಗೊಂಡ) ಹೊಂದಾವರೆಗಳಂತಾದುವು. ("ಸುರಭಿಗಂಧ"— ೧. ಮದ್ಯದ ವಾಸನೆ, ೨. ಪರಿಮಳ, ೧ನೆಯ ಅರ್ಥವನ್ನು ಸ್ತ್ರೀಯರ ಮುಖಗಳಿಗೂ, ೨ನೆಯದನ್ನು ಹೊಂದಾವರೆಗೂ ಅನ್ವಯಿಸಬೇಕು. ಈ ಪದ್ಯದಲ್ಲಿಯ "ನಯನಪದಯುಗಂಗಳ್" ಎಂಬುದರ ಅರ್ಥ ಸ್ಪಷ್ಟವಿಲ್ಲ. ಇದಕ್ಕೆ ಸಂವಾದಿಯಾದ ರಘುವಂಶದ ಪದ್ಯದಲ್ಲಿ "ವಿಲೋಲನೇತ್ರಭ್ರಮರೈಃ" ಎಂದಿದೆ. ಪೊನ್ನನ ಮೂಲ ಪಾಠ "ನಯನ ಷಡಂ[illegible]ನಂಗಳ್" ಎಂದು ಇದ್ದಿರಬಹುದೆ ?)

ವ॥ ಅಂತು ಸೌಜನ್ಯ ಕಂದಾಂಕುರನ ಲಾವಣ್ಯರಸಮಂ ಕಣ್ಣೊಳ್ ಪೀರ್ವಂತೆ ನೋಳ್ಪ ನಗರ ವಾರ ವಿಲಾಸಿನಿಯರ ಪಂಚೇಂದ್ರಿಯ ಪ್ರಪಂಚಂಗಳೆಲ್ಲಂ ಚಕ್ಷುರಿಂದ್ರಿಯಮನೆ ಪೊಕ್ಕೊಳಿದುಳಿದ [1]ವಿಷಯಯೋಗಂಗಳ[1]ನಱಿಯದೇಕೇಂದ್ರಿಯ (ಭೂತ) ಜಾತಲತಾಕಾರಮಂ ಕೆಯ್ಕೊಂಡು ಬಿಲ್ಲುಂ ಬೆಱಗುಮಾಗಿ ನೋಡೆ ವಧೂವರರ್ ಬರೆವರೆ—

ಕಂ॥ ಆದ ಸೊಯಂಬರಮಂ ಜಗ
ದಾದಿಯ ನೃಪರಮಿತ ಮತಿಗಳಿದನೊಳ್ಪಿತನು
ತ್ಪಾದಿಸಿದರಲ್ಲದಂದುದಿ
ತೋದಿತನಂ ವರನನೀಕೆ ಪಡೆಗುಮೆ ನೃಪರೊಳ್ ॥ ೧೨ ॥

ವ॥ ಅದಲ್ಲದೆಯುಂ ಸಮವಯೋರೂಪ ಲಾವಣ್ಯಪುಣ್ಯಮನೀದ್ವಂದ್ವಮಂ ಕೂಡಿದ ಬಿದಿಗವರಂ ಪುಟ್ಟಿಸಿದ ಮಹಾಪ್ರಯತ್ನಂ ಸಫಲಮಾದುದು ಈ ರಾಜಸಹಸ್ರದೊಳೀಕೆ ತನಗನುರೂಪನಪ್ಪನನಱಿದು ಮಾಲೆ ಯೂಡಿದಳ್ ಉನ್ನಮೆ ಪುರಾತನ ಭವಸಂಬಂಧವೇದಿನಿ ಎಂದಿಂತರ್ಥ ಭೂತಂಗಳನೆನಿತಾನುಮಂ ನುಡಿವನಾಗರಕಶ್ರೋತ್ರಸುಖಮಧುರವಾರ್ತಾಮೃತಾಕ್ಷರಂಗಳಂ ಕೇಳುತ್ತುಂ ಮಂಗಳವಿಧಾನಾಧಾನ ಸನಾಥ ಭವನಮಂ ಪೊಕ್ಕು ಕುಮಾರನಂ ಮುನ್ನಂ ಹುತಾಗ್ನಿಯಾಗಿರ್ದ ಪುರೋಹಿತನನಿದಿರ್ಗೊಂಡಗ್ನಿಸಾಕ್ಷಿಯೊಳ್ ಜ್ಯೋತಿಃಪ್ರಭೆಯಂ ಯಥೋಕ್ತವಿಧಿಪೂರ್ವಕಂ ಕುಡುವುದುಂ—

ಶಿಖರಿಣೀವೃತ್ತಂ॥ ವಧೂಕಾಂತರ್ ಪಾಣಿಗ್ರಹಣ ವಿಧಿಯೊಳ್ ರಾಗವಿಸರರ್
ಸುಧಾಸಿಕ್ತಾಶೋಕವ್ರತತಿಯುಮಶೋಕಾವನಿಜಮುಂ
ಮಧು ಶ್ರೀಯೊಳ್ ತಳ್ತಿರ್ದುವು ತಳಿರ ತಳ್ಪಿಂದೆನಿಸಿದ
ಪ್ರದಾನಾನಂಗೇಭಂ ಬೆದಱಿ ನೆರೆದಿರ್ದುಂ ಮದುವೆಯೊಳ್ ॥ ೧೩ ॥

ವ॥ ಸಜ್ಜನಪ್ರಿಯನಾದ ಆ ಕುಮಾರನ ಸೌಂದರ್ಯಾಮೃತವನ್ನು ತಮ್ಮ ಕಣ್ಣಿಂದಲೆ ಹೀರಿಕೊಳ್ಳುವಂತೆ ನಗರ ವಾರಸ್ತ್ರೀಯರು ನಿಟ್ಟಿಸುತ್ತಿರಲಾಗಿ ಅವರ ಸರ್ವೇಂದ್ರಿಯಗಳು ನೇತ್ರೇಂದ್ರಿಯವೊಂದರಲ್ಲಿಯೆ ಏಕೀಕೃತವಾಗಿ ಅವರಿಗೆ ಹೊರಗಿನ ಪ್ರಪಂಚದ ಅರಿವೇ ಉಳಿಯದಂತಾಯಿತು. ಹೀಗೆ ಮರವಟ್ಟು ನಿಂತ ಆಕೆಯರು ಏಕೇಂದ್ರಿಯವಾದ ಎಳೆಯ ಹೂವಿನ ಸಸ್ಯದಂತೆ ನಿಶ್ಚಲರಾಗಿ, ನಿಬ್ಬೆರಗಾಗಿ ನೋಡುತ್ತಿದ್ದರು. ವಧೂವರರು ಮುಂದೆ ಸಾಗುತ್ತಿದ್ದರು.

೧೨. "ಸ್ವಯಂವರ ನಡೆದು ಜಗತ್ತಿನ ಜಾಣರಾಜರೆಲ್ಲ ಇಲ್ಲಿ ನೆರೆದುದು ಒಳ್ಳೆಯದೇ ಆಯಿತು. ಹಾಗಾಗದಿದ್ದರೆ ಉತ್ತರೋತ್ತರವಾಗಿ ಅಭಿವೃದ್ಧಿ ಪಡೆಯುವ ಇಂತಹ ವರನನ್ನು ಆಯ್ದುಕೊಳ್ಳುವ ಅವಕಾಶ ಈಕೆಗೆ ದೊರೆಯುತ್ತಿತ್ತೆ ?

ವ॥ ಅದಲ್ಲದೆ, ವಯಸ್ಸು, ರೂಪ, ಲಾವಣ್ಯ, ಪುಣ್ಯ—ಇವೆಲ್ಲದರಲ್ಲಿಯೂ ಪರಸ್ಪರರಿಗೆ ಅನುರೂಪರಾದ ಈ ವಧೂವರರನ್ನು ಬೆರಸಿದ್ದರಿಂದ ಸೃಷ್ಟಿಕರ್ತನು ಕೃತಾರ್ಥನಾದನು. ಸಹಸ್ರಸಂಖ್ಯೆಯ ಈ ರಾಜಸಮೂಹದಲ್ಲಿ ಈಕೆ ತನಗೆ ಯೋಗ್ಯನಾದವನನ್ನೆ ಅರಿತು ಮಾಲೆಯಿಕ್ಕಿದಳು. ಪುರಾತನ ಋಣಾನುಬಂಧವೆಂಬುದು ಸುಮ್ಮನೆ ಏನು ?" ಈ ನೇರೆಗೆ ಅರ್ಥವತ್ತಾದ ಎಷ್ಟೊ ಕರ್ಣಮಧುರವಾದ ಮಾತುಗಳನ್ನು ನಗರವಾಸಿಗಳ ಮುಖದಿಂದ ಕೇಳುತ್ತ, ಮಂಗಳವಾಗಿ ಅಲಂಕೃತವಾದ ಅರಮನೆಯನ್ನು ಪ್ರವೇಶಮಾಡಿದೊಡನೆ, ಹೋಮಾಗ್ನಿಯನ್ನು ಪೂಜಿಸಿದ ಪುರೋಹಿತನು ಇದಿರುಗೊಂಡು ಅಗ್ನಿಸಾಕ್ಷಿಯಾಗಿ ಜ್ಯೋತಿಃಪ್ರಭೆಯನ್ನು ವರನಿಗೆ ವಿಧ್ಯುಕ್ತವಾಗಿ ವಿವಾಹಮಾಡಿದನು.

೧೩. ಅಂಕುಶವಿಲ್ಲದ ಮನ್ಮಥಗಜದಂತಿದ್ದ ಆ ವಧು (ಪ್ರಣಯಾರಂಭದ) ಭಯದಿಂದ ಬೆದರಿ ಬೆವರಿಡಲಾಗಿ, ವಸಂತಕಾಲದಲ್ಲಿ ಅಮೃತದಿಂದ ಸೇಚನಗೊಂಡ ಅಶೋಕವಲ್ಲರಿಯೂ ಅಶೋಕವೃಕ್ಷವೂ ಚಿಗುರಿಟ್ಟು ಒಂದನ್ನೊಂದು ಅಪ್ಪಿಕೊಂಡವೊ ಏನೊ ಎಂಬಂತೆ ಅನುರಾಗಪೂರ್ಣರಾದ ವಧೂವರರ ಪಾಣಿಗ್ರಹಣವು ಶೋಭಿಸಿತು.

---

1. ವಿಷಮಯೋಗಾಂತರಂಗಳಂ (ಅ)

ಕಂ॥ ಸುಕುಮಾರ ಕುಮಾರನ ಕಂ
ಟಕಿತಾಂಗಪ್ರಕೃತಿಗಂ ವಧೂಸ್ವಿನ್ನಾಂಗ
ಪ್ರಕೃತಿಗಮನಂಗನೇಂ ಪ
ಚ್ಚಿ ಕೊಟ್ಟನೋ ಬೇಱೆವೇಱೆ ರಸಮಂ ಪಸೆಯೊಳ್ ॥ ೧೪ ॥

ವ॥ ಎಂದುರ್ವರಾಸ್ಮತಿಲಕ ಪ್ರಮೋದೋದಯಮುಮಂ ಜ್ಯೋತಿಃಪ್ರಭೆಯ ಲಜ್ಜಾಪ್ರಾಯ ಭಾವಮುಮಂ ಭಾವುಕರ್ ಭಾವಿಸಿ ಬೇಱೆವೇಱೆ ಮೆಚ್ಚಿ ಪಚ್ಚು ಪೊಗೞೆ ಮತ್ತಂ—

ಕಂ॥ ಓರೊರ್ವರ ಕಣ್ಗಳ್ ಸಂ
ಚಾರಿ ಕಟಾಕ್ಷೇಕ್ಷಣಂಗಳಲೆದುವೊ ಲಜ್ಜಾ
ಪ್ರಾರಂಭಮನನ್ಯೋನ್ಯ ವಿ
ಸಾರಿ ನವಪ್ರಣಯದಿಂ ಕ್ರಿಯಾವಿರಮಣದೊಳ್ ॥ ೧೫ ॥

ವ॥ ಇನಿಸಾನುಂ ಬೇಗದಿಂ—

ಕಂ॥ ಉರಿವಗ್ನಿ ಕುಂಡಮಂ ಬಲ
ವರೆ ದಂಪತಿ ಕನಕಶೈಲಮಂ ಬಳಸುವ ವಾ
ಸರದಿರುಳ ತೆಱನನಿರದನು
ಕರಿಸಿದುದಾಗಳ್ ತದೀಯ ಮಹಿಮಸಹಿತ್ವಂ ॥ ೧೬ ॥

ವ॥ ಅಂತಲ್ಲಿಂ ಬೞಿಯಂ—

ಕಂ॥ ಪ್ರಮದ ಪುರೋಹಿತ ವಚನ
ಪ್ರಮಾಣದಿಂದಗ್ನಿ ಕುಂಡದೊಳ್ ಲಾಜೆಯುಮಂ
ಕ್ರಮದಿಂದಮಿಕ್ಕಿದಳ್ ಪೆಣ್
ದ ಮನಃಪ್ರಣಯಕ್ಕೆ ಮುಡಿಗೆಯಿಕ್ಕುವ ತೆಱದಿಂ ॥ ೧೭ ॥

---

೧೪. "ಈ ಸುಕುಮಾರನ ನವಿರೆದ್ದ ಮೈಗೂ ಈ ವಧುವಿನ ಬೆವರಿಡುವ ಮೈಗೂ ಮನ್ಮಥನು ಬೇರೆಬೇರೆ ರಸಾನುಭವವನ್ನು ಹೇಗೆ ಹಂಚಿಕೊಟ್ಟಿರುವನು!"

ವ॥ ಎಂದು ಕುಮಾರನ ಸಂತೋಷೋದಯವನ್ನೂ ಜ್ಯೋತಿಃಪ್ರಭೆಯ ಲಜ್ಜಾಭಾವವನ್ನೂ ಭಾವುಕರು ತಿಳಿದು ಬೇರೆಬೇರೆ ಮೆಚ್ಚಿಮೆಚ್ಚಿ ಹೊಗಳುತ್ತಿರಲಾಗಿ—

೧೫. ದಂಪತಿಗಳಿಬ್ಬರ ಕಣ್ಣುಗಳೂ ಕುಡಿನೋಟವನ್ನು ಪಸರಿಸುತ್ತ ಅಕಸ್ಮಾತ್ತಾಗಿ ಒಂದನ್ನೊಂದು ಸಂಧಿಸಿದಾಗ ನವಪ್ರಣಯದ ನಾಚುಗೆಯಿಂದ ಹೊರಳಿ ಅಗಲಿದುವು.

ವ॥ ಕೆಲವೇ ಸಮಯಾನಂತರದಲ್ಲಿ—

೧೬. ಹೋಮಾಗ್ನಿಗೆ ಪ್ರದಕ್ಷಿಣೆ ಹಾಕುತ್ತಿರುವ ದಂಪತಿಗಳು ಮೇರುಪರ್ವತವನ್ನು ಸುತ್ತುವ ಹಗಲು-ರಾತ್ರಿಗಳೊ ಏನೊ ಎಂಬಂತೆ ಶೋಭಿಸಿದರು.

ವ॥ ಹಾಗೆ ಆದರ ತರುವಾಯ—

೧೭. ಪುರೋಹಿತನ ಮಂತ್ರವಚನಕ್ಕನುಸಾರವಾಗಿ ಅಗ್ನಿಕುಂಡದಲ್ಲಿ ಲಾಜೆಯನ್ನು ಅರ್ಪಿಸುವ ವಧು ತನ್ನ ಮನಃಪ್ರಣಯಕ್ಕೆ ಕಾಣಿಕೆಯನ್ನಿಡುವಂತೆ ತೋರಿದಳು.

ಕಂ॥ ಅಲ್ಲಿಂದಂ ಲಾಜಶಮೀ
ಪಲ್ಲವ ಶುಭಗಂಧಿ ನೆಗೆದ ಪೊಗೆ ಸೊಗಯಿಸಿತು
ತ್ಫುಲ್ಲಾಬ್ಜಾಸ್ಯೆಯನವಯವ
ಪಲ್ಲವದ ವತಂಸಮೆನಿಸಿ ಗಂಡದ್ವಯದೊಳ್ ॥ ೧೮ ॥

ವ॥ ಅಗಳಾಚಾರಧೂಪ[1]ಗ್ರಹಣಾಂಜನ[1] ಕ್ಲೇ[2][ಶ][2]ಸಮಾಕುಲಾಕ್ಷಿ ಪರಿಮ್ಲಾನ (ತಾ) ಬೀಜಾಂಕು (ರೀಭೂತ) ರ ಕರ್ಣಪೂರ ಪಾಟಳ ಗಂ[3][ಧಲೇ][3]ಖಮುಖ ಮಂಡಳ ಜ್ಯೋತಿಃಪ್ರಭೆಯೊಂದು ಲೀಲಾಲಕ್ಷ್ಮಿಗಾವಾಸಮಾಗಿರೆ ಸೌಸ್ನಾತಿಕರುಂ ಬಂಧುಸಹಿತಂ ಶ್ರೀವಿಜಯನುಂ ಪುರಂಧ್ರೀವರ್ಗಮುಂ ಬಂದು ಕನಕಪೀಠಸ್ಥಿತರಪ್ಪ ಮದೆವಂಗಂ ಮದೆವಳ್ಗಮಾರ್ದ್ರಾಕ್ಷತಾರೋಪಣಂ ಗೆಯ್ದರ್ [4]ಇಂತು[4] —

ಉ॥ ಶ್ರೀವಿಜಯಂ ವಿವಾಹಮನೊಡಂಬಡೆ ತಂಗೆಗೆ ಮಾಡಿ ಬೇಡಿದಂ
ಗೀವುದನಿತ್ತು ಖೇಚರ ಮಹೀಚರ ಕೋಟಿಗೆ ಬಾಯಿನಂಗಳಂ
ತೀವಿದಶೇಷ ಕೋಶಗೃಹಮುಂ ಬಱಿದಾಗಿರೆ ಕೊಟ್ಟು ತನ್ನ ಸಿ
ತ್ರೋವದೆ ಮೈದುನಂಗೆ ಮೆಱಿದಂ ನೆರೆದನ್ವಯದೊಂದು ಮೈಮೆಯುಂ ॥ ೧೯ ॥

ಕಂ॥ ಬಱಿವಱಿಯೆಂಬುದು ಬಡವಂ
ಗೞಿಪಂಗೇಂ ಮುಟ್ಟೆ ಖಚರಕೇತುಗೆ ಸಿರಿ ಪೊಂ
ಪುೞಿವೋದ ರೂಪ್ಯಗಿರಿಕುಳ
ವಱಿಯಿಂದಂ ಬಂದ ಕೋಶಗೃಹ[5]ಮುಂ[5] ಗೃಹ[5]ಮುಂ[5] ॥ ೨೦ ॥

ವ॥ ಅದಱಿಂದಂ ತಮ್ಮಿರ್ವರ ತಲೆ ಬಱಿವಱಿಯೆಂದು ಶ್ರೀವಿಜಯನುಂ ವಿಜಯನುಮಮಿತತೇಜನುಮಂ ಜ್ಯೋತಿಃಪ್ರಭೆಯುಮಂ ಕಳಿಪಲ್ ಮೂಱು ಪಯಣಮೊಡವೋಗಿ ತಮ್ಮಂ ಬೆರಸು—

---

೧೮. ಅನಂತರ ಲಾಜೆಯಿಂದಲೂ ಶಮೀಪಲ್ಲವಗಳಿಂದಲೂ ಸುಗಂಧಿತವಾದ ಹಾಗು ಪವಿತ್ರವಾದ ಹೊಗೆ ನೆಗೆದು ಆ ಕಮಲಮುಖಿಯ ಕಪೋಲಗಳನ್ನು ಆವರಿಸಿ ಚಿಗುರೆಲೆಯ ಕರ್ಣಾಭರಣದಂತೆ ಶೋಭಿಸಿತು.

ವ॥ ವಿಧಿಪೂರ್ವಕವಾಗಿ ನಡೆದ ಧೂಪಗ್ರಹಣದಿಂದಾಗಿ ಕಾಡಿಗೆಯೊಡನೆ ಹನಿಗೂಡಿದ ಕಣ್ಣುಗಳಿಂದಲೂ, ಬಾಡಿದ ಯವಾಂಕುರದ ಕರ್ಣಪೂರಗಳಿಂದಲೂ, ಕೆಂಪಾದ ಕೆನ್ನೆಗಳಿಂದಲೂ ಜ್ಯೋತಿಃಪ್ರಭೆಯು ಹೊಸಬಗೆಯ ಸೌಂದರ್ಯವನ್ನು ತಾಳಿದಳು. ಗೃಹಸ್ಥರು ಹಾಗೂ ಬಂಧುಗಳೊಡನೆ ಶ್ರೀವಿಜಯನೂ ಮುತ್ತೈದೆಯರೂ ಬಂದು ಚಿನ್ನದ ಪೀಠಗಳಲ್ಲಿ ಕುಳಿತ ಮದುಮಕ್ಕಳಿಗೆ ಆರ್ದ್ರಾಕ್ಷತೆಗಳನ್ನು ಸೂಸಿದರು.

೧೯. ಶ್ರೀವಿಜಯನು ತಕ್ಕ ರೀತಿಯಲ್ಲಿ ತಂಗಿಗೆ ಮದುವೆಮಾಡಿ, ಯಾಚಕರಿಗೆಲ್ಲ ಬೇಡಿದ ವಸ್ತುಗಳನ್ನು ದಾನ ಮಾಡಿ, ತನ್ನ ತುಂಬಿದ ಭಂಡಾರ ಬರಿದಾಗುವಂತೆ ಖೇಚರ-ಭೂಚರ ಜನಕ್ಕೆ ಬಾಗಿನಗಳನ್ನು ಕೊಟ್ಟು, ಮೈದುನನಿಗೆ ತನ್ನನ್ನೇ ಇತ್ತು ವಂಶದ ಮಹಿಮೆಯನ್ನು ಮೆರೆದನು.

೨೦. "ಬಳಿವಳಿಯೆಂಬುದು ಬಡವನಿಗೂ ಲೋಭಿಗೂ ಉಂಟು. ಬೆಳ್ಳಿಯ ಬೆಟ್ಟದಂತಹ ಐಶ್ವರ್ಯದ ಮೂಲ ನಿಧಿಯನ್ನೇ ಆಳುವ ವಿದ್ಯಾಧರ ಶ್ರೇಷ್ಠನಿಗೆ ಆತನ ಮನೆಯನ್ನಾಗಲಿ ಭಂಡಾರವನ್ನಾಗಲಿ ಹೊಸದಾಗಿ ಸೇರಬಲ್ಲ ಸಂಪತ್ತು ಯಾವುದು ?

ವ॥ ಆದುದರಿಂದ ನಾವಿಬ್ಬರೂ ಸೋದರರ ತಲೆಗಳೇ ನಿಮ್ಮ ಬಳಿವಳಿ"ಯೆಂದು ಶ್ರೀವಿಜಯನೂ ವಿಜಯನೂ ಅಮಿತತೇಜಕುಮಾರ ಹಾಗು ಜ್ಯೋತಿಃಪ್ರಭೆಯರನ್ನು ಮೂರು ಪಯಣಗಳವರೆಗೆ ಹಿಂಬಾಲಿಸಿ ಕಳಿಸಿ

---

1. ಗ್ರಹಣಕ್ಕೆ ಕರ (ಅ) 2. ದ (ಮ) 3. ಡರೇ (ಮ) 4. × (ಮ) 5. ಮುಂ (ಅ)

ಕಂ॥ ಶ್ರೀವಿಜಯನತ್ತ ಮಗುಟ್ದನೆ
ಮಾವಾಸ್ಯೆಯೊಳೊಡನೆ ನಡೆದು ಕಡೆಯೊಳ್ ರವಿ ರಾ
ಜೀವರಿಪುವಿಂದಗಲ್ವವೊ
ಲಾವಿರ್ಭೂತ ಪ್ರತಾಪನಧಿರೂಢರಥಂ ॥ ೨೧ ॥

ವ॥ ಅಂತು ಚಕ್ರವರ್ತಿ ತನೂಜಂ ಕಳಿಪಿ ಮಗುಟ್ಟುದುಮತ್ತ ಕತಿಪಯದಿನಂಗಳಿಂ—

ಚಂ॥ ಜಲಜಸರಸ್ತಟಂಗಳೊಳಶೋಕ ಮಹೀರುಹ ರಮ್ಯಭೂತಳಂ
ಗಳೊಳನವದ್ಯನದ್ಯುಭಯ ತೀರದ ಸೈಕತ ಮಾಧವೀಗೃಹಂ
ಗಳೊಳೆದೆಮಾಡಿ ಬೀಡುವಿಡುತುಂ ಖಚರೇಶ್ವರನೆಯ್ದಿದಂ ನಿರಾ
ಕುಳಗತಿ ಲೀಲನಪ್ರತಿರಥಂ ರಥನೂಪುರ ಚಕ್ರವಾಳಮಂ ॥ ೨೨ ॥

ವ॥ ಎಯ್ದಿ ಪೊಬಲನಾಗಳಷ್ಟಶೋಭೆಗೆಯ್ಸಿ ಮಹಾವಿಭೂತಿಯಿಂ ಪೊಕ್ಕನವರತಂ ವಿಷಯಸುಖ ನಿರತನಾಗಿ ಮಿತದಿನಂಗಳ ನಮಿತತೇಜನಿರ್ದು ತನ್ನ ತಂಗೆಯ ಸುತಾರೆಯ ಸ್ವಯಂವರ ವಿವಾಹಕಲ್ಯಾಣಕಾರ್ಯ ಪರ್ಯಾಳೋಚನ ವಿರಾಮದೊಳ್ ಶ್ರೀವಿಜಯಂ [1]ಮೊದಲಾಗೆ[1] ವಿಶ್ವಂಭರಾಧೀಶ ತನೂಜ ಸಮಾಜಮಂ ಬರಿಸೆಬಂದು ಶ್ರೀವಿಜಯಂ

ಮ॥ ಗಗನಕ್ಷ್ಮಾಚರರೊಳ್ ಸ್ವಯಂವರದೊಳೀ ಸ್ತ್ರೀರತ್ನಮಂ ಕನ್ನೆಯಂ
ಬಗೆಗೊಂಡಂತೊಳ[2]ಗೊಳ್ವೆ[2]ವೆಮ್ಮೊಳೆನುತಿರ್ಪುರ್ವೀಶರಿರ್ದಂತೆ ಕಂ
ತುಗೆ ಕನ್ಯೋತ್ತಮೆ ರಾಜಕೋಟಿ ತನಗಳ್ಕರ್ಪನ್ನಮಾಗಳ್ ಸುತಾ
ರೆಗೆ ತಾರಾಧಿಪನಂತೆ ವಿಸ್ತರಿಸಿದಂ ಪ್ರಾಣೇಶ್ವರ ಪ್ರೀತಿಯಂ ॥ ೨೩ ॥

---

೨೧. ಅಮಾವಾಸ್ಯೆಯಂದು ಒಡನಿದ್ದು ಆಮೇಲೆ ಚಂದ್ರನಿಂದ ಅಗಲಿಹೋಗುವ ಸೂರ್ಯನಂತೆ ಪ್ರತಾಪ ಶಾಲಿಯಾದ ಶ್ರೀವಿಜಯನು ರಥವೇರಿ

ವ॥ ತಮ್ಮನೊಡನೆ ಮರಳಿ ತನ್ನ ರಾಜಧಾನಿಗೆ ಬಂದನು. ಅತ್ತ ಕೆಲವು ದಿನಗಳವರೆಗೆ—

೨೨. ಕಮಲಸರೋವರ ತೀರಗಳಲ್ಲಿಯೂ, ಅಶೋಕವೃಕ್ಷಗಳಿಂದ ಕಂಗೊಳಿಸುವ ಪ್ರದೇಶಗಳಲ್ಲಿಯೂ, ಹೊಳೆ ದಂಡೆಯ ಮರಳಲ್ಲಿ ರಚಿಸಿದ ಅದಿರ್ಗಂತಿಯ ಬಳ್ಳಿಮಂಟಪಗಳಲ್ಲಿಯೂ ಅಲ್ಲಲ್ಲಿಗೆ ಬೀಡುಬಿಟ್ಟು ವಿಶ್ರಮಿಸುತ್ತ ಸುಖ ವಾಗಿ ನಿರಾತುರವಾಗಿ ಪ್ರಯಾಣ ಮಾಡುತ್ತ ವಿದ್ಯಾಧರರಾಜಕುಮಾರನಾದ ಮಹಾಪರಾಕ್ರಮಿ ಅಮಿತತೇಜನು ರಥನೂಪುರಚಕ್ರವಾಳಕ್ಕೆ ಬಂದು ಮುಟ್ಟಿದನು.

ವ॥ ಅಷ್ಟಶೋಭೆಗಳಿಂದ ಅಲಂಕೃತವಾದ ತನ್ನ ಪಟ್ಟಣವನ್ನು ಮಹಾವೈಭವದಿಂದ ಪ್ರವೇಶಿಸಿ ನಿರಂತರವಾದ ದಾಂಪತ್ಯ ಸುಖದಲ್ಲಿ ಕೆಲದಿನಗಳನ್ನು ಕಳೆದನು. ಆ ಬಳಿಕ ತನ್ನ ತಂಗಿ ಸುತಾರೆಯ ಸ್ವಯಂವರ ಕಾರ್ಯವನ್ನು ಪರ್ಯಾಲೋಚಿಸಿ ಶ್ರೀವಿಜಯನೇ ಮೊದಲಾದ ಅನೇಕ ರಾಜಕುಮಾರರನ್ನು ಆಮಂತ್ರಿಸಿ ಬರಮಾಡಿಕೊಂಡನು. ಹಾಗೆ ಬಂದ ಶ್ರೀವಿಜಯನು—

೨೩. "ಈ ಸ್ವಯಂವರದಲ್ಲಿ ಕನ್ಯಾರತ್ನವಾದ ಈಕೆಯನ್ನು ಮೆಚ್ಚಿಸಿ ನಾವೇ ಪಡೆಯುವೆವು"ಎಂದುಕೊಳ್ಳುತ್ತಿರುವ ಅರಸುಮಕ್ಕಳು ಇದ್ದಂತೆಯೆ ಸುತಾರೆಗೆ "ಚಂದ್ರನಂತಿರುವ ಈತನೇ ನನ್ನ ಪ್ರಾಣೇಶ್ವರ"ನೆಂದುಕೊಳ್ಳುವ ಹಾಗೆ ಅತ್ಯಂತ ಪ್ರಿಯನಾಗಿ ಕಂಡನು. (ಆಕೆ ಈತನನ್ನೇ ವರಿಸಿದಳು.)

---

1. + ವಿಶ್ವ (ಅ) 2. ಗೊಳ್ವ (ಅ)

ವ॥ ಅಂತು ಪಿರಿದುಂ ವಿಭೂತಿಯೊಳ್ ಸ್ವಯಂವರದೊಳ್ ಶ್ರೀವಿಜಯಂ ಸುತಾರೆಯೊಳ್ ನೆರೆದಿಂ ಬಳಿಕಮಕಳಂಕಾಚಾರ ಸಾರನನೇಕ ವಸನದುಡುಗೊಱೆ ಸಹಿತಂ ಕಳಿಪೆ ಪೌದನಪುರಕ್ಕೆ ಪೋಗಿ ಸುಖಸಂಕಥಾ ವಿನೋದದಿನರಸುಗೆಯ್ಯುತ್ತುಮಿರೆ ಮತ್ತೊಂದು ದಿವಸಮಾಸ್ಥಾನ ಮಂಟಪ ಮಧ್ಯಸ್ಥಿತ ಚಾರು ಚಾಮೀಕರ ಮೃಗರಿಪು ವಿಷ್ಟರದೊಳ್ ತ್ರಿಪೃಷ್ಠತನಯಂ ಶ್ರೀವಿಜಯನಿರೆ—

ಕಂ॥ ತ್ರಿಜಗದ ತಿರಿಕಂ ವಿದ್ಯಾ
ಭಿಜಾತ [1]ಗಂಧರ್ವಂ[1] ನಿಮಿತ್ತವಿದನಾಸಭೆಯೊಳ್
ದ್ವಿಜನಱಿದೀತೆಂದನಮೋ
ಘ ಜಿಹ್ವನೆಂಬೊಂ ಸಮಸ್ತ ವಸುಧಾಧಿಪನಂ ॥ ೨೪ ॥

ವ॥ ಇಂದಿಂಗೇೞು ದಿವಸದಂದಿಂಗೆ ಪೌದನಪುರಾಧೀಶ ಮಸ್ತಕದೊಳ್ ನಿರ್ಘಾತಾಪಾತಮಕ್ಕು ಮೆಂದಾದೇಶಂಗೆಯ್ವುದುಂ ತತ್ಸಭಾಪತಿಯನರ್ಮಸಚಿವರೊಳಗಿಱಿಮನುಕಾರ ನೈಮಿತ್ತಿಕನಂ ಕಣ್ಣಿಂ ಕಿಡೆ ಜಡಿದು—

ಕಂ॥ ಅದು ನಿನ್ನಯ ತಲೆಯೊಳ್ ಬೀ
ೞ್ವುದಕ್ಕೆ ಶುಭಮಕ್ಕೆ ಸಾರ್ವಭೌಮಂಗೆ ದಲೆಂ
ಬುದುಮೆನ್ನಯ ತಲೆಯೊಳ್ ಸುರಿ
ವುದು ಕಾಂಚನವೃಷ್ಟಿ ಮೆಚ್ಚಿ ನಿಮ್ಮ ಮಹೀಶಂ ॥ ೨೫ ॥

ವ॥ ಎಂದು ನಿಶ್ಶಂಕನುಂ [2]ನಿಸ್ಸಹಾಯನುಮಾಗಿ[2] ನುಡಿದಮೋಘಜಿಹ್ವನ ಸ್ಥಿರತ್ವಕ್ಕೆ ಮೆಚ್ಚಿ ನೀನಾರ್ಗೆನೆಂಬೆಯೆಲ್ಲಿರ್ದುಬಂದೆ ಯೆಂದರಸಂ ಬೆಸಗೊಂಡೊಡಾಂ ಸಿಂಧುವಿಷಯದ ಪದ್ಮಿನೀಖೇಟದ ವಿಪ್ರಪ್ರವರನಷ್ಟಾಂಗ ಮಹಾನಿಮಿತ್ತವಿಶಾರದಂ ವಿಶಾರದನೆಂಬೊಂ ತದೀಯ ಪುತ್ರನೆ ನಾನಮೋಘ ಜಿಹ್ವನೆಂಬವನೆನೆ ತರ್ಜನ ನಿರತರಪ್ಪ ದುರ್ಜನರಂ ಬಾರಿಸಿ ಸನ್ಮಾನಪುರಸ್ಸರಂ ನೈಮಿತ್ತಕನಂ ಪೋಗಲ್ವೇೞ್ದು ಶ್ರೀವಿಜಯಂ ಮಂತ್ರಿಮಹತ್ತರ ಪುರೋಹಿತ ಪ್ರಭೃತಿಪ್ರಧಾನಪುರುಷರೊಳಾಳೋಚಿಸಿ ಮಹಾಶನಿ ರಕ್ಷೋಪಾಯಮಂ ಬೆಸಗೊಳೆ ಭೂಮಿಗೃಹಪ್ರವೇಶ

ವ॥ ಅತ್ಯಂತ ವೈಭವದಿಂದೊಡಗೂಡಿದ ಸ್ವಯಂವರದಲ್ಲಿ ಶ್ರೀವಿಜಯನು ಸುತಾರೆಯನ್ನು ಗೆದ್ದು ಮದುವೆಯಾದ ಬಳಿಕ ನಿಷ್ಕಳಂಕ ಚಾರಿತ್ರನಾದ ಅಮಿತತೇಜನು ಮದುಮಕ್ಕಳನ್ನು ಅನೇಕ ವಸ್ತ್ರಾಭರಣಾದಿ ಉಡುಗೊರೆ ಸಹಿತವಾಗಿ ಕಳಿಸಿಕೊಟ್ಟನು. ನೂತನ ವಧುವಿನೊಂದಿಗೆ ಪೌದನಪುರಕ್ಕೆ ಬಂದು ಸುಖಾಲಾಪಗಳಿಂದಲೂ ವಿನೋದಗಳಿಂದಲೂ ಕೂಡಿ ಕೊಂಡು ಶ್ರೀವಿಜಯನು ರಾಜ್ಯವಾಳುತ್ತಿದ್ದನು. ಹೀಗಿರುವಾಗ ಒಂದು ದಿನ ಆತನು ಒಡ್ಡೋಲಗದ ಮಂಡಪಮಧ್ಯದಲ್ಲಿ ಸಿಂಹಾಸನಸ್ಥನಾಗಿರುವಾಗ—

೨೪. ತ್ರಿಲೋಕಸಂಚಾರಿಯೂ, ವಿದ್ಯಾಪರಿಣತನೂ, ಜ್ಯೋತಿಷಿಯೂ ಆದ ಅಮೋಘಜಿಹ್ವನೆಂಬ ಬ್ರಾಹ್ಮಣ ನೊಬ್ಬನು ಬಂದು ಚಕ್ರವರ್ತಿಗೆ ಹೀಗೆಂದನು :

ವ॥ "ಇಂದಿಗೆ ಏಳನೆಯ ದಿನದಂದು ಪೌದನಪುರದ ಅಧಿಪತಿಯ ತಲೆಗೆ ಸಿಡಿಲು ಬಂದು ಅಪ್ಪಳಿಸುವುದು." ಹೀಗೆ ಆತನು ಭವಿಷ್ಯವನ್ನು ನುಡಿಯಲಾಗಿ, ಆ ಸಭೆಯಲ್ಲಿದ್ದ ರಾಜನ ನರ್ಮಸಚಿವನೊಬ್ಬನು ಜ್ಯೋತಿಷಿಯನ್ನು ಕಿಡಿ ಗಣ್ಣಿಂದ ನೋಡಿ:

೨೫. "ಅದು ನಿನ್ನ ತಲೆಯ ಮೇಲೆ ಬೀಳಲಿ. ಸಾರ್ವಭೌಮನಿಗೆ ಶುಭವಾಗಲಿ" ಎಂದನು. "ನನ್ನ ತಲೆಯಮೇಲೆ ಬೀಳುವುದು ಚಿನ್ನದ ಮಳೆ. ಅದೂ ನಿಮ್ಮ ದೊರೆ ಮೆಚ್ಚಿ ಸುರಿಸುವುದು" ಎಂದು

ವ॥ ಸಂಶಯಕ್ಕೆಡೆಗೊಡದೆ ಧೈರ್ಯದಿಂದ ನುಡಿದ ಅಮೋಘಜಿಹ್ವನ ದೃಢತೆಗೆ ಮೆಚ್ಚಿ ಅರಸನು "ಅಯ್ಯಾ ನೀನು ಯಾರು ? ನಿನ್ನ ಹೆಸರೇನು ? ಎಲ್ಲಿಂದ ಬಂದಿರುವೆ ?" ಎಂದು ಕೇಳಿದನು. "ಸಿಂಧುರಾಜ್ಯದಲ್ಲಿ ಪದ್ಮಿನೀಖೇಟ ವೆಂಬ ಊರುಂಟು. ಅಲ್ಲಿ ಅಷ್ಟಾಂಗಮಹಾನಿಮಿತ್ತಗಳಲ್ಲಿ ನಿಷ್ಣಾತನಾದ ವಿಶಾರದನೆಂಬ ಬ್ರಾಹ್ಮಣೋತ್ತಮನಿರುವನು. ನಾನು ಆತನ ಮಗ. ಅಮೋಘಜಿಹ್ವನೆಂಬುದು ನನ್ನ ಹೆಸರು" ಎಂದು ಆ ಜ್ಯೋತಿಷಿ ತಿಳಿಸಿದನು. (ಆತನ) ನಿಂದನೆಗೆ ತೊಡಗಿದ್ದ ದುರ್ಜನರನ್ನು ಬಿರಳ ಸನ್ನೆಯಿಂದಲೆ ತಡೆಗಟ್ಟಿ ಸನ್ಮಾನಪೂರ್ವಕವಾಗಿ ಆ ನಿಮಿತ್ತಜ್ಞನನ್ನು ಕಳಿಸಿ

---

1. ಗಂಧಂ (ಮ) 2. ನಿಸ್ಸಂಶಯನುಂ (ಅ)

ಮಂಜೂ[1]ಷಿ[1]ಜ[2]ಯಾ[2]ವಗಾಹಾದಿ ರಕ್ಷೋಪಾಯಂಗಳನೇಕಂಗಳಂ ಮಂತ್ರಿಗಣಂ ನುಡಿದು ತೋಱೆ[3] ಮಾಣಿಮೆಂದವರಂ ಮಾಣಿಸಿ ಮಣಿಭೂಷಣನೆಂಬಮಾತ್ಯೋತ್ತಮನುಪಾಖ್ಯಾನಮನಿಂತೆಂದು ಪೇೞಲ್ತಗುಳ್ದಂ ಒಂದು ಪರ್ವತೋಪಕಂಠದೊಳ್ ಕುಂಭಕಾರಕಟಕಮೆಂಬುದು ಪೊೞಲುಂಟಲ್ಲಿ ಚಂಡಕೌಶಿಕನೆಂಬೊಂ ಪಾರ್ವಂ ದುರಾಚರಣಂ ಆತನ ಭಾರ್ಯೆ ಸೋಮಶ್ರೀಯೆಂಬೊಳಾಕೆ ವ್ಯಂತರಾರಾಧನೆಗಳಿಂ ಮುಂಡಕೌಶಿಕನೆಂಬೊನಂ ಮಗನಂ ಪಡೆದಳಾಮಗಂ ಬಳೆಯೆವಳೆಯೆ ಮುಳಿದು ಕೊಲಲೆರ್ದ ಕುಂಭನೆಂಬ ರಕ್ಕಸಂಗೆ ಸಡುಗಿ ಚಂಡಕೌಶಿಕಂ ಮುಂಡಕೌಶಿಕನನೊಯ್ದದ್ರಿ ಗುಹಾಂತರದೊಳ್ ಪ್ರಯತ್ನಂ ಬೆರಸಿರಿಸಿ ಕಾವುದುಮಲ್ಲಿಯುಂ—

ಕ॥ ಪರಮಾರ್ಥತೆಹಿತಮಹಿತಮ
ಪರಮಾರ್ಥತೆಯೆನ್ನದಾತ್ಮ ಜನಕಜ್ಞಾನ
ಸ್ಥಿರತೆಯೊಡನೊಡನೆ ಜರದಜ
ಗರಗರಳ ಗತಾಯು ಮುಂಡಕೌಶಿಕನೞಿದಂ ॥ ೨೬ ॥

ಅದಱಿಂದಂ ಜೀವಕ್ಕ
ಭ್ಯುದಯಮನಭ್ಯುದಯಮೆಂಬಿವಂ ಧರ್ಮಾಧ
ರ್ಮದ ಮತಿಯೆ ಮಾಳ್ಕುಮಜ್ಞಾ
ನದೊಳಿನ್ನೇನೆಂಬುಪಾಯಮಂ ಕೆಯ್ಕೊಳ್ಳಾ ॥ ೨೭ ॥

ಪೌದನ ಪುರಾಧಿಪತ್ಯಮ
ನಾ[4]ದ[4]ಕ್ಷನ [ರೂಪಂ] ಯಕ್ಷಬಿಂಬಕ್ಕಿತ್ತಿಂ
ತಾದರದಿನೇೞು ದೆವಸಮ
ನಾದಿ ಜಿನಾಲಯದೊಳರ್ಚನಾ[5]ವಿಧಿ[5] ಸಹಿತಂ ॥ ೨೮ ॥

ಕೊಟ್ಟು ಶ್ರೀವಿಜಯನು ತನ್ನ ಸಚಿವರು, ಹೆಗ್ಗಡೆಗಳು, ಪುರೋಹಿತರು ಮೊದಲಾದ ಪ್ರಧಾನ ವ್ಯಕ್ತಿಗಳೊಡನೆ ಆಲೋಚಿಸಿ, "ಈ ಮಹಾ ಸಿಡಿಲಿನ ಅಪಘಾತದಿಂದ ತಪ್ಪಿಸಿಕೊಳ್ಳುವ ಹಂಚಿಕೆಯೇನು ಹೇಳಿ" ಎಂದನು. ನೆಲಮನೆಯನ್ನು ಹೊಗಬೇಕೆಂದು ಕೆಲವರೂ, ಪೆಟ್ಟಿಗೆಯೊಳಗೆ ಅಡಗಬೇಕೆಂದು ಕೆಲವರೂ—ಹೀಗೆ ತಮತಮಗೆ ತಿಳಿದ ಏನೇನೊ ಹಲವಾರು ರಕ್ಷಣೋಪಾಯಗಳನ್ನು ಸೂಚಿಸಿದರು. ಆಗ ಮಣಿಭೂಷಣನೆಂಬ ಸಚಿವೋತ್ತಮನು ಅವೆಲ್ಲವುಗಳನ್ನೂ ನಿರಾಕರಿಸಿ ಈ ಕೆಳಗಿನ ಉಪಾಖ್ಯಾನವನ್ನು ಹೇಳತೊಡಗಿದನು: "ಬೆಟ್ಟದ ಬಳಿಯಲ್ಲಿ ಕುಂಭಕಾರಕಟವೆಂಬ ಪಟ್ಟಣವುಂಟು. ಅಲ್ಲಿ ಚಂಡಕೌಶಿಕನೆಂಬ ದುರಾಚಾರಿಯಾದ ಹಾರುವನಿರುವನು. ಆತನ ಹೆಂಡತಿಯಾದ ಸೋಮಶ್ರೀಯೆಂಬಳು ವ್ಯಂತರ ದೇವರನ್ನು ಆರಾಧಿಸಿ ಮುಂಡಕೌಶಿಕನೆಂಬ ಮಗನನ್ನು ಹಡೆದಳು. ಆ ಮಗನು ಬೆಳೆಯುತ್ತಿರಲಾಗಿ ಅವನನ್ನು ಕೊಲ್ಲಲೆಂದು ಬಂದ ಕುಂಭನೆಂಬ ರಕ್ಕಸನಿಗೆ ಹೆದರಿ ಚಂಡಕೌಶಿಕನು ತನ್ನ ಮಗನನ್ನು ಒಯ್ದು ಬೆಟ್ಟದ ಒಂದು ಗವಿಯಲ್ಲಿ ಬಚ್ಚಿಟ್ಟು ಕಾಯುತ್ತಿದ್ದನು. ಅಲ್ಲಿಯೂ—

೨೬. "ಪರಹಿತನಾಗಿರುವುದೇ ಹಿತ; ಹಾಗಿಲ್ಲದಿರುವುದು ಅಹಿತ" ಎಂಬುದನ್ನು ತಿಳಿಯದೆ ತನ್ನ ತಂದೆಯ ಜ್ಞಾನವೆ ಸ್ಥಿರವೆಂದುಕೊಂಡಿದ್ದ ಮುಂಡಕೌಶಿಕನು ಆ ಗವಿಯಲ್ಲಿದ್ದ ಹಳೆಯ ಹೆಬ್ಬಾವೊಂದರಿಂದ ಕಚ್ಚಿಸಿಕೊಂಡು ಆಯುಷ್ಯವನ್ನು ಕಳೆದುಕೊಂಡನು (ಸತ್ತನು).

೨೭. ಜೀವಕ್ಕೆ ಅಭ್ಯುದಯವನ್ನಾಗಲಿ ಅವನತಿಯನ್ನಾಗಲಿ ತಂದುಕೊಡುವುದು ಅವರವರ ಧರ್ಮಬುದ್ಧಿ ಅಥವಾ ಅಧರ್ಮಬುದ್ಧಿ. ಅಜ್ಞಾನದಿಂದ ಏನು ಪ್ರಯೋಜನ ? ಅದನ್ನು ಬಿಟ್ಟು ಧರ್ಮಲಾಭದ ಉಪಾಯವನ್ನೇ ಕೈಕೊ.

೨೮. ಪೌದನಪುರದ ಆಧಿಪತ್ಯವನ್ನು ಒಂದು ಯಕ್ಷ ಪ್ರತಿಮೆಗೆ ಒಪ್ಪಿಸಿ ಸಂತೋಷದಿಂದ ನೀನು ಇನ್ನೇಳು ದಿವಸಗಳವರೆಗೆ ಜಿನಾಲಯದಲ್ಲಿ ಅರ್ಚನಾದಿಗಳನ್ನು ಮಾಡುತ್ತ ಇರು."

---

1. + ಕಾ (ಅ) 2. ಲಾ (ಅ) 3. ದ (ಮ) 4. ತ (ಅ) 5. ದಿಕ (ಮ)

ವ॥ ಎಂದಿರಿಸೆ ಶಾಂತ್ಯಭಿಷೇಕಪುರಸ್ಸರಂ ಪೂಜಾವಿಧಾನಮಂ ಸಪ್ತವಾಸರಾವಸಾನಂಬರಂ ಮಾಡಲ್ಪುಗುಳ್ವುದುಂ ಪರಿಪೂರ್ಣಾವಧಿ ದಿವಸ ಸಾಯಂತನ ಸಮಯದೊಳ್ ಶ್ರೀವಿಜಯನಿರ್ಪ ಚಿತ್ರಶಾಲೆಯೊಳಗಣ ಸಿಂಹಾಸನದೊಳಧಿಗತ ರಾಜ್ಯಾಭಿಷೇಕ ಕಿರೀಟಪಟ್ಟಬದ್ಧಮಪ್ಪ ವೈಶ್ರವಣ ಪ್ರತಿಮೆ ಶ್ರೀವಿಜಯನಾಸ್ಥಾನದೊಳಿರೆ—

ಕಂ॥ ತುಡೆ ಧ್ವನಿ ಸರಲನೊರ್ವಂ
ಗೆಡೆವುಗೆ ಮರ್ತ್ಯೋರ್ವನವನನದು ತಱಿವವೊಲೆ
ಳ್ಪಡುಗದೆ ಯಕ್ಷಪ್ರತಿಮೆಯ
ನಡುದಲೆಯೊಳ್ ಬಿಟ್ಟುದಶನಿ ನುರ್ಗಪ್ಪಿನೆಗಂ ॥ ೨೯ ॥

ವ॥ ಅಂತು ತಾಮ್ರಮಯ ಗುಹ್ಯಕಪ್ರತಿರೂಪಂ ಕಿಚ್ಚಿಂಗೆ ತೋಱಿದರಗು ಕ[ರ][1]ಗುವಂತೆ ಕ[ರ][1]ಗಿ ಪೊಸಲ್ವರಿಯೆ ಬಿಟ್ಟಿದ್ರಾಯುಧಮಂ ಕಂಡು ಬೆಕ್ಕಸಂಬಟ್ಟು ಪದ್ಮಿನೀ ಖೇಡಂಬೆರಸು ಮಂಡಲಮನಮೋಘ ಜಿಹ್ವಂಗೆ ಮಚ್ಚುಗೊಟ್ಟು ಶ್ರೀವಿಜಯಂ ನಿಜರಾಜ್ಯದೊಳ್ ನಿಂದು—

ಹರಿಣೀವೃತ್ತಂ॥ ಜನನಿ ತನಗಿತ್ತುದ್ಯದ್ವಿದ್ಯಾದ್ವಯಂ ಬೆಸಕೆಯ್ಯೆ ಕಾಂ
ಚನಮಯ ವಿಮಾನಾಭ್ಯಾರೂಢಂ ಸುತಾರೆಯೊಳೋಪಳೊಳ್
ಮನದೆಱಕದಿಂ ಪೋದಂ ಜ್ಯೋತಿರ್ವನಕ್ಕೆ ವಿಹಾರಿಸಲ್
ಜನಪತಿ ಪೆಱಂಗಿರ್ದೊಂದುತ್ಪಾತಮಂ ಸಚಿವೋತ್ತಮಂ ॥ ೩೦ ॥

ವ॥ ಸಂಭ್ರಮಾಕುಲಿತ ಚಿತ್ತಂ ಸ್ವಯಂಪ್ರಭೆಗಮಱಿಪಿ ವಿಷಾದ ವ್ಯಾಪಾದಿತ ಪ್ರಮೋದರಾಗಿರ್ಪಿ[2]ನೆಗಮೊರ್ವನ[2]ಪೂರ್ವಖೇಚರ ಸಚಿರರುಚಿರರೋಚಿರ್ನಿಚಯ ನಿಚಿತ ಕಕುಭಾಂಬರನಂಬರಚರನವನಿಗವತರಿಸಿ ರಾಜಮಂದಿರಮಂ ಪೊಕ್ಕು ವಿನಯವಿನಮಿತ ಮಣಿಮಕುಟನಾಗಿ ಸ್ವಯಂಪ್ರಭೆಯಂ ಕಂಡು ನಿಜಾಗಮನಕಾರಣಮನಿಂತೆಂದು ಬಿನ್ನಪಂ ಗೆಯ್ದಂ—

ವ॥ ಅವನು ಹೇಳಿದಂತೆ ಮಾಡಿ (ಅನಿಷ್ಟ) ಶಾಂತಿಗಾಗಿ ಅಭಿಷೇಕಪೂರ್ವಕವಾಗಿ ಪೂಜೆಯನ್ನು ಆರಂಭಿಸಿ ಏಳು ದಿನಗಳವರೆಗೆ ನಡಸಲಾಗಿ ಜ್ಯೋತಿಷಿ ತಿಳಿಸಿದ ದಿನದ ಸಾಯಂಕಾಲದಲ್ಲಿ ಶ್ರೀವಿಜಯನು ವಾಡಿಕೆಯಾಗಿ ಕುಳಿತುಕೊಳ್ಳುವ ಚಿತ್ರಶಾಲೆಯ ಸಿಂಹಾಸನದಲ್ಲಿ ಆತನ ಬದಲಾಗಿ ರಾಜ್ಯಾಭಿಷೇಕ ಮಾಡಿಸಿಕೊಂಡು ಕಿರೀಟಧಾರಿಯಾದ ಯಕ್ಷಪ್ರತಿಮೆ ಕುಳಿತುಕೊಂಡಿರಲಾಗಿ—

೨೯. ಬಿಲ್ಗಾರನು ಒಬ್ಬನಿಗೆ ಗುರಿಯಿಟ್ಟು ಬಾಣಪ್ರಯೋಗ ಮಾಡುವಾಗ ಇನ್ನಾವನೊ ಅದಕ್ಕೆ ಅಡ್ಡವಾಗಿ ಬಂದರೆ ಆ ಹೊಡೆತಕ್ಕೆ ಬಲಿಯಾಗುತ್ತಾನೆ. ಹಾಗೆಯೆ ರಾಜನ ಬದಲಾಗಿ ಆಸ್ಥಾನದಲ್ಲಿದ್ದ ಯಕ್ಷಪ್ರತಿಮೆಯ ನಡುದಲೆಯ ಮೇಲೆ ಸಿಡಿಲು ಬಂದು ಅಪ್ಪಳಿಸಿತು.

ವ॥ ಹೀಗೆ ಸಿಡಿಲಿನಿಂದಾಗಿ ತಾಮ್ರದ ಆ ಯಕ್ಷಪ್ರತಿಮೆ ನುಗ್ಗಾಗಿ, ಬೆಂಕಿಗೆ ಹಿಡಿದ ಅರಗಿನಂತೆ ಕರಗಿ ನೆಲದ ಮೇಲೆ ಹರಿಯತೊಡಗಿತು. ಅದನ್ನು ಕಂಡು ವಿಸ್ಮಿತನಾಗಿ ಶ್ರೀವಿಜಯನು ಅಮೋಘಜಿಹ್ವನಿಗೆ ಪದ್ಮಿನೀಖೇಟ ಸಹಿತ ವಾದ ಆ ರಾಜ್ಯವನ್ನು ಉಂಬಳಿಯಾಗಿ ಕೊಟ್ಟು ಕಳಿಸಿ ಪುನಃ ರಾಜ್ಯಾಧಿಕಾರವನ್ನು ವಹಿಸಿಕೊಂಡನು.

೩೦. ತನ್ನ ತಾಯಿ ಕೊಟ್ಟ ಎರಡು ಉತ್ತಮವಾದ ವಿದ್ಯೆಗಳನ್ನು ಉಪಯೋಗಿಸಿಕೊಳ್ಳುತ್ತಾ ಇದ್ದು, ಆತನು ಒಂದು ದಿನ ತನ್ನ ಮನದನ್ನೆ ಸುತಾರೆಯೊಡನೆ ಚಿನ್ನದ ವಿಮಾನವನ್ನೇರಿ ವಿಹಾರಕ್ಕೆಂದು ಜ್ಯೋತಿರ್ವನಕ್ಕೆ ಹೋದನು. ಆತನು ಹೋದ ಬಳಿಕ ನಗರದಲ್ಲಿ ಉತ್ಪಾತ ಕಾಣಿಸಿಕೊಂಡಿತು. ಆಗ ಆತನ ಮುಖ್ಯ ಸಚಿವನು—

ವ॥ ಗಾಬರಿಯಿಂದ ಬಂದು ಸ್ವಯಂಪ್ರಭೆಗೆ ತಿಳಿಸಿದನು. ಹೀಗೆ ಅವರು ವಿಷಣ್ಣರಾಗಿರುವ ಸಮಯದಲ್ಲಿ ಮಿಂಚಿನಂತೆ ಥಳಥಳಿಸುವ ವೇಷಭೂಷಣಗಳುಳ್ಳ ಖೇಚರನೊಬ್ಬನು ಆಕಾಶದಿಂದ ಇಳಿದುಬಂದು ಅರಮನೆಯನ್ನು ಹೊಕ್ಕು ವಿನಯದಿಂದ ಸ್ವಯಂಪ್ರಭೆಗೆ ನಮಸ್ಕರಿಸಿ ತಾನು ಬಂದ ಕಾರಣವನ್ನು ಹೀಗೆಂದು ಬಿನ್ನವಿಸಿದನು:

---

1. ಬ (ಮ) 2. ನೆಗಂ ಅಪೂರ್ವ (ಮ)

ಕಂ॥ ಆನಪ್ಪೊಡೆ ಸಂಭಿನ್ನಮ
ಹಾ ನೈಮಿತ್ತಿಕನ ಮಗನೆನೆಮ್ಮಯ್ಯನುಮಿಂ
ದಾನುಮೊಡವೋಗಿ ಕಂಡು ಜ
ನಾನಂದನರುರ್ವರಾಸ್ಯ ತಿಲಕರನರಸೀ ॥ ೩೧ ॥

ಓಲಗಿಸಿ ನಿಜಪುರಕ್ಕೆ ವಿ
ಶಾಲತರಾಂಭೋದ ಮಾರ್ಗದೊಳ್ ಒರೆ ಶರಣೆಂ
ಬಾಲಾಪರುದಿತ ನಿನದಮ
ನಾಲಿಸಿ ನಿಂದಿನಿಸನೆಮ್ಮ ತಂದೆಯುಮಾನುಂ ॥ ೩೨ ॥

ವ॥ ನಿಲ್ವಿನಮೆಮ್ಮಿರ್ದೆಡೆಗನತಿದೂರದೊಳ್ ವಿಮಾನಾರೂಢಂ ನವಯೌವನ ಶ್ರೀ ಮಧುರ ರೂಪಾಲಂಕಾರಾಭೂತ ಪರಿವೇಷನಂ ಯಶೋಭಿರಾಮ ಪ್ರಮೋದ ಸನಾಥ ಪಾರ್ಶ್ವನನಂಬರಚರನಂ ಕಂಡು ತತ್ಸಮೀಪ ಸ್ತ್ರೀರೂಪಮಂ ಸುತಾರೆಯೆಂದಱಿದು ತಂದಿರ್ವರುಮಾ ಮೊಂದೊರ್ವರಂ ಮಱವಲಿಸಿ ತದ್ವಿಯಚ್ಚರ ವಿಮಾನಕ್ಕಡ್ಡಮಾಗಿ ನಿಂದಾಗಳ್—

ಕಂ॥ ಹಾಹಾಧ್ವನಿ ಕರುಣಾವ್ಯಾ
ಮೋಹಮದೆರ್ದೆಯೊಳಗೆ ಬಳೆಯೆ ಸುತ್ತಿರ್ದೊಡದಂ
ಸಾಹಸಿಗಂ ಕೇಳ್ಗುಂ ಧೃತ
ಮೋಹಂ ಕೇಳ್ಗುಮೆ ಜಿತಾರ್ತಕುರರೀರವಮಂ ॥ ೩೩ ॥

ವ॥ ಅಂತು ಪುಯ್ಯಲಿಟ್ಟೊಳಱಿ ಪ[1][ಱ][1]ವಿಸಿ ಬಾಯುಱಿದಟ್ಟಿ ಸುತಾರೆಯನಂಜಲಂಜಲೆಂದು ಮಂಡಲಾಗ್ರಮಂಡಿತ ದೋರ್ದಂಡರೆಮಾಗಿ ಪೋಗಿ ಪಗೆವನೊಳ್ ತಡೆಯದೆ ತಾಗುವೆಮ್ಮ ರಭಸಮಂ ಕೇಳ್ದು ವಿಮಾನಾಜಿರದೊಳಿರ್ದ ನಿಮ್ಮ ಸೊಸೆ ಬಾಡಿದ ಪಸಿ ಮಱಿಯುಂ ಪೆತ್ತಂತೆ ರಾಗಿಸಿ ನಯಂಬೆತ್ತಿಂತೆಂದಳ್—

---

೩೧. "ನಾನು ಸಂಭಿನ್ನನೆಂಬ ಮಹಾ ಜ್ಯೋತಿಷಿಯ ಮಗ. ನಾನು [illegible] ಲೋಕಭೂಷಣನಾದ ಅಮಿತತೇಜ ಮಹಾರಾಜನನ್ನು ಕಂಡು

೩೨. ಓಲೈಸಿ ನಮ್ಮ ಊರಿಗೆ ಮರಳಿ ಬರುತ್ತಿರುವಾಗ 'ರಕ್ಷಿಸಿರಿ, ರಕ್ಷಿಸಿರಿ' ಎಂದು ಬಾಲೋ ಹೆಂಗಸರು ಮೊರೆಯಿಡುವ ಧ್ವನಿ ಕಿವಿಗೆ ಬಿದ್ದಿತು. ಆಗ ನಾನೂ ನನ್ನ ತಂದೆಯೂ ನಿಂತೆವು.

ವ॥ ನಾವು ನಿಂತಲ್ಲಿಂದ ತುಸು ದೂರದಲ್ಲಿಯೆ ರೂಪದಿಂದಲೂ ಅಲಂಕಾರದಿಂದಲೂ ಸುಂದರನಾದ ತರುಣ ಖೇಚರನೊಬ್ಬನು ವಿಮಾನಾರೂಢನಾಗಿದ್ದುದನ್ನೂ ಅವನ ಸನಿಹದಲ್ಲಿ ಇದ್ದವಳು ಸುತಾರೆಯೆಂಬುದನ್ನೂ ಅರಿತು, ನಾವಿಬ್ಬರೂ ಆ ವಿಮಾನವನ್ನು ಅಡ್ಡಗಟ್ಟಿದೆವು.

೩೩. ಕರುಣಾಜನಕವಾದ ಆ ಸ್ತ್ರೀಯ ಹಾಹಾಕಾರವನ್ನು ಕೇಳಿಯೂ ಆ ಸಾಹಸಿಗನ ಮನಸ್ಸಿನ ಮೇಲೆ ಏನೂ ಪರಿಣಾಮವಾಗಿರಲಿಲ್ಲ. ಮೋಹವಶನಾದವನು ಆರ್ತನಾದಕ್ಕೆ ಕಿವಿಗೊಡುವನೆ?

ವ॥ ಹಾಗೆ ಪುಯ್ಯಲಿಟ್ಟು ಅಳುತ್ತಿರುವ ಸುತಾರೆಗೆ ಅಂಜದಿರೆಂದು ಧೈರ್ಯ ಹೇಳಿ ನಾವಿಬ್ಬರೂ ಆ ಶತ್ರುವಿನ ಮೇಲೆ ಏರಿಹೋದೆವು. ನಮ್ಮ ರಭಸವನ್ನು ಕಂಡು ವಿಮಾನದ ಮುಂದಿದ್ದ ನಿಮ್ಮ ಸೊಸೆ ಬಾಡಿದ ಪಸಿಯು ಮಳೆಯನ್ನು ಕಂಡಂತೆ ಸಂತೋಷಪಟ್ಟು ನಯವಾಗಿ ಹೀಗೆಂದಳು:

---

1. ೪ (ಮ)

ಕಂ॥ ಜ್ಯೋತಿರ್ವನದೊಳ್ ಛಿದ್ರಿಸಿ
ಪಾತಕನಿತ್ತಶನಿಘೋಷನಸ್ಮತ್ಪತಿಯಂ
ಮಾತೇಂ ನಿಜನಗರಕ್ಕೆಟ³
ದೀತಂ ಕೊಂಡೊಯ್ದು ಪೊಂ ವಿಯಚ್ಚರನೆನ್ನಂ ॥ ೩೪ ॥

ವ॥ ಅದಱಿಂದಂ ಬೇಗಂ ಪೋಗಿತಂದಿರ್ವರುಂ ಮದೀಯ ಜೀವಿತೇಶ್ವರನಂ ಕಾಯಲ್ವೇಟ್ಟುದು ಇನ್ನಿನಿಸುಬೇಗಂ ತಡೆದಿರಪ್ಪೊಡೆನ್ನಂ ಕಾಣದಮೋಘಂ ಪ್ರಾಣಪರಿತ್ಯಾಗಂಗೆಯ್ಗುಮೆಂಬುದುಂ ಪೋಪರ್ ಪೋಗರೆಂಬಾಶಂಕೆ ವೆರಸಿದ ವಿರೋಧಿ ನೋಡೆನೋಡೆ ಶ್ರೀವಿಜಯ ಪ್ರಾಣತ್ರಾಣ ನಿಮಿತ್ತಂ ಜ್ಯೋತಿರ್ವ¹ನ¹ಮಂ ಮನೋಜವದಿನೆಯ್ದಿ ಸುತಾರಾರೂಪಧಾರಿಣಿಯಾಗಿ ಕುಕ್ಕುಟಸರ್ಪದಶನಪ(ಶಾ)ಂಶವ್ಯಾಜದಿಂ ಬಿದ್ದುಪಟ್ಟಿರ್ದ ಬಹುರೂಪಿಣಿಯೆಂಬ ಅಶನಿಘೋಷನಘೋಷಣ ವಿದ್ಯೆಯುಮನದಂಸುತಾರೆ ಗೆತ್ತೆರ್ದೆಯೊಳಿಟ್ಟು ಸುಡಲ್ ಚಿತಾರೂಢನಾಗಿರ್ದ ಶ್ರೀವಿಜಯನುಮಂ ಕಂಡು ಬೇಗ ಮಗ್ನಿಕುಂಡದಿನುರ್ವೀಶ್ವರನಂ ಪೊಱಕೆಗೆದು ಬಱಿಕೆನ್ನ ತಂದೆ ಸಂಭಿನ್ನಂ ಬಹುರೂಪಿಣೀ ವಿದ್ಯೆಯನಾಟಂದೊಡೋಱಿ ಪೆಳಱಿ—

ಕಂ॥ ತದ್ವಿದ್ಯೆ ಪೋಗೆ ದಶನಕು
ಮುದ್ವತಿ ಪೊಱಪೊಣ್ಮೆ ನಗೆವೊಗಂಬೆರಸು ನೃಪಂ
ಸದ್ವಿದ್ಯಾನಿಧಿ ಪೇೞ್ನೆ
ತದ್ವಾರ್ತೆಯನಾಗಳಱಿಪಿದಂ ಸಂಭಿನ್ನಂ ॥ ೩೫ ॥

ನೃಪತಿ ಸುತಾರಾಹರಣ
ಪ್ರಪಂಚಮಂ ಜಲಕನಱಿದುಮಯ್ದುನನ ಪೊೞ
ಲ್ಗೆಪಮತಿ ಸಂಭಿನ್ನಂ ಬೆರ
ಸು ಪೋದನಿತ್ತಟ್ಟಿ ನಿಮಗೆ ಪೇೞಲ್ಕೆನ್ನಂ ॥ ೩೬ ॥

---

೩೪. 'ಈತನು ಅಶನಿಘೋಷನೆಂಬ ವಿದ್ಯಾಧರ. ಜ್ಯೋತಿರ್ವನವಲ್ಲಿ ವಿದ್ಯಾಬಲದಿಂದ ನನ್ನ ಪತಿಯನ್ನು ಮೋಸಗೊಳಿಸಿ, ನನ್ನನ್ನೀಗ ಬಲಾತ್ಕಾರದಿಂದ ತನ್ನ ನಗರಕ್ಕೆ ಎಳೆದೊಯ್ಯುತ್ತಿರುವನು.

ವ॥ ಆದುದರಿಂದ ನೀವಿಬ್ಬರೂ ಮೊದಲು ನನ್ನ ಪ್ರಾಣೇಶ್ವರನ ರಕ್ಷಣೆಗೆ ಧಾವಿಸಿರಿ. ನೀವು ಇನ್ನು ಸ್ವಲ್ಪ ತಡಮಾಡಿದರೂ ಸಾಕು ನನ್ನ ಅಗಲಿಕೆಯನ್ನು ಸೈರಿಸಲಾರದೆ ಆತನು ಪ್ರಾಣಬಿಡಬಹುದು. ಈ ಮಾತನ್ನು ಕೇಳಿ ನಾವು ಹೋಗುವೆವೋ ಇಲ್ಲವೋ ಎಂದು ಅನುಮಾನಿಸುತ್ತ ಆ ಖೇಚರನು ನಮ್ಮನ್ನು ನೋಡುತ್ತಿದ್ದನು. ನಾವು ಕೂಡಲೆ ಶ್ರೀವಿಜಯನ ಪ್ರಾಣವುಳಿಸಲೆಂದು ಜ್ಯೋತಿರ್ವನಕ್ಕೆ ಧಾವಿಸಿದೆವು. ಅಲ್ಲಿ ಅಶನಿಘೋಷನ ಬಹುರೂಪಿಣೀ ವಿದ್ಯೆ ಸುತಾರೆಯ ರೂಪವನ್ನು ಧರಿಸಿ, ತನಗೆ ಕುಕ್ಕುಟಸರ್ಪ ಕಚ್ಚಿತೆಂದು ಹೇಳಿ ವಿಷಬಾಧೆಯಿಂದ ಸತ್ತಂತೆ ಬಿದ್ದುಕೊಂಡಿತ್ತು. ಸುತಾರೆಯೇ ಮಡಿದಳೆಂದು ಭ್ರಮಿಸಿದ ಶ್ರೀವಿಜಯನು ಅವಳೊಡನೆ ಚಿತೆಯನ್ನು ಏರಿದನು. ಆದರೆ ಅಷ್ಟು ಹೊತ್ತಿನಲ್ಲಿ ನಾವಿಬ್ಬರೂ ಆ ಸ್ಥಳಕ್ಕೆ ಮುಟ್ಟಿ ಅಗ್ನಿಕುಂಡದಿಂದ ಅರಸನನ್ನು ಹೊರಕ್ಕೆ ತೆಗೆದೆವು. ಬಳಿಕ ನನ್ನ ತಂದೆಯು ಆ ಬಹುರೂಪಿಣೀ ವಿದ್ಯೆಯನ್ನು ಸದೆಬಡಿದು ಓಡಿಸಿಬಿಟ್ಟನು.

೩೫. ಹಾಗೆ ಆ ವಿದ್ಯೆ ಹೊರಟುಹೋಗಲಾಗಿ ಬೆಳ್ದಿಂಗಳಂತೆ ನಗೆಯನ್ನು ಸೂಸುತ್ತ ಅರಸನು 'ವಿದ್ಯಾನಿಧಿಯಾದ ಸಂಭಿನ್ನನೆ ಇದೆಲ್ಲ ಏನು ಹೇಳು' ಎಂದನು. ನಮ್ಮ ತಂದೆ ನಡೆದ ಸಂಗತಿಯನ್ನೆಲ್ಲ ತಿಳಿಸಿದನು.

೩೬. ಸುತಾರೆಯ ಅಪಹರಣವನ್ನು ತಿಳಿದು ಅರಸನು ಈ ವಿಷಯವನ್ನು ನಿಮಗೆ ತಿಳಿಸಲೆಂದು ನನ್ನನ್ನು ಇತ್ತ ಕಳಿಸಿ ಸಂಭಿನ್ನನೊಡನೆ ತನ್ನ ಮೈದುನನ ರಾಜಧಾನಿಗೆ ಹೋದನು."

---

1. ಣ (ಅ)

ವ॥ ಎಂಬುದುಂ ದೀಪಶಿಖಂಬೆರಸು ಸ್ವಯಂಪ್ರಭಾದೇವಿಯುಮಾಪ್ಪೊಟ್ಟೆ ಪೋಲ್ವಾಗೆ ರಥನೂಪುರ ಚಕ್ರವಾಳಪುರಕ್ಕೆ ಪೋಗಿ ರಾಜಮಂದಿರಮಂ ಪೊಕ್ಕು ತನ್ನ ಮುನ್ನೆ ಕನ್ನೆತನದಂದೆತ್ತಿ ಕೊಂಡಾಡಿದ ಮಾತಾಪಿತೃಪಕ್ಷದ ಜನನೀ ಜನಂಗಳ್ ನೋಡೆ ತನಗಿದಿರ್ವಂದೆಱಗಿ ಪೊಡೆವಟ್ಟ ಕಂಡ ಮಗಳುಮಳಿಯನುಮಂ ಕಂಡು ಪರಸಿ ಪ್ರಣಯಿನೀ ವಿಯೋಗ ಪರಿಭವಾನಲದಗ್ಧಮಾನ ಮಾನಸನಪ್ಪ ಶ್ರೀವಿಜಯನುಮಂ ಛಂಗಿಸಿ ವಿಶ್ಲೇಷೋಪತಾಪಾಂತಸ್ತ[1]ಪ್ಯ[1]ಮಾನ ಹೃದಯನಪ್ಪ ಶಲಿಂಕಾಚಾರ ಸಾರನುಮಂ ಲೋಕಜ್ಞತಾಪಿ ಮೃದುವಚನ ರಚನೆಗಳಿಂದ ಮಾಱೆ ನುಡಿದು ಕಿಱಿದು ಪೊಲ್ಕುನಿರ್ದು ನಿಜಸ್ನುಷಾವಿರಹ ವಿಧುರೆ ಪೊಣ್ಮುವ ಕಣ್ಣನೀರ್ಗಳಂ ನಿದಾಘಸಮಯ ಸರಸಿಯಂ ತಱಿಸಿ ಮಿಗಲೀಯದೊಳಗಡಂಗಿಸಿ ಸಭೆಯೊಳಿಂತೆಂದಳ್ —

ಉ॥ ಆದಿ ಜಿನೇಂದ್ರನುಂ ನಮಿಯುಮಿರ್ವರ ಪೂರ್ವಜರಿಂತು ಚಿಂತೆಯಂ
ಖೇದಮುಮಲ್ಲು ನಾಯಕಗುಣಂ ರಿಪುಭೂಮಿಯನುಯ್ದ ಪಾಯಮಂ
ಪೋದೆಡೆಯಂ ಪ್ರಕಾಶಮಱಿದುಂ ತಡೆವೊಂ ಗಡಮೆಂದೊಡಂಗನಾ
ನಾದನಿದೆಂತೊ ಸೈರಿಸುವರಾತ್ಮ ಪರಾಭವಮಂ ಕುಲೋದ್ಭವರ್ ॥ ೩೭ ॥

ವ॥ ಎಂಬುದುಂ ಸೌಜನ್ಯ ಕಂದಾಂಕುರಂ ಶ್ರೀವಿಜಯಂಗೆ ಹೇತಿ ವಿದಾರಿಣಿಯುಂ ಬಂಧವಿಮೋಚನಿ ಯುಮೆಂಬೆರಡುಂ ವಿದ್ಯೆಗಳಂ ಕೊಟ್ಟು ಪುತ್ರಂ ಸಾಧಿತ ಮಹಾವಿದ್ಯಂ ಮಾಡಿ ಮಿತ್ರನ ನಭ್ಯುದಯಮಿತ್ರಂ ನಿಜತನೂಜಸಹಿತಮಾಜಿಗೆ ಮುಂದಟ್ಟಿ ತಾಂ ಸಹಸ್ರ ರಶ್ಮಿ ವೆರಸಗ್ರಿಮಂತಮೆಂಬ ಪರ್ವತದೊಳ್ ಮಹಾ ಬಳಾಭಿಧಾನವಿದ್ಯೆಯುಮಂ ಸಾಧಿಸಿಕೊಂಡಾ ವಿದ್ಯೆವೆರಸು ಮನೋನಿಲ ವೇಗದಿಂ ಬಂದು ಚಂಪಾಪುರಮನೆಯ್ದೆ ವರ್ಪನ್ನೆಗಮಶನಿಘೋಷಂ ಶ್ರೀವಿಜಯನೊಳ್ ಬಹುರೂಪಿಣಿ ವಿದ್ಯಾಪ್ರಭಾವದಿಂ ಕಾದುವಾಗಳ್—

ಮ॥ ನೆಲದಾಕಾಶದ ದಿಕ್ತಟಂಗಳೆಡೆಯೊಳ್ ಪರ್ವಿರ್ದ ತದ್ರೂಪ ಸಂ
ಕುಲಮಂ ಕಂಡಸುರಾತ್ಮ ಜನ್ಮನ ಮಹಾವಿದ್ಯಾಬಲಂ ಶೀರ್ಣ ಪ
ಲ್ವಲ [ದಂ] ತಾಗೆ ನಿಜಾಗ್ರವಿದ್ಯೆ ತವಿಸುತ್ತಿರ್ಪನ್ನಮಾಟಂದು ದೋ
ರ್ವಲದೇಕಾಂಗನಿವಂ ದಲೆಂದು ನುಡಿದಂ ಸೌಜನ್ಯಕಂದಾಂಕುರಂ ॥ ೩೮ ॥

ವ॥ ಹೀಗೆಂದು ದೀಪ್ತಶಿಖನೆಂಬ ಆ ಖೇಚರನು ವಿವರಿಸಿದನು. ಸ್ವಯಂಪ್ರಭಾದೇವಿಯು ಆಗಿಂದಾಗಲೆ ರಥನೂಪುರಚಕ್ರವಾಳಪುರಕ್ಕೆ ಹೋಗಿ, ಅರಮನೆಯನ್ನು ಹೊಕ್ಕು, ಚಿಕ್ಕಂದಿನಲ್ಲಿ ತನ್ನನ್ನು ಎತ್ತಿ ಆಡಿಸಿದ ತಂದೆತಾಯ್ಗಳ ಬಳಗವು ನೋಡುತ್ತಿರುವಂತೆಯೆ ತನಗೆ ಎದುರುಬಂದು ನಮಸ್ಕರಿಸಿದ ಮಗಳನ್ನೂ ಅಳಿಯನನ್ನೂ ಆಶೀರ್ವದಿಸಿದಳು. ತನ್ನ ಪತ್ನಿಯ ವಿರಹದಿಂದ ಒಳಗೊಳಗೆ ಬೇಯುತ್ತಿರುವ ಸಚ್ಚರಿತ ಶ್ರೀವಿಜಯನನ್ನು ವ್ಯವಹಾರ ಜ್ಞಾನದಿಂದೊಡಗೂಡಿದ ಮೃದುವಾದ ಮಾತುಗಳಿಂದ ಸಮಾಧಾನಪಡಿಸಿ, ಕೊಂಚ ಸಮಯಾನಂತರ ತನ್ನ ಸೊಸೆಯ ವಿಯೋಗವನ್ನು ಸೈರಿಸಲಾರದೆ ಕಣ್ಣಲ್ಲಿ ಉಕ್ಕಿಬರುವ ಕಣ್ಣೀರನ್ನು ಬೇಸಗೆಯ ಕೊಳದಂತೆ ಅಲ್ಲಿಯೆ ಇಂಗಿಸಿ ತನ್ನ ಕಳವಳವನ್ನು ಒಳಗೇ ಹತ್ತಿಕ್ಕಿಕೊಂಡು ಹೀಗೆಂದು ನುಡಿದಳು:

೩೭. "ಆದಿತೀರ್ಥಂಕರನಿಂದಲೂ ನಮಿಮಹಾರಾಜನಿಂದಲೂ ನಡೆದುಬಂದ ವಂಶಗಳು ನಿಮ್ಮವು. ಹೀಗೆ ಚಿಂತೆಯಿಂದಲೂ ದುಃಖದಿಂದಲೂ ಕುಳಿತುಕೊಳ್ಳುವುದು ನಿಮಗೆ ಭೂಷಣವಲ್ಲ. ಶತ್ರುವಿನ ಠಾವನ್ನೂ, ಅವನು ಅಪಹರಿಸಿದ ವಿಧಾನವನ್ನೂ, ಹೋದ ಸ್ಥಳವನ್ನೂ ಸ್ಪಷ್ಟವಾಗಿ ತಿಳಿದ ಮೇಲೆ ನೀವು ಇನ್ನೂ ತಡೆದು ನಿಲ್ಲುವುದೆಂದರೆ ಏನು ? ಅಂಗನೆಯರ ಆರ್ತನಾದವನ್ನೂ ತಮ್ಮ ಅಪಮಾನವನ್ನೂ ಸತ್ಕುಲಪ್ರಸೂತರು ಅದೆಂತು ಸಹಿಸುವರು?"

ವ॥ ಹೀಗೆನ್ನಲಾಗಿ ಅಮಿತತೇಜಕುಮಾರನು ಶ್ರೀವಿಜಯನಿಗೆ 'ಹೇತಿವಿದಾರಿಣಿ'ಯೆಂಬ ಹಾಗು 'ಬಂಧವಿಮೋಚನಿ'ಯೆಂಬ ಎರಡು ವಿದ್ಯೆಗಳನ್ನು ಕೊಟ್ಟು ಆತನು ಸಾಧಿತವಿದ್ಯನಾಗುವಂತೆ ಮಾಡಿ ತನ್ನ ಮಗನೊಡನೆ ಆತನನ್ನು ಶತ್ರುವಿನ ಮೇಲೇರಲು ಕಳಿಸಿ ತಾನು ಸಹಸ್ರರಶ್ಮಿಯೆಂಬ ಮಿತ್ರನೊಡನೆ ಅಗ್ರಿಮಂತವೆಂಬ ಪರ್ವತಕ್ಕೆ ಹೋದನು. ಅಲ್ಲಿ ಮಹಾಬಳವೆಂಬ ವಿದ್ಯೆಯನ್ನು ಸಾಧಿಸಿಕೊಂಡು ಆ ವಿದ್ಯಾಸಹಿತವಾಗಿ ಅತ್ಯಂತ ವೇಗದಿಂದ ಚಂಪಾಪುರಕ್ಕೆ ಬಂದನು. ಅಷ್ಟರಲ್ಲಿ ಅಶನಿಘೋಷನು ಶ್ರೀವಿಜಯನೊಡನೆ ಬಹುರೂಪಿಣೀ ವಿದ್ಯಾಪ್ರಭಾವದಿಂದ ಕಾದುತ್ತಿದ್ದನು.

೩೮. ನೆಲದಲ್ಲಿಯೂ, ಆಕಾಶದಲ್ಲಿಯೂ, ಎಲ್ಲ ದಿಕ್ಕುಗಳಲ್ಲಿಯೂ ಅಸಂಖ್ಯವಾಗಿ ತನ್ನ ರೂಪಗಳನ್ನು ನಿರ್ಮಿಸಿ ಕಾದಾಡುತ್ತಿರುವ ಅಶನಿಘೋಷನನ್ನು ಕಂಡು ಅಮಿತತೇಜನು ತನ್ನ ಮಹಾವಿದ್ಯೆಯನ್ನು ಪ್ರಯೋಗಿಸಿದನು. ಕೂಡಲೆ ಆ ಅಸುರನ ವಿದ್ಯಾಬಲ ಬತ್ತಿದ ಹೊಂಡದಂತಾಯಿತು. ಅವನನ್ನು ಕಂಡು, "ಭುಜಬಲದ ಈ ವೀರನು ಈಗ ಏಕಾಂಗ ಸಾದನು" ಎಂದು ಅಮಿತತೇಜನು ನುಡಿದನು.

---

1. ಕ್ಷ, (ಅ)

ವ॥ ಅಂತಿಂದಜಾಲಗನಂತೆ ವಿಯದವನೀ ದಿಗ್ಭಾ[ಗ]ದೊಳ್ ತನ್ನ ರೂಪೆ ರೂಪಾಗಿ ಬಹುರೂಪದಿಂ ಕಾದುತ್ತಿರ್ದಸುರಂ ದೀನಜನತಾ ಕಲ್ಪಾಂಘ್ರಿಪನಿಂ ಭಿನ್ನವಿದ್ಯನುಮಭಿನ್ನ ಸನ್ನಾಹನುಮಾಗಿ ಪೆಱತೆಗೆದು ಪೋಗಿ—

ಕಂ॥ ಜಾರುಂಗೆ ವಿಜಯ ಕಾಮಿನಿ
ಕೂರಳೆ ಚಲಮಿರದು ಕೆಯ್ದು ಬೆಸಕೆಯ್ಯದು ಸಂ
ಸಾರದೊಳೆನೆಯೆನೆ ದಟಿಮೊಳ
ಸೋರೆ ಖಗೇಶಾವನೀಶ ಸೈನಿಕರಾರ್ದರ್ ॥ ೩೯ ॥

ವ॥ ಅಂತು ತನ್ನಂ ಮುನ್ನಂ ಬೀರನೆಂದವರ್ ಬೀರುವೆನೆ ಕಲಿಯೆಂದವರಯ್ಯಗಲಿಯೆನೆ ಪ್ರಾಣವನೆ ಕಾವ ಬಗೆ ಮಿಗೆ ಸ್ವಾಮಿದ್ರೋಹ ನಾದ [1][ವಧ್ಯ][1]ನಂತೆ ಸುತಾರಾಪಹರಣಮನೆಯ್ದಿಯುಂ ದೆಸೆಗೆಟ್ಟೋಡುವಶನಿಘೋಷನನುರ್ವರಾಸ್ಯತಿಲಕಂ ಕೊಂದಲ್ಲದಿರೆನೆಂದು ವಿದ್ಯೆಗಳಂ ಬೆನ್ನೊಳ್ ತಗುಳವೇೞ್ದು ತಾನುಂ ಶ್ರೀವಿಜಯನುಂ ವಿದ್ಯಾಧರ ಶೂರಸೈನ್ಯಾವಸ್ಕಂದನ ಸಮನ್ವಿತಂ ಬೆಂಕೊಳ್ವುದುಂ ಅಶನಿಘೋಷನಪರಣ ನಾ[2][ಸಿ][2]ಕ್ಯನಗರಸಮೀಪದ ಗಜಧ್ವಜಾಭಿಧಾನಾಚಲದ ಮೇಗಿರ್ದು—

ಚಂ॥ ವಿನಿಹತಕಲ್ಮಷಂ ಜಿನನನಂತ ಚತುಷ್ಟಯಭಾಗಿ ಭವ್ಯನಂ
ದನನಖಿಲಾಮರೇಂದ್ರ ಖಚರೇಂದ್ರ ಸುರೇಂದ್ರನತಂ ಶರಣ್ಯ ನ
ಪ್ಪಿನಮಭವಾಂಘ್ರಿ ಪದ್ಮಯುಗಳಕ್ಕೆಱಗಿರ್ಪುದುಮಾಗಳೋಡುವಾ
ತನ ಭಯಮಟ್ಟುವಾತನ ಚಲಂ ತವುತಂದುವು ತತ್ಸಮೀಪದೊಳ್ ॥ ೪೦ ॥

ವ॥ ಅಂತು ಬಿಱುತು ಬೆಳ್ಕೋಟವೋಡುವ ಶನಿಘೋಷನ ಭಯರಸಮುಂ ಕ[3][ಱು][3]ತ್ತು ನಟ್ಟು ಬೆನ್ನಟ್ಟುವ ಗಗನ ಚರೇಂದ್ರನ ರೌದ್ರರಸಮುಂ ನಿದ್ರಾವಿದ್ರಾವಣನ ಲೋಚನದ್ವಯ ರಸನದಂ ತೊಡನೊಡನೆ ಮಾಣ್ಬುದುಮಶನಿಘೋಷಂ ಮನದೊಳ್ ನಿಶ್ಶಂಕನಾಗಿ—

ವ॥ ಮಾಯಾವಿಯಂತೆ ಬಹುರೂಪಿಯಾಗಿ ನೆಲಬಾನುಗಳನ್ನೆಲ್ಲ ವ್ಯಾಪಿಸಿ ಹೋರಾಡುತ್ತಿದ್ದ ಅಸುರನು ತನ್ನ ವಿದ್ಯೆಯನ್ನು ಅಮಿತತೇಜನು ಭೇದಿಸಲಾಗಿ ಅಸಹಾಯನಾಗಿ ಹಿಮ್ಮೆಟ್ಟಿ ಪಲಾಯನಮಾಡಿದನು.

೩೯. "ಹಾದರಿಗನಾದವನನ್ನು ಜಯಲಕ್ಷ್ಮಿಯೆಂದೂ ಮೆಚ್ಚಲಾರಳು; ಆತನಿಗೆ ಚಲ ಉಳಿಯದು; ಆಯುಧ ಕೈಸಾಗದು" ಎಂದು ಖೇಚರ-ಭೂಚರ ಸೈನಿಕರು ಅಬ್ಬರಿಸಿದರು.

ವ॥ ತನ್ನನ್ನು ಮೊದಲು ವೀರನೆಂದವರೆ ಈಗ ಹೇಡಿ ಎನ್ನಲಾಗಿ, ಕಲಿಯೆಂದವರೇ ಅಂಜುಬುರುಕನೆನ್ನಲಾಗಿ ತನ್ನ ಪ್ರಾಣವುಳಿಸಿಕೊಳ್ಳುವ ಹಂಬಲದಿಂದ ಸ್ವಾಮಿದ್ರೋಹಿಯಾದ ವೈದ್ಯನಂತೆ ಸುತಾರೆಯನ್ನು ಅಪಹರಿಸಿದ ಅನಿಶಘೋಷನು ದಿಕ್ಕುಗೆಟ್ಟು ಓಡತೊಡಗಿದನು. "ಇವನನ್ನು ಕೊಲ್ಲದೆ ಬಿಡೆನು" ಎಂದು ಅಮಿತತೇಜನು ತನ್ನ ವಿದ್ಯೆಗಳಿಗೆ ಶತ್ರುವನ್ನು ಬೆನ್ನಟ್ಟಲು ಹೇಳಿ, ತಾನೂ ಶ್ರೀವಿಜಯನೂ ಶೂರರಾದ ವಿದ್ಯಾಧರ ಸೈನಿಕರೊಡನೆ ಅವನನ್ನು ಹಿಂಬಾಲಿಸಿ ಹೊರಟರು. ಗತ್ಯಂತರವಿಲ್ಲದೆ ಅಶನಿಘೋಷನು ನಾಶಿಕ್ಯನಗರದ ಸಮೀಪದಲ್ಲಿ ಗಜಧ್ವಜವೆಂಬ ಬೆಟ್ಟದ ಮೇಲೆ ಓಡಿಹೋದನು.

೪೦. ಮತ್ತು ಅಲ್ಲಿದ್ದ ದೋಷಾಪಹಾರಿಯೂ, ಅನಂತ ಚತುಷ್ಟಯ ಭೋಗಿಯೂ (ಅನಂತವಾದ ಜ್ಞಾನ, ದರ್ಶನ, ಸುಖ ಮತ್ತು ಶಕ್ತಿಗಳನ್ನು ಸಾಧಿಸಿಕೊಂಡವನು), ಭವ್ಯಜನಕ್ಕೆ ಆನಂದವನ್ನೊದಗಿಸುವವನೂ, ಸಮಸ್ತ ಅಮರೇಂದ್ರ, ಖೇಚರೇಂದ್ರ, ದೇವೇಂದ್ರರಿಂದ ಪೂಜಿಸಿಕೊಳ್ಳುವವನೂ ಆದ ಕೇವಲ ಭಗವಂತನನ್ನು ಕಂಡು ಆತನ ಪಾದಕಮಲಗಳಿಗೆ ಎರಗಿದನು. ಆ ಭಗವಂತನ ಸಮೀಪಕ್ಕೆ ಬಂದೊಡನೆ, ಓಡುವವನ ಭಯ ಹಾಗು ಅಟ್ಟುವವನ ಚಲ ಎರಡೂ ಹಿಂಗಿಹೋದುವು.

ವ॥ ಹಾಗೆ ಹೇಡಿಯಾಗಿ ಓಡುತ್ತಿದ್ದ ಅಶನಿಘೋಷನ ಭಯರಸವೂ ರಭಸದಿಂದ ಅಟ್ಟಿಬಂದ ವಿದ್ಯಾಧರೇಂದ್ರನ ರೌದ್ರರಸವೂ ಒಮ್ಮೆಲೆ ನಿದ್ರಾನಿವಾರಕನಾದ ಕೇವಲಿಯ ಸಮಕ್ಷದಲ್ಲಿ ಶಾಂತವಾಗಿ ಹೋಗಲು ಅಶನಿಘೋಷನು ಮನಸ್ಸಿನಲ್ಲಿ ನಿಶ್ಚಿಂತನಾಗಿ—

---

1. ವೈದ್ಯ (ಮ) 2. ಶಿ (ಮ) 3. ರು (ಮ)

ಕಂ॥ ಅವಯವದಿಂದಂದುರ್ಚುವ
ಭವಭಯಮುಮುಂ ಶಿಥಿಲಮಾದುದೆಂದೊಡೆ ತಾಂ ಶಾ
ತ್ರವಭಯಮೇಗಹನಮೊ ಕ
ರ್ಮವ್ಯೆರಿ ನಿರ್ಮೂಲನಾಂಘ್ರಿ ಕಮಲಾಂತಿಕದೊಳ್ ॥ ೪೧ ॥

ವ॥ ಎಂದು (ಬಗೆದು) ಬಗೆಯುತ್ತಿರ್ಜಿನಂ ಪಾಪೇಭಕಂಠೀರವನುಂ ಶ್ರೀವಿಜಯನುಮುಜಾತನ ಪಾದಪಯೋಜಯುಗಳಕ್ಕೆ ಜಿಗಿ—

ಕಂ॥ ಅಕ್ಕಟ ಬಡವನೊಳೀತನೊ
ಳಕ್ಕುಮೆ ಚಲಮೀತನಿಂದಮಧಿಕನೊಳಕ್ಕುಂ
ತಕ್ಕುದೆ ಮುಳಿಸು ಜಿನೇಂದ್ರನ
ಪಕ್ಕದೆ ಪೊತ್ತಿಸೆಯುಮನಲನುರಿಗುಮೆ ಜಲದೊಳ್ ॥ ೪೨ ॥

ವ॥ ಅಂತು ವಿದ್ಯಾಧರ ಶಿಖಾಮಣಿನೂನನುರ್ವರಾಸ್ಕ ತಿಲಕನುಮವನೀಶ್ವರ ಶಿರೋಮಣಿ ಮಯೂಖ ಮಾಲಾಲೋಲಲೀಲಾಪಾದ ಪದ್ಮಶ್ರೀಕಂ ಶ್ರೀವಿಜಯನುಂ ವಿನಯಾಂಬುಜಾತ ಬಂಧುವನಪಗತ ಕಾಲುಷ್ಯ ನೀರಾಗ ಲೋಚನನಂ ಭಕ್ತಿ ಭರಾನತರೋಲಗಿಸುತ್ತಿರ್ಪನ್ನೆಗಂ ಸುತಾರಾಸಮೇತಂ ಸ್ವಯಂಪ್ರಭೆ ಬಂದು ತತ್ಕೇವಳಿಗೆ ಭಯವಿನಮಿತರಾಗಿ ಕುಳ್ಳಿರಲೊಡಂ—

ಕಂ॥ ವಿಜಯಾರ್ಧೇಶಂ ಬೆಸಗೊಳೆ
ವಿಜಯಾಖ್ಯ ಜಿನೇಂದ್ರನಱಿಯೆ ಬೆಸಸಿದನಾಗಳ್
ತ್ರಿಜಗನ್ನುತ ಜಿನಧರ್ಮಮ
ನಜೇಯಮಂ ಜೀವಕರ್ಮ ಭೇದಸ್ಥಿತಿಯಂ ॥ ೪೩ ॥

ವಾತಾಹತ ಭವತೃಷ್ಣಾ
ಪಾತಂ ತಣಿಪಿದುದು ಮೊತ್ತಮೊದಲೊಳ್ ಪರಿಪ
ತ್ರ್ರೀತಿಕರಮಮಿತತೇಜ
ಶ್ಚಾತಕಮಂ ಜಿನವಚೋಮೃತಾಂಭಃಪೃಷತಂ ॥ ೪೪ ॥

---

೪೧. "ಕರ್ಮಗಳೆಂಬ ವೈರಿಗಳನ್ನು ನಿರ್ಮೂಲಗೊಳಿಸಿದ ಈ ಮಹಾತ್ಮನ ಪಾದಕಮಲಗಳ ಸನ್ನಿಧಿಯಲ್ಲಿ ಪರಿಪರಿಯಿಂದ ಪೀಡಿಸುವ ಸಂಸಾರದ ಮಹಾಭಯವೆ ಸಡಿಲಿಹೋಯಿತು ಎಂದ ಮೇಲೆ ಶತ್ರುವಿನ ಭಯ ಏನು ಮಹಾ ?"

ವ॥ ಎಂದು ಯೋಚಿಸುತ್ತಿರುವಷ್ಟರಲ್ಲಿ ಶ್ರೀವಿಜಯನೂ ಅಮಿತತೇಜಕುಮಾರನೂ ಆ ಭಗವಂತನ ಪಾದಗಳಿಗೆ ಎರಗಿದರು.

೪೨. "ಅಯ್ಯೊ ಪಾಪ ! ಈ ಬಡವನೊಡನೆ ಛಲವೆ? ಅಧಿಕನಾದವನ ಮೇಲಾದರೆ ಛಲವೊಪ್ಪೀತು. ಅಲ್ಲದೆ ಜಿನೇಂದ್ರನ ಸನ್ನಿಧಿಯಲ್ಲಿ ಕೋಪಿಸುವುದು ಯೋಗ್ಯವೆ? ಎಷ್ಟು ಹೊತ್ತಿಸಿದರೇನು ನೀರಿನಲ್ಲಿ ಬೆಂಕಿಯಾದೀತೆ?"

ವ॥ ಹೀಗೆಂದು ಭಾವಿಸಿ ವಿದ್ಯಾಧರ ರಾಜೋತ್ತಮನಾದ ಅಮಿತತೇಜನೂ ರಾಜಶಿರೋಮಣಿಗಳಿಗೆ ಪೂಜ್ಯನಾದ ಶ್ರೀವಿಜಯನೂ ವಿನಯ ಜನ ಬಂಧುವಾದ ಆ ದೋಷರಹಿತ ಕೇವಲಿಗೆ ಭಕ್ತಿಪೂರ್ವಕವಾಗಿ ನಮಸ್ಕರಿಸಿ ಆರಾಧಿಸುತ್ತಿದ್ದರು. ಅಷ್ಟರಲ್ಲಿ ಸುತಾರೆಯೊಡನೆ ಸ್ವಯಂಪ್ರಭೆಯೂ ಅಲ್ಲಿಗೆ ಬಂದು ನಯಭಯಗಳಿಂದ ನಮಸ್ಕರಿಸಿ ಕುಳಿತಳು.

೪೩. ಆಗ ವಿಜಯಾರ್ಧಾಧಿಪನಾದ ಅಮಿತತೇಜನ ಬಿನ್ನಹದ ಮೇರೆಗೆ 'ವಿಜಯ' ಎಂಬ ಹೆಸರುಳ್ಳ ಆ ಕೇವಲಿಗಳು ಅಜೇಯವೂ ತ್ರಿಲೋಕಪೂಜ್ಯವೂ ಆದ ಜಿನಧರ್ಮಸ್ವರೂಪವನ್ನು ಜೀವ-ಕರ್ಮಗಳ ಭೇದ ಸಹಿತವಾಗಿ ವಿವರಿಸಿದರು.

೪೪. ಭವತೃಷ್ಣೆಯಿಂದ ಬಳಲುತ್ತಿದ್ದ ಅಮಿತತೇಜನೆಂಬ ಚಾತಕವನ್ನು ಜಿನವಚನವೆಂಬ ಅಮೃತವೃಷ್ಟಿ ತಣಿಸಿತು; ಅಲ್ಲಿ ನೆರೆದವರೆಲ್ಲರಿಗೆ ಸಂತೋಷವನ್ನು ಉಂಟುಮಾಡಿತು.

ಕಂ॥ ಸಾಧಿತ ಸಮ್ಯಗ್ದರ್ಶನ
ಬೋಧಚರಿತ್ರಂಗ[1]ಳೆಂಬ[1] ಧರ್ಮಮಿದಪ್ಪಾ
ಬಾಧಂ ಧರ್ಮಮಿದಲ್ಲದು
ದಾಧಿ ವ್ಯಾಧಿಪ್ರದಂ ಶರೀರಿಗಪಥ್ಯಂ ॥ ೪೫ ॥

ತತ್ವಾರ್ಥ ಶ್ರದ್ಧಾನ ಪ
ಟುತ್ವಂ ಸಮ್ಯಕ್ತ್ವಮದು ನಿಸರ್ಗಾದಿಗಮಾಂ
ಗತ್ವದಿನಿರ್ತೆ[2][ಱ][2]ನರ್ಹ
ತ್ತತ್ವದೊಳಂಬರ ಚರಾನ್ವಯಾಂಬರಭಾನೂ ॥ ೪೬ ॥

ಲೋಕಾಲೋಕಾವಿತತ ವಿ
ಲೋಕಂ ಜ್ಞಾನಂ ಸಮೂರ್ಜಿತಾವದ್ಯ ವಿದ
ಶ್ರೀಕಂ ಚರಿತ್ರಮಱಿ ಪರ
ಲೋಕಮುಮೀಲೋಕಮುಂ ತದಾಯತ್ತಂಗಳ್ ॥ ೪೭ ॥

ಜೀವಾದಿ ಸಪ್ತ ತತ್ವದೊ
ಳಾವಿಷ್ಕೃತ ನ[ವ]ಪದಾರ್ಥದೊಳ್ ಜ್ಞಾನಮಯಂ
ಜೀವಂ ದರ್ಶನಮಯನದ
ನೇವೇೞ್ವುದನಾದಿ ನಿಧನನಂಗ ಪ್ರಮಿತಂ ॥ ೪೮ ॥

ಹಿಂಸೆ ಪುಸಿ ಕಳವು ರತಿ ರಾ
ಗಂ ಸಕಳಪರಿಗ್ರಹಂಗಳೆಂಬುದನಱಿದ
ರ್ಥಂ ಸಕಳಮೆಂದು ತೊಱೆವುದು
ಸಂಸಾರದೊಳಣು ಮಹಾವ್ರತಂಗಳ್ ಕ್ರಮದಿಂ ॥ ೪೯ ॥

---

೪೫. ಸಮ್ಯಗ್‌ದರ್ಶನ, ಸಮ್ಯಗ್‌ಜ್ಞಾನ ಹಾಗು ಸಮ್ಯಗ್‌ಚಾರಿತ್ರ ಇವುಗಳನ್ನು ಸಾಧಿಸುವುದೇ ಧರ್ಮ; ಇದರಿಂದ ಎಲ್ಲ ಬಾಧೆಗಳೂ ನಿವಾರಣೆಯಾಗುತ್ತವೆ. ಇವುಗಳಿಲ್ಲದೆ ಹೋದರೆ ಪ್ರಾಣಿಗಳಿಗೆ ವ್ಯಾಧಿಗಳು ಒದಗುತ್ತವೆ, ಅಹಿತವಾಗುತ್ತದೆ.

೪೬. ಜೀವಾಜೀವ ಮೊದಲಾದ ಸಪ್ತತತ್ತ್ವಗಳಲ್ಲಿಯ ಶ್ರದ್ಧೆಯೇ ಸಮ್ಯಕ್ತ್ವ; ಅದು ನಿಸರ್ಗ ಸಮ್ಯಗ್‌ದರ್ಶನ ಮತ್ತು ಅಧಿಗಮಜ ಸಮ್ಯಗ್‌ದರ್ಶನ ಎಂದು ಎರಡು ವಿಧವಾಗಿದೆ (ತಾನಾಗಿ ಉಂಟಾಗುವ ಶ್ರದ್ಧೆ ನಿಸರ್ಗ; ಇನ್ನೊಬ್ಬರ ಪ್ರಬೋಧನೆಯಿಂದ ಒದಗುವುದು ಅಧಿಗಮಜ).

೪೭. ಲೋಕ, ಅಲೋಕ ಮೊದಲಾದ ಸರ್ವಪದಾರ್ಥಗಳ ಯಥಾರ್ಥಜ್ಞಾನವೆ ಸಮ್ಯಗ್‌ಜ್ಞಾನ; ನಿಂದ್ಯವೂ ಅಹಿತಕಾರಿಯೂ ಆದ ಪಾಪಾಚರಣೆಯನ್ನು ಸಂಪೂರ್ಣವಾಗಿ ತೊರೆದು ಸದಾಚರಣೆಯಲ್ಲಿರುವುದು ಸಮ್ಯಗ್‌ಚಾರಿತ್ರ. ಪರಲೋಕವಾಗಲಿ, ಈ ಲೋಕವಾಗಲಿ ಎರಡೂ ಇದಕ್ಕೆ ಅಧೀನವಾಗಿವೆ.

೪೮. ಜೀವಾದಿ ಸಪ್ತತತ್ತ್ವಗಳಲ್ಲಿಯೂ ನವಪದಾರ್ಥಗಳಲ್ಲಿಯೂ ಮೊದಲನೆಯದಾದ ಜೀವ ಎಂಬುದು ಜ್ಞಾನ ಮತ್ತು ದರ್ಶನವೆಂಬೆರಡು ಗುಣಗಳಿಂದ ಕೂಡಿದೆ. (ಅನೇಕ) ದೇಹಗಳನ್ನು ಧರಿಸಿ ಆಯಾ ಪ್ರಮಾಣವನ್ನು ಹೊಂದಿದರೂ ಜೀವಕ್ಕೆ ಆದಿಯಿಲ್ಲ, ಅಂತವೂ ಇಲ್ಲ. ಅದನ್ನು ಏನೆಂದು ಬಣ್ಣಿಸುವುದು?

೪೯. ಹಿಂಸೆ, ಅಸತ್ಯ, ಕಳವು, ರತಿಯಲ್ಲಿ ಆಸಕ್ತಿ, ಹಾಗು ಸಕಲ ಪರಿಗ್ರಹ—ಇವುಗಳನ್ನು ಅರಿತು ಬಿಟ್ಟು ಬಿಡಬೇಕು. ಇದಕ್ಕೆ ಅಣುವ್ರತವೆಂದೂ ಮಹಾವ್ರತವೆಂದೂ ಹೇಳುತ್ತಾರೆ. (ಗೃಹಸ್ಥರ ಆಚರಣೆಗಾಗಿ ಪರಿಮಿತವಾದುದು ಅಣುವ್ರತ; ವಿರಕ್ತರು ಆಚರಿಸುವ ಕಠೋರವಾದ ಸಂಪೂರ್ಣ ತ್ಯಾಗವು ಮಹಾವ್ರತ.)

---

1. ಳಿಮ್ಮ (ಅ) 2. ರ (ಮ)

ವ॥ ಮತ್ತಂ ಮಿಥ್ಯಾವಿರತಿಪ್ರಮಾದ ಕಷಾಯ ಯೋಗಾಭಿಧಾನ ಬಂಧಹೇತೂಚ್ಚನೀಚಕರ್ಮ ಪರಿನಿರ್ಮಿತ ಚತುರ್ಗತ್ಯುಪಲಕ್ಷಿತಂ ಸಂಸಾರ ಸಾಗಾರ ನಿರಗಾರ ಧರ್ಮದ್ವೈತದೊಳ್ ದಾನಪೂಜಾ ಶೀಲೋಪವಾಸ ಭೇದಭಿನ್ನಂ ಗೃಹೀತಧರ್ಮಮಲ್ಲಿಯುಂ ಆಹಾರಾಭಯ ಭೈಷಜ್ಯ ಶಾಸ್ತ್ರಭೇದದಿಂ ದಾನಂ ಚತುರ್ವಿಧಂ ಇಂದ್ರ ಚಕ್ರವರ್ತ್ಯಾದಿ ನಿತ್ಯ ನಿರ್ವರ್ತ್ಯಮಾನಂ ಮಹಾಮಹ ಸರ್ವತೋಭದ್ರಾದಿಕಂ ಪೂಜಾ ವಿಧಾನಮನೇಕವಿಧಂ ವ್ರತಪರಿರಕ್ಷಣಂ ಶೀಲಂ ಸಾಕಾರ ನಿರಾಕಾರ ವಿರಹಿತಮುಪವಾಸಂ ಮತ್ತಮುಪಾಸಕಗುಣ ಸ್ಥಾನಂಗಳ್—

ಸ್ರ॥ ಸಮ್ಯಕ್ತ್ವಂ ಸದ್ವ್ರತೌಘಂ [1]ಸ[1]ಮತೆ [2]ಶ[2]ಮಯುತಂ ಪ್ರೋಷ[3]ಧಂ[3] ಗುಲ್ಮವಲ್ಲೀ
ಸಾಮ್ಯೋರ್ವೀಜ ಪ್ರಘಾತಂ ರಜನಿಸುರತರಾಗಂ ಮಹದ್ಬ್ರಹ್ಮಚರ್ಯಂ
ಕಾಮ್ಯಾರಂಭೋಪಹಾನಂ ಪರಿಹೃತ ಸಕಲಗ್ರಂಥಮಸ್ತಾನುಮೋದಂ
ಭೂಮ್ಯುದ್ದಿಷ್ಟ ಪ್ರದೇಶ ತ್ಯಜನಮಱಿವುದೇಕಾದಶಂ ಖೇಚರೇಂದ್ರಾ ॥ ೫೦ ॥

ವ॥ ಮತ್ತಂ ಯತಿನಿಕಾಯದ ವಿಶದ ದಶ ಧರ್ಮಂಗಳೊಳ್—

ಕಂ॥ ಪ್ರವರಕ್ಷಮೆ ಮಾರ್ದವಮಾ
ರ್ಜವಂ ಮಹತ್ಸತ್ಯಮುಚಿತಶೌಚಂ ಯಮಮಾ
ಸವಿಶೇಷ ತಪಸ್ತ್ಯಾಗಂ
ವಿವಿಧಾಕಿಂಚನ್ಯಮಪಗತ ಸ್ತ್ರೀಸಂಗಂ ॥ ೫೧ ॥

ವ॥ ಮಿಥ್ಯಾತ್ವ (ಜಿನಧರ್ಮವನ್ನು ನಂಬದೆ ಇತರ ಧರ್ಮಗಳನ್ನು ಆಶ್ರಯಿಸುವುದು), ಅವಿರತಿ (ಹಿಂಸೆಯೇ ಮೊದಲಾದ ಪಾಪಾಚರಣೆಗಳನ್ನು ಬಿಡದಿರುವುದು), ಕಷಾಯ (ಕ್ರೋಧ, ಮಾನ, ಮಾಯಾ ಮತ್ತು ಲೋಭಗಳು), ಯೋಗ (ಮನೋವಾಕ್ಕಾಯಗಳ ವ್ಯಾಪಾರದಿಂದ ಆತ್ಮಪ್ರದೇಶದಲ್ಲಿ ಉಂಟಾಗುವ ಚಂಚಲತೆ)—ಇವು ಜೀವನಿಗೆ ಬಂಧ ಕಾರಣಗಳು. ಉಚ್ಚನೀಚಕರ್ಮಗಳ ಮೇರೆಗೆ ಜೀವನು (ದೇವ, ಮಾನುಷ, ತಿರ್ಯಕ್ ಹಾಗು ನಾರಕವೆಂಬ) ನಾಲ್ಕು ಗತಿಗಳಲ್ಲಿ ಸುತ್ತುತ್ತಾನೆ. ಇದನ್ನೇ ಸಂಸಾರವೆನ್ನುವುದು. ಧರ್ಮಾಚರಣೆಯಲ್ಲಿ ಸಾಗಾರ (ಗೃಹಸ್ಥ) ಮತ್ತು ನಿರಗಾರ (ಸಂನ್ಯಾಸಿ) ಎಂದು ಎರಡು ತೆರ. (ಗೃಹಸ್ಥ ಧರ್ಮದಲ್ಲಿ ಆಚರಿಸಬೇಕಾದ) ದಾನ, ಪೂಜೆ, ಶೀಲ, ಉಪವಾಸ—ಇವುಗಳಲ್ಲಿ ಒಳಭೇದಗಳುಂಟು. ಆಹಾರ, ಅಭಯ, ಭೈಷಜ್ಯ ಮತ್ತು ಶಾಸ್ತ್ರ ಎಂದು ದಾನ ನಾಲ್ಕು ಬಗೆ; ಚಕ್ರವರ್ತಿಗಳೂ ಇಂದ್ರನೂ ನಿತ್ಯವಾಗಿ ಮಾಡುವ ಮಹಾಮಹ, ಸರ್ವತೋಭದ್ರ ಮುಂತಾಗಿ ಪೂಜೆ ಅನೇಕ ವಿಧವಾಗಿದೆ. ವ್ರತವನ್ನು ಪಾಲಿಸಿಕೊಂಡುಬರುವುದು ಶೀಲ. ಉಪವಾಸದಲ್ಲಿ ಸಾಕಾರ (ನಿರ್ದಿಷ್ಟ ಫಲಾಪೇಕ್ಷೆಯಿಂದ ಕೈಕೊಳ್ಳುವ ಸೀಮಿತಕಾಲದ ಉಪವಾಸ) ಮತ್ತು ನಿರಾಕಾರ (ಯಾವುದೇ ಫಲನಿರೀಕ್ಷಣೆಯಿಲ್ಲದೆ ತಪಸ್ಸಿಗಾಗಿ ಆಚರಿಸುವ ಉಪವಾಸ) ಎಂಬೆರಡು ಪ್ರಕಾರಗಳಿವೆ ಮತ್ತು ಉಪಾಸಕ ಗುಣಸ್ಥಾನಗಳು (ಯಾವುವೆಂದರೆ)—

೫೦. ಸಮ್ಯಕ್ತ್ವ (ಅಣುವ್ರತ, ಶಿಕ್ಷಾವ್ರತ ಮೊದಲಾದ ವ್ರತಗಳು), ಸಾಮಾಯಿಕ, ಪ್ರೋಷಧ, ಸಚಿತ್ತ ವಿರತಿ (ಸಜೀವವಾದ ಹೊದರು, ಬಳ್ಳಿ, ಮರ ಮೊದಲಾದವುಗಳಿಂದಾದ ಕಾಯಿಪಲ್ಯಗಳನ್ನು ತಿನ್ನದಿರುವುದು), ರಾತ್ರಿಯಲ್ಲಿ ಮಾತ್ರ ಸುರತಾಸಕ್ತಿ, ಬ್ರಹ್ಮಚರ್ಯ (ಪರಸ್ತ್ರೀ ಸಂಗತ್ಯಾಗ) ಜೀವಹಿಂಸೆಯಾಗುವ ಐಹಿಕ ವೃತ್ತಿಗಳನ್ನು ಕೈಕೊಳ್ಳದಿರುವುದು, ಪರಿಗ್ರಹತ್ಯಾಗ, ಅನುಮತಿತ್ಯಾಗ, ಉದ್ದಿಷ್ಟ ಪ್ರದೇಶತ್ಯಾಗ—ಇವೇ ಆ ಹನ್ನೊಂದೆಂದು ತಿಳಿ.

ವ॥ ಇನ್ನು ಯತಿಗಳು ಪಾಲಿಸಬೇಕಾದ ಹತ್ತು ಧರ್ಮಗಳಾವುವೆಂದರೆ :

೫೧. ಉತ್ತಮ ಕ್ಷಮೆ, ಮಾರ್ದವ, ಆರ್ಜವ, ಸತ್ಯ, ಶೌಚ, ಸಂಯಮ, ತಪ, ತ್ಯಾಗ, ಅಕಿಂಚನ್ಯ ಮತ್ತು ಬ್ರಹ್ಮಚರ್ಯ.

---

1. ಶ (ಮ) 2. ಸ (ಮ) 3. ದಂ (ಅ)

ಹರಿಣೀವೃತ್ತಂ ॥ ನಡೆವ ನುಡಿವಾಹಾರಂಗೊಳ್ವೆಯ್ದಿ ಕೊಳ್ವಿಡುವಯ್ದುವೊ
ಳ್ಪಡಕಮೆ ಸಮಿತ್ಯಾಖ್ಯಂ ಚೇತೋವಚಸ್ತನು ಗುಪ್ತಿ ಮೂ
ಱೊಡಲಡಿಗೆ ವರ್ಪನ್ನಂ ಬೇಟ್ಕುಂ ಮುಮುಕ್ಷುಗಿದೆಂದೊಡಂ
ಬಡು ಜಿನವಚಸ್ತಂಭಂ ನಂಬಭ್ರಗಾಮಿ ಶಿಖಾಮಣೀ ॥ ೫೨ ॥

ಕಂ॥ [1]ಅ[1]ಕ್ಷಾಂತಿ ಲೋಭ ಹಾಸ್ಯ ಭ
ಯಕ್ಷಯ ಸೂತ್ರಾನುಭಾಷಣಾ ನಿಯಮಮಿವ
ಯ್ದಕ್ಷೂಣ ಸತ್ಯಮಱಿದು ಪ
ರೀಕ್ಷಿಸಿ ಕೇಳ್ ಮುನಿಗೆ ಗಗನಚರಕುಲತಿಲಕಾ ॥ ೫೩ ॥

ಯುವತಿಕಥಾಲೋಕನ ಭೂ
ತವಿಭವ ಚಿಂತಾಂಗ ಸಂಸ್ಕೃತಂ ವೃಷ್ಯರಸಾ
ಭ್ಯವಹಾರತ್ಯಜನಂ ಪಂ
ಚವಿಧಂ ಬ್ರಹ್ಮವ್ರತಂ ಜಿನೇಶ್ವರ ಮತದೊಳ್ ॥ ೫೪ ॥

ವ॥ ಮತ್ತಮದು ಬಾದರ ರೂಪದಿಂ ತ್ರಿವಿಧಂ—

ಕಂ॥ ಜನನಿ ಸುತೆ ಭಗಿನಿ ವಯಸದೊ
ಳೆನಗಧಿಕೆಯುಮೂನೆಯುಂ ಸಮಾನೆಯುಮೆಂದಂ
ಗನೆಯನವಲೋಕಿಸುವುದೆನೆ
ಮನೋಹರಂ ಬ್ರಹ್ಮಚರ್ಯಮಾರ್ಯ ಪ್ರಣುತಂ ॥ ೫೫ ॥

---

೫೨. ನಡೆವಲ್ಲಿ, ನುಡಿವಲ್ಲಿ, ಆಹಾರ ಸೇವನೆಯಲ್ಲಿ, ಏನನ್ನಾದರೂ ಕೈಯಿಂದ ಎತ್ತಿಕೊಳ್ಳುವಲ್ಲಿ, ಇಡುವಲ್ಲಿ ಜೀವಹಿಂಸೆಯಾಗದಂತೆ ಎಚ್ಚರದಿಂದ ನಡೆಯುವುದು ಪಂಚಸಮಿತಿ; ಮನಸ್ಸು, ಮಾತು ಮತ್ತು ದೇಹ—ಇವು ಮೂರನ್ನೂ ಸಂಯಮಿಸುವುದು ತ್ರಿಗುಪ್ತಿ; ಮೋಕ್ಷವನ್ನು ಬಯಸುವವನು ಇವುಗಳನ್ನು ಯಾವಜ್ಜೀವವೂ ಪಾಲಿಸಬೇಕು. ಜಿನವಾಣಿಯಿದು. ಖೇಚರಶಿಖಾಮಣಿಯೇ, ಇದನ್ನು ನಂಬು.

೫೩. ಅಸಹನೆ, ಲೋಭ, ಹಾಸ್ಯ ಮತ್ತು ಭಯ—ಎಂಬ ನಾಲ್ಕೂ ವಿಕಾರಗಳನ್ನು ತ್ಯಜಿಸಿ, ಧರ್ಮಸೂತ್ರಗಳಿಗೆ ಅನುಸಾರವಾಗಿ ಮಾತಾಡುವುದು ಸತ್ಯವ್ರತದ ಮುಖ್ಯ ಭಾವನೆ. ವಿದ್ಯಾಧರ ಶ್ರೇಷ್ಠನೇ, ಇವನ್ನು ಅರಿತುಕೊಂಡು, ಪರೀಕ್ಷಿಸಿ ಮುನಿಗಳನ್ನು ಕೇಳು.

೫೪. ಸ್ತ್ರೀಯರ ಕಥಾಶ್ರವಣ, ದರ್ಶನ, ಅವರೊಡನೆ ಈ ಮೊದಲು ಭೋಗಿಸಿದ ಸುಖದ ಸ್ಮರಣೆ, ಅವರನ್ನು ಆಕರ್ಷಿಸುವಂತೆ ದೇಹಾಲಂಕರಣ, ಕಾಮವಿಕಾರವನ್ನು ವೃದ್ಧಿಪಡಿಸುವಂತಹ ಆಹಾರಸೇವನೆ—ಈ ಐದು ವಿಷಯಗಳನ್ನು ತ್ಯಜಿಸುವುದು ಪಂಚವಿಧ ಬ್ರಹ್ಮಚರ್ಯವೆನಿಸುವುದು.

ವ॥ ಮತ್ತು ಬಾದರ ರೂಪದಿಂದ ಅದು ಮೂರು ಬಗೆಯಾಗಿದೆ :

೫೫. ಸ್ತ್ರೀಯನ್ನು ಕಂಡಾಗ ಈಕೆ ನನಗೆ ತಾಯಿ, ಮಗಳು, ಸೋದರಿ ಎಂದಾಗಲಿ, ವಯಸ್ಸಿನಲ್ಲಿ ನನಗಿಂತ ಹಿರಿಯಳು, ಒಲು ಚಿಕ್ಕವಳು ಎಂದಾಗಲಿ, ನನ್ನಂತೆಯೆ (ವ್ರತನಿಷ್ಠೆ) ಎಂದಾಗಲಿ ಅವಳನ್ನು ಭಾವಿಸಬೇಕು. ಆರ್ಯರಿಂದ ಸ್ತುತವಾದ ಬ್ರಹ್ಮಚರ್ಯವೆಂಬುದು ಹೀಗೆ (ಆಚರಿಸಿದರೆ) ಮನೋಹರವಾಗಿರುವುದು.

---

1. ಅ (ಮ)

ಕಂ॥ ಬಯಸುವ ಬಯಸಿದ ಪಂಚೇಂ
ದ್ರಿಯ ವಿಷಯಂಗಳನತಿಪ್ರಿಯಂ ಸಂತತಮ
ಪ್ರಿಯಮೆಂಬಿವನುೞಿದ ತಪೋ
ನಿಯಮಮಂ ನಿಷ್ಕಿಂಚಿನತ್ವಮರ್ಹನ್ಮತದೊಳ್ ॥ ೫೬ ॥

ವ॥ ಎಂದು ದೇಶಸಕಲ ಪ್ರವರಗುಣಸ್ಥಾನ ವ್ರತರೂಪಮಂ ಸಂಕ್ಷೇಪದೊಳ್ ವಿಜಯ ಕೇವಳಿ ಬೆಸಸುವುದುಂ ವಿಬುಧವನಜ ವನಹಂಸ ನೇಕಾದಶ ವಿಧಶ್ರಾವಕ ವ್ರತಮೆಲ್ಲಮಂ ಹೃದಯಂಗಮಾಧಿಕ ಸಮ್ಯಗ್ದರ್ಶನ ಪುರಸ್ಸರಂ ತನಗಲಂಕಾರಂ ಮಾಡಿ—

ಕಂ॥ ಕ್ಷಪಿತ ದುರಿತನ ವಚಃಕ
ರ್ಣ ಪೂರಮಂ ಶ್ರವಣ ನಿಕಟದೊಳ್ತಾಳ್ದಿ ಪರಂ
ತಪನಾ ಜಿನಚಂದ್ರಂ ಜೈ
ನ ಪಾದನತ ಮಕುಟ ವರ್ತಿಯಂ ಬಿನ್ನವಿಕುಂ ॥ ೫೭ ॥

ಮದನುಜೆಯೊಳಶನಿ ಘೋಷಂ
ಗದೇಕೆ ಪಿ[1][ರಿ]ದಾಗ್ರಹಂ [2]ಕ[ಳ]ಲ್ವೇಟ್ಟಿ[2]ನದಂ
ತ್ರಿದಶೇಂದ್ರವಂದ್ಯ ಬೆಸನೆನೆ
ಪೊದಟ್ಟುದರ್ಹನ್ಮುಖೇಂದು ದಿವ್ಯ ನಿನಾದಂ ॥ ೫೮ ॥

ಸ್ರ॥ ನಾನಾಭಾಷಾತ್ಮಕಂ ಮಾನವ ದಿವಿಜ ಸದಃಕರ್ಣಪಾತ್ರಕ್ಕೆ ತದ್ವಿ
ಜ್ಞಾನಂ ತಂತಮ್ಮ ಭಾಷಾರವದಿನೆಸೆಯೆ ಪೊಣ್ಮಿತ್ತು ದಿವ್ಯಧ್ವನಿ ಪ್ರಾ
ದಾನಂ ಪೇೞ್ದಂ ಜಿನಂ ಕೇಳ್ದೊರಖಿಳ ವಿನೇಯಾರ್ಥಿಗಳ್ ತತ್ಕಥಾ ಸಂ
ತಾನಂ ಧರ್ಮಶ್ರವಃಸುಂದರಮೆನೆ ಪೆಱದೇವಣ್ಣಿಪೊಂ ಬಣ್ಣಿಪಣ್ಣಂ ॥ ೫೯ ॥

---

೫೬. ಇದು ನಾನು ಇಷ್ಟಪಡುವ ವಿಷಯ, ಇದು ನನಗೆ ಬೇಡಾದುದು ಎಂದು ಇಂದ್ರಿಯ ವಿಷಯಗಳನ್ನು ವಿಂಗಡಿಸಿ ಅವುಗಳಲ್ಲಿ ಅತಿ ಪ್ರೇಮವನ್ನಾಗಲಿ, ದ್ವೇಷವನ್ನಾಗಲಿ ಇಟ್ಟುಕೊಳ್ಳದೆ ತಪೋ ನಿಯಮವನ್ನು ಆಚರಿಸುವುದೆ ನಿಷ್ಕಿಂಚನತ್ವ.

ವ॥ ಈ ಮೇರೆಗೆ ದೇಶಗುಣ ಹಾಗು ಸಕಲಗುಣ ಸ್ವರೂಪವಾದ (ಗೃಹಸ್ಥರಿಗೆ ಸೀಮಿತವಾಗಿಯೂ ಸಂನ್ಯಾಸಿಗಳಿಗೆ ಕಟ್ಟುನಿಟ್ಟಾಗಿಯೂ ಇರುವ) ವ್ರತರೂಪವನ್ನು ವಿಜಯಕೇವಳಿಗಳು ಸಂಗ್ರಹವಾಗಿ ತಿಳಿಸಿ ಹೇಳಿದರು. ಬುಧಜನ ಪ್ರಿಯನಾದ ಅಮಿತತೇಜನು ಈ ಹನ್ನೊಂದು ಬಗೆಯ ಶ್ರಾವಕವ್ರತವನ್ನು ಸಮ್ಯಗ್ದರ್ಶನ ಪೂರ್ವಕವಾಗಿ ಕೈಕೊಂಡನು.

೫೭. ಪಾಪದೂರರಾದ ಕೇವಳಿಗಳ ವಾಣಿಯನ್ನು ಕರ್ಣಪೂರದಂತೆ ಕಿವಿಗಳಲ್ಲಿ ಧರಿಸಿ ಶತ್ರುಪೀಡಕನಾದ ಆ ಜಿನಚಂದ್ರನು ಅವರಿಗೆ ಹೀಗೆಂದು ಬಿನ್ನವಿಸಿದನು :

೫೮. "ನನ್ನ ತಂಗಿಯನ್ನು ಅಪಹರಿಸಿಕೊಂಡು ಹೋಗುವಂತಹ ಆಗ್ರಹ ಅಶಿನಿಘೋಷನಿಗೆ ಅದೇಕೆ ಉಂಟಾಯಿತು ? ದೇವೇಂದ್ರಪೂಜ್ಯನೆ ತಿಳಿಸು" ಎನ್ನಲಾಗಿ ಆ ಜಿನನ ಮುಖದಿಂದ ದಿವ್ಯವಾಗಿ ಹೊರಹೊಮ್ಮಿತು.

೫೯. ನಾನಾ ಭಾಷಾತ್ಮಕವಾದ ಆ ದಿವ್ಯವಾಣಿ ಆಸ್ಥಾನದಲ್ಲಿರುವವರ ಕಿವಿಗೆ ಬಿದ್ದಾಗ, ಅವರವರ ಭಾಷೆಯಾಗಿಯೆ ಕೇಳಿಸಿತು. ಹೇಳಿದವನು ಜಿನೇಶ್ವರ, ಕೇಳಿದವರು ಧರ್ಮಾನುರಾಗಿಗಳು ; ಆ ಕಥೆಯಾದರೋ ಸುಂದರವಾದ ಧರ್ಮಶ್ರವಣ ಎಂದಮೇಲೆ ಅದನ್ನು ಬಣ್ಣಿಸುವವನು ಏನೆಂದು ಬಣ್ಣಿಸುವನು ?

---

1. ಱ (ಮ) 2. ಕಱಲ್ವೇಟ್ಟು (ಮ) ಕಳಲ್ವೇಟ್ಟು (ಅ)

ವ॥ ಎಂಬ ಪೆಂಪು ದೊರೆವೆತ್ತು ಕಥಾರಸಮತಿಶಯಯುಮುಂ ಪೊಂಪುಳಿಯೋಳಿಯುಮಾಗೆ ವಿಜಯ ಕೇವಳಿಗಳಿಂತೆಂದು ಬೆಸಸಿದರೀ ಜಂಬೂದ್ರುಮೋಪಲಕ್ಷಿತದ್ವೀಪದ ದಕ್ಷಿಣ ಭರತದ ಮಳಯ ವಿಷಯದ ರತ್ನಪುರಮಂ ಶ್ರೀಷೇಣನೆಂಬಸರಸನಾಳ್ವೊನಾತಂಗೆ—

ಚಂ॥ ಸೊಗಯಿಸೆ ಸಿಂಹನಂದೆಯುಮನಿಂದಿತೆಯುಂ ತನುಜನ್ಮ ಜನ್ಮಭೂ
ಮಿಗಳವರಿಂದಮಾಮಹಿಭುಜಂ ಕರಮೊಪ್ಪಿದನೈಂದ್ರವಾರುಣಾ
ಶೆಗಳಿನತೀವ ರಕ್ತನಿನನಗ್ಗಳವೊಪ್ಪುವವೋ[1]ಲ[1]ಧೀಶನಾ
ಕೆಗಳೊಳಪತ್ಯರಂ ಪಡೆದನಿರ್ವರನಿಂದ್ರನುಪೇಂದ್ರನೆಂಬರಂ ॥ ೬೦ ॥

ಕಂ॥ ಆ ಭೂಪನ ಭುಜ[2]ಯುಗಬಲ[2]
ವೈಭವಮೆ ತನೂಜಯುಗಳಮಾದುದು ವಿದ್ಯಾ
ಪ್ರಾಭವದಿನೆಸೆದು ಯೌವನ
ಶೋಭೆಗಡರ್ಪಾದರೆನಿಸಿದರ್ ಪ್ರಿಯತನಯರ್ ॥ ೬೧ ॥

ವ॥ ಎನಿಸಿ ಭವ್ಯತಾ ಗುಣಮಣಿ ಜನ್ಮಸ್ಥಾನಮಾಗಿ ವಿಜಿತಾಹಿತ ನರೇಂದ್ರಾತ್ಮೇಚ್ಛಾ ಸೇನಾ ಪರಿಚ್ಛದರಪ್ಪರವರವರಿರ್ವರೊಳಂ ಕೃತದಾರಪರಿಗ್ರಹನಿಂದ್ರಂ ಯುವರಾಜ್ಯಪದದೊಳ್ ನಿಂದು ತನ್ನ ಶ್ರೀಮತಿಯೆಂಬರಸಿಯೊಳ್ ಕಳಾಭಿಸೂತ ಚಂದ್ರಪ್ರತಿಚ್ಛಂದಂ ಚಂದ್ರನೆಂಬೊಂ ಮಗನಂ ಪಡೆದು ಸಂತಸದಿಂದಿರ್ಪನಂ ಆದಿರಾಜ ಪರಂಪರಾ ಪುತ್ರ ಪೌತ್ರನಕಳಂಕಾಚಾರಸಾರಂ ಸುಖದೊಳರಸುಗೆಯ್ಯೆ ಮತ್ತೊಂದು ದೆವಸದೊಳೊರ್ವಳ್—

ಉ॥ ಸುಂದರಿ ಸಾಧ್ವಸಾಕುಳೆ ಸಭಾಂತರಮಂ ಪುಗುತಂದು ರಕ್ಷ ರ
ಕ್ಷೆಂದು ನೃಪಂಗೆ ಪುಯ್ಯಲಿಡುತುಂ ನಿಲೆ ಭೂಪನಭೂತಪೂರ್ವಮಾ
ಕ್ರಂದನಮೆಂದುಮೆನ್ನರಸಿನೊಳ್ ನಗೆಯೊಳ್ ಮೊದಲಾಗೆ ಕೇಳಲಾ
ಗಿಂದಿದು ಚೋದ್ಯಮೆಂದುಸಿರದಿರ್ದಿನಿಸಂ ಖುತಭಂಗ ಶಂಕೆಯಿಂ ॥ ೬೨ ॥

ವ॥ ಇಂತಹ ಮಹಿಮೆವೆತ್ತು ಕಥಾರಸವು ಅತಿಶಯವಾಗುವಂತೆ ವಿಜಯಕೇವಳಿಗಳು ಹೀಗೆಂದು ವಿವರಿಸಿದರು : "ಈ ಜಂಬೂದ್ವೀಪದ ದಕ್ಷಿಣ ಭಾರತದಲ್ಲಿ ಮಳಯವಿಷಯದ ರತ್ನಪುರಕ್ಕೆ ಶ್ರೀಷೇಣನೆಂಬುವನು ದೊರೆ; ಆತನಿಗೆ—

೬೦. ಸಿಂಹನಂದೆ ಮತ್ತು ಅನಿಂದಿತೆ ಎಂಬಿಬ್ಬರು ಹೆಂಡಿರು. ಪೂರ್ವದಿಕ್ಕಿನಲ್ಲಿಯೂ ಪಶ್ಚಿಮದಲ್ಲಿಯೂ ಅತ್ಯಂತ "ರಕ್ತ" (ಕೆಂಪು ವರ್ಣವುಳ್ಳ)ನಾಗಿ ಶೋಭಿಸುವ ಸೂರ್ಯನಂತೆ ಆ ರಾಜನು ಇವರಿಬ್ಬರಲ್ಲಿ "ರಕ್ತ" (ಅನುರಾಗವುಳ್ಳವ)ನಾಗಿದ್ದು, ಇಂದ್ರ ಮತ್ತು ಉಪೇಂದ್ರ ಎಂಬಿಬ್ಬರು ಮಕ್ಕಳನ್ನು ಪಡೆದನು.

೬೧. ಆ ರಾಜನ ತೋಳ್ಬಲದ ವೈಭವವೆ ಎರಡು ರೂಪಾದಂತೆ, ಆ ಮಕ್ಕಳು ಬಲಶಾಲಿಗಳಾಗಿ ವಿದ್ಯಾಭ್ಯಾಸವನ್ನು ಮುಗಿಸಿ, ಯೌವನಾವಸ್ಥೆಯನ್ನು ಪಡೆದರು.

ವ॥ ಆ ಇಬ್ಬರೂ ಪರಾಕ್ರಮದಿಂದ ಶತ್ರುರಾಜರನ್ನೆಲ್ಲ ಗೆದ್ದು ಸುಖವಾಗಿದ್ದರು. ಅವರಲ್ಲಿ ಹಿರಿಯನಾದ ಇಂದ್ರನು ಯುವರಾಜ ಪದವಿಯನ್ನೇರಿದನು. ಶ್ರೀಮತಿಯೆಂಬ ಅರಸಿಯಲ್ಲಿ ಅವನಿಗೆ ಕಲಾಪೂರ್ಣನಾದ ಚಂದ್ರನ ಪ್ರತಿಬಿಂಬವೊ ಏನೊ ಎಂಬಂತಹ ಚಂದ್ರನೆಂಬ ಮಗನಾದನು. ಹೀಗೆ ಮಕ್ಕಳು ಮೊಮ್ಮಕ್ಕಳೊಂದಿಗೆ ಆ ಅರಸನು ಸದಾಚಾರನಾಗಿ ರಾಜ್ಯವಾಳುತ್ತಾ ಇರಲಾಗಿ ಒಂದು ದಿವಸ ಒಬ್ಬ

೬೨. ಸುಂದರಿಯು ಭಯಭೀತಳಾಗಿ ಒಡ್ಡೋಲಗವನ್ನು ಹೊಗುತ್ತ "ಕಾಪಾಡಿ, ಕಾಪಾಡಿ" ಎಂದು ಹುಯ್ಯಲಿಟ್ಟಳು. ಆಗ ಆ ರಾಜನು, "ಇದೇನು ಇಂತಹ ಆಕ್ರಂದನವನ್ನು ಹಿಂದೆಂದೂ ನಾವು ಕೇಳಿಲ್ಲ. ನಮ್ಮ ಆಳಿಕೆಯಲ್ಲಿ ವಿನೋದಕ್ಕಾಗಿ ಕೂಡ ಇಂತಹ ಸನ್ನಿವೇಶ ನಮ್ಮ ಕಿವಿಗೆ ಬಿದ್ದುದಿಲ್ಲ. ತುಂಬ ಸೋಜಿಗವಾಗಿದೆ" ಎಂದುಕೊಂಡು ನಸುಹೊತ್ತು ನೀರವವಾಗಿದ್ದು—

---

1. ಲ್ವ (ಅ) 2. ಬಲಯುಗ (ಅ)

ವ|| ಬಳಿಕವಾಕೆಯುಂ ನಿನಗಿನಿವಿ[1][ರಿ][1]ದಃ ಭಯಾವೇಶಮಾರದೆಸೆಯಿಂದಮಾದುದೆಂದರಸಂ ಬೆಸಗೊಳ್ವುದುಮಾಬಾಲಿಕೆ ಗದ್ಗದಕಂಠೆ ವಾಮಕರಪಲ್ಲವಾಂಗುಳಿ ನಖಾಕ್ಷಿಪ್ತಾಶ್ರು[2]ರ[2]ವೆ ದಕ್ಷಿಣ ಹಸ್ತಾಚ್ಛಾದ್ಯಮಾನ ಸ್ತನಾಂಶುಕೆಯಾಗಿ ಬಿನ್ನವಿಕುಂ ನಿನ್ನ ಪುರೋಹಿತಂ ಸತ್ಯಕಿಗಂ ಜಂಬೂವತಿಗಂ ಪುಟ್ಟಿದೆನಾಂ ಸತ್ಯಭಾಮೆಯೆಂಬೆನೆನ್ನಂ ಕಪಿಳನೆಂಬೊಂಗೆ ಕೊಟ್ಟರ್ ಕೆಲಕಾಲಕ್ಕಾತನ ದುರಾಚರಣಕ್ಕಾಂ ಕೊಕ್ಕರಿಸುತ್ತಿರೆ ತಮ್ಮೀಯ ಜನಕನೆಮ್ಮ ಮನೆಗೆ ಬಿರ್ದುವಂದನಂ ಸನ್ಮಾನ ದಾನಾದಿಗಳೊಳ್ ಸಂತಸಂ ಬಡಿಸಿ ಮನಂಗೊಂಡೊಳಪೊಕ್ಕು ಬೆಸಗೊಳ್ವುದು ಮಾಮಹಾನುಭಾವನಿಂತೆಂದಂ ಮಗಧ ವಿಷಯದಚಲ ಗ್ರಾಮದೊಳ್ ಧರಣೀಜಟನೆಂಬೆನಾನೆನ್ನ ಪಾರ್ವಂತಿ ಯಶೋಭದ್ರೆಯೆಂಬಳೆನಗ ಮಾಕೆಗಂ ಶ್ರೀಭೂತಿಯುಂ ನಂದನಭೂತಿಯುಮೆಂಬರಿರ್ವರ್ ಕೂಸುಗಳೊಳರಾ[3]ನೆ[3]ನ್ನ ಗೃಹದಾಸಿಯನೊಳಗಿಟ್ಟಲ್ಲಿ ಪುಟ್ಟಿದನಿವಂ ಕಪಿಲ ನೆಂಬೊನೇಕಸಂಧಿಯಪ್ಪುದಱಿಂ ನಾನುಂ ಮತ್ತಿನ—

ಕಂ|| ಮತ್ತನಯರ್ಕಳನೋದಿಸೆ
ಮತ್ತಿವನಕ್ಲೇಶದಿಂ ಶ್ರುತಿ ಸ್ಮೃತಿ ಶಾಸ್ತ್ರೋ
ಪಾತ್ತಮುಖನಾಗೆ ಜಡರ
ಸ್ಮತ್ತನುಜರ್ ಕಲ್ಲದಿರೆ ತದಂಬಿಕೆ ಮುಳಿಸಿಂ ॥ ೬೩ ॥

ತೊಟ್ಟಿನ ಮಗನಧ್ಯಯನಮೆ
ಬಾಟಿಸ್ತೆ ಮದಾತ್ಮಜರ ಬುದ್ಧಿಯುಂ ವೃದ್ಧಿಯುಮೇಂ
ಬಾಟಿಸ್ತೆ ನಿನಗೆಂದಬಿಲ್ದಳ್
ತಟ್ಟಿರೆ ಸತಿ ಸುಮತಿ ಕುಮತಿ ಖೇದಾಂಧತೆಯಿಂ ॥ ೬೪ ॥

ವ|| ಬಳಿಕ "ನಿನಗೆ ಇಷ್ಟೊಂದು ಭೀತಿ ಯಾರಿಂದ ಆಯಿತು?" ಎಂದು ಕೇಳಿದನು. ಆಗ ಗದ್ಗದ ಕಂಠೆಯಾದ ಆ ಯುವತಿಯು ಎಡಗೈಯ ಬೆರಳುಗಳಿಂದ ಕಂಬನಿಗಳನ್ನು ಕೊಡಹುತ್ತ ಬಲಗೈಯಿಂದ ಎದೆಯ ಮೇಲಿನ ಸೆರಗನ್ನು ಸಾವರಿಸಿಕೊಳ್ಳುತ್ತ ಹೀಗೆಂದು ಬಿನ್ನವಿಸಿದಳು: "ನಿನ್ನ ಪುರೋಹಿತನಾದ ಸತ್ಯಕಿಗೂ ಜಂಬೂವತಿಗೂ ಹುಟ್ಟಿದ ನನಗೆ ಸತ್ಯಭಾಮೆಯೆಂದು ಹೆಸರು. ನನ್ನನ್ನು ಕಪಿಳನೆಂಬವನಿಗೆ ಮದುವೆ ಮಾಡಿಕೊಟ್ಟರು. ಕೆಲಸಮಯದಲ್ಲಿ ಆತನ ದುರಾಚರಣೆಯನ್ನು ಕಂಡು ನನಗೆ ಜುಗುಪ್ಸೆಯಾಯಿತು. ಅದೇ ಹೊತ್ತಿಗೆ ಆತನ ತಂದೆ ನಮ್ಮ ಮನೆಗೆ ಅತಿಥಿಯಾಗಿ ಬಂದನು. ಅವನನ್ನು ದಾನಪುರಃಸರವಾದ ಸತ್ಕಾರದಿಂದ ಸಂತೋಷಪಡಿಸಿ, ಆತನ ಮನವೊಲಿಸಿಕೊಂಡು ನಾನು ಆತನಿಗೆ (ಕಪಿಳನ ಪೂರ್ವವೃತ್ತಾಂತವೇನೆಂದು) ಕೇಳಿದೆನು. ಆತನು ಹೀಗೆಂದನು: 'ಮಗಧರಾಜ್ಯದಲ್ಲಿ ಅಚಲವೆಂಬ ಗ್ರಾಮವುಂಟು. ಅಲ್ಲಿ ಧರಣೀ ಜಟನೆಂದು ನನ್ನನ್ನು ಕರೆಯುತ್ತಾರೆ. ಯಶೋಭದ್ರೆಯೆಂದು ನನ್ನ ಹೆಂಡತಿಯ ಹೆಸರು. ನಮಗೆ ಶ್ರೀಭೂತಿ ಮತ್ತು ನಂದನಭೂತಿ ಎಂಬಿಬ್ಬರು ಮಕ್ಕಳುಂಟು. ನಿನ್ನ ಗಂಡನಾದ ಕಪಿಲನು ನನಗೆ ಒಬ್ಬ ದಾಸಿಯಲ್ಲಿ ಹುಟ್ಟಿದವನು. ಅವನು ಏಕಸಾಠಿಯಾಗಿದ್ದುದರಿಂದ

೬೩. ನಾನು ನನ್ನ ಮಕ್ಕಳಿಗೆ ಪಾಠ ಹೇಳುತ್ತಿರುವುದನ್ನು ಕೇಳುಕೇಳುತ್ತಲೆ ಸುಲಭವಾಗಿ ಕಲಿತುಕೊಂಡು ಶ್ರುತಿ, ಸ್ಮೃತಿ, ಶಾಸ್ತ್ರಗಳಲ್ಲೆಲ್ಲ ಪರಿಣತನಾದನು. ಆದರೆ ನನ್ನ ಔರಸಪುತ್ರರು ಮಂದಬುದ್ಧಿಗಳಾಗಿದ್ದು ಏನನ್ನೂ ಕಲಿಯದಾದರು ಆಗ ಅವರ ತಾಯಿ ಕೋಪದಿಂದ

೬೪. 'ನಿಮಗೆ ತೊತ್ತಿನ ಮಗನಿಗೆ ಪಾಠಹೇಳುವುದೇ ಪ್ರಯೋಜನವಾಯಿತು. ನನ್ನ ಮಕ್ಕಳಿಗೆ ಬುದ್ಧಿಯಾಗಲಿ ವೃದ್ಧಿಯಾಗಲಿ ಬರಲೆಂಬ ಬಯಕೆ ನಿಮಗಿದೆಯೇ?' ಎಂದು ನೊಂದು ನುಡಿದಳು. ಆಕೆ ಸ್ವಭಾವತಃ ಸದ್ಬುದ್ಧಿಯಾಗಿದ್ದರೂ ದುಃಖದಿಂದ ಮತಿಗೆಟ್ಟು ಹೀಗಾಡಿದಳು.

---

1. ಜಿ॰ (ಮ) 2. ಸ್ರ (ಮ) 3. ದೆ (ಮ)

ವ॥ ಮೆಲ್ಲನಾ ಕಾಂತೆಯುಸಧ್ಯಾಯನದೊಳ್ ಪ್ರತಿಬೋಧಿಸಲ್ ಬಂದಾಂ ನಿನ್ನ ಮಗಂದಿರನೋದಿಸುವಲ್ಲಿಗೊಡನೊಡನೆ ಬಂದಿವಂ ಕುಶಾಗ್ರಮತಿ ಕಲ್ಗುಂ ಮತ್ತಮಿವರ್ಕಳೇಗೆಯ್ದುಂ ಕಲಲಾಱ[1]ರಾನೇ[1]ಗೆಯ್ವೆನೆಂದೊಡಾಕೆ ನಿರುತ್ತರೆಯಾಗಿ ಎನ್ನ ದೆಸೆಯ ಮುಳಿಸನುೞಿದಂ ದಿಂದಿತ್ತ[2]ವ[2]ಂಗೆ ನಿಂದು ಪೊತ್ತು ಕಾಯ್ದು ಬೇ[3]ಸಱಿಸಿ[3] ನಿರ್ವಂದದಿನಟ್ಟೆ ಕಳೆಯೆ ಬಂದನಿದೀತನ ವೃತ್ತಕಮೆಂದು ವಿಪ್ರಂ ಪೋಪುದುಮಾಂ ಚಿಂತಾರ್ಣವಾವಗಾಹದೊಳಿರ್ದೊಡೀ ಪೋ[4]ದ[4] ರಾತ್ರಿಯೊಳ್ ನಿನ್ನನೋಲಗಿಸಿ ಕಪಿಲಂ—

ಕಂ॥ ನಿಚ್ಚಿಲಿ ಕಾರಿರುಳೊಳ್ ಪೊಱ
ಪಚ್ಚಮನುಟ್ಟಿರ್ದಿ[5]ಱು[5]ಂಕಿ ಕಕ್ಷದೊಳಾಪಾ
ಟಚ್ಚರ ಭಯದಿಂದುಟ್ಟು ಪ
ಟಚ್ಚರಮಂ ಮನೆಗೆವಂದು ನಿಂದಂಗಣದೊಳ್ ॥ ೬೫ ॥

ವ॥ ಕವುಂಕುೞ[?]ೊಳಿಱುಂಕಿದುಟ್ಟುದುಂ ಮೇಲುದುಮಂ ತೆಗೆದುಟ್ಟುಂ [6][ಪೊದೆ][6]ದುಂ ಮನೆಯುಂ ಪೊಕ್ಕು ವಿದ್ಯಾಪ್ರಭಾವದಿಂ ಮನೆಯೊಳ್ ನಾನದೆಬಂದೆನೆಂದು ನುಡಿಯೆ ಕೇಳ್ದಾಂ ಮನದೊಳ್ ನಾಣ್ಚದ ನನೆಯದ ನಿನಗೆ ನಾಣುದುಂ ನನೆವುದುಮೆತ್ತಣಿಂ ಬಂದು ದೆಂದಿರಲನ್ನೆವರಂ ಬಲ್ಲಾಳ್ಕನದೊಳೆನ್ನನನುಭವಿಸಲ್ ಬಂದೊಂ ನೀನುಂ ವರ್ಣಾಶ್ರಮ ಗುರುವಯ್ ಎನ್ನಂ ಕಾವುದೆಂದೆನಲೊಡಂ—

ಕಂ॥ ಪರಭವಿಸಿ ಕಪಿಲನಂ ಪುರ
ವರದಿಂ ಕಳೆದಿರಿಸಿ ಸತ್ಯಭಾಮೆಯನಂತಃ
ಪುರದೊಳ್ ಕಿಱಿಯ[7][ರ][7]ಸಿಯ ಪಿರಿ
ಯರಸಿಯ ಪಕ್ಕದೆ ತದೀಯ ರಕ್ಷಣವಿಧಿಯಂ ॥ ೬೬ ॥

ವ॥ ಆಗ ನಾನು ಅವಳಿಗೆ ಸಮಾಧಾನವಾಗಲೆಂದು ನಿಜಾಂಶವನ್ನು ಹೀಗೆ ತಿಳಿಸಿದೆನು : 'ನಿನ್ನ ಮಕ್ಕಳನ್ನು ನಾನು ಓದಿಸುತ್ತಿರುವಾಗ ಅಲ್ಲಿಗೆ ಈ ಕಪಿಲನು ಬಂದು ಕೇಳಿಸಿಕೊಳ್ಳುತ್ತಾನೆ. ಆತನು ಚುರುಕಾದ ಬುದ್ಧಿಯುವನಾದುದರಿಂದ ಎಲ್ಲವನ್ನೂ ಕಲಿಯುತ್ತಾನೆ. ಇವರೋ ಏನು ಮಾಡಿದರೂ ಕಲಿಯಲಾರರು. ಇನ್ನು ನಾನೇನು ಮಾಡಲಿ ?' ಈ ಪ್ರಶ್ನೆಗೆ ಪಾಪ ಅಕೆ ಏನೆಂದು ಉತ್ತರ ನೀಡಿಯಾಳು ? ನನ್ನ ಮೇಲಿನ ಕೋಪ ಈಗ ಆತನ ಮೇಲೆ ಹೋಯಿತು. ಸಮಯಸಾಧಿಸಿ ಒಂದು ದಿನ ಈತನನ್ನು ಒತ್ತಾಯಪೂರ್ವಕವಾಗಿ ಮನೆಬಿಟ್ಟು ಓಡಿಸಿದೆವು. ಅಲ್ಲಿಂದ ಈತನು ನಿಮ್ಮಲ್ಲಿಗೆ ಬಂದನು. ಇದು ಇವನ ವೃತ್ತಾಂತ' ಇಷ್ಟು ಹೇಳಿ ಆ ಬ್ರಾಹ್ಮಣನು ಹೋಗಿಬಿಟ್ಟನು. ನಾನು ಚಿಂತೆಯಲ್ಲಿ ಮುಳುಗಿದೆನು. ನಿನ್ನೆ ರಾತ್ರಿ ನಿನ್ನನ್ನು ಓಲಗಿಸಿದ ಬಳಿಕ ಕಪಿಲನು

೬೫. ಕಗ್ಗತ್ತಲೆಯ ರಾತ್ರಿಯಲ್ಲಿ ಕಳ್ಳರ ಭಯದಿಂದ ಉಟ್ಟ ವಸ್ತ್ರವನ್ನೂ ಮೇಲುಹೊದಿಕೆಯನ್ನೂ ಕಂಕುಳಲ್ಲಿ ಇರುಕಿಕೊಂಡು ಚಿಂದಿಬಟ್ಟೆಯನ್ನುಟ್ಟುಕೊಂಡೇ ಅಂಗಳಕ್ಕೆ ಬಂದನು; ಮತ್ತು ಅಲ್ಲಿ ನಿಂತು

ವ॥ ಕಂಕುಳಲ್ಲಿರುಕಿಕೊಂಡಿದ್ದ ಬಟ್ಟೆಗಳನ್ನು ತೆಗೆದು ಪುನಃ ಧರಿಸಿಕೊಂಡು ಬಂದು, 'ನೋಡು ವಿದ್ಯಾಪ್ರಭಾವದಿಂದ ನೆನೆಯದೆ ಬಂದುಬಿಟ್ಟೆನು' ಎಂದು ನುಡಿದನು. ಆಗ ನಾನು 'ಮನಸ್ಸಿನಲ್ಲಿ ನಾಚದ, ನೆನೆಯದ ನಿನಗೆ ನಾಚುವುದೂ ನೆನೆಯುವುದೂ ಹೊಸದಾಗಿ ಎಲ್ಲಿಂದ ಬಂದುವು ?' ಎಂದೆನು. ಅಷ್ಟರಲ್ಲಿ ಬಲಾತ್ಕಾರವಾಗಿ ನನ್ನನ್ನು ಹಿಡಿದು ಭೋಗಿಸಲು ಬಂದನು. ದೊರೆಯೇ, ನೀನು ವರ್ಣಾಶ್ರಮಗಳನ್ನು ರಕ್ಷಿಸುವ ಹಿರಿಯ. ನನ್ನನ್ನು ಕಾಪಾಡು" ಆಕೆಯ ಈ ಮಾತುಗಳನ್ನು ಕೇಳಿ (ರಾಜನು)—

೬೬. ಕಪಿಲನನ್ನು ಅಪಮಾನಗೊಳಿಸಿ ಪಟ್ಟಣದಿಂದ ಹೊರದೂಡಿ ಸತ್ಯಭಾಮೆಯನ್ನು ಅಂತಃಪುರದಲ್ಲಿ ತನ್ನ ಅರಸಿಯರ ಬಳಿ ಸುರಕ್ಷಿತವಾಗಿ ಇಟ್ಟನು.

---

1. ರೇ (ಮ) 2. × (ಮ) 3. ರಿ (ಮ) 4. ದೀ (ಅ) 5. ಱ (ಅ) 6. ಪೋದು (ಮ) 7. ಱ (ಮ)

ವ॥ ಒಂದು ದೆವಸಂ ಮಧುಸನ್ನಿಭಂ ಮಧುಸಮಯದೊಳ್ ಸೌರಪುರಾಭ್ಯರ್ಣದೊಳ್ ಶ್ರೀಷೇಣ ಮಹೀನಾಥಂ—

ಕಂ॥ ದಾರಿತ ಭೂಭಾಗಂ ವೈ
ಭಾರಾಚಳ ಕೇಳಿಗಂಗನಾಸಹಿತಂ ಬಂ
ದಾರೂಢ ಭಕ್ತಿ ಕುಲ ನಿ
ಸ್ತಾರಕನಾದಿತ್ಯಯಶನನಶನ ಕೃಶನಂ ॥ ೬೭ ॥

ಮುನಿಪತಿಯಂ ಕಂಡು ಮನೋ
ಜನಿಭಂ ಸಾಷ್ಟಾಂಗವೆಱಗಿ ಪೊಡವಟ್ಟು ಯತೀಂ
ದ್ರನ ಪಕ್ಕದೆ ಧರ್ಮವನಾ
ಜಿನಚಂದ್ರಂ ಕೇಳ್ದು ತಾಳ್ದಿ ಮನದುಪಶಮಮಂ ॥ ೬೮ ॥

ವ॥ ಅಂತಾದಿತ್ಯಮುನೀಂದ್ರರ ಪಕ್ಕದೆ ಧರ್ಮಮಂ ಕೇಳ್ದು ವ್ರತರಕ್ಷಣ ಕ್ಷಮನಪ್ಪುದಱಿಂ ಜಿನಚಂದ್ರಂ ದಾನಧರ್ಮಾದಿಗಳೊಳ್ ಪೊರೆದು ಮುನಿಚರಣಯುಗಳಕ್ಕೆಱಗಿ ದ್ರವ್ಯಭಾವಾರ್ಚನೆಗಳಿಂದಮರ್ಚಿಸಿ ಗೃಹೀತಧರ್ಮನುಂ ನಿಗೃಹೀತಾಶೇಷದೋಷನುಮಾಗಿ ನಿಜರಾಜಧಾನಿಗೆ ವಂದು—

ಕಂ॥ ವಸುಧೆಯನೇಕಾಯತ ಮಾ
ನಸನಱಿವಿಂ ನೆಱೆದು ರಾಜಧರ್ಮದಿನಭಿರ
ಕ್ಷಿಸೆ ಪೋಯ್ತು ಕಾಲಮಾದುದು
ಬಸನಂ ಮಹಿಪತಿಗೆ ಪಾತ್ರದಾನೋನ್ನತಿಯಾ ॥ ೬೯ ॥

ವ॥ ಅಂತನೂನ ಪಾತ್ರದಾನಾಧೀನಮಾನಸಂ ಸಮ್ಯಗ್ದರ್ಶನ ವ್ರತಾಚರಣಾ ವ್ರತೋಪೇತಂ ದೀನಜನತಾಕಲ್ಪಾಂಘ್ರಿಪಂ ಶ್ರೀಯಂ ನಿರಾಕುಳಮನುಭವಿಸುತ್ತುಮಿರ್ದು ಮತ್ತೊಂದು ಪುಣ್ಯದಿನದೊಳನಗಾರಸಮಯದೊಳ್ ದ್ವಾರಾಪೇಕ್ಷೆಯೊಳಿರೆ—

ವ। ಒಂದು ದಿವಸ ಮನೋಹರವಾದ ವಸಂತಕಾಲದಲ್ಲಿ ಸೌರಪುರದ ಸಮೀಪದಲ್ಲಿ ಮನ್ಮಥಸದೃಶನಾದ ಶ್ರೀಷೇಣ ರಾಜನು—

೬೭. ವೈಭಾರವೆಂಬ ಬೆಟ್ಟದಮೇಲೆ ತನ್ನ ಅರಸಿಯರೊಂದಿಗೆ ಕ್ರೀಡೆಗಾಗಿ ಬಂದನು. ಆ ಪ್ರದೇಶದಲ್ಲಿ ಉಪವಾಸವ್ರತದಿಂದ ಸೊರಗಿದ ಆದಿತ್ಯಯಶನೆಂಬ

೬೮. ಮುನೀಂದ್ರನನ್ನು ಕಂಡು, ಭಕ್ತಿಪೂರ್ವಕವಾಗಿ ಸಾಷ್ಟಾಂಗವೆರಗಿ ಆ ಯತಿಯ ಸನ್ನಿಧಿಯಲ್ಲಿದ್ದು ಧರ್ಮ ಶ್ರವಣದಿಂದ ಮನಃಶಾಂತಿಯನ್ನು ಪಡೆದನು.

ವ॥ ಹಾಗೆ ಧರ್ಮಶ್ರವಣಾನಂತರ ವ್ರತಪರಿಪಾಲನೆಯಲ್ಲಿ ನಿಷ್ಠನಾದ ಆತನು ದಾನಧರ್ಮಾದಿಗಳನ್ನು ಮಾಡಿ ಮುನಿಗಳ ಪಾದಕ್ಕೆರಗಿ ದ್ರವ್ಯದಿಂದಲೂ ಭಾವದಿಂದಲೂ ಅರ್ಚಿಸಿ ಅವರಿಂದ ವ್ರತಗ್ರಹಣಮಾಡಿ ಸರ್ವದೋಷ ಗಳನ್ನು ನಿಗ್ರಹಿಸಿಕೊಂಡು ರಾಜಧಾನಿಗೆಮರಳಿದನು.

೬೯. ಹಾಗೆ ಬಂದ ಬಳಿಕ, ಸ್ಥಿರಚಿತ್ತದಿಂದ ರಾಜಧರ್ಮಾನುಸಾರವಾಗಿ ದೀರ್ಘಕಾಲದವರೆಗೆ ರಾಜ್ಯವಾಳು ತ್ತಿದ್ದನು. ಪಾತ್ರದಾನದ ಮಹತಿಯನ್ನು ತಿಳಿದುಕೊಂಡು ಅದನ್ನು ಆಚರಿಸುತ್ತಲಿದ್ದನು.

ವ॥ ಈ ಮೇರೆಗೆ ಪಾತ್ರದಾನದಲ್ಲಿ ನಿಷ್ಠನಾಗಿ ಸಮ್ಯಗ್ದರ್ಶನ ವ್ರತಾಚರಣೆಯೊಡನೆ ನೆಮ್ಮದಿಯಿಂದ ರಾಜ್ಯಸುಖ ವನ್ನು ಅನುಭವಿಸುತ್ತಿರಲಾಗಿ ಒಂದು ಪುಣ್ಯದಿನದಂದು ಅನಗಾರ ಸಮಯದಲ್ಲಿ (ಜೈನವ್ರತಿಗಳು ಚರ್ಯೆಗೆ ಬರುವ ಕಾಲದಲ್ಲಿ) ಬಾಗಿಲಲ್ಲಿ ನಿಂತು ಮುನಿಗಳ ಆಗಮನವನ್ನು ನಿರೀಕ್ಷಿಸುತ್ತಿದ್ದನು. ಆಗ—

ಚಂ॥ ಹಿಮಕರನಂತೆ ಸತ್ಪಥಸಚಂಕ್ರಮಣರ್ ನಭದಂತೆ ವೀತಸಂ
ಗಮರುದಭಾರದಂತೆ ಸಕಳಾಶಯಹಾರಿಗಳರ್ಕನಂತೆ ದು
ರ್ದಮ ತಿಮಿರಪ್ರಭೇದರಘನೀಧರದಂತಚಲರ್ ಸಮುದ್ರದಂ
ತಮಿತಗಭೀರರಾಕೃತಿಯುತರ್ ಮುನಿನಾಯಕರಿರ್ವರುರ್ವಿಯೊಳ್ ॥ ೨೦ ॥

ವ॥ ಈರ್ಯಾ ಮಾರ್ಗಪರ್ಯವಲೋಕನ ಮಂದ ಮಂದಗಮನ ನಿರತರವಧಿಬೋಧಾವಧೂತರೂಪದರ್ಶನ ಕ್ಷಪಿತಸಂದೇಹ ಸಂದೋಹರ್ ಚಾರಣ ಗುಣಮಣಿ ಭೂಷಣ ಮಂಜರೀ ರೋಚಿಃಕರಂಜಿತ ಚರಣ ಸರಸೀರುಹರಾದಿತ್ಯಗತಿಗಳುಮಮಿತಗತಿಗಳುಮೆಂಬ ದಿಬ್ಯತಪೋಧನರಂಬರಮಾರ್ಗದಿನವನಿಗವತರಿಸಿ ರಾಜಮಾರ್ಗದೊಳಗನೆ ಮಾಸೋಪವಾಸ ಪಾರಣೆಯೊಳರಮನೆಗೆ ಚರಿಗೆ ವರ್ಪುದುಂ ಪಾಪೇಭಕಂಠೀರವಂ ಕಂಡು—

ಕಂ॥ ಅಭಿಗಮನಾಂಘ್ರಿಕ್ಷಾಳನ
ಶುಭಾಸನಾರ್ಚಾ ಪ್ರಣಾಮಕರಣಾಹಾರ
ವ್ಯಭಿಚಾರಶುದ್ಧಿ ನವ ಭೇ
ದಭೂತ ಪುಣ್ಯೈಕ ಪಣ್ಯನಿಧಿ ನಿಱಿಸುವುದುಂ ॥ ೨೧ ॥

ವ॥ ತನ್ಮುನೀಶ್ವರರ್ ನಿಲೆ—

ಕಂ॥ ಬಗೆಯುಱ್ತಿಗೆ ಶಕ್ತಿಗೆ ಭ
ಕ್ತಿಗೆ ವಿಪುಳಕ್ಷಮೆಗೆ ದಯೆಗೆ ತಿಳಿವಱಿವಿಂಗಾ
ವಗಮೊದವಿದುದಾರತೆಗಂ
ಜಗದಧಿಪತಿ ನೆಱೆದು ನಿಱಿಸಿದಂ ಮುನಿವರರಂ ॥ ೨೨ ॥

---

೨೦. ಚಂದ್ರನಂತೆ ಸತ್ಪಥ (೧. ಆಕಾಶ, ೨. ಸನ್ಮಾರ್ಗ)ದಲ್ಲಿ ಸಂಚರಿಸುವವರೂ, ಆಕಾಶದಂತೆ ವೀತಸಂಗವು (೧. ಪಕ್ಷಿಗಳ ಸಹವಾಸವುಳ್ಳದು, ೨. ನಿಸ್ಸಂಗ) ರೂ, ನೀರಿನ ಅಡ್ಡೆಯಂತೆ (೧. ಎಲ್ಲ ಸ್ಥಳಗಳಿಗೆ ಹೋಗುವುದು, ೨. ಎಲ್ಲರ ಮನಸ್ಸನ್ನೂ ಆಕರ್ಷಿಸುವವ) ಯೂ, ಸೂರ್ಯನಂತೆ ನಿವಾರಿಸಲಾಗಲೆಂಬಂತಹ "ತಿಮಿರ" (೧. ಕತ್ತಲೆ ೨. ಅಜ್ಞಾನ)ವನ್ನು ನಾಶಮಾಡುವವರೂ, ಪರ್ವತದಂತೆ "ಅಚಲ" (೧. ನಿಶ್ಚಲ, ೨. ಸ್ಥಿರಚಿತ್ತ)ರೂ, ಸಮುದ್ರದಂತೆ ಅಳೆಯಲಾಗದಷ್ಟು "ಗಂಭೀರ" (೧. ಆಳವಾದುದು, ೨. ಗಂಭೀರಗುಣವುಳ್ಳವ)ರೂ—ಆದ ಇಬ್ಬರು ಮುನೀಂದ್ರರು (ಬಂದರು).

ವ॥ ಹಾದಿಯಲ್ಲಿ ಜೀವಹಿಂಸೆಯಾಗಬಾರದೆಂಬ ಮುಂದಾಲೋಚನೆಯಿಂದ ತಮ್ಮ ಮುಂದಿನ ನಾಲ್ಕುಮೊಳದಂತರದ ವರೆಗೆ ಸೂಕ್ಷ್ಮವಾಗಿ ಪರೀಕ್ಷಿಸುತ್ತ ಮೆಲ್ಲಮೆಲ್ಲಗೆ ಹೆಜ್ಜೆಯಿಡುವವರೂ, ಅವಧಿಜ್ಞಾನದಿಂದ ಸಂದೇಹಗಳನ್ನು ನಿವಾರಿಸುವವರೂ, ಚಾರಣಗುಣವೆಂಬ ಮಂಜೀರಕವನ್ನು ಕಾಲುಗಳಲ್ಲಿ ಧರಿಸಿದವರೂ (ಚಾರಣಗತಿಯುಳ್ಳವರೂ) ಆದ ಆದಿತ್ಯಗತಿ ಮತ್ತು ಅಮಿತಗತಿಯೆಂಬ ಇಬ್ಬರು ಮಹಾತಪಸ್ವಿಗಳು ಆಕಾಶಮಾರ್ಗದಿಂದ ಭೂಮಿಗೆ ಇಳಿದು ರಾಜಮಾರ್ಗವನ್ನು ಹಿಡಿದು ತಮ್ಮ ಮಾಸೋಪವಾಸದ ಪಾರಣೆಗಾಗಿ ಅರಮನೆಗೆ ಚರಿಗೆಗೆ ಬಂದರು. ಪಾಪನಾಶಕನಾದ ಶ್ರೀಷೇಣರಾಜನು ಅವರನ್ನು ಕಂಡು—

೨೧. (ಚರ್ಯೆಗೆ ಬಂದವರನ್ನು) ಇದಿರುಗೊಳ್ಳುವುದು, ಪಾದ ತೊಳೆಯುವುದು, ಉತ್ತಮವಾದ ಪೀಠವನ್ನು ನೀಡುವುದು, ಪೂಜೆ, ನಮಸ್ಕಾರ, ಮನಃಶುದ್ಧಿ, ವಾಕ್‌ಶುದ್ಧಿ, ಕಾಯಶುದ್ಧಿ ಹಾಗು ಆಹಾರ ಶುದ್ಧಿ—ಎಂಬ ಒಂಬತ್ತು ಬಗೆಯ ಪುಣ್ಯಕ್ರಮಗಳನ್ನು ಬಲ್ಲವನಾದ ಆತನು ಅವರನ್ನು ಬಿನ್ನವಿಸಿ ನಿಲ್ಲಿಸಿಕೊಂಡನು.

ವ॥ ಆ ಮುನೀಂದ್ರರು ನಿಲ್ಲಲಾಗಿ—

೨೨. ಮನಃಪ್ರೀತಿಗೆ, ಶಕ್ತಿಗೆ, ಭಕ್ತಿಗೆ, ಅತಿಶಯವಾದ ಕ್ಷಮೆಗೆ, ದಯೆಗೆ, ಅರಿವಿಗೆ, ಸಂತತವಾದ ಔದಾರ್ಯಕ್ಕೆ ಪರಿಪೂರ್ಣನೆನಿಸಿ ರಾಜನು ಮುನಿವರರನ್ನು ಸ್ವಾಗತಿಸಿದನು.

ವ॥ ಅಂತುಂ ತನ್ನಿರ್ವರಗ್ರಮಹಿಷಿಯರುಂ ದ್ವಿಜತನೂಜೆ ಸತ್ಯಭಾಮೆಯುಂ ಪರ್ಯುಷ್ಟಿಸಕ್ತೆಯರುಮನುಮೋದಾನುರಕ್ತೆಯರುಮಾಗಿರೆ ತನ್ನೊಡನೊಡನೆ ಸಮ ಶುಭಪರಿಣಾಮದೊಳ್ ನೆಗಱ್ದ ಪರಮ ಪವಿತ್ರೋತ್ತಮ ಪಾತ್ರಕ್ಕೆ ಶ್ರೀಷೇಣಂ

ಕಂ॥ ಧನಮುಚಿತ ದಾನದೊಳ್ ಜ
ವ್ವನಂ ತಪೋನಿಯಮದೊಳ್ ಸ್ವಜೀವಂ ಸನ್ಯಾ
ಸನದೊಳ್ ಪೋದಂಗೇವೋ
ಯ್ತೆನೆ ಸುಜನರ್ ನೃಪತಿ ಪಾತ್ರದಾನಮನಿತ್ತಂ ॥ ೭೩ ॥

ವ॥ ಈವುದುಂ ತದನಂತರಮಿನ್ನಪ್ಪ ಮಹಿಮಾಶ್ಚರ್ಯಮನಱಿಪುವಂತೆ ಪಂಚಾಶ್ಚರ್ಯಂಗಳ್—

ಉ॥ ಧ್ವಾನಿತದೇವದುಂದುಭಿರವಂ ಸುರಿತರ್ಪ ದಳನ್ನಮೇರು ಸಂ
ತಾನಕವೃಷ್ಟಿ ಕೊಳ್ವ ಪೊಸರನ್ನದ ಪೊನ್ನ ಪೊದಟ್ಟಿ ಸೋನೆ ಮಂ
ದಾನಿಳನಿಟ್ಟೆ [1]ಬೆಚ್ಚೆಯೊಳಟ್ಟಿ[1]ಱಿದಂತಿರೆ ದೇವರಾರ್ವಹೋ
ಧ್ವಾನ ನಿನಾದಮೊಪ್ಪಿದುದು ರಾಜಿತ ರಾಜಗೃಹಾಂತರಾಳದೊಳ್ ॥ ೭೪ ॥

ವ॥ ಆಶ್ಚರ್ಯಂ ನೆಗೞ್ದ ಲೋಕಂ ಪೊಗೞ್ದ ತದ್ಧರಣೀಶ್ವರಂ ಪುಣ್ಯೋಪಾದೇಯನಾಗಿರ್ಪಿನಂ ಪಿರಿಯನಪ್ಪಿಂದ್ರನರಸಿ ಶ್ರೀಮತಿಗೆ ಬಱಿವಱಿಯೆ ಬಂದ ವಸಂತಸೇನೆಯನೊರ್ಮೊದಲೆ ಕಂಡು—

ಕಂ॥ ನಿಧಿಯಂ ಕಂಡಂತೊಳಗಿಡೆ
ಮದಿರಾಕ್ಷಿಯನಿಂದ್ರನಿಡಿದ ನನೆಗಣೆಯಿಂ ತೀ
ವಿದ ದೊಣೆಗೆಣೆಯಾಗಿರ್ದ ಕೋ
ಟ್ಟುದಿಗೊಳೆ ಸೈರಿಸದುಪೇಂದ್ರನವಳೊಳ್ ನೆರೆದಂ ॥ ೭೫ ॥

ವ॥ ತನ್ನಿಬ್ಬರು ಪಟ್ಟದರಸಿಯರೂ ಬ್ರಾಹ್ಮಣಪುತ್ರಿಯಾದ ಸತ್ಯಭಾಮೆಯೂ ಪೂಜಾನಿರತರಾಗಿ, ಅನುಮೋದದಲ್ಲಿ ಆಸಕ್ತರಾಗಿ ಇದ್ದು, ತನ್ನೊಡನೆ ಸಮಾನವಾದ ಶುಭಫಲಕ್ಕೆ ಯೋಗ್ಯರಾಗುವಂತೆ ಪರಮಪುಣ್ಯಶಾಲಿಗಳೂ (ದಾನಕ್ಕೆ) ಉತ್ತಮ ಪಾತ್ರರೂ ಆದ ಆ ಮುನಿಗಳಿಗೆ ಶ್ರೀಷೇಣನು—

೭೩. "ಪಾತ್ರದಾನದಲ್ಲಿ ಧನವೂ, ತಪಶ್ಚರಣದಲ್ಲಿ ಯೌವನವೂ, ಸಂನ್ಯಾಸದಲ್ಲಿ ಜೀವವೂ ಹೋದವನಿಗೆ ಏನು ಹೋಯಿತು ?" ಎಂದು ಸಜ್ಜನರು ಕೊಂಡಾಡುತ್ತಿರಲಾಗಿ ಪಾತ್ರದಾನವನ್ನಿತ್ತನು.

ವ॥ ಹಾಗೆ ಈಯಲಾಗಿ ಇನ್ನು ಮುಂದೆ ಒದಗುವ ಆಶ್ಚರ್ಯಕರ ಮಹಿಮೆಯನ್ನು ಸೂಚಿಸುವಂತೆ ಪಂಚಾಶ್ಚರ್ಯಗಳು ಉಂಟಾದುವು (ಹೇಗೆಂದರೆ)—

೭೪. ದೇವದುಂದುಭಿಗಳು ಬಾರಿಸಿದುವು; ನಮೇರುಪುಷ್ಪಗಳ ಮಳೆ ಸುರಿಯಿತು ; ನೂತನ ಸುವರ್ಣ ರತ್ನಗಳ ವೃಷ್ಟಿಯಾಯಿತು; ಮೆಲುಗಾಳಿ ಹಿತವಾಗಿ ಬೀಸಿತು; ದೇವತೆಗಳು ಮೆಚ್ಚಿಕೆಯಿಂದ "ಅಹೋ, ಅಹೋ" ಎಂದು ಕೊಂಡಾಡಿದರು. ಹೀಗೆ ಅರಮನೆಯ ಅಂಗಳದಲ್ಲಿ

ವ॥ (ಪಂಚಾಶ್ಚರ್ಯಗಳ) ಶೋಭೆಯುಂಟಾಗಲಾಗಿ ಲೋಕದ ಜನವೆಲ್ಲ ಹೊಗಳಲಾಗಿ ಆ ರಾಜನು ಪುಣ್ಯವನ್ನು ಗಳಿಸಿದನು. ಹೀಗೆ ಸುಖದಿಂದ ಇರುತ್ತಿರಲಾಗಿ ಆತನ ಹಿರಿಯ ಮಗನ ಹೆಂಡತಿ ಬಳುವಳಿಯಾಗಿ ವಸಂತಸೇನೆಯೆಂಬ ದಾಸಿಯನ್ನು ತನ್ನೊಡನೆ ತಂದಿದ್ದಳು.

೭೫. ಅವಳ ಗಂಡನಾದ ಇಂದ್ರನು ಅವಳೊಬ್ಬ (ಅಪೂರ್ವ) ನಿಧಿಯೆಂಬಂತೆ ಒಳಗೇ ಇರಿಸಿದ್ದನು. ಮದನ ಬಾಣಗಳಿಂದ ಕಿಕ್ಕಿರಿದ ಬತ್ತಳಿಕೆಯಂತಿದ್ದ ಆಕೆಯನ್ನು ಒಮ್ಮೆ ಕಂಡು (ಆತನ ತಮ್ಮನಾದ) ಉಪೇಂದ್ರನು ಉದ್ರಿಕ್ತನಾಗಿ ಮದನಾವಸ್ಥೆಗೆ ಸೈರಿಸಲಾರದೆ ಒತ್ತಾಯದಿಂದ ಅವಳನ್ನು ಕೂಡಿಕೊಂಡನು.

---

1. ಬೆಚ್ಚೆಯೊಳಗಟ್ಟಿ (ಮ)

ವ॥ ಅನ್ನೆಗಮದನರಸನಱಿದು—

ಕಂ॥ ಬಾರಿಸೆವಾರಿಸೆ ಬಂದು ಮ
ನೋರಮೆಗಾಳಿಪಿದನುಪೇಂದ್ರನತಿರಕ್ತರನಾರ್
ವಾರಿಸುವರ್ ಸಂಧ್ಯಾರಾ
ಗಾರುಣ ರುಚಿವಾರಿಸಲ್ಕೆ ವರ್ಕುಮೆ ರವಿಯೊಳ್ ॥ ೭೬ ॥

ವ॥ ಎಂಬೀ ವ್ಯತಿಕರಮನಿಂದ್ರನಱಿದು—

ಕಂ॥ ಸ್ಮಯಮೆರ್ದೆವುಗೆ ಕಿವಿವುಗೆ ದು
ರ್ನಯೋಕ್ತಿ ಕೊಲೆಗೆಯ್ದೆ ತನ್ನಬಗೆಯಿಂ ತತ್ಕಾಂ
ತೆಯೊಳಳುಪಿ ನೆರೆದೊಡೇಂ ಕ
ಯ್ಪಿಯುಣ್ಬರಂ ರಸಮೆ ಬಾರಿಕುಂ ಕೆಮ್ಮನಿರಿಂ ॥ ೭೭ ॥

ತಪ್ಪದೆ ಗುರುವಚನಮುಮಂ
ತಪ್ಪಲ್ ಬಸನಿಗೆ ಮದೀಯ ಕೋಪದ ಪದನೇಂ
ತಪ್ಪಿದುದೆ ಪರಕಳತ್ರಮ
ನಪ್ಪಿದುರಂ ಬೆರಸು ಖಳನ ತಲೆಯಂ ಕೊಳ್ವೆಂ ॥ ೭೮ ॥

ಇಟ್ಟವನಿಟ್ಟಿಗಳೆನ್ನಂ
ನಟ್ಟೊಡಮೆನ್ನಿಟ್ಟ ಶಂಕುಸಂಕುಲಮವನಂ
ನಟ್ಟೊಡಮಿಭರದಮಿಭಮಂ
ನಟ್ಟೊಡಮೆನ್ನವನ ಮುಳಿಸನಱಿಯಲ್ಕಕ್ಕುಂ ॥ ೭೯ ॥

ವ॥ ಇಂದ್ರರಾಜನು ಅದನ್ನು ಅರಿತು,

೭೬. "ಇದು ತರವಲ್ಲ, ಬಿಟ್ಟುಬಿಡು" ಎಂದು ಪುನಃ ಪುನಃ ಹೇಳಿದರೂ ಉಪೇಂದ್ರನು ಆಕೆಯ ಮೋಹವನ್ನು ತೊರೆಯದಾದನು. ಅತ್ಯಾಸಕ್ತರನ್ನು ವಿಮುಖಗೊಳಿಸಬಲ್ಲವರಾರು? ಸಂಧ್ಯಾಕಾಲದಲ್ಲಿ ಸೂರ್ಯನಿಗೆ ಕೆಂಬೆಳಕು ಒದಗುವುದನ್ನು ನಿವಾರಿಸಲಾದೀತೆ?

ವ॥ ಹಠಮಾರಿತನದ ಈ ವಿರೋಧವನ್ನು ಇಂದ್ರನು ಅರಿತನು.

೭೭. (ತಮ್ಮನ) ಉದ್ಧಟತನ ಮನವನ್ನು ಇರಿಯಿತು; ಅವಿಧೇಯತೆಯ ಮಾತು ಕಿವಿಯನ್ನು ಇರಿಯಿತು; "ಅವನನ್ನು ಕೊಂದುಬಿಡಲೆ?" ಎಂಬ ಮನಸ್ಸಾಯಿತು. ಆಗ ಹಿರಿಯರು ಹೇಳಿದರು: "ಆ ಹೆಂಗಸಿಗೆ ಹಂಬಲಿಸಿ ಆತನು ಅವಳ ಬೆನ್ನುಬಿದ್ದರೇನಾಯಿತು? ಉಣ್ಣುವುದಕ್ಕೆ ಹೋದವನಿಗೆ ರಸ ಕಹಿಯೆಂದು ಗೊತ್ತಾದರೆ ತಾನೇ ಬಿಟ್ಟುಬರುತ್ತಾನೆ. ನೀನು ಸುಮ್ಮನಿರು."

೭೮. ಆದರೆ ಆ ಹಿರಿಯರ ಮಾತು ಸುಳ್ಳಾಯಿತು. "ನನ್ನ ಕೋಪದ ತಾಪವೇನಾದರೂ ತಪ್ಪಿತೆ? ಪರಸ್ತ್ರೀಯನ್ನು ಅಪ್ಪಿಕೊಂಡ ಆ ವ್ಯಸನಿಯ ಎದೆಯೊಡನೆ ತಲೆಯನ್ನೂ ಸೀಳುವೆನು.

೭೯. ಅವನ ಈಟಿಗಳು ನನ್ನನ್ನು ನೆಡಲಿ; ನನ್ನ ಬಾಣಗಳು ಅವನನ್ನು ನಾಟಲಿ; (ನನ್ನ) ಆನೆಯ ಕೋರೆ (ಅವನ) ಆನೆಯನ್ನು ಇರಿಯಲಿ; ಆಗ ನನ್ನ ಮತ್ತು ಅವನ ಕೋಪವನ್ನು ಅರಿಯಬಹುದು.

---

1. ಳು (ಮ) 2. ಡಿಂ (ಅ)

ಕಂ॥ ಒಡವುಟ್ಟಿದನರಸಿಯನೆಂ
ನೊಡವುಟ್ಟಿದರೆನ್ನ ದಬ್ಬೆಯೆಂದತ್ತಿಗೆಯೆಂ
ದೊಡೆ ನಾಲಗೆಯಾತನ ತಲೆ
ಸಿಡಿಲ್ದು ಪಾಱೆಟ್ಟುಗುಮೆನ್ನ ಪಾಱುಂಬಳೆಯೊಳ್ ॥ ೮೦ ॥

ಒಡಲವಡವಡಪ್ಪಿನಮೆ
ಲ್ವಡಗಪ್ಪಿನಮಲಸದಾಯ್ತು ಸುಡುವಿನಮಿಭದೊ
[1]ಳ್ಕ[1]ಡಗುಮ[2]ವ[2]ನಡುಗುವೆ ರತಿಯ
ಗರ್ಡ[3][ಗೆ][3]ಲ್ವಪ್ಪಿನಮಿಭೇಂದ್ರದಿಂ ತು[4][ಳಿ][4]ಯಿಸುವೆಂ ॥ ೮೧ ॥

ವ॥ ಎಂದಿಂದ್ರಂ ಮೃಗೇಂದ್ರನಂತೆ ಗರ್ಜಿಸಿ ಚತುರಂಗಬಲ ಸಮೇತಂ ಪೊಱಮಟ್ಟು ಬೂತಟ್ಟಿದೊಡುಪೇಂದ್ರನುಮಿದಿರಿದಿರಂ ಗಱಿವಱಿಯ ಪಾವು ಬರ್ಪಂತೆ ಬಂದು ತಾಗುವುದುಂ—

ಕಂ॥ ಉಭಯಾಬ್ಧಿರವದಿನಿಭಘಟೆ
ಯಿಭಘಟೆಯೊಳ್ ಕುದುರೆ ಕುದುರೆಯೊಳ್ ತೇರ್ ತೇರೊಳ್
ಸುಭಟರ್ ಸುಭಟರೊಳುಱದಿಱೆ
ದುಭಯಬಲಂ ಮೊಟ್ಟನಾದೊಡಿಂದ್ರನುಪೇಂದ್ರಂ ॥ ೮೨ ॥

ವ॥ ಮೂಗುರ್ಚಿದೆಮ್ಮೆ ಪೋರಿಯುಂ ಪೆಱಮೆಟ್ಟಿದ ತಗ[5]ರು[5]ಂ ತಾಗುವಂತೆ ತಂತಮ್ಮೇಱಿದಾನೆಗಳಂ ನೂಂಕಿ ಚಕ್ರಾಚಕ್ರಿಯುಂ ಖಡ್ಗಾಖಡ್ಗಿಯುಮಾಗೆಯುಂ ಪೆಣೆದಿಱಿವ ಪದದೊಳ್—

೮೦. ಸೋದರನ ಅರಸಿಯನ್ನು ಸೋದರಿಯೆನ್ನದೆ, ತಾಯಿಯೆನ್ನದೆ, ಪ್ರೇಯಸಿಯೆಂದು ಕರೆಯುವ ನಾಲಗೆಯಾದರೆ ಆತನ ತಲೆಯನ್ನು ನನ್ನ ಚಕ್ರದಿಂದ ಚೂರುಚೂರು ಮಾಡುವೆನು.

೮೧. ಅವನ ದೇಹದಲ್ಲಿಯ ಮೂಳೆಗಳೆಲ್ಲ ಮುರಿದು, ಗಿಜಿಗಿಜಿಯಾಗಿ ಅದೊಂದು ಬರಿ ಮಾಂಸದ ಮುದ್ದೆಯಾಗುವಂತೆ ಆನೆಯ ಕಾಲಲ್ಲಿ ಹಾಕಿ ತುಳಿಸುವೆನು." (ಪದ್ಯದಲ್ಲಿ ತುಂಬ ಕ್ಲೇಶವಿದೆ. "ಅಲಸದಾಯ್ತು ಸುಡುವಿನಂ ಇಭದೊಳ್ಳಡಗುಮನಡುಗುವೆ ರತಿಯಗರ್ಡಲ್ವಪ್ಪಿನಂ"— ಎಂಬುದನ್ನು ಅನ್ವಯಿಸುವುದು ಕಷ್ಟ.)

ವ॥ ಹೀಗೆಂದು ಇಂದ್ರನು ಸಿಂಹದಂತೆ ಅಬ್ಬರಿಸಿ ಚತುರಂಗ ಸೈನ್ಯ ಸಹಿತವಾಗಿ ಹೊರಟು, ಯುದ್ಧಕ್ಕೆ ಆಹ್ವಾನವೀಯಲು ದೂತನನ್ನು ಕಳಿಸಿದನು. ಉಪೇಂದ್ರನು ಅಳುಕದೆ ಹಗೆಯ ಬಳಿಯ ಹಾವಿನಂತೆ ಬಂದು ಮೇಲೆಬಿದ್ದನು.

೮೨. ಎರಡು ಸಮುದ್ರಗಳಂತೆ ಅಬ್ಬರಿಸಿ (ಇಬ್ಬರ ಸೈನ್ಯಗಳಲ್ಲಿಯ) ಆನೆ ಆನೆಯೊಡನೆಯೂ, ಕುದುರೆ ಕುದುರೆಯೊಡನೆಯೂ, ರಥ ರಥದೊಂದಿಗೂ, ಕಾಲಾಳು ಕಾಲಾಳೊಂದಿಗೂ ಉಗ್ರವಾಗಿ ಹೋರಾಡಿ ಇಕ್ಕೆಲದ ಪಡೆಗಳೂ ನಾಶವಾದುವು. ಆಗ ಇಂದ್ರ ಮತ್ತು ಉಪೇಂದ್ರ ಇಬ್ಬರೂ—

ವ॥ ಮೂಗುಚ್ಚಿದ ಕೋಣದಂತೆ, ಹಿಮ್ಮೆಟ್ಟಿನಿಂತ ತಗರಿನಂತೆ ರಭಸದಿಂದ ತಂತಮ್ಮ ಆನೆಗಳನ್ನು ನೂಕಿ ಚಕ್ರಗಳಿಂದಲೂ ಖಡ್ಗದಿಂದಲೂ ಒಬ್ಬರೊಡನೊಬ್ಬರು ಹೆಣೆದಂತೆ ತಾಗಿದಾಗ—

1. ಳ್ಳ (ಮ) 2. × (ಮ) 3. ಗೊ (ಮ) 4. ೞ (ಮ) 5. ಱು (ಅ)

ಕಂ॥ ಕಡುಗರ್ಪಿಡಿದೆರಡಬ್ದದ
ನಡುವೆ ಬೆಡಂಗಿಡಿದು ತೊಳಗಿ ಪೊಳೆವೆಳಮಿಂಚೊಂ
ದೆಡೆವುಗುವ ತೆಱದಿನೆರಡಿಭ
ದೆಡೆವುಗೆ ಮಣಿಕುಂಡಲಾಭಿಧಾನಂ ಖಚರಂ ॥ ೮೩ ॥

ವ॥ ಇಂದ್ರನುಮುಪೇಂದ್ರನುಂ ನೋಡಿ—

ಕಂ॥ ಎಡೆವುಗುವುದುಮಾನೆಯನೆಡೆ
ಯೆಡೆಯಿಂದಳವಡಿಸಿ ನಿಱಿಸೆ ಮಣಿಕುಂಡಲನೇಂ
ಜಡರಿರೊ ವಸಂತಸೇನೆ ದ
ಲೊಡವುಟ್ಟಿದಳಕ್ಕುಮಿಱಿವ ನಿನಗಂ ತನಗಂ ॥ ೮೪ ॥

ವ॥ ಎಂತೆನೆ ಧಾತಕೀಷಂಡದ ಮೂಡಣ ಮಂದರದ ಪೂರ್ವವಿದೇಹದ ಸೀತಾನದಿಯ ಬಡಗಣ ತಡಿಯ ಪುಷ್ಕಳಾವತೀ ವಿಷಯದ ವಿಜಯಾರ್ಧ ಪರ್ವತದ ದಕ್ಷಿಣಶ್ರೇಣಿಯೊಳಾದಿತ್ಯಪುರಮನಾಳ್ವ **ಸುಕುಂಡಲಂಗಮಮಿತೆಗಂ** ಸೀತಾನದಿಯ ಬಡಗಣತಡಿಯ ಪುಷ್ಕಳಾವತೀ ವಿಷಯದ ಪುಂಡರೀಕಿಣಿಯ—

ಕಂ॥ ಕುಸುಮಿತ ಬಹಿರುಪವನ ಭೂ
ಪ್ರಸರದೊಳಿರ್ದಮಿತಕೀರ್ತಿಕೇವಳಿಯಂ ಬಂ
ದಿಸಿ ಮದ್ಭವ ಪದ್ಧತಿಯಂ
ಬೆಸಗೊಳೆ ಬೆಸಸಿದನಘಾರಿ ದಿವ್ಯಧ್ವನಿಯಿಂ ॥ ೮೫ ॥

ವ॥ ನೀನತೀತಭವದೊಳ್ ಉಪಾರ್ಜಿತೋರ್ಜಿತಪುಣ್ಯನೆಯಾಗಿ ಸೌಧರ್ಮ ಕಲ್ಪದೊಳ್ ದೇವನಾದೈ ನಿನ್ನ ಮೂವರ್ಮಗಳ್ದಿರೊಳ ಗಿರ್ವರಲ್ಲಿಯೆ ದಿವಿಜರಾದರ್ ಒರ್ವಳನಂಗರಾಗರಸ ರಸಿಕತೆಯಿಂದಮಪ್ಸರಃಸಮುದಯದೊಳಮರ ವಾರವನಿತೆಯಾದಳ್ ಎಂದು ಕೇವಳ ಲೋಚನಂ ಬೆಸಸುವುದುಂ ಎನಗಾಮೂವರುಂ ಮಗಳ್ದಿರಾದಂದಮುಮಂ ನಾನಾಭವದಿಂದ ಮತ್ತಣ ಭವದೊಳೆಲ್ಲಿ ಪುಟ್ಟಿಬಂದೆನೆಂಬುದಮಂ

---

೮೩. ಕಡುಗಪ್ಪಾದ ಎರಡು ಮೋಡಗಳ ನಡುವೆ ಬೆಡಗಿನ ಮಿಂಚೊಂದು ಸೆಳೆಯುವಂತೆ ಇವರ ಎರಡೂ ಆನೆಗಳ ನಡುವೆ ಮಣಿಕುಂಡಲನೆಂಬ ಖೇಚರನೊಬ್ಬನು ಬಂದು ನಿಂತನು.

ವ॥ ಇಂದ್ರನೂ ಉಪೇಂದ್ರನೂ ಅದನ್ನು ಕಂಡು,

೮೪. ತಂತಮ್ಮ ಆನೆಗಳನ್ನು ಹಿಂದಕ್ಕೆ ಸರಿಸಿ ನಿಲ್ಲಿಸಿದರು. ಆಗ ಮಣಿಕುಂಡಲನು ಹೀಗೆಂದನು : "ಎಂತಹ ಅವಿವೇಕಿಗಳೊ ನೀವು ? ಒಬ್ಬರನ್ನೊಬ್ಬರು ಇರಿಯಹೊರಟ ನಿಮಗಿಬ್ಬರಿಗೂ ಆ ವಸಂತಸೇನೆ ಒಡಹುಟ್ಟಿದವಳು.

ವ॥ ಅದು ಹೇಗೆಂದರೆ : ಧಾತಕೀಷಂಡದ ಮೂಡಣ ಮಂದರದ ಪೂರ್ವ ವಿದೇಹ ಭೂಮಿಯುಂಟು. ಅಲ್ಲಿಯ ಸೀತಾನದಿಯ ಉತ್ತರ ತೀರದಲ್ಲಿ ಪುಷ್ಕಳಾವತೀರಾಜ್ಯವುಂಟು. ಆ ದೇಶದ ಮಧ್ಯದಲ್ಲಿರುವ ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯಲ್ಲಿ ಆದಿತ್ಯಪುರವೆಂಬ ಪಟ್ಟಣವಿದೆ. ಅದನ್ನಾಳುವ ಸುಕುಂಡಲನೆಂಬ ರಾಜನಿಗೂ ಆತನ ರಾಣಿ ಅಮಿತಾದೇವಿಗೂ (ಮಗನಾದ ಮಣಿಕುಂಡಲನೆಂಬವನೇ ನಾನು. ನನಗೆ ರಾಜ್ಯಾಧಿಕಾರವನ್ನೊಪ್ಪಿಸಿ ನಮ್ಮ ತಂದೆ ತಪಸ್ಸಿಗೆ ಹೋದರು. ಒಂದು ದಿವಸ ನಾನು ವಿಹಾರಮಾಡುತ್ತ)* ಅದೇ ರಾಜ್ಯದ ಪುಂಡರೀಕಿಣಿಗೆ ಬಂದೆನು.

೮೫. ಆ ಪುರದ ಹೊರವಲಯದಲ್ಲಿ ಹೂಬಿಟ್ಟ ಉದ್ಯಾನದಲ್ಲಿ ತಂಗಿದ್ದ ಅಮಿತಕೀರ್ತಿ ಕೇವಳಿಗಳನ್ನು ವಂದಿಸಿ, ನನ್ನ ಭವಾವಳಿಯನ್ನು ತಿಳಿಸಲು ಬಿನ್ನವಿಸಿದೆನು. ಆಗ ಆ ಪಾಪವೈರಿಗಳು ದಿವ್ಯವಾಣಿಯಿಂದ ಹೀಗೆಂದರು :

ವ॥ "ನೀನು ಕಳೆದ ಜನ್ಮದಲ್ಲಿ ಪುಣ್ಯವನ್ನು ಗಳಿಸಿಕೊಂಡು ಸೌಧರ್ಮಕಲ್ಪದಲ್ಲಿ ದೇವನಾಗಿ ಹುಟ್ಟಿದೆ. ನಿನ್ನ ಮೂವರು ಪುತ್ರಿಯರಲ್ಲಿ ಇಬ್ಬರು ಅದೇ ಕಲ್ಪದಲ್ಲಿ ದೇವರಾದರು. ಒಬ್ಬಳು ಮಾತ್ರ (ಸಮ್ಯಕ್ತ್ವವಿಲ್ಲದೆ) ಕಾಮಾಸಕ್ತಳಾಗಿದ್ದುದರಿಂದ ಅಪ್ಸರಲೋಕದಲ್ಲಿ ವಾರಸ್ತ್ರೀಯಾದಳು." ಹೀಗೆ ಕೇವಲಿಗಳು ತಿಳಿಸಲಾಗಿ, "ನನಗೆ ಆ ಮೂವರು

---

* ಇಲ್ಲಿ ಗ್ರಂಥಪಾತವಿದ್ದಂತಿದೆ. ಅಸಗನ ಸಂಸ್ಕೃತ ಮೂಲವನ್ನು ಅನುಸರಿಸಿ ಈ ಭಾಗವನ್ನು ಸಂಗ್ರಹಿಸಿದೆ.

ಬೆಸಸುವುದೆ[ನೆ] ಸೌಧರ್ಮಕಲ್ಪ ಸಮುತ್ಪತ್ತಿವರಮಲ್ಲಿಂದತ್ತಣ ಭವಪ್ರಾದುರ್ಭಾವಮುಮಂ ಭವಾವನೀರುಹ ವಿದಾರಕುಠಾರಂ ಬೆಸಸಿದಂ ಪುಷ್ಕರವರದ್ವೀಪದ ಪಡುವಣ ಮಂದರದ ಅಪರ ವಿದೇಹದ ಸೀತಾನದಿಯ ತೆಂಕಣ ತಡಿಯ ಸರಿದ್ವರ ವಿಷಯದ ವೀತಶೋಕ ಪುರಮನಾಳ್ವೊಂ ಚಕ್ರಧರನೆಂಬೊಂ ಸಕಲ ಚಕ್ರವರ್ತಿ ತದಗ್ರಕಾಂತೆಯರ್ ವಿದ್ಯುನ್ಮತಿಯುಂ ಕನಕಶ್ರೀಯುಮೆಂಬವರೊಳಗೆ ವಿದ್ಯುನ್ಮತಿಗೆ ಪದ್ಮಾವತಿಯೆಂಬಳ್ ಮಗಳ್ ಮತ್ತಿನ ಕನಕಶ್ರೀಗಂ ಪದ್ಮಲತೆಯುಂ ಕನಕಲತೆಯುಮೆಂಬ ಮಗಳ್ದಿರಾಗಿ—

ಉ॥ ದಂಡಿತ ವೈರಿ ಚಕ್ರಧರನೆಂಬ ನೆಗೞ್ತೆಯ ಚಕವರ್ತಿ ಪ
ಟ್ಖಂಡಮನೇಕಭೋಗ್ಯಮನನಾಕುಳಮಾಳೆ ಜಿನಾಗಮೋಕ್ತಿ ಕೆ
ಯ್ಕೊಂಡಿರೆ ಚಿತ್ತಮಂ ಸುತೆಯರುಂ ನೃಪಾಕಾಂತೆಯರುಂ ವ್ರತಂಗಳಂ
ಕೊಂಡೊರೊಡರ್ಚೆ ಸುವ್ರತ ತಪೋಧನೆ ತಮ್ಮನಣುವ್ರತಂಗಳಂ ॥ ೮೬ ॥

ವ॥ ಅಂತು ನೃಪನಗ್ರಮಹಿಷಿಯರಿರ್ವರುಂ ಮಗಳ್ದಿರ್ ಮೂವರುಂ ಶ್ರಾವಕವ್ರತಂಗಳಂ ಕೆಯ್ಕೊಂಡರಲ್ಲಿ ಕನಕಶ್ರೀಯುಂ ಕನಕಲತೆಯುಂ ಪದ್ಮಲತೆಯುಂ ಸಮ್ಯಗ್ದರ್ಶನಮನಸ್ಖಳಿತಮಾರಾಧಿಸಿ ನಿಜಾಯುರವಸಾನದೊಳ್ ಸಮಾಧಿವಡೆದು ಮುಡುಪಿ ಸೌಧರ್ಮಕಲ್ಪದೊಳ್ ಸಾಮಾನಿಕ ದೇವರಾದೊರ್ ಆ ವಿದ್ಯುನ್ಮತಿಯುಂ ಪದ್ಮಾವತಿಯುಂ ಸುದರ್ಶನೋತ್ತರಮಪ್ಪುಪಾಸಕ ವ್ರತೋಪಪನ್ನೆಯಪ್ಪುದಱಿಂ ಪದ್ಮಾವತಿ ಮೊದಲ ನಾಕದೊಳಚ್ಚರಿಸಿಯಾದಳ್ ಆ ಕನಕಶ್ರೀಯೆ ನೀಂ ಬಂದಿಲ್ಲಿ ಮಣಿಕುಂಡಳನಾದೆಯೆಂಬುದುಮೆನ್ನ ಮೂವರ್ ಮಕ್ಕಳುಮೆಲ್ಲಿ ಪುಟ್ಟಿದರೆಂಬುದಂ ಎನಗೆ ಬೆಸಸುವುದೆನೆ ಜಂಬೂದ್ವೀಪದ ದಕ್ಷಿಣಭರತದ ಮಳಯದೇಶದ ರತ್ನಪುರಮನಾಳ್ವೊಂ ಶ್ರೀಷೇಣನರಸಿಯಪ್ಪ ಸಿಂಹನಂದೆಗಮನಿಂದಿತೆಗಂ ಕನಕಲತೆಯಪ್ಪಂದಿನ ದಿವಿಜನುಮಾಪದ್ಮಲತೆಯಪ್ಪ ದೇವನುಮಿಂದ್ರನುಮುಪೇಂದ್ರನುಮೆಂಬ ಮಕ್ಕಳಾದರಿನ್ನಾ ಪದ್ಮಾವತಿಯೆಂಬಚ್ಚರಸಿಯೆ ತತ್ಪುರದೊಳ್ ವಸಂತಸೇನೆಯೆಂಬ ಪಣ್ಯಾಂಗನೆಯಾಗಿರೆ ತದೀಯಾಗ್ರ ಹಸ್ತ ಗ್ರಹ ಗ್ರಹ ಗ್ರಸ್ತರಿಂದ್ರನುಮುಪೇಂದ್ರನು

ಮಕ್ಕಳಾಗಿದ್ದ ಭವವನ್ನೂ ನಾನಾ ಬಗೆಯ ಜನ್ಮಗಳನ್ನೆತ್ತಿ ನಾನು ಎಲ್ಲಿ ಹುಟ್ಟಿಬಂದಿದ್ದೆನೆಂಬುದನ್ನೂ ತಿಳಿಸಿ ಅನುಗ್ರಹಿಸಿ" ಎಂದು ನಾನು ಕೇಳಿದೆನು. ಆಗ ಸಂಸಾರ ವೃಕ್ಷಕ್ಕೆ ಕೊಡಲಿಯ ಸ್ವರೂಪರಾದ ಆ ಯತಿಗಳು ನನ್ನ ಸೌಧರ್ಮಕಲ್ಪದ ಅವಸ್ಥೆಗಿಂತ ಮುಂಚಿನ ಭವಗಳನ್ನೂ ಅದರಿಂದೀಚೆಯ ಭವವನ್ನೂ ಹೀಗೆ ತಿಳಿಸಿದರು: "ಪುಷ್ಕರ ದ್ವೀಪದ ಪಶ್ಚಿಮ ಮಂದರ ಪರ್ವತದ ಅಪರ ವಿದೇಹದಲ್ಲಿ ಸೀತಾ ನದಿಯ ದಕ್ಷಿಣಕ್ಕೆ ವೀತಶೋಕವೆಂಬ ನಗರವುಂಟು. ಅದನ್ನಾಳುವವನು ಚಕ್ರಧರನೆಂಬ ಚಕ್ರವರ್ತಿ; ವಿದ್ಯುನ್ಮತಿ ಮತ್ತು ಕನಕಶ್ರೀ ಎಂಬಿಬ್ಬರು ಅವನಿಗೆ ಪಟ್ಟದರಸಿಯರು. ವಿದ್ಯುನ್ಮತಿಯ ಹೊಟ್ಟೆಯಲ್ಲಿ ಪದ್ಮಾವತಿಯೆಂಬ ಮಗಳಾದಳು; ಕನಕಶ್ರೀಗೆ ಪದ್ಮಲತೆ ಮತ್ತು ಕನಕಲತೆಯೆಂಬ ಇಬ್ಬರು ಮಕ್ಕಳು ಹುಟ್ಟಿದರು.

೮೬. ಶತ್ರುಗಳನ್ನೆಲ್ಲ ಗೆದ್ದು ಷಟ್ಖಂಡ ಭೂಮಿಯನ್ನು ಚಕ್ರಧರನು ಏಕಚ್ಛತ್ರದಿಂದ ಆಳುತ್ತಿದ್ದನು. ಜಿನಧರ್ಮಾಸಕ್ತರಾದ ಆತನ ರಾಣಿಯರು ಒಬ್ಬ ಆರ್ಯಿಕೆಯ ಸನ್ನಿಧಿಯಲ್ಲಿ ಅಣುವ್ರತಗಳನ್ನು ಕೈಕೊಂಡರು.

ವ॥ ಹೀಗೆ ಇಬ್ಬರು ರಾಣಿಯರೂ ಮೂವರು ಮಕ್ಕಳೂ ಶ್ರಾವಕವ್ರತಗಳನ್ನು ಆಚರಿಸುತ್ತಿರುವಲ್ಲಿ ಕನಕಶ್ರೀಯೂ, ಕನಕಲತೆಯೂ, ಪದ್ಮಲತೆಯೂ ಸಮ್ಯಗ್‌ದರ್ಶನವನ್ನು ಪಡೆದು ತಮ್ಮ ಆಯುಷ್ಯಾಂತದಲ್ಲಿ ಸಲ್ಲೇಖನದಿಂದ ಮರಣಹೊಂದಿ ಸೌಧರ್ಮಕಲ್ಪದಲ್ಲಿ ಸಾಮಾನಿಕ ದೇವರಾದರು. ವಿದ್ಯುನ್ಮತಿಯೂ ಪದ್ಮಾವತಿಯೂ ಉಪಾಸಕವ್ರತವನ್ನಾಚರಿಸಿದರು. (ಸಮ್ಯಕ್ತ್ವವಿಲ್ಲದುದರಿಂದ) ಪದ್ಮಾವತಿಯು ಮೊದಲನೆಯ ಸ್ವರ್ಗದಲ್ಲಿ ಅಪ್ಸರೆಯಾಗಿ ಹುಟ್ಟಿದಳು ಆ ಕನಕಶ್ರೀ ಎಂಬುವಳೆ ನೀನು; ದೇವನಾಗಿದ್ದು (ಅಲ್ಲಿಯ ಆಯುಷ್ಯ ಮುಗಿದ ಬಳಿಕ) ಇಲ್ಲಿ ಮಣಿಕುಂಡಲನೆಂಬ ಹೆಸರಿನಿಂದ ಹುಟ್ಟಿದೆ." ಹೀಗೆ ಅವರು ತಿಳಿಸಿದಾಗ, "ನನ್ನ ಮೂವರು ಮಕ್ಕಳು ಎಲ್ಲಿ ಹುಟ್ಟಿದರೆಂಬುದನ್ನು ತಿಳಿಸಿ" ಎಂದು ನಾನು ಬೇಡಿಕೊಂಡೆನು. ಆಗ ಅವರು ಇಂತೆಂದರು: "ಜಂಬೂದ್ವೀಪದ ಭರತಖಂಡದಲ್ಲಿ ಮಳಯದೇಶವುಂಟು. ಆ ದೇಶದ ರತ್ನಪುರವನ್ನು ಆಳುವವನು ಶ್ರೀಷೇಣರಾಜ. ಆತನ ಅರಸಿಯರಾದ ಸಿಂಹನಂದೆಗೂ ಅನಿಂದಿತೆಗೂ ಕನಕಲತೆ ಹಾಗೂ ಪದ್ಮಲತೆಯಾಗಿದ್ದ ಆ ದೇವರು ಇಂದ್ರ ಮತ್ತು ಉಪೇಂದ್ರರೆಂಬ ಮಕ್ಕಳಾಗಿ ಹುಟ್ಟಿದರು. ಆ ಪದ್ಮಾವತಿಯೆಂಬ ಅಪ್ಸರೆಯು ವಸಂತಸೇನೆಯೆಂಬ ವಾರಾಂಗನೆಯಾಗಿ ಹುಟ್ಟಿಬಂದಳು. ಇಂದ್ರ-

ಮಿಾಗಳ್ ಕಾದಿದಪರೆಂಬುದಂ ಬೆಸಸಿದ ಜಿನೇಂದ್ರ ಪಾದಾರವಿಂದಂಗಳ್ಗೆಱಗಿ ಸ್ನೇಹಪಾಶಪಾಶಿತನೆನಾಗಿ ನಿಮ್ಮಜ್ಞಾನ ವಿಳಸನಮಂ ಬಾಱಿಸಲ್ ಬಂದೆನಲ್ಲದೆಯುಂ—

ಮ॥ ಸ್ರ॥ ಮಗಳಕ್ಕಂ ತಂಗೆ ತಾಯ್ನಾ[1]ದಿ[1]ನಿ ಸೊಸೆ ಮದವಳ್ಳಜ್ಜಿ ಮುತ್ತಜ್ಜಿ ಮತ್ತ
ತ್ತಿಗೆ ಕೂಸಿತ್ತತ್ತೆಯೆಂಬೀ ಪೊ[2]ಱ[2]ಯ ವನಿತೆಯರ್ ಜನ್ಮ ಜನ್ಮಂಗಳೊಳ್ ತಾ
ಮೆ ಗಡಂ ಬೇಱಾಗಿ ಪುಟ್ಟಿರ್ದನುಭವಿಸುವರೆಂದಂದೆ ಸಂಸಾರದೊಳ್ ಪೇ
ಸುಗೆ ಗೆಟ್ಟೀ ನಾಣಪುತ್ತಪ್ಪಱಜಗಳದೊಳೇ ನಮ್ಮತಕ್ಕೂರ್ಮೆಯುಂಟೇ ॥ ೮೭ ॥

ಕಂ॥ ಎಂಬಿನಿತನಾತನಱಪಲೊ
ಡಂ ಬಿಲ್ಲುಂ ಬೆಱಗುಮಾಗಿ ತಮ್ಮ ಮನಂ ಕ
ಯ್ಯಂಬೇಱನಿಧಟುಮಸ್ತ್ರಕ
ದಂಬಕಮುಂ ಸೋರೆ ತಮ್ಮುತಿರ್ವರುಮಾಗಳ್ ॥ ೮೮ ॥

ಗಟಗಟ ಸುರಿವಶ್ರುವ ಕೊರ
ಲಱವಿ[3][ನೆಗಂ][3]ಮಟ್ಟಿಗದಟ್ವ ಪೊಟಗಿಂಗಂ ಪೊಂ
ಪುಱಯೆನಿಸಿದಾತ್ಮನಿಂದೆಗ
ಮಱಲ್ಗಮಿಂದ್ರನುಮುಪೇಂದ್ರನುಂ ಪದನಾದರ್ ॥ ೮೯ ॥

ವ॥ ಅಗಿ—

ಕಂ॥ ಆಭವದೊಳ್ ತಾಯಾಗಿಯು
ಮಿಾಭವದೊಳ್ ತಂದೆಯಾಗಿಯುಂ ನೀನೆಮ್ಮಾ
ರಾಭಸಿಕ ವೃತ್ತಿಯಂ ವಾ
ಗ್ಸ್ಯಭವದಿಂ ಕಳೆದು ಪೊರೆದೆಯೆಮ್ಮನನಿಂದ್ಯಾ ॥ ೯೦ ॥

ಉಪೇಂದ್ರರಿಬ್ಬರೂ ಈಗ ಅವಳಿಗಾಗಿ ಪರಸ್ಪರ ಕಾದಾಡುತ್ತಿದ್ದಾರೆ.” ಈ ವಿಷಯವನ್ನು ತಿಳಿದೊಡನೆ ನಾನು ಆ ಮುನಿಗಳ ಪಾದಗಳಿಗೆ ಎರಗಿ, ಪೂರ್ವಜನ್ಮಗಳ ಋಣಾನುಬಂಧಕ್ಕೋಳಗಾಗಿ ನಿಮ್ಮ ಅವಿವೇಕ ವರ್ತನೆಯನ್ನು ತಡೆಯಲು ಇಲ್ಲಿಗೆ ಬಂದೆನು. ಅದಲ್ಲದೆ—

೮೭. ಮಗಳು, ಅಕ್ಕ, ತಂಗಿ, ತಾಯಿ, ನಾದಿನಿ, ಸೊಸೆ, ಹೆಂಡತಿ, ಅಜ್ಜಿ, ಮುತ್ತಜ್ಜಿ, ಅತ್ತಿಗೆ, ಹೆಣ್ಣುಕೊಟ್ಟ ಅತ್ತೆ - ಮುಂತಾಗಿ ಹೆಂಗಸರು ಬಗೆಬಗೆಯ ಸಂಬಂಧಗಳನ್ನು ಹೊತ್ತು ಬೇರೆಬೇರೆ ಜನ್ಮವೆತ್ತಿ ಈ ಸಂಸಾರದಲ್ಲಿ ಬರುವರು. ಹೇಸುಗೆಗೆಟ್ಟ ಈ ನಾಚಿಕೆಗೇಡಾದ ವಿಷಯವನ್ನು ತಿಳಿಯದೆ ಹೀನರಾಗಿ ಜಗಳಕ್ಕೆ ನಿಂತು ಏನು ಪ್ರಯೋಜನ ? ಇದು ಯೋಗ್ಯವೆ ?”

೮೮. ಈ ವೃತ್ತಾಂತವನ್ನು ಆತನಿಂದ ಕೇಳಿ ಆ ಸೋದರರಿಬ್ಬರೂ ನಿಬ್ಬೆರಗಾದರು. ಅವರ ಮನಸ್ಸು ಜರ್‍ರನೆ ಇಳಿದುಹೋಯಿತು. ಕೈಯಲ್ಲಿಯ ಅಸ್ತ್ರದೊಡನೆ ಕಲಿತನದ ಉಕ್ಕೂ ಕಳಚಿಬಿದ್ದಿತು.

೮೯. ಕಣ್ಣುಗಳಿಂದ ದಳದಳನೆ ಕಂಬನಿಗಳುರುಳಿದುವು ; ಕೊರಳಸೆರೆ ಬಿಗಿಯಿತು ; ಅಳು ಉಕ್ಕಿಬಂದಿತು. ಇಂದ್ರ-ಉಪೇಂದ್ರರು ತಮಗೆ ತಾವೆ ಹೇಸಿಕೊಂಡರು.

ವ॥ ಹೀಗಾಗಿ—

೯೦. “ಆ ಜನ್ಮದಲ್ಲಿ ತಾಯಿಯಾಗಿ, ಈ ಜನ್ಮದಲ್ಲಿ ತಂದೆಯಾಗಿ ಬಂದು ನಮ್ಮ ಅವಿವೇಕದ ನಡತೆಯನ್ನು ತಪ್ಪಿಸಿ ನಮ್ಮನ್ನು ಸಲಹಿದ ಪವಿತ್ರಾತ್ಮನು ನೀನು.

---

1. ದು (ಅ) 2. ರ (ಅ) 3. ಗಮಗಿ (ಮ)

ವ॥ ಅಂತುಮಲ್ಲದೆಯುಂ ಸೌಜನ್ಯ ಜ್ಞಾನಾಧೀನ ಮಾನಸನೆಯಾಗಿ ನೀನಿಲ್ಲಿವರಂ ಬಂದೆಮ್ಮಂ ಪ್ರಬೋಧಿಸಿದೆಯಲ್ಲದಂದು ಗಭೀರ ಘೋರ ಸಂಸಾರ ಪಾರಾವಾರ ಪಾತಕ್ಕೆ ಪಕ್ಕಾಗಲೀಯದಾರ್ಪೊಂ ಕಾರ್ಪೊನದಱಿಂದಮೆಮಗೆ ನೀನೆ ಕಲ್ಯಾಣ ಮಿತ್ರನೈ ನಿನ್ನಿಂದಗ್ಗಳಮರ್ಪ್ಪೊಡ ಮರ್ಹತ್ಪರಮೇಶ್ವರನಲ್ಲದೆ ಪೆಱರಿಲ್ಲೆಂದಷ್ಟಾಂಗ[1]ವೆರಸಿ[1] ಪೊಡವಟ್ಟು ಖಚರೇಶ್ವರನಂ ವಿಸರ್ಜಿಸಿ ಸಕಲಕರ್ಮನಿರ್ಜರಾಕರಣ ಕಾರಣ ನಿರಂಜನ ದೀಕ್ಷೆಯಂ **ಸುಧರ್ಮ**ಮುನಿನಾಥ ಪಾದಪದ್ಮೋಪಕಂಠದೊಳಿಂದ್ರೋಪೇಂದ್ರರ್ ತಾಳ್ದಲೊಡಂ—

ಕಂ॥ ಬೇಗಂ ಜಿನಚಂದ್ರನ ಮೊಗ
ರಾಗಂ ಬೇಸಗೆಯ ಬಿಸಿಲೊಳಟಿದ ಹರಿದ್ರಾ
ರಾಗದ ತೆಱದಿಂ ತನಯ ವಿ
ಯೋಗದಿನೊರ್ವೊದಲೆ ಕಂದಿ ಕುಂದಿದುದಾಗಳ್ ॥ ೯೧ ॥

ವ॥ ಅಂತು ಪ್ರಿಯಪುತ್ರ ವಿಯೋಗ ವಿಹ್ವಲೀಭೂತ ಚೇತನೆಯಿಂ ಮೆಯ್ಯಂ ನಿಱಿಸಲಾಱದೆಯುಂ ಪರಿಣತ ವಯಸನಾಗಿಯುಂ ಬಾಳಮರಣಮನೆತ್ತಿಕೊಂಡು—

ಕಂ॥ ನಂಜಿನೊಳೂಡಿದ ಕಂಜಮ
ನೆಂಜಲಿಸಿದ ಮಧುಪನಂತೆ ವಿಷವಿಷಮ ಕನ
ತ್ಕಿಂಜಲ್ಕಮನುತ್ಪಲಮೊಂ.
ದಂ ಜನಪತಿ ಕಂಪುಗೊಂಡು ತೂಂಕಂಗೊಂಡಂ ॥ ೯೨ ॥

ಮ॥ ವಿಕಚೇಂದೀವರ ಪತ್ರಪಾತ್ರ ನಟನಂಗೋಪಾಂಗ ಗಂಭೀರ ಕುಂ
ಭಕಸಂರೇಚಕ ಪೂರಕಂ ಪರಿಮಳೋ[2]ನ್ಮಿಶ್ರಂ[2] ದಳದ್ರೋಮ ರೋ
ಮಕುಳಂ ನಂಜಿನ ಸುಯ್ಯ ಗಾಳಿ ನೃಪನಂ ಕೊಂದಿಕ್ಕಿತಾರ್ |ಕಾವರಂ
ತಕರಾಜಂ ಬಲಗರ್ವಿತಂ ಮುಳಿದೊಡಂ ತಾಯ್ವಾಲೆ ನಂಜಾದೊಡಂ ॥ ೯೩ ॥

ವ॥ ಅದಲ್ಲದೆ, ಜ್ಞಾನವಂತನಾದ ನೀನು ಸೌಜನ್ಯದಿಂದ ಇಲ್ಲಿಯವರೆಗೆ ಬಂದು ನಮ್ಮನ್ನು (ಸಕಾಲದಲ್ಲಿ) ಎಚ್ಚರಿಸಿದೆ. ನೀನು ಹಾಗೆ ಮಾಡದಿದ್ದರೆ ಘೋರವಾದ ಹಾಗು ಗಂಭೀರವಾದ ಈ ಸಂಸಾರ ಸಾಗರದಲ್ಲಿ ಬಿದ್ದು ಮುಳುಗುತ್ತಿದ್ದ ನಮ್ಮನ್ನು ಇನ್ನಾರು ಕಾಪಾಡುತ್ತಿದ್ದರು ? ಆದರಿಂದ ನೀನು ನಮಗೆ ಹಿತಕಾರಿಯಾದ ಮಿತ್ರನಾಗಿರುವೆ. ನಿನಗಿಂತ ಶ್ರೇಷ್ಠರಾದವರು ಅರ್ಹಂತ ಪರಮೇಶ್ವರನಲ್ಲದೆ ಬೇರೊಬ್ಬರಿಲ್ಲ." ಹೀಗೆ ನುಡಿದು ನಮಸ್ಕರಿಸಿ ಅವರು ಆ ಖೇಚರೇಂದ್ರನನ್ನು ಬೀಳ್ಕೊಟ್ಟರು ಮತ್ತು ಸುಧರ್ಮ ಮುನೀಂದ್ರರ ಪಾದಸನ್ನಿಧಿಯಲ್ಲಿ ಸಮಸ್ತ ಕರ್ಮನಾಶಕರವಾದ ಸಂನ್ಯಾಸ ದೀಕ್ಷೆಯನ್ನು ವಹಿಸಿದರು.

೯೧. ಹೀಗೆ ಒಮ್ಮಿಂದೊಮ್ಮೆಲೆ ತನ್ನ ಮಕ್ಕಳು ತನ್ನನ್ನು ಅಗಲಿ ಹೋದುದರಿಂದ ಜಿನಚಂದ್ರನಾದ ಶ್ರೀಷೇಣ ರಾಜನು ಖೇದದಿಂದ ಬಳಲಿದನು. ಬೇಸಗೆಯ ಬಿಸಿಲಿಗೆ ಬಿದ್ದ ಅರಿಸಿನದಂತೆ ಅವನ ಮುಖ ಬಣ್ಣಗೆಟ್ಟಿತು.

ವ॥ ತನ್ನ ಅಕ್ಕರೆಯ ಮಕ್ಕಳ ವಿಯೋಗವನ್ನು ಸೈರಿಸಲಾರದೆ ಕಳವಳದಿಂದ ಮನ ಕುದಿದು ಆತನಿಗ ಬದುಕೇ ಬೇಡವೆನಿಸಿತು. ವಯೋವೃದ್ಧನಾಗಿದ್ದರೂ ಅವಿವೇಕದ ಆತ್ಮಹತ್ಯೆಯನ್ನು ನಿರ್ಧರಿಸಿ—

೯೨. ತುಂಬ ಪ್ರಚಂಡವಾದ ವಿಷದ ಕೇಸರಗಳುಳ್ಳ ಕನ್ನೈದಿಲೆಯ ಹೂವೊಂದನ್ನು ಆಘ್ರಾಣಿಸಿದನು ; ನಂಜಿನ ತಾವರೆಗೆ ಬಾಯಿಟ್ಟ ದುಂಬಿಯಂತೆ ಕೂಡಲೆ ಎಚ್ಚರತಪ್ಪಿ ಬಿದ್ದನು.

೯೩. ಅರಳಿದ ಕಮಲಪತ್ರಗಳ ಮೇಲೆ ಪರಿಮಳದಿಂದೊಡಗೂಡಿ ನಾಟ್ಯವಾಡುವಂತಿದ್ದ ಗಾಳಿ ವಿಷವಾಗಿ ಆ ರಾಜನ ಉಸಿರಿನೊಡನೆ ಒಳಸೇರಿ, ಎದೆಯಲ್ಲಿ ತುಂಬಿನಿಂತು, ರೋಮರೋಮಗಳನ್ನೆಲ್ಲ ವ್ಯಾಪಿಸಿ, ಆಮೇಲೆ ಉಸಿರೊಡನೆ ಜೀವವನ್ನೂ ಹೊರದೂಡಿ ಅವನನ್ನು ಕೊಂದುಹಾಕಿತು. ಮಹಾಬಲಶಾಲಿಯಾದ ಯಮರಾಜನೆ ದರ್ಪದಿಂದ, ಕೋಪದಿಂದ ಕೈಯಿಕ್ಕಿದಾಗ ಬಿಡಿಸಿಕೊಳ್ಳುವವರಾರು ? ತಾಯಿಯ ಹಾಲೇ ವಿಷವಾದರೆ ಕಾಯುವವರು ಯಾರು ?

---

1. ವೆಱಗಿ (ಅ) 2. ದೋಮಿ (ಮ)

ಉ॥ ಬಾಯಱಿದಟ್ಟಿ ಮೆಟ್ಟಿ[1]ಡಿಪ[1] ಡಂಬಿಪ ರಂಡೆತನಕ್ಕೆ ಪೂಣ್ದಭಿ
ಪ್ರಾಯಮೆ ಸಿಂಹನಂದೆಗಮನಿಂದಿತೆಗಂ ಮೃಗಕಂತಮಾದ ತ
ತ್ಸಾಯಕಮುರ್ಚಿ ಪೋಗದೆ ಮೃಗೀಯುಗಳಂ ಮಡಿವಂತೆ ಸತ್ತರಾ
ಘ್ರಾಯಿಸಿ ನೀಲನೀರಜಮನಿಷ್ಟವಿಯೋಗಮನಾರೊ ಸೈರಿಪರ್ ॥ ೯೪ ॥

ವ॥ ಮತ್ತಂ ಪುರೋಹಿತನ ಮಗಳಪ್ಪಾ—

ಕಂ॥ ಸತಿ ಸತ್ಯಭಾಮೆ ವಿಕಸಿತ
ಶತಪತ್ರ ಪರಾಗಮಾತ್ಮ ನಾಸಾಪುಟ ನಿ
ಷ್ಪತಿತಂ ಕೊಳೆ ಮಡಿದಳ್ ಮಹಿ
ಪತಿಯೊಳಮರಸಿಯರೊಳಂ ಪೊದಟ್ಟಿರೆ ಮೋಹಂ ॥ ೯೫ ॥

ಪಱಿದೆಳಲತೆಯುಮನಿಭಪತಿ
ಪಱಿದ ನವಾಮ್ರಮುಮನೆಯ್ದೆ ಪೋಲ್ತುವು ಜೀವಂ
ಪಱಿಪಟ್ಟು ಪೋಗೆ ತನುವಿಂ
ಕಱಂಗಿ ಕಾಂತಾ ಶರೀರಮುಂ ನೃಪವಪುವುಂ ॥ ೯೬ ॥

ಆದಿತ್ಯವಿರಹದೊಳಮು
ಕ್ಷೋದತಮಂ ಪರ್ವುವಂತೆ ಜಗಮುಂ ಜೀವಂ
ಪೋದೊಡಮದಂಗರುಚಿ ಬೇ
ಱಾದುದು ನಡೆಜಂತ್ರಮಲ್ತೆ ನರರ ಶರೀರಂ ॥ ೯೭ ॥

---

೯೪. ಬಾಯ್ಬಿಟ್ಟು ಅತ್ತು, ಕರೆದು ವೈಧವ್ಯಕ್ಕೆ ಗುರಿಯಾಗುವ ಅವಸ್ಥೆಯನ್ನು ಆ ಸಿಂಹನಂದೆಯೂ ಅನಿಂದಿತೆಯೂ ಒಪ್ಪುವರೆ? ಗಂಡೆರಳೆಯನ್ನು ಭೇದಿಸಿದ ಬಾಣವೆ ಅದರೊಡನಿದ್ದ ಹೆಣ್ಣೆರಳೆಯನ್ನೂ ನಾಟಿ ಅವೂ ಸಾಯುವಂತೆ ಅದೇ ವಿಷಕಮಲವನ್ನು ಆಘ್ರಾಣಿಸಿ ಅವರಿಬ್ಬರೂ ಪ್ರಾಣಬಿಟ್ಟರು. ಇಷ್ಟಜನರ ವಿಯೋಗವನ್ನು ಸೈರಿಸ ಬಲ್ಲವರಾರು?

ವ॥ ಮತ್ತು ಪುರೋಹಿತನ ಮಗಳಾದ ಆ

೯೫. ಸತ್ಯಭಾಮೆಯು ಆ ಅರಸನ ಹಾಗು ಅರಸಿಯರ ಮೇಲಿನ ಮೋಹದಿಂದ ತಾನೂ ಅದೇ ಕಮಲವನ್ನು ಮೂಸಿ ಕೂಡಲೆ ತೀರಿಕೊಂಡಳು.

೯೬. ಮಹಾಗಜವೊಂದು ತುಳಿದಾಡಿದಾಗ ಹೊಸ ಮಾವಿನ ಸಸ್ಯವೂ, ಎಳೆಯ ಬಳ್ಳಿಗಳೂ ತೋರುವಂತೆ ಪ್ರಾಣಹೀನವಾದ ಆ ರಾಜರಾಣಿಯರ ದೇಹಗಳು ತೋರಿದುವು.

೯೭. ಸೂರ್ಯನು ಮುಳುಗಿದಮೇಲೆ ಜಗತ್ತನ್ನೆಲ್ಲ ಕಗ್ಗತ್ತಲೆ ಆವರಿಸುವಂತೆ ಜೀವ ಹೋದೊಡನೆ ದೇಹದ ಕಾಂತಿ ಹೊರಟು ಹೋಯಿತು (ದೇಹ ಕಪ್ಪಿಟ್ಟಿತು). ಮನುಷ್ಯರ ಶರೀರವೆಂದರೇನು? ಒಂದು ನಡೆಯುವ ಯಂತ್ರವಲ್ಲವೆ?

---

1. ಡುವ (ಮ)

ವ॥ ಆಗಳ್ ಮಂತ್ರಿಪುರೋಹಿತಸೇನಾನಾಯಕಾಂತಃಪುರಾವರೋಧಜನಂಗಳ್ ಹಾಹಾಕರುಣ ಧ್ವನಿಬಧಿರಿತಾಶಾವಳಯರರಸಂಗಮರಸಿಯರ್ಗಂ ಸತ್ಯಭಾಮೆಗಂ ಶರೀರಪೂಜೆಯಂ ಮಾಡಿ ಕರ್ಪೂರಾಗುರು[1]ತುರುಷ್ಕ[1]ಚಂದನ ಹರಿಚಂದನಾದಿ ನಾನಾವಿಧ ಸುರಭಿತರೇಂಧನಂಗಳೊಳ್ ಶರೀರ ಸಂಸ್ಕಾರ ವಿಧಿಯಂ ವಿಧಿಪೂರ್ವಕಂ ನಿರ್ವರ್ತಿಸಿ ರಾಜ್ಯಾರ್ಹನಪ್ಪಿಂದ್ರನ ಮಗಂ ಚಂದ್ರನಂ ಧರಾಭಾರ ಧುರಂಧರಂ ಮಾಡಿದರಿತ್ತ ಶ್ರೀಷೇಣಂಗಮಾ ಮೂವರುಮಂಗನೋತ್ತಮೆಯರ್ಗಮುತ್ತಮಪಾತ್ರ ದಾನದ ದಾನಾನುಮೋದದ ಭೂತಪುಣ್ಯದಿಂ ಧಾತಕೀಷಂಡದ ಮೂಡಣ ಮಂದರಮುತ್ತರದಿಗ್ಭಾಗದೊಳುತ್ತರ ಕುರುವೆಂಬುತ್ತಮ ಭೋಗಭೂಮಿ ಸಮುತ್ಪತ್ತಿಸ್ಥಾನಮಾದುವಲ್ಲಿ—

ಕಂ॥ ಮರಕತಮಣಿ ಕುಟ್ಟಿಮಮು
ರ್ವರೆ ಚಂಚತ್ಪಂಚ ರತ್ನರುಚಿ ಬೆಳಗು ರಸಂ
ಪರಮಾನಂದರಸಂ ಸುರ
ತರುಗಳ್ ಸವಿಯುರಳಿ ಪುರುಳಿಯರಗಿಳಿಯ ರವಂ ॥ ೯೮ ॥

ಏಮಾತೊ ಮೊಱೆದು ಪಾಱುವ
ಕಾಮಶರ ಸ್ಥಿತಿಯೊಳಿರ್ಪ ನೆಱೆಗೊಳ್ವೆಡೆಗಂ
ಕಾಮಶಿಳೀಮುಖಮಲ್ತೆ ಶಿ
ಳೀಮುಖಮಾರೆಯ್ದೆ ಪೊಗಟ್ವರುತ್ತರ ಕುರುವಂ ॥ ೯೯ ॥

ಅಭಿನುತ ಕಲ್ಪ ಮಹೀಜ
ಪ್ರಭೆಗಳಿನಲ್ಲಿರುಳ ಪಗಲ ರುಚಿ ವಿಷಯವಿಭು
ಪ್ರಭುತೆಯ ಮನೋಭವಂಗ್ಜನ ಜ[2]
ನ್ಮಭೂಮಿ ತದ್ಭೋಗಭೂಮಿ ಭೂಮಿವಿಭಾಗಂ ॥ ೧೦೦ ॥

ವ॥ ಆಗ ಮಂತ್ರಿ, ಪುರೋಹಿತ, ಸೇನಾಪತಿ, ಅಂತಃಪುರದ ಸ್ತ್ರೀಯರು ಮುಂತಾದವರೆಲ್ಲರೂ ಕರುಣಾಜನಕವಾದ ಹಾಹಾಕಾರದಿಂದ ದಿಕ್ಕುಗಳೆಲ್ಲ ಕಿವುಡಾಯಿತೆನ್ನುತ್ತಿರಲಾಗಿ ಅರಸನಿಗೂ, ಅರಸಿಯರಿಗೂ, ಸತ್ಯಭಾಮೆಗೂ ಕಳೇವರ ಪೂಜೆಮಾಡಿ ಕರ್ಪೂರ, ಅಗುರು, ಶ್ರೀಗಂಧ, ಹರಿಚಂದನ ಮೊದಲಾದ ಶ್ರೀಗಂಧದ ಇಂಧನಗಳನ್ನೊಟ್ಟಿ ಆ ದೇಹಗಳಿಗೆ ವಿಧಿವತ್ತಾಗಿ ಅಗ್ನಿಸಂಸ್ಕಾರವನ್ನು ನೆರವೇರಿಸಿದರು. ಇಂದ್ರನ ಮಗನಾದ ಚಂದ್ರನೆಂಬವನಿಗೆ ಪಟ್ಟಗಟ್ಟಿ ರಾಜ್ಯಾಧಿಕಾರವನ್ನಿತ್ತರು. ಇತ್ತ ಶ್ರೀಷೇಣನಿಗೆ ಉತ್ತಮವಾದ ಪಾತ್ರದಾನದ ಪುಣ್ಯವೂ ಆ ಮೂವರೂ ಸ್ತ್ರೀಯರಿಗೆ ದಾನಾನುಮೋದದ ಪುಣ್ಯವೂ ಲಭಿಸಿ ಅವರೆಲ್ಲರಿಗೆ ಧಾತಕೀಷಂಡದ ಪೂರ್ವಮಂದರಕ್ಕೆ ಉತ್ತರ ದಿಕ್ಕಿನಲ್ಲಿರುವ ಉತ್ತರಕುರುವೆಂಬ ಭೋಗಭೂಮಿಯಲ್ಲಿ ಜನ್ಮವಾಯಿತು. ಆ ಪ್ರದೇಶದಲ್ಲಿ

೯೮. ಭೂಮಿಯೆಲ್ಲ ಪಚ್ಚೆಯ ನೆಲಗಟ್ಟು; ಬೆಳಕೆಲ್ಲ ಪಂಚರತ್ನಗಳ ಪ್ರಭೆ; ರಸವೆಂದರೆ ಪರಮಾನಂದ ರಸವೇ; ಮರಗಳು ಕಲ್ಪವೃಕ್ಷಗಳು; ಮೈನಾ ಹಕ್ಕಿಗಳ ಹಾಗು ಅರಗಿಳಿಗಳ ಧ್ವನಿಯು ಇಂಪೇ ಇಂಪು.

೯೯. ಕಾಮಾವಸ್ಥೆಯಿಂದ ಗುಂಯಿಗುಡುತ್ತ ತಂತಮ್ಮ ಇನಿಯರನ್ನು ಬೆರೆಯಹೊರಟ ದುಂಬಿಗಳು ಪ್ರತ್ಯಕ್ಷ ಕಾಮಬಾಣಗಳೇ ಅಲ್ಲವೆ? ಛೆ! ಇನ್ನೇನು ಮಾತು? ಉತ್ತರ ಕುರುವನ್ನು ಹೊಗಳಿ ಮುಗಿಸಬಲ್ಲವರಾರು?

೧೦೦. ಅಲ್ಲಿ ಹಗಲಿರುಳುಗಳ ಬೆಳಕನ್ನು (ಜ್ಯೋತಿರಂಗವಾದ) ಕಲ್ಪವೃಕ್ಷಗಳೇ ಉಂಟುಮಾಡುವುವು. ವಿಷಯಸುಖದ ಪ್ರಭುವಾದ ಮನ್ಮಥನಿಗೆ ಆ ಭೋಗಭೂಮಿಯೆ ಜನ್ಮಭೂಮಿ.

---

1. ಮದಾರ್ಕ (ಮ) 2. ಸಜ್ಜ (ಅ)

ಕಂ॥ ಅಮರವಿಮಾನಮುಮಹಿಪತಿ
ವಿಮಾನಮುಂ ನಾಕನಾಗಲೋಕಂಗಳೊಳು
ತ್ತಮಮಲ್ತಿವರ್ಕ್ಕಮತ್ಯು
ತ್ತಮಮುತ್ತಮ ಭೋಗಭೂಮಿ ಭವನಾವಳಿಗಳ್ ॥ ೧೦೧ ॥

ವ॥ ಮತ್ತಮಲ್ಲಿ—

ಮ॥ ಜಳದಗ್ರೀಷ್ಮ ಹಿಮಂಗಳಿಲ್ಲ ಮೊಳೆವುಲ್ನಾಲ್ಕಂಗುಳಂಗಳ್ವರಂ
ಬಳಗುಂ ತಣ್ಪಿನ ಬಿಣ್ಪಿನಂತೆಸಗುಗುಂ ಸೌರಭ್ಯಮಾಂದ್ಯಂಗಳಂ
ತಳೆದುದ್ಯಾನಭವಾನಿಳಂ ಸರಸಿಜಂ ಹೈಮಂ ವನಂ ಕೋಕಿಳಾ
ಕುಳಮಬ್ಜಾಕರಮಂಬುವಿಷ್ಕಿರಚಿತಂ ನೀಚೋಚ್ಚನೀರೋಪಮಂ ॥ ೧೦೨ ॥

ವ॥ ಅದಲ್ಲದೆ ಚೋರ ಡಾಮರಾಕ್ರಾಂತಿಯುಮಿಟ್ಟಿಯ ಪಸವಿನ ಪೆಸರ್ಪೆಸರುಂ ಸ್ವಾಮಿ ಭೃತ್ಯಸಂಬಂಧದ ದೆಸೆಯುಂ ಬಡವರ್ ಬಲ್ಲಿದರೆಂಬ ದೇಶಭಾಷೆಯುಂ ಆಯಿಲದಳುಪಿನಿಟಿ ವಿಟಿಯುಂ ಕುತ್ತದ ಮ[1][ಉ][1]ಕದ ಚಿತ್ರವೃತ್ತಿಯುಮಪಮೃತ್ಯುವಿನ ಸತ್ವಬಾಧೆಯ ಗಂಧಾಗಂಧಮುಮಿಲ್ಲಿನ್ನಾ ಭೋಗಭೂಮಿಗಳುತ್ತಮ ಮಧ್ಯಮ ಜಘನ್ಯಭೇದದಿಂ ತ್ರಿವಿಧಮಕ್ಕುಮಲ್ಲಿಯಾರ್ಯರ ಸಂಹನನಂಗಳ್—

ಕಂ॥ ಪರಮಪ್ರಮಾಣಮಱು ಸಾ
ಸಿರಂಬರಂ ಮತ್ತೆ ಮಧ್ಯಮಂಸ್ಥಿತಿ ನಾಲ್ಸಾ
ಸಿರಮಧಮಮಾತ್ರಮಿರ್ಛಾ
ಸಿರಂ ಶರಾಸನಮದು ಕ್ರಮಕ್ರಮದಿಂದಂ ॥ ೧೦೩ ॥

---

೧೦೧. ದೇವಲೋಕದ ವಿಮಾನಗಳಾಗಲಿ ನಾಗಲೋಕದ ವಿಮಾನಗಳಾಗಲಿ ತಮ್ಮನ್ನು ಮೀರಲಾರವೆಂಬಂತೆ ಆ ಭೋಗಭೂಮಿಯ ಭವ್ಯಭವನಗಳು ಉತ್ಕೃಷ್ಟವಾಗಿ ಶೋಭಿಸುವುವು.

ವ॥ ಮತ್ತು ಅಲ್ಲಿ—

೧೦೨. ಮಳೆಗಾಲ, ಚಳಿಗಾಲ, ಬೇಸಗೆಗಳೆಂಬುವಿಲ್ಲ; ಮೊಳೆ ಹುಲ್ಲು ನಾಲ್ಕಂಗುಲದವರೆಗೆ ಬೆಳೆಯುವುದು ; ಉದ್ಯಾನದಿಂದ ಸುಗಂಧವಾಗಿಯೂ ಮಂದವಾಗಿಯೂ ಬರುವ ಗಾಳಿ ತಂಪಿನ ಪುಂಜದಂತೆ ಶೋಭಿಸುವುದು; ತಾವರೆಗಳು ಚಿನ್ನದ ಹೂಗಳು; ಬನಗಳು ಕೋಗಿಲೆಗಳಿಂದ ಇಡಿಕಿರಿದಿವೆ; ನೀರನ್ನು ಚಿಮ್ಮುತ್ತಿರುವ ಜಲಪಕ್ಷಿಗಳಿಂದ ತುಂಬಿ ಕಮಲ ಸರೋವರಗಳು ವಜ್ರದ ನೀರಿನಂತೆ ಮಿರುಗುತ್ತಿರುವುವು.

ವ॥ ಅದಲ್ಲದೆ, ಅಲ್ಲಿ ಕಳ್ಳಕಾಕರ ಭಯವಿಲ್ಲ ; ಕ್ಷಾಮಡಾಮರಗಳಿಲ್ಲ ; ಈತಿಬಾಧೆಯ ಹೆಸರು ಕೂಡ ಇಲ್ಲ ; ಒಡೆಯ-ಆಳು ಎಂಬ ಭೇದಭಾವವಾಗಲಿ, ಬಡವ ಬಲ್ಲಿದರೆಂಬ ನಾಡಮಾತಾಗಲಿ, ಕೊಳ್ಳೆ-ಸುಲಿಗೆಗಳ ಉಪದ್ರವವಾಗಲಿ ಇಲ್ಲವೇ ಇಲ್ಲ; ರೋಗ, ಮನೋವ್ಯಾಕುಲತೆ, ಅಪಮೃತ್ಯು, ಜೀವಹಿಂಸೆ—ಇವುಗಳ ಸುಳಿವು ಕೂಡ ಇಲ್ಲ. ಹೀಗಿರುವ ಭೋಗಭೂಮಿಗಳು ಉತ್ತಮ, ಮಧ್ಯಮ ಮತ್ತು ಜಘನ್ಯ ಎಂದು ಮೂರು ಬಗೆಯಾಗಿರುವುವು. ಅಲ್ಲಿಯ ಆರ್ಯರ ದೇಹಗಳಿಗೆ—

೧೦೩. ಉತ್ತಮ ಭೋಗಭೂಮಿಯಲ್ಲಿ ಆರು ಸಾವಿರ ಬಿಲ್ಲಳತೆ, ಮಧ್ಯಮದಲ್ಲಿ ನಾಲ್ಕು ಸಾವಿರ ಬಿಲ್ಲಳತೆ, ಜಘನ್ಯದಲ್ಲಿ ಎರಡು ಸಾವಿರ ಬಿಲ್ಲಳತೆ.

---

1. ರು (ಮ)

ಮ॥ ಬದರಾಕ್ಷಾಮಲಕ ಪ್ರಮಾಣಮಶನಂ ತ್ರಿದ್ವ್ಯೈಕ ಸಂಖ್ಯಾತ ಮಾ
ತ್ರದೊಳಾಯುಷ್ಯದ ಸಂಖ್ಯೆ ಮೂಱೆರಡುವೊಂದೊಂದಲ್ಲಿ ಪಲ್ಯೋಪಮಂ
ಪದೆದಿತ್ತುತ್ತಮ ಮಧ್ಯಮಾಧಮ ಮಹಾ ಸತ್ಪಾತ್ರದಾಹಾರ ದಾ
ನದಿನಾಭೂಮಿಗಳೊಳ್ ಕಷಾಯ ರಹಿತರ್ ಪರ್ಯಾಯದಿಂ ಪುಟ್ಟುವರ್ ॥ ೧೦೪ ॥

ವ॥ ಮತ್ತಮುತ್ತಮ ಭೋಗಭೂಮಿಯ ದಂಪತಿಗಳೆ ಶುಕ್ಲಶೋಣಿತಂಗಳೊಂದೊಂದಱೊಳೊಂದಿ ಗರ್ಭಶಯನದೊಳ್—

ಕಂ॥ ಪರ್ವಿ ನಿಲೆ ಕಲಿಲ ಘನ ಪೇ
ಶ್ಯರ್ವುದಪರಿಣತಿಯನುಕ್ರಮಂ ನೆಱೆವುದುಮಿ
ರ್ವರ್ವರೆ ನವಮಾಸಾಂತದೊ
ಳೊರ್ವುಳಿಯೊಳಮಳ್ಗಳಾಗಿ ಸಂಕ್ರಮಿಪರವರ್ ॥ ೧೦೫ ॥

ವ॥ ಸಂಕ್ರಮಿಸಿ—

ಉ॥ ಪುಟ್ಟಿದ ಜೀವರಾಶಿ ಮಿಥುನತ್ವದೊಳಲ್ಲದೆ ಪುಟ್ಟದಾತ್ಮಜರ್
ಪುಟ್ಟಿರೆ ಸೀಂತುಮಾಗುಳಿಸಿಯುಂ ಪಿತೃಗಳ್ ಕ[1][ರ]ಗುತ್ತೆ ಸಗ್ಗದೊಳ್
ಪುಟ್ಟುವರಬ್ಬೆದಾದಿ ಪರಿಚಾರಕರೀ[2][ಱ]ಲ ಕಾಪು ಕಾಪೆ ಕೂ
ಸಿಟ್ಟವರಾತ್ಮಪುಣ್ಯಮೆ ವಿಪುಣ್ಯರನೋಳಿಯೆ ಕಾಪು ಕಾಗುಮೇ ॥ ೧೦೬ ॥

ವ॥ ಅಂತವರ್ ಕರ್ಕಟಕೇಶ ಚರ್ಮರಾಗಿ ಪುಟ್ಟಿ ಪೂ[3]ರ್ವೋಪಾರ್ಜಿತ ಸುಕೃತಮಹೀರುಹ ನಿಶಾಕರ ನಿಜಾಂಗುಳಿನಿಸ್ರವದ್ದುಗ್ಧಾಜ್ಯ ಧಾರೆಯ ಸವಿಯಂ ಸೇವಿಸಲೇಱೇೞು ದೆವಸಂಗಳುಂ ಪೋಗೆ ಪೋಗೆ—

---

೧೦೪. ಉತ್ತಮ ಪಾತ್ರ, ಮಧ್ಯಮ ಪಾತ್ರ ಹಾಗು ಜಘನ್ಯಪಾತ್ರ ದಾನಮಾಡಿದವರಿಗೆ ಆ ಪುಣ್ಯಫಲದಿಂದ ಅನುಕ್ರಮವಾಗಿ ಉತ್ತಮ ಭೋಗಭೂಮಿ, ಮಧ್ಯಮ ಭೋಗಭೂಮಿ ಹಾಗು ಜಘನ್ಯಭೂಮಿಯಲ್ಲಿ ಜನ್ಮವಾಗುವುದು; ಮೊದಲನೆಯ ವರ್ಗದವರಿಗೆ (ಅಮೃತದ) ಆಹಾರ ಪ್ರಯಾಣ ಬೋರೆ (ಬದರಿ) ಹಣ್ಣಿನಷ್ಟು—ಮೂರು ದಿನಕ್ಕೊಮ್ಮೆ. ಎರಡನೆಯ ವರ್ಗಕ್ಕೆ ತಾರೆಕಾಯಿಯಷ್ಟು—ಎರಡು ದಿನಕ್ಕೊಮ್ಮೆ; ಕೊನೆಯ ವರ್ಗಕ್ಕೆ ನೆಲ್ಲಿಕಾಯಿಯಷ್ಟು—ದಿನಕ್ಕೊಮ್ಮೆ. ಆಯುಷ್ಯಾವಧಿ ಅದೇ ಅನುಕ್ರಮದಲ್ಲಿ ಮೂರು ಪಲ್ಯಕಾಲ, ಎರಡು ಪಲ್ಯಕಾಲ ಹಾಗೂ ಒಂದು ಪಲ್ಯೋಪಮಕಾಲ. ಭೋಗಭೂಮಿಯಲ್ಲಿ ಹುಟ್ಟುವವರಿಗೆ ಕಷಾಯವಿರುವುದಿಲ್ಲ.

ವ॥ ಮತ್ತು ಉತ್ತಮ ಭೋಗಭೂಮಿಯಲ್ಲಿ ಹುಟ್ಟುವವರು ದಂಪತಿಗಳಾಗಿಯೆ ಹುಟ್ಟುತ್ತಾರೆ. ಅವರ ಶುಕ್ರ ಶೋಣಿತಗಳು ಒಂದರಲ್ಲೊಂದು ಬೆರೆತು ಗರ್ಭಾಶಯದಲ್ಲಿ—

೧೦೫. ಗಟ್ಟಿಗೊಂಡು, ಕಲಿಲ, ಘನ, ಅಂಡ, ಪಿಂಡ ಮೊದಲಾದ ಅವಸ್ಥೆಗಳನ್ನು ಹೊಂದುತ್ತ ಪರಿಪಕ್ವವಾಗಿ ಒಂಬತ್ತು ತಿಂಗಳಿಗೆ ಅವಳಿಮಕ್ಕಳಾಗಿ ರೂಪುಗೊಳ್ಳುವುವು.

ವ॥ ಹಾಗೆ ರೂಪುಗೊಂಡು—

೧೦೬. ಹುಟ್ಟುವ ಎಲ್ಲ ಜೀವಗಳೂ ಅವಳಿಗಳಲ್ಲದೆ ಒಂಟೊಂಟಿಯಾಗಿ ಹುಟ್ಟುವುದಿಲ್ಲ. ಹಾಗೆ ಮಕ್ಕಳು ಹುಟ್ಟಿದೊಡನೆ ತಂದೆತಾಯಿಗಳು ಸೀತು ಆಕಳಿಸಿ ಅಲ್ಲಿಂದ ಕರಗಿಹೋಗಿ ಸ್ವರ್ಗದಲ್ಲಿ ಜನ್ಮತಾಳುವರು. ಅವರು ಜನ್ಮವಿತ್ತ ಈ ಹಸುಗೂಸುಗಳಿಗೆ ತಾಯಿ, ದಾದಿ, ಪರಿಚಾರಕರು—ಇವರಾರ ರಕ್ಷೆಯೂ ಬೇಕಾಗಿಲ್ಲ. ಆ ಕೂಸುಗಳು ಗಳಿಸಿಕೊಂಡು ಬಂದ ಪುಣ್ಯವೇ ಅವರನ್ನು ರಕ್ಷಿಸುವುದು. ಪುಣ್ಯಹೀನರಾದವರಿಗೆ ಎಷ್ಟು ಜನರ ರಕ್ಷೆ ಇದ್ದರೂ ಏನು ಫಲ ?

ವ॥ ಹಾಗೆ ಕರ್ಕಟಕೇಶಚರ್ಮರಾಗಿ ಹುಟ್ಟಿದ ಆ ಜೀವಗಳು ಪೂರ್ವಜನ್ಮದ ಪುಣ್ಯಫಲವಾಗಿ ತಮ್ಮ ಬೆರಳುಗಳಿಂದ ಒಸರುವ ಹಾಲು ತುಪ್ಪದ ಧಾರೆಯನ್ನು ಸೀಪಿ ಕುಡಿಯುತ್ತ ಏಳು ದಿನಸ ಕಳೆಯುವಷ್ಟರಲ್ಲಿ—

---

1. ಱ (ಮ)　2. ರ (ಮ)　3. ಪುರೋ (ಅ)

ಚಂ॥ ತಡೆಯದೆ ಕುಳ್ಳಿರಲ್ ತುರಿಪದಿಂ ತೆವ[1][ಟ][1]ಲ್ ತದನಂತರಂ ತಳ
ರ್ವಡೆ ನಡೆಯಲ್ ಬಟಿಕ್ಕೆ ಪದುಳಂ ನಡೆಯಲ್ ಕಳೆಯೆಲ್ಲಮಂ ಕಲಲ್
ಜಡರೆನಲೀಯದೋದನಱಿಯಲ್ ನವಯವ್ವನರಾಗಿ ಚೆಲ್ವನ
ಚ್ಚುಡಿದಿಡಿರ್ದ ಲಕ್ಷಣದಿನಾಂತಿರಲಂತವರಂತು ಸೋಂತರಾರ್ ॥ ೧೦೭ ॥

ವ॥ ಅಂತು ನಾಲ್ವತ್ತೊಂಭತ್ತು ದಿವಸದಿಂ ಬಟಿಯಮವರ್ಗಂ ಜೀವನೋಪಾಯ ಭೋಗೋಪಭೋಗ ವಿತರಣ ನಿರತ ಸುರತರು ಪ್ರಕರಂಗಳೊಳ್—

ಕಂ॥ ಮದಿರಾಭರಣಾಂಬರಸುರ
ಭಿದಾಮ ವಾದಿತ್ರಮತ್ರ ಭೋಜನ ನಾನಾ
ಸದನ ಪ್ರದೀಪ ತೇಜೋಂ
ಗದ ಪತ್ತುಂ ತೇಜದನಲ್ಪಕಲ್ಪಕುಜಂಗಳ್ ॥ ೧೦೮ ॥

ವ॥ ಒಳವವ[2][ಱೊ][2]ಳ್—

ಕಂ॥ ಈಗುಂ ಮಿಥುನರ್ಗಳ್ಕುರೆ
ರಾಗದ ರತದೊದವನೀವ ಕಣ್ಗಂ ಮನಕಂ
ರಾಗಮನೀಯದ ಸವಿಯ ಸ
ಮಾಗಮಮುಂ ಪಡೆವ ಮದ್ಯಮಂ ಮದ್ಯಾಂಗಂ ॥ ೧೦೯ ॥

ಪೊಳೆವ ಮಣಿಮಕುಟಮೆಕ್ಕಾ
ವಳಿ ಹಾರಂ ಕಟಕಮುದರಬಂಧಂ ಮಣಿಮೇ
ಖಳೆ ಮಕರಕುಂಡಳಂ ತೋ
ಳ್ವಳೆಯೆಂಬಿವನವರ್ಗೆ ಭೂಷಣಾಂಗಂ ಕುಡುಗುಂ ॥ ೧೧೦ ॥

---

೧೦೭. ಕುಳ್ಳಿರಲು, ತ್ವರಿತವಾಗಿ ಅಂಬೆಗಾಲಿಕ್ಕಲು ಕಲಿತು, ಆಮೇಲೆ ದಟ್ಟಡಿಯಿಡುತ್ತ ಚೆನ್ನಾಗಿ ನಡೆಯಲೂ ಸಮರ್ಥವಾಗುವುವು; ಆ ಬಳಿಕ ಸಕಲ ಕಲೆಗಳನ್ನು ಕಲಿತು, ಓದಿ, ಜ್ಞಾನ ಸಂಪಾದಿಸಿ, ನವಯೌವನವನ್ನು ತಾಳಿ ಉತ್ತಮ ಲಕ್ಷಣವಂತರಾಗುವುವು. ಹೀಗೆ ಸುಕೃತಿಗಳಾದವರು ಇವರಲ್ಲದೆ ಇನ್ನಾರು ?

ವ॥ ಹೀಗೆ ನಾಲ್ವತ್ತೊಂಬತ್ತು ದಿನಕ್ಕೆ ಸಂಪೂರ್ಣ ಬೆಳವಣಿಗೆಯನ್ನು ಹೊಂದುವರು. ಅವರಿಗೆ ಜೀವನೋಪಾಯ ವನ್ನೂ ಭೋಗೋಪಭೋಗಗಳನ್ನೂ ಒದಗಿಸಲು

೧೦೮. ಮದ್ಯ, ಆಭರಣ, ವಸ್ತ್ರ, ಪುಷ್ಪಮಾಲೆ, ವಾದ್ಯ, ಪಾತ್ರೆ, ಭೋಜನ, ನಾನಾರೀತಿಯ ಗೃಹ, ದೀಪ, ಬೆಳಕು—ಇವುಗಳನ್ನೆಲ್ಲ ನೀಡುವ ಹತ್ತು ಬಗೆಯ ಕಲ್ಪವೃಕ್ಷಗಳಿರುವುವು.

ವ॥ ಅವುಗಳಲ್ಲಿ—

೧೦೯. ಮದ್ಯಾಂಗವೆಂಬ ಕಲ್ಪವೃಕ್ಷಗಳು ಅಲ್ಲಿಯ ದಂಪತಿಗಳಿಗೆ ಸುರತದ ಸೊಗಸನ್ನು ಉಂಟುಮಾಡುವ, ಆದರೆ ಕಣ್ಣಿಗೆ ಕೆಂಪನ್ನಾಗಲಿ ಮನಕ್ಕೆ ಮತ್ತನ್ನಾಗಲಿ ತಾರದ ತುಂಬ ಸವಿಯಾದ ಮದ್ಯವನ್ನು ಒದಗಿಸುತ್ತವೆ.

೧೧೦. ಥಳಥಳಿಸುವ ರತ್ನಕಿರೀಟ, ಏಕಾವಳಿ, ಹಾರ, ಕಡಗ, ಉದರಬಂಧ, ರತ್ನದ ಕಟಿಸೂತ್ರ, ಮಕರಕುಂಡಲ, ತೋಳ್ಬಳೆ—ಈ ಆಭರಣಗಳನ್ನು ಭೂಷಣಾಂಗ ವೃಕ್ಷ ಕೊಡುವುವು.

---

1. ಳ (ಮ) 2. ರೊ (ಮ)

ಕಂ॥ ಕುಡುಗುಂ ಚಿತ್ರಾವಳಿ ಪ[ಟ್][1]
ಯಡವಟ್ಟ ಸುವರ್ಣ ಚೇಲಮುಂ ತಿವಟಂ ಪೂ
ವಡೆ ಕರ್ಮಂ ನೆರೆವಂ ಮಣ
ಲೆಡೆಯಂ[2] ರತ್ನಂಗ ವಸನಮಂ ವಸನಾಂಗಂ ॥ ೧೧೧ ॥

ಅದಿರ್ಮುತ್ತೆಯ ವಕುಲದ ನಾ
ಗದ ಪೊಂಗೇದಗೆಯ ಹೇಮ ತಾಮರಸದ ಕುಂ
ದದ ಬಣ್ಣವಾಸಿಗಂಗಳ
ಸುದಾತ್ತಮಾಲ್ಯಾಂಗ ಮಹಿರುಹಂ ಕುಡುತಿರ್ಕುಂ ॥ ೧೧೨ ॥

ಅನವರತವಿತತ ಸುಷಿರಾ
ವನದ್ಧ ಘನತತ ವಿಚಿತ್ರಭೇದ ನಿನಾದಂ
ಜನಯಿಸೆ ತೂರ್ಯಾಂಗಂ ಕನ
ದನೋಕಹಂ ಪಲವು ತೆಱದ ಪಱೆಗಳನೀಗುಂ ॥ ೧೧೩ ॥

ಅಹರಹ[ರ][3]ಭಿನವ ಮಣಿರುಚಿ
ರಹಾಟಕ ಪ್ರಕರ ವಿರಚಿತಂಗಳನೆಂದುಂ
ಬಹು ಭಾಜನಂಗಳಂ ನಿ
ರ್ವಹಿಸುವುದವರವರ್ಗೆ ಭಾಜನಾಂಗ ಮಹೀಜಂ ॥ ೧೧೪ ॥

ಉದರ ಸಮಾಗ್ನಿಯ ಚಿಹ್ನದ
ಪದದೊಳ್ ವೈದ್ಯೋಕ್ತನಪ್ಪ ಬಾಣಸಿಗನವೋಲ್
ತ್ರಿದಶಾಮೃತಾನ್ನಮಂ ಕುಡು
ವುದವರ್ಗೆ ಭೋಜ್ಯಾಂಗ ತುಂಗ ಕಲ್ಪಮಹೀಜಂ ॥ ೧೧೫ ॥

---

೧೧೧. ಚಿತ್ರಾವಳಿ, ಪಳಿ, ಅಡವಟ್ಟೆ, ಚೇಲ, ತಿವಟ, ಪೂವಡೆ ಮೊದಲಾದ ವಸ್ತ್ರಗಳನ್ನು ವಸನಾಂಗ ವೃಕ್ಷಗಳು ಒದಗಿಸುವುವು. (ಇವು ಎಂತಹ ಬಟ್ಟೆಗಳೆಂಬುದು ಖಚಿತವಾಗಿ ತಿಳಿದಿಲ್ಲ.)

೧೧೨. ಮಾಧವಿ, ಬಕುಲ, ನಾಗಪುಷ್ಪ, ಹೊಂಗೇದಗೆ, ಹೊಂದಾವರೆ—ಈ (ಮೊದಲಾದ) ಹೂವುಗಳಿಂದ ಕಟ್ಟಿದ ಬಣ್ಣಬಣ್ಣದ ಹಾಗು ಉತ್ತಮವಾದ ಬಾಸಿಗಗಳನ್ನು ಮಾಲ್ಯಾಂಗ ವೃಕ್ಷಗಳು ಅರ್ಪಿಸುವುವು. ಈ ಬಾಸಿಗಗಳು ಬಾಡುವುದಿಲ್ಲ.

೧೧೩. ಘನ, ತತ, ಸುಷಿರ ಮತ್ತು ಅವನದ್ಧವೆಂಬ ನಾಲ್ಕು ಬಗೆಯ ವಿಚಿತ್ರ ನಾದಭೇದಗಳುಳ್ಳ ವಾದ್ಯಗಳನ್ನೂ ಹಲವಾರು ಬಗೆಯ ಹರೆಗಳನ್ನೂ ತೂರ್ಯಾಂಗ ವೃಕ್ಷಗಳು ನೀಡುವುವು.

೧೧೪. ದಿನಕ್ಕೊಂದು ರೀತಿಯಾಗಿ ಹೊಸ ಹೊಸ ರತ್ನಪ್ರಭೆಗಳಿಂದ ಬೆಳಗುವ ಚಿನ್ನದ ಅನೇಕಾನೇಕ ಪಾತ್ರೆಗಳನ್ನು ಅವರವರ ಇಷ್ಟಾನುಸಾರವಾಗಿ ಪೂರೈಸುವುವು ಭಾಜನಾಂಗ ವೃಕ್ಷಗಳು.

೧೧೫. ಉದರಾಗ್ನಿಯು (ಹಸಿವಿನ) ಚಿಹ್ನೆ ತೋರಿದೊಡನೆ ವೈದ್ಯನ ಆಜ್ಞಾನುಸಾರವಾಗಿ ಪಥ್ಯಾಹಾರವನ್ನೊದಗಿಸುವ ಬಾಣಸಿಗನಂತೆ ದೇವತೆಗಳಿಗೆ ಯೋಗ್ಯವಾದ ಅಮೃತಾಹಾರವನ್ನು ನೀಡುವುವು ಭೋಜ್ಯಾಂಗವೆಂಬ ಶ್ರೇಷ್ಠ ಕಲ್ಪದ್ರುಮಗಳು.

---

1. ಳಿ (ಮ) 2. × (ಮ) 3. ದ (ಮ)

ಕಂ॥ ಎಸೆವ ಪವಡಿಸುವ ಮನೆ ಚಿ
ತ್ರಸಾಲೆ ಸುರತಾಲಯಂ ಮಹೀಗೃಹವಮಾರೋ
ಗಿಸುವ ಮನೆ ಮಂಡಪಂ ಗುಣ
[1][ಣೆ][1]ಸಾಲೆಯೆಂಬಿನಿತುಮಂ ಗೃಹಾಂಗಂ ಕುಡುಗುಂ ॥ ೧೧೬ ॥

ತ[2][ಳತಳಿ][2]ಸಿ ತೊಳಗಿ ಬೆಳಗುವ
ವಿಳಸನ್ಮಣಿಕಿರಣಶಿಖಿಯ ಬಳಗದ ಬೆಳಗಂ
ತಳೆದೆಸೆವ ತಾಣದೀವಿಗೆ
ಗಳನವರ್ಗೀಗುಂ ಪ್ರದೀಪ ದೀಪಾಂಗಕುಜಂ ॥ ೧೧೭ ॥

ಇಡಿವಡರೆ ಕೊಂಡ ಕುಸು[3]ಕಱ[3]
ಕಡುಗತ್ತಲೆ ತಲೆಯನೆತ್ತದೊತ್ತರಿಸದಣಂ
ಸೊಡರದೆಲೆ ಮಿಡುಕದಿರೆ ನೆಲೆ
ಸೊಡರ್ಗಳನಾ ಜ್ಯೋತಿರಂಗತರು ಕುಡುತಿರ್ಕುಂ ॥ ೧೧೮ ॥

ವ॥ ಮತ್ತಂ ಪೆಱವುಮಱಿಕೆಯ ಸುರತರು ನಿಕರಂಗಳೊಳ್—

ಕಂ॥ ಕರಗದವರಂತೆ ಸೂಳಾ
ಯ್ತರಂತೆ ಕಂಚುಕಿಗಳಂತೆ ಪಡಿಯಱರಂತ
ಜ್ಜರಗುಜ್ಜರಂತೆ ಮನದಣು
ಗರಂತೆ ಮೇಳದವರಂತೆ ನೆರೆದೋಲಗಿಕುಂ ॥ ೧೧೯ ॥

ವ॥ ಅಂತೆನಿಸುವನೇಕ ಸುರತರುವಿಕೀರ್ಣ ಭೋಗೋಪಭೋಗಂಗಳುಮಮನವರತಮನುಭವಿಸುವಾರ್ಯರೊಳ್—

---

೧೧೬. ಶಯ್ಯಾಗೃಹ, ಚಿತ್ರಶಾಲೆ, ಸುರತಕ್ರೀಡಾಲಯ, ನೆಲಮನೆ, ಭೋಜನಶಾಲೆ, ಮಂಡಪ, ನರ್ತನಶಾಲೆ— ಇವೆಲ್ಲವನ್ನೂ ಕೊಡುವುವು ಗೃಹಾಂಗ ತರುಗಳು.

೧೧೭. ಥಳಥಳ ಹೊಳೆಯುತ್ತ ಬೆಳಗುವ ಸುಂದರ ರತ್ನಕಿರಣಗಳ ಪ್ರಭೆಯನ್ನೊಳಗೊಂಡ ತಾಣಾದೀಪಗಳನು ಒದಗಿಸುವುವು ದೀಪಾಂಗ ವೃಕ್ಷಗಳು.

೧೧೮. ಕತ್ತಲೆಗೆ ತಲೆಯೆತ್ತಲು ಅವಕಾಶವೇ ಇಲ್ಲದಂತೆ ಪ್ರಖರವಲ್ಲದ ಕೊಂಚವೂ ಕೂಡ ಕುಡಿಯಲುಗದ ಪ್ರಶಾಂತವಾದ ಬೆಳಕನ್ನು ನೀಡುವುವು ಜ್ಯೋತಿರಂಗ ವೃಕ್ಷಗಳು.

ವ॥ ಇದಲ್ಲದೆ ಶ್ರೇಷ್ಠವಾದ ಇನ್ನೂ ಕೆಲವು ವೃಕ್ಷಗಳು—

೧೧೯. ಕರಗವನ್ನು ಹಿಡಿಯುವವರಾಗಿ, ಓಲಿಕಾರರಾಗಿ, ಕಂಚುಕಿಗಳಾಗಿ, ಪ್ರತೀಹಾರಿಗಳಾಗಿ, ಅಂತಃಪುರದ ಕಾಪಿನಾರ್ಯರಾಗಿ, ವಿನೋದದ ಕುಬ್ಜರಾಗಿ, ಆಪ್ತ ಸೇವಕರಾಗಿ, ಮೇಳದವರಾಗಿ ಸೇವೆ ಸಲ್ಲಿಸುವುವು.

ವ॥ ಈ ಮೇರೆಗೆ ಅನೇಕ ಕಲ್ಪವೃಕ್ಷಗಳಿಂದ ಒದಗುವ ಭೋಗೋಪಭೋಗಗಳನ್ನು ನಿರಂತರವಾಗಿ ಅನುಭವಿಸುವ ಪುಣ್ಯಶಾಲಿಗಳಲ್ಲಿ—

---

1. [ನೆ (ಮ) 2. ಳದಳ್ (ಮ) 3. ಕುರ (ಅ)

ಚಂ॥ ಮುಳಿಸು ವಿಘೂರ್ಣನಂ ತಿಳಿವುದಂಬು ಪರೋನ್ನತಿ ತತ್ತರಂಗ ಸಂ
ಕುಳವಮರ್ದಪ್ಪು ತೆಪ್ಪಮೆರ್ದೆಗೊಂಡ ರಸಂ ರಸ ಮಕ್ಷಿಕಾಂತಿ ಮೀಂ
ಬೊಳಪೆನೆ ಮೇರೆದಪ್ಪಿದ ರತಾಮೃತವಾರ್ಧಿಯನೀಸಿ ಮೂಡುತುಂ
ಮುಳುಗುತುಮಿ[1]ರ್ಪರ[1]ಲ್ಲ[ದ]ವರ್ಗಾವುದು ಮತ್ತಿನ ಕಜ್ಜದುಜ್ಜುಗಂ ॥ ೧೨೦ ॥

ಧರೆಯ ಲಲಾಟಮುತ್ತರಕುರೂರ್ವರೆ ಧಾರಿಣಿಗುತ್ತಮಾಂಗಮು
ತ್ತರಕುರುದೇಶಮುರ್ವರೆಯ ಕತ್ತುರಿಯೊಪ್ಪುವ ಪತ್ರಭಂಗಮು
ತ್ತರಕುರುಧಾತ್ರಿ ಮೇದಿನಿಯ ಹಸ್ತ ವಿಳಾಸದ ಹೇಮಪದ್ಮಮು
ತ್ತರಕುರುಭೂಮಿಯೆಂದಿನಿತನಲ್ಲದೆ ಬಣ್ಣಿಪನೆಂತು ಬಣ್ಣಿಪೊಂ ॥ ೧೨೧ ॥

ಮ॥ ಅಣಿಮಾದ್ಯಷ್ಟಗುಣಂಗಳಿಂ ನೆಲೆಗಳಿಂ ಮೇಗಾರ್ಯರಿಂದೆಂದು ಟಂ
ಟಣೆಸುತ್ತಿರ್ಪುದು ತಮ್ಮ ಮೆಚ್ಚುಗುಡೆ ಪೆತ್ತಾವಾರ್ಯರ ಕ್ರೋಧರು
ಲ್ಬಣರಿಂದ್ರಾದಿಗಳಾರ್ಯರಾರ್ಯಚರಿತರ್ ನೋಕರ್ಮ ನೋದುಃಖ ಭೀ
ಷಣಮೆಂದುಂ ಸುರ ನಿರ್ವಿಶೇಷ ಸುಖ ಸರ್ವಸ್ವಂ ಕುರೂರ್ವೀತಳಂ ॥ ೧೨೨ ॥

ವ॥ ಅಂತು ನಾಕಕ್ಕಮುಚ್ಚನೀಚ ವಿಚಾರದೊಳ್ ಸಮಾನಮುಂ ಮೇಗುಮಾದುತ್ತಮಭೋಗ ಭೂಮಿಯೊಳುರ್ವರಾಸ್ಯ ತಿಲಕನಪ್ಪ ಶ್ರೀಷೇಣನುಂ ಸಿಂಹನಂದೆಯುಮನಿಂದಿತೆಯುಂ ಸತ್ಯಭಾಮೆಯುಂ—

ಮ॥ ಗರಳೇಂದೀವರವಾಸಿತೋಗ್ರವಿಷಮಂ ಪುಣ್ಯಾಮೃತಂ ನಿರ್ವಿಷೀ
ಕರಣಂ ಗೆಯ್ವುವೊಲೊರ್ಮೆಗೊರ್ಮೆಗೆರ್ದೆಯೊಳ್ ಬೈತಿಚ್ಚೆಯೊಳ್ ಕೂರ್ಮೆ ತ
ಳ್ತಿರವಿಂ ಮಚ್ಚುಗೆವೆತ್ತ ಪತ್ತುಗೆಯಿನಂತಾ ನಾಲ್ವರಂದಿರ್ವರಿ
ರ್ವರೆ ಯುಗ್ಮದ್ವಯಮಾದರೇಂ ಸಫಲಮೋ ಸತ್ಪಾತ್ರದಾನೋದಯಂ ॥ ೧೨೩ ॥

೧೨೦. (ಪ್ರಣಯ) ಕೋಪವೆ ಕ್ಷೋಭೆ; (ಕೋಪ) ಶಮನವೆ (ಶಾಂತ) ಸ್ಥಿತಿ; ಪರರ ಉನ್ನತಿಯೆ ಅಲೆಗಳು; ಗಾಢಾಲಿಂಗನವೆ ತೆಪ್ಪ; ಎದೆದುಂಬಿದ ಆನಂದವೆ ನೀರು; ಕಣ್ಣಹೊಳಪೆ ಮೀನು—ಹೀಗೆ ಸಮಗ್ರವಾದ ಶೃಂಗಾರದ ಸಮುದ್ರದಲ್ಲಿ ಈಸಿ, ಮುಳುಮುಳುಗಿ ಏಳುತ್ತ ಇರುವುದೊಂದೆ ಅಲ್ಲದೆ ಬೇರೆ ಯಾವ ಉದ್ಯೋಗವೂ ಅಲ್ಲಿರುವವರಿಗೆ ಇಲ್ಲ.

೧೨೧. ಉತ್ತರ ಕುರುಭೂಮಿಯೆಂದರೆ ಭೂದೇವಿಯ ಹಣೆ, ತಲೆ, ಕಸ್ತೂರಿ, ಮಕರಿಕಾಪತ್ರ, ಭೂಲಲನೆಯ ಕೈಯಲ್ಲಿರುವ ಚಿನ್ನದ ಲೀಲಾಕಮಲ—ಹೀಗಲ್ಲದೆ ಬೇರೆ ಇನ್ನಾವ ರೀತಿಯಲ್ಲಿ ಬಣ್ಣಿಸಬಹುದು ?

೧೨೨. ಅಣಿಮಾ ಮುಂತಾದ ಅಷ್ಟಗುಣಗಳಿಂದಲೂ ನೆಲೆಗಳಿಂದಲೂ ಶ್ರೇಷ್ಠರಾದ ಇಲ್ಲಿಯ ಆರ್ಯರು ಇಂದ್ರಾದಿಗಳಂತೆ ಸಮರ್ಥರು, ಸಚ್ಚರಿತ್ರರು, ಕರ್ಮರಹಿತರು, ದುಃಖರಹಿತರು, ಭಯವರ್ಜಿತರು. ಈ ಕುರುಭೂಮಿ ಸುಖಸರ್ವಸ್ವದಲ್ಲಿ ಸ್ವರ್ಗಕ್ಕೇನೂ ಕಡಮೆಯಿಲ್ಲ.

ವ॥ ಹೀಗೆ ಯಾವ ವಿಷಯದಲ್ಲಿಯೆ ಆದರೂ ಸ್ವರ್ಗಲೋಕಕ್ಕೆ ಸರಿಮಿಗಿಲೆನಿಸಿದ ಉತ್ತಮ ಭೋಗಭೂಮಿಯಲ್ಲಿ ಶ್ರೀಷೇಣನೂ, ಸಿಂಹನಂದೆಯೂ, ಅನಿಂದಿತೆಯೂ, ಸತ್ಯಭಾಮೆಯೂ—

೧೨೩. ವಿಷಕಮಲ ವಾಸನೆಯಿಂದ ಏರಿದ ವಿಷವೆಲ್ಲ ಪುಣ್ಯವೆಂಬ ಅಮೃತದಿಂದ ಒಮ್ಮೆಲೆ ಸಂಪೂರ್ಣ ನಿವಾರಣೆಯಾಗಿ, ಅವರ ಅಂತಃಕರಣಗಳಲ್ಲಿ ಹುದುಗಿದ್ದ ಪ್ರೇಮದ ಋಣಾನುಬಂಧದಿಂದಾಗಿ ಅವರು ನಾಲ್ವರೂ ಈಗ ಎರಡು ದಂಪತಿಗಳಾದರು. ಸತ್ಪಾತ್ರರಿಗಿತ್ತ ದಾನಫಲ ಎಷ್ಟು ಸಾರ್ಥಕವಾದುದು !

1. ಪುದ (ಅ)

ಕಂ॥ ಪ್ರಮದೆಯರಾ ನೃಪದಾನಾ
ನುಮೋದದಿಂದಲ್ಲಿ ಬಂದು ಪುಟ್ಟಿದರೇನು
ತ್ರಮಮೊ ಮುನಿದಾನ ದಾನಾ
ನುಮೋದ ಸುಕೃತಾಗ್ರಗಣ್ಯ ಪುಣ್ಯಮಗಣ್ಯಂ ॥ ೧೨೪ ॥

ವ॥ ಅಂತಲ್ಲಿ ಜಿನಚಂದ್ರ (ನೆನಿಪ) ಶ್ರೀಷೇಣನುಂ ಸಿಂಹನಂದೆಯುಂ ವಿಥುನ[1]ರಾ[1]ದರ್ ಭಾವ ಶುದ್ಧಿ ವಿಶೇಷದಿಂದಮನಿಂದಿತೆಯು ಮಾರ್ಯನಾಗೆ ಸತ್ಯಭಾಮೆ ತದಾರ್ಯೆಯಾದಳಿಂತು —

ಕಂ॥ ತವದ ಪುರಾತನ ಭವಬಂ
ಧವಿಸ್ಫುರತ್ಪ್ರೇಮಮಂತೆ ಬಂದವರ್ಗೆ ಪುನ
ರ್ನವಮಾದುದು ಪರಕಾಯ
ಪ್ರವೇಶದುಪ ಯೋಗಯೋಗಿಯಂತಾಭವದೊಳ್ ॥ ೧೨೫ ॥

ಮ॥ ಕಳಗೇಯಂ ಬಗೆಗೊಂಡ ರೂಪು ಕುಸುಮಾಮೋದಂ ರಸಾಸ್ವಾದಮು
ಗ್ಗಳಮಪ್ಪಂಗಜರಾಗಮೆಂಬಿವಿನಿತುಂ ತಳ್ಪೊಯ್ಯೆ ಪಂಚೇಂದ್ರಿಯಂ
ಗಳೊಳಾರ್ಯೋತ್ತಮನುತ್ತಮಾರ್ಯವೆಸರವ್ಯಾಬಾಧದಿಂ ಮೂಡುತುಂ
ಮುಳುಗುತ್ತುಂ ತಣಿದಂ ಸುಖಾಂಬುನಿಧಿಯೊಳ್ ಸೌಜನ್ಯ ಕಂದಾಂಕುರಂ ॥ ೧೨೬ ॥

—ಗದ್ಯ—

ಇದು ಜಿನೇಂದ್ರ ಚರಣ ಸರಸೀರುಹ ಶಿಲೀಮುಖಾಯಮಾನ
ಶ್ರೀಮದುಭಯಕವಿ ಚಕ್ರವರ್ತಿ ನಿರ್ವರ್ತಿತಮುಂ
ಅಮ್ಮನ ಭಕ್ತಾಭಿಧಾನ ವಿದ್ಯಾನಿಧಾನ ಮಲ್ಲಪಾರ್ಯ
ತದನುಜಾತಾಭಿಜಾತ ಸಾರಸ್ವತ ಪುನ್ನಮಾರ್ಯ ಕಾರಿತಮುಮಪ್ಪ
ಪುರಾಣಚೂಡಾಮಣಿಯೊಳ್ ಷಷ್ಠಾಶ್ವಾಸಂ

---

೧೨೪. ಆ ಅರಸನು ಕೊಟ್ಟ ದಾನಕ್ಕೆ ಅನುಮೋದನ ನೀಡಿದ್ದೇ ಈ ಸ್ತ್ರೀಯರ ಪುಣ್ಯ. ಅಷ್ಟರಿಂದಲೆ ಅವರು ಇಂತಹ ಭೂಮಿಯಲ್ಲಿ ಹುಟ್ಟಿಬಂದರು ಎಂದಮೇಲೆ ದಾನಾನುಮೋದದ ಪುಣ್ಯ ಎಷ್ಟು ಘನವಾದುದು ನೋಡಿ.

ವ॥ ಹಾಗೆ ಅಲ್ಲಿ ಜಿನಚಂದ್ರನೆನಿಸಿದ ಶ್ರೀಷೇಣನೂ ಸಿಂಹನಂದೆಯೂ ದಂಪತಿಗಳಾದರು. ಭಾವಶುದ್ಧಿಯ ಫಲದಿಂದ ಅನಿಂದಿತೆ ಆರ್ಯನಾಗಿ ಸತ್ಯಭಾಮೆ ಆತನ ಹೆಂಡತಿಯಾದಳು.

೧೨೫. ಹೀಗೆ ಅವಿನಾಶಿಯಾಗಿ ಪುರಾತನ ಜನ್ಮದಿಂದ ಬಂದ ಪ್ರೇಮವು ಅವರಿಗೆ ಈ ಜನ್ಮದಲ್ಲಿಯೂ ಬಂದು, ಪರಕಾಯ ಪ್ರವೇಶ ಮಾಡಿದ ಯೋಗಿಯಂತೆ ಹೊಸ ರೂಪದಲ್ಲಿ ಮತ್ತೆ ಕಾಣಿಸಿಕೊಂಡಿತು.

೧೨೬. ಮಧುರವಾದ ಗಾಯನ, ಮನೋಹರವಾದ ರೂಪ, ಪುಷ್ಪಗಳ ಸುಗಂಧ, ಸವಿಯಾದ ರಸಗಳ ಸೇವನೆ, ಉತ್ಕೃಷ್ಟವಾದ ಪ್ರಣಯಸುಖ—ಇವೆಲ್ಲ ಸಮೃದ್ಧವಾಗಿ ಪಂಚೇಂದ್ರಿಯಗಳಿಗೂ ತೃಪ್ತಿಯನ್ನೀಯುತ್ತಿರಲಾಗಿ ಸುಜನರಿಗೆ ಆನಂದಕರನಾದ ಆ ಆರ್ಯಶ್ರೇಷ್ಠನು ಉತ್ತಮಾರ್ಯನೆಂದು ಹೆಸರಾಗಿ ಸುಖಸಮುದ್ರದಲ್ಲಿ ಮುಳುಮುಳುಗಿ ಏಳುತ್ತಿದ್ದನು.

ಗದ್ಯ॥ ಇದು ಜಿನೇಶ್ವರನ ಚರಣಕಮಲದ ದುಂಬಿಯಂತಿರುವ, ಶ್ರೀಮದುಭಯಕವಿ ಚಕ್ರವರ್ತಿಯೆಂಬ ಬಿರುದಾಂಕಿತನಿಂದ ನಿರ್ವರ್ತಿತವೂ ಅಮ್ಮನ ಭಕ್ತಾಭಿಧಾನ ಮಲ್ಲಪಾರ್ಯ ಅವನ ತಮ್ಮ ಹೊಸ ಸಾರಸ್ವತ ಪುನ್ನಮಾರ್ಯ ಹೇಳಿಸಿದ ಪುರಾಣಚೂಡಾಮಣಿಯಲ್ಲಿ ಆರನೆಯ ಆಶ್ವಾಸವು.

---

1. ಮಾ (ಅ)

ಶ್ರೀ

ಶಾಂತಿಪುರಾಣಂ

—೦—

ಸಪ್ತಮಾಶ್ವಾಸಂ

ಕಂ॥ ಶ್ರೀಕುರುಭೂಮಿಭವಂ ದಿ
ವ್ಯಾಕೃತಿ ಜಿನಚಂದ್ರದೇವನಿರೆ ಪರಸಲ್ ಬಂ
ದಾಕಾಶ ಚಾರಣರ್ ತಪ
ದಾಕಾರಮೆ ರೂಪುಗೊಂಡು ಬಂದಂತಾಗಳ್ ॥ ೧ ॥

ತಾಗೆ[1]ವ[1]ರೆ ಗಗನಚಾರಣ
ರಾಗಮನಮನಱಿದು ನಾಲ್ವರುಂ ನಡೆದಿದಿರಂ
ಪೋಗಿ [2]ಮುನಿ[2]ಪಾದಪದ್ಮ ಪ
ರಾಗಪರಾಗತ ಲಲಾಟತಟಮುಂ ತಳೆದರ್ ॥ ೨ ॥

ವ॥ ಅಂತು ಯಶೋಧರ ಗುರುಚರಣ ಸರಸೀರುಹ ಮಕರಂದ ಬಿಂದು ಸಂದೋಹ ಚಂದ್ರಕಬಲ ಚಂದ್ರಕಿತ ಮುಖಚಂದ್ರರಾಗಿ ಸಮುತ್ತುಂಗಾಸನದೊಳಿರಿಸಿ ಧರ್ಮಮಂ ಬೆಸಗೊಳೆ ಸಂಕ್ಷೇಪದೊಳ್—

ಕಂ॥ ಸದಲಂಕಾರೋದಾರಂ
ವದನೇಂದು ಸುಧಾಚ್ಛಟಾಂಬು ಪಸರಿಸೆ ಮೊದಲಿಂ
ತುದಿವರಮುಚಿತಾಪ್ತಾಗಮ
ಪದಾರ್ಥಸೂತ್ರ ಪ್ರಪಂಚಮಂ ಮುನಿ ನುಡಿದಂ ॥ ೩ ॥

ಆಶ್ವಾಸ ೭

೧. ಜಿನಧರ್ಮಕ್ಕೆ ಚಂದ್ರನಂತಿರುವ ಆ ದೇವನು ಕುರುಭೂಮಿಯಲ್ಲಿ ದಿವ್ಯರೂಪವನ್ನು ತಾಳಿ ಇರುತ್ತಿರುವಾಗ ಒಮ್ಮೆ ಅವನನ್ನು ಆಶೀರ್ವದಿಸಲೆಂದು ತಪಸ್ಸೇ ಮೈದಾಳಿ ಬಂದಂತೆ ಆಕಾಶಚಾರಣರಾದ ಮುನಿಗಳು

೨. ಆತನ ಬಳಿಗೆ ಬಂದರು. ಅವರ ಆಗಮನವನ್ನರಿತು ನಾಲ್ವರೂ ಎದುರುಗೊಂಡು ಆ ಜಿನಮುನಿಗಳ ಪಾದಗಳಿಗೆ ಹಣೆಮುಟ್ಟಿಸಿ ಎರಗಿದರು.

ವ॥ ಹಾಗೆ ಯಶೋಧರ ಗುರುಗಳ ಚರಣಕಮಲಗಳ ಮಕರಂದ ಬಿಂದುಗಳನ್ನು ತಮ್ಮ ಮುಖಗಳಿಗೆ ತಿಲಕವಾಗಿ ತಾಳಿ, ಅವರಿಗೆ ಉನ್ನತವಾದ ಪೀಠವನ್ನಿತ್ತು, ಧರ್ಮವನ್ನು ತಿಳಿಸಲು ಬಿನ್ನವಿಸಿದರು. ಅವರು ಸಂಕ್ಷಿಪ್ತವಾಗಿ—

೩. ಸಾದ್ಯಂತವೂ ಉಚಿತವೂ ಆದ ಆಪ್ತ, ಆಗಮ ಪದಾರ್ಥಗಳ ಸೂತ್ರಗಳನ್ನು ತಿಳಿಸಿದರು. ಚಂದ್ರನು ಅಮೃತರಸವನ್ನು ನೀಡುವಂತೆ ಅವರ ಪವಿತ್ರವಾದ ಮುಖ ಉದಾತ್ತವಾದ ಧರ್ಮವನ್ನು ಈ ರೀತಿಯಾಗಿ ಒದಗಿಸಿತು:

---

1. ಬ (ಅ) 2. ಜಿನ (ಮ)

ಕಂ॥ ದೋಷೇತರನಾಪ್ತಂ ತ
ದ್ಭಾಷಿತಮುಪಹಿಂಸಮಾಗಮಂ ಷಡ್ಭೇದಾ
ಕ್ಲೇಶಂ ಪದಾರ್ಥಮಿದೆ ಗಂ
ಡೂಷಂ ನಿನಗಕ್ಕೆ ದುರಿತ ಕಫ ವಿಳಯನದೊಳ್ ॥ ೪ ॥

ಮ॥ ಕೊಲೆ[1][ಯೆ][1]ಂದೊಂದನಸತ್ಯಮೆಂಬೆರಡನನ್ಯಾರ್ಥಕ್ಕೆ ಕಣ್ಣಿಟ್ಟು ಪಂ
ಬಲಿಸುತ್ತಿರ್ಪಿರವಿಂದೆ ಮೂಱನೆ ಪರಸ್ತ್ರೀಯೆಂದು ನಾ[2]ಲ್ಕಂ[2]ದನಾ
ಕುಲಮೊಂದಯ್ದನಸಾಕುಳಂ ತೊಱೆ[3]ದೊಡೇಂ ಹೃಲ್ಲಾಸಮೋ ದೋಷಮೋ
ಮಲಮೋ ತಲ್ಲಣಮೋ ಕೃತಾಂತ ಭಯಮೋ ಸಂತಾಪಮೋ ಬೇವಸಂ ॥ ೫ ॥

ಕಂ॥ ಈವ್ರತ[3]ಗಣ[ಮಣ][3]ಮಾದೊಡ
ಣುವ್ರತಮಾ ಶ್ರಾವಕಂಗೆ ಗುರುತರವಿಧಿಯಿಂ
ಪ್ರವ್ರಜಿತದೆ ನಿಲೆ ನೆಲಸೆ ಮ
ಹಾವ್ರತಮಕ್ಕುಂ ಜಿನಾಗಮಾಂಭೋನಿಧಿಯೊಳ್ ॥ ೬ ॥

ಆ ವ್ರತ ಶಿತಾಸಿ ಸಂಸಾ
ರವ್ರತತಿಚ್ಛೇ[4]ದ[4]ಮಕ್ಕುಮಾ ಸಂಸಾರಂ
ತೀವ್ರತರ ದುಃಖದಂ ನಾ
ಳೀವ್ರಣಸದೃಶಂ ಶರೀರಿಗದ ಕಿಡೆ ನೆಗೞಿಂ ॥ ೭ ॥

ಮ॥ ತವದಾಯುಷ್ಯದ ಕುಂದವಂದದ ಬಿಯಂಗೆಯ್ದುಂ ಪವಣ್ಗೊಡ್ಡೀಱದು
ದ್ಭವದೇ ನೋಂತೆನೆನಿಪ್ಪ ರೂಪಿನ ಮನಂಗೊಂಡಿರ್ಪ ಲಾವಣ್ಯದೊ
ಪ್ಪುವ ನೇಪಥ್ಯದಮರ್ಕೆ ನಿಲ್ಲವನಿಮೇಷೇಂದ್ರಾದಿಗಳ್ಗೆಂದೊಡಾ
ರ್ಗಿವು ನಿಲ್ಕುಂ ನವಸಾಂಧ್ಯರಾಗ ಹಿಮರುಂದ್ರೇಂದ್ರಾಯು[5]ಧೋದ್ಭಾ[5]ಸಿಗಳ್ ॥ ೮ ॥

೪. "ದೋಷರಹಿತನಾದವನೇ ಆಪ್ತ. ಹಿಂಸಾರಹಿತವಾದ ಆತನ ನುಡಿಯೆ ಆಗಮ. ಜೀವಾದಿ ಪದಾರ್ಥ ಸ್ವರೂಪ ಆರು ಬಗೆಯಾಗಿದೆ.* ಪಾಪವೆಂಬ ಕಫವನ್ನು ಕಳೆಯುವುದಕ್ಕೆ ಇದೇ (ಈ ಜ್ಞಾನವೇ) ನಿನಗೆ ಔಷಧಿಯಾಗಲಿ.

೫. ಕೊಲೆ, ಹುಸಿ, ಪರದ್ರವ್ಯ, ಪರಸ್ತ್ರೀ ಮತ್ತು ಪರಗ್ರಹ ಎಂಬ ಈ ಐದನ್ನೂ ತೊರೆದವನಿಗೆ ದುಃಖವಿಲ್ಲ, ಪಾಪವಿಲ್ಲ, ಮಲವಿಲ್ಲ, ಚಿಂತೆಯಿಲ್ಲ, ಮರಣಭಯವಿಲ್ಲ, ಸಂತಾಪ ಸಂಕಟಗಳೂ ಇಲ್ಲ.

೬. ಮಿತಪ್ರಮಾಣದಲ್ಲಿ ಇವು ಅಣುವ್ರತಗಳೆನಿಸಿ ಶ್ರಾವಕನಿಗೆ ವಿಹಿತವಾಗಿವೆ. ಪೂರ್ಣ ಪ್ರಮಾಣದಲ್ಲಿ ಕಟ್ಟುನಿಟ್ಟಾಗಿ ಆಚರಿಸಿದರೆ ಇವೇ ಮಹಾವ್ರತಗಳೆನಿಸಿ ಸಂನ್ಯಾಸಿಗಳಿಗೆ ವಿಧಿಸಲ್ಪಟ್ಟಿವೆ.

೭. ಸಂಸಾರವೆಂಬ ಬಳ್ಳಿಯೊಡಕನ್ನು ತುಂಡರಿಸುವುದಕ್ಕೆ ಈ ವ್ರತಗಳೇ ಹರಿತವಾದ ಖಡ್ಗ. ಸಂಸಾರವೆಂಬುದು ಜೀವನಿಗೆ ನಾಡಿಹುಣ್ಣಿನಂತೆ ಘೋರವಾದ ದುಃಖವನ್ನುಂಟುಮಾಡುತ್ತದೆ. ಆದುದರಿಂದ ಅದನ್ನು ನಾಶಪಡಿಸುವಂತೆ (ಸಂಸಾರದಿಂದ ಬಿಡುಗಡೆ ಹೊಂದುವಂತೆ) ನಡೆದುಕೊಳ್ಳಿ.

೮. ಎಂದೆಂದಿಗೂ ತೀರದೇನೊ ಎಂಬಂತಹ ಆಯುಷ್ಯ, ಕುಗ್ಗದ ಸುಖ, ಎಷ್ಟು ವೆಚ್ಚಮಾಡಿದರೂ ಮುಗಿಯದೆಂಬ ಸಂಪತ್ತು, ಅತಿಶಯವಾದ ರೂಪು, ಮೋಹಕವಾದ ಸೌಂದರ್ಯ, ಅದಕ್ಕೆ ಅನುಕೂಲವಾದ ಪರಿಕರ-ಪರಿಸರಗಳು. ಇವುಗಳೆಲ್ಲ ಇಂದ್ರಾದಿಗಳಿಗೆ ಉಂಟಷ್ಟೆ? ಆದರೆ ಅವರಿಗಾದರೂ ಇವು ಶಾಶ್ವತವಲ್ಲ. ಸಂಧ್ಯಾಕಾಲದ ವರ್ಣವೈಭವದಂತೆ, ಇಬ್ಬನಿಯ ಹನಿಯಂತೆ, ಕಾಮನಬಿಲ್ಲಿನಂತೆ ಇರತಕ್ಕ ಇವು ಯಾರಿಗೆ ನಿತ್ಯವಾಗಿ ಉಳಿದಾವು?"

1. ಯಿ (ಮ) 2. ಲಿಂ (ಅ) 3. ಗುಣಗಣ (ಅ) ಗಣಮಣ (ಮ) 4. ಚ್ಛಿದುರ (ಮ) 5. ಧಾಭಾ (ಮ)

* ನಿರ್ದೇಶ, ಸ್ವಾಮಿತ್ವ, ಸಾಧನ, ಅಧಿಕರಣ, ಸ್ಥಿತಿ ಮತ್ತು ವಿಧಾನ ಎಂಬುವೆ ಆರು ಸ್ವರೂಪಗಳು.

ವ॥ ಎಂದು ಪ್ರತಿಬೋಧಿಸಿ—

ಮ॥ ನಿಟಿಲನ್ಯಸ್ತ ಕರಾಬ್ಜಸಂಪುಟ ವಿನಮ್ರಾತ್ಮಾಂಗರಂ ಭಕ್ತಿಲಂ
ಪಟರಂ ತನ್ಮುನಿ ಧರ್ಮವೃದ್ಧಿ ನಿಮಗೆಂದಾ ನಾಲ್ವರಂತಸ್ತಮಃ
ಪಟಮಂ ಪಿಂಗಿಸಿ ಭೋಗಭೂಮಿಜರ ಕಣ್ಗಾಗಳ್ ನಭೋಮಾರ್ಗ ಪ
ರ್ಯಟನ[1][ರ್][1] ಶಿಕ್ಷಿಸಿ ಪೋದರಾತ್ಮ ನಿಯಮಕ್ಕತ್ತಾರ್ಯರಿತ್ತನ್ನೆಗಂ ॥ ೯॥

ವ॥ ನಿಜಪ್ರತಿಬಂಧ ಕಲ್ಪಪಾದಪೋದ್ಯಾನದೊಳೊಂದು ದಿವಸಂ ತೊಟಲ್ದು ನೋಡುತ್ತುಂ ವೈಶ್ರವಣ ನಿಮಿತ್ತವೊಂದು ಪುಳಿನತಳೋದ್ದೇಶದೊಳ್ ಕುಳ್ಳಿರೆ—

ಚಂ॥ ವನರುಹ[1]ಮೆ[1]ಡ್ಡಮಪ್ಪ ಮೊಗಮಾದ ತಳಿ[2]ರ್ತ[2]ಳಮಾದ ಕೋಕಿಳ
ಧ್ವನಿ [3]ಸರ[3]ಮಾದ ಪಣ್ಣಡಕೆ ಬಾಯ್ದೆಱೆ[3]ಯಾದೆಳವಳ್ಳಿ[4]ಯೇಟಿ[3][4] ನೂ
ತನ ತನುವಾದ ಮಲ್ಲಿಗೆಯ ತುಂಬಿಯ ಕೂಟಮೆ ನೋಟಮಾದ ನಂ
ದನವನ ಲಕ್ಷ್ಮಿ [5]ಕಣ್ಗೆಸೆದು ತನ್ನನೆ ನೋಡಿಸಿದಳ್ ತದಾರ್ಯರಿಂ[5] ॥ ೧೦ ॥

ವ॥ ತದನಂತರಂ ನಿಜಾವಾಸಕ್ಕೆ ಪೋಗಿರ್ದು ಪಲವುಂ ಕಾಲಮಸಂಗರಾಗರಸೈಕ ನಿಷ್ಠಿತರುಂ ಮದ[6]ನಾ[6]ದ್ವೈತಮಾದ ಸಮಯ ಯುಗಳಂಗಳಂ ಕಂತುವೆ ಪರಮಾತ್ಮನಾಗೆ ತನ್ಮತಮೆ ಸಿದ್ಧಾಂತಮಾಗೆ ಕಾಮುಕೀ ಕಾಮುಕರೆ ಸಧರ್ಮರಾಗೆ ಮುಂಪುಟ್ಟಿದಾಚಾರ್ಯ ರಾಚಾರ್ಯರಾಗೆ ಸುರತ ಸುಖಮೇ ಸಂಸಾರನಿರತ ಸುಖಮಾಗೆ ಪ್ರಾಣೇಶ್ವರರ ಸಂಸರ್ಗಮೆ ಸ್ವರ್ಗಮಾಗೆ ನಿಜಾಯುಃಪಲ್ಯೋಪಮತ್ರಯಾ ವಸಾನಮೆಯ್ದುರೆಯುಂ ಕಾಮಾಂಧರಾಗಿ—

ವ॥ ಹೀಗೆ ಧರ್ಮಬೋಧೆಯನ್ನು ಅವರು ಮಾಡಲಾಗಿ—

೯. ಕೈಜೋಡಿಸಿ, ಹಣೆಮುಟ್ಟಿ, ವಿನೀತಭಾವದಿಂದ ಆ ನಾಲ್ವರೂ ನಮಸ್ಕರಿಸಿದರು. "ನಿಮಗೆ ಧರ್ಮವೃದ್ಧಿಯಾಗಲಿ" ಎಂದು ಹರಸಿ, ಭೋಗಭೂಮಿಜರಾದ ಆ ಭಕ್ತರ ಅಂತರಂಗಕಶ್ಮಲವನ್ನೆಲ್ಲ ಕಳೆದುಹಾಕಿ, ಸನ್ಮಾರ್ಗವನ್ನು ಸೂಚಿಸಿ, ಆ ಚಾರಣಮುನಿಗಳು ತಮ್ಮ ತಪಶ್ಚರಣಕ್ಕಾಗಿ ಪುನಃ ಆಕಾಶಮಾರ್ಗದಿಂದ ಹೊರಟುಹೋದರು.

ವ॥ ಇತ್ತ ಈ ಭೋಗಭೂಮಿಜರು ಕಲ್ಪವೃಕ್ಷಗಳ ಉದ್ಯಾನದಲ್ಲಿ ವಿಹಾರಮಾಡುತ್ತ, ವಿನೋದಾರ್ಥವಾಗಿ ಒಂದು ತೋಪಿನ ಮಧ್ಯೆ ಕುಳಿತರು.

೧೦. ತಾವರೆಯೇ ಸುಂದರವಾದ ಮುಖ; ಚಿಗುರೆಲೆಗಳೇ ಕೈಗಳು; ಕೋಗಿಲೆಗಳ ಕುಕಿಲೇ ಧ್ವನಿ; ಹಣ್ಣಡಕೆಯೆ ತುಟಿ; ಕೋಮಲವಾದ ಏಲಾಲತೆಯೆ ದೇಹ; ದುಂಬಿಗಳಿಂದ ಕೂಡಿದ ಮಲ್ಲಿಗೆಯೆ ಕಣ್ಣುಗಳು—ಹೀಗೆ ಮೈದಾಳಿದ ವನಲಕ್ಷ್ಮಿ ಕಂಗೊಳಿಸಿ, ಆ ಆರ್ಯರು ತನ್ನನ್ನೇ ನೋಡುವಂತೆ ಮಾಡಿದಳು.

ವ॥ ಆ ಬಳಿಕ ಅವರು ತಮ್ಮ ನಿವಾಸಸ್ಥಾನಕ್ಕೆ ಹೋಗಿ, ಹಲವಾರು ಕಾಲದವರೆಗೆ ಕಾಮಭೋಗದಲ್ಲಿಯೆ ನಿರತರಾಗಿದ್ದರು. ಅವರಿಗೆ ಮನ್ಮಥನೇ ಪರಮಾತ್ಮ; ಕಾಮಮತವೇ ಸಿದ್ಧಾಂತ; ಕಾಮುಕ-ಕಾಮುಕಿಯರೇ ಸಧರ್ಮೀಯರು; ಮುಂಚೆ ಹುಟ್ಟಿದ ಆಚಾರ್ಯರೇ ಆಚಾರ್ಯರು; ಸುರತ ಸುಖವೇ ಸಂಸಾರಸುಖ; ಪ್ರಾಣಪ್ರಿಯರ ಸಹವಾಸವೆ ಸ್ವರ್ಗ. ಈ ರೀತಿಯಾಗಿ ಮೂರು ಪಲ್ಯೋಪಮವಾದ ತಮ್ಮ ಆಯುಷ್ಯವನ್ನು ಕಳೆದರು; ಆಯುಷ್ಯದ ಅವಧಿ ಮುಗಿಯುತ್ತಾ ಬಂದಾಗಲೂ ಇನ್ನೂ ಕಾಮಾಂಧರಾಗಿಯೇ ಇದ್ದು—

---

1. ವೆ (ಸೂ) 2. ರ್ತ (ಮ) 3. ದನಿ (ಸೂ) 4. ಯೆಣೆ (ಮ) ಮಿಕ್ಕ (ಸೂ) 5. ಮಾಧವ ಮಹೀಶನ ಕಾಂತೆಯೊ ಕಂತು ಕಾಂತೆಯೋ (ಸೂ) 6. ನ (ಅ)

ಕಂ॥ ಬಗೆಯದಿರೆಯಿರೆ ಕೃತಾಂತಂ
ಬಗೆದಂ ಪೆಱತೊಂದನಾರ ಪು[1][ಟು][1]ವಗೆಯುಮುವಂ
ಬಗೆಯದಿರೆ ನಿಮಿರ್ಗುಮಾತಂ
ಬಗೆದೊಡೆ ಬಗೆದಂತೆ ಬಗೆದ ಬಗೆ ನಿಮಿರ್ದಪುದೇ ॥ ೧೧ ॥

ವ॥ ಅಂತು ಪರಲೋಕಪ್ರಾಪ್ತರಾಗಿ—

ಮ॥ ಬನದಿಂದಂ ಬನದಾನೆಗಳ್ ಪಿಡಿಗಳಂ ಮುಂದಿಟ್ಟು ಪೋಪಂತೆ ಕಾ
ಮಿನಿಯರ್ಕಳ್ವೆರಸಾರ್ಯರಾತ್ಮತನುಗಳ್ ತತ್ಕಾಲದೊಳ್ ಮಾಯಮಾ
ಗೆ ನೆಟಿಲ್ಪಟ್ಟೆ[2]ಯು ರೂಪಿನಂತೆ ತಳರ್ದರ್ ಸೌಧರ್ಮ ಕಲ್ಪಕ್ಕೆ ಭಾ
ವನೆ ಜೈನೋಕ್ತಿಯೊಳಾಗೆ ದುರ್ಗತಿಗಮಾ ಜೀವಕ್ಕಮೇಂ ಸಮ್ಮದಂ ॥ ೧೨ ॥

ವ॥ ಅಂತು ಮೊದಲ ಕಲ್ಪದ ಶ್ರೀನಿಳಯ ವಿಮಾನದೊಳ್ ಶ್ರೀಷೇಣಾರ್ಯಂ—

ಕಂ॥ ಉಪಪಾ[3]ದ[3] ಭವನತಲ್ಪದೊ
ಳುಪಚ್ಛದಾಚ್ಛಾದ್ಯ ತಳದೊಳನವದ್ಯದೊಳ
ಗ್ಗಪಿತನಿರೆ ಪಾಸಿನೊಳ್ ನೂ
ಸೆ ಪಾಸು ಕೃತಿಗೆಂದು ದಿವಿಜರುಲಿದರ್ ತಮ್ಮೊಳ್ ॥ ೧೩ ॥

---

೧೧. ಬೇರಾವ ಯೋಚನೆಯನ್ನೂ ಮಾಡದಿದ್ದರು. ಆದರೆ ಮೃತ್ಯುದೇವತೆಯ ಯೋಚನೆ ಬೇರೆಯೆ ಆಗಿತ್ತು. ಯಮರಾಜನಿಗೆ ಸಮ್ಮತವಲ್ಲದಿದ್ದಾಗ ಯಾರ ಯಾವ ಕ್ಷುಲ್ಲಕ ಯೋಚನೆಯಾದರೂ ಈಡೇರಲಾರದು. ಆತನ ಯೋಚನೆ ಮಾತ್ರ ಆತನು ಯೋಚಿಸಿದಂತೆ ನಡೆದೇ ತೀರುವುದು.

ವ॥ ಹಾಗೆ ಅವರು (ನಾಲ್ವರೂ) ಮರಣಹೊಂದಲಾಗಿ—

೧೨. ಕಾಡಿನ ಸಲಗಗಳು ತಂತಮ್ಮ ಹೆಣ್ಣಾನೆಗಳನ್ನು ಮುಂದೆ ಮಾಡಿಕೊಂಡು ಕಾಡಿನಿಂದ ಹೊರಬೀಳುವಂತೆ ಈ ಆರ್ಯರು ತಮ್ಮ ಹೆಂಡಂದಿರೊಡನೆ ಏಕಕಾಲದಲ್ಲಿ ದೇಹಗಳನ್ನು ಕಳೆದುಕೊಂಡು ನೇರವಾಗಿ ಸೌಧರ್ಮಕಲ್ಪಕ್ಕೆ ಹೋದರು. ಜಿನವಚನದಲ್ಲಿ ಶ್ರದ್ಧೆಯುಂಟಾಗಿರುವಾಗ ಆ ಜೀವಕ್ಕೂ ದುರ್ಗತಿಗೂ ಏನು ಸಂಬಂಧ? (ದುರ್ಗತಿಯೆಂದೂ ಬರಲಾರದು.)

ವ॥ ಹೀಗೆ ಮೊದಲನೆಯ ಕಲ್ಪದ ಶ್ರೀನಿಳಯ ವಿಮಾನದಲ್ಲಿ ಶ್ರೀಷೇಣಾರ್ಯನು—

೧೩. ಉಪಪಾದಜ (ಗರ್ಭವಿಲ್ಲದೆ ಜನ್ಮತಾಳುವ ದೇವಲೋಕದ ಜೀವ)ನಾಗಿ ಶ್ರೇಷ್ಠವಾದ ಮೇಲುಹೊದಿಕೆಯುಳ್ಳ ಹಾಸಿಗೆಯಲ್ಲಿ ಅವತರಿಸಿದನು. "ಪುಣ್ಯವಂತನಾದವನಿಗೆ 'ನೂಸೆ' (?) ಹಾಸಿಗೆ" ಎಂದು ದೇವತೆಗಳು ತಮ್ಮೊಳಗೆ ಮಾತಾಡಿಕೊಂಡರು. [ಆದಿಪುರಾಣದಲ್ಲಿಯೂ (೩-೭೯ವ) "ಪುಣ್ಯಭಾಜನಂಗೆ ನೂಸೆ ಪಾಸೆಂಬಂತೆ" ಎಂಬ ಮಾತು ಇಂತಹದೇ ಸಂದರ್ಭದಲ್ಲಿ ಬಂದಿದ್ದು ಅದಕ್ಕೆ "ಮಾಕೆಪಾಸೆಂಬಂತೆ, ನೂಕೆಪಾಸೆಂಬಂತೆ, ಮಾಸುಪಾಸೆಂಬಂತೆ" ಎಂಬ ಪಾಠಾಂತರಗಳಿವೆ "ನೂಸೆ" ಅರ್ಥ ತಿಳಿಯಲಾರದಾಗಿ ಪಾಠಾಂತರಗಳು ಹುಟ್ಟಿಕೊಂಡಿರಬಹುದು.]

---

1 ಟು (ಮ) 2. ಳಟ್ಟಟ್ಟಿ (ಮ) 3. ತ (ಅ)

ವ॥ ಅಂತಾತನವತರಿಸಿ ಗಂಗಾತರಂಗ ತರಳದುಕೂಲವಸನಾಂತರೀಯೋತ್ತರೀಯಂ ಅಭಿನವ ಸುಜಾತ ಪಾರಿಜಾತಸುಮನಶ್ಶೇಖರಂ ಅನರ್ಘರತ್ನಮಣಿಮುಕುಟಕಿರೀಟ ಮಯೂಖಮಾಲಿಕಾಪರಿಚಿತ ಪ್ರಭಾಕದಂಬಕ ಪ್ರತಿಬಿಂಬಿತವಿಮಾನ ಭಿತ್ತಿಭಾಗಂ ಪ್ರಲಂಬಕರ್ಣಾಭರಣ ಮಕರಿಕಾಪಿತಾಡ್ಯ ಮಾನಕಪೋಲಫಲಕಂ ಅವತಂಸೀಕೃತಸುಂದರ ಮಂದಾರಪ್ರತಿನವಪ್ರವಾಳಂ ಏಕಾವಳೀವಿಳಾಸಾಪಹಸಿತಾಮೃತಡಿಂಡೀರಪಿಂಡ ಪಾಂಡುರಂ ಉಪಾಸನಾಗತ ಶಾರದ ಶಶಾಂಕಶಂಕಾಜನನ ಮನೋಹರ ಹಾರಂ ಅಂಘ್ರಿನಖಕಿರಣಾಚ್ಛುರಣ ಸಂಕಾಶ ಮೌಕ್ತಿಕ ಪದಬಂಧಂ ಆದೇವಂ ಶ್ರೀದೇವನಾಮಮಂ ತಾಳ್ದಿ—

ಚಂ॥ ಸುರಧನುವಂ ವಿಮಾನಮಣಿಕುಟ್ಟಿಮಮಾ ಶರದಭ್ರಮಂ ನಿಜಾ
ಸ್ಫುರಣದುಪಚ್ಛದಂ ಪೊಳೆವ ಮಿಂಚಿನ ಗೊಂಚಲನಂಚಿತೋತ್ತಮಾ
ಭರಣದ ದೀಪ್ತಿ ತೋರವನಿಯಂ ಪೊಸಮುತ್ತಿನ ಲಂಬಣಂ ನಿರಾ
ಕರಿಸೆ ವಿಮಾನಮಂ ಜಲದ ಯಾನಮೆ ಗೆತ್ತಮರೇಂದ್ರ ನಾಯಕಂ ॥ ೧೪ ॥

ವ॥ ಕನಸಿದು ನೆನಸೆಂದು ನಿಶ್ಚೈಸಿ ಮನದೊಳಿಂತೆಂದು ಬಗೆಗುಂ—

ಉ॥ ಭೋರ್ಗರೆವಷ್ಟತೂರ್ಯರವಮಾರ್ಗೆ ಜಯಧ್ವನಿಯಾರ್ಗೆ ಪೇಟಿಮಾ
ನಾರ್ಗೆ ವಿಮಾನಮಾರ್ಗುಲಿವ ವಂದಿಗಳಾರ್ಗೆ ಸುಖಾಮೃತಾಬ್ಧಿ ತಾ
ನಾರ್ಗಿದಭೂತಪೂರ್ವಮೆನಗೆಂದಮರಂ ಬಗೆದಂ ವಿಮೋಹಮಾ
ರಾರ್ಗೆ ಭವಾಂತರಾಗಮದೊಳಾಗಳೆ ಪುಟ್ಟವೆ ಗರ್ಭಸಂಧಿಯೊಳ್ ॥ ೧೫ ॥

ವ॥ ಹೀಗೆ ಅವತಾರಮಾಡಿದ ಆತನಿಗೆ ಗಂಗಾನದಿಯ ತೆರೆಯಂತೆ ಶುಭ್ರವಾದ ರೇಷ್ಮೆಯ ಪಂಚೆ ; ಅಂತಹದೇ ಉತ್ತರೀಯವಿತ್ತು; ಆದೇ ಅರಳಿದ ಪಾರಿಜಾತ ಪುಷ್ಪಗಳ ಬಾಸಿಗ ತಲೆಯನ್ನಲಂಕರಿಸಿತ್ತು; ಅಮೂಲ್ಯವಾದ ರತ್ನಗಳಿಂದ ಖಚಿತವಾದ ಆತನ ಕಿರೀಟದ ಪ್ರಭಾಪುಂಜದಿಂದ ಆ ವಿಮಾನಭವನದ ಭಿತ್ತಿಗಳೆಲ್ಲ ಪ್ರತಿಬಿಂಬಿತವಾಗಿದ್ದುವು; ಕಿವಿದುದಿಯಿಂದ ನೇತಾಡುತ್ತಿರುವ ಕುಂಡಲಗಳು ಕೆನ್ನೆಗೆ ಬಂದು ತಾಕುತ್ತಿದ್ದುವು; ಮಂದಾರ ವೃಕ್ಷದ ಹೊಚ್ಚಹೊಸ ಚಿಗುರು ಅಲಂಕಾರವಾಗಿ (ಕಿವಿಯ ಮೇಲೆ) ಇದ್ದಿತು. ಅಮೃತ ಸಮುದ್ರದ ನೊರೆಯನ್ನು ಹೀಯಾಳಿಸಿ ನಗುವಂತೆ ಬೆಳ್ಳಗೆ ಥಳಥಳಿಸುವ ಏಕಾವಳಿ ಕೊರಳಲ್ಲಿ ವಿಲಾಸವಾಡುತ್ತ ಈತನನ್ನು ಆರಾಧಿಸಲೆಂದು ಬಂದ ಶರಚ್ಚಂದ್ರನೇ ಹಾರವಾಗಿ ರೂಪುಗೊಂಡನೋ ಏನೋ ಎಂಬ ಭ್ರಾಂತಿಯನ್ನು ಉಂಟುಮಾಡುತ್ತಿತ್ತು. ಕಾಲುಗುರುಗಳ ಬೆಳಗಿನೊಡನೆ ಬೆರೆತ ಅಂಗಾಲಿನ ತಿಳಿಗೆಂಪಿನಂತೆ ಶೋಭಿಸುವ ಮುತ್ತಿನ ಪೆಂಡೆಯಗಳು ಕಾಲಲ್ಲಿ ಕಂಗೊಳಿಸುತ್ತಿದ್ದುವು. ಹೀಗೆ (ಜನ್ಮತಃ ಪ್ರಾಪ್ತವಾದ ಪ್ರಸಾಧನಗಳಿಂದ ಶೋಭಿಸುವ) ಆ ದೇವನು ಶ್ರೀದೇವನೆಂಬ ಹೆಸರನ್ನು ತಾಳಿದನು.

೧೪. ಆ ವಿಮಾನ (ಭವನ)ದ ನೆಲಗಟ್ಟು ಕಾಮನಬಿಲ್ಲನ್ನು, ಪೀಠದ ಮೇಲಿನ ಹೊದಿಕೆ ಶರತ್ಕಾಲದ ಮೇಘವನ್ನು, ಧರಿಸಿಕೊಂಡ ಆಭರಣಗಳ ಕಾಂತಿ ಮಿಂಚಿನ ಗೊಂಚಲನ್ನು, ಹೊಸ ಮುತ್ತಿನ ಸೂಸಕಪ್ರ ಮಾಲೆಯು ದೊಡ್ಡದೊಡ್ಡ ಹನಿಗಳನ್ನು ಹೀಯಾಳಿಸುವಂತೆ ಇರಲಾಗಿ, ತನ್ನ ವಿಮಾನ ಬಂದು ಮೋಡವೊ ಏನೊ ಎಂದು ಆ ದೇವನು ಭ್ರಮಿಸಿದನು.

ವ॥ (ಬಳಿಕ) ಕನಸಿನಂತೆ ತೋರುವ ಇದೆಲ್ಲವೂ ಕನಸಾಗಿರದೆ, ಸತ್ಯವಾಗಿದೆಯೆಂದು ನಿರ್ಧರಿಸಿ ಮನಸ್ಸಿನಲ್ಲಿ ಹೀಗೆಂದುಕೊಂಡನು :

೧೫. "ಭೋರೆಂದು ಧ್ವನಿಮಾಡುತ್ತಿರುವ ಈ ಎಂಟು ಬಗೆಯ (ಭೇರಿ, ಮದಂಗ, ಝಲ್ಲರಿ, ಕಾಳೆ, ಶಂಖ, ಕೊಳಲು, ವೀಣೆ ಮತ್ತು ತಮಟ) ಮಂಗಳವಾದ್ಯಗಳು ಯಾರಿಗಾಗಿ? ಜಯ ಜಯಕಾರ ಯಾರದು ? ನಾನು ಯಾರು ? ಈ ವಿಮಾನ ಯಾರದು ? ಉಗ್ಗಡಿಸುತ್ತಿರುವ ವಂದಿಗಳು ಯಾರವರು ? ಸುಖದ ಈ ಅಮೃತ ಸಮುದ್ರ ನನಗೆ ಹಿಂದೆಂದೂ ಕಾಣದಂತಹುದು." ಒಂದು ಭವವನ್ನು ಬಿಟ್ಟು ಇನ್ನೊಂದು ಭವಕ್ಕೆ ಬಂದ ಸಂಧಿಕಾಲದಲ್ಲಿ ಜೀವನಿಗೆ ಹೀಗೆ ಮನಸ್ಸಿನಲ್ಲಿ ಗೊಂದಲವುಂಟಾಗುವುದು ಸಹಜವೇ.

ವ॥ [1]ಆತನ[1]ಪ್ರಾಪ್ತಪೂರ್ವ ಸುಖವಿಸ್ಮಯ ಸ್ಮೇರ ಮುಖಕಮಳಂ ವಿದಿತಾವಿದಿತ ವೃತ್ತಾಂತಂ ಅತ್ಯಂತ ಸಂತೋಷ ಪೀಯೂಷ ಸರೋವರಾವಗಾಹಂ ಮಱೆದುದನಂತೆ ನೆನೆವಂತೆ ಅವಧಾನಾಧೀನ ಮಾನಸನಾಗಿ—

ಚಂ॥ ಧೃತಕಾಲಾಗುರುಧೂಪಧೂಮುಮವನದ್ಧೋದ್ದಾಮದಾಮಂ ವಿಲಂ
ಬಿತಲಂಬೂಷವಿಶೇಷಮುಚ್ಛ್ರಿತಪತಾಕಾನೀಕ ಮಾತೋದ್ಯ ಶೋ
ಭಿತ ಮೊಪ್ಪಿರ್ದುಪಪಾದಸದ್ಗೃಹದ ಮುಂದುತ್ಫುಲ್ಲ ಪುಷ್ಪೋಪಹಾ
ರಿತ ಚಂಚನ್ಮಣಿ ಕುಟ್ಟಿಮಂ ಸುರಸಭಾ ಶ್ರೀಸುಂದರಂ ಮಂದಿರಂ ॥ ೧೬ ॥

ವ॥ ಆ ಸಭಾಗೇಹದೊಳ್ ಉತ್ತಮ ಮಹತ್ತರ ದೇವರೆರಡುಂ ಕೆಲದೊಳಂ ವಾಹನಾಭಿಯೋಗ್ಯ ಕಿಲ್ಬಿಷಿಕಾಪ್ಸರೋ[2]ರಗ[2]ಗಂಧರ್ವರೋರೊರ್ವರೊಳ್ ಸಂದಣಿಸೆ ಭಗವದರ್ಹತ್ಪರಮೇಶ್ವರಗುಣೋಪ ರಚಿತ ವರ್ಣ[2]ಪೂರ[2]ರಸಗೇಯ ಪೂರಪರಿಪ್ಲಾವಿತಾಂತರಂಗನಾಗಿರೆ—

ಕಂ॥ ತೆಱೆ[3]ಯದೆ ರನ್ನದ ಪಡಿಗಳ್
ತೆಱೆ[3]ದುವು ತಮ್ಮಿಂದೆ ದಿವಿಜ ಕೃತಪುಣ್ಯಮೆ ಕ
ಣ್ದೆಱೆ[3]ದಂತೆ ಮೊ[3][ರೆ][3]ದು ಪಾಱುವ
ಪಱಮೆಗಳೊಡನುಣ್ಮೆ ಪೊಣ್ಮೆ ಧೂಪಾಮೋದಂ ॥ ೧೭ ॥

ವ॥ ಆಗಳ್—

ಕಂ॥ ಜಯ [4]ಜೀವ[4] ನಂದ ವರ್ಧ
ಸ್ವ ಯಥಾ ಕಾ[5]ಮಾ[5]ರವಂ ತದೈಶ್ವರ್ಯ ನವೋ
ದಯಮಂ ಗೋಸನೆಗಳೆವಂ
ತೆಯುಮೆಸೆದುವು ದಶದಿಶಾವಸಾನಂಬರೆಗಂ ॥ ೧೮ ॥

ವ॥ ಹಿಂದೆಂದೂ ಅನುಭವಿಸದಿದ್ದ ಈ ಸುಖದಿಂದ ಪುಲಕಿತನಾಗಿ ಆತನ ಮುಖವರಳಿತು; ಈವರೆಗೆ ಅರಿವಿಗೆ ಬಾರದಿದ್ದ ಪೂರ್ವಾಪರ ವೃತ್ತಾಂತವು ಅವನಿಗೆ ಸ್ಪಷ್ಟವಾಗತೊಡಗಿತು; ಅತ್ಯಧಿಕವಾದ ಸಂತೋಷದಲ್ಲಿ ಮುಳುಮುಳುಗೇಳುತ್ತಿರುವಂತೆಯೆ, ಮರೆತುಹೋದ ವಿಷಯವನ್ನು ಮರಳಿ ನೆನೆದು ಚಿತ್ರಿಸಿಕೊಳ್ಳುವಂತೆ, ಮನಸ್ಸಿನಲ್ಲಿಯೆ ಎಲ್ಲವನ್ನೂ ಅರಿತುಕೊಂಡನು.

೧೬. ಕರಿಯ ಅಗುರಿನ ಧೂಪದ ಹೊಗೆಯ ಸುಗಂಧದಿಂದಲೂ, (ಬಾಗಿಲುವಾಡಗಳಿಗೆ) ಕಟ್ಟಿದ ಉತ್ತಮವಾದ ಪುಷ್ಪಹಾರಗಳಿಂದಲೂ, (ಅಲ್ಲಲ್ಲಿಗೆ) ಇಳಿಬಿಟ್ಟ ಸೂಸಕಗಳಿಂದಲೂ, ಎತ್ತರಿಸಿ ಕಟ್ಟಿದ ಪತಾಕೆಗಳಿಂದಲೂ, (ಮಂಗಳ) ವಾದ್ಯಧ್ವನಿಯಿಂದಲೂ, ಪುಷ್ಪೋಪಹಾರಗಳಿಂದ ಶೋಭಿಸುವ ರತ್ನಕುಟ್ಟಿಮದ ಅಂಗಳದಿಂದಲೂ ಆ ದೇವನ ಸಭಾಮಂದಿರವು ಸುಂದರವಾಗಿತ್ತು.

ವ॥ ಆ ಸಭಾಮಂದಿರದಲ್ಲಿ ಉತ್ತಮರಾದ ಮಹತ್ತರ ದೇವರು ಇಕ್ಕೆಲಗಳಲ್ಲಿ ವಾಹನಗಳಾದಿಗಳಾಗಿ ಸೇವೆ ಸಲ್ಲಿಸುವ ದೇವತೆಗಳು, ಕಿಲ್ಬಿಷಿಕರು, ಅಪ್ಸರ ಗಂಧರ್ವರು ಕಿಕ್ಕಿರಿಸಿ ನಿಂತಿದ್ದರು; ಭಗವಂತನಾದ ಅರ್ಹಂತನನ್ನು ಸುತ್ತಿಸುವ ಮನೋಹರವಾದ ಗಾಯನವು ತೆರೆತೆರೆಯಾಗಿ ಬಂದು ಅವನ ಅಂತರಂಗವನ್ನು ತುಂಬಿತು.

೧೭. ಆ ದೇವನ ಪೂರ್ವಜನ್ಮ ಪುಣ್ಯವೆ ಕಣ್ತೆರೆದಂತೆ ಆ ಭವನದ ರತ್ನದ ಬಾಗಿಲುಗಳು ತಾವಾಗಿ ತೆರೆದುಕೊಂಡುವು; ಗುಂಯಿಗುಡುತ್ತ ಹಾರಾಡುವ ದುಂಬಿಗಳೊಡನೆ ಧೂಪದ ಪರಿಮಳ ಹಿತವಾಗಿ ಹೊಮ್ಮಿಬಂದಿತು.

ವ॥ ಆಗ—

೧೮. "ನಿನಗೆ ಜಯವಾಗಲಿ, ಆಯುಷ್ಮಂತನಾಗು, ಯಥೇಷ್ಟ ಸುಖವಂತನಾಗು, ನಿನಗೆ ಏಳಿಗೆಯಾಗಲಿ" ಎಂಬ ಜಯ ಜಯಕಾರ ಧ್ವನಿಗಳು ಆತನ ಐಶ್ವರ್ಯದ ನವೋದಯವನ್ನು ದಿಗ್‌ದಿಗಂತಗಳವರೆಗೆ ಡಂಗುರ ಸಾರುವಂತೆ ಮೊಳಗಿದುವು.

---

1. ಅಂತಾತನ (ಅ) 2. × (ಅ) 3. ಱ[3] (ಮ) 4. ಜೀಯ (ಅ) 5. ಮೋ (ಅ)

ವ॥ ಅನ್ನೆಗಮವ್ಯಕ್ತಕಾಲದೊಳೋದಿ ಮಱೆದ ಪಿಷಮಶಾಸ್ತ್ರದ ಮೂಲಗ್ರಂಥಕ್ಕೆ—

ಕಂ॥ ವಿವರಣೆ ಬರ್ಪವೊಲಿರದವ
ಧಿ ವಿಬೋಧದೆ ಬರೆ ಮನಕ್ಕೆ ಬಗೆಯೊಳ್ ಕಂಡಂ
ದಿವಿಜಪತಿ ತನ್ನ ಮುನ್ನಿನ
ಭವಮಂ ಪೊಲಗೆಟ್ಟ ಬಟ್ಟೆ ಗಾಣ್ಬಂತಾಗಳ್ ॥ ೧೯ ॥

ಮ॥ ತಿಳಿದೆಂ ಮೂಱನೆಯೆನ್ನತೀತ ಭವದೊಳ್ ಶ್ರೀಷೇಣನೆಂ ಕೊಟ್ಟನಾ
ಕುಳಮಾಹಾರದ ದಾನಮಂ ಮುನಿಯುಗಕ್ಕಾಪುಣ್ಯದಿಂ ಭೋಗಭೂ
ತಳದೊಳ್ ಪುಟ್ಟಿ ಕಷಾಯವಿಲ್ಲದುದಱಿಂ ದೇವತ್ವಮಂ ಪೆತ್ತೆನು
ಜ್ಜ್ವಳದಾನಂ ಕಿಱಿದುಂ ಕರಂ ಪಿ[ರಿ][1]ದೆ ದಲ್ [2]ಸತ್ಕ್ಷೇತ್ರಬೀಜೋಪಮಂ ॥ ೨೦ ॥

ಸ್ರ॥ ಸೌಧರ್ಮಂ ಕಲ್ಪಮಿಾ ಶ್ರೀನಿಲಯಮಿದು ವಿಮಾನೋತ್ತಮಂ ತನ್ನಿಬದ್ಧಂ
ಮಾಧುರ್ಯಾತೋದ್ಯಮಿಂತೀ ಪೊಱಗಣಮರರೆಂದಾ ಲಸದ್ಬೋಧನವ್ಯಾ
ಬಾಧಂ ತಾತ್ಪರ್ಯದಿಂದಂ ಬಗೆದಱಿವುದುಮಾ ದೇವದೇವೀವ್ರಜಂ ಪೊ
ಕ್ಕಾ ಧನ್ಯಂಗೆಯ್ದೆ ವಂದಂದೆಱಗಿದುದುಚಿತ ಸ್ವಾಮಿಭ[3]ಕ್ತ್ಯಾ ಪ್ರತೀತಂ ॥ ೨೧ ॥

ಚಂ॥ ಎಱಗಿ ಮಹತ್ತರಾಮರರಣಂ ಕರಮಂ ಮುಗಿದಿರ್ದು ಮುಂದೆ ನಿಂ
ದಱಿಪಿದರಿಂತಿವರ್ ನಿನಗೆ ದೇವಿಯರೀ ಗಣಿಕಾಳಿ ನಿನ್ನ ಕ
ಣ್ಣಱಿದು ವಿನೋದಮಂ ಸಲಿಸುಗುಂ ನಿನಗೀ ಸುರರಾಳ್ಗಳಿತ್ತ ನೋ
ಡೆ[ಱ]ಯನೆ ಯಿಾ ವಿಮಾನತತಿಗಿಂದ್ರ ವಿಭೂತಿಗಮದ್ವಿತೀಯನೈ ॥ ೨೨ ॥

ವ|| ಅಷ್ಟರಲ್ಲಿ, ಯಾವುದೊ ಒಂದು ಕಾಲದಲ್ಲಿ ಓದಿ ಮರೆತುಹೋದ ಒಂದು ಅಸಮಾನ ಗ್ರಂಥಕ್ಕೆ—

೧೯. ವಿವರಣೆ ಒಂದು ಒದಗಿದಂತೆ—ದಾರಿದಪ್ಪಿ ದಿಗಿಲುಗೊಂಡವನಿಗೆ ಒಮ್ಮೆಲೆ ಸರಿಯಾದ ದಾರಿ ಕಂಡು ಬಂದಂತೆ—ಅವಧಿಜ್ಞಾನದಿಂದ ಆ ದೇವನಿಗೆ ವಿಷಯವೆಲ್ಲ ಸ್ಪಷ್ಟವಾಗಿ ಗೋಚರವಾಯಿತು. (ಆತನು ಹೀಗೆಂದು ಕೊಂಡನು) :

೨೦. "ನನಗೆ ತಿಳಿಯಿತು. ಇಂದಿಗೆ ಹಿಂದಿನ ಮೂರನೆಯ ಜನ್ಮದಲ್ಲಿ ನಾನು ಶ್ರೀಷೇಣನಾಗಿದ್ದೆನು. ಇಬ್ಬರು ಮುನಿಗಳಿಗೆ ಶುದ್ಧವಾದ ಆಹಾರವನ್ನು ದಾನಮಾಡಿದೆನು. ಆ ಪುಣ್ಯದಿಂದ ಭೋಗಭೂಮಿಯಲ್ಲಿ ಜನ್ಮತಾಳಿ, ಕಷಾಯವಿಲ್ಲದ ಮೂಲಕ ದೇವತ್ವವನ್ನು ಪಡೆದೆನು. ಉತ್ತಮ ದಾನವು ಎಷ್ಟೇ ಕಿರಿದಾದರೂ ಅದರ ಫಲ ಬಲು ಹಿರಿದೇ ಆಗುವುದು; ಹದವಾದ ಭೂಮಿಯಲ್ಲಿ ಬಿತ್ತಿದ ಬೀಜ ತಾನು ಚಿಕ್ಕದಾದರೂ ಘನವಾದ ಫಲವನ್ನು ಕೊಡುವುದು.

೨೧. ಇದು ಸೌಧರ್ಮಕಲ್ಪ; ಈ ಉತ್ತಮ ವಿಮಾನವು ಶ್ರೀನಿಳಯವೆಂಬುದು ; ಈ ಮಂಗಳವಾದ್ಯಗಳ ಮಧುರ ಧ್ವನಿ ಇದಕ್ಕೇ ಸೇರಿದುದು. ಹೊರಗೆ (ಸೇವಾತುರರಾಗಿ) ನಿಂತಿರುವವರು ದೇವತೆಗಳು." ಹೀಗೆಂದು ಜ್ಞಾನಿ ಯಾದ ಆತನು ಸಮಗ್ರವಾಗಿ ಅರಿತುಕೊಂಡಾಗ, ಕಾದುನಿಂತಿದ್ದ ದೇವದೇವಿಯರ ಸಮುದಾಯವು ಒಳಗೆ ಬಂದು ಆ ಪುಣ್ಯವಂತನಿಗೆ ಸ್ವಾಮಿಭಕ್ತಿಯಿಂದ ಎರಗಿತು.

೨೨. ಮಹತ್ತರ ದೇವರು ನಮಸ್ಕರಿಸಿ ಕೈಮುಗಿದುಕೊಂಡು ಮುಂದೆ ನಿಂತು ಹೀಗೆಂದು ಅರಿಕೆಮಾಡಿ ಕೊಂಡರು : "ಈ ಇವರೆಲ್ಲ ನಿನಗೆ ದೇವಿಯರು; ಇದು ಈ ಗಣಿಕೆಯರ ಸಮುದಾಯ; ಇವರು ನಿನ್ನ ಇಂಗಿತವನ್ನು ಅರಿತು ವಿನೋದವನ್ನು ಒದಗಿಸುವರು; ಈ ದೇವತೆಗಳು ನಿನಗೆ ಸೇವಕರು; ಇತ್ತ ನೋಡು—ಈ ವಿಮಾನಗಳೆಲ್ಲ ನಿನ್ನವು. ಒಡೆಯನೆ, ಐಶ್ವರ್ಯ ಮಹಿಮೆಯಿಂದ ನೀನೀಗ ಇಂದ್ರನಿಗೆ ಸಮನಾಗಿರುವೆ.

---

1. ಱ (ಮ) 2. ಸು (ಅ) 3. ಕ್ತ್ಯ (ಅ)

ಕಂ॥ ದೇವ ಭವತ್ಸುಕೃತಾವಿ
ರ್ಭಾವಿತ ನುತಪುಣ್ಯನಾಮದಿಂದಂ ನೀಂ ಶ್ರೀ
ದೇವನೆಯಿಂತೀ ಕ್ರಮದಿಂ
ಶ್ರೀವಿಜಯ ಭವದ್ವಿಮಾನಮುಂ ಶ್ರೀನಿಳಯಂ ॥ ೨೩ ॥

ಮ॥ ಸ್ರ॥ ಇದೆ ಸಾರಂ ಸ್ವರ್ಗಲೋಕಕ್ಕಿದೆ ಸುರಸಮಿತಿ ಪ್ರಾರ್ಥಿತಂ ಯೌವರಾಜ್ಯಾ
ಸ್ಪದಮಿಂದ್ರ ಪ್ರಾಜ್ಯರಾಜ್ಯಕ್ಕಿದೆ ಬೆಳಸು [1]ಸುಖಕ್ಕಾ[1]ನವ ಶ್ರೀಗೆ ಚಿತ್ರಾ
ಭ್ಯುದಯಕ್ಕುತ್ಪತ್ತಿ ರಾಗಕ್ಕಿರಲೆಡೆ ವಿಭವಕ್ಕಾ[2]ಲ[2]ಯಂ ಲೀಲೆಗುದ್ಯ
ನ್ಮದನಾವಾಸಂ ವಿಲಾಸಕ್ಕನವರತ ಮನೋಭಾಗ ಭಾವ್ಯಕ್ಕೆ ನಿಚ್ಚಂ ॥ ೨೪ ॥

ಮ॥ ಅದಱಿಂದಂ ನಿನಗೀ ಪರಾರ್ಧ್ಯನಿಲಯಂ ಶ್ರೀಪ್ರಾಭವಂ ಜೈನ ಪಾ
ದದುಪಾ[3]ಸಾ[3]ಸ್ರವದಿಂದಮಾದುದು ಜಿನಾನಿಂದ್ಯಾಲಯಂಗಳ್ಗೆ ಮಾ
ಡ್ಪುದು ಪೂಜಾವಿಭವೋತ್ಸವಂಗಳನವಂ ಮುಂದಿರ್ದು ನಂದೀಶ್ವರಾ
ದ್ಯುದಿತದ್ವೀಪ ನಮಸ್ಕ್ರಿಯಾ ವಿಧಿಗಳಂ ನೀಂ ಮಾಡು ದೇವಾಧಿಪಾ ॥ ೨೫ ॥

ಕಂ॥ ಎಂದು ಮಹತ್ತರ ದೇವರಿ
ದಂ ದೇವಂಗಂದು ಬಿನ್ನಪಂಗೆಯ್ವೊಡೆ ನೀ
ಮೆಂದಂತೆ ಧರ್ಮದಿಂ ದಮೆ
ಯಿಂ ದಾನದಿನಲ್ಲದಾಗವಖಿಳ ಸುಖಂಗಳ್ ॥ ೨೬ ॥

ಎನೆ ಎನೆ ತಕ್ಷಣದೊಳ್ ಸಿಂ
ಹನಂದೆ ತತ್ಕಲ್ಪದೊಳ್ ನಿದಾನದಿನಾ ದೇ
ವನ ದೇವಿಯಾಗಿ ಪುಟ್ಟಿದ
ಳನಂತರಂ ಶ್ರೀಪ್ರಭಾಭಿಧಾನ ಸಮೇತಂ ॥ ೨೭ ॥

೨೩. ದೇವನೆ, ನೀನು ಗಳಿಸಿಕೊಂಡು ಬಂದ ಪುಣ್ಯ ಫಲವಾಗಿ ನಿನಗೀಗ ಶ್ರೀದೇವನೆಂಬ ಪುಣ್ಯನಾಮವಾಯಿತು. ಇದೇ ರೀತಿಯಾಗಿ ನಿನ್ನ ಈ ವಿಮೂನಕ್ಕೆ ಶ್ರೀನಿಳಯವೆಂಬ ಹೆಸರಾಯಿತು.

೨೪. ಇದೇ ಸ್ವರ್ಗಲೋಕದ ಸಾರವೆನಿಸುವುದು ; ದೇವಸಮೂಹವೆಲ್ಲ ಬಯಸಿ ಹೊಗಳುವ ಇಂದ್ರ ಮಹಾ ರಾಜ್ಯಕ್ಕೆ ಯುವರಾಜ ಪದವಿಯಿದು; ಸುಖಕ್ಕೆ ಅಭ್ಯುದಯ ; ನವೈಶ್ವರ್ಯಕ್ಕೆ, ಚಿತ್ರವಿಕಾಸಕ್ಕೆ ಇದು ಜನ್ಮಸ್ಥಾನ ; ರಾಗಕ್ಕೆ ನಿವಾಸ; ವೈಭವಕ್ಕೆ ನೆಲೆ; ಲೀಲಾವಿನೋದಕ್ಕೆ ಮನ್ಮಥನ ಅರಮನೆಯೇ ಇದಕ್ಕೆ ಸಮಾನ; ನಿರಂತರ ಸುಖಾನುಭವಕ್ಕೆ ನಿತ್ಯಸ್ಥಾನ.

೨೫. ಈ ವೈಭವೋಪೇತವಾದ ಉತ್ಕೃಷ್ಟ ನಿವಾಸವು ನಿನಗೆ ಜಿನಪಾದದ ಉಪಾಸನೆಯಿಂದ ದೊರೆತಿದೆ. ಆದುದರಿಂದ ಅನವದ್ಯವಾದ ಜಿನಾಲಯಗಳಿಗೆ ವೈಭವದ ಪೂಜೋತ್ಸವಗಳನ್ನು ನೀನು ಮಾಡಬೇಕು. ನಂದೀಶ್ವರವೆ ಮೊದಲಾದ ದ್ವೀಪಗಳಲ್ಲಿ ಜಿನಾಲಯಗಳಿಗೆ ನಮಸ್ಕಾರ ವಿಧಿಗಳನ್ನು ನೆರವೇರಿಸಬೇಕು."

೨೬. ಹೀಗೆ ಮಹತ್ತರ ದೇವರು ಬಿನ್ನವಿಸಲಾಗಿ, "ನೀವೆಂದಂತೆ ಧರ್ಮ-ದಯೆ-ದಾನಗಳಿಂದ ಅಲ್ಲದೆ ಸಮಸ್ತ ಸುಖಗಳು ದೊರೆಯಲಾರವು."

೨೭. ಎಂದು ಅವನು ಹೇಳುತ್ತಿದ್ದನು. ಆ ಕ್ಷಣದಲ್ಲಿಯೆ ಸಿಂಹನಂದೆಯು ನಿಧಾನದಿಂದ ಅದೇ ಕಲ್ಪದಲ್ಲಿ ಶ್ರೀಪ್ರಭೆಯೆಂಬ ಹೆಸರಿನಿಂದ ಆತನಿಗೆ ಹೆಂಡತಿಯಾಗಿ ಹುಟ್ಟಿಬಂದಳು.

1. ಸುಖಂ ತಾ (ಅ) 2. ಜ (ಅ) 3. ಸ್ವಾ (ಅ)

ಕಂ॥ ಇನಿಯನ ವಿಯೋಗ ಭರದಿಂ
ಮುಸಿದಿರಲಣಮಾಱಳೀಕೆ ತಡೆದಿರ್ಕುಮೆ ಮಿಂ
ಚಿನ ಬಟಿಯ ಮೊಟಗುವೋಲ್ ಬೆ
ನ್ನನೆ ಬಂದಳ್ ಸಿಂಹನಂದೆಗದು ಸಂದೆಯಮೇ ॥ ೨೮ ॥

ಚಂ॥ ಪೊಸಮದದಾನೆಯಂ ನಸೆಯ ಪೆರ್ಬಿಡಿ ಜಂಗಮ ಕಲ್ಪವೃಕ್ಷಮಂ
ಮಿಸುಗುವನಲ್ಪಕಲ್ಪಲತೆ ನೀರದಮಂ ಕುಡುಮಿಂಚು ಪೊರ್ದಿ ಶೋ
[1]ಭಿಸುವವೊಲಾ ಸುರಾಧಿಪನನಾ ಪರಮೇಶ್ವರಿ ಪೊರ್ದಿ ನಾಡೆ ಕ
ಣ್ಗೆಸೆದಳತೀತಜನ್ಮ ಕೃತಪುಣ್ಯಸಮಾನ ಮನಃಪ್ರವೃತ್ತಿಯಿಂ ॥ ೨೯ ॥

ವ॥ ಮತ್ತನಿಂದಿತಾರ್ಯನುಮಲ್ಲಿಯೆ ಬಂದಮಳಪ್ರಭವಿಮಾನದಮಿತಪ್ರಭ ದೇವನಾದಂ ಆ ದಿವಿಜೇಶ್ವರಂಗೆ ಸತ್ಯಭಾಮಾರ್ಯೆ ಸುಪ್ರಭೆಯೆಂಬ ದೇವಿಯಾದಳಂತಾ ನಾಲ್ವರುಮಂದೋರೊರ್ವರನಗಲ್ದಿರಲಾಱದೆ ಮೋಹದಿಂದಮೊಂದೆ ಕಲ್ಪದೊಳ್ ಪುಟ್ಟಿದರ್ ಶ್ರೀದೇವಂ ವಿಮಾನೋಪಾಂತ ಸ್ಥಿತಿಯೊಳ್ ಜಿನನಿಲಯ ಪ್ರಾಂಗಣದೊಳ್—

ಕಂ॥ ಪೊಸಮುತ್ತಿನ ಮಂಡಪದೊಳ
ಗೆಸೆವ ಕನತ್ಕನಕ ಪೀಠದೊಳ್ ವಿಧಿಸಹಿತಂ
ಮಿಸಿಸಿ ಬಱಿಕ್ಕರ್ಚಿಸಿ ಪೂ
ಜಿಸಿ ಮಣಿಮಯ ಜೈನಬಿಂಬಮಂ ಜಿನಚಂದ್ರಂ ॥ ೩೦ ॥

ಚಂ॥ ಜಿನಪದಪದ್ಮದೊಳ್ ಮಣಿಕಿರೀಟತಟಂ ಜಿನನಾಥತತ್ವದೊಳ್
ಮನಮನವದ್ಯಜೈನಗೃಹದೊಳ್ ವಿವಿಧಾರ್ಚನೆ ಭಕ್ತಿಯೊಳ್ ವಿಭಾ
ವನೆ ಪರಿಶುದ್ಧಿಯೊಳ್ ತ್ರಿಕರಣಂ ಸಮಸಂದಿರೆ ಮುಕ್ತಿಸೌಖ್ಯಭಾ
ಜನನಮರಂ ತ್ರಿಲೋಕ ತಿಲಕಂಗೆ ಮಹಾಮಹಮಂ ಪೊಣರ್ಚಿದಂ ॥ ೩೧ ॥

---

೨೮. ಪ್ರಣಯ ಕೋಪ ಬಂದಾಗ ಕೂಡ ತನ್ನ ಪತಿಯನ್ನು ಒಂದಿಷ್ಟೂ ಆಗಲಿ ಇರಲಾರದವಳು ಈಕೆ. ಎಂದ ಮೇಲೆ ಈಗ ತಡೆದಿರುವಳೆ ? ಮಿಂಚಿನ ಜೊತೆಗೇ ಗುಡುಗು ಬಂದಹಾಗೆ ಸಿಂಹನಂದೆ ಪತಿಯ ಹಿಂದಿನಿಂದ ಅವನ ಲೋಕಕ್ಕೇ ಬಂದಳು.

೨೯. ಹೊಸ ಮದವೇರಿದ ಸಲಗನನ್ನು ಬಿದೆಯೇರಿದ ಹೆಣ್ಣಾನೆಯೂ, ಸಂಚಾರಿ ಕಲ್ಪವೃಕ್ಷವನ್ನು ಜಂಗಮ ಕಲ್ಪವಲ್ಲಿಯೂ, ಮೇಘವನ್ನು ಕೋರೆ ಮಿಂಚೂ ಹೊಂದಿಕೊಂಡು ಶೋಭಿಸುವಂತೆ ಪೂರ್ವಜನ್ಮದ ಪುಣ್ಯದಿಂದ ಸಮಾನವಾದ ಮನಃಪ್ರವೃತ್ತಿಯುಳ್ಳ ಆ ಪರಮೇಶ್ವರಿ ಆ ದೇವೋತ್ತಮನನ್ನು ಹೊಂದಿಕೊಂಡು ಕಂಗೊಳಿಸಿದಳು.

ವ॥ ಮತ್ತು ಅನಿಂದಿತನೆಂಬ (ಭೋಗಭೂಮಿಯ) ಆರ್ಯನು ಬಂದು ಅಮಳಪ್ರಭ ವಿಮಾನದ ಅಮಿತಪ್ರಭದೇವನಾದನು; ಪೂರ್ವಭವದಲ್ಲಿ ಸತ್ಯಭಾಮೆಯೆನಿಸಿದ್ದ ಆರ್ಯೆಯೆ ಈತನಿಗೆ ಸುಪ್ರಭೆಯೆಂಬ ದೇವಿಯಾದಳು. ಹೀಗೆ ಆ ನಾಲ್ವರೂ ಒಬ್ಬರನ್ನೊಬ್ಬರು ಬಿಟ್ಟಿರಲಾರದೆ ಮೋಹದಿಂದ ಒಂದೇ ಕಲ್ಪದಲ್ಲಿ ಜನ್ಮತಾಳಿದರು. ಶ್ರೀದೇವನು ತನ್ನ ವಿಮಾನದ ಹತ್ತಿರದಲ್ಲಿ ಇದ್ದ ಜಿನಾಲಯದ ಅಂಗಳದಲ್ಲಿ—

೩೦. ಹೊಸ ಮುತ್ತಿನ ಮಂಟಪದೊಳಗೆ ಶೋಭಿಸುವ ಅಚ್ಚ ಚಿನ್ನದ ಪೀಠದಲ್ಲಿ ವಿಧಿವತ್ತಾಗಿ ಜಿನನ ರತ್ನ ವಿಗ್ರಹವನ್ನಿಟ್ಟು, ಅಭಿಷೇಕ ಮಾಡಿ, ಅರ್ಚಿಸಿ, ಪೂಜಿಸಿದನು.

೩೧. ಜಿನನ ಪಾದಕಮಲಗಳಲ್ಲಿ ತನ್ನ ಕಿರೀಟಶಿಖರವೂ, ಅರ್ಹಂತ ತತ್ವದಲ್ಲಿ ಮನಸ್ಸೂ, ಶ್ರೇಷ್ಠವಾದ ಜಿನಾಲಯದಲ್ಲಿ ಬಗೆ ಬಗೆಯ ಅರ್ಚನೆಯೂ, ಭಕ್ತಿಯಲ್ಲಿ ಶುದ್ಧ ದರ್ಶನವೂ, ಪರಿಶುದ್ಧಿಯಲ್ಲಿ ಮೈ ಮನ ಮಾತುಗಳೂ ಸಂಪೂರ್ಣವಾಗಿ ಹೊಂದಿಕೊಂಡಿರಲು ಮೋಕ್ಷಸುಖಯೋಗ್ಯನಾದ ಆ ದೇವನು ತ್ರಿಲೋಕಭೂಷಣನಾದ ಭಗವಂತನಿಗೆ ಮಹಾಪೂಜೆಯನ್ನು ಮಾಡಿದನು.

---

1. ಧಿ (ಅ)

ವ॥ ಅಂತಾಷ್ಟಾಹ್ನಿಕ ಮಹಾಮಹಿಮೆಯನೆಂಟು ದಿವಸಂಬರಂ ಮಾಡಿ ಜಿನೇಂದ್ರಪೂಜೆಯಂ ನಿರ್ವರ್ತಿಸಿ ತದನಂತರದೊಳ್ ಜೈನಶಾಸನಚೂಡಾಮಣಿ ಶ್ರೀದೇವಂ ಸೌಧರ್ಮೇಂದ್ರನಿಂದ್ರಾಣಿವೆರಸು ತನ್ನ ವಿಮಾನಕ್ಕೆ ಬರ್ಪುದನಱಿದಿದಿರ್ವಂದು ಯಥಾರೂಪಪ್ರತಿಪತ್ತಿಯಿಂದಮರ ಪರಿಷನ್ಮಧ್ಯದೊಳಮರೇಂದ್ರನ[1]ನಿಱಿಸಿ[1] ತಾನುಂ ನಿಜೋಚಿತಾಸನದೊಳ್ ಕುಳ್ಳಿರ್ದು ದೇವಾಂಗನಾ ಸಂಗೀತ ಪ್ರಸಂಗ ಪ್ರಸ್ತಾವನೆಯಂ ಪ್ರಾರಂಭಗೆಯ್ಯಲ್ವೇೞ್ವುದುಂ ವಿಚಿತ್ರಸುರಸೂತ್ರಧಾರನಪ್ಸರಃಪಾತ್ರೀಪ್ರವೇಶ ಪ್ರದೇಶ ಪ್ರರೋಚನಾನಂತರಂ ಪುಷ್ಪಾಂಜಲಿವಿಕ್ಷೇಪಂಗೆಯ್ಯೆ—

ಕಂ॥ ಕೆದಱಿದ ಪುಷ್ಪಾವಳಿ ರಂ
ಗದೊಳೆ ನೆಯಂಬಡೆಯೆ ರಂಗಭೂಮಿಕೆ ಪೂತೊ
ಪ್ಪಿದಪುದೆನಿಸಿದುದು ಸಮುಹ
ಸ್ತದ ಗಾಂಧರ್ವರಿನಪೂರ್ವ ಸಂಗೀತಕದೊಳ್ ॥ ೩೨ ॥

ವ॥ ಅಂತು ಕೈಶಿಕೀವೃತ್ತಿನರ್ತನೋಪೇತಮುಮಂಗನಾ ಕುಸುಮ ಸುಕುಮಾರಾಂಗ ಸಮುಚಿತಮುಮಪ್ಪ ಲಾಸ್ಯಮನಪ್ಸರಸೆಯರಾದಿ ಸಂಧ್ಯಂಗಗತ ನೃತ್ಯಾಂಗ ರಸಭಾವಾಭಿನಯಂಗಳನಿಂದ್ರಂ ಶ್ರೀದೇವಂಗೆ ನೋಡಿಕೊಳ್ವಂತೆ ಪರಿಸ್ಫುಟಂ ಮಾಡಿ ಕರಣಾಂಗ ಹಾರ ಚಾರಿ ಪರಿಕ್ರಮಂಗಳೊಳ್ ಪೊಸಮಸೆಯ ಮಿಂಚಿನಂತಮರ ಸಮಾಜದ ಕಣ್ಗಳೊಳ್ ಪಳಂಚಿ ರಂಜಿಸಿ—

ಕಂ॥ ಮಂಜೀರಕ ಮಂಜುಳ ಮೃದು
ಸಿಂಜ ಪರಿಸ್ಫುರಿತಮೆಸೆಯೆ ಭರತದ ಪಲವುಂ
ಪಂಜಿಕೆಗಳಂತದೇಂ ಸುರ
ಲಂಜಿಕೆಯರ್ ವಿಷಮಮಂ ಸಮಂ ಮಾಡಿದರೋ ॥ ೩೩ ॥

ವ॥ ಹೀಗೆ ಜಿನಧರ್ಮಭೂಷಣನಾದ ಶ್ರೀದೇವನು ಎಂಟು ದಿನಗಳವರೆಗೆ ಅಷ್ಟಾಹ್ನಿಕ ಮಹಾ ಮಹಿಮೆಯನ್ನು ಮಾಡಿ, ಜಿನೇಂದ್ರ ಪೂಜೆಯನ್ನು ಮುಗಿಸಿದನು. ಆನಂತರ ಸೌಧರ್ಮೇಂದ್ರನು ಇಂದ್ರಾಣಿಯೊಂದಿಗೆ ತನ್ನ ವಿಮಾನಕ್ಕೆ ಬರುವುದನ್ನು ಅರಿತು, ಇದಿರುಗೊಂಡು ಉಚಿತವಾದ ರೀತಿಯಲ್ಲಿ ಅವರನ್ನು ಕರೆತಂದು ದೇವತೆಗಳಿಂದ ಕೂಡಿದ ತನ್ನ ಒಡ್ಡೋಲಗದಲ್ಲಿ ಕುಳ್ಳಿರಿಸಿ, ಯೋಗ್ಯವಾದ ಪೀಠದಲ್ಲಿ ತಾನೂ ಕುಳಿತುಕೊಂಡು, ದೇವಾಂಗನೆಯರಿಗೆ ಸಂಗೀತ ಪ್ರಸಂಗವನ್ನು ಆರಂಭಿಸಲು ಅಪ್ಪಣೆಯಿತ್ತನು. ದೇವಲೋಕದ ಸೂತ್ರಧಾರನು ಅಪ್ಸರೆಯರನ್ನು ಪ್ರವೇಶಗೊಳಿಸಿ ರಂಗಪೂಜೆಗಾಗಿ ಪುಷ್ಪಾಂಜಲಿಯನ್ನು ಕೊಡಲಾಗಿ—

೩೨. ಸುಸಂಗತ ಮೇಳವಾಗಿ ನುಡಿಸುವ ಈ ಗಂಧರ್ವರ ಅಪೂರ್ವ ಸಂಗೀತಕ್ಕಾಗಿ ರಂಗಭೂಮಿಯು (ಬಳ್ಳಿಯಂತೆ) ಹೂಬಿಟ್ಟಿದೆಯೊ ಏನೊ ಎಂಬಂತೆ ರಂಗದ ತುಂಬಾ ಚೆಲುವಾಗಿ ಹರಡಿಕೊಂಡ (ಪುಷ್ಪಾಂಜಲಿಯ) ಹೂಗಳು ಕಂಗೊಳಿಸಿದುವು.

ವ॥ ಕೈಶಿಕೀವೃತ್ತಿಯ ನರ್ತನವನ್ನೊಳಗೊಂಡು ಕುಸುಮ ಕೋಮಲಶರೀರದ ಅಂಗನೆಯರಿಗೆ ಉಚಿತವೆನಿಸುವ ಲಾಸ್ಯವನ್ನು ಅಪ್ಸರೆಯರು ಮಾಡಿ ತೋರಿಸುತ್ತಿರಲು, ಅವರ ಆದಿ. ಸಂಧಿ ಮೊದಲಾದವೆಡೆಯ ರಸಭಾವಾಭಿನಯಗಳನ್ನು ಇಂದ್ರನು ಶ್ರೀದೇವನಿಗೆ ತಿಳಿಸಿ ಹೇಳುತ್ತಿದ್ದನು. ಕರಣ, ಅಂಗಹಾರ, ಚಾರಿ — ಇವುಗಳಲ್ಲೆಲ್ಲ ತೀಕ್ಷ್ಣವಾದ ಹೊಸ ಮಿಂಚಿನಂತೆ ದೇವಸಭೆಯ ಕಣ್ಣುಗಳಿಗೆ ಮಿರುಗಿ ಸಂತೋಷಪಡಿಸಿ —

೩೩. ಕಾಲಂದುಗೆಯ ಮೃದು ಮಧುರವಾದ ಧ್ವನಿಯೊಂದಿಗೆ ನರ್ತಿಸುತ್ತಿದ್ದ ಅಪ್ಸರೆಯರು ಭರತಶಾಸ್ತ್ರದ ಹಲವಾರು ವಿಷಮ ವ್ಯಾಖ್ಯಾನಗಳನ್ನು ತಮ್ಮ ಲಾಸ್ಯಪ್ರಯೋಗದಿಂದ ಸಮಗೊಳಿಸಿ ತೋರಿದರು.

---

1. ಸಿರಿಸಿ (ಅ)

[1]ವ॥ ಅಂತಲ್ಲಿ ಕೆಲಂಬರ್[1]—

ಕಂ॥ ನಿಲೆ ಸೂಚಿಯಲರೆಸ[2][ಲ್][2] ಕೊರ
ಗಲೀಯದಭಿನಯದ ಕರಣದ ಭ್ರಮರಿಯ ನಿ
ಶ್ಚಲತೆಯ ಲಘುತೆಯ ಮಾರ್ದವ
ವಿಲಾಸ ನರ್ತನದಿನಮರಿಯರ್ ನರ್ತಿಸಿದರ್ ॥ ೩೪ ॥

ವ॥ ಅಂತು ಸೂಚೀನಾಟ್ಯಪರ್ಯವಸಾನಂಬರಮಾದಾಕೆಗಳಾಡಿದಾಟಮನಿಂದ್ರಂ ನೋಡಿ ಮೆಚ್ಚಿ ಮೆಚ್ಚುಗೊಟ್ಟುಪಸಂಹಾರಿಸಿ ನಾಡೆಯುಂ ಬೇಗಮಂ ಶ್ರೀದೇವನೊಳ್ ಸಂಭಾಷಿಸಿ ತದ್ದಿವಿಜನೊಡವರೆ ವಾಸವಂ ನಿಜಾವಾಸಕ್ಕೆ ಪೋಗಿ ಶ್ರೀದೇವನಂ ವಿಸರ್ಜಿಸೆ ಬಂದಾ ದೇವಂ ನಿಜವಿಮಾನದೊಳಿರ್ದು ಶ್ರೀಪ್ರಭೆಯುಮಮಿತ ಪ್ರಭೆಯುಮಮಿತಪ್ರಭನುಂ ಸುಪ್ರಭೆಯುಂ ಬೆರಸು—

ಉ॥ ಒರ್ಮೆ ಹಿಮಾದ್ರಿಗೊರ್ಮೆ ರಜತಾದ್ರಿವ[3]ನಾಳಿಗದೊರ್ಮೆ[3] ವಾರ್ಧಿಗೋ
ರೊರ್ಮೆ ಪಯೋಧಿಗೊರ್ಮೆ ಜಿನಮಂದಿರ ಸುಂದರಮಂದಿರಕ್ಕೆ ಮ
ತ್ತೊರ್ಮೆ ಮನುಷ್ಯಲೋಕ ಜಿನಪೂಜೆಗೆ ಪೋಗೆ ದಲಟ್ಟಿಗೊರ್ಮೆ ಸೌ
ಧರ್ಮದೊಳಿರ್ದುದಿಲ್ಲ ಮನಮಾ ದಿವಿಜೇಶ್ವರನೇಂ ಸಧರ್ಮನೋ ॥ ೩೫ ॥

ವ॥ ಅಂತು ವಂದನಾ ಭಕ್ತಿಗೆ ಪೆಱವುಮಱಿಕೆಯ ಕೃತ್ರಿಮ ಚೈತ್ಯಾಲಯಂಗಳ್ಗೆ ವಿವಿಧಾರ್ಚನಾ ವ್ಯಗ್ರಾಗ್ರಹಸ್ತ ಸುರ ಪರಿಜನನಾಗಿ ಪೋಗಿ—

ಮ॥ ಮುದಮಂ ಮಾಡುವ ಧೂಪಧೂಮಲತೆಯಿಂ ಕರ್ಪೂರಪಾ[4]ಳಿ[4]ಪ್ರದೀ
ಪದಿನೆತ್ತಂ ಬಿಡುಮುತ್ತಿನಚ್ಚಗಡೆಯಿಂ ಮಂದಾರ ಪುಷ್ಪೋಪಹಾ
ರದಿನುದ್ಗಂಧ ಸುಗಂಧದಿಂದಮೃತ ಸಾನ್ನಾಯ್ಯಾಜ್ಯದಿಂ ಗಂಧತೋ
ಯದಿನಾಪ್ತಾಂಘ್ರಿಯನಾದಮರ್ಚಿಸಿದರಾ ಶ್ರೀದೇವನುಂ ದೇವಿಯುಂ ॥ ೩೬ ॥

ವ॥ ಹಾಗೆ ಅಲ್ಲಿ ಕೆಲವರು

೩೪. ಸೂಚೀನಾಟ್ಯದಲ್ಲಿ (ಧರಿಸಿಕೊಂಡ) ಹೂವಿನ ಎಸಳು ಕೂಡ ಕೊರಗದಂತೆ ಅಭಿನಯದ, ಕರಣದ, ಭ್ರಮರಿಯ, ನಿಶ್ಚಲತೆಯ, ಲಘುತೆಯ ಹಾಗೂ ಕೋಮಲತೆಯ ವಿಲಾಸದಿಂದೊಡಗೂಡಿ ದೇವನರ್ತಕಿಯರು ಕುಣಿದರು.

ವ॥ ಹೀಗೆ ಸೂಚೀನಾಟ್ಯ ಮುಗಿವವರೆಗೆ ಅಪ್ಸರೆಯರ ನರ್ತನವನ್ನು ನೋಡಿ ಇಂದ್ರನು ಮೆಚ್ಚಿ, ಮೆಚ್ಚಿನ ಬಹುಮಾನವನ್ನಿತ್ತು, ಆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿದನು. ಆಮೇಲೆ ಶ್ರೀದೇವನೊಡನೆ ಸಂಭಾಷಣೆ ಮಾಡಿ, ಹೊರಟು, ತನ್ನೊಡನೆ ನಡೆದುಬರುತ್ತಿದ್ದ ಶ್ರೀದೇವನನ್ನು ನಿಲ್ಲೆಂದು ಹೇಳಿ ಇಂದ್ರನು ತನ್ನ ನಿವಾಸಕ್ಕೆ ಹೋದನು. ಶ್ರೀದೇವನು ಮರಳಿ ಬಂದು ತನ್ನ ವಿಮಾನದಲ್ಲಿ ಶ್ರೀಪ್ರಭೆ, ಅಮಿತಪ್ರಭ ಹಾಗೂ ಸುಪ್ರಭೆಯರನ್ನೊಳಗೊಂಡು—

೩೫. ಒಮ್ಮೆ ಹಿಮವಂತ ಪರ್ವತಕ್ಕೆ, ಒಮ್ಮೆ ರಜತಾದ್ರಿಗೆ, ಒಮ್ಮೆ ಸಮುದ್ರಕ್ಕೆ ಹೋಗಿ ಅಲ್ಲಿಯ ಜಿನ ಮಂದಿರಗಳನ್ನು ಪೂಜಿಸುತ್ತಿದ್ದನು; ಒಮ್ಮೊಮ್ಮೆ ಮನುಷ್ಯಲೋಕದ ಜಿನಾಲಯಗಳಿಗೂ ಪ್ರೀತಿಯಿಂದ ಹೋಗಿ ಬರುತ್ತಿದ್ದನು. ಆ ದಿವಿಜೇಶ್ವರನಿಗೆ ಸೌಧರ್ಮಕಲ್ಪದಲ್ಲಿ (ಸುಮ್ಮನೆ ಉಳಿಯುವ) ಮನಸ್ಸಿದ್ದಿಲ್ಲ. ಅವನ ಧರ್ಮ ಬುದ್ಧಿ ಅಂತಹುದು.

ವ॥ ಹೀಗೆ ವಂದನಾ ಭಕ್ತಿಯಿಂದ ಅನೇಕ ಇತರ ಅಕೃತ್ರಿಮ ಚೈತ್ಯಾಲಯಗಳಿಗೂ ಹೋಗಿ, ಬಗೆ ಬಗೆಯ ಅರ್ಚನಾದ್ರವ್ಯದೊಡನೆ ಹಾಗು ದೇವಪರಿವಾರದೊಡನೆ ಕೂಡಿಕೊಂಡು—

೩೬. ಸುಖಕರವಾದ ಧೂಪದ ಹೊಗೆಯಿಂದಲೂ, ಕರ್ಪೂರದ ದೀಪಗಳಿಂದಲೂ, ಎತ್ತೆತ್ತಲೂ ಬಿಡುಮುತ್ತಿನ ರಂಗವಲ್ಲಿಗಳಿಂದಲೂ, ಮಂದಾರಪುಷ್ಪಗಳಿಂದ ರಚಿಸಿದ ಪುಷ್ಪೋಪಹಾರಗಳಿಂದಲೂ, ಉತ್ತಮವಾದ ಶ್ರೀಗಂಧದ ಪರಿಮಳದಿಂದಲೂ, ಅಮೃತಾಹಾರದ ನೈವೇದ್ಯದಿಂದಲೂ, ಗಂಧದ ಪನ್ನೀರಿಂದಲೂ ಭಗವಂತನ ಪಾದಗಳಿಗೆ ಶ್ರೀದೇವ ದಂಪತಿಗಳು ಅರ್ಚನೆಮಾಡಿದರು.

---

1. × (ಮ) 2. ಳ್ (ಮ) 3. ನಾವಳಿಗೊ [ರ್ಮೆ] (ಮ) 4. ಳ (ಮ)

ವ॥ ಅಂತನುಮೋದಮಾನ ಶ್ರೀಪ್ರಭಾದೇವ್ಯಾದಿಕಂ ಜಿನೇಂದ್ರ ಪಾದಾರವಿಂದಂಗಳನರ್ಚಿಸಿ ಮಗುಳ್ದು ಬಂದು ವಿಷಯಸುಖಾಸ್ವಾದನ ರಸಾಮೃತ ತತ್ಪರನಾಗಿರೆ—

ಮ॥ ತವದುತ್ಕಂಠತೆ ಮಾ[1][ಬ್ಗ][1]*ಮಾ[2][ಟ್ಗ][2]ದೆಜಿಕಂ* ತ[3][ಟ್ಕ][3]ಯ್ಸದಟ್ಕಿಜ್ ಮನ
ಕ್ಕವಚ[4][ಜು][4] ಮಾಡದಳುರ್ಕೆ ಕುಂದದಳಿಪೇವಂಗೊಳ್ಳದಾಸಕ್ತಿ ಕೈ
ತವಮಿರ್ದಲ್ಲಿರದಿರ್ದೊಡಂಬಡಗಲಲ್ ಮೆಯ್ವಾರದೊಳ್ಪೆಂಬಿವಂ
ದಿವಿಜಂ ಶ್ರೀಪ್ರಭೆಗಿತ್ತನಾಕೆ ದಿವಿಜಂಗಿ[5]ತ್ತಳ್[5] ರತಕ್ರೀಡೆಯೊಳ್ ॥ ೩೭ ॥

ವ॥ ಅಂತು ಶ್ರೀದೇವಂ ಶ್ರೀಪ್ರಭೆಯುಂ ತಾನುಂ ಸುಪ್ರಭೆವೆರಸಮಿತಪ್ರಭನುಂ ಅಯ್ದು ಪಲ್ಯೋಪಮ ಪರಿಮಾಣದಾಯುಷ್ಯಮುಮಾಗೆಯುಂ ಏಱುವರೆ ದಿವಸಮುಮೆ ಸುರಭಿ ನಿಶ್ವಾಸಾವಧಿಯಾಗೆಯುಂ ಅಯ್ನೂರು ವರ್ಷಮಮೃತಾಹಾರ ಸಂಸ್ಮರಣ ಮರ್ಯಾದೆಯುಮಾಗೆಯುಂ ಪುಣ್ಯ ಸುಖಮಹಿಮಾಧಿಷ್ಠಾನಮಾದ ಮೊದಲ ಕಲ್ಪದೊಳ್ ನಿಖಿಳ ನಿರಾಕುಳ ನಿರ್ದ್ವಂದ್ವ ನಿಳಿಂಪ ನಿರತಿಶಯ ಪರಮಾನಂದ ನಿಳಯಮುಮಪ್ಪ ಶ್ರೀನಿಲಯ ವಿಮಾನದೊಳಗೆ ಪಲ್ಯೋಪಮ ಪಂಚಕಾವಸಾನದೊಳಱುದಿಂಗಳಾಯುಷ್ಯಮುಂಟೆನೆ—

ಮಾಳಿನೀವೃತ್ತಂ ॥ ಸುರಭಿಕುಸುಮಧಾಮಂ ಬಾಡಿ ನೀರೋಡೆ ದಿವ್ಯಾ
ಭರಣರುಚಿಗಳಸ್ತೋದಸ್ತ ಸೂರ್ಯಾಂಶುಗಳ್ವೋ
ಲಿರೆ ಮಸುಳೆ ನಿಜಾಂಗಂ ಮಂದಮಂದಾಯಮಾನಂ
ತೆರುತಿರೆ ಮುಖಜೃಂಭಾರಂಭಮಂ ಜೆಂಹಭಾವಂ ॥ ೩೮ ॥

ವ॥ ಈ ಅರ್ಚನೆಗೆ ಅನುಮೋದನೆ ಮಾಡುತ್ತಿರುವ ಶ್ರೀಪ್ರಭೆಯೇ ಮೊದಲಾದವರಿಂದ ಕೂಡಿಕೊಂಡು ಜಿನೇಂದ್ರನ ಪಾದಕಮಲಗಳನ್ನು ಪೂಜಿಸಿ ಮರಳಿಬಂದು ವಿಷಯಸುಖಾನುಭವದಲ್ಲಿ ಮಗ್ನನಾದನು.

೩೭. ಕುಗ್ಗದ ಉತ್ಕಂಠೆ, ಕಡಮೆಯಾಗದ ಮೆಚ್ಚು, ಕ್ಷೀಣವಾಗದ ಅನುರಾಗ, ತಗ್ಗದ ಅಕ್ಕರತೆ, ಮನಸ್ಸಿಗೆ ಜಿಗುಪ್ಸೆಯನ್ನುಂಟುಮಾಡದ (ಕಾಮದ) ಆಧಿಕ್ಯ, ಕುಂದದ ಭೋಗಾಭಿಲಾಷೆ, ಹೇವಗೊಳ್ಳದ ಆಸಕ್ತಿ, (ಪ್ರಣಯ ಕಲಹಕ್ಕೆ) ನೆಪವಿರಲಿ ಇರದಿರಲಿ, ಯಾವಾಗಲೂ ಒಡಂಬಟ್ಟು ಹೊಂದಿಕೊಳ್ಳುವ ಚಿತ್ತವೃತ್ತಿ, ಅಗಲುವುದಕ್ಕೆ ಮನಸ್ಸೇ ಆಗದಂತಹ ಮಮತೆಯ ಅತಿಶಯ—ರತಿಕ್ರೀಡೆಯಲ್ಲಿ ಇವುಗಳನ್ನೆಲ್ಲ ಶ್ರೀದೇವನು ಶ್ರೀಪ್ರಭೆಗೆ ಇತ್ತನು, ಆಕೆ ಅವನಿಗೆ ಇತ್ತಳು.

ವ॥ ಹೀಗೆ ಶ್ರೀದೇವ-ಶ್ರೀಪ್ರಭೆಯರೂ ಅಮಿತಪ್ರಭ-ಸುಪ್ರಭೆಯರೂ ಐದು ಪಲ್ಯೋಪಮ ಆಯುಷ್ಯವನ್ನು ಪಡೆದು, ಏಳೂವರೆ ದಿನಕ್ಕೊಮ್ಮೆ ಸುಗಂಧ ನಿಶ್ವಾಸವುಳ್ಳವರಾಗಿ, ಐನೂರು ವರ್ಷಕ್ಕೊಮ್ಮೆ ಅಮೃತಾಹಾರವನ್ನು ಸೇವಿಸುತ್ತ, ಪುಣ್ಯಸುಖದ ಮಹಿಮೆಗೆ ನೆಲೆವನೆಯಾದ ಮೊದಲನೆಯ ಕಲ್ಪದಲ್ಲಿ ಸಮಗ್ರವಾಗಿ ದುಃಖವಿಲ್ಲದ, ದ್ವಂದ್ವವಿಲ್ಲದ ದೇವಲೋಕದ ಅತ್ಯಧಿಕವಾದ ಆನಂದಕ್ಕೆ ಬೀಡೆನಿಸಿದ ಶ್ರೀನಿಳಯ ವಿಮಾನದಲ್ಲಿ ಇರುತ್ತಿದ್ದರು. ಅವರ ಐದು ಪಲ್ಯೋಪಮ ಕಾಲ ಮುಗಿಯುತ್ತ ಬಂದು, ಆಯುಷ್ಯ ಇನ್ನು ಆರು ತಿಂಗಳು ಮಾತ್ರ ಉಳಿದಿರುವಾಗ—

೩೮. (ಅವರು ಮುಡಿದುಕೊಂಡ) ಸುಗಂಧ ಪುಷ್ಪಗಳ ಹಾರ ಬಾಡಿ ಕಂದಿದುವು; ದಿವ್ಯವಾದ ಆಭರಣಗಳ ಪ್ರಭೆ ಮುಳುಗುವ ಸೂರ್ಯನ ಕಿರಣಗಳಂತೆ ನಿಸ್ತೇಜವಾಯಿತು; ದೇಹಕಾಂತಿ ಮಸುಳಿತು; ಮೆಲ್ಲಮೆಲ್ಲಗೆ ಆಗುಳಿಕೆಗಳು ಬರಲಾರಂಭಿಸಿದುವು.

---

1. ಬ್ಗ (ಮ) * ಬಳ್ಪದೆ ಕರಂ (ಅ) 2. ಳ್ಗ (ಮ) 3. ಳ್ಕ (ಮ) 4. ಜಂ (ಮ) 5. ತ್ತಂ (ಅ)

ಕಂ॥ ಅಱುದಿಂಗಳ್ವರೆಗಂ ಪೆಱ
ಪೆಱವನನುಷ್ಠಿಸದೆ ಜಿನಪದಾಂಭೋರುಹದೊಳ್
ನಿಱಿಸಿ ಮತಿಯಂ ಸುರರ್ ಕ
ಯ್ಗಿಱಿ ನಿಱಿದೊಡನೊಡನೆ ಪೊಗೞೆ ತಱಿಸಂದಮರರ್ ॥ ೩೯ ॥

ವ॥ ಅಂತು ಷಣ್ಮಾಸಾವಧಿವರಮಾ ವಿಬುಧೇಶ್ವರನಾತ್ಮಾತೀತ ಭವಜ್ಞಾನ ವಿಳಸಿತಮನಮನವಧಾರಿಸಿ—

ಚಂ॥ ಅತಿವಯನಾಗಿ ಬಾಳಮೃತಿಯಿಂದಱಿದಂದಿನ ಮೂರ್ಖವೃತ್ತಿ ಪಂ
ಡಿತಮೃತಿಯಿಂದಮಲ್ಲದದು ನೀಗದು ಪೋಗೆನಗೆಂಬ ಭಾವಿತಾ
ತ್ಮಕೆಗಮರೇಂದ್ರನುಂ ಶಚಿಯುಮಿಾಮರಣಂ ನಮಗಾದೊಡಲ್ತೆ ಭ
ವ್ಯತೆ ಬಳೆದಿರ್ಕುಮೆಂದು ಬಯಸುತ್ತಿರೆ ಜೈನಗೃಹಾಂತರಾಳದೊಳ್ ॥ ೪೦ ॥

ವ॥ ಆಗಳ್ ತನ್ನ ಸಹಜಾತ ದುಕೂಲಾಂಬರ ಮಂದಾರ ಮಾಲಾಭರಣಂಗಳ್ವೆರಸು ಜಿನೇಂದ್ರ ಭವನದೊಳಿರ್ದು ತನ್ನಲ್ಲಿಗೆ ವಂದ ಸೌಧರ್ಮೇಂದ್ರನಂ ಬೀೞ್ಕೊಂಡು—

ಕಂ॥ ಅಸಿತ ವಿಷೋತ್ಪಳ ಪರಿಮಳ
ದುಸಿರೊಳ್ ಮಡಿದಂದಿನೆಗ್ಗು ನೀಗೆ ಜಿನಾಂಘ್ರಿ
ಶ್ವಸದಮೃತಾಬ್ಜಮನಾಘ್ರಾ
ಯಿಸಿದಂ ಜಿನಚಂದ್ರನಾಸಹಾಯ ಸಮೇತಂ ॥ ೪೧ ॥

ವ॥ ಅಂತು ಮುಗಿದ ಕೆಯ್ಯುಂ ನಿಶ್ಚಲಿತಮಪ್ಪ ಮನಮುಂ ಎಱಗಿದ ಮಣಿಮಕುಟಮುಮುಚ್ಚಾರಿಸುವ ಪಂಚನಮಸ್ಕಾರ ಪದಂಗಳುಂ ಮೆಯ್ವೆತ್ತಿರೆ—

---

೩೯. ಈ ಆರು ತಿಂಗಳು ಕಳೆಯುವವರೆಗೂ ಅವರು ಬೇರೆ ಏನನ್ನೂ ಮಾಡದೆ, ಜಿನನ ಪಾದಗಳಲ್ಲಿಯೆ ಮನಸ್ಸಿಟ್ಟು ದೇವತೆಗಳೆಲ್ಲ ಕೈಯೆತ್ತಿ ಹೊಗಳುವಂತೆ (ಧರ್ಮಭಾವನೆಯಲ್ಲಿ) ದೃಢಚಿತ್ತರಾದರು.

ವ॥ ಹೀಗೆ ಆ ದೇವೇಶ್ವರನಾದ ಶ್ರೀದೇವನು ತನ್ನ ಪೂರ್ವಜನ್ಮಗಳ ಕಥೆಯನ್ನು ನೆನೆದು ಯೋಚಿಸುತ್ತ—

೪೦. ವಯೋವೃದ್ಧನಾಗಿದ್ದಾಗಲೂ ಅಜ್ಞಾನದಿಂದ ಬಾಲಮೃತಿ (ಸಮ್ಯಕ್ತ್ವವಿಲ್ಲದೆ ಭಾವೋದ್ರೇಕದಿಂದ ಮಾಡಿಕೊಳ್ಳುವ ಆತ್ಮಹತ್ಯೆ)ಯಿಂದ ಜೀವ ನೀಗಿದ ಮೂರ್ಖತನವನ್ನು ಪಂಡಿತಮೃತಿ (ಸಮ್ಯಕ್ತಪೂರ್ವಕವಾಗಿ ಪಡೆಯುವ ಸಮಾಧಿ ಮರಣ)ಯಿಂದಲೆ ಕಳೆಯಬೇಕಲ್ಲದೆ ಅನ್ಯಮಾರ್ಗವಿಲ್ಲ ಇಂತಹ ಮರಣ ಒದಗಿದಾಗಲೆ ಭವ್ಯತೆ ಬೆಳೆಯುವುದೆಂದು ಇಂದ್ರ-ಶಚಿಯರು ಕೂಡ ಬಯಸುತ್ತಿರುವರು.

ವ॥ ಆಗ ಜನ್ಮಾರಭ್ಯವಾಗಿ ತನಗೆ ಬಂದಿದ್ದ ದಿವ್ಯವಸ್ತ್ರ, ಮಂದಾರ ಮಾಲೆ ಹಾಗೂ ಆಭರಣಗಳೊಡನೆ ಜಿನಾಲಯದಲ್ಲಿ ಇದ್ದು, ತನ್ನಲ್ಲಿಗೆ ಬಂದ ಸೌಧರ್ಮೇಂದ್ರನನ್ನು ಬೀಳ್ಕೊಂಡು—

೪೧. ವಿಷಭರಿತವಾದ ಕನ್ನೈದಿಲೆಯನ್ನು ಮೂಸಿನೋಡಿ ಮರಣ ಹೊಂದಿದ ಮೂರ್ಖತನದ ಪರಿಣಾಮ ಹೊರಟುಹೋಗುವಂತೆ ತನ್ನ ಸಂಗಡಿಗರೊಡನೆ ಭಗವಂತನ ಪಾದಕಮಲಗಳನ್ನು ಆಘ್ರಾಣಿಸಿದನು.

ವ॥ ಹೀಗೆ ಮುಗಿದ ಕೈ, ನಿಶ್ಚಲವಾದ ಮನಸ್ಸು, ಬಾಗಿದ ರತ್ನಕಿರೀಟ, ಉಚ್ಚರಿಸುತ್ತಿರುವ ಪಂಚ ನಮಸ್ಕಾರ ಪದಗಳು—ಇವುಗಳನ್ನೊಡಗೊಂಡಿರಲಾಗಿ—

ಕಂ॥ ಉದಯಿಸೆ ರವಿ ತಾರೆಗಳೊ
ರ್ಮೊದಲನಿತುಮದೃಶ್ಯಮಪ್ಪವೋಲ್ ಯಮನುದಯ
ಕ್ಕಿದಿರಾಗಿ ತಮ್ಮ ನಾಲ್ವರು
ಮದೃಶ್ಯರಾದರ್ ಜಿನಾಂಘ್ರಿ ಕಮಲದ ಮೊದಲೊಳ್ ॥ ೪೨ ॥

ವ॥ ಅಂತದೃಶ್ಯರಾಗಿ ಬಂದರ್ಕಕೀರ್ತಿಗಂ ಜ್ಯೋತಿರ್ಮಾಲೆಗಂ ಶ್ರೀದೇವನಾದನೀ ನಮಿತತೇಜನಯಕಳಂಕಾಚಾರ ಸಾರನೆಯಾಗಿ ಪುಟ್ಟಿದಯ್ ಶ್ರೀಪ್ರಭೆಯುಂ ಬಂದಿಲ್ಲಿ ನಿನಗೆ ವಲ್ಲಭೆ ಜ್ಯೋತಿಃಪ್ರಭೆಯಾದಳ್ ಅಮಿತಪ್ರಭನುಂ ಬಂದಿಲ್ಲಿ ತ್ರಿಪೃಷ್ಠಂಗಂ ಸ್ವಯಂಪ್ರಭೆಗಂ ಶ್ರೀವಿಜಯನೆಂಬ ಮಗನಾದೊಂ ಸುಪ್ರಭೆಯುಮೀತಂಗರಸಿ ಸುತಾರೆಯಾದಳ್ ನೀಂ ಶ್ರೀಷೇಣನಾದಂದು ಸತ್ಯಭಾಮೆಯಂ ಮದುವೆನಿಂದೊಡೆ ತನ್ನಂ ನಿರ್ಘಾಟಿಸೆ ಕಳೆಯೆ ಪೋಗಿ ಸತ್ತು ವಿವಿಧ ಜವಂಜವ ಚಕ್ರಾಕ್ರಮಣದಿಂ ಬಂದು ಭೂತರಮಣನಾಮ ಕಾಂತಾರದೈರಾವತೀ ತೀರದ ತಾಪಸಾಶ್ರಮದೊಳ್ ಮಿಥ್ಯಾ ತಪಶ್ಚರಣ ಪರಿಣತ ತಾಪಸನಿಕಾಯದೊಳ್—

ಕಂ॥ ಉಟಜ ಕುಶೈವಾಗ್ರಹ ಲಂ
ಪಟನೊರ್ವಂ ತವಸಿ ಕೌಶಿಕಾಖ್ಯಂ ಮತ್ತಾ
ಜಟಿಧರ್ಮಪತ್ನಿ ಗುಣಗಣ
ಪಟುಮಾನಿತೆ ಪೆಸರೊಳವಳರುಂಧತಿಯೆಂಬಳ್ ॥ ೪೩ ॥

ವ॥ [1]ಆಯಿರ್ವರ್ಗಂ[1] ಪುಟ್ಟಿದೊಂ ಮೃಗಶೃಂಗನೆಂಬೊಂ ತಾಪಸಕುಮಾರನಾತಂ ಬಾಲಕಾಲ ಪರಿಗೃಹೀತ ತಾಪಸಾಚರಣಂ ತಪೋರೂಪಮಾರ್ಗಮಂ ಮೆಚ್ಚದೆ ಮಿಥ್ಯಾಂಧಕಾರಾವಕುಂಠಿತ ಸಮ್ಯಗ್ದರ್ಶನನಾಗೆ—

ಕಂ॥ ಹರಿಣಾ ಜಿನವಾಸಃ ಪರಿ
ಕರನಾಗಿ ವಿಚಿತ್ರ ಮೌಂಜಿಮೇಖಳೆಯನವಂ
ಧರಿಯಿಸಿ ತೊಡರ್ದಂ ಭವವಾ
ಗುರೆಯೊಳ್ ವಾಗುರೆಯ ಮೃಗದವೋಲ್ ಮೃಗಶೃಂಗಂ ॥ ೪೪ ॥

---

೪೨. ಸೂರ್ಯನು ಬಂದೊಡನೆ ನಕ್ಷತ್ರಗಳು ಮಾಯವಾಗುವಂತೆ, ಯಮನು ಬಂದೊಡನೆ ಆ ನಾಲ್ವರೂ ದೇವತೆಗಳು ಜಿನನ ಪಾದಕಮಲಗಳಲ್ಲಿ ಅದೃಶ್ಯರಾದರು.

ವ॥ ಹಾಗೆ ಅಲ್ಲಿ ಅದೃಶ್ಯರಾಗಿ ಈ ಲೋಕಕ್ಕೆ ಬಂದಾಗ ಶ್ರೀದೇವನಾಗಿದ್ದ ನೀನು ಅರ್ಕಕೀರ್ತಿಗೂ ಜ್ಯೋತಿರ್ಮಾಲೆಗೂ ನಿಷ್ಕಳಂಕ ಚರಿತ್ರನಾದ ಅಮಿತತೇಜನಾಗಿ ಹುಟ್ಟಿದೆ; ಶ್ರೀಪ್ರಭೆಯೂ ಇಲ್ಲಿಗೆ ಬಂದು ನಿನಗೆ ಜ್ಯೋತಿಃಪ್ರಭೆಯೆಂಬ ಮಡದಿಯಾದಳು; ಅಮಿತಪ್ರಭನು ತ್ರಿಪೃಷ್ಠ-ಸ್ವಯಂಪ್ರಭೆಯರಿಗೆ ಶ್ರೀವಿಜಯನೆಂಬ ಮಗನಾದನು; ಸುಪ್ರಭೆಯು ಈತನಿಗೆ ಸುತಾರೆಯೆಂಬ ಅರಸಿಯಾದಳು; ನೀನು ಶ್ರೀಷೇಣನಾಗಿದ್ದ ಕಾಲದಲ್ಲಿ ಸತ್ಯಭಾಮೆಯನ್ನು ಮದುವೆಯಾಗಿದ್ದ ಕಪಿಲನೆಂಬವನನ್ನು ನೀನು ಧಿಕ್ಕರಿಸಿ ಹೊರದೂಡಿದೆಯಷ್ಟೆ. ಆತನು ಅಲ್ಲಿಂದ ಹೋಗಿ ಸತ್ತು, ಸಂಸಾರ ಚಕ್ರದಲ್ಲಿ ಸುತ್ತುತ್ತಿದ್ದನು. ಭೂತರಮಣವೆಂಬ ಅರಣ್ಯದಲ್ಲಿ ಐರಾವತೀನದಿಯ ದಂಡೆಗಿರುವ ಒಂದು ತಾಪಸಾಶ್ರಮದಲ್ಲಿ ಅಜ್ಞಾನಮಯವಾದ ತಪಸ್ಸನ್ನಾಚರಿಸುವ ತಪಸ್ವಿಗಳ ಸಮೂಹವಿರುವುದು; ಅದರಲ್ಲಿ—

೪೩. ಗುಡಿಸಿಲಲ್ಲಿದ್ದು ಕುಮತಾಚರಣೆಯಲ್ಲಿ ಮಗ್ನನಾದ ಕೌಶಿಕನೆಂಬ ತಪಸ್ವಿಯಿರುವನು; ಆತನ ಹೆಂಡತಿ ಅರುಂಧತಿಯೆಂಬುವಳು; ತುಂಬ ಗುಣವಂತೆ.

ವ॥ ಇವರಿಗೆ ಮೃಗಶೃಂಗನೆಂಬ ಮಗನಾದನು. ಈತನು ಚಿಕ್ಕಂದಿನಿಂದಲೆ ತಪಸ್ಸಿಗೆ ತೊಡಗಿದ್ದರೂ ನಿಜವಾದ ತಪೋಮಾರ್ಗವನ್ನು ಮೆಚ್ಚದೆ. ಮೂಢ ಭಾವನೆಯಿಂದ ಸಮ್ಯಗ್‌ದರ್ಶನ ವಿರಹಿತನಾಗಿ—

೪೪. ಜಿಂಕೆಯ ಚರ್ಮವನ್ನೂ ವಿಚಿತ್ರವಾದ ಮೌಂಜಿಯ ಉಡಿದಾರವನ್ನೂ ಧರಿಸಿಕೊಂಡು ಜೇಡನ ಬಲೆಗೆ

ವ|| ಅಂತು ಪಲಕಾಲಂ ತಪಂಗೆಯ್ದವಸಾನಕಾಲದೊಳ್ ನಿದಾನಪೂರ್ವಕಂ ಸತ್ತಶನಿಘೋಷನಾಗಿ ಪುಟ್ಟಿ ಸತ್ಯಭಾಮೆಯಪ್ಪ ಸುತಾರೆಯಂ ಕಂಡು ತಾಂ ಮುನ್ನೆ—

ಕಂ|| ನೆಱೆಯನುಭವಿಸಲ್ ಪಡೆಯದ
ಮಱುಕದಿನುಯ್ದು ಸುತಾರೆಯಂ ನಿನ್ನೊಳ್ ತ
ಟ್ಟಿಱಿಯಲಣಮಾಱದಕ್ಕಟ
ಪೊಱಮಾಱಿದನೀತನೋಪದಿದು ಕರ್ಮಕೃತಂ ॥ ೪೫ ॥

ವ|| ಎಂದು ವಿಜಯಕೇವಲಿಗಳ್ ವಿನೇಯ ನಿಕಾಯಾಂಬುಜಭಾನುಗಯ್ವರ ಭವಾವಳಿವೆರಸು ಸುತಾರಾಹರಣಮಂ ಸವಿಸ್ತರಂ ಬೆಸಸುವುದುಮಶನಿಘೋಷನಲ್ಲಿಯೆ—

ಕಂ|| ಆಗಳೆ ಮಳಿನಾತ್ಮಪದಾ
ಭಾಗಮನಿರದಲಸದಲೆದು ಶಿಲೆಯೊಳ್ ಪೊಯ್ವು
ದ್ಯೋಗದಿನರ್ಹದ್ದೀಕ್ಷೆಗೆ
ಪೋಗದೆ ಮೆಯ್ಪಂದನೇಕೆ ತಡೆಗುಮೊ ಭವ್ಯಂ ॥ ೪೬ ॥

ವ|| ಅನಂತರಂ—

ಕಂ|| ಅದಿರದೆ ಮೋಹವಿರೋಧಿಯ
ಪುದಿದೊದವಿದ ಬಳ್ಳಿವಳ್ಳಿಯಂ ಪಱಿದು ಮನೋ
ಮುದದಿಂ ಸ್ವಯಂಪ್ರಭಾದೇ
ವಿ ದೀಕ್ಷೆಗೊಂಡಳ್ ಕವರ್ತೆ[1]ಗೊ[ಳ್ದ][1]ವೊಲಱಿವಂ ॥ ೪೭ ॥

ವ|| ಅಂತಾಗಳಾಶಾಂಬರ ರಾಜಹಂಸನುಂ ಶ್ರೀವಿಜಯನುಂ ಶ್ರಾವಕವ್ರತಪೂತಾಂ[2]ತರ[2]ಂಗನನಂಗ ವೈರಿ ಪಾದಪಯೋಜಂಗಳ್ಗೆಱಗಿ ಪೋಗಿ ರಥನೂಪುರಚಕ್ರವಾಳದೊಳಂ ಪೌದನಪುರದೊಳಂ ತತ್ತ್ವಭಾವಾನ್ವಿತ ದೇಹಾಂತರಂಗರ್ ಸುಖವಿರೆ—

ವ|| ಹೀಗೆ ಹಲವಾರು ವರ್ಷ ತಪಮಾಡಿ ನಿದಾನಪೂರ್ವಕವಾಗಿ ಸತ್ತು, ಅಶನಿಘೋಷನಾಗಿ ಹುಟ್ಟಿದನು. ಹಿಂದೆ ಸತ್ಯಭಾಮೆಯಾಗಿದ್ದ ಸುತಾರೆಯನ್ನು ಕಂಡಾಗ ತಾನು ಹಿಂದಣ ಜನ್ಮದಲ್ಲಿ—

೪೫. ಅನುಭವಿಸಲಾಗದಿದ್ದ ಸುಖವನ್ನು ಆಕೆಯಿಂದ ಈಗ ಪಡೆಯಬೇಕೆಂಬ ಉದ್ವೇಗದಿಂದ ಅವಳನ್ನು ಅಪಹರಿಸಿದನು. ನಿನ್ನೊಡನೆ ಕಾಳಗಮಾಡಲು ಅಸಮರ್ಥನಾಗಿ ಓಡಿಬಂದನು. ಇದು ಆತನ ಕರ್ಮಫಲ."

ವ|| ಹೀಗೆಂದು ವಿಜಯ ಕೇವಲಿಗಳು ಐವರ ಭವಾವಳಿಯನ್ನೂ ಸುತಾರೆಯ ಅಪಹಾರದ ಹಿನ್ನೆಲೆಯನ್ನೂ ವಿವರವಾಗಿ ತಿಳಿಸಿ ಹೇಳಲಾಗಿ, ಅಶನಿಘೋಷನು ಅಲ್ಲಿಯೇ—

೪೬. ಕೊಳೆಯಾದ ಬಟ್ಟೆಯನ್ನು ನೀರಲ್ಲಿ ಅಲೆದು ಕಲ್ಲಿಗೆ ಒಗೆದು ಹಸನುಗೊಳಿಸುವಂತೆ, ತನ್ನ ಆತ್ಮಕ್ಕೆ ಅಂಟಿದ ದೋಷವನ್ನು ಕಳೆದುಕೊಳ್ಳಲು ನಿರ್ಧರಿಸಿ ದೀಕ್ಷೆವಹಿಸಿದನು. ಭವ್ಯನಾದವನು ಏಕೆ ತಡಮಾಡುವನು ?

ವ|| ಆ ಬಳಿಕ—

೪೭. ಮೋಹವೆಂಬ ವೈರಿಯೊಡ್ಡಿದ ವಿಶಾಲವಾದ ಜಾಲವನ್ನೆಲ್ಲ ಕತ್ತರಿಸಿಕೊಂಡು ಪ್ರಸನ್ನಚಿತ್ತದಿಂದ ಸ್ವಯಂಪ್ರಭಾದೇವಿಯೂ ಜ್ಞಾನವನ್ನು ಸೂರೆಗೊಳ್ಳುವಂತೆ ದೀಕ್ಷೆಯನ್ನು ಕೈಕೊಂಡಳು.

ವ|| ಜಿನಭಕ್ತನಾದ ಅಮಿತತೇಜನೂ ಶ್ರೀವಿಜಯನೂ ಶ್ರಾವಕವ್ರತಗಳಿಂದ ಪವಿತ್ರಾತ್ಮರಾಗಿ ಆ ಮುನಿಗಳಿಗೆ ನಮಸ್ಕಾರಮಾಡಿ ಹೋಗಿ ರಥನೂಪುರಚಕ್ರವಾಳನಗರದಲ್ಲಿಯೂ ಪೌದನಪುರದಲ್ಲಿಯೂ ತತ್ತ್ವಭಾವನೆಯಿಂದ ಸುಖವಾಗಿದ್ದರು.

ಕಂ॥ ವಂದಾರು ಬಂದ ಫಾಲ್ಗುಣ
ನಂದೀಶ್ವರದೊಳ್ ತ್ರಿಪೃಷ್ಠತನಯಂ ತನುವಂ
ತಂದುಪವಾಸಕ್ಕಾ ನಿಜ
ನಂದನದ ಸಹಸ್ರಕೂಟ ಚೈತ್ಯಾಲಯದೊಳ್ ॥ ೪೮ ॥

ಇರೆ ದೇವಾ¹ಮ¹ರಗುರು ನಾ
ಮರಿರ್ವರಾಕಾಶ ಚಾರಣರ್ ವಂದರ್ಹ
ತ್ಪರಮೇಶ್ವರನಂ ಬಂದಿಸಿ
ನಿರಸ್ತತಮರಾ ಜಿನೇಂದ್ರ ಗೃಹಮಂಟಪದೊಳ್ ॥ ೪೯ ॥

ಚಂ॥ ಇರೆ ಗುರುಭಕ್ತಿಯಿಂ ನೃಪತಿ ಬಂದಿಸಿ ತನ್ಮುನಿಮುಖ್ಯರಂ ಮುನೀ
ಶ್ವರ ಬೆಸಸಿಂ ಮದೀಯ ಜನಕಂಗಿನಿತುಂ ಭರತತ್ರಿಖಂಡದೊಂ
ದರಸಿನ ಚಕ್ರವರ್ತಿಪದದಾದ ನಿಮಿತ್ತಮನಿಂತುಟೆಂದು ವಿ
ಸ್ತರವಿಧಿಯಿಂದಮಂದು ಬೆಸಕೊಳ್ವುದುಮಗ್ರಮುನೀಂದ್ರನಟ್ಟಿಯಿಂ ॥ ೫೦ ॥

ವ॥ ಇಂತೆಂದು ಬೆಸಸಿದರೀಗಳ್ ಪೂರ್ವವಿದೇಹದೊಳ್ ಶ್ರೇಯಾಂಸರೆಂಬ ತೀರ್ಥಕರ ಪರಮದೇವರ ಗಣಧರದೇವರ್ ಭರತಕ್ಷೇತ್ರದ ತ್ರಿಷಷ್ಠಿ ಶಲಾಕಾಪುರುಷ ಪುರಾಣಪ್ರಸ್ತಾವದೊಳ್ ಬಂದ ಮೊದಲರ್ಧಚಕ್ರವರ್ತಿಯಪ್ಪ ತ್ರಿಪೃಷ್ಠನ ಕಥೆಯಂ ಪೇಟ್ ಕೇಳ್ದಿವ ದೆಂತೆಂದೊಡೆ ಈ ಜಂಬೂದ್ವೀಪದ ಭರತಕ್ಷೇತ್ರದ ಮಗಧವಿಷಯದ ರಾಜಗೃಹಮನಾಳ್ವ ವಿಶ್ವಭೂತಿಗಂ ಜೈನೆಯೆಂಬರಸಿಗಂ ವಿಶ್ವನಂದಿ ಯೆಂಬೊಂ ಮಗನಾದೊಂ ವಿಶ್ವಭೂತಿಯ ತಮ್ಮನಪ್ಪ ವಿಶಾಖಭೂತಿಗಂ ಸುಲಕ್ಷಣೆಗಂ ವಿಶಾಖನಂದಿಯೆಂಬೊಂ ಮಗನಾದೊಂ ಮತ್ತಾ ವಿಶ್ವಭೂತಿ ವಿಶ್ವಂಭರಾ ಭಾರಮಂ—

---

೪೮. ಪುಣ್ಯಕರವಾದ ಫಾಲ್ಗುಣ ನಂದೀಶ್ವರದಲ್ಲಿ ತ್ರಿಪೃಷ್ಠನ ಮಗನಾದ ಶ್ರೀವಿಜಯನು ಉಪವಾಸವ್ರತವನ್ನು ಚರಿಸುತ್ತ ತನ್ನ ತೋಟದಲ್ಲಿದ್ದ ಸಹಸ್ರಕೂಟ ಬಸದಿಯಲ್ಲಿ

೪೯. ಇರಲಾಗಿ, ದೇವಗುರು ಮತ್ತು ಅಮರಗುರು ಎಂಬ ಇಬ್ಬರು ಚಾರಣಮುನಿಗಳು ಅಲ್ಲಿಗೆ ಬಂದು ಅರ್ಹಂತನನ್ನು ವಂದಿಸಿದರು. ಅಜ್ಞಾನವನ್ನೆಲ್ಲ ಪರಿಹರಿಸಿದ ಆ ಮಹಿಮರು ಆ ದೇವಾಲಯದಲ್ಲಿ ಮಂಟಪದಲ್ಲಿ

೫೦. ಕುಳಿತಿರಲಾಗಿ ಅರಸನು ಅವರಿಗೆ ನಮಸ್ಕಾರಮಾಡಿ, "ಮುನೀಂದ್ರರೇ, ನಮ್ಮ ತಂದೆಗೆ ಭರತತ್ರಿಖಂಡದ ಚಕ್ರವರ್ತಿತ್ವವು ಹೇಗೆ ಒದಗಿತು ? (ಆತನ ಪೂರ್ವ ಭವಾವಳಿಯೇನು ?) ಎಂಬುದನ್ನು ನನಗೆ ದಯವಿಟ್ಟು ತಿಳಿಸಿ" ಎಂದು ಬಿನ್ನವಿಸಿದನು. ಆ ಮುನಿಗಳಲ್ಲಿ ಹಿರಿಯನಾದವನು ಪ್ರೇಮದಿಂದ—

ವ॥ ಹೀಗೆಂದು ಹೇಳಿದನು: -"ಪೂರ್ವ ವಿದೇಹದಲ್ಲಿ ಶ್ರೇಯಾಂಸರೆಂಬ ತೀರ್ಥಕರ ಪರಮದೇವರ ಗಣಧರರು ಭರತಕ್ಷೇತ್ರದ ತ್ರಿಷಷ್ಟಿಶಲಾಕಾ ಪುರುಷರ ಪುರಾಣವನ್ನು ಹೇಳುತ್ತ ಮೊದಲನೆಯ ಅರ್ಧಚಕ್ರವರ್ತಿಯಾದ ತ್ರಿಪೃಷ್ಠನ ಕಥೆಯನ್ನು ತಿಳಿಸಿದರು. ಅದು ಹೇಗೆಂದರೆ—ಈ ಜಂಬೂದ್ವೀಪದಲ್ಲಿ ಭರತಕ್ಷೇತ್ರದ ಮಗಧರಾಜ್ಯದ ರಾಜಗೃಹಕ್ಕೆ ವಿಶ್ವಭೂತಿಯೆಂಬವನು ಅರಸನಾಗಿದ್ದನು. ಆತನಿಗೆ ಜೈನೆಯೆಂಬ ಅರಸಿಯಲ್ಲಿ ವಿಶ್ವನಂದಿಯೆಂಬ ಮಗನಾದನು. ವಿಶ್ವಭೂತಿಯ ತಮ್ಮನಾದ ವಿಶಾಖಭೂತಿಗೂ ಆತನ ಹೆಂಡತಿಯಾದ ಸುಲಕ್ಷಣೆಗೂ ವಿಶಾಖನಂದಿಯೆಂಬ ಮಗನು ಹುಟ್ಟಿದನು. ವಿಶ್ವಭೂತಿರಾಜನು—

---

1. ಸು (ಮ)

ಕಂ॥ ಅಂಗದಮಂ ವಿರಚನೆಯಾ
ದುಂಗುರಮಂ ತಾಳ್ದುವಂದದಿಂ ತಾಳ್ದಿದನು
ತ್ತುಂಗಭುಜಂ ದಕ್ಷಿಣಭುಜ
ದಿಂ ಗೆಲ್ದು ವಿರೋಧಿ ಮಂಡಲಾಧೀಶ್ವರರಂ ॥ ೫೧ ॥

ವ॥ ಆತಂ ತನಗೆ ಸಂಸಾರ ನಿರ್ವೇಗಮುಂ ಪುಟ್ಟೆ ಪಿರಿಯ ಮಗಂ ವಿಶ್ವನಂದಿಯಿರ್ದಂತೆ ತಮ್ಮನೊಳಾದ ಸ್ನೇಹದಿಂ ವಿಶಾಖಭೂತಿಯುಮನಧಿರಾಜ ಪದವಿಯೊಳ್ ವಿಶ್ವನಂದಿಯಂ ಯುವರಾಜಪದವಿಯೊಳ್ ನಿಯೋಜಿಸಿ ಶ್ರೀಧರಗುರುಗೆ ಶಿಷ್ಯನಾಗಿ—

ಕಂ॥ ದ್ವಾದಶ ರಾಜಕಮಂ ಗೆ
ಲ್ದಾದುನ್ನತಿ ಪೆರ್ಚೆ ಕರ್ಮರಿಪು ವಿಜಯದೊಳು
ಸಾದಿತ ಕೇವಳಲೋಚನ
ನಾ ದೇವಂ ಮೋಕ್ಷಲಕ್ಷ್ಮಿಗಧಿಪತಿಯಾದಂ ॥ ೫೨ ॥

ವ॥ ಇತ್ತ ವಿಶಾಖಭೂತಿಯರಸುಗೆಯ್ಯುತ್ತಿರೆ ಪೊಱಲ ಪೊಱ[1]ವಳಯದೊಳ್[1]—

ಚಂ॥ ಅಸುಗೆಯ ನಾಗಕೇಸರದ ಬಲ್ಮುಗುಳಂ ಬಿ[2][ರಿ][2]ಯೊತ್ತಿ ತುಂಬಿ ಚುಂ
ಬಿಸೆ ರಜದಿಂ ತೊವರ್ಚಿದ ಕೊರಳ್ ಸವಿಯಂ ತರೆ ಪಾಡಿ ಕೂಡಿ[3]ರಂ[3]
ಜಿಸುವುವು ಪೊ[4]ಕ್ಕು[4] ನಿಸ್ಪೃಹ[5]ನ[5]ನೆಂಬ ಪೊಗೞ್ತೆಗೆ ವಿಶ್ವನಂದಿ ಮಾ
ಡಿಸಿದನದೊಂದು ನಂದನಮನಂಗಜ ಮಂಗಳಗೇಯ ಶೋಭೆಯಂ ॥ ೫೩ ॥

ವ॥ ಅಂತು ವಿಧೃತ ಭದ್ರಶಾಳ [6]ವಿಶಾಳ[6] ವಿಳಾಸಮನುದ್ಯಾನಮಂ ಸಮೆಯಿಸಿ ವಿಶ್ವನಂದಿ ವನಕೇಳೀ ಲೀಲೆಯಿನಿರ್ಪುದುಂ ವಿಶಾಖಭೂತಿ ಮಂತ್ರಾಲೋಚನೆಯೊಳ್ ಯುವರಾಜಂಗೆ ಬೞಿಯನಟ್ಟಿ—

---

೫೧. ಶತ್ರು ಮಂಡಲಗಳ ಅರಸರನ್ನು ತನ್ನ ತೋಳ್ಬಲದಿಂದ ಗೆದ್ದು ಭೂಮಿಯ ಭಾರವನ್ನು (ರಾಜ್ಯಭಾರವನ್ನು) ತೋಳ್ಬಳೆಯನ್ನೊ ಅಥವಾ ಉಂಗುರವನ್ನೊ ಧರಿಸುವಂತೆ ನಿರಾಯಾಸವಾಗಿ ಧರಿಸಿದ್ದನು.

ವ॥ ಆತನಿಗೆ ವೈರಾಗ್ಯವುಂಟಾಗಲಾಗಿ ತನ್ನ ಹಿರಿಯ ಮಗನಾದ ವಿಶ್ವನಂದಿ ಪಟ್ಟಕ್ಕೆ ಹಕ್ಕುದಾರನಾಗಿದ್ದರೂ ತಮ್ಮನ ಮೇಲಿನ ಪ್ರೀತಿಯ ಮೂಲಕ ವಿಶ್ವಭೂತಿಗೇ ರಾಜ್ಯಪದವನ್ನೊಪ್ಪಿಸಿ, ವಿಶ್ವನಂದಿಗೆ ಯುವರಾಜಪದವಿಯನ್ನಿತ್ತು, ತಾನು ಶ್ರೀಧರಗುರುಗಳಿಗೆ ಶಿಷ್ಯನಾದನು.

೫೨. ದ್ವಾದಶ ರಾಜಮಂಡಲಿಗಳನ್ನು ಗೆದ್ದ ಪರಾಕ್ರಮಕ್ಕಿಂತ ಹೆಚ್ಚಿನ ಕೆಚ್ಚಿನಿಂದ ಅಷ್ಟಕರ್ಮಗಳೆಂಬ ವೈರಿಗಳನ್ನು ಗೆದ್ದು, ಕೇವಲ ಜ್ಞಾನವನ್ನು ಸಂಪಾದಿಸಿ ಮೋಕ್ಷಪದವಿಯನ್ನು ಪಡೆದನು.

ವ॥ ಇತ್ತ ವಿಶಾಖಭೂತಿಯು ರಾಜ್ಯವಾಳುತ್ತಿರಲು ಪಟ್ಟಣದ ಹೊರವಲಯದಲ್ಲಿ—

೫೩. ನಿಸ್ಪೃಹನೆಂದು ಹೆಸರಾದ ವಿಶ್ವನಂದಿಯು ಸುಂದರವಾದೊಂದು ಉದ್ಯಾನವನ್ನು ನಿರ್ಮಿಸಿದನು. ಅದರಲ್ಲಿ ಅಶೋಕವೃಕ್ಷಗಳೂ ನಾಗಕೇಸರ ತರುಗಳೂ ಹಬ್ಬಿ, ಅವುಗಳ ಹೂಗಳ ಪರಾಗವನ್ನು ಸೇವಿಸಿದ ದುಂಬಿಗಳು ಆ ರಸದ ಒಗರಿನಿಂದ ಸವಿಗೊಂಡು ಗುಂಪುಗುಂಪಾಗಿ ಕೂಡಿ, ಮನೋಹರವಾಗಿ ಮನ್ಮಥನ ಮಂಗಳ ಗೀತವನ್ನೆ ಹಾಡುವವೊ ಎಂಬಂತೆ ಧ್ವನಿಗೈಯುತ್ತಿದ್ದುವು.

ವ॥ ಹೀಗೆ ವಿಶಾಲವೂ ಸುಂದರವೂ ಆದ ನಂದನವನ್ನು ರಚಿಸಿ ವಿಶ್ವನಂದಿಯು ಅದರಲ್ಲಿ ಆಟವಾಡುತ್ತ ಇರುತ್ತಿರಲು, ವಿಶಾಖಭೂತಿರಾಜನು ಒಂದು ದಿನ ಮಂತ್ರಿಗಳೊಡನೆ ಆಲೋಚನೆಮಾಡಿ ಯುವರಾಜನಾದ ಈತನನ್ನು ಕರೆಯಿಸಿಕೊಂಡು—

---

1. ಪೂಱಲೊಳ್ (ಅ) 2. ಱಿಂ (ಮ) 3. ಯುಂ (ಮ) 4. ಕ್ಕ (ಮ) 5. ತೆ (ಅ) 6. × (ಅ)

ಮ॥ ಪಗೆವರ್ ಪೂರ್ವಿನ ರೋಮದಂತಿರೆ ಮಿಗರ್ ಮರ್ಯಾದೆಯಂ ವಿಶ್ವಭೂ
ತಿಗೆ ಚಂದ್ರೋದಯದಬ್ಧಿಯಂತೆ ನಮಗಿಂ ಮರ್ಯಾದೆಯಂ ಮೆಲ್ಲ ಮೆ
ಲ್ಲಗೆ ದಾಂಟಲ್ ಬಗೆದಪ್ಪರೀಪದವಿಯೊಳ್ ನೀಮಿರ್ಪುದಾಂ ಪೋಗಿ ಕೂ
ರಗೆ ವಿಂಡಂ ಗಜವೈರಿ ಪೊಕ್ಕವೊಲರಿ ಪ್ರಧ್ವಂಸನಂ ಮಾಡುವೆಂ ॥ ೫೪ ॥

ವ॥ ಎನೆ ವಿಶ್ವನಂದಿ ವಿನಯವಿನಮಿತ ಕಿರೀಟನೀತೆಂದಂ—

ಮ॥ ಕೃಪೆಯಿಂದಂ ಬೆಸಸಲ್ಕದಾವುದೆಡೆ ಪುಟ್ಟುಳ್ಳಂತೆ ಕಯ್ ಬೇಗುಮೇ
ನೃಪ ಮತ್ತಾನಿರೆ ದೇವರೇವರಿನಿತೇನೀಪೊಟ್ಟು ಪೊಟ್ಪಾಗೆ ಪೋ
ಗಿ ಪರಕ್ಷ್ಮಾಪರನಿಕ್ಕಿ ಕೆಯ್ಯ ಬೆಸಗೊಳ್ವಾರಂಭಿಗಂಬೋಲ್ ಪಯೋ
ಧಿಪರೀತಾವನಿಯಂ ನಿಮಿರ್ಚೆ ನಿನಗಾಂ ನಿಷ್ಕಂಟಕಂ ಮಾಡುವೆಂ ॥ ೫೫ ॥

ವ॥ ಎಂದು ಮಱುಮಾತಿಂಗೆಡೆಯಿಲ್ಲದಂತು ನುಡಿದು ಚತುರಂಗಬಲಸಮೇತಂ ವಿಶ್ವನಂದಿ ಪೋದನನ್ನೆಗಮಿತ್ತಲ್—

ಕಂ॥ ಪರಚಕ್ರಮೆ ಕಯ್ಗೆವರಲ್
ಕರಚಕ್ರಂ ಪೂಣ್ದು ಪೋದ ಬೇಗದೊಳೆ ಪರಂ
ಪರವೋದನಾತನಿನ್ನೆಂ
ದಿರದಾನಂದಿತ ವಿಶಾಖನಂದಿ ದುರಾತ್ಮಂ ॥ ೫೬ ॥

ಆತನ ವನಪಾಲಕರಂ
ಘಾತಿಸಿ ಕೆಯ್ಕೊಂಡು ಬನಮನಿರೆಯಿರೆ ಶೌರ್ಯೋ
ಪೇತಂ ರಿಪುನೃಪರಂ ಗೆ
ಲ್ದಾ ತಕ್ಕಿನ ವಿಶ್ವನಂದಿ ತಡೆಯದೆ ಬಂದಂ ॥ ೫೭ ॥

---

೫೪ "ವಿಶ್ವಭೂತಿ ರಾಜನಾಗಿದ್ದಾಗ ವೈರಿಗಳು ಹುಬ್ಬಿನ ಕೂದಲಿನಂತೆ ಮರ್ಯಾದೆಯನ್ನು ಮೀರುತ್ತಿರಲಿಲ್ಲ. ಈಗ ನಮ್ಮ ಅಧಿಕಾರವನ್ನು ಕಂಡು ಚಂದ್ರೋದಯವನ್ನು ಕಂಡ ಕಡಲಿನಂತೆ ಮೆಲ್ಲಮೆಲ್ಲಗೆ ಮೇರೆ ಮೀರಲು ಹವಣಿಸುತ್ತಿದ್ದಾರೆ. ಆದುದರಿಂದ ಈಗ ನೀನು ರಾಜಪದವಿಯಲ್ಲಿ ನಿಂತುಕೊ. ನಾನು ಹೋಗಿ ಕೂರಗೆಗಳ ಹಿಂಡನ್ನು ಸಿಂಹ ಹೊಕ್ಕಹಾಗೆ ವೈರಿಗಳನ್ನು ಧ್ವಂಸಮಾಡಿ ಬರುವೆನು."

ವ॥ ಎಂದು ನುಡಿದನು. ವಿಶ್ವನಂದಿಯು ವಿನಯದಿಂದ ತಲೆಬಾಗಿ ಹೀಗೆಂದನು :

೫೫. "ದಯವಿಟ್ಟು ನನಗೆ ಅಪ್ಪಣೆಮಾಡಿ. ಅದು ಯಾವ ನಿಟ್ಟು? ಹೇಳಿ. ಹುಟ್ಟು ಇರುವಾಗ ಕೈಸುಟ್ಟುಕೊಳ್ಳುವುದೆ? ದೇವ, ನಾನು ಇರುವಾಗ ನೀವೇಕೆ ಹೊರಡಬೇಕು? ಅಂತಹದೇನು? ಈಗಿಂದೀಗಲೆ ಹೋಗಿ ಶತ್ರುರಾಜರನ್ನು ಮೆಟ್ಟಿ, ಭೂಮಿಯನ್ನು ಸಾಗುಮಾಡುವ ಒಕ್ಕಲಿಗನು ಅದನ್ನು 'ನಿಷ್ಕಂಟಕ' (ಮುಳ್ಳುಪೊದೆ ಮುಂತಾದುವು ಇಲ್ಲದಂತೆ) ಮಾಡುವಂತೆ ಸಮುದ್ರಾವಧಿಯಾದ ಭೂಮಿಯನ್ನು ನಿಮಗೆ 'ನಿಷ್ಕಂಟಕ' (ನಿರುಪದ್ರವವಾಗುವಂತೆ) ಮಾಡುವೆನು."

ವ॥ ಹೀಗೆಂದು ಮರುಮಾತಿಗೆ ಅವಕಾಶವಿಲ್ಲದಂತೆ ನುಡಿದು, ಚತುರಂಗ ಸೈನ್ಯದೊಡನೆ ವಿಶ್ವನಂದಿಯು ಹೊರಟುಹೋದನು. ಇತ್ತ—

೫೬. ಶತ್ರುಸೈನ್ಯವನ್ನು ಸೋಲಿಸಲೆಂದು ನಿರ್ಧಾರಮಾಡಿ ಆ ವೀರನು ಹಾಗೆ ಹೋದುದರಿಂದ ದುಷ್ಟನಾದ ವಿಶಾಖನಂದಿಗೆ ತುಂಬ ಸಂತೋಷವಾಯಿತು.

೫೭. ಆತನು ವಿಶ್ವನಂದಿಯ ವನಪಾಲಕರನ್ನು ಹೊಡೆದಟ್ಟಿ ಉದ್ಯಾನವನ್ನು ವಶಪಡಿಸಿಕೊಂಡನು. ಹೀಗೆ ಅವನು ಸಂತಸಪಡುತ್ತಿರುವಾಗಲೆ ಶೂರನಾದ ವಿಶ್ವನಂದಿಯು ಶತ್ರುರಾಜರನ್ನು ಗೆದ್ದು ವೇಗವಾಗಿ ಮರಳಿ ಬಂದನು.

ವ॥ ಕಾಪಿನವರನಿಱಿದು ಬನಮಂ ಕೆಯ್ಕೊಂಡಿರ್ದ ವಿಶಾಖನಂದಿಯನೋಡಿಸಿ ತನ್ನ ಬನಮಂ ಕೆಯ್ಕೊಂಡುದನರಸಂ ಕೇಳ್ದು ವಿಶ್ವನಂದಿಗೆ ಬೞಿಯಟ್ಟಿ ಬರಿಸಿ ವಿಶಾಖನಂದಿಯಪ್ಪೊಡೆ ಮರುಳ್ ಎಮಗಱಿಪದೆ ನಿನ್ನ ಪರೋಕ್ಷದೊಳಿದಂ ನೆಗೞ್ದನಾದೊಡಮಾತಂ [1]ಗೊರ್ಮೆಗೆ[1] ಕ್ಷಮಿಯಿಸ[2]ವೇ[2]ೞ್ಪುದೆಂದು ವಿಶಾಖನಂದಿಯಂ ತಂದು ವಿಶ್ವನಂದಿಯ ಕಾಲಂ ಪಿಡಿಯಿಸಿ ಮುನ್ನಿನಂದದೊಳ್ ಸುಖಮರಸುಗೆಯ್ಯುತ್ತುಂ ಪಲಕಾಲಂ ಸಲೆ ಸಂಸಾರ ನಿರ್ವೇಗಂ ದೊರೆಕೊಳೆ ವಿಶಾಖಭೂತಿ ವಿಶ್ವನಂದಿಯಂ —

ಕಂ॥ ಮೇದಿನಿಯಂ ಕೆಯ್ಕೊಳ್ ಪದ
ನಾದುದು ಜಿನದೀಕ್ಷೆಗೆನಗೆ ಮಗನೇ ಎನೆ ನಿಂ
ಮಾದುದನಪ್ಪೆಂ ದುರ್ಜನ
ನಾದುದನಪ್ಪಂತು ಕಲ್ತೆನೇ ಜಿನಮತಮಂ ॥ ೫೮ ॥

ವ॥ ಎಂದು ವಿಶಾಖಭೂತಿಯೊಡನೆ ವಿಶ್ವನಂದಿಯುಂ ದಿಗಂಬರದೀಕ್ಷೆಯಂ ಕೆಯ್ಕೊಂಡು ವಿಶಾಖನಂದಿಯು[3]ಮ[3]ಧಿರಾಜ್ಯಪದದೊಳ್ ನಿಂದು ರಾಜ್ಯಂಗೆಯ್ಯೆ—

ಮ॥ ಒಱೆಯಿಂದುರ್ಚಿದ ಬಾಳ್ವೊಲಾಗೆ ತಪದೊಳ್ ನಿಂದಿರ್ವರೇಱಿಲ್ಲದಿ
ರ್ದೊಱೆಯಂ ಪೋಲೆ ವಿಶಾಖನಂದಿ ರಿಪುಭೂಪರ್ ಪಕ್ಕುವೆತ್ತೆತ್ತಿ ತ
ಟ್ಟಿಱಿದೆತ್ತಂ ಸೆಱೆಗೆಯ್ದು ಕೊಂಡು ನೆಲನಂ ತಾವಾಳ್ದು ಮತ್ತಿತ್ತರಂ
ದುಱದಾತಂಗಿರದೋಲೆಯೊಯ್ವ ಬೆಸನಂ ಭೀರುತ್ವಮೇ ಗೆಯ್ಯದೋ ॥ ೫೯ ॥

ವ॥ ಇತ್ತ ವಿಶಾಖಭೂತಿಯುಂ ಭೂರಿ ತಪೋಭಾರಮಂ ನಿರ್ವಹಿಸಿ ಶತಾರಕಲ್ಪದೊಳ್ ಸಾಮಾನಿಕ ದೇವನಾದೊಂ ವಿಶ್ವನಂದಿಯುಂ ಗ್ರಾಮ ನಗರ [4]ಖೇಡ ಖರ್ವಡ[4] ತೀರ್ಥಪುಣ್ಯಾರಣ್ಯಂಗಳಂ ತೊೞಲ್ದು ವಿಹಾರಿಸುತ್ತುಮುತ್ತರ ಮಧುರೆಗೆ ವಂದು ಮಾಸೋಪವಾಸದ ಪಾರಣೆಯೊಳ್ ಚರಿಗೆವ್ರುಗೆ ಕಟ್ಟಿದಿರೊಳ್ ನಿಟ್ಟಾಲಿಯಾಗಿ ಕೆಂ[5]ಗಣ್ಮಿ[5]ಸಗಿ ಬಂದೊಂದೀಂದಪಸು ತನ್ನುನಿಪತಿಯನಿಱಿವುದುಮುಬೞಿ ಬಸಿದು

ವ॥ ಕೂಡಲೆ ವಿಶಾಖನಂದಿಯನ್ನು ತೊಲಗಿಸಿ ತನ್ನ ಉದ್ಯಾನವನ್ನು ಮರಳಿ ವಶಪಡಿಸಿಕೊಂಡನು. ಈ ಸಂಗತಿಯನ್ನು ಕೇಳಿ ಅರಸನು ವಿಶ್ವನಂದಿಯನ್ನು ಕರೆಯಿಸಿಕೊಂಡು, "ವಿಶಾಖನಂದಿಯೊಬ್ಬ ಮೂರ್ಖ; ನೀನಿಲ್ಲಿ ಇಲ್ಲದಾಗ ನಮಗೆ ತಿಳಿಸದೆಯೆ ಈ ಅಕಾರ್ಯವನ್ನು ಮಾಡಿದನು. ಆತನು ತಪ್ಪುಮಾಡಿದ್ದರೂ ಒಂದು ಬಾರಿ ಆತನನ್ನು ಕ್ಷಮಿಸಿಬಿಡು" ಎಂದು ನುಡಿದು ವಿಶಾಖನಂದಿಯನ್ನು ಕರೆತಂದು ವಿಶ್ವನಂದಿಯ ಕಾಲಿಗೆ ಎರಗಿಸಿದನು. (ಹೀಗೆ ಮನಸ್ತಾಪವನ್ನು ನಿವಾರಿಸಿ) ಎಂದಿನಂತೆ ಸುಖವಾಗಿ ರಾಜ್ಯವಾಳುತ್ತ ಅನೇಕ ವರ್ಷಗಳು ಕಳೆದಮೇಲೆ ಆತನಿಗೆ ವೈರಾಗ್ಯವುಂಟಾಯಿತು. ಆಗ ವಿಶಾಖಭೂತಿಯು ವಿಶ್ವನಂದಿಗೆ ಹೀಗೆಂದನು:

೫೮. "ಮಗನೇ, ಜಿನದೀಕ್ಷೆಗೆ ನಾನು ಹೊರಡಬೇಕು. ಇನ್ನು ನೀನು ರಾಜ್ಯಭಾರವನ್ನು ವಹಿಸಿಕೊ." ಹೀಗೆನ್ನುತ್ತಲೆ ವಿಶ್ವನಂದಿಯು "ನೀವು ಪಡೆಯುವ ಸ್ಥಿತಿಯನ್ನೆ ನಾನೂ ಪಡೆಯುವೆನು. ಜಿನಮತವನ್ನು ಕುರಿತು ನಾನು ದುರ್ಜನನಾಗಬೇಕೆ?" ಎಂದನು.

ವ॥ ಹೀಗೆ ವಿಶಾಖಭೂತಿಯೊಡನೆ ವಿಶ್ವನಂದಿಯೂ ದಿಗಂಬರ ವ್ರತವನ್ನು ಧರಿಸಿದನು. ವಿಶಾಖನಂದಿಯು ಪಟ್ಟಕ್ಕೆ ಬಂದು ರಾಜ್ಯವಾಳತೊಡಗಿದನು.

೫೯. ಒರೆಯಿಂದ ಹಿರಿದ ಖಡ್ಗದಂತೆ ಅವರಿಬ್ಬರೂ ತಪಶ್ಚರ್ಯದಲ್ಲಿ ಬೆಳಗಿದರು. ಖಡ್ಗವಿಲ್ಲದ ಬರಿ ಒರೆಯಂತಿರುವ ವಿಶಾಖನಂದಿಯನ್ನು ಕಂಡು ಶತ್ರುರಾಜರು ಸಮಯನೋಡಿ, ದಾಳಿಯಿಟ್ಟು ಆತನನ್ನು ಸೆರೆಹಿಡಿದು, ಆತನ ರಾಜ್ಯವನ್ನೆಲ್ಲ ತಮ್ಮ ಅಧೀನಕ್ಕೆ ತೆಗೆದುಕೊಂಡರು. ಆಮೇಲೆ ವಿಶಾಖನಂದಿಯನ್ನು ಓಲೆಕಾರನ ಕೆಲಸಕ್ಕೆ ನೇಮಿಸಿದರು. ಹೇಡಿತನದಿಂದ ಏನೇನಾಗದು?

ವ॥ ಇತ್ತ ವಿಶಾಖಭೂತಿಯೂ ಮಹಾತಪಸ್ಸನ್ನು ಆಚರಿಸಿ ಶತಾರಕಲ್ಪದಲ್ಲಿ ಸಾಮಾನಿಕ ದೇವನಾದನು. (ಅಸಗನ ಕಾವ್ಯದಲ್ಲಿ "ಮಹಾಶುಕ್ರಕಲ್ಪ"ವೆಂದಿದೆ.) ವಿಶ್ವನಂದಿಯು ಗ್ರಾಮ, ನಗರ, ಖೇಡ, ಖರ್ವಡ, ತೀರ್ಥ, ಅರಣ್ಯ ಮೊದಲಾದ ಪುಣ್ಯಸ್ಥಳಗಳಲ್ಲಿ ವಿಹಾರಮಾಡುತ್ತ ಉತ್ತರ ಮಧುರೆಗೆ ಬಂದನು. ಅಲ್ಲಿ ಮಾಸೋಪವಾಸದ ನಂತರ

---

1. ಮೊರ್ಮೆಗೆ (ಅ) 2. ಲ್ವೇ (ಅ) 3. ಮಾ (ಮ) 4. ಪುಣ್ಯ (ಅ) 5. ಗೋಲ್ಮ (ಅ)

ಪೊಸಯಿಸಿದನ್ನವಪ್ಪ ಕೈಗೋಡುಗಳುರ್ಚೆ ವೀಥೀಮಧ್ಯದೊಳ್ ಬಿೞ್ದಿರ್ದ ವಿಶ್ವನಂದಿ ಮುನಿಯಂ ಪೊೞ್ತ[1]ನೆಡೆಯಿಟ್ಟೋಲೆಯುಡಕುವ ವಿಶಾಖನಂದಿ ಗಣಿಕಾವಾಟದೊಳ್ ಸುೞಿಯುತ್ತಿರ್ದು ಪರಿತಂದು ನೋಡಿ ಕಂಡಱಿದು—

ಮ॥ ಮುನಿದೆಮ್ಮಂ ಕೊಲಲೊಡ್ಡಿದಂದಿನ ಶಿಲಾಸ್ತಂಭಕ್ಕೆ ಕೆಯ್ನೀಡಿದಂ
ದಿನ ಕಿೞ್ತಂದಿನ ಕಾದಿದಂದಿನ ಕಪಿತ್ಥೋರ್ವೀಜದಿಂ ಮೋದಿದಂ
ದಿನ ಗೆಲ್ದಂದಿನ ಗೆಲ್ದು ಬಂದು ಬನಮಂ ಕೊಂಡಂದಿನಾ ನಿನ್ನ ಗ
ರ್ಜನೆಯುಂ ಬೀರಮುಮೀಗಳಿಂತು ಪುಡಿಯೊಳ್ ಚೀಃಸೀ ಪೊರಳ್ದಿರ್ಪುದೇ ॥ ೬೦ ॥

ವ॥ ಎಂದು ತನ್ನ[2]ನೇಱಿಗೊಂಡ ಮುಳಿಸಿನೊಳ್ ನೆಱನಲ್ಲದುದಂ ನೆಱಂ ಮಾಡಿ ನೆಱನೆತ್ತೆ—

ಕಂ॥ ಕಱಿಯೋರ್ಪೆತ್ತಿಭ ವೈರಿಯ
ನೆಱಕೆ ಶಿರಂ ಮಾಟ್ಪವೋಲವಂ ಮುಳಿಯಿಸೆ ಕೆ
ಯ್ಗಱಿಯೆ ಮುನಿಪತಿಯ ಕಣ್ಗಳೊ
ಳಿಱಿವೋದುವು ತೀವಿ ಕೋಪರಸದ ಪೊನಲ್ಗಳ್ ॥ ೬೧ ॥

ವ॥ ಅಂತುತ್ಕಂಠನಾಗಿರ್ದುಮಿನ್ನೆಲ್ಲಿ ಪುಟ್ಟಿಯುಂ ನಿನ್ನಂ ಕೊಲ್ಲದಿರೆನೆಂದು ರೌದ್ರಪರಿಣಾಮದಿಂ ವಿಗತಜೀವಿತನಾಗಿ ವಿಶಾಖಭೂತಿಯ ಪುಟ್ಟಿದಾ ಶತಾರಕಲ್ಪದೊಳ್ ಸಾಮಾನಿಕದೇವನಾಗಿ ಪುಟ್ಟಿ ತಮ್ಮ ಕಿಱಿಯಮ್ಮನುಂ ತಾನುಂ—

ಪಾರಣೆಗೆಂದು ಚರಿಗೆ ಹೊರಟಾಗ ಆತನ ಎದುರಿಗೇ ಕೆಂಗಣ್ಣುಗಳಿಂದ ಕೆಕ್ಕರಿಸಿ ನೋಡುತ್ತ ಬಂದ ಒಂದು ಹಸು ಮಸೆದು ಸಾಣೆಯಿಟ್ಟಂತಿದ್ದ ತನ್ನ ಕೋಡುಗಳಿಂದ ಆತನನ್ನು ಇರಿಯಿತು. ಓಲೆಯ ಚೀಲವನ್ನು ಹೊತ್ತುಕೊಂಡು ಸೂಳೆಗೇರಿಯಲ್ಲಿ ಅಲೆಯುತ್ತಿದ್ದ ವಿಶಾಖನಂದಿಯು ಓಡಿಬಂದು ಬೀದಿಯಲ್ಲಿ ಗಾಯಗೊಂಡು ಬಿದ್ದಿದ್ದ ಮುನಿಯನ್ನು ಕಂಡು, ಗುರುತುಹಿಡಿದು—

೬೦. "ಕೋಪದಿಂದ ನಮ್ಮನ್ನು ಆ ದಿನ ಕೊಲ್ಲುವುದಕ್ಕೆ ಹೊರಟಿದ್ದೆಯಲ್ಲವೆ ? ಕಲ್ಲಿನ ಕಂಬಕ್ಕೆ ಕೈನೀಡಿ, ಅದನ್ನು ಕಿತ್ತು, ಕಾದಾಡಿ, ಬೆಳವಲಮರದಿಂದ ನನ್ನನ್ನು ಸದೆದೆಯಲ್ಲವೆ ? ಹಾಗೆ ನನ್ನನ್ನು ಬಡಿದು ಸೋಲಿಸಿ ಉದ್ಯಾನವನ್ನು ನನ್ನ ಕೈಯಿಂದ ಕಿತ್ತುಕೊಂಡೆಯಲ್ಲವೆ ? ಅಂದಿನ ಆ ನಿನ್ನ ಆರ್ಭಟೆ, ಆ ಶೌರ್ಯ ಈಗ ಏನಾಯಿತು ? ಛೀ ! ಹೀಗೆ ಹುಡಿಯಲ್ಲಿ ಹೊರಳಾಡುವ ಗತಿ ಒದಗಿತೆ ನಿನ್ನ ಶೌರ್ಯಕ್ಕೆ ?"

ವ॥ ಹೀಗೆ ತನ್ನ ಹೊಟ್ಟೆಯೊಳಗಿನ ಕಿಚ್ಚಿನಿಂದ ದೋಷವಲ್ಲದುದನ್ನೂ ದೋಷವೆಂಬಂತೆ ನುಡಿದು ಮೂದಲಿಸಲಾಗಿ—

೬೧. ತೀವ್ರವಾಗಿ ಗಾಯಗೊಂಡು ಬಿದ್ದ ಸಿಂಹವನ್ನು ಕ್ಷುದ್ರಮೃಗವೊಂದು ಬಂದು ಅಪಹಾಸ್ಯಮಾಡಿ ಛೇಡಿಸುವಂತೆ ವಿಶಾಖಭೂತಿಯು ಚುಚ್ಚುಮಾತಿನಿಂದ ಕೆರಳಿಸಲಾಗಿ, ಮುನಿಯ ಕಣ್ಣುಗಳಲ್ಲಿ ಕೋಪ ಹೊನಲಿಟ್ಟು ಹರಿಯಿತು. ("ಎಟಕೆ ಶಿರಂ ಮಾಟ್ಪ" ಎಂಬುದು ಅರ್ಥವಾಗಿಲ್ಲ.)

ವ॥ ಹೀಗೆ ಉದ್ವೇಗಗೊಂಡು "ಇನ್ನು ಎಲ್ಲಿ ಹುಟ್ಟಿಬಂದರೂ ನಿನ್ನನ್ನು ಕೊಲ್ಲದೆ ಬಿಡೆನು" ಎಂದು ರೌದ್ರಧ್ಯಾನದಲ್ಲಿಯೆ ಮರಣಹೊಂದಿ ವಿಶಾಖಭೂತಿಯಿದ್ದ ಶತಾರಕಲ್ಪದಲ್ಲಿಯೆ ಸಾಮಾನಿಕ ದೇವನಾಗಿ ಹುಟ್ಟಿದನು. ತನ್ನ ಚಿಕ್ಕಪ್ಪನೊಡನೆ ಆತನು—

---

1. ಱ್ತ (ಮ) 2. ನೆ (ಮ)

ಮ॥ ವಿತತಾಷ್ಟಾದಶ ಸಾಗರೋಪಮ ನಿಜಾಯುಷ್ಯಾಂತದಿಂದಂ ಪ್ರಜಾ
ಪತಿ ಭೂಚಕ್ರಿಗೆ ಬಂದು ಪುಟ್ಟೆ ಬಲದೇವಂ ವಾಸುದೇವಂ ಜಯಾ
ವತಿಯುಂ ತನ್ಮೃಗಯಾವತೀಲಲನೆಯುಂ ತಾಯ್ಮಕ್ಕಳಾಗಾಳ್ದರು
ನ್ನತಿಯಿಂ ಚಕ್ರಸಮೇತಮಿಾ ಭರತ ಭೂಶ್ರೀಯಂ ಮಹೀವಲ್ಲಭಾ ॥ ೬೨ ॥

ವ॥ ಅಲ್ಲಿ ವಿಶಾಖಭೂತಿಚರಂ ವಿಜಯಂ ಬಲದೇವಂ ವಿಶ್ವನಂದಿಚರಂ ತ್ರಿಪೃಷ್ಠಂ ವಾಸುದೇವನಿದವರ ವೃತ್ತಕಂ ವಿಶಾಖನಂದಿಯು ಮಾಯುರವಸಾನದೊಳ್ ಸತ್ತನೇಕಭವ ಗಹನ ಪರ್ಯಟನದಿಂ ಬಂದೈರಾವತ ತೀರದ—

ಕಂ॥ ಕಾನನದಾಶ್ರಮದೊಳ್ ವೈ
ಖಾನಸಕುಲಪತಿ ಮಹಾಜಟಂ ತಂದೆ ಜಯಾ
ಮಾನಿನಿ ತಾಯ್ ತನ್ಮಿಥುನದ
ಸೂನುತೆಗೆ ವಿಶಾಖನಂದಿ ಭಾಜನನಾದೊಂ ॥ ೬೩ ॥

ವ॥ ಆಗಿ ಸುಜಟನೆಂಬ ಪೆಸರಂ ಪಡೆದು ಬಳೆದು—

ಕಂ॥ ಜಿನದೀಕ್ಷಿತನಂತ್ಯದೊಳಮ
ರನಾಗಿ ಮುನ್ನಿನ ನಿದಾನದಿಂದಶ್ವಗ್ರೀ
ವ ನಭಶ್ಚರನಲ್ತೆ ಪುರಾ
ತನವೈರದಿನಟಿದನಾ ತ್ರಿಪೃಷ್ಠನ ಕೆಯ್ಯೊಳ್ ॥ ೬೪ ॥

ವ॥ ಎಂದು—

ಕಂ॥ ದೇವಗುರು ಬೆಸಸೆ ಜನಕ ಭ
ವಾವಳಿಯಂ ಕೇಳ್ದು ವಿನಯ ವಿನಮಿತನಾದೊಂ
ಶ್ರೀವಿಜಯಂ ಮುದಮೊದವೆ ತ
ಪೋವೃದ್ಧಂ ಧರ್ಮವೃದ್ಧಿಯೆಂದು ಮುನೀಂದ್ರಂ ॥ ೬೫ ॥

---

೬೨. ಹದಿನೆಂಟು ಸಾಗರೋಪಮ ಆಯುಷ್ಯವನ್ನು ಅಲ್ಲಿ ಕಳೆದನು. ಬಳಿಕ ಅವರು ಅಲ್ಲಿಂದ ಬಂದು ಪ್ರಜಾಪತಿರಾಜನಿಗೆ ಜಯಾವಲೀದೇವಿಯಲ್ಲಿ ಬಲದೇವನಾಗಿಯೂ ಮೃಗಯಾವಲೀದೇವಿಯಲ್ಲಿ ವಾಸುದೇವನಾಗಿಯೂ ಜನ್ಮತಾಳಿದರು.

ವ॥ ವಿಶಾಖಭೂತಿಯಾಗಿದ್ದವನೇ ವಿಜಯನೆಂಬ ಹೆಸರಿನ ಬಲದೇವ; ವಿಶ್ವನಂದಿಯಾಗಿದ್ದವನೇ ತ್ರಿಪೃಷ್ಠನೆಂಬ ವಾಸುದೇವ. ಇದು ಇವರ ವೃತ್ತಾಂತ. ವಿಶಾಖನಂದಿಯು ತನ್ನ ಆಯುಷ್ಯ ತೀರಿ ಸತ್ತಬಳಿಕ ಜನ್ಮಚಕ್ರದಲ್ಲಿ ಅನೇಕ ಬಾರಿ ಸುತ್ತುತ್ತ ಬಂದನು. ಐರಾವತ ತೀರದಲ್ಲಿ—

೬೩. ಕಾಡೊಂದಿರುವುದು; ಅದರೊಳಗಿನ ಆಶ್ರಮದಲ್ಲಿ ಮಹಾಜಟನೆಂಬ ಮುನಿಪತಿಯಿರುವನು; ಆತನ ಪತ್ನಿ ಜಯೆಯೆಂಬವಳು. ಅವರಿಬ್ಬರಿಗೆ ಮಗನಾಗಿ ವಿಶಾಖನಂದಿಯು ಹುಟ್ಟಿದನು.

ವ॥ ಹಾಗೆ ಜನ್ಮತಾಳಿ ಸುಜಟನೆಂಬ ಹೆಸರಿನಿಂದ ಬೆಳೆದು—

೬೪. ಜಿನದೀಕ್ಷೆಯನ್ನು ಕೈಕೊಂಡು ಅಂತ್ಯದಲ್ಲಿ ದೇವನಾಗಿ, ಪೂರ್ವಜನ್ಮದಲ್ಲಿ ಮಾಡಿದ ನಿದಾನ ಫಲವಾಗಿ ಅಶ್ವಗ್ರೀವನೆಂಬ ವಿದ್ಯಾಧರನಾದನು. ಹಾಗು ಪೂರ್ವವೈರದಿಂದ ತ್ರಿಪೃಷ್ಠನ ಕೈಯಲ್ಲಿ ಮರಣಹೊಂದಿದನು.

ವ॥ ಹೀಗೆಂದು—

೬೫. ದೇವಗುರು ಮುನಿಯು ತಿಳಿಸಲಾಗಿ ತನ್ನ ತಂದೆಯ ಭವಾವಳಿಯನ್ನು ಅರಿತುಕೊಂಡು ಶ್ರೀವಿಜಯನು ವಿನಯದಿಂದ ತಲೆಬಾಗಿ ನಮಸ್ಕರಿಸಿದನು. ತಪೋವೃದ್ಧನಾದ ಆ ಮುನೀಂದ್ರನು "ನಿನಗೆ ಧರ್ಮವೃದ್ಧಿಯಾಗಲಿ" ಎಂದು ಹರಸಿ,

ಕಂ॥ ಅಮರ ಗುರುವೆರಸು ಯತಿ ಜಲ
ದ ಮಾರ್ಗ ಗತಿಯಾದನರಸನುಪವಾಸಪರಿ
ಶ್ರಮಮನರಮನೆಗೆ ವಂದ
ಶ ಮದೊಳೆ ಕಳೆದೆಯ್ದಿ ರಜತರಾಜಿತ ನಗಮಂ ॥ ೬೬ ॥

ವ॥ [1]ಅ[1] ರಥನೂಪುರ ಚಕ್ರವಾಳಮಂ ಪೊಕ್ಕು ರ್ವರಾಸ್ಯತಿಲಕನುಂ ತಾನುಂ ನಿದಾಘಸಮಯದೊಳುದ್ಯಾನಕೇಳೀ[2]ರಸಾಸಕ್ತ[2] ಚಿತ್ತನಿರೆ ತದ್ವನೈಕದೇಶದ ರಕ್ತಾಶೋಕ ಪಾದಪ ತಳದೊಳಿರ್ದ ವಿಪುಳರುಮಚಳರುಮೆಂಬ ಮುನಿಯುಗಳಮಂ ಕಂಡುದ್ಯಾನ ಕ್ರೀಡೆಯೊಳಾದ ಪರಿಶ್ರಮಮಂ ತನ್ಮುನಿಪಾದ ಕಲ್ಪಪಾದಪಚ್ಛಾಯೆಯೊಳ್ ಕಳೆಯಲ್ಬರ್ಪಂತೆ ಬಂದು ಬಂದಿಸಿ ನಿಜಮಕುಟ[3]ಮಣಿ[3]ಮರೀಚಿ ನಿರ್ಮಲ ಸಲಿಲ ಧಾರೆಯಿಂ ತದೀಯ ಪಾದಪಂಕಜ ರಜಮಂ ತೊಳೆದು ಕಳೆದು ವನಕುಸುಮ ಸ್ತಬಕಗಳಿನರ್ಚಿಸಿ ಕುಳ್ಳಿರ್ದು ಧರ್ಮಶ್ರವಣಾನಂತರ ಮಿಂತೆಂದು ಬಿನ್ನಪಂ ಗೆಯ್ದರ್—

ಮ॥ ಪಟುವಪ್ಪಿಂದ್ರಿಯವರ್ಗದಿಂ ತನಗೆ ಮುಂ ಕಾಮಾರ್ಥಮೆಮ್ಮೊಳ್ ಪರಿ
ಸ್ಫುಟಮಿನ್ನಿಂದ್ರಿಯ ಶಕ್ತಿಯಂ ಜರೆ ಭರಂಗೆಯ್ದೆಯ್ದೆ ಬೆನ್ನಟ್ಟಿ ವಿ
ಸ್ಫುಟಮಿಲ್ಲಿಚ್ಛೆಯ ಮುಚ್ಚು ಮೋಹಧನಮುಂ ಮುಂದಿಟ್ಟು ದಲ್ ತೃಷ್ಣೆ ಲಂ
ಪಟೆ ಬೆನ್ನಿಂ ಬಿಡದೆಲ್ಲಿಮೊಲ್ಲೆಮೆನೆಯುಂ ದೂದಟ್ಟಿ ದುರ್ಬುದ್ಧಿಯಂ ॥ ೬೭ ॥

ಕಂ॥ ಆಕೆ ಬಿಸುಡದೊಡಮಾಮಿಂ
ತೇಕಿರ್ಪೆಮೊ ಬಿಸುಡದಾಕೆಯಂ ಬೆಸಸುವುದ
ವ್ಯಾಕುಳಮೆಮ್ಮಾಯುಷ್ಯ
ಸ್ತೋಕ ಬಹುತ್ವಮನಗಾಧ ಬೋಧ ಪಯೋಧೀ ॥ ೬೮ ॥

ವ॥ ಎಂದು ಪಾಪೇಭ ಕಂಠೀರವನುಂ ಶ್ರೀವಿಜಯನುಂ ಬೆಸಗೊಳೆ ವಿಪುಳಾಮಳ ಮುನಿನಾಥರ್ ಧರ್ಮವಾತ್ಸಲ್ಯಕಲ್ಯಾಣಾಂತರಂಗಳಿಂ ನಿಮಗಿಪ್ಪತ್ತಾಱುದಿವಸಮಾಯುಷ್ಯಮೆಂದು ಬೆಸಸಿ ಬಿಜಯಂ ಗೆಯ್ವುದುಂ—

---

೬೬. ಅಮರಗುರು ಮುನಿಯೊಡನೆ ಆಕಾಶಮಾರ್ಗವಾಗಿ ಹೋದನು. ಅರಸನು ಅರಮನೆಗೆ ಬಂದು ಉಪವಾಸದ ಶ್ರಮವನ್ನು ಪರಿಹರಿಸಿಕೊಂಡನು.

ವ॥ ರಥನೂಪುರ ಚಕ್ರವಾಳಪುರದಲ್ಲಿ ಅಮಿತತೇಜನೊಡನೆ ಸಂತೋಷದಿಂದ ಉದ್ಯಾನವನ್ನು ಹೊಕ್ಕು ಬೇಸಗೆಯಲ್ಲಿ ವನಕ್ರೀಡೆಯಾಡುತ್ತ ಇರುವಾಗ, ಆ ಉದ್ಯಾನದ ಒಂದು ಪ್ರದೇಶದಲ್ಲಿ ಕೆಂಪು ಅಶೋಕವೃಕ್ಷದ ಅಡಿಯಲ್ಲಿ ವಿಪುಲ ಮತ್ತು ಅಮಳ ಎಂಬ ಇಬ್ಬರು ಮುನಿಗಳನ್ನು ಕಂಡರು. ವನಕ್ರೀಡೆಯ ಆಯಾಸವನ್ನೆಲ್ಲ ಆ ಮುನಿಗಳ ಪಾದವೆಂಬ ಕಲ್ಪವೃಕ್ಷದ ನೆರಳಿನಲ್ಲಿ ಕಳೆದುಕೊಳ್ಳಲು ಬಂದರೋ ಏನೋ ಎಂಬಂತೆ ಬಂದು ಅವರಿಗೆ ನಮಸ್ಕರಿಸಿ ತಮ್ಮ ಕಿರೀಟಗಳ ಕಾಂತಿಯೆಂಬ ನಿರ್ಮಲವಾದ ಜಲಧಾರೆಯಿಂದ ಆ ಮುನಿಗಳ ಪಾದಧೂಳಿಯನ್ನು ತೊಳೆದು ಹೂಗಳಿಂದ ಅರ್ಚಿಸಿ ಕುಳಿತುಕೊಂಡು ಧರ್ಮಶ್ರವಣ ಮಾಡಿದರು ; ಆನಂತರ ಹೀಗೆಂದು ಬಿನ್ನವಿಸಿದರು :

೬೭. ನಮ್ಮ ಇಂದ್ರಿಯಗಳು ಚುರುಕಾಗಿದ್ದು ಈವರೆಗೆ ಕಾಮಾರ್ಥಗಳನ್ನು ಸುಲಭವಾಗಿ ಹಾಗು ಸಮೃದ್ಧವಾಗಿ ನಾವು ಅನುಭವಿಸಬಲ್ಲವರಾಗಿದ್ದೆವು. ಈಗ ಮುಪ್ಪು ಬಂದು ಇಂದ್ರಿಯ ಶಕ್ತಿಯನ್ನು ಅಟ್ಟಿ ಕಳೆಯುತ್ತಿರುವುದರಿಂದ ವಿಷಯಸುಖದಲ್ಲಿ ಕೊರತೆಯುಂಟಾಗಿದೆ. ಹೀಗಿದ್ದರೂ ಅಭಿಲಾಷೆ ಕುಗ್ಗದೆ ವಿಷಯಲಂಪಟತೆಯ ಹುಚ್ಚು ಮೋಹವೆಂಬ ಧನವನ್ನು ಒಡ್ಡಿ, ದುರ್ಬುದ್ಧಿಯೆಂಬ ದೂತಿಯನ್ನು ಕಳಿಸಿ ನಮ್ಮನ್ನು ಒಲ್ಲೆ ಎಂದರೂ ಬಿಡದೆ ಸೆಳೆಯುತ್ತಿದೆ.

೬೮. ಈ 'ತೃಷ್ಣೆ'ಯೆಂಬುದು ನಮ್ಮನ್ನು ಬಿಡದಿದ್ದರೂ ನಾವೇಕೆ ಅದನ್ನು ಬಿಡದೆ ಉಳಿದಿರುವೆವು ? ಅಗಾಧ ಜ್ಞಾನ ಸಂಪನ್ನರಾದ ತಾವು ದಯವಿಟ್ಟು ಹೇಳಿ. ನನಗೆ ಇನ್ನೂ ಎಷ್ಟು ಆಯುಷ್ಯ ಉಳಿದಿದೆ ?"

ವ॥ ಹೀಗೆಂದು ಅಮಿತತೇಜ ಹಾಗೂ ಶ್ರೀವಿಜಯರು ಕೇಳಲಾಗಿ ಆ ಮುನೀಂದ್ರರು "ನಿಮಗೆ ಇನ್ನು ಇಪ್ಪತ್ತಾರು ದಿವಸ ಆಯುಷ್ಯ ಉಳಿದಿದೆ. ಧರ್ಮವತ್ಸಲರಾಗಿ ನಿಮ್ಮ ಕಲ್ಯಾಣವನ್ನು ನೋಡಿಕೊಳ್ಳಿ" ಎಂದು ಹೇಳಿ ಅಲ್ಲಿಂದ ಹೊರಟುಹೋದರು.

---

1. × (ಮ) 2. ರಸಸಕ್ತ (ಮ) 3. × (ಮ)

ಕಂ॥ ಸೆ*[ಱ]*ಗಂ ಪಾರದೆ ಮತಿ ಮಱಿ³
ದಿರದೆ ಮನೆಗೊಂಡೊಡಂಬಡಂ ಬಳಸಿರ್ದಾ
ಸಿರಿವಂತಿಗೆಯುಂ ತೊಱ³ವಂ
ತಿರೆ ಖಚರಶ್ರೀಯನುೞಿದನಾ ಜಿನಚಂದ್ರಂ ॥ ೬೯ ॥

ವಿಜಯಶ್ರೀಯುಂ ಶ್ರೀಯುಂ
ನಿಜಮನೆ ನೆಗೞ್ದ ಮಿತತೇಜನೊಡನೆ ಜಿತಾತ್ಮಂ
ರುಜೆಯಂ ಬಿಸುಡುವವೋಲ್ ಶ್ರೀ
ವಿಜಯಂ ಬಿಸುಟಂ ಧರಾ ಲತಾಂಗಿಯನಾಗಳ್ ॥ ೭೦ ॥

ವ॥ ಅಂತು ಮಯ್ದುನಿರ್ವರು[1]ಮೋರೊರ್ವರೊಳ್ ತೆಕ್ಕೆ ತೆಕ್ಕೆಯಿಂ[1] ಬಾಹ್ಯಾಭ್ಯಂತರ ಪರಿಗ್ರ[2]ಹಂಗಳಂ[2] ಪರಿ[3]ಚ್ಛೇದದಿಂ[3] ತೊಱ[3]ದು ತಮ್ಮ ಮಕ್ಕಳಪ್ಪ ಸುತೇಜನುಮಂ ಶ್ರೀದತ್ತನುಮಂ ರಾಜ್ಯದೊಳ್ [4]ನಿಜ[4]ಸಿ ಬೞಿಯಮಿಪ್ಪತ್ತಾಱು ದಿವಸಂಬರಂ—

ಕಂ॥ ಅಭಿನಂದನಮುನಿ ರವಿವಾ
ಕ್ಪ್ರಭೆ ತಮಮಂ ಕಳೆಯೆ ಮಯ್ದುನಿರ್ವರುಮು[5][ಱ³][5] ನೋಂ
ತಭಯಮನರಾಗಿಯುಂ ದುರಿ
ತ ಭೀತಿಯಿಂ ನಡುಗಿ ಬಡಬಡಾದಂತಾದರ್ ॥ ೭೧ ॥

ವ॥ ಅಂತುಪವಾಸ ಕೃಶೀಕೃತಾಂಗರಾಗಿ ಶರೀರಕರ್ಮಪರಮಾಣುಗಳನೊಡನೊಡನೆ ತವಿಸಿ ಕಾನನಮಧ್ಯಸ್ಥಿತ ರುಂದ್ರಗಿರೀಂದ್ರಶೃಂಗದೊಳ್ ಆತ್ಮಪರ ಪರ್ಯಾಪ್ತಿ ನಿರಾಪೇಕ್ಷರಾಗಿ ಶಾಜಲಾ[6]ಜ[6]ದ ಸ್ಥಳನಳಿನಿಗಳನೆ ಪೋಲ್ತುತ್ತರಾಶಾಭಿಮುಖರಾಗಿ ಪೋಗಿ ತದದ್ರಿಶಿಖರದೊ[7]ಳೊಂದೆ[7]ಡೆವೆತ್ತು—

ಕಂ॥ ಮೃಗರಾಜಂ ರಾಜತ್ವದ
ಪಗೆಗಿಱಿವಂತಿಱಿದು ನಖದಿನೋವದೆ ತಿನೆಯುಂ
ಬಗೆಯದೆ ವೀರಪ್ರಾಯೋ
ಪಗಮನದಿಂದಮಿತತೇಜನೊಡಲಂ ಬಿಸುಟಂ ॥ ೭೨ ॥

---

೬೯. ಸಹಾಯ ಆಶಿಸದೆ ಬುದ್ಧಿ ಮರೆಯದೆ ಜಿನಭಕ್ತನಾದ ಅಮಿತತೇಜನು ತನಗೆ ಮೆಚ್ಚಿಗೆಯಾಗಿ ಸುತ್ತುವರಿದಿದ್ದ ಸಂಪತ್ತನ್ನೆಲ್ಲ ತ್ಯಜಿಸಿಬಿಡುವಂತೆ ತನ್ನ ಖೇಚರರಾಜ್ಯವನ್ನು ಬಿಟ್ಟುಕೊಟ್ಟನು.

೭೦. ವಿಜಯಶ್ರೀಯೂ, ಐಶ್ವರ್ಯವೂ ವಿಪುಲವಾಗಿದ್ದ ಆ ಅಮಿತತೇಜನೊಡನೆ ಶ್ರೀವಿಜಯನು, ಆತ್ಮಸಂಯಮಿಯು ರೋಗವನ್ನು ಕಳೆದು ಬಿಸಾಡುವಂತೆ ತನ್ನ ರಾಜ್ಯಶ್ರೀಯನ್ನು ತ್ಯಾಗಮಾಡಿದನು.

ವ॥ ಹೀಗೆ ಇಬ್ಬರೂ ಮೈದುನರು ದೃಢ ನಿರ್ಧಾರದಿಂದ ರಾಶಿರಾಶಿಯಾದ ಬಾಹ್ಯ ಹಾಗು ಅಭ್ಯಂತರ ಪರಿಗ್ರಹಗಳನ್ನು ತೊರೆದು, ತಮ್ಮ ಮಕ್ಕಳಾದ ಸುತೇಜನಿಗೂ ಶ್ರೀದತ್ತನಿಗೂ ಪಟ್ಟಗಟ್ಟಿ, ತಮಗೆ ಉಳಿದಾಯುಷ್ಯದ ಇಪ್ಪತ್ತಾರು ದಿನಗಳವರೆಗೂ—

೭೧ ಅಭಿನಂದನ ಮುನಿಗಳ ವಾಕ್ಪ್ರಭೆಯಿಂದ ತಮ್ಮ ಅಜ್ಞಾನದ ಕತ್ತಲನ್ನು ನಿವಾರಿಸಿಕೊಂಡರು. ಸ್ವಭಾವತಃ ಭೀತಿಯಿಲ್ಲದವರಾಗಿದ್ದರೂ ಪಾಪಭಯದಿಂದ ನಡುನಡುಗಿ ಕೊರಗಿದರೊ ಏನೊ ಎಂಬಂತೆ ವ್ರತದಿಂದ ಸೊರಗಿ ಸಣ್ಣಗಾದರು.

ವ॥ ಹೀಗೆ ಉಪವಾಸವ್ರತದಿಂದ ಕೃಶರಾಗಿ ಶರೀರ ಕರ್ಮದ ಪರಮಾಣುಗಳನ್ನು ನಾಶಮಾಡಿ ಅರಣ್ಯಮಧ್ಯದಲ್ಲಿದ್ದ ಒಂದು ಭವ್ಯ ಪರ್ವತದ ಮೇಲೆ ದೇಹರಕ್ಷಣೆಯನ್ನು ಚಿಂತಿಸದ ಬಾಡಿದ ಕಮಲಗಳಂತಾಗಿ ಉತ್ತರ ದಿಕ್ಕಿಗೆ ಮುಖಮಾಡಿ ಹೊರಟು ಆ ಬೆಟ್ಟದ ತುದಿಯಲ್ಲೊಂದು ಪ್ರದೇಶದಲ್ಲಿ ನೆಲೆಸಿದರು. ಅಲ್ಲಿ—

೭೨. ಮೃಗರಾಜ (ಸಿಂಹ)ವೊಂದು ಬಂದು ಈತನೂ 'ರಾಜ'ನೆನಿಸಿದನೆಂಬ ಹಗೆತನದಿಂದಲೊ ಏನೊ ಎಂಬಂತೆ ಪಂಜದಿಂದ ಇರಿದು ತಿಂದರೂ ಅದನ್ನು ಗಮನಿಸದೆ ಪ್ರಾಯೋಪಗಮನದಿಂದ ಅಮಿತತೇಜನು ದೇಹವನ್ನು ತೊರೆದನು.

---

* ಗ (ಮ) 1. ಮೊರ್ವರೆಸೆವರೊಳ್ಕೆತ್ತುಮಂ (ತ) 2. ಜ (ಅ) 3. ಚ್ಛೇದನಂ (ಲ) 4. ಲ (ಅ) 5. ರೆ (ಮ)
6. × (ಮ) 7. ಳ್ ಬಂದೆ (ಅ)

ವ॥ ಶ್ರೀವಿಜಯನುಂ ನಿಜಜನಕ ಲಕ್ಷ್ಮೀಕಾಂಕ್ಷಿತ ಪ್ರಾಯೋಪಗಮನ ಮರಣ ಮಾರ್ಗದೊಳ್ ಶರೀರಪರಿತ್ಯಾಗಂಗೆಯ್ದನಮಿತತೇಜನುಂ ಪ್ರಾಣತಕಲ್ಪಜಂ—

ಶಾ॥ ಲಾವಣ್ಯಾಮೃತವಾರ್ಧಿಮಗ್ನ ದಿವಿಜ ಶ್ರೀರಮ್ಯದೊಳ್ ನಂದ ನಂ
ದ್ಯಾವರ್ತಾಖ್ಯ ವಿಮಾನದೊಳ್ ಮಣಿಮಯಕ್ಷ್ಮಾಭಾಸಿಯೊಳ್ ಪುಟ್ಟಿ ತ
ದ್ದೇವಂ ದೇವನಿಷೇವಣೀಯನಣಿಮಾದ್ಯೈಶ್ವರ್ಯಯುಕ್ತಂ ತ್ರಿಶ
ದ್ದೇವೇಂದ್ರಂ ಮಣಿಚೂಳನೆಂಬ ಪೆಸರಿಂ ಪೆತ್ತಂದಿವೈಶ್ವರ್ಯಮಂ ॥ ೭೩ ॥

ವ॥ ಶ್ರೀವಿಜಯನುಂ ಸ್ವಸ್ತಿಕಾವರ್ತವಿಮಾನದೊಳ್ ಮಣಿಚೂಳನೆಂಬೊಂ ಸಾಮಾನಿಕ ದೇವನಾದೊಂ ಮತ್ತಮಮಿತತೇಜನಖೆಚರಸುರೇಶ್ವರಂಗೆ—

ಚಂ॥ ಗಡಣದ ಸಂಗಡಂ ಪೊಗಟ್ವ ಪಪ್ಪವರುಂ ಬಗೆ ಮುಟ್ಟು ಮುಟ್ಟುವೊಂ
ದೆಡೆಗೆಡೆಮಾಡದೆಯ್ದುಸುವ ವಾಹನಮುಂ ಬಳಸಿರ್ದ ಸಬ್ಬವರ್
ನುಡಿವರಸಾಳುಮೋಲಗಿಪ ನಿಗ್ಗೆಗಳುಂ ಮುದುಗಣ್ಗಳುಂ ಮೊದಲ್
ಪಡಿಯಜರುಂ ಮಹಾಮರರದೇಂ ಜಿನಚಂದ್ರನಗಣ್ಯ ಪುಣ್ಯನೋ ॥ ೭೪ ॥

ವ॥ ಅಂತುಮಲ್ಲದೆಯುಂ—

ಚಂ॥ ಪರಿವೆಸವೋಗಲಚ್ಚರಸಿಯರ್ ಶ್ರುತಿಯೊಳ್ ಸಮನಾಗೆ ಪಾಡಲ
ಚ್ಚರಸಿಯರಟ್ಟಿಯಿಚ್ಚೆಯಱಿದುಂ ಪರಿವಾರಿಸಿ ಪಾಟವೋದಲ
ಚ್ಚರಸಿಯರಾಡಲಚ್ಚರಸಿಯರ್ ಮನದಿಚ್ಚೆಯನಿಚ್ಚೆಗೆಯ್ಯಲ
ಚ್ಚರಸಿಯರೇದೊಡೇವೊಗಟ್ವುದೋ ಜಿನಚಂದ್ರ ವಿಭೂತಿಲೀಲೆಯಂ ॥ ೭೫ ॥

ವ॥ ಶ್ರೀವಿಜಯನೂ ತನ್ನ ತಂದೆಯಂತೆ ವಾಸುದೇವನಾಗಿ ವೈಭವವನ್ನು ಪಡೆಯಬೇಕೆಂಬ ನಿದಾನದಿಂದ ಪ್ರಾಯೋಪವೇಶಮಾಡಿ ದೇಹತ್ಯಾಗಮಾಡಿದನು.

೭೩. ಅಮಿತತೇಜನು ಪ್ರಾಣತಕಲ್ಪದಲ್ಲಿ ಸೌಂದರ್ಯಾಮೃತದ ಸಮುದ್ರದಲ್ಲಿಯೆ ಮುಳುಗಿದಂತೆ ಶೋಭಾಯಮಾನವಾದ ಹಾಗೂ ರತ್ನಕಾಂತಿಯಿಂದ ಕಂಗೊಳಿಸುವ ನಂದ್ಯಾವರ್ತವೆಂಬ ವಿಮಾನದಲ್ಲಿ ಹುಟ್ಟಿ ಮಣಿಚೂಳನೆಂಬ ದೇವೇಂದ್ರನಾದನು. ಆತನಿಗೆ ದೇವಭೋಗ್ಯವಾದ ಅಣಿಮಾದಿ ಐಶ್ವರ್ಯವು ಪ್ರಾಪ್ತವಾಯಿತು. (ಮೂಲದಲ್ಲಿ "ಆದಿತ್ಯಚೂಳ" ಎಂದಿದೆ.)

ವ॥ ಶ್ರೀವಿಜಯನು ಸ್ವಸ್ತಿಕಾವರ್ತ ವಿಮಾನದಲ್ಲಿ ಮಣಿಚೂಳನೆಂಬ ಸಾಮಾನಿಕದೇವನಾದನು. ಈ ಮುನ್ನ ಅಮಿತತೇಜನಾಗಿದ್ದ ಖೇಚರ ದೇವೇಂದ್ರನಿಗೆ—

೭೪. ಮೇಳದ ಸಂಗಡಿಗರು, ಹೊಗಳುವ ವಂದಿಗಳು, ಮನೋವೇಗದಿಂದ ಬಯಸಿದಲ್ಲಿಗೆ ಕರೆದೊಯ್ಯುವ ವಾಹನಗಳು, ಬಳಸಿಕೊಂಡಿರುವ ವಿನೋದಕಾರರು, ಅರಸಾಳುಗಳು, ಓಲಗಿಸುವ ಅಧಿಕಾರಿಗಳು, ಬುದ್ಧಿ ಹೇಳುವ ಹಿರಿಯರು, ಪ್ರತೀಹಾರರು—ಈ ಎಲ್ಲರೂ ಮಹಾ ಅಮರರೇ. ಇವರಿಂದ ಸೇವೆ ಕೈಗೊಳ್ಳುವ ಜಿನಭಕ್ತಶಿರೋಮಣಿಯು ಎಂತಹ ಮಹಾ ಪುಣ್ಯಶಾಲಿ !

ವ॥ ಅಷ್ಟೇ ಅಲ್ಲದೆ—

೭೫. ಪರಿಚರ್ಯೆಗಾಗಿ ಓಡಾಡುವವರು ಅಪ್ಸರೆಯರು; ಶ್ರುತಿಬದ್ಧವಾಗಿ ಸೊಗಸಾದ ಗಾಯನಮಾಡುವವರು ಅಪ್ಸರೆಯರು; ತನ್ನ ಇಂಗಿತವನ್ನರಿತು ಓದುವವರು ಅಪ್ಸರೆಯರು; ಆಡುವುದಕ್ಕೂ ಅಪ್ಸರೆಯರು; ಮನದ ಇಚ್ಛೆಯನ್ನು ಪೂರೈಸುವುದಕ್ಕೂ ಅಪರ್ಸೆಯರೆ. ಎಂದಮೇಲೆ ಆತನ ವೈಭವ ವಿಲಾಸವನ್ನು ಎಷ್ಟೆಂದು ಹೊಗಳಲಿ ?

ಕಂ॥ ರಮಿಯಿಸುವುದಮರಿಯರೊಳ್ ತೆಗ
ಟಮರಿಯರೊಳ್ [1]ತವದ ಮೇ[1]ಳಮಮರಿಯರೊಳಲಂ
ಪಮರಿಯರೊ[2][ಳ್ನಗೆ ಸಬ್ಬವ][2]
ಮಮರಿಯರೊಳ್ [3]ನೆ[3]ಡೆವುದಮರನೇಂ ಸುಖಮಯನೋ ॥ ೭೬ ॥

ವ॥ ಅಂತಪರಿಮಿತಾಮರಾಮರೀ ಲಲಿತಾಪ್ಸರಸ್ಸಂದೋಹ ಸುಂದರಾರವಿಂದಮಿತ್ರಂ ಮಣಿಚೂಳ ದಿವಿಜಂ ಮಿತ್ರಮಣಿಚೂಳಂ ಬೆರಸು ಕುಂದದೆ—

ಮ॥ ಬಗೆ ಧರ್ಮೋತ್ಸವಮೆಲ್ಲಿತಲ್ಲಿಗೆ ಜಿನಶ್ರೀಗೇಹದೊಳ್ಪೆಲ್ಲಿತ
ಲ್ಲಿಗೆ ಯೋಗಿವ್ರಜಮೆಲ್ಲಿತಲ್ಲಿಗೆ ಮಹಾ ತೀರ್ಥೌಘದಿಂಬೆಲ್ಲಿತ
ಲ್ಲಿಗೆ ದೇವಾಗಮಮೆಲ್ಲಿತಲ್ಲಿಗೆ ಮಹಾ ಪೂಜಾಂಗದೊಳ್ಪೆಲ್ಲಿತ
ಲ್ಲಿಗೆ ತನ್ನಂ ತಡವಿಲ್ಲದುಯ್ಯೆ ಪಲವುಂ ಕಾಲಂ ಸಲುತ್ತಿರ್ಪಿನಂ ॥ ೭೭ ॥

ವ॥ ದೋಷಧಾತು ಮಲವಿಹೀನನುಂ ನಖರೋಮ ಶ್ಮಶ್ರುಕೇಶ ವಿರಹಿತನುಂ ನಿದ್ರಾಲಸ್ಯಾಕ್ಷಿಪಕ್ಷ್ಮಪಾತೇತರನುಂ ದಶಮಾಸಾವಧಿ ನಿರ್ಯತ್ಸುರಭಿ ನಿಶ್ವಾಸನುಂ ವಿಂಶತಿ ಸಹಸ್ರವರ್ಷಪರ್ಯಂತ ಸ್ಮೃತಾಹಾರನುಂ ವಿಂಶತಿ ಸಮುದ್ರೋಪಮಾಯುಷ್ಯನುಮಖಿಳಾಮಯ ವಿದೂರನುಂ ನಿತ್ಯ ಯೌವನನುಮಾಗಿ ಮಣಿಚೂಳಾಮರೇಶ್ವರನಿರೆ ತದೀಯ ದಿವ್ಯಶರೀರಂ—

ಚಂ॥ ಹಿಮರುಚಿ ಕುಂದೆ ಕುಂದೆ ನೆಱೆದೊಪ್ಪುವ ಚಂದ್ರಿಕೆ ಕುಂದುವಂತೆ ಬಂ
ಹಿಮವದಪಾರ ಸಾಗರಮಿತಾಯುವ ಲೆಕ್ಕದ ಕುಂದೆ ಕುಂದೆ ದೈ
ನ್ಯಮನೊಳಕೊಂಡುದಂತಕನ ಸಾಮ್ಯಮನಂತಕವೈರಿಯಲ್ಲದುಂ
ತಮರವಮನುಷ್ಯರಾರ್ಪರೆ ನಿರಾಕರಿಸಲ್ ಭುವನತ್ರಯಂಗಳೊಳ್ ॥ ೭೮ ॥

೭೬. ರಮಿಸುವುದು ಅಮರಿಯರೊಡನೆ; ಚಕ್ಕಂದ ಅಮರಿಯರೊಡನೆ; ನಿರಂತರವಾದ ಮೇಳವೂ ಅಮರಿಯರದೆ; ಸಂತೋಷ, ನಗೆ, ವಿನೋದ—ಎಲ್ಲಕ್ಕೂ ಅಮರಿಯರೇ ಎಂದಾಗ ಆ ದೇವನು ಎಂತಹ ಸುಖಿ !

ವ॥ ಹೀಗೆ ಅಸಂಖ್ಯರಾದ ಅಮರ, ಅಮರಿ, ಅಪ್ಸರೆಯರ ಸಮೂಹಕ್ಕೆಲ್ಲ ಅತ್ಯಂತ ಪ್ರಿಯನಾದ ಮಣಿಚೂಳ ದೇವನು ತನ್ನ ಮಿತ್ರನಾದ ಮಣಿಚೂಳನೊಡನೆ—

೭೭. ಎಲ್ಲೆಲ್ಲಿ ಧರ್ಮೋತ್ಸವವೋ, ಎಲ್ಲೆಲ್ಲಿ ಜಿನಾಲಯಗಳ ಶೋಭೆಯೊ, ಎಲ್ಲೆಲ್ಲಿ ಮುನಿಸಮೂಹವೋ, ಎಲ್ಲೆಲ್ಲಿ ಮಹಾ ತೀರ್ಥಗಳೊ, ಎಲ್ಲೆಲ್ಲಿ ದೇವಾಗಮವೋ, ಎಲ್ಲೆಲ್ಲಿ ಮಹಾಪೂಜೆಯೊ—ಅಲ್ಲಲ್ಲಿಗೆಲ್ಲಾ ತಡವಿಲ್ಲದೆ ಹೋಗಿ ಬರುತ್ತ ಸಮಯವನ್ನು ಕಳೆದನು.

ವ॥ ಆ ಮಣಿಚೂಳದೇವೇಂದ್ರನಿಗೆ (ದೇಹದ) ದೋಷ, ಧಾತು, ಮಲ—ಇವು ಯಾವವೂ ಇರಲಿಲ್ಲ; ಉಗುರು, ಗಡ್ಡ ಮೀಸೆಗಳಿರಲಿಲ್ಲ; ನಿದ್ದೆ, ಆಲಸ್ಯ, ರೆಪ್ಪೆಹೊಡೆಯುವುದು ಕೂಡ ಇರಲಿಲ್ಲ; ಆತನಿಗೆ ಹತ್ತು ತಿಂಗಳಿಗೆ ಒಂದು ಸಲ ಸುಗಂಧದ ನಿಶ್ವಾಸ; ಇಪ್ಪತ್ತುಸಾವಿರ ವರ್ಷಕ್ಕೆ ಒಂದು ಬಾರಿ ಮಾತ್ರ ಆಹಾರದ ನೆನಪು; ಇಪ್ಪತ್ತು ಸಾಗರೋಪಮ ಕಾಲ ಆಯುಷ್ಯ; ಸರ್ವ ರೋಗಗಳಿಂದ ದೂರವಾದ ನಿತ್ಯಯೌವನವುಳ್ಳ ದಿವ್ಯ ಶರೀರ. ಹೀಗಿರುತ್ತ—

೭೮. ಚಂದ್ರನು ಕುಗ್ಗಿದಂತೆಲ್ಲ ಆತನ ಬೆಳಕು ಕುಂದುತ್ತ ಬರುವಹಾಗೆ, ಸಾಗರೋಪಮ ಲೆಕ್ಕದ ಈ ದೀರ್ಘವಾದ ಆಯುಷ್ಯವೂ ಕರಗಿ, ಕರಗಿ ಆತನ ದಿವ್ಯಶರೀರವು ಅಂತಕನ ಸಮೀಪಕ್ಕೆ ಸರಿಯತೊಡಗಿ ದೈನ್ಯಾವಸ್ಥೆಯನ್ನು ಹೊಂದಿತು. ಅಂತಕ ವೈರಿಯಾದ ಅರ್ಹಂತನಿಗಲ್ಲದೆ ಮನುಷ್ಯ ಮಾತ್ರರಾದವರಿಗೆ ಮೃತ್ಯುವನ್ನು ಹೊಡೆದಟ್ಟುವ ಸಾಮರ್ಥ್ಯವುಂಟೆ ?

1. ಸಮುವಮೇ (ಅ) 2. ಳ್ನಗಲಮುಮ (ಅ) 3. ತ (ಅ)

ಉ॥ ಇನ್ನಱುದಿಂಗಳುಂಟೆನೆ ನಿಜಾಯು ಸುರಪ್ರಕರಂ ಮೊಗಂಗಳಂ
ಬಿನ್ನಗೆ ಮಾಡೆಯುಂ ತಮಗೆ ಶಂಕೆಯುಮಿಲ್ಲ ವಿಭೂಷಣಪ್ರಭಾ
ತ್ಯುನ್ನತಿ ಮಾಣೆಯುಂ ಮುಖಸರೋನ್ನತಿ ಮಾಣದೆ ಜೈನತತ್ವಸಂ
ಪನ್ನರನಾಜವಂಜವಭಯಂ ಗೆಲಲಾರ್ಕುಮೊ ಪಿಾ[1][ಱ][1]ಲಾರ್ಕುಮೋ ॥ ೭೯ ॥

ವ॥ ಅಂತು ಮಣಿಚೂಳದೇವಂ ತನ್ನ ಸಹಾಯಂ ಮಣಿಚೂಳನುಂ ತಾನುಂ—

ಕಂ॥ ಜಿನಚರಣದೊಳಿರೆ ನತಿ ಮತಿ
ಜಿನಗುಣಸಂಪತ್ತಿಯೊಳ್ ಪೊದಟ್ಟಿರೆ ತನು ತ
ಜ್ಜಿನಗೃಹದೊಳಿರೆ ಸುರೇಂದ್ರರ್
ಜಿನೇಂದ್ರ ಮಹಿಮೆಗೆ ಸಮಾಧಿಯೊಳ್ ಮೊದಲಿಟ್ಟರ್ ॥ ೮೦ ॥

ತಳಮಳಗಾಗದ ತನು ಪೆ
[2]ಳ್ಪ[2]ಳಿಸದ ನೆಲೆ ತೊಲಗದ[3]ಱಿವು[3] ಪೆಳ[1][ಱ][1]ದ ಚೇಪ್ಪಾ
ವಳಿ ಪಂಚನಮಸ್ಕಾರದ
ಕಳರುತಿ ತಮಗಮರೆ ಮಡಿಪಿದರ್ ಮಣಿಚೂಳರ್ ॥ ೮೧ ॥

ವ॥ ಅಂತು ಮಡಿಪಿ ಶರೀರ ಸಮೇತಂ ನಿರಾದಾನವಿದಾನದಿಂ ಗಾಳಿಪೆ[1]ಟ[1]ಗಿನೊಳಿರ್ದಮಳದೀಪಿಕೆಯಂತಿರ್ದಂತುಪೊಡಂವೃಶ್ಯರಾಗಿ ಬಂದು ಜಂಬೂದ್ವೀಪದ ಪೂರ್ವವಿದೇಹದ ವತ್ಸಕಾವತೀ ವಿಷಯದ ಪ್ರಭಾಕರೀ ಪುರಾಧಿಪಂ ಸ್ತಿಮಿತಸಾಗರಂಗಂ ವಸುಂಧರೆಗಂ ಮಣಿಚೂಳಚರನಪರಾಜಿತನೆಂಬ ಪೆಸರೊಳುಂ ಬಲದೇವನಾದೆಂ ತದ್ಧರಾಧೀಶ್ವರಂಗಂ ವಸುಮತಿಗಂ ಮತ್ತಿನ ಮಣಿಚೂಳಚರನಯ್ ನೀನನಂತವೀರ್ಯನಾಮದಿಂ—

೭೯. ಆಯುಷ್ಯ ಇನ್ನು ಆರು ತಿಂಗಳು ಉಳಿದಿದೆ ಎಂಬಾಗ ಅಮರರೆಲ್ಲರು ಖಿನ್ನರಾಗಿ ಮುಖ ಚಿಕ್ಕದು ಮಾಡಿಕೊಂಡರು ; ಆದರೆ ಈ ಪುಣ್ಯವಂತರಿಬ್ಬರಿಗೆ ಚಿಂತೆಯಿರಲಿಲ್ಲ ; ತೊಟ್ಟಿದ್ದ ಆಭರಣಗಳ ಕಾಂತಿ ಕುಗ್ಗಿದರೂ ಇವರ ಮುಖದ ಕಳೆ ಕುಗ್ಗಲಿಲ್ಲ; ಜೈನ ತತ್ವವನ್ನು ಅರಗಿಸಿಕೊಂಡು ಆಚರಿಸುವ ಮಹಾತ್ಮರಿಗೆ ಸಂಸಾರದ ಭಯವೆಂಬುದೂ ಉಂಟೆ? ಅದು ಅವರನ್ನು ಸೋಲಿಸಬಲ್ಲುದೆ ?

ವ॥ ಹೀಗೆ ಮಣಿಚೂಳದೇವನು ತನ್ನ ಮಿತ್ರನಾದ ಮಣಿಚೂಳನೊಡನೆ—

೮೦. ಜಿನಾಲಯದಲ್ಲಿದ್ದು, ಜಿನಚರಣಗಳಿಗೆ ಬಾಗಿ, ಜಿನಗುಣ ಸಂಪತ್ತಿಯಲ್ಲಿ ಮನವಿಟ್ಟು, ಸಮಾಧಿಯನ್ನು ಆರಂಭಿಸಿದನು.

೮೧. ಕಳವಳಕ್ಕೀಡಾಗದೆ ನಿಶ್ಚಲರಾಗಿ ದೃಢವಾದ ಅರಿವಿನಿಂದ ನಿರ್ಭೀತರಾಗಿ ಪಂಚ ನಮಸ್ಕಾರಗಳನ್ನು ಮಧುರವಾದ ಮೆಲುದನಿಯಲ್ಲಿ ಪಠಿಸುತ್ತ ಇಬ್ಬರೂ ಮಣಿಚೂಳರು ಪ್ರಾಣತ್ಯಾಗಮಾಡಿದರು.

ವ॥ ಹೀಗೆ ಪ್ರಾಣತ್ಯಾಗ ಮಾಡಲಾಗಿ, ಗಾಳಿಗೆ ಮರೆಯಾದ ದೀಪದಂತೆ ಶರೀರ ಸಹಿತವಾಗಿ ಕೂಡಲೆ ಅದೃಶ್ಯರಾಗಿ ಬಂದು ಜಂಬೂದ್ವೀಪದಲ್ಲಿ ಪೂರ್ವವಿದೇಹದ ವತ್ಸಕಾವತೀ ವಿಷಯದ ಪ್ರಭಾಕರೀಪುರದರಸು ಸ್ತಿಮಿತಸಾಗರನಿಗೂ ವಸುಂಧರೆಗೂ ಮಕ್ಕಳಾಗಿ ಹುಟ್ಟಿದರು; ಅವರಿಬ್ಬರಲ್ಲಿ ದೇವೇಂದ್ರ ಮಣಿಚೂಳನಾಗಿದ್ದ ನಾನು ಅಪರಾಜಿತನೆಂಬ ಬಲದೇವನಾದೆನು ; ಅದೇ ಅರಸನಿಗೆ ವಸುಮತಿಯೆಂಬ ರಾಣಿಯಲ್ಲಿ (ಮಣಿಚೂಳದೇವನಾಗಿದ್ದ) ನೀನು ಅನಂತವೀರ್ಯನೆಂಬ ಮಗನಾಗಿ ಹುಟ್ಟಿದೆ.

1. ರ (ಮ) 2. ಪ್ಪ (ಮ) 3. ಯುವು (ಅ)

ಕಂ॥ ಅತಿಕಾಂಕ್ಷಿತನೈ ಬಗೆ ಗೆ
ಟ್ಟತೀತ ಭವಜನಕ ಲಕ್ಷ್ಮಿಯೊಳ್ ಮತಿ ನಿಲೆ ದು
ರ್ಗತಿಗೆಳಸಿ ಯಾಮತಿಸ್ಸಾ
ಗತಿಯೆಂಬುದನಜಿಪಿ ವಾಸುದೇವನೆಯಾದಯ್ ॥ ೮೨ ॥

ವ॥ ಅಂತು ನಾಮಿರ್ವರುಂ ಬಲದೇವ ವಾಸುದೇವರಾಗಿ ಬಳೆಯೆವಳೆಯೆ ನಮ್ಮ ತಂದೆ ಸ್ತಿಮಿತಸಾಗರ ಮಹೀನಾಥನುಂ ಜಿನೇಂದ್ರ ಪಾದಾರ್ಚನದೊಳ್ ನಿರ್ಗ್ರಂಥರೂಪಧಾರಿಯಾಗಿ ವಂದನಾ ಭಕ್ತಿಗೆ ವಂದ ಧರಣೇಂದ್ರನಂ ಕಂಡು ತತ್ಸೌಂದರ್ಯಮಹಿಮೆಗೆ ನಿದಾನಂಗೆಯ್ದು ಭವನಾಮರಲೋಕದೊಳ್ ಧರಣೇಂದ್ರನಾಗಿ ಪುಟ್ಟಿದನಾನುಂ ನೀನುಂ ನಿಜಗುರು ಪರೋಕ್ಷದೊಳಧಿರಾಜನುಂ ಯುವರಾಜನುಮಾದೆವಿನ್ನೆನ್ನ ನಿನ್ನ ತದ್ಭವಸಂಬಂಧದ ಬಂಧುರಲಂಬಪ್ರಾರಂಭಮಮಂ ಕೇಳ್ವೆಯಪ್ಪೊಡೆ—

ಮ॥ ಖಚರೇಂದ್ರಂ ಪರವೇಟ್ಟಿ ಗಾಯಿಕೆಯರೊಂದಾಕಾರದಿಂ ಪೋಗಿ ಸ
ತ್ಕಚಿಯಂ ತತ್ಸುತೆಯಂ ಮರುಳ್ದು ಕನಕಶ್ರೀಯಂ ಭಯಭ್ರಾಂತಿಯಿಂ
ದಚಿರಂ ತಂದಿರಾದ ಖೇಚರಾನನಾಂ ಬಿಲ್ವೊಯ್ದು[1] ಕೊಂದಿಕ್ಕಿ ಚ
ಕ್ರಚಿರಾಸ್ಥಾಯಿಯನರ್ಧಚಕ್ರಿಶಿರಮಂ ನೀಂ ಪಾಂಸುಲಂ ಮಾಡಿದೈ ॥ ೮೩ ॥

ವ॥ ಅಂತು ದಮಿತಾರಿ ವಧಾನಂತರದೊಳರ್ಧಚಕ್ರವರ್ತಿಯಾಗಿ ನೀಂ ನಿಜಾಯುರವಸಾನದೊಳ್ ರತ್ನಪ್ರಭೆಯೆಂಬ ಮೊದಲ ನರಕದ ಪದಿಮೂಱುಮಿಂದ್ರಕಂಗಳೊಳಗೆ 'ಚಂದ್ರಕ'[2] ಮೆಂಬ ಮೊದಲಿಂದ್ರಕದೊಳ್ ನಾಲ್ವತ್ತಿರ್ಛಾಸಿರವರ್ಷಂ ಮಧ್ಯಮಾಯುಷ್ಯನಾಗಿ ಪುಟ್ಟಿದಯ್ ಆನುಂ ನಿನ್ನ ವಿಯೋಗ ದುಃಖದೊಳ್ ಜಿನೇಶ್ವರ ತಪಶ್ಚರಣಕ್ಕೆ ತಱಿಸಂದು ನೆಗಱ್ದ ಕಡೆಯೊಳ್ ಪ್ರಾಯೋಪಗಮನದಿಂ —

---

೮೨. ನೀನು ಬಹುಲೋಭಿಯಾಗಿ ಮತಿಗೆಟ್ಟು ನಿನ್ನ ಪೂರ್ವಭವದ ತಂದೆಯ ವೈಭವಕ್ಕೆ ಮಾರುಹೋಗಿ ದುರ್ಗತಿ ಬಯಸಿ, "ಹೇಗೆ ಬುದ್ಧಿಯೊ ಹಾಗೆ ಗತಿ" ಎಂಬುದನ್ನು ಉದಾಹರಿಸುವಂತೆ ವಾಸುದೇವನಾದೆ.

ವ॥ ಹಾಗೆ ನಾವಿಬ್ಬರೂ ಬಲದೇವ ವಾಸುದೇವರಾಗಿ ಬೆಳೆದೆವು. ನಮ್ಮ ತಂದೆ ಸ್ತಿಮಿತಸಾಗರನು ಜಿನೇಂದ್ರ ಪೂಜೆಯಲ್ಲಿ ಮುನಿರೂಪಧಾರಿಯಾಗಿ ವಂದನಾಭಕ್ತಿಗೆ ಬಂದಿದ್ದ ಧರಣೇಂದ್ರನನ್ನು ಕಂಡು ಆತನ ಸೌಂದರ್ಯ ವೈಭವವೇ ತನಗೆ ದೊರೆಯಲೆಂದು ನಿದಾನಮಾಡಿ, ತೀರಿಕೊಂಡು ಭವನಾಮರಲೋಕದಲ್ಲಿ ಧರಣೇಂದ್ರನಾಗಿ ಹುಟ್ಟಿದನು. ನಮ್ಮ ತಂದೆ ಹೋದ ಬಳಿಕ ನಾನು ಅಧಿರಾಜನಾಗಿಯೂ ನೀನು ಯುವರಾಜನಾಗಿಯೂ ಇದ್ದೆವು. ಇನ್ನು ಆ ಜನ್ಮದ ಸುಂದರವಾದ ಪ್ರಸಂಗವನ್ನು ಕೇಳುವೆಯಾದರೆ (ಹೇಳುತ್ತೇನೆ ಕೇಳು)

೮೩. ಖೇಚರಚಕ್ರವರ್ತಿಯಾದ ದಮಿತಾರಿ ತಂದುಕೊಳ್ಳಬೇಕೆಂದಿದ್ದ ಗಾಯಿಕೆಯರ ವೇಷದಲ್ಲಿ ನಾವಿಬ್ಬರೂ ಅವನಲ್ಲಿಗೆ ಹೋಗಿ ಇದ್ದು, ಆತನ ಮಗಳಾದ ಕನಕಶ್ರೀಯನ್ನು ಅಪಹರಿಸಿದೆವು. ಭಯದಿಂದಲೂ ಭ್ರಾಂತಿಯಿಂದಲೂ ಕೂಡಲೆ ನಮ್ಮನ್ನು ಎದುರಿಸಿದ ಖೇಚರಚಕ್ರವರ್ತಿಯೊಡನೆ ನಾನು ಧನುರ್ಯುದ್ಧ ಮಾಡುತ್ತಿದ್ದೆನು. ಆ ಅರ್ಧ ಚಕ್ರವರ್ತಿಯ ತಲೆಯನ್ನು ಆತನ ಚಕ್ರದಿಂದಲೆ ಕತ್ತರಿಸಿ ನೀನು ಹುಡಿಯಲ್ಲಿ ಕೆಡಹಿದೆ.

ವ॥ ದಮಿತಾರಿಯ ವಧೆಯ ತರುವಾಯ ನೀನು ಅರ್ಧಚಕ್ರವರ್ತಿಯಾದೆ. ನಿನ್ನ ಆಯುಸ್ಸು ತೀರಿದಾಗ, ಅಲ್ಲಿಂದ ಹೊರಟು ರತ್ನಪ್ರಭೆಯೆಂಬ ಮೊದಲನೆಯ ನರಕದ ಹದಿಮೂರು ಇಂದ್ರಕಗಳಲ್ಲಿ ಮೊದಲನೆಯ ಇಂದ್ರಕದಲ್ಲಿ ನಾಲ್ವತ್ತೆರಡು ಸಾವಿರ ವರ್ಷಗಳ ಮಧ್ಯಮಾಯುಷ್ಯನಾಗಿ ಹುಟ್ಟಿದೆ. ನಿನ್ನ ಅಗಲಿಕೆಯ ದುಃಖವನ್ನು ಸೈರಿಸಲಾರದೆ ನಾನು ಜಿನದೀಕ್ಷೆ ವಹಿಸಿ ತಪಶ್ಚರ್ಯೆಯಿಂದಿದ್ದು ಕೊನೆಗೆ ಪ್ರಾಯೋಪಗಮನದಿಂದ—

---

1. ರಣಂ ಬಿಲ್ವಾಯ್ದು (ಅ)   2. ಸೀಮಂತ (ಅ)

ಕಂ॥ ತೊಱೆದು ಪರೀಷಹ ತತಿಯುಂ
ಪಱಿವಱಿಯಾದೊಡಲನಾತ್ಮನಿರಪೇಕ್ಷತೆಯಿಂ
ನಿಱಿಸಿ ದುರಿತಾರಿಯೊಡಮಡಿ
ದೆಱೆವಿಡಿದಘಹರನನಚ್ಯುತೇಂದ್ರನೆನಾದೆಂ ॥ ೮೪ ॥

ವ॥ ನಿನ್ನುಮಂ ಸ್ತಿಮಿತಸಾಗರಚರ ಧರಣೇಂದ್ರಂ ತೀವ್ರದುಃಖಮನನುಭವಿಸುವುದನಱಿದು ಮೋಹದಿಂ ಸಮ್ಯಗ್ದರ್ಶನಮಂ ಕೆಯ್ಕೊಳಿಸಿದನಾ ನಾರಕಪಟಲಂಗಳ[1]ಂತೆನೆ—ಮಂದರದಿಂ ಮೊದಲಿಂ ಕೆಳಗೆ ಲಕ್ಷಯೋಜನಾಂತರದೊಳೊಂದೊಂದೋರೊಂದು ರಜ್ಜು ಪ್ರಮಾಣಂ ತರಿತಂಗಳಕ್ಕುಮವಾ[2]ವು[2]ವೆಂದೊಡೆ ರತ್ನಪ್ರಭೆಯುಂ ಘರ್ಮೆಯುಮೆಂಬ ಪ್ರಥಮ ಭೂಮಿಯುಂ ಶರ್ಕರಾ ಪ್ರಭೆಯುಂ ವಂಶೆಯು ಮೆಂಬೆರಡನೆಯ ಭೂಮಿಯುಂ ವಾಲುಕಾಪ್ರಭೆಯುಂ ಶೈಲೆಯುಮೆಂಬ ತೃತೀಯ ಭೂಮಿಯುಂ ಪಂಕಪ್ರಭೆಯುಮಂಜನೆಯುಮೆಂಬ ನಾಲ್ಕನೆಯ ಭೂಮಿಯುಂ [ಧೂಮಪ್ರಭೆಯುಂ ಅರಿಷ್ಟೆಯುಮೆಂಬಯ್ದನೆಯ ಭೂಮಿಯುಂ] ತಮಃಪ್ರಭೆಯುಂ ಮಘವಿಯು ಮೆಂಬಾಜನೆಯ ಭೂಮಿಯುಂ ಮಹಾ ತಮಃಪ್ರಭೆಯು ಮಾಘವಿಯುಮೆಂಬೇೞನೆಯ ಭೂಮಿಯುಮೊಂದೊಂದಕ್ಕೆರಡೆರಡು ಪೆಸರಕ್ಕು ಮವಱೊಳಗೆ—

ಹರಿಣೀವೃತ್ತಂ॥ ಅರೆವೆರಸು ನಾಲ್ಕುಷ್ಣಂ ಮೇಗಿರ್ದ ಭೂಮಿಗಳತ್ತ ಮ
ತ್ತೆರಡುವರೆ ಭೂಭಾಗಂ ಕೋಡುತ್ತುಮಿರ್ಪುವು ವಜ್ರಮುಂ
ಕರಗಿ ಪರಿಗುಂ ಸೋಷ್ಣಾಭೂಮಧ್ಯದೊಳ್ ಹಿಮವದ್ವಸುಂ
ಧರೆಯೊಳಿರೆ ತಪ್ತಾಶ್ಮಂ ಶೀತಾಶ್ಮದಂತಿರೆ ಕೋಡುಗುಂ ॥ ೮೫ ॥

ಕಂ॥ ಆ ಬಹುವಿಧ ದುಃಖ ಬಳ
ಕ್ಷೀಬೊರ್ವೀಜಂಗಳುದ್ಭಯಂಕಾರಗುಹಾ
ಕ್ಷಾ ಬಹುಳಮಿಂದ್ರಕ ಶ್ರೇ
ಣೀಬದ್ಧ ಮಹಾಪ್ರಕೀರ್ಣಕಾಖ್ಯ ಬಿಲಂಗಳ್ ॥ ೮೬ ॥

---

೮೪. ಪರೀಷಹಗಳನ್ನು ವಿಸರ್ಜಿಸಿ, ಆತ್ಮನಿರಪೇಕ್ಷನಾಗಿ ದೇಹವನ್ನು ತೊರೆದು ಪಾಪಹರವಾದ ಭಗವಂತನ ಪಾದಗಳಾಶ್ರಯದಿಂದ ಅಚ್ಯುತೇಂದ್ರನಾದೆನು.

ವ॥ ನೀನು ನರಕದಲ್ಲಿ ಘೋರವಾದ ದುಃಖವನ್ನು ಅನುಭವಿಸುತ್ತಿರುವುದು ತಿಳಿದು ಸ್ತಿಮಿತಸಾಗರನಾಗಿದ್ದ ಧರಣೇಂದ್ರನು ಮೋಹದಿಂದ ಬಂದು ನಿನಗೆ ಸಮ್ಯಗ್ದರ್ಶನವನ್ನು ಒದಗಿಸಿದನು. ಆ ನರಕ ಪಟಲಗಳು ಹೇಗಿವೆ ಯೆಂದರೆ—ಮಂದರದ ತಳದಿಂದ ಕೆಳಗೆ ಒಂದು ಲಕ್ಷ ಯೋಜನ ದೂರದಲ್ಲಿ ಒಂದೊಂದೂ ಒಂದು ರಜ್ಜು ಪ್ರಮಾಣವಾಗಿ ಏಳು ನರಕ ಭೂಮಿಗಳುಂಟು. ರತ್ನಪ್ರಭೆ ಅಥವಾ ಘರ್ಮೆಯೆಂಬುದು ಮೊದಲನೆಯದು ; ಶರ್ಕರಾ ಪ್ರಭೆಯೆಂದೂ ವಂಶೆಯೆಂದೂ ಹೆಸರಾದುದು ಎರಡನೆಯದು ; ವಾಲುಕಾಪ್ರಭೆ ಹಾಗೂ ಶೈಲೆ ಎಂಬ ಹೆಸರಿನದು ಮೂರನೆಯದು; ಪಂಕಪ್ರಭೆ ಹಾಗೂ ಅಂಜನೆಯೆಂಬುದು ನಾಲ್ಕನೆಯ ನರಕಭೂಮಿ ; ಧೂಮಪ್ರಭೆ ಅಥವಾ ಅರಿಷ್ಟೆಯೆಂಬುದು ಐದನೆಯ ಭೂಮಿ ; ತಮಃಪ್ರಭೆಯೆಂದೂ ಮಘವಿಯೆಂದೂ ಹೆಸರಿರುವುದು ಆರನೆಯ ಭೂಮಿ ; ಮಹಾತಮಃಪ್ರಭೆ ಹಾಗೂ ಮಾಘವಿ ಎಂದು ಹೆಸರಾದುದು ಏಳನೆಯದು. ಹೀಗೆ ಇವುಗಳಲ್ಲಿ ಪ್ರತಿಯೊಂದಕ್ಕೂ ಎರಡೆರಡು ಹೆಸರುಗಳುಂಟು. ಅವುಗಳಲ್ಲಿ—

೮೫. ಮೇಲಿನ ನಾಲ್ಕೂವರೆ ಭೂಮಿಗಳು ಉಷ್ಣ; ಅದರ ಕೆಳಗಿನ ಭೂಮಿಗಳು ಚಳಿಯಿಂದ ತುಂಬಿರುವುವು. ಉಷ್ಣಭೂಮಿಗಳಲ್ಲಿ ವಜ್ರವೂ ಕೂಡ ಕರಗಿಹೋಗುವುದು; ಚಳಿಯ ಭೂಮಿಯಲ್ಲಿ ಕಾದ ಕಲ್ಲು ಹಿಮದ ಕಲ್ಲಿನಂತಾಗುವುದು.

೮೬. ಆ ನರಕಗಳಲ್ಲಿ ಅನೇಕ ಪ್ರಕಾರದ ದುಃಖವನ್ನೀಯುವ (ಅಸಿಪತ್ರವೆ ಮೊದಲಾದ) ಘೋರ ವೃಕ್ಷ ಗಳಿಂದಲೂ ಭಯಾನಕವಾದ ಗುಹೆಗಳಿಂದಲೂ ಕೂಡಿದ ಇಂದ್ರಕ, ಶ್ರೇಣೀಬದ್ಧ ಮತ್ತು ಪ್ರಕೀರ್ಣಕಗಳೆಂಬ ಬಿಲ ಗಳಿರುವುವು.

---

1. ಗಳೊಳಂ (ಮ) 2. × (ಮ)

ವ॥ ಅವು ತಾಮನುಕ್ರಮದೊಳ್ ತ್ರಿಂಶತ್ಪಂಚವಿಂಶತಿ ಪಂಚದಶ [ದಶ]ತ್ರಿಲಕ್ಷ ಪಂಚೋನೈಕಲಕ್ಷ ಪಂಚಪ್ರಮಾಣಂಗಳವಱೊಳ್ ವಿರತಿ ಪ್ರಮಾದ ಕಷಾಯ ತರತಮ ಸ್ವೀಕಾರದಿಂ ಹಿಂಸಾನೃತಸ್ತೇಯಾ ಬ್ರಹ್ಮಪರಿಗ್ರಹಮುಂ ಕೃಷ್ಣನೀಲಕಪೋತ ಲೇಶ್ಯಾತ್ರಿಭಾವಮುಂ ಕಾರಣಮಾಗೆ ಪುಟ್ಟುವನಾರಕ ಶರೀರಾಯುಷ್ಯ ಪ್ರಮಾಣಂಗಳ್—

ಕಂ॥ ಮೊದಲಿಂದಂ ತುದಿವರಮಿನಿ
ತೆ ದಲೊಂದುಂ ಮೂಱು ಬೞಿಕಮೇೞುಂ ಪತ್ತುಂ
ಪದಿನೇೞುಮಿಪ್ಪತೆರಡುಂ
ವಿದಿತಂ ಮೂವತ್ತುಮೂಱುಮಂಭೋನಿಧಿಗಳ್ ॥ ೮೭ ॥

ಅಳವಿಯೊಳಾದಿಯ ನಾರಕ
ರಳವಿ ತನುಸ್ಥಿತಿಯೊಳೇೞ್ ಬಿಲ್ಲುಂ ಮೂಱುಂ
ಮೊ[1][ೞ][1]ನರೆಗೇಣ್ ಸಪ್ತೋರ್ವೀ
ವಳಯಂಬರಮತ್ತಮತ್ತಮಿರ್ಮಡಿಯಕ್ಕುಂ ॥ ೮೮ ॥

ವ॥ ಮತ್ತಮಾ ಬಿಲಂಗಳ ಮೇಗಣಟ್ಟುಗಳೊಳ್ ತಲೆಕೆಳಗಾಗಿರ್ದ ಖರಕರಭ ಸೃಗಾಳಸಾರಮೇಯಾಕಾರಂಗಳಪ್ಪುತ್ಪತ್ತಿಸ್ಥಾನಂಗಳೊಳ್ ಪುಟ್ಟಿ ನಟ್ಟಿರ್ದ ಮೂವತ್ತೆರಡಾಯುಧಂಗಳ ಮೇಲೆ [2]ಬಿಟ್ಟು ಸಿಡಿಲ್ದು[2]ಚ್ಚಳಿಸಿ —

ಮ॥ ನೆಲದೊಳ್ ಬಿಟ್ಟೊಡಗಿಂಡೆಯಾಗೆ ನೆಱನಂ ನಟ್ಟುರ್ಚಿದುಗ್ರಾಯುಧಾ
ವಲಿಯಿಂದುರ್ವಿಸುವಿಂದ್ರಜಾಲಿಗನವೋಲ್ ಜೋಲ್ದುಂ ನೆಜಲ್ದುಂ ಸಮಾ
ಕುಲಿತರ್ ಮೋಹಿಸಿ ಮುಚ್ಚಿವೋಗೆ ಪರಿತಂದುತ್ತಪ್ತ ಲೋಹದ್ರವಂ
ಜಲಮೆಂದಲ್ಲಿಯ ನಾರಕರ್ ತಳಿವುದುಂ ತಾತ್ಕಾಲಿ[3]ಕಾ[3] ನಾರಕರ್ ॥ ೮೯ ॥

ವ॥ ಅವುಗಳ ಸಂಖ್ಯೆ ಒಂದನೆಯ ನರಕಭೂಮಿಯಿಂದ ಏಳನೆಯದರವರೆಗೆ ಅನುಕ್ರಮವಾಗಿ ಮೂವತ್ತು ಲಕ್ಷ, ಇಪ್ಪತ್ತೈದು ಲಕ್ಷ, ಹದಿನೈದು ಲಕ್ಷ, ಹತ್ತು ಲಕ್ಷ, ಮೂರು ಲಕ್ಷ, ತೊಂಬತ್ತೊಂಬತ್ತು ಸಾವಿರದ ಒಂಬಯ್ನೂರ ತೊಂಬತ್ತೈದು ಮತ್ತು ಐದು. ಧರ್ಮದಲ್ಲಿ ಅನಾಸಕ್ತರಾದವರು, ಕಷಾಯವುಳ್ಳವರು, ತರತಮಭಾವವುಳ್ಳವರು, ಹಿಂಸೆ, ಅಸತ್ಯ, ಚೌರ್ಯ, ಹಾದರ, ಪರಿಗ್ರಹ—ಇವುಗಳನ್ನು ಮಾಡಿದ ಪಾಪಿಗಳು, ಕೃಷ್ಣ, ನೀಲ, ಕಪೋತ, ಲೇಶ್ಯಗಳುಳ್ಳವರು ನಾರಕಿಗಳಾಗಿ ಹುಟ್ಟುವರು. ಅವರ ದೇಹ ಹಾಗೂ ಆಯುಷ್ಯ ಪ್ರಮಾಣಗಳು ಎಷ್ಟೆಂದರೆ—

೮೭. ಮೊದಲನೆಯ ನರಕಭೂಮಿಯಿಂದ ಏಳನೆಯದರವರೆಗೆ ನಾರಕಿಗಳ ಆಯುಷ್ಯ ಪ್ರಮಾಣವು ಅನುಕ್ರಮವಾಗಿ ಒಂದು, ಮೂರು, ಏಳು, ಹತ್ತು, ಹದಿನೇಳು, ಇಪ್ಪತ್ತೆರಡು ಮತ್ತು ಮೂವತ್ತುಮೂರು ಸಾಗರೋಪಮವಾಗಿರುತ್ತದೆ.

೮೮. ಅವರ ದೇಹದ ಪ್ರಮಾಣ ಮೊದಲನೆಯ ನರಕಭೂಮಿಯಲ್ಲಿ ಏಳು ಬಿಲ್ಲು, ಮೂರು ಮೊಳ ಆರಂಗುಲ; ಮುಂದಿನ ಆರು ಭೂಮಿಗಳಲ್ಲಿ ಅದು ಕ್ರಮವಾಗಿ ಇಮ್ಮಡಿ-ಇಮ್ಮಡಿಯಾಗುತ್ತ ಹೋಗುವುದು. (ಎಂದರೆ ಎರಡನೆಯ ನರಕದಲ್ಲಿ ಮೊದಲಿನದರ ಇಮ್ಮಡಿ, ಮೂರನೆಯದರಲ್ಲಿ ಎರಡನೆಯದರ ಇಮ್ಮಡಿ – ಹೀಗೆ ಏಳನೆಯ ನರಕಭೂಮಿಯಲ್ಲಿ ಐನೂರು ಬಿಲ್ಲುಗಳ ಅಳತೆಯಾಗುತ್ತದೆ.)

ವ॥ ಆ ಬಿಲಗಳಲ್ಲಿ ಕತ್ತೆ, ಒಂಟೆ, ನರಿ, ನಾಯಿಗಳ ಮುಖಗಳಂತಿರುವ ಮೇಲಿನ ನೆಲೆಗಳಲ್ಲಿ ನಾರಕಿಗಳು ಹುಟ್ಟಿ ಅಲ್ಲಿಂದ ತಲೆಕೆಳಗಾಗಿ ಮೂವತ್ತೆರಡು ಬಗೆಯ ಆಯುಧಗಳ ಮೇಲೆ ಬಿದ್ದು ಸಿಡಿದು ಹಾರುವರು ಹಾಗೆ ಹಾರಿ—

೮೯. ನೆಲದ ಮೇಲೆ ಬಿದ್ದು, ಮೈಯೊಳಗಿನ ಮಾಂಸವೆಲ್ಲ ಅಜಿಗಿಜಿಯಾಗಿ, ಮರ್ಮಾಂತಿಕವಾಗಿ ನಟ್ಟ ಆಯುಧಗಳಿಂದ ಇಂದ್ರಜಾಲಿಗನಂತೆ ಜೋತು, ನಿಶ್ಚೇಷ್ಟರಾಗಿ, ನೋವಿನಿಂದ ನರಳಿ ಮೂರ್ಛೆಹೋಗುವರು ; ಆಗ ಅಲ್ಲಿ ಮೊದಲೆ ಇದ್ದ ನಾರಕರು (ಶೀತೋಪಚಾರದ) ನೀರೆಂದು ಕುದಿಯುವ ಕಬ್ಬಿಣದ ರಸವನ್ನು ಇವರ ಮೇಲೆ ಚಿಮುಕಿಸುವರು.

---

1. ಳ (ಮ) 2 ಬಿರ್ದು ಸಿಡಿದು (ಅ) 3. ಕರ್ (ಮ)

*ಕಂ॥ ಇಱಿವ ಬಲಿಗುಡುವ [1][ಕೈ][1]ರಂ
ದಱಿವುರ್ದಂ ಸೀಳ್ವ ಪೋಳ್ವ[2]ಪ[2]ರಪುವ ಗೊಟ್ಟಂ
ಗೊಱಿವಗುಟ್ಟು ನಟ್ಟು ಪರೆಪುವ
ಪೆಱವುಮಗುರ್ವಪ್ಪ ಚಿತ್ರವಿಧ ವಧೆಯಿಂದಂ ॥ ೯೦ ॥

ಪಿಡಿಖಂಡಂಗೊಳೆ ಮನದೊಳ್
ಪೊಡರ್ಪುಗೆಟ್ಟಗಿದು ಬೆಗಡುಗೊಂಡವಧಾನ
ಕ್ಕೊಡರಿಸೆ ಭಂಗಮದಂದವ
ರೊಡವುಟ್ಟಿರೆ ಪುಟ್ಟುಗುಂ ವಿಭಂಗಜ್ಞಾನಂ ॥ ೯೧ ॥

ವ॥ ಅಂತು ಪುಟ್ಟಿದ ವಿಭಂಗಜ್ಞಾನದಿಂದಮವಗತ ನರಕಲೋಕಪ್ರಪಂಚನಾಗಿ ಕಿಱುವೇಂಟೆಯ ನಾಯ್ಗಳಿಂದ [3][ಮು][3]ಟ್ಟುಪಟ್ಟ ಪೆಣ್ಮೊಲನಂತೆ ಭಯಮನೆಡಗಲಿಸಿ ಬೆಳ್ಳೋಟವೋಡಿ ಜವಂಗೆಟ್ಟು ಕಾಲ್ ಪಡಂಗಲಿಸೆ ಬೀೞುತ್ತುಮೇೞುತ್ತುಮೆಂತಾನುಮೆಯ್ದಿ ಕೂಟಶಾಲ್ಮಲಿಯನಡರ್ವನನಡಿಯಿಂದಾ ಮಸ್ತಕಂಬರಂ ರೋಮರೋಮಂದಪ್ಪದೆ ಕೊಂಡುರ್ಚಿ ನಿಂದೆಲ್ವಂ ನಟ್ಟು ಕೀಲ್ಗೊಟ್ಟಂತಿರ್ದ ವಜ್ರಕಂಟಕಂಗಳ್ವೆರಸಲ್ಲಿಯುಂ ನಿಲಲಾಱದೆ ಬೀ[4][ೞು][4]ತ್ತುಂ ದೆಸೆದೆಸೆವಱಿದು ತಳಮಳಗಪ್ಪಿನಂ ಬೞಿಯನುೞಿಯದೆ ಕ[5][ಱು][5]ತ್ತು ನಟ್ಟು ಪೆನ್ನಟ್ಟುವ ಪುರಾಣ ನಾರಕರೆಟ್ಟುರವಿಂಗೆ ಕೋಳ್ಗುದಿಗೊಂಡು ಜಳಾವಗಾಹಾಸೆಯಿಂ ವೈತರಣಿಯ ಪಿರಿಯ ದರಿಯಂ ಮೆಟ್ಟಿ ಸುಣ್ಣಣಲಂಮಣಲ್ದಿಂಟೆಗೆತ್ತ್ರದಱ ಪರಿತಪ್ತ ಲೋಹರಜಸ್ಸಿಕತಿಳತಳದೊಳ್ ಮೆಯ್ಯನೀಡಾಡುವುದುಂ—

---

೯೦. ಇರಿಯುವ, ಬಲಿಕೊಡುವ, ಕಗ್ಗಲಿಮರವೆಂಬಂತೆ ಉದ್ದಕ್ಕೆ ಸೀಳುವ, ಹೋಳುಮಾಡುವ, ತೂತು ಕೊರೆವ, ಮೈಯನ್ನು ಅಗಿದು, ನಟ್ಟು, ಚಿಲ್ಲಾಪಿಲ್ಲಿಮಾಡುವ—ಈ ಮೊದಲಾದ ಇನ್ನೂ ಹಲವಾರು ಬಗೆಯ ಚಿತ್ರ ವಧೆಯನ್ನು ಅನುಭವಿಸುತ್ತ

೯೧. ಮೈ ಖಂಡ ಖಂಡವಾಗಿ, ಮನಸ್ಸು ಕುಗ್ಗಿಹೋಗಿ, ದಿಗಿಲುಗೊಂಡು, ಇದೇನೆಂದು ತಿಳಿಯಲು ಪ್ರಯತ್ನಿಸಿದಾಗ ಅವರಿಗೆ ವಿಭಂಗಜ್ಞಾನವುಂಟಾಗುವುದು. (ಸಮ್ಯಕ್ತ್ವವಿಲ್ಲದಿದ್ದರೂ ಉಪಶಮ ಭಾವದಿಂದ ಸುತ್ತುಮುತ್ತಲಿನ ಪ್ರಪಂಚವನ್ನು ತಿಳಿಯುವ ಮಟ್ಟಿಗಿರುವ ದೇಶಾವಧಿ ಜ್ಞಾನ.)

ವ॥ ಹೀಗೆ ಹುಟ್ಟಿದ ವಿಭಂಗಜ್ಞಾನದಿಂದ ನರಕಲೋಕ ಪ್ರಪಂಚವನ್ನು ಅರಿತವರಾಗಿ ಕಿರುಬೇಟೆಯಲ್ಲಿ ನಾಯಿಗಳು ಬೆನ್ನಟ್ಟಿದಾಗ ಕಿತ್ತುಓಡುವ ಹೆಣ್ಣು ಮೊಲದಂತೆ ಬೆದರಿ ಓಡುತ್ತ ಓಡುತ್ತ ಓಡುವ ಶಕ್ತಿ ಕುಗ್ಗಿ, ಕಾಲು ತತ್ತರಿಸಿ ಬೀಳುತ್ತಲೂ ಏಳುತ್ತಲೂ ಹೇಗೊ ಏನೊ ಕೂಟಶಾಲ್ಮಲಿಯನ್ನು ಏರುವರು; ಆ ಮರದಲ್ಲಿಯ ವಜ್ರದ ಮುಳ್ಳುಗಳು ಅಡಿಯಿಂದ ಮುಡಿವರೆಗೆ ಒಂದು ಕೂದಲೆಳೆಯಷ್ಟು ಕೂಡ ಜಾಗವುಳಿಯದಂತೆ ಮೈತುಂಬ ಚುಚ್ಚಿ ಎಲುವುಗಳನ್ನು ಭೇದಿಸಿ ಕೀಲಿಸುವುವು; ಆಗ ಅಲ್ಲಿಯೂ ನಿಲ್ಲಲಾರದೆ ಬೀಳುತ್ತ ದಿಕ್ಕುಗೆಟ್ಟು ಓಡುತ್ತ ತಳಮಳಿಸುತ್ತಿರಲು, ಅವರ ಬೆನ್ನು ಬಿಡದೆ ಅಂಟಿಕೊಂಡಂತೆ ಅಟ್ಟಿಬರುವ ಪುರಾಣನಾರಕರನ್ನು ಕಂಡು ಒಳಗೊಳಗೆ ಕುದಿಯುತ್ತ ನೀರಿನಲ್ಲಾದರೂ ಮುಳುಗುವೆನೆಂಬ ಹಂಬಲದಿಂದ ವೈತರಣಿಯ ದೊಡ್ಡ ಕೊರಕಲನ್ನು ಮೆಟ್ಟಿ ಅದರ ತೀರದಲ್ಲಿ ಹರಡಿದ ನುಣುಪಾದ ಮರಳನ್ನು ಕಂಡು, ಇದು ಮರಳಿನ ದಿಣ್ಣೆಯೆ ಎಂಬ ಭ್ರಾಂತಿಯಿಂದ ಅದರ ಮೇಲೆ ತಮ್ಮ ಮೈಯನ್ನು ಚೆಲ್ಲುವರು; ಆದರೆ ಅದು ಮರಳಾಗಿರದೆ ಕಾದ ಲೋಹದ ಹುಡಿಯಾದುದರಿಂದ—

---

* +ವ॥ ಮುಚ್ಚಿಯೀಂದಟ್ಟಿತ್ತು ಕಳ್ಳರಿ (ಅ) 1. ಖೈ (ಮ) 2. ಪು (ಅ) 3. ಮ (ಮ) 4. ಳು (ಮ) 5. ರು (ಮ)

ಪರಿಣೀವೃತ್ತಂ॥ ಪುರಿಗಡಲೆಯಂತಾನುಂ [1]ಕಾಯ್ವಾಱ[1]ದೋಡಿನ ಜೋಳದೊ
[2]ಳ್ಳರಳ[2]ಲರುವಂತಾನುಂ ಕಾರ್ಗೆಯ್ಕ ಮೋರೆಯೊಳಿಟ್ಟ ಕೆ
ಕ್ಕರಿಕೆ ಬಿರಿವಂತಾನುಂ ಮೆಯ್ ಬಿರ್ಕು ಬಿರ್ಕೆನೆ ನಿಬ್ಬರಂ
ಬಿರಿದೊಳಱುಗುಂ ಜೋಲ್ಗುಂ ವೈಚಿತ್ರ್ಯಜೀವರ ರೂಪದಿಂ ॥ ೯೨ ॥

ವ॥ ಅಂತಲ್ಲಿಯುಂ ಸೈರಿಸದೆ ನದೀಹ್ರದಮಂ ಪುಗುವುದುಂ—

ಕಂ॥ ಮಕರಂ ನಾರಕನಹಿ ನಾ
ರಕಂ ಮಹಾನಕ್ರನಾರಕಂ ಕಮಠಂ ನಾ
ರಕನುಗ್ರ ಗ್ರಾಹಂ ನಾ
ರಕನವು ತಿನೆ ಪೊಕ್ಕ ನಾರಕಂ ಬರ್ದುಕುವನೇ ॥ ೯೩ ॥

ವ॥ ಮತ್ತಮಲ್ಲಿಯುಂ ಮೆಯ್ಯಂ ಸಿಲಿಸಲಾಱದೆ ವೈತರಣಿಯಂ ಪೊಱಮಟ್ಟು ಪರಿತಂದಸಿಪತ್ರ ವನಮಂ ಪುಗುಪುದುಮಲ್ಲಿ—

ಉ॥ ಮರ್ಮರಪತ್ರಮಂಬು ತಳಮಂ ನಡುವಂತಿರೆ ನಟ್ಟೊಡೆತ್ತ ಬೀ
ೞ್ವರ್ಮಗುಟ್ಟಿತ್ತ ಪೂಮಿಡಿಯ ಪೂವಿನ ಕಾಯ್ಗಳ ಕಯ್ದು [3]ವುಳ್ಕುಗುಂ[3]
ಮರ್ಮಮನಾರ್ ಶರಣ್ಯಮೆಮಗಾರ್ [4]ನೆಱ[4]ವಾರ್ ಪೆಱಗಿಕ್ಕಿ ಕಾವರಾ
ರಾರ್ಮೆನುತೊೞಲ್ದಲುತಿರ್ಪುದೆ ನಾರಕರ್ಗಲ್ಲಿ [5]ತಲ್ಲ[ಟ][5]ಂ ॥ ೯೪ ॥

ವ॥ ಮತ್ತಂ ದೆಸೆಗಳ್ ಪಿಡಿಪಿಡಿದು ನುಂಗಿದಪುವು ನೆಲನೆ ಬಾಯ್ದೆಱೆದಪ್ಪುದು ಆಕಾಶಂ ಮೇಗೆ ಕವಿದಪುದು ಗಾಳಿಯೆ ನಂಜಾದುದು ಎಂಬ ಸಕಲ ಪ್ರಕ್ಷೋಭದೊಳ್ ವಿಪ್ವಳರಾಗಿರ್ದ ನಿರಯ ಜರನೆಯ್ದಿ ಸುತ್ತಿಮುತ್ತಿ ಪಿಡಿದುಗಿಬಗಿ ಮಾಡಿ—

---

೯೨. ಹುರಿಗಡಲೆಯಂತೆಯೂ, ಹುರಿಯುವ ಹೆಂಚಿನ ಮೇಲಿರುವ ಜೋಳದ ಅರಳಿನಂತೆಯೂ, ಕಾರುಗದ್ದೆಯ ಮೋರೆಯಲ್ಲಿಟ್ಟ ಕೆಕ್ಕರಿಕೆ ಹಣ್ಣಿನಂತೆಯೂ ಮೈಯೆಲ್ಲ ಬಿರುಕ್ ಬಿರುಕೆಂದು ಬಿರಿಯಲಾಗಿ ಯಾತನೆಯಿಂದ ಚೀರುವರು ; ಎಚ್ಚರತಪ್ಪುವರು.

ವ॥ ಹೀಗೆ ಅಲ್ಲಿಯೂ ತಾಳಲಾರದೆ ನದಿಯ ಮಡುವಿನಲ್ಲಿ ದುಮುಕಿದಾಗ ಅಲ್ಲಿ—

೯೩. ಮಕರವಾಗಿ, ಹಾವಾಗಿ, ಮಹಾಗಾತ್ರದ ಮೊಸಳೆಯಾಗಿ, ಆಮೆಯಾಗಿ, ನಾರಕಜೀವಗಳು ಅವರನ್ನು ಹಿಡಿದು ಹರಿಹರಿದು ತಿನ್ನತೊಡಗುವುವು. ಇವುಗಳ ಕೈಯಲ್ಲಿ ನಾರಕಜೀವಿ ಬದುಕಿ ಉಳಿಯುವುದೆಂತು ?

ವ॥ ಹೀಗೆ ಅಲ್ಲಿಯೂ ತಡೆದುಕೊಳ್ಳಲಾಗದೆ ವೈತರಣಿಯಿಂದ ಹೊರಬಿದ್ದು ಓಡಿಹೋಗಿ ಅಸಿಪತ್ರವನವನು ಹೊಗುವರು. ಅಲ್ಲಿ—

೯೪. ಮರ್ಮರ ಧ್ವನಿಮಾಡುವ ಅದರ ಎಲೆಗಳೆಲ್ಲ ಬಾಣಗಳಂತೆ ಅಂಗೈ ಅಂಗಾಲುಗಳಿಗೆ ನಾಟಲಾಗಿ, ಕೆಳಗೆ ಬೀಳುವರು ; ಆಗ ಮೊಗ್ಗು, ಮಿಡಿ, ಹೂ, ಕಾಯಿಗಳು ಆಯುಧಗಳಾಗಿ ಮರ್ಮಕ್ಕೆ ಚುಚ್ಚುವುವು ; ನಾವಿನ್ನು ಯಾರಿಗೆ ಮೊರೆಯಿಡೋಣ ? ನಮಗೆ ನೆರವಾಗುವವರು ಯಾರು ? ಇಲ್ಲಿಂದ ದಾಟಿಸಿ ಕಾಪಾಡುವ ಪುಣ್ಯಾತ್ಮರಾರು ? ಎಂದು ಆರ್ತರಾಗಿ ಕೂಗಿಕೊಳ್ಳುತ್ತ ನರಳುವುದೆ ನಾರಕರಿಗೆ ಗತಿಯಾಗುವುದು.

ವ॥ ಮತ್ತು ದಿಕ್ಕುಗಳೆ ಹಿಡಿಹಿಡಿದು ನುಂಗುವುವು; ನೆಲವೆ ಬಾಯಿ ತೆರೆಯುವುದು; ಆಕಾಶ ಮೇಲೆ ಕವಿದು ಬೀಳುವುದು; ಗಾಳಿಯೆ ವಿಷವಾಗುವುದು—ಈ ಎಲ್ಲ ಸಂಕಟದಲ್ಲಿ ಕುದಿಯುತ್ತ ಇರುವ ನಾರಕಿಗಳನ್ನು ಸುತ್ತಲೂ ಮುತ್ತಿಕೊಂಡು ಹಿಡಿದು ತಳಮಳಗೊಳಿಸಿ—

---

1. ಕಯ್ವಾಱ (ಅ) 2. ಳ್ಳರಲ (ಮ) 3. ಮಳ್ಗುಗುಂ (ಅ) 4. ನೆರ (ಅ) 5. ಳ (ಮ)

ಉ॥ ಕರ್ಬಿನಗಾಣದೊಳ್ ಮಱುಗುವಾಣದೊಳೆಣ್ಣೆಯ ಕುಂಡದೊಳ್ ಕನ
ಲ್ದರ್ಬಿಸುವಚ್ಚಗೊಂಡದೋಳಗುರ್ಬಿಸೆ ಸೀಳಿಸಿ ಮಾಣದಿಕ್ಕಿ ಪೋ
ಟ್ಬಿರ್ವಗಿ ಮಾಡಿ ತಾಳಿಸೆ ಸುರಳ್ಚಿನೆಗಂ ನೆಱೆ ಸಾಯಸಂತಕಂ
ಚರ್ವಿತ ಚರ್ವಣಕ್ಕವನನೋವಿದನಾಗಳೆ ಸಾಯಲೀಗುಮೇ ॥ ೯೫ ॥

ವ॥ ಅಂತು ಪಿಡಿಯೆ ಕಕ್ಕ[1][ಱ][1]ಗಟಲ್ಲು ಸೊಪ್ಪುಸೊ[2]ಪ್ಪ[2]ಪ್ಪೆಲ್ಲಂ ಕುದಿಯಿಸೆ ತತ್ತಳಗುದಿದು ಕೋಟ್ಗುದಿಗೊಳ್ಳ ಮೆಯ್ಗುಂಡ[3]ಮಂ[3] ತಾಳಿಸೆ ಸುರುಂಟಿ ಬ[4]ಗಿ[4]ದಾ ಮೆಯ್ಯಂ ಸುಡೆ ಬಿಸಿಲ ಬೆಣ್ಣೆಯಂತೆಕರಗಿ ಕಱಂಪು ನಾಱುವ ಕೊಟ್ಟೆನುಮಗುರ್ವಂ ಪಡೆಯೆ ಜೀವನ್ಮೃತಾವಸ್ಥೆಯೊಳಲ್ಲಿಂದಂ ತೆಗೆದು ಬೇಱೆ ನಿಱಿಸಿ—

ಕಂ॥ ಬಲ್ಲಡಗಿಲ್ಲದೊಡುಣಿಸಣ
ಮಿಲ್ಲೀ ಪ್ರಭುಗೆನುತುಮವನ ತೊಡೆಯಡಗನೆ ತ
ಳ್ವಿಲ್ಲದವಂಗಿಕ್ಕುವರೇಂ
ಪೊಲ್ಲದುದೋ ಮಾಂಸಸೇವನ ಪ್ರತಿಪಾಪಂ ॥ ೯೬ ॥

ನಾಯಕ [5]ಸಾರ್[5]ವೊಲಿದು ಕಡು
ಸೀಯೆನೆ ಕುಡಿಯೆಂದು ತಂದು ಕುಡಿಯಿಸುವರ್ ತ
ಪ್ಪಾಯಸ ರಸಮಂ ಬಸನಿಗ
ಪಾಯಂ ಭವಭವದೊಳೆಂದುಮೇಂ ಕುಂದುಗುಮೇ ॥ ೯೭ ॥

ಕಂ॥ ಪರವಧುವನಲ್ಲದಂತಃ
ಪುರವಧುವಂ ಮೆಚ್ಚೆಯೆಂದು ತಂದಪ್ಪಿಸುವರ್
ಪರಿತಪ್ತಲೋಹಮಯ ಸುಂ
ದರಿಯಂ ಸುಂದರಿಯರಲ್ಲಿ ಮೋ[6]ಱ[6]ಯಿಲ್ಲದರೊಳ್ ॥ ೯೮ ॥

೯೫. ಕಬ್ಬಿನ ಗಾಣವಲ್ಲಿಯೂ, ಕುದಿಯುವ ಎಣ್ಣೆಯ ಕುಂಡದಲ್ಲಿಯೂ, ಸಿಗಿಸಿಗಿಯಾದ ಬೆಂಕಿಕೊಂಡದಲ್ಲಿಯೂ ಸೀಳಿ ಸೀಳಿ ಇಟ್ಟು, ಎರಡೆರಡು ಹೋಳು ಮಾಡಿ, ತಾಳಿಸಿ, ಸುಟ್ಟು ಕರಿಕಾಗುವಂತೆ ಮಾಡುವರು. ಇಷ್ಟೆಲ್ಲ ಆದರೂ ನಾರಕಿ ಸಾಯುವುದಿಲ್ಲ. ಮಾಡಿದುದನ್ನೆ ಮತ್ತೆ ಮತ್ತೆ ಮಾಡಿ ಗೋಳಿಡಿಸಲು ಹೊರಟ ಅಂತಕನು ಅವನನ್ನು ಸಾಯಗೊಡುವನೆ,?

ವ॥ ಹಾಗೆ ಹಿಡಿದು ಹಿಂಡಲಾಗಿ ಎಲುಪುಗಳೆಲ್ಲ ಹಿಪ್ಪೆಸಿಪ್ಪೆಯಾಗಿ ಸಳಸಳನೆ ಕುದಿಸಲಾಗಿ ಮೈಯ ಖಂಡವೆಲ್ಲ ಬೆಂದು, ತಾಳಿಸಲಾಗಿ ಸುರುಟಿಕೊಂಡು, ಚುಚ್ಚಿ ಹಿಡಿದು ಬೆಂಕಿಯಲ್ಲಿ ಸುಡಲಾಗಿ ಬಿಸಿಲಲ್ಲಿಯೆ ಬೆಣ್ಣೆಯಂತೆ ಕರಗಿ ದುರ್ವಾಸನೆಯಿಡುವ ಮೈಯ ನೆಣ ಕರಿಕಾಗಿ ಹೇಸಿಗೆ ಅತಿಶಯವಾಗಲಾಗಿ ಜೀವವಿದ್ದರೂ ಸತ್ತಂತೆ ಆಗಿರುವ ಆ ಅವಸ್ಥೆಯಲ್ಲಿ ಅಲ್ಲಿಂದ ತೆಗೆದು ಬೇರೆ ಜಾಗದಲ್ಲಿ ನಿಲ್ಲಿಸಿ—

೯೬. "ಈ ಒಡೆಯನಿಗೆ ಬಲವಾದ ಮಾಂಸವಿಲ್ಲದೆ ಊಟವಾಗದು ಅಲ್ಲವೆ ?" ಎಂದು ಅವನ ತೊಡೆಯ ಮಾಂಸವನ್ನೆ ಕುಯ್ದು ಅವನಿಗೆ ತಿನ್ನಲಿಡುವರು. ಮಾಂಸ ಭಕ್ಷಣ ಎಂತಹ ಹೊಲಸಾದ ಪಾಪ ಕರ್ಮ !

೯೭. "ಇದು ನೋಡು, ಶ್ರೇಷ್ಠವಾದ ರಸ; ಅಮೃತದಂತೆ ಬಲು ಸಿಹಿಯಾಗಿದೆ. ಸಂತೋಷದಿಂದ ಕುಡಿ" ಎಂದು ಕುದಿಯುವ ಕಬ್ಬಿಣದ ದ್ರವವನ್ನು ಕುಡಿಸುವರು. ದುರ್ವ್ಯಸನಿಯಾದವನಿಗೆ ಜನ್ಮಜನ್ಮಕ್ಕೂ ಅಪಾಯವಿದ್ದುದೇ. ಅದೇನು ಕುಂದುವುದೆ ?

೯೮. "ನಿನಗೆ ಪರಸ್ತ್ರೀಯಲ್ಲದೆ ಮಾಡಿಕೊಂಡ ಮಡದಿ ಮೆಚ್ಚಾಗುವುದಿಲ್ಲ ಅಲ್ಲವೆ? ಇಕೊ ಇವಳನ್ನು ಹಿಡಿ" ಎಂದು ಕೆಂಪಗೆ ಕಾದ ಲೋಹದ ಪುತ್ಥಳಿಯನ್ನು ತಂದು ಅವನಿಂದ ಅಪ್ಪಿಸುವರು.

1. ಳ (ಮ) 2. × (ಮ) 3. ಮುಂ (ಅ) 4. ತ್ರಿ (ಅ) 5. ಸಾಱ (ಅ) 6. ರೆ (ಮ)

ವ॥ ಅಂತು ಲೋಹಮಯಪುತ್ರಿಕೆಗಳನಪ್ಪಿಸಿದಾಗಳ್[1]ಲ್ವು[1]ಱಿಯೆ ಮುತ್ತಿನ ರಸಾದಿಧಾತುಗಳೆಲ್ಲಂ ಪತ್ತಿ ಮೆತ್ತಿದಂತಿರೆ ಪೆಣವೊಗೆಸುತ್ತಿ ನರಕಲೋಕಮೆಲ್ಲಮಂತಕ ಡಾಮರದೊಳ್ ಬೆಂದು ಧೂಮಮಯಮಾದ ದಿಶಾಭೂಗಂ ಕವಿದಂತಾಭೀಳಮಾಗೆ ಭೈರವಂ ಬೆರಸೊದಱಿ ಮೂದಲಿಸಿ ಕೊಲ್ವರುಂ ಕೊಲೆಯಿಂ ಕರಮಟಿಯೆಯುಂ ನೊಂದು ಪ್ರಾಣಮುನೆಂತಾನುಂ ಪರಮಾಯುಷ್ಯಂಬರಂ ನಿಱಿಸಿ—

ಕಂ॥ ತೆರ್ಪತ್ತು [2]ಬಿಟ್ದು[2] ನವೆಯು
ತ್ತಿರ್ಪರ್ ನಾರಕರವಂದಿರೊಡಲುಂ ಮನಮುಂ
ಕರ್ಪಿಡಿದು ಕೃಷ್ಣಲೇಶ್ಯೆಯ
ಡರ್ಪಿರ್ಪಂತಿರ್ಪುವನಿತ ಪುಣ್ಯರುಮೊಳರೇ ॥ ೯೯ ॥

ಎನಿತೊಳವು ಕೊಳೆವ ಪಡುಕೆಗ
ಳನಿತಱ ದುರ್ಗಂಧಮವರ ಮೆಯ್ಯ ನಿಸರ್ಗಾ
ತ್ಯನುಪಮ ಘಾತಿಯ ಪಟುಗೆಱ
ದ ನಾತಮಂ ಪೋಲವವರದೇಂ ಕಿಸುಗುಳರೋ ॥ ೧೦೦ ॥

ವ॥ ಅಂತು ಹುಂಡ ಸಂಸ್ಥಾನರುಂ ನಪುಂಸಕರುಮಪ್ಪ ನಾರಕರ ಜನ್ಮಭೂಮಿಗಳಾದೇೞಱೊಳಂ ನೆಲಸುವ ಜೀವಂಗಳ ಕರ್ಮ ತಾರತಮ್ಯ ಪರಮೋತ್ಕೃಷ್ಟಸ್ಥಿತಿ—

ಕಂ॥ ಕುಪಿತಮತಿ [3]ಸಂಜ್ಞಿ[3]ಯುಂ ಸರಿ
ಸೃಪಮುಂ ವಿಹಗಮುಮಹೀಂದ್ರಮುಂ ದ್ವಿಪರಿಪುವುಂ
ಚಪಲಾಂಗನೆಯುಂಮಿಂಬೞ
ಸು ಪುರುಷನುಂ ನೆಲ[4]ಸನು[4]ಕ್ರಮಕ್ರಮದಿಂದಂ ॥ ೧೦೧ ॥

ವ॥ ಹಾಗೆ ಲೋಹದ ಬೊಂಬೆಗಳನ್ನು ಅಪ್ಪಿಸಿದಾಗ ಎಲುವೊಂದನ್ನು ಬಿಟ್ಟು ದೇಹದ ರಕ್ತ ಮೊದಲಾದ ಧಾತುಗಳೆಲ್ಲ ಜಿಗಿಜಿಗಿಯಾಗಿ ಮೆತ್ತಿಕೊಂಡು ಹೆಣಹೊಗೆ ಸುತ್ತಿ, ನರಕಲೋಕವೆಲ್ಲವೂ ಈ ಬಗೆಯ ಯಮಹಿಂಸೆಯಿಂದ ಬೆಂದು ದಿಕ್ಕುಗಳೆಲ್ಲ ಹೊಗೆಕಾರಿದಂತೆ ಭಯಾನಕವಾಗಲು ಭೀಕರವಾಗಿ ಗರ್ಜಿಸಿ ಮೂದಲಿಸಿ ಕೊಲ್ಲುವರು; ಹೀಗೆ ಕೊಂದರೂ ಸಾಯದೆ ನಾರಕಿಗಳು ಹೇಗೊ ಏನೊ ತಮ್ಮ ನರಕಾಯುಷ್ಯ ಮುಗಿಯುವವರೆಗೆ ಪ್ರಾಣಹಿಡಿದೇ ಇರುವರು.

೯೯. (ಈ ಹಿಂಸೆಯಿಂದ) ಜೇತರಿಸಿಕೊಂಡು ಬಿದ್ದು ನಾರಕರು ನವೆಯುತ್ತಿರುವರು. ಅವರ ದೇಹ ಹಾಗು ಮನಸ್ಸು ಎರಡೂ ಕಪ್ಪಿಟ್ಟು ಕೃಷ್ಣಲೇಶ್ಯ ಆವರಿಸಿದಂತೆ ಇರುವುವು. ಅವರಂತಹ ಪುಣ್ಯಹೀನರು (ಇನ್ನಾರಾದರೂ) ಉಂಟೆ ?

೧೦೦. ಕೊಳೆತು ನಾರುವ ಸ್ಥಳಗಳು ಎಷ್ಟಿವೆಯೊ ಅವೆಲ್ಲವುಗಳ ದುರ್ಗಂಧವನ್ನು ಒಟ್ಟಿಗೆ ಬೆರಸಿ ತಂದರೂ, ಈ ನಾರಕಿಗಳ ಮೈಯ ನಾತಕ್ಕೆ ಅದು ಹೋಲಿಕೆ ಎಂದು ಕೂಡ ಎನಿಸಲಾರದು. (ಎಂದಮೇಲೆ) ಇವರು ಎಂತಹ ಹೇಸಿಗಳು ?

ವ॥ ಹೀಗೆ ಹುಂಡಸಂಸ್ಥಾನರೂ ನಪುಂಸಕರೂ ಆದ ನಾರಕರ ಜನ್ಮಭೂಮಿಗಳಾದ ಈ ಏಳು ನರಕಗಳಲ್ಲಿ ನೆಲಸುವ ಜೀವಗಳು ಕರ್ಮತಾರತಮ್ಯದಿಂದ—

೧೦೧. ಕೋಪಗೊಂಡ ಬುದ್ಧಿಯ ಸಂಜಿಯೂ (ಒಂದು ಪ್ರಾಣಿಯೆ ?), ಸರಿಸೃಪವೂ, ಪಕ್ಷಿಯೂ, ಯಜಮಾನ ಸರ್ಪವೂ, ಸಿಂಹವೂ, ಚಪಲಾಂಗನೆಯೂ, ಆಕೆಯೊಡನೆ ಪುರುಷನೂ ಅನುಕ್ರಮ ಕ್ರಮದಿಂದ ನೆಲಸಿ—

---

1. ಲುವು (ಮ) 2. ಬಿರ್ದು (ಅ) 3. ಸಂಜಿ (ಮ) 4. ಸುವ (ಅ)

ಕಂ॥ ಆಪತ್ತುವೆರಸು ಮೃಗಾಯಾ
ವ್ಯಾಪಾರದೆ ಮಱುಗುವವನಿಪತಿಯರ್ ಕುಂ
ಭೀಪಾಕಕ್ಕೆ ಕೃಷ್ಟಪಾಕ
ವ್ಯಾಪನ್ನರ್ ಮಱುಗುವರ್ ನಿರಂತರಮುವ[1][ಱೊ][1]ಳ್ ॥ ೧೦೨ ॥

ಈಪೇ[2][ಟ್ಟಿ][2] ನರಕ ದುಃಖದ
ಪಾಪಂ ಕಡುವಿರಿ[3]ದಿದರ್ಕೆ[3] ರತ್ನಪ್ರಭೆಯಿಂ
ದಾಪತ್ತುವಟ್ಟು ಬಂದೀ
ದ್ವೀಪದ ಭರತಪ್ರಸಿದ್ಧ ರಜತಾಚಳದೊಳ್ ॥ ೧೦೩ ॥

ವ॥ ಉತ್ತರ ಶ್ರೇಣಿಯ ಗಗನವಲ್ಲಭ ಪುರಮನಾಳ್ವ ಖೇಚರರಾಜಂ ಸಿಂಹನಾದಂಗಮಾತನ ಮನೋವೃತ್ತಿ ಜನ್ಮಭೂಮಿ ಮೇಘಮಾಲಿನಿಗಂ ಮಗನ್ನೆ ನೀಂ ಮೇಘನಾದನಾಗಿ ನಿಜಜನಕ ಪರೋಕ್ಷದೊಳ್ ವಿಯಚ್ಚರ ಚಕ್ರವರ್ತಿತ್ವಮಂ ಪಡೆದು ನಿನ್ನಚ್ಚೇತ್ತಿದನ್ನರುಂ ಪಱಿದು ಪತ್ತಿಸಿದನ್ನರುಮಪ್ಪೈದುಸ್ಸೂರ್ವರ್ ಮಕ್ಕಳ್ವೆರಸಿನ್ನೆವರಮರಸುಗೆಯ್ದು ನೀನಿಂದು ವಂದನಾಭಕ್ತಿಗೆ ವಂದುವಱಿಂದಮೊಂದೊರ್ವರ ಕಂಡತಿಪ್ರೀತಿಯಾದುದು ಪ್ರಥಮ ಭೂಮಿಯೊಳ್ ಧರಣೇಂದ್ರಂ ಕೆಯ್ಕೊಳಿಸೆ ನಿನ್ನ ಕೊಂಡ ಸಮ್ಯಗ್ದರ್ಶನ ದೀಪಿಕಾ ಪ್ರದ್ಯೋತಮನವಲಂಬಿಸಿ ಮೋಹಾಂಧ ತಮಸಾಧೀನ ಮಾನಸನಾಗದೆ—

ಕಂ॥ ಒಡಹುಟ್ಟಿಯುಮೊಡವಳೆದುಂ
ಕಡೆಯೊಳ್ ನೀನೆನ್ನ[4][ನಿ][4]ಂತು ಕಂಡುಂಬಂದಿ
ರ್ದೊಡೆಯುಡಿದೀ ನಮ್ಮಿರ್ವರ
ತೊಡರ್ಪಿದಂ ನೀಂ ಪುನರ್ನವಂ ಮಾಡಿನ್ನುಂ ॥ ೧೦೪ ॥

---

೧೦೨. ಆಪತ್ತಿನಿಂದೊಡಗೂಡಿ ಬೇಟೆಯ ವ್ಯಸನದಲ್ಲಿ ಕುದಿಯುವ ಅರಸುಗಳು ಕುಂಭೀಪಾಕದಲ್ಲಿ ಕೃಷ್ಟಪಾಕಕೆ ಒಳಗಾಗಿ ನಿರಂತರ ದುಃಖವನ್ನು ಅನುಭವಿಸುವರು.

೧೦೩. ಹೀಗೆಲ್ಲ ಇರುವ ಅತಿಶಯವಾದ ದುಃಖಕ್ಕೆ ಕಾರಣವಾದುದು ಮಹಾಪಾಪ. ನೀನು (ಪಾಪದಿಂದ) ರತ್ನಪ್ರಭಾನರಕದಲ್ಲಿ ಯಾತನೆಯನ್ನು ಅನುಭವಿಸಿದ ಬಳಿಕ ಅಲ್ಲಿಂದ ಬಂದು ಈ ದ್ವೀಪದಲ್ಲಿ ಪ್ರಸಿದ್ಧವಾದ ರಜತಪರ್ವತದ—

ವ॥ ಉತ್ತರ ಶ್ರೇಣಿಯ ಗಗನವಲ್ಲಭ ಪುರಕ್ಕೊಡೆಯನಾದ ಖೇಚರರಾಜ ಸಿಂಹನಾದನಿಗೂ ಆತನ ಮನೋವಲ್ಲಭೆ ಮೇಘಮಾಲಿನಿಗೂ ಮೇಘನಾದನೆಂಬ ಮಗನಾಗಿ ಹುಟ್ಟಿದೆ. ನಿಮ್ಮ ತಂದೆಯ ತರುವಾಯ ಚಕ್ರವರ್ತಿ ಪದವಿಯನ್ನು ಪಡೆದು, ನಿನ್ನನ್ನು ಅಚ್ಚಳಿಯದೆ ಹೋಲುವ ಐನೂರ್ವರು ಮಕ್ಕಳೊಡನೆ ಈವರೆಗೆ ರಾಜ್ಯವಾಳುತ್ತಿದ್ದು, ಈ ದಿವಸ ನೀನು ವಂದನಾಭಕ್ತಿಗೆಂದು ಇಲ್ಲಿಗೆ ಬಂದೆ. ನಾವು ಪರಸ್ಪರರನ್ನು ಕಂಡು ನಮ್ಮಿಬ್ಬರಿಗೂ ಅತಿಪ್ರೀತಿಯಾಯಿತು. ಮೊದಲನೆಯ ನರಕದಲ್ಲಿ ನೀನಿರುವಾಗ ಧರಣೇಂದ್ರನು ಬೋಧಿಸಿ ಹೊತ್ತಿಸಿದ ಸಮ್ಯಗ್ದರ್ಶನವೆಂಬ ದೀಪದ ಬೆಳಕಿನಲ್ಲಿ ನೀನು ಅಜ್ಞಾನವೆಂಬ ಕತ್ತಲೆಯಿಂದ ದೂರವಾದೆ.

೧೦೪. ನಾವಿಬ್ಬರೂ ಒಡಹುಟ್ಟುಗಳಾಗಿ ಒಡನೊಡನೆ ಬೆಳೆದುಬಂದವರು. (ನಡುವೆ ಅಗಲಿ ಹೋಗಿದ್ದರೂ) ಕೊನೆಗೆ ಇಲ್ಲಿ ಹೀಗೆ ನೀನು ನನ್ನನ್ನು ಕಂಡೆ. ನಮ್ಮ ಕಡಿದುಹೋದ ಬಾಂಧವ್ಯವನ್ನು ನೀನು ಇನ್ನು ಪುನಃ ಪಡೆದುಕೊಳ್ಳಬೇಕು.

---

1. ಱೊ. (ಮ) 2. ಳ್ದ (ಮ) 3. ದದರ್ಕೆ (ಅ) 4. ಮಿ (ಮ)

ಕಂ॥ ಅದು ನಿಸ್ಸಂಗತೆಯಿಂದ
ಲ್ಲದಾಗದದು ಜಾತರೂಪದಿಂದಲ್ಲದೆ ತೀ
ರದದು ಶುಭದುದಯದಿಂದ
ಲ್ಲದೆ ಬಾರದದಕ್ಕೆ ತಡೆಯದುದ್ಯತನಾಗಾ ॥ ೧೦೫ ॥

ಎಂದು ಪುನರ್ದರ್ಶನವು
ಕ್ಕೆಂದುಂ ಯಶಮಕ್ಕೆ ವಿಜಯಮಕ್ಕೆಂದೊಳ್ಪ
ಕ್ಕೆಂದಘ ವಿಘಾತಿಯಕ್ಕೆಂ
ದಂದಚ್ಯುತ ಕಲ್ಪಕಚ್ಯುತೇಂದ್ರಂ ಪೋದಂ ॥ ೧೦೬ ॥

ಉ॥ ಇತ್ತ ನಿಜಾಲಯಕ್ಕೆ ವಿಭು ಬಂದು ಮನಂಬಿಡೆ ಮೇಘನಾದನ
ತ್ಯುತ್ತಮ ಮೋಕ್ಷಲಕ್ಷ್ಮಿಗಿರದಾಟಿಸಿ ನಿಶ್ಚಿತನಾಗಿ ನಂದನಂ
ಗಿತ್ತದನಂಬರೇಚರ ವಿಭೂತಿಯನಂದಭಿನಂದನಾಖ್ಯ ವೃ
ದ್ಧೋತ್ತಮ ಯೋಗಿಗಳ್ಗೆ ಜಗಿ ಕೊಂಡನಖಂಡಿತ ಜೈನದೀಕ್ಷೆಯಂ ॥ ೧೦೭ ॥

ವ॥ ಅಂತು ಮೇಘನಾದಂ ತನ್ನ ಮಗಂ ಸಿಂಹನಾದಂಗೆ ರಾಜ್ಯಭಾರಮನಿತ್ತು ತಪೋಭಾರದೊಳ್ ತಾಂ ನಿಂದು ಶುಭಭಾವ ನಿತಾಂತ ಶುದ್ಧಾಂತರಂಗನನಶನಾದಿ ತಪೋವೃದ್ಧಿವರ್ತಿತಾದ್ಮಾವಸಾನನೊರ್ಮೆ ಗಿರಿನಂದನ ಗಿರಿಶಿಖರಾಯಮಾನಂ—

ಉ॥ ಕಲ್ಮೆಲೆ ನಿಂದು ಯೋಗದ ನಿಯೋಗದಿನಿರ್ಪುದುಮೊರ್ವನತ್ತಲಿ
ತ್ತಲ್ ನಭದೊಳ್ [1]ತೊಟಲ್ವ[1] ಸುರನಾಮುನಿರಾಜನ ಮೇಲೆ ಕೀಱಿ ಪಾ
ಱಲ್ ನಿಜಯಾನಮಾಱದ[2]ದು[2] ಕೀಲಿಸಿದಂತಿರೆ ನೋಡಿ ಕಂಡವಂ
ದಲ್ ನೆನೆದಂ ವಿಭಂಗದಿನಶೀತ ಭವಾಂತರ ಭೂರಿ ವೈರಮಂ ॥ ೧೦೮ ॥

---

೧೦೫. ಅದು ನಿಸ್ಸಂಗತೆಯಿಂದಲ್ಲದೆ ಆಗದು; ದಿಗಂಬರ ವ್ರತದಿಂದಲ್ಲದೆ ಕೈಗೂಡದು ; ಶುಭೋದಯದಿಂದಲ್ಲದೆ ಬರಲಾರದು. ಆದುದರಿಂದ ತಡಮಾಡದೆ ನೀನು ಅದಕ್ಕಾಗಿ ಪ್ರಯತ್ನಿಸು.

೧೦೬. ಪುನಃ ಭೇಟಿಯಾಗೋಣ ನಿನಗೆ ಯಶಸ್ಸಾಗಲಿ, ಗೆಲವಾಗಲಿ, ಕಲ್ಯಾಣವಾಗಲಿ, ಕರ್ಮಮುಕ್ತಿಯಾಗಲಿ—ಹೀಗೆಂದು ನುಡಿದು ಅಚ್ಯುತೇಂದ್ರನು ಅಚ್ಯುತಕಲ್ಪಕ್ಕೆ ಹೋದನು.

೧೦೭. ಇತ್ತ ಮೇಘನಾದ ರಾಜನು ತನ್ನ ನಿವಾಸಕ್ಕೆ ಮರಳಿ ಬಂದನು. ಅತ್ಯುತ್ತಮ ಪದವಾದ ಮೋಕ್ಷವನ್ನು ಪಡೆಯುವ ನಿಶ್ಚಯದಿಂದ ತನ್ನ ಖೇಚರ ರಾಜ್ಯವನ್ನು ಮಗನಿಗೆ ಒಪ್ಪಿಸಿ, ಅಭಿನಂದನರೆಂಬ ವೃದ್ಧರಾದ ಶ್ರೇಷ್ಠ ಮುನಿಗಳ ಪಾದ ಸನ್ನಿಧಿಯಲ್ಲಿ ಜೈನದೀಕ್ಷೆಯನ್ನು ಕೈಕೊಂಡನು.

ವ॥ ಹಾಗೆ ತನ್ನ ಮಗನಾದ ಸಿಂಹನಾದನಿಗೆ ರಾಜ್ಯಭಾರವನ್ನು ವಹಿಸಿ ತಪಶ್ಚರ್ಯೆಗೆ ತೊಡಗಿದನು. ಶುದ್ಧ ಭಾವದಿಂದ ಪವಿತ್ರಾತ್ಮನಾಗಿ ಅನಶನವೇ ಮೊದಲಾದ ತಪಗಳನ್ನು ಮಾಡುತ್ತ ಗಿರಿನಂದನವೆಂಬ ಬೆಟ್ಟದಮೇಲೆ ತಾನೆ ಅದರ ಶಿಖರವೋ ಏನೊ ಎಂಬಂತೆ (ಪ್ರತಿಮಾಯೋಗದಲ್ಲಿ) ನಿಂತನು.

೧೦೮. ಹಾಗೆ ಆತನು (ಬೇಸಗೆಯಲ್ಲಿ ಕಾಯ್ದ) ಕಲ್ಲಿನ ಮೇಲೆ ನಿಂತು ತಪಸ್ಸು ಮಾಡುತ್ತಿರುವಾಗ ಆಕಾಶದಲ್ಲಿ ಅತ್ತಿತ್ತ ಅಲೆದಾಡುತ್ತಿದ್ದ ದೇವನೊಬ್ಬನು ಆತನು ನಿಂತ ಸ್ಥಳದಮೇಲೆ ಹಾರಿಹೋಗುತ್ತಿರಲು ಆತನ ವಿಮಾನವು ಕೀಲಿಸಿದಂತೆ ತಟ್ಟನೆ ನಿಂತುಬಿಟ್ಟಿತು. ಅದನ್ನು ಕಂಡು ಅವನು ವಿಭಂಗಜ್ಞಾನದಿಂದ ಪೂರ್ವಜನ್ಮದ ವೈರವನ್ನು ಸ್ಮರಿಸಿಕೊಂಡನು.

1, ತೊಳರ್ವ (ಮ) 2. ರೆ (ಅ)

ವ॥ ಆತಂ ಮುನ್ನಿನ ಭವದೊಳ್ ದಮಿತಾರಿ ಪಕ್ಷಮಾಗಿ ಬಂದಾ ಮುನೀಶ್ವರನನನಂತವೀರ್ಯನಪ್ಪ ಭವದೊಳಿದಿರ್ಚಿ ತನ್ನ ಸತ್ತಂದಿನ್ನ ವೈರವಂ ಬಗೆದು ಸುಕಂಠಂ ಮುಕ್ತಕಂಠನೊದಱಿ ಬಯ್ದು ಮೂದಲಿಸಿ ಮಹೋಪಸರ್ಗಂಗೆಯ್ವುದುಮದಂ ಸೈರಿಸಿ ಚತುರ್ವಿಧಾಹಾರ ಶರೀರ ಪ್ರತ್ಯಾಖ್ಯಾನ ಪೂರ್ವಕಂ ಸನ್ಯಸನವಿಧಿಯೊಳ್ ಶುಭಪರಿಣಾಮ ನಿಕಾಯ ಕಮನೀಯಾಂತರಂಗಂ ತದುಪಸರ್ಗದೊಳ್ ಮಡಿಪಿ—

ಕಂ॥ ಸುರರಾಜಂ ಜಿನಚಂದ್ರಂ
ಬರಮಾವನುಮಿಲ್ಲ ಕಲ್ಪದಚ್ಯುತಕಲ್ಪಂ
ಬರಮಾವುದುಮಿಲ್ಲಾ ದೊರೆ
ದೊರೆವಿಡಿದಿರೆ ತತ್ಪ್ರತೀಂದ್ರಪದಮಂ ಪಡೆದಂ ॥ ೧೦೯ ॥

ಉ॥ ತಂತ್ರನಿಯಂತ್ರಣಂ ಬಿನದವೋಲಗಮಕ್ಕರಗೊಟ್ಟಿ ಕಾರ್ಯಸ
ನ್ಮಂತ್ರಮುದಾತ್ತವೃತ್ತಿ ಪರಮಾಗಮಭಾವನೆ ವೃದ್ಧಸೇವೆ ಯಾ
ನಂ ತ್ರಿಜಗದ್ಗುರು ಪ್ರಣತಿಯೆಂಬಿವನಾಗಳುಮೊಂದೆ ಕೀಲೆ ದಲ್
ಜಂತ್ರದ ಪಾಪೆಯಂತೊಡನೊಡರ್ಚುವನಿಂದ್ರನುಮಾಪ್ರತೀಂದ್ರನುಂ ॥ ೧೧೦ ॥

ಕಂ॥ ಅತಿಮೋಹನಿಗಳ ನಿಯಮಿತ
ನುತರೊಡನೊಡನಖಿಲ ಸುಖಮನುಂಡರ್ ದ್ವಾವಿಂ
ಶತಿ ಜಲಧಿವರೆಗಮಿಂದ್ರ
ಪ್ರತೀಂದ್ರರಿದು ಕೆಳೆ ವಿಭಿನ್ನತರರುಚಿ ಕೆಳೆಯೇ ॥ ೧೧೧ ॥

ವ॥ ಅಂತು [1]ಕ್ರಮ[1] ಕ್ರಮದಿಂದಿ[2]ಪ್ಪತ್ತು[2] ಸಾಗರೋಪಮಮುಂ—

ವ॥ ಪೂರ್ವಜನ್ಮದಲ್ಲಿ ಈ ಮುನೀಶ್ವರನು ಅನಂತವೀರ್ಯನಾಗಿದ್ದನು. ಈಗ ವಿಮಾನದಿಂದ ಬಂದ ದೇವನು ಆಗ ದಮಿತಾರಿಯ ಪಕ್ಷದಲ್ಲಿ ಸುಕಂಠನೆಂಬ ವೀರನಾಗಿದ್ದು ಈತನಿಂದ ಕಾಳಗದಲ್ಲಿ ವಧೆಗೀಡಾಗಿದ್ದನು. ಆ ಕಾಲದ ಶತ್ರುತ್ವವನ್ನು ನೆನೆದು ಸುಕಂಠಚರನು ಬಾಯ್ಬಿಟ್ಟು ಅಬ್ಬರಿಸಿ, ಬಯ್ದು ಮುನಿಗೆ ಘೋರವಾದ ಉಪಸರ್ಗವನ್ನುಂಟು ಮಾಡಿದನು. ಆದರೆ ಮೇಘನಾದಮುನಿ ಅದೆಲ್ಲವನ್ನೂ ಸೈರಿಸಿಕೊಂಡು ಪ್ರತ್ಯಾಖ್ಯಾನ ಪೂರ್ವಕವಾಗಿ ಸಲ್ಲೇಖನ ವಿಧಿಯನ್ನು ಕೈಕೊಂಡು ಶುಭ ಪರಿಣಾಮವನ್ನೊದಗಿಸುವ ಶುದ್ಧಭಾವದಿಂದ ಪ್ರಸನ್ನಚಿತ್ತನಾಗಿ ಪ್ರಾಣತ್ಯಾಗಮಾಡಿದನು.

೧೦೯. ಅಚ್ಯುತೇಂದ್ರನಿಗೆ ಸಮನಾದವನು ಯಾವನೂ ಇಲ್ಲ; ಅಚ್ಯುತ ಕಲ್ಪಕ್ಕೆ ಸಮನಾದುದು ಇನ್ನೊಂದಿಲ್ಲ. ಅಂತಹ ಸ್ಥಾನಕ್ಕೆ ಯೋಗ್ಯನೆಂಬ ಮಹಿಮೆಯನ್ನು ತಾಳಿ ಈತನು ಅದೇ ಕಲ್ಪದಲ್ಲಿ ಪ್ರತೀಂದ್ರನಾದನು.

೧೧೦. ಪೂಜಾ ವ್ರತಾದಿ ತಂತ್ರಗಳ ಮಾರ್ಗದರ್ಶನವಾಗಲಿ, ವಿನೋದವಾಗಲಿ, ಚರ್ಚಾ ಗೋಷ್ಠಿಯಾಗಲಿ, ಮಾಡಬೇಕಾದ ಕಾರ್ಯದ ಮಂತ್ರಾಲೋಚನೆಯಾಗಲಿ, ಯಾವುದೇ ಶ್ರೇಷ್ಠವಾದ ಕಾರ್ಯಾಚರಣೆಯಾಗಲಿ ಪರಮಾಗಮ ಚಿಂತನೆ, ವೃದ್ಧಸೇವೆ ಪ್ರಮಾಣ, ಭಗವಂತನ ಪೂಜೆ—ಇವು ಎಲ್ಲದರಲ್ಲಿಯೂ ಒಂದೇ ಕೀಲಿನ ಎರಡು ಯಂತ್ರದ ಬೊಂಬೆಗಳಂತೆ ಆ ಇಂದ್ರ ಮತ್ತು ಪ್ರತೀಂದ್ರರು ಜೊತೆಜೊತೆಯಾಗಿಯೆ ನಡೆಸುವರು.

೧೧೧. (ಜನ್ಮಾಂತರಗಳಿಂದ ಬಂದ) ಅತ್ಯಂತ ಗಾಢವಾದ ಮೋಹದಿಂದಾಗಿ ಅವರಿಬ್ಬರೂ ಜೊತೆಯಾಗಿಯೆ ಇಪ್ಪತ್ತೆರಡು ಸಾಗರೋಪಮ ಕಾಲದವರೆಗೆ ಸ್ವರ್ಗದ ಸಕಲ ಸುಖವನ್ನು ಅನುಭವಿಸಿದರು. ಹೀಗೆ (ಅವಿನಾಭಾವದಿಂದ ಜೊತೆಯಾಗಿ) ಇರುವುದು ಕೆಳೆ; ಒಬ್ಬರಿಗೊಂದು ರುಚಿ, ಇನ್ನೊಬ್ಬನಿಗೆ ಇನ್ನೊಂದು ರುಚಿ ಎಂದರೆ ಅದು ಕೆಳೆಯೆ?

ವ॥ ಹೀಗೆ ಕ್ರಮವಾಗಿ ಇಪ್ಪತ್ತು ಸಾಗರೋಪಮ ಕಾಲವು—

---

1. × (ಮ) 2. ಪ್ಪತ್ತೆರಡು (ಅ)

ಕಂ॥ ನೆಱೆವುದುಮಂತಕನೊಳ್ ತ
ಳ್ತಿಱಿಯಲ್ ಕಳವುಗುವವೋಲ್ ಜಿನಾಲಯಮಂ ಪೊ
ಕ್ಕಱಿವಂ ಮೆಱೆದೊಡಲಂ ತೊಱೆ
ದಱಿಪಿದನಾಸನ್ನ ಭವ್ಯನಪ್ಪುದನಿಂದ್ರಂ ॥ ೧೧೨ ॥

ಅಭಿಷೇಕಂ ಪೊಸನನೆ[1] [ಸಂ
ದ ಭೀಮಸೇ][1]ನಿಕದ ನಂದ ದೀವಿಗೆ ಧೂಪಂ
ಶುಭಪರಿಣಾಮಯುತಂ ದ್ರ
ವ್ಯಭಾವ ನಾಮಾರ್ಚನಂಗಳಾಗೆ ಸುರೇಂದ್ರಂ ॥ ೧೧೩ ॥

ಕೆಯ್ವಾರದಿಂದಮರ್ಚಿಪ
ಮೆಯ್ವೆರಸಸು ಪೋಗೆ ಕೊಡದ ನೀರಂ ಕೊಡದೊಳ್
ಪೊಯ್ವಂತೆ ತನ್ನ ಸಂಚಯ
ಮುಯ್ವುದುಮುತ್ತಮ ಮನುಷ್ಯಗತಿಗಮರೇಂದ್ರಂ ॥ ೧೧೪ ॥

ವ॥ ಪೋಗಿ ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ತೆಂಕಣ ತಡಿಯ ಮಂಗಳಾವತೀ ವಿಷಯದ ರತ್ನಸಂಚಯ ಪುರಮನಾಳ್ವ—

ಕಂ॥ ಕಿಂಕರ ನರಾಮರಂ ಕ್ಷೇ
ಮಂಕರ ತೀರ್ಥಕರ ನೃಪಕುಮಾರಂಗಂ ಧ
ನ್ಯಂ ಕನಕಚಿತ್ರೆಗಂ ವ
ಜ್ರಾಂಕಿತ ತಳವಿಳಸಿತಂ ಪವಿತ್ರಂ ಪುತ್ರಂ ॥ ೧೧೫ ॥

ವ॥ ವಜ್ರಾಂಕಿತಂ ಪುಟ್ಟಿ ತಾಯ ತಂದೆಯ ಪರಮಾನಂದಮೆ ತನಗಮಳಾಗೆ ಬಳೆಯುತ್ತುಂ—

---

೧೧೨. ಮುಗಿಯುತ್ತ ಬರಲಾಗಿ, ಮೃತ್ಯುವನ್ನು ಇರಿಯಲು ರಣರಂಗಕ್ಕೆ ಹೋಗುವಂತೆ, ಜಿನಮಂದಿರವನ್ನು ಹೊಕ್ಕು, ಜ್ಞಾನವನ್ನು ಆಧರಿಸಿ, ಮೈಯನ್ನು ನಿರಾಕರಿಸಿ, ಆಸನ್ನಭವ್ಯನಾಗುವ ವಿಧಾನವನ್ನು ಅಚ್ಯುತೇಂದ್ರನು ತೋರಿದನು.

೧೧೩. ಅಭಿಷೇಕ, ಹೊಸ ಹೂಗಳು, ಭೀಮಸೇನಿಕವೆಂಬ ಕಪ್ಪುರದ ನಂದಾದೀಪ, ಧೂಪ—ಇವುಗಳೊಂದಿಗೆ ಶುಭವಾಗಿ ದ್ರವ್ಯ, ಭಾವ ಮತ್ತು ನಾಮ ಎಂಬ ಮೂರೂ ಬಗೆಯ ಅರ್ಚನೆಗಳಿಂದ ಆ ಸುರೇಂದ್ರನು

೧೧೪. ಭಕ್ತಿಪೂರ್ವಕವಾಗಿ ಭಗವಂತನನ್ನು ಅರ್ಚಿಸುತ್ತಿರಲಾಗಿ, ದೇಹಸಹಿತವಾಗಿ ಜೀವ ಅದೃಶ್ಯವಾಗಲು ಕೊಡದ ನೀರನ್ನು ಮರಳಿ ಕೊಡದೊಳಗೇ ಸುರಿದಂತೆ ಆತನ ದೈವ ಪುನಃ ಅವನನ್ನು ಮನುಷ್ಯ ಗತಿಗೆ ಕರೆತಂದಿತು.

ವ॥ ಜಂಬೂದ್ವೀಪದಲ್ಲಿ ಪೂರ್ವವಿದೇಹದ ಸೀತಾನದಿಯ ದಕ್ಷಿಣ ತೀರದಲ್ಲಿ ಮಂಗಳಾವತೀ ವಿಷಯವಿರುವುದು; ಅದರಲ್ಲಿಯ ರತ್ನಸಂಚಯಪುರವನ್ನಾಳುವ

೧೧೫. ಕ್ಷೇಮಂಕರನೆಂಬ ತೀರ್ಥಕರರಾಜ ತನ್ನನ್ನು ಓಲೈಸುವ ಜನಕ್ಕೆಲ್ಲ ದೇವರಂತೆ ಇರುವನು. ಧನ್ಯನಾದ ಆ ಅರಸನಿಗೆ ಕನಕಚಿತ್ರೆಯೆಂಬ ರಾಣಿಯಲ್ಲಿ ವಜ್ರಚಿಹ್ನೆಯೊಡನೆ ಶೋಭಿಸುವ ಹಸ್ತಗಳುಳ್ಳ ಪುಣ್ಯಶಾಲಿಯಾದ ಮಗನಾಗಿ ಆ ಅಚ್ಯುತೇಂದ್ರನು ಹುಟ್ಟಿದನು.

ವ॥ ವಜ್ರಾಯುಧನೆಂಬ ಈ ಮಗನೂ ತಾಯ್ತಂದೆಗಳ ಪರಮಾನಂದವೂ ಅವಳಿ ಮಕ್ಕಳಂತೆ ಜೊತೆ ಜೊತೆಯಾಗಿ ಬೆಳೆದರು.

---

1. . . ಭಿಮಸೆ (ಮ)

ಕಂ॥ ಬಾಲಕನಮೃತಮೆ ಕೆಯ್ಕಾಲುಂ
ಕಾಲುಂ ಬಳೆವಂತೆ ಮಧುರ ಗಂಭೀರಂ ಪ
ದ್ಮಾಲಿಂಗಿತನಂತ ಶ್ರೀ
ಲೋಲತೆಗಂ ದೂರಮೆನಿಸಿದಂ ಕಿಱಿಯಂದುಂ ॥ ೧೧೬ ॥

ವ॥ ಆ ನಿತ್ಯೋದಯನ ತಂದೆ ತಾಂ ತೀರ್ಥಕರನಪ್ಪುದಱಿಂ ಮಗಂಗೆ ಕಿಱಿಯಂದೆ ರಾಜ್ಯಂಗಳಂ ಸಂಗತಂ ಮಾಡಿ ಸಾರವಸ್ತುಗಳೊಳ್ ನಿಸರ್ಗದಿಂದೆ ತಾಂ ನಿರಾದರನಾಗಿ ಶುಭ ಭಾವನೆಯೊಳ್ ರಾಜ್ಯಕಾಲಮಂ ಸಲಿಸುತ್ತುಮಿರೆ ಮಂತ್ರಾಯುಧನುಂ ತ್ರಿಜಗದ್ಗುರುವುಮೆನಿಸಿದಾತ್ಮಗುರುಭಕ್ತಿಗಂ ಪರಮ ಭವಹತ್ಯಭಿನಯಾನುನಯಾಯತ್ತನಾಗಿ ನೆಗೞೆ—

ಹರಿಣೀವೃತ್ತಂ॥ ನೆಱೆಯದಿರೆಯುಂ ತೋಳ್ಗಂ ವಕ್ಷಸ್ಥಳಾಂತರಕಂ ಕರಂ
ಕಿಱಿಯನೆನವೇಡೀತಂ ಪ್ರೌಢಾನುಭಾವದಿನಕ್ಕುಮೆಂ
ದಱಿದು ಧವಲಚ್ಛತ್ರಚ್ಛಾಯಾಸದಾತ್ಮತೆ ಸಂಜೆವೋಲ್
ಮಱೆಯೊಳೆ ಕುಲಶ್ರೀ ನಿಚ್ಚಂ ನಿಚ್ಚಮಪ್ಪುಗುಮಾತನಂ ॥ ೧೧೭ ॥

ವ॥ ಮತ್ತಮಾತಂ ಪ್ರತಿದಿವಸಮುನ್ಮುಚ್ಯಮಾನ ಬಾಲಕೇಳೀಲೀಲನಾಗಿ—

ಉ॥ ಶೂರ್ಪಕವೈರಿ ಕಾಲುಗುರ್ಗೆವರ್ಪನೊ ಶೀತಮರೀಚಿ ಕಾಂತಿಗೇಂ
ವರ್ಪನೊ ವಾಸವಂ ಸಿರಿಗೆ ವರ್ಪನೊ ವೃತ್ರಹಮಂತ್ರಿ ಜಾಣ್ಗೆ ಮೇಣ್
ವರ್ಪನೊ ಪೇೞಿಮೆಂಬ[ಬ]ಗೆ ಭಾವಿಸಿ ನೋೞ್ಪರ ಕಣ್ಗೆಗೆಯ್ದೆ ವಂ
ದಿರ್ಪುದು ತತ್ಕುಮಾರತನು ಪುಣ್ಯದ ಪಿಂಡವೊ ಭಾಗ್ಯಭಾಂಡವೋ ॥ ೧೧೮ ॥

ಚಂ॥ ಮಳಯಜಗಂಧಮೆಂತು ಹರಿಪೌರುಷಮೆಂತು ಹಿಮಾಂಶುಬಿಂಬ ನಿ
ರ್ಮಳರುಚಿಯೆಂತು ಪುಷ್ಪಶರತೀವ್ರತೆಯೆಂತು ರವಿಪ್ರತಾಪಮೆಂ
ತಳಿಕುಳದಂಗನೀಳರುಚಿಯೆಂತು ನಿಜಂ ತನಗಂತು ಸದ್ಗುಣಾ
ವಳಿ ಸಹಜಾತಮಾತನೊರೆಗಂ ದೊರೆಗಂ ಬರಲಾರ್ ನೃಪೋತ್ತಮರ್ ॥ ೧೧೯ ॥

---

೧೧೬. ಕೈಕಾಲುಗಳನ್ನು ಹೊಂದಿದ ಅಮೃತವೆ ಬೆಳೆಯುವಂತೆ ಮಧುರನೂ ಗಂಭೀರನೂ ಆಗಿ ಆತನು ವರ್ಧಿಸಿದನು. ಚಿಕ್ಕಂದಿನಿಂದಲೇ (ಕುಬೇರನಂತೆ) "ಪದ್ಮಾಲಿಂಗಿತ" (ಐಶ್ವರ್ಯದಿಂದ ಕೂಡಿದವನು) ಆಗಿದ್ದರೂ ಕೃಪಣತನವಂತು ಅವನಿಗೆ ಎಷ್ಟೂ ಇರಲಿಲ್ಲ.

ವ॥ ಉತ್ತರೋತ್ತರವಾಗಿ ಅಭಿವೃದ್ಧಿ ಹೊಂದುತ್ತಿರುವ ಈತನನ್ನು ನೋಡಿ, ತಂದೆಯು ತಾನು ತೀರ್ಥಕರನಾದುದರಿಂದ ಚಿಕ್ಕಂದಿನಲ್ಲಿಯೆ ಈತನಿಗೆ ರಾಜ್ಯಭಾರವನ್ನು ಒಪ್ಪಿಸಿ (ಬಿಟ್ಟುಕೊಟ್ಟು) ಐಹಿಕ ಸುಖಭೋಗಗಳಲ್ಲಿ ಸಹಜವಾಗಿಯೆ ವಿರಕ್ತನಾಗಿದ್ದನು. ವಜ್ರಾಯುಧನು ತ್ರಿಲೋಕಗುರುವಾದ ತನ್ನ ತಂದೆಯೊಡನೆ ಭಕ್ತಿ ಪೂರ್ವಕವಾಗಿ ನಡೆದುಕೊಳ್ಳುತ್ತ ಸಂಸಾರ ನಿರಸನದಲ್ಲಿ ಅವರನ್ನು ಅನುಸರಿಸುತ್ತ ರಾಜ್ಯವಾಳುತ್ತಿದ್ದನು.

೧೧೭. "ನನ್ನ ತೋಳುಗಳಿಗೂ ಎದೆಯ ವಿಸ್ತಾರಕ್ಕೂ ಈತನ ಅಪ್ಪುಗೆ ಸಾಲದೆಂದು ಹೇಳಕೂಡದು. ಈತನು ಅನುಭಾವದಲ್ಲಿ ಪ್ರೌಢನಾಗಿರುವನು" ಎಂದು ಅರಿತುಕೊಂಡು, ಆತನ ವಂಶಲಕ್ಷ್ಮಿಯು ಬೆಳ್ಗೊಡೆಯ ನೆರಳಿನ ಮರೆಯಲ್ಲಿ ಬಂದು ನಿತ್ಯನಿತ್ಯವಾಗಿ ಆತನನ್ನು ಅಪ್ಪಿಕೊಳ್ಳುವಳು.

ವ॥ ಆತನು ದಿನದಿನಕ್ಕೆ ಬಾಲ್ಯದ ಕ್ರೀಡೆಗಳನ್ನು ಬಿಡುತ್ತ ಬಂದನು— (ಯುವಾವಸ್ಥೆಯನ್ನು ಹೊಂದಿದನು)—

೧೧೮. ಮನ್ಮಥನು ಇವನ ಕಾಲುಗುರಿಗಾದರೂ ಸಮನಾದಾನೆಯೆ? ಚಂದ್ರನೇನು ಇವನನ್ನು ಕಾಂತಿಯಲ್ಲಿ ಸರಿಗಟ್ಟಬಲ್ಲನೆ? ಈತನ ಐಶ್ವರ್ಯಕ್ಕೆ ಇಂದ್ರನು ಸರಿಯಾದಾನೆಯೆ? ಬುದ್ಧಿವಂತಿಕೆಯಲ್ಲಿ ಬೃಹಸ್ಪತಿ ಸಮವೆನಿಸಿಯಾನೆಯೆ? ಎಂದು ಕಂಡವರ ಕಣ್ಣಿಗೆಲ್ಲ ಕಂಗೊಳಿಸಿ ಬೆಳೆದ ಆತನ ದೇಹವು ಪುಣ್ಯದ ಪಿಂಡವೊ, ಭಾಗ್ಯದ ಭಂಡಾರವೊ ಎಂಬಂತಾಯಿತು.

೧೧೯. ಶ್ರೀಗಂಧಕ್ಕೆ ಪರಿಮಳ, ಸಿಂಹಕ್ಕೆ ಶೌರ್ಯ, ಚಂದ್ರಬಿಂಬಕ್ಕೆ ನಿರ್ಮಲವಾದ ಕಾಂತಿ, ಹೂಬಾಣಕ್ಕೆ ತೀಕ್ಷ್ಣತೆ, ಸೂರ್ಯನಿಗೆ ಪ್ರತಾಪ, ದುಂಬಿಯ ದೇಹಕ್ಕೆ ನೀಲವರ್ಣದ ಶೋಭೆ ಹೇಗೆ ಸಹಜವೊ ಹಾಗೆ ಸದ್ಗುಣಗಳು ವಜ್ರಾಯುಧನಿಗೆ ಅವನೊಡನೆಯೆ ಹುಟ್ಟಿ ಬಂದಿದ್ದವು. ಅವನಿಗೆ ಸರಿದೊರೆಯಾಗಬಲ್ಲ ರಾಜೋತ್ತಮರು ಇನ್ನಾರು?

ಕಂ॥ ಆ ವಿಭು ಜಿನಚಂದ್ರಂ ಲ
ಕ್ಷ್ಮೀಮತಿಯಂ ಮದುವೆನಿಂದು ಪೊಸಮದವಣಿಗಂ
ದೇವೇಂದ್ರನ ಶಚಿಯು ವಿಳಾ
ಸಾವಿಷ್ಕೃತ ವಿವಿಧ ವಿಭವಮಂ ಮಸುಳಿಸಿದಂ ॥ ೧೨೦ ॥

ವ॥ ಅಂತು ದಿವ್ಯ ಮನುಷ್ಯೋದಯಾದಿತ್ಯಾಚಳನಾಗಿ—

ಮ॥ ಸುಖಮಿರ್ಪನ್ನೆವರಂ ಪ್ರತೀಂದ್ರದಿವಿಜಂ ವಜ್ರಾಯುಧಂಗಂ ಹಸ
ನ್ಮುಖಿ ಲಕ್ಷ್ಮೀಮತಿಗು ಪುರಾತನ ಭವ ಸ್ನೇಹಕ್ಕೆ ಪುಣ್ಯಂ ಮಹಾ
ಸುಖಮಾಗುತ್ತಿರೆ ಬಂದು ಪುಟ್ಟಿ ಗುರುವುಂ ತಾನುಂ ಮನಂಗೊಂಡರಾ
ನಖಮಾಂಸ ಸ್ಥಿತಿಯಪ್ಪ ಪತ್ತುಗೆಗಳಿಂ ಕ್ಷೇಮಂಕರಾಧೀಶನಂ ॥ ೧೨೧ ॥

ವ॥ ಅಂತು ಸೌಜನ್ಯಕಂದಾಂಕುರಂ ಮಹಾಮಹೀಪಾಲಕಂಗೆ ಸಹಸ್ರಾಯುಧಂ ಪುಟ್ಟುವುದುಂ—

ಕಂ॥ ಉತ್ತಮ ನಿಮಿತ್ತಮಂ ನೈ
ಮಿತ್ತಿಕಮುಂ ಪೋಲ್ಕುಮೆನಿಸಿ ಸೊಡರಿಂ ಸೊಡರಂ
ಪೊತ್ತಿಸಿ ತಂದುಪಮೆಯೊಳ
ಚ್ಚೊತ್ತಿದುವವರಂತರಂಗ ಬಹಿರಂಗಂಗಳ್ ॥ ೧೨೨ ॥

ವ॥ [1]ಅಂತು ಯುವ ಕೇಸರಿಯುಂ[1] ಕಿಶೋರ ಕೇಸರಿಯುಂ ಬಳೆವಂತೆ ಜಿನಚಂದ್ರನಪ್ಪ ವಜ್ರಾಯುಧ ಕುಮಾರನುಂ ಸಹಸ್ರಾಯುಧ ಬಾಲಕನುಮೊಡವಳೆಯೆವಳೆಯೆ—

---

೧೨೦ ಆ ಜಿನಭಕ್ತ ಶಿರೋಮಣಿಯು ಲಕ್ಷ್ಮೀಮತಿಯೆಂಬವಳನ್ನು ಮದುವೆಯಾದನು. ಈ ವಧೂವರರು ತಮ್ಮ ವೈಭವ ವಿಲಾಸಗಳಿಂದ ಶಚೀ-ದೇವೇಂದ್ರರನ್ನು ಸೋಲಿಸಿದರು.

ವ॥ ಹಾಗಿದ್ದು ದಿವ್ಯಪುರುಷನೆಂಬ ಸೂರ್ಯೋದಯಕ್ಕೆ ಉದಯ ಪರ್ವತದಂತೆ ಆಗಿ—

೧೨೧. ಸುಖದಿಂದ ಇರುತ್ತಿರಲಾಗಿ, ಅಚ್ಯುತಕಲ್ಪದಲ್ಲಿ ಪ್ರತೀಂದ್ರನಾಗಿದ್ದ ದೇವನು ಪೂರ್ವಜನ್ಮದ ಸ್ನೇಹ ದಿಂದಲೂ ಪುಣ್ಯದಿಂದಲೂ ಕೂಡಿಕೊಂಡು ವಜ್ರಾಯುಧ-ಲಕ್ಷ್ಮೀಮತಿಯರಿಗೆ ಮಗನಾಗಿ ಹುಟ್ಟಿದನು. ಈ ತಂದೆ ಮಕ್ಕಳು ಉಗುರು ಹಾಗು ಉಗುರುಕಣ್ಣುಗಳಂತೆ ಪರಸ್ಪರ ಗಾಢ ಸ್ನೇಹದಿಂದ ಹೊಂದಿಕೊಂಡು ಕ್ಷೇಮಂಕರ ರಾಜನಿಗೆ ಸಂತೋಷವನ್ನುಂಟುಮಾಡಿದರು.

ವ॥ ಹಾಗೆ ಸಜ್ಜನಪ್ರಿಯನಾದ ಅರಸನಿಗೆ ಸಹಸ್ರಾಯುಧನೆಂಬ ಮಗನು ಹುಟ್ಟಲಾಗಿ—

೧೨೨. ಉತ್ತಮವಾದ ಕಾರಣಕ್ಕೆ ಅನುರೂಪವಾಗಿ ಉತ್ತಮವಾದ ಕಾರ್ಯ ಎಂಬುದು ದೃಢವಾಯಿತು. ಒಂದು ದೀಪದಿಂದ ಇನ್ನೊಂದು ದೀಪವನ್ನು ಹೊತ್ತಿಸಿದ ಹಾಗೆ ಆ ತಂದೆ ಮಕ್ಕಳು ಅಂತರಂಗ-ಬಹಿರಂಗಗಳೆರಡರಲ್ಲಿಯೂ ಒಬ್ಬನ ಪ್ರತಿರೂಪ ಇನ್ನೊಬ್ಬನೆಂಬಂತೆ ಇದ್ದರು.

ವ॥ ಹರಯದ ಸಿಂಹವೂ ಮರಿಸಿಂಹವೂ ಒಡನೊಡನೆ ಬೆಳೆಯುವಂತೆ ಜಿನಭಕ್ತನಾದ ವಜ್ರಾಯುಧನೂ ವಜ್ರಾಯುಧಕುಮಾರನೂ ದಿನದಿನಕ್ಕೆ ಪ್ರವರ್ಧಮಾನರಾದರು.

1, × (ಅ)

ಮ॥ ಅಗದಂ ಶೀತಮಯೂಖ ಮಾಳಿಗಗದಕ್ಕಾರೋಗ್ಯದೊಳ್ಪೆಂತು ಪು
ಟ್ಟುಗುಮಂತಭ್ಯುದಯೈಕ ಭಾಗಿಗೆ ಮಗಂ ಕ್ಷೇಮಂಕರಂಗರ್ಚಿತಾಂ
ಘ್ರಿಗೆ ವಜ್ರಾಯುಧನಾ ಮಹೀಶತಿಲಕಂಗಾದಂ ಸಹಸ್ರಾಯುಧಂ
ಮಗನುದ್ದಾಮತೆ ತಂದೆ ಮೂವ[1][ರೊ][1]ಳಮೇಂ ಕಯ್ಗಣ್ಮಿ ಪೊಣ್ಮಿರ್ದುದೋ ॥ ೧೨೩ ॥

ವ॥ ಎಂದು ಲೋಕಮೆಲ್ಲಂ ಪೊಗೞ್ವ ಪೊಗೞ್ತೆಗಂ [2]ನೆಗೞ್ತೆಗಂ[2] ನಿಸರ್ಗತರಮಾಗೆ ರತ್ನತ್ರಯೋಪಮಾನರವರಭಿರಕ್ಷಿತ ವರ್ಣಾಶ್ರಮರಪಧ್ಮಾದ್ಯದ್ದಂದಶೂಕಭಯ ಜಾಗರೂಕರವನಿಪಾಶ್ರಮಗಳರಸುಗೆಯ್ಯುತ್ತುಮಿರೆ—

ಚಂ॥ ವಿರಹಿ ಮೃಗಂ [3]ದಲೊಡ್ಡಿ[3]ಸುವವಂ [4]ಮಧು ದಲ್[4] ಬಲೆಗಳ್ ಲತಾಳಿ [5]ದಲ್[5]
ಕರಿಕು ಕನಲ್ದು ಕಾ[6]ಯ್ದು[6] ವಿರಹಾಗ್ನಿ ದ[7]ಲೊ[7]ಪ್ಪುವ [8]ಕಯ್ಬನಂದಲಾ
ನುರಿವನಲ[8] ದಲೆಂಬಿನಮನಂಗನ ಬೇಂಟೆಯ ಬಿಂದದಂದದಿಂ
ಬರೆ ಪೊಸಸುಗ್ಗಿ ಕೆಯ್ಗಟಿಯೆ ಕಣ್ಗೆಸೆದಿರ್ದುವು ನಂದನಾಳಿಗಳ್ ॥ ೧೨೪ ॥

ವ॥ ಅಂತು ಬಂದ ಬಸಂತಲಕ್ಷ್ಮೀ ಸಂಗೀತಪೂರ್ವ ರಂಗದೊಳ್—

ಚಂ॥ ಸನೆದೊನೆಯಾಗಿ ಬಂದುವೆಳಮಾವೆಳಮಾವಿನ ಮುಂಚಿ ಬಂದ ಪೂ
ವಿನ ಪೊಸ ಗೊಂಚಲೊಪ್ಪಿದುವು ಗೊಂಚಲೊಳೋಳಿಯೆ ಪಾಯ್ದುವಚ್ಚಗಂ
ಬಿನೊಳವಿನಾಣಮಾಗೆ ಮದನಂ ಮಸಿಯೊಳ್ ಬರೆದಿಟ್ಟ ತನ್ನ ತ
ಕ್ಕಿನ ಪೆಸರಕ್ಕರಂಗಳೆನಿಸಿರ್ದುವು ಮತ್ತ ಮಧುವ್ರತಾಳಿಗಳ್ ॥ ೧೨೫ ॥

ವ॥ ತದನಂತರಂ—

---

೧೨೩. ಚಂದ್ರನಿಂದ ಆರೋಗ್ಯವೂ ಆರೋಗ್ಯದಿಂದ ಸುಖವೂ ಹೇಗೆ ಹುಟ್ಟುವುವೊ ಹಾಗೆ ಕೇವಲ ಭಾಗ್ಯಶಾಲಿಯಾದ ಕ್ಷೇಮಂಕರ ರಾಜನಿಗೆ ವಜ್ರಾಯುಧನೂ, ವಜ್ರಾಯುಧ ಮಹಾರಾಜನಿಗೆ ಸಹಸ್ರಾಯುಧನೂ ಹುಟ್ಟಿ, ಈ ಮೂವರಲ್ಲಿಯೂ ಉನ್ನತಿಯ ಮಹಿಮೆ ಎಷ್ಟೆಂದು ತುಂಬಿಕೊಂಡಿದೆ !

ವ॥ ಎಂದು ಲೋಕವೆಲ್ಲ ಹೊಗಳುತ್ತಿರಲು ಆ ಹೊಗಳಿಕೆಗೆ ಯೋಗ್ಯರಾಗಿ ರತ್ನತ್ರಯಕ್ಕೆ ಸದೃಶರಾದ ಈ ಮೂವರು ವರ್ಣಾಶ್ರಮಗಳನ್ನು ರಕ್ಷಿಸುತ್ತ, ಪಾಪಕರ್ಮಕ್ಕೆ ಅವಕಾಶವೀಯದಂತೆ ಜಾಗರೂಕರಾಗಿ ರಾಜ್ಯವಾಳುತ್ತಿರಲಾಗಿ—

೧೨೪. ಪರಸ್ಪರರನ್ನು ಅಗಲಿ ದುಃಖಿಸುವ ಪ್ರಿಯಕರ-ಪ್ರೇಯಸಿಯರೆ ಮೃಗಗಳು; ಬಲೆ ಬೀಸುವವನು ವಸಂತ; ಬಳ್ಳಿಗಳೆ ಬಲೆ; ಪ್ರಖರವಾದ ವಿರಹತಾಪವೆ ಕರಿಕು—ಹೀಗೆ ಬೇಟೆಗಾರರ ಹಿಂಡಿನಂತೆ ನವವಸಂತವೊದಗಲಾಗಿ ನಂದನಗಳು ಅತಿಶಯವಾಗಿ ಕಂಗೊಳಿಸಿದುವು. ("ಅಪ್ಪುವ ಕಯ್ಬನಂದಲೊಳ್ಪರಿವ ವನಂ"—ಇವರ ಅರ್ಥ ಸ್ಪಷ್ಟವಾಗಿಲ್ಲ.)

ವ॥ ಹಾಗೆ ಬಂದ ವಸಂತಲಕ್ಷ್ಮಿಯ ಸಂಗೀತೋತ್ಸವದ ಪೂರ್ವರಂಗದಲ್ಲಿ—

೧೨೫. ಎಳಮಾವುಗಳು ಮೈತುಂಬ ಮೊಗ್ಗುದೋರಿದುವು ; ತಾವೇ ಮುಂಚೆ ಎಂಬಂತೆ ಗೊಂಚಲುಗೊಂಚಲಾಗಿ ಹೂವರಳಿದುವು; ಹೂಗೊಂಚಲಲ್ಲಿ ಹೊಕ್ಕು, ಅದರ ಅಚ್ಚುಕಂಬಿನಲ್ಲಿ ಬೆರೆತು, ಮನ್ಮಥನು ಮಸಿಯಿಂದ ಬರೆದಿಟ್ಟ ತನ್ನ ಹೆಸರಿನ ಅಕ್ಷರಗಳೊ ಏನೊ ಎಂಬಂತೆ ಮದವೇರಿದ ದುಂಬಿಗಳ ಹಿಂಡುಗಳು ಕಂಗೊಳಿಸಿದುವು.

ವ॥ ಆ ಬಳಿಕ—

---

1 ಜೊ (ಮ) 2. × (ಮ) 3. ದಲಂಜಿ, ದಲಾಡಿ (ಕಾ) 4. ಮದನಂ (ಕಾ) 5. ಗಳ್ (ಕಾ) 6. ಯ್ಗ (ಕಾ) 7. ಲ (ಮ)
8. ಕೆಯ್ಮೊಳಂದಲಾಗುರಿವ ವನಂ (ಕಾ) ಕಯ್ಬನಂದಲೊಳ್ಪರಿವ ವನಂ (ಮ)

ಚಂ॥ ಬಯಸಿ ಕುಬೇರ ರಕ್ಷಿತ ದಿಗಂ[ಗ]ನೆಯೊಳ್ ರವಿ ಪೋಗಿ ಕೂಡಲ
ಟ್ಟಿಯೊಳನುವಾಸರಂ ನೆ[1][ರೆ][1]ಯೆ ಸೂೞ್ ಸಮನಾಗಿರೆ ಪೋಪ ಸಪ್ತಸ
ಪ್ತಿಯ ವಿರಹಕ್ಕಿದಲ್ತು ಬಿಸುಸುಯ್ ಪುಸಿಸುಯ್ಯೆನೆ ಸುಯ್ದು ದಕ್ಷಿಣಾ
ಶೆಯ ನಱುಸುಯ್ಯ ಗಾಳಿಯನೆ ಪೋಲ್ತುದು ಗಂಧವಹಂ ವಸಂತದೊಳ್ ॥ ೧೨೬ ॥

ವ॥ ಅಲ್ಲಿಂ ಬೞಿಯಂ—

ಮ॥ ಕೊಳದಂಭೋಲವಮುಣ್ಮಿ ಪೊಣ್ಮೆ ವಿಲಸತ್ಸೋಪಾನಪರ್ವಂಕ ಪ
ಲ್ವಳವಲ್ಲಾಭೆಗೆ ರಾಗಮಾಗೆ ಕನಕಾಂಭೋಜಾತಮುದ್ದಂಡ ಕೋ
ಮಳನಾಳಂ ಸಿರಿ ಸತ್ತಿಗೆತ್ತಿಸಿದವೋಲಿಂಬಾಗೆ ನಾರೀ ಸಮು
ಜ್ಜ್ವಳ ಶುಂಭಜ್ಜ್ಘನಪ್ರಮಾಣಗತಿಯಾಯ್ತಾದಂ ಬಸಂತರ್ತುವೊಳ್ ॥ ೧೨೭ ॥

ವ॥ ಮತ್ತಮಿರೆಯಿರೆ—

ಮ॥ ವನಸಾಯಂತನ ಮಲ್ಲಿಕಾ ಮುಕುಳ ಕೋಟ್ಯಗ್ರಂಗಳೊಳ್ ಕೂಡೆ ನೂ
ತನ ಸದ್ಗಂಧಿಗಳೊಳ್ ಮದಾಂಧ ಮಧುಪಂ ಪ್ರತ್ಯೇಕಮಳ್ವಾಱುವಾ
ಱಿ ನವಾರ್ದ್ರಧ್ವನಿ ಪಾಯ್ದು ಪಾಯ್ದೆಣಿಸುವಂತಾಯ್ತಾತ್ಮ ಸೌರಭ್ಯಭಾ
ಜನ ಸರ್ವಸ್ವಮನೇಂ ಬಸಂತ ಸಮಯಂ ಸೌಖ್ಯೈಕ ಸರ್ವಸ್ವಮೋ ॥ ೧೨೮ ॥

ವ॥ ಮತ್ತಂ ಮಧುಕರ ನಿಕರಮುಂ ಪುಂಸ್ಕೋಕಿಳ ಕಳಾಪಮುಂ ರಾಜಕೀರ ಕದಂಬಕಮುಂ ಮುಂದೆ ನಡೆಯಱಿದೋಲಗಿ ಸುತ್ತುಂ ಬರೆ ಬಂದು ಮನೋಜರಾಜನ ಪ್ರಪಂಚದೊಳನುಜೀವಿ ವೃತ್ತದಿನನುವರ್ತಿಸುವ ಸೇವಾ ವಿಚಕ್ಷಣ ಪ್ರೀಣನ ಕರಮಪ್ಪ ಜೀವಿಕಾ ಪ್ರಸ್ತಾವದೊಳ್—

---

೧೨೬. ಸೂರ್ಯನು ಹೋಗಿ ಉತ್ತರ ದಿಶಾಂಗನೆಯನ್ನು ಕೂಡಿದನು. ಪ್ರತಿದಿನವೂ ಅನುರಕ್ತನಾಗಿ ಅಲ್ಲಿಯೆ ಆತನು ಆಸಕ್ತನಾಗಿರಲಾಗಿ (ಉತ್ತರಾಯಣ ಕಾಲದಲ್ಲಿ) ಸೂರ್ಯನ ವಿರಹದುಃಖದಿಂದ ಬಿಟ್ಟ ಬಿಸಿಯುಸಿರಲ್ಲ ಇದು, ಹುಸಿ ಉಸಿರು ಎಂಬಂತೆ ದಕ್ಷಿಣದ ಮೆಲುಗಾಳಿಯನ್ನೆ ಹೋತು ವಸಂತದ ಸುಳಿಗಾಳಿ ಬೀಸಿತು.

ವ॥ ಆನಂತರ—

೧೨೭. ಕೊಳದ ನೀರಹನಿಗಳು ಸಿಡಿದೆದ್ದು ಸುಂದರವಾದ ಸೋಪಾನ ಮಾರ್ಗದಲ್ಲಿ ಅಲ್ಲಲ್ಲಿ ಚಿಕ್ಕಚಿಕ್ಕ ಹೊಂಡಗಳಂತೆ ನೀರು ನಿಲ್ಲಲಾಗಿ, ಹೊಂದಾವರೆಯ ಉದ್ದವಾದ ನಾಳವು ಲಕ್ಷ್ಮಿಗೆ ಎತ್ತಿದ ಸತ್ತಿಗೆಯ ದಂಡದಂತೆ ಶೋಭಿಸಲು, ವಸಂತಋತುವಿನಲ್ಲಿ ಕೊಳದ ನೀರು ಸ್ತ್ರೀಯರಿಗೆ ಸೊಂಟದ ಮಟ್ಟಕ್ಕೆ ಮಾತ್ರ ಉಳಿಯಿತು. ("ಸೋಪಾನ ಪರ್ವಂಕ ಪಲ್ವಳವಲ್ಲಾಭೆಗೆ" ಎಂಬಲ್ಲಿ ಏನೊ ಪಾಠದೋಷವಿರಬೇಕು. ಅರ್ಥವಾಗುವುದಿಲ್ಲ.)

ವ॥ ಹೀಗೆ ಇರುತ್ತಿರಲಾಗಿ—

೧೨೮. ಮದಾಂಧವಾದ ದುಂಬಿಗಳು ಪರಿಮಳಪೂರ್ಣವಾದ ಸಂಜೆಮಲ್ಲಿಗೆಯ ಹೂಗೊಂಚಲಲ್ಲಿ ಒಂದರಿಂದ ಇನ್ನೊಂದು ಹೂವಿಗೆ ಹಾರುತ್ತ ಆರ್ದ್ರವಾದ ಧ್ವನಿಯಿಂದ ಗುಂಯಿಗುಡುತ್ತಿರಲಾಗಿ ತಮಗೆ ಒದಗಿಬಂದ ಸುಗಂಧ ಸಂಪತ್ತನ್ನು ಎಣಿಸಿ ಎಣಿಸಿ ಹೇಳುವಂತೆ ತೋರಿತು. ವಸಂತ ಸಮಯವೆಂದರೆ ಕೇವಲ ಸುಖಸರ್ವಸ್ವ; ಅದನ್ನು ಎಷ್ಟೆಂದು ಬಣ್ಣಿಸುವುದು ?

ವ॥ ದುಂಬಿಗಳ ಹಿಂಡು, ಗಂಡು ಕೋಗಿಲೆಗಳ ಗುಂಪು ಹಾಗು ಅರಗಿಳಿಗಳ ಸಮುದಾಯವು ಮುಂದೆ ನಡೆದು ಓಲೈಸುತ್ತ ಬರಲಾಗಿ, ಮನ್ಮಥರಾಜನ ಸಾಮ್ರಾಜ್ಯದಲ್ಲಿ ಅನುಚರರಾಗಿ ಜೀವಿಸುತ್ತಿರುವ ಇವರಿಗೆ, ಸೇವಾಕಾರ್ಯಕ್ಕೆ ಅನುರೂಪವಾಗಿ ತೃಪ್ತಿಕರವಾದ ಸಂಬಳವನ್ನು ಕೊಡಬೇಕೆಂದು—

---

1. ಱಿ (ಮ)

ಚಂ॥ ಸಕಲಮಧುವ್ರತಪ್ರಚಯಮೆಂಬ ಪಿಕಾವಳಿಯೆಂಬ ಸದ್ವಚಃ
ಶುಕಕುಳಮೆಂಬ ಮೆಚ್ಚಿಸಿದ ಗಾಯಕಸತ್ಪ್ರತಿಹಾರವೃತ್ತಪಾ
ಠಕ ತತಿಗಿತ್ತನಗ್ಗಳದ ಮಾವಿನ ಪೂವಿನ ಮಾವಿನಂಕುರ
ಪ್ರಕರದ ಮಾವಿ[1]ನೊ[1]ಳ್ಮಿಡಿಯ ಜೀವಿತಮಂ ಮದನಂ ಬಸಂತದೊಳ್ ॥ ೧೨೯ ॥

ವ॥ ಎನೆ ಸೊಗಯಿಸುವ ಸಹಕಾರ ಲಬ್ಧಪ್ರಸರಂಗಳಪ್ಪ ಪೆಣ್ದುಂಬಿಯಬ್ಬೃಂದಮುಂ ಗಂಡುಗೋಗಿಲೆಯ ತಂಡಮುಂ ತೊಂಡುಗಿಳಿಯ ಪಿಂಡುಂ ಮುಂ ಪಯಣಮಾಗೆ—

ಚಂ॥ ಮನಸಿಜ ಚಕ್ರವರ್ತಿ ನಡೆಯುತ್ತಿರೆ ದಿಗ್ವಿಜಯಕ್ಕೆ ಮುಂದು ಮುಂ
ದನೆ ಮಧು ಬಂದು ಮಚ್ಚಱಿದು ಕೂಡೆ ವಿನಿರ್ಮಿಸಿದೋಳಿವೀಡು ನಂ
ದನ ಚಯಮಲ್ಲಿ ರಾಜಿಪುವು ಬಳ್ಳಿಗವುಂಗಿನ ತಟ್ಟಿ ಬಳ್ಳಿಮಾ
ವಿನ ಮನೆ ಬಳ್ಳಿಮಲ್ಲಿಗೆಯ ಮಂಡಪಮೆಂಬಿನಿತುಂ ಬಸಂತದೊಳ್ ॥ ೧೩೦ ॥

ವ॥ ಎಂಬಿನವೊಪ್ಪುಗುಂ ಮತ್ತಂ ಕೆಲವೆಡೆಯೊಳ್—

ಕಂ॥ ಆಯತ ಸಹಕಾರ ಲತಾ
ಜಾಯೆ ನವಾಶೋಕಯುವನನೆಡೆಗುಡದಡರ್ದಿ
ರ್ದಾಯಿರವೇಂ ಪೋಲ್ತುದೊ ಪುರು
ಷಾ[2][ಯಿ][2]ತಮಂ ಮಧುಪರೀತ ವನ ವಿತತಿಗಳೊಳ್ ॥ ೧೩೧ ॥

ವ॥ ಅಂತುಮಲ್ಲದೋರೊಂದೆಡೆಯೊಳ್ ಮಧುಮದಮುದಿತ ಕೋಕಿಳಾಳೋಕನ ರಾಗರಕ್ತಂಗಳಾದಂತೆ—

---

೧೨೯. ದುಂಬಿಗಳೆಂಬ ಸಮಸ್ತ ಗಾಯಕರಿಗೆ ಶ್ರೇಷ್ಠವಾದ ಮಾವಿನ ಹೂಗಳನ್ನೂ, ಕೋಗಿಲೆಗಳೆಂಬ ಪ್ರತಿಹಾರರಿಗೆ ಮಾವಿನ ಚಿಗುರುಗಳನ್ನೂ, ಒಳ್ನುಡಿಯ ಗಿಳಿಗಳೆಂಬ ಸ್ತುತಿಪಾಠಕರಿಗೆ ಮಾವಿನ ಒಳ್ಳೆಯ ಮಿಡಿಗಳನ್ನೂ ಸಂಬಳವಾಗಿ ಮನ್ಮಥನು ಕೊಟ್ಟನು.

ವ॥ ಎಂಬಂತೆ ಮಾವಿನಲ್ಲಿ ತೃಪ್ತಿಗೊಂಡು ಹೆಣ್ದುಂಬಿಗಳ ಹಿಂಡೂ, ಗಂಡು ಕೋಗಿಲೆಗಳ ತಂಡವೂ, ವಚನಪಟುಗಳಾದ ಗಿಳಿಗಳ ಗುಂಪೂ ಮುಂದೆ ಮುಂದೆ ಹೊರಡಲಾಗಿ—

೧೩೦. ಮನ್ಮಥ ಚಕ್ರವರ್ತಿಯು ದಿಗ್ವಿಜಯಕ್ಕೆ ಹೊರಟನು. ಅವನಿಗಿಂತ ಮುಂದೆ ಹೋಗಿ ವಸಂತನು ಅವನಿಗೆ ಮೆಚ್ಚಿಕೆಯಾಗುವಂತೆ ಅಲ್ಲಲ್ಲಿ ನಿರ್ಮಿಸಿದ ಚೆಲುವಾದ ತಂಗುದಾಣಗಳಂತೆ ನಂದನಗಳ ಸಾಲು ಕಂಗೊಳಿಸಿದುವು; ಅವುಗಳಲ್ಲಿ ಬಳ್ಳಿಕೌಂಗಿನ ತಡಿಕೆ, ಬಳ್ಳಿಮಾವಿನ ಮನೆ ಮತ್ತು ಬಳ್ಳಿಮಲ್ಲಿಗೆಯ ಮಂಟಪಗಳನ್ನು ಆತನೇ ನಿರ್ಮಿಸಿದನು.

ವ॥ ಎಂಬಂತೆ ಅವು ಶೋಭಿಸಿದುವು. ಕೆಲವೆಡೆಯಲ್ಲಿ—

೧೩೧. ಎತ್ತರವಾಗಿ ಹಬ್ಬಿದ ಬಳ್ಳಿಮಾವೆಂಬ ಹೆಣ್ಣು ಅಶೋಕವೃಕ್ಷವೆಂಬ ನವತರುಣನನ್ನು ಆವರಿಸಿ ಅಪ್ಪಿಕೊಂಡು ಪುರುಷಾಯಿತ ಕ್ರೀಡೆಯನ್ನು ಹೋಲುತ್ತಿತ್ತು.

ವ॥ ಒಂದೊಂದೆಡೆಯಲ್ಲಿ ವಸಂತಕಾಲದ ಸುಖದಿಂದ ಉನ್ಮತ್ತವಾದ ಕೋಗಿಲೆಯ ಕಣ್ಣುಗಳ ಬಣ್ಣವನ್ನು ನೋಡಿ ನೋಡಿ ತಾವೆ ಕೆಂಪಾದುವೇನೊ ಎಂಬಂತೆ—(ಅಶೋಕವೃಕ್ಷಗಳು ರಕ್ತವರ್ಣವಾಗಿ ಶೋಭಿಸಿದುವು.)

---

1. ಸ (ಅ) 2. ಯ (ಮ)

ಉ॥ ಭ್ರಾಜಿತ ಧೂಮಮಾಳೆ ಮಧುಪಾವಳಿ ಕೇಸುರಿ ಕೆಂದಳಿರ್ ತದು
ರ್ವೀಜಮುದಗ್ರವಹ್ನಿಯೆನೆ ಯಾತ್ರೆಯೊಳಂಗಜನಿಕ್ಷು ಚಾಪಮಂ
ಪೂಜಿಸಿ ಮೀಸಕೇತನಮನರ್ಚಿಸಿ ವಾಜಿಯನಾಜಿಗಂದು ನೀ
ರಾಜಿಸಲೆಂದು ಪೊತ್ತಿಸಿದ ದೀಪಮೆನಿಪ್ಪುವು ತಳ್ತಶೋಕೆಗಳ್ ॥ ೧೩೨ ॥

ವ॥ ಅಂತುಮಲ್ಲದೆಯುಂ—

ಕಂ॥ ಪೊಸಮಕರಂದದ ಮಾಂದದ
ರಸಕ್ಕೆ ವಂದಲರೊಳೆಱಗಿದಳಿ ರಚನೆಯ ಕ
ರ್ಪೆಸೆವಂತೆಸೆವಿನಮೇಂ ಸೊಗ
ಯಿಸಿದುದೊ ವನಯುವತಿ ವದನ ತಿಲಕಂ ತಿಲಕಂ ॥ ೧೩೩ ॥

ವ॥ ಅದಲ್ಲದೆಯುಂ—

ಮ॥ ಪಿಕನಾದಂ ಕಳನಾದಮಂ ಪರಿಪ ತನ್ಮಾಲಾಶುಕಂ ಪಚ್ಚೆಯಂ
ಶುಕಮಂ ತಳ್ತಲರ್ದೋಲೆ ಪೋಲೆ ಸಖಿಯಂ ಮೆಯ್ವಿಟ್ಟು ಕೆಯ್ವಿ[1]ಟ್ಟಶೋ
ಕೆ[1]ಕರಂ ಪೋಲ್ತುದು ಮಿಂದು ನಿಂದು ಮುಡಿಯಂ ಬಿಟ್ಟಾಱಿಸುತ್ತಿರ್ದ ಕಾ
ಮುಕಿಯಂ ಕಾಂತತಮಾಳಕಾಂ[2]ತನಿ[2]ದಿರೊಳ್ ಮೆಯ್ವೆತ್ತ ಸೌಂದರ್ಯದಿಂ ॥ ೧೩೪ ॥

[3]ವ॥ ಮತ್ತಂ ತದಂತಿಕದೊಳ್[3]—

---

೧೩೨. ಸುತ್ತುವರಿದು ಹಾರಾಡುತ್ತಿರುವ ದಂಬಿಗಳ ಸಮುದಾಯವೆ ಹೊಗೆ; ಕೆಂದಳಿರ ಉರಿಯೆ ನಾಲಗೆ; ಆ (ಅಶೋಕ) ವೃಕ್ಷವೆ ಉರಿವ ಬೆಂಕಿ (ಹೀಗೆ ಹೋಮಾಗ್ನಿ ಪೂರ್ವಕ) ತನ್ನ ವಿಜಯ ಯಾತ್ರೆಯಲ್ಲಿ ಮನ್ಮಥನು ಕಬ್ಬಿನ ಬಿಲ್ಲನ್ನು ಪೂಜಿಸಿ, ಮೀನಧ್ವಜವನ್ನು ಅರ್ಚನೆ ಮಾಡಿ, ತನ್ನ ಯುದ್ಧದ ಕುದುರೆಗೆ ಆರತಿಯೆತ್ತಲು ಹೊತ್ತಿಸಿದ ನೀಲಾಂಜನದ ದೀಪಗಳೊ ಏನೊ ಎಂಬಂತೆ ಚಿಗುರು ಬಿಟ್ಟ ಅಶೋಕೆಗಳು ಕಂಗೊಳಿಸಿದುವು.

ವ॥ ಅಷ್ಟೆ ಅಲ್ಲದೆ—

೧೩೩. ಹೊಸ ಮರಿಮುಳದ ಅಚ್ಚ ಮಕರಂದದ ರಸಕ್ಕೆ ಬಂದು ಕವಿದ ದುಂಬಿಗಳ ಕಪ್ಪು ಬಣ್ಣದಿಂದ ಕೂಡಿ ಕರಿದಾಗಿ ಶೋಭಿಸುವ ತಿಲಕ ವೃಕ್ಷವು ವನವೆಂಬ ತರುಣಿಯ ತಿಲಕದಂತೆ (ಹಣೆಬೊಟ್ಟಿನಂತೆ) ಅದೆಷ್ಟು ಮನೋಹರವಾಯಿತು !

ವ॥ ಅಷ್ಟೆ ಅಲ್ಲದೆ—

೧೩೪. ಕೋಗಿಲೆಯ ಕೂಜಿತವು ತನ್ನ ಮಧುರ ಧ್ವನಿಯನ್ನೂ, ಮೇಲೆ ಬಂದು ಕುಳಿತುಕೊಳ್ಳುವ ಗಿಳಿಗಳ ಹಿಂಡು ಹಸಿರು ಸೀರೆಯನ್ನೂ, ಹೂತ ಓಲೆ ಮರವು ಸಖಿಯನ್ನೂ ಹೋಲಲಾಗಿ, ಮೈಬಿಟ್ಟು ಶಾಖೆಗಳನ್ನು ಹರಡಿದ ಅಶೋಕೆಯು ಸ್ನಾನಮಾಡಿ ಬಂದು ತನ್ನ ಕಾಂತನೆದುರಿಗೆ ಮುಡಿಯನ್ನು ಬಿಟ್ಟು ಆರಿಸಿಕೊಳ್ಳುವ ಕಾಮುಕಿಯ ಹಾಗೆ ತಮಾಲ ವೃಕ್ಷದ ಎದುರಿಗೆ ಶೋಭಿಸಿತು.

ವ॥ ಅಲ್ಲದೆ ಅದರ ಕಡೆಯಲ್ಲಿ—

1, ಟ್ಟು ಸೀರೆ (ಅ) 2, ತಿಗ (ಅ) 3, × (ಮ)

ಕಂ॥ ಮೃಗನಯನೆಯರೊದೆಯೆಯುಮಾ
ಕೆಗಳುದ್ಯನ್ಮದನ ಮದ್ಯಮಂ ಮುಕ್ಕುಳಿಸಿ
ದುರ್ಗುಳಿಯುಮಶೋಕೆ ವಕುಳದ
ಮುಗುಳಲರ್ವುವು ರಮಣವದನಮಲರ್ವಂತೆತ್ತಂ ॥ ೧೩೫ ॥

ವ॥ ಎನಿಸಿದ ಮಧುಸಮಯದೊಳುದ್ಯಾನನಂದನ ಪುರೋಪವನ ಕಿಸಲಯ ಕುಸುಮಫಲಭರ ವಿನಮ್ರಕಮ್ರಾಮ್ರವನಲಕ್ಷ್ಮಿಯಲ್ಲದೆ ಬೇಜಿ[3]ಯುಂ—

ಚಂ॥ ಅಳಿವೃತಮಪ್ಪ ಕೊಂಬಳಿಯೆ ಸೆಂಬುಳಿಗೋಲ್ ವಸನಂ ಮಿಸುರ್ಪ ಕೆಂ
ದಳಿರತಿಪಕ್ವ ಬಂಧುರ ಫಲಂ ಸತಿ ಮುಟ್ಟಿದ ಪೊನ್ನ ಬಟ್ಟಲ
ಗ್ಗಳದ ವನೈಕದೇಶವಸನಂ ತೊಲಗಿರ್ಪಿರವಾಗೆ ಮುಟ್ಟಲಿ
ರ್ದಳಿಯಳನೇನರಣ್ಯ ಸಹಕಾರಲತಾಂಗನೆ ಪೋಲ್ತು ನಿಲ್ತಳೋ ॥ ೧೩೬ ॥

ವ॥ ಮತ್ತಮಿಂತನಿತ್ತುಮತಿ ಕತಿಪಯವಿಳಸಿತಮೆನಿಸಿದ ಮಧುಪ್ರಪಂಚದೊಳ್—

ಮ॥ ಪರಿರಾಜತ್ಸಹಕಾರ ಸಾಂದ್ರರಸಮುಂ ಸಪ್ತಚ್ಛದೋದ್ಗಂಧಿ ಬಂ
ಧುರ ನಿರ್ಯಾಸಮುಮಾಸ್ರವತ್ಸರಳಸಾರಾಸಾರಮುಂ ಹೇಮತಾ
ಮರಸಾಂಭಃಕಣಮುಂ ನಿವರ್ತನೆ ವರಂ ತಾನಾಮದಂ ಸೀಧುಸೀ
ಕರಮಾದುಗ್ರವಸಂತದಂತಿ[1][ಪೆಳ][1]ಜಿತ್ತೊಲ್ದಿರ್ದಗಲ್ದಿರ್ದೋರಂ ॥ ೧೩೭ ॥

ವ॥ ಮತ್ತಂ ವನಾಂತರಂಗ[2]ದೊ[2]ಳ್—

---

೧೩೫. ಮೃಗಾಕ್ಷಿಯರ ಪಾದಾಘಾತದಿಂದಲೂ ಮುಕ್ಕುಳಿಸಿ ಉಗುಳಿದ ಮದ್ಯದಿಂದಲೂ ಅಶೋಕ ಹಾಗು ಬಕುಲ ವೃಕ್ಷಗಳು (ಆ ಸ್ತ್ರೀಯರ) ರಮಣರ ಮುಖಗಳಂತೆ ತಮ್ಮ ಹೂಗಳನ್ನು ಅರಳಿಸುವುವು.

ವ॥ ಹೀಗೆ ವಸಂತ ಸಮಯದಲ್ಲಿ ಉದ್ಯಾನನಂದನ ಉಪವನಗಳೆಲ್ಲ ಚಿಗುರು ಹೂ ಹಣ್ಣುಗಳ ಭಾರದಿಂದ ಬಾಗಿ ಕಂಗೊಳಿಸುವ ಮಾವಿನ ಸೌಭಾಗ್ಯವೊಪ್ಪಿ ತೋರುತ್ತಿರಲು ಇನ್ನೊಂದೆಡೆಗೆ—

೧೩೬. ದುಂಬಿಗಳಿಂದ ತುಂಬಿದ ಕೊಂಬೆಯೆ ಸೆಳೆ; ಮಿಗುಗುವ ಕೆಂದಳಿರ ಸೀರೆ; ಮಾಗಿ ಬಣ್ಣಗೊಂಡೊಪ್ಪುವ ಫಲವೆ ಚಿನ್ನದ ಬಟ್ಟಲು; ವನದಲ್ಲಿಯ ಒಂದು ಮೂಲೆಯ (ಜನರಿಂದ) ದೂರವಿರುವ ಜಾಗವಾಗಿರಲು ಅರಣ್ಯದ ಒಂದು ಬಳ್ಳಿಮಾವು ಮುಟ್ಟಾದ ಹೆಂಗಸನ್ನು ಹೋತು ಕಂಗೊಳಿಸಿತು.

ವ॥ ಹೀಗೆ ನಾನಾ ಬಗೆಯ ಚೆಲುವನ್ನು ಹೊಂದಿದ ವಸಂತ ಪ್ರಪಂಚದಲ್ಲಿ—

೧೩೭. ಉತ್ತಮವಾದ ಮಾವುಗಳಿಂದ ಸುರಿಯುತ್ತಿರುವ ಮಂದವಾದ ರಸವೂ, ಪರಿಮಳದೊಡನೆ ಸೋರುವ ಏಳೆಲೆಬಾಳೆಯ ಅಂಟು ದ್ರವವೂ, ಧೂಪವೃಕ್ಷಗಳಿಂದ ಧಾರಾಕಾರವಾಗಿ ಹರಿಯುತ್ತಿರುವ ಸಿರ್‍ಯಾಸವೂ, ಹೊಂದಾವರೆಗಳ ಮಕರಂದ ಬಿಂದುಗಳೂ ಕೂಡಿಕೊಂಡು ಮದ್ಯದ ಸೋನೆಯಂತಿರುವ ಮದೋದಕವನ್ನು ಸುರಿಸುತ್ತ ವಸಂತವೆಂಬ ಪ್ರಚಂಡವಾದ ಆನೆ ಒಲಿದವರನ್ನೂ ಅಗಲಿದವರನ್ನೂ ಒಡನೊಡನೆ ಬೆದರಿಸಿತು.

ವ॥ ಮತ್ತು ವನದ ಮಧ್ಯಪ್ರದೇಶಗಳಲ್ಲಿ—

---

1. ಬೆಣ (ಮ) 2. ಳೊ (ಮ)

ಕಂ॥ ಭಂಗಿಯೊಳಶೋಕಲತೆಯೆಂ
ಬಂಗನೆ ತರತರದಿನಡರ್ದು ಮಲಯಜಮಂ ಬ
ಲ್ಲಂಗೆ ಲತಾವೇಷ್ಟಿತಕಾ
ಲಿಂಗನಮನನಂಗಮತಮನೇನಱಿಪಿದಳೋ ॥ ೧೩೮ ॥

ವ॥ ಮತ್ತಮದಱ ಸಮೀಪದೊಳ್ ಬೀತು ಪಸುರೇಱಿರ್ದ—

ಕಂ॥ ಕುಂದಲತೆ ಪುಷ್ಪಮಂ ನಿ
ಷ್ಪಂದಿ[1][ಸೆ][1] ಸೊಗಯಿಸಳೆ ಮಧುಪನಿಕರಕ್ಕೆ ಜರ
ತ್ಸುಂದರಿ ಸೊಗಯಿಸುಗುಮೆ ವಿಟ
ಸಂದೋಹಕ್ಕೆನಿತು ನಯಮುನಳವಡಿಸಿದೊಡಂ ॥ ೧೩೯ ॥

ವ॥ ಅದಕ್ಕನತಿದೂರದೊಳ್—

ಕಂ॥ ಕುಸುಮಾಯುಧ ನೃಪನೆಟ್ಟಿರೆ
ಬಸಂತಕಂ ಪೊನ್ನ ಪೂಗಳಿಂದಿರದಡಿಯು
ರ್ಚಿಸಿದನೆನೆ ಕೊಸಗುಗಳ್ ಸೊಗ
ಯಿಸಿದುವು ಕಣ್ಗಂ ಮನಕ್ಕಮಂದಿನ ದಿವಸಂ ॥ ೧೪೦ ॥

ವ॥ ಅದಲ್ಲದೆಯುಂ ತದುಪಕಂಠದೊಳ್—

ಕಂ॥ ಅಳವಳವಿಗಳೆದ ನವಪರಿ
ಮಳಕ್ಕೆ ಗೆಂಟಾಗಿ ಮದನಮಂಗಳದೀಪಂ ॥
ಗಳಿವೆಂದು ಪೂತ ಸಂಪಗೆ
ಗಳೊಳೆಳಸದೆ ಮೊಱೆದು ತಿರಿವುವಳಿಗಳ ಬಳಗಂ ॥ ೧೪೧ ॥

೧೩೮ ಅಶೋಕಲತೆಯೆಂಬ ಹೆಣ್ಣು ಶ್ರೀಗಂಧವೆಂಬ ನಲ್ಲನ ಮೈಯನ್ನು ಅಚ್ಚುಕಟ್ಟಾಗಿ ತಬ್ಬಿಕೊಂಡು ಕಾಮ ಶಾಸ್ತ್ರದಲ್ಲಿ ಹೇಳಿದ ಲತಾವೇಷ್ಟಿತಕಾಲಿಂಗನವೆಂದರೇನೆಂಬುದನ್ನು ಪ್ರತ್ಯಕ್ಷವಾಗಿ ಮಾಡಿ ತೋರಿದಳು.

ವ॥ ಅದರ ಸನಿಯದಲ್ಲಿ ಬಾಡಿ ಹಸುರೇರಿದ್ದ (ಹಳೆಯ)

೧೩೯. ಒಂದು ಮೊಲ್ಲೆಯ ಬಳ್ಳಿ ಹೂವಿನ ಶೋಭೆಯಿಲ್ಲದೆ ನಿಶ್ಚಲವಾಗಿ ನಿಂತಿತ್ತು. ದುಂಬಿಗಳಿಗೆ ಹೂವಿಲ್ಲದ ಬಳ್ಳಿಯೂ ವಿಟ ಸಮೂಹಕ್ಕೆ ವೃದ್ಧಸುಂದರಿಯೂ ಎಷ್ಟು ಅಲಂಕಾರ ಮಾಡಿಕೊಂಡಿದ್ದರೂ ಎಂದಾದರೂ ಮೆಚ್ಚಿಗೆ ಯಾಗಬಹುದೆ ? (ಪದ್ಯಪಾಠದಲ್ಲಿ ಏನೊ ಲುಪ್ತವಾದಂತಿದೆ. ಅಸಗನ ಪದ್ಯ ಹೀಗಿದೆ: "ಷಟ್ಪದೇ ಕುಂದಲತಾನಾಸೀತ್ ಪುರೈವ ಮಧುಪಾಯಿನಾಮ್ ವೀತ ಪುಷ್ಪೋದ್ಗಮಾ ವಾರನಾರೀವ ಕಾಮಿನಾಮ್")

ವ॥ ಅದಕ್ಕೆ ಅತಿ ಸಮೀಪದಲ್ಲಿ—

೧೪೦. ಪುಷ್ಪಬಾಣ (ಮನ್ಮಥ)ನೆಂಬ ರಾಜನು ಬರಲಾಗಿ ವಸಂತನು ಚಿನ್ನದ ಹೂಗಳಿಂದ ಅವನಿಗೆ ಪಾದಪೂಜೆ ಮಾಡಿದನೊ ಏನೊ ಎಂಬಂತೆ ಬೆಟ್ಟದಾವರೆ ಹೂಗಳು ಕಣ್ಣಿಗೂ ಮನಕ್ಕೂ ಸಂತೋಷವನ್ನಿತ್ತುವು.

ವ॥ ಅದಲ್ಲದೆ ಅದರ ಬಳಿಯ ಪ್ರದೇಶದಲ್ಲಿ—

೧೪೧. "ಇವು ಮನ್ಮಥನ ಮಂಗಳ ದೀಪಗಳು" ಎಂಬ ಭಾವನೆಯಿಂದಲೊ ಏನೊ ಎಂಬಂತೆ ಹೂಬಿಟ್ಟ ಸಂಪಿಗೆ ಮರಗಳಲ್ಲಿ ಮಿತಿಮೀರಿ ಹೊಮ್ಮುವ ಪರಿಮಳಕ್ಕೆ ದೂರವಾಗಿ, ಅದಕ್ಕೆ ಆಸೆಮಾಡದೆ, ದುಂಬಿಗಳ ಬಳಗ ಗುಂಯಿಗುಡುತ ಎನ್ನೆತ್ತಲೊ ಅಲೆಯುತ್ತಿರುವುದು.

. ಶೆ (ಮ)

ವ॥ ಮತ್ತಮಪರಿಮಿತ ಪರಿಮಳಾತಿಶಯಿತ ಸರ್ವರ್ತುಸಂಭವ ಪ್ರಸವ ಪ್ರಸರಕ್ಕೆ ಲತಾಂತಾಧಿರಾಜ ಮಲ್ಲಿಕಾ ವಿದಲನ್ಮುಕುಳನಿಕರ ಮುಗುಳ್ದ ಪೊಸಗಂಪು ದೆಸೆದೆಸೆಗೆ ಪಸರಿಸಿ ಮಗಮಗಿಸೆ ಕಂಪಿನ ಕಣಿಯೆನಿಸಿದುದ್ಯಾನೈಕದೇಶದೊಳ್ ಸೊಗಯಿಸೆ—

ಚಂ॥ ಕುಸುಮ ಕುಳಕ್ಕೆ ನಿನ್ನರಸೆ ನಿನ್ನ ವಿಳಾಸಮೆ ನಿನ್ನ ಚೆಲ್ವೆ ನಿ
ನ್ನೆಸಕಮೆ ನಿನ್ನಸಲ್ಗೆ ಮಧುಲಕ್ಷ್ಮಿಯೊಳಾ ಮಳಯಾನಿಳೇಂದುಗಳ್
ಪೊಸಯಿಸೆ ನಿನ್ನ ಸೌರಭಮನೆಂದಭಿಷೇಕ ಪುರಸ್ಸರಂ ಸ್ಮರಂ
ನಸು ಬಿರಿದಿರ್ದ ಮಲ್ಲಿಗೆಗೆ ಕಟ್ಟಿದನಂಕದ ರಾಜ್ಯಪಟ್ಟಮಂ ॥ ೧೪೨ ॥

ವ॥ ಅದಲ್ಲದೆಯುಂ—

ಚಂ॥ ಪುದಿದೆಳಗಾಯ್[1]ಬ[1]ಸಂತದ ಮೊದಲ್ ನೆ[2]ರೆ[2]ದೊಪ್ಪುವ ದೋರೆಗಾಯ್ [3]ಬ[3]ಸಂ
ತದ ನಡು ಪಣ್ [3]ಬ[3]ಸಂತದ ಸೆ[4]ಜ[4]ಂಗೆನೆ ತನ್ಮಯಮಪ್ಪಿನಂ [5]ಬ[5]ಸಂ
ತದ [6]ಪುದಿದಾ[6]ದಿ ಮಧ್ಯಮವಸಾನಮೊಡಂಬಡೆ ತನ್ನೊಳಂ [7]ಬ[7]ಸಂ
ತದೊಳಮಿದೇಂ [7]ಬ[7]ಸಂತ[8]ದದಗುಂತಿಗೆ ಬಾಚಿಕ್ಕೊದಲಾಯ್ತೊ[8] ಮಾಮರಂ ॥ ೧೪೩ ॥

ವ॥ ಆ ಪೂತಚೂತಂ ಮೊದಲಾಗೆ ಬಸಂತರಾಜನ ಕೋಶಸಾರಸರ್ವಸ್ವಮುಂ ಕಯ್ವಿಡಿಯುಂ ನಿಕ್ಷೇಪಮುಂ ಆದ ಸಮಸ್ತಾರ್ತ್ವರ್ತ್ರ ವನಸ್ಪತಿ ಪರಿಚ್ಛದಾಯಮಾನ ಪಲ್ಲವೋಪಲಾಸಿತ ಗುಚ್ಛಾಚ್ಛಾದನ ಬಾಲಸಟಾಳು ಸಮಾಟೋಪಾಳಿ ವಿವಿಧ ವಿಳಸನನತಿ ವಿತರಣ ಮಂದ ಮಾರುತಾಂದೋಳಿತ ಲತಾಂದೋಳಾರೂಢ ಕೇಳಿಕೀರಕೇಳಿ ಪಿಕಾಳಿಕೇಳಿ ಸಮ್ಮದಾಳಿಕುಳಾಂದೋಳಾರಾವಾವಿರ್ಭೂತ ವಸಂತೋತ್ಸವಂ ಪೊಂಪುಳಿ ವೋಪುದುಂ ಮತ್ತಂ—

ವ॥ ಎಲ್ಲ ಋತುಗಳಲ್ಲಿಯೂ ಹೂಬಿಡುತ್ತ ಅಪರಿಮಿತವಾದ ಪರಿಮಳದಿಂದ ಹೂಗಳಿಗೆಲ್ಲ ರಾಜನೆನಿಸಿಕೊಂಡ ಮಲ್ಲಿಗೆಯ ಬಿರಿಮೊಗ್ಗುಗಳು ಅರಳುತ್ತ ಅದರ ನವಸುಗಂಧ ದಿಕ್ಕುದಿಕ್ಕಿಗೆ ಹಬ್ಬಿ ಗಮಗಮಿಸಲಾಗಿ ಪರಿಮಳದ ನೆಲೆಮನೆಯೆನಿಸಿದ ಉದ್ಯಾನದೊಂದು ಪ್ರದೇಶದಲ್ಲಿ

೧೪೨. "ವಸಂತದ ವೈಭವದಲ್ಲಿ ದಕ್ಷಿಣದ ತಂಗಾಳಿಯೂ ಚಂದ್ರನೂ ನಿನ್ನ ಪರಿಮಳವನ್ನು ಪುನರ್ನವಗೊಳಿಸಲಾಗಿ ಹೂಗಳಿಗೆಲ್ಲ ನೀನೆ ದೊರೆ; ವಿಲಾಸವೆಂದರೆ ನಿನ್ನದೇ; ಚೆಲುವು ನಿನ್ನವೇ; ಶೋಭೆಯೆಂದರೂ ನಿನ್ನದೇ" ಎಂದು ಮನ್ಮಥನು ಅಭಿಷೇಕ ಪೂರ್ವಕವಾಗಿ ಅರೆಬಿರಿದ ಮಲ್ಲಿಗೆಗೆ ಶ್ರೇಷ್ಠವಾದ ರಾಜ್ಯಪಟ್ಟವನ್ನು ಕಟ್ಟಿದನು.

ವ॥ ಅದೊಂದೇ ಅಲ್ಲದೆ—

೧೪೩. ಗೊಂಚಲು ಗೊಂಚಲಾದ ಎಳಗಾಯಿ ವಸಂತದ ಆರಂಭ; ದೋರೆಗಾಯಿ ವಸಂತದ ನಡುಗಾಲ; ಹಣ್ಣು ಅದರ ಕೊನೆ. ಹೀಗೆ ವಸಂತವೆಂದರೆ ಮಾವಿನ ತನ್ಮಯವೆಂಬಂತೆ ವಸಂತಋತುವಿನ ಮೂರವಸ್ಥೆಗಳೂ ತನ್ನಲ್ಲಿ ಅಳವಟ್ಟು ಶೋಭಿಸಲಾಗಿ, ವಸಂತದ ವೈಭವಕ್ಕೆ ಮಾವಿನಮರವೇ ತವರಾಯಿತು.

ವ॥ ಆ ಹೂತ ಮಾಮರವೆ ಮೊದಲಾದ ವಸಂತರಾಜನ ಭಂಡಾರ ಸರ್ವಸ್ವವೂ ತನಗೆ ಆಧಾರವೂ ನಿಕ್ಷೇಪವೂ ಆದ ಸಾರ್ವರ್ತುಕ ವನಸ್ಪತಿಗಳ ಪರಿವಾರದೊಂದಿಗೆ ಕೂಡಿಕೊಂಡು ಚಿಗುರೆಲೆಗಳಿಂದ ರಮಣೀಯವಾದ ಪುಷ್ಪಗುಚ್ಛಗಳ ವಿಜೃಂಭಣೆಯಿಂದಲೂ, ಅವುಗಳ ಮೇಲೆ ವಿಲಾಸದಿಂದ ಹಾಯ್ದು ಬಂದು ಪರಿಮಳವನ್ನು ಬೀರುತ್ತ ಮಂದವಾಗಿ ಬೀಸುವ ಗಾಳಿಯಿಂದಲೂ, ಆ ಗಾಳಿಗೆ ತೊಯ್ದಾಡುವ ಬಳ್ಳಿಗಳ ಉಯ್ಯಾಲೆಯಲ್ಲಿ ಜೀಕವಾಡುತ್ತಿರುವ ಗಿಳಿ-ದುಂಬಿ-ಕೋಗಿಲೆಗಳ ಸಂತೋಷ ಧ್ವನಿಗಳಿಂದಲೂ ವಸಂತೋತ್ಸವವು ಅತಿಶಯವಾಯಿತು.

---

1. ವ (ಸೂ) 2. ಱ (ಅ) 3. ವ (ಸೂ) 4. ರ (ಮ) 5. ವ (ಸೂ) 6. ನಿಮಿರ್ದಾ (ಮ) 7. ವ (ಸೂ) 8. ದೊಳಗಾಡಿಯ ಪೊಲಾಯಿತು ಬಂದ (ಸೂ)

ಕಂ॥ ಇರುಳಿನ ವಿಯೋಗದುಃಖದೊ
ಳಿರೆ ಸತ್ತಂತಿರ್ಪ ಜಕ್ಕವಕ್ಕಿಗೆ ಮನದೊಳ್
ಕರುಣಿಸಿ ಕುಂದುವ ತೆಱದಿಂ
ದಿರುಳ್ ಕರಂ ಕಿಱಿಯವಾದುವಂದಿನ ದಿನದೊಳ್ ॥ ೧೪೪ ॥

ವ॥ ಮತ್ತಮಾ ಮಧುಸಮಯದೊಳ್—

ಕಂ॥ ಕೊಸಗಿನ ತುಱುಂಬುಮುಳ್ಪಿನ
ವಸನಂ ಕುಂಕುಮ ನವಾಂಗರಾಗಂ ಪರಿರಂ
ಜಿಸೆ ರಾಗದಿಂದಮುತ್ಪಾ
ದಿಸಿದನಜಂ ಭುವನಜನಮನೆನಿಸಿದುದು ಜನಂ ॥ ೧೪೫ ॥

ಇನನರ್ಥಲೋಭದಿಂ ಧನ
ದನ ದೆಸೆಗೆ ಮಹೋಷ್ಣ ಕಿರಣನೆಯ್ದುರ್ಪಿನೆಗಂ
ಘನಜಳಧಿವೇಳೆ ಯಿಚ್ಚೆಯ
ತನಿಗಣ್ಪುವೊಲೊಯ್ಯನೊಯ್ಯನುಡುಗಿದುದು ಹಿಮಂ ॥ ೧೪೬ ॥

ನನೆಗಣೆ ಕಣೆ ತನುರಹಿತಂ
ಮನೋಜನುಂತುಂ ಬಸಂತಬಲದಿಂ ಗೆಲ್ದಂ
ತನಗಂ ಪಿರಿಯರನಚಲಿತ
ಮನಸ್ಕರಂ ಮಿತ್ರಬಲದಿನಾಗದುದುಂಟೇ ॥ ೧೪೭ ॥

ವ॥ ಇಂತು—

---

೧೪೪. "ರಾತ್ರಿಯೆಲ್ಲ ವಿರಹದುಃಖದಿಂದ ಪಾಪ! ಈ ಚಕ್ರವಾಕಗಳು ಜೀವನ್ಮೃತವಾಗಿರುವುವು" ಎಂಬ ಕನಿಕರದಿಂದಲೊ ಏನೊ ಎಂಬಂತೆ ಆ ಋತುವಿನಲ್ಲಿ ರಾತ್ರಿಗಳು ಕಿರಿದಾದುವು.

ವ॥ ಮತ್ತು ಆ ವಸಂತಸಮಯದಲ್ಲಿ—

೧೪೫. ಚೆಟ್ಟಿದಾವರೆಯ ತುರುಬು, ಕೆಂಬಣ್ಣದ ಉಡುಪು, ಕುಂಕುಮದ ಅಂಗರಾಗ—ಇವುಗಳಿಂದ ಶೋಭಿಸುವ ಜನರನ್ನು ಕಂಡಾಗ ಈ ಲೋಕದ ಜನರನ್ನೆಲ್ಲ ಬ್ರಹ್ಮನು ಬಣ್ಣದಿಂದಲೆ ನಿರ್ಮಿಸಿದನೊ ಏನೊ ಎಂದೆನಿಸುವುದು ("ಉಳ್ಪಿನ" ಎಂದರೆ "ಕೆಂಬಣ್ಣದ" ಎಂದೇ ಆಶಯ. ಅಸಗನ ಪದ್ಯದಲ್ಲಿ "ರಕ್ತಾಂಶುಕ" ಎಂದಿದೆ.)

೧೪೬. ದ್ರವ್ಯದಾಸೆಗೆ ಬಿದ್ದು ಉಗ್ರಕಿರಣನಾದ ಸೂರ್ಯನು ಕುಬೇರನ ದಿಕ್ಕಿಗೆ (ಉತ್ತರಕ್ಕೆ) ಹೋಗಲಾಗಿ, ಘನೋದಧಿಯ ತೀರವನ್ನು ತಣಿಸುವುದಕ್ಕೆ ಹೊರಟಿತೊ ಏನೊ ಎಂಬಂತೆ ಮೆಲ್ಲಮೆಲ್ಲಗೆ ಚಳಿ ಹಿಮ್ಮೆಟ್ಟಿತು.

೧೪೭. ತನ್ನ ಬಾಣವನ್ನು ನೋಡಿದರೆ ಹೂವಿನ ಬಾಣಗಳು; ತಾನೋ ದೇಹವೇ ಇಲ್ಲದವನು; ಹೀಗಿದ್ದರೂ ಮನ್ಮಥನು ವಸಂತನ ಬಲದಿಂದ ತನಗಿಂತ ಹಿರಿಯರಾದ ದೃಢಚಿತ್ತರನ್ನು ಗೆದ್ದನು. ಮಿತ್ರಬಲದಿಂದ ಕೈಗೂಡಲಾರದುದು ಉಂಟೆ ?

ವ॥ ಹೀಗೆ—

ಮ॥ ಸಕಳೋರ್ವೀಧರನಂದನಾವಳಿಗಳಂ ಮೆಯ್ವಿಟ್ಟು ಕೆಯ್ವಿಟ್ಟು ಸೈ
ನಿಕರಪ್ಪನ್ಯಭೃತಾಳಿ ಕೀರಸುಭಟರ್ ಕಯ್ಕೊಳ್ವಿನಂ ತದ್ವಸಂ
ತಕನೆಟ್ಟಿರ್ಪುದುಮುರ್ವರಾಸ್ಯತಿಲಕಂ ವಜ್ರಾಯುಧಂ ಬೇಗಮು
ತ್ಸುಕನಾದಂ ವನಕೇಳಿಲೀಲೆಗನಘಂ ಸೌಜನ್ಯಕಂದಾಂಕುರಂ ॥ ೧೪೮ ॥

—ಗದ್ಯ—

ಇದು ಜಿನೇಂದ್ರ ಚರಣ ಸರಸೀರುಹ ಶಿಲೀಮುಖಾಯಮಾನ
ಶ್ರೀಮದುಭಯಕವಿ ಚಕ್ರವರ್ತಿ
ನಿರ್ವರ್ತಿತಮುಂ
ಅಮ್ಮನ ಭಕ್ತಾಭಿಧಾನ ವಿದ್ಯಾನಿದಾನ ಮಲ್ಲಪಾರ್ಯ
ತದನುಜಾತಾಭಿಜಾತ ಸಾರಸ್ವತ ಪುನ್ನಮಾರ್ಯ ಕಾರಿತಮುಮಪ್ಪ
ಪುರಾಣಚೂಡಾಮಣಿಯೊಳ್ ಸಪ್ತಮಾಶ್ವಾಸಂ

---

೧೪೮. ಎಲ್ಲಾ ಬೆಟ್ಟಗಳನ್ನೂ, ನಂದನಗಳನ್ನೂ ಮೈಬಿಟ್ಟು ಕೈಬಿಟ್ಟು (ಸ್ವೈರವಾಗಿ) ತನ್ನ ಸೈನಿಕರಾದ ಕೋಗಿಲೆಗಳೂ ಯೋಧರಾದ ಗಿಳಿಗಳೂ ಆಕ್ರಮಿಸುವಂತೆ ವಸಂತರಾಜನು ಏರಿಬರಲಾಗ ಭೂಲೋಕಕ್ಕೆ ಭೂಷಣನಾದ ವಜ್ರಾಯುಧನು ವನಕೇಳಿಗೆ ಉತ್ಸುಕನಾದನು.

ಗದ್ಯ॥ ಇದು ಜಿನೇಶ್ವರನ ಚರಣಕಮಲದ ದುಂಬಿಯಂತಿರುವ, ಶ್ರೀಮದುಭಯಕವಿ ಚಕ್ರವರ್ತಿಯೆಂಬ ಬಿರುದಾಂಕಿತನಿಂದ ನಿರ್ವರ್ತಿತವೂ ಅಮ್ಮನ ಭಕ್ತಾಭಿಧಾನ ಮಲ್ಲಪಾರ್ಯನ, ಅವನ ತಮ್ಮ ಹೊಸ ಸಾರಸ್ವತ ಪುನ್ನಮಾರ್ಯ ಹೇಳಿಸಿದ ಪುರಾಣಚೂಡಾಮಣಿಯಲ್ಲಿ ಏಳನೆಯ ಆಶ್ವಾಸವು.

ಶ್ರೀ

ಶಾಂತಿಪುರಾಣಂ

—೦—

ಅಷ್ಟಮಾಶ್ವಾಸಂ

ಕಂ॥ ಶ್ರೀಮಜ್ಜಿನಶಾಸನ ಚೂ
ಡಾಮಣಿ ವಿಭು ವಿಬುಧವನಜವನ ಕಳಹಂಸಂ
ಭೂಮಂಡಳಪತಿ ಬುಧಚಿಂ
ತಾಮಣಿ ಜಿನಚಂದ್ರನಿರೆ ಸಭಾಮಂಡಳದೊಳ್ ॥ ೧ ॥

ಜನಿತನೃಪಾನಂದಂ ನಂ
ದನವನಿಗಂ ಬಂದು ಬಿನ್ನಪಂಗೆಯ್ಯೆ ಮನೋ
ಜನೊಳೆಕ್ಕತುಳಕೆ ಬರ್ಪಂ
ತನಂತರಂ ನಂದನಕ್ಕೆ ವಿಭು ಜಿನಚಂದ್ರಂ ॥ ೨ ॥

ವ॥ ಬಂದು ಸೌಜನ್ಯಕಂದಾಂಕುರಂ ಪುರಂದರಲೀಲೆಯಿಂ ದೇವರ ಮ[1]ಹೋ[1]ದ್ಯಾನಮನೆಯ್ದಿ ಮದಗಜಮನಿೞಿದು ಲಕ್ಷ್ಮೀಮತಿ ಮಹಾದೇವಿ ಮೊದಲಾಗಯ್ನೂರ್ವರರಸಿಯರ್ವೆರಸು ಬರ್ಪ ಯುವರಾಜನಂ—

ಕಂ॥ ನಂದನವನಪವನಂ ಬೞಿ
ವಂದೊಡಗೊಂಡೊಯ್ದು ಪುಗಿಸೆ ಬನಮಂ ಪುಗಲೆಂ
ಬೊಂದನ್ಯಭೃತಕ್ಕಾಣತಿ
ವಂದಂತಾಯ್ತನು ಬೆಸಸೆ ಕುಸುಮಾಮೋದಂ ॥ ೩ ॥

ಆಶ್ವಾಸ ೮

೧. ಜಿನಧರ್ಮಚೂಡಾಮಣಿಯೂ ಪಂಡಿತ ಜನಪ್ರಿಯನೂ ಆದ ಜಿನಚಂದ್ರ ಭೂಪೋತ್ತಮನು ಒಡ್ಡೋಲಗದಲ್ಲಿ ಕುಳಿತಿರುವಾಗ

೨. ಆನಂದಕರನಾದ ಮಗನು ಬಂದು ಬಿನ್ನಹ ಮಾಡಲಾಗಿ, ಆ ಪ್ರಭು ಮನ್ಮಥನಿಗೆ ಸರಿಸವನೆಂಬಂತೆ ಹೊರಟು

ವ॥ ಇಂದ್ರವೈಭವದಿಂದ ಮಹೋದ್ಯಾನಕ್ಕೆ ಬಂದನು; ಮದದಾನೆಯಿಂದ ಇಳಿದು, ಲಕ್ಷ್ಮೀಮತಿಯೆ ಮೊದಲಾದ ಐನೂರ್ವರು ಅರಸಿಯರೊಡನೆ ಬರುವ ಆ ಯುವರಾಜನನ್ನು

೩. ನಂದನದ ಗಾಳಿ ಬಳಿಗೆ ಬಂದು ಒಡಗೊಂಡು ಒಳಗೆ ಪ್ರವೇಶ ಮಾಡಿಸಿತು. "ಪುಗಲ್" (ಒಳಗೆ ಹೋಗಬೇಡಿ) ಎಂಬ ಕೋಗಿಲೆಗೆ (ಸುಮ್ಮನಿರೆಂಬ) ಮನ್ಮಥನ ಆಜ್ಞೆಯನ್ನು ತಂದಿತೊ ಏನೊ ಎಂಬಂತೆ ಪುಷ್ಪಗಳ ಪರಿಮಳ ನುಗ್ಗಿ ಬಂದಿತು.

---

1. ಹೋ (ಅ)

ವ॥ ಅಂತು ಬಂದ ವನಕುಸುಮ ಪರಿಮಳಮಿಳದಳಿಕುಳ ಕಾಕಳೀಕಳಿತ ಕೋಮಳಕಳಿಕಾವಿಳಸಿತ ಕರ್ಣಪೂರನುದ್ಯಾನಪಾಲಕ ನಿರ್ದಿಷ್ಟ ಮಾರ್ಗಂ ಬಂದು ತದ್ವನಮಧ್ಯದ—

ಚಂ॥ ಪೊಸತಲರ್ದಂಬುಜಾಕರದ ತಣ್ಪು[1][ಟಿ][1]ಲೊಳ್ ತನಗೇಱಲಿಕ್ಕೆ ರಾ
ಜಿಸುವ ನವಾಮ್ರಪಲ್ಲವಸುಖಾಸನದೊಳ್ [2][ಸು][2]ಖಮಿರ್ದು ನೆಮ್ಮಿ ನಿ
ರ್ಮಿಸಿದಲರೊಂದು ಬೊಂದರಿಗೆಯೊಳ್ ಕನಕಾಂಬುಜಪಾದಪೀಠದೊಳ್
ನಿಸದಮೆ ನೀಡಿ ಕಾಲನಿಡೆ ರಾಜಕುಮಾರನದೊಂದು ದೇಸೆಯಿಂ ॥ ೪ ॥

ಕಂ॥ ಇರೆ ಲಕ್ಷ್ಮೀಮತಿ ಮೊದಲಾ
ಗಿರೆ ತನ್ನಿರ್ಕೆಲದೊಳಬ್ಜದೆಳಯೆಲೆಗಳ ಬಿ
ತ್ತರಿ[3][ಗೆ][3]ಗಳೊಳರಸಿಯರ್ ನೆ
ಮ್ಮಿ ರಾಗದಿಂ ಕನಕ ರಜತ ಸಿಕತಿಳತಳದೊಳ್ ॥ ೫ ॥

ವ॥ ಅಂತು [4]ರಾಜ[4]ಕುಮಾರೋದಾರ ಪರಿವಾರ ಪರಂಪರೆಯುಮಂತಃಪುರ ಚೇಟಿಕಾಗೃಹ ಚೇಟಿಕಾ ನಿಕರಮುಮವರೋಧ ವಧೂ ಪರಿಚಾರಿಕಾ ನಿಚಯಮುಂ ಕಿಕ್ಕಿ[5][ಱಿ][5]ಗಿಱಿದಿರೆ—

ಕಂ॥ ಆ ವಿವಿಧ ಕಳಕಳಕ್ಕೆ ವ
ನಾವಳಿಯಿಂ ಪಾಱಿ ಮೊಱೆವ ಮಧುಪಶ್ರೇಣೀ
ರಾವದ ಘೋಷಣೆ ಕಳೆದುದಿ
ಳಾ ವಲ್ಲಭಸುತನ ಪಡೆಯ ಮಥನಶ್ರೀಯಂ ॥ ೬ ॥

ವ॥ ಅಲ್ಲಿಂ ಬೞಿಯಂ—

ವ॥ ಹಾಗೆ ಬಂದ ವನಪುಷ್ಪ ಸುಗಂಧದೊಡನೆ ಬೆರತುಕೊಂಡು ಮದುಮಧುರವಾಗಿ ದುಂಬಿಗಳು ಗುಂಜಾರವ ಗೈಯುತ್ತಿದ್ದುವು. ಹಾಗೆ ದುಂಬಿಗಳ ಕಲರವದಿಂದ ಶೋಭಿಸುವ ಕೋಮಲ ಪುಷ್ಪಾಭರಣವನ್ನು ಕಿವಿಯಲ್ಲಿಟ್ಟುಕೊಂಡ ಉದ್ಯಾನಪಾಲಕನು ಮುಂದಾಗಿ ಹಾದಿ ತೋರಿಸುತ್ತಿರಲಾಗಿ ನಡೆದು ಆ ತೋಟದ ಮಧ್ಯದಲ್ಲಿದ್ದ—

೪. ಆದೇ ಅರಳಿದ ಹೂಗಳಿಂದ ತುಂಬಿದ ಕೊಳದ ತಂಪಾದ ತೀರದಲ್ಲಿ ಸುಂದರವಾದ ಮಾವಿನ ಚಿಗುರೆಲೆಯ ಸುಖಾಸನದಲ್ಲಿ ಸಂತೋಷದಿಂದ ಕುಳಿತು, ಹೂಗಳಿಂದ ರಚಿಸಿದ ದಿಂಬನ್ನು ಒರಗಿಕೊಂಡು, ಹೊಂದಾವರೆಯ ಪಾದಪೀಠದಲ್ಲಿ ಕಾಲನ್ನು ನೀಡಿಕೊಂಡು ರಾಜಕುಮಾರನು ಠೀವಿಯಿಂದ ಶೋಭಿಸಿದನು.

೫. ಲಕ್ಷ್ಮೀಮತಿಯೆ ಮೊದಲಾದ ಅರಸಿಯರು ಆತನ ಇಕ್ಕೆಲಗಳಲ್ಲಿಯೂ ಕಮಲದ ಎಳೆಯ ಎಲೆಗಳ ಮೆತ್ತೆಗಳನ್ನು ಒರಗಿಕೊಂಡು ಹೊಂದಾವರೆಯ ಹುಡಿಯಿಂದ ಕೂಡಿದ ಮರಳಿನ ಮೇಲೆ ಕುಳಿತರು.

ವ॥ ಹೀಗೆ ಯುವರಾಜನ ಬಹುಸಂಖ್ಯಾತ ಪರಿವಾರವೂ, ಅಂತಃಪುರದ ದಾಸಿಯರೂ, ಗೃಹದಾಸಿಯರೂ, ಅರಸಿಯರ ಪರಿಚಾರಿಕೆಯರೂ ಕಿಕ್ಕಿರಿದು ನೆರೆದಿದ್ದರು.

೬. ಅವರೆಲ್ಲರ ಕಲಕಲಧ್ವನಿಗೆ (ಗಾಬರಿಯಾಗಿ) ಬನದಿಂದ ಹಾರಿ ಸಾಲುಸಾಲಾಗಿ ಹೊರಟ ದುಂಬಿಗಳ ಗುಂಜೀರವವು ರಾಜಕುಮಾರನ ಹಾಗೂ ಆತನ ಪರಿವಾರದ ಪಥಶ್ರಮವನ್ನು ನಿವಾರಿಸಿತು. ("ಮಥನ ಶ್ರೀ" ಎಂಬುದರಲ್ಲಿ ಪಾಠದೋಷವಿರಬಹುದು.)

ವ॥ ಆ ಬಳಿಕ

1. ೯ (ಮ) 2. ಸ (ಮ) 3. x (ಮ) 4. x (ಮ) 5. ೦ (ಮ)

ಕಂ॥ ವನದೇವತೆಗಳ್ ನೃಪನಂ
ದನಂಗೆ ಸೇಸೆಗಳನಾಗಳಿಕ್ಕುವವೋಲ್ ನೂ
ತನ ಲತಿಕೆಗಳಿಂದಲ್ಲೊ
ಕ್ಕು ನಿಂದ ಕುಸುಮೋತ್ಕರಂ ಕರಂ ಸೊಗಯಿಸುಗುಂ ॥ ೭ ॥

ವ॥ ಮತ್ತಿನಿಸಾನುಂ ಬೇಗದಿವಕಳಂಕಾಚಾರ ಸಾರನಪ್ಪ ವಜ್ರಾಯುಧಾಧಿಷ್ಠಿತಮಾದ ಮಾಧವೀ ಮಂಟಪದೊಳ್—

ಚಂ॥ ಮಧುಪಮಹೇಂದ್ರನೀಲಮತಿಮುಕ್ತಕಮೌಕ್ತಿಕಮುತ್ಕವಾಳಸ
ನ್ನಿಧಿ ದಳ ವಿಸ್ಫುರನ್ಮರಕತಂ ಕಳಿಕಾ ಕುಳಿಶಂ ರುವನ್ಮಧೂ
ನ್ಮಧುರಮದೊಂದು ಭೂಪನಿ[1][ದಿರಾದದಿ][1]ಮುರ್ಕ್ತೆಯು ಕೊಂಬು ಪೋಲ್ತುದಾ
ಮಧು ಮಧುಪರ್ಕ ಪೂರ್ವಕಮನರ್ಘಮನರ್ಘ್ಯಮನೆತ್ತುವಂದದಿಂ ॥ ೮ ॥

ವ॥ ಆ ಮಧುಪರ್ಕ ಸಮಯ ಸಮುತ್ಪನ್ನ ಲಕ್ಷ್ಮೀವಿಭವಾನುಭವನಿರತಂ ವಿನೇಯ ನಿಕಾಯಾಂಬುಜಭಾನುವಪ್ಪ ಯುವರಾಜಂ ಕಿಱಿದು ಬೇಗಂ ಮದನಂ ನಿಜಮಹೋತ್ಸವ [2]ವಂಶ[2]ವರ್ಧನದೊಳಿರ್ಪಂತೊಡ್ಡೋಲಗಂಗೊಟ್ಟಿರ್ದು ವನಾವಲೋಕನ ಕುತೂಹಳಾಕುಳಿತಂ ಮಧ್ಯಂದಿನ ಸಮಯಸಂತಪ್ತ ತಪನ ಮಂಡಲಮಂ ನೋಡಿ ನಿಜಾಸನ್ನವರ್ತಿ ವೃದ್ಧಕಂಚುಕಿ ನಿಕಾಯಕ್ಕಂ ನರ್ಮಸಚಿವ ಸಂದೋಹಕ್ಕಂ ಪೊಟ್ಟಂ ತೋಱಿ ನೋಡಿಮಾಗಳ್—

ಮ॥ ತಿಮಿವಿಕ್ಷೋಭಿತದೀರ್ಘಿಕಾಂಬು ಕುದಿವಂತಾಯ್ತುಷ್ಣದಿಂ ನೃತ್ಯವಿ
ಭ್ರಮಹೀನಂ ನವಿಲಾತಪತ್ರಸದೃಶಂ ಮಾಡಿತ್ತು ಪಿಂಛಾಳಿಯಂ
ಶ್ರಮದಿಂ ಪೊರ್ದಿದುದಾಳವಾಳವತಿವೃಕ್ಷಚ್ಛಾಯೆಯಂ ಪುಲ್ಲೆ ಪಿಂ
ಗಿ ಮದಸ್ಥಾನದ ಭೃಂಗಿ ಶಂಕುಳಿವರಂ ಪೊಕ್ಕತ್ತು ಮತ್ತೇಭದಾ ॥ ೯ ॥

---

೭. ವನದೇವತೆಗಳು ರಾಜಕುಮಾರನಿಗೆ ಶೇಷಾಕ್ಷತೆಗಳನ್ನು ತಳಿದರೊ ಏನೊ ಎಂಬಂತೆ ಹೊಸ ಬಳ್ಳಿಗಳಿಂದ ಉದುರಿ ಬಿದ್ದ ಹೂಗಳ ರಾಶಿ ತುಂಬ ಮನೋಹರವಾಯಿತು.

ವ॥ ಮತ್ತು ತುಸು ಹೊತ್ತಿನಲ್ಲಿಯೆ, ನಿಷ್ಕಲಂಕ ಚರಿತ್ರನಾದ ವಜ್ರಾಯುಧಕುಮಾರನು ಕುಳಿತ ಮಾಧವೀ ಮಂಡಪದಲ್ಲಿ—

೮. ದುಂಬಿಗಳೆಂಬ ಇಂದ್ರನೀಲಗಳನ್ನೂ, ಅದಿಮುರ್ಕ್ತೆಯೆಂಬ ಮುತ್ತುಗಳನ್ನೂ, ಚಿಗುರೆಲೆಗಳ ಪಕ್ಕದಲ್ಲಿ ಹಸಿರಾಗಿ ಮಿರುಗುವ ಎಲೆಗಳೆಂಬ ಪಚ್ಚೆಗಳನ್ನೂ, ಮೊಗ್ಗುಗಳೆಂಬ ವಜ್ರಗಳನ್ನೂ ಬೊಗಸೆಯಲ್ಲಿ ಹಿಡಿದುಕೊಂಡು (ದುಂಬಿಗಳಿಂದ) ಮಧುರವಾಗಿ ಧ್ವನಿಗೈಯುತ್ತ ರಾಜಕುಮಾರನಿಗೆ ಎದುರಾಗಿ ನಿಂತ ಅದಿಮುರ್ಕ್ತೆಯ ಕೊಂಬು—ಕುಮಾರನಿಗೆ ಮಧುಪರ್ಕ ಪುರಸ್ಸರವಾಗಿ ಅರ್ಘ್ಯವೆತ್ತುವ ವಸಂತನ ಕೈಯೊ ಏನೊ ಎಂಬಂತೆ ತೋರಿತು.

ವ॥ ಆ ಮಧುಪರ್ಕ ಸಮಯದಲ್ಲಿ ಉಂಟಾದ ಸುಖವನ್ನು ಅನುಭವಿಸುತ್ತ ಭಕ್ತಜನ ಪ್ರಿಯನಾದ ಯುವರಾಜನು ಕೆಲ ಸಮಯದವರೆಗೆ ತನ್ನ ಮಹಾರಾಣಿಯೊಡನೆ ಇರುವಂತೆ ಒಡ್ಡೋಲಗದಲ್ಲಿದ್ದು, ಉದ್ಯಾನವನ್ನು ನೋಡಬೇಕೆಂಬ ಕುತೂಹಲದಿಂದ ಮಧ್ಯಾಹ್ನ ಸಮಯದ ಸೂರ್ಯಮಂಡಲವನ್ನು ನೋಡಿ, ವೃದ್ಧರಾದ ಕಂಚುಕಿಗಳಿಗೂ ತನ್ನ ನರ್ಮಸಚಿವರಿಗೂ ಹೊತ್ತನ್ನು ತೋರಿಸಿ ಹೀಗೆಂದನು : "ಈಗ ನೋಡಿ—

೯. ತಿಮಿಗಳಿಂದ ಕ್ಷುಬ್ಧವಾಗಿದ್ದ ಸರೋವರದ ನೀರು ಉಷ್ಣದಿಂದ ಕುದಿಯುವಂತೆ ಆಯಿತು ; ನವಿಲು ತನ್ನ ನರ್ತನ ವಿಲಾಸವನ್ನು ಬಿಟ್ಟು ಕೊಡೆಯಂತೆ ತೋಕೆಯನ್ನು ಹರಡಿಕೊಂಡಿತು ; ಹುಲ್ಲೆ ಬಂದು ಮರದ ನೆರಳಿನಲ್ಲಿ ಆಲವಾಲವನ್ನೇ ಸೇರಿತು ; ಮದದಾನೆಯ ಮದೋದಕವನ್ನು ಕುಡಿಯುತ್ತಿದ್ದ ತುಂಬಿ ಅಂಕುಶದಂತೆ ಮದಸ್ಥಾನದ ಆಳಕ್ಕೇ ಇಳಿಯಿತು."

---

1. ಧರಾದಿದ (ಮ) 2. ವರ್ಷ (ಅ)

ವ॥ ಎಂದು ಮಧ್ಯಾಹ್ನೋಚಿತ ಭಗವದರ್ಹದ್ವಂದನಾವಸಾನದೊಳ್—

ಮ॥ ಅವತಂಸಂ ವಿದಳನ್ನಮೇರುಕುಸುಮಂ ಹಾರಂ ಮೃಣಾಳಂ ಮನೋ
ಭವರಾಗಂ ಪೊಳೆವಂಗರಾಗಮಳಿನೀವೃಂದಸ್ವನಂ ಗೀತಮು
ಟ್ಟ ವಿಚಿತ್ರಾಂಬರಮಬ್ಜ ಸೂತ್ರವಸನಂಬಿಲ್ ಪುರ್ವು ಬಾಣಂ ನಿಜಾ
ಕ್ಷಿ ವನಕ್ರೀಡೆಗೆ ಪುಷ್ಪಸಾಯಕನಿಭಂ ತನ್ನಾಯಕಂ ನಿಲ್ವುದುಂ ॥ ೧೦ ॥

ವ॥ ಅಂತು ವನವಿಹಾರರಸಿಕನಪ್ಪುದುಮೊಡನೆ—

ಕಂ॥ ಒಡನಾಡಿಗಳೆನಿಬರ್ ಕಿಱು
ವಡಿಗಾಲದ ಕೆಳೆಯರೆನಿಬರೊಡವರೆಯದ ತ
ನ್ನೆ[1]ಡೆಗಳೆನಿಬರ್ ಪಸಾಯಂ
ಬಡೆವರಸರ ಮಕ್ಕಳೆನಿಬರನಿಬರುಮೆಟ್ದರ್ ॥ ೧೧ ॥

ವ॥ ಅಂತು ದೀನಜನತಾಕಲ್ಪಾಂಘ್ರಿಪನಪ್ಪ ವಜ್ರಾಯುಧನೊಳ್ ಸಹಪಾಂಸುಕ್ರೀಡಿತರಪ್ಪ ರಾಜಕುಮಾರರೆಲ್ಲರುಮೊಡನೆ ವನಕ್ರೀಡಾಭಿಲಾಷದಿಂ ಬರೆ—

ಕಂ॥ ಕುಸುಮಾಯುಧನೆಸಕಮನೋ
ಡಿಸಿ ಬರೆ ವಜ್ರಾಯುಧಂ ವಧೂನಿಕರಮದೇ
ನೆಸೆದುದೊ ಬಿದಿ ಕುಡುಮಿಂಚಂ
ಮಸೆದಂತೊಡನೊಡನೆ ಬಂದಧೀಶನ ಮತದಿಂ ॥ ೧೨ ॥

ಅಂತು ವನಕ್ರೀಡೆಗೆ ವರೆ
ಕಂತುವೆ ವಜ್ರಾಯುಧಂಗೆ ಬೀಡಂ ಮಾಡಿ
ಟ್ಟಂತೆ ಸೊಗಯಿಸಿದುವುದ್ಯಾ
ನಾಂತರದೊಳ್ ಸಂತತಂ ವಸಂತಗೃಹಂಗಳ್ ॥ ೧೩ ॥

ವ॥ ಹೀಗೆ ಮಧ್ಯಾಹ್ನವಾಗಲು ಆ ಸಮಯಕ್ಕೆ ಉಚಿತವಾದ ಭಗವಂತನ ವಂದನೆಯನ್ನು ಮುಗಿಸಿದರು.

೧೦. ಧರಿಸಿಕೊಂಡ ಆಭರಣಗಳೇ ನಮೇರುಕುಸುಮಗಳು; ಮುತ್ತಿನ ಹಾರವೆ ಮೃಣಾಳ; ಅಂಗರಾಗವೆ ಶೃಂಗಾರದ ರಾಗ (ಭಾವ); ಗೀತವೆ ದುಂಬಿಗಳ ಗುಂಜಾರವ; ಉಟ್ಟುಕೊಂಡ ವಸ್ತ್ರವೆ ತಾವರೆಯುಳೆಯ ಬಟ್ಟೆ; ಹುಬ್ಬುಗಳೆ ಬಿಲ್ಲು; ಕಣ್ಣುಗಳೆ ಬಾಣ—ಹೀಗೆ ಆ ರಾಜಕುಮಾರನು ಮನ್ಮಥನಿಗೆ ಸದೃಶವಾಗಿ ವನಕ್ರೀಡೆಗೆ ನಿಂತನು.

ವ॥ ಹಾಗೆ ಆತನು ವನವಿಹಾರಕ್ಕೆ ಆಸಕ್ತನಾಗಲು—

೧೧. ಆತನಿಗೆ ಈಗ ಒಡನಾಡಿಗಳಾದವರು, ಚಿಕ್ಕಂದಿನ ಗೆಳೆಯರು, ಯೌವನಕಾಲದ ಸಂಗಡಿಗರು, ಮೆಚ್ಚಿಗೆಯಾದ ಅರಸು ಮಕ್ಕಳು ಎಷ್ಟು ಜನರಿದ್ದರೊ ಅಷ್ಟು ಜನವೆಲ್ಲವೂ ಅವನೊಡನೆ ಎದ್ದು ಬಂದಿತು.

ವ॥ ದೀನಜನರಿಗೆ ಕಲ್ಪವೃಕ್ಷವಾಗಿದ್ದ ವಜ್ರಾಯುಧನೊಡನೆ ಧೂಳಾಟವಾಡಿದ ರಾಜಕುಮಾರರೆಲ್ಲರೂ ಸಂಗಡವಾಗಿ ವನಕ್ರೀಡೆಗೆಂದು ಬಂದರು.

೧೨. ಮನ್ಮಥನ ವಿಲಾಸವನ್ನು ಹೀನವೆನಿಸಿ ವಜ್ರಾಯುಧಕುಮಾರನು ಬರಲಾಗಿ, ಬ್ರಹ್ಮನು ಕೋರೆ ಮಿಂಚನ್ನು ಮಸೆದನೊ ಏನೊ ಎಂಬಂತೆ ಆತನ ಹೆಂಡಂದಿರ ಸಮೂಹವು ಆತನೊಡನೆ ಬಂದಿತು.

೧೩. ಹಾಗೆ ಆ ಕುಮಾರನು ವನಕ್ರೀಡೆಗೆ ಬರಲಾಗಿ ಸಾಕ್ಷಾತ್ ಮನ್ಮಥನೆ ಅವನಿಗೆಂದು ಬೀಡನ್ನು ರಚಿಸಿದನೊ ಏನೊ ಎಂಬಂತೆ ಆ ಉದ್ಯಾನದಲ್ಲಿಯ ವಸಂತ ಗೃಹಗಳು ಕಂಗೊಳಿಸಿದುವು.

[1] ಯತಂತಂಗೆ (ಅ)

ಮಾಲಿನೀ ವೃತ್ತಂ॥ ತಳಿರ ತಳಿರ ಜೊಂಪಂ ಕೂಡೆ [1]ಸೇಡಾಗಿರಲ್ ಕೆಯ್
ಕೊಳೆ[1] ಕುಳಿರ್ವುವು ಬಂಬಲ್ಗಾವಣಂ ಮಾಗಿ ಬಂದ
ತ್ತೊಳಗು[2][ಳಿ][2]ದೆನಿಕುಂ ಧಾರಾಗೃಹಂ ಚಂದ್ರಕಾಂತೋ
ಪಳದೊಳೆ ಸಮೆದಿರ್ದಂತಾಲಿ ಕೋಡುತ್ತುಮಿರ್ಕುಂ ॥ ೧೪ ॥

ವ॥ ಅಂತವಱೊಳಗೊಂದನೊಂದನೆ ಮೆಚ್ಚಿ ನೋಡುತ್ತುಮೊರ್ಮೆಗೊರ್ಮೆ—

ಮ॥ ಅವಱೊಳ್ ವಿಶ್ರಮಿಸುತ್ತುಮೆಯ್ದೆ ಬನಮಂ ನೋಡುತ್ತುಮಾಡುತ್ತುಮಿಂ
ತು ವನಕ್ರೀಡೆಯೊಳಿರ್ಪುದುಂ ಮುಗುಳ್ಗಳಿಂ ಪೂವಿಂ ನವಾಶೋಕ ಪ
ಲ್ಲವದಿಂ ಕಾಯ್ಗಳಿನಾದ ಪೂದುಡುಗೆಯಿಂ ಚೆಲ್ವಾದರಾ ಕಾಮನು
ತ್ಸವದಿಂ ತೆಲ್ಲಟಿದಂದ ಮಾಧವಪುರಶ್ರೀಲೀಲೆ[3][ಯಿ][3]ಂ ಬಾಲೆಯರ್ ॥ ೧೫ ॥

ವ॥ ಅವರೊಳಗೊರ್ವಳ್—

ಕಂ॥ ಪೊಸ ಕೆಂದಳಿರ್ಗಳ ದಾಳಿಂ
ಬ ಸಾರಮಂ ಕಟ್ಟಿ ತನ್ನ ಬಣ್ಣದೊಳದು ರಂ
ಜಿಸೆ ದೂರ್ವಾಂಕುರರುಚಿ ಕ
ಣ್ಗೆಸೆದಳ್ ಪರಭಾಗಮಿಂಬನೀವುದು ಪಿ[4][ರಿ][4]ದೇ ॥ ೧೬ ॥

ವ॥ ಮತ್ತಮೊರ್ವಳ್—

ಕಂ॥ ಪೊನ್ನೆಯ ಮುಗುಳೆಕ್ಕಾವಳಿ
ತನ್ನ ಕೊರಲ್ಗೆಸೆಯೆ ಮಧುಪರುಚಿ ಮದನವಶಾ
ತ್ಯುನ್ನತೆ ಪೂವಿನ ಪೊರಜೆಯೆ
ಳುನ್ನುನ್ನಂ ಸೊಗಯಿಪಂತೆ ಕಣ್ಗೆಸೆದಿರ್ದಳ್ ॥ ೧೭ ॥

---

೧೪. ಬಗೆಬಗೆಯ ಎಳೆದಳಿರುಗಳ ಸಮೃದ್ಧಿಯಿಂದ ಅಲ್ಲಿಯ ಬಳ್ಳಿಮಂಟಪಗಳು ಚಳಿಯೆನಿಸುವಷ್ಟು ತಂಪಾಗಿರುವುದನ್ನು ನೋಡಿದರೆ, (ಈಗಾಗಲೆ ಹೋಗಿಬಿಡಬೇಕಾಗಿದ್ದ) ಚಳಿಗಾಲ ಈ ಮಂಟಪಗಳಲ್ಲಿ ಇನ್ನೂ ಅಡಗಿಕೊಂಡಿದೆಯೇನೊ ಎಂದೆನಿಸಿತು. ಅಲ್ಲಿಯ ಧಾರಾಗೃಹಗಳು ಚಂದ್ರಕಾಂತ ಶಿಲೆಯಿಂದಲೆ ರಚಿತವಾದಂತೆ ತಣ್ಣನೆಯ ನೀರನ್ನು ಸುರಿಸುತ್ತಿದ್ದುವು.

ವ॥ ಹೀಗಿರುವ ಅವುಗಳನ್ನು ಒಂದೊಂದಾಗಿ ಮೆಚ್ಚಿ ನೋಡುತ್ತ ಒಮ್ಮೊಮ್ಮೆ —

೧೫. ಅವುಗಳಲ್ಲಿ ವಿಶ್ರಮಿಸುತ್ತ, ಉದ್ಯಾನವನ್ನು ನೋಡುತ್ತ, ಆಡುತ್ತ—ಹೀಗೆ ವನಕ್ರೀಡೆಯಲ್ಲಿ ತೊಡಗಿರುವಾಗ (ಅಂತಃಪುರದ) ಆ ತರುಣಿಯರು ಮೊಗ್ಗು-ಹೂ-ಕಾಯಿಗಳಿಂದಲೂ ಅಶೋಕದ ಹೊಸ ಚಿಗುರುಗಳಿಂದಲೂ ಆಭರಣಗಳನ್ನು ಮಾಡಿಕೊಂಡು ತೊಟ್ಟು ಚೆಲುವಾದರು. ವಸಂತನ ರಾಜಧಾನಿಯಿಂದ ಕಾಮನು ಉತ್ಸಾಹಪೂರ್ವಕವಾಗಿ ತಂದೊಪ್ಪಿಸಿದ ಉಡುಗೊರೆಗಳೊ ಏನೊ ಎಂಬಂತೆ ಆ ಆಭರಣಗಳು ಶೋಭಿಸಿದುವು.

ವ॥ ಅವರಲ್ಲಿ ಒಬ್ಬಳು—

೧೬. ಕೆಂಪಾದ ಚಿಗುರೆಲೆಗಳಿಂದ 'ದಾಳಿಂಬಸಾರ'ವೆಂಬ ಆಭರಣವನ್ನು ರಚಿಸಿ ಕಟ್ಟಿಕೊಂಡಳು. ಎಳಗರುಕೆ ಬಣ್ಣದ ಆಕೆಯ ದೇಹಕಾಂತಿಗೆ ಅದು ಬಲು ಚೆನ್ನಾಗಿ ಒಪ್ಪಿ ಆಕೆ ಚೆಲುವಾಗಿ ಕಂಡಳು. (ಮೊದಲೆ) ಶ್ರೇಷ್ಠವಾದ ರೂಪು (ಅಲಂಕಾರದಿಂದ ಇನ್ನಷ್ಟು) ಸುಂದರವಾಗಿ ಕಾಣುವುದು ಏನು ದೊಡ್ಡ ವಿಷಯ ?

ವ॥ ಇನ್ನೊಬ್ಬಳು—

೧೭. ದುಂಬಿಯಂತೆ ಮೈಬಣ್ಣ ಏಳು ಹೊನ್ನೆಯ ಮೊಗ್ಗುಗಳಿಂದ ಏಕಾವಳಿ ಸರವನ್ನು ಮಾಡಿಕೊಂಡು ಕೊರಳಲ್ಲಿ ಧರಿಸಲಾಗಿ, ಮನ್ಮಥನ ಮುದದಾನೆ ಹೂವಿನ ಹೊರಜೆ (ಹಗ್ಗ)ಗಳಿಂದ ತುಂಬ ಮನೋಹರವಾಗುವಂತೆ ಇನ್ನಷ್ಟು ಚೆಲುವಾಗಿ ಕಂಡಳು.

---

1. ಸೇರ್ದಾ (ಗ) ರಯ್ಮಿಲ್ಕೊಳೆ (ಅ) 2. ಟಿ (ಮ) 3. ಯ (ಮ) 4. ಱ (ಮ)

ವ॥ ಮತ್ತಮೊರ್ವಳ್—

ಕಂ॥ ಎಳಮಾವಿನ ಮಿಡಿಯೊಳ್ ಕೋ
ಮಳೆ ಸಮೆಯಿಸಿ ಪಚ್ಚೆಸಾರಮಂ ಕಟ್ಟಿ ಸಮು
ಜ್ಜ್ವಳ ಕನಕವರ್ಣೆ ಮಿಗೆ ಬಗೆ
ಗೊಳಿಸಿದಳುದ್ಯಾನಕೇಳಿ ಲೀಲಾ ಕ್ಷಣದೊಳ್ ॥ ೧೮ ॥

ವ॥ ಮತ್ತಮೊರ್ವಳ್—

ಕಂ॥ ಕನಕಾಂಬುಜ ನಾಳಂ ಸು
ತ್ರನಂಬುಜಂ ಕೀರ್ತಿಮುಖಮನನುಕರಿಸೆ ನಿತಂ
ಬಿನಿ ಕೇಯೂರಂ ತನಗೊ
ಪ್ಪೆ ನಾಡೆ ಸೊಗಯಿಸಿದಳೊರ್ವಳಾ ವ್ಯತಿಕರದೊಳ್ ॥ ೧೯ ॥

ವ॥ ಪೆರದೊರ್ವಳ್—

ಕಂ॥ ಸುರಯಿಯ ಮುಗುಳ ಮುಗುಳ್ ಕಿಂ
ಕಿರಾತ ಕುಟ್ಮಳದ ನೂಪುರಂ ಸಹಕಾರಾಂ
ಕುರದ ಪೊಸಗೆಜ್ಜೆಯಿಂ ಹೋ
ಯಿರೆಯೆಂಬಿನಮೊಪ್ಪೆ ಮುದ್ದೊಡಂಬಡೆ ನಡೆದಳ್ ॥ ೨೦ ॥

ವ॥ ಮತ್ತೊರ್ವಳ್—

ವ॥ ಮತ್ತೊಬ್ಬಳು—

೧೮. ಉದ್ಯಾನ ಕ್ರೀಡೆಯಲ್ಲಿ ವಿಲಾಸವಾಡುತ್ತ ಪುಟವಿಟ್ಟ ಚಿನ್ನದಂತೆ ಕಾಂತಿಯುಳ್ಳ ತನ್ನ ದೇಹಕ್ಕೊಪ್ಪುವ ರೀತಿಯಲ್ಲಿ ಎಳೆಯ ಮಾವಿನ ಮಿಡಿಗಳಿಂದ ರಚಿಸಿದ ಪಚ್ಚೆಯ ಹಾರವನ್ನು ಧರಿಸಿಕೊಂಡು ಬಲು ಮನೋಹರವಾಗಿ ತೋರಿದಳು.

ವ॥ ಬೇರೆಯೊಬ್ಬಳು—

೧೯. ಕೀರ್ತಿ ಮುಖದಂತೆ ಹೊಂದಾವರೆಯ ಹೂವನಿಟ್ಟು, ಅದರ ನಾಳದ ಸುತ್ತಿನಿಂದ ರಚಿಸಿದ ತೋಳ್ಬಳೆಯನ್ನು ತನಗೊಪ್ಪುವಂತೆ ತೊಟ್ಟು ತುಂಬ ಸೊಗಸಾಗಿ ಕಂಡಳು.

ವ॥ ಇನ್ನೊಬ್ಬಳು—

೨೦. ಸುರಗಿಯ ಮೊಗ್ಗು ಹಾಗು ಅಶೋಕದ ಮೊಗ್ಗುಗಳಿಂದ ಹೆಣೆದ ಕಾಲಂದುಗೆಗೆ ಮಾವಿನ ಮೊಳಕೆಗಳನ್ನೆ ಗೆಜ್ಜೆಯಾಗಿ ಅಳವಡಿಸಿ ತೊಟ್ಟುಕೊಂಡು ಕಂಡವರೆಲ್ಲ ಮೆಚ್ಚಿ ಭಲೆಭಲೆಯೆನ್ನುವಂತೆ ಮುದ್ದಾಗಿ ನಡೆದಳು.

ವ॥ ಮತ್ತೊಬ್ಬಳು—

ಕಂ|| ರಕ್ತಾಶೋಕ ಲತಾಂತದ
ಮುಕ್ತಕಮಂಜರಿಯ ಸೂಸಕಂ ತಿಲಕದ ಸ
ಮ್ಯಕ್ತಿಲಕಮಮು[1][ರ್][1] ತನಗನು
ರಕ್ತಂ ಮಾಡಿದಳನೇಕ ಕಾಮುಕ ಜನಮಂ ॥ ೨೧ ॥

ವ|| ಆಕೆಯಲ್ಲದೆ ಮತ್ತೊರ್ವಳ್—

ಕಂ|| ಬರಗಲೆಯುಂ ಕೊಪ್ಪುಂ ನೂ
ಪುರಮುಂ ಲಂಬ[2]ಳ[2]ಮುಮಲ್ಲಿ ಮಲ್ಲಿಗೆಯ ಮುಗುಳ್
ಬಿರಿಮುಗುಳೆಂಬಿವು ತನಗಾ
ಗಿರಿ ದೇಸೆಯ ಮಾಸರಿಕ್ಕೆಯಂ ಪೊಸಯಿಸಿದಳ್ ॥ ೨೨ ॥

ವ|| [3]ಅಂ[3]ತಪರೋಧ ಪರಿಚಾರಿಕಾ ಚತುರ ವಿಳಾಸಿನೀ ಪ್ರತೀಯಮಾನ ಶೋಭಾ ವಿಭವನ[4]ಪ್ಪ[4]ಕಳಂಕಾಚಾರ ಸಾರನಪ್ಪ ವಜ್ರಾಯುಧನೆರಡುಂ ಕೆಲದೋಳಂ ಮದನನ ಮಸೆದ ನನೆಗಣೆಗೆಣೆಯಾಗಿ—

ಕಂ|| ದ್ವೇಷಂ ವಿರಹಿಗಳೊಳ್ ಪರಿ
ತೋಷಂ ಮಧುಮತದೊಳಾಗೆ ಬಂದರ್ ಕೆಲರುಂ
ಯೋಷಿಜ್ಜನಮಲರಂಬಿನ
ವೇಷಂಗೊಂಡಂತೆ ನೆ[5][ರೆ][5]ದು ಪೂಮುಡುಗೆಗಳಿಂ ॥ ೨೩ ॥

ವ|| ಅಂತವರ್ವೆರಸು ದೀನಜನತಾ ಕಲ್ಪಾಂಘ್ರಿಪನಪ್ಪ ವಜ್ರಾಯುಧಂ ಕ್ಷೇಮಂಕರ ಮಹೀಪಾಲನ ಕಟ್ಟಿದ ಕಂಠಿ[6]ಕೆ[6]ಗಮೆತ್ತಿದಯ್ತ ಗೊಡೆಗಂ ದಯೆಗೆಯ್ದ ಯುವರಾಜಲಕ್ಷ್ಮಿಗಂ ಪ್ರತಿ[7]ಬದ್ದಿನಿ[7]ಯೆನಿಸಿದ ಮಧುಮಹೀಪಾಲನ ವಕುಲಮುಕುಲದ ಕಂಠಿಕೆಯುಮೆತ್ತಿದ ಪೊಂಗೇದಗೆಯ ಸವಡಿ ಗೊಡೆಯುಮತುಚ್ಛಪರಿಚ್ಛದ ಮಾಧವೀಲಕ್ಷ್ಮಿಯುಂ ತನಗಮಃಜ[3] ಪಿರಿದು ಪೊಲ್ತಿಂ ವನಪ್ರಚಾರದೊಳಲಸಿದ ನದೀಚರನಪ್ಪ ಯೂಥಪತಿಯಂತೆ ವನವಿಹಾರದೊಳಲಸಿ ಬಂದು ಕಾವಣಮಂ ಪೊಗೆ—

೨೧. ಅಶೋಕ ಪುಷ್ಪಗಳಿಂದಲೆ ಮುತ್ತಿನ ಸೂಸಕಗಳನ್ನು ಮಾಡಿಕೊಂಡು ತಿಲಕ ಪುಷ್ಪದಿಂದಲೆ ಸುಂದರವಾದ ಹಣೆಬೊಟ್ಟು ಇಟ್ಟುಕೊಂಡು ಅವೆರಡೂ ತನ್ನ ರೂಪಕ್ಕೆ ಅನುರೂಪವಾಗಲಾಗಿ ಅನೇಕ ಕಾಮುಕರ ಮನವನ್ನು ಗೆದ್ದಳು.

ವ|| ಆಕೆಯಲ್ಲದೆ ಇನ್ನು ಒಬ್ಬಾಕೆ—

೨೨. "ಬರಗಲೆ" (ಆಭರಣ), ಕರ್ಣಪೂರ, ಕಾಲಂದುಗೆ, ಕೊರಳಹಾರ—ಇವೆಲ್ಲವನ್ನೂ ಮಲ್ಲಿಗೆಯ ಬಿರಿಮೊಗ್ಗು, ಹೂಗಳಿಂದಲೆ ಮಾಡಿ ಧರಿಸಿಕೊಂಡು ತನ್ನ ಸಹಜ ಸೌಂದರ್ಯಕ್ಕೆ ಹೊಸ ಕಳೆಯನ್ನು ಒದಗಿಸಿದಳು.

ವ|| ಹೀಗೆ ಅಂತಃಪುರದ ಸ್ತ್ರೀಯರೂ, ಪರಿಚಾರಿಕೆಯರೂ, ವಿಲಾಸಿನಿಯರೂ ವಜ್ರಾಯುಧನ ಎರಡು ಪಕ್ಕಗಳಲ್ಲಿ ತಮ್ಮ ಬೆಡಗಿನಿಂದ ಶೋಭೆಯನ್ನುಂಟುಮಾಡುತ್ತ ಸಾಣೆಹಿಡಿದ ಮದನಬಾಣಗಳಂತಾದರು.

೨೩. ವಿರಹಿಗಳಲ್ಲಿ ದ್ವೇಷವೂ ವಸಂತೋತ್ಸವದಲ್ಲಿ ಸಂತೋಷವೂ ಉಂಟಾಗುವಂತಾಗಿ ಕೆಲವರು ಸ್ತ್ರೀಯರು ಹೂಮೊಡವುಗಳನ್ನು ತೊಟ್ಟು ಪುಷ್ಪಬಾಣಗಳ ವೇಷತಾಳಿದಂತೆ ನಡೆದುಬಂದರು.

ವ|| ಈ ಮೊದಲೆ ಕ್ಷೇಮಂಕರನು ಕಟ್ಟಿದ (ಯುವರಾಜಪದವ) ಕಂಠಿಕೆಗೂ, ಎತ್ತಿದ ರಾಜಚ್ಛತ್ರಕ್ಕೂ, ಯೌವರಾಜ್ಯವೈಭವಕ್ಕೂ ಪ್ರತಿಸ್ಪರ್ಧಿಗಳೆಂಬಂತೆ ವಸಂತರಾಜನು ನೀಡಿದ ಬಕುಲಪುಷ್ಪಗಳ ಕಂಠಿಕೆಯೂ, ಹೊಂಗೇದಗೆಯ ಇಮ್ಮೈಲ ಚತ್ತರಿಗೆಯೂ, ಅತ್ಯುತ್ತಮ ಪರಿಕರಗಳಿಂದ ಸಮೃದ್ಧವಾದ ವಸಂತಲಕ್ಷ್ಮಿಯೂ ತನಗೆ ಚೆನ್ನಾಗಿ ಒಪ್ಪುತ್ತಿರಲು ಸಪರಿವಾರನಾದ ಅಂತಃಪುರದ ಮಂಡಳಿಯೊಡನೆ ವಜ್ರಾಯುಧನು ದೀರ್ಘಕಾಲದವರೆಗೆ ವನಸಂಚಾರ ಮಾಡಿದ ಬಳಿಕ—ಕಾಡಿನಲ್ಲಿ ಅಲೆದಲೆದು ದಣಿದ ಆನೆಹಿಂಡಿನ ನಾಯಕಗಜವು ನದಿಯ ಸನ್ನಿಧಿಗೆ ಬರುವಂತೆ—ಬಳ್ಳಿಮಂಟಪವನ್ನು ಹೊಕ್ಕನು.

1. ಜ[3] (ಮ) 2. ಣ (ಅ) 3. ಇಂ (ಅ) 4. × (ಮ) 5. ಜ[3] (ಮ) 6. × (ಮ) 7. ಬಂಧಿನಿ (ಅ)

ಕಂ॥ ನೆಱೆಯೆ ಪಟಚ್ಚರದೊದವಿದ
ಸೆಱಂಗಿನೊಳ್ ತಂದು ತೀವಿ ಪವನಂ ಹಿಮಮಂ
ಸೆಱೆಯಿಟ್ಟಂತಿರೆ ಮೊಗದೊಳ್
ತುಱುಗಿದ ಕಿಱುಬೆಮರದೇಂ ಮನಂಗೊಳಿಸಿದುದೋ ॥ ೨೪ ॥

ವ॥ ಅಂತು ವನವಿಹಾರಪರಿಶ್ರಮಂ ಪೋಗೆ ಮೂಱುಜಾವಂ ಪೋದುದೆಂದು ಗಳಿಗೆಯ ಭಟ್ಟಂ ಬಿನ್ನಪಂಗೆಯ್ವುದುಂ—

ಮ॥ ಯುವರಾಜಂ ಯುವರಾಜಪು[1][ತ್ರ][1]ಯುವತಿಶ್ರೀ ತನ್ನವಾನಂಗವೈ
ಭವಮುಂ ರಾಜಿತ ರಾಜಪುತ್ರಮಹಿಮಾವಷ್ಟಂಭಮುಂ ನೋಡಲೊ
ಪ್ಪುವಿನಂ ವಾರಿವಿಹಾರಕೇಳಿಗಿರದಾ ವಜ್ರಾಯುಧಂ ಬಂದನಂ
ದವಗಾಹಕ್ಕೆ ಸಯೂಥಮಿಂದ್ರವನದಿಂದೈರಾವತಂ ಬರ್ಪವೋಲ್ ॥ ೨೫ ॥

ಕಂ॥ ವನಿತೆಯರಾ ರಾಜಕುಮಾ
ರನನುಯ್ದರ್ ದೀರ್ಘಿಕಾಂಬುಕೇಳಿಗೆ ಪಿಡಿಗಳ್
ವನಕರಿಯನುಯ್ವವೋಲ್ ನೂ
ತನ ಪುಷ್ಕರಹಸ್ತೆಯರ್ ಮನೋಹರಗತಿಗಳ್ ॥ ೨೬ ॥

ಒಡವುಗುವರಸಿಯರ ನೆಟಲ್
ಬೆಡಂಗುವೆತ್ತಿರ್ದುವೊಲಿದು ಜಲದೇವತೆಗಳ್
ತಡೆಯದಿದಿರ್ವಂದು ನೃಪನೊಡ
ನೊಡನೆ ಸರೋವರಮನೊಸೆದು ಪುಗುವಂತಾಗಳ್ ॥ ೨೭ ॥

ವ॥ ಮತ್ತಮನುಪಮ ಲಾವಣ್ಯ ರೂಪ ಸೌಂದರ್ಯ ವಿಭ್ರಮ ಭ್ರಾಜಿತಾನೇಕಾವರೋಧಂ ಸಮಾಧಿ ವಿನೋದಾ ವಿಧಿಯಿಂ ದೀರ್ಘಿಕಾಪ್ರಿಯದರ್ಶನೆಯೆಂಬನ್ವರ್ಥನಾಮಮಂ ತಾಳ್ದಿ—

೨೪. (ಓಡಿಹೋಗುತ್ತಿದ್ದ) ಹಿಮವನ್ನು ಗಾಳಿಬಂದು ಒಂದು ಬಟ್ಟೆಯ ಸೆರಗಿನಲ್ಲಿ ಕಟ್ಟಿ ಸೆರೆಯಿಟ್ಟಿತೊ ಏನೊ ಎಂಬಂತೆ, ಮುಖದ ಮೇಲೆ ಮೂಡಿದ ಕಿರುಬೆವರು ಅದೆಷ್ಟು ಮನೋಹರವಾಯಿತು !

ವ॥ ಹೀಗೆ ವನವಿಹಾರದ ಆಯಾಸ ಪರಿಹಾರವಾಗುವ ಸಮಯಕ್ಕೆ ಮೂರು ಜಾವವಾಯಿತೆಂದು ಗಳಿಗೆಯ ಭಟ್ಟ (ರಾಜನಿಗೂ ಆತನ ಪರಿವಾರಕ್ಕೂ ಆಗಾಗ ಗಳಿಗೆ ಬಟ್ಟಲಿನ ಲೆಕ್ಕದಿಂದ ಸಮಯವನ್ನು ತಿಳಿಸುವ ಸೇವಕ)ನು ಬಿನ್ನವಿಸಿದನು.

೨೫. ನವೋನವವಾದ ದೇಹಸೌಂದರ್ಯ, ಅದಕ್ಕೆ ಮೆರುಗಾಗಿ ಯೌವನಸಂಪತ್ತು, ಇದರಮೇಲೆ ರಾಜಪುತ್ರನಿಗೆ ಒಪ್ಪುವ ವೈಭವದ ಅಗ್ಗಳಿಕೆ—ಇವುಗಳಿಂದಾಗಿ ನೋಡುವವರ ಕಣ್ಣುಗಳಿಗೆ ಹಬ್ಬವಾಗಿ—ತನ್ನ ಆನೆಬಳಗದೊಂದಿಗೆ ಐರಾವತವೆ ಬರುವಂತೆ—ವಜ್ರಾಯುಧನು ಜಲಕ್ರೀಡೆಗೆ ಬಂದನು.

೨೬. ತಮ್ಮ ಸೊಂಡಿಲ ತುದಿಗಳನ್ನು ಚಾಚಿ ಎತ್ತಿಕೊಂಡು ಬೆಡಗಿನಿಂದ ನಡೆಯುತ್ತ ಹೆಣ್ಣಾನೆಗಳ ಹಿಂಡು ವನಗಜವನ್ನು ನೀರಾಟಕ್ಕೆ ಕರೆತರುವಂತೆ, ಕಮಲಗಳಂತ್ರ ಹಸ್ತಗಳುಳ್ಳ ಚೆಲುವೆಯರು ಮನೋಹರವಾಗಿ ನಡೆಯುತ್ತ ಆ ರಾಜಕುಮಾರನನ್ನು ಜಲಕೇಳಿಗೆಂದು ಸರೋವರಕ್ಕೆ ಕರೆತಂದರು.

೨೭. ಜಲದೇವತೆಗಳು ಬೆಡಗಿನಿಂದ ಇದಿರುಗೊಂಡು ಆ ಕುಮಾರನೊಡನೆ ಸರೋವರವನ್ನು ಸಂತೋಷದಿಂದ ಪ್ರವೇಶಮಾಡುತ್ತಿರುವರೋ ಏನೋ ಎಂಬಂತೆ ಆ ಅರಸಿಯರ ಪ್ರತಿಬಿಂಬಗಳು ನೀರಲ್ಲಿ ಶೋಭಿಸಿದುವು.

ವ॥ ಅನನ್ಯಸಾಧಾರಣ ರೂಪಲಾವಣ್ಯಗಳಿಂದಲೂ ವಿಭ್ರಮವಿಲಾಸದಿಂದಲೂ ಶೋಭಿಸುವ ಅಂತಃಪುರಸ್ತ್ರೀಯರು ತನ್ನಲ್ಲಿ ಬಂದು ನಿಲ್ಲಲಾಗಿ ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವಂತೆ ತುಂಬ ಸುಂದರವಾಗಿ ತೋರುವ ಆ ಸರೋವರಕ್ಕೆ "ಪ್ರಿಯದರ್ಶನಾ" ಎಂಬ ಹೆಸರು ಇಂದು ಅನ್ವರ್ಥಕವಾಯಿತು.

1. ತ್ರ (ಮ)

ಚಂ॥ ಪುಗೆ ಕೊಳನಂ ಲತಾಲಲಿತೆಯರ್ ಜಘನಸ್ಥಳಮೊತ್ತೆ ಮೇರೆಯಂ
ಮಿಗುವುದಭಾಮಾಕೆಗಳ ಪೀವರ ತುಂಗ ನಿತಂಬ ಬಿಂಬದೊಂ
ದಗಲದ ವೃದ್ಧಿ ಪೆರ್ಚೆ ನೆಲೆವೆರ್ಚಿದುದೀ ಕೊಳನೆಂಬುದೆಂದು ಭಿ
ತ್ತಿಗೆ ನೆಲೆಯಾಮುದಂಮ ಜಿನಚಂದ್ರನ ವಾಃವಿಹಾರಲೀಲೆಯಿಂ ॥ ೨೮ ॥

ವ॥ ಅಂತು ತನ್ನೋರೆಗಳ್ವೆರಸು ದುಘುಮ್ಮಿಱಿದೋಲಾಡುವಲ್ಲಿ—

ಚಂ॥ ಅಡರೆ ಕವಲ್ತುದೊಂದೆಡೆ ಮೃಗೋದ್ಭವದಿಂ ಬೆಳರ್ವಟ್ಟು ನಿಂದುದೊಂ
ದೆಡೆ ಮಲಯೋದ್ಭವ ಪ್ರಸರ[1]ದಿಂ ಕದಡಿಂ[1] ಕಡುಕೆಂಕಮಾದುದೊಂ
ದೆಡೆ ನವಕುಂಕುಮ ದ್ರವದಿನರ್ವಿಪ ಕರ್ಪಿ[2]ಡಿದಿ[2]ರ್ಪನಾಳ್ದುದೊಂ
ದೆಡೆ ಪರಿಮಿಶ್ರಿತಾ[3]ರ್ದ್ರ[3] ಮಹಿಷೀರಸದಿಂ ಸರಸೀ ವಿಭಾ[4]ಗ[4]ದೊಳ್ ॥ ೨೯ ॥

ವ॥ ಅಂತು ನಾನಾವಿಧ ವರ್ಣ ಜಳೌಘ ತರತ್ತರಂಗ ಭಂಗುರ ಸರಸೀಮಧ್ಯದೊಳ್ ಮಾನಸಸರೋವರದೊಳೋಲಾಡುವ ಗಗನಚರ ಸುಂದರಿಯರಂತೆ ಸೌಜನ್ಯಕಂದಾಂಕುರನಪ್ಪ ವಜ್ರಾಯುಧನರಸಿಯುರ್ ತಮ್ಮ ರವಮೆ ರವಮಾಗೆ ಜಲಕ್ರೀಡೆಯನಾಡುವಾಗಳ್—

ಕಂ॥ ಸರಸಿಜದ ಸೌರಭಂ ಮುಖ
ಸರಸಿಜ ಸೌರಭಕೆ ಪದ್ಮಶೋಭೆ ಮುಖಾಬ್ಜ
ಸ್ಥಿರಶೋಭೆಗೆ ಸೋಲ್ತುದು ಗೆ
[5]ಲ್ದ[5]ರೆಂಬವೋಲ್ ಮೊ[6][ರೆ][6]ದುವೊಡನೆ ಮಧುಪಕುಳಂಗಳ್ ॥ ೩೦ ॥

---

೨೮. ಬಳ್ಳಿಯಂತೆ ಕೋಮಲೆಯರಾದ ಆ ಹೆಣ್ಣುಗಳು ಕೊಳದಲ್ಲಿ ಇಳಿದಾಗ ಅವರ ಜಘನಸ್ಥಳದ ಒತ್ತಡದಿಂದ ನೀರು ಮೇಲ್ಪರಿದು ಮೇರೆಯನ್ನು ಮೀರಿತು; ಜಲಕ್ರೀಡೆಯ ವಿಲಾಸದಲ್ಲಿ ಆ ಚೆಲುವೆಯರ ಅತಿವಿಶಾಲವಾದ ನಿತಂಬಬಿಂಬಗಳ ಸ್ಪರ್ಶದಿಂದ ಸರೋವರ ಮೈಯುಬ್ಬಿತೊ ಏನೋ ಎಂದೆನಿಸಿತು.

ವ॥ ಹೀಗೆ ತನ್ನ ಓರಗೆಯ ಸಂಗಡಿಗರೊಡನೆ ಕುಮಾರನು ನೀರಲ್ಲಿ ದುಮುಕಿ ಆಡುತ್ತಿರುವಾಗ—

೨೯. ಆ ಸರೋವರದ ನೀರು ಒಂದೆಡೆಯಲ್ಲಿ ಕಸ್ತೂರಿಯ ಕದಡಿನಿಂದ ಕಂದು ಬಣ್ಣವಾಯಿತು; ಒಂದೆಡೆಯಲ್ಲಿ ಶ್ರೀಗಂಧದಿಂದ ಬಿಳಿದಾಯಿತು; ಇನ್ನೊಂದೆಡೆಯಲ್ಲಿ ಕುಂಕುಮದಿಂದ ಕಡುಗೆಂಪಾಯಿತು; ಬೇರೊಂದೆಡೆಯಲ್ಲಿ ವಿವಿಧ ಸುಗಂಧಮಿಶ್ರಣಗಳಿಂದಾದ ಮಹಿಷೀರಸದಿಂದ ಕಡುಗಪ್ಪಾಯಿತು.

ವ॥ ಹೀಗೆ ಬಗೆಬಗೆಯ ಬಣ್ಣಗಳನ್ನೊಳಗೊಂಡು, ಹೊಯ್ದಾಡುವ ಅಲೆಗಳಿಂದ ಅತಿ ಚಂಚಲವಾದ ಸರೋವರದ ಮಧ್ಯಭಾಗದಲ್ಲಿ, ಮಾನಸಸರೋವರದಲ್ಲಾಡುವ ಖೇಚರ ಸುಂದರಿಯರೋ ಏನೊ ಎಂಬಂತೆ ವಜ್ರಾಯುಧನ ಅರಸಿಯರು, ತಮ್ಮ ಧ್ವನಿಯೆ ಧ್ವನಿಯಾಗಿ (ಬೇರಾವ ಧ್ವನಿಗಳೂ ಕೇಳದಂತೆ) ಕಲಕಲದಿಂದ ಜಲಕ್ರೀಡೆಯನ್ನು ನಡೆಸಿದರು.

೩೦. "ಈ ಚೆನ್ನೆಯರ ಮುಖಕಮಲಗಳ ಸ್ಥಿರವಾದ ಶೋಭೆಗೆ ಸೋಲುವ ಕಮಲಗಳ ಶೋಭೆ ಸೋತು ಕಮಲಗಳು ಹಗಲಿನಲ್ಲಿ ಮಾತ್ರ ಅರಳಿ ರಾತ್ರಿ ಮುಚ್ಚಿಕೊಳ್ಳುವುದರಿಂದ ಅವುಗಳ ಶೋಭೆ ಸ್ಥಿರವಲ್ಲ; ಕಮಲಗಳ ಸುಗಂಧ ಅತಿಹೀನವೆನಿಸಿತು. "ಇವರು ಗೆದ್ದರು" ಇವರ ಮುಖ(ಶ್ವಾಸ)ಗಳ ಪರಿಮಳದೆದುರು ಎಂದು ಘೋಷಿಸುವಂತೆ ದುಂಬಿಹಿಂಡುಗಳು ಮೊರೆದುವು.

---

1. ದೊಳ್ ಮುದದಿಂ (ಸೂ) 2. ನದಿ (ಮ) ನದ (ಅ) 3. ದ್ರಿ (ಸೂ) 4. ವ (ಅ) 5. ಲ್ದಿ (ಅ) 6. ಱ (ಮ)

ವ॥ ಅಂತು ಕುಟಿಲ ನೀಳಕುಂತಳ ಕಳಾಪೆಯರ[1]ಚತುರ[1]ಭಾವಕ್ಕೆ ತಾಮುಂ ಸೋಲ್ತು ಗಱ[2]ಸೋಂಕದೋಡುವಂತೆ ಪೊ[2][ರೆ][2]ದು ಪಾಱುವ ಶಿಳೀಮುಖಂಗಳನಂಗನ ಬಿಲ್ವಡೆಗೆ ಪಡಲ್ವಡುವ ವಿಯೋಗಿಗಳ [3]ಮೇಗೆ[3] ಪಾಱುವ ಶಿಳೀಮುಖಂಗಳನೆ ಪೋಲೆ ಒಪ್ಪಿ—

ಮ॥ ಸ್ರ॥ ರವವತ್ಸ್ರೋತಃಪಥೋತ್ತೋಯಮನಿಭಪತಿ ನಾಗಾಂಗನಾಂಗಂಗಳೊಳ್ ಸೂ
ಸುವವೋಲ್ ವಜ್ರಾಯುಧಂ ಜೀರ್ಕೊ[4][ಟ][4]ವಿಯಿನಮೃತಸ್ಯಂದಿ ಸಂಧಾನಿಯಪ್ಪಂ
ಬುವನಾಗಳ್ ಪೋಗದೊತ್ತುತ್ತರಸಿಯರ ತನುಶ್ಯಾಮಕಾಗ್ರಂಗಳೊಳ್ ಸ್ನೇ
ಹವಶಾನಂಗಾಗ್ನಿಯಂ ನೀರ್ದಳಿದು ನದಿಪುವಂತಾದನಂಭೋದಲೀಲಂ ॥ ೩೧ ॥

ವ॥ ಅಂತು ರಾಜಕುಮಾರ[5][ನೊ][5]ತ್ತಿದ ಜಲಯಂತ್ರ ಪಯೋಭಿಘಾತದಿಂದಮರಸಿಯರ ತೊಟ್ಟ ಪೂದುಡಿಗೆಗಳೆಲ್ಲಂ [6][ಬಱಲ್ದು][6] ಕಟಲ್ದು ಪುಣ್ಯಲಾವಣ್ಯ ವಿಳಾಸಿನೀಜನಕ್ಕೆ ಭೂಷಣಪರಂಪರೆ ದೊರೆಕೊಳ್ಗುಮೆಂಬಂತೆ—

ಪೃಥ್ವೀವೃತ್ತಂ॥ ಸಳೀಲವಿಶದೋದಬಿಂದು ನವಹಾರಮಂ ತಮ್ಮುರ
ಸ್ಥಳಂಗಳೊಳುದಗ್ರಲೀಲೆ ಪೊಸಮುತ್ತಿನೇಕಾವಳೀ
ವಿಳಾಸಮನಪೂರ್ವಮಂಬುಕಣರಾಜಿ ಕರ್ಣಾಂತಿಕೋ
ಜ್ಜ್ವಳೀಕೃತ ವಸಂತಮಂಜರಿಯನೆಯ್ದೆ ಪೋಲ್ತಿರ್ದಿನಂ ॥ ೩೨ ॥

ಕಂ॥ ಜಗದಧಿಪನ ಕಣ್ಗೆ ಕರಂ
ಸೊಗಯಿಸಿವಂದಂತೆ ಸುಭಗ ಮಧುರಾಕೃತಿಗೊ
ಪ್ಪುಗುಮಾವ ಪರಿಚ್ಛದಮುಂ
ಮೃಗಾಂಕಬಿಂಬಕ್ಕೆ ನೆಱ[3]ದ ಕಱ[3] ಸೊಗಯಿಪವೋಲ್ ॥ ೩೩ ॥

ವ॥ ಹಾಗೆಂದ ದುಂಬಿಗಳು ಕೊಂಕಾಗಿಯೂ ಕಪ್ಪಾಗಿಯೂ ಇರುವ ಆ ಮಹಿಳೆಯರ ಕೇಶಭಾರದ ಚೆಡಗಿಗೆ ತಾವೂ ಸೋತು, ಅಲ್ಲಿಂದ ಎದ್ದು ಓಡಿಹೋಗುವಂತೆ ಹಾರಾಡುವ "ಶಿಳೀಮುಖ" (ದುಂಬಿ)ಗಳು ಮನ್ಮಥನ ಬಿಲ್ಲಾಳುಗಳ ಹೊಡೆತಕ್ಕೆ ಪಕ್ಕಾದ ವಿಯೋಗಿಗಳ ಮೇಲೆ ನುಗ್ಗುವ 'ಶಿಳೀಮುಖ' (ಬಾಣ)ಗಳಂತೆ ಒಪ್ಪಿದುವು.

೩೧. ನದಿಯ ನೀರನ್ನು ಸೊಂಡಿಲಿಂದ ಮೇಲೆತ್ತಿ ಸುರ್ರೆಂದು ತನ್ನ ಹೆಣ್ಣಾನೆಗಳ ಮೈತುಂಬ ಸೂಸುವ ಸಲಗನಂತೆ ಅಮೃತಸಮಾನವಾದ ಆ ಕೊಳದ ನೀರನ್ನು ಜೀರ್ಕೊಳವಿಯಲ್ಲಿ ತುಂಬಿ ವಜ್ರಾಯುಧನು ತನ್ನ ಅರಸಿಯರ ಸುಂದರವಾದ ದೇಹಗಳ ಮೇಲೆ ಚಿಮ್ಮುವಾಗ ಪ್ರೇಮವಶವಾಗಿ ಅವರಲ್ಲಿ ಹೊತ್ತಿದ್ದ ಮದನಾಗ್ನಿಯನ್ನು ಮಳೆಯಂತೆ ನೀರು ತಳಿದು ಆರಿಸುತ್ತಿದ್ದನೊ ಏನೊ ಎಂದೆನಿಸಿತು.

ವ॥ ಹಾಗೆ ರಾಜಕುಮಾರನು ಜೀರ್ಕೊಳವಿಯಿಂದ ಚಿಮ್ಮಿದ ಜಲಧಾರೆಯ ಪ್ರಹಾರದಿಂದಾಗಿ ಅರಸಿಯರ ಹೂದೊಡವುಗಳೆಲ್ಲ ಶಿಥಿಲವಾಗಿ ಕಳಚಿಬಿದ್ದುವು. ಆದರೆ ಪುಣ್ಯವಂತರಾದ ಲಾವಣ್ಯವತಿಯರಿಗೆ ಭೂಷಣಗಳೇನು ಕಡಮೆಯೆಂಬಂತೆ—

೩೨. (ಬಿಡಿಬಿಡಿಯಾಗಿ) ನಿಂತುಕೊಂಡ ತಿಳಿನೀರಿನ ಹನಿಗಳು ಕೊರಳಿಗೆ ಹಾರವಾದುವು; ಎದೆಯಲ್ಲಿ ಹೊಸ ಮುತ್ತಿನ ಏಕಾವಳಿಯಂತೆ ಕಂಗೊಳಿಸಿದುವು; ಕಿವಿಯ ಬಳಿಯ ನೀರ ಬಿಂದುಗಳು ಉಜ್ವಲವಾದ ವಸಂತ ಮಂಜರಿಯಂತೆ ಶೋಭಿಸಿದುವು.

೩೩. ಈ ಹೊಸ ತೊಡವುಗಳು ರಾಜಕುಮಾರನ ಕಣ್ಣಿಗೆ ತುಂಬಿ ಸೊಗಸಾಗಿ ಕಂಡುವು. ಸಹಜಸುಂದರ ರಾದವರಿಗೆ ಏನಿಟ್ಟರೂ ಅದು ಅಲಂಕಾರವೇ. ಚಂದ್ರಮಂಡಲಕ್ಕೆ ಅದರೊಳಗಿನ ಕಪ್ಪು ಕಲೆಯೂ ಶೋಭೆ ಯನ್ನೀಯುವುದಷ್ಟೆ!

---

1. ಚಿಕುರ (ಅ) 2. ಟ[3] (ಮ) 3 × (ಪತ್ರೆ) 4. ಳ (ಮ) 5. ನೆ (ಮ) 6. ಳ (ಮ)

ಕಂ॥ ಆ ರಮಣಿಯರೊಡನೊಸೆದ ಕು
ಮಾರನ ಮೇಗಂದು ಪೊನ್ನ ಜೀರ್ಕೊಳವಿಗಳಿಂ
ನೀರನಿರದೊತ್ತಿದರ್ ಸಮ
ರಾರಂಭಮನಂಗಜಂಗೆ ಕಲಿಸುವ ತೆಱದಿಂ ॥ ೩೪ ॥

ವ॥ ಅಂತುಮಲ್ಲದೆಯುಂ —

ಕಂ॥ ಜಳಧರಮಾಳೆ ಸುರೇಂದ್ರಾ
ಚಳದೊಳ್ ಕಱೆವಂತೆ ನೀರನೊತ್ತಿದುದಬಳಾ
ವಳಿ ವಜ್ರಾಯುಧ ವಕ್ಷ
ಸ್ಥಳದೊಳ್ ಮಲ್ಲಿಗೆಯ ಮಾಲೆ[1]ಯನೂ[1]ಡಿದ ತೆಱದಿಂ ॥ ೩೫ ॥

ಅಂತಂತಃಪುರ ಕಾಂತಾ
ಸಂತತಿ ಲತಾಪ್ರತಾನಮಂ ಜಲಧರ ಧಾ
ರಾಂತಾಭಿಷೇಕದಿಂ ತಳಿ
ದಂ ತೋಂಟಿಗನಂತೆ ಸಂತತಂ ಯುವರಾಜಂ ॥ ೩೬ ॥

ವ॥ ಅವರೊಳೊರ್ವಳ್--

ಕಂ॥ ವಸುಧೇಶನೊತ್ತಿದಂಬು
ಪ್ರಸನ್ನ ಧಾರೆಗೆ ಮೃಗಾಕ್ಷಿ ವದನಮನಿರದೊ
ಡ್ಡಿಸೆ ಧಾರೆ ಚಿಕುರದೊಳ್ ನಿಲೆ
ಪೊಸತಲರ್ದ ಸನಾಳ ಕಮಳಮೆನಿಸಿದುದು ಮೊಗಂ ॥ ೩೭ ॥

---

೩೪. ಆ ರಮಣಿಯರೂ ಮನ್ಮಥನಿಗೆ ಯುದ್ಧಾರಂಭವನ್ನು ಕಲಿಸಿಕೊಡುವಂತೆ ತಮ್ಮ ಚಿನ್ನದ ಜೀಕಳಿಗಳಿಂದ ತುಂಬಿತುಂಬಿ ಆ ಕುಮಾರನ ಮೇಲೆ ನೀರನ್ನು ಚಿಮ್ಮಿದರು.

ವ॥ ಅಷ್ಟೇ ಅಲ್ಲದೆ—

೩೫. ಮೇರು ಪರ್ವತದ ಮೇಲೆ ಮೇಘಮಂಡಲವು ಮಳೆಗರೆದಂತೆ ಆ ಸ್ತ್ರೀಯರು ಆತನ ಮೇಲೆ ನೀರನ್ನು ಸೂಸಲಾಗಿ, ವಜ್ರಾಯುಧನ ಎದೆಯ ಮೇಲೆ ಮಲ್ಲಿಗೆಯ ಮಾಲೆಯನ್ನು ಇಕ್ಕಿದಂತಾಯಿತು.

೩೬. ತೋಟಗಾರನು ಬಳ್ಳಿಗಳಿಗೆ ನೀರೆರೆಯುವಂತೆ ಲತಾಕೋಮಲೆಯರಾದ ತನ್ನ ಕಾಂತೆಯರ ಮೇಲೆ ಯುವರಾಜನು ಮಳೆಯ ಧಾರೆಯಂತೆ ನೀರನ್ನು ನಿರಂತರವಾಗಿ ಸುರಿದನು.

ವ॥ ಅವರಲ್ಲಿ ಒಬ್ಬಳು —

೩೭. ಕುಮಾರನು ಚಿಮ್ಮಿದ ತಿಳಿನೀರಿನ ಧಾರೆಗೆ ತನ್ನ ಮುಖವನ್ನೊಡ್ಡಲಾಗಿ ಆ ನೀರಧಾರೆ ಆಕೆಯ ಗದ್ದಕ್ಕೆ ಹೊಂದಿಕೊಂಡು ಇದೊಂದು ನಾಳಸಹಿತವಾದ ಅರಳಿದ ಕಮಲವೆಂಬಂತೆ ಅವಳ ಮುಖವು ತೋರಿತು.

---

1. ಮೂ (ಅ)

ವ॥ ಆ ಜಲದ್ವಂದ್ವಯುದ್ಧಮಲ್ಲದೆಯುಂ—

ಚಂ॥ ಲಲಿತಲತಾಂಗಿಯರ್ ತುಮುಳಕೇಳಿಯ ವಾರಿವಿಹಾರದೊಳ್ ಪಳಂ
ಚಲೆವವನೀಶ ನಂದನನನಾಱದೆ ಮಾ[1]ಣ್ದಿಸ[1]ದಾತನೊತ್ತಿದು
ಜ್ಜ್ವಲ[ಜಲ]ಧಾರೆ ತಮ್ಮ ಮೊಗಮಂ ಕೊಳೆಗೊಂಡಿರದೊಡ್ಡಿದರ್ ಪೊದ
ಱ್ದಲರ್ಗಣೆಗೊಡ್ಡಿದಡ್ಡಣಮಿದೆಂಬಿನಮಬ್ಜ ವಿಚಿತ್ರ ಪತ್ರಮಂ ॥ ೩೮ ॥

ವ॥ ಅಂತವರ್ ಸೋಲ್ತು ಕೋಟಿಭಟಂಗೆ ಸೋಲ್ತ ಭಟಕೋಟಿಯಂತೆ ಕೊಳದೊಂದು ಭಾಗಕ್ಕೆ ನೀರೆಲ್ಲಮಗುಂದಲೆಪೋಗೆ ತೊಲಗಿ ಗಟಿಯಿಕ್ಕಿ ಕೊಲಗಿದಂಕದಂತೆ ಪೆಱಮೆಟ್ಟಿ ನಿಲ್ವುದುಂ—

ಕಂ॥ ಜನಪತಿ ಖನತೀಸ[2][ರ್ವ]ರ್[2]ಂ
ಖನತಿಯೆನಲ್ ತಕ್ಕ ಪಂಡಿತೋಕ್ತಿಗೆ ದೊರೆಯ
ಪ್ಪಿನಮಾಡಲ್ಕಂತಃಪುರ
ವನಿತೆಯರಂ ಸನ್ನೆಗೆಯ್ದು ಕೊಳನಂ ಪೊಕ್ಕಂ ॥ ೩೯ ॥

ವ॥ ಪೊಕ್ಕು ಜಳಕ್ರೀಡಾವಿನೋದೈಕ ರಸರಸಿಕನಂತಃಪುರ ಜನಸಹಿತಂ ಮಗುಟ್ದು ಮಾಡುವಾಗಳ್—

ಚಂ॥ ಬಿಳಿಯಲರ್ಗಣ್ಗೆ ಕೆಂಪನರುಣಾಧರಕೊಪ್ಪುವ ಬೆಳ್ಪನೆಯ್ದೆ ಪ
ಜ್ಜಳಿಸುವ ದೇಹದೀಪ್ತಿಗೆ ಬೆಳರ್ತಿರವಂ ಪಡೆದುಂ ನಿಕಾಮ ಕೋ
ಮಳೆಯರುದಾತ್ತವೃತ್ತಿ ಕಿಡುಗುಂ ಜಳವಾಸದೊಳಂತುಮೊಪ್ಪುವೊಂ
ದಳವಿ ನಿಸರ್ಗವಾಕೆಗಳೊಳೊಪ್ಪುವ ತೇಜಮದೆಂತುಮೊ[ಪ್ಪ][3]ದೇ ॥ ೪೦ ॥

ವ॥ ಎಂಬಿನಂ ಸೊಗಯಿಸುವವರೋಧ ವಧೂನಿವಹದೊಳ್—

ವ॥ ಹೀಗೆ ಸಾಗಿದ ನೀರಿನ ಧ್ವನಿ ದ್ವಂದ್ವಯುದ್ಧವಲ್ಲದೆ—

೩೮. ಬಳ್ಳಿಯಂತೆ ತುಂಬ ಕೋಮಲ ದೇಹವುಳ್ಳ ಕೆಲವು ಚೆನ್ನೆಯರು ತುಮುಲವಾದ ಈ ಜಲಕ್ರೀಡೆಯಲ್ಲಿ ರಾಜಕುಮಾರನ ಜಲಪ್ರಹಾರದ ರಭಸಕ್ಕೆ ತಾಳಲಾರದೆ ತಾವುಕೂಡ ಆತನ ಮೇಲೆ ನೀರು ಚಲ್ಲದೆ ಆತನು ಚಿಮ್ಮಿದ ನೀರಧಾರೆ ತಮ್ಮ ಮುಖಕ್ಕೆ ಬರುತ್ತಲೇ ಹೂಬಾಣಕ್ಕೆ ಅಡ್ಡವಾಗಿ ಹಿಡಿದ ಗುರಾಣಿಯೊ ಏನೊ ಎಂಬಂತೆ ಕಮಲದ ಎಲೆಯನ್ನು ಮುಖಕ್ಕೆ ಮರೆಯಾಗಿ ಒಡ್ಡಿ ನಿಂತರು.

ವ॥ ಹೀಗೆ ಮಿಗಿಲಾದ ಶೂರನಿಗೆ ಸೋತುಹೋಗುವ ಯೋಧ ಸಮೂಹದಂತೆ ಹಿಮ್ಮೆಟ್ಟಿ, ಕೊಳದ ಒಂದು ಭಾಗದ ನೀರೆಲ್ಲ ಒತ್ತರಿಸಿ ಈಚೆಗೆ ಬರುವಂತೆ ಆಚೆಗೆ ಹೋಗಿ ನಿಂತರು. ಆಯುಧಗಳನ್ನು ಬಿಸಾಡಿ ಬಿಟ್ಟುಹೋದ ರಣರಂಗದಂತೆ ಕಾಣುವ ಆ ಸ್ಥಿತಿಯನ್ನು ನೋಡಿ—

೩೯. ರಾಜಕುಮಾರನು "ಅಗೆವ ಗುದ್ದಲಿ ಪೂರ್ತಿಯಾಗಿ ಅಗೆಯುತ್ತದೆ" (ಅಗಿಯುವವನು ಪೂರ್ಣವಾಗಿ ಅಗೆಯುಬೇಕಲ್ಲದೆ ಅರ್ಧಕ್ಕೆ ನಿಲ್ಲಿಸಕೂಡದು) ಎಂಬ ಜಾಣ್ನುಡಿಗೆ ತಕ್ಕಂತೆ ತನ್ನ ಅಂತಃಪುರದ ರಮಣಿಯರಿಗೆ ಮರಳಿ ಬರಲು ಸನ್ನೆ ಮಾಡಿ ನೀರಲ್ಲಿ ಹೊಕ್ಕನು. ("ಸರ್ಪಂ" ಎಂಬುದು ಬಹುಶಃ "ಸರ್ವಂ" ಎಂದಿರಬಹುದೆಂದು ಊಹಿಸಲಾಗಿದೆ.)

ವ॥ ಹಾಗೆ ಹೊಕ್ಕು ಜಲಕ್ರೀಡಾವಿನೋದದಲ್ಲಿಯೆ ಮಗ್ನನಾಗಿ ತನ್ನ ಅರಸಿಯರೊಡನೆ ಮತ್ತೆ ಆಡುತ್ತಿರಲಾಗಿ—

೪೦. ಬೆಳ್ಳನೆಯ ಅರಳುಗಣ್ಣುಗಳು ಕೆಂಪಡರಿದುವು; ಕೆಂದುಟಿಗಳು ಬಿಳುಪೇರಿದುವು; ಮಿರುಗುತ್ತಿದ್ದ ಮೈಕಾಂತಿ ಬಿಳಿಚಿಕೊಂಡಿತು; ತುಂಬಾ ಕೋಮಲೆಯರಾದವರು ನೀರಲ್ಲಿ ಮುಳುಗಿ ನಿಂತರೆ ಅವರ ಬೆಡಗು ಮಾಸುವುದು ಸಹಜ. ಆದರೆ ನೈಸರ್ಗಿಕವಾದ ತೇಜಸ್ಸು ಎಂತಹ ಪರಿಸ್ಥಿತಿಯಲ್ಲಾದರೂ ಶೋಭಿಸದಿರುವುದೆ?

ವ॥ ಎಂಬಂತೆ ಮನೋಹರವಾದ ಆ ಅಂತಃಪುರ ವನಿತೆಯರಲ್ಲಿ—

---

1. ಣಸು (ಅ) 2. ಪ (ಮ) 3. ಪ್ಪು (ಮ)

ಚಂ॥ ಬಯಸುವ ನಾಣ ಜಾಣನು[ಟ್][1]ದಂತೆ ದುಕೂಲದ ನಾಂದ ವಸ್ತ್ರಶೋ
ಭೆಯೊಳಮರ್ಚುಟ್ಟಳೋ ನಿರುತಮೇನುಡಳೋ ಬಗೆ ಪೋಗದೆಂಬ ಸಂ
ದೆಯುದೆ ಜನಕ್ಕೆ ಪೋಲೆ ಬರೆಗುಂ ಬರೆಯಂ ದೊರೆವೆತ್ತ ಚೀರಘ
ಟ್ಟಿಯುಮನೆ ಛಿತ್ರಿವೆತ್ತ ತೆಜಿನೊಪ್ಪಿದುದೊರ್ವಳಪೂರ್ವರೂಪೆಯಾ ॥ ೪೧ ॥

ವ॥ ಮತ್ತಮೊರ್ವಳ್ —

ಕಂ॥ ಕೊಡಕೆಯುದಬಿಂದು ಕೊಪ್ಪಿನ
ಬೆಡಂಗನವಗಯ್ಸೆ ಕುಟಿಲ ಕೇಶಾವಳಿಯೋ
ಗಡಿಸದೆ ಪನಿಗಳ್ ನಿಲೆ ತಲೆ
ದುಡುಗೆಯ ಮುತ್ತಿನವೊಲೆಸೆಯೆ ಸತಿ ಸೊಗಯಿಸಿದಳ್ ॥ ೪೨ ॥

ವ॥ ಮತ್ತಮೊರ್ವಳ್—

ಕಂ॥ ತೋಳ ನಖವ್ರಣಕೆಜಿಗಿ[ದ][2]
ಬಾಳೆಗಳಂ ನೋಟ್ಟ ಬಾಳೆ ಕಣ್ಮೀನೆಂಬಾ
ಲೋಳಮನೊಡರಿಸೆ ಸಲೆ ನೃಪ
ಬಾಳೆಗೆ ಪಡೆದಳ್ ಮೃಗಾಕ್ಷಿ ಪರಿಸಂಭ್ರಮಮಂ ॥ ೪೩ ॥

ವ॥ ಆಕೆಯಲ್ಲದೆಯುಂ—

ಕಂ॥ ಉರದಡಕಿಲ್ವುಣ್ಣಂ ಕರ್ದು
ಕಿರದಧರದ ಪುಣ್ಗೆ ಪಾಯ್ದು ಮಿಾಂಗಗಿದು ತಳ್ಳೋ
ದರಿ ದರಿಯನೆಯ್ದುವಿನಮಾ
ಸರೋವರಂ ಕದಡೆ ಬೆರ್ಚಿ ದೆಸೆದೆಸೆವರಿದಳ್ ॥ ೪೪ ॥

---

೪೧. ಅಪೇಕ್ಷಣೀಯವಾದ ಲಜ್ಜೆ ಹಾಗು ಜಾಣ್ಮೆ ಇವೆರಡನ್ನೂ ಮರೆತು, ಈಕೆ ಒಪ್ಪಿಯಾದ ರೇಷ್ಮೆ ಸೀರೆಯನ್ನು ಮೈಗೆ ಹತ್ತಿಯಾಗುವಂತೆ ಬಿಗಿದುಟ್ಟಿರುವಳೊ ಅಥವಾ ಏನನ್ನೂ ಉಟ್ಟೇ ಇಲ್ಲವೊ? ಈ ಸಂಶಯ ಪರಿಹಾರವಾಗುವಂತಿಲ್ಲ ಎಂದು ಜನಕ್ಕೆ ಎನಿಸುವ ಹಾಗೆ ಇಂತಹ ಒಂದು ಚಿತ್ರವನ್ನು ಚೀರಘಟ್ಟಿಯಾದರೂ ಬರೆಯ ಬಲ್ಲನೊ ಅಥವಾ ಬರೆಯಲೇ ಆರನೊ—ಎಂಬ ಮಟ್ಟಿಗೆ ಅಪೂರ್ವರೂಪವತಿಯಾದ ಒಬ್ಬಳು ಕಂಗೊಳಿಸಿದಳು.

ವ॥ ಮತ್ತೊಬ್ಬಳು—

೪೨. ೪೨. ಕಿವಿಯ ಮೇಲೆ ನಿಂತ ನೀರ ಹನಿ ಕೊಪ್ಪಿನಂತೆ ಶೋಭಿಸಿ, ಕೊಂಕಿದ ಕುರುಳಲ್ಲಿ ತೊಡಕಿನಿಂತ ತುಂತುರು ಹನಿಗಳು ಮುತ್ತಿನ ಶಿರೋಭೂಷಣವೆನಿಸಲಾಗಿ ಚಲುವಾಗಿ ಕಂಡಳು.

ವ॥ ಇನ್ನೊಬ್ಬಳು—

೪೩. ತನ್ನ ತೋಳಮೇಲಿನ ಉಗುರುಗಾಯಕ್ಕೆ ಎರಗಿದ ಬಾಳೆಮೀನುಗಳನ್ನು ನೋಡುತ್ತ (ತನ್ನ ಚಂಚಲವಾದ ದೃಷ್ಟಿಯಮೂಲಕ) ಕಣ್ಣುಗಳೇ ಮೀನುಗಳೆಂಬ ಭ್ರಾಂತಿಯನ್ನು ಹುಟ್ಟಿಸಿ ರಾಜಕುಮಾರನ ಕಣ್ಣಿಗೆ ಸಂತೋಷವನ್ನುಂಟುಮಾಡಿದಳು.

ವ॥ ಇವಳಲ್ಲದೆ (ಇನ್ನೊಬ್ಬಳು)—

೪೪. ತನ್ನ ಎದೆಯ ಮೇಲಾದ (ನಖಕ್ಷತದ) ಹಲವಾರು ಗಾಯಗಳೆಡೆ ನೂಕ್ಕು ಕುಕ್ಕಿದುದಲ್ಲದೆ ತುಟಿಯ (ದಂತಕ್ಷತದ) ಗಾಯಕ್ಕೂ ಎರಗುವ ಮೀನುಗಳನ್ನು ಕಂಡು ಬೆದರಿ ಕೊಳದ ಅಂಚಿನೆಡೆಗೆ ಸುಗ್ಗಿಯೊಡನೆ ಕೊಳ ಕದಡಿದಂತಾಗಲು ಕಕ್ಕಾಬಿಕ್ಕಿಯಾಗಿ ದಿಕ್ಕುದಿಕ್ಕಿಗೆ ಹರಿದಾಡಿದಳು.

---

1. ಡಿ (ಮ) 2. ದು (ಮ)

ವ॥ ಪೆಱಳೊರ್ವಳ್—

ಮ॥ ಸ್ರ॥ ಅಲರ್ವಚ್ಚಂ ಪಚ್ಚನುಂ ಪೊಚ್ಚಮುಮೆನಿಸದೆ ಮೆಯ್ವೆತ್ತೊಡಂ[1]ಬಟ್ಟು[1] ತನ್ನೊಳ್
ನಿಲೆ ಹೇಮೋದ್ದಾಮಕುಂಭಂ ತಳದೊಳಮರೆ ಮತ್ತೊಂದು ಕೈಕುಂಭಕಂಠ
ಸ್ಥಲದೊಳ್ [2]ಚೆಲ್ವಾಗೆ[2] ವಜ್ರಾಯುಧ ವಿಭುಗಭಿಷೇಕಕ್ಕೆ ತಕ್ಕಂ[3]ತು[3] ಬಂದು
ಜ್ವಲೆ ಗಂಗಾದೇವಿ ಪೊಯ್ವಂತಿರೆ ವಿಮಳಜಲಕ್ಷೀರಮಂ ತಂದು ಪೊಯ್ದಳ್ ॥ ೪೫ ॥

ಕಂ॥ ಅರಸಂ ಸುರಕರಿ ಕರನಿರ
ದೆ ರಾಗದಿಂ ಕನಕ ಕಳಶಜಳದಿಂದಾ ಸುಂ
ದರಿಯುಂ ಮಿಸಿಸಿದೊಡೆ ಸರೋ
ವರದೊಳ್ ಕರಿ ಮಿಸಿಸೆ ಮಿಾವ ಸಿರಿಯಂ ಪೋಲ್ತಳ್ ॥ ೪೬ ॥

ವ॥ ಮತ್ತಂ ತಿಮಿಕುಳ ಕ್ಷೋಭಿತ ಬಾಳಿಕಾ ನಿಕರಕ್ಕೆ ಬಱಿವೃತ್ತಿಧಾರೆವೆತ್ತಿರೆ ತಳಮಳಗಪ್ಪಿನಂ ಕದರ್ಥಿಸುವ ಬಾಳೆಮಿಾಂಗಳ ಕೋಳಾಹಳ ಕಳಕಳದಿಂ—

ಕಂ॥ ನೀರೊಳಗಳ್ಕಿದ ನೆವದಿಂ
ದಾ ರೂಪನಿದಾನನಂ ಮೃಗಾಕ್ಷಿಯರಪ್ಪ[4][ಲ್][4]
ಸಾರೆ ಬಿಡುತಂದು ಕೂಡಲ್
ನೀರಂತಿರೆ ಬೆರಸೆ ಮದನ ಜಲಮುಂ ಜಲಮುಂ ॥ ೪೭ ॥

ವ॥ ಅಂತು ಪುಷ್ಪಾಯುಧನ ಕೊಂದ ಕೊಳ್ಗೊಳನಂ ಪೋಲ್ತು ಪೂಗೊಳದೊಳ್ ಸೌಜನ್ಯಕಂದಾಂಕುರನುಮಪ್ಪ ವಜ್ರಾಯುಧಂ ಪ್ರಮತ್ತನುಮೇಕರಸನುಮಾಗಿ ನೀಡುಂ ಪೊಱ್ತು ಜಳಕ್ರೀಡಾ ವಿನೋದದೊಳಿರೆ—

ವ॥ ಮತ್ತೊಬ್ಬಳು—

೪೫. ಹೂದೊಡವು ಅಲಂಕಾರವೆಂದಾಗಲಿ ಹೊಸತೆಂದಾಗಲಿ ತೋರದೆ (ಆಕೆಯ ದೇಹ ಸೌಂದರ್ಯದಿಂದ) ತಾನೆ ಶೋಭೆಗೊಂಡಿ ನಿಂತಿರಲಾಗಿ, ಅಗ್ಗಳವಾದೊಂದು ಚಿನ್ನದ ಕೊಡದ ತಳಕ್ಕೊಂದು ಕೈಹಿಡಿದು ಅದರ ಕಂಠಕ್ಕೊಂದು ಕೈಯಿಟ್ಟು, ವಜ್ರಾಯುಧನಿಗೆ ಪ್ರತ್ಯಕ್ಷ ಗಂಗಾದೇವಿಯೆ ಬಂದು ಅಭಿಷೇಕ ಮಾಡುವಳೊ ಏನೊ ಎಂಬಂತೆ ಶುದ್ಧವಾದ ನೀರನ್ನು ತುಂಬಿ ಸುರಿದಳು.

೪೬. ಐರಾವತದ ಸೊಂಡಿಲಂತೆ ತೋಳುಗಳುಳ್ಳ ಆ ಅರಸನು ಚಿನ್ನದ ಕಳಶದಲ್ಲಿ ನೀರನ್ನು ತುಂಬಿ ಆ ಚೆಲುವೆಗೆ ಸ್ನಾನಮಾಡಿಸಲಾಗಿ, ಆನೆ ಸುರಿದ ನೀರಿನಿಂದ ಸ್ನಾನಮಾಡುವ ಲಕ್ಷ್ಮೀದೇವತೆಯಂತೆ ಆಕೆ ಕಂಗೊಳಿಸಿದಳು.

ವ॥ 'ತಿಮಿ'ಯೆಂಬ ಹೆಮ್ಮೀನುಗಳಿಂದ ಗಾಬರಿಯಾದ ಈ ಯುವತಿಯರಿಗೆ (ಜೀರ್ಕೊಳವಿಗಳ) ಜಲಧಾರೆಯ ಪ್ರಹಾರವೊಂದು ಸೇರಿ ಅವರು ತಳಮಳಗೊಳ್ಳುತ್ತಿದ್ದರು; (ನಖಕ್ಷತ ದಂತಕ್ಷತಗಳ) ಗಾಯಗಳಿಗೆ ಅಡರುವ ಬಾಳೆ ಮೀನುಗಳ ಕಾಟ ಬೇರೆ. ಇದರಿಂದ ಕೋಲಾಹಲವೆದ್ದು ಕಲ ಕಲ ನಡೆದಿರುವಾಗ—

೪೭. ಅಂಜಿಕೆಯ ನೆವದಿಂದ ಮೃಗಾಕ್ಷಿಯರು ಗುಂಪನ್ನು ಓಡಿಬಂದು ನೀರಿನ ಮರೆಯಲ್ಲಿ ರೂಪನಿಧಿಯಾದ ಆ ಕುಮಾರನನ್ನು ಕೂಡಿಕೊಳ್ಳಲಾಗಿ, ಮನ್ಮಥ ದ್ರವವೂ ನೀರೂ ಬೆರತುಕೊಂಡುವು.

ವ॥ ಹೀಗೆ ಮನ್ಮಥನ ಕಗ್ಗೊಲೆಯ ರಣಾಂಗಣಕ್ಕೆ ಸದೃಶವಾದ ಹೂಗೊಳದಲ್ಲಿ ಸಜ್ಜನಪ್ರಿಯನಾದ ವಜ್ರಾಯುಧ ಕುಮಾರನು ಉತ್ಸಾಹಾತಿಶಯದಿಂದ ತನ್ಮಯನಾಗಿ ತುಂಬ ಹೊತ್ತಿನವರೆಗೆ ಜಲಕ್ರೀಡೆಮಾಡಿ ಸಂತಸಗೊಳ್ಳುತ್ತಿರಲು—

---

1. ಬಡಿಸಿಟ್ಟ (ಅ) 2. ಮೇಲಾಗೆ (ಅ) 3. ದು (ಮ) 4. ರ್ (ಮ)

ಶಾ॥ ಉದ್ದಾಮಾಯುತ ಚಂದ್ರಶಾಲಮುಪಮಾತೀತಂ ವಿಧುಸ್ಪರ್ಧಿ ವಿ
ದ್ಯುದ್ದಂಷ್ಟ್ರಾಸುರಯಾನಮಭ್ರಪಥದೊಳ್ ಪಾಱುತ್ತುಮಿರ್ದಲ್ಲಿ ಚಂ
ಚದ್ದಂಡಾಗ್ರಪತಾಕೆ ಮಾಣೆ ನಿನಗೆಂಬಂತೆತ್ತಮುಂ ಪೋಗದು
ದ್ಯದ್ದೈನ್ಯಂ ನಿಲೆ ತದ್ವಿರೋಧಿಗೆ ವಿಭಂಗಜ್ಞಾನಮಾ ಬೇಗದೊಳ್ ॥ ೪೮ ॥

ಕಂ॥ ಪುಟ್ಟಲೊಡಮಱಿದು ಮೊದಲೊಳ್
ಪುಟ್ಟಿದ ಭವಬದ್ಧವೈರದಿಂ ದಿತಿಸುತನ
ಣ್ಮುಟ್ಟಾಗೆ ಬಂದು ಕಡನಂ
ಕೊಟ್ಟರ್ ಕೊಳ್ವಂತೆ ನಾಗಪಾಶದಿನಾಗಳ್ ॥ ೪೯ ॥

ವ॥ ಊರುಂ ಮೂಲೆಯುಂ ತಿಂಬಗುರು ಪಯಗರಿಯ ತಸಿಗೊಂಬಂ ಬಳಿ[1]ಗೊಯ್ಯಲ್[1] ಪೂಣ್ದು ತುದಿಯೊಳೋಡಿ ಪೋಪ ಭೀರುವಪ್ಪ ಪಣದಕಾ[2][ಱ]ನಂತೆ ವಜ್ರಾಯುಧನ ದಿಕ್ಕರಿ ಕರಾಕಾರ ಬಾಹುಪರಿಘ ಯುಗಳಮುಂ ತಾಮರೆಯ ನೂಲೊಳಾನೆಗಟ್ಟುವಂತೆ ಕಟ್ಟಿ—

ಕಂ॥ ಕೇಳೀ ಲೋಲನ[3]ನಮೃತಿರ
ಸಾಳಾಪನನಱಿಯಲೀಯದಾ ಕೊಳನನಮಂ
ಬಾಳಮತಿ ಪುರುಷರತ್ನದ
ಪೇಳಿಗೆಯುಂ ಮುಚ್ಚುವಂತೆ ಮುಚ್ಚಿದನಗದಿಂ ॥ ೫೦ ॥

ವ॥ ಆಗಳ್ ಕೊಳದೊಳಗೆ ಪುದಿದೊಗೆದ ತಮಮಂ ಕಂಡು ಬೆಗಡುಗೊಂಡು ನಡುಗುವ ವಲ್ಲಭೆಯರನಂಜಲಿಮಂಜಲಿಮೆಂದು ಸಂತೈಸಿ ತೊಡರಂ ಪೊಸೆದು ಪಱಿವ ಮದಕರಿಯಂತೆ ಪೊಸೆದು ನೋಡಲೊಡ—

---

೪೮. ಅತ್ಯಂತ ಉನ್ನತವೂ ವಿಶಾಲವೂ ಆದ ಚಂದ್ರಶಾಲೆಯನ್ನೊಳಗೊಂಡು ಚಂದ್ರನೊಡನೆ ಸ್ಪರ್ಧಿಸುವಂತಹ ನಿರುಪಮ ವಿಮಾನದಲ್ಲಿ ಕುಳಿತುಕೊಂಡು ವಿದ್ಯುದ್ದಂಷ್ಟ್ರನೆಂಬ ಅಸುರನು ಆಕಾಶದಲ್ಲಿ ಹಾರುತ್ತ ಹೊರಟಿದ್ದನು. (ಈ ಕೊಳದ ಮೇಲ್ಗಡೆಗೆ ಬಂದೊಡನೆ) ಆ ವಿಮಾನದ ಧ್ವಜ ಅಲುಗಾಟವನ್ನು ನಿಲ್ಲಿಸಿತು; ವಿಮಾನವು ಅತ್ತಿತ್ತ ಸರಿದಾಡ ಲಾರದೆ ಅಸಹಾಯವಾಗಿ ನಿಂತಲ್ಲಿಯೇ ನಿಂತುಹೋಯಿತು. ಕೂಡಲೆ (ವಜ್ರಾಯುಧನ ಪೂರ್ವಜನ್ಮದ) ವೈರಿಯಾದ ಆತನಿಗೆ ವಿಭಂಗ ಜ್ಞಾನವು

೪೯. ಉಂಟಾಗಿ, ಪೂರ್ವಕಾಲದ ಬದ್ಧವೈರವನ್ನು ನೆನೆದು ಆ ಅಸುರನು ಮೇಲಿಂದ ಒಮ್ಮೆಲೆ ಎರಗಿ ಕಡ ಕೊಟ್ಟವರು ತಿರುಗಿ ಅದನ್ನು ತೆಗೆದುಕೊಳ್ಳುವಂತೆ ನಾಗಪಾಶದಿಂದ

ವ॥ ಎಲ್ಲವನ್ನೂ ಸಮೂಲವಾಗಿ ಕತ್ತರಿಸಿಹಾಕುವೆನೆಂದು ಪ್ರತಿಜ್ಞೆಮಾಡಿ, ಆನಂತರ ಕೈಸಾಗದೆ ಓಡಿಹೋಗುವ ಕಡಿತಗಾರನ ಹಾಗೆ, ದಿಗ್ಗಜದ ಸೊಂಡಿಲಂತಿರುವ ವಜ್ರಾಯುಧನ ತೋಳುಗಳನ್ನು ಕಟ್ಟಿದನು. ಈ ಬಂಧನವು ತಾವರೆಯ ನಾರೆಳೆಯಿಂದ ಆನೆಯನ್ನು ಕಟ್ಟುವಂತೆ ಆಯಿತು. ("ಊರುಂ.............ಬಳಿಗೊಯ್ಯಲ್" ಎಂಬ ಭಾಗದ ಅರ್ಥ ಸ್ಪಷ್ಟವಾಗಿಲ್ಲ.)

೫೦. ಸಂತೋಷದಿಂದ ಸಲ್ಲಾಪಮಾಡುತ್ತ ಆಟದಲ್ಲಿ ಮಗ್ನನಾದ ಕುಮಾರನಿಗೆ ತಿಳಿಯದ ಹಾಗೆ—ಪುರುಷ ವೆಂಬ ರತ್ನವನ್ನಿಟ್ಟ ಪೆಟ್ಟಿಗೆಯನ್ನು ಮುಚ್ಚಿಬಿಡುವಂತೆ—ಆ ಮೂರ್ಖನು ಕೊಳವನ್ನು ಬೆಟ್ಟದಿಂದ ಮುಚ್ಚಿಬಿಟ್ಟನು.

ವ॥ ಆಗ ಕೊಳದಲ್ಲಿ ತುಂಬಿಕೊಂಡ ಕತ್ತಲೆಗೆ ಬೆದರಿ ನಡುಗುವ ತನ್ನ ಪ್ರಿಯರಮಣಿಯರಿಗೆ "ಭಯಪಡಬೇಡಿ" ಎಂದು ಆಶ್ವಾಸನೆ ಕೊಟ್ಟು, ತೊಡಕಿದ ಬಳ್ಳಿಯನ್ನು ಹರಿದೊಗೆವ ಮದದಾನೆಯಂತೆ, ವಜ್ರಾಯುಧನು ಆ ನಾಗ ಪಾಶವನ್ನು ಹರಿದೊಗೆದು ನೋಡಲಾಗಿ—

---

1. ಗೋಯಲ್ (ಅ) 2. ರ (ಮ) 3. ನುಮತ (ಮ)

ಕಂ॥ ಸೆಱೆದಿರೆ ಸಂಕಲೆವಂದದ
ತೆಱದಿಂ ಪೆಣೆದಿರ್ದ ನಾಗರಜ್ಜುಗಳೆಲ್ಲಂ
ಉಱೆಯ[1][ಱ][1]ಯೆ ಬಲದಕಂಡಂ
ಪಱೆವಂತಿರೆ ಪಱಿದು ಕೆದಱಿ ಬಿಟ್ಟುವು ಕೊಳದೊಳ್ ॥ ೫೧ ॥

ವ॥ ಅಂತು ನಾಗಪಾಶಮುಮಂ[2]ನಶ್ರಮದೊಳ್[2] ಪಱಿದು ಬಲದ ಕೆಯ್ಯೊಳ್ ನಿಜಪ್ರಾಣ ವಲ್ಲಭೆಯರಂ ಪುದುಂಗೊಳಿಸಿ ವಾಮಹಸ್ತದೊಳ್ ನೂಂಕೆ—

ಕಂ॥ ಗಿರಿ ಪಾ[3]ಱೆ[3] ಭಾಗಮಿಕ್ಕಿದ
ನಿ[4][ಱ][4]ಗೆ ವೊಲಸುರೇಂದ್ರನಳ್ಕಿ ಬೆಳ್ಕುತ್ತಿರದಂ
ಬರದ ನಿಱಿಮುಗಿಲ ತೆರೆಗಳ
ಪೊರೆಯೊಳಗಣ ನಿಜವಿಮಾನದೊಳಗಂ ಪೊಕ್ಕಂ ॥ ೫೨ ॥

ವ॥ ಅಂತಕಿವರ್ತಿಯುಂ [5]ಮಹಾಸತ್ವ[5]ಮೂರ್ತಿಯುಮಪ್ಪ ಸೌಜನ್ಯಕಂದಾಂಕುರನಪ್ಪ ವಜ್ರಾಯುಧನಿದಿರೊಳ್ ನಿಲಲಣ್ಮದಸುರನ ಸುರಕ್ಷಣಾರ್ಥಮೋಡುವುದುಂ—

ಕಂ॥ [6]ದಿವಿಜಾ[6]ನಕಂಗಳಿರದೆಸೆ
ದುವು ತುಂಬಿಗರಂಬಮರಲ ಸರಿಯೆಱಗಿದುದು
ತ್ಸವಮಾಗಳಾದುದಬಳಾ
ನಿವಹಕ್ಕೆಸಗಿದುದು ಮೆಲ್ಲಮೆಲ್ಲನೆ ಪವನಂ ॥ ೫೩ ॥

ಆ ನಾಗಪಾಶಮಂ ಜಗ
ತೀನಾಥಂ ಪೊಸೆಯೆ ಕಟ್ಟುಗಳ್ ಬಿಟ್ಟಿರೆ ಪೋ
ಲ್ತೇನೆಸೆದುದೊ ನೃಪಸುತನಪ
ದಾನದ ಶಾಸನಕೆ ಲೆಕ್ಕಮಿಟ್ಟಕ್ಕರಮಂ ॥ ೫೪ ॥

---

೫೧. ಸರಪಳಿಯ ಸುತ್ತಿನಂತೆ ಮೈತುಂಬ ಹೆಣೆದುಕೊಂಡಿದ್ದ ನಾಗಪಾಶದ ಹಗ್ಗಗಳು ತುಂಡರಿಸಿ, ಚೆಲ್ಲಾಪಿಲ್ಲಿಯಾಗಿ ಕೊಳದಲ್ಲಿ ಬಿದ್ದುವು. ("ಉಱೆ" ಮತ್ತು "ಬಲದ ಕಂಡ"—ಏನೆಂದು ತಿಳಿಯದು.)

ವ॥ ಹೀಗೆ ನಿರಾಯಾಸವಾಗಿ ನಾಗಪಾಶವನ್ನು ಹರಿದೊಗೆದು ಬಲಗೈಯಿಂದ ತನ್ನ ಪ್ರಾಣಪ್ರಿಯೆಯರನ್ನು ಸಮಾಧಾನಗೊಳಿಸುತ್ತ (ಮೇಲೆ ಕವಿದಿದ್ದ ಮುಚ್ಚಳವನ್ನು) ಎಡಗೈಯಿಂದ ನೂಕಿದನು.

೫೨. (ಆತನ ತಿವಿತಕ್ಕೆ) ಆ ಬೆಟ್ಟ (ಹೋಳುಹೋಳಾಗಿ) ಹಾರಿಹೋಗಲಾಗಿ ಅಸುರನು ಗಾಬರಿಯಾಗಿ ಆಕಾಶದಲ್ಲಿ ಪದರಪದರವಾಗಿದ್ದ ಮೋಡಗಳ ಸಂದಿನಲ್ಲಿ ಹೊಕ್ಕು ಅಲ್ಲಿದ್ದ ತನ್ನ ವಿಮಾನದಲ್ಲಿ ಸೇರಿಕೊಂಡನು.

ವ॥ ಹೀಗೆ ಮಹಾಮಹಿಮನೂ ಬಲಶಾಲಿಯೂ ಆದ ವಜ್ರಾಯುಧನ ಎದುರಿಗೆ ನಿಲ್ಲಲಾರದೆ ಆ ಅಸುರನು ಪ್ರಾಣವುಳಿದರೆ ಸಾಕೆಂದು ಓಡಿಹೋದನು.

೫೩. ಆಗ ಬಗೆಬಗೆಯ ವಾದ್ಯಗಳು ಮೊಳಗಿದುವು; ದುಂಬಿಗಳು ಸಹಿತವಾದ ಹೂವಿನ ಮಳೆ ಸುರಿಯಿತು; ಮೆಲ್ಲಮೆಲ್ಲಗೆ ಸುಳಿಗಾಳಿ ಬೀಸಿತು; ಹೀಗಾಗಿ ಆ ಸ್ತ್ರೀಸಮೂಹಕ್ಕೆ ಉತ್ಸಾಹವುಂಟಾಯಿತು.

೫೪. ಆ ನಾಗಪಾಶವನ್ನು ಕುಮಾರನು ಹರಿದೊಗೆಯಲಾಗಿ ತುಂಡುತುಂಡಾಗಿ ಬಿದ್ದ ಆ ಕಟ್ಟುಗಳು ರಾಜಕುಮಾರನ ಸಾಹಸ ಪ್ರಶಸ್ತಿಯ ಶಾಸನದಲ್ಲಿ ಎಷ್ಟು ಎಷ್ಟು ಅಕ್ಷರಗಳೆಂಬುದನ್ನು ಎಣಿಕೆಮಾಡಿ ಬರೆದಿಟ್ಟ ಲೆಕ್ಕದ ಸಾಲುಗಳೊ ಏನೊ ಎಂಬಂತೆ ಕಂಡುವು.

---

1. ಱ (ಮ) 2. + ನೂತನಮದನದಪಾಶಮುಮ (ಆ) 3. ಱ (ಆ) 4. ರ (ವು) 5. ಮಹಾಂತ (ಆ) 6. ವಿವಿಧಾ (ವು)

ವ॥ ಆಗಳಪಗತ ವಿಷಾದರುಮುಪಗತ ಪ್ರಮೋದರುಮಾದಂತಃಪುರಾವರೋಧ ಜನಂಗಳೆಲ್ಲಂ ತನ್ನ ಮೇಗಿಲ್ಲದ ಬಲ್ಲಾಳ್ತನಮುಮಂ ದೈವಬಲಮುಮಂ ಮೆಚ್ಚಿದು—

ಕಂ॥ ಕಮಲಾಕರ ತಟದೊಳ್ ವಿ
ಶ್ರಮಿಸೆ ಪಯೋರಾಶಿ ತಟದೊಳಾತನ ಕೀರ್ತಿ
ಪ್ರಮದೆ ಪಥಶ್ರಮದಿಂ ವಿ
ಶ್ರಮಿಸಿದಳೇಲಾ ಲವಂಗ ಲವಲೀ ವನದೊಳ್ ॥೫೫॥

ವ॥ ತದನಂತರಂ—

ಉ॥ ಆಯತ ವಾಮಹಸ್ತತಳ ಲಕ್ಷಣವಜ್ರ[ವಿ]ಚೂರ್ಣಿತಾದ್ರಿ ವ
ಜ್ರಾಯುಧನೆಂಬ ದೊಡ್ಡಿವೆಸರಂ ಕೊಳದೊಳ್ ತನಗರ್ಥವೋಪವಾ
ಮ್ನಾಯಮನೀಯೆ ಪೌರನಿಕರಂ ಪರಿವೇಷ್ಟಿಸೆ ವಂದಿಕೋಟಿ ಕ
ಟ್ಟಾಯಮನಿಟ್ಟಳಂ ಪೊಗೞೆ ತದ್ವನದಿಂ ತಳರ್ದಂ ನೃಪಾತ್ಮಜಂ ॥ ೫೬ ॥

ವ॥ ಅಂತು ದೀನಜನತಾಕಲ್ಪಾಂಘ್ರಿಪಂ ವನದಿಂ ಪೊಱಮಡೆ ಪೋಪಟೆಯನೆ ಕಣ್ಬೊಲಂಗಟೆವಿನಮಟ್ಟಱುರ್ಕೆಯಿಂ ನಿಂದು ನೋಡಿ—

ಕಂ॥ ವನದೇವತೆಯರ ನಯನಮ
ನನುಕರಿಸುವುದಲ್ಲಿ ಬಳ್ಳಿಮಲ್ಲಿಗೆಯಲರೊಳ್
ನನೆಯೊಳ್ ಮುಗುಳೊಳ್ ಪಾಯ್ದೊ
ಯ್ಯನೊಯ್ಯನತ್ತಿತ್ತ ಪೊಳೆವ ಮಧುಕರ ನಿಕರಂ ॥ ೫೭ ॥

ವ॥ ಮನದ ತಲ್ಲಣವನ್ನು ಕಳೆದುಕೊಂಡು ಮರಳಿ ಸಂತೋಷಭರಿತರಾದ ಅಂತಃಪುರ ಸ್ತ್ರೀಯರೆಲ್ಲರೂ ಆತನ ಅಸಮಾನವಾದ ಸಾಮರ್ಥ್ಯವನ್ನೂ ದೈವಬಲವನ್ನೂ ಹೊಗಳುತ್ತ—

೫೫. ಆ ಕಮಲಸರೋವರದ ತೀರದಲ್ಲಿ ವಿಶ್ರಮಿಸಿದರು ; ಆತನ ಕೀರ್ತಿವನಿತೆ ದೂರದೂರ ನಡೆದೂ ನಡೆದೂ ಹಾದಿಯ ದಣಿವನ್ನಾರಿಸಿಕೊಳ್ಳಲು ಸಮುದ್ರ ತೀರದ ಏಲಾ ಹಾಗು ಲವಲೀ ಬಳ್ಳಿಗಳ ವನದಲ್ಲಿ ವಿಶ್ರಮಿಸಿದಳು. (ಆತನ ಕೀರ್ತಿ ಸಮುದ್ರ ಪರ್ಯಂತವಾದ ಭೂಮಿಯಲ್ಲೆಲ್ಲ ಹರಡಿತು.)

ವ॥ ಅನಂತರ—

೫೬. ಬೆಟ್ಟವನ್ನು ತಿವಿದು ಹುಡಿಗುಟ್ಟಿದ್ದುದರಿಂದ ಆತನ ಅಂಗೈಯಲ್ಲಿದ್ದ ವಜ್ರಚಿಹ್ನೆಯು ಸಾರ್ಥಕವಾಗಿ ವಜ್ರಾಯುಧನೆಂಬ ಆತನ ದೊಡ್ಡ ಹೆಸರೂ ಅನ್ವರ್ಥಕವಾಯಿತು ; ಪುರಜನರೆಲ್ಲ ಬಂದು ಸುತ್ತಲೂ ನೆರೆದು ಹೊಗಳು ಭಟ್ಟರು ಆತನ ಮಹಾಪರಾಕ್ರಮವನ್ನು ಸೊಗಸಾಗಿ ಬಣ್ಣಿಸಿ ಹಾಡುತ್ತಿರುವಾಗ ಆ ರಾಜಕುಮಾರನು ಆ ಉದ್ಯಾನದಿಂದ ಹೊರಟನು.

ವ॥ ಹೀಗೆ ಆ ದೀನಜನರ ಬಂಧುವು ಉದ್ಯಾನವನ್ನು ಬಿಟ್ಟು ಹೊರಡಲಾಗಿ, ಅವನು ಹೋಗುತ್ತಿರುವುದನ್ನು ಹಿಂದಿನಿಂದಲೆ ತಮ್ಮ ದೃಷ್ಟಿ ಹರಿಯುವವರೆಗೆ ಸ್ನೇಹಾತಿಶಯದಿಂದ ನಿಂತು ನೋಡುವ

೫೭. ವನದೇವತೆಯರ ಕಣ್ಣುಗಳೊ ಏನೊ ಎಂಬಂತೆ ಬಳ್ಳಿಮಲ್ಲಿಗೆಯ ಹೂಗಳಲ್ಲಿಯೂ ಮೊಗ್ಗುಗಳಲ್ಲಿಯೂ ಹಾಯ್ದು ಅತ್ತಿತ್ತ ಹೊಳೆಯುವ ದುಂಬಿಗಳ ಹಿಂಡು ಕಂಗೊಳಿಸಿತು.

ವ॥ ಅಂತುದ್ಯಾನ ಪ್ರತೋಳೀ ದ್ವಾರದಿಂ ಪೊಱಮಟ್ಟು ಸೌಜನ್ಯಕಂದಾಂಕುರಂ ರಾಜಭವನಾಭಿಮುಖನಪ್ಪುದುಂ—

ಕಂ॥ ತವದ ಬಸಂತದ ಸಿರಿ ಒರೆ
ಯುವರಾಜನ ಬೆನ್ನನಿತ್ತ ತೀವಿದ ಬೆತ್ತೋ
ದ್ಭವನರಮನೆ ನೃಪಸುತ[1][ನಿ][1]ಂ
ಕವರ್ತೆವೋದಂತೆ ಬಿನ್ನನಾಯ್ತುದ್ಯಾನಂ ॥ ೫೮ ॥

ಆಗಳ್ ವಜ್ರಾಯುಧನನು
ರಾಗಮೆ ತನಗಂಗರಾಗಮಾದುದು ನಿರುತಂ
ಪೋಗೆನೆ ಗಗನದ ಪಡುವಣ
ಭಾಗದೊಳವಲಂಬಿ ಬಿಂಬನಾದಂ ದಿನಪಂ ॥ ೫೯ ॥

ವ॥ ಅಂತುಮಲ್ಲದೆ—

ಮ॥ ಅಮಿತಾಬ್ಜಾಕರಕೇಳಿಯೊಳ್ ನೃಪಸುತಂಗಾದೊಂದನಂಗೈಕ ವಿ
ಭ್ರಮಮೆನ್ನಂ [2]ಕ[2]ಳೆದತ್ತಿರುಳ್ ಸಫಲಮಕ್ಕಾನುಂ ಪ್ರತೀಚೀಸಮಾ
ಗಮ ಸಂತುಷ್ಟನೆನಪ್ಪೆನೆಂದು ದಿನಪಂ ರಕ್ತತ್ವದಿಂ ಪೋಗೆ ರಾ
ಗಮೆ ತತ್ಕುಂಕುಮರಾಗಮಾದುದಪರಾಲಂಕಾರ ವಿಸ್ತಾರದೊಳ್ ॥ ೬೦ ॥

ವ॥ ಅದಲ್ಲದೆಯುಂ—

ಕಂ॥ ನಿಜಕುಪಿತಾಂಬುಜ ಮಧುರಂ
ರಜೋಪಮಾಮೂರ್ತಿ ಮತ್ತಮದನಂತಿರೆ ನೀ
ರಜಬಂಧು ಗುಬುಮ್ಮನೆ ರಸೆ
ಗಜಾಂಡದಿಂದಿೞಿದನಾರನೞಿಯದೊ ರಾಗಂ ॥ ೬೧ ॥

ವ॥ ಹಾಗೆ ಉದ್ಯಾನದ ಮಹಾದ್ವಾರದಿಂದ ಹೊರಬಂದು ರಾಜಕುಮಾರನು ಅರಮನೆಯತ್ತ ನಡೆದನು

೫೮. ಈ ತೋಟಕ್ಕೆ ಅಕ್ಷಯವಾದ ವಸಂತ ವೈಭವದ ಸಂಪತ್ತು ಒದಗಿತ್ತು. ಯುವರಾಜನು ಹೊರಟು ಹೋದೊಡನೆ ಅವನ ಬೆನ್ನ ಹಿಂದೆಯೆ ರಾಜಕುಮಾರರು ಬಂದು ಏನೂ ಉಳಿಯದಂತೆ ಮನ್ಮಥನ ಈ ಅರಮನೆಯನ್ನು ಲೂಟಿಮಾಡಿದರೊ ಏನೊ ಎಂಬಂತೆ ಉದ್ಯಾನವು ಭಣಗುಟ್ಟಿತು.

೫೯. ಆಗ ವಜ್ರಾಯುಧನ ಅನುರಾಗವೆ ತನಗೆ ಅಂಗರಾಗ (ಮೈಗೆ ಲೇಪಿಸಿಕೊಳ್ಳುವ ಸುಗಂಧ ದ್ರವ್ಯ) ವಾಯಿತೆಂಬಂತೆ ಸೂರ್ಯನು ಪಶ್ಚಿಮ ದಿಕ್ಕಿನಲ್ಲಿ ನಿಂತನು. (ಕವಿ ಸಮಯದ ಮೇರೆಗೆ ಅನುರಾಗದ ಬಣ್ಣ ಕೆಂಪು.)

ವ॥ ಅಷ್ಟೆ ಅಲ್ಲದೆ—

೬೦. "ಕಮಲಸರೋವರದಲ್ಲಿಯ ಅಸದೃಶವಾದ ಜಲಕ್ರೀಡೆಯಿಂದ ರಾಜಕುಮಾರನಿಗೆ ಒದಗಿದ ಶೃಂಗಾರ ಮಯವಾದ ವಿಲಾಸವನ್ನು ನೋಡುವುದರಲ್ಲಿಯೆ ನನ್ನ (ಹಗಲಿನ) ಅವಧಿ ಮುಗಿದುಹೋಯಿತು. ಇನ್ನು ರಾತ್ರಿಯೂ ನನ್ನಂತೆಯೆ ಧನ್ಯವಾಗಲಿ. ನಾನು ಕೂಡ ಪಶ್ಚಿಮಾಂಗನೆಯ ಸಹವಾಸದಲ್ಲಿ ತೃಪ್ತನಾಗುವೆನು." ಹೀಗೆಂದುಕೊಂಡು ಹಗಲಿನ ಒಡೆಯನು "ರಕ್ತತ್ವ" (೧. ಸ್ನೇಹ, ೨. ಕೆಂಪು ವರ್ಣ)ವನ್ನು ಹೊಂದಿ ಹೋಗಲಾಗಿ, ಆತನ ರಾಗವೆ ಕುಂಕುಮ ವರ್ಣವಾಗಿ ಪಶ್ಚಿಮ ದಿಕ್ಕನ್ನು ವಿಶಾಲವಾಗಿ ಅಲಂಕರಿಸಿತು.

ವ॥ ಅದಲ್ಲದೆ—

೬೧. ರಜೋಮೂರ್ತಿಯಾಗಿ ಮದೋನ್ಮತ್ತನಾದ ಸೂರ್ಯನು ಆಕಾಶದಿಂದ ಭೂಮಿಗೆ ದುಡುಮ್ಮನೆ ಇಳಿದನು. 'ರಾಗ'ವೆಂಬುದು ಯಾರನ್ನು ನಾಶಮಾಡದು ?

---

1. ೦ (ಮ) 2. ತ (ಅ)

ವ॥ ಮತ್ತಮಾ ಪ್ರಸ್ತಾವದೊಳ್—

ಕಂ॥ ಒಡನಿರೆಯುಂ ಕೊ[1][ರ][1]ಗಿ ಮಸಂ
ಗಿಡುಗುಂ ದಿನಪಾಸ್ತ ಸಮಯದೊಳ್ ದಿನಪನ ಪಿಂ
ಬಡಿನೊಳ್ ಕೋಮಳೆಯ ಮೊಗಂ
ಗಿಡುವಂತಿರೆ ಕಿಡುವುದರಿದೆ ಕಮಳವಿಕಾಸಂ ॥ ೬೨ ॥

ಆಗಳ್ ಕಿಸುಸಂಜೆಯ ನವ
ರಾಗದ ರುಚಿ ಮಸುಳೆ ಮಸುಳನಾಗಿ ತಮಂ ಮೇ
ಲಾಗೆ ಕವಿತಂದುದಿನನೊಡ
ವೋಗದ ನವವಧುಗೆ ಪಿರಿದೆ ಕಂದುಂ ಕುಂದುಂ ॥ ೬೩ ॥

ವ॥ ಅಂತು ಕವಿದ ಕತ್ತಲೆಯೊಳರಸಿಯರುಂ ತಾನುಂ ಕತಿಪಯ ಪರಿಚಿತಾಂಗರಕ್ಷಕ ಪರಿವೃತ ಗಜವರಾರೂಢನಾಗಿ ಬರೆ—

ಕಂ॥ ಬಟಿಯಂ ಪೋಗುತ್ತುಂ ಪೆಜ
ಗುಟಿವಿನನನುಚರರ ತೆಱದೆ ಕೆಯ್ದೀವಿಗೆಗಳ್
ಪಟಪಟನೆಸೆದಿರೆ ಬರವವ
ಗಟಿಯೆನೆ ಕಣ್ಗೆವರೆ ಬರ್ಪ ವಜ್ರಾಯುಧನಾ ॥ ೬೪ ॥

ವ॥ ಇದಿರ್ಗೊಂಡು—

ಮ॥ ಕ್ಷಿತಿನಾಥಂ ಕ್ಷಿತಿನಾಥನಂಪೊಣರ್ದು ಗೆಲ್ವಂತಾತನುಂ ದಲ್ ಗುಣ
ಸ್ತುತಿಗಕ್ಕುಂ ನೃಪಪುತ್ರನಿಂದಸುರನಂ ತಾನಾಸುರಂಗೊಲ್ದೊನಿ
ತ್ತು ತವಂ ವಂದಿಗೆ ಕಾದಿ ಸೋಲನಹಿತಂಗೀ ಚಾಗಮಿಾ ಬೀರದು
ನ್ನತಿ ವಜ್ರಾಯುಧನೊಳ್ ಪೊಗಟ್ಕೆವಡೆದತ್ತಂಭೋಧಿತೀರಂಬರಂ ॥ ೬೫ ॥

ವ॥ ಆ ಪ್ರಸಂಗದಲ್ಲಿ—

೬೨. ಸಂಧ್ಯಾಕಾಲದಲ್ಲಿ ಸೂರ್ಯ ತನ್ನ ಜೊತೆಗಿದ್ದಾಗಲೆ (ಇನ್ನು ಅಗಲಿಹೋಗುವನೆಂಬ ಚಿಂತೆಯಿಂದ) ನೊಂದುಕೊಳ್ಳುವ ಕಮಲಕ್ಕೆ ಆತನು ಹೊರಟುಹೋದ ಮೇಲೆ ಆಗುವ ಅವಸ್ಥೆಯನ್ನು ಕೇಳುವುದೇನು? ಕೋಮಲೆಯ ಮುಖ ಬಾಡಿಹೋಗುವಂತೆ ಅದರ ವಿಕಾಸವೆಲ್ಲ ಕಳೆದುಹೋಗುವುದು.

೬೩. ಆಗ ಸಂಜೆಗೆಂಪಿನ ಹೊಸ ಕಾಂತಿ ಮಾಸುಹೋಗಿ ಕತ್ತಲೆ ಬಲವಾಗಿ ಕವಿದುಕೊಂಡಿತು. ತನ್ನ ಒಡೆಯ ನೊಡನೆ ಹೋಗದ ನವವಧುವಿಗೆ ಕೊರಗೂ ಕಳಂಕವೂ ಒದಗುವುದೇನು ಆಶ್ಚರ್ಯವೆ?

ವ॥ ಹಾಗೆ ಕವಿದ ಕತ್ತಲೆಯಲ್ಲಿ ಅರಸಿಯರೂ ತಾನೂ ಕೂಡಿಕೊಂಡು ಆಪ್ತವಾದ ಅಂಗರಕ್ಷಕರ ಬಳಸಿನಲ್ಲಿ ಆನೆಯನ್ನೇರಿ ಬರಲು—

೬೪. (ಸೂರ್ಯನು) ಹೋಗುತ್ತಿರುವಾಗ ಅವನನ್ನು ಅನುಸರಿಸಿ ಬರುತ್ತ ಹಿಂದುಳಿದ ಸೇವಕರೊ ಎನೊ ಎಂಬಂತೆ ಕೈದೀವಿಗೆಗಳು ತಳತಳಿಸುತ್ತಿರಲಾಗಿ ವಜ್ರಾಯುಧನ ಆಗಮನವು ಅತಿಶಯವಾದ ಶೋಭೆಯನ್ನು ಪಡೆಯಿತು.

ವ॥ (ಹಾಗೆ ಬಂದ ಆತನನ್ನು) ಇದಿರುಗೊಂಡು—

೬೫. "ಒಬ್ಬ ಅರಸನು ಇನ್ನೊಬ್ಬ ಅರಸನನ್ನು ಯುದ್ಧದಲ್ಲಿ ಜಯಿಸಿದಾಗ ಹೊಗಳಿಕೆಗೆ ಪಾತ್ರನಾಗುವನು; ರಾಜಕುಮಾರನಾದರೋ ಇಂದು ಭೀಕರನಾದ ಅಸುರನನ್ನು ಸೋಲಿಸಿದನು. ಯುದ್ಧದಲ್ಲಿ ಈತನು ಎಂದಿಗೂ ಎದುರಾಳಿಗೆ ಸೋಲದವನು. ಈ ತ್ಯಾಗಗುಣ, ಈ ಶೌರ್ಯಾತಿಶಯ— ಎರಡೂ ಸಮುದ್ರ ಪರ್ಯಂತವಾಗಿ ಭೂಮಿಯಲ್ಲೆಲ್ಲ ಹಾಡಿಹರಸುವಂತಾದುವು."

1. ಐ (ಮ)

ವ॥ ಎಂದರಸ[ರ್][1] ಪಕ್ಕದೊಳ್ ಸುತ್ತುಗೊಂಡು ಬೆರ್ಚ್ಚಿ ಬಿಚ್ಚಳಿಸುತ್ತುಂ ಬರೆ ಕಿಂಚಿದವನತಾನನಂ ತದಾಪ್ರೀಡನಾಗಿ—

ಕಂ॥ ಪೊಗಟ್ಟಿ ನೃಪಕೋಟಿ ತನ್ನಂ
ಪೊಗಟಿದೆ ಗುಣಲವದ ತವದ ಗಣನೆಯ ನೆವದಿಂ
ಪೊಗಟ್ದಿಪುದೆಂಬಂತಿರೆ ಕಿವಿ
ವುಗದೆ ದಲಾತ್ಮ ಪ್ರಶಂಸೆ ವಜ್ರಾಯುಧನಾ ॥ ೬೬ ॥

ವ॥ ಅಂತು ರಾಜಮಾರ್ಗದಿಂ ಬಂದು ನೃಪಭವನಮಂ ಪೊಕ್ಕಾಸ್ಥಾನಮಂಡಪೋಪಗತ ಚಾಮೀಕರ ಪೀಠಾಧ್ಯಾಸಿತನಂ ತ್ರಿವಿಷ್ಟಪ ಗುರುವಂ ಕಂಡತ್ಯಂತದೂರಾವನತ ಮಣಿಕಿರೀಟನಾಸನ್ನಗತನಾಗಿ—

ಕಂ॥ ಕ್ಷೇಮಂಕರ ಪದಯುಗನವ
ತಾಮರಸರಜಂ ನೊಸಲ್ಗೆ ತಿಲಕವಿಭೂಷೋ
ದ್ದಾಮತೆಯಂ ಕುಡೆ ಪೊಡೆವ
ಟ್ಟಾಮಹಿಮಂ ಪರಸೆ ಕನಕಮಯವಿಷ್ಟರದೊಳ್ ॥ ೬೭ ॥

ವ॥ ಕುಳ್ಳಿರ್ದುದುಂ ಕ್ಷೇಮಂಕರ ಮಹಾರಾಜಂ ಪರಿತೋಷ ಪ್ರಾದುರ್ಭಾವ ಚಿಹ್ನಭೂತ ಪರಮ ಪ್ರಸಾದ ಸ್ಮೇರಮುಖಿಂ ಪ್ರಿಯಾತ್ಮಜಾನನಾರವಿಂದ ನಿರೀಕ್ಷಣಾನಂತರಂ ಸಭಾಸದರ್ಗೆ—

ಕಂ॥ ಈ ರಾಜಹಂಸನಂ ಸರ
ಸೀರತಲಂಪಟನನಸುರನೊರ್ವಂ ಗಡ [2]ಕೊ
ಲ್ಗಾ[2]ರವೊಲುದ್ಧತನಾದನ
ಪಾರಬಲಂ ತಗುಳೆ ತಗುಣೆಗಾಟಂಗಾಡಲ್ ॥ ೬೮ ॥

ವ॥ ಹೀಗೆಂದು ಅರಸರು ಪಕ್ಕದಲ್ಲಿ ಸುತ್ತುವರಿದು ವಿಸ್ಮಯದಿಂದ ತನ್ನನ್ನು ಬಣ್ಣಿಸುತ್ತ ಬರಲು ವಜ್ರಾಯುಧನು ನಾಚಿಕೊಂಡು ಮುಖವನ್ನು ನಸು ಬಾಗಿಸಿದನು.

೬೬. ಈ ರಾಜಸಮೂಹವೆಲ್ಲ ತನ್ನನ್ನು ಹೊಗಳುತ್ತಿರದೆ (ಯಾರದೋ) ಗುಣಾಂಶದ ಸ್ಥಿರತೆಯನ್ನು ಹೊಗಳುತ್ತಿದೆಯೊ ಏನೊ ಎಂಬಂತೆ ಆತನು ಆ ಮಾತುಗಳಿಗೆ ಅಷ್ಟಾಗಿ ಕಿವಿಗೊಡಲಿಲ್ಲ. ವಜ್ರಾಯುಧನಿಗೆ ಆತ್ಮಸ್ತುತಿ ಮೆಚ್ಚದು.

ವ॥ ಹೀಗೆ ರಾಜಮಾರ್ಗದಿಂದ ಬಂದು ಅರಮನೆಯನ್ನು ಸೇರಿ ಒಡ್ಡೋಲಗದ ಮಂಟಪದಲ್ಲಿ ಚಿನ್ನದ ಸಿಂಹಾಸನದ ಮೇಲೆ ಕುಳಿತಿದ್ದ ದೇವಗುರುವನ್ನು (ತನ್ನ ತಂದೆಯನ್ನು) ಕಂಡು ತೀರ ದೂರದಿಂದಲೆ ತಲೆಬಾಗಿಕೊಂಡು ಹತ್ತಿರ ಬಂದು—

೬೭. ಕ್ಷೇಮಂಕರ ರಾಜನ ಪಾದಕಮಲಗಳ ದೂಳು ತನ್ನ ಹಣೆಗೆ ತಿಲಕದ ಶೋಭೆಯೀಯುವಂತೆ ನಮಸ್ಕಾರ ಮಾಡಿದನು; ಆತನ ಹರಕೆಯನ್ನು ಪಡೆದು ಚಿನ್ನದ ಪೀಠದಲ್ಲಿ—

ವ॥ ಕುಳಿತುಕೊಂಡನು. ಕ್ಷೇಮಂಕರ ಮಹಾರಾಜನು ತುಂಬ ಸಂತೋಷದಿಂದ ನಗುಮುಖನಾಗಿ ತನ್ನ ಪ್ರಿಯಪುತ್ರನ ಮುಖವನ್ನು ನೋಡುತ್ತಿದ್ದು ಆ ಬಳಿಕ ಸಭಾಸದರಿಗೆ—

೬೮. "ಈ ರಾಜಶ್ರೇಷ್ಠನು ಜಲಕ್ರೀಡೆಯಲ್ಲಿ ಮಗ್ನನಾಗಿದ್ದಾಗ ಮಹಾ ಬಲಿಷ್ಠನಾದ ಅಸುರನೊಬ್ಬನು ಕೊಲೆಗಾರನಂತೆ ಬಂದು ಆಕ್ರಮಿಸಿದನು. ಅದೊಂದು ತಗುಣೆಯ ಕಾಟವೆಂಬಂತೆ

---

1. ರ (ಮ) 2. ತೋಲಾ (ಅ)

ಕಂ॥ ದೇವೋಪಘಾತವಂ ಶೌ
ರ್ಯಾವಷ್ಟಂಭದಿನದೆಂತು ಗೆಲ್ದೆಯೊ ಪೇೞೆಂ
ದಾವಿಭು ಬೆಸಗೊಳೆ ಗುರುಲ
ಜ್ಜಾವನತಮುಖಂ ಕುಮಾರನಿರೆ ಕೆಲದವರ್ಗಳ್ ॥ ೧೯ ॥

ವ॥ ತತ್ಪ್ರಪಂಚಮನಱಿಯೆ ಬಿನ್ನಪಂಗೆಯ್ದರ್ ಕ್ಷೇಮಂಕರ ಮಹೀಪಾಲನುಂ ಮಗನಂ ಬೀಡಿಂಗೆ ಪೋಗಲ್ವೇೞ್ವುದುಮಕಳಂಕಾಚಾರಸಾರನಪ್ಪ ವಜ್ರಾಯುಧಂ ನಿಜನಿವಾಸಕ್ಕೆ ವಂದಿರೆ—

ಕಂ॥ ಕಮನೀಯಾಕಾಶಗಜ
ಕ್ಕೆ ಮಾಡಿದವದಾತಕರ್ಣ ಚಮರರುಹಸಮಂ
ಹಿಮಕರ ಕರಮೆನೆ ನಕ್ಷ
ತ್ರಮಾಲೆ [ನಕ್ಷತ್ರಮಾಲೆ]ಯೆನಿಸಿದುವಾಗಳ್ ॥ ೨೦ ॥

ಮ॥ ಸ್ರ॥ ಉದಯಕ್ಷ್ಮಾಭೃತ್ತಟಂ ರಂಗಮನುಡುತತಿ ಪುಷ್ಪಾಂಜಲಿಕ್ಷೇಪಮಂ ಪ
ರ್ವಿದಗುರ್ವಪ್ಪಂಧಕಾರಂ ನವಜವನಿಕೆಯುಂ ನಾಲ್ಕು ಜಾಮಂಗಳುಂ ತ
ಪ್ಪದೆ ನಾಲ್ಕಂಕಂಗಳಂ ಪೋಲ್ತಮರ್ದಿರೆ ಹಿಮಕೃನ್ನಾಟಿಕಾಸೂತ್ರಧಾರಾ
ಭ್ಯುದಯಪ್ರಾರಂಭಮಿಂದ್ರಾಶೆಯೊಳ್[1]ನೆ[1]ಯೆನೆ ಚೆಲ್ವಾಯ್ತು ಶೀತಾಂಶುಬಿಂಬಂ ॥ ೨೧ ॥

ವ॥ ಮತ್ತಂ ಕಿಱಿದು ಬೇಗದಿಂ—

ಕಂ॥ ಹಿಮರಶ್ಮಿ ರೋಹಿಣೀಕುಂ
ಕುಮ ಮಸೃಣೋಲ್ಬಣರಸಂ ನಿಜಾಕೃತಿಯೊಳ್ ಸಂ
ಕ್ರಮಿಸಿದೊಡದನಮರಾಪಗೆ
ಯ ಮಡುವಿನೊಳ್ ಕರ್ಚಿದಂತೆ ಕೆಂಪಂ ಬಿಸುಟಂ ॥ ೨೨ ॥

---

೧೯. ಆ ಮಹಾ ಉಪದ್ರವವನ್ನು ನಿನ್ನ ಪರಾಕ್ರಮ ಬಲದಿಂದ ನೀನು ಹೇಗೆ ಜಯಿಸಿದೆ ? ಹೇಳು" ಎಂದು ಆ ಪ್ರಭು ಕೇಳಲಾಗಿ ಕುಮಾರನು ಲಜ್ಜೆಯಿಂದ ತಲೆಬಾಗಿ ನಿಂತನು. ಪಕ್ಕದಲ್ಲಿದ್ದವರು

ವ। ಆ ಸನ್ನಿವೇಶವನ್ನೆಲ್ಲ ವಿಶದವಾಗಿ ನಿವೇದಿಸಿದರು. ಕ್ಷೇಮಂಕರ ರಾಜನು ಮಗನನ್ನು ಮನೆಗೆ ಹೋಗಲು ಹೇಳಿದೊಡನೆ ನಿಷ್ಕಳಂಕ ಚರಿತ್ರನಾದ ವಜ್ರಾಯುಧನು ತನ್ನ ನಿವಾಸಕ್ಕೆ ಬಂದನು.

೨೦. ಆಗ, ಮನೋಹರವಾದ ಆಕಾಶವೆಂಬ ಆನೆಯ ಕಿವಿಗಿಡುವ ಅಲಂಕಾರದ ಚಾಮರವೆಂಬಂತೆ ಚಂದ್ರಬಿಂಬವು ಶೋಭಿಸಿತು; ನಕ್ಷತ್ರ ಸಮೂಹವು 'ನಕ್ಷತ್ರ ಮಾಲೆ' (ಇಪ್ಪತ್ತೊಂದು ಮುತ್ತುಗಳನ್ನು ಪವಣಿಸಿ ಮಾಡಿದ ಕಂಠಹಾರ)ಯೆನಿಸಿತು.

೨೧. ಉದಯ ಪರ್ವತದ ಶಿಖರ ಪ್ರದೇಶವೆ ರಂಗಭೂಮಿ; ನಕ್ಷತ್ರಗಳೆ ಸೂಸಿದ ಪುಷ್ಪಾಂಜಲಿ; ದಟ್ಟವಾಗಿ ಹಬ್ಬಿರುವ ಕತ್ತಲೆಯೆ ಹೊಸ ಬಗೆಯ ತೆರೆ; (ರಾತ್ರಿಯ) ನಾಲ್ಕು ಯಾಮಗಳೆ ನಾಲ್ಕು ಅಂಕಗಳು; ಹೀಗಿರುವ ನಾಟಕದ ಪ್ರಾರಂಭೋತ್ಸವವನ್ನು ನೆರವೇರಿಸುವ ಸೂತ್ರಧಾರನಂತೆ ಚಂದ್ರಬಿಂಬವು ಶೋಭಿಸಿತು.

ವ॥ ಕೆಲ ಸಮಯದ ನಂತರ—

೨೨. ರೋಹಿಣಿಯು (ಎದೆಗೆ ಲೇಪಿಸಿಕೊಂಡ) ದಟ್ಟವಾದ ಕುಂಕುಮದ ಮಂದ ರಸ ತನ್ನ ದೇಹವನ್ನೆಲ್ಲ ವ್ಯಾಪಿಸಿ ಕೆಂಪಗಾಗಿದ್ದ ಚಂದ್ರನು ದೇವಗಂಗೆಗೆ ಹೋಗಿ ಅಲ್ಲಿ ಅದನ್ನು ತೊಳೆದುಕೊಂಡನೊ ಏನೊ ಎಂಬಂತೆ ಚಂದ್ರಬಿಂಬವು ರಕ್ತವರ್ಣವನ್ನು ಬಿಟ್ಟು ಬೆಳ್ಳಗಾಯಿತು.

---

1. ಣೆ (ಅ)

ವ॥ ಅಂತು ಪಗಲೊಳ್ ತಡವಮಾಡಿದಂತೆ ಜಲಕ್ಕನಾದಚ್ಚ ಬೆಳ್ದಿಂಗಳೊಳ್ ದೀನಜನತಾ ಕಲ್ಪಾಂಘ್ರಿಪಂ ನಾಗರಕ ವಿಟ ವಿದೂಷಕ ಪೀಠಮರ್ದಕರ್ಕಳ್ವೆರಸು ಮಕರಧ್ವಜನೋಲಗಂ ಪೊಱಮಡುವಂತೆ ಪೊಱಲೊಳಗಣ ಬಸಂತೋತ್ಸವದ ಕೌಮುದೀಮಹೋತ್ಸವಮಂ ನೋಡುವಟ್ಟಿಯೊಳ್ ಅಕೃತಕಾರಾಮಸಂವರಣನನುಪಲಕ್ಷಿತಭಾಷಾಸಂಕೇತಜನಂಗಳ್ವಿಡಿದು ಬರ್ಪೊನಲ್ಲಿ ಪುಲ್ಲಶರನುಮಂ ಬಲ್ಲದೊಳ್ ಪದವಡಿಸಲುಂ ವಾತ್ಸ್ಯಾಯನನುಮಂ ಮತ್ಸರದೊಳ್ ಗೆಲಲುಂ ದತ್ತಕನ[1][ನು][1]ಮಾ ಜತ್ತಕದೊಳ್ ಸುತ್ತದಿಂ ಪಾಂಚಾಳನುಮಂ ಪಂಚಾವಸ್ಥೆಗೆದ[2][ರ][2]ಲುಂ ಕರಂ ಚೆನ್ನೆಯರಾಗಿಯುಂ ಖಿನ್ನೆಯರಲ್ಲದೆ ನುಣ್ಪೋಜುಗೆಯ್ತದಿಂ ಮಧುವಂ ಸುಡಲುಂ ತ್ರಿಪುರಮಾನುರಿಪಲುಂ ಕೀಲೊಳ್ ಕಿಚ್ಚಿಡಲುಂ ಕಣ್ಣಪಾಪೆಗಳೆಣ್ಣೆಮಾಜ[3] ಪೂಮಾಜಲುಂ ಬಲ್ಲವರಾಗಿ ಮದನನ ಪರಿಚಾರಿಕೆಯರಂಬೆತ್ತುವಂತೆ ಪೂವನೆತ್ತುವ ಪುಷ್ಪಲಾವಿಕಾ ಚತುಷ್ಪಥದೊಳ್—

ಚಂ॥ ವಯಸದೊಳೇಟಿಗೆ ಜ[3][ವ್ವ][3]ನಕೆ ಕಾಂತಿಯೊಳುಜ್ಜ್ವಳಕಾಂತಿಯಿರ್ಪ ಭಂ
ಗಿಯೊಳೆರ್ದೆಗೊಳ್ವಭಂಗಿಗೆ ನಿರಂತರಮಾಗಿರೆ ನೋಂತು ಮಾಲೆಗಾ
ರ್ತಿಯರೆಸೆದೊಪ್ಪೆ ಪುಂಜಿಸಿದ ಕಾಮನ ಕೆಯ್ಪುಗಳಿರ್ಪ ಜೇನಸಾ
ಲೆಯ ನವಸಾಲಭಂಜಿಕೆಗಳೆಂದವರಂ ವಿಭು ನಿಂದು ನೋಡಿದಂ ॥ ೭೩ ॥

[4]ವ॥ ನೋಡಿ ಕಿಜ[3]ದಂತರಂ ಬಂದು[4]—

ಕಂ॥ ಅಮರೋರಗಾಂಗನಾ ವಿ
ಭ್ರಮ ಭಾಜನಮಾದ ವಾರವನಿತಾಜನದೊ
ಳ್ಪಮರ್ದಿರೆ ಮದನನ ನಚ್ಚಿನ
....ವಶ್ಯಮೆನೆ ನೆಗಟ್ದ ಸೂಳೆಗೇರಿಯನರಸಂ ॥ ೭೪ ॥

ವ॥ ಎಯ್ದೆ ವಂದೆರಡೋಳಿಯ ನೆಲೆಯ ಸುಧಾಗೃಹಂಗಳ ವಿಶಾಳಾಂಗಣದೊಳ್ ನಿಂದು ನೋಡುತ್ತುಮಿರೆ—

ವ॥ ಹಗಲಲ್ಲಿ ವಿನೋದದಿಂದ ಆಟವಾಡಿದಂತೆ ಪರಿಶುದ್ಧವಾದ ಈ ಬೆಳ್ದಿಂಗಳಲ್ಲಿ ವಸಂತೋತ್ಸವವನ್ನೂ ಬೆಳದಿಂಗಳ ವಿಲಾಸವನ್ನೂ ನೋಡಬೇಕೆಂಬ ಬಯಕೆಯಿಂದ. ವಜ್ರಾಯುಧನು ನಾಗರಕ, ವಿಟ, ವಿದೂಷಕ, ಪೀಠ ಮರ್ದಕರೊಡನೆ ಮನ್ಮಥನ ಒಡ್ಡೋಲಗವೆ ಹೊರಟಂತೆ ಹೊರಟು ಸ್ವಾಭಾವಿಕ ಹಾಗೂ ಸುಂದರವಾದ ಮೇಲು ಹೊದಿಕೆಯನ್ನು ಹಾಕಿಕೊಂಡು ಇತರರಿಗೆ ತಿಳಿಯದಂತೆ ಸಾಂಕೇತಿಕ ಭಾಷೆಯಾಡುವ ತನ್ನ ಸಂಗಡಿಗರೊಡನೆ ಬಂದನು. ಅಲ್ಲಿ ಮನ್ಮಥನನ್ನೇ ತಮ್ಮ ವಿಲಾಸದಿಂದ ವಶಪಡಿಸಿಕೊಳ್ಳಲು (ಕಾಮಶಾಸ್ತ್ರ ಪ್ರಾವೀಣ್ಯದಲ್ಲಿ) 'ವಾತ್ಸ್ಯಾಯನ'ನನ್ನು ಗೆಲ್ಲಲೂ, ಕಪಟ ಚಾತುರ್ಯದಲ್ಲಿ 'ದತ್ತಕ'ನನ್ನೆ ಕಟ್ಟಿಹಾಕಲೂ, 'ಪಾಂಚಾಳ'ನನ್ನು ವಿರಹದ ಐದು ಅವಸ್ಥೆಗಳಿಗೆ ಗುರಿಮಾಡಲೂ, ತುಂಬ ಚಲುವೆಯರಾಗಿದ್ದರೂ ಬಲಹೀನೆಯರಾಗಿರದ ಮಧುರವಾದ ಯುದ್ಧದಿಂದ ವಸಂತನನ್ನು ಸುಡಲೂ, ತ್ರಿಪುರವನ್ನು ಉರಿಸಲೂ, ಕೀಲಲ್ಲಿಯೆ ಕಿಚ್ಚಿಡಲೂ, ಕೈಯಲ್ಲಿ ಹೂ ಮಾರುತ್ತಿದ್ದರೂ ಕಣ್ಣಲ್ಲಿ ಸ್ನೇಹವನ್ನು ಮಾರಲು ಬಲ್ಲವರಾಗಿ ಮನ್ಮಥನ ಪರಿಚಾರಿಕೆಯರು ಹೂಬಾಣಗಳನ್ನು ಎತ್ತುವಂತೆ ಹೂಗಳನ್ನು ಎತ್ತುತ್ತಿದ್ದ ಮಾಲೆ ಗಾರ್ತಿಯರ ಬೀದಿಯಲ್ಲಿ—('ಪಾಂಚಾಳ' ಮತ್ತು 'ದತ್ತಕ' ಎಂಬವರು ವಾತ್ಸ್ಯಾಯನನಿಗೆ ಪೂರ್ವದಲ್ಲಿ ಕಾಮಶಾಸ್ತ್ರವನ್ನು ರಚಿಸಿದವರು.)

೭೩. ಏರುತ್ತಿರುವ ಯೌವನ; ಯೌವನಕ್ಕೆ ತಕ್ಕ ಕಾಂತಿ; ಕಾಂತಿ ಹೆಚ್ಚುವಂತಹ ಭಂಗಿ—ಹೀಗೆ ಒಂದಕ್ಕಿಂತ ಒಂದು ಸೊಗಸಾಗಿ ಮಾಲೆಗಾರ್ತಿಯರು ಕಂಗೊಳಿಸಲಾಗಿ, "ಇವರು ಕಾಮನ ಶಸ್ತ್ರಾಗಾರದಲ್ಲಿರುವ ಪುತ್ಥಳಿಗಳೊ ಏನೊ" ಎಂಬಂತೆ ರಾಜಕುಮಾರನು ಅವರನ್ನು ನಿಂತು ನೋಡಿದನು.

ವ॥ ನೋಡಿ ಸ್ವಲ್ಪ ದೂರದವರೆಗೆ ಬಂದು—

೭೪. ದೇವಾಂಗನೆಯರ ಹಾಗು ನಾಗಾಂಗನೆಯರ ವಿಭ್ರಮ ವಿಲಾಸಗಳನ್ನೊಡಗೊಂಡ ವೇಶ್ಯೆಯರ ಬೆಡಗು ಕಂಗೊಳಿಸುತ್ತಿರಲಾಗಿ ಜಗತ್ತನ್ನೆ ವಶಮಾಡಿಕೊಳ್ಳಲು ಮನ್ಮಥನು ಹೂಡಿದ ವಶ್ಯತಂತ್ರವೆಂಬಂತೆ ಇದ್ದ ಸೂಳೆಗೇರಿಗೆ ಆ ಕುಮಾರನು

ವ॥ ಬಂದನು. ಎರಡೂ ಬದಿಗೆ ಸಾಲಾಗಿದ್ದ ಸೌಧಗಳ ವಿಶಾಲವಾದ ಅಂಗಳಗಳಲ್ಲಿ—.

---

1. × (ಮ) 2. ಜ (ಮ) 3. ಸ್ವ (ಮ) 4. × (ಮ)

ಮ॥ ತಳಿರುಯ್ಯಲ್ ಶ್ರುತಿಯಿಂದಮೊಂದೆ ಕೊರಲೊಳ್ ಜೀಯೆಂಬಿನಂ ಪಾಡುವಿಂ
ದೋಳಮುಟ್ಟೆಕ್ಕಳವಟ್ಟದಿಂದಱಿಯೆ ಬರ್ಪರ್ ಪೋಪರಾರ್ಗಂ ಮನಂ
ಗೊಳಿಸಲ್ ಕಪ್ಪುರ ದೀವವಿಟ್ಟೆವಿಡಿ [1]ಜಾಗಂ[1] ವಾರನಾರೀಜನಂ
ಗಳೊಳಂದೊಪ್ಪೆ ನೃಪಂಗಲಂಪುವಡೆದತ್ತೆತ್ತಂ ಬಸಂತೋತ್ಸವಂ ॥ ೭೫ ॥

ವ॥ ಅಂತು ನೋಟ್ಪರ ಮನದೊಳ್ ತವೆ ಮಾಡಿಯುಮುಯ್ಯಲಾಡಿಯುಂ ಚತುರರಪ್ಪಾರ್ಯರ್ ಮನಂಗೊಳೆ ಪಾಡಿಯುಂ ಶೃಂಗಾರಸಾರ ಸರ್ವಸ್ವಭೂತೆಯುರಪ್ಪ ವಿಲಾಸವತಿಯುಂದೋಳ ಕೇಳೀವಿಲಾಸಮನುಯ್ಯಲ ಮರನಂ ಮುಱಿಗೊಂ[2]ವಾಳಿಗೆವಂದ[2]ದಿಂದೊಳಗೆ ವಡ್ಡಂಬರಂ ನೋಡಿ ಪೆಂಡವಾಸಗೇರಿಯೊಳಗನೆ ಬರೆವರೆ ತೊಟ್ಟನೆ ಕಟ್ಟಿದಿರೊಳ್—

ಮ॥ ನೊರೆವಿಂಡುಟ್ಟ ದುಕೂಲಮಾಗೆ ಸಲಿಲಂ ಮೆಯ್ಯಾಗೆ ಹಂಸಾವಳೀ
ವಿರುತಂ ನೂಪುರನಾದಮಾಗೆ ತೆರೆಗಳ್ ತೋಳಾಗೆ ನಿರ್ಭಿನ್ನ ತಾ
ಮರಸಂ ಶ್ರೀಮೊಗಮಾಗೆ ಮೀನ್ ನಯನಮಾಗೊರ್ವಳ್ ಮನೋಜಾಂಬುಜಾ
ಕರದಂತಾ ನೃಪನಂದನಂಗೆ ಪಡೆದಳ್ ಬೇಱೊಂದತಿ ಪ್ರೀತಿಯಂ ॥ ೭೬ ॥

ವ॥ ಆಕೆಯಂ ನೋಡಿ ಹೊಟ್ಟಚತುರಕನೆಂಬ ನಾಗರಕನರಸಂಗೆ ತೋರಿ—

ಉ॥ ಆಯತ ಭದ್ರ ಲಕ್ಷಣಗಣ ಪ್ರಕೃತಿಸ್ಥಿತಿ ಧಾತು ಸತ್ವಮೆಂ
ದೀಯೆಡೆ ಸಾಂಪ್ರಯೋಗದ ತವರ್ಮನೆ ಮತ್ತಮ ನಿನ್ನ ತನ್ನಭಿ
ಪ್ರಾಯದೊಳೊಂದಿ ತೋಱಿದಪುದೆನ್ನ ಮನಕ್ಕದಱಿಂ ಕುಮಾರ ನೀಂ
ನಾಯಕನಪ್ಪ [ದಾ] ಸುದತಿ ನಾಯಿಕೆಯಪ್ಪುದು ನಾಡೆ ಕೂಡುಗುಂ ॥ ೭೭ ॥

ವ॥ ಎಂದಪಹಾಸಪೇಶಲಂ ನುಡಿಯೆ ಸೌಜನ್ಯಕಂದಾಂಕುರನಪ್ಪ ವಜ್ರಾಯುಧಂ ನಾವಪ್ಪೊಡೆ ನಿಯತೇಂದ್ರಿಯವರ್ತಿಗಳೆಮುತ್ತ ನೇಗಯ್ದುಮುಂತೆ ದ್ರಷ್ಟವ್ಯ ದರ್ಶನಫಲಂ ಲೋಚನಮೆಂಬಂತೆ ನೋಡುವುದೆ ಬಾಱ್ತೆಯೆಂದಾಕೆಯುಂ ನೋಡುತ್ತುಂ ಬರೆ ಮತ್ತೊಂದೆಡೆ

೭೫. ಚಿಗುರೆಲೆಗಳ ಉಯ್ಯಾಲೆ; ಸುಶ್ರಾವ್ಯವಾಗಿ ಏಕಕಂಠದಿಂದ ಹಾಡುವ ಇಂದೋಳ ರಾಗ; ಉಟ್ಟು ಕೊಂಡ "ಎಕ್ಕಳವಟ್ಟ" ವೆಂಬ ಸೀರೆ; ಮನೋಹರವಾದ ಕಪ್ಪುರದ ದೀಪಗಳು; ಜಾಗರದ ಹಡಲಿಗೆಗಳು—ಇವೆಲ್ಲವು ಗಳನ್ನೊಡಗೊಂಡು ವಾರನಾರಿಯರು ಆಚರಿಸುತ್ತಿದ್ದ ವಸಂತೋತ್ಸವವನ್ನು ನೋಡಿ ರಾಜಕುಮಾರನು ಸಂತೋಷ ಪಟ್ಟನು. ('ಕಪ್ಪುರದೀಪ'ದ ಮುಂದೆ ಇರುವ ಶಬ್ದವೇನೊ ತಿಳಿಯದು.)

ವ॥ ನೋಡುವವರ ಮನವನ್ನು ಚಕಿತಗೊಳಿಸಿ ಉಯ್ಯಲಾಡುತ್ತ ವಿದ್ಯಾಚತುರರು ಮೆಚ್ಚುವಂತೆ ಮನೋಹರ ವಾಗಿ ಹಾಡುತ್ತ ಶೃಂಗಾರ ಸರ್ವಸ್ವರೆನಿಸಿದ ಆ ಬೆಡಗುಗಾತಿಯರ ಗಾಯನ ಕೇಳಿಯನ್ನೂ ಉಯ್ಯಲಾಟವನ್ನೂ ಮರೆಯಲ್ಲಿ ನಿಂತುಕೊಂಡು ಕಣ್ತುಂಬ ನೋಡಿ ಸೂಳೆಗೇರಿಯ ಒಳಭಾಗವನ್ನು ಸೇರಲಾಗಿ ನೇರವಾಗಿ ಅವನೆದುರಿನಲ್ಲಿಯೆ—

೭೬. ಉಟ್ಟ ರೇಷ್ಮೆ ಸೀರೆಯೆ ನೊರೆಯ ಹಿಂಡು; ಮೈಯೆ ನೀರು; ಅಂದುಗೆಯ ಮೆಲ್ಲುಲಿಯೆ ಹಂಸಪಕ್ಷಿಗಳ ಕುಕಿಲು; ತೋಳುಗಳೆ ತೆರೆಗಳು; ತನ್ನ ಚೆಲುವಾದ ಮುಖವೆ ಅರಳಿದ ಕಮಲ; ಕಣ್ಣುಗಳೆ ಮೀನು—ಹೀಗೆ ಸಾದೃಶ್ಯವನ್ನು ಹೊಂದಿದ ಒಬ್ಬ ಚೆಲುವೆ ಮನ್ಮಥನ ಕಮಲ ಸರೋವರದಂತೆ ತೋರಿ ರಾಜಕುಮಾರನಿಗೆ ಹೊಸ ಬಗೆಯ **ಸಂತೋಷವನ್ನುಂಟುಮಾಡಿದಳು.**

ವ॥ ಆಕೆಯನ್ನು ನೋಡಿ ಹೊಟ್ಟಚತುರಕನೆಂಬ ನಾಗರಕನು ಅರಸನಿಗೆ ಅವಳನ್ನು ತೋರಿ—

೭೭. (ಕಾಮಶಾಸ್ತ್ರದ ಮೇರೆಗೆ) "ಉತ್ತಮವಾದ ಲಕ್ಷಣ, ಗುಣ, ಪ್ರಕೃತಿ, ಸ್ಥಿತಿ, ಧಾತು, ಸತ್ವ—ಈ ಎಲ್ಲವುಗಳಲ್ಲಿ ಈಕೆ ಸುರತ ಸುಖಕ್ಕೆ ತವರ್ಮನೆಯೆಂಬುದು ನಿನ್ನ ಅಭಿಪ್ರಾಯ; ನನ್ನದೂ ಅದೇ ಅಭಿಪ್ರಾಯ. ಆದುದರಿಂದ ನೀನು ನಾಯಕನಾಗು; ಈಕೆ ನಾಯಿಕೆಯಾಗಲಿ. ಇದು ಉತ್ತಮವಾದ ಕೂಟವಾಗುವುದು."

ವ॥ ಎಂದು ಹಾಸ್ಯಪೂರ್ವಕವಾಗಿ ನುಡಿಯಲು, ವಜ್ರಾಯುಧನು "ನಾವು ಸಂಯಮಿಗಳಾಗಿ ಇರತಕ್ಕವರು; ನಮಗೆ ಯಾವುದಾದರೂ ಅಷ್ಟೆ. 'ನೋಡಲು ತಕ್ಕುದು ಯಾವುದೊ ಅದನ್ನು ನೋಡಿದರೆ ಸಾಕು; ಕಣ್ಣಿದ್ದುದಕ್ಕೆ ಅದೇ ಫಲ' ಎಂಬ ಉಕ್ತಿಯಂತೆ ನೋಡುವುದಷ್ಟೆ ಕೆಲಸ" ಎಂದು ನುಡಿದು ಆಕೆಯನ್ನು ನೋಡುತ್ತ ಬಂದನು.

1. ಚಾಗಂ (ಅ) 2. ದೋಡಿಗೆವಾದ (ಬ)

ಯೊಳ್ ಒರ್ವಳ್ ಮೇಳದ ಕೆಳದಿಯುಂ ತಾನುಂ ಪೆಜಗಣ ಮತ್ತವಾರಣದೊಳ್ ಕುಳ್ಳಿರ್ದು ಪಲದಿವಸಂ ಸೂಳ್ಪುಡೆಯದೆ ಕರೆವುದರ್ಕಾಸೆವಟ್ಟು ಮಾತಟ್ಟಿದ ಕೆಳೆಯನನೆಮ್ಮಬ್ಬೆಯನೊಡಂಬಡಿಸಲಣ್ಮೆನೆಂದು ಪೋಗಲ್ವೇಟ್ಟು (ತನ್ನ ನಲ್ಲನ ನಲ್ಮೆಯುಂ) [1]ತಾಯನವಕ್ರಶೀಲತೆಯುಮಂ ಕೆಳದಿಗಿಂತೆಂದಳ್[1]—

ಚಂ॥ ಸಮದನನೇಕ ರಕ್ಷಿತನನಾನೆಯನಾಳ್ವುದುಮೆನ್ನನಾಳ್ವುದುಂ
[2]ಸಮನೆ[2] ದಲೇಕೆ ನೀನಱಿಯ ನಲ್ಲನ ನಲ್ಮೆಯುಮೆನ್ನ ನಲ್ಮೆಯುಂ
ಸಮರಸಮೋಪನಂ ಬಿಸುಟು ತನ್ನ ಮನಂಗೊಳೆಯುಂ ಕನಲ್ವಳಿಂ
ತಮೃತದೊಳೆನ್ನುಮಂ ವಿಷದೊಳಬ್ಬೆಯುಮಂ ಪಡೆದಂ ಪಿತಾಮಹಂ ॥ ೭೮ ॥

ವ॥ ಎಂದು ತನ್ನ ಮನದನ್ನಳಪ್ಪ ಕೆಳದಿಗೆ ನಿವೇದ್ಯ ದುಃಖಂ ಸುಖೀ ಭವತು ಎಂಬಂತುಸಿರ್ದಿರ್ದಿಸಿರದಿರೆ ನಗರ ನಾಗರಕಾದಿಗಳದಂ ಕೇಳುತ್ತುಂ ಬಂದು ಮತ್ತೊಂದು ವಿಟಜನಚತುಷ್ಪಥದೊಳ್ ಪಾಲುಂ ನೀರು[3][ಂ][3] ಬೆರಸಿದಂತಪ್ಪ ಕೆಳೆಯರಿರ್ದು ವಿಸ್ರಂಭ ದೋಷಪ್ರಸಕ್ತರಾದೆಡೆಯೊಳೊರ್ವನೊರ್ವಂಗೆ ಕೋಳ್ಗಗ್ಗಳವಾದ ಮನೆಗಂ ತೋಳ್ಗಗ್ಗಳವಾದ [4]ಬದ್ದೆಗಂ[4] ಬೇಸತ್ತು ಗೆಟಪ್ಪ ತಕ್ಕು ವಿಕ್ಕಿರೆ ತನಗತ್ಯಂತಾನುರಕ್ತೆಯಲ್ಲದಿರೆಯುಮಾಕೆಯಸಾಧಾರಣಗುಣಂ ಚದುರೆಂಬಿವಂ ಬಿಸುಡಲಾಱದೆ—

ಚಂ॥ ಮನಮನಗಲ್ಚಲೊಂದೆಡೆಯ ಪೊಲ್ಲಮೆಗಾಣೆನೆ ಬೇಱದೊಂದು ರೂ
ಪಿನ ನಿಧಿ ಬೇಱದೊಂದು ಕಡುಗಾಡಿಯ ಸನ್ನಿಧಿ ಬೇಱದೊಂದು ಸು
ಣ್ಪಿನ ಕಣಿ ಬೇಱದೊಂದು ಪೊಸಗಂಪಿನ ಪೊಂಪುಳಿ ಬೇಱದೊಂದು ಬ
ರ್ದಿನ ನೆಲೆ ಬೇಱದೊಂದು ರಸಭಾವದ ಕಾಲ್ಪುರಮೆನ್ನ ನಲ್ಲಳಾ ॥ ೭೯ ॥

ಮುಂದೆ ಮತ್ತೊಂದು ಸ್ಥಳದಲ್ಲಿ ಒಬ್ಬಳು ತನ್ನ ಒಡನಾಟದ ಗೆಳತಿಯೊಂದಿಗೆ ಮನೆಯ ಮುಖಮಂಡಪದಲ್ಲಿ ಕುಳಿತಿದ್ದಳು ; ಹಲವಾರು ದಿನಗಳಿಂದ ಸಹವಾಸವಿಲ್ಲದೆ ಕೊರಗಿ ಬಯಸಿ ಹೇಳಿಕಳಿಸಿದ ತನ್ನ ಪ್ರಿಯಕರನಿಗೆ "ನಮ್ಮ ತಾಯಿಯನ್ನು ಒಡಂಬಡಿಸುವುದು ನನಗೆ ಸಾಧ್ಯವಿಲ್ಲ" ಎಂದು ತಿಳಿಸಿ ಮರಳಿ ಕಳಿಸಿದ ಆಕೆ ತನ್ನ ನಲ್ಲನ ನಲ್ಮೆಯನ್ನೂ ತಾಯಿಯ ನಡವಳಿಕೆಯನ್ನೂ ಕುರಿತು ಗೆಳತಿಗೆ ಹೀಗೆಂದಳು :

೭೮. "ಮದಗಜವನ್ನು ಅದರ ಒಬ್ಬನೇ ಒಬ್ಬ ರಕ್ಷಕನು ಆಳಬಲ್ಲನು ; ಹಾಗೆಯೆ ನನ್ನನ್ನು ಆತನೊಬ್ಬನೆ ಆಳಬಲ್ಲನು. ನನ್ನ ನಲ್ಲನ ಪ್ರೇಮವೂ ನನ್ನ ಪ್ರೇಮವೂ ಸಮರಸವೆಂಬುದನ್ನು ನೀನು ತಿಳಿಯದವಳೆ ? ಹೀಗಿರುವ ನನ್ನ ನಲ್ಲನನ್ನು ಬಿಟ್ಟು ನನ್ನ ತಾಯಿಯ ಮನಸ್ಸಿಗೆ ಒಪ್ಪುವಂತೆ ನಡೆದುಕೊಂಡೆನು ; ಆದರೂ ಆಕೆ ಕೋಪದಿಂದ ಕುದಿಯುತ್ತಲೆ ಇರುವಳು. ಬ್ರಹ್ಮನು ಅಮೃತದಿಂದ ನನ್ನನ್ನೂ ವಿಷದಿಂದ ನಮ್ಮ ತಾಯಿಯನ್ನೂ ನಿರ್ಮಿಸಿದನು."

ವ॥ ಹೀಗೆಂದು "ದುಃಖವನ್ನು ತೊಡಿಕೊಂಡು ಮನಸ್ಸನ್ನು ಹಗುರಗೊಳಿಸಬೇಕು" ಎಂಬ ಉಕ್ತಿಯಂತೆ ಇಷ್ಟು ಮಾತ್ರ ಹೇಳಿ ಸುಮ್ಮನಾದಳು. ನಾಗರಕರೆ ಮೊದಲಾದವರು ಅದನ್ನು ಕೇಳುತ್ತ ಬರಲಾಗಿ ವಿಟಜನರು ನೆರೆಯುವ ಬೀದಿ ಚೌಕದಲ್ಲಿ ಹಾಲು ನೀರುಗಳಂತೆ ಸಮರಸವಾಗಿ ಬೆರೆತ ಇಬ್ಬರು ಗೆಳೆಯರು ಪ್ರಣಯ ದೋಷವನ್ನು ಕುರಿತು ಚರ್ಚಿಸುತ್ತಿದ್ದರು ; ಒಬ್ಬನು ಇನ್ನೊಬ್ಬನಿಗೆ ತನ್ನ ಸ್ಥಿತಿಯನ್ನು ತಿಳಿಸುತ್ತ, "ನನಗೆ ವಶವಾದ ಆ ಮನೆ ಶ್ರೇಷ್ಠವಾಗಿದೆ, ನನ್ನ ತೋಳಿಗೆ ವಶವಾದ ಆ ಪ್ರೌಢೆಯೂ ಮಿಗಿಲಾದವಳು. ಆದರೆ ಆ ಎರಡಕ್ಕೂ ಬೇಸತ್ತು ಬಿಟ್ಟುಬಿಡಬೇಕೆಂಬ ಇಚ್ಛೆ ಬಲವಾಗಿದೆ ಆಕೆ ನನ್ನಲ್ಲಿ ಅತ್ಯಂತ ಅನುರಾಗವನ್ನೇನೂ ತೋರಿಲ್ಲ. ಆದರೆ ಅಸಾಧಾರಣ ಗುಣವನ್ನೂ ಚಾತುರ್ಯವನ್ನೂ ನಾನು ಹೇಗೆ ಕಡೆಗಣಿಸಲಿ ?

೭೯. ಮನವನ್ನು ಅಗಲಿಸುವಂತಹ ಒಂದು ದೋಷವನ್ನೂ ನಾನು ಆಕೆಯಲ್ಲಿ ಕಾಣೆನು. ಅವಳ ರೂಪ ಸಮೃದ್ಧಿಯೆ ಬೇರೆ ; ಸೌಂದರ್ಯಾತಿಶಯವೆ ಬೇರೆ ; ಅವಳೊಂದು ಮಾಧುರ್ಯದ ಹೊಸ ಖನಿ, ಹೊಸ ಪರಿಮಳದ ಸೌಭಾಗ್ಯ, ಪ್ರೌಢಿಯ ನೆಲೆ, ರಸಭಾವದ ಮಹಾಪೂರ."

1. × (ಮ) 2. ನಮಗೆ (ಮ) 3. × (ಮ) 4. ಬಟ್ಟೆಗ (ಅ)

ವ॥ ಎಂದು ತದೀಯ ವಯಸ್ಯನಾತನೆಗ್ಗಂ ಮಾರ್ಕೊಂಡು ದೋಷಾನ್ವೇಷಣಮಂ ಬಾರಿಸಿ—

ಚಂ॥ ಒಡಮೆಯನೀಯದಿತ್ತೆನೆನಿಸಲ್ ಕಿಱಿದಂ ಪಿ[1][ರಿ][1]ದಾಗೆ ಕೊಟ್ಟು ಮೆ
ಚ್ಚಿಡಿಸಲೊಡಂಬಡಂ ಬಿಸುಟೊಡಂಬಡಿಸಲ್ ಬಗೆದಪ್ಪುದೆಲ್ಲಿಯುಂ
ಪಡೆಯದ ಬೇಟಮಂ ಪಡೆದುದಂ ಕಿಡಿಸಲ್ ತೊಱೆಯೊಳ್ ಪೊದಟಿ ಮು
ಳ್ಗಿಡುಗಡಿಸಟ್ಟುಗಕ್ಕೊನಲಿಗಂ ದೊರೆಯಪ್ಪರೆ ಕೇಳರಪ್ಪವರ್ ॥ ೮೦ ॥

ವ॥ ಎಂದು ಸಂತೈಸಿ ಬುದ್ಧಿವೇಳ್ದೊಡಂಬಡಿಸಿದಂ ಮತ್ತೊಂದೆಡೆಯೊಳ್ ಕೆಯ್ಗೆಯ್ದು ಬಿನ್ನನಾಗಿರ್ದಳನನುಮಾನದಿಂದಮಱಿದಮೃತ ಪರಿಹಾಸಕನೆಂಬ ವಿದೂಷಕನರಸಂಗಿಂತೆಂದಂ—

ಚಂ॥ ಮನೆಯನಿವಕ್ಕೆ ಮರ್ಚಿಸಿದ ಮರ್ಚಿಸಿ ಕೂರಿಸಿದೆಯ್ದೆ ಕೂರ್ತು ನ
ಚ್ಚಿನ ರುಚಿ ಬೆರ್ಚು ಬಿಚ್ಚತಿಕೆಯಂ ಬಗೆ ಕೂಡಿದ ಕೆಯ್ಗೆ ಮಾಡಿದೋ
ಪನನುಟಿದೊತ್ತೆಗಿರ್ದೆಡೆಯೊಳೊಂದೆನಗಿತ್ತಪುದೋ ವಸಂತಕಂ
ಮನಸಿಜ ಮಾರ್ಗಣಕ್ಕೆ ಗುಱಿಯೊಡ್ಡಿದನೆಂಬ ಮನಃಪ್ರವೃತ್ತಿಯಂ ॥ ೮೧ ॥

ವ॥ ಎನೆ ಕುಮಾರನೀತೆಂದನಾನುಮದನೆ ಬಗೆದಪ್ಪೆನೆಂದಲ್ಲಿಂದಂ ತಳರ್ದು ಪೆಱತೊಂದೆಡೆಯೊಳಾಗಳಾಗಳೆ ತನಗಟ್ಟಿದ ಪೂವಿಂಗೆ ಮಧುಕರಿ ಸಂಪಿಗೆಯು ಪೂವಿಂಗೇವಯ್ಸುವಂತೇವಯ್ಸಿ ತನಗಂ ಮನೆಗಂ ಕೆಳದಿಯಿಂದಮೆ ಪಚ್ಚುಗುಡಲೆವೇೞ್ದು ತನಗೆ ನೀಡುವ ಪೂವಂ ತಂದಣ್ಣಂಗೆ ಕುಡಾಂ ಕೆಯ್ವಾಸಿದೆನೆಂದಳಂ ಲಂಜಿಕಾಭಂಜನನೆಂಬ ವಿಟಂ ಕೇಳ್ದುರ್ವರಾಸ್ಯತಿಳಕಂಗೆ ಬೆ[2]ರಂ[2]ಟಿ ತೋಱಿ—

ವ। ಹೀಗೆಂದವನಿಗೆ ಮಿತ್ರನು ಆತನ ಅವಿವೇಕವನ್ನು ಪ್ರತಿಭಟಿಸಿ, ದೋಷ ಹುಡುಕುವ ಪ್ರಯತ್ನವನ್ನು ಖಂಡಿಸಿ ಹೀಗೆಂದನು :

೮೦. "(ಆಭರಣಾದಿಯಾದ) ಒಡವೆಗಳನ್ನು ಕೊಡದಿದ್ದರೂ ಕೊಟ್ಟವನೆನಿಸಬೇಕು; ಕಿರಿದಾಗಿ ಕೊಟ್ಟರೂ ಅದು ಹಿರಿದೆನಿಸುವಂತೆ ಮಾಡಿ ಮೋಹಗೊಳಿಸಬೇಕು ; ಹೊಂದಿಕೆಯೆ, ಸಾದೃಶ್ಯವೆ—ಎಂಬೀ ಯೋಚನೆಗಳನ್ನು ದೂರ ತಳ್ಳಿ (ನಲ್ಲೆಯ) ಮನಸ್ಸು ಒಪ್ಪುವಂತೆ ನಡೆದುಕೊಳ್ಳಬೇಕು. ಕೈಗೆಟುಕದಿದ್ದ ಪ್ರಣಯವನ್ನು ಹೀಗೆ ಪ್ರಯತ್ನಿಸಿ ಪಡೆದುಕೊಳ್ಳಬೇಕಲ್ಲದೆ ಕೈವಶವಾದ ಪ್ರಣಯವನ್ನು ಕೆಡಿಸಿ ಕಳೆದುಕೊಳ್ಳುವವನು ರಸಿಕನೆ ? ನದಿಯಲ್ಲಿ ತೇಲಿ ಹೋಗುವ ಮುಳ್ಳುಗಿಡಕ್ಕೆ, ಅಡುಗೆಯ ಸೌಟಿಗೆ, ಹಿಟ್ಟು ಸೋಸುವ ಜರಡಿಗೆ ಅವನು ಸಮನಾಗುತ್ತಾನೆ."

ವ॥ ಹೀಗೆಂದು ಸಂತಯಿಸಿ, ತಿಳಿಹೇಳಿ ಅವನನ್ನು ಒಪ್ಪಿಸಿದನು. ಇನ್ನೊಂದು ಸ್ಥಳದಲ್ಲಿ ಅಲಂಕರಿಸಿ ಕೊಂಡಿದ್ದರೂ ಮಾನದಿಂದ ಬಿಗಿದುಕೊಂಡಂತಿರುವ ಒಬ್ಬಳನ್ನು ನೋಡಿ ಅನುಮಾನದಿಂದ ಅರಿತು ಅಮೃತ ಪರಿಹಾಸಕನೆಂಬ ವಿದೂಷಕನು ಅರಸನಿಗೆ ಹೀಗೆ ನುಡಿದನು :

೮೧. "ಇವಳು ಯಾವನೊ ಒಬ್ಬನನ್ನು ಮೆಚ್ಚಿಸಿ ಅವನಲ್ಲಿ ಅನುರಾಗವನ್ನು ಬಿತ್ತಿ ತಾನೂ ಆತನಲ್ಲಿ ಅನುರಕ್ತಳಾದಳು. ಇಬ್ಬರ ಸ್ನೇಹದ ಸವಿ ಬೆಸುಗೆಯಾಗಿ ಅವಿನಾಭಾವದಿಂದ ಎರಡು ಮನಗಳೂ ಒಂದಾಗಿ ಅವನನ್ನು ಈಕೆ ಪೂರ್ಣವಾಗಿ ವಶಪಡಿಸಿಕೊಂಡಿದ್ದಳು. ಅಂತಹ ಪ್ರಿಯತಮನನ್ನೇ ಈಕೆ ಈಗ ಮನೆಯವರ ನಿರ್ಬಂಧದಿಂದಾಗಿ ಬಿಟ್ಟುಕೊಟ್ಟು ಒತ್ತೆಗೆ ನಿಂತಿರುವಳು. ಇದನ್ನು ನೋಡಿದರೆ ಕಾಮನ ಬಾಣಕ್ಕೆ ವಸಂತಕನೇ ಗುರಿಯೊಡ್ಡಿದನೊ ಏನೊ ಎಂಬ ಭಾವನೆ ಹುಟ್ಟುತ್ತದೆ."

ವ। "ನನಗೂ ಹಾಗೆಯೆ ತೋರುವುದು" ಎಂದು ಕುಮಾರನು ನುಡಿದು ಅಲ್ಲಿಂದ ಮುನ್ನಡೆದನು. ಬೇರೊಂದು ಸ್ಥಳದಲ್ಲಿ ಪ್ರಣಯಾಪೇಕ್ಷಿಯೊಬ್ಬನು ಕಳಿಸಿಕೊಟ್ಟ ಹೂವನ್ನು ಕಂಡು ಸಂಪಿಗೆ ಹೂವಿಗೆ ಅಸಹ್ಯಪಡುವ ಹೆಣ್ದುಂಬಿಯಂತೆ ಅಸಮಾಧಾನದಿಂದ "ಹೂ ತಂದ ಅಣ್ಣನಿಗೇ ಇದನ್ನು ಕೊಟ್ಟುಬಿಡು. ನಾನು ಮೈಲಿಗೆಯಾಗಿದ್ದೇನೆ."—ಎಂದು ಓರ್ವಳು ಹೇಳಿದಳು. ಅದನ್ನು ಕೇಳಿ ಲಂಜಿಕಾಭಂಜನನೆಂಬ ವಿಟನು ರಾಜಕುಮಾರನಿಗೆ ಅವಳನ್ನು ಬೆರಳಿಟ್ಟು ತೋರಿ ಹೀಗೆಂದನು:

---

1. ಱ (ಮ) 2. ರುಂ (ಅ)

ಕಂ॥ ಸ್ಮರಶರ ಸಂಧಾನಕ್ಕಂ
ಬುರುಹೇಕ್ಷಣೆ ಲಕ್ಷ್ಯಮಾಗೆ ನಲ್ಲನನುೞಿದಾ
ಪರವಶೆ ತನ್ನೊಲ್ಲದನಂ
ಕರೆದಳ್ ಬೆಟ್ಟೇಱಿ ಮಿಟ್ಟುಗರೆವಂತೀಗಳ್ ॥ ೮೨ ॥

ವ॥ ಎನೆ ಕುಮಾರಂ ಪುಷ್ಪದರ್ಶನದಿಂ ಕೆಯ್ಮಾಸಿದನೆಂಬುದೀಕೆಗೆ ಪಾೞಿಯೆ ಪಲಮೆಂದು ವಕ್ರೋಕ್ತಿಯಿಂ ನುಡಿದಲ್ಲಿಂ ತಳರ್ದು ಮತ್ತೊಂದನಂಗಮಂಗಳಗೃಹಾನುಕಾರಿ ಲಂಜಿಕಾನಿಕೇತನಾಜಿರ ದೇಶದೊಳ್—

ಉ॥ ಪೂವಿನ ಬಿಲ್ಗೆ ಪುರ್ವು ಕುಸುಮೇಷುಗೆ ಕಣ್ ಝಷಕೇತನಕ್ಕೆ ಚೆ
ಲ್ವಾವಗಮಾದ ಸೋರ್ಮುಡಿ ರತಿಪ್ರಿಯಗಾಗೆ ಹಯಾನನಂಗೆ ಸ
ದ್ಭಾಮವನಾಳ್ದ ಗುಜ್ಜುಪಮೆಗಪ್ಪಿನಮೊರ್ವಳನಂಗರಾಜ್ಯಲ
ಕ್ಷ್ಮೀವಿಭವಂ ಗೃಹಾಂಗಣದ ಮುಂದೆಸೆದಿರ್ದವೊಲೊಪ್ಪಿ ತೋಱಿದಳ್ ॥ ೮೩ ॥

ವ॥ ಅಂತು ಪ್ರಧಾನಪ್ರಕೃತಿಯಪ್ಪ ಕಾಮದೇವನಿಲ್ಲದೆ ತದೀಯ ಪರಿಪೂರ್ಣ ಪರಿಚ್ಛದಮಂ ಪೊತ್ತುನಿಂದಳಂ ನೋಡಿ ನಾಗರಕಂ ಈ ಮದನಲಕ್ಷ್ಮೀ ವಿಬುಧವನ ವನಜಕಳಹಂಸನಪ್ಪವಜ್ರಾಯುಧಂ ನಿನ್ನಿಂದೆ ಸನಾಥವಕ್ಕುಮೆಂಬುದುಮವನವನತಾನನನಪಾಂಗಾವಳೋಕನ ದೋಳಾಕೆಯಂ ತಪ್ಪ ನೋಡುತ್ತುಂ ಪೋಗಿ ಪೆಱತೊಂದು ತಾಣದೊಳುಚಿತ ಮತ್ತವಾರಣ ಸಮೀಪ ಚಂಚತ್ಕಾಂಚನ ಮಂಚೋಪಶೋಭಿತ ದೇವಾಂಗ ವಸನ ಪ್ರಚ್ಛದಾಚ್ಛಾದಿತ ಶಯ್ಯಾತಳದೊಳ್ ಸ್ವೇದಾಪನೋದಿತ ಪಟಚ್ಚರ ಪರಿವೀಜ್ಯಮಾನೆ ಮನೆಯ ಮುಂದೆ ಮೆಯ್ಯ ನಾಗಳಾಱಿಸಲೆಂದು ಪಟ್ಟಿರ್ದ ಗರ್ಭೇಶ್ವರಿಯಲ್ಲಿಗೆ ದೂತನನಟ್ಟಿ ಪಸರಂಬಡೆಯದೆ ವೈನತೇಯನ ಚಿತ್ರವೃತ್ತಿಯಂತೆ ಭುಜಗದ್ವೇಷಿಯಾಗಿರ್ದು (ದ)ನಱಿದುರಗ ವನಿತೆಯಂತೆ ಕೋಳ್ದಪ್ಪಿ ಮುಳಿದಿರ್ದಳಂ ಪೞಿಗೆ ಮುಳಿದಳೆಂದು ವಿಟವೃಷಭನಾಕೆಯಂ ತಿಳಿಪಲಡಿಗೆಱಗಿ—

---

೮೨. "ಕಾಮನ ಬಾಣಕ್ಕೆ ಗುರಿಯಾದ ಈ ಕಮಲಾಕ್ಷಿಯು ತನ್ನ ನಲ್ಲನನ್ನು ಬಿಟ್ಟು ಪರವಶಳಾಗಿ ಬೆಟ್ಟವನ್ನೇರಿ ಮೃತ್ಯುವನ್ನೇ ಕರೆದಂತೆ, ತನಗೆ ಬೇಡಾದವನನ್ನು ಕರೆದಳು."

ವ॥ ಹೀಗೆನ್ನಲಾಗಿ ಕುಮಾರನು, "ಪುಷ್ಪದರ್ಶನ (೧. ಹೂವನ್ನು ನೋಡುವುದು, ೨. ಮುಟ್ಟಾಗುವುದು) ದಿಂದ ನಾನು ಮೈಲಿಗೆಯಾದೆನು ಎಂಬುದು ಈಕೆಗೆ ಸರಿಯೆ ಮತ್ತೆ" ಎಂದು ವಕ್ರೋಕ್ತಿಯಿಂದ ನುಡಿದನು. ಅಲ್ಲಿಂದ ಮುನ್ನಡೆದಾಗ ಮನ್ಮಥನ ಇನ್ನೊಂದು ಮಂಗಳ ಗೃಹದಂತಿದ್ದ ವೇಶ್ಯಾನಿವಾಸದ ಅಂಗಳದಲ್ಲಿ—

೮೩. ಹೂವಿನ ಬಿಲ್ಲಿಗೆ ಸಮಾನವಾದ ಹುಬ್ಬು, ಕಾಮಬಾಣಕ್ಕೆ ಸರಿಯಾದ ಕಣ್ಣು, ಮೀನ ಧ್ವಜಕ್ಕೆ ಸಮನೆನಿಸಿ ಯಾವಾಗಲೂ ಚೆಲುವಾದ ಸೋರ್ಮುಡಿ—ಇವುಗಳನ್ನೊಡಗೊಂಡ ಈ ಕನ್ಯೆಯನ್ನು ನೋಡಲಾಗಿ, ಮನ್ಮಥನ ರಾಜ್ಯಲಕ್ಷ್ಮಿಯೆ ಮೈದಾಳಿ ಈ ಮನೆಯಂಗಳದಲ್ಲಿ ನಿಂತಂತೆ ಎನಿಸಿತು. ("ಹಯಾನನಂಗೆ ಸದ್ಭಾವಮನಾಳ್ದ ಗುಜ್ಜುಪಮೆಗಪ್ಪಿನಂ" ಎಂಬುದರ ಅನ್ವಯ ತಿಳಿಯದು.)

ವ॥ ಹೀಗೆ ಮುಖ್ಯವಾಗಿ ಇರಬೇಕಾದ ಕಾಮದೇವನೇ ಇಲ್ಲದೆ, ಆತನ ಪರಿಕರವನ್ನೆಲ್ಲ ಸಂಪೂರ್ಣವಾಗಿ ಹೊತ್ತು ನಿಂತ ಇವಳನ್ನು ನೋಡಿ ನಾಗರಕನು ಹೀಗೆಂದನು: "ಈ ಮದನಲಕ್ಷ್ಮಿಯು ಚತುರ ಜನಪ್ರಿಯನಾದ ವಜ್ರಾಯುಧನೇ ನಿನ್ನಿಂದ ಸನಾಥಳಾಗತಕ್ಕವಳು." ಈ ಮಾತಿಗೆ ಕುಮಾರನು ತಲೆ ತಗ್ಗಿಸಿ, ಕಡೆಗಣ್ಣಿಂದ ಆಕೆಯನ್ನು ಕದ್ದು ನೋಡುತ್ತ ಮುಂದೆ ಹೋದನು. ಬೇರೊಂದು ಪ್ರದೇಶದಲ್ಲಿ ಸುಂದರವಾದ ಮುಖಮಂಟಪದ ಸಮೀಪದಲ್ಲಿಯೆ ಮಿರುಗುವ ಚಿನ್ನದ ಮಂಚದ ಮೇಲೆ ಶೋಭಿಸುವ ರೇಷ್ಮೆಯ ವಸ್ತ್ರವನ್ನು ಹೊದಿಸಿದ ಹಾಸುಗೆಯ ಮೇಲೆ ಒರಗಿ ಒಬ್ಬಳು ಬೆವರನ್ನು ಆರಿಸಲೆಂದು ಬಟ್ಟೆಯ ಸೆರಗಿನಿಂದ ಗಾಳಿ ಹಾಕಿಕೊಳ್ಳುತ್ತಿದ್ದಳು. ಆಕೆಯ ಮನೆಯ ಮುಂದೆ ಒಬ್ಬ ವಿಟಶಿರೋಮಣಿಯು ಬಂದು, ಮೈಬೆವರನ್ನು ಆರಿಸಿಕೊಳ್ಳಲೆಂದು ಒರಗಿದ ಒಡತಿಯ ಬಳಿಗೆ ದೂತನನ್ನು ಕಳಿಸಿಕೊಟ್ಟಿದ್ದನು; ಆದರೆ ತನಗೆ ಇನ್ನೂ ಕರೆ ಬಾರದುದರಿಂದ ಈ ಹೆಣ್ಣು ಗರುಡನಂತೆ "ಭುಜಗದ್ವೇಷಿ" (೧. ಹಾವುಗಳ ವೈರಿ, ೨. ವಿಟರನ್ನು ದ್ವೇಷಿಸುವ ವ್ಯಕ್ತಿ)ಯಾಗಿರುವಳೆಂದು ಅರಿತುಕೊಂಡನು. ತನ್ನ ಬಾಯಿಗೆ ಬಂದ ಬೇಟೆ ತಪ್ಪಿಸಿಕೊಂಡು ಹೋದಾಗ ಕ್ರೋಧಗೊಂಡ ಹಾವಿನಂತೆ ಒಲಿದವನು ವಶಕ್ಕೆ ಬಾರದೆಹೋದುದರಿಂದಾಗಿ ತಳಮಳಿಸುತ್ತಿದ್ದವಳನ್ನು ಅರ್ಥಮಾಡಿಕೊಳ್ಳದೆ ನಿಂದೆಗೆ ಮುನಿಸಿಕೊಂಡಳೆಂದು ಭ್ರಮಿಸಿ ಆಕೆಯನ್ನು ಸಮಾಧಾನ ಪಡಿಸಲು ಈತನು ಕಾಲಿಗೆ ಬಿದ್ದು ಹೀಗೆ ನುಡಿದನು:

ಉ॥ ಎನ್ನ ಮನಕ್ಕೊಡಂಬಡನೊಡಂಬಡುವೈ ಪಟು[1]ಗೆಯ್ದುದೇ[1]ವಮಂ
ನೀನ್ನೆಗಟ್ಟ್ವೈದ[2]ಳಿಂ[2]ದು ಮುಳಿಕೆಯ್ದುಗಿದೊಪ್ಪದು ಸಮ್ಮತಾವಸಾ
ನನ್ನಳಿನಾನನೇ ಮುಳಿದದಂ ಬಿಸುಡೈ ಪೊಡವಟ್ಟೊಡಂ ಕುಚಾ
ಸನ್ನತೆ ನಿನ್ನ ಮೆಲ್ಲೆರ್ದೆಗೆ ಕರ್ಕಶ ವೃತ್ತಿಯನಿತ್ತುದಾಗದೇ ॥ ೮೪ ॥

ವ॥ ಎಂದೊಡವನೆ ಪಿಡಿಯಟ್ಟು ವಿಡಿದುಂಟುಮಾಡಿ ದಂಡಂಗೊಂಡು ತಿಳಿದೊಳಂ ಕಂಡು ಯುವರಾಜ ಪ್ರಭೃತಿಗಳೆತ್ತಮೆಟ್ಟೆತ್ತ ಚಪ್ಪಟೆಯೆಂದು ನಗುತಂ ಪೋಗಿ ಪೆಱತೊಂದೆಡೆಯೊಳ್—

ಚಂ॥ ಪರಿವಿಡಿಗೆಯ್ಕೆ ಸೋಂದಿಗಿಳಿ ತಂದೆಯ ತಾಯ ಸಮೀಪದೊಳ್ ತನೂ
ದರಿಯ ರತೋಪಯುಕ್ತರುತಮಂ ವಿನತಾನನೆ ನಾಣ್ಚಿ [3]ತಾಳತ
ತ್ಸರ[3] ಶಿಶುನರ್ತನ ಪ್ರಹತ ಕಂಕಣ ಝಂಕೃತ ಹಸ್ತತೂರ್ಯ [4]ನಿ
ರ್ಭರ[4]ರವದಿಂದದಂ ಮ[5]ಱೆ[5]ಸಿದಳ್ ಗಡ ಮುಗ್ಧೆ[6]ಯದೇಂ ವಿದಗ್ಧೆಯೋ[6] ॥ ೮೫ ॥

ವ॥ ಎಂದಾಕೆಯ ಪ್ರತ್ಯುತ್ಪನ್ನ ಮತಿಯಂ ಮನಂಗೊಂಡು ಪೊಗೞುತ್ತುಂ ಮತ್ತೊಂದು ತಾಣದೊಳ್ ಮನೆಯ ಮುಂದಣ ಮತ್ತವಾರಣದೊಳ್ ನಿಂದಿರ್ದು—

ಉ॥ ಕಯ್ದುವವಿಲ್ಲದೊಲ್ದೊಲಿಸಿದೋಪನುಮೋಪಳುಮೆಯ್ದೆ ತ[7][ಳ್ತು][7]ತ
ಳ್ತೊಪ್ಪಿಯಿರ್ದರೆ ಪೋಪ ಬರ್ಪ ಜನಮಂ ಮುರಿದೀಕ್ಷಿಸೆ ಕಾಂತೆ ಬೀದಿಯುಂ
ಕೆಯ್ದುವಿನಂ ಪೊದಟ್ಟಿಸೆ[8]ದ[8]ನಂಗ ರಸಾಬ್ಧಿಯೊಳುಯ್ವು ತೊಯ್ದು ಕ
ಣ್ಣೆಯ್ದಿಲ ಬಾಸಿಗಂ ನಿಮಿರ್ವವೋಲ್ ನಿಮಿರ್ದತ್ತು ಕಟಾಕ್ಷವೀಕ್ಷಣಂ ॥ ೮೬ ॥

೮೪. "ನನ್ನ ಮನಸ್ಸಿಗೆ ಒಪ್ಪಿಗೆಯಾಗುವಂತೆ ನನಗೆ ಹೊಂದಿಕೊಳ್ಳುವವಳು ನೀನು. ನಿಂದೆಗೆ ಒಳಗಾಗುವವಳಲ್ಲ. ಜಿಗುಪ್ಸೆಯಾಯಿತೆಂದು ಹೇಪಗೊಂಡು ಕೋಪಿಸಿಕೊಂಡೆ. ಕೋಪವೆಂಬುದು ಸಮ್ಮತಿಯವರೆಗೆ ಮಾತ್ರ. ಕಮಲಮುಖಿಯೆ, ನಿನ್ನ ಕೋಪವನ್ನು ಬಿಡು. ನೋಡು, ನಾನು ನಿನ್ನ ಕಾಲಿಗೆ ಬಿದ್ದಾಗಲೂ ನಿನಗೆ ಎದೆ ಕರಗುವುದಿಲ್ಲವೆಂದರೆ ಕುಚಗಳ ಸಹವಾಸ ದೋಷದಿಂದಲೆ ನಿನ್ನ ಮೆದುವಾದ ಎದೆಗೆ ಈ ಕಠೋರತೆ ಬಂದಿರಬೇಕಲ್ಲವೆ ?"

ವ॥ ಹೀಗೆಂದ ಮಾತನ್ನೆ ಗಟ್ಟಿಯಾಗಿ ಹಿಡಿದುಕೊಂಡು, ಅವನಿಂದ ದಂಡವನ್ನು ವಸೂಲುಮಾಡಿ ಸಮಾಧಾನ ಹೊಂದಿದ ಆಕೆಯನ್ನು ಕಂಡು ಯುವರಾಜನೆ ಮೊದಲಾದವರು "ಮೆಟ್ಟಿದುದು ಎತ್ತಲೊ, ಚಪ್ಪಟಿಯಾದುದು ಇನ್ನೆತ್ತಲೊ" ಎಂದು ನಗುತ್ತ ಹೋದರು. ಮುಂದೆ ಇನ್ನೊಂದು ಎಡೆಯಲ್ಲಿ—

೮೫. ಮುಗ್ಧೆಯೊಬ್ಬಳು ಸುರತಕಾಲದಲ್ಲಿ ಮಾಡಿದ ಧ್ವನಿಯನ್ನು ಅನುಕರಿಸುತ್ತ ಮನೆಯ ಗಿಳಿ ತನ್ನ ತಂದೆ ತಾಯಿಗಳ ಬಳಿಯಲ್ಲಿಯೆ ನುಡಿಯ ತೊಡಗಲು ಆಕೆ ನಾಚಿಕೆಯಿಂದ ತಲೆಬಾಗಿ ತಾಳಹಾಕಿ ಕೂಸನ್ನು ಕುಣಿಸುವ ನೆವದಿಂದ ಕೈಬಳೆಗಳ ಜಣಜಣವೆಂಬ ಧ್ವನಿಯಿಂದಲೂ ಕೈಗಳನ್ನೇ ವಾದ್ಯಗಳಂತೆ ಮಾಡಿ ಊದುವ ಇಂಪಾದ ನಾದದಿಂದಲೂ ಗಿಳಿಯ ಧ್ವನಿಯನ್ನು ಅಡಗಿಸಿಬಿಟ್ಟಳು. (ಏನನ್ನೂ ಅರಿಯದ) ಮುಗ್ಧೆ ಹೀಗೆ ಒಮ್ಮೆಲೆ ಪ್ರೌಢೆಯಂತೆ ವರ್ತಿಸಿದಳು.

ವ॥ ಆಕೆಯ ಪ್ರಸಂಗಾವಧಾನವನ್ನು ಮೆಚ್ಚಿ ಹೊಗಳುತ್ತ ಹೋಗಲಾಗಿ, ಮುಂದೆ ಮತ್ತೊಂದೆಡೆಗೆ ಮನೆಯ ಮುಖಮಂಟಪದಲ್ಲಿ ನಿಂತುಕೊಂಡು—

೮೬. ನಿಷ್ಕಪಟ ವೃತ್ತಿಯಿಂದ ಒಲಿದು ಒಲಿಸಿಕೊಂಡ ಪ್ರಿಯತಮನೂ ಪ್ರೇಯಸಿಯೂ ಅಪ್ಪುಗೆಯಲ್ಲಿ ಬೆಸೆದುಕೊಂಡಿರಲಾಗಿ (ಮನೆಯ ಮುಂದಿನ ಹಾದಿಯಲ್ಲಿ) ಹೋಗುವ ಹಾಗೂ ಬರುವ ಜನರ ಕಡೆಗೆ ಆ ಕಾಂತೆ ಹೊರಳಿ ನೋಡಿದಳು. ಕಾಮರಸ ಸಮುದ್ರದಲ್ಲಿ ಓಲಾಡಿ ತೊಯ್ದು ಕನ್ನೈದಿಲೆಯ ಬಾಸಿಗವು ಬಿಚ್ಚಿ ಹರಡಿಕೊಂಡ ಹಾಗೆ ಬೀದಿಯುಂಚಿನವರೆಗೆ ಆಕೆಯ ಕಡೆಗಣ್ಣೋಟವು ಹರಿಯಿತು.

1. ಗೆಯ್ದುಯೇ (ಅ) 2. ಲಿಂ (ಮ) 3. ತೋಳತಳ್ಪದ, ಕಾಮತತ್ಪರ, ತೋಳತಳ್ತುರು (ಕಾ) 4. ಸುಂದರ (ಮ) 5. ಱ (ಕಾ) 6. ಕರಂ ವಿದಗ್ಧವೋಲ್ (ಮ) 7. ಟ್ರು (ಮ) 8. ವ (ಅ)

ವ॥ ಅಂತು ದಂಪತಿಯುಲಂಪಿನ ಪೆಂಪುಮಂ ಸೌಂದರ್ಯದ ಪೊಂಪುೞಿಯುಮಂ ಬಂದೊಂದು ವಿಚಿತ್ರ ಚಿತ್ರಭಿತ್ತಿ ತಂತಸ್ಯಮಾನ ವಾತಾಯನ ಪರೀತ ಮತ್ತವಾರಣ ಕ್ರೋಡೀಕೃತ ಚಂದ್ರಕಾಂತ ಕಾಂತ ಸುಧಾವೇದಿಕಾ ಮಧ್ಯಭೂಮ್ಯಂತರಾಳದೊಳ್ ಒರ್ವಳ್ ಮುಖಪರಿಮಳ ನಿಪತದ್ಭ್ರಮರ ವಾತಾಯಾಸಿತೆಯಾದಳಂ ಕೆಳದಿ—

ಉ॥ ಅಂಬುಜ ಸೌರಭಂ ತನಗೆ ಗಾವಣ ಜೀವಣಮತ್ಯಪೂರ್ವಮಾ
ಸ್ಯಾಂಬುಜ ಗಂಧಮೆಂದೆಱಗಿ ಬಗ್ಗಿಸೆ ಬಗ್ಗಿಸೆ ಸೋಯೆ ಸೋಯೆ ನಿ
ನ್ನಂ ಬಲವರ್ಪುವಿನ್ನದಱ ಮೇಲೆ ಭಯಾಕುಳ ಲೋಲನೇತ್ರನೀ
ಲಾಂಬುಜ ಲಕ್ಷ್ಮಿಯಂ ಕೆದಱಿ ಮಾಣವು ಕಾಣಗೆ ಮಾಯ್ದ ತುಂಬಿಗಳ್ ॥ ೮೭ ॥

ವ॥ ಎಂದಾಕೆಯ ಮುಖಾಂಬುಜಾಮೋದಮುಮಂ ಸ್ವಭಾವ ಭೀರುತೆಯುಮಂ ಭ್ರಮರ ವ್ಯಾಜದೊಳೆ ಮೆಱಿವ ಕೆಳದಿಯ ಮಾತುಮಂ ಮನದೆಗೊಂಡು ಪೋಗಿ ಮತ್ತಮೊಂದು ಪ್ರದೇಶದೊಳ್ ಮೇಗಣ ನೆಲೆಯ ಮತ್ತವಾರಣದ ಪೆಱಗಣ ಕೆಲಸಂ ಸೆಮ್ಮಿ ಕುಂದಲತಾಲೀಲೆಯಿಂ—

ಚಂ॥ ಪೊಸಬಿಸುಸುಯ್ಯ ಪಾಡೞಿದ ಮೆಯ್ಯ ಕದಂಪಿನ ಕೆಯ್ಯ ಭಂಗಿ ಕ
ಣ್ಗೆಸೆಯೆ ಪೊದಟ್ಟ ಕಣ್ಬನಿಯ ಬಾನಲ ತಣ್ಣಸದೊಳ್ ಪಗಿಲ್ತು ಪಾ
ವಸೆಗೊಳೆ ಕಾರ ತಂದಲೊಳಗುಂದಲೆಯಾಗಿರೆ ನಟ್ಟು ಸೋರ್ವ ಪಾ
[1][ಟ್ಬಿ][1]ಸಡಿಯ ಪೆಣ್ಣ ಜೋಹದವೊಲೊಪ್ಪಿದಳೊರ್ವಳನಂಗರಾಗದಿಂ ॥ ೮೮ ॥

ವ॥ ಆಕೆಯುಂ ನೋಡಿ ಹೇಮಂತದೊಳ್ ಮದಮಂ ತಗು[2][ಳ್ದ][2] ಶಿಶಿರದೊಳುೞಿದು ಮತ್ತಂ ಬಸಂತದೊಳ್ ಬಂಬಲ್ದಗು[3][ಳ್ದ][3] ಮದನಮದಾನೇಕಪಕ್ಕೆ ಪಕ್ಕಾದಳೀಕೆಯೆಂದು ಋತುಪ್ರತಾನಾವಯವಂಗಳನೆ ವಿದೂಷಕಂ ಮದೋಪಕ್ರಮದನುಕ್ರಮಂ ಮಾಡಿ—

ವ॥ ಹಾಗಿರುವ ದಂಪತಿಗಳ ಸಂತೋಷ ಸೌಭಾಗ್ಯವನ್ನೂ ಸೌಂದರ್ಯದ ಅಗ್ಗಳಿಕೆಯನ್ನೂ ನೋಡುತ್ತ ಬರಲಾಗಿ, ಮುಂದೆ ಮತ್ತೊಂದು ಪ್ರದೇಶದಲ್ಲಿ ಬಗೆಬಗೆಯ ಸುಂದರ ಚಿತ್ರಗಳುಳ್ಳ ಗೋಡೆಗಳಿಂದಲೂ ವಿಶಾಲವಾದ ಕಿಟಕಿಗಳಿಂದಲೂ ಸುತ್ತುವರಿಯಲ್ಪಟ್ಟು ಶೋಭಿಸುವ ಮುಖಮಂಟಪದೊಳಗೆ ಚಂದ್ರಕಾಂತಶಿಲೆಗಳಿಂದ ನಿರ್ಮಿಸಿದ ಸೊಗಸಾದ ಜಗಲಿಯ ನಟ್ಟನಡುವೆ ಕಾಂತೆಯೊಬ್ಬಳು ತನ್ನ ಮುಖದ ಸುಗಂಧಕ್ಕೆ ಎರಗುವ ದುಂಬಿಗಳ ಕಾಟವನ್ನು ನಿವಾರಿಸಲಾಗದೆ ಪೇಚಾಡುತ್ತಿದ್ದಳು ; ಆಗ ಆಕೆಯ ಗೆಳತಿ ಆಕೆಗೆ ಹೀಗೆಂದಳು :

೮೭. "ದುಂಬಿಗಳಿಗೆ ಸುಗಂಧವಾದ ಕಮಲದ ಮಕರಂದವೆ ಆಹಾರ; ಕಮಲವೆ ಅವುಗಳಿಗೆ ನೆಲೆವೀಡು. ನಿನ್ನ ಮುಖ ಪರಿಮಳವನ್ನು ಕಂಡು ಇದೊಂದು ಅತ್ಯಪೂರ್ವವಾದ ಕಮಲ ಗಂಧವೆ ಎಂದು ಮೊರೆಯುತ್ತ ಅವು ಎರಗುತ್ತಲಿವೆ ; ನೀನು ಬೀಸಿ ಬೀಸಿ ಅವುಗಳನ್ನು ಅಟ್ಟುತ್ತಿರುವೆ ; ನೀನು ಹೊಡೆದಟ್ಟಿದಷ್ಟೂ ಅವು ಸುತ್ತಿಸುತ್ತಿ ನಿನ್ನ ಮುಖಡೆಡೆಗೇ ಬರುವುದೇಕೆ ಬಲ್ಲೆಯಾ ? ಭಯದಿಂದ ಚಂಚಲವಾದ ನಿನ್ನ ಕಣ್ಣುಗಳು ಕನ್ನೈದಿಲೆಗಳ ಚೆಲುವನ್ನೆ ಹರಡುತ್ತಿವೆ ಎಂದ ಮೇಲೆ ಆ ದುಷ್ಟ ದುಂಬಿಗಳು ಬಿಟ್ಟುಹೋದಾವೆಯೆ ?"

ವ॥ ಹೀಗೆಂದು (ಪದ್ಮಿನೀಜಾತಿಯವಳಾದ) ಆಕೆಯ ಮುಖದ ಪದ್ಮಗಂಧವನ್ನೂ ಪುಕ್ಕಲು ಸ್ವಭಾವವನ್ನೂ ದುಂಬಿಗಳ ನೆಪದಿಂದ ಪ್ರಕಟಗೊಳಿಸಿದ ಆ ಗೆಳತಿಯ ಮಾತನ್ನು ಮೆಚ್ಚುತ್ತ ಹೋಗಿ ಮತ್ತೊಂದು ಪ್ರದೇಶದಲ್ಲಿ ನೋಡಲು ಅಲ್ಲಿ ಮೇಲುಪ್ಪರಿಗೆಯ ಮುಖಮಂಟಪದ ಹಿಂಭಾಗವನ್ನು ಮೊಲ್ಲೆಯ ಬಳ್ಳಿಯಂತೆ ಕೋಮಲವಾಗಿ ಒರಗಿ ನಿಂತು—

೮೮. ಹೊಸ ನಿಟ್ಟುಸಿರಿಂದ, ಕಂದಿದ ಮೈಯಿಂದ, ಕೆನ್ನೆಯ ಮೇಲಿಟ್ಟ ಕೈಯಿಂದ, ಉಕ್ಕುಕ್ಕಿ ಹರಿವ ಕಣ್ಣೀರ ಧಾರೆಯಲ್ಲಿ ನೆನೆದು ಉಟ್ಟ ಬಟ್ಟೆಯೆಲ್ಲ ಮೈಗೆ ಅಂಟಿಕೊಂಡಿರುವ ಸ್ಥಿತಿಯಿಂದ ಕಾಮಾಗ್ನಿಗೆ ಗುರಿಯಾದ ಕಾಂತೆಯೊಬ್ಬಳು ಮಳೆಗಾಲದ ಧಾರಾಪಾತದಲ್ಲಿ ಹಾಳು ಬಸದಿಯ ಕಣ್ಣು ಬೊಂಬೆಯೊಂದು ಹಾಸಿಗೆಟ್ಟಿ ನಿಂತ ಹಾಗೆ ತೋರಿದಳು.

ವ॥ ಆಕೆಯನ್ನು ನೋಡಿ, "ಹೇಮಂತದಲ್ಲಿ ಮದವೇರಿ, ಶಿಶಿರದಲ್ಲಿ ಮದವಿಳಿದು ಮತ್ತೆ ವಸಂತದಲ್ಲಿ ಹುಚ್ಚೆದ್ದ ಮನ್ಮಥನೆಂಬ ಮದಗಜದ ಕೈಗೆ ಸಿಕ್ಕಿದವಳು ಇವಳು" ಎಂದು ಋತುಗಳಿಗೆ ಅನುಸಾರವಾಗಿ ಮದಾವಸ್ಥೆಗಳನ್ನು ಹೋದಿಸಿ ವಿದೂಷಕನು ನುಡಿದು—

1. ಳ್ಬ (ಮ) 2. ಬ್ದು (ಮ) 3. ಜ್ದ (ಮ)

ಮ॥ ಸ್ರ॥ ಮದನೇಭಕ್ಕಾಮ್ರಮೋದಂಬುಜಮೆರಡು ಕೊಳಂ ಮೂಱು ತೆಂಗಾಳಿ ನಾಲ್ಕ
ಭ್ಯುದಿತಂ ಹಿಂದೋಳಮಯ್ದುದ್ಧತ ಪಿಕಕುಳಮಾಱುನ್ನತಾಶೋಕಮೇೞು
ನ್ಮದ ಕೀರವ್ರಾತಮೆಂಟುಚ್ಚಳಿತ ವಕುಳಮೊಂಭತ್ತಲರ್ ಪತ್ತು ತತ್ಕೌ
ಮುದಿ ಪನ್ನೊಂದುತ್ಪಳಂ ಪನ್ನೆರಡಳಿ ಪದಿಮೂಱಲ್ತೆ ಮತ್ತೋಪಚಾರಂ ॥ ೮೯ ॥

ವ॥ ಅದಱಿಂದಂ ವಿರಹಿಯೆಂಬ ಜಿೞೋಡಗಂಗಮುಗುರ್ವಿನಮುಗುರ್ವಪ್ಪನಂಗ ಮಾತಂಗದ ದೆವಸಮಿದೆಂದಪೂರ್ವೋಕ್ತಿಯಂ ನುಡಿವುತ್ತುಂ ಪೋಗಿ ಮತ್ತೊಂದು ಸುಧಾ ಭವನದೊಳನವರತ ದಹ್ಯಮಾನ ಕಾಳಾಗುರು ಧೂಪ ಧೂಮದ ಪರಿಮಳಮಯಮಪ್ಪ ನೆಲೆಮನೆಯ ಮೇಗೇಕಾಗ್ರ ಮನಃಪರಿಗ್ರಹೆಯಾಗಿ—

ಚಂ॥ ಬಕುಳದ ಪೂವಿನಕ್ಷವಳಯಕ್ಕೆ ದುಕೂಲದ ಚೆಲ್ವನಪ್ಪ ಸಾ
[1][ಟಿ][1]ಗೆಗೆ ಪಯೋಜಸೂತ್ರನವಮುಂಜಿಗೆ ನೇತ್ರದ [2]ಕೋ[2]ವಣಕ್ಕೆ ಮಿ
ಕ್ಕಗುರುವ ಬೂದಿಗೊಡ್ಡೆ ತನುವಂ ನಿಜನಾಥನ ಮೆಟ್ಟಿ ಮಿಾವ ಪಾ
ವುಗೆ ಪರಮಾತ್ಮನಾಗೆ ವಿರಹೋತ್ತಮ ದೀಕ್ಷೆಗೆ ನಿಂದಳೊರ್ವಳಂ ॥ ೯೦ ॥

ವ॥ ಕಂಡು ಮದನಾದ್ವೈತವಾದ ಸ್ಥಾನದ ಸಭಾಭವನಮಿರ್ಪಂತಿರ್ದ ತದ್ಗಣಿಕಾ ಭವನಮುಮಂ ತೋಱಿ ನಾಯಕಂ ನಾಗರಕಾದಿಗಳ್ಗೆ ತತ್ಸ್ವರೂಪಕಥನವಿತತನಾಗಿ ಪೋಗಿ ತದ್ವಾರಾವಸಾನದೊಳ್ ನಿಂದು ಮಿಥ್ಯಾಚ[ತು]ಷ್ಪಯಾಲಂಕಾರವಾಗಿರ್ದ ಚತುಃಪಥ ಸಭಾಮಂಟಪದೊಳಿರ್ದ ವಿಟಕೋಟಿಯಂ ಕಂಡೇನಾನುಮಿಲ್ಲಿ ಚತುರ ಸುಭಾಷಿತಮಂ ಕೇಳಲಕ್ಕುಮೆಂದು ರಾಜಕುಮಾರ ಪ್ರಮುಖರ್ ಮೆಯ್ಗ[3][ರೆ][3]ದಿರ್ಪುದುಂ ಕಾಮಶಾಸ್ತ್ರಾಭಿಪ್ರಾಯದಿಂ ನುಡಿವ ವಿದಗ್ಧ[4]ವಿಟ[4]ರ ಮಾತಂ ಕೇಳುತ್ತುಂ ಮತ್ತೊರ್ವನಿಂತೆಂದಂ—

---

೮೯. "ಮನ್ಮಥಗಜಕ್ಕೆ ಹದಿಮೂರು ಉಪಚಾರಗಳಲ್ಲವೆ? ಒಂದು ಮಾವು, ಎರಡು ಕಮಲ, ಮೂರು ಕೊಳ, ನಾಲ್ಕು ತೆಂಗಾಳಿ, ಐದು ಹಿಂದೋಳರಾಗ, ಆರು ಮದವೇರಿದ ಕೋಗಿಲೆ. ಏಳು ಅಶೋಕ, ಎಂಟು ಸೊಕ್ಕಿದ ಗಿಳಿವಿಂಡು, ಒಂಬತ್ತು ಬಕುಳ, ಹತ್ತು ಹೂ, ಹನ್ನೊಂದು ಬೆಳ್ದಿಂಗಳು, ಹನ್ನೆರಡು ಉತ್ಪಲ ಮತ್ತು ಹದಿಮೂರು ದುಂಬಿ.

ವ॥ ಆದರಿಂದ ವಿರಹಿಯೆಂಬ ಅವಿವೇಕಿಗೆ ಅತ್ಯಂತ ಭಯಾನಕವಾದ ಮದನ ಮದಗಜದ ದಿವಸವಿದು"— ಹೀಗೆಂದು ಅಪೂರ್ವವಾಗಿ ನುಡಿಯುತ್ತ ಹೋಗಲಾಗಿ, ಮುಂದೆ ಮತ್ತೊಂದು ಸೌಧದಲ್ಲಿ ನಿರಂತರವಾಗಿ ಉರಿಸುತ್ತಿರುವ ಕಾಳಾಗುರುವಿನ ಧೂಪದ ಹೊಗೆಯಿಂದ ಸುಗಂಧಮಯವಾದ ನೆಲೆಮನೆಯ ಮೇಲೆ ಒಬ್ಬಳು ಏಕಾಗ್ರಚಿತ್ತೆಯಾಗಿ—

೯೦. ಬಕುಳ ಪುಷ್ಪದ ಜಪಮಾಲೆಯನ್ನೂ, ದುಕೂಲವೆಂಬ ಚೆಲುವಾದ ಶಾಟಿಯನ್ನೂ, ತಾವರೆಯೆಳೆಯ ಹೊಸ ಮುಂಜಿಯನ್ನೂ, ನೇತ್ರವೆಂಬ ಬಟ್ಟೆಯ ಕೌಪೀನವನ್ನೂ ಧರಿಸಿ ಅಗುರು ಧೂಪದ ಬೂದಿಯನ್ನು ಮೈಗೆ ಲೇಪಿಸಿ ಕೊಂಡು, ತನ್ನ ಪ್ರಾಣನಾಥನ ಸ್ನಾನ ಪಾದುಕೆಗಳನ್ನೆ ಪರಮಾತ್ಮನೆಂದು ಭಾವಿಸಿ ವಿರಹ ವ್ರತದ ದೀಕ್ಷೆಗೆ ನಿಂತು ಕೊಂಡಿದ್ದಳು.

ವ। ಅವಳನ್ನು ಕಂಡು, ಕಾಮಾದ್ವೈತವಾದ ಸ್ಥಾನದ ಸಭಾಮಂಟಪದಂತಿದ್ದ ಆ ವೇಶ್ಯಾಮಂದಿರವನ್ನು ತೋರಿ ನಾಯಕನು ನಾಗರಕಾದಿಗಳಿಗೆ ಅದರ ಸ್ವರೂಪವನ್ನು ವಿವರವಾಗಿ ತಿಳಿಸುತ್ತ ಹೋಗಿ, ಅದರ ಬಾಗಿಲು ದಾಟಿದ ಒಳಿಕ ನಿಂತನು. ಮುಂದೆ ಚೌಪಟ್ಟದ ಸಭಾಮಂಟಪದಲ್ಲಿ ನೆರೆದ ವಿಟ ಸಮೂಹವನ್ನು ಕಂಡು ಇಲ್ಲಿ ಕೆಲವು ಚತುರೋಕ್ತಿಗಳನ್ನು ಕೇಳಬಹುದೆಂದುಕೊಂಡು ರಾಜಕುಮಾರನೂ ಆತನ ಸಂಗಡಿಗರೂ ಅಲ್ಲಿಗೆ ಬಂದು ಮರೆಯಲ್ಲಿ ನಿಂತು, ಕಾಮಶಾಸ್ತ್ರಾಧಾರದಿಂದ ಮಾತಾಡುವ ಪ್ರೌಢರ ನುಡಿಗಳನ್ನು ಕೇಳುತ್ತಿದ್ದರು. ಆಗ ಒಬ್ಬನು ಹೀಗೆಂದನು:

---

1. ೯ (ಮ) 2. ಪೋ (ಮ) 3. ಱ (ಮ) 4. + (ಮ)

ಚಂ॥ ಮಸೆವುದು ಮಾಸಲಿರ್ದ ಪೞವೇಟಮನಿಚ್ಚೆಯ ಬಿಚ್ಚತಿಕ್ಕೆಯಂ
ಪೊಸಯಿಪುದೊಳ್ಕಮಂ ನಡಪುತಿರ್ಪುದು ಧಾತುವನೊಳ್ಪಿತೆಯ್ದೆ ಪಾ
ಟಿಸುವುದು ಕೂಟದೊಳ್ ಕುಶಲನಪ್ಪುದು ಕೇಳಿಯಿದಿಂತುಟೆಂದು ಚ
ರ್ಚಿಸಿ ನುಡಿವಂತು ಬೇಱೆ ಪೆಱತಾವುದು ಕೇಳಿಕೆಯುಂ ವಿಟತ್ವಮುಂ ॥ ೯೧ ॥

ವ॥ ಎನೆ ಮತ್ತೊರ್ವಂ ಪೆಂಡಿರೊಲವಂ ನಿರಾಕರಿಸಿ ನುಡಿದೊಡೊಲಿಸಿಯುಮೊಲ್ದುಮಱಿವ ಚದುರನಾತ್ಮಾನುಭೂತಮನಿಂತೆಂದಂ।

ಚಂ॥ ಪಗಲೆರ್ದೆಗೊಂಡ ತನ್ನ ಸಮಕಟ್ಟನಿರುಳ್ [1]ಮ[1]ಱೆದಂತೆಗೆಯ್ದು ಮೆ
ಲ್ಲಗೆ ಮಱೆದೊಂದಿದಂತುಸಿರದಾ[2]ನಿ[2]ರೆ ಕೂಟದ ಚಿತ್ರವೃತ್ತಿಯಂ
ಬಗೆಯನೆನುತ್ತೞಲ್ದಳೆ ಕುಚಾಂತರದೊಳ್ ಕೊಳಗೊಂಡು ಮೋಹವ
ಲ್ಲಿಗೆ ಬಿದಿ ತಿರ್ದಿ ಸುತ್ತಿಸಿದ ನೀರ್ಗೆಣೆಯಾದುದು ಬಾಷ್ಪಮೋಪಳಾ ॥ ೯೨ ॥

ವ॥ ಎನೆ [3]ಮತ್ತೊ[3]ರ್ವನುಮಾತ್ಮ ಪ್ರತ್ಯಕ್ಷಮನಿಂತೆಂದು ನುಡಿದಂ—

ಉ॥ ಚಂಪಕಗಂಧಿ ಮಂದಮನದೊಳ್ ಕೞಿಪಲ್ ಬರೆ ಮಾಣ್ದು ಮಾರುತೋ
ತ್ಕಂಪಿತ ಚೂತನಂದನದೊಳಿನ್ನಿರು ನೀನೆನೆ ಮಾವಿನಳ್ಳಿಗೊಂ
ಬಂ ಪಿಡಿದೊಂದು ಕೆಯ್ವೆರಸು ಮೆಯ್ಗಱಿದಳ್ ನಿಲೆ ಮುಚ್ಚಿವೋಗಿ ಬೇ
ಗಂ ಪಯಣಕ್ಕೆ ಮಾಡಿದಳದೊಂದಳವಲ್ಲದ ದುರ್ನಿಮಿತ್ತಮಂ ॥ ೯೩ ॥

---

೯೧. "ಹಳತಾಗಿ ಮಾಸುವಂತಾದ ಪ್ರಣಯವನ್ನು ಮಸೆದು ತೀಕ್ಷ್ಣಗೊಳಿಸಬೇಕು ; ಬಯಕೆಯಲ್ಲಿ ಉತ್ಕಂಠತೆಯನ್ನು ಹುಟ್ಟಿಸಬೇಕು ; ರತಿಕ್ರೀಡೆ ಅವ್ಯಾಹತವಾಗಿ ನಡೆಯುತ್ತಲೆ ಇರಬೇಕು ; ಒಲಿಸಿ ಕೊಳ್ಳುವುದರಲ್ಲಿಯೂ ರತಿಬಂಧಗಳಲ್ಲಿಯೂ ಕುಶಲನಾಗಿರಬೇಕು. ಇದು ಹೀಗೆ ಎಂದು ಚರ್ಚಿಸಿ ನುಡಿಯುವಂತಹ ವಿನೋದ ವಿಟತ್ವದಲ್ಲಿ ಅಲ್ಲದೆ ಬೇರೆ ಎಲ್ಲಿದೆ ?"

ವ॥ ಆಗ ಮತ್ತೊಬ್ಬನು ಹೆಣ್ಣುಗಳ ಒಲವನ್ನು ಧಿಕ್ಕರಿಸಿ ನುಡಿಯಲಾಗಿ, ಒಲಿದು ಒಲಿಸಿಕೊಂಡ ಚತುರ ವಿಟನೊಬ್ಬನು ತನ್ನ ಅನುಭವವೊಂದನ್ನು ಹೀಗೆ ಹೇಳಿದನು :

೯೨. "ಹಗಲು ಹೊತ್ತಿನಲ್ಲಿ ಮನಸ್ಸನ್ನು ಸೂರೆಗೊಂಡ ವಿಧಾನವನ್ನು ರಾತ್ರಿ ಮರೆತಂತೆ ಮಾಡಿ ಮೆಲ್ಲಗೆ ಮೈ ಮರೆತಂತೆ ನಾನು ಮೌನವಾದುದನ್ನು ಕಂಡು, 'ರತಿಕ್ರಿಯೆಯಲ್ಲಿ ಇವನಿಗೆ ಆಸಕ್ತಿಯೇ ಇಲ್ಲ'ವೆಂದು ಭಾವಿಸಿ ನನ್ನ ನಲ್ಲೆ ದುಃಖಿಸಲಾಗಿ ಆಕೆಯ ಮೊಲೆಗಳ ನಡುವೆ ಮಡುಗಟ್ಟಿನಿಂತ ಕಣ್ಣೀರು—ಮೋಹದ ಬಳ್ಳಿಗೆ ಉಣಿಸಲೆಂದು ದೈವ ತಿದ್ದಿ ಕಟ್ಟಿದ ನೀರೊ ಏನೊ ಎಂದೆನಿಸಿತು."

ವ॥ ಆಗ ಇನ್ನೊಬ್ಬನು ತಾನು ಅನುಭವದಿಂದ ಕಂಡುಕೊಂಡ ಮಾತನ್ನು ಹೀಗೆಂದು ನುಡಿದನು :

೯೩. "(ನಾನು ಪ್ರವಾಸಕ್ಕೆ ಹೋದಾಗ) ಸಂಪಿಗೆ ಹೂವಿನಂತೆ ಸುಗಂಧಿಯಾದ ನನ್ನ ನಲ್ಲೆ ಜಡವಾದ ಮನಸ್ಸಿನಿಂದಲೆ ನನ್ನನ್ನು ಕಳಿಸಲೆಂದು ಬಂದಳು. ಗಾಳಿಗೆ ಅಲುಗುತ್ತಿರುವ ಮಾವುಗಳ ತೋಪಿನ ಬಳಿ ಬಂದಾಗ, 'ಸಾಕು, ನೀನು ಇಲ್ಲಿಯೆ ನಿಲ್ಲು' ಎಂದು ಹೇಳಲಾಗಿ ಮಾವಿನ ಎಳೆಯ ಕೊಂಬೆಯೊಂದನ್ನು ಹಿಡಿದು ಮರೆಯಾಗಿ ನಿಂತಳು ; ನಿಂತಳೆಂಬಷ್ಟರಲ್ಲಿ ಮೂರ್ಛೆಹೋಗಿ ನನ್ನ ಪ್ರಯಾಣಕ್ಕೆ ಅಧಿಕವಾದೊಂದು ಅಪಶಕುನವನ್ನೆ ಮಾಡಿದಳು."

1, ಕ (ಅ) 2. ಗ (ಮ) 3. × (ಮ)

ವ॥ ಎಂದು ಪೆಂಡಿರೊಲವನೆ ಸಮರ್ಥಿಸಿ ನುಡಿದಂ ಮತ್ತೊರ್ವನೆನ್ನಿನಿಯಳೊರ್ಮೆ—

ಚಂ॥ ಮುನಿಯಿಸೆ ಮಾಣದಾಂ ಮುನಿದು ತೊಟ್ಟನೆ ಮಂಚದಿನೆೞ್ದು ಪೋಗೆ ನಾ
ಣ[1][ನ][1]ಗಳವಟ್ಟ ಬರ್ದನಗೆ ಪೆಂಪೆನಗಣ್ಮೆನಗಾಗಳಾಯದೊ
ಳ್ಪೆನಗೆ ಮಹಾಪ್ರಸಿದ್ಧಿಯೆನ[2]ಗುರ್ಕೆನಗೊಡ್ಡೆನಗೆನ್ನ[ಬೆನ್ನ][2] ಬೆ
ನ್ನನೆ ಪರಿತಂದ ದೈನ್ಯಮರಿದಾದುದು ಮಿಾಱಲತರ್ಕ್ಯರೂಪೆಯಾ ॥ ೯೪ ॥

ವ॥ ಎಂಬುದುಂ ಮತ್ತಮಲ್ಲಿ ಬೇಟದ ತೆತ್ತಿಗನುಂ ಮೊತ್ತಮೊದಲಿಗನುಮಪ್ಪೊನೊರ್ವಂ ತನ್ನ ಜತ್ತಮಲ್ಲದೊಲ್ದೋಪಳ ವೃತ್ತಕಮ ನೀತೆಂದಂ—

ಚಂ॥ ಉಗುರ್ವಿಸಿಯಪ್ಪುವೊರ್ಮೆ ಪುಗೆ ವಾರಿರುಹಾಕರವಾರಿ ಸುಯ್ಯ ಬೆಂ
ಕೆಗಳೊಳೆ ಪೊಕ್ಕ ನಂದನವನಂ ಕೊ[3][ರ][3]ಗಿರ್ಪುವು ಪೊಕ್ಕ ಜೊಂಪವಾ
ವಗೆಯವೊಲಿರ್ಪುವುಷ್ಣಜಲಮಕ್ಷಿಗಳೊಳ್ ಕ[4][ರೆ][4]ಗಣ್ಮೆ ಕಣ್ಣಪಾ
ಪೆಗಳವಗಾಹಮಿರ್ಪುವು ಮದೀಯ ವಿಯೋಗದೊಳೆನ್ನ ನಲ್ಲಳಾ ॥ ೯೫ ॥

ವ॥ ಎಂಬುದುಮದ[5]ರ್ಕೆ[5] ಪಾರಯ್ಸಿ ಸೌಭಾಗ್ಯಶಾಳಿ ವಿಟನಿಂತೆಂದಂ—

ಚಂ॥ ಅಕುಟಿಲಚಿತ್ತೆಯೆಂದಱಿದುಮಿಲ್ಲದ ದೋಷಮನಿಟ್ಟು ಕೋಪರೂ
ಪಕಮೆಡೆಯಾಗದಾನಿರೆ ಪೊದಱ್ದಿರ್ದೆಯುರ್ಚಿದ ನಲ್ಮೆಯೊಂದು ಭಾ
ವಕಮಱಿಯಲ್ಕೆವಂದುದೆನಗಿಂದುಕರ[6]ಚ್ಯು[6]ತ ಚಂದ್ರಕಾಂತ ಪು
ತ್ರಿಕೆಯೊಸರ್ವಂತೆ ಝುಮ್ಮೆಗೆ ಬೆಮರ್ತಿರವಿಂ ತರಳಾಯತಾಕ್ಷಿಯಾ ॥ ೯೬ ॥

ವ॥ ಹೀಗೆಂದು ಆತನು ಸ್ತ್ರೀಯರ ಒಲವನ್ನೇ ಮೇಲುಗಟ್ಟಿ ನುಡಿದನು. ಮತ್ತೊಬ್ಬನು ಹೀಗೆಂದನು: "ನನ್ನ ಪ್ರಿಯೆ ಒಮ್ಮೆ—

೯೪. ಕೆರಳಿಸಲಾಗಿ ನಾನು ಕೋಪಿಸಿಕೊಂಡು ತಟ್ಟನೆ ಮಂಚದಿಂದ ಎದ್ದು ಹೊರಟೆನು; ಆಗ ಲಜ್ಜೆ, ಪ್ರೌಢಿ, ಹೆಮ್ಮೆ, ಬಲ, ರಹಸ್ಯದ ಸೊಗಸು, ಮಹಾ ಪ್ರಸಿದ್ಧಿ, ದರ್ಪ, ಸಂಪತ್ತು—ಇವೆಲ್ಲವೂ ನನಗೇ ಮಿಸಲೆಂದು ಅಡವರಿಸಿ ಬಂದಂತೆ ನನ್ನ ಬೆನ್ನ ಹಿಂದೆಯೆ ಧಾವಿಸಿಬಂದ ಅವಳ ದೈನ್ಯ ಭಾವವೂ ಅತರ್ಕ್ಯರೂಪವೂ ಅಪೂರ್ವವಾದುವು."

ವ॥ ಹೀಗೆನ್ನಲಾಗಿ ಅಲ್ಲಿಯೆ ಇದ್ದ ಪ್ರಣಯದ ಬಂಧುವೂ ಪ್ರಣಯಶ್ರೇಷ್ಠನೂ ಆದ ಒಬ್ಬನು ಅಪ್ರಯತ್ನವಾಗಿ ಒಲಿದ ತನ್ನ ಪ್ರೇಯಸಿಯ ವೃತ್ತಾಂತವನ್ನು ಹೀಗೆ ಹೇಳಿದನು:

೯೫. "ನನ್ನನ್ನು ಅಗಲಿದ ಕಾಲದಲ್ಲಿ ನನ್ನ ನಲ್ಲೆಯ ಅವಸ್ಥೆಯನ್ನು ಏನೆಂದು ಹೇಳಲಿ? ಆಕೆ ಒಳಹೊಕ್ಕರೆ ಕಮಲ ಸರೋವರದ ನೀರೆಲ್ಲ ಉಗುರು ಬಿಸಿಯಾಗುವುದು; ಆಕೆಯ ನಿಟ್ಟುಸಿರಿನ ಬೆಂಕಿಯಿಂದ ಉದ್ಯಾನವನಗಳೆಲ್ಲ ಬಾಡಿಹೋಗುವುವು; ತಂಪೆಂದು ಪ್ರವೇಶಮಾಡಿದ ಬಳ್ಳಿ ಮಂಟಪಗಳು ಆವಗೆಯಂತಾಗುವುವು; ಬಿಸಿನೀರು ಸೂಸಿ ಬಂದು ಕಣ್ಣಿನ ಪಾಪೆಗಳು ಸದಾ ಮುಳುಗಿಯೆ ಇರುವುವು"

ವ॥ ಹೀಗೆನ್ನಲು ಅದಕ್ಕೆ ಹಾರೈಸಿ ಸೌಭಾಗ್ಯವಂತನಾದ ವಿಟನು ಹೀಗೆಂದನು:

೯೬. "ನನ್ನ ಪ್ರೇಯಸಿಯ ಮನಸ್ಸು ನಿಷ್ಕಪಟವೆಂದು ಅರಿತೆನಾದರೂ ಇಲ್ಲದ ದೋಷವನ್ನು ಅವಳ ಮೇಲೆ ಹೊರಿಸಿ, ಕೋಪವಿಲ್ಲದಿದ್ದರೂ ಕೋಪಿಸಿಕೊಂಡಂತೆ ನಾನು ನಟಿಸಿದೊಡನೆ, ಬೆಳ್ದಿಂಗಳ ಸ್ಪರ್ಶಕ್ಕೆ ಚಂದ್ರಕಾಂತದ ಆ ಪುತ್ಥಳಿ ನೀರೊಡೆವಂತೆ, ಝುಮ್ಮೆಂದು ಬೆವರಿಟ್ಟ ಆ ಚಂಚಲಾಕ್ಷಿಯನ್ನು ಕಂಡು, ಅವಳ ಎದೆಯಲ್ಲಿ ನಟ್ಟುನಿಂತ ಪ್ರೇಮದ ಒಂದು ದರ್ಶನವನ್ನು ನಾನು ಪಡೆದೆನು."

---

1. ನೆ (ಮ) 2. ಗೊಡ್ಡೆನಗುರ್ಕೆನಗೆನ್ನದೆನ್ನ (ಅ) 3. ಱ (ಮ) 4. ಱೆ (ಮ) 5. ನೆ (ಅ) 6. ಶ್ಯು (ಮ)

ವ॥ ಎಂದು ಪೆಂಡಿರ ಬೇಟಮುಮೇೞ್ದಿಟಂ ಮಾಡದೆ ನುಡಿಯೆ ನಿರಾಕರಿಸಿ ಮತ್ತೊರ್ವಂ ಕೇ[1]ಣ[1]ಕಾರವಿಟನಪ್ಪ ವಣಿಗ್ವಿಟನಿಂತೆಂದಂ—

ಚಂ॥ ಮದನರಸಪ್ಲವಂ ಕವಿಯೆ ತಣ್ಣಸನಾಗದೆ ತೃಷ್ಣೆಗಿಂಬುಕೆ
ಯ್ಯದೆ ಪಗೆಗೊಂಡು ಪೋಪುದು ಸಮುದ್ರದ ಮಧ್ಯದ ಬಾಳೆ ಕೆಯ್ಗೆ ವ
ರ್ಪುದುಮನಗಾಧ ಮನ್ಮಥಸಮುದ್ರದ ಮಧ್ಯದ ಬಾಳೆ ಕೆಯ್ಗೆ ವ
ರ್ಪುದುಮನವೋಘುಮಿಚ್ಚಯಿಪನಿಚ್ಚಯಿಪೊಂ ಹಯಶೃಂಗಚಾಪಮಂ ॥ ೯೭ ॥

ಇನಿತೆನಗಿಂಬುಕೆಯ್ದಿನಿತು ಬೆಳ್ಪಿನಿತೊಳ್ದಿಳಿದೆನ್ನನಿನ್ನುಮೊ
ರ್ವನೊಳಿವಳಿಂದೊಡಂಬಡುವಳೆಲ್ಲಿಯ ಬಾೞ್ನೆಗೆಂಬ ಪಂಬಲಿಂ
ಮನದೊಳಟಿಲ್ದು ಚಿಂತಿಸಿ ಕಟಿಲ್ದು ಬಟಿಲ್ದು ಕನಲ್ದೊನಲ್ದು ಬೆ
ಳ್ಪೆನಿಸುವ ಬೆಳ್ಳಬೇರನಗುೞ್ದಾಗಸ[2]ಕೆ[2]ತ್ತದೆ ಸೂಳೆ ಮಾಣ್ಗುಮೇ ॥ ೯೮ ॥

ಮನಸಿಜಮಂತ್ರದೇವತೆಯರಂಗನೆಯರ್ ತದುದಾರಸಾರಸಾ
ಧನೆಗನುಸಾರಿಯಪ್ಪ ಸಕಲೀಕರಣಂಗಳವಾವುವೆನ್ನ ನ
ಚ್ಚಿನ ಸೊಬಗೆಂತುಮಾಗೆ ತನಗೆನ್ನದ ನಿಶ್ಚಯಮಪ್ಪ ದಾನಮಂ
ಜನಿತನಿತಿಲ್ಲದೋದೆ ಗಣಿಕಾಜನ ಸಾಧನ ಸಿದ್ಧಿಯಕ್ಕುಮೇ ॥ ೯೯ ॥

ವ॥ ಎಂದು ನುಡಿವ ಪೂರ್ವಪರಪಕ್ಷಂಗಳೊಳ್ ಪಕ್ಷನಿರ್ಣಯಮಪ್ಪಿನಂ ಪೊಗೞ್ದು ಪಾಪೇಭಕಂಠೀರವನಪ್ಪ ವಜ್ರಾಯುಧಂ ನಾಗರಕಾದಿಗಳ್ವೆರಸು ಪೆ[3][ಜ][3]ತೊಂದು ವಿಳಾಸಿನೀವಾಟದೊಳಗನೆ ಬರೆವರೆ ಮತ್ತೊಂದೆಡೆಯೊಳ್—

ವ॥ ಈ ವೇರಿಗೆ ಸ್ತ್ರೀಯರ ಪ್ರಣಯವನ್ನು ಹೀಗಳೆಯದೆ ನುಡಿಯಲಾಗಿ, ಅದನ್ನು ಅಲ್ಲಗಳೆದು ಗುತ್ತಿಗೆದಾರ ವಿಟನಾದ ವರ್ತಕನು ಹೀಗೆಂದನು:

೯೭. "ಮನ್ಮಥರಸವು ಪೂರವಾಗಿ ಹರಿಯಲು ತೃಪ್ತಿಹೊಂದಬೇಕು ; ಆಸೆ ತಣಿಯಬೇಕು. ಹಾಗಲ್ಲದೆ (ಇನ್ನೂ ಬೇಕು, ಇದಕ್ಕೂ ಮೇಲಾದುದು ಬೇಕು ಎಂದು) ಹಂಬಲಿಸಿ ಹಾತೊರೆಯುವುದು ಅವಿವೇಕ. ಸಮುದ್ರ ಮಧ್ಯದಲ್ಲಿ ಬಾಳೆಮೀನು ಕೈಗೆಟುಕಬಲ್ಲುದೆ ? ಅಗಾಧವಾದ ಮನ್ಮಥಸಮುದ್ರದ ಮಧ್ಯದಲ್ಲಿ ಶ್ರೇಷ್ಠಳಾದ ಬಾಲೆ ಕೈವಶವಾಗಬಲ್ಲಳೆ ? ಇವೆರಡನ್ನು ಬಯಸುವುದೂ ಕುದುರೆಯ ಕೋಡನ್ನು ಬಯಸುವುದೂ ಒಂದೆಯೆ.

೯೮. 'ನನ್ನನ್ನು ಇಷ್ಟೊಂದು ಸಂತೋಷಪಡಿಸಿ ಇಷ್ಟೊಂದು ಸ್ಪಷ್ಟವಾಗಿ ನನ್ನ ಅಂತರಂಗವನ್ನು ತಿಳಿದವಳಾಗಿ ಇದ್ದರೂ ಈಕೆ ಇನ್ನೂ ಒಬ್ಬನನ್ನು ಒಪ್ಪಿಕೊಳ್ಳುವಳಲ್ಲಾ—ಇನ್ನು ನನಗೆಲ್ಲಿಯ ಬಾಳು ?' ಎಂಬ ಹಂಬಲಿಕೆಯಿಂದ ಮನಸ್ಸಿನಲ್ಲಿ ನೊಂದುಕೊಂಡು, ಚಿಂತಿಸಿ, ಕೊರಗಿ, ಕರಗಿ, ಕುದಿದು, ಕೋಪಗೊಂಡು ಚಡಪಡಿಸುತ್ತಿರುವ ಮೂರ್ಖನನ್ನು ಕಂಡ ಸೂಳೆ ಆತನ ಬೇರನ್ನು ಅಗೆದು ಆಕಾಶಕ್ಕೆ ಎತ್ತದೆ ಇರುವಳೆ ?

೯೯. ಸ್ತ್ರೀಯರು ಮನ್ಮಥನ ಮಂತ್ರದೇವತೆಯರು. ಅವರಲ್ಲಿಯ ಸಾರಸರ್ವಸ್ವವನ್ನು ಪಡೆಯಬೇಕಾದರೆ ಅದಕ್ಕೆ ಅನುಕೂಲವಾದ ಸಾಧನ ಸಂಪತ್ತುಗಳು ಯಾವುವು ಎಂಬುದನ್ನು ಅರಿತುಕೊಂಡು ತನ್ನ ಸ್ನೇಹದ ಸೊಗಸಿಗೆ ತಕ್ಕಂತೆ ಕೃಪಣತೆಯಿಲ್ಲದೆ ನಿಶ್ಚಿತವಾಗಿ ಅವರಿಗೆ (ಧನ, ದ್ರವ್ಯ, ಆಭರಣ, ವಸ್ತ್ರಾದಿಗಳನ್ನು) ದಾನಮಾಡಬೇಕು. ಹೀಗಲ್ಲದೆ ವೇಶ್ಯಾಜನವನ್ನು ಒಲಿಸಿಕೊಳ್ಳುವುದು ಸಾಧ್ಯವೆ ?"

ವ॥ ಹೀಗೆ ಪೂರ್ವಪಕ್ಷ ಪರಪಕ್ಷಗಳೆರಡನ್ನೂ ನುಡಿದುದನ್ನು ಕೇಳಿ, ಪಕ್ಷನಿರ್ಣಯವಾಗಲು ಹೊಗಳಿ, ವಜ್ರಾಯುಧನು ನಾಗರಕಾದಿಗಳೊಡನೆ ಬೇರೊಂದು ವೇಶ್ಯಾವಾಟವನ್ನು ಪ್ರವೇಶಿಸಿದನು. ಅಲ್ಲಿ ನಡೆಯುತ್ತಿರುವಾಗ ಒಂದೆಡೆಯಲ್ಲಿ—

1. ಣ (ಅ) 2. ಗೆ (ಮ) 3. ರ (ಮ)

ಉ॥ ಕೂಡಿದ ಕೂಟದಿಂದೊಲಿಸಿದಿರ್ವರುಮಂ ಸಮಪಾತವಾರಿಯಿಂ
ಕೋಡೆ ಸರಾಗದೊಳ್ ಮುಟುಗಿ [1]ಮೂಡೆ[1] ಮೃಗಾಂಕಕರಂ ಪಯೋರಸಂ
ತೀಡುವ ತೆಂಬೆಲರ್ ಮನದೊಳುರ್ಕೆಗಳಂ ಸುರತಾವಸಾನದೊಳ್
ಮಾಡೆ ರತಕ್ಕೆ ಮತ್ತೆ ಬಗೆದಂದುದು ದಂಪತಿ ಸೌಧಕೂಟದೊಳ್ ॥ ೧೦೦ ॥

ಚಂ॥ ಶಕಟನಿರವಕ್ಕೆ ಕಂಠರುತಿ ಕೂಟದೊಡಂಬಡಿನೊಳ್ ನಿವಿರ್ಚೆ ಗಾ
ಯಕತೆಯನಾಡೆ ತಾಳದ ಲಯಕ್ಕಲಕಾಳಿ ತಗುಳ್ದು ತಾಡನಾ
ಸಕಮನುವಾದಿಯಾಗಿ ಮೊಟಗುತ್ತಿರೆ ಮನ್ಮಥಸೂತ್ರಧಾರ ನಾ
ಟಕರವಮುಣ್ಮುವಂತೆ ಸುರತಾರವಮುಣ್ಮಿದುದೊಂದು ಗೇಹದೊಳ್ ॥ ೧೦೧ ॥

ವ॥ ಮತ್ತಮಾ ಸೂಳೆಗೇಱಯೆರಡೋಳಿಯೊಳ್—

ಮ॥ ಲಸದಾಸ್ಯೋದಯಮಿಂದುಬಿಂಬದುದಯಂ ತಾನಾಗೆ ಖೇದಶ್ರಮ
ಶ್ವಸಿತಂ ಮಾರುತಮಾಗೆ ತೋಳ್ ತೆರೆಗಳಾಗಕ್ಷಿಭ್ರಮಂ ಮೀನವ್ರಂ
ದಸಮುದ್ವರ್ತನಮಾಗೆ ನಿರ್ಭರರತೋದೀರ್ಣಾರ್ಣವಂ ಘೂರ್ಣಿಸಲ್
ಪಸಗಿತ್ತೆಂದು ವಿಚಿತ್ರಚಿತ್ರಿತ ಸುಧಾಶ್ರೀ ರಮ್ಯಹರ್ಮ್ಯಂಗಳೊಳ್ ॥ ೧೦೨ ॥

ವ॥ ಅಂತು ಶೃಂಗಾರರಸಪೂರ ಪ್ರವಾಹಮಂ ದಾಂಟಿ ಬರೆವರೆ ಮುಂದೊಂದೆಡೆಯೊಳ್—

ಚಂ॥ ಬೆಸವರಿಗೆಯ್ದು ಬೇಸ[2][ಱ][2]ಸುವಿತ್ತುದನೆತ್ತುವ ಮೇಗುದೋರ್ಪ ಕಂ
ಟಿಸುವ ಕನಲ್ದು ಕಡ್ಡಯಿಸುವೇಱದನಂ ತಿಳಿಪಲ್ ಮನಂಗೊಳಲ್
ಬಸಯಿಸಲಿಂಬುಕೆಯ್ಸಲೊಳಪೊಯ್ಸಲೊಡಂಬಡಿಸಲ್ ಪ್ರಮೋದಮಂ
ಪೊಸಯಿಸಲಾಱಸಲ್ ನೆರೆದುಮೊಲ್ಲದೆ ಚಿತ್ತಮುದಾತ್ತ ಚಿತ್ರೆ[3]ಯಾ[3] ॥ ೧೦೩ ॥

---

೧೦೦. ಒಲಿದು ಒಲಿಸಿಕೊಂಡ ದಂಪತಿಗಳು ಸಮರತಿಯಲ್ಲಿ ಬೆರೆತು ಸಂತೋಷದಲ್ಲಿ ಮುಳುಮುಳುಗಿ ಏಳುತ್ತಾ ಸುರತಕ್ರೀಡೆಯನ್ನು ಮುಗಿಸಿ ಒರಗಿರುವಾಗ ಚಂದ್ರನ ಕಿರಣ ಹಾಗೂ ದಕ್ಷಿಣದ ಮೆಲ್ಗಾಳಿಯ ಸ್ಪರ್ಶದಿಂದ ಮತ್ತೆ ಉದ್ರಿಕ್ತರಾಗಿ ರತಿಕ್ರಿಯೆಗೆ ಮನಸ್ಸುಮಾಡಿದರು.

೧೦೧. ಕೂಟದ ಗತಿಯಲ್ಲಿ ಮಂಚದ ಗಿಲಿಗಿಲಿಯೊಡನೆ ಕಂಠಧ್ವನಿಯೂ ಸೇರಿ ಗಾಯನವಾಗಲು, ತಾಳದ ಲಯಕ್ಕನುಸಾರವಾಗಿ ತಲೆಗೂದಲು ಕುಣಿದಾಡಲು, ತಾಡನವು ಅನುವಾದಿಯಾಗಲು ಮನ್ಮಥನೆಂಬ ಸೂತ್ರಧಾರನು ಆಡಿಸುವ ನಾಟಕ ಧ್ವನಿ ಹೊಮ್ಮುವಂತೆ ಒಂದು ಮನೆಯಲ್ಲಿ ಸುರತ ಧ್ವನಿ ಹೊಮ್ಮಿತು.

ವ॥ ಮತ್ತು ಆ ಸೂಳೆಗೇರಿಯ ಎರಡೂ ಸಾಲುಗಳಲ್ಲಿ—

೧೦೨. ನಾನಾ ಬಗೆಯ ಸುಂದರವಾದ ಚಿತ್ರಗಳಿಂದ ಸಮೃದ್ಧವಾದ ಭವ್ಯಮಹಲುಗಳಲ್ಲಿ ಒಪ್ಪವಾದ ಮುಖ ವಿಕಾಸವೆ ಚಂದ್ರೋದಯ, ಸುರತ ಶ್ರಮದಿಂದ ಬರುವ ದೀರ್ಘವಾದ ಉಸಿರೆ ಬೀಸುವ ಗಾಳಿ, ತೋಳುಗಳೆ ತೆರೆ, ಚಂಚಲವಾದ ಕಣ್ಣುಗಳೆ ಚಲಿಸುವ ಮೀನುಗಳು—ಹೀಗೆ, ಸುರತವೆಂಬ ಮಹಾಸಮುದ್ರವು ಮೊರೆಯುತ್ತಾ ರಭಸದಿಂದ ಉಕ್ಕುತ್ತಿತ್ತು.

ವ॥ ಹೀಗೆ ಶೃಂಗಾರ ರಸದ ಮಹಾಪೂರವನ್ನು ದಾಟಿ ಬರುತ್ತಿರಲಾಗಿ ಮುಂದೆ ಒಂದು ಪ್ರದೇಶದಲ್ಲಿ—

೧೦೩. ಬೇಸರಿಸುವ, ಕೊಟ್ಟುದನ್ನು ಮರಳಿ ತೆಗೆದುಕೊಳ್ಳುವ, ತಾನೆ ಹೆಚ್ಚಿನವನೆಂದು ಜಂಬ ತೋರುವ, ಕಾಡುವ, ಕೋಪಗೊಂಡು ಪೀಡಿಸುವ ಹೀನ ವಿಟನನ್ನು ಹಿಡಿದು ಸಂತೈಸಿ, ಮನವೊಲಿಸಿ, ಆತನನ್ನು ಪೂರ್ಣವಾಗಿ ವಶಪಡಿಸಿಕೊಂಡು ಒಡಂಬಡಿಸಲೂ ಸಂತೋಷವನ್ನುಂಟುಮಾಡಲೂ ಸಮರ್ಥಳಾದರೂ ಕೂಡ ಒಬ್ಬ ಉದಾತ್ತ ಚಿತ್ತದ ಚತುರೆಗೆ ಮನಸ್ಸೇ ಒಪ್ಪದೆ ಬೇಸರವಾಯಿತು.

---

1. ಮೂಡಿ (ಮ) 2. ರ (ಮ) 3. ಯೋ (ಅ)

ವ॥ ಮತ್ತೊಂದೆಡೆಯೊಳ್—

ಉ॥ ಕೂರ್ಮೆಯ ಪೆರ್ಮೆ ಸಕ್ಕಸಮನಾಗೆ ಸುಖಾಮೃತಮೊರ್ವರೊರ್ವರೊಳ್
ನೂರ್ಮಡಿ ಕೂಡೆ ಕೂಡಿ ಪೊಱಮಟ್ಟೆಲರ್ಗೊಡ್ಡಿ ನಿಜಾಂಗಮಂ ಸ್ರವ
ದ್ಘರ್ಮಜಲಾರ್ದ್ರೆ ಕೆಯ್ಗೞಿಯೆ ಕಣ್ಗೆಸದೊಪ್ಪಿದಳೊರ್ವಳೋಪನಂ
ನೆರ್ವಿದ ಬಾಳಿ ಕತ್ತುರಿಯ ನೀರ್ದಳಿದುತ್ಪಳಮಾಳೆಯಂದಮಂ ॥ ೧೦೪ ॥

ವ॥ ಪೆಱತೊಂದು ತಾಣದೊಳವಜಱಿವಾದ ಪಱಪೇಟದಿ ನಿಲ್ಲದ ದೋಷಮನಿ(ಲ್ಲ)ಟ್ಟಲ್ಲಣಿಗೆ ಮುಳಿಸಂ ಮುಳಿದೊಲ್ಲದೆ ಪೋಪನನೆರಡಿಲ್ಲದೆ ನಲ್ಲಳ್ ಪಿಡಿದು ನಿಂದು—

ಚಂ॥ ಅನುವಿಪ ತಾಯ ಬಾರಿಸುವ ತಂದೆಯ ಕಾಯ್ಪಿನೊಳೆಕ್ಕೆಗುಟ್ಟುವ
ಕ್ಕನ ಪಡಪೆತ್ತಿ ಬಯ್ವ ಕಿಱುದಂಗೆಯ ಕಣ್ಣೊಳೆ ಕೀಱಿ ಕಲ್ಪಿಪ
ಣ್ಣನ ಬಿಯಕಿಲ್ಲದವ್ವಳಿಪ ತಮ್ಮನ ತೀನಿಗೆ ಮೆಯ್ಯನೊಡ್ಡಿ ನಿ
ನ್ನನೆ ಪಿಡಿದೆನ್ನ ನಲ್ಮೆಗಿದೆ ತಕ್ಕುದೆ ನಲ್ಮೆಗೆ ದೋಷಮಾಗದೇ ॥ ೧೦೫ ॥

ವ॥ ಎಂದು ತನ್ನ ಸದ್ಭಾವಮನೆ ನುಡಿದು ಕಣ್ಣ ನೀರ ಕಾಟ್ಪುರದಿನೊಳಗುಮಾಡಿ ನಿಱಿಸಿದಳ್ ಬೇಱೊಂದೆಡೆಯೊಳ್ ಅನೇಕವಿಧ ನಿಧುವನಾವಸಾನದೊಳ್ ಬೆಮರನಾಱಿಸಲ್ ಪೊಱಮಟ್ಟು—

ಉ॥ ಭಂಗುರಕೇಶಪಾಶೆ ತನುಮಧ್ಯೆ ಮೃಗಾಕ್ಷಿ ವಿಟಂ **ನಿಜಾಂಘ್ರಿಪ**
ದ್ಮಂಗಳ ಮೇಲೆ ಪೊಯ್ಯೆ ಕರಕಾಂಬುವನಂ**ಗಣದೊಳ್** ವಿಲಾಸಮ
ದ್ಭಂಗಿಯನಾಳ [ವಾಳ] ಪರಿವಾರಿತ **ಮೂಳತಳೋ**ಪಮಾನದಿಂ
ದಾಂಗುಡಿವಿಟ್ಟ ಜಂಗಮ ಮನೋಜಲತಾಕೃತಿಯೊಪ್ಪೆ ತೋಱಿದಳ್ ॥ ೧೦೬ ॥

ವ॥ ಮತ್ತೊಂದು ಸ್ಥಳದಲ್ಲಿ—

೧೦೪. ಅನುರಾಗದ ಆಧಿಕ್ಯ ಪರಸ್ಪರರಲ್ಲಿ ಸರಿಸಮಾನವಾಗಿ ಸುಖವಿಬ್ಬರಿಗೂ ನೂರುಮಡಿಯಾಗಿ ಹೊಮ್ಮುವಂತೆ ರತಿಯನ್ನು ಅನುಭವಿಸಿದ ಬಳಿಕ, ಬೆವರು ಸುರಿಯುತ್ತಿರುವ ತನ್ನ ದೇಹವನ್ನು ಗಾಳಿಗೆ ಒಡ್ಡಿ ನಲ್ಲನನ್ನು ಒರಗಿದ ಯುವತಿ ಕಸ್ತೂರಿಯ ನೀರು ಚಿಮುಕಿಸಿದ ಬೆಳ್ದಾವರೆಯ ಮಾಲೆಯೋ ಏನೋ ಎಂಬಂತೆ ಅತಿ ಮನೋಹರವಾಗಿ ಕಂಡಳು.

ವ॥ ಇನ್ನೊಂದೆಡೆಯಲ್ಲಿ ಬೇಸರವಾದ ಹಳೆಯ ಪ್ರಣಯದಿಂದಾಗಿ ಇಲ್ಲದ ದೋಷವನ್ನು ಹೊರಿಸಿ ಸುಮ್ಮ ಸುಮ್ಮನೆ ಕೋಪಿಸಿಕೊಂಡು ಹೊರಟುಹೋಗುವ ನಲ್ಲನನ್ನು ನಿಷ್ಕಪಟಿಯಾದ ಆತನ ನಲ್ಲೆ ಹಿಡಿದು ನಿಂತು—

೧೦೫. "ಬೇಡವೆಂದು ಬೇಡಿಕೊಳ್ಳುವ ತಾಯಿ, ನಿರ್ಬಂಧಿಸುವ ತಂದೆ, ಸಿಡಿಮಿಡಿಗೊಂಡು ಗೊಣಗುಟ್ಟುವ ಅಕ್ಕ, ತನ್ನ ಗಳಿಕೆಯನ್ನು ತೋರಿ ಹಂಗಿಸಿ ಬಯ್ಯುವ ತಂಗಿ, ಕಣ್ಣು ಕೆಕ್ಕರಿಸಿ ಬುದ್ಧಿಗಲಿಸುವ ಅಣ್ಣ, ವೆಚ್ಚಕ್ಕೆ ದುಡ್ಡಿಲ್ಲದೆ ಬಂದು ಕಾಡುವ ತಮ್ಮ—ಇವರೆಲ್ಲರನ್ನು ಎದುರುಹಾಕಿಕೊಂಡು ನಿನ್ನನ್ನೇ ಆಶ್ರಯಿಸಿದ ನನ್ನ ಒಲವಿಗೆ ಇದು ಸರಿಯೆ ? ನಿನ್ನ ಈ ವರ್ತನೆ ನಲ್ಲತನಕ್ಕೆ ದೋಷವಲ್ಲವೆ ?"

ವ॥ ಎಂದು ತನ್ನ ಒಳ್ಳೆಯ ಭಾವವನ್ನೆ ನುಡಿದು ಕಣ್ಣೀರ ಪೂರದಿಂದ ಅವನನ್ನು ತಡೆಗಟ್ಟಿ ನಿಲ್ಲಿಸಿದಳು. ಇನ್ನೊಂದೆಡೆಯಲ್ಲಿ ವಿಧವಿಧವಾಗಿ ರತಿಸುಖವನ್ನು ಅನುಭವಿಸಿಯಾದ ಮೇಲೆ ಬೆವರನ್ನಾರಿಸಿಕೊಳ್ಳಲೆಂದು ಹೊರ ಬಂದು ನಿಂತಾಗ—

೧೦೬. ಗುಂಗುರು ಗುಂಗುರಾದ ಕೇಶರಾಶಿಯನ್ನು ಹರಡಿಕೊಂಡು ಬಳಕುವ ಸೊಂಟದ ಆ ಚಂಚಲಾಕ್ಷಿಯ ಪಾದಕಮಲಗಳ ಮೇಲೆ ಆಕೆಯ ನಲ್ಲನು ತಂಪಾದ ನೀರನ್ನು ಸುರಿಯಲಾಗಿ ವಿಲಾಸದ ಭಂಗಿಯಲ್ಲಿ ನಿಂತ ಆ ಚೆಲುವೆ ತುಂಬಿದ ಪಾತಿಯ ಮಧ್ಯೆ ಕುಡಿ ಚಾಚಿ ನಿಂತ ಮನ್ಮಥನ ಜಂಗಮಲತೆಯೋ ಏನೋ ಎಂಬಂತೆ ಮೋಹಕವಾಗಿ ತೋರಿದಳು.

ವ॥ ಆದಸುತ್ತೇಕ್ಷಿಸಿ ನೋಡುತ್ತುಂ ಪೋಗಿ ಮತ್ತೊಂದೆಡೆಯೊಳ್ ತನಗರಡಿಲ್ಲದೋಪನ ವಿಯೋಗದೊಳ್ ಚಿಂತಾಕ್ರಾಂತೆಯಾಗಿ[1]ರ್ದು[1] ಕೆಳದಿಗಿಂತೆಂದಳ್—

ಚಂ॥ ಇನಿಯನಗಲ್ದು ತಾನೆನಿತು ದೂರದೊಳಿರ್ದೊಡಮೆನ್ನ ಚಿತ್ತಮಾ
ತನೊಳೆಸೆದಿರ್ದುದಾತನ ಮನಂ ದಲ್[2]ದೆ[2]ನ್ನೊಡನಿರ್ದು[3]ದಿರ್ವರುಂ[3]
ನೆನೆವುದದೇಕೆ ಚಿಂತಿಸುವುದೇಕೆ ಪಲುಂಬುವುದೇಕೆ ಸೋವುದೇ
ಕೆನಗಿದು ವಿಸ್ಮಯಂ ಕೆಳದಿ ನೀಂ ತಿಳಿವಂತಿರೆ ಪೇೞಲಾಗದೇ ॥ ೧೦೭ ॥

ವ॥ ಎಂದು ತನ್ನ ಕೆಳದಿಗೆ ಪೇೞ್ದು ಮನಮಂ ಬಲಿದು ತನ್ನಂ ತಾನೆ ಸಂತಯಿಸಿದಳ್ ಮತ್ತೊಂದೆಡೆಯೊಳಗಲ್ದು ಪರದೇಶಕ್ಕೆ ಪೋದ ನಲ್ಲಂ ಬಂದು ತನ್ನ ವಿಯೋಗದೊಳ್ ಬಡವಾದ ನಲ್ಲಳ ಬಡವಾದಂದಮಂ ಬೆಸಗೊಳಲಾಕೆಯಿಂತೆಂದಳ್—

ಚಂ॥ ಮನಸಿಜನೋವದೆನ್ನ ಮನಮಂ ಮೊನೆಯಂಬುಗಳಿಂದಮೆಚ್ಚೊಡಾಂ
ಮನದೊಳಗಿರ್ದ ನಿನ್ನನವು ಕೊಳ್ಗುಮೆಗೆತ್ತು ದಲಂಜಿ ನೋಡ ನ
ಲ್ಲನೆ ಬಡವಾದೆನುಂತು ಬಡವಪ್ಪೆನೆ ಪೂವಿನ ಬಾಣಮುರ್ಚೆ ನೋ
ವೆನೆ ಸಲೆ ಪೂವಿನಂಬು ಕೊಳೆ ನೋವವರಾರ್ ಜಗದೊಳ್ ಮನಃಪ್ರಿಯಾ ॥ ೧೦೮ ॥

ವ॥ ಎಂದು ತನ್ನೆರದಿಲ್ಲದ ನಲ್ಮೆಯುಮಂ ಪೇೞೆ ನಾಗರಕಾದಿಗಳಾಕೆಯ ಮಾತಂ ಕೇಳ್ದು ಮೆಚ್ಚುತ್ತುಂ ಪೋಗಿ —

ವ॥ ಅದನ್ನು ಬಣ್ಣಿಸಿ ಹೊಗಳುತ್ತ ಹೋಗಲಾಗಿ—ಬೇರೊಂದು ಸ್ಥಳದಲ್ಲಿ ಅನನ್ಯಭಾವದಿಂದ ಒಲಿದ ತನ್ನ ನಲ್ಲನ ಅಗಲಿಕೆಯಿಂದ ಚಿಂತೆಗೀಡಾದವಳೊಬ್ಬಳು ತನ್ನ ಸಖಿಗೆ ಹೀಗೆಂದಳು :

೧೦೭. "ನಲ್ಲನು ನನ್ನನ್ನಗಲಿ ಎಷ್ಟು ದೂರದಲ್ಲಿ ಇದ್ದರೇನು ? ನನ್ನ ಮನಸ್ಸು ಆತನಲ್ಲಿಯೆ ನೆಲಸಿದೆ ; ಆತನ ಮನಸ್ಸು ನನ್ನೊಡನೆಯೆ ಇದೆ. ಹೀಗಿರುವಾಗ ನಾವಿಬ್ಬರೂ ನೆನೆಯುವುದೇತಕ್ಕೆ ? ಚಿಂತಿಸುವುದೇಕೆ ? ಹಲುಬುವುದೇಕೆ ? ದುಃಖಿಸುವುದೇಕೆ ? ನನಗಿದು ದಿಗ್ಭ್ರಮೆಯಾಗಿದೆ. ಗೆಳತಿಯೆ, ಇದನ್ನು ನನಗೆ ತಿಳಿಯುವಂತೆ ಹೇಳಬಾರದೆ ?"

ವ॥ ಹೀಗೆಂದು ಗೆಳತಿಗೆ ಹೇಳಿ ಮನಸ್ಸನ್ನು ಗಟ್ಟಿಮಾಡಿಕೊಂಡು ತನ್ನನ್ನು ತಾನೆ ಸಂತೈಸಿಕೊಂಡಳು. ಮತ್ತೊಂದು ಎಡೆಯಲ್ಲಿ ಪ್ರೇಯಸಿಯನ್ನು ಬಿಟ್ಟು ಪರದೇಶಕ್ಕೆ ಹೋಗಿದ್ದ ನಲ್ಲನು ಮರಳಿಬಂದು ತನ್ನ ವಿರಹದಿಂದ ಕೊರಗಿ ಬಡವಾದ ನಲ್ಲೆಯ ಸ್ಥಿತಿಯನ್ನು ಕಂಡು "ಅದೇಕೆ ಸೊರಗಿದೆ ?" ಎಂದು ಕೇಳಿದನು. ಆಕೆ ಹೀಗೆಂದಳು :

೧೦೮. "ಕಾಮನು ನಿಷ್ಕರುಣನಾಗಿ ನನ್ನ ಮನಕ್ಕೆ ಹರಿತವಾದ ಬಾಣಗಳನ್ನು ಎಸೆಯಲಾಗಿ ಮನದೊಳಗೆ ಇರುವ ನಿನ್ನನ್ನು ಎಲ್ಲಿ ಅವು ಇರಿಯುವುವೊ ಎಂದು ಅಂಜಿ ಚಿಂತಿಸುತ್ತ ನಾನು ಸೊರಗಿಹೋದೆನು. ಸುಮ್ಮನೆ ಸೊರಗುವೆನೆ ? ಪುಷ್ಪ ಬಾಣದ ಇರಿತಕ್ಕೆ ನಾನು ನೊಂದುಕೊಳ್ಳುವೆನೆ ? ಮನಃಪ್ರಿಯನೆ, ಹೂಬಾಣ ತಾಗಿತೆಂದು ನೊಂದುಕೊಳ್ಳುವವರಾರು ಈ ಜಗತ್ತಿನಲ್ಲಿ ?"

ವ॥ ಹೀಗೆ ಅನನ್ಯವಾದ ತನ್ನ ಅನುರಾಗವನ್ನು ಆಕೆ ಹೇಳಲಾಗಿ ನಾಗರಿಕಾದಿಗಳು ಆಕೆಯ ಮಾತನ್ನು ಕೇಳಿ ಮೆಚ್ಚುತ್ತ ಹೋದರು.

---

1. ರ್ದ (ಮ) 2. ದಿ (ಅ) 3. ದಿರ್ಪೆಮುಂ (ಅ)

ಚಂ॥ ಬಳೆದು ಪೊದಟ್ದ ಮನ್ಮಥರಸಾಸವದಿಂ ಸಮಸಂದ ಸೊರ್ಕುಗಳ್
ತಿಳಿವಿನಮಗ್ಗಳಂ ಪ್ರಣಯಮಗ್ಗಳಮಿರ್ವರ ಮೆಚ್ಚಿದಂದಮ
ಗ್ಗಳಮಳವಗ್ಗಳಂ ಮಸಕಮಗ್ಗಳಮಟ್ಕಱಿಳರ್ಕೆ ಪೆರ್ಚುಕ
ಣ್ಣೊಳೆ ಬೆಳಗಾಯ್ತು ದಂಪತಿಗೆ ಪೆಂಪಿನಲಂಪಿನ ಸಾಂಪ್ರಯೋಗದೊಳ್ ॥ ೧೦೯ ॥

ವ॥ ಅಂತು ಬೆಳಗಪ್ಪುದಂ ದೀನಜನತಾಕಲ್ಪಾಂಘ್ರಿಪಕನಪ್ಪ ವಜ್ರಾಯುಧ ಯುವರಾಜಂ ತನ್ನೊಡನೆಯ ನಾಗರಕಾದಿಗಳ್ವೆರಸು ರಾಜಮಂದಿರಮಂ ಪೊಕ್ಕು ತಾಂಬೂಲ ಮಾಲ್ಯಾನುಲೇಪನ ಫಲಾವಳಿ ಪುರಸ್ಸರಂ ವಯಸ್ಯರಂ ವಿಸರ್ಜಿಸಿ ಯಾಮಿನೀಚರಮಯಾಮಮರ್ಧಾವ ಶೇಷಮುಂಟೆನೆ ಮುಂಸೂಟ್ಗಿ ವಂದಿರ್ದ ಪ್ರಾಣೇಶ್ವರಿಯುಂ ತಾನುಂ ಮಂಜುಳಶ್ರೀ ಮಂಚದೊಳಿರೆ—

ಚಂ॥ ರಜನಿ ವಿನೋದನಕ್ಕೆ ಮುಳಿದಿರ್ಪ ಲತಾಂಗಿಯನಪ್ಪುಕೆಯ್ದು ಸಾ
ಮಜಪತಿ ಪೊಕ್ಕು ಪಕ್ಕುವಿಡಿಯಂ ನಡೆ ಸೋಂಕುವವೋ[1]ಲ್ಸ[1]ರೋಜ ಪಂ
ಕಜ ಮುಕುಳಕ್ಕೆ ವಕ್ಷಮಮರ್ದೊಪ್ಪಿರೆ ತ[2][ಳ್ತ][2]ಮರ್ದಪ್ಪೆ ಕೋಪಮಂ
ಗಜರಸಪೂರದೊಳ್ ತೊಡೆದವೋಲ್ ತಳರ್ದತ್ತು ನೃಪೇಂದ್ರಕಾಂತೆಯಾ ॥ ೧೧೦ ॥

ವ॥ ಅಂತೋಪಳ ಕೋಪಮಂ ಕಳೆದು ಕಳಮಧುರತರ ಮನೋಹರ ಸಂಭೋಗಾವಸಾನದೊಳೆರಡು ಗಳಿಗೆಯುಂಟೆನೆ ಪೆಱರ ಸೂಟ[3]ೞಳಮ[3]ಱಿಯ[3]ಲೀಯದನುಭವಿಸಲ್ ಬಂದ ನಿದ್ರಾಂಗನೆಗಭಿಮುಖನಾಗಿ ನೆಗಟ್ದುರ್ವರಾಸ್ಯತಿಲಕನಪ್ಪ ವಜ್ರಾಯುಧಂ ಪವಡಿಸೆ—

---

೧೦೯. ಅತಿಶಯವಾಗಿ ಹೊಮ್ಮಿದ ಮನ್ಮಥರಸವೆಂಬ ಮದ್ಯದಿಂದ ಏರಿ ಬರುವ ಮದ, ಆ ಮತ್ತು ಇಳಿಯುತ್ತಿರುವಂತೆಯೆ ಉಂಟಾಗುವ ಪ್ರಣಯ ಅತ್ಯಧಿಕವಾದುದು; ಪರಸ್ಪರರ ಮೆಚ್ಚಿಕೆ ಅತಿಶಯವಾದುದು; ಆಸಕ್ತಿಯ ಬಲ ಅಧಿಕ ; ರಭಸ ಅಧಿಕ ; ಅನುರಾಗದ ಆವೇಶ ಅಧಿಕ—ಹೀಗೆ ಒಂದಕ್ಕೊಂದು ಹೆಚ್ಚುತ್ತಿರುವ ದಂಪತಿಗಳಿಗೆ ಸುರತ ಸಂಭ್ರಮದ ಸಂತೋಷದಲ್ಲಿ ಬೆಳಗಾದುದೆ ತಿಳಿಯಲಿಲ್ಲ.

ವ॥ ಹೀಗೆ ಬೆಳಗಾಗಲಾಗಿ ವಜ್ರಾಯುಧ ಕುಮಾರನು ತನ್ನ ನಾಗರಕಾದಿ ಸಂಗಡಿಗರನ್ನೊಡಗೊಂಡು ಅರಮನೆಗೆ ಬಂದು, ತಾಂಬೂಲ, ಪುಷ್ಪಹಾರ, ಅನುಲೇಪನದ್ರವ್ಯ, ಫಲ ಮೊದಲಾದುವನ್ನು ಕೊಟ್ಟು ಮಿತ್ರರನ್ನು ಕಳಿಸಿಕೊಟ್ಟು, ರಾತ್ರಿ ಕಳೆಯುವುದಕ್ಕೆ ಇನ್ನು ಅರ್ಧ ಜಾವ ಮಾತ್ರ ಉಂಟೆಂಬ ಹೊತ್ತಿಗೆ ಈ ಮೊದಲೆ ಬಂದು ಮಲಗಿಕೊಂಡಿದ್ದ ತನ್ನ ಪ್ರಾಣೇಶ್ವರಿಯ ಪಕ್ಕದಲ್ಲಿ ಸುಂದರವಾದ ಮಂಚವನ್ನೇರಲಾಗಿ—

೧೧೦. ರಾತ್ರಿ ವಿನೋದಕ್ಕಾಗಿ ತಾನು ಹೀಗೆ ಹೊರ ಹೋದುದನ್ನು ಕಂಡು ಮುನಿಸಿಕೊಂಡ ಕೋಮಲಾಂಗಿಯನ್ನು ಸಂತೈಸಿ ಒಪ್ಪಿಸಿ, ನಾಯಕಗಜವು ತನ್ನ ಹೆಣ್ಣಾನೆಯನ್ನು ಸೋಕುವಂತೆ, ತಾವರೆಯ ಮೊಗ್ಗುಗಳಂತಹ ಮೊಲೆಗಳಿಗೆ ತನ್ನ ಎದೆಯುಮರಿಸಿ ಬಿಗಿಯಾಗಿ ತಬ್ಬಿಕೊಂಡೊಡನೆ ಮನ್ಮಥರಸದ ಮಹಾಪೂರದಲ್ಲಿ ತೊಳೆದು ಹೋಯಿತೊ ಏನೊ ಎಂಬಂತೆ ಆ ಅರಸಿಯ ಕೋಪ ಹೊರಟುಹೋಯಿತು.

ವ॥ ಹೀಗೆ ನನ್ನ ನಲ್ಲೆಯ ಕೋಪವನ್ನು ನಿವಾರಿಸಿ ಸುಖಕರವಾದ ಸಂಭೋಗವನ್ನು ಅನುಭವಿಸಿ ರಾತ್ರಿ ಇನ್ನೂ ಎರಡು ಗಳಿಗೆಯಿರುವಾಗ ಬೇರೆಯವರ ಸಂಗಸುಖದಲ್ಲಿ ಇರಗೊಡದ ನಿದ್ರಾಂಗನೆ ಬರಲು ಅವಳೆಡೆಗೆ ಹೊರಳಿ ವಜ್ರಾಯುಧನು ಮಲಗಿದನು.

---

1. ಲು (ಮ) 2. ಟ್ಪ (ಮ) 3. ಠಠ (ಮ)

ಚಂ॥ ಉಗುಳ್ವ ಕಷಾಯ ಸೌರಭಮನಾರ್ದಳಿ ಪೀರ್ದುವು ಪಂಕಜಂಗಳೊ
ಳ್ಮುಗುಳ್ಗಳೊಳಂ ವಿಯೋಗದುಪವಾಸದ ಪಾರಣೆಗೆಂದು ಚಕ್ರವಾ
ಕಿಗೆ ರಮಣಂ ಮೃಣಾಳ ಕಬಳಂಗಳನಾಗಳೆ ಬಂದು ನೀಡಿ ಸಾ
ವಗಿಸಿದನಂಜಿ ಸಂಜೆಯೊಳಗುಳ್ಳ ಖಳರ್ ಪರೆದರ್ ಪ್ರಭಾತದೊಳ್ ॥ ೧೧೧ ॥

ವ॥ ಅಲ್ಲಿಂ ಬಟೆಯಂ —

ಕಂ॥ ಪನಿಪುಲ್ ಪಚ್ಚೆಯ ನೆಲಗ
ಟ್ಟಿನ ಮುತ್ತಿನ ರಂಗವಲಿಯ ತೆಱನು ಮನದೊಳ್
ಜನಯಿಸೆ ಶಶಿ ಮಸುಳೆ ಏನೂ
ತನ ರವಿರಥಪಾಂಸು ಪರಿಗತಂಬೋಲ್ ನಭದೊಳ್ ॥ ೧೧೨ ॥

ವ॥ ಮತ್ತಿನಿಸಾನುಂ ಬೇಗದಿಂ—

ಕಂ॥ ದೆಸೆಗಳ್ ಮೃಗಮದ ಕರ್ದಮ
ದೆಸಕದಿನಣ್ಪೆಕ್ಕಿ ಪಾಲೊಳೋಲಾಡಿದ ವೋ
ಲೆಸೆದಿರ್ದುವೊಯ್ಯನೊಯ್ಯನೆ
ಮಸುಳ್ದುವು ತಾರಗೆಗಳೊಣಗಿದಗೆಗಳ ತೆಱದಿಂ ॥ ೧೧೩ ॥

ವ॥ ತನದಂತರಮುದಯದೊಳ್ —

---

೧೧೧. ತಾವರೆಯ ಉತ್ತಮವಾದ ಅರಳು ಮೊಗ್ಗುಗಳ ನವಸುಂಗಧವನ್ನು ದುಂಬಿಗಳು ಮೊರೆಮೊರೆದು ಹೀರಿದುವು ; ವಿರಹದ ಉಪವಾಸಮಾಡಿದ ತನ್ನ ಚಕ್ರವಾಕಿಯ ಪಾರಣೆಗೆಂದು ಚಕ್ರವಾಕರಮಣನು ತಾವರೆ ನಾಳಗಳ ಆಹಾರವನ್ನು ಆಗಲೆ ಸಿದ್ಧಪಡಿಸಿಕೊಟ್ಟು ಸಂತೈಸಿದನು ; ಅಂಜಿಕೊಂಡು ಸಂಜೆಯಲ್ಲಿ ಅಡಗಿದ್ದ ಖಳರೆಲ್ಲ ಪ್ರಭಾತಕಾಲದಲ್ಲಿ ಹೊರಟುಹೋದರು.

ವ॥ ಅನಂತರ—

೧೧೨. ಪಚ್ಚೆಯ ನೆಲಗಟ್ಟಿನ ಮೇಲೆ ರಚಿಸಿದ ಮುತ್ತಿನ ರಂಗವಲಿಯೊ ಏನೊ ಎಂಬಂತೆ ಹಸಲೆಯ ಹುಲ್ಲರಿಗಳ ಕೊನೆಯಲ್ಲಿ ಕುಳಿತ (ಮಂಜಿನ) ಹನಿ ಶೋಭಿಸಿದುವು ; ಸೂರ್ಯರಥದ ದೂಳಿ ಮುಸುಕಿತೊ ಏನೊ ಎಂಬಂತೆ ಚಂದ್ರಬಿಂಬ ಮಸುಮಸುಕಾಯಿತು.

ವ॥ ಇನ್ನು ಕೆಲಸಮಯಾನಂತರ—

೧೧೩. ಕಸ್ತೂರಿಯ ಲೇಪವಿಕ್ಕಿ, ಅನಂತರ ಹಾಲಲ್ಲಿ ಆಡಿಸಿ ತೆಗೆದಂತೆ ದಿಕ್ಕುಗಳೆಲ್ಲ ಕಂಗೊಳಿಸಿದುವು ; ಒಣಗಿದ ಸಸಿಗಳಂತೆ ಮೆಲ್ಲಮೆಲ್ಲಗೆ ನಕ್ಷತ್ರಗಳು ಬಾಡಿ ಮಸುಳಿದುವು.

ವ॥ ಆಮೇಲೆ ಉದಯಕಾಲದಲ್ಲಿ—

ಕಂ॥ ಕರಮೊಪ್ಪಿದುದಂದು ಪುರಂ
ದರನೀಯೆ ಪುಳೋಮಸುತೆಯ ಕಟ್ಟಿದ ಕಂಠಾ
ಭರಣಕ್ಕೆ ತಗುಳ್ಚಿದ ಪ
ದ್ಮರಾಗ ನಾಯಕಮಿದೆಂಬಿನಂ ರವಿಬಿಂಬಂ ॥ ೧೧೪ ॥

ವ॥ ಅಂತು ನೇಸಱ್ ಮೂಡುವುದುಂ ಪಟುಪುಣ್ಯಪಾಠಕ ಸಮುಚ್ಚಾರ್ಯಮಾಣ ಮಂಗಳವಚನ ರಚನಾ ಸಮಾಕೃಷ್ಟ ಶ್ಲಥಬಾಹು ನಿದ್ರಾಲಿಂಗನ ವಿಮುಖನಾಗಿ ಸೆಜ್ಜೆಯಿಂದೆಟ್ದು ಪತ್ಯೂಷಕೃತ್ಯಮಂ ನಿರ್ವರ್ತಿಸಿ ಜಿನೇಂದ್ರ ಪಾದಾರವಿಂದ ಕೋಮಳದಳಾಯಮಾನಾಂಗುಳಿ ನಖದರ್ಪಣಾರ್ಪಿತಾನನೇಂದು ಪ್ರತಿಬಿಂಬಂ ತ್ರಿಲೋಕ ಶಿಖರ ಶೇಖರಂಗಷ್ಟಾಂಗಮೆಱಗಿ ಪೊಡಮಟ್ಟಷ್ಟವಿಧಾರ್ಚನೆಗಳಿನರ್ಚಿಸಿ ಲೋಕಗುರುವುಂ ನಿಜಗುರುವುಮಪ್ಪ ಕ್ಷೇಮಂಕರಾವನೀಶ್ವರಂಗವನತೋತ್ತಮಾಂಗನಾಗಿ ಕಂಡು ನಿತ್ಯನಿಯಮದಿನೋಲಗಿಸುತ್ತುಮಿರ್ದೀ ಸ್ಥಿತಿಯೊಳ್ ಕಾಲಂ ಸಲೆ ಮತ್ತೊಂದು ಶುಭದಿನದೊಳ್—

ಉ॥ ಆಯುಧಮಂ ಜಯಾಂಗನೆಯೊಳಾವಗಮೋತೊಡಗೂಡುವಂತೆ ವ
ಜ್ರಾಯುಧನರ್ಥದಿಂ ತಣಿಪಿ ವಂದಿಗಳಂ ನಿಜಪುತ್ರನಂ ಸಹ
ಸ್ರಾಯುಧನಂ ಮನೋಹರೆಯೊಳೋತೊಡಗೂಡಿ ನಿಜಾನ್ವವಾಯ ಪಾ
ರಾಯಣನಿಂತು ಸಂತತಿಗಡರ್ಪನೊಡರ್ಚಿದನುತ್ತರೋತ್ತರಂ ॥ ೧೧೫ ॥

ವ॥ ಅಂತುರ್ವರಾಸ್ಯತಿಲಕನಪ್ಪ ವಜ್ರಾಯುಧಂ ಸಹಸ್ರಾಯುಧಂಗಂ ಮನೋಹರಿಗಂ ಮನೋಹರಮಾಗಿ ಮದುವೆಮಾಡೆ ತತ್ಪುಣ್ಯದಂಪತಿಗೆ—

ಚಂ॥ ಮಗನಗರಾಜಧೈರ್ಯನಿಭರಾಜಮನಂ ಮೃಗರಾಜಸತ್ವನ
ರ್ಥಿಗೆ ಭಯಮಿಲ್ಲ ಬಾಟ್ಕೆಗೆ ವೃಥೋಕ್ತಿಗಳಿಲ್ಲ ನೆಗಟ್ತೆಗಂ ಪೊಗ
ಟ್ತೆಗಮೆಣೆಯಿಲ್ಲಿಭೇಂದ್ರರಿಪುವುಂ ಮೃಗಮೆಂಬವೊಲಾಕುಮಾರನೊಳ್
ಮೃಗನೊನೆಯೆಂಬಿನಂ ಕನಕಕಾಂತಿ ಕುಲೋನ್ನತಿ ಪುಟ್ಟೆ ಪುಟ್ಟಿದಂ ॥ ೧೧೬ ॥

---

೧೧೪. ದೇವೇಂದ್ರನು ಶಚೀದೇವಿಯ ಕೊರಳಿಗೆ ತೊಡಿಸಿದ ಕಂಠಾಭರಣದಲ್ಲಿ ತೂಗುವ ಮಾಣಿಕ್ಯದ ಮಧ್ಯ ಪದಕವೊ ಏನೊ ಎಂಬಂತೆ ಸೂರ್ಯಬಿಂಬವು ತುಂಬ ಸುಂದರವಾಗಿ ತೋರಿತು.

ವ॥ ಹೀಗೆ ಸೂರ್ಯೋದಯವಾಗಲು ವಂದಿಮಾಗಧರ ಮಂಗಳ ವಚನಗಳನ್ನು ಕೇಳುತ್ತ ವಜ್ರಾಯುಧ ಕುಮಾರನು ನಿದ್ದೆ ತಿಳಿದು ಹಾಸುಗೆಯಿಂದೆದ್ದು ಬೆಳಗಿನ ಕೃತ್ಯವನ್ನು ಮುಗಿಸಿ ಜಿನೇಂದ್ರನ ಪಾದಕಮಲಗಳಿಗೆ ನಮಿಸಿ ಆ ಜಿನಬಿಂಬದ ಪಾದನಖಗಳಲ್ಲಿ ತನ್ನ ಪ್ರತಿಬಿಂಬವನ್ನು ನೋಡಿಕೊಂಡು, ತ್ರಿಭುವನ ಗುರುವಿಗೆ ಸಾಷ್ಟಾಂಗ ನಮಸ್ಕಾರ ಪೂರ್ವಕವಾಗಿ ಅಷ್ಟ ವಿಧ ಪೂಜೆಯನ್ನು ಮಾಡಿ, ಲೋಕಗುರುವೂ ತನಗೆ ತಂದೆಯೂ ಆದ ಕ್ಷೇಮಂಕರ ರಾಜನಿಗೆ ತಲೆಬಾಗಿ ಕಾಣಿಸಿಕೊಂಡು, ನಿತ್ಯವಿಧಿಯಂತೆ ಓಲೈಸುತ್ತ ಇದ್ದನು. ಈ ರೀತಿಯಾಗಿ ಕೆಲವು ಕಾಲ ಕಳೆಯಲಾಗಿ ಮತ್ತೊಂದು ಶುಭ ದಿವಸದಲ್ಲಿ—

೧೧೫. ಆಯುಧವನ್ನು ಜಯಲಕ್ಷ್ಮಿಯೊಡನೆ ಯಾವಾಗಲೂ ಬೆರಸಿಡುವಂತೆ ವಜ್ರಾಯುಧನು ತನ್ನ ಮಗನಾದ ಸಹಸ್ರಾಯುಧನನ್ನು ಮನೋಹರಿಯೆಂಬ ಕನ್ಯೆಯೊಡನೆ ಕೂಡಿಸಿ, ವಂದಿ ಜನರಿಗೆಲ್ಲ ತೃಪ್ತಿಯಾಗುವಂತೆ ವಿವಾಹ ಮಾಡಿ ತನ್ನ ವಂಶವೃದ್ಧಿಗೆ ಉತ್ತರೋತ್ತರವಾಗಿ ಸಂತತಿ ಲಾಭವಾಗುವಂತೆ ಮಾಡಿದನು.

ವ॥ ಹೀಗೆ ವಜ್ರಾಯುಧನು ಸಹಸ್ರಾಯುಧ-ಮನೋಹರಿಯರಿಗೆ ಮನೋಹರವಾಗಿ ಮದುವೆ ಮಾಡಲಾಗಿ ಆ ಪುಣ್ಯವಂತ ದಂಪತಿಗಳಿಗೆ—

೧೧೬. ಗಿರಿರಾಜನಂತೆ ಧೈರ್ಯವುಳ್ಳ, ಗಜರಾಜನಂತೆ ಚಿತ್ತವುಳ್ಳ, ಸಿಂಹನಂತೆ ಸಾಮರ್ಥ್ಯವುಳ್ಳ, ಕನಕಶಾಂತಿ ಯೆಂಬ ಮಗನು ಹುಟ್ಟಿದನು. ಅವನು ಹುಟ್ಟಿದೊಡನೆ "ಇನ್ನು (ದಾನ) ಬೇಡುವವನಿಗೆ ಭಯವಿಲ್ಲ, ಬದುಕಿಗೆ ವ್ಯರ್ಥವಾದ ಮಾತುಗಳಿಲ್ಲ. ಸಿದ್ಧಿಗೂ ಪ್ರಸಿದ್ಧಿಗೂ ಇನ್ನು ಅಳತೆಯೆ ಇಲ್ಲ" ಎಂಬಂತೆ ಆತನ ಕುಲಕ್ಕೆ ಉನ್ನತಿಯಾಯಿತು.

ವ॥ ಅಂತು ಕನಕಶಾಂತಿ ಪರಮೋಪಶಾಂತಿಯೆ ರೂಪುಗೊಂಡಂತೆಯುಮಱಿವಡ[1][ರೆ][1]ಗೊಂಡಂತೆಯುಂ [2]ಧರ್ಮಂ ನಿರ್ಮಲಂ ಗೊಂಡಂತೆಯುಂ[2] ಪುಟ್ಟಿ ಬಳೆಯೆ ಮತ್ತೊಂದು ದೆವಸಂ ಪವಿತ್ರರಾತ್ರಿ ಸಮಯಾವಸಾನದೊಳ್—

ಮ॥ ಪರಮಶ್ರೀಪತಿ ದೇವವಂದ್ಯನಮಿತ ಕ್ಷೇಮಂಕರಂ ಘೋರಸಂ
ಸರಣಾಂಭೋಧಿಯನೀಸುವಟ್ಟಿ ಮನದೊಳ್ ಕೆಯ್ಗಣ್ಮಿ ಭಾವಕ್ಕೆ ಬಂ
ಧಿರೆ ಬಯ್ಸಿಟ್ಟ ವಿಶೋಧಿದುರ್ದಮತೆಯಿಂ ಮೋಹಾಧಿರಾಜಂಗನಾ
ದರನಾದಂ ದೊರೆಯಲ್ಲರೆಂದು ಮುಳಿದಕ್ಕೋಪಕ್ಕಘಧ್ವಂಸಿಯಾ ॥ ೧೧೭ ॥

ವ॥ ಅಂತು ಕ್ಷೇಮಂಕರಂ ದುರಿತಾರಿ ಸೈನ್ಯಮಂ ಬೆಂಕೊಳಲ್ ಬಗೆವಂತೆ ಪರಮದೀಕ್ಷೆಯಂ ಕೆಯ್ಕೊಳಲ್ ಬಗೆದು ಪರಿನಿಷ್ಕ್ರಮಣೋದ್ಯುಕ್ತನಾದುದಂ ಬ್ರಹ್ಮಕಲ್ಪನಿಳಯರಾದಿತ್ಯಾದಿಗಳಪ್ಪ ಲೋಕಾಂತಿಕರವಧಿಜ್ಞಾನದಿಂದಮಱಿದು ಬಂದು ಪರಮೇಶ್ವರನ ಮನೋಗತಮಂ [3]ತಮ್ಮ[3] ವಚೋಗತಂ ಮಾಡಿ ನಿಜಾಧಿಕಾರ ವಶದಿಂ—

ಕಂ॥ ಪಾರಾವಾರಕ್ಕೆ ಜಡರ್
ನೀರಡುಕುವ ತೆಱದೆ ಬಿನ್ನಪಂ ಗೆಯ್ದೆಂ ಸಂ
ಸಾರದ ಮೋಕ್ಷದ ಪಕ್ಷದ
ಸಾರೇತರಸುಖಮನೀಶ ನಿನಗಾರ್ ಪೇಳ್ವರ್ ॥ ೧೧೮ ॥

ಈ ಒಗೆ ಸಂಸಾರ ಮತಿ
ಕ್ಲೀಬಂಗೆ[4][ಕ][4]ಕ್ಕುಮುಪ್ಪೊಡಕ್ಕುಂ ನಿನಗ
ಕ್ಲೀಬಂಗೆ ಚರಾಚರಗುರು
ಗೀ ಬಗೆ ಬಗೆದಂತೆ ಬಗೆಗೆ ವರ್ಪುದು ಪಿ[5][ರಿ][5]ದೇ ॥ ೧೧೯ ॥

ವ॥ ಹಾಗೆ ಕನಕಶಾಂತಿಯು ಸೈರಣೆಯೆ ಮೈದಾಳಿದಂತೆ, ಜ್ಞಾನವೆ ರೂಪುತಾಳಿದಂತೆ, ಧರ್ಮವು ನಿರ್ಮಲಗೊಂಡಂತೆ ಹುಟ್ಟಿ ಬೆಳೆಯುತ್ತಿದ್ದನು. ಹೀಗಿರುತ್ತ ಮತ್ತೊಂದು ದಿವಸ ಪವಿತ್ರವಾದ ಬೆಳಗಿನ ಸಮಯದಲ್ಲಿ—

೧೧೭. ಪರಮಪದಕ್ಕೆ ಒಡೆಯನೂ, ದೇವಪೂಜ್ಯನೂ, ಅಸೀಮವಾದ ಸುಖವನ್ನುಂಟುಮಾಡುವವನೂ ಆದ ಕ್ಷೇಮಂಕರರಾಜನಿಗೆ ಘೋರವಾದ ಸಂಸಾರಸಮುದ್ರವನ್ನು ಈಸಿ ದಾಟಬೇಕೆಂಬ ಬಯಕೆ ಮನಸ್ಸಿನಲ್ಲಿ ಬಲಿತು ನಿರ್ಣಯಕ್ಕೆ ಬರಲಾಗಿ, ಪಾಪನಿರ್ಮೂಲನ ಮಾಡುವವನಿಗೆ ಯೋಗ್ಯವಲ್ಲವೆಂದು ಮೋಹವೈಭವಕ್ಕೆ ವಿಮುಖನಾದನು.

ವ॥ ಹೀಗೆ ಪಾಪವೆಂಬ ಶತ್ರುಗಳ ಸೈನ್ಯವನ್ನು ಬೆನ್ನಟ್ಟುವುದಕ್ಕೆ ಹೊರಟಂತೆ ಕ್ಷೇಮಂಕರ ರಾಜನು ಪರಮದೀಕ್ಷೆಯನ್ನು ಕೈಕೊಳ್ಳಲು ಬಯಸಿ ಪರಿನಿಷ್ಕ್ರಮಣಕ್ಕೆ ತೊಡಗಿದನು ; ಅವಧಿಜ್ಞಾನದಿಂದ ಇದನ್ನು ತಿಳಿದ ಬ್ರಹ್ಮಕಲ್ಪವಾಸಿಗಳಾದ ಆದಿತ್ಯರೇ ಮೊದಲಾದ ಲೋಕಾಂತಿಕ ದೇವರು ಬಂದು ಪರಮೇಶ್ವರನ ಮನದಲ್ಲಿದ್ದುದನ್ನು ಮಾತಿನಲ್ಲಿ ಪ್ರಕಟಗೊಳಿಸಿ ತಮ್ಮ ಅಧಿಕಾರವಶದಿಂದ ಹೀಗೆ ನುಡಿದರು :

೧೧೮. "ಸಮುದ್ರಕ್ಕೆ ನೀರು ತಂದು ತುಂಬಿಸುವೆವೆಂಬ ಮೂರ್ಖರಂತೆ ನಿಮಗೆ ನಾವು ಬಿನ್ನಹಮಾಡಿ ಏನು ಪ್ರಯೋಜನ? ಸಂಸಾರ ಮೋಕ್ಷವನ್ನೂ ಮುಕ್ತಿಯ ಅನನ್ಯಸುಖವನ್ನೂ ಪ್ರಭುವೆ ನಿನಗೆ ಹೇಳುವವರಾರು ?

೧೧೯. ಸಂಸಾರವು ಅಸಮರ್ಥನಾದವನಿಗೆ ತೊಡಕಿಕೊಳ್ಳುವುದು. ಸಮರ್ಥನೂ ಚರಾಚರಕ್ಕೆ ಗುರುವೂ ಆದ ನಿನಗೆ ಬಯಸಿದುದು ಬಯಸಿದಂತೆ ಕೈಗೂಡುವುದು. (ಸಂಸಾರವಾಗಲಿ, ವೈರಾಗ್ಯವಾಗಲಿ ನಿನಗೆ ಇಚ್ಛಾಮಾತ್ರದಿಂದ ಸಿದ್ಧಿಸುವುದು.) ಅದೇನು ಆಶ್ಚರ್ಯದ ಮಾತೆ ?"

---

1. ಱ (ಮ) 2. × (ಮ) 3. × (ಮ) 4. ತ (ಮ) 5. ಱ (ಮ)

ವ॥ ಎಂದು ಪರಮನಂತಃಕರಣಜಾತಮನನುವ[1]ದಿಸಿ ಮಾಣ್ದಿರನ್ನೆಗಂ ಸೌಧರ್ಮೇಂದ್ರಸಮೇತಂ ಚತುರ್ವಿಧ ವಿಬುಧನಿಕಾಯಂ ತೃತೀಯಕಲ್ಯಾಣಕರಣೋತ್ಸುಕತ್ವದಿಂ ಬಂದು ಭಗವತ್ಪಾದ ಪಯೋರುಹಕ್ಕೆಱಗೆ ತದನಂತರಂ ಕ್ಷೇಮಂಕರಾಧೀಶ್ವರಂ ವಜ್ರಾಯುಧನುಮಂ ಸಹಸ್ರಾಯುಧನುಮಂ ಬರವೇೞ್ದು—

ಕಂ॥ ಈ ರತ್ನಸಂಚಯಂ ನಿನ
ಗೀರಾಜಿತ ರತ್ನಸಂಚಯಂ ತನಗೆಂದು
ರ್ವೀ ರಕ್ಷಕನಾಗಳ್ ಬಗೆ
ದಾರಯ್ದಾ ಪುರುಷ ರತ್ನಯುಗಳಕ್ಕಿತ್ತಂ ॥ ೧೨೦ ॥

ವ॥ ಅಂತು ನಿಜಾನ್ವಯ ರಾಜಧಾನಿಯಪ್ಪ ರತ್ನಸಂಚಯಮುಮಂ ಕುಲಧನಸಾರಮಪ್ಪ ರತ್ನಸಂಚಯಮುಮಂ ಮಗಂಗಂ ಮಮ್ಮಂಗಂಗಮಧಿರಾಜ ಯುವರಾಜಪದವಿವೆರಸು ದಯೆಗೆಯ್ದು ಬೞಿಯಂ ಸುದರ್ಶನಮೆಂಬ ಸಿವಿಗೆಯಂ ಕ್ಷೇಮಂಕರಾಧೀಶನೇಱುವುದುಂ—

ಸ್ರ॥ ಜ್ಯೋತಿಷ್ಕರ್ ಮುನ್ನಮಲ್ಲಿಂಬೞಿಯಮಮರರತ್ತಿಂದ್ರರಭ್ರಂಕಷೋದ್ಯ
ತ್ಕೇತುವ್ರಾತಂಗಳಿಂದೊಪ್ಪುವ ಸಿವಿಗೆಯನಂದಟ್ಟಿಱಿಂ ಪೊತ್ತು ಭಕ್ತಿ
ಪ್ರೀತಂ ದೇವಾನಕಂಗಳ್ ಮೊೞಗೆ ಪಲವುಮಾಕಾಲದೊಳ್ ದೇವಚಾಪಂ
ಜ್ಯೋತಿರ್ಲೋಕಾಧಿಪಾಲಾಭರಣ ಕಿರಣದಿಂದುರ್ವಿಯಂ ಪರ್ವೆ ಬಂದರ್ ॥ ೧೨೧ ॥

ಕಂ॥ ದೇವಾರಣ್ಯಂ ದೇವರ
ದೇವನ ಮನಕಿಂಬನೀಯೆ ತನ್ನಂದನದೊಳ್
ದೇವರ್ ಸಿವಿಗೆಯನಾ ಪ್ರ
ಸ್ತಾವನೆಯಂ ಕೞಿಪದಿೞಿಪೆ ಪುಳಿನಸ್ಥಳದೊಳ್ ॥ ೧೨೨ ॥

ವ॥ ಹೀಗೆಂದ ಪರಮಗುರುವಿನ ಮನೋರಥವನ್ನು ತಮ್ಮ ಬಾಯಿಂದ ಆಡಿ ತೋರಿ ಸುಮ್ಮನಾದರು. ಅಷ್ಟರಲ್ಲಿ ಸೌಧರ್ಮೇಂದ್ರ ಸಹಿತವಾಗಿ (ಭವನವಾಸಿ, ವ್ಯಂತರ, ಜ್ಯೋತಿಷ್ಕ ಮತ್ತು ಕಲ್ಪವಾಸಿಗಳೆಂಬ) ನಾಲ್ಕು ಬಗೆಯ ದೇವತೆಗಳ ಸಮೂಹವೂ ತೃತೀಯ ಕಲ್ಯಾಣೋತ್ಸವಕ್ಕಾಗಿ ಉತ್ಸಾಹದಿಂದ ಬಂದು ಭಗವಂತನ ಪಾದಗಳಿಗೆ ಎರಗಿತು. ಆ ಬಳಿಕ ಕ್ಷೇಮಂಕರರಾಜನು ವಜ್ರಾಯುಧನನ್ನೂ ಸಹಸ್ರಾಯುಧನನ್ನೂ ಕರೆಯಿಸಿ,

೧೨೦. "ಈ ರತ್ನಭಂಡಾರ ನಿನಗೆ ಮತ್ತು ಹೊಳೆಯುವ ಈ ರತ್ನಸಂಚಯ ನಿನಗೆ" ಎಂದು ಆ ಪುರುಷರತ್ನರಿಬ್ಬರಿಗೂ ಯೋಗ್ಯವಾಗಿ ಹಂಚಿಕೊಟ್ಟನು.

ವ॥ ಹೀಗೆ ತನ್ನ ವಂಶಾನುಗತವಾದ ರಾಜಧಾನಿಯ ರತ್ನಭಂಡಾರವನ್ನೂ, ಕುಲಧನದಲ್ಲಿ ಶ್ರೇಷ್ಠವೆನಿಸಿದ ರತ್ನಭಂಡಾರವನ್ನೂ ಮಗನಿಗೂ ಮೊಮ್ಮಗನಿಗೂ ಅಧಿರಾಜ-ಯುವರಾಜ ಪದವಿಗಳೊಡನೆ ಕೊಟ್ಟು, ಅನಂತರ ಸುದರ್ಶನವೆಂಬ ಸಿವಿಗೆಯನ್ನು ಏರಿದನು—

೧೨೧. ಮೊದಲು ಜ್ಯೋತಿಷ್ಕರೂ, ಅಲ್ಲಿಂದ ಇತರ ಅಮರರೂ, ಅಲ್ಲಿಂದ ಇಂದ್ರನೂ ಆಕಾಶಚುಂಬಿ ಧ್ವಜಗಳಿಂದೊಪ್ಪುವ ಆ ಸಿವಿಗೆಯನ್ನು ಸಂತೋಷದಿಂದ ಹೊತ್ತುಕೊಂಡು ನಡೆಯುತ್ತ ಭಕ್ತಿಯಿಂದಲೂ ಪ್ರೀತಿಯಿಂದಲೂ ದೇವವಾದ್ಯಗಳು ಅನೇಕವಾಗಿ ಮೊಳಗುತ್ತಿರಲು ಜ್ಯೋತಿರ್ಲೋಕಾಧಿಪತಿಗಳ ಆಭರಣಕಿರಣಗಳಿಂದ ಭೂಮಿಯನ್ನೆಲ್ಲ ಕಾಮನಬಿಲ್ಲಿನ ಕಾಂತಿ ವ್ಯಾಪಿಸಲು ಮುನ್ನಡೆದು,

೧೨೨. (ಮೇರುಪರ್ವತದ ಕೆಳಗಿರುವ) ದೇವಾರಣ್ಯವೆಂಬ ವನಕ್ಕೆ ಬಂದರು; ಆ ಭದ್ರವನವು ಪರಮೇಶ್ವರನ ಮನಸ್ಸಿಗೆ ಮೆಚ್ಚುಗೆಯಾಗಲು ಅಲ್ಲಿಯ ತೋಪಿನಲ್ಲಿಯೆ ಸಿವಿಗೆಯನ್ನು ಇಳಿಸಿದರು.

---

1. ಡ (ಮ)

ವ॥ ತತ್ಸಮೀಪಸ್ಥಿತ ರಕ್ತಾಶೋಕ ಮಹೀರುಹತಳವಿಶಾಳ ಶಿಳಾಪಟ್ಟಕದೊಳ್ ಉತ್ತರಾಭಿಮುಖನಾಗಿ ಕುಳ್ಳಿರ್ದು ಸಮುತ್ಸಾರಿತ ವಸ್ತ್ರಾಭರಣನಾಗಿ ಪರ್ಯಂಕಾಸನ ಪರಿಗ್ರಹದಿಂ—

ಮ॥ ಸಕಳೋರ್ವೀಶ್ವರ ನಾಕಿನಾಯಕಚಮೂಪರ್ಯರ್ಚ್ಯಪಾತ್ರಂ ತ್ರಿಸಾ
ಕ್ಷಿಕನಾಗಳ್ ಬಲಗೆಯ್ ನೊಸಲ್ಗೆಡದ ಕೆಯ್ [1]ಪರ್ಯಂಕ[1]ಮಪ್ಪಂತು ಸಾ
ರ್ಚಿ ಕಳಾಳಾಪದಿನಾ ಜಗತ್ಪತಿ ನಮಸ್ಸಿದ್ಧೇಭ್ಯ ಎಂದಾತ್ಮ ಕೇ
ಶಕಳಾಪಂ ಬರೆ ಪಂಚಮುಷ್ಟಿಗೆ ಜಿನಶ್ರೀದೀಕ್ಷೆಯಂ ತಾಳ್ದಿದಂ ॥ ೧೨೩ ॥

ವ॥ ಅಂತಾ ಪರಮೇಶ್ವರನ ಪಱಿದು ಬಿಸುಟ ಮಧುಪಕಳಭಕುಳ ಮಸೃಣ ಕುಟಿಳ ಸಹಸ್ರಕುಂತಳಂಗಳನುತ್ತರ ದಕ್ಷಿಣೇಂದ್ರರ್ ಪಂಚರತ್ನದ ಪಡಲಿಗೆಗಳೊಳಾಂತು ಪಂಚಮಾಬ್ಧಿಯೊಳಿಕ್ಕಿದರಂತು ಪರಿನಿಷ್ಕ್ರಮಣ ಕಲ್ಯಾಣಾವಸಾನದೊಳ್ ನರೇಂದ್ರ ದೇವೇಂದ್ರರ್ ತಂತಮ್ಮಾವಾಸಂಗಳ್ಗೆ ಪರೆದು ಪೋದರಿತ್ತ ವಜ್ರಾಯುಧನರಸುಗೆಯ್ಯುತ್ತಿರ್ದು—

ಕಂ॥ ಉಪಶಮಮುಂ ತೀವ್ರತೆಯುಂ
ವಿಪಕ್ಷಮಿತರೇತರೋಕ್ತಿಯಿಂದವನಾ ಭೂ
ಮಿಪನಾಂತು ಮಧ್ಯಮಂ ಲೋ
ಕಪಾಲನಾದಂ ಗಡಂ ಮಹೀಮಂಡಳದೊಳ್ ॥ ೧೨೪ ॥

ವ॥ ಮತ್ತಮಾ ಮಹಾನುಭಾವಂ ತನ್ನ ರಾಜ್ಯಾಭಿವೃದ್ಧಿಯೊಳ್—

ಕಂ॥ ಕಸವರದೊಳ್ ಜಸಮುಂ ಮಾ
ನಸವಾಟಿೊಳ್ ಧರ್ಮಮಂ ಶರೀರದೊಳಱಿವಂ
ಸಸಿಯೊಳ್ ಬೆಳಸಂ ಕೊಳ್ವವೊ
ಲಸಾರದೊಳ್ ಸಾರಮಂ ಮಹೀಪತಿ ಕೊಂಡಂ ॥ ೧೨೫ ॥

ವ॥ ಆಗ (ಕ್ಷೇಮಂಕರ ಪ್ರಭು) ಅದರ ಸಮೀಪದಲ್ಲಿದ್ದ ಒಂದು ರಕ್ತಾಶೋಕವೃಕ್ಷದ ಕೆಳಗಿನ ಹಾಸುಗಲ್ಲಿನ ಮೇಲೆ ಉತ್ತರ ದಿಕ್ಕಿಗೆದುರಾಗಿ ಕುಳಿತು, ವಸ್ತ್ರಾಭರಣಗಳನ್ನೆಲ್ಲ ಕಳಚಿ, ಪರ್ಯಂಕಾಸನವನ್ನು ರಚಿಸಿಕೊಂಡು—

೧೨೩. ಸಮಸ್ತ ಭೂಪಾಲಕರಿಗೂ ಸ್ವರ್ಗಾಧಿಪತಿಗಳಿಗೂ ಪೂಜ್ಯನಾದ ಆ ಪ್ರಭುವು (ಆತ್ಮ, ಇಂದ್ರ ಮತ್ತು ಸಿದ್ಧ ಎಂಬ) ಮೂರು ಸಾಕ್ಷಿಗಳುಳ್ಳವನಾಗಿ ಬಲಗೈಯನ್ನು ಹಣೆಯ ಮೇಲೂ ಎಡಗೈಯನ್ನು ಹಿಡಿಕೆಯ ಬಳಿಯಾಗುವಂತೆಯೂ ಚಾಚಿ ಮಧುರ ಧ್ವನಿಯಿಂದ "ನಮಸ್ಸಿದ್ಧೇಭ್ಯಃ" ಎಂದುಚ್ಚರಿಸಿ ತನ್ನ ಕೂದಲನ್ನು ಐದು ಮುಷ್ಟಿಯಿಂದ ಕಿತ್ತು ತೆಗೆದು ಶ್ರೇಷ್ಠವಾದ ಜಿನದೀಕ್ಷೆಯನ್ನು ತಾಳಿದನು.

ವ॥ ಹಾಗೆ ಆ ಪರಮೇಶ್ವರನು ಹರಿದು ಬಿಸಾಡಿದ, ದುಂಬಿವಿಂಡು ಮುಕುರಿಕೊಂಡ ಮೃದುವೂ ಕುಟಿಲವೂ ಆದ ಕೇಶರಾಶಿಯನ್ನು ಉತ್ತರೇಂದ್ರ-ದಕ್ಷಿಣೇಂದ್ರರು ಪಂಚರತ್ನದ ಪಾತ್ರೆಗಳಲ್ಲಿಟ್ಟುಕೊಂಡು ಐದನೆಯ ಸಾಗರದಲ್ಲಿ ಇಟ್ಟು ಬಂದರು. ಹೀಗೆ ಪರಿನಿಷ್ಕ್ರಮಣ ಕಲ್ಯಾಣ ನೆರವೇರಿದ ಬಳಿಕ ರಾಜೇಂದ್ರರೂ ದೇವೇಂದ್ರರೂ ತಂತಮ್ಮ ನಿವಾಸಗಳಿಗೆ ಹೊರಟುಹೋದರು. ಇತ್ತ ವಜ್ರಾಯುಧನು ರಾಜ್ಯವಾಳುತ್ತ

೧೨೪. ಸೈರಣೆ ಹಾಗು ತೀವ್ರವಾದ ಪರಾಕ್ರಮ ಇವೆರಡೂ ಪರಸ್ಪರ ವಿರುದ್ಧವಾದ ಗುಣಗಳೆಂಬುದು ಸುಳ್ಳೆಂಬಂತೆ ಅವೆರಡನ್ನೂ ಒಳಗೊಂಡ ಈ ರಾಜನು ಈ ಭೂಮಂಡಲದಲ್ಲಿ ಮಧ್ಯಮನಾದ ಲೋಕಪಾಲನೆನಿಸಿದನು.

ವ॥ ಮತ್ತು ಮಹಾನುಭಾವನು ತನ್ನ ರಾಜ್ಯಾಭಿವೃದ್ಧಿಯಲ್ಲಿ—

೧೨೫. ಧನದಿಂದ ಯಶಸ್ಸನ್ನು, ಮನುಷ್ಯ ಜೀವನದಿಂದ ಧರ್ಮವನ್ನು, ದೇಹದಿಂದ ಜ್ಞಾನವನ್ನು, ಸಸ್ಯದಿಂದ ಬೆಳೆಯನ್ನು ಪಡೆದುಕೊಳ್ಳುವಂತೆ, ಅಸಾರವಾದುದರಿಂದಲೂ ಸಾರವನ್ನು ಎತ್ತಿ ಪಡೆದುಕೊಂಡನು.

---

1. ಪಲ್ಯಂಕ (ಅ)

ವ॥ ಅಂತರಸುಗೆಯ್ಯುತ್ತಿರೆ ಮತ್ತೊಂದು ದೇವಸಂ—

ಕಂ॥ ವಟುವೇಷಧಾರಿ[1]ಮಾಯಾ[1]
ಪಟುಮತಿ ಬಳ್ಳಿಸಿದ ಕಯ್ಯ ಕವಳಿಗೆಯುಂ ಕ
ರ್ಪಟಮುಂ ಬೆರಸಜ್ಞಾನೋ
ತ್ಕಟಮದನರಮನೆಯ ಬಾಗಿಲೊಳ್ ಬಂದಿರ್ದಂ ॥ ೧೨೬ ॥

ವ॥ ಇರ್ದು ದೌವಾರಿಕನಿವೇದಿತನಿಜಾಗಮನನವನಿಪಾಲಮತದಿನೊಡ್ಡೋಲಗಂಬೊಕ್ಕು ಮದೋದ್ಧತವೃತ್ತಿಯಾಗಿಯುಮಳಿ ಕಳಭಮುತ್ಫುಲ್ಲ ಮಲ್ಲಿಕಾಮುಕುಳಕ್ಕೆಱಗುವಂತೆ ಪಾಪೇಭಕಂಠೀರವನಪ್ಪ ವಜ್ರಾಯುಧಂಗೆಱಗುವುದುಮರಸನಾತನ ಮನುಷ್ಯಾತೀತ ಮ[2]ಪ್ಪಾ[2]ಕೃತಿಯಂ ಕಂಡಾಸನೋಚಿತ[3]ದಿಂ[3]ದೇಱಲಿಕ್ಕಿ[4]ದ[4] ಭದ್ರಾಸನದೊಳ್ ಕುಳ್ಳಿರ್ದು ಸ್ವಾಗತ ವಚನ ಪುರಸ್ಸರಂ ಸಂಭಾಷಣ ಪ್ರಸ್ತಾವದೊಳ್ ವಸ್ತುವಿಚಾರಂ ಪುಟ್ಟೆ ಜೀವತತ್ತ್ವವಿಷಯದೊಳ್ ಕೃತಕದ್ವಿಜಂ ಚಾರ್ವಾಕಮತಾವಲಂಬಿಯಾಗಿ ಸೌಜನ್ಯಕಂದಾಂಕುರನಪ್ಪ ವಜ್ರಾಯುಧ ಮಹೀಪಾಲನೊಳ್ ಸಹಸ್ರಜಿಹ್ವನಪ್ಪ ನಾಗರಾಜನನೆ ಪೋಲ್ತು ನುಡಿಯೆ—

ಕಂ॥ ಕರಡಿಯ [5]ತೋಲಂ[5] ಕಜ್ಜಲ
ಪರಾಗದಿಂ ಪೊರೆದು ಪಿ[6]ಡಿ[6]ದು ಜೇನೆಯ್ಯೊಳ್ ತಂ
ದಿರಿಸಿದವೊಲರಸನಂ ವಚ
ನರಚನೆ ಬಳಸಿದುದತೀವ ತಮಮೊದವುವಿನಂ ॥ ೧೨೭ ॥

ಎಂಬಿನಿತೇಟಿಗ್ಗೆ ವಿವಾದಾ
ಡಂಬರದೊಳಳುಂಬಮೊದವಿ ನಿಲೆ ಪಾಸುಂ ಪೊ
ಕ್ಕುಂ ಬರಿದು ನಿಚಿತವಚನಕ
ದಂಬಕಮೆರ್ದೆಗೊಳಿಸೆ ಸಭೆಯ ವಿಬುಧಾವಳಿಯಂ ॥ ೧೨೮ ॥

ವ॥ ಹೀಗೆ ರಾಜ್ಯವಾಳುತ್ತಿರಲು ಒಂದು ದಿನ—

೧೨೬. ಕಂಕುಳಲ್ಲಿ ಕಕ್ಷಪಾಳ, ಉಟ್ಟುಕೊಂಡ ಕಪ್ಪಡ ಸಹಿತವಾಗಿ ವಟುವೇಷವನ್ನು ಧರಿಸಿದ ತೀಕ್ಷ್ಣ ಮತಿಯೊಬ್ಬನು ಮಿಥ್ಯಾಜ್ಞಾನದಿಂದ ಮತ್ತನಾಗಿ ಅರಮನೆಯ ಬಾಗಿಲಿಗೆ ಬಂದನು.

ವ॥ ದ್ವಾರಪಾಲಕನ ಮುಖಾಂತರ ತನ್ನ ಆಗಮನವನ್ನು ತಿಳಿಸಿ, ಅರಸನ ಅನುಮತಿಯನ್ನು ಪಡೆದು ಒಡ್ಡೋಲಗವನ್ನು ಪ್ರವೇಶಿಸಿ ತಾನು ಸೊಕ್ಕಿನವನಾಗಿದ್ದರೂ ಮಲ್ಲಿಗೆ ಹೂವಿಗೆ ಮರಿದುಂಬಿ ಎರಗುವಂತೆ ವಜ್ರಾಯುಧನಿಗೆ ಎರಗಿದನು. ಈತನ ಅತಿಮಾನುಷ ಪ್ರಕೃತಿಯನ್ನು ಕಂಡು ಅರಸನು ಔಚಿತ್ಯವರಿತು ಭದ್ರಾಸನದಲ್ಲಿ ಕುಳ್ಳಿರಿಸಿದನು. ಸ್ವಾಗತವಚನ ಪೂರ್ವಕವಾಗಿ ಸಂಭಾಷಣೆ ನಡೆದು ವಸ್ತು ವಿಚಾರವಾಗಿ ಮಾತು ಬರಲಾಗಿ ಬ್ರಾಹ್ಮಣ ವೇಷಧಾರಿಯಾದ ಈತನು ಜೀವತತ್ವದ ವಿಷಯದಲ್ಲಿ ಚಾರ್ವಾಕಮತವನ್ನು ಅವಲಂಬಿಸಿ ಸಾವಿರ ನಾಲಗೆಗಳುಳ್ಳ ನಾಗರಾಜನಂತೆ ನುಡಿಯಲು—

೧೨೭. ಕರಡಿಯ ತೊಗಲನ್ನು ಕಾಡಿಗೆ ಹುಡಿಯಿಂದ ಒರಸಿ ಜೇನುತುಪ್ಪದಲ್ಲಿ ತೋಯಿಸಿ ತಂದಿಟ್ಟಂತೆ ತಮೋಮಯವಾದ ವಚನ ರಚನೆ ಅರಸನನ್ನು ಆವರಿಸಿತು.

೧೨೮. ವಿವಾದದ ಆಡಂಬರವು ಅಧಿಕವಾಗಿ ಆಯ್ದ ವಚನಗಳು ಹಾಸುಹೊಕ್ಕಾಗಿ ನೆಯ್ದುಕೊಂಡು ಸಭೆಯ ವಿದ್ವಾಂಸರ ಮನಸ್ಸನ್ನು ಸೆಳೆದುಕೊಳ್ಳುವಂತೆ ಮಾತನಾಡುತ್ತ

---

1. ಯಾದಂ (ಮ) 2. ಪ್ಪ ಪ್ರ (ಮ) 3. ನಂ (ಅ) 4. ಸೆ (ಅ) 5. ತೊನಲು (ಅ) 6. ಱಿ (ಮ)

ವ॥ ಪೂರ್ವಪಕ್ಷಮನಿಂತೆಂದನೀ ಲೋಕದ ಪ್ರಾಣಿಗಳುಂ ಚೈತನ್ಯ ಪರಲೋಕ ನಿಮಿತ್ತಂ ತಪೋದಾನ ಶೀಲ ವ್ರತೋಪವಾಸಾದಿಗಳಿನೆಲ್ವುಂ ತೊಗಲುಮಾಗಿರ್ಪರದು ಜಡತ್ವಮೆಂತೆನೆ ಪರಲೋಕಿಯೆ ಮುನ್ನಮಿಲ್ಲೆನೆ ಪರಲೋಕಮೆತ್ತಣಿಂ ಬಂದುದೀ ನಿಮ್ಮ ಜಿನಮತದ ಜೀವಸಂಭಾವನೆಯೊಳ್ ಪೃಥಿವ್ಯಪ್ತೇಜೋವಾತಾಭಿಧಾನ ಭೂತಚತುಷ್ಟಯದಿಂದಂ ಬೇಱೆ ಜೀವತ್ವಗ್ರಾಹಕ ಪ್ರಮಾಣಮಿಲ್ಲಂ ಭೂತಚತುಷ್ಟಯ ಸಂಭೂತಚೈತನ್ಯಂ ಪಿಷ್ಟೋದಕಗುಡಧಾತಕ್ಯಾದಿಯತ್ತಣಿಂ ಮದಶಕ್ತಿ ಪುಟ್ಟುವಂತೆ ಪುಟುಗುಮಾ ಭೂತಂಗಳುಂ ಕಾಯಾಕಾರಪರಿಣತಂಗಳಕ್ಕುಮಿದು ಪ್ರತ್ಯಕ್ಷಪ್ರಮಾಣಸಿದ್ಧಂ ಅನುಮಾನಪ್ರಮಾಣಮುಮಪ್ಪ ದೇಶಕಾಲಾದಿಗಳ್ ಭಿನ್ನಮಪ್ಪುದಱಿಂ ದ್ರವ್ಯಶಕ್ತಿಯಿಂ ಭಿನ್ನಮೆಂತೆನೆ ಮೂಲ[1]ದಂ ಬಾಲಂ ದೋಷಪರಮುಬಾಲಂ ದೋಷಕರಮುದಱಿಂ ಪ್ರತ್ಯಕ್ಷ ಪರಿಚ್ಛೇದ್ಯಂ ವಸ್ತುತತ್ವಮನುಮಾನದಿಂ ವ್ಯಭಿಚರಿಸುಗುಂ ಎಂದು ನುಡಿದುಮಪನೇ (ಮುದಂತ) ಪಕ್ಷನಿರ್ಣಯ ನಿಮಿತ್ತಮಿಂತೆಂದಂ—

ಉ॥ ಜೀವನಿವಾದಮೆತ್ತ ಪರಲೋಕ ಫಲೋದಯಮೆತ್ತದರ್ಕೆ ಮೆ
ಯ್ನೋವದೆ ಪೂಣ್ದು ಕೊಳ್ವ ತಪಮೆತ್ತಡದುಣ್ಣದ ಮಿಾಯದಂಗನಿ
ರ್ಜೀವಕೆಪೆತ್ತುದೆತ್ತ ವಿಫಲದ್ರ್ವಯದಾನವಿಧಾನಮೆತ್ತ ನಾ
ನಾವಿಧದಿಂದಮೇಂ ನಮೆದ್ ನಾರುಗಿದಿರ್ಪರೊ ಜೈನದೀಕ್ಷಿತರ್ ॥ ೧೨೯ ॥

ಕಂ॥ ಇಂತಿರೆ ಬೆದಬೆದ ಬೇಯು
ತ್ತುಂ ತಪದೊಳ್ ನಮೆದು ತಮ್ಮ ಶಿಷ್ಯರ್ಕಳುಮಂ
ತಾಂ ತಿರಿವ ಗೊರವಿ ಬೆನಕನು
ಮಂ ತಿರಿಯಿಪಳೆಂಬ ತೆಱದೆ ನೆಱೆ ನಮೆಯಿಸುವರ್ ॥ ೧೩೦ ॥

ವ॥ ಪೂರ್ವಪಕ್ಷವನ್ನು ಹೀಗೆ ಮಂಡಿಸಿದನು : "ಈ ಲೋಕದ ಪ್ರಾಣಿಗಳು ಆತ್ಮವೆಂದೂ ಪರಲೋಕವೆಂದೂ ಹಂಬಲಿಸಿ ದಾನ, ಶೀಲ, ವ್ರತ, ಉಪವಾಸಾದಿಗಳಿಂದ ಸೊರಗಿ ಎಲವು-ತೊಗಲು ಮಾತ್ರ ಉಳಿಯುವಂತಾಗುತ್ತಾರೆ. ಇದು ಮೂರ್ಖತನ. ಹೇಗೆಂದರೆ: ಪರಲೋಕದವನು (ತಾನೆಂದು ಹೇಳುವವನೆ) ಇಲ್ಲವೆಂದ ಮೇಲೆ ಪರಲೋಕವೆಲ್ಲಿಂದ ಬಂತು ? ಈ ನಿಮ್ಮ ಜಿನಮತದವರು ಹೇಳುವ 'ಜೀವತತ್ವ'ದಲ್ಲಿ ಪೃಥ್ವಿ, ಜಲ, ಅಗ್ನಿ, ವಾಯು—ಎಂಬ ನಾಲ್ಕು ಭೂತಗಳಿಂದ ಪ್ರತ್ಯೇಕವಾದ ಜೀವತ್ವವನ್ನು ಸ್ಥಾಪಿಸುವ ಪ್ರಮಾಣವಿಲ್ಲ. ಹಿಟ್ಟು, ನೀರು, ಬೆಲ್ಲ ಮತ್ತು ಆರೆ ಹೂವು ಮೊದಲಾದುವುಗಳ ಸಂಯೋಗದಿಂದ ಮಾದಕ ಶಕ್ತಿ ಹುಟ್ಟುವಂತೆ ಈ ನಾಲ್ಕು ಭೂತಗಳ ಸಂಯೋಗದಿಂದ ಜೀವವೆಂಬುದು ಹುಟ್ಟುವುದು. ಆ ಭೂತಗಳೂ ದೇಹಾಕಾರ ಪರಿಣತಗಳು. ಇದು ಪ್ರತ್ಯಕ್ಷ ಪ್ರಮಾಣದಿಂದ ಸಿದ್ಧ. ಇನ್ನು ಅನುಮಾನ ಪ್ರಮಾಣದ ಮೇರೆಗೆ ದೇಶ, ಕಾಲ, ಅವಸ್ಥೆ ಮೊದಲಾದುವು ಬೇರೆ ಬೇರೆ ಆಗಿರುವುದರಿಂದ ದ್ರವ್ಯ ಶಕ್ತಿಯೂ ಭಿನ್ನವಾಗುವುದು. ಹೇಗೆಂದರೆ : "ಮೂಲಕ"ವೆಂಬ ಸಸ್ಯ ಎಳೆಯದಾದರೆ ದೋಷಹರ, ಬಲಿತಿದ್ದರೆ ದೋಷಕರ. ಆದುದರಿಂದ ಪ್ರತ್ಯಕ್ಷಪ್ರಮಾಣದಿಂದ ನಿರ್ಣಯಿಸಬೇಕಾದ ವಸ್ತುತತ್ವವು ಅನುಮಾನದಿಂದ ವ್ಯತ್ಯಸ್ತವಾಗುವುದು." ಹೀಗೆಂದು ನುಡಿದು ತನ್ನ ಪಕ್ಷನಿರ್ಣಯಕ್ಕಾಗಿ ಹೀಗೆಂದನು :

೧೨೯. "ಜೀವವಿದೆಯೆಂಬುದೆತ್ತ ? ಪರಲೋಕದಲ್ಲಿ ಫಲನೆಂಬುದೆತ್ತ ? ಹಾಗೆ ಫಲವುಂಟೆಂದು ಭ್ರಮಿಸಿ ಮೈಮೇಲೆ ಮೋಹವಿಲ್ಲದೆ ಆಚರಿಸುವ ತಪವೆತ್ತ ? ಊಟವಿಲ್ಲದೆ, ಸ್ನಾನವಿಲ್ಲದೆ ಕೊರಗಿ ನಿರ್ಜೀವವಾಗುವುದೆತ್ತ ? ನಿಷ್ಫಲವಾದ ದಾನ ವಿಧಾನವೆತ್ತ ? (ಈ ಎಲ್ಲ ಹುಚ್ಚು ಭಾವನೆಗಳಿಗೆ ಮರುಳಾಗಿ) ನಾನಾ ವಿಧವಾಗಿ ನವೆದು ಜೈನದೀಕ್ಷೆ ವಹಿಸಿದವರು ಎಂತಹ ಕಷ್ಟಕ್ಕೆ ಈಡಾಗುವರು !

೧೩೦. ಹೀಗಿದ್ದು ತಪಸ್ಸಿನಲ್ಲಿ ತಾವು ಬೇಯುವುದಲ್ಲದೆ, "ತಿರುಕಳಾದ ಗೊರವಿ ಬೆನಕನನ್ನೂ ತಿರುಪೆಗೆ ಕಳಿಸಿದಳು" ಎಂಬಂತೆ ತಮ್ಮ ಶಿಷ್ಯರನ್ನೂ ತಮ್ಮಂತೆ ನವೆಯಿಸುವರು.

---

1. ಕಂ (ಮಾ)

ಕಂ॥ ಆ ನೆವದಿಂದಂ ಶ್ರಾವಕ
ಮಾನಿಗಳನನೇಕವಿಧದಿನುಪಜೀವಿಪರ
ಜ್ಞಾನಿಗಳ ಬುದ್ಧಿಪೌರುಷ
ಹೀನಮಜೀವಿಕೃತಂ ಬೃಹಸ್ಪತಿಮತದೊಳ್ ॥ ೧೩೧ ॥

ಚಂ॥ ಸಮಯವಿಚಾರಮೆಂಬುದು ಮಹಾಗಹನಂ ಕಪಟಕ್ಕೆ ಪೊತ್ತ ಕುಂ
ಚಮುಮಟೀಶೌಚಮುಂ ಮೆಱೆವ ಗುಂಡಿಗೆಯುಂ ವಿಕೃತಕ್ಕೆ ಸಂದ ನಾ
ಗ್ನ್ಯಮುಮಪಹಿಂಸೆಯೆಂಬ ಜನವಾದಮುಮಲ್ಲದೆ ಪೇೞ ಜೀವತ
ತ್ವಮುಮನಜೀವತತ್ವ[ಮು]ಮನೆತ್ತಱಿವರ್ ಜಿನತತ್ವ ತಾತ್ವಿಕರ್ ॥ ೧೩೨ ॥

ವ॥ ಅದಲ್ಲದೆಯುಂ ಭೂತಚತುಷ್ಟಯಸಂನಿಪಾತಮಂ ಶರೀರಮೆಂಬುದುಮದರ್ಕೆತ್ತಲುಂ ಬೇಱಿಲ್ಲದ ಚೈತನ್ಯಮುಂ ಜೀವಮೆಂಬುದುಮಂಬರಕುಸುಮಸಮಾನಮುಂ ಪರಲೋಕಮೆಂಬುದು ಖರವಿಷಾಣನಿರ್ವಿಶೇಷಂಗಳುಂ ಪುಣ್ಯಪಾಪಮೆಂಬುದು ಗಂಧರ್ವನಗರವಿಳಾಸಮುಂ ಧರ್ಮಾಸ್ತಿಕಾಯಮೆಂಬುದು ಮರುಮರೀಚಿಕಾನಿಕಾ[1][ಶ][1]ಂಗಳುಂ ಸುಖದುಃಖಂಗಳೆಂಬುದು ಸ್ವಪ್ನೇಂದ್ರಜಾಲಸನ್ನಿಭಂಗಳುಂ ಜೀವಿತಮರಣಂಗಳೆಂಬ[2][ವಿ][2]ಟ್ಟಳಮುಂ ಪುಸಿಯ ಪೊಟ್ಟಳಮುಮಕ್ಕುಮದ[3][ನ][3]ಕರ್ಣ್ಣಹೃದಯನುಮನೇಡಮೂಕನುಂ ತತ್ವಾಂಧನುಂ ವಸ್ತುಬಾಹ್ಯನುಂ ನಂಬುಗುಂ—

ಕಂ॥ ನಿನ್ನನ್ನಂ ಪ್ರತಿಭಾ ಸಂ
ಪನ್ನಂ ನಂಬುಗುಮೆ ಮೆಯ್ಗೆ ಮೆಚ್ಚಿದ ತೆಱದಿಂ
ದನ್ನಂಬಿ ವಿಷಯಸುಖದೊಳ್
ತನ್ನಿಷ್ಟನೆಯಾಗಿ ಮರುಳೆ ನಿರ್ವೃತನಾಗಾ ॥ ೧೩೩ ॥

ವ॥ ಅದಲ್ಲದೆಯುಂ—

---

೧೩೧. ಆ ನೆವದಿಂದ ಶ್ರಾವಕಾಭಿಮಾನಿಗಳನ್ನು ಅನೇಕ ವಿಧವಾಗಿ ಆಶ್ರಯಿಸುವವರು ಅಜ್ಞಾನಿಗಳು ಬೃಹಸ್ಪತಿ ಮತದಂತೆ ಇದು ಬುದ್ಧಿಹೀನರೂ ಪೌರುಷಹೀನರೂ ಒಪ್ಪುವ ಆಚರಣೆ.

೧೩೨. ಧರ್ಮ ವಿಚಾರವೆಂಬುದು ತುಂಬ ಗಹನವಾದುದು. ಕಪಟ ವೃತ್ತಿಯಿಂದ ಕುಂಚವನ್ನೂ ಕಮಂಡಲುವನ್ನೂ ಹಿಡಿದುಕೊಂಡು ಶೌಚವಿಲ್ಲದೆ ವಿಕಾರವಾಗಿ ಬೆತ್ತಲೆ ತಿರುಗುತ್ತ ಅಹಿಂಸಾವಾದಿಗಳೆಂದು ಹೇಳಿಕೊಳ್ಳುವುದು ಬರಿ ಜನವಾದವೆ ಹೊರತು ಜೀವತತ್ವವನ್ನಾಗಲಿ ಅಜೀವತತ್ವವನ್ನಾಗಲಿ ಜಿನಮತದ ತಾತ್ವಿಕರು ಅದೆಲ್ಲಿ ಬಲ್ಲರು ?

ವ॥ ಅದಲ್ಲದೆ ಭೂತಚತುಷ್ಟಯದಿಂದಾದುದಕ್ಕೆ ಶರೀರವೆಂಬುದೂ ಅದಕ್ಕೆ ಎಲ್ಲಿಯೂ ಬೇರೆನಿಸದ ಚೈತನ್ಯಕ್ಕೆ ಜೀವವೆನ್ನುವುದೂ ಆಕಾಶಪುಷ್ಪಕ್ಕೆ ಸಮಾನ ; ಪರಲೋಕವೆಂಬುದು ಕತ್ತೆಯ ಕೋಡು ಎಂಬಷ್ಟೇ ಸತ್ಯ; ಪುಣ್ಯಪಾಪಗಳೆಂಬುದು ಗಂಧರ್ವನಗರ ವಿಲಾಸ (ಅಸಂಭವ ಸಂಗತಿ); ಧರ್ಮಾಸ್ತಿಕಾಯವೆಂಬುದು ಬಿಸಿಲುಗುದುರೆಯಂತೆ ಬರಿ ಭ್ರಮೆ; ಸುಖದುಃಖಗಳೆಂಬುದು ಸ್ವಪ್ನಕ್ಕೆ ಅಥವಾ ಇಂದ್ರಜಾಲಕ್ಕೆ ಸದೃಶವಾದುದು. ಬದುಕು-ಸಾವುಗಳ ಸಮುದಾಯ (ಹುಟ್ಟು-ಸಾವುಗಳು ಅನೇಕವೆಂಬುದು) ಸುಳ್ಳಿನ ಮೊಟ್ಟೆ. ಇವೆಲ್ಲವನ್ನು ನಂಬುವವರು ಕಿವಿಯಿಲ್ಲದವರು. ಹೃದಯವಿಲ್ಲದವರು, ಕಿವುಡರು, ಮೂಕರು, ತತ್ವಾಂಧರು, ವಸ್ತುಬಾಹ್ಯರು.

೧೩೩. ನಿನ್ನಂತಹ ಪ್ರತಿಭಾವಂತನು ಇದನ್ನು ನಂಬುವುದುಂಟೆ ? ದೇಹಕ್ಕೆ ಯಾವುದು ಹೇಗೆ ಮೆಚ್ಚೊ ಅದನ್ನು ನಂಬಿ ವಿಷಯಸುಖದಲ್ಲಿ ನಿನಗೆ ಇಷ್ಟಬಂದಂತೆ ಇದ್ದು, ಮರುಳೆ, ಸಂತೃಪ್ತಿಪಡು.

ವ॥ ಅದಲ್ಲದೆ—

---

1. ಯಂ (ಮ) 2. ವಱಟ್ಟ (ಮ) 3. × (ಮ)

ಕಂ॥ ಪುಟ್ಟಿಂ ಸತ್ತೊಂ [1]ಕೊಟ್ಟೊಂ
ಕೆಟ್ಟಂ[1] ಬಾಟ್ವನ್ನವಿಂದ್ರಿಯಾಳಿಗೆ ಪಸರಂ
[2]ಗೊಟ್ಟುಂ ಮೆಯ್ಮೆಚ್ಚಿದವೋ
ಲುಟ್ಟುಂಡುಂ ನಿದ್ದೆಗೆಯ್ದು ಸುಖಮಂ ಪಡೆಯಾ ॥ ೧೩೪ ॥

ವ॥ ಎಂದು ಪೂರ್ವಪಕ್ಷ ಸ್ವರೂಪ[ನಿರೂಪ]ಣಾ ಪ್ರತಿಜ್ಞಾನಂತರಮನೇಕ ಕುನಯೋಪಪತ್ತಿಗಳಿಂ ಪಕ್ಷಪ್ರತಿಷ್ಠಾಪನೆಗೆಯ್ದು ಕವಳಿಗೆಯ ಭಟ್ಟಂ ನುಡಿಯೆ ರತ್ನತ್ರಯಪರೀಕ್ಷೆಗೆ ಮಾಣಿಕಚಟ್ಟನಪ್ಪ ವಜ್ರಾಯುಧನಾತನ ನುಡಿದುದೆಲ್ಲಮನನುವದಿಸಿ—

ಕಂ॥ ಲೋಕಾಯತವೆನಿಸಿದ ಚಾ
ರ್ವಾಕೋಕ್ತಿಯನಹಿತಶಕ್ತಿಯುಂ ಭೇದಿಸುವಂ
ತೇಕಕ್ಷಣದೊಳೆ ವಿಗತಾವಿ
ವೇಕಂ ಜಿನಚಂದ್ರಭೂಭುಜಂ ಭೇದಿಸಿದಂ ॥ ೧೩೫ ॥

ವ॥ ಅಂತದಂ ಭೇದಿಸೆ—

ಕಂ॥ ಪೊಸವೆಳ್ದಿಂಗಳ್ ಪಗಲೊಳ
ಮೆಸೆವಂತಿರೆ ದಂತಕಾಂತಿಗಳ್ ವಿಭು ನುಡಿದಂ
ಪಸರಿಸೆ ಸಾರೋದಾರ
ಪ್ರಸನ್ನ ಗಂಭೀರ ವಚನರಚನಾನಿಚಯಂ ॥ ೧೩೬ ॥

ಅಮರಗುರುವಾಣಿ ಮದಿರಾ
ಪ್ರಮತ್ತ ವಾಣೀಸಮಾನಮುನ್ಮತ್ತವಚಃ
ಸಮಮಂತಲ್ಲದೊಡೆಂತೀ
ಪ್ರಮಾದಿ ಚಾರ್ವಾಕನೆಂಬ ಪೆಸರಂ ಪಡೆಗುಂ ॥ ೧೩೭ ॥

೧೩೪. ಸತ್ತವನು ಹುಟ್ಟ ; ಕೊಟ್ಟವನು ಕೆಟ್ಟ. ಬದುಕಿರುವವರೆಗೆ ಇಂದ್ರಿಯಗಳಿಗೆ ತೃಪ್ತಿಯನ್ನೊದಗಿಸಿ ಮೈಮೆಚ್ಚುವಂತೆ ಉಟ್ಟು, ಉಂಡು, ನಿದ್ದೆ ಮಾಡಿ ಸುಖ ಪಡೆದುಕೊ."

ವ॥ ಈ ಮೇರೆಗೆ ಪೂರ್ವಪಕ್ಷವನ್ನು ನಿರೂಪಿಸಿದ ಬಳಿಕ ಹಲವಾರು ದುಷ್ಟನ್ಯಾಯದ ಉಪಪತ್ತಿಗಳಿಂದ ಪಕ್ಷವನ್ನು ಪ್ರತಿಷ್ಠಾಪಿಸಿ ಕವಳಿಗೆಯ ಭಟ್ಟನು ನುಡಿಯಲಾಗಿ, ರತ್ನತ್ರಯ ಪರೀಕ್ಷೆಯಲ್ಲಿ ಮಾಣಿಕಚಿಟ್ಟ (ನಿಷ್ಣಾತ)ನಾದ ವಜ್ರಾಯುಧನು ಆತನ ಮಾತೆಲ್ಲವನ್ನೂ ಅನುವಾದ ಮಾಡಿ—

೧೩೫. ಶತ್ರು ಶಕ್ತಿಯನ್ನು ಕತ್ತರಿಸುವಂತೆ ಲೋಕಾಯತವೆಂಬ ಚಾರ್ವಾಕಮತವನ್ನು ಒಂದೇ ಕ್ಷಣದಲ್ಲಿ ಜಿನಚಂದ್ರನಾದ ವಜ್ರಾಯುನು ಛೇದಿಸಿದನು.

ವ॥ ಹಾಗೆ ಅದನ್ನು ಛೇದಿಸಲು—

೧೩೬. ಹಗಲು ಹೊತ್ತಿನಲ್ಲಿಯೆ ಹೊಸ ಬೆಳ್ದಿಂಗಳು ಕಂಗೊಳಿಸುವಂತೆ ಹಲ್ಲುಗಳ ಪ್ರಭೆ ಹರಡುತ್ತಿರಲಾಗಿ ಆ ರಾಜನು ಸಾರವತ್ತಾದ ಪ್ರಸನ್ನವೂ ಗಂಭೀರವೂ ಆದ ವಚನ ರಚನೆಯಿಂದ ಹೀಗೆ ನುಡಿದನು :

೧೩೭. "ಬೃಹಸ್ಪತಿ ಮತವೆಂಬುದು ಹೆಂಡ ಕುಡಿದು ಮತ್ತೇರಿದವನು ಆಡುವ ಹುಚ್ಚು ಹುಚ್ಚಾದ ಮಾತಿಗೆ ಸಮಾನವಾದುದು. ಹಾಗಲ್ಲದಿದ್ದರೆ ಈ ಪ್ರಮಾದಿಗೆ ಚಾರ್ವಾಕನೆಂಬ ಹೆಸರು ಹೇಗೆ ಬರುತ್ತಿತ್ತು ?

1. ಕೆಟ್ಟಂ ಕೊಟ್ಟೊಂ (ಮ) 2. ಗೊಟ್ಟು ಮೆಯ್ಮೆಚ್ಚಿದಂದದೊಳು (ಅ)

ವ॥ ಅಮ್ಮಾ ಕೇಳ್ ನಿಮ್ಮ ಸಮ್ಮತಮಪ್ಪ ಪೃಥಿವ್ಯಾದಿ ತತ್ತ್ವಚತುಷ್ಟಯ ಸನ್ನಿಪಾತಮೆ ಚೈತನ್ಯಮಂ ಪುಟ್ಟಿಸುಗುಮಪ್ಪೊಡೊಲೆಯ ಕಿಚ್ಚಿನ ಮೃದ್ಭಾಜನದೆಸಱ ನೀರ ಬಾಣಸಿಗರುರಿಪ್ಪುವ ಗಾಳಿಯ ಸಂಯೋಗದೊಳ್ ಚೈತನ್ಯಮದೇಕೆ ಪುಟ್ಟದು ಅಂತಲ್ತು ಕಾಯಾಕಾರಪರಿಣತ ಭೂತಸನ್ನಿಪಾತಂ ಚೈತನ್ಯಜನಕಮೆಂಬೆಯಪ್ಪೊಡೆ ಸಂಸ್ಕಾರ ನಿಮಿತ್ತದಿಂದಿಟ್ಟಿಪಿದ ಶವದ ನೆಲದ ಪೊತ್ತಿಸಿದ ಕಿಚ್ಚಿನ ತಳಿದ ನೀರ ಬೀಸುವ ಗಾಳಿಯ ಸಂಯೋಗದೊಳ್ ಚೈತನ್ಯೋತ್ಪತ್ತಿಯಾಗಲೆವೇಳ್ಕುಂ ಈ ಮಾತಮೋಘಂ ಮಂದರಾಚಳ ನಿಶ್ಚಳಮಿದಂ ಚಳಿಯಿಸಲ್ ನಿಮ್ಮ ನಚ್ಚಿನ ವಾಚಸ್ಪತಿಗಮಶಕ್ಯಮದಱಿಂದಂ ಪೃಥಿವ್ಯಾದಿ ಸಂಬಂಧಮಲ್ಲದೆ ಪೆಱತು ದರ್ಶನ ಜ್ಞಾನಲಕ್ಷಣಂ ಜೀವಾಭಿಧಾನಂ ತತ್ತ್ವಾಂತರಮೆಲ್ಲಾ ಕಾಲಮುಂಟೆಂಬುದರ್ಕುಪಪತ್ತಿಯಾವುದೆನೆ ಜಾತಿಸ್ಮರರನೇಕರಾಮುಂ ನೀಮುಮಱಿಯೆ ತಮ್ಮ ಭವಾಂತರಂಗಳಂ ಪೇೞ್ದುದುಂ ಗ್ರಹಗ್ರಸ್ತಂ ಮಂತ್ರದಿನಾವೇಶಂಗೊಂಡು ತನ್ನ ಮುನ್ನಿನ ಭವದ ಪೆಸರಂ ನೆಗೞ್ತೆಯುಮಂ ಪೇೞ್ದುದುಮಾಬಾಲ ಗೋಪಾಲ ವೃದ್ಧ ಪ್ರಸಿದ್ಧಂ ಮತ್ತಂ ಸಾರ್ವಭೌಮರಪ್ಪ ಸಕಳಚಕ್ರವರ್ತಿಗಳಂ ಕಂಡು ಜಡಜನಂಗಳ್ ಪೊದಲಾಗಿದು ಮುನ್ನಿನ ಭವದೊಳ್ ನೆರಪಿದ ಪುಣ್ಯದ ಫಲಮೆಂಬರ್—

ಕಂ॥ ಅದಱಿಂದಂ ಜೀವಾಭಾ
ವದ ವಾದಂ ದರಿಯ ಮರನನೇಱಿದ ತೆಱನಂ
ತದನವಲಂಬಿಸ ಚೇವುಗು
ಮುದಯ್ಯ ಬುಧನಿಕರ ಕರ್ಣಶೂಲೋಪಮಮಂ ॥ ೧೩೮ ॥

ವ॥ ಅದಲ್ಲದೆಯುಂ ಜೀವನಿಲ್ಲೆಂಬ ನಿನ್ನ ಪ್ರತಿಷೇಧೋಕ್ತಿಯಿಂದಮೆ ಜೀವಸಿದ್ಧಿ ಹೇಳಾಸಾಧ್ಯಮೆಂತೆನೆ ಉಳ್ಳುದನಲ್ಲದಾರ್ಗಮಿಲ್ಲೆನಲ್ ಬಾರದುಳ್ಳುದುಂ ಪರದ್ರವ್ಯ ಪರಕ್ಷೇತ್ರ ಪರಿಕಾಲ ಪರಭಾವದಿಂದಮಿಲ್ಲದಿರ್ಕುಂ ಸ್ವದ್ರವ್ಯ ಸ್ವಕ್ಷೇತ್ರ ಸ್ವಕಾಲ ಸ್ವಭಾವದಿಂದಮವಶ್ಯಮುಂಟಾಗದಿರದು ಮತ್ತ ಮೆತ್ತಾನುಮುಳ್ಳುದನಲ್ಲದಿಲ್ಲೆನಲ್ಬಾರದು ಎಂಬ ನಿಷೇಧವಚನಮನೆ ಪಿಡಿದು ಜೀವಸಿದ್ಧಿಗೆಯ್ವೊಡೆ ಗಗನಕುಸುಮಮನತ್ಯಂತಾ

ವ॥ ಅಯ್ಯಾ, ಕೇಳು. ನಿಮ್ಮ ಅಭಿಪ್ರಾಯದಂತೆ ಪೃಥಿವಿಯೆ ಮೊದಲಾದ ನಾಲ್ಕು ಭೂತಗಳ ಸಂಯೋಗದಿಂದಲೆ ಜೀವ ಹುಟ್ಟುವುದಾದರೆ (ಒಲೆಯ ಮೇಲೆ ಪಾತ್ರೆಯಿಟ್ಟು ಅಡುಗೆ ಮಾಡುವಾಗ) ಒಲೆಯ ಬೆಂಕಿ, ಮಣ್ಣಿನ ಮಡಕೆ, ಅದರೊಳಗೆ ಎಸರಾದ ನೀರು, ಅಡುಗೆ ಭಟ್ಟನು ಊದುವ ಗಾಳಿ— ಈ ನಾಲ್ಕೂ ಭೂತಗಳ ಸಂಯೋಗದಿಂದ ಇಲ್ಲಿ ಜೀವ ಏಕೆ ಹುಟ್ಟುವುದಿಲ್ಲ ? ಹಾಗೆ ಆಗಲಾರದು. ದೇಹಾಕಾರ ಪರಿಣತವಾದ ಭೂತ ಸಮೂಹವೆ ಜೀವ ಜನಕವೆಂದು ನೀನು ವಾದಿಸುವುದಾದರೆ, ಅಂತ್ಯಸಂಸ್ಕಾರಕ್ಕಾಗಿ ಶವವನ್ನಿಟ್ಟ ಭೂಮಿ, ಹೊತ್ತಿಸಿದ ಕಿಚ್ಚು, ತಳಿದ ನೀರು, ಬೀಸುವ ಗಾಳಿ- ಈ ನಾಲ್ಕರ ಸಂಯೋಗದಿಂದ ಅಲ್ಲಿ ಜೀವೋತ್ಪತ್ತಿಯಾಗಲೇಬೇಕು. (ಆದರೆ ಹಾಗೆ ಎಂದಿಗೂ ಆಗುವುದಿಲ್ಲ.) ಇದು ನಿಶ್ಚಿತವಾದುದು ; ಮಂದರ ಪರ್ವತದಂತೆ ನಿಶ್ಚಲವಾದುದು. ಇದನ್ನು ಅಲ್ಲಗಳೆಯುವುದು - ನಿಮ್ಮ ನೆಚ್ಚಿನ ಬೃಹಸ್ಪತಿಗೂ ಸಾಧ್ಯವಿಲ್ಲ. ಅದರಿಂದ ಪೃಥಿವಿಯೆ ಮೊದಲಾದ ಭೂತಗಳ ಸಂಬಂಧವಿಲ್ಲದೆ ಪ್ರತ್ಯೇಕವಾಗಿದ್ದು ದರ್ಶನ ಜ್ಞಾನಗಳೇ ಲಕ್ಷಣವಾಗುಳ್ಳ ಜೀವವೆಂಬ ಇನ್ನೊಂದು ತತ್ತ್ವವು ಎಲ್ಲಾ ಕಾಲಕ್ಕೂ ಉಂಟು. ಇದಕ್ಕೆ ಉಪಪತ್ತಿ ಯಾವುದೆಂದರೆ—ನಾವೂ ನೀವೂ ತಿಳಿದಂತೆ ಪೂರ್ವಜನ್ಮ ಸ್ಮರಣೆಯಿಂದ ಕೆಲವರು ತಮ್ಮ ಜನ್ಮಾಂತರ ವೃತ್ತಾಂತಗಳನ್ನು ಹೇಳುವುದೂ, ಪಿಶಾಚಗ್ರಸ್ತನಾದವನು ಮಂತ್ರದ ಪ್ರಭಾವದಿಂದ ಆವೇಶಗೊಂಡು ತನ್ನ ಪೂರ್ವಭವದ ಹೆಸರನ್ನೂ ಕೃತಿಗಳನ್ನೂ ಹೇಳುವುದೂ— ಚಿಕ್ಕ ಮಕ್ಕಳಿಂದ ಹಿಡಿದು ಮುಪ್ಪಿನ ಮುದುಕರವರೆಗೆ ಎಲ್ಲರಿಗೂ ಚಿರಪರಿಚಿತವಾದ ವಿಷಯ ಮತ್ತು ಸಾರ್ವಭೌಮರಾದ ಚಕ್ರವರ್ತಿಗಳನ್ನು ಕಂಡು ಜನಸಾಮಾನ್ಯರು ಮೊದಲಾಗಿ ಎಲ್ಲರೂ "ಇದು ಹಿಂದಿನ ಜನ್ಮದಲ್ಲಿ ಗಳಿಸಿದ ಪುಣ್ಯದ ಫಲ"ವೆಂದು ನುಡಿಯುವರು.

೧೩೮. ಆದುದರಿಂದ ಜೀವವಿಲ್ಲೆಂಬ ವಾದವು ಕಪುರಿಯ ತುದಿಯ ಮರವನ್ನೇರಿದಂತೆ. ಅದನ್ನು ಅವಲಂಬಿಸಿದ ಮಾತು ಬಲ್ಲವರ ಕಿವಿಗೆ ಶೂಲದಂತೆ ಬಾಧೆಯುಂಟುಮಾಡುತ್ತದೆ. ಆ ವಾದವನ್ನು ನಂಬಿದವನು ಹಾಳಾಗುತ್ತಾನೆ.

ವ॥ ಅದಲ್ಲದೆ, 'ಜೀವ'ವೆಂಬುದೇ ಇಲ್ಲವೆಂಬ ನಿನ್ನ ನಿಷೇಧವಾಕ್ಯದಿಂದಲೆ ಜೀವನುಂಟೆಂದು ಸುಲಭವಾಗಿ ಸಾಧಿಸಬಹುದು. ಹೇಗೆಂದರೆ ಇದ್ದುದನ್ನು ಇಲ್ಲವೆನ್ನಲು ಯಾರಿಗೂ ಸಾಧ್ಯವಿಲ್ಲ. ಇದ್ದುದು (ಅಥವಾ ಇರುವುದು) ರ ದ್ರವ್ಯ, ಪರಕ್ಷೇತ್ರ, ಪರಕಾಲ, ಪರಭಾವದಿಂದ ಇಲ್ಲದಿರಬಹುದು. ಆದರೆ ಸ್ವಕ್ಷೇತ್ರ, ಸ್ವಕಾಲ, ಸ್ವಭಾವದಿಂದ

ಭಾವಮಂ ನಿಷೇಧಮಾತ್ರದಿಂದಮುಂಟುಮಾಡಲಕ್ಕುಮೆ ಪೇಟಿಮೆಂಬಯಪ್ಪೊಡೆ ಅದು ಮುನ್ನಿನ ಸ್ವದ್ರವ್ಯ ಪರದ್ರವ್ಯಾದಿ ಚತುಷ್ಟಯದೋಳಡಂಗಿಮುದು ಎಂತೆನೆ ಗಗನಕುಸುಮುಂ ಕುಸುಮಕ್ಕೆ ಗಗನಮಿಲ್ಲದಲ್ಲದೆ ನಿಜಾಧಾರಾಧೇಯ ಸ್ಥಿತಿಯೊಳಲ್ಲದಿರ್ಕುಮೆ ಮತ್ತಂ ಪ್ರಸಿದ್ಧಾನಮುಂ ಪಡೆದ ಪರಾರ್ಥಮಂ ಶಾಶ್ವತಮೆಂಬುದನುಕ್ತಸಿದ್ಧಮಲ್ಲದಂದಭಿಧಾನಂ ನಿರರ್ಥಕರಮುಮಾಧಾರರಹಿತಮುಮಕ್ಕುಮೆಂದುಮಿಲ್ಲದ ಪದಾರ್ಥಕ್ಕಭಿಧಾನಮನಿಡುವ ಮರುಳಾವೊಂ ವಸ್ತುಹೀನಮಭಿಧಾನಮುಂಟಕ್ಕುಮಪ್ಪೊಡೆ ಶಬ್ದಾರ್ಥಸಂಬಂಧಂ ಪಾರಿಪ್ಲವ ಪರಿಪ್ಲವಮಕ್ಕುಂ—

ಮ॥ ಅದಱಿಂ ಜೀವ ಪದಾರ್ಥಮಿಲ್ಲದಿರದಾ ಜೀವಕ್ಕಮೀ ಜನ್ಮಮೆಂ
ಬುದುಮಾ ಮತ್ತಿನ ಜನ್ಮಮೆಂಬುದುಮನೇಕಂ ಜೀವತತ್ವಕ್ಕೆ ಪಾ
ಪದೊಳಂ ಪುಣ್ಯದೊಳಂ ವಿಮಿಶ್ರಣದೊಳಂ ಜನ್ಮಾಳಿ ಸಲ್ಗುಂ ಸುಖ
ಕ್ಕದೆ ದುಃಖಕ್ಕದೆ ಮಿಶ್ರಣಕ್ಕದೆ ಪದಂ ಸಂಸಾರಿ ಸಂಸಾರದೊಳ್ ॥ ೧೩೯ ॥

ಕಂ॥ ಸಮಕೊಂಡ ಪುಣ್ಯಮುಂ ಪಾ
ಪಮುಮಿಲ್ಲದೊಡಾಳ್ದನಾಳ್ ಸರೋಗನರೋಗಂ
ಶ್ರಮರಹಿತಂ ಕ್ಲೇಶಕೃತ
ಶ್ರಮನೆಂಬೀಲೋಕಯಾತ್ರೆ ಕಿಡದೆ ಮಹಾತ್ಮಾ ॥ ೧೪೦ ॥

ಆರಂಭಿಗನಾತ್ಮಂ ಸಂ
ಸಾರಂ ಕೆಯ್ ಬಿತ್ತಿಯುಣ್ಬ ಫಲಮುಭಯಭವೋ
ದಾರಂ ಬಿತ್ತು ಶುಭಾಶುಭ
ಮೋರಂತಿರೆ ಬೆಳಪ ಬೆಳಸು ಸುಖದುಃಖಂಗಳ್ ॥ ೧೪೧ ॥

ಅವಶ್ಯವಾಗಿ ಇದ್ದೇ ಇರುವುದು. ಮತ್ತು "ಇದ್ದುದನ್ನು ಇಲ್ಲೆನಲು ಬಾರದು" ಎಂಬ ನಿಷೇಧ ವಾಕ್ಯವನ್ನೇ ಹಿಡಿದು ಜೀವಸಿದ್ಧಿಯನ್ನು ಹೇಳುವುದಾದರೆ ಅತ್ಯಂತ ಅಸಾಧ್ಯವಾದ ಗಗನಕುಸುಮವನ್ನು ನಿಷೇಧ ಮಾತ್ರದಿಂದ ಸಿದ್ಧಿಸಬಹುದೆ ಎಂದು ನೀನು ಕೇಳಬಹುದು. ಅದು ಮುಂಚಿನ ಸ್ವದ್ರವ್ಯ ಪರದ್ರವ್ಯಾದಿ ಚತುಷ್ಟಯದಲ್ಲಿ ಅಡಗಿದಃದು. ಹೇಗೆಂದರೆ 'ಗಗನಕುಸುಮ' ಎಂದಾಗ ಕುಸುಮಕ್ಕೆ ಗಗನವೆಂಬ ಆಧಾರವಿರಲೇಬೇಕಲ್ಲವೆ? ಹೀಗೆ ಆಧಾರ-ಆಧೇಯ ಸ್ಥಿತಿಯಲ್ಲಿ ಅಲ್ಲದೆ ಅದಕ್ಕೆ ಅವಕಾಶವಿಲ್ಲ. ಮತ್ತು ಪ್ರಸಿದ್ಧವಾದ ಪರಾರ್ಥವನ್ನು ಶಾಶ್ವತವೆಂಬುದು ಅನುಕ್ತಸಿದ್ಧ. ಹಾಗಲ್ಲವಾದರೆ ಅಭಿಧಾನವೆಂಬುದಕ್ಕೆ ಅರ್ಥವೂ ಇಲ್ಲ ಆಧಾರವೂ ಇಲ್ಲ ಎಂದಾಗುತ್ತದೆ. ಎಂದೂ ಎಲ್ಲಿಯೂ ಇಲ್ಲದ ಪಥಾರ್ಥಕ್ಕೆ ಒಂದು ಅಭಿಧಾನ (ಹೆಸರು) ವನ್ನು ಕೊಡುವ ಬುದ್ಧಿಗೇಡಿ ಯಾರು? ವಸ್ತುಹೀನವಾದ ಅಭಿಧಾನವುಂಟೆಂದರೆ ಶಬ್ದಾರ್ಥ ಸಂಬಂಧವೇ ಅನಿಶ್ಚಿತವಾಗುವುದು—

೧೩೯. ಆದುದರಿಂದ ಜೀವವೆಂಬುದು ಇಲ್ಲದೆ ಇಲ್ಲ. ಆ ಜೀವಕ್ಕೆ ಈ ಜನ್ಮವೂ ಉಂಟು, ಜನ್ಮಾಂತರಗಳೂ ಉಂಟು. ಜೀವತತ್ವಕ್ಕೆ ಪಾಪದಿಂದಲೂ, ಪುಣ್ಯದಿಂದಲೂ, ಅವುಗಳ ಬೆರಕೆಯಿಂದಲೂ ಭವಾವಳಿಯುಂಟಾಗುವುದು. 'ಸಂಸಾರಿ'ಯೆನಿಸುವ ಈ ಜೀವದ ಸುಖಕ್ಕೂ, ದುಃಖಕ್ಕೂ, ಅವೆರಡರ ಮಿಶ್ರಣಕ್ಕೂ ಸಂಸಾರವೇ ಆಸ್ಪದವಾಗಿದೆ.

೧೪೦. ಪುಣ್ಯವೂ ಪಾಪವೂ ಇಲ್ಲವಾದರೆ, ಅರಸು-ಆಳು, ರೋಗಿ-ನಿರೋಗಿ, ಶ್ರಮಿ-ವಿಶ್ರಮಿ ಎಂಬ ಈ ಲೋಕಯಾತ್ರೆ ಕೆಡುವುದಿಲ್ಲವೆ?

೧೪೧. ಈ ಸಂಸಾರವೆಂಬುದೊಂದು ವ್ಯವಸಾಯ. ಇದರಲ್ಲಿ ಆತ್ಮನು ಬೇಸಾಯಗಾರ; ಸಂಸಾರವೆ ಸಾಗುವಳಿಯ ಭೂಮಿ; ಪಾಪಪುಣ್ಯಗಳೆ ಬೀಜ; ಸುಖದುಃಖಗಳೆಂಬುವೆ ಪಡೆದುಕೊಳ್ಳುವ ಬೆಳೆ.

ವ॥ ಅದಱಿಂದಮಾತ್ಮವಚನಂ ಪ್ರಮಾಣಸಿದ್ಧಂಗಳಾಗಿ ಪದಾರ್ಥಂಗಳೆಲ್ಲಂ ಪ್ರತ್ಯಕ್ಷಂಗಳಲ್ಲದುವಿಲ್ಲ ಮಾಂಸನಯನಾ ವಿಷಯಮೆಲ್ಲಮ ಪ್ರತ್ಯಕ್ಷಮೆಂಬೀ ಜಡವಾದಮಂ ಕಂಡು ಕಂಡಲ್ಲದಱ[1]ಯೆಂ[1] ಎಂಬ ನಾಣ್ಣುಡಿಯಂ ಪೋಲ್ಕುಮೆಂಬುದುಂ ಪ್ರತಿವಾದಿ ನಿರುತ್ತರನಾಗಿ ಪಕ್ಷಪರಿತ್ಯಾಗಂ ನಿಗ್ರಹಸ್ಥಾನಮೆಂಬುದಱಿಂ ನಿಗ್ರಹಸ್ಥಾನಮನೆಯ್ದಿಯುಮಿರದೆ—

ಕಂ॥ ಅಗಳವನೇಕಪಕ್ಷ
ತ್ಯಾಗಂ [2]ಕೆಯ್ಯಱಿಯೆ[2] ಸುರಿಗೆವಿಸುಟ[3][ಟ][3]ಲಂಕಂ
ಪೋಗದೆ ಕಟ್ಟಿದ ಸುರಿಗೆಯ
ನಾಗಳ್ ಕಿಟ್ಟಂತೆ ಸುಗತಮತಮಂ ಪಿಡಿದಂ ॥ ೧೪೨ ॥

ವ॥ ಪಿಡಿದು ನಿಮ್ಮಾಗ್ರಹದಿಂದಂ ನಿಱಿಸಿದ ಪದಾರ್ಥಂ ಸುಖದುಃಖಹರ್ಷವಿಷಾದಂಗಳೊಳಾದುದೊಂದು ವಿಜ್ಞಾನ ಸಂತಾನಮಾದುದಲ್ಲದೆ ತದ್ವ್ಯತಿರಿಕ್ತಂ ಜೀವನೆಂಬುದಿಲ್ಲ ತದ್ಗ್ರಾಹಕಪ್ರಮಾಣಮಿಲ್ಲದುದಱಿಂದೆ ಪೂರ್ವಕಾಲಭಾವಿವಿಜ್ಞಾನಮುತ್ತರ ಕಾಲಾದಿಗಳೊಳ್ ನೆಗೆದು ಕ್ಷಣಿಕತ್ವದಿಂದಮಾಗಳಾ ವಿಜ್ಞಾನಂ ನಿಲ್ಲದಪ್ಪುದಱಿಂದಮಿನ್ನುತ್ತರಕಾಲತಾಭಾವ ವಿಜ್ಞಾನಮುಂ ಪೂರ್ವಕಾಲ ತಾಭಾವವಿಜ್ಞಾನದೊಳ್ ಸಂಗತಮಲ್ಲದಱಿಂ ಪೂರ್ವೋತ್ತರಕಾಲವ್ಯಾಪ್ತಿ ಜೀವತತ್ವಮೊಂದುಂಟೆಂಬರದೊಂದುಮಿಲ್ಲ ಪ್ರತಿಕ್ಷಣಂ ವಿಶರಾರುಗಳ್ ಚಿತ್ರಕ್ಷಣಂಗಳ್ ಪೂರ್ವಾಪೂರ್ವ ಚಿತ್ರವಿಶೇಷಪ್ರಭವಂಗಳ್ ಪ್ರಬಂಧದಿಂದಂ ಪ್ರವರ್ತಿಸುವುವವನಱಿಯದ ಲೋಕಕ್ಕಾತ್ಮಾಭಿ ಮಾನಂ ಪುಟ್ಟುಗುಂ ಅದಱಿಂದಮಿನ್ನಪ್ಪೊಡಂ ಜೀವಸದ್ಭಾವಾಭಿಮಾನಮಂ ಬಿಸುಡುವುದು ರೂಪವೇದನಾವಿಜ್ಞಾನ ಸಂಜ್ಞಾನ [4]ಸಂಸಾರ[4]ಸಾರಂಗಳೆಂಬಯ್ದುಂ ಸ್ಕಂಧಂಗಳ್ ದೀಪಶಿಖಾರೂಪದಿಂ ಕ್ಷಣವಿಳಂಬಿಗಳದಱಿಂ ವಿಜ್ಞಾನಾಶ್ರಿತಂಗಳಪ್ಪ ಶರೀರೇಂದ್ರಿಯಬುದ್ಧಿ ಗಳೇಕಕ್ಷಣಾಂತರಾಳವರ್ತಿಗಳುತ್ತರಕ್ಷಣವ್ಯಪಾಯಿಗಳದರ್ಕೇಕಾತ್ಮಜಂ ಜೀವಮೆಂಬುದಾದುದೆನೆ ದರಹಸಿತವದನಾರವಿಂದನಾಗಿ ಸಮ್ಯಕ್ತ್ವ ಖಡ್ಗನಪ್ಪ ವಜ್ರಾಯುಧಂ—

ವ॥ ಆದುದರಿಂದ ಆತ್ಮದ ಮಾತು ಪ್ರಮಾಣಸಿದ್ಧವಾಗಿದ್ದು ಪದಾರ್ಥಗಳೆಲ್ಲ ಪ್ರತ್ಯಕ್ಷಗಳೇ ಆಗಿವೆ. ಮಾಂಸ, ನಯನ ಮೊದಲಾದ ವಿಷಯವೆಲ್ಲ ಅಪ್ರತ್ಯಕ್ಷವೆಂಬ ಜಡವಾದವು "ಕಂಡಲ್ಲದೆ ಅರಿಯಲಾರ"ನೆಂಬ ನಾಣ್ಣುಡಿಯನ್ನು ಹೋಲುವುದು. ಹೀಗೆ ವಾದಿಸಲಾಗಿ ಪ್ರತಿವಾದಿಯು ನಿರುತ್ತರನಾದನು. ಪಕ್ಷತ್ಯಾಗವು (ಮುಂದಿಸಿದ ಪಕ್ಷವನ್ನು ಬಿಟ್ಟು ವಾದಿಸುವುದು) ವಾದದಲ್ಲಿ ತರ್ಕದೋಷ. ಹಾಗೆ ಆ ದೋಷವನ್ನೆ ಮಾಡಿ ಆತನು—

೧೪೨. ಕಾಳಗ ಕೈಮೀರಿದಾಗ ಭಟನು ಕಟ್ಟಿದ ಚೂರಿಯನ್ನು ಹಿರಿಯುವಂತೆ ಮೊದಲಿನ ಪಕ್ಷವನ್ನು ತೊರೆದು ಬೌದ್ಧಮತವನ್ನು ಹಿಡಿದು ವಾದಿಸತೊಡಗಿದನು :

ವ॥ "ನೀವು ಆಗ್ರಹದಿಂದ ಸ್ಥಾಪಿಸಿದ ಪದಾರ್ಥವು ಸುಖ-ದುಃಖ, ನಗೆ ನೋವುಗಳಲ್ಲಿ ಆದ ಒಂದು ವಿಜ್ಞಾನ ಸಂತಾನವೆ ಹೊರತು ಅದಕ್ಕೆ ವ್ಯತಿರಿಕ್ತವಾದ ಜೀವನೆಂಬುದು ಇಲ್ಲ. ಅದಕ್ಕೆ ಗ್ರಾಹಕ ಪ್ರಮಾಣವಿಲ್ಲದುದರಿಂದ ಮೊದಲು ಉಂಟಾದ ವಿಜ್ಞಾನವು ಮುಂದು ಮುಂದಿನ ಕಾಲದಲ್ಲಿ ನೆಗೆದುಹೋಗುವುದು ; ಹೀಗೆ ಕ್ಷಣಿಕತ್ವದಿಂದ ಆ ವಿಜ್ಞಾನವು ನಿಲ್ಲಲಾರದು. ಆದುದರಿಂದ ಉತ್ತರ ಕಾಲದಲ್ಲಿ ಹುಟ್ಟುವ ವಿಜ್ಞಾನಕ್ಕೂ ಪೂರ್ವಕಾಲದಲ್ಲಿ ಹುಟ್ಟಿದ ವಿಜ್ಞಾನಕ್ಕೂ ಸಾಂಗತ್ಯವಿಲ್ಲ ಎಂದಮೇಲೆ ಪೂರ್ವೋತ್ತರ ಕಾಲಗಳೆರಡನ್ನೂ ವ್ಯಾಪಿಸಬಲ್ಲ ಜೀವತತ್ವವುಂಟೆಂದ ಹೇಳಲಾಗುವುದಿಲ್ಲ. ಪೂರ್ವಾಪೂರ್ವ ಚಿತ್ರವಿಶೇಷದಿಂದ ಹುಟ್ಟುವ ಚಿತ್ರ ಕ್ಷಣಗಳು ಕ್ಷಣ ಕ್ಷಣಕ್ಕೆ ನಾಶವಾಗುವುವಾದರೂ ಒಂದಕ್ಕೊಂದು ಹೊಂದಿಕೊಂಡು ಬರುವುದರಿಂದ ಅದನ್ನರಿಯದ ಜನಕ್ಕೆ ಆತ್ಮಾಭಿಮಾನ ಹುಟ್ಟುವುದು. ಅದರಿಂದ ಇನ್ನು ಮೇಲಾದರೂ ಜೀವವುಂಟೆಂಬ ಅಭಿಮಾನವನ್ನು ಬಿಡು. ರೂಪ, ವೇದನೆ, ವಿಜ್ಞಾನ, ಸಂಜ್ಞಾನ, ಸಂಸಾರ— ಎಂಬ ಐದು ಸ್ಕಂಧಗಳೂ ದೀಪದ ಕುಡಿಯಂತೆ ಕ್ಷಣಕಾಲ ಮಾತ್ರ ಇದ್ದುಹೋಗತಕ್ಕುವು. ಆದರಿಂದ ವಿಜ್ಞಾನವನ್ನಾಶ್ರಯಿಸಿದ ಶರೀರ ಇಂದ್ರಿಯ, ಬುದ್ಧಿಗಳು ಈ ಕ್ಷಣದಲ್ಲಿ ಇದ್ದು ಇನ್ನೊಂದು ಕ್ಷಣದಲ್ಲಿ ಇಲ್ಲವಾಗುವುವು. ಹೀಗಿರುವುದರಿಂದ ಜೀವನೆಂಬುದು ಹೇಗೆ ಉಂಟಾಯಿತು ?" ಈ ಮಾತುಗಳಿಗೆ ನಸುನಗುತ್ತ ಸಮ್ಯಕ್ತ್ವವೆಂಬ ಖಡ್ಗಧಾರಿಯಾದ ವಜ್ರಾಯುಧನು—

---

1. ಯೆನೆಂಬರ್ (ಮ) 2. ಕೆಯ್ವಱಿಯೆ (ಮ) 3. ಳ (ಮ) 4. ಸಂಸ್ಕಾರಂ (ಮ)

ಕಂ॥ ಕವಳಂಗೊಂಡೊಡದಂ ಪ
ತ್ತುವಿಡಿಸಿ ಪಕ್ಕಾದ ರೂಪನಡಸುವ ಕರಿಯಂ
ತವನನವನೀಶನಿರದೆ
ತ್ತವೋಪೆಯೆಂಬಂತೆ ತಕ್ಕುಗಿಡೆ ಕಡುಗೆಯ್ದಂ ॥ ೧೪೩ ॥

ಕ್ಷಣಿಕಪ್ರತಿಜ್ಞೆ ಜೀವನೊ
ಳೊಣರದು ವಂಧ್ಯಾಸ್ತನಂಧಯಪ್ರತಿಮಮದಂ
ಗುಣಿ ದೂಷಿಸೆ ಯುಕ್ತಿಗಳಿಂ
ಕ್ಷಣಾರ್ಧಮುಂ ನಿಲ್ಲದಿಲ್ಲದಕ್ಕನುಮಾನಂ ॥ ೧೪೪ ॥

ವ॥ ಅದೆಂತೆಂದೊಡೆ ವಿಜ್ಞಾನಕ್ಷಣಿಕವಾದಂ ಬಾಲಲೋಲ ಭಾಷಿತದಂತೆ ಪರಿಹಾಸಾಸ್ಪದಮಾದಪ್ಪುದೊಂದು ಕ್ಷಣಮಾತ್ರದಿಂದತ್ತ ಪರಮಾಣುಮಾತ್ರದಿಂ ನಿಲ್ಲದು ವಿಜ್ಞಾನವಾದದೊಳ್—

ಮ॥ ಸ್ಮರಬಾಣಾರ್ತವಿಟೀವಿಟಾಳಿಗೆ ವಿಯೋಗಂ ಪೂರ್ವಸಂಭೋಗ ಸಂ
ಸ್ಮರಣಂ ದೂತನ ಕೆಯ್ಯೊಳಟ್ಟುವವಿನಾಣಂ ಕೂಟದುದ್ಯೋಗದಾ
ದರವಿಾಯಲ್ ಪೆಸರ್ಪೋದುದಂ ಕುಡುವ ಕೋಡೆಂದೀ ಸ್ವಸಂವಿತ್ಪರಂ
ಪರೆ ಪೋಕುಂ ಪ್ರಳಯಕ್ಕೆ ತತ್ಕ್ಷಣಿಕ ಮಿಥ್ಯಾವಾದಿ ವಾದೀಂದ್ರರಿಂ ॥ ೧೪೫ ॥

ವ॥ ಅದಲ್ಲದೆಯುಂ ಸುಗತಮತಾನುಸಾರಿಗಳ—

ಮ॥ ಮನಮೊಲ್ದಾತನನೆಯ್ದೆ ಜಾನಿಸುವುದುಂ ಮೆಲ್ಪುಂ ಶಿರಸ್ತುಂಡಮುಂ
ಡನಮುಂ ಪಾತ್ರಕಷಾಯ ಚೀವರ ತಪೋನುಷ್ಠಾನಮುಂ ತತ್ವಭಾ
ವನೆಯುಂ ಧ್ಯಾನಮುಮೆಂದುಮೊಂದುವವರಾ ರಾದ್ಧಾಂತಮುಂ ತತ್ತಪೋ
ರ್ಜನಮುಂ ತುಪ್ಪದ ಕಾದ ಪಾಲವೊಲದೇಂ ಸಂಭಿನ್ನಸಂಯೋಗಮೋ ॥ ೧೪೬ ॥

---

೧೪೩. ತುತ್ತುಮಾಡಿಕೊಂಡ ಪದಾರ್ಥವನ್ನು ಒಡೆದು ತನಗೆ ತಕ್ಕ ಆಕಾರಕ್ಕೆ ಮಾರ್ಪಡಿಸುವ ಆನೆಯಂತೆ ಅವನ ಮಾತುಗಳನ್ನು ಖಂಡಿಸಿ ತನ್ನ ವಾದಕ್ಕೆ ಬಳಸಿಕೊಂಡನು—

೧೪೪. "ಕ್ಷಣಿಕವಾದವು ಜೀವತತ್ವಕ್ಕೆ ಅನ್ವಯಿಸಲಾರದು. 'ಬಂಜೆಯ ಮಗ' ಎಂಬಂತೆ ಅದು ಅಸಂಬದ್ಧವಾಗಿದೆ. ಯುಕ್ತಿವಾದದ ಎದುರಿಗೆ ಅದು ಕ್ಷಣಾರ್ಧವೂ ನಿಲ್ಲಲಾರದು. ಇದಕ್ಕೆ ಅನುಮಾನವಿಲ್ಲ.

ವ॥ ಹೇಗೆಂದರೆ: ವಿಜ್ಞಾನ ಕ್ಷಣಿಕವಾದವು. ತಿಳಿವಳಿಕೆಯಿಲ್ಲದ ಮಕ್ಕಳ ಮಾತಿನಂತೆ ಹಾಸ್ಯಾಸ್ಪದವಾಗಿದೆ. ಅದು ಒಂದು ಪರಮಾಣು ಕಾಲಕ್ಕೂ ತಾಳಲಾರದ ವಾದ. ವಿಜ್ಞಾನವಾದದ ಮೇರೆಗೆ—

೧೪೫. ಮದನಬಾಧೆಗೀಡಾದ ವಿಟವಿಟಿಯರಿಗೆ ವಿರಹ, ಪೂರ್ವರತಿಕ್ರೀಡೆಯ ಸ್ಮರಣೆ, ದೂತನ ಕೈಯಲ್ಲಿ ಕೊಟ್ಟು ಕಳಿಸುವ ಕುರುಹು, ಕೂಟ, ಅದರ, ಕೊಡುಗೆ ಮುಂತಾದ ಪ್ರತ್ಯಕ್ಷಾನುಭವ ರೂಢಿ ಎಲ್ಲಾ ಸುಳ್ಳಾಗಿ ಹೋಗುವುದು.

ವ॥ ಅದಲ್ಲದೆ ಬೌದ್ಧಮತಾನುಯಾಯಿಗಳಲ್ಲಿ—

೧೪೬. ಮನಮೆಚ್ಚಿ ಆತನನ್ನು (ಬುದ್ಧನನ್ನು) ಧ್ಯಾನಮಾಡುವುದು, ಮಾರ್ದವ, ತಲೆಬೋಳು ಭಿಕ್ಷಾಪಾತ್ರೆ, ಕಾಟವಸ್ತ್ರ, ತಪಶ್ಚರಣ, ತತ್ವಭಾವನೆ, ಧ್ಯಾನ— ಇವುಗಳನ್ನೆಲ್ಲ ಒಳಗೊಂಡ ಅವರ ಸಿದ್ಧಾಂತವೂ ಅವರ ತಪಃಫಲವೂ ಇವೆಲ್ಲ ಏನು ? ತುಪ್ಪ ಹಾಗೂ ಕಾದ ಹಾಲುಗಳಂತೆ ಸಂಭಿನ್ನ ಸಂಯೋಗವೆ ?

ಕಂ॥ ಸಮಯಿಗಳೊಳ್ ಜೀವಾಭಾ
ವಮಿತ್ತ ಸೌಗತನೊಳತ್ತ ಚಾರ್ವಾಕನೊಳೀ
ಕ್ರಮದಿಂದಮವರ ಸಿದ್ಧಾಂ
ತಮುಮವರ ಚರಿತ್ರಮುಂ ಸ್ವವಚನ ವಿರೋಧಂ ॥ ೧೪೭ ॥

ವ॥ ಎಂದು ತಥಾಗತಮತಮಂ ತಿರಸ್ಕರಿಸಿ ತನ್ನೊಳಶಕ್ಯಾನುಷ್ಠಾನಕ್ಕೆ ಪೊಣರ್ದ ಲೋಕಾಯತ ಶಾಕ್ಯಮತಾವಲಂಬಿಯನವಿಲಂಬಿತಂ ಗೆಲ್ದು ಮತ್ತಮನೇಕೋಪಪತ್ತಿಗಳಿಂ ಚಾರ್ವಾಕ ಕಾರುಣಿಕಘಾಘದೂಕನಂ ಕರುಣರಸಾಸ್ಪದಂ ಮಾಡಿ—

ಕಂ॥ ಕಪಟವಟು[ಪಟು] ಮನೋಗ
ರ್ವಪರ್ವತಂ ನುಗ್ಗಿ ನುರ್ಚುನೂಱಾದುದು ಭೂ
ಮಿಪ ವಜ್ರಾಯುಧ ವಾಗ್ವ
ಜ್ರಘಾತದಿಂ ನೆರೆದ ವಿದ್ವದಾಸ್ಥಾಯಿಕೆಯೊಳ್ ॥ ೧೪೮ ॥

ವ॥ ಅಂತಿನಿವಿರಿಯನುಂ ಚತುರಶ್ರಮನುಮಪ್ಪ—

ಕಂ॥ ಪಂಡಿತನೊಡನಮೃತಾಕ್ಷರ
ಗಂಡೂಷಮನುಗುಳ್ವ ತೆಱದನುಗ್ರಾಹಿಸೆ ಭೂ
ಮಂಡಳಪತಿ ತಾರ್ಕಿಕರೆರ್ದೆ
ಗೊಂಡುದುಪನ್ಯಾಸಮಾ ಸಭಾಮಂಡಳದೊಳ್ ॥ ೧೪೯ ॥

ವ॥ ಅಂತು ನಿರುತ್ತರನಾಗಿ ಪ್ರತಿವಾದೀಂದ್ರಂ ವನಪ್ರವಿಷ್ಟಕರೀಂದ್ರ ವಿಚ್ಛಿನ್ನ ಮದಸಲಿಲ ಪ್ರವಾಹನಾಗಿರ್ದೊಡಂಬಟ್ಟು ಕುಡಿಸೆ—

---

೧೪೭. ಜೀವನಿಲ್ಲೆಂದು ವಾದಿಸುವ ಬೌದ್ಧಮತದಲ್ಲಾಗಲಿ ಚಾರ್ವಾಕಮತದಲ್ಲಾಗಲಿ ಈ ಕ್ರಮದಿಂದ ಅವರ ಸಿದ್ಧಾಂತವೊಂದು, ನಡವಳಿಕೆಯಿನ್ನೊಂದು—ಅವರ ಮಾತಿಗೇ ಅದು ವಿರುದ್ಧವಾಗಿದೆ."

ವ॥ ಹೀಗೆ ಬೌದ್ಧಮತವನ್ನು ತಿರಸ್ಕರಿಸಿ ತನ್ನನ್ನು ವಾದದಲ್ಲಿ ಗೆಲ್ಲಲು ಪ್ರಯತ್ನಿಸಿದ ಲೋಕಾಯತ ಮತಾವಲಂಬಿಯನ್ನು ನಿರುತ್ತರಗೊಳಿಸಿ ಗೆದ್ದು ಅನೇಕ ಯುಕ್ತಿಗಳಿಂದ ಚಾರ್ವಾಕವಾದಿಯನ್ನು 'ಅಯ್ಯೋ ಪಾಪ ಎಂಬವಸ್ಥೆಗೆ ಇಳಿಸಿದನು.

೧೪೮. ವಿದ್ವಾಂಸರು ನೆರೆದ ಸಭೆಯಲ್ಲಿ ವಜ್ರಾಯುಧನ ವಾಣಿಯೆಂಬ ವಜ್ರಾಘಾತದಿಂದ ಆ ಕಪಟ ವಟ ವೇಷಧಾರಿಯ ಗರ್ವಪರ್ವತ ಸೀಳಿ ನುಚ್ಚುನೂರಾಯಿತು.

ವ॥ ಈ ಮೇರೆಗೆ ಇಷ್ಟೊಂದು ಹಿರಿಯನೂ ಚತುರ ವಿದ್ವಾಂಸನೂ ಆದ—

೧೪೯. ಪಂಡಿತನೊಡನೆ ಅರಸನು ಅಮೃತಾಕ್ಷರವನ್ನು ಮುಕ್ಕುಳಿಸುವಂತೆ ನುಡಿದು ಉಪನ್ಯಾಸ ಮಾಡಲಾಗಿ ಆ ಸಭಾಮಂದಿರದ ತಾರ್ಕಿಕರಿಗೆಲ್ಲ ಅದು ಮೆಚ್ಚುಗೆಯಾಯಿತು.

ವ॥ ಹೀಗೆ ನಿರುತ್ತರನಾದ ಪ್ರತಿವಾದಿಯು ಕಾಡಿನಲ್ಲಿ ಹೊಕ್ಕು ಮದವನ್ನೆಲ್ಲ ಕಳೆದುಕೊಂಡ ಆನೆಯಂತೆ ಮದವಿಳಿದು (ಸೋತೆನೆಂದು) ಒಡಂಬಟ್ಟು—

ಕಂ॥ ಜಯವಾದಮನಖಿಳ ಜಗ
ಜ್ಜಯಪತ್ರಮನಪಕ್ಷಪತಿತರ್ ಕುಡೆ ಕೊಂ
ಡಯನಯ ವಿನ[ಯ] ಪರಂ ಮಾ
ಣಿಯನವಮನ್ನಿಸದೆ ವಿಭು ಕರಂ ಮನ್ನಿಸಿದಂ ॥ ೧೫೦ ॥

ವ॥ ಅಂತಾತನ ಸಿಗ್ಗಂ ಕಳೆವುದುಂ ವಿಪ್ರಂ ಕಿಱುಕುಳನೊಳ್ ಪಡೆ [ದ ಗೆಲ್ಲದಿಂದಂ] ಪಿರಿಯನೊಳ್ ಪಡೆವ ಸೋಲಮುತ್ತಮಮೆಂದು ಸಂತಸಂಬಟ್ಟು—

ಕಂ॥ ಉಪಸಂಹಾರಿಸಿ ಮಾನವ
ವಪುವಂ ರವಿಗಡ್ಡಮಿರ್ದ ಮುಗಿಲ ನೆೞಲ್ ಬಂ
ದಪಹರಿಸುವಂತೆ ಕಣ್ಣು
ಳ್ಕೆ ಪರಂಜ್ಯೋತಿಃಸ್ವರೂಪಮಂ ಕೆಯ್ಕೊಂಡಂ ॥ ೧೫೧ ॥

ವ॥ ಅಂತು ಪೊರ್ಮೋದಲೆ ಭೂಮಿದೇವಂ ದೇವನಾಗಿ ಜೈನಶಾಸನಚೂಡಾಮಣಿಯಪ್ಪ ವಜ್ರಾಯುಧನಂ ಪೂಜಿಸಿ ಪೊಡೆವಟ್ಟು ಪೋಪುದುಮೋಲಗದ ಸಭಾಸದರೀ ದಿವ್ಯನೇನೆಂಬನೇಕೆ ನಿಜಾಕೃತಿಸಂವೃತಿಯಿಂ ಬಂದು ನಿಮ್ಮೊಳ್ ನುಡಿದು ಸೋಲ್ತು ಪೋಪನೆಂದು ತನ್ನಂ ಬೆಸಕೊಳೆ ವಜ್ರಾಯುಧಂ ಲಬ್ಧಾವಧಿ(ಬೋಧ)ಲೋಚನಂ ತಾನಪರಾಜಿತನೆನಿಪಂದು ದಮಿತಾರಿಯ ಪಕ್ಷಮಾಗಿ ಬಂದೆನ್ನೊಳ್ ಕಾದಿ ಸತ್ತನೀತಂ ಮಹಾಬಲನೆಂಬೊಂ ವಿದ್ಯಾಧರನನೇಕಭವಪರಿಭ್ರಮಣದಿಂ ಬಂದೀಶಾನಕಲ್ಪದೊಳ್ ದೇವನಾಗಿ ಸಭೆಯೊಳೀಶಾನೇಂದ್ರನೆಂಮ ಸಮ್ಯಗ್ದರ್ಶನಮಂ ಪೊಗೞ್ದುದರ್ಕೆ ದರ್ಕಂ ನುಂಗಿದಂತುದ್ಗ್ರೀವನಾಗಿ ಮತ್ಸರಪ್ರೇರಿತನೆಮ್ಮಂ ಸೋಲಿಸಲ್ ಬಂದು ತಾನೆ ಸೋಲ್ತು ಪೋದನೆನೆ ವಿಪಶ್ಚಿಜ್ಜನಮೊಂದೆ ಕೊರಲೊಳ್—

---

೧೫೦. ಜಯಜಯಕಾರದೊಡನೆ ಸಮಸ್ತಜಗಜ್ಜಯಪತ್ರವನ್ನು ನಿಷ್ಪಕ್ಷಪಾತಿಗಳು ಕೊಡಲಾಗಿ ಶ್ರೇಯೋಭಾಗಿಯಾದ ವಜ್ರಾಯುಧನು ವಿನಯಶಾಲಿಯಾಗಿ ಆ ಬ್ರಾಹ್ಮಣ ವಟುವನ್ನು ಅವಮಾನಿಸದೆ ಮನ್ನಣೆಯಿತ್ತು ಚೆನ್ನಾಗಿ ಗೌರವಿಸಿದನು.

ವ॥ ಹೀಗೆ ಆತನ ಮನಸ್ಸಿನ ಜುಗುಪ್ಸೆಯನ್ನು ನಿವಾರಿಸಲಾಗಿ ಆ ಬ್ರಾಹ್ಮಣನು "ಅಲ್ಪನಾದವನನ್ನು ಗೆಲ್ಲುವುದಕ್ಕಿಂತ ಹಿರಿಯನಾದವನಿಗೆ ಸೋಲುವುದೆ ಮೇಲು" ಎಂದು ಸಂತೋಷಪಟ್ಟನು. ಆ ಬಳಿಕ—

೧೫೧. ಅಡ್ಡವಾಗಿ ಬಂದ ಮೋಡದ ನೆರಳು ಚದರಿದೊಡನೆ ಕಣ್ಣುಕುಕ್ಕುವ ಸೂರ್ಯಪ್ರಕಾಶದಂತೆ ತಾನು ಧರಿಸಿದ್ದ ಮನುಷ್ಯ ವೇಷವನ್ನು ಕಳಚಿ ಪ್ರಖರವಾದ ಪರಂಜ್ಯೋತಿಃಸ್ವರೂಪವನ್ನು ಆತನು ತಾಳಿದನು.

ವ॥ ಹೀಗೆ ಮುಂಚೆ ಬ್ರಾಹ್ಮಣನಾಗಿ ಬಂದವನು ದೇವನಾಗಿದ್ದು ತನ್ನ ನಿಜಸ್ವರೂಪದಲ್ಲಿ ಪ್ರಕಟವಾಗಿ ಜೈನ ಶಾಸನ ಶಿರೋಮಣಿಯಾದ ವಜ್ರಾಯುಧನನ್ನು ಗೌರವಿಸಿ ನಮಸ್ಕಾರಮಾಡಿ ಹೋದನು. ಆಗ ಸಭಾಸದರು "ಈ ದಿವ್ಯಪುರುಷನು ಯಾರು ? ತನ್ನ ವೇಷವನ್ನು ಬದಲಿಸಿಕೊಂಡು ಬಂದು ನಿಮ್ಮೊಡನೆ ವಾದಿಸಿ ಸೋತುಹೋದನೇಕೆ ?" ಎಂದು ತನ್ನನ್ನು ಕೇಳಲಾಗಿ ಅವಧಿಜ್ಞಾನ ದೃಷ್ಟಿಯನ್ನು ಪಡೆದ ವಜ್ರಾಯುಧನು ಹೀಗೆ ವಿವರಿಸಿದನು: "ನಾನು ಪೂರ್ವ ಜನ್ಮದಲ್ಲಿ ಅಪರಾಜಿತನಾಗಿದ್ದಾಗ ದಮಿತಾರಿಯ ಪಕ್ಷವಹಿಸಿ ನನ್ನೊಡನೆ ಕಾದಾಡಿ ಸತ್ತ ಮಹಾಬಲನೆಂಬ ವಿದ್ಯಾಧರನೆ ಈತನು. ಆ ಜನ್ಮಾಂತರ ಅನೇಕ ಭವಗಳಲ್ಲಿ ಸುತ್ತಿ ಸುತ್ತಿ ಬಂದು ಈಗ ಈಶಾನ ಕಲ್ಪದಲ್ಲಿ ದೇವನಾಗಿರುವನು. ಅಲ್ಲಿ ಈಶಾನ ಕಲ್ಪೇಂದ್ರನು ನಮ್ಮ ಸಮ್ಯಗ್‌ದರ್ಶನವನ್ನು ಹೊಗಳಿದುದನ್ನು ಕೇಳಿ, ದಸಿಯನ್ನು ನುಂಗಿದವನಂತೆ ಕೊರಳೆತ್ತಿಕೊಂಡು ಹೊಟ್ಟೆಯುರಿಯಿಂದ ನಮ್ಮನ್ನು ಸೋಲಿಸ ಬಂದನು; ಆದರೆ ತಾನೇ ಸೋತುಹೋದನು." ಹೀಗೆ ತಿಳಿಸಲಾಗಿ ವಿದ್ವಜ್ಜನವೆಲ್ಲ ಒಕ್ಕೊರಲಾಗಿ—

ಕಂ॥ ಮೊದಲೊಳ್ ಮುಳ್ ಮೇಗೆ ವಿಟಿ
ತ್ರ್ಯಕ್ಷಿದಳಿತರಕ್ತಪ್ರಸೂನಮೆಂಬಿನಿತಱೊಳಾ
ಗದು ಶಾಲ್ಮಲಿ ವನರುಹಮಾ
ಪ್ಪುದಂತರಂ ನಿನಗಮಿದಿರ ವಾದಿಗಮಧಿಪಾ ॥ ೧೫೨ ॥

ವ॥ ಎಂದು ಪೊಗೞೆ ಜೀವಸಿದ್ಧಿಪುರಸ್ಸರಂ ಸ್ವರ್ಗಾಪವರ್ಗಮಾರ್ಗಪ್ರಕಟನದಿನರ್ಹನ್ಮಾರ್ಗಪ್ರಭಾವನೆಯಂ ಮಾಡಿ ಪಾಪೇಭಕಂಠೀರವನಪ್ಪ ವಜ್ರಾಯುಧಂ ಸುಖದಿನರಸುಗೆಯ್ಯುತ್ತಿರ್ಪುದುಮೊಂದುದಿವಸಮೋಲಗದೊಳಾಯುಧಾಧ್ಯಕ್ಷಂ ಬಂದುಮರಸ ನಿದಿರೊಳ್ ನಿಂದು—

ಉ॥ ಆಯುಧಶಾಲೆಯೊಳ್ ಶತಸಹಸ್ರ ರವಿಪ್ರವಿಭಾಸಿ ದೇವ ಚ
ಕ್ರಾಯುಧಮಿಂದು ಬಂದು ನೆಲಸಿರ್ದುದು ಯಕ್ಷಸಹಸ್ರರಕ್ಷಿತಂ
ನ್ಯಾಯವಿದಂ ವಿಧಿಕ್ರಮದಿನರ್ಚಿಸಿ ದಿಗ್ವಿಜಯಕ್ಕೆ ಪೋಪುದ
ತ್ಯಾಯತ ಪುಣ್ಯಮುಂನಮಧಿರಾಜನೆಯಿಂ ಸಲೆ ಚಕ್ರವರ್ತಿಯೈ ॥ ೧೫೩ ॥

ವ॥ ಎಂದು ಬಿನ್ನಪಂಗೆಯ್ದು ಮಾಣ್ದ ಬೇಗದೊಳಾನಂದನೆಂಬೋಂ ಋಷಿನಿವೇದಕನಿಂತೆಂದು ಬಿನ್ನಪಂಗೆಯ್ದಂ ಶ್ರೀನಿಲಯೋದ್ಯಾನದೊಳ್—

ಕಂ॥ ಸುರಪೂಜ್ಯಂಗಾ ಕ್ಷೇಮಂ
ಕರಂಗೆ ಪುಟ್ಟಿದುದು ತನ್ಮನಃಪರ್ಯಯದಿಂ
ದೆರಡನೆಯ ಸಮಯದೊಳ್ ಕ್ರಮ
ಕರಣ ವ್ಯವಧಾನರಹಿತ ಕೇವಳಬೋಧಂ ॥ ೧೫೪ ॥

---

೧೫೨. "ಕೆಳಗೆ ಮುಳ್ಳು, ಮೇಲೆ ಸೊಗಸಾಗಿ ಅರಳಿದ ಕೆಂಪು ಹೂ— ಇಷ್ಟರಿಂದಲೆ ಬೂರುಗವು ತಾವರೆಯೆನಿಸೀತೆ? ಹಾಗೆಯೆ ನಿನಗೂ ನಿನಗೆದುರಾದ ವಾದಿಗೂ ಯಾವ ಸಾದೃಶ್ಯ?"

ವ॥ ಎಂದು ಹೊಗಳಿದರು. ಜೀವತತ್ವಪ್ರತಿಷ್ಠಾಪನ ಪೂರ್ವಕವಾಗಿ ಸ್ವರ್ಗ ಹಾಗೂ ಮೋಕ್ಷ ಲಾಭದ ಮಾರ್ಗವನ್ನು ತೋರಿ ಅರ್ಹಂತಮತದ ಮಹಿಮೆಯನ್ನು ವಿವರಿಸಿ ಪಾಪವೈರಿಯಾದ ವಜ್ರಾಯುಧನು ಸುಖದಿಂದ ರಾಜ್ಯವಾಳುತ್ತಿದ್ದನು. ಹೀಗಿರುತ್ತ ಒಂದು ದಿವಸ ಆಯುಧಾಧ್ಯಕ್ಷನು ಬಂದು ಅರಸನೆದುರು ನಿಂತು—

೧೫೩. "ದೇವಾ ನೂರುಸಾವಿರ ಸೂರ್ಯರಂತೆ ಝಗಝಗಿಸುವ ಚಕ್ರಾಯುಧವಿಂದು ಆಯುಧಶಾಲೆಯಲ್ಲಿ ಬಂದು ನೆಲಸಿರುವುದು. ಸಾವಿರ ಯಕ್ಷರು ಅದಕ್ಕೆ ಕಾವಲಾಗಿರುವರು. ಅದನ್ನು ವಿಧ್ಯುಕ್ತವಾಗಿ ಪೂಜಿಸಿ ದಿಗ್ವಿಜಯಕ್ಕೆ ಹೊರಡು. ಅತ್ಯಧಿಕವಾದ ಪುಣ್ಯದಿಂದ ಅಧಿರಾಜನಾದ ನೀನು ಇನ್ನು ಚಕ್ರವರ್ತಿಯಾದೆ."

ವ॥ ಎಂದು ಬಿನ್ನವಿಸಿದನು. ಅವನ ಮಾತು ಮುಗಿಯುವಷ್ಟರಲ್ಲಿ ಆನಂದನೆಂಬ ಋಷಿ ನಿವೇದಕನು (ಮುನಿಗಳ ಆಗಮನವನ್ನು ತಿಳಿಸುವವನು) ಹೀಗೆಂದು ಬಿನ್ನವಿಸಿದನು: "ಶ್ರೀನಿಲಯೋದ್ಯಾನದಲ್ಲಿ—

೧೫೪. ದೇವಪೂಜ್ಯನಾದ ಕ್ಷೇಮಂಕರನಿಗೆ ಮನಃಪರ್ಯಯ ಜ್ಞಾನವೂ, ಅನಂತರ ಎರಡನೆಯದಾಗಿ ಕ್ರಮಕರಣ ವ್ಯವಧಾನಗಳಿಗೆ ಅತೀತವಾದ ಕೇವಲಜ್ಞಾನವೂ ಉಂಟಾಗಿವೆ."

ವ॥ ಎಂಬು ಬಿನ್ನವಿಸುವುದುಮಿಭೇಂದ್ರಾರಾತಿಪೀಠದಿಂದಮೆರ್ದೇೞಡಿಯುಂ ನಡೆದು ಚರಾಚರಗುರುವಿರ್ದ ದೆಸೆಗೇೞಡಿಯುಂ ನಡೆದು[1][ಜ]ಗಿ ಪೊಡೆವಟ್ಟೆರಡೊಸಗೆಯೊಳಂ ಮುಖ್ಯಂ ಗುರುವೆಂದು ಬಗೆದು ಆನಂದಭೇರಿಯಂ ಪೊ[2]ಯ್ಯ[2]ಲ್ವೇೞ್ದು ಋಷಿನಿವೇದಕನ ಮೊಗಮಂ ನೋಡಿ—

ಕಂ॥ ರಾಗದ ಪೊೞೆಯಿರೆ ಪೊತ್ತಿರ
ಲಾಗದವೋಲ್ ತನ್ನ ತೊಟ್ಟ ತುಡುಗೆಯನಾತಂ
ಗಾಗಳೆ ಕಳೆದಿತ್ತಂ ಕುಡು
ವೀ ಗುಣಮೊಪ್ಪುವವೊಲೊಪ್ಪವಾಭರಣಂಗಳ್ ॥ ೧೫೫ ॥

ವ॥ ಅಂತಾತಂಗೆ ಮಚ್ಚುಗೊಟ್ಟು ವಂದನಾಭಕ್ತಿಗೆ ಪುರಾಂತಃಪುರ ಪರಿವಾರ ಜನಸಮೇತಮಷ್ಟವಿಧಾರ್ಚನಾಪುರಸ್ಸರಂ ಜೈನ ಶಾಸನಚೂಡಾಮಣಿಯಪ್ಪ ವಜ್ರಾಯುಧಂ ಪೋಗಿ ಸಮವಸರಣ ಭೂಮಿಯನೆಯ್ದಿ ಪಟ್ಟವರ್ಧನದಿಂದಮಿೞಿಯೆ—

ಕಂ॥ ಮಾನಸ್ತಂಭದಿನಭವಾ
ಸೀನ ಶ್ರೀಮಂಡಪಂಬರಂ ಕ್ರಮದಿಂದಾ
ಭೂನಾಥಂ ಪೊಕ್ಕಂ ಭ
ವ್ಯಾನಂದನ ಸಮವಸರಣಭೂಮಂಡಳಮಂ ॥ ೧೫೬ ॥

ಜಿತ ವಿಶ್ವಕರ್ಮ ಪರಿನಿ
ರ್ಮಿತಕೃತಿಯಂ ತ್ರಿಃಪ್ರದಕ್ಷಿಣಂಗೆಯ್ದು ಮಹೀ
ಪತಿ ಗಂಧಕುಟಿಯನಾಜಿನ
ಪತಿಯಿದಿರೊಳ್ ನಿಂದು ವಿನಯವಿನಮಿತಮಕುಟಂ ॥ ೧೫೭ ॥

ವ॥ ಹೀಗೆ ಬಿನ್ನವಿಸಲಾಗಿ ವಜ್ರಾಯುಧನು ಸಿಂಹಾಸನದಿಂದ ಎದ್ದು ಏಳಡಿಯನ್ನು ನಡೆದು, ಚರಾಚರ ಗುರುವಾದ ಆ ಕೇವಲ ಜ್ಞಾನಿಯಿರುವ ದಿಕ್ಕಿಗೆ ಏಳಡಿ ನಡೆದು ಬಾಗಿ ನಮಸ್ಕರಿಸಿ ತನಗೊದಗಿದ ಎರಡು ಉತ್ಸವ ವಾರ್ತೆಗಳಿಗೂ ಆ ಗುರುವೇ ಮುಖ್ಯವೆಂದು ತಿಳಿದು ಆನಂದಭೇರಿಯನ್ನು ಬಾರಿಸಲು ಹೇಳಿ ಋಷಿನಿವೇದಕನ ಮುಖವನ್ನು ನೋಡಿ—

೧೫೫. ಸಂತೋಷದ ಭಾರವೆ ಹೆಚ್ಚಾಗಿರುವುದರಿಂದ ಇನ್ನಿದನ್ನು ಹೊರಲಾರನೊ ಏನೊ ಎಂಬಂತೆ ತಾನು ಧರಿಸಿದ ಆಭರಣವನ್ನೆ ತೆಗೆದು ಆತನಿಗೆ ಬಹುಮಾನವಾಗಿ ಕೊಟ್ಟನು. ಈ ದಾನಗುಣ ಒಪ್ಪುವಂತೆ ಆಭರಣಗಳು ಒಪ್ಪಲಾರವು.

ವ॥ ಹೀಗೆ ಆತನಿಗೆ ಮೆಚ್ಚುಗೊಟ್ಟು ವಂದನಾಭಕ್ತಿಗಾಗಿ ತನ್ನ ಪುರದ ಹಾಗು ಅಂತಃಪುರದ ಪರಿವಾರ ಜನ ಸಹಿತವಾಗಿ ಅಷ್ಟವಿಧಾರ್ಚನೆಯ ಸಾಮಗ್ರಿಗಳನ್ನೊಡಗೊಂಡು ಹೊರಟು ವಜ್ರಾಯುಧನು ಸಮವಸರಣ ಭೂಮಿಗೆ ಬಂದು ಪಟ್ಟದಾನೆಯಿಂದ ಇಳಿದು

೧೫೬. ಮಾನಸ್ತಂಭದಿಂದ ಆ ಅಭವನು ಕುಳಿತು ಶ್ರೀಮಂಡಪದವರೆಗೆ ಕಾಲ್ನಡಿಗೆಯಿಂದ ಬಂದನು.

೧೫೭. ವಿಶ್ವಕರ್ಮನ ರಚನೆಯನ್ನು ಮೀರುವ ಗಂಧಕುಟಿಯನ್ನು ಮೂರುಸಲ ಪ್ರದಕ್ಷಿಣೆ ಮಾಡಿ ಅರಸನು ಜಿನಪತಿಯ ಇದುರಿಗೆ ತಲೆಬಾಗಿ ನಿಂತು—

---

1. ರ (ಮ) 2. ಯ್ಯ (ಮ)

ಮ॥ ಪಗೆವಂಗಂ ಕೆಳೆಯಂಗಮಾರ್ದ್ರಮತಿಯಂ ತ್ವನ್ಮೂರ್ತಿ ತೀರ್ಥೇಶ ಮಾ
ಡುಗುಮಾಳೋಚಿಸೆ ನಿನ್ನ ತತ್ವಮ[ವಿ]ಸಂವಾದಂ ದುರಾಪಂ ಗುಣಾ
ಬ್ಧಿ ಗಭೀರಂ ಭವದೀಯಮೆಂದವಿತಥಾಳಾಪೋತ್ಕರಂ ರೂಪವ
ಸ್ತುಗುಣ ಸ್ತೋತ್ರದಿನಂದು ಬಂದಿಸಿದನಾ ಪಾಪೇಭಕಂಠೀರವಂ ॥ ೧೫೮ ॥

—ಗದ್ಯ—

ಇದು

ಜಿನೇಂದ್ರ ಚರಣ ಸರಸೀರುಹ ಶಿಲೀಮುಖಾಯಮಾನ
ಶ್ರೀಮದುಭಯಕವಿಚಕ್ರವರ್ತಿ

ನಿರ್ವರ್ತಿತಮುಂ

ಅಮ್ಮನ ಭಕ್ತಾಭಿಧಾನ ವಿದ್ಯಾನಿಧಾನ ಮಲ್ಲಪಾರ್ಯ

ತದನುಜಾತಾಭಿಜಾತ ಸಾರಸ್ವತ
ಪುನ್ನಮಾರ್ಯ ಕಾರಿತಮುಮಪ್ಪ

ಪುರಾಣಚೂಡಾಮಣಿಯೊಳ್

ಅಷ್ಟಮಾಶ್ವಾಸಂ

---

೧೫೮. "ತೀರ್ಥೇಶನೇ, ನಿನ್ನ ದರ್ಶನದಿಂದ ಗೆಳೆಯನಿಗಾಗಲಿ ಹಗೆಗಾಗಲಿ ಆರ್ದ್ರಭಾವವೆ ಹುಟ್ಟುವುದು. ನಿನ್ನ ತತ್ವವು ಅವಿರೋಧವಾದುದು. ನಿನ್ನ ಗುಣ ಸಮುದ್ರವು ದುರ್ಲಭವೂ ಗಂಭೀರವೂ ಆಗಿದೆ."—ಈ ಬಗೆಯಾಗಿ ಸಾರ್ಥಕವಾದ ವಚನದಿಂದ ಆ ಮಹಿಮನನ್ನು ರೂಪಸ್ತವ, ವಸ್ತುಸ್ತವ, ಗುಣಸ್ತವ ಪೂರ್ವಕವಾಗಿ ವಂದಿಸಿದನು.

ಗದ್ಯ॥ ಇದು ಜಿನೇಶ್ವರನ ಚರಣಕಮಲದ ದುಂಬಿಯಂತಿರುವ, ಶ್ರೀಮದುಭಯಕವಿ ಚಕ್ರವರ್ತಿಯೆಂಬ ಬಿರುದಾಂಕಿತನಿಂದ ನಿರ್ವರ್ತಿತವೂ ಅಮ್ಮನ ಭಕ್ತಾಭಿಧಾನ ಮಲ್ಲಪಾರ್ಯನ, ಅವನ ತಮ್ಮ ಹೊಸ ಸಾರಸ್ವತ ಪುನ್ನಮಾರ್ಯ ಹೇಳಿಸಿದ ಪುರಾಣಚೂಡಾಮಣಿಯಲ್ಲಿ ಎಂಟನೆಯ ಆಶ್ವಾಸವು.

ಶ್ರೀ

ಶಾಂತಿಪುರಾಣಂ

—o—

ನವಮಾಶ್ವಾಸಂ

ಕಂ॥ ಶ್ರೀನಾರೀಪತಿ ಬಂದಿಸಿ
ಮಾನಿತಗಣಧರಯತೀಂದ್ರರಂ ಪರಮದಯಾ
[ಧೀನ] ಜಿನಧರ್ಮರಂ ಮ
ತ್ತಾ ನೃಪತಿ ಏದಿಷ್ಪಕೋಷ್ಠವಿಷ್ಟರದಿಂದಂ ॥ ೧ ॥

ವ॥ ಎಳ್ದು ಭಗವದರ್ಹತ್ಪದಾರವಿಂದ ವಂದನಾನಂತರಂ ಗಣಧರದೇವರಂ ಬಂದಿಸಿ ಸಮವಸರಣಮಂ ಪೊಱಮಟ್ಟು ಪಟ್ಟವರ್ಧನಮನೇಱಿ ಬಂದು ರತ್ನಸಂಚಯಪುರಮಂ ಪೊಕ್ಕು ಚಕ್ರರತ್ನಮಂ ಪೂಜಿಸಿ ತದನಂತರಂ ಪುರಾತನ ಚಕ್ರವರ್ತಿಗಳ ನಿಯಮದಿಂ ದಿಗ್ವಿಜಯಕ್ಕೆ ಪೊಱಮಟ್ಟನೇಕ ವ್ಯಂತರಾಮರರುಮಂ ರಜತಾಚಳದುಭಯಶ್ರೇಣೀನಿವಾಸಿಗಳಪ್ಪ ಗಗನಚರರುಮಂ ಬಾಯ್ಕೇಳಿಸಿ ಮಗುಳ್ದು ಬಂದು—

ಮ॥ ಸ್ವಯವದ್ಭೂಮಿಪರಿತ್ತ ವಿತ್ತನಿಕರಂ ಬೆನ್ನಿತ್ತ ಗೆಲ್ಲಂ ನಿಜಾ
ಜ್ಞೆಯನಾಂತೊಂದಟಿಯೋಲೆಗೇ ದೊರೆಯರುಂ ಮೂಱಿವಿಟ್ಟಗಂ ಪೂಣ್ದತೊ
ರ್ಮೆಯ ಮೆಯ್ ದಿಗ್ವಿಜಯಕ್ಕೆ ನೇರ್ಪಡುವಿನಂ ವಜ್ರಾಯುಧಂ ರತ್ನಸಂ
ಚಯಮಂ ಹಾರದ ನಾಯಕಂ ಪುಗುವವೋಲ್ ಪೊಕ್ಕಂ ಸ್ಫುರತ್ತೇಜದಿಂ ॥ ೨ ॥

ವ॥ ಅಂತು ಸಕಳಚಕ್ರವರ್ತಿ ಷಟ್ಖಂಡಾವನಿಯಂ ಬಾಯ್ಕೇಳಿಸಿ ಪೊಟಲಂ ಪೊಕ್ಕಿರ್ದೊಂದು ದೆವಸಂ ವಿಚಿತ್ರ ಚಿತ್ರಶಾಲ್ಯಾಭ್ಯಂತರ (ವ್ಯ)ವಸ್ಥಿತ ಮೃಗೇಂದ್ರಾಸನದೊಳಿರೆ—

ಆಶ್ವಾಸ ೯

೧. ಪೂಜ್ಯರೂ ಪರಮ ಕರುಣಾಶಾಲಿಗಳೂ ಆದ ಗಣಧರ ಯತೀಂದ್ರರಿಗೆ ನಮಸ್ಕರಿಸಿ ಆ ಭೂಪತಿಯು ಸಮವಸರಣ ಮಂಟಪದಲ್ಲಿಯ ತನ್ನ ಪೀಠದಿಂದ

ವ॥ ಎದ್ದು ಭಗವಂತನ ಅಡಿದಾವರೆಗಳಿಗೆ ಎರಗಿ ಆ ಬಳಿಕ ಗಣಧರ ದೇವರನ್ನು ವಂದಿಸಿ ಸಮವಸರಣದಿಂದ ಹೊರಬಂದು ಪಟ್ಟದಾನೆಯನ್ನೇರಿ ರತ್ನಸಂಚಯಪುರಕ್ಕೆ ಬಂದನು. ಅಲ್ಲಿ ಚಕ್ರರತ್ನವನ್ನು ಪೂಜಿಸಿ ಅನಂತರ ಪೂರ್ವ ಚಕ್ರವರ್ತಿಗಳ ಪದ್ಧತಿಯಂತೆ ದಿಗ್ವಿಜಯಕ್ಕೆ ಹೊರಟು ಅನೇಕ ವ್ಯಂತರ ದೇವರನ್ನೂ ರಜತಾದ್ರಿಯ ಎರಡೂ ಶ್ರೇಣಿಗಳಲ್ಲಿ ವಾಸವಾಗಿದ್ದ ಖೇಚರರನ್ನೂ ಗೆದ್ದು ಮರಳಿಬಂದನು.

೨. ಬೆರಗಾದ ಭೂಪಾಲಕರು ಧನರಾಶಿಯನ್ನಿತ್ತರು; ಸೋತು ಗೆಲವನ್ನೊಪ್ಪಿದರು; ಈತನ ಆಜ್ಞೆಯನ್ನು ತಲೆಯಲ್ಲಿ ಹೊತ್ತುನಿಂತರು; ಈತನ ಒಂದು ಸಾಮಾನ್ಯ ಓಲೆಗೆ ಹೆದರಿ ಎಂತೆಂತಹ ದೊರೆಗಳೂ ಮೂಱಿಟ್ಟಿಗೆ ಒಳಗಾದರು. ಹೀಗೆ ಒಂದೇ ಸಲಕ್ಕೆ ದಿಗ್ವಿಜಯವನ್ನು ಸಾಧಿಸಿ ವಜ್ರಾಯುಧನು ರತ್ನಸಂಚಯಪುರವನ್ನು ಹಾರದ ನಾಯಕಮಣಿಯಂತೆ ತೇಜಃಪುಂಜನಾಗಿ ಹೊಕ್ಕನು.

ವ॥ ಹೀಗೆ ಆರು ಖಂಡಗಳನ್ನೂ ಗೆದ್ದು ಸಕಲ ಚಕ್ರವರ್ತಿಯಾಗಿ ಪುನಃ ರಾಜಧಾನಿಯನ್ನು ಪ್ರವೇಶಿಸಿದ ಬಳಿಕ ಒಂದು ದಿವಸ ಮನೋಹರವಾದ ಚಿತ್ರಶಾಲೆಯೊಳಗೆ ಸಿಂಹಾಸನಸ್ಥನಾಗಿರುವಾಗ—

ಕಂ॥ ಗಗನಚರನೊರ್ವನಮರಾ
ಪಗೆ ಬೆನ್ನೊಳ್ ಬರೆ ಬಗೀರಥಂ ಬರ್ಪವೊಲ
ಭೃಗಮನೆ ಭಾಮಿನಿ ಬೆಂಕೊಳೆ
ಪುಗುತಂದಂ ಸಕಳಚಕ್ರವರ್ತಿಯ ಸಭೆಯಂ ॥ ೩ ॥

ವ॥ ಅಂತು ಕಿತ್ತಿ ಬಾಳುಮತ್ತಪರಮುಂ ಬೆರಸು ಮಿಟ್ಟುದೇವತೆಯಂತೆ ಬೆನ್ನಟ್ಟಿ ಮುಟ್ಟುವ ಖೇಚರಿಯುವಘಂತೆ ನಿಮಿ[1][ರ][1] ಲಾಱದೆ ಚರಣಂ ಶರಣಮೆಂದು ಸಕಳಚಕ್ರವರ್ತಿಯ ಮುಂದೆ ಕುಳ್ಳಿರ್ಪುದುಮಾ ವಿಯಚ್ಚರಕಾಂತೆಯುಂ ಚತುರಂತಕ್ಷಿತೀಶ್ವರಂಗೆ ಪೊಡೆವಟ್ಟು—

ಕಂ॥ ಕಾಯಲ್ತಕ್ಕುದೆ ದೋಷಿಗೆ
ಕಾಯಲ್ತಕ್ಕುದೆ ದಲಿವನನವನೀಶ್ವರ ನೀಂ
ಕಾಯದಿರೆನೆಯೆನೆ ನಭದಿಂ
ದಾಯೆಡೆಗೆ ಜರನ್ನಭಶ್ಚರಂ ಮತ್ತೊರ್ವಂ ॥ ೪ ॥

ವ॥ ಮುದ್ಗರಸನಾಥಹಸ್ತಂ ಬಂದು ಮಹೀವಲ್ಲಭಂಗವನತನಾಗಿ ಬಱಿಯಮವರಿರ್ವರ ಕೋಪಸಂಬಂಧಮಂ ಬಿನ್ನಪಂಗೆಯ್ದಂ ವಿಜಯಾರ್ಧ ದಕ್ಷಿಣಶ್ರೇಣಿಯ ಶುಕ್ಲಪ್ರಭಮೆಂಬ ಪೊಟಲನಾಳ್ವೆನಾಂ ಪ್ರಭಂಜನನೆಂಬೆನೆನಗಮೆನ್ನಯ ಪೆಂಡಿತಿ ಶುಭಕಾಂತಿಗಂ ಪುಟ್ಟಿದಳೀಕೆ ಶಾಂತಿಮತಿಯೆಂಬೊಳ್—

ಕಂ॥ ಮುನಿಸಾಗರಗಿರಿಯೊಳ್ ಮ
ತ್ತನುಜೆಯೆ ನಿರವದ್ಯವಿದ್ಯೆಯಂ ಸಾಧಿಸೆ ಯೌ
ವನ ರೂಪವಿಭ್ರಮಂಗಳ್
ಮನಕ್ಕೆವರೆ ಗೆಯ್ದನಂತರಾಯಮನೀತಂ ॥ ೫ ॥

---

೩. ತನ್ನ ಬೆನ್ನ ಹಿಂದೆಯೆ ಭಾಗೀರಥಿಯನ್ನೊಡಗೊಂಡು ಭಗೀರಥನು ಬರುವಂತೆ ಖೇಚರಿಯೊಬ್ಬಳಿಂದ ಅಟ್ಟಿಸಿಕೊಳ್ಳುತ್ತಾ ಗಗನೇಚರನೊಬ್ಬನು ಚಕ್ರವರ್ತಿಯ ಸಭೆಯನ್ನು ಹೊಕ್ಕನು.

ವ॥ ಹಾಗೆ ಹಿರಿದ ಖಡ್ಗ ಹಾಗು ಗುರಾಣಿಯೊಡನೆ ಮೃತ್ಯುದೇವತೆಯಂತೆ ಬೆನ್ನಟ್ಟಿ ಮುಟ್ಟಬರುವ ಖೇಚರಿಯ ಮುಂದೆ ನಿಲ್ಲಲಾರದೆ "ದೇವಾ, ನಿನ್ನ ಪಾದಗಳೇ ಶರಣು" ಎಂದು ಮೊರೆಯಿಡುತ್ತ ಆ ಖೇಚರನು ಚಕ್ರವರ್ತಿಯ ಮುಂದೆ ಕುಳಿತನು. ಆ ಖೇಚರ ಸ್ತ್ರೀಯೂ ಸಾರ್ವಭೌಮನಿಗೆ ನಮಸ್ಕರಿಸಿ—

೪. "ದೋಷಿಗೆ ರಕ್ಷಣೆ ನೀಡುವುದು ಯೋಗ್ಯವೆ? ಭೂರಮಣನೆ, ನೀನು ಇವನನ್ನು ಕಾಪಾಡದಿರು" ಎಂದು ಹೇಳುತ್ತಿರುವಷ್ಟರಲ್ಲಿ ಆಕಾಶದಿಂದ ಆ ಸ್ಥಳಕ್ಕೆ ವೃದ್ಧನಾದ ಇನ್ನೊಬ್ಬ ಖೇಚರನು—

ವ॥ ಕೈಯಲ್ಲಿ ಮುದ್ಗರವನ್ನು ಹಿಡಿದುಕೊಂಡು ಬಂದು, ಅರಸನಿಗೆ ಬಾಗಿ, ಬಳಿಕ ಈ ಇಬ್ಬರ ಕೋಪ ಸಂಬಂಧವನ್ನು ಹೀಗೆ ತಿಳಿಸಿದನು: "ವಿಜಯಾರ್ಧ ಪರ್ವತದ ದಕ್ಷಿಣಶ್ರೇಣಿಯ ಶುಕ್ಲಪ್ರಭವೆಂಬ ಪಟ್ಟಣಕ್ಕೆ ರಾಜನಾದ ನನ್ನ ಹೆಸರು ಪ್ರಭಂಜನ; ನನಗೂ ನನ್ನ ಹೆಂಡತಿ ಶುಭಕಾಂತಿಗೂ ಹುಟ್ಟಿದ ಶಾಂತಿಮತಿಯೆಂಬ ಮಗಳು ಈಕೆ—

೫. ಮುನಿಸಾಗರ ಪರ್ವತದಲ್ಲಿ ಶ್ರೇಷ್ಠವಾದೊಂದು ವಿದ್ಯಾಸಾಧನೆಗಾಗಿ ತಪಿಸುತ್ತಿರುವಾಗ ಆಕೆಯ ಯೌವನ ಹಾಗೂ ರೂಪವಿಲಾಸಗಳಿಗೆ ಮನಸೋತು ಈತನು ತಪಸ್ಸಿಗೆ ವಿಘ್ನವೊಡ್ಡಿದನು.

1, ಐ (ಮ)

ವ॥ ಅಂತು ಪ್ರಜ್ಞಪ್ತಿವಿದ್ಯಾಲಾಭಾಂತರಾಯಮಂ ಮಾಡಲೀತನೆತ್ತಿಕೊಂಡುಪಸರ್ಗಮಂ ಸಂಸಾರನಿಸರ್ಗಮೆಂದು ನಿಶ್ಚಳಿತೆ ಸ್ಥಿರಿಸಿ ವಿದ್ಯಾರಾಧನದೊಳ್ ಚಿತ್ತಮಂ ನಿಱಿಸಿ—

ಉ॥ ಸಾಧಿಸಿ ವಿದ್ಯೆಯುಂ ತನಗೆ ಮಾಡಿ ಸದೋಷನಿವಂ ದಲಸ್ಮದಾ
ರಾಧನವಿಘ್ನಕಾರಿ ರಿಪುವೆಂದಸಿಖೇಟಕಹಸ್ತೆ ತೂಳ್ದಿದಳ್
ಚೋದಿತತತ್ವ ನಿನ್ನ ಮಱೆಯಂ ಪುಗೆ ನಿನ್ನಯ ರೂಪು ವಿಶ್ವವಿ
ದ್ಯಾಧರ ಭೂಮಿಗೋಚರಕಿರೀಟಶಿಖಾಮಣಿಚುಂಬಿತಕ್ರಮಾ ॥ ೬ ॥

ವ॥ ಆನುಂ ಮದೀಯಪುರದೊಳಿರ್ದೆನ್ನ ಮಗಳಂ ನೋಡಲವಳೋಕಿನೀವಿದ್ಯೆಯನಟ್ಟಿದೊಡದು ನೋಡಿ ಬಂದೀ ವ್ಯತಿಕರಮನೆನಗೆ ಪೇೞ್ವುದುಂ ಬೆನ್ನನೆ ಬಂದೆನೆಂಬುದಂ ಪ್ರಯುಕ್ತಾವಧಿಬೋಧಂ ಚಕ್ರವರ್ತಿಯುಂ ಮುಗುಳ್ನಗೆ ನಕ್ಕು—

ಮ॥ ಭವವಾರ್ಧಿ ಪ್ರತಿಮಗ್ನ ಜೀವನಿವಹಂ ಪ್ರೇಮಾನುಬಂಧಂ ಮನೋ
ಭವರಾಗಾಶಯವಂ ನಿಮಿರ್ವ ಭವಸಂತಾನಂಗಳೊಳ್ ಕೂರ್ಪ ಕೂ
ಡುವ ತ[1][ೞ್ಪಿ][1]ರ್ಪ ಬಯಕ್ಕೆಯುಂ ಬಯಸುಗುಂ ನಿಷ್ಕಾಮರೇಗೆಯ್ದುಮೊ
ಲ್ದವರೇನಿತ್ತೊಡಮೊಲ್ಲರಿಂತು ವಿಪರೀತಂ ದೇಹಿ ಮೋಹೋದಯಂ ॥ ೭ ॥

ವ॥ ಎಂಬುದುಂ—

ಕಂ॥ ಅವಧಿಜ್ಞಾನಾಸ್ತಿತ್ವಮ
ನವಧಾರಿಸಿ ಸಕಲ ಚಕ್ರವರ್ತಿಯ ಸಚಿವ
ಪ್ರವರಂ ಬೆಸಗೊಳೆ ಖೇಚರ
ಭವಮಾಲೆಯನೋಳಿಯಿಂ ಜಗತ್ಪತಿ ಪೇೞ್ಗುಂ ॥ ೮ ॥

ವ॥ ಹಾಗೆ ಪ್ರಜ್ಞಪ್ತಿವಿದ್ಯಾಲಾಭಕ್ಕೆ ಈತನು ವಿಘ್ನಮಾಡಲಾಗಿ ಇದು ಸಂಸಾರದಲ್ಲಿ ಬರುವ ಸಹಜವಾದ ತೊಂದರೆಯೆ ಎಂದುಕೊಂಡು ಆಕೆ ನಿಶ್ಚಲಳಾಗಿ ವಿದ್ಯಾಸಾಧನೆಯಲ್ಲಿಯೆ ಮನಸ್ಸನ್ನು ದೃಢವಾಗಿ ನಿಲ್ಲಿಸಿ—

೬. ವಿದ್ಯೆಯನ್ನು ವಶಪಡಿಸಿಕೊಂಡಳು. ಆ ಬಳಿಕ 'ಈ ದುಷ್ಟನು ನಮಗೆ ಆರಾಧನೆಯಲ್ಲಿ ವಿಘ್ನವುಂಟು ಮಾಡಿದ ವೈರಿ'ಯೆಂದು ಗುರಾಣಿ-ಕತ್ತಿಗಳನ್ನು ಹಿಡಿದುಕೊಂಡು ಇವನನ್ನು ಬೆನ್ನಟ್ಟಿದಳು. ಈತನು ನಿನ್ನ ಮರೆ ಹೊಕ್ಕನು.

ವ॥ ನಾನು ನನ್ನ ಪಟ್ಟಣದಲ್ಲಿದ್ದು ನನ್ನ ಮಗಳನ್ನು ನೋಡಿಕೊಂಡು ಬರಲು ಅವಲೋಕಿನೀ ವಿದ್ಯೆಯನ್ನು ಕಳಿಸಲಾಗಿ ಅದು ನೋಡಿ ಬಂದು ನಡೆದ ಸಂಗತಿಯನ್ನು ನನಗೆ ಹೇಳಿತು. ಆದುದರಿಂದ ಇವರ ಬೆನ್ನ ಹಿಂದೆಯೆ ನಾನೂ ಧಾವಿಸಿಬಂದೆನು." ಈ ಮಾತನ್ನು ಕೇಳಿ ಅವಧಿಜ್ಞಾನದಿಂದ ಅವರ ಪೂರ್ವಾಪರವನ್ನೆಲ್ಲ ಅರಿತ ಚಕ್ರವರ್ತಿಯು ಮುಗುಳ್ನಗೆ ನಕ್ಕು—

೭. "ಸಂಸಾರವೆಂಬ ಸಮುದ್ರದಲ್ಲಿ ಮುಳುಗಿದ ಜೀವಗಳು ಪ್ರೇಮದ ಅನುಬಂಧಕ್ಕೆ ಸಿಕ್ಕಿ ಕಾಮಾಪೇಕ್ಷೆಯನ್ನು ಬೆಳೆಸುವ ಭವಗಳ ಮಾಲೆಯಲ್ಲಿ ಸುತ್ತುತ್ತ ಪ್ರೀತಿಸುವ, ಕೂಡುವ, ಹೊಂದಿಕೊಂಡೇ ಇರುವ ಬಯಕೆಯನ್ನೇ ಪುನಃ ಪುನಃ ತಾಳುತ್ತಿರುವುವು. ಒಲಿದವರು ಬಂದು ಏನು ಕೊಟ್ಟರೂ ಕೂಡ ನಿಷ್ಕಾಮರಾದ ಜೀವರು ಮಾತ್ರ ಒಲಿಯರು. ಹೀಗೆ ದೇಹಿಗಳ ಮೋಹ ವಿಪರೀತವಾಗಿದೆ."

ವ॥ ಹೀಗೆನ್ನಲಾಗಿ—

೮. ಚಕ್ರವರ್ತಿಗೆ ಅವಧಿಜ್ಞಾನವಿರುವುದನ್ನು ಗಮನಿಸಿ ಮುಖ್ಯ ಸಚಿವನು ಈ ಖೇಚರರ ಭವಾವಳಿಯೇನೆಂದು ಕೇಳಿದನು. ಆಗ ಆತನು ಹೀಗೆ ಹೇಳಿದನು :

---

1. ೞ್ಪಿ (ಮ)

ವ॥ ಈ ಜಂಬೂದ್ವೀಪದೈರಾವತಕ್ಷೇತ್ರದ ಗಾಂಧಾರವಿಷಯದ ವಿಂಧ್ಯಪುರಮನಾಳ್ವ ವಿಂಧ್ಯಸೇನಂಗಂ ಸುಲಕ್ಷಣೆಗಂ ನಳಿನಕೇತುವೆಂಬೊಂ ಮಗನಾದೊಂ ಮತ್ತಾಪುರದೊಳ್ ಧರ್ಮಪ್ರಿಯನೆಂಬೊಂ ಪರದಂಗಂ ಶ್ರೀದತ್ತೆಗಂ ಪುಟ್ಟಿದ ದತ್ತನೆಂಬೊಂ ಮಗನಾತನ ಜನಕಂ—

ಕಂ॥ ಪ್ರಿಯಕಾರಿಣಿಯೆಂಬೊಳನ
ನ್ವಯವೃದ್ಧಿಗೆ ಮದುವೆಮಾಡೆ ವನಕೇಳಿಗೆ ತ
ತ್ಪ್ರಿಯೆವೆರಸು ದತ್ತನಿರೆ ಶೋ
ಭೆಯನೊಳಕೊಂಡುದು ಮನೋಹರೋದ್ಯಾನವನಂ ॥ ೯ ॥

ವ॥ ಆ ಮನೋಹರೋದ್ಯಾನಕ್ಕೆ ವಂದು—

ಕಂ॥ ಪ್ರಕಟಿತ ವಿಳಾಸನಧಿರಾ
ಜಕುಮಾರಂ ನಳಿನಕೇತು ಕಂಡವರಂ ತ
ತ್ಸುಕುಮಾರಾಂಗಿಗೆ ಸೋಲ್ತೆಳೆ
ದುಕೊಂಡನನ್ಯಾಯವೃತ್ತಿಯಿಂ ಕೋಮಳೆಯಂ ॥ ೧೦ ॥

ಪ್ರಿಯಕಾರಿಣಿಯಂ ಕೊಳೆ ತ
ತ್ಪ್ರಿಯಂಗೆ ದತ್ತಂಗೆ ಜೈನದೀಕ್ಷಾಂಗನೆ ತ
ತ್ಪ್ರಿಯೆಯಾದಳ್ ತತ್ವವಿನಿ
ಶ್ಚಯಮೆ ಮನಂಬುಗೆ ಮುದಂ ಮನಂಬೊಕ್ಕಪುದೇ ॥ ೧೧ ॥

ವ॥ ಅಂತು ಪರಿಚ್ಛೇದಿಸಿ ಸುಭದ್ರಸೂರಿಸನ್ನಿಧಾನದೊಳ್ ನಿರ್ಗ್ರಂಥರೂಪಮುಂ ತಾಳ್ದಿ ಮುನಿಪದಾಭರಣಪರಿಣತನಾಗಿ ನೆಗಜ್ಜ್ದಾಯುರವಸಾನದೊಳ್ ವಿದ್ಯಾಧರಲೀಲೆಗೆ ನಿದಾನಂಗೆಯ್ದು ಮುಡುಪಿ ಜಂಬೂದ್ವೀಪದ ಪೂರ್ವವಿದೇಹದ [1]ಸಕತ್ಸ[1]ವಿಷಯದ ವಿಜಯಾರ್ಧದುತ್ತರಶ್ರೇಣಿಯ ಕಾಂಚನ[2]ಪುರ[2]ಮೆಂಬ ಪೊಟಲರಸಂ ಮಹೇಂದ್ರನೆಂಬೊನುಭಯಶ್ರೇಣಿಗಳನಾಳ್ದಂ—

ವ॥ ಈ ಜಂಬೂದ್ವೀಪದ ಐರಾವತ ಕ್ಷೇತ್ರದಲ್ಲಿ ಗಾಂಧಾರವೆಂಬ ವಿಷಯವುಂಟು ; ಅದರಲ್ಲಿಯ ವಿಂಧ್ಯಪುರಕ್ಕೆ ರಾಜನಾದವನು ವಿಂಧ್ಯಸೇನ: ಆತನ ಹೆಂಡತಿ ಸುಲಕ್ಷಣೆ. ಇವರಿಬ್ಬರಿಗೆ ನಳಿನಕೇತುವೆಂಬ ಮಗನಾದನು. ಅದೇ ಊರಲ್ಲಿ ಧರ್ಮಪ್ರಿಯನೆಂಬ ವರ್ತಕನಿಗೂ ಆತನ ಹೆಂಡತಿ ಶ್ರೀದತ್ತೆಗೂ ದತ್ತನೆಂಬ ಮಗನಾದನು. ತಂದೆಯು—

೯. ಪ್ರಿಯಕಾರಿಣಿಯೆಂಬವಳನ್ನು ತಂದು ಮಗನಿಗೆ ಮದುವೆಮಾಡಿದನು. ದತ್ತನು ತನ್ನ ಪತ್ನಿಯೊಡನೆ ಒಂದು ದಿನ ವನಕ್ರೀಡೆಗೆಂದು ಸುಂದರವಾದೊಂದು ಉದ್ಯಾನಕ್ಕೆ ಹೋದನು.

ವ॥ ಹಾಗೆ ಆ ಚೆಲುವಾದ ಉದ್ಯಾನಕ್ಕೆ ಬಂದಾಗ—

೧೦. ತನ್ನ ವಿಲಾಸದೊಂದಿಗೆ ಅಲ್ಲಿಗೆ ಬಂದ ರಾಜಕುಮಾರ ನಳಿನಕೇತು ಅವರನ್ನು ಕಂಡು, ಆ ಕೋಮಲಾಂಗಿಗೆ ಮನಸೋತು, ಬಲಾತ್ಕಾರದಿಂದ ಅವಳನ್ನು ಎಳೆದುಕೊಂಡು ಹೋದನು.

೧೧. ಹೀಗೆ ಪ್ರಿಯಕಾರಿಣಿಯನ್ನು ಆತನು ಕಿತ್ತುಕೊಳ್ಳಲಾಗಿ ದತ್ತನಿಗೆ ಜೈನದೀಕ್ಷೆಯೆ ಪ್ರಿಯವಾಯಿತು. ತತ್ವನಿಶ್ಚಯಕ್ಕೆ ಒಲಿದ ಮನಸ್ಸಿಗೆ (ಸಾಂಸಾರಿಕ) ವಿನೋದ ಮೆಚ್ಚುಗೆಯಾದೀತೆ ?

ವ॥ ಹಾಗೆ ವೈರಾಗ್ಯವನ್ನು ನಿರ್ಧರಿಸಿ ಸುಭದ್ರಸೂರಿಗಳ ಸನ್ನಿಧಿಯಲ್ಲಿ ದಿಗಂಬರ ರೂಪವನ್ನು ತಾಳಿ ಮುನಿಪಾದ ಸೇವೆಯಲ್ಲಿ ತೊಡಗಿ ವ್ರತವನ್ನು ನಡೆಸಿ ಆಯುಷ್ಯಾಂತದಲ್ಲಿ ವಿದ್ಯಾಧರನಾಗಬೇಕೆಂದು ನಿದಾನಮಾಡಿ ಮುಡುಪಿದನು. ಜಂಬೂದ್ವೀಪದ ಪೂರ್ವವಿದೇಹದ ಸಕತ್ಸ ವಿಷಯದಲ್ಲಿ ವಿಜಯಾರ್ಧದ ಉತ್ತರಶ್ರೇಣಿಯ ಕಾಂಚನಪುರವೆಂಬ ಪಟ್ಟಣಕ್ಕೆ ಮಹೇಂದ್ರನೆಂಬ ರಾಜನಿದ್ದನು ; ಉಭಯ ಶ್ರೇಣಿಗಳನ್ನೂ ಆತನು ಆಳುತ್ತಿದ್ದನು.

1. ಸುಕಚ್ಛ (ಅ) 2. ತಿಲಕ (ಅ)

ಕಂ॥ ವಿದ್ಯಾಧರರಾಜಂಗಂ ತ
ದ್ವಿದ್ಯಾಧರಿ ಪವನವೇಗೆ ತತ್ಪ್ರಿಯಸುತ[1]ನೀಂ[1]
ವಿದ್ಯಾಧರನದು ಪೋಯ್ತಾ
ವಿದ್ಯಾಧರ ರಾಜಸುತೆಯ ಕತೆಯುಂ ಕೇಳಿಂ ॥ ೧೨ ॥

ವ॥ ಈ ವಿಯಚ್ಚರಿಯುಂ ಪ್ರಿಯಕಾರಿಣಿಯಾದಂದು ನಳಿನಕೇತುವುಂ ತಾನುಂ ಪ್ರಾಸಾದದುಪರಿಮಭೂಮಿಯೊಳ್ ಇರ್ದು ದಿಶಾವಲೋಕನಂಗೆಯ್ಯುತ್ತಿರೆಯೊಂದು [2]ಮ[ಣ]ಕಕ್ಕೆ[2]—

ಕಂ॥ ಎರಡುಂ ವೃಷಭಂಗಳ್ ಮ
ಚ್ಚರದಿಂ ಪೋರ್ದಧಿಕನೂನನಂ ಕೊಲೆ ಕಂಡಾ
ನರಪತಿಗೆ ನಳಿನಕೇತುಗೆ
ದೊರೆಕೊಂಡುದು ಚಿತ್ತವೃತ್ತಿಯೊಳ್ ನಿರ್ವೇಗಂ ॥ ೧೩ ॥

ವ॥ ಪ್ರಿಯಕಾರಿಣಿ ಯೆನ್ನಾಣ್ಮನುಂ ಬಲ್ಲಿದನಾದೊಡೆನ್ನುಮನಿಂತೆ ಕೊಂದಿಕ್ಕಿಯು(ಂ)ನಿನ್ನುಮನಿಂತೆ ಕೊಲ್ವನಕ್ಕುಂ ತಿರ್ಯಗ್ಜಾತಿಗೆಲ್ಲ ಮಿನಿವಿರಿದು ಸ್ತ್ರೀಪ್ರತಿಬದ್ಧಂ ಮುಳಿಸೆಂದೊಡೆ ಮಾನಿಸರ್ ಸಾಮರ್ಥ್ಯಮುಳ್ಳೊಡೆ ಕಿಱಿದಱೊಳ್ ಮಾಣರವೇ ಕಾರಣದಿಂ—

ಮ॥ ಸ್ರ॥ ದಯಿತಾ ಸಂಬಂಧಬಂಧಂ ಭವಪರಿಣತಿ ತನ್ಮೂಲಮಿಾ ಬೇವಸಂ ನಿ
ಶ್ಚಯಮೆಂದಾತಂ ತೊಡರ್ಪಂ ಬಿಡಿಸಿ ಕಿಡಿಸಿ ದುರ್ಮೋಹಮಂ ಪೋಗಿ ಧರ್ಮ
ಪ್ರಿಯರೆಂಬಾಚಾರ್ಯರಂ ಬಂದಿಸಿ ಗಳಿತಮದಂ ದೀಕ್ಷೆಗೊಂಡೆಯ್ದಿ ಘಾತಿ
ಕ್ಷಯಮಂ ಕೈವಲ್ಯಬೋಧಾಸ್ಪದಮನನಘಮಂ ಗೆಲ್ದು ನಿರ್ಮೋಹನಾದಂ ॥ ೧೪ ॥

೧೨. ಆ ವಿದ್ಯಾಧರ ರಾಜನಿಗೂ ಆತನ ರಾಣಿ ಪವನವೇಗೆ ಎಂಬಾಕೆಗೂ ಮಗನಾಗಿ ದತ್ತನು ಹುಟ್ಟಿದನು. ಅದು ಹಾಗಿರಲಿ. ಇತ್ತ ವಿದ್ಯಾಧರ ರಾಜಪುತ್ರಿಯ ಕತೆಯನ್ನು ಕೇಳಿ.

ವ॥ ಈ ವಿದ್ಯಾಧರಕುಮಾರಿ ಪ್ರಿಯಕಾರಿಣಿಯಾಗಿದ್ದ ಕಾಲದಲ್ಲಿ ನಳಿನಕೇತುವೂ ಈಕೆಯೂ ಅರಮನೆಯ ಉಪ್ಪರಿಗೆಯಲ್ಲಿದ್ದು ಸುತ್ತಲೂ ನೋಡುತ್ತಿರುವಾಗ ಒಂದು ಮಣಕಕ್ಕೆ—

೧೩. ಎರಡು ಹೋರಿಗಳು ಈರ್ಷ್ಯೆಯಿಂದ ಹೋರಾಡುತ್ತಿದ್ದುವು; ಅವುಗಳಲ್ಲಿ ಬಲಿಷ್ಠವಾದ ಹೋರಿ ಅಶಕ್ತವಾದುದನ್ನು ಕೊಂದುಹಾಕಿತು. ಇದನ್ನು ಕಂಡ ಆ ನಳಿನಕೇತು ರಾಜಕುಮಾರನಿಗೆ ಕೂಡಲೆ ಸಂಸಾರ ವಿಷಯದಲ್ಲಿ ಜುಗುಪ್ಸೆಯುಂಟಾಯಿತು. (ಆಗ ಅವನ ಹೀಗೆಂದನು):

ವ॥ "ಪ್ರಿಯಕಾರಿಣಿ, ನಿನ್ನ ಪತಿ ಬಲವಂತನಾಗಿದ್ದರೆ ನನ್ನನ್ನು ಹೀಗೆ ಕೊಂದುಹಾಕಿ ನಿನ್ನನ್ನೂ ಕೊಲ್ಲುತ್ತಿದ್ದನು. ಹೆಣ್ಣಿಗಾಗಿ ಹೋರಾಡುವ ಈ ಕ್ರೋಧ ತಿರ್ಯಕ್ ಜಾತಿಯಲ್ಲಿಯೆ ಇಷ್ಟು ಪ್ರಚಂಡವಾಗಿದೆಯೆಂದ ಮೇಲೆ, ಮನುಷ್ಯರಾದವರು ಸಾಮರ್ಥ್ಯವಿದ್ದಲ್ಲಿ ಇಷ್ಟಕ್ಕೇ ಬಿಡುವರೇ ?

೧೪. ಹೆಣ್ಣಿನ ಮೋಹಕ್ಕೆ ತೊಡಕಿಕೊಳ್ಳುವುದರಿಂದಲೆ ಈ ಸಂಸಾರ; ಅದರಿಂದಲೇ ಈ ದುಃಖ; ಇದು ನಿಶ್ಚಯ." ಹೀಗೆಂದು ಆತನು ಸಂಸಾರದ ತೊಡಕಿನಿಂದ ಬಿಡಿಸಿಕೊಂಡು ದುರ್ಮೋಹವನ್ನು ಕಳೆದು, ಧರ್ಮಪ್ರಿಯರೆಂಬ ಆಚಾರ್ಯರ ಬಳಿಗೆ ಹೋಗಿ ದೀಕ್ಷೆ ಪಡೆದನು. ಕೈವಲ್ಯಜ್ಞಾನಕ್ಕೆ ಸಾಧಕವಾಗುವಂತೆ ಘಾತಿಕರ್ಮಗಳನ್ನು ಗೆದ್ದು ನಿರ್ಮೋಹನಾದನು.

1. [ನುಂ] (ಮ) 2. ಮಣತಕ್ಕೆ (ಅ) ಮಣಕಕ್ಕೆ (ಮ)

ವ॥ ಪ್ರಿಯಕಾರಿಣಿಯುಮವನಾತನ ವಿಯೋಗದುಃಖದಿಂ ಸುಸ್ಥಿತಾಭಿಧಾನಾರ್ಯಿಕಾಸಮಕ್ಷದೊಳ್ ದೀಕ್ಷೆಯಂ ಕೆಯ್ಕೊಂಡು ಚಾಂದ್ರಾಯಣಮಂ ನೋಂತು ಮುಡುಪಿ ಬಂದೀ ಪ್ರಭಂಜನ ವಿಯಚ್ಚರಂಗೆ ಮಗಳ್ ಶಾಂತಿಮತಿಯಾದಳ್ ಇನ್ನೀ ಭವದೊಳ್ ತಪಂಬಟ್ಟು ಮುಕ್ತಾವಳೀ ತಪಸ್ತಪನತಾಪದಿಂ ಸಮಾಧಿಮರಣದಿಂದೀಶಾನಕಲ್ಪದೊಳ್ ಕನಕಪ್ರಭನೆಂಬೊಂ ದೇವನಾಗಿ ಬಂದಿಲ್ಲಿ ಪುಟ್ಟಿ ಮುಕ್ತನಕ್ಕುಮೆಂದು ಚಕ್ರವರ್ತಿ[1] ಪೇಳ್ದುದುಂ ಮೂವರುಮತ್ಯಂತ ಸಂವೇಗಪರರಾಗಿ ಕ್ಷೇಮಂಕರತೀರ್ಥಕರಪಾದಪಾರ್ಶ್ವದೊಳ್ ಜೈನ ದೀಕ್ಷಿತರಾದರಿಂತು—

ಕಂ॥ ಆ ನೆ[ರ]ವಿಗಂ ಮಹಿಪತಿ[ಗ]ತ
ತಾನಾಗತ ವರ್ತಮಾನ ವಿಷಯಾವಧಿ ವಿ
ಜ್ಞಾನಮನಸವಯವದಿಂ ಮೆಱೆ
ದಾನಂದಾಮೃತಕರೋದಯಾಚಲನಾದಂ ॥ ೧೫ ॥

ವ॥ ಆಗಿ ಸಾಮ್ರಾಜ್ಯಶ್ರೀಯುನನುಭವಿಸುತ್ತುಮಿರೆ ವಿಜಯಾರ್ಧಾಂದ್ರಿಯ ದಕ್ಷಿಣಶ್ರೇಣಿಯ ಶಿವಮಂದಿರ ಪುರಮನಾಳ್ವಂ ಮೇರುಮಾಳಿಗಂ ತದ್ವಲ್ಲಭೆಯುಮಮಿತಮಾಳಿಗಂ ಪುಟ್ಟಿದ ಕನಕಮಾಳೆಯುನವರವ್ಯಂ (ನವ) ಯೌವನಪ್ರಾಪ್ತೆಯಂ ನೋಡಿ—

ಚಂ॥ ಅಭಿನವ ಮಾಳತೀ ಮುಕುಳಮಾಲೆವೊಲುತ್ತಮ ಸೌರಭೋತ್ತಮ
ಪ್ರಭೆ ನರಲೋಕದೊಳ್ ಕನಕಮಾಳೆ ಪೆಣಂಗೆಣೆಯಲ್ಲದೀ ಜಗ
ತ್ತ್ರಭುವಿನ ಚಕ್ರವರ್ತಿಯ ನೆಗಳ್ತೆಯಿನಮ್ಮನುಮಂಗಜನ್ಮಸ
ನ್ನಿಭನುಮುದಾತ್ತನುಂ ಕನಕಶಾಂತಿ ದಲಾ ವಿಭುಗೀವುದೀಕೆಯಂ ॥ ೧೬ ॥

ವ॥ ಪ್ರಿಯಕಾರಿಣಿಯೂ ಆತನ ವಿರಹದುಃಖದಿಂದ ಸುಸ್ಥಿತೆಯೆಂಬ ಆರ್ಯಿಕೆಯ ಸನ್ನಿಧಿಯಲ್ಲಿ ದೀಕ್ಷೆಯನ್ನು ವಹಿಸಿ ಚಾಂದ್ರಾಯಣ ವ್ರತವನ್ನು ಆಚರಿಸಿ, ಮುಡುಪಿ ಬಂದು ಈ ಪ್ರಭಂಜನನೆಂಬ ಖೇಚರನಿಗೆ ಶಾಂತಿಮತಿಯೆಂಬ ಮಗಳಾದಳು. ಇನ್ನು ಈ ಜನ್ಮದಲ್ಲಿ ಮುಕ್ತಾವಳೀ ವ್ರತವೆ ಮೊದಲಾಗಿ ತಪಗಳನ್ನಾಚರಿಸಿ ಸಮಾಧಿ ಮರಣದಿಂದ ಈಶಾನ ಕಲ್ಪದಲ್ಲಿ ಕನಕಪ್ರಭನೆಂಬ ದೇವನಾಗುವಳು ಮತ್ತು ಪುನಃ ಇಲ್ಲಿ ಹುಟ್ಟಿ ಮುಕ್ತಿಹೊಂದುವಳು." ಹೀಗೆಂದು ಚಕ್ರವರ್ತಿಯು ತಿಳಿಸಲಾಗಿ ಆ ಮೂವರೂ ಅತ್ಯಂತ ಭಾವಾವಿಷ್ಟರಾಗಿ ಕ್ಷೇಮಂಕರ ತೀರ್ಥಕರರ ಪಾದಸನ್ನಿಧಿಯಲ್ಲಿ ಜಿನದೀಕ್ಷೆಯನ್ನು ಪಡೆದರು. ಹೀಗೆ

೧೫. ಅಲ್ಲಿ ನೆರೆದ ಜನಕ್ಕೆಲ್ಲ ಭೂತ-ವರ್ತಮಾನ-ಭವಿಷ್ಯ ಕಾಲಗಳ ವಿಷಯಗಳನ್ನೆಲ್ಲ ತಿಳಿಯುವ ತನ್ನ ಅವಧಿಜ್ಞಾನವನ್ನು ಪ್ರಕಟಿಸಿ ವಜ್ರಾಯುಧ ರಾಜನು ಆನಂದನೆಂಬ ಚಂದ್ರನಿಗೆ ಉದಯ ಪರ್ವತವಾದನು (ಆನಂದವುಂಟುಮಾಡಿದನು).

ವ॥ ಹೀಗೆ ಸಾಮ್ರಾಜ್ಯವೈಭವವನ್ನು ಅನುಭವಿಸುತ್ತ ಇರುತ್ತಿರಲಾಗಿ ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯಲ್ಲಿ ಶಿವಪುರವನ್ನು ಆಳುವ ಮೇರುಮಾಳಿಗೂ ಆತನ ಅರಸಿ ಅಮಿತಮಾಳಿಗೂ ಕನಕಮಾಳೆಯೆಂಬ ಮಗಳು ಹುಟ್ಟಿದಳು. ಆಕೆಗೆ ನವತಾರುಣ್ಯ ಪ್ರಾಪ್ತವಾದುದನ್ನು ನೋಡಿ—

೧೬. ಹೊಸ ಮಾಲತೀಪುಷ್ಪಮಾಲೆಯಂತೆ ಸೌರಭ (೧. ಪರಿಮಳ, ೨. ಸೌಂದರ್ಯ) ಮತ್ತು ಕಾಂತಿಯಿಂದ ಶೋಭಿಸುವ ಕನಕಮಾಳೆಗೆ ಮನ್ಮಥಸದೃಶನೂ ಉದಾತ್ತನೂ ಆದ ಚಕ್ರವರ್ತಿಯ ಮೊಮ್ಮಗ ಕನಕಶಾಂತಿಯೆ ಯೋಗ್ಯನಲ್ಲದೆ ಬೇರೆ ಯಾರೂ ಆಗಲಾರರು. ಆದುದರಿಂದ ಅವನಿಗೇ ಈಕೆಯನ್ನು ಕೊಡಬೇಕು.

---

1 ಜ (ಮ)

ವ॥ ಎಂದು ನಿಶ್ಚಿತಮನಸ್ಕರಾಗಿ ಬಯಸಿ ಬಂದು ಕೂಸಂ ಕುಡೆ ಕನಕಶಾಂತಿ ಕನಕಮಾಳೆಯುಮಂ ಮದುವೆನಿಂದ ಕೆಲವು ದೆವಸದಿಂ ರಜತಾದ್ರೀಂದ್ರ ದಕ್ಷಿಣಶ್ರೇಣಿಯ ಪೃಷತ್ಕಾಸಾರಪುರಮನಾಳ್ವಂ ಜಯಸೇನಂಗಂ ಜಯಾಂಗನೆಗಂ ಪುಟ್ಟಿದ ವಸಂತಸೇನೆಯುಮಂ ಸೋದರಳಿಯುಂ ಹಿಮಚೂಳಂಗೆ ಕುಡಲಂದಿರ್ಪುದುಂ—

ಶಾ॥ ಎಂತೆಂತೇಱಿಗೆಯು ಜವ್ವನಂ ನೆಱೆಗುಮಂತಂತೊಪ್ಪೆ ಲಾವಣ್ಯಮಂ
ತೆಂತುದ್ದಾನಿಯು ಹಾವ ಭಾವ ರಸಮಂತಂತೆಯ್ದೆ ಶೃಂಗಾರಮುಂ
ತೆಂತಾ ಲೋಲವಿಲೋಚನ ಪ್ರಸರಮಂತಂತಾಗೆ ಸೌಂದರ್ಯಮೋ
ರಂತಾ ಕಾಂತೆಗನಂತರಂ ನೆಱೆಯೆ ತಾಯುಂ ತಂದೆಯುಂ ನಿಚ್ಚಲುಂ ॥ ೧೭ ॥

ವ॥ ಗುಜಿಗುಜಿಗೊಂಡು ಪರ್ಯಾಳೋಚಿಸಿ ಮನಂ ಮಗುಳ್ದೀಕೆಗೀತನನುಸಾರಿಯಲ್ಲತೆಳಲತಿಕೆಯು ತ[ಳ್ವಿ]ಂಗೆಳವಮಾವೆ ಪೊರೆಯೆಂಬಂತೆ ಬಸಂತಸೇನೆಗೆ ಚಕ್ರವರ್ತಿಯ ಕೊಂಡಾಟದಾ ಮಮ್ಮಂ ಕನಕಶಾಂತಿಯೆ ತಕ್ಕನೆಂದಟ್ಟಿಯೊಳಾ ಕನ್ನೆಯುಮಂ ಕನಕಶಾಂತಿಯೊಳ್ ನೆರಪಿದನಂತು ಕನಕಶಾಂತಿ ಕುಮಾರನಾ ಯಿರ್ವರರಸಿಯರೊಳಂ ವಿಷಯಸುಖಮನನುಭವಿಸುತ್ತುಮಿರ್ದೊಂದು ದೆವಸಂ ಕ್ರೀಡಾ ನಿಮಿತ್ತಂ ತುಹಿನಮಹೀಧರಕ್ಕೆ ಪೋಗಿ ತಡಪ್ರಿಂದೆರ್ರೋಪತ್ಯಕಾಶೋಕತರುತಳಶಿಲಾಪಟ್ಟಕದೊಳಿರ್ದ ವಿಪುಳಮತಿಮುನೀಂದ್ರರಂ ಕಂಡಬಗಿ ಪೊಡೆವಟ್ಟು ಧರ್ಮಮಂ ಕೇಳ್ದು ಸಂಸಾರ(ಶರೀರ) ಭೋಗ ವೈರಾಗ್ಯಭಾವನೆ ಚೇತೋಗತಮಾಗೆ ಕನಕಶಾಂತಿ—

ಕಂ॥ ಮೆಱೆಯದೆ ವಿಭವಮನಱಿವಂ
ಮೆಱೆದುಂ ಧೀರತೆಯನಪ್ಪುಕೆಯ್ದುರ್ದ ಮತಿ ಕ
ಣ್ದೆಱೆದಿರೆ ಜಿನೇಂದ್ರದೀಕ್ಷೆಯ
ಮಱೆವೊಕ್ಕಂ ಬೇಗಮಾಜವಂಜವಭಯದಿಂ ॥ ೧೮ ॥

ವ॥ ಎಂದು ನಿರ್ಧರಿಸಿ, ಬಯಸಿ ಬಂದು ಧಾರೆಯೆರೆದು ಕೊಡಲಾಗಿ ಕನಕಶಾಂತಿಯು ಕನಕಮಾಳೆಯನ್ನು ಮದುವೆಯಾದನು. ಕೆಲವು ದಿನಗಳಾದ ಬಳಿಕ ರಜತಾದ್ರಿಯ ದಕ್ಷಿಣಶ್ರೇಣಿಯಲ್ಲಿ ಪೃಷತ್ಕಾಸಾರಪುರಕ್ಕೆ ಅಧಿಪತಿಯಾದ ಜಯಸೇನನಿಗೂ ಆತನರಸಿ ಜಯಸೇನೆಗೂ ಮಗಳಾದ ವಸಂತಸೇನೆಯನ್ನು ಸೋದರಳಿಯನಾದ ಹಿಮಚೂಳನಿಗೆ ಕೊಡಬೇಕೆಂದು ಯೋಚಿಸಿದರು.

೧೭. ಯೌವನ ಏರಿ ಏರಿದಂತೆಲ್ಲ ಅದಕ್ಕೆ ತಕ್ಕಂತೆ ಲಾವಣ್ಯವೂ, ಹಾವಭಾವ ರಸಗಳು ಅಭಿವೃದ್ಧಿ ಹೊಂದಿದಂತೆಲ್ಲ ಅದಕ್ಕನುರೂಪವಾಗಿ ಶೃಂಗಾರವೂ, ಚಂಚಲವಾದ ಕಣ್ಣುಗಳು ಅಗಲಗಲವಾಗಿ ಅರಳಿದಂತೆಲ್ಲ ಸೌಂದರ್ಯವೂ ಕ್ರಮಕ್ರಮವಾಗಿ ಆ ಚೆಲುವೆಯಲ್ಲಿ ತುಂಬಿಕೊಳ್ಳುತ್ತ ಬರಲಾಗಿ ಅವಳ ತಾಯ್ತಂದೆಗಳು ನಿತ್ಯವೂ

ವ॥ ತಂತಮ್ಮಲ್ಲಿಯೆ ಪುನಃ ಆಲೋಚನೆಮಾಡಿಕೊಂಡು ಮನಸ್ಸು ಬದಲಿಸಿದರು. "ಈಕೆಗೆ ನಾವು ಯೋಚಿಸಿದವನು ಅನುರೂಪನಲ್ಲವೇ ಅಲ್ಲ. ಎಳೆಯ ಬಳ್ಳಿಯ ಅಪ್ಪುಗೆಗೆ ಎಳಮಾವೇ ಯೋಗ್ಯ. ವಸಂತಸೇನೆಗೆ ಚಕ್ರವರ್ತಿಯ ಮುದ್ದಿನ ಮೊಮ್ಮಗನಾದ ಕನಕಶಾಂತಿಯೆ ತಕ್ಕವನು" ಎಂದು ನಿಶ್ಚಯಿಸಿ ಆ ಕನ್ಯೆಯನ್ನು ತಂದು ಕನಕಶಾಂತಿಗೆ ಮದುವೆಮಾಡಿಕೊಟ್ಟರು. ಹಾಗೆ ಆ ಕುಮಾರನು ಇಬ್ಬರು ಅರಸಿಯರಲ್ಲಿಯೂ ದಾಂಪತ್ಯಸುಖವನ್ನು ಅನುಭವಿಸುತ್ತ ಇದ್ದು ಒಂದು ದಿನ ವಿನೋದಾರ್ಥವಾಗಿ ಹಿಮಪರ್ವತಕ್ಕೆ ಹೋದನು. ಆ ಪರ್ವತದ ತಪ್ಪಲು ಪ್ರದೇಶದಲ್ಲಿ ಅಶೋಕವೃಕ್ಷದ ಕೆಳಗೆ ಒಂದು ಹಾಸುಗಲ್ಲಿನ ಮೇಲೆ ಕುಳಿತಿದ್ದ ವಿಪುಳಮತಿ ಮುನಿಗಳನ್ನು ಕಂಡನು. ಅವರಿಗೆ ನಮಸ್ಕರಿಸಿ, ಅವರಿಂದ ಧರ್ಮವನ್ನು ಕೇಳಿ ತಿಳಿದಾಗ ಅವನಿಗೆ ಸಂಸಾರ ವಿಷಯದಲ್ಲಿ ವೈರಾಗ್ಯ ಭಾವನೆಯುಂಟಾಯಿತು. ಆಗ ಕನಕಶಾಂತಿ ಕುಮಾರನು—

೧೮. ತನ್ನ (ರಾಜ್ಯ)ವೈಭವವನ್ನು ಮೆಚ್ಚದೆ, ಜ್ಞಾನಕ್ಕೆ ಮೆಚ್ಚಿ, ಜ್ಞಾನೋದಯದಿಂದ ಧೀರನಾದನು; ಸಂಸಾರ ಭಯದಿಂದ ಜಿನದೀಕ್ಷೆಯನ್ನು ಮರೆಹೊಕ್ಕನು.

---

1. ಣ್ವ (ಮ)

ವ॥ ಅಂತು ಕನಕಶಾಂತಿ ಪಾಪೋಪಶಾಂತಿಗೆಂದು ತ್ರೈಲೋಕ್ಯೇಶ್ವರರೂಪಮಂ ಧರಿಯಿಸುವುದುಮಾತನರ್ವರರಸಿಯರುಂ ರತ್ನಸಂಚಯಕ್ಕೆ ಬಂದು ರತ್ನತ್ರಯಭೂಷಿತರಾಗಿ ವಿಮಳಮತಿಮುನಿ ಸನ್ನಿಧಾನದೊಳ್ ಸುಮತ್ಯರ್ಜಿಕಾನುಗ್ರಹಪರಿಗೃಹೀತ ಪರಮ ತಪೋವೃತ್ತಿಯಾದರಂತೆ—

ಕಂ॥ ಪ್ರಮದೋತ್ತಮೆಗಾಣ್ಮನ ದೆ
ಯ್ವಮೆ ದೆಯ್ವಂ ಪತಿಯ ಮತಿಯೆ ಮತಿ ಗಂಡನ ಧ
ರ್ಮಮೆ ಧರ್ಮಂ ಭರ್ತೃವ ತ
ತ್ವಮೆ ತತ್ವಂ ಕುಮತನಿರತೆಯೇಂ ಕುಲವಧುವೇ ॥ ೧೯ ॥

ವ॥ ಇತ್ತ ಕನಕಶಾಂತಿ ತಪೋಧನನುಂ ಧ್ಯಾನಾನಲಸಂಧುಕ್ಷ್ಯಮಾಣ ದಾರುಣ ದುರಿತಾರಣ್ಯನಾಗಿ ಯೋಗದೊಳಿರೆ ತತ್ತಪೋಗ್ರಹಣ ಮನಱಿದು ಹೇಮಚೂಳಂ ಮುನ್ನಿನ ಸ್ತ್ರೀಲೋಲತೆಯ ಮುಳಿಸು ಕಾರಣಮಾಗುಪಸರ್ಗಂಗೆಯ್ಯಲ್ ಪ್ರಾರಂಭಿಸುವುದುಂ—

ಕಂ॥ ಉಪಸರ್ಗಮಿದು ವಿಶೇಷಣ
ದುಪಸರ್ಗಂ ಮತ್ಪ್ರಶಂಸೆಗೆನುತುಗ್ರತಪೋ
ಧಿಪ[ನುಱ]ಸೈರಿಸಿದಂ ಶುಭ
ವಿಪಾಕಕೃತಶಾಂತಿ ಕನಕಶಾಂತಿ ಮುನೀಶಂ ॥ ೨೦ ॥

ಧರಣೇಂದ್ರಂ ಪದ್ಮಾವತಿ
ವೆರಸು ವಿಹಾರಿಸುವೊನೆಯ್ದೆ ಕಂಡುಪಸರ್ಗ
ಸ್ಥಿರಯೋಗಿಗೆಱಗಿ ಖಚರನ
ನುರಗಾಕೃತಿಯಿಂದಮಣಲೊಳಡಸುವ ಪದದೊಳ್ ॥ ೨೧ ॥

ವ॥ ಹೀಗೆ ಪಾಪಕ್ಷಯಕ್ಕಾಗಿ ದಿಗಂಬರತ್ವವನ್ನು ಧರಿಸಲಾಗಿ, ಆತನ ರಾಣಿಯರಿಬ್ಬರೂ ರತ್ನಸಂಚಯಕ್ಕೆ ಬಂದು (ಸಮ್ಯಗ್‌ದರ್ಶನ, ಸಮ್ಯಗ್‌ಜ್ಞಾನ ಮತ್ತು ಸಮ್ಯಕ್‌ಚಾರಿತ್ರವೆಂಬ) ರತ್ನತ್ರಯವನ್ನು ತೊಟ್ಟು, ವಿಮಳಮತಿಯೆಂಬ ಮುನಿಗಳ ಬಳಿಯಲ್ಲಿ ಸುಮತಿಯೆಂಬ ಆರ್ಯಿಕೆಯಿಂದ ದೀಕ್ಷೆಯನ್ನು ಸ್ವೀಕರಿಸಿ ಶ್ರೇಷ್ಠವಾದ ತಪಸ್ಸಿಗೆ ತೊಡಗಿದರು.

೧೯. ಉತ್ತಮ ಸ್ತ್ರೀಗೆ ಗಂಡನ ದೈವವೆ ದೈವ; ಪತಿಯ ಮತಿಯೆ ಮತಿ; ಆತನ ಧರ್ಮವೆ ಧರ್ಮ. ಪತಿಯ ತತ್ವವೆ ತತ್ವ. ಕುಮತವನ್ನು ಆಶ್ರಯಿಸುವವಳು ಕುಲಸ್ತ್ರೀಯೆ ?

ವ॥ ಇತ್ತ ಕನಕಶಾಂತಿಯು ತಪೋನಿಷ್ಠನಾಗಿ ಧ್ಯಾನಾಗ್ನಿಯಿಂದ ಪಾಪಗಳನ್ನೆಲ್ಲ ಸುಟ್ಟುಹಾಕುತ್ತ ಯೋಗದಲ್ಲಿರಲು, ಆತನ ತಪಶ್ಚರಣವನ್ನರಿತು ಹೇಮಚೂಳನು ಈ ಮೊದಲು (ತನ್ನವಳಾಗಬೇಕಿದ್ದ ಹೆಣ್ಣು ಇವನಿಗೆ ದೊರೆತಳು ಎಂಬ) ಹೊಟ್ಟೆಯುರಿಯಿಂದ ತಪಸ್ಸಿಗೆ ವಿಘ್ನವನ್ನು ಒಡ್ಡಲು ಆರಂಭಿಸಿದನು.

೨೦. "ಈ ಉಪಸರ್ಗವು (ವಿಘ್ನವು) ನನ್ನ ಹೊಗಳಿಕೆಗೆ ವಿಶೇಷಣವಾಗುವ ಉಪಸರ್ಗ" ಎಂದುಕೊಂಡು ಕರ್ಮವಿಪಾಕದಲ್ಲಿ ತೊಡಗಿದ ಕನಕಶಾಂತಿ ಮುನೀಂದ್ರನು ಆ ಪೀಡೆಯನ್ನೆಲ್ಲ ಶಾಂತನಾಗಿ ಸಹಿಸಿಕೊಂಡನು.

೨೧. (ಆ ಸಮಯದಲ್ಲಿ) ಪದ್ಮಾವತಿಯೊಡನೆ ವಿಹಾರ ಮಾಡುತ್ತ ಬಂದ ಧರಣೇಂದ್ರನು ಉಪಸರ್ಗದಲ್ಲಿಯೂ ನಿಶ್ಚಲನಾಗಿರುವ ಯೋಗಿಯನ್ನು ಕಂಡು ಆತನಿಗೆ ನಮಸ್ಕರಿಸಿ, ಸರ್ಪಾಕಾರವನ್ನು ತಾಳಿ ಆ (ಮಣಿಚೂಳನೆಂಬ) ಖೇಚರನನ್ನು ನುಂಗುವುದಕ್ಕೆ ಬಾಯಿಟ್ಟನು.

ವ॥ ಹಿಮಚೂಳಂ [1]ಕುಳ್ಪರಿಯೋ[1]ಡಿದನಿತ್ತ ಶಾಂತಾಂತರಂಗಂಗೆ ಕನಕಶಾಂತಿಮುನಿ ಮುಖ್ಯಂಗೆ ಪೊಡೆವಟ್ಟು ಧರಣೇಂದ್ರಂ ಪೋಗೆ ತನ್ಮುನೀಂದ್ರಂ ಪರ್ಯಾಪ್ತಯೋಗಂ ಕೆಯ್ಕನೆತ್ತಿಕೊಂಡು ಯಥೋಕ್ತವಿಹಾರದಿಂ ಮಾಸೋಪವಾಸದ ಪಾರಣೆಯೊಳ್ ರತ್ನಪುರಮಂ ಚರಿಗೆವುಗೆ ತತ್ಪುರಾಧೀಶಂ ದೃಢ(ಧೃತ)ಸೇನಂ ನಿಲಿಸಿ(ನಿಱಿಸಿ) ಭಕ್ತಿಪೂರ್ವಕದಿಂದಮಾಹಾರಂಗುಡೆ ಕೊಂಡು ಭಟ್ಟಾರಕನುಮಾತನಂ ಪರಸಿ ಬಿಜಯಂಗೆಯ್ದುದುಮಾತನ ಮನೆಯೊಳ್—

ಕಂ॥ ಪಂಚಾಶ್ಚರ್ಯಂಗಳ್ ಸುರ
ರಿಂಚರದೊಡ[2]ನೊಡ[3] ನೆಗೞ್ದುವುತ್ತಮದಾನಂ
ಸಂಚಿತ ಸುಕೃತಂಗಲ್ಲದ
ಸಂಚಿತಸುಕೃತಂಗೆ ಬಯಸೆ ಸಮನಿಸಿದಪುದೇ ॥ ೨೨ ॥

ವ॥ ಆ ಮುನಿನಾಥನುಂ ತತ್ಪುರಪೂರ್ವದಿಗ್ಭಾಗದ ಸುರಸಂಪಾತಮೆಂಬುದ್ಯಾನದೊಳಿರುಳ್ ಪ್ರತಿಮಾಯೋಗದೊಳಿರೆ ಬಂದು—

ಮ॥ ಹಿಮಚೂಳಂ ಯಮಕೋಪಲೀಲನುಪಸರ್ಗಂಗೆಯ್ಯೆ ಬಾಹ್ಯಪ್ರಪಂ
ಚಮನಾತ್ಮಾಶ್ರಿತಮಂ ಬಿಸುಟ್ಟರೆ ಜಿನೇಂದ್ರೋಕ್ತಂ ವಿಶುದ್ಧಾಂತರಂ
ಗಮನೇಕಾತ್ಮಕಮುರ್ಚೆ ಸುತ್ತಱಿಯೆ ಕರ್ಮಧ್ಯಾನಬಂಧಂ ಕ್ರಮ
ಕ್ರಮದಿಂದಾದುದು ಕೇವಲಾವಗಮದಿಂ ತ್ರೈಲೋಕ್ಯವಿಕ್ಷೋಭಣಂ ॥ ೨೩ ॥

ವ॥ ಅಂತು ಕನಕಶಾಂತಿಮುನಿರಾಜಂ ಕೇವಲಬೋಧಪ್ರದ್ಯೋತಕ್ಕಾದಿತ್ಯನಾಗೆ ಚತುರ್ನಿಕಾಯಾಮರಕೋಟಿ ವಂದನಾಭಕ್ತಿಗೆ ವರೆ ಹಿಮಚೂಳಂ ಕಳದೊಳೆತ್ತುಂಗೋಲ್ಪೋದ ರಕ್ತಚೂಳನಂತೆಱಂಕೆವಿಸುಟ್ಟು ಕನಕಶಾಂತಿಮುನೀಂದ್ರ ಕೇವಳಿಗಳ ಪೊಜಲಡಿಗಳೊಳಂ ಮಣಿಮಯಮಕುಟಮಲೆಯ ಮೊಟ್ಗಿ ಪೊಡೆವಟ್ಟು ಭವ್ಯತಾಪ್ರತೀತ್ಯನಿಶ್ಚಯಮನೀಯೆ ದೀಕ್ಷೆಯಂ ಕೆಯ್ಕೊಂಡು ಯಥಾ

ವ॥ ಆಗ ಹಿಮಚೂಳನು ದಿಕ್ಕುಗೆಟ್ಟು ಓಡಿಹೋದನು. ಶಾಂತಚಿತ್ತನಾದ ಕನಕಶಾಂತಿ ಮುನಿಯನ್ನು ವಂದಿಸಿ ಧರಣೇಂದ್ರನೂ ಹೊರಟುಹೋದನು. ಆ ಮುನೀಂದ್ರನು ತಪವನ್ನು ಮುಗಿಸಿದ ಬಳಿಕ ಕೈಯೆತ್ತಿಕೊಂಡು ವಿಧ್ಯುಕ್ತವಾದ ವಿಹಾರಕ್ರಮದಿಂದ ಮಾಸೋಪವಾಸದ ಪಾರಣೆಗೆಂದು ರತ್ನಪುರದಲ್ಲಿ ಚರ್ಯೆಗೆ ಹೊರಟನು. ಆ ಪುರದೊಡೆಯನಾದ ದೃಢಸೇನನು ಆತನನ್ನು ನಿಲ್ಲಿಸಿಕೊಂಡು ಭಕ್ತಿ ಪುರಃಸರವಾಗಿ ಆಹಾರವನ್ನಿತ್ತನು. ಮುನಿ ಆತನನ್ನು ಹರಸಿ, ಹೊರಟುಹೋಗಲಾಗಿ ಆತನ ಮನೆಯಲ್ಲಿ—

೨೨. ದೇವತೆಗಳ ಸುಸ್ವರದೊಡನೆ ಪಂಚಾಶ್ಚರ್ಯಗಳು ಉಂಟಾದುವು. ಉತ್ತಮ ದಾನವು ಪುಣ್ಯಗಳಿಸಿದವನಿಗಲ್ಲದೆ ಪುಣ್ಯಹೀನನಿಗೆ ಎಂದಾದರೂ ದೊರಕುವುದೆ ?

ವ॥ ಆ ಮುನೀಂದ್ರನು ಆ ಪಟ್ಟಣದ ಪೂರ್ವ ದಿಕ್ಕಿಗಿದ್ದ ಸುರಸಂಪಾತವೆಂಬ ಉದ್ಯಾನದಲ್ಲಿ ರಾತ್ರಿ ಪ್ರತಿಮಾ ಯೋಗದಲ್ಲಿರಲಾಗಿ—

೨೩. ಹಿಮಚೂಳನು ಅಲ್ಲಿಗೂ ಬಂದು ಯಮನಂತೆ ಕೋಪತಾಳಿ ಅವರನ್ನು ಪೀಡಿಸತೊಡಗಿದನು. ಆದರೆ ಆ ಮುನಿ ಬಾಹ್ಯಪ್ರಪಂಚವನ್ನು ಮರೆತು ಆತ್ಮಲೀನನಾಗಿ ಜಿನೇಂದ್ರೋಕ್ತಿಗೆ ಅನುಸಾರವಾಗಿ ಅನೇಕಾತ್ಮಕ ವಿತರ್ಕ ಹಾಗೂ ಏಕಾತ್ಮಕ ವಿತರ್ಕವೆಂಬ ಶುಕ್ಲಧ್ಯಾನವನ್ನು ಕೈಕೊಂಡು ಚಿಂತನಮಾಡುತ್ತ ಕರ್ಮಬಂಧವನ್ನು ಕಳಚಿಕೊಂಡನು. ಕ್ರಮಕ್ರಮವಾಗಿ ಆತನಿಗೆ ಕೇವಲಜ್ಞಾನ ಪ್ರಾಪ್ತವಾಯಿತು.

ವ॥ ಹೀಗೆ ಕನಕಶಾಂತಿ ಮುನಿರಾಜನು ಕೇವಲಜ್ಞಾನಿಯಾದೊಡನೆ ಚತುರ್ವಿಧ ದೇವನಿಕಾಯಗಳು ವಂದನಾ ಭಕ್ತಿಗೆಂದು ಬಂದುವು. ಕಾಳಗದ ಕಣದಲ್ಲಿ ಹರಿತವಾದ ಕತ್ತಿಯೇಟಿಗೆ ರೆಕ್ಕೆ ಕಳೆದುಕೊಂಡ ಹುಂಜದಂತೆ ಹಿಮಚೂಳನು ಕನಕಶಾಂತಿ ಮುನೀಂದ್ರ ಕೇವಲಿಗಳ ಪಾದಗಳಿಗೆ ಬಾಗಿ ನಮಸ್ಕರಿಸಿ, ಭವ್ಯಭಾವನೆಯಿಂದ

---

1. ಕರುಳ್ಪಱಿವೋ (ಅ) 2. ಪ[ಯ] (ಮ)

ಚರಣದಿನಂತ್ಯದೊಳ್ ಸಮಾಧಿವಡೆದು ಮುಡುಪಿ ಶತಾರಕಲ್ಪದೊಳ್ ಸಾಮಾನಿಕ ದೇವನಾದೊಂ ಇತ್ತ ಋಷಿನಿವೇದಕಂ ಸುರಸಂಪಾತದೊಳ್ ಕನಕಶಾಂತಿಮುನೀಂದ್ರಂ ಕೇವಲಜ್ಞಾನಭಾನೂದಯಾಚಲ[1]ನಾದ[1]ನೆಂದು ಬಿನ್ನವಿಸುವುದುಂ ಚಕ್ರವರ್ತಿ—

ಕಂ॥ ಮತ್ಪೌತ್ರನಾದನಖಿಳಜ
ಗತ್ಪತಿ ಮರದಾವಗೊಂಬು ಪಣ್ತೊಡಮೇಂ ಪೆ
ದುತ್ಸನ್ನಾನಂದಂ ತ್ರಿಜ
ಗತ್ಪೂಜ್ಯಂಗಿೞಿದು ಪೀಠದಿಂ ಪೊಡೆವಟ್ಟಂ ॥ ೨೪ ॥

ವ॥ ಋಷಿನಿವೇದಕಂಗೆ ತುಷ್ಟಿದಾನಂಗೊಟ್ಟು ಭೇರಿಯಂ ಪೊಯ್ಸಿ ಪಲವುತೆಱದರ್ಚನೆಗಳ್ವೆರಸು ವಂದನಾಭಕ್ತಿಗೆ ಪೋಗಿ ಕನಕಶಾಂತಿ ಕೇವಳಿಗಳ ಪಾದಪಯೋಜಾತಂಗಳ್ಗೆಱಗಿ ಪೊಡೆವಟ್ಟು ತ್ರಿಕರಣ ಶುದ್ಧಿಯಿಂದಮರ್ಚಿಸಿ ಧರ್ಮಶ್ರವಣಾನಂತರಂ ತ್ರಿಃಪ್ರದಕ್ಷಿಣಂಗೆಯ್ದು [2]ಬರೆವರೆ ಮನದೊಳ್[2]—

ಕಂ॥ ಸುತನ ಸುತನಾಗಿಯುಂ ಮ
ತ್ಸುತಂಗಮೆನಗಂ ಚರಾಚರಕ್ಕಂ ಗುರುವಾ
ದತಿಶಯ ಪುಣ್ಯದ ಬೆಳಸ
ದ್ವಿತೀಯಮೇಂ ಪೆಂಪೊ ಕನಕಶಾಂತೀಶ್ವರನಾ ॥ ೨೫ ॥

ವ॥ ಎಂದು ಬಗೆಯುತ್ತುಂ ತನ್ನ ಭೋಗಕಾಂಕ್ಷೆಗೆ ತಾನೆ ಕೊಕ್ಕರಿಸುತ್ತುಂ ಬಂದು ರಾಜಧಾನಿಯಂ ಪೊಕ್ಕು ಹರ್ನಿಶಮದುವೆ ನಿರ್ವೇಗಕಾರಣಮಾಗೆ ಸಂಸಾರಕಾರಣ ಪರಿತ್ಯಾಗನಿಮಿತ್ತಂ—

ದೀಕ್ಷೆಯನ್ನು ಸ್ವೀಕರಿಸಿದನು ; ಮತ್ತು ಯೋಗ್ಯವಾದ ತಪಶ್ಚರಣ ಮಾಡಿ ಅಂತ್ಯದಲ್ಲಿ ಸಮಾಧಿಯಿಂದ ಮರಣಹೊಂದಿ ಶತಾರ ಕಲ್ಪದಲ್ಲಿ ಸಾಮಾನಿಕ ದೇವನಾದನು. ಇತ್ತ ಋಷಿನಿವೇದಕನು ಬಂದು "ಸುರಸಂಪಾತದಲ್ಲಿ ಕನಕಶಾಂತಿ ಮುನೀಂದ್ರನಿಗೆ ಕೇವಲಜ್ಞಾನ ಉತ್ಪತ್ತಿಯಾಯಿತು" ಎಂದು ಬಿನ್ನವಿಸಲಾಗಿ ಚಕ್ರವರ್ತಿಯು—

೨೪. "ನನ್ನ ಮೊಮ್ಮಗನು ಸಕಲ ಜಗತ್ಪತಿಯಾದನು. ಮರದಲ್ಲಿ ಯಾವ ಕೊಂಬೆ ಹಣ್ಣುಬಿಟ್ಟರೆ ಏನು ? (ಅದು ಆ ಮರಕ್ಕೇ ಶ್ರೇಯಸ್ಸು)" ಎಂದು ಆನಂದಭರಿತನಾಗಿ ಪೀಠದಿಂದ ಇಳಿದು ತ್ರಿಜಗತ್ಪೂಜ್ಯನಿಗೆ ನಮಸ್ಕರಿಸಿದನು.

ವ॥ ಋಷಿನಿವೇದಕನಿಗೆ ಬಹುಮಾನವನ್ನು ಕೊಟ್ಟು ಭೇರಿಯನ್ನು ಹೊಡೆಯಿಸಿ ಹಲವಾರು ಪೂಜಾಸಾಮಾಗ್ರಿ ಸಹಿತವಾಗಿ ವಂದನಾಭಕ್ತಿಗೆ ಹೋಗಿ ಕನಕಶಾಂತಿ ಕೇವಲಿಗಳ ಪಾದಕಮಲಗಳಿಗೆ ಬಾಗಿ ನಮಸ್ಕರಿಸಿ, ತ್ರಿಕರಣ ಶುದ್ಧಿಯಿಂದ ಪೂಜಿಸಿ, ಧರ್ಮಶ್ರವಣ ಮಾಡಿದನು. ಅನಂತರ ಮೂರು ಸಲ ಪ್ರದಕ್ಷಿಣೆಮಾಡಿ—

೨೫. "ನನ್ನ ಮಗನ ಮಗನಾಗಿದ್ದು ನನಗೂ ನನ್ನ ಮಗನಿಗೂ ಸಕಲ ಚರಾಚರಕ್ಕೂ ಗುರುವಾದ ಅತ್ಯಧಿಕ ಪುಣ್ಯದ ಫಲ ಕನಕಶಾಂತೀಶ್ವರನಿಗೆ ಪ್ರಾಪ್ತವಾಯಿತು. ಇದು ಎಂತಹ ಅನನ್ಯವಾದ ಮಹಿಮೆ !"

ವ॥ ಹೀಗೆ ಯೋಚಿಸುತ್ತ ತನ್ನ ಭೋಗಾಸಕ್ತಿಗೆ ತಾನೆ ಹೇಸಿಕೊಂಡು ಬಂದು, ರಾಜಧಾನಿಯನ್ನು ಹೊಕ್ಕು ಹಗಲಿರುಳೂ ಅದೇ ಧ್ಯಾನದಿಂದ ವೈರಾಗ್ಯ ಹುಟ್ಟಲು, ಸಂಸಾರ ಪರಿತ್ಯಾಗಕ್ಕೆ ಮನಸ್ಸಾಗಿ—

---

1. × (ಪಾ) 2. × (ಮ)

ಕಂ॥ [1]ನಿ[1]ಧಿ ದುಸ್ತರ[2]ಜನ್ಮಾಂ[2]ಭೋ
ನಿಧಿ ಕರ್ಮಕ್ಷಯ ವಿರೋಧಮವರೋಧಂ ಶ್ರೀ
ವಧು ಕುಲ[3]ಟಾ[3]ವಧುವೆಂಬೊಂ
ದಧಮತೆ ತಳ್ತತ್ತು ಚಕ್ರವರ್ತಿಯ [4]ಬಗೆಯೊಳ್[4] ॥ ೨೬ ॥

ವ॥ ಅಂತಸಾರಸಂಸಾರಸ್ವರೂಪಮನಱಿದು ತಱಿಸಂದು ಪಾಪೇಭಕಂಠೀರವನಪ್ಪ ವಜ್ರಾಯುಧಂ ನಿಜಪ್ರಿಯಸುತಂಗೆ ಪಟ್ಟಂಗಟ್ಟಿ ಕ್ಷೇಮಂಕರ ತೀರ್ಥಕರ ಪರಮದೇವರ್ ಗುರುಗಳಾಗೆ —

ಕಂ॥ ಮಹಿಪತಿಭೋಗಪ್ರಕರಮ
ನಹಿಪತಿಭೋಗೋಪಮಾನಮೆಂದಱಿದಂತ
ರ್ಬಹಿರರ್ಥನಿಚಯಮಂ ತೊಱೆ
ದಹೀನಜೈನೇಂದ್ರರೂಪಮಂ ಕೆಯ್ಕೊಂಡಂ ॥ ೨೭ ॥

ವ॥ ಅಂತು ಮೂಸಾಸಿರ್ವರ್ ಮಹೀನಾಥರೊಡನೆ ಜಿನ(ನಾಥ)ರೂಪಮಂ ತಾ[5][ಳ್ದಿ][5] ತಪಕ್ಕುಪಯೋಗ್ಯಮಪ್ಪ ಕ್ರಿಯಾಕ್ರಮ ಮೆಲ್ಲಮನಾತ್ಮೀಯಂಮಾಡಿ ಗಣಪೋಷಣಾನಂತರಂ ಏಕವಿಹಾರಿಯಾಗಿ ವಿಹಾರಿಸುತ್ತುಂ ಸಿದ್ಧಾಚಳದ ಮೇಗೆ ಸಂವತ್ಸರಾವಧಿಯಪ್ಪುತ್ಕೃಷ್ಟ ಪ್ರತಿಮಾಯೋಗದೊಳಿರೆ ತ್ರಿಪೃಷ್ಠನ ಕೆಯ್ಯೊಳ್ ಸತ್ತಶ್ವಗ್ರೀವನ ಮಕ್ಕಳಮಿತತೇಜಂಗಿದಿರ್ಚಿ ಸತ್ತಂಬರಚರರ್ ಭವನವಾಸಿಗಳೊಳ ನಂತವೀರ್ಯನುಂ ಮಹಾಬಲನುಮೆಂಬ ಪೆಸರೊಳಸುರರಾಗಿ ಪುಟ್ಟಿ ಭೌಮವಿಹಾರಾರ್ಥಂ [6]ಪೋಗೆ[6] ವಜ್ರಾಯುಧಮುನೀಂದ್ರನ ಮೇಗೆ ವಿಮಾನಂ ಪಾಱದಿರೆ ವಿಭಂಗಜ್ಞಾನದಿನಱಿದು ಮುನಿದು—

---

೨೬. "(ಚಕ್ರವರ್ತಿಯ) ನಿಧಿಯೆಂಬುದು ದಾಟಲಾಗದ ಜನ್ಮಾವಳಿಯ ಸಮುದ್ರ; ರಾಣಿವಾಸವೆಂಬುದು ಕರ್ಮಕ್ಷಯಕ್ಕೆ ವಿಘ್ನಕಾರಿ; ಲಕ್ಷ್ಮಿಯೆಂಬವಳು ಕುಲಟೆ" ಎಂಬ ತಾತ್ಪರ ಭಾವನೆ ಚಕ್ರವರ್ತಿಯ ಮನಸ್ಸಿನಲ್ಲಿ ನೆಲಸಿತು.

ವ॥ ಹೀಗೆ ಸಂಸಾರದಲ್ಲಿ ಏನೂ ಹುರುಳಿಲ್ಲವೆಂಬುದನ್ನು ಅರಿತು, ದೃಢನಿರ್ಧಾರದಿಂದ ಪಾಪವೈರಿಯಾದ ವಜ್ರಾಯುಧನು ತನ್ನ ಪ್ರಿಯಪುತ್ರನಿಗೆ ಪಟ್ಟಗಟ್ಟಿ ಕ್ಷೇಮಂಕರ ತೀರ್ಥಕರರೇ ಗುರುಗಳಾಗಲಾಗಿ—

೨೭. ರಾಜಭೋಗಗಳೆಲ್ಲವೂ ಸರ್ಪರಾಜನ ಭೋಗ (ಹೆಡೆ)ಗಳಿಗೆ ಸಮಾನವೆಂದರಿತು ತನ್ನ ಎಲ್ಲ ಸಂಪತ್ತನ್ನೂ ತೊರೆದು ದಿಗಂಬರ ವ್ರತವನ್ನು ಸ್ವೀಕರಿಸಿದನು.

ವ॥ ಹೀಗೆ ಮೂರು ಸಾವಿರ ಅರಸುಗಳೊಡನೆ ಜಿನದೀಕ್ಷೆಯನ್ನು ವಹಿಸಿ, ತಪೋಯೋಗ್ಯವಾದ ಕ್ರಮಗಳನ್ನೆಲ್ಲ ಅನುಗೊಳಿಸಿ, ಗಣಪೋಷಣೆಯ ತರುವಾಯ ಏಕವಿಹಾರಿಯಾಗಿ ಸಂಚರಿಸುತ್ತ ಸಿದ್ಧಾಚಲದ ಮೇಲೆ ಒಂದು ವರ್ಷದ ವರೆಗೆ ಉತ್ಕೃಷ್ಟವಾದ ಪ್ರತಿಮಾಯೋಗದಲ್ಲಿ ನಿಂತಿರಲು, ತ್ರಿಪೃಷ್ಠನ ಕೈಯಲ್ಲಿ ಸತ್ತ ಅಶ್ವಗ್ರೀವನ ಮಕ್ಕಳೂ ಅಮಿತ ತೇಜನ ಕೈಯಲ್ಲಿ ಸತ್ತ ಖೇಚರರೂ ಭವನವಾಸಿಗಳೊಳಗೆ ಅನಂತವೀರ್ಯ ಮತ್ತು ಮಹಾಬಲ ಎಂಬ ಹೆಸರಿನ ಅಸುರರಾಗಿ ಹುಟ್ಟಿ ಭೂಮಿಯ ಮೇಲೆ ವಿಹಾರ ಮಾಡುತ್ತ ಬಂದರು. ವಜ್ರಾಯುಧ ಮುನೀಂದ್ರನ ಮೇಲೆ ವಿಮಾನವು ಹಾರದೆ ನಿಂತುಬಿಡಲಾಗಿ ವಿಭಂಗಜ್ಞಾನದಿಂದ ಅರಿತು ಕ್ರೋಧಗೊಂಡು—

---

1. ಪಿ (ರ) 2. ಕರ್ಮಾಂ (ರ) 3. ದಾ (ರ) 4. ಮನದೊಳ್ (ರ) 5. ಟ್ದ (ಮ) 6. ಪೋಗೆ ಪೋಗೆ (ಅ)

ಚಂ॥ ಇೞಿದು ವಿಮಾನದಿಂ ಪರಮಯೋಗಿಗೆ ಯೋಗನಿಯೋಗಘಾತಮಂ
ಘಟಿಯಿಸೆ ರಂಭೆಯೆಂಬಳ ತಿಲೋತ್ತಮೆಯೆಂಬಳ ಬರ್ಪುದರ್ಕೆ ತ
ಲ್ಲಟಿಸಿ ಭಯಾಕುಳರ್ ಪೆ[1][ಳ][1]ಱ[3] ದೇವವಿಳಾಸಿನಿಯರ್ ವಿಶೋಧಿ ಪೊಂ
ಪುೞಿಯೆನೆ ತನ್ಮುನೀಶ್ವರನನರ್ಚಿಸಿ ಪೂಜಿಸಿ ಪೋದರನ್ನೆಗಂ ॥ ೨೮ ॥

ವ॥ ಇತ್ತ ಸಹಸ್ರಾಯುಧಂಗೆ ವಜ್ರಾಯುಧಮುನೀಂದ್ರ ತಪಃಪ್ರಭಾವಮನರಣ್ಯಾನೀಚರರಱಿಪೆ ಹರ್ಷಾಶ್ರುವಿಮಿಶ್ರವಿಲೋಚನಂ ಬಂದು ಬಂದಿಸಿ—

ಕಂ॥ ಸತಿ ವಿಸುಟಳಲೊಳಮೆ ಲತಾ
ಕೃತಿಯಿಂದಡರ್ವಂತೆ ಮೆಯ್ಯನಡರ್ದುವು ಪಲವುಂ
ವ್ರತತಿಗಳಪ್ಪುದವೊಲಿಳಾ
ಸತಿ ಪೆಯ್ಯಂ ಪುತ್ತು ಪತ್ತಿ ಮೆತ್ತಿದುವೆನಿತುಂ ॥ ೨೯ ॥

ವ॥ ತದ್ರೂಪಾದರ್ಶನಮೆ ತನಗೆ ವೈರಾಗ್ಯನಿಮಿತ್ತಮಾಗಿ ಪ್ರೀತಿಂಕರನೆಂಬ ನಿಜತನೂಜಂಗೆ ರಾಜ್ಯಭಾರಮನಿತ್ತು ಪಿಹಿತಾಸ್ರವ ಗುರುಗಳ ಪಾದಪದ್ಮಸಮೀಪದೊಳನೇಕ ರಾಜಸಮಾಜಂಬೆರಸು ಸಹಸ್ರಾಯುಧಂ ಜಿನೇಶ್ವರರೂಪಮಂ ತಾಳ್ದಿ ದುಶ್ಚರ ತಪಶ್ಚರಣ ಪರಿಣತ ನಿಹಿತ ವಿಹಾರನಾಗಿ ಮುನಿವೃಂದಕ್ಕೆ ಪಡಿಚಂದಮಾಗಿ ನೆಗೞುತ್ತಿರೆ ಮತ್ತಿತ್ತ ಸಿದ್ಧಾದ್ರೀಂದ್ರದೊಳ್—

ಕಂ॥ ಪ್ರಾಯೋಪಗಮನದಿಂ ವ
ಜ್ರಾಯುಧಮುನಿ ತೊಱೆದು ಮುಡುಪಿ ಬಂದುಪರಿಗ್ರೈ
ವೇಯಕಪರಾರ್ಘ್ಯಮಣಿಕಿರ
ಣಾಯತದೀಪ ಪ್ರದೀಪ ಕಬಳಿತ ತಮದೊಳ್ ॥ ೩೦ ॥

ವ॥ ಪ್ರೀತಿಂಕರ ವಿಮಾನದೊಳ್ ಮೂವತ್ತೊಂದು ಸಾಗರೋಪಮಮುಮಮಿತ [2]ತೇಜ[2] ವಿಕ್ರಮಾಭಿಧಾನಮುಮಹಮಿಂದ್ರ ಪರಮೈಶ್ವರ್ಯಮುಂ ದೊರೆಕೊಳೆ ಸುಖಾತ್ಮನಿರೆ—

---

೨೮. ವಿಮಾನದಿಂದ ಇಳಿದು ಆ ಪರಮ ತಪಸ್ವಿಯ ತಪಸ್ಸಿಗೆ ವಿಘ್ನವೊಡ್ಡುತ್ತ ನಿಂತರು. ಆಗ ರಂಭೆ ಹಾಗು ತಿಲೋತ್ತಮೆ ಎಂಬಿಬ್ಬರು ದೇವವೇಶ್ಯೆಯರು ಬರಲಾಗಿ ಹೆದರಿಕೊಂಡು ಅಸುರರು ಹಿಮ್ಮೆಟ್ಟಿದರು. ಆ ದೇವ ವಿಲಾಸಿನಿಯರು ಆ ಮುನೀಶ್ವರನನ್ನು ಅರ್ಚಿಸಿ ಹೋದರು.

ವ॥ ಇತ್ತ ಸಹಸ್ರಾಯುಧನಿಗೆ ವನಚರರು ಬಂದು ವಜ್ರಾಯುಧನ ತಪಃಪ್ರಭಾವವನ್ನು ಅರಿಕೆಮಾಡಿಕೊಳ್ಳಲಾಗಿ ಆತನು ಆನಂದಾಶ್ರುಗಳನ್ನು ಸುರಿಸುತ್ತ ಬಂದು ವಂದಿಸಿದನು.

೨೯. ಬಿಟ್ಟುಬಂದ ಸತಿಯರೆಲ್ಲ ಬಳ್ಳಿಗಳ ರೂಪಾಗಿ ಮೈಯನ್ನು ತಬ್ಬಿಕೊಂಡರೊ ಏನೊ ಎಂಬಂತೆ ಹಲವಾರು ಬಳ್ಳಿಗಳೊಡನೆ ಹುತ್ತವೇರಿ ಮುನಿಯ ಮೈಯನ್ನೆಲ್ಲ ಮೆತ್ತಿಕೊಂಡಿತ್ತು.

ವ॥ ಆ ರೂಪದ ದರ್ಶನವೆ ತನಗೆ ವೈರಾಗ್ಯ ಕಾರಣವಾಗಿ ಪ್ರೀತಿಂಕರನೆಂಬ ಮಗನಿಗೆ ರಾಜ್ಯಭಾರವನ್ನೊಪ್ಪಿಸಿ ಪಿಹಿತಾಸ್ರವ ಗುರುಗಳ ಪಾದಸನ್ನಿಧಿಯಲ್ಲಿ ಅನೇಕ ರಾಜರೊಡನೆ ಸಹಸ್ರಾಯುಧನು ಜಿನರೂಪವನ್ನು ಧರಿಸಿ, ಕಠೋರವಾದ ತಪಸ್ಸಿನಲ್ಲಿ ತೊಡಗಿ, ಮುನಿಸಮೂಹಕ್ಕೆ ಪ್ರತಿಬಿಂಬವಾಗಿ ಇರುತ್ತಿದ್ದನು. ಇತ್ತ ಸಿದ್ಧಾಚಲದಲ್ಲಿ—

೩೦. ಪ್ರಾಯೋಪಗಮನದಿಂದ ವಜ್ರಾಯುಧಮುನಿ ಮುಡಿಪಿ ಬಂದು ಉಪರಿಗ್ರೈವೇಯಕದ ಶ್ರೇಷ್ಠವಾದ ರತ್ನಕಿರಣ ಪ್ರಭೆಯಿಂದ ಥಳಥಳಿಸುವ

ವ॥ ಪ್ರೀತಿಂಕರ ವಿಮಾನದಲ್ಲಿ ಮುವತ್ತೊಂದು ಸಾಗರೋಪಮ ಆಯುಷ್ಯವುಳ್ಳ ಅಮಿತವಿಕ್ರಮನೆಂಬ ಹೆಸರುಳ್ಳ ಅಹಮಿಂದ್ರನಾದನು ; ಮತ್ತು ಆ ಐಶ್ವರ್ಯವನ್ನು ಅನುಭವಿಸುತ್ತ ಸುಖದಿಂದಿದ್ದನು.

---

1. ಬ (ಮ) 2. × (ಮ)

ಕಂ॥ ನೆಗೞ್ದೀಷತ್ಪ್ರಾಗ್ಭಾರಾ
ಖ್ಯಗಿರೀಂದ್ರದ ಶಿರದೊಳಾ ಸಹಸ್ರಾಯುಧ ಯೋ
ಗಿಗಳುಂ ಬಿಸುಟರ್ ಪ್ರಾಯೋ
ಪಗಮನದಿಂ ತಮ್ಮ ಪೊತ್ತ ತನುವಿನ ಪೊಱೆಯಂ ॥ ೩೧ ॥

ವ॥ ಅಂತು ಶರೀರಭಾರಮನಿೞಿಪಿ ನೀರೊಳ್ ಮಣ್ಣಪೆಟ್ಟೆಯಂ ಪತ್ತುವಿಟ್ಟ ಕಳಮಕಣಿಶವಂತೂರ್ಧ್ವಗತಿಸ್ವಭಾವನಿರತನಾಗಿ ಸಹಸ್ರಾಯುಧನುಂ ವಜ್ರಾಯುಧನುಂ ಪುಟ್ಟಿದ ವಿಮಾನದೊಳ್ ಕಾಂತಿಪ್ರಭನೆಂಬೊನಹಮಿಂದ್ರನಾದನಿಂತು—

ಕಂ॥ ಬೞಿವೞಿಯನೆ ಪೋಗನೊಡೆಳೆ
ಪೞಿಗುಂ ಸುರಕೋಟಿ ನಗುಗುಮೆಂದಾತನ ಪೊಂ
ಪುೞಿ ಪೋದಲಂಪು[1]ವೋಲ್[1] ಬಂ
ದುೞಿ[2]ಯ[2]ನೆ ಬೆಂಬೆನ್ನನಿಂತು ಕೂರ್ತರುಮೊಳರೇ ॥ ೩೨ ॥

ವ॥ ಅಂತು ಸಾರ್ಧ ಪಂಚದಶಮಾಸನಿಶ್ವಾಸನುಮೇಕ[illegible]ಮಿತಜೀವಿತನುಮಾಗಿ ಸಹಾಯೋತ್ತಮನಮಿತವಿಕ್ರಮನುಂ ತಾನುಂ ಅಗಲದಿರೆ ನಿರಂತರಮಮಿತವಿಕ್ರಮದೇವಂ ಭಗವದರ್ಹದ್ದೇವನಪ್ಪ—

ಉ॥ ದೇವರ ದೇವನೊಳ್ ಭವಭವಾಳಿಯೊಳ್ ಬಗೆಯಾಗೆ ತತ್ವಮಂ
ಭಾವಿಸಿಯುಂ ತಗುಳ್ದ[3]ಱು[3]ತು ಸೇವಿಸದೊಯ್ಯನೆ ದೇವಸೌಖ್ಯಮಂ
ಸೇವಿಸಿಯುಂ ಕಷಾಯಮೊಗೆಯುತ್ತಿರೆ ಪೋದ ಪರಾರ್ಧ್ಯವಸ್ತ್ರದಂ
ತಾವಿಭುಗಾದುದಂದು ವಿಶದಂ ಬಹಿರಂಗಮುಮಂತರಂಗಮುಂ ॥ ೩೩ ॥

---

೩೧. ಈಷತ್ ಪ್ರಾಗ್ಭಾರವೆಂಬ ಬೆಟ್ಟದ ಶಿಖರದಲ್ಲಿ ಸಹಸ್ರಾಯುಧ ಮುನಿಗಳು ಸಲ್ಲೇಖನ ವಿಧಿಯಿಂದ ತಮ್ಮ ದೇಹದ ಭಾರವನ್ನು ಕಳಚಿಕೊಂಡರು.

ವ॥ ಹಾಗೆ ಶರೀರ ಭಾರವನ್ನು ಇಳಿಸಿ, ನೀರಲ್ಲಿ ಮಣ್ಣಿನ ಹೆಂಟೆಯನ್ನು ಬಿಟ್ಟ ನೆಲ್ಲಿನ ತೆನೆಯಂತೆ ಮೇಲು ಮೇಲಕ್ಕೆ ಚಿಮ್ಮಿಹೋಗುತ್ತ ಸಹಸ್ರಾಯುಧನು ವಜ್ರಾಯುಧನ ವಿಮಾನದಲ್ಲಿಯೆ ಕಾಂತಿಪ್ರಭನೆಂಬ ಅಹಮಿಂದ್ರನಾದನು.

೩೨. "(ತಂದೆಯನ್ನು) ಅನುಸರಿಸಿ ಆತನ ಹಿಂದೆಹಿಂದೆಯೆ ಹೋಗದಿದ್ದರ ಭೂಮಿಯ ಜನ ನಿಂದಿಸುವರು; ದೇವಸಮೂಹ ನಗುವುದು" ಎಂದು ಆತನ ಅತಿಶಯವಾದ ಸುಖವನ್ನು ಉಣ್ಣಲು ತಡೆದು ನಿಲ್ಲಲಾರದೆ ಬಂದನು. ಹೀಗೆ ಬೆನ್ನ ಹಿಂದೆಯೆ (ಜನ್ಮಜನ್ಮಾಂತರಕ್ಕೂ) ಅನುಸರಿಸಿ ಬರುವ ಇಂತಹ ಸ್ನೇಹವುಳ್ಳವರೂ ಉಂಟೆ ?

ವ॥ ಏದೂವರೆ ತಿಂಗಳಿಗೆ ಒಮ್ಮೆ ನಿಶ್ವಾಸ; ಮೂವತ್ತೊಂದು ಸಾಗರೋಪಮ ಆಯುಷ್ಯ—ಇವುಗಳನ್ನು ಪಡೆದು ಅಮಿತವಿಕ್ರಮನನ್ನು ಅಗಲದೆ ಇರುತ್ತಿದ್ದನು. ಅಮಿತವಿಕ್ರಮದೇವನು ಭಗವಂತನಾದ—

೩೩. ಅರ್ಹತ್ ಪರಮೇಶ್ವರನಲ್ಲಿಯೆ ಜನ್ಮಜನ್ಮಾಂತರಗಳಿಂದ ಮನಸ್ಸಿಟ್ಟು ಆತನ ತತ್ವವನ್ನು ಭಾವಿಸುತ್ತ ದೇವಸೌಖ್ಯದಲ್ಲಿ ಆಸಕ್ತನಾಗದೆ ಹಳೆಯ ವಸ್ತ್ರಗಳಂತೆ ಕಷಾಯಗಳನ್ನು ಕಳಚಿಹಾಕಿ ಅಂತರಂಗದಲ್ಲಿಯೂ ಬಹಿರಂಗದಲ್ಲಿಯೂ ಪರಿಶುದ್ಧನಾದನು.

---

1 ೞಲ್ (ಮ) 2 ಯೆ (ಮ) 3 ಱು (ಮ)

ವ॥ ಅಂ[1]ತು[1] ಪೊಱಗಣೊಳಗಣೆರಡುಂ ಲೇಶ್ಯಾಶುದ್ಧಿಯಂ ತಾಳ್ದಿ ತಳತಳಿಸಿ ಶೀತಳತಳದೊಳಗೆ ಬಳ್ವಳ ಬೆಳೆದು ಪೊಳೆವೆಳನೇಸಱಂ ಸೆಱೆ[3]ಗೆಯ್ವ ಮಣಿಕುಟ್ಟಿಮ ಭೂಮಿಭಾಗದೊಳಮಮಿತವಿಕ್ರಮ ದೇವನ ದಿವ್ಯಚ್ಛಾಯೆ ಪ್ರತಿಬಿಂಬಿಸೆ ಬಿಸಿಲುಗೊಂಡು [2]ಸೋಂಕಿ[2]ಱಂದ [3]ಕಣ್ಣ[3][4][ಬ್ವ][4]ಂತುಳ್ಕಿ ಪ್ರೀತಿಂಕರ ವಿಮಾನದೊಳಿಂತು ಕಲ್ಪೋತ್ತರಾಮರರ್—

ಚಂ॥ ಸಹಜ ವಿಭೂಷಣ ಪ್ರತತಿ ಪಲ್ಲವಮಿಲ್ಲದ ದಿವ್ಯದೇಹ ಸ
ನ್ನಿಹಿತಪಹಾಸ್ಯಮೆಂಬ ಪೆಸರಿಲ್ಲದೆಯಾಡುವ ಕೋಟಿಯಿಲ್ಲದು
ಸ್ಸಹತರ ಕಾರ್ಯಪರ್ಯವಸಿತಾಂತರಮಿಲ್ಲ[5][ನಿ][5]ಸಿಲ್ಲ ಚಿಂತೆ ದು
ರ್ವಹಮಹಮಿಂದ್ರರೇಂ ಸುಖದ ಲೆಪ್ಪವೊ ಪುಣ್ಯದ ಚಿತ್ರಕರ್ಮವೋ ॥ ೩೪ ॥

ಕಂ॥ ಕೊಳೆ ನೋಡುವ ಕಣ್ಗಳಸುಂ
ಗೊಳೆ ದಿವ್ಯಶರೀರಮಂತುಮ್ಮಲ್ಲದೆಯುಂ ತಾಂ
ತೊಳ [ತೊಳತೊಳಗೆ] ನಿಶಾಕರ
ನಿಳಂಬಿಯಾಯ್ತಮಿತ ವಿಕ್ರಮಪ್ರಭೆ ದಿವದೊಳ್ ॥ ೩೫ ॥

ವ॥ ಅಂತಮಿತ ವಿಕ್ರಮದೇವಂ ಸುಖೈಕಾಂತವೇದಿಯಪ್ಪುದಱಿಂ[6]ನಱಿಯಲಾಗದಂತಿ[6][ರೆ][6]—

ಚಂ॥ ಸೊಗಯಿಪ ಜವ್ವನಂ ನೆಱೆ[3]ದ ರೂಪು ನಿಸರ್ಗಮನೋಹರಂ ಮುಗು
ಳ್ನಗೆ ಸವಿಳಾಸ ಮೋದಮೊಡವುಟ್ಟಿದುವಿನ್ನಿವು ನಿಟ್ಟೆಯೆಂಬ ದಂ
ದುಗಮೆರ್ದೆಯುರ್ಚೆ ಮಾಗಿಯ ಪಗಲ್ ತವುವಂತಿರೆ ನೋಡೆ ನೋಡದ
ನ್ನೆಗಮಹಮಿಂದ್ರರಾಯು ತವುತಂದುವು ನಿಂದುವೆ ಕಾಲಸಂಖ್ಯೆಯೊಳ್ ॥ ೩೬ ॥

ವ॥ ಅನಂತರಂ ನಿಜ ಜೀವಿತಾವಧಿಯನಱಿಂದರ್ಹತ್ತತ್ವನಿ[7]ಷ್ಠ[7]ರಾಗಿ—

ವ॥ ಹೊರಗಿನ ಹಾಗು ಒಳಗಿನ ಎರಡೂ ಲೇಶ್ಯಾಶುದ್ಧಿಯನ್ನು ಪಡೆದು ಥಳಥಳಿಸಿ ಬೆಳೆದ ಬಾಲಸೂರ್ಯನನ್ನು ಸೆರೆಹಿಡಿಯುವ ರತ್ನದ ನೆಲಗಟ್ಟಿನಲ್ಲಿ ಅಮಿತವಿಕ್ರಮದೇವನ ದಿವ್ಯ ಪ್ರತಿಬಿಂಬ ಮೂಡಿ ಕಣ್ಣು ಕುಕ್ಕುವಂತೆ ಹೊಳೆಯುತ್ತಿತ್ತು. ಹೀಗೆ ಪ್ರೀತಿಂಕರ ವಿಮಾನದಲ್ಲಿ—

೩೪. ಆಭರಣಗಳ ತೊಡಕಿಲ್ಲದೆ ಹೊಳೆಯುವ ಶುಭ್ರ ದೇಹಗಳನ್ನು ತಾಳಿ, ಎಡೆಯಾಡುವ ತೊಂದರೆಯಿಲ್ಲದೆ, ದುಸ್ತರವೆಂಬ ಕಾರ್ಯವಿಲ್ಲದೆ, ಚಿಂತೆಯಿಲ್ಲದೆ, ಇರುವ ಆ ಅಹಮಿಂದ್ರರೇನು ಸುಖದ ಮೂರ್ತಿಗಳೋ ಪುಣ್ಯದ ಚಿತ್ರಗಳೊ! (ಪದ್ಯ ತುಂಬ ಕ್ಲಿಷ್ಟವಾಗಿದೆ. ಪಾಠವೂ ಸರಿಯಾಗಿರುವಂತೆ ತೋರುವುದಿಲ್ಲ.)

೩೫. ನೋಡುವ ಕಣ್ಣುಗಳಿಗೆ ಬೆರಗನ್ನುಂಟುಮಾಡುವ ದಿವ್ಯ ದೇಹವು ಹೊಳೆಯುತ್ತಿರಲಾಗಿ ಅಮಿತವಿಕ್ರಮನ ಕಾಂತಿಯೆ ಸ್ವರ್ಗದಲ್ಲಿ ಚಂದ್ರಕಾಂತಿಯಾಯಿತು.

ವ॥ ಅಮಿತವಿಕ್ರಮದೇವನು ಏಕಾಂತ ಸುಖಿಯಾಗಿದ್ದುದರಿಂದ (ಇತರರಿಗೆ) ತಿಳಿಯದಂತೆ ಇರಲಾಗಿ—

೩೬. ಸೊಗಸಾದ ಯೌವನ, ಪರಿಪೂರ್ಣ ಸೌಂದರ್ಯ, ಮುಗುಳ್ನಗೆ, ವಿಲಾಸಪೂರ್ಣವಾದ ವಿನೋದ— ಇವೆಲ್ಲ ಜನ್ಮತಃ ಬಂದುವು; ಇವು ನಿತ್ಯ ಎಂಬ ಯೋಚನೆ ಮನದಲ್ಲಿ ಹುಟ್ಟುತ್ತಿರುವಾಗಲೆ ಚಳಿಗಾಲದ ಹಗಲು ಕೊನೆಗಾಣುವಂತೆ ನೋಡುನೋಡುವಷ್ಟರಲ್ಲಿ ಅಹಮಿಂದ್ರರ ಆಯುಸ್ಸುಗಳು ಕೊನೆಗೆ ಬಂದುವು. ಕಾಲಗಣನೆಯಲ್ಲಿ ಅವು ನಿಲ್ಲುವುವೆ?

ವ॥ ಬಳಿಕ ತಮ್ಮ ಆಯುಷ್ಯಾವಧಿ ಮುಗಿಯುತ್ತ ಬಂದುದನ್ನು ಅರಿತು ಜಿನತತ್ವ ನಿಷ್ಠರಾಗಿ—

---

1. ದು (ಮ) 2. ಸೊಂದೆ (ಅ) 3. ಕಣ್ಣಾ (ಅ) 4. ಳ್ವ (ಮ) 5. ಲಿ (ಮ) 6. ಱ (ಮ) 7. ಷ್ಟಕ (ಅ)

ಕಂ॥ ಮುಳಿಸಿಲ್ಲದೆ ಮುಳಿಸಿಂಗೆರ್ದೆ
ಗೊಳೆ ವಿಬುಧರ್ ಧ್ಯಾನನಿಶಿತಖಡ್ಗದಿನಘಸಂ
ಕುಳಮೆಯ್ದೆ ಬೆದಱೆ ನೆಲೆಯಿಂ
ಪೊಳರ್ದಿಂಬಾಗಿಱಿದರಿರ್ವರುಂ ಸುರಭಟರುಂ ॥ ೩೭ ॥

ಕೊರಗಿದರೆ ಮೆಯ್ಯನಿನಿಸಗಿ
ದರೆ ಅವರ್ಗಳ್ ದೇವಲೋಕ ಸುಖದೊಳ್ ಮನವಿ
ಟ್ಟರೆ ಮಱುಭವಕ್ಕೆ ಕಣ್ಣಿ
ಟ್ಟರೆ ಮುಡುಪಿದರಮರರಿರ್ವರುಂ ನಿರಪೇಕ್ಷರ್ ॥ ೩೮ ॥

ವ॥ ಅಂತಲ್ಲಿಂ ಪರಿಚ್ಯುತರಾಗಿ ಬಂದೀ ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ಬಡಗಣ ತಡಿಯ ಪುಷ್ಕಲಾವತೀವಿಷಯದ ಪುಂಡರೀಕಿಣೀಪುರಮನಾಳ್ವೊಂ—

ಕಂ॥ ಅತಿಶಯಪುಣ್ಯಂ ಗರ್ಭಾ
ವತರಣ ಜನ್ಮಾಭಿಷೇಕ ನುತಕಲ್ಯಾಣ
ದ್ವಿತಯಮನೆಯ್ದಿರ್ದ ಜಗ
ತ್ಪತಿ ಘನರಥನಭಿಮುಖಂ ವಿಮೋಹಾಂ[1]ತ[1]ರಥಂ ॥ ೩೯ ॥

ವ॥ ಆ ಪುಣ್ಯಾಂಕುರಪಾಕಪ್ರರೋಹಾಯಮಾಣನುಮಪ್ಪ—

ಕಂ॥ ಪರಮೇಶ್ವರಂಗೆ ಬಗೆಗೊಂ
ಡರಸಿಯರವರಿರ್ವರತ್ಯಪೂರ್ವಾಕೃತಿ ಭಾ
ಸುರೆಯರ್ ಪಿರಿಯರಸಿ ಮನೋ
ಹರೆ ಕಿಱಿಯಳ್ ಪ್ರೀತಿಮತಿ ಪತಿವ್ರತೆ ಧರೆಯೊಳ್ ॥ ೪೦ ॥

---

೩೭. ಕೋಪವಿಲ್ಲದವರಾದರೂ ದೇವತೆಗಳು ಮೆಚ್ಚುವಂತೆ ಧ್ಯಾನವೆಂಬ ಹರಿತವಾದ ಖಡ್ಗದಿಂದ ಪಾಪ ಸಮೂಹವು ಬೆದರುವಂತೆ ಆ ಇಬ್ಬರು ವೀರರೂ ರಭಸದಿಂದ ಇರಿದರು.

೩೮. ಅವರು ಕೊರಗಿದರೆ? ಬಡವಾದರೆ? ಕೊಂಚವಾದರೂ ಅಂಜಿದರೆ? ದೇವಲೋಕದ ಸುಖಕ್ಕೆ ಬಯಸಿದರೆ? ಪುನರ್ಜನ್ಮಕ್ಕೆ ಕಣ್ಣಿಟ್ಟರೆ? ಯಾವ ಅಪೇಕ್ಷೆಯೂ ಇಲ್ಲದೆ ಆ ದೇವರಿಬ್ಬರೂ ಮುಡುಪಿದರು.

ವ॥ ಹಾಗೆ ಅಲ್ಲಿಯ ಜನ್ಮವನ್ನು ಕಳೆದು (ಈ ಭೂಮಿಗೆ) ಬಂದರು. ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ಉತ್ತರ ತೀರದಲ್ಲಿ ಪುಷ್ಕಲಾವತಿಯೆಂಬೊಂದು ರಾಜ್ಯವುಂಟು. ಅದರಲ್ಲಿಯ ಪುಂಡರೀಕಿಣೀಪುರವನ್ನು ಆಳುವವನು—

೩೯. ಅತ್ಯಧಿಕ ಪುಣ್ಯವಂತನೂ, (ತೀರ್ಥಕರನಾದುದರಿಂದ) ಗರ್ಭಾವತರಣ ಮತ್ತು ಜನ್ಮಾಭಿಷೇಕವೆಂಬ ಎರಡು ಕಲ್ಯಾಣಗಳನ್ನು ಪಡೆದವನೂ, ಜಗತ್ಪತಿಯೂ, ಮೋಹವನ್ನು ಗೆದ್ದವನೂ ಆದ ಮೇಘರಥ,

ವ॥ ಪುಣ್ಯದ ಅಂಕುರವನ್ನು ಬೆಳಸುವವನಾದ ಆ—

೪೦. ಪರಮೇಶ್ವರನಿಗೆ ಅಪೂರ್ವ ಸೌಂದರ್ಯವತಿಯರಾದ ಮನಮೆಚ್ಚಿನ ಮಡದಿಯರು ಇಬ್ಬರು. ಅವರಲ್ಲಿ ಹಿರಿಯ ರಾಣಿ ಮನೋಹರೆ; ಕಿರಿಯವಳು ಪ್ರೀತಿಮತಿ. ಇಬ್ಬರೂ ಪತಿವ್ರತೆಯರು.

1· ದ (ಅ)

ಕಂ॥ ಅಪ್ರಮಿತಪುಣ್ಯರಮರರ
ತಿ ಪ್ರಿಯರಂದಗಲದಮಿತವಿಕ್ರಮನುಂ ಕಾಂ
ತಪ್ರಭನುಂ ಘನರಥ ತೀ
ರ್ಥಪ್ರಭುಗಂ ತತ್ಪ್ರಿಯಾದ್ವಯಕ್ಕಮುದಾತ್ತರ್ ॥ ೪೧ ॥

ಕ್ರಮದೆ ಮನೋಹರೆಗಂ ಪ್ರೀ
ತಿಮತಿಗಮಱಿವೊಡನೆ ಪುಟ್ಟೆ ಪುಟ್ಟಿದರಮರೋ
ತ್ತಮರಗ್ರತನೂಭವರಾ
ಗಿ ಮೇಘರಥ ದೃಢರಥಾಭಿಧಾನಾನೂನರ್ ॥ ೪೨ ॥

ವ॥ ಅಂತು ಘನರಥತೀರ್ಥಕರ ರಾಜ್ಯಕಾಲ ಕಲ್ಪಭೂರುಹಕ್ಕೆ ಪುಟ್ಟಿ ತಂದೆಯ ಪರಮೌದಾರಿಕ ಶರೀರ ಬಾಹುಯುಗಳದಂತೆ ಜವ್ವನಂ ನೆಱೆದಿರೆ ಪಿರಿಯ ಮಗನಂ—

ಚಂ॥ ಘನರಥನಂದು ಮೇಘರಥನಂ ಪ್ರಿಯಮಿತ್ರೆಯೊಳಂ ಮನೋಹರಾ
ವನಿತೆಯೊಳಂ ವಿವಾಹವಿಧಿಯಿಂದೊಡಗೂಡಿ ಸುರೇಶ್ವರಂ ವಿಲೋ
ಕನದಿನಹೀಶ್ವರಂ ವಿಭವವರ್ಣನೆಯಿಂದೆ ಧನೇಶ್ವರಂ ವಿಸೂ
ತನ ಧನದಾನದಿಂ ನೆರದರೇಂ ಸಲೆ ಮೇಘರಥಂ ಸಪುಣ್ಯನೋ ॥ ೪೩ ॥

ವ॥ ಅಲ್ಲಿಂ ಬಟಿಯಂ—

ಕಂ॥ ಸುಮತಿ[1]ಗತಿ ಸುಮತಿ[1] ಪುನರು
ಕ್ತಮೆನ್ನ[2]ದರೆ ಸುಮತಿಯೆನಿಪ ದೃಢರಥನುಮನಾ
ಸುಮತಿಯೊಡನೆರಪಿದಂ ಗುರು
ಸುಮತಿಯ ಮತಿ ದೃಢರಥಂಗಮಿರ್ಮಡಿಸುವಿನಂ ॥ ೪೪ ॥

೪೧. (ಅಮಿತ ಪುಣ್ಯಶಾಲಿಗಳಾಗಿ ಎಂದೆಂದೂ ಅಗಲಿರದೆ ಅಹಮಿಂದ್ರ) ದೇವರಾಗಿದ್ದ ಅಮಿತವಿಕ್ರಮ ಮತ್ತು ಕಾಂತಿಪ್ರಭರು ಈ ತೀರ್ಥಕರನಿಗೆ ಹಾಗು ಆತನ ಇಬ್ಬರು ಪತ್ನಿಯರಿಗೆ (ಮಕ್ಕಳಾದರು.)

೪೨. ಮನೋಹರೆಗೆ ಹಿರಿಯ ಮಗನಾಗಿ ಮೇಘರಥನೆಂದೂ ಪ್ರೀತಿಮತಿಯ ಮಗನಾಗಿ ದೃಢರಥನೆಂದೂ ಆ ದೇವೋತ್ತಮರು ಹುಟ್ಟಿದರು.

ವ॥ ಹಾಗೆ ಘನರಥ ತೀರ್ಥಕರ ರಾಜ್ಯಕಾಲವೆಂಬ ಕಲ್ಪವೃಕ್ಷಕ್ಕೆ ಹುಟ್ಟಿ (?) ತಂದೆಯ ಉದಾತ್ತ ದೇಹದ ಎರಡು ಬಾಹುಗಳಂತೆ ಆ ಮಕ್ಕಳಿಬ್ಬರೂ ಶೋಭಿಸಿದರು. ಯೌವನ ಪ್ರಾಪ್ತವಾಗಲು ಹಿರಿಯ ಮಗನಾದ—

೪೩. ಮೇಘರಥನಿಗೆ ಪ್ರಿಯಮಿತ್ರೆಯೆಂಬ ಸುಂದರಿಯನ್ನು ತಂದು ಮದುವೆಮಾಡಲಾಗಿ, ನೋಡಿನೋಡಿ ಇಂದ್ರನೂ, ವೈಭವವನ್ನು ಹೊಗಳಿ ಹಾಡಿ ಸರ್ಪೇಶ್ವರ (ಶೇಷ)ನೂ, ವಿಪುಲವಾದ ಧನದಾನದಿಂದ ಕುಬೇರನೂ ತೃಪ್ತಿ ಹೊಂದಿದರು. ಎಂದ ಮೇಲೆ ಘನರಥನು ಎಂತಹ ಪುಣ್ಯಶಾಲಿ! (ಕೊನೆಯ ಚರಣದಲ್ಲಿ "ನೆರೆದರೇಂ" ಎಂಬುದು "ನೆಱೆದರೇಂ" ಎಂಬುದರ ಅಪಲಿಖಿತವಾಗಿರಬಹುದು.)

ವ॥ ಆ ಬಳಿಕ—

೪೪. ಜ್ಞಾನಿಗಳಿಗೆ ಜ್ಞಾನಿಯೆನಿಸಿದ ಘನರಥನು ಸುಮತಿ (ಬುದ್ಧಿವಂತ)ಯಾದ ದೃಢರಥನಿಗೆ ಸುಮತಿಯೆಂಬ ಕನ್ಯೆಯೊಡನೆ ಮದುವೆಮಾಡಿದನು. ಸುಮತಿಗೆ ಸುಮತಿಯನ್ನು ಜೋಡಿಸಿದುದು ಪುನರುಕ್ತವಾಗದೆ ಮೊದಲೆ ಇದ್ದುದನ್ನು ಇಮ್ಮಡಿಗೊಳಿಸಿದಂತೆ ಆಯಿತು.

1. ಯನೆರವುದ (ಅ) 2. ಗಹಿ (ಅ)

ವ॥ ಅಂತು ಪಿರಿಯ ಮಗಂಗೆ ಪ್ರಿಯಮಿತ್ರೆಯುಂ ಕಿಱಿಯ ಮಗಂಗೆ ಸುಮತಿಯುಮಗ್ರಮಹಿಷೀಪದದೊಳ್ ನಿಲೆ ಮೇಘರಥಕುಮಾರಂ ಬೆರಸೊಂದು ದೆವಸಂ ಘನರಥ ಮಹಾಮಹೀಪಾಲನೊಡ್ಡೋಲಗಮಂ ಪೊಱಮಟ್ಟೊಂದು ರಥ್ಯಾಶೋಭಾವಬದ್ಧ ವಂದನಮಾಲಾಲಂಕೃತ ಪ್ರದೇಶದೊಳ್—

ಕಂ॥ ಕಿಡಿಗುಟ್ಟಿದ ತೆಱದಿಂ ಕಡಿ
ಗಡಿಯಾಗಿರೆ ಪೋರ್ವವೆರಡು ಕೋೞಿಗಳಂ ಕಂ
ಡೆಡೆಯಿಂ ಭವಮಂ ಭೂಪತಿ
ನಡೆ ನೋಡಿ ತದೀಯ ಕೋಪಹೇತುವನಱಿದುಂ ॥ ೪೫ ॥

ವ॥ ಅಂತು ತನ್ನ ಪೆರ್ಮಗಂ ಮೇಘರಥನವಧಿಜ್ಞಾನಮನಾಸನ್ನವರ್ತಿಗಳಱಿಯಲೆಂದಾ ತಾಮ್ರಚೂಳಂಗ[1][ಳ್][1]ನಿಂದು ನೀಡುಂ ಪೋರ್ವ ಮುಳಿಸುಮನೆನಿತು ಪೊೞ್ತು ಪೋರ್ದುಂ ಸೆರಗುವಾರ್ದು ವಿಶ್ರಮಿಸದ ಜಿತಶ್ರಮತೆಯುಮಂ ಬೆಸಗೊಳೆ ವಿನಯ ವಿನಮಿತೋತ್ತಮಾಂಗಂ ಮೇಘರಥನಿಂತೆಂದು ಪೇೞಲ್ ತಗುಳ್ದಂ—

ಕಂ॥ ಈ ಜಂಬೂದ್ವೀಪ ಮಹೀ
ಭ್ರಾಜಿತ ಭರತಕ್ಕೆ ರತ್ನಪುರಮಾಸ್ಯಂ ತ
ದ್ರಾಜಂ ವಿಜಯಂಧರನಧಿ
ರಾಜಮನೋನಳಿನನಿಳಯೆ ವಸುಮತಿಯೆಂಬಳ್ ॥ ೪೬ ॥

ವ॥ ಆ ಪೊೞಲೊಳ್ ಕಾಷ್ಠಭಾರಂಗಳಂ ತಂದು ಮಾಱಿ ಬಾೞ್ವ [2][ಧ][2]ನ್ಯನುಂ ಭದ್ರನುಮೆಂಬೊರಿರ್ವರ್ ಕುಡಿಯರರೊರ್ವರ್ ನಡೆವ ಬಂಡಿಗಳ್ ಶ್ರೀನದೀತೀರದಿಟ್ಟೆಡೆಯೊಳೊಂದೊಂದಂ ಸೋಂಕಿ ಮುಱಿಯೆ ಮುನಿದಿರ್ವರುಮೊಂದೋರೊರ್ವರನಿಱಿದು ಸತ್ತು ವಿಂಧ್ಯಾಟವೀ ನಿಕಟದ ಜಂಬೂನದಮೆಂಬ ನದಿಯ ತಡಿಯೊಳ್ ಮದಾಂಧಗಂಧಸಿಂಧುರಂಗಳಾಗಿ—

ವ॥ ಹೀಗೆ ಹಿರಿಯ ಮಗನಿಗೆ ಪ್ರಿಯಮಿತ್ರೆಯೂ ಕಿರಿಯ ಮಗನಿಗೆ ಸುಮತಿಯೂ ಪಟ್ಟದ ರಾಣಿಯರಾದರು. ಮೇಘರಥಕುಮಾರನೊಂದಿಗೆ ಘನರಥ ಮಹಾರಾಜನು ಒಂದು ದಿನ ಒಡ್ಡೋಲಗದಿಂದ ಹೊರಟು, ಬೀದಿಗುಂಟ ತೋರಣಗಳಿಂದ ಅಲಂಕೃತವಾದ ಒಂದು ಪ್ರದೇಶದಲ್ಲಿ,

೪೫. ಕಿಡಿ ಹಾರುವಂತೆ ತಾಕಲಾಡಿ ರಭಸದಿಂದ ಕಾದಾಡುವ ಎರಡು ಕೋಳಿಗಳನ್ನು ಕಂಡು, ಅವುಗಳ ಜನ್ಮಕಥೆಯನ್ನೂ ಕೋಪದ ಕಾರಣವನ್ನೂ ತನ್ನಲ್ಲಿಯೆ ಅರಿತುಕೊಂಡನು.

ವ॥ ತನ್ನ ಹಿರಿಯ ಮಗನಾದ ಮೇಘರಥನು ಅವಧಿಜ್ಞಾನಿಯೆಂಬುದನ್ನು ಬಳಿಯಲ್ಲಿದ್ದವರೆಲ್ಲಾ ಅರಿಯಲೆಂಬ ಉದ್ದೇಶದಿಂದ "ಈ ಕೋಳಿಗಳಿಗೆ ಇಂದು ಇಷ್ಟು ದೀರ್ಘಕಾಲದವರೆಗೆ ಕಾದಾಡುವ ಕೋಪವೂ ಎಷ್ಟು ಹೊತ್ತು ಹೋರಾಡಿದರೂ ಹಿಂಜರಿಯದೆ, ವಿಶ್ರಾಂತಿ ಪಡೆಯದೆ ಇರುವಂತಹ ಶ್ರಮಸಹಿಷ್ಣುತೆಯೂ ಹೇಗೆ ಉಂಟಾದುವು ?" ಎಂದು ಕೇಳಿದನು. ವಿನಯದಿಂದ ತಲೆಬಾಗಿ ಮೇಘರಥನು ಹೀಗೆಂದು ಹೇಳತೊಡಗಿದನು :

೪೬. "ಈ ಜಂಬೂದ್ವೀಪದಲ್ಲಿ ಶೋಭಿಸುವ ಭರತಕ್ಷೇತ್ರಕ್ಕೆ ಮುಖದಂತಿರುವುದು ರತ್ನಪುರವೆಂಬ ಪಟ್ಟಣ. ಅದನ್ನಾಳುವವನು ವಿಜಯಂಧರ ; ಆತನ ಮನೋವಲ್ಲಭೆ ವಸುಮತಿ.

ವ॥ ಆ ಪಟ್ಟಣದಲ್ಲಿ ಸೌದೆಯ ಹೊರೆಗಳನ್ನು ತಂದು ಮಾರಿ ಬದುಕುವ ಧನ್ಯ ಮತ್ತು ಭದ್ರ ಎಂಬಿಬ್ಬರು ಕುಡಿಯರಿರುವರು. ಒಂದು ಸಲ ಇವರು ಬಂಡಿ ಹೊಡೆದುಕೊಂಡು ಬರುತ್ತಿರುವಾಗ ಶ್ರೀನದಿಯ ತೀರದ ಒಂದು ಇಕ್ಕಟ್ಟಾದ ಹಾದಿಯಲ್ಲಿ ಇಬ್ಬರ ಬಂಡಿಗಳೂ ಒಂದಕ್ಕೊಂದು ತಾಗಿ ಮುರಿದುವು. ಆಗ ಈ ಇಬ್ಬರೂ ಕ್ರೋಧಗೊಂಡು ಒಬ್ಬರನ್ನೊಬ್ಬರು ಇರಿದು ಸತ್ತರು. ಆ ಮೇಲೆ ವಿಂಧ್ಯಾಟವೀ ಸಮೀಪದ ಜಂಬೂನದವೆಂಬ ನದಿಯ ತೀರಪ್ರದೇಶದಲ್ಲಿ ಮದಾಂಧವಾದ ಗಂಧಗಜಗಳಾಗಿ—

---

1. ಳ (ಮ) 2. ದಾ (ಮ)

ಕಂ॥ ಕರಿಣಿಯ ಕಾರಣದಿಂ ಮದ
ಕರಿಗಳ್ ವೈಭಾವದಿಂದೆ ತಮ್ಮೊಳಗತ್ಯಾ
ಸುರಮಾಗೆ ಪೋರ್ದು ಸತ್ತು
ತ್ತರ ಕೌಸಲವಿಷಯಮಾದಯೋಧ್ಯಾಪುರದೊಳ್ ॥ ೪೭ ॥

ವ॥ ಶತ್ರುಂಜಯು ಮಹೀಪಾಲಗೋಮಂಡಳಿಗಂ ನಂದಿಮಿತ್ರನ ಗೋಮಂಡಳದೊಳೊರ್ಮೆ [1]ಹೋರಿ[1]ಗಳಾಗಿ ರಾಜಮಂದಿರದ [2]ಸಿ[ಂ][2]ಯಬಾರದೊಳ್ [3]ಪೋರ್ದು[3]—

ಕಂ॥ ಮಿಳಿಯಿಕ್ಕಿ ತೆಗೆಯೆಯುಂ ಕರ
ಮೊಳಸೋರದೆ ಖಂಡಖಂಡಮಾಗಿಱಿದು ಕುಳಾ
ಚಳಮೆ ಕುಲಾಚಳದೊಳಸುಂ
ಗೊಳೆ ಪೋರ್ವವೊಲಣ್ಮಿ ಪೋರ್ದು ಕೊಂದೊಂದೊಂದಂ ॥ ೪೮ ॥

ಆ ಪುರದೊಳ್ ತಗರಾಗಿ ಮ
ಹೀಪಾಳನ ಮುಂದೆ ಪೋರ್ದು ಸತ್ತಲ್ಲಿಂ ಬಂ
ದೀ ಪೊಟಲೊಳ್ ಕೋಟಿಗಳಾ
ಗೀಪೋರ್ವುವೆ ವಿದಿತವೇದ್ಯ ವಿದ್ಯಾತಿಶಯಾ ॥ ೪೯ ॥

ವ॥ ಇನ್ನಿವಱ ಪೋರ್ದು ಜವಂಗಿಡದೆ ಪಪ್ಪುಕಮಾದಂದಮುಮಂ ಕೇಳೀ ಜಂಬೂದ್ವೀಪದ ಭರತಕ್ಷೇತ್ರದ ವಿಜಯಾರ್ಧ ಪರ್ವತದ ದಕ್ಷಿಣಶ್ರೇಣಿಯ ಹಿರಣ್ಯಪುರಮನಾಳ್ವ ಗರುಡವೇಗಂಗಂ ತದೀಯ ಪ್ರೀತಿಭೂಮಿ ಪ್ರೀತಿಷೇಣೆಗಂ ಮಕ್ಕಳಿಂದ್ರತಿಲಕನುಂ ನಭಸ್ತಿಲಕನು ಮೆಂಬಿರ್ವರೊರ್ಮೆ—

ಮ॥ ಸುರವತ್ಸುಂದರ ಕಂದರೋದರದಳನ್ಮಂದಾರ ಭೂಜಕ್ಕೆ ಮಂ
ದರಶೈಲಕ್ಕೆ ಜಿನೇಂದ್ರಪೂಜೆಗೆ ಜಿತಾತ್ಮರ್ ಪೋಗಿ ಕಂಡಲ್ಲಿ ಸಾ
ಗರಚಂದ್ರಾಖ್ಯಮುನೀಂದ್ರರಂ ವಿನಯದಿಂದಂ ಬಂದಿಸಿರ್ದಂಬರೇ
ಚರಪುತ್ರರ್ ಬೆಸಗೊಂಡರಾತ್ಮಭವಮಂ ಧರ್ಮಶ್ರವಾನಂತರಂ ॥ ೫೦ ॥

---

೪೭. ಒಂದು ಹೆಣ್ಣಾನೆಯ ನಿಮಿತ್ತವಾಗಿ ಪರಸ್ಪರ ದ್ವೇಷ ತಾಳಿ ಎರಡೂ ಘೋರವಾಗಿ ಹೋರಾಡಿ ಸತ್ತುವು; ಬಳಿಕ ಕೌಸಲ ವಿಷಯದ ಅಯೋಧ್ಯಾಪುರದಲ್ಲಿ

ವ॥ ಶತ್ರುಂಜಯ ರಾಜನ ಗವಳಿಗನಾದ ನಂದಿಮಿತ್ರನ ದನದ ಮಂದೆಯಲ್ಲಿ ಹೋರಿಗಳಾಗಿ ಹುಟ್ಟಿ ಒಂದು ಸಲ ಅರಮನೆಯ ಮಹಾದ್ವಾರದಲ್ಲಿ ಕಾದಾಟಕ್ಕೆ ಬಿದ್ದು—

೪೮. ಹಗ್ಗ ಹಾಕಿ ಎಳೆದರೂ ಬಿಡದೆ ಒಂದನ್ನೊಂದು ಖಂಡಖಂಡವಾಗಿ ಇರಿದು, ಕುಲಪರ್ವತಗಳೆರಡು ಪರಸ್ಪರ ಹೋರಾಡುವಂತೆ ಕಾದಾಡಿ, ಒಂದನ್ನೊಂದು ಕೊಂದುವು.

೪೯. ಮತ್ತೆ ಆ ಪಟ್ಟಣದಲ್ಲಿಯೆ ತಗರುಗಳಾಗಿ ಅರಸನ ಮುಂದೆ ಹೋರಾಡಿ ಸತ್ತು ಈ ಊರಲ್ಲಿ ಈಗ ಕೋಳಿಗಳಾಗಿ ಹೊಡೆದಾಡುತ್ತಲಿವೆ. ವಿದ್ಯಾಧಿಕನೆ, ನಿನಗೆ ತಿಳಿಯಬೇಕಾದುದೆಲ್ಲ ತೀರೆ ಇದೆ.

ವ॥ ಇನ್ನು ಇಷ್ಟು ಹೋರಾಡಿದರೂ ಇವುಗಳಿಗೆ ದಣಿವೇ ಆಗದಿರುವ ವಿಷಯವನ್ನು ಹೇಳುತ್ತೇನೆ ಕೇಳಿ. ಈ ಜಂಬೂದ್ವೀಪದ ಭರತಕ್ಷೇತ್ರದಲ್ಲಿ ವಿಜಯಾರ್ಧಪರ್ವತವುಂಟಷ್ಟೆ. ಅದರ ದಕ್ಷಿಣಶ್ರೇಣಿಯ ಹಿರಣ್ಯಪುರಕ್ಕೆ ಗರುಡವೇಗನೆಂಬ ಅರಸನಿದ್ದನು. ಆತನ ಮಡದಿಯಾದ ಪ್ರೀತಿಷೇಣೆಯೆಂಬವಳಿಂದ ಆತನಿಗೆ ಇಂದ್ರತಿಲಕ ಮತ್ತು ನಭಸ್ತಿಲಕ ಎಂಬಿಬ್ಬರು ಮಕ್ಕಳಾದರು. ಈ ಇಬ್ಬರು ಪುತ್ರರು ಒಮ್ಮೆ

೫೦. ಸುಂದರವಾದ ಕಂದರಗಳಿಂದಲೂ ಮಂದಾರ ವೃಕ್ಷಗಳಿಂದಲೂ ಶೋಭಿಸುವ ಮಂದರಗಿರಿಗೆ ಜಿನಪೂಜಾರ್ಥವಾಗಿ ಹೋಗಿ ಅಲ್ಲಿ ಸಾಗರಚಂದ್ರರೆಂಬ ಮುನಿಗಳನ್ನು ಕಂಡು ವಿನಯದಿಂದ ವಂದಿಸಿ ಧರ್ಮಶ್ರವಣ ಮಾಡಿದ ಬಳಿಕ ತಮ್ಮ ಭವಾವಳಿಯನ್ನು ಹೇಳಲು ಬಿನ್ನವಿಸಿದರು.

---

1. ಱಿ (ಮ) 2. ಸೀಯ (ಮ) 3. ಪೊಣರ್ದು (ಮ)

ವ॥ ಬೆಸಗೊಂಡೊಡವರ್ ಬೆಸಸಿದರ್ ಧಾತಕೀಷಂಡದ ಮೂಡಣ ಮಂದರೈರಾವತದ ಪೃಥಿವೀತಿಲಕ ಪುರಮನಾಳ್ವ ಅಭಯ ಘೋಷಂಗಂ ತನ್ಮನೋಹರಲತಾಕೃತಿ ಕನಕಲತೆಗಂ ಮಕ್ಕಳ್ ಜಯಂತನುಂ ವಿಜಯನುಮೆಂಬರಾಗೆ ಮತ್ತಮಾ ವಿಷಯದ ಸುಭೌಮ ನಗರಮನಾಳ್ವೊಂ ಶಂಖಂಗಂ ತತ್ಸುಂದರಿ ಚಂದ್ರಮತಿಗಂ ಮಗಳ್ ಪೃಥ್ವೀಷೇಣೆಯೆಂಬಳನಭಯಘೋಷಂಗೆ ಕುಡುವುದುಮಸಿಲತೆಗೆ ಬೆ[ಚ್ಚಿ] ಪೃಥಿವಿಯಂ ಮಚ್ಚದುದಂ ಪೃಥ್ವೀಷೇಣೆಯುಂ ಮಚ್ಚಿ ವಿಷಯಸುಖಮನನುಭ[ವಿ]ಸೆ ಕನಕಲತೆಯುಮಾಕೆಗಮರಸಂಗಂ ಕ್ಷಣಮಾತ್ರ ವಿದ್ವೇಷಕಾರಿಯಪ್ಪ ಪುಷ್ಪಮಾಲೆಯಂ ಮಂತ್ರವಿದರುಪದೇಶದಿಂ ಮದ್ಯರಸನಿವೇದನ ವ್ಯಾಜದಿಂ ಪರಿಚಾರಿಕೆಯರ ಕೆಯ್ಯೊಳಟ್ಟುವುದುಂ ಮರ ವಟ್ಟದಂ ನೋಡಿ ಸೋಂಕಿರ್ದುಂ—

ಕಂ॥ ವಲ್ಲಭೆಯ ವಚನಮಂ ಮನ
ವಲ್ಲದ ಮನದೊಳ್ ತದೀಯ ಸಂಗಮುಮಂ ಮೆ
ಯ್ಯಲ್ಲದ ಮೆಯ್ಯೊಳ್ ಸೈರಿಸೆ
ಮೆಲ್ಲನೆ ಮೆಯ್ದೆಗೆದು ಬೇಟದರಸಿಯುಮಾಗಳ್ ॥ ೫೧ ॥

ವ॥ ವನಸೌರಭಭರವಿಭಗ್ನದಳ ವಿಳಸಿತಮಲ್ಲಿಕಾಮಾಲಾಲಿಸಕ್ತ ಕಾಂಚನಚಂಚರೀಕಾಯಮಾನಂಗಳಾದರಸನ ಕಣ್ಣಱಿದು ತನ್ನ ಮನೆಗೆ ಪೃಥ್ವೀಷೇಣೆ ಪೋದೊಡಂ ಮಱುದೆವಸಂ ತಿಳಿಪಲಾಕೆಯ ಮಾಡಕ್ಕೆ ವಂದಭಯಘೋಷ ನರೇಂದ್ರಂಗಿಂತೆಂದಳ್—

ಕಂ॥ ಪಿರಿಯರಸಿಯ ಪೞವೇಟದ
ಪರಿವಿಡಿ ಮಗುೞ್ದುಂ ಕೊನರ್ತುದಾ[1]ಸತಿಯೊಡನಿಂ[1]
ನರಪತಿ [2]ನಿನ್ನ[2]ಂಗಾಲೊಳ್
ನರೆ ಬೞ್ಪಿನಮು[3]ತ್ತರೋತ್ತರಂ ಪುದುವಾೞಾ ॥ ೫೨ ॥

ವ॥ ಆಗ ಆ ಮುನಿಗಳು ಹೀಗೆಂದು ತಿಳಿಸಿದರು : ಧಾತಕೀಷಂಡದ ಐರಾವತ ಕ್ಷೇತ್ರದಲ್ಲಿ ಪೃಥ್ವೀತಿಲಕವೆಂಬ ಪಟ್ಟಣಕ್ಕೆ ಅಭಯಘೋಷನೆಂಬವನು ದೊರೆ; ಕನಕಲತೆಯೆಂಬ ಕೋಮಲಾಂಗಿ ಆತನ ಹೆಂಡತಿ. ಈ ದಂಪತಿಗಳಿಗೆ ಜಯಂತ ಮತ್ತು ವಿಜಯ ಎಂಬಿಬ್ಬರು ಮಕ್ಕಳಾದರು. ಆ ರಾಜ್ಯದ ಸುಭೌಮನಗರದ ಅರಸು ಶಂಖನಿಗೂ ಆತನರಸಿ ಚಂದ್ರಮತಿಗೂ ಪೃಥ್ವೀಷೇಣೆಯೆಂಬ ಮಗಳಿದ್ದಳು. ಅವಳನ್ನು ಅಭಯಘೋಷನಿಗೆ ಮದುವೆಮಾಡಿ ಕೊಡಲಾಗಿ, ಆತನು ಈ ಕಿರಿಯ ರಾಣಿಯಲ್ಲಿಯೆ ಅನುರಕ್ತನಾಗಿ ಮೊದಲ ಹೆಂಡತಿಯನ್ನು ಕಡೆಗಣಿಸಿದನು. ಕನಕಲತೆಯು ಮಂತ್ರವಾದಿಗಳ ಸಲಹೆಯಿಂದ ಒಂದು ಕ್ಷಣಕಾಲ ದ್ವೇಷವನ್ನು ಹುಟ್ಟಿಸುವಂತಹ ಪುಷ್ಪಮಾಲೆಯನ್ನು ತಯಾರಿಸಿ ಮದ್ಯರಸವನ್ನೊಯ್ಯುವ ನೆವದಿಂದ ಪರಿಚಾರಿಕೆಯರ ಕೈಯಲ್ಲಿ ಅದನ್ನು ಕೊಟ್ಟು ಕಳಿಸಿದಳು. ರಾಜನು ಮೈಮರೆತು ಅದನ್ನು ನೋಡಿ, ಮುಟ್ಟಿ—

೫೧. (ತನ್ನ ಪಕ್ಕದಲ್ಲಿದ್ದ) ಪ್ರಿಯೆಯ ಮಾತನ್ನು ಮನಸ್ಸಿಲ್ಲದ ಮನಸ್ಸಿನಿಂದ ಕೇಳಿ, ಅವಳ ಸ್ಪರ್ಶಕ್ಕೆ ಮೈಗೊಟ್ಟಿದ್ದರೂ ಮೈಯಲ್ಲಿ ಉತ್ಸಾಹವಿಲ್ಲದೆ ಆಕೆಯ ಸಹವಾಸವನ್ನು ಅನುಭವಿಸುವ ಬದಲಾಗಿ ಹೇಗೊ ಸೈರಿಸಿಕೊಂಡನು. ಆ ಅರಸಿಯು ಆತನು ಹೀಗೆ ಮೈದೆಗೆದುದನ್ನು ಕಂಡಳು.

ವ॥ ವನಸುಗಂಧ ಭಾರದಿಂದ ಬಿರಿದ ಮಲ್ಲಿಗೆಮಾಲೆಗಳಲ್ಲಿ ಆಸಕ್ತವಾದ ದುಂಬಿ ಒಮ್ಮೆಲೆ ಸಂಪಗೆಯನ್ನು ಕಂಡಂತೆ ಹಿಂದೆಗೆವ ಅರಸನ ಕಣ್ಣೋಟವನ್ನು ಅರಿತು ಪೃಥ್ವೀಷೇಣೆಯು ತನ್ನ ಮನೆಗೆ ಹೋದಳು. ಮರುದಿನ ಆಕೆಯನ್ನು ಸಂತೈಸಲೆಂದು ಬಂದ ಅಭಯಘೋಷನಿಗೆ ಆಕೆ ಹೀಗೆಂದಳು :

೫೨. 'ನಿಮ್ಮ ಹಿರಿಯರಸಿಯ ಹಳೆಯ ಪ್ರಣಯ ಹೊಸತಾಗಿ ಚಿಗುರಿದೆ. ಭೂಪತಿಯೆ, ಇನ್ನು ಹೋಗಿ ನಿನ್ನ ಅಂಗಾಲಲ್ಲಿ ನರೆ ಹಾಯುವವರೆಗೂ ಅವಳೊಡನೆಯೆ ಹೊಂದಿಕೊಂಡು ಸುಖವಾಗಿ ಸಂಸಾರಮಾಡು.

---

1. ಒಲೆಯೊಡನೆ (ಶ) 2. ಮುತ್ತುಂ (ಶ) 3. ಪರ್ಣ್ನೆಗಮಿರು (ಶ)

ವ॥ ಇನ್ನೆನಗೆ ಮೊಱೆಯಲ್ಲೆಯೆಂದು ಬಿಡಿಸಿಯುಮಾದುದೆ ಮುಹೂರ್ತಮಾಗೆ ದತ್ತಮುನಿನಾಥ ಸನ್ನಿಧಾನದೊಳ್ ಸುಲೋಚನಾ ನಾಮ ಗಣಿನೀ ಸಮೀಪದೊಳ್ ಮೋಕ್ಷಲಕ್ಷಣೋಪೇತ ದೀಕ್ಷಾಪರಾಯಣೆಯಾದ ಪೃಥಿವೀಷೇಣೆಯೆ ನಿರ್ವೇಗಕ್ಕೆ ಕಾರಣಮಾಗೆ ಜಯಂತ ವಿಜಯರನಧಿರಾಜ ಯುವರಾಜಪದವಿಯೊಳ್ ನಿಱಿಸೆ ಬೞಿಯಮವರಿರ್ವರುಂ—

ಕಂ॥ ನಿಲಲೊಲ್ಲದೆ ವೈರಾಗ್ಯಮೆ
ಕುಲವೞಿಯೆಂಬಂತೆ ತಂದೆಯಿಂ ಮುನ್ನಂ ನಿ
ರ್ಮಲ ಜಿನದೀಕ್ಷೆಗವರ್ ಪೂ
ಣ್ದಲಂಘ್ಯ ದಮಮಂ ಧರಿತ್ರಿಯಿಂ ಪೊಗೞಿಸಿದರ್ ॥ ೫೩ ॥

ವ॥ ಬೞಿಯಮಭಯಘೋಷಂ ಮಂಮಂಗೆ ಸಂಜಯಂತಂಗೆ ರಾಜ್ಯಭಾರಮನಿತ್ತು ತಂದೆ ಮಕ್ಕಳ್ ಮೂವರುಮನಂತಜಿನರೆಂಬ ಮುನಿಪತಿಗಳ್ ಗುರುಗಳಾಗೆ ತಪಶ್ಚ[ರಣ ನಿರ]ತರಾದರವರೊಳಭಯಘೋಷ ಮುನೀಂದ್ರಂ—

ಚಂ॥ ಪರಮ ಪದಾರ್ಥ ತೀರ್ಥಕರಭಾವನೆಗಳ್ ಪದಿನಾಱನುತ್ತರೋ
ತ್ತರಗುಣನೆಯ್ದೆ ಭಾವಿಸಿ ದಮಂ ನಿಯಮಂ ಯಮಮೆಂಬಿ[ವ]ರ್ಕೆ ನಿ
ರ್ದೊರೆಯೆನೆ ಪನ್ನೆರಡ್ತಪದೊಳುತ್ತಮನಾರ್ತು ಸಮಾಧಿವೆತ್ತು ಬಂ
ಧುರಸುಖನಚ್ಯುತೇಂದ್ರ ಪದಮಂ ಪಡೆದಂ ಸುರರಾಜ ಪೂಜ್ಯಮಂ ॥ ೫೪ ॥

ವ॥ ಅಂತಮಲಮಪ್ಪಚ್ಯುತಕಲ್ಪದೊಳ್—

ಕಂ॥ ಸುರಗುಣ ಪರಿವೃತನಿಪ್ಪ
ತ್ತೆರಡಂಭೋನಿಧಿ ಸಮಾಯುರವಸಾನದೊಳಾ
ಪರಮಂ ಬಂದಿಲ್ಲಿ ಚರಾ
ಚರಗುರು ಗರ್ಭಾವತರಣ ಮಂಗಳವಿಧಿಯಿಂ ॥ ೫೫ ॥

ವ॥ ಇನ್ನು ನೀನು ನನಗೆ ಸಂಬಂಧವಿಲ್ಲ' ಹೀಗೆಂದು ನಂಟನ್ನು ಕಡಿದುಕೊಂಡು ಅದೇ ಮುಹೂರ್ತವೆಂದು ದತ್ತಮುನೀಂದ್ರರ ಸನ್ನಿಧಿಯಲ್ಲಿ ಸುಲೋಚನೆಯೆಂಬ ಗಣಿನಿಯ ಸಮೀಪದಲ್ಲಿ ಮೋಕ್ಷದಾಯಿಯಾದ ದೀಕ್ಷೆಯನ್ನು ಕೈಕೊಂಡಳು. ಪೃಥ್ವೀಷೇಣೆಯೆ ವೈರಾಗ್ಯಕ್ಕೆ ಕಾರಣವಾಗಿ ಜಯಂತ ಮತ್ತು ವಿಜಯರು ತಮಗೆ ಅಧಿರಾಜ ಯುವರಾಜ ಪದಗಳನ್ನು ಇತ್ತರೂ—

೫೩. ಆ ಪದವಿಗಳಲ್ಲಿ ನಿಲ್ಲಲೊಪ್ಪದೆ ವೈರಾಗ್ಯವೇ ತಮ್ಮ ಕುಲಪರಂಪರೆಯೆಂಬಂತೆ ತಮ್ಮ ತಂದೆಗಿಂತ ಮುಂಚೆ ತಾವೇ ನಿರ್ಮಲವಾದ ಜಿನದೀಕ್ಷೆಯನ್ನು ವಹಿಸಿ, ತಮ್ಮ ಆತ್ಮನಿಗ್ರಹವನ್ನು ಜನವೆಲ್ಲ ಹೊಗಳುವಂತೆ ನಡೆದುಕೊಂಡರು.

ವ॥ ಅನಂತರ ಅಭಯಘೋಷನು ಮೊಮ್ಮಗನಾದ ಸಂಜಯಂತನಿಗೆ ರಾಜ್ಯಭಾರವನ್ನು ಒಪ್ಪಿಸಿ ಹೊರಟನು. ಹೀಗೆ ತಂದೆಯೂ ಮಕ್ಕಳೂ ಕೂಡಿಕೊಂಡು ಅನಂತಜಿನರೆಂಬ ಮುನೀಂದ್ರರೆ ಗುರುಗಳಾಗಲು ತಪಸ್ಸಿಗೆ ತೊಡಗಿದರು. ಅವರಲ್ಲಿ ಅಭಯಘೋಷನು—

೫೪. ಮೋಕ್ಷಾರ್ಥವಾದ ಹದಿನಾರು ತೀರ್ಥಕರ ಭಾವನೆಗಳನ್ನು ಭಾವಿಸಿ ದಮ, ನಿಯಮ, ಯಮ (ಎಂಬ ಯೋಗಾಂಗ)ಗಳಲ್ಲಿ ತನಗೆ ಸಮಾನರಾರೂ ಇಲ್ಲವೆಂಬಂತೆ ಹನ್ನೆರಡು (ಆಭ್ಯಂತರ ಆರು ಮತ್ತು ಬಾಹ್ಯ ಆರು) ತಪಗಳನ್ನು ನೆರವೇರಿಸಿ ಸಮಾಧಿವಿಧಿಯಿಂದ ದೇಹತ್ಯಾಗ ಮಾಡಿ, ದೇವೇಂದ್ರ ಪೂಜ್ಯವಾದ ಅಚ್ಯುತೇಂದ್ರ ಪದವನ್ನು ಗಳಿಸಿದನು.

ವ॥ ಹಾಗೆ ಪರಿಶುದ್ಧವಾದ ಆ ಅಚ್ಯುತಕಲ್ಪದಲ್ಲಿ—

೫೫. ದೇವಗಣಗಳ ಬಳಗದಲ್ಲಿ ಇಪ್ಪತ್ತೆರಡು ಸಾಗರೋಪಮ ಆಯುಸ್ಸನ್ನು ಕಳೆದು, ಇಲ್ಲಿಗೆ ಬಂದು, ಚರಾಚರ ಗುರುವಾದ ಆ ಮಹಿಮನು ಗರ್ಭಾವತರಣ ಮಂಗಳ ವಿಧಿಯಿಂದ

ವ॥ ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ಬಡಗಣತಡಿಯ ಪುಷ್ಕಳಾವತೀ ವಿಷಯದ ಪುಂಡರೀಕಿಣೀ ಪುರಮನಾಳ್ವ ಹೇಮರಥಮಹೀಪಾಲಂಗಂ ಹೇಮಮಾಲಾದೇವಿಗಂ ಘನರಥನರೇಂದ್ರನಾಗಿ ಪುಟ್ಟಿ ಕಲ್ಯಾಣದ್ವಯಮನೆಯ್ದಿ ತತ್ಸ್ವಕೀಯ ರಾಜ್ಯದೊಳ್ ನಿಂದನಾ ಜಯಂತ ವಿಜಯರ್ಕಳಿರ್ವರುಂ ದುರ್ವಾರ ತಪೋಭಾರ ನಿರ್ವಾಣದಿಂ ತದಚ್ಯುತಕಲ್ಪದೊಳ್ ಸಾಮಾನಿಕ ದೇವರಾಗಿ ಪುಟ್ಟಿ ವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯ ಹಿರಣ್ಯನಾಭಪುರಮನಾಳ್ವೊಂ ಗರುಡವೇಗಂಗಂ ಪ್ರೀತಿಷೇಣೆಗಂ ಚಂದ್ರತಿಲಕನುಂ ನಭಸ್ತಿಲಕನುಮೆಂಬೊರಾಗಿ ಪುಟ್ಟಿದಿರೆಂದು ಭಟ್ಟಾರಕರ್ ಬೆಸಸುವುದುಂ ತಮ್ಮ ಮೂಱನೆಯ ಭವದ ಜನ್ಯಜನಕಮೋಹಂ ಕಾರಣಮಾಗಿ ನಿಮ್ಮಡಿಯಂ ಕಾಣಲ್ ಬಂದು ಲೋಕಜ್ಞರುಂ ಸೇವಾವಿಚಕ್ಷಣರುಮಪ್ಪುದಱಿಂದಮಿಾ ಕುಕ್ಕುಟಯುದ್ಧ ನಿರೀಕ್ಷಣರಸಕ್ಕೆ ಭಂಗಂಮಾಡದೆ ವಿದ್ಯಾಸಾಮರ್ಥ್ಯದಿನಿವರ್ಕೆ ಬಲಂಬೊಯ್ದು ತಾಮುಮಿಾ ನೆರವಿಯೊಳದೃಶ್ಯರಾಗಿ ನೋಡುತ್ತುಮಿರ್ದರದಱಿಂದಮಿಾ ತಾಮ್ರಚೂಳಂಗಳೆನಿತು ಪೋರ್ದೊಡಮಿವರ್ಕೆ ಶ್ರಮಮಾಗದೆಂದು ಪಾಪೇಭಕಂಠೀರವನಪ್ಪ ಮೇಘರಥಂ ಪೇಱುತ್ತುಮಿರ್ದ—

ಕಂ॥ ಪ್ರಸ್ತಾವದೊಳ್ ಕೃತಾಕೃತಿ
ವಿಸ್ತಾರರ್ ಘನರಥಂಗೆ ಪೊಡೆವಡೆ ವಿನ[ಮ]
ನ್ಮಸ್ತಕರ ಚಂದ್ರತಿಲಕ ನ
ಭಸ್ತಿಲಕರ ಮಕುಟಮೆರಡುಮೆಱಗಿದುವಾಗಳ್ ॥ ೫೬ ॥

ವ॥ ಅಂತೆಱಗಿದ ವಿದ್ಯಾಧರರಂ ಮೇಘರಥನರೇಂದ್ರಂ ಪರಸಿ ಪೆಱಗನೇಱಿಸಿಕೊಂಡು ಪೋಗಿ ರಾಜಮಂದಿರಮಂ ಪೊಕ್ಕು ದಾನಸನ್ಮಾನಾದಿಗಳಿಂ ಸಂತಸಂಬಡಿಸಿ ತದ್ವಿದ್ಯಾಧರ ಕುಮಾರರಂ ಪೋಗಲ್ವೇಱ್ದು ಸುಖದಿನಿರ್ಪನ್ನೆಗಂ—

ಕಂ॥ ನೆಗಟ್ದ ಪಯೋಂಬುಧಿಗಂ ಗಂ
ಗೆಗಮಮೃತಂ ಪುಟ್ಟುವಂತೆ ಮೇಘರಥಂಗಂ
ಮೃಗಲೋಚನೆ ತತ್ಪ್ರಿಯಮಿ
ತ್ರೆಗಂ ಮಗಂ ನಂದಿವರ್ಧನಂ ಪುಟ್ಟುವುದುಂ ॥ ೫೭ ॥

ವ॥ ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ಉತ್ತರ ತೀರದಲ್ಲಿರುವ ಪುಷ್ಕಳಾವತೀ ವಿಷಯದಲ್ಲಿ ಪುಂಡರೀಕಿಣೀಪುರವನ್ನಾಳುವ ಹೇಮರಥರಾಜನಿಗೂ ಹೇಮಮಾಲಾದೇವಿಗೂ 'ಘನರಥ'ನೆಂಬ ಮಗನಾಗಿ ಹುಟ್ಟಿ ಎರಡು ಕಲ್ಯಾಣಗಳನ್ನು ಪಡೆದು ತನ್ನ ರಾಜ್ಯದಲ್ಲಿ ನಿಂತನು. ಆ ಜಯಂತ ಮತ್ತು ವಿಜಯ ಎಂಬಿಬ್ಬರು ಕಠೋರ ತಪವನ್ನಾಚರಿಸಿ ಅಚ್ಯುತಕಲ್ಪದಲ್ಲಿ ಸಾಮಾನಿಕ ದೇವರಾಗಿ ಹುಟ್ಟಿದರು. ಅಲ್ಲಿಂದ ಬಂದು ವಿಜಯಾರ್ಧಗಿರಿಯ ದಕ್ಷಿಣಶ್ರೇಣಿಯಲ್ಲಿ ಹಿರಣ್ಯನಾಭಪುರದೊಡೆಯ ಗರುಡವೇಗನಿಗೂ ಪ್ರೀತಿಷೇಣೆಗೂ ಚಂದ್ರತಿಲಕ ಮತ್ತು ನಭಸ್ತಿಲಕ ಎಂಬ ಮಕ್ಕಳಾದರು. ನೀವೇ ಅವರು."—ಹೀಗೆಂದು ಭಟ್ಟಾರಕರು ತಿಳಿಸಲಾಗಿ ತಮ್ಮ ಮೂರನೆಯ ಜನ್ಮದ ತಂದೆ-ಮಕ್ಕಳ ಮೋಹವೇ ಕಾರಣವಾಗಿ ಈಗ ನಿಮ್ಮನ್ನು ಕಾಣಲೆಂದು ಬಂದರು. ಅವರು ಲೋಕವ್ಯವಹಾರಜ್ಞರೂ ಸೇವಾದಕ್ಷರೂ ಆಗಿರುವುದರಿಂದ ಈ ಕೋಳಿ-ಕಾಳಗವನ್ನು ಚಿತ್ತಗೊಟ್ಟು ನೋಡುತ್ತಿರುವ ನಿಮಗೆ ರಸಭಂಗವಾಗಬಾರದೆಂದು ತಮ್ಮ ವಿದ್ಯಾಸಾಮರ್ಥ್ಯದಿಂದ ಇವುಗಳಿಗೆ ಶಕ್ತಿಯನ್ನಿತ್ತು ತಾವೂ ಈ ಜನಸಮುದಣಯಲ್ಲಿ ಅದೃಶ್ಯರಾಗಿ ನೋಡುತ್ತಿರುವರು. ಅದರಿಂದ ಈ ಕೋಳಿಗಳಿಗೆ ಎಷ್ಟು ಕಾದಾಡಿದರೂ ದಣಿವಾಗದು. ಹೀಗೆ ಪಾಪವೈರಿಯಾದ ಮೇಘರಥನು ವಿವರಿಸುತ್ತಿದ್ದ—

೫೬. ಸಂದರ್ಭದಲ್ಲಿ, ಆ ಚಂದ್ರತಿಲಕ ನಭಸ್ತಿಲಕ ಎಂಬಿಬ್ಬರೂ ಪ್ರತ್ಯಕ್ಷರಾಗಿ ಬಂದು ಘನರಥನ ಪಾದಗಳಿಗೆ ತಲೆತಾಗಿಸಿ ನಮಸ್ಕರಿಸಿದರು.

ವ॥ ಹಾಗೆ ಎರಗಿದ ವಿದ್ಯಾಧರರನ್ನು ಅರಸನು ಆಶೀರ್ವದಿಸಿ ತನ್ನ ಹಿಂದೆ (ಆನೆಯನ್ನು) ಏರಿಸಿಕೊಂಡು ಹೋಗಿ ಅರಮನೆಯನ್ನು ಸೇರಿ ದಾನಸತ್ಕಾರಗಳಿಂದ ಅವರನ್ನು ಸಂತೋಷಪಡಿಸಿ ಕಳಿಸಿಕೊಟ್ಟನು. ಅನಂತರ ಸುಖದಿಂದಿರುತ್ತಿರಲು —

೫೭. ಸಮುದ್ರಕ್ಕೂ ಗಂಗೆಗೂ ಅಮೃತ ಹುಟ್ಟುವಂತೆ ಮೇಘರಥನಿಗೂ ಆತನ ಹರಿಣಾಕ್ಷಿಯಾದ ರಾಣಿ ಪ್ರಿಯಮಿತ್ರೆಗೂ ನಂದಿವರ್ಧನನೆಂಬ ಮಗನು ಹುಟ್ಟಿದನು.

ಕಂ॥ ಮತ್ತಾ ದೃಢರಥನ ಸುತ
ತ್ತ್ವೋತ್ತಮನಾತನ ಮನೋಜ್ಞೆ ಸುಮತಿಯುಮಱಿವಂ
ಪೊತ್ತುವವೊಲನ್ವಯಂದೆರೊ
ವೆತ್ತಿರೆ ವರಸೇನನೆಂಬ ಮಗನಂ ಪೆತ್ತಳ್ ॥ ೫೮ ॥

ಉ॥ ಚಂದನವೃಕ್ಷಮಂ ಪುದಿದ ಕರ್ಪುರವಳ್ಳಿವೊಲಾ ಕುಮಾರರಂ
ಸುಂದರಿಯರ್ ನಯಂಬೆರಸು ಸೋಂಕಿರೆ ತನ್ನೊಡನಿಂದ್ರನಾಜ್ಞೆಯಿಂ
ದಂ ದಿವಿಜಾಂಗರಕ್ಷರಿರೆ ಮಾಸರಮಾರದನೆಯ್ದೆ ಬಣ್ಣಿಪರ್
ದುಂದುಮೆಗಾಲಮಂ ಘನರಥಾವನಿಪಾಲನ ರಾಜ್ಯಕಾಲಮಂ ॥ ೫೯ ॥

ವ॥ ಅಂತವರ್ಗೆ ಧರ್ಮಾರ್ಥಕಾಮಂಗಳ್ ಸಲೆ—

ಉ॥ ಆ ಸಕಳಾಮರೋರಗ ನರಾವನತಂ ಖಿಳಕರ್ಮಸೈನ್ಯ ಸಂ
ತ್ರಾಸಿ ಮನೋರಥಂ ಘನರಥಂ ಘನಘಾತಿವಿಘಾತನಾ[1][ರ್ಥ][1]ಮು
ಗ್ರಾಸಿ ಸಮಾನಬೋಧಿ ಪದದೊಳ್ ನಿಲಲೆಂದಪವರ್ಗಮಾರ್ಗದ
ಗ್ರೇಸರನಾಗಲೆಂದು ಬಗೆದಾತ್ಮಗತಂ ಬೆಳಗಪ್ಪ ಜಾವದೊಳ್ ॥ ೬೦ ॥

ವ॥ ಪರಿನಿಷ್ಕ್ರಮಣ ಕಲ್ಯಾಣಮನನಾಗಿ ನಿಶ್ಚಯಿಸಲೊಡಂ ಲೋಕಾಂತಿಕದೇವರ್ ಬಂದೆಱಗಿ—

ಕಂ॥ ಪ್ರತಿಬೋಧಿ[2]ಸ[2]ರೆಂಬುದು ಬೋ
ಧಿತ ಬುದ್ಧರನಭವ ನೀಂ ಸ್ವಯಂಬುದ್ಧನೆ ಆರ್
ಪ್ರತಿಬೋಧಿಸುವರ್ ನಿನ್ನಂ
ಗತಸೂಕ್ಷ್ಮಾಂತರಿತ ದೂರವಸ್ತುನಿಧಾನಾ ॥ ೬೧ ॥

---

೫೮. ಮತ್ತು ತತ್ವನಿಷ್ಠನಾದ ದೃಢರಥನಿಗೂ ಆತನ ವಲ್ಲಭೆ ಸುಮತಿಗೂ ವಂಶಕ್ಕೆ ಭೂಷಣನಾಗಿ ವರಸೇನನೆಂಬ ಮಗನು ಹುಟ್ಟಿದನು.

೫೯. ಚಂದನ ವೃಕ್ಷವನ್ನು ತಬ್ಬಿಕೊಂಡ ಕಪ್ಪುರದ ಬಳ್ಳಿಗಳಂತೆ ಆ ಕುಮಾರರನ್ನು ಸುಂದರಿಯರು ಕೋಮಲವಾಗಿ ಸೋಕಿಕೊಂಡಿರಲಾಗಿ, ಇಂದ್ರನ ಅಪ್ಪಣೆಯ ಮೇರೆಗೆ ದೇವಲೋಕದ ಅಂಗರಕ್ಷಕರು ತನಗೆ ಕಾವಲಾಗಿರಲಾಗಿ, ಘನರಥ ಮಹಾರಾಜನ ಸುಖವೈಭವದ ಕಾಲವನ್ನು ಬಣ್ಣಿಸ ಬಲ್ಲವರಾರು ?

ವ॥ ಹೀಗೆ ಅವರಿಗೆ ಧರ್ಮ, ಅರ್ಥ ಮತ್ತು ಕಾಮ ಮೂರೂ ಪುರುಷಾರ್ಥಗಳು ಸಿದ್ಧಿಸಿರಲಾಗಿ—

೬೦. ದೇವ-ಮರ್ತ್ಯ-ಪಾತಾಳ ಈ ಮೂರೂ ಲೋಕಗಳಿಗೆ ಪೂಜ್ಯನಾಗಿ ದುಷ್ಟಕರ್ಮಗಳನ್ನು ನಾಶಮಾಡುವ ಬಯಕೆಯಿಂದ ಘಾತಿಸಮೂಹಕ್ಕೆ ಖಡ್ಗಸ್ವರೂಪವಾದ ಜ್ಞಾನಪದ(ಕೇವಲಜ್ಞಾನ)ವನ್ನು ಪಡೆದು ಮೋಕ್ಷಮಾರ್ಗದಲ್ಲಿ ಮುನ್ನಡೆಯಬೇಕೆಂದು ಮನಸ್ಸಿನಲ್ಲಿಯೆ ಯೋಚಿಸಿ ಬೆಳಗಿನ ಜಾವದಲ್ಲಿ

ವ॥ ಪರಿನಿಷ್ಕ್ರಮಣ ಕಲ್ಯಾಣಕ್ಕೆ ಮನಸ್ಸುಮಾಡಿದನು. ಕೂಡಲೆ ಲೋಕಾಂತಿಕ ದೇವರು ಬಂದು ನಮಸ್ಕರಿಸಿ—

೬೧. "ಸ್ವತಃ ತಿಳಿದವರಿಗೆ ತಿಳಿಹೇಳಿ ಎಚ್ಚರಿಸುವುದುಂಟೆ? ಅಭವನೆ ನೀನು ಸ್ವಯಂಬುದ್ಧನೆ ಆಗಿರುವಾಗ ನಿನ್ನನ್ನು ಎಚ್ಚರಿಸಬೇಕಾದವರು ಯಾರು? ಸೂಕ್ಷ್ಮ, ಗುಪ್ತ, ದೂರ ಎಂಬ ವಸ್ತುವೆಲ್ಲವನ್ನೂ ಬಲ್ಲವನು ನೀನು."

---

1. ತ್ಥ (ಮ) 2. ಪ (ಅ)

ವ॥ ಎಂದು ಭಗವದ್ವೈರಾಗ್ಯಾನುಮೋದನಾಮಾತ್ರಂ ಕೃತಾರ್ಥಾಧಿಕಾರರಾಗಿ ಪೋದರಿತ್ತ ಘನರಥಂ ನೇಸಱ್ ಮೂಡೆ—

ಕಂ॥ ಅಭಿಷೇಕಪೂರ್ವಕಂ ಭೂ
ತಭವಿಷ್ಯದ್ವರ್ತಮಾನ ಜಗತೀ ತಳಮಂ
ಪ್ರಭು ಮೇಘರಥಂಗಿತ್ತಂ
ವಿಭೂತಿವೆರಸಖಿಳ ರಾಜ್ಯಯಂ ದಯೆಯಿಂದಂ ॥ ೬೨ ॥

ವ॥ ತದನಂತರಂ ದಿವಿಜೇಂದ್ರಾನೀತ ಸುದರ್ಶನಾಭಿಧಾನ ಶಿಬಿಕಾರೂಢನಪ್ಪುದುಂ—

ಕಂ॥ ಅತಿವಿನಯದಿಂದಮವನೀ
ಪತಿಗಳ್ ಮುಂ ಬಟಿಕೆ ಕಲ್ಪವಾಸಿಗರತ್ಯಾ
ನತರುಯ್ದರಾಗ[ಳಾಕುಸು
ಮಿತ ವರ] ನಂದನವನಕ್ಕೆ ಪೊತ್ತುತ್ಸವದಿಂ ॥ ೬೩ ॥

ವ॥ ಅಲ್ಲಿ ದೇವೇಂದ್ರರಿಟಿಪೆ ಘನರಥ (ಭೂ)ನಾಥಂ—

ಕಂ॥ ಆ ವನದಶೋಕತರುನುತ
ಪಾವನಸಿಕತಿಳತಳಪ್ರದೇಶಪವಿತ್ರ
ಗ್ರಾವದೊಳಂತರ್ಮುಖಚಿಂ
ತಾವಿಷ್ಕೃತತತ್ವನುಲ್ಲಸತ್ಪಲ್ಯಂಕಂ ॥ ೬೪ ॥

ವ॥ ವಸ್ತ್ರಾಭರಣಂಗಳಂ ಕಳೆದು ನಮಸ್ಸಿದ್ಧೇಭ್ಯ ಎಂದು ಪಂಚಮುಷ್ಟಿಯಿಂದಂ—

ವ॥ ಹೀಗೆಂದು ನುಡಿದು ಭಗವಂತನ ವೈರಾಗ್ಯಕ್ಕೆ ಅನುಮೋದನೆಯನ್ನು ಮಾತ್ರ ಮಾಡಿ, ಅಷ್ಟರಿಂದಲೆ ತಾವು ಕೃತಾರ್ಥರಾದೆವೆಂದು ಹೊರಟುಹೋದರು. ಇತ್ತ ಸೂರ್ಯೋದಯವಾಗಲು ಘನರಥನು—

೬೨. ಅಭಿಷೇಕಪೂರ್ವಕವಾಗಿ ಮೇಘರಥನಿಗೆ ವೈಭವದಿಂದ ಸಮಸ್ತ ಭೂಮಂಡಲವನ್ನೊಳಗೊಂಡ ರಾಜ್ಯಭಾರವನ್ನೊಪ್ಪಿಸಿದನು.

ವ॥ ಅನಂತರ ದೇವೇಂದ್ರನು ತಂದ ಸುದರ್ಶನವೆಂಬ ಸಿವಿಗೆಯನ್ನು ಏರಿದನು—

೬೩. ತುಂಬ ವಿನಯಪೂರ್ವಕವಾಗಿ ಮೊದಲು ಭೂಪತಿಗಳೂ ಆಮೇಲೆ ಕಲ್ಪವಾಸಿದೇವರೂ ಆ ಸಿವಿಗೆಯನ್ನು ಹೊತ್ತು ಉತ್ಸವದಿಂದ ಹೂಬಿಟ್ಟ ನಂದನವನಕ್ಕೆ ತಂದರು.

ವ॥ ಅಲ್ಲಿ ಅದನ್ನಿಳಿಸಲಾಗಿ ಘನರಥ ರಾಜನು—

೬೪. ಆ ವನದ ಅಶೋಕವೃಕ್ಷದ ಕೆಳಗಿನ ಪರಿಶುದ್ಧವಾದ ಮಳಲಿನ ಮಧ್ಯೆ ಇದ್ದೊಂದು ಪವಿತ್ರಶಿಲೆಯ ಮೇಲೆ ಅಂತರ್ಮುಖನಾಗಿ ಪಲ್ಯಂಕಾಸನದಲ್ಲಿ ಕುಳಿತನು.

ವ॥ ತನ್ನ ವಸ್ತ್ರಾಭರಣಗಳನ್ನೆಲ್ಲ ಕಳಚಿ, "ನಮಃ ಸಿದ್ಧೇಭ್ಯಃ" ಎಂದು ಐದು ಮುಷ್ಟಿಗಳಿಂದ—

ಕಂ॥ ಅಪವರ್ಗಪ್ರಿಯೆಯಂ ವಿ
ಷ್ಟಪಲಕ್ಷ್ಮಿಯ ಮೋಹದಿಂದಮೆಯ್ದುವುದರಿದೆಂ
ದಪಗತದುರಿತಂ ತನ್ನೋ
ಹಪಾಶಮಂ ಪಱಿದ ತೆಱದೆ ತಲೆಯಂ ಪಱಿದಂ ॥ ೬೫ ॥

ವ॥ ಅಂತಭವನ ಕೇಶೋತ್ಪಾಟಿತ ಕೋಮಳಾಳಿಮಾಳಾಳಂಕೃತಂಗಳನಮರೇಂದ್ರರ್ ಮಣಿ [1]ಪಡಿಗಂಗಳೊಳಾಂತು ಕೊಂಡು—

ಕಂ॥ ಕ್ಷೀರಾಂಬುಧಿಲಹರೀ ವಿ
ಸ್ತಾರಾಂತರ ಶೈವಳಾಳಿಯೊಳ್ ಮಳವಿಾಕ
ರ್ಮಾರಾತಿ ಜಿನಂಗಿಂದೀ
ಪಾರಾವಾರದೊಳಪಾರದೊಳ್ ನೆಲಸಿದುದೋ ॥ ೬೬ ॥

ಎನಿಪುತ್ಪ್ರೇಕ್ಷೆಗೆ ನೆಲಸಿ
ರ್ಪಿನೆಗಂ ಪಂಚಮಸಮುದ್ರದೊಳ್ ಕೂಡಿ ಮುನೀಂ
ದ್ರನನಭಿವಂದಿಸಿ ಬಲಗೊಂ
ಡು ನಾಕಪತಿಗಳ್ ದಿವಕ್ಕೆ ತಳರ್ದುದುಮಾಗಳ್ ॥ ೬೭ ॥

ವ॥ ಅಂತುರ್ವರಾಸ್ಯತಿಲಕನಪ್ಪ ಮೇಘರಥನುಂ ದೃಢರಥಾದಿಗಳ್ವೆರಸು ತನ್ಮುನೀಂದ್ರಪಾದಂಗಳ್ಗೆಱಗಿ ಬಂದು ಪುಂಡರೀಕಿಣಿಯಂ ಪೊಕ್ಕರಸುಗೆಯ್ಯುತ್ತಿರೆ ಮತ್ತಿತ್ತ ಘನರಥನಾಥಂಗೆ—

ಕಂ॥ ಪುಟ್ಟೆ ಮನಃಪರ್ಯಯಮೊಡ
ವುಟ್ಟಿಯುಮಮಳಲ್ತು ತನ್ನ ಮಳಮಂ ಕಿಡಿಸಲ್
ಪುಟ್ಟಿದುದೆನೆ ಶುಭದಿನದೊಳ್
ಪುಟ್ಟಿದುದಖಿಳಾವಬೋಧಿ ಕೇವಳಬೋಧಂ ॥ ೬೮ ॥

---

೬೫. "ಈ ಲೋಕದ ಲಕ್ಷ್ಮಿ (ಐಶ್ವರ್ಯ) ಯ ಮೋಹವಿದ್ದರೆ ಮೋಕ್ಷಲಕ್ಷ್ಮಿಯನ್ನು ಪಡೆಯುವುದು ಅಸಾಧ್ಯ" ವೆಂದುಕೊಂಡು ಮೋಹಪಾಶವನ್ನೆ ಹರಿದೊಗೆದನೊ ಏನೊ ಎಂಬಂತೆ ತಲೆಗೂದಲನ್ನು ಕಿತ್ತುಹಾಕಿದನು.

ವ॥ ಹೀಗೆ ಅಭವನು ಕಿತ್ತುಹಾಕಿದ ಕೋಮಲವಾದ ಗುಂಬಿಗಳಿಂದಲಂಕೃತವಾದ ಕೂದಲನ್ನು ದೇವೇಂದ್ರರು ರತ್ನಪಾತ್ರೆಗಳಲ್ಲಿಟ್ಟುಕೊಂಡು—

೬೬. ಕ್ಷೀರಸಮುದ್ರದ ತೆರೆಗಳಿಂದ ದೂರ ದೂರಕ್ಕೆ ಸರಿದ ಹಾವಸೆಯ ರೂಪವಾಗಿ ಕರ್ಮವೈರಿಯಾದ ಜಿನನ ಮೈಮಲವು ಅಸೀಮವಾದ ಸಮುದ್ರದಲ್ಲಿ ನೆಲಸಿತೋ ಏನೊ

೬೭. ಎಂಬಂತೆ ಅದನ್ನು ಪಂಚಮ ಸಮುದ್ರದಲ್ಲಿ ಕೂಡಿಸಿ, ಮುನೀಂದ್ರನನ್ನು ವಂದಿಸಿ, ಪ್ರದಕ್ಷಿಣೆಗೊಂಡು ಮರಳಿ ಸ್ವರ್ಗಲೋಕಕ್ಕೆ ಹೋದರು.

ವ॥ ಲೋಕಭೂಷಣನಾದ ಮೇಘರಥನು ದೃಢರಥನೆ ಮೊದಲಾದವರನ್ನೊಡಗೊಂಡು ಬಂದು ಆ ಮುನೀಂದ್ರನ ಪಾದಗಳಿಗೆ ನಮಸ್ಕರಿಸಿ, ಮರಳಿ ಪುಂಡರೀಕಿಣಿ ನಗರವನ್ನು ಸೇರಿ ರಾಜ್ಯಭಾರದಲ್ಲಿ ತೊಡಗಿದನು. ಇತ್ತ ಘನರಥ ಮುನಿಗೆ—

೬೮. ಮನಃಪರ್ಯಯಜ್ಞಾನ ಹುಟ್ಟಿತು. ಅದರೊಡನೆ ದೋಷವನ್ನೆಲ್ಲ ನಿವಾರಿಸಲು ಹುಟ್ಟಿತೊ ಏನೊ ಎಂಬಂತೆ ಶುಭದಿನದಲ್ಲಿ ಸಮಸ್ತವನ್ನೂ ತಿಳಿಯುವ ಕೇವಲಜ್ಞಾನ ಉತ್ಪತ್ತಿಯಾಯಿತು.

---

1. ಪಲಟಕದೊ (ಅ)

ವ॥ ತದನಂತರಂ—

ಕಂ॥ ಧಾತ್ರಿಪ ಫಣಿಪರ್ ಖೇಚರ
ಪ ತ್ರಿದಶಪರೆಯ್ದೆ ವಿಶ್ವಕರ್ಮಂ ಬರೆದಂ
ಚಿತ್ರಪಟಮಂ ದಲೆನೆ ಭುವ
ನ ತ್ರಿತಯಂ ಕಾಣಲಾದುದಭವನ ಸಭೆಯೊಳ್ ॥ ೬೯ ॥

ವ॥ ಜೈನಶಾಸನ ಚೂಡಾಮಣಿಯುಪ್ಪ ಮೇಘರಥಧರಾಧೀಶ್ವರನುಂ ವಂದನಾಭಕ್ತಿಗೆ ಪೋಗಿ ಭವಭಯಹರಣ ಪ್ರದಾಯಮಾನ ವಿನೇಯಜನೈಕಶರಣಮುಂ ಸಮವಸರಣಮುಂ ಪೊಕ್ಕು ಪ್ರಥಮ ದ್ವಿತೀಯ ತೃತೀಯಪೀಠಂಗಳುಮನನುಕ್ರಮದಿನರ್ಚಿಸಿ ಗಂಧಕುಟೀ ಮಧ್ಯಾಧ್ಯಾಸಿತ ಸಿಂಹಾಸನಾಸೀನಂ ದ್ವಾದಶಗಣ ಸರಸ್ಸರೋಜ ವಿದಳನಶೋಭಾ ಪ್ರಭಾವ ಪ್ರಸವಪಾರೀಣ ದಿವ್ಯವಚನ ಮರೀಚಿಮಾಲಿರೋಚಿ ರ್ನಿಚಯ ತ್ರಿಜಗಚ್ಚೂಡಾಮಣಿಯುಂ ಕರಣತ್ರಯಶುದ್ಧಿಯಿಂದೆಱಗಿ ಪೊಡೆವಟ್ಟನಿತಾನುಂ ಸ್ತುತಿಗಳಿಂ ಸ್ತುತಿಯಿಸಿ ಬಂದು ಗಣಧರದೇವರ ಗುರುಭಕ್ತಿಪೂರ್ವಕಂ ತನಗೆಡೆಮಾಡಿದ ಕೋಷ್ಠಾಸನದೊಳ್ ಕುಳ್ಳಿರ್ದು—

ಕಂ॥ ಜಿನವಚನ ರಸಾಯನಮಂ
ಜನಾಧಿಪಂ ಶ್ರೋತ್ರಪಾತ್ರದೊಳ್ ತೀವಿ ಚಿರಂ
ವಿನಮಿತಮಕುಟಂ ಬಂದಿಸಿ
ಜಿನೇಂದ್ರಗಣಧರರನೊಸೆದನುಕ್ರಮದಿಂದಂ ॥ ೭೦ ॥

ವ॥ ಸಮವಸರಣದಿಂದಂ[1] ಪೊಱಮಟ್ಟು ಬಂದರಮನೆಯಂ ಪೊಕ್ಕು ರಾಜಲೀಲಾವಿಲಾಸ ವಿನೋದಂ ನಾನಾನೂನ ವಿಭವ ಸಂಭವ ಸುಖಾನುಭವನಿರತಂ ಸೌಜನ್ಯಕಂದಾಂಕುರನಪ್ಪ ಮೇಘರಥ ನರೇಂದ್ರನಾಸ್ಥಾನದೊಳೊಡ್ಡೋಲಗಂಗೊಟ್ಟಿರೆ—

ವ॥ ಆ ಬಳಿಕ—

೬೯. ಭೂಪತಿಗಳೂ, ಸರ್ಪಲೋಕಪತಿಗಳೂ, ಖೇಚರರಾಜರೂ, ದೇವೇಂದ್ರರೂ ಕೂಡಿಕೊಳ್ಳುತ್ತಿರಲು, ವಿಶ್ವಕರ್ಮನು ಬರೆದ ಚಿತ್ರಪಟವೆಂಬಂತೆ ಅಭವನ ಸಭಾಮಂಟಪದಲ್ಲಿ ಮೂರು ಲೋಕಗಳೂ ಕಾಣಬಂದುವು.

ವ॥ ಜೈನಧರ್ಮಚೂಡಾಮಣಿಯಾದ ಮೇಘರಥರಾಜನೂ ವಂದನಾಭಕ್ತಿಗೆಂದು ಹೋಗಿ, ಸಂಸಾರ ಭಯ ನಿವಾರಕವೂ ಭಕ್ತಜನರಿಗೆ ಏಕಾಶ್ರಯವೂ ಆದ ಸಮವಸರಣವನ್ನು ಹೊಕ್ಕು, ಒಂದನೆಯ, ಎರಡನೆಯ ಹಾಗು ಮೂರನೆಯ ಪೀಠಗಳನ್ನು ಅನುಕ್ರಮದಿಂದ ಪೂಜಿಸಿ, ಗಂಧಕುಟಿಯ ಮಧ್ಯದಲ್ಲಿ ಸಿಂಹಾಸನಸ್ಥನಾದ ದ್ವಾದಶಗಣಗಳೆಂಬ ಕಮಲಪುಷ್ಪಗಳನ್ನು ತನ್ನ ವಚನವೆಂಬ ಕಿರಣಗಳಿಂದ ಅರಳಿಸುವ ಸೂರ್ಯನಾಗಿ, ಸೂರ್ಯನಂತೆ ಪ್ರಭೆಯುಳ್ಳವನಾದ ತ್ರಿಲೋಕಶಿರೋಮಣಿಗೆ ತ್ರಿಕರಣಶುದ್ಧಿಯಿಂದ ನಮಸ್ಕಾರಮಾಡಿ, ಅನೇಕ ಸ್ತೋತ್ರಗಳಿಂದ ಆತನನ್ನು ಹೊಗಳಿ ಬಂದು, ಗಣಧರದೇವರು ಗುರುಭಕ್ತಿಯಿಂದ ತನಗೆ ಏರ್ಪಡಿಸಿದ ಅಂತರ್ಗೃಹದ ಆಸನದಲ್ಲಿ ಕುಳಿತನು.

೭೦. ಹಾಗೆ ಕುಳಿತು ಜಿನವಚನಾಮೃತವನ್ನು ತನ್ನ ಕಿವಿಗಳಲ್ಲಿ ತುಂಬಿಕೊಂಡು, ಜಿನೇಂದ್ರ ಗಣಧರರನ್ನು ಅನುಕ್ರಮದಿಂದ ವಂದಿಸಿ—

ವ॥ ಸಮವಸರಣದಿಂದ ಹೊರಟುಬಂದು ಅರಮನೆಯನ್ನು ಸೇರಿ, ರಾಜರಿಗೊಪ್ಪುವ ಆಟಪಾಟವಿನೋದಗಳಿಂದ ಸಮೃದ್ಧವಾದ ವೈಭವದ ಸುಖವನ್ನು ಅನುಭವಿಸುತ್ತ ಇದ್ದನು. ಹೀಗಿರುತ್ತ ಒಂದು ದಿನ ಒಡ್ಡೋಲಗದಲ್ಲಿ ಕುಳಿತಿರುವಾಗ—

---

1. ಮಂ (ಅ)

ಕಂ॥ ಬಂದಮರರಿರ್ವರವನತ
ರೆಂದರ್ ಭೂಪೇಂದ್ರ ಬೆಸಸು ಬೆಸಸೆಮ್ಮಂ ನೀ
ನೆಂದುದನೆ ಬಯಸಿ ತೀರ್ಚಲ್
ಬಂದೆವು ಜಾತೋಪಕಾರ ವಿಕ್ರಿಯಮತಿಯಿಂ ॥ ೭೧ ॥

ವ॥ ಘನರಥನರನಾಥನ ಬವಣಿಯೊಳ್ ತಾಮ್ರಚೂಳಂಗಳಾಗಿ ಪೋರುತ್ತುಮಾವಿರೆ ಭುವನಜನಕಂ ಬೆಸಗೊಳೆ ನೀಂ ಪೇೞೆ ಕೇಳ್ದು ಜಾತಿಸ್ಮರರೆಮಾಗಿ ಪರಸ್ಪರ ವೈರಮಂ ಬಿಸುಟ್ಟಾಹಾರ ಶರೀರ ಪ್ರತ್ಯಾಖ್ಯಾನಪೂರ್ವಕಂ ಸನ್ಯಸನ ವಿಧಿಯಿಂದಸುವಂ ವಿಸರ್ಜಿಸಿ ಜಂಬೂದ್ವೀಪದಪರ ವಿದೇಹದ ಭೂತಾರಣ್ಯದೊಳ್ ವ್ಯಂತರಾಂತಃಪಾತಿಗಳಾಗಿ ಭೂತಿಸಿಕಾಯದೊಳ್ ಕಾಳಮಹಾಕಾಳರೆಂಬಿಂದ್ರ ಪ್ರತೀಂದ್ರರೆಮಾಗಿ ಪುಟ್ಟಿ ನಿನ್ನ ಪರೋಪಕಾರಮಂ ನೆನೆದು ಬೆಸಕೆಯ್ಯಲ್ ಬಂದೆವೆಂಬುದುಂ ಜಿನಚಂದ್ರದೇವಂ ದರಹಸಿತವದನನಾಗಿ—

ಕಂ॥ ಕರವೊಳ್ಳಿತಮ್ಮ ಬೆಸಕೆ
ಯ್ವಿರಪೊಡೆನಗಱ್ತಿ ವಂದನಾಭಕ್ತಿಯೆ ನೀ
ಮೆರಡುವರೆ ದ್ವೀಪದ ಚೈ
ತ್ಯರಾಜಿಗೊಯ್ವುದೆ ಬೆಸಂ ಬೆಸಂ ಪೆಱತುಂಟೇ ॥ ೭೨ ॥

ಎಂಬುದುಮಭ್ರಮನಿರದೆ ತ
ಱುಂಬುವ ತೆಱದಿಂದಮೆತ್ತಿ ಪೊತ್ತಂಸದೊಳ
ಭ್ರಂ ಬರೆಗವೊಗೆಯೆ ನೋಟ
ಕ್ಕಿಂಬಾದುದು ಮೇಘರಥವಿಯತ್ಪಥಗಮನಂ ॥ ೭೩ ॥

ಸಮನಾಗೆ ಮೇಘದೊಳ್ ಕಾ
ಳಮಹಾಕಾಳರ್ಕಳವರ ಪೆಗಲೇಱಿದ ವಿ
ಭ್ರಮದಿಂ ನೋಡುವರ್ಗನ್ವ
ರ್ಥಮಾದುದಾಮೇಘರಥನ ಪೆಸರಂಬರದೊಳ್ ॥ ೭೪ ॥

---

೭೧. ಇಬ್ಬರು ದೇವತೆಗಳು ಬಂದು ನಮಸ್ಕರಿಸಿ ಹೀಗೆಂದರು : "ರಾಜೇಂದ್ರನೆ, ಏನಪ್ಪಣೆ ಹೇಳು ? ನೀನು ಹೇಳಿದ ಕೆಲಸವನ್ನು ನೆರವೇರಿಸಲೆಂದು ಬಯಸಿ ಬಂದಿದ್ದೇವೆ. ನೀನು ನಮಗೆ ಹಿಂದೆ ಮಾಡಿದ ಉಪಕಾರವನ್ನು ತೀರಿಸಬೇಡವೆ ?

ವ॥ ಘನರಥರಾಜನ ಕಾಲದಲ್ಲಿ ನಾವಿಬ್ಬರೂ ಕೋಳಿಗಳಾಗಿ ಹೋರಾಡುತ್ತಿದ್ದೆವು. ಆ ಸಂದರ್ಭದಲ್ಲಿ ಆ ಲೋಕೇಶ್ವರರು ಕೇಳಿದ ಪ್ರಶ್ನೆಗೆ ಉತ್ತರವಾಗಿ ನೀನು ನಮ್ಮ ಭವಾವಳಿಯನ್ನು ಹೇಳಿದೆ. ನಮ್ಮ ಪೂರ್ವಜನ್ಮದ ಕತೆಯನ್ನು ತಿಳಿದು ನಾವು ಪರಸ್ಪರ ದ್ವೇಷವನ್ನು ಬಿಟ್ಟು, ಶರೀರ ಪ್ರತ್ಯಾಖ್ಯಾನ ಪೂರ್ವಕವಾಗಿ ಸಂನ್ಯಸನ ವಿಧಿಯಿಂದ ಪ್ರಾಣತ್ಯಾಗಮಾಡಿ, ಜಂಬೂದ್ವೀಪದ ಪಶ್ಚಿಮವಿದೇಹದ ಭೂತಾರಣ್ಯದಲ್ಲಿ ವ್ಯಂತರ ಜನ್ಮಕ್ಕೆ ಬಂದು ಕಾಳ ಮತ್ತು ಮಹಾಕಾಳರೆಂಬ ಇಂದ್ರ-ಪ್ರತೀಂದ್ರರಾದೆವು. ನಿನ್ನ ಉಪಕಾರವನ್ನು ನೆನೆದು ಈಗ ಸೇವೆಮಾಡಲು ಬಂದಿರುವೆವು." ಹೀಗೆಂದ ಅವರ ನುಡಿಯನ್ನು ಕೇಳಿ ಜಿನಚಂದ್ರದೇವನು ಮುಗುಳ್ನಗೆಯಿಂದ ಹೀಗೆಂದನು :

೭೨. "ಅಯ್ಯಾ, ಬಲು ಒಳ್ಳೆಯದೇ ಆಯಿತು. ನೀವು ನನ್ನ ಸೇವೆ ಮಾಡುವುದೇ ಆದರೆ ಕೇಳಿ. ನನಗೆ ವಂದನಾಭಕ್ತಿಯೆಂದರೆ ತುಂಬ ಪ್ರೀತಿ. ಎರಡೂವರೆ ದ್ವೀಪದಲ್ಲಿರುವ ಜಿನಾಲಯಗಳಿಗೆ ನನ್ನನ್ನು ಕರೆದೊಯ್ಯಬೇಕು. ಈ ಕೆಲಸವಲ್ಲದೆ ಬೇರೇನು ಕೆಲಸ ಹೇಳಲಿ ?"

೭೩. ಹೀಗೆಂದೊಡನೆ ಮೋಡವನ್ನು ತಡೆಹಿಡಿಯುವಂತೆ ಆತನನ್ನು ಎತ್ತಿ ಹೆಗಲಮೇಲೆ ಇರಿಸಿಕೊಂಡು ಆಕಾಶಕ್ಕೆ ಚಿಮ್ಮಲಾಗಿ ಮೇಘರಥನ ಆಕಾಶ ಗಮನ ನೋಟಕ್ಕೆ ರಮ್ಯವಾಯಿತು.

೭೪. ಕಾಳ-ಮಹಾಕಾಳರಿಬ್ಬರೂ ಮೇಘಕ್ಕೆ (ಮೋಡಕ್ಕೆ) ಸದೃಶರಾಗಿ ಅವರ ಹೆಗಲೇರಿ ಹೊರಟುದರಿಂದ ಮೇಘರಥನಿಗೆ ಆ ಹೆಸರು ಅನ್ವರ್ಥಕವಾಯಿತು.

ವ॥ ಅಂತು ಪೋಗಿ ಬೇಗಮರ್ದ[1][ತೃತೀ][1]ಯ ದ್ವೀಪದ ಜಿನಮಂದಿರಂಗಳಂ ಬಂದಿಸಿ ಮಗುಟ್ದು ಪುಂಡರೀಕಿಣಿಯಂ ಪೊಕ್ಕು ರಾಜ್ಯಂಗೆಯ್ಯುತ್ತಿರೆ ಮನೋ[ಜ]ರಾಜನಧಿರಾಜಂಗೆ ದಂಡೋಪನತನಾಗಿ ತನ್ನ ಸರ್ವಸ್ವಮುಮನಟ್ಟಿದಂತೆ ಮುಂಚಿ ಬಂದ ವಸಂತೋತ್ಸವದೊಳ್—

ಚಂ॥ ಮದನಧನುರ್ಧರಂಗೆ ದೊಣೆಯಾದ ತಳಿರ್ ಸರಲಾದ ಪೂ ಬಸಂ
ತದ ಮೊದಲಂಗಜಂಗೆ ದಳಮಾದೆಲೆ ಮುದ್ಗರಮಾದ ಕೆಯ್ ಬಸಂ
ತದ ನಡು ಮನ್ಮಥಂಗೆ ನೆರಮಾದರೆವಣ್ಣುಮಳಾದ ಪಣ್ ಬಸಂ
ತದ ಕಡೆಯಾಗೆ ಸುಗ್ಗಿಯ ಮನೋಜನ ಕೆಯ್ಪಿಡಿಯಲ್ತೆ ಮಾಮರಂ ॥ ೭೫ ॥

ಕಂ॥ ಇಂತಿರೆ ಸೊಗಯಿಸಿ ಬಂದ ಬ
ಸಂತದೊಳಧಿರಾಜನನುಜಸಹಿತಂ ತಾಂ ತ
ನ್ನಂತಃಪುರಸಹಿತಂ ಶ್ರೀ
ಕಾಂತಂ ವನಕೇಳಿ ಲೀಲೆಗುದ್ಯತನಾದಂ ॥ ೭೬ ॥

ವ॥ ಆಗಿ ದೇವಾರಣ್ಯಮೆಂಬುದ್ಯಾನಮಂ ಪೊಕ್ಕಕಲಂಕಾಚಾರಸಾರನಪ್ಪ ಮೇಘರಥಂ ವನವಿಹಾರದೊಳಿರೆ ತದೀಯಾಂತಃಪುರಾವರೋಧಜನಂ ಪುಷ್ಪಾಪಚಯಾಸಕ್ತಿಯಿಂ ವನಮಂ ತೊ[2][ಟ][2]ಲುತ್ತುಂ—

ಕಂ॥ ಆವ ನನೆಗಾವ ಬಿರಿಮುಗು
ಳ್ಗಾವಲರ್ಗವಚತ್ತರುಂತವೆಲ್ಲಂ ತವೆ ಪು
ಷ್ಪಾವಚಯದಿಂ ತಳಿರ್ಗಳ
ಕಾವಣದೊಳ್ ಕಂಡೆಗೊಳ್ವನಂದಿನ ದಿವಸಂ ॥ ೭೭ ॥

ವ॥ ಅಂತಾ ಪಾಪೇಭಕಂಠೀರನವಪ್ಪ ಮೇಘರಥನುದ್ಯಾನಕೇಳೀಲೀಲಾಕ್ರಾಂತಂ ವಿಶ್ರಮಿಸಲೆಂದು ಬಂದಲ್ಲಿಯ ಕೃತಕಾಚಳದ ಮೇಗಣ—

ವ॥ ಹಾಗೆ ಹೋಗಿ ಆ ದ್ವೀಪಗಳಲ್ಲಿಯ ಜಿನಾಲಯುಗಳನ್ನೆಲ್ಲ ವಂದಿಸಿ ಮರಳಿ ಪುಂಡರೀಕಿಣೀಪುರಕ್ಕೆ ಬಂದು ರಾಜ್ಯವಾಳುತ್ತ ಇದ್ದನು. ಹೀಗಿರುವಾಗ ಮನ್ಮಥರಾಜನು ಸಾಷ್ಟಾಂಗವೆರಗಿ ತನ್ನ ಸರ್ವಸಂಪತ್ತನ್ನೂ ಕಳಿಸಿಕೊಟ್ಟನೊ ಏನೊ ಎಂಬಂತೆ ವಸಂತೋತ್ಸವವು ಬರಲಾಗಿ

೭೫. ಮನ್ಮಥನೆಂಬ ಬಿಲ್ಗಾರನಿಗೆ ಬತ್ತಳಿಕೆಯಾದ ಚಿಗುರು ಹಾಗು ಬಾಣವಾದ ಹೂ ವಸಂತನ ಬಾಲ್ಯ; ಕಾಮನಿಗೆ ಆಯುಧವಾದ ಎಲೆ ಹಾಗು ಮುದ್ಗರವಾದ ಕೊಂಬೆ ವಸಂತನ ಹರಯ; ಮದನನಿಗೆ ಹಿತವಾದ ದೋರೆ ಹಾಗು ಹಣ್ಣು ವಸಂತನ ಕೊನೆ. ಹೀಗೆ ಮಾವಿನ ಮರವು (ವಸಂತನಿಗೆ ಹಾಗು) ಮನ್ಮಥನಿಗೆ ಆಶ್ರಯವಲ್ಲವೆ?

೭೬. ಹೀಗೆ ಸೊಗಸಾಗಿ ಬಂದ ವಸಂತಕಾಲದಲ್ಲಿ ಅರಸನು ತನ್ನ ತಮ್ಮ ಹಾಗು ಅಂತಃಪುರಜನರನ್ನೊಡಗೊಂಡು ವನಕ್ರೀಡೆಗೆ ಹೊರಟನು.

ವ॥ ದೇವಾರಣ್ಯವೆಂಬ ಉದ್ಯಾನವನ್ನು ಹೊಕ್ಕು ಮೇಘರಥನು ವಿಹಾರಮಾಡುತ್ತಿರುವಾಗ ಆತನ ರಾಣಿವಾಸದ ಸ್ತ್ರೀಯರು ಹೂಗಳನ್ನಾಯುವ ಬಯಕೆಯಿಂದ ಅಲೆದಾಡುತ್ತ,

೭೭. ಯಾವ ಮೊಗ್ಗು, ಯಾವ ಬಿರಿಮೊಗ್ಗು ಮತ್ತು ಯಾವ ಹೂಗಳು ತಮಗೆ ಬೇಡವಾದುವು (ಮತ್ತು ಯಾವು ಇಷ್ಟವಾದುವು) ಎಂಬುದನ್ನರಿತು ಆಯ್ದಾಯ್ದು ಚಿಗುರೆಲೆಗಳ ಬಳ್ಳಿಮಂಟಪಗಳಲ್ಲಿ ಅವರು ಕೂಡಿ ಹಾಕಿದುದನ್ನು ರಾಜನು ಕಂಡನು.

ವ॥ ಹೀಗೆ ಮೇಘರಥನು ವನಕ್ರೀಡೆಯಾಡಿ ವಿಶ್ರಾಂತಿ ಪಡೆಯಲೆಂದು ಬಂದನು. ಅಲ್ಲಿ ಕ್ರೀಡೆಗಾಗಿಯೆ ನಿರ್ಮಿಸಲಾದ ಕೃತಕಗಿರಿಯ ಮೇಲೆ—

---

1. ಕೃತಿಯ (ಮ) 2. ೞ (ಮ)

ಕಂ॥ ಗಣನಾತೀತ ಕನನ್ಮಣಿ
ಗಣಸಂಗತ ತುಂಗ ಶೃಂಗ ಮತ್ಸಂಗದ ತಿಂ
ತಿಣಿಯಾಗಿ ಪೆಣೆದ ಲತೆಗಾ
ವಣಗಳ ನುಣ್ಮ[1][ಲ][1]ಲ ಜಗತಿ ಯೆರಡುಂ ಕೆಲದೊಳ್ ॥ ೭೮ ॥

ಪರಿವ ಪರಿವೊನಲ ಹಿಮಶೀ
ಕರಂಗಳೊಳ್ ಪುದಿದ ಮಂದಮರುತಂ ಮಲಯೋ
ಚ್ಚರಪವನಂ ಸೊಗಯಿಪ ಚಮ
ರರುಹಾನಿಲನೊಗೆದ ಬೆಮರನಳವಡಿಸುವಿನಂ ॥ ೭೯ ॥

ವ॥ ಅತಿ ಮನೋಹರತರ ಸ್ಫಟಿಕೋದ್ದೇಶದೊಳರಸಿಯರುಂ ತಾನುಂ ಕುಳ್ಳಿರ್ದಿನಿಸಾನುಂ ಬೇಗದಿಂ ಕಾಳಮಾಕಾಳರಂ ನೆನೆವುದುಂ—

ಹರಿಣೀವೃತ್ತಂ ॥ ನೆನೆದಮನದಿಂ ಮುನ್ನಂ ಭೂತಾಮರರ್ ಬರೆ ತೋರ್ಪುದಿ
ನ್ನೆನಗವಿತತ ಕ್ರೀಡಾಕ್ರೀಡಾ ವಿನೋದಮನೆಂಬುದುಂ
ಜನಪನಿದಿರೊಳ್ ಭೂತಂ ಭೂತಾಟಮಾಡೆ ಮನೋರಥಂ
ಘನರಥಸುತಂಗಾಗಳ್ ಮೆಯ್ಯಿಂದದೇಂ ಪೊಱಪೊಣ್ಮಿತೋ ॥ ೮೦ ॥

ವ॥ ಅಂತು [2]ಪೊರು[2]ವಾಯ್ದುಂ [3]ಕುಂಬ[3]ಕಂಬಾಯ್ದುಮೇಡಿಸಿಯುಂ ಜಱೋಡಿಸಿಯುಂ ಪಟಿಸಿಯುಂ ಬಂದಾಡಿಯುಂ ಮಿಡುಕಾ[4]ಡಿ[4]ಯುಂ ಪಾಱುಗೆಡೆವ ಕಾಳ ಮಹಾಕಾಳರ ಗೆಡೆವೊಕ್ಕಿರೆ—

ಕಂ॥ ನೆರವಿಯುಮರಸನುಮಂತಃ
ಪುರಮುಂ ಕಳಕಳಿಸಿ ನಕ್ಕು ನೋಡ ತದುರ್ವೀ
ಧರಮುಂ ಜಗಲಿಯುಮಿರ್ದಂ
ತಿರೆ ನಡನಡ ನಡುಗೆ ಮಹಿಪನಱಿದಲ್ಲಿಂದಂ ॥ ೮೧ ॥

---

೭೮. ಅಸಂಖ್ಯವಾದ ಪ್ರಜ್ವಲರತ್ನಗಳಿಂದ ತುಂಬಿದ ಎತ್ತರವಾದ ಶಿಖರ; ಅದರಲ್ಲಿ ದಟ್ಟವಾಗಿ ಹೆಣೆದ ಬಳ್ಳಿಮಂಟಪಗಳು; ಅವುಗಳ ಎರಡೂ ಪಕ್ಕಗಳಲ್ಲಿ ನುಣುಪಾದ ಮರಳ ಜಗಲಿಗಳು;

೭೯. ಹರಿಯುವ ಹೊಳೆಯ ಮೇಲಿನ ತಂಪಾದ ತುಂತುರು ಹನಿಗಳಲ್ಲಿ ಹಾಯ್ದು ಬಂದು ಮಂದಮಂದವಾಗಿ ಚಾಮರದ ಗಾಳಿಯಂತೆ ಬೀಸುವ ದಕ್ಷಿಣದ ಗಾಳಿ ಮೈಬೆವರನ್ನು ಆರಿಸುವುದು.

ವ॥ ಹೀಗೆ ತುಂಬ ಮನೋಹರವಾದ ಮರಳಿನ ಪ್ರದೇಶದಲ್ಲಿ ಅರಸಿಯರೂ ತಾನೂ ಕುಳಿತಿದ್ದು ಸ್ವಲ್ಪ ಸಮಯಾನಂತರ ಕಾಳ-ಮಹಾಕಾಳರನ್ನು ಆತನು ನೆನೆದನು.

೮೦. ಹಾಗೆ ನೆನೆದನೆಂಬಷ್ಟರಲ್ಲಿ ಶೀಘ್ರವಾಗಿ ಆ ಭೂತಾಮರರು ಬಂದರು. "ನಿಮ್ಮ ಕ್ರೀಡಾ ವಿನೋದಗಳನ್ನು ನಮಗೆ ಮಾಡಿ ತೋರಿಸಿ" ಎಂದು ಅರಸನು ಅಪ್ಪಣೆಕೊಟ್ಟನು. ಅವರು ತಮ್ಮ ಭೂತಾಟವನ್ನು ಮಾಡಿ ತೋರ ತ್ತಿರಲಾಗಿ ಮೇಘರಥನ ಮನಸ್ಸಿಗೆ ತೃಪ್ತಿಯಾಯಿತು.

ವ॥ ಕಾಳ-ಮಹಾಕಾಳರು ನೆಗೆದು, ಕುಪ್ಪಳಿಸಿ, ಒಬ್ಬರನ್ನೊಬ್ಬರು ಅಣಕಿಸಿ, ಹೀಯಾಳಿಸಿ, ನಗಾಡಿ ಹೀಗೆ ಬಗೆಬಗೆಯಾಗಿ ವಿನೋದವನ್ನುಂಟುಮಾಡಲಾಗಿ

೮೧. ಅರಸನೂ ಅಂತಃಪುರಸ್ತ್ರೀಯರೂ ಬಿದ್ದುಬಿದ್ದು ನಕ್ಕು ನೋಡುತ್ತಿದ್ದರು. ಆ ಹೊತ್ತಿನಲ್ಲಿ, ಆ ಬೆಟ್ಟವೂ ಜಗಲಿಯೂ ಇದ್ದಕ್ಕಿದ್ದಂತೆ ಗಡಗಡ ನಡುಗಲಾಗಿ ಅರಸನು ಅರಿತುಕೊಂಡು ಅಲ್ಲಿಂದ—

---

1. ಳ (ಮ) 2. ಱುಱು (ಅ) 3. ತುಂಬು (ಅ) 4. ಡ (ಅ)

ಕಂ॥ ಇಱಿಯದೆಯುಂ ಮಲ್ಲಂ[1][ತಿ][1]ಗೆ
ಯಱಿಯದೆಯುಂ ಕಾಲೊಳೊತ್ತೆ ಮರ್ದನಿವೆರಸಂ
ದೞಿಪಿಂ ಕರುಣಾಧ್ವನಿ ಪೊಂ
ಪುೞಿಯಾದುದು ಗಿರಿಯ ಪಿರಿಯ ತಾಱಿಲೊಳಾಗಳ್ ॥ ೮೨ ॥

ವ॥ ಅದಂ ಕೇಳ್ದು ಗಗನಚರಿಯೊರ್ವಳ್ ಬಂದರಸಂಗೆಱಗಿ ಪೊಡೆವಟ್ಟೆನಗೆ ಭರ್ತೃಭೈಕ್ಷಮಂ ದೇವರಿಕ್ಕಲೆವೇೞ್ಕುಮೆಂಬುದುಮರಸಂ ಕಾಲನುಡುಗೆ ಯೊಡದುಮೂಡಿ—

ಕಂ॥ ಬೇಗಮುಸಿರ್ ಮುಟ್ಟಿಗೆವರೆ
ಮೇಗುಸಿರ್ಗೊಂಡೊರ್ಮೆಗೊರ್ಮೆಗಗಿವೊಲ್ಗದೆ ಬಂ
ದಾಗಳೆಱಗಿರ್ದನಂದು ನ
ಭೋಗತಿಯೊರ್ವಂ ನೃಪೇಂದ್ರಪದಸರಸಿಜದೊಳ್ ॥ ೮೩ ॥

ವ॥ ಅಂತೆಱಗಿರ್ದನಮೇೞಿಮೆನೆ ಕುಳ್ಳಿರ್ದು ಮುಕುಳಿತ ಕರಕಮಳನೆಂದಂ ಇನಿವಿರಿದು ವಿಭೂತಿಯುಂ ಮಾನಸಮಾಟುಮೆನಗೆ ದೇವರಿಂದಮಾದುದೆಂದಾಗಳ್ ವಿನೀತನಾಗಿಯುಂ ತಾಗಿ ಬಾಗಿಯುಂ ನುಡಿದೊಡರಸಂ ಕರುಣಿಸಿ ಸಂಭಾಷಿಸಿರೆ ಪ್ರಿಯಮಿತ್ರೆಯಕಳಂಕಾಚಾರ ಸಾರನಪ್ಪ ಮೇಘರಥನರೇಂದ್ರಂಗೀತನಾರ್ಗೇನೆಂಬೊಂ ಭದ್ರಾಕಾರನುಂ ಕಾಂತಿಮಂತನುಮಭಿರೂಪನುಮಾಪನೀತಂಗಿನಿತು ವಿಭವಮು ಮೆಂತಾದುದು ನಿಮ್ಮಡಿಗಂ ಕೈಯ್ಯನೊಡ್ಡಿ ಪುರುಷಭೈಕ್ಷೆಯಂ ಬೇಡಿ ದೀಕ್ಷೆಯುಮಂ ನಿಸರ್ಗಸ್ನೇಹಿತೆಯಾದ ಕಾರಣಮುಮನಿದನಱಿಯೆ ಬೆಸಸುವುದೆನೆ ಮೇಘನಿನಾದದಿಂ ಮೇಘರಥಾವನೀನಾಥನಿಂತೆಂದು ಪೇೞ್ದಂ : ಪುಷ್ಕರವರದ್ವೀಪದ ಮೂಡಣಮಂದರದ ಭರತಕ್ಷೇತ್ರದ ಶಂಖಪುರಮನಾಳ್ವನನ್ಯದಾರವಿದೂರಂ **ಉದಾರ**ನೆಂಬೊಂ ಆತನ[ಪತ್ನಿ] ಪದ್ಮಸದ್ಮೆ ಪದ್ಮೆಯೆಂಬಳ್ ತದೀಯಾನೇಕಪಮಹಾಮಾತ್ಯಂ **ರಾಜಗುಪ್ತ**ನೆಂಬೊನಾತನಧೀತಸಕಳಶಾಸ್ತ್ರನಾಗಿಯುಂ ವಿತ್ತಹೀನಂ ತತ್ಕಳತ್ರಂ ಶಂಖಿಕೆಯೆಂಬೊಳಿಂತವರ್ಗಳ್ ದರಿದ್ರ ತಾಪಹತರೊಂದುದೆವಸಂ ಶಂಖಾಚಳಕ್ಕೆ ಪೋಗಿ ಭವದೀಯಾಧಿತ್ಯಕಾವಾಸದೊಳಿರ್ದ ಸರ್ವಗುಪ್ತಮುನಿಗಳಂ ಕಂಡು ಬಂದಿಸಿ ಧರ್ಮಮಂ ಕೇಳ್ದು ಸಂಸಾರ ಶರೀರಭೋಗ ನಿರ್ವೇಗಮಂ ಬೋಧಿಸೆ ಸಮ್ಯಗ್ದರ್ಶನಸಮೇತಂ ಸಕಳಶ್ರಾವಕ ವ್ರತಂಗಳಂ ಕೆಯ್ಕೊಂಡು ಮನೆಗೆ ವಂದು ದ್ವಾತ್ರಿಂಶದೇಕಕಲ್ಯಾಣಂಗಳಂ

---

೮೨. ಕೆಳಗಿಳಿಯದೆ ಇದ್ದ ಜಂಗದಿಂದ ಅಲ್ಲಾಡದೆ ತನ್ನ ಕಾಲನ್ನು ನೆಲಕ್ಕೆ ಅದುಮಿದನು. ಆ ಕೂಡಲೆ ಪ್ರತಿಧ್ವನಿ ಸಹಿತವಾಗಿ ಬೆಟ್ಟದ ತಪ್ಪಲಲ್ಲಿ ಕರುಣಾಜನಕವಾದ ಒಂದು ಕೂಗು ಅದ್ಭುತವಾಗಿ ಹೊಮ್ಮಿತು.

ವ॥ ಅದನ್ನು ಕೇಳಿ ಖೇಚರಿಯೊಬ್ಬಳು ಬಂದು ಅರಸನಿಗೆ ನಮಸ್ಕರಿಸಿ "ದೇವಾ, ನನಗೆ ಪತಿಭಿಕ್ಷೆಯನ್ನು ನೀಡಿ" ಎಂದು ಬೇಡಿಕೊಂಡಳು. ಅರಸನು ತನ್ನ ಕಾಲನ್ನು ಮೇಲೆತ್ತಲಾಗಿ—

೮೩. ಪ್ರಾಣಾಂತಿಕವಾಗಿ ಕಟ್ಟಿಕೊಂಡ ಉಸಿರು ಒಮ್ಮೆಲೆ ಹಗುರಾಗಿ ಮೇಲುಸಿರು ಬಿಡುತ್ತ ಒಬ್ಬನು ಆಕಾಶ ಮಾರ್ಗದಿಂದ ಧಾವಿಸಿ ಬಂದು ಅರಸನ ಕಾಲಿಗೆ ಬಿದ್ದನು.

ವ॥ ಹಾಗೆ ಎರಗಿದವನಿಗೆ "ಏಳಿ" ಎನ್ನಲಾಗಿ, ಆತನು ಎದ್ದು ಕುಳಿತು ಕೈಮುಗಿದು, "ಇಷ್ಟೊಂದು ಮಹಾ ವೈಭವವೂ ಉದಾತ್ತ ಜೀವನವೂ ನಿಮ್ಮಿಂದ ದೊರಕಿದುವು" ಎಂದು ವಿನಯದಿಂದ ಬಾಗಿ ನುಡಿಯಲು, ಅರಸನು ಕರುಣಿಸಿ ಅವನೊಡನೆ ಸಂತೋಷದಿಂದ ಸಲ್ಲಾಪ ಮಾಡುತ್ತಿದ್ದನು. ಆಗ ಸುಚರಿತ್ರನಾದ ಮೇಘರಥನಿಗೆ ಪ್ರಿಯಮಿತ್ರೆಯು "ಈತನು ಯಾರು ? ಇವನ ಹೆಸರೇನು ? ಮಂಗಳಾಕಾರನೂ, ಕಾಂತಿಮಯನೂ, ಸುಂದರನೂ ಆದ ಈತನಿಗೆ ಇಷ್ಟೊಂದು ವೈಭವ ಹೇಗೆ ದೊರಕಿತು ? ಮತ್ತು ನಿಮಗೆ ಕೈಮುಗಿದು 'ಪುರುಷಭಿಕ್ಷೆಯನ್ನು ನೀಡಿ' ಎಂದು ಬೇಡಿಕೊಳ್ಳುವ ಈಕೆಗೆ ಇವನಲ್ಲಿ ಸ್ವಾಭಾವಿಕ ಸ್ನೇಹವುಂಟಾಗಲು ಕಾರಣವೇನು ? ತಿಳಿಸಿ" ಎಂದಳು. ಆಗ ಮೇಘ ಧ್ವನಿಯಂತೆ ಗಂಭೀರವಾದ ಧ್ವನಿಯಿಂದ ಮೇಘರಥನು ಹೀಗೆಂದು ಹೇಳಿದನು : "ಪುಷ್ಕರದ್ವೀಪದ ಪೂರ್ವ ಮಂದರದ ಭರತಕ್ಷೇತ್ರದಲ್ಲಿ ಶಂಖಪುರಕ್ಕೆ ಏಕಪತ್ನೀವ್ರತಸ್ಥನಾದ ಉದಾರನೆಂಬುವನು ಅರಸು; ಆತನ ಹೆಂಡತಿ ಪದ್ಮೆ. ಆತನ

1, ತಿ (ಮ)

ನೋನುತಿರ್ಪನ್ನೆಗಮನಗಾರವೇಳೆಯೊಳ್ ಮಾಸೋಪವಾಸ[1]ದೊಳಿರ್ದು[1] ಪಾರಣೆಯೊಳ್ ಚರಿಗೆಗೆ ವಂದ ಧೃತಿಕರಣಮುನೀಂದ್ರರಂ ನಿಱಿಸಿ ಪರಿಣಾಮಶುದ್ಧಿಯಿಂದಮಾಹಾರದಾನಮನಿತ್ತು ಕೆಲವು ದೆವಸದಿಂ ತನ್ನ ನಿಸ್ವತೆ ಕಾರಣಮಾಗೆ ಸಮಾಧಿಗುಪ್ತಮುನೀಂದ್ರ ಪಾದಪದ್ಮೋಪಕಂಠದೊಳ್ ಪರಮದೀಕ್ಷಾವಿಲಕ್ಷಿತಾಕ್ಷೂಣ ಪ್ರಮೋದನಾಗಿ ಶಂಖಿಕೆಯುಂ ಸುಶೀಲಾರ್ಯಿಕಾಸಮಕ್ಷದೊಳಾರ್ಯಿಕೆಯಾದಳಾ ತ್ರಿಗುಪ್ತನಪ್ಪ ರಾಜಗುಪ್ತನೆಂಬಂ—

ಮ॥ ಮುನಿರಾಜಂ ದಿವರಾಜ [2]ಲ[2]ಕ್ಷ್ಮಿಗೆ ಮನಂದಂದಳ್ಕದಾಚಾಮ್ಲವ
ರ್ಧನಮಂ ತಪ್ಪದೆ ನೋಂತಂತಪ್ಪ ತನುವಂ ಪ್ರಾಯೋಪವೇಶಕ್ಕೆ ತಂ
ದು ನರಸ್ತೋತ್ರಮಮೂರ್ತಿಪಂಚಮಕನತ್ಕಲ್ಪಾಗ್ರದೊಳ್ ಪುಟ್ಟಿ ಕಾಂ
ತಿ ನಿಧಾನಂ ದಶ ಸಾಗರೋಪಮ ಸಮುದ್ರಾಯುಷ್ಯಮಂ ತಾಳ್ದಿದಂ ॥ ೮೪ ॥

ವ॥ ಅಂತಲ್ಲಿ ಸೂರ್ಯಪ್ರಭಾಭಿಧಾನನಾಗಿರೆ ಶಂಖಿಕಾರ್ಯೆಯುಂ ಸೌಧರ್ಮಕಲ್ಪದೊಳ್ ಪಂಚವಿಂಶಪಲ್ಯೋಪಮಾಯುಷ್ಯದಿಂ ಪುಟ್ಟೆ ಸೂರ್ಯಪ್ರಭನುಮಾಯುರವಸಾನದೊಳ್ ಜಂಬೂದ್ವೀಪದ ಪೂರ್ವವಿದೇಹದ ಪುಷ್ಕಳಾವತೀವಿಷಯದ ವಿಜಯಾರ್ಧಪರ್ವತದುತ್ತರಶ್ರೇಣಿಯ ಗಗನವಲ್ಲಭಪುರಮನಾಳ್ವೊಂ ವಿದ್ಯುತ್ಪ್ರಭಂಗೆ—

ಕಂ॥ ಶ್ರೀಗಂ ಧರಿತ್ರಿಗಂ ವಾ
ಕ್ಶ್ರೀಗಂ ಸಲೆ ಸವತಿಯೆನಿಸಲಾಪುಣ್ಯಸುಧಾ
ಭೋಗಿಗೆ ಮಾದೇವಿ ಮನೋ
ವೇಗೆ ಮನೋನಯನೆ ತನ್ಮುದಾಸ್ಪದಮೆನಿಕುಂ ॥ ೮೫ ॥

ಆನೆಗಳ ಲಾಯವನ್ನು ನೋಡಿಕೊಳ್ಳುವ ಅಧಿಕಾರಿ ರಾಜಗುಪ್ತನೆಂಬವನು, ಸಮಸ್ತ ಶಾಸ್ತ್ರಗಳನ್ನು ಬಲ್ಲವನಾಗಿದ್ದರೂ ಬಡವನಾಗಿದ್ದನು. ಆತನ ಹೆಂಡತಿ ಶಂಖಿಕೆಯೆಂಬವಳು. ಹೀಗೆ ಅವರಿಬ್ಬರೂ ಬಡತನದಲ್ಲಿ ಬೆಂದು ಒಂದು ದಿನ ಶಂಖಪರ್ವತಕ್ಕೆ ಹೋಗಿ, ಅದರ ತಪ್ಪಲು ಭೂಮಿಯಲ್ಲಿದ್ದ ಸರ್ವಗುಪ್ತ ಮುನಿಗಳನ್ನು ಕಂಡು ವಂದಿಸಿ, ಧರ್ಮಶ್ರವಣ ಮಾಡಿ, ಅವರು ವೈರಾಗ್ಯವನ್ನು ಬೋಧಿಸಲಾಗಿ ಸಮ್ಯಗ್‌ದರ್ಶನ ಸಹಿತವಾಗಿ ಎಲ್ಲ ಶ್ರಾವಕ ವ್ರತಗಳನ್ನೂ ಅವರಿಂದ ಕೈಕೊಂಡು ಮನೆಗೆ ಬಂದರು; ಮೂವತ್ತೆರಡು ಏಕಕಲ್ಯಾಣ ವ್ರತಗಳನ್ನು ಆಚರಿಸಿದರು; ಮಾಸೋಪವಾಸಮಾಡಿ ಚರಿಗೆಗೆ ಹೊರಟ ಧೃತಿಕರಣ ಮುನಿಗಳನ್ನು ಕಂಡು ಅವರನ್ನು ಬರಮಾಡಿಕೊಂಡು (ಮನ, ವಚನ, ಕಾಯ ಮತ್ತು ಏಷಣಾ ಎಂಬ ನಾಲ್ಕೂ ಬಗೆಯ) ಶುದ್ಧಿಯಿಂದ ಆಹಾರವನ್ನಿತ್ತರು. ಕೆಲವು ದಿನಗಳಾದ ಮೇಲೆ ದಾರಿದ್ರ್ಯಕ್ಕೆ ಬೇಸತ್ತು, (ವೈರಾಗ್ಯದಿಂದ) ಸಮಾಧಿಗುಪ್ತಮುನೀಂದ್ರರ ಸನ್ನಿಧಿಯಲ್ಲಿ ರಾಜಗುಪ್ತನು ತಪೋದೀಕ್ಷೆಯನ್ನು ಸ್ವೀಕರಿಸಿದನು. ಶಂಖಿಕೆಯೂ ಸುಶೀಲಾರ್ಯಿಕೆಯರ ಸಮಕ್ಷದಲ್ಲಿ ದೀಕ್ಷೆಹೊಂದಿ ಆರ್ಯಿಕೆಯಾದಳು. ಮನಸ್ಸು, ಮಾತು ಮತ್ತು ದೇಹ ಈ ಮೂರರ ನಿಗ್ರಹವನ್ನು ಸಾಧಿಸಿಕೊಂಡ ರಾಜಗುಪ್ತನು—

೮೪. ಮುನಿರಾಜನೆನಿಸಿ ಸ್ವರ್ಗವೈಭವಾಪೇಕ್ಷೆಯಿಂದ ಆಚಾಮ್ಲವರ್ಧನವನ್ನು ಶುದ್ಧವಾಗಿ ಆಚರಿಸಿ ಪ್ರಾಯೋಪವೇಶದಿಂದ ದೇಹವನ್ನು ತೊರೆದು ಐದನೆಯ ಕಲ್ಪದಲ್ಲಿ ಹುಟ್ಟಿ, ಹತ್ತು ಸಾಗರೋಪಮ ಆಯುಷ್ಯವನ್ನು ಪಡೆದನು.

ವ॥ ಅಲ್ಲಿ ಅವನಿಗೆ ಸೂರ್ಯಪ್ರಭನೆಂದು ಹೆಸರಾಯಿತು. ಶಂಖಿಕಾರ್ಯೆಯೂ ಸೌಧರ್ಮಕಲ್ಪದಲ್ಲಿ ಹುಟ್ಟಿ ಇಪ್ಪತ್ತೈದು ಪಲ್ಯೋಪಮ ಆಯುಷ್ಯವನ್ನು ಪಡೆದಳು. ತನ್ನ ಆಯುಷ್ಯ ತೀರಿದ ಬಳಿಕ ಸೂರ್ಯಪ್ರಭನು ಅಲ್ಲಿಂದ ಭೂಮಿಗೆ ಬಂದನು. ಜಂಬೂದ್ವೀಪದ ಪೂರ್ವವಿದೇಹದ ಪುಷ್ಕಳಾವತೀ ವಿಷಯದಲ್ಲಿ ವಿಜಯಾರ್ಧಪರ್ವತದ ಉತ್ತರ ಶ್ರೇಣಿಯ ಗಗನವಲ್ಲಭಪುರವನ್ನು ಆಳುವವನು ವಿದ್ಯುತ್ಪ್ರಭ.

೮೫. ಲಕ್ಷ್ಮಿಗೂ, ಭೂಮಿಗೂ, ಸರಸ್ವತಿಗೂ ಸವತಿಯೆನಿಸುವಂತೆ ಪುಣ್ಯಶಾಲಿನಿಯಾದ ಮಹಾದೇವಿ ಮನೋವೇಗೆಯೆಂಬವಳು ಆತನಿಗೆ ಹೆಂಡತಿಯಾಗಿದ್ದಳು.

1, ದ ಪಾರಣೆ (ಅ) 2, × (ಮ)

ವ॥ ತನ್ಮಿಥುನಕ್ಕೆ ಹೇಮರಥನೆಂಬೊಂ ಮಗನಾದೊಂ ಶಂಖಿಕಾಚರದೇವಿಯುಂ ತತ್ಪಲ್ಯೋಪಮಾಯುಷ್ಯ ವಿರಾಮದೊಳನೇಕ ಜನ್ಮಾತಿಕ್ರಮಣದಿಂ ಬಂದೀತಂಗೆ ಮನೋವೇಗೆಯಾದಳ್ ಈತನ ತಂದೆ ವಿದ್ಯುತ್ಪ್ರಭನುಂ ರಾಜ್ಯಭಾರಮನೀತಂಗಿತ್ತು ಪರಮತಪೋರಾಜ್ಯದೊಳ್ ನಿಂದನಿಂದೀತನುಮೀ ಖೇಚರಿಯುಮಮಿತವಾಹನಭಟ್ಟಾರಕರಂ ಬಂದಿಸಿ ಬರುತ್ತಮೆಮ್ಮಮೇಗೆತ್ತಂ ವಿಮಾನಂ ಪಾಱದಿರೆ ಮುನಿದು ಕೃತಕಾದ್ರಿವೆರಸೆತ್ತುತ್ತಿರೆ—

ಕಂ॥ ವಾಮಪದಾಗ್ರದಿನೊತ್ತೆ ರ
ಸಾಮಗ್ನಂ ಖಚರನೊಳಱಿ³ ಕೇಳ್ದು ತದೀಯ
ಪ್ರೇಮದಿನೆನ್ನಂ ಬೇಡಿದ
ಳೀಮಾನಿನಿ ಭರ್ತೃಭೈಕ್ಷಮಂ ಪ್ರಿಯಮಿತ್ರೇ ॥ ೮೬ ॥

ವ॥ ಈತಂಗಂ ಕ್ರಿಯಾವರ್ಧನತಪಃಪ್ರಭಾವದಿಂ ದೇವಲೋಕದೊಳಮೀ ವಿದ್ಯಾಧರಲೋಕದೊಳಮಮಿತತೇಜೋತಿಶಯ ಮಾದುದೀತಂಗೀ ಖೇಚರಿ ಮೂಱನೆಯ ಭವದೊಳ್ ಪೆಂಡಿತಿಯಪ್ಪುದಱಿಂದಮೀತನ ಮೇಗಿನಿವಿ[1][ರಿ][1]ದು ಮೋಹಮಾದುದೆಂದು—

ಕಂ॥ ಪರಿವಿಡಿಯಂ ತೊಡರದೆ ಜಿನ
ಚರಣಂ ಪ್ರಿಯಮಿತ್ರೆಗಂತದಂ ಪೇೞ್ವುದುಮಂ
ತಿರೆಯಿರೆ ಪುಟ್ಟದುದಾ ಹೇ
ಮರಥಂಗಂ ಪವನವೇಗೆಗಂ ನಿರ್ವೇಗಂ ॥ ೮೭ ॥

ವ॥ ಅಂತು ವೈರಾಗ್ಯಮನಸ್ಕರಾಗಿ ಮೇಘರಥನಂ ಬೀೞ್ಕೊಂಡು ಪೋಗಿ ಘನರಥತೀರ್ಥಕರ ಸಮವಸರಣದೊಳ್ ಹೇಮರಥಂ ಜಾತರೂಪಧರನಾದೊಂ ಪವನವೇಗೆಯುಂ ಸುಲೋಚನಾರ್ಯಿಕಾ ಕ್ರಮಕಮಳಸಮೀಪದೊಳ್ ತಪೋಧನೆಯಾದಳಿತ್ತ ವಿನೇಯ ನಿಕಾಯಾಂಬುಜಭಾನುವಪ್ಪ ಮೇಘರಥನರಮನೆಯಂ ಪೊಕ್ಕಿರ್ದೊಂದು ದೆವಸಂ ಫಾಲ್ಗುಣನಂದೀಶ್ವರದೊಳ್ ಕೃತಮಹಾತ್ರಿ[2]ರಾತ್ರಾಭಿಷವೋ[2]ಪವಾಸನಾಗಿ ಜಗತ್ತ್ರಿತಯತಿಲಕನನರ್ಚಿಸಿ ನಂದೀಶ್ವರಂಗೆಯ್ದು ಜಿನಮಂದಿರದ ಮುಂದಣ ಮಂಡಪದೊಳ್ ನಿಂದಿರ್ಪುದುಮೊಂದು—

ವ॥ ಆ ದಂಪತಿಗಳಿಗೆ (ಸೂರ್ಯಪ್ರಭನಾಗಿದ್ದ ದೇವನು) ಹೇಮರಥನೆಂಬ ಮಗನಾಗಿ ಹುಟ್ಟಿದನು. ಶಂಖಿಕೆಯಾಗಿದ್ದ ದೇವಿಯೂ ತನ್ನ ಸ್ವರ್ಗಲೋಕದ ಆಯುಷ್ಯವನ್ನು ಮುಗಿಸಿಕೊಂಡು ಆ ಜನ್ಮವನ್ನು ಪರಿಹರಿಸಿ ಬಂದು ಈತನಿಗೆ ಮನೋವೇಗೆಯಾಗಿದ್ದಳು. ತಂದೆ ವಿದ್ಯುತ್ಪ್ರಭನು ಈತನಿಗೆ ರಾಜ್ಯಭಾರವನ್ನೊಪ್ಪಿಸಿ ತಪಸ್ಸಿನಲ್ಲಿ ನಿರತನಾದನು. ಈತನೂ ಈ ಖೇಚರಿಯೊಡನೆ ಅಮಿತವಾಹನ ಭಟ್ಟಾರಕರನ್ನು ವಂದಿಸಿ ಬರುತ್ತ ನಮ್ಮ ಮೇಲೆ ಹಾರಲಾರದೆ ತಮ್ಮ ವಿಮಾನ ನಿಂತುಹೋಗಲಾಗಿ ಕೋಪಗೊಂಡು ಕೃತಕಾಚಲ ಸಹಿತವಾಗಿ ನಮ್ಮನ್ನು ಎತ್ತುವುದಕ್ಕೆ ಹೊರಟನು.

೮೬. ಆಗ ನಾನು ಎಡಗಾಲಿಂದ ಒತ್ತಿದೊಡನೆ ನೆಲದೊಳಗೆ ಸಿಕ್ಕಿಬಿದ್ದು ಈ ಖೇಚರನು ಕೂಗಿಕೊಂಡನು. ಅದನ್ನು ಕೇಳಿ ಖೇಚರಿಯು ಆತನ ಮೇಲಿನ ಪ್ರೀತಿಯಿಂದ ನನಗೆ ಕೈಮುಗಿದು ಪತಿಭಿಕ್ಷೆಯನ್ನು ಬೇಡಿದಳು.

ವ॥ ಈತನಿಗೆ ಕ್ರಿಯಾವರ್ಧನ ತಪಸ್ಸಿನ ಫಲವಾಗಿ ದೇವಲೋಕದಲ್ಲಿಯೂ ವಿದ್ಯಾಧರಲೋಕದಲ್ಲಿಯೂ ಅತಿಶಯವಾದ ತೇಜಸ್ಸುಂಟಾಗುವುದು. ಈತನಿಗೆ ಮೂರನೆಯ ಭವದಲ್ಲಿ ಈ ಖೇಚರಿ ಹೆಂಡತಿಯಾಗಿದ್ದುದರಿಂದಲೆ ಈಕೆಗೆ ಅಷ್ಟೊಂದು ಮೋಹವುಂಟಾಯಿತು."

೮೭. ಹೀಗೆ ಕ್ರಮಾನುಸಾರವಾಗಿಯೂ ಸರಳವಾಗಿಯೂ ಮೇಘರಥನು ಪ್ರಿಯಮಿತ್ರೆಗೆ ವಿವರಿಸುವುದನ್ನು ಕೇಳಿ ಆ ಹೇಮರಥನಿಗೂ ಪವನವೇಗೆಯೆಂಬ ಆ ಖೇಚರಿಗೂ ವೈರಾಗ್ಯ ಹುಟ್ಟಿತು.

ವ॥ ಹೀಗೆ ವೈರಾಗ್ಯಬುದ್ಧಿ ಹುಟ್ಟಿ ಮೇಘರಥನನ್ನು ಬೀಳ್ಕೊಂಡು ಹೋಗಿ ಘನರಥತೀರ್ಥಕರ ಸಮವಸರಣದಲ್ಲಿ ಹೇಮರಥನು ದಿಗಂಬರವ್ರತವನ್ನು ಕೈಕೊಂಡನು. ಪವನವೇಗೆಯು ಸುಲೋಚನೆ ಎಂಬ ಆರ್ಯಿಕೆಯ ಪಾದಸನ್ನಿಧಿಯಲ್ಲಿ ತಪೋದೀಕ್ಷೆ ವಹಿಸಿದಳು. ಇತ್ತ ಮೇಘರಥನು ಅರಮನೆಯನ್ನು ಸೇರಿ, ಒಂದು ದಿವಸ ಫಾಲ್ಗುಣ ನಂದೀಶ್ವರದಲ್ಲಿ ಮಹಾತ್ರಿರಾತ್ರವೆಂಬ ಉಪವಾಸವ್ರತ ಮಾಡಿ ಅರ್ಹಂತನನ್ನು ಅರ್ಚಿಸಿ, ನಂದೀಶ್ವರವನ್ನು ಮಾಡಿ ಜಿನಾಲಯದ ಮುಂದಿನ ಮಂಟಪದಲ್ಲಿ ನಿಂತಿರುವಾಗ ಒಂದು—

1. ಱ (ಮ) 2. ರಾತ್ರೋ (ಅ)

ಕಂ॥ ಪಾರಾವತಮಂ ಗಿಡಿಗಂ
ಭೋರೆಂದೋರಂತೆ ಮುಟ್ಟಿ ಬೆನ್ನಟ್ಟೆ ಧರಾ
ಧಾರನೆ ಯೆನ್ನಂ ಕಾವುದ
ಕಾರಣಮಿಾ ಶ್ಯೇನಕೋಪಮುಪಗತಪಾಪಾ ॥ ೮೮ ॥

ವ॥ ಎಂದು ಸೌಜನ್ಯಕಂದಾಂಕುರನಪ್ಪ ಮೇಘರಥಧರಾಧೀಶ್ವರನ ಮುಂದೆ ಬಂದು ಬಿೞ್ದಿರ್ದ ರಾಜಕಪೋತದ ಪೆಱಗನೆ ಬಂದೆಱಗಿ—

ಕಂ॥ ಗಿಡಿಗನಂ ಕಾಯಲ್ ಕಾ
ದೊಡೆ ಮೇಘರಥಾವನೀಶ ಮದ್ಭಕ್ಷ್ಯಮಿದಂ
ಕುಡದೊಡೆ ಮಿಗೆ ಪಸಿದಾನೀ
ಗದೆ ಸಯೆ ಸಾವದ್ಯಮಲ್ತೆ ನಿನಗೆನೆ ನೃಪನುಂ ॥ ೮೯ ॥

ವ॥ ಸಕಲಜೀವದಯಾಪರನಪ್ಪುದಱಿನರಸಂಜದಿರೆಂದು ಗಿಡಿಗನಂ ನೋಡಿ—

ಮ॥ ಪಸಿವಿಂದಂ ನಿನಗಾದ ತೃಷ್ಣೆಯಣಮಲ್ತೀ ಕೋಪ ದುರ್ವನ್ಯಜ
ನ್ಮಸಮುತ್ಪನ್ನಮದಂತು[1]ಟಲ್ತೆ[1] ಖಗ ಜಂಬೂದ್ವೀಪದೊಳ್ ಭಾರತೋ
ರ್ವಿ ಸಲೀಲಂ ಸೊಗಯಿಕ್ಕುಮಲ್ಲಿಯ ಪುರಂ ಕೇಳ್ ಪದ್ಮಿನೀಖೇಡಮಿಂ
ದ್ರಸಮಂ ತನ್ನ ಗರಾಧಿರಾಜನಧಿಪಂ [2]ಶ್ರೀವರ್ಮ[2]ನೆಂಬೊಂ ನೃಪಂ ॥ ೯೦ ॥

ವ॥ ಆತನರಸಿ ಶ್ರೀಮತಿಯೆಂಬೊಳ್ ಮತ್ತಮಾಪೊೞಲೊಳ್ ರಾಜಶ್ರೇಷ್ಠಿ ಸಾಗರಸೇನಂಗಮಮೃತಮತಿಗಂ ಪುಟ್ಟಿದ ದತ್ತನುಂ ನಂದಿಷೇಣನುಂ ಎಂಬರ್ ತಂದೆಯ ಪರೋಕ್ಷದೊಳಕ್ಷೂಣ ಕನಕರಾಶಿಯಂ ಬಸನಕ್ಕೆ ತವಿಸಿ ಬಿಯಂ ನಡೆಯದಿರೆ ನಡುವಿರುಳ್ ಕರ್ಪಟಿಮಮಂ ಪಱಿದುಟ್ಟು ನಾಗಪುರಕ್ಕೆ ಪೋಗಿ ಸೋದರಮಾವಂ ಭದ್ರಮಿತ್ರನಲ್ಲಿ ಮೊವಲ್ಗೊಂಡು ಸ್ಥಳಯಾತ್ರೆಗೆ ಪೋಗಿ ಸಂಖ್ಯಾತೀತ

---

೮೮. ಗಿಡುಗನಿಂದ ಬೆನ್ನಟ್ಟಿಸಿಕೊಂಡು ಬಂದ ಪಾರಿವಾಳವು "ಭೂನಾಥನೇ, ಈ ಗಿಡುಗನ ಕೈಯಿಂದ ನನ್ನನ್ನು ರಕ್ಷಿಸು"

ವ॥ ಎಂದು ಮೇಘರಥನ ಮುಂದೆ ಬಂದು ಬಿದ್ದಿತು. ಅದರ ಹಿಂದಿನಿಂದಲೆ ಎರಗಿ ಬಂದ

೮೯. ಗಿಡುಗವು "ಅದನ್ನು ರಕ್ಷಿಸಬೇಡ. ಮೇಘರಥ ಮಹಾರಾಜನೆ, ಅದನ್ನು ಕಾದು, ನನಗೆ ಆಹಾರವಿಲ್ಲದಂತೆ ಮಾಡಿದರೆ, ಹಸಿವೆಯಿಂದ ನಾನು ಸತ್ತುಹೋಗುತ್ತೇನೆ. ಇದು ನಿನಗೆ ಕಲಂಕವಲ್ಲವೆ?" ಎಂದಿತು. ಆಗ ಅರಸನು—

ವ॥ ಸರ್ವಜೀವಗಳಲ್ಲಿಯೂ ದಯಾಪರನಾದವನಾದುದರಿಂದ ಅಂಜದಿರೆಂದು ಹೇಳಿ ಗಿಡುಗನನ್ನು ನೋಡಿ (ಹೀಗೆ ನುಡಿದನು) :

೯೦. "(ಪಾರಿವಾಳದ ಮೇಲೆ, ನಿನಗೆ ಉಂಟಾದ ಈ ಕೋಪದ ಆವೇಗಕ್ಕೆ ನಿನ್ನ ಹಸಿವು ಎಷ್ಟು ಮಟ್ಟಿಗೂ ಕಾರಣವಲ್ಲ. ಇದು ಪೂರ್ವಜನ್ಮದಿಂದ ಬಂದ ಕೋಪವಲ್ಲವೆ? ಜಂಬೂದ್ವೀಪದ ಭಾರತ ಭೂಮಿಯಲ್ಲಿ ಪದ್ಮಿನೀಖೇಡವೆಂಬ ಪಟ್ಟಣವು ಮನೋಹರವಾಗಿರುವುದು. ಇಂದ್ರ ಸಮಾನನಾದ ಶ್ರೀವರ್ಮನೆಂಬವನು ಅದನ್ನು ಆಳುವವನು.

ವ॥ ಆತನ ಅರಸಿ ಶ್ರೀಮತಿಯೆಂಬವಳು. ಆ ಪಟ್ಟಣದಲ್ಲಿ ರಾಜವರ್ತಕನಾದ ಸಾಗರಸೇನನಿಗೂ ಅಮೃತಮತಿಗೂ ಹುಟ್ಟಿದ ದತ್ತಮತ್ತು ನಂದಿಷೇಣ ಎಂಬಿಬ್ಬರು ತಂದೆಯ ತರುವಾಯ (ಅಧಿಕಾರಕ್ಕೆ ಬಂದು) ಅಪಾರವಾದ ಚಿನ್ನದ ರಾಶಿಯನ್ನೆಲ್ಲ ತಮ್ಮ ವ್ಯಸನಕ್ಕೆ ವೆಚ್ಚಮಾಡಿ ಮುಗಿಸಿ, ಕೈಖರ್ಚಿಗೆ ಏನೂ ಇಲ್ಲದಾಗಲು ನಟ್ಟಿರುಳಲ್ಲಿ ಚಿಂದಿ ಬಟ್ಟೆಯನ್ನುಟ್ಟುಕೊಂಡು ನಾಗಪುರಕ್ಕೆ ಹೋದರು. ಅಲ್ಲಿ ತಮ್ಮ ಸೋದರಮಾವನಾದ ಭದ್ರಮಿತ್ರನಲ್ಲಿ ಬಂಡವಾಳವನು ಪಡೆದುಕೊಂಡು ಸ್ಥಳಯಾತ್ರೆಗೆ ಹೋಗಿ ಅಪಾರವಾದ ಧನವನ್ನು ಗಳಿಸಿದರು. ಹೀಗೆ ಗಳಿಸಿದ ಸಂಪತ್ತಿನೊಡನೆ

---

1. ಟೆಂಬ (ಅ) 2. ಶ್ರೀವರ್ಮ (ಅ)

ಸಾರಧನಮಂ ಪಡೆದು ಬರ್ಪೆಡೆಯೊಳ್ ಶಂಖನದೀತೀರದ ಜಂಬೂದ್ರುಮತಳದೊಳ್ ವಿತ್ತನಿಮಿತ್ತದಿನೊರ್ವರನೊರ್ವರಿಱಿದು ಸತ್ತರ್ ಅವರೊಳಗೆ ದತ್ತನೀ ಪಾರಾವತಂ ನಂದಿಷೇಣಂ ಗಿಡಿಗಂ ನೀನಾದಯ್ ಆ ಬದ್ಧವೈರದಿನಿನಿತು ಕಱುಪ್ಪುಂ ಕಾಯ್ಪುಂ ನಿನಗಾದುದೆಂದರಸು ಪೇೞ್ವುದುಮಂ ದೃಢರಥಂ ಮೇಘರಥಮಹೀಪತಿಯಂ—

ಕಂ॥ ಮಾನಿಸರ ನುಡಿವ ತೆಱದಿಂ
ಶ್ಯೇನನುಮರವೊಱಸಮಿಂತು ಗ[1][ಬ][1]ಪಿದಪುದಿದಂ
ಶ್ರೀನಾಥ ಬೆಸಸಿಮವಧಿ
ಜ್ಞಾನದಿನಱಿದೆನೆ ನೃಪೇಂದ್ರನದುವಂ ಪೇೞ್ಗುಂ ॥ ೯೧ ॥

ವ॥ ಈ ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ತೆಂಕದಡಿಯ ವತ್ಸಕಾವತೀ ವಿಷಯದ ವಿಜಯಾರ್ಧ ಪರ್ವತದ ದಕ್ಷಿಣಶ್ರೇಣಿಯ ಸುಜಯಂತಪುರವನಾಳ್ವೊಂ ಸಂಜಯನೆಂಬೆಂ ಖಚರನಾನಪರಾಜಿತನಾದಂದೆನ್ನೊಳೆ ನಿಂದು ಕಾದಿ ಸತ್ತು ಭವಪರಿಣಾಮ ಪರಾವರ್ತನದಿಂ ಬಂದು ವಿಂಧ್ಯಾಟವೀ ಮಧ್ಯದೊಳ್ ಸೋಮನಾಮಧೇಯತಾಪಸಂಗಂ ಶ್ರೀದತ್ತೆಗಂ ಸೋಮಿಲನೆಂಬೊಂ ಮಗನಾಗಿ ತಾಪಸವೃತ್ತಿಯೊಳ್ ನೆಗೞ್ದು ನಿರ್ವೃತಿವಿದೂರನಾಗಿಯುಂ ನಿರ್ವೃತಿನಾಮನದೀತೀರದ ಕಾಶ್ಯಪಾಶ್ರಮದೊಳ್ ಮುಡಿಪೀಶಾನಕಲ್ಪದೊಳ್ ಸುರೂಪನೆಂಬೊಂ ದೇವನಾಗಿರ್ದೀಶಾನೇಂದ್ರನ ಸಭೆಯೊಳೆಮ್ಮಂ ಬಣ್ಣಿಸೆ ಕಣ್ಣ ಕಸಮಂ ಸೈರಿಸದಂತೆ ತಾನೋದುಪಚಾರಧರನಾಗಿಯು ಮಸ್ಮದ್ಗುಣಚ್ಛೇದಕಸಮರ್ಥಕನಾಗಿ ಬಂದೀಗಳೆಮ್ಮ ಗುಣಾಪಹಾರಾರ್ಥಂ ಬಂದೀ ಶ್ಯೇನಪಾರಾವತಂಗಳೊಳ್ ಪರಕಾಯಪ್ರವೇಶದಿಂ ನುಡಿವುದದುಕಾರಣದಿನೀಪುರುಷ ಭಾಷಾನುವಾದಂಗಳೊಳವೆಂಬುದುಂ—

ಕಂ॥ ಸುರಕಾಯಸ್ಥಿತಿ ಸಮನಿಸು
ತಿರೆ ಪರಕಾಯಪ್ರವೇಶಮೇವುದದೆಂಬಂ
ತಿರೆ ಪಕ್ಷಿ ಶರೀರದಿನವ
ತರಿಸಿಸುರಂ ತನಗೆ ಮೊೞ್ಗಿ ಪೊಡೆವಡೆ ನೃಪನುಂ ॥ ೯೨ ॥

ಬರುತ್ತಿರುವಾಗ ಶಂಖನದೀ ತೀರದ ಒಂದು ನೇರಿಳೆ ಮರದ ಕೆಳಗೆ ಈ ಧನದ ವಿಷಯದಲ್ಲಿ ಮನಸ್ತಾಪವಾಗಿ ಒಬ್ಬರನ್ನೊಬ್ಬರು ಇರಿದು ಇಬ್ಬರೂ ಸತ್ತರು. ಅವರಲ್ಲಿ ದತ್ತನಾಗಿದ್ದವನೇ ಈ ಪಾರಿವಾಳ, ನಂದಿಷೇಣನಾಗಿದ್ದವನೇ ಈಗ ಗಿಡುಗನಾಗಿರುವ. ಆ ಜನ್ಮದ ಬದ್ಧವೈರದಿಂದ ನಿನಗೆ ಇಷ್ಟೊಂದು ಮತ್ಸರವೂ ಕೋಪವೂ ಉಂಟಾದುವು." ಹೀಗೆ ಅರಸನು ತಿಳಿಸಲಾಗಿ ದೃಢರಥನು ಮೇಘರಥರಾಜನಿಗೆ ಹೀಗೆಂದನು :

೯೧. "ಮನುಷ್ಯರು ಮಾತಾಡುವಂತೆ ಈ ಪಾರಿವಾಳವೂ ಗಿಡುಗವೂ ಹೇಗೆ ಮಾತು ಕಲಿತುವು? ಅವಧಿಜ್ಞಾನದಿಂದ ನೋಡಿ ನೀನು ನಮಗೆ ಇದನ್ನು ತಿಳಿಸು." ಹೀಗೆನ್ನಲು ಅರಸನು ಅದನ್ನು ಹೀಗೆ ಹೇಳಿದನು :

ವ॥ ಈ ಜಂಬೂದ್ವೀಪದ ಪೂರ್ವವಿದೇಹದ ಸೀತಾನದಿಯ ದಕ್ಷಿಣತೀರದಲ್ಲಿ ವತ್ಸಕಾವತೀ ವಿಷಯದ ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯಲ್ಲಿ ಸುಜಯಂತವೆಂಬುದು ಪಟ್ಟಣ ; ಅದನ್ನಾಳುವವನು ಸಂಜಯನೆಂಬ ಖೇಚರನು ; ನಾನು ಅಪರಾಜಿತನಾಗಿದ್ದ ಕಾಲದಲ್ಲಿ ನನ್ನೊಡನೆ ಕಾದಾಡಿ ಸತ್ತು ಭವಾವಳಿಯಲ್ಲಿ ಸುತ್ತಿಸುತ್ತಿ ಬಂದು ವಿಂಧ್ಯಾಟವಿಯ ಮಧ್ಯದಲ್ಲಿ ಸೋಮನೆಂಬ ತಪಸ್ವಿಗೂ ಶ್ರೀದತ್ತೆಗೂ ಸೋಮಿಲನೆಂಬ ಮಗನಾದನು. ಆತನು ತಪಸ್ಸನ್ನಾಚರಿಸಿ ಶಾಂತಿಯನ್ನು ಪಡೆಯದೆ ನಿರ್ವೃತಿಯೆಂಬ ನದೀತೀರದ ಕಾಶ್ಯಪಾಶ್ರಮದಲ್ಲಿ ಮುಡಿಪಿ ಈಶಾನಕಲ್ಪದಲ್ಲಿ ಸುರೂಪನೆಂಬ ದೇವನಾದನು. ಈಶಾನೇಂದ್ರನ ಸಭೆಯಲ್ಲಿ ನನ್ನ ಹೊಗಳಿಕೆಯನ್ನು ಕೇಳಿ ಕಣ್ಣಲ್ಲಿ ಕಸ ಹೊಕ್ಕಂತೆ ಸೈರಿಸಲಾರದೆ ಉಪಾಯದಿಂದ ನನ್ನ ಸದ್ಗುಣವನ್ನು ಕೆಡಿಸುವ ಉದ್ದೇಶದಿಂದ ಬಂದು ಈ ಪಾರಿವಾಳ-ಗಿಡುಗಗಳಲ್ಲಿ ಪರಕಾಯ ಪ್ರವೇಶ ಮಾಡಿ ನುಡಿಯುತ್ತಿರುವನು. ಆದುದರಿಂದಲೆ ಈ ಪಕ್ಷಿಗಳು ಮನುಷ್ಯ ಭಾಷೆಯಾಡುವಂತೆ ಭಾಸವಾಗುವುದು."—ಹೀಗೆ ನುಡಿಯಲಾಗಿ

೯೨. ದೇವಶರೀರವೇ ಪ್ರಾಪ್ತವಾಗುತ್ತಿರಲು ಪರಕಾಯ ಪ್ರವೇಶದಿಂದೇನು ಪ್ರಯೋಜನ ಎಂದುಕೊಂಡನೊ ಏನೊ ಆ ದೇವನು ತನ್ನ ಸ್ವರೂಪವನ್ನು ತಾಳಿ ಬಾಗಿ ನಮಸ್ಕರಿಸಿದನು. ಅರಸನು

---

1. ಳ (ಮ)

ವ॥ ಸ್ವಾಗತಪುರಸ್ಸರಂ ಸಂಭಾಷಿಸಿ ಬನ್ನಿಮೆಂದೇಱಲಿಕ್ಕಿಸೆ ಕುಳ್ಳಿರ್ದು—

ಮ॥ ಸ್ರ॥ ಸಭೆಗೀಶಾನೇಂದ್ರನೋದಂದದಿನಱಿಯೆನೆನಲ್ ಬಣ್ಣಿಸಲ್ಕೆನ್ನನಾಂ ನಿ
ನ್ನಭಿರೂಪಾಕಾರ ಸತ್ಯವ್ರತ ಗುಣಗಣಶೀಲಂಗಳಂ ಬಣ್ಣಿಪರ್ ಪೋ
ದ ಭವಾಯತ್ತಂ ವಿರೋಧಂ ಮನದೊಳೆನಗೆ ನಿಶ್ಶಲ್ಯಮಿನ್ನೆಂದು ನಾಕ
ಪ್ರಭವೋದ್ಯನ್ಮಾಲೆಯಿಂ ಭೂಪತಿಯನೊಸೆದೊಱಲ್ದರ್ಚಿಸಿರ್ದಂ ಸುರೇಂದ್ರಂ ॥ ೯೩ ॥

ವ॥ ಇರ್ದಿನಿಸಾನುಂ ಬೇಗದಿಂ—

ಕಂ॥ ಜನಪತಿಗೆಱಗಿ ಪುನರ್ದ
ರ್ಶನಮಕ್ಕೆಂದಮರನವನಿಪಾಲನ ಸಭೆ ತ
ನ್ನನೆ ನೋಡೆ ಮುಗಿಲ ತೆಗಳಿಗೆ
ಯ ನೆಗೆದ ಪೊ[ರೆ][1]ಗಳೊಳದೃಶ್ಯನಾದಂ ನಭದೊಳ್ ॥ ೯೪ ॥

ವ॥ ತದನಂತರಂ ಗಿಡಿಗನುಂ ರಾಜಕಪೋತಮುಂ ಪರಿತ್ಯಕ್ತಾಹಾರ ಶರೀರಂಗಳಾಗಿ ಮುಡುಪಿ ಭವನಾಮರಲೋಕದೊಳ್ ಮಹರ್ಧಿಕರವರಾದರರಸನುಂ ನಂದೀಶ್ವರಮಹಿಮೆಯ ಮಹಾತ್ರಿರಾತ್ರದ ಪಾರಣೆಗೆ ವಂದು ಪಾರಣಾವ್ಯಾಪಾರವನಿನಿಸಾನುಂ ಮಾಣಿಸಿ ದ್ವಾರಾಪೇಕ್ಷೆಗೆಯ್ಯುತ್ತಿರ್ಪಿನಮನಗಾರವೇಳೆಯೊಳ್ ಮಾಸೋಪವಾಸಮಂ ನೆ[ರ][2]ಪಿ—

ಕಂ॥ ಚರಿಗೆವುಗೆ ಬೋಧನಿಧಿ ದಮ
ವರಮುನಿಯಂ ಭುವನನಾಥನಿದಿರ್ಗೊಂಡು ಮನೋ
ಹರಪಾತ್ರ[ದಾನಮಂ ಮೇ]
ಘರಥಂ ಕುಡೆ ನೆಗೞ್ದುವೊಡನೆ ಪಂಚಾಶ್ಚರ್ಯಂ ॥ ೯೫ ॥

ವ॥ ಸ್ವಾಗತಪೂರ್ವಕವಾಗಿ ಆತನೊಡನೆ ಮಾತಾಡಿ, ಬನ್ನಿಯೆಂದು ಆಸನವನ್ನಿತ್ತು ಕುಳ್ಳಿರಿಸಿದನು.

೯೩. "ನಿನ್ನ ಸುಂದರಾಕಾರವನ್ನೂ ಸತ್ಯವ್ರತ ಗುಣಶೀಲಗಳನ್ನೂ ಅವರ್ಣನೀಯವೆಂಬಂತೆ ಈಶಾನೇಂದ್ರನು ಸಭೆಯಲ್ಲಿ ಹೊಗಳಿದ್ದನ್ನು ನಾನು ಕೇಳಿದೆ. ಪೂರ್ವಭವದ ದ್ವೇಷದಿಂದ ನನಗೆ ಸೈರಿಸಲಿಲ್ಲ. ಈಗ ಆ ದ್ವೇಷಭಾವ ಪೂರ್ಣವಾಗಿ ಹೊರಟುಹೋಯಿತು". ಹೀಗೆ ನುಡಿದ ಆ ದೇವನು ಸಂತೋಷದಿಂದ ದೇವಲೋಕದ ಪುಷ್ಪಮಾಲೆಯೇರಿಸಿ ಅರಸನನ್ನು ಪೂಜಿಸಿದನು.

ವ॥ ಹಾಗೆ ಕೆಲ ಸಮಯವಿದ್ದು—

೯೪. ಅರಸನಿಗೆ ನಮಸ್ಕರಿಸಿ "ಮತ್ತೆ ಕಾಣುವಾ" ಎಂದು ನುಡಿದು ಸಭೆಯು ನೋಡು ನೋಡುತ್ತಿರುವಷ್ಟರಲ್ಲಿ ಆಕಾಶಕ್ಕೇರಿ ಮೋಡಗಳ ಪೊರೆಯಲ್ಲಿ ಅದೃಶ್ಯನಾದನು.

ವ॥ ಅನಂತರ ಆ ಗಿಡುಗ-ಪಾರಿವಾಳಗಳು ಆಹಾರತ್ಯಾಗದಿಂದ ದೇಹವನ್ನು ಬಿಟ್ಟು ಭವನಾಮರ ಲೋಕದಲ್ಲಿ ಮಹರ್ಧಿಕರಾದುವು. ಅರಸನೂ ನಂದೀಶ್ವರ ಮಹಿಮೆಯ ಮಹಾತ್ರಿರಾತ್ರದ ಉಪವಾಸವನ್ನು ಮುಗಿಸಿ ಪಾರಣೆಯ ಮುನ್ನ ಬಾಗಿಲಲ್ಲಿ ನಿಂತು ಚರಿಗೆಗೆಂದು ಯಾರಾದರೂ ಮುನಿಗಳು ಬರುವರೇ ಎಂದು ಪ್ರತೀಕ್ಷಿಸುತ್ತ ನಿಂತನು. ಆಗ ಮಾಸೋಪವಾಸವನ್ನು ಮುಗಿಸಿಕೊಂಡು

೯೫. ಜ್ಞಾನಿಗಳಾದ ದಮವರ ಮುನಿಗಳು ಚರ್ಯೆಗೆ ಬಂದರು. ರಾಜನು ಅವರನ್ನು ಇದಿರುಗೊಂಡು ಉತ್ತಮವಾದ ಪಾತ್ರದಾನ ಮಾಡಿದನು. ಕೂಡಲೆ ಪಂಚಾಶ್ಚರ್ಯಗಳುಂಟಾದುವು.

---

1. ಱೆ (ಮ) 2. ಱ (ಮ)

ವ॥ ತದನಂತರಂ ಭಟ್ಟಾರಕರರಸನಂ ಪರಸಿ ಬಿಜಯಂಗೆಯ್ದುರುರ್ವರಾಸ್ಯತಿಲಕನಪ್ಪ ಮೇಘರಥ ನರೇಂದ್ರನುಪ[ವಾ]ಸದ ಮೇಗೆ ದೊರೆಕೊಂಡುತ್ತಮಪಾತ್ರದಾನದ ಸಂತಸದಿಂ ತಣಿದುದಂ ಪುನರುಕ್ತಂ ಮಾಳ್ಪಂತೆ ದಿವ್ಯಾಹಾರಮಂ ಪಾರಿ ಸುಖಮಿರೆ ಮತ್ತೊಂದು ಚತುರ್ದಶೀ ವಾಸರ ರಜನೀಸಮಯದೊಳ್ ಮೇಘರಥಂ ಮನಃಪ್ರೀತಿರಥನ ಪ್ರತಿರಥನುಪವಾಸನಿರತಂ ಜಿನಮಂದಿರದ ಮುಂದಣ ಮಂಟಪದಲ್ಲಿ ರಾತ್ರಿ ಪ್ರತಿಮಾಯೋಗದೊಳಿರೆ—

ಕಂ॥ ಸಾಂದ್ರನತಿವಿತತನೀಶಾ
ನೇಂದ್ರಂ ಪೊಡೆವಡೆ ನೆಲಕ್ಕೆ ದಿವಿಜರ್ ನುತ ದೇ
ವೇಂದ್ರ ಭವನ್ನಮನಕ್ಕೆ ಜಿ
ನೇಂದ್ರಂ ದೊರೆ ಬೆಸಸದೇಕೆ ನೆಲಕೆಜಗಿದಪ್ಪೆ ॥ ೯೬ ॥

ವ॥ ಎಂಬುದುಮೀಶಾನೇಂದ್ರಂ—

ಉ॥ ಅಪ್ರತಿಮಂ ನೃಪೇಂದ್ರನುಪವಾಸವಿಧಾನದಿನಿರ್ದನಲ್ಲೆ ರಾ
ತ್ರಿಪ್ರತಿಮಾನ್ವಿತಂ ಜಿನಗೃಹಾಗ್ರದ ಮಂದರದಲ್ಲಿ ಸರ್ವಲೋ
ಕಪ್ರಿಯನಪ್ಪ ಮೇಘರಥ ನಾವಿಭುಗಾನತನಾದೆನಿಂ ತ್ರಿಲೋ
ಕಪ್ರಭುವಪ್ಪನಾತನೆನೆ ಗರ್ವದಿನಿರ್ವರಪೂರ್ವ ರೂಪೆಯರ್ ॥ ೯೭ ॥

ಕಂ॥ ಅಮರಿಯರಾತನ ನಿಯಮಮ
ನಮೋಘನವಯವದಿನಱಿವೆಮೆಂದಿೞಿತಂದು
ತ್ರಮಯೋಗ ಭಂಗಮಂ ಮಾ
ಡೆ ಮಂದರಾಚಳ ನಿರಾಕುಳಂ ಜಿನಚಂದ್ರಂ ॥ ೯೮ ॥

ವ॥ ಬಳಿಕ ಮುನಿಗಳು ಅರಸನನ್ನು ಆಶೀರ್ವದಿಸಿ ಹೊರಟುಹೋದರು. ಮೇಘರಥ ರಾಜನಿಗೆ ಉಪವಾಸಾನಂತರ ಉತ್ತಮ ಪಾತ್ರದಾನದ ಸಂತೋಷದಿಂದ ಈಗಾಗಲೆ ತೃಪ್ತಿಯಾಗಿತ್ತು. ಅದನ್ನು ಪುನರುಕ್ತಗೊಳಿಸುವಂತೆ ಉತ್ತಮಾಹಾರವನ್ನು ಸೇವಿಸಿ ಸುಖದಿಂದಿದ್ದನು. ಹೀಗಿರುತ್ತ ಮತ್ತೊಂದು ಚತುರ್ದಶಿಯ ರಾತ್ರಿ ಮೇಘರಥನು ಉಪವಾಸ ವ್ರತದಲ್ಲಿ ತೊಡಗಿ ಜಿನಾಲಯದ ಮುಂದಿನ ಅಂಗಳದಲ್ಲಿ ಪ್ರತಿಮಾಯೋಗದಿಂದ ನಿಂತಿರಲಾಗಿ—

೯೬. ಈಶಾನೇಂದ್ರನು (ತಾನಿದ್ದಲ್ಲಿಯೆ) ನೆಲಕ್ಕೆ ಬಾಗಿ ನಮಸ್ಕಾರ ಮಾಡಿದನು ; ಆಗ ಅಲ್ಲಿಯ ದೇವತೆಗಳು "ದೇವೇಂದ್ರನೆ, ಜಿನೇಂದ್ರನಿಗೆ ಮಾತ್ರ ನೀನು ನಮಸ್ಕಾರ ಮಾಡುವವನು. ಈಗ ಅದೇಕೆ ನೆಲಕ್ಕೆ ಬಾಗಿದೆ ? ಹೇಳು" ಎಂದರು.

ವ॥ ಹೀಗೆನ್ನಲಾಗಿ ಈಶಾನೇಂದ್ರನು—

೯೭. ಅನುಪಮನಾದ ಮೇಘರಥ ರಾಜೇಂದ್ರನು ಉಪವಾಸವಿಧಿಯಿಂದ ಜಿನಾಲಯದ ಅಂಗಳದಲ್ಲಿ ರಾತ್ರಿಯೆಲ್ಲ ಯೋಗದಲ್ಲಿ ನಿಂತಿರುವನು. ಆದುದರಿಂದ ಆತನಿಗೆ ನಮಸ್ಕರಿಸಿದೆನು. ಇನ್ನು ಮೂರು ಲೋಕಗಳಿಗೆ ಪ್ರಭುವಾಗ ತಕ್ಕವನು ಆತನೇ" ಎಂದು ಹೇಳಿದನು. ಈ ಮಾತನ್ನು ಕೇಳಿ ಗರ್ವಿಷ್ಠೆಯರೂ ಅಪೂರ್ವ ಸುಂದರಿಯರೂ ಆದ ಇಬ್ಬರು—

೯೮. ದೇವಾಂಗನೆಯರು "ಆತನ ಯೋಗಶಕ್ತಿ ಎಂತಹದೆಂಬುದನ್ನು ಸುಲಭವಾಗಿ ನೋಡುವೆವು" ಎಂದು ಇಳಿದು ಬಂದು ಆತನ ತಪಸ್ಸಿಗೆ ಭಂಗವುಂಟುಮಾಡಲು ಯತ್ನಿಸಿದರು. ಆದರೆ ಆತನು ಮಂದರಪರ್ವತದಂತೆ ನಿಶ್ಚಲವಾಗಿ ನಿಂತು

ಕಂ॥ ಅರಜ[1]ನೆ[1]ಯುಂ ವಿರಜನಿಯುಂ
ಪರಾಜಿತಂ ಮಾಡಿ ಭಾವಿಸುತ್ತಿರ್ದಂ ಪ
ನ್ನೆರಡುಮನನುಪ್ರೇಕ್ಷೆಗಳಂ
ಗ [ಂ] [2]ನೆರೆಯದುವನೆ[2] ಪರಲದೇಂ ನೆ[3]ರೆ[3]ವಪ್ಪುದೇ ॥ ೯೯ ॥

ವ॥ ಆ ದಿವಿಜವನಿತೆಯರನಿತಾನುಂ ತೆಱದ ಶೃಂಗಾರಚೇಷ್ಟೆಗಳನುಪಯೋಜಿಸಿಯುಮೆಂತುಮೇಗೆಯ್ದುಮಾ ಜಂಗಮ ಮೇರುವೆನಿಸಿದ ಸೌಜನ್ಯಕಂದಾಂತುರನಂ ಸಂಚಳಿಸಲಾಱದೆ ಸಿಗ್ಗಿನನುಕಂಪೆಯುಂ ತರೆ ವಿನಯವಿನಮಿತೋತ್ತಮಾಂಗೆಯರ್ ಬಿಜ್ಜಳಿಯುಂ ಮೆಚ್ಚಿಯುಂ ಪೋದರಿತ್ತರಾಜ್ಯಾಶ್ರಮ ಗುರೂರ್ವರಾಪತಿತಿಲಕಂ ಯಾಮಿನೀವಿಯೋಗಮಂ ನಿರ್ವರ್ತಿಸಿ ರಾಜಮಂದಿರಕ್ಕೆ ವಂದು ಪಾರಣಾವಿಧಿಯೊಳಮೃತಾಹಾರಮನಾರೋಗಿಸಿ—

ಕಂ॥ ಪೊರೆಯದವೋಲ್ [4]ನೀ[4]ರಂ ನೀ
ರರುಹಂ ಸಪ್ತಾಂಗ ರಾಜ್ಯ ಭರದೊಳ್ ನಿಲೆ ಮೇ
ಘರಥಂಗೆ ತಪಂಗೆಯ್ವಂ
ತಿರೆ ರಾಜ್ಯಂಗೆಯ್ಯೆ ಪೋಯ್ತಮೇಯಂ ಪ್ರಾಯಂ ॥ ೧೦೦ ॥

ವ॥ ಅಂತು ರಾಜ್ಯಂಗೆಯ್ಯುತ್ತಿರೆ—

ಕಂ॥ ದಯಿತಾ ಸೌಂದರ್ಯದ ಲೀ
ಲೆಯ ಕಾಂತೆಯ ಮಾತು ಪುಟ್ಟೆ ಮೇಘರಥಮನಃ
ಪ್ರಿಯೆಯಾಗಿರ್ದಾ ಪ್ರಿಯಮಿ
ತ್ರೆಯ ರೂಪಂ ಸಭೆಗೆ ಪೊಗಟ್ದನೀಶಾನೇಂದ್ರಂ ॥ ೧೦೧ ॥

---

೯೯. ಅರಜನಿ ಮತ್ತು ವಿರಜನಿಯೆಂಬ ಆ ಇಬ್ಬರನ್ನೂ ಸೋಲಿಸಿ, ಹನ್ನೆರಡು ಅನುಪ್ರೇಕ್ಷೆಗಳನ್ನು ಭಾವಿಸುತ್ತಲೆ ಇದ್ದನು. ಬಿಟ್ಟದ ಕೈಯಲ್ಲಿಯೆ ಆಗದ ಕೆಲಸವನ್ನು ಒಂದು ಹರಳು ಮಾಡಬಲ್ಲುದೆ ?

ವ॥ ಆ ದೇವಾಂಗನೆಯರು ಎಷ್ಟೋ ಬಗೆಯ ಶೃಂಗಾರ ಚೇಷ್ಟೆಗಳನ್ನು ಮಾಡಿ ನೋಡಿದರು. ಆದರೆ ಏನು ಮಾಡಿದರೂ ಜಂಗಮ ಮೇರುಪರ್ವತವೆನಿಸಿದ ಆ ಸುಜನಪ್ರಿಯನನ್ನು ಮರುಳುಗೊಳಿಸಲಾರದೆ ಜುಗುಪ್ಸೆಗೊಂಡು, ದೀನರಾಗಿ, ವಿನಯದಿಂದ ತಲೆಬಾಗಿ ಹೊರಟುಹೋದರು. ಮೇಘರಥನು ರಾತ್ರಿಯೋಗವನ್ನು ಮುಗಿಸಿ ಅರಮನೆಗೆ ಬಂದು, ಪಾರಣಾವಿಧಿಯಿಂದ ಅಮೃತಸಮಾನವಾದ ಆಹಾರವನ್ನು ಸೇವಿಸಿದನು.

೧೦೦. ನೀರಲ್ಲಿಯೆ ಹುಟ್ಟಿದ ತಾವರೆ ನೀರನ್ನು ಮುಟ್ಟದೆ ಇರುವಂತೆ, ಸಪ್ತಾಂಗ ರಾಜ್ಯವನ್ನು ಆತನು ನಿರ್ಲಿಪ್ತಭಾವದಿಂದ ಪಾಲಿಸುತ್ತಿದ್ದನು. ತಪಸ್ಸನ್ನು ಆಚರಿಸಿದಂತೆ ರಾಜ್ಯದ ಆಡಳಿತವನ್ನು ನಡೆಸಿಕೊಂಡು ಹೋಗುತ್ತ ಅಪರಿಮಿತವಾದ ಪ್ರಾಯ ಕಳೆಯಿತು.

ವ॥ ಹೀಗೆ ರಾಜ್ಯವಾಳುತ್ತ ಇರಲಾಗಿ—

೧೦೧. ಈಶಾನೇಂದ್ರ ಸಭೆಯಲ್ಲಿ ಸ್ತ್ರೀಯರ ಸೌಂದರ್ಯ ಹಾಗು ವಿಲಾಸದ ಮಾತು ಬಂದಾಗ ಈಶಾನೇಂದ್ರನು ಮೇಘರಥನ ಮನೋರಮೆಯಾದ ಪ್ರಿಯಮಿತ್ರೆಯ ರೂಪವನ್ನು ಹೊಗಳಿದನು.

---

1. ನಿ (ಮ) 2. ನೆಱೆಯದುಮೇಗೆ (ಅ) 3. ಜ[3] (ಅ) 4. ಕೀ (ಮ)

ವ॥ ಅಂತೀಂದ್ರನ ಪೊಗೞ್ತೆಯುಂ ಕೇಳ್ದೞ್ತಿಯಿಂದಿರ್ವರ್ ದೇವಿಯರಾಕೃತಿಯ ಪರಾವರ್ತನದಿಂ ಮಾನವಸ್ತ್ರೀರೂಪದಿಂ ಪ್ರಿಯಮಿತ್ರೆಯುಂ ನೋಡಲ್ಬಂದರಮನೆಯ ಬಾಗಿಲೊಳ್ ನಿಂದು ದೌವಾರಿಕ ನಿವೇದಿತನಿಜಾಗಮನೆಯರ್ ಪ್ರಿಯಮಿತ್ರೆ ಮಜ್ಜನಂಬುಗುವಿನಮಿರ್ದರ್ ತದವಸಾನದೊಳಶೇಷಭೂಷಣಭೂಷಿತೆಯುಂ ಪಡಿಯುಟ್ಟುಂ ಕಾಣಿಸಿಯುಂ ಕಂಡೀಶಾನೇಂದ್ರನ ಪೇೞ್ದ ವಿವರಮಾಕೆಯ ರೂಪಳುಂಬಮಾದೊಡಂ ಸಮ್ಮ ಮುನ್ನ ನೋಡಿದಾಲಿಗೀಗಳ್ ಕಿಂಚಿನ್ಮಾತ್ರಂ ಕುಂದಿರ್ದುದೆಂದು ತಮ್ಮೊಳ್ ನುಡಿವರನದೇ[1]ನೆಂದ[1]ರೆಂದಾಬೆಸಗೊಳೆ ಮಗುೞ್ದು ಮದನೆ ನುಡಿದೊಡೆ [2]ನೀಮೆನ್ನಂ[2] ಮುನ್ನೇಗಳ್ ಕಂಡಿರೆಂಬುದುಮೀಶಾನೇಂದ್ರಂ ಬಣ್ಣಿಸೆ ತಮ್ಮ [3]ಬಂದುದುಮ[3]ದೃಶ್ಯರೂಪದಿನಭ್ಯಂಗನ ಕಾಲದೊಳ್ ಕಂಡುದುಮಂ ಸಪ್ರಪಂಚಮಱಿಪಿ ರೂಪಂ ಬಣ್ಣಿಸಿ ಪೋಪುದುಮಲ್ಲಿ—

ಕಂ॥ ಮಾನಿಸರೊಳ್ಸಂ ಬಾೞುಮ
ದೇನಲ್ಪಮದೇನಸಾರವಿಸ್ತಾರಮದೇಂ
ಮಾನಮದೇಂ ವಿಪುಳಮದೇಂ
ದೀನಮದೇಂ ಸ್ತೋಕಸುಖಮದೇನಧ್ರುವಮೋ ॥ ೧೦೨ ॥

ವ॥ ಎಂದು ದೀನಜನ ದುರ್ಲಭ ಬುದ್ಧಿಯಪ್ಪ ಪ್ರಿಯಮಿತ್ರೆ ತನ್ನಂತರಂಗದೊಳ್ ಬಗೆವನುವೆ ಪೊೞ್ತಾಗೆ ಪೋಗಿ ನಿಜಾಧಿಪತಿಗದೆಲ್ಲಮಂ ನಱಿಪುವುದುಮಾ ಮಹಾನುಭಾವಂ—

ಮ॥ ಸ್ರ॥ ಮನದೊಳ್ ನಿರ್ವೇದಮಾದಂ ದೊರೆಕೊಳೆ ಭವಸಂಬಂಧದೊಳ್ ತೊಟ್ಟ ಸಂಭಾ
ವನೆ ಚಿತ್ತಂಬೊಕ್ಕು ಹಸ್ತಾಮಳಕದ ತೆಱದಿಂ ತೋಱಿ ಪಾಱೇಟಿ ದುರ್ಭಾ
ವನೆ ಲಕ್ಷ್ಮೀವಲ್ಲಭಂ ಪೊಲ್ಲದು ತಡೆದೊಡದಕ್ಕಿನ್ನೆಗಂ ಕೆಮ್ಮಗಿರ್ದಂ
ದನವದ್ಯೋದ್ಯೋಗನಾಗಳ್ ಪಿಡಿದು ದೃಢರಥಂಗೆಂದನಾ ರಾಜರಾಜಂ ॥ ೧೦೩ ॥

ವ॥ ಈಶಾನೇಂದ್ರನ ಬಾಯಿಂದ ಬಂದ ಹೊಗಳಿಕೆಯನ್ನು ಕೇಳಿ, ಪ್ರತ್ಯಕ್ಷವಾಗಿ ನೋಡಬೇಕೆಂಬ ಕುತೂಹಲದಿಂದ ಇಬ್ಬರು ದೇವಿಯರು ಮಾನವ ವೇಷವನ್ನು ಧರಿಸಿ ಅರಮನೆಯ ಬಾಗಿಲಿಗೆ ಬಂದು ದ್ವಾರಪಾಲಕನಿಂದ ಹೇಳಿಕಳಿಸಿದರು. ಪ್ರಿಯಮಿತ್ರೆಯು ಸ್ನಾನಮಾಡಿ ಬರುವವರೆಗೆ ಕಾಯಬೇಕೆಂದು ಪ್ರತೀಹಾರನು ಅವರನ್ನು ತಡೆದು, ಸ್ನಾನಾನಂತರ ಸಂಪೂರ್ಣವಾಗಿ ಅಲಂಕರಿಸಿಕೊಂಡ ಪ್ರಿಯಮಿತ್ರೆಯನ್ನು ಅವರಿಗೆ ಕಾಣಿಸಿದನು. ಅವಳನ್ನು ನೋಡಿ ಈ ದೇವಾಂಗನೆಯರು, "ಈಶಾನೇಂದ್ರನು ಹೇಳಿದಂತೆ ಈಕೆಯ ರೂಪವು ಅತಿಶಯವಾಗಿದ್ದರೂ ನಾವು ಬಂದ ತಕ್ಷಣ ಕಂಡ ರೂಪಕ್ಕಿಂತ ಈಗಿನ ರೂಪ ಕೊಂಚ ಕುಂದಿದೆ" ಎಂದು ತಂತಮ್ಮಲ್ಲಿಯೆ ಮಾತಾಡಿಕೊಂಡರು. ಅದೇನು ನಿಮ್ಮ ಮಾತೆಂದು ಕೇಳಲಾಗಿ ಅದನ್ನೇ ಅವಳಿಗೆ ಕೇಳುವಂತೆ ಹೇಳಿದರು. "ನನ್ನನ್ನು ಈ ಮೊದಲೆ ನೀವು ಯಾವಾಗ ಕಂಡಿರಿ?" ಎನ್ನಲಾಗಿ, ಈಶಾನೇಂದ್ರನು ಮಾಡಿದ ವರ್ಣನೆಯನ್ನು ಕೇಳಿದೊಡನೆ, ಬಂದು ಅದೃಶ್ಯರೂಪದಿಂದ ನಿಂತು ಸ್ನಾನಕಾಲದಲ್ಲಿ ಅವಳನ್ನು ತಾವು ಕಂಡದನ್ನೂ ಆಮೇಲೆ ಪ್ರತ್ಯಕ್ಷವಾಗಿ ಕಂಡುದನ್ನೂ ಸವಿಸ್ತಾರವಾಗಿ ತಿಳಿಸಿ, ಆಕೆಯ ಸೌಂದರ್ಯವನ್ನು ಹೊಗಳಿ ಹೋದರು.

೧೦೨. "ಮನುಷ್ಯರ ಸೌಂದರ್ಯವಾಗಲಿ, ಬದುಕಾಗಲಿ, ಸೊಗಸಾಗಲಿ ಎಷ್ಟು ನಿಸ್ಸಾರವಾದುದು! ಎಷ್ಟೊಂದು ವಿಸ್ತಾರವಾಗಿ, ವಿಪುಲವಾಗಿ ಕಂಡರೂ ಅದರ ಸುಖ ಅದೆಷ್ಟು ಅಲ್ಪ, ದೀನ ಹಾಗು ನಶ್ವರವಾದುದು!"

ವ॥ ಹೀಗೆಂದು ಉದಾತ್ತಬುದ್ಧಿಯವಳಾದ ಪ್ರಿಯಮಿತ್ರೆ ತನ್ನ ಮನದೊಳಗೇ ಯೋಚಿಸಿ, ಆಗಿಂದಾಗಲೆ ಹೋಗಿ ತನ್ನ ಪತಿಗೆ ಅದೆಲ್ಲವನ್ನೂ ಅರಿಕೆಮಾಡಿಕೊಂಡಳು. ಆಗ ಆ ಮಹಾನುಭಾವನಿಗೆ—

೧೦೩. ಅಂತರಂಗದಲ್ಲಿ ವೈರಾಗ್ಯಭಾವ ಅಧಿಕವಾಗಿ ಸಂಸಾರ ವಿಷಯದಲ್ಲಿ ತಾಳಿದ ಸಂಭಾವನೆ ಅಂಗೈನೆಲ್ಲಿಯಂತೆ ಸುಸ್ಪಷ್ಟವಾಗಿ ಚಿತ್ತಕ್ಕೆ ವೇದ್ಯವಾಯಿತು. (ಮೋಹದ) ದುಷ್ಟಭಾವನೆ ಹಾರಿಹೋಗಿ, "ಇನ್ನು ತಡೆಯುವುದು ಯೋಗ್ಯವಲ್ಲ. ಈವರೆಗೆ ಸುಮ್ಮನಿದ್ದುದೇ ಸಾಕು" ಎಂದು ಪರಿಶುದ್ಧವಾದ ಕ್ರಮವನ್ನು ಕೈಕೊಳ್ಳುವ ನಿರ್ಧಾರಮಾಡಿ ರಾಜೇಂದ್ರನು ದೃಢರಥನಿಗೆ ಹೀಗೆಂದನು :

---

1. ನೆಂದಱಿಪಿ (ಮ) 2. ನೀಮೊಂದಂ (ಮ) 3. ಬಂದುದನ (ಮ)

ಚಂ॥ ಗುಣನಿಧಿ ನಂದಿವರ್ಧನನನಾಡುವನಾಳ್ವೆಸಕೆಯ್ಸಿ ನಿಶ್ವಧಾ
ರಿಣಿಯುನವಜ್ಞೆಗೆಯ್ಯುದೆನಗಂ ಬೆಸಕೆಯ್ವೊಡೆ ಪಾಳಿಸಾಂತ ಬ
ಲ್ಕಣೆಯುನಘಾರಿಯುಂ ತವಿಪಕಾಲಮದಿನ್ನೆ[1]ನಗಮ್ಮ[1] ಪುಂಡರೀ
ಕಿಣಿಗೆಣೆ ಪುಂಡರೀಕಿಣಿ ಭವದ್ಭುಜರಕ್ಷಿತೆಯಕ್ಕೆ ಸಿಕ್ಕುಮಾ ॥ ೧೧೪ ॥

ಕಂ॥ ಎನೆ ದೃಢರಥನೆಂದಂ ನಿಮ
ಗಿನಿತುಂ ಬೆಸಕೆಯ್ಸಿದೀ ಕುಲಶ್ರೀ ಮತ್ತೆಂ
ತೆನಗೆ ಹಿತಂ ಮಾೞ್[3]ಪ್ಪೊಳದಿಂ
ತನಿಷ್ಟಮಂ [2]ಕೂರ್ಪರಿಂತು[2] ಕೆಯ್ಕೊಳಿಸುಗುಮೇ ॥ ೧೧೫ ॥

ವ॥ ಎಂಬುದುಮಾತನ ಮನದ ಪರಿಚ್ಛೇದಮನಱಿದು ನಿಜಕುಲನಂದನವರ್ಧನ ನಿಮಿತ್ತಂ ನಂದಿವರ್ಧನಂಗೆ ವಸುಂಧರಾಭಾರಮಂ ನಿತ್ತು ಮೇಘರಥಂ ದೃಢರಥ ಸಮೇತಮನೇಕರಾಜನಿಕುರುಂಬ ಬಲಂ ಬೆರಸು ತ್ರೈಲೋಕ್ಯಾದಿರಾಜಂ ಘನರಥತೀರ್ಥಕರನಾತಂಗೆ ಮುಕ್ತಿಕಂಠಿಕಾ ಹೇಮ[3]ಕಂಠಂ ಯುವರಾಜನಾಗಿ ಪರಮದೀಕ್ಷಾಪರಿಗ್ರಹ ಪವಿತ್ರ[3] ಪರಿಗ್ರಹನಾದಂ. ಪ್ರಿಯಮಿತ್ರೆಯುಮನೇಕರಾಜಕುಲಸ್ತ್ರೀಸಮನ್ವಿತೆ ಸುವ್ರತಾರ್ಯಿಕಾಸನ್ನಿಧಾನದೊಳಂ ಗುಣರೂಪ ಸಮನ್ವಿತೆಯಾದಳ್ ಮೇಘರಥಮುನೀಂದ್ರನುಂ ದೃಢರಥಯತೀಂದ್ರನುಂ ಬೆರಸು ದ್ವಾದಶಾಂಗ ಚತುರ್ದಶಪೂರ್ವಮಂ [4]ನೆಱೆಯೆ[4] ಕಲ್ತು ತ್ರಿಜಗದ್ಗುರುನಿವಾಸಮನಗಲ್ದೇಕ ವಿಹಾರದೊಳ್ ಮಹಾರಣ್ಯನಿವಿಷ್ಟಂ ಮೊದಲಸಾಕಾರನಿರಾಕಾರ ಭೇದಭಿನ್ನಮಪ್ಪನಶನ ತಪದೊಳಮೆರಡನೆ[5]ಯೇಕಕಬಲಾದ್ಯೇಕಸಿಕ್ಥಾನ[5]ವಸಾನದೊಳ್ [6]ಮೆಱೆವ[6]ವಮೋದರ್ಯ ತಪದೊಳಂ ಮೂಱನೆಯ ಗ್ರಾಸಪರಿಮಾಣದೊಳ್ ಉಣ್ಬಾವೃತ್ತಿಪರಿಸಂಖ್ಯಾನ ತಪದೊಳಂ ನಾಲ್ಕನೆಯ ಸರ್ವರಸ[7]ವರ್ಜ[7]ನಾವ್ಯವಹಾರ ರೂಪರಸಪರಿತ್ಯಾಗ ತಪದೊಳಂ ಅಯ್ದನೆಯ ಮೃಗಪಶುಸ್ತ್ರೀನಪುಂಸಕವ್ಯಪೇತ ಸ್ಥಾನಾವಾಸಲಕ್ಷಣಮಪ್ಪ [ವಿ] ವಿಕ್ತಾವಾಸ ತಪದೊಳಂ ನೆಱೆಯೆ ನೆಗೞ್ದಾಱನೆಯ ಕಾಯಕ್ಲೇಶತಪದೊಳ್[8]ವರ್ಷ[8] ಕಾಲದೊಳಂ ಭಯಂಕರಾಕಾರಮಪ್ಪ ಕಾರ ಕಾರಿರುಳೊಳ್—

---

೧೧೪. "ಗುಣನಿಧಿಯೆ, ನಂದಿವರ್ಧನನಿಂದ ಸೇವೆ ಮಾಡಿಸಿಕೊಳ್ಳುತ್ತ ಈ ಸಕಲ ಭೂಮಿಯ ಆಡಳಿತವನ್ನು ನೀನು ವಹಿಸಿಕೊ. ಪಾಪ ನಿರ್ಮೂಲನಕ್ಕೆ ಹೊರಡುವ ಸಮಯ ನನಗೆ ಪ್ರಾಪ್ತವಾಗಿದೆ. ಕಮಲ ಸರೋವರದಂತೆ ಇರುವ ಈ ಪುಂಡರೀಕಿಣಿಪುರಕ್ಕೆ ಇನ್ನು ನಿನ್ನ ತೋಳುಗಳೆ ರಕ್ಷೆಯಾಗಲಿ."

೧೧೫. ಈ ಮಾತಿಗೆ ದೃಢರಥನು ಹೀಗೆಂದು ಉತ್ತರಿಸಿದನು : "ಈವರೆಗೆ ನಿಮ್ಮ ಸೇವೆ ಮಾಡುತ್ತ ಬಂದ ಕುಲಲಕ್ಷ್ಮಿ ನನಗೆ ಹೇಗೆ ಹಿತವಾದಾಳು ? ಪ್ರೀತಿಯುಳ್ಳವರು ಹೀಗೆ ಅನಿಷ್ಟವನ್ನು ಕೊಡಮಾಡುವರೆ ?"

ವ॥ ಹೀಗೆಂದ ಆತನ ಮನದ ನಿರ್ಧಾರವನ್ನು ಅರಿತು ಮೇಘರಥನು ತನ್ನ ವಂಶವರ್ಧನೆಯ ದೃಷ್ಟಿಯಿಂದ ನಂದಿವರ್ಧನನಿಗೆ ರಾಜ್ಯಭಾರವನ್ನು ಒಪ್ಪಿಸಿ, ದೃಢರಥನೊಡನೆ ಹಲವಾರು ಜನ ರಾಜರುಗಳನ್ನೂ ಒಡಗೊಂಡು ಹೋಗಿ ಘನರಥ ತೀರ್ಥಂಕರನ ಪಾದಸನ್ನಿಧಿಯಲ್ಲಿ ತಪೋದೀಕ್ಷೆಯನ್ನು ಪಡೆದನು. ಪ್ರಿಯಮಿತ್ರೆಯೂ ಅನೇಕ ರಾಜಕುಲಸ್ತ್ರೀಯರೊಡನೆ ಸುವ್ರತೆಯೆಂಬ ಆರ್ಯಿಕೆಯ ಸಮಕ್ಷದಲ್ಲಿ ವ್ರತವನ್ನು ಸ್ವೀಕರಿಸಿದಳು. ಮೇಘರಥ ಮುನೀಂದ್ರನು ದೃಢರಥ ಯತೀಶ್ವರನೊಂದಿಗೆ ದ್ವಾದಶಾಂಗ ಚತುರ್ದಶ ಪೂರ್ವವನ್ನು ಕಲಿತು ತ್ರಿಲೋಕಗುರುವಿನ ನಿವಾಸವನ್ನು ಬಿಟ್ಟು ಏಕವಿಹಾರಿಯಾಗಿ ಕಾಡಿನಲ್ಲಿ ಹೊಕ್ಕು ಸಾಕಾರ ಮತ್ತು ನಿರಾಕಾರವೆಂಬ ಎರಡು ಭೇದಗಳುಳ್ಳ ಅನಶನ ತಪವನ್ನೂ, ಎರಡನೆಯದಾದ ಅವಮೋದರ್ಯ ತಪವನ್ನೂ, ಮೂರನೆಯದಾದ ವೃತ್ತಿಪರಿಸಂಖ್ಯಾನ ತಪವನ್ನೂ, ನಾಲ್ಕನೆಯದಾದ ಸರ್ವರಸ—ನಾನಾ ಬಗೆಯಾದ ರಸ—ಪರಿತ್ಯಾಗ ತಪವನ್ನೂ, ಐದನೆಯದಾದ ಮೃಗ ಪಶು ಸ್ತ್ರೀ ನಪುಂಸಕ—ಇವರಾರೂ ಇಲ್ಲದಂತಹ ಸ್ಥಾನದಲ್ಲಿ ವಾಸಮಾಡುವ ವಿವಿಕ್ತಾವಾಸ ತಪವನ್ನೂ ಚೆನ್ನಾಗಿ ನೆರವೇರಿಸಿ ಆರನೆಯದಾದ ಕಾಯಕ್ಲೇಶ ತಪವನ್ನು ಕೈಕೊಂಡು....ಕಾಲದಲ್ಲಿಯೂ, ಭೀಕರವಾದ ಮಳೆಗಾಲದ ಕಗ್ಗತ್ತಲೆಯ ರಾತ್ರಿಯಲ್ಲಿ—

---

1. ನಗದು (ಮ) 2. ಕೂರ್ಪನಱಿದು (ಅ) 3. ಕಂಠ ××× (ಮ) 4. × (ಮ) 5. × (ಮ) 6. ನೆಱದ (ಅ) 7. × (ಮ) 8. × (ಮ)

೬೦॥ ಪೋಬಿಲ ಪಾವಡರೆ [ಸಿ]ಡಿಲ್
ಬೀೞ್ ಮರಂ ಮುಱಿಯೆ ಗಾಳಿ ಕೊಳೆ ವಿಟಪಂ ಪಾ
ಱೇೞ್ ಚಿರಂ ಮರವೊದಲೊಳ್
ಬೀಬಲ್ ನಿಲ್ವಂತೆ ನಿಶ್ಚಲಂ ಮುನಿ ನಿಂದಂ ॥ ೧೭೬ ॥

ವ॥ ಮತ್ತಂ ಹೇಮಂತ ಶಿಶಿರದೊಳ್—

ಕಂ॥ ಅವಿರಳಶಿಶಿರಕಣಂ [2]ಮೆಯ್[2]
[ನವಿರೊಳ್] ಪನಿಪುಲ್ಲ ತೆಱನನನುಕರಿಸಿರೆ ಯೋ
ಗವಶೀಕೃತಾಂ [ಗ] ಕಂ ಬೆ
ಳ್ವಾಸದೊಳ್ ಮೇಘರಥಮುನೀಂದ್ರಂ ನಿಂದಂ ॥ ೧೭೭ ॥

ಉ॥ ಪೊಂಪುೞಿಯೊಯ್ತು ದೀಪ್ತತಪಮೆಂಬಿನಮುರ್ಕರಂಗಳತ್ತಮಿ
ತ್ತಂ ಪುದಿದುಷ್ಣ ರಶ್ಮಿ ಪುರುಷಾಕೃತಿಯಂತಿರೆ ನಿತ್ಯಯೋಗನಿ
ಷ್ಕಂಪಮ[3]ನ[3]ಂಗೆ [4]ಶಾಂತಮನು[4]ತಾಪಮನಾೞಿಸಿ ತಂ[ದುದಂ]ದು ಬ
ದ್ದೊಂ ಪೆಡೆ[5]ದಿರ್ದವೋಲ್ ಮುನಿಗೆ ಕಲ್ಗಲೆ ಬಲ್ಗಲೆಯುಂ ನಿದಾಘದೊಳ್ ॥ ೧೭೮ ॥

ವ॥ ಮತ್ತಮೋಗಣಾಬ್ಯಂತಪದೊಳಗಂ ಪ್ರಾಯಶ್ಚಿತ್ತ ವಿನಯ ವೈಯಾಪೃತ್ಯ ಸ್ವಾಧ್ಯಾಯಧ್ಯಾನಕಾಯೋತ್ಸರ್ಗಂಗಳಂ ನಿಟ್ಟೆವಡಿಸಿ ಮೂಲೋತ್ತರಗುಣಂಗಳನುತ್ತರೋತ್ತರಂ ಪೆರ್ಚಿಸಿ—

ಕಂ॥ ಸಂಶಯ[ಮಣ]ಮಿಲ್ಲದೆ[6][ದಮ]
ದಿಂ ಶಮದಿಂ ತತ್ಕ್ಷುಧಾಪಿಪಾಸಾದಿ ದ್ವಾ
ವಿಂಶತಿ ವಿಷಮಪರೀಷಹ
ವಂಶಮನಶ್ರಮದಿನಾ ಮುನೀಂದ್ರಂ ಗೆಲ್ದಂ ॥ ೧೭೯ ॥

---

೧೭೬. ಮರದ ಪೊಟರೆಯಿಂದ ಹಾವು ಬಂದು ಅಡರಿತು; ಸಿಡಿಲು ಬಿದ್ದಿತು; ಮರ ಮುರಿದು ಬಿದ್ದಿತು; ಗಾಳಿ ಬೀಸಿ ಮರ ಛಿನ್ನವಿಚ್ಛಿನ್ನವಾಯಿತು. ಇಷ್ಟೆಲ್ಲ ಆದರೂ ಬೀಳಲಿನಂತೆ ಮುನಿಯು ಮರದ ಬುಡದಲ್ಲಿ ನಿಶ್ಚಲನಾಗಿ ನಿಂತಿದ್ದನು.

ವ॥ ಮತ್ತು ಹೇಮಂತ ಶಿಶಿರ ಋತುಗಳಲ್ಲಿ—

೧೭೭. ಹಿಮದ ಕಣಗಳು ದಟ್ಟವಾಗಿ ಹುಲ್ಲಿನ ಮೇಲಿನ ಹನಿಗಳಂತೆ ತಲೆಗೂದಲಲ್ಲಿ ತುಂಬಿದರೂ ಯೋಗನಿಷ್ಠನಾದ ಮೇಘರಥ ಮುನೀಶನು ಬೆಳ್ವಾಸದಲ್ಲಿ ಸ್ಥಿರವಾಗಿ ನಿಂತನು.

೧೭೮. ತಪಸ್ಸಿನಿಂದ ಉಂಟಾದ ಬುದ್ಧಿಯು ಮೂಲಕ 'ದೀಪ್ತತಪ' (ಸೂರ್ಯ ಸಮಾನವಾದ ದೇಹಕಾಂತಿ) ಪ್ರಾಪ್ತವಾಗಲು, ಸುತ್ತುಮುತ್ತಲೂ ವ್ಯಾಪಿಸಿದ ಬಿಸಿಲಿನಿಂದ ಸೂರ್ಯನೇ ಪುರುಷಾಕೃತಿಯನ್ನು ತಾಳಿ ನಿಂತನೊ ಏನೊ ಎಂಬಂತೆ ನಿಶ್ಚಲವಾದ ಯೋಗದಲ್ಲಿ ಲೀನನಾಗಿ ಆ ಯೋಗಿಯು ಬೇಸಗೆಯಲ್ಲಿ ಕಾದ ಕಲ್ಲಿನ ಮೇಲೆ ಶಾಂತನಾಗಿಯೂ ನಿಶ್ಚಲನಾಗಿಯೂ ನಿಂತಿದ್ದನು.

ವ॥ ಆಮೇಲೆ ಪ್ರಾಯಶ್ಚಿತ್ತ, ವಿನಯ, ವೈಯಾಪೃತ್ಯ, ಸ್ವಾಧ್ಯಾಯ, ಧ್ಯಾನ, ಕಾಯೋತ್ಸರ್ಗ ಎಂಬ ಆರು ಅಭ್ಯಂತರ ತಪಗಳನ್ನು ಆಚರಿಸಿ, ಮೂಲೋತ್ತರ ಗುಣಗಳನ್ನು ಕ್ರಮವಾಗಿ ಅಭಿವೃದ್ಧಿಗೊಳಿಸಿ—

೧೭೯. ನಿಸ್ಸಂಶಯವಾಗಿ ಶಾಂತಿಯಿಂದ ಹಸಿವು, ನೀರಡಿಕೆ ಮೊದಲಾದ ಇಪ್ಪತ್ತೆರಡು ಪರೀಷಹಗಳನ್ನು ಸುಲಭವಾಗಿ ಆ ಮುನೀಂದ್ರನು ಗೆದ್ದನು.

---

1. ಜ (ಮ) 2. × (ಮ) 3. ಪ (ಮ) 4. ಶಾಂತಮತಿ (ಅ) 5. ರ (ಮ) 6. × (ಮ)

ಕಂ॥ ಆದಿವ್ಯತಪೋಧನ ನ
ಕ್ಷೋದಂ ಧ್ಯಾನಿಸಿದನನಿತುಮಂ ಕ್ರಮದಿಂ ಪು
ಣ್ಯೋದಯ ಗಿರೀಂದ್ರತಟದೊಳ್
ದ್ವಾದಶವಿಧ ಭೇದದಿಂದನುಪ್ರೇಕ್ಷೆಗಳಂ ॥ ೧೧೦ ॥

ವ॥ ಮತ್ತಮುತ್ತಮಕ್ಷಮಾದಿದಶಕು[ಶ]ಲಧರ್ಮನಿರ್ಮಿತಶರೀರಮೇಕಶರೀರಮಾನ ರತ್ನತ್ರಯಮನೆ ಪೋಲ್ತು—

ಕಂ॥ ಕಸವರಮುಂ ಕಸಮುಂ ಪೂ
ಜಿಸುವನುಮೇಳಿಸುವನುಂ ಸಮಾನಂ ಪ್ರತಿಭಾ
ಸಿಸೆ ಪಂಚಮಹಾವ್ರತ ಪಂ
ಚಸಮಿತಿಮಿಳಿತತ್ರಿಗುಪ್ತಿಗುಪ್ತಂ ಮುನಿಪಂ ॥ ೧೧೧ ॥

ಜಾತಾಭಿಜಂಗಮಾಗಮ
ಜಾತಕ್ಷ(ಮ)ವಿತತೆಯಾಯ್ತು ಮುನಿಪತಿಯೆಸೆದಿ
ರ್ದಾತನು ಸಪ್ತರ್ಧಿ ಸಮ
ನ್ವೀತಂ ವ್ರತನಿಯಮಯುಕ್ತ್ಯಗಸ್ಥೀಭೂತಂ ॥ ೧೧೨ ॥

ಚಾರಣಗುಣದಿಂದಂ ಸಂ
ಸಾರಾರ್ಥಮಪಾರ ಚೈತ್ಯವಂದನೆಗೆಂದಂ
ದೂರಂತೆ ಪೋಗಿ ಗಗನವಿ
ಹಾರದಿನುರ್ವೀವಿಹಾರಮಂ ಮುನಿ ಬಿಸುಟಂ ॥ ೧೧೩ ॥

ಆಪರಮಮುಮುಕ್ಷು ದುರಾ
ರೋಪಗುಣಶ್ರೇಣಿಯಂ ಯಥಾಕ್ರಮಮವ್ಯಾ
ಕ್ಷೇಪದಿ ನೇಱಿ ಮುನೀಂದ್ರಕ
ಳಾಪಕ್ಕೆ ನಿರ್ವಿಘ್ನದಂ ಪ್ರತಿಚ್ಛಂದತೆಯಂ ॥ ೧೧೪ ॥

---

೧೧೦. ಪುಣ್ಯೋದಯ ಪರ್ವತದಲ್ಲಿ ಆ ದಿವ್ಯ ತಪಸ್ವಿಯು ಹನ್ನೆರಡು ಅನುಪ್ರೇಕ್ಷೆಗಳನ್ನು ಅನುಕ್ರಮವಾಗಿ ಧ್ಯಾನಿಸಿದನು.

ವ॥ ಮತ್ತು ಉತ್ತಮ ಕ್ಷಮೆಯೆ ಮೊದಲಾದ ದಶಧರ್ಮಗಳನ್ನೊಡಗೊಂಡು ರತ್ನತ್ರಯಕ್ಕೇ ಸದೃಶನಾಗಿ—

೧೧೧. ಪಂಚಮಹಾವ್ರತಗಳನ್ನೂ, ಐದು ಸಮಿತಿಗಳನ್ನೂ, ಮೂರು ಗುಪ್ತಿಗಳನ್ನೂ ಸಾಧಿಸಿಕೊಂಡ ಆ ಮುನೀಂದ್ರನಿಗೆ ಚಿನ್ನವೆಂಬರೂ ಅಷ್ಟೆ, ಕಸನೆಂದರೂ ಅಷ್ಟೆ; ಗೌರವಿಸುವವನೂ ಒಂದೆ, ಹಳಿಯುವವನೂ ಒಂದೆ—ಎಂಬ ಸಮದೃಷ್ಟಿಯೊದಗಿತ್ತು.

೧೧೨. ಜನ್ಮತಃ ಜ್ಞಾನಿಯಾದ ಆ ಮುನಿಗೆ ಈಗ ಆಗಮಾಭ್ಯಾಸದ ಬಲವೂ ಸೇರಿಕೊಂಡು ಆತನ ದೇಹವು ಏಳು ಬಗೆಯ ಋದ್ಧಿಗಳನ್ನು ಪಡೆದು, ವ್ರತನಿಯಮಗಳಿಂದ ಬಡವಾಗಿ ಕೇವಲ ಮೂಳೆ ತೊಗಲುಗಳ ಆಕಾರವಾಯಿತು.

೧೧೩. ಅಸಂಖ್ಯವಾದ ಚೈತ್ಯಾಲಯಗಳ ವಂದನೆಗಾಗಿ ಚಾರಣಬಲದಿಂದ ಆಕಾಶಮಾರ್ಗವಾಗಿಯೆ ಸಂಚರಿಸುತ್ತ ಮುನಿಪತಿಯು ಭೂಸಂಚಾರವನ್ನು ಬಿಟ್ಟುಬಿಟ್ಟನು.

೧೧೪. ಮೋಕ್ಷಾರ್ಥಿಯಾದ ಆ ಮುನಿಯು ಏರಲು ದುಸ್ತರವಾದ ಗುಣಸ್ಥಾನಗಳನ್ನು ಸರಿಯಾದ ಕ್ರಮದಲ್ಲಿ ನಿರ್ವಿಘ್ನವಾಗಿ ಏರಿ ಮುನೀಂದ್ರ ಸಮೂಹಕ್ಕೆ ಪ್ರತಿಮೂರ್ತಿಯಾದನು (ಆದರ್ಶವಾದನು).

ವ॥ ಅಂತುತ್ತರನುತ್ತರೋತ್ತರ[ಮು][1]ವಾಗೆ ಸಮ್ವೇದತಪಃಪ್ರಾಸಾದಕ್ಕೆ ಕಳಶವಿಡುವಂತಾ ಮುನೀಂದ್ರಂ—

ಕಂ॥ ಸಮ್ಯಕ್ತ್ವಶುದ್ಧಿ ವಿನಯತೆ
ಸಮ್ಯಕ್ಶೀಲತೆ ನಿರಂತರಧ್ಯಾಯಮನಃ
ಸಮ್ಯದಿಗಮ್ಯತೆ ಪತಿಗತ
ಗಮ್ಯಮಜೇಯತ್ವಮಮಲಜಿನಪತಿ ಮತನೊಳ್ ॥ ೧೧೫ ॥

ಹಿತಸಾಧುಸಮಾಧಿ ವ್ಯಾ
ಪೃತಿ ಗುರುವಂದಿತ ಜಿನಪ್ರವಚನ ಷಡಾವ
ಶ್ಯಕತೆಯೆನಿಸಿ ನೆಗೆಟ್ದುಬೀಜನ
ಪತಿಶಾಸನ ದೀಪಕತೆ ಶ್ರುತಾಭಿಪ್ರಣಯಂ ॥ ೧೧೬ ॥

ಎಂಬ ಪದಿನಾಱುಭಾವನೆ
ಯಂ ಬಹುವಿಧಮಱಿದಹರ್ನಿಶಂ ಭಾವಿಸೆ ಬೋ
ಧಾಂಬುಧಿ ತೀರ್ಥಕರತ್ವಮ
ನಿಂ ಬರ್ಪ ಭವಕ್ಕೆ ನೆರಪಿದಂ ಮುನಿನಾಥಂ ॥ ೧೧೭ ॥

ವ॥ ಅಂತು ತೀರ್ಥಕರಪುಣ್ಯಮಂ ನೆರಪಿಕೊಂಡು —

ಕಂ॥ ಸೊಡರೊಳ್ ಬತ್ತಿಯುಮೆಣ್ಣೆಯು
ಮೊಡನಱಿದವೊಲಾಯುವುಂ ಶರೀರಮುಮ[ಮ]ಳಿಂ
ತೊಡರದವೆ ನೋಂತಂ ಮುನಿ ಮು
ನ್ನೊಡವುಟ್ಟಿದುವೊಡನೆ ತವುವುದೌಚಿತ್ಯಮೆನಲ್ ॥ ೧೧೮ ॥

ವ॥ ಹೀಗೆ ಉತ್ತರೋತ್ತರವಾಗಿ ಅಭಿವೃದ್ಧಿಹೊಂದುತ್ತ ಸಮ್ವೇದ ತಪವೆಂಬ ಭವ್ಯಭವನಕ್ಕೆ ಕಳಶವಿಡುವಂತೆ ಆ ಮುನೀಶ್ವರನು—

೧೧೫. ಸಮ್ಯಗ್‌ದರ್ಶನಶುದ್ಧಿ, ವಿನಯ, ಅತಿಚಾರವಿಲ್ಲದ ಸಮ್ಯಕ್‌ಚಾರಿತ್ರ, ನಿರಂತರಾಭ್ಯಾಸದಿಂದ ಬರುವ ಜ್ಞಾನ, ಸಂಸಾರ ಭೀರುತ್ವವೆಂಬ ಸಂವೇಗ ಮತ್ತು ಪರಿಶುದ್ಧವಾದ ಜಿನೋಕ್ತಿಯುಮೇರೆಗೆ

೧೧೬. ಸಮಾಧಿ, ವೈಯಾಪೃತ್ಯ, ಆಚಾರ್ಯಭಕ್ತಿ, ಜಿನೋಕ್ತವಾದ ಷಡಾವಶ್ಯಕ, ಜಿನಶಾಸನ ದೀಪಕವಾದ ರತ್ನತ್ರಯಗಳು ಮತ್ತು ಸದ್ಧರ್ಮಪ್ರೇಮ

೧೧೭. ಎಂಬ ಹದಿನಾರು ಭಾವನೆಗಳನ್ನು ಚೆನ್ನಾಗಿ ಅರಿತು ಹಗಲಿರುಳೂ ಭಾವಿಸುತ್ತ, ಮುಂದಿನ ಜನ್ಮದಲ್ಲಿ ತನಗೆ ಬರುವ ತೀರ್ಥಕರತ್ವಕ್ಕೆ ತಕ್ಕ (ಪುಣ್ಯವನ್ನು) ಗಳಿಸಿಕೊಂಡನು.

ವ॥ ಹಾಗೆ ತೀರ್ಥಕರ ಪುಣ್ಯವನ್ನು ಸಂಪಾದಿಸಿಕೊಂಡು—

೧೧೮. ದೀಪದಲ್ಲಿ ಎಣ್ಣೆಯೂ ಬತ್ತಿಯೂ ಜೊತೆಜೊತೆಯಾಗಿ ಮುಗಿದಂತೆ, ಆಯುಸ್ಸೂ ದೇಹವೂ ಜೊತೆಯಾಗಿಯೆ ತೀರುವಂತೆ ಮುನಿಯು ತಪಸ್ಸನ್ನಾಚರಿಸಿದನು. ಜೊತೆಯಾಗಿ ಹುಟ್ಟಿದುವು ಜೊತೆಯಾಗಿಯೆ ನಾಶವಾಗುವುದು ಉಚಿತವೆಂದೊ ಏನೊ!

---

1. × (ಮ)

ವ॥ ಅಂತಾಯತಿತಿಲಕಂ [1]ಭೀತಿ[1]ಯೆಂಳ್ ಪ್ರಾಯೋಪಗಮನಂಗೆಯ್ದುದುಂ ಯಥಾಗಸಾರ್ಥ ದ್ರವ್ಯಂಗಳನನುಕ್ರಮದಿಂದಜಿವಾಜ್ಞಾವಿಚಯಮುಮನಪಸಾರಿತ ಸಂಸಾರಿಜೀವಂಗಳ್ ಸಂಸಾರದೊಳ್ ತೊ[2][ಟ][2]ಲುತ್ತಿರ್ಪುದೆಂಬಪಾಯವಿಚಯಮುಮಂ ನಾನಾವಿಧ[3]ಕರ್ಮ[3]ವಿಪಾಕವಿಚಯಮುಮನೂರ್ಧ್ವಾಧೋಮಧ್ಯಗತಾಸಮವಸ್ಥಿತಲೋಕಸ್ಥಿತಿಸ್ಮರಣಪರಿಣತಸಂಸ್ಥಾನವಿಚಯಮುಮಂ ಬೇಱಬೇಱೆ ಹೃದ್ಗತಂಮಾಡಿ ಧರ್ಮಧ್ಯಾನಮಯನಾದನಾಮುನಿನಾಥಂಗಂ—

ಕಂ॥ ಅವಬೋಧಂ ವಿಷಯಪರಿ
ಪ್ರವಂ(ಮನೋವಚನಕಾಯನಿಯಮಂ ಪಾರಿ
ಪ್ಲವಮಿನಿತಿಲ್ಲದೆ ಮೂಱುಂ
ಭುವನಮನೆಱಗಿಸುವ ಸಮತೆ ಸಮನಿಸಿದಪುದೇ ॥ ೧೧೯ ॥

ವ॥ ಎಂಬಿನಂ ಮೇಘರಥ ಸಂಯಮಿ ನಿಜಪರ ನಿರಪೇಕ್ಷನಾಗಿ—

ಕಂ॥ ಇಂತೊಂದುತಿಂಗಳಂ ತವೆ
ನೋಂತೊಡಲಂ ಬಡಬಡವ್ವುದುಂ ಬಿಸುಟಂ ಕಾ
ಲಾಂತರದೊಳೊರ್ವನೊಡಲೋ
ರಂತಗಲದೆ ನಿಲ್ವರಾತ್ಮಹಿತಯುತಮತಿಗಳ್ ॥ ೧೨೦ ॥

ವ॥ ಅಂತು ಮುಡುಪಿ ಪಂಚಾಣುತ್ತರೆಗಳ ನಾಭಿಯಪ್ಪ ಸರ್ವಾರ್ಥಸಿದ್ಧಿಯೊಳ್ ಪುಟ್ಟಿದನಂದು—

ಕಂ॥ ದ್ವಾದಶಯೋಜನಮಿತಿ ಪರ
ವಾದಿ[ಯು]ವಾದಕ್ಕೆ ಪೊಱಗು ಮುಕ್ತಿಯ ಸುಖದೊಂ
ದಾದಾನಮನುಪಮಾನ ಮ
ನಾದಿನಿರಸ್ತಾವಸಾನಮನಘಸ್ಥಾನಂ ॥ ೧೨೧ ॥

ವ॥ ಹಾಗೆ ಆ ಯತಿಶ್ರೇಷ್ಠನು ಪ್ರಾಯೋಪವೇಶವನ್ನು ಕೈಕೊಂಡು, ಆಗಮೋಕ್ತವಾದ ದ್ರವ್ಯಗಳನ್ನು ಅರಿಯುವ ಆಜ್ಞಾವಿಚಯುವನ್ನೂ, ದಾರಿತಪ್ಪಿದ ಸಂಸಾರಿ ಜೀವಗಳು ಸಂಸಾರದಲ್ಲಿ ತೊಡಕಿ ಕಷ್ಟಪಡುತ್ತಿರುವವೆಂಬ ಅಪಾಯ ವಿಚಯುವನ್ನೂ, ಅನೇಕ ಬಗೆಯ ಕರ್ಮವಿಪಾಕ ವಿಚಯುವನ್ನೂ, ಮೇಲೆ, ನಡುವೆ, ಕೆಳಗೆ ಇರುವ ಮೂರು ಲೋಕಗಳ ಸ್ಥಿತಿಯ ಸ್ಮರಣ ಪರಿಣತ ಸಂಸ್ಥಾನ ವಿಚಯುವನ್ನೂ ಬೇರೆಬೇರೆಯಾಗಿ ಅರಿತುಕೊಂಡು ಧರ್ಮ ಧ್ಯಾನದಲ್ಲಿ ನಿರತನಾದನು. ಆ ಮುನೀಶ್ವರನಿಗೆ—

೧೧೯. (ಪರಮ) ಜ್ಞಾನ, ವಿಷಯ ತ್ಯಾಗ, ಮನ, ವಚನ ಮತ್ತು ಕಾಯವೆಂಬ ಮೂರು ಬಗೆಯ ಗುಪ್ತಿ—ಇಷ್ಟು ಇಲ್ಲದೆ ಮೂರು ಲೋಕಗಳಿಂದಲೂ ಎರಗಿಸಿಕೊಳ್ಳುವ ಯೋಗ್ಯತೆ ಬರುವುದೆ?

ವ॥ ಎಂಬಂತೆ ಮೇಘರಥನು—

೧೨೦. ಈರೀತಿ ಒಂದು ತಿಂಗಳವರೆಗೆ ತಪವನ್ನಾಚರಿಸಿ ದೇಹ ತೀರ ಸೊರಗಿ ಬಡಕಲಾಗಲು ಅದನ್ನು ಅವನು ಬಿಸುಟು ಬಿಟ್ಟನು. ಆತ್ಮಹಿತವನ್ನು ತಿಳಿದ ಯತಿಗಳು ದೇಹವನ್ನು ಅಗಲದೆ ನಿಲ್ಲುವರೆ?

ವ॥ ಹಾಗೆ ದೇಹತ್ಯಾಗಮಾಡಿ (ಆ ಮುನಿಯು) ಐದು ಅಣುತ್ತರಗಳಲ್ಲಿ ಶ್ರೇಷ್ಠವೆನಿಸಿದ ಸರ್ವಾರ್ಥಸಿದ್ಧಿಯಲ್ಲಿ ಹುಟ್ಟಿದನು. ಅದು—

೧೨೧. ಹನ್ನೆರಡು ಯೋಜನ ಅಗಲವಾದುದು; ವಾದಿಗಳ ವಾದಕ್ಕೆ ಅತೀತವಾದುದು; ಮೋಕ್ಷಸುಖದ ನೆಲೆ; ಉಪಮೆಗೆ ಮೀರಿದುದು; ಆದ್ಯಂತ ರಹಿತವಾದುದು; ಪಾಪಲೇಪವಿಲ್ಲದ ಸ್ಥಾನ

1. ಭತ್ತಿ (ಅ) 2. ಳಿ (ಮ) 3. + ನೋನಾಗತಮಪ್ಪ

ಚಂ॥ ಅದರ ಪರಾರ್ಧ್ಯ ನೀಲಮಣಿಕುಟ್ಟಿಮಭೂತಳದರ್ಪಣೈಕಬಿಂ
ಬದೊಳಹಮಿಂದ್ರದಿವ್ಯತನು ಬಿಂಬಿಸೆ ರೂಪಿದು ಬಿಂಬಮಿಂತಿದೆಂ
ಬುದನಱಿಯಲ್ಕೆ ಬಾರದದಱುತ್ತಮಭಿತ್ತಿಗಳೊಳ್ಪು ಬೇಱೆ ಭಿ
ತ್ತಿ ದಲದು ನಾಕಲೋಕಶಿಖರೋಪಮಮಾರದನೆಯ್ದೆ ಬಣ್ಣಿಪರ್ ॥ ೧೨೨ ॥

ಕಂ॥ ಅಮಿತಗುಣರತ್ನ ಪರಿಲಂ
ಬಮಾನ ಲಂಬೂಷಭೂಷಿತಂ ಸುರಲೋಕ
ದ್ರುಮಫಲಮೀಷತ್ಪ್ರಾಗ್ಭಾ
ರಮೆಂಬ ಮಾಡಕ್ಕೆ ನೆಲೆಯ ಬಾಗಿಲ್ವಾಡಂ ॥ ೧೨೩ ॥

ವ॥ ಮತ್ತಮಲ್ಲಿ ಪುಟ್ಟಿದ—

ಕಂ॥ ಅಹಮಿಂದ್ರರಧಿಕಭಕ್ತಿಯಿ
ನಹರ್ನಿಶಂ ತಮ್ಮ ನೆಲೆಗಳಿಂ ತಳರದೆ ಪಾ
ಪಹರಂಗೆಱಗುವರೆನಿಸಿದ
ಮಹಿಮೆಯ ಪಱಿಗಱಿದ ಪರಮಕೋಟಿಯೊಳಿರ್ಪರ್ ॥ ೧೨೪ ॥

ಮೂಱುಂಜಗದಖಿಲಸುಖಂ
ಬೇಱದು ಬೇಱಾಗಿ ತೂಗೆ ಗೆಲ್ಲಮದಕ್ಕಂ
ದೇಱಿಬರೆ ರಾಗಮುಂ ಮೆ
ಯ್ದೋಱಿರೆ ಸರ್ವಾರ್ಥಸಿದ್ಧಿವೆಸರನ್ವರ್ಥಂ ॥ ೧೨೫ ॥

ವ॥ ಮತ್ತಮಹಮಿಂದ್ರದೇಹಪ್ರಮಾಣಂ—

---

೧೨೨. ಅದರ ಶ್ರೇಷ್ಠವಾದ ಇಂದ್ರನೀಲಮಣಿಗಳ ನೆಲಗಟ್ಟಿನಲ್ಲಿ ಅಹಮಿಂದ್ರನ ದೇಹ ಪ್ರತಿಫಲಿಸುವುದು; ಆ ಪ್ರತಿಫಲನ ಎಷ್ಟು ಸ್ಪಷ್ಟನೆಂದರೆ ಬಿಂಬ ಯಾವುದು ಪ್ರತಿಬಿಂಬ ಯಾವುದು ಎಂದು ಪ್ರತ್ಯೇಕಿಸಿ ಹೇಳುವುದೇ ಅಸಾಧ್ಯ. ಅದರ ಗೋಡೆಗಳ ಸೊಗಸೇ ಬೇರೆ. ಅದು ದೇವಲೋಕ ಶಿಖರಕ್ಕೆ ಸದೃಶವಾದುದು. ಅದನ್ನು ಬಣ್ಣಿಸಿ ಮುಗಿಸ ಬಲ್ಲವರಾರು ?

೧೨೩. ದೇವಲೋಕವೆಂಬ ಮರದಲ್ಲಿ ಬಿಟ್ಟ ಹಣ್ಣಿನಂತಿರುವ ಈಷತ್‌ಪ್ರಾಗ್ಭಾರವೆಂಬ ಆ ವಿಮಾನಕ್ಕೆ ವಿಶಾಲವಾದ ಬಾಗಿಲುವಾಡ ಅಸಂಖ್ಯ ರತ್ನಗಳಿಂದ ನಿರ್ಮಿತವಾದ ಹಾರಗಳಿಂದಲೂ ಸೂಸಕಗಳಿಂದಲೂ ಅಲಂಕೃತವಾಗಿದೆ.

ವ॥ ಮತ್ತು ಅಲ್ಲಿ ಹುಟ್ಟಿದ—

೧೨೪. ಅಹಮಿಂದ್ರರು ಹಗಲಿರುಳೂ ತಮ್ಮ ನೆಲೆಗಳಿಂದ ಹೊರಬೀಳದೆಯೆ ಅರ್ಹಂತನಿಗೆ ನಮಸ್ಕರಿಸುವರು. (ಇದ್ದಲ್ಲಿಯೆ ಭಗವಂತನ ಪಾದಗಳನ್ನು ಮುಟ್ಟಬಲ್ಲರು.) ಈ ಬಗೆಯ ಮಹಿಮೆಯಿಂದ ಅವರು ಪರಮೋಚ್ಚ ಸ್ಥಿತಿಯಲ್ಲಿರುವರು.

೧೨೫. ಮೂರು ಲೋಕಗಳ ಸುಖವೆ ಬೇರೆ. ಈ ಸ್ಥಳದ ಸುಖವೆ ಬೇರೆ. ಎರಡನ್ನೂ ತೂಗಿ ನೋಡಿದರೆ ಇದೇ ಮೇಲಾಗಿ ಶೋಭಿಸುವುದರಿಂದ ಸರ್ವಾರ್ಥಸಿದ್ಧಿಯೆಂಬ ಹೆಸರು ಇದಕ್ಕೆ ಅನ್ವರ್ಥಕವಾಗುತ್ತದೆ.

ವ॥ ಅಹಮಿಂದ್ರರ ದೇಹ ಪ್ರಮಾಣವು ಎಷ್ಟೆಂದರೆ—

ಕಂ॥ ತ್ರಿದಶರಭಿಷೇಕದಿಂದೆ ಇ
ಪ್ಪಿದ ಪಳಿಕಿನ ಜೈನಬಿಂಬಮಂ ಪೂಜಿಸಿ ಪೀ
ಠದೊಳಿರಿಸಿದಂತೆ ಸೊಗಯಿಸು
ವುದು ನಿರ್ಮಳಮೊರ್ಮೊಟಿಂ ಶರೀರಮುದಾರಂ ॥ ೧೨೬ ॥

ವ॥ ಅಲ್ಲಿ—

ಮ॥ ಮನವೊಲ್ದಿರ್ಪಹಮಿಂದ್ರರಾಯು ಪೆಱದೇಂ ಮೂವತ್ತುಮೂಱಂಬುರಾ
ಶಿ [1]ನಿಕಾ[ಯಂ][1] ಪದಿನಾಱುತಿಂಗಳ ಬಱಿಕ್ಕಂತೊಂದುಪಕ್ಷಕ್ಕೆ ಮೆ
ಲ್ಲನೆ ಸುಯ್ವರ್ ನೆನೆವರ್ ಸುಧಾಶನಮನೇಕಾಗ್ರಂ ತ್ರಯಸ್ತ್ರಿಂಶದು
ಕ್ತನಯೋಪೇತಸಹಸ್ರಹಾಯನದಿನಾಕಲ್ಪೋತ್ತರಾವಾಸಿಗಳ್ ॥ ೧೨೭ ॥

ಕಂ॥ ಒದವುವುದು ನಿಪ್ರವೀಚಾ
ರದಿನವರ್ಗೆ ಮನೋಜಪರಮಸುಖಮಿನ್ನವರ
ಭ್ಯುದಯಮನದನಿನ್ನೇವೇ
ೞ್ವುದೊ ದೇವರ ದೇವರಪ್ಪ ಭವಸಂಭವದಿಂ ॥ ೧೨೮ ॥

ವ॥ ಅಲ್ಲಿ ಮೇಘರಥಯತೀಂದ್ರನಹಮಿಂದ್ರನಾದೊಂ ದೃಢರಥಯತೀಂದ್ರನುಮಾತ್ಮೀಯ ಸಂಸಾರಕಾಲದೊಳ್ ಬಱಿಯಂ ಜುಮನಿರ್ವಮಮನೇಕವಿಹಾರದಿನಗ್ರಮುನೀಂದ್ರಚಾರಿತ್ರನಿರ್ವಿಶೇಷ ಶುಭಭಾವನಾಭಾವಿತಾತ್ಮಂ ನಿಜಾಯುರವಸಾನದೊಳ್ ಪ್ರಾಯೋಪಗಮನೋತ್ತಮಮರಣದಿಂ ಪ್ರಾಣಪರಿತ್ಯಾಗಂಗೆಯ್ದು ಸರ್ವಾರ್ಥಸಿದ್ಧಿಯೊಳ್—

ಕಂ॥ ಸ್ಫುರಿತರುಚಿರುಚಿರ ನವಪ
ದ್ಮರಾಗವೈಢೂರ್ಯವಜ್ರಮರಕತಕಿರಣೋ
ಚ್ಚುರಣಸ್ತಬಕಿತ ತನುಸುಂ
ದರವಿಭ್ರಮನಿಂದ್ರಚಂದ್ರನೆಂಬಹಮಿಂದ್ರಂ ॥ ೧೨೯ ॥

---

೧೨೬. ದೇವತೆಗಳು ಅಭಿಷೇಕ ಪುರಸ್ಸರವಾಗಿ ಪೂಜೆಮಾಡಿ ಪೀಠದಲ್ಲಿ ಇಟ್ಟ ಸ್ಫಟಿಕದ ಜಿನವಿಗ್ರಹದಂತೆ ನಿರ್ಮಲವಾಗಿ ಹೊಳೆಯುವ ಒಂದು ಮೊಳದಷ್ಟೆ ದೇಹದ ಎತ್ತರ.

ವ॥ ಅಲ್ಲಿ—

೧೨೭. ಇರತಕ್ಕ ಅಹಮಿಂದ್ರರಿಗೆ ಮೂವತ್ತುಮೂರು ಸಾಗರೋಪಮ ಆಯುಷ್ಯ; ಹದಿನಾರು ತಿಂಗಳು ಮತ್ತು ಒಂದು ಪಕ್ಷವಾದಾಗ ಒಮ್ಮೆ ಮೆಲ್ಲಗೆ ಉಸಿರಾಡುವರು; ಮೂವತ್ತುಮೂರು ಸಾವಿರ ವರ್ಷಕ್ಕೆ ಒಂದುಸಲ ಅಮೃತಾಹಾರವನ್ನು ನೆನೆಯುವರು.

೧೨೮. ಮೈಥುನ ಸಂಪರ್ಕವಿಲ್ಲದೆಯೆ ಅವರಿಗೆ ಮನ್ಮಥ ಸುಖ ಒದಗುವುದು. ಅವರ ಅಭ್ಯುದಯವನ್ನು ಇನ್ನೂ ಏನೆಂದು ಬಣ್ಣಿಸುವುದು? ಅವರು ದೇವರ ದೇವರು.

ವ॥ ಅಲ್ಲಿ ಮೇಘರಥ ಮುನೀಂದ್ರನು ಅಹಮಿಂದ್ರನಾದನು. ದೃಢರಥ ಮುನೀಂದ್ರನೂ ಯೋಗಕ್ರಮದಿಂದ ಏಕವಿಹಾರಿಯಾಗಿ, ಶ್ರೇಷ್ಠ ಯತಿಚಾರಿತ್ರದಿಂದ ಸಮಗ್ರನಾಗಿ, ಶುಭಭಾವನೆಗಳನ್ನು ಭಾವಿಸಿ ಆಯುಷ್ಯಾಂತದಲ್ಲಿ ಪ್ರಾಯೋಪಗಮನದಿಂದ ಪ್ರಾಣಬಿಟ್ಟು, ಸರ್ವಾರ್ಥಸಿದ್ಧಿಯಲ್ಲಿ—

೧೨೯. ಪ್ರಜ್ವಲವಾದ ಪ್ರಭೆಯುಳ್ಳ ಮಾಣಿಕ್ಯ, ವೈಢೂರ್ಯ, ವಜ್ರ, ಮರಕತ ಮೊದಲಾದ ರತ್ನಗಳ ಕಿರಣಗಳಿಂದ ತುಂಬಿ ಸುಂದರವಾದ ದೇಹವುಳ್ಳ ಇಂದ್ರಚಂದ್ರನೆಂಬ ಅಹಮಿಂದ್ರನಾಗಿ

---

1. ನಿಕಾಶಂ (ಮ) ಸಮಾಸಂ (ಅ)

ವ॥ ಆಗಿ ಪುಟ್ಟುವುದುಮಿಂದ್ರಚಂದ್ರನೊಳ್ ನೆರೆದು ಮಹೇಂದ್ರಾಮರೇಶ್ವರನಭೂತೋಪಮ ದಿವ್ಯಸುಖಮನನುಭವಿಸಿ—

ಕಂ॥ ಒಡವುಟ್ಟಿದ ತಳದಳಿಸುವ
ತೊಡುಗೆಯ ದುಗುಲದ ನಮೇರುದಾಮಕದೊ[ಳ್][1]
ಚ್ಚುಡಿದುದು ಪರಾರ್ಧ್ಯಕೂಟದ
ಬೆಡಂಗೊಡಂಬಟ್ಟುದಿರ್ವರಹಮಿಂದ್ರರೊಳಂ ॥ ೧೩೦ ॥

ಚಂ॥ ಕೞಿದ ಭವಕ್ಕೆ ಪೇಸುವಡೆವಾಸುರಕರ್ಮದ ತಲ್ಪನರ್ಥಿಸು
ತ್ತುೞಿವೊಡನಿರ್ದೊಡಂಬಡುವ ಯೋಜಿಪ ಬಾಜಿಪ ತತ್ವಗೋಷ್ಠಿಯೊಳ್
ದುೞಿಯದೆ ಭಾವಿತಾತ್ಮರಹಮಿಂದ್ರರೊಡಂಬಡದಿಚ್ಛೆ ರೂಪಮಂ
ನೆೞಲುಮನೆಯ್ದೆ ಪೋಲ್ತಗಲರಲ್ಲಿ ಮಹೇಂದ್ರನುಮಿಂದ್ರಚಂದ್ರನುಂ ॥ ೧೩೧ ॥

ವ॥ ಮತ್ತಿತ್ತ ಜಂಬೂದ್ವೀಪದ ಭರತಕ್ಷೇತ್ರಕ್ಕೆ—

ಕಂ॥ ಲಲಿತಾಮ್ರತರುಗೆ ಪೊಸಗೊಂ
ಚಲಂತೆ ಗಗನಕ್ಕೆ ಶಿಶಿರನಂತೆ ಕೊಳಕ್ಕು
ಳ್ಪಲರ್ದಬ್ಜದಂತೆ ಕುರುಜಾಂ
ಗಲವಿಷಯಂ ನಯನವಿಷಯಸುಖಮಂ ಪಡೆಗುಂ ॥ ೧೩೨ ॥

ಮ॥ ಅದ[2]ಱೂ[2]ರೂರ್ಗಳೊಳಬ್ಜವಿಲ್ಲದ ಸರಸ್ಸಂಘಾತಮಿಲ್ಲಾಮ್ರಮಿ
ಲ್ಲದ ಕಾಡಿಲ್ಲಳಿಯಿಲ್ಲದಬ್ಜವನಮಿಲ್ಲುದ್ಯಾನಸಂತಾನಮಿ
ಲ್ಲದ ಬಾಗಿಲ್ಲ ಮುನೀಂದ್ರರಿಲ್ಲದಗಮಿಲ್ಲಾತೋದ್ಯದುದ್ಯೋಗಮಿ
ಲ್ಲದ ಜೈನಾಲಯಮಿಲ್ಲ ನೋಡ[3]ಲದಱೊಳ್[3] ಗರ್ಭಸ್ಥಿತರ್ ಪುಟ್ಟಿಯುಂ ॥ ೧೩೩ ॥

ವ॥ ಹುಟ್ಟಿದನು. ಇಂದ್ರಚಂದ್ರನೊಡನೆ ಕೂಡಿಕೊಂಡು ಮಹೇಂದ್ರನು ಅಪೂರ್ವವಾದ ಸ್ವರ್ಗೀಯ ಸುಖವನ್ನನುಭವಿಸಿದನು.

೧೩೦. ಜನ್ಮತಃ ಪ್ರಾಪ್ತವಾಗಿ ಥಳಥಳಿಸುವ ರೇಷ್ಮೆವಸ್ತ್ರಗಳಿಂದಲೂ ನಮೇರು ಪುಷ್ಪಗಳ ಹಾರಗಳಿಂದಲೂ ಇಬ್ಬರೂ ಅಹಮಿಂದ್ರರಿಗೆ ಅತಿಶಯವಾದ ಶೋಭೆಯುಂಟಾಯಿತು.

೧೩೧. ಕಳಿದ ಜನ್ಮಗಳಿಗೆ ಜಿಗುಪ್ಸೆ ಪಡುವ, ಘೋರಕರ್ಮಗಳ ಆಸ್ರವವನ್ನು ತಿಳಿದು ನಿವಾರಿಸುವ ಜೊತೆಯಾಗಿದ್ದು ಸಂತೋಷದಿಂದ ಯೋಜಿಸುವ, ವಾದಿಸುವ, ತತ್ವಗೋಷ್ಠಿ ನಡೆಸುವ ಅಹಮಿಂದ್ರ-ಮಹೇಂದ್ರರಿಬ್ಬರೂ ಒಬ್ಬರನ್ನೊಬ್ಬರು ಅಗಲದೆ ರೂಪವೂ ನೆಳಲೂ ಹೊಂದಿಕೊಂಡಂತೆ ಇದ್ದರು.

ವ॥ ಇತ್ತ ಜಂಬೂದ್ವೀಪದ ಭರತಕ್ಷೇತ್ರಕ್ಕೆ—

೧೩೨. ಸೊಗಸಾದ ಮಾಮರಕ್ಕೆ ಹೊಸ ಹೂಗೊಂಚಲಿನಂತೆ, ಆಕಾಶಕ್ಕೆ ಚಂದ್ರಬಿಂಬದಂತೆ, ಸರೋವರಕ್ಕೆ ಅರಳು ತಾವರೆಯಂತೆ ಕುರುಜಾಂಗಣ ವಿಷಯವು ನಯನಮನೋಹರವಾಗಿ ಇರುವುದು.

೧೩೩. ಅದರ ಯಾವ ಊರಲ್ಲಾದರೂ ತಾವರೆಗಳಿಲ್ಲದ ಕೊಳಗಳಿಲ್ಲ; ಮಾಮರವಿಲ್ಲದ ಕಾಡಿಲ್ಲ; ದುಂಬಿಗಳಿಲ್ಲದ ಕಮಲವನವಿಲ್ಲ; ತೋಟಗಳಿಲ್ಲದ ಕೇರಿಲ್ಲ; ಯತೀಂದ್ರರಿಲ್ಲದ ಬೆಟ್ಟಗಳಿಲ್ಲ; ವಾದ್ಯಧ್ವನಿಯಿಲ್ಲದ ಚೈತ್ಯಾಲಯವಿಲ್ಲ. ಅಲ್ಲಿಯ ಜನರು ಹುಟ್ಟಿದರೂ "ಗರ್ಭಸ್ಥಿತ"ರು (೧. ಬಸಿರಲ್ಲಿ ಕೂಸಿನಂತೆ ಇರುವವರು. ೨. ಜನ್ಮತಃ ಉತ್ತಮವಾದ ಶೀಲವುಳ್ಳವರು).

---

1. ಳ್ಪ (ಮ) 2. ರೂ (ಮ) 3. ದರೊಳಂ (ಮ)

ಚಂ॥ ವನಲತೆಯಾದ ಕಲ್ಪಲತೆ ವನ್ಯಮಹೀರುಹಮಾದ ಕಲ್ಪನಂ
ದನತರು ದೇವದಾರುಕುಜಮಾದ ನಮೇರುಕುಜಂ ವಿಲಾಸವ
ಜ್ಜನಪದಮಾದ ಸಗ್ಗಮವನೀಶ್ವರರಾದ ಸುರೇಶ್ವರರ್ ಚತ
ದ್ದ್ವನಗಜಮಾದ ದಿವ್ಯಗಜಮೆಂಬುದನಾನೆಲನುಂಟುಮಾಡುಗುಂ ॥ ೧೩೪ ॥

ಮ॥ ಹಿಮಮುಂ ಗ್ರೀಷ್ಮಮುಮೆಂಬಿವಾರಿತುಗಳುಂ ಶೀತಕ್ಕಮುಷ್ಣಕ್ಕಮು
ಗ್ರಿಮಥಾಮಂಗಳಸೌಖ್ಯದಂಗಳದಱಿಂದಂ ತಮ್ಮ ತಮ್ಮಂದಿನಂ
ದಮನಾಱುಂ ರಿತು ಪತ್ತುವಿಟ್ಟುವದಱಿಂ ನಿಂದಂತೆ ಕಾರುಂ ಬಸಂ
ತಮೆ ನಾಡೊಳ್ ವಿಷಮರ್ತುಗಳ್ ಪುಗುಗುಮೇ ಪುಣ್ಯಪ್ರಜಾವಾಸದೊಳ್ ॥ ೧೩೫ ॥

ಕಂ॥ ಎರಡನೆಯ ಪಾರಿಜಾತದ
ಮರನೆಂದೆಂಬವೊಲದಕ್ಕಮೆಣೆಯಿಲ್ಲದಱಿಂ
ಕುರುಜಾಂಗಲಮಗ್ಗಳಮು
ತ್ತರಕುರುಗಂ ದೇವಕುರುಗಮತಿನುತವಿಷಯಂ ॥ ೧೩೬ ॥

ನಾಕಸುಖಶೇಷಮಂ ನಾ
ಕೌಕರ್ ಬಂದದಱೊಳನುಭವಿಪ್ಪುದಱಿಂದೇ
ಕಾಕೃತಿ ಕುರುಜಾಂಗಲ[1]ಮುಂ[1]
ನಾಕಮುಮದು ಕಿಱುಕುಳಂಗೆ ಬಣ್ಣಿಸಲ[2]ಟ[3]ದೇ ॥ ೧೩೭ ॥

ಆಕುರುಜಾಂಗಲ ವಿಷಯಮ
ಹೀಕಾಂತೆಗೆ ಪೊಸತೆ ಸಮೆದ ಮುತ್ತಿನ ಮುಡಿ ಧಾ
ತ್ರೀಕರ್ಣಪೂರಮವನಿ
ಸ್ತ್ರೀಕರಲೀಲಾಂಬುಜಂ ಧರಿತ್ರೀತಿಳಕಂ ॥ ೧೩೮ ॥

---

೧೩೪. ಕಲ್ಪಲತೆಯೆ ಬನದ ಬಳ್ಳಿಯಾಯಿತು ; ಕಲ್ಪವೃಕ್ಷವೆ ಕಾಡುಮರವಾಗಿ ನಿಂತಿತು ; ನಮೇರು ವೃಕ್ಷವೇ ದೇವದಾರುವಾಯಿತು ; ಸ್ವರ್ಗಲೋಕವೆ ಜನಪದವಾಯಿತು ; ದೇವೇಂದ್ರರೆ ಬಂದು ಭೂಪತಿಗಳಾದರು ; ದೇವಲೋಕದ ಆನೆಗಳೆ ವನಗಜಗಳಾದುವು—ಎಂಬ ಭಾವನೆಯನ್ನು ಆ ದೇಶ ಉಂಟುಮಾಡುವುದು.

೧೩೫. ಹೇಮಂತ-ಗ್ರೀಷ್ಮ ಎಂಬ ಋತುಗಳು ವಿಪರೀತವಾದ ಚಳಿ ಹಾಗು ಕಾವನ್ನು ಉಂಟುಮಾಡುತ್ತವೆ ; ಕ್ಲೇಶಕ್ಕೆ ಕಾರಣವಾಗುತ್ತವೆ. (ಜನಕ್ಕೆ ಇದು ಒಳ್ಳೆಯದಲ್ಲವೆಂದುಕೊಂಡು) ಆರೂ ಋತುಗಳು ತಂತಮ್ಮ ವೈಶಿಷ್ಟ್ಯಗಳನ್ನು ತೊರೆದುಬಿಟ್ಟುವು. ಅದರಿಂದ ಆ ದೇಶದಲ್ಲಿ ಎಲ್ಲ ಕಾಲದಲ್ಲಿಯೂ ವಸಂತವೇ ನೆಲೆ ನಿಂತಿತು. ಪುಣ್ಯವಂತರಾದ ಪ್ರಜೆಗಳಿರುವಲ್ಲಿ ವಿಷಮವಾದ ಋತುಗಳಿಗೆ ಅವಕಾಶವುಂಟೆ ?

೧೩೬. ಎರಡನೆಯ ಪಾರಿಜಾತದ ಮರವೊ ಏನೊ ಎಂಬಂತೆ ಅಸದೃಶವಾದ ಕುರುಜಾಂಗಲ ದೇಶವು ಉತ್ತರ ಕುರುವಿಗೂ ಉತ್ತಮ ದೇವಕುರುವಿಗೂ ಮೇಲು ಎಂದೆನಿಸಿತು.

೧೩೭. ದೇವಲೋಕದಲ್ಲಿ ತೀರದ ತಮ್ಮ ಸುಖಾಭಿಲಾಷೆಯನ್ನು ದೇವತೆಗಳು ಇಲ್ಲಿಗೆ ಬಂದು ಪೂರೈಸಿಕೊಳ್ಳುವರು ಎಂದಮೇಲೆ ನಾಕಲೋಕಕ್ಕೂ ಕುರುಜಾಂಗಲಕ್ಕೂ ಏನು ಭೇದ ? ನಾಡಾಡಿಯಾದವನು ಅದನ್ನೇನು ಬಣ್ಣಿಸಿಯಾನು ?

೧೩೮. ಆ ಕುರುಜಾಂಗಲ ವಿಷಯವೆಂಬ ಭೂದೇವತೆಗೆ ಹೊಸತಾಗಿ ನಿರ್ಮಿಸಿದ ಮುತ್ತಿನ ಮುಡಿ, ಭೂರಮಣಿಯ ಕರ್ಣಪೂರ ಭೂಮಿಯೆಂಬ ಲಲನೆಯ ಕೈಯಲ್ಲಿರುವ ಲೀಲಾಕಮಲ, ಧರಣೀದೇವಿಯ ಹಣೆಬೊಟ್ಟು,

---

1. ಮಂ (ಮ) 2. ಱ (ಮ) 3. ಕುಳ (ಅ)

ಕಂ॥ ಧರಣೀಹಾರಂ ಹಸ್ತಿನ
ಪುರಮಮರಪುರೋಪಹಾಸಿ ಭೂವನಿತೆಯ ಕ
ರ್ಪೂರದ ಕರಂಡಗೆ ಸೌಖ್ಯದ
ಪರವರಿ ಪೊಸವೇಟದಿರ್ಕೆ ಸಯ್ಪಿನ ತಾಣಂ ॥ ೧೩೯ ॥

ಅದಱ ಪೊಱವೊಟಲ ಸಪ್ತ
ಚ್ಛದಗಂಧದ ಸೊವಡು ಮುಟ್ಟೆ ಮದಕರಿಕುಳಮೋ
ವದೆ ಬಳ್ಳಿವಾಯ್ದು ಗ¹[ಱ¹]¹ತು
ಳ್ಕಿದ ಗಿರಿ ಪರಿವಂತೆ ಪರಿದು ಮುರವಾಯ್ದಿರ್ಕುಂ ॥ ೧೪೦ ॥

ವ॥ ಮತ್ತಮಲ್ಲಿಯೆ—

ಕಂ॥ ಚಾಮೀಕರ ಕಳಶಮೆ ಕುರು
ಭೂಮಿಗೆ ತಾಂ ²ನೇಲೆ² ಮಾಡಮುಂ ಬಳಸಿ ನಭ
ಶ್ಶ್ಯಾಮಂ ನಂದನವನಮಭಿ
ರಾಮಘನಪ್ರಾವೃಷೇಣ್ಯಪಟಲಮನಿಟಿ²ಕುಂ ॥ ೧೪೧ ॥

ಮ॥ ನವನಿರ್ಯತ್ಸಹಕಾರವಾರಿ ಮದಮಂ ತತ್ಪಲ್ಲವಂ ಕರ್ಣಪ
ಲ್ಲವಮಂ ಪೂತೆಳಗೊಂಬು ಕೊಂಬನಳಿ ತದ್ಗಂಡಸ್ಥಳೋದ್ದೇಶ ಸಂ
ಭವಮತ್ತಾಳಿಯನೆಯ್ದೆ ಪೋಲೆ ಬಿಡುತಂದುಗ್ರದ್ವಿಪಂ ಬಂದು ತಾಂ
ಗುವುದೆಂಬಂದೆಳಮಾವಿನೊಳ್ದ್ವಿಪಮೆ ಗೆತ್ತೇಂ ಸೊರ್ಕು ಸೈತಿರ್ಕುಮೇ ॥ ೧೪೨ ॥

ವ॥ ಎನಿಪಳವಿಗಗ್ಗಳಮಾಗಿ ಸೊಗಯಿಸುವ ಪುರಬಹಿರ್ಭಾಗದೊಳ್—

೧೩೯. ಧರಿತ್ರಿಯ ಕೊರಳ ಹಾರ ಎಂಬಂತಿರುವ ಹಸ್ತಿನಪುರವು ಅಮರಾವತಿಯನ್ನು ನೋಡಿ ನಗುತ್ತಿರುವುದು. ಆ ಪುರವು ಭೂದೇವಿಯ ಕಪ್ಪುರದ ಕರಡಗೆ; ಸೌಖ್ಯದ ಬೀಡು; ನವೋನವ ಪ್ರಣಯದ ನೆಲೆಮನೆ; ಸುಖದ ಆಗರ.

೧೪೦. ಅದರ ಹೊರವಲಯದಲ್ಲಿರುವ ಏಳೆಲೆಬಾಳೆಯ ತೀಕ್ಷ್ಣಗಂಧ ತಟ್ಟಿದೊಡನೆ ಮದಗಜದ ಹಿಂಡುಗಳು ಸಾಲುಗಟ್ಟಿ ಗರಿಮೂಡಿದ ಗಿರಿಗಳಂತೆ ಧಾವಿಸಿಬಂದು ಆವರಿಸುವುವು.

ವ॥ ಮತ್ತು ಅಲ್ಲಿ—

೧೪೧. ಕುರುಭೂಮಿಯಲ್ಲಿ ಉಪ್ಪರಿಗೆ ಮನೆಗಳ ಚಿನ್ನದ ಕಳಶಗಳೂ ಅವುಗಳನ್ನು ಆಕಾಶದಂತೆ ಶ್ಯಾಮಲವಾಗಿ ಸುತ್ತುಗಟ್ಟಿದ ಉದ್ಯಾನಗಳೂ ಮಳೆಗಾಲದ ಮೇಘಪಟಲದ ಸೌಂದರ್ಯವನ್ನು ಹೀಯಾಳಿಸುವುವು.

೧೪೨. ಹೊಸದಾಗಿ ಒಸರುತ್ತಿರುವ ಮಾಮರದ ರಸ ಮದೋದಕವನ್ನು, ಅದರ ಎಲೆಗಳ ಕಿವಿಗಳನ್ನು, ಹೂತ ಕೊಂಬೆಯ ಕೋರೆಗಳನ್ನು, ಅಲ್ಲಿರುವ ದುಂಬಿಗಳು ಗಂಡಸ್ಥಲದಲ್ಲಿ ಸೊಕ್ಕೇರಿದ ದುಂಬಿಗಳನ್ನು ಹೋಲಲಾಗಿ, ಮದವೇರಿದ ಆನೆಯೊಂದು ಬಂದು, ಇದೊಂದು ಆನೆಯೆ ಎಂಬ ಭ್ರಾಂತಿಯಿಂದ ಮಾವಿನ ಮರವನ್ನು ಆಕ್ರಮಿಸುವುದು. ಸೊಕ್ಕು ಸರಿಯಾಗಿರಗೊಡುವುದೆ?

ವ॥ ಹೀಗೆ ಅಸದೃಶವಾಗಿ ಶೋಭಿಸುವ ಊರಿನ ಹೊರವಲಯದಲ್ಲಿ—

1. ಠ (ಮ) 2. ನೆಲೆಯ (ಅ)

ಶಾ॥ ಏಳಾಲುಂಗಲವಂಗಭೂರ್ಜಲವಲೀನಾರಂಗಜಂಬೀರಹಿಂ
ತಾಳಾನೋಕಹಸಂಕುಳಂ ಬಳಸಿ ತಚ್ಚಿತ್ರಂ ಪುರೇಶಂಗೆ ದಿ
ಕ್ಪಾಳರ್ ಪಟ್ಟೆಯ ಕೋಂಟೆಯಂ ಸಮೆದರೆಂಬಾಳೋಕಮಂ ಮಾಡುವಿಂ
ದೋಳಾರೂಢವಿಟೀವಿಟಾನನಗಣಾಂದೋಳಂ ತದಾರಾಮದೊಳ್ ॥ ೧೪೩ ॥

ವ॥ ಅದಱಿಂದೊಳಗೆ ಪೂರ್ವಾಪರದಿಗ್ಭಾಗದ ಸಮಭೂತಳಪ್ರದೇಶದೊಳಪೂರ್ವಶಿಲ್ಪಿಕೃತಮಪ್ಪ ಲೆಕ್ಕವಲಗೆಯಂ ಕಾಡಿಗೆಯೊಳ್ ಪುಟ್ಟಿಸಿ ಪೊಟ್ಟಿಗವಡಿಕೆಯೊಳೊರಸಿದಂತೆ ಮಿಂಚಿ ಸೆಳೆದು ನೋಡಿದ ದಿಟ್ಟಿ ತೆಮ[1][ಳ್ಪ][1]ನ್ನೆಗಂ ನುಣ್ಪಂ ತಿಣ್ಪುಮನೊಳಕೊಂಡು ಪುರೋಭಯಪಕ್ಷದೊಳ್—

ಚಂ॥ ಹಯದ ಮನಕ್ಕಮೇಱಿದನ ಬಿನ್ನಣಕಂ ದೊರೆಯಾಗಿಯುಂ ನೆಗ
ೞ್ತೆಯ ಪಣದಕ್ಕೆ ಮಿಕ್ಕೆಸೆವ ತಕ್ಕಿನ ಬೀರರನಟ್ಟಿ ಕೊಲ್ವಳು
ರ್ಕೆಯ ತವಿಗೋಲಮಿಲ್ಲದಿರೆಯುಂ ವಿಭುಗೞ್ತೆಯ ಸೆಂಡನಾಡಲಾ
ನೆಯ ಪರಿನೋಡಲೆಂದೊಲೆದು ಮಾಡಿದ ವಾಹಳಿಗಳ್ ಮನೋಹರಂ ॥ ೧೪೪ ॥

ಪೃಥ್ವೀ ವೃತ್ತಂ॥ ಅವಂ ಪೊಱಗುಮಾಡಿ ರುಗ್ಮಿಕುಳಶೈಳಮಂ ಗೆಲ್ದು ರು
ಗ್ಮಿವಿಸ್ಫುರಿತಮಪ್ಪ ಕೋಂಟೆ ಸಲೆ ಗೊಂಟುಗೊಂಡಿರ್ದುದೆಂ
ಬ ವರ್ಣನೆಗೆ ತಕ್ಕುದೇ ದಲೆ[ನಲಂ]ತದಂ ಸುತ್ತಿ ದು
ಗ್ಧವಾರ್ಧಿಗೆಣೆಯಾದಗೞ್ ಸೊಗಯಿಸಿರ್ಕುಮಚ್ಛಾಂಬುವಿಂ ॥ ೧೪೫ ॥

---

೧೪೩. ಏಲಕ್ಕಿ, ಮಾದಳ, ಲವಂಗ, ಭೂರ್ಜ, ಅರನೆಲ್ಲಿ, ಕಿತ್ತಳೆ, ಸಿಂಬೆ, ಕಿರುತಾಳೆ ಮೊದಲಾದ ಮರಗಳ ಸಮೂಹ ದಟ್ಟವಾಗಿ ಬೆಳೆದು ಸುತ್ತುಗಟ್ಟಿ, ಈ ಪಟ್ಟಣದ ಅಧಿಪತಿಗೆ ದಿಕ್ಪಾಲಕರು ಪಟ್ಟೆಯ ಕೋಟೆಯನ್ನು ನಿರ್ಮಿಸಿ ಕೊಟ್ಟರೊ ಏನೊ ಎಂಬಂತೆ ಕಂಗೊಳಿಸುವುದು. ಆ ಉದ್ಯಾನಗಳಲ್ಲಿ ವಿಟವಿಟಿಯರು ಉಯ್ಯಾಲೆಯಾಡುತ್ತ ಗಾಯನ ಮಾಡುತ್ತಿರುವರು.

ವ॥ ಅದರಿಂದ ಒಳಗೆ ಹೋಗಲಾಗಿ ಪೂರ್ವಪಶ್ಚಿಮ ದಿಗ್ಭಾಗದ ಸಮತಟ್ಟಾದ ಪ್ರದೇಶದಲ್ಲಿ ಅಪೂರ್ವನಾದೊಬ್ಬ ಶಿಲ್ಪಿಯು ನಿರ್ಮಿಸಿದ ಲೇಖನದ ಹಲಗೆಯನ್ನು ಕಾಡಿಗೆಯಿಂದ ತೊಡೆದು, ಹೊಟ್ಟಿಕವಡೆಯಿಂದ ತಿಕ್ಕಿ ಒರಸಿದಂತೆ ಮಿರಮಿರನೆ ಮಿಂಚುತ್ತ ನೋಡಿದವರ ಕಣ್ಣು ದಣಿವಂತೆ ನುಣುಪಾಗಿಯೂ ವಿಸ್ತಾರವಾಗಿಯೂ ಪಟ್ಟಣದ ಎರಡೂ ಪಕ್ಕಗಳಲ್ಲಿ

೧೪೪. ಕುದುರೆಯ ಮನಸ್ಸಿಗೂ ಸವಾರನ ಕೌಶಲ್ಯಕ್ಕೂ ಯೋಗ್ಯವೆನಿಸಿ ಪ್ರಸಿದ್ಧವಾದ ರಣಗಡಿತಕ್ಕೆ ಮೇಲೆನಿಸಿದ ವೀರರನ್ನು ಆಕ್ರಮಿಸಿ ಕೊಲ್ಲುವುದಕ್ಕೆ ಪರಾಕ್ರಮ ತೋರುವುದಕ್ಕೆ (ಯೋಗ್ಯವಾದ ರಂಗದಂತಿದ್ದರೂ) ಅವಕಾಶವಿಲ್ಲದಿರುವ ಕುದುರೆಯೋಟದ ಮೈದಾನಗಳು ಅರಸನಿಗೆ ಚೆಂಡಾಡಲೂ ಆನೆಗಳ ಓಟವನ್ನು ನೋಡಲೂ ಹೇಳಿ ಮಾಡಿಸಿದಂತೆ ಮನಮೋಹಕವಾಗಿರುವುವು.

೧೪೫. ಅವುಗಳನ್ನು ಹೊರಗೆ ಮಾಡಿಕೊಂಡು ಕುಲಪರ್ವತವಾದ ಮೇರುಗಿರಿಯನ್ನು ಗೆದ್ದು (ಅದರಿಂದ ಸುಲಿದುಕೊಂಡು ಬಂದ ಚಿನ್ನದಿಂದ) ತನಗೆ ಅಂಚುಕಟ್ಟಿಕೊಂಡಿತೊ ಏನೊ ಎಂಬಂತೆ ಚಿನ್ನದಿಂದ ಥಳಥಳಿಸುವ ಕೋಟೆ ಒಪ್ಪುವುದು. ಅದರ ಸುತ್ತಲೂ ಕ್ಷೀರಸಮುದ್ರಕ್ಕೆ ಸಮಾನವಾದ ಅಗಳು ಸ್ವಚ್ಛವಾದ ನೀರಿನಿಂದ (ತುಂಬಿ) ಶೋಭಿಸುವುದು.

---

೧. ಳ್ವ (ಮ)

ಕಂ॥ ಆಕೋಟೆಯೊಳಗೆ ಮೂಱುಂ
ಲೋಕಂ ಬಿರ್ದಿರ್ದುದಕ್ಕುಮೆಂಬಳವಿಗೆ ಪಂ
ದೇಕದ್ವಿತ್ರಿ ಚತುಶ್ಶಾ
ಲಾಕೀರ್ಣಂ ಪುರವರಂ ಕರಂ ಸೊಗಯಿಸುಗುಂ ॥ ೧೪೬ ॥

ಚಂ॥ ಪಡೆದ ಧನಕ್ಕೆ ಲೆಕ್ಕಮಿಡಲಿಂದ್ರನಗಂ ಬಳಪಂ ಧರಾತಳಂ
ಕಡಿತಮಹೀಶ್ವರಂ ತಗುಳೆ ಬಾಚಿಸುವೊಂ ಸುರಮಂತ್ರಿ ಕೂಡುವೊಂ
ತೊಡರ್ದಿರ್ದದಱಂತ್ಯಮಿಲ್ಲ ಪವಣೆಂಬ ಪೊಗಟ್ತೆಯ ಸೂಳೆಗೇರಿಯುಂ
ಗಡಿಯ ದಗುಂತಿ ಪೆಂಪುವಡೆದಾ ಪೊೞಲೊಳ್ ನೆ²[ಱ³]²ದೊಪ್ಪಿ ತೋಱುಗುಂ ॥ ೧೪೭ ॥

ವ॥ ಮತ್ತಮಲ್ಲಿ—

ಮ॥ ಸ್ರ॥ ಕರುಮಾಡಂ ರಮ್ಯಹರ್ಮ್ಯಾಚಳದಳವಿಗಳುಂಬಂ ಹಿಮಾದ್ರೀಂದ್ರಸಾನೂ
ತ್ಕರಕಾಂತಂ ಬಳ್ಳಿಮಾಡಂಗಳ ಬಳಗಮದೇನೆಂಬ ಪೆಂಪುರ್ವದೇನೆಂ
ಬಿರವಿಂದೊಳ್ಪಿಂಬದೇನೆಂಬ ದಳಬೆಸನದೇನೆಂಬ ಮಿಕ್ಕೊಳ್ಪದೇನೆಂ
ಬರ ಸಂಬೆತ್ತೊಳ್ಪದೇನೆಂಬವಿಂತಗುಣಮದೇನೆಂಬ ಚಿತ್ರಪ್ರಪಂಚಂ ॥ ೧೪೮ ॥

ಕಂ॥ ವಿವಿಧವಿನೋದಸುಖಂ ವೈ
ಶ್ರವಣಂ ಧನದಾದ್ರಿಯೊಳ್ ಸುಖಂ ವಸಿಯಿಸುವಂ
ತವನಿಪನಾಮಾಡದೊಳು
ದ್ಭವಾಂಬುನಿಧಿ ವಿಶ್ವಸೇನನನುದಿನಮಿರ್ಕುಂ ॥ ೧೪೯ ॥

ವ॥ ಆ ಮಹೀಮಂಡಳೇಶ್ವರಂಗೆ—

೧೪೬. ಮೂರೂ ಲೋಕಗಳೂ ಆ ಕೋಟೆಯ ಒಳಗೆ ಅತಿಥಿಗಳಾಗಿ ಬಂದು ಉಳಿದುಕೊಂಡಿವೆಯೊ ಏನೊ ಎಂಬಂತೆ ಆ ಪಟ್ಟಣವು ಒಂದು, ಎರಡು, ಮೂರು, ನಾಲ್ಕು ಶಾಲೆಗಳನ್ನೊಳಗೊಂಡ ಕಟ್ಟಡಗಳಿಂದ ತುಂಬಿ ಮನೋಹರವಾಗಿರುವುದು.

೧೪೭. ಗಳಿಸಿದ ಹಣದ ಲೆಕ್ಕ ಬರೆಯುವುದಕ್ಕೆ ಮೇರುನಗವೆ ಬಳಪ; ಭೂಮಿಯೆ ಕಡಿತದ ಹಾಳೆ; ಓದಿ ಹೇಳುವವನು ಆದಿಶೇಷ; ಸಂಖ್ಯೆಗಳನ್ನೆಲ್ಲ ಕೂಡಿ ಒಟ್ಟು ಲೆಕ್ಕಮಾಡುವವನು ಬೃಹಸ್ಪತಿ—ಇಷ್ಟಾದರೂ ಲೆಕ್ಕ ಮುಗಿಯದು ಎಂಬ ಪ್ರಸಿದ್ಧಿ ಆ ಪಟ್ಟಣದ ಸೂಳೆಗೇರಿಗೆ ಹಾಗು ಅಂಗಡಿಗಳಿಗೆ ಇರುವುದು; ಇವುಗಳಿಂದ ಆ ಪುರಕ್ಕೆ ಅತಿಶಯವಾದ ಶೋಭೆಯುಂಟಾಗಿರುವುದು.

ವ॥ ಮತ್ತು ಅದರಲ್ಲಿ—

೧೪೮. (ರಾಜನ) ಉಪ್ಪರಿಗೆ ಮಹಲು ಸುಂದರವಾದ ಸುಮೇರು ಪರ್ವತಕ್ಕಿಂತಲೂ ಅತಿಶಯವಾದುದು, ಹಿಮವಂತಪರ್ವತ ಶಿಖರದಂತೆ ಕಾಂತಿಮಯವಾದುದು. ಅಲ್ಲಿಯ ಬಳ್ಳಿಮಂಟಪಗಳ ಬಳಗವೆಂತಹುದು! ವೈಭವ ವೆಂತಹುದು! ಮಹಿಮೆಯೆಂತಹುದು! ಸೌಖ್ಯವೆಂತಹುದು! ಅತಿಶಯವಾದ ಸೊಗಸು ಎಂತಹುದು! ರಸಮಯವಾದ ಜೀವನವೆಂತಹುದು! ಅಮಿತವಾದ ಗುಣವೆಂತಹುದು!—ಅದೆಲ್ಲ ಒಂದು ಆಶ್ಚರ್ಯಕರವಾದ ಪ್ರಪಂಚ.

೧೪೯. ಬಗೆಬಗೆಯ ವಿನೋದಗಳಿಂದ ಕುಬೇರನು ಸುಖವಾಗಿ ಕೈಲಾಸಪರ್ವತದಲ್ಲಿ ವಾಸಮಾಡುವಂತೆ ವಿಶ್ವಸೇನ ಮಹಾರಾಜನು ಆ ಮಹಲಿನಲ್ಲಿ ವಾಸಮಾಡುವನು.

ವ॥ ಆ ಮಹಾರಾಜನಿಗೆ—

1. (ಐ) ದಿದಂ (ಮ) 2. ರೆ (ಮ) 3. ಏ (ಮ)

ಮ॥ ಹಿಮದಿಂ ಸೇತುವನೆಯ್ದೆ ನೀಳ್ದ ರಜತಪ್ರಾಕಾರದಾಕಾರಮಂ
ಹಿಮರಶ್ಮಿದ್ಯುತಿಕೀರ್ತಿ ಪೋಲ್ತ ತೆಱದಿಂದೆಂಬಂತೆ ಶೂನ್ಯಾ
ಭ್ರಮಾರ್ಗಮನಾಜ್ಞಾಂಗನೆ ಪೋಗಿ ಸೇದೆಗಿಡದಂತಾಕಾಶದೊಳ್ ಬಟ್ಟೆಯುಂ
ನಿಮಿರ್ವನ್ನಂ ಬಿದಿ ಸೇತುವಂ ಸಮೆದನೆಂಬಾಶಂಕೆಯಂ ಮಾಡುಗುಂ ॥ ೧೫೦ ॥

ಸುಮನೋಮಾಲೆಯುಮೊರ್ಮೆಯುಂ ಹಿಮದೊಳೇಂ ಬಾಡಿರ್ದಗಲ್ದಿರ್ಕುಮ
ಗ್ರಿಮಭೂಪಾಲಶಿರೋಗ್ರಮಂ ಮೆಱೆದುದಾರಾಜಾಧಿರಾಜಾಜ್ಞೆಯುಂ
ದಮನೇದುಂ ನಿಖಿಲಾವನೀಪರಧಿಪರ್ ಮಾಣಿಕ್ಯಪರ್ಯಂಕ ಕೀ
ರ್ತಿಮುಖಾಧಾರಕಿರೀಟದಿಂದಮೆನೆ ಸಂದೊಾ ವಿಶ್ವಸೇನಾಧಿಪಂ ॥ ೧೫೧ ॥

ಕಂ॥ ಕೆಳೆಯರ ಪಗೆವರ ಪೆಂಡಿರ
ವಿಳೋಳ ಹಾರಾವನದ್ಧಕಂಠಂಗಳಿಳಾ
ತಳನಾಥನ ಮಧ್ಯಸ್ಥಿತೆ
ಯಳವಿಯನಳವಲ್ಲದೆಳೆಗೆ ಗೋಸನೆಗೊಳುಗುಂ ॥ ೧೫೨ ॥

ವ॥ ಮತ್ತಮಾ ಪರಮಕ್ಷತ್ರತೇಜೋರಾಶಿಗೆ—

ಕಂ॥ ಮುನಿಸೆಂಬ ಕಿಚ್ಚಿನೊಳೆ ಬೆಂ
ದು ನಿಲ್ಲದಂಬುಧಿಯನೋಡಿ ಪೊಕ್ಕರಿನೃಪಸಾ
ಧನದಿರವಿನಂದಮೆಂತೆನೆ
ತನುನಿರ್ವಾಪಣನಿಮಿತ್ತದಿರವಂ ಪೋಲ್ಕುಂ ॥ ೧೫೩ ॥

---

೧೫೦. ಆ ರಾಜನ ಬೆಳದಿಂಗಳಂತಹ ಕೀರ್ತಿ ತಂಪಾಗಿ ನೆಲದ ತೆವರನ್ನು ಮುಟ್ಟಿ ಅರಮನೆಯ ಪ್ರಾಕಾರದ ರೂಪವನ್ನು ಪಡೆಯಿತೊ, ಅಥವಾ ಆತನ ಆಜ್ಞೆಯೆಂಬ ಅಂಗನೆ (ವೇಗವಾಗಿ ಹೋಗಲು) ಆಕಾಶದಲ್ಲಿ ಸಂಚರಿಸ್ತುತ್ತಿರುವಾಗ ಅವಳಿಗೆ ಶ್ರಮವಾಗದಂತೆ ಬ್ರಹ್ಮನೇ ಬಂದು ಸೇತುವೆಯನ್ನು ಕಟ್ಟಿದನೋ ಎಂಬಂತೆ (ಅರಮನೆಯ ಗೋಡೆ ಧವಳವಾಗಿಯೂ ಉನ್ನತವಾಗಿಯೂ) ಇರುವುದು.

೧೫೧. ಹೂವಿನ ಮಾಲೆಯೂ ತಂಪುಗಾಲವಲ್ಲಿ ಒಮ್ಮೆ ಬಾಡಿ ರಾಜಶ್ರೇಷ್ಠರ ತಲೆಯಿಂದ ಅಗಲಬಹುದು. ಆದರೆ ಈ ರಾಜಾಧಿರಾಜನ ಆಜ್ಞೆ ಅವರ ತಲೆಯಿಂದ ಎಂದೂ ಅಗಲಲಾರದು ಎಂದು ತಿಳಿದ ಸಮಸ್ತ ಭೂಪಾಲಕರು ಮಾಣಿಕ್ಯಭೂಷಿತವಾದ ತಮ್ಮ ಕಿರೀಟದ ಮೇಲೆ ಆತನ ಆಜ್ಞೆಯನ್ನು ಧರಿಸಿದ್ದರು. (ಪದ್ಯದ ಅನ್ವಯ ತುಂಬ ಕ್ಲಿಷ್ಟವಾಗಿದೆ.)

೧೫೨. ತನ್ನ ಶತ್ರುಗಳ ಹೆಂಡಿರೆ ಆಗಲಿ, ಮಿತ್ರರ ಹೆಂಡಿರೆ ಆಗಲಿ ಅವರಿಬ್ಬರ ಕಂಠಗಳನ್ನೂ ಈತನು "ಹಾರಾವನದ್ಧ" (೧. ಹಾಯ್ ಹಾಯ್ ಎಂಬ ದುಃಖ ಧ್ವನಿಯಿಂದ ತುಂಬಿದುವು, ೨ ಮುತ್ತಿನ ಹಾರಗಳಿಂದ ಕೂಡಿದುವು) ಆಗುವಂತೆ ಮಾಡುವನು; ಹೀಗೆ ಆತನು "ಮಧ್ಯಸ್ಥ" (ನಿಷ್ಪಕ್ಷಪಾತ)ನೆಂದು ಭೂಮಿಗೆಲ್ಲ ಪ್ರಸಿದ್ಧಿಯಾಗಿರುವುದು.

ವ॥ ಮತ್ತು ಪ್ರಚಂಡವಾದ ಕ್ಷಾತ್ರ ತೇಜಸ್ಸುಳ್ಳ ಆತನ—

೧೫೩. ಕೋಪವೆಂಬ ಬೆಂಕಿಯಲ್ಲಿ ಬೆಂದು ಸೈರಿಸಲಾರದೆ ಆತನ ವೈರಿಸೈನ್ಯಗಳು ಓಡಿಹೋಗಿ "ತನುನಿರ್ವಾಪಣ"ಕ್ಕೆ (೧. ದೇಹದ ಬಲಿ ಕೊಡುವುದಕ್ಕೆ, ೨. ದೇಹವನ್ನು ತಂಪುಗೊಳಿಸಲಿಕ್ಕೆ) ಎಂಬಂತೆ ಸಮುದ್ರವನ್ನು ಹೊಗುವುವು. (ಶೇಷ: ಓಡಿಹೋದವರು ಸಮುದ್ರತೀರದಲ್ಲಿಯೆ ವಾಸಮಾಡುವರು ಅಥವಾ ಮುಳುಗಿ ಸತ್ತುಹೋಗುವರು.)

ಕಂ॥ ಆತನ ಚಾಗಂ ಪೆರ್ಮಳೆ
ಚಾತಕಪೋತಕಮನಲಸೆ ಕೊಳ್ವವೊಲರ್ಥಿ
ವ್ರಾತಮನಲಸಿಸಿದುದು ಪೆ
ಮಾರ್ತಿನ ತೊಡವಿಂ ಮದಾಂಧಕರಿಯಿಂ ಹಯಿಯಿಂ ॥ ೧೫೪ ॥

ಉ॥ ಆವಿಜಯಾಂಗನಾನಿಳಯಬಾಹುಗೆ ರಾಜಮುನೀಶ್ವರಂಗೆ ಮಾ
ದೇವಿ ಮದೇಭಗಾಮಿನಿ ಜಗತ್ತ್ರಿತಯಾಂಬಿಕೆ ನಾಮದಿಂದಮೈ
ರಾವಧು ಚಕ್ರವರ್ತಿಯ ಜಿನೇಂದ್ರನ ಕಾಮನ ಜನ್ಮಭೂಮಿ ಲೀ
ಲಾವಿಲಸನ್ನಿಧಾನಮಭಿರಾಮತೆಯೊಡ್ಡು ವಿಲಾಸದಾಲಯಂ ॥ ೧೫೫ ॥

ಕಂ॥ ಗುಣಶೀಲವ್ರಾತದ ಮೇ
ಗಣಾಯಮಾಯತಿಯ ಮೇಗಣಱಿವಱಿವಿನ ಮೇ
ಗಣ ರೂಪುಂ ರೂಪಿನ ಮೇ
ಗಣ ಕಾಂತತೆಯಾ ತ್ರಿಲೋಕಜನನಿಗೆ ಸಹಜಂ ॥ ೧೫೬ ॥

ಮ॥ ಸಡೆ ನೋಡಲ್ ದಿವಿಜೇಂದ್ರನೆಯ್ದೆ ಪೊಗಟಲ್ ನಾಗಾಧಿಪಂ ಭಾವದೊಂ
ದೆಡೆಯಂ ಭಾವಕನಾಗಿ ಪೋಲೆ ಬರೆಯಲ್ಕಾ ವಿಶ್ವಕರ್ಮಂ ದಲಾ
ಪೊಡೆ ನಾಮಾರ್ಪೆಮೆ[1][ನುತ್ತು]ಮಂದು[1] ವಿಬುಧರ್ ಮೌನವ್ರತಂಗೊಂಡರೆಂ
ದೊಡೆ ಪೇಟ್ ಮಾನಿಸರಣ್ಣ ಬಣ್ಣಿಸುವರಾರೈರಾಮಹಾದೇವಿಯಂ ॥ ೧೫೭ ॥

ಚಂ॥ ಸುರಪತಿ ಸೂತ್ರಧಾರನಮರಾವಳಿ ಶಿಲ್ಪಿಗಣಂ ಧನೇಶ್ವರಂ
ಬರೆದು ಪವಣ್ಗೆ ಜಾಣ್ಗವರೆ ನಿರ್ಮಿಸಿದಂ ಪುರಮಂ ನೃಪಂ ಜಗ
ದ್ಗುರುಜನಕಂ ನೃಪಾಂಗನೆ ಜಿನಾಂಬಿಕೆ ಬಣ್ಣಿಸಲಾರ್ಪೊನಾವೊನಾ
ಪುರಮುಮನಾನೃಪೇಂದ್ರನುಮನಾ ನೃಪಕಾ[2][ಂ]ತೆಯುಮಂ ಕವೀಶ್ವರಂ ॥ ೧೫೮ ॥

೧೫೪. ದೊಡ್ಡ ಮಳೆಯಿಂದ ಚಾತಕಗಳಿಗೆಲ್ಲ ಸಾಕು ಸಾಕೆನಿಸುವುದು. ಹಾಗೆಯೆ ಆತನು ದಾನಮಾಡಿದ ಬೆಲೆಯುಳ್ಳ ಆಭರಣ, ಆನೆ, ಕುದುರೆಗಳಿಂದ ಯಾಚಕರು ತಣಿದು ದಣಿದುಹೋಗುವರು.

೧೫೫. ತನ್ನ ತೋಳ್ಬಲದಿಂದ ವಿಜಯ ಪಡೆದ ಆ ರಾಜಯೋಗಿಗೆ ಪಟ್ಟದರಾಣಿ ಐರಾದೇವಿ; ಮದಗಜದಂತೆ ನಡೆಯುಳ್ಳ ಆಕೆ ಮೂರು ಲೋಕಗಳ ತಾಯಿ; ಚಕ್ರವರ್ತಿಯೂ ಕಾಮನೂ ಎನಿಸಿದ (ಶಾಂತಿ) ತೀರ್ಥಂಕರನ ಜನ್ಮಭೂಮಿ; ವಿಭ್ರಮ ವಿಲಾಸಗಳ ನೆಲೆವೀಡು; ಸೌಂದರ್ಯದ ರಾಶಿ; ಬೆಡಗಿನ ತವರು.

೧೫೬. ಸದ್ಗುಣಗಳಿಂದೊಡಗೂಡಿದ ಚಾರಿತ್ರ; ಅದಕ್ಕೆ ಮೇಲಾದ ಮಹಿಮೆ; ಮಹಿಮೆಗೆ ಮೇಲಾದ ಅರಿವು; ಅರಿವಿಗೆ ಮಿಗಿಲಾದ ರೂಪು; ರೂಪಿಗೆ ಮಿಗಿಲಾದ ಕಾಂತಿ—ಇವು ಆ ತ್ರಿಲೋಕಮಾತೆಗೆ ಸ್ವಾಭಾವಿಕ.

೧೫೭. ಅವಳನ್ನು ನೋಡುವುದಕ್ಕೆ (ಮೈತುಂಬ ಕಣ್ಣುಳ್ಳ) ದೇವೇಂದ್ರನು, ಹೊಗಳುವುದಕ್ಕೆ (ಅಸಂಖ್ಯವಾದ ನಾಲಗೆಗಳುಳ್ಳ) ಆದಿಶೇಷನು, ಭಾವಸ್ಥಿತಿಯನ್ನು ಭಕ್ತಿಯಿಂದ ಬರೆಯಲು ವಿಶ್ವಕರ್ಮನು ಸಮರ್ಥರಾದರೆ ಆಹಾ, ನಾವಾದೇವೆಯೆ? ಹೀಗೆಂದುಕೊಂಡು ತಿಳಿದವರು ಮೌನ ತಾಳಿದರು ಎಂದಮೇಲೆ ಅಣ್ಣ, ಆ ಐರಾಮಹಾದೇವಿಯನ್ನು ವರ್ಣಿಸಬಲ್ಲವರು ಯಾರು ಹೇಳು?

೧೫೮. ದೇವೇಂದ್ರನೆ ಸೂತ್ರಧಾರನಾಗಿ ನಿಂತು, ದೇವತೆಗಳು ಶಿಲ್ಪಿಗಳಾಗಿ, ಕುಬೇರನೇ ಬರೆದು ಬುದ್ಧಿವಂತಿಕೆಯಿಂದ ನಿರ್ಮಿಸಿದ ಪಟ್ಟಣ ಆ ಹಸ್ತಿನಾಪುರ. ಅದರ ಅರಸನಾದರೋ ಲೋಕಗುರುವಿನ ತಂದೆ; ಆತನ ಅರಸಿ ತೀರ್ಥಂಕರನ ತಾಯಿ. ಹೀಗಿರುವಾಗ ಆ ಪಟ್ಟಣವನ್ನಾಗಲಿ, ಅರಸನನ್ನಾಗಲಿ, ಆ ಅರಸಿಯನ್ನಾಗಲಿ ಬಣ್ಣಿಸಬಲ್ಲ ಕವಿಸಾರ್ವಭೌಮನು ಯಾರು?

1. × × ಮೆಂದು (ಮ) 2. × (ಮ)

ವ॥ ಅಂತು ವಿಶ್ವಸೇನಾವನೀನಾಥನುಮೈರಾಮಹಾದೇವಿಯುಂ ಧರ್ಮಾನುರಾಗದೊಳಂ ದಾನವಿನೋದದೊಳಂ ಪರೋಪಕಾರವ್ಯಸನದೊಳಂ ಅರಿಷಡ್ವರ್ಗವಿಜಯದೊಳಂ ತತ್ವಭಾವನೆಯೊಳಂ [1]ಕೃತ್ಯ[1]ವ್ಯಾಪಾರರು ಮುದಿತಾಭ್ಯುದಯಪರಂಪರರುಮಾಗಿ ರಾಜ್ಯಸುಖಮನನುಭವಿ[2]ಸುತ್ತಮಿರೆ[2]—

ಕಂ॥ ಆಜನಪದದವ[3][ರು][3]ಮರಸ
ಮಾಜದ ನೆಗಲ್ದುದನೆ ನೆಗಲ್ಚೆ ನೆಲನುಂ ದಿವಮುಂ
ರಾಜೇಂದ್ರನುಮಿಂದ್ರನುಮಧಿ
ರಾಜಾಂಗನೆಯುಂ ಪುಳೋ[4][ಮ][4]ಸುತೆಯಂ ಪೋಲ್ತುಂ ॥ ೧೫೯ ॥

ಅಂತು ಮಹಾದೇವಿಯುಮಖಿ
ಲಾಂತಃಪುರಮುಂ ಕುಳೀನ ರಾಜಕಮುಂ ಸಾ
ಮಂತರುಮಿಂ ಬೆಸಕೆಯ್ಯೆ ಜ
ಗಂ ತನ್ನಂ ಪೊಗಳ್ಚೆ ವಿಶ್ವಸೇನನೃಪೇಂದ್ರಂ ॥ ೧೬೦ ॥

ಸುಖಸಂಕಥಾವಿನೋದದಿ
ನಖಂಡಭೂಮಂಡಲೈಕಪತಿ ದಕ್ಷಿಣದೊಳ್
ಸುಖಮರಸುಗೆಯ್ಯೆ ಕುರುಕುಲ
ಶಿಖಾಮಣಿಪ್ರತಿಮನಾಗಿ ನೃಪನಪ್ರತಿಮಂ ॥ ೧೬೧ ॥

ವ॥ ಪೂರ್ವೋಕ್ತಸರ್ವಾರ್ಥಸಿದ್ಧೀಶ್ವರಂ ಮಹೇಂದ್ರಾಮರಂ ಮೂವತ್ತುಮೂಱುಸಾಗರೋಪಮಾಯುಷ್ಯಂಬರಮನನ್ಯಸಾಮಾನ್ಯ ದಿವ್ಯಸುಖಮನನುಭವಿಸುತ್ತುಮಿರೆ ಪರಮಾಯುರವಶೇಷಮಾಱುದಿಂಗಳುಂಟೆನೆ—

ವ॥ ಹೀಗಿರುವ ವಿಶ್ವಸೇನ ಮಹಾರಾಜನಿಗೂ ಐರಾಮಹಾದೇವಿಗೂ ಧರ್ಮದಲ್ಲಿಯೆ ಪ್ರೀತಿ; ದಾನವೇ ವಿನೋದ; ಪರೋಪಕಾರವೆ ವ್ಯಸನ; ಕಾಮಕ್ರೋಧಾದಿಗಳನ್ನು ಗೆಲ್ಲುವುದೆ ವಿಜಯ; ತತ್ವದಲ್ಲಿಯೆ ಮನಸ್ಸು. ಈ ರೀತಿಯಲ್ಲಿ ವರ್ತಿಸುತ್ತ ಅವರು ಉತ್ತರೋತ್ತರವಾಗಿ ಏಳ್ಗೆ ಹೊಂದುತ್ತ ರಾಜ್ಯಸುಖವನ್ನು ಅನುಭವಿಸುತ್ತಿದ್ದರು.

೧೫೯. ದೇವಲೋಕದವರು ಮಾಡುವುದನ್ನೆ ಆ ಜನಪದದ ಜನರು ಮಾಡುತ್ತಿದ್ದರು. ಆದುದರಿಂದ ಆ ಭೂಮಿ ಸ್ವರ್ಗಕ್ಕೆ ಸದೃಶವಾಯಿತು; ರಾಜನು ಇಂದ್ರನಿಗೆ ಹೋಲಿಕೆಯಾದನು; ರಾಣಿಯು ಶಚೀದೇವಿಗೆ ಸಮನಾದಳು.

೧೬೦. ಮಹಾರಾಣಿಯೂ, ಸಮಸ್ತ ರಾಣಿವಾಸವೂ, ಸತ್ಕುಲಜರಾದ ರಾಜರ ಮಂಡಲಿಯೂ, ಸಾಮಂತರೂ ಆಜ್ಞಾಧಾರಕರಾಗಿ ಸೇವೆ ಸಲ್ಲಿಸುತ್ತಿರಲಾಗಿ, ವಿಶ್ವಸೇನ ಮಹಾರಾಜನು

೧೬೧ ಸುಖಸಂಕಥಾಲಾಪವೆ ಮೊದಲಾದ ವಿನೋದಗಳಿಂದ ಸಮಸ್ತ ಭೂಮಿಗೆಲ್ಲ ಸಾರ್ವಭೌಮನಾಗಿ ನೆಮ್ಮದಿಯಿಂದ ರಾಜ್ಯವಾಳುತ್ತ ಕುರುವಂಶಕ್ಕೆ ಶಿರೋಮಣಿಯೂ ಅದ್ವಿತೀಯನೂ ಎನಿಸಿಕೊಂಡನು.

ವ॥ ಈ ಮುಂಚೆ ವರ್ಣಿತನಾದ ಸರ್ವಾರ್ಥಸಿದ್ಧಿಯ ಮಹೇಂದ್ರನು ಮೂವತ್ತುಮೂರು ಸಾಗರೋಪಮವಾದ ಆಯುಷ್ಯ ಮುಗಿವವರೆಗೆ ಅದ್ವಿತೀಯವಾದ ಸ್ವರ್ಗಸುಖವನ್ನು ಅನುಭವಿಸುತ್ತ ಇದ್ದನು. ಆತನ ಆಯುಷ್ಯ ಇನ್ನೂ ಆರು ತಿಂಗಳು ಉಳಿದಾಗ—

---

1. ಕೃತ (ಮ) 2. ಸುತ್ತಿರೆ (ಮ) 3. ರ (ಮ) 4. ಪು (ಮ)

ಮ॥ ಸ್ರ॥ ಸುರಪಿಜ್ಞಾನೋಪಯೋಗಂ ಸುರಪತಿಗುಪವಿಷ್ಟಾಸನಾಕಂಪದಿಂದಂ
ಬರೆ ಕಂಡೈರಾಮಹಾದೇವಿಯರುದರದೊಳಂಬರ್ಪ ಲೋಕೇಶನಂ ಚಿ
ಚ್ಚರಮಾವಿತ್ತೇಶನಂ ಪೇಟ್ದುದುಮೊಸೆದಱುದಿಂಗಳ್ವರಂ ಪಂಚರತ್ನೋ
ತ್ಕರದಿಂ ಸಾರ್ಧತ್ರಿಕೋಟಿಪ್ರಮಿತಿಯ ಮೞೆಯಂ ಪಣ್ದಿದಂ ಲೋಕಪಾಳಂ ॥ ೧೬೨ ॥

ಕಂ॥ ಆ ರತ್ನದ ಮೞೆ ಪಟ್ಟಣ
ಭಾರಮಿದೆನೆ ವಿಶ್ವಸೇನನರಮನೆಯೊಳ್ ಭೋರ್
ಭೋರೆನೆ ಪಂಚಾಶ್ಚರ್ಯಸ
ಮಾರಂಭಯುತಂ ಶಗುಳ್ದು ಕಱೆದುದು ನಭದಿಂ ॥ ೧೬೩ ॥

ವ॥ ಮತ್ತಂ ಸೌಧರ್ಮೇಂದ್ರನಖಿಲಜಗದ್ಗುರುಜನನಿಯಪ್ಪೈರಾವತೀಮಹಾದೇವಿಯಂ ಕೆಯ್ಗೆಯ್ಯಲ್ —

ಕಂ॥ ಅತಿಶಯಪದ್ಮಾದಿ ಸರ
ಸ್ಥಿತಿಯೊಳ್ ವಸಯಿಸುವರಂ ವಿನೂತ್ನಶ್ರೀಹ್ರೀ
ಧೃತಿ ಕೀರ್ತಿಬುದ್ಧಿ ಲಕ್ಷ್ಮೀ
ಪ್ರತಿತರ್ ದೇವಿಯರನಱುವರಂ ಬೆಸವೇೞ್ದಂ ॥ ೧೬೪ ॥

ವ॥ ಮತ್ತಂ ರುಚಕಾಚಳದ ಮೂಡಣದೆಸೆಯೊಳನಿಂದಿತ[ಮೆಂಬ]ಸ್ವಸ್ತಿಕವೆಂಬ [1]ದಿವಮೆಂಬ[1] ಕಾಂಚನಮೆಂಬ ವಿಡೂರಮೆಂಬಂಜನ ಮೆಂಬರಿಷ್ಟಮೆಂಬಂಜನಮೂ[ಲ]ಮೆಂಬ ಕನಕಮೆಂಬ ಕೂಟತಳಂಗಳೊಳಪಸಲಂಕರಿಸಿರ್ಪ ವಿಜಯೆ ವೈಜಯಂತೆಜಯಂತೆಯಪರಾಜಿತೆ ಯಾನಂದೆ ನಂದೋತ್ತರೆ ನಂದೆ ನಂದವರ್ಧನೆಯರೆಂಬ ಮಹತ್ತರದಿಕ್ಕುಮಾರಿಯರೆಣ್ಬರುಮಂ ಪ್ರಸವೋತ್ಸವೋತ್ಸವದೊಳ್ ತುಂಗ ಭೃಂಗಾರಂಗಳಂ ಪೊತ್ತು ನಡೆಯುಲಿಂದ್ರಂ ಬೆಸಸಿದಂ ಮತ್ತಾಗಿರಿಯ ತೆಂಕಣ ದರಿಯ—

---

೧೬೨. ಇಂದ್ರನಿಗೆ ಆಸನ ಕಂಪವಾಯಿತು. ಈ ಲೋಕಪ್ರಭು ಐರಾಮಹಾದೇವಿಯ ಗರ್ಭದಲ್ಲಿ ಅವತರಿಸುವ ನೆಂದು ದಿವ್ಯಜ್ಞಾನದಿಂದ ಆತನು ಅರಿತುಕೊಂಡನು. ಕೂಡಲೆ ಆತನು ಕುಬೇರನಿಗೆ ಆಜ್ಞಾಪಿಸಿದನು. ಆ ಮೇರೆಗೆ ಕುಬೇರನು ಉತ್ಸಾಹದಿಂದ ಮೂರೂವರೆ ಕೋಟಿ ಸಂಖ್ಯೆಯ ಪಂಚರತ್ನಗಳನ್ನು ಮಳೆಗರೆದನು.

೧೬೩. ಪಟ್ಟಣ ಹಿಡಿಸದಂತೆ ಆ ರತ್ನವೃಷ್ಟಿ ನಡೆಯುತ್ತಿರುವ ಕಾಲದಲ್ಲಿಯೆ ವಿಶ್ವಸೇನನ ಅರಮನೆಯಲ್ಲಿ ಪಂಚಾಶ್ಚರ್ಯಗಳು ಸಂಭ್ರಮದಿಂದ ತಲೆದೋರಿದುವು.

ವ॥ ದೇವೇಂದ್ರನು ಸಮಸ್ತ ಲೋಕಗುರುವಿನ ತಾಯಾಗಲಿರುವ ಐರಾವತೀ ಮಹಾದೇವಿಯನ್ನು ಅಲಂಕರಿಸಲೆಂದು—

೧೬೪. ಅತಿಶಯವಾದ ಪದ್ಮವೆ ಮೊದಲಾದ ಸರೋವರಗಳಲ್ಲಿ ವಾಸಿಸುವ ಶ್ರೀ, ಹ್ರೀ, ಧೃತಿ, ಕೀರ್ತಿ, ಬುದ್ಧಿ, ಲಕ್ಷ್ಮಿ ಎಂಬ ಆರು ದೇವಿಯರನ್ನು ಅಪ್ಪಣೆಮಾಡಿ ಕಳಿಸಿಕೊಟ್ಟನು;

ವ॥ ರುಚಕಪರ್ವತದ ಪೂರ್ವದಿಕ್ಕಿನಲ್ಲಿ ಅನಿಂದಿತ, ಸ್ವಸ್ತಿಕ, ಕಾಂಚನ, ವಿಡೂರ, ಅಂಜನ, ಅರಿಷ್ಟ, ಅಂಜನ ಮೂಲ, ಕನಕ ಎಂಬ ಎಂಟು ಕೂಟ ತಳಗಳಿವೆ. ಅವುಗಳನ್ನು ಅಲಂಕರಿಸಿರುವ ವಿಜಯೆ, ವೈಜಯಂತೆ, ಜಯಂತೆ, ಅಪರಾಜಿತೆ, ಆನಂದೆ, ನಂದೋತ್ತರೆ, ನಂದೆ, ನಂದವರ್ಧನೆ ಎಂಬ ಎಂಟು ಜನ ಮಹತ್ತರ ದಿಕ್ಕನ್ಯೆಯರನ್ನು ಕರೆದು ತೀರ್ಥಂಕರನ ಜನನಕಾಲದಲ್ಲಿ ದೊಡ್ಡದೊಡ್ಡ ಚಿನ್ನದ ಕುಂಭಗಳನ್ನು ಹೊತ್ತು ನಡೆಯಲು ವಿಧಿಸಿದನು; ಮತ್ತು ಆ ಬೆಟ್ಟದ ದಕ್ಷಿಣಕ್ಕೆ

---

1. × (ಮ)

ಕಂ॥ ರುಚಕಮಮೋಘಂ ವಿಮಳಂ
ರುಚಕೋತ್ತರಮುಚಿತಸುಪ್ರಬುದ್ಧಂ ಭದ್ರಂ
ರುಚಿವನ್ಮಂದರಮಪವರ
ಕಚಾರುತರಸುಪ್ರತಿಷ್ಠಮೆಂಬ ನಿತಂಬಂ ॥ ೧೬೫ ॥

ವ॥ ಆ ಕೂಟಾಷ್ಟಕದೊಳ್—

ಕಂ॥ ಪ್ರತಿದಿವಸಂ ರಮಿಯಿಪ ದೇ
ವತೆಗಳ್ ಸುಪ್ರಣಿಧಿ ಸದ್ಯಶೋಧರೆ ಲಕ್ಷ್ಮೀ
ಮತಿ ಕೀರ್ತಿಮತಿ ವಸುಂಧರೆ
ಸುತಸುಸ್ಥಿತೆ ಸುಪ್ರಬುದ್ಧೆ ಚಿತ್ರಿಕೆಯೆಂಬಳ್ ॥ ೧೬೬ ॥

ವ॥ ಅವರನಮರರಾಜಂ ಸಿರಿಗನ್ನಡಿವಿಡಿಯುಲಪ್ಪಯ್ಸಿದಂ ಮತ್ತಂ ತದದ್ರೀಂದ್ರದ ವಾರುಣ ದಿಶಾಭಾಗದ ರತ್ನಾರುಣಮಪ್ಪ—

ಕಂ॥ ಕುಮುದಂ ನಳಿನಂ ಪದ್ಮಂ
ಕಮಳಂ ಸೌಮನಸಮುಂ ಯಶೋಭದ್ರಕಮು
ತ್ತಮಲೋಹಿತಾಕ್ಷಮುಂ ಕುಸು
ಮಮೆಂದು ಪೆಸರ್ವೆಸರೊಳೆಸೆವ ಕೂಟಾಷ್ಟಕದೊಳ್ ॥ ೧೬೭ ॥

[1]ಆಪೊರ್ಬು೦[1] ನೆಲಸುವಿಳಾ
ದೇವಿ ಸುರಾದೇವಿ ಪೃಥ್ವಿ ಪದ್ಮಾವತಿ ಸ
ದ್ಭಾವದ ಕಾಂಚನೆ ನವಮಿಕೆ
ಲಾವಣ್ಯದ ಸೀತೆ ಭದ್ರೆಯೆಂಬೆಣ್ಬರುಮಂ ॥ ೧೬೮ ॥

---

೧೬೫. ರುಚಕ, ವಿಮಳ, ರುಚಕೋತ್ತರ, ಸುಪ್ರಬುದ್ಧ, ಭದ್ರ, ಮಂದರ, ಅಪವರಕ ಮತ್ತು ಸುಪ್ರತಿಷ್ಠವೆಂಬ ಕೂಟಗಳಿರುವುವು.

ವ॥ ಆ ಅಷ್ಟಕೂಟಗಳಲ್ಲಿ—

೧೬೬. ದಿನಾಲು ಆಟವಾಡುತ್ತಿರುವ ಸುಪ್ರಣಿಧಿ, ಯಶೋಧರೆ, ಲಕ್ಷ್ಮೀಮತಿ, ಕೀರ್ತಿಮತಿ, ವಸುಂಧರೆ, ಸುಸ್ಥಿತೆ, ಸುಪ್ರಬುದ್ಧೆ, ಚಿತ್ರಿಕೆ ಎಂಬ ದೇವತೆಗಳಿರುವರು.

ವ॥ ಅವರನ್ನು ಕನ್ನಡಿ ಹಿಡಿಯುವ ಕೆಲಸಕ್ಕೆ ನಿಯಮಿಸಿದನು. ಮತ್ತು ಆ ಬೆಟ್ಟದ ಪಶ್ಚಿಮ ದಿಗ್ಭಾಗದಲ್ಲಿ ರತ್ನಗಳಿಂದ ಕೆಂಪಾದ—

೧೬೭. ಕುಮುದ, ನಳಿನ, ಪದ್ಮ, ಕಮಳ, ಸೌಮನಸ, ಯಶೋಭದ್ರಕ, ಲೋಹಿತಾಕ್ಷಕ ಮತ್ತು ಕುಸುಮ ಎಂಬ ಎಂಟು ಕೂಟಗಳಿರುವುವು. ಅವುಗಳಲ್ಲಿ—

೧೬೮. ಸದಾಕಾಲ ನೆಲಸಿರುವ ಇಳಾದೇವಿ, ಸುರಾದೇವಿ, ಪೃಥ್ವಿ, ಪದ್ಮಾವತಿ, ಕಾಂಚನೆ, ನವಮಿಕೆ, ಸೀತೆ ಮತ್ತು ಭದ್ರೆ ಎಂಬ ಎಂಟು ದೇವಿಯರನ್ನು

---

1. × (ಮ)

ವ॥ ನಾಕನಾಯಕಂ ತ್ರಿಲೋಕಗುರುಪವಿತ್ರಿಗೆ ಸೀಯನಪ್ಪ ಗೇಯದಿಂ ಪೊಲ್ತುಗಳೆಯಲ್ ನಿಯಮಿಸಿದಂ ಮತ್ತಮಾಧರಣೀಧರ ರಾಜಾಧಿರಾಜನಪ್ಪ—

ಕಂ॥ ವಿನುತ ರುಚಕಾದ್ರಿಯುತ್ತರ
ವನದೊಳ್ ಸೊಗಯಿಸುವ ಕುಂಡಳ ಸ್ಫಟಿಕಾರ್ಕಾಂ
ಜನ ಕಾಂಚನ ರುಚಿರ ಸುದ
ರ್ಶನ ರಜತಾಂಕಿತ ವಿಚಿತ್ರಕೂಟಾವಳಿಯೊಳ್ ॥ ೧೬೯ ॥

ಒಸೆದಿರ್ಪ ಶ್ರೀಹ್ರೀಧೃತಿ
ಲಸದಾಸ್ಯೆ ವಿಬುದ್ಧೆ ಪುಂಡರೀಕಿಣಿ ಭಾವ
ಪ್ರಸರದೆ ಕಡುಗಾಡಿಯಳುಂ
ಬೆಸವಾರುಣಿ ಮಿಶ್ರಕೇಶಿಯೆಂಬೆಣ್ಬರುಮಂ ॥ ೧೭೦ ॥

ವ॥ ಕುಳಿಶಾಯುಧನರ್ಹನ್ಮಾತೆಗೆ ಧವಳಚಮರರುಹಂಗಳನಿಕ್ಕಲ್ ನಿಯೋಜಿಸಿದಂ ಮತ್ತಮಾಪರ್ವತದ ಪೂರ್ವದಿಗ್ಭಾಗದ ನಾಲ್ಕು ಕೂಟಂಗಳಪ್ಪ—

ಕಂ॥ ನಿತ್ಯಾವಲೋಕ ವಿಮಳಕ
ನಿತ್ಯೋದ್ಯೋತಸ್ವಯಂಪ್ರಭಂಗಳೊಳಿರ್ದಾ
ದಿತ್ಯಕ್ಷಣರುಚಿತನುರುಚಿ
ಮತ್ಯಬಲೆಯರಂ ಪ್ರದೀಪತತಿಯಂ ಬೆಳಗಲ್ ॥ ೧೭೧ ॥

ತ್ರಿಶಿರೆಯುಮಂ ಚಿತ್ರೆಯು [ಮಂ]
ವಿಶೇಷದಿಂ ಕನಕಚಿತ್ರೆಯೆಂಬಳುಮನಘಾಂ
ಕುಶಮಣಿ ಸೂತ್ರಾಮಣಿಯುಮ
ನಶೇಷ ಜಿನಜನನಿಗಮರರಾಜಂ ಪೇಟ್ದಂ ॥ ೧೭೨ ॥

ವ॥ ದೇವೇಂದ್ರನು ತ್ರಿಜಗದ್ಗುರುವಿನ ತಾಯಿಗೆ ಇಂಪಾದ ಗಾಯನ ಮಾಡಿ ಹೊತ್ತುಗಳೆಯಲು ನೇರವಾಗಿರೆಂದು ಆಜ್ಞೆಮಾಡಿದನು. ಮತ್ತು ಗಿರೀಂದ್ರನೆನಿಸಿದ

೧೬೯. ಆ ರುಚಕಪರ್ವತದ ಉತ್ತರ ವನದಲ್ಲಿ ಶೋಭಿಸುವ ಕುಂಡಳ, ಸ್ಫಟಿಕ, ಅರ್ಕ, ಅಂಜನ, ಕಾಂಚನ, ರುಚಿರ, ಸುದರ್ಶನ ಮತ್ತು ರಜತವೆಂಬ ಕೂಟಗಳಿರುವುವು. ಅವುಗಳಲ್ಲಿ

೧೭೦. ಸಂತೋಷದಿಂದ ವಾಸಮಾಡುವ ಶ್ರೀ, ಹ್ರೀ, ಧೃತಿ, ಆಸ್ಯೆ, ವಿಬುದ್ಧೆ, ಪುಂಡರೀಕಿಣಿ, ಆರುಣಿ ಮತ್ತು ಮಿಶ್ರಕೇಶಿ ಎಂಬ ಅತಿಸುಂದರಿಯರಾದ ಎಂಟು ಜನರನ್ನು

ವ॥ ದೇವೇಂದ್ರನು ಅರ್ಹಂತ ಜನನಿಗೆ ಚಾಮರ ಬೀಸಲು ನೇಮಿಸಿದನು. ಮತ್ತು ಆ ಗಿರಿಯ ಪೂರ್ವದಿಕ್ಕಿನ ನಾಲ್ಕು ಕೂಟಗಳಾದ

೧೭೧. ನಿತ್ಯಾವಲೋಕ, ವಿಮಳಕ, ನಿತ್ಯೋದ್ಯೋತ ಮತ್ತು ಸ್ವಯಂಭು ಎಂಬುವುಗಳಲ್ಲಿ ಮಿಂಚಿನಂತೆ ಮೈಕಾಂತಿಯುಳ್ಳ ವಿದ್ಯುತ್ಕುಮಾರಿಯರನ್ನು ದೀಪಬೆಳಗುವ ಕೆಲಸಕ್ಕೆ ಗೊತ್ತುಮಾಡಿದನು.

೧೭೨. ತ್ರಿಶಿರೆ, ಚಿತ್ರೆ, ಕನಕಚಿತ್ರೆ ಮತ್ತು ಸೂತ್ರಾಮಣಿಯೆಂಬವರೇ ಹಾಗೆ ಆ ಕೆಲಸಕ್ಕೆ ದೇವೇಂದ್ರನಿಂದ ನಿಯಮಿಸಲ್ಪಟ್ಟವರು.

ವ॥ ಮತ್ತಮಾ ರುಚಕಾಚಳದ ವಿದಿಗ್ಭಾಗಸ್ಥಿತಕೂಟಂಗಳಪ್ಪ—

ಕಂ॥ ರುಚಕಮಣಿಪ್ರಭವೈಡೂ
ರ್ಯಚಾರುರುಚಕೋತ್ತರಂಗಳೊಳ್ ರಮಯಿಸುವಾ
ರುಚಕೆ ರುಚಕಾಸ್ಯೆ ರುಚಕಾಂ
ತೆ ಚಟುಲೆ ರುಚಕಪ್ರಭಾಖ್ಯೆಯೆಂಬಮರಿಯರಂ ॥ ೧೭೩ ॥

ವ॥ ಮತ್ತಂ ತದದ್ರೀಂದ್ರದ—

ಕಂ॥ ರತ್ನೋಚ್ಚ್ರಯ ರತ್ನಪ್ರಭ
ರತ್ನಲಸತ್ಸರ್ವರತ್ನ ಕೂಟಾದಿಗಳೊಳ್
ಯತ್ನದಿನಿರ್ಪಮರಸ್ತ್ರೀ
ರತ್ನಂಗಳನರ್ಹದಂಬಿಕಾಸೇವನೆಯೊಳ್ ॥ ೧೭೪ ॥

ಅಪರಾಜಿತೆ ವಿಜಯೆ ಜಯಂ
ತೆ ಪೆಸರೊಳಾವೈಜಯಂತೆಯೆಂಬಿವರಂ ನಾ
ಕಪತಿ ನಿಯೋಜಿಸಿದಂ ವಿ
ಷ್ಟಪತ್ರಯಾಧೀಶ ಜನನಿಗಿಸುವೆಸಗೆಯ್ಕಲ್ ॥ ೧೭೫ ॥

ವ॥ ಮತ್ತಮನ್ಯಕುಲಶಿಖರಿ ಶೇಖರಂಗಳಪ್ಪ ಕೂಟಂಗಳೊಳಿರ್ಪ—

ಉ॥ ಹಾವವಿಲಾಸಭಾವರಸರಂಜಿತೆ ಮಾಳಿನಿ ಪುಷ್ಪಚೂಳೆ ಚೂ
ಳಾವತಿ ಚಂಕನತ್ಕನಕಚಿತ್ರಿಕೆ ಮಾಳಿಕೆ ಕಾಂತಿಮತ್ಸುರಾ
ದೇವಿ ವಿಳಾಸದಾತ್ರಿಶತೆ ಕಾಂಚನದೇವತೆಯೆಂಬೊರಂ ಜಿನೇಂ
ದ್ರಾವಸಥೈಕಗರ್ಭಪರಿಶೋಧನೆಗಟ್ಟಿದನಿಂದ್ರನಬ್ಬಿಯಿಂ ॥ ೧೭೬ ॥

ವ॥ ಮತ್ತು ಆ ರುಚಕಗಿರಿಯ ವಿದಿಕ್ಕಿನಲ್ಲಿರುವ ಕೂಟಗಳು—

೧೭೩. ರುಚಕ, ಮಣಿಪ್ರಭ, ವೈಡೂರ್ಯ ಮತ್ತು ರುಚಕೋತ್ತರ ಎಂಬುವು. ಅವುಗಳಲ್ಲಿ ರಮಿಸುವ ರುಚಕೆ, ರುಚಕಾಸ್ಯೆ, ರುಚಕಾಂತ ಮತ್ತು ರುಚಕಪ್ರಭೆಯೆಂಬ ದೇವಾಂಗನೆಯರನ್ನು

ವ॥ ಆ ಗಿರಿಯ—

೧೭೪. ರತ್ನೋಚ್ಚ್ರಯ, ರತ್ನಪ್ರಭ, ಸರ್ವರತ್ನವೆ ಮೊದಲಾದ ಕೂಟಗಳಲ್ಲಿ ವಾಸವಾದ ದೇವಸ್ತ್ರೀಯರನ್ನು ತೀರ್ಥಂಕರ ಮಾತೆಯ ಸೇವೆಗೆ ನಿಯಮಿಸಿದನು.

೧೭೫. ಅಪರಾಜಿತೆ, ವಿಜಯೆ, ಜಯಂತೆ, ವೈಜಯಂತೆ ಎಂಬವರನ್ನು ಜಿನಮಾತೆಯ ಸೇವೆಗೆ ನಿಲ್ಲಿಸಿದನು.

ವ॥ ಮತ್ತು ಇತರ ಪರ್ವತಶಿಖರಗಳಾದ ಕೂಟಗಳಲ್ಲಿರುವ—

೧೭೬. ಹಾವಭಾವ ವಿಲಾಸದಿಂದ ರಂಜಿಸುವ ಮಾಳಿನಿ, ಪುಷ್ಪಚೂಳೆ, ಚೂಳಾವತಿ, ಕನಕಚಿತ್ರಿಕೆ, ಮಾಳಿನಿ, ಸುರಾದೇವಿ, ತ್ರಿಶತೆ, ಕಾಂಚನದೇವತೆ ಎಂಬವರನ್ನು ಜಿನಮಾತೆಯ ಗರ್ಭಶೋಧನೆ ಮಾಡಲು ಇಂದ್ರನು ಕಳಿಸಿಕೊಟ್ಟನು.

ವ॥ ಅಂತನುರೇಂ[1]ದ್ರಂ ತನ್ನಿಂ[1]ದ್ರಾಣಿಯು ದೊರೆಯುರಾದೆಲ್ಲರು(ಮಂ)ರಮಣಿಯ ರಹಸ್ಯವ್ಯಾಪಾರಕ್ಕಂ ಪರಿಚಾರಿಕಾ[2]ಕೃತ್ಯಕ್ಕೆ[2]ಮಟ್ಟುವುದುಮನಿಬರುಂ ಬಂದು—

ಕಂ॥ ಸಂಗತಸುರಸುದತಿಯರ
ಷ್ಟಾಂಗಂ ಬೆರಸೆಱಗೆ ಜಿನನ ಜನನಿಯ ಪದಪ
ದ್ಮಂಗಳೊಳೊಪ್ಪಿದುವಳಿಕುಳ
ಮಂ ಗೆಲ್ದು ತದೀಯಕುಟಿಳಚಿಳದಳಕಂಗಳ್ ॥ ೧೭೭ ॥

ವ॥ ಅಂತನಿಬರಮರಿಯರಲಸದ್ಬೈರಾಮಹಾದೇವಿಯನೋಲಗಿಸುತ್ತಿರೆ—

ಕಂ॥ ಪರಮಜಿನಜನನಿಗೊರ್ವಳ್
ಸುರವಧು ಕೊಡೆವಿಡಿದು ನಳಿನಿಯೊಡವೆಳೆದು ರಜಂ
ಬೊರೆದು ಕೊಡೆಯಲೆಯು ಕೆಳಗಿ
ರ್ದ ರಾಜಹಂಸಿಯ ವಿಳಾಸಮಂ ನೆನೆಯಿಸಿದಳ್ ॥ ೧೭೮ ॥

ತ್ರಿದಶನದೀಸಲಿಲದ ಪೂ
ರದಿನಂಗನೆ ನಯದೊಳಭಿಷವೋತ್ಸವಮನೊಡ
ರ್ಚಿದಳೆನೆ ಜಿನಜನನಿಗೆ ರಾ
ಗದಿನಿಕ್ಕಿದಳೊರ್ವಳಮರಿ ಚಮರೀರುಹಮಂ ॥ ೧೭೯ ॥

ಕವಿತಗೆ ವಾಗ್ದೇವತೆ ಕಿ
ಟ್ಟವಳಿಗೆವಿಡುವಂತೆ ತಂಬುಲಂದೀವಿದ ಪೊಂ
ಗವಳಿಗೆಯುಂ ಪಿಡಿದಂಬಿಕೆ
ಗವಟಯ್ಸಿದಳೊರ್ವಳಿಂದ್ರವಧು ತಂಬುಲಮಂ ॥ ೧೮೦ ॥

ವ॥ ಹೀಗೆ ದೇವೇಂದ್ರನು ಶಚೀದೇವಿಗೆ ಸಮನಾದ ಈ ಎಲ್ಲ ದೇವಾಂಗನೆಯರನ್ನು ರಹಸ್ಯವಾದ (ಗರ್ಭಶೋಧನೆಯ) ಕಾರ್ಯಕ್ಕೂ, ಪರಿಚಾರಿಕಾ ಕಾರ್ಯಕ್ಕೂ ನಿಯಮಿಸಿ ಕಳಿಸಲಾಗಿ, ಬಂದು—

೧೭೭. ನೆರೆದ ದೇವಸ್ತ್ರೀಯರು ಜಿನಮಾತೆಯ ಪಾದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು; ಆ ಸುಂದರವಾದ ಪಾದಗಳ ಮೇಲೆ ಹರಡಿದ ಅವರ ಉಂಗುರು ಗೂದಲುಗಳು ಕಮಲಗಳ ಮೇಲೆ ಮುಸುಕಿದ ದುಂಬಿಗಳ ಚೆಲುವನ್ನು ಮೀರಿಸಿದುವು.

ವ॥ ಆನಂತರ ಆ ಎಲ್ಲ ದೇವಾಂಗನೆಯರು ಐರಾಮಹಾದೇವಿಯ ಸೇವೆಗೆ ತೊಡಗಿದರು.

೧೭೮. ಪರಮೇಶ್ವರನ ತಾಯಿಗೆ ಒಬ್ಬ ಸುರಯುವತಿ ಕೊಡೆಹಿಡಿದಳು; ಆಗ ಕಮಲಿನಿಯೊಡನೆ ಬೆಳೆದು ಅದರ ಹುಡಿಯೊಡನೆ ಕೊಡೆಯಿಲೆಯ ಕೆಳಗೆ ಕಂಗೊಳಿಸುವ ರಾಜಹಂಸಿಯಂತೆ ಆ ಅರಸಿ ಶೋಭಿಸಿದಳು.

೧೭೯. ದೇವಗಂಗೆಯ ಧವಳಜಲದಿಂದ ಅಭಿಷೇಕ ಮಾಡುವಳೊ ಏನೊ ಎಂಬಂತೆ ದೇವವಧುವೊಬ್ಬಳು ಜಿನಾಂಬಿಕೆಗೆ ಧವಳಚಾಮರವನ್ನು ಬೀಸಿದಳು.

೧೮೦. ಕವನ ರಚನೆಗೆ ಸರಸ್ವತೀದೇವಿಯು ಓಲೆಯಗರಿಯನ್ನು ಹಿಡಿಯುವಂತೆ ತಾಂಬೂಲ ತುಂಬಿದ ಚಿನ್ನದ ಕವಳಿಗೆಯೊಂದನ್ನು ನೀಡಿ ಇಂದ್ರಕನ್ಯೆಯೊಬ್ಬಳು ಆ ತಾಯಿಗೆ ತಂಬುಲವಿತ್ತಳು.

---

1. ದ್ರನಿಂ (ಮ) 2. ಕೃತ್ಯಾನುಷ್ಠಾನಕ್ಕೆ (ಅ)

ಕಂ॥ ಅನುದಿನಮೊರ್ವಳ್ ಗೀರ್ವಾ
ಣನಾಥವಧು ನಾಕಲೋಕದಿಂ ಬಂದರ್ಹ
ಜ್ಜನನಿಗೆ ನಂದನವನಗತ
ವನಲತೆವೋಲ್ ತಂದು ನೀಡುಗುಂ ಪಣ್ಪಲಮಂ ॥ ೧೮೧ ॥

ಸುಕುಮಾರಸುರಭಿಸಂತಾ
ನಕಕುಸುಮದ ಬಣ್ಣವಾಸಿಗಂಗಳನೆತ್ತಿ
ತ್ತಕಳಂಕಮೂರ್ತಿಗಾಗಾ
ಡಿಕಾರ್ತಿಗಮರಿಯರೆ ಮಾಲೆಗಾರ್ತಿಯರಾದರ್ ॥ ೧೮೨ ॥

ಮಂಡಲದ ತುಡುಗೆಯುಂ ಕೆ
ಯ್ಕೊಂಡುಂ ಬಗೆಯಱಿದು ತುಡಿಸಿಯುಂ ಮದವದ್ವೇ
ತಂಡಮೃದುಗತಿಗೆ ಮಾಣಿಕ
ಭಂಡಾರದ ಬೆಸನನಮರಿಯರ್ ನಡೆಯಿಸುವರ್ ॥ ೧೮೩ ॥

ಅತಿಶಯಮೆಸೆದಿರೆ ಮೃದುಪಾ
ದತಳಂಗಳನೂಡಿ ಯಾವಕದ್ರವದಿಂದಂ
ಪ್ರತಿದಿನಮಾ ದೇವಿ[1]ವಿಳೇ[1]
ಪಿತಕರ್ಮಮನೊರ್ವಳಮರವಧು ಕೆಯ್ಕೊಂಡಳ್ ॥ ೧೮೪ ॥

ತ್ರಿದಶಾಂಗನೆಯರ್ ತ್ರಿಸ್ಥಾ
ನದೊಳ್ ಪ್ರಸನ್ನಾಧಿಯಪ್ಪಲಂಕಾರಂಗಳ್
ಪದಿಮೂಱುಮೆಸೆಯೆ ಕೊಳೆ ಪಾ
ಡಿದರೋಲಗಸಾಲೆಯೊಳ್ ಜಿನೇಂದ್ರಾಂಬಿಕೆಯಾ ॥ ೧೮೫ ॥

---

೧೮೧. ಪ್ರತಿದಿವಸ ದೇವಕನ್ಯೆಯೊಬ್ಬಳು ದೇವಲೋಕದಿಂದ ಹಣ್ಣುಹಂಪಲವನ್ನು ತಂದು ಅಮರಾವತಿಯ ವನಲತೆಯಂತೆ ಅರ್ಹಂತಮಾತೆಗೆ ನೀಡುವಳು.

೧೮೨. ದೇವಲೋಕದ ಸಂತಾನಕ ವೃಕ್ಷದಲ್ಲಿ ಅರಳಿದ ಕೋಮಲ ಪರಿಮಳ ಕುಸುಮಗಳಿಂದ ಸೊಗಸಾಗಿ ಹೆಣೆದ ಮಾಲೆಗಳನ್ನು ಎತ್ತಿಕೊಂಡು ಬರುವ ದೇವಾಂಗನೆಯರೆ ನಿಷ್ಕಲಂಕಮೂರ್ತಿಯಾದ ಆ ತಾಯಿಗೆ ಮಾಲೆಗಾರ್ತಿಯರಾದರು.

೧೮೩. ಹೇರಳವಾದ ಆಭರಣಗಳನ್ನು ತೆಗೆದುಕೊಂಡು ಕ್ರಮವರಿತು ತೊಡಿಸುತ್ತ ಮದಗಜಯಾನೆಯಾದ ಆ ಮಾತೆಗೆ ಅಮರಾಂಗನೆಯರು ರತ್ನಭಂಡಾರದ ಸೇವೆಯನ್ನು ಸಲ್ಲಿಸುವರು.

೧೮೪. ಅರಗಿನ ದ್ರವದಿಂದ ತುಂಬ ಸೊಗಸಾಗುವಂತೆ ಆ ತಾಯಿಯ ಮೃದುವಾದ ಅಂಗಾಲುಗಳಿಗೆ ಲೇಪಿಸುತ್ತ ಅಮರಕನ್ಯೆಯೊಬ್ಬಳು ಪ್ರತಿದಿನ ಪಾದಲೇಪನ ಸೇವೆಯನ್ನು ನೆರವೇರಿಸಿದಳು.

೧೮೫. ಮೂರು ಸ್ಥಾನಗಳಲ್ಲಿ ಸುಂದರವಾದ ಹದಿಮೂರು ಅಲಂಕಾರಗಳನ್ನು ಅಳವಡಿಸಿ, ಮನೋಹರವಾಗುವಂತೆ ದೇವಗಾಯಿಕೆಯರು ಜಿನೇಂದ್ರಜನನಿಯ ಓಲಗಶಾಲೆಯಲ್ಲಿ ಹಾಡಿದರು.

---

1. ಗ ನಾ (ಅ)

ಕಂ॥ ರಂಗದೊಳಮರಾಂಗನೆ ಗ
ತ್ಯಂಗಂ ನೃತ್ಯಾಂಗಮಂಗಹಾರಂ ರಸವ
ದ್ಭಂಗಿಯೆನಿತನಿತುಮಂ ಲಲಿ
ತಾಂಗಿಗೆ ತೋಱಿದಳಪೂರ್ವಸಂಗೀತಕದೊಳ್ ॥ ೧೮೬ ॥

ವ॥ ಮತ್ತಮೊರ್ವಳ್—

ಚಂ॥ ನಯಮಳವಟ್ಟ ಜೀವೆಯುಳವಟ್ಟಧರೋತ್ತರತಂತ್ರಮಪ್ಪ ತಂ
ತ್ರಿಯೊಳನುವಾದಿಯಾಗೆ ಪೊಸಮೂರ್ಛನೆ ರಂಜಿಸೆ ಮಂದ್ರತಾರಗೀ
ತಿಯು ಪವಣೊಪ್ಪೆ ಗಾಯನಶಿರೋಮಣಿಸಭೆಯೊಳ್ ಕಡುಜಾಣೆಯುಂ ಪ್ರವೀ
ಣೆಯುಮೆನೆ ವೀಣೆಯಂ ಮಿಡಿದಳಳ್ಕಿರ್ದೆಯಂ ಮಿಡಿದಳ್ ಪ್ರಗೀತರಾ ॥ ೧೮೭ ॥

ಕಂ॥ ಅಮರ್ದೆಸೆವ ಪುರ್ವುಮಂ ನೊಸ
ಲುಮನೊರ್ವಳ್ ಸಮುಱುವಮರಿ ಹೇಮಾಂಬುಜದೊಳ್
ಸಮನಿಸಿದ ಶೈವಲಪ್ರಸ
ರಮನೋಸರಿಸುವ ಜಳೋರ್ಮಿಯಂ ಪೋಲ್ತಿರ್ದಳ್ ॥ ೧೮೮ ॥

ಆರೋಗ್ಯಂ ಮಾೞ್ಪಮೃತಾ
ಹಾರಮನಂಬಿಕೆಗೆ ಬೋನಮೆತ್ತುವ ದಿವಿಜ
ಸ್ತ್ರೀರುಚಿರಭೋಜನಾಂಗಲ
ತಾರಮಣೀಯತೆಯನೇಂ ಪುದುಂಗೊಳಿಸಿದಳೋ ॥ ೧೮೯ ॥

ಸ್ಮರಹರನ ತಾಯ್ಗೆ ಸುರವಧು
ಸಿರಿಗನ್ನಡಿವಿಡಿವ ತೆಱನದೆಂತೆನೆ ತತ್ಸುಂ
ದರಿಯ ಮೊಗಕ್ಕಾ ಬಿಂಬಮೆ
ದೊರೆ ಪೆಱತಿಲ್ಲೆಂಬ ಬಗೆಯ ಪೆಱತೆನಲಱಿಯೆಂ ॥ ೧೯೦ ॥

---

೧೮೬. ಅಪೂರ್ವವಾದ ಸಂಗೀತದಲ್ಲಿ ದೇವಾಂಗನೆಯೊಬ್ಬಳು ಗತ್ಯಾಂಗ, ನೃತ್ಯಾಂಗ, ಅಂಗಹಾರ ಹಾಗು ರಸಮಯವಾದ ಭಂಗಿ – ಎಂಬಿವನ್ನೆಲ್ಲ ಚೆಲುವೆಯಾದ ಆ ಅರಸಿಗೆ ತೋರಿದಳು.

ವ॥ ಮತ್ತೆ ಇನ್ನೊಬ್ಬಳು—

೧೮೭. ನಯ, ಜೀವೆ ಮತ್ತು ಅಧರೋತ್ತರ ತಂತ್ರಗಳನ್ನು ಅಳವಡಿಸಿಕೊಂಡ ವೀಣೆಯಲ್ಲಿ ಅನುವಾದಿಯಾಗಿ ಹೊಸಹೊಸ ಮೂರ್ಛನೆಗಳನ್ನು ತಂದು ಇಂಪುಗೊಳಿಸುತ್ತ ಮಂದ್ರತಾರಗಳನ್ನು ಹವಣಾಗಿ ಹೊಂದಿಸಿ ಪರಮ ಚತುರೆಯೂ ಸಂಗೀತವಿಶಾರದೆಯೂ ಎನಿಸಿ ಮಹಾರಾಣಿಯ ಓಲಗದಲ್ಲಿ ಗಾಯಕರ ಅಳ್ಕಿದೆಯನ್ನೇ ಮಿಡಿದಂತೆ ವೀಣೆಯನ್ನು ಮಿಡಿದಳು.

೧೮೮. ಮಹಾರಾಣಿಯ ಪರಮ ಸುಂದರವಾದ ಹುಬ್ಬುಗಳನ್ನೂ ಹಣೆಯನ್ನೂ ಸವರುವ ಸುರಾಂಗನೆಯೊಬ್ಬಳು ಹೊಂದಾವರೆಗೆ ಅಂಟಿಕೊಂಡ ಹಾವಸೆಯನ್ನು ಒರಸಿಕೊಂಡು ಹೋಗುವ ತರಂಗದಂತೆ ಕಂಗೊಳಿಸಿದಳು.

೧೮೯. ಆರೋಗ್ಯಕರವಾದ ಅಮೃತಾಹಾರವನ್ನು ಅಂಬಿಕೆಗೆ ಎಡೆ ಮಾಡುವ ದೇವರಮಣಿಯೊಬ್ಬಳು ಭೋಜನಾಂಗ ಕಲ್ಪಲತೆಯಂತೆ ರಮಣೀಯವಾಗಿ ಕಂಡಳು.

೧೯೦. ಮನ್ಮಥವಿಜಯಿಯಾದ ತೀರ್ಥಂಕರನ ತಾಯಿಗೆ ಸುರವಧು ಸುಂದರವಾದ ಕನ್ನಡಿಯನ್ನು ಹಿಡಿದಳು; ಅದರಲ್ಲಿ ಮೂಡಿದ ಪ್ರತಿಬಿಂಬವೇ ಆ ಮುಖಕ್ಕೆ ಸಮಾನವಲ್ಲದೆ ಇನ್ನಾವುದೂ ಸರಿಬಾರದು ಎಂದು ಹೇಳಬಲ್ಲೆನೆ ಹೊರತು ಇನ್ನೇನೂ ನಾನು ಹೇಳಲಾರೆ.

ಕಂ॥ ಆಪೂತಚರಿತ್ರೆಗೆ ಮೆ
ಯ್ಗಾಪಾಗಿ ಕೃಪಾಣಪಾಣಿಪಲ್ಲವೆಯರ್ ದೇ
ವಾಪಗೆಯ ಕೆಲದ ಖಡ್ಗಿಕ
ಳಾಪಮನನುಕರಿಸಿದರ್ ಸುರೇಂದ್ರಾಂಗನೆಯರ್ ॥ ೧೯೧ ॥

ನಿಱಿಸಿದ ವಿಚಿತ್ರವೇತ್ರದ
ತುಱುಗಲ್ ಪೊಸಲತೆಯ ಬೀಟಲಂ ಪೋಲ್ತಿರೆ ಕಂ
ಣಱಿದು ಮಹಾದೇವಿಗೆ ಪಡಿ
ಯಱವೆಸನಂ ಕೆಲಬರಮರಿಯರ್ ಕೈಕೊಂಡರ್ ॥ ೧೯೨ ॥

ವ॥ ಮತ್ತಮಾಹಾರೋತ್ತರಾನ್ನವಾಸಕಾಧಿಷ್ಠಿತ ಮನಃಪ್ರಸಾದಪ್ರದವಿನೋದ ದರ್ಶನಪ್ರಸ್ತಾವ ಘಟನಾವಸರಪ್ರಾಪ್ತವೈದಗ್ಧ್ಯಜನ ಸಂಭಾಷಣಗೋಷ್ಠೀಸಂದರ್ಶಿತಚತುರವಚನೋಪಪನ್ನಗರ್ಭಾರ್ಥಾಧ್ಮಾತ ಪರಿಜ್ಞಾನೋದ್ರೇಕಮಾಮರೀಷ್ಟ್ವಲಕರಂತಸ್ಮವಾಸ [1]ಸಂತತಾಂತಪ್ರಹೇಳಿಕಾ ಸಮಸ್ಯಾಸಮಾಸೋದಿತ ಕಾಲದೊಳ್ ದೇವಿಗೊರ್ವಳ್ ಸುರವಾಮನೇತ್ರೆ—

ಕಂ॥ ಅಡರಿ ತೊಡರ್ಚಿನೊಳಿರ್ಪಂ
ತಡರ್ವಹಿತರನಿಱಿದು ಪಗೆಯ ಕಾಲಂ ಒಡಿವಂ
ಕುಡು ಬೆಸನ[2]ಮನೆಮ್ಮಂದಿಗೆ[2]
ವಿಡುಕನೆನೆ............... .... ॥ ೧೯೩ ॥

ವ॥ ಮತ್ತಂ—

ಕಂ॥ ಚಾಂಡಾಲಪತಿಯ ಮನಮೆರ್ದೆ
ಗೊಂಡು ಮನಃಪದ್ಮಮುಕುಳಮಂ ಸವಿವಳಿಯಂ
ಕಂಡೊಡೆ ಮುನಿವಾ ನರರುಂ
ಪೆಂಡಿರುದಾರತೆಗದೇಕೆ ಮುನಿವರೊ ದೇವೀ ॥ ೧೯೪ ॥

---

೧೯೧. ಆ ಪವಿತ್ರಚರಿತ್ರೆಯ ಅಂಗರಕ್ಷೆಗೆಂದು ಕಿರುಗತ್ತಿ ಹಿಡಿದು ನಿಂತ ದೇವಲೋಕದ ಕೋಮಲೆಯರು ದೇವಗಂಗೆಯ ದಡದಲ್ಲಿ ನಿಂತ ಖಡ್ಗಿಗಳ ಸಮೂಹಕ್ಕೆ ಸದೃಶರಾದರು.

೧೯೨. ಹಿಡಿದುಕೊಂಡ ಚಿತ್ರವಿಚಿತ್ರ ಬೆತ್ತಗಳು ಹೊಸಬಳ್ಳಿಯ ಬೀಳಲಿನಂತೆ ತೋರಲಾಗಿ, ಕಣ್ಸನ್ನೆಯರಿದು ಮಹಾದೇವಿಗೆ ಪ್ರತೀಹಾರಿ ಸೇವೆಯನ್ನು ಕೆಲವರು ಅಮರಕನ್ಯೆಯರು ಕೈಕೊಂಡರು.

ವ। ಊಟವಾದ ಬಳಿಕ ಭೋಜನಶಾಲೆಯಲ್ಲಿ ಕುಳಿತುಕೊಂಡಾಗ ದೇವಿಯ ಮನಸ್ಸನ್ನು ಪ್ರಸನ್ನಗೊಳಿಸುವ ವಿನೋದಗಳನ್ನು ಮಾಡುತ್ತ ದರ್ಶನಕ್ಕೆ ಅವಕಾಶಕೊಟ್ಟಾಗ ವಿದ್ವಜ್ಜನಗೋಷ್ಠಿಯನ್ನು ನಡಸುತ್ತ ಚಾತುರ್ಯಪೂರ್ಣವಾದ ಮಾತುಗಳನ್ನಾಡುದ ದೇವಾಂಗನೆಯರು ಪ್ರಹೇಳಿಕೆಗಳನ್ನೂ ಸಮಸ್ಯೆಗಳನ್ನೂ ಒಡ್ಡುತ್ತಿದ್ದರು. ಅಂತಹ ಒಂದು ಸಂದರ್ಭದಲ್ಲಿ ಒಬ್ಬ ಸುರಸುಂದರಿಯು ಹೀಗೆ ಪ್ರಹೇಳಿಕೆಯನ್ನು ಒಡ್ಡಿದಳು :

೧೯೩. "ಏರಿಬಂದು ತನ್ನನ್ನು ತೊಡರಿಕೊಂಡ ವೈರಿಗಳನ್ನು ಇರಿದು ಶತ್ರುವಿನ ಕಾಲನ್ನು ಹಿಡಿಯುವನು. ಅಪ್ಪಣೆಯನ್ನು ಕೊಡು........ (ಪದ್ಯ ಮುಂದೆ ತ್ರುಟಿತವಾಗಿದೆ.)

ವ॥ ಮತ್ತು—

೧೯೪. ಚಾಂಡಲಪತಿಯ ಮನಸ್ಸು ಇಷ್ಟಪಟ್ಟು ಮನಸ್ಸೆಂಬ ತಾವರೆಯ ಮೊಗ್ಗನ್ನು ಸವಿವ ದುಂಬಿಯನ್ನು ನೋಡಿದರೆ ಕೋಪಿಸಿಕೊಳ್ಳುವ ಮನುಷ್ಯರು ಹೆಂಗಸರ ಉದಾರಗುಣಕ್ಕೆ ಅದೇಕೆ ಕೋಪಿಸಿಕೊಳ್ಳುತ್ತಾರೆಯೊ ದೇವೀ ? (ಪದ್ಯದ ಅರ್ಥ ಸ್ಫುಟವಾಗಿಲ್ಲ.)

---

1. ಸಂತಾನಾಂತ (ಅ) 2. ದೊಳೆಮ್ಮಮಂದಿಗೆ (ಅ)

ವ॥ ಮತ್ತಂ—

ಕಂ॥ [1]ಲವಲೀ[1] ಲವಂಗ [2]ಪಲ್ಲವ[2]
[3]ಸವಿ[3]ಪಲ್ಲವಮನವಯವದೆ [4]ದುಃಖ[4]ದಮದಱಿಂ
ಲವಲೀ ಲವಂಗ ಪಲ್ಲವ
[5][ಸವಿಪಲ್ಲವ][5]ಮೆರಡೆ ಸಿಜಯಶಃಸುಕುಮಾರಂ ॥ ೧೯೫ ॥

ತಾಳದೊಳೆಸೆವಳಿಯಂ ಹಿಂ
ತಾಳದೊಳೆಸೆವಳಿಯಮರದೊಳೇವಳಿಯಂ ತಾ
ಪೇಳ[6]ಸುತಮಿರ್ಪುದುಂ ಚದು[6]
[7]ರೇಳಗೆ ತಾವಿಳಿಯಲಾಗ[7] ತಿಳಿವವನೆಗ್ಗಂ ॥ ೧೯೬ ॥

ಇಂತಿರೆ ದಿವಿಜೇಂದ್ರನ ಬಹಿ
ರಂತಃಪುರವಧುವಿರಾವಪೊಟ್ಟುಂ ಪದದೊಳ್
ತಂತಮ್ಮ ನಿಯೋಗದೊಳಿರೆ
ಸಂಶತಮಱುದಿಂಗಳೊಂದು ದಿವಸದ ತೆಱದಿಂ ॥ ೧೯೭ ॥

ಚಂ॥ ಅನುದಿನಮಾಱುದಿಂಗಳಮರಾಂಗನೆಯರ್ ದಿವಿಜೇಂದ್ರಲೋಕಸಂ
ಜನಿತ ಮಹೌಷಧಿಪ್ರಕರದಿಂ ಜಿನಮಾತೆಗೆ ಮಾಡೆ ಗರ್ಭಶೋ
ಧನೆಯನದೇನಮಾನುಷಮೆನಲ್ದೊರೆಯಾಗೆ ಶರೀರಮಬ್ಜಜ
ನ್ಮನೆ ಸಮೆದಿಂದುಕಾಂತವನಕಾಂತೆವೊಲೇಂ ತನೆ ತೆಳ್ಪುವೆತ್ತುದೋ ॥ ೧೯೮ ॥

ವ॥ ಮತ್ತಮುಮರಮಹತ್ತರಿಕಾನಿವಹಂ ಪ್ರತ್ಯೇಕನಾಮಗ್ರಹಣದಿಂ ನಿಪುಣಿಕೆ ಚಂದ್ರಿಕೆಯಮೃತಮತಿ ಲವಲಿಕೆ ಪದ್ಮಿನಿ ಮನೋಹರಿ

ವ॥ ಮತ್ತು —

೧೯೫. (ಈ ಪದ್ಯದ ಅರ್ಥ ಸರಿಯಾಗಿ ತಿಳಿಯುವುದಿಲ್ಲ.)

೧೯೬. (ಈ ಪದ್ಯದ ಅರ್ಥ ಗೊತ್ತಾಗುತ್ತಿಲ್ಲ.)

೧೯೭. ಹೀಗೆ ಇಂದ್ರನು ಕಳಿಸಿಕೊಟ್ಟ ದೇವಾಂಗನೆಯರು ಅಂತಃಪುರದ ಒಳಗೆ ಹಾಗು ಹೊರಗೆ ತಂತಮಗೆ ಒಪ್ಪಿಸಿದ ಕಾರ್ಯಗಳನ್ನು ನಿರ್ವಹಿಸುತ್ತ ಇರಲಾಗಿ ಆರು ತಿಂಗಳು ಆರು ದಿನಗಳಂತೆ (ಕಳೆದುವು).

೧೯೮. ಆರು ತಿಂಗಳುಗಳವರೆಗೆ ಪ್ರತಿದಿನವೂ ದೇವೇಂದ್ರಲೋಕದಿಂದ ತಂದ ಮಹಾ ಔಷಧಿಗಳಿಂದ ದೇವಾಂಗನೆಯರು ಜಿನಮಾತೆಯ ಗರ್ಭವನ್ನು ಶುದ್ಧಗೊಳಿಸಲಾಗಿ, ಮನುಷ್ಯಾತೀತವಾದ ಸ್ವರೂಪವನ್ನು ಹೊಂದಿದ ಆ ತಾಯಿಯ ದೇಹವು ಚಂದ್ರಕಾಂತ ಶಿಲೆಯಿಂದ ಬ್ರಹ್ಮನೆ ನಿರ್ಮಿಸಿದ ಪುತ್ಥಳಿಯೊ ಏನೊ ಎಂಬಂತೆ ಪರಿಶುದ್ಧವೂ ಧವಳವೂ ಆಯಿತು.

ವ॥ ಮತ್ತು ದೇವಲೋಕದಿಂದ ಬಂದ ಮಹತ್ತರಿಕೆಯರು ನಿಪುಣಿಕೆ, ಚಂದ್ರಿಕೆ, ಅಮೃತಮತಿ, ಲವಲಿಕೆ, ಪದ್ಮಿನಿ, ಮನೋಹರಿ, ಮಾಳತಿಕೆ, ಉತ್ಪಳಿಕೆ, ಮಂದಾರಿಕೆ, ಯವನಿಕೆ, ಪ್ರಭಾವತಿ, ಚಿತ್ರಲೇಖೆ, ಮಯೂರಿಕೆ,

---

1. ಅವತೀ (ಅ) 2. ಪ್ಲವ (ಅ) 3. ಜವಸದಿಪ (ಅ) 4. ದುಃಖಕರ (ಅ) 5. × (ಅ) (ಮ) 6. ಸುತಿರ್ಪುದು ಚದುರೇ (ಅ)
7. ಬಾಲೆ ಕಡೆತಾಳಿಯುವಾಗ (ಅ)

ಮಾಳತಿಕೆ ಉತ್ಪಳಿಕೆ ಮಂದಾರಿಕೆ ಯವನಿಕೆ ಪ್ರಭಾವತಿ ಚಿತ್ರಲೇಖೆ ಮಯೂರಿಕೆ ಚೂತಲತಿಕೆ ಮೃಣಾಳಿಕೆ ಯೆಂಬವರ್ಗೆ ತಕ್ಕ ಪೆಸರ್ವಿಡಿದು ¹ಪೊಱಗಣ¹ಬೆಸಂಗಳಂ ನಿಯೋಜಿಸುವುದುಂ—

ಮ॥ ಅವರೊಂದೊರ್ವರೊಳಿಕ್ಕಿಯಿಂ ಸೆಣಸಿ ಕೊಳ್ ಕೊಳ್ಳೆಂದು ಕೆಯ್ಗಿಯ್ಕೊಳೊ
ಪ್ಪುವ ಹಾರಂ ಮೊಲೆಯೊಳ್ ತೊಡಂಕೆ ವಳಯಂ ಕರ್ಣಾಂತಮಂ ತಾಳ್ದೆ ಸಾ
ರ್ದವತಂಸಂ ಕದಪಂ ಪಳಂಚೆ ಬೆಸದೊಳ್ ತಳ್ತಿರ್ಪುದಾ ದೇವಿಯು
ದ್ಭವಮುಂ ವಿಭ್ರಮಲೀಲೆಯುಂ ನಗುವಿನಂ ಸ್ತ್ರೀರಾಜ್ಯಸಾಮ್ರಾಜ್ಯಮಂ ॥ ೧೯೯ ॥

ವ॥ ಅಂತೊಂದು ಪುಣ್ಯದಿನದೊಳ್—

ಚಂ॥ ಅವಿರಳಪಾಣಿಪಲ್ಲವೆ ಕುಚೋನ್ನತಮಂಜರಿ ಬಾಹುಶಾಖೆ ಸು
ಚ್ಛವಿದಶನಾವಳೀಮುಕುಳೆ ಷಟ್ಪದಕುಂತಳೆ ಪತ್ರಭಂಗಪ
ಲ್ಲವಿತಕಪೋಲಪತ್ರೆ ತನುಮಧ್ಯೆ ವಚಃಪರಪುಷ್ಟನಾದೆ ಪು
ಣ್ಯವತಿ ನೃಪೇಂದ್ರಕಾಂತೆ ನವಕಲ್ಪಲತಾಕೃತಿಯಿಂದಮೊಪ್ಪಿದಳ್ ॥ ೨೦೦ ॥

ವ॥ ಅಂತಳವಲ್ಲದೊಪ್ಪಿ ತಲೆನೀರ್ಮಿಂದು ರಜನೀಸಮಯದೊಳ್ ಪವಡಿಸಿ ಮನೋಹರ ಮುಹೂರ್ತದೊಳ್—

ಕಂ॥ ಐರಾವತಕರಿಯಂ ಮದ
ಮೈರೇಯಕಭಾರಚಂಚರೀಕಮನಿಂದು
ಕ್ಷೀರರುಚಿಯಂ ವೃಷೇಂದ್ರನ
ನಾರಮಣೀರತ್ನಮಿರುಳ ಕಡೆಯೊಳ್ ಕಂಡಳ್ ॥ ೨೦೧ ॥

ಚೂತಲತಿಕೆ, ಮೃಣಾಳಿಕೆ ಎಂಬವರನ್ನು ಪ್ರತ್ಯೇಕವಾಗಿ ಹೆಸರುಗೊಂಡು ಕರೆದು ಅವರವರಿಗೆ ಯೋಗ್ಯವಾದ ಇನ್ನೂ ಕೆಲವು ಕೆಲಸಗಳನ್ನು ಒಪ್ಪಿಸಿದರು.

೧೯೯. ಅವರು ಕೂಡಿಕೊಂಡು ಒಬ್ಬರಿಗಿಂತ ಒಬ್ಬರು ಮುಂದಾಗಿ "ಹಿಡಿ, ಹಿಡಿ" ಎಂದು ಅಲಂಕಾರ ವಸ್ತುಗಳನ್ನು ಕೈಯಿಂದ ಕೈಗೆ ಸಾಗಿಸುತ್ತ ಹಾರ ಮೊಲೆಯಲ್ಲಿ ತೊಡಕಿ, ಬಳೆ ಕಿವಿದುದಿಗೆ ಬಂದು, (ಕಿವಿಯ) ಆಭರಣ ಕೆನ್ನೆಗೆ ತಾಕುತ್ತಿರಲಾಗಿ ಕೆಲಸದಲ್ಲಿ ಮಗ್ನರಾಗಿದ್ದರು. ಆ ಮಹಾದೇವಿಯ ವೈಭವವೂ ವಿಭ್ರಮವಿಲಾಸವೂ ಸ್ತ್ರೀರಾಜ್ಯ ಸಾಮ್ರಾಜ್ಯವನ್ನು ಹೀಯಾಳಿಸುವಂತಿತ್ತು.

ವ॥ ಹೀಗಿರುತ್ತ, ಒಂದು ಶುಭ ದಿನದಲ್ಲಿ—

೨೦೦. ತನ್ನ ಮುಂಗೈಗಳೆ ಚಿಗುರುಗಳಾಗಿ, ಮೊಲೆಗಳೆ ಹೂಗೊಂಚಲಾಗಿ, ತೋಳುಗಳೆ ಕೊಂಬೆಗಳಾಗಿ, ಪ್ರಭೆಯಿಂದ ಹೊಳೆವ ಹಲ್ಲುಗಳೆ ಮೊಗ್ಗುಗಳಾಗಿ, ಕೂದಲೆ ದುಂಬಿಗಳಾಗಿ, ಕೆನ್ನೆಯಲ್ಲಿ ಪತ್ರಭಂಗ (೧. ಕೆನ್ನೆಯ ಮೇಲೆ ಅಲಂಕಾರಕ್ಕಾಗಿ ಬರೆವ ರೇಖಾಕೃತಿ, ೨. ಹರಿದ ಎಲೆ)ವನ್ನು ತಾಳಿ, ತೆಳುವಾದ ಮಧ್ಯ (೧. ಸೊಂಟ, ೨. ಬಳ್ಳಿಯ ತಾಳು) ವುಳ್ಳವಳಾಗಿ, ಕೋಗಿಲೆಯಂತೆ ಧ್ವನಿಯುಳ್ಳವಳಾಗಿ ಪುಣ್ಯವತಿಯಾದ ಆ ಮಹಾರಾಣಿ ಹೊಸ ಕಲ್ಪಲತೆಯೆ ಎಂಬಂತೆ ಕಂಗೊಳಿಸಿದಳು.

ವ॥ ಹಾಗೆ ಅತಿಶಯವಾಗಿ ಒಪ್ಪಿ, ತಲೆಯೆರೆದುಕೊಂಡು (ಮುಟ್ಟಾದ ನಾಲ್ಕನೆಯ ದಿನದ ಸ್ನಾನ ಮಾಡಿ) ರಾತ್ರಿಕಾಲದಲ್ಲಿ ಮಲಗಿರುವಾಗ ಒಳ್ಳೆಯ ಮುಹೂರ್ತದಲ್ಲಿ—

೨೦೧. ಮದೋದಕವೆಂಬ ಮದ್ಯದಿಂದ ದುಂಬಿಗಳನ್ನು ತಣಿಸುತ್ತಿರುವ ಐರಾವತ ಗಜವನ್ನೂ ಚಂದ್ರನಂತೆ ಹಾಗು ಹಾಲಿನಂತೆ ಬೆಳ್ಳಗಿರುವ ವೃಷಭನನ್ನೂ ಆ ನಾರೀಮಣಿಯು ರಾತ್ರಿಯ ಕಡೆಯ ಯಾಮದಲ್ಲಿ (ಕನಸಿನಲ್ಲಿ) ಕಂಡಳು.

1. X (ಮ)

ಕಂ॥ ಅಗರಾಜಸಾನುಗತನಂ
ಮೃಗರಾಜನ ನಿಭಯುಗಾಭಿಷೇಕಜಲೌಘ
ಸ್ಥಗಿತೆಯನಬ್ಜಾಸನೆಯಂ
ಮೃಗಾಕ್ಷಿ ಬೆಳಗಪ್ಪ ಜಾವದಾಗಳ್ ಕಂಡಳ್ ॥ ೨೦೨ ॥

ಲೋಳದಳಿನೀಲಕುವಳಯ
ಮಾಳೆಗಳೆರಡಂ ತದೀಯಮೈತ್ರೀರಸಸಂ
ಪಾಳಸಮನ್ವಿತಹಿಮರುಚಿ
ಮಾಳೆಯನಂಬಿಕೆ ನಿಶಾಂತದೊಳ್ ವೀಕ್ಷಿಸಿದಳ್ ॥ ೨೦೩ ॥

ಪೊಸತಲರ್ದಂಭೋರುಹದೆಸೆ
ವೆಸ[1][ಟ][1]ಂತಳವಡಿಸಿ ಕಿರಣಮೊಗೆದರುಣನನಾ
ಗಸಗಂಗೆಯ ಮಡುವಿನೊಳೊಡ
ನೆಸೆವೆಳವಾಳೆಗಳನೆರಡನಂಬಿಕೆ ಕಂಡಳ್ ॥ ೨೦೪ ॥

ತಳದಳಿಸುವ ಕೆಂಬೊನ್ನಮ
ಳ್ಗಳಸಮನಮೃತೋದಭಾಸುಚುಂಬಿತಗಗನ
ಸ್ಥಳಮಂ ಸೊಗಯಿಪ ತಾಮರೆ
ಗೊಳನಂ ಪ್ರತ್ಯೂಷದೊಳ್ ಜನಾಂಬಿಕೆ ಕಂಡಳ್ ॥ ೨೦೫ ॥

ಧೃತವಿದ್ರುಮಕಂಬುಲತಾ
ಪ್ರತಾನನೀಳೋರ್ಮಿಮಾಳೆಯಂ ಜಳನಿಧಿಯಂ
ನುತಹರಿಪೀಠಮನಂಬಿಕೆ
ನಿತಂಬಭರಚಲಿತಚಲನೆ ಕನಸಂ ಕಂಡಳ್ ॥ ೨೦೬ ॥

---

೨೦೨. ಗಿರಿರಾಜನ ಸಾನುಪ್ರದೇಶದಲ್ಲಿರುವ ಸಿಂಹವನ್ನೂ ಎರಡು ಆನೆಗಳಿಂದ ಜಲಾಭಿಷೇಕ ಮಾಡಿಸಿಕೊಳ್ಳುತ್ತಿರುವ ಲಕ್ಷ್ಮಿಯನ್ನೂ ಬೆಳಗಾಗುವ ಸಮಯದಲ್ಲಿ ಕಂಡಳು.

೨೦೩. ಆಸಕ್ತವಾದ ದುಂಬಿಗಳಿಂದೊಡಗೂಡಿದ ಕನ್ನೈದಿಲೆಯ ಎರಡು ಮಾಲೆಗಳನ್ನೂ ನೈದಿಲೆಗಳಿಗೆ ಮಿತ್ರನಾದ ಚಂದ್ರನನ್ನೂ ರಾತ್ರಿಯ ಕೊನೆಯಲ್ಲಿ ಆ ತಾಯಿ ಕಂಡಳು.

೨೦೪. ಹೊಸದಾಗಿ ಅರಳಿದ ತಾವರೆಯೆಸಳುಗಳಂತೆ (ಕೆಂಪಾದ) ಕಿರಣಗಳನ್ನು ಅಳವಡಿಸಿಕೊಂಡ ಅರುಣ (ಸೂರ್ಯ)ನನ್ನೂ ಆಕಾಶಗಂಗೆಯ ಮಡುವಿನಲ್ಲಿ ಕಂಗೊಳಿಸುವ ಜೊತೆ ಮೀನುಗಳನ್ನೂ ಆಕೆ ಕಂಡಳು.

೨೦೫. ಥಳಥಳಿಸುವ ಎರಡು ಚಿನ್ನದ ಕೊಡಗಳನ್ನೂ ಅಮೃತದಂತೆ ಸ್ವಚ್ಛವಾದ ನೀರಿನಿಂದ ಶೋಭಿಸುವ ತಾವರೆ ಕೊಳವನ್ನೂ ಜಿನಮಾತೆ ಕಂಡಳು.

೨೦೬. ಹವಳ, ಶಂಖ ಹಾಗು ತೆರೆಗಳ ಸಾಲುಗಳನ್ನೊಳಗೊಂಡ ಸಮುದ್ರವನ್ನೂ ಸುಂದರವಾದ ಸಿಂಹಾಸನವನ್ನೂ ಅಂಬಿಕೆ ಕನಸಿನಲ್ಲಿ ಕಂಡಳು.

---

1. ಳ (ಮ)

ಕಂ॥ ಪ್ರಚುರನವಪ್ಪೆಜಯಂಶೀ
ವಿಚಿತ್ರವಮಂ ಸುರವಿಮಾನವಮಂ ನಾನಾರತ್ನ
[1]ರಚಿತಮು[1]ಮನಹಿಗ್ರೃಹಮಂ ಘನ
ಕುಚೆ ರಜನೀಚರಮದೊಳ್ ಜಿನಾಂಬಿಕೆ ಕಂಡಳ್ ॥ ೨೦೭ ॥

ಪಸರಿಸಿದ ಪಂಚರತ್ನದ
ಪಸರದ ಪೃಥುರಾಶಿ ಗಗನಮಂ ತಾಗೆ ಪೊದ
ಟ್ಟಿಸೆದಿರೆ ಕೃಶಾನುಶಿಖೆ ದೆಸೆ
ದೆಸೆಯೊಳ್ ಜಿನಪತಿಯ ಜನನಿ ಪರಿವೀಕ್ಷಿಸಿದಳ್ ॥ ೨೦೮ ॥

ವ॥ ತದನಂತರಮಭ್ಯುದಯನಿಶ್ರೇಯಸಸುಖನಿಮಿತ್ತಂಗಳುಮುದಿತೋದಿತನುಂ ಶಲಾಕಾ ಪುರುಷನುಂ ಚಕ್ರವರ್ತಿಯುಂ ಮನ್ಮಥನುಂ ತೀರ್ಥಕರಪರಮದೇವನುಮಪ್ಪ ಸುಪುತ್ರೋತ್ಪತ್ತಿ ಹೇತುಭೂತಂಗಳುಮಪ್ಪ—

ಉ॥ ಈಪದಿನಾಱುಮೊಳ್ಗನಸನಂಬಿಕೆ ಕಂಡು ನಿಶಾಂತದೊಳ್ ಪಯೋ
ಜೋಪಮ ವಕ್ತ್ರೆ ತಳ್ಪತಳದಿಂದೊಸೆದೆಟ್ದು ದಿನಾದಿಸತ್ಕ್ರಿಯಾ
ವ್ಯಾಪೃತಿಯೆಲ್ಲಮಂ ನೆಱೆ[3]ಯನುಷ್ಠಿಸಿ ಪೋಗಿ ನೃಪಂಗೆ ಪೇೞೆ[3] ಕೇ
ಳ್ದಾ ಪುರುಷೋತ್ತಮಂ ತಿಳಿಪಿದಂ ಕನಸಂ ನೆನಸಾಗೆ ರಾಗದಿಂ ॥ ೨೦೯ ॥

[2]ವ॥ ಎಂತೆನೆ[2]

ಮ॥ ಸ್ರ॥ ಗಜದಿಂ ಗಂಭೀರಭಾವಂ ವೃಷಭದಿನಭನಂ ಸಿಂಹದಿಂ ಬಂಹಿಮಸ್ಮಾ
ದ್ರಿಜನಬ್ಜಾವಾಸೆಯಿಂ ಶ್ರೀಗಧಿಪನಮಳದಾಮಂಗಳಿಂ ಭೋಗಿ ನೀಲಾಂ
ಬುಜಲೀಲಾಕಾರದಿಂ ಕಾಂತಿಯುತನಿನನಿನತ್ಯೂರ್ಜಿತಂ ಬಾಳೆಯಿಂದಂ
ಗಜಜೈತ್ರಂ ಕುಂಭದಿಂದುತ್ತಮನಮಲಪಯಸ್ಸದ್ಮದಿಂ ಶುದ್ಧವೃತ್ತಂ ॥ ೨೧೦ ॥

೨೦೭. ಸುಂದರವಾದ ಧ್ವಜಗಳಿಂದಲೂ ನಾನಾರತ್ನಗಳಿಂದಲೂ ಶೋಭಿಸುವ ದೇವವಿಮಾನವನ್ನೂ ಹಾವಿನ ಹುತ್ತವನ್ನೂ ಜಿನಜನನಿಯು ಕಂಡಳು.

೨೦೮. ಐದು ಬಗೆಯ ರತ್ನಗಳ ಮಹಾರಾಶಿಯನ್ನೂ ಆಕಾಶದವರೆಗೆ ಎದ್ದ (ಹೊಗೆಯಿಲ್ಲದ) ಬೆಂಕಿಯನ್ನೂ ಜಿನೇಂದ್ರನ ತಾಯಿ ಕಂಡಳು.

ವ॥ ಈ ಲೋಕದ ಹಾಗು ಪರಲೋಕದ ಸುಖಕ್ಕೆ ಕಾರಣನಾದವನೂ, ಉತ್ತರೋತ್ತರವಾದ ಏಳ್ಗೆಯುಳ್ಳವನೂ, ಶಲಾಕಾಪುರುಷನೂ, ಚಕ್ರವರ್ತಿಯೂ, ಮನ್ಮಥನೂ, ತೀರ್ಥಂಕರನೂ ಆಗುವ ಸತ್ಪುತ್ರನ ಜನನಕ್ಕೆ ಸೂಚಕವಾದ

೨೦೯. ಈ ಹದಿನಾರು ಉತ್ತಮವಾದ ಕನಸುಗಳನ್ನು ಬೆಳಗಾಗುವ ಹೊತ್ತಿಗೆ ಕಂಡು ಜಿನಾಂಬಿಕೆಯು ಹಾಸಿಗೆಯಿಂದೆದ್ದಳು; ದೈನಂದಿನ ಸತ್ಕ್ರಿಯೆಗಳನ್ನು ನೆರವೇರಿಸಿಕೊಂಡು ಅರಸನ ಬಳಿ ಹೋಗಿ ತನ್ನ ಕನಸುಗಳನ್ನೆಲ್ಲ ಹೇಳಿದಳು. ಅದನ್ನು ಕೇಳಿ ಆ ಮಹಾಪುರುಷನು ಆ ಕನಸುಗಳ ಅರ್ಥವನ್ನು ಹೀಗೆ ವಿವರಿಸಿದನು :

ವ॥ ಹೇಗೆಂದರೆ

೨೧೦. "ಆನೆಯಿಂದ ಗಾಂಭೀರ್ಯವುಳ್ಳವನೂ, ವೃಷಭದಿಂದ ಶ್ರೇಷ್ಠನೂ, ಸಿಂಹದಿಂದ ಶಕ್ತಿಶಾಲಿಯೂ, ಲಕ್ಷ್ಮಿಯಿಂದ ಸಂಪತ್ತಿಗೆ ಒಡೆಯನೂ, ಹಾರಗಳಿಂದ ಭೋಗಿಯೂ, ಚಂದ್ರನಿಂದ ಕಾಂತಿವಂತನೂ, ಸೂರ್ಯನಿಂದ ಅಧಿಕವಾದ ಏಳ್ಗೆಯುಳ್ಳವನೂ, ಮೀನುಗಳಿಂದ ಮನ್ಮಥವಿಜಯಿಯೂ, ಕೊಡಗಳಿಂದ ಉತ್ತಮನೂ, ತಾವರೆಕೊಳದಿಂದ ಶುದ್ಧ ಚಾರಿತ್ರನೂ

1. × (ಮ) 2. × (ಮ)

ಕಂ॥ ವಾರಿಧಿಯಿಂ ಸುಖನಿಧಿ ಕಂ
ಠೀರವವಿಷ್ಟರದಿನಧಿಕನಮರಾಲಯದಿಂ
ಧೀರಂ ಫಣಿಗೃಹದಿಂದಂ
ವೀರಂ ಮಣಿಗಣದಿನಜರನನಲನಿನನಘಂ ॥ ೨೧೧ ॥

ಕನಸು ಪದಿನಾಱುಮಂ ಕಂ
ಡನಂತರಂ ವದನವನಜಮಂ ಪುಗುವ ಮೃಗೇಂ
ದ್ರನುಮಂ ಕಂಡುದಱಿಂ[ದಂ]
[1]ನಿನಗೆ ಪುಟ್ಟಿದಪನಘವಿಘಾತಿ ಘಾತಿ ಜಿನೇಂದ್ರಂ ॥ ೨೧೨ ॥

ವ॥ ಎಂದರಸಿಗಮೋಘಂಗಳಪ್ಪ ಕನಸಿನ ಫಲಂಗಳುಮಂ ನಿವೇದಿಸುವುದುಂ ಪಗಲ ಪದ್ಮಸರಸಿಯಂತರಸಿ ವಿಕಸಿತಮುಖಾರವಿಂದೆಯಾಗಿ ನಿವಾಸಕ್ಕೆ ಪೋಗಿ ಸಂತಸದಿನಿರ್ಪುದುಂ ಸರ್ವಾರ್ಥಸಿದ್ಧಿಯಿಂದಂ ಮಹೇಂದ್ರಾಮರಂ ಜಿನಚಂದ್ರಂ ಫಾಲ್ಗುಣ[2]ಶುದ್ಧ[2]ಪಂಚಮಿಯುಂ ಭರಣಿನಕ್ಷತ್ರಮುಂ ನೊರೆಕೊಳೆ ತ್ರಿಲೋಕಾಂಬಿಕೆಯ [3]ಗರ್ಭಕ್ಕ[3]ವತರಿಸಿ ಪ್ರವರ್ಧಮಾನದಶಾಧೀಶನಿರೆ—

ಅಕ್ಕರಂ॥ ಬಸಿಱ ತೆಳ್ಪುಮಂ ತ್ರಿವಳಿಗಳೊಳ್ಪುಮಂ ಕುಚಚೂಚುಕಂಗಳ ಬಣ್ಣಮುಮ
ನಸಿಯ ಬಾಸೆಯ ಮುನ್ನಿನ ರುಚಿಯುಮಂ ಮುಖಪೂರ್ವಚ್ಛವಿಯುಮಂ ಕಿಡಲೀಯದೇ
ನೆಸೆದು ಸೊಗಯಿಸಿ ತೋಱಿತೋ ಜಗದೀಶನಿರೆ ಗರ್ಭಂ [4]ಬಳೆದು[4] ಶಾರದ ನೀರದ
ಪ್ರಸರದೊಳಗಣ ಚಂದ್ರಬಿಂಬದವೋಲ್ ಚೆಲ್ವುವೆತ್ತುದೈರಾಮಹಾದೇವಿಯಾ ॥ ೨೧೩ ॥

---

೨೧೧. ಸಮುದ್ರದಿಂದ ಸುಖಕ್ಕೆ ಆಶ್ರಯನೂ, ಸಿಂಹಾಸನದಿಂದ ಅಧಿಕನೂ, ದೇವವಿಮಾನದಿಂದ ಧೀರನೂ, ಹುತ್ತದಿಂದ ವೀರನೂ, ರತ್ನರಾಶಿಯಿಂದ ಮುಪ್ಪಿಲ್ಲದವನೂ, ಬೆಂಕಿಯಿಂದ ಪಾಪಮುಕ್ತನೂ—

೨೧೨. ಹದಿನಾರು ಕನಸುಗಳನ್ನು ಕಂಡ ಬಳಿಕ ಮುಖದಲ್ಲಿ ಸಿಂಹವು ಪ್ರವೇಶ ಮಾಡುವುದನ್ನೂ ಕಂಡುದರಿಂದ ಘೋರಕರ್ಮಗಳನ್ನು ಧ್ವಂಸಗೊಳಿಸುವವನೂ ಆದ ಜಿನಪತಿಯು ನಿನಗೆ ಮಗನಾಗಿ ಹುಟ್ಟುವನು."

ವ॥ ಹೀಗೆಂದು ಸಾರ್ಥಕವಾದ ಕನಸಿನ ಫಲಗಳನ್ನು ತಿಳಿಸಲಾಗಿ ಹಗಲುಹೊತ್ತಿನ ತಾವರೆಕೊಳದಂತೆ ಅರಸಿಯ ಮುಖ ಅರಳಿತು. ಆಕೆ ತನ್ನ ನಿವಾಸಕ್ಕೆ ಹೋಗಿ ಸಂತೋಷದಿಂದ ಇದ್ದಳು. ಅತ್ತ ಸರ್ವಾರ್ಥಸಿದ್ಧಿಯಲ್ಲಿದ್ದ ಮಹೇಂದ್ರದೇವನು ಫಾಲ್ಗುಣ ಶುದ್ಧ ಪಂಚಮಿಯಂದು ಭರಣಿನಕ್ಷತ್ರ ಕೂಡಿರಲಾಗಿ, ಜಗನ್ಮಾತೆಯ ಗರ್ಭದಲ್ಲಿ ಅವತರಿಸಿ ಬೆಳೆಯತೊಡಗಿದನು.

೨೧೩. ಆ ತಾಯಿಯ ಹೊಟ್ಟೆಯ ತೆಳುವನ್ನಾಗಲಿ, ಹೊಕ್ಕುಳ ಮೇಲಿನ ಗೆರೆಗಳನ್ನಾಗಲಿ, ಮೊಲೆತೊಟ್ಟುಗಳ ಬಣ್ಣವನ್ನಾಗಲಿ, ತೆಳುವಾದ ಬಾಸೆಯ (ಮೊದಲಿನ) ಚೆಲುವನ್ನಾಗಲಿ, ಮುಖಕ್ಕೆ ಮೊದಲಿಂದ ಇದ್ದ ಕಾಂತಿಯನ್ನಾಗಲಿ ಏನನ್ನೂ ಕೆಡಿಸದೆ ಗರ್ಭ ಬೆಳೆಯಿತು. ಜಗತ್ಪತಿಯನ್ನು ಒಳಗಿಟ್ಟುಕೊಂಡ ಐರಾವತಿದೇವಿಯ ಗರ್ಭವು ಚಂದ್ರಬಿಂಬವನ್ನೊಳಗೊಂಡ ಶರತ್ಕಾಲದ ಬಿಳಿಮೋಡದಂತೆ ಮನೋಹರವಾಯಿತು.

---

1. × (ಮ) 2. + ಎನ (ಅ) 3. ಗರ್ಭ ಶಯನಕ್ಕ (ಅ) 4. ಬಳೆದುದು (ಅ)

ಕಂ॥ ಅತಿದೀಪ್ತಿಬೋಧಮಯನಾ
ಗಿ ತಣ್ಣದೊಂ ಜನನಿಯುದರದೊಳ್ ರತ್ನಸ್ತ್ರೀ
ಪ್ರತಿಕೃತಿಯೊಳರ್ಕಬಿಂಬ
ಪ್ರತಿಬಿಂಬಂ ನೆಲಸಿ ಪೀಡೆಯಂ ಮಾಡುಗುಮೇ ॥ ೨೧೪ ॥

ವ॥ ಮತ್ತಂ ರತ್ನ ಪ್ರತಿಬಿಂಬಬಿಂಬಿತ ಮಣಿದೀಪಪ್ರತಿಬಿಂಬದಂತಾನುಮಾಕಾಶಸ್ಫಟಿಕಾಂತರಿತ ದಹನಾರ್ಚಿಯಂತಾನುಮಚ್ಛಸಲಿಲ ವ್ಯವಹಿತಪದ್ಮರಾಗಮಣಿಯಂತಾನುಂ ತನ್ನ ಬೆಳಗೆ ಬೆಳಗಾಗೆ ಶುದ್ಧಗರ್ಭಾವಾಸದೊಳ್ ಜಿನಾರ್ಭಕಂ ಬಳೆಯೆ ವಿಶ್ವಸೇನಮಹೀಪಾಲಂ ಪ್ರಜಾಪಾಲನಪಾರಾಯಣನಾಗಿ ಯು[1]ಗ್ರ[1]ಮನಪ್ರೇಕ್ಷಿತಮಗ್ರಾಮ್ಯಧರ್ಮ(ರ)ತನಾಗಿ ಮಹಾದೇವಿಯ ಸಮೀಪದೊಳ್ ತದಾನನಾವಲೋಕನ ಮಾತ್ರ ಪರಿಪೂರ್ಣಾನಂಗವ್ಯಾಪಾರಪ್ರವೀಚಾರನಾಗಿ ಮತ್ತಮಾ ಮಹಾದೇವಿಯುಂ ತಾನುಂ—

ಕಂ॥ ಅಂಗವ್ಯವಧಾನದೊಳಮ
ಪಾಂಗಸಮೀಪತೆಯೊಳಂ ನೃಪೇಂದ್ರಂ ಪೋಲ್ತಂ
ಗಂಗಾಶೀಕರಕಣಗಣ
ಸಂಗಸಮಾಸನ್ನಪಾರಿಜಾತದ್ರುಮಮಂ ॥ ೨೧೫ ॥

ವ॥ ಅನಂತರಂ ನವಮಾಸಾವಸಾನದೊಳ್ ಕಾರ್ತಿಕಶುದ್ಧಚತುರ್ದಶಿಯುಂ ಭರಣಿನಕ್ಷತ್ರಮುಮಾಗೆ ಬೆಳಗಪ್ಪ ಜಾವದ ಬ್ರಾಹ್ಮಮೆಂಬ ಮುಹೂರ್ತದೊಳ್—

---

೨೧೪. ಸ್ತ್ರೀರತ್ನವೆನಿಸಿದ ಆ ತಾಯಿಯ ಗರ್ಭದಲ್ಲಿದ್ದ ಆ ಮಹಾತ್ಮನಿಗೆ ಅತ್ಯಂತ ಪ್ರಜ್ವಲವಾದ ತೇಜವಿದ್ದರೂ ಆತನು ತಂಪಾಗಿಯೆ ಇದ್ದನು. ಸೂರ್ಯನು (ಎಷ್ಟೇ ಪ್ರಖರನಾಗಿದ್ದರೂ) ಕನ್ನಡಿಯಲ್ಲಿ ಮೂಡಿದಾಗ ಅದಕ್ಕೆ ತಾಪ ಕೊಡುವನೆ?

ವ॥ ರತ್ನಪ್ರತಿಬಿಂಬವನ್ನೊಳಗೊಂಡ ಮಾಣಿಕದ ದೀಪದಂತೆ, ಸೂರ್ಯಕಾಂತ ಶಿಲೆಯಲ್ಲಿ ಅಡಗಿದ ಬೆಂಕಿಯಂತೆ, ಹಸನಾದ ನೀರಲ್ಲಿ ಹುದುಗಿದ ಮಾಣಿಕ್ಯಮಣಿಯಂತೆ, ತನ್ನ ಬೆಳಕೇ ಎಲ್ಲಾ ಕಡೆಗೆ ತುಂಬುತ್ತಿರಲಾಗಿ ಜಿನಾರ್ಭಕನು ದೇವಿಯ ಪರಿಶುದ್ಧವಾದ ಗರ್ಭದಲ್ಲಿ ಬೆಳೆಯುತ್ತಿದ್ದನು. ವಿಶ್ವಸೇನರಾಜನು ಪ್ರಜೆಗಳ ಹಿತರಕ್ಷಣೆಯಲ್ಲಿ ನಿರತನಾಗಿ ಮಹಾರಾಣಿಯ ಬಳಿಯಲ್ಲಿ ಆಕೆಯ ಮುಖದರ್ಶನವೊಂದರಿಂದಲೇ ಸಂಪೂರ್ಣವಾದ ಕಾಮತೃಪ್ತಿಯನ್ನು ಪಡೆಯುತ್ತಿದ್ದನು.

೨೧೫. ಮಹಾರಾಣಿಯ ಕಡೆಗಣ್ಣೋಟಕ್ಕೆ ಸಮೀಪವಾಗಿ (ಒಳಗಿರುವ ತೇಜಸ್ಸಿಗೆ) ತೆರೆಯಂತಿರುವ ಆಕೆಯ ದೇಹಕ್ಕೆ ಹತ್ತಿರವಾಗಿ ಇರುವ ರಾಜನು—ದೇವಗಂಗೆಯ ಬಳಿ, ಅದರ ತುಷಾರಗಳನ್ನು ಹೊಂದಿರುವ ಪಾರಿಜಾತ ವೃಕ್ಷದಂತೆ ಕಂಗೊಳಿಸಿದನು.

ವ॥ ಆಮೇಲೆ ಒಂಬತ್ತು ತಿಂಗಳು ತುಂಬಿ, ಕಾರ್ತಿಕಶುದ್ಧ ಚತುರ್ದಶಿಯೂ ಭರಣಿನಕ್ಷತ್ರವೂ ಕೂಡಿದ ಬೆಳಗಿನ ಜಾವದ ಬ್ರಾಹ್ಮಮುಹೂರ್ತದಲ್ಲಿ—

---

1. × (ಅ)

ಮ॥ ಸುರವೃಂದಾರಕವೃಂದಮರ್ತ್ಯಪತಿನಾಗಾಧೀಶಚೇತೋಮುಖಾಂ
ಬುರುಹಂಗಳ್ ಮುದಿತಂಗಳಾಗೆ ಕುಮುದಧ್ವಾಂತೈಕನಿರ್ಭೇದನ
ಸ್ಫುರವಿಜ್ಞಾನಮರೀಚಿ ಸಂದ ಜಿನ[1]ಚಂದ್ರಾರ್ಕೋ[1]ದಯಂ ಲೋಕದೊಳ್
ಕರಮೊಪ್ಪಿರ್ದುದುದಾತ್ತಜೈನಸಮಯೋತ್ತುಂಗೋದಯಾದ್ರೀಂದ್ರದೊಳ್ ॥ ೨೧೬ ॥

—ಗದ್ಯ—

ಇದು

ಜಿನೇಂದ್ರಚರಣಸರಸೀರುಹ ಶಿಲೀಮುಖಾಯಮಾನ

ಶ್ರೀಮದುಭಯಕವಿಚಕ್ರವರ್ತಿ

ನಿರ್ವರ್ತಿತಮುಂ

ಅಮ್ಮನ ಭಕ್ತಾಭಿಧಾನ ವಿದ್ಯಾನಿಧಾನ ಮಲ್ಲಪಾರ್ಯ

ತದನುಜಾತಾಭಿಜಾತ ಸಾರಸ್ವತ

ಪುನ್ನಮಾರ್ಯ ಕಾರಿತಮುಮಪ್ಪ

ಪುರಾಣಚೂಡಾಮಣಿಯೊಳ್

ನವಮಾಶ್ವಾಸಂ

---

೨೧೬. ಕಮಲಗಳಿಗೆ ಸಂತೋಷವನ್ನುಂಟುಮಾಡುತ್ತ, ಕತ್ತಲೆಯನ್ನು ಭೇದಿಸುತ್ತ ಉದಯಪರ್ವತದಲ್ಲಿ ಸೂರ್ಯನು ಹುಟ್ಟುವ ಹಾಗೆ ಮೂರೂ ಲೋಕಗಳ ಮನಸ್ಸಿಗೆ ಆನಂದವನ್ನುಂಟುಮಾಡುತ್ತ, ದುಷ್ಟಭಾವಗಳನ್ನು ಧ್ವಂಸಮಾಡುತ್ತ, ಜ್ಞಾನಮಯನಾದ ತೀರ್ಥಂಕರನು ಈ ಲೋಕದಲ್ಲಿ ಜನ್ಮತಾಳಿದನು.

ಗದ್ಯ॥ ಇದು ಜಿನೇಶ್ವರನ ಚರಣಕಮಲದ ದುಂಬಿಯಂತಿರುವ, ಶ್ರೀಮದುಭಯಕವಿಚಕ್ರವರ್ತಿಯೆಂಬ ಬಿರುದಾಂಕಿತನಿಂದ ನಿರ್ವರ್ತಿತವೂ ಅಮ್ಮನ ಭಕ್ತಾಭಿಧಾನ ಮಲ್ಲಪಾರ್ಯನ, ಅವನ ತಮ್ಮ ಹೊಸ ಸಾರಸ್ವತ ಪುನ್ನಮಾರ್ಯ ಹೇಳಿಸಿದ ಪುರಾಣಚೂಡಾಮಣಿಯಲ್ಲಿ ಒಂಭತ್ತನೆಯ ಆಶ್ವಾಸವು.

---

1. ಚಂದ್ರೇಂದೂ (ಅ)

ಶ್ರೀ

ಶಾಂತಿಪುರಾಣಂ

— ೦ —

ದಶಮಾಶ್ವಾಸಂ

ಕಂ॥ ಶ್ರೀಮಜ್ಜಿನಚಂದ್ರ ಸುಧಾ
ಧಾಮೋದಯ ವಿಭ[ವ]ಮಂ [1]ನೆಱಂ[1]ಬಡೆದವೊಲಂ
ದಾಮಹಿಯುತ್ಸವಮೆಂಬುದ
ಸಾಮಾನ್ಯಮದೃಷ್ಟಪೂರ್ವಮಶ್ರುತಪೂರ್ವಂ ॥ ೧ ॥

ವ॥ ಅಂತಾತ್ರಿಲೋಕಚೂಡಾಮಣಿಯುದಯದೊಳ್ ಮಂದಮಂದಾಯಮಾನಪವನವಿಳಸನಮುಮಪಾಂಸುಲದಿ[2][ಗ್ವ][2]ನಿತಾವದ[3][ನ][3]ಲಕ್ಷ್ಮಿಯುಮಭಿನವನಮೇರು ಮಂದಾರ ಪಾರಿಜಾತಕುಸುಮವರ್ಷಮುಮಿತಸ್ತತಸ್ಸಂಚಲದಮರಕರಪರಿತಾಡ್ಯಮಾನಮಹನೀಯ ದೇವದುಂದುಭಿ ನಿರ್ಘೋಷ ಲೀಲೆಯುಂ ಗಗನದಿಗವನೀವಳಯವಿಲಂಬಿವ್ಯತಿಕರಮಪ್ಪುದಂ ಭವನನಿಳಯವ್ಯಂತರಾವಾಸಜ್ಯೋತಿರಮರ ಕಲ್ಪಾಲಯಚತುರ್ಭೇದಭಿನ್ನಮಪ್ಪ ದೇವಲೋಕದೊಳ್ ಶಂಖಪಟ[4][ಹ][4] ಕಂಠೀರವ ಘಂಟಾರವಂಗಳೊರ್ಮೊದಲೆಸೆವುದುಮರ್ಹದ್ದ್ವಿತೀಯ ಕಲ್ಯಾಣಮನಱಿದು ಸಮುದ್ರವೇಳಾವಿಳಾಸೋಪಹಾಸಿಯಾಗಿ ನಾಲ್ಕುಂ ದೇವಲೋಕದೊಳ್ ಕ್ಷೋಭಿಸುತ್ತಿರ್ಪನ್ನೆಗಂ —

ಆಶ್ವಾಸ ೧೦

೧. ಕ್ಷೀರಸಮುದ್ರವು ಚಂದ್ರೋದಯದ ವೈಭವವನ್ನು ಪಡೆದಂತೆ ಜಿನಧರ್ಮಚಂದ್ರನಾದ ತೀರ್ಥಂಕರ ಜನ್ಮದಿಂದ ಆ ಭೂಮಿ ಪಡೆದ ಸಂತೋಷ ಅಸಾಧಾರಣವಾಗಿತ್ತು. ಅಂತಹ ಉತ್ಸವವನ್ನು ಈ ಹಿಂದೆ ಯಾರೂ ಕಂಡಿರಲಿಲ್ಲ, ಕೇಳಿರಲಿಲ್ಲ.

ವ॥ ತ್ರಿಭುವನಗಳಿಗೂ ಶಿರೋಮಣಿಯಾದ ಆತನ ಜನ್ಮವಾದೊಡನೆ ಮೆಲ್ಲಮೆಲ್ಲಗೆ ಗಾಳಿ ಬೀಸತೊಡಗಿತು; ದಿಕ್ಕುದಿಕ್ಕುಗಳೆಲ್ಲ ಧೂಳಿಲ್ಲದಂತೆ ಸ್ವಚ್ಛವಾಗಿ ಶೋಭಿಸಿದುವು; ನಮೇರು, ಮಂದಾರ ಹಾಗು ಪಾರಿಜಾತದ ಹೊಸ ಹೂಗಳ ಮಳೆ ಸುರಿಯಿತು; ಸಡಗರದಿಂದ ಅತ್ತಿತ್ತ ಓಡಾಡುವ ದೇವವಾದಕರು ಉತ್ತಮವಾದ ದೇವದುಂದುಭಿಗಳನ್ನು ಬಾರಿಸಿದರು; ಭವನವಾಸಿ, ವ್ಯಂತರ, ಜ್ಯೋತಿಷ್ಕ ಹಾಗು ಕಲ್ಪವಾಸಿ ದೇವಲೋಕಗಳಲ್ಲಿ ಶಂಖ, ಪಟಹ, ಕಂಠೀರವ, ಘಂಟೆ ಮುಂತಾದ ವಾದ್ಯಧ್ವನಿ ಹೊಮ್ಮಿತು. ಅರ್ಹಂತನ ದ್ವಿತೀಯ ಕಲ್ಯಾಣವನ್ನು ಅರಿತು, ಉಕ್ಕೇರುವ ಸಮುದ್ರವನ್ನು ನಾಚಿಸುವಂತೆ ನಾಲ್ಕೂ ಬಗೆಯ ದೇವಲೋಕಗಳಲ್ಲಿ ದೇವತಾಸಮೂಹ ಸಂಭ್ರಮದಿಂದ ನೆರೆಯಿತು. ಅಷ್ಟರಲ್ಲಿ—

---

1. ನೆರಂ (ಅ) 2. ಗ್ವ (ಮ) 3. ದ (ಮ) 4. ಟ (ಮ)

ಉ॥ ಆಸನಕಂಪದಿಂದಮಿೞಿದಾಸನದಿಂ ಕರಪದ್ಮಕುಟ್ಮಲೋ
ದ್ಭಾಸಿಲಲಾಟಪಟ್ಟರತಿಸಂಭ್ರಮದಿಂ ಪೊಡೆವಟ್ಟು ನೂಱನೂ
ರ್ಭಾಸಿರಮಂ ವಿಗುರ್ವಿಸಿ ವಿಮಾನದ ಯಾನದ ವಾಹನಂಗಳ
ಗ್ರೇಸರಸದ್ವಿಮಾನಮುಮನರ್ಚನೆಯೊಳ್ ದೊರೆಕೊಂಡ ಚೆಲ್ವುಮಂ ॥ ೨ ॥

ವ॥ ಅವಗಯಿಸಿ—

ಕಂ॥ ತಳರ್ದರ್ಗಳ್ ಜಿನಪುಣ್ಯಾ
ನಿಳಚಳಿತ ಚತುರ್ವಿಧಾಮರೇಂದ್ರಾಂಬುಧಿ ಕ
ಣ್ಗೊಳಿಸಿದುದು ದೇವಸಮಿತಿಯ
ವಿಳಾಸಮಂ ನೆಱೆಯೆ ಪೊಗೞಲಾರ್ಪೊಂ ನೆಱೆವೊಂ ॥ ೩ ॥

ವ॥ ಅಂತು ಮೂವತ್ತಿರ್ವರಿಂದ್ರರುಂ ಪರಿವೇಷ್ಟಿಸಿ ಬರೆ ಸೌಧರ್ಮೇಂದ್ರನೈರಾವಣಕರೀಂದ್ರಮನೇಱಿ ಸಾಮಾನಿಕತ್ರಯಸ್ತ್ರಿಂಶ ಲ್ಲೋಕಪಾಲಪಾರಿಷದಾತ್ಮರಕ್ಷಕಾಭಿಯೋಗ್ಯಕಿಲ್ಬಿಷಿಕಾದಿ ಪರಿವಾರ ಪರೀತರಾಗಿ ಹಸ್ತ್ಯಶ್ವರಥಪದಾತಿವೃಷಭಗಂಧರ್ವನರ್ತಕೀ[5]ವಾರ[6]ಪ್ರಾನೀಕಂ ಬೆರಸು ಜಿನೇಂದ್ರ ದ್ವಿತೀಯಕಲ್ಯಾಣೋತ್ಸುಕರಾಗಿ ಬರೆವರೆ—

ಕಂ॥ ರಾಗಂ ಮೆಯ್ಯೊಳ್ ಪೊಂಪುೞಿ
ವೋಗೆ ಪೊನಲ್ವರಿಯೆ ನೃತ್ಯವಾದನ ಗೀತೋ
ದ್ಯೋಗದ ಸಂಗೀತಕರಸ
ಮಾಗಳ್ ಸುರಗಗನಗಮನಮೇನೊಪ್ಪಿದುದೋ ॥ ೪ ॥

---

೨. (ದೇವೇಂದ್ರರು) ಆಸನಕಂಪದಿಂದ (ಅರ್ಹಂತ ಜನ್ಮವನ್ನು) ಅರಿತು, ಕೂಡಲೆ ತಂತಮ್ಮ ಪೀಠಗಳಿಂದ ಇಳಿದು ಹಣೆಗೆ ಕೈಜೋಡಿಸಿ ಸಂತೋಷದಿಂದ ನಮಸ್ಕರಿಸಿದರು. ಅನೇಕ ಸಹಸ್ರ ಸಂಖ್ಯೆಯ ವಿಮಾನಗಳನ್ನೂ, ಬಗೆಬಗೆಯ ವಾಹನಗಳನ್ನೂ, ಏರಿಕೊಂಡು ಮುಂದಾಗಿ ಹೊರಟ ಶ್ರೇಷ್ಠ ವಿಮಾನವನ್ನೂ, (ಅದರಲ್ಲಿದ್ದ) ಅರ್ಚನಾ ದ್ರವ್ಯಗಳ ಸೌಂದರ್ಯವನ್ನೂ

ವ॥ ಮೆಚ್ಚಿ,

೩. ನಾಲ್ಕೂ ಬಗೆಯ ದೇವೇಂದ್ರರು ಹೊರಟರು. ಜಿನಪುಣ್ಯವೆಂಬ ಗಾಳಿಯಿಂದ ಅಲ್ಲೋಲಕಲ್ಲೋಲವಾದ ಈ ದೇವಸಮೂಹವೆಂಬ ಸಮುದ್ರವು ಶೋಭಿಸಿತು. ದೇವಸಮೂಹದ ಸಡಗರವನ್ನು ಪೂರ್ಣವಾಗಿ ಬಣ್ಣಿಸಬಲ್ಲವನಾರು?

ವ॥ ಹೀಗೆ ಮೂವತ್ತು ಇಂದ್ರರು ತನ್ನ ಸುತ್ತಲೂ ಬರಲು, ಸೌಧರ್ಮೇಂದ್ರನು ಐರಾವತವನ್ನು ಏರಿ, ಸಾಮಾನಿಕ, ತ್ರಯಸ್ತ್ರಿಂಶತ್, ಲೋಕಪಾಲ, ಪಾರಿಷದ, ಆತ್ಮರಕ್ಷಕ ದೇವತೆಗಳೊಡನೆಯೂ ವಾಹನಯೋಗ್ಯರಾದ ಕಿಲ್ಬಿಷಿಕ ಪರಿವಾರದೊಡನೆಯೂ ಕೂಡಿಕೊಂಡು ಆನೆ, ಕುದುರೆ, ರಥ, ಕಾಲಾಳು, ವೃಷಭ, ಗಂಧರ್ವ ಮತ್ತು ನರ್ತಕಿ ಎಂಬ ಏಳು ಬಗೆಯ ಸೈನ್ಯ ಸಮೇತರಾಗಿ ಅರ್ಹಂತನ ದ್ವಿತೀಯ ಕಲ್ಯಾಣೋತ್ಸವಕ್ಕೆಂದು ಬರಲಾಗಿ—

೪. ನರ್ತನ-ವಾದನ-ಗಾಯನಗಳನ್ನೊಳಗೊಂಡ ಸಂಗೀತರಸ ಮಹಾಪೂರದಂತೆ ಹೊನಲಿಟ್ಟು ಹರಿಯುತ್ತಿರಲು ಅತ್ಯಧಿಕವಾದ ಉತ್ಸಾಹ ಮೈತುಂಬಿ ಹೊರಟ ಆ ದೇವತೆಗಳ ಆಕಾಶಗಮನ ಎಷ್ಟು ಮನೋಹರವಾಗಿತ್ತು!

---

5. ವಾರ್ (ಅ) 6. ಪ್ರಕಾರ (ಅ)

ಕಂ॥ ಗಗನದೊಳಡರ್ದು ಪರೆದಿರ
ದೀಗಡೆ ನಿರ್ಮಾಣರೇಖೆಗೊಂಡನೊ ವಿಧಿಯಿಂ
ಬೀಗಮನಿಸಿಯುಂತಾನೇ
ವಾಗಮ[ನ]ದ ಚೆಲ್ವ್ವಾಗಗೋಚರಮಲ್ತೇ ॥ ೫ ॥

ವ॥ ಎಂಬಿನಂ ಬಂದು ಹಸ್ತಿನಪುರಮಂ ಪೊಯ್ದು ವಿಶ್ವಸೇನಮಹಾರಾಜನ ರಾಜಮಂದಿರದೊಳಮರೇಂದ್ರಸಮೇತಮಮರನಿಕಾಯಮಿರೆ ಪರಮಪವಿತ್ರ ಪುಲೋಮಪುತ್ರಿ ಪರಿವಾರದೇವೀಸಮನ್ವಿತೆ ಪೋಗಿ ಮಹಾದೇವಿಯ ಪ್ರಸೂತಿಕಾ ನಿಕಾಯಮುಮಂ ಪೊಕ್ಕು—

ಕಂ॥ ಗಂಗಾಸಿಕತಿಳತಳದು
ತ್ತುಂಗದೊಳೆಸೆವೊಂದು ಹೇಮಪದ್ಮಮೆ ಗೆತ್ತಿಂ
ದ್ರಾಂಗನೆ ನೋಡಿದಳಂಬಿಕೆ
ಯಂಗೋಪಾಂತದ ಜಿನೇಂದ್ರದಾರಕರವಿಯಂ ॥ ೬ ॥

ವ॥ ಕಂಡು ಮೂಮೆ ಬಲಗೊಂಡೆಱಗಿ ಪೊಡೆವಟ್ಟುಮುಬ್ಬಱೊಳ್ ನಿಂದು ಭಾವಿಸಿ ನೋಡಿ—

ಕಂ॥ ತೆಂಬಲರಲೆಪದ [1]ಪೊಸ[1]ಲತೆ
ಯೆಂಬಿನಮುಂಕುರಿಸೆ ಪುಳಕಮೊರ್ಮೊದಲೊಳೆ ಬಿ
ಲ್ಲುಂಬೆಱಗುಮಾಗಿ ಸತಿ ಚೋ
ದ್ಯಂಬಟ್ಟಳಜಾತಪೂರ್ವ ವಿಸ್ಮಯದಿಂದಂ ॥ ೭ ॥

ವ॥ ಅಂತು ಜಿನಾರ್ಭಕನಂ ನೋಡಿ ತದೀಯಾಂಗಸಂಗತಲಕ್ಷಣವ್ಯಂಜನಂಗಳಂ ನೋಡಲ[2][ಱ][2]ಯದೆಯುಂ ಎತ್ತಿಕೊಳಲಣ್ಮದೆಯುಮಿರ್ದಿಂದ್ರನಾಜ್ಞೆಯಂ ಬಗೆದು ಕಿಱಿದು ಶಂಕೆವೆರಸು—

---

೫. ಆಕಾಶದಲ್ಲಿ ಅನ್ಯವಸ್ಥಿತವಾಗಿ ಹರಡದಂತೆ ಬ್ರಹ್ಮನೇ ರೇಖೆ ಕೊರೆದಿಟ್ಟನೊ ಎಂಬಂತೆ ಚೆಲುವಾಗಿ ಬರುವ ದೇವತೆಗಳ ಸಾಲು ಅವರ್ಣನೀಯವಲ್ಲವೆ?

ವ॥ ಹಾಗೆ ಬಂದು, ಹಸ್ತಿನಾಪುರವನ್ನು ಮುಟ್ಟಿ, ವಿಶ್ವಸೇನಮಹಾರಾಜನ ಅರಮನೆಯಲ್ಲಿ ದೇವೇಂದ್ರ ಸಹಿತವಾಗಿ ದೇವತೆಗಳು ನೆರೆದರು. ಆಗ ಪರಮ ಪರಿಶುದ್ಧಳಾದ ಶಚೀದೇವಿಯು ಪರಿವಾರ ದೇವಿಯರೊಡನೆ ಐರಾದೇವಿಯ ಬಾಣಂತಿ ಮನೆಯನ್ನು ಪ್ರವೇಶಿಸಿದಳು.

೬. ಗಂಗಾನದಿಯ ಮಳಲ ಮಡಿಲಲ್ಲಿ ಕಂಗೊಳಿಸುವ ಹೊಂದಾವರೆಯೊ ಏನೊ ಎಂಬಂತೆ ಜಗದಂಬಿಕೆಯ ಬಳಿ ಒರಗಿದ ಜಿನಶಿಶುವನ್ನು ಇಂದ್ರಾಣಿ ಕಂಡಳು.

ವ॥ ಕಂಡೊಡನೆ ಮೂರುಸಲ ಪ್ರದಕ್ಷಿಣೆ ಮಾಡಿ ನಮಸ್ಕರಿಸಿ ಪ್ರೀತಿಯಿಂದ ನಿಂತು ಗಮನವಿಟ್ಟು ನೋಡಿದಳು.

೭. ದಕ್ಷಿಣದ ಮೆಲುಗಾಳಿ ತಾಕಿದ ಹೂಬಳ್ಳಿಗೆ ಮೈತುಂಬ ಮೊಗ್ಗುಗಳು ಮೂಡುವಂತೆ ತನ್ನ ಶರೀರಾದ್ಯಂತವಾಗಿ ರೋಮಾಂಚ ಮೂಡಲಾಗಿ, ಅಭೂತಪೂರ್ವವಾದ ಬೆರಗಿನಿಂದ ಆಕೆ ಆ ಶಿಶುವನ್ನು ನೋಡಿದಳು.

ವ॥ ಹಾಗೆ ಜಿನಶಿಶುವನ್ನು ನೋಡಿ ಆತನ ದೇಹದಲ್ಲಿರುವ (ಸ್ವಸ್ತಿಕ, ಅಂಕುಶ ಮೊದಲಾದ ೧೦೮) ಲಕ್ಷಣಗಳನ್ನೂ (೯೦೦ ಬಗೆಯ) ವ್ಯಂಜನಗಳನ್ನೂ "ನೋಡುತ್ತ ಇರಲೊ, ಅಥವಾ ಎತ್ತಿಕೊಳ್ಳಲೊ" ಎಂದು ತಿಳಿಯದೆ (ಮೈಮರೆತು ನಿಂತಳು. ಆದರೆ) ಇಂದ್ರನ ಅಪ್ಪಣೆಯನ್ನು ನೆನೆದು ಅನುಮಾನಿಸುತ್ತಲೆ,

---

1. ಪೂ (ಮ) 2. ಱ (ಮ)

ಕಂ॥ ಒಳ್ಳಾನೆಗೋಡಲ್[1][ಅಂ][1]ಜಿಯದ
ಬೆಳ್ಳಾಳವೊಲಗಿದು ಕಂಡು ಲಾವಣ್ಯರಸಂ
ತಳ್ಳಂಕುಗುಟ್ಟೆ ಮಿಳ್ಳಿಸಿ
ದಳ್ಳಂಜಿದಾಡುವ ಜಿನೇಂದ್ರಶಿಶುವಂ ತಳದಿಂ ॥ ೮ ॥

ಅಕ್ಕರಂ॥ ನಿಡಿಯ ಬಳ್ಳಿಯ ತುಱುಗೆವೆಗಣ್ಗಳಂ ಕಿವಿಯನೆಯ್ದಿದ ಪುರ್ವುಗಳಂ
ಪೊಡವಿ ಷಟ್ಖಂಡಕ್ಕಡಿಯಿಡುವಡಿಗಳಂ ತೊಳ[2]ಗಿ ಬೆಳಗುವ ಪೆಱೆನೊಸಲಂ
ಪಡೆದ ಕಾಮದೇವತ್ವಮನವಗಯಿಸುವಂತಿರ್ದ ರೂಪಿನ ಬಾಲಕನಂ
ಬಡವಂ ಮಾಣಿಕಂಬೆತ್ತಂತೆ ರಾಗದಿನೆತ್ತಿಕೊಂಡಿಂದ್ರನ ದೇವಿ ಬಂದಳ್ ॥ ೯ ॥

ವ॥ ಅಂತೈರಾದೇವಿಯ ಮುಂದೆ ಮಾಯಾರ್ಭಕನನಿರಿಸಿ ಜಿನಾರ್ಭಕನನೆತ್ತಿಕೊಂಡು ಬರೆ ಸುರಸುಂದರಿಯರ ತಳ್ತು ಪಿಡಿದ ವಜ್ರದ ಕೊಡೆಗಳ ನೆೞಲ್ಗಳೊಳಂ ಗೊಂದಳದಿನಿಕ್ಕುವ ಚಾಮರಂಗಳ ತಣ್ಗಾಳಿಯೊಳಂ ಮಂಗಳಗೀತಿಪೂತೆಯರ ಪಿಡಿದ ಮಂಗಳೋಪಕರಣವಾದ್ಯದೊಳಂ ವಿಸ್ಮಿತನಾಗಿ ತ್ರಿಭುವನ[3]ಭವನ[3]ಮೂಲಸ್ತಂಭಂ ಸಕಳಕಳಾಧರಲೀಲಾವಳಂಬಿತವದನೇಂದುಸಾಂದ್ರಚಂದ್ರಿಕಾ ವ್ಯತಿಷ್ಪಟಾಸ್ಫೋಟಿತಸುರಾಧೀಶ ನೆೞ್ತಂದುದಂ ಕಂಡು—

ಮ॥ ಜಯ ಜೀ[4]ವಾ[4]ಧಿಪ ನಂದ ನಂದ ಸುಚಿರಂ ವರ್ಧಸ್ವ ವರ್ಧಸ್ವಯೆಂ
ದು ಯಥಾರ್ಥಂ ಸ್ತುತಿಗೆಯ್ದು ರತ್ನಮಕುಟಂ ನಿರ್ಯಾಣಮಂ ತಾಗೆ ದಂ
ತಿಯ ಮೇಗಿರ್ದು ವಿನಮ್ರನಾಗೆ ದಿವಿಜೇಂದ್ರಂ ತನ್ನನೋನೀತಿ ಭ
ಕ್ತಿಯ ಪೆಂಪಂ ಪವಣೆಯ್ದೆ ಪೇೞಲಱಿಯೆಂ ವಾಗ್ಗೋಚರಾತೀತಮಂ ॥ ೧೦ ॥

---

೮. ಬಲಿಷ್ಠವಾದ ಆನೆಯನ್ನು ಕಂಡು ಓಡಲಾರದೆ ಅಂಜಿನಿಂತ ಪುಕ್ಕನಂತೆ ಸೌಂದರ್ಯರಸದಲ್ಲಿ ತುಳುಕಾಡಿ ಶೋಭಿಸುತ್ತಿರುವ ಆ ಜಿನಶಿಶುವನ್ನು ಕಂಡು ಅಂಜಂಜುತ್ತಲೆ ತನ್ನ ಕೈ (ನೀಡಿದಳು).

೯. ಬಳ್ಳಿಯ ಕುಡಿಯಂತೆ ನೀಳವಾದ ತುಂಬಿದೆವೆಯ ಕಣ್ಣುಗಳು ; ಕಿವಿಯವರೆಗೆ ಚಾಚಿಕೊಂಡ ಹುಬ್ಬುಗಳು ; ಭೂಮಿಯ ಆರು ಖಂಡಗಳಿಗೂ ಹೆಜ್ಜೆಯಿಡುವ ಪಾದಗಳು ; ಹೊಳೆಯುವ ಚಂದ್ರನಂತಹ ಹಣೆ—ಇವುಗಳನ್ನು ಪಡೆದು ಕಾಮದೇವ ಪದವಿಯನ್ನು ತಾಳಲಿರುವ ಆ ಶಿಶುವಿನ ದೇಹವನ್ನು—ಮಾಣಿಕ್ಯರತ್ನವನ್ನು ಪಡೆದ ಬಡವನಂತೆ—ಹಿಗ್ಗುತ್ತ ಎತ್ತಿಕೊಂಡು ಬಂದಳು.

ವ॥ ಐರಾದೇವಿಯ ಮುಂದೆ ಮಾಯಾಶಿಶುವನ್ನು ಇಟ್ಟು, ಜಿನಶಿಶುವನ್ನು ಎತ್ತಿಕೊಂಡು ಆಕೆ ಬರಲಾಗಿ, ದೇವಸುಂದರಿಯರು ಹಿಡಿದ ವಜ್ರದ ಕೊಡೆಗಳ ನೆಳಲುಗಳಿಂದಲೂ, ಒಟ್ಟೊಟ್ಟಾಗಿ ಬೀಸುವ ಚಾಮರಗಳ ತಂಗಾಳಿಯಿಂದಲೂ, ಮಂಗಳಗೀತೆಗಳನ್ನು ಹಾಡುತ್ತ ಪವಿತ್ರಾಂಗನೆಯರು ಹಿಡಿದುಕೊಂಡು ಬಂದ ಮಂಗಳದ್ರವ್ಯಗಳಿಂದಲೂ ಕೂಡಿಕೊಂಡು ವಿಸ್ಮಯಭಾವದಿಂದ ಸಮಸ್ತಕಲಾಪೂರ್ಣನಾದ ಚಂದ್ರನಂತೆ ಮುಖವುಳ್ಳ ದೇವಾಧಿಪತಿಯು (ಶಿಶು) ಬಂದುದನ್ನು ಕಂಡು—

೧೦. "ಜೀವೇಶ್ವರನೇ ನಿನಗೆ ಜಯವಾಗಲಿ! ಸಂತೋಷವಾಗಲಿ! ಚಿರಕಾಲ ನಿನಗೆ ಅಭಿವೃದ್ಧಿಯಾಗಲಿ!" ಎಂದು ಸಾರ್ಥಕವಾಗಿ ಸ್ತುತಿಸಿ, ತನ್ನ ಕಿರೀಟವು ಆನೆಯ ಕಣ್ತಾದಿಯನ್ನು ತಾಗುವಂತೆ ಆನೆಯ ಮೇಲಿಂದಲೆ ಬಾಗಿ ದೇವೇಂದ್ರನು ನಮಸ್ಕರಿಸಿದನು. ಆತನ ಮನದಲ್ಲಿ ತುಂಬಿದ ಭಕ್ತಿಯ ಅತಿಶಯವನ್ನು ನಾನು ಬಣ್ಣಿಸಲಾರೆ. ಅದು ಮಾತಿಗೆ ನಿಲುಕಲಾರದು.

---

1. ಲಿ (ಮ) 2. ತಂ (ಅ) 3. × (ಮ) 4. ಯಾ (ಅ)

ಕಂ॥ ಆಯೆಡೆಯೊಳೆಜಗೆ ದಿವಿಜನಿ
ಕಾಯಂ ತನ್ಮಣಿಕಿರೀಟಕುಳಚಳನದೊಳಿರ
ದ್ವಾಯುಧಮಯಮಾದುದು ನಿಖಿ
ಳಾಯತ ನೃಪಭವನ ಭುವನ ದಿಗ್ವಿಸ್ತಾರಂ ॥ ೧೧ ॥

ಚಂ॥ ಅಮರರ ದಂತಿ ನಿರ್ಗವಿಸೆಯುಂ ಶಚಿ ನೀಡೆಯುಮಿಂದ್ರನಾಂತು ಸಂ
ಭ್ರಮಮನನಾಗಿ ಬಾಗಿ ಕೊಳೆಯುಂ ಜಿನಬಾಲಕನೇಱೆಯುಂ ಸಸಂ
ಭ್ರಮ ಸುರವರ್ಧಮಾನಪಟಹಧ್ವನಿ ಪೊಣ್ಮೆಯುಮುತ್ಸವಂ ಮನೋ
ರಮ ಹೃದಯಂಗಮಾನುಪಮುಮಾದುದು ಜನ್ಮದೊಳಿಂದ್ರವಂದ್ಯನಾ ॥ ೧೨ ॥

ವ॥ ಅಂತು ಜಿನದಾರಕನಂ ಪಾರಿಜಾತಪಲ್ಲವಾಯಮಾನನಿಜಕರಪಲ್ಲವಂಗಳಿನೆತ್ತಿಕೊಂಡೈರಾವತಬಂಧುರಸ್ಕಂಧದೊಳಿಟ್ಟು ಪರಮೌದಾರಿಕಶರೀರಸ್ಪರ್ಶನಸುಖಾನುಭವನಿಮೀಳಿತಲೋಚನಂ ಸೌಧರ್ಮೇಂದ್ರನಿಂದ್ರಾಣಿಯುಂ ಪಿಂಬಗನೇಱಿಸಿಕೊಂಡುತ್ತರಾಭಿಮುಖನಾದಾಗಳ್—

ಕಂ॥ ಜಿನನ ತನುಜ್ಯೋತ್ಸ್ನೆಯಿನಿಂ
ದ್ರನಯನಕುವಲಯವನಂಗಳಲರ್ದುವಿಭಂ ಕಾಂ
ಚನಶಿಖರದ ಹಿಮವದ್ಗಿರಿ
ಯೆನಿಸಿದುದಭ್ರಹರನ ಕನಕತನು ಸುಚ್ಛವಿಯಿಂ ॥ ೧೩ ॥

ವ॥ ಆಗಳೀಶಾನೇಂದ್ರಂ ಮುತ್ತಿನ ಜುರಿದ ಲಂಬಣಂಗಳಿಂ ನೇಲ್ವ ಸೌಗಂಧಿಕದ ಸೂಸಕಂಗಳಿಂ ಪದ್ಮರಾಗ(ದ) ಮಣಿಕುಡಿಯಿಂದಂ ನಯನಮನೋಹರಮಪ್ಪ ಚಂದ್ರಕಾಂತಧವಳಾತಪತ್ರಮಂ ಪಿಡಿಯೆಯುಂ ಸನತ್ಕುಮಾರಮಾಹೇಂದ್ರಪತಿಗಳಿಂದ್ರಾಯುಧೋಪಮಾನವರಾರ್ಘ್ಯ ಮಣಿಮಯೂಖಮಾಳಿಕಾದುರಾಲೋಕನನಕ್ಷತ್ರಮಾಳಾಕಳಾಪಕಕ್ಷಂಗಳಪ್ಪ ಪಕ್ಷಗಜಂಗಳನೇಱಿ ಗಂಗಾತರಂಗಧವಳವಿಲೋಲಚಾಮರಂಗಳ

---

೧೧. ಅತ್ತ ದೇವತೆಗಳ ಸಮೂಹವೆಲ್ಲವೂ ಜಿನಶಿಶುವಿಗೆ ಬಾಗಿ ನಮಸ್ಕರಿಸಿತು. ಅವರೆಲ್ಲರ ಕಿರೀಟಗಳ ಸಂಚಲನದಿಂದ ಅರಮನೆ, ಭೂಮಿ, ದಿಕ್ಕುಗಳು—ಎಲ್ಲವೂ ವಜ್ರಮಯವಾದಂತೆ ಪ್ರಭೆಯಿಂದ ತುಂಬಿದುವು.

೧೨. ಐರಾವತ ಬಾಗಿತು; ಶಚಿ (ಶಿಶುವನ್ನು) ನೀಡಿದಳು; ಇಂದ್ರನು ಬಾಗಿ, ಕೈಚಾಚಿ ಎತ್ತಿಕೊಂಡನು. ಹೀಗೆ ಜಿನಾರ್ಭಕನು ಆನೆಯನ್ನೇರಲಾಗಿ, ದೇವತೆಗಳ ವಾದ್ಯಗಳು ಸಡಗರದಿಂದ ನುಡಿದುವು; ಇಂದ್ರಪೂಜ್ಯನಾದ ಅರ್ಹಂತದೇವನ ಜನ್ಮೋತ್ಸವವು ಮನೋಹರವೂ, ಹೃದಯಂಗಮವೂ, ಅಲೌಕಿಕವೂ ಆಯಿತು.

ವ॥ ಹಾಗೆ ಜಿನಬಾಲಕನನ್ನು ಪಾರಿಜಾತದ ಚಿಗುರುಗಳಂತೆ ಕೋಮಲವಾದ ತನ್ನ ಕೈಗಳಿಂದ ಎತ್ತಿಕೊಂಡು ಐರಾವತದ ಸುಂದರವಾದ ಹೆಗಲಮೇಲೆ ಇರಿಸಿ, ಆ ಶಿಶುವಿನ ಔದಾರಿಕಶರೀರಸ್ಪರ್ಶದಸುಖದಿಂದ ಕಣ್ಣುಮುಚ್ಚಿ ಕೊಂಡು, ಸೌಧರ್ಮೇಂದ್ರನು ಇಂದ್ರಾಣಿಯನ್ನು ಹಿಂದೆ ಏರಿಸಿಕೊಂಡು ಉತ್ತರದಿಕ್ಕಿಗೆ ಮುಖ ಮಾಡಿದನು.

೧೩. ಜಿನನ ದೇಹಪ್ರಭೆಯೆಂಬ ಬೆಳದಿಂಗಳಿಂದ ಇಂದ್ರನ ಕಣ್ಣುಗಳೆಂಬ ನೈದಿಲೆಗಳು ಅರಳಿದುವು. ಅರ್ಹಂತ ದೇಹದ ಸುವರ್ಣಕಾಂತಿಯಿಂದ ಐರಾವತವು ಚಿನ್ನದ ಶಿಖರವುಳ್ಳ ಹಿಮಗಿರಿಯಾಯಿತು.

ವ॥ ಆಗ ಈಶಾನೇಂದ್ರನು ಮುತ್ತಿನ ಲಂಬಣಗಳಿಂದಲೂ, ಸೌಗಂಧಿಕದ ಸೂಸಕಗಳಿಂದಲೂ, ಮಾಣಿಕದ ತುದಿಕಳಸದಿಂದಲೂ ಕಂಗೊಳಿಸುವ ಚಂದ್ರಕಾಂತಶಿಲೆಯಂತೆ ಬೆಳ್ಳಗಿರುವ ಕೊಡೆಯನ್ನು ಶಿಶುವಿನ ಮೇಲೆ ಎತ್ತಿ ಹಿಡಿದನು. ಸನತ್ಕುಮಾರ ಮಹೇಂದ್ರರು ವಜ್ರಸದೃಶವಾದ ಶ್ರೇಷ್ಠರತ್ನಗಳಿಂದ ಖಚಿತವಾಗಿ ನೋಡಲಸದಳವಾಗುವಂತೆ ಹೊಳೆಯುವ ನಕ್ಷತ್ರಮಾಲೆಗಳನ್ನೊಳಗೊಂಡ ಆನೆಗಳನ್ನೇರಿ, ಅಕ್ಕಪಕ್ಕದಲ್ಲಿ ಅರ್ಹಂತನಿಗೆ ಗಂಗಾತರಂಗದಂತೆ ಧವಳವಾದ ಚಾಮರಗಳನ್ನು ಬೀಸಿದರು. ದೇವಲೋಕದ ಶ್ರೀಗಂಧಲೇಪದಿಂದ ಪರಿಮಳಯುಕ್ತವಾದ ಸುರಭಿ

ಸಿಕ್ಕೆಯುಂ ನಾಕಲೋಕನಂದನವನಚರ್ಚಾಚರ್ಚಿತಸುರಭಿ ನಮೇರು ಮಂದಾರ ಪಾರಿಜಾತ ಕುಸುಮಾರ್ಚಿತ ದೇವಾಂಗಪಟಪ್ರಚ್ಛದಾಚ್ಛಾದಿತ ಪಂಚರತ್ನಮಯವೇದಿಕಾವಿರಾಜಮಾನಸಮುತ್ತುಂಗಮಣಿಪೀಠಪ್ರತಿಮಮಪ್ಪ ಸೌಧರ್ಮೇಂದ್ರನುತ್ಸಂಗದೊಳ್ ತೀರ್ಥಕರಕುಮಾರಂ ಬರೆ ಚತುರ್ವಿಧಾಮರನಿಕಾಯಂ ನಡೆಗೊಂಡಾಗಳ್—

ಕಂ॥ ಸುರಕರಿಗೆ ಮೊಗಂ ಮೂವ
ತ್ತೆರಡದಱೊಂದೊಂದು ಮೊಗಕೆ ಕೋಡೆಂಟೆಂಬಾ
ಗಿರೆ ಕೋಡೊಳೊಂದು ಕೊಳನಾ
ಸರದೊಳ್ ನವನಳಿನಲತೆಗಳೋರೊಂದವಱೊಳ್ ॥ ೧೪ ॥

ಸರಸಿರುಹಲತೆಗೆ ಮೂವ
ತ್ತೆರಡಂಬುಜಮಂಬುಜಕ್ಕಮೆಸ[1][ಟ್ಗ][1]ಳ್ ಮೂವ
ತ್ತೆರಡವಱ ಮೇಗೆ ಕುಣಿವರ್
ಸುರವನಿತೆಯರಿಂದ್ರನಾಜ್ಞೆಯಿಂದೋರೊರ್ವರ್ ॥ ೧೫ ॥

ಎಸಳ ಮೊನೆ ಕೂರಿತಡಿಗಂ
ಬ ಸಂಕೆಯಿಂ ಮೆಟ್ಟದಂತೆ ಮುಟ್ಟದೆ ಕುಣಿದಾ
ಗಸಮೆಂಬ ರಂಗದೊಳ್ ಬ
ಣ್ಣಸರಮನಾಡಿದರನೇಕರಮರಾಂಗನೆಯರ್ ॥ ೧೬ ॥

ಸರಸಿರುಹದ ಮೇಗಾಡುವ
ಸುರಸುದತಿಯರಾಟದಂದಮೇತೆನೆ ಸಿರಿಯುಂ
ಪರಿಭವಿಸಿ ತಂದು ಪೊಸಯಿಪ
ಸಿರಿವಂತಿಕೆಯಿಂದೆ ಕಾಲೊಳೊದೆದಪರೆನಿಕುಂ ॥ ೧೭ ॥

ನಮೇರು, ಮಂದಾರ, ಪಾರಿಜಾತ ಪುಷ್ಪಗಳಿಂದಲೂ ಪೂಜೆಗೊಂಡು, ರೇಷ್ಮೆವಸ್ತ್ರವನ್ನು ಹೊದಿಸಿದ ಪಂಚರತ್ನಖಚಿತ ವೇದಿಕೆಯಲ್ಲಿ ಶೋಭಿಸುವ ಎತ್ತರವಾದ ರತ್ನಮಯ ಪೀಠವೊ ಏನೊ ಎಂಬಂತಿರುವ ಸೌಧರ್ಮೇಂದ್ರನ ತೊಡೆಯಮೇಲೆ ತೀರ್ಥಂಕರಕುಮಾರನು ಬರಲಾಗಿ, ನಾಲ್ಕು ಬಗೆಯ ದೇವತೆಗಳ ಸಮೂಹವು ನಡೆದು ಬಂದಿತು. ಆಗ—

೧೪. ಐರಾವತಕ್ಕೆ ಮೂವತ್ತೆರಡು ಮುಖಗಳು ಮೂಡಿದುವು; ಒಂದೊಂದು ಮುಖಕ್ಕೆ ಎಂಟೆಂಟು ಕೋರೆಗಳಾದುವು; ಪ್ರತಿಯೊಂದು ಕೋರೆಯಲ್ಲಿಯೂ ಒಂದು ತಾವರೆಕೊಳ; ಒಂದೊಂದು ಕೊಳದಲ್ಲಿ ಒಂದೊಂದು ಕಮಲದ ಬಳ್ಳಿಯಾದುವು.

೧೫. ಒಂದೊಂದು ಬಳ್ಳಿಗೆ ಮೂವತ್ತೆರಡು ತಾವರೆಗಳು; ಒಂದೊಂದು ತಾವರೆಗೆ ಮೂವತ್ತೆರಡು ದಳಗಳು; ಒಂದೊಂದು ಎಸಳಿನ ಮೇಲೂ ಇಂದ್ರನಾಜ್ಞೆಯಿಂದ ಒಬ್ಬೊಬ್ಬಳಂತೆ ದೇವನರ್ತಕಿಯರು ನಾಟ್ಯವಾಡುವರು.

೧೬. ಈ ತಾವರೆಯ ಎಸಳು ತಮ್ಮ ಅಂಗಾಲಿಗೆ ಹರಿತವಾಗಿ ನಟ್ಟುಬಿಟ್ಟೀತೆಂಬ ಅನುಮಾನದಿಂದಲೊ ಏನೊ ಎಂಬಂತೆ ಅವುಗಳನ್ನು ಮುಟ್ಟದೆ, ಅಂತರಿಕ್ಷದಲ್ಲಿಯೆ ಆ ದೇವಾಂಗನೆಯರು ವಿಲಾಸದಿಂದ ನರ್ತಿಸಿದರು.

೧೭. ಕಮಲಗಳ ಮೇಲೆ ಆಡುವ ಈ ದೇವಸುಂದರಿಯರ ಆಟವನ್ನು ನೋಡಿದರೆ, ತಮ್ಮ ಸಿರಿವಂತಿಕೆಯ ಅತಿಶಯದಿಂದ ಲಕ್ಷ್ಮಿಯನ್ನು ಸೋಲಿಸಿ ಹಿಡಿತಂದು ಕಾಲಲ್ಲಿಟ್ಟು ಮೆಟ್ಟುವರೊ ಏನೊ ಎಂದು ಎನಿಸಿತು.

---

1. ಳ್ಗ (ಮ)

ವ॥ ಅನಿಪಿಱಿಪ ಮಹಿಮೆಗೆ ನೋಂತ ತೀರ್ಥಕರಬಾಲಕನಂ ತಮ್ಮನೆ ನೋಡಿಸುವ ಬಗೆಯಿಂ—

ಕಂ॥ ಬಗೆದಂದಮಪ್ಪ ತನು ಬಗೆ
ವುಗೆಯುಂ ಬಗೆದಂದಮಪ್ಪ ಕೆಯ್ತುಂ ಚಿತ್ತಂ
ಬುಗೆಯುಂ ಪಪ್ಪದ ದೇವರ್
ತೆಗೆದರ್ ಕಿಱುಕಿಱಿದೆ ಮಂತಹರಣನ ಬಗೆಯಂ ॥ ೧೮ ॥

ವ॥ ಮತ್ತಮಾ ದಿವಿಜವಂದಿಸಂದೋಹಂ—

ಕಂ॥ ಪೊಗೞ್ದರ್ ತಮ್ಮಱಿವಿನಿತನೆ
ಪೊಗೞ್ದುಪಮೆಗಳುಂಬಮಾದ ಜಿನನಂ ಕೆಯ್ದೀ
ವಿಗೆ ಬೆಳಗುವನಿತನಲ್ಲದೆ
ದಿಗವನಿಗಗನಾಂತರಾಳಮಂ ಬೆಳಗುಗುಮೇ ॥ ೧೯ ॥

ವ॥ ಅಂತಮರಸಮಿತಿ ಸುರಕರಿಯಂ ಬಳಸಿ ಬರುತ್ತುಂ—

ಹರಿಣೀವೃತ್ತಂ॥ ಪರಮ ದಯೆಗೆಯ್ ನಿನ್ನೊಳ್ ತೊಟ್ಟೊಂದು ಭಕ್ತಿಯನಾದರಂ
ಬೆರಸು ಪೆಱತೊಂದೇಮುಟ್ಟಾಮೊಲ್ಲೆಮಂತದನೆಂಬ ತ
ತ್ಸುರಸಮುದಯಂ ಚೇತೋವಾಕ್ಕಾಯಶುದ್ಧಿಗಳೊಳ್ ತಮೋ
ಹರನನೆರೆದರ್ ದುಷ್ಕರ್ಮಾರಾತಿ ಹೇತಿವಿಭೀತಿಯಿಂ ॥ ೨೦ ॥

ಕಂ॥ ದುರಿತಾರಿಯನಭವಂ ಗೆ
ಲ್ದಿರೆ ಮೊಱಗುವ ವಿಜಯಪಟಹದಂತೆ ನವಾಂಭೋ
ಧರರವದಿನೇೞುಕೋಟಿಯು
ಮರೆ ಸುರದುಂದುಭಿಗಳೊಡನೆ ಮೊಱಗಿದುವಾಗಳ್ ॥ ೨೧ ॥

ವ॥ ಅಷ್ಟೊಂದು ಮಹಾಮಹಿಮೆಯುಳ್ಳ ತೀರ್ಥಂಕರ ಬಾಲಕನ ದೃಷ್ಟಿಯನ್ನು ತಮ್ಮೆಡೆಗೆ ಎಳೆದುಕೊಳ್ಳುವ ಬಯಕೆಯಿಂದ—

೧೮. ಇಷ್ಟಂದದ ರೂಪವನ್ನು ತಾಳುವ ತಮ್ಮ ದೇಹದಿಂದಲೂ ಇಷ್ಟವಾಗುವ ಚೇಷ್ಟೆಗಳಿಂದಲೂ ಮೋಹಕವಾಗಿ (ಅಭಿನಯಿಸಿ ವಿನೋದದ?) ದೇವತೆಗಳು ಪಾಪಹರನ ಮನಸ್ಸನ್ನು ಸ್ವಲ್ಪಸ್ವಲ್ಪವಾಗಿ ಆಕರ್ಷಿಸಿದರು.

ವ॥ ಮತ್ತು ದೇವಲೋಕದ ಹೊಗಳುಭಟ್ಟರು ಸಮೂಹವಾಗಿ—

೧೯. ಹೊಗಳಿಕೆಗೂ ಹೋಲಿಕೆಗೂ ಅತೀತನಾದ ಜಿನೇಶ್ವರನನ್ನು ತಮ್ಮ ಅರಿವಿಗೆ ಅಳವಡುವಷ್ಟು ಹೊಗಳಿದರು. ಕೈದೀವಿಗೆ ತನ್ನ ಪರಿಮಿತ ಅವಕಾಶವನ್ನು ಮಾತ್ರ ಬೆಳಗೀತಲ್ಲದೆ ದಿಕ್ಕು, ಭೂಮಿ, ಆಕಾಶಗಳನ್ನೆಲ್ಲ ಬೆಳಗಬಲ್ಲುದೆ?

ವ॥ ಹೀಗೆ ದೇವಸಮಾಜವು ಐರಾವತವನ್ನು ಬಳಸಿಕೊಂಡು ಬರುತ್ತ—

೨೦. "ದೇವ, ನಿನ್ನಲ್ಲಿರುವ ಭಕ್ತಿಯೊಂದನ್ನೆ ಸ್ಥಿರವಾಗಿರುವಂತೆ ಅನುಗ್ರಹಿಸು. ಬೇರಾವುದನ್ನೂ ನಾವು ಬೇಡೆವು" ಎಂದು ಸಮಸ್ತ ದೇವರುಗಳು ದುಷ್ಕರ್ಮಗಳೆಂಬ ಶತ್ರುವಿನ ಭೀತಿಯಿಂದ (ಮುಕ್ತರಾಗಲು) ತ್ರಿಕರಣ ಶುದ್ಧಿಯಿಂದ ಬೇಡಿಕೊಂಡರು.

೨೧. ಘಾತಿಕರ್ಮಗಳನ್ನು ಅರ್ಹಂತನು ಗೆದ್ದಾಗ ಮೊಳಗುವ ವಿಜಯವಾದ್ಯದಂತೆ, ಏಳು ಕೋಟಿ ದೇವದುಂದುಭಿಗಳು ಮೇಘಗರ್ಜನೆಗೆ ಸಮನಾಗಿ ಕೂಡಲೆ ಮೊಳಗಿದುವು.

ವ॥ ಅಂತು ನಭೋಯಾನದಿಂದಮರಪಙ್ಕ್ತಿ ಬರೆ ಪರ್ಕಳಿಸಿಯುಂ ತುಱುಗಿಯುಂ ನಿಗುಂಬಿಸಿಯುಂ ಕೀಳಿಸಿಯುಂ ನಡೆದು ದಿಗಂತಪರ್ಯಂತಮಾನಾಕಲೋಕಮೆಲ್ಲಂ ಕಿಕ್ಕಿಱಿದು ಬರೆ ಕವಿದ ಮಣಿಮಕುಟದ ತೊಟ್ಟಾಭರಣದುಟ್ಟ ದುಗುಲದ ಕಿಕ್ಕಿಱಿಗಿಱಿವ ಧವಳಚ್ಛತ್ರಂಗಳೊಳ್ ತಳ್ಪೊಯ್ಪು ಯಾನವಿಮಾನಂಗಳೊಳ್ ಪಾಯ್ದಾಯ್ದು ತಟ್ಟಿಸ್ಸುವ ಧವಳಚಮರರುಹಂಗಳ ಮುಂದೆ ಪೊಳೆವ ದುಗ್ಧಾಬ್ಧಿಫೇನಪಿಂಡಪಾಂಡುರಂಗಳಪ್ಪೊಜ್ಝರಂಗಳೊಳಂ ದಂದಶೂಕಬೃಂದಮಂತೆ ವನಪಾವನದೊಳ್ ಮೆಯ್ವಡೆದ ಮತ್ಸ್ಯಮಕರಸಿಂಹ ವ್ಯಾಘ್ರಾದಿಪತಾಕಾನೀಕದೊಳಂ ದೆಸೆಗೆ ಜಸೆದು ಬಿಙ್ಮನೆ ಬೀಗುವ ಪೊಸಸಿರಿವಂತನಂತೆ ವಾತಪೂರಣಂಗಳೊಳಂ ಪರಭಾಗಂ ಬಡೆದು—

ಕಂ॥ ಅತಿಶಯಪಂಚರುಚಿ ಪ್ರತಿ
ಕೃತಿ ಹರಿತಂ ತಾಮ್ರಕೃಷ್ಣಪೀತಸಿತ ಶ್ರೀ
ಶ್ಲಥಿತಮಾಗಿ ಸೂಯಿಯಾಣದ
ವಿತಾನಮಂ ಪೋಲ್ತುದಖಿಳಧರಣೀಮಾರ್ಗಂ ॥ ೨೨ ॥

ವ॥ ಮತ್ತಂ—

ಕಂ॥ ವಸುಧೆಯೊಳಿಸೆದಿರ್ದಭಿವೀ
ಕ್ಷಿಸುವ ಜನಕ್ಕೆಯ್ದೆ ಜಿನನ ಜನ್ಮೋತ್ಸವಮಂ
ಬೆಸಕೆಯ್ದ ಮಣಿವಿತಾನದೊ
ಳೆಸೆದಂತಸೆವತ್ತಶೇಷದೇವನಿಕಾಯಂ ॥ ೨೩ ॥

ವ॥ ಅಂತು ಪಿರಿದಪ್ಪುದಱಿಂದನೇಕಮುಖದೊಳ್ ನಡೆವ ಸುರಕೋಟಿಯುಂ ಕಂಡು ಸೌಧರ್ಮೇಂದ್ರಂ ಜಿನಾಭಿಷೇಕಕ್ಕೆ ನಿಂದ ಕೃತ್ರಿಮಹೇಮಪಟ್ಟಕಾಕಾರದಿಂ ಪವಿತ್ರಮಾದಮರಗಿರೀಂದ್ರಕ್ಕೆನಡೆಯಿಮೆಂದು ಗಿರಿದುರ್ಗಕ್ಕೆ ಕಯ್ವಾಸುವಂತೆ ಸನ್ನೆಗೆಯ್ದು ಚಾಮರಮಂ ಬೀಸುವುದುಂ—

ವ॥ ಆಕಾಶಮಾರ್ಗದಿಂದ ದೇವಸೈನ್ಯವು ಬಂದು, ವಿಸ್ತಾರವಾಗಿ, ಸಾಂದ್ರವಾಗಿ ದಿಕ್ಕಿನ ತುದಿಯವರೆಗೆ ತುಂಬಿಕೊಂಡು ನಡೆಯಿತು. ಹೀಗೆ ದೇವಲೋಕವೆಲ್ಲವೂ ಕಿಕ್ಕಿರಿದು ಬರಲಾಗಿ, ಆ ದೇವತೆಗಳು ಧರಿಸಿದ ರತ್ನಕಿರೀಟಗಳಿಂದಲೂ, ತೊಟ್ಟ ಆಭರಣಗಳಿಂದಲೂ, ಉಟ್ಟ ರೇಷ್ಮೆವಸ್ತ್ರಗಳಿಂದಲೂ, ಇಡಿಕಿರಿದ ಬಿಳಿಯ ಚಾಮರಗಳಿಂದಲೂ, ಮುಂದೆ ಹೊಳೆಯುವ ಕ್ಷೀರಸಾಗರದ ನೊರೆವಿಂಡಿನಂತೆ ಬೆಳ್ಳಗೆ ಶೋಭಿಸುವ 'ಒಜ್ಝರ'ಗಳೆಂಬ ರಾಜಚಿಹ್ನೆಗಳಿಂದಲೂ, ಹಾವಿನ ಹಿಂಡಿನಂತೆ ಗಾಳಿಯಲ್ಲಿ ಮಣಿಮಣಿದು ಪಟಪಟಿಸುವ ಮೀನು ಮಕರ ಸಿಂಹ ವ್ಯಾಘ್ರಾದಿ ಚಿಹ್ನೆಗಳುಳ್ಳ ಧ್ವಜ ಸಮೂಹದಿಂದಲೂ, ದಿಕ್ಕುಗಳಿಗೆ ಚೆಸೆದುಕೊಂಡು ಹೊಸತಾಗಿ ಶ್ರೀಮಂತಿಕೆಯನ್ನು ಪಡೆದವನಂತೆ ಬಿರಬಿರನೆ ಬೀಗುವ ವಾತಪೂರಣಗಳಿಂದಲೂ ರಮ್ಯವಾಗಿ

೨೨. ಅಧಿಕವಾದ ಪಂಚರತ್ನಗಳ ಪ್ರತಿಫಲನವು ಹಸಿರು, ಕೆಂಪು, ಕಪ್ಪು, ಹಳದಿ ಮತ್ತು ಬಿಳಿಬಣ್ಣಗಳಿಂದ ಬೆಡಗಾಗಿ ಭೂಮಾರ್ಗವು ಕಸೂತಿಕೆಲಸದ ವಿತಾನದಂತೆ ತೋರಿತು.

ವ॥ ಮತ್ತು—

೨೩. ಭೂಮಿಯ ಮೇಲಿನ ಜನರು ಜಿನನ ಜನ್ಮಕಲ್ಯಾಣೋತ್ಸವವನ್ನು ನೋಡಲೆಂದು ಅವರಿಗಾಗಿ ನಿರ್ಮಿಸಿದ ರತ್ನವಿತಾನವೋ ಎನ್ನುವಂತೆ ಸಮಸ್ತ ದೇವತೆಗಳ ಪರಿವಾರವು ಶೋಭಿಸಿತು.

ವ॥ ಹಾಗೆ ಅಸಂಖ್ಯವಾಗಿರುವುದರಿಂದ ಒಂದು ಸಾಲಾಗಿ ನಡೆವ ದೇವಸಮೂಹವನ್ನು ಕಂಡು ಸೌಧರ್ಮೇಂದ್ರನು ಜಿನೇಂದ್ರನ ಅಭಿಷೇಕಕ್ಕಾಗಿ ಸಿಲ್ಲಿಸಿದ ಚಿನ್ನದ ಪಟ್ಟದಂತೆ ಪವಿತ್ರವಾದ ಮೇರುಪರ್ವತಕ್ಕೆ ನಡೆಯಿರೆಂದು ಸನ್ನೆಮಾಡಿ ಚಾಮರವನ್ನು ಬೀಸಿದನು.

---

1. ೦ (ಮ) 2. ಟು (ಮ) 3. ವ್ವ (ಅ)

ಮ॥ ಬಗೆಯಲ್ ಬಾರದ ದೇವರಾಜಬಲಮಂ ಭೋರೆಂದು ಪೋಪೋ ಪುಗಲ್
[ಪುಗಲಿ]ತ್ತಿತ್ತ ದಿವೌಕದಿಂ ಪೊಱಗೆ ನಿಲ್ ನಿಲ್ ಪಿಂಗು ನೀನೆಂಬ ದಂ
ದುಗದಿಂ ದೇವರ ದಂಡಧಾರರೆರಡುಂ ಪಕ್ಷಂಗಳೊಳ್ ಸಾ[1]ಱ[1] ನೂ
ಲ್ದಿಗೆದಂತಿಂದ್ರಗಿರೀಂದ್ರಮೆಯ್ದುವಿನೆಗಂ ಪೋಯ್ತಾಗಳಿಂದ್ರದ್ವಿಪಂ ॥ ೨೪ ॥

ವ॥ ಅಂತು ಜ್ಯೋತಿರ್ಲೋಕಂಗಳ ವಿಮಾನಂಗಳ್ ತೊಲಗೆಯುಮಿದಿರಾದ ಜಲಧರಪಟಲಂಗಳರಲೆಯುಂ ದಿವಿ(ಜ)ಕರ್ಮ
ಕರ್ಬಟ್ಟೆಯಂ ಸಮಱಿ ಬಂದು ಮಂದರಪ್ರಥಮಕಂದರದ ಭದ್ರಶಾಲವೇದಿಕೋಪಾಂತದೊಳ್ ನಿಂದು—

ಕಂ॥ ಇದು ಶತಸಹಸ್ರಯೋಜನ
ಮುದಗ್ರಮಿದನಡರ್ವ ತೊಡರ್ವ ಗಸಣೆಯೊಳೇನೆಂ
ಬುದನೆಂದು ದಿವಿಜಗಜಮಂ
ಬುದಮಾರ್ಗಕ್ಕೊಗೆದುದೊಗೆವ ರಜತಾದ್ರಿಯವೋಲ್ ॥ ೨೫ ॥

ಆ ಗಿರಿಯ ದರಿಯ ಕರ್ಪೂ
ರಾಗುರುಕುಜತತಿಯ ಮೇಗಣಿಂ ಪೋಗೆ ಮರು
ನ್ನಾಗಂ ಬಿಳಿಯ ಮುಗಿಲ್ಗಳ
ಮೇಗಂ ನಡೆವಿಂದುಬಿಂಬಮೆನಿಸಿದುದಾಗಳ್ ॥ ೨೬ ॥

ವ॥ ಅಂತಮರಮಹೀಧರಂಬಿಡಿದು ಮೇಗಣ್ಗೊಗೆವಿಂದ್ರಕರೀಂದ್ರದ ಬಟಿವಟಿಯನೆ—

ಕಂ॥ ಓರಂತು ಪೋಪ ದಿವಿಜರ
ಹಾರಿ ತಟಂಬಿಡಿದು ಪೊಕ್ಕು ಪೊಱಮಡುವೊಂದಾ
ಕಾರಂ ಗಿರಿರಾಜನ ನವ
ಹಾರದ ಲಂಬಣಮನೇನದನುಕರಿಸಿದುದೋ ॥ ೨೭ ॥

---

೨೪. ಇಷ್ಟೆಂದು ಊಹಿಸಲಾಗದ ದೇವೇಂದ್ರ ಸೇನೆಯನ್ನು "ಹೋಗು, ಹೋಗು! ಅಲ್ಲಿ ಹೋಗಬೇಡ, ಹೋಗ ಬೇಡ! ಇತ್ತ ಬಾ, ಇತ್ತ ಬಾ! ದೇವನಿವಾಸದಿಂದ ಹೊರಗೆ ನಿಲ್ಲು, ನಿಲ್ಲು! ಹಿಂದಕ್ಕೆ ಸರಿ ನೀನು!" ಎಂದು ಮುಂತಾಗಿ ದೇವಲೋಕದ ಕೋಲ್ಕಾರರು ಎರಡೂ ಬದಿಗಳಲ್ಲಿ ಎಚ್ಚರಿಸುತ್ತ ಬರಲಾಗಿ, ಮೇರು ಪರ್ವತವನ್ನು ಮುಟ್ಟುವವರೆಗ ನೂಲು ಹಿಗೆದಂತೆ (ನೇರವಾಗಿ) ಐರಾವತವು ಸಾಗಿತು.

ವ॥ ಹಾಗೆ ಜ್ಯೋತಿರ್ಲೋಕದ ವಿಮಾನಗಳು ಹೋಗುವಂತೆ ಎದುರಾದ ಮೋಡಗಳ ಹಿಂಡು ಚದರುವಂತೆ ದೇವಲೋಕದ ಕೆಲಸಗಾರರು ದಾರಿಯನ್ನು ಸಿದ್ಧಪಡಿಸಿ ಬರಲಾಗಿ, ಮಂದರಪರ್ವತದ ಮೊದಲನೆಯ ಕಂದರದಲ್ಲಿರುವ ಭದ್ರಶಾಲದ ಜಗಲಿಯ ಬಳಿ ನಿಂತು,

೨೫. "ಇದು ನೂರು ಸಾವಿರ ಯೋಜನ ಎತ್ತರವಾಗಿದೆ ಇದನ್ನು ಏರಿ ಹೋಗುವ ತೊಂದರೆಯೇಕೆ?" ಎನ್ನುಕೊಂಡು ಐರಾವತವು ಬೆಳ್ಳಿಯ ಬೆಟ್ಟವೆ ನೆಗೆದಂತೆ ಆಕಾಶಕ್ಕೆ ಹಾರಿತು.

೨೬. ಆ ಬೆಟ್ಟದ ಕೊಳ್ಳದಲ್ಲಿದ್ದ ಕರ್ಪೂರ ಅಗುರುವೃಕ್ಷಗಳ ಮೇಲೆ ಹಾಯ್ದು ಹೋಗುವ ದೇವಗಜವು ಬಿಳಿಯ ಮೋಡಗಳ ಮೇಲೆ ನಡೆಯುವ ಚಂದ್ರಬಿಂಬವೊ ಏನೊ ಎಂಬಂತೆ ತೋರಿತು.

ವ॥ ಹಾಗೆ ದೇವಪರ್ವತವನ್ನನುಸರಿಸಿ ಮೇಲೆ ಸಾಗುತ್ತಿರುವ ಇಂದ್ರಗಜದ ಹಿಂದುಹಿಂದೆಯೆ—

೨೭. ಸಾಲಾಗಿ ಹೋಗುವ ದೇವತೆಗಳ ಸಮೂಹವು (ದರಿಯಲ್ಲಿ) ಒಂದೆಡೆಗೆ ಹೊಕ್ಕು ಇನ್ನೊಂದೆಡೆಗೆ ಹೊರಬರುವಾಗ ಅದು ಈ ಗಿರಿರಾಜನಿಗೆ ತೊಡಿಸಿದ ಹೊಸ ಹಾರದ ಸೂಸಕವೊ ಏನೊ ಎಂಬಂತೆ ಶೋಭಿಸಿತು.

---

1. ರ (ಮ)

ಕಂ॥ ನವಕುಸುಮಾವಚಯಕ್ಕಮ
ರವನಿತೆಯರ್ ತಗುಳೆ ಪಾರಿಜಾತಾವಳಿ ಸೋ
ಲ್ತವರ್ಗೆ ಕರಂ ಮುಗುಳ್ದಂ ಪ
ಲ್ಲವಿಸಿದುವೆನಿಸಿದುವು ತಳದ ವೆಳ್ಪುಂ ಕೆಂಪುಂ ॥ ೨೮ ॥

ವ॥ ಅಂತು ಪೋಗಿ ಪಾಂಡುಕವನದ ಮೂಡಣದೆಸೆಯೊಳ್ ನೂಱುಯೋಜನವಾಯಾಮದೊಳಂ ಪಂಚಾಶತ್ಯೋಜನವಿಸ್ತಾರದೊಳ್ ಎಂಟುಯೋಜನಮುತ್ಸೇಧದೊಳ್[1]ಮಮರ್ದು[1] ಚಂದ್ರಸ್ವರೂಪದೊಳವೊಪ್ಪಿ—

ಕಂ॥ ಕುಳಿಶಾವಳಿಗಳನಮರ್ದಿಂ
ತೊಳೆದಡಿಗಲ್ಲಿಕ್ಕಿ ಬೆಳ್ಳಿಯಿಟ್ಟಗೆಯಿಂ ಬೌ
ಪಳ[3]ಯಿ[3]ಕ್ಕಿದಂತ ತೊಳತೊಳ
ತೊಳಗಿ ಬೆಡಂಗಿಡದ ಪಾಂಡುಕಾಹ್ವಯಶಿಲೆಯೊಳ್ ॥ ೨೯ ॥

ವ॥ ಪೂರ್ವಾಭಿಮುಖನಾಗಿ ನಿಂದು ಮೃಗೇಂದ್ರಾಸನದೊಳ್ ಜಿನೇಂದ್ರದಾರಕನನಿರಿಸೆ ಸಿಂಹಾಸನದಿಕ್ಕೆಲದೊಳಂ ಕಿಱಿದುವಾಗಿರ್ದ ಮಣಿಮಯ ಭದ್ರಾಸನದೊಳ್ ಸೌಧರ್ಮೇಶಾನೇಂದ್ರರಿರ್ದು ವಿರಚಿಸೆ—

ಮ॥ ನವಮುಕ್ತಾಫಳಮಧ್ಯವಿದ್ರುಮಮಣಿಪ್ರಾಲಂಬಿಲಂಬೂಷಮೆ
ಯ್ದುವ ರೋಚಿರ್ನಿಚಯೋಜ್ಜ್ವಳಂ ಸುರಭಿದಾಮೋಲ್ಲಾಸಿ ಮಂದಾರಪ
ಲ್ಲವಮುಕ್ತೋರಣಮಿಂದ್ರಲೋಕವಸನಾವಷ್ಟಂಭಿತಸ್ತಂಭವಿ
ದ್ಧವಿತಾನಂ ಮಣಿಕೇತನಂ ಸಮೆದುದುದ್ಯೋತಾತಪಂ ಮಂಡಪಂ ॥ ೩೦ ॥

ವ॥ ಅದಱೊಳಗಣ ಮೃಗೇಂದ್ರವಿಷ್ಟರದೊಳ್ ಕಿಱಿದಾಗಿಯುಂ ಪ್ರಭಾವಿಶೇಷದಿಂದೆರಡನೆಯ ಮಂದರದ ಚೂಳಿಕೆಯಂತಿರ್ದ ಜಿನೇಂದ್ರಂಗೆ ಸೌಧರ್ಮೇಂದ್ರಂ ಜನ್ಮಾಭಿಷೇಕೋದ್ಯುಕ್ತನಾಗಿ ದಕ್ಷಿಣೇಂದ್ರಂಬೆರಸು ನಿಂದಿರ್ದ ಸಾಮಾನಿಕದೇವರಂ ಜಿನರಾಜಂಗೆ ಮೆಯ್ಗಾಪಾಗಿರಿಸೆ—

---

೨೮. ದೇವಾಂಗನೆಯರು ಹೂಗಳನ್ನು ಎತ್ತುವುದಕ್ಕೆ ತೊಡಗಿದಾಗ, ಪಾರಿಜಾತದ ವೃಕ್ಷಗಳು ಅವರಿಗೆ ಮನಸೋತು ಮರಳಿ ಚಿಗುರಿ ಹಬ್ಬಿಬಿಟ್ಟವೊ ಏನೊ ಎಂಬಂತೆ ಅವರ ಅಂಗೈಯ ಕೆಂಪೂ, (ಉಗುರುಗಳ) ಬಿಳುಪೂ ಶೋಭಿಸಿದುವು.

ವ॥ ಹಾಗೆ ಮುಂದುವರಿದು ಪಾಂಡುಕವನದ ಪೂರ್ವದಿಕ್ಕಿನಲ್ಲಿ ನೂರು ಯೋಜನ ಉದ್ದವೂ, ಐವತ್ತು ಯೋಜನ ಅಗಲವೂ, ಎಂಟು ಯೋಜನ ಎತ್ತರವೂ ಆಗಿ ಚಂದ್ರಾಕಾರದಿಂದ ಶೋಭಿಸಿ—

೨೯. ಅನೇಕ ವಜ್ರಗಳನ್ನು ಅಮೃತದಲ್ಲಿ ತೊಳೆದು ಅಡಿಪಾಯ ಹಾಕಿ, ಅದರ ಮೇಲೆ ಬೆಳ್ಳಿಯ ಇಟ್ಟಿಗೆಗಳಿಂದ ಕಟ್ಟಿ ಕಟ್ಟಿದಂತೆ ಥಳಥಳಿಸುವ ಚೆಲುವುಳ್ಳ ಪಾಂಡುಕಶಿಲೆಯಲ್ಲಿ—

ವ॥ ಪೂರ್ವಕ್ಕೆ ಎದುರಾಗಿ ನಿಂತು ಸಿಂಹಾಸನದಲ್ಲಿ ಜಿನಶಿಶುವನ್ನು ಇರಿಸಿ, ಆ ಪೀಠದ ಎಡಬಲಗಳಲ್ಲಿ ಅದಕ್ಕಿಂತ ಕಿರಿದಾದ ರತ್ನಮಯ ಪೀಠಗಳಲ್ಲಿ ಸೌಧರ್ಮೇಂದ್ರ ಹಾಗು ಈಶಾನೇಂದ್ರರು ಕುಳಿತರು.

೩೦. ಮಧ್ಯದಲ್ಲಿ ಹವಳದ ಮಣಿಯುಳ್ಳ ಹೊಸ ಮುತ್ತುಗಳ ಹಾರಗಳಿಂದ ಪ್ರಕಾಶಮಾನವಾಗಿ ಸುಗಂಧಿ ಪುಷ್ಪಮಾಲೆಗಳಿಂದ ಸುಂದರವಾಗಿ ಮಂದಾರಪಲ್ಲವದ ತೋರಣದಿಂದಲೂ, ಇಂದ್ರಲೋಕದ ವಸ್ತ್ರಗಳನ್ನು ಸುತ್ತಿದ ಸುಂದರವಾದ ಕಂಬಗಳಿಂದಲೂ, ವಿತಾನದಿಂದಲೂ ರತ್ನಖಚಿತವಾದ ಉಜ್ವಲ ಮಂಟಪವು (ದೇವೇಂದ್ರ, ಈಶಾನೇಂದ್ರರಿಂದ) ಸಿದ್ಧವಾಯಿತು.

ವ॥ ಅದರೊಳಗಿನ ಸಿಂಹಾಸನದಲ್ಲಿ ಕೂಸಾಗಿದ್ದರೂ ತನ್ನ ಅತಿಶಯ ಕಾಂತಿಯಿಂದ ಎರಡನೆಯ ಮಂದರಗಿರಿ ಶಿಖರದಂತೆ ಕಂಗೊಳಿಸುವ ಜಿನೇಂದ್ರನಿಗೆ ಜನ್ಮಾಭಿಷೇಕ ಮಾಡುವ ಕಾರ್ಯವನ್ನೆತ್ತಿಕೊಂಡು ಸೌಧರ್ಮೇಂದ್ರನು ಈಶಾನೇಂದ್ರನೊಡನೆ ನಿಂತಿರುವ ಸಾಮಾನಿಕ ದೇವರನ್ನು "ಜಿನೇಂದ್ರನಿಗೆ ಮೈಗಾವಲಾಗಿರಿ" ಎಂದಿರಿಸಿ,

---

1. ವನೇಕ ಮಂಗಳ ಪಂಚ್ಚದದೊಳಮಮರ್ದು (ಅ) 2. ಗಿ (ಅ)

ಕಂ॥ ಸುರಪತಿ ಶಿಖಿ ದಂಡಧರಂ
ನಿರುತಿ ಜಳೇಶಂ ಸಮಾರಣಂ ಧನದನುಮೀಾ
ಶ್ವರನೆಂಬ ಲೋಕಪಾಲರ
ನಿರವೇಟ್ಟವರವರ ದೆಸೆಯೊಳನುಚರ ಸಹಿತಂ ॥ ೩೧ ॥

ಮಹಿಳಾಸಹಿತಂ ವಾಹನ
ಸಹಿತಂ ಸಂಗೀತಸಹಿತಮತಿಶುದ್ಧಮನ
ಸ್ಸಹಿತಂ ನಿಜವಿವಿಧಾಯುಧ
ಸಹಿತಂ ನಿಲವೇಟ್ಟ ನೆಲೆಯೊಳಿರೆ ದಿಗಧೀಶರ್ ॥ ೩೨ ॥

ವ॥ ಇತ್ತ ಜಿನಬಾಲಕಾಧ್ಯಾಸಿತ ಪ್ರದೇಶದೊಳ್—

ಕಂ॥ ಲಸದಗುರುಸುರಭಿಸಾರ
ಪ್ರಸರಂ ನವಧೂಪಧೂಮಮಮರಾದ್ರಿಯನಾ
ಗಸಮನಮರೇಂದ್ರರಂ ದಿ
ಕ್ಪ್ರಸರಮನೇಂ ಪುದಿದು ನಿಲೆ ಪುದುಂಗೊಳಿಸಿದುದೋ ॥ ೩೩ ॥

ವ॥ ಅಲ್ಲಿಂ ಬಳಿಯಂ—

ಕಂ॥ ಕನಕಾದ್ರಿಶಿಖಾವಳನ
ರ್ತನಕ್ಕೆ ಲಯಮೆಳಸೆ ದಿವಿಜದುಂದುಭಿ ಶಂಖ
ಸ್ವನದೊಡನೆ ಮೊಳಗಿದುವು ಜಿನ
ಜನನಾಭಿಷವಪ್ರಸಂಗಮಂಗಳವಿಧಿಯೊಳ್ ॥ ೩೪ ॥

ಮ॥ ಸಮಶುದ್ಧಸ್ಫುಟಮಪ್ಪುದೊಂದು ಸುತಿಯಂ ಪ್ರಾರಂಭಿಗಂ ಮಾಡೆ ತಾ
ಳ[ಮ]ನುದ್ದಂಬಿಡಿದಂಗವರ್ತನೆಯೊಳಾಭೋಗಂ ಪೊದಳ್ದೊಪ್ಪೆ ಬಂ
ಹಿಮವನ್ಮಂದರಕಂದರಪ್ರತಿರವಂ ಕೂಟಕ್ಕೆ ಮೆಯ್ವೊಡ್ಡೆ ಪಂ
ಚಮಮಾಂಗಲ್ಯದೊಳಿಂದ್ರಗಾಯಕರದೇನಿಂಬಿಂ ನಯಂಬೆತ್ತರೋ ॥ ೩೫ ॥

---

೩೧. ಇಂದ್ರ, ಅಗ್ನಿ, ಯಮ, ನಿರುತಿ, ವರುಣ, ವಾಯು, ಕುಬೇರ ಮತ್ತು ಈಶ್ವರನೆಂಬ ದಿಕ್ಪಾಲಕರನ್ನು ಅವರವರ ದಿಕ್ಕುಗಳಲ್ಲಿ ಸೇವಕರು ಸಹಿತವಾಗಿ ನಿಲ್ಲಲು ಆಜ್ಞಾಪಿಸಿದನು.

೩೨. ಆ ನೇರೆಗೆ ದಿಕ್ಪಾಲಕರು ತಂತಮ್ಮ ಪತ್ನಿಯರು, ವಾಹನಗಳು, ಸಂಗೀತ ಹಾಗು ಆಯುಧಗಳ ಸಹಿತವಾಗಿ, ಪರಿಶುದ್ಧವಾದ ಚಿತ್ತದಿಂದ ಆಯಾ ಸ್ಥಳಗಳಲ್ಲಿ ನಿಂತರು.

ವ॥ ಇತ್ತ ಜಿನಶಿಶು ಇರುವ ಪ್ರದೇಶದಲ್ಲಿ—

೩೩. ಅಗುರುವಿನ ಸುಗಂಧಮಯವಾದ ಧೂಪದ ಹೊಗೆ ಮಂದರಪರ್ವತವನ್ನೂ, ಆಕಾಶವನ್ನೂ, ದೇವೇಂದ್ರರನ್ನೂ, ಸಕಲ ದಿಕ್ಕುಗಳನ್ನೂ ಸಂಪೂರ್ಣವಾಗಿ ಆವರಿಸಿತು.

ವ॥ ಆ ಬಳಿಕ—

೩೪. ಮಂದರಗಿರಿಯ ಶಿಖರದಲ್ಲಿ ನರ್ತನಕ್ಕೆ ಅನುಕೂಲವಾದ ಲಯದಲ್ಲಿ ದೇವದುಂದುಭಿಗಳೂ, ಶಂಖಗಳೂ ಮೊಳಗಿ ಜಿನಾಭಿಷೇಕ ಮಂಗಳದ ಪ್ರಸಂಗವನ್ನು ಆರಂಭಿಸಿದುವು.

೩೫. ಗಾಯಕ ಸೂತ್ರಧಾರನು ಸಮಶುದ್ಧವೂ ಸ್ಫುಟವೂ ಆದ ಶ್ರುತಿಯನ್ನು ಎತ್ತಿದನು ; ಅನುಕೂಲವಾದ ತಾಳವನ್ನು ಅನುಸ್ಯೂತವಾಗಿ ಹಿಡಿದು ಅಂಗವರ್ತನೆಯಲ್ಲಿ ಆಲೇಪವು ಹೊಮ್ಮಿ ಇಂಪಾಯಿತು. ಹಿಮವಂತ ಮಂದರ ಗಿರಿಗಳ ಕಂದರಗಳಿಂದ ಬರುವ ಪ್ರತಿಧ್ವನಿಗಳು ಅದಕ್ಕೆ ಮೇಳವಾದುವು. ಹೀಗೆ ಪಂಚಮಸ್ವರದಲ್ಲಿ ಇಂದ್ರಗಾಯಕರು ಮಂಗಲ ಗಾಯನವನ್ನು ಅದೆಷ್ಟು ನಯವಾಗಿ ಮಾಡಿದರು !

ವ॥ ಮತ್ತಂ ತ್ರಿಭುವನೈಕ (ಸಕಲ) ಚಕ್ರವರ್ತಿಯ ನಾಲ್ಕುಂದೆಸೆಯೊಳಂ ಸೂಟ್ಸುಟೊಳ್—

ಕಂ॥ ಅವೇರರ ಗಾಣರ ಮುಖರಿಗ
ಳಮರ್ದಂ ಕಿದಱಿದವೊಲೆಳಸೆ ಗಾಣತಿಗೆಯ್ದು
ತ್ರಮಮಧ್ಯಮನೀಚಲಯ
ಕ್ರಮತಾಳದಿನೆಸೆಯೆ ಪಾಡಿದರ್ ಮಂಗಳಮಂ ॥ ೩೬ ॥

ವ॥ ತವನಂತರಂ ಪ್ರಥಮಲೋಕಾಮರೇಶನುಮಿಶಾನೇಶನುಂ ಚಂಚತ್ಪಂಚರತ್ನಗೋಶೀರ್ಷ ಚಂದನ ನಿರ್ಮಲಾಕ್ಷತಂಅರ್ಘ್ಯ ಮನೆತ್ತಿದಿಂ ಬಱಿಯಿಂ—

ಕಂ॥ ಸುರಪತಿಯುಗಳಂ ಕಳಶೋ
ದ್ಧರಣೋದಿತಮಂತ್ರದಿಂದವೋಂಕಾರಪುರ
ಸ್ಸರವಮುರದ್ರುಮಪಲ್ಲವ
ಪರಿಶೋಭಿತಶಾತಕುಂಭಕುಂಭದ್ವಯಮಂ ॥ ೩೭ ॥

ವ॥ ಪದ್ಮಾದಿ ಸರೋವರವಾರಿಪೂರಿತಮನೆತ್ತಿಕೊಳ್ವುದುಮುಱಿದನಿಬರಿಂದ್ರರುಮಭಿಷೇಕಮಂಗಳದ್ರವ್ಯಂಗಳಂ ಕೂಡಿ ಶಚೀದೇವಿ (ಶಕ್ರ) ಕರತಳಕ್ಕವಂ ನೋಡಿ ನೀಡೆ ಪುರೋಡಾಶಕಷಾಯಸ್ನಾನೀಯೋದ್ವರ್ತನಸಂಚಾವಳಿಸ್ನಾನೋಪಕರಣಂಬೆರಸು ಜಗದೇಕಬಂಧುವಂ ಮಜ್ಜನಂಬುಗಿಸಿ—

ಕಂ॥ ನೀರೊಳ್ ಪಂಚಮಜಲಧಿಯ
ನೀರೆ ಪವಿತ್ರಂ ಪವಿತ್ರಮಲ್ಲವು ಪೆಱವೆಂ
ದೋರಂತು ತದಂಭೋಧಿಯ
ನೀರಂ ತರವೇಟ್ಟನಮರರಿಂದಮರೇಂದ್ರಂ ॥ ೩೮ ॥

ವ॥ ತ್ರಿಲೋಕ ಚಕ್ರವರ್ತಿಯಾದ ಆ ಅರ್ಹಂತಶಿಶುವಿನ ನಾಲ್ಕೂ ಮಗ್ಗುಲಲ್ಲಿ ಕ್ರಮಕ್ರಮವಾಗಿ—

೩೬. ದೇವಲೋಕದ ಗಾಯಕಪ್ರಮುಖರು ಅಮೃತವನ್ನೆ ಸುರಿಸಿದ ಹಾಗೆ, ಗಾಯನಮಾಡುತ್ತ ಮಂದ್ರ-ಮಧ್ಯಮ-ತಾರ ಲಯಗಳಲ್ಲಿ ತಾಲಬದ್ಧವಾಗಿ ಮಂಗಳವನ್ನು ಹಾಡಿದರು.

ವ॥ ಅನಂತರ ಪ್ರಥಮಲೋಕದ ಇಂದ್ರನೂ ಈಶಾನೇಂದ್ರನೂ ಸೊಗಸಾದ ಪಂಚರತ್ನ, ಗೋಶೀರ್ಷ ಹಾಗು ಚಂದನಗಳಿಂದಲೂ ನಿರ್ಮಲವಾದ ಅಕ್ಷತೆಗಳಿಂದಲೂ ಕೂಡಿದ ಅರ್ಘ್ಯವನ್ನು ಎತ್ತಿದರು. ಆಮೇಲೆ—

೩೭. ಇಬ್ಬರೂ ಇಂದ್ರರು ಓಂಕಾರಪೂರ್ವಕವಾದ ಕಲಶೋದ್ಧರಣ ಮಂತ್ರವನ್ನು ಹೇಳುತ್ತ ಸ್ವರ್ಗ ವೃಕ್ಷಗಳ ಚಿಗುರೆಲೆಗಳಿಂದ ಶೋಭಿಸುವ ಎರಡು ಚಿನ್ನದ ಕಲಶಗಳಲ್ಲಿ—

ವ॥ ಪದ್ಮವೆ ಮೊದಲಾದ ಸರೋವರಗಳ ನೀರನ್ನು ತುಂಬಿ ಎತ್ತಿಕೊಂಡರು. ಇತರ ಎಲ್ಲ ಇಂದ್ರರು ಅಭಿಷೇಕಕ್ಕೆ ಬೇಕಾದ ಮಂಗಳದ್ರವ್ಯಗಳನ್ನು ತಂದು ಶಚೀದೇವಿಯ ಕೈಗೆ ಕೊಟ್ಟರು. ಸೋಮರಸ, ಸುಗಂಧ ದ್ರವ್ಯಗಳನ್ನು ಬೆರಸಿದ ನೀರು, ಮೈಗೆ ಹಚ್ಚಿ ತಿಕ್ಕುವ ಗಂಧಾದಿ ದ್ರವ್ಯಗಳು ಮೊದಲಾದ ಸ್ನಾನ ಸಾಮಗ್ರಿಗಳಿಂದ ಲೋಕೈಕಮಿತ್ರನನ್ನು ಸ್ನಾನಮಾಡಿಸಿದರು.

೩೮. "ನೀರಲ್ಲಿ ಐದನೆಯ ಸಮುದ್ರದ ನೀರೇ ಪವಿತ್ರವಾದುದು; ಉಳಿದುವು ಪವಿತ್ರವಲ್ಲ" ಎಂದುಕೊಂಡು ದೇವೇಂದ್ರನು ಆ ಸಮುದ್ರದ ನೀರನ್ನು ತರಲು ವಿಧಿಸಿದನು.

ಕಂ॥ ತರವೇಟಿಲೊಡಂ ಸುರರೊ
ರ್ವರೊರ್ವರಂ ಕಟ್ಟಿಯೆ ತೇನತೇನಂ[1] ತಳರ್ದುಂ
ಭರದಿಂ ನೀರಂ ಮೊಗೆದುಂ
ಪರಿತಂದರ್ ಕನಕಕಳಶವಿಶದೋದಕಮಂ ॥ ೩೯ ॥

ವ॥ ಸೌಧರ್ಮೇಶಾನೇಂದ್ರರ ಕೆಯ್ಯೊಳ್ ನೀಡುತ್ತುಮಿರೆಯಿರೆ ಮೇರುವಿನ ಪಂಚಮ ಸಮುದ್ರದೆಡೆಯೊಳ್ ನಿಂದಮರಸಮಾಜ ಮೋದೋರೊರ್ವರ ಕೆಯ್ಗೆಯ್ಗೆ—

ಕಂ॥ ಕುಡೆಯುಂ ಕೊಳೆಯುಂ ನಭದೊಳ್
ಬೆಡಂಗುವೆತ್ತಮರಕರದಿನಮರಕರಕ್ಕಂ
ನಡೆದುವು ಹಿಮಕರನೆಡೆಗೊಡ
ಪಡೆವಂತಿರಲೋಳಿವೋಳಿಯಿಂ ಕಳಶಂಗಳ್ ॥ ೪೦ ॥

ಎರಡೆ ಕರದಿಂದಮಂ ಕೊಳ
ಲರಿದೆಂದನಿತರ್ಕಮನಿತೆ ಭುಜಮಂ ಹರಿ ವಿ
ಸ್ತರಿಸಿದನಣಿಮಾದಿಗುಣೋ
ತ್ಕರಮುಳ್ಳಮರಂಗೆ ಭುಜವಿಗುರ್ವಣೆ ಪಿರಿದೇ ॥ ೪೧ ॥

ವ॥ ಅಂತು ಕಳಧೌತಕಳಶಸಹಸ್ರಂಗಳಿಂದಭಿಷೇಕಂಗೆಯ್ಯೆ—

ಕಂ॥ ಜಿನಚಂದ್ರಕುಮಾರಂ ಕ್ಷೀ
ರನೀರಪೂರಪ್ಲವಾಂತರಸ್ಥಂ ಪೋಲ್ತಂ
ಕನಕರುಚಿಯಿಂದಮಾಪಳಿ
ಕಿನ ಕೊಡನೊಳಗಿರ್ದ ನಂದದೀವಿಗೆಯಿರವಂ ॥ ೪೨ ॥

---

೩೯. ಹಾಗೆ ಅಪ್ಪಣೆ ಮಾಡಿದೊಡನೆ ದೇವತೆಗಳು ಅಲ್ಲಿಯವರೆಗೆ ಸಾಲಾಗಿ ಹೋಗಿ ಅತ್ಯಂತ ವೇಗದಿಂದ ಪರಿಶುದ್ಧವಾದ ನೀರನ್ನು ಮೊಗೆದು ಚಿನ್ನದ ಕಲಶಗಳಲ್ಲಿ ತುಂಬಿಕೊಡುತ್ತಿದ್ದರು.

ವ॥ ಸೌಧರ್ಮೇಂದ್ರ ಹಾಗು ಈಶಾನೇಂದ್ರರ ಕೈಯಲ್ಲಿ ಆ ಕಲಶಗಳನ್ನು ಕೊಡುತ್ತಿರಲಾಗಿ, ಮೇರುವಿನ ಪಂಚಮ ಸಮುದ್ರ ತೀರದಲ್ಲಿ ನಿಂತ ದೇವಸಮೂಹದ ಸಾಲು ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ (ಕಲಶಗಳನ್ನು)

೪೦. ಕೊಡುತ್ತಲೂ ತೆಗೆದುಕೊಳ್ಳುತ್ತಲೂ ಇರಲು, ಚಂದ್ರನ ಕಡೆಗೆ ಸಾಲುಸಾಲಾಗಿ ಏರಿಹೋಗುವುವೊ ಏನೊ ಎಂಬಂತೆ ಒಬ್ಬ ದೇವತೆಯ ಕೈಯಿಂದ ಇನ್ನೊಬ್ಬ ದೇವತೆಯ ಕೈಗೆ ಆ ಕಲಶಗಳು ಬೆಡಗಿನಿಂದ ಸಾಗಿದುವು.

೪೧. ಹೀಗೆ ಬರುತ್ತಿರುವ ಅಸಂಖ್ಯಾತವಾದ ಕಲಶಗಳನ್ನು ತೆಗೆದುಕೊಳ್ಳಲು ಎರಡೇ ಕೈಗಳು ಸಾಲವೆಂದು ಇಂದ್ರನು ಎಷ್ಟು ಕಲಶಗಳೊ ಅಷ್ಟು ಕೈಗಳನ್ನು ಸೃಷ್ಟಿಸಿಕೊಂಡನು. ಅಣಿಮಾ ಮೊದಲಾದ ಅಷ್ಟಸಿದ್ಧಿಯುಳ್ಳವನಿಗೆ ತೋಳುಗಳನ್ನು ಹೆಚ್ಚಿಸಿಕೊಳ್ಳುವುದೇನು ದೊಡ್ಡ ವಿಷಯವೆ?

ವ॥ ಹೀಗೆ ಸಹಸ್ರಾವಧಿ ಸುವರ್ಣಕಲಶಗಳಿಂದ ಅಭಿಷೇಕ ಮಾಡಲಾಗಿ—

೪೨. ಕ್ಷೀರಜಲದ ಪೂರದಲ್ಲಿ ಸುವರ್ಣ ದೇಹಚ್ಛಾಯೆಯುಳ್ಳ ವಿರಾಜಿಸುವ ಜಿನಕುಮಾರನು ಸ್ಫಟಿಕದ ಕೊಡದೊಳಗಿರುವ ನಂದಾದೀವಿಗೆಯಂತೆ ಕಂಡನು.

---

1. ಪದೆ (ಅ)

ವ॥ ಅಂತಾ ಕ್ಷೀರವಾರಿಧಿವಾರಿಯೆಲ್ಲಮನೊರ್ವೊದಲೊಳೆ ಪೊಯ್ವಂತೆ ಪೊಯ್ದು ಪಯಃಪ್ರವಾಹಮಂ ಬಾಲಕನಬಲಂ ಸೈರಿಸನೆಂಬ—

ಕಂ॥ ಸಂದೆಯದ ಮನದ ನಾಕಜ
ಸಂದೋಹದ ಬಗೆಯನಘಹರಂ ಕಳೆಯಲ್ಕಃ
ಎಂದುಸಿ[1][ರೆ][1] ಗಾಳಿಯೊಳ್ ತಿರಿ
ತಂದರ್ ತ[2][ಱ][2]ಗೆಲೆವೊಲಮರರಂಬರತಳದೊಳ್ ॥ ೪೩ ॥

ವ॥ ಬೞಿಯಂ—

ಕಂ॥ ಉಸಿರನೊಳದೆಗೆವುದುಂ ದೇ
ವಸಮಿತಿ ತಂತಮ್ಮ ನೆಲೆಗಳೊಳ್ ನಿಂದಸವಂ
ಜಸಿಕೆಯನುೞಿದು ಪರಿಚ್ಛೇ
ದಿಸಿದುದು ಜಿನಪತಿಯನಂತವೀರ್ಯಸ್ಥಿತಿಯಂ ॥ ೪೪ ॥

ವ॥ ಅನಂತರಂ ಪುರಂದರಂ ಪುನರಾರಬ್ಧಜನ್ಮಾಭಿಷೇಕನಾಗಿ—

ಉ॥ ಶ್ರೀರಮಣೀಪ್ರಿಯಂಗಮೃತಮಂಗಳಮಜ್ಜನಮಂ ಜಿನಂಗೆ ವಿ
ಸ್ತಾರಿಸೆ ಪೊನ್ನ ಪೊಚ್ಚಪೊಸವಪ್ಪ ಕೊಡಂಬೆರಸಾಳಿಗಟ್ಟಿ ಭೋರ್
ಭೋರೆನೆ ಪೋಪ ಬರ್ಪಮರಸಂಹತಿ ಪೋಲ್ತುದು ಮಂದರಾದ್ರಿಗಂ
ಕ್ಷೀರಪಯೋಧಿಗಂ ಹರಿಯ ಕಟ್ಟಿದ ಜಂಗಮಸೇತುಬಂಧಮಂ ॥ ೪೫ ॥

ವ॥ ಎನಿಸಿದಮರಸಮಿತಿಯ ತಂದ ಪಾಲ್ಗಡಲ ಪಾಲಂ ಪುಷ್ಕಲಾವರ್ತಬಲಾಹಕಾಂಬುದಂಗಳ್ ಕನಕಾಚಳಚೂಳಿಕೆಯೊಳ್ ಸುರಿವುತಿರ್ಪಂತಿಂದ್ರರುಂ ಭಗವದುಷ್ಣೀಷದೊಳ್ ಸು[3][ರಿ][3]ಯೆ—

ವ॥ ಹಾಗೆ ಕ್ಷೀರಸಾಗರದ ನೀರೆಲ್ಲವನ್ನೂ ಸುರಿಯುವಂತೆ ಸುರಿದ ನೀರಿನ ಧಾರೆಯನ್ನು ಬಲವಿಲ್ಲದ ಈ ಶಿಶು ಸೈರಿಸಲಾರನೆಂದು

೪೩. ದೇವತೆಗಳು ಮನದಲ್ಲಿ ಸಂದೇಹಿಸುತ್ತಿದ್ದರು. ಆ ಸಂದೇಹವನ್ನು ಕಳೆಯಲೆಂದು ಅರ್ಹಂತ ಶಿಶು 'ಅಃ' ಎಂದು ಉಸಿರು ಬಿಡಲಾಗಿ, ಆ ಗಾಳಿಯಲ್ಲಿ ದೇವತೆಗಳೆಲ್ಲ ತರಗೆಲೆಗಳಂತೆ ಹಾರಿ ಆಕಾಶದಲ್ಲಿ ತಿರುಗಾಡಿದರು.

ವ॥ ಆ ಬಳಿಕ—

೪೪. ಆತನು ಉಸಿರನ್ನು ಒಳಗೆ ಎಳೆದುಕೊಂಡನು. ಕೂಡಲೆ ದೇವತೆಗಳು ಮರಳಿ ತಂತಮ್ಮ ಸ್ಥಾನಕ್ಕೆ ಬಂದು ನಿಂತರು. ಹೀಗೆ ತಮ್ಮ ಮನದ ಭ್ರಾಂತಿಯನ್ನು ಕಳೆದುಕೊಂಡು ಜಿನೇಂದ್ರನ ಅನಂತವೀರ್ಯವನ್ನು ಅವರು ಮನಗಂಡರು.

ವ॥ ಅನಂತರ ಇಂದ್ರನು ಪುನಃ ಅಭಿಷೇಕವನ್ನು ಆರಂಭಿಸಿದನು.

೪೫. ಸಕಲ ಸಂಪತ್ತಿಗೊಡೆಯನಾದ ಜಿನನ ಮಂಗಳಸ್ನಾನಕ್ಕೆಂದು ಹೊಚ್ಚಹೊಸ ಕೊಡಗಳೊಡನೆ ಸಾಲುಗಟ್ಟಿ ಭರಭರನೆ ಹೋಗಿಬರುವ ದೇವಸಮೂಹವನ್ನು ನೋಡಿದರೆ, ಮಂದರಪರ್ವತಕ್ಕೂ ಕ್ಷೀರಸಮುದ್ರಕ್ಕೂ ಕಟ್ಟಿದ ಅದೊಂದು ಜಂಗಮ ಸೇತುವೆಯೊ ಏನೊ ಎಂದೆನಿಸಿತು.

ವ॥ ಹೀಗೆ ದೇವಸಮೂಹವು ತಂದ ಕ್ಷೀರಸಮುದ್ರದ ಹಾಲನ್ನು—ಪುಷ್ಕಲಾವರ್ತ ಮತ್ತು ಬಲಾಹಕವೆಂಬ ಮೋಡಗಳು ಮಂದರಪರ್ವತ ಶಿಖರದ ಮೇಲೆ ಮಳೆ ಸುರಿಯುವಂತೆ—ಭಗವಂತನ ತಲೆಯ ಮೇಲೆ ಇಂದ್ರರು ಸುರಿಯುತ್ತಿರಲಾಗಿ—

---

1. ರ (ಮ) 2. ರ (ಮ) 3. ಱಿ (ಮ)

ಕಂ॥ ಜಿನಸುರದೊಳೆಸೆವ ಪಾಲಿನ
ಪೊನಲ್ ಸಯಂಬರದ ಮುಕ್ತಿಕನ್ಯಕೆ ಸುರರಾ
ಜನ ಮುಂದೆ ಮಾಲೆಯೂಡಿದ
ಮನೋಜ್ಞಸಿತಸಿಂಧುವಾರಮಾಲೆಯಂನಿಟ್ಟಿಸುಂ ॥ ೪೬ ॥

ಆ ಕುರುತಿಲಕನ ಮೆಯ್ಯೊಳ
ನೇಕಪಯಃಕಣಗಣಂ ಪೊದಟ್ದುವು ಮುಕ್ತಿ
ಶ್ರೀಕಾಂತೆಯಿತ್ತ ಮುತ್ತಿನ
ವೈಕಕ್ಷದ ತೆಱದಿನಭಿಷವೋತ್ಸವವಿಧಿಯೊಳ್ ॥ ೪೭ ॥

ಬಳಸಿದ ಬಂಬಲ್ಗುರುಳೊಳ್
ಪೊಳೆವ ಪಯಃಕಣಿಕೆ ಸಿಂಧುವಾರಲತಾಂತಾ
ವಳಿಯೆನಿಸಿ ತುಱುಗೆ ಮಜ್ಜನ
ವಿಳಾಸಮುಂದೇಂ ವಿಳಾಸಮಂ ತಾಳ್ದಿದುದೋ ॥ ೪೮ ॥

ವ॥ ಮತ್ತಂ ತತ್ಸಮಯದೊಳ್—

ಕಂ॥ ಖಚಿತಹರಿನೀಲ ಮರಕತ
ರುಚಿರಂ ಚೆಂಬೊನ್ನಕಳಶಮಿಂದ್ರಧನುಃಶ್ರೀ
ನಿಚಿತಂ ನವಸಾಂಧ್ಯಜಳದ
ರುಚಿಯಂ ಕೆಯ್ಕೊಂಡುದಮರ ಕರಪಲ್ಲವದೊಳ್ ॥ ೪೯ ॥

ವ॥ ಅದಲ್ಲದೆಯುಮಭವನ ಜನ್ಮಾಭಿಷವೋತ್ಸವದೊಳ್ ದುಗ್ಧೋಪದುಗ್ಧಮಾಗಿ—

---

೪೬. ಮುಕ್ತಿಕನ್ಯೆಯು ಸ್ವಯಂವರದಲ್ಲಿ ದೇವೇಂದ್ರನ ಸಮಕ್ಷಮಾಗಿ ಜಿನೇಂದ್ರನಿಗೆ ಹಾಕಿದ ಬಿಳಿಯ ಸಿಂಧುವಾರದ ಮಾಲೆಯ ಸೌಂದರ್ಯವನ್ನು ಹೀಯಾಳಿಸುವಂತೆ ಜಿನಕುಮಾರನ ಎದೆಯಮೇಲೆ ಹರಿಯುವ ನೀರಿನ ಧಾರೆ ಕಂಗೊಳಿಸಿತು.

೪೭. ಮುಕ್ತಿಕಾಂತೆಯು ಇತ್ತ ಮುತ್ತಿನ ಹಾರವೊ ಏನೊ ಎಂಬಂತೆ, ಆ ಕುರುವಂಶಭೂಷಣನ ಮೈಮೇಲೆ ನಿಂತ ಅನೇಕ ಹಾಲಿನ ಬಿಂದುಗಳು ಶೋಭಿಸಿದುವು.

೪೮. ದಟ್ಟವಾಗಿ ಬೆಳೆದ ಆತನ ಕೂದಲುಗಳಲ್ಲಿ ನಿಂತು ಹೊಳೆಯುವ ಹಾಲಿನ ತುಂತುರುಗಳು ಸಿಂಧುವಾರದ ಪುಷ್ಪಗಳಂತೆ ತುಂಬಿಕೊಂಡಿರಲಾಗಿ, ಆತನ ಸ್ನಾನವು ಎಷ್ಟೊಂದು ವಿಲಾಸವನ್ನು ಪಡೆಯಿತು !

ವ॥ ಆ ಕಾಲದಲ್ಲಿ—

೪೯. ಇಂದ್ರನೀಲ ಮತ್ತು ಪಚ್ಚೆಗಳನ್ನು ಕಟ್ಟಿ ಸುಂದರವಾದ ಚಿನ್ನದ ಕಲಶಗಳು ಕಾಮನಬಿಲ್ಲಿನ ಸೌಂದರ್ಯವನ್ನೊಳಗೊಂಡಿದ್ದುವು. ದೇವತೆಗಳ ಚಿಗುರೆಲೆಗಳಂತಹ ಅಂಗೈಗಳಲ್ಲಿ ಸೇರಿದಾಗ ಅವು ಸಾಯಂಕಾಲದ ಮೋಡಗಳಂತೆ ಬಣ್ಣಗೊಂಡುವು.

ವ॥ ಅದೆ ಅಲ್ಲದೆ, ಅರ್ಹಂತನ ಅಭಿಷೇಕೋತ್ಸವದಲ್ಲಿ ಹಾಲಿನ ಮೇಲೆ ಹಾಲು ಸುರಿಸುರಿದು—

ಕಂ॥ ತ್ರೈಲೋಕ್ಯತಿಲಕಜಿನಪತಿ
ಬಾಲಕಜನ್ಮಾಭಿಷವಣಯೋಗ್ಯಮಿದೆಂದಿಂ
ದ್ರಾಳಿ ಸಮೆಯಿಸಿದ ಬೆಳ್ಳಿಯ
ಕೋಳೆಯನಾಂತಂತಿರೆಸೆದುದಿಂದ್ರನಗೇಂದ್ರಂ ॥ ೫೦ ॥

ಪಾಲ್ಗಡಲ ನೀರ ಪರಿವ ಪೊ
ನಲ್ಗಳ್ ಸುರಗಿರಿಯ ಪಿರಿಯ ನೇರಾಣೆಯ ತಾ
¹ಱ¹ಲ್ಗಳ್ಪಿಡಿದ²[ಟ್ಟ]²(ದಂ)ದೇ
ಱಲ್ಗೆ ಱಗಿದುವಾಜಿನೇಂದ್ರಸವನೋತ್ಸವದೊಳ್ ॥ ೫೧ ॥

ವ॥ ತದನಂತರಮಾದಿತ್ಯಂಗೆ ಸೊಡರಿಡುವಂತೆ ಭಕ್ತಿನಿಮಿತ್ತದಿಂ—

ಕಂ॥ ಸೌರಭನಿಧಿ ತೀರ್ಥಕರಕು
ಮಾರಕನೆಂದಱಿದುಮಾಜಗತ್ಪತಿಗಿಂದ್ರಂ
ಸಾರಸುಗಂಧವಿಲೇಪನ
ಭೂರಿಜಳಸ್ನಪನವಿಧಿಗೊಡರ್ಚಿದನಾಗಳ್ ॥ ೫೨ ॥

ವ॥ ಆ ಗಂಧಸ್ನಪನೋದಕಂ ಮೇರುಮಹೀಧರಜಾಂಬೂನದನಿತಂಬಂಬಿಡಿದಿೞಿದು ಕಾಳಾಗುರುಮಿಶ್ರಪಯಸ್ಸ್ರೋತಸ್ಸಮುದಿತಂ ಸೌಮನಸಮನೆಯ್ದೆ—

ಕಂ॥ ಅಕಳಂಕ ಜಿನಾಭಿಷವೋ
ತ್ಸುಕದೊಳ್ ನಾಂದಾಱಿಸಲ್ಕೆ ಪರಪಿದ ಕುಟಿಳಾ
ಳಕದೊಳ್ ತಗುಳ್ದ ಶೀತೋ
ದಕಮೆನೆ ಕರ್ಬುರಿತಮಾಗಿ ಸೊಗಯಿಸಿ ತೋರ್ಕುಂ ॥ ೫೩ ॥

---

೫೦. ಮೂರು ಲೋಕಗಳಿಗೂ ಭೂಷಣನಾದ ಜಿನೇಂದ್ರನ ಅಭಿಷೇಕಕ್ಕೆ ಇದು ಯೋಗ್ಯವೆಂದು ಇಂದ್ರರು ಮಾಡಿಸಿದ ಬೆಳ್ಳಿಯ ವೇದಿಕೆಯನ್ನು ಪಡೆದಂತೆ ಮಂದರಗಿರಿ ಶೋಭಿಸಿತು.

೫೧. ಕ್ಷೀರಸಾಗರದ ನೀರಿನ ತೊರೆಗಳು ಮೇರುಗಿರಿಯ ಚಿನ್ನದ ಕಿಬ್ಬಿಯನ್ನನುಸರಿಸಿ ಸೂಸಿ ಹರಿದುವು. ಏರಿಯನ್ನು ಅಡರಿದುವು.

ವ॥ ಆಮೇಲೆ ಸೂರ್ಯನಿಗೆ ದೀಪ ಬೆಳಗುವಂತೆ,

೫೨. ಜಿನಕುಮಾರನು ಪರಿಮಳದ ನಿಧಿಯೆಂದು ಅರಿತಿದ್ದರೂ ಇಂದ್ರನು ಆತನಿಗೆ ಸಾರವತ್ತಾದ ಗಂಧಲೇಪನವನ್ನೂ ಗಂಧಸ್ನಾನವನ್ನೂ ಮಾಡಲು ಉದ್ಯುಕ್ತನಾದನು.

ವ॥ ಹಾಗೆ ಎರೆದ ಗಂಧದ ಸ್ನಾನೋದಕವು ಮೇರುಪರ್ವತದ ಸುವರ್ಣದ ತಪ್ಪಲನ್ನನುಸರಿಸಿ ಇಳಿದು ಕಾಳಾಗುರು ಮಿಶ್ರಣದ ನೀರಿನೊಡನೆ ಬೆರೆತು,

೫೩. ನಿರ್ಮಲನಾದ ಜಿನೇಂದ್ರನ ಅಭಿಷೇಕೋತ್ಸವದಲ್ಲಿ ತೊಯ್ದು ಆರಿಸಲೆಂದು ಹರಡಿದ ಗುಂಗುರು ಗೂದಲಲ್ಲಿರುವ ತಣ್ಣೀರೊ ಏನೊ ಎಂಬಂತೆ ಮಿಶ್ರವರ್ಣವಾಗಿ ಶೋಭಿಸಿತು.

---

1. ರ (ಅ) 2. ೯ (ಮ)

ವ॥ ಎಂಬಿನಂ ಗಂಧೋದಕದಿನಮರೇಂದ್ರನಭಿಷೇಕಂಗೆಯ್ಯೆ—

ಕಂ॥ ಆ ಗಂಧೋದಕಕತಿಪಯ
ಭಾಗಮೆ ನೆಲೆಮುಟ್ಟೆ ಮೇಗಣಿಂ ಮೇಗೆಯೆ ಕೊ
ಳ್ವಾಗಡಿನ ಮುಕುಟದೊಳ್ ತಳಿ
ವಾಗಡಿ[1]ನುಗಿಬಗಿ[1] ತಗುಳ್ದುದಮರೇಶ್ವರರೊಳ್ ॥ ೫೪ ॥

ವ॥ ಅಂತು ನೆಱೆಯೆ ಜನ್ಮಾಭಿಷೇಕಮಂ ವೃತ್ರಹಂ ನಿರ್ವರ್ತಿಸಿ ದಕ್ಷಿಣೇಂದ್ರನುಂ ಶಚಿಯುಂ ಬೆರಸು—

ಮ॥ ಜಳದಿಂದಂ ಬಳಮಂ ಸುಗಂಧರಸದಿಂ ಸೌಗಂಧ್ಯಮಂ ಪುಷ್ಪಸಂ
ಕುಳದಿಂ ಪೂಜ್ಯತೆಯಂ ಸಿತಾಕ್ಷತದಿನುದ್ಯದ್ವೃತ್ತಮಂ ಚಂದ್ರಿಕೋ
ಜ್ಜ್ವಳಸಾನ್ನಾಯ್ಯದಿನಿಂದುಲಕ್ಷ್ಮಿಯನುದಂಚದ್ದೀಪದಿಂ ಕಾಂತಿಯಂ
ವಿಳಸದ್ಧೂಪದಿನೈಷ್ಯಮಂ ಫಲದಿನವ್ಯಾಬಾಧೆಯಂ ಮಾಡುಗುಂ ॥ ೫೫ ॥

ಕಂ॥ ಜಿನಪತಿಪದಪಂಕಜಮಂ
ದಿನಿತರ್ಚನೆಯಿಂದಮಿಂದ್ರನರ್ಚಿಸಿ ಮನದಿಂ
ತನುವಿಂ ವಚನದಿನೇಕಾ
ಗ್ರನಾಗಿ ಪೊಡವಟ್ಟನೆಱಗೆ ಮಕುಟಂ ಧರೆಯೊಳ್ ॥ ೫೬ ॥

ವ॥ ಅಂತರ್ಚಿಸಿ ಪೊಡಮಟ್ಟು ಪರಮೌದಾರಿಕದಿವ್ಯಶರೀರನುಂ ತೃಣೀಕೃತತ್ರಿಭುವನ ಸಕಲ ಸೌಂದರ್ಯಾತಿಶಯಸುಂದರಾಕಾರನುಮಪ್ಪ ತೀರ್ಥಕರಕುಮಾರಂಗೆ ಸೌಧರ್ಮೇಂದ್ರಂ ಪ್ರಸಾಧಿತ ವಿಷ್ಟಪತ್ರಿತಯನಪ್ಪುದನಱಿದು ಪ್ರಸಾಧನಪ್ರಾರಂಭಂ ಗೆಯ್ಯೆ—

ವ॥ ಹೀಗೆ ಗಂಧೋದಕದಿಂದ ಇಂದ್ರನು ಅಭಿಷೇಕ ಮಾಡಲಾಗಿ –

೫೪. ಆ ಗಂಧಜಲದ ಕೆಲಭಾಗವನ್ನು ಜಿನೇಂದ್ರನ ಮೈಯಿಂದ ಮೇಲಿಂದ ಬೀಳುತ್ತಿರುವಂತೆಯೆ ಇಂದ್ರರು ಆತುರದಿಂದ ಆಗಾಗಲೆ ಎತ್ತಿಕೊಂಡು ತಂತಮ್ಮ ತಲೆಯಲ್ಲಿ ತಿಳಿದುಕೊಳ್ಳುವ ಸಡಗರವುಂಟಾಯಿತು.

ವ॥ ಹೀಗೆ ಅಭಿಷೇಕ ಕಾರ್ಯವನ್ನು ನೆರವೇರಿಸಿದ ಬಳಿಕ ಇಂದ್ರನು ಶಚೀದೇವಿ ಹಾಗು ದಕ್ಷಿಣೇಂದ್ರ ಸಹಿತವಾಗಿ

೫೫. ಜಲದಿಂದ ಬಲವನ್ನೂ, ಸುಗಂಧ ರಸದಿಂದ ಪರಿಮಳವನ್ನೂ, ಹೂಗಳಿಂದ ಪೂಜ್ಯತೆಯನ್ನೂ, ಬಿಳಿ ಅಕ್ಷತೆಗಳಿಂದ ಉತ್ತಮ ವೃತ್ತವನ್ನೂ, ಸಾಂನಾಯ (ಬೆಣ್ಣೆಯಲ್ಲಿ ಕಲಸಿದ ನೈವೇದ್ಯ)ದಿಂದ ಚಂದ್ರಬಿಂಬದ ಸೌಂದರ್ಯವನ್ನೂ, ಉಜ್ವಲ ದೀಪಗಳಿಂದ ಕಾಂತಿಯನ್ನೂ, ಶೋಭಿಸುವ ಧೂಪದಿಂದ ಸುಖವನ್ನೂ (?), ಫಲದಿಂದ ಬಾಧಾಪರಿಹಾರವನ್ನೂ ಮಾಡಿದನು.

೫೬. ಜಿನಪತಿಯ ಪಾದಕಮಲಗಳನ್ನು ಈ ಎಲ್ಲ ಮಂಗಳದ್ರವ್ಯಗಳಿಂದ ಅರ್ಚಿಸಿ ದೇವೇಂದ್ರನು ತ್ರಿಕರಣಪೂರ್ವಕವಾದ ಭಕ್ತಿಯಿಂದ ನೆಲತಾಕುವಂತೆ ತಲೆಬಾಗಿ ನಮಸ್ಕರಿಸಿದನು.

ವ॥ ಹೀಗೆ ನಮಸ್ಕರಿಸಿದ ಬಳಿಕ, ಔದಾರಿಕ ಶರೀರನೂ ಮೂರು ಲೋಕಗಳ ಸೌಂದರ್ಯ ಹುಲ್ಲುಕಡ್ಡಿಗೆ ಸಮವೆಂದು ತೋರುವಂತಹ ಅತ್ಯಂತ ಸುಂದರವಾದ ರೂಪುಳ್ಳವನೂ ಆದ ತೀರ್ಥಂಕರ ಕುಮಾರನಿಗೆ "ಈತನು ಮೂರು ಲೋಕಗಳಿಗೆ ಅಲಂಕಾರನಾದವನು" ಎಂದು ಅರಿತಿದ್ದರೂ ದೇವೇಂದ್ರನು ಅಲಂಕಾರ ಮಾಡಲು ತೊಡಗಿದನು—

---

1. ನಗಿಬಗಿ (ಪಾ)

ಕಂ॥ ತೊಡವಿಂಗೆ ತೊಡವು ನಿರತಂ
ತೊಡವೇಂ ಪೆಱತುಂಟೆ ಜಿನನ ತೊಡವೆನೆ ಮತ್ತಾ
ತೊಡವೆಡ್ಡಮಪ್ಪ ರೂಪಿನ
ಬೆಡಂಗು ಭೂಷಣವಿಶೇಷಮಂ ಬಾಱಿಸದೇ ॥ ೫೭ ॥

ವ॥ ಎಂದು ಪ್ರಥಮಕಲ್ಪಾಮರೇಂದ್ರಂ ಸಾಂದ್ರಭಕ್ತಿಪ್ರಬೋಧಿತಾಶಯನುಮಶೇಷಗುಣಗಣಮಣಿಭೂಷಣಂಗೆ ದಿವಿಜೇಂದ್ರಲೋಕೋತ್ತಮಭೂಷಣಂಗಳಂ ತುಡಿಸೆ—

ಮ॥ ಮಣಿಬಂಧಂ ಮಣಿಯಿಂ ಕಟೀನಿಕಟಮಾ ಚೆಂಬೊನ್ನ ಚೆಲ್ವಪ್ಪ ಕಿಂ
ಕಿಣಿಯಿಂ ವೃತ್ತಘನಪ್ರಕೋಷ್ಠಯುಗಳಂ ಮೇಲಾದ ಮಾಣಿಕ್ಯಕಂ
ಕಣದಿಂ ತೋಳೆಸೆದಿರ್ದ ತೋಳ್ವಳೆಗಳಿಂದುಷ್ಣೀಷಪಟ್ಟಂ ಶಿಖಾ
ಮಣಿಯಿಂ ಕಂಧರವಕ್ಷರದಿಂ ನೊಸಲುದಾರಾಶ್ವತ್ಥಪತ್ರಾಂಕದಿಂ ॥ ೫೮ ॥

ವ॥ ಅಲಂಕೃತನಾಗಿಯುಂ ನಿಸರ್ಗಸುಂದರನಪ್ಪುದಱಿಂದಮಲಂಕಾರಕ್ಕೆ ತಾನಲಂಕಾರಮಾದೊಡಂ ಲೋಕವ್ಯವಹಾರಾಪೇಕ್ಷೆಯಿಂ ಪ್ರಸಾಧಿತಂಮಾಡಿ—

ಕಂ॥ ಮುದ್ರಸಹಜಾತವಿದ್ಧ
ಚ್ಛಿದ್ರಾನ್ವಿತಕರ್ಣಯುಗಳಪಾಳಿಗಳೊಳ್ [1]ಸಂ[1]
ವಿದ್ಯುತರಜಂಗೆ ಹರಿ ವಿಲ
ಸದ್ರುಚಿಮದ್ವಜ್ರಕುಂಡಲಂಗಳನಿಟ್ಟಂ ॥ ೫೯ ॥

ವ॥ ಇಟ್ಟು ಜಿನೇಂದ್ರಭಾನುವನಕ್ಕರ್ತು ನೋಡಿ—

---

೫೭. "ಆಭರಣಗಳಿಗೆಲ್ಲ ಈತನೇ ಆಭರಣವಾಗಿರುವಾಗ ಈತನಿಗೆ ತೊಡಿಸುವ ಆಭರಣವೂ ಉಂಟೆ? ತೊಡಿಸಿದರೆ ಈತನ ರೂಪದಿಂದ ಆ ಆಭರಣಗಳಿಗೇ ಚೆಲುವು ಬಂದೀತು. ಈ ದೇಹಕ್ಕೆ ಹೊರಗಿನ ಬೇರಾವ ಭೂಷಣವೂ ಬೇಡವೆನಿಸದೆ?"

ವ॥ ಎಂದು ಪ್ರಥಮ ಕಲ್ಪದ ಇಂದ್ರನು ಗಾಢವಾದ ಭಕ್ತಿಯಿಂದ ಪ್ರೇರಿತನಾಗಿ ಆ ಗುಣರತ್ನ ಭೂಷಣನಿಗೆ ದೇವಲೋಕದ ಶ್ರೇಷ್ಠವಾದ ಆಭರಣಗಳನ್ನು ತೊಡಿಸಿದನು.

೫೮. ಮಣಿಗಂಟಿಗೆ ರತ್ನ, ನಡುವಿಗೆ ಚೆಲುವಾದ ಚಿನ್ನದ ಕಿಂಕಿಣಿ, ದುಂಡಾದ ಮುಂಗೈಗೆ ಉತ್ತಮವಾದ ಮಾಣಿಕ್ಯಕಂಕಣ, ತೋಳುಗಳಿಗೆ ಸುಂದರವಾದ ತೋಳ್ಬಳೆ, ತಲೆಗೆ ಶಿರೋಮಣಿ, ಕೊರಳಿಗೆ ಹಾರ, ಹಣೆಗೆ ಮೇಲಾದ ಅರಳೆಲೆ—

ವ॥ ಹೀಗೆ ಅಲಂಕೃತನಾಗಿದ್ದರೂ ನಿಸರ್ಗಸುಂದರನಾದುದರಿಂದ ಅಲಂಕಾರಗಳಿಗೆ ತಾನೇ ಅಲಂಕಾರವಾಗಿದ್ದರೂ, ಲೋಕರೂಢಿಯನ್ನನುಸರಿಸಿ ಅಲಂಕರಿಸಿದನು.

೫೯. ಹುಟ್ಟುವಾಗಲೇ ಆತನಿಗೆ ತಾನಾಗಿ ಕಿವಿಗಳಲ್ಲಿ ತೂತುಗಳು ಸಿದ್ಧವಾಗಿದ್ದುವು. ಅವುಗಳನ್ನು ನೋಡಿ ರಜೋಭಾವವರ್ಜಿತನಾದ ಆ ಮಹಿಮನಿಗೆ ಇಂದ್ರನು ಉಜ್ವಲವಾದ ರತ್ನಕುಂಡಲಗಳನ್ನು ತೊಡಿಸಿದನು.

ವ॥ ಹಾಗೆ ತೊಡಿಸಿ ಜಿನಸೂರ್ಯನನ್ನು ಅಕ್ಕರೆಯಿಂದ ನೋಡಿ—

---

1. ಸಾ (ಅ)

ಕಂ॥ ಭವನ ತನು ಭಾಳಮಂಡದ
ನವಮಂಡನದಿಂದಮೊಪ್ಪೆ ನಯನದ್ವಯದಿಂ
ತವೆ ನೋಡಲ್ ನೆಱೆಯದೆ ನಯ
ನವಿಹ್ವಲಂ ಹರಿ ಸಹಸ್ರಲೋಚನನಾದಂ ॥ ೬೦ ॥

ವ॥ ಆಗಿಯುಂ ಮನಂ ಸಂತಸಂಬಡೆ ಪರಿತೃಪ್ತ ಹರ್ಷೋತ್ಕರ್ಷಚಿತ್ತನಾಗಿಯಾದಿಮಾರ್ಗಪ್ರಹಿತಮತಿಯಾಗಿ ಪಾಂಡುಕ ಶಿಲಾತಳಮೆ ರಂಗಭೂಮಿಯಾಗೆ ದಿವಿಜವಾದಕಕರಹತತತವಿತತಘನಸುಷಿರಾವನದ್ಧವಾದಿತ್ರಂ ಸಂಗೀತತೂರ್ಯಮಾಗೆ ಗೀರ್ವಾಣಮಂಗಳಗಾಯಕರೆ ಸಂಗೀತಗಾಯಕರಾಗೆ ನಿಳಿಂಪಭಾರತಿಕರೆ ನಟ್ಟುವರಾಗೆ ಸನ್ಮಾರ್ಗನಾಟಕಾರಂಭಪ್ರಸ್ತುತಪವಿತ್ರಸೂತ್ರಧಾರನೆ ಮುಂದೆ ನಿಂದು ಪುಷ್ಪಾಂಜಳಿಯುಂ ಕೆದಱೆ—

ಕಂ॥ ಆ ಲಲಿತಕುಸುಮತತಿಯಾ
ಬಾಲಕಪದಪದ್ಮಮೂಲಮಂ ಬಳಸಿದುವೊ
ಡ್ಡೋಲಗಕೆ ಪುಷ್ಪರಾಜನ
ನೋಲಗಿಸಲ್ ಬಂದ ಪುಷ್ಪನಿಚಯದ ತೆಱದಿಂ ॥ ೬೧ ॥

ವ॥ ಪುಷ್ಪಾಂಜಳಿವಿಕ್ಷೇಪಂಗೆಯ್ದೞಗಿ ಪೊಡವಟ್ಟು ಸರಸಾಗಮಪ್ರಾರಂಭನಿರತನನುವೈಶಾಖಸ್ಥಾನಸ್ಥಿತನಾಗಿ—

ಮ॥ ಸ್ರ॥ ವಿಭು ಮೂವತ್ತಿರ್ವರಿಂದ್ರರ್ ತನಗೆ ವಶವಿಧೇಯರ್ ದಿವೌಕಾತ್ಮತೇಜಃ
ಪ್ರಭೆ ಮತ್ತೊಂದಿಲ್ಲ ತತ್ವಂ ಮತಿಗೆ ವಿಮಲಮೇಕಾಂತವೈರಾಗ್ಯಮಸ್ಮ
ತ್ಪ್ರಭು ಕೂಸಿಂದಿರ್ದನಿಲ್ಲುತ್ತಮಸಮರಸವತ್ತಾಂಡವಾರಂಭಣಕ್ಕಾ
ರಭಟೀವೃತ್ತಪ್ರವೃತ್ತಂ ಸುರಪತಿವ ಫಣೆಟ್ಟಾಡಿದಂ ಭಕ್ತಿಯಿಂದಂ ॥ ೬೨ ॥

---

೬೦. ಅರ್ಹಂತನ ದೇಹವು ಅತ್ಯುತ್ತಮವಾದ ಆಭರಣಗಳಿಂದ ಒಪ್ಪಿ ಮನೋಹರವಾಗಲು, ಈ ಸೌಂದರ್ಯವನ್ನು ನೋಡಲು ಎರಡು ಕಣ್ಣು ಸಾಲವೆಂದು ಇಂದ್ರನು ಸಾವಿರ ಕಣ್ಣುಳ್ಳವನಾದನು.

ವ॥ ಹೀಗೆ (ಸಾವಿರ ಕಣ್ಣು ಪಡೆದರೂ) ಮನಸ್ಸಿಗೆ ತೃಪ್ತಿಯಾಗದೆ, ಅತ್ಯಂತ ಹರ್ಷಚಿತ್ತನಾಗಿ ಪೂರ್ವಪರಂಪರೆಯನ್ನು ನೆನೆದು (ನರ್ತನಕ್ಕೆ ಅನುವಾದನು.) ಪಾಂಡುಕಶಿಲೆಯೆ ರಂಗಭೂಮಿಯಾಯಿತು; ದೇವವಾದಕರು ನುಡಿಸುವ ತತ-ವಿತತ-ಘನ-ಸುಷಿರ ಎಂಬ ನಾಲ್ಕು ಬಗೆಯ ವಾದ್ಯಗಳ ವಾದನ ಸಂಗೀತ ತೂರ್ಯವಾದುವು; ದೇವಲೋಕದ ಮಂಗಳಗಾಯಕರೆ ಸಂಗೀತಗಾಯಕರಾದರು; ದೇವನರ್ತಕರೆ ನೃತ್ಯಕಾರರಾದರು; ಮಾರ್ಗಪದ್ಧತಿಯ ನಾಟಕಾರಂಭಕ್ಕೆ ಪರಿಶುದ್ಧನಾದ ಸೂತ್ರಧಾರನು ಮುಂದೆ ಬಂದು ಪುಷ್ಪಾಂಜಲಿಯನ್ನು ಬೀರಿದನು.

೬೧. ಹಾಗೆ ಬೀರಿದ ಆ ಹೂಗಳು ಆ ಜಿನಶಿಶುವಿನ ಪಾದಗಳನ್ನು ಬಳಸಿ ಪುಷ್ಪರಾಜನನ್ನು ಓಲೈಸಲೆಂದು ಆತನ ಒಡ್ಡೋಲಗಕ್ಕೆ ಬಂದ ಪುಷ್ಪಸಮುದಾಯವೋ ಏನೊ ಎಂಬಂತೆ ಕಂಡುವು.

ವ॥ ಪುಷ್ಪಾಂಜಲಿ ವಿಕ್ಷೇಪವಾದ ಬಳಿಕ ಬಾಗಿ ನಮಸ್ಕರಿಸಿ ಇಂದ್ರನು ರಸಮಯವಾದ ನೃತ್ಯ ಪ್ರಾರಂಭಕ್ಕೆ ತೊಡಗಿ ವೈಶಾಖ ಸ್ಥಾನದಲ್ಲಿ ನಿಂತು —

೬೨. "ಈ ಪ್ರಭುವಿಗೆ ಮೂವತ್ತೆರಡು ಇಂದ್ರರು ಅಧೀನರು; ಸ್ವರ್ಗೀಯವಾದ ಅನನ್ಯ ತೇಜಸ್ಸಿನ ಪ್ರಭೆಯುಂಟು; ಬುದ್ಧಿಗೆ ನಿರ್ಮಲವಾದ ಏಕಾಂತ ವೈರಾಗ್ಯವಲ್ಲದೆ ಮತ್ತೊಂದು ತತ್ವವಿಲ್ಲ; ಈ ನಮ್ಮ ಪ್ರಭು ಕೂಸಾಗಿದ್ದರೂ ಕೂಸಲ್ಲ." ಹೀಗೆಂದುಕೊಂಡು ರಸವತ್ತಾದ ತಾಂಡವವನ್ನಾರಂಭಿಸಲು ಆರಭಟೀವೃತ್ತಿಯನ್ನು ಕೈಕೊಂಡು ದೇವೇಂದ್ರನು ಭಕ್ತಿಪೂರ್ವಕ ನರ್ತಿಸಿದನು.

ವ॥ ಅಂತು ನಾಟ್ಯನಿಬಂಧನಮೆ ಸುರೇಶ್ವರರೂಪದಿಂದಮಾಡುವಂತಾಡೆ ತ್ರಿಲೋಕಾಧಿಪತಿ ನೋಡೆ ನಾಟ್ಯರಸಕೂಪಾರಂ ಮೇರೆದಪ್ಪಿ ಕಪ್ಪಂಗವಿಯಾಗಿ ಕವಿಯೆ—

ಕಂ॥ ಆ ರಸದೊಳ್ ಬಳೆದ ಲತಾ
ಕಾರಮನನುಕರಿಸೆ ದಿವಿಜರಾಜನ ಭುಜವಿ
ಸ್ತಾರದೊಳಾಡಿದರಮರಿಯ
ರೋರೊಂದರೊಳೆಣ್ಬರೊಂದಿ ಗೊಂದಳದಿಂದಂ ॥ ೬೩ ॥

ವ॥ ಅಂತಾಡೆ—

ಕಂ॥ ಜಂಭಾರಿ ವಿಕೃತಮಾಡುವ
ರಂಭಾನಟಿಯಂತೆ ಲಾಸ್ಯದೊಳ್ ತಾಂಡವಮುಂ
ಜೃಂಭಿಸೆ ಗಣಿಕೆಯರೊಡನಾ
ರಂಭಿಸಿದರಪೂರ್ವನರ್ತನಾರಂಭಣಮಂ ॥ ೬೪ ॥

ವ॥ ಅಂತು ದ್ರುತಲಲಿತರಸಾಯತ್ತಮಪ್ಪಾರಭಟೀವೃತ್ತಿಯೊಳಂ ತಾನುಂ ತನ್ನ ಭುಜತರುವನದೊಳಾಡುವಪ್ಸರಸೆಯರುಮಾಡಿ ರಂಜಿಸಿರೆ ಜಿನಪತಿಸ್ನಪನದ ಕಡೆಯೊಳ್—

ಕಂ॥ ಲೋಲಭ್ರಮರಂ ಭ್ರಮರೀ
ಮಾಲೆ ತೆಱಂದಿರಿಯೆ ತಾಂ ತೆಱಂದಿರಿವವೊಲು
ನ್ಮೀಲಿತಮನನಮರೀಸಮು
ಲೀಲಂ ಹರಿ ಬವರಿಗೊಟ್ಟನಾಟ್ದು ಬೆಡಂಗಿಂ ॥ ೬೫ ॥

ವ॥ ನಾಟ್ಯಶಾಸ್ತ್ರವೆ ದೇವೇಂದ್ರನ ರೂಪತಾಳಿ ಆಡುವಂತೆ ಆತನು ನರ್ತಿಸುತ್ತಿದ್ದನು; ತ್ರಿಭುವನ ಪತಿಯಾದ ಅರ್ಹಂತನು ನೋಡುತ್ತಿದ್ದನು; ನಾಟ್ಯರಸದ ಸಮುದ್ರವು ಮೇರೆಮೀರಿ ಉಕ್ಕಿ ಕವಿಯುತ್ತಿತ್ತು—

೬೩. ಆ ರಸದಲ್ಲಿ ಬೆಳೆದ ಬಳ್ಳಿಗಳೊ ಏನೊ ಎಂಬಂತೆ (ಲತಾಕೋಮಲೆಯರಾದ) ದೇವಾಂಗನೆಯರು ದೇವೇಂದ್ರನ ಒಂದೊಂದು ತೋಳಮೇಲೆ ಎಂಟೆಂಟು ಜನರಂತೆ ಮೇಳವಾಗಿ ನರ್ತಿಸಿದರು.

ವ॥ ಹಾಗೆ ನರ್ತಿಸಲಾಗಿ—

೬೪. ದೇವಗಣಿಕೆಯರ ಲಾಸ್ಯದಲ್ಲಿ ತನ್ನ ತಾಂಡವವೂ ಮೇಳವಾಗಿ ಶೋಭಿಸುವಂತೆ ದೇವೇಂದ್ರನು ಅಪೂರ್ವವಾದ ನರ್ತನವನ್ನು ಆರಂಭಿಸಿದನು.

ವ॥ ಹಾಗೆ ದ್ರುತಗತಿಯಲ್ಲಿ ರಸಭರಿತವಾಗಿರುವ ಆರಭಟೀವೃತ್ತಿಯಲ್ಲಿ ತಾನೂ ತನ್ನ ಭುಜಗಳ ಮೇಲೆ ಆಡುವ ಅಪ್ಸರೆಯರೂ ಮನೋಹರವಾಗಿ ನರ್ತಿಸಿದ ಬಳಿಕ ಜನ್ಮಾಭಿಷೇಕೋತ್ಸವದ ಕಡೆಯಲ್ಲಿ—

೬೫. ಹೆಣ್ದುಂಬಿಗಳ ಹಿಂಡು ರಭಸದಿಂದ ತಿರುಗಿದಂತೆಲ್ಲ ಚಂಚಲವಾದ ದುಂಬಿಗಳೂ ತಿರುಗುವಂತೆ ಉಲ್ಲಸಿತ ಚಿತ್ತನಾದ ದೇವೇಂದ್ರನು ಅಪ್ಸರೆಯರೊಡನೆ ಸಮಸಮನಾಗಿ ನರ್ತಿಸುತ್ತ ಬೆಡಗಿನಿಂದ 'ಬವರಿ' ಕುಣಿತವನ್ನು ಕುಣಿದನು.

ವ॥ ಅಂತಿಂದ್ರನಾನಂದನೃತ್ಯಮನಾಡಿದ ಪರಿಸಮಾಪ್ತಿಯೊಳ್ ಐರಾವತದ ಬೆಂಗೆ ಪಂಪ ನಿಜಪರಮಸ್ವಾಮಿಯಂ ನಿಪಾದಿಯಂತೆ ನಿಬಿಡನಿಬದ್ಧಪವಿತ್ರಕ್ಷೌಮೋಪಚ್ಛದೋಪಚಿತಸುಖಾಸನಾಂಕಿತಮಂ ನಿಜಾಂಕಮನೇಱಿಸಿಕೊಂಡು ಹಸ್ತಿನಪುರಾಭಿಮುಖನಪ್ಪುದುಂ ಸಹಿತಪರಿಸು ಅಮರೇಂದ್ರನಮರಗಿರೀಂದ್ರದ ಚೂಳಿಕೆಯಿಂ ಭದ್ರಶಾಳಂಬರಮಾದಭಿರಾಮತೆಯುಂ ನೋಡುತ್ತುಂ—

ಪಿರಿಯಕ್ಕರಂ॥ ಪಿಳಿಯೊಳಟ್ಟುದು ಸಾಸಿರಯೋಜನಂ ಗಗನಕ್ಕೆ ತೊಂಭತ್ತೊಂಭಯ್ಸಾಸಿರಂ
ಬಳೆದುದಂತಿದಂ ಚಂದ್ರಾದಿತ್ಯ ಗ್ರಹನಕ್ಷತ್ರ ತಾರಕಾನಿಕರಮೆಂದುಂ
ಬಳಸುತ್ತಿರ್ಪುದು ನಾಲ್ಕುಪವನಂಗಳೊಳ್ ಪದಿನಾಱಕೃತ್ರಿಮಜಿನಗೃಹಂಗಳ್
ಕುಳನಗಂಗಳ ಕುಲದೈವಮಧಿರಾಜಂ ತಾಯ್ಗಿರಿ ಮೇರುಮಹೀಧರೇಂದ್ರಂ ॥ ೬೬ ॥

ಇದಱ ತಪನೀಯಸಾನುಗಳ್ ಜಿನ[1]ಸವ[1]ಗಂಧೋದಕಂಗಳಿಂ ಪೂವಲಿಯುಂ
ಮುದದೆ ತಲೆಯೊಳ್ ಪೊತ್ತಂತಿರ್ಪುವು ಮೇರುವೆಂತಂ[2]ತತಿವಿಭ[2]ಕ್ತಂ(ಗಳ್)
ಮದನವೈರಿಗಾಸಂದಿಯಾದುದು ಯಥಾರಾಜಾ ತಥಾಪ್ರಜಾಃ ಎಂಬ ಪಡೆ
[3]ದಿದನೆ[ಪಡೆವಾತಂ][3]ನುಡಿವುತ್ತುಮಮರೇಂದ್ರನೆಯ್ದಿದಂ ಹಸ್ತಿನಪುರವರಮಂ ॥ ೬೭ ॥

ವ॥ ಎಯ್ದಿ ಬಹಿರ್ಭಾಗದೊಳ್ ನಿಂದು ವಿಶ್ವಸೇನಮಹಾರಾಜಂಗೆ ಪೊೞಲಂ ಬೇಗಮಪ್ಪಶೋಭೆಯಂಗೆಯ್ಯಲ್ವೇೞ್ದಟ್ಟುವುದುಂ—

ಚಂ॥ ಪುರನಿಕರಂ ತ್ರಿವಿಷ್ಟಪಮೊ ಪೇೞ್ ದಿವಿಜೇಂದ್ರನಿವಾಸಮೋ ಸಮೋ
ಪುರಮೊ ವಿಮಾನಮೋ ಭವನಮೋ ಸುರಭೂರುಹರಾಜಿಯೋ ವನೋ
ತ್ಕರಮೊ ಸುರೇಂದ್ರನೋ ನೃಪನೊ ದೇವನೊ ಮರ್ತ್ಯನೊ ಪೇೞಿಮೆಂಬಿನಂ
ನರಪತಿ ಮಾಡಿದಂ ಪುರಕೆ ಪೋಪ್ರಱಿಯಪ್ಪಿನಮಷ್ಟಶೋಭೆಯುಂ ॥ ೬೮ ॥

ವ॥ ಹೀಗೆ ಇಂದ್ರನು ಆನಂದ ನೃತ್ಯವನ್ನು ಆಡಿ ಮುಗಿಸಿದ ಬಳಿಕ, ಪರಮೇಶ್ವರನನ್ನು ಐರಾವತದ ಮೇಲೇರಿಸಿ ದಪ್ಪವಾಗಿ ದಟ್ಟವಾಗಿ ಅಳವಡಿಸಿದ ರೇಷ್ಮೆಯ ವಸ್ತ್ರವನ್ನು ಹೊದಿಸಿದ ಸುಖಾಸನದಲ್ಲಿರಿಸಿ, ಅದನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಹಸ್ತಿನಾಪುರಕ್ಕೆ ಹೊರಟನು. ದೇವಸಮೂಹದೊಡನೆ ಆತನು ಮೇರುಗಿರಿಯ ಶಿಖರದಿಂದ ಭದ್ರ ಶಾಳದವರೆಗೆ ಉಂಟಾದ ಸೌಂದರ್ಯವನ್ನು ನೋಡುತ್ತ ಬಂದನು.

೬೬. ಮೇರುಪರ್ವತವು ಕುಲಪರ್ವತಗಳ ಕುಲದೈವ, ಸಾಮ್ರಾಟ: ಗಿರಿಗಳಿಗೆಲ್ಲ ತಾಯ್ಗಿರಿ. ಭೂಮಿಯ ಒಳಗೆ ಒಂದು ಸಾವಿರ ಯೋಜನ ಹುದುಗಿಕೊಂಡಿದೆ; ಆಕಾಶದಲ್ಲಿ ತೊಂಭತ್ತೊಂಭತ್ತು ಸಾವಿರ ಯೋಜನ ಬೆಳೆದಿದೆ. ಸೂರ್ಯ-ಚಂದ್ರ-ಗ್ರಹ-ನಕ್ಷತ್ರ ಮೊದಲಾದುವು ಎಂದೆಂದಿಗೂ ಇದನ್ನು ಬಳಸಿಕೊಂಡು ಸಾಗುತ್ತವೆ; ಇದರ ನಾಲ್ಕು ಉಪವನ ಗಳಲ್ಲಿ ಹದಿನಾರು ಅಕೃತ್ರಿಮ ಜಿನಾಲಯಗಳಿವೆ.

೬೭. "ಈ ಪರ್ವತ ಮನ್ಮಥವೈರಿಗೆ ಪೀಠವಾಯಿತು; ಇದರ ಸುವರ್ಣಶಿಖರಗಳು ಜಿನಾಭಿಷೇಕದ ಗಂಧೋದಕ ವನ್ನು ಪುಷ್ಪಬಲಿಯಂತೆ ತಮ್ಮ ತಲೆಯಲ್ಲಿ ಧರಿಸಿದುವು. ಮೇರು ಹೇಗೋ ಹಾಗೆ ಇವೂ ಅತ್ಯಂತ ಭಕ್ತಿಯುಳ್ಳುವೇ ರಾಜನಂತೆ ಪ್ರಜೆಯೆಂಬುದು ಪ್ರಸಿದ್ಧವಾದ ನಾಣ್ಣುಡಿ." ಈ ಮಾತುಗಳನ್ನಾಡುತ್ತ ದೇವೇಂದ್ರನು ಹಸ್ತಿನಪುರವನ್ನು ತಲುಪಿದನು.

ವ॥ ಊರಿನ ಹೊರವಲಯದಲ್ಲಿ ನಿಂತು ಪಟ್ಟಣವನ್ನು ಅಷ್ಟಶೋಭೆಗಳಿಂದ ಅಲಂಕರಿಸೆಂದು ವಿಶ್ವಸೇನಮಹಾ ರಾಜನಿಗೆ ಹೇಳಿಕಳಿಸಿದನು. ಆಗ—

೬೮. ಇದೇನು ಪಟ್ಟಣವೋ ಸ್ವರ್ಗಲೋಕವೋ, ಪುರಮಧ್ಯವೋ (?) ಅಮರಾವತಿಯೋ, ಅರಮನೆಯೋ ಸ್ವರ್ಗವಿಮಾನವೋ, ಉದ್ಯಾನವೃಕ್ಷಗಳೋ, ಕಲ್ಪವೃಕ್ಷಗಳೋ, ಭೂಪತಿಯೋ ಇಂದ್ರನೋ, ಮನುಷ್ಯನೋ ದೇವನೋ (ಎಂದು ಭ್ರಾಂತಿಯುಂಟಾಗುವಂತೆ) ಅರಸನು ಪಟ್ಟಣವನ್ನು ಅಷ್ಟಶೋಭೆಯಿಂದ ಅತಿಶಯವಾಗಿ ಅಲಂಕರಿಸಿದನು.

---

1. ಸ್ನಾನ (ಅ) 2. ತಿವುಮತಿಭ (ಅ) 3. ಮಾತೆಂಬಿದನೆ (ಅ)

ವ॥ ಅಂತಪ್ಪ ಶೋಭೆಯಂ ಮಾಡೆ—

ಕಂ॥ ಗುಡಿ ತುಱುಗಿ ಲತೆಯ ಪೊಸದಾಂ
ಗುಡಿಯೆನಿಸಿದುದವನಿಪತಿಯ ಕ[1][ರು][1]ಮಾಡದೊಳಂ
ಗಡಿಯೊಳ್ ವೇಶ್ಯಾವಾಟದೊ
ಳೆಡೆಗಿಱಿದ ವಿಶಿಷ್ಟಸೌಧಭವನಾವಳಿಯೊಳ್ ॥ ೬೯ ॥

ರಾಣಿಯುವಾಸದ ಪೊಸನೇ
ರಾಣಿಯ ಮಾಡಂಗಳೊಳಗೆ ಕೆಯ್ಗೆಯ್ದಿರೆ ರು
ದ್ರಾಣಿ ವರುಣಾನಿ ನೆಗಟ್ದಿಂ
ದ್ರಾಣಿಯೆನಲ್ಕುಕ್ಕುಮಿಕ್ಕ ಮಹಿಷೀಬೃಂದಂ ॥ ೭೦ ॥

ಮಣಿಕುಟ್ಟಿಮಭೂಮಿಗೆ ಕಿ
ಟ್ಟಣೆಯದಿದೆನೆ ಪೋಲೆ ನಿಮಿ[2][ರೆ][2] ಪಾಸಿದ ಕಾರೋ
ಹಣದಿಂ ನೃಪೇಂದ್ರಭವನಾಂ
ಗಣಮೊಪ್ಪಿದುದುರ್ವರಾಸ್ಕತಿಲಕನ ಬರವಿಂ ॥ ೭೧ ॥

ವ॥ ಅಂತು ಪಸದನರಾಜಲಕ್ಷ್ಮಿಯ ಮೊಗವಿರ್ಪಂತಿರ್ದ ಮರಕತತೋರಣದ ಮುಂದೆತ್ತಿದ ಮುತ್ತಿನ ಮಂಡಪಿಗೆಯೊಳಗೆ—

ಕಂ॥ ಹಾರದ ಲಂಬೂಷಂ ಕೇ
ಯೂರದ ಪೊಸಗಂಬಮೆಸೆವ ಮುತ್ತಿನ ಕಡೆ ವಿ
ಸ್ತಾರಿಸಿದ ಪಂಚರತ್ನದ
ತೋರಣಮೊಪ್ಪಿದುದು ನಡುವೆ ನಿಲೆ ಹರಿಪೀಠಂ ॥ ೭೨ ॥

ವ॥ ಹೀಗೆ ಅಷ್ಟಶೋಭೆಯನ್ನು ಮಾಡಲಾಗಿ—

೬೯. ಅರಮನೆಯ ಉಪ್ಪರಿಗೆಯ ಮೇಲೆ, ಅಂಗಡಿಗಳ ಮೇಲೆ, ವೇಶ್ಯಾವಾಟದಲ್ಲಿ ಕಿಕ್ಕಿರಿದ ಭವ್ಯಭವನಗಳ ಮೇಲೆ ಸಾಂದ್ರವಾಗಿ ನಿಲ್ಲಿಸಿದ ಧ್ವಜಗಳು ಬಳ್ಳಿಯ ಹೊಸ ಚಾಚುಕುಡಿಗಳೆನಿಸಿದುವು.

೭೦. ಅಂತಃಪುರದ ಹೊಸ ಚಿನ್ನದ ಮಹಲುಗಳಲ್ಲಿ ಅಲಂಕರಿಸಿಕೊಂಡಿರುವ ಪಟ್ಟದರಸಿಯರು ಒಬ್ಬೊಬ್ಬರೂ ಪಾರ್ವತಿ, ವರುಣಾನಿ, ಶಚೀದೇವಿ ಎಂದೆನಿಸಿಕೊಳ್ಳಲು ತಕ್ಕವರಾಗಿದ್ದರು.

೭೧. ರತ್ನಮಯವಾದ ನೆಲಗಟ್ಟಿಗೆ ಇದೇನು ಕಡಮೆಯದಲ್ಲವೆಂಬಂತೆ ಅಗಲವಾಗಿ ಹಾಸಿದ 'ಕಾರೋಹಣ'ವೆಂಬ ಬಟ್ಟೆಯಿಂದ ಒಪ್ಪುವ ಅರಮನೆಯ ಅಂಗಳವು ಭೂಲೋಕಭೂಷಣನ (ಅರ್ಹಂತನ) ಆಗಮನಕ್ಕೆ ಸಿದ್ಧವಾಗಿತ್ತು.

ವ॥ ಪ್ರಸಾಧನಲಕ್ಷ್ಮಿಯ (ಅಲಂಕಾರ ಸೌಂದರ್ಯದ) ಮುಖದಂತಿದ್ದ ಪಚ್ಚೆರತ್ನಗಳ ತೋರಣಗಳನ್ನು ಕಟ್ಟಿ ರಚಿಸಿದ ಮಂಟಪದೊಳಗೆ—

೭೨. ಸುತ್ತಲೂ ಮುತ್ತಿನ ಹಾರದ ಅಲಂಕಾರ; ಬಳೆದೊಡಿಸಿದ ಹೊಸ ಕಂಬಗಳು; ಮುತ್ತಿನ ರಂಗವಲ್ಲಿ; ವಿಸ್ತಾರವಾದ ಪಂಚರತ್ನದ ತೋರಣ; ನಟ್ಟನಡುವೆ ಸಿಂಹಾಸನ ಶೋಭಿಸಿತು.

---

1. ಱು (ಮ) 2. ಱೆ (ಮ)

ಕಂ॥ ಆ ಹರಿಪೀಠದೊಳಪಗತ
ಮೋಹನನನಿದಿರ್ವೋಗಿ ತಂದು ಕುಳ್ಳಿರಿಸಿ ಸುರ
ವ್ಯೂಹಕ್ಕಂದಾಸನಮಂ
ದೋಹಮನವರವರ್ಗೆ ತಕ್ಕುದಂ ತರಿಸಿ ನೃಪಂ ॥ ೭೩ ॥

ವ॥ ತಾನುಂ (ತನಗೆ) ತಕ್ಕಾಸನದೊಳ್ ಕುಳ್ಳಿರೆ—

ಕಂ॥ ಆ ದಿನದೊಳ್ ಹಸ್ತಿನಪುರ
ದಾದುತ್ಸವಮೆಳಿಯೊಳಿನಿತೆನಲ್ಕೆಡೆಗಾಣ
ದ್ಯೋದಿದಗಾಳುಗವಾಸಿತ
ಮಾನುಷಸಂಜಾತಪೂರ್ವವಿಸ್ಮಯದಿಂದಂ ॥ ೭೪ ॥

ವ॥ ಆಗಳ್ ಸೌಧರ್ಮೇಂದ್ರಂ ವಿಶ್ವಸೇನನೃಪೇಂದ್ರನುಮನೈರಾಮಹಾದೇವಿಯುಮನಮರಲೋಕಾಂಬರಸ್ರಗ್ವಿಲೇಪನಾಲಂಕರಣಗಳಿಂದಂ ಪೂಜಿಸಿ ಜನ್ಮಾಭಿಷೇಕವೃತ್ತಕಮನವರ್ಗೆ ತಿಳಿಯೆ ಪೇಳ್ದು—

ಉ॥ ಈ ಪರಮೇಶ್ವರಂ ತ್ರಿಜಗದೀಶ್ವರನೀಹತಕಲ್ಮಷಂಗೆ ಮಾ
ತಾಪಿತೃಭಾವಮೆಂದು ನಿಮಗಾದುದು ನೀಮೆಮಗಂದು ದೇವತಾ
ರೂಪಮತೀತಜನ್ಮಸಮುಪಾರ್ಜಿತಪುಣ್ಯಫಲೈಕಕಾಲಕೂ
ಟೋಪಪರಂಪರಾಸಮಧಿಕಂ ನಮಗಿಂತಿರೆ ಮುನ್ನೆ ನೋಂತರಾರ್ ॥ ೭೫ ॥

ವ॥ ಎಂದು ಪರಮಾಶ್ಚರ್ಯಪರ್ಯಾತೀತ ಶಿರಃಕಂಪಂಬೆರಸು—

ಕಂ॥ ಸುರಪತಿ ಕೆಯ್ಮುಗಿದು ಚರಾ
ಚರಗುರುಗಂ ಗುರುಗಳೆನಿಸಿದಾಯಿರ್ವರ್ ಮು
ನ್ನೆರಪಿರ್ದಗಣ್ಯಪುಣ್ಯ
ಸ್ಥಿರತ್ವಮಂ ನೆಗಳ್ಚಿ ಪೊಗಳಲಜಿಯಂ ಸಭೆಯೊಳ್ ॥ ೭೬ ॥

---

೭೩. ಅರಸನು ಎದುರುಗೊಂಡು ಮೋಹನರೂಪನಾದ ಜಿನೇಂದ್ರನನ್ನು ಎತ್ತಿಕೊಂಡು ಬಂದು ಆ ಸಿಂಹಾಸನದಲ್ಲಿ ಕುಳ್ಳಿರಿಸಿದನು; ದೇವತೆಗಳೆಲ್ಲರನ್ನೂ ಅವರವರಿಗೆ ತಕ್ಕ ಪೀಠಗಳಲ್ಲಿ ಕುಳ್ಳಿರಿಸಿದನು.

ವ॥ ತಾನೂ ತನಗೆ ತಕ್ಕ ಪೀಠದಲ್ಲಿ ಕುಳಿತನು.

೭೪. ಆ ದಿವಸ ಹಸ್ತಿನಪುರದಲ್ಲಾದ ಉತ್ಸವವನ್ನು ಇಷ್ಟೆಂದು ಊಹಿಸುವುದು ಎಂತಹ ವಿದ್ವಾಂಸನಿಗೂ ಸಾಧ್ಯವಾಗದಂತೆ ಅಪೂರ್ವವಾದ ಬೆರಗನ್ನು ಅದು ಉಂಟುಮಾಡಿತು.

ವ॥ ಆಗ ಸೌಧರ್ಮೇಂದ್ರನು ವಿಶ್ವಸೇನರಾಜನನ್ನೂ ಐರಾಮಹಾದೇವಿಯನ್ನೂ ದೇವಲೋಕದ ವಸ್ತ್ರ, ಹಾರ, ಲೇಪನ, ಆಭರಣಗಳಿಂದ ಪೂಜಿಸಿ, ಜನ್ಮಾಭಿಷೇಕದ ವಿವರವನ್ನು ಅವರಿಗೆ ತಿಳಿಯುವಂತೆ ಹೇಳಿದನು:

೭೫. "ಈ ಪರಮೇಶ್ವರನು ಮೂರು ಲೋಕಗಳಿಗೂ ಒಡೆಯನು; ಪಾಪಗಳನ್ನು ನಾಶಮಾಡಿದವನು; ಇವನಿಗೆ ತಾಯಿತಂದೆಗಳಾಗುವ ಭಾಗ್ಯ ನಿಮಗೆ ಪ್ರಾಪ್ತವಾಯಿತು. ಕಳೆದುಹೋದ (ಅನೇಕ) ಜನ್ಮಗಳಲ್ಲಿ ಗಳಿಸಿದ ಪುಣ್ಯಪರಂಪರೆಯ ಫಲವಿದು. ಇಂತಹ ಪುಣ್ಯಫಲವನ್ನು ಈ ಮುಂಚೆ ಪಡೆದವರಾರು?"

ವ॥ ಎಂದು ಅತ್ಯಂತ ಆಶ್ಚರ್ಯಭರಿತನಾಗಿ ತಲೆದೂಗಿ—

೭೬. ಆ ಚರಾಚರ ಗುರುವಿಗೂ ಹಿರಿಯರೆನಿಸಿದ ಆ ಇಬ್ಬರು ಪೂರ್ವಭವಗಳಲ್ಲಿ ಸಂಪಾದಿಸಿದ ಅಸೀಮವಾದ ಪುಣ್ಯದ ಸ್ಥಿರತೆಯನ್ನು ಕೈಯೆತ್ತಿ ಹೊಗಳಲು ದೇವೇಂದ್ರನು (ತೊಡಗಿದರೂ, ಪೂರ್ತಿಯಾಗಿ ಹೊಗಳಲು) ಅಸಮರ್ಥನಾದನು.

ವ॥ ಅನಂತರಂ ಯಥೋಕ್ತವಿಧಾನದಿ[ಂ ಶುಭದಿ]ನಮುಂ—

ಕಂ॥ ಪ್ರಕಟಮುಮಪ್ಪಂತಿರೆ ಜಾ
ತಕರ್ಮದೊಸಗೆಯುಮನೊಸೆದು ಮಾಡಿಸೆ ಬಳಿಕ
ರ್ಭಕಜಿನಶೀತಾಂಶುಗೆ ನಾ
ಮಕರಣದುತ್ಸವದೊಳುತ್ಸವಂ ಬೆರಸಾಗಳ್ ॥ ೭೭ ॥

ವ॥ ತನ್ನಿಪ್ಪನಾಗಿ ತಾರಾತರಳಮುಕ್ತಾಫಲಾಂಗುಲಿಕಪ್ರಾರಂಭದೊಳ್ ಪರಿಚಿತಚಾಮೀಕರವೇದಿಕಾ ಸನಾಥದೊಳಪರಿಮಿತರುಂದ್ರೇಂದ್ರ ಚಾಪ ಪ್ರತಾನಾನೂನಾಂಶುಲಲಿತದೀಪ್ಯಮಾನ ಮಣಿಭಿತ್ತಿಸಮಭಿದ್ಯೋತಿ(ತ)ನೀರಂಧ್ರಜಾಲಾಂತರಾಳದೊಳ್ ಸತತದಹ್ಯಮಾನಕಾಲಾಗುರು ಧೂಪೋದ್ದಾಮಧೂಮಾಮೋದಮತ್ತಮಧುಕರನಿಕರಝಂಕಾರಪರೀತದಿಗಂತರಾಳದೊಳಭಿನವ(ನ) ಮೇರುಮಂದಾರ ಪಾರಿಜಾತ ಸಂತಾನಕ ಕುಸುಮಮಂಜರೀಮಧ್ಯಲಂಬಮಾನಸಿಂಜಾನ ಮಣಿಕಿಂಕಿಣೀಕ್ವಣಿತದೊಳ್ ಮಂಗಳಾಲಂಕರಣಾಭಿರಾಮ ರಾಜಭವನಲಕ್ಷ್ಮೀ ಶಿರೋಮಣಿ ನೋಪಮಾನ ಮೌಕ್ತಿಕ ಮಣಿಮಯ ಮಂಡಪದೊಳ್—

ಮ॥ ಪಸೆಯೊಳ್ ಪಾಸಿದ ಬೊಂಗದುಲ್ಲವದ ದೇವಾಂಗಂ ಮಣಿಸ್ತಂಭದೊಳ್
ಪೊಸವತ್ಯಂಗವಪೂರ್ವಮಾಗೆ ಹರಿ ಪೌರೋಹಿತ್ಯಮಂ ತಾಳೆ ರಾ
ಗಿಸಿ [1][ಶ]ಚ್ಯಾಂಗನೆ ದಾದಿಯಾಗೆ ತರೆ ದೇವೇಂದ್ರಾಳಿ ಮುಂದಿರ್ದು ಘೋ
ಷಿಸೆ ಸಿದ್ಧಸ್ತುತಿಯಂ ಜಿನಂಗೆಸೆದುದಂತಾನಾಮಕರ್ಮೋತ್ಸವಂ ॥ ೭೮ ॥

ವ॥ ಅನಂತರಂ ವಿಶ್ವಸೇನಾವನೀನಾಥನುಮೈರಾಮಹಾದೇವಿಯುಂ ಕುರುಕುಳಾಗ್ರಗಣ್ಯರಪ್ಪ ಬಂಧುಗಳುಂ ಮುಕುಳಿತಕರಕಮಳರ್ ಬಳಸಿಯುಮಿರೆ—

ವ॥ ಅನಂತರ ವಿಧಿಪೂರ್ವಕವಾಗಿ—

೭೭. ಪ್ರಕಟವಾಗುವಂತೆ ಜಾತಕರ್ಮದ ಉತ್ಸವವನ್ನು ಸಂತೋಷದಿಂದ ಮಾಡಿಸಿ, ಬಳಿಕ ಜಿನಾರ್ಭಕನಿಗೆ ಹೆಸರಿಡುವ ಸಮಾರಂಭಕ್ಕಾಗಿ ಉತ್ಸಾಹದಿಂದ—

ವ॥ ತೊಡಗಿದನು. ನಕ್ಷತ್ರಗಳಂತೆ ಹೊಳೆಯುವ ಮುತ್ತಿನ ಹಾರಗಳ ತೋರಣ (?) ; ಚಿನ್ನದ ವೇದಿಕೆ ; ಅಸಂಖ್ಯವಾದ ಕಾಮನಬಿಲ್ಲುಗಳಂತೆ ಪ್ರಭೆಯನ್ನು ಹರಡುವ ರತ್ನಮಯ ಭಿತ್ತಿಗಳು ; ಹತ್ತಿರ ಹತ್ತಿರವಾಗಿ ಹೊಳೆಯುತ್ತಿರುವ ಜಾಲರಿಯ ಕಿಟಕಿಗಳು ; ಸತತವಾಗಿ ಉರಿಸುತ್ತಿರುವ ಕಾಳಾಗುರು ಧೂಪದ ಶ್ರೇಷ್ಠ ಪರಿಮಳ ; ಆ ಪರಿಮಳವನ್ನು ಸೇವಿಸಿ ಸೊಕ್ಕೇರಿದ ದುಂಬಿವಿಂಡುಗಳ ಝೇಂಕಾರ ; ಅದೇ ಆಗ ಅರಳಿದ ನಮೇರು ಮಂದಾರ ಪಾರಿಜಾತ ಸಂತಾನಕಗಳೆಂಬ ದೇವಲೋಕದ ಪುಷ್ಪಮಂಜರಿಗಳು ; ಅವುಗಳ ಮಧ್ಯದಲ್ಲಿ ನೇತಾಡುವ ರತ್ನಮಯ ಕಿರುಗಂಟೆಗಳ ಕಿಣಿಕಿಣಿ ಧ್ವನಿ ಇವುಗಳನ್ನೊಳಗೊಂಡು ಮಂಗಳವಾದ ಅಲಂಕಾರಗಳಿಂದ ಸುಂದರವಾಗಿ ಅರಮನೆಯ ವೈಭವಕ್ಕೇ ಶಿರೋಮಣಿಯಂತಿರುವ ಮುತ್ತುರತ್ನಗಳಿಂದ ನಿರ್ಮಿಸಿದ ಮಂಡಪ ; ಅದರಲ್ಲಿ—

೭೮. ಹಸೆಯಲ್ಲಿ ಹಾಸಿದ 'ಬೊಂಗ' ವಸ್ತ್ರ ; ಮೇಲ್ಕಟ್ಟಿನ ದೇವಾಂಗವಸ್ತ್ರ ; ರತ್ನಸ್ತಂಭಗಳಿಗೆ ಸುತ್ತಿದ 'ಅತ್ಯಂಗ' ವಸ್ತ್ರ—ಇವು ಅಪೂರ್ವ ಶೋಭೆಯಿಂದ ಕೂಡಿರಲಾಗಿ, ಇಂದ್ರನೆ ಪುರೋಹಿತನಾದನು : ಶಚೀದೇವಿ ದಾದಿಯಾದಳು ; ಇತರ ಇಂದ್ರರು ಮುಂದೆ ನಿಂತು ಸಿದ್ಧಸ್ತುತಿಯನ್ನು ಘೋಷಿಸಿದರು. ಹೀಗೆ ಜಿನನಿಗೆ ನಾಮಕರ್ಮೋತ್ಸವ ನೆರವೇರಿತು.

ವ॥ ಬಳಿಕ ವಿಶ್ವಸೇನರಾಜನೂ, ಐರಾದೇವಿಯೂ, ಕುರುವಂಶದ ಹಿರಿಯರೂ, ಬಂಧುಗಳೂ ಕೈಮುಗಿದು ಕೊಂಡು ಸುತ್ತಲೂ ನಿಂತಿರಲಾಗಿ—

---

1. ಚ (ಮ)

ಉ॥ ಆದಿಜಿನೇಶ್ವರಂ ಮೊದಲ ಚಕ್ರಿಗೆ ಭಾವಿಜಿನೇಂದ್ರನಾಮತೀ
ರ್ಥೋದಯಮಾಳೆಯಂ ಬೆಸಸೆ ತಜ್ಜಿನಭಾಷಿತವಾತ್ಮಚಿತ್ತಮಂ
ಭೇದಿಸಿದಂತೆ ಲೋಕಪತಿಗಿಟ್ಟನನುಸ್ಮೃತಮಾತ್ರಪಾಪವಿ
ಚ್ಛೇದನಮಂ ಜಗತ್ಪ್ರಥಮಮಂಗಳಮಂ ಹರಿ ಶಾಂತಿನಾಮಮಂ ॥ ೭೯ ॥

ವ॥ ಅಂತು ತೀರ್ಥಕರನಾಮಕರ್ಮೋತ್ಕಟಂಗೆ ಶಾಂತಿನಾಮಮನಿಟ್ಟು ದಿವಿಜೇಂದ್ರವೃಂದಂ ಬೆರಸಿಂದ್ರನೊಸಗೆವೆರಳ್ಗೊಂಡು ಪಿಷ್ಟಾತಕಕೇಳೀವಿಧಾನಾನಂತರಂ—

ಕಂ॥ ಆ ನಾಮಕರಣದೊಳ್ ಪೊಸ
ತಾನಂದಂ ಬಗೆಯನುಗಿಯೆ ಪುನರುಕ್ತತೆಯಿಂ
ದಾನಂದನೃತ್ಯಮಂ ಹರಿ
ತಾನಾಡಿದನೊಸಗೆಯೆಸಕಮಿರ್ಮಡಿಸುವಿನಂ ॥ ೮೦ ॥

ವ॥ ಅಂತು ನಿರ್ವರ್ತಿತತ್ರಿಭುವನಪತಿಭವೋತ್ಸವನಾಗಿ ಸಮವಯಾದಿವಿಜಯವಯಸ್ಯರುಮನಮರಧಾತ್ರೀಜನಮುಮಂ ದಿವಿಜಾಂಗರಕ್ಷಕರುಮಂ ಸುರಲೋಕಕ್ಷೀರಪಯೋರಸಂಗಳುಮಂ ಗೀರ್ವಾಣಮಹಾನಸಿಕನಿಕರಮುಮಂ ದೇವಸ್ನಪನಕಾರಿಕಾನಿಕಾಯಮುಮಂ ನಿಯೋಜಿಸಿ ಸುರಪತಿ ಜಗತ್ಪತಿಗೆಱಗಿ ತತ್ಪಿತೃಗಳುಮಂ ಬೀಳ್ಕೊಂಡು ಕಲ್ಪಾಮರಪುರಸ್ಸರಂ ನಿಜನಿವಾಸಕ್ಕೆ ಪೋದನಿತ್ತ ತೀರ್ಥಕರಕುಮಾರಂ ಪ್ರತಿದಿವಸಪ್ರವರ್ಧಮಾನನಾಗಿ ನೋಡುವ ಜನದ ಕಣ್ಗಂ ಮನಕ್ಕಂ—

ಕಂ॥ ಸವವಯಸದಿವಿಜಖೇಟಕ
ನವಪೇಟಕನಿಕರಮಗಲದಿರಲಬ್ಧಿಯ ಮೇ
ರುವ ಕೆಲದ ಗಿರಿಕದಂಬಕ
ದವಜ್ಞೆಯಂ ಪೋಲ್ತುದಾಕುಮಾರನ ಕೆಲದೊಳ್ ॥ ೮೧ ॥

---

೭೯. ಈ ಮುಂಚೆಯೇ ಆದಿತೀರ್ಥಂಕರನು ಮೊದಲನೆಯ ಚಕ್ರವರ್ತಿಗೆ ಮುಂದೆ ಬರುವ ತೀರ್ಥಂಕರರ ಹೆಸರುಗಳನ್ನೆಲ್ಲ ಹೇಳಿದ್ದನ್ನು ಮನದಂದು ಅದಕ್ಕನುಸಾರವಾಗಿ ದೇವೇಂದ್ರನು ಸ್ಮರಣಮಾತ್ರದಿಂದಲೆ ಪಾಪನಾಶವಾಗುವಂತಹ ಪರಮ ಮಂಗಳವಾದ "ಶಾಂತಿ" ಎಂಬ ಹೆಸರನ್ನು ಜಿನಶಿಶುವಿಗೆ ಇಟ್ಟನು.

ವ॥ ಹಾಗೆ ಹೆಸರಿಟ್ಟು ಇಂದ್ರರ ಸಮೂಹದೊಂದಿಗೆ ದೇವೇಂದ್ರನು ಪರಮ ಸಂತೋಷಭರಿತನಾಗಿ ಪಿಷ್ಟಾತಕಕೇಳಿಯನ್ನು (ಸುಗಂಧದ ಹುಡಿಯನ್ನು ಒಬ್ಬರಮೇಲೊಬ್ಬರು ಎರಚುವುದು) ಮುಗಿಸಿದನು. ಆನಂತರ—

೮೦. ನಾಮಕರಣೋತ್ಸವದಲ್ಲಿ ಹೊಸ ಆನಂದ ಮನಸ್ಸಿನಲ್ಲಿ ಉಕ್ಕಿಬರಲಾಗಿ ದೇವೇಂದ್ರನು ಮತ್ತೊಮ್ಮೆ ಆನಂದನೃತ್ಯವನ್ನು ಮಾಡಿ ಉತ್ಸವದ ಶೋಭೆಯನ್ನು ಇಮ್ಮಡಿಸಿದನು.

ವ॥ ಹೀಗೆ ಜನ್ಮೋತ್ಸವ ಕಾರ್ಯವನ್ನು ಮುಗಿಸಿದ ಬಳಿಕ, ಜಿನಕುಮಾರನಿಗೆ ಸಮವಯಸ್ಕರಾದ ದೇವಕುಮಾರರನ್ನು, ದೇವಲೋಕದ ದಾದಿಯರನ್ನು, ಸ್ವರ್ಗದ ಅಂಗರಕ್ಷಕರನ್ನು, ಸುರಲೋಕದ ಹಾಲು ಮತ್ತು ರಸಗಳನ್ನು, ದಿವಿಜಲೋಕದ ಸೂಪಕಾರರನ್ನು (ಅಡುಗೆಯವರನ್ನು), ಸ್ನಾನ ಮಾಡಿಸುವ ದೇವಾಂಗನೆಯರನ್ನು ಜಿನಾರ್ಭಕನ ಸೇವೆಗೆಂದು ನಿಯಮಿಸಿ ಭಗವಂತನಿಗೆ ನಮಸ್ಕಾರಮಾಡಿ ಆತನ ತಂದೆತಾಯಿಗಳನ್ನು ಬೀಳ್ಕೊಂಡು ಕಲ್ಪದೇವತೆಗಳೊಡನೆ ದೇವೇಂದ್ರನು ತನ್ನ ಸ್ಥಳಕ್ಕೆ ಹೋದನು. ಇತ್ತ ತೀರ್ಥಂಕರ ಕುಮಾರನು ದಿನದಿನಕ್ಕೆ ಬೆಳೆಯುತ್ತ ನೋಡುವ ಜನರ ಕಣ್ಣಿಗೂ ಮನಸ್ಸಿಗೂ (ಮನೋಹರನಾಗಿದ್ದನು.)

೮೧. ಓರಗೆಯ ದೇವಕುಮಾರರು ಆತನ ಬಳಿ ಅಗಲದೆ ಯಾವಾಗಲೂ ಇರುತ್ತಿದ್ದರು. ಮೇರುಪರ್ವತದ ಅಕ್ಕಪಕ್ಕದಲ್ಲಿರುವ ಗಿರಿಗಳ ಗುಂಪನ್ನು ಅವರು ಹೀಯಾಳಿಸುವಂತಿದ್ದರು.

ವ॥ ಅಂತಾಕುರುವಂಶಶಿಖಾಮಣಿ ಜಿನಚಂದ್ರದೇವಂ ಬಳೆಯುತ್ತುಂ—

ಚಂ॥ ಅಡಿಯಿಡುವಂತಿರಯ್ದನೆಯ ಚಕ್ರಿಪದಕ್ಕೆ ಜಿನಾರ್ಭಕಂ ತಳ
ರ್ನಡೆ ನಡೆದಂ ಜಿನೋಕ್ತಿ ಮೊದಲಲ್ತು ಮದಂಗದೊಳೆಂಬಪೋಲ್ ತೊದ
ಳ್ನುಡಿ ನುಡಿದಂ ಗಭೀರತರರಾಜಕವೃತ್ತಿಯನೆಂದುಮೆಯ್ದೆ ಬ
ಲ್ಪಿಡಿವಿಡಿದಂ ಜಗಜ್ಜನಕನಂ ಶಿಶುವೆಂಬುದೊ ಮರ್ತ್ಯನೆಂಬುದೋ ॥ ೮೨ ॥

ವ॥ ಮತ್ತಮೋರೊಂದುದೆವಸಂ ಕುಳ್ಳಿರ್ದಲ್ಲಿ—

ಕಂ॥ ಉಡೆಯ ಮಣಿಕಿಂಕಿಣೀರವ
ಮಡಂಗೆ ಕೆಯ್ನೀಡಿ ನುಡಿಯೆ ಕರವಳಯರವಂ
ಪೊಡರೆ ಹರಿಪೀಠದೊಳ್ ದಾಂ
ಗುಡಿವಿಟ್ಟುದನಂತಕಾಂತಿ ಶಾಂತೀಶ್ವರನಾ ॥ ೮೩ ॥

ವ॥ ಅಲ್ಲದೆಯುಂ ಗಂಭೀರೋದಾರಸಾರಪರಿಹಾಸರಸಪ್ರಾಯವಚನಂಗಳೊಳ್—

ಕಂ॥ [1]ಪೊಗಸ[1]ಲರ್ದಂಬುಜದಲರೊಳ್
ಸೊಗಯಿಪ ಕುಳಿಶಾಳಿ ಪುಟ್ಟಿತೆಂಬಂತಿರೆ ಪೋ
ಲ್ವೆಗೆ ವಂದ ಪಲ್ಗಳಿಂ ನಗೆ
ಮೊಗಮಿಾಯದೆ ಸುರರ ನಟ್ಟ ದಿಟ್ಟಿಯನುಗಿಯಲ್ ॥ ೮೪ ॥

ವ॥ ಅಂತುಮಲ್ಲದೆ ನಿಸರ್ಗಮಧುರಾಕಾರದಿಂ ಮನೋಹರನಾಗಿ—

ವ॥ ಹೀಗೆ ಕುರುವಂಶ ಶ್ರೇಷ್ಠನಾದ ಆ ಜಿನೇಶ್ವರನು ಬೆಳೆಯುತ್ತ—

೮೨. ಐದನೆಯ ಚಕ್ರವರ್ತಿ ಪದಕ್ಕೆ ಅಡಿಯಿಡುವಂತೆ ದಟ್ಟಡಿಯಿಟ್ಟನು ; ಜಿನವಾಣಿ ತನ್ನಲ್ಲಿಯೆ ಮೊದಲಾಗ ಲಿಲ್ಲವೆಂದು ಸೂಚಿಸುವಂತೆ ತೊದಳ್ನುಡಿ ನುಡಿದನು ; ಗಂಭೀರವಾದ ರಾಜಪದವಿಯನ್ನು ಪಡೆಯುವೆನೆಂಬಂತೆ ತಂದೆಯನ್ನು ಭದ್ರವಾಗಿ ಅಪ್ಪಿಕೊಂಡನು. ಈತನಿಗೆ ಶಿಶುವೆನ್ನಬೇಕೊ ? ಮರ್ತ್ಯನೆನ್ನಬೇಕೊ ?

ವ॥ ಒಂದು ದಿವಸ—

೮೩. ಕಟಿಸೂತ್ರದ ರತ್ನಮಯ ಕಿರುಗೆಜ್ಜೆಗಳ ಸದ್ದು ನಿಂತು ಕಂಕಣಗಳು ಜಣಜಣಿಸುವಂತೆ ಕೈನೀಡಿ ಸಿಂಹಾಸನವನ್ನು ಅವನು ಏರಿ ಕುಳ್ಳಿರಲಾಗಿ ಶಾಂತೀಶ್ವರನ ಅನಂತವಾದ ದೇಹಕಾಂತಿ ದಾಂಗುಡಿಯಿಟ್ಟು ಹರಡಿತು.

ವ॥ ಅದಲ್ಲದೆ ಗಂಭೀರವೂ, ಸಾರಭರಿತವೂ, ಹಾಸ್ಯರಸಯುಕ್ತವೂ ಆದ ಮಾತುಗಳನ್ನು ನುಡಿಯುತ್ತಿರಲು,

೮೪. ಸೊಗಸಾಗಿ ಅರಳಿದ ತಾವರೆಹೂವಿನಲ್ಲಿ ಚೆಲುವಾದ ವಜ್ರದ ಸಾಲು ಹುಟ್ಟಿತೊ ಏನೊ ಎಂಬಂತೆ ನಗೆಮೊಗದಲ್ಲಿ ಹಲ್ಲುಗಳು ಮೂಡಿಬಂದುವು. ನೋಡುತ್ತಿರುವ ದೇವತೆಗಳಿಗೆ ತಮ್ಮ ದೃಷ್ಟಿಯನ್ನು ಕೀಳಲಾಗದಂತೆ ಆ ಸುಂದರವಾದ ಮುಖ ಆಕರ್ಷಕವಾಯಿತು.

ವ॥ ಜನ್ಮದೊಂದಿಗೇ ಪಡೆದ ಸುಂದರ ರೂಪಿನೊಡನೆ ಮನೋಹರನಾಗಿರುವ—

---

1. ಪೊಸತ (ಅ)

ಮ॥ ನಯದಿಂದಂ ಬರೆದಂತೆಯುಂ ಕಡೆದು ತಂದಿಟ್ಟಂತೆಯುಂ ಮೂಡಿದಂ
ತೆಯುಮೊಲ್ದಚ್ಚಿಱಿದಂತೆಯುಂ ದೃಢತರಂ ಬೆಚ್ಚಿತ್ತಂತೆಯುಂ ಸಾರ್ಚಿದಂ
ತೆಯುಮತ್ತಾದಿಸಿದಂತೆಯುಂ ನಿಱಿಸಿ ಕಾಲ್ಗೊಂಡಂತೆಯುಂ ನೆಮ್ಮಿದಂ
ತೆಯುಮಿರ್ಕುಂ ಜಿನಬಾಲರೂಪಮೆರ್ದೆಯೊಳ್ ಮುಂ ಕಂಡಗಲ್ದಿರ್ದರಾ ॥ ೮೫ ॥

ವ॥ ಅದಲ್ಲದೆಯುಂ—

ಕಂ॥ ನೆರೆದೋಲಗಿಪಮರನರೋ
ತ್ಕರಜಲಧರವಳಯದೊಳಗೆ ಕಾಂತಿಯ ಪೆರ್ಮೆಯಿಂ
ಪರಿವೇಷಗೊಂಡ ಸಿತಾ
ಕರನಂ ಪೋಲ್ತಂ ಕುಮಾರನೊಡ್ಡೋಲಗದೊಳ್ ॥ ೮೬ ॥

ವ॥ ಅದಲ್ಲದೆಯುಂ—

ಪಿರಿಯಕ್ಕರಂ॥ ನಡೆಯೆ ನಡೆದುಂ ಕುಳ್ಳಿರೆ ಕುಳ್ಳಿರ್ದುಂ ನಿಲೆ ನಿಂದುಂ ಪವಡಿಸೆ ಪಕ್ಕದಿರ್ದುಂ
ನುಡಿಯೆ ಜೀಯೆಂದುಂ ಬಾಯ್ಗುಳಂ ಮುಚ್ಚಿರ್ದು ದಿವ್ಯನಿನಾದಮನಾಲಿಸಿಯುಂ
ಮಿಡುಕದುಸಿರದೆ ನುಡಿಯದೆ ಮೋನಂಗೊಂಡಿನಿಸಿರ್ದ[1]ಧಿಪತಿಗೆ[1] ನಿಚ್ಚಂ [2]ನಿಚ್ಚಂ[2]
ಪಡೆದು ನಚ್ಚಿನ ನಾಕಿನಿಕಾಯ[3]ಮು[3]ಮಗಲದಹೋರಾತ್ರಮೋಲಗಿ[4]ಕುಂ[1] ॥ ೮೭ ॥

ವ॥ ಅಂತು ವಯೋಬಾಲಕನುಂ ಜ್ಞಾನವೃದ್ಧನುಮಪ್ಪ ಜಗದ್ಗುರುಗೆ ಸುರಸಮುದಯಂ ಪರ್ಯುಪಾಸ್ತಿಗೆಯ್ಯುತ್ತಿರೆ—

---

೮೫. ಆತನನ್ನು ಒಮ್ಮೆ ಕಂಡು ಅಗಲಿದವರ ಹೃದಯದಲ್ಲಿ ಆತನ ರೂಪವು ನಯವಾಗಿ ಬರೆದಿಟ್ಟಂತೆ, ಕಂಡರಿಸಿ ತಂದಿಟ್ಟಂತೆ, ತಾನಾಗಿ ಒಡಮೂಡಿದಂತೆ, ಒತ್ತಿ ಅಚ್ಚಿಟ್ಟಂತೆ, ಬಲವಾಗಿ ಬೆಸುಗೆ ಹಾಕಿದಂತೆ, ನೊಳೆತಂತೆ, ನಿಲ್ಲಿಸಿ ಬಿಗಿದಿಟ್ಟಂತೆ, ನೆಮ್ಮಿದಂತೆ ಸ್ಥಿರವಾಗಿ ಉಳಿಯುವುದು.

ವ॥ ಅದಲ್ಲದೆ—

೮೬. ಮೋಡಗಳ ಸಮೂಹದ ಮಧ್ಯೆ ತನ್ನ ಪ್ರಭೆಯ ಆಧಿಕ್ಯದಿಂದ ಪರಿವೇಷಗೊಂಡ ಚಂದ್ರನಿಗೆ ಸದೃಶನಾಗಿ ತನ್ನನ್ನು ಓಲೈಸುವ ದೇವತೆಗಳ ಹಾಗು ಮನುಷ್ಯರ ಬಳಗದೊಡನೆ ಕೂಡಿಕೊಂಡು ಒಡ್ಡೋಲಗದಲ್ಲಿ ಆ ಕುಮಾರನು ಕಂಗೊಳಿಸುತ್ತಿದ್ದನು.

ವ॥ ಅದಲ್ಲದೆ—

೮೭. ಆತನಿಗೆ ನಚ್ಚಿನವರಾದ ದೇವಸೇವಕರು ಅವನು ನಡೆದರೆ ನಡೆಯುವರು; ಕುಳಿತರೆ ಕುಳ್ಳಿರುವರು; ನಿಂತರೆ ನಿಲ್ಲುವರು; ಮಲಗಿದರೆ ಪಕ್ಕದಲ್ಲಿ ಇರುವರು; ಆತನು ಮಾತಾಡಿದರೆ ಜೀಯೆಂದು ಬಾಯಿಮುಚ್ಚಿಕೊಂಡು ಆತನ ದಿವ್ಯವಾಣಿಯನ್ನು ಮನಗೊಟ್ಟು ಕೇಳುವರು; ಮಿಡುಕದೆ, ಉಸಿರದೆ, ಮಾತಾಡದೆ, ಮೌನವಾಗಿದ್ದುಕೊಂಡು ಆತನ ಮೆಚ್ಚಿಕೆಯನ್ನು ಗಳಿಸುವರು.

ವ॥ ವಯೋಮಾನದಿಂದ ಬಾಲಕನಾಗಿದ್ದರೂ ಜ್ಞಾನದಿಂದ ಹಿರಿಯನಾದ ಆ ಜಗದ್ಗುರುವಿಗೆ ದೇವಸಮೂಹವು ಹೀಗೆ ಸೇವೆ ಸಲ್ಲಿಸುತ್ತಿರುವುದು.

---

1. ಧಿಪಗೆ (ಅ) 2. × (ಮ) 3. × (ಅ) 4. ಪಿರ್ಕ (ಅ)

ಕಂ॥ ಜಡೆಯೆಡೆಯೊಳ್ ಕುರುಳೆಡೆಗಿಱಿ
ದೆಡೆಗಿಱಿದೆಡೆಗಿಱಿದು ತೊಡರದೆಡೆದೊಟ್ಟೆಡೆದೊ
ಟ್ಟೊಡನೊಡನೆ ಪೊಳೆವುವಾ ವಿಭು
ಗೆಡೆಯುಡುಗದೆ ಬೀಸುವಮರಚಾಮರದೆಲರಿಂ ॥ ೮೮ ॥

ವ॥ ಮತ್ತಮಾ ಸೋಮವಂಶಲಲಾಮನಪ್ಪ -

ಕಂ॥ ಪ್ರಿಯಮೂರ್ತಿ ತಾಯುಮಂ ತಂ
ದೆಯುಮಂ ಜಿನಚಂದ್ರಶಿಶು ಮನಂಗೊಳಿಸಿದನೇ
ಱ್ಗಿಯ ಪಾಡಿವದಿಂದು ಧರಿ
ತ್ರಿಯುಮಂ ಜಳನಿಧಿಯುಮಂ ಮನಂಗೊಳಿಸುವವೋಲ್ ॥ ೮೯ ॥

ಚಂ॥ ಕರಿ ಹರಿ ಹಂಸ ಮಲ್ಲ ಶುಕ ಶಾರಿಕ ಲಾವುಕ ಸಿಂಹ ಕೇಕಿ ವಾ
ನರ ಮೃಗ ರೂಪಧಾರಿ ಸುರಕೋಟಿ ವಿನೋದದ ತೋಟಿಯೊಳ್ ಚರಾ
ಚರಗುರುವಿಂಗೆ ಪೊಟ್ತುಗಳೆಯುತ್ತಿರೆ ಪೋದುವು ಪೊಟ್ತುಗಳ್ ನಿರಂ
ತರಮೆನೆ ಬಾಳಕೇಳಿಯತಿಲೀಲೆಯನಾಂತುದು ಶಾಂತಿನಾಥನಾ ॥ ೯೦ ॥

ವ॥ ಬಾಳಕೇಳಿಗಳಂ ಬಱಿಯಂ ಪದವಾಕ್ಯಪ್ರಮಾಣಾನುಗತಮಪ್ಪ ವ್ಯಾಕರಣಮುಮಂ ಜಾತಿವೃತ್ತಾ[1]ರ್ಥ[1]ಕಮಪ್ಪ ಛಂದಸ್ಸ್ಕೃತಿಯುಮಂ ಶಬ್ದಾರ್ಥವಿಷಯಮಪ್ಪಲಂಕೃತಿಯುಮಂ ಅಭಿಧಾನ ಲಿಂಗಾಂಗೀಕೃತಮಪ್ಪ ನಿಘಂಟುಸಮಯಮುಮಂ ತತಾರ್ಯವೃತ್ತಕಮಪ್ಪ ನಾಟ್ಯವಿದ್ಯೆಯುಮಂ ಯೋಗಕ್ಷೇಮಾಧೀನಮಪ್ಪ ನೀತಿಶಾಸ್ತ್ರಮುಮಂ ವಶ್ಯವೇಶ್ಯಾಚಾರಮನೋವೃತ್ತಿಯಪ್ಪ ಕಾಮತಂತ್ರಮುಮಂ ಚಿಕಿತ್ಸಿತಾಗೂಢ ಪ್ರೌಢಮಪ್ಪ ಗದಾಂಗಮುಮಂ [2]ಪೆಱವುಂ[2] ವಿದ್ಯಾಕಳಾ ಕಳಾಪಮುಮಂ ತ್ರಿದಶವರ್ಗಕ್ಕುಪದೇಶಂಗೆಯ್ಯುತ್ತುಂ ಬಾಲಭಾವಮಂ ಪಱಗಿಕ್ಕಿ ಯೌವನಪ್ರಾದುರ್ಭಾವಕ್ಕಿದಿರಾಗಿ—

೮೮. ಆತನ ತಲೆಯಲ್ಲಿ ದಟ್ಟವಾಗಿ ಇಡಿಕಿರಿದು ಇಡಿಕಿರಿದು ಬೆಳೆದ ಕೂದಲುಗಳು ದೇವತೆಗಳು ಒಂದೆ ಸಮನಾಗಿ ಬೀಸುವ ಚಾಮರದ ಗಾಳಿಯಲ್ಲಿ ಎದ್ದು ತೊಡಕಾಗನೆ ಸರಿಯಾದ ಎಡೆಯಲ್ಲಿಯೆ ಇದ್ದು ಇದ್ದು ಹೊಳೆಯುವುವು.

ವ॥ ಆ ಸೋಮವಂಶಕ್ಕೆ ಭೂಷಣನಾದ—

೮೯. ಪ್ರಿಯ ಮೂರ್ತಿಯು—(ಶುಕ್ಲಪಕ್ಷದಲ್ಲಿ) ಏಳಿಗೆಹೊಂದುತ್ತಿರುವ ಚಂದ್ರನು ಭೂಮಿಗೂ ಕಡಲಿಗೂ ಸಂತೋಷವನ್ನು ನೀಡುವಂತೆ—ತನ್ನ ತಂದೆಗೂ ತಾಯಿಗೂ ಉಲ್ಲಾಸವನ್ನುಂಟುಮಾಡಿದನು.

೯೦. ಆನೆ, ಕುದುರೆ, ಹಂಸ, ಮಲ್ಲ, ಗಿಳಿ, ಸಾರಿಕೆ, ಲಾವುಗೆ, ಸಿಂಹ, ನವಿಲು, ಕೋತಿ, ಜಿಂಕೆ ಮೊದಲಾದ ಬಗೆಬಗೆಯ ರೂಪಗಳನ್ನು ಧರಿಸಿ ದೇವತೆಗಳು ವಿನೋದಪಡಿಸುತ್ತಿರಲಾಗಿ ಆ ಚರಾಚರ ಪ್ರಭುವಿಗೆ ನಿರಂತರ ಸಂತೋಷದಲ್ಲಿಯೆ ದಿನಗಳು ಕಳೆದುವು. ಹೀಗೆ ಶಾಂತಿನಾಥನ ಬಾಲಲೀಲೆಯು ತುಂಬ ರಮ್ಯವಾಯಿತು.

ವ॥ ಹೀಗೆ ಬಾಲಕ್ರೀಡೆ ನಡೆದ ಬಳಿಕ, ಪದವಾಕ್ಯ ಪ್ರಮಾಣಗಳನ್ನೊಡಗೊಂಡ ವ್ಯಾಕರಣಶಾಸ್ತ್ರವನ್ನು, ಜಾತಿ ಮತ್ತು ವೃತ್ತಗಳನ್ನೊಡಗೊಂಡ ಛಂದಶ್ಶಾಸ್ತ್ರವನ್ನು, ಶಬ್ದ, ಅರ್ಥ ಹಾಗು ಅಲಂಕಾರಗಳ ವಿವರಣೆಯುಳ್ಳ ಅಲಂಕಾರಶಾಸ್ತ್ರವನ್ನು, ಶಬ್ದಗಳ ಅರ್ಥ ಹಾಗು ಲಿಂಗಗಳ ನಿರ್ದೇಶವುಳ್ಳ ನಿಘಂಟುಶಾಸ್ತ್ರವನ್ನು, ಆರ್ಯಪರಂಪರೆಯಿಂದ ವಿಸ್ತಾರವಾಗಿ ಬಂದ ನಾಟ್ಯವಿದ್ಯೆಯನ್ನು, ಯೋಗಕ್ಷೇಮಗಳಿಗೆ ಅಧೀನವಾದ ನೀತಿಶಾಸ್ತ್ರವನ್ನು, ವೇಶ್ಯೆಯರ ನಡವಳಿ, ಮನೋವೃತ್ತಿ, ವಶೀಕರಣ ಮೊದಲಾದುವುಗಳನ್ನೊಡಗೊಂಡ ಕಾಮಶಾಸ್ತ್ರವನ್ನು, ರೋಗಗಳ ಗೂಢ ನಿದಾನ ಹಾಗೂ ಪ್ರೌಢವಾದ ಚಿಕಿತ್ಸೆ ಇವೆರಡನ್ನೂ ವಿವರಿಸುವ ವೈದ್ಯಶಾಸ್ತ್ರವನ್ನು, ಇವಲ್ಲದೆ ಇನ್ನಿತರ ವಿದ್ಯೆಗಳನ್ನು ದೇವಸಮೂಹಕ್ಕೆ ತಿಳಿಸಿಹೇಳುತ್ತ ಕುಮಾರನು ಬಾಲ್ಯವನ್ನು ಕಳೆದು ತಾರುಣ್ಯಕ್ಕೆ ಅಡಿಯಿಟ್ಟನು.

1. ತ್ಥ (ಅ) 2. ಇತ್ಯಾದ್ಯನೇಕ (ಅ)

ತ್ರಿಪದಿ॥ ಎಯ್ದದ ಬಗೆಯನೆ ಮೆಯ್ದಪ್ಪಂತೆನಿತು
ಮೆಯ್ದರೆ ವಧುವರ್ ಬಂಧರೂಪಿಂಗಾ
ಯ್ದೊಯ್ದನ್ನನಪ್ಪ ಪರಮನಂ ॥ ೯೧ ॥

ಅಂತುಮಾರೂಪನೆ ಚಿಂತಿಸಿ ಚಿಂತಿಸಿ
ಕಾಂತೆಯರ್ ಪತಿಗೆ ರತಿ ಸೋಲ್ತ ಕೆಂದಳಿ
ರಂತಲರ್ಗಣೆಗೆ ಡೊಣೆಯಾದರ್ ॥ ೯೨ ॥

ವ॥ ಅಂತುಮಾ ಭುವನತ್ರಯವಿಜಯಿಯಪ್ಪ ರೂಪಾತಿಶಯದೊಡನಮಳ್ವಳೆದಂತೆ ಬಳೆದಸರ್ಗ ಶೌಚಾದಿಗುಣಂಗಳಿಂ [1][ಬೀಟ್ಟು][1]ಂ ಡಿಕ್ಕಿದ ಭೈತ್ರಮುಮಂ ನಿಶ್ಚಲಪ್ರದೀಪ ಪವಿತ್ರಪ್ರದೀಪಮುಮಂ ಪೋಲ್ತು ಸಭಾಂಭೋಧಿಮಧ್ಯದೊ[2]ಳಿರ್ಪ[2] ತೀರ್ಥಕರಕುಮಾರನಾ—

ಕಂ॥ ಪೋದ ಭವಂಗಳ ಸಕಲದ
ಯಾದತಿಶಯಫಲದಿನಾದ ರೂಪನೆ ಮಗುಟ್ದು
ತ್ಪಾದಿಸಿದುದು ಜವ್ವನಮಿಂ
ದೂದಯಮಂಗಜನ ಜಯ[ಮ]ಸುತ್ಪಾದಿಪವೋಲ್ ॥ ೯೩ ॥

ಲಾವಣ್ಯಮವಯವಂಗಳ
ನಾವರಿಸಿದುದಮೃತಕಳೆಗಳಿಂದಂ ಬಿಂಬಂ
ತೀವಿರ್ದಸವಯವಂಗಳ
ನಾವರಿಸಿದ ಕಾಂತಿಯಂತೆ ಶಾಂತೀಶ್ವರನಾ ॥ ೯೪ ॥

ವ॥ ಮತ್ತಂ ಗೋಕ್ಷೀರಕ್ಷತಜತ್ವಮುಂ ನಿಸ್ವೇದಮುಂ ಸಮಚತುರಶ್ರಮಪ್ಪ ಸಂಸ್ಥಾನಸಂಹನನಮುಂ ಅತಿಶಯ ರೂಪತೆಯುಂ ಅತ್ಯಂತಸುರಭಿನಿಶ್ವಾಸತೆಯುಂ ತಿಲಮಸೂರಿಕಾದಿ[ನವ]ಶತವ್ಯಂಜನಮುಂ ಶ್ರೀವೃಕ್ಷಸ್ವಸ್ತಿಕನಂದ್ಯಾವರ್ತಪ್ರಮುಖಾಷ್ಟೋತ್ತರ ಶತಪ್ರಶಸ್ತಲಕ್ಷಣಮುಂ ವಿಷಾಗ್ನಿಪಾಷಾಣಶೀತಾತಪವೃಷ್ಟಿ(ರಾಷ್ಟ್ರ)ನಿರ್ಭೇದತೆಯುಂ ವಿಕಚಕರ್ಣಿಕಾರವರ್ಣಮುಂ ಕಫವಾತಪಿತ್ತದೋಷ

೯೧. ಮನಸೆಳೆಯುವ ರೂಪಕ್ಕೆ ಜೀವ ತುಂಬಿದಂತಿರುವ ಆ ಪರಮೇಶ್ವರನನ್ನು ಹೊಂದಲು ಹಂಬಲಿಸಿದ ಹೆಣ್ಣುಗಳು ಎಷ್ಟು ಪ್ರಯತ್ನಿಸಿದರೂ ಆತನ ಮನಸ್ಸಿಗೆ ಹಿಡಿಯಲಿಲ್ಲ.

೯೨. ಆದುದರಿಂದ ಆತನ ರೂಪವನ್ನೇ ಧ್ಯಾನಿಸುತ್ತ ಚಿಂತೆಗೊಳಗಾಗಿ ಆ ಹೆಣ್ಣುಗಳು (ಮೈತುಂಬ ಕಾಮನ ಬಾಣಗಳನ್ನು ನಾಟಿಸಿಕೊಂಡು) ಕಾಮಬಾಣಗಳ ಬತ್ತಳಿಕೆಯಂತೆ ಆದರು.

ವ॥ ಲೋಕತ್ರಯ ವಿಜಯಿಯಾದ ಅತ್ಯಧಿಕ ರೂಪದೊಡನೆ ಅವಳಿಯಂತೆ ಆತನ ಶೌಚವೆ ಮೊದಲಾದ ಹುಟ್ಟುಗುಣಗಳೂ ವೃದ್ಧಿಯಾಗಿ ಆ ತೀರ್ಥಕರಕುಮಾರನು ಲಂಗರುಹಾಕಿದ ಹಡಗಿನಂತೆ ನಿಶ್ಚಲವಾದ ಕುಡಿಯುಳ್ಳ ಮಂಗಳದೀಪದಂತೆ ಸ್ಥಿರನಾಗಿದ್ದನು.

೯೩. ಕಳೆದುಹೋದ ಜನ್ಮಗಳಲ್ಲಿ ಸತ್ಕುಲ ಫಲವಾಗಿ ದೊರೆತಿದ್ದ ಅತಿಶಯ ರೂಪವನ್ನು ಯೌವನವು ಮರಳಿ ಈ ಜನ್ಮದಲ್ಲಿಯೂ ಆತನಲ್ಲಿ ಪ್ರಕಟಪಡಿಸಿತು. ಚಂದ್ರೋದಯವು ಮನ್ಮಥನಿಗೆ ಜಯವನ್ನು ಹುಟ್ಟಿಸುವುದಿಲ್ಲವೆ ?

೯೪. (ಹದಿನಾರು) ಕಲೆಗಳೂ ಸಮೃದ್ಧವಾಗಿ ಚಂದ್ರಬಿಂಬಕ್ಕೆ ಕಾಂತಿಯನ್ನುಂಟುಮಾಡುವಂತೆ ಅಂಗಾಂಗಗಳಲ್ಲೆಲ್ಲ ಲಾವಣ್ಯ ತುಂಬಿ ಶಾಂತೀಶ್ವರನ ಕಾಂತಿಯನ್ನು ಹೆಚ್ಚಿಸಿದುವು.

ವ॥ ತೀರ್ಥಂಕರ ಕುಮಾರನಾದುದರಿಂದ ಆತನ ಮೈಯಲ್ಲಿ ಹಸುವಿನ ಹಾಲಿನಂತಹ ರಕ್ತ; ಎಂದೂ ಬೆವರು ಬಿಡದ ಸ್ಥಿತಿ; ಸಮಚತುರಶ್ರವಾದ ಸಂಸ್ಥಾನ ಪ್ರಕೃತಿ (ಸರ್ವಾಂಗ ಸುಂದರವಾದ ಹಾಗು ಪ್ರಮಾಣಬದ್ಧವಾದ ದೇಹ); ಅತ್ಯಧಿಕವಾದ ಸೌಂದರ್ಯ, ಅತಿಶಯವಾದ ಸುಗಂಧದ ಉಸಿರು; ತಿಲ, ಮಸೂರಿಕೆ ಮೊದಲಾದ ಒಂಭೈನೂರು ವ್ಯಂಜನಗಳು; ಶ್ರೀವೃಕ್ಷ, ಸ್ವಸ್ತಿಕ, ನಂದ್ಯಾವರ್ತ ಮುಂತಾದ ನೂರಎಂಟು ಲಕ್ಷಣಗಳು; ವಿಷ, ಅಗ್ನಿ,

3. ಜಿಟ್ಟ (ಮ) 4. ಳ್ (ಮ)

ದೂರತೆಯುಂ ಜರಾಮಯವ್ಯಾಬಾಧಾ[1]ಬಾಧಿತ್ವ[1]ಮುಂ ಗಂಭೀರಮೃದುಮಧು[2]ರ[2]ವಾದಿತೆಯುಂ ವಜ್ರವೃಷಭನಾರಾಚಾಸ್ಥಿಸಂಧಿಬಂಧಮುಂ ಚತ್ವಾರಿಂಶಚ್ಚಾಪಪ್ರಮಯಸಪರಮೌದಾರಿಕದಿವ್ಯಮೂರ್ತಿಯುಂ ಲಕ್ಷಸಮಾಸಮ್ಮಿತಾನಪವರ್ತಿತದೀರ್ಘಾಯುಷ್ಯಮುಂ ತನಗನುಸಂಗತಮಾಗೆ ಯೌವನಪ್ರಾಪ್ತನಾಗಿ ಕುಮಾರಕಾಲದೊಳಿಪ್ಪತ್ತಯ್ಸಾಸಿರವರ್ಷಂ ನೆಱೆ[3]ಯೆ ಪದಿನಾಱನೆಯ ತೀರ್ಥಾಧಿನಾಥನಪ್ಪುರ್ವರಾಸ್ಯತಿಲಕಂ—

ಚಂ॥ ಅಡಸಿದ ಪಾರಿಜಾತಕದ ಕಪ್ಪುರವಳ್ಳಿಯ ನೇಲವತ್ತಿಯಾ
ಯ್ದಡಕೆಯ ಭೀಮಸೇನಿಕದ ತಂಬುಲದಿಂ ವಿಭು ಪೋಲ್ತನೋಲಗಂ
ಗುಡುವೆಡೆಯೊಳ್ ಮುಖಾರ್ಪಿತಮದಂ ಕಟಶೋಧನದಿಂ ಪ್ರಭೇದಮು
ಕ್ಕಡಸಿದ ಬೇರನಾಮದ ಕಳಂಬೆರಸಿರ್ದಮರೇಂದ್ರದಂತಿಯಂ ॥ ೯೫ ॥

ವ॥ ಮತ್ತಮೆತ್ತರಮನೆಯೊಳಗೆ ಪಾದಮಾರ್ಗದಿಂ—

ಕಂ॥ ಶ್ರೀಗಧಿಪನೊಳಗೆ ಪೊಱಮಡು
ವಾಗಡಿನ ವಿಳಾಸಮಮರಸಮಿತಿಯ ಕಣ್ಗಂ
ಬಾಗೆ ನದೀಗಮನಪ್ರ
ತ್ಯಾಗಮನದ ಸುಪ್ರತೀಕಗಜಮನೆ ಪೋಲ್ತಂ ॥ ೯೬ ॥

ವ॥ ಅಂತುದಿತೋದಿತನಪ್ಪುದುಮಾ ಸರ್ವಾರ್ಥಸಿದ್ಧಿಯಿಂದಂ ಬಂದು ವಿಶ್ವಸೇನಮಹಾರಾಜಂಗಂ ಯಶಸ್ವತಿಮಹಾದೇವಿಗಮಿಂದ್ರಚಂದ್ರಂ ಚಕ್ರಾಯುಧನೆಂಬೊಂ ಮಗನಾಗಿ ಪುಟ್ಟಿಬಳೆಯೆ—

ಕಲ್ಲು, ಚಳಿ, ಬಿಸಿಲು, ಮಳೆ, ಮರ ಮೊದಲಾದುವುಗಳಿಂದ ಯಾವ ಬಾಧೆಯೂ ಆಗದಿರುವಿಕೆ; ಅರಳಿದ ಬಿಟ್ಟದಾವರೆಯಂತಹ ಮೈಬಣ್ಣ; ಕಫ, ವಾತ, ಪಿತ್ತ ದೋಷಗಳಿಂದ ಸಂಪೂರ್ಣ ಮುಕ್ತಿ; ಮುಪ್ಪು, ರೋಗಬಾಧೆಗಳಿಲ್ಲದಿರುವ ಸ್ಥಿತಿ; ಗಂಭೀರವೂ, ಮೃದುಮಧುರವೂ ಆದ ಧ್ವನಿ; ವಜ್ರವೃಷಭನಾರಾಚದ ಅಸ್ಥಿಸಂಬಂಧ (ದೇಹದಲ್ಲಿಯ ಎಲ್ಲ ಮೂಳೆಗಳೂ ಸ್ನಾಯುಗಳೂ ವಜ್ರದಂತೆ ದೃಢವಾಗಿರುವುದು); ನಲವತ್ತು ಬಿಲ್ಲುಗಳಷ್ಟು ಎತ್ತರವಾದ ಔದಾರಿಕ ಶರೀರ; ಒಂದು ಲಕ್ಷ ವರ್ಷಗಳ ಅನಪವರ್ತಿಯಾದ ಆಯುಷ್ಯ—ಈ ಬಗೆಯ ವೈಶಿಷ್ಟ್ಯಗಳನ್ನೊಡಗೊಂಡು ಬೆಳೆಯುತ್ತ ಯೌವನವನ್ನು ತಾಳಿ ಇಪ್ಪತ್ತೈದು ಸಾವಿರ ವರ್ಷ ಕುಮಾರ ಕಾಲವನ್ನು ಕಳೆದು ಹದಿನಾರನೆಯ ತೀರ್ಥಂಕರನಾದ ಆತನು—

೯೫. ಪಾರಿಜಾತಕ ಹಾಗು ಕಪ್ಪುರ ಬೆರಸಿದ ನೇಲವತ್ತಿ ಅಡಕೆಯಿಂದ ಮಾಡಿದ ಭೀಮಸೇನಿಕವೆಂಬ ತಾಂಬೂಲವನ್ನು ಬಾಯಲ್ಲಿಟ್ಟುಕೊಂಡು ಒಡ್ಡೋಲಗದಲ್ಲಿ ಕುಮಾರನು ಕುಳಿತಿರುವಾಗ ಮದೋದಕ ಪ್ರಾಪ್ತವಾಗಿ ಬೇರವೆಂಬ ಕಣದಲ್ಲಿ ನಿಂತ ಐರಾವತದಂತೆ ಶೋಭಿಸಿದನು.

ವ॥ ಅರಮನೆಯೊಳಗೆ ಹೆಜ್ಜೆಯಿಡುತ್ತ—

೯೬. ಐಶ್ವರ್ಯಪತಿಯಾದ ಭಗವಂತನು ಒಳಹೊರಗೆ ಸಂಚರಿಸುವಾಗ ನದಿಯನ್ನು ಹೊಕ್ಕು ಹೊರಬರುವ ಸುಪ್ರತೀಕ ಗಜಕ್ಕೆ ಸದೃಶನಾಗಿ ದೇವತೆಗಳ ಕಣ್ಣಿಗೆ ಮನೋಹರನಾದನು.

ವ॥ ಹೀಗೆ ಆತನು ಉತ್ತರೋತ್ತರವಾಗಿ ಬೆಳೆಯುತ್ತಿರುವಾಗ ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರನಾಗಿದ್ದ ದೃಢರಥನು ವಿಶ್ವಸೇನಮಹಾರಾಜನಿಗೂ ಯಶಸ್ವತೀಮಹಾದೇವಿಗೂ ಚಕ್ರಾಯುಧನೆಂಬ ಮಗನಾಗಿ ಹುಟ್ಟಿದನು. ಆತನೂ ಬೆಳೆಯುತ್ತ—

---

1. ಬಾಧಿತತ್ವ (ಅ) 2. + ಪ್ರಿಯಹಿತ (ಅ)

ಕಂ॥ ಗುಣನಿಧಿಯನಾತನಂ ತ
ತ್ಕ್ಷಣತತ್ಪರನಕ್ಷಿಪಕ್ಷ್ಮಪಾಳಿಪವಿಕ್ಷೇ
ಪಣಮಾತ್ರಮುಮಘರುಚಿವಾಃ
ಕಣರವಿ ಜಿನಚಂದ್ರದೇವನಿಱಿಪನೆ ಮನದಿಂ ॥ ೯೭ ॥

ಅಂದಮುಮತಿಶಯಮುಂ ಬಿಸ
ವಂದಮನುಱಿದೇಕರೂಪಮಾಯ್ತೆನೆ ವಿದ್ಯಾ
ಸಂದೋಹದೊಳಣ್ಣನ ಪಡಿ
ಚಂದಂ ಚಕ್ರಾಯುಧಂಗೆ ಗುರು ಪೆಱನೊಳನೇ ॥ ೯೮ ॥

ಕಳೆದಭವದೊಳ್ ವಿರಾಮಂ
ಗಳೊಳೊದವಿದ ಮೋಹದಿಂ ವಿಚಾರಕ್ಕೆ ಪವ
ಣ್ಗಳಿದ ಗುಣದಿಂ ಕರಂ ಪಳು
ಗಳಿದುದು ದಯೆ ತಮ್ಮನೊಳ್ ಜಗತ್ತ್ರಯಪತಿಯಾ ॥ ೯೯ ॥

ವ॥ ಅಂತುತ್ಪನ್ನದೋಹದಹೃದಯಾಯತದ್ಯುತಿಯಮಪೂರ್ವಗೀರ್ವಾಣಜಂಗಮಮಹಿರುಹಂಗಳೆರ್ಪಂತೊಂದುಪೊೞ್ತುಮಗಲದಿರ ಮತ್ತೊಂದುಪವಿತ್ರದಿನದೊಳ್ ವಿಶ್ವಸೇನಮಹಾರಾಜನುಮೈರಾಮಹಾದೇವಿಯುಂ ಭಗವತ್ಸಿಂಹಾಸನಾಸನ್ನವರ್ತಿಗಳ್ ಮುಕುಳಿತಕರಕಮಳರಾಗಿ—

ಉ॥ ವೀರ್ಯಮನಂತವೀರ್ಯಮಱಿವಪ್ರತಿಮಂ ಸುಖಮಾತ್ಮಭಾವಿ ಗಾಂ
ಭೀರ್ಯಮಮಾನುಷಂ ನಿನಗೆ ದೇವರ ದೇವ ವಿಡೂರಭೂಮಿ ವೈ
ಡೂರ್ಯದಿನೆಂತು ಶುಕ್ತಿ ನವಮೌಕ್ತಿಕಜನ್ಮದಿನೆಂತು ಪೂಜ್ಯಮಂ
ತಾರ್ಯ ಭವದ್ಗುರುತ್ವಮೆ ಮದೀಯಗುರುತ್ವ ಸಮಗ್ರಕಾರಣಂ ॥ ೧೦೦ ॥

---

೯೭. ಪಾಪವೆಂಬ ಮಂಜಿನ ಹನಿಗಳಿಗೆ ಸೂರ್ಯನಂತಿರುವ ಜಿನಚಂದ್ರದೇವನು (ತನ್ನ ತಮ್ಮನು ಹುಟ್ಟಿದ ಕ್ಷಣದಿಂದಲೆ) ಆತನಲ್ಲಿ ಆಸಕ್ತನಾದುದರಿಂದ ಒಂದು ನಿಮಿಷವಾದರೂ ಮನಸ್ಸಿನಿಂದ ಆತನನ್ನು ದೂರವಿಡುವನೆ ?

೯೮. ಲಾವಣ್ಯದ ಅತಿಶಯದಲ್ಲಿಯೂ ವಿದ್ಯಾಪರಿಣತಿಯಲ್ಲಿಯೂ ತಮ್ಮನು ಅಣ್ಣನ ಪ್ರತಿರೂಪವಾದನು. ಚಕ್ರಾಯುಧನಿಗೆ ಈತನಲ್ಲದೆ ಬೇರೆ ಗುರುವುಂಟೆ ?

೯೯. ಪೂರ್ವಜನ್ಮಗಳಲ್ಲಿ ಉಂಟಾದ ಮೋಹದಿಂದಲೂ (ತಮ್ಮನಲ್ಲಿದ್ದ) ಅಸೀಮವಾದ ಸದ್ಗುಣದಿಂದಲೂ ತೀರ್ಥಂಕರನಿಗೆ ತಮ್ಮನಲ್ಲಿ ಅತ್ಯಧಿಕವಾದ ವಾತ್ಸಲ್ಯ ಬೆಳೆಯಿತು.

ವ॥ ಹೀಗೆ ಎದೆದುಂಬಿದ ಅಕ್ಕರೆಯಿಂದಾಗಿ ಅಣ್ಣತಮ್ಮಂದಿರಿಬ್ಬರೂ ಅಪೂರ್ವವಾದ ಜಂಗಮ ಕಲ್ಪವೃಕ್ಷಗಳಂತೆ ಒಬ್ಬರನ್ನೊಬ್ಬರು ಒಂದು ಹೊತ್ತೂ ಅಗಲದೆ ಇದ್ದರು. ಹೀಗಿರುತ್ತ ಒಂದು ಶುಭದಿನದಲ್ಲಿ ವಿಶ್ವಸೇನಮಹಾರಾಜನೂ ಐರಾಮಹಾದೇವಿಯೂ ಭಗವಂತನ ಸಿಂಹಾಸನದ ಬಳಿಯಲ್ಲಿ ಕೈಮುಗಿದುಕೊಂಡು

೧೦೦. "ದೇವಾಧಿದೇವನೆ, ನಿನ್ನ ಶಕ್ತಿ ಅನಂತ ಶಕ್ತಿ; ಜ್ಞಾನ ಅದ್ವಿತೀಯ ಜ್ಞಾನ; ಸುಖ ಆತ್ಮಸುಖ; ಗಾಂಭೀರ್ಯ ಮನುಷ್ಯಾತೀತವಾದುದು; ವೈಡೂರ್ಯದಿಂದ ಅದರ ಖನಿಯೂ, ಮುತ್ತಿನಿಂದ ಚಿಪ್ಪು ಹೇಗೆ ಪೂಜ್ಯವೋ ಹಾಗೆ ನಿನ್ನ ಮಹಿಮೆಯಿಂದಲೆ ನಮಗೆ ಮಹಿಮೆಯುಂಟಾಯಿತು.

ಕಂ॥ ನಿನಗೆ ಗುರುವಾದಕಾರಣ
ದಿನೆಮಗೆ ಸುರಪತಿಕಿರೀಟಮೆಱಗಿದುದಾಕಾಂ
ಚನಗಿರಿಗೆ ಸುರರಕೃತ್ರಿಮ
ಜಿನಾಲಯಸ್ಥಿತಿಯಿನೆಱಗುವಂದಮನಿಂದ್ಯಾ ॥ ೧೦೧ ॥

ಚಂ॥ ಮಹಿಮೆ ಜಗತ್ರಯಪ್ರಭುತೆಗಾಸ್ಪದಮಾದುದಿದರ್ಕಮಗ್ಗಳಂ
ಮಹಿಮೆಯನಾರೊ ಮಾಟ್ಪರಿದು ನಿನ್ನೊಡವುಟ್ಟಿದುದೀಗಳಾದೊಡಂ
ಮಹಿತ ನಿಜೈಕರಾಜ್ಯಭರದೊಳ್ ನಿಲವೇಟ್ಪುದು ನೀನವೋಘನ
ಪ್ರಹತಸಮಸ್ತ ನಾಕನರಲೋಕ ಫಣೀಶ್ವರಲೋಕಶಾಸನಾ ॥ ೧೦೨ ॥

ವ॥ ಎನ್ನುನುಡಿ ಮುನಿಗೆ ಕನಿಸುಪ್ಪೋದಿರೆಂಬ ನುಡಿಯುನೆ ಪೋಲ್ತುದಱಿಂದವಿದಂ ದಿವ್ಯಚಿತ್ತದೊಳವಧರಿಸಿ ಯುಕ್ತತರವಿಚಾರದೊಳ್ ನೆಗಬ್ದುದೆಂದ ತಂದೆಯು ತಾಯು ಮಾತಿಗೆ ದರಹಸಿತ ವದನಾರವಿಂದನಾಗಿರ್ದುದಱಿಂದಮನಕ್ಷರವ್ಯಕ್ತಮಪ್ಪೊಡಂಬಡನಂ ವಿಶ್ವಸೇನಪ್ರಮುಖಸೇನಾಭಿಜ್ಞಾನತೆಯಿಂ ರಾಜಲೋಕಮಱಿದತ್ಯುತ್ಸುಕರಾಗಿ ಶಶಿವಂಶಕೇತುಗೆ ರಾಜ್ಯಾಭಿಷೇಕಂಗೆಯ್ಯೆ—

ಕಂ॥ ಸರಸೀ ಸರಿತ್ಸಮುದ್ರೋ .
ತ್ಕರಂಗಳಿಂ ತಂದು ಕನಕಕಳಶದ ನೀರ್ಗಳ್
ಸುರಿದುವು ವಿಭುಶಿರದೊಳ್ ಶೈ
ಲರಾಜಮಸ್ತಕದೊಳೆಱಗಿದಬ್ದಜಲಂಬೋಲ್ ॥ ೧೦೩ ॥

ವ॥ ಅಂತು ರಾಜ್ಯಾಭಿಷೇಕಂಗೆಯ್ದಿಂ ಬಱಿಯಂ—

ಕಂ॥ ಎತ್ತಿದ ಪಟ್ಟಮುಮಂ ಕವಿ
ದುತ್ತಮಮಕುಟಮುಮನುತ್ತಮಾಂಗದೊಳಾಂತುಂ
[1][ಪೆ][1]ತ್ತರ ಬಸಿ[2]ರ್ಗಂ[2] ಪಟ್ಟಮ
ನೆತ್ತಿಸಿದಂ ಮಕುಟಬದ್ಧರಿಂ ಜಿನಚಂದ್ರಂ ॥ ೧೦೪ ॥

---

೧೦೧. ಅಕೃತ್ರಿಮ ಜಿನಾಲಯಗಳಿರುವುವೆಂಬ ಕಾರಣದಿಂದ ಮೇರುಗಿರಿಗೆ ದೇವತೆಗಳು ನಮಸ್ಕರಿಸುವಂತೆ ನಿನಗೆ ತಾಯ್ತಂದೆಗಳಾಗಿದ್ದ ಕಾರಣ ದೇವೇಂದ್ರನ ಕಿರೀಟ ನಮಗೆ ಬಾಗಿ ನಮಸ್ಕರಿಸಿತು.

೧೦೨. ನಿನ್ನ ಮಹಿಮೆ ಮೂರೂ ಲೋಕಗಳ ಪ್ರಭುತ್ವಕ್ಕೆ ಆಸ್ಪದವಾದುದು. ಇದಕ್ಕಿಂತ ಹೆಚ್ಚಿನ ಮಹಿಮೆ ಯಾರಿಗುಂಟು? ಇದು ನಿನಗೆ ಆಜನ್ಮವಾಗಿ ಬಂದುದು. ಸಮಸ್ತ ದೇವಲೋಕ, ಮರ್ತ್ಯಲೋಕ, ನಾಗಲೋಕಗಳನ್ನು ಆಳುವ ಮಹಾತ್ಮನೆ, ಈಗಲಾದರೂ ನೀನು ನಿನ್ನ ಈ ರಾಜ್ಯಭಾರವನ್ನು ವಹಿಸಿಕೊ.

ವ॥ ಮುನಿಯಾದವನಿಗೆ ಮುನಿಸಿಕೊಳ್ಳಲು ಹೇಳಿದರೆಂಬ ನಾಡನುಡಿಯಂತೆ ನಮ್ಮ ಮಾತು ತೋರಬಹುದು. ನಿನ್ನ ದಿವ್ಯವಾದ ಚಿತ್ತದಲ್ಲಿ ಇದನ್ನು ಯೋಚಿಸು; ನಿನಗೆ ಯೋಗ್ಯವೆನಿಸಿದಂತೆ ಮಾಡು" ಹೀಗೆ ನುಡಿದ ತಾಯಿತಂದೆಗಳ ಮಾತಿಗೆ ಕುಮಾರನು (ಮರುಮಾತಾಡದೆ) ಸುಮ್ಮನೆ ನಸುನಕ್ಕನು. ಇದು ಮಾತಿಲ್ಲದೆ ನೀಡಿದ ಅನುಮತಿಯೆಂದು ವಿಶ್ವಸೇನಮಹಾರಾಜನೂ ರಾಜಪರಿವಾರವೂ ಅರಿತುಕೊಂಡು ಆತನಿಗೆ ಪಟ್ಟಾಭಿಷೇಕ ಮಾಡಲು ಉದ್ಯುಕ್ತರಾದರು.

೧೦೩. ಗಿರಿರಾಜನ ಶಿಖರದ ಮೇಲೆ ಮೋಡಗಳು ಮಳೆಗರೆಯುವಂತೆ, ಕಡಲಿನಿಂದಲೂ ತೊರೆಗಳಿಂದಲೂ ತಂದ ನೀರನ್ನು ಚಿನ್ನದ ಕಲಶಗಳಲ್ಲಿ ತುಂಬಿ ಆತನ ತಲೆಯಮೇಲೆ ಎರೆದರು.

ವ॥ ಹೀಗೆ ರಾಜ್ಯಾಭಿಷೇಕ ಮಾಡಿದ ಬಳಿಕ—

೧೦೪. ರಾಜ್ಯಪಟ್ಟವನ್ನು ಕಟ್ಟಿಕೊಂಡು ಕಿರೀಟಧಾರಿಯಾದ ಕುಮಾರನು ತನ್ನನ್ನು ಹೆತ್ತವರ ಗರ್ಭಕೂ ಮುಕುಟಬದ್ಧ ರಾಜರಿಂದ ಪಟ್ಟಕಟ್ಟಿಸಿದನು.

---

1. ಟಿ (ಮ) 2. ಗರ್ಭ್ಯಂ (ಅ)

ವ॥ ಮತ್ತಂ—

ಕಂ॥ ಏನಾತೊ ಕೋಟಿ ಕೋಟಿ
ಗ್ರಾಮಾಧಿಪರೆಱಗೆ ಮುಂದೆ ನುಡಿದು ಜಗಚ್ಛೂ
ಡಾಮಣಿಗೆ ಮಕುಟಬದ್ಧಮ
ಹಾಮಂಡಳಪತಿಗಳಾದರೆಣ್ಬಾಸಿರ್ವರ್ ॥ ೧೦೫ ॥

ಬಲ್ಲರಿಗೆ ದಿವ್ಯಸಂಭವ
ಮಲ್ಲದೆ ದೊರೆಗರ್ಭಸಂಭವಂಗ[1]ಳ್ಗಿಲ್ಲೆ[1]
[2]ಲ್ಲೆಲ್ಲಿಯು[2]ಮೆನೆ ಪಿರಿದುಂ ತಲೆ
ವಲ್ಲಿದುವಱುವತ್ತುಸಾಸಿರಂ ಮದಕರಿಗಳ್ ॥ ೧೦೬ ॥

ಅಕ್ಷೂಣರಥಂ ತ್ರಿಂಶ
ಲ್ಲಕ್ಷಂ ಹರಿ ಷಷ್ಟಿಲಕ್ಷಮಾಪಾದಾತಂ
ಲಕ್ಷಾಲಕ್ಷಮದಂ ಪ[ರಿ]
ವೀಕ್ಷಿಸಲರಿದುಱಿದಿರ್ಚಿ ಕಾದುವರೊಳರೇ ॥ ೧೦೭ ॥

ವ॥ ತದನಂತರಂ—

ಮ॥ ಬಲವದ್ರಾಜಿತ ರಾಜಕಪ್ರಭೃತಿ ಕೃತ್ಯಾಕೃತ್ಯಪಕ್ಷಕ್ಕಮಾ
ತ್ಮಲಸನ್ಮಂಡಲಮಂತ್ರವಂ ತೆಗೆ ಮನಂ ಮೆಯ್ದಾರ್ದಾದೇವನು
ಜ್ಜ್ವಲತತ್ತ್ವಾಗಮನಕ್ಕೆ ತನ್ನ ತನುವಂ ತಂದಿರ್ದುವೋನೆಯ್ದೆ ಮಂ
ಡಲನಾಥತ್ವಮನೆಯ್ದಿದಂ ಸುಕೃತಿಗಾಪಾಡ್ಗುಣ್ಯಮೇಂ ಬಾಟಿಸಿಯೋ ॥ ೧೦೮ ॥

ವ॥ ಮತ್ತಮಾರಾಜ್ಯಾಶ್ರಮಂ ಮುನೀಶ್ವರಂಗೆ—

ವ॥ ಮತ್ತು—

೧೦೫. (ಆ ವೈಭವವನ್ನು) ಏನೆಂದು ಹೇಳುವುದು! ಕೋಟಿಕೋಟಿ ಗ್ರಾಮಾಧಿಪತಿಗಳು ಬಂದು ನಮಸ್ಕರಿಸಿದರು. ಎಂಟು ಸಾವಿರ ಮಕುಟಬದ್ಧ ಮಹಾಮಾಂಡಲಿಕರು ಮುಂದೆ ಬಂದು ಹೊಗಳಿದರು.

೧೦೬. "ಈ ಆನೆಗಳಿಗೆ ದಿವ್ಯಸಂಭವ (ದೇವಲೋಕದ) ಆನೆಗಳೆ ಸರಿಯಲ್ಲದೆ ಈ ಲೋಕದವು ಸರಿಯಾಗಲಾರವು" ಎಂಬಂತಹ ಶ್ರೇಷ್ಠವಾದ ಅರವತ್ತು ಸಾವಿರ ಮದಗಜಗಳು ಆತನ ಸೇನೆಯಲ್ಲಿದ್ದುವು.

೧೦೭. ಉತ್ಕೃಷ್ಟವಾದ ರಥಗಳು ಮೂವತ್ತು ಲಕ್ಷ; ಕುದುರೆಗಳು ಅರವತ್ತು ಲಕ್ಷ; ಕಾಲಾಳುಗಳು ಲಕ್ಷಲಕ್ಷ. ಈ ಸೇನೆಯನ್ನು ನೋಡುವುದೆ ಅಸಾಧ್ಯ; ಇನ್ನು ಇದಿರಿಸಿ ಕಾದಾಡುವವರು ಉಂಟೆ?

ವ॥ ಆಮೇಲೆ—

೧೦೮. ಬಲಿಷ್ಠರಾದ ರಾಜರೊಡನೆ ಅನುಸರಿಸಬೇಕಾದ (ಅವರನ್ನು ಆಶ್ರಯಿಸುವುದು ಅಥವಾ ಸೋಲಿಸಿ ಹತ್ತಿಕ್ಕುವುದು ಮೊದಲಾದ) ರಾಜನೀತಿಯ ಕಾರ್ಯಗಳಿಗೆ ಮನಸ್ಸುಗೊಡದೆ, ಆತನು ಉಜ್ಜ್ವಲವಾದ ತತ್ತ್ವಾಗಮಕ್ಕೇ ತನ್ನ ದೇಹವನ್ನು ಮೀಸಲಾಗಿಟ್ಟದ್ದನು. ಹಾಗಿದ್ದರೂ ಆತನು ಎಲ್ಲ ರಾಜಮಂಡಲಗಳಿಗೂ ಅಧಿಪತಿಯಾದನು. ಪುಣ್ಯವಂತನಾದವನಿಗೆ ಷಾಡ್ಗುಣ್ಯವೇತಕ್ಕೆ ಬೇಕು?

ವ॥ ರಾಜ್ಯವೆಂಬುದು ಆತನಿಗೊಂದು ಆಶ್ರಮ; ಅಲ್ಲಿ ಆತನು ಮುನೀಶ್ವರನಾಗಿದ್ದನು. ಆತನಿಗೆ—

---

1. ಳ್ಗಿಲ್ಲಿಯು (ಅ) 2. ಮೆಯ್ದುಮೆನೆ (ಅ)

ಮ॥ ಅರಿಭೂಪಾಳಕರಿಲ್ಲ ಮಧ್ಯಮನೃಪೋದಾಸೀನರಿಲ್ಲಾ ಮಹೀ
ಶ್ವರನುಂತುಂ ವಿಜಿಗೀಷು ಚಾರರಹಿತಂ ವಿಶ್ವೇಕ್ಷಣಂ ವೃದ್ಧಿಗೋ
ಚರಸೇವಾನುತದೂರತತ್ವವಿನಯಂ ಶಾಂತೀಶ್ವರಂ ನಿತ್ಯಶಾಂ
ತರಸಂ ಭೂಮಿಪಧರ್ಮಶಾಸನಮಿದೇನನ್ಯೋನ್ಯವೈರುಧ್ಯಮೋ ॥ ೧೦೯ ॥

ವ॥ ಅಂತುಮಲ್ಲದೆ—

ಮ॥ ಸ್ರ॥ ಉಪಮಾತೀತಂ ಜಗಕ್ಕದ್ಭುತಮೊದವೆ ಪಯೋರಾಶಿಯಂ ತಾಗೆ ತದ್ಭೂ
ಮಿಪಶಾಂತಂ ಕ್ಷತ್ರತೇಜಂ ಹಿಮಮಳುರ್ವಪೊಲಬ್ಬಂಗಳಂ ಗರ್ವಮದ್ಭೂ
ಮಿಪರಂ ತಳ್ತಳ್ವಿಕೊಂಡತ್ತದು ಪಿರಿದೆಸೆವಂ ದೇವದೇವಂಗೆ ಮಾಡಿ
ತ್ತಪವರ್ಗಶ್ರೀಯನೇಂ ಶಾಂತತೆ ಬಹುಗುಣಮೋ ನೀತಿಶಾಸ್ತ್ರೋಪದಿಷ್ಟಂ ॥ ೧೧೦ ॥

ಕಂ॥ ಮುಂತಿರೆ ಕೂರ್ಪು ನಯಜ್ಞತೆ
ಪಿಂತಿರೆ ರಿಪುಮಂಡಳಂಗಳಂ ಕೊಂಡಿರೆ ನಿ
ಶ್ಚಿಂತಮನಸಿ ಕೂರ್ಪಂ ತ
ರ್ಪಂತುಪಶಮಮಿರ್ದುದಾನರೇಂದ್ರೋತ್ತಮನೊಳ್ ॥ ೧೧೧ ॥

ವ॥ ಮತ್ತಮಾಪರಮಪುಣ್ಯಮೂರ್ತಿ(ಯ) ಯಶೋರಾಜ್ಯದೊಳ್—

ಕಂ॥ ರಾಜವತಿಯಾಯ್ತು ರಿಪುಮಹಿ
ರಾಜನ್ವತಿಯಾಯ್ತು ತನ್ನ ಧರೆಯೆನೆ ವಿನಮ
ದ್ರಾಜಕನಳವಡಿಸಿದನಧಿ
ರಾಜತೆಯಂ ಶಾಂತಿನಾಥನಖಿಳಾವನಿಯೊಳ್ ॥ ೧೧೨ ॥

---

೧೦೯. ಶತ್ರುರಾಜರಿಲ್ಲ; ಮಧ್ಯಮರಿಲ್ಲ; ಉದಾಸೀನರೂ ಇಲ್ಲ. ಹೀಗಿದ್ದರೂ ಆ ರಾಜನು ವಿಜಿಗೀಷುವೇ ಆಗಿದ್ದನು; ಗುಪ್ತಚಾರರಿಲ್ಲದಿದ್ದರೂ ಆತನಿಗೆ ಸಮಸ್ತವೂ ತಿಳಿಯುತ್ತಿತ್ತು; ಆತನು ವೃದ್ಧರ ಸೇವೆಯನ್ನು ಮಾಡುತ್ತಿರಲಿಲ್ಲವಾದರೂ ವಿನಯಶಾಲಿಯಾಗಿದ್ದನು; ಶಾಂತೀಶ್ವರನು ಸದಾ ಶಾಂತನಾಗಿದ್ದರೂ ಭೂಮಿಗೆ ಒಳ್ಳೆಯ ಶಾಸಕನಾಗಿದ್ದನು. ಇದೆಂತಹ ಪರಸ್ಪರ ವಿರುದ್ಧ ಸ್ಥಿತಿ! (ರಾಜನೀತಿಶಾಸ್ತ್ರದ ಮೇರೆಗೆ ರಾಜಮಂಡಲಗಳು ೧೨. ಮಧ್ಯದಲ್ಲಿರುವ ಮುಖ್ಯರಾಜನು ವಿಜಿಗೀಷು. ಅವನಿಗೆ ಸಹಜ ವಿರೋಧಿಯಾದ ಪ್ರಬಲರಾಜ "ಅರಿ"; ನಡುವೆ ಇರುವ ರಾಜ ಮಧ್ಯಸ್ಥ; ವಿಜಿಗೀಷು ಅರಿಗಳ ಸಂಬಂಧವೆ ತನಗಿಲ್ಲವೆಂಬಂತೆ ತನ್ನಷ್ಟಕ್ಕೆ ಇರುವವನು "ಉದಾಸೀನ". ಈ ನಾಲ್ವರಿಗೂ 'ಮಿತ್ರ' ಹಾಗು 'ಮಿತ್ರಾಮಿತ್ರ' ಎಂಬ ರಾಜರಿರುವರು. ಹೀಗೆ ಒಟ್ಟು ಹನ್ನೆರಡು ರಾಜಮಂಡಲಗಳು)

ವ॥ ಅದೂ ಅಲ್ಲದೆ—

೧೧೦. ಚಳಿಗಾಲದ ತಂಪು ಕಮಲಗಳನ್ನೆಲ್ಲ ಒಣಗಿಸುವಂತೆ, ಸಮುದ್ರಪರ್ಯಂತವಾದ ಭೂಮಿಯಮೇಲಿನ ಎಲ್ಲ ಗರ್ವಿಷ್ಠರಾಜರನ್ನೂ ಶಾಂತಿರಾಜನ ಶಾಂತವಾದ ಕ್ಷಾತ್ರತೇಜವು ಆಕ್ರಮಿಸಿ ಅವರ ಗರ್ವವನ್ನು ಸುಟ್ಟುಹಾಕಿತು; ದೇವಾಧಿದೇವನಾದ ಆತನಿಗೆ ಮೋಕ್ಷಸಂಪತ್ತನ್ನೂ ಗಳಿಸಿತು ನೀತಿಶಾಸ್ತ್ರದಲ್ಲಿ ಹೇಳಿದ ಶಾಂತತೆಯೆಂಬುದು ಅನೇಕ ಬಗೆಯಾಗಿ ಪ್ರಯೋಜಕವಾಗುತ್ತದೆ.

೧೧೧. ಮುಂದೆ ಕಠೋರವಾದ ತೀಕ್ಷ್ಣತೆ, ಹಿಂದೆ ರಾಜನೀತಿಯ ಚಾತುರ್ಯ—ಇವುಗಳಿಂದಾಗಿ ಆತನ ಖಡ್ಗವು ನಿರಾಯಾಸವಾಗಿ ಶತ್ರುಮಂಡಲಗಳನ್ನೆಲ್ಲ ವಶಪಡಿಸಿಕೊಂಡಿತು. ಹೀಗೆ "ಕೂರ್ಪ"ನ್ನು (೧ ತೀಕ್ಷ್ಣತೆ, ೨. ಸ್ನೇಹ) ತರುವಂತೆ ಆ ರಾಜೋತ್ತಮನಲ್ಲಿ ಶಾಂತವೃತ್ತಿಯಿತ್ತು.

ವ॥ ಆ ಮಹಾಪುಣ್ಯಮೂರ್ತಿಯ ಯಶೋಮಯ ರಾಜ್ಯದಲ್ಲಿ—

೧೧೨. ಶತ್ರುರಾಜನ ಭೂಮಿ ರಾಜವತಿ (ಹೆಸರಿಗೆ ಮಾತ್ರ ರಾಜನುಳ್ಳದು)ಯಾಯಿತು; ಈತನ ಭೂಮಿ ರಾಜನ್ವತಿ (ಉತ್ತಮ ರಾಜನ ಆಳ್ವಿಗೆ ಒಳಪಟ್ಟುದು) ಆಯಿತು; ಹೀಗೆ ಶಾಂತಿನಾಥನು ಸಮಸ್ತ ಭೂಮಿಯಲ್ಲಿ ಎಲ್ಲ ರಾಜರನ್ನು ಮಣಿಸಿ ಅಧಿರಾಜನಾದನು

ಉ॥ ಕೋಪದ ತಣ್ಪು ತಣ್ಪುವೆರಸಂಬರದೊಳ್ ಸಿಡಿಲಂತೆ ಸರ್ವದಿ
ಗ್ವ್ಯಾಪಕಮಾಗೆ ಗುಪ್ತಮಕರಪ್ರಕರಂ ಶರಧೀಶನಂತರ
ದ್ವೀಪಮನೆತ್ತಿಕೊಳ್ವತೆಱದಿಂ ಸಮಸಿದ್ಧಿಯೆ ಸಿದ್ಧಿಯಾಗೆ ತ
ದ್ಭೂಪತಿ ಕೊಂಡನನ್ಯಮಹಿಕಾಂಡಮನುಂಡಿಗೆ ಸಾಧ್ಯಮಪ್ಪಿನಂ ॥ ೧೧೩ ॥

ಕಂ॥ ಅಹಿತರ್ ಸಂಧಿಯುಮಂ ವಿ
ಗ್ರಹಮುಮನಾತನೊಳೊಡರ್ಚರೇಕೆನೆ ಸರ್ವ
ಸ್ವಹರಣಮಂ ಸಂಧಿ ಶಿರಃ
ಪ್ರಹರಣಮಂ ತಮಗೆ ವಿಗ್ರಹಂ ಮಾಡ್ಪುದಱಿಂ ॥ ೧೧೪ ॥

ವ॥ ಬಂದು ಲೋಕಮೆಲ್ಲಂ ಪೊಗೞೆ ಮತ್ತೊಂದು ಶುಭದಿನದೊಳ್ ಸಿಂಹಾಸನಾ[ಸೀನ]ನಾಗಿರ್ದ ಜಿನಚಂದ್ರದೇವನಂ ಕಂಡಾಯುಧಾಧ್ಯಕ್ಷನಷ್ಟಾಂಗಮೆಱಗಿ ಪೊಡೆವಟ್ಟು ಮುಂದೆ ನಿಂದು ಮುಕುಳಿತಕರಕಮಳನಾಗಿ—

ಮ॥ ದಿವಮೆಂತಂತೆ ಶತಾರಮಗ್ರಿಮಸಹಸ್ರಾರಂ ಸಹಸ್ರಾರಮು
ಪ್ರವಿಲಕ್ಷ್ಯಂ ದಿನಪೋಪಮಾನವಳಯಂ ಜಾಜ್ವಲ್ಯಮಾನಂ ಮರು
ನ್ನಿವಹಾನಂದಕೃತಸ್ವನಂ ಕುಸುಮವೃಷ್ಟ್ಯಗ್ರೇಸರಂ ಬಂದುದಿಂ
ದು ವಿಯಚ್ಚಕ್ರದಿನಸ್ತ್ರಶಾಲೆಗೆ ಮಹಾಚಕ್ರಂ ಮಹೀವಲ್ಲಭಾ ॥ ೧೧೫ ॥

ಕಂ॥ ಎಂದೀಬಿನ್ನಪಮನ[1]ವ[1]
ಸ್ಪಂದಮನಂತೆಯ್ದೆ ಕೇಳ್ದು ಮನುಜೋತ್ತಮನಿ
ಸ್ಪಂದಮತಿ ಕೇಳದಂತಿ
ರ್ದಂದಪಗತಚಳನಜಳಧಿಯಂ ವಿಭು ಪೋಲ್ತಂ ॥ ೧೧೬ ॥

೧೧೩. ಕೋಪದ ಆಧಿಕ್ಯವು ತಂಪಾಗಿ ಆಕಾಶದೊಳಗಿನ ಸಿಡಿಲಂತೆ ಸಮಸ್ತ ದಿಕ್ಕುಗಳನ್ನೂ ಆಕ್ರಮಿಸಿತು. ಮಕರಗಳನ್ನು ಒಳಗೆ ಅಡಗಿಸಿಕೊಂಡ ಸಮುದ್ರವು ಮಧ್ಯದ ದ್ವೀಪವನ್ನು ಎತ್ತಿಕೊಳ್ಳುವ ಹಾಗೆ ಆ ಮಹಾರಾಜನು ಅರಿಭೂಪತಿಗಳ ರಾಜ್ಯವನ್ನೆಲ್ಲ ಸಾಮದಿಂದಲೆ ಗೆದ್ದು ತನ್ನ ಅಂಕಿತಕ್ಕೆ ಒಳಪಡಿಸಿಕೊಂಡನು.

೧೧೪. ಶತ್ರುಗಳು ಆತನೊಡನೆ ಸಂಧಿಯನ್ನಾಗಲಿ ವಿಗ್ರಹ (ಯುದ್ಧ)ವನ್ನಾಗಲಿ ಮಾಡಿಕೊಳ್ಳಲು ಹೊರಡುತ್ತಿರಲಿಲ್ಲ. ಏಕೆಂದರೆ ಸಂಧಿಮಾಡಿಕೊಂಡರೆ ಎಲ್ಲವನ್ನೂ ಕಿತ್ತುಕೊಳ್ಳುತ್ತಾನೆ; ಯುದ್ಧ ಮಾಡಿದರೆ ತಲೆಯೆ ಹೋಗುತ್ತದೆ.

ವ॥ ಹೀಗೆಂದು ಲೋಕವೆಲ್ಲ ಹೊಗಳುತ್ತಿತ್ತು. ಹೀಗಿರುತ್ತ ಒಂದು ಶುಭದಿನದಲ್ಲಿ ಸಿಂಹಾಸನದಲ್ಲಿ ಕುಳಿತ ಜಿನೇಂದ್ರನನ್ನು ಕಂಡು ಆಯುಧಾಧ್ಯಕ್ಷನು ಸಾಷ್ಟಾಂಗ ನಮಸ್ಕಾರ ಮಾಡಿ, ಮುಂದೆ ನಿಂತು ಕೈಮುಗಿದುಕೊಂಡು ಹೀಗೆ ಬಿನ್ನವಿಸಿದನು :

೧೧೫. "ಸ್ವರ್ಗಲೋಕದಂತೆ ಶತಾರ (ಮಧ್ಯದಲ್ಲಿ ನೂರು ಅರಗಳುಳ್ಳದು) ಅಂಚಿನಲ್ಲಿ ಸಹಸ್ರಾರ (ಸಾವಿರಾರು ಮೊನೆಗಳುಳ್ಳದು); ಸೂರ್ಯನಂತೆ ಜಾಜ್ವಲ್ಯವಾಗಿ ನೋಡಲು ಅಸದಳ; ಹೀಗಿರುವ ಮಹಾಚಕ್ರವೊಂದು ದೇವತೆಗಳ ಉತ್ಸಾಹಧ್ವನಿ ಹಾಗು ಪುಷ್ಪವೃಷ್ಟಿ ಸಹಿತವಾಗಿ ಆಕಾಶಮಂಡಲದಿಂದ ಇಳಿದು ನಮ್ಮ ಆಯುಧಶಾಲೆಗೆ ಬಂದಿರುವುದು."

೧೧೬. ಹೀಗೆ ಆತನು ಮಾಡಿದ ಬಿನ್ನಹವನ್ನು ನಿರ್ವಿಕಾರವಾಗಿ ಕೇಳಿದನು. ಕೇಳಿಯೂ ಕೇಳದವನಂತೆ ನಿರುದ್ವಿಗ್ನನಾದ ಆ ಪ್ರಭು ತೆರೆಗಳ ಅಲುಗಾಟವಿಲ್ಲದೆ ಶಾಂತವಾದ ಸಮುದ್ರದಂತೆ ಕಂಡನು.

1. ನ (ಅ)

ವ॥ ಅಂತುದಾಸೀನಮಾನಸಂ ಮಸಕಮಿಲ್ಲದ ಸಾರ್ವಭೌಮಂ ಪೇರಡ್ಡಮಾಗಿ ಕೆಲದ ಚಕ್ರಾಯುಧನೊಳ್ ತಮ್ಮಂಗಬಾಹ್ಯವಸ್ತುವಂ ಪರಿತಃಮಾಡುತ್ತಿರೆ ಮತ್ತಂ ಕುಲವೃದ್ಧರ್ ತದೀಯಾಭಿಮುಖರಾಗಿ ಬಿನ್ನಪಂಗೆಯ್ವೊಡವರುಪರೋಧದಿಂದೆಂತಾನುಂ ಮೊಗಮಿತ್ತು ನೋಡಿ ಪೇಳಿಮದರ್ಕೇಗೆಯ್ವುದೆನೆ ಮುಕುಳಿತಪಾಣಿಪಂಕರುಹರಾಗಿ —

ಕಂ॥ ಮಂಡಳಪತಿಯೈ ಮುಂ ಷ
ಟ್ಖಂಡಕ್ಷ್ಮಾಪತಿಯೆ ಯಾಗಳದಱಿಂದಮದೇಂ
ಭಂಡಮೆನಗೆನ್ನದೇಱ್ ಒಗೆ
ಗೊಂಡರ್ಚಿಸು ಚಕ್ರರತ್ನಮಂ ಕುರುತಿಲಕಾ ॥ ೧೧೭ ॥

ವ॥ ಅದಲ್ಲದೆಯುಂ ಪೂರ್ವಚಕ್ರಾಯುಧರನುಕ್ರಮಮಾನಱಿಯೆ ಬಿನ್ನಪಂಗೆಯ್ವದಱಿಂದೆಮೇಲಪ್ಪುದಂ ದೇವರ ಚಿತ್ತಮಱಿಗುಂ —

ಕಂ॥ ಎನೆ ದರಹಸಿತಾಸ್ಯಂ ಶಾಂ
ತಿನಾಥನೆಂತೆಂತೊ ಚಕ್ರಮಂ ಪೂಜಿಸಿ ಮು
ನ್ನಿನ ಚಕ್ರವರ್ತಿಗಳ ತೆಱ
ದಿನಾಮುಮೆಱಗುವುದು ನಿಮಗೆ ಹೃದಯಂಗಮಮೇ ॥ ೧೧೮ ॥

ಕುಲವೃದ್ಧರಿರೆಂದುಮನಾ
ಕುಲವೃದ್ಧಿವಿಶೇಷವಿದ್ಯರಿರ್ ನಿಮ್ಮ ವಚೋ
ಜಲಮಾಲವಾಲಜಲಕೃತ
ವಿಲಾಸನೃಪಭೂರುಹಕ್ಕೆ ಹಿತಕರಮೆ ವಲಂ ॥ ೧೧೯ ॥

ವ॥ ಹಾಗೆ ಆ ಸಾರ್ವಭೌಮನು ಆ ವಿಷಯದಲ್ಲಿ ಎಷ್ಟೂ ಉತ್ಸಾಹ ತೋರದೆ ಮೊಗದಿರುಹಿ ಪಕ್ಕದಲ್ಲಿದ್ದ ತನ್ನ ತಮ್ಮ ಚಕ್ರಾಯುಧನೊಡನೆ ಬೇರೇನೊ ವಿಷಯವಾಗಿ ಮಾತಾಡುತ್ತಿದ್ದನು. ಆಗ ಕುಲದ ಹಿರಿಯರು ಆತನಿಗೆ ಎದುರಾಗಿ ನಿಂತು ಬಿನ್ನಹ ಮಾಡಿದರು. ಅವರ ಒತ್ತಾಯಕ್ಕೆ ಕಟ್ಟುಬಿದ್ದು ಮೊಗದಿರುಹಿ ನೋಡಿ "ಹೇಳಿ, ಅದಕ್ಕೇನು ಮಾಡಬೇಕು?" ಎಂದನು. ಅವರು ಕೈಮುಗಿದು ಹೀಗೆಂದರು :

೧೧೭. "ನೀನು ಮಂಡಳಾಧಿಪತಿ; ಈಗಾಗಲೆ ಷಟ್ಖಂಡ ಭೂಮಿಗೂ ಅಧಿಪತಿಯಾಗಿರುವೆ. ಆದುದರಿಂದ ಇದರಿಂದೇನು ಪ್ರಯೋಜನವೆಂದು ಕಡೆಗಣಿಸದೆ ಏಳು. ಕುರುಕುಲಭೂಷಣನೇ, ಮನಃಪೂರ್ವಕವಾಗಿ ಚಕ್ರರತ್ನವನ್ನು ಪೂಜಿಸು.

ವ॥ ಅದಲ್ಲದೆ, ಪೂರ್ವಕಾಲದ ಚಕ್ರವರ್ತಿಗಳು ಅನುಸರಿಸುವ ಕ್ರಮವೆಂದು ಇದನ್ನು ಹೇಳಿದೆವು. ಇದರ ಮೇಲೆ ನಿನ್ನ ಚಿತ್ತ."

೧೧೮. ಅವರ ಮಾತನ್ನು ಕೇಳಿ ಶಾಂತಿನಾಥನು ಹೀಗೆಂದನು : "ಈ ಮೊದಲು ಆಗಿಹೋದ ಚಕ್ರವರ್ತಿಗಳ ಹಾಗೆ ಹೇಗೆಹೇಗೊ ಚಕ್ರವನ್ನು ಪೂಜಿಸಿ ನಾವೂ ಅದಕ್ಕೆ ನಮಸ್ಕರಿಸುವುದು ನಿಮಗೆ ಇಷ್ಟವೆ?

೧೧೯. ನೀವು ಕುಲಕ್ಕೆ ಹಿರಿಯರು; ಸೌಖ್ಯವೃದ್ಧಿ ವಿಶೇಷವೇನು, ಹೇಗೆ ಎಂಬುದನ್ನು ಬಲ್ಲವರಾಗಿದ್ದೀರಿ; ಗಿಡುವಿಗೆ ಪಾತಿಯ ನೀರು ಹೇಗೊ ಹಾಗೆ ಅರಸನಿಗೆ ನಿಮ್ಮ ಮಾತು ಹಿತಕರವೇ ಸರಿ.

ಕಂ॥ ಮುದುಗಣ್ಗಳುಚಿತಮಂ ನುಡಿ
ವುದು ದಲ್ [1]ಸ್ವಮತೇ ನಿವಾರಕಾಭಾವಾತೆಂ[1]
ಬುದನೆ ಬಗೆದುಚಿತಮಂ ಬಗೆ
ಯುದೆ ನುಡಿದೊಡಮೆಮಗೆ ಲಂಘನೀಯಮಪೇಯಂ ॥ ೧೨೦ ॥

ಬಗೆಗೆ[2]ಱಗೆ[2] ಸಿದ್ಧಪರಮೇ
ಷ್ಠಿಗಳಲ್ಲದೆ ರಮ್ಯರಲ್ಲರುೞಿದ ಸಮಸ್ತೋ
ರ್ವಿಗಳೆಮ್ಮಂಘ್ರಿಯುಗಕ್ಕೆಱ
ಗುಗುಂ ಸ್ಫುರದ್ದೀಪವರ್ತಿನಿಧಿಗೆಱಗುವವೋಲ್ ॥ ೧೨೧ ॥

ವ॥ ಅದಲ್ಲದೆಯುಮಿಾ ಶರೀರದೊಳ್ ಘಾತ್ಯಘಾತಿದುರಿತ ವಿನಾಶಮುಮನಂತಚತುಷ್ಟಯಮುಂ ಕೇವಲಲಬ್ಧಿಲಾಭಮುಮಪ್ಪುದ ನಱಿದುಮಿಾಚಕ್ರಲೋಹಖಂಡಕ್ಕಂ ಕುಡುಗಲ್ಗಮೆಱಗಿ ಮಂಗೊಳಿಪುದಾವುದೆಂ ನೀಮಱಿಪಿದಿರಾಗಿ ಮಹತ್ತರವಚನಮಮೋಘಂ ಮಾನ್ಯಮೆ —

ಚಂ॥ ಎನೆ ಯೆನೆ ಚಕ್ರರತ್ನಮಮರಾಳಿವೃತ್ತಂ ಬಲಗೊಂಡು ಶಾಂತಿನಾ
ಥನ ಪದಪಂಕಜಕ್ಕೆಱಗೆ ಮುನ್ನಿದನರ್ಚಿಸು ಪೂಜಿಸೆಂದು ಪೇ
ೞ್ದನುಮೆಱಗೆಂದು ಪೇೞ್ದನುಮಿದಾದಿಯ ಚಕ್ರಿಗಳಂದಮೆಂದು ಪೇ
ೞ್ದನುಮಿದು ಚೋದ್ಯಮೆಂದು ಬೆ[3][ಱ][3]ಗಾಗಿ ನಿಜೋಕ್ತಿಗೆ ತಾಮೆ ನಾಣ್ಚಿದರ್ ॥ ೧೨೨ ॥

ವ॥ ಅಂತಿನಿವಿರಿದಾಶ್ಚರ್ಯಮುಂ ಜಗತ್ಕ್ಷೋಭಮುಮಾಗಿಯಾಚಕ್ರೋತ್ಪತ್ತಿಯುಪ್ಪುದುಮಧಿರಾಜಯಶಶ್ಚಂದ್ರಿಕೆ ಜಿನರಾಜಚಂದ್ರೋದಯದೊಳ್ ಮಸುಳೆಯುಂ ಕನಸಿನೊಳ್ ರಥಾಂಗಧರಯಕ್ಷರೂಪಮುಂ ಕಂಡು ನನಸೆಂದು ತಂತಮ್ಮ ನೆಲೆಗಳೊಳ್ ಪ್ರಶಸ್ತರಾಜಕೋಟಿ ಪೆಳ್ವಳಿಸೆಯುಂ ಇಂತು ನಿರತಿಶಯಪುಣ್ಯಪ್ರಭಾವಭೂತಚಕ್ರೋತ್ಪತ್ತಿ ನಾಡೆಯುಂ ವಿಸ್ಮಯಂಮಾಡೆ ಮಱುದೆವಸಂ ಮುನ್ನಿನ ಚಕ್ರೋತ್ಪತ್ತಿಪೂಜಾನು

---

೧೨೦. ವೃದ್ಧರಾದವರು ಯೋಗ್ಯವಾದ ಮಾತನ್ನೆ ಹೇಳಬೇಕು. ತಮ್ಮ ಮಾತನ್ನು ತೆಗೆದುಹಾಕುವವರು ಯಾರೂ ಇಲ್ಲ ಎಂಬುದನ್ನು ಚೆನ್ನಾಗಿ ಯೋಚಿಸಿ ನುಡಿಯಬೇಕು. ಹಾಗಲ್ಲದೆ ಯೋಗ್ಯತೆಯ ವಿಚಾರಮಾಡದೆ ನೀವು ನುಡಿದರೆ ಅದು ನಮಗೆ ಅಹಿತವಾಗಿ, ಅದನ್ನು ಮೀರಲೇಬೇಕಾಗುತ್ತದೆ.

೧೨೧. ನನ್ನಿಂದ ಎರಗಿಸಿಕೊಳ್ಳುವ ಯೋಗ್ಯತೆ ಸಿದ್ಧರಿಗೆ ಪರಮೇಷ್ಠಿಗಳಿಗೆ ಮಾತ್ರವಲ್ಲದೆ ಉಳಿದವರಿಗೆ ಇಲ್ಲ. ದೀಪದ ಬತ್ತಿ (ನೆಲದಲ್ಲಿರುವ) ನಿಧಾನದ ಎಡೆಗೇ ಎರಗುವಂತೆ ಸಕಲ ಲೋಕ ನಮ್ಮ ಅಡಿಗಳಿಗೆ ಎರಗುವುದು.

ವ॥ ಅದಲ್ಲದೆ, ಈ ನಮ್ಮ ದೇಹ ಘಾತಿ-ಅಘಾತಿ ಕರ್ಮಗಳೆರಡನ್ನೂ ನಾಶಗೊಳಿಸಿದುದು, (ಅನಂತ ಜ್ಞಾನ, ಅನಂತ ದರ್ಶನ, ಅನಂತ ಸುಖ ಹಾಗು ಅನಂತ ವೀರ್ಯವೆಂಬ) ಅನಂತ ಚತುಷ್ಟಯ ಸಂಪನ್ನವಾದುದು, ಕೇವಲ ಲಬ್ಧಿಯನ್ನು ಪಡೆದುದು. ಇದನ್ನು ಅರಿತುಕೊಂಡಿದ್ದರೂ, ಈ ಚಕ್ರವೆಂಬ ಲೋಹದ ತುಂಡಿಗೂ ಕುಡುಗೋಲಿಗೂ ನಮಸ್ಕರಿಸೆಂದು ನೀವು ಹೇಳುವುದಾದರೆ, ನೀವೇ ಬಲ್ಲಿರಿ. ನಮಗೆ ಹಿರಿಯರ ಮಾತು ನಿಶ್ಚಿತವಾಗಿ ಮಾನ್ಯವೇ."

೧೨೨. ಹೀಗೆ ಆತನು ನುಡಿಯುತ್ತಿರುವಾಗಲೆ ಚಕ್ರರತ್ನವು (ತನ್ನ ರಕ್ಷಕರಾದ) ದೇವತೆಗಳ ಸಮೂಹದೊಡನೆ ಶಾಂತಿನಾಥನಿಗೆ ಪ್ರದಕ್ಷಿಣೆ ಹಾಕಿ ಕಾಲಿಗೆರಗಿತು. ಈ ಮೊದಲು ಇದನ್ನು ಪೂಜಿಸೆಂದು ಹೇಳಿದವನೂ, ನಮಸ್ಕರಿಸೆಂದವನೂ, ಇದು ಚಕ್ರವರ್ತಿಗಳ ಸಂಪ್ರದಾಯವೆಂದವನೂ ಇದೇನು ಸೋಜಿಗವೆಂದು ವಿಸ್ಮಿತರಾಗಿ ತಮ್ಮ ಮಾತಿಗೆ ತಾನೆ ನಾಚಿಕೊಂಡರು.

ವ॥ ಹೀಗೆ ಇಷ್ಟೊಂದು ಅದ್ಭುತವಾದ ಜಗತ್ತನ್ನೆ ವಿಭ್ರಮಗೊಳಿಸುವ ಆಶ್ಚರ್ಯವುಂಟಾಗಲಾಗಿ, ಚಂದ್ರೋದಯ ವಾದೊಡನೆ ನಕ್ಷತ್ರಗಳ ಕಾಂತಿ ಮಸುಳುವಂತೆ ಅಧಿರಾಜರ ಯಶಸ್ಸು ಮಸುಕಾಯಿತು; ಕನಸಿನಲ್ಲಿ ಚಕ್ರಧರಯಕ್ಷನ ರೂಪವನ್ನು ಕಂಡು ಅದು ಸತ್ಯವೆಂದೇ ಬಗೆದು ತಂತಮ್ಮ ನಿವಾಸಗಳಲ್ಲಿಯೆ ರಾಜಸಮೂಹವು ಗಾಬರಿಗೊಂಡಿತು; ಹೀಗೆ

---

1. ಸಮತೇ ನಿವಾರಕಾಭಾವಾತ್ತೆಂ (ಅ) 2. ವುಗೆ (ಅ) 3. ರ (ಮ)

ಭಾಷಿಗನಪ್ಪ ಪ್ರಧಾನಂ ನಿಂದಿರ್ದು ಪೂಜಾಪ್ರಸಂಗ ವಿಜ್ಞಾಪನಮುಖರಮುಖನಾಗಿಯುಮತೀತದಿವಸಸ್ವವಚನಕೃತಾರಂಭಕ್ಕೆ ಸಿಗ್ಗಾಗಿ ಚಕ್ರಾಯುಧನಂ ಬಿನ್ನಪಂಗೆಯ್ಯಲ್ವೇಳ್ಪುದುಮಾತಂ ಬಂದು—

ಮ॥ ಶ್ರವಣೋಪಾಂತದೊಳಿರ್ದು ಹಸ್ತತಳಮಂ ವಕ್ತ್ರಾಬ್ಜದೊಳ್ ಸಾರ್ಚಿ ವೈ
ಶ್ರವಣಂ ವಜ್ರಧರಂಗೆ ಬಿನ್ನವಿಸುವಂತಂಭೋಧಿವೇಳಾಪರೀ
ತವನಶ್ರೇಣಿಯನುರ್ವರಾವನಿತೆಯುಂ ಬಾಯ್ಕೇಳಿಸಲ್ವೇಳ್ಪುದೆಂ
ದವನೀವಲ್ಲಭವಲ್ಲಭಾನುಜ(ನು)ದಾತ್ತಂ ಬಿನ್ನಪಂ ಗೆಯ್ವುದುಂ ॥ ೧೨೩ ॥

ವ॥ ಅಪ್ರತಿಹತನಿಜಾಜ್ಞಾರೂಢ ತ್ರೈಲೋಕ್ಯಶೇಖರಂ ತನಗೆ ನಿಸ್ಸಂತಯುಮಾಗಿಯುಪವನ ಪ್ರತಿಕೂಲಪ್ರಿಯಹಿತವಾದಿಯಪ್ಪನದಱ ನಂತೆಗೆಯ್ವೆನೆಂಬುದುಂ ಚಕ್ರಾಯುಧನಾಯುಧಾಧ್ಯಕ್ಷಾಪ್ತ ಪುರುಷರುಮೊಂದೆ ಸರದೊಳ್ ಮಹಾಪ್ರಸಾದಮೆಂದಾಸ್ಥಾನಮಧ್ಯದಿನೆೞ್ದು ಬಂದು ಹಸ್ತಿನಪುರಾಂತರಾಳದೊಳ್ ದಿಗ್ವಿಜಯಘೋಷಣಾಪ್ರವರ್ತನಪರರಾಗಿ ಪೊೞಲ ಪೂರ್ವದಿಗ್ಭಾಗಂಗಳೊಳ್ ಶಿಬಿರ ನಿವೇಶೋಪಕಾರ್ಯವಿರಚನ ಪರರಾಗಿ ಪ್ರಾರಂಭಮಂ ಪಡೆವಧಿನಿಂದಂ ಮಾಡಲ್ವೇೞ್ದು ದಿಗ್ವಿಜಯಭೇರಿಯಂ ಪೊಯ್ಸಿದಾಗಳ್—

ಮ॥ ಮದಮಂ ದಿಗ್ಗಜಮೆತ್ತಿ ಕಟ್ಟೆ ದಿಗಧೀಶರ್ ದೇವದೇವಂಗದಾ
ವುದೊ ಭೂಲೋಕದ ಸಾಧ್ಯಸಾಧನೆಗಳಿಂ ತ್ರೈಲೋಕ್ಯಸಾಮ್ರಾಜ್ಯಸಂ
ಪದುಪೇತಂಗೆನೆ ಬಂದು ಮುಂದೆ ನಿಲೆ ಮೂವತ್ತಿರ್ವರಿಂದ್ರರ್ ಕಲಂ
ಕಿದುವಂತಬ್ಧಿಗಳಂದದೇನೆಸೆದುದೋ ಗಂಭೀರ ಭೇರೀರವಂ ॥ ೧೨೪ ॥

ವ॥ ಅಂತು ದಿಗ್ವಿಜಯಭೇರಿಯ ನಿನಾದದೊಡನೊಡನೆ—

ಅತ್ಯಧಿಕ ಪುಣ್ಯಫಲದಿಂದ ಚಕ್ರರತ್ನ ಹುಟ್ಟಿದುದು ಎಲ್ಲರಿಗೂ ವಿಸ್ಮಯವನ್ನುಂಟುಮಾಡಿತು. ಮರುದಿವಸ "ಪೂರ್ವ ಚಕ್ರವರ್ತಿಗಳಂತೆ ಚಕ್ರಪೂಜೆ ಮಾಡು" ಎಂದು ಹೇಳಿದ ಪ್ರಧಾನನು ಮುಂದೆ ನಿಂತು ದಿಗ್ವಿಜಯಕ್ಕೆ ಹೊರಡಬೇಕೆಂದು ವಿಜ್ಞಾಪಿಸಲು ಬಂದನು; ಆದರೆ ಮುನ್ನಾದಿನ ತಾನು ಆಡಿದ ಮಾತಿಗೆ ಜಿಗುಪ್ಸೆಗೊಂಡು ಈಗ ಮಾತಾಡಲಾರದೆ ಚಕ್ರಾಯುಧನಿಗೇ ಬಿನ್ನಹಮಾಡೆಂದು ತಿಳಿಸಿದನು. ಆಗ ಆತನು ಬಂದು –

೧೨೩. ಶಾಂತೀಶ್ವರನ ಕಿವಿಯ ಬಳಿಗೆ ಬಂದು ಬಾಯಿಗೆ ಕೈಮರೆ ಮಾಡಿಕೊಂಡು ಕುಬೇರನು ದೇವೇಂದ್ರನಿಗೆ ಪಿಸುಮಾತಿನಲ್ಲಿ ಬಿನ್ನವಿಸುವಂತೆ "ಸಮುದ್ರಪರ್ಯಂತವಾದ ಸಮಸ್ತ ಭೂಮಿಯನ್ನೂ ನಿನ್ನ ಆಜ್ಞೆಗೆ ಒಳಪಡಿಸಬೇಕು" ಎಂದು ಬಿನ್ನವಿಸಿದನು.

ವ॥ ಮೂರು ಲೋಕಗಳಲ್ಲಿಯೂ ತನ್ನ ಆಜ್ಞೆ ಅಪ್ರತಿಹತವಾಗಿ ನಡೆಯುತ್ತಿದ್ದರೂ ಕೂಡ ಇದು ತನಗೆ ಪ್ರತಿಕೂಲವಲ್ಲದಂತೆ ಯಾವಾಗಲೂ ಪ್ರಿಯವಾಗಿಯೂ ಹಿತವಾಗಿಯೂ ನುಡಿಯುವ ತಮ್ಮನ ಬಿನ್ನಹ ಪಾದುದರಿಂದ "ಸರಿ ಹಾಗೆಯೆ ಮಾಡುವೆನು" ಎಂದು ಆ ತ್ರಿಭುವನ ಚೂಡಾಮಣಿಯು ಒಪ್ಪಿದನು. ಚಕ್ರಾಯುಧಕುಮಾರನೂ, ಆಯುಧಾಧ್ಯಕ್ಷನೂ, ಆಪ್ತಪುರುಷರೂ ಏಕಕಂಠರಾಗಿ "ಅನುಗ್ರಹವಾಯಿತು" ಎಂದು ಓಲಗಶಾಲೆಯಿಂದ ಎದ್ದುಹೋಗಿ ಹಸ್ತಿನಪುರದಲ್ಲೆಲ್ಲ ದಿಗ್ವಿಜಯ ಪ್ರಾಸ್ತಾನವನ್ನು ಘೋಷಿಸಿ, ಪಟ್ಟಣದ ಪೂರ್ವ ದಿಗ್ಭಾಗದಲ್ಲಿ ಶಿಬಿರವನ್ನು ನಿರ್ಮಿಸೆಂದು ಸೇನಾಪತಿಗೆ ಆಜ್ಞಾಪಿಸಿ, ವಿಜಯಭೇರಿಯನ್ನು ಹೊಡೆಯಿಸಿದರು. ಆಗ—

೧೨೪. ದಿಗ್ಗಜಗಳು ತಮ್ಮ ಮದವನ್ನು ಕಳೆದುಕೊಂಡುವು; "ತ್ರಿಲೋಕ ಸಾಮ್ರಾಜ್ಯದ ಅಧಿಪತಿಯಾದ ದೇವಾಧಿದೇವನಿಗೆ ಭೂಲೋಕದಲ್ಲಿ ಇನ್ನೂ ಅಸಾಧ್ಯವಾದುದಾಗಲಿ, ಸಾಧಿಸಬೇಕಾದುದಾಗಲಿ ಅದು ಯಾವುದು" ಎಂದು ಮೂವತ್ತೆರಡು ಇಂದ್ರರು ಮುಂದೆ ಬಂದು ನಿಂತರು; ಸಮುದ್ರಗಳು ಅಲ್ಲಕಲ್ಲೋಲವಾದುವು. ಆ ವಿಜಯ ಭೇರಿಯ ಗಂಭೀರ ಧ್ವನಿ ಅದೆಷ್ಟು ಅದ್ಭುತವಾಗಿತ್ತು !

ವ॥ ಹಾಗೆ ದಿಗ್ವಿಜಯ ಭೇರಿಯ ನಿನಾದದೊಡನೆಯೆ—

ಕಂ॥ ಅಸಮರವವೋಕಶಂಖ
ಪ್ರಸನ್ನಗಂಭೀರನಿನದಮೆಸೆದುದು ವಿಜಯ
ಪ್ರಸರಮನಶೇಷವಸುಮತಿ
ಗೆ ಸಾಱುವಂತಾಮಹಾಮಹೀವಲ್ಲಭನಾ ॥ ೧೨೫ ॥

ವ॥ ತನ್ನಿನದಶ್ರವಣಸಮುಪಜನಿತ ಪ್ರಯಾಣೋದ್ಯೋಗವಿಶಿತಪಡ್ವಿಧಬಳಜಳನಿಧಿಯೊಳ್—

ಕಂ॥ ಕಳಭಸ್ತನ್ಯಪಜವನಂ
ಗಳನಂಜಿಪ ಹರಿಕುಳಕ್ಕೆ ನಡೆ ಮುಳಿಸಂ ಮು
ಕ್ಕುಳಿಸಿದುವೆನೆ ಮದಮಂ ಮು
ಕ್ಕುಳಿಸಿದುವೆಣ್ಬತ್ತುನಾಲ್ಕು ಲಕ್ಕ ಗಜಂಗಳ್ ॥ ೧೨೬ ॥

ಕ್ಷಿತಿಪನ ಗಜಘಟೆಗಳೊಳಾ
ಶ್ರಿತನುಂ ಜನಾವಗಾಢ ನಾಮಘಟಾಸಂ
ತತಿಗೆ ಸುಲಕ್ಷಣಸಂಗರ
ಸುತವಾದುವದೇಂ ಸಲಕ್ಷಣಂಗಳೊ ಕರಿಗಳ್ ॥ ೧೨೭ ॥

ವ॥ ಮತ್ತಮೆರಡನೆಯ ಸೇನಾಂಗದೊಳ್—

ಕಂ॥ ಸಂಗತದಶಧ್ರುವಕ್ಷೇ
ತ್ರಂಗಳ್ ಶುಭಲಕ್ಷಣಂಗಳಮೃತೋದ್ಭವವಾ
ಹಂಗಳಜಮೃಗ್ಯುಳೂಕ ಭ
ವಂಗಳ್ ಪದಿನೆಂಟುಕೋಟಿ ಜಾತ್ಯಶ್ವಂಗಳ್ ॥ ೧೨೮ ॥

---

೧೨೫. ತನ್ನ ಸಮಸ್ತ ವಿಜಯವನ್ನು ಭೂಮಿಗೆಲ್ಲ ಸಾರುವಂತೆ ಆ ಭೂಪತಿಯ ಏಕಶಂಖದ ಪ್ರಸನ್ನವೂ ಗಂಭೀರವೂ ಆದ ನಿನಾದ ವಿಜೃಂಭಿಸಿತು.

ವ॥ ಆ ಶಬ್ದ ಕೇಳಿ ಉಂಟಾದ ಪ್ರಯಾಣ ಹೊರಟು ನಿಂತ ಆರು ವಿಧವಾದ ಸೈನ್ಯ ಸಮುದ್ರದಲ್ಲಿ—

೧೨೬. ತಮ್ಮ ಚಿಕ್ಕಚಿಕ್ಕ ಮರಿಗಳನ್ನು ಅಂಜಿಸುವ ಸಿಂಹಗಳ ಮೇಲೆ ಕೋಪಗೊಂಡು ಆ ಕೋಪವನ್ನೇ ಕಾರುತ್ತಿವೆಯೊ ಏನೊ ಎಂಬಂತೆ ಎಂಬತ್ತುನಾಲ್ಕು ಲಕ್ಷ ಆನೆಗಳು ಮದೋದಕವನ್ನು ಚಿಮ್ಮಿದುವು.

೧೨೭. ಆ ದೊರೆಯ ಗಜಸೈನ್ಯದಲ್ಲಿ ಆಶ್ರಿತ ಮತ್ತು ಜನಾವಗಾಢ ಎಂಬ ಹೆಸರಿನ(?) ಉತ್ತಮವಾದ ಲಕ್ಷಣಗಳಿರುವ ಯುದ್ಧಕಾರ್ಯ ಪ್ರಸಿದ್ಧವಾದ ಆನೆಗಳಿದ್ದುವು. ("ಆಶ್ರಿತನುಂ ಜನಾವಗಾಢ ನಾಮ ಘಟಾಸಂತತಿ" ಎಂಬುದರ ಅರ್ಥ ಸ್ಪಷ್ಟವಿಲ್ಲ.)

ವ॥ ಸೈನ್ಯದ ಎರಡನೆಯ ಅಂಗದಲ್ಲಿ—

೧೨೮. ಹತ್ತು ಕಡೆಯಲ್ಲಿ (ತಲೆಯಲ್ಲಿ ಎರಡು, ಪಕ್ಕೆಯಲ್ಲಿ ನಾಲ್ಕು, ಹಣೆಯಲ್ಲಿ ಒಂದು, ಹೊಟ್ಟೆಯ ಮೇಲೆ ಎರಡು, ಮೂಗಿನ ಹೊರಳೆಯ ಮೇಲೆ ಒಂದು) ಶುಭವಾದ ಸುಳಿಯುಳ್ಳ, ಶುಭ ಲಕ್ಷಣಗಳನ್ನೊಡಗೊಂಡ ಅಮೃತ—ಬ್ರಹ್ಮನ ಅಶ್ರುಧಾರೆ—ಜಿಂಕೆ – ಗೂಗೆ ಇವುಗಳಿಂದ (ತತ್ತ್ರಿಯ ರೂಪವಾಗಿ) ಜನ್ಮತಾಳಿದ ಹದಿನೆಂಟು ಕೋಟಿ ಜಾತಿ ಕುದುರೆಗಳಿದ್ದುವು. (ಶ್ರೇಷ್ಠವಾದ ಕುದುರೆಗಳು ಹೀಗೆ ಹುಟ್ಟುವುವೆಂದು ಅಶ್ವಶಾಸ್ತ್ರದ ಹೇಳಿಕೆಯಿದೆ.)

ವ॥ ಮತ್ತಂ ತೃತೀಯಬಲಾಂಗದೊಳ್—

ಕಂ॥ ಅರಿಷಡ್ವರ್ಗಮನವನೀ
ಶ್ವರನಾಟಲೆಯೆ ಪೊಱಗಣರಿಗೆ ಜಯಾಂಗನೆ ಪ
ಲ್ಮೊರೆದಪಳೆನೆ ಪರಿದುವು ಜೀ
ರ್ಗರೆವುತ್ತುಂ ಚತುರಶೀತಿಲಕ್ಷರಥಂಗಳ್ ॥ ೧೨೯ ॥

ವ॥ ನಾಲ್ಕನೆಯ ಸೇನಾವಯವದೊಳ್—

ಕಂ॥ ದಶದಿ[1]ಕ್ತ[1]ಟೀತ[2]ಟ[2]ಂ ಚತು
ರಶೀತಿಕೋಟಿಪ್ರಮಾಣಪಾದಾತಂ ತ
ದ್ವಶಕಾಸ್ಪದಮಾದುದದೇ
ನಶೇಷಗುರು ಪಿರಿಯ ಸಿರಿಯನವಗಯ್ಸಿದನೋ ॥ ೧೩೦ ॥

ಅಂತು ಚತುರಂಗಸೇನೆ ಯು
ಗಾಂತಕರವ ವೇರ್ಣವಾರವಂ ಘನರವಮೆಂ
ಬಂತಾಗೆ ತಾಗೆ ದಿಗ್ಭಿವ
ರಾಂತರಮಂ ಬಂದು ನಿಂದುದಂದರಮನೆಯೊಳ್ ॥ ೧೩೧ ॥

ಉ॥ ಅನ್ನೆಗಮಂಬುಜಾಕರದ ಸೀಕರಮಂ ನಡೆಗೊಂಡು ಮಾಳಿಸಂ
ಪನ್ನತೆಯೊಳ್ ಪೊದಟ್ಟು ಪೊಸಪೂವಿನ ಕಂಪಿನೊಳಟ್ಟು ಚಿತ್ತಜೋ
ತ್ಪನ್ನವಿಳಾಸಮಂ ವಿರಹಿಗಿರ್ಮಡಿಮಾಡಿ ಶರದ್ಭವಂ ಸಮೀ
ರ[ನ್ನ]ಸುಸೋಂಕಿ ಘರ್ಮಜಲಬಿಂದುವನಾಱಿಸಿದತ್ತು ನಲ್ಲರಾ ॥ ೧೩೨ ॥

ವ॥ ಮತ್ತು ಸೇನೆಯ ಮೂರನೆಯ ಅಂಗದಲ್ಲಿ —

೧೨೯. ಒಳಗಿನ ಅರಿಷಡ್ವರ್ಗವನ್ನು ಗೆದ್ದುಬಿಟ್ಟುದರಿಂದ ಹೊರಗಿನ ಶತ್ರುಗಳನ್ನು ಕಂಡು ಜಯಾಂಗನೆ ಹಲ್ಲುಕಡಿಯುತ್ತಿರುವಳೊ ಏನೊ ಎಂಬಂತೆ (ತಮ್ಮ ಗಾಲಿಗಳಿಂದ) ಚೀರ್ ಚೀರ್ ಎಂದು ಧ್ವನಿ ಮಾಡುತ್ತ ಎಂಬತ್ತು ನಾಲ್ಕು ಲಕ್ಷ ರಥಗಳು ನಡೆದುವು.

ವ॥ ನಾಲ್ಕನೆಯ ಸೇನಾಂಗದಲ್ಲಿ—

೧೩೦. ಹತ್ತು ದಿಕ್ಕುಗಳಿಗೂ ಹಬ್ಬಿಕೊಂಡಿರುವ ಎಂಬತ್ತುನಾಲ್ಕು ಕೋಟಿ ಸಂಖ್ಯೆಯ ಕಾಲಾಳುಗಳ ಪಡೆ ಆತನಿಗೆ ಅಧೀನವಾಗಿತ್ತು. ಅದೆಂತಹ ಅದ್ಭುತವಾದ ಮಹಾವೈಭವ ಆ ಸಮಸ್ತ ಗುರುವಾದ ರಾಜನದು !

೧೩೧. ಹೀಗೆ ಪ್ರಳಯಕಾಲದ ಸಾಗರದಂತೆ ಅದ್ಭುತವಾಗಿ ದಿಗ್ದಿಗಂತಗಳನ್ನು ಕೋಲಾಹಲ ಧ್ವನಿಯಿಂದ ತುಂಬಿದ ಚತುರಂಗ ಸೈನ್ಯವು ಅರಮನೆಗೆ ಬಂದು ನಿಂತಿತು.

೧೩೨. ಆ ಸಮಯಕ್ಕೆ ಕಮಲಸರೋವರದ ತುಂತುರು ಹನಿಗಳನ್ನೊಡಗೊಂಡು, ಹೊಸ ಹೂಗಳ ಪರಿಮಳದಲ್ಲಿ ಮುಳುಗಿ ಎದ್ದು, ವಿರಹಿಗಳಿಗೆ ಮನ್ಮಥ ತಾಪವನ್ನು ಇಮ್ಮಡಿಗೊಳಿಸುತ್ತ, (ಕೂಡಿಕೊಂಡಿದ್ದ) ನಲ್ಲರನ್ನು ಮೃದುವಾಗಿ ಸೋಕಿ, ಅವರ ಬೆವರಹನಿಗಳನ್ನು ಆರಿಸುತ್ತ ಶರತ್ಕಾಲದ ಗಾಳಿ ಬೀಸಿತು.

1. ಕೃ (ಅ)　2. ತ (ಮ)

ಕಂ॥ ಎರಡನೆಯ ಪಾರ್ಥಿವ ಶ್ರೀ
ಸ್ವರೂಪದಿಂ ನಿಧಿಯಧೀಶನಂ ಸಾರ್ವಂತಾ
ಶರದಂಗನೆ ಸಾರ್ದಳ್ ಪಂ
ಕರುಹಾಂಕಿ[1]ತ ವಿಶದಗಗನಹರಿದಂತರಮಂ ॥ ೧೩೩ ॥

ದಿನಪಪ್ರತಾಪಮುಂ ಶಾಂ
ತಿನಾಥವಿನುತಪ್ರತಾಪಮುಂ ತದ್ವಸುಧೇ
ಶನ ಕಾಂತಿಯುಮಂದು ಮೃಗಾಂ
ಕನ ಕಾಂತಿಯುಮೇಂ ದಿಗಂತಮಂ ಪರ್ವಿದುದೋ ॥ ೧೩೪ ॥

ಹರಿ ವರ್ಷಜಧನುಷಂ ಸಂ
ಹರಿಸಲೊಡಂ ಜೈತ್ರಚಾಪಮಂ ಜಿನಚಂದ್ರಂ
ಧರಿಯಿಸಿದಂ ಧರೆಗಿಂತಿ
ರ್ದರುಮೇಂ ದೃಢದಿವ್ಯಚಾಪಮಾರೋಪಿತಮಂ ॥ ೧೩೫ ॥

ಕಾಶಚಮರರುಹ [2]ದತ್ತವಿ
ಲಾಸೆಗೆ ಸಿತಪಂಕಜಾತಪತ್ರೆಗೆ[2] ಶರದು
ದ್ಭಾಸಿತಲಕ್ಷ್ಮಿಗೆ ಸದೃಶವಿ
ಕಾಸಮಿದೆನಿಸಿದುದು ಲಕ್ಷ್ಮಿ ಶಾಂತೀಶ್ವರನಾ ॥ ೧೩೬ ॥

ಕಾಂತಿಪ್ರಸಾದಗುಣದ ದ
ಗ್ಗಾಂತಿಗಳಿಂದುಗಮಿಳೇಶ್ವರೇಂದುಗಮೊಡನೆ
ತ್ಪಂತಂ ಸಮನಿಸಿ ಚಕ್ಷು
ಷ್ಮಂತರ ಕಣ್ಗಂ ಮನಕ್ಕಮಿತ್ತುದು ಮುದಮಂ ॥ ೧೩೭ ॥

---

೧೩೩. ಎರಡನೆಯ ರಾಜ್ಯಸಂಪತ್ತಿನ ರೂಪದಿಂದ ಸಾರ್ವಭೌಮನಿಗೆ ನಿಧಿಯೊದಗಿಬರುವಂತೆ ಪದ್ಮಾಂಕಿತೆಯಾದ ಶರತ್ಕಾಲದ ಲಕ್ಷ್ಮಿ ಸ್ವಚ್ಛವಾದ ದಿಕ್ಕುಗಳನ್ನು ವ್ಯಾಪಿಸುತ್ತ ಬಂದಳು. (ಚಕ್ರವರ್ತಿಯ ನವನಿಧಿಗಳಲ್ಲಿ 'ಪದ್ಮ'ಎಂಬುದೂ ಒಂದು.)

೧೩೪. ಸೂರ್ಯನ ಪ್ರತಾಪ(ಪ್ರಕಾಶ)ದೊಡನೆ ಶಾಂತಿನಾಥನ ಪರಾಕ್ರಮ ವೈಭವವೂ ಚಂದ್ರನ ಕಾಂತಿಯೊಡನೆ ಆ ಭೂಪತಿಯ ಕಾಂತಿಯೂ ದಿಗಂತಗಳಲ್ಲಿ ಎಷ್ಟೆಂದು ಹಬ್ಬಿ ಹರಡಿಕೊಂಡುವು!

೧೩೫. ಮಳೆಗಾಲದ ಕಾಮನಬಿಲ್ಲನ್ನು ಇಂದ್ರನು ಇಳಿಸಿದನು; ಅದೇ ಕಾಲಕ್ಕೆ ದಿಗ್ವಿಜಯದ ಬಿಲ್ಲನ್ನು ಜಿನೇಂದ್ರನು ಧರಿಸಿದನು. ಹೀಗೆ ದೃಢವಾಗಿ ಬಿಲ್ಲನ್ನು ಹಿಡಿದಿಡುವುದಕ್ಕೂ ಏರಿಸುವುದಕ್ಕೂ ಸಮರ್ಥರಾದ ಬಿಲ್ಗಾರರು ಇವರಿಬ್ಬರೇ ಎನಿಸಿದರು.

೧೩೬. ಕಾಶತೃಣ ಕುಸುಮಗಳ ಚಾಮರಗಳಿಂದ ವಿಲಾಸವನ್ನು ತಾಳಿ ಬಿಳಿ ತಾವರೆಯ ಕೊಡೆ ಹಿಡಿಸಿಕೊಂಡ ಶರತ್ಕಾಲ ಲಕ್ಷ್ಮಿಗೆ (ಸೌಂದರ್ಯಕ್ಕೆ) ಶಾಂತೀಶ್ವರನ ಲಕ್ಷ್ಮಿಯೂ (ವೈಭವವೂ) ಸಮಸಮನಾಗಿ ವಿಕಾಸವಾಯಿತು.

೧೩೭. ಕಾಂತಿ ಹಾಗು ಪ್ರಸನ್ನತೆ ಎಂಬ ಗುಣಗಳ ಅತಿಶಯ ಚಂದ್ರನಿಗೂ ಈ ಅರಸನಿಗೂ ಒಡನೊಡನೆ ಉಂಟಾಗಿ, "ಚಕ್ಷುಷ್ಮಂತ"ರ (೧. ಕಣ್ಣುಗಳುಳ್ಳವರ, ೨. ದೂರದೃಷ್ಟಿಯುಳ್ಳವರ) ಕಣ್ಣಿಗೂ ಮನಸ್ಸಿಗೂ ಸಂತೋಷವನ್ನುಂಟುಮಾಡಿತು.

---

1. ತೆ (ಮ) 2. ಚಿತ್ರವಿಲಾಸಸ್ಮಿತ ಪಂಕಜಾತನೇತ್ರೆಗೆ (ಅ)

ವ॥ ಮತ್ತಂ ಹಂಸಯೂಥಲೀಲೆಗಂ ಧವಳಜಳಧರವಾಳಿಗಂ ಕುಮುದವಿಮಳಾಬ್ಜುಗಂ ಸಿಂಧೂಪಾಂತಪಿಶಿಕಂಬುಗಂ ಕುರುಕುಲ ಲಲಾಮನಪ್ಪ ಚಕ್ರವರ್ತಿಯ ಕೀರ್ತಿಯೆ ಬಿದ್ದುವಂದಂತೆಸೆವುದುಂ—

ಕಂ॥ ಧವಳೇಕ್ಷುಚ್ಛಾಯ ನಿಪ
ಣ್ಣವಪುಗಳಂದದೊಳೆ ನೆಗಟ್ಟ ಬಣ್ಣಮನಾ[1]ಸ್ಪೈ
ಶವದಿಂ[1] ಕಾಕಳಿಯೊಳ್ ಚ
ಕ್ರವರ್ತಿಯುಂ ಪಾಡಿ ಶಾಳಿಗೋಪಿಯರೆಸೆದರ್ ॥ ೧೩೮ ॥

ಕಳಶಜನುದಯದೊಳೊದವಿದ
ಜಳಾಶಯಂ ತಿಳಿದುವೊಡನೆ ಕದಡಿದುವವನೀ
ತಳಪತಿಯ ಪಡೆಯೊಳರಿನೃಪ
ಜಳಾಶಯಂ ಶರದವೇಂ ವಿರುದ್ಧಾರ್ಥಕವೋ ॥ ೧೩೯ ॥

ಅಸಮಚ್ಛದಪರಿವೀತ
ಪ್ರಸವಾಮೋದಾಹತಂಗಳವನಿಪಕರಿಗಳ್
ಪೊಸತೆ ಬಿಡುತಂದುವೊಡನೊಡ
[2]ನಸೂಯೆಯಿಂ[2] ಸೆಣಸು[3]ವಾದಿ[3]ವೋಲ್ ಪರಿಮಳಮಂ ॥ ೧೪೦ ॥

ನೆಲೆಯುಂ ಮಾಡಿ ಸರಿತ್ಸಂ
ಕುಲಕ್ಕೆ ಬಟ್ಟೆಯನೆ ಮಾಡಿ ಕರ್ದಮಜಳಮಂ
ಸ್ಥಲಮೆನಿಸಿ ಯಾತ್ರೆಗವನೀ
ತಲಪತಿಯಂ ಪ್ರೇರಿಸಿತ್ತು ಪುಗಿಲೊಳ್ ಶರದಂ ॥ ೧೪೧ ॥

ವ॥ ತದನಂತರಂ—

ವ॥ ಹಂಸಸಮೂಹಗಳ ಶೋಭೆಗೂ, ಬಿಳಿಮೋಡಗಳ ಸಾಲಿಗೂ, ನೈದಿಲೆಗಳ ನಿರ್ಮಲತೆಗೂ, ಕಡಲ ಬಳಿಯ ಶುದ್ಧಶಂಖಕ್ಕೂ ಕುರುವಂಶಭೂಷಣನಾದ ಈ ಚಕ್ರವರ್ತಿಯ ಕೀರ್ತಿ ಅತಿಥಿಯಾಗಿ ಬಂದಂತೆ ಕಂಗೊಳಿಸಿತು.

೧೩೮. ಸುಕುಮಾರವಾದ ಮೈಬಣ್ಣವುಳ್ಳ ಆ ಚಕ್ರವರ್ತಿಯನ್ನು ಹಾಡಿ ಹೊಗಳುತ್ತ ಬಿಳಿಕಬ್ಬುಗಳ ನೆಳಲಲ್ಲಿ ಕುಳಿತು ಗದ್ದೆಗಳನ್ನು ಕಾಯುವ ಪಾಮರಿಯರು ಶೋಭಿಸಿದರು.

೧೩೯. ಅಗಸ್ತ್ಯನಕ್ಷತ್ರದ ಉದಯದೊಡನೆ ಜಲಾಶಯಗಳೆಲ್ಲ ತಿಳಿಯಾದುವು; ಈ ಭೂಪತಿಯ ಸೈನ್ಯ ಬರಲೊಡನೆ ಶತ್ರುರಾಜರ ಜಲಾಶಯಗಳು ಕದಡಾದುವು. ಶರತ್ಕಾಲವು ಎಂತಹ ವಿರೋಧಗಳಿಂದ ಕೂಡಿದುದು!

೧೪೦. ಏಳೆಲೆ ಬಾಳೆಯ ಹೂಗಳು ಸೂಸುವ ಪರಿಮಳವನ್ನು ಕಂಡು ಅಸೂಯೆಯಿಂದ ಅವುಗಳೊಡನೆ ಸ್ಪರ್ಧಿಸುವಂತೆ ಅರಸನ ಆನೆಗಳು ಹೊಸ ಮದೋದಕವನ್ನು ಸುರಿಸುತ್ತ ಬಂದುವು.

೧೪೧. ನದಿಗಳನ್ನು ತೆಳ್ಳಗೆ ಮಾಡಿ, ಕೆಸರನ್ನೊಣಗಿಸಿ ಹಾದಿ ಹಸನಾಗುವಂತೆ ಮಾಡಿ, ಶರತ್ಕಾಲವು ಭೂನಾಥನನ್ನು ವಿಜಯಯಾತ್ರೆಗೆ ಪ್ರೇರಿಸಿತು.

ವ॥ ಅನಂತರ—

---

1. ಸ್ವೈರವದಿಂ (ಅ) 2. ಸೆ ಬೀಗಿಯುಂ (ಅ) 3. ವಂತೆ (ಮ)

ಕಂ॥ ಬಲದ ಸುಟ್ಟುವೆರಸಿದರ್ಚಿಯ
ವಿಳಾಸದಿಂದಗ್ನಿರಾಜಿ ನೀರಾಜನದೊಳ್
ಬಲಗೆಯ್ಯೊಳ್ ಚಕ್ರಿಗೆ ದೋ
ರ್ವಲವಿಜಯಮನೀವ ತೆಱದಿನೇಂ ಸೊಗಯಿಸಿತೋ ॥ ೧೪೨ ॥

ವ॥ ಅಂತಪರಿಮಿತ ಶುದ್ಧಪಾರ್ಷ್ಣಿಯುಂ ಗುಪ್ತಮೂಲಪ್ರತ್ಯಂತನುಮಂಗೀಕೃತ ವೀರಪ್ರಸರನುಮಾಗಿ ಸೌಜನ್ಯಕಂದಾಂಕುರಂ ವಿಜಯಪ್ರಸ್ಥಾನೋದ್ಯುಕ್ತಂ ಮಂಗಳವಸದನಂಗೊಂಡು ಪರಿಪೂರ್ಣಾಬ್ಜಕುಬ್ಜಶಿರೋದ್ಧರಣನು ವ್ಯೂಢೋರಸ್ಕನಂ ಪ್ರಭೂತಾಂತರ್ಮಣಿಯಂ ವಿಪುಳೋಚಿತಾಂ[1]ಸ[1]ನಂ ಪ್ರಶಸ್ತಾಸನನಂ ಕಾರ್ಮುಕಪರಿಣ[2]ತನಂ[2] [3]ಸಮ[3]ಪಾರ್ಶ್ವನ ನಿಜಕುಕ್ಷಿಯುಂ ಗೂಢಪುಷ್ಕರನಂ ವಿಪುಳಾಯತಬಾಹುವಂ ವರಾಹಜಘನಪರನಂ ಸುತಾತ್ರಿಯಸ್ಥಿ [4]ಲಾಂಗಲ[4]ಜನನುಪದಿಗ್ಧಪೇಚಕನನಪೂರ್ವಲಾಂಗೂಲನಂ ಕಾಚಕಿಲ್ಯಸಂವರ್ತಕನಂ ಪ್ರಶಸ್ತ ವಾಳಧಿಯುಂ ಸಮಸುವಿಭಕ್ತಸ್ತನಾಂತರನಂ ಸುನಿವೃತ್ತಾಯಾಮಕಾಂಡನನತನೂದರನಂ ಪರಿಪೂರ್ಣವಕ್ತ್ರದಿಕ್ಕೋಶ[5]ಲ[5]ನಂ ಮಂತ್ರಾಧಿಕಾಖ್ಯನಂ [6]ಅನಿಮ್ನ[6]ನಾಭಿಯುಂ—

ಕಂ॥ ವಿನುತಸುಜಾತಪ್ರಸ್ವ
ಸ್ತನಚೂಚಕನಂ ಪ್ರಪೂರ್ಣಸಪ್ತಸುರೋಚಿಃ
ಕನದಂಕುಶಕೃತದೀರ್ಘ
ಪ್ರಣೂತಕೋಪನನುದೀತಜವನಂ ಯುವನಂ ॥ ೧೪೩ ॥

ವ॥ ಸಮತಜ್ಞಾವಿದ್ವಸ್ಸಮತಾನುಪೂರ್ವ ಮೃದುಕಳಶವೃತ್ತಪುಷ್ಕರಗೋತ್ರನಂ ಸುಸಂವೃತಪ್ರೋಪಪಳಿಹಸ್ತವಿಕಟಗಾತ್ರನಂ ಸಂಜ್ಞಾತವೃಷ್ಟಿಪಿಪ್ಪಕಪ್ರೋತ್ಸಂಗನಂ—

---

೧೪೨. (ಸೈನ್ಯದ ಆನೆ ಕುದುರೆಗಳಿಗೆ) ನೀಲಾಂಜನಗಳಿಂದ ಆರತಿ ಬೆಳಗುವಾಗ ಅಗ್ನಿಯ ಜ್ವಾಲೆ ಬಲಗಡೆಗೆ ಹೊರಳುವ ವಿಲಾಸದಿಂದ ಚಕ್ರವರ್ತಿಗೆ ಕೈಯಾರೆ ಜಯವನ್ನು ತಂದುಕೊಡುವಂತೆ ಶೋಭಿಸಿತು. (ಹೋಮಾಗ್ನಿ ಪ್ರದಕ್ಷಿಣಗತವಾದರೆ ರಾಜನಿಗೆ ಸಮಸ್ತ ಭೂಮಿ ವಶವಾಗುವುದೆಂದು ಹೇಳಲಾಗಿದೆ.)

ವ॥ ಹಿಂದೆ ಯಾವ ಶತ್ರುವೂ ಉಳಿಯದಂತೆ ಸಮಗ್ರ ವ್ಯವಸ್ಥೆಮಾಡಿ, ತನ್ನ ನಿವಾಸವನ್ನೂ ಪ್ರಾಂತದುರ್ಗವನ್ನೂ ಭದ್ರವಾದ ಕಾವಲಲ್ಲಿಟ್ಟು, ಶೌರ್ಯಾತಿಶಯದಿಂದ ಸುಜನಪ್ರಿಯನಾದ ಶಾಂತಿನಾಥನು ವಿಜಯಯಾತ್ರೆಗೆ ಸಿದ್ಧನಾಗಿ ಮಂಗಲಾಲಂಕರಣ ಮಾಡಿಕೊಂಡನು. (ಆತನಿಗೆ ಏರಲು ತಕ್ಕ ಆನೆಯನ್ನು ತರಿಸಿದನು. ಅದಕ್ಕೆ) ಅರಳಿದ ಕಮಲದಂತೆ ಹರವಾದ ಆದರೆ ಉದ್ದವಿಲ್ಲದ ಕತ್ತು(?); ವಿಶಾಲವಾದ ಎದೆ; ದೊಡ್ಡ ಅಂತರ್ಮಣಿ(?); ತುಂಬ ವಿಸ್ತಾರವಾದ ಹೆಗಲು; ಪ್ರಶಸ್ತವಾಗಿ ಅಳವಡಿಸಿದ ಪೀಠ; ಬಿಲ್ಲಿನಂತೆ ಬಾಗುಳ್ಳ ಬೆನ್ನುಮೂಳೆ; ಸಮನಾದ ಪಕ್ಕೆ; ತೆಳುವಾದ ಹೊಟ್ಟೆ; ಹೊರಗೆ ಕಾಣದಿರುವ ಸೊಂಡಿಲ ತುದಿ; ವಿಸ್ತೀರ್ಣವಾದ ಬಾಹುಗಳು; ವರಾಹದಂತೆ ಕಟಿಪ್ರದೇಶ; "ಸುತಾತ್ರಿಯಸ್ಥಿಲಾಗಲಜ"(?); ಅಪೂರ್ವವಾದ ಬಾಲ; "ಕಾಚಕಿಲ್ಯಸಂವರ್ತ"(?); ಪ್ರಶಸ್ತವಾದ ಬಾಲದ ಕೂದಲು; ಮೊಲೆಗಳ ನಡುವೆ ಸಮಾನಾಂತರ; ದಪ್ಪಗೂ ಉದ್ದವಾಗಿಯೂ ಇರುವ ಮೈಕಟ್ಟು; ಪುಷ್ಟವಾದ ಮೈ; ಪರಿಪೂರ್ಣವಾದ ವಕ್ತ್ರದಿಕ್ಕೋಶ(?): "ಮಂತ್ರಾಧಿಕ"ವೆಂಬ ಹೆಸರು(?); ಆಳವಲ್ಲದ ಹೊಕ್ಕುಳು—

೧೪೩. ಚಿಕ್ಕಚಿಕ್ಕ ಮೊಲೆ ತೊಟ್ಟುಗಳು; ಅಂಕುಶದ ತಿವಿತದಿಂದ ಕೋಪಗೊಳ್ಳುವ ಸ್ವಭಾವ; ಅತ್ಯಂತವಾದ ವೇಗ; ಯೌವನ;

ವ॥ "ಸಮತಜ್ಞಾವಿದ್ವಸ್ಸಮತಾನುಪೂರ್ವಮೃದುಕಳಶವೃತ್ತಪುಷ್ಕರ ಗೋತ್ರ"(?); ಒಳ್ಳೆಯ ವೃತ್ತಾಕಾರವಾದ ಪಾದಗಳು; ಪಳಿಹಸ್ತ ವಿಕಟಗಾತ್ರ"(?); "ಸಂಜ್ಞಾತ ವೃಷ್ಟಿಪಿಪ್ಪಕ ಪ್ರೋತ್ಸಂಗ"(?);

---

1. ಗ (ಅ) 2. ತವಂಶಸಂ (ಮ) 3 ದಶನ (ಅ) 4. ಲಾಂಗೂಲ (ಅ) 5. × (ಮ) 6. ನಾಭ್ರ (ಅ)

ಕಂ॥ ಉಪಸಂದಿಗ್ಧಶರಶ್ಲ
ಕ್ಷ್ಣ ಪಾರ್ಷ್ಣಿಯಂ ಸುಪ್ರತಿಷ್ಠಿತಾಪರನಂ ಶ್ಲ
ಕ್ಷ್ಣ ಪತಿವ್ರಣತಾಂಚಿತನಂ
ಸುಪಾದತಳನಂ ಮರುದಧೀಶಸನ್ನಿಭನಂ ॥ ೧೪೪ ಅ ॥*

ವ॥ ಮತ್ತಂ—ಸ್ನಿಗ್ಧಪೂರ್ವಶ್ವೇತಶ್ಲಕ್ಷ್ಣಾರ್ಧಚಂದ್ರ ಸದೃಶಸುಸನ್ನಿವಿಷ್ಟಾನುವಂಶ ವೃತ್ತಾಂತರವಿಂಶತಿನಖನಂ ಶ್ಲಕ್ಷ್ಣಸ್ನಿಗ್ಧಪ್ರಪ್ರದ್ಬಹುಳಾನುವ್ಯಾಯಮಿತಪ್ರತಿಯಾಂಕಸ್ನಿಗ್ಧಪ್ರಕಾಶಸೂಕ್ಷ್ಮಬಿಂದುಸಂದೋಹನಂ ಮೃದುಸ್ನಿಗ್ಧಪ್ರಭೂತಸೂಕ್ಷ್ಮವರ್ಣಾನುವರ್ಣಜಯುಗ್ಮಜೈಕರೋಮಾಂಚಿತನಂ—

ಉ॥ ಚಂಪಕಸಪ್ತಪರ್ಣಮದಗಂಧಿಯನುತ್ತಮಪಾತ್ರವರ್ತಿ ಭೂ
ಕಂಪನಮಂ ಕನತ್ಕನಕಮಂಡನಮಂಡಿತಮಂ ವಪುಷ್ಮಮಂ
ಸಂಪದುಪೇತಮಂ ತರಿಸಿ ದಿಗ್ವಿಜಯಕ್ಕೆ ಜಿನೇಂದ್ರಚಂದ್ರದೇ
ವಂ ಪೊಱಮಟ್ಟನೇಱಿ ಜಯಮಂ ಜಯಪರ್ವತಯಾಸನಾಗಮಂ ॥ ೧೪೪ ಆ ॥

ವ॥ ಮತ್ತಂ ಮಕರತೋರಣಾಂತರದಿಂ ನುಗುಳ್ದು ಬರ್ಪ ಚಕ್ರವರ್ತಿಯೆರಡೋಳಿಯೊಳಂ—

ಕಂ॥ ಶ್ರೀಜಾಯಾಪತಿಗಕ್ಷಯ
ಲಾಜಾಸಾರಂ ಪುರಂಧ್ರಿಯರ್ ಸೂಸೆ ಕರಂ
ರಾಜಿಸಿದುದಮೃತಬಿಂದುಸ
ಮಾಜಂ ಜನ್ಮಾಭಿಷವದಿನೊಪ್ಪುವತೆಱದಿಂ ॥ ೧೪೫ ॥

ಪ್ರಾಚೀನಬರ್ಹಿರುಪಮಂ
ಪ್ರಾಚೀಹರಿದಭಿಮುಖಂ ಮರುದ್ಧತಕೇತೂ
ತ್ಕ್ರೋಚಿತತರ್ಜಿತರಿಪು ಚಳಿ
ತಾಚಳಸನ್ನಿಭಗಜಾಧಿರೂಢನಧೀಶಂ ॥ ೧೪೬ ॥

---

೧೪೪ ಅ. ಮೃದುವಾದ ಹಿಂಭಾಗ; ಉತ್ತಮವಾದ ಅಂಗಾಲುಗಳು; (ವೇಗದಲ್ಲಿ) ವಾಯುವಿಗೆ ಸಮಾನನೆ;

ವ॥ ಅಲ್ಲದೆ, ಸ್ನಿಗ್ಧವೂ, ಧವಳ ವರ್ಣವೂ, ಅರ್ಧಚಂದ್ರಾಕೃತಿಯೂ ಆದ ಇಪ್ಪತ್ತು ಉಗುರುಗಳು; ಬಹಳವಾದ ವ್ಯಾಯಾಮದಿಂದ ಮೈಮೇಲೆ ಹೊಳೆಯುವ ಬೆವರಿನ ಹನಿಗಳು; ಮೃದುವೂ ಸ್ನಿಗ್ಧವೂ ಆದ ಸೂಕ್ಷ್ಮವರ್ಣದ ರೋಮಾಂಚ—

೧೪೪ ಆ. ಸಂಪಿಗೆಯ ಹಾಗು ಏಳೆಲೆ ಬಾಳೆಯ ಪರಿಮಳವುಳ್ಳ ಮದೋದಕ—ಹೀಗಿರುವ "ಜಯಪರ್ವತ"ವೆಂಬ ಆನೆಯು ಭೂಮಿಯನ್ನು ನಡುಗಿಸುತ್ತ ಮಿರುಗುವ ಚಿನ್ನದ ಆಭರಣಗಳಿಂದ ಅಲಂಕೃತವಾಗಿ ಬರಲು, ಅದನ್ನು ಏರಿ ಜಿನೇಂದ್ರನು ಹೊರಟನು.

ವ॥ ಮಕರ ತೋರಣವನ್ನು ದಾಟಿ ಬರುತ್ತಿರುವ ಚಕ್ರವರ್ತಿಯ ಎರಡೂ ಪಕ್ಕಗಳಲ್ಲಿ—

೧೪೫. ಐಶ್ವರ್ಯಪತಿಯಾದ ಅರಸನಿಗೆ ಮುತ್ತೈದೆಯರು ಲಾಜೆಗಳನ್ನು ಸೂಸಲಾಗಿ, ಜನ್ಮಾಭಿಷೇಕದಲ್ಲಿ ಅಮೃತಬಿಂದುಗಳು ಶೋಭಿಸಿದಂತೆ (ಆ ಲಾಜೆಗಳು ಮೈಮೇಲೆ) ಶೋಭಿಸಿದುವು.

೧೪೬. ಪೂರ್ವಾಭಿಮುಖವಾಗಿ ಹೊರಟು ಗಾಳಿಯ ಹೊಡೆತಕ್ಕೆ ಅಲುಗಾಡುವ ತನ್ನ ಧ್ವಜದಿಂದಲೆ ಶತ್ರುಗಳನ್ನು ಬೆದರಿಸುತ್ತ ಜಂಗಮ ಪರ್ವತದಂತೆ ಇರುವ ಆ ಆನೆಯನ್ನೇರಿ ಇಂದ್ರ ಸದೃಶನಾದ ಆ ಚಕ್ರವರ್ತಿಯು—

---

* ಇದು (ಮ) ಪ್ರತಿಯಲ್ಲಿ ಗದ್ಯವಾಗಿದೆ.

ಕಂ॥ ತಳರೆ ಮಹೀರಜದಿಂ ಘನ
ವಿಳಾಸಗಜಘಟೆಯಿನವನಿಯುಂ ನಭಕೆ ನಭ
ಸ್ಥಳಮುಂ ನೆಲಕ್ಕೆ ಕಂದಂ
ತಳುಂಬಮಾದುದು ತದೀಯಚತುರಂಗಬಳಂ ॥ ೧೪೭ ॥

ವ॥ ಅಂತು ಬಂದು ಮುನ್ನಮೆ ಸಮೆದ ನಾಯಕಮನೊಳಗುಮಾಡೆ ಪರಿವೇಷ್ಟಿಸಿ ರಚನಾ ವಿಶೇಷಂ ಬಳೆದು ಪರಿವ ರುಚಕರಚನೆ (ಯಿರ್ಪಂತೆ)ಮಾಡಮಂ ಪತ್ತಿ ಸುತ್ತಿಱಿದ ಕರಗಪಡಪದ ಡವಕೆಯ ಮಡಿಯ ಪರಿಯಣದ ಬಾಣಸಿನ ಗುಣನೆಯ ಮಜ್ಜನದ ದೇಹಾರದ [1][ಜಿ][1]ಂಚೆಯ ಕೊಂಚೆಯುದ ಕೂರವದ ಕೊಟ್ಟಗೆಯ ಗುಡಿಯ [2]ಜಳಗುಡಿಯ[2] ಗೊಲ್ಲಣಿಗೆಯ ಮಂಡವಿಗೆಯ ವಿಳಾಸನಿವಾಸಂಗಳಿಂದಂ ಎರಡೋಳಿಯ ರಾಣೀವಾಸದ ಬಳ್ಳಿಗಾವಣಂಗಳಿಂದಮವಱ ಮುಂದೆ ಸಾಪಣ್ಘದೊಳಗಿರಿಸುವ ಪಂಚಕಲ್ಯಾಣದ [3]ಪೂಜೆ[3]ಯಾನಗಳ್ಗೆಂದು ನಿಱಿಸಿದ ನೆಡೆಮಾಡ ಸಾಲೆಗಳಿಂದಂ ಅಲ್ಲಿಂದಂ ಮತ್ತೊಂದು ಬಾಗಿಲಿಂ ಪೊಱಗೆ ವಂಕದಾರದೆರಡುಂ ದೆಸೆಯೊಳಂ ತುರಗಾಸುರನ ಪಡೆದೋರ್ಕೆಯಂತಿರ್ದ ದಿವ್ಯಾಶ್ವಂಗಳ ಕಟ್ಟುವ ದೀರ್ಘಪಟ ಮಂಡಪಂಗಳಿಂದಮತಿ ಮನೋಹರಮಾದವನಿಪತಿಯ ಭವನನಿವೇಶದಿಂದಮಂದಂಬಡೆದ ಪೊಱವೀಡಂ ಸೋಮಾನ್ವಯ ಪ್ರದೀಪಂ ಪುಗುವಾಗಳ್—

ಕಂ॥ ಪಿಡಿಗಳ್ ನೃಪವಿಭವದ ಕೆ
ಯ್ಪಿಡಿಗಳ್ ಬರ್ಪಂತಿರಂಗರಕ್ಕರ ನೆರದೊ
ಳ್ಕಡಿತಲೆ ಬೆಸದೊಡ[4]ನೆ[4]ಯೆ ಚೆ
ಲ್ವಿಡಿದೊಡನಂದೇಱಿ ಬರೆ ನೃಪಾಂಗನೆಯರ್ಕಳ್ ॥ ೧೪೮ ॥

ಮಂದಾಕ್ರಾಂತಂ॥ ಅಲ್ಲಿಂ ಮುನ್ನಂ ನೃಪತಿ ಗಜಮಂ ಮಂಡನಾಯೋಗಹೇಮೋ
ತ್ಫುಲ್ಲಶ್ರೀಚಂಪಕವನಮದೊಂದುರ್ವಿದಾಕಾರಮಂ ವಿ
ದ್ಯುಲ್ಲೀಲಾವಿಭ್ರಮದೆ ಪೊಳೆಪಂ ತಾಳ್ದೆ ಕೂರಂಕುಸಂ ಕಂ
ಡೆಲ್ಲಂ ತನ್ನಂ ಪರಸಿ ಪುಗೆ ಬೀಡಂ ಮಹೋತ್ಸಾಹದಿಂದಂ ॥ ೧೪೯ ॥

---

೧೪೭. ಹೊರಡಲಾಗಿ, (ರಥಗಳ ಸಂಚಾರದಿಂದೆದ್ದ) ದೂಳಿನಿಂದಲೂ ವಿಲಾಸದ ಆನೆಪಡೆಯಿಂದಲೂ ಆಕಾಶವನ್ನು ನೆಲಕ್ಕೆ ತರುವುದೋ ಅಥವಾ ನೆಲವನ್ನು ನಭಕ್ಕೆ ಎತ್ತುವುದೋ ಎಂಬಂತೆ ಆತನ ಚತುರಂಗಬಲವು ಅದ್ಭುತವಾಗಿ ನಡೆಯಿತು.

ವ॥ ಹಾಗೆ ನಡೆದು, ಮುಂಚಿತವಾಗಿಯೆ ಅಣಿಗೊಳಿಸಿದ ಮುಖಂಡರ ಸಮೂಹವನ್ನು ಒಳಗಾಗುವಂತೆ ಬಳಸಿತು; ಮಾಲೆ ಹೆಣೆದಂತೆ ಮಾಡಕ್ಕೆ ಹತ್ತಿರವಾಗಿ ಸುತ್ತಿಕೊಂಡ ಕಲಶದ, ಹಡಪ (ತಾಂಬೂಲ)ದ, ಪೀಕದಾನಿಯ, ಮಡಿಬಟ್ಟೆಗಳ, ಹರಿವಾಣದ, ಅಡುಗೆಯ, ನೃತ್ಯದ, ಸ್ನಾನದ, ಪೂಜೆಯ, ಬಳ್ಳಿಮಂಟಪದ, "ಕೂರವ"ದ(?), ಕೊಟ್ಟಗೆಯ, ಧ್ವಜದ, ಧಾರಾಗೃಹದ, ಗೂಡಾರದ(?), ಮಂಡಪದ ವಿಲಾಸಮಯವಾದ ನಿವಾಸಗಳಿಂದಲೂ, ಇಕ್ಕೆಲಗಳಲ್ಲಿ ರಚಿಸಿದ ರಾಣಿವಾಸದ ಬಳ್ಳಿಮಂಟಪಗಳಿಂದಲೂ, ಅವುಗಳ ಮುಂದೆ ಲಾಯದೊಳಗೆ ಕಟ್ಟುವ ಪಂಚಕಲ್ಯಾಣದ ಆನೆಗಳಿಗಾಗಿ ನಿರ್ಮಿಸಿದ ತಾತ್ಕಾಲಿಕ ಗಜಶಾಲೆಗಳಿಂದಲೂ, ಅಲ್ಲಿಂದ ಇನ್ನೊಂದು ಬಾಗಿಲಾಚೆಗೆ ದ್ವಾರಮಾರ್ಗದ ಎರಡೂ ಬದಿಗಳಲ್ಲಿ ತುರಗಾಸುರನ ಸೈನ್ಯ ಪ್ರದರ್ಶನದಂತೆ ತೋರುವ ದಿವ್ಯವಾದ ಕುದುರೆಗಳ ವಿಶಾಲವಾದ ಡೇರೆಗಳಿಂದಲೂ— ಅತ್ಯಂತ ರಮಣೀಯವಾದ ಅರಸನ ನಿವಾಸಸ್ಥಾನವೇರ್ಪಟ್ಟದ್ದಿತು. ಹೀಗೆ ಅಂದವಾದ ಹೊರಬೀಡನ್ನು ಸೋಮವಂಶಾಧಿಪತಿಯಾದ ಶಾಂತಿನಾಥನು ಪ್ರವೇಶಿಸುತ್ತಿರುವಾಗ—

೧೪೮. ರಾಜವೈಭವದ ಕನ್ನಡಿಯಾದ ಹೆಣ್ಣಾನೆಗಳು ಬರುವಂತೆ ಕಡಿತಲೆಯ ಅಂಗರಕ್ಷಕರೊಡನೆ ಅರಸಿಯರು ಚೆಲುವಾಗಿ (ಆನೆಯೇರಿ) ಬಂದರು.

೧೪೯. ಚಿನ್ನದ ಆಭರಣಾಲಂಕಾರಗಳನ್ನು ತೊಟ್ಟ ಆನೆ ಅರಳಿದ ಸಂಪಿಗೆವನದಂತೆ ಶೋಭಿಸುತ್ತಿರಲಾಗಿ ಹರಿತವಾದ ಅಂಕುಶ ಮಿಂಚಿನ ಕುಡಿಯಂತೆ ಹೊಳಪನ್ನು ಸೂಸುತ್ತಿರಲಾಗಿ ಬಂದ ಅರಸನನ್ನು ಎಲ್ಲರೂ ಹರಸಿ ತುಂಬ ಉತ್ಸಾಹದಿಂದ ತಂತಮ್ಮ ಬೀಡನ್ನು ಸೇರಿದರು.

---

1. ಲಿ (ಮ) 2. × (ಅ) 3. ಸೂಜೀ (ಮ) 4. ಲೆ (ಮ)

ಕಂ॥ ಗಜಢಕ್ಕೆಯ ಪಾ[ಲಿ][1] ಮಹಾ
ಧ್ವಜದೊಜ್ಜರದೇಕ ಶಂಖ ರವಿ ಶಶಿಬಿಂಬ
ಧ್ವಜದ ಧವಳಾತಪತ್ರ
ವ್ರಜದೊಳಗನೆ ನಡೆಯೆ ಪೊನ್ನ ಸಿರಿವಟಯಿಗೆಯೊಳ್ ॥ ೧೫೦ ॥

ಪಂಚಮಹಾಶಬ್ದದ ನಡು
ವಿಂಚರದಿಂದೆಸೆವ ಕನಕ ಕಾಹಳ ಜಯಘಂ
ಟಾಂಚಿತಮಂಗಳಪಟುಪಟ
ಹಂ ಚಕ್ರಿಯ ಮುಂದೆ ವರ್ಧಮಾನ ನಿನಾದಂ ॥ ೧೫೧ ॥

ಅದಱಿಂ ಮುನ್ನಂ ಸೇನಾ
ನಿ ದಂಡರತ್ನಂ ನಿಜಾಗ್ರದೊಳ್ ಬರೆ ಪರಮಾ
ಭ್ಯುದಯಕ್ಕುದಯದ ಗಿರಿ ಭೂ
ಭೃದಖಿಳ ಮಣಿಮಕುಟ ಕೋಟಿತಾಟಿತಚರಣಂ ॥ ೧೫೨ ॥

ವ॥ ಬಂದು ರಾಜಮಂದಿರಮಂ ಪೊಕ್ಕು ಚಕ್ರವರ್ತಿಯು ನಿಜೋಚಿತಕಾರ್ಯನಿಗಿರ್ತನಂ—

ಮ॥ ಕುರುವಂಶಾಂಬರಭಾನುಗಾದುದುದಯಂ ಕ್ಷತ್ರಪ್ರತಾಪಂ ನಿರಂ
ತರಮಾಭೂಪನೊಳಿರ್ದುದಂಧತಮಸಂ ಬೆನ್ನಿತ್ತುದಾತಂಗೆ ಮಾ
ಣ್ದಿರೆನಿನ್ನೆಂಬವೊಲಸ್ತಮಸ್ತಕ ತಳನ್ಯಸ್ತಾತ್ಮಬಿಂಬಂ ಚರಾ
ಚರನೇತ್ರಂ ಕಮಳೈಕಮಿತ್ರನಪರಾಕೂಪಾರಮಂ ಪೊರ್ದಿದಂ ॥ ೧೫೩ ॥

---

೧೫೦. ಗಜಢಕ್ಕೆ, ಪಾಲಿಮಹಾಧ್ವಜ, ಒಜ್ಜರ, ಏಕಶಂಖ, ಸೂರ್ಯಚಂದ್ರರ ಲಾಂಛನವುಳ್ಳ ಧ್ವಜಗಳು, ಬೆಳ್ಗೊಡೆಗಳು ರಾಜನ ಶ್ರೀಛತ್ರದೊಡನೆ ನಡೆಯಲಾಗಿ,

೧೫೧. ಪಂಚಮಹಾಶಬ್ದದ ನಡುವೆ ಇಂಪಾಗಿ ನುಡಿವ ಚಿನ್ನದ ಕಾಳೆ, ಜಯಘಂಟೆ, ಮಂಗಳ ಪಟಹ, ವರ್ಧಮಾನಗಳು ಅರಸನ ಮುಂದೆ ಸಾಗಲಾಗಿ,

೧೫೨. ಅದಕ್ಕಿಂತ ಮುಂದೆ ದಂಡರತ್ನವನ್ನು ಮುಂದಿಟ್ಟುಕೊಂಡು ನಡೆಯಲಾಗಿ ಪರಮಾಭ್ಯುದಯಕ್ಕೆ ಉದಯಪರ್ವತವಾದ ಸಮಸ್ತ ಭೂಪತಿಗಳನ್ನು ತನ್ನ ಪಾದಕ್ಕೆರಗಿಸಿಕೊಂಡ ಚಕ್ರವರ್ತಿಯು

ವ॥ ಬಂದು ರಾಜನಿವಾಸವನ್ನು ಹೊಕ್ಕು, ತನಗೆ ಉಚಿತವಾದ ಕಾರ್ಯಗಳಲ್ಲಿ ತೊಡಗಿದನು.

೧೫೩. "ಕುರುವಂಶಾಕಾಶದ ಸೂರ್ಯನಿಗೆ ಉದಯವಾಯಿತು ; ಆ ರಾಜನಲ್ಲಿ ಕ್ಷಾತ್ರ ಪ್ರತಾಪವು ನಿರಂತರವಾಗಿ ನೆಲಸಿರುವುದು ; ಕತ್ತಲೆಯೆಂಬುದು ಬೆಂಗೊಟ್ಟು ಓಡಿಹೋಯಿತು ; ಇನ್ನು ಮೇಲೆ ತಪ್ಪಿಯೂ ಕೂಡ ನಾನು ಬರಲಾರೆನು" ಎಂದುಕೊಂಡನೊ ಏನೊ ಎಂಬಂತೆ ಲೋಕನೇತ್ರನಾದ ಸೂರ್ಯನು ಅಸ್ತಾಚಲದ ತುದಿಯಿಂದ ಪಶ್ಚಿಮ ಸಮುದ್ರಕ್ಕೆ ಇಳಿದನು.

---

1. ಲಿ (ಮ)

ವ॥ ತದನಂತರಂ—

ಉ॥ ಏಂತಮೃತಾಬ್ಧಿಗೆನ್ನುದಯದಿಂದಭಿವೃದ್ಧಿ ಮದೀಯಕಾಂತಿ ಮ
ತ್ಸಂತತಿ ಪೆರ್ಚೆ ಪೆರ್ಚೆನಗಮಪ್ಪುದದಱಿಂದಮನೆಯ್ದೆ ನೋೞ್ಪೆನೆಂ
ಬಂತಿರೆ ಶಾಂತಿನಾಥಮುಖದರ್ಪಣಬಿಂಬಿತಬಿಂಬದಿಂದೆ ದಿ
ಗ್ದಂತಿಯ ಚೂಳಚಾಮರನಿಭಂ ಶಶಿ ಬಂದುದಯಸ್ಥನಪ್ಪುದುಂ ॥ ೧೫೪ ॥

ವ॥ ಚಕ್ರವರ್ತಿಯುಂ ಕರ್ಮವೇಳೆಯೊಳ್ ಪಿರಿದುಪೊೞ್ತುಸಿರ್ದೋಲಗಮಂ ವಿಸರ್ಜಿಸಲ್ವೇೞ್ದು ಶಯನಸದನಮಂ ಪೊಕ್ಕನಿಸಾನುಂ ಬೇಗದಿಂ—

ಕಂ॥ ಕ್ಷೀರಾಬ್ಧಿಫೇನಧವಳೋ
ದಾರಪ್ರಚ್ಛದದೊಳುಚಿತಶಯ್ಯಾತಳದೊಳ್
ಧೀರಂ ಪವಡಿಸಿ ಪೋಲ್ತಂ
ಶಾರದನೀರದದೊಳೊಱಗಿದೈರಾವಣಮಂ ॥ ೧೫೫ ॥

ವ॥ ಅಂತು ಪವಡಿಸಿದ ಪರಮೇಶ್ವರಂಗೆ ಮನೋಗತಮಲ್ಲದ ಕಾಮಿನಿಯಂತೆ ಯಾಮಿನಿ ತನ್ನ ಕ್ಷಣದಾಭಿಧಾನಮಂ ನನ್ನಿಮಾಡಿ ಕ್ಷಣ ಮಾತ್ರದಿಂ ಪೋಗೆ ಬೆಳಗಪ್ಪುದುಂ—

ಮ॥ ಜಯಲಕ್ಷ್ಮೀನಿಭೆಯಪ್ಪ ಸೂೞರಸಿಗಂ ಭೂಪಂಗಮಾ ದಿವ್ಯಶ
ಯ್ಯೆಯಿನೇೞಲ್ಕಿದೆ ಪೊೞ್ತು ದಿಗ್ವಿಜಯಮಂ ನೋೞ್ಪಂ ದಲಾನೀಗಳ
ೞ್ತಿಯಿನೆಂಬಂದದಿನಾಗಳೇಱಿ ದಿನಪಂ ಪೂರ್ವಾದ್ರಿಯಂ ಚಕ್ರವ
ರ್ತಿಯ ಚಕ್ರಪ್ರತಿಬಿಂಬಮೆಂಬಿನಮದೇನಿಂಬಾಯ್ತೊ ಬಿಂಬೋದಯಂ ॥ ೧೫೬ ॥

ವ॥ ಆ ಬಳಿಕ—

೧೫೪. "ನನ್ನ ಉದಯದಿಂದ ಅಮೃತ ಸಮೃದ್ಧಿಗೆ ಹೇಗೆ ಅಭಿವೃದ್ಧಿಯೋ ಹಾಗೆ ನನ್ನ ವಂಶದ ಅಭಿವೃದ್ಧಿಯಿಂದ ನನಗೂ ಏಳಿಗೆಯಾಗುವುದು. ಆದರ ಬಗೆಯನ್ನು ಚೆನ್ನಾಗಿ ನೋಡಬೇಕು" ಎಂದುಕೊಂಡಂತೆ ಶಾಂತಿನಾಥನ ಮುಖದಲ್ಲಿ ಮೂಡಿದ ಪ್ರತಿಬಿಂಬವಾಗಿ ದಿಗ್ದಂತಿಯ ತಲೆ ಚಾಮರದಂತಿರುವ ಚಂದ್ರನು ಉದಯವಾದನು.

ವ॥ ಚಕ್ರವರ್ತಿಯು ತನ್ನ ಕಾರ್ಯದಲ್ಲಿ ಬಲುಹೊತ್ತು ತೊಡಗಿದ್ದು ಓಲಗವನ್ನು ವಿಸರ್ಜಿಸಲು ಅಪ್ಪಣೆಮಾಡಿ ಶಯನಗೃಹವನ್ನು ಸೇರಿದನು.

೧೫೫. ಕ್ಷೀರಸಮುದ್ರದ ನೊರೆಯಂತೆ ಅತ್ಯಂತ ಶುಭ್ರವಾದ ಹೊದಿಕೆಯುಳ್ಳ ಹಾಸುಗೆಯಲ್ಲಿ ಮಲಗಿಕೊಂಡ ಆ ಧೀರನು ಶರತ್ಕಾಲದ ಮೋಡಗಳ ಮೇಲೆ ಒರಗಿದ ಐರಾವತದಂತೆ ಕಂಗೊಳಿಸಿದನು.

ವ॥ ಹಾಗೆ ಮಲಗಿದ ಪರಮೇಶ್ವರನಿಗೆ ಮನಸ್ಸಿಲ್ಲದ ಹೆಣ್ಣಿನಂತೆ ರಾತ್ರಿ ತನ್ನ "ಕ್ಷಣದೆ" (೧. ಕ್ಷಣಕಾಲ ಮಾತ್ರ ಇರುವವಳು, ೨. ವಿಶ್ರಾಂತಿದಾಯಕಳು) ಎಂಬ ಹೆಸರನ್ನು ಸಾರ್ಥಕಗೊಳಿಸಿ ಕ್ಷಣಮಾತ್ರದಲ್ಲಿಯೆ ಹೊರಟು ಹೋಗಲಾಗಿ ಬೆಳಗಾಯಿತು.

೧೫೬. "ಜಯಲಕ್ಷ್ಮೀ ಸದೃಶಳಾದ ಅರಸಿಗೂ ಈ ರಾಜನಿಗೂ ತಮ್ಮ ದಿವ್ಯವಾದ ಹಾಸುಗೆಯಿಂದ ಏಳುವುದಕ್ಕೆ ಇದು ಸರಿಯಾದ ಹೊತ್ತು; ಈಗ ಈತನ ದಿಗ್ವಿಜಯವನ್ನು ನಾನು ನೋಡಿ ಸಂತೋಷಪಡಬೇಕು" ಎಂದುಕೊಂಡನೊ ಏನೊ ಎಂಬಂತೆ ಪೂರ್ವಾಚಲದಲ್ಲಿ ಸೂರ್ಯನು ಹುಟ್ಟಿದನು. ಚಕ್ರವರ್ತಿಯ ಚಕ್ರರತ್ನದ ಪ್ರತಿಬಿಂಬವೊ ಏನೊ ಎಂಬಂತೆ ಸೂರ್ಯಬಿಂಬವು ಎಷ್ಟೊಂದು ಸುಂದರವಾಯಿತು!

ವ॥ ಅಂತು ನೇಸಱ್ ಮೂಡುವುದುಮರಸನುಪ್ಪವಡಿಸೆ ಕೃತೋಚಿತದಿವಸಮುಖವ್ಯಾಪಾರನಾಗಿ ಪ್ರಯಾಣಪಟಹಂಗಳೆಸೆಯೆ ಪೂರ್ವಾಭಿಮುಖನಾಗಿ ಪಯಣಂಬೋಗಿ—

ಕಂ॥ ಆವೆರ್ಬಡೆಯಂ ಪ್ರಾಚೀ
ಕೂಪಾರಕ್ಕೊಯ್ವ ನೃಪತಿಸೇನಾಪತಿ ಗಂ
ಗಾಪಗೆಯಂ ನಡೆಯಿಪ ಸಗ
ರಾಪತ್ಯನ ಮಹಿಮೆಯಿಂದಮಂದಂಬಡೆದಂ ॥ ೧೫೭ ॥

ವ॥ ಮತ್ತಂ—

ಕಂ॥ ಅವಗತಫಲತ್ವಮಂ ಭ
ಗ್ನಪಾತಿತೋತ್ಪಾತವಿಧಿಯನೆಯ್ದಿದ ನೃಪರಿಂ
ದ್ವಿಪಮಾರ್ಗಮೆಂತು ಹತಪಾ
ದಪಂಗಳಿಂ ಭಯದಮಂತೆ ಭಯದಂ ಮಾರ್ಗಂ ॥ ೧೫೮ ॥

ವ॥ ಅಂತಾ ದಂಡನಾಯಕಂ ಪೌರಸ್ತ್ಯರಾಜನ್ಯಕಸಾಧನಪರನಾಗಿ ಮುಂದಂ ನಡೆಯೆ—

ಕಂ॥ [1]ಭೂ[1]ಜಾಂಗವೃತ್ತಿಯಂ ಬಿಸು
ಟಾಜಗದಧಿಪಂಗೆ ವೈತಸಾವಳಿ [2]ಪರಿವಂ
ದಾ[2]ಜಳಕೆಱಗುವವೋಲ್ ನಯ
ಭಾಜನರೆಱಗಿದರಜಿಂಹರೆನಿಸಿದ ಸುಹೃರ್ ॥ ೧೫೯ ॥

ವ॥ ಅಲ್ಲಿಂದತ್ತಂ—

ವ॥ ಹಾಗೆ ಸೂರ್ಯೋದಯವಾಗಲಾಗಿ ಅರಸನು ಎದ್ದು ಪ್ರಾತರ್ವಿಧಿಗಳನ್ನು ಮುಗಿಸಿಕೊಂಡು ವಿಜಯ ಯಾತ್ರೆಯ ವಾದ್ಯಧ್ವನಿಯೊಡನೆ ಪೂರ್ವದಿಕ್ಕಿಗೆ ಪ್ರಯಾಣಮಾಡಿದನು.

೧೫೭. ಆ ಮಹಾಸೈನ್ಯವನ್ನು ಪೂರ್ವಸಮುದ್ರದೆಡೆಗೆ ಅರಸನು ಕೊಂಡುಹೋಗುತ್ತಿರುವಾಗ ಗಂಗಾನದಿಯನ್ನು ಕರೆತರುತ್ತಿರುವ ಭಗೀರಥನಿಗಿಂತಲೂ ಮಹಿಮಾವಂತನಾಗಿ ತೋರಿದನು.

ವ॥ ಮತ್ತು—

೧೫೮. ಆನೆಗಳು ತೊತ್ತಳದುಳಿದು ಹೋದಾಗ ಕೆಡೆದು ಬಿದ್ದ ಮರಗಳಿಂದಲೂ ನಷ್ಟವಾದ ಫಲಗಳಿಂದಲೂ ಆ ಹಾದಿ ಹೇಗೆ ಭಯಾನಕವಾಗುವುದೊ ಹಾಗೆ ಈ ಸೈನ್ಯ ಹಾದುಹೋದ ಮಾರ್ಗವು ಫಲವನ್ನೆಲ್ಲ ಕಳೆದುಕೊಂಡು ಸೋತುಬಿದ್ದ ಕೊಳ್ಳೆಹೋದ ಅರಸರಿಂದ ಭಯಾನ್ವಿತವಾಯಿತು.

ವ॥ ಹಾಗೆ ಹೋಗುತ್ತ ಸೇನಾನಾಯಕನು ಪೂರ್ವದಿಗ್ಭಾಗದಲ್ಲಿರುವ ರಾಜರನ್ನು ಹಿಡಿಯಲೆಂದು ಮುಂದೆ ಸಾಗಿದನು.

೧೫೯. ಮರಗಳನ್ನು ಕಿತ್ತುಹಾಕುವ ಜಲಪ್ರವಾಹಕ್ಕೆ ಬೆತ್ತದ ಬೆಳೆ ಬಾಗಿ ಬದುಕುವಂತೆ ನಯವರ್ತಿಗಳಾದ ಅರಸರು ಸೆಡೆದು ನಿಲ್ಲುವುದನ್ನು ಬಿಟ್ಟು ಎರಗಿ ಉಳಿದುಕೊಂಡರು.

ವ॥ ಅಲ್ಲಿಂದ ಮುಂದೆ—

---

1. ಭೋ (ಅ) 2. ವಾವರ ಹ್ಯ (ಅ)

ಕಂ॥ ನೌಸಾಧನೋದ್ಧತರನಂ[1]
ತಾ ಸೇನಾನಿ ತ್ರಿವಂಶರಂ ಕಿಟ್ಟು ಗತಾ
ಯಾಸಂ ನಟ್ಟಂ ನೃಪಜಯ
ಶಾಸನಮಂ ಗಂಗೆಯೆರಡುತಡಿಯೊಳಮೊಗದೊಳ್ ॥ ೧೬೦ ॥

ವ॥ ಮತ್ತಮಲ್ಲಿಯೆ—

ಕಂ॥ ಆ ಪಾದಪದ್ಮನತರಂ
ತಾಪದದೊಳ್ ಕಳಮದಂತೆ ಫಲಿಳಿಯಿಸಿದರವರ್
ಶ್ರೀಪತಿಗುತ್ಖಾತಪ್ರತಿ
ರೋಪಿತರಧಿಕಂಗಶಕ್ಯಮೆಂಬರುಮೊಳರೇ ॥ ೧೬೧ ॥

ವ॥ ಅಂತು ಸರ್ವಸ್ವಹರಣಾನಂತರಮವರವರ (ನವರವರ) ನೆಲೆಯೊಳ್ ನಿಱಿಸಿ ತೀರ್ಥಕರ್ಮನಿರ್ಮಾಪಣನಿಬದ್ಧಸಿಂಧುರಸೇತುಬಂಧನದಿಂದಮುತ್ಕಳಾದರ್ಶಿತನಿರ್ಗಮಮಾರ್ಗಂ ಚಕ್ರವರ್ತಿ ಕಳಿಂಗದೇಶಾಭಿಮುಖನಾಗಿ ಪೋಗಿ—

ಕಂ॥ ಪ್ರವರಾಂಕುಶಮಂ ಗಂಭೀ
ರವೇದಿಶಿರದೊಳ್ ನಿಷಾದಿ ನಿಱಿಸುವ ತೆಱದಿಂ
ದವನಿಪತಿ ನಿಱಿಸಿದಂ ತೀ
ವ್ರವೈರಿಜಯಮಂ ಮಹೇಂದ್ರಗಿರಿಮಸ್ತಕದೊಳ್ ॥ ೧೬೨ ॥

ವ॥ ಅಂತು ಪೂರ್ವಮಹೇಂದ್ರಪೂಜಾವಾಪ್ತ ಮಹಿಮಾತಿಶಯದಿಂ ಮಹೇಂದ್ರಾದ್ರಿಸಾರಮನಾತ್ಮಾಯತ್ತಂ ಮಾಡಿದುರ್ವೀಶತಿಲಕನ ಸೈನಿಕಂ—

---

೧೬೦. ನೌಕಾಬಲದಿಂದ ಸನ್ನದ್ಧರಾದ ತ್ರಿವಂಶರನ್ನು ಆ ಸೇನಾನಿಯು ಉನ್ಮೂಲಗೊಳಿಸಿ ಗಂಗಾನದಿಯ (ಮಧ್ಯದಲ್ಲಿಯೂ ದ್ವೀಪಗಳಲ್ಲಿಯೂ) ಉಭಯ ತೀರಗಳಲ್ಲಿಯೂ ಜಯಸ್ತಂಭಗಳನ್ನು ನಿಲ್ಲಿಸಿದನು.

ವ॥ ಮತ್ತು ಅಲ್ಲಿಯೆ—

೧೬೧. ಕೆಲವರು ಬಂದು ಆತನ ಕಾಲಿಗೆ ಎರಗಿದರು. ಕಿತ್ತು ತೆಗೆದ ಬತ್ತದ ಸಸಿಯನ್ನು ಮತ್ತೆ ನೆಡುವಂತೆ ಮೊದಲು ಕಿತ್ತುಹಾಕಿಸಿಕೊಂಡವರನ್ನು ಚಕ್ರವರ್ತಿಯು ಅವರವರ ಸ್ಥಳದಲ್ಲಿ ಪುನಃ ಪ್ರಸ್ಥಾಪಿಸಿದನು. ಅಧೀನನಾದವನಿಗೆ ಅಸಾಧ್ಯವೆಂಬುವದು ಉಂಟೆ?

ವ॥ ಹೀಗೆ ಅವರ ಸರ್ವಸ್ವವನ್ನೂ ಅಪಹರಿಸಿದ ಮೇಲೆ ಮರಳಿ ಅವರವರನ್ನು ಅವರವರ ನೆಲೆಗಳಲ್ಲಿ ನಿಲ್ಲಿಸಿದ ಬಳಿಕ ತೀರ್ಥಕರನು ಆನೆ ಪಡೆಗಳ ಸೇತುವೆಯಿಂದ (ನದಿಯನ್ನು ದಾಟಿ) ಉತ್ಕಲ ರಾಜರಿಂದ ಮಾರ್ಗದರ್ಶನವನ್ನು ಪಡೆಯುತ್ತ ಕಲಿಂಗದೇಶದತ್ತ ನಡೆದನು.

೧೬೨. ಎಂತಹ ಏಟಿಗೂ ಮಣಿಯದಿರುವ "ಗಂಭೀರವೇದಿ"ಯೆಂಬ ಆನೆಯ ಕುಂಭಸ್ಥಳದಲ್ಲಿ ಮಾವುತನು ಅಂಕುಶವನ್ನು ಚುಚ್ಚಿ ನೆಡುವಂತೆ, ಮಹೇಂದ್ರಪರ್ವತದ ಶಿಖರದ ಮೇಲೆ ವೈರಿವಿಜಯಿಯಾದ ತನ್ನ ಪ್ರತಾಪವನ್ನು ನಾಟಿಸಿದನು.

ವ॥ ಪೂರ್ವಜನ್ಮದಲ್ಲಿ ಮಹೇಂದ್ರನಾಗಿ ಪೂಜೆಮಾಡಿ ಗಳಿಸಿಕೊಂಡ ಅತ್ಯಧಿಕ ಮಹಿಮೆಯಿಂದ ಮಹೇಂದ್ರ ಪರ್ವತದ ಸಾರವನ್ನೆಲ್ಲ ವಶಪಡಿಸಿಕೊಂಡನು. ಆಗ ಆತನ ಸೈನಿಕರು—

---

1. ಸಿರಕಸಿಂದಂ (ಅ)

ಕಂ॥ ಕಡಿಯೆ ಕವುಂಗುಂ ತೆಂಗುಂ
ಪಡಲಿಟ್ಟುವು ತಮಗೆ ಸೋಲ್ತ ರಿಪುವನಿತೆಯ ಸೋ
ರ್ಮುಡಿಯನಿಳಿಪುವವೊಲಿಳಿಸಿದ
ರಡರ್ತು ಕಯ್ಪಿಟ್ಟು ನಿಮಿರ್ದ ಸೀರೆಯ ಕಯ್ಯಂ ॥ ೧೬೩ ॥

ವ॥ ಅಂತು ವಿಲಯಪವನನಂತೆ ವನಭಂಗಂಗೆಯ್ದು ಪೋಗಿ ಚಕ್ರವರ್ತಿಯ ದಂಡನಾಯಕನೊಳ್ ಗಜಪೋತಬಲಸೇನಾಂಗನಪ್ಪ ಕಳಿಂಗರಾಜಂ ಬಂದು ಪಕ್ಷಚ್ಛೇದನೋದ್ಯುಕ್ತನಪ್ಪ ಸುರರಾಜನ ಸೇನಾನಿಯೊಳ್ ತಾಗುವ ಪದದ ವರ್ಷನಗದಂತೆ ಬಂದು ತಾಗುವುದುಂ ದಂಡನಾಯಕನುಂ ಕೆಲವು ಗಂಧಸಿಂಧುರಂಬೆರಸು ತೊತ್ತಳದುಳಿದುಳಿಸೆ ಕಳಿಂಗನೃಪಯೋಧರುಂ—

ಕಂ॥ ನಾರಾಚವೃಷ್ಟಿ ಮಂಗಳ
ಧಾರಾಸ್ನಪನಮನೆ ಪೋಲೆ ಸೇನಾನಿಗೆ ಕೈ
ಯ್ಯಾರೆ ಜಯಲಕ್ಷ್ಮಿ ನೃಪಘಟೆ
ಗಾ ರಾಜಕಮಾದುದಂದು ಕಟ್ಟುಂಗವಳಂ ॥ ೧೬೪ ॥

ವ॥ ಅಂತು ಕಳಿಂಗರಾಜನ ಮದದಂತಿಗಳ್ ನುಗ್ಗುನುಗ್ಗಿಟ್ಟನಂ ಪರಿಯಿಸಿ ಗೆಲ್ದುದುಮೊಂದೆಮೊಯ್ಯಾಳೋಡುವ ಕಳಿಂಗರಾಜನಂ ಜಾನೆಯಾನೆಗಳೊಳ್ ಭಂಡಾರಿಸಿ ತದೀಯಶೌರ್ಯಮನೆತ್ತಂಗೊಳ್ವಂತೆ ಮೇಗಣಂ ಮೇಗೆ ಪಡಿದೆತ್ತಿಕೊಂಡು ಮರ್ಕಟಬಂಧದಿಂ ಕಟ್ಟಿ ತಂದು ಚಕ್ರವರ್ತಿಯ ಮುಂದಿಟ್ಟುದುಂ—

---

೧೬೩. ಅಡಕೆ ತೆಂಗುಗಳನ್ನು ಕಡಿದು ಕಡಿದು 'ಚೆಲ್ಲಾಪಿಲ್ಲಿ ಮಾಡಿದರು. ತಮ್ಮ ಕೈಯಲ್ಲಿ ಸೋತು ಸಿಕ್ಕಿದ ಶತ್ರುಸ್ತ್ರೀಯ ಸೋರ್ಮುಡಿಯನ್ನು ಇಳಿಸುವ ಹಾಗೆ 'ಸೀರ' ವೃಕ್ಷಗಳ ಕೊಂಬೆಗಳನ್ನು ಆಕ್ರಮಿಸಿ ಹಿಡಿದು ಇಳಿಸಿದರು.

ವ॥ ಹೀಗೆ ಪ್ರಳಯದ ಬಿರುಗಾಳಿಯಂತೆ ವನವನ್ನು ಮುರಿದು ಮುನ್ನಡೆದರು. ಕುಲಪರ್ವತಗಳ ರೆಕ್ಕೆಗಳನ್ನೆಲ್ಲ ಸವರುತ್ತ ಬರುವ ದೇವೇಂದ್ರನಿಗೆ ಎದುರಾಗುವ ವರ್ಷಪರ್ವತದಂತೆ ಬಲಿಷ್ಠವಾದ ಗಜಸೈನ್ಯದೊಡನೆ ಕಳಿಂಗರಾಜನು ಬಂದು ತಾಗಿದನು. ಸೇನಾಪತಿಯು ಕೆಲವು ಗಂಧಗಜಗಳನ್ನೊಡಗೊಂಡು ನುಗ್ಗಿ ತೊತ್ತಳದುಳಿದನು. ಕಳಿಂಗರಾಜನ ಸೈನಿಕರು (ಸುರಿಸಿದ)—

೧೬೪. ಬಾಣಗಳ ಮಳೆಯು ತನಗೆ ಮಂಗಳಸ್ನಾನವಾಗಲು ಸೇನಾಪತಿಯು ಜಯಲಕ್ಷ್ಮಿಯನ್ನು ವಶಪಡಿಸಿಕೊಂಡನು. ಚಕ್ರವರ್ತಿಯ ಗಜಸೈನ್ಯಕ್ಕೆ ಆ ರಾಜ್ಯವು ಕಟ್ಟಿಕೊಟ್ಟ ಬುತ್ತಿಯಾಯಿತು.

ವ॥ ಹೀಗೆ ಕಳಿಂಗರಾಜನ ಮದಗಜಗಳನ್ನು ನುಗ್ಗುನುಗ್ಗಾಗುವಂತೆ ಬಡಿದು ಓಡಿಸಿ ಗೆಲುವನ್ನು ಪಡೆಯಲಾಗಿ ಏಕಾಕಿಯಾಗಿ ಆನೆಯ ಮೇಲೆ ಓಡಿಹೋಗುತ್ತಿದ್ದ ಕಳಿಂಗರಾಜನನ್ನು ಆನೆಗಳಿಂದ ಸುತ್ತುಗಟ್ಟಿಸಿ ಆತನ ಶೌರ್ಯವನ್ನು ತಾನಿದ್ದೆಡೆಯಿಂದ [illegible] ಎತ್ತಿಕೊಳ್ಳುವಂತೆ ಆನೆಯ ಮೇಲಿಂದಲೆ ಅವನನ್ನು ಎತ್ತಿ ಸೆಳೆದು ಕೋಡಗಗಟ್ಟು ಕಟ್ಟಿ ಹಿಡಿತಂದು ಚಕ್ರವರ್ತಿಯ ಮುಂದೆ ಇಳಿಸಿದನು.

ಕಂ॥ ಅರಿಗಸುರವಿಜಯಿ ಮುನಿಗುಂ
ಧರೆ ಬರೆ ಸಿರಿ ಸಾರೆ ಧರ್ಮವಿಜಯಂ ವಿಭು ತಾಂ
ಕರುಣಿಸೆ ಮಹೇಂದ್ರನಾಥನ
ಧರೆಯಿರೆ ಸಿರಿ ಚಕ್ರವರ್ತಿಗಾವಗಮಾದಳ್ ॥ ೧೬೫ ॥

ವ॥ ಅಂತು ಕಳಿಂಗರಾಜಂಗೆ ಕೋಶೋಪನತವೃತ್ತಿಯನಿತ್ತು ಸರ್ವಸ್ವಮಂ ಕೊಂಡಾಜ್ಞಾವಿಧೇಯಮಂಮಾಡಿ ಮಹೇಂದ್ರೋಪಕಂಠದೊಳ್ ಮೂಱುಪ್ಪಯಣಂಗೆಯ್ದು ಮತ್ತಂ ಕತಿಪಯಪ್ರಯಾಣಂಗಳಿಂ—

ಕಂ॥ ಗಂಗೆಯ ತಡಿವಿಡಿದು ಬಲಾಂ
ಗಂಗಳ್ ಬೇಱೊಂದು ಗಂಗೆ ನಡೆವಂತಿರೆ ಬೇ
ಗಂಗಿಡದೆ ನಡೆ[1]ಯೆ[1] ನಡೆದು ರ
ಥಾಂಗಧರಂ ಬೀಡುವಿಟ್ಟನಂಬುಧಿತಟದೊಳ್ ॥ ೧೬೬ ॥

ವ॥ ಅಂತು ಗಂಗಾದ್ವಾರದೊಳ್ ಚತುರಶ್ರ ಷಣ್ಣವತಿಗವ್ಯೂತಿಪ್ರಮಾಣದೊಳ್ ಬೀಡಂಬಿಟ್ಟು ಚಕ್ರೇಶ್ವರನಿರ್ಪುದುಂ—

ಉ॥ ಬೇಗಮುದನ್ವದಂತರನಿವಾಸಿಗಳಾಸನಕಂಪದಿಂ ನೃಪೇಂ
ದ್ರಾಗಮಮಂ ಜಲಕ್ಷನಱಿದೀಶನನೀಗಡೆ ಕಾಣ್ಬುದೆಂದು ತ
ನ್ಮಾಗಧದೇವನಂ ಬಳಸಿ ಕೊಂಡಮರರ್ ಬರೆ ಬಂದು ಮಾಗಧಂ
ಮಾಗಧನಂತೆ ಬಿಚ್ಚಳಿಸಿ ಭೂಪನ ಬಾಗಿಲ ಕಣ್ಣೋಳಿರ್ಪುದುಂ ॥ ೧೬೭ ॥

---

೧೬೫. ಅಸುರ ವಿಜಯಿಯಾದವನು ಶತ್ರುವಿನ ಭೂಮಿ ಹಾಗು ಸಂಪತ್ತುಗಳನ್ನು ಗೆದ್ದರೂ ಕೋಪವನ್ನು ಬಿಡುವುದಿಲ್ಲ. ಶಾಂತಿನಾಥನು ಧರ್ಮವಿಜಯಿ; ಆದುದರಿಂದ ಮಹೇಂದ್ರನಾಥನ ಭೂಮಿಯನ್ನು ಆತನಿಗೇ ಮರಳಿ ಕೊಟ್ಟು, ಅವನ ಸಂಪತ್ತನ್ನು ಮಾತ್ರ ತೆಗೆದುಕೊಂಡನು. (ವಿಜಯಗಳಲ್ಲಿ ಮೂರು ವಿಧ: 1. ಶತ್ರುವನ್ನು ಸೋಲಿಸಿದ ಬಳಿಕ ಆತನ ಸಂಪತ್ತನ್ನು ಮಾತ್ರ ತೆಗೆದುಕೊಂಡು ರಾಜ್ಯವನ್ನು ಪುನಃ ಅವನಿಗೇ ಕೊಡುವವನು ಧರ್ಮವಿಜಯಿ; 2. ಗೆದ್ದ ಮೇಲೆ ಶತ್ರುವಿನ ಸಂಪತ್ತು-ಭೂಮಿ ಎರಡನ್ನೂ ಕಿತ್ತುಕೊಂಡು ಅವನ ಪ್ರಾಣವನ್ನು ಮಾತ್ರ ಉಳಿಸುವವನು ಲೋಭವಿಜಯಿ; 3. ಶತ್ರುವನ್ನು ಕೊಂದು ಆತನ ಭೂಮಿ-ಸಂಪತ್ತುಗಳನ್ನು ಅಪಹರಿಸುವವನು ಅಸುರವಿಜಯಿ.)

ವ॥ ಹೀಗೆ ಶಾಂತೀಶ್ವರನು ಕಳಿಂಗರಾಜನಿಗೆ ಮಾಂಡಲಿಕವೃತ್ತಿಯನ್ನು ಕೊಟ್ಟು ಆತನ ಸಂಪತ್ತೆಲ್ಲವನ್ನು ತೆಗೆದುಕೊಂಡು ಮಹೇಂದ್ರಪರ್ವತದ ಬಳಿ ಮೂರು ಉಪ್ಪಯಣಗಳನ್ನು ಮಾಡಿ ಕೆಲವು ಪಯಣಗಳಿಂದ ಸಾಗಿದನು.

೧೬೬. ಗಂಗಾನದಿಯ ತೀರವನ್ನನುಸರಿಸಿ ಇದು ಇನ್ನೊಂದು ಗಂಗೆಯೊ ಏನೊ ಎಂಬಂತೆ ವೇಗವಾಗಿ ಸೈನ್ಯವನ್ನು ನಡಸಿಕೊಂಡು ಹೋಗಿ ಸಮುದ್ರತಟದಲ್ಲಿ ಚಕ್ರವರ್ತಿಯು ಬೀಡುಬಿಟ್ಟನು.

ವ॥ ಗಂಗಾದ್ವಾರದಲ್ಲಿ ಚಚ್ಚೌಕವಾಗಿ ತೊಂಬತ್ತಾರು ಯೋಜನದಳತೆಯಾಗಿ ಬೀಡುಬಿಟ್ಟು ಚಕ್ರೇಶ್ವರನು ನಿಲ್ಲಲಾಗಿ,

೧೬೭. ಸಮುದ್ರಮಧ್ಯದ ನಿವಾಸಿಗಳು ಆತನ ಕಂಪದಿಂದ ಥಟ್ಟನೆ ಚಕ್ರೇಶ್ವರನ ಆಗಮನವನ್ನರಿತು ಈಗಲೆ ಹೋಗಿ ಆತನನ್ನು ಕಾಣಬೇಕೆಂದು ಮಗಧದೇವನೊಡನೆ ಬಂದರು. ಮಾಗಧನು "ಮಾಗಧ" (ಹೊಗಳುಭಟ್ಟ)ನಂತೆ ಸ್ತುತಿಸುತ್ತ ಚಕ್ರಿಯ ಬಾಗಿಲಲ್ಲಿ ಕಾದುನಿಂತನು.

---

1. ದು (ಅ)

ಕಂ॥ ಅಱಿಪೆ ಮೊದಲವರ್ಗೆ ಕಿಟ್ಟಡಿ
ಯುಱಿರವರಧಿಪಂಗೆ ಬಿನ್ನಪಂಗೆಯ್ವುದುಮಾ
ಮಱಿಯೆವದಂ ಚಕ್ರಾಯುಧ
ನಱಿಗುಂ ವ್ಯಂತರರ ಕಾಣ್ಬ ಕಾಣಿಸುವೆಡೆಯುಂ ॥ ೧೬೮ ॥

ವ॥ ಎಂಬುದುಂ ವಾಮಕರತಳನಿಹಿತದುಕೂಲಾಂಶುಕವಸನಾಜ್ಞಾದಿತೋಷ್ಠದ್ವಯದಕ್ಷಿಣಪಾಣಿಪಲ್ಲವಾಭಿನಯನಿವೇದಿತಾವಿನೇಯ ವಿಳಸಿತಚಕ್ರಾಯುಧಂ ನಿಂದಿರ್ದ—

ಕಂ॥ ಅಪ್ರತಿಮಾರ್ಘ್ಯಕರಂ ತ್ರಿದಿ
ವ ಪ್ರಸ್ತುತವಸ್ತು ಹಸ್ತಯುಕ್ತಂ ಶ್ರೀಪಾ
ದ ಪ್ರಣತನಗ್ರಹಾರದ
ವಿಪ್ರನ ಮಾಗಧನ ಕಾಣ್ಕೆಗೇನಾಳೋಚಂ ॥ ೧೬೯ ॥

ಬರವೇಳ್ಟ್ವುದೆಂಬುದುಂ ರಾ
ಜರಾಜನನುಮತಮನಱಿದು ಪೆರ್ವಡಿಯಱನಾ
ದರದಿಂ ಕಾಣಿಸಿದಂ ವ್ಯಂ
ತರೇಶನಂ ಮೂಡಣಂಬುನಿಧಿಗಧಿಪತಿಯಂ ॥ ೧೭೦ ॥

ವ॥ ಅಂತು ತಂದು ಕಾಣಿಸಿ ಜಗತ್ಪ್ರಾಸಾದಮೂಲಸ್ತಂಭಂಗೆ ಪೊಡವಡಿಸೆ—

ಕಂ॥ ನಡನಡ ನಡುಗಿ ತಳರ್ನಡೆ
ನಡೆವ[1]ತ್ಕುಕುತಂಬೊಲುದಧಿಪತಿ ನೃಪತಿಗೆ ಮೂ
ಱಿಡೆಯೊಳ್ ಮೊಟ್ಗಿ ಧರಿತ್ರಿಗೆ
ಪಡೆದಂ ನಿಜಮಕುಟ ಕಿರಣವರ್ಣಾಂತರಮಂ ॥ ೧೭೧ ॥

---

೧೬೮ ದ್ವಾರಪಾಲಕರಿಗೆ ಹೇಳಲಾಗಿ ಅವರು ಹಿರಿ ಪ್ರತೀಹಾರಿಗಳಿಗೆ ತಿಳಿಸಿದರು. ಅವರು ಬಂದು ಅಧೀಶ್ವರನಿಗೆ ಅರಿಕೆಮಾಡಿಕೊಳ್ಳಲು "ವ್ಯಂತರರನ್ನು ಕಾಣುವುದು ಕಾಣಿಸುವುದು ಎಲ್ಲಾ ಚಕ್ರಾಯುಧನಿಗೆ ಗೊತ್ತು ; ನಾವದನ್ನು ಅರಿಯೆವು" ಎಂದನು.

ವ॥ ಹಾಗೆನ್ನಲು ಎಡಗೈಯಲ್ಲಿ ಸೆರಗಿನಿಂದ ತುಟಿಗಳನ್ನು ಮರೆಮಾಡಿಕೊಂಡು ಬಲಗೈಯಿಂದ ಸನ್ನೆಮಾಡುತ್ತ ಚಕ್ರಾಯುಧನು ಬಂದು ನಿಂತು—

೧೬೯. "ಅರ್ಘ್ಯಪೂರ್ವಕವಾಗಿ ದೇವಲೋಕದ ಶ್ರೇಷ್ಠವಸ್ತುಗಳ ಕಾಣಿಕೆಯೊಡನೆ ನಿಮ್ಮ ಪಾದಗಳಿಗೆ ಅಗ್ರಹಾರದ ಬ್ರಾಹ್ಮಣನಂತೆ ಬಾಗಿರುವ ಮಾಗಧನನ್ನು ಕಾಣುವುದಕ್ಕೆ ಆಲೋಚನೆಯೇನು ?

೧೭೦. ಬರಹೇಳು" ಎಂದನು. ಚಕ್ರವರ್ತಿಯ ಅನುಮತವನ್ನು ಅರಿತು ಹಿರಿಯ ಪ್ರತೀಹಾರನು ಪೂರ್ವಸಮುದ್ರಾಧಿಪತಿಯಾದ ವ್ಯಂತರ ರಾಜನನ್ನು ಕರೆತಂದನು.

ವ॥ ಹಾಗೆ ಕರೆತಂದು ಜಗತ್ ಸ್ಥಿತಿಗೆ ಮೂಲಾಧಾರನಾದ ಚಕ್ರವರ್ತಿಗೆ ನಮಸ್ಕಾರ ಮಾಡಿಸಲಾಗಿ—

೧೭೧. ಗಡಗಡ ನಡುಗಿ ದಟ್ಟಡಿಯಿಡುವ ಮಗುವಿನಂತೆ ತತ್ತರಿಸುತ್ತ ಸಮುದ್ರಾಧಿಪತಿಯು ಶಾಂತಿನಾಥೇಶನಿಗೆ ಮೂರುಸಲ ಬಾಗಿ, ತನ್ನ ಕಿರೀಟದ ರತ್ನಪ್ರಭೆಯನ್ನು ನೆಲದಮೇಲೆಲ್ಲ ಹರಡಿದನು.

---

1 ವ್ಯ (ಮ)

ವ॥ ತದನಂತರಂ—

ಕಂ॥ ಸೊಗಯಿಪ ತುಡುಗೆಗಳಂ ಪಡ
ಲಿಗೆವೆರಸವಟಯಿಸ್ಸಿ ಭೂಷಣಾದಿಗಳಂ ಪೇ
ಳಿಗೆವೇಱಿ ತೋರ್ಪ ಭಂಡಾ
ರಿಗ[1]ನ[1]ನಿಸಿದನಮರನಜರನಾಸ್ಥಾಯಿಕೆಯೊಳ್ ॥ ೧೭೨ ॥

ವ॥ ಅಂತವಟಯಿಸ್ಸಿದ ಪರಾರ್ಘ್ಯರತ್ನಂಗಳಂ ಗೃಹಪತಿರತ್ನಂ ಕೆಯ್ಕೊಳಲೆಂದು ನಿಂದು ನೋಡೆ –

ಕಂ॥ ನೀಲಪಟಾಸ್ತರಣದ ಮೇ
ಲಾಲಲಿತಾಭರಣಮೊಪ್ಪಿ ತೋಱಿದುವು ಶರ
ತ್ಕಾಲದ ಗಗನದ ತಾರಾ
ಮಾಲೆಯನನುಕರಿಸಿ ದೇವದೇವನ ಸಭೆಯೊಳ್ ॥ ೧೭೩ ॥

ವ॥ ಅವಂ ಗೃಹಪತಿರತ್ನಂ ಕೆಯ್ಕೊಂಡು ಮಾಣಿಕಭಂಡಾರಿಗಂಗೆ ಪ್ರವೇಶಂಗೆಯ್ವುದಿತ್ತ ಸ್ವಾಂತರಾಮರಂ—

ಹರಣೀವೃತ್ತಂ॥ ಅಱಿಯದ ಜಡಂ ಪಾಲಂ ದುಗ್ಧಾಬ್ಧಿಗುಯ್ವವೊಲಾನುವಿ
ತೆಱದೆ ನೃಪತೀ ನಿನ್ನಂ ಕಾಣ್ಬಲ್ಲಿಗೀಮಣಿಭೂಷಣಂ
ನೆಱೆಯದೊಡ[2]ಲಿಂ[2] ತಂದೆಂ ಮದ್ಭಕ್ತಿಯಿಂ ಪರಮಾರ್ಥದಿಂ
ದಱಿಯದವರಾರ್ ಅರ್ಥೀ ದೋಷಂ ನ ಪಶ್ಯತಿಯೆಂಬುದಂ ॥ ೧೭೪ ॥

ಕಂ॥ ಶ್ರೀನಾಥ ನಿನ್ನ ಬರವಿಂ
ಗೇನುಂ ಚಕ್ರಪ್ರಸೂತಿ ಕಾರಣಮಲ್ತು
ದ್ದಾನಿಯ ಪುಣ್ಯಮೆ ಜಗದೊಳ್
ತಾನೆ ಮೊದಲ್ ಕಾರಣಕ್ಕಕಾರಣಬಂಧೂ ॥ ೧೭೫ ॥

ವ॥ ಆನಂತರ—

೧೭೨. ಸೊಗಸಾದ ಅಲಂಕಾರ ವಸ್ತುಗಳನ್ನು ಪಡಲಿಗೆಗಳಲ್ಲಿಟ್ಟು, ಆಭರಣಗಳನ್ನು ಪೆಟ್ಟಿಗೆಸಹಿತವಾಗಿ ತೆರೆದಿಟ್ಟು ದೇವದೇವನ ಓಲಗದಲ್ಲಿ ತನ್ನ ಭಂಡಾರವನ್ನೇ ತಂದಿಟ್ಟಂತೆ ಸಾದರಪಡಿಸಿದನು.

ವ॥ ಹಾಗೆ ಸಮರ್ಪಿಸಿದ ಶ್ರೇಷ್ಠರತ್ನಗಳನ್ನು ಗೃಹಪತಿರತ್ನರನು ಸ್ವೀಕರಿಸಲೆಂದು ಬಂದು ನೋಡಿದನು.

೧೭೩. ನೀಲವರ್ಣದ ಬಟ್ಟೆಯನ್ನು ಹಾಸಿ ಅದರ ಮೇಲಿಟ್ಟ ಆ ಆಭರಣಗಳು ಶರತ್ಕಾಲದ ಆಕಾಶದಲ್ಲಿ ಹೊಳೆಯುವ ನಕ್ಷತ್ರಮಾಲೆಗಳಿಗೆ ಸದೃಶವೆನಿಸಿದುವು.

ವ॥ ಗೃಹಪತಿರತ್ನರನು ಅವುಗಳನ್ನು ತೆಗೆದುಕೊಂಡು ಮಾಣಿಕಭಂಡಾರಕ್ಕೆ ಸೇರಿಸಿದನು. ಇತ್ತ ಸ್ವಾಂತರದೇವನು ಹೀಗೆ ನುಡಿದನು :

೧೭೪. "ಕ್ಷೀರಸಮುದ್ರಕ್ಕೆ ಹಾಲನ್ನೊಯ್ದುಕೊಡುವ ಮರುಳನಂತೆ ಮಹಾರಾಜನೆ ನಿನಗೆ ಕಾಣಿಕೆಯೆಂದು ಈ ರತ್ನಾಭರಣಗಳನ್ನು ತಂದೊಪ್ಪಿಸಿದೆನು. ಇದಕ್ಕೆ ನನ್ನ ಪರಮ ಭಕ್ತಿ ಕಾರಣವಲ್ಲದೆ ಬೇರೇನೂ ಇಲ್ಲ. ಅಭಿಲಾಷಿಯ ಕಣ್ಣಿಗೆ ದೋಷವೇ ಕಾಣದೆಂಬರು. ಇದನ್ನು ಅರಿಯದವರಾರು?

೧೭೫. ನೀನು ಬರುವುದಕ್ಕೆ ಚಕ್ರೋತ್ಪತ್ತಿ ಕಾರಣವಲ್ಲ. ಅಕಾರಣ ಬಂಧುವೆ, ನಮ್ಮ ಪುಣ್ಯ ದೊಡ್ಡದು. ಬೇರೆ ಕಾರಣವೇಕೆ ಬೇಕು?

---

1. ಳಿ (ಮ) 2. ಲು (ಮ)

ಕಂ॥ ಮನಮುಂ ತನುವುಂ ಪುತ್ರೊ
ರ್ವನರಸನ ದಂದು ಮುಕ್ತಿಯುಂ ಭುಕ್ತಿಯುಮೊ
ರ್ವನೊಳಿಲ್ಲನುಜೀವಿಗೆ ದೇ
ವನುಮರಸನುಮೊರ್ವನೆಂದೊಡದನಾರ್ ಪಡೆವರ್ ॥ ೧೪೬ ॥

ವನನಿಧಿಯೊಳೆನಗೆ ಕೆಯ್ಸಾ
ರ್ದನಿತುಂ ವಸ್ತುಗಳನುೞಿಪದೋಲಗಿಸಿದೆನಿ
ನ್ನೆನಗದುವೆ ದಿವ್ಯಮಂತ
ರ್ಧನಕ್ಕೆ ಭವದವಧಿಬೋಧಮತಿಶಯಬೋಧಾ ॥ ೧೪೭ ॥

ಎನೆ ಮಾಗಧನಂ ಚಕ್ರೇ
ಶನನುಜನಿರವೇೞ್ದು ಮುನ್ನಮಿಕ್ಕಿದ ದಿವಿಜಾ
ಸನದೊಳ್ ಬೞಿಯಂ ಕುಳ್ಳಿ
ರ್ದನನೆಂದಂ ತೊಳಗಿ ಬೆಳಗೆ ದಶನದ್ಯುತಿಗಳ್ ॥ ೧೪೮ ॥

ಪ್ರಕಟತರಂ ವೃತ್ತಿಗೆ ವಾ
ರ್ತಿಕಮೆಂತಂತುಟೆ ಭವದ್ವಚೋವೃತ್ತಿಗೆ ಸ
ನ್ನಿಕುರುಂಬವಾಕ್ಯದಂಬಕ
ಮಕಾರಣಂ ವಾಣಿ ಕಂಠಶೋಷಂ ಶೇಷಂ ॥ ೧೪೯ ॥

ಈ ನುಡಿ ನಿನಗಲ್ಲದೆ ದಿವಿ
ಜಾನೀಕಕ್ಕಮರದವರ ವಚನಂ ಜಡಸು
ಸ್ಥಾನಮವಿಜ್ಞೇಯಮದ
ರ್ಕೆನಾನುಂ ನ್ಯಾಸಕಾರರಂ ತರವೇೞ್ಕುಂ ॥ ೧೫೦ ॥

---

೧೪೬. ಇತರರು ಅರಸರಾಗಿದ್ದಾಗ ಮನಸ್ಸು ಬೇರೆ, ದೇಹ ಬೇರೆ ಎಂಬಂತೆ ಪ್ರಜೆಗಳ ಮುಕ್ತಿಗೊಬ್ಬ ಗುರು, ಭೋಗಕ್ಕೊಬ್ಬ ದೊರೆ ಇಬ್ಬರು ಬೇಕಾಗುತ್ತಿದ್ದರು. ಈಗ (ಮುಕ್ತಿದಾಯಕನಾದ) ಭಗವಂತನೂ (ಐಹಿಕಸುಖ ಕಾರಣನಾದ) ಭೂಪತಿಯೂ ನೀನೊಬ್ಬನೆ ಆಗಿರುವೆ. ಇಂತಹ ಸೌಭಾಗ್ಯವನ್ನು ಇನ್ನಾರು ಪಡೆಯುವರು?

೧೪೭. ಸಮುದ್ರದಲ್ಲಿ ನನ್ನ ಕೈಗೆ ಸೇರಿದ ವಸ್ತುಗಳೆಷ್ಟಿದ್ದುವೊ ಅಷ್ಟೆಲ್ಲವನ್ನೂ ನಿಃಶೇಷವಾಗಿ ತಂದು ನಿನಗೆ ಒಪ್ಪಿಸಿರುವೆನು. ಅನಂತ ಜ್ಞಾನಿಯೆ, ಇನ್ನು ನನ್ನ ಅಂತರ್ಧನಕ್ಕೆ ನಿನ್ನ ಅವಧಿಜ್ಞಾನವೇ ದಿವ್ಯ"

೧೪೮. ಹೀಗೆ ಆತನು ನುಡಿಯಲಾಗಿ ಚಕ್ರವರ್ತಿಯು ತಮ್ಮನು ಆತನನ್ನು ಇರಹೇಳಿ ಮುಂಚೆಯೆ ಅಣಿಗೊಳಿಸಿದ ದಿವ್ಯಪೀಠದಲ್ಲಿ ತನ್ನ ಬಳಿ ಕುಳ್ಳಿರಿಸಿಕೊಂಡು ಹೀಗೆಂದನು :

೧೪೯. "ವೃತ್ತಿಯು ಸ್ಪಷ್ಟವಾಗಿ ಅರ್ಥವಾಗುವಂತಿದ್ದರೆ ಅದಕ್ಕೆ ಟೀಕೆ ಟಿಪ್ಪಣಿಯೇಕೆ ಬೇಕು? ನೀನು ಆಡಿದ ಮಾತುಗಳಿಗೆ ಮಿಕ್ಕು ಇನ್ನೇನಾದರೂ ಹೇಳಿದರೆ ಅದು ವ್ಯರ್ಥವಾದ ಕಂಠಶೋಷವೆ ಸರಿ.

೧೫೦. ಈ ಮಾತು ನಿನಗಲ್ಲದೆ ದೇವತೆಗಳಿಗೆ ಬಾರದು; ಅವರ ಮಾತು ಜಟಿಲವಾಗಿರುವುದರಿಂದ ಅದಕೆ ಟೀಕೆ ಮಾಡಿ ವಿವರಿಸುವವರನ್ನು ತರಬೇಕಾಗುತ್ತದೆ. ಹಾಗೆಯೆ ಅರ್ಥವಾಗುವುದಿಲ್ಲ.

ಕಂ॥ ಪೞಗಾಂಪರ ನುಡಿ ಮುತ್ತುಂ
ಮೆೞಸುಂ[1]ಗೋ[1]ದಂದದಕ್ಕೆ ಭಾಷ್ಯಮನೊರ್ವಂ
ಕಱಿಯೋದಿದಾತನಲ್ಲದೆ
ಬಱಿವ[2][ಱಿ][3]ಯಿಂ ಬಂದು ಬರೆಯಲಾಗದಗಣ್ಯಂ ॥ ೧೮೧ ॥

ಸಾರತರೋಕ್ತಿಗೆ ನೆಲ್ಲುಂ
ಪೋರುಂಗೋದಂತೆ ನೇ[3]ರಿ[3] ಕಲ್ಪಾರ್ಪರವ
ಗೋರ್ಱೀರ[4]ನಿ[4]ಬಂಧನಟೀಕಾ
ಕಾರಂಗಲ್ಲದೆ ಪೆಱಂಗೆ ಕೋ[5][ಳ್ವೊ][5]ದವುದೇ ॥ ೧೮೨ ॥

ವ॥ ಅದಱಿಂ ಜೀವಶರೀರಸನ್ನಿಧಾನದಂತೆ ವಚನರಚನೆಯುಮರ್ಥಮುಮಿತರೇತರಸಹಾಯಮಪ್ಪುದು ನಿನ್ನ ನುಡಿಯೊಳಲ್ಲದಿಲ್ಲೆಂದು ಮಾಗಧನನತ್ಯಂತಮಾೞ್ಕೆ ನುಡಿದು ರಾಜಾಧಿರಾಜಾನುಜನ್ಮಂ ಮತ್ತಮಿಂತೆಂದಂ—

ಕಂ॥ ಮೂವತ್ತಿರ್ಚಾಸಿರ್ವರ್
ದೇವರ ಮೆಯ್ಗಾಪು ದೇವದೇವಂಗವರಂ
ಸಾವಗಿಸಿ ತಂತ್ರಪಾಲತೆ
ಗಾವಗಮಾಗಿಯೆ ನೃಪಾಂಘ್ರಿಯುಗಲದ ಮೊದಲೊಳ್ ॥ ೧೮೩ ॥

ಪುಗುವ ಪೊಱಮಡುವ ಪಾಳೆಯ
ಮಗಣಿತಮಾಳವರ್ಗಳಿವರ್ಗಳೆಂಬಂತೀ ದಂ
ದುಗಮೆರದಿಲ್ಲದೆ ನಿಮ್ಮೊಳ್
ತಗುಳ್ಗುಮಿಲ್ಲಿಂದಮತ್ತ ಕೆಯ್ಯೊಳ್ ಬೆಸನಂ ॥ ೧೮೪ ॥

---

೧೮೧. ಹಳೆಯ ಗಾಂಪರ ಮಾತು ಮುತ್ತು-ಮೆಣಸುಗಳನ್ನು ಒಂದೇ ನೂಲಿನಲ್ಲಿ ಪವಣಿಸಿದಂತೆ. ಅದಕ್ಕೆ ಭಾಷ್ಯ ಬರೆಯುವುದಾದರೆ ಚೆನ್ನಾಗಿ ಓದಿಕೊಂಡ ಪಂಡಿತನೆ ಆಗಬೇಕು. ಸಾಮಾನ್ಯನಾದವನು ಅದಕ್ಕೆ ಕೈಯಿಕ್ಕಲಾಗದು.

೧೮೨. ತಾವು ಕಲಿತು ಪಂಡಿತರೆಂದುಕೊಂಡವರು. ಭತ್ತ ಮೊಸರು ಕಲಸಿದಂತೆ ಸ್ವತಃ ಅರ್ಥಪ್ರಸನ್ನತೆಯಿರುವ ಮಾತಿಗೆ ವ್ಯಾಖ್ಯಾನ, ಟೀಕೆಗಳನ್ನು ಬರೆಯುವರು. ಅದರಿಂದ ಅವರಿಗೆ ತೊಂದರೆಯಲ್ಲದೆ ಬೇರೆಯವರಿಗೆ ಏನು ನಷ್ಟ?

ವ॥ ಜೀವ-ಶರೀರಗಳು ಪರಸ್ಪರವಾಗಿ, ಹೊಂದಿಕೊಂಡಿರುವಂತೆ ವಚನವಿನ್ಯಾಸ ಹಾಗು ಅರ್ಥ ಎರಡೂ ಒಂದಕ್ಕೊಂದು ಸಹಕಾರಿಯಾಗಿರುವುದು ನಿನ್ನ ಮಾತಿನಲ್ಲಿ ಅಲ್ಲದೆ ಬೇರೆಡೆ ಇಲ್ಲ." ಹೀಗೆಂದು ಮಾಗಧನ ಮನಸ್ಸಿಗೆ ಸಂತೋಷವಾಗುವಂತೆ ನುಡಿದು ಚಕ್ರವರ್ತಿಯ ಸಹೋದರನು ಮತ್ತೆ ಹೀಗೆಂದನು :

೧೮೩. "ದೇವಾಧಿದೇವನಾದ ಶಾಂತೀಶ್ವರನಿಗೆ ಮೂವತ್ತೆರಡು ಸಾವಿರ ದೇವರು ಅಂಗರಕ್ಷಕರು. ಸೇವೆಗೆ ಸೇರಿ ಆತನ ಪಾದಗಳ ಸನ್ನಿಧಿಯಲ್ಲಿ

೧೮೪. ಬರುತ್ತಹೋಗುತ್ತ ಇರುವ ಪಾಳೆಯದವರೆಷ್ಟೊ ಎಣಿಸಲಾಗುವುದಿಲ್ಲ. ದೇವನ ಆಳುಗಳಲ್ಲಿ ಅವರು ಇವರು ಎಂಬ ಭೇದವಿಲ್ಲ. ಈ ಬಗೆಯ ಸೇವಕತನ ನಿಮಗೂ ಆಯಿತು. ಇನ್ನುಮುಂದೆ ಆಜ್ಞಾಧಾರಕರಾಗಿ ನೀವಿರಬೇಕು."

---

1. ಗೊಂ (ಅ) 2. ೞ (ಮ) 3. ಱಿ (ಮ) 4. ನಿಂ (ಅ) 5. ಳ್ವೊ (ಮ)

ವ॥ ಎಂದು ಮಾಗಧನನಾಳ್ವೆಸಕ್ಕೆ ಪೋ[1]ದ[1]ಮಡಿಸಿ—

ಮ॥ ಸೆಣಸಲ್ ಮಾರ್ಮಲೆಯಲ್ ಬೆಸಕ್ಕೆ ಬೆಸೆಯಲ್ ದಂಡೋಪನತ್ಯಕ್ಕೆ ಟೆಂ
ಠಣಿಸಲ್ ಪೇಳ್ದುದನಿರ್ಮೆ ಕೇಳಲರಿಯಿಲ್ಲೆಂಬನ್ನೆಗಂ ಗೆಲ್ದು ಮೂ
ಡಣ ರತ್ನಾಕರಮಂಬುಶೇಷಮೆನೆ ತದ್ರತ್ನಂಗಳಂ ಕೊಂಡು ದ
ಕ್ಷಿಣರತ್ನಾಕರದತ್ತಮೆತ್ತಿನಡೆದಂ ಸೌಜನ್ಯಕಂದಾಂಕುರಂ ॥ ೧೮೫ ॥

—ಗದ್ಯ—

ಇದು

ಜಿನೇಂದ್ರ ಚರಣ ಸರಸೀರುಹ ಶಿಲೀಮುಖಾಯಮಾನ
ಶ್ರೀಮದುಭಯಕವಿ ಚಕ್ರವರ್ತಿ
ನಿರ್ವರ್ತಿತಮುಂ
ಅಮ್ಮನ ಭಕ್ತಾಭಿಧಾನ ವಿದ್ಯಾನಿಧಾನ ಮಲ್ಲಪಾರ್ಯ
ತದನುಜಾತಾಭಿಜಾತ ಸಾರಸ್ವತ
ಪುನ್ನಮಾರ್ಯ ಕಾರಿತಮುಮಪ್ಪ
ಪುರಾಣಚೂಡಾಮಣಿಯೊಳ್
ದಶಮಾಶ್ವಾಸಂ

ವ॥ ಹೀಗೆ ತಿಳಿಸಿ ಮಾಗಧನನ್ನು ಸೇವಾಕಾರ್ಯಕ್ಕೆ ನಿಯಮಿಸಿ ಕಳಿಸಿದನು.

೧೮೫. ಇನ್ನು ಎದುರಾಗುವವರಾಗಲಿ, ಹೋರಾಡುವವರಾಗಲಿ ಯಾರೂ ಉಳಿಯಲಿಲ್ಲ; ಅಪ್ಪಣೆಗೆ ಮೀರುವವರಾಗಲಿ, ದಂಡೋಪಾಯಕ್ಕೆ ಉತ್ಸುಕರಾಗಲಿ, ಒಮ್ಮೆ ಹೇಳಿದುದನ್ನು ಇನ್ನೊಮ್ಮೆ ಹೇಳಿಸಿಕೊಳ್ಳುವವರಾಗಲಿ ಇಲ್ಲಿ ಇಲ್ಲ; ಶತ್ರುಗಳೆಂಬವರೇ ಇಲ್ಲ—ಎಂಬಂತೆ ಪೂರ್ವದೇಶಗಳನ್ನೆಲ್ಲ ಗೆದ್ದು, ಪೂರ್ವಸಾಗರದಲ್ಲಿ ನೀರು ಮಾತ್ರ ಉಳಿಯಿತು ಇನ್ನೇನೂ ಇಲ್ಲವೆಂಬಂತೆ ಅದರೊಳಗಿನ ರತ್ನಗಳನ್ನೆಲ್ಲ ಎಳೆದುಕೊಂಡು ಸುಜನಪ್ರಿಯನಾದ ಚಕ್ರವರ್ತಿ ದಕ್ಷಿಣಸಮುದ್ರದತ್ತ ದಿಗ್ವಿಜಯಕ್ಕೆ ಹೊರಟನು.

ಗದ್ಯ॥ ಇದು ಜಿನೇಶ್ವರನ ಚರಣಕಮಲದ ದುಂಬಿಯಂತಿರುವ, ಶ್ರೀಮದುಭಯಕವಿಚಕ್ರವರ್ತಿಯೆಂಬ ಬಿರುದಾಂಕಿತನಿಂದ ನಿರ್ವರ್ತಿತವೂ ಅಮ್ಮನ ಭಕ್ತಾಭಿಧಾನ ಮಲ್ಲಪಾರ್ಯನ, ಅವನ ತಮ್ಮ ಹೊಸ ಸಾರಸ್ವತ ಪುನ್ನಮಾರ್ಯ ಹೇಳಿಸಿದ ಪುರಾಣಚೂಡಾಮಣಿಯಲ್ಲಿ ಹತ್ತನೆಯ ಆಶ್ವಾಸವು.

---

1. ಅ (ಮ)

ಶ್ರೀ

ಶಾಂತಿಪುರಾಣಂ

— ೧ —

ಏಕಾದಶಾಶ್ವಾಸಂ

ಕಂ॥ ಶ್ರೀಚತುರಂತೇಶಂ ಸಚ
ರಾಚರಪತಿ ದಕ್ಷಿಣಾಭಿಮುಖನಿನನಿನಸಂ
ಶಾಚಕ್ರವರ್ತಿ ನಡೆದನ
ವಾಚೀದಿಗ್ವಿಜಯಹೇತುವಿಂ ಜಿನಚಂದ್ರಂ ॥ ೧ ॥

ವ॥ ಅಂತು ಕತಿಪಯದಿನಂಗಳಿಂ ಮಹಾಸಮುದ್ರದ ನಡುವೆ ಸೈನ್ಯಸಮುದ್ರಂ ಬರೆ ಬಂದು—

ಕಂ॥ ಸ್ಕಂಧಾವಾರೇಭ ಮದೋ
ದ್ಗಂಧಾವಿ[1]ಲೆಯಂ ಕವೇರಕನ್ನಿಕೆಯಂ ತ
ತ್ಸಿಂಧುಪತಿಗಿಂಬಿನಿಂದತಿ
ಸಂಧಿಸಿದಂ ನೃಪತಿ ಬಿಟ್ಟು ತದುಭಯತಟದೊಳ್ ॥ ೨ ॥

ವ॥ ಅಂತಲ್ಲಿ ಬೀಡಂ ಬಿಟ್ಟು ಪೂರ್ವಮುಖಾದಿಗ್ದೇಶಾಧೀಶ್ವರರಪ್ಪರಸುಗಳ್ ಚಕ್ರವರ್ತಿಯ ಚರಣನಳಿನಯುಗಳಕ್ಕೆರಗಿ ಕುಲಧನಜೀವಧನಾದಿ ಸಾರವಸ್ತುಗಳನೋಲಗಿಸಿದರಲ್ಲದೆಯುಂ—

ಆಶ್ವಾಸ ೧೧

೧. ಲೋಕರಕ್ಷಕನಾದ ಸೂರ್ಯನು ದಕ್ಷಿಣಕ್ಕೆ ಸೇರಿದನು. ಸೂರ್ಯನಂತೆ ಲೋಕಾಧಿಪತಿಯಾದ ಚಕ್ರವರ್ತಿಯು ದಿಗ್ವಿಜಯಕ್ಕಾಗಿ ದಕ್ಷಿಣಕ್ಕೆ ಹೊರಟನು.

ವ॥ ಕೆಲವು ದಿನ ಪಯಣಮಾಡಿ ಮಹಾಸಾಗರದ ಒಳಗೆ ಚಕ್ರಿಯ ಮಹಾಸೈನ್ಯವು ಬಂದಿತು.

೨. ಕಾವೇರೀ ನದಿಯ ಉಭಯ ತಟಗಳಲ್ಲಿ ಬೀಡುಬಿಟ್ಟನು; ತನ್ನ ಸೈನ್ಯಗಜಗಳ ಮದೋದಕದಿಂದ ಕದಡಾದ ಕಾವೇರಿಯನ್ನು ಇಂಬಿನಿಂದ ಹೀಗೆ ಕೂಡಿ ಸಮುದ್ರರಾಜನಿಗೆ (ಕಾವೇರಿಯ ಬಗೆಗೆ) ಸಂಕೇತವನ್ನುಂಟುಮಾಡಿದನು. [ಕದಡು ಹಾಗು ಮದಜಲಗಂಧ ಎರಡೂ ಸಂಭೋಗದ ಸಂಕೇತಕ್ಕೆ ಕಾರಣಗಳು. (ಇದಕ್ಕೆ ಮೂಲವಾದ ರಘುವಂಶ ೪-೪೫ರಲ್ಲಿ "ಕಾವೇರೀಂ ಸರಿತಾಂ ಪತ್ಯುಃ ಶಂಕನೀಯಾಮಿವಾಕರೋತ್" ಎಂದು ಸ್ಪಷ್ಟವಾಗಿ ಹೇಳಿದೆ. ಆ ಅರ್ಥ ಇಲ್ಲಿ "ಆಸಂಧಿಸಿದಂ" (ಹೊಸಗೊಳಿಸಿದನು) ಎಂಬ ಮಾತಿನಲ್ಲಿ ಅಡಕವಾಗಿದೆ.]

ವ॥ ಹಾಗೆ ಅಲ್ಲಿ ಬೀಡುಬಿಟ್ಟವನಾಗಿ ಆ ದಿಗ್ಭಾಗದಲ್ಲಿಯ ನಾಡರಸುಗಳೆಲ್ಲರೂ ಚಕ್ರವರ್ತಿಯ ಪಾದಗಳಿಗೆ ಎರಗಿ ತಮ್ಮ ಕುಲಧನ (ವಂಶಪರಂಪರೆಯಿಂದ ಬಂದ ಭಂಡಾರ) ಹಾಗು ಜೀವಧನ (ಆನೆ, ಕುದುರೆ, ಒಂಟೆ ಮೊದಲಾದುವು) ಮೊದಲಾದ ಬೆಲೆಯುಳ್ಳ ವಸ್ತುಗಳನ್ನು ಅರ್ಪಿಸಿದರು. ಅದಲ್ಲದೆ—

1. ಲೇಪಕ್ಕೆ ವೆರಸು (ಅ)

ಕಂ॥ ವಿತತಗ್ರಿಪಂ ನಿಪಹತಿಸಿ
ಯುತಪಲ್ಲವರೆಱಗಿ ಗಹನವುಟೆಂದಿತ್ತು ವನ
ಸ್ಪತಿಗಳೆನಲಲ್ಲದವನೀ
ಪತಿಗಳ್ ಶಾಂತೀಶನಂಘ್ರಿಗೆಱಗಿ ಮಹೀಶರ್ ॥ ೩ ॥

ವ॥ ಅಂತವರಂ ಶಾಸನೋಪನತರ್ಮಾಡಿ ಕಾವೇರೀಸ್ರವಂತೀಸಮುತ್ತರಣಾನಂತರಂ ಬರೆವರೆ—

ಕಂ॥ ಗುಣನಿಧಿಗೆ ಜಗಚ್ಚೂಡಾ
ಮಣಿಗೆಱಗಿ ಪೆಱಂಗೆ ಭಯದಿನೆಱಗದ ಚೂಡಾ
ಮಣಿಗೆಱಗೆ ಚಕ್ರಿಪದದೊಳ್
ಫಣಮಣಿ ಪುನರುಕ್ತಿ ಪಾಂಡ್ಯಪತಿಗಾಯ್ತಾಗಳ್ ॥ ೪ ॥

ವ॥ ಮತ್ತಂ ಪಾಂಡ್ಯವಿಷಯದ ವಿಷಯಸಂ[1]ನಿ[1]ಧಿಯೊಳ್ ಬೀಡುವಿಟ್ಟಲ್ಲಿ—

ಕಂ॥ ನಂದನ ಭುಜಂಗವೇಷ್ಟಿತ
ಚಂದನಮಾರ್ಗದೊಳಿಭಂಗಳೊಳ್ಪಾನೆಗಳಂ
ತೊಂದು ತ್ರಿಪದಿಚ್ಛೇದದೊ
ಳಂ ನಡೆ[ಳ]ರವೆ ಪಯೋಧಿವೇಳಾವನದೊಳ್ ॥ ೫ ॥

ವ॥ ಮತ್ತಂ—

ಚಂ॥ ದಿನಕರತೇಜಮುಂ ಕ್ರಮದಿನೊಯ್ಯನೆ[2]ಯೊಯ್ಯನೆದಕ್ಷ[2] ದಕ್ಷಿಣಾ
ಯನದೊಳವಾಚ್ಯರರ್ಣವನಿವಾಸಿಗಳಾಗಿಯುಮಂದು ಶಾಂತಿನಾ
ಥನ ವಿತತ ಪ್ರತಾಪಶಿಖಿ ಕಣ್ಗಳೊಳುಳ್ಕೆ ವಿಷಣ್ಣರಾಗಿ ತ
ಜ್ಜಿನಪತಿಪಾದಪಾದಪದ ತಣ್ಣೆಳಲೊಳ್ ಕಳೆದರ್ ವಿಷಾದಮಂ ॥ ೬ ॥

೩. ತಮ್ಮಲ್ಲಿ ಈಗ ವನಸ್ಪತಿಗಳಲ್ಲದೆ ಬೇರೇನೂ ಉಳಿದಿಲ್ಲವೆಂದು ಹೇಳುವಂತೆ ಕೈಯಲ್ಲಿ ಹಸಿರೆಲೆ ಹಿಡಿದು ಶಾಂತೀಶ್ವರನ ಅಡಿಗೆ ಎರಗಿದರು. (ಕೈಯಲ್ಲಿ ಹಸಿರೆಲೆ ಅಥವಾ ಹುಲ್ಲುಕಡ್ಡಿಗಳನ್ನು ಹಿಡಿಯುವುದು ಶರಣಾಗತಿಯ ಲಕ್ಷಣ; "ವಿತತಗ್ರಿಪಂ ನಿಪಹತಿಸಿ" ಎಂಬುದರ ಅರ್ಥ ಸ್ಪಷ್ಟವಿಲ್ಲ.)

ವ॥ ಆಗ ಅವರನ್ನು ತನ್ನ ಆಜ್ಞೆಗೆ ಒಳಪಡಿಸಿ ಕಾವೇರೀ ನದಿಯನ್ನು ದಾಟಿ ಮುಂದೆ ಬರಲಾಗಿ—

೪. ಜಗತ್ತಿಗೇ ಶಿರೋಮಣಿಯೂ ಗುಣವಂತನೂ ಆದ ಚಕ್ರಿಯ ಪಾದಗಳಿಗೆ ಪಾಂಡ್ಯನು ತನ್ನ ಶಿರೋರತ್ನವನ್ನು ಇಟ್ಟು 'ಚಕ್ರಿ'ಯೆಂದರೆ (೧ ಚಕ್ರವರ್ತಿ, ೨. ಹಾವು) 'ಫಣಮಣಿ' (೧. ಶಿರೋರತ್ನವನ್ನು ತಾಗಿಸಿಕೊಂಡುದು. ೨. ಹೆಡೆಯಲ್ಲಿ ರತ್ನವುಳ್ಳುದು; ಹಾವು) ಎಂಬ ಮಾತನ್ನು ಪುನರುಕ್ತಿಗೊಳಿಸಿದನು.

ವ॥ ಪಾಂಡ್ಯರಾಜ್ಯದ ಅಂಚಿನಲ್ಲಿ ಬೀಡುಬಿಟ್ಟಾಗ—

೫. ಕಡಲಂಚಿನ ವನದಲ್ಲಿ ಹಾವುಗಳು ಸುತ್ತಿಕೊಂಡಿರುವ ಶ್ರೀಗಂಧ ವೃಕ್ಷಗಳ ನಡುವಿನ ಮಾರ್ಗದಲ್ಲಿ (ಶಾಂತೀಶ್ವರನ) ಆನೆಗಳು ತಮಗೆ ಪಾದಬಂಧನಗಳಿಲ್ಲದಿದ್ದರೂ ಮುಂದೆ ಹೆಜ್ಜೆಯಿಡಲಿಲ್ಲ. (ಆ ಸುಗಂಧವನ್ನು ಮೂಸುತ್ತ ನಿಂತುವು.)

ವ॥ ಮತ್ತು—

೬. ದಕ್ಷಿಣಾಯನ ಕಾಲವಾದುದರಿಂದ ಸೂರ್ಯನ ಪ್ರತಾಪವು ಕ್ರಮೇಣ ಮಂದಮಂದವಾಗುತ್ತಿತ್ತು; ಅದಲ್ಲದೆ ಈ ಜನ ಸಮುದ್ರತೀರವಾಸಿಗಳು; ಹೀಗಿದ್ದರೂ ಶಾಂತಿನಾಥನ ಪ್ರತಾಪದ ಬೆಂಕಿ ಕಣ್ಣು ಕುಕ್ಕಿ ಅದರ ತಾಪವನ್ನು ತಾಳಲಾರದೆ ಅವರು ಜಿನೇಂದ್ರಪಾದವೆಂಬ ವೃಕ್ಷದ ತಂಪೆಳಲಿಗೆ ಬಂದು ತಮ್ಮ ತಾಪವನ್ನು ಆರಿಸಿಕೊಂಡರು.

1. × (ಮ) 2. ××× ದಕ್ಷ (ಮ)

ವ॥ ಅಂತು ದಕ್ಷಿಣದಿಕ್ಪಾಲಪ್ರಸ್ತರನನಿತರೀನೆಳಾಳ್ತಿನರು ಪ್ರಾಭೃತ ಸಾರಸರ್ವಸ್ವ ನಿವೇದನಂಗೆಯ್ಯೆ ಮುಂಗುಡಿಯು ಬಂದ ಚಕ್ರವರ್ತಿ ವೈಜಯಂತೀದ್ವಾರಾಭಿಮುಖನಾಗಿ ಬೀಡಂ ಬಿಟ್ಟೋಲಗಂಗೊಟ್ಟಿರೆ—

ಚಂ॥ ಕರಿಮಕರಾಧಿರೂಢನಸಮಾನಸಮುಂ ಸುರವೇಷ್ಟಿತಂ ಮನೋ
ಹರಕರಯುಗ್ಮ[1][ಪೂ][2]ರಿತಶರಾಸಪರಾರ್ಘ್ಯಮಣಿವ್ರಜಂ ನಿಧೀ
ಶ್ವರಭವನಾಂತರಾಳಪದಮಾರ್ಗನುಪಪನ್ನದುಪಾಂತ ಸಾರನಾ
ವರತನು ಬಂದು ಕಂಡೆಱಗಿದಂ ಕ್ಷಿತಿವಲ್ಲಭ ಪಾದಪೀಠದೊಳ್ ॥ ೭ ॥

ಕಂ॥ ಅಂತೆಱಗಿದ ವರತನುವನು
ಪಾಂತಸ್ಥಿತಮಂತ್ರಿವರ್ಗಮೇಳ್ಕೇಳ್ ಧರಣೀ
ಕಾಂತಂ ನಿನ್ನಂ ನಿಜಸಾ
ಮಂತರ ಸಮನಾಗೆ ಬಗೆಗುಮಿನ್ನಂಜದಿರಾ ॥ ೮ ॥

ಎನೆ ವರತನು ಬಂದಧಿನಾ
ಥನಿದಿರೊಳಿಕ್ಕಿದ ನಿಜೋಚಿತಾಸನದೊಳ್ ತಾಂ
ವಿನಯದಿನಿರ್ದೋಲಗಿಸಿದ
ನಿನನಂ ಪೊಲ್ಬುಜಿನ ಕಮಳಮೋಲಗಿಸುವವೋಲ್ ॥ ೯ ॥

ವ॥ ತದನಂತರಂ ತನ್ನ ತಂದನರ್ಘ್ಯರತ್ನದಿಂ—

ಕಂ॥ ವಿವಿಧಮಣಿಕಿರಣಚಯದಿಂ
ದವನಿಪನಂ ಬಳಿದು ಕೊಟ್ಟನರ್ಥಿಜನಕ್ಕಾ
ದಿವಿಜೇಂದ್ರಂ ಬಳಿವಿಯ ಮಂ
ತ್ರವಾದಿಯೆನೆ ನೆರೆದ ಮಕುಟಬದ್ಧಸಮಾಜಂ ॥ ೧೦ ॥

ವ॥ ಹೀಗೆ ದಕ್ಷಿಣ ದಿಕ್ಪಾಲಕನೆ ಮೊದಲಾಗಿ ಆ ಭಾಗದ ಭೂಪತಿಗಳೆಲ್ಲ ತಾವು ಶಾಂತಿನಾಥನಿಗೆ ಕಿಂಕರರೆಂದು ಒಪ್ಪಿ ತಮ್ಮ ಸರ್ವಸಂಪತ್ತನ್ನೂ ಆತನಿಗೆ ಸಮರ್ಪಿಸಿದರು. ಚಕ್ರವರ್ತಿಯು ವೈಜಯಂತಿಯೆಂಬ ಸಮುದ್ರದ್ವಾರಕ್ಕೆ ಅಭಿಮುಖವಾಗಿ ಬೀಡುಬಿಟ್ಟು ಓಲಗವನ್ನು ನಡಸಿರುವಾಗ—

೭. ಆನೆಯನ್ನೇರಿ ದೇವತೆಗಳ ಪರಿವಾರದೊಡನೆ ತನ್ನ ಎರಡೂ ಕೈತುಂಬ ಶ್ರೇಷ್ಠವಾದ ಸಾಗರದ ರತ್ನಗಳನ್ನು ತುಂಬಿಕೊಂಡು ವರತನುವೆಂಬವನು ಬಂದು ಚಕ್ರವರ್ತಿಯ ಪಾದಗಳಿಗೆ ಬಾಗಿ ನಮಸ್ಕರಿಸಿದನು.

೮. ಹಾಗೆ ಬಾಗಿದ ವರತನುವಿಗೆ ಬಳಿಯಲ್ಲಿದ್ದ (ಶಾಂತೀಶ್ವರನ) ಮಂತ್ರಿಗಳು "ಏಳು ಏಳು, ಭೂಪತಿಯು ನಿನ್ನನ್ನು ಸಾಮಂತರಾಜರಿಗೆ ಸಮನಾಗಿ ನೋಡಿಕೊಳ್ಳುವನು ಅಂಜಬೇಡ" ಎಂದರು.

೯. ಹೀಗೆನ್ನಲಾಗಿ ವರತನು ಎದ್ದು ಬಂದು ಚಕ್ರವರ್ತಿಯ ಇದಿರಲ್ಲಿ ತನಗೆ ನೀಡಿದ ಉಚಿತವಾದ ಪೀಠದಲ್ಲಿ ಕುಳಿತು ಬೆಳಗಿನ ಕಮಲವು ಸೂರ್ಯನನ್ನು ಮೆಚ್ಚಿ ಆರಾಧಿಸುವಂತೆ ವಿನಯಪೂರ್ವಕವಾಗಿ ಆರಾಧಿಸಿದನು.

ವ॥ ಆಮೇಲೆ ತಾನು ತಂದ ಅಮೌಲ್ಯವಾದ ರತ್ನಗಳ

೧೦. ನಾನಾ ಬಗೆಯ ಪ್ರಭಾಕಿರಣಗಳಿಂದ ಅರಸನನ್ನು ಅಲಂಕರಿಸಿ, ಆ ದೇವನು ರತ್ನಗಳನ್ನು ಬೆಳಸುವ ಮಂತ್ರವಾದಿಯೊ ಏನೊ ಎಂಬಂತೆ ಯಾಚಕಜನಕ್ಕೆ ಹೇರಳವಾಗಿ ರತ್ನಗಳನ್ನು ಕೊಟ್ಟನು.

---

1. ಅಪ್ಪ (ಮ) 2. ಪಾ (ಮ)

ವ॥ ಅಲ್ಲಿಂ ಬಱಿಯಂ ಲವಣಾರ್ಣವದ ನಿಖಿಳವಸ್ತುಗಳಂ ಕಸ್ತೂರಿ(ಸಿ)ವಿಸ್ತಾರಿಸಿ ಪೆಸರ್ವೆಸರೊಳೆ ಪೇೞ್ದುವಟ್ಟಯ್ಸಿ ವರತನು ತೆಱುಬ್ಬುವೆಸನಂ ಪೂಣ್ದಾಳಾದಂ ಚಕ್ರವರ್ತಿಯುಂ ಪಶ್ಚಿಮಾಭಿಮುಖನಾಗಿ ಪಯಣದ ಮೇಲೆ ಪಯಣಂಬೋಗೆ –

ಕಂ॥ ಆವಿಜಿಗೀಷುವ ಸೈನ್ಯಸ
ಮಾ[1]ವಾಸದಿನಧಿಕ[1]ವೊಪ್ಪಿ ತೋಱಿದುದು ಮರೀ
ಚಾವಿಷ್ಕೃತ[2]ಹಾರೀತವ[2]
ನಾವಳಿ ಪರಿಭಾಸಿ ಮಲಯಪರ್ವತಕಟಕಂ ॥ ೧೧ ॥

ಅನುಭವಿಸಿದನರಸಂ ಚಂ
ದನಾಭಿನಂದಿತ ತಟಂಗಳಿಂ ವರಣಾಶಾಂ
ಗನೆಗೆ ಮೊಲೆಯಾದೊಲಿರೆ ನೂ
ತನಮಲಯಾಚಳತಟಂಗಳೊಳಗೊಳಗಾಗಳ್ ॥ ೧೨ ॥

ವ॥ ಅಂತು ಪಾರಾವಾರೋಪಕಂಠಂಬಿಡಿದು ನಡೆವ ಚಕ್ರವರ್ತಿಗೆ –

ಕಂ॥ ಸಾರತರತಾಮ್ರಪರ್ಣಿಯ
ವಾರಿಯೊಳೆಳದಳಿಸಿ ಬಳೆದ ಶುಕ್ತಿಯ ಮುಕ್ತಾ
ಸಾರಮನೀವ ಪಯೋನಿಧಿ
ತೀರದ ನೃಪರಾತ್ಮಯಶಮನೀವಂತಾದರ್ ॥ ೧೩ ॥

ವ॥ ಅಲ್ಲಿಂದತ್ತಂ—

ವ॥ ಆಮೇಲೆ ಲವಣಸಮುದ್ರದ ಸಮಸ್ತ ಸಾರವಸ್ತುಗಳನ್ನು ಇದು ಇಂತಹುದು ಎಂದು ಒಂದೊಂದನ್ನೆ ಹೆಸರಿಸಿ ವಿವರಿಸುತ್ತ ಅರಸನಿಗೆ ಒಪ್ಪಿಸಿ, ಕಿಂಕರತ್ವವನ್ನು ಒಪ್ಪಿ ಅಧೀನನಾದನು. ಚಕ್ರವರ್ತಿಯು ಪಶ್ಚಿಮಕ್ಕೆ ಹೊರಟು ಪಯಣದ ಮೇಲೆ ಪಯಣ ಮಾಡುತ್ತ ಹೋಗಿ—

೧೧. ಮಲಯಪರ್ವತದ ತಪ್ಪಲಲ್ಲಿ ಬೀಡುಬಿಟ್ಟನು. ಮೆಣಸಿನ ವನಗಳಿಂದಲೂ ಹಾರೀತ ಪಕ್ಷಿಗಳಿಂದಲೂ ತುಂಬಿದ ಆ ಪ್ರದೇಶವು ಈ ಸೈನ್ಯದ ಪಾಳೆಯದಿಂದ ಇನ್ನಷ್ಟು ಸುಂದರವಾಗಿ ತೋರಿತು.

೧೨. ಪಶ್ಚಿಮ ದಿಗಂಗನೆಯ ಮೊಲೆಗಳೊ ಏನೊ ಎಂಬಂತೆ ಚಂದನ ಸುಗಂಧದಿಂದ ರಮ್ಯವಾದ ಮಲಯ ಪರ್ವತ ತಟಗಳಲ್ಲಿ ವಿಶ್ರಮಿಸಿ ಅರಸನು ಸುಖವನ್ನು ಪಡೆದನು.

ವ॥ ಹಾಗೆ ಸಮುದ್ರ ತೀರವನ್ನು ಅನುಸರಿಸಿ ಬಂದ ಚಕ್ರವರ್ತಿಗೆ—

೧೩. ಕಡಲಂಚಿನ ಭೂಪತಿಗಳು ತಮ್ಮ ಯಶಸ್ಸನ್ನೆ ತೆಗೆದೊಪ್ಪಿಸುವ ಹಾಗೆ ತಾಮ್ರಪರ್ಣಿಯ ಸಾರವತ್ತಾದ ಮುತ್ತುಗಳನ್ನು ತಂದು ಓಪ್ಪಿಸಿದರು.

ವ॥ ಅಲ್ಲಿಂದ ಮುಂದೆ—

---

1. ಮಾಮೂವಸದಿಂ (ಅ) 2. ಹರಿತಾಳೀವ (ಅ)

ಕಂ॥ ಬಳವತ್ಸೈನ್ಯಮನವನೀ
ತಳಪತಿ ಬಿಸುಟಂ ಪಯೋಧಿದೂರಾರ್ಜಿತಮಾಲಾ
ವಿಳಸದ್ವಸನವಿಮುಕ್ತಮ
ನಿಳಾನ್ವಿತಂ ಬರೆ ಪುದಾತ್ತಮತಿ ಬಿಸುಡುವವೊಲ್ ॥ ೧೪ ॥

ವ॥ ಮತ್ತಂ—

ಕಂ॥ ಭಯವಶವಿಮುಕ್ತಭೂಷಣ
ಚಯಕೇರಳಕಾಮಿನೀಮುಖಶ್ರೀ ನೃಪಸೇ
ನೆಯ ಪಾದರಜದಿನಾದೇ
ನಯತ್ನಕುಂಕುಮವಿಳಾಸಮಂ ತಾಳ್ದಿದುದೋ ॥ ೧೫ ॥

ವ॥ ಅಲ್ಲಿಂ ಬಳಿಯಂ—

ಕಂ॥ ತುರಗಖುರಕ್ಷುಣ್ಣೇಳಾ
ಪರಿಪಾಂಸುಪರಾಗವಿಭಕಟಾಳಿಗಳೊಳ್ ಪಾ
ಯ್ದುರೆ ಗಂಧನಿರ್ವಿಶೇಷಂ
ದೊರೆಕೊಂಡುದು ಚಕ್ರವರ್ತಿ ಮದಗಜಘಟೆಯೊಳ್ ॥ ೧೬ ॥

ಚಟುಲ[1]ಮುಲಯಾ[1]ನಿಲೋದ್ಧತ
[2]ಪಟುಕೈತಕಧೂಳಿ ಪಡೆದುದು[2]ರ್ವೀಶ ಚಮೂ
ಭಟ ಕೃತ್ರಿಮಕಂಚುಕ
ಪಟವಾಸವಿಳಾಸಮಂ ಪ್ರಯಾಣಾಂತರದೊಳ್ ॥ ೧೭ ॥

ವ॥ ಅಂತು ಪಯಣಂಬೋಗೆ ಚಕ್ರವರ್ತಿಯ ಕಟಕದೊಳ್—

೧೪. ಕಡಲಿನ ತೆರೆಮಾಲೆಗಳೆಂಬ ವಸ್ತ್ರವನ್ನು ದೂರಗೊಳಿಸಿದ (ಕಡಲಿಂದ ದೂರವಾಗಿರುವ) ಭೂಮಿಗೆ ಒರಲಾಗಿ, ಅರಸನು ತನ್ನ ಬಲಿಷ್ಠವಾದ ಸೈನ್ಯವನ್ನು ಬಿಟ್ಟನು. (ಇಲ್ಲಿ "ಅವನೀತಳಪತಿ" ಮತ್ತು "ಇಳಾನ್ವಿತಂ" ಎಂಬುವು ಯಾರಿಗೆ ಅನ್ವಯಿಸುತ್ತವೆಂದು ನಿರ್ಧರಿಸುವುದು ಕಷ್ಟ. "ಸೈನ್ಯಮಂ ಬಿಸುಟಂ" ಎಂಬುದೂ ಅಷ್ಟೇ ಕ್ಲಿಷ್ಟವಾಗಿದೆ. ಇದಕ್ಕೆ ಸಂವಾದಿಯಾದ ರಘುವಂಶ ೪-೫೨ರಲ್ಲಿ "ಅಸಹ್ಯವಿಕ್ರಮಸ್ಸಹ್ಯ ದೂರಾನ್ಮುಕ್ತಮುದನ್ವತಾ ನಿತಂಬಮಿವಮೇದಿನ್ಯಾಃ ಸ್ರಸ್ತಾಂಶುಕಮಲಂಘಯತ್" ಎಂದಿದೆ.)

ವ॥ ಮತ್ತು—

೧೫. ತಮ್ಮ ಆಭರಣಗಳನ್ನೆಲ್ಲ ಕಳೆದುಕೊಂಡು, ಭಯಪಡುತ್ತಿದ್ದ ಕೇರಳ ಸ್ತ್ರೀಯರ ಮುಖ ಸೌಂದರ್ಯಕ್ಕೆ ಚಕ್ರವರ್ತಿ ಸೈನ್ಯದ ಪಾದಧೂಳಿಯು ಅಪ್ರಯತ್ನವಾಗಿ ಕುಂಕುಮದ ಶೋಭೆಯನ್ನು ಒದಗಿಸಿತು. (ಆ ಸ್ತ್ರೀಯರು ಪಲಾಯನ ಮಾಡಿದರೆಂದೂ ಸೈನಿಕರು ಅವರನ್ನು ಬೆನ್ನಟ್ಟಿದರೆಂದೂ ಇದರ ಧ್ವನಿತಾರ್ಥ.)

ವ॥ ಆ ಬಳಿಕ—

೧೬. ಕುದುರೆಗಳ ಖುರಪುಟಗಳಿಂದೆದ್ದ ನೆಲದ ಧೂಳು ಬಂದು ಮುಸುಕಿದುದರಿಂದ ಚಕ್ರವರ್ತಿಯ ಮದಗಜಗಳ ಮದಗಂಧವೆಲ್ಲ ಹೂತುಹೋಯಿತು.

೧೭. ಮುರಲಾನದಿಯ ಮೇಲಿಂದ ಹಾಯ್ದು ಬಂದ ಗಾಳಿಯಿಂದ ಕೇದಗೆಯ ಪರಾಗ ಧೂಳಿ ಬಂದು ಮೈಮೇಲೆಲ್ಲ ಬಿದ್ದು, ಸೈನಿಕರ ಕಂಚುಕಗಳಿಗೆ ಅಪ್ರಯತ್ನವಾಗಿ ಸುಗಂಧ ಸೇಚನೆ ಮಾಡಿತು.

ವ॥ ಹಾಗೆ ಪಯಣವನ್ನು ಮುಂದುವರಿಸಲಾಗಿ—

1. ಮುರಲಾ (ಮ) 2. ಪಟುಕೇತಕಧೂಳಿಯುಲಮು (ಅ)

ಹರಿಣೀವೃತ್ತಂ॥ ಪಳಿಕಿನ ಶಿಲಾಪಟ್ಟಂ ಪ್ರಸ್ಥಾನದೊಳ್ ವಿಜಯದ್ವಿಪಾ
ವಳಿಯ ದರಿಗೊಂಡುದ್ದೇಶಂ ಚಕ್ರವರ್ತಿಯ [1]ನಾ[1]ಮದ
ಗ್ಗಳದ ಸಿರಿಯಂ ಪೋಲ್ವನ್ನಂ ತದ್ದ್ವಿಪಾಳಿ ದಿಗಂತದೊಳ್
ತಳೆದುದು ಜಯಸ್ತಂಭಶ್ರೀಯಂ ತ್ರಿಕೂಟಮಹೀಧರಂ ॥ ೧೮ ॥

ವ॥ ಅಲ್ಲಿಂದತ್ತಂ ಪೋಗೆವೋಗೆ—

ಕಂ॥ ಅಪರಾಂತಮಹಿಪಸಮದ
ದ್ವಿಪಂಗಳಂ ಪಿಡಿಯಲವನಿನಾಥನ ಸೇನಾ
ಧಿಪನ ತಲೆವಿಲ್ಲೆ [2]ದಲ್ ದಾ
ರು[2]ಪಾಶವಿಧಿಯಾಯ್ತು ಬಂದು ಕಾಣ್ಬನ್ನೆವರಂ ॥ ೧೯ ॥

ವ॥ ಅಂತು ಬಂದು ಶಾಂತೀಶ್ವರಂ ನಿಜವಿಜಯಸ್ಕಂಧಾವಾರಮಂ ಸಿಂಧುದ್ವಾರಕ್ಕಿದಿರಾಗಿ ಬೀಡಂಬಿಡಿಸಿ ಸಭಾಮಂಡಲ ಮಧ್ಯಸ್ಥಿತ ಕಂಠೀರವಾಸನಾಸೀನನಾಗಿರೆ—

ಹರಿಣೀವೃತ್ತಂ॥ ದಿಗವನಿಸಭೋ [3][ಭಾ][3]ಗಾಭೋಗಂ ಮದನ್ವಯಮಾಗೆ ವ
ಸ್ತುಗಳ ಬಟೆಯಂ ಪಣ್ಯಾಗಾರ ಸ್ವವಾಹನದೇವರೊಳ್
ಸೊಗಯಿಸೆ ನೃಪಾಜ್ಞಾತಂ ತಂ[ದಂ]ದು ಕಾಣಿಸೆ ಭಕ್ತಿಯಿಂ
ಜಗದಧಿಪನಂ ಕಂಡಂ ಬಂದಾ ಪ್ರಭಾಸ ಸುರೇಶ್ವರಂ ॥ ೨೦ ॥

ವ॥ ಅಂತುಕಂಡೊನಂ ಪ್ರಭಾಸವ್ಯಂತರಾಧೀಶನನಾಳ್ದಲ್ಲಿಂದಂ ತಳರ್ದು—

---

೧೮. ತ್ರಿಕೂಟಗಿರಿಯ ಸ್ಫಟಿಕ ಶಿಲೆಗಳಲ್ಲಿ ಸೇನಾಗಜಗಳು ಕೋರೆಗಳಿಂದ ತಿವಿದು ಕೊರೆದ ಚಿಹ್ನಗಳಿಂದಾಗಿ ಆ ಬೆಟ್ಟವು ಚಕ್ರವರ್ತಿಯ ಜಯಸ್ತಂಭಗಳನ್ನು ಧರಿಸಿ ದಿಗಂತದಲ್ಲಿ ಶೋಭಿಸುವ ಆತನ ವೈಭವಮೂರ್ತಿಯೆಂಬಂತೆ ತೋರಿತು.

ವ॥ ಅಲ್ಲಿಂದ ಮುಂದೆ ಹೋಗಹೋಗುತ್ತ—

೧೯. ಅಪರಾಂತನೆಂಬ ಅರಸನ ಮದಗಜಗಳನ್ನು ಹಿಡಿತರಲು ಸೇನಾನಿಯ ಮುಂಚೂಣಿಯ ಬಿಲ್ಲೇ ಸಾಕಾಯಿತು; ಮತ್ತು ಬಂದು ಕಾಣುವಂತೆ ಆತನಿಗೆ ಕಟ್ಟಿ ನಿಲ್ಲಿಸುವ ಪಾಶವಾಯಿತು.

ವ॥ ಶಾಂತೀಶ್ವರನು ತನ್ನ ವಿಜಯಸೈನ್ಯವನ್ನು ಸಮುದ್ರದ್ವಾರಕ್ಕೆ ಇದಿರಾಗಿ ಬೀಡುಬಿಡಿಸಿ, ಓಲಗಕೊಟ್ಟು ಸಿಂಹಾಸನದಲ್ಲಿರಲಾಗಿ—

೨೦. ಆತನ ಅಪ್ಪಣೆಯ ಮೇರೆಗೆ ತಂದು ಕಾಣಿಸಲಾಗಿ, ಬೆಲೆಯುಳ್ಳ ಕಾಣಿಕೆಯ ವಸ್ತುಗಳನ್ನು ತನ್ನ ವಾಹನ ದೇವತೆಗಳ ಮೇಲೆ ಹೊರಿಸಿಕೊಂಡು ಭಕ್ತಿಯುತನಾಗಿ ಪ್ರಭಾಸನೆಂಬ ದೇವೇಶ್ವರನು ಬಂದು ಚಕ್ರವರ್ತಿಯನ್ನು ಕಂಡನು.

ವ॥ ಹಾಗೆ ಬಂದು ಕಂಡ ಪ್ರಭಾಸನೆಂಬ ವ್ಯಂತರಾಧಿಪತಿಯನ್ನು ಚಕ್ರವರ್ತಿಯು ತನಗೆ ಅಧೀನಮಾಡಿಕೊಂಡು ಅಲ್ಲಿಂದ ಹೊರಟನು—

---

1. ಪಾ (ಮ)　2. ದಮರುಕಾಲ (ಅ)　3. ಭೋ (ಮ)

ಚಂ॥ ಒದವಿದ ಪಾರಸೀಕಬಲಮಂ ಸ್ಥಳಮಾರ್ಗದೊಳಿಂದ್ರಿಯಾದಿವ
ರ್ಗದ ಬಲಮಂ ಸಮಾಧಿವಿಧಿಯಿಂದೆ ತಪೋಧನನಾಗಮಜ್ಞನೊ
ರ್ವೊದಲೆ ಗೆಲಲ್ಕಡಂಗುವವೊಲಾ ಜಗದೀಶನ ದಂಡನಾಯಕಂ
ಮದವದನೇಕಪಪ್ರಕರದಿಂ ಕಡುಗೆಯ್ದು ಗೆಲಲ್ ಕಡಂಗಿದಂ ॥ ೨೧ ॥

ವ॥ ಮತ್ತಮತ್ತಂ ನಡೆದು—

ಕಂ॥ [1]ಯ[1]ವನೀಮುಖಾಬ್ಜಮಧುಪಾ
ಟವಮಂ ಸೇನಾನಿ ಕಳೆದನಬ್ಜವಿಕಾಸ
ಪ್ರವಣಾತಪಮಂ ಕಾಳಾಂ
ಬುವಾಹಮೊರ್ವೊದಲೆ ಕಳೆವ ತೆಱದಿಂದಾಗಳ್ ॥ ೨೨ ॥

ವ॥ ತದ್ವಿಜಯಾವಸಾನದೊಳ್ ಜೈನಶಾಸನಚೂಡಾಮಣಿಯುದಙ್ಮುಖನಾಗಿ ಪಯಣಂ ಬರೆವರೆ—

ಉ॥ ಅತ್ಯಭಿಸಾಂದ್ರರುಂದ್ರರಜದೊಳ್ ಪರವೀರಬಳಾವಬೋಧವೈ
ಚಿತ್ಯದೊಳುಗ್ರಶಾರ್ಙ್ಗರವವೇದಿ[2]ತ[2]ವೈರಿಪರಿಸ್ಫುಟಂ ಮಹೀ
ಪತ್ಯಖಿಳಪ್ರಚಂಡಬಲಮುಖ್ಯರುಮಂ ಸಮದಾಂಧರಪ್ಪ ಪಾ
ಶ್ಚಾತ್ಯರುದಶ್ವಸಾಧನದೊಳಾದುದು ದಲ್ ತುಮುಲಂ ಮಹಾಹವಂ ॥ ೨೩ ॥

---

೨೧. ಇಂದ್ರಿಯಗಳನ್ನು ಸಮಾಧಿವಿಧಿಯಿಂದ ಗೆಲ್ಲಲು ತಪಸ್ವಿಯು ರಭಸದಿಂದ ಹೊರಡುವಂತೆ ಪಾರಸೀಕರ ಬಲವನ್ನು ಗೆಲ್ಲಲೆಂದು ಚಕ್ರಿಯ ಸೇನಾನಿಯು ಅನೇಕ ಮದಗಜಗಳಿಂದ ಕೂಡಿ ಸ್ಥಳಮಾರ್ಗ (ಭೂಮಾರ್ಗ)ದಿಂದ ಮುನ್ನುಗ್ಗಿದನು.

ವ॥ ಹೀಗೆ ಅತ್ತ ನಡೆದು—

೨೨. ಕಮಲಗಳಿಗೆ ವಿಕಾಸವನ್ನುಂಟುಮಾಡುವ ಬಿಸಿಲನ್ನು ಮಳೆಗಾಲದ ಕರಿಮೋಡ ಬಂದು ಕಳೆದುಬಿಡುವಂತೆ ಯುವನಸ್ತ್ರೀಯರ ಮುಖವನ್ನರಳಿಸುವ ಮದ್ಯಸುಖವನ್ನು ಕಳೆದುಬಿಟ್ಟನು. (ಯವನ ರಾಜ್ಯವನ್ನು ಆಕ್ರಮಿಸಿದನು.)

ವ॥ ಹಾಗೆ ವಿಜಯವನ್ನು ಸಂಪಾದಿಸಿದ ಬಳಿಕ, ಜೈನಧರ್ಮಶಿರೋಮಣಿಯಾದ ಶಾಂತೀಶನು ಉತ್ತರಾಭಿಮುಖನಾಗಿ ಹೊರಟನು.

೨೩. ಮದಾಂಧರಾದ ಹಾಗು ಪ್ರಚಂಡ ಅಶ್ವಸೈನ್ಯಗಳುಳ್ಳ ಪಶ್ಚಿಮರಾಜರೊಡನೆ ತುಮುಲವಾದ ಮಹಾಯುದ್ಧವಾಯಿತು; ಅದರಲ್ಲಿ ಅತ್ಯಂತ ದಟ್ಟವಾಗಿ ಮುಸುಕಿದ ಧೂಳಿಯಿಂದಾಗಿ ಶತ್ರುಬಲವನ್ನು ಗುರುತಿಸುವುದಕ್ಕೆ ಅವರ ಉಗ್ರವಾದ ಬಿಲ್ಲಿನ ಧ್ವನಿಗಳೇ ಮಾರ್ಗದರ್ಶಕವಾದುವು.

---

1. ಅ (ಬ) 2. ಕ (ಅ)

ವ॥ ಅಂತೊದವಿದ ಸಂಗ್ರಾಮದೊಳ್—

ಕಂ॥ ನೃಪಸೇನಾಪತಿ[1]ಸರಘಾ
ಳಿಪರೀತಕ್ಷೌದ್ರಪಟಳದಿಂದೆಳೆಯಂ ಪಾ
ಳಿಪವೋಲ್ ಭಲ್ಲಚ್ಛಿನ್ನಾ
ಧಿಪತನ್ಮೂರ್ಧಾಳಿಯಿಂದಮಾಚ್ಛಾದಿಸಿದಂ ॥ ೨೪ ॥

ವ॥ ಮತ್ತಂ ತತ್ಪಾರ್ಶ್ವಬಃದೊಳ್ ಗಾಣದೆಳ್ಳೋರೆಂದೆ ಬರ್ದುಂಕುವಂತೆ ಬರ್ದುಂಕಿದೊರಂ ಪಿರಿಯನ ಮುನಿಸೆಂಬುದು ಪ್ರಣಿಪಾತ ಪ್ರತೀಕಾರಮೆಂದಱಿದರಸನ ದಂಡನಾಯಕಂಗೆ ಶರಣಾಗತರಾಗಿ ನಿಜಶಿರಸ್ತ್ರಾಣಪರಾಯಣರಾದರ್ ಚಕ್ರಿಯೋಧರುಂ ವಿಜಯಶ್ರಮವಿನೇಯಪರರಾಗಿ[1]ದ್ರಾಕ್ಷಾವಳಯ[1] ಭೂಮಿಗಳೊಳ್ ವಿಶ್ರಮಿಸಿದರ್ ಮತ್ತಂ—

ಕಂ॥ ಧನದ ಹರಿದಭಿಮುಖಂ ವಿಭು
ಜಿನಚಂದ್ರಂ ನಡೆದುದೀಚ್ಯರಂ ಕಪ್ಪಂಗೊಂ
ಡಿನನುತ್ತರಾಯಣದೊಳನು
ದಿನಂ ರಸಜ್ಞಾನಿ ನೀರನೊಸೆವಂತೊಸೆದಂ ॥ ೨೫ ॥

ವ॥ ಅಂತಂತೆ ಮತ್ತೊತ್ತಿ ನಡೆದು—

ಕಂ॥ ಕ್ಷೋಣೀಶಸೈನ್ಯನಿಪತಿತ
ಬಾಣಾವಳಿ [2]ಪೂಣ್ದು[2] ಭೂಮಿಪತಿಧರಣಿಯುಮಂ
ಪ್ರಾಣವಧೂಟಳದಳ
ಶ್ರೇಣಿಯ ಕುಟಿಳತೆಯುಮಂ ನಿಮಿರ್ಚಿ[3]ದುವಾ[3]ಗಳ್ ॥ ೨೬ ॥

ವ॥ ಹಾಗೆ ನಡೆದ ಯುದ್ಧದಲ್ಲಿ—

೨೪. ನೊಣಗಳು ಮುಸುಕಿಕೊಂಡ ಜೇನುಹುಟ್ಟುಗಳಿಂದಲೆ ಭೂಮಿಯನ್ನು ಪೋಷಿಸುವನೊ ಏನೊ ಎಂಬಂತೆ ಸೇನಾಪತಿಯು 'ಭಿಲ್ಲ'ವೆಂಬ ಬಾಣವಿಶೇಷದಿಂದ ರೋಮಮಯವಾದ ಆ ಪಾರಸೀಕರ ತಲೆಗಳನ್ನು ಕತ್ತರಿಸಿ ಕೆಡಹಿ ಭೂಮಿಯನ್ನು ಮುಚ್ಚಿಬಿಟ್ಟನು.

ವ॥ ಮತ್ತು (ತಿರುಗುತ್ತಿರುವ) ಎಳ್ಳಿನ ಗಾಣದಲ್ಲಿ ಎಲ್ಲೊ ಉಳಿದುಕೊಂಡ ಒಂದೊಂದು ಎಳ್ಳು ಕಾಳಿನಂತೆ ಈ ಯುದ್ಧದಲ್ಲಿ ಬದುಕಿ ಉಳಿದವರು, "ದೊಡ್ಡವರ ಕೋಪಕ್ಕೆ ನಮಸ್ಕಾರವೇ ಮದ್ದು" ಎಂದು ಅರಿತು, ದಂಡನಾಯಕನಿಗೆ ಶರಣಾಗಿ ತಮ್ಮ ಶಿರಸ್ತ್ರಾಣಗಳನ್ನು ತೆಗೆದಿಟ್ಟರು. ಚಕ್ರವರ್ತಿಯ ಸೈನಿಕರೂ ವಿಜಯ ಪಡೆದಮೇಲೆ ಶ್ರಮಪರಿಹಾರಕ್ಕಾಗಿ ದ್ರಾಕ್ಷಿತೋಟಗಳಲ್ಲಿ ತಂಗಿದರು. ಮತ್ತು—

೨೫. ಉತ್ತರಾಯಣಕಾಲದಲ್ಲಿ ರಸಜ್ಞನಾದ ಸೂರ್ಯನು (ಪೃಥ್ವಿಯ) ರಸವನ್ನು ಹೀರಿ ಸಂತೋಷಪಡುವಂತೆ ಜಿನೇಂದ್ರನು ಉತ್ತರಕ್ಕೆ ನಡೆದು ಔತ್ತರೇಯರಿಂದ ಕಪ್ಪವನ್ನು ಪಡೆದು ಸಂತೋಷಪಟ್ಟನು.

ವ॥ ಹಾಗೆ ಮುಂದೆ ಮುಂದೆ ಬಲಸಹಿತವಾಗಿ ವಿಜಯಮಾಡುತ್ತ—

೨೬. ಚಕ್ರವರ್ತಿಯ ಸೈನ್ಯದಿಂದ ಹೊರಟ ಬಾಣಗಳು ಹೂಣರಾಜರ ಭೂಮಿಯನ್ನೂ ಅವರ ಅಂತಃಪುರ ಸ್ತ್ರೀಯರ ಕೇಶದ ಕುಟಿಲತೆಯನ್ನೂ ಮುಕ್ತಗೊಳಿಸಿದುವು. (ಹೂಣರ ರಾಜ್ಯವನ್ನು ವಶಪಡಿಸಿಕೊಂಡು ಆ ರಾಣಿಯರ ವಿಲಾಸವನ್ನು ಅಪಹರಿಸಿದುವು.)

---

1. ದ್ರಾಕ್ಷರಾದೆಯ (ಶ) 2. ಹೂಣ (ಮ) 3. ದರಾ (ಅ)

ವ॥ ಅಂತು ಪೋಗೆವೋಗೆ—

ಕಂ॥ ವ್ಯಾಳತೆ ಷಟ್ಖಂಡಮಹೀ
ಪಾಳನೊಳೆಮಗಾದುದೆಂದು ಕಾಂಭೋಜನೃಪರ್
ವ್ಯಾಳಗ[1]ಜಾಳಾ[1]ನ ಚಳ
ಕ್ಷಾಳತಿ ಯೊಡನೊಡನೆ ತಡೆಯದೆಱಗಿಪರಾಗಳ್ ॥ ೨೭ ॥

ವ॥ ಅಂತವರ್ ಬಂದು ಕಂಡಾಳಪ್ಪುದುಂ—

ಕಂ॥ ತುಂಗತುರಂಗಮಭೂಯಿ
ಷ್ಠಂಗಳ್ ಕೊಟ್ಟಜದ ಕೊಟ್ಟ ಕಪ್ಪದ ಭಂಡಾ
ರಂಗಳ್ ನಿಂದುವು ರಾಜಗೃ
ಹಾಂಗಣದೊಳ್ ಪಾರದಖ್ಖವಣಿಗೆಯ ಪದಮಂ ॥ ೨೮ ॥

ವ॥ ಅಂತು ದಕ್ಷಿಣಭರತವಿನೀತಾಖಂಡಮನುಂಡಿಗೆಸಾಧ್ಯಮಾಗೆ ಬಾಯ್ಕೇಳಿಸಿ—

ಮ॥ ವಿಜಯಾರ್ಧಾದ್ರಿಯನೆಯ್ದಿ ತತ್ಕಟಕದೊಳ್ ಬೀಡಿಂಗೆ ಪಾಂಗಾಗೆ ತ
ದ್ವಿಜಯಶ್ರೀಕಟಕೋಪಮಂ ಕಟಕಮಣ್ಮುಟ್ಟಾಗೆ ಬಿಟ್ಟರ್ಪಿನಂ
ವಿಜಯಾರ್ಧೇಂದ್ರಕುಮಾರನಾ ನಗದಧೀಶಂ ಬಂದು ಕಂಡಂ ನಮ
ತ್ರಿಜಗನ್ನಾಥನನರ್ಘ್ಯಪಾಣಿ ವಿಜಯಾರ್ಧಂ ಬಂದು ಕಾಣ್ಬಂದದಿಂ ॥ ೨೯ ॥

ಕಂ॥ ಎಱಗಿ ಪೊಡವಡುವ ತೆಱನೆರ್ದೆ
ಯೆಱಕಮನನುವದಿಸಿ ಪೊಳೆವ [2][ಮಣಿ][2] ಮಕುಟದ ಕಿ
ಕ್ಕಿಱಿಗಿಱಿದ ಪೊನ್ನ ಪೊಂಗಳ
ತುಱುಗಲ್ ಪರಿಕಲಿಸೆ ಪಾದಪೀಠದ ಮೊದಲೊಳ್ ॥ ೩೦ ॥

ವ॥ ಹಾಗೆ ಮುಂದೆ ಮುಂದೆ ಸಾಗಿ—

೨೭. ಷಟ್ಖಂಡಾಧಿಪತಿಯೊಡನೆ ನಮಗೆ ವೈರವಾಯಿತೆಂದು ಬೆದರಿ ಕಾಂಭೋಜದೇಶದ ದೊರೆಗಳು ತುಂಟ ಆನೆಯನ್ನು ಕಟ್ಟಿದ ಕಂಬ ಕಿತ್ತು ಎರಗುವಂತೆ ತಡೆಯದೆ ಬಂದು ಎರಗಿದರು.

ವ॥ ಹಾಗೆ ಅವರು ಬಂದು ಕಂಡು ಆಳಾಗಲಾಗಿ—

೨೮. ಭವ್ಯನಾದ ಅನೇಕಾನೇಕ ಕುದುರೆಗಳು ಸಹಿತವಾಗಿ ಕಪ್ಪಕಾಣಿಕೆಯೆಂದು ಆ ರಾಜರು ಒಪ್ಪಿಸಿದ ಭಾಂಡಾರಗಳು ಚಕ್ರವರ್ತಿಯ ಅಂಗಳದಲ್ಲಿ ಎಣಿಸಲಸದಳವಾಗಿ ಬಂದು ನಿಂತುವು.

ವ॥ ಹೀಗೆ ದಕ್ಷಿಣಭರತವಿನೀತಾಖಂಡವನ್ನು ಗೆದ್ದು ತನಗೆ ಅಧೀನಮಾಡಿಕೊಂಡು—

೨೯. ವಿಜಯಾರ್ಧಪರ್ವತಕ್ಕೆ ಬಂದು ಅದರ ತಪ್ಪಲಲ್ಲಿ ವಿಜಯಲಕ್ಷ್ಮಿಯ ರಾಜಧಾನಿಯೊ ಏನೊ ಎಂಬಂತೆ ತನ್ನ ಸೈನ್ಯದೊಡನೆ ಅಲ್ಲಿ ಬೀಡುಬಿಟ್ಟನು. ಆಗ ವಿಜಯಾರ್ಧಪರ್ವತವೆ ಅರ್ಘ್ಯಸಹಿತವಾಗಿ ತ್ರಿಜಗತ್ಪತಿಯ ದರ್ಶನಕ್ಕೆ ಎದ್ದುಬಂದಂತೆ ಆ ಬೆಟ್ಟದ ಒಡೆಯನಾದ ವಿಜಯಾರ್ಧೇಂದ್ರಕುಮಾರನು ಬಂದು ಕಂಡನು ;

೩೦. ತನ್ನ ಹೃದಯದಲ್ಲಿರುವ ಭಕ್ತಿಯನ್ನೆ ತೆರೆದಿಡುವಂತೆ ಹೊಳೆಯುವ ರತ್ನ ಕಿರೀಟ ಹಾಗು ಕಿಕ್ಕಿರಿದ ಹೊನ್ನಿನ ನಾಣ್ಯಗಳ ರಾಶಿಯನ್ನು ಚಕ್ರವರ್ತಿಯ ಪಾದಪೀಠದ ಬಳಿ ಇಟ್ಟು ಬಾಗಿ ನಮಸ್ಕರಿಸಿದನು.

---

1. ಜಡಾ (ಅ) 2. × (ಮ)

ವ॥ ಅಂತು ಪೊಡವಟ್ಟು ಕಂಡು ತನ್ನ ತಂದನರ್ಘಮಣಿ ಪುದಿದುರ್ವರಾಸ್ಮೃತಿಲಕನಪ್ಪ ಚಕ್ರವರ್ತಿಯ ಪಾದಪದ್ಮಂಗಳನರ್ಚಿಸಿ ಮುಕುಳಿತಸುರಕುಮಾರಕರಕಮಳಂ ವಿಜಯಾರ್ಧಕುಮಾರಂ ವಿಜ್ಞಾಪನಮುಖರಮುಖನಾಗಿ—

ಸ್ರ॥ ಭಗವಜ್ಜನ್ಮಾಭಿಷೇಕಕ್ಕೆಮಗಣಮಧಿಕಾರಂ ದಲಿಲ್ಲೆಂದು ಶಕ್ರಾ
ದಿಗಳಿಂದಂ ಸ್ನಾನಕಲ್ಯಾಣದ ವಿಧಿ ನಿಮಗಂ ತೀರ್ವುದೆಮ್ಮನ್ನರಪ್ಪ
ರ್ಥಿಗಳುರ್ವೀಶರಾಜಪೂಜಾಭಿಷವಣವಿಧಿಯಿಂ [1]ತೀರ್ಚುವರ್ ದೇವ ಕೇಳೆಂ
ದಗಪುಣ್ಯಸ್ರೋತದಿಂ ಸ್ನಾನಮನೊದವಿಸಿದರ್ ದೇವದೇವಂಗೆ ದೇವರ್ ॥ ೩೧ ॥

ವ॥ ಅಂತು ಮಜ್ಜನಂಬುಗಿಸಿ—

ಕಂ॥ ದಿವಿಜಪತಿ ಪೊಳೆವ ದೇವಾಂ
ಗವಸ್ತ್ರಮಂ ಭುವನಪತಿಯನುಡಿಸಿ ನಿಜಾನ್ವೀ
ತವಿಶೇಷಭೂಷಣಂಗಳ
ನವಾರಿತಂ ತುಡಿಸಿ ತೋಱಿ ಸಂಗೀತಕಮಂ ॥ ೩೨ ॥

ತನಿಗಿರ್ಚು ಕರಗಿಕುಂ ಕಾಂ
ಚನಮಂ ಕರಗಿಕುಮೆ ವಜ್ರಮಂ ಧರಣೀಭೃ
ನ್ಮನಿ ಪೊಱಗಾಗುಟಿದರ ಕ
ಣ್ಮನಮೆಂಬಿವನುಗಿವುದಮರಗಣಿಕೆಯರಾಟಂ ॥ ೩೩ ॥

ಮ॥ ಹರಿಪೀಠಂ ಚಮರೀರುಹಂ ಶಶಿನಿಭಂ ಛತ್ರತ್ರಯಂ ಮೌಕ್ತಿಕಾ
ಭರಣವ್ರಾತಮುದಾತ್ತಕೇತನಚಯಂ ರಾಜ್ಯಕ್ಕೆ ಚಿಹ್ನಂಗಳೆಂ
ದರಸಂಗಂದವಟಯ್ಸಿದಂ ರಜತಶೈಲಾಧೀಶ್ವರಂ ವ್ಯಂತರಾ
ಮರರಾಜಂ ವಿಜಯಾರ್ಧನಾಥನುಮನಂತಾಳ್ದಂ ಮಹೀವಲ್ಲಭಂ ॥ ೩೪ ॥

ವ॥ ಹಾಗೆ ನಮಸ್ಕಾರ ಪೂರ್ವಕವಾಗಿ ಕಂಡು, ತಾನು ತಂದ ಅಮೂಲ್ಯವಾದ ರತ್ನಗಳನ್ನು ಸುರಿಸುರಿದು ಚಕ್ರವರ್ತಿಯ ಪಾದಕಮಲಗಳನ್ನು ಅರ್ಚಿಸಿ, ಕೈಮುಗಿದುಕೊಂಡು ವಿಜಯಾರ್ಧಕುಮಾರನು ಹೀಗೆಂದು ಬಿನ್ನವಿಸಿದನು :

೩೧. "ದೇವನೆ, ನಿಮ್ಮ ಜನ್ಮಾಭಿಷೇಕೋತ್ಸವ ಮಾಡುವುದಕ್ಕೆ ನಮಗೆ ಎಷ್ಟೂ ಅಧಿಕಾರವಿಲ್ಲವೆಂದು ಇಂದ್ರಾದಿಗಳಿಂದ ನಿಮ್ಮ ಸ್ನಾನ ಕಲ್ಯಾಣ ನೆರವೇರುವುದು. ಅಂತಹದೊಂದು ಭಾಗ್ಯಕ್ಕಾಗಿ ಹಂಬಲಿಸುವ ನಮ್ಮಂತಹವರು ಭೂಪತಿಯ ಪೂಜೆ ಹಾಗು ಅಭಿಷೇಕಗಳಿಂದಲೆ ಸಂತೋಷಪಡುವರು." ಹೀಗೆಂದು ಅತನೂ ಅವನೊಡನಿದ್ದ ದೇವರೂ ಆ ಬೆಟ್ಟದ ಪರಮಪವಿತ್ರವಾದ ನೀರಿನಿಂದ ದೇವಾಧಿದೇವನಿಗೆ ಸ್ನಾನಮಾಡಿಸಿದರು.

ವ॥ ಹಾಗೆ ಸ್ನಾನಮಾಡಿಸಿದ ಬಳಿಕ—

೩೨. ಮಿರುಗುವ ದೇವಾಂಗವಸ್ತ್ರವನ್ನು ಉಡಿಸಿ, ತಮ್ಮಲ್ಲಿದ್ದ ಅತಿಶಯವಾದ ಆಭರಣಗಳನ್ನು ತೊಡಿಸಿ, ಸಂಗೀತಕವನ್ನು ತೋರಿದನು.

೩೩. ಪ್ರಖರವಾದ ಬೆಂಕಿ ಚಿನ್ನವನ್ನು ಕರಗಿಸಬಲ್ಲುದಲ್ಲದೆ ವಜ್ರವನ್ನು ಕರಗಿಸಬಲ್ಲುದೆ ? ಅಲ್ಲಿ ನರ್ತಿಸುವ ದೇವಗಣಿಕೆಯರ ಲಾಸ್ಯವು ಉಳಿದೆಲ್ಲರ ಕಣ್ಣುಮನಗಳನ್ನು ಸೆಳೆದುವಾದರೂ ಆ ರಾಜರ್ಷಿಯ ಮೇಲೆ ಏನೂ ಪರಿಣಾಮ ಬೀರಲಿಲ್ಲ.

೩೪. ಅನಂತರ ಬೆಳ್ಳಿಬೆಟ್ಟದ ಒಡೆಯನಾದ ವ್ಯಂತರರಾಜ ವಿಜಯಾರ್ಧಕುಮಾರನು ರಾಜ್ಯಚಿಹ್ನಗಳೆಂದು ಸಿಂಹಾಸನ, ಚಾಮರ, ಚಂದ್ರಸದೃಶವಾದ ಮೂರು ಛತ್ರ, ಮುತ್ತಿನ ಆಭರಣಗಳು, ಶ್ರೇಷ್ಠವಾದ ಧ್ವಜಗಳ ಸಮೂಹ—ಇವೆಲ್ಲವನ್ನೂ ಅರ್ಪಿಸಿದನು.

---

1. ಪೆ (ಮ)

ವ॥ ಅನಂತರಂ ವಿಜಯಾರ್ಧಕುಮಾರನಂ ವಿಸರ್ಜಿಸಿದಿಂ ಬೞಿಯಂ—

ಮ॥ ಮಿತಸಾರೇತರಸಾರವಾಗೆ ವಿಜಯಾರ್ಧಾದ್ರೀಂದ್ರದುದ್ದಾಮಸಾ
ನುತಳಂ ತದ್ವಿಭವಂ ತಳಾಮಳಕಮೆಂಬಾಸ್ಫೋಟದಿಂ ಬಂದು ದೂ
ರತರಾರ್ಘ್ಯೌಘಪರಾರ್ಘ್ಯರತ್ನನಿಚಯಾದ್ವಂದ್ವಂ ಮಹಾಪುಣ್ಯದಿಂ
ಕೃತಮಾಲಾಮರನಾಥನಂದೆಱಗಿದಂ ಶಾಂತೀಶಪಾದಾಬ್ಜದೊಳ್ ॥ ೩೫ ॥

ವ॥ ಎಱಗಿ ಕೃತಾಂಜಳಿಯಾಗಿ—

ಕಂ॥ ಕ್ಷೋಣೀಶ ನೆಗೞ್ದ ಸಗ್ಗದ
ಮಾಣಿಕಚಟ್ಟರೊಳಮಮರಮಂಡಳಿಯೊಳವಿಾ
ಮಾಣಿಕ್ಯದ ಬೆಲೆಯಿಡಲಾರ್
ಜಾಣರ್ ಬೞಿಯಟ್ಟು ಬೆಲೆಯ[1]ನಾಗಿಪೊಡವಱಿಂ ॥ ೩೬ ॥

ಎಂದೋಲಗಿಸಿದ ನವಮಣಿ
ಸಂದೋಹಮನೆಟ್ಟು ಬಂದು ಗೃಹಪತಿ ಕೊಳೆ ದೇ
ವಂ ದಿವ್ಯಚಿತ್ತದಿಂ ತಾ
ಳ್ದಂ ದಿವಿಜನುಮಂದು ಚಕ್ರಿಗೊಲ್ದಾಳಾದಂ ॥ ೩೭ ॥

ಆಳಾಗಿ ವಿಪುಳರಾಜತ
ಶೈಳಗುಹಾಮುಖವಿಘಾಟನಾರಂಭಮುಮಂ
ಹೇಳಾಸಾಧ್ಯಮನಾಕೃತ
ಮಾಳಂ ಸೇನಾನಿ ನಿನ್ನದೆಂದಱಿಪುವುದುಂ ॥ ೩೮ ॥

ವ॥ ಅನಂತರ ವಿಜಯಾರ್ಧಕುಮಾರನನ್ನು ಚಕ್ರಿಯು ಕಳಿಸಿಕೊಟ್ಟನು. ಆಮೇಲೆ—

೩೫. ವಿಜಯಾರ್ಧಗಿರಿಯ ವಿಸ್ತಾರವಾದ ಹಾಗು ಸಾರವತ್ತಾದ ಸಾನುಪ್ರದೇಶಕ್ಕೆಲ್ಲ ಒಡೆಯನಾದ ಕೃತಮಾಲನೆಂಬ ವ್ಯಂತರಾಧಿಪತಿಯು ಶ್ರೇಷ್ಠವಾದ ರತ್ನರಾಶಿಗಳೊಡನೆ ಅರ್ಘ್ಯೋದಕವನ್ನೆತ್ತಿಕೊಂಡು ಬಂದು ಭಕ್ತಿಪೂರ್ವಕವಾಗಿ ಶಾಂತೀಶ್ವರನ ಪಾದಗಳಿಗೆ ಎರಗಿದನು.

ವ॥ ಹಾಗೆ ಎರಗಿ ಕೈಮುಗಿದುಕೊಂಡು—

೩೬. "ಭೂಪತಿಯೆ, ಸ್ವರ್ಗಲೋಕದಲ್ಲಿ ಪ್ರಖ್ಯಾತರಾದ ರತ್ನಪರೀಕ್ಷಕರಲ್ಲಿ ಯಾರಾದರೂ ಈ ಮಾಣಿಕ್ಯಗಳನ್ನು ಬೆಲೆಗಟ್ಟಬಲ್ಲವರಿದ್ದರೆ ಕರೆಕಳಿಸು. ಸಾಧ್ಯವಾದರೆ ಬೆಲೆಗಟ್ಟಲಿ"

೩೭. ಎಂದು ನುಡಿಯುತ್ತ ರತ್ನಸಮುದಾಯವನ್ನು ಸಮರ್ಪಿಸಿದನು. ಗೃಹಮಹತ್ತರನು ಬಂದು ಅವುಗಳನ್ನು ಎತ್ತಿಕೊಂಡನು. ಶಾಂತಿದೇವನ ಅನುಗ್ರಹವನ್ನು ಪಡೆದು ಆ ವ್ಯಂತರದೇವನು ಸಂತೋಷದಿಂದ ಅವನಿಗೆ ಆಳಾದನು.

೩೮. "ಈ ಬೆಳ್ಳಿಬೆಟ್ಟದಲ್ಲಿರುವ ಮಹಾಗುಹೆಯ ದ್ವಾರವನ್ನು ಒಡೆದು ತೆಗೆಯುವ ಕಾರ್ಯ ನಿನ್ನದು; ನಿನಗೆ ಅದು ಸುಲಭವೂ ಅಹುದು" ಎಂದು ಕೃತಮಾಲನು ಸೇನಾಪತಿಗೆ ತಿಳಿಸಿದನು.

---

1. ನಿಡುಸುಪೊ (ಅ)

ಮ॥ ಅಱದೀಶಂ ಬೆಸವೇೞೆ ಸಿಂಧುವನವೇದೀದ್ವಾರದಿಂ ಪೋಗಿ ಸು
ತ್ರಿಱದೆತ್ತಂ ಬರೆ ತನ್ನವಶ್ವನಿಚಯಂ ರೂಪ್ಯಾದ್ರಿವೇದೀತಟಂ
ತೆಱದಿಂದಿಂಬಿನೊಡಂಬಡಂಬಡೆಯೆ ಬಂದಂದೇಱದಂ ಕೇಜಮಂ
ಮೆಱೆಯುತ್ತುಂ ಜಗತೀತಳಂಬರಮಿಳೇಶಾನೀಕಿನೀನಾಯಕಂ ॥ ೫೯ ॥

ವ॥ ಅಂತು ವೇದಿಯ ಮೂಡಣ ದೆಸೆಯ ರತ್ನರಚಿತಸೋಪಾನಚಯಂಗಳಿಂ ಜಗತೀತಳಮನೇಱ ಮುನ್ನೆ ತನ್ನೊಡವಂದಶ್ವಬಲಮಂ ಪಶ್ಚಿಮಸೋಪಾನಪಙ್ತಿಗಳಿಂದಮಪರಮ್ಲೇಚ್ಛಖಂಡಮಧ್ಯಮಗಾಮಿಯಾಗೆ ವಿಸ್ಫುಳಿಂಗವ್ಯಾಸಂಗವಾಗದಂತತ್ತ ಪೋಗಲ್ವೇೞ್ದು ತಮಿಸ್ರಾ ಗುಹೋತ್ಸಂಗಮಂ ತಾನೊರ್ವನುಮೇಱ ತುರುಗರತ್ನಾಧಿರೂಢಂ ಪಡುವಣಮೊಗದೆ ನಿಂದು ದ್ವಾದಶಯೋಜನಮಗಲದೆಂಟುಯೋಜನ ಮುತ್ಸೇಧದ ವಜ್ರದ ಪಡಿಗಳಂ ಲಕ್ಷ್ಯಂಮಾಡಿ ಸಕಳಚಕ್ರವರ್ತಿ ಗೆಲ್ಗೆಂದು ದಂಡರತ್ನದಿಂದಮಿಡುವುದುಮಾಗುಹಾಮುಖದ್ವಾರದಿಂ ಪುಟ್ಟಿದ ಗಂಭೀರಾರಾವದಿಂ—

ಮ॥ ವಸುಧಾಮಂಡಳಮಧ್ಯದೊಳ್ ನೆಲಸಿದೀ ನಿನ್ನಾಜ್ಞೆಯಂ ಮಾಲತೀ
ಕುಸುಮಸ್ರಕ್ಕೃತಿರೂಪದಿಂ ತಲೆಯೊಳಾಂತೆಂ ದೇವ ಹಾಹಾ ವಿಚಾ
ರಿಸದೀದಿಗ್ವಿಜಯಪ್ರಘಟ್ಟಕದೊಳುರ್ವೀಭೃತ್ಸಮಾಜಕ್ಕೆ ನೋ
ಯಿಸಿದಂ ನಿರ್ನೆರಮೆನ್ನನೇದು ಮೊರೆಯಿಟ್ಟಂತಾಯ್ತು ರೂಪ್ಯಾಚಳಂ ॥ ೬೦ ॥

ವ॥ ಅಂತು ಕೀಲ್ ಕಟಲ್ದ ಜಂತ್ರದ ಪಡಿಗಳಂತೆ ತಮಿಸ್ರಾ[1]ಗುಹಾದ್ವಾರದ ವಜ್ರದ ಪಡಿಗಳ್ ಭೋಂಕನೆ ತೆಱೆವುದುಂ—

ಕಂ॥ ಅರರೀಪುಟಚೀತ್ಕಾರ
ಸ್ಫುರಿತಧ್ವನಿ ರಜತಶಿಖರಿ ಸೇನಾನಿಗೆ ಪ
ಲ್ಮೊರೆದಪುದೆನಿಸೆ ಗುಹಾಗ
ಹ್ವರದಿಂ ಪೊಣ್ಮಿದುದು ಘೂರ್ಣಿತಾರ್ಣವರವದಿಂ ॥ ೬೧ ॥

---

೫೯. ಅದನ್ನರಿತು ಚಕ್ರವರ್ತಿಯು ಅಪ್ಪಣೆ ಕೊಡಲಾಗಿ, ಸೇನಾನಿಯು ಸಿಂಧುವನ ವೇದಿದ್ವಾರದಿಂದ ತನ್ನ ಅಶ್ವದಳದೊಡನೆ ಹೊರಟು ಬೆಟ್ಟದ ವೇದೀತಟವನ್ನು ಏರಿದನು.

ವ॥ ವೇದಿಯ ಪೂರ್ವಭಾಗದಲ್ಲಿದ್ದ ರತ್ನನಿರ್ಮಿತ ಸೋಪಾನಗಳನ್ನು ಏರುತ್ತ, ಮೊದಲು ತನ್ನ ಜೊತೆಗೆ ಬಂದಿದ್ದ ಕುದುರೆಗಳನ್ನು ಪಶ್ಚಿಮ ಸೋಪಾನಮಾರ್ಗದಿಂದ ಪಶ್ಚಿಮಮ್ಲೇಚ್ಛಖಂಡದ ಮಧ್ಯದೊಳಗೆ ಹಾಯ್ದು ಹೋಗಲು ಅಪ್ಪಣೆ ಕೊಟ್ಟು ಕಳಿಸಿದನು. ತಮಿಸ್ರಗುಹೆಯ ಪ್ರದೇಶವನ್ನು ತಾನೊಬ್ಬನೆ ಏರಿಹೋಗಿ, ಪಶ್ಚಿಮಾಭಿಮುಖನಾಗಿ ನಿಂತು, ಹನ್ನೆರಡು ಯೋಜನ ಅಗಲವೂ ಎರಡು ಯೋಜನ ಎತ್ತರವೂ ಆದ ವಜ್ರದ ಕದಗಳಿಗೆ ಗುರಿಯಿಟ್ಟು "ಸಕಲ ಚಕ್ರವರ್ತಿಗೆ ಜಯವಾಗಲಿ" ಎಂದು ದಂಡರತ್ನದಿಂದ ಪ್ರಹಾರಮಾಡಿದನು. ಕೂಡಲೆ ಗುಹೆಯ ಮುಖದಿಂದ ಅದ್ಭುತವಾದ ಧ್ವನಿ ಹೊಮ್ಮಿತು.

೬೦. "ಈ ಭೂಮಂಡಲ ಮಧ್ಯದಲ್ಲಿ ನೆಲೆಸಿರುವ ನಿನ್ನ ಆಜ್ಞೆಯನ್ನು ಮಾಲತೀಪುಷ್ಪಮಾಲೆಯೊಬಂತೆ ನನ್ನ ತಲೆಯ ಮೇಲೆ ಇಟ್ಟುಕೊಂಡಿರುವೆನು ಅಯ್ಯೊ ದೇವನೆ, ಈ ದಿಗ್ವಿಜಯ ಪ್ರಸಂಗದಲ್ಲಿ ನಿನ್ನ ಸೇನಾನಿಯು ವಿಚಾರಮಾಡದೆ ನನ್ನ ಪರ್ವತಾವಳಿಗೆ ಸುಮ್ಮನೆ ನೋವುಂಟುಮಾಡಿದನಲ್ಲ" ಎಂದು ಬೆಳ್ಳಿಬೆಟ್ಟವೆ ಮೊರೆಯಿಡುವಂತೆ ಆ ಧ್ವನಿ ಕೇಳಿಸಿತು.

ವ॥ ಕೀಲು ಕಳಚಿದ ಯಂತ್ರದ ಮುಚ್ಚಳದಂತೆ ತಮಿಸ್ರಗುಹೆಯ ವಜ್ರದ ಕದಗಳು ಒಮ್ಮೆಲೆ ತೆರೆದುಕೊಂಡುವು.

೬೧. ರಜತಪರ್ವತವು ಸೇನಾನಿಯನ್ನು ಕಂಡು ಹಲ್ಲುಕಡಿಯುವುದೊ ಏನೊ ಎಂಬಂತೆ ಕಿರುಗುಟ್ಟುವ ಕದಗಳ ಘೋರ ಧ್ವನಿ ಕ್ಷೋಭೆಗೊಂಡ ಕಡಲ ಗರ್ಜನೆಗೆ ಸದೃಶವಾಗಿ ಗುಹೆಯ ಮುಖದಿಂದ ಹೊಮ್ಮಿತು.

---

1. ಸ್ರಾ (ಮ)

ವ॥ ಅಂತು ಕವಾಟಪುಟಂಗಳಶ್ರಮದೊಳ್ ಗವಾಕ್ಷಕವಾಟಂಗಳಂತೆ ತೆಱೆಯೆ ಮತ್ತಾಶ್ರಮದೊಳಲ್ಲಿಂದೊಳಗೊಗೆದ ನಿರ್ಘಾತತಜಾತ ವೇದಸ್ವಾದಮಂ ಮುಟ್ಟಲೀಯದೆ ಸೇನಾಪತಿರತ್ನಂ ತುರಂಗ ರತ್ನಮನವಯವದೊಳಿನಿಸಾನುಂ ಕಣ್ಕೆತ್ತಿದಂತೆ—

ಕಂ॥ ಅಂಕಂಗುಡಲೊಡಮದು ನಿ
ಶ್ಶಂಕಂ ಪನ್ನೆರಡುಯೋಜನಂ ಪಾಱಿದುದ
ಭ್ರಂಕಷಖರಖುರಧಾರಾ
ಟಂಕಾಹತಿ ಮುಗಿಲ ಮು[1]ಱು[1]ಗಳಂ ಕೆದಱುವಿನಂ ॥ ೪೨ ॥

ವ॥ ಅಂತಶ್ವರತ್ನದ ವಯಃಕ್ಷೇತ್ರಧ್ರುವಲಕ್ಷಣಂ ನಿರ್ವಿಶೇಷಂಗಳನೋದಿಮನಗಲದೆ ಕಾರುವುವು ಸಹಸ್ರಂ ರಜತಾದ್ರಿಪ್ರಸ್ಥವೇದಿಕಾವ ಕಾಶಂಬಿಡಿದು ಸಿಂಧುವಿನ ಪಡುವಣದೆಸೆಯ ವನವೇದಿಕೆಯ ತೋರಣದ್ವಾರದಿಂದಮತ್ತ ಪಡುವಣಮ್ಲೇಚ್ಛಖಂಡಮಂ ಮೂವಳಸುಬಳಸಿ ಸಾಧಿಸಿ —

ಕಂ॥ ಆಳರಸೆಂಬಿನಿತಂ ಮನ
ಮಾಳೋಚಿಸಲಱಿಯದವನಿಪಾಳರ್ ಧರಣೀ
ಪಾಳನ ಸೇನಾಪತಿಗಿರ
ದಾಳಾದರ್ ಕಟ್ಟುಪಟ್ಟ ವನಮದಕರಿವೋಲ್ ॥ ೪೩ ॥

ವ॥ ಅಂತು ಸ್ತ್ರೀಬಾಲಸಾಧ್ಯಮಾದ ಮ್ಲೇಚ್ಛಖಂಡದರಸುಗಳುಮನವರ ಕೊಟ್ಟಟ್ಟಿದ ಕುಲಧನಜೀವಧನಪರಿಕರಂಗಳುಂಬೆರಸ ಬಂದಾಸ್ಥಾನಮಂಡಳಮಧ್ಯದೊಳ್ ಇರ್ದ ಚಕ್ರವರ್ತಿಯ ಮಣಿಮಕುಟಂ ತನ್ನತಂದ—

ಮ॥ ನೃಪರಂ ಚಕ್ರಿಪದಾಂಬುಜಕ್ಕೆಱಗವೇಟ್ಟೀ ರತ್ನಮಿಾ ಹೇಮಮಿಾ
ದ್ವಿಪಮಿಾ ತುಂಗತುರಂಗಮಂಗಳಿವರಿತ್ತರ್ಥಂಗಳೆಂದೆಂದು ಬಿ
ನ್ನಪದಿಂ ಶ್ರೀಜಿನಚಂದ್ರನಂಘ್ರಿಯುಗಳಕ್ಕಾಳ್ಮಾಡಿ ತನ್ಮ್ಲೇಚ್ಛಭೂ
ಮಿಪರಂ ಮನ್ನಣೆಯಿಂ ವಿಸರ್ಜಿಸಿದನುರ್ವೀನಾಥಸೇನಾಧಿಪಂ ॥ ೪೪ ॥

ವ॥ ಹೀಗೆ (ಮನೆಯ) ಕಿಟಕಿಯ ಕದಗಳಂತೆ ಗುಹೆಯ ಕದಗಳು ಸಲೀಸಾಗಿ ತೆರೆದುಕೊಳ್ಳಲಾಗಿ ಅದರೊಳಗಿಂದ ಎದ್ದು ಭೀಕರವಾದ ಬೆಂಕಿಗಾಳಿ ತನಗೆ ಮುಟ್ಟದಂತೆ ಸೇನಾಪತಿಯು ತನ್ನ ಶ್ರೇಷ್ಠವಾದ ಕುದುರೆಯನ್ನು ತಿವಿದು ನೆಗೆಯಿಸಿದನು.

೪೨. ಅದು ತನ್ನ ಖುರಪುಟಗಳ ಹೊಡೆತದಿಂದ ಮೋಡಗಳನ್ನು ತುಂಡುಮಾಡಿ ಚದರಿಸುತ್ತ ಸುಲಭವಾಗಿ ಹನ್ನೆರಡು ಯೋಜನಗಳವರೆಗೆ ಹಾರಿತು.

ವ॥ ಹೀಗೆ ಸೇನಾನಿಯು ತನ್ನ ಕುದುರೆಯ ಮೈಸುಳಿಗಳಿಗೆ ಕೂಡ ಬಾಧೆ ತಟ್ಟದಂತೆ ಬೆಂಕಿಕಾರುತ್ತಿರುವ ಸಹಸ್ರ ರಜತಾದ್ರಿ ಪ್ರಸ್ಥವೇದಿಕೆಯನ್ನು ದಾಟಿ ಸಿಂಧುವಿನ ಪಶ್ಚಿಮ ದಿಗ್ಭಾಗದ ವನವೇದಿಕೆಯ ತೋರಣದ್ವಾರದಿಂದ ಹಾಯ್ದು ಅತ್ತ ಪಶ್ಚಿಮ ಮ್ಲೇಚ್ಛಖಂಡವನ್ನು ಮೂರು ಸುತ್ತು ಬಳಸಿ ಗೆದ್ದುಕೊಂಡನು.

೪೩. ಆಳು-ಅರಸು ಎಂಬ ಯಾವ ಆಲೋಚನೆಗೂ ಅವಕಾಶವಿಲ್ಲದೆ ಆ ಭಾಗದ ಅರಸರು ಸೆರೆಸಿಕ್ಕ ವನಗಜಗಳಂತೆ ಸೇನಾನಿಗೆ ಆಳಾದರು.

ವ॥ ಹೀಗೆ ಸುಲಭವಾಗಿ ಸೋತ ಮ್ಲೇಚ್ಛಖಂಡದ ರಾಜರನ್ನೂ ಅವರು ಒಪ್ಪಿಸಿದ ಕುಲಧನಜೀವಧನಗಳನ್ನೂ ಒಡಗೊಂಡು ಬಂದು ಓಲಗಮಧ್ಯದಲ್ಲಿರುವ ಚಕ್ರವರ್ತಿಯ ಮುಂದೆ ಸೇನಾಪತಿಯು (ಬಂದು)—

೪೪. ಆ ಅರಸರಿಗೆಲ್ಲ ಚಕ್ರಿಯ ಪಾದಕ್ಕೆರಗಲು ಅಜ್ಞಾಪಿಸಿ, "ಈ ರತ್ನ, ಈ ಚಿನ್ನ, ಈ ಆನೆ, ಈ ಭವ್ಯವಾದ ಕುದುರೆಗಳು ಇದು ಇವರು ಒಪ್ಪಿಸಿದ ಧನ" ಎಂದು ವಿವರವಾಗಿ ಬಿನ್ನೈಸಿದನು; ಹೀಗೆ ಮ್ಲೇಚ್ಛಭೂಪತಿಗಳನ್ನು ಅಧೀನತೆಗೆ ಒಳಪಡಿಸಿ ಮರಳಿ ಕಳಿಸಿಕೊಟ್ಟನು.

---

1. ೦ (ಮ)

ಕಂ॥ ಅಭಿಘಾತಜ್ವರವೌಷಧ
ವಿಭಿನ್ನಮುಪಶಮಿಸುವಂತಿರುಪಶಮಿಸಿದುದು
ತ್ರಿಭದಂಡನಿಹತಸಂಭೂ
ತ ಭೂರಿಪರಿತಾಪವನಾಱುತಿಂಗಳೊಳಗದಾ ॥ ೪೫ ॥

ವ॥ ಅಂತಱುದಿಂಗಳ್ವರವಿರ್ದಾಜಿದ ತಮಿಸ್ರಗುಹಾದ್ವಾರದ ಬೆಂಕೆಯುಪಶಮಮುಮನಱಿದು ಶುಭದಿನದೊಳುತ್ತರಭರತಮುಂ ಗೆಲಲ್ ಪ್ರಯಾಣಭೇರಿಯಂ ಪೊಯ್ಸಿ ಚಕ್ರವರ್ತಿ ಪಟ್ಟವರ್ಧನಮನೇಱಿ ವಿಜಯಶಿಬಿರಮಂ ಪೊಱಮಟ್ಟು ತಮಿಸ್ರಗುಹಾದ್ವಾರದೊಳ್ ನಿಂದು ಮುಂದೆ ಬೀಡಂ ನಡೆಯಿಸಲೆಂದಿರೆ—

ಉ॥ ಮುಂದೆ ತಮಸ್ತಮಂ ಪರೆಯೆ ಬಂದ ಚಮೂಪತಿ ಕಾಕಿಣೀಮಣಿ
ಸ್ಯಂಧನದಿಂದಮಿರ್ದೆಸೆಯ ಕೇರ್ಗಳೊಳಂ ಬರೆದೊಂದು ಕೇರೊಳಂ
ದಿಂದುವನೊಂದು ಕೇರೊಳಿನನಂ ಪಡೆಯಂ ನಡೆಯಲ್ಕೆವೇೞೆ ಭೋ
ರೆಂಡು ಗಭೀರನಾದದಿನದೇಂ ನಡೆಗೊಂಡುದೊ ಚಕ್ರವರ್ತಿಯಾ ॥ ೪೬ ॥

ಕಂ॥ ಒಂದೊಂದುಯೋಜನಾಂತದೊ
ಳಿಂದುರವಿಜ್ಯೋತಿ ಬೆಳಗೆ ಬರೆವರೆಯುತ್ತುಂ
ಮುಂದೆವರೆ ಸೈನ್ಯಪತಿ ಕೊ
ಳ್ಪಿಂದು ಗುಹಾಂತರದೊಳೆಸೆದು ಪಡೆ ನಡೆವೆಡೆಯೊಳ್ ॥ ೪೭ ॥

ಬೆಳಗಿದುದು ಚಕ್ರರತ್ನೋ
ಜ್ಜ್ವಳದೀಪಂ ಚರಣಮಂತರಿಕ್ಷದೊಳವನೀ
ತಳಪತಿ ತೇಜೋರವಿಮಂ
ಡಳಮೆಂಬ ಜನಪ್ರವಾದಮಂ ಪೊಸಯಿಸುತುಂ ॥ ೪೮ ॥

---

೪೫. ಆಘಾತಜ್ವರವು ಔಷಧದಿಂದ ಇಳಿದುಹೋಗುವಂತೆ ದಂಡರತ್ನ ಪ್ರಹಾರದಿಂದೆದ್ದ ಗಿರಿಯ ಮಹಾಅಗ್ನಿಯ ತಾಪವು ಆರು ತಿಂಗಳಲ್ಲಿ ಶಾಂತವಾಯಿತು.

ವ॥ ಹಾಗೆ ಆರು ತಿಂಗಳನಂತರ ತಮಿಸ್ರಗುಹಾಮುಖದ ಬೆಂಕಿ ಆರಿದುದನ್ನು ಅರಿತು ಶುಭದಿನದಂದು ಉತ್ತರ ಭರತವನ್ನು ಗೆಲ್ಲಲು ಪ್ರಯಾಣಭೇರಿಯನ್ನು ಹೊಡೆಯಿಸಿ ಚಕ್ರವರ್ತಿಯು ಪಟ್ಟದಾನೆಯನ್ನೇರಿ ಹೊರಟು ತಮಿಸ್ರಗುಹೆಯ ಬಾಗಿಲಲ್ಲಿ ನಿಂತು ಮುಂದೆ ಸೈನ್ಯವನ್ನು ನಡೆಯಿಸೆಂದು ಹೇಳಲಾಗಿ—

೪೬. ಸೇನಾಪತಿಯು ಬಂದು ಕತ್ತಲೆಯನ್ನು ನಿವಾರಿಸಲೆಂದು ಗುಹೆಯ ಒಂದು ಗೋಡೆಗೆ ಚಂದ್ರಚಿಹ್ನವನ್ನೂ ಇನ್ನೊಂದಕ್ಕೆ ಸೂರ್ಯಚಿಹ್ನವನ್ನೂ ಬರೆದನು. ಅದರಿಂದುಂಟಾದ ಬೆಳಕಿನಲ್ಲಿ ಸಾಗಲು ಆಜ್ಞೆಯೀಯಲಾಗಿ ಚಕ್ರವರ್ತಿಯ ಸೈನ್ಯವು ಭೋರ್ಗರೆಯುತ್ತ ನಡೆಯಿತು.

೪೭. ಹೀಗೆ ಒಂದೊಂದು ಯೋಜನಕ್ಕೊಮ್ಮೆ ಗೋಡೆಗಳ ಮೇಲೆ ಸೂರ್ಯಚಂದ್ರರನ್ನು ಬರೆಯುತ್ತಾ ಅದರಿಂದುಂಟಾದ ಪ್ರಕಾಶದಲ್ಲಿ ಸೈನ್ಯವನ್ನು ರಭಸದಲ್ಲಿ ನಡಸಿಕೊಂಡು ಸೇನಾಪತಿ ಮುನ್ನಡೆದನು.

೪೮. (ಶಾಂತೀಶ್ವರ) ಭೂಪತಿಯು ಸೂರ್ಯನಂತೆ ತೇಜಃಪುಂಜನೆಂಬ ಜನಪ್ರವಾದವನ್ನು ಸತ್ಯಗೊಳಿಸುವಂತೆ ಚಕ್ರರತ್ನದ ಪ್ರಜ್ವಲವಾದ ಪ್ರಭೆ ಅಂತರಿಕ್ಷದಲ್ಲಿ ಬೆಳಗಿತು.

ವ॥ ಅಂತುದೀರ್ಘೋಚ್ಛೇದನಮುಂ ನಿರಾತಂಕಮುಮಾಗಿ—

ಕಂ॥ ತುಂಗನೃಪಸೇನೆ ನಗದ ಮ
ನಂಗೊಳಲೆರ್ದೆವುಗುವ ತೆಱದಿನೊಳಪುಗೆ ರಿಪುರಾ
ಜ್ಯಾಂಗನೆ ವಿಜಯಕೆ ಮೆಚ್ಚಿ ಮ
ನಂಗೊಳ್ವಂತದ್ರಿರಾಜನದನೊಳಕೊಂಡಂ ॥ ೪೯ ॥

ವ॥ ಅಂತು ಮಣಿಮಯಸೋಪಾನಂಗಳೊಳಾದಮಿೞಿದಿರ್ವಗೆಯಾಗಿ ಸಿಂಧುನದಿಯೆರಡುಂ ತಡಿವಿಡಿದು ಯೋಜನದ್ವಯದಗಲದೊಳ್ ನಡೆಯ ಚಕ್ರವರ್ತಿಯೆಡೆಯೆಡೆಯೊಳ್ ಬರೆ ಗುಹಾಕುಡ್ಯಂಗಳೆರಡುಂದೆಸೆಯೊಳಮಿರ್ದೆರಡುಂ ಕುಂಡಂಗಳಿಂದಂ ಬಂದು ಸಿಂಧುನದೀಪ್ರವಾಹದೊಳ್ ಕೂಡೆ—

ಕಂ॥ ಜನಿತಾಭ್ಯುದಯುಂಗುನ್ಮ
ಗ್ನನಿಮಗ್ನಜಲಾಪಗಾಯುಗಂ ಗತಿಸಂರೋ
ಧನಮಾಗೆ ನಡೆವ ಪಡೆ ನಡೆ
ದು ನಿಂದುದು ನದೀತಟದ್ವಯೋರ್ವೀತಳದೊಳ್ ॥ ೫೦ ॥

ವ॥ ಅಂತು ಮೇಗಣ್ಗೊಗೆದುಮಿೞಿಗೆ ತೆಗೆದುಂ ಪವನವಶದಿಂ ಪರಿವ ಜಳಪ್ರವಾಹಂಗಳಿಂದಂ ವಿರುದ್ಧಸ್ರೋತಮಾದೆರಡುಂ ತೊಱೆಗಳುಮಂ ಸ್ಥಪತಿರತ್ನಪ್ರಯತ್ನನಿರ್ಮಿತಸೇತುಮಾರ್ಗಂಗಳೊಳ್ ಜಂಗಮಗಿರಿದುರ್ಗಂಬೆರಸು ನಡೆದಂತೆ ಕರಿಕರೇಣುಪರೀತಂ ಚಕ್ರವರ್ತಿ ನಡೆವುದುಂ ಅದಿತ್ಯನ ಬೞಿಯನುೞಿಯದ ದೀಧಿತಿನಿವಹದಂತೆ ಧರಣೀಶ್ವರನ ಬೆನ್ನನೆ ವಿಜಯಕಟಕಂ ಮುನ್ನಂ ನಡೆದು ಕೆಲವುಪಯಣದಿಂದಮುತ್ತರಗುಹಾದ್ವಾರದಿಂ ಪೊಱಮಡುವಾಗಳ್—

ಮಂದಾಕ್ರಾಂತವೃತ್ತಂ॥ ಮತ್ತೇಭಾಶ್ವಾದ್ಯಮಿತಬಳವತ್ಸೈನ್ಯಮಾದ್ವಾರದಿಂ ಬಂ
ದೆತ್ತಂ ಬಿಟ್ಟೊಕ್ಕಲವೊಲಿರೆ ಚಕ್ರೇಶ್ವರಂ ಬಂದೊಡಾತ್ಮಾ
ಯತ್ತಾನೀಕಂಗಳನವನಿಪಂಗಿತ್ತು ತೆತ್ತರ್ಥಶಾಸ್ತ್ರೋ
ದಾತ್ತಂ ದಂಡೋಪ[ನತ]ನೆನೆ ರೌಪ್ಯಾದ್ರಿ ಚೆಲ್ವಾದುದಾಗಳ್ ॥ ೫೧ ॥

ವ॥ ಹಾಗೆ ವಿಸ್ತಾರವಾದ ಆ ಭಾಗವನ್ನು ನಿರಾತಂಕವಾಗಿ

೪೯. ಮಹಾಸೈನ್ಯವು ಪರ್ವತದ ಹೃದಯವನ್ನೇ ಪ್ರವೇಶಿಸುವಂತೆ ಒಳ ಹೊಗಲಾಗಿ ಶತ್ರುರಾಜ್ಯ ವಿಜಯಕ್ಕೆ ಮೆಚ್ಚಿ ಅದನ್ನು ತನ್ನ ಹೃದಯದಲ್ಲಿಟ್ಟುಕೊಳ್ಳುವಂತೆ ಪರ್ವತರಾಜನು ಆ ಸೈನ್ಯವನ್ನು ಒಳಗೊಂಡನು.

ವ॥ ಹಾಗೆ ಹೊಕ್ಕ ಸೈನ್ಯವು ರತ್ನಮಯ ಸೋಪಾನಗಳನ್ನು ಇಳಿದು ಇಬ್ಭಾಗವಾಗಿ ಸಿಂಧೂನದಿಯ ಎರಡೂ ತಡಿಗಳನ್ನು ಅನುಸರಿಸಿ ಎರಡು ಯೋಜನದ ಅಗಲ ನಡೆಯಿತು ; ಗುಹೆಯ ಗೋಡೆಗಳ ಎರಡು ಪಕ್ಕದಲ್ಲಿದ್ದ ಎರಡೂ ಕುಂಡಗಳಿಂದ ಬಂದ ನೀರು ಸಿಂಧೂನದಿಯ ಪ್ರವಾಹದಲ್ಲಿ ಕೂಡಿತು.

೫೦. ಹಾಗೆ ತುಂಬಿತುಳುಕುವ ಎರಡೂ ಪ್ರವಾಹಗಳು ಹಾದಿಗೆ ಅಡ್ಡವಾಗಿ ಹರಿಯುವುದನ್ನು ಕಂಡು ರಾಜಸೈನ್ಯವು ಅವೆರಡರ ತೀರಗಳಿಗೆ ಬಂದು ನಿಂತುವು.

ವ॥ ಗಾಳಿಯಿಂದ ಮೇಲೆದ್ದು ಕೆಳಗೆ ಬಿದ್ದು ಹರಿಯುವ ನೀರಿನಿಂದ ಪಯಣಕ್ಕೆ ತಡೆಯುಂಟುಮಾಡಿದ ಆ ಎರಡೂ ತೊರೆಗಳನ್ನು ಕಂಡು ಚಕ್ರವರ್ತಿಯ ಸ್ಥಪತಿಯು ಸೇತುವೆಯನ್ನು ನಿರ್ಮಿಸಿದನು. ನಡೆಯುವ ಗಿರಿದುರ್ಗದಂತೆ ಗಜಸೈನ್ಯಸಹಿತವಾಗಿ ಚಕ್ರವರ್ತಿಯು ಸೇತುಮಾರ್ಗದಿಂದ ದಾಟಿದನು ; ಸೂರ್ಯನನ್ನು ಬೆನ್ನುಬಿಡದೆ ಅನುಸರಿಸುವ ಪ್ರಕಾಶದಂತೆ ವಿಜಯಸೈನ್ಯವೂ ಆತನ ಹಿಂದಿನಿಂದ ನಡೆದುಬಂದಿತು. ಕೆಲವು ಪಯಣಗಳಲ್ಲಿ ಅವರು ಗುಹೆಯ ಉತ್ತರ ದ್ವಾರದಿಂದ ಹೊರಬಂದರು.

೫೧. ಮದಗಜಗಳೂ ಕುದುರೆಗಳೂ ಕೂಡಿದ ಆ ಬಲಿಷ್ಠಸೈನ್ಯವು ಆ ದ್ವಾರದಿಂದ ಹೊರಬಿದ್ದು ಬೀಡುಬಿಟ್ಟ ಒಕ್ಕಲಂತೆ ನೆರೆಯಲಾಗಿ, ಚಕ್ರೇಶ್ವರನು ಬಂದೊಡನೆ "ನನಗೆ ಒಪ್ಪಿಸಿದ್ದ ನಿನ್ನ ಸೈನ್ಯವನ್ನು ತಂದು ನಿನಗೆ ಮರಳಿ ತಂದುಕೊಟ್ಟಿದ್ದೇನೆ ತೆಗೆದುಕೊ" ಎಂದು ಹೇಳಿ ಸಾದರಪಡಿಸುವ ಸಾಮಂತನಂತೆ ರಜತಾದ್ರಿ ಶೋಭಿಸಿತು.

ವ॥ ಅಂತು ಗುಹಾದ್ವಾರದಿಂ ಪೊಱಮಡುವ ರಾಗರಸೋದ್ರೇಕದಿಂದಮೂರ್ಮೆದಲೆ ಮೊೞಗುವ ಪಲವುಂತೆಱದ ಪಱೆಗಳೆಸೆವುದ್ದಾಮರಭಸದಿಂದಂ ಮಾರ್ದನಿವಿಟ್ಟು ಮುದುಗಣ್ಣನವಸುಂಟುಮಾಡಿದಂತೆ ಶಾಂತೀಶ್ವರಂಗೆ—

ಕಂ॥ ಕರ್ತಾರಂಗೆಱಗುವುದತಿ
ವರ್ತಿತ್ವಂ ಪೊಲ್ಲದೆಂದು ಪುರುಸೂನುಗೆ ಮುಂ
ಮಾರ್ತಲೆಯಾದ ಚಿಲಾತಾ
ವರ್ತರನಂದಾಱೆ ಕಲ್ಪಿಪಂತಾಯ್ತು ನಗಂ ॥ ೫೨ ॥

ವ॥ ಅಂತು ಪೊಱಮಟ್ಟಾವಿಜಯಕಟಕಂ ಪೆಱಗುಮುಂದಪಿದುಮುಗಲಿತುಮಾಗಿ ಬರ್ಪಲ್ಲಿ—

ಕಂ॥ ಪರಮೇಶ್ವರದಿಗ್ವಿಜಯ
ಕ್ಕೆ ರಾಗದಿಂದುರಗರಾಜನದ್ರಿದರೀಗ
ಹ್ವರಮಂ ಪೊಱಮಡುವವೊಲಾ
ಗಿರಿಯಿಂ ಪೊಱಮಡುವ ಸೈನ್ಯಮೊಪ್ಪಿದುದಿನಿಸುಂ ॥ ೫೩ ॥

ವ॥ ಅಂತು ಚಕ್ರವರ್ತಿ ಬಂದುತ್ತರಭರತಮಧ್ಯಮಖಂಡಕ್ಕಭಿಮುಖನಾಗಿ ಬೀಡಂ ಬಿಡೆ—

ಕಂ॥ ತಾರಾದ್ರೀಂದ್ರದ ತೋ[1]ರ[1]ದ
ತಾ[2](ಱ)[2]ಲೊಳೆಳದಳಿಸಿ ಬಳೆವ ತಾರಲತಾವಿ
ಸ್ತಾರಮನನುಕರಿಸಿದುದಂ
ತಾರಾಜಿತರಾಜಕೀರ್ತಿ ವಲ್ಲೀವದನಂ ॥ ೫೪ ॥

ವ॥ ಎಂಬಿನಮೊಂದೆರಡುಪ್ಪಯಣಂ ಗೆಯ್ವುರ್ದುದುಂ—

ವ॥ ಹಾಗೆ ಗುಹಾದ್ವಾರದಿಂದ ಹೊರಬಂದೆವೆಂಬ ಸಂತೋಷಾತಿಶಯದಿಂದ ಹಲವಾರು ಬಗೆಯ ಹರೆಗಳು ಗಂಭೀರವಾಗಿ ಮೊಳಗಿದುವು ; ಅವು ಪ್ರತಿಧ್ವನಿಸಿ ವಯೋವೃದ್ಧರು ಉಪದೇಶಮಾಡುವರೊ ಏನೊ ಎಂಬಂತಾಯಿತು.

೫೨. "ಕರ್ತಾರನಾದ ಈ ಮಹಾತ್ಮನಿಗೆ ಅವಿಧೇಯರಾಗುವುದು ಸಲ್ಲದು." ಎಂದು ಭರತೇಶ್ವರನಿಗೆ ಪೂರ್ವ ಕಾಲದಲ್ಲಿ ಎದುರಾಗಿದ್ದ ಚಿಲಾತ ಮತ್ತು ಆವರ್ತ ಎಂಬವರಿಗೆ ಪುನಃ ಆ ಬೆಟ್ಟವು ಸಾರಿ ಹೇಳಿ ಬುದ್ಧಿಗಲಿಸುವಂತೆ ಆಯಿತು.

ವ॥ ಹಾಗೆ ಹೊರಬಿದ್ದ ಆ ವಿಜಯಸೈನ್ಯವು ಹಿಂದೆ ತೆಳುವಾದ ಸಾಲಾಗಿದ್ದುದು ಈಗ ವಿಸ್ತಾರವಾಗಿ ಹರಡಿಕೊಂಡು ನಡೆಯಿತು.

೫೩. ಪರಮೇಶ್ವರನ ದಿಗ್ವಿಜಯಕ್ಕೆಂದು ಸರ್ಪರಾಜನು ಪರ್ವತದ ಕೊಳ್ಳದಿಂದ ಹೊರಬರುತ್ತಿರುವನೊ ಏನೊ ಎಂಬಂತೆ ಆ ಬೆಟ್ಟದಿಂದ ಹೊರಬರುವ ಸೈನ್ಯವು ಕಂಗೊಳಿಸಿತು.

ವ॥ ಹಾಗೆ ಬಂದು ಚಕ್ರವರ್ತಿಯು ಉತ್ತರ ಭರತದ ಮಧ್ಯಮ ಖಂಡಕ್ಕೆ ಅಭಿಮುಖನಾಗಿ ಬೀಡುಬಿಟ್ಟನು.

೫೪. ಬೆಳ್ಳಿಬೆಟ್ಟದ ವಿಸ್ತಾರವಾದ ಪೊದೆಗಳ ಪ್ರದೇಶದಲ್ಲಿ ನಳನಳಿಸಿ ವಿಸ್ತಾರವಾಗಿ ಬೆಳೆಯುವ ಕರ್ಪೂರದ ಬಳ್ಳಿಯೊ ಏನೊ ಎಂಬಂತೆ ಆ ರಾಜನ ಕೀರ್ತಿಯ ಬಳ್ಳಿ ಶೋಭಿಸಿತು.

ವ॥ ಒಂದೆರಡು ಉಪ್ಪಯಣ ಮಾಡಲಾಗಿ—

1. ಱ (ಮ) 2. ರ (ಮ)

ಶಿಖರಿಣೀವೃತ್ತಂ॥ ಚಿಳಾ[1]ತಾ[1]ವರ್ತರ್ ಮತ್ತೆನಗಭಿಮುಖರ್ ಮೇಘಮುಖರೊಳ್
ವಿಳಿತ್ಕಾಯರ್ಾಳೋ[2]ಚರ್[2] ತಿಳಿದು ತಿಳಿನೀರಂತಪರಜರ್
ಬಳಾವಷ್ಟಂಭಂಗೆಟ್ಟಡಿಗೆಱಗಿ ಕಂಡರ್ ಪಿರಿಯನೊಳ್
ಬಳೋನ್ಮತ್ತಂ ದಲ್ ದುರ್ಬಳಮಿಭಹಯಾನೂನರಬಳಂ ॥ ೫೫ ॥

ವ॥ ಅಂತು ಕೈತವಮಿಲ್ಲದೆ ವಿಧೇಯತ್ವದ ತುದಿಯನೆಯ್ದಿ ಮಣಿಯೆಂಬ ಪಸುರ್ವಣಿಯಂ ತುರಂಗವೆಂಬ ತುರಂಗಮುಮಂ ಕರಿಯೆಂಬ ಸೂಕರಿಯುಮಂ ಪೊನ್ನೆಂಬ ಚಿನ್ನಮಂ ಲಂಜಿಕೆಯೆಂಬ ಶಾಳಭಂಜಿಕೆಯುಮಂ ಉೞಿಯದಂತಿರೆ ತಂದುರ್ವರಾಸ್ಯತಿಲಕನಪ್ಪ ದೇವದೇವಂಗವಟಯಿಸ್ಸಿ ತತ್ಪರಮಪ್ರಸಾದ ನಿಷ್ಕ್ರಯಕ್ಕೆ ತಲೆಯೆಂದು ಪೂಣ್ದಾಳಾದರ್—

ಕಂ॥ ವರಚರ್ಮರತ್ನಮುಂ ಛ
ತ್ರರತ್ನಮುಂ ತಮ್ಮತಮ್ಮ ಬೆಸಗಳನುೞಿದಿ
ರ್ಪರವಿಂದೆ ಜೀವರತ್ನಂ
ಸ್ಥಿರತ್ವಮನ್ವರ್ಥಮಾಗಿ ತಳರವೆ ನೆಲೆಯಿಂ ॥ ೫೬ ॥

ವ॥ ಇತ್ತ ಸೇನಾನಿಯುತ್ತರಭರತದ ಪಶ್ಚಿಮಖಂಡಮಂ ಬಾಯ್ಕೇಳಿಸಿ ಬಂದು ವಿಜಯ ಕಟಕಂ ಬಿಡಿದು ತುಹಿನಾಚಳಸಿಂಧೂಪಾಂತದೊಳ್ ಬಿಟ್ಟಿರೆ—

ಕಂ॥ ಭದ್ರಾಸನಮಂ ಭುಜವಿಜ
ಯದ್ರವಿಣಂಗವನಿಪತಿಗೆ ಕೊಟ್ಟೆಱಗೆ ಯಶೋ
ಭದ್ರೈಕ ತಿರಸ್ಕೃತ ತುಹಿ
ನಾದ್ರಿ ಜಗದ್ಬಂಧು ಸಿಂಧುದೇವಿಯನರಸಂ ॥ ೫೭ ॥

---

೫೫. ಚಿಳಾತಾವರ್ತರು ಮೇಘಮುಖರೆಂಬ ರಾಜರೊಡನೆ ಮಂತ್ರಾಲೋಚನೆ ನಡೆಸಿ ನೀರು ತಿಳಿವಂತೆ ಚೆನ್ನಾಗಿ ತಮ್ಮ ಸ್ಥಿತಿಯನ್ನು ತಿಳಿದುಕೊಂಡರು. ತಮ್ಮ ಬಲದ ದರ್ಪ ಉಡುಗಿ ನಮ್ರರಾಗಿ ಬಂದು ಶಾಂತೀಶ್ವರನನ್ನು ಕಂಡರು. ಈ ಹಿರಿಯನೆದುರಿಗೆ ಎಂತಹ ಬಲೋನ್ಮತ್ತನೂ ದುರ್ಬಲನೇ; ಆನೆ-ಕುದುರೆಗಳ ಬಲವುಳ್ಳವರೂ ಬಲಹೀನರೇ.

ವ॥ ಹಾಗಾಗಿ ಅತ್ಯಂತ ವಿಧೇಯರಾಗಿ ಮಣಿಯೆಂಬ ಪಚ್ಚವನ್ನೂ, ತುರಂಗವೆಂಬ ಕುದುರೆಯನ್ನೂ, ಕರಿಯೆಂಬ ಮದಗಜವನ್ನೂ, ಹೊನ್ನೆಂಬ ಚಿನ್ನವನ್ನೂ, ಲಂಜಿಕೆಯೆಂಬ ವಾರಾಂಗನೆಯನ್ನೂ, ತಮ್ಮಲ್ಲೇನೂ ಉಳಿಯದಂತೆ ಸಕಲ ಸಂಪತ್ತನ್ನೂ ತಂದು ಭೂಮಂಡಲ ಭೂಷಣನಾದ ದೇವೇಶ್ವರನಿಗೆ ಒಪ್ಪಿಸಿ ಆತನ ಪರಮಾನುಗ್ರಹಕ್ಕೆ ತಮ್ಮ ತಲೆಯೆ ಬೆಲೆಯೆಂದು ಪ್ರತಿಜ್ಞಾಪೂರ್ವಕವಾಗಿ ಆಳಾದರು.

೫೬. ಶ್ರೇಷ್ಠವಾದ ಚರ್ಮರತ್ನವೂ ಛತ್ರರತ್ನವೂ ಕೆಲಸ ಮಾಡಬೇಕಾದ ಪ್ರಸಂಗವೇ ಇಲ್ಲದುದರಿಂದ ಸ್ವಸ್ಥವಾಗಿದ್ದುವು. ಜೀವರತ್ನಗಳು ಸ್ಥಿರವೆಂಬ ಮಾತನ್ನು ಅನ್ವರ್ಥಗೊಳಿಸುವಂತೆ ಅವು ತಂತಮ್ಮ ನೆಲೆಗಳಿಂದ ಹೊರಬರಲೇ ಇಲ್ಲ.

ವ॥ ಇತ್ತ ಸೇನಾಪತಿಯು ಉತ್ತರಭರತದ ಪಶ್ಚಿಮ ಖಂಡವನ್ನು ಗೆದ್ದುಕೊಂಡು ಬಂದನು. ವಿಜಯಸೈನ್ಯವು ಹಿಮಗಿರಿಯ ಸಿಂಧೂತೀರದಲ್ಲಿ ಬೀಡುಬಿಟ್ಟಿತು.

೫೭. ಯಶಸ್ಸಿನಲ್ಲಿ ಮೇರುಪರ್ವತಕ್ಕೆ ಮಾತ್ರ ಹಿಂದಾದ ಹಿಮವಂತಗಿರಿಯ ಅಧೀಶನು ಭುಜಪರಾಕ್ರಮಿಯಾದ ಶಾಂತೀಶನಿಗೆ ಭದ್ರಪೀಠವನ್ನಿತ್ತು ನಮಸ್ಕರಿಸಿದನು. ಲೋಕಬಂಧು (ಶಾಂತಿನಾಥನು) ಆತನನ್ನೂ ಸಿಂಧುದೇವಿಯನ್ನೂ

---

1. × (ಮ) 2. ಚಂ (ಅ)

ವ॥ ಪೋಗವೇೞ್ದು ಪ್ರಸನ್ನಕತಿಪಯಪ್ರಯಾಣಂಗಳಿಂ ಪ್ರಾಲೇಯಾಚಳಮಧ್ಯಮಕೂಟಮನೆಯ್ದೆವರ್ಪುದುಂ—

ಕಂ॥ ಹಿಮವನ್ನಿವಾಸಿ ಹಿಮವ
ತ್ಕುಮಾರನಾಚಕ್ರವರ್ತಿಯಡಿಗೆಱಗೆ ನೃಪೋ
ತ್ತಮನ ಗೃಹಪತಿಗೆ ರತ್ನ
ಪ್ರಮಾಣಗಣಿಕೆಯರ ಬೆಸನೆ ಬೆಸನಾಯ್ತಾಗಳ್ ॥ ೫೮ ॥

ವ॥ ಎನೆ ಸಾರವಸ್ತುಗಳಿನೋಲಗಿಸಿ ಚಕ್ರವರ್ತಿಯ ಪರಮಾನುಗ್ರಹಾಮೃತಮನಾಸ್ವಾದಿಸಿ ಪೋಗೆ ಷಟ್ಖಂಡಭೂವಲ್ಲಭನುಂ ಹಿಮವತ್ತಟಂಬಿಡಿದು ಮೂಡಮೊಗದೆ ಪಯಣಂಬರೆ ಪಾರ್ವತೇಯೋಪಾದ ಪ್ರಧಾನಪುರಸ್ಸರನಾಗಿ ರಾಜನ್ಯಕದ ಕಾಣ್ಕೆಯಿಂದಂ—

ಕಂ॥ ಹಿಮವತ್ಸಾರತೆಯಂ ಬಂ
ಹಿಮಮಂ ನೃಪನಱಿದನವನಿಪತಿಸಾರತೆಯಂ
ಹಿಮವನ್ನಗಮಱಿದುದದೇ
ನಮೇಯಸಾರರೊ ಹಿಮಾದ್ರಿಯುಂ ಭೂಪತಿಯುಂ ॥ ೫೯ ॥

ವ॥ ಎನೆ ಪಯಣಂ ಬಂದು—

ಮ॥ ಪ್ರಕಟಶ್ರೀ ಹಿಮವಾರವಾಣವಿಶದಂ ಗಂಗಾಂಶುಕನ್ಯಸ್ತಮ
ಸ್ತಕನಗ್ರಸ್ಥನಮೇರುಶೇಖರನುಪಾತ್ತೋದಾತ್ತವಿಸ್ತಾರಕೀ
ಚಕವೇತ್ರಂ ಭರತಾವನೀಪತಿಮಹೀಸ್ತ್ರೀರಕ್ಷಕಂ ವೃದ್ಧಕಂ
ಚುಕಿಮರ್ಯಾದೆಯೊಳಿರ್ದನೆಂದು ಮಹಿಪಂ ಹೈಮಾದ್ರಿಯಂ ನೋಡಿದಂ ॥ ೬೦ ॥

ವ॥ (ಅನುಗ್ರಹಿಸಿ) ಕಳಿಸಿಕೊಟ್ಟು ಸಂತೋಷದಿಂದ ಕೆಲವು ಪಯಣ ಮಾಡಿ ಹಿಮಗಿರಿಯ ಮಧ್ಯಮಕೂಟಕ್ಕೆ ಬಂದನು.

೫೮. ಆ ಪ್ರದೇಶದ ಅರಸನಾದ ಹಿಮವತ್ಕುಮಾರನು ಬಂದು ಚಕ್ರವರ್ತಿಯ ಪಾದಗಳಿಗೆ ಎರಗಿದನು. ಚಕ್ರವರ್ತಿಯ ಗೃಹಪತಿಗೆ ರತ್ನಸದೃಶರಾದ ಗಣಿಕೆಯರ ಕಾರ್ಯವೆ ಕಾರ್ಯವಾಯಿತು. (ಬಂದಬಂದವರಿಂದ ಧನವನ್ನು ಪಡೆದು ಇಟ್ಟುಕೊಳ್ಳುವುದೊಂದೆ ಕೆಲಸವಾಯಿತು.)

ವ॥ ಹೀಗೆ ಬೆಲೆಯುಳ್ಳ ವಸ್ತುಗಳನ್ನು ಸಮರ್ಪಿಸಿ ಚಕ್ರವರ್ತಿಯ ಅನುಗ್ರಹವನ್ನು ಗಳಿಸಿ ಆ ಕುಮಾರನು ಹೋದನು. ಷಟ್ಖಂಡ ಭೂಮಿಗೆ ಒಡೆಯನಾದ ಶಾಂತಿನಾಥನು ಹಿಮಾಲಯದ ತಟವನ್ನು ಅನುಸರಿಸಿ ಪೂರ್ವಾಭಿಮುಖನಾಗಿ ಪ್ರಯಾಣಮಾಡುತ್ತ ಬರಲಾಗಿ, ಪರ್ವತಪ್ರದೇಶದ ಪ್ರಧಾನರಾಜನೇ ಮೊದಲಾಗಿ ಅಲ್ಲಿರುವ ದೊರೆಗಳು ಕೊಟ್ಟ ಕಾಣಿಕೆಗಳಿಂದ

೫೯. ಹಿಮಗಿರಿಯ ಅದ್ಭುತ ಸಾರಸಮೃದ್ಧಿಯನ್ನು ಚಕ್ರವರ್ತಿ ಅರಿತನು; ಚಕ್ರಿಯ ಶಕ್ತಿ ಸಮೃದ್ಧಿಯನ್ನು ಹಿಮವಂತಗಿರಿ ಅರಿಯಿತು. ಹಿಮಾದ್ರಿಯೂ ಜಿನೇಂದ್ರಭೂಪತಿಯೂ ಅದೆಂತಹ ಅತರ್ಕ್ಯ ಸತ್ವಶಾಲಿಗಳು!

ವ॥ ಹಾಗೆಯೆ ಪಯಣಮಾಡುತ್ತ ಬಂದು—

೬೦. "ಈ ಹಿಮವಂತನು ಸುಂದರವಾದ ಹಿಮವೆಂಬ ಕಂಚುಕವನ್ನು ತೊಟ್ಟುಕೊಂಡು ಗಂಗೆಯೆಂಬ ಬಿಳಿಬಟ್ಟೆಯನ್ನು ತಲೆಯಮೇಲೆ ಹೊದೆದುಕೊಂಡು ನಮೇರು ಮಾಲೆಯನ್ನು ಶಿಖರದಲ್ಲಿ ಧರಿಸಿ ವಿಸ್ತಾರವಾದ ಬಿದಿರಿನ ಬೆಳೆಯ ರೂಪದಲ್ಲಿ ವೇತ್ರಧಾರಿಯಾಗಿ ಭರತಭೂಪತಿಯ ಅಂತಃಪುರ ರಕ್ಷಕನಾದ ವೃದ್ಧಕಂಚುಕಿಯಂತೆ ಇರುವನು" ಎಂದು ರಾಜನು ಅದನ್ನು ನೋಡಿದನು.

ವ॥ ಅಂತುರ್ವರಾಸ್ಯತಿಲಕಂ ನೋಡಿ ಹಿಮವತ್ಕುಕ್ಷೀಲದಿಂದೆ ಸೈತು ತೆಂಕಣವೊಗದೆ ಪಯಣಂಬಂದು ಮೊದಲೊಳ್ ನೂಱು ಯೋಜನದಗಲಮುಮನಿತುತ್ಸೇಧಮುಂ ಮೇಗಯ್ವತ್ತು ಯೋಜನ ವಿಸ್ತಾರಮು ಮಯ್ವತ್ತುಯೋಜನಮಾೞ್ಯುಮನವಗಯ್ಸಿ—

ಕಂ॥ ಇತ್ತುತ್ತರಭರತಮನಾ
ಳುತ್ತಿರ್ದರನೇಕಚಕ್ರವರ್ತಿಗಳ ಪೆಸರ್
ಸುತ್ತಿ ಬರೆದಿರೆ ನಿಬಂಧದ
[1][ಪೊ][1]ತ್ತಗೆಯೆಂಬಂತಿರಿರ್ದ ವೃಷಭಾಚಲಮಂ ॥ ೬೧ ॥

ವ॥ ಕಂಡು ತದುಪಕಂತದೊಳ್ ಬೀಡಂ ಬಿಡಿಸಿ ಚಕ್ರಾಯುಧಪ್ರಭೃತಿಗಳುಪರೋಧದಿಂ ತದ್ಗಿರಿಗೆ ನಾಮಾಕ್ಷರನಿಕ್ಷೇಪನಿಮಿತ್ತಂ ಪೋಗಿ ನೋಟ್ಟನ್ನೆಗಂ—

ಉ॥ ಆನಗದೊಳ್ ವ್ಯತೀತಬಹುಚಕ್ರಿಗುಣಾನ್ವಯತತ್ಪ್ರತಾಪಸಂ
ತಾನಲಿಪಿಪ್ರಪಂಚವಚನಾಳಿಯನೋಳಿಯೆ ಕೇಳ್ದು ಕೇಳ್ದು ವಿ
ಶ್ವಾನತಪಾದನಪ್ಪುದಱಿನಾತ್ಮಗುಣಸ್ತುತಿ ಸಿಗ್ಗನೀಯೆ ಲ
ಜ್ಜಾನತಮಾದುದುನ್ನತಶಿರೋಮಣಿ ಪಂಚಮಚಕ್ರವರ್ತಿಯಾ ॥ ೬೨ ॥

ವ॥ ಅಂತು ವಾಳಾಗ್ರಕ್ಕಮವಕಾಶಮಿಲ್ಲದಂತು ಕಿಕ್ಕಿಱಿಗಿಱಿದಿರ್ದ ಪುರಾತನಚಕ್ರವರ್ತಿಗಳ ನಾಮಾಂಕಮಾಳಿಕೆಯಂ ಕಂಡಱಿದು ಮಂತ್ರಿವರ್ಗಮನಱಿಪಲೆಂದು ಬಂದನಪ್ಪುದಱಿಂದಂ—

ಕಂ॥ ಮುಂ ಬರೆದಭಿಧಾನಮನಟಿ
ದಿಂ ಬರೆವಹಮಿಕೆಯ ಪೆಸರೊಳೇವಂದಪುದೇ
ನುಂ ಬೇಡ ಬನ್ನಿಮೆಂದಧಿ
ಪಂ ಬೀಡಂ ಬಂದು ಪೊಕ್ಕು ಸುಖದಿಂದಿರ್ದಂ ॥ ೬೩ ॥

ವ॥ ಹಾಗೆ ನೋಡಿ, ಆ ಬೆಟ್ಟದಿಂದ ನೇರ ದಕ್ಷಿಣಕ್ಕೆ ಹೊರಟುಬಂದನು. ನೂರು ಯೋಜನ ಅಗಲವೂ, ಅಷ್ಟೇ ಎತ್ತರವೂ, ಮೇಲೆ ಐವತ್ತು ಯೋಜನ ವಿಸ್ತಾರವೂ, ಐವತ್ತು ಯೋಜನ ಆಳವೂ ಆಗಿ—

೬೧. ಉತ್ತರ ಭರತವನ್ನು ಆಳುತ್ತಿದ್ದ ಅನೇಕ ಚಕ್ರವರ್ತಿಗಳ ಹೆಸರನ್ನು ಬರೆಬರೆದಿಟ್ಟ ಅನೇಕ ಶಾಸನಗಳನ್ನೊಡಗೊಂಡ ವೃಷಭಾಚಲವು ಒಂದು ನಿಬಂಧದ ಹೊತ್ತಗೆಯೆಂಬಂತೆ ತೋರಿತು.

ವ॥ ಅದನ್ನು ಕಂಡು ಅದರ ಪಕ್ಕದಲ್ಲಿ ಬೀಡುಬಿಡಿಸಿ, ಚಕ್ರಾಯುಧನೆ ಮೊದಲಾದವರ ಒತ್ತಾಯದ ಮೂಲಕ ಆ ಬೆಟ್ಟದಲ್ಲಿ ತನ್ನ ಹೆಸರನ್ನೂ ಕೊರೆಯಿಸಬೇಕೆಂದು ಹೋದನು. ಆದರೆ ಅಲ್ಲಿ ಹೋಗಿ ನೋಡಲಾಗಿ—

೬೨. ಈ ಹಿಂದೆ ಆಗಿಹೋದ ಚಕ್ರವರ್ತಿಗಳ ಗುಣವಂಶ ಪ್ರತಾಪಾದಿಗಳನ್ನು ಹೊಗಳಿಸುವ ಶಾಸನದ ಬರಹಗಳನ್ನು ಸಾಲುಸಾಲಾಗಿ ಓದಿಸಿ ಕೇಳಿಕೇಳಿದಂತೆಲ್ಲ ತಾನು ವಿಶ್ವವನ್ನೆ ತನ್ನ ಪಾದಗಳಿಗೆ ಎರಗಿಸಿಕೊಂಡವನಾದುದರಿಂದ ಹೀಗೆ ಆತ್ಮಸ್ತುತಿ ಮಾಡಿಕೊಳ್ಳುವುದನ್ನು ಕಂಡು ಆತನಿಗೆ ಜುಗುಪ್ಸೆಯಾಯಿತು; ಪಂಚಮ ಚಕ್ರವರ್ತಿ ಲಜ್ಜೆಯಿಂದ ತಲೆತಗ್ಗಿಸಿದನು.

ವ॥ ಹಾಗೆ ಬೆರಳಿಡುವುದಕ್ಕೂ ಜಾಗವಿಲ್ಲದಂತೆ ಕಿಕ್ಕಿರಿದು ತುಂಬಿದ ಪುರಾತನ ಚಕ್ರವರ್ತಿಗಳ ಪ್ರಶಸ್ತಿಮಾಲೆಯನ್ನು ಕಂಡು ತನ್ನ ಮಂತ್ರಿಮಂಡಳಿಗೆ ತಿಳಿಸಲೆಂದು ಬಂದು—

೬೩. "ಈಗಾಗಲೆ ಬರೆದಿಟ್ಟಿರುವವರ ಹೆಸರನ್ನು ಅಳಿಸಿ ನನ್ನದನ್ನು ಬರೆಯುವ ಅಹಂಕಾರದಿಂದ ಏನು ಬರುವುದು? ಏನೂ ಬೇಡ, ಬನ್ನಿ" ಎಂದು ಆ ರಾಜನು ಬೀಡಿಗೆ ಬಂದು ಸ್ವಸ್ಥನಾಗಿದ್ದನು.

---

1. ಹೊ (ಮ)

ವ॥ ಮಂತ್ರಿಮುಖ್ಯರುಂ ಪುರಾತನಚಕ್ರವರ್ತಿಪ್ರವರ್ತಿತಮಾರ್ಗಮಿದೆಂದು ಕಾಕಿಣೀರತ್ನದಿಂದಲ್ಲಿ ಮುನ್ನಿರ್ದುದೊಂದು ಪ್ರಶಸ್ತಿಯಂ ಪರಾಮೃಷ್ಟಂ ಮಾಡಿ—

ಉ॥ ಸ್ವಸ್ತಿ ಸಮಸ್ತಮಂಡಳಿಕಮಸ್ತಕಪುಷ್ಪರಜಃಪಿಶಂಗಿತಾಂ
ಘ್ರಿಸ್ತಬಕದ್ವಯಂ ವಿನತಪಾಪಹರಂ ಶಶಿವಂಶಸದ್ವಿಹಾ
ಯಸ್ತಪನಂ ನಿಧೀಶ್ವರನಖಂಡಿತಮಂಡಳನಾಥನದ್ರಿವಿ
ನ್ಯಸ್ತನಿಜಪ್ರಶಸ್ತಿಕೃತಶಾಂತಿ ಮಹೀಪತಿ ಸಿದ್ಧದಿಗ್ಜಯಂ ॥ ೬೪ ॥

ಮ॥ ಕುರುವಂಶಂ ಪಿತೃ ವಿಶ್ವಸೇನವಿಭು ತಾಯೈರಾಮಹಾದೇವಿ ಸಂ
ಸರಣಾಂಭೋಧಿವಿಶೋಧಿ ತೀರ್ಥಕರನುಂ ಷಟ್ಖಂಡಧಾತ್ರೀಶನುಂ
ಸ್ಮರನುಂ ತಾನೆನೆ ಚಕ್ರವರ್ತಿಗಳೊಳೀಶಾಂತೀಶನೊಳ್ ಮುನ್ನಮಾ
ದರನಿನ್ನಪ್ಪರನೀಗಳುಳ್ಳ ನೃಪರಂ ಚಿಃ ಪೋಲಿಸಲ್ ತಕ್ಕುದೇ ॥ ೬೫ ॥

ವ॥ ಮತ್ತಮಾವಿನೇಯನಿಕಾಯಾಂಬುಜಭಾನುವಪ್ಪ ಹಿಮಾಂಶುವಂಶಲಲಾಮಂ—

ಚಂ॥ ಜಯವಧುಗಾಣ್ಮನಾಗಿಯುಮಸೌಮ್ಯನೆ ವೃದ್ಧಪರೀತಮೂರ್ತಿಯಾ
ಗಿಯುಮನುಶಾಸ್ಯನೇ ಮಹಿತನಾಗಿಯುಮುದ್ರುತನೇ ನಯಜ್ಞನಾ
ಗಿಯುಮಕೃತಜ್ಞನೇ [1]ಸ್ವ[1]ಯ[2]ತ,[2]ನಾಗಿಯುಮುಗ್ರನೆ ಚಕ್ರವರ್ತಿಯಾ
ಗಿಯುಮತಿವರ್ತಿಯೇ ಮದನನಾಗಿಯುಮಿಂದ್ರಿಯವೃತ್ತವರ್ತಿಯೇ ॥ ೬೬ ॥

ವ॥ ಆದರೆ ಮಂತ್ರಿಗಳೆ ಮೊದಲಾದ ಮುಖಂಡರು ಪುರಾತನಕಾಲದಿಂದಲೂ ಚಕ್ರವರ್ತಿಗಳು ಪಾಲಿಸಿಕೊಂಡು ಬಂದ ಪರಂಪರೆಯನ್ನು ಬಿಡಲಾಗದೆಂದು ಕಾಕಿಣೀರತ್ನದಿಂದ ಅಲ್ಲಿದ್ದ ಒಂದು ಹಳೆಯ ಪ್ರಶಸ್ತಿಯನ್ನು ಒರಸಿಹಾಕಿ ಹೀಗೆ ಬರೆಯಿಸಿದರು :

೬೪. "ಸ್ವಸ್ತಿ ಸಮಸ್ತ ಮಂಡಲಿಕಾಧಿಪತಿಗಳ ತಲೆಗಳೆಂಬ ಪುಷ್ಪಗಳಿಂದ ಪಾದಗಳನ್ನು ಪೂಜಿಸಿಕೊಂಡವನು; ಶರಣಾಗತರ ಪಾಪಗಳನ್ನು ನಿವಾರಿಸುವವನು; ಸೋಮವಂಶವೆಂಬ ಆಕಾಶಕ್ಕೆ ಸೂರ್ಯನಾದವನು; ನವನಿಧಿಗಳಿಗೆ ಅಧಿಪತಿಯು; ಅಖಿಲ ಮಂಡಲಾಧಿಪತಿಯು; ಪರ್ವತಾಗ್ರದಲ್ಲಿ ತನ್ನ ಪ್ರಶಸ್ತಿಯನ್ನು ನಿಲ್ಲಿಸಿದವನು; ದಿಗ್ವಿಜಯವನ್ನು ಸಾಧಿಸಿದವನೂ ಆದ ಮಹೀಪತಿ ಶಾಂತಿನಾಥನು

೬೫. ಕುರುವಂಶದಲ್ಲಿ ಜನಿಸಿದವನು; ತಂದೆ ವಿಶ್ವಸೇನರಾಜ; ತಾಯಿ ಐರಾಮಹಾದೇವಿ; ಸಂಸಾರಸಾಗರವನ್ನು ಪರಿಶುದ್ಧಗೊಳಿಸುವ ತೀರ್ಥಂಕರನು; ಷಟ್ಖಂಡ ಭೂಮೀಶ್ವರನು; ತಾನೇ ಕಾಮನಾದವನು ಎಂದಮೇಲೆ ಈ ಶಾಂತೀಶ್ವರನಿಗೆ ಈಗಾಗಲೆ ಆಗಿಹೋದ, ಅಥವಾ ಇನ್ನುಮುಂದೆ ಬರುವ, ಅಥವಾ ಈಗ ಇರುವ ಚಕ್ರವರ್ತಿಗಳನ್ನು ಛೀ ! ಎಂದಾದರೂ ಹೋಲಿಸಬಹುದೆ?

ವ॥ ಮತ್ತು ಭಕ್ತಜನರೆಂಬ ಕಮಲಗಳಿಗೆ ಸೂರ್ಯಸದೃಶನಾದ ಆ ಚಂದ್ರವಂಶಭೂಷಣನು—

೬೬. ಸಂಪೂರ್ಣ ಜಯವನ್ನು ಪಡೆದವನಾದರೂ ಸೌಮ್ಯನಾದವನಲ್ಲ (ಅವನ ಜಯಾಪೇಕ್ಷೆಗೆ ಈ ಭೂಮಿಯ ಜಯ ಸಾಲದು); ವೃದ್ಧರಾದ (ಮಂತ್ರಿ ಮೊದಲಾದ) ಉಪದೇಶಕರನ್ನು ತನ್ನ ಸುತ್ತಲೂ ಉಳ್ಳವನಾದರೂ ಅನುಶಾಸ್ಯನೇ (೧. ಸಲಹೆ ಪಡೆಯತಕ್ಕವನು, ೨. ಹೊಗಳಿಕೆಗೆ ತಕ್ಕವನು); ಮಹಿಮಾವಂತನಾಗಿದ್ದರೂ 'ಉದ್ರುತ'ನೇ (ಓಡಿಹೋಗುವವನು ಎಂಬರ್ಥದಲ್ಲಿ ಅಲ್ಲ; ಮಹಾವೇಗವುಳ್ಳವನು ಎಂಬರ್ಥದಲ್ಲಿ); ನೀತಿಯನ್ನು ಬಲ್ಲವನಾಗಿದ್ದರೂ 'ಅಕೃತಜ್ಞ'ನು (ಉಪಕಾರಗೇಡಿಯೆಂಬರ್ಥದಲ್ಲಿ ಅಲ್ಲ; 'ಅಕೃತ' ಎಂದರೆ ಮೋಕ್ಷವನ್ನು ಅರಿತವನು); ಆತ್ಮನಿಗ್ರಹಿಯಾಗಿದ್ದರೂ 'ಉಗ್ರ'ನೇ (ಕಠೋರನೆಂದಲ್ಲ; ಶಕ್ತಿವಂತನೇ); ಚಕ್ರವರ್ತಿಯಾಗಿಯೂ 'ಅತಿವರ್ತಿ'ಯೇ (ಆತನ ಪ್ರಗತಿ ಸೀಮಾತೀತವಾದುದು); ಸ್ವತಃ ಕಾಮನಾದರೂ ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡಿರುವವನು.

---

1. ಶ್ವ (ಅ) 2. ಥ (ಮ)

ವ॥ ಎನೆ ನೆಗಟ್ದ—

ಚಂ॥ ತ್ರಿಜಗದಭಿಷ್ಟುತಂಗೆ ಜಿನಚಂದ್ರಮಹಾಮಹಿಪಾಳಕಂಗೆ ದಿ
ಗ್ವಿಜಯಮಿದಾವಗುರ್ವು ಗಡಮಾದೊಡಮಾದಿಯ ಚಕ್ರವರ್ತಿಗಳ್
ಭಜಿಯಿಸಿದೀ ಪದಂ ಮಸುಳ್ಗುಮೆಂಬುದಱಿಂದದನೆತ್ತಿಕೊಂಡನಂ
ಗಜಗಜವೈರಿ ಗೆಲ್ದುದದು ಚೋದ್ಯಮೆ ಭೂಮಿಪಸಾಮಜಂಗಳಂ ॥ ೬೭ ॥

ವ॥ ಎಂದು ಬರೆಯಿಸಿ ಮಂತ್ರಿಮುಖ್ಯರುಂ ಚಕ್ರಾಯುಧಂಬೆರಸು ವಿಜಯಕಟಕಮಂಪೊಕ್ಕು ಮಱುದೆವಸಂ ಪಯಣಂಬೋಗಿ ವಿಜಯಾರ್ಧಪರ್ವತದ ಕಾಂಡಕಪ್ರಪಾತಗುಹೆಗಭಿಮುಖನಾಗಿ ಬೀಡಂಬಿಟ್ಟು ಪೂರ್ವೋಕ್ತಸ್ಥಿತಿಯೊಳ್ ವಜ್ರಕವಾಟೋದ್ಘಾಟನಂಗೆಯ್ದುದಱ ಬೆಂಕೆಯಾಱುವನ್ನೆಗಂ ಮೂಡಣಮ್ಲೇಚ್ಛಖಂಡಮುಂ ದಂಡನಾಯಕಂ ಬಾಯ್ಕೊಳಿಸಿ ತಂದಾಮ್ಲೇಚ್ಛರಾಜರಂ ಕಾಣಿಸಿಯುಮಾಳ್ತನಮಂ ಪೂಣಿಸಿಯುಂ ಚಕ್ರವರ್ತಿಗೆ ಸರ್ವಸ್ವಮಂ ಕುಡಿಸಿಯುಮವರಂ ದಾನಸನ್ಮಾನದೊಳ್ ಸಂತಸಂ ಬಡಿಸಿಯುಮಿರ್ಪನ್ನೆಗಂ—

ಕಂ॥ ಉಭಯಶ್ರೇಢಿಯ ಖೇಚರ
ವಿಭುಗಳ್ ನಮಿವಿನಮಿವಂಶಸಂಭವರರಸಂ
ಗಿಭಹೇಮತುರಗಗಣಿಕಾ
ಪ್ರಭೂತತರಮಪ್ಪ ಕಪ್ಪಮಂ ಪಾ[1]ಲ[1]ರಿತ್ತರ್ ॥ ೬೮ ॥

ವ॥ ಮತ್ತಂ—

ವ॥ ಹೀಗೆ ಪ್ರಖ್ಯಾತನಾದ—

೬೭. ತ್ರಿಲೋಕಸ್ತುತನಾದ ಜಿನಚಂದ್ರಮಹಾರಾಜನಿಗೆ ಈ ದಿಗ್ವಿಜಯವೆಂಬುದು ಏನು ದೊಡ್ಡ ಕೆಲಸ? ಆದರೂ ಆದಿಕಾಲದಿಂದಲೂ ಚಕ್ರವರ್ತಿಗಳು ಅನುಸರಿಸಿಕೊಂಡು ಬಂದ ಈ ಪದ್ಧತಿಯನ್ನು ನಿಲ್ಲಿಸಬಾರದೆಂದು ಈ ಕಾರ್ಯವನ್ನು ಅವನು ಎತ್ತಿಕೊಂಡನು. ಮನ್ಮಥನೆಂಬ ಮದಗಜವನ್ನೇ ಗೆದ್ದವನಿಗೆ ಭೂಪತಿಗಜಗಳನ್ನು ಗೆಲ್ಲುವುದೇನು ಆಶ್ಚರ್ಯದ ಸಂಗತಿಯೆ?"

ವ॥ ಹೀಗೆಂದು ಬರೆಯಿಸಿ ಮಂತ್ರಿಮುಖ್ಯರೂ ಚಕ್ರಾಯುಧಕುಮಾರನೂ ವಿಜಯಸೈನ್ಯದ ಪಾಳೆಯವನ್ನು ಹೊಕ್ಕರು. ಮರುದಿವಸ ಪಯಣಹೊರಟು ವಿಜಯಾರ್ಧಪರ್ವತದ ಕಾಂಡಕಪ್ರಪಾತವೆಂಬ ಗುಹೆಗೆ ಎದುರಾಗಿ ಬೀಡುಬಿಟ್ಟು ಈ ಹಿಂದೆ ಮಾಡಿದ ರೀತಿಯಲ್ಲಿಯೆ ಅಲ್ಲಿಯ ವಜ್ರಕವಾಟವನ್ನೂ ಒಡೆದು ತೆಗೆದು ಅದರ ಬೆಂಕಿ ಆರುವವರೆಗಿನ ಅವಧಿಯಲ್ಲಿ ಪೂರ್ವದಿಗ್ಭಾಗದ ಮ್ಲೇಚ್ಛಖಂಡವನ್ನು ಸೇನಾಧಿಪತಿಯು ವಶಪಡಿಸಿಕೊಂಡು ಆ ಮ್ಲೇಚ್ಛರಾಜರನ್ನು ಹಿಡಿತಂದು ಚಕ್ರವರ್ತಿಗೆ ಕಾಣಿಸಿದನು; ಆಳುಗಳಾಗಿರುತ್ತೇವೆಂದು ಅವರಿಂದ ಪ್ರಮಾಣಮಾಡಿಸಿ ಅವರ ಸರ್ವಸಂಪತ್ತನ್ನೂ ಚಕ್ರವರ್ತಿಗೆ ಕೊಡಿಸಿದನು; ಮತ್ತು ದಾನಸನ್ಮಾನಗಳಿಂದ ಆ ರಾಜರನ್ನು ಸಂತೋಷಪಡಿಸಿದನು. ಅಷ್ಟರಲ್ಲಿ—

೬೮. ಆ ಬೆಟ್ಟದ ಎರಡೂ ಶ್ರೇಢಿಗಳಲ್ಲಿ ರಾಜರಾಗಿದ್ದ ನಮಿ-ವಿನಮಿ ವಂಶಗಳ ಖೇಚರರು ಬಂದು ಶಾಂತೀಶನಿಗೆ ಆನೆ, ಕುದುರೆ, ಚಿನ್ನ, ಗಣಿಕೆಯರೇ ಮೊದಲಾದ ಶ್ರೇಷ್ಠ ವಸ್ತುಗಳಿಂದ ಒಡಗೂಡಿದ ಕಪ್ಪವನ್ನು ಒಪ್ಪಿಸಿದರು.

ವ॥ ಮತ್ತು—

---

1. ರ (ಅ)

ಹರಿಣೀವೃತ್ತಂ॥ ತನು ಮೃದು ಕುಚಂ ಸ್ತಬ್ಧಂ ಶೀಲಂ ಕರಂ ರುಜು ಪುಷ್ಪಕೇ
ತನನಿಭಕಚೋದ್ವೃಂಧಂ ನೇತ್ರೋತ್ಪಳಂ ಚಪಳಂ ಸ್ಥಿರಂ
ಮನಮಸದೃಶಂ ಯತ್ನಂ ಸ್ತ್ರೀರತ್ನದೊಳ್ ಮಿಗಿಲೆಂಬ ಪೆಂ
ಡಿನ ತನುಜೆಯಂ ಕೊಟ್ಟಂ ಶಾಂತೀಶ್ವರಂಗೆ ನಭಶ್ಚರಂ ॥ ೬೯ ॥

ವ॥ ಅಂತಾ ಸ್ತ್ರೀರತ್ನಮಂ ಕೊಟ್ಟು ವಿದ್ಯಾಧರರಧಿರಾಜನೊಳ್ ನಂಟರುಮಾದರ್—

ಕಂ॥ ಗಂಗಾದೇವಿಯುಮಲ್ಲಿ ಲ
ತಾಂಗಿ ಜಗತ್ಪತಿಗನರ್ಘ್ಯಭೂಷಣ ಮದಮಾ
ತಂಗವನಾಯುಜಹಯ ನಿಕ
ರಂಗಳನವಟಯಿಸಿ ವಿನಯದಿಂ ಬೀಳ್ಕೊಂಡಳ್ ॥ ೭೦ ॥

ವ॥ ಅನಂತರಮಱುದಿಂಗಳಾಱಿದ ಕಾಂಡಕಪ್ರಪಾತಗುಹಾದ್ವಾರಮಂ ಪೊಕ್ಕು ಕಾಕಿಣೀಮಣಿ ರತ್ನೋತ್ಕೀರ್ಣಚಂದ್ರಾದಿತ್ಯದ್ಯೋತದೊಳಮನೇಕಮಕುಟಬದ್ಧಕಿರೀಟಚೂಡಾಮಣಿಗಣಮಯೂಖಮಂಜರೀಪ್ರಭಾಪಟಳದೊಳಂ ಮುಂದೆ ನಡೆದ ರಥಾಂಗರತ್ನದ ಬೆಡಂಗಿನೊಳಂ ಚಕ್ರವರ್ತಿಯು ಪಡೆ ಗಂಗಾನದ್ಯುಭಯತೀರಂಗಳೊಳ್ ಪಚ್ಚು ಪರಿಕಲಿಸಿ ನಡೆದು ಕೆಲವು ದಿನಂಗಳಿಂ ದಕ್ಷಿಣಗುಹಾದ್ವಾರಮನೆಯ್ದೆ ತತ್ತ್ರದೇಶನಿವಾಸಿ ನಾಟ್ಯಮಾಲಾಮರಂ ಮಂಗಳೋಪಕರಣಂಗಳಿಂದಮಿದಿರ್ಗೊಂಡೆಱಗಿ ಪೊಡವಟ್ಟು ನಿಜಸಂಚಿತಾಂಚಿತವಸ್ತುಗಳಂ ತಂದು ಮುಂದಿಡೆ ಕೊಂಡು ರಥಾಂಗಾಯುಧಂ ದಕ್ಷಿಣಗುಹಾದ್ವಾರದಿಂ ಪೊಱಮಟ್ಟು—

ಕಂ॥ ತ್ವಂಗತ್ಕರಿಮಕರತೆ ಹಯ
ತುಂಗತರಂಗತೆ ಪತಾಕಿಕಾತಿಮಿತೆ ವಿಶು
ದ್ಧಾಂಗತೆ ನಿಜಮೆನೆ ಗಂಗೆಯ
ತಂಗೆವೊಲುರ್ವೀಶಸೇನೆ ತಳರ್ದುದು ಗುಹೆಯಿಂ ॥ ೭೧ ॥

---

೬೯. ಮೃದುವಾದ ದೇಹ; ಕರ್ಕಶವಾದ ಕುಚ; ನೀತಿಯುಕ್ತವಾದ ಚಾರಿತ್ರ; ಮನ್ಮಥನ ಧ್ವಜದಂತಿರುವ ಕೇಶಪಾಶ; ಚಂಚಲವಾದ ಕಮಲಸದೃಶ ಕಣ್ಣುಗಳು; ಸ್ಥಿರವಾದ ಚಿತ್ತ; ಅಸಮಾನವಾದ ಉದ್ಯೋಗಶೀಲತೆ—ಈ ಗುಣಗಳನ್ನೊಡಗೊಂಡ ಸ್ತ್ರೀರತ್ನಗಳಲ್ಲಿಯೆ ಮಿಗಿಲೆನಿಸುವ ತನ್ನ ಮಗಳನ್ನು ಖೇಚರರಾಜನು ಶಾಂತೀಶ್ವರನಿಗೆ ಧಾರೆಯೆರೆದನು.

ವ॥ ಹೀಗೆ ಆ ಸ್ತ್ರೀರತ್ನವನ್ನು ಕೊಟ್ಟು ಆ ವಿದ್ಯಾಧರರು ಚಕ್ರವರ್ತಿಗೆ ನಂಟರಾದರು.

೭೦. ಗಂಗಾದೇವಿಯೂ ಅಲ್ಲಿಗೆ ಬಂದು ಜಗನ್ನಾಥನಿಗೆ ಅಮೂಲ್ಯವಾದ ಆಭರಣ, ಮದಗಜ, ಉತ್ತಮ ವರ್ಗದ ಕುದುರೆ—ಈ ಮೊದಲಾದುವನ್ನು ಹೇರಳವಾಗಿ ಸಮರ್ಪಿಸಿ ಬೀಳ್ಕೊಂಡಳು.

ವ॥ ಈ ಆರು ತಿಂಗಳಲ್ಲಿ ಕಾಂಡಕಪ್ರಪಾತ ಗುಹೆಯ ಬೆಂಕಿ ಆರಿತ್ತು; ಚಕ್ರಿಯೂ ಆತನ ಸೈನ್ಯವೂ ಆ ಗುಹೆಯನ್ನು ಹೊಕ್ಕು ಕಾಕಿಣೀರತ್ನದಿಂದ ಬರೆದ ಸೂರ್ಯಚಂದ್ರ ಚಿಹ್ನೆಗಳ ಬೆಳಕಿನಲ್ಲಿಯೂ, ಅನೇಕ ಮಕುಟಬದ್ಧರ ಕಿರೀಟರತ್ನಗಳ ಪ್ರಭೆಯಲ್ಲಿಯೂ, ಮುಂದೆ ನಡೆವ ಚಕ್ರರತ್ನದ ಬೆಡಗಿನ (ಕಾಂತಿಯ)ಲ್ಲಿಯೂ ನಡೆದು ಗಂಗಾನದಿಯ ಎರಡೂ ದಂಡೆಗಳಲ್ಲಿ ಇಬ್ಭಾಗವಾಗಿ ನಡೆದು ಕೆಲವು ದಿನಗಳಲ್ಲಿಯೆ ದಕ್ಷಿಣ ಗುಹಾದ್ವಾರವನ್ನು ತಲ್ಪಿದರು. ಆ ಪ್ರದೇಶ ವಾಸಿಯಾದ ನಾಟ್ಯಮಾಲನೆಂಬ ದೇವನು ಮಂಗಳೋಪಕರಣಗಳಿಂದ ಇವರನ್ನು ಎದುರುಗೊಂಡು ನಮಸ್ಕರಿಸಿ ತನ್ನ ಸಂಗ್ರಹದಲ್ಲಿದ್ದ ವಸ್ತುಗಳನ್ನು ತಂದು ಮುಂದಿಟ್ಟನು. ಅವುಗಳನ್ನು ಸ್ವೀಕರಿಸಿ ಚಕ್ರವರ್ತಿಯು ದಕ್ಷಿಣ ಗುಹಾ ದ್ವಾರದಿಂದ ಹೊರಬಂದನು.

೭೧. ಮುಂದುವರಿದ ಆನೆಗಳೆ ಮಕರಗಳು; ಕುದುರೆಗಳೆ ಎತ್ತರವಾದ ಅಲೆಗಳು; ಪತಾಕೆಗಳೆ ಮೀನುಗಳು; ನಿರ್ಮಲತೆಯೆ ಶುದ್ಧವಾದ ನೀರು—ಹೀಗೆ ಗಂಗಾನದಿಯ ತಂಗೆಯೊ ಏನೊ ಎಂಬಂತೆ ಭೂಮೀಶನ ಸೈನ್ಯ ಗುಹೆಯಿಂದ ಹೊರಟಿತು.

ವ॥ ಅಂತು ಬರೆ ಪ್ರಾಚ್ಯಮ್ಲೇಚ್ಛಖಂಡಮಂ ದಂಡನಾಯಕನುಂಡಿಗೆಸಾಧ್ಯಂಮಾಡಿ ಪೆಱಗಣಿಂ ಕೂಡೆ ವಂದು ತನ್ನೊಡವಂದ ಮ್ಲೇಚ್ಛರಾಜರಂ ರಾಜರಾಜಾನುಜೀವಾನುವೃತ್ತದಿಂ ಕೃತಾರ್ಥರ್ಮಾಡಿ ತತ್ಸಮಸ್ತವಸ್ತುವಂ ಭಂಡಾರಪ್ರವೇಶಂಗೆಯ್ವುದುಂ ಕುರುವಂಶ ವಿಶೇಷಕಂ ಕುಬೇರಾಚಲಮನೆಯ್ದಿ ತದುಪಾಂತದೊಳ್ ಬೀಡಂ ಬಿಡಿಸಿ—

ಕಂ॥ ಹಯರತ್ನಾರೂಢಂ ಹಯ
ಮಯಸಾಧನನಾಗಿರೀಂದ್ರಮಂ ಬಲಗೊಳೆ ಧೂ
ಳಿಯ ಪುದುವಿಂದಚಲಕ್ಕುಪ
ಚಯಮಂ ಪಡೆವುದು ಚಲತ್ತುರಂಗಖುರಂಗಳ್ ॥ ೭೨ ॥

ವ॥ ಮತ್ತಂ ತದದ್ರೀಂದ್ರಸಾನುಗಳೊಳ್—

ಕಂ॥ ಪರಿವರ್ತಿತಾವಲೋಕನ
ನಿರತಂಗಳ್ ಬಲದ ಬಲಿದ ಕಳಕಳಮಂ ಕೇ
ಳ್ದಿರದನುಗೆಯ್ಯುತ್ತುಂ ತುರ
ಗರತ್ನ ಹೇಷಾರವಕ್ಕೆ ಮಾಣ್ದುವು ಹರಿಗಳ್ ॥ ೭೩ ॥

ಚೀರೀಚೀತ್ಕಾರಸಮು
ಚ್ಚಾರಿತಬಹುಭೂರ್ಜಮರ್ಮರಧ್ವನಿ ಗಂಗಾ
ವಾರಿಕಣಗಣಮಯಂ ಪವ
ನಾರಂಭಂ ಪಡೆಗೆ ಪಡೆದುದೊದವಿದ ಮುದಮಂ ॥ ೭೪ ॥

ವ॥ ಆತಂ ತೀರ್ಥಭೂತಕೈಲಾಸಪ್ರದಕ್ಷಿಣೀಕರಣಾನಂತರಂ ಕೌರವಾಧೀಶ್ವರಂ ಧೀರನುದಾರಂ ಸೌಜನ್ಯಕಂದಾಂಕುರಂ ಸ್ಕಂಧಾವಾರಮಂ ಪೊಕ್ಕು ಮಱುದೆವಸಂ ಮುಂ ನಡೆಯೆ ನಿಚ್ಚವಯಣಂಗಳೊಳ್ ಅಱಿಕೆಯ ಕೆಱೆಯ ನದೀನದಂಗಳ ಬೀಡುದಾಣಂಗಳೊಳ್—

ವ॥ ಸೇನಾಪತಿಯು ಪೂರ್ವ ಮ್ಲೇಚ್ಛಖಂಡವನ್ನು ಗೆದ್ದು ವಶಪಡಿಸಿಕೊಂಡು ಬಂದು ಆ ಸೈನ್ಯವನ್ನು ಕೂಡಿಕೊಂಡನು; ತನ್ನೊಡನೆ ಬಂದ ಮ್ಲೇಚ್ಛರಾಜರನ್ನು ಚಕ್ರವರ್ತಿಗೆ ವಿಧೇಯರೆನಿಸಿ ಅವರನ್ನು ಕೃತಾರ್ಥಗೊಳಿಸಿ ಅವರಿಂದ ಪಡೆದ ವಸ್ತುಗಳನ್ನೆಲ್ಲ ಭಂಡಾರಕ್ಕೆ ಸೇರಿಸಿದನು. ಕುರುವಂಶಭೂಷಣನು ಅನಂತರ ಕುಬೇರಪರ್ವತಕ್ಕೆ ಬಂದು ಅದರ ಬಳಿ ಬೀಡುಬಿಟ್ಟನು.

೭೨. 'ಹಯರತ್ನ'ವೆಂಬ ದಿವ್ಯಾಶ್ವವನ್ನೇರಿ ತನ್ನ ಅಶ್ವಬಲದೊಂದಿಗೆ ಚಕ್ರವರ್ತಿಯು ಆ ಪರ್ವತವನ್ನು ಪ್ರದಕ್ಷಿಣೆ ಮಾಡಲಾಗಿ, ಓಡುವ ಕುದುರೆಗಳ ಖುರಪುಟಗಳು ಆ ಬೆಟ್ಟಕ್ಕೆ ಇನ್ನಷ್ಟು ಬೆಳೆಗೆಯನ್ನು ಒದಗಿಸಿದುವು. (ಅವುಗಳ ಕಾಲ್ಧೂಳಿಯೆದ್ದು ಬೆಟ್ಟ ಬೆಳೆದಂತೆ ತೋರಿತು.)

ವ॥ ಮತ್ತು ಆ ಮಹಾಗಿರಿಯ ಸಾನುಪ್ರದೇಶದಲ್ಲಿ—

೭೩. ದೃಷ್ಟಿಯನ್ನು ಹೊರಳಿಸಿ ನೋಡುತ್ತ ನಿಂತು ಅಲ್ಲಿಯ ಸಿಂಹಗಳು ಈ ಸೈನ್ಯದ ಪ್ರಚಂಡವಾದ ಕೋಲಾಹಲ ಧ್ವನಿಯನ್ನು ಕೇಳಿ ಹೊರಡಲು ಸಿದ್ಧವಾದರೂ ಹಯರತ್ನದ ಕೆನೆತದ ಧ್ವನಿಗೆ ಬೆದರಿ ನಿಂತುಬಿಟ್ಟುವು.

೭೪. ಚಿಮ್ಮಂಡೆಗಳ ಚೀತ್ಕಾರದೊಡನೆ ಭೂರ್ಜವೃಕ್ಷಗಳ ಮರ್ಮರಧ್ವನಿಯನ್ನು ಕೇಳುತ್ತ ಗಂಗಾನದಿಯ ತುಷಾರಗಳಿಂದ ತಂಪಾದ ಗಾಳಿಯ ಸುಖವನ್ನು ಅನುಭವಿಸುತ್ತ ಸೈನ್ಯ ತುಂಬ ನೆಮ್ಮದಿಯನ್ನು ಪಡೆಯಿತು.

ವ॥ ಧೀರನೂ ಉದಾತ್ತನೂ ಆದ ಕುರುವಂಶಾಧಿಪತಿಯು ತೀರ್ಥವಾದ ಕೈಲಾಸಪರ್ವತವನ್ನು ಪ್ರದಕ್ಷಿಣೆಗೊಂಡ ಬಳಿಕ ತನ್ನ ಪಾಳೆಯವನ್ನು ಸೇರಿದನು. ಮರುದಿನ ಮುಂದೆ ನಡೆದು ನಿತ್ಯಪ್ರಯಾಣದಿಂದ ಪ್ರಸಿದ್ಧವಾದ ಅನೇಕ ಕೆರೆ, ನದಿ, ನದಗಳ ಬಳಿಯಲ್ಲಿ ಬೀಡುಬಿಡುತ್ತ ನಡೆದನು. ಬೀಡುಬಿಟ್ಟ ಸ್ಥಳಗಳಲ್ಲಿ

ಕಂ॥ ಕುಸುಮಿತಮಂದಾರಚ್ಛಾ
ಯಸಿಕ್ತಮೃಗನಾಭಿಗಂಧರಮ್ಯಾಶ್ಮಚಯ
ಪ್ರಸರಂಗಳೊಳೆಳಸಿದ ಚ
ಕ್ರಿಸೈನಿಕಂ ನೀಗಿತಧ್ವಗಮನ ಶ್ರಮಮಂ ॥ ೭೫ ॥

ವ॥ ಮತ್ತಂ ವಿವಿಧಪ್ರದೇಶಂಗಳೊಳ್—

ಕಂ॥ ಸರಲಾಸಕ್ತಮದೇಭ
ಸ್ಫುರಿತಗ್ರೈವಾವಲಗ್ನರುಚಿಗಳ್ ಧರಣೀ
ಶ್ವರಗಜನಿಷಾದಿಗಳನನು
ಕರಿಸಿದುವೋಷಧಿಗಳೆಣ್ಣೆಯಿಲ್ಲದ ಸೊಡರಂ ॥ ೭೬ ॥

ಆಳಾನೋದ್ಧರಿತತ್ವ
ಗ್ಜಾಳಂಗಳ್ ಪೇೞ್ವ ಮಾೞ್ಕೆಯಿಂದಿರ್ದುವು ಭೂ
ಪಾಳಗಜಮಾರ್ಗಮಂ [1]ಪಥಿ
ಕಾಳಿಗೆ[1] ಪಡೆ ನಡೆದು ಬಿಟ್ಟು ಪೋಪೆಡೆಯೆಡೆಯೊಳ್ ॥ ೭೭ ॥

[2]ಲೌ[2]ಹಿತ್ಯಮನಂಬುಧಿಪರಿ
ವಾಹಮನವನೀಶನೇಱೆ[3] ತತ್ತಟನೃಪಸಂ
ದೋಹಮೆಱಗಿದುದಧೀಶಗ
ಜಾಹತಕಾಲಾಗರುದ್ರುಮಂಬೆರಸಾಗಳ್ ॥ ೭೮ ॥

ವ॥ ಮತ್ತಂ ಪೋಗೆವೋಗೆ—

---

೭೫. ಹೂಬಿಟ್ಟ ಮಂದಾರವೃಕ್ಷಗಳ ನೆರಳಲ್ಲಿ, ಕಸ್ತೂರಿಯ ಸುಗಂಧದಿಂದ ರಮ್ಯವಾದ ಬಂಡೆಗಳ ಬಳಿಯಲ್ಲಿ ಉಲ್ಲಾಸದಿಂದ ವಿಶ್ರಮಿಸುತ್ತ ಚಕ್ರಿಯ ಸೈನ್ಯವು ದಾರಿಯ ದಣಿವನ್ನು ಆರಿಸಿಕೊಂಡಿತು.

ವ॥ ಮತ್ತು ಬಗೆಬಗೆಯ ಪ್ರದೇಶಗಳಲ್ಲಿ—

೭೬. ಸರಲವೆಂಬ (ದೇವದಾರು) ವೃಕ್ಷಗಳಿಗೆ ಆನೆಗಳನ್ನು ಕಟ್ಟಿನಿಲ್ಲಿಸಿದಾಗ ಅವುಗಳ ಕೊರಳ ಸರಪಳಿಯ ಹೊಳಪು ಜ್ಯೋತಿರ್ಲತೆಗಳಲ್ಲಿ ಪ್ರತಿಬಿಂಬಿಸಿ ಚಕ್ರವರ್ತಿಯ ಮಾವುತರಿಗೆ ಎಣ್ಣೆಯಿಲ್ಲದೆ ಉರಿಯುವ ದೀಪಗಳನ್ನು ಒದಗಿಸಿದುವು.

೭೭. ಆನೆಗಳನ್ನು ಕಟ್ಟಿದ ಹಗ್ಗಗಳಿಂದಾಗಿ ಮೇಲಿನ ತೊಗಟೆ ಕಿತ್ತುಹೋದ ದೇವದಾರು ಮರಗಳು "ಈ ಮಾರ್ಗವಾಗಿ ಭೂಪತಿಯ ಆನೆಗಳು ನಡೆದುಹೋದುವು" ಎಂದು ಹಾದಿಕಾರರಿಗೆ ಹೇಳುತ್ತಿರುವುವೊ ಏನೊ ಎಂಬಂತೆ ಅವರು ಬೀಡುಬಿಟ್ಟ ಎಡೆಗಳಲ್ಲಿ ಆ ಚಿಹ್ನಗಳು ಶೋಭಿಸಿದುವು.

೭೮. ಲೌಹಿತ್ಯವೆಂಬ ಮಹಾನದಿಯನ್ನು ಚಕ್ರವರ್ತಿಯು ದಾಟಿ ಬರಲಾಗಿ, ಅದರ ತೀರದಲ್ಲಿದ್ದ ರಾಜರು ಆನೆಗಳನ್ನು ಕಟ್ಟಿದ ಕಾಲಾಗುರು ವೃಕ್ಷಗಳೊಡನೆ ಭೂಮಿಗೆ ಬಾಗಿದರು. [ಇದಕ್ಕೆ ಮೂಲವಾದ ರಘುವಂಶದ ೪-೮೧ರಲ್ಲಿ "ಚಕಂಪೇ" (ನಡುಗಿದರು) ಎಂದಿದೆ.]

ವ॥ ಹಾಗೆಯೆ ಮುಂದೆ ಮುಂದೆ ಹೋಗಲಾಗಿ—

---

1. ಬುಧವಾಳಿಗೆ (ಅ) 2. ಸೌ (ಅ)

ಕಂ॥ ಘನವರ್ಷತರಂ ಪೆರದು
ರ್ದಿನವಾರುದ್ಧಾರ್ಕ[ಮುರು]ನೃಪಾನೀಕರ[1][ಜಂ][1]
ವನನಿಧಿಯಃನಾಂತುದೆನಲಧಿ
ಪನ ಬಲಮಂ ಕಾಮರೂಪಭೂಮಿಪರಾಂಕರ್ ॥ ೭೯ ॥

ವ॥ ಅಂತಿದಿರ್ವಂದು ಪ್ರಾಗ್ಜ್ಯೋತಿಷಪುರಾಧೀಶ್ವರನೆಱಗೆ—

ಕಂ॥ ತವದರಿಬಲಮಂ ತವೆ ಸೀ
[2][ಳ್ದು][2]ವನುಪಕಾರಿಗಳನಿಭ[3]ಚಯಂ[3]ಗಳನ[4]ಧಿ[1]ಪಂ
ಗವಟಯಿಸಿದರವರತಿ ಭೀ
ರುವುಳ್ಳೊಡೇಂ ಕೃತಮನಱಿದುಮಱಿಯದುದೆ ವಲಂ ॥ ೮೦ ॥

ಉ॥ ಅಂತಖಿಳಾವನೀತಳಮನಾಪರಮೇಶ್ವರನೇಕಭೋಗ್ಯಮ
ಪ್ಪಂತು ನಿಮಿರ್ಚಿ ಹಸ್ತಿನಪುರಾಭಿಮುಖಂ ನಡೆದಂ ಸಮಸ್ತಸಾ
ಮಂತಕಿರೀಟಕೋಟಿಗಳೊಳಾತಪವಾರಣಶೂನ್ಯದೈನ್ಯವಿ
ಶ್ರಾಂತಿಪದಂಗಳೊಳ್ ನೆಲಸೆ ಸೈನ್ಯರಜೋರುಣಕಾಂತಿ [5]ರಶ್ಮಿ[5]ಗಳ್ ॥ ೮೧ ॥

ವ॥ ಅಂತು ಬಂದು ನಿಜಕುಲರಾಜಧಾನಿಯ ಸಮೀಪದೊಳ್ ಪುಣ್ಯಬೀಜದ ಬೆಳಸೊಟ್ಟಿ ಬೆಟ್ಟಾದಂತೆ ಬಿಟ್ಟಿರ್ದು [ಹಿತಪುರೋಹಿತ ರತ್ನದತ್ತಲಗ್ನದೊಳ್ ಚಕ್ರವರ್ತಿ ಪುರಪ್ರವೇಶಾಭಿಮುಖನಾಗಿ—

---

೭೯. ಮಳೆಯಿಲ್ಲದಿದ್ದರೂ ಮಳೆಗಾಲದ ಕಗ್ಗತ್ತಲೆಯ ದಿನದಂತೆ ಸೂರ್ಯಪ್ರಕಾಶವನ್ನು ತಡೆಗಟ್ಟಿ ಎಲ್ಲಕಡೆಗೂ ದೂಳು ಮುಸುಕಿಸುವ ಚಕ್ರವರ್ತಿಯ ಸೈನ್ಯವನ್ನು ಕಂಡು (ಭೀತಿಯಿಂದ) ಕಾಮರೂಪದ ಅರಸುಗಳು ಅದನ್ನು ಎದುರುಗೊಂಡರು.

ವ॥ ಹಾಗೆ ಎದುರುಗೊಂಡು ಪ್ರಾಗ್ಜ್ಯೋತಿಷಪುರದ ರಾಜನು ಎರಗಲಾಗಿ—

೮೦. ಎಂದಿಗೂ ಸೋಲಲಾರೆವೆಂಬ ಶತ್ರುಸೈನ್ಯವನ್ನು ಸೋಲಿಸಿ ತಮಗೆ ಉಪಕಾರಮಾಡಿದ ಆನೆಗಳ ಪಡೆಯನ್ನು ಆ ರಾಜರು ಚಕ್ರವರ್ತಿಗೆ ಒಪ್ಪಿಸಿಬಿಟ್ಟರು. ಪುಕ್ಕಲುಸ್ವಭಾವದವನು ಉಪಕಾರವನ್ನು ಅರಿತರೂ ಅರಿಯದವನೇ ಸರಿ.

೮೧ ಹೀಗೆ ಆ ಪರಮೇಶ್ವರನು ಸಮಸ್ತ ಭೂಮಂಡಲವನ್ನು ತನ್ನ ಏಕಚ್ಛತ್ರಾಧಿಕಾರಕ್ಕೆ ಒಳಪಡಿಸಿಕೊಂಡು ಹಸ್ತಿನಾಪುರದತ್ತ ನಡೆದನು. ತಲೆಯಮೇಲೆ ಬಿಳಿಕೊಡೆಯನ್ನು ಹಿಡಿದುಕೊಳ್ಳುವುದಕ್ಕೆ ಗತಿಯಿಲ್ಲದೆ ದೀನಾವಸ್ಥೆಯಲ್ಲಿರುವ ಸಾಮಂತರಾಜರ ಕಿರೀಟಗಳಲ್ಲಿ ಚಕ್ರಿಯ ಸೈನ್ಯವೆಬ್ಬಿಸಿದ ಕಾಲ್ಧೂಳಿಯ ಕೆಂಬಣ್ಣ ಕುಳಿತು ಕಂಗೊಳಿಸಿತು.

ವ॥ ಹಾಗೆ ಬಂದು ತನ್ನ ವಂಶಪರಂಪರಾಗತ ರಾಜಧಾನಿಯ ಸಮೀಪದಲ್ಲಿ ತನ್ನ ಪುಣ್ಯಬೀಜದ ಬೆಳೆಯನ್ನು ಬೆಟ್ಟದ ಗಾತ್ರದಲ್ಲಿ ಒಟ್ಟಿದನೊ ಏನೊ ಎಂಬಂತೆ ಬೀಡುಬಿಟ್ಟನು. ಬಳಿಕ ತನ್ನ ಪುರೋಹಿತನು ತಿಳಿಸಿದ ಪ್ರಶಸ್ತವಾದ ಮುಹೂರ್ತದಲ್ಲಿ ಪುರಪ್ರವೇಶಕ್ಕೆ ಸಿದ್ಧನಾದನು.

---

1. ಜೋ (ಮ) 2. ಟ್ಟು (ಮ) 3. ಹಯಂ (ಅ) 4. ಱಿ (ಅ) 5. ರಾಜಿ (ಮ)

ಕಂ॥ ಎಯ್ದಿ ಪತಿ ಬರೆ ವಿಳಾಸಮ
ನೆಯ್ದಿದಳಂಕಾರಸಾರಕೃತಶೋಭೆಯನಂ
ದೆಯ್ದುವವೊಲಪ್ಪಶೋಭೆಯ
ನೆಯ್ದಿದುದಾ]ರಾಜಧಾನಿ ಪುಗೆ ಜಿನಚಂದ್ರಂ ॥ ೮೨ ॥

ವ॥ ಅಂತು ಪೊಬಲಂ ಪೊಕ್ಕು ರಾಜಮಾರ್ಗದೊಳಗಣಿಂ ಬಂದು—

ಕಂ॥ ಬಗೆವುಗೆ ಸಲಿಲಕ್ರೀಡಾ
ವಗಾಹರುಚಿ ಯೂಥಪತಿಸಮನ್ವಿತಯೂಥಂ
ಸೊಗಯಿಪ ತಾವರೆಗೊಳನಂ
ಪುಗುವಂತಿರೆ ಚಕ್ರವರ್ತಿ ನಿಜಮಂದಿರಮಂ ॥ ೮೩ ॥

ವ॥ ಪೊಕ್ಕು ಮಕುಟಬದ್ಧಪರಿವೃತಂ ಕಿ[1]ರು[1]ಮಾಡದೊಳ್ ಮುನ್ನಂ ಪಸೆವರಿಸಿದ ಮೃಗಾಧಿರಾಜವಿಷ್ಟರದೊಳ್ ಕುಳ್ಳಿರ್ದು ಕಿಱಿದಾನುಂ ಬೇಗದಿಂ ಯಥೋಚಿತಸಂಭಾವನೆಯಿಂ ರಾಜನ್ಯಕಮಂ ಬೀಡಿಂಗೆ ವಿಸರ್ಜಿಸಿ ಸುಖದಿನಿರ್ದು ಕತಿಪಯದಿನಂಗಳಿಂ—

ಮ॥ ಅಪರಾಂಭೋಧಿಪರೀತಭೂತಳಜಯಕ್ಲೇಶಾಗತಾನೇಕಭೂ
ಮಿಪರಂ ನಾಟ್ಗಧಿಪಂ ವಿಸರ್ಜಿಸಿ ಜಗಂ ತನ್ನಿಟ್ಟ ಕಲ್ಪೋದ್ಯದಂ
ಫ್ರುಪಮೆಂತಂತೆ ಫಲಾವನಮ್ರವಿಧಿಯಿಂದೊಪ್ಪಿರ್ಪಿನಂ ಕಾಲಮ
ಗ್ಲಪಿತಂ ಸಂದುದು ಬೇಗವೊಂದು ದೆವಸಂ ಸಲ್ವಂತು ವಿದ್ಯಾತ್ಮಕಂ ॥ ೮೪ ॥

ವ॥ ಅಂತು ಭರತಾವನೀಮಂಡಳಷಟ್ಖಂಡಮಂ ಕಡಿತಕ್ಕೆ ತಂದು ಚಕ್ರೇಶ್ವರನೆಣ್ಬತ್ತುನಾಲ್ಕುಲಕ್ಕೆ ಭದ್ರಗಜಂಗಳಿಂದಂ [ಅನಿತೆ ರಥಂಗಳಿಂದಂ] ಪದಿನೆಂಟುಕೋಟಿ ಜಾತ್ಯಶ್ವಂಗಳಿಂದಂ ಎಣ್ಬತ್ತುನಾಲ್ಕುಕೋಟಿ ಪದಾತಿಬಲಂಗಳಿಂದಂ ಮೂವತ್ತಿರ್ಛಾಸಿರ್ವರ್ ಮಕುಟಬದ್ಧ

೮೨. ಅಗಲಿಹೋಗಿದ್ದ ಪತಿ ಮರಳಿ ಮನೆಗೆ ಬಂದಾಗ (ಸತಿ) ವಿಲಾಸದಿಂದ ಅಲಂಕಾರಮಾಡಿಕೊಂಡು ಶೋಭಿಸುವಂತೆ, ಜಿನೇಂದ್ರನ ಪ್ರವೇಶಕ್ಕಾಗಿ ಆ ರಾಜಧಾನಿಯು ಅಷ್ಟಶೋಭೆಯನ್ನು ಪಡೆಯಿತು.

ವ॥ ಚಕ್ರವರ್ತಿಯು ಪುರವನ್ನು ಪ್ರವೇಶಿಸಿ ರಾಜಮಾರ್ಗದಿಂದ ಬಂದು,

೮೩. ಜಲಕ್ರೀಡೆಗೆ ಉತ್ಸುಕವಾಗಿ ನಾಯಕಗಜವು ತನ್ನ ಆನೆಗಳ ಹಿಂಡಿನೊಡನೆ ಕಮಲಸರೋವರದಲ್ಲಿ ಹೊಗುವಂತೆ, ಚಕ್ರವರ್ತಿಯು ತನ್ನ ಅರಮನೆಯನ್ನು—

ವ॥ ಪ್ರವೇಶಮಾಡಿ ಮುಂಚಿತವಾಗಿ ಹಸೆಹಾಸಿ ಸಿದ್ಧಪಡಿಸಿದ ಸಿಂಹಾಸನದಲ್ಲಿ ಕುಳಿತುಕೊಂಡನು. ಸ್ವಲ್ಪ ಹೊತ್ತಿನಲ್ಲಿಯೆ ಯೋಗ್ಯವಾದ ಸಂಭಾವನೆಯಿತ್ತು ಅಧೀನರಾಜ ಸಮೂಹವನ್ನು ಅವರವರ ಬೀಡಿಗೆ ಕಳಿಸಿ ಸುಖದಿಂದಿದ್ದನು. ಕೆಲದಿನಗಳಾದ ಬಳಿಕ—

೮೪. ಪಶ್ಚಿಮಸಮುದ್ರ ಪರ್ಯಂತವಾದ ಭೂಮಂಡಲ ಜಯಕ್ಕಾಗಿ ತನ್ನೊಡನೆ ಸಂಚರಿಸಿ ಶ್ರಮಿಸಿದ ಅನೇಕ ರಾಜರನ್ನು ಅವರವರ ನಾಡುಗಳಿಗೆ ಕಳಿಸಿಕೊಟ್ಟನು. ತಾನು ಊರಿದ ಕಲ್ಪವೃಕ್ಷದಂತೆ ಫಲಭಾರದಿಂದ ಬಾಗಿತೊ ಎಂಬಂತೆ ಜಗತ್ತು ಸುಖಸಮೃದ್ಧಿಯಿಂದ ತುಂಬಿರಲಾಗಿ, ಒಂದು ದಿನ ಕಳೆದಂತೆ ಹಲವಾರು (ವರ್ಷಗಳ)ಕಾಲ ಸುಖವಾಗಿ ಕಳೆದುಹೋಯಿತು.

ವ॥ ಹಾಗೆ ಭರತಭೂಮಿಯ ಆರು ಖಂಡಗಳನ್ನು ತನ್ನ ಅಧೀನಕ್ಕೆ ಒಳಪಡಿಸಿಕೊಂಡ ಚಕ್ರವರ್ತಿಯ ವಶದಲ್ಲಿ ನಾಲ್ಕು ಲಕ್ಷ ಭದ್ರಗಜಗಳು; ಅಷ್ಟೇ ರಥಗಳು; ಹದಿನೆಂಟು ಕೋಟಿ ಜಾತಿ ಕುದುರೆಗಳು; ಎಂಬತ್ತುನಾಲ್ಕು ಕೋಟಿ ಕಾಲಾಳುಗಳು; ಮೂವತ್ತೆರಡು ಸಾವಿರ ಮಕುಟಬದ್ಧರು; ಅಷ್ಟೇ ಅಧೀನ ರಾಜ್ಯಗಳು; ಅಷ್ಟೇ ಸಂಖ್ಯೆಯ ರಾಜಧಾನಿಗಳಾದ ಮಹಾಪಟ್ಟಣಗಳು; ಅಷ್ಟೇ ಸಂಖ್ಯೆಯ ರಾಜಪುತ್ರಿಯರಾದ ಅಂತಃಪುರಸ್ತ್ರೀಯರು; ಅಷ್ಟೇ

1. ಜು (ಮ)

ರಿಂದ ಮನಿತೆವಿಷಯಂಗ[1]ಳಿಂದ[1]ಮನಿತೆ ರಾಜಧಾನೀಭೂತಮಪ್ಪ ಪೆಸರ ಪೊಳಲ್ಗಳಿಂದಮನಿತೆರಾಜತನೂಜೆಯರಪ್ಪ ರಸಿಯರಿಂದಮನಿಬರೆ ಮ್ಲೇಚ್ಛ ರಾಜಪುತ್ರಿಯರಪ್ಪಂತಃಪುರ ಸ್ತ್ರೀಯರಿಂದಮನಿಬರೆ ದೇವಾಂಗನಾ ಕೃತಾವರೋಧ ಸುಂದರಿಯರಿಂದಮನಿತೆ ಸಂಗೀತ ಗೃಹಂಗಳಿಂದಂ ಶ್ರೀನಿಕೇತನಸಂಜಾತ ಕಾಳ ಮಹಾಕಾಳ ನೈಸರ್ಪ ಪಾಂಡುಕ ಪದ್ಮ ಪಿಂಗಳ ಮಾಣವಕ ಶಂಖ ಸರ್ವರತ್ನಂಗಳೆಂಬೊಂಭತ್ತು ನಿಧಿಗಳಿಂದಂ ವಿಜಯಾರ್ಧಮಹೀಧರಜನಿತಂಗಳಪ್ಪ ಗಜಾಶ್ವಸ್ತ್ರೀರತ್ನಂಗಳಿಂದಂ ಹಸ್ತಿನಪುರಸಂಭೂತಂಗಳಪ್ಪ ಸೇನಾಪತಿ ಗೃಹಪತಿ ಸ್ಥಪತಿ ಪುರೋಹಿತ ರತ್ನಂಗಳಿಂದಂ ಶಸ್ತ್ರಶಾಲಾಜಾತಂಗಳಪ್ಪ ಚಕ್ರಾಸಿದಂಡಚ್ಛತ್ರರತ್ನಂಗಳಿಂದಂ ಶ್ರೀಗೃಹಾದಿ ಸಮುತ್ಪನ್ನಂಗಳಪ್ಪ ಮಣಿಚರ್ಮ ಕಾಕಿಣೀರತ್ನಂಗಳಿಂದಂ ಕೃತಸಾಗರಾಭಿಧಾನಪ್ರಕಾರಂಗಳಿಂದಂ ಸರ್ವತೋಭದ್ರನಾಮ ಗೋಪುರಂಗಳಿಂದಂ ವೈಜಯಂತಿಯೆಂಬಪ್ರಾಸಾದದಿಂದಂ ದಿಕ್ಸ್ವಸ್ತಿಕಮೆಂಬ ಸಭಾಭವನದಿಂ ನಂದ್ಯಾವರ್ತಪ್ರಕಾಶ[2]ಮೆಂಬ ಶಿಖರ[2]ನಿವೇಶಂಗಳಿಂದಂ ವರ್ಧಮಾನಾಭಿಧಾನಪ್ರೇಕ್ಷಾಸದನಂಗಳಿಂದಂ ಕುಬೇರಕಾಂತಮೆಂಬ ಕೋಶಗೃಹದಿಂದಂ ಪುಷ್ಕಳಾವತಿಯೆಂಬ ಸಜ್ಜೆವನೆಯಿಂದಂ ಜೀಮೂತಮೆಂಬ ಮಜ್ಜನನಿಕೇತನದಿಂದಂ ಗಿರಿಕೂಟನಾಮಧೇಯದಿಗವಲೋಕನಾಗಾರದಿಂದಂ ಗೃಹಕೂಟಾಂಕ(ದ) ವರ್ಷಾಲಯದಿಂದಂ ಮಹಾಘವರ್ಮಾಂತಾಭಿಧೇಯಧಾರಾಗೃಹದಿಂದಂ ವಸುಧಾಧಾರಮೆಂಬ ಕೋಷ್ಠಾಗಾರದಿಂದಂ ದೇವರಮ್ಯಮೆಂಬ(ಪಟ)ಗುಡಿಯಿಂದಂ ಅವತಂಸಿಯೆಂಬರತ್ನಮಾಲೆಯಿಂದಂ ಸಿಂಹವಾಹಿನಿಯೆಂಬ ಶಯ್ಯೆಯಿಂದಂ ಗಂಗಾತರಂಗಂಗಳೆಂಬ ಪೆಸರ್ವಡೆದ ಯಕ್ಷಕರವಿಧೃತಂಗಳಪ್ಪ ದ್ವಾತ್ರಿಂಶಚ್ಚಮರರುಹಂಗಳಿಂದಮನುತ್ತರಮೆಂಬ ಸಿಂಹಾಸನದಿಂದಂ ವಜ್ರಕಾಂಡಮೆಂಬ ಚಾಪದಿಂದಂ ಸಿಂಹಾಟಕಮೆಂಬ ಕೊಂತದಿಂದಂ ವಜ್ರತುಂಡಮೆಂಬ ಶಕ್ತಿಯಿಂದಂ ಮನೋವೇಗವೆಂಬ ಕಣೆಯಿಂದಂ ಲೋಹವಾಹಿನಿಯೆಂಬ ಸುರಿಗೆಯಿಂದಂ ಭೂತಮುಖಮೆಂಬ ಮಣಿಖೇಟಕದಿಂದಂ (ಸೌ)ನಂದಕಮೆಂಬ ಬಾಳಿಂದಂ ಚೂಡಾಮಣಿಯೆಂಬ ಮಣಿಯಿಂದಂ ಸುದರ್ಶನಮೆಂಬ ಚಕ್ರದಿಂದಂ ಅಯೋಧ್ಯನೆಂಬ ಸೇನಾನಿಯಿಂದಂ ಚಿಂತಾಜನನಿಯೆಂಬ ಕಾಕಿಣೀರತ್ನದಿಂದಂ ಕಾಮವೃಷ್ಟಿಯೆಂಬ ಭಂಡಾರಿಗನಿಂದಂ ಬುದ್ಧಿಸಾಗರನೆಂಬ ಪುರೋಹಿತನಿಂದಂ ವಿಜಯಪರ್ವತಮೆಂಬ ಪಟ್ಟವರ್ಧನದಿಂದಂ ಪವನಂಜಯನೆಂಬ ತುರಂಗರತ್ನದಿಂದಂ ಭದ್ರಮುಖನೆಂಬ ತಕ್ಷನಿಂದಂ ಗುಣರತ್ನಮೆಂಬ ಸ್ತ್ರೀರತ್ನದಿಂದಂ ವಿಜಯಘೋಷಂಗಳೆಂಬ ಪನ್ನೆರಡುಪಟಹಂಗಳಿಂದಂ ಆನಂದಮೆಂಬ ಪನ್ನೆರಡು ಭೇರಿಗಳಿಂದಂ ಅಂಬರವಿಲಂಬಿಯೆಂಬ ನಾಲ್ವತ್ತೆಂಟುಕೋಟಿ ಪತಾಕೆಗಳಿಂದಂ ಗಂಭೀರಾವರ್ತಂಗಳೆಂಬಿಪ್ಪತ್ತುನಾಲ್ಕು ಶಂಖಂಗಳಿಂದಂ ವೀರಾಂಗದಂಗಳೆಂಬ ವಲಯಂಗಳಿಂದಂ ಅಮೃತ[3]ಭಕ್ಷ್ಯಂ[3]ಗಳೆಂಬ ರುಚಿಭಕ್ಷ್ಯಂಗಳಿಂದಂ [4]+[4]ಕಲ್ಯಾಣಮೆಂಬುಣಿಸಿಂದಂ ಅಮೃತಮೆಂಬ ಪಾನದಿಂದಂ ಅಮೃತಕಲ್ಪಮೆಂಬ ಲೇಹ್ಯದಿಂದಂ ತೊಂಭತ್ತಾರುಕೋಟಿ ಗ್ರಾಮಂಗಳಿಂದಂ ನಾಲ್ವತ್ತೆಣ್ಸಾಸಿರ ಪಟ್ಟಣಂಗಳಿಂದಂ ತೊಂಭತ್ತಾರುಸಾಸಿರ ದ್ರೋಣಾಮುಖಂಗಳಿಂದಂ ಪದಿನಾರುಸಾಸಿರ

ಸಂಖ್ಯೆಯ ಸುಂದರ ದೇವಾಂಗನೆಯರು ; ಅಷ್ಟೇ ಸಂಖ್ಯೆಯ ಸಂಗೀತ ಶಾಲೆಗಳು ; ಭಂಡಾರದಲ್ಲಿ ತಾನಾಗಿ ಜನಿಸಿ ಬಂದ ಕಾಳ, ಮಹಾಕಾಳ, ನೈಸರ್ಪ, ಪಾಂಡುಕ, ಪದ್ಮ, ಪಿಂಗಳ, ಮಾಣವಕ, ಶಂಖ, ಸರ್ವರತ್ನಗಳೆಂಬ ಒಂಬತ್ತು ನಿಧಿಗಳು ; ವಿಜಯಾರ್ಧಪರ್ವತಜನ್ಯವಾದ ಆನೆ, ಕುದುರೆ ಹಾಗು ಸ್ತ್ರೀರತ್ನಗಳು ; ಹಸ್ತಿನಾಪುರದಲ್ಲಿ ಹುಟ್ಟಿದ ಸೇನಾಪತಿ, ಗೃಹಪತಿ, ಸ್ಥಪತಿ, ಪುರೋಹಿತ ಎಂಬ ಜೀವರತ್ನಗಳು; ಶಸ್ತ್ರಾಗಾರದಲ್ಲಿ ಹುಟ್ಟಿದ ಚಕ್ರರತ್ನ, ಖಡ್ಗರತ್ನ, ದಂಡರತ್ನ, ಚಕ್ರರತ್ನಗಳು; ಶ್ರೀಗೃಹವೆ ಮೊದಲಾದೆಡೆಗಳಲ್ಲಿ ಹುಟ್ಟಿದ ಮಣಿರತ್ನ, ಚರ್ಮರತ್ನ, ಕಾಕಿಣೀರತ್ನಗಳು ; ಕೃತಸಾಗರವೆಂಬ ಪ್ರಾಕಾರಗಳು ; ಸರ್ವತೋಭದ್ರವೆಂಬ ಗೋಪುರಗಳು ; ವೈಜಯಂತಿಯೆಂಬ ಅರಮನೆ; ದಿಕ್ಸ್ವಸ್ತಿಕವೆಂಬ ಓಲಗಶಾಲೆ; ನಂದ್ಯಾವರ್ತಪ್ರಕಾಶವೆಂಬ ಶಿಖರ ನಿವೇಶಗಳು ; ವರ್ಧಮಾನವೆಂಬ ಪ್ರೇಕ್ಷಕಭವನಗಳು ; ಕುಬೇರಕಾಂತವೆಂಬ ಭಂಡಾರಗೃಹ ; ಪುಷ್ಕಳಾವತಿಯೆಂಬ ಶಯ್ಯಾಗೃಹ ; ಜೀಮೂತವೆಂಬ ಸ್ನಾನಗೃಹ ; ಗಿರಿಕೂಟವೆಂಬ ದಿಗವಲೋಕನ (ನಿಂತು ಸುತ್ತಲೂ ನೋಡುವುದಕ್ಕೆ ಅನುಕೂಲವಾದ ಎತ್ತರದ ಉಪ್ಪರಿಗೆಯುಳ್ಳ) ಭವನ; ಗೃಹಕೂಟದೊಳಗಿರುವ ಮಳೆ ಸುರಿಸುವ ಮನೆ; ಮಹಾಘವರ್ಮಾಂತವೆಂಬ ಕಾರಂಜಿ ಮನೆ (ಧಾರಾಗೃಹ) ; ವಸುಧಾಧಾರವೆಂಬ ಕೊಟ್ಟಿಗೆ ; ದೇವರಮ್ಯವೆಂಬ ಡೇರೆ (ಪಟಗುಡಿ) ; ಅವತಂಸಿಯೆಂಬ ರತ್ನಹಾರ ; ಸಿಂಹವಾಹಿನಿಯೆಂಬ ಹಾಸುಗೆ ; ಯಕ್ಷರು ಹಿಡಿದು ಬೀಸುವ ಗಂಗಾತರಂಗಗಳೆಂಬ ಚಾಮರಗಳು ; ಅನುತ್ತರವೆಂಬ ಸಿಂಹಾಸನ ; ವಜ್ರಕಾಂಡವೆಂಬ ಬಿಲ್ಲು ; ಸಿಂಹಾಟಕವೆಂಬ ಕುಂತ ; ವಜ್ರತುಂಡವೆಂಬ ಶಕ್ತ್ಯಾಯುಧ ; ಮನೋವೇಗವೆಂಬ ಬಾಣ ; ಲೋಹವಾಹಿನಿಯೆಂಬ ಕಿರುಗತ್ತಿ : ಭೂತಮುಖವೆಂಬ ರತ್ನದ ಗುರಾಣಿ ; ಸೌನಂದಕವೆಂಬ ಖಡ್ಗ ; ಚೂಡಾಮಣಿಯೆಂಬ ರತ್ನ ; ಸುದರ್ಶನವೆಂಬ ಚಕ್ರಾಯುಧ ; ಅಯೋಧ್ಯನೆಂಬ ಸೇನಾಪತಿ ; ಚಿಂತಾಜನನಿಯೆಂಬ ಕಾಕಿಣೀರತ್ನ ; ಕಾಮವೃಷ್ಟಿಯೆಂಬ ಭಾಂಡಾರಿಗ ; ಬುದ್ಧಿಸಾಗರನೆಂಬ ಪುರೋಹಿತ ; ವಿಜಯಪರ್ವತವೆಂಬ ಪಟ್ಟದಾನೆ : ಪವನಂಜಯವೆಂಬ ಅಶ್ವರತ್ನ ; ಭದ್ರಮುಖನೆಂಬ ಶಿಲ್ಪಿ ; ಗುಣರತ್ನವೆಂಬ ಸ್ತ್ರೀರತ್ನ ; ವಿಜಯಘೋಷವೆಂಬ ಹನ್ನೆರಡು ನಗಾರಿಗಳು ; ಆನಂದವೆಂಬ

---

1. ಳಿಂದಮನಿಬರೆ ಗಣಬದ್ಧದೇವರಿಂದ (ಅ) 2. ಶಿಖರಮೆಂಬ (ಅ) 3. ಗರ್ಭಂ (ಅ) 4. + (ಮಹಾ) (ಮ)

ಖೇಟಕಂಗಳಿಂದಂ ಪದಿನಾಲ್ಸಾಸಿರಸಂವಾಹನಂಗಳಿಂದಂ ಅಯ್ವತ್ತಾಱಂತರದ್ವೀಪಂಗಳಿಂದಂ ನೂರ್ಛಾಸಿರಕೋಟಿಪಳಂಗಳಿಂದವೊಂದುಕೋಟಿ (ಪ್ರಮಾಣ) ಸ್ಥಳಗಳಿಂದಂ ಮೂಱುಕೋಟಿ ಗೋಮಂಡಳಂಗಳಿಂದಮಿಪ್ಪತ್ತೆಣ್ಛಾಸಿರದುರ್ಗಭೂಮಿಗಳಿಂದಂ ನೂಱುಕುಕ್ಷಿನಿವಾಸಂಗಳಿಂದಂ ಪದಿನೆಣ್ಛಾಸಿರ್ವರ್ ಮ್ಲೇಚ್ಛರಾಜರಿಂದಂ—

ಮ॥ ನೆಱೆದೈಶ್ವರ್ಯದ ಮೇಗೆ ವಜ್ರಿ ಬೆಸದಾಳಂತಾಗಿಯುಂ ಕಲ್ಪಮಂ
ನೆಱೆಯಭ್ಯಂತರಸಿದ್ಧಿಯುಂ ಪಡೆಯುನುಳ್ಳೊಂದರ್ಥಮಂ ನಿಚ್ಚಲುಂ
ತೆಱುವೊಂ ಚಕ್ರಿಯ ನೋಂತ ನೋಂಪಿಯ ಫಲ[1]ಕ್ಕಾ[1] ಸಂಖ್ಯೆ ಲೆಕ್ಕಕ್ಕೆ ಕಂ
ಡಱಿಯೆಂ ನೋಂಪಿಯ ಪೆಂಪನಾವೆಡೆಯೊಳಂ ಸ್ವರ್ಭೂರ್ಭುವರ್ಭಾಗದೊಳ್ ॥ ೮೫ ॥

ವ॥ ಅಂತು ವರ್ಣರಾಸ್ಯತಿಲಕನಪ್ಪ ಸಕಳಚಕ್ರವರ್ತಿಸಕಳಸಾಮ್ರಾಜ್ಯಶ್ರೀಯುಂ ಪಿರಿದುಮಾಶ್ಚರ್ಯದಿಂದಂ ಪಿರಿಯರಪ್ಪವರ್ ಪೊಗೞೆ—

ಕಂ॥ ಕೆಯ್ಯಾರ್ದಂತಾರ್ತಿತ್ರವ
ಗಯ್ಸಿದ ಸುಖಸಂಕಥಾವಿನೋದದಿನಿಪ್ಪ
ತ್ತಯ್ಸಾಸಿರವರ್ಷಂ ಸಿರಿ
ಮೆಯ್ಯೊಗಮಂ ಚಕ್ರವರ್ತಿಯೊಳ್ ಭೋಗಿಸಿದಳ್ ॥ ೮೬ ॥

ವ॥ ಅಂತಿಪ್ಪತ್ತಯ್ಸಾಸಿರವರ್ಷಂ ಚಕ್ರವರ್ತಿಯ ಕಾಲ[2]ವೊಂದುದೆವಸಂ[2] ಸಲ್ವಂತು ಸುಖದಿಂದನುಪಲಕ್ಷಿತರೂಪದಿಂ ಸಲೆ ಬಱಿಯುಂ ಮತ್ತೊಂದದೆವಸಂ ಯಾಮಿನೀತ್ರಿತಯಯಾಮ ವಿರಾಮದೊಳ್ ನಿಸರ್ಗನಿರ್ಗತನಿದ್ರಾನುಗಮನನವರತಾಳಂಬಿತ ಪ್ರಶಸ್ತಪರಿಣಾಮನಪ್ಪುದಱಿಂ ಶಾಂತೀಶ್ವರನಾತ್ಮಗತಂ—

ಹನ್ನೆರಡು ಭೇರಿಗಳು ; ಅಂಬರವಿಲಂಬಿಯೆಂಬ ನಾಲ್ವತ್ತೆಂಟು ಕೋಟಿ ಧ್ವಜಗಳು ; ಗಂಭೀರಾವರ್ತಗಳೆಂಬ ಇಪ್ಪತ್ತುನಾಲ್ಕು ಶಂಖಗಳು ; ವೀರಾಂಗದಗಳೆಂಬ ವಲಯಗಳು ; ಅಮೃತಭಕ್ಷ್ಯಗಳೆಂಬ ರುಚಿಕರನಾದ ಭಕ್ಷ್ಯಗಳು ; ಮಹಾಕಲ್ಯಾಣವೆಂಬ ಆಹಾರ ; ಅಮೃತವೆಂಬ ಪೇಯ ; ಅಮೃತಕಲ್ಪವೆಂಬ ಲೇಹ್ಯ ; ತೊಂಬತ್ತಾರು ಕೋಟಿ ಗ್ರಾಮಗಳು ; ನಾಲ್ವತ್ತೆಂಟು ಸಾವಿರ ಪಟ್ಟಣಗಳು ; ತೊಂಬತ್ತಾರು ಸಾವಿರ ದ್ರೋಣಾಮುಖಗಳು ; ಹದಿನಾರು ಸಾವಿರ ಖೇಟಕಗಳು ; ಹದಿನಾಲ್ಕು ಸಾವಿರ ಸಂವಾಹನಗಳು ; ಐವತ್ತಾರು ಅಂತರ ದ್ವೀಪಗಳು ; ನೂರು ಸಾವಿರ ಕೋಟಿ 'ಹಳ'ಗಳು ; ಒಂದು ಕೋಟಿ ಪ್ರಮಾಣ ಸ್ಥಳಗಳು ; ಮೂರು ಕೋಟಿ ಗೋಮಂಡಳಗಳು ; ಇಪ್ಪತ್ತೆಂಟು ಸಾವಿರ ದುರ್ಗಭೂಮಿಗಳು ; ನೂರು ಕುಕ್ಷಿನಿವಾಸಗಳು ; ಹದಿನೆಂಟು ಸಾವಿರ ಮ್ಲೇಚ್ಛರಾಜರು—

೮೫. ಹೀಗೆ ಸಮೃದ್ಧವಾದ ಐಶ್ವರ್ಯದ ಮೇಲೆ ಇಂದ್ರನು ಕೆಲಸದ ಆಳಂತೆ ಆಗಿದ್ದರೂ ಅವನ ಮನಸ್ಸಿಗೆ ತೃಪ್ತಿಯಿರಲಿಲ್ಲ. ಇದ್ದ ಧನವನ್ನು ಪ್ರತಿನಿತ್ಯವೂ ದಾನಮಾಡುತ್ತಿದ್ದನು ಈ ಚಕ್ರವರ್ತಿಯು ಗಳಿಸಿಕೊಂಡುಬಂದ ಪುಣ್ಯ ಹಾಗು ಅದರ ಫಲವನ್ನು ಅಳೆಯಲು ಸಂಖ್ಯೆ ಸಾಲದು ಸ್ವರ್ಗದಲ್ಲಾಗಲಿ, ಭೂಮಿಯಲ್ಲಾಗಲಿ ಇಂತಹ ಸೌಭಾಗ್ಯವನ್ನು ಪಡೆದವರಾರು ?

ವ॥ ಹೀಗೆ ಭೂಮಂಡಲಭೂಷಣನಾದ ಸಕಲ ಚಕ್ರವರ್ತಿಯ ಸಾಮ್ರಾಜ್ಯವೈಭವವನ್ನು ಪರಮಾಶ್ಚರ್ಯದಿಂದ ಹಿರಿಯರಾದವರು ಹೊಗಳುತ್ತಿರಲಾಗಿ—

೮೬. ಕೈಗೆ ಬಂದುದೆಲ್ಲ ಸಂತೋಷದಿಂದ ದಾನಮಾಡುತ್ತ ಸುಖ ಸಂಕಥೆಗಳಿಂದ ವಿನೋದಪಡುತ್ತ ಇರುವ ಚಕ್ರವರ್ತಿಯ ಮೈಸುಖವನ್ನು ಇಪ್ಪತ್ತೈದು ಸಾವಿರ ವರ್ಷಗಳವರೆಗೆ ಆತನ ಲಕ್ಷ್ಮಿ ಭೋಗಿಸಿದಳು.

ವ॥ ಹಾಗೆ ಇಪ್ಪತ್ತೈದು ಸಾವಿರ ವರ್ಷಗಳು ಸುಖದಲ್ಲಿ ಒಂದು ದಿನದಂತೆ ತಿಳಿಯದೆ ಕಳೆದುಹೋಗಲಾಗಿ, ಒಂದು ದಿವಸ ಬೆಳಗಾಗುವ ಹೊತ್ತಿಗೆ ನಿದ್ದೆ ತಿಳಿದ ಶಾಂತೀಶ್ವರನು ಯಾವಾಗಲೂ ಶುಭ ಪರಿಣಾಮವುಳ್ಳವನಾದುದರಿಂದ ತನ್ನ ಮನಸ್ಸಿನಲ್ಲಿಯೆ ಹೀಗೆಂದುಕೊಂಡನು :

---

1. ಕ್ಯಾಂ (ಮ) 2 ವಂ (ಮ)

ಕಂ॥ ಕೈಕೊಳ್ವೊಡಾತ್ಮಸುಖಮನೆ
ಕೈಕೊಳ್ವುದಂ ದೇಹಿ ನೆಗೞ್ ಪರಹಿತಮುಮನೀ
ಹೈಕನೆರಡ[1][ೞೊ][1]ಳವೊಂದಂ
ಕೈಕೊಳ್ವೊಡೆ ಹಿತಮುವಣಾತ್ಮಹಿತವೊಂದೆ ವಲಂ ॥ ೮೭ ॥

ವ॥ ಅದಲ್ಲದೆಯುಂ—

ಕಂ॥ ಧರೆ ಶಾಶ್ವತಮಲ್ಲಷ್ಟಮ
ಧರೆ ಶಾಶ್ವತಮವನಿಚಕ್ರವಿಕ್ರಮಚಕ್ರಂ
ದೊರೆಯಲ್ತು ಧರ್ಮಚಕ್ರಂ
ದೊರೆಯಕ್ಕುಂ ಭವ್ಯವಿನಮದಪ್ರತಿಬದ್ಧಂ ॥ ೮೮ ॥

ಈ ಪದಿನಾಲ್ಕುಂ ರತ್ನಕ
ಲಾಪಂ ರತ್ನತ್ರಯಕ್ಕೆ ಬರ್ಕುಮೆ ಭೂಪಾ
ಟೋಪಂ ಬರ್ಕುಮೆ ವೃಜಿನವಿ
ಲೋಪಿಜಿನೇಂದ್ರಪ್ರಶಾಂತಿಯೊರೆಗಂ ದೊರೆಗಂ ॥ ೮೯ ॥

ಸ್ತ್ರೀರತ್ನದೆಡೆಗೆ ಮುಕ್ತಿ
ಸ್ತ್ರೀರತ್ನಂ ಸಭೆಗೆ ದೇವಮಾನವಸಭೆ ಗಂ
ಭೀರೋಕ್ತಿಗೆ ದಿವ್ಯಧ್ವನಿ
ಸಾರಮವಂ ಬಿಸುಟನಪ್ಪೊಡುಱುಮಾಱಲ್ತೇ ॥ ೯೦ ॥

ವ॥ ಅದಱಿಂದಮಲ್ಪಮುಮನಿತ್ಯಮುಮಪ್ಪಾಜವಂಜವಾಂತರ್ವರ್ತಿಗಳೆ ಪಲರುಮಾಸನ್ನ ಭವ್ಯತಾವ್ಯಪೇತರವ್ಯವಸಾಯಪರರಾಗಿ—

೮೭. "ಮನುಷ್ಯನು ಹೊಂದುವುದಾದರೆ ಆತ್ಮಸುಖವನ್ನೇ ಹೊಂದಬೇಕು. ಇಹಪರಗಳೆರಡರಲ್ಲಿಯೂ ಸುಖವಾಗಬೇಕಾದರೆ ಪರೋಪಕಾರವನ್ನೆ ಮಾಡಬೇಕು. ಹಿತವೆಂದರೆ ಆತ್ಮಹಿತವೊಂದೇ.

ವ॥ ಅದಲ್ಲದೆ—

೮೮. ಈ ಭೂಮಿ ಕೊನೆ ಬಾಳುವುದಲ್ಲ ; ಅಷ್ಟಮ ಭೂಮಿ (ಮೋಕ್ಷ)ಯೊಂದೇ ಶಾಶ್ವತವಾದುದು; ಭೂಲೋಕದಲ್ಲಿ ಪರಾಕ್ರಮ ಬೀರುವ ಚಕ್ರ ಯೋಗ್ಯವಲ್ಲ; ಧರ್ಮಚಕ್ರವೇ ಯೋಗ್ಯ. ಏಕೆಂದರೆ ಅದು ಧರ್ಮಮಾರ್ಗಿಗಳಿಗೆ ಪೂಜ್ಯವಾದುದು ಹಾಗು ಪ್ರತಿಬಂಧಗಳನ್ನು ಮೀರಿದುದು.

೮೯. (ಜೀವಾಜೀವವೆಂಬ) ಈ ಹದಿನಾಲ್ಕು ರತ್ನಗಳು ರತ್ನತ್ರಯಕ್ಕೆ ಸಾಟಿಯೆ ? ರಾಜತ್ವದ ಆಟೋಪವು ಪಾಪಲೋಪಿಯಾದ ಜಿನೇಂದ್ರನ ಶಾಂತಿಗೆ ಸರಿಸಮನಾದೀತೆ ?

೯೦. ಸ್ತ್ರೀರತ್ನಗಳಲ್ಲಿ ಮುಕ್ತಿಸ್ತ್ರೀ, ಸಭೆಗಳಲ್ಲಿ ದೇವಮಾನವ ಸಭೆ, ಗಂಭೀರ ಉಕ್ತಿಗಳಲ್ಲಿ (ಜಿನೇಂದ್ರನ) ದಿವ್ಯಧ್ವನಿ ಅತ್ಯುತ್ತಮವಾದುವು. ಇವುಗಳನ್ನು ಒಲ್ಲೆನೆಂಬುದು ಮೂರ್ಖತನವಲ್ಲವೆ ?

ವ॥ ಅಲ್ಪವೂ ಅಶಾಶ್ವತವೂ ಆದ ಸಂಸಾರದಲ್ಲಿಯೆ ತೊಡಗಿರುವ ಜೀವರು ಕೆಲವು ಆಸನ್ನ ಭವ್ಯತೆಯನ್ನು ಪಡೆಯದೆ ಅಯೋಗ್ಯವಾದ ವ್ಯವಸಾಯಗಳಲ್ಲಿ ತೊಡಗುವರು.

1. ರೊ (ಮ)

ಕಂ॥ ಶಿವಸುಖಮನಱಿಯದೀ ಮಾ
ನವಸುಖದ ನಿಮಿತ್ತದಿಂ ತಪಂಗೆಯ್ವವರೊ
ಪ್ಪುವ ಮಾಣಿಕಮಂ ತೌಡಿಂ
ಗವಯವದಿಂ ಮಾಱುಗುಡುವ ಮರುಳಂ ಪೋಲ್ಗುಂ ॥ ೯೧ ॥

ವ॥ ಇಂತೆಂದು ವಿಸ್ತರರೂಪದೊಳ್ ಸಂಸಾರತದ್ಧೇತುಬಂಧತನ್ನಿಮಿತ್ತಮೋಕ್ಷತತ್ಕಾರಣ ಪ್ರಪಂಚಮಂ ದಿವ್ಯಚಿತ್ತದೊಳ್ ಪರಮಾರ್ಥಂಗೆಯ್ದು ಪರಿನಿಷ್ಕ್ರಮಣಕಲ್ಯಾಣಾಭಿಮುಖನಾಗಿರ್ದ ಚಕ್ರವರ್ತಿಯ ಬಗೆಯನಱಿದು—

ಮ॥ ಮಕುಟಾಗ್ರಸ್ಥಿತಜೈನಬಿಂಬ ವಿಹಟಚ್ಚೂಡಾಮಣಿವ್ರಾತರಿಂ
ದ್ರಕದಂಬಪ್ರತಿಬೋಧಕರ್ ಜಿನಸಮಾಳೋಚಿತ್ಯಕರ್ತೃತ್ವಭಾ
ವೇರಾದೇವನ ಚಿತ್ತವಾರ್ಧಿಗಮೃತಂ ಬರ್ಪಂದದಿಂ ಸಂತತಾಂ
ತಿಕಸಂವಾಸಿಗಳಂತೆ ತಮ್ಮ ನೆಲೆಯಿಂ ಲೋಕಾಂತಿ[1][ಕ][1]ರ್ ಬರ್ಪುದುಂ ॥ ೯೨ ॥

ವ॥ ದ್ವಾರಪಾಲಕರರಸಂಗವರ ಬರವನಱಿಪಿ ಬಂದು ಕಾಣಿಸೆ ಲೋಕಾಂತಿಕದೇವರವನೀಶ್ವರಪಾದಪ್ರಣತರಾಗಿ—

ಕಂ॥ ಪಂಚಮರಥಾಂಗಪಾಣಿಗೆ
ಪಂಚಮಕಲ್ಪಪ್ರಧಾನರಮೃತಾಯತಮಾ
ದಿಂಚರದಿಂ ಬಿನ್ನವಿಸಿದ
ರಂಚಿತದಶನಾಂಶು ಸೆಣಸೆ ಮಣಿದೀಪಿಕೆಯೊಳ್ ॥ ೯೩ ॥

ಮ॥ ಇಭವಿದ್ವೇಷಿಗೆ ವಿಕ್ರಮಂ ಪರಿದಳನ್ಮಂದಾರಪುಷ್ಪಕ್ಕೆ ಸೌ
ರಭಮರ್ಕಂಗೆ ಬಿಸಿಲ್ ಹಿಮಾಂಶುಗೆ ಹಿಮಂ ವೈಶ್ವಾನರಂಗುಷ್ಣ[ವ]
ತ್ಪ್ರಭೆ ನೀರ್ಗಾರ್ದ್ರತೆ ಮುಳ್ಗೆ ಚೂರ್ಮೊನೆ ಭವಚ್ಚಿತ್ತಕ್ಕೆ ತತ್ವಜ್ಞತಾ
ವಿಭವಂ ಸಾಜಮದಂ ನಿಯೋಜಿಸುವೆನಾನೆಂಬಂ ಮರುಳ್ಗೊಂಡನೇ ॥ ೯೪ ॥

---

೯೧. ಮೋಕ್ಷಸುಖವನ್ನು ಅರಿಯದೆ ಈ ಮಾನವಸುಖಕ್ಕಾಗಿಯೆ ಕೆಲವರು ತಪಸ್ಸು ಮಾಡುವರು ; ಮಾಣಿಕವನ್ನು ಮಾರಿ ತವುಡು ಕೊಳ್ಳುವ ಮೂರ್ಖನಿಗೆ ಅವರು ಸಮಾನರು."

ವ॥ ಹೀಗೆಂದು ವಿಸ್ತಾರವಾಗಿ ಸಂಸಾರ ಬಂಧ, ಮೋಕ್ಷ, ಅದರ ಕಾರಣ—ಇವೆಲ್ಲವನ್ನು ತನ್ನ ದಿವ್ಯಚಿತ್ತದಲ್ಲಿ ಯೋಚಿಸಿ ನಿಶ್ಚಯಮಾಡಿ, ಪರಿನಿಷ್ಕ್ರಮಣ ಕಲ್ಯಾಣಕ್ಕೆ ಉದ್ಯುಕ್ತನಾದನು. ಆತನ ಈ ಯೋಚನೆಯನ್ನರಿತು—

೯೨. ತಮ್ಮ ಕಿರೀಟಗಳ ಮೇಲೆ ಜಿನಬಿಂಬದ ಪ್ರಭೆಯನ್ನು ಧರಿಸಿಕೊಂಡು ಇಂದ್ರಾದಿಗಳಿಗೆ ಪ್ರಬೋಧಕರೂ, ಜಿನನ ಆಲೋಚನೆ ರಾಗು ಕಾರ್ಯಗಳಲ್ಲಿ ಭಕ್ತಿಯುಳ್ಳವರೂ, ನಿರಂತರ ಬ್ರಹ್ಮಕಲ್ಪವಾಸಿಗಳೂ ಆದ ಲೋಕಾಂತಿಕ ದೇವರು ದೇವನ ಚಿತ್ತಸಮುದ್ರಕ್ಕೆ ಅಮೃತ ಬರುವಂತೆ ತಮ್ಮ ನೆಲೆಗಳಿಂದ ಬಂದರು.

ವ॥ ಅವರು ಬಂದುದನ್ನು ದ್ವಾರಪಾಲಕರು ಅರಸನಿಗೆ ಅರಿಕೆಮಾಡಿ ಅವರನ್ನು ತಂದು ಕಾಣಿಸಲಾಗಿ ಲೋಕಾಂತಿಕದೇವರು ಶಾಂತೀಶ್ವರನ ಪಾದಗಳಿಗೆ ನಮಸ್ಕರಿಸಿ—

೯೩. ಐದನೆಯ ಚಕ್ರವರ್ತಿಗೆ ಐದನೆಯ ಕಲ್ಪದ ಅಧಿಪತಿಗಳು ಅಮೃತಸಮಾನವಾದ ಧ್ವನಿಯಿಂದ ರತ್ನದೀಪಗಳೊಡನೆ ಸ್ಪರ್ಧಿಸುವ ದಂತಪ್ರಭೆಯನ್ನು ಹರಡುತ್ತ ಹೀಗೆ ಬಿನ್ನವಿಸಿದರು :

೯೪. "ಸಿಂಹಕ್ಕೆ ಶೌರ್ಯ, ಮಂದಾರಪುಷ್ಪಕ್ಕೆ ಪರಿಮಳ, ಸೂರ್ಯನಿಗೆ ಬಿಸಿಲು, ಚಂದ್ರನಿಗೆ ತಂಪು, ಬೆಂಕಿಗೆ ಉಷ್ಣಪ್ರಭೆ, ನೀರಿಗೆ ಆರ್ದ್ರತೆ, ಮುಳ್ಳಿಗೆ ಹರಿತವಾದ ಮೊನೆ ಹೇಗೊ ಹಾಗೆ ನಿನ್ನ ಚಿತ್ತಕ್ಕೆ ತತ್ವಜ್ಞತೆಯ ವೈಭವ ನೈಸರ್ಗಿಕ ; ಹೀಗಿರುವಾಗ ಅದನ್ನು ನಿನ್ನಲ್ಲಿ ಉಂಟುಮಾಡುವೆನೆಂಬವನು ಬುದ್ಧಿಗೇಡಿಯೆ.

---

1. ಗ (ಮ)

ವ॥ ಅವಲ್ಲದೆಯುಂ ನಿನಗೊರ್ಮೆ ಶಾಂತತೆಯುಂ ಮತ್ತೊರ್ಮೆ ಸಮಾವಿಳತೆಯುಮೆಂಬ ಮಾತುಗಳ್ ಛಾಯಾತಪವಿರೋಧ ವಿದ್ಧಂಗಳೆಂತೆನ್ನೆ—

ಕಂ॥ ಮಳರಹಿತನೊರ್ಮೆ ವಿಳಸ
ನ್ಮಳನೊರ್ಮೆ ಪೆಱಂ ಸದಾಚ್ಛನೈ ನೀಂ ಬೇಗಂ
ತಿಳಿವುದುಮಾ ಕದಡುವುದುಂ
ಕುಳುಂಪೆಯೊಳ್ ನೆಗೞ್ಗುಮುದಧಿಯೊಳ್ ನೆಗೞ್ದಪುದೇ ॥ ೯೫ ॥

ನೀರಜದ ರಜದ ಪೊರೆಪಾ
ನೀರೇಜದ ನೀರ ಪೊರೆಪು ಪೊರೆ[1]ಪೊರೆನೀಂ[1][ಸಂ]
ಸಾರಕ್ಕೆ ನಿನಗವಿಾಸಂ
ಸಾರಂ ಪೊರೆವೊರೆ ಪರಾತ್ಮಹಿತನುತಚರಿತಾ ॥ ೯೬ ॥

ಸ್ಥಿತಭೌವೋತ್ತರದೇಯು
ಸ್ತಿತಿ ಬೆಸದೊಳ್ ಗರ್ಭಸಂಭವಕ್ಕಭಿ[2]ಮತದು[2]
ನ್ನತದಿವ್ಯಸಂಭವರ್ಗನು
ಚಿತಮೆಂಬಂತೀಶ ನಿಮಗೆ ಪೆಱರುಪದೇಶಂ ॥ ೯೭ ॥

ವ॥ ಅಂತು ಪರಮೇಶ್ವರನ ಬಗೆಯಂ ನೋಡಿಯೊಳಭಿನಯಿಸುವಂತೆ ನುಡಿದು ಸಾರಸ್ವತಾದಿಗಳಧೀಶ್ವರಂಗೆಱಗಿ—

ಕಂ॥ ಅಯ್ದನೆಯ ಗತಿಯನಚರಸ
ನೆಯ್ದಿಪ ಬಗೆ ಕಡೆಯನೆಯ್ದೆ ಲೊ[3][ೀ][3]ಕಾಂತಿಕರಂ
ತಯ್ದನೆಯ ನಾಕಲೋಕಮ
ನೆಯ್ದಿದರಯ್ದನೆಯ ಚಕ್ರವರ್ತಿಯುಮಾಗಳ್ ॥ ೯೮ ॥

ವ॥ ಅದಲ್ಲದೆ, ನಿನ್ನಲ್ಲಿ ಒಮ್ಮೆ ಶಾಂತಿಯೂ ಇನ್ನೊಮ್ಮೆ ಕ್ಷೋಭೆಯೂ ಉಂಟೆಂದರೆ ಅದು ನೆಳಲು-ಬಿಸಿಲುಗಳೆರಡೂ ಒಂದೇ ಕಡೆಗೆ ಇವೆಯೆಂದು ಹೇಳಿದಂತೆ ಅಸಮಂಜಸವಾದ ಮಾತು; ಹೇಗೆಂದರೆ—

೯೫. ಹೆರವರಾದರೆ ಒಮ್ಮೆ ಮಲರಹಿತರೂ ಒಮ್ಮೆ ಮಲಸಹಿತರೂ ಆಗಿರಬಹುದು. ನೀನು ಸದಾಕಾಲ ನಿರ್ಮಲನಾದವನು. ತಟ್ಟನೆ ಕದಡುವುದೂ ಹಾಗು ತಿಳಿಯುವುದೂ ಆಳವಿಲ್ಲದ ಕುಂಟೆಯಲ್ಲಿ ಉಂಟಲ್ಲದೆ ಸಾಗರದಲ್ಲಿ ಸಾಧ್ಯವೆ?

೯೬. ತಾವರೆಗೂ ದೂಳಿಗೂ ಇರುವ ಸಂಬಂಧ ಅಥವಾ ನೀರಿಗೂ ತಾವರೆಗೂ ಇರುವ ಸಂಬಂಧ ಬರಿ ತೋರಿಕೆಯ ಸಂಬಂಧವಷ್ಟೇ. ಅದರಂತೆ ಸಂಸಾರಕ್ಕೂ ನಿನಗೂ ಇರುವ ಸಂಬಂಧ ಬರಿ ಹೊರನೋಟಕ್ಕೆ ತೋರುವ ಸಂಬಂಧ. ಆತ್ಮದ ಪರಮಹಿತವನ್ನರಿತು ಆಚರಿಸುವವನು ನೀನು.

೯೭. ಮೋಕ್ಷಸಾಧನೆಗಾಗಿ (ಗರ್ಭರಹಿತವಾದ) ದಿವ್ಯಜನ್ಮವನ್ನು ಪಡೆಯುವ ಮಹಾತ್ಮರಿಗೆ ಗರ್ಭಜನ್ಮ ಹೇಗೆ ಉಚಿತವಲ್ಲವೊ ಹಾಗೆ ನಿಮಗೆ ಬೇರೆಯವರು ಉಪದೇಶಮಾಡುವುದೂ ಅನುಚಿತ."

ವ॥ ಈ ಮೇರೆಗೆ ಪರಮೇಶ್ವರನ ಮನಸ್ಸನ್ನೆ ತಮ್ಮ ಮಾತಿನಲ್ಲಿ ಅಭಿನಯಿಸಿ ತೋರುವಂತೆ ನುಡಿದು ಸಾರಸ್ವತನೆ ಮೊದಲಾದ ಲೋಕಾಂತಿಕದೇವರು ಶಾಂತೀಶನಿಗೆ ನಮಸ್ಕರಿಸಿದರು.

೯೮. ಐದನೆಯ ಗತಿ(ಮೋಕ್ಷಪದವಿ)ಗೆ ಈ ಜನ್ಮರಹಿತನನ್ನು ಮುಟ್ಟಿಸುವ ಯೋಚನೆ ನೆರವೇರಲಾಗಿ ಲೋಕಾಂತಿಕದೇವರು ಐದನೆಯ ಸ್ವರ್ಗಕ್ಕೆ ಹೋದರು. ಐದನೆಯ ಚಕ್ರವರ್ತಿಯಾದ ಶಾಂತೀಶನೂ ಆಗ

---

1. ಪೊಲೆವಿ (ಅ) 2. ನಮದು (ಅ) 3. × (ಮ)

ವ॥ ತಪಶ್ಚರಣ ನಿಶ್ಚಿತಮನನಾಗಿ—

ಕಂ॥ ಪರಿನಿಷ್ಕ್ರಮಣಶ್ವಸನಂ
ತರೆ ನಾಲ್ಕುಂತೆಱದ ದಿವಿಜ ಜೀಮೂತಕುಳಂ
ಬರೆ ಕೇ[ಠ][1]ಲ್ಲದ ಚಿತ್ರದ
ವಿರಚನೆಯಂ ಪೋಲ್ತುದಮಳಜಳಧರಮಾರ್ಗಂ ॥ ೯೯ ॥

ವ॥ ಅಂತು ಪ್ರಥಮನಾಕನಾಯಕಪ್ರಗ್ರಹಾಮರರ್ ಬಂದು ಷೋಡಶತೀರ್ಥಕರಪಾದಪಯೋಜಂಗಳ್ಗವನತಮಣಿಮಕುಟರಾಗಿ ಪರಿಚಾರಕಕೃತ್ಯಮೊಳ್ ನೆಗೞೆ ಮಂಗಳಪ್ರಸಾಧನಸನಾಥನುಂ ವಿನೀತನುಮವತ್ಯಸರಸನುಮಪ್ಪ ನಾರಾಯಣನೆಂಬ ಪಿರಿಯಮಗಂಗೆ ರಾಜ್ಯಭಾರಮಂ ದಯೆಗೆಯ್ದು ಬಂದು ಸಿವಿಗೆಯ ನೇಱೆ—

ಪೃಥ್ವೀವೃತ್ತಂ॥ ಅದಂ ಮೊದಲೊಳೆತ್ತಿ ಪೊತ್ತು ನಡೆದರ್ ಮಹೀನಾಥರ
ತ್ತುದಾತ್ತಖಚರೇಂದ್ರರಭ್ರಪಥದೊಳ್[ವಲಂ]ಪೊತ್ತರ
ತ್ತುದಗ್ರರಮರೇಂದ್ರರುಯ್ದರಮರಾಂಗನಾನರ್ತನಾ
ಸ್ಪದಂ ಗಗನರಂಗ[2]ಮೊಪ್ಪಿನೆಗಮೊಪ್ಪೆ ಪುಣ್ಯೋತ್ಸವಂ ॥ ೧೦೦ ॥

ವ॥ ಅಂತು ತ್ರೈಲೋಕ್ಯಕ್ಷೋಭಕಾರಿಯಾದೊಸಗೆಯೊಳ್—

ಉ॥ ವೈಣ ರಸೋತ್ತರಾರವಮಯಂ ಭುವನಂ ಸುರದುಂದುಭಿಧ್ವನಿ
ಶ್ರೇಣಿಮಯಂ ಪುರಂ ಕುಸುಮವೃಷ್ಟಿಮಯಂ ನಭಮಿಂದ್ರಸರ್ವಗೀ
ರ್ವಾಣಮಯಂ ಮಹೀವಳಯಮಾಗೆ ಮಹಾಮಹಮಾತೃತೀಯಕ
ಲ್ಯಾಣದೊಳಾಯ್ತು ನಿಷ್ಕ್ರಮಣದಿಂ ಭುವನತ್ರಯಚಕ್ರವರ್ತಿಯಾ ॥ ೧೦೧ ॥

ವ॥ ತಪಸ್ಸಿಗೆ ಹೊರಡಲು ನಿರ್ಧರಿಸಿ —

೯೯. ಗಾಳಿಯಿಂದ ಮೋಡಗಳು ಎದ್ದು ಬಂದು ಆಕಾಶವನ್ನು ಆವರಿಸುವಂತೆ, ಪರಿನಿಷ್ಕ್ರಮಣವನ್ನು ತಿಳಿದು (ಭವನವಾಸಿ, ವ್ಯಂತರ, ಜ್ಯೋತಿಷ್ಕ ಮತ್ತು ಕಲ್ಪವಾಸಿಗಳೆಂಬ) ನಾಲ್ಕು ಬಗೆಯ ದೇವತೆಗಳು ಬಂದು ನೆರೆದು ಗೋಡೆಯಿಲ್ಲದೆ ಬರೆದ ಚಿತ್ರಮಾಲೆಗಳಂತೆ ಆಕಾಶವನ್ನು ತುಂಬಿದರು.

ವ॥ ಸೌಧರ್ಮೇಂದ್ರನು ತನ್ನ ದೇವಪರಿವಾರದೊಡನೆ ಬಂದು ಹದಿನಾರನೆಯ ತೀರ್ಥಕರ ಪಾದಗಳಿಗೆ ತಲೆಬಾಗಿ ಪರಿಚಾರಿಕೆಯನ್ನು ಒದಗಿಸಿದನು. ನಾರಾಯಣನೆಂಬ ಹಿರಿಯ ಮಗನಿಗೆ ಮಂಗಳ ಪ್ರಸಾಧನ ವಿಧಿಯೊಂದಿಗೆ ಅಭಿಷೇಕಮಾಡಿ ರಾಜ್ಯಭಾರವನ್ನಿತ್ತು ಶಾಂತೀಶನು ಸಿವಿಗೆಯನ್ನೇರಿದನು.

೧೦೦. ಅದನ್ನು ಮೊದಲು ಎತ್ತಿಕೊಂಡು ಭೂಪತಿಗಳು ನಡೆದರು; ಆಮೇಲೆ ಖೇಚರೇಂದ್ರರು ಎತ್ತಿಕೊಂಡು ಆಕಾಶಮಾರ್ಗವಾಗಿ ನಡೆದರು; ಅಲ್ಲಿಂದಾಚೆಗೆ ದೇವೇಂದ್ರರು ಸಿವಿಗೆಯನ್ನು ಹೊತ್ತು ನಡೆದರು. ದೇವಾಂಗನೆಯರ ನೃತ್ಯದಿಂದ ಆಕಾಶ ಸುಂದರವಾಯಿತು. ಹೀಗೆ ಪುಣ್ಯೋತ್ಸವವು ನಡೆಯಿತು.

ವ॥ ಹೀಗೆ ಮೂರು ಲೋಕಗಳಲ್ಲಿಯೂ ಕ್ಷೋಭೆಯನ್ನುಂಟುಮಾಡಿದ ಶುಭೋತ್ಸವದಲ್ಲಿ—

೧೦೧. ಲೋಕವೆಲ್ಲ ವೀಣಾ ಧ್ವನಿಮಯ; ಪುರವೆಲ್ಲ ದೇವದುಂದುಭಿ ಧ್ವನಿಮಯ; ಆಕಾಶವೆಲ್ಲ ಪುಷ್ಪವೃಷ್ಟಿಮಯ; ಭೂಮಂಡಲವೆಲ್ಲ ಇಂದ್ರಾದಿ ಸಮಸ್ತ ದೇವತಾಮಯ— ಹೀಗೆ ತ್ರಿಲೋಕಚಕ್ರವರ್ತಿಯ ತೃತೀಯ ಕಲ್ಯಾಣೋತ್ಸವವು ಮಹತ್ತಾಗಿ ನಡೆಯಿತು.

---

1. ಞ (ಮ) 2. ಮೊ (ಮ)

ವ॥ ಅಂತು ಪರಾರ್ಧ್ಯ ಶಿಬಿಕಾರೂಢಂ ಶಾಂತೀಶ್ವರಂ ಗಗನಗಮನದಿಂ ಸಹಸ್ರಾಮ್ರವನಂಬರಂ ಬರೆ ದೇವದೇವನ ಮನಮನಱಿದು ದೇವರಲ್ಲಿ ಸಿವಿಗೆಯನಿೞಿಪಲೆಂದಭಿಮುಖರಪ್ಪುದುಂ—

ಕಂ॥ ಆಕಾಶಗಂಗೆ ಧರೆಗಿೞಿ
ವಾಕಾರದಿನೊಯ್ಯನೊಯ್ಯನವತರಿಸೆ ಸು[1]ರಾ[1]
ನೀಕಂ ಸಹಕಾರವನ
ಶ್ರೀ ಕಣ್ಗೊಪ್ಪಿದುದು ಜಿನವಸಂತಾಗಮದೊಳ್ ॥ ೧೧೨ ॥

ವ॥ ಅಲ್ಲಿ ಸೌಧರ್ಮೇಂದ್ರಂ ನಂದಿದ್ರುಮದೊಳ್ ಮಣಿಮಯಶಿಬಿಕಾಯಾನಮನಿೞಿಪುವುದುಂ ತ್ರೈಲೋಕ್ಯಶೇಖರಂ ಸಿವಿಗೆಯಿಂದ ಮಿೞಿದಪಸಾರಿತವಸ್ತ್ರಾಭರಣನಾಗಿ—

ಕಂ॥ ಮಣಿಭೂಷಣದಿವ್ಯಾಂಬರ
ಗಣಂಗಳಂ ತಣಿಯೆ ಕೊಟ್ಟು ದಿವಿಜಗಣಕ್ಕು
ಲ್ಬಣತೆಯನುೞಿದೊಪ್ಪಿದ ಭೂ
ಷಣಾಂಗವೃಕ್ಷ[2]ಮೆ[2]ನೆ ಭುವನಪತಿ ತಾಂ [3]ಪೋಲ್ತಂ[3] ॥ ೧೧೩ ॥

ವ॥ ಅಂತುತ್ತರಾಭಿಮುಖನಾಗಿ ಪಲ್ಯಂಕಾಸನದೊಳ್ ಕುಳ್ಳಿರ್ದು—

ಕಂ॥ ಶುದ್ಧಮನೋವೃತ್ತಿ ನಮ
ಸ್ಸಿದ್ಧೇಭ್ಯ ಎನುತ್ತೆ ಪಂಚಮುಷ್ಟಿಯಿನಘಮೂ
ಲೋದ್ಧರಣಂಗೆಯ್ವವೊಲಪ
ರುದ್ಧಾಸ್ರವನಾತ್ಮಕೇಶತತಿಯಂ ಪಱಿದಂ ॥ ೧೧೪ ॥

ವ॥ ಅಂತು ಪಱಿದು ಬಿಸುಟ ಹರಿನೀಳಮದಾಳಿಕಳಭಕುಳಮಸೃಣಕುಟಿಳಸಮೃದ್ಧಕುಂತಳಂಗಳಂ ವಜ್ರದ ಪಡಲಿಗೆಗಳೊಳಾಂತುಕೊಂಡು —

ವ॥ ಹೀಗೆ ಶ್ರೇಷ್ಠವಾದ ಸಿವಿಗೆಯಲ್ಲಿ ಕುಳಿತು ಶಾಂತೀಶ್ವರನು ಆಕಾಶಮಾರ್ಗವಾಗಿ ಸಹಸ್ರಾಮ್ರವೆಂಬ ವನಕ್ಕೆ ಬಂದನು. ಆತನ ಮನಸ್ಸನ್ನು ಅರಿತು ದೇವತೆಗಳು ಸಿಬಿಕೆಯನ್ನು ಅಲ್ಲಿಯೆ ಇಳಿಸುತ್ತ

೧೧೨. ಆಕಾಶಗಂಗೆ ಭೂಮಿಗೆ ಇಳಿಯುವಂತೆ ದೇವಸಮೂಹವು ಮೆಲ್ಲಮೆಲ್ಲಗೆ ಇಳಿಯಲು ಜಿನನೆಂಬ ವಸಂತನ ಆಗಮನದಿಂದ ಆಮ್ರವನವು ಶೋಭಾವಹವಾಗಿ ಕಂಗೊಳಿಸಿತು.

ವ॥ ಸೌಧರ್ಮೇಂದ್ರನು ನಂದಿದ್ರುಮದ ಬಳಿ ಸಿಬಿಕೆಯನ್ನಿಳಿಸಲಾಗಿ ತ್ರಿಭುವನಚೂಡಾಮಣಿ ಶಾಂತೀಶ್ವರನು ಸಿವಿಗೆಯಿಂದಿಳಿದು ತನ್ನ ವಸ್ತ್ರಾಭರಣಗಳನ್ನು ಕಳಚಿದನು.

೧೧೩. ತಾನು ತೊಟ್ಟ ರತ್ನಾಭರಣಗಳನ್ನೂ ಉಟ್ಟ ದಿವ್ಯ ವಸ್ತ್ರಗಳನ್ನೂ ದೇವಸಮೂಹಕ್ಕೆ ಮನದಣಿಯುವಂತೆ ಕೊಟ್ಟು ಶಾಂತೀಶ್ವರನು ಭೂಷಣಾಂಗ ಕಲ್ಪವೃಕ್ಷವನ್ನು ಸೋಲಿಸಿದನು.

ವ॥ ಅನಂತರ ಉತ್ತರಕ್ಕೆ ಮುಖಮಾಡಿ ಪಲ್ಯಂಕಾಸನದಲ್ಲಿ ಕುಳಿತು—

೧೧೪. ಮನಃಶುದ್ಧಿಯಿಂದ "ನಮಃಸಿದ್ಧೇಭ್ಯಃ" ಎನ್ನುತ್ತ ಐದು ಹಿಡಿಯಿಂದ ಪಾಪಮೂಲವನ್ನೇ ಕಿತ್ತು ತೆಗೆವಂತೆ ಆಸ್ರವಮುಕ್ತನಾದ ಆತನು ತನ್ನ ತಲೆಗೂದಲನ್ನು ಕಿತ್ತುಹಾಕಿದನು.

ವ॥ ಹಾಗೆ ಹರಿದೊಗೆಯಲಾಗಿ ಇಂದ್ರನೀಲದಂತೆ ಕಪ್ಪಾಗಿಯೂ, ಸೊಕ್ಕಿದ ದುಂಬಿಗಳಿಂದ ಆವೃತವಾಗಿಯೂ, ಗುಂಗುರುಗುಂಗುರಾಗಿ ಸ್ನಿಗ್ಧವಾಗಿಯೂ ಇದ್ದ ಆತನ ಸಮೃದ್ಧ ಕೂದಲನ್ನು ವಜ್ರದ ಹಡಲಿಗೆಗಳಲ್ಲಿ ಇಟ್ಟುಕೊಂಡು—

---

1. ಧಾ (ಅ) 2. ಮ (ಮ) 3. ಗೆಲ್ದಂ (ಮ)

ಕಂ॥ ಅಮರೇಶ್ವರರುಯ್ವು ತದು
ತ್ತಮಕೇಶಮನಿಕ್ಕೆ ನೀಲಮಣಿಶಬಳಿತ ವಿ
ಭ್ರಮಮಂ ಪಡೆದುವು ಪಂಚಮ
ಸಮುದ್ರವಿದ್ರುಮಲತಾಪ್ರತಾನಾವಳಿಗಳ್ ॥ ೧೦೫ ॥

ವ॥ ಅಂತುಮಲ್ಲದೆ—

ಕಂ॥ ಕಂಬುಲತಾಕಾಂತೆಗೆ ನೀ
ಲಾಂಬರಕಂಚುಕಮಿದೆಂದು ಮಿಂದಿಂದುಲಸ
ದ್ಬಿಂಬಕ್ಕೆ ಲಕ್ಷ್ಮಲಕ್ಷ್ಮದ
ಲೆಂಬುದನೆನಿಸಿದುವಧೀಶಕೇಶಾವಳಿಗಳ್ ॥ ೧೦೬ ॥

ವ॥ ಅಂತು ಜ್ಯೇಷ್ಠಮಾಸದ ಸಿತಚತುರ್ದಶಿಯೊಳ್ ಭರಣೀನಕ್ಷತ್ರದೊಳಪರಾಹ್ಣದೊಳ್ ಪರಿಮದೀಕ್ಷೆಯಂ ಕೆಯ್ಕೊಳ್ವುದುಮಿಂದ್ರಪ್ರಧಾನರಮರನಿಕುರುಂಬಂ ಪರಿನಿಷ್ಕ್ರಮಣಕಲ್ಯಾಣಪೂಜೋತ್ಸವಾನಂತರಂ ಪ್ರದಕ್ಷಿಣಪೂರ್ವಕಂ ಜಿನನಾಥಂಗೆಱಗಿ ನಿಜನಿವಾಸಂಗಳ್ಗೆ ಪರೆದು ಪೋಪುದುಮಾ ಮುನೀಂದ್ರೋತ್ತಮಂ ತ್ರಿರಾತ್ರಂಬಟ್ಟದೀಕ್ಷೋಪವಾಸಂಗೆಯ್ದು ಲಬ್ಧಸಪ್ತರ್ಧಿಭೂಷಣಂ ಮನಃಪರ್ಯಯಜ್ಞಾನಪ್ರತಿಬಿಂಬದರ್ಪಣನಾಗಿ ಚರ್ಯಾಮಾರ್ಗಮನಱಿಪಲೆಂದು ಅನಗಾರವೇಳೆಯೊಳ್ [1]ಮಂ[1]ದಿರಾಭಿಧಾನಪುರಕ್ಕೆ ಚರಿಗೆಗೆವರೆ ತತ್ಪುರಾಧೀಶಂ ಸುಮಿತ್ರಂ ಶ್ರದ್ಧಾದಿ[2]ಸಪ್ತಗುಣ[2]ಸಮನ್ವಿತಂ ನವವಿಧಪುಣ್ಯಪಣ್ಯಂ ನಿಲಿಸಿ ಪವಿತ್ರಾಹಾರದಾನಮನೀವುದುಮಾತನ ಮನೆಯೊಳ್ ಪಂಚಾಶ್ಚರ್ಯಂಗಳ್ ನೆಗಟ್ದು ತದನಂತರಂ ಶಾಂತಿಭಟ್ಟಾರಕರ್ ಸಹಸ್ರಾಮ್ರವಣಕ್ಕೆ ಬಂದುತ್ತರೋತ್ತರಸ್ಥಿತಿಯಿಂ ಯೋಗನಿಯೋಗದೊಳಿರೆ—

ಚಂ॥ ಅಪಗತರಾಜಕೀರನಿನದಂ ನಿಭೃತಾನ್ಯಭೃತಪ್ರಣಾದಮು
ಪ್ರಪದಿತಪತ್ರಪತ್ರಿಭವನಂ ಗತಷಟ್ಪದಕಾಕಳೀಕಮ
ತ್ಯಪಗತಪಾಕಸತ್ವಮಪಸಾರಿತಮಾರುತಮಾಗಿ ತಿಟ್ಟವಿ
ಟ್ಟುಪವನದಂತುಟಾದುದು ಬನಂ ಜಿನಚಂದ್ರತಪಃಪ್ರಭಾವದಿಂ ॥ ೧೦೭ ॥

---

೧೦೫. ದೇವೇಂದ್ರರು ಒಯ್ದು ಕ್ಷೀರಸಮುದ್ರದಲ್ಲಿ ಬಿಡಲಾಗಿ ಅದರಲ್ಲಿಯ ಹವಳದ ಬಳ್ಳಿಗಳು ಇಂದ್ರನೀಲ ರತ್ನದ ಪ್ರಕಾಶದಿಂದ ಮಿಶ್ರವರ್ಣವಾದುವು.

ವ॥ ಅದೂ ಅಲ್ಲದೆ—

೧೦೬. ಶಂಖಗಳೆ ಕಂಠವಾದ (ಕ್ಷೀರಸಮುದ್ರವೆಂಬ) ಸ್ತ್ರೀಗೆ ಇದೊಂದು ಕರಿಯ ಕುಪ್ಪಸವೆಂಬಂತೆ ಚಂದ್ರಬಿಂಬಕ್ಕೆ ಶೋಭೆತರುವ ಅದರೊಳಗಿನ ಕಪ್ಪು ಕಲೆಯೆಂಬಂತೆ ಶಾಂತೀಶನ ಕೇಶರಾಶಿಗಳು ಕಂಗೊಳಿಸಿದುವು.

ವ॥ ಜ್ಯೇಷ್ಠ ಶುದ್ಧ ಚತುದರ್ಶಿಯಂದು ಭರಣೀನಕ್ಷತ್ರದಲ್ಲಿ ಅಪರಾಹ್ಣದ ಹೊತ್ತಿಗೆ ಶಾಂತೀಶನು ಸಂನ್ಯಾಸ ದೀಕ್ಷೆಯನ್ನು ವಹಿಸಿದನು. ಇಂದ್ರನೇ ಮೊದಲಾದ ದೇವತೆಗಳು ಪರಿನಿಷ್ಕ್ರಮಣ ಕಲ್ಯಾಣೋತ್ಸವದ ಪೂಜೆಯನ್ನು ಮುಗಿಸಿ ಪ್ರದಕ್ಷಿಣೆ ಹಾಕಿ ನಮಸ್ಕರಿಸಿ ತಮ್ಮ ನಿವಾಸಗಳಿಗೆ ಹೊರಟುಹೋದರು. ಆ ಯತಿಶ್ರೇಷ್ಠನು ಮೂರು ದಿನ ದೀಕ್ಷೋಪವಾಸಮಾಡಿ, (ಬುದ್ಧಿ, ವಿಕ್ರಿಯಾ, ತಪ, ಬಲ, ಔಷಧ, ರಸ ಹಾಗು ಕ್ಷೇತ್ರ ಎಂಬ) ಏಳು ಋದ್ಧಿಗಳನ್ನು ಪಡೆದು, ಮನಃಪರ್ಯಯ ಜ್ಞಾನವನ್ನು ಗಳಿಸಿಕೊಂಡನು. ಆಮೇಲೆ ಚರ್ಯಾಮಾರ್ಗವನ್ನು ತಿಳಿಸಲೆಂದು ಅನಗಾರ ಸಮಯದಲ್ಲಿ ಮಂದಿರ ಎಂಬ ಪಟ್ಟಣಕ್ಕೆ ಚರಿಗೆ ಬಂದನು. ಆ ಪಟ್ಟಣಕ್ಕೆ ದೊರೆಯಾದ ಸುಮಿತ್ರ ಎಂಬವನು ಶ್ರದ್ಧೆಯೆ ಮೊದಲಾದ ಏಳು ಗುಣಗಳಿಂದ ಕೂಡಿದವನಾಗಿ ನವವಿಧ ಪುಣ್ಯದಿಂದ ಜಿನೇಂದ್ರನನ್ನು ನಿಲ್ಲಿಸಿಕೊಂಡು ಪರಿಶುದ್ಧವಾದ ಆಹಾರವನ್ನು ನೀಡಿದನು. ಆತನ ಮನೆಯಲ್ಲಿ ಕೂಡಲೆ ಪಂಚಾಶ್ಚರ್ಯಗಳುಂಟಾದುವು. ಆ ಬಳಿಕ ಶಾಂತಿಭಟ್ಟಾರಕರು ಸಹಸ್ರಾಮ್ರವನಕ್ಕೆ ಮರಳಿ ಬಂದು ಉತ್ತರೋತ್ತರವಾಗಿ ತಪಸ್ಸಿನಲ್ಲಿ ತೊಡಗಿದರು.

೧೦೭. ಜಿನೇಂದ್ರನು ಮಾಡುವ ತಪಸ್ಸಿನ ಪ್ರಚಂಡ ಪ್ರಭಾವದಿಂದಾಗಿ ಆ ವನದಲ್ಲಿ ಅರಗಿಳಿಗಳ ಆಲಾಪವಿಲ್ಲ; ಕೋಗಿಲೆಗಳ ಕೂಜನವಿಲ್ಲ; ಹಕ್ಕಿಗಳ ಗೂಡುಗಳಿಲ್ಲ; ದುಂಬಿಗಳ ಮೃದುಮಧುರ ಧ್ವನಿಯಿಲ್ಲ; ಗಾಳಿಯಿಲ್ಲ; ಪಾಕಸತ್ವ(?) ವಿಲ್ಲ—ಹೀಗಾಗಿ ಆ ವನವು ಚಿತ್ರದಲ್ಲಿ ಬರೆದಿಟ್ಟ ವನದಂತಾಯಿತು.

---

1. ಮಾ (ಮ) 2. ಗುಣಸಪ್ತಕ (ಅ)

ಕಂ॥ ಕತ್ತುರಿಮೃಗಮದಮಂ ತೊಡ
ದತ್ತಳಿಸೆ ಸುರೇಂದ್ರದಾರುರಸದಿಂ ವಿಶದೋ
ದಾತ್ತಶಿಲಾಪಟ್ಟಕಮಂ
ಬಿತ್ತರಿಸಿದರಂದು ಯತಿಗೆ ವನದೇವತೆಗಳ್ ॥ ೧೦೮ ॥

ವ॥ ಅಂತುಶಿಲಾಪಟ್ಟದೊಳ್ ನಿರಂತರಂ ಸೂರ್ಯರಾತ್ರಿಪ್ರತಿಮಾಪರಂಪರೆಯಂ ಪರ್ಯಾಯದಿಂದಮನುಷ್ಠಿಸುತ್ತುಂ—

ಚಂ॥ ಮದನಹರಂ ತಪೋಗ್ರಹಣದಿಂದೆ ತಗುಳ್ದಿಡೆ ಮಾಡದಂತೆ ಸಿಂ
ದುದಱಿ(ನ)ಲ್ಪಕಾಲಕೃತಯೋಗಮಿದಿರ್ಚಿ ನಿಮಿರ್ಚಿ ಮುಯ್ಪಿನೊಳ್
ಪುದಿದ ಕುರುಳ್ ಸಮೀರಣಸಮೀರಿತಮುಳ್ಳೆಯ ಪೂತ ಕಿಂಕಿರಾ
ತದೊಳೆಱಗುತ್ತುಮಿರ್ಪಳಿಯ ಗಾವಳಿಯಂದದಿನೊಪ್ಪಿ ತೋಱುಗುಂ ॥ ೧೦೯ ॥

ವ॥ ಮತ್ತಮೊರೊರ್ಮೆ ತನ್ಮುನಿರಾಜಂಗೆ—

ಕಂ॥ ಮಗಮಗಿಪ ಪುಷ್ಪವಾಟಾ
ಳಿಗಳಳಿಗಳ್ವೆರಸು ಪೀಠದೊಳ್ ನಿಲೆ ಪೊಗಸುಂ
ಪಗಲುಂ ಬಯ್ಗೆಯುಮುರಲ
ಲ್ಲುಗೆ ಸೊಗಯಿಪನಲ್ಪಕಲ್ಪತರುಗೆಣೆಯಾದಂ ॥ ೧೧೦ ॥

ವ॥ ಅದಲ್ಲ[1][ದೆ][1]ಯುಂ ನಿತ್ಯನಿಯಮದೊಳ್—

ಕಂ॥ ಉದಯಾಸ್ತಮಯಗತಾ[2]ರ್ಕಂ[2]
ತದೀಯಮುನಿರಾಜಪೂಜಿತಚ್ಛಾಯೆಯನಾ
ತ್ರಿದಶಪತಿರಕ್ಷೆಯಂ ಮು
ಟ್ಟದು ಮುಟ್ಟದು ವನ್ಯಮೃಗವನೇಚರನಿಕರಂ ॥ ೧೧೧ ॥

---

೧೦೮. ವನದೇವತೆಗಳು ಕಸ್ತೂರಿಯ ದ್ರವವನ್ನು ತೊಡೆದು ದೇವದಾರು ರಸವನ್ನು ಲೇಪಿಸಿ ಆ ಯತಿಗಾಗಿ ಶಿಲಾಪಟ್ಟಕವನ್ನು ನಿರ್ಮಿಸಿಕೊಟ್ಟರು.

ವ॥ ಆ ಶಿಲಾಪಟ್ಟಕದ ಮೇಲೆ ಸೂರ್ಯಪ್ರತಿಮೆ, ರಾತ್ರಿಪ್ರತಿಮೆಗಳನ್ನು ಪರ್ಯಾಯವಾಗಿ ಆಚರಿಸುತ್ತ—

೧೦೯. ಮನ್ಮಥಹರನಾದ ಶಾಂತೀಶಮುನಿ ದೀರ್ಘಕಾಲದವರೆಗೆ ತಪೋಯೋಗದಲ್ಲಿ ಎಡೆಬಿಡದೆ ನಿಂತುದರಿಂದ ಬೆಳೆದು ಹೆಗಲಮೇಲೆಲ್ಲ ಹರಡಿನಿಂತ ಆತನ ಕೂದಲು ಗಾಳಿಯಲ್ಲಿ ಅಲುಗಾಡಿದಾಗ ಹೂಬಿಟ್ಟ ಅಶೋಕವೃಕ್ಷದ ಮೇಲೆ ಎರಗುತ್ತಿರುವ ದುಂಬಿಗಳ ಸಮುದಾಯದಂತೆ ಶೋಭಿಸಿತು.

ವ॥ ಮತ್ತು ಒಮ್ಮೊಮ್ಮೆ—

೧೧೦. ಗಮಗಮಿಸುವ ಹೂಬನಗಳೊಡನೆ ಪೀಠದಲ್ಲಿ ನಿಂತಾಗ ಹಗಲಿರುಳೂ ಅವುಗಳ ಹೂಗಳು ಉದುರಿ ಶಾಂತೀಶನು ಶ್ರೇಷ್ಠವಾದ ಕಲ್ಪಲತೆಯಂತೆ ಕಂಗೊಳಿಸಿದನು.

ವ॥ ಅದಲ್ಲದೆ ನಿತ್ಯನಿಯಮದಲ್ಲಿ—

೧೧೧. ಉದಯಾಸ್ತಗಳಲ್ಲಿಗೆ ಸೂರ್ಯನು ಬೆಳಗುತ್ತಿದ್ದರೂ ಇಂದ್ರರಕ್ಷಿತನಾದ ಆ ಮುನಿರಾಜನ ನೆರಳಿನ ಪ್ರದೇಶವನ್ನು ಮುಟ್ಟುತ್ತಿರಲಿಲ್ಲ; ವನ್ಯಮೃಗಗಳಾಗಲಿ, ವನಚರರಾಗಲಿ ಅಲ್ಲಿಗೆ ಬರುತ್ತಿರಲಿಲ್ಲ.

---

1. ತ (ಮ) 2. ರ್ಕ್ಕಂ (ಅ)

ವ॥ ಇಂತೀಕ್ರಮದಿಂ ಷೋಡಶವರ್ಷಾವಧಿವರಂ ತಪಸ್ಸ್[ಪ]ಮಂ ತಾಳ್ದಿಯುಂ ತಪನತಾಪದೊಳ್ ಪದ್ಮಂ ಕೊರಗದಂತೆ ಪರಮೌದಾರಿಕಶರೀರಂ ಕೊರಗದಿರೆ ಮತ್ತಮೊಂದುದೆವಸಂ ತದ್ವನ ಮಧ್ಯಸ್ಥಿತಂ ಯೋಗದೆ ೞಳ್ ಅಧ್ರುವಂ ಮೊದಲಾಗೆ ಪನ್ನೆರಡನುಪ್ರೇಕ್ಷೆಗಳುಮನಾಜ್ಞಾ[1]ವಿ[1]ಚಯಂ ಮೊದಲಾಗೆ ನಾಲ್ಕುಂ ಧರ್ಮಧ್ಯಾನಂಗಳುಮಂ ಧ್ಯಾನಿಸಿ ಶುಕ್ಲಲೇಶ್ಯಾತ್ಮಕಂ ಅಪ್ರಮತ್ತಗುಣಸ್ಥಾನಸ್ಥಿತಂ ಅಧಃಪ್ರವೃತ್ತ (ಪೂರ್ವಾನಿವೃತ್ತಿ) ಕರಣಪರಿಣಾಮಸಮಯಚೇತನಂ ಅನಂತಾನುಬಂಧಿ ಕ್ರೋಧಮಾನಮಾಯಾಲೋಭಾದಿಕಷಾಯಮಂ ಕಿಡಿಸಿ ಮತ್ತಮಂತರ್ಮುಹೂರ್ತಮನಿರ್ದು ಮಿಥ್ಯಾತ್ವಸಮ್ಯ[2]ಕ್ಪ್ರ[2]ಕೃತಿ ಸಮ್ಯಙ್ಮಿಥ್ಯಾತ್ವಮೆಂದು ತ್ರಿವಿಧಮಪ್ಪ ದರ್ಶನಮೋಹನೀಯಮಂ ನಿರ್ಮೂಲಿಸಿ ಕ್ಷಾಯಿಕ ಸಮ್ಯಗ್ದರ್ಶನಮನವಗಯ್ಸಿ [ಮತ್ತ]ಮಂತರ್ಮುಹೂರ್ತಕಾಲಂ ಪ್ರಮತ್ತಾಪ್ರಮತ್ತ ಪರಿವೃತ್ತಿಸಹಸ್ರಕ್ಷಪಕಶ್ರೇಣಿಪ್ರಾಯೋಗ್ಯಾಧಃಪ್ರವೃತ್ತ ಕರಣಕ್ಷಪಕನಾಗಿ ಮತ್ತಮಂತರ್ಮುಹೂರ್ತದಿಂ ನಿದ್ರಾನಿದ್ರಾಪ್ರಚಳಾಪ್ರಚಳಾಸ್ತ್ಯಾನಗೃದ್ಧಿನರಕಗತಿತತ್ಪ್ರಾಯೋಗ್ಯಾನುಪೂರ್ವಿತಿರ್ಯಗ್ಗತಿ ತತ್ಪ್ರಾಯೋಗ್ಯಾನುಪೂರ್ವ್ಯೇಕೇಂದ್ರಿಯವಿಕಳೇಂದ್ರಿಯಜಾತ್ಯಾತಪೋದ್ಯೋತ ಸ್ಥಾವರಸಾಧಾರಣ ಸೂಕ್ಷ್ಮ[3]ದಾನಂಗಳೆಂಬ[3] ಷೋಡಶಕರ್ಮ ಪ್ರಕೃತಿಗೆ ವಿಳಯಂಮಾಡಿ ಮತ್ತಮಂತರ್ಮುಹೂರ್ತದಿ ನಪ್ರತ್ಯಾಖ್ಯಾನಕ್ರೋಧಮಾನಮಾಯಾಲೋಭಂಗಳಂ ನಿರಾಕರಿಸಿ ಬೞಿಯಂ ಸಂಜ್ವಳನ ಕಷಾಯ ಚತುಷ್ಕನೋಕಷಾಯನವಕನಾಮತ್ರಯೋದಶಪ್ರಕೃತಿಗಳನರೆದು ಮತ್ತಂ ಸ್ತ್ರೀಪುರುಷನಪುಂಸಕಭೇದತ್ರಿಕಮಂ ಚಿರಂತನಷಟ್ಕರ್ಮಂ ಬೆರಸು ಹಾಸ್ಯರತಿಶೋಕಭಯಜುಗುಪ್ಸಾಭಿಧಾನಷಟ್ಕಷಾಯಮುಮಂ ಕಿಡಿಸಿ ವೇದನಬಂಧಮಂ ಸಮಯೋನದ್ವ್ಯಾವಳಿಕಾಸಮಯಂಗಳಿಂ ವಿದಾರಿಸಿ ಗತವೇದನಾಗಿ ಮತ್ತಂ ಪ್ರತಿಸಮಯೋದ್ಯೋತಸಂಜ್ವಳನಚತುಷ್ಟಯ[ಘಾತಿತಾ]ಶೇಷಾನುಭಾಗಸ್ವಕರ್ಮಕರಣಪೂರ್ವಸ್ಪರ್ಧಕಪತಿಯಿನಂತರ್ಮುಹೂರ್ತಮಿರ್ದು ಪೂರ್ವಪೂರ್ವಸ್ಪರ್ಧಕಾನುಭಾಗಂ ಅನುಚಿತಕೃಷ್ಟಿವಿಧಿಯಿನನಂತಗುಣಹಾನಿಸ್ವರೂಪದಿಂ ಹೀನಂಮಾಡಿ ದ್ವಾದಶ ಸಂಗ್ರಹಕೃಷ್ಟಿಗತಂ ಮಾಡುತ್ತುಂ ಮತ್ತಂ ಕೃಷ್ಟಿರೂಪಗತಚತುಷ್ಕಷಾಯಸಮಸ್ತಾನು[4]ಭಾ[4]ಗವಿಧಿಯಿಂ ಅನಂತರಂ ಕ್ರೋಧಮಾನಮಾಯಾ ಸಂಜ್ವಳನಕೃಷ್ಟಿತ್ರಿಕಮಂ ಸುಟ್ಟು ಕಷಾಯತ್ರಿಕಮಂ ಕಿಡಿಸಿದಿಂ ಬೞಿಯಂ ಲೋಭಸಂಜ್ವಳನದ ಮೊದಲ ಕೃಷ್ಟಿಗತಾನುಭಾಗಮನೞಿದು

ವ॥ ಈ ರೀತಿಯಲ್ಲಿ ಹದಿನಾರು ವರ್ಷಗಳವರೆಗೆ ತಪಸ್ಸಿನಲ್ಲಿದ್ದರೂ ಸೂರ್ಯನ ತಾಪದಿಂದ ಕಮಲಗಳು ಕೊರಗದಂತೆ ಶಾಂತೀಶ್ವರನ ಔದಾರಿಕ ದೇಹ ಕೊರಗಲಿಲ್ಲ. ಮತ್ತು ಒಂದು ದಿವಸ ಆ ವನದ ಮಧ್ಯದಲ್ಲಿ ಯೋಗಸ್ಥನಾಗಿ ಅಧ್ರುವಾನುಪ್ರೇಕ್ಷೆಯೆ ಮೊದಲಾಗಿ ಹನ್ನೆರಡು ಅನುಪ್ರೇಕ್ಷೆಗಳನ್ನೂ ಆಜ್ಞಾವಿಚಯವೇ ಮೊದಲಾದ ನಾಲ್ಕು ಧರ್ಮಜ್ಞಾನಗಳನ್ನೂ ಧ್ಯಾನಿಸಿದನು ; ಶುಕ್ಲಲೇಶ್ಯಾತ್ಮಕನಾಗಿ ಅಪ್ರಮತ್ತಗುಣಸ್ಥಾನದಲ್ಲಿ ನೆಲಸಿದನು ; ಅಧಃಪ್ರವೃತ್ತ (ಪೂರ್ವಾನಿವೃತ್ತಿ) ಕರಣಪರಿಣಾಮಸಮಯಚೇತನನಾಗಿ ಅನಂತಾನುಬಂಧಿಯಾದ ಕ್ರೋಧ, ಮಾನ, ಮಾಯಾ ಮತ್ತು ಲೋಭ ಎಂಬ ಕಷಾಯಗಳನ್ನು ನಾಶಮಾಡಿದನು ; ಮತ್ತು ಒಂದು ಅಂತರ್ಮುಹೂರ್ತ ಕಾಲ ಬಿಟ್ಟು ಮಿಥ್ಯಾತ್ವ, ಸಮ್ಯಕ್, ಪ್ರಕೃತಿ ಸಮ್ಯಙ್ಮಿಥ್ಯಾತ್ವವೆಂದು ಮೂರು ಬಗೆಯಾದ ದರ್ಶನಮೋಹನೀಯ ಕರ್ಮವನ್ನು ನಿರ್ಮೂಲಗೊಳಿಸಿದನು ; ಕ್ಷಾಯಿಕ ಸಮ್ಯಗ್‌ದರ್ಶನವನ್ನು ಹೊಂದಿದನು ; ಮತ್ತೆ ಒಂದು ಅಂತರ್ಮುಹೂರ್ತ ಕಾಲದಲ್ಲಿ ಪ್ರಮತ್ತ, ಅಪ್ರಮತ್ತ ಪರಿವೃತ್ತಿಸಹಸ್ರಕ್ಷಪಕಶ್ರೇಣಿಪ್ರಾಯೋಗ್ಯ ಅಧಃಪ್ರವೃತ್ತಕರಣಕ್ಷಪಕನಾದನು ; ಮತ್ತೆ ಅಂತರ್ಮುಹೂರ್ತ ಕಾಲದಲ್ಲಿ ನಿದ್ರಾನಿದ್ರಾ, ಪ್ರಚಳಾಪ್ರಚಳಾ, ಸ್ತ್ಯಾನಗೃದ್ಧಿ ನರಕಗತಿ ಮತ್ತು ಅದರ ಪ್ರಾಯೋಗ್ಯಾನುಪೂರ್ವಿ ತಿರ್ಯಗ್ಗತಿ, ಅದರ ಪ್ರಾಯೋಗ್ಯಾನುಪೂರ್ವಿ ಏಕೇಂದ್ರಿಯ ವಿಕಳೇಂದ್ರಿಯ ಜಾತಿ ಆತಪೋದ್ಯೋತ ಸ್ಥಾವರ, ಸಾಧಾರಣ, ಸೂಕ್ಷ್ಮಗಳೆಂಬ ಹದಿನಾರು ಕರ್ಮಪ್ರಕೃತಿಗಳನ್ನು ನಾಶಗೊಳಿಸಿದನು; ಮತ್ತೆ ಅಂತರ್ಮುಹೂರ್ತದಲ್ಲಿ ಅಪ್ರತ್ಯಾಖ್ಯಾನ, ಕ್ರೋಧ, ಮಾನ, ಮಾಯಾ, ಲೋಭಗಳನ್ನು ನಿವಾರಿಸಿದನು ; ಬಳಿಕ ನಾಲ್ಕು ಸಂಜ್ವಳನ ಕಷಾಯ, ಒಂಬತ್ತು ನೋಕಷಾಯ—ಹೀಗೆ ಒಂಬತ್ತು ಪ್ರಕೃತಿಗಳನ್ನು ಕ್ಷಯಿಸಿದನು ; ಚಿರಂತನವಾದ ಷಟ್ಕರ್ಮಗಳೊಡನೆ ಕೂಡಿ ಮತ್ತು ಸ್ತ್ರೀ-ಪುರುಷ-ನಪುಂಸಕವೆಂಬ ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆ—ಆರು ಕಷಾಯಗಳನ್ನು ನಿರ್ಮೂಲಿಸಿದನು ; ವೇದನಿಬಂಧವನ್ನು ಸಮಯೋನದ್ವ್ಯಾವಳಿಗಳಿಂದ ಸೀಳಿಹಾಕಿದನು ; ಹೀಗೆ ವೇದಗಳಿಂದ ಮುಕ್ತನಾಗಿ, ಪ್ರತಿಸಮಯೋದ್ಯೋತಸಂಜ್ವಳನಚತುಷ್ಟಯ(ಘಾತಿತಾ)ಶೇಷಾನುಭಾಗಸ್ವಕರ್ಮಕರಣಪೂರ್ವಸ್ಪರ್ಧಕಹತಿಯಿಂದ ಅಂತರ್ಮುಹೂರ್ತ ಕಾಲವಿದ್ದು ಪೂರ್ವಪೂರ್ವಸ್ಪರ್ಧಕಾನುಭಾಗವಾಗಿ ಅನುಚಿತಕೃಷ್ಟಿವಿಧಾನದಿಂದ ಅನಂತಗುಣಹಾನಿ ಸ್ವರೂಪದಿಂದ ಹೀನಗೊಳಿಸಿ, ಹನ್ನೆರಡು ಸಂಗ್ರಹಕೃಷ್ಟಿಗಳಲ್ಲಿ ಅಳವಡಿಸಿದನು ; ಮತ್ತು ಕೃಷ್ಟಿರೂಪಗತ ಚತುಷ್ಕಷಾಯ ಸಮಸ್ತಾನುಭಾಗವಿಧಿಯಿಂದ ಅನಂತರಂ ಕ್ರೋಧಮಾನಮಾಯಾಸಂಜ್ವಳನ ಕೃಷ್ಟಿತ್ರಯವನ್ನು ಲೋಪಿಸಿದನು ; ಬಳಿಕ ಲೋಭಸಂಜ್ವಳನದ ಮೊದಲ ಕೃಷ್ಟಿಗತಾನುಭಾಗವನ್ನು ಅರಿತನು. ಮತ್ತು ಅದರ ಎರಡನೆಯ ಕೃಷ್ಟಿಗತಾನುಭಾಗವನ್ನು ನಿರ್ಮೂಲಿಸಿದನು. ಬಾದರಸಾಂಪರಾಯ ಕೃಷ್ಟಿರೂಪಾನುಭಾಗವನ್ನು

---

1. (ಅ) 2 ಕ್ಷ್ವ ಪ್ರ (ಅ) 3. × (ಮ) 4. ಭೋ (ಅ)

ಮತ್ತಮುದಟಿರಡನೆಯ ಕೃಷ್ಟಿಗತಾನುಭಾಗಮಮಂ ಮರ್ದಿಸಿ ಬಾದರಸಾಂಪರಾಯ ಕೃಷ್ಟಿರೂಪಾನುಭಾಗಮನನಂತಗುಣರೂಪಹಾನಿಗೆಯ್ದು ಸೂಕ್ಷ್ಮಸಾಂಪರಾಯಕೃಷ್ಟಿವಿಧಾನಾನಂತರಂ ಬಾದರಲೋಭಸಂಜ್ವಳನಮಂ ನಿಶ್ಶೇಷಂಗೆಯ್ದು ಅಪಗತ ಸಾಮಯಿಕಚ್ಛೇದೋಪಸ್ಥಾಪನಾ ಪರಿಹಾರವಿಶುದ್ಧಿಸಂಯಮಾನುಗತಾನುವೃತ್ತಿ ಗುಣಸ್ಥಾನಂ ಸೂಕ್ಷ್ಮಸಾಂಪರಾಯಕ್ಷಪಕಂ ಸೂಕ್ಷ್ಮಲೋಭನಿರ್ಮೂಲನಂಗೆಯ್ದು ಜಿತಾಷ್ಟವಿಂಶತಿ ಮೋಹನೀಯಂ ಅತ್ತಮಿತ್ತಪನೀತ ದೋಷಜಾತಯಥಾಖ್ಯಾತಚಾರಿತ್ರಸಂಪನ್ನಕ್ಷೀಣಕಷಾಯವೀತರಾಗಚ್ಛದ್ಮಸ್ಥ ಗುಣಸ್ಥಾ[ನಾ]ನೇಕತ್ವ ವಿತರ್ಕವಿಚಾರಧ್ಯಾನಾದಿ[ಪರಿಣತ]ನ[ಪರಿ]ಮಿತಪ್ರದೇಶಂ ನಿರ್ಜರಾದಿಕರಣಪರಿಣತಂ ಕೆಲವುಸಮಯಂಗಳಿನಾತ್ಮದ್ವಿಚರಮಸಮಯದೊಳ್ ನಿದ್ರಾಪ್ರಚಳಾಪ್ರಳಯ ವಿದಾರಿತೋದಯಸಮಯದೊಳ್ ಜ್ಞಾನಾವರಣಪಂಚಕಮಂ ದರ್ಶನಾವರಣಚತುಷ್ಕಮಂ ಅಂತರಾಯ ಪಂಚಕಮಂ ಸಪ್ರಪಂಚಂ ಘಾತಿಸಿ—

ಕಂ॥ ಕದಳೀಘಾತಂ ಜೀವ
ಕ್ಕೆ ದುರಿತದಿಂದಕ್ಕುಮೆಂಬುದರ್ಹನ್ಮತಮಂ
ತದು ಮಾಣ್ದಿರೆ ಬೇರ್ವೆರಸಾ
ದುದು[1]ಜಿನನೀ[1]ಘಾತಿಗಳ್ಗೆ ಕದಳೀಘಾತಂ ॥ ೧೧೨ ॥

ವ॥ ತದನಂತರಮಾ ಮುನಿವೈರೋಚನನುಮಪ್ಪ ಮುನಿರಾಜಂಗೆ—

ಹರಣೀವೃತ್ತಂ॥ ವ್ಯವಹಿತಪದಾರ್ಥಾವಿರ್ಭಾವಪ್ರಕಾಶಕಮಿಂದ್ರಿಯಾ
ವ್ಯವಹಿತಪದಂ ಪರ್ಯಾಯದೊಳ್ [2]ತೋಕನೇತರಮಂ ?[2]
[3]ಭವವಿರಹಿತಂ ಲೋಕಾಲೋಕೈಕಗೋಚರಮಕ್ಷಯಂ
ಪ್ರವಿಮಳಗುಣೋದಾತ್ತಂ ಪುಟ್ಟಿತ್ತು ಕೇವಳಲೋಚನಂ ॥ ೧೧೩ ॥

ಅನಂತಗುಣರೂಪ ಹಾನಿಗೊಳಿಸಿದನು. ಸೂಕ್ಷ್ಮಸಾಂಪರಾಯ ಕೃಷ್ಟಿವಿಧಾನದ ಬಳಿಕ ಬಾದರಲೋಭ ಸಂಜ್ವಳನವನ್ನು ನಿಃಶೇಷಗೊಳಿಸಿದನು; ಅಪಗತ ಸಾಮಯಿಕ ಚ್ಛೇದೋಪಸ್ಥಾಪನಾಪರಿಹಾರ ವಿಶುದ್ಧಿ ಸಂಯಮಾನುಗತಾನು ವೃತ್ತಿ ಗುಣಸ್ಥಾನನಾದನು; ಸೂಕ್ಷ್ಮಸಾಂಪರಾಯ ಕ್ಷಪಕನಾಗಿ, ಸೂಕ್ಷ್ಮಲೋಭವನ್ನು ನಿರ್ಮೂಲಗೊಳಿಸಿದನು; ಇಪ್ಪತ್ತೆಂಟು ಮೋಹನೀಯಗಳನ್ನು ಗೆದ್ದನು; ದೋಷಾತೀತನಾಗಿ, ಚಾರಿತ್ರಸಂಪನ್ನನಾಗಿ, ಕಷಾಯರಹಿತನಾಗಿ, ರಾಗಾದಿಗಳನ್ನು ಕಳೆದು ಛದ್ಮಸ್ಥಗುಣಸ್ಥಾನದಲ್ಲಿ ನಿಂತನು; ಅನೇಕತ್ವ, ವಿತರ್ಕವಿಚಾರಧ್ಯಾನಾದಿ ಪರಿಣತನಾಗಿ ಅಮಿತಪ್ರದೇಶನಾದನು; ನಿರ್ಜರಾದಿ ಕ್ರಿಯೆಯಲ್ಲಿ ಪರಿಣತನಾಗಿ ಕೆಲವು ಸಮಯದಲ್ಲಿ ಆತ್ಮದ್ವಿಚರ ಸಮಯದಿಂದ ನಿದ್ರಾ, ಪ್ರಚಳಾ ಎಂಬವುಗಳನ್ನು ಸೀಳಿದನು. ಉದಯ ಸಮಯಕ್ಕೆ ಐದು ಜ್ಞಾನಾವರಣಗಳನ್ನೂ, ನಾಲ್ಕು ದರ್ಶನಾವರಣಗಳನ್ನೂ, ಐದು ಅಂತರಾಯಗಳನ್ನೂ ಸಂಪೂರ್ಣವಾಗಿ ನಾಶಮಾಡಿದನು.

೧೧೨. ಪಾಪಫಲದಿಂದಾಗಿ ಜೀವಕ್ಕೆ ಕದಳೀಘಾತ (ಅಪಮೃತ್ಯು)ವಾಗುವುದೆಂಬುದು ಅರ್ಹಂತನ ಮತ. ಇಲ್ಲಿ ಹಾಗಲ್ಲದೆ, ಜಿನನಿಂದ ಘಾತಿಕರ್ಮಗಳಿಗೆ ಸಮೂಲವಾಗಿ ಕದಳೀಘಾತವಾಯಿತು.

ವ॥ ಆ ಬಳಿಕ ಮುನಿಬ್ರಹ್ಮನಾದ ಆ ಜಿನನಿಗೆ—

೧೧೩. ಸಕಲದ್ರವ್ಯ, ಪ್ರಕಾಶ ಹಾಗು ಇಂದ್ರಿಯಗಳಿಗೆ ಅತೀತವಾದ, ಜನ್ಮಾವಳಿಯಿಂದ ಮುಕ್ತವಾದ, ಲೋಕಾಲೋಕಗಳನ್ನೆಲ್ಲ ಕಾಣಬಲ್ಲ, ಅಕ್ಷಯವೂ ನಿರ್ಮಲವೂ ಆದ ಕೇವಲಜ್ಞಾನವು ಪ್ರಾಪ್ತವಾಯಿತು.

---

1. ಜೀವನಿನ (ಅ) 2. ತೋಕನೆತರಮಂ (ಅ) 3. ಜಯದ್ರಾವ (ಅ)

ಮ॥ ಭವದಿಂದಂ ಭವದೊಳ್ ವ್ರತಂ ದ್ವಿವಿಧಮಾಪ್ತೋದ್ದಿಷ್ಟಮುದ್ವೀರಣಂ
ತ್ರಿವಿಧಂ ಬೋಧಿ ಚತುರ್ವಿಧಂ ನಮಿತಚಾರಿತ್ರಂ ವರಂ ಸೂಕ್ತಿ ಪಂ
ಚವಿಧಂ ಪ್ರಾಣ್ಯಭಿರಕ್ಷೆ ಷಡ್ವಿಧಮುದಾತ್ತೋದ್ವಿಕ್ರಮಾವಾಪ್ತಿ ಸ
ಪ್ತವಿಧಂ ಪೇಳ್ವ ತಮೋಧಿಯಂ ಕಿಡಿಸಿದಂ ಸೌಜನ್ಯಕಂದಾಂಕುರಂ ॥ ೧೧೪ ॥

—ಗದ್ಯ—

ಇದು

ಜಿನೇಂದ್ರ ಚರಣ ಸರಸೀರುಹ ಶಿಲೀಮುಖಾಯಮಾನ

ಶ್ರೀಮದುಭಯಕವಿ ಚಕ್ರವರ್ತಿ

ನಿರ್ವರ್ತಿತಮುಂ

ಅಮ್ಮನ ಭಕ್ತಾಭಿಧಾನ ವಿದ್ಯಾನಿಧಾನ ಮಲ್ಲಪಾರ್ಯ

ತದನುಜಾತಾಭಿಜಾತ ಸಾರಸ್ವತ

ಪುನ್ನಮಾರ್ಯ ಕಾರಿತಮುಮಪ್ಪ

ಪುರಾಣಚೂಡಾಮಣಿಯೊಳ್

ಏಕಾದಶಾಶ್ವಾಸಂ

---

೧೧೪. ಜನ್ಮದಿಂದ ಜನ್ಮಕ್ಕೆ ವ್ರತ ಎರಡು ಬಗೆ. ಆಪ್ತ ಉದ್ದಿಷ್ಟ ಉದ್ವೀರಣವು ಮೂರು ವಿಧ. ಬೋಧಿಯು ನಾಲ್ಕು ವಿಧ. ನಮಿತಚಾರಿತ್ರವು ಶ್ರೇಷ್ಠ ಸೂಕ್ತಿಯೂ ಐದು ವಿಧ. ಪ್ರಾಣಕ್ಕೆ ಅಭಯ ನೀಡುವುದು ಆರು ವಿಧ. ಉದಾತ್ತವೂ ವಿಕ್ರಮದಿಂದ ಕೂಡಿದುದೂ ಏಳು ವಿಧ—ಹೀಗೆ ಹೇಳುವ ತಮೋಧಿಯನ್ನು ಸೌಜನ್ಯಕಂದಾಂಕುರನು ನಾಶ ಪಡಿಸಿದನು. (ಈ ಪದ್ಯ ಸರಿಯಾಗಿ ಅರ್ಥವಾಗಲಿಲ್ಲ.)

ಗದ್ಯ॥ ಇದು ಜಿನೇಶ್ವರನ ಚರಣಕಮಲದ ದುಂಬಿಯಂತಿರುವ, ಶ್ರೀಮದುಭಯ ಕವಿಚಕ್ರವರ್ತಿಯೆಂಬ ಬಿರುದಾಂಕಿತನಿಂದ ನಿರ್ವರ್ತಿತವೂ ಅಮ್ಮನ ಭಕ್ತಾಭಿಧಾನ ಮಲ್ಲಪಾರ್ಯನ, ಅವನ ತಮ್ಮ ಹೊಸ ಸಾರಸ್ವತ ಪುನ್ನಮಾರ್ಯ ಹೇಳಿಸಿದ ಪುರಾಣಚೂಡಾಮಣಿಯಲ್ಲಿ ಹನ್ನೊಂದನೆಯ ಆಶ್ವಾಸವು.

ಶ್ರೀ

ಶಾಂತಿಪುರಾಣಂ

—o—

ದ್ವಾದಶಾಶ್ವಾಸಂ

ಕಂ॥ ಶ್ರೀಶಾಂತೀಶಂ ತ್ರಿಜಗದ
ಧೀಶಂ ಕೇವಳವಿಬೋಧವಿನಿರೋಧಪದಾ
ರ್ಥಾಶೇಷರೂಪನಮರ ನ
ರೇಶ ಸಭಾವೃತನುದಾತ್ತ ದಿವ್ಯ[1]ನಿಧಾನಂ ॥ ೧ ॥

ವ॥ ದ್ವಾದಶಗಣಪರಿವೇಷ್ಟಿತನುಮಷ್ಟ ಮಹಾಪ್ರಾತಿಹಾರ್ಯ ವಿಭವೌದಾರ್ಯನುಂ ಚತುರಾಸ್ಯನುಮಹಮಿಂದ್ರ ನಮಸ್ಯನುಂ ಚರಾಚರೋಪಾಸ್ಯನುಮಷ್ಟಾದಶದೋಷದೂರನುಂ ಪರಮೌದಾರಿಕಶರೀರನುಂ ಅನಂತ ಚತುಷ್ಟಯಾವಷ್ಟಂಭನುಂ ಭಗವತ್ಸ್ವರೂಪ ನಿರೂಪಿತನುಂ ಜನ್ಮನಿಗಳ ವಿಗಳಿತಾತ್ಮನುಮಾಗಿ—

ಕಂ॥ ಹರಿಪೀಠದ ಮೇಗೆ ನಿಜ
ಸ್ವರೂಪಮಿರೆ ನೆಗೆದ ನಾಲ್ಕುಬೆರಲಳವಿಯೊಳಾ
ಪರಮೇಶ್ವರನಘವಿಘಟನ
ಕರನಾಪ್ತಾಗಮ ಪದಾರ್ಥಮಾಗಮ್ಯತಮುಖಿಖಿಂ ॥ ೨ ॥

ಆಶ್ವಾಸ ೧೨

೧. ಮೂರೂ ಲೋಕಗಳಿಗೆ ಅಧಿಪತಿಯೂ ಕೇವಲ ಜ್ಞಾನದಿಂದ ಸಕಲ ಪದಾರ್ಥಗಳನ್ನು ಯಥಾರ್ಥವಾಗಿ ಅರಿಯಬಲ್ಲವನೂ ಆದ ಶ್ರೀ ಶಾಂತೀಶ್ವರನು ದೇವಮಾನವ ಸಭೆಯಲ್ಲಿ ಶೋಭಿಸಿದನು.

ವ॥ ಆತನ ಸುತ್ತಲೂ ಹನ್ನೆರಡು ಜನ ಗಣಗಳು; (ಅಶೋಕ ವೃಕ್ಷ, ಮುಕ್ಕೊಡೆ, ರತ್ನಖಚಿತ ಸಿಂಹಾಸನ, ಭಕ್ತಿಯುಕ್ತ ಗಣಗಳ ಸಮೂಹ, ದುಂದುಭಿನಾದ, ಪುಷ್ಪವೃಷ್ಟಿ, ಪ್ರಭಾಮಂಡಲ, ೬೪ ಚಾಮರಗಳ ಸೇವೆ ಎಂಬ) ಅಷ್ಟ ಪ್ರಾತಿಹಾರ್ಯಗಳ ವೈಭವ; ನಾಲ್ಕು ದಿಕ್ಕುಗಳಲ್ಲಿಯೂ ಎದುರಿಗೇ ಕಾಣುವಂತೆ ಮುಖ (ಚತುರ್ಮುಖತೆ) ಈ ವೈಶಿಷ್ಟ್ಯಗಳಿಂದ ಕೂಡಿ ಇಂದ್ರಪೂಜ್ಯನೂ, ಚರಾಚರಗಳಿಗೆ ಉಪಾಸ್ಯನೂ, (ಹಸಿವೆ, ನೀರಡಿಕೆ, ಭಯ, ಕ್ರೋಧ, ರಾಗ, ಮೋಹ, ಚಿಂತೆ, ಮುಪ್ಪು, ರೋಗ, ಮರಣ, ಬೆವರು, ಖೇದ, ಮದ, ರತಿ, ವಿಸ್ಮಯ, ನಿದ್ರೆ, ಜನ್ಮ ಮತ್ತು ಉದ್ವೇಗ ಎಂಬ) ಹದಿನೆಂಟು ದೋಷಗಳಿಂದ ದೂರನಾದವನೂ, ಶ್ರೇಷ್ಠವಾದ ಔದಾರಿಕ ದೇಹವುಳ್ಳವನೂ, (ಅನಂತವಾದ ಜ್ಞಾನ, ದರ್ಶನ, ಸುಖ ಹಾಗು ವೀರ್ಯಗಳೆಂಬ) ನಾಲ್ಕು ಅನಂತ ಸಿದ್ಧಿಯುಳ್ಳವನೂ, ಭಗವಂತನ ಸ್ವರೂಪವನ್ನು ನಿರೂಪಿಸುವವನೂ, ಜನ್ಮಬಂಧನದಿಂದ ಮುಕ್ತನೂ ಆಗಿ—

೨. ಸಿಂಹಾಸನದ ಮೇಲೆ ಅದನ್ನು ಮುಟ್ಟದೆ ನಾಲ್ಕು ಬೆರಳಂತರದ ಮೇಲೆಯೆ ವಿರಾಜಮಾನನಾಗಿ ಕುಳಿತು ಆಪ್ತ, ಆಗಮ ಪದಾರ್ಥಗಳನ್ನು ಅಮೃತಮುಖದಿಂದ ತಿಳಿಸಬಲ್ಲವನಾಗಿ

---

1. ನಿನಾದಂ (ಅ)

ಉ॥ ಆ ಪರಮೇಶ್ವರಂ ಪ್ರಥಿತಷೋಡಶತೀರ್ಥಕರಂ ಸಚೋದ್ಯ ವಿ
ದ್ಯಾಪರಿಪಾಕ ಶಾಸನಸಭಾವಳಯಂ ಗಣನಾಥಯೂಥಮಂ
ಕ್ಷ್ಮಾಪಸಮೂಹಮಂ ತಿಳಿಪಲೊಪ್ಪುವ ದಿವ್ಯನಿನಾದದಿಂ ಜಗ
ದ್ವ್ಯಾಪಿ ಜಿನೇಂದ್ರಶಾಸನಮತಾಶ್ರಮಮಂ ವಿಗತಾಶ್ರಮದ್ವಯಂ ॥೩॥

ವ॥ ಇಂತೆಂದು ಬೆಸಸಿದಂ ತತ್ವವಿತತ್ವಸಂಸೇವ್ಯನಿಕುರುಂಬಾಶಯಕರ್ದಮಮವಾತ್ಮವಚ[1]ಸಬೋಧೋ[1]ದಾರಕ್ಷೀರಕ್ಷಾಳಿತಮಾಗೆ—

ಕಂ॥ ಆಸ್ರವಮೆರಡುತೆಱಂ ಪು
ಣ್ಯಾಸ್ರವಮೊಂದದಱ ವೈಪರೀತ್ಯಭವಂ ಪಾ
ಪಾಸ್ರವಮಂತವಱೊಳ್ ಪು
ಣ್ಯಾಸ್ರವ್ಯವಸ್ತುಸ್ವರೂಪಮಕ್ಕುಂ ತ್ರಿವಿಧಂ ॥ ೪ ॥

ಪೃಥ್ವೀವೃತ್ತಂ॥ ಮನೋವಚನಕಾಯವೃತ್ತಿ ಶುಭಮಲ್ತೆ ಪುಣ್ಯಾಸ್ರವಂ
ಮನೋವಚನಕಾಯವೃತ್ತ್ಯಶುಭಮಲ್ತೆ ಪಾಪಾಸ್ರವಂ
ಜಿನಾಗಮದೊಳಿಂ ಕಷಾಯರಹಿತಂ ತಲೋದೀತ್ತಮ
ತ್ತನಂತ ಸುಖಹೃತ್ಕಷಾಯ ಸಹಿತಂ ಭವಾರಣ್ಯಜಂ ॥ ೫ ॥

ವ॥ ಅಂತು ಶುಭಾಶುಭಂಗಳೆಂಬೆರಡುಮಾಸ್ರವಂಗಳ್ಗೆ ಹೇತುಭೂತಮಕ್ಕುಂ [2]ಅಲ್ಲಿ[2] ಸಾಂಪರಾಯಕಾಯಮುಂ ವೀರ್ಯ ಪ್ರವೃತ್ತಿಯುಮಿಂದ್ರಿಯಕಷಾಯಯೋಗ(ಮು)ಮಿಲ್ಲದುದು ಪುಣ್ಯಾಸ್ರವಮಕ್ಕುಂ ಉೞಿದುದು ಪಾಪಾಸ್ರವದ್ವಾರಂ ಅದಂ ಮುಚ್ಚುವುದು ಸಂವ[3]ರ[3]ಮೆಂಬುದಕ್ಕುಂ ಮತ್ತಂ ಪೂರ್ವೋಪಾರ್ಜಿತಪರುಷಕರ್ಮನಿರ್ಜರಣಕಾರಣಂ ನಿರ್ಜರೆಯೆಂಬುದಕ್ಕುಂ [4]ಬೞಿಯಂ ಸತ್[4] ಕರ್ಮಬಂಧಂ ಶುಭಮೆಂಬುದಕ್ಕುಂ ಅಸತ್ಕರ್ಮಬಂಧಮಶುಭಮೆಂಬುದಕ್ಕುಂ ತದುಭಯಕರ್ಮ ನಿರ್ಮೂಲನಂ ಮೋಕ್ಷಮೆಂಬು[5]ದಕ್ಕುಂ[5]—

---

೩. ಆಶ್ಚರ್ಯಕರವಾದ ವಿದ್ಯಾಪರಿಣತರಿಂದಲೂ, ಗಣನಾಥರಿಂದಲೂ, ಭಕ್ತರಿಂದಲೂ ಕೂಡಿದ ಆ ಮಹಾ ಸಭೆಯನ್ನುದ್ದೇಶಿಸಿ ಹದಿನಾರನೆಯ ತೀರ್ಥಕರನಾದ ಆ ಪರಮೇಶ್ವರನು ಜಗದ್ವ್ಯಾಪಿಯಾದ ಜಿನಧರ್ಮವನ್ನು ತಿಳಿಸಬೇಕೆಂದು

ವ॥ ತತ್ವವನ್ನು ತಿಳಿಯದವರ ಅಜ್ಞಾನವೆಂಬ ಕೆಸರನ್ನು ತನ್ನ ವಚನಬೋಧೆಯೆಂಬ ಹಾಲಿನಿಂದ ತೊಳೆಯುತ್ತ ಹೀಗೆಂದು ಅಪ್ಪಣೆಯಿತ್ತನು :

೪. ಆಸ್ರವ ಎರಡು ಬಗೆ; ಪುಣ್ಯಾಸ್ರವವೆಂಬುದೊಂದು; ಅದಕ್ಕೆ ವಿರುದ್ಧವಾದುದು ಪಾಪಾಸ್ರವ. ಪುಣ್ಯಾಸ್ರವವು ಮೂರು ವಿಧವಾಗಿದೆ :

೫. ಮನಸ್ಸು, ಮಾತು ಹಾಗು ದೇಹಗಳ ಮೂಲಕವಾಗಿ ಶುಭ (ಸತ್ಕರ್ಮ ಬಂಧ)ವನ್ನುಂಟುಮಾಡುವುದು ಪುಣ್ಯಾಸ್ರವ ; ಅಶುಭ(ಅಸತ್ಕರ್ಮ ಬಂಧ)ವನ್ನುಂಟುಮಾಡುವುದು ಪಾಪಾಸ್ರವ. ಕಷಾಯರಹಿತವಾದ ಪುಣ್ಯಾಸ್ರವವು ಅನಂತ ಸುಖಕ್ಕೆ ಕಾರಣ ; ಕಷಾಯಸಹಿತವಾದ ಪಾಪಾಸ್ರವವು ಸಂಸಾರಾರಣ್ಯದಲ್ಲಿ (ಮರಳಿ) ಹುಟ್ಟುವುದಕ್ಕೆ ಕಾರಣ.

ವ॥ ಹೀಗೆ ಶುಭ ಮತ್ತು ಅಶುಭವೆಂಬೆರಡು ಆಸ್ರವಕ್ಕೆ ಕಾರಣಗಳು ; ಅಲ್ಲದೆ ಸಂಪರಾಯಕಾಯವೂ, ವೀರ್ಯ ಪ್ರವೃತ್ತಿಯೂ, ಇಂದ್ರಿಯ ಕಷಾಯ ಯೋಗವೂ ಇಲ್ಲದುದು ಪುಣ್ಯಾಸ್ರವ ; ಉಳಿದುದು ಪಾಪಾಸ್ರವಕ್ಕೆ ದ್ವಾರ ; ಅದನ್ನು ಮುಚ್ಚುವುದು ಸಂವರ. ಮತ್ತು ಈ ಮೊದಲು (ಪೂರ್ವಜನ್ಮಗಳಿಂದ) ಪಡೆದುಕೊಂಡು ಬಂದ ಕರ್ಮಗಳನ್ನು ನಾಶಗೊಳಿಸುವುದು ನಿರ್ಜರೆ ; ಸತ್ಕರ್ಮ ಬಂಧವೇ ಶುಭವೆಂಬುದು ; ಅಸತ್ಕರ್ಮ ಬಂಧವೆಂಬುದು ಅಶುಭ. ಈ ಎರಡೂ ಬಗೆಯ ಕರ್ಮಗಳನ್ನು ನಿರ್ಮೂಲಗೊಳಿಸುವುದೆ ಮೋಕ್ಷ.

---

1. ಸೋತ್ರಮೋ (ಅ) 2. ಅಲ್ಲವೆ (ಮ) 3. ರ (ಅ) 4. × (ಮ) 5. ದು (ಮ)

ಕಂ॥ ಏಂದಿಂತು ವಸ್ತುವಂ ನಿ
ಸ್ಸಂದೇಹಂಮಾಡಿ ಬೆಸಸೆ ತಿರ್ಯಗ್ಗಣಮುಂ
[1]ತಂದ[1]ಱಿಗುಂ ದಲೆನಲ್ ಗಣ
ಬೃಂದಂ ಪನ್ನೆರಡುಮಱಿದುದೊಂದಚ್ಚರಿಯೇ ॥ ೬ ॥

ವ॥ ತದನಂತರಂ ಭೂಚರಪರಮಗುರು ಲೋಕವಿಭಾಗಮುಮನಕಲಂಕಾಚಾರಸಾರಂ ಸಂಕ್ಷೇಪರೂಪದಿಂದಮಿಂತೆಂದು ಬೆಸಸುಗುಂ ಲೋಕಂಗಳ್ ಮೂಱಕ್ಕುಂ ತದ್ಗತಂಗಳಪ್ಪ ಜೀವಂಗಳ ಗತಿ ನಾಲ್ಕಕ್ಕುಮವಾವುವೆಂದೊಡೆ ನರಕತಿರ್ಯಙ್ಮನುಷ್ಯದೇವಗತಿನಾಮದಿಂ ಮತ್ತಮಲ್ಲಿ ದೇವಗತಿ ನಾಲ್ಕಕ್ಕುಮೆಂತೆನೆ ಭವನವಾಸಿಗ ವಾನವ್ಯಂತರ ಜ್ಯೋತಿಷ್ಕ ಕಲ್ಪವಾಸಿ ಭೇದಭಿನ್ನತ್ವದಿಂ ಮತ್ತಮಲ್ಲಿ ಭವನಾಮರನಿಕಾಯ ಮುಮಸುರ ನಾಗ ಸುಪರ್ಣದ್ವೀಪೋದಧಿಸ್ವನಿತ ವಿದ್ಯುದ್ದಿಗಗ್ನಿವಾತಕುಮಾರನಾಮದಿಂ ಪತ್ತುತೆಱಮಕ್ಕುಂ ವ್ಯಂತರಾಮರಭೇದಮೆಂಟು ವಿಧಮಕ್ಕುಮೆಂತೆನೆ ಕಿನ್ನರ ಕಿಂಪುರುಷ ಗರುಡ ಗಂಧರ್ವ ಯಕ್ಷರಾಕ್ಷಸ ಭೂತ ಪಿಶಾಚ ಭೇದದಿಂ ಮತ್ತಂ ಜ್ಯೋತಿಷ್ಕರುಂ ಪಂಚವಿಧಮೆಂತೆನೆ ಚಂದ್ರಾದಿತ್ಯಗ್ರಹನಕ್ಷತ್ರತಾರಕಾಭೇದಭಿನ್ನವಿಧಿಯಿಂ ಮತ್ತಮನಲ್ಪಕಲ್ಪಾಮರರುಮಿಂದ್ರಪ್ರತೀಂದ್ರಸಾಮಾನಿಕತ್ರಾಯಸ್ತ್ರಿಂಶಪಾರಿಷದಾತ್ಮರಕ್ಷಕ ಲೋಕಪಾಲಕಿಲ್ಬಿ[2]ಷಾ[2]ಭಿಯೋಗ್ಯ ಭೇದದಿಂ ನವವಿಧಮಕ್ಕುಮಾ ನಾಕಲೋಕಮಱುವತ್ತುಮೂಱು ಪಟಲಮಕ್ಕುಂ—

ಕಂ॥ ನಾಕತ್ರಿಷಷ್ಟಿಪಟಲಾ
ನೀಕಂ ಗ್ರೈವೇಯಕಂಗಳೊಂಭತ್ತೊಂಭ
ತ್ತಾಕಡೆವರೆವನುದಿಶೆಗಳ್
ಲೋಕೋಪರಿಮಂಗಳಯ್ದಣೂತ್ತರೆಯಕ್ಕುಂ ॥ ೭ ॥

ಅದಱ[3]ಡೆಗೀಷತ್ಪ್ರಾಗ್ಭಾ
ರದಳವಿ ಪನ್ನೆರಡುಯೋಜನಂ ಸೌಧರ್ಮ
ಕ್ಕದಱಿಂದಮತ್ತಮೂಗಾ
ವುದದೊಳ್ ನೆಲಸುವರನಂತಸುಖಿರಾ ಸಿದ್ಧರ್ ॥ ೮ ॥

೬. ಹೀಗೆ ನಿಃಸಂದೇಹವಾಗಿ ತಿಳಿಸಿ ಹೇಳಲಾಗಿ ತಿರ್ಯಕ್ ಜೀವಗಳು ಕೂಡ ತಿಳಿದುಕೊಳ್ಳುವುವು : ಎಂದಮೇಲೆ ಹನ್ನೆರಡು ಜನ ಗಣಧರರು ಅರಿತುಕೊಳ್ಳುವುದೇನು ಸೋಜಿಗವೆ ?

ವ॥ ಆಮೇಲೆ ನಿಷ್ಕಳಂಕವಾದ ಆಚಾರವುಳ್ಳ ಆ ಪರಮೇಶ್ವರನು ಲೋಕಾಕಾರವನ್ನು ಹೀಗೆಂದು ವಿವರಿಸಿದನು : ಲೋಕಗಳು ಮೂರು ಉಂಟು ; ಅವುಗಳೊಳಗಿರುವ ಜೀವಗಳಿಗೆ ನಾರಕ, ತಿರ್ಯಕ್, ಮನುಷ್ಯ ಮತ್ತು ದೇವ ಎಂಬ ನಾಲ್ಕು ಗತಿಗಳುಂಟು ; ಮತ್ತು ಅದರಲ್ಲಿ ಭವನವಾಸಿ, ವಾನವ್ಯಂತರ, ಜ್ಯೋತಿಷ್ಕ ಮತ್ತು ಕಲ್ಪವಾಸಿ ಎಂದು ದೇವಗತಿ ನಾಲ್ಕು ತೆರನಾಗಿದೆ; ಮತ್ತು ಅಸುರ, ನಾಗ, ಸುಪರ್ಣ, ದ್ವೀಪೋದಧಿಸ್ವನಿತ, ವಿದ್ಯುತ್, ಅಗ್ನಿ, ವಾತ (ಈ ಎಲ್ಲಕ್ಕೂ ಮುಂದೆ ಕುಮಾರ ಎಂಬ ಪದ ಸಹಿತವಾಗಿದೆ) ಎಂದು ಹತ್ತು ತೆರನಾಗಿ ಭವನಾಮರರು ; ವ್ಯಂತರಾಮರರಲ್ಲಿ ಎಂಟು ಭೇದಗಳು : ಕಿನ್ನರ, ಕಿಂಪುರುಷ, ಗರುಡ, ಗಂಧರ್ವ, ಯಕ್ಷ, ರಾಕ್ಷಸ, ಭೂತ, ಪಿಶಾಚ ಎಂದು ಮತ್ತು ಕಲ್ಪಾಮರರಲ್ಲಿ : ಇಂದ್ರ, ಪ್ರತೀಂದ್ರ, ಸಾಮಾನಿಕ, ತ್ರಾಯತ್ರಿಂಶ, ಪಾರಿಷದ, ಆತ್ಮರಕ್ಷಕ, ಲೋಕಪಾಲ, ಕಿಲ್ಬಿಷ, ಅಭಿಯೋಗ್ಯ ಎಂದು ಒಂಬತ್ತು ಭೇದಗಳಿವೆ. ಸ್ವರ್ಗಲೋಕದಲ್ಲಿ ಅರುವತ್ತುಮೂರು ಪಟಲಗಳಿವೆ

೭. ಈ ಅರುವತ್ತುಮೂರು ಪಟಲಗಳ ಮೇಲೆ ಒಂಬತ್ತು ಗ್ರೈವೇಯಕಗಳೂ. ಅಲ್ಲಿಂದ ಮೇಲೆ ಒಂಬತ್ತು ಅನುದಿಶೆಗಳೂ, ಅದರಾಚೆಗೆ ಲೋಕದ ಮೇಲ್ಭಾಗದಲ್ಲಿ ಐದು ಅಣೂತ್ತರೆಗಳೂ ಉಂಟು.

೮. ಅದರ ಬಳಿ ಈಷತ್ಪ್ರಾಗ್ಭಾರ(ವೆಂಬ ಅಷ್ಟಮ ಭೂಮಿಯೊಳಗಿನ ಕ್ಷೇತ್ರವು) ಸೌಧರ್ಮಕಲ್ಪದಿಂದ ಮೂರು ಗಾವುದ ಮೇಲೆ, ಹನ್ನೆರಡು ಯೋಜನ ವಿಸ್ತೀರ್ಣವಾಗಿರುವುದು. ಅನಂತಸುಖಿಗಳಾದ ಸಿದ್ಧರು ಇದರಲ್ಲಿ ನೆಲಸುವರು.

1. ಮಾಣ್ದ (ಅ) 2. ಪಿಶಾ (ಅ)

ಕಂ॥ ಅಷ್ಟಗುಣೌಘದನಂತಚ
ತುಷ್ಟಯದ ಶರೀರಮೆನಿಸಿ ಸಿದ್ಧರ್ ಖ[1]ರ[1]ಕ
ರ್ಮಾಷ್ಟಕಮಂಟಿಯೆ ಜಗತ್ಪ
ಯರ್ಚಿಷ್ಟಿಗೆ ನೆಲೆಯಾದರಷ್ಟಮಾವನಿನಿಲಯರ್ ॥ ೯ ॥

ವ॥ ಅಂತೆಂಟನೆಯ ಭೂಮಿಯಾಗಿರ್ದೀಷತ್ಪ್ರಾಗ್ಭಾರಭೂಮಿಪ್ರಮಾಣಮಾವುದೆಂದೊಡೆ —

ಕಂ॥ ಎರಡುವರೆದ್ವೀಪಂ ವ್ಯಂ
ತರಮಾನವತಿರ್ಯಗಾಲಯಂ ತತ್ಪ್ರಮಿತಂ
ಪರಸಿದ್ಧಕ್ಷೇತ್ರಮಿದಂ
ಪರಮಾರ್ಥಂ ನಂಬುಗೆಂಬುದರ್ಹದ್ವಚನಂ ॥ ೧೦ ॥

ವ॥ ಅಂತು ನಿಗೋದಂಬೆರಸು ಸಪ್ತಭೂಮ್ಯಾದಿಪರ್ಯಂತಮಪ್ಪ ಗತಿಪಂಚಕಸ್ಥಾನಂ ಲೋಕಾಕಾಶಂಗಳ್ ಸಂಗತಂಗಳಾಗಿಯಿರ್ದುವಂ[2] ಧರಿಯಿಸಿ ನಿಂದ ಮಹಾವಾತಂಗಳ್ ಮೂಱುಕ್ಕುಮವಾವುವೆಂದೊಡೆ ಘನೋದಧಿಯುಂ ಘನಾನಿಲಮುಂ ತನುವಾತಮುಮೆಂಬುದಕ್ಕುಮಲ್ಲಿ ದ್ವಿತೀಯ ಮಹಾವಾತದಿಂ ಮೇಲೆ ಪೋಗೆ ಮೂಱನೆಯ ಮಹಾವಾತದ ಕೆಳಗೆ ಸಿದ್ಧಪರಮೇಷ್ಠಿಗಳಿರ್ಪರ್—

ಕಂ॥ ವರಭೋಗಭೂಚರರ್ ಭೂ
ಚರರಂಬರಚರರೆನಲ್ ಮನುಷ್ಯರ್ ತ್ರಿವಿಧರ್
ಸ್ಥಿರತಿರ್ಯಗ್ಗತಿ ಭೂಮ್ಯಂ
ತರಂಗದೊಳ್ ಸಕಳವಿಕಳಮಿಂದ್ರಿಯಮತಿಯಂ ॥ ೧೧ ॥

ವ॥ ಅವಱೊಳ್ ಪಂಚೇಂದ್ರಿಯಂಗಳ್ ಜಳಚರಸ್ಥಳಚರಗಗನಚರಪ್ರಕಾರದಿಂ ಮೂಱಜನಕ್ಕುಂ ವಿಕಳೇಂದ್ರಿಯಂ ತ್ರಿವಿಧಂ ಕರ್ಮಭೇದಮುಂ ಸಾಮಾನ್ಯರೂಪದಿಂದೇಕವಿಧಂ ಮೂಲಪ್ರಕೃತಿಭೇದದಿಂದೆಂಟುತೆಱನಕ್ಕುಂ ಅವಾವುವೆನೆ ಜ್ಞಾನಾವರಣೀಯಂ ದರ್ಶನಾ

---

೯. ಈ ಅಷ್ಟಮ ಭೂಮಿವಾಸಿಗಳಾದ ಸಿದ್ಧರು ಅಷ್ಟಗುಣ ಸಂಪನ್ನರು ; ಅನಂತ ಚತುಷ್ಟಯವುಳ್ಳವರು ; ಎಂಟು ಬಗೆಯ ಕರ್ಮಗಳನ್ನು ನಾಶಮಾಡಿ ಜಗತ್ಪೂಜ್ಯರಾದವರು.

ವ॥ ಹೀಗೆ ಎಂಟನೆಯ ಭೂಮಿಯೆನಿಸಿದ ಈಷತ್ಪ್ರಾಗ್ಭಾರ ಭೂಮಿಯ ಅಳತೆಯೆಷ್ಟೆಂದರೆ —

೧೦. ಎರಡೂವರೆ ದ್ವೀಪ ಹಾಗು ವ್ಯಂತರ ಮಾನವ ತಿರ್ಯಕ್ ಜೀವಗಳಿರುವ ಲೋಕವೆಷ್ಟು ವಿಸ್ತೀರ್ಣವೋ ಇದೂ ಅಷ್ಟೇ ವಿಸ್ತೀರ್ಣವಾಗಿದೆ. ಇದಕ್ಕೆ ಪರಮ ಸಿದ್ಧಕ್ಷೇತ್ರವೆನ್ನುತ್ತಾರೆ. ಇದು ನಿಶ್ಚಿತವೆಂದು ಅರ್ಹಂತನ ವಚನವಿದೆ.

ವ॥ ನಿಗೋದ ಸಹಿತವಾಗಿ ಏಳು ಭೂಮಿಗಳನ್ನೊಡಗೊಂಡು ಪಂಚಮ ಗತಿಯ ಸ್ಥಾನವು ಲೋಕಾಕಾಶಗಳೊಡನೆ ಸೇರುತ್ತದೆ. ಇದನ್ನು ಧರಿಸಿ ನಿಂತ ಮಹಾವಾತಗಳು ಮೂರು ; ಯಾವುವೆಂದರೆ : ಘನೋದಧಿ. ಘನಾನಿಲ ಮತ್ತು ತನುವಾತ ಎಂಬುವು. ಅವುಗಳಲ್ಲಿ ಎರಡನೆಯ ವಾತದ ಮೇಲೆ ಹಾಗು ಮೂರನೆಯ ಮಹಾವಾತದ ಕೆಳಗೆ (ಇವೆರಡರ ನಡುವೆ) ಸಿದ್ಧಪರಮೇಷ್ಠಿಗಳು ಇರುವರು.

೧೧. ಭೋಗಭೂಮಿವಾಸಿಗಳು, ಭೂಮಿವಾಸಿಗಳು ಮತ್ತು ಖೇಚರರು ಎಂದು ಮನುಷ್ಯರಲ್ಲಿ ಮೂರು ಬಗೆ. ಭೂಮಿಯಲ್ಲಿ ಪಂಚೇಂದ್ರಿಯಗಳಿಂದೂ ವಿಕಳೇಂದ್ರಿಯ (ಎಂದರೆ, ಏಕೇಂದ್ರಿಯ, ದ್ವೀಂದ್ರಿಯ ಇತ್ಯಾದಿ)ಗಳಿಂದೂ ತಿರ್ಯಕ್ ಜೀವಗಳುಂಟು.

ವ॥ ಅವುಗಳಲ್ಲಿ ಪಂಚೇಂದ್ರಿಯಗಳು— ಜಲಚರ, ಗಗನಚರ ಮತ್ತು ಭೂಚರ ಎಂದು ಮೂರು ಬಗೆ. ವಿಕಳೇಂದ್ರಿಯಗಳು ಮೂರು ಬಗೆ. ಕರ್ಮಗಳು ಸಾಮಾನ್ಯ ರೂಪದಿಂದ ಒಂದೇ ಬಗೆ ; ಅವರೆ ಮೂಲಪ್ರಕೃತಿಭೇದದಿಂದ

---

1. ಳ (ಅ) 2. ಯುಮವಂ (ಅ)

ವರಣೀಯಂ ವೇದನೀಯಂ ಮೋಹನೀಯಂ ಆಯುಷ್ಯಂ ನಾಮ ಗೋತ್ರ ಮಂತರಾಯಮೆಂಬಲ್ಲಿ ಜ್ಞಾನಾವರಣೀಯಂ ಪಂಚವಿಧಮೆಂತೆನೆ ಮತಿಶ್ರುತಾವಧಿಮನಃಪರ್ಯಯಕೇವಲಬೋಧ [1]ನಿರೋಧ[1] ದಿನಕ್ಕುಂ ಇಂ ದರ್ಶನಾವರಣೀಯಮುಂ ನವವಿಧಮೆಂತೆನೆ ನಿದ್ರಾನಿದ್ರಾ ಪ್ರಚಳಾಗ್ರ[2]ಪ್ರ[2]ಚಳಾಸ್ತ್ಯಾನಗೃದ್ಧಿ ನಿದ್ರಾಪ್ರಚಳಾಚಕ್ಷುರಚಕ್ಷುರವಧಿಕೇವಲಬೋಧದರ್ಶನಪ್ರ[3]ಜ್ಞಾನದಿ[3]ನಿನಿತುಭೇದಮಕ್ಕುಂ ವೇದನೀಯಮುಂ ಸಾತಾವೇದನೀಯಮುಮಸಾತಾವೇದನೀಯಮುಮೆಂದಿರ್ತೆಱನಕ್ಕುಂ ಮೋಹನೀಯ ಮಿರ್ಪತ್ತೆಂಟುತೆಱನಕ್ಕುಮೆಂತೆನೆ ದರ್ಶನಮೋಹನೀಯಂ ಚಾರಿತ್ರಮೋಹನೀಯಮೆಂದಿರ್ತೆಱನಕ್ಕುಮಲ್ಲಿ[4]ಮಿಥ್ಯಾತ್ವಂ[4] ಸಮ್ಯ[5]ಗ್ಮಿಥ್ಯಾತ್ವಂ[5] ಸಮ್ಯಕ್ತ್ವಪ್ರಕೃತಿಯುಮೆಂದು ದರ್ಶನ ಮೋಹನೀಯಂ ಮೂಱುತೆಱಂ ಕಷಾಯನೋಕಷಾಯ ಭೇದದಿಂ ಚಾರಿತ್ರಮೋಹನೀಯಮಿರ್ತೆಱಂ ಅಲ್ಲಿ ಕಷಾಯಮೋಹನೀಯಂ ಷೋಡಶವಿಧಮೆಂತೆಂದೊಡೆ ಅನಂತಾನುಬಂಧಿ ಕ್ರೋಧಮಾನಮಾಯಾಲೋಭಮಪ್ರತ್ಯಾಖ್ಯಾನ ಕ್ರೋಧಮಾನಮಾಯಾಲೋಭಂ ಪ್ರತ್ಯಾಖ್ಯಾನಕ್ರೋಧಮಾನಮಾಯಾ ಲೋಭಂ ಸಂಜ್ವಳನಕ್ರೋಧಮಾನಮಾಯಾಲೋಭಮೆಂದು ನೋಕಷಾಯಂ ನವವಿಧಂ ಹಾಸ್ಯರತ್ಯರತಿಶೋಕಭಯಜುಗುಪ್ಸಾಸ್ತ್ರೀಪುನ್ನಪುಂಸಕ ಭೇದದಿನಿಂತು ಮೋಹನೀಯಕರ್ಮಮಿಪ್ಪತ್ತೆಂಟುತೆಱನಕ್ಕುಂ ಆಯುಷ್ಯಕರ್ಮಮುಂ ನರಕತಿರ್ಯಙ್ಮನುಷ್ಯದೇವಾಯುಷ್ಯಭೇದದಿಂ ನಾಲ್ಕುತೆಱನಕ್ಕುಂ ನಾಮಕರ್ಮಮುಂ ಪಿಂಡಾಪಿಂಡನಾಮದಿಂ ತೊಂಭತ್ತುಮೂಱುತೆಱನಕ್ಕುಂ ಗೋತ್ರಕರ್ಮಮುಮುಚ್ಚನೀಚಭೇದಭಿನ್ನಮಿರ್ತೆಱನಕ್ಕುಂ ಅಂತರಾಯಮುಂ ದಾನಲೋಭ ಭೋಗೋಪಭೋಗವೀರ್ಯಾಂತರಾಯಪ್ರಕಾರದಿಂ ಪಂಚವಿಧಮಕ್ಕುಂ ಇಂತುತ್ತರಪ್ರಕೃತಿಗಳಷ್ಟಾಚತ್ವಾರಿಂಶದುತ್ತರಶತಸಂಖ್ಯಾರೂಪಂಗಳಕ್ಕುಮುತ್ತರೋತ್ತರಪ್ರಕೃತಿಗಳಸಂಖ್ಯಾತಲೋಕಮಾತ್ರಂಗಳಕ್ಕುಂ—

ಕಂ॥ ಜಿನಪತಿ ಕರ್ಮಪ್ರಕೃತಿಯ
ನನಘಂ ಸ್ಥೂಲಸ್ವರೂಪದಿಂ ಬೆಸಸೆ [6]ಮನ
ಸ್ಸನು[6]ವಚನಂಗಳ್ ಸಂಗತ
ಮೆನೆ ತಂದೆಯ ಭಕ್ತ ಪುನ್ನಮಾರ್ಯರ್ ಕೇಳ ರ್ ॥ ೧೨ ॥

ಎಂಟು ಬಗೆ ; ಯಾವುವೆಂದರೆ : ಜ್ಞಾನಾವರಣೀಯ, ದರ್ಶನಾವರಣೀಯ, ವೇದನೀಯ, ಮೋಹನೀಯ, ಆಯುಷ್ಯ, ನಾಮ, ಗೋತ್ರ ಮತ್ತು ಅಂತರಾಯ. ಜ್ಞಾನಾವರಣೀಯದಲ್ಲಿ ಮತಿ, ಶ್ರುತ, ಅವಧಿ, ಮನಃಪರ್ಯಯ, ಕೇವಲ ಬೋಧ ಎಂಬ ಐದು ಜ್ಞಾನಗಳನ್ನು ಆವರಿಸುವ ಮೂಲಕ ಐದು ಭೇದಗಳು. ನಿದ್ರಾನಿದ್ರಾ, ಪ್ರಚಲಾ, ಪ್ರಚಲಾ ಪ್ರಚಲಾ (ಅಗ್ರುಚಳಾ), ಸ್ತ್ಯಾನಗೃದ್ಧಿ, ಚಕ್ಷು, ಅಚಕ್ಷು, ಅವಧಿ ಮತ್ತು ಕೇವಲ ದರ್ಶನಜ್ಞಾನಾವರಣೀಯಗಳೆಂದು ದರ್ಶನಾವರಣೀಯ ಕರ್ಮವು ಒಂಭತ್ತು ಬಗೆಯಾಗಿವೆ. ಸಾತಾವೇದನೀಯ ಮತ್ತು ಅಸಾತಾವೇದನೀಯ ಎಂದು ವೇದನೀಯವು ಇಬ್ಬಗೆಯಾಗಿದೆ. ಮೋಹನೀಯದಲ್ಲಿ ಇಪ್ಪತ್ತೆಂಟು ಭೇದಗಳುಂಟು ; ಹೇಗೆಂದರೆ, ದರ್ಶನಮೋಹನೀಯ ಮತ್ತು ಚಾರಿತ್ರಮೋಹನೀಯ ಎಂದು ಎರಡು ಮುಖ್ಯ ಪ್ರಭೇದಗಳು ; ಅವುಗಳಲ್ಲಿ ಅವಿಧೂತ, ಸಮ್ಯಗ್ವಿಧೂತ ಮತ್ತು ಸಮ್ಯಕ್ತ್ವಪ್ರಕೃತಿಯೆಂದು ದರ್ಶನಮೋಹನೀಯ ಮೂರು ತೆರ ; ಕಷಾಯ-ನೋಕಷಾಯ ಭೇದದಿಂದ ಚಾರಿತ್ರಮೋಹನೀಯ ಎರಡು ವಿಧ ; ಅದರಲ್ಲಿ ಕಷಾಯಮೋಹನೀಯವು ಅನಂತಾನುಬಂಧಿಯಾದ ಕ್ರೋಧ, ಮಾನ, ಮಾಯಾ, ಲೋಭ, ಅಪ್ರತ್ಯಾಖ್ಯಾನಕ್ರೋಧಮಾನಮಾಯಾಲೋಭ, ಪ್ರತ್ಯಾಖ್ಯಾನ ಕ್ರೋಧಮಾನಮಾಯಾಲೋಭ, ಸಂಜ್ವಳನ ಕ್ರೋಧಮಾನಮಾಯಾಲೋಭ ಎಂದು ಹದಿನಾರು ತೆರ. ಹಾಸ್ಯ, ರತಿ, ಅರತಿ, ಶೋಕ, ಭಯ, ಜುಗುಪ್ಸೆ, ಸ್ತ್ರೀಪುನ್ನಪುಂಸಕ ಭೇದದಿಂದ ನೋಕಷಾಯ ಒಂಭತ್ತು ತೆರ. ಹೀಗೆ ಮೋಹನೀಯ ಕರ್ಮ ಇಪ್ಪತ್ತೆಂಟು ವಿಧ. ಆಯುಷ್ಯಕರ್ಮವು ನರಕ, ತಿರ್ಯಕ್, ಮನುಷ್ಯ, ದೇವ ಎಂದು ನಾಲ್ಕು ವಿಧ. ನಾಮಕರ್ಮವು ಪಿಂಡ, ಅಪಿಂಡಗಳೆಂಬ ಹೆಸರಿನಿಂದ ತೊಂಭತ್ತುಮೂರು ತೆರನಾಗಿದೆ ಗೋತ್ರಕರ್ಮವು ಉಚ್ಚ, ನೀಚವೆಂದು ಎರಡು ಬಗೆ. ಅಂತರಾಯಕರ್ಮವು ದಾನ, ಲೋಭ, ಭೋಗ, ಉಪಭೋಗ ಮತ್ತು ವೀರ್ಯ ಎಂದು ಐದು ಪ್ರಕಾರವಾಗಿದೆ. ಹೀಗೆ ಉತ್ತರ ಪ್ರಕೃತಿಗಳು ಒಂದುನೂರನಾಲ್ವತ್ತೆಂಟು ಭೇದವಾಗಿವೆ ; ಉತ್ತರೋತ್ತರ ಪ್ರಕೃತಿಗಳು ಅಸಂಖ್ಯಾತವಾಗಿವೆ.

೧೨. ಜಿನೇಶ್ವರನು ಹೀಗೆ ಕರ್ಮಪ್ರಕೃತಿಗಳನ್ನು ಸ್ಥೂಲರೂಪವಾಗಿ ಹೇಳಲಾಗಿ, ತ್ರಿಕರಣಶುದ್ಧಿಯಿಂದ ಪಿತೃಭಕ್ತರಾದ ಪುನ್ನಮಾರ್ಯರು ಕೇಳಿದರು.

---

1. × (ಮ) 2 × (ಮ) 3. ಜ್ಞಾದನದಿ (ಅ) 4. ವಿಮಧೂತಂ (ಮ) 5. ಗ್ವಿಧೂತಂ (ಮ) 6. ಮನಂತನು (ಅ)

ವ॥ ತದನಂತರಂ—

ಚಂ॥ ವಿಹರಣಕಾಲಮಿನ್ನೆನಗೆ ಬಂದುದಿದೆಂದು ಜಿನಂ ಜನಸ್ತುತಂ
ವಿಹರಿಸಲುದ್ಯಮಂಗೆಯಲೊಡಂ ನೆಱೆ[3] ಪನ್ನೆರಡುಂ ಗಣಾಳಿ ಸ
ನ್ನಿಹಿತ[1] ಪದಾರ್ಚ[1]ನಾಕಳಕಳಂ ದಿವಿಜೇಂದ್ರಪುರಸ್ಸರಂ ನಭೋ
ವಿಹಿತಗತಿಸ್ವರೂಪ ಮೆಸೆದೊಪ್ಪಿದುದೊಪ್ಪವಗಣ್ಯಪುಣ್ಯದಿಂ ॥ ೧೩ ॥

ತರಳವೃತ್ತಂ॥ ಗಗನಮುರ್ವಿಗೆ ಯೋಜನದ್ವಯಮಾಗೆ ಜೈನಪದದ್ವಯಂ
ನೆಗೆಯೆ ಮುಂದಣವೇೞು ಪಿಂದಣವೇೞು ತಾವರೆಗಳ್ ಕರಂ
ಸೊಗಯಿಸಿರ್ಪಿನಮಂತವಂ ಜಿನನಂಘ್ರಿಗಳ್ ನಿಜಘಾತದಿಂ
ಸುಗಿಯೆ ಮೆಟ್ಟವೆ ಮುಟ್ಟದಾಚತುರಂಗುಳೋಪರಿಮಾರ್ಗದೊಳ್ ॥ ೧೪ ॥

ವ॥ ಜಿನಚಂದ್ರದೇವಂ ನಡೆಯೆ ಧರ್ಮಚಕ್ರಂ ಮುಂದೆ ನಡೆಯೆ ನಡೆವ ನಾಲ್ಕುಂ ದೆಸೆಗಳೊಳಂ ನೂಱುಯೋಜನಪ್ರಮಾಣಾಂತರದೊಳಾವ ಜೀವಕ್ಕಂ ಪಸಿವು ಪಸವುಂ ಪ್ರಾಣವಧೆಯುಮಾಗದಿರೆಯುಂ ಕುಸುಮಫಲಪರಿಣತಫಲದಾನಂಗಳಪ್ಪ ವನಸ್ಪತಿವೃಕ್ಷೌಷಧಿಗುಲ್ಮಂಗಳಪ್ಪನೋಕಹಜಾತಿಗಳುಂ[2] ವನ್ಯಧಾನ್ಯಫಲಗ್ರಾಮಂಗಳಪ್ಪ ಬೀಜಕಾಯಂಗಳುಂ[2] ಭಗವದಾಗಮನದರ್ಶನಹರ್ಷೋತ್ಕರ್ಷದಿಂ ಘನ ರೋಮಾಂಚಕಂಚುಕಿತಾಂಗಿಯಾಧರಾವನಿತೆಯೆಂದಂಬೆತ್ತಿರೆಯುಂ ನೀರದಮಾರ್ಗಂ ನಿರ್ನೀರದ ತುಷಾರ[2]ಪಾಂಸುಪಟಳಮಾಗೆಯುಂ ಸ್ವಾಭಾವಿಕಕರ್ಮಕ್ಷಯಜ ದೇವಕೃತಂಗಳೆಂಬ ಮೂವತ್ತುನಾಲ್ಕುಮತಿಶಯಂಗಳೊಳೊಂದುಗುಂದದಿರೆಯುಮಷ್ಟಪ್ರಾತಿಹಾರ್ಯಂಗಳ್ ನಿಂದೆಡೆಯೊಳ್ ನಿರಂತರ ಮಿರೆಯಿರೆ—

ಮಲ್ಲಿಕಾಮಾಲೆ॥ ಚಾರುನೀರದಮಾರ್ಗದೊಳ್ ನಿಯತಂ ಪ್ರಶಸ್ತವಿಹಾರವಿ
ಸ್ತಾರಮಾಗೆಯುಮಾಜಗತ್ರಯವಂದಿತಾಂಘ್ರಿವಿಹಾರದೊಳ್
ಮೇರುಜಂಗಮಮಾದವೋಲ್ ನಡೆದಂ ಸಧರ್ಮಪವಿತ್ರ ಭೂ
ಭಾರಮಷ್ಟಮಭೂಮಿಭಾರಮಿದೆಂಬಿನಂ ಪರಮೇಶ್ವರಂ ॥ ೧೫ ॥

ವ॥ ಆನಂತರ—

೧೩. "ನನಗೆ ಇನ್ನು ವಿಹಾರಮಾಡುವ ಕಾಲ ಪ್ರಾಪ್ತವಾಯಿತು" ಎಂದುಕೊಂಡು ಜನಸ್ತುತನಾದ ಜಿನನು ವಿಹಾರೋದ್ಯುಕ್ತನಾಗಲಾಗಿ ಹನ್ನೆರಡು ಜನಗಣಗಳೊಡಗೂಡಿ, ದೇವೇಂದ್ರನೆ ಮೊದಲಾದ ದೇವತೆಗಳು ಆ ಮಹಾತ್ಮನ ಪಾದಪೂಜಾಸಮಾರಂಭಕ್ಕಾಗಿ ಸಂಭ್ರಮದಿಂದ ಬರುತ್ತಿರಲು ಆಕಾಶವು ಅವರ ಸಂಚಾರದಿಂದ ಶೋಭಿಸಿತು.

೧೪. ಭೂಮಿಯಿಂದ ಅಂತರಿಕ್ಷದೆಡೆಗೆ ಎರಡು ಯೋಜನ ಎತ್ತರಕ್ಕೆ ಜಿನೇಶ್ವರನ ಪಾದಗಳು ನೆಗೆದುವು. ಮುಂದೆ ಏಳು, ಹಿಂದೆ ಏಳರಂತೆ ತಾವರೆಗಳು ಶೋಭಿಸುತ್ತಿರಲಾಗಿ ಅವುಗಳಿಗೆ ತನ್ನ ಪಾದಗಳು ತಾಗದಂತೆ ನಾಲ್ಕು ಬೆರಳು ಮೇಲೆಯೆ ಆತನು ನಡೆದನು.

ವ॥ ಹಾಗೆ ಜಿನಚಂದ್ರದೇವನು ನಡೆಯಲಾಗಿ, ಧರ್ಮಚಕ್ರವು ಮುಂದೆ ನಡೆಯಿತು; ಆತನು ನಡೆಯುವ ಸ್ಥಳದಿಂದ ಸುತ್ತಲೂ ನೂರು ಯೋಜನ ವಿಸ್ತೀರ್ಣದಲ್ಲಿ ಯಾವ ಜೀವಕ್ಕಾದರೂ ಹಸಿವು, ಪೀಡೆ, ಪ್ರಾಣಹಾನಿಗಳು ಆಗವು; ಹೂ ಹಣ್ಣುಗಳನ್ನು ಕೊಟ್ಟು ಆತಿಥ್ಯಮಾಡುವ ವನಸ್ಪತಿ, ವೃಕ್ಷ, ಔಷಧಿಗಳ ಸಮೂಹದಿಂದಲೂ ವನಧಾನ್ಯ ಹಾಗು ಫಲಗಳನ್ನೀಯುವ ಬೀಜಕಾಯಗಳಿಂದಲೂ ಭಗವಂತನ ಆಗಮನದಿಂದ ಹರ್ಷಪುಲಕಿತವಾದ ಭೂಮಿ ಒಪ್ಪಿತು. ಆಕಾಶವು ನಿರಭ್ರವೂ, ದೂಳು ಮೊದಲಾದುವುಗಳಿಲ್ಲದಂತೆ ನಿರ್ಮಲವೂ ಆಯಿತು; 'ಸ್ವಾಭಾವಿಕ' ಕರ್ಮಕ್ಷಯದಿಂದಾದುವು ಹಾಗು 'ದೇವಕೃತ' ಹೀಗೆ ಮೂರು ಬಗೆಯಿಂದಾದ ಮೂವತ್ತುನಾಲ್ಕು ಅತಿಶಯಗಳಲ್ಲಿ ಒಂದೂ ಕುಂದದೆ ಅಷ್ಟಪ್ರಾತಿಹಾರ್ಯಗಳು ನಿಂತ ನೆಲೆಯಲ್ಲಿಯೆ ನಿರಂತರವಾಗಿರಲಾಗಿ—

೧೫. ಸುಂದರವಾದ ಆಕಾಶದಲ್ಲಿ ನಿಯತವಾಗಿಯೂ ಪ್ರಶಸ್ತವಾಗಿಯೂ ತನ್ನ ಪಾದಗಳು ವಿಹಾರಮಾಡುತ್ತಿರಲಾಗಿ ಧರ್ಮದಿಂದ ಪವಿತ್ರವಾದ ಈ ಭೂಮಿಯೆ ಅಷ್ಟಮಭೂಮಿಯೊ ಏನೊ ಎಂಬಂತೆ ಚಲಿಸುತ್ತಿರುವ ಮೇರು ಪರ್ವತ ಸ್ವರೂಪನಾಗಿ ಭಗವಂತನು ನಡೆದನು.

---

1. ಪದಾರ್ಚ (ಅ)　2. ೪ಂ (ಮ)　3. × (ಮ)

ಕಂ॥ ಇಂದ್ರನಯನದ್ವಯಕ್ಕೆ ಜಿ
ನೇಂದ್ರನ ರೂಪಧಿಕಮಾಗೆ ಪಡೆದಂ ಸೌಧ
ರ್ಮೇಂದ್ರಂ ಸಾಸಿರಕಣ್ಣನ
ತೀಂದ್ರಿಯದರ್ಶನನಿದೇಂ ಜಿನಂ ಸುಂದರನೋ ॥ ೧೬ ॥

ಜಿನಜನ್ಮಾಭಿಷ[1]ವಂ[1] ನ
ರ್ತನದಿಂ ಸೊಗಯಿಸುವುದಂತದಂ ಸುರರಾಜಂ
ಪುನರುಕ್ತಂಮಾಡೆ ಜಿನೇಂ
ದ್ರನ ವಿಹರಣಪೂರ್ವರಂಗಮೇನೊಪ್ಪಿದುದೋ ॥ ೧೭ ॥

ಕ್ಷೀರಂ ರುಧಿರಂ ಪರಮೌ
ದಾರಿಕತನುಗಿಲ್ಲ ನೆೞಲು ಪಕ್ಷ್ಮಸ್ಪಂದಂ
ಚಾರುನಯನದ್ವಯಕ್ಕೆ ಶಿ
ರೋರುಹನಖಮಂದಿನಂತೆ ಬಳೆಯವು ಜಿನನಾ ॥ ೧೮ ॥

ದಿವ್ಯಧ್ವನಿ ಯೋಜನಮಾ
ತ್ರವ್ಯವಸಿತಮಿಭವಿರೋಧಿಪೀಠಂ ತನು ತಾ
ನವ್ಯಾಬಾಧಂ ಘಾತಿತ
ಮೋವ್ಯಯದಿಂದಾಗೆ ತಳರ್ದನಾ ಜಿನಚಂದ್ರಂ ॥ ೧೯ ॥

ವ॥ ಮತ್ತ[2]ಮಿತ್ತ[2]ಮೈತ್ರಿಯುಂ ಸಹಸ್ರಕರಜ್ಯೋತಿಯುಮಾಳೋಕಪ್ರಿಯಜನನಯನ ಸುಂದರತೆಯುಂ ಪದ್ಮರಾಗಾರುಣ ಲಸದ ಶೋಕಪಾದಪಮುಂ ಪರಿಪೂರ್ಣೇಂದುಮಂಡಲಾಖಂಡಿತ ಪ್ರಭಾಪ್ರಸರಶೋಭಾಯಮಾನಚ್ಛತ್ರತ್ರಯಮುಂ ದ್ವಾತ್ರಿಂಶದ್ಯಕ್ಷೇಂದ್ರಪರಿವೀಜ್ಯಮಾನಪಂಚರತ್ನಾಂಚಿತಚಾರುಚಮರೀಕರಚಮರರುಹಂಗಳುಂ ಘರ್ಮೋರ್ಮಿಹತನಿರ್ಮಳಸಮೀರನುಂ ನಮೇರು ಮಂದಾರಸಂತಾನಕಪಾರಿಜಾತ

೧೬. ಜಿನೇಂದ್ರನ ಅತ್ಯಧಿಕವಾದ ರೂಪವನ್ನು ನೋಡಲು ಎರಡು ಕಣ್ಣು ಸಾಲವೆಂದು ಇಂದ್ರನು ಸಾವಿರ ಕಣ್ಣುಗಳನ್ನು ಹೊಂದಿದನು. ಅತೀಂದ್ರಿಯ ದರ್ಶನನಾದ ಜಿನನು ಎಂತಹ ಸುಂದರನು !

೧೭. ಜಿನನ ಜನ್ಮಾಭಿಷೇಕವು ನರ್ತನದಿಂದ ಶೋಭಿಸುವುದು. ದೇವೇಂದ್ರನು ಅದನ್ನು ಈಗ ಪುನರಾವರ್ತನೆಗೊಳಿಸಲಾಗಿ (ಮತ್ತೊಮ್ಮೆ ಮಾಡಲಾಗಿ) ವಿಹಾರಪೂರ್ವರಂಗವೆಷ್ಟು ಮನೋಹರವಾಯಿತು !

೧೮. ಭಗವಂತನ ಮೈಯಲ್ಲಿ ರಕ್ತವೆಂದರೆ ಹಾಲು ; ದೇಹ ಪರಮ ಔದಾರಿಕವಾದುದರಿಂದ ಅದಕ್ಕೆ ನೆಳಲಿಲ್ಲ ; ಕಣ್ಣರೆಪ್ಪೆಗಳಿಗೆ ಅಲುಗಾಟವಿಲ್ಲ ; ಉಗುರುಗಳಾಗಲಿ, ಕೂದಲಾಗಲಿ ಬೆಳೆಯದೆ ಮೊದಲಿದ್ದಷ್ಟೆ ಉಳಿಯುವುವು.

೧೯. (ಆತನ) ದಿವ್ಯಧ್ವನಿ ಯೋಜನದವರೆಗೆ ಕೇಳತಕ್ಕುದು ; ಕುಳ್ಳಿರುವುದಕ್ಕೆ ದಿವ್ಯ ಸಿಂಹಾಸನ ; ದೇಹಕ್ಕೆ ಯಾವ ತೆರೆದ ಬಾಧೆಯೂ ಬರಲಾರದು. ಘಾತಿಕರ್ಮ ಕ್ಷಯದಿಂದ ಈ ಸೌಭಾಗ್ಯವನ್ನು ಪಡೆದ ತೀರ್ಥಕರನು ಮುನ್ನಡೆದನು.

ವ॥ ಅತ್ಯಧಿಕವಾದ ಸ್ನೇಹಭಾವವೂ, ಸೂರ್ಯಸಮ ಪ್ರಭೆಯೂ, ನೋಡುವವರ ಕಣ್ಣಿಗೆ ಸಂತೋಷಕರವಾದ ಸೌಂದರ್ಯವೂ ಉಳ್ಳವನಾದ ಆತನೊಡನೆ ಮಾಣಿಕದಂತೆ ಕೆಂಪಾಗಿ ಶೋಭಿಸುವ ಅಶೋಕವೃಕ್ಷ, ಪೂರ್ಣ ಚಂದ್ರಬಿಂಬದ ಪ್ರಭೆಯನ್ನು ಮೀರ್ದುದಂತಹ ಕಾಂತಿಯುಕ್ತವಾದ ಹಾಗು ಶೋಭಾಯಮಾನವಾದ ಮುಕ್ಕೊಡೆ, ಮೂವತ್ತೆರಡು ಇಂದ್ರರು ಕೈಯಲ್ಲಿ ಹಿಡಿದುಕೊಂಡು ಬೀಸುತ್ತಿರುವ ಪಂಚರತ್ನಖಚಿತವಾದ ಸುಂದರ ಚಾಮರಗಳು, ಬೆವರಹನಿಗಳನ್ನು ಆರಿಸತಕ್ಕ ನಿರ್ಮಲ ವಾಯುವೂ, ನಮೇರು, ಮಂದಾರ ಸಂತಾನಕ, ಪಾರಿಜಾತಕಗಳೆಂಬ ದೇವತರುಗಳ ಕುಸುಮವೃಷ್ಟಿಯೂ

1. ವಣ (ಅ) 2. ಮತಿ (ಮ)

ಕುಸುಮಸ್ಪಷ್ಟವೃಷ್ಟಿಯುಮಷ್ಟೋತ್ತರಶತಸಹಸ್ರಸಂಖ್ಯಾತಿಚಿತಾಂಕಮಾಲಿಕಾಸ್ತವನನಿರತ ಭವನವನಜ್ಯೋತಿಷ್ಕೇಂದ್ರಪ್ರತೀಂದ್ರಸಾಮಾನಿಕ ದಿಕ್ಪಾಲಲೋಕಾಂತಿಕಶ್ರವಣಸುಂದರಧ್ವನಿಯುಮನವರತದಿವಿಜದುಂದುಭಿಸುರನಿಕರತಳವಿತಾಡ್ಯಮಾನಪ್ರಧ್ವಾನಮುಂ ಭೂಚರಖೇಚರ ವಂದನಾಸುಂದರರವಪ್ರತಿನಾದಮುಮುದಾತ್ತವಿವರಮುಂ ನಿಜವಾಹನವಿಹೀನವಿಸ್ಮಯಸ್ಮೇರವದನಸರಸಿರುಹ ದ್ವಾತ್ರಿಂಶನ್ನಾಕನಾಯಕಮುಂ ಕರಮೊಪ್ಪೆ —

ಕಂ॥ ಕನಕರುಚಿರುಚಿರವಿಂಶತಿ
ಧನುಃಪ್ರಮಾಣಾಂಗಮೆಸೆಯೆ ಗಗನವಿಹಾರಂ
ತನಗೊಪ್ಪೆ ವಿಹಾರಿಸಿಯುಂ
ಜಿನಚಂದ್ರನಘೌಘಶೇಷದೈನ್ಯದನಾದಂ ॥ ೨೦ ॥

ಅಮರಾನೀಕಮನೇಕಂ
ಕ್ರಮಯುಗವಿನ್ಯಸ್ತಮಸ್ತಕಂ ಬಳಸಿರೆ ವಿ
ಶ್ರಮಿಸುವವೋಲ್ ಧರ್ಮಕ್ಷೇ
ತ್ರಮದಾವುದೆನೆ ಸಮವಸರಣದೆಡೆಯನೆ ನಡೆದಂ ॥ ೨೧ ॥

ಉ॥ ಆದಿವಿಜಾದಿನಾಥಮತದಿಂ ಸ್ತನಿತಾಮರಬೃಂದಮಂದು ಗಂ
ಧೋದಕವೃಷ್ಟಿಯಂ ಸುರಿವರೊಯ್ಯನೆ ತಣ್ಣಗೆ ಕಮ್ಮನಾಗೆ ಮೇ
ಲಾದನಿಲಾಮರರ್ ಸುೞಿದು ಬೀಸುವರೊಪ್ಪುವ ವಾಂಶವೈಣ ಗೇ
ಯಾದಿಗಳಿಂಪು ಪೊಂಪುೞಿ ಸುರೇಶ್ವರಗಾಯಕವಾದನೋದಿತಂ ॥ ೨೨ ॥

ವ॥ ಎನಿಸೆ ಭವ್ಯಜನಶರಣಮಾದ ಸಮವಸರಣಗೋಭೂಮಿಯೊಳ್—

ನೂರಎಂಟು ಸಾವಿರ ಸಂಖ್ಯೆಯ ಅಂಕಮಾಲಾ ಸ್ತೋತ್ರಗಳಲ್ಲಿ ತೊಡಗಿದ ಭವನಾಮರ ಜ್ಯೋತಿಷ್ಕಲೋಕಗಳ ಇಂದ್ರ, ಪ್ರತೀಂದ್ರ, ಸಾಮಾನಿಕ, ದಿಕ್ಪಾಲ, ಲೋಕಾಂತಿಕರ ಕರ್ಣಮಧುರವಾದ ಧ್ವನಿಯೂ, ಸತತವಾಗಿ ನುಡಿಯುತ್ತಿರುವ ದೇವದುಂದುಭಿ ಹಾಗು ದೇವಸಮಾಜದವರು ಕೈಯಿಂದ ಇಡುವ ತಾಳಗಳ ನಿನಾದವೂ, ಭೂಚರ, ಖೇಚರರ "ನಮೋನಮಃ" ಎಂಬ ಸುಂದರ ಧ್ವನಿಯು ಪ್ರತಿನಾದವೂ, ತಂತಮ್ಮ ವಾಹನಗಳಿಲ್ಲದೆ (ಕಾಲ್ನಡೆಯಿಂದಲೆ ಬರುತ್ತ) ನಗುಮೊಗದಿಂದಿರುವ ಮೂವತ್ತೆರಡು ದೇವೇಂದ್ರರೂ ಅತಿಶಯವಾಗಿ ಕಂಗೊಳಿಸಿದುವು.

೨೦. ಚಿನ್ನದಂತೆ ಕಾಂತಿಮಯವಾದ ಇಪ್ಪತ್ತು ಬಿಲ್ಲಳತೆಯ ದೇಹವು ತನಗೆ ಒಪ್ಪಿರಲಾಗಿ ಸರ್ವಪಾಪನಾಶಕಾರಿಯಾದ ಜಿನಚಂದ್ರನು ಆಕಾಶಮಾರ್ಗದಲ್ಲಿ ಸೊಗಸಾಗಿ ವಿಹಾರಮಾಡಿದನು.

೨೧. ಅನೇಕ ದೇವಸಮೂಹಗಳು ತನ್ನ ಪಾದಗಳನ್ನು ತಮ್ಮ ತಲೆಯಲ್ಲಿಟ್ಟುಕೊಂಡು ಸುತ್ತರಿದು ಬರುತ್ತಿರಲಾಗಿ ವಿಶ್ರಾಮಕ್ಕೆ ಯೋಗ್ಯವಾದ ಧರ್ಮಕ್ಷೇತ್ರವಾವುದೆಂದು ಸಮವಸರಣದೆಡೆಗೆ ನಡೆದನು.

೨೨. ದೇವೇಂದ್ರನ ಅಪ್ಪಣೆಯ ಮೇರೆಗೆ ಮೇಘದೇವತೆಗಳು ಗಂಧೋದಕವನ್ನು ಮಳೆಗರೆಯುವರು; ಅನಿಲದೇವತೆಗಳು ಮೆಲ್ಲಗೆ ತಂಪಾಗಿಯೂ ಕಂಪಾಗಿಯೂ ಸುಳಿದು ಗಾಳಿ ಬೀಸುವರು; ದೇವಗಾಯಕವಾದಕರು ಕೊಳಲು ವೀಣೆಗಳಿಂದಲೂ ಗಾಯನದಿಂದಲೂ ಇಂಪಾಗಿ ಶ್ರವಣಸುಖವನ್ನು ಒದಗಿಸುವರು.

ವ॥ ಹೀಗೆ ಭಕ್ತಜನರಿಗೆ ಶರಣಸ್ಥಾನವಾದ ಆ ಸಮವಸರಣ ಭೂಮಿಯಲ್ಲಿ —

---

1. × (ಅ)

ಕಂ॥ ಶ್ರವಣಾಮೃತಮೆನೆ ಧರ್ಮ
ಶ್ರವಣಂ ಮೃದುಮಧುರರುಚಿರಗಂಭೀರರವಂ
ಶ್ರವಣದಿನಾಳಿಸಿದಂ ವಿವಿ
ಧವಿನೇಯರುಮನಿಂತು ಶಾಂತಿಜಿನನಪವೃಜಿನಂ ॥ ೨೬ ॥

ವ॥ ಮತ್ತಂ ನಭೋಯಾನದೊಳ್ ಕಿಱಿದು ಪೊೞ್ತಾಗೆಯುಂ ಸಭಾಸದನದೊಳ್ ಪಿರಿದು ಪೊೞ್ತು ಪೋಗೆಯುಂ ಗಗನವಿಹಾರ ಮಲ್ಪಮೆನೆಯುಂ ನಗರಮನೋಹರವ್ಯಾಪಾರಮನಲ್ಪಮೆನೆಯುಂ ವ್ಯೋಮಯಾನಂ ತುಚ್ಛಮೆನೆಯುಂ ಗ್ರಾಮಯಾನಮತುಚ್ಛಮೆನೆಯುಂ ಧರ್ಮೋಪದೇಶಂಗೆಯುತ್ತುಮುತ್ತಮತೀರ್ಥೇಶ್ವರಂ ವಿಹಾರಿಸೆ—

ಉ॥ ಆ ಗತರಾಗನಂ ಬಳಸೆ ಪನ್ನೆರಡುಂ ಗಣಮಭ್ರಶುಭ್ರತಾ
ರಾಗಣದಂದದಿಂದೆಸೆದುದೀ ಭರತಾವನಿ ಭೋಗಭೂಮಿ ಭೂ
ಭಾಗಿ ಸುಖಾಪ್ತಿಯಂ ಪಡೆದುದಷ್ಟಮಭೂಮಿ ಸಮೀಪಮಾಯ್ತು ಜೈ
ನಾಗಮಭಾಗಿ ಭವ್ಯಜನಕೇನುಪಶಾಂತಿಯೊ ಶಾಂತಿನಾಥನಾ ॥ ೨೭ ॥

ವ॥ ಮತ್ತಮಾಪರಮೇಶ್ವರನುತ್ತಮಾಗಣ್ಯಪುಣ್ಯಾತಿಶಯಮಂ ಪೇೞ್ವೊಡೆ—

ಉ॥ ಆಡುವನಿಂದ್ರನಂಘ್ರಿನತಿಗೆಂದೆಡೆಯಾಡುವನಿಂದ್ರನೋತು ಮಾ
ತಾಡುವನಿಂದ್ರನಕ್ಷಿಯುಗಮೆಯ್ದದೊಡಕ್ಷಿಸಹಸ್ರಸಂಖ್ಯೆಯಿಂ
ನೋಡುವನಿಂದ್ರನಿಂದ್ರನತಿಯುದ್ಧತಮಾಡುವನಾಜಿನೇಂದ್ರನಾ[1]
ಷೋಡಶತೀರ್ಥನಾಥನೊರೆಗಂ ದೊರೆಗಂ ದೊರೆಯಾರಘಾಂತಕರ್ ॥ ೨೮ ॥

---

೨೬. ಪಾಪದೂರನಾದ ಶಾಂತೀಜಿನೇಶ್ವರನು ಕಿವಿಗಳಿಗೆ ಅಮೃತಪ್ರಾಯವಾದ ಮೃದುಮಧುರವೂ ಗಂಭೀರವೂ ಆದ ಧ್ವನಿಯಿಂದ ಧರ್ಮಶ್ರವಣ ಮಾಡಿಸಿ ಭಕ್ತಜನರನ್ನು ತಣಿಸಿದನು.

ವ॥ ನಭೋವಿಹಾರವು ಅಲ್ಪಕಾಲಿಕ, ಸಭಾಭವನ ವಾಸವೆ ದೀರ್ಘಕಾಲಿಕ ; ಗಗನವಿಹಾರವು ಅಲ್ಪ, ನಗರಕ್ಕೆ ಮನೋಹರವಾದ ಒಡ್ಡೋಲಗವೆ ಅನಲ್ಪ ; ಆಕಾಶಗಮನ ತುಚ್ಛ ; ಆದರೆ ಗ್ರಾಮಗಮನವೆ ಶ್ರೇಷ್ಠ ಎಂಬಂತೆ ಧರ್ಮೋಪದೇಶ ಮಾಡುತ್ತ ತೀರ್ಥೇಶನು ವಿಹಾರಮಾಡಿದನು.

೨೭. ರಾಗಮುಕ್ತನಾದ ಆ ಮಹಿಮನನ್ನು ಹನ್ನೆರಡು ಗಣಧರರು ಬಳಸಲಾಗಿ, ನಕ್ಷತ್ರಗಳೊಡನೆ ನಿರ್ಮಲವಾದ ಆಕಾಶದಂತೆ ಅತನು ಶೋಭಿಸಿದನು. ಭರತಭೂಮಿ ಭೋಗಭೂಮಿಯಾಯಿತು ; ಭೂಮಿಯ ಜೀವಗಳೆಲ್ಲ ಸುಖಸಮೃದ್ಧಿಯನ್ನು ಪಡೆದುವು ; ಜೈನಧರ್ಮಾನುಯಾಯಿಗಳಾದ ಭಕ್ತಜನಕ್ಕೆ ಅಷ್ಟಮಭೂಮಿ ಸಮೀಪವಾಯಿತು. ಶಾಂತಿನಾಥನ ಉಪಶಮ ಎಂತಹ ಅದ್ಭುತವಾದುದು !

ವ॥ ಆ ಪರಮೇಶ್ವರನ ಉತ್ತಮವೂ ಅಮೇಯವೂ ಆದ ಪುಣ್ಯದ ಅತಿಶಯವನ್ನು ಹೇಳುವುದಾದರೆ—

೨೮. ಜಿನೇಂದ್ರನ ಮುಂದೆ ಇಂದ್ರನು ನರ್ತಿಸುವನು ; ಪಾದಗಳಿಗೆ ನಮಸ್ಕರಿಸಲೆಂದು ಇಂದ್ರನೆ ಎಡೆಮಾಡುವನು ; ಅಕ್ಕರೆಯಿಂದ ಬಂದು ಮಾತನಾಡುವನು ; ಎರಡೇ ಕಣ್ಣು ಸಾಲದೆಂದು ಸಾವಿರ ಕಣ್ಣುಗಳಿಂದ ನೋಡುವನು ; ಸಂತೋಷದಿಂದ ಕುಣಿದಾಡುವನು. ಹದಿನಾರನೆಯ ತೀರ್ಥನಾಥನಿಗೆ ಸರಿಸಮಾನರಾದ ಪಾಪಾಂತಕರು ಇನ್ನಾರು ?

---

1. ನಿಂ (ಅ)

ಕಂ॥ ಎಂಬಳವಿಗಮಧಿಕನಘ
ಸ್ತಂಬೇರಮವೈರಿ ಶಾಂತಿನಾಥಂ ಮಿಥ್ಯಾ
ಡಂಬರವಿಘಾತಿ ಘಾತಿಕ
ದಂಬಕತರುಗಹನದಹನನೆನೆ ನೆಗಟ್ದ[1]ಜರಂ[1] ॥ ೨೬ ॥

ಭರತಕ್ಷೇತ್ರದಯೋಧ್ಯಾ
ಪುರಸತ್ಪ್ರತಿಬದ್ಧಮಪ್ಪ ಮಧ್ಯಮಖಂಡಂ
ಸ್ಫುರಿಯಿಸೆ ಧರ್ಮರಸಾಯನ
ಸರಿತ್ಪ್ರವಾಹದಿನಜಂ ವಿಹಾರಿಸುವೆಡೆಯೊಳ್ ॥ ೨೭ ॥

ಬಾಲಂಗಬಲೆಗೆ ಬಲಗೋ
ಪಾಲಕವರ್ಗಕ್ಕೆ ಸಗ್ಗದಪವರ್ಗದ ಮಾ
ರ್ಗಾಲಂಬನಮಾದುದು ತ
ತ್ತ್ರೈಲೋಕ್ಯಶರಣ್ಯಸೇವ್ಯದಿವ್ಯಧ್ವನಿಯಿಂ ॥ ೨೮ ॥

ಉ॥ ಅಂತು ವಿಹಾರಿಸುತ್ತುಮಭವಂ ಭವಸಂಭವದೋಷದೂಷಣೋ
ದಂತಮನಂತಸೌಖ್ಯನಿರತಂ ಭರತಾವನಿಗಪ್ಪಮಾವನೀ
ಭ್ರಾಂತಿಯುತಂ ಕರಂ ಜಿನನನಾಗತಭೂತಭವತ್ಸಮಸ್ತವ
ಸ್ತ್ವಂತರಭಾಷಿ ತೋಷಿಸಿದನಿಂದ್ರನರೇಂದ್ರಫಣೀಂದ್ರಲೋಕಮಂ ॥ ೨೯ ॥

ವ॥ ಅಂತು ಧರ್ಮಕ್ಷೇತ್ರಪವಿತ್ರೀಕರಣವಿಹಾರಾನಂತರಮನಂತಚತುಷ್ಟಯಪುಷ್ಟಿಪರಿಪುಷ್ಟ[ನುಂ]ವಿ ಶತಿಧನುಃಪ್ರಮಿತಿಪರಮೌದಾರಿಕಶರೀರನುಂ ಸಲಕ್ಷಸಂವತ್ಸರಸಂಖ್ಯಾಪರಮಾಯುಷ್ಯನುಮುತ್ತಪ್ತಸುವರ್ಣವರ್ಣನುಂ ಷೋಡಶತೀರ್ಥಕರನುಮೇಕಕಾಲಕಳಿತ ಚಕ್ರಧರ ತೀರ್ಥಕರಕುಸುಮಶರಾಗ್ರಗಣ್ಯಪುಣ್ಯತನುವಪ್ಪ ಶಾಂತೀಶ್ವರನಕಲಂಕಾಚಾರಸಾರಂ ಸಮವಸರ[2]ಣಾ[2]ಗತಗಣನಾತೀತ ದ್ವಾದಶಗಣವಿನೇಯ ಜನಂಗಳಂ ನರನಾಕನಾಗಲೋಕಗಮನಕ್ಕೆ ಪರಸಿ ವಿಸರ್ಜಿಸಿ—

---

೨೬. ಹೀಗೆ ಅಳತೆಗೆ ಸಿಕ್ಕದ ಮಹಿಮೆಯುಳ್ಳ ಶಾಂತಿನಾಥನು ಪಾಪವೆಂಬ ಗಜಗಳಿಗೆ ಸಿಂಹಸ್ವರೂಪನು; ಮಿಥ್ಯಾಡಂಬರವನ್ನು ನಾಶಮಾಡುವವನು ; ಘಾತಿಕರ್ಮಾರಣ್ಯಕ್ಕೆ ಕಾಡುಗಿಚ್ಚಾದವನು

೨೭. ವಿಹಾರಮಾಡುತ್ತ ಬಂದು ಭರತಕ್ಷೇತ್ರದ ಅಯೋಧ್ಯಾಪಟ್ಟಣವನ್ನೊಳಗೊಂಡ ಮಧ್ಯಮ ಖಂಡವನ್ನು ತನ್ನ ಧರ್ಮಾಮೃತವೆಂಬ ನದಿಯ ನೀರಿನಿಂದ ತಣಿಸಿದನು.

೨೮. ತ್ರಿಲೋಕಶರಣ್ಯನಾದ ಆ ಭಗವಂತನ ದಿವ್ಯಧ್ವನಿಯಿಂದ ಮಕ್ಕಳು, ಸ್ತ್ರೀಯರು, ಗೋಪಾಲಕರು ಮೊದಲಾದವರಿಗೆ ಸ್ವರ್ಗಕ್ಕೂ ಮೋಕ್ಷಕ್ಕೂ ಮಾರ್ಗ ದೊರೆಯಿತು.

೨೯. ಹೀಗೆ ವಿಹಾರಮಾಡುತ್ತ ಜನ್ಮಮುಕ್ತನೂ ಅನಂತ ಸೌಖ್ಯ ಭೋಗಿಯೂ ಆದ ಜಿನನು ಸಂಸಾರಿಗರ ದೋಷಗಳನ್ನು ವಿವರಿಸಿ ಖಂಡಿಸುತ್ತ ಭೂತವರ್ತಮಾನಭವಿಷ್ಯತ್ತುಗಳನ್ನೂ ಸಮಸ್ತ ವಸ್ತುಗಳನ್ನೂ ಅರಿತು ಹೇಳುತಾ ಭರತಭೂಮಿಯೆ ಅಪ್ಪುಮ ಭೂಮಿಯೆಂದು ತೋರುವಂತೆ ಮಾಡಿ ತನ್ನ ದಿವ್ಯವಾದ ವಚನದಿಂದ ದೇವಮಾನವನಾಗ ಲೋಕಗಳನ್ನು ಸಂತೋಷಪಡಿಸಿದನು.

ವ॥ ಹೀಗೆ ಧರ್ಮಕ್ಷೇತ್ರಗಳನ್ನು ಪವಿತ್ರಗೊಳಿಸುತ್ತ ವಿಹಾರಮಾಡಿ ಅನಂತ ಚತುಷ್ಟಯಸಂಪನ್ನನೂ, ಇಪ್ಪತ್ತು ಬಿಲ್ಲಳತೆಯ ಔದಾರಿಕ ದೇಹವುಳ್ಳವನೂ, ಲಕ್ಷ ವರ್ಷಗಳ ಆಯುಷ್ಯವನ್ನು ಪಡೆದವನೂ, ಪುಟವಿಟ್ಟ ಚಿನ್ನದಂತೆ ಮೈಬಣ್ಣ ಹೊಂದಿದವನೂ, ಹದಿನಾರನೆಯ ತೀರ್ಥಕರನೂ, ಏಕಕಾಲದಲ್ಲಿ ಚಕ್ರವರ್ತಿ, ತೀರ್ಥಕರ ಹಾಗು ಮನ್ಮಥ ಎಂಬ ಮೂರೂ ಪದವಿಯನ್ನು ಪಡೆದ ಪುಣ್ಯದೇಹನೂ, ನಿಷ್ಕಲಂಕಚಾರಿತ್ರನೂ ಆದ ಶಾಂತೀಶ್ವರನು ಸಮವಸರಣಕ್ಕೆ ಬಂದಿದ್ದ ಸಂಖ್ಯಾತೀತನಾದ ಹನ್ನೆರಡು ಗಣಗಳ ಭಕ್ತಜನರನ್ನು ಆಶೀರ್ವದಿಸಿ ಅವರವರ ನಿವಾಸಗಳಿಗೆ ಹೋಗಹೇಳಿದನು.

---

1. ರಜಂ (ಅ) 2. ಣ (ಅ)

ಮ॥ ಸ್ರ॥ ಪುರುದೇವಂ ದಿವ್ಯಕೈಲಾಸದೊಳಘಮಥನಂ [1]ಪಾ[1]ವೆಯೊಳ್ ವೀರನಾಥಂ
ಸ್ಥಿರಬೋಧಂ ಚಂಪೆಯೊಳ್ ಪೆಂಪೆಸೆದಿರೆ ವಸುಪೂಜ್ಯಾತ್ಮಜಂ ನೇಮಿನಾಥಂ
ದೊರೆವೆತ್ತುಜ್ಜಂತದೊಳ್ ನಿರ್ವೃ[2]ನ[2]ರುೞಿದ ಜಿನರ್ ಸಂದ ಸಮ್ಮೇದದೊಳ್ ಮು
[3][ಕ್ತಿರಮಾಧೀ][3]ಶರ್ಕಳೆಂದಲ್ಲಿಗೆ ಮಿಗೆ ಬಿಜಯಂಗೆಯ್ದನಾ ಶಾಂತಿನಾಥಂ ॥ ೩೦ ॥

ಕಂ॥ ಆ ಸಮ್ಮೇದಗಿರೀಂದ್ರದ
ಭಾಸುರಮಣಿಕನಕರಜತಶಿಕತಿಳತಳದೊಳ್
ಮಾಸಾವಧಿಯೆನೆ ಯೋಗಸ
ಮಾಸಾದಿತವಿಧಿಯಿನಮರೆ ಕಾಯೋತ್ಸರ್ಗಂ ॥ ೩೧ ॥

ವ॥ ಅಂತು ತಿಂಗಳ್ವರಮೊಡೆಯುಡಿಯದೆ ನಿಂದು—

ಕಂ॥ ಪ್ರತಿಮಾರೂಪಮಘಾತಿ
ಪ್ರತಿರೂಪದ ಗರ್ವಪರ್ವತಾರೂಢತೆಯಿಂ
ಶತಖಂಡಂ ಮಾಡಿದುದೇ
ನತರ್ಕ್ಯಮೋ ಜಿನನ ಪಡೆದಘಾತಿವಿಘಾತಂ ॥ ೩೨ ॥

ಅೞಿವುದುಮಘಾತಿಗಳ್ ಪೂ
ಮೞೆಗೞೆದುದು ನಭದಿನಮರಪಟಹಧ್ವನಿಗಳ್
ಮೊೞಗಿದುವೌದಾರಿಕತನು
ನೆೞಲಂತಿರೆ ನೆಲಕೆ ವಂದುದಘವಿಘಟನದಿಂ ॥ ೩೩ ॥

ಮುಕ್ತಿಶ್ರೀಯೊಳ್ ತನಗಾ
ಸಕ್ತಿಯೊಳಿರದೆಸೆದು ನೆರೆದನಜರಂ ವನಿತಾ
ಸಕ್ತಿಯ ವರಂಗೆ ನೆರೆವನು
[ರಕ್ತಿ ಯನೊದವಿಸುವ ಮೆಚ್ಚ[4]ದೇನ[4]ಚ್ಚರಿಯೋ ॥ ೩೪ ॥

೩೦. ಪುರುದೇವನು ದಿವ್ಯವಾದ ಕೈಲಾಸದಲ್ಲಿಯೂ, ಮಹಾವೀರನು ಪಾವಾಪುರಿಯಲ್ಲಿಯೂ, ವಾಸುಪೂಜ್ಯನು ಚಂಪೆಯಲ್ಲಿಯೂ, ನೇಮಿನಾಥನು ಉಜ್ಜಂತದಲ್ಲಿಯೂ, ಉಳಿದೆಲ್ಲ ಜಿನರು ಸಮ್ಮೇದಶಿಖರದಲ್ಲಿಯೂ ಮುಕ್ತಿಯನ್ನು ಪಡೆದರು ; ಆದುದರಿಂದ ತಾನೂ ಅಲ್ಲಿಗೇ ಎಂದು ಶಾಂತಿನಾಥನು ಅತ್ತ ದಯಮಾಡಿದನು.

೩೧. ಆ ಸಮ್ಮೇದಗಿರಿಯ ಸುಂದರವಾದ ರನ್ನ-ಚಿನ್ನ-ಬೆಳ್ಳಿಯ ಮರಳುಪ್ರದೇಶದಲ್ಲಿ ಒಂದು ತಿಂಗಳವರೆಗೆ ಯೋಗವಿಧಿಯಿಂದ ಶಾಂತೀಶನು ಕಾಯೋತ್ಸರ್ಗಕ್ಕೆ ನಿಂತನು.

ವ॥ ಹಾಗೆ ಒಂದು ತಿಂಗಳವರೆಗೆ ನಿರಂತರವಾಗಿ ನಿಂತು—

೩೨. ಗರ್ವಪರ್ವತವನ್ನೇರಿ ನಿಂತ ಅಘಾತಿಕರ್ಮಗಳನ್ನು ಆತನ ತಪಸ್ಸು ನೂರು ಚೂರಾಗಿ ಒಡೆದುಹಾಕಿತು. ಆ ಅಘಾತಿಕರ್ಮನಾಶವು ತರ್ಕಾತೀತವಾದುದು.

೩೩. ಹೀಗೆ ಅಘಾತಿಕರ್ಮಗಳು ಅಳಿದೊಡನೆ ಆಕಾಶದಿಂದ ಹೂಮಳೆ ಸುರಿಯಿತು ; ದೇವವಾದ್ಯಗಳು ಮೊಳಗಿದುವು ; ಆತನ ಔದಾರಿಕ ದೇಹವು ನೆಳಲಂತೆ ಭೂಮಿಗೆ ಇಳಿಯಿತು.

೩೪. ಮುಪ್ಪರಿಯದ ಆ ಮಹಿಮನು ಸಂತೋಷದಿಂದ ಹಾಗು ಆಸಕ್ತಿಯಿಂದ ಮೋಕ್ಷಲಕ್ಷ್ಮಿಯನ್ನು ಕೂಡಿಕೊಂಡನು. ಹೆಣ್ಣಿನಲ್ಲಿ ಆಸಕ್ತಿಯುಳ್ಳ ವರನಿಗೆ ಕೂಡಿಕೊಳ್ಳುವಂತೆ ಅನುರಾಗವನ್ನು ಉಂಟುಮಾಡುವ ಮೆಚ್ಚು ಅದೇನು ಅಚ್ಚರಿ?

1. ಸಾ (ಮ) 2. ತ (ಅ) 3. ಕ್ರುರುಮೂದೇ (ಮ) 4. ದೆನಗ (ಅ)

ವ॥ ಆಗಳ್ ಪರಿನಿರ್ವಾಣಕಲ್ಯಾಣಸೂಚನಾಚಿಹ್ನಂಗಳ್ ತಂತಮ್ಮ ಲೋಕಂಗಳೊಳ್ ನೆಗೞ್[1] ನೆಗೞ್ದ ಭವನಾಮರವ್ಯಂತರಜ್ಯೋತಿಷ್ಕ ಕಲ್ಪವಾಸಿ ದೇವನಿಕಾಯಂ ವಿವಿಧಾರ್ಚನಾಸಮಗ್ರಾಗ್ರಹಸ್ತರಾಗಿ ಬಂದು ಬಲವಂದು ನಿಂದು ತಮ್ಮ ತಂದರ್ಚನೆಗಳಿಂ ಜಿನನಾಥಶರೀರಮ ನರ್ಚಿಸಿರ್ದು ಕಿಱಿದು ಬೇಗದಿಂ—

ಹರಿಣೀವೃತ್ತಂ॥ ಬೆಸಸೆ ಬೆಸನಂ ಸೌಧರ್ಮೇಂದ್ರಂ ಫಣೀಂದ್ರಸುರೇಂದ್ರರಾ
ದ್ರೋಸೆದು ಮಕುಟಾಯತ್ತಾಗ್ನಿಸ್ಫಾರದಿಂ ಜಿನದೇಹಮಂ
ಭಸಿತಮಯಮಪ್ಪನ್ನಂ ಸಂಸ್ಕಾರಿಸಿರ್ದು ತ್ರಿಪುಂಡ್ರಮಂ
ನೊಸಲೊಳಿಡೆ ತಾನಿಂದ್ರಂ ತಾಮಿಟ್ಟರಗ್ನಿಕುಮಾರಕರ್ ॥ ೩೫ ॥

ವ॥ ತದನಂತರಂ—

ಕಂ॥ ಅಮರಸಮಾಜಂ ತದ್ಭ
ಸ್ಮಮನಂಗೋಪಾಂಗನಿಕಟತಟದೊಳ್ ಪೂಸಿ
ರ್ದೆಮಗೆ ಜಿನಪತಿಯ ಮಹಿಮೆಯ
ಸಮಗ್ರಸಾಮಗ್ರಿಯಕ್ಕುಮೆಂದೊಡಗುಣಿದರ್ ॥ ೩೬ ॥

ಧರ್ಮಾನುರಾಗದಿಂ ಸೌ
ಧರ್ಮೇಂದ್ರನು ಮಾಡೆ ಮತ್ತಿನಿಂದ್ರರುಮದನೇಂ
ನಿರ್ಮಿಸಿದರೊ ಜಿನಧರ್ಮದ
ಪೆರ್ಮೆಗೆ ರಾಗಿಸರೆ ಭವ್ಯರಱಿವಿನ ದಿವ್ಯರ್ ॥ ೩೭ ॥

ವ॥ ಅಂತು ಮೂವತ್ತಿರ್ವರಿಂದ್ರರುಮಾನಂದನೃತ್ಯಮನಾಡೆಯುಂ ಕಿನ್ನರರ್ ಕೊಳೆ ಪಾಡೆಯುಂ ಅಮರತೂರ್ಯಂಗಳ್ ತಾಳಂಗಳೊಳ ಕೂಡೆಯುಂ ಆಡಿ ಬ[2][ಟ]ಳ್ದಮರರೆಟ್ಟಿ ನೋಡೆಯುಂ ಪರಮನ ಚರಮಕಲ್ಯಾಣಂ ಪರಿಪೂರ್ಣಮಾಗೆ—

ವ॥ ಜಿನೇಂದ್ರನ ಪರಿನಿರ್ವಾಣಕಲ್ಯಾಣದ ಚಿಹ್ನೆಗಳು ತಂತಮ್ಮ ಲೋಕಗಳಲ್ಲಿ ತೋರಲಾಗಿ, ಭವನಾಮರ, ವ್ಯಂತರ, ಜ್ಯೋತಿಷ್ಕ, ಕಲ್ಪವಾಸಿ ದೇವ ಸಮೂಹಗಳು ಬಗೆಬಗೆಯ ಅರ್ಚನಾ ಪರಿಕರಗಳನ್ನು ಕೈಯಲ್ಲಿಟ್ಟುಕೊಂಡು ಬಂದು, ಪ್ರದಕ್ಷಿಣೆ ಮಾಡಿ ನಿಂತು, ತಾವು ತಂದ ಅರ್ಚನಾ ದ್ರವ್ಯಗಳಿಂದ ಜಿನೇಶನ ದೇಹವನ್ನು ಪೂಜಿಸಿದರು. ತುಸು ಹೊತ್ತಿನ ಬಳಿಕ—

೩೫. ಸೌಧರ್ಮೇಂದ್ರನ ಅಪ್ಪಣೆಯಿಂದ ಫಣೀಂದ್ರ ದೇವರು ತಮ್ಮ ಕಿರೀಟಗಳಲ್ಲಿದ್ದ ಬೆಂಕಿಯನ್ನು ಬಿಟ್ಟು ಜಿನದೇಹವನ್ನು ಬೂದಿಯಾಗುವಂತೆ ಸುಟ್ಟು ಸಂಸ್ಕರಿಸಿದರು. ಇಂದ್ರನು ಆ ಬೂದಿಯಿಂದ ಹಣೆಗೆ ತ್ರಿಪುಂಡ್ರವಿಟ್ಟು ಕೊಂಡನು ; ಅಗ್ನಿಕುಮಾರರೂ ಹಾಗೆಯೆ ಮಾಡಿದರು.

ವ॥ ಅನಂತರ—

೩೬. ದೇವಸಮೂಹವೆಲ್ಲ ಆ ಬೂದಿಯನ್ನು ತಮ್ಮ ಮೈತುಂಬ ಪೂಸಿಕೊಂಡು, "ಇದರಿಂದ ನಮಗೆ ಜಿನೇಂದ್ರ ಮಹಿಮೆಯ ಸಮಸ್ತ ಫಲವೂ ಒರುವುದು" ಎಂದು ಸಂತೋಷದಿಂದ ಕುಣಿದಾಡಿದರು.

೩೭. ಧರ್ಮಪ್ರೇಮದಿಂದ ಸೌಧರ್ಮೇಂದ್ರನು (ನೃತ್ಯವನ್ನು) ಮಾಡಲಾಗಿ ಇತರ ಇಂದ್ರರೂ ಅವನನ್ನು ಅನುಸರಿಸಿದರು. ಜಿನಧರ್ಮದ ಮಹಿಮೆಯನ್ನು ಕಂಡು ಭವ್ಯರಾದವರೂ ದಿವ್ಯಜ್ಞಾನವುಳ್ಳವರೂ ಸಂತೋಷಪಡದೆ ಇರುವರೆ ?

ವ॥ ಹಾಗೆ ಮೂವತ್ತು ಇಂದ್ರರೂ ಆನಂದ ನೃತ್ಯವಾಡಿ, ಕಿನ್ನರರು ಮೋಹಕವಾಗಿ ಹಾಡಿ, ದೇವತೂರ್ಯಗಳು ತಾಳಬದ್ಧವಾಗಿ ನುಡಿದು, ಕುಣಿಕುಣಿದು ದಣಿದ ದೇವತೆಗಳು ನೋಡುತ್ತಿರಲಾಗಿ ಪರಮೇಶ್ವರನ ಅಂತಿಮ ಕಲ್ಯಾಣವು ಸಂಪೂರ್ಣವಾಯಿತು.

---

1. ಧೃಳ (ಮ)　2. ಳ (ಮ)

ಕಂ॥ ಪರಮ ಜಿನಶಿಷ್ಯರಂ ಗಣ
ಧರರಂ ಮಕುಟಾಗ್ನಿಯಿಂದಮಗ್ನಿಕುಮಾರರ್
ಸುರಪತಿಮತದಿಂದಂ ಸಂ
ಸ್ಕರಿಸಿದರರ್ಹತ್ಸ್ವರೂಪಮೆಂದತಿಮುದದಿಂ ॥ ೩೮ ॥

ಆಸನ್ನಭವ್ಯರರ್ಹ
ಚ್ಛಾಸನದೊಳ್ ಭಕ್ತರೆಂದೊಡಿಂ ಪ್ರತ್ಯಕ್ಷೋ
ದ್ಭಾಸಿಯನೀಕ್ಷಿಸಿ ಜಿನನಂ
ಶಾಸನದೀಪಕರ ಭಕ್ತಿ ಕಿಱಿದಾದಪುದೇ ॥ ೩೯ ॥

ಆಸಮಯದೊಳಂದರ್ಹ
ಚ್ಛಾಸನಬದ್ಧಪ್ರಸಿದ್ಧ ಭವಸಂತತಿಯಂ
ಭಾಸುರಕುಳಿಶದೆ ಬರೆಯಿಸಿ
ವಾಸವನೆಱಗಿದನದಕ್ಕೆ ಭಕ್ತಿಯ ಭರದಿಂ ॥ ೪೦ ॥

ಅಭವಂಗೆ ಕಾಲಲಬ್ಧಿಯ
ವಿಭವಂ ದೊರೆಕೊಂಡ ಭವದಿನರ್ಹಲ್ಲಕ್ಷ್ಮೀ
ಪ್ರಭುತೆವರಂ ಬರೆಯಿಸಿ ಭ
ಕ್ತಿಭಾರಮಂ ಸಫಲಮನಿಸಿ ನಿಱಿಸಿದನಿಂದ್ರಂ ॥ ೪೧ ॥

ಅಯ್ದುಂ ಕಲ್ಯಾಣಂಗಳ
ನೆಯ್ದಿಸಿ ಷೋಡಶಜಿನೇಂದ್ರನಂ ಮುಕ್ತಿಯನಿ
ನ್ನೆಯ್ದುವುದುಮರಿದೆ ಹರಿಗಾ
[1][ರ][1]ಯ್ದಿದನಾರ್ ನಂಬರಖಿಳಭುವನತ್ರಯದೊಳ್ ॥ ೪೨ ॥

ಎಂದು ವಿನೇಯೋತ್ಕರಮಭಿ
ವಂದಿಸಿ ಶಾಂತೀಶ್ವರಂಗೆ ಪರಿಚಾರಕರಾ
ದಂದುಮಳವಳವಿಗಟಿಯೆ ಪು
ರಂದರತತಿ ನೆಗೞ್ದುದಿಂತು ನೋಂತರುಮೊಳರೇ ॥ ೪೩ ॥

---

೩೮. ಶ್ರೇಷ್ಠರಾದ ಜಿನಶಿಷ್ಯರನ್ನು ಮತ್ತು ಗಣಧರರನ್ನು ಇವರೂ ಅರ್ಹಂತಸ್ವರೂಪನೆಂದು ತಿಳಿದು ದೇವೇಂದ್ರನು ವಿಧಿಸಿದ ಮೇರೆಗೆ ಅಗ್ನಿಕುಮಾರರು ತಮ್ಮ ಮಕುಟಾಗ್ನಿಯಿಂದ ಸಂಸ್ಕರಿಸಿದರು.

೩೯. ಆಸನ್ನ ಭವ್ಯರು, ಅರ್ಹಂತ ಮತದಲ್ಲಿ ಭಕ್ತಿಯುಳ್ಳವರು, ಪ್ರತ್ಯಕ್ಷವಾಗಿ ಜಿನನನ್ನು ನೋಡಿದವರು ಎಂದ ಮೇಲೆ ಆ ಧರ್ಮದೀಪಕರ ಭಕ್ತಿಯೇನು ಸಾಮಾನ್ಯವೆ ?

೪೦. ಆ ಸಮಯದಲ್ಲಿ ಅರ್ಹಂತನ ಪ್ರಸಿದ್ಧವಾದ ಭವಾವಳಿಯನ್ನೆಲ್ಲ ಇಂದ್ರನು ಭಕ್ತಿಪೂರ್ವಕವಾಗಿ ವಜ್ರಲಿಪಿಯಲ್ಲಿ ಬರೆಯಿಸಿದನು.

೪೧. ಜಿನೇಂದ್ರನಿಗೆ ಕಾಲಲಬ್ಧಿಯು ಭಾಗ್ಯ ದೊರೆತಂದಿನಿಂದ ಹಿಡಿದು ಮೋಕ್ಷ ಪ್ರಾಪ್ತಿಯವರೆಗಿನ ಭವಗಳನ್ನು ಬರೆದು ನಿಲ್ಲಿಸಿ ಇಂದ್ರನು ತನ್ನ ಭಕ್ತಿಯನ್ನು ಸಾರ್ಥಕಗೊಳಿಸಿದನು.

೪೨. ಹದಿನಾರನೆಯ ಜಿನೇಂದ್ರನಿಗೆ ಐದು ಕಲ್ಯಾಣೋತ್ಸವಗಳನ್ನು ಮಾಡಿದ ಇಂದ್ರನಿಗೆ ಮುಕ್ತಿಪದ ದೊರೆಯುವುದು ಅಸಾಧ್ಯವೆ? (ತೀರ ಸುಲಭವಾದುದು.) ಮೂರು ಲೋಕಗಳಲ್ಲಿ ಇದನ್ನು ನಂಬದವರು ಯಾರು?

೪೩. ಹೀಗೆಂದು ಭಕ್ತಿಯಿಂದ ಶಾಂತೀಶ್ವರನಿಗೆ ಪರಿಚಾರಕರಾಗಿ ಇಂದ್ರರು ಅಸೀಮವಾದ ಪುಣ್ಯವನ್ನು ಗಳಿಸಿಕೊಂಡರು. ಅವರಂತೆ ಹೀಗೆ ಪುಣ್ಯಭಾಗ್ಯವನ್ನು ಗಳಿಸಿಕೊಂಡವರುಂಟೆ ?

---

1. ಠ (ಮ)

ವ॥ ಮತ್ತಮಾಸರ್ವಗೀರ್ವಾಣನಾಥನಕ್ಷೂಣವಿಶೋಧಿಪರಿಣಾಮಸಂ[1]ಚಿತಭೋಗಂತಮಗವುಳ್ಳುದಱಿಂದಂ ಶಚೀಮಹಾದೇವಿಯುಂ ಲೋಕಪಾಲರುಂ ಬ್ರಹ್ಮಲೋಕನಿಳಯರಪ್ಪ ಲೋಕಾಂತಿಕರುಂ ದಕ್ಷಿಣೇಂದ್ರರುಮಯ್ದುಮನೂತ್ತರೆಗಳೊಳ್ ಮಧ್ಯಮವರ್ತಿಯಪ್ಪ ಸರ್ವಾರ್ಥ ಸಿದ್ಧಿಯಹಮಿಂದ್ರರುಂ—

ಕಂ॥ ಭವವಲ್ಲೀದಳಫಲಮೂ
ಲವಿಷಯಮಂ ಪಱಿದು ಮುಱಿದು ಕುಡಿಯಂ ಬಂದಾ
ದಿವದಿಂದಂ ಮುಕ್ತಿವಧೂ
ವಿವಾಹಮಲ್ಲದೆ ವಧೂವಿವಾಹಮನೊಲ್ಲರ್ ॥ ೪೪ ॥

ಮೊದಲಿಂದ್ರುಂಬೆರಸಿಂದ್ರರು
ಮುದಿತೋದಿತರಂತನಂತ ಸುಖತನುಗಳಘಾ
ಸ್ಪದತನುಹರರೆಂದೆಂದುಂ
ಮುದದಿಂ ಮುಕ್ತಿಯೊಳೆ ನಿಲ್ಲದಿರ್ಪರೆ ಸಿದ್ಧರ್ ॥ ೪೫ ॥

ಉ॥ ಇಂತು ಚರಾಚರೈಕಸುಖಕಾರಣನಂ ದಿವಿಜರ್ ಚತುರ್ವಿಧರ್
ಶಾಂತಿಜಿನೇಂದ್ರನಂ ನೆರೆದಹರ್ನಿಶವೋಲಗಿಸುತ್ತುಮಿರ್ದು ಕಾ
ಲಾಂತದೊಳಾಜಿನಂ ವೃಜಿನಮಂ ತವಿಸುತ್ತೆ ನಿರಾಸ್ರವಂ ತ್ರಿಲೋ
ಕಾಂತಮನೆಯ್ದೆ ತಾಮುಮಿರದೆಯ್ದಿದರಾತ್ಮನಿಕೇತನಂಗಳಂ ॥ ೪೬ ॥

ವ॥ ಮತ್ತಮಾಜಿನೇಂದ್ರನ ಪರಮಚರಮೌದಾರಿಕ ಶರೀರಸಂಸ್ಕಾರಭೂಮಿಪ್ರದೇಶಕ್ಕೆ ಕಾಲತ್ರಯನಿಯಮಮಂ ತಪ್ಪದೆ ಕರಣ ತ್ರಿತಯಶುದ್ಧಿಪುರಸ್ಸರಂ ದ್ರವ್ಯಭಾವನಾರ್ಚನಾಸಮೇತಂ—

ವ॥ ಅಖಿಲ ದೇವತೆಗಳಿಗೆ ಒಡೆಯನಾದ ಇಂದ್ರನು ಪರಿಪೂರ್ಣವಾಗಿ ಶುಭ ಪರಿಣಾಮವುಳ್ಳವನೂ ಅನಂತ ಸುಖ ಭೋಗಿಯೂ ಆಗಿರುವುದರಿಂದ ಆತನೂ, ಶಚೀದೇವಿಯೂ, ಲೋಕಪಾಲರೂ, ಬ್ರಹ್ಮಲೋಕವಾಸಿಗಳಾದ ಲೋಕಾಂತಿಕ ದೇವತೆಗಳೂ, ದಕ್ಷಿಣೇಂದ್ರರೂ, ಐದು ಅಣೂತ್ತರೆಗಳ ಮಧ್ಯದಲ್ಲಿರುವ ಸರ್ವಾರ್ಥಸಿದ್ಧಿಯ ಇಂದ್ರರೂ—

೪೪. ಸಂಸಾರವೆಂಬ ಬಳ್ಳಿಯ ಬೇರನ್ನು ಹರಿದು, ಕುಡಿಯನ್ನು ಕತ್ತರಿಸಿ ದೇವಲೋಕದಿಂದ ಬಂದು ಮುಕ್ತಿ ಯೆಂಬ ವಧುವಿನೊಡನೆ ಮದುವೆಗೆ ನಿಲ್ಲುವರಲ್ಲದೆ ಬೇರೆ ಮದುವೆಗೆ ಮನಸ್ಸು ಮಾಡರು.

೪೫. ಸೌಧರ್ಮೇಂದ್ರನೆ ಮೊದಲಾದ ಇಂದ್ರರು ಉತ್ತರೋತ್ತರವಾಗಿ ಅಭ್ಯುದಯಹೊಂದುತ್ತ ಅನಂತ ಸುಖದ ದೇಹಗಳನ್ನು ಪಡೆದು ಪಾಪಕ್ಕೆ ಆಸ್ಪದವಾಗುವ ದೇಹಗಳನ್ನು ನಾಶಮಾಡುವರು. ಅವರು 'ಸಿದ್ಧರು' ಎನಿಸಿ ಸಂತೋಷದಿಂದ ಮುಕ್ತಿಯಲ್ಲಿಯೆ ನೆಲಸದಿರುವರೆ?

೪೬. ಹೀಗೆ ಚರಾಚರಗಳಿಗೆಲ್ಲ ಸುಖಕಾರಣನಾದ ಶಾಂತಿಜಿನೇಂದ್ರನನ್ನು ನಾಲ್ಕೂ ಬಗೆಯ ದೇವತೆಗಳು ಹಗಲಿರುಳೂ ಓಲೈಸುತ್ತ ಇದ್ದು ಕಾಲಾಂತರದಲ್ಲಿ ಆ ಜಿನನು ಪಾಪಕ್ಷಯಮಾಡಿಕೊಂಡು ಆಸ್ರವಮುಕ್ತನಾಗಿ ತ್ರಿಲೋಕ ಗಳಿಗೆ ಅತೀತವಾದ ಮೋಕ್ಷ ಸ್ಥಾನವನ್ನು ಪಡೆಯಲಾಗಿ ತಂತಮ್ಮ ನಿವಾಸಗಳಿಗೆ ತೆರಳಿದರು.

ವ॥ ಮತ್ತು ಆ ಜಿನೇಂದ್ರನ ಪರಮೌದಾರಿಕ ದೇಹವನ್ನು ಸಂಸ್ಕಾರಗೊಳಿಸಿದ ಭೂಪ್ರದೇಶಕ್ಕೆ ತ್ರಿಕಾಲಗಳಲ್ಲಿಯೂ ತಪ್ಪದೆ ತ್ರಿಕರಣಶುದ್ಧಿಯಿಂದ ದ್ರವ್ಯಾರ್ಚನೆ ಭಾವಾರ್ಚನೆಗಳೊಡನೆ—

---

1. × (ಮ)

ಕಂ॥ ಇಂದ್ರರ್ ಬಂದೆಱಗುವರಹ
ಮಿಂದ್ರರ್ ತಮ್ಮಿರ್ದ ನೆಲೆಯೊಳಿರ್ದೆಱಗುವರ
ಗ್ನೀಂದ್ರರ್ ಸೊಡರಿಂದೆಱಗುವ
ರೇಂ ದ್ರವ್ಯದ ಭಾವದರ್ಚನಾವಿಧಿ ಪಿರಿದೋ ॥ ೪೭ ॥

ಉ॥ ಶಾಂತಿಜಿನೇಂದ್ರಪಾದಕಮಲದ್ವಯಮಂ ಪ್ರತಿಮಾಸ್ವರೂಪದಿಂ
ಚಿಂತಿಸಿದೊಂಗೆ ಕರ್ಮಮಲನಿರ್ಮಥನಂ ದೊರೆಕೊಳ್ಗುಮೆಂದೊಡೇಂ
ಭ್ರಾಂತೊ ಶರೀರಪೂಜೆಯಿನದೇವಿರಿದಿಂದ್ರಫಣೀಂದ್ರರುಂದ್ರಮ
ರ್ತ್ಯೇಂದ್ರರತಿಕ್ರಿಯಾವಿಭವಮಂ ಭವಭಂಜನಶಕ್ತಿತತ್ತ್ವಮಂ ॥ ೪೮ ॥

ಕಂ॥ ಷೋಡಶಜಿನಪತಿನುತಚರ
ಣಾಡಂಬರಮಘವಿಘಾತಿ ಯೆನೆ ತತ್ಪ್ರತಿಮಾ
ನೀಡಾಗಮನಮುಮರ್ಚಾ
ಕ್ರೀಡನಮುಂ ಮುಕ್ತಿಹೇತುವಪ್ಪುದು ಪಿರಿದೇ ॥ ೪೯ ॥

ಸ್ರ॥ ಈಷತ್ಪ್ರಾಗ್ಭಾರಮೆಂಬೆಂಟನೆಯ ನೆಲನುಮಂ ದಾಂಟಿ ತೀರ್ಥೇಶ್ವರಂ ನಿ
ರ್ದೋಷಂ ಮೇಗತ್ತ ಮೂಗಾವುದಮೊಗೆದು [1]ನಭೋವೀತನಾ[1]ಗಿರ್ದನಾಸಂ
ತೋಷಕ್ಕಾ ವೈಭವಕ್ಕಾ ಮದರಹಿತಮುದಕ್ಕಾ ಸುಖಾವಾಪ್ತಿಗಾ ನಿ
ಶ್ಶೇಷಾಘೌಘಚ್ಛಿತ್ತಿಗಾಮೋಕ್ಷದಪದವಿಗದೇಂ ನೋಂತನೋ ಶಾಂತಿನಾಥಂ ॥ ೫೦ ॥

ಕಂ॥ ಅಡಕಿಲ ಮಡಕೆಗಳೆಂಟುಂ
ಬೆಡಂಗು ನಿಲೆ ನೆಲವುವಿಡಿದು ನಿಲ್ವಂತೆಂಟುಂ
ಪೊಡವಿಗಳಂ ತಾಳ್ದಿದುವೋ
ಗಡಿಸದೆ ಮೂಱುಂ ಮಹಾನಿಲಂಗಳ್ ಕ್ರಮದಿಂ ॥ ೫೧ ॥

---

೪೭. ಇಂದ್ರರು ಬಂದು ನಮಸ್ಕರಿಸುವರು; ಅಹಮಿಂದ್ರರು ತಾವಿದ್ದಲ್ಲಿಂದಲೆ ನಮಸ್ಕರಿಸುವರು; ಅಗ್ನೀಂದ್ರರು ದೀಪಗಳಿಂದ ನಮಸ್ಕರಿಸುವರು; ದ್ರವ್ಯದ ಹಾಗು ಭಾವದ ಈ ಅರ್ಚನೆ ಎಷ್ಟು ಘನವಾದುದು !

೪೮. ಶಾಂತಿಜಿನೇಂದ್ರನ ಪಾದಕಮಲಗಳನ್ನು ಪ್ರತಿಮಾರೂಪದಲ್ಲಿ ಧ್ಯಾನಮಾಡಿದವನಿಗೆ ಕೂಡ ಕರ್ಮನಾಶವಾಗಿ ಹೋಗುತ್ತದೆ. ಎಂದಮೇಲೆ ಪ್ರತ್ಯಕ್ಷನಾಗಿ ಆತನ ಶರೀರಪೂಜೆಯನ್ನು ನೆರವೇರಿಸಿದ ಇಂದ್ರ, ಫಣೀಂದ್ರಾದಿಗಳ ವೈಭವವೂ ಸಂಸಾರನಾಶಕ ಶಕ್ತಿಯೂ ಎಷ್ಟು ಘನವಾದುವು !

೪೯. ಹದಿನಾರನೆಯ ಜಿನೇಂದ್ರನ ಪಾದಗಳ ಸ್ಮರಣೆಯಿಂದಲೆ ಪಾಪನಾಶವಾಗುವುದು ; ಎಂದಮೇಲೆ ಆತನ ಮೂರ್ತಿಯಿರುವ ಬಸದಿಗೆ ಹೋಗುವುದೂ ಅರ್ಚನೆ ಮಾಡುವುದೂ ಮುಕ್ತಿಗೆ ದಾರಿ ಎಂಬುದು ಏನು ದೊಡ್ಡ ವಿಷಯ ?

೫೦. ಈಷತ್ ಪ್ರಾಗ್ಭಾರವೆಂಬ ಎಂಟನೆಯ ಭೂಮಿಯನ್ನೂ ದಾಟಿ ತೀರ್ಥಕರನು ಅದರ ಮೇಲೆ ಮೂರು ಗಾವುದ ಹೋಗಿ ಆಕಾಶದಲ್ಲಿ ಲೀನನಾದನು. ಆ ಸಂತೋಷಕ್ಕೆ, ಆ ವೈಭವಕ್ಕೆ, ಆ ಕಲ್ಯಾಣಕ್ಕೆ, ಆ ಆನಂದಕ್ಕೆ, ಆ ಸುಖಪ್ರಾಪ್ತಿಗೆ, ನಿಶ್ಶೇಷವಾದ ಆ ಪಾಪಸಂಹಾರಕ್ಕೆ, ಆ ಮುಕ್ತಿಯ ಪದವಿಗೆ ಶಾಂತನಾಥನು ಅದೆಂತಹ ಅದ್ಭುತವಾದ ಪುಣ್ಯವನ್ನು ಗಳಿಸಿದ್ದನು !

೫೧. ಒಂದರಮೇಲೊಂದು ಅಡಕಲಾಗಿರುವ ಎಂಟು ಮಡಕೆಗಳನ್ನು ನೆಲುವು ಹಿಡಿದಿರುವಂತೆ ಎಂಟು ಭೂಮಿಗಳನ್ನೂ ಭದ್ರವಾಗಿ ಮೂರು ಮಹಾವಾತಗಳು ಹಿಡಿದು ನಿಲ್ಲಿಸಿರುವುವು.

---

1. ನಭೋತಮಾ (ಅ)

ವ॥ ಅವಱ ಪೆಸರ್ಗಳುಂ ಘನೋದಧಿ ಘನವಾತ ತನುವಾತಂಗಳೆಂಬುವುವವಱೊಳಗೆ ಘನೋದಧಿಯೆಂಬ ಮೊದಲ ಮಹಾವಾತಮಂ ಘನವಾತಮೆಂಬೆರಡನೆಯ ಗಾಳಿಯಂ ಕಿಱಿದು ಮೇಗೆ ಪೋಗೆ ಮೂಱನೆಯ ತನುವಾತಮೆಂಬ ಗಾಳಿಯ ಮೇಗೆ ಕ್ಷಾಯಿಕಸಮ್ಯಕ್ತ್ವಮುಮನಂತಜ್ಞಾನಮುಮನಂತದರ್ಶನಮುಮನಂತವೀರ್ಯಮುಂ ಸೂಕ್ಷ್ಮತ್ವ(ಮು)ಮವಗಹನಮ[1]ಗುರುಲಘುತ್ವಮು[1]ಮವ್ಯಾಬಾಧಂಗಳೆಂಬೆಂಟುಂಗುಣಂಗಳಾತ್ಮೀಯತ್ತವಾಗೆ ಷೋಡಶತೀರ್ಥಕರಪರಮೇಶ್ವರಂ ಪರಮಪದಪ್ರಾಪ್ತನುಮನಂತಸುಖಾಮೃತತೃಪ್ತನುಮಾಗಿರೆ —

ಕಂ॥ ಸಾಸಿರದೆಂಟು ಪೆಸರ್ಗಳ್
ವಾಸವನಿಡೆ ನೆಗೞ್ದವವನೆ ಸುರರುಂ ಪಿರಿದುಂ
ಗೋಸನೆ[2]ಗೊಳು[2]ವಂತಾ ಜಿನ
ವಾಸಸ್ಥಿ[3]ತ[3] ಶಾಂತಿನಾಥನಂ ಸ್ತುತಿಯಿಸುವರ್ ॥ ೫೨ ॥

ಎರಡುವರೆದ್ವೀಪದ ಮಂ
ದರಂಗಳೆಯ್ದವಱೊಳೊಂದಱೊಳ್ ಪದಿನಾಱಾ
ಗಿರೆಯುಮಕೃತ್ರಿಮಜಿನಮಂ
ದಿರಂಗಳೊಳಗೊಳ[4]ವು[4] ಶಾಂತಿಜಿನಸಂಸ್ತುತಿಗಳ್ ॥ ೫೩ ॥

ಭೂತಭವಿಷ್ಯತ್ಸಂಪ್ರತಿ
ಗೀತಸ್ತುತಪೂಜಿತಾರ್ಹದಭಿವರ್ಣನದೊಳ್
ಮಾತೇಂ ಶಾಂತೀಶ[ಕಥಾ]
ಖ್ಯಾತಿ ದಲೆಲ್ಲೆಡೆಯೊಳಂ ಮಹೀಮಂಡಳದೊಳ್ ॥ ೫೪ ॥

ಚಂ॥ ತ್ರಿಜಗದಭಿಷ್ಟುತಂ ತ್ರಿಜಗದಾಶ್ರಯಣಂ ತ್ರಿಜಗಜ್ಜನಸ್ತುತಂ
ತ್ರಿಜಗದುಪಾಸಿತಂ ತ್ರಿಜಗದುಲ್ಲಸಿತಂ ತ್ರಿಜಗನ್ಮನೋಹರಂ
ತ್ರಿಜಗದಲಂಕೃತಂ ತ್ರಿಜಗದೇಕಮತಂ ತ್ರಿಜಗತ್ಸುಖಾಸ್ಪದಂ
ತ್ರಿಜಗದಘಚ್ಛಿದಂ ತ್ರಿಜಗದೀಶನುತಂ ಕಥೆ ಶಾಂತಿನಾಥನಾ ॥ ೫೫ ॥

ವ॥ ಘನೋದಧಿ, ಘನವಾತ ಮತ್ತು ತನುವಾತ ಎಂದು ಅವುಗಳ ಹೆಸರು. ಅವುಗಳಲ್ಲಿ ಘನೋದಧಿಯೆಂಬ ಮೊದಲನೆಯದು ಮಹಾವಾತ ; ಅದರ ಮೇಲೆ ಎರಡನೆಯದು ಗಾಳಿ ; ಅದರಿಂದ ಸ್ವಲ್ಪ ಮೇಲೆ ಮೂರನೆಯದು ತನುವಾತವೆಂಬ ಗಾಳಿ. ಇದರ ಮೇಲೆ ಕ್ಷಾಯಿಕ ಸಮ್ಯಕ್ತ್ವ, ಅನಂತಜ್ಞಾನ, ಅನಂತದರ್ಶನ, (ಅನಂತಸುಖ), ಅನಂತವೀರ್ಯ, ಸೂಕ್ಷ್ಮತ್ವ, ಅವಗಹನ, ಅವ್ಯಾಬಾಧ ಎಂಬ ಎಂಟು ಗುಣಗಳನ್ನೂ ಅಳವಡಿಸಿಕೊಂಡು ಹದಿನಾರನೆಯ ತೀರ್ಥಕರ ಪರಮೇಶ್ವರನು ಮೋಕ್ಷಪದವನ್ನು ಹೊಂದಿ ಅನಂತಸುಖದಿಂದ ತೃಪ್ತನಾದನು.

೫೨. ಇಂದ್ರನು ಆತನಿಗೆ ಸಾವಿರದ ಎಂಟು ಹೆಸರುಗಳನ್ನಿಟ್ಟನು. ದೇವತೆಗಳು ಅವುಗಳನ್ನು ಉದ್ಘೋಷಿಸುತ್ತ ಸಿದ್ಧಸ್ಥಿತಿಯ ಶಾಂತಿನಾಥನನ್ನು ಸ್ತುತಿಸುವರು.

೫೩. ಎರಡುವರೆ ದ್ವೀಪದಲ್ಲಿ ಮಂದರಗಳು ಐದು ; ಅವುಗಳಲ್ಲಿ ಒಂದೊಂದರಲ್ಲಿಯೂ ಹದಿನಾರು ಅಕೃತ್ರಿಮ ಜಿನಾಲಯಗಳುಂಟು. ಅವೆಲ್ಲವುಗಳಲ್ಲಿಯೂ ಶಾಂತಿಜಿನೇಶ್ವರನ ಸ್ತುತಿಗಳು ನಡೆದುವು.

೫೪. ಭೂತ ಭವಿಷ್ಯತ್ ವರ್ತಮಾನಗಳಲ್ಲೆಲ್ಲರೂ ಹಾಡಿ, ಹೊಗಳಿ, ಪೂಜಿಸುತ್ತ ಅರ್ಹಂತನನ್ನು ವರ್ಣಿಸುತ್ತ ಇರುವರು—ಹೆಚ್ಚು ಹೇಳುವುದೇನು? ಈ ಭೂಮಂಡಲದಲ್ಲೆಲ್ಲ ಶಾಂತೀಶ್ವರನ ಕಥೆ ಪ್ರಖ್ಯಾತವಾದುದು.

೫೫. ಶಾಂತಿನಾಥನ ಕಥೆ ಮೂರೂ ಲೋಕಗಳಲ್ಲಿ ಕೊಂಡಾಟಕ್ಕೆ ಪಾತ್ರವಾದುದು ; ಆಶ್ರಯವುಳ್ಳುದು ; ಜನಖ್ಯಾತವಾದುದು ; ಉಪಾಸನೆಗೆ ಯೋಗ್ಯವಾದುದು ; ಉಲ್ಲಾಸಕರವಾದುದು ; ಮನೋಹರವಾದುದು ; ಮೂರು ಲೋಕಗಳಿಗೂ ಭೂಷಣವಾದುದು ; ಎಲ್ಲರೂ ಒಪ್ಪುವಂತಹುದು ; ಸರ್ವರಿಗೂ ಸುಖದಾಯಕವಾದುದು ; ಎಲ್ಲ ಪಾಪಗಳನ್ನು ನಿವಾರಿಸುವಂತಹುದು ; ಜಗದೀಶರಿಗೆಲ್ಲ ಪೂಜ್ಯವಾದುದು.

---

1. × (ಮ) 2. ಗಳ (ಅ) 3. ತಿ (ಅ) 4. ಗೆ (ಮ)

ಕಂ॥ ಕಾಂತಜನಾಂತರದೊಳ್ ಸಲೆ
ಶಾಂತಿಪುರಾಣಮೆ ಪುರಾಣಚೂಡಾಮಣಿಯೆಂ
ದಿಂತು ಪೆಸರಿಡುಗುಮೇ ಮತಿ
ವಂತಂ ಕವಿಚಕ್ರವರ್ತಿ ಸಮೆದೀ ಕೃತಿಯಂ ॥ ೫೬ ॥

ಮ॥ ಜಿನಚಂದ್ರಂ ವಿಭು ಶಾಂತಿನಾಥನಜರಂ ಶ್ರೀಶಾಂತಿತೀರ್ಥೇಶ್ವರಂ
ಜಿನನಾಥಂ ಭವಬದ್ಧನಾಮಯುಗಳಂ ಶ್ರೀಷೇಣನೆಂದೀ ಜಿನೇಂ
ದ್ರನ ಜನ್ಮಂಬರಮಾ ವಿಶೇಷಣವಿಶೇಷ್ಯದ್ವಂದ್ವಮದ್ವಂದ್ವಮಾ
ಜಿನಚಂದ್ರಪ್ರಭುಗಂ ಜಿನಾಧಿಪತಿಗಂ ಭೂಲೋಕನಾಕೌಘದೊಳ್ ॥ ೫೭ ॥

ಉ॥ ಷೋಡಶತೀರ್ಥನಾಥ ಮದನತ್ವದ ಪಂಚಮಚಕ್ರವರ್ತಿ ತಾ
ನೀಡದಗಣ್ಯಪುಣ್ಯದಮನಂತಸಿತಾಂತದ ಶಾಂತಿಕಾಂತೆಯೊಳ್
ಕೂಡಿದ ಕೂಟದಗ್ಗಳದ ಮೋಕ್ಷದ [1]ದೀ[1]ಕ್ಷೆಗೆ ನೋಂತ ಪೆಂಪು ನಾ
ಡಾಡಿಯೆ ಶಾಂತಿನಾಥಜಿನಚಂದ್ರಮುನೀಂದ್ರನದೇಂ ಕೃತಾರ್ಥನೋ ॥ ೫೮ ॥

ಮ॥ ಜಿನಚಂದ್ರಂ ಕೃತಿನಾಥ[2]ನಾ ಕೃತಿಗೆ ನಾಥಂ[2] ಶಾಂತಿನಾಥಂ ಪುರಾ
ತನ ಕಾವ್ಯಂಗಳುಮೀಗಳಾದ ಕುಕಥಾಕಾವ್ಯಂಗಳುಂ ಪೋಲ್ವುವಿ
ಲ್ಲ ನಭೂತೋ ನಭವಿಷ್ಯತಿಕ್ರಮಮದಕ್ಕೀ ಪ್ರೌಢಿಯಂ ಮಲ್ಲಪ
ಯ್ಯನುಮತ್ಯುನ್ನತಪುನ್ನಮಯ್ಯನುಮಧೀಶಪ್ರೀತಿಯಂ ಮಾಡಿದರ್ ॥ ೫೯ ॥

ಕಂ॥ ಜಿನಚಂದ್ರಮುನೀಂದ್ರನೆ ಶಾಂ
ತಿನಾಥನೀ ಶಾಂತಿನಾಥನಾ ಜಿನಚಂದ್ರಂ
ಜಿನಚಂದ್ರಮುನೀಂದ್ರನೆ ಶಾಂ
ತಿನಾಥನಾದೊಂ ಭವಾವಳೀವಿರಮಣದೊಳ್ ॥ ೬೦ ॥

---

೫೬. ಜಿನೇಂದ್ರರ ಸುಂದರವಾದ ಪುರಾಣಗಳಲ್ಲೆಲ್ಲ ಕವಿಚಕ್ರವರ್ತಿರಚಿತವಾದ ಈ ಶಾಂತಿಪುರಾಣವೆ ಶ್ರೇಷ್ಠ ಪುರಾಣವೆಂದು ಬಲ್ಲವರು ಹೆಸರಿಸುವರು.

೫೭. ಜಿನಚಂದ್ರಪ್ರಭುವೆಂದೂ, ಶ್ರೀ ಶಾಂತಿತೀರ್ಥೇಶ್ವರನೆಂದೂ, ಶ್ರೀಷೇಣನೆಂದೂ ಈ ಜಿನೇಂದ್ರನಿಗೆ ನಡೆದು ಬಂದ ಹೆಸರುಗಳು. ವಿಶೇಷಣ-ವಿಶೇಷ್ಯಗಳೆರಡೂ ಒಬ್ಬನಿಗೇ ಅನ್ವಯಿಸುತ್ತವೆ. ಈ ಮೂರು ಲೋಕಗಳಲ್ಲಿ ಜಿನಚಂದ್ರ ಹಾಗು ಜಿನಾಧಿಪತಿ ಇಬ್ಬರೂ ಒಂದೆ.

೫೮. ಹದಿನಾರನೆಯ ತೀರ್ಥಕರ, ಮನ್ಮಥ ಹಾಗು ಐದನೆಯ ಚಕ್ರವರ್ತಿ—ಈ ಮೂರೂ ಪದವಿಗಳನ್ನು ತಾನೊಬ್ಬನೆ ಪಡೆದು ಅಸೀಮವಾದ ಪುಣ್ಯದಿಂದ ಅನಂತವಾದ ಶಾಂತಿಯೊಡನೆ ಪರಮಗತಿಯಾದ ಮೋಕ್ಷವನ್ನು ಗಳಿಸಿದ ಅಗ್ಗಳಿಕೆ ಸಾಮಾನ್ಯವೆ? ಶಾಂತಿನಾಥನಾದ ಜಿನಚಂದ್ರ ಮುನೀಶ್ವರನು ಎಂತಹ ಕೃತಾರ್ಥನು !

೫೯. ಜಿನಚಂದ್ರನೆ ಶಾಂತಿನಾಥನೆಂಬ ಹೆಸರಿಂದ ಈ ಕೃತಿಗೆ ನಾಯಕನು ; ಪ್ರಾಚೀನ ಕಾವ್ಯಗಳಾಗಲಿ, ಈಗಿನ ಸುಖ್ಯಾತ್ಯದ ಕಥಾಕಾವ್ಯಗಳಾಗಲಿ ಈ ಕಾವ್ಯವನ್ನು ಹೋಲಲಾರವು. ಇಂತಹ ಕಾವ್ಯ ಹಿಂದಾಗಲಿಲ್ಲ, ಮುಂದೆ ಆಗುವುದಿಲ್ಲ. ಅದಕ್ಕೆ ಇಂತಹ ಪ್ರೌಢಿಯನ್ನು ಒದಗಿಸಿ ಮಲ್ಲಪಯ್ಯನೂ, ಶ್ರೇಷ್ಠನಾದ ಪುನ್ನಮಯ್ಯನೂ ತಮ್ಮ ಗುರುವಿಗೆ ಪ್ರೀತಿಯುಂಟುಮಾಡಿದರು.

೬೦. ಜಿನಚಂದ್ರ ಮುನೀಶ್ವರನೇ ಶಾಂತಿನಾಥನು ; ಶಾಂತಿನಾಥನೇ ಜಿನಚಂದ್ರನು. ಜಿನಚಂದ್ರ ಮುನೀಂದ್ರನೇ ಭವಾವಳಿಯ ಕೊನೆಯಲ್ಲಿ ಶಾಂತಿನಾಥನಾದನು.

---

1. ಪೀ (ಅ) 2. × (ಮ)

ಉ॥ ಅಮ್ಮನ ಭಕ್ತನುಂ ಗುಣಗಣಾಶ್ರಯನಾತನ ತಮ್ಮನಪ್ಪ ಪು
ನ್ನಮ್ಮನುಮಟ್ಟಿಯಿಂ ಗುರುಸಮಕ್ಷಪರೋಕ್ಷವಿನೇಯವೃತ್ತಿ[1]ಯಿಂ
ದಮ್ಮನದುಕ್ಕಿವಂ[1] ತಗು[2]ಟ[3] ನಿರ್ವಹಣಸ್ಥಿತಿ[2]ಗುಯ್ದರೀ ಪುರಾ
ಣಮ್ಮಹಿರತ್ನಮಿಂತಿದೆಯಲಂಕೃತಿ ತಾಂ ಕವಿಚಕ್ರವರ್ತಿಯಾ ॥ ೬೧ ॥

ಕಂ॥ ತಂದೆಯ ಭಕ್ತಂ [ಬುಧಜನ]
ವೃಂದಾರಕನೆನಿಪನಾವೊನಾತನ ತಮ್ಮಂ
ಸಂದ ವಿಭು ಪುನ್ನಮಯ್ಯನಿ
ದಂ ದುಗ್ಧಾಂಬುಧಿಯನೆಯ್ದೆ ಪರಿಯಿಸಿ ನೆಗಟ್ದಂ ॥ ೬೨ ॥

ದ್ವಿಜಕುಲತಿಲಕೋಪಮರ
ಗ್ರಜಾನುಜರ್ ಮಲ್ಲಪಯ್ಯಪುನ್ನಮಯಂಗಳ್
ನಿಜಗುರುಪರೋಕ್ಷವಿನಯದಿ
ನಜಿತರ್ ಜಿನಚಂದ್ರಕೃತಿಗೆ ಕಲಶಮನಿಟ್ಟರ್ ॥ ೬೩ ॥

ಇದಿರ್ಗೆ ಬರೆ ಪುನ್ನಿಗಂ ಕಿಡಿ
ಸದಿರಂ ಕವಿಗಮಕಿವಾದಿವಾಗ್ಮಿಗಳ ಕವಿ
ತ್ವದ ಗಮಕಿತ್ವದ ವಾದಿ
ತ್ವದ ವಾಗ್ಮಿತ್ವದ ಪೊಡರ್ಪುಮಂ ದರ್ಪಮುಮಂ ॥ ೬೪ ॥

ಪ್ರಕಟಂ ಲೋಕೋತ್ತರಲೌ
ಕಿಕಪರಿಣತಿ ಪುನ್ನಿಗಂಗೆ ಶಾಂತೀಶ್ವರರಾ
ಮಕಥಾಪ್ರಶಸ್ತಿಯಿಂದಾ
ದ ಕೃತಿಗಳಿಂ [ಕೃತಿಯುಗಂಗಳ]ನ್ನವುಮೊಳವೇ ॥ ೬೫ ॥

---

೬೧. 'ತಂದೆಯ ಭಕ್ತ'ನೆಂದು ಖ್ಯಾತನಾದ ಗುಣವಂತ ಮಲ್ಲಪಯ್ಯನೂ ಆತನ ತಮ್ಮನಾದ ಪುನ್ನಮಯ್ಯನೂ ಪ್ರೀತಿಯಿಂದ ಗುರುಗಳ ಸಮಕ್ಷದಲ್ಲಿಯೂ ಪರೋಕ್ಷದಲ್ಲಿಯೂ ಭಕ್ತಿಯುಕ್ತರಾಗಿದ್ದು ಆತ್ಮೀಯವಾಗಿಯೂ ಉತ್ಸಾಹದಿಂದಲೂ ಕವಿಚಕ್ರವರ್ತಿಗೆ ಅಲಂಕಾರನಾದ ಭೂಮಿಗೆ ರತ್ನವೆನಿಸಿದ ಈ ಪುರಾಣವನ್ನು ಬರೆಯಿಸಿದರು.

೬೨. ತಂದೆಯ ಭಕ್ತನೆಂದೂ ವಿದ್ವಾಂಸರ ದೇವನೆಂದೂ ಖ್ಯಾತನಾದ ಮಲ್ಲಪಯ್ಯನ ತಮ್ಮನಾದ ಪ್ರಭು ಪುನ್ನಮಯ್ಯನು ಇದರ ಖ್ಯಾತಿಯನ್ನು ಕ್ಷೀರಸಾಗರದವರೆಗೆ ಹಬ್ಬಿಸಿ ಪ್ರಸಿದ್ಧನಾದನು.

೬೩. ದ್ವಿಜಕುಲಕ್ಕೆ ಭೂಷಣಪ್ರಾಯರಾದ ಮಲ್ಲಪಯ್ಯ, ಪುನ್ನಮಯ್ಯರೆಂಬ ಈ ಸೋದರರು ತಮ್ಮ ಗುರುವಿಗೆ ಪರೋಕ್ಷ ವಿನಯವನ್ನು ತೋರಲು ಈ ಜಿನಪುರಾಣಕ್ಕೆ ಕಲಶವಿಟ್ಟರು.

೬೪. ಕವಿಗಳಾಗಲಿ, ವಾದಿಗಳಾಗಲಿ, ಗಮಕಿಗಳಾಗಲಿ ಎದುರಿಗೆ ಬಂದರೆ ಪೊನ್ನಕವಿ ಅವರ ಕವಿತ್ವದ, ವಾದಪಟುತ್ವದ, ಗಮಕಿತ್ವದ ಪ್ರೌಢಿಯನ್ನೂ ದರ್ಪವನ್ನೂ ಇಳಿಸದೆ ಬಿಡುವುದಿಲ್ಲ.

೬೫. ಪೊನ್ನಿಗನಿಗೆ (ಪುನ್ನಕವಿಗೆ) ಆಗಮಿಕ ಹಾಗು ಲೌಕಿಕಗಳೆರಡರಲ್ಲಿಯೂ ಪರಿಣತಿಯುಂಟು. (ಆತನು ರಚಿಸಿದ) ಶಾಂತಿಪುರಾಣ ಹಾಗು ರಾಮಕಥೆಗಳಿಗೆ ಸಮಾನವಾದ ಬೇರೆ ಎರಡು ಕೃತಿಗಳು ಎಲ್ಲಾದರೂ ಉಂಟೆ?

---

1. ತಮ್ಮನ್ನಾನವಾ (ಅ)　2. ಟ್ಟಿಯುಂ [illegible] ತಗುಳೆ (ಅ)

ಕಂ॥ ವಿದಿತಭುವನೈಕರಾಮಾ
ಭ್ಯುದಯಕ್ಕಂ ಬೆಲೆಗಮಾವುದಂತರವಿಂತೀ
ಪದಿನಾಲ್ಕುಂ ಭುವನಂಗಳ್
ಪದಿನಾಲ್ಕಾಶ್ವಾಸರಚನೆಗಂ ಬೆಲೆಯಕ್ಕುಂ ॥ ೬೬ ॥

ಶಾಂತಿಪುರಾಣದ ರೇಖೆಗ
ಳೆಂತುಟಿದಟಿಗವಿಯ ರೇಖೆ ಬಕ್ಕುಂಮೆ ಶಶಭೃ
ತ್ಕಾಂತಿಗೆ ಮಿಂಚುಂಬುಳು ಸಮ
ನೆಂತಕ್ಕುಮೊ ದೊರೆಗಮೊರೆಗಮೆಣೆಗಂ ತೊಣೆಗಂ ॥ ೬೭ ॥

ಪನ್ನೆರಡಾಶ್ವಾಸಂಗಳ
ಬಿನ್ನಣದ ತೆರಳ್ಕೆಯಿಂಪಿನೊಳ್ಪಿನ ರಸಮುಂ
ಭಿನ್ನರಸಂಗಳ ಸಮುಕ
ಟ್ಟುನ್ನಟ್ಟನೆ ಮೆಱೆಗುಮಱೆಯೆ ಶಾಂತಿಪುರಾಣಂ ॥ ೬೮ ॥

ನೇರಿದುವೆನಿಪೆರಡುಂ ಕವಿ
ತಾರಸಮಿಾ ಸವಣನೊರ್ವನೊಳ್ ನೆಲಸಿದುವಿಂ
ನಾರಾರ ಕವಿತ್ವಮುಮವಿ
ಚಾರಿತರಮಣೀಯಮಲ್ಲಿ ಪುರುಳರಸುವುದೇ ॥ ೬೯ ॥

ಎರೆದೆಡೆವರ್ಪವನುಂ ಮು
ಚ್ಚರಿಸುವನುಂ ನುಡಿಗೆ ಸಕ್ಕದಂ ಕನ್ನಡಮುಂ
ಬೆರಡುಂ ಕವಿತೆ[1]ಯ ಬಲ್ಮೆಗೆ[1]
ಬೆರಲೆತ್ತಿದನಿಳೆಯೊಳೀಕುರುಳ್ಗಳಸವಣಂ ॥ ೭೦ ॥

೬೬. ಪ್ರಸಿದ್ಧವಾದ ಭುವನೈಕರಾಮಾಭ್ಯುದಯ ಕಾವ್ಯಕ್ಕೆ ಬೆಲೆಯ ಪ್ರಮಾಣ ಯಾವುದು ? ಅದರ ಹದಿನಾಲ್ಕು ಆಶ್ವಾಸಗಳಿಗೆ ಈ ಹದಿನಾಲ್ಕು ಲೋಕಗಳೆ ಬೆಲೆಯಾದಾವು.

೬೭. ಇತರ ಅಳಿಗವಿಗಳ ರಚನೆಗಳು ಶಾಂತಿಪುರಾಣದ ಒರೆಗೆ ಬರಬಲ್ಲುವೆ ? ಚಂದ್ರನ ಕಾಂತಿಗೆ ಮಿಂಚುಹುಳು ಸರಿಯಾದೀತೆ ?

೬೮. ಹನ್ನೆರಡು ಆಶ್ವಾಸಗಳ ಜಾಣ್ಮೆ, ಇಂಪು, ಸೊಗಸು, ರಸ—ಅನೇಕ ರಸಗಳ ವೈಚಿತ್ರ್ಯ ಪೂರ್ಣವಾದ ಹೊಂದಾಣಿಕೆ—ಇವುಗಳಿಂದ ಶಾಂತಿಪುರಾಣವು ಸಮಗ್ರವಾಗಿ ಶೋಭಿಸುವುದು.

೬೯. ಶ್ರೇಷ್ಠವಾದ ಎರಡು (ಭಾಷೆಗಳಲ್ಲಿಯೂ) ಕವಿತಾ ಸಾಮರ್ಥ್ಯ ಈ ಸವಣನಲ್ಲಿ ನೆಲೆಗೊಂಡಿವೆ. ಇತರ ಕವಿಗಳ ಕವಿತ್ವ ತೋರಿಕೆಗೆ ಮಾತ್ರ ರಮಣೀಯ (ವಿಚಾರ ಮಾಡಿದಲ್ಲಿ ಹುರುಳಿಲ್ಲದುವು). ಅವುಗಳಲ್ಲಿ ತಥ್ಯವನ್ನು ಹುಡುಕಬೇಕೆ ?

೭೦. ಯಾಚಿಸಿ ಬಳಿಗೆ ಬರುವವನೆ ಆಗಲಿ, ಮತ್ಸರ ಪಡುವವನೆ ಆಗಲಿ—ಬಾದು ಮಾತಾಡಲಿ. ಸಂಸ್ಕೃತ ಮತ್ತು ಕನ್ನಡ ಎರಡರಲ್ಲೂ ಭಾಷೆಗಳಲ್ಲಿ ಕಾವ್ಯಕ್ಕೆ ತಾನೆ ಮೇಲೆಂಬ ಹುರುಳುಳ್ಳ ಸವಣನಾದ ಪೊನ್ನಕವಿಯು ಕೀರ್ತಿ ಹೇಳಿಸಿ ಕೊಂಡನು (ಪ್ರಖ್ಯಾತನಾದನು).

1. ಯೊಳವಗನೆ (ಅ)

ಕಂ॥ ಸಕಲೇತರ ನೈಗಮಸ
ಙ್ಗ್ರಹವಕಾರಣದೆ ಜೀವ[ಮುಖ್ಯ]ಪದಾರ್ಥ
ಪ್ರಕರಮನಱಿವೆಡೆಗೆರಡನೆ
ಯಕಳಂಕಂ ನೋಡಿಮಿಂ ಕುರುಳ್ಗಳ ಸವಣಂ ॥ ೭೧ ॥

ಕವಿತಾವಿಳಾಸಮುಂ ಚ
ಕ್ರವರ್ತಿ ತಾನಿರ್ದು ಮೆಚ್ಚೆ ಪೆಸರ್ಗೊಂಡೆರಡುಂ
ಕವಿತೆಯೊಳಮುಭಯಕವಿಚ
ಕ್ರವರ್ತಿಯೆನೆ ನೆಗಟ್ದನೀ ಕುರುಳ್ಗಳ ಸವಣಂ ॥ ೭೨ ॥

ಅಯ್ದು ಕಷಾಯೋದಕದೊಳ್
ತೊಯ್ದುಸಗಂಬೋಲ್ ನೃಪೇಂದ್ರಸಭೆಯೆಂಬ ಕೊಳ
ಕ್ಕಯ್ದ[ಲಸದಲೆದು ಸೆಲೆಯೊಳ್]
ಪೊಯ್ದಂ ಕವಿಚಕ್ರವರ್ತಿ ಕವಿಚೀವರಮಂ ॥ ೭೩ ॥

ಸಂದ ಗತಪ್ರತ್ಯಾಗತ
ಮೇಂದೀಕ್ಕೃತಿಯೊಂದಿವಕ್ಕೆ ಗೆಲ್ಗಂ ನೀಂ ಪೇ
ೞ್ದೊಂದೆರಡು ಮುಕ್ತಕಂ ಪೞ
ರೊಂದೊಂದಧ್ವಾನಮೇಂ ಕುರುಳ್ಗಳ ಸವಣಾ ॥ ೭೪ ॥

ಜಸಮು[1]ಡಿ[1]ಗಿಡೆ ಪೆಱರಿಂ ಪೇ
ೞಿಸದ ಪೆಸರ್ ಪೆಱರದೆನಿಸಿ ಪೆಱರಿಂದಂ ಸೋ
ದಿಸದ ಪೆಱಂಗಿನಿಸೆಡೆಗುಡ
ದಸಹಾಯಕವೀಶ್ವರಂ ಕುರುಳ್ಗಳ ಸವಣಂ ॥ ೭೫ ॥

---

೭೧. ನೈಗಮ, ಸಂಗ್ರಹ, ಜೀವಮುಖ್ಯ ಪದಾರ್ಥಗಳ ನಯವೇ ಮೊದಲಾದುವನ್ನು ಅರಿಯುವ ವಿಷಯದಲ್ಲಿ ಕುರುಳ್ಗಳ ಸವಣನಾದ ಪೊನ್ನನು ಎರಡನೆಯ ಅಕಳಂಕಭಟ್ಟಾರಕನು.

೭೨. ಈತನ ಕವಿತ್ವದ ವಿಲಾಸವನ್ನು ಚಕ್ರವರ್ತಿ ಮೆಚ್ಚಲಾಗಿ ಪ್ರಸಿದ್ಧವಾದ ಉಭಯ ಭಾಷೆಗಳಲ್ಲಿಯೂ ಕವಿಚಕ್ರವರ್ತಿಯೆಂದು ಕುರುಳ್ಗಳ ಸವಣನು ಪ್ರಖ್ಯಾತನಾದನು.

೭೩. ಐದು ಕಷಾಯಗಳ ನೀರಿನಲ್ಲಿ ತೋಯಿಸಿ ಚಕ್ರವರ್ತಿಯ ಒಡ್ಡೋಲಗವೆಂಬ ಸರೋವರಕ್ಕೆ ಒಯ್ದು ಕವಿ ವಸ್ತ್ರವನ್ನು (ಕವಿತ್ವವನ್ನು) ಅಗಸನಂತೆ ಕವಿಚಕ್ರವರ್ತಿ ಅಲುಬಿ ಜಾಲಿಸಿ ಒಗೆದನು.

೭೪. ಪ್ರಸಿದ್ಧವಾದ ಗತಪ್ರತ್ಯಾಗತವೆಂಬ ಚಿತ್ರಕವಿತ್ವವುಳ್ಳ ನಿನ್ನ ಒಂದೆರಡು ಮುಕ್ತಕಗಳೇ ಸಾಕು ಗೆಲ್ಲುವುದಕ್ಕೆ. ಕುರುಳ್ಗಳ ಸವಣನೇ ಇತರ ಕವಿಗಳ ರಚನೆ ಏನು ಪ್ರಯೋಜನ ?

೭೫. ತನ್ನ ಯಶಸ್ಸಿಗೆ ಕುಂದು ಬರುವಂತೆ ಹೆರವರಿಂದ ಹೇಳಿಸದ, ಬೇರೆಯವರದೆಂದು ಹೆಸರಿಸಲಾಗದ, ಪರವರಿಂದ ತಿದ್ದಿಸದ, ಇತರರಿಗೆ ಎಷ್ಟೆಷ್ಟೂ ಅವಕಾಶವೀಯದ ಅಸಹಾಯ ಕವೀಶ್ವರನು ಕುರುಳ್ಗಳ ಸವಣನು.

1, ಯ (ಅ)

ಚಂ॥ ಎಸೆಯದೆ ಪೂಟ್ಟು ಕೆಟ್ಟ ಪಟಗಬ್ಬಮನಾವಗಮೆಮ್ಮವೆಂದು ಬಾ
ಚಿಸಿ ಪೆಱರ್ಗಿತ್ತುದಲ್ಲದೆ ಬಹುಶ್ರುತಮೆಂಬಿನಮೆಕ್ಕಲಾವಣಂ
ಪೊಸೆಯಿಪ ಕಮ್ಮಯಿಪ್ಪ ಸಮಕಟ್ಟುವ ಬಿನ್ನಣಮಿಲ್ಲದಕ್ಕೆ ರಂ
ಜಿಸುವೆರ್ದೆಗೊಳ್ಳದೀಗಡಿನ ಕಬ್ಬಿಗವಂದಿಗಳೊಂದವಿಂದಿಗಳ್ ॥ ೭೬ ॥

ಉ॥ ನೋಡಿರೆ ಪೇೞ್ವ ಮೂಱುವ[ರೆ] ಭಾಷೆಗಳಂ ಪೆಱರರ್ಥಮಂ ಪೆಱರ್
ಮಾಡಿದ ದೇಸೆಯಂ ಪೆಱರ ಬಿನ್ನಣಮಂ ಪೆಱರೋಜೆಯಂ [1]ಕ[1]ಡಂ
ಮಾಡುವ ಕಳ್ವ ಕೊಳ್ವ ಖಳರಿರ್ಕೆಮ ಕಬ್ಬಿಗಗಳ್ಳರೆಂದು ಕೂ
ಸಾಡಿಸ[2]ಬಾರ[2]ದಕ್ಕರದ [3]ರಾಜ್ಯ[3]ದೊಳೀ ಕವಿಚಕ್ರವರ್ತಿಯಾ ॥ ೭೭ ॥

ಕಂಡೊಡನಾಡಿದಕ್ಕರಿಗನಕ್ಕರಿಗಂ ಗೆಡೆಗೊಂಡ ಪಂಡಿತಂ
ಪಂಡಿತನೆಯ್ದೆ ಕಲ್ತ ಚದುರಂ ಚದುರಂ ಸಭೆಗುಕ್ತಿಮಂಡನಂ
ಮಂಡನನಟ್ಟಿಯಂ ಕಿಡಿಸದಾಳ್ವ ನೃಪಂ ನೃಪನಿರ್ದ ಮಂಡಲಂ
ಮಂಡಲಮೆಂದೊಡಯ್ದಲರಿದುನ್ನತಿಯಂ [ಕವಿಚಕ್ರವರ್ತಿಯಾ ॥ ೭೮ ॥

ಚಂ॥ ಉಡು]ಗಿದುದೀಗಳೀಗಳಿನ ಕಬ್ಬದೊಳೊಟ್ಟಜೆ ಕೆಟ್ಟುದೀಗಡೀ
ಗಡಿನ ಕವಿವ್ರಜಕ್ಕೆ ಪದಸಂಚಯಮಂಚಿರವಾದುದೀಗಡೀ
ಗಡಿನ ಕಥಾನ್ವಯಕ್ಕೆ ರಸಮುಂ ಪೊಸಗಬ್ಬಮಪೂರ್ವಮಾವುದು
ಳ್ಳೊಡವಱವು ಪೇೞ್ದು ಸಾಧಿಸಿದ ಕಬ್ಬಮೆ ದಲ್ ಕವಿಚಕ್ರವರ್ತಿಯಾ ॥ ೭೯ ॥

ಉ॥ ತತ್ವಮನಾದಿನಾಥಮತದಿಂ ಸಿರಿಯಂ ನೃಪರಿಂ ಮಹಾಪ್ರಸಿ
ದ್ಧತ್ವಮನಗ್ಗದಕ್ಕರಿಗರಿಂ ಕವಿತಾರಸಮಂ ಸದರ್ಥವಾ
ದಿತ್ವಮನಿಂದ್ರನಂದಿಮುನಿಯಿಂ ಪಡೆದೊಂ ದೊರೆ ಯಾರ್ ಕವಿತ್ವವಾ
ದಿತ್ವಫಲಂ ಹಿ ಶಾಸ್ತ್ರಮೆನಿಪುನ್ನತಿಯಾ ಕವಿಚಕ್ರವರ್ತಿಯಾ ॥ ೮೦ ॥

---

೭೬. ಶೋಭೆಯಿಲ್ಲದಂತೆ ರಚಿಸಿ ಕೆಟ್ಟ ಹಳೆಯ ಕಾವ್ಯಗಳನ್ನು ತಮ್ಮವೆಂದು ಓದಿ ಹೇರವರಿಗೆ ಕೊಡುವರಲ್ಲಿ ಬಹುಶ್ರುತತ್ವವಾಗಲಿ, ಹೊಸತುಗೊಳಿಸುವ ಸೊಗಸಾಗಲಿ, ಬಂಧದ ಜಾಣ್ಮೆಯಾಗಲಿ, ರಂಜಿಸುವ ಗುಣವಾಗಲಿ ಈಗಿನ ಕವಿಗಳಲ್ಲಿ ಇಲ್ಲ ; ಅವರ ಕಾವ್ಯ ಮನೋಹರವಾಗದು.

೭೭. ಪ್ರಸಿದ್ಧ ಮೂರುವರೆ ಭಾಷೆಗಳಲ್ಲಿಯೂ ನೋಡಿ. ಬೇರೆಯವರ ಅರ್ಥವನ್ನು, ಬೇರೆಯವರ ರೀತಿಯನ್ನು, ಇತರರ ಬೆಡಗನ್ನು, ಒಪ್ಪವನ್ನು ಕಡವಾಗಿ ತೆಗೆದುಕೊಳ್ಳುವ ಅಥವಾ ಕಳವುಮಾಡುವ ನೀಚರಿದ್ದಾರೆ. ಆ ಕಬ್ಬಿಗಗಳ್ಳರು ಹಾಗಿರಲಿ. ವಾಙ್ಮಯ ರಾಜ್ಯದಲ್ಲಿ ಕವಿಚಕ್ರವರ್ತಿಯ ಬಗೆಗೆ ಇಂತಹ ಹುಡುಗಾಟ ನಡೆಯಲಾರದು.

೭೮. ವಿದ್ಯಾಪ್ರವೀಣರೊಡನೆ ಒಡನಾಡಿದ ವಿದ್ಯಾನಿಷ್ಣಾತನು ; ಜೊತೆಗೆ ಪಂಡಿತನು ; ಚೆನ್ನಾಗಿ ಅಧ್ಯಯನ ಮಾಡಿ ಚಮತ್ಕಾರ ಚಾತುರ್ಯವನ್ನು ಸಂಪಾದಿಸಿದವನು ; ಸಭೆಯಲ್ಲಿ ಭೂಷಣವಾಗಿ ನುಡಿಯಬಲ್ಲವನು ; ಪ್ರೀತಿಯಿಂದ ಆಳುವ ಅರಸು ಇದ್ದ ರಾಜ್ಯವೆ ತನ್ನ ರಾಜ್ಯ. ಹೀಗಿರುವ ಕವಿಚಕ್ರವರ್ತಿಯ ಅಭ್ಯುದಯ ವೈಭವ ಇತರರಿಗೆ ಅಸಾಧ್ಯವಾದುದು.

೭೯. ಇತ್ತೀಚೆಯ ಕಾವ್ಯದಲ್ಲಿ ಅತಿಶಯವೆಂಬುದು ಉಳಿಯಲಿಲ್ಲ ; ಈಗಿನ ಕವಿಗಳಲ್ಲಿ ಪದಬಂಧ ಕೆಟ್ಟು ಹೋಯಿತು ; ಈಗಿನ ಕಥಾ ರಚನೆಯಲ್ಲಿ ರಸಕ್ಕೆ ಉಳಿಗಾಲವಿಲ್ಲ ; ಹೊಸ ಕಾವ್ಯವೆಂಬುದಾಗಲಿ, ಅಪೂರ್ವವೆಂಬುದಾಗಲಿ ಏನಾದರೂ ಇರುವುದಾದರೆ ಈ ಕವಿಚಕ್ರವರ್ತಿ ಸಿದ್ಧಹಸ್ತದಿಂದ ಬರೆದ ಕಾವ್ಯದಲ್ಲಿಯೆ ಹೊರತಾಗಿ ಬೇರೆ ಕಡೆ ಇಲ್ಲ.

೮೦. ತತ್ವವನ್ನು ಆದಿನಾಥಮುನಿಯ ಮತದಿಂದಲೂ, ಐಶ್ವರ್ಯವನ್ನು ಅರಸರಿಂದಲೂ, ಮಹಾಖ್ಯಾತಿಯನ್ನು ಪಂಡಿತಶ್ರೇಷ್ಠರಿಂದಲೂ, ಕವಿತಾಶಕ್ತಿ ಹಾಗು ವಾದನೈಪುಣ್ಯವನ್ನು ಇಂದ್ರನಂದಿಮುನಿಯಿಂದಲೂ ಗಳಿಸಿಕೊಂಡು, "ಕವಿತ್ವವಾದಿತ್ವಗಳನ್ನು ಸಿದ್ಧಿಸಿಕೊಡುವುದೇ ಶಾಸ್ತ್ರ" ಎಂಬ ಮಹಿಮೆಯನ್ನು ಪಡೆದವನು ಕವಿಚಕ್ರವರ್ತಿ. ಆತನಿಗೆ ಸಮನಾದವರು ಯಾರು ?

---

1. ತ (ಅ) 2. ಲಾಗ (ಅ) 3. ಕಾವ್ಯ (ಶ)

ಮ॥ ಸಕಲಜ್ಞಂ ಕವಿಚಕ್ರವರ್ತಿ ಜಿನಚಂದ್ರೇಂದ್ರುಂಗೆ ಸದ್ಭಕ್ತಿಪೂ
ರ್ವಕದಿಂದಮ್ಮನಭಕ್ತನುಂ ತದನುಜಾತಂ ಪೊನ್ನನುಂ ಪೇಳ್ವುದೆಂ
ದು ೧ರಂ ಪ್ರಾರ್ಥಿಸೆ ಶಾಂತಿನಾಥಕಥೆಯಂ ಲೇಸಪ್ಪಿನಂ ಸರ್ವದೇ
ವಕವೀಂದ್ರಂ ಬರೆದಂ ಬುಧರ್ ಪೊಗಳ್ವಿನಂ ತನ್ನಂ ಮಹೋತ್ಸಾಹದಿಂ ॥ ೮೧ ॥

—ಗದ್ಯ—

ಇದು

ಜಿನೇಂದ್ರಚರಣಸರಸೀರುಹ ಶಿಲೀಮುಖಾಯಮಾನ

ಶ್ರೀಮದುಭಯಕವಿ ಚಕ್ರವರ್ತಿ

ನಿರ್ವರ್ತಿತಮುಂ

ಅಮ್ಮನ ಭಕ್ತಾಭಿಧಾನ ವಿದ್ಯಾನಿಧಾನ ಮಲ್ಲಪಾರ್ಯ

ತದನುಜಾತಾಭಿಜಾತ ಸಾರಸ್ವತ

ಪುನ್ನಮಾರ್ಯ ಕಾರಿತಮುಮಪ್ಪ

ಪುರಾಣಚೂಡಾಮಣಿಯೊಳ್

ದ್ವಾದಶಾಶ್ವಾಸಂ

—೦—

ಶಾಂತಿಪುರಾಣಂ

ಸಮಾಪ್ತಂ

---

೮೧. ಜಿನಚಂದ್ರಮುನೀಂದ್ರನಲ್ಲಿರುವ ಭಕ್ತಿಯಿಂದಾಗಿ "ತಂದೆಯ ಭಕ್ತ"ನೂ ಆತನ ತಮ್ಮ ಪೊನ್ನನೂ ಕಾವ್ಯವನ್ನು ರಚಿಸೆಂದು ಬಹಳವಾಗಿ ಬೇಡಿಕೊಂಡುದರಿಂದ ಸಕಲವನ್ನೂ ತಿಳಿದವನೂ ಕವಿಚಕ್ರವರ್ತಿಯೂ ಆದ ಸರ್ವದೇವಕವೀಂದ್ರ (ಪೊನ್ನನು) ಶಾಂತಿನಾಥನ ಕಥೆಯನ್ನು ಲೇಸಾಗಿಯೂ, ಪ್ರಾಜ್ಞರು ಮೆಚ್ಚಿ ಹೊಗಳುವಂತೆಯೂ ಅತ್ಯಂತ ಉತ್ಸಾಹದಿಂದ ಬರೆದನು.

ಗದ್ಯ॥ ಇದು ಜಿನೇಶ್ವರನ ಚರಣಕಮಲದ ದುಂಬಿಯಂತಿರುವ, ಶ್ರೀಮದುಭಯಕವಿಚಕ್ರವರ್ತಿಯೆಂಬ ಬಿರುದಾಂಕಿತನಿಂದ ನಿರ್ವರ್ತಿತವೂ ಅಮ್ಮನ ಭಕ್ತಾಭಿಧಾನ ಮಲ್ಲಪಾರ್ಯನ, ಅವನ ತಮ್ಮ ಹೊಸ ಸಾರಸ್ವತ ಪುನ್ನಮಾರ್ಯ ಹೇಳಿಸಿದ ಪುರಾಣಚೂಡಾಮಣಿಯಲ್ಲಿ ಹನ್ನೆರಡನೆಯ ಆಶ್ವಾಸವು.

ಇಲ್ಲಿಗೆ

ಶಾಂತಿಪುರಾಣ ಕಾವ್ಯ

ಮುಗಿಯಿತು

ಅನುಬಂಧಗಳು

ಅನುಬಂಧ ೧

ಪ್ರಾಚೀನಕಾಲದಲ್ಲಿ ಈ ಕಾವ್ಯವು ಹರಡಿಕೊಂಡಿದ್ದ ಬಗೆ

[1](ಈ ಪದ್ಯಗಳು ಅಜ್ಞಾತಕರ್ತೃಕಗಳು)

ಶ್ರೀಮದಶೇಷಜೈನಸಮಯೈಕಶಿರೋಮಣಿ ಸರ್ವಜೀವರ
ಕ್ಷಾವಮಣಿಯೆಂದು ಭವ್ಯತತಿ ಬಿಚ್ಚಳಿಸುತ್ತಿರೆ ಸಂದ ದಾನಚಿಂ
ತಾಮಣಿ ತನ್ನದೊಂದು ಪಿತೃಭಕ್ತತೆಯಂ ಮೆಱೆಯಲ್ ಪುರಾಣಚೂ
ಡಾಮಣಿಯಂ ನಿಮಿರ್ಚಿದಳಿಳಾಗ್ರದೊಳಿಂತು ಜಸಕ್ಕ ನೋಂತರಾರ್ ॥ ೧ ॥

ಬಿಸೆಯುದೆ ಪೂಟ್ಟು ಕೆಟ್ಟಪುದು ಶಾಂತಿಪುರಾಣಮದಂ ನೆಗಟ್ಟುವೆಂ
ವಸುಧೆಯೊಳಿನ್ನ ತಂದೆಯು ಪರೋಕ್ಷದೊಳೆಂದು ಸಹಸ್ರಪುಸ್ತಕ
ಪ್ರಸರಮನತ್ತಿಮಬ್ಬೆ ಪರಮಾದರದಿಂ ಬರೆಯಲ್ಕೆ ವೇಟ್ಟು ಪೆಂ
ಪಸದಳಮದ್ವಿತೀಯಮಸಮಂ ಸಲೆ ಭಾವಿಸಲೆಯ್ದೆ ಬಣ್ಣಿಸಲ್ ॥ ೨ ॥

ಧರೆ ಪೊಗಟ್ಗುಂ ಮದೀಯಗುರುಭಕ್ತಿಯನಯ್ಯನುದಾತ್ತಕೀರ್ತಿವ
ಲ್ಲರಿ ನಿಮಿರ್ಗುಂ ಬುಧಾಳಿ ತಿಳಿಗುಂ ಜಿನಧರ್ಮಮನೀಗಳೀಮನೋ
ಹರತರಶಾಂತಿನಾಥಕಥೆಯಿಂ ಗಡಮೆಂದದನೀ ಜಗಂಗಳೊಳ್
ಪರೆಯಿಸಿದೊಂದು ದಾನಗುಣಮಚ್ಚರಿ ಭಾವಿಪೊಡತ್ತಿಮಬ್ಬೆಯಾ ॥ ೩ ॥

ತಂದೆಗೆ ಭಕ್ತನೆಂಬ ಗುಣನಾಮಮುದೆನ್ನಯ ತಂದೆಗೆನ್ನೊಳಿಂ
ತಂದೆಯು ಭಕ್ತೆಯೆಂಬ ಪೆಸರನ್ವಯಸಿದ್ಧಿಯಿನಕ್ಕುಮೆಲ್ಲರಿಂ
ದೆಂದೊಸೆದಂದು ಶಾಂತಿಕಥೆಯಂ ಭುವನಾಂತರದೊಳ್ ನಿಮಿರ್ಚಿದೊಂ
ದಂದಮನೊಂದೆನಾಲಗೆಯೊಳೇಪೊಗಟ್ವೆಂ ನೆಗಟ್ದತ್ತಿಮಬ್ಬೆಯಾ ॥ ೪ ॥

ಪಡೆವಮಾತೇನುದಯಾಚಲಾಸ್ತನಗಹೈಮಾದ್ರೀಂದ್ರತತ್ಸೇತುವಾ
ಕಡೆಗಳ್ ರುಂದ್ರಫಣೀಂದ್ರಲೋಕಸುರಲೋಕಾಂಭೋಜಜಾತಾಂಡದಾ
ಕಡೆಗಳ್ ಶಾಂತಿಪುರಾಣಸತ್ಕೃತಿಗಡರ್ಪಪ್ಪನ್ನೆಗಂ ಪರ್ವಿ ದಾಂ
ಗುಡಿವಿಟ್ಟತ್ತು ಯಶೋಲತಾಪ್ರತತಿ ಚೆಲ್ವಿಂದತ್ತಿಮಬ್ಬೆಯಾ ॥ ೫ ॥

... ___ .... ಪ್ರತಾಪಿ ಮಗಳಾದಂದೆನ್ನ ಸತ್ಕೀರ್ತಿ ಮ
ದ್ಗುರುನಾಮಾಂಕಿತಕಾವ್ಯಮುಂ ನೆಗಟ್ದುದೆಂದಾನಂದಮಂ ತಾಳ್ದುಗುಂ
ಪಿರಿದುಂ ಸಗ್ಗದ ಮಾತು ಕಟ್ಟದಿರದೀಶಾಂತೀಶಕಾವ್ಯಂ ಮನೋ
ಹರಮಾಗಲ್ ಪಡಿಚಂದಮಂ ಪರೆಸಿದಳ್ ಭೂಲೋಕಕತ್ತಿಮಬ್ಬೆಯುಂ ॥ ೬ ॥

ಜಿನಧರ್ಮಾವೃತಿ ಶಾಂತಿನಾಥಕಥೆಯಂ ಕೈವಾರದಿಂದತ್ತಿಮ
ಬ್ಬೆ ನಿಮಿರ್ಚುತ್ತಿರಲಿತ್ತಮತ್ತಲಮರರ್ ಕೈಕೊಂಡುಪೊಯ್ದರ್ ದಿವ
ಕ್ಕನೆ ಸತ್ಕೀರ್ತಿಗೆ ನೋಂತೆವೆಂದು ದಿವದೊಳ್ ಪುನ್ನಯ್ಯನುಂ ಮಲ್ಲಪ
ಯ್ಯನುಮಂತಾಜಿನಚಂದ್ರನುಂ ಪಿರಿದುಮೊಂದುತ್ಸಾಹಮಂ ತಾಳ್ದಿದರ್ ॥ ೭ ॥

ಪೊನ್ನಮಯ್ಯನ ಶ್ರೀಶಾಂತಿಪುರಾಣಕ್ಕಂ ಮಂಗಳಮಹಃ

---

1. ಈ ಪದ್ಯಗಳು ಒಂದು ಹಸ್ತಲಿಖಿತ ಪ್ರತಿಯ ಕೊನೆಯಲ್ಲಿವೆ.

ಅನುಬಂಧ ೨

ಪದ್ಯಗಳ ಆದಿ	ಆಶ್ವಾಸ	ಪ.ಸಂ.
ಕುಪಿತಮತಿಸಂಜ್ಞಿ	೭	೧೦೧
ಕುಮುದಂ ನಳಿನಂ	೯	೧೬೭
ಕುರುವಂಶಂ ಪಿತೃವಿಶ್ವಸೇನ	೧೧	೬೫
ಕುರುವಂಶಾಂಬರಭಾನು	೧೦	೧೫೩
ಕುಲನಗಮುನಡರ್ವ	೫	೧೫೪
ಕುಲಮಂ ನಾಭಿತನೂಭವಂ	೫	೭೫
ಕುಲವಿದ್ಯಾದಿ ನಿಜಾನ್ವಯು	೫	೧೩
ಕುಲವೃದ್ಧರಿರೆಂದು	೧೦	೧೧೯
ಕುಲಶೈಲವೇಟಿಃಂ	೩	೨೦
ಕುಸುಮುಕುಳಕ್ಕೆ ನಿನ್ನ	೭	೧೪೨
ಕುಸುಮಾಯುಧ ನೃಪ	೭	೧೪೦
ಕುಸುಮಾಯುಧನೆಶಕಂ	೮	೧೨
ಕುಸುಮಿತಬಹಿರುಪ	೬	೮೫
ಕುಸುಮಿತ ಮಂದಾರ	೧೧	೭೫
ಕುಳಿಶಾವಳಿಗಳ	೧೦	೨೯
ಕೂಡಿದ ಕೂಟದಿಂದೊಲಿಸಿ	೮	೧೦೦
ಕೂರಿದರಪ್ಪಧನುರ್ಧರ	೪	೧೦
ಕೂರ್ಮೆಯು ಪೆರ್ಮೆ	೮	೧೦೪
ಕೂಸಂ ತಂದುದನಱಿದ	೩	೮೪
ಕೃಪೆಯಿಂದಂ ಬೆಸಸಲ್ಕೆ	೭	೫೫
ಕೃಶರಾಗಂ ವಿಗತಮನಃ	೧	೯೪
ಕೆತ್ತುವ ಮಾಸೆ ಕೆಂಪಡರ್ದ	೩	೬೮
ಕೆದಱಿದ ಪುಷ್ಪಾವಳಿ	೭	೩೨
ಕೆಯ್ಸ್ವಾರದಿಂದ ಮರ್ಜಿಸಿ	೭	೧೧೪
ಕೆಯ್ಸಾರ್ದಂತಾರ್ತಿತ್ತ	೧೧	೮೬
ಕೆಲಕೆಲವೆಡೆಯೊಳ್	೨	೧೧೪
ಕೆಲವೆಡೆಯು ತಮಾಳದ	೨	೧೯೩
ಕೆಲವೆಡೆಯೊಳಿಂದ್ರನೀಲ	೨	೯೪
ಕೆಳೆಯರ ಪಗೆವರ	೯	೧೫೨
ಕೇಣಮನೊಕ್ಕು ತಕ್ಕ	೩	೧೩
ಕೇಶೋತ್ಪಾಟನದಂದು	೧	೨
ಕೇಳೀಲೋಲನನಸ್ಮೃತ	೮	೫೦
ಕೈಕೊಳ್ವೊಡಾತ್ಮಸುಖ	೧೧	೮೭
ಕೊಂಡಿಡೆ ಶಾರ್ಙ್ಗ	೫	೬೩
ಕೊಟ್ಟೊಡಮೇಂ ಕನ್ನೆಕೆ	೫	೪೪
ಕೊಡಕೆಯುದಬಿಂದು	೮	೪೨
ಕೊಸಗಿಡದೆ ಮಯ್ಯನಿಸಿಸ	೯	೩೮

ಪದ್ಯಗಳ ಆದಿ	ಆಶ್ವಾಸ	ಪ.ಸಂ.
ಕೊರಳೊಳಮರ್ದಿಕ್ಕೆ	೨	೭೩
ಕೊಲೆಯಿಂದೊಂದಸಸತ್ಯ	೭	೫
ಕೊಳೆಯೊಳ್ ಸ್ಫೂರೆಯಿಲ್ಲದ	೧	[illegible]೮
ಕೊಲ್ವೆನರಾತಿಯುನಿಂದೆ	೫	೪೮
ಕೊಸಗಿನ ತುಱುಂಬ	೭	೧೪೫
ಕೊಳದಂಭೋಲವಮುಣ್ಮೆ	೭	೧೨೭
ಕೊಳೆ ನೋಡುವ ಕಣ್ಗಳ	೯	೩೫
ಕೋಪದ ತಣ್ಪುತಣ್ಪು	೧೦	೧೧೩
ಕ್ಷಣಿಕಪ್ರತಿಜ್ಞೆ ಜೀವ	೮	೧೪೪
ಕ್ಷಪಿತದುರಿತನ ವಚಃ	೬	೫೭
ಕ್ಷಯವೃದ್ಧಿಸ್ಥಾನ ವಿಧಿ	೨	೪೯
ಕ್ಷಾಯಿಕ ದೃಷ್ಟಿತುಷ್ಟಿ	೧	೪
ಕ್ಷಿತಿನಾಥಂ ಕ್ಷಿತಿನಾಥನಂ	೮	೬೫
ಕ್ಷಿತಿನಾಥತ್ವಮನೊಲ್ಲ	೫	೨೬
ಕ್ಷಿತಿನಾಥರ್ ಪಲರುಳ್ಳೊಡಂ	೫	೧೦೭
ಕ್ಷಿತಿನಾಥಾಪಾಂಗವಿಲೋಕ	೧	೭೪
ಕ್ಷಿತಿಪತಪೋಗ್ರಹಣದ	೧	೯೩
ಕ್ಷಿತಿಪತಿಸುತೆ ನೀನೀ	೫	೧೨೪
ಕ್ಷಿತಿಪನಗಜಘಟೆಗಳೊ	೧೦	೧೨೭
ಕ್ಷಿತಿಪಶ್ರೀವಿಭವ	೩	೪೨
ಕ್ಷೀರಂ ರುಧಿರಂ	೧೨	೧೮
ಕ್ಷೀರಾಂಬುಧಿಲಹರೀ	೯	೬೬
ಕ್ಷೀರಾಬ್ಧಿಫೇನಧವಳೋ	೧೦	೧೫೫
ಕ್ಷೇಮಂಕರ ಪದಯುಗ	೮	೬೭
ಕ್ಷೋಣಿಗೆ ಹಾರಮಲ್ತೆ	೫	೧೪೯
ಕ್ಷೋಣೀಶ ನೆಗೞ್ದಸಗ್ಗದ	೧೧	೩೬
ಕ್ಷೋಣೀಶ ಸೈನ್ಯನಿಪತಿತ	೧೧	೨೬

ಖ

ಪದ್ಯಗಳ ಆದಿ	ಆಶ್ವಾಸ	ಪ.ಸಂ.
ಖಗರಾಜೇಂದ್ರ ಗಜೇಂದ್ರ	೪	೨೧
ಖಚರೇಂದ್ರಂ ತರಪೇೞ್ದ	೭	೮೩
ಖಚಿತಹರಿನೀಲ	೧೦	೪೯
ಖರಕಿರಣಂ ತೀವ್ರಂ	೨	೭೭
ಖ್ಯಾತಂ ಮಹೇಂದ್ರಗಿರಿ	೫	೧೩೩
ಖೇಚರಸೈನ್ಯಂ	೪	೬

ಬ

ಭ

ಯ

ರ

ಅನುಬಂಧ ೩

ಉತ್ತರಪುರಾಣದಲ್ಲಿಯ ಶಾಂತಿತೀರ್ಥಂಕರ ಚರಿತ್ರೆಯ ಕಥಾಸಾರ

ವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯಲ್ಲಿ ರಥನೂಪುರ ಚಕ್ರವಾಲವೆಂಬ ನಗರಕ್ಕೆ ಜ್ವಲನಜಟಿಯೆಂಬ ಖೇಚರನು ರಾಜನಾಗಿದ್ದನು. ದ್ಯುತಿಲಕಪುರದ ದೊರೆಯಾದ ಚಂದ್ರಾಭ ರಾಜನಿಗೆ ಸುಭದ್ರೆಯೆಂಬ ಪತ್ನಿಯಲ್ಲಿ ಹುಟ್ಟಿದ ವಾಯುವೇಗೆಯೆಂಬವಳು ಜ್ವಲನಜಟಿಗೆ ಪಟ್ಟಮಹಿಷಿಯಾದಳು. ಈ ದಂಪತಿಗಳಿಗೆ ಅರ್ಕಕೀರ್ತಿಯೆಂಬ ಮಗನೂ ಸ್ವಯಂಪ್ರಭೆಯೆಂಬ ಮಗಳೂ ಜನಿಸಿದರು. ಚೆಲುವೆಯಾದ ಈ ಕನ್ಯೆ ಯೌವನನೇರುತ್ತಿರಲಾಗಿ ಜಗನ್ನಂದನ ಮತ್ತು ಅಭಿನಂದನರೆಂಬ ಚಾರಣಮುನಿಗಳ ಬಳಿಯಲ್ಲಿ ಸದ್ಧರ್ಮವನ್ನು ಕೈಕೊಂಡು ಚತುರ್ದಶಿಯಲ್ಲಿ ಉಪವಾಸಮಾಡಿ ಅರ್ಹತ್ಪೂಜಾನಂತರ ಭಗವಂತನ ಪಾದಸ್ಪರ್ಶದಿಂದ ಪವಿತ್ರವಾದ ಪುಷ್ಪಮಾಲೆಯನ್ನು ತಂದು ತಂದೆಗೆ ನೀಡಿದಳು. ಉಪವಾಸದಿಂದ ಬಳಲಿದ ಸ್ವಯಂಪ್ರಭೆಯನ್ನು ನೋಡಿ ಜ್ವಲನಜಟಿಯು ಅವಳನ್ನು ಪಾರಣೆಗೆ ಕಳಿಸಿ ವಿವಾಹಯೋಗ್ಯಳಾದ ಇವಳಿಗೆ ತಕ್ಕ ವರನು ಯಾರೆಂಬ ಯೋಚನೆಗೆ ತೊಡಗಿ ತನ್ನ ಮಂತ್ರಿಗಳೊಡನೆ ಅದನ್ನು ಪ್ರಸ್ತಾಪಿಸಿದನು. ಆಗ ಸುಶ್ರುತನೆಂಬ ಮಂತ್ರಿಯು ಹೀಗೆಂದನು—"ವಿಜಯಾರ್ಧಪರ್ವತದ ಉತ್ತರಶ್ರೇಣಿಯಲ್ಲಿ ಅಲಕಾಪಟ್ಟಣದ ದೊರೆಯಾದ ಮಯೂರಗ್ರೀವನಿಗೆ ಅಶ್ವಗ್ರೀವ, ನೀಲರಥ, ನೀಲಕಂಠ, ಸುಕಂಠ, ವಜ್ರಕಂಠರೆಂಬ ಐವರು ಮಕ್ಕಳುಂಟು. ಹಿರಿಯ ಮಗನಾದ ಅಶ್ವಗ್ರೀವನಿಗೆ ರತ್ನಗ್ರೀವನೇ ಮೊದಲಾದ ಐನೂರ್ವರು ಮಕ್ಕಳಿರುವರು. ಉಭಯ ಶ್ರೇಣಿಗಳಿಗೆ ಪ್ರಭುವಾದ ಈತನಿಗೆ ನಿಮ್ಮ ಕನ್ಯೆಯನ್ನು ಕೊಡಬಹುದು." ಬಹುಶ್ರುತನೆಂಬ ಮಂತ್ರಿ ಆಗ ಹೀಗೆ ನುಡಿದನು—"ಸುಶ್ರುತನು ಹೇಳಿದ್ದೆಲ್ಲವೂ ಅಶ್ವಗ್ರೀವನಲ್ಲಿ ಇದ್ದೇ ಇದೆ. ಸತ್ಕುಲ, ನಿರೋಗತೆ, ವಯಸ್ಸು, ಶೀಲ, ಶಾಸ್ತ್ರ, ರೂಪ, ಸಂಪತ್ತು, ಬಂಧುಗಳು ಮತ್ತು ಪರಿವಾರವೆಂಬ ಒಂಭತ್ತು ಗುಣಗಳು ವರನಿಗೆ ಇರಬೇಕು. ಅಶ್ವಗ್ರೀವನಿಗೆ ಈ ಗುಣಗಳೂ ಉಂಟು. ಆದರೆ ಆತನು ವಯಸ್ಸಿನಲ್ಲಿ ಅಧಿಕನಾಗಿರುವನು. ಆದುದರಿಂದ ಯುವಕನಾದ ಇನ್ನೊಬ್ಬ ವರನನ್ನು ನೋಡಬೇಕು. ಗಗನವಲ್ಲಭಪುರದಲ್ಲಿ ಪ್ರಖ್ಯಾತನಾದ ಸಿಂಹರಥರಾಜ, ಮೇಘಪುರದಲ್ಲಿ ಪದ್ಮರಥರಾಜ, ಚಿತ್ರಪುರದಲ್ಲಿ ಅರಿಂಜಯರಾಜ, ತ್ರಿಪುರದಲ್ಲಿ ಲಲಿತಾಂಗರಾಜ, ಅಶ್ವಪುರದ ದೊರೆ ಕನಕರಥರಾಜ, ಮಹಾರತ್ನಪುರಾಧಿಪತಿ ಧನಂಜಯರಾಜ—ಇವರಲ್ಲಿ ಯಾರೊಬ್ಬರನ್ನಾದರೂ ಆಯ್ದುಕೊಳ್ಳಬಹುದು." ಈ ಮಾತನ್ನು ಕೇಳಿ ಶ್ರುತಸಾಗರನೆಂಬ ಮಂತ್ರಿಯು ಹೀಗೆ ಹೇಳಿದನು—"ಸುರೇಂದ್ರಕಾಂತಾರವೆಂಬ ನಗರಕ್ಕೆ ಮೇಘವಾಹನನೆಂಬವನು ಅರಸನಾಗಿರುವನು. ಆತನಿಗೆ ವಿದ್ಯುತ್ಪ್ರಭನೆಂಬ ಮಗನೂ ಜ್ಯೋತಿರ್ಮಾಲೆಯೆಂಬ ಮಗಳೂ ಉಂಟು. ಒಂದಾನೊಂದು ದಿನ ಮೇಘವಾಹನರಾಜನು ವರಧರ್ಮನೆಂಬ ಚಾರಣಮುನಿಗಳನ್ನು ಕಂಡು, ತನ್ನ ಪುತ್ರನ ಭವಾವಳಿಯನ್ನು ಕೇಳಿದನು. ಆಗ ಆ ಮುನಿ ಈ ಮುಂದೆ ಹೇಳುವಂತೆ ತಿಳಿಸಿದರು—'ಪೂರ್ವವಿದೇಹದಲ್ಲಿ ವತ್ಸಕಾವತಿಯೆಂಬ ದೇಶವಿದೆ. ಅಲ್ಲಿ ಪ್ರಭಾಕರಿ ನಗರಕ್ಕೆ ನಂದನನೆಂಬುವನು ದೊರೆ. ಅವನಿಗೆ ವಿಜಯಭದ್ರನೆಂಬ ಮಗನಾದನು. ಅವನು ವೈರಾಗ್ಯದಿಂದ ದೀಕ್ಷಾಗ್ರಹಣಮಾಡಿ ಮುಡಿಪಿ ಮಹೇಂದ್ರಕಲ್ಪದಲ್ಲಿ ಏಳು ಸಾಗರೋಪಮ ಆಯುಷ್ಯವನ್ನು ಅನುಭವಿಸಿ, ಅಲ್ಲಿಂದ ಚ್ಯುತನಾಗಿ ಬಂದು ನಿನಗೆ ಮಗನಾಗಿದ್ದಾನೆ. ಇವನು ಮುಕ್ತಿಯನ್ನು ಹೊಂದುವನು.' ಅವರ ಈ ಮಾತನ್ನು ನಾನು ಕೇಳಿಸಿಕೊಂಡೆನು. ಸುಯೋಗ್ಯ ವರನಾದ ವಿದ್ಯುತ್ಪ್ರಭನಿಗೆ ಸ್ವಯಂಪ್ರಭೆಯನ್ನು ಕೊಟ್ಟು, ಜ್ಯೋತಿರ್ಮಾಲೆಯನ್ನು ಅರ್ಕಕೀರ್ತಿಗೆ ತಂದುಕೊಳ್ಳೋಣ." ಕೊನೆಗೆ ಸುಮತಿಯೆಂಬ ಮಂತ್ರಿಯು "ಯಾರೋ ಒಬ್ಬನಿಗೆ ಕೊಟ್ಟು ಇತರರ ವೈರ ಕಟ್ಟಿಕೊಳ್ಳುವುದು ಬೇಡ. ಸ್ವಯಂವರವನ್ನು ಏರ್ಪಡಿಸುವುದು ಲೇಸು" ಎಂದನು. ಎಲ್ಲರೂ ಇದನ್ನೊಪ್ಪಿದರು. ಮಂತ್ರಿಗಳನ್ನು ಬೀಳ್ಕೊಂಡಾದ ಮೇಲೆ ರಾಜನು ಸಂಭಿನ್ನಶ್ರೋತೃವೆಂಬ ನೈಮಿತ್ತಿಕನನ್ನು ಕರೆಸಿ "ನನ್ನ ಮಗಳಿಗೆ ಒಪ್ಪಿಗೆಯಾಗುವವನು ಯಾರು ?" ಎಂದು ಕೇಳಿದನು. "ಭರತ ಚಕ್ರವರ್ತಿಯ ಮಗನಾದ ಮರೀಚಿಯು ಸಂಸಾರದಲ್ಲಿ ಜನ್ಮಾಂತರಗಳನ್ನು ಹೊಂದುತ್ತ ಬಂದು ಈಗ ಸುರಮ್ಯದೇಶದಲ್ಲಿರುವ ಪೌದನಪುರಾಧಿಪತಿ ಪ್ರಜಾಪತಿ ಮಹಾರಾಜನಿಗೆ ಮೃಗಾವತಿಯೆಂಬ

ಅರಸಿಯಲ್ಲಿ ತ್ರಿಪೃಷ್ಠನೆಂಬ ಮಗನಾಗಿರುವನು. ಈ ಪ್ರಜಾಪತಿ ಮಹಾರಾಜನಿಗೇ ಭದ್ರಾದೇವಿಯಲ್ಲಿ ವಿಜಯನೆಂಬ ಹಿರಿಯ ಮಗನಿರುವನು. ಇವರಿಬ್ಬರೂ ಶ್ರೇಯೋನಾಥ ತೀರ್ಥಂಕರ ಕಾಲದ ಬಲದೇವಕೇಶವರೆಂದೂ, ಅಶ್ವಗ್ರೀವನನ್ನು ಕೊಂದು ತ್ರಿಖಂಡ ರಾಜ್ಯಾಧಿಪತಿಗಳಾಗುವರೆಂದೂ ಮತ್ತು ಇದೇ ತ್ರಿಪೃಷ್ಠನು ಸಂಸಾರಚಕ್ರದಲ್ಲಿ ತಿರುಗುತ್ತ ಕೊನೆಯ ತೀರ್ಥಂಕರನಾಗುವನೆಂದೂ ವೃಷಭ ತೀರ್ಥಂಕರರು ಮುಂಚೆಯೇ ತಿಳಿಸಿರುವರು. ನಮಿವಂಶದ ನಿನಗೂ ಬಾಹುಬಲಿ ವಂಶದ ಆ ಪ್ರಜಾಪತಿ ಮಹಾರಾಜನಿಗೂ ಹಳೆಯ ವಂಶಸಂಬಂಧವುಂಟು. ಆದುದರಿಂದ ತ್ರಿಪೃಷ್ಠನಿಗೇ ನಿನ್ನ ಮಗಳನ್ನು ಕೊಡು. ಅವನಿಂದಲೇ ಮುಂದೆ ನೀನು ಸಕಲ ವಿದ್ಯಾಧರಾಧಿಪತಿಯಾಗುವೆ." ಈ ಮಾತುಗಳಿಂದ ಸಂತುಷ್ಟನಾದ ಜ್ವಲನಜಟಿ ರಾಜನು ಕೈಗಾಣಿಕೆಯೊಡನೆಯೂ ಲೇಖದೊಡನೆಯೂ ಇಂದುವೆಂಬ ದೂತನನ್ನು ಪೌದನಪುರಕ್ಕೆ ಕಳಿಸಿದನು. ತ್ರಿಪೃಷ್ಠನು ಸ್ವಯಂಪ್ರಭೆಯ ಪತಿಯಾಗುವನೆಂಬುದನ್ನು ತನ್ನ ನೈಮಿತ್ತಿಕನಿಂದ ಮೊದಲೇ ತಿಳಿದಿದ್ದ ಪ್ರಜಾಪತಿ ಮಹಾರಾಜನು ಈ ದೂತನನ್ನು ಸಂತೋಷದಿಂದ ಬರಮಾಡಿಕೊಂಡು, ಮದುವೆಗೆ ಒಪ್ಪುವ ಮಾತೋಲೆಯನ್ನು ದೂತನ ಮುಖಾಂತರ ಕಳುಹಿದನು. ಮುಂದೆ ತಡಮಾಡದೆ ಜ್ವಲನಜಟಿ ಮಹಾರಾಜನು ಕನ್ಯೆಯೊಡನೆ ಬಂದು ಸ್ವಯಂಪ್ರಭೆಯನ್ನು ತ್ರಿಪೃಷ್ಠನಿಗೆ ಧಾರೆಯೆರೆದು ಸಿಂಹವಾಹಿನಿ ಗರುಡವಾಹಿನಿಯೆಂಬ ಎರಡು ವಿದ್ಯೆಗಳನ್ನೂ ಅಳಿಯನಿಗೆ ಕೊಟ್ಟನು. ಇತ್ತ ಅಶ್ವಗ್ರೀವನ ಪಟ್ಟಣದಲ್ಲಿ ವಿನಾಶಸೂಚಕವಾದ ಉತ್ಪಾತಗಳುಂಟಾದುವು. ಅಶ್ವಗ್ರೀವನು ನಿಮಿತ್ತಜ್ಞನನ್ನು ಕರೆಯಿಸಿ ಕೇಳಲಾಗಿ, ಆತನು ಹೀಗೆ ತಿಳಿಸಿದನು—"ಸಿಂಧುದೇಶದಲ್ಲಿ ಪರಾಕ್ರಮದಿಂದ ಸಿಂಹವನ್ನು ಕೊಂದವನೂ, ನಿನಗೆಂದು ಕಳಿಸಿದ್ದ ಕೈಗಾಣಿಕೆಯನ್ನು ನಡುವೆ ಬಂದು ಬಲಾತ್ಕಾರವಾಗಿ ಕಿತ್ತುಕೊಂಡವನೂ, ನಿನಗೆ ಕೊಡಬೇಕಾಗಿದ್ದ ಸ್ವಯಂಪ್ರಭೆಯನ್ನು ತಾನೇ ಮದುವೆಮಾಡಿಕೊಂಡವನೂ ಯಾವನೊ ಅವನಿಂದ ನಿನಗೆ ಕೆಡುಕುಂಟಾಗುವುದು. ಈ ಉತ್ಪಾತಗಳು ಅದನ್ನು ಸೂಚಿಸುತ್ತವೆ." ಈ ವರ್ಣನೆಗೆ ಸರಿಯಾದವನು ಯಾರೆಂದು ಗೂಢಚಾರರನ್ನಟ್ಟಿ ಪ್ರಯತ್ನಿಸಲಾಗಿ ಆತನು ತ್ರಿಪೃಷ್ಠನೆಂದು ತಿಳಿಯಿತು. ಕೂಡಲೆ ಅಶ್ವಗ್ರೀವನು ತನ್ನ ಇಬ್ಬರು ದೂತರ ಮೂಲಕ "ನಾನು ರಥಾವರ್ತಪರ್ವತಕ್ಕೆ ಬರುವೆನು. ಅಲ್ಲಿಗೆ ಬಂದು ನೀನು ನನ್ನನ್ನು ಕಾಣಬೇಕು" ಎಂದು ತ್ರಿಪೃಷ್ಠನಿಗೆ ಹೇಳಿಕಳಿಸಿದನು. ತ್ರಿಪೃಷ್ಠನು ಅಶ್ವಗ್ರೀವನನ್ನು ತಿರಸ್ಕರಿಸಿ ಮಾತನಾಡಿ ದೂತರನ್ನು ಮರಳಿ ಕಳಿಸಿದನು. ಅಶ್ವಗ್ರೀವನು ಕೋಪದಿಂದ ಸೈನ್ಯ ಸಹಿತನಾಗಿ ಹೊರಟನು. ಘೋರವಾದ ಯುದ್ಧವಾಯಿತು. ಎಲ್ಲ ಅಸ್ತ್ರಯುದ್ಧ ಮುಗಿದ ಮೇಲೆ ಅಶ್ವಗ್ರೀವನು ತನ್ನ ಚಕ್ರಾಯುಧವನ್ನು ಪ್ರಯೋಗಿಸಿದನು. ಅದೇ ಚಕ್ರವನ್ನು ತೆಗೆದುಕೊಂಡು ತ್ರಿಪೃಷ್ಠನು ಅಶ್ವಗ್ರೀವನ ಕೊರಳನ್ನು ಕತ್ತರಿಸಿದನು. ಹೀಗೆ ಬಲದೇವಕೇಶವರು ತ್ರಿಖಂಡಾಧಿಪತಿಗಳಾದರು. ತ್ರಿಪೃಷ್ಠನು ತನ್ನ ಮಾವನಾದ ಜ್ವಲನಜಟಿಗೆ ಉಭಯಶ್ರೇಣಿಗಳ ಆಧಿಪತ್ಯವನ್ನು ಕೊಟ್ಟನು; ಅರ್ಕಕೀರ್ತಿಗೆ ಜ್ಯೋತಿರ್ಮಾಲೆಯನ್ನು ಕೊಟ್ಟು ಮದುವೆಮಾಡಿದನು. ಅರ್ಕಕೀರ್ತಿಗೆ ಅಮಿತತೇಜನೆಂಬ ಮಗನೂ ಸುತಾರೆಯೆಂಬ ಮಗಳೂ ಹುಟ್ಟಿದರು. ತ್ರಿಪೃಷ್ಠನಿಗೆ ಶ್ರೀವಿಜಯನೆಂಬ ಮಗನಾದನು; ತರುವಾಯ ವಿಜಯಭದ್ರನೆಂಬ ಇನ್ನೊಬ್ಬ ಮಗನೂ ಜ್ಯೋತಿಪ್ರಭೆಯೆಂಬ ಮಗಳೂ ಹುಟ್ಟಿದರು. ಮುಂದೆ ಕೆಲಕಾಲದಲ್ಲಿ ಪ್ರಜಾಪತಿ ಮಹಾರಾಜನೂ ಅವನನ್ನು ಅನುಸರಿಸಿ ಜ್ವಲನಜಟಿ ರಾಜನೂ ಸಂನ್ಯಾಸದೀಕ್ಷೆ ವಹಿಸಿ ತಪಸ್ಯಾನಂತರ ಸದ್ಗತಿಯನ್ನು ಪಡೆದರು. ತ್ರಿಪೃಷ್ಠನು ಅರ್ಧಚಕ್ರವರ್ತಿಯಾಗಿ ಆಳುತ್ತ ಇದ್ದು ಮಗಳಿಗೆ ಸ್ವಯಂವರವನ್ನು ಏರ್ಪಡಿಸಿದನು. ಆತನ ಸೋದರಳಿಯನಾದ ಅಮಿತತೇಜನಿಗೇ ಆಕೆ ಮಾಲೆಯಿಕ್ಕಿದಳು. ಸುತಾರೆಯು ಶ್ರೀವಿಜಯನನ್ನು ಇದೇ ವಿಧಾನದಿಂದ ಮದುವೆಯಾದಳು. ತ್ರಿಪೃಷ್ಠನು ಆಯುಷ್ಯಾವಸಾನದಲ್ಲಿ ಏಳನೆಯ ನರಕವನ್ನು ಸೇರಿದನು. ವಿಜಯನು ತಮ್ಮನ ಮರಣದಿಂದ ದುಃಖಿತನಾಗಿ ನಿರ್ವೇಗದಿಂದ ದೀಕ್ಷೆಹೊಂದಿ ತಪಸ್ಸುಮಾಡಿ ಮುಕ್ತಿಹೊಂದಿದನು. ಅರ್ಕಕೀರ್ತಿಯೂ ಅದೇ ರೀತಿಯಾಗಿ ತಪೋಬಲದಿಂದ ಮುಕ್ತನಾದನು. ಅಮಿತತೇಜ ಶ್ರೀವಿಜಯರ ಕಾಲದಲ್ಲಿ ಒಂದು ದಿನ ಒಬ್ಬ ನಿಮಿತ್ತಜ್ಞನು ಬಂದು, "ಇಂದಿಗೆ ಏಳನೆಯ ದಿನದಂದು ಪೌದನಪುರಾಧಿಪನ ತಲೆಯ ಮೇಲೆ ದೊಡ್ಡ ಸಿಡಿಲು ಬೀಳುವುದು. ಅದಕ್ಕೆ ಪ್ರತೀಕಾರವನ್ನು ಕೈಕೊಳ್ಳಿ" ಎಂದು ತಿಳಿಸಿದನು. ಶ್ರೀವಿಜಯನು ಕ್ರುದ್ಧನಾಗಿ "ಸರ್ವಜ್ಞನಾದ ನಿನ್ನ ತಲೆಯ ಮೇಲೆ ಏನು ಬೀಳುವುದು ಹೇಳು" ಎನ್ನಲಾಗಿ ಆತನು "ನನ್ನ ತಲೆಯ ಮೇಲೆ ಅಭಿಷೇಕದೊಡನೆ ನಿಜವಾಗಿ ರತ್ನವೃಷ್ಟಿಯಾಗುವುದು" ಎಂದನು. ಅಮೋಘಜಿಹ್ವನೆಂಬ ಆ ನೈಮಿತ್ತಿಕನ ಭವಿಷ್ಯ ವಚನವನ್ನು ನಂಬಿ ರಾಜನು ಪ್ರತೀಕಾರೋಪಾಯಕ್ಕೆ ಮಂತ್ರಿಗಳೊಡನೆ

ವಿಚಾರಿಸಿದನು. ಕಬ್ಬಿಣದ ಪೆಟ್ಟಿಗೆಯಲ್ಲಿ ಕುಳ್ಳಿರಿಸಿ ಸಮುದ್ರ ಮಧ್ಯದಲ್ಲಿರಿಸಬೇಕೆಂದು ಒಬ್ಬನೂ, ವಿಜಯಾರ್ಧಪರ್ವತದ ಗುಹೆಯ ಮಧ್ಯದಲ್ಲಿರಿಸಬೇಕೆಂದು ಇನ್ನೊಬ್ಬನೂ ಹೇಳಿದರು. ಬುದ್ಧಿಸಾಗರನೆಂಬ ಮಂತ್ರಿಯು ಅದಕ್ಕೊಪ್ಪದೆ ಚಂಡಕೌಶಿಕನೆಂಬ ವಿಪ್ರನು ಕುಂಭ ರಾಕ್ಷಸನಿಗೆ ತನ್ನ ಮಗನು ತುತ್ತಾಗಬಾರದೆಂದು ಒಂದು ಬಿಲದಲ್ಲಿ ಬಚ್ಚಿಡಲು ಅಲ್ಲಿ ಒಂದು ಹೆಬ್ಬಾವು ಅವನನ್ನು ನುಂಗಿದ ಕತೆಯನ್ನು ಹೇಳಿದನು. ಆಗ ಮತಿಸಾಗರನೆಂಬ ಮಂತ್ರಿಯು, "ನಮ್ಮ ರಾಜನಿಗೇ ಸಿಡಿಲು ಬೀಳುವುದೆಂದು ನೈಮಿತ್ತಿಕನು ಹೇಳಿಲ್ಲ. ಆದುದರಿಂದ ಬೇರೆ ಯಾರನ್ನಾದರೂ ಪೌದನಾಧಿಪತಿಯಾಗಿ ಸ್ಥಾಪಿಸೋಣ" ಎಂದನು. ಆಗ ಎಲ್ಲರೂ ಒಪ್ಪಿ ರಾಜನ ಪೀಠದಲ್ಲಿ ಯಕ್ಷದೇವನ ಮೂರ್ತಿಯನ್ನು ವಿಧ್ಯುಕ್ತವಾಗಿ ಸ್ಥಾಪಿಸಿದರು. ರಾಜನು ಜಿನಚೈತ್ಯಾಲಯದಲ್ಲಿ ಶಾಂತಿಕರ್ಮ ಪೂಜಾದಿಗಳನ್ನು ಮಾಡುತ್ತ ನೆಲಸಿದನು. ಏಳನೆಯ ದಿನ ಯಕ್ಷದೇವನ ಪ್ರತಿಮೆಯ ಮೇಲೆ ಭಯಾನಕವಾದ ಸಿಡಿಲು ಬಿದ್ದಿತು. ಹೀಗೆ ತನ್ನ ಪೀಡೆ ಪರಿಹಾರವಾಗಲು ರಾಜನು ನೈಮಿತ್ತಿಕನನ್ನು ಪೂಜಿಸಿ ಅವನಿಗೆ ಪದ್ಮಿನೀಖೇಟನಗರದೊಡನೆ ನೂರು ಗ್ರಾಮಗಳನ್ನು ಕೊಟ್ಟನು. ಅನಂತರ ಸುಖದಿಂದ ರಾಜ್ಯವಾಳುತ್ತಿರಲು ಒಂದು ದಿನ ಆ ರಾಜನು ತನ್ನ ಹೆಂಡತಿ ಸುತಾರೆಯೊಡನೆ ಜ್ಯೋತಿರ್ವನಕ್ಕೆ ಹೋಗಿ ವಿಹಾರಮಾಡುತ್ತಿದ್ದನು. ಆಗ ಅಶನಿಘೋಷನೆಂಬ ಖೇಚರನು ಆಕಸ್ಮಾತ್ತಾಗಿ ಅಲ್ಲಿಗೆ ಬಂದು ಸುತಾರೆಯ ಮೇಲೆ ಮೋಹಗೊಂಡು ಕೃತ್ರಿಮವಾದ ಜಿಂಕೆಯ ನೆಪದಿಂದ ಅವಳ ಗಂಡನನ್ನು ಅಲ್ಲಿಂದ ಸಾಗಿಸಿ ಅವಳನ್ನು ಶ್ರೀವಿಜಯನ ರೂಪದಿಂದ ಮೋಸಗೊಳಿಸಿ ವಿಮಾನದಲ್ಲಿ ಕರೆದೊಯ್ದನು. ನಡುದಾರಿಯಲ್ಲಿ ತನ್ನ ನಿಜರೂಪವನ್ನು ಆತನು ಪ್ರಕಟಿಸಿದಾಗ ಆಕೆ ಆರ್ತನಾದದಿಂದ ರಕ್ಷಣೆಗಾಗಿ ಕೂಗಿಕೊಂಡಳು. ಇತ್ತ ಅಶನಿಘೋಷನ ವೈತಾಲೀವಿದ್ಯೆಯು ಸುತಾರೆಯ ರೂಪವನ್ನು ತಾಳಿ ಶ್ರೀವಿಜಯನಿಗೆ "ನನಗೆ ಕುಕ್ಕುಟಸರ್ಪ ಕಚ್ಚಿದೆ. ನಾನು ಸಾಯುವೆನು" ಎಂದು ಹೇಳಿತು. ಮಣಿಮಂತ್ರೌಷಧಿಗಳಿಂದ ಆ ವಿಷ ಹೋಗದೆಂದು ತಿಳಿದ ಶ್ರೀವಿಜಯನು ಆಕೆಯೊಡನೆ ತಾನೂ ಸಾಯುವೆನೆಂದು ಚಿತೆಯನ್ನು ಏರಿದನು. ಆ ಹೊತ್ತಿಗೆ ಇಬ್ಬರು ಖೇಚರರು ಅಲ್ಲಿಗೆ ಬಂದು ತಮ್ಮ ವಿದ್ಯಾಚ್ಛೇದಿನೀ ವಿದ್ಯೆಯಿಂದ ವೈತಾಲಿಯನ್ನು ಒದೆದು ಓಡಿಸಿ ಶ್ರೀವಿಜಯನನ್ನು ಉಳಿಸಿದರು. ನೀವಾರೆಂದು ಅವನು ಕೇಳಲಾಗಿ ಅವರಲ್ಲಿ ಹಿರಿಯನಾದವನು ಹೀಗೆ ಹೇಳಿದನು—"ನನ್ನ ಹೆಸರು ಸಂಭಿನ್ನ. ಈತನು ನನ್ನ ಮಗನಾದ ದೀಪಶಿಖ. ಉದ್ಯಾನವಿಹಾರದಿಂದ ಮರಳಿ ಹೊರಟಿರುವಾಗ ಮಧ್ಯದಲ್ಲಿ ಸುತಾರೆಯ ಆಕ್ರಂದನವನ್ನು ಕೇಳಿದೆವು ; ಆಕೆಯನ್ನು ಅಪಹರಿಸಿಕೊಂಡು ಹೋಗುತ್ತಿದ್ದ ಅಶನಿಘೋಷನನ್ನು ಅಡ್ಡಗಟ್ಟಿ ಯುದ್ಧಕ್ಕೆ ನಿಂತೆವು. ಆಗ ಸುತಾರೆಯು ನೀವು ಈಗಿಂದೀಗಲೆ ಜ್ಯೋತಿರ್ವನಕ್ಕೆ ಹೋಗಿ ನನ್ನ ಪತಿಗೆ ನನ್ನ ಅವಸ್ಥೆಯನ್ನು ತಿಳಿಸಿ ಎಂದು ನಮ್ಮನ್ನು ಇಲ್ಲಿಗೆ ಕಳಿಸಿದಳು." ತನ್ನ ತಾಯಿಗೆ ಸುದ್ದಿ ಮುಟ್ಟಿಸಲೆಂದು ದೀಪಶಿಖನನ್ನು ಶ್ರೀವಿಜಯನು ಅಟ್ಟಿದನು. ಸಂಗತಿಯನ್ನು ಕೇಳಿ ದುಃಖಿತೆಯಾದ ಸ್ವಯಂಪ್ರಭೆ ಸೈನ್ಯ ಸಮೇತಳಾಗಿ ಅಲ್ಲಿಗೆ ಬಂದಳು. ಆಮೇಲೆ ಆತನೊಡನೆ ಪೌದನಪುರಕ್ಕೆ ಬಂದು ಅಳಿಯನಾದ ಅಮಿತತೇಜನಿಗೆ ವಿಷಯವನ್ನು ತಿಳಿಸಿದಳು. ಅಮಿತತೇಜನು ಮೂರು ವಿದ್ಯೆಗಳನ್ನೂ ತನ್ನ ಐನೂರ್ವರು ಮಕ್ಕಳನ್ನೂ ಜೊತೆಮಾಡಿ ಯುದ್ಧಕ್ಕೆ ಕಳಿಸಿ ಮಹಾಜ್ವಾಲೆಯೆಂಬ ವಿದ್ಯಾಸಾಧನೆಗಾಗಿ ಹ್ರೀಮಂತಪರ್ವತಕ್ಕೆ ಹೋದನು. ಅಶನಿಘೋಷನೊಡನೆ ಶ್ರೀವಿಜಯನು ಹದಿನೈದು ದಿನಗಳವರೆಗೆ ಯುದ್ಧಮಾಡುತ್ತಿದ್ದನು. ಕೊನೆಗೆ ಅಶನಿಘೋಷನು ಭ್ರಾಮರೀ ವಿದ್ಯೆಯಿಂದ ಬಹುರೂಪನಾಗಿ ಪ್ರತಿಪಕ್ಷವನ್ನು ತಬ್ಬಿಬ್ಬುಗೊಳಿಸಿದನು. ಅಷ್ಟರಲ್ಲಿ ಅಲ್ಲಿಗೆ ಬಂದ ಅಮಿತತೇಜನು ತನ್ನ ವಿದ್ಯೆಯಿಂದ ಅವನ ಮಾಯೆಯನ್ನು ನಾಶಮಾಡಲಾಗಿ ಅಶನಿಘೋಷನು ಭಯದಿಂದ ಓಡಿಹೋಗಿ ವೃಷಭಾದ್ರಿಯಲ್ಲಿ ವಿಜಯಜಿನೇಶ್ವರರ ಸಮವಸರಣವನ್ನು ಹೊಕ್ಕನು. ಇವರೂ ಅವನನ್ನು ಬೆನ್ನಟ್ಟಿ ಅಲ್ಲಿಗೆ ಹೋದರು. ಜಿನೇಶ್ವರನ ಸನ್ನಿಧಿಯಲ್ಲಿ ಅವರ ವೈರವೆಲ್ಲ ನಂದಿಹೋಯಿತು. ಅಶನಿಘೋಷನ ತಾಯಿ ಅಲ್ಲಿಗೆ ಬಂದು ಸುತಾರೆಯನ್ನು ಶ್ರೀವಿಜಯನಿಗೆ ಒಪ್ಪಿಸಿ, "ನನ್ನ ಮಗನ ತಪ್ಪನ್ನು ಕ್ಷಮಿಸಿ" ಎಂದು ಬೇಡಿಕೊಂಡಳು. ಮುನಿಗಳಿಂದ ಧರ್ಮಶ್ರವಣ ಮಾಡಿದ ಮೇಲೆ ಅಮಿತತೇಜನು, "ನನ್ನ ಪ್ರಭಾವವನ್ನು ಬಲ್ಲವನಾದರೂ ಅಶನಿಘೋಷನು ನನ್ನ ತಂಗಿಯನ್ನೇಕೆ ಅಪಹರಿಸಿದನು ?" ಎಂದು ಕೇಳಲಾಗಿ, ಅವರು ಹೀಗೆ ವಿವರಿಸಿದರು : "ಮಂಗಲದೇಶದ ಅಚಲಗ್ರಾಮದಲ್ಲಿ ಧರಣೀಜಟನೆಂಬ ಬ್ರಾಹ್ಮಣನಿಗೆ ಅಗ್ನಿಲೆಯೆಂಬ ಪತ್ನಿಯಿದ್ದಳು. ಆ ದಂಪತಿಗಳಿಗೆ ಇಂದ್ರಭೂತಿ ಅಗ್ನಿಭೂತಿಯೆಂಬಿಬ್ಬರು ಮಕ್ಕಳಿದ್ದರು. ಕಪಿಲನೆಂಬುವನು ಆ ಬ್ರಾಹ್ಮಣನ ದಾಸಿಯ ಪುತ್ರನು. ಆ

ಬ್ರಾಹ್ಮಣನು ತನ್ನ ಮಕ್ಕಳಿಗೆ ವೇದಾಧ್ಯಯನ ಮಾಡಿಸುವಾಗ ಸೂಕ್ಷ್ಮಬುದ್ಧಿಯುಳ್ಳನಾದ ಕಪಿಲನು ಅದೆಲ್ಲವನ್ನೂ ಕಲಿತುಕೊಂಡನು. ಅದನ್ನು ತಿಳಿದು ಬ್ರಾಹ್ಮಣನು ಆ ದಾಸೀಪುತ್ರನನ್ನು ಮನೆಯಿಂದ ಹೊರದೂಡಿದನು. ಕಪಿಲನು ರತ್ನಪುರಕ್ಕೆ ಹೋದನು. ಅಲ್ಲಿ ಸತ್ಯಕನೆಂಬ ವಿಪ್ರನು ಈತನ ವಿದ್ಯೆಯನ್ನು ಕಂಡು ಬ್ರಾಹ್ಮಣನೆಂದೇ ಭಾವಿಸಿ ತನ್ನ ಮಗಳಾದ ಸತ್ಯಭಾಮೆಯನ್ನು ಅವನಿಗೆ ಧಾರೆಯೆರೆದನು. ಕಪಿಲನು ಅಲ್ಲಿ ರಾಜಪೂಜಿತನಾಗಿ ಸುಖದಿಂದ ಕೆಲವು ಕಾಲ ಕಳೆದನು. ಆದರೆ ಸತ್ಯಭಾಮೆಯು ಅವನ ವಿಪ್ರಕುಲ ವಿರುದ್ಧವಾದ ದುರಾಚರಣವನ್ನು ಕಂಡು ಸಂಶಯಗೊಂಡಳು. ಕಪಿಲನ ಶ್ರೀಮಂತಿಕೆಯನ್ನು ಕೇಳಿ ತನ್ನ ಬಡತನದ ನಿವಾರಣೆಗೆಂದು ಧರಣೀಜಟನು ಅಲ್ಲಿಗೇ ಬಂದನು. ಸತ್ಯಭಾಮೆಯು ಆತನ ಮನವೊಲಿಸಿಕೊಂಡು ಕಪಿಲನ ನಿಜವೃತ್ತಾಂತವನ್ನು ಅರಿತುಕೊಂಡಳು.

ಆ ಪಟ್ಟಣದಲ್ಲಿ ಆಗ ಶ್ರೀಷೇಣನೆಂಬ ರಾಜನಿದ್ದನು. ಆತನಿಗೆ ಸಿಂಹನಂದಿತೆ ಮತ್ತು ಅನಿಂದಿತೆಯೆಂಬ ಇಬ್ಬರು ಹೆಂಡಿರೂ ಅವರಿಂದ ಇಂದ್ರಸೇನ ಉಪೇಂದ್ರಸೇನರೆಂಬ ಮಕ್ಕಳೂ ಇದ್ದರು. ವಂಶಾಭಿಮಾನಿಯಾದ ಸತ್ಯಭಾಮೆಯು ಪಾಪಿಯಾದ ತನ್ನ ಪತಿಯೊಡನೆ ಇರಲೊಲ್ಲದೆ ದೊರೆಯಲ್ಲಿ ಮೊರೆಯಿಟ್ಟಳು. ಶ್ರೀಷೇಣ ರಾಜನು ನಿಜವೃತ್ತಾಂತವನ್ನು ತಿಳಿದುಕೊಂಡು ಕಪಿಲನನ್ನು ತನ್ನ ದೇಶದಿಂದ ತಳ್ಳಿ, ಸತ್ಯಭಾಮೆಗೆ ತನ್ನ ಅರಮನೆಯಲ್ಲಿ ಆಶ್ರಯವಿತ್ತನು ಕೆಲಕಾಲಾನಂತರ ತನ್ನಲ್ಲಿಗೆ ಬಂದ ಆದಿತ್ಯಗತಿ ಅರಿಂಜಯರೆಂಬ ಇಬ್ಬರು ಚಾರಣಮುನಿಗಳಿಗೆ ಆಹಾರದಾನವನ್ನು ಕೊಟ್ಟು ಪಂಚಾಶ್ಚರ್ಯಗಳನ್ನು ಹೊಂದಿದ ಶ್ರೀಷೇಣನಿಗೆ ಆ ಪುಣ್ಯದಿಂದ ಉತ್ತರ ಕುರುಭೂಮಿಯಲ್ಲಿ ಜನಿಸುವ ಫಲ ದೊರೆಯಿತು. ಆತನ ಇಬ್ಬರು ಅರಸಿಯರಿಗೂ ಸತ್ಯಭಾಮೆಗೂ ಮುನಿದಾನದ ಅನುಮೋದನೆಯ ಫಲವಾಗಿ ಅದೇ ಭೋಗಭೂಮಿಯಲ್ಲಿ ಹುಟ್ಟುವ ಪುಣ್ಯ ಒದಗಿತು. ಇತ್ತ ಕೌಶಾಂಬಿಯ ದೊರೆ ಮಹಾಬಲ ರಾಜನ ಮಗಳು ಶ್ರೀಕಾಂತೆ ಇಂದ್ರಸೇನನನ್ನು ಮದುವೆಯಾಗಿ ತನ್ನೊಡನೆ ಅನಂತಮತಿಯೆಂಬ ಸಾಮಾನ್ಯ ಕಾಮಿನಿಯನ್ನೂ ಕರೆತಂದಳು. ಉಪೇಂದ್ರಸೇನನಿಗೆ ಈ ಅನಂತಮತಿಯೊಂದಿಗೆ ಪ್ರಣಯ ಸಹವಾಸವುಂಟಾಯಿತು. ಇದರಿಂದಾಗಿ ಅಣ್ಣತಮ್ಮಂದಿರಲ್ಲಿ ವಿರಸವುಂಟಾಗಿ ಇಬ್ಬರೂ ಒಬ್ಬರನ್ನೊಬ್ಬರು ಎದುರಿಸಿ ಯುದ್ಧಕ್ಕೆ ತೊಡಗಿದರು. ಅವರನ್ನು ತಡೆಯಲು ಅಸಮರ್ಥನಾದ ಶ್ರೀಷೇಣ ರಾಜನು ಉದ್ವೇಗದಿಂದ ವಿಷಪುಷ್ಪವನ್ನು ಮೂಸಿ ಮರಣಹೊಂದಿದನು. ಅವನ ಪತ್ನಿಯರೂ ಸತ್ಯಭಾಮೆಯೂ ಅದೇ ಹೂವನ್ನು ಮೂಸಿ ಮಡಿದರು. ಶ್ರೀಷೇಣನೂ ಸಿಂಹನಂದಿತೆಯೂ ಉತ್ತರ ಕುರುಭೂಮಿಯಲ್ಲಿ ದಂಪತಿಗಳಾಗಿ ಹುಟ್ಟಿದರು. ಅನಿಂದಿತೆ ಅದೇ ಭೂಮಿಯಲ್ಲಿ ಆರ್ಯನಾಗಿ ಜನಿಸಿದಳು. ಸತ್ಯಭಾಮೆ ಆತನ ಪತ್ನಿಯಾಗಿ ಹುಟ್ಟಿದಳು.

ಇಂದ್ರಸೇನ-ಉಪೇಂದ್ರಸೇನರು ಕಾಳಗ ಮಾಡುತ್ತಿರುವಾಗ ವಿದ್ಯಾಧರನೊಬ್ಬನು ಮಧ್ಯದಲ್ಲಿ ಪ್ರವೇಶಿಸಿ, "ಏಕೆ ಸುಮ್ಮನೆ ಹೊಡೆದಾಡುತ್ತಿರುವಿರಿ? ಈಕೆ ನಿಮ್ಮ ತಂಗಿ" ಎಂದು ಹೇಳಿದನು. ರಾಜಕುಮಾರರು ಬೆರಗಾಗಿ ಅದೆಂತೆಂದು ಕೇಳಲಾಗಿ ಆತನು ಹೀಗೆಂದು ವಿವರಿಸಿದನು—"ಪುಷ್ಕಲಾವತಿಯಲ್ಲಿ ಆದಿತ್ಯಾಭಿಪುರದ ದೊರೆ ಸುಕುಂಡಲಿ; ಆತನ ಮಗನಾದ ಮಣಿಕುಂಡಲಿಯೆಂಬವನು ನಾನು. ಒಮ್ಮೆ ಅಮಿತಪ್ರಭರೆಂಬ ಜಿನೇಶ್ವರರನ್ನು ಕಂಡು ನನ್ನ ಪೂರ್ವಭವವನ್ನು ಕೇಳಲಾಗಿ ಅವರು ಈ ರೀತಿಯಾಗಿ ಹೇಳಿದರು—'ಪುಷ್ಕರದ್ವೀಪದಲ್ಲಿ ವೀತಶೋಕ ನಗರಕ್ಕೆ ಚಕ್ರಧ್ವಜನೆಂಬವನು ಅರಸನಾಗಿದ್ದನು. ಅವನಿಗೆ ಕನಕಮಾಲೆಯೆಂಬ ಹೆಂಡತಿಯಲ್ಲಿ ಕನಕಲತೆ, ಪದ್ಮಲತೆ ಎಂಬ ಮಕ್ಕಳಾದರು; ವಿದ್ಯುನ್ಮತಿಯೆಂಬ ಹೆಂಡತಿಯಲ್ಲಿ ಪದ್ಮಾವತಿಯೆಂಬ ಮಗಳಾದಳು. ಕನಕಮಾಲೆಯೂ ಆಕೆಯ ಪುತ್ರಿಯರೂ ದೀಕ್ಷೆವಹಿಸಿ ತಪಮಾಡಿ ಮೊದಲನೆಯ ಕಲ್ಪದ ದೇವತೆಗಳಾದರು. ಪದ್ಮಾವತಿಯು ಇಬ್ಬರು ಕಾಮುಕರಿಂದ ಸಾಧಿಸಲ್ಪಡುತ್ತಿದ್ದ ವೇಶ್ಯೆಯನ್ನು ನೋಡಿ ತದೇಕಚಿತ್ತಳಾಗಿ ಸತ್ತು ಸೌಧರ್ಮಕಲ್ಪದಲ್ಲಿ ಅಪ್ಸರೆಯಾದಳು. ಕನಕಮಾಲೆಯ ಆತ್ಮವು ಸ್ವರ್ಗದಿಂದ ಚ್ಯುತವಾಗಿ ಬಂದು ನೀನು ಮಣಿಕುಂಡಲನಾದೆ. ಆ ಇಬ್ಬರು ರಾಜಕುಮಾರಿಯರ ಆತ್ಮಗಳು ರತ್ನಪುರದ ರಾಜಪುತ್ರರಾಗಿಯೂ ಪದ್ಮಾವತಿಯು ಅನಂತಮತಿಯಾಗಿಯೂ ಜನಿಸಿದ್ದು, ಆಕೆಯ ನಿಮಿತ್ತದಿಂದ ಆ ಸೋದರರಿಬ್ಬರೂ ಹೊಡೆದಾಡುತ್ತಿದ್ದಾರೆ.'—ಈ ವಿಷಯವನ್ನು ಜಿನೇಶ್ವರರಿಂದ ಅರಿತ ಕೂಡಲೆ ನಿಮ್ಮನ್ನು ತಿಳುಹಲೆಂದು ನಾನು ಬಂದೆನು." ಮಣಿಕುಂಡಲನ ಮಾತಿನಿಂದ ಎಚ್ಚತ್ತು, ವೈರಾಗ್ಯದಿಂದ ಆ ರಾಜಕುಮಾರರಿಬ್ಬರೂ ದೀಕ್ಷೆವಹಿಸಿ, ತಪೋಮಾರ್ಗದಿಂದ ಮೋಕ್ಷಗಾಮಿಗಳಾದರು, ಅನಂತಮತಿಯೂ ಶ್ರಾವಕವ್ರತದಿಂದ ಸ್ವರ್ಗಕ್ಕೆ ಹೋದಳು.

ಶ್ರೀಷೇಣನು ಭೋಗಭೂಮಿಯ ಆಯುಷ್ಯಾನಂತರ ಸೌಧರ್ಮಕಲ್ಪದಲ್ಲಿ ಶ್ರೀಪ್ರಭದೇವನಾದನು. ಸಿಂಹನಂದಿತೆ ವಿದ್ಯುತ್ಪ್ರಭಾದೇವಿಯಾದಳು. ಸತ್ಯಭಾಮೆ ಶುಕ್ಲಪ್ರಭೆಯೆಂಬ ದೇವಿಯಾದಳು. ಅನಿಂದಿತೆ ವಿಮಲಪ್ರಭದೇವಿಯಾದಳು. ಐದು ಪಲ್ಯೋಪಮಕಾಲವಾದ ಬಳಿಕ ಶ್ರೀಪ್ರಭನು ಕಲ್ಪಚ್ಯುತನಾಗಿ ಬಂದು ಇಲ್ಲಿ ಅಮಿತತೇಜನಾಗಿರುವೆ. ಸಿಂಹನಂದಿತೆಯಾಗಿದ್ದವಳು ನಿನಗೆ ಜ್ಯೋತಿಪ್ರಭೆಯೆಂಬ ಪತ್ನಿಯಾದಳು. ಅನಿಂದಿತೆಯಾಗಿದ್ದ ಆತ್ಮನೆ ಈಗಿನ ಶ್ರೀವಿಜಯ. ಸತ್ಯಭಾಮೆಯಾಗಿದ್ದವಳು ಈ ಸುತಾರೆ. ಹಿಂದೆ ಕಪಿಲನಾಗಿದ್ದವನು ದುರ್ಗತಿ ಹೊಂದಿ, ಅನಂತರ ಐರಾವತೀನಗರದಲ್ಲಿ ಮೃಗಶೃಂಗನೆಂಬ ತಾಪಸಕುಮಾರನಾಗಿದ್ದು, ದುಷ್ಕೃತಪಸ್ಸು ಮಾಡಿ ಖೇಚರಾಧಿಪತಿಯ ಸಂಪತ್ತಿಯನ್ನು ಕಂಡು ನಿದಾನಶಲ್ಯದಿಂದ ಸತ್ತು ಈಗಿನ ಅಶನಿಘೋಷನಾದನು. ಪೂರ್ವಭವ ಸ್ನೇಹದಿಂದಾಗಿ ಆತನು ಸುತಾರೆಯನ್ನು ಅಪಹರಿಸಿದನು. ಅಮಿತತೇಜನಾದ ನೀನು ಮುಂದೆ ಒಂಭತ್ತನೆಯ ಭವದಲ್ಲಿ ಐದನೆಯ ಚಕ್ರವರ್ತಿಯೂ ಹದಿನಾರನೆಯ ತೀರ್ಥಂಕರನೂ ಎನಿಸುವ ಶಾಂತಿತೀರ್ಥಂಕರನಾಗುವೆ.

ಈ ಭವಾವಳಿ ವಿವರಣೆಯನ್ನು ಕೇಳಿ ಅಶನಿಘೋಷನೂ, ಅವನ ತಾಯಿಯೂ, ಸ್ವಯಂಪ್ರಭೆಯೂ, ಸುತಾರೆಯೂ, ಇನ್ನಿತರ ಹಲವರೂ ವಿರಕ್ತರಾಗಿ ಸಂಯಮವನ್ನು ಹೊಂದಿದರು ಅಲ್ಲಿಂದ ಹೊರಟುಬಂದ ಅಮಿತತೇಜನು ಧರ್ಮನಿಷ್ಠನಾಗಿ ರಾಜ್ಯವಾಳುತ್ತ ಪ್ರಜ್ಞಪ್ತಿ, ಕಾಮರೂಪಿಣಿ ಮೊದಲಾದ ಹಲವಾರು ವಿದ್ಯೆಗಳನ್ನು ಸಾಧಿಸಿಕೊಂಡನು. ದಮವರನೆಂಬ ಚಾರಣಮುನಿಗೆ ಆಹಾರದಾನ ಮಾಡಿ ಆತನು ಪಂಚಾಶ್ಚರ್ಯಗಳನ್ನೂ ಪಡೆದನು. ಮುಂದೆ ಒಂದು ದಿನ ವಿಪುಲಮತಿ ಮತ್ತು ವಿಮಲಮತಿ ಎಂಬ ಮುನಿಗಳ ಸನ್ನಿಧಿಯಲ್ಲಿ ಶ್ರೀವಿಜಯನಿಗೂ ತನಗೂ ಇನ್ನು ಒಂದೇ ತಿಂಗಳು ಆಯುಷ್ಯ ಉಳಿದುದನ್ನು ತಿಳಿದು ವಿರಕ್ತರಾಗಿ ತಪೋನಿರತರಾಗಿ ಮಡಿದರು. ಅಮಿತತೇಜನು ಆನತಕಲ್ಪದಲ್ಲಿ ರವಿಚೂಲನೆಂಬ ದೇವನಾಗಿಯೂ ಶ್ರೀವಿಜಯನು ಮಣಿಚೂಲದೇವನಾಗಿಯೂ ಹುಟ್ಟಿದರು. ಅಲ್ಲಿಯ ಭೋಗವನ್ನುಂಡ ಬಳಿಕ ವತ್ಸಕಾವತೀ ದೇಶದ ಪ್ರಭಾಕರೀ ಪುರಾಧಿಪತಿ ಸ್ತಿಮಿತಸಾಗರನಿಗೆ ವಸುಂಧರಿಯೆಂಬ ರಾಣಿಯಲ್ಲಿ ರವಿಚೂಲನು ಅಪರಾಜಿತನೆಂಬ ಮಗನಾಗಿಯೂ ಅನುಮತಾದೇವಿಯಲ್ಲಿ ಮಣಿಚೂಲನು ಅನಂತವೀರ್ಯನೆಂಬ ಮಗನಾಗಿಯೂ ಹುಟ್ಟಿದರು. ಅವರು ಯೌವನಪ್ರಾಪ್ತರಾದಾಗ ಸ್ತಿಮಿತಸಾಗರನು ಅವರಿಬ್ಬರಿಗೂ ಅನುಕ್ರಮವಾಗಿ ಅಧಿರಾಜ ಹಾಗು ಯುವರಾಜ ಪದವಿಗಳನ್ನು ಕೊಟ್ಟು ತಪೋನಿರತನಾದನು. ಒಂದು ದಿನ ಧರಣೇಂದ್ರನ ಸಂಪತ್ತಿಯನ್ನು ಕಂಡು ನಿದಾನಶಲ್ಯದಿಂದ ಮಡಿದು ಧರಣೇಂದ್ರಪದವಿಯನ್ನು ಪಡೆದನು. ರಾಜಕುಮಾರರಿಬ್ಬರೂ ಪರಾಕ್ರಮದಿಂದ ಪ್ರಖ್ಯಾತರಾಗಿ ಸುಖಿಸುತ್ತಿದ್ದರು. ಬರ್ಬರಿ ಮತ್ತು ಚಿಲಾತಿಕೆಯೆಂಬಿಬ್ಬರು ಪ್ರಖ್ಯಾತ ನರ್ತಕಿಯರ ನಾಟ್ಯವನ್ನು ನೋಡುತ್ತ ಅವರು ಕುಳಿತಿರುವಾಗ ನಾರದನು ಅಲ್ಲಿಗೆ ಬಂದನು. ನೃತ್ಯಾನಂದದಲ್ಲಿ ಮೈಮರೆತ ರಾಜ-ಯುವರಾಜರು ಅವನಿಗೆ ಸತ್ಕಾರಮಾಡದೆ ಹೋದುದರಿಂದ ನಾರದನು ಕ್ರುದ್ಧನಾಗಿ ಹೋಗಿ ಶಿವಮಂದಿರಪುರದ ರಾಜ ದಮಿತಾರಿಗೆ "ಈ ನರ್ತಕಿಯರು ಚಕ್ರವರ್ತಿಯಾದ ನಿನ್ನ ಸಭೆಗೆ ಯೋಗ್ಯರಲ್ಲದೆ ಆ ಹೀನ ದೊರೆಗಳಿಗೆ ಸರ್ವಥಾ ಯೋಗ್ಯರಲ್ಲ. ನೀನು ಕೂಡಲೆ ದೂತನಿಂದ ಹೇಳಿಕಳಿಸಿ ಅವರನ್ನು ನಿನ್ನ ವಶಕ್ಕೆ ತೆಗೆದುಕೊ" ಎಂದು ತಿಳಿಸಿದನು. ಅವನ ಮಾತಿಗೆ ಮರುಳಾಗಿ ದಮಿತಾರಿಯು ಕೂಡಲೆ ಕೈಗಾಣಿಕೆಯೊಡನೆ ಅಪರಾಜಿತನಲ್ಲಿಗೆ ದೂತನನ್ನಟ್ಟಿದನು. ಆ ದೂತನು ತನ್ನ ದೊರೆಯ ಪರಾಕ್ರಮವನ್ನೂ ದರ್ಪವನ್ನೂ ಹೊಗಳಿ ನರ್ತಕಿಯರನ್ನು ತನ್ನೊಡನೆ ಕಳಿಸಿಕೊಡಬೇಕೆಂದು ತಿಳಿಸಿದನು. ಅಪರಾಜಿತನು ಮಂತ್ರಿಗಳೊಡನೆ ಆಲೋಚಿಸಿದನು. ಆಗಲೇ ಆ ಕುಮಾರರಿಬ್ಬರ ಮೂರನೆಯ ಭವದ ದೇವತೆಗಳು ಬಂದು ಅವರನ್ನು ಆಶ್ರಯಿಸಿದರು. ಅಪರಾಜಿತ-ಅನಂತವೀರ್ಯರು ತಾವೆ ನರ್ತಕಿಯರ ವೇಷ ತಾಳಿ ಆ ದೂತನೊಡನೆ ಶಿವಮಂದಿರಪುರಕ್ಕೆ ಹೋದರು. ಅವರ ನರ್ತನವನ್ನು ಕಂಡು ಸಂತುಷ್ಟನಾದ ದಮಿತಾರಿಯು "ನಿಮ್ಮ ಕಲೆಯನ್ನು ನನ್ನ ಮಗಳಿಗೆ ಕಲಿಸಿರಿ" ಎಂದು ಅವರಿಬ್ಬರನ್ನೂ ಮಗಳಾದ ಕನಕಶ್ರೀಯ ಬಳಿಗೆ ಕಳಿಸಿದನು. ಅವಳಿಗೆ ನರ್ತನವಿದ್ಯೆಯನ್ನು ಕಲಿಸುತ್ತ ಅನಂತವೀರ್ಯನು ಅವಳಿಗೆ ತನ್ನ ರೂಪವನ್ನು ತೋರಿ ಮನವೊಲಿಸಿಕೊಂಡನು. ಅವಳೊಡನೆ ಆ ಇಬ್ಬರೂ ವಿಮಾನವೇರಿ ಹೊರಟುಹೋದರು. ಅಂತಃಪುರಾಧ್ಯಕ್ಷನಿಂದ ಈ ವಿಷಯವನ್ನು ತಿಳಿದ ದಮಿತಾರಿಯು ಅವರನ್ನು ಕರೆತರಲು ತನ್ನ ಭಟರನ್ನು ಕಳುಹಿದನು. ಅವರನ್ನು ಅಪರಾಜಿತನು ಕಾಳಗದಲ್ಲಿ ಕೊಂದುದನ್ನು ಕೇಳಿ ದಮಿತಾರಿ ತಾನೆ ಸೈನ್ಯ ಸಹಿತನಾಗಿ ಬಂದು ಉಗ್ರವಾಗಿ ಹೋರಾಡಿದನು.

ಅಪರಾಜಿತನು ಅವನೊಬ್ಬನನ್ನುಳಿಸಿ ಎಲ್ಲ ಸೈನ್ಯವನ್ನೂ ನಾಶಮಾಡಿದನು. ಆಗ ಏರಿಬರುತ್ತಿರುವ ದಮಿತಾರಿಯನ್ನು ಅನಂತವೀರ್ಯನು ಎದುರಿಸಿ ಅವನ ಅಸ್ತ್ರಗಳನ್ನು ವ್ಯರ್ಥಗೊಳಿಸಿದನು. ಕೊನೆಗೆ ದಮಿತಾರಿಯು ತನ್ನ ಚಕ್ರಾಯುಧವನ್ನು ಪ್ರಯೋಗಿಸಿದನು. ಅನಂತವೀರ್ಯನು ಅದನ್ನೆ ಹಿಡಿದು ತಿರುಗಿ ಎಸೆದು ದಮಿತಾರಿಯನ್ನು ಕೊಂದನು. ಅನಂತರ ವಿಮಾನವನ್ನೇರಿ ಆ ಮೂವರೂ ಬರುತ್ತಿರುವಾಗ ಮಾರ್ಗಮಧ್ಯದಲ್ಲಿ ದಮಿತಾರಿಯ ತಂದೆಯಾಗಿದ್ದು ಈಗ ಕೇವಲಜ್ಞಾನಿಯಾದ ಕೀರ್ತಿಧರನೆಂಬ ಮುನಿಯ ಸಮವಸರಣವನ್ನು ಕಂಡು, ಅಲ್ಲಿಗೆ ಬಂದು, ಅವನನ್ನು ಭಕ್ತಿಯಿಂದ ಆರಾಧಿಸಿದರು. ಕನಕಶ್ರೀಯು ಅವರಲ್ಲಿ ತನ್ನ ಭವಾವಳಿಯನ್ನು ಕೇಳಲಾಗಿ ಅವರು ಹೀಗೆ ತಿಳಿಸಿದರು—"ಶಂಖನಗರದಲ್ಲಿ ದೇವಿಲನೆಂಬ ವೈಶ್ಯನಿಗೆ ಬಂಧುಶ್ರೀಯೆಂಬ ಪತ್ನಿಯಲ್ಲಿ ನೀನು ಶ್ರೀದತ್ತೆಯೆಂಬ ಮಗಳಾಗಿದ್ದೆ. ಕುಂಟಿ, ಕುರುಡಿ, ಕಿವುಡಿ, ಗಿಡ್ಡಿ, ಕುಣಿ ಮತ್ತು ಕುಂಡಿಯರಾದ ಆರು ಹುಡುಗಿಯರು ನಿನಗೆ ತಂಗೆಂದಿರಾಗಿದ್ದರು. ತಂದೆತಾಯಿಗಳು ಸತ್ತು ಹೋದುದರಿಂದ ನೀನೇ ಅವರೆಲ್ಲರನ್ನೂ ಸಲಹುತ್ತಿದ್ದೆ. ಮುಂದೆ ಸರ್ವಯಶಮುನಿಗಳಿಂದ ಶ್ರಾವಕವ್ರತಗಳನ್ನೂ ಧರ್ಮಚಕ್ರವೆಂಬ ಉಪವಾಸವನ್ನೂ ಗ್ರಹಣಮಾಡಿದೆ. ಒಂದು ದಿನ ಸುವ್ರತೆಯೆಂಬ ಆರ್ಯಿಕೆಗೆ ಆಹಾರದಾನ ಮಾಡಿದೆ. ಆಕೆಗೆ ವಾಂತಿಯಾಗಲು ಸಮ್ಯಕ್ತ್ವವಿಲ್ಲದೆ ನೀನು ಜುಗುಪ್ಸೆಪಟ್ಟುಕೊಂಡೆ. ಅನಂತರ ಸತ್ತು ಸೌಧರ್ಮಕಲ್ಪದಲ್ಲಿ ಸಾಮಾನಿಕ ದೇವಿಯಾಗಿದ್ದು ಅಲ್ಲಿಂದ ವ್ರತೋಪವಾಸದ ಪುಣ್ಯದಿಂದ ದಮಿತಾರಿ ಚಕ್ರವರ್ತಿಯ ಮಗಳಾಗಿ ಹುಟ್ಟಿದೆ. ಆರ್ಯಿಕೆಗೆ ನೀನು ಜುಗುಪ್ಸೆಪಟ್ಟುದರಿಂದಾಗಿ ನಿನಗೆ ತಂದೆಯ ಸಾವೇ ಮೊದಲಾದ ದುಃಖಗಳುಂಟಾದುವು." ಅನಂತರ ಅವಳೊಡನೆ ಆ ಕುಮಾರರಿಬ್ಬರೂ ತಮ್ಮ ರಾಜಧಾನಿಗೆ ಬರಲಾಗಿ ಅಲ್ಲಿ ಆಕೆಯ ಸೋದರರಾದ ಸುಘೋಷ ಮತ್ತು ವಿದ್ಯುದ್ದಂಷ್ಟ್ರರು ಪಟ್ಟಣವನ್ನು ಮುತ್ತಿ ಯುದ್ಧಮಾಡುತ್ತಿದ್ದರು. ಅಪರಾಜಿತ-ಅನಂತವೀರ್ಯರು ಅವರನ್ನು ಬಂಧಿಸಿದರು. ಆದರಿಂದ ತುಂಬ ಖಿನ್ನಳಾದ ಕನಕಶ್ರೀಯು ಆ ಬಲದೇವಕೇಶವರನ್ನು ಪ್ರಾರ್ಥಿಸಿ ತನ್ನ ಸೋದರರನ್ನು ಬಿಡಿಸಿ ದೀಕ್ಷೆವಹಿಸಿ ತಪಸ್ಸಿಗೆ ನಿಂತಳು ಆಯುಷ್ಯಾವಸಾನದಲ್ಲಿ ಆಕೆ ಸೌಧರ್ಮಕಲ್ಪದಲ್ಲಿ ದೇವನಾದಳು.

ಅನಂತರ ಸುಖದಿಂದ ಇರುತ್ತಿರಲಾಗಿ ಅಪರಾಜಿತನಿಗೆ ಸುಮತಿಯೆಂಬ ಮಗಳಾದಳು. ಆಕೆ ಬಾಲ್ಯದಿಂದಲೆ ಧರ್ಮಪರಾಯಣಳಾಗಿದ್ದಳು. ಆಕೆ ಯೌವನವತಿಯಾದಾಗ ಆಕೆಯ ತಂದೆ ಸ್ವಯಂವರವನ್ನೇರ್ಪಡಿಸಿದನು. ಆಕೆ ಮಾಲೆ ಹಿಡಿದು ಸ್ವಯಂವರಮಂಟಪವನ್ನು ಸೇರಿದಾಗ ಆಕಾಶಮಾರ್ಗವಾಗಿ ಬಂದ ಖೇಚರಿಯೊಬ್ಬಳು, "ಏನು ನಿನಗೆ ನೆನಪಿದೆಯೋ ? ದೇವಲೋಕದಲ್ಲಿ ನಾವಿಬ್ಬರೂ ಜೊತೆಯಾಗಿಯೆ ಇರುತ್ತಿರಲಾಗಿ ಮೊದಲು ಯಾವಳು ಭೂಮಿಗಿಳಿಯುವಳೊ ಅವಳಿಗೆ ಮತ್ತೊಬ್ಬಳು ಬಂದು ಬೋಧಿಸಬೇಕೆಂದು ನಿರ್ಧರಿಸಿದ್ದೆವು. ನಮ್ಮಿಬ್ಬರ ಪೂರ್ವಭವದ ಸಂಬಂಧವನ್ನು ಕೇಳು ನಂದನಪುರದಲ್ಲಿ ಅಮಿತವಿಕ್ರಮನೆಂಬ ದೊರೆಗೆ ನಾವಿಬ್ಬರೂ ಧನಶ್ರೀ ಮತ್ತು ಅನಂತಶ್ರೀ ಎಂಬ ಮಕ್ಕಳಾಗಿದ್ದೆವು. ನಂದನಮುನೀಶ್ವರನಿಂದ ಧರ್ಮಶ್ರವಣ ಮಾಡಿ ಉಪವಾಸವ್ರತಗಳನ್ನು ಮಾಡಿದೆವು. ಒಮ್ಮೆ ಮನೋಹರವನದಲ್ಲಿ ನಾವಿದ್ದಾಗ ತನ್ನ ಪತ್ನಿ ವಜ್ರಮಾಲಿನಿಯೊಡನೆ ಹೋಗುತ್ತಿದ್ದ ತ್ರಿಪುರಾಧಿಪತಿ ವಜ್ರಾಂಗದನು ತನ್ನ ಹೆಂಡತಿಯನ್ನು ಪಟ್ಟಣಕ್ಕೆ ಕಳಿಸಿ ನಮ್ಮನ್ನು ಮೋಹದಿಂದ ಅಪಹರಿಸಿಕೊಂಡು ಹೊರಟನು ಸಂಶಯದಿಂದ ಬೆನ್ನಟ್ಟಿ ಬಂದ ವಜ್ರಮಾಲಿನಿಗೆ ಹೆದರಿ ಬಿದಿರಿನ ಕಾಡಿನಲ್ಲಿ ನಮ್ಮನ್ನು ಬಿಟ್ಟು ಓಡಿಹೋದನು. ನಾವು ಅಲ್ಲಿಯೆ ಸಮಾಧಿಮರಣ ಹೊಂದಲಾಗಿ ನಾನು ಸೌಧರ್ಮೇಂದ್ರನಿಗೆ ನಮಿತಾದೇವಿಯಾದೆನು. ನೀನು ಕುಬೇರನಿಗೆ ರತಿಯೆಂಬ ದೇವಿಯಾದೆ. ನಾವಿಬ್ಬರೂ ಒಮ್ಮೆ ನಂದೀಶ್ವರ ಮಹೋತ್ಸವದಲ್ಲಿ ಧೃತಿಷೇಣರೆಂಬ ಮುನಿಗಳನ್ನು ಆಶ್ರಯಿಸಿ ನಮಗೆ ಎಂದು ಮುಕ್ತಿಯಾಗುವುದೆಂದು ಕೇಳಲಾಗಿ ಈ ಜನ್ಮದಿಂದ ನಾಲ್ಕನೆಯ ಜನ್ಮದಲ್ಲಿ ಅವಶ್ಯವಾಗಿ ಮುಕ್ತಿಯಾಗುವುದು ಎಂದವರು ತಿಳಿಸಿದರು. ಆದುದರಿಂದ ನಿನ್ನನ್ನು ಬೋಧಿಸಲೆಂದು ನಾನು ಸ್ವರ್ಗಲೋಕದಿಂದ ಬಂದೆನು."

ಈ ಮಾತನ್ನು ಕೇಳಿ ಸುಮತಿಯು ಕೂಡಲೆ ಸುವ್ರತಾರ್ಯಿಕೆಯರಲ್ಲಿ ಏಳುನೂರೈವತ್ತು ಕನ್ಯೆಯರೊಡನೆ ದೀಕ್ಷೆವಹಿಸಿದಳು. ಮಹಾತಪಸ್ಸಿನಿಂದ ಮುಂದೆ ದೇವತ್ವವನ್ನು ಹೊಂದಿದಳು. ಇತ್ತ ಅನಂತವೀರ್ಯನು ನಾನಾ ಭೋಗಗಳಿಂದ ತ್ರಿಖಂಡಾಧಿಪತ್ಯವನ್ನು ಭೋಗಿಸುತ್ತಿದ್ದು ಆಯುಷ್ಯಾವಸಾನದಲ್ಲಿ ಸತ್ತು ಪ್ರಥಮ ನರಕಕ್ಕೆ ಇಳಿದನು. ತಮ್ಮನ ಮರಣದಿಂದ ನೊಂದ ಅಪರಾಜಿತನು ವೈರಾಗ್ಯದಿಂದ ದೀಕ್ಷಾಬದ್ಧನಾಗಿ ತಪಮಾಡಿ ಅಚ್ಯುತಸ್ವರ್ಗದ ಇಂದ್ರನಾದನು.

ಧರಣೇಂದ್ರನಾಗಿದ್ದ ಅವರಿಬ್ಬರ ತಂದೆಯು ಪ್ರಥಮ ನರಕದಲ್ಲಿದ್ದ ಅನಂತವೀರ್ಯನಿಗೆ ಬೋಧೆಮಾಡಿ ಸಮ್ಯಕ್ತ್ವ ವನ್ನುಂಟುಮಾಡಿದನು. ಅನಂತವೀರ್ಯನು ನರಕವಾಸವನ್ನು ಮುಗಿಸಿ ಬಂದು ಗಗನವಲ್ಲಭಪುರಾಧಿಪತಿ ಮೇಘವಾಹನ ನಿಗೆ ಮೇಘನಾದನೆಂಬ ಮಗನಾದನು. ಆತನು ಸುರಗುರು ಮತ್ತು ಅಮರಗುರುಗಳೆಂಬ ಚಾರಣಮುನಿಗಳಿಂದ ವ್ರತ ಗ್ರಹಣಮಾಡಿ ನಂದನನೆಂಬ ಬೆಟ್ಟದ ಮೇಲೆ ಪ್ರತಿಮಾಯೋಗದಲ್ಲಿ ಧ್ಯಾನಾರೂಢನಾದನು. ಅಶ್ವಗ್ರೀವನ ತಮ್ಮ ನಾಗಿದ್ದ ಸುಕಂಠನು ಭವಚಕ್ರದಲ್ಲಿ ತಿರುಗುತ್ತ ಅಸುರನಾಗಿ ಇವನಿಗೆ ಉಪಸರ್ಗಗಳನ್ನು ಮಾಡಿದರೂ ಮುನಿ ಅಚಲನಾಗಿ ನಿಂತು ಅಚ್ಯುತಸ್ವರ್ಗದಲ್ಲಿ ಪ್ರತೀಂದ್ರನಾದನು. ಅಲ್ಲಿ ಸೋದರರಿಬ್ಬರೂ ಪುನಃ ಕೂಡಿ ಸುಖಿಸಿದರು. ಅಚ್ಯುತೇಂದ್ರನು ಮೊದಲು ಸ್ವರ್ಗಚ್ಯುತನಾಗಿ ಬಂದು ಮಂಗಲಾವತಿದೇಶದ ರತ್ನಸಂಚಯನಗರದಲ್ಲಿ ಕ್ಷೇಮಂಕರರಾಜನಿಗೆ ವಜ್ರಾಯುಧ ನೆಂಬ ಮಗನಾದನು. ಅವನು ಮಹಾಜ್ಞಾನಿಯಾಗಿದ್ದನು. ಅನಂತವೀರ್ಯನಾಗಿದ್ದ ಪ್ರತೀಂದ್ರನು ಸ್ವರ್ಗದಿಂದ ಚ್ಯುತನಾಗಿ ಬಂದು ಈತನಿಗೆ ಸಹಸ್ರಾಯುಧನೆಂಬ ಮಗನಾದನು. ಸಹಸ್ರಾಯುಧನಿಗೆ ಕನಕಶಾಂತನೆಂಬ ಮಗ ನಾದನು. ಒಂದು ದಿನ ಕ್ಷೇಮಂಕರನು ಒಡ್ಡೋಲಗದಲ್ಲಿದ್ದಾಗ (ಈಶಾನೇಂದ್ರನಿಂದ ವಜ್ರಾಯುಧನ ಸ್ತುತಿಯನ್ನು ಕೇಳಿ ಸಹಿಸಲಾರದೆ ಅವನನ್ನು ಸೋಲಿಸಲೆಂದು) ವಿಚಿತ್ರಚೂಲನೆಂಬ ದೇವನು ರೂಪಪರಾವರ್ತನದಿಂದ ಬಂದು ಸೌತ್ರಾಂತಿಕ ಮತದಿಂದ ಜೀವವೆಂಬ ತತ್ವವೇ ಇಲ್ಲವೆಂದು ವಾದಿಸಿದನು. ವಜ್ರಾಯುಧನು ಅವನ ವಾದವನ್ನು ಖಂಡಿಸಿ ಅವನನ್ನು ಸೋಲಿಸಿದನು. ವಿಚಿತ್ರಚೂಲನು ಗರ್ವಭಂಗಿತನಾಗಿ ತನ್ನ ಆಗಮನದ ಉದ್ದೇಶವನ್ನು ವಿವರಿಸಿ ಹೊರಟು ಹೋದನು.

ಕಾಲಾಂತರದಲ್ಲಿ ಕ್ಷೇಮಂಕರ ರಾಜನು ವಜ್ರಾಯುಧನಿಗೆ ರಾಜ್ಯಾಭಿಷೇಕ ಮಾಡಿ ತಪೋನಿರತನಾಗಿ ಕೇವಲಜ್ಞಾನ ವನ್ನು ಸಂಪಾದಿಸಿದನು. ಇತ್ತ ವಜ್ರಾಯುಧನು ರಾಜ್ಯವಾಳುತ್ತ ಇರಲು ಒಮ್ಮೆ ಚೈತ್ರಮಾಸದಲ್ಲಿ ತನ್ನ ಪತ್ನಿಯರೊಡನೆ ಜಲಕ್ರೀಡೆಯಾಡಲು ಸುದರ್ಶನವೆಂಬ ಸರೋವರಕ್ಕೆ ಹೋದನು. ಜಲಕೇಳಿಯಲ್ಲಿ ಅವರು ತೊಡಗಿರುವಾಗ ದುಷ್ಟ ವಿದ್ಯಾಧರನೊಬ್ಬನು ವಜ್ರಾಯುಧನನ್ನು ನಾಗಪಾಶದಿಂದ ಕಟ್ಟಿ ಸರೋವರವನ್ನು ಶಿಲೆಯಿಂದ ಮುಚ್ಚಿಬಿಟ್ಟನು. ವಜ್ರಾಯುಧನು ಅಂಗೈಯಿಂದ ಹೊಡೆದು ಚೂರುಚೂರು ಮಾಡಲಾಗಿ ವಿದ್ಯಾಧರನು ಓಡಿಹೋದನು. ಈ ವಿದ್ಯಾಧರನು ಪೂರ್ವದಲ್ಲಿ ವಿದ್ಯುದ್ದಂಷ್ಟ್ರನಾಗಿದ್ದವನು.

ಅಲ್ಲಿಂದ ಮರಳಿ ಅರಮನೆಗೆ ಬಂದು ಸುಖದಿಂದ ಇರುತ್ತಿರಲು ವಜ್ರಾಯುಧನಿಗೆ ನವನಿಧಿಗಳೂ ಚತುರ್ದಶ ರತ್ನ ಗಳೂ ಉಂಟಾದುವು. ಚಕ್ರವರ್ತಿಯಾಗಿ ಓಲಗದಲ್ಲಿ ಕುಳಿತಿರುವಾಗ ಒಂದು ದಿನ ಭೀತನಾದ ವಿದ್ಯಾಧರನು ಧಾವಿಸಿ ಬಂದು ಮೊರೆಹೊಕ್ಕನು. ಅವನನ್ನು ಬೆನ್ನಟ್ಟಿಕೊಂಡು ಖಡ್ಗಧಾರಿಣಿಯಾದ ಖೇಚರಿಯೂ ಅವಳ ಹಿಂದಿನಿಂದ ಗದಾಧಾರಿ ಯಾದ ಒಬ್ಬ ಮುದುಕನೂ ಬಂದರು. ಆ ವೃದ್ಧನು ಹೀಗೆಂದನು—"ಮಹಾರಾಜನೆ, ಈತನು ದುಷ್ಟ ಖೇಚರ ನಾದುದರಿಂದ ಇವನಿಗೆ ರಕ್ಷಣೆ ಕೊಡದಿರು. ನಮ್ಮ ಕತೆಯನ್ನು ಸ್ವಲ್ಪ ಕೇಳು. ಸುಕಚ್ಛದೇಶದ ಶುಕಪ್ರಭಪುರದ ದೊರೆ ಇಂದ್ರದತ್ತನು; ನಾನು ಆತನ ಮಗನಾದ ವಾಯುವೇಗ. ಈಕೆ ನನ್ನ ಮಗಳಾದ ಶಾಂತಿಮತಿ; ವಿದ್ಯೆಗಳನ್ನು ಸಾಧಿಸಲೆಂದು ಮುನಿಸಾಗರಪರ್ವತದಲ್ಲಿ ಇವಳು ತೊಡಗಿದಾಗ ಪಾಪಿಯಾದ ಈ ಖೇಚರನು ವಿದ್ಯಾಸಾಧನೆಗೆ ವಿಘ್ನ ವೊಡ್ಡಲು ಬಂದನು. ಆದರೆ ಅಷ್ಟರಲ್ಲಿ ಆಕೆಯು ವಿದ್ಯೆಯನ್ನು ಸಾಧಿಸಿಕೊಂಡುದರಿಂದ ಭಯದಿಂದ ನಿನ್ನ ಬಳಿಗೆ ಓಡಿಬಂದಿರುವನು. ಮಗಳನ್ನು ಕಾಣಲೆಂದು ಹೋದ ನಾನು ಅಲ್ಲಿ ಅವಳನ್ನು ಕಾಣದೆ ಶೀಘ್ರನಾಗಿ ಅವರು ಹೋದ ಹಾದಿಯನ್ನು ಅನುಸರಿಸಿ ಬಂದೆನು."

ವಜ್ರಾಯುಧನು ಅವಧಿಜ್ಞಾನದಿಂದ ತಿಳಿದು ವಿದ್ಯಾಸಾಧನೆಗೆ ಉಂಟಾಗಿದ್ದ ಕಾರಣವನ್ನು ಹೀಗೆ ವಿವರಿಸಿದನು— "ಐರಾವತ ಕ್ಷೇತ್ರದಲ್ಲಿಯ ಗಾಂಧಾರದೇಶದ ವಿಂಧ್ಯಪುರಕ್ಕೆ ವಿಂಧ್ಯಸೇನನೆಂಬ ದೊರೆಯಿದ್ದನು. ಅವನ ಮಗನ ಹೆಸರು ನಲಿನಕೇತು. ಅದೇ ನಗರದಲ್ಲಿ ಸುದತ್ತನೆಂಬ ವೈಶ್ಯಪುತ್ರನು ತನ್ನ ಪತ್ನಿಯಾದ ಪ್ರಿಯಂಕರೆಯೊಡನೆ ಒಂದು ದಿನ ವಿಹಾರ ಮಾಡುತ್ತಿದ್ದಾಗ ಈ ರಾಜಕುಮಾರನು ಅವಳನ್ನು ಮೋಹಿಸಿ ಬಲಾತ್ಕಾರದಿಂದ ಅಪಹರಿಸಿಕೊಂಡುಹೋದನು. ಸುದತ್ತನು

ವೈರಾಗ್ಯದಿಂದ ದೀಕ್ಷೆವಹಿಸಿ ಘೋರವಾದ ತಪೋಬಲದಿಂದ ಈಶಾನಕಲ್ಪದ ದೇವನಾದನು. ಅಲ್ಲಿಂದ ಚ್ಯುತನಾಗಿ ಕಾಂಚನತಿಲಕಪುರದ ದೊರೆ ಮಹೇಂದ್ರವಿಕ್ರಮನಿಗೆ ಅಜಿತಸೇನನೆಂಬ ಮಗನಾದನು. ಇತ್ತ ನಲಿನಕೇತುವು ಉಲ್ಕಾಪಾತವನ್ನು ನೋಡಿ ವೈರಾಗ್ಯಹೊಂದಿ ದೀಕ್ಷಾಗ್ರಹಣಾನಂತರ ತಪಸ್ಸಿನಿಂದ ಮುಕ್ತಿಯನ್ನು ಪಡೆದನು. ಪ್ರಿಯಂಕರೆಯೂ ವೈರಾಗ್ಯದಿಂದ ಚಾಂದ್ರಾಯಣ ತಪಸ್ಸನ್ನುಮಾಡಿ ಈಶಾನಕಲ್ಪದ ಸುಖವನ್ನು ಪಡೆದಳು. ಅಲ್ಲಿಂದ ಚ್ಯುತಳಾದ ಮೇಲೆ ಇಲ್ಲಿಗೆ ಬಂದು ನಿನಗೆ ಮಗಳಾಗಿ ಹುಟ್ಟಿದಳು. ಪೂರ್ವಭವದ ಸಂಬಂಧದಿಂದ ಅಜಿತಸೇನನು ವಿದ್ಯಾಘಾತಕ್ಕೆ ಪ್ರಯತ್ನಿಸಿದನು." ಈ ವಿಷಯವನ್ನು ತಿಳಿದು ಆ ಮೂವರೂ ದೀಕ್ಷೆಯನ್ನು ಹೊಂದಿ ತಪಸ್ಸಿನಿಂದ ಸದ್ಗತಿ ಹೊಂದಿದರು.

ಕೆಲಕಾಲಾನಂತರ ಕನಕಶಾಂತಿಕುಮಾರನಿಗೆ ಕನಕಮಾಲೆ ಮತ್ತು ವಸಂತಸೇನೆಯೆಂಬ ಇಬ್ಬರು ಹೆಂಡಿರಾದರು. ದಾಂಪತ್ಯ ಸುಖವನ್ನು ಅನುಭವಿಸುತ್ತ ಇದ್ದು ಒಮ್ಮೆ ಸಪತ್ನೀಕನಾಗಿ ವನವಿಹಾರಕ್ಕೆ ಹೋದಾಗ ವಿಮಲಪ್ರಭ ಮುನಿಗಳನ್ನು ಕಂಡು ಅವರಿಂದ ದೀಕ್ಷೆವಹಿಸಿದನು. ತಪಸ್ಸಿನಿಂದ ಆತನು ಕೇವಲಜ್ಞಾನವನ್ನು ಹೊಂದಿದನು. ಮೊಮ್ಮಗನ ಕೈವಲ್ಯವನ್ನು ಕಂಡು ವಜ್ರಾಯುಧನು ದೀಕ್ಷಾಗ್ರಹಣ ಮಾಡಿ ಸಿದ್ಧಗಿರಿಯಲ್ಲಿ ಪ್ರತಿಮಾಯೋಗದಲ್ಲಿ ನಿಂತನು. ಸಹಸ್ರಾಯುಧನೂ ತಂದೆಯನ್ನನುಸರಿಸಿ ತಪೋನಿರತನಾದನು. ಅವರಿಬ್ಬರೂ ಇಲ್ಲಿಯ ಆಯುಷ್ಯ ತೀರಿದಾಗ ಊರ್ಧ್ವ ಗ್ರೈವೇಯಕದಲ್ಲಿ ಮಹರ್ದ್ಧಿಕದೇವರಾದರು. ಅಲ್ಲಿಂದ ಚ್ಯುತನಾದ ವಜ್ರಾಯುಧನು ಪುಷ್ಕಲಾವತಿ ದೇಶದ ಪುಂಡರೀಕಿಣೀ ನಗರದ ದೊರೆ ಘನರಥನಿಗೆ ಮನೋಹರಾದೇವಿಯಲ್ಲಿ ಮೇಘರಥನೆಂಬ ಮಗನಾಗಿ ಹುಟ್ಟಿದನು. ಸಹಸ್ರಾಯುಧನು ಅದೇ ರಾಜನಿಗೆ ಮನೋರಮಾದೇವಿಯಲ್ಲಿ ದೃಢರಥನೆಂಬ ಪುತ್ರನಾದನು. ಇಬ್ಬರಿಗೂ ಮದುವೆಯಾಗಿ ಮಕ್ಕಳೂ ಆದರು. ಹೀಗೆ ಪುತ್ರಪೌತ್ರಾದಿಗಳೊಡನೆ ಘನರಥ ರಾಜನು ಸುಖದಿಂದ ಇರುತ್ತಿರಲು ಒಂದು ದಿನ ಅಂತಃಪುರದಲ್ಲಿ ಜಿದ್ದಿನಿಂದ ಆಡಿಸುತ್ತಿದ್ದ ಕೋಳಿಕಾಳಗವನ್ನು ನೋಡುತ್ತ ತನ್ನ ಮಗನ ಜ್ಞಾನಮಹಿಮೆಯನ್ನು ಪ್ರಕಾಶಪಡಿಸಬೇಕೆಂಬ ಉದ್ದೇಶದಿಂದ—"ದೃಢವಾದ ಕೋಪದಿಂದ ಕಾದಾಡುತ್ತಿರುವ ಈ ಕೋಳಿಗಳಿಗೆ ಯಾವುದರಿಂದ ಇತಹ ಶಕ್ತಿಯುಂಟಾಯಿತು ?" ಎಂದು ಕೇಳಿದನು. ಅವಧಿಜ್ಞಾನಿಯಾದ ಮೇಘರಥನು ಹೀಗೆ ವಿವರಿಸಿದನು—"ಐರಾವತ ಕ್ಷೇತ್ರದ ರತ್ನಪುರದಲ್ಲಿ ಭದ್ರ ಮತ್ತು ಧನ್ಯ ಎಂಬಿಬ್ಬರು ಬಂಡಿಹೊಡೆಯುವ ಸೋದರರಿದ್ದರು. ಎತ್ತಿನ ನಿಮಿತ್ತದಿಂದ ಹೊಡೆದಾಡಿ ಇಬ್ಬರೂ ಸತ್ತು ಕಾಡಾನೆಗಳಾಗಿ ಹುಟ್ಟಿದರು. ಪೂರ್ವವೈರದಿಂದ ಹೋರಾಡಿ ಸತ್ತು ಕೋಣಗಳಾಗಿಯೂ ಅನಂತರ ತಗರುಗಳಾಗಿಯೂ ಪರಸ್ಪರರನ್ನು ಕೊಂದು ಈಗ ಈ ಕೋಳಿಗಳಾಗಿವೆ. ವಿದ್ಯಾಸಿದ್ಧಿಯುಳ್ಳ ವಿದ್ಯಾಧರರಿಬ್ಬರು ಗುಪ್ತವಾಗಿ ನಿಂತು ಅವುಗಳಿಂದ ಕಾಳಗ ಮಾಡಿಸುತ್ತಿದ್ದಾರೆ."

ಈ ವಿದ್ಯಾಧರರು ಯಾರು ಮತ್ತು ಏಕೆ ಹೀಗೆ ಮಾಡುತ್ತಿದ್ದಾರೆಂದು ಕೇಳಲಾಗಿ ಅವರ ಕತೆಯನ್ನು ಮೇಘರಥನು ಹೀಗೆ ಹೇಳಿದನು—"ಉತ್ತರಶ್ರೇಣಿಯ ಕನಕಪುರದ ರಾಜನಾದ ಗರುಡವೇಗನೆಂಬವನಿಗೆ ದಿವಿತಿಲಕ ಮತ್ತು ಚಂದ್ರತಿಲಕ ಎಂಬಿಬ್ಬರು ಪುತ್ರರಾದರು. ಇಬ್ಬರು ಚಾರಣಮುನಿಗಳಿಂದ ತಮ್ಮ ಪೂರ್ವಭವವನ್ನು ಕೇಳಲಾಗಿ ಅವರು ಹೀಗೆಂದರು—ಐರಾವತ ಕ್ಷೇತ್ರದಲ್ಲಿ ತಿಲಕವೆಂಬ ನಗರಕ್ಕೆ ಅಭಯಘೋಷನೆಂಬ ದೊರೆಯಿದ್ದನು. ಅವನಿಗೆ ಸುವರ್ಣತಿಲಕೆಯೆಂಬ ಪತ್ನಿಯಲ್ಲಿ ವಿಜಯ ಮತ್ತು ಜಯಂತ ಎಂಬಿಬ್ಬರು ಪುತ್ರರಾದರು. ಅಭಯಘೋಷನು ಆಮೇಲೆ ಪೃಥಿವೀತಿಲಕೆಯೆಂಬ ರಾಜಕುಮಾರಿಯನ್ನು ಮದುವೆಯಾಗಿ ಅವಳಲ್ಲಿಯೆ ಒಂದು ವರ್ಷ ಕಾಲ ಆಸಕ್ತನಾಗಿರಲು ಮೊದಲ ಹೆಂಡತಿ ಅವನನ್ನು ಒಂದು ಸಲ ತನ್ನೊಡನೆ ವನವಿಹಾರಕ್ಕೆ ಬರಬೇಕೆಂದು ಹೇಳಿಕಳಿಸಿದಳು. ಅವನು ಒಪ್ಪಿ ಹೊರಡಲು ಅವನನ್ನು ತಡೆಯಲು ಪ್ರಯತ್ನಿಸಿದ ಕಿರಿಯ ಹೆಂಡತಿ, ತನ್ನ ಪ್ರಯತ್ನ ವ್ಯರ್ಥವಾದುದರಿಂದ ಜುಗುಪ್ಸೆಯಾಗಿ ದೀಕ್ಷೆವಹಿಸಿ ತಪೋನಿರತಳಾದಳು. ಮುಂದೆ ಕೆಲಸಮಯಾನಂತರ ಅಭಯಘೋಷನೂ ವೈರಾಗ್ಯದಿಂದ ತನ್ನ ಪುತ್ರರೊಡನೆ ತಪಸ್ಸುಮಾಡಿ ಅಚ್ಯುತಕಲ್ಪವನ್ನು ಸೇರಿದನು. ಅಲ್ಲಿಯ ಆಯುಷ್ಯವನ್ನು ಮುಗಿಸಿಕೊಂಡ ಪುತ್ರರೇ ನೀವು ಇಲ್ಲಿ ದಿವಿತಿಲಕ ಚಂದ್ರತಿಲಕರಾಗಿದ್ದೀರಿ. ನಿಮ್ಮ ತಂದೆಯಾಗಿದ್ದವನು ಅಚ್ಯುತಕಲ್ಪದಿಂದ ಬಂದು ಹೇಮಾಂಗದ ರಾಜನಿಗೆ ಘನರಥನೆಂಬ ಮಗನಾಗಿ ಹುಟ್ಟಿ ಈಗ ಪತ್ನೀ ಪುತ್ರ ಸಮೇತನಾಗಿದ್ದು ಕೋಳಿಕಾಳಗವನ್ನು ನೋಡುತ್ತಿದ್ದಾನೆ—ಈ ವಿಷಯವನ್ನು ತಿಳಿದುಕೊಂಡು ಆ ಖೇಚರ ಕುಮಾರರಿಬ್ಬರೂ ನಿಮ್ಮಲ್ಲಿರುವ ಪ್ರೀತಿಯಿಂದ ಇಲ್ಲಿಗೆ ಬಂದಿದ್ದಾರೆ." ಈ ಮಾತನ್ನು ಕೇಳಿ

ದೊಡನೆ ಆ ಕುಮಾರರು ತಮ್ಮ ರೂಪವನ್ನು ಪ್ರಕಟಿಸಿ ಘನರಥ ಮಹಾರಾಜನನ್ನೂ ಮೇಘರಥನನ್ನೂ ಪೂಜಿಸಿ ದೀಕ್ಷೆಗೆಂದು ಹೊರಟುಹೋದರು. ಆ ಕೋಳಿಗಳು ತಮ್ಮ ಪೂರ್ವ ಭವಾವಳಿಯನ್ನು ತಿಳಿದು ಪರಸ್ಪರ ವೈರವನ್ನು ತೊರೆದು ಶುಭ ಭಾವನೆಯಿಂದ ಸತ್ತು ತಾಮ್ರಚೂಲ ಮತ್ತು ಕನಕಚೂಲ ಎಂಬ ಭೂತಜಾತಿಯ ವ್ಯಂತರದೇವತೆಗಳಾಗಿ ಹುಟ್ಟಿದುವು. ಮತ್ತು ಆಗಲೆ ಬಂದು ತಮ್ಮ ಜನ್ಮಾಂತರ ಸಂಬಂಧವನ್ನು ಹೇಳಿ, "ಮೇಘರಥಕುಮಾರನೆ, ಮಾನುಷೋತ್ತರ ಪರ್ವತ ಮಧ್ಯದಲ್ಲಿರುವ ಜಗತ್ತನ್ನು ನಿನಗೆ ತೋರುವೆವು" ಎಂದು ತಮ್ಮ ವಿಮಾನದಲ್ಲಿ ಆತನನ್ನು ಆಪ್ತರೊಡನೆ ಕುಳ್ಳಿರಿಸಿಕೊಂಡು ಅನೇಕ ದೇಶ, ಪರ್ವತ, ನದಿ, ಸರೋವರ, ನಗರ ಮೊದಲಾದುವುಗಳನ್ನು ಸವಿವರವಾಗಿ ತೋರಿದುವು.

ಮುಂದೆ ಒಂದು ದಿನ ಘನರಥ ರಾಜನು ದೀಕ್ಷೆವಹಿಸಿ ತಪೋಮಹಿಮೆಯಿಂದ ಕೇವಲಜ್ಞಾನಿಯಾಗಿ ದೇವತೆಗಳಿಂದ ಪೂಜಿಸಿಕೊಂಡನು. ಆಮೇಲೆ ಒಮ್ಮೆ ದೇವರ ಮಣೋದ್ಯಾನದಲ್ಲಿ ತನ್ನ ದೇವಿಯರೊಡನೆ ಮೇಘರಥ ಮಹಾರಾಜನು ವಿಹರಿಸಿ ಚಂದ್ರಕಾಂತ ಶಿಲೆಯ ಮೇಲೆ ಕುಳಿತಿರುವಾಗ ಖೇಚರನೊಬ್ಬನು ಆ ಶಿಲೆಯನ್ನು ಎತ್ತುವುದಕ್ಕೆ ತೊಡಗಿದನು. ರಾಜನು ಅಂಗುಷ್ಠದ ತುದಿಯಿಂದ ಅಮುಕಲಾಗಿ ಅವನು ಇರುಕಿನಲ್ಲಿ ಸಿಕ್ಕಿ ಕಿರುಚಿಕೊಂಡನು. ಆಗ ಆತನ ಹೆಂಡತಿ ಬಂದು ಘನರಥನನ್ನು ಪ್ರಾರ್ಥಿಸಿ ಪತಿಭಿಕ್ಷೆಯನ್ನು ಬೇಡಿದಳು. ಮೇಘರಥನು ಅನುಗ್ರಹಿಸಿದುದರಿಂದ ಬಿಡುಗಡೆಯಾದ ಖೇಚರನು ಆತನನ್ನು ಪೂಜಿಸಿ ದೀಕ್ಷಾಗ್ರಹಣಮಾಡಿ ತಪಕ್ಕೆ ಹೊರಟನು. ಅವನ ಹೆಂಡತಿಯೂ ದೀಕ್ಷೆವಹಿಸಿದಳು.

ಕೆಲಸಮಯಾನಂತರ ಒಂದು ದಿನ ಒಂದು ಪಾರಿವಾಳವು ಬಂದು ಮೇಘರಥನ ಮೊರೆಹೊಕ್ಕಿತು. ಅದರ ಹಿಂದೆಯೆ ವೇಗವಾಗಿ ಒಂದು ಗಿಡುಗವು ಬಂದು ರಾಜನೆದುರು ನಿಂತು, "ಸ್ವಾಮಿಯೆ, ನಾನು ತುಂಬ ಹಸಿದಿದ್ದೇನೆ. ನಿನ್ನ ಮೊರೆಹೊಕ್ಕಿರುವ ಈ ಪಾರಿವಾಳವನ್ನು ನನಗೆ ಕೊಡದೆ ಇದ್ದರೆ ನಾನು ಜೀವದಿಂದ ಉಳಿಯಲಾರೆನು" ಎಂದು ಹೇಳಿತು. ಈ ಗಿಡುಗವು ಯಾವ ಕಾರಣದಿಂದ ಮಾತನಾಡುತ್ತದೆ ? ಎಂದು ದೃಢರಥನು ಕೇಳಲಾಗಿ ರಾಜನು ಹೀಗೆ ತಿಳಿಸಿದನು— "ಐರಾವತ ಕ್ಷೇತ್ರದಲ್ಲಿ ಪದ್ಮಿನೀಖೇಟ ನಗರದ ಸಾಗರಸೇನನೆಂಬ ವರ್ತಕನಿಗೆ ಧನಮಿತ್ರ ಮತ್ತು ನಂದಿಷೇಣರೆಂಬ ಬಹು ಲೋಭಿಗಳಾದ ಮಕ್ಕಳು ಇದ್ದು ಧನನಿಮಿತ್ತವಾಗಿ ಹೊಡೆದಾಡಿ ಸತ್ತು ಈ ಎರಡು ಪಕ್ಷಿಗಳಾಗಿದ್ದಾರೆ. ಆ ಹದ್ದಿನ ಮೇಲೆ ಸಮೀಪವಾಗಿ ನಿಂತಿರುವವನು ಯಾರೆಂದರೆ ದಮಿತಾರಿಯೊಡನೆ ಆದ ಯುದ್ಧದಲ್ಲಿ ನಿನ್ನಿಂದ ಹತನಾದ ಹೇಮರಥನೆಂಬ ಖೇಚರನು ; ಅವನು ಭವಚಕ್ರದಲ್ಲಿ ಸುತ್ತುತ್ತ ಜ್ಯೋತಿರ್ಲೋಕದಲ್ಲಿ ದೇವನಾದನು. ಒಮ್ಮೆ ಸ್ವರ್ಗಕ್ಕೆ ಹೋಗಿ ಎರಡನೆಯ ಕಲ್ಪದ ಇಂದ್ರನ ಸಭಾಸದರಿಂದ "ಪೃಥಿವಿಯಲ್ಲಿ ಮೇಘರಥನಿಗೆ ಸಮನಾದ ದಾನಿಯಿಲ್ಲ" ಎಂಬ ಸ್ತುತಿಯನ್ನು ಕೇಳಿ ರೋಷದಿಂದ ನನ್ನನ್ನು ಪರೀಕ್ಷಿಸಲು ಬಂದಿದ್ದಾನೆ. ಮಾಂಸವನ್ನು ದಾನಮಾಡುವುದೂ ತೆಗೆದುಕೊಳ್ಳುವುದೂ ಎರಡೂ ನರಕಕ್ಕೆ ಮಾರ್ಗಗಳು. ಆದುದರಿಂದ ಈ ಹದ್ದು ದಾನಪಾತ್ರವಲ್ಲ; ಪಾರಿವಾಳವು ದಾನವಸ್ತುವೂ ಅಲ್ಲ."

ಈ ಮಾತನ್ನು ಕೇಳಿ ಆ ಜ್ಯೋತಿರ್ದೇವನು ತನ್ನ ರೂಪವನ್ನು ಪ್ರಕಟಿಸಿ ಮೇಘರಥನ ಜ್ಞಾನದಾನಗಳನ್ನು ಹೊಗಳಿ ಹೊರಟುಹೋದನು. ಆ ಪಕ್ಷಿಗಳೂ ತಿಳಿದು ದೇಹತ್ಯಾಗಮಾಡಿ ವ್ಯಂತರದೇವತೆಗಳಾದುವು. ಮೇಘರಥನು ಒಂದು ದಿನ ದಮವರನೆಂಬ ಚಾರಣಮುನಿಗೆ ಆಹಾರದಾನಮಾಡಿ ಪಂಚಾಶ್ಚರ್ಯಗಳನ್ನು ಪಡೆದನು ; ನಂದೀಶ್ವರ ಮಹಾಪೂಜೆ ಮಾಡಿ ಉಪವಾಸವ್ರತದಿಂದ ರಾತ್ರಿಯಲ್ಲಿ ಪ್ರತಿಮಾಯೋಗದಿಂದ ಧ್ಯಾನಾಸಕ್ತನಾದನು. ಈಶಾನೇಂದ್ರನು ದೇವಸಭೆಯಲ್ಲಿ ಈ ರಾಜನ ಶುದ್ಧ ಸಮ್ಯಗ್ದೃಷ್ಟಿಯನ್ನೂ ಧೈರ್ಯವನ್ನೂ ಹೊಗಳಿದನು. ಆತನನ್ನು ಪರೀಕ್ಷಿಸಲೆಂದು ಅತಿರೂಪೆ ಮತ್ತು ಸುರೂಪೆಯೆಂಬ ದೇವಿಯರಿಬ್ಬರು ಬಂದು ತಮ್ಮ ಕೌಶಲವನ್ನೆಲ್ಲ ಪ್ರಯೋಗಿಸಿದರೂ ಅವನನ್ನು ಮರುಳುಗೊಳಿಸಲಾರದೆ ಸೋತುಹೋದರು. ಮತ್ತೊಂದು ಸಲ ಈಶಾನೇಂದ್ರನು ಮೇಘರಥನ ಪತ್ನಿಯಾದ ಪ್ರಿಯಮಿತ್ರೆಯ ರೂಪವನ್ನು ಹೊಗಳಿದನು. ಅದನ್ನು ಕೇಳಿ ರತಿಷೇಣೆ ಮತ್ತು ರತಿಯೆಂಬಿಬ್ಬರು ದೇವಿಯರು ಆಕೆಯ ರೂಪವನ್ನು ಕಾಣಲೆಂದು ಬಂದು ಸ್ನಾನಸಮಯದಲ್ಲಿ ಅವಳನ್ನು ನೋಡಿ ಮೆಚ್ಚಿಕೊಂಡರೂ ಆಕೆಯನ್ನು ಮಾತನಾಡಿಸಲೆಂದು ಧನಿಕಕನ್ನೆಯರೆಂದು ಪ್ರತ್ಯಕ್ಷರಾಗಿ ಹೇಳಿಕಳಿಸಿದರು. ಪ್ರಿಯಮಿತ್ರೆ ಅವರನ್ನು ಕಾಯಲು ಹೇಳಿ ಸಂಪೂರ್ಣವಾಗಿ ಅಲಂಕರಿಸಿಕೊಂಡು ಬಂದು ದರ್ಶನವಿತ್ತಳು. ಆಗ ಅವರು "ಮೊದಲಿನಂತೆ ಈಗ ದೇಹಕಾಂತಿಯಿಲ್ಲ" ಎಂದರು. ಆ ಮಾತನ್ನು ಕೇಳಿ ಆಕೆ

ಮೇಘರಥನ ಮುಖವನ್ನು ನೋಡಲಾಗಿ ಅವನು "ಅವರು ಹೇಳಿದುದು ಸರಿ" ಎಂದನು. ದೇವಿಯರು ತಮ್ಮ ಆಗಮನ ವಿಷಯವನ್ನು ತಿಳಿಸಿ "ನಿನ್ನ ಅಪೂರ್ವ ಸೌಂದರ್ಯವೂ ನಾಶಶೀಲವಾಗಿದೆ. ಈ ಲೋಕದಲ್ಲಿ ಯಾವುದೂ ಸ್ಥಿರವಲ್ಲ" ಎಂದು ವೈರಾಗ್ಯದಿಂದ ನುಡಿದು ಹೋದರು. ಮೇಘರಥನು "ಈ ಜಗತ್ತು ಇರುವುದೇ ಹಾಗೆ. ಶೋಕಿಸಬೇಡ" ಎಂದು ಅವಳನ್ನು ಸಮಾಧಾನಪಡಿಸಿದನು. ಮತ್ತೊಂದು ದಿನ ಘನರಥ ಜಿನನನ್ನು ಪೂಜಿಸಿ ಧರ್ಮಶ್ರವಣಮಾಡಿ ವೈರಾಗ್ಯದಿಂದ ದೀಕ್ಷೆವಹಿಸಿದನು. ದೃಢರಥನೂ ಅವನಂತೆ ತಪೋನಿರತನಾದನು. ಅವರಿಬ್ಬರೂ ನಭಸ್ತಿಲಕಪರ್ವತದಲ್ಲಿ ಪ್ರಾಯೋಪಗಮನ ವಿಧಿಯಿಂದ ದೇಹತ್ಯಾಗಮಾಡಿ ಸರ್ವಾರ್ಥಸಿದ್ಧಿಯಲ್ಲಿ ಅಹಮಿಂದ್ರರಾದರು.

ಇತ್ತ ಆರ್ಯಕ್ಷೇತ್ರದಲ್ಲಿ ಕುರುಜಾಂಗಲವೆಂಬ ಸಮೃದ್ಧ ಹಾಗು ಸುಂದರವಾದ ನಾಡಿನಲ್ಲಿ ಹಸ್ತಿನಪುರಕ್ಕೆ ವಿಶ್ವಸೇನನೆಂಬ ರಾಜನಿದ್ದನು. ಆತನ ಹೆಂಡತಿಯಾದ ಐರಾಮಹಾದೇವಿಯು ಬೆಳಗಿನಜಾವದಲ್ಲಿ ಹದಿನಾರು ಸ್ವಪ್ನಗಳನ್ನು ಕಂಡು ಆಮೇಲೆ ಅವಧಿಜ್ಞಾನಿಯಾದ ತನ್ನ ಪತಿಯಿಂದ ಅವುಗಳ ಫಲವನ್ನು ತಿಳಿದಳು. ದೇವೇಂದ್ರರು ಚತುರ್ವಿಧಾಮರರೊಡನೆ ಬಂದು ಸ್ವರ್ಗಾವತರಣ ಕಲ್ಯಾಣವನ್ನು ನೆರವೇರಿಸಿದರು. ಹದಿನೈದು ತಿಂಗಳವರೆಗೆ ರತ್ನವೃಷ್ಟಿಯಾಯಿತು. ಜ್ಯೇಷ್ಠ ಕೃಷ್ಣ ಚತುರ್ದಶಿಯಂದು ಭರಣೀ ನಕ್ಷತ್ರಯೋಗದಲ್ಲಿ ಅಹಮಿಂದ್ರನಾಗಿದ್ದ ಮೇಘರಥನು ಅವಳ ಗರ್ಭದಿಂದ ಉದಿಸಿಬಂದನು. ಶಚೀದೇವಿಯು ಮಾಯಾಶಿಶುವನ್ನು ಅವಳ ಮುಂದಿಟ್ಟು ಜಿನಾರ್ಭಕನನ್ನು ತೆಗೆದುಕೊಂಡು ಹೋಗಿ ಇಂದ್ರನ ಕೈಗಿತ್ತಳು. ಐರಾವತದ ಮೇಲೆ ಜಿನಶಿಶುವನ್ನು ಕರೆದೊಯ್ದು ಇಂದ್ರನು ಮೇರುಪರ್ವತದಲ್ಲಿ ಕ್ಷೀರಸಾಗರದ ನೀರಿಂದ ಜನ್ಮಾಭಿಷೇಕವನ್ನು ನೆರವೇರಿಸಿ, ಆತನಿಗೆ "ಶಾಂತಿ" ಎಂಬ ಹೆಸರಿಟ್ಟನು ವಿಶ್ವಸೇನ ರಾಜನಿಗೆ ಅನಂತರ ಯಶಸ್ವತೀ ದೇವಿಯಲ್ಲಿ (ದೃಢರಥನಾದವನು) ಚಕ್ರಾಯುಧನೆಂಬ ಮಗನಾಗಿ ಹುಟ್ಟಿದನು. ಶಾಂತೀಶ್ವರನು ಯೌವನಾವಸ್ಥೆಗೆ ಬರಲು ವಿಶ್ವಸೇನನು ಅವನಿಗೆ ರಾಜ್ಯಭಾರವನ್ನು ಒಪ್ಪಿಸಿದನು. ಶಾಂತಿನಾಥನಿಗೆ ಸಾಮ್ರಾಜ್ಯ ಸಾಧನಗಳಾದ ಚಕ್ರವೇ ಮೊದಲಾದ ಆಯುಧಗಳೂ, ಜೀವಾಜೀವಭೇದದ ಹದಿನಾಲ್ಕು ರತ್ನಗಳೂ, ನವನಿಧಿಗಳೂ ಉಂಟಾದುವು. ಸಾಮ್ರಾಜ್ಯಸುಖವನ್ನು ಇಪ್ಪತ್ತೈದು ಸಹಸ್ರ ವರ್ಷ ಅನುಭವಿಸಿದಾಗ ಒಂದು ದಿನ ಕನ್ನಡಿಯಲ್ಲಿ ತನ್ನ ಎರಡು ನೆರಳುಗಳನ್ನು ಕಂಡು ವಿರಕ್ತನಾದನು. ಲೋಕಾಂತಿಕದೇವರು ಬಂದು ಅವನ ನಿಷ್ಕ್ರಮಣವನ್ನು ಅನುಮೋದಿಸಿ ಹೋದರು. ದೇವತೆಗಳು ಸರ್ವಾರ್ಥಸಿದ್ಧಿಯೆಂಬ ಪಲ್ಲಕ್ಕಿಯಲ್ಲಿ ಕುಳ್ಳಿರಿಸಿಕೊಂಡು ಆತನನ್ನು ಸಹಸ್ರಾಮ್ರವನಕ್ಕೆ ಕರೆತಂದರು. ಅಲ್ಲಿ ಶಾಂತೀಶನು ದಿಗಂಬರವ್ರತವನ್ನು ಧರಿಸಿ ತಪಸ್ಸಿನಿಂದ ಕೇವಲಜ್ಞಾನಿಯಾದನು. ಆತನು ಗಣಧರರು, ಮುನಿಗಳು, ವಾದಿಗಳು, ಆರ್ಯಿಕೆಯರು, ಶ್ರಾವಕರು ಮೊದಲಾದ ಪರಿವಾರವನ್ನು ಹೊಂದಿದ್ದನು. ಧರ್ಮಬೋಧೆಮಾಡುತ್ತ ವಿಹಾರ ಮಾಡಿ, ತನಗೆ ಒಂದು ತಿಂಗಳು ಆಯುಷ್ಯವುಳಿದಿರುವಾಗ ಜಿನೇಂದ್ರನು ಸಮ್ಮೇದ ಶಿಖರಕ್ಕೆ ಬಂದು ಸಕಲ ಕರ್ಮಗಳನ್ನು ಕ್ಷಯಿಸಿಕೊಂಡು ಸಿದ್ಧರ ನೆಲೆಯಾದ ಲೋಕಾಗ್ರವನ್ನು ಸೇರಿದನು. ಇಂದ್ರಾದಿ ದೇವತೆಗಳು ಬಂದು ನಿರ್ವಾಣಕಲ್ಯಾಣ ಪೂಜೆ ಮಾಡಿದರು. ಚಕ್ರಾಯುಧನೇ ಮೊದಲಾದ ಒಂಭತ್ತು ಸಾವಿರ ಯತಿಗಳೂ ಮೋಕ್ಷಹೊಂದಿದರು. ಧರ್ಮತೀರ್ಥಂಕರರವರೆಗೆ ಮಧ್ಯೇ ಮಧ್ಯೇ ಮುಕ್ತಿಮಾರ್ಗವು ವಿಚ್ಛಿನ್ನವಾಗಿತ್ತು; ಶಾಂತಿತೀರ್ಥಂಕರರ ಕಾಲದಿಂದ ಅದು ವಿಚ್ಛಿನ್ನವಾಗಿಲ್ಲ.

ಅನುಬಂಧ ೪

ಜೈನ ಪರಿಭಾಷೆ

[ಸೂಚನೆ : ಅನೇಕ ಜೈನ ಪಾರಿಭಾಷಿಕ ಪದಗಳಿಗೆ ಅನುವಾದದಲ್ಲಿಯೆ ವಿವರಣೆಯೀಯಲಾಗಿದೆ. ಹೆಚ್ಚಿನ ಶಬ್ದಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ.]

ಅನಗಾರಕೇವಲಿ (೪-೬೮) : ಕೇವಲಜ್ಞಾನವನ್ನು ಪಡೆದವನು ಕೇವಲಿ. ತೀರ್ಥಂಕರರೂ ಗಣಧರರೂ ಅಲ್ಲದ ಕೇವಲಿಗಳು ಅನಗಾರ ಕೇವಲಿಗಳು.

ಅನಗಾರವೇಳೆ (೧೧-೧೦೭) : ಜೈನಮುನಿಗಳು ಚರಿಗೆಗಾಗಿ ಸಂಚರಿಸುವ ಸಮಯ.

ಅನುಪ್ರೇಕ್ಷೆ (೯-೧೧೦) : ಅನುಚಿಂತನೆ ಮಾಡಬೇಕಾದ ತತ್ತ್ವಗಳು ; ಇವು—ಅನಿತ್ಯತ್ವ, ಅಶರಣತ್ವ, ಸಂಸಾರ, ಏಕತ್ವ, ಅನ್ಯತ್ವ, ಅಶುಚಿ, ಆಸ್ರವ, ಸಂವರ, ನಿರ್ಜರೆ, ಲೋಕ, ಬೋಧಿದುರ್ಲಭತ್ವ ಮತ್ತು ಧರ್ಮ ಎಂದು ಹನ್ನೆರಡು. ಇವುಗಳಿಗೆ ದ್ವಾದಶ ಭಾವನೆಗಳೆಂದೂ ಹೆಸರಿದೆ.

ಅಪಾಯವಿಚಯ (೯-೧೧೯) : ಧರ್ಮಧ್ಯಾನಕ್ಕೆ ನಾಲ್ಕು ಅಂಗಗಳು : ೧. ಆಜ್ಞಾವಿಚಯ (ಆಗಮಪ್ರಮಾಣದಿಂದ ಅರ್ಥದ್ರವ್ಯ ಚಿಂತನೆ) ; ೨. ಅಪಾಯವಿಚಯ (ಸಂಸಾರಮಗ್ನ ಜೀವಗಳು ಅನುಭವಿಸುವ ನಿರಂತರ ದುಃಖದ ಚಿಂತನೆ) ; ೩. ಕರ್ಮ ವಿಪಾಕವಿಚಯ (ಸಂಚಿತವಾದ ಕರ್ಮದ ದುಷ್ಪರಿಣಾಮಗಳನ್ನು ಅನುಭವಿಸಬೇಕಾದ ವಿಷಯದ ಚಿಂತನೆ) ; ಮತ್ತು ೪. ಊರ್ಧ್ವ, ಮಧ್ಯ ಹಾಗು ಅಧೋಭಾಗಗಳಲ್ಲಿ ಸ್ಥಿತವಾಗಿರುವ ಲೋಕಗಳ ಚಿಂತನೆ.

ಅವಧಿಬೋಧ (೫-೧೦) : ಜ್ಞಾನವು ಮತಿ, ಶ್ರುತ, ಅವಧಿ, ಮನಃಪರ್ಯಯ ಮತ್ತು ಕೇವಲ ಎಂದು ಐದು ಬಗೆಯಾಗಿದೆ. ಹಿಂದೆ ನಡೆದುಹೋದ ಅಥವಾ ಮುಂದೆ ನಡೆಯಲಿರುವ ಸಂಗತಿಗಳನ್ನೂ ದೂರದಲ್ಲಿರುವ ವಸ್ತುವಿಷಯಗಳನ್ನೂ (ಸೀಮಿತವಾಗಿ) ಸ್ಪಷ್ಟವಾಗಿ ಅರಿತುಕೊಳ್ಳುವುದಕ್ಕೆ ಅವಧಿಜ್ಞಾನವೆಂದು ಹೆಸರು. ಇದು ದೇಶಾವಧಿ, ಪರಮಾವಧಿ ಮತ್ತು ಸರ್ವಾವಧಿ ಎಂದು ಮೂರು ವಿಧವಾಗಿದೆ.

ಅವಸರ್ಪಿಣಿ (೧-೧೯) : ಒಂದು ಕಲ್ಪಕಾಲದಲ್ಲಿ ಉತ್ಸರ್ಪಿಣಿ ಮತ್ತು ಅವಸರ್ಪಿಣಿ ಎಂದು ಎರಡು ಭಾಗಗಳಿವೆ. ಧರ್ಮ, ಸತ್ಯ, ನ್ಯಾಯ, ಜನರ ಆಯುಷ್ಯ, ಸುಖ ಮುಂತಾದುವು ಕ್ರಮಕ್ರಮವಾಗಿ ಹೆಚ್ಚುತ್ತಹೋಗುವ ಕಾಲಾವಧಿ ಉತ್ಸರ್ಪಿಣಿ ; ಅವು ಕ್ರಮೇಣ ಕುಗ್ಗುತ್ತ ಬರುವ ಕಾಲಾವಧಿ ಅವಸರ್ಪಿಣಿ. ಈ ಎರಡೂ ಕಾಲಭಾಗಗಳು ಒಂದರ ನಂತರ ಒಂದು ಎಡೆಬಿಡದೆ ಬರುತ್ತಲೆ ಇರುತ್ತವೆ.

ಅಷ್ಟಗುಣ (೧೨-೯) : (i) ಮುಕ್ತಜೀವನಿಗೆ ಇರುವ ಎಂಟು ಗುಣಗಳು : ೧. ಸಮ್ಯಕ್ತ್ವ, ೨. ಅನಂತದರ್ಶನ, ೩. ಅನಂತಜ್ಞಾನ, ೪. ಅನಂತವೀರ್ಯ, ೫. ಸೂಕ್ಷ್ಮತ್ವ, ೬. ಅವಗಾಹಿತ್ವ, ೭. ಅವ್ಯಾಬಾಧತ್ವ, ೮. ಅಗುರುಲಘುತ್ವ. (ii) ಸಿದ್ಧರಿಗೆ ಇರುವ ಎಂಟು ಗುಣ ಅಥವಾ ಸಿದ್ಧಿಗಳು : ೧. ಅಣಿಮಾ, ೨. ಮಹಿಮಾ, ೩. ಲಘಿಮಾ, ೪. ಪ್ರಾಪ್ತಿ, ೫. ಪ್ರಾಕಾಮ್ಯ, ೬. ಈಶಿತ್ವ, ೭. ವಶಿತ್ವ, ೮. ಕಾಮರೂಪಿತ್ವ. ತಪೋಬಲದಿಂದಲೂ ಇವುಗಳನ್ನು ಪಡೆಯಬಹುದು.

ಅಷ್ಟಮಭೂಮಿ (೧೨-೨೪) : ನೋಡಿ—ಈಷತ್‌ಪ್ರಾಗ್ಭಾರ.

ಅಷ್ಟಮಾವನಿ (೧೨-೯) : ನೋಡಿ—ಈಷತ್‌ಪ್ರಾಗ್ಭಾರ.

ಅಸಾತಾವೇದನೀಯ (೧೨-೧೭) ; ವೇದನೀಯ ಕರ್ಮ ಸಾತಾ ಮತ್ತು ಅಸಾತಾ ಎಂದು ಎರಡು ವಿಧವಾಗಿದೆ.

ಆಚಾಮ್ಲವರ್ಧನ (೯-೮೪) : ಒಂದು ಬಗೆಯ ಉಪವಾಸವ್ರತ. ಒಂದು ದಿನ ಆಚಾಮ್ಲ (ಗಂಜಿ) ಸೇವನೆ. ೧. ಪಾರಣೆ, ೨. ಆಚಾಮ್ಲ ; ೧. ಪಾರಣೆ, ೨. ಆಚಾಮ್ಲ ; ೧. ಪಾರಣೆ—ಈ ಕ್ರಮದಲ್ಲಿ ಹತ್ತು ಆಚಾಮ್ಲಗಳವರೆಗೆ ಸಾಗಿ ಅನಂತರ ೯ ಆಚಾಮ್ಲ, ೮ ಆಚಾಮ್ಲ ಹೀಗೆ ೧ರ ವರೆಗೆ ಇಳಿಸುತ್ತಾ ಬರುವ ವ್ರತ. ಇದರಲ್ಲಿ ಒಟ್ಟು ೧೦೦ ಆಚಾಮ್ಲಗಳೂ ೧೯ ಪಾರಣೆಗಳೂ ಆಗುತ್ತವೆ.

ಆಜ್ಞಾವಿಚಯ (೯-೧೧೯) : 'ಅಪಾಯವಿಚಯ' ನೋ.

ಆಸನ್ನಭವ್ಯ (೭-೧೧೨) : ಸಂಸಾರದಲ್ಲಿ ಸುತ್ತುತ್ತಿರುವ ಜೀವಕ್ಕೆ ಸದ್ಗತಿಯ ಕಡೆಗೆ ಗಮನ ಉಂಟಾಗಿ ಸಮ್ಯಕ್ತ್ವ ದೊರೆಯುವ ಕಾಲಲಬ್ಧಿ ಪುಣ್ಯವಶದಿಂದಾಗಿ ತಾನಾಗಿ ಅಥವಾ ಗುರು-ಮುನಿಗಳ ಉಪದೇಶದಿಂದ ಬರುವುದು. ಈ ರೀತಿಯಾಗಿ ಸಮ್ಯಕ್ತ್ವ ದೊರೆಯುವ ಸಂಭವ ಬೇಗನೆ ಇದ್ದ ಜೀವ ಆಸನ್ನಭವ್ಯವೆನಿಸುತ್ತದೆ.

ಆಸ್ರವ (೧೨-೪) : ಕರ್ಮಪುದ್ಗಲ ಜೀವದೊಳಕ್ಕೆ ಹರಿದುಬರುವುದಕ್ಕೆ ಆಸ್ರವವೆಂಬ ಹೆಸರು. ಭಾವ ಮತ್ತು ದ್ರವ್ಯವೆಂಬ ಎರಡು ಭೇದದ ಆಸ್ರವ— ಐದು ಬಗೆಯ ಮಿಥ್ಯಾತ್ವದಿಂದ, ಪಂಚವಿಧ ಅವಿರತಿಯಿಂದ, ತ್ರಿವಿಧ ಯೋಗದಿಂದ, ಹದಿನೈದು ಬಗೆಯ ಪ್ರಮಾದದಿಂದ, ನಾಲ್ಕು ಕಷಾಯಗಳಿಂದ— ಹೀಗೆ ೩೨ ವಿಧಗಳಿಂದ ಉಂಟಾಗುತ್ತದೆ.

ಈಷತ್ಪ್ರಾಗ್ಭಾರ (೪೨-೮ ; ೧೨-೫೦) : ಅನುತ್ತರ ವಿಮಾನಗಳ ಮೇಲುಗಡೆ ಹನ್ನೆರಡು ಯೋಜನ ವಿಸ್ತಾರವಾಗಿರುವ : ಸಿದ್ಧರು ವಾಸಿಸುವ ಕ್ಷೇತ್ರ.

ಎರಡುವರೆ ದ್ವೀಪ (೧೨-೧೦) : ಜಂಬು, ಧಾತಕಿ ಮತ್ತು ಪುಷ್ಕರಾರ್ಧ (ಪುಷ್ಕರವರ) ಎಂಬ ಎರಡೂವರೆ ದ್ವೀಪಗಳಲ್ಲಿ ಮಾತ್ರ ಮನುಷ್ಯರು ವಾಸಿಸುತ್ತಾರೆ.

ಔದಾರಿಕ ತನು (೧೨-೩೩) : ಮನುಷ್ಯ ಮತ್ತು ತಿರ್ಯಂಚರ ಶರೀರವೇ ಔದಾರಿಕ ತನು (ಕಾಯ).

ಕರ್ಮವಿಪಾಕ ವಿಚಯ (೯-೧೧೯) : 'ಅಪಾಯ ವಿಚಯ' ನೋ.

ಕಾಕಿಣೀಮಣಿ (೧೧-೪೬) : ಚಕ್ರವರ್ತಿಗೆ ತಾವಾಗಿ ಬಂದು ಸೇರುವ ಏಳು ಅಜೀವ ರತ್ನಗಳಲ್ಲಿ "ಕಾಕಿಣಿ" ಒಂದು. ಗೋಡೆಯ ಮೇಲೆ ಸೂರ್ಯ ಚಂದ್ರರ ಮಂಡಲಗಳನ್ನು ಬರೆದರೆ ಸೂರ್ಯ ಚಂದ್ರರಂತೆ ಬೆಳಕನ್ನು ನೀಡಬಲ್ಲ ರತ್ನ. ಮಣಿಯೂ ಅಂತಹದೇ ಇನ್ನೊಂದು ರತ್ನ.

ಕಾಯೋತ್ಸರ್ಗ (೧೨-೩೧) : ಕೈಗಳನ್ನು ಇಳಿಬಿಟ್ಟುಕೊಂಡು ದೇಹವನ್ನು ನೇರವಾಗಿಯೂ ನಿಶ್ಚಲವಾಗಿಯೂ ಇರಿಸಿಕೊಂಡು (ಧ್ಯಾನಾಸಕ್ತ ಸ್ಥಿತಿಯಲ್ಲಿ) ನಿಂತಿರುವುದು. ಇದಕ್ಕೆ ಖಡ್ಗಾಸನವೆಂದೂ ಹೆಸರಿದೆ.

ಕಾಳೋದಕವಾರ್ಧಿ (೩-೫) : ಜಂಬೂದ್ವೀಪದ ಸುತ್ತಲೂ ಇರುವುದು ಲವಣಸಮುದ್ರ ; ಆ ಸಮುದ್ರದ ಸುತ್ತಲೂ ಮಂಡಲಾಕೃತಿಯಾಗಿರುವುದು ಧಾತಕೀದ್ವೀಪ ; ಆ ದ್ವೀಪದ ಸುತ್ತಲೂ ಇರುವ ಸಮುದ್ರಕ್ಕೆ ಕಾಳೋದಧಿಯೆಂದು ಹೆಸರು.

ಕೇವಳಬೋಧ (೯-೬೮) : ಸರ್ವವಸ್ತು-ವಿಷಯಗಳ ಸಮಗ್ರ ಜ್ಞಾನ : ಸರ್ವಜ್ಞತ್ವ.

ಕೇವಳಾಗಮ (೪-೬೩) : ಕೇವಳಬೋಧ.

ಗಂಧಕುಟಿ (೮-೧೫೭) : ಸಮವಸರಣದಲ್ಲಿ ಅರ್ಹಂತನು ಕುಳಿತುಕೊಳ್ಳುವುದಕ್ಕಾಗಿ ನಿರ್ಮಿಸಿದ ಸುಗಂಧಮಯವಾದ ಮಂಟಪ.

ಘಾತಿಚತುಷ್ಕ (೪-೬೩) : ಜ್ಞಾನಾವರಣೀಯ, ದರ್ಶನಾವರಣೀಯ, ಅಂತರಾಯ ಮತ್ತು ಮೋಹನೀಯ ಎಂಬ ನಾಲ್ಕು ಬಗೆಯ ಕರ್ಮಗಳು.

ಚರ್ಮರತ್ನ (೧೧-೫೬) : ಚಕ್ರವರ್ತಿಗೆ ಒದಗುವ ಏಳು ಅಜೀವರತ್ನಗಳಲ್ಲೊಂದು. ನೀರಿನ ಮೇಲೆ ತೆಪ್ಪದಂತೆ ತೇಲಿಕೊಂಡು ಸಮಸ್ತ ಸೈನ್ಯವನ್ನೆ ತನ್ನ ಮೇಲಿಟ್ಟುಕೊಳ್ಳಬಲ್ಲ ಚರ್ಮದ ಸಾಧನ.

ಚರ್ಯಾಮಾರ್ಗ (೧೧-೧೦೭) : ಜೈನಮುನಿಗಳು ಚರಿಗೆಗಾಗಿ ಹೋಗುವ ಉದ್ದೇಶ.

ಚಾಂದ್ರಾಯಣ (೯-೧೫) : ಚಂದ್ರನ ವೃದ್ಧಿ ಕ್ಷಯಗಳಿಗನುಸಾರವಾಗಿ ಆಹಾರ ಸೇವನೆಯಲ್ಲಿ ದಿನಕ್ಕೊಂದೇ ತುತ್ತಿನಂತೆ ಆರಂಭಿಸಿ ಹೆಚ್ಚಿಸುತ್ತ ಆಮೇಲೆ ಕಡಮೆ ಮಾಡುತ್ತ ಬರುವ ವ್ರತ.

ಚಾರಣಗುಣ (೯-೧೧೩) : ಆಕಾಶದಲ್ಲಿ ನಡೆದುಹೋಗುವ ಶಕ್ತಿ.

ಛತ್ರರತ್ನ (೧೧-೧೬) : ಏಳು ಅಜೀವ ರತ್ನಗಳಲ್ಲೊಂದು. ಚಕ್ರವರ್ತಿಯ ಸೈನ್ಯವನ್ನೂ ಪರಿವಾರವನ್ನೂ ಮಳೆ-ಬಿಸಿಲುಗಳು ತಾಗದಂತೆ ರಕ್ಷಿಸುವ ಅತ್ಯಂತ ವಿಸ್ತಾರವಾದ ಛತ್ರ.

ಜೀವರತ್ನ (೧೧-೫೬) : ಚಕ್ರವರ್ತಿಗೆ ತಾನಾಗಿ ಬಂದೊದಗುವ—ಸೇನಾಪತಿ, ಸ್ಥಪತಿ, ಗೃಹಪತಿ, ಪುರೋಹಿತ, ಆನೆ, ಕುದುರೆ ಹಾಗು ಸ್ತ್ರೀ ಎಂಬ ಏಳು ಶ್ರೇಷ್ಠ ರತ್ನಪ್ರಾಯವಾದ ಸೇವಾಸಾಧನಗಳು.

ತ್ರಿಗುಪ್ತಿ (೯-೧೧೧) : ಮೂರು ಬಗೆಯ ಆತ್ಮನಿಗ್ರಹ ; ಮನೋಗುಪ್ತಿ, ವಾಗ್ಗುಪ್ತಿ ಮತ್ತು ಕಾಯಗುಪ್ತಿ ಎಂದು ಇವು ಮೂರು ಗುಪ್ತಿಗಳು.

ದೇವೋತ್ತರಕುರು (೩-೪) : ವಿದೇಹ ಕ್ಷೇತ್ರದಲ್ಲಿರುವ ದೇವಕುರು ಮತ್ತು ಉತ್ತರ ಕುರು ಎಂಬ ಭೋಗಭೂಮಿಗಳು.

ದೇಶಾವಧಿ (೫-೭) ; 'ಅವಧಿಬೋಧ' ನೋ.

ಧರ್ಮಚಕ್ರವಾಳ (೪-೬೭) : ಒಂದು ವ್ರತ.

ಧರ್ಮಧ್ಯಾನ (೯-೧೧೯) : ಧರ್ಮವಿಷಯಗಳನ್ನು ಧ್ಯಾನಮಾಡುವಿಕೆ.

ನಂದನ (೫-೭) : ಮೇರುಪರ್ವತದ ನಾಲ್ಕು ವನಗಳಲ್ಲಿ ಒಂದು. ಭದ್ರಶಾಲ, ನಂದನ, ಸೌಮನಸ ಮತ್ತು ಪಾಂಡುಕ ಎಂದು ಅವುಗಳಿಗೆ ಹೆಸರು.

ನಂದೀಶ್ವರ (೭-೪೮) : ಆಷಾಢ, ಕಾರ್ತಿಕ, ಫಾಲ್ಗುಣ ಮಾಸಗಳಲ್ಲಿ ಶುಕ್ಲ ಅಷ್ಟಮಿಯಿಂದ ಹುಣ್ಣಿಮೆಯವರೆಗಿನ ಕಾಲ. ಆ ಕಾಲದಲ್ಲಿ ನಂದೀಶ್ವರ ದ್ವೀಪದ ಜಿನಪೂಜೆಗಾಗಿ ದೇವತೆಗಳು ಅಲ್ಲಿಗೆ ಹೋಗುತ್ತಾರೆ. ಈ ಎಂಟು ದಿನದ ಪೂಜೆಗೆ 'ಅಷ್ಟಾಹ್ನಿಕಮಹ'ವೆನ್ನುವರು.

ನವವಿಧ ಪುಣ್ಯ (೧೧-೧೦೭) : ಮುನಿಗಳು ಚರಿಗೆಗೆ ಬಂದಾಗ ಅವರಿಗೆ ಆಹಾರದಾನ ಮಾಡುವಲ್ಲಿ ಅನುಸರಿಸಬೇಕಾದ ಒಂಭತ್ತು ಕ್ರಮಗಳು—ತ್ರಿಪ್ರದಕ್ಷಿಣೆ, ಉಚ್ಚಾಸನ ದಾನ, ಪಾದಪ್ರಕ್ಷಾಲನ, ಅರ್ಚನ, ಪ್ರಣಾಮ, ವಚನಶುದ್ಧಿ, ಕಾಯಶುದ್ಧಿ ಮತ್ತು ಏಷಣಾ ಶುದ್ಧಿ.

ನಿಗೋದ (೧೨-೧೧) : ತ್ರಸಜೀವಿಗಳಲ್ಲಿ ಒಂದು. ಇದು ಮೂರು ಲೋಕಗಳಲ್ಲಿಯೂ ಅತ್ಯಂತ ದುಃಖಕರವಾದ ಸ್ಥಾನ.

ನೋಕಷಾಯ (೧೨-೧೨) : ಹಾಸ್ಯ, ರತಿ, ಅರತಿ, ಶೋಕ, ಭಯ, ಜಿಗುಪ್ಸಾ, ಸ್ತ್ರೀವೇದ, ಪುಂವೇದ ಮತ್ತು ನಪುಂಸಕವೇದ.

ಪಂಚಸಮಿತಿ (೯-೧೧೧) : ಜೀವಹಿಂಸೆಯಾದಂತೆ ನೋಡಿಕೊಳ್ಳುವ ಐದು ರೀತಿ—ಈರ್ಯಾ, ಭಾಷಾ, ಏಷಣಾ, ಆದಾನ ಮತ್ತು ಪ್ರತಿಷ್ಠಾನ ಸಮಿತಿಗಳೆಂದು ಇವುಗಳಿಗೆ ಹೆಸರು.

ಪಂಚಾನುತ್ತರೆ (೯-೧೨೧) ; ಲೋಕಾಕಾರದ ತುದಿಯ ನೆಲೆಯಲ್ಲಿರುವ ಐದು ವಿಮಾನಗಳು—ವಿಜಯ, ವೈಜಯಂತ, ಜಯಂತ ಅಪರಾಜಿತ ಮತ್ತು ಸರ್ವಾರ್ಥಸಿದ್ಧಿಗಳೆಂದು ಅವುಗಳಿಗೆ ಹೆಸರು.

ಪಂಚಾಶ್ಚರ್ಯ (೧೧-೧೦೬) : ಪಾತ್ರದಾನ ಮಾಡಿದಾಗ ತಾವಾಗಿ ಉಂಟಾಗುವ ಐದು ಆಶ್ಚರ್ಯಕರ ಘಟನೆಗಳು— ದೇವದುಂದುಭಿಗಳ ಧ್ವನಿ, ಆಕಾಶದಿಂದ ಹೂಮಳೆ, ಚಿನ್ನದ ಮಳೆ, ದೇವತೆಗಳಿಂದ ಪ್ರಶಂಸೆಯ ಉದ್ಗಾರ, ತಂಪಾದ ಮೆಲುಗಾಳಿ ಬೀಸುವುದು.

ಪಂಡಿತಮೃತಿ (೭-೪೦) : ಸಮ್ಯಕ್ತ್ವಪೂರ್ವಕವಾಗಿ ಸಲ್ಲೇಖನದಿಂದ ಮರಣಹೊಂದುವುದು.

ಪರಿನಿಷ್ಕ್ರಮಣ ಕಲ್ಯಾಣ (೯-೬೧) : ತೀರ್ಥಂಕರರು ಸಂಸಾರದಲ್ಲಿ ವಿರಕ್ತನಾಗಿ ತಪಸ್ಸಿಗೆ ಹೊರಡಲು ಇಂದ್ರಾದಿ ದೇವತೆಗಳು ಆತನನ್ನು ತಪಕ್ಕೆ ಕರೆದೊಯ್ದು ಮಾಡುವ ಪೂಜಾದಿ ಉತ್ಸವ.

ಪರೀಷಹ (೧೪-೧೧೯) : ತಪಶ್ಚರಣೆಗೆ ಬಾಧಕವಾದ ಹಸಿವು, ನೀರಡಿಕೆ, ಚಳಿ, ಬಿಸಿಲು, ಕ್ರಿಮಿಕೀಟಾದಿಗಳ ಉಪದ್ರವ ಮೊದಲಾದ ೨೨ ಬಗೆಯ ತೊಂದರೆಗಳು.

ಪ್ರತ್ಯಾಖ್ಯಾನ (೪-೯೭) : ದೋಷವಾಗದಂತೆ ವಹಿಸುವ ಮುಂಜಾಗ್ರತೆ. ಇದರಲ್ಲಿ ಆವಶ್ಯಕ ಕ್ರಿಯೆ (= ಸಮಸ್ತ ಅಯೋಗ್ಯ ಆಚರಣೆ ಪರಿತ್ಯಾಗ) ಮತ್ತು ಭಾವಪೂಜಾ ಭೇದ (= ಸಮ್ಯಕ್ತ್ವ ಕ್ರಿಯೆಗಳನ್ನು ನೆನೆಸಿಕೊಳ್ಳುವುದು) ಎಂದು ಎರಡು ಬಗೆ.

ಪಾಂಡುಕ (೫-೨) : ಮೇರುಗಿರಿಯ ನಾಲ್ಕು ವನಗಳಲ್ಲಿ ಒಂದು.

ಪ್ರಾಯೋಪಗಮನ (೭-೭೨) : ತನಗೊದಗಿದ ರೋಗಾದಿಗಳಿಗಾಗಿ ತಾನೂ ಉಪಚಾರಮಾಡಿಕೊಳ್ಳದೆ, ಉಪಚಾರವನ್ನು ಇತರರಿಂದಲೂ ಮಾಡಿಸಿಕೊಳ್ಳದೆ ಸಂನ್ಯಾಸ ಧರಿಸಿದಲ್ಲಿಯೇ ಸ್ಥಿರವಾಗಿ ನಿಂತು ಆತ್ಮಚಿಂತನೆ ಮಾಡುತ್ತಾ ಪ್ರಾಣತ್ಯಾಗ ಮಾಡುವುದು.

ಪ್ರೋಷಧವ್ರತ (೪-೯೬) : ಇದೊಂದು ವ್ರತ. ೨೫ ಪರ್ವದಿನಗಳಲ್ಲಿ ಮಾಡುವ ವಿಶೇಷ ರೀತಿಯ ಉಪವಾಸವ್ರತ. ಚತುರ್ವಿಧಾಹಾರ ಬಿಟ್ಟು ಬ್ರಹ್ಮಚರ್ಯದಿಂದ ಧರ್ಮಶ್ರವಣದಿಂದ ಇರಬೇಕು.

ಬಾಳಮೃತಿ (೭-೪೦) : ಸಮ್ಯಕ್ತ್ವವನ್ನು ಪಡೆಯದೆ ದುಡುಕಿ ಮಾಡಿಕೊಂಡ ಆತ್ಮಹತ್ಯೆ.

ಬೆಳ್ಳವಾಸ (೯-೧೦೭) : ಮಳೆಗಾಲದಲ್ಲಿ ನೀರಲ್ಲಿ ನಿಂತುಕೊಂಡು ಸ್ಥಿರವಾಗಿ ತಪಸ್ಸುಮಾಡುವುದು ಕಾಯಕ್ಲೇಶದಲ್ಲಿ ಒಂವು ವಿಧಿ.

ಭದ್ರಶಾಲ (೫-೨) : ಮೇರುನಗದ ನಾಲ್ಕು ವನಗಳಲ್ಲಿ ಒಂದು.

ಮನಃಪರ್ಯಯ ಜ್ಞಾನ (೧೧-೧೦೭) : ಬೇರೆಯವರ ಮನಸ್ಸಿನಲ್ಲಿರುವುದನ್ನು ಅಪ್ರಯತ್ನವಾಗಿ ಅರಿಯುವ ಶಕ್ತಿ.

ಮನಃಪ್ರವೀಚಾರ (೪-೧೧೨) : ಪ್ರವೀಚಾರವೆಂದರೆ ಮೈಥುನ. ದೈಹಿಕ ಸಂಪರ್ಕವಿಲ್ಲದೆ ಮನಸ್ಸಿನಿಂದಲೆ ರತಿಕ್ರೀಡೆಯ ಸಮಗ್ರ ಸುಖವನ್ನು ಅನುಭವಿಸುವುದು ಮನಃಪ್ರವೀಚಾರ.

ಮುಕ್ತಾವಳಿತಪ (೯-೧೪ ವ) : ಒಂದು ಉಪವಾಸವ್ರತ.

ಮೂಲೋತ್ತರ ಗುಣ (೯-೧೮೯) : ಸತ್ಯ, ಅಹಿಂಸೆ ಮೊದಲಾದ ಅಣುವ್ರತಗಳು, ಐದು ಸಮಿತಿಗಳು, ದಿಗಂಬರತ್ವ ಮೊದಲಾದ ೨೮ ಮೂಲ ಗುಣಗಳು ; ೧೨ ತಪಸ್ಸು, ೬ ಆವಶ್ಯಕಕ್ರಿಯೆ, ೫ ಆಚಾರಗಳು, ೧೦ ಧರ್ಮಗಳು, ೩ ಗುಪ್ತಿಗಳು—ಇವೆಲ್ಲ ಕೂಡಿ ೩೬ ಉತ್ತರ ಗುಣಗಳು.

ಲೇಶ್ಯಾಶುದ್ಧಿ (೯-೩೪) : ಲೇಶ್ಯೆಯು ಹೆಚ್ಚು ಹೆಚ್ಚು ಮಂದವಾಗುತ್ತ ಹೋಗಿ ಕಡೆಗೆ ಸಂಪೂರ್ಣವಾಗಿ ನಷ್ಟವಾಗುವುದು.

ಲೋಕಾಂತಿಕ ದೇವ (೯-೬೧) : ಬ್ರಹ್ಮಕಲ್ಪದಲ್ಲಿರುವ ದೇವತೆಗಳು. ತೀರ್ಥಂಕರನು ಸಂಸಾರದಲ್ಲಿ ವಿರಕ್ತನಾದಾಗ ಅವನನ್ನು ಎಚ್ಚರಿಸಿ, ಪರಿನಿಷ್ಕ್ರಮಣಕ್ಕೆ ಇನ್ನು ಹೊರಡಬೇಕೆಂದು ಅವನಿಗೆ ಹೇಳುವುದಕ್ಕೆ ಇವರು ಅವನಲ್ಲಿಗೆ ಬರುವುದುಂಟು.

ವಂದನಾಭಕ್ತಿ (೫-೧) : (i) ಪ್ರಕೀರ್ಣಕಗಳಲ್ಲೊಂದು. ಅರ್ಹದಾದಿಗಳ ವಂದನೆಯ ಲಕ್ಷಣ. (ii) ಭಾವಪೂಜಾ ಭೇದ.

ವಿಭಂಗಜ್ಞಾನ (೯-೨೭) : ಮಿಥ್ಯಾಜ್ಞಾನ. ಇದರಲ್ಲಿ ಮೂರು ವಿಧ—(1) ಕುಮತಿ, (2) ಕುಶ್ರುತ, (3) ಕುಅವಧಿ.

ವೈಯಾಪ್ರತ್ಯ (೯-೧೮೯) : ಶಿಕ್ಷಾವ್ರತದ ಪ್ರಕಾರ ಇದು ಅತಿಥಿ ಸಂವಿಭಾಗ. ಜಿನಮುನಿಗೆ ಆಹಾರ ನೀಡುವುದು, ಮುನಿಗಳಿಗೆ ಸೇವೆ ಮಾಡುವುದು, ರೋಗಿ ಮುನಿಗಳಿಗೆ ಸೇವೆಮಾಡುವುದು.

ಶ್ರಾವಕವ್ರತ (೯-೮೩) : ಜೈನಗೃಹಸ್ಥರು ತೆಗೆದುಕೊಳ್ಳುವ ವ್ರತ.

ಶ್ರೀಪಂಚಮಿ (೫-೧೮) : ಒಂದು ವ್ರತದ ಹೆಸರು.

ಷಡಾವಶ್ಯಕತೆ (೯-೧೧೬) : ಸಾಮಾಯಿಕ, ಸ್ತವನ, ವಂದನಾ, ಪ್ರತಿಕ್ರಮಣ, ಪ್ರತ್ಯಾಖ್ಯಾನ ಮತ್ತು ಕಾಯೋತ್ಸರ್ಗವೆಂಬ ಆರು ಆವಶ್ಯಕ ಕ್ರಿಯೆಗಳು.

ಸಂಸ್ಥಾನ ವಿಚಯು (೯-೧೮೯) : ಲೋಕಸ್ಥಿತಿಯ ಚಿಂತನೆ. ಧರ್ಮಧ್ಯಾನದ ನಾಲ್ಕು ಅಂಗಗಳಲ್ಲಿ ಒಂದು.

ಸಪ್ತರ್ಧಿ (೯-೧೧೨) : ಏಳು ಋದ್ಧಿಗಳು. ಇವು ತಪಸ್ಸಿದ್ಧಿ ಪಡೆದವರಿಗೆ ಉಂಟಾಗುವ ಮಹಿಮೆಗಳು.

ಸಮವಸರಣ (೮-೧೫೩) : ಜಿನಸಭೆ. ತೀರ್ಥಂಕರನು ಧರ್ಮೋಪದೇಶಮಾಡುವುದಕ್ಕೆ ಇಂದ್ರನ ಆಜ್ಞೆಯಂತೆ ಕುಬೇರನು ನಿರ್ಮಿಸಿದ ಮಂಟಪ. ಎಲ್ಲರಿಗೂ ಸಮಾನವಾದ ಆಶ್ರಯ ಕೊಡುವುದು.

ಸಮಾಧಿ ಮರಣ (೯-೧೫) : ಸಮಾಧಾನದಿಂದ ಸಾವನ್ನು ಅಪ್ಪುವುದು. ನಿವೃತ್ತಿ ಪೂರ್ವಕವಾಗಿ ಶರೀರಭಾರವನ್ನು ಇಳಿಸುವುದು.

ಸಮ್ಮೇದ ತಪ (೯-೧೪ ವ) : ಸಮ್ಮೇದ ಪರ್ವತದಲ್ಲಿ ಮಾಡುವ ತಪ. ಇದು ಬಿಹಾರದಲ್ಲಿದೆ.

ಸರ್ವಾರ್ಥಸಿದ್ಧಿ (೯-೧೨೧) : ಐದು ಅಣುತ್ತರಗಳಲ್ಲಿ ನಡುವಿನದು.

ಸ್ವಯಂಭೂರಮಣ (೧-೧) : ನಡುವೆ ದ್ವೀಪ ಅದನ್ನು ಆವರಿಸಿ ಸಮುದ್ರ ; ಆ ಸಮುದ್ರದ ಸುತ್ತ ದ್ವೀಪ ; ಅದರ ಸುತ್ತ ಮತ್ತೊಂದು ಸಮುದ್ರ—ಹೀಗೆ ಲೋಕಾಕಾರದಲ್ಲಿ ಕೊನೆಯ ಬಹು ವಿಸ್ತಾರವಾದ ಸಮುದ್ರಕ್ಕೆ ಸ್ವಯಂಭೂರಮಣವೆಂದು ಹೆಸರು.

ಸಾಂಪರಾಯಕಾಯ (೧೨-೫ ವ)

ಸಾಮಾನಿಕಾಮರ (೪-೧೧೧) : ಅಚ್ಯುತೇಂದ್ರನ ಪರಿವಾರ ದೇವತೆಗಳಲ್ಲಿ ಒಂದು ವರ್ಗ. ಆಜ್ಞಾಧಿಕಾರವೊಂದರ ಹೊರತಾಗಿ ಎಲ್ಲ ಭೋಗಗಳಲ್ಲಿ ಅಚ್ಯುತೇಂದ್ರನಿಗೆ ಸಮಾನರು.

ಹುಂಡಸಂಸ್ಥಾನ (೭-೧೦೧) : ಶರೀರದ ಅಂಗೋಪಾಂಗಗಳನ್ನು ಅತಿ ಕುರೂಪಗೊಳಿಸುವ ಕರ್ಮಗಳ ಉದಯ.

ಅನುಬಂಧ ೫

ಶಬ್ದಕೋಶ

[ಈ ಶಬ್ದಾರ್ಥಕೋಶವನ್ನು ವಿಸ್ತಾರವಾಗಿ ಕೊಟ್ಟಿಲ್ಲ ; ಆಯಾ ಪ್ರಯೋಗಕ್ಕೆ ಅಲ್ಲಲ್ಲೇ ಗದ್ಯಾನುವಾದದಲ್ಲಿ ಕೊಟ್ಟಿದೆ. ಒಟ್ಟು ಕಾವ್ಯದಿಂದ ಗಮನಾರ್ಹವೆನಿಸಿದ ಕೆಲವು ಶಬ್ದಗಳಿಗೆ ಅರ್ಥ ಕೊಟ್ಟಿದೆ.]

ಅಗದ : ೧. ಆರೋಗ್ಯ ; ನೀರೋಗತೆ. ೨. ವನಸ್ಪತಿ ; ಔಷಧಿ ಸಸ್ಯ (೭-೧೨೩)
ಅಗುರ್ಬು : ತೀಕ್ಷ್ಣತೆ ; ಪ್ರಚಂಡತೆ ; ಉಗ್ರತೆ (೪-೨೨)
ಅಚ್ಚಗಡೆ : ಚೆಲುವಾದ ರಂಗವಲ್ಲಿ (೭-೩೬)
ಅಚ್ಚಿಱಿ : ಅಚ್ಚೊತ್ತು (೨-೭೮)
ಅಜ್ಜ : ಹಿರಿಯ; ಆರ್ಯ (೬-೧೧೯)
ಅಡರ್ಪು : ಆಧಾರ ; ಸಾಧನ (೫-೬೭)
ಅತ್ತಿಗೆ: ನಲ್ಲೆ; ಪ್ರೇಯಸಿ; ಪ್ರಣಯಿನಿ (೬-೮೦)
ಅನಾಕುಳ : ಶುದ್ಧವಾದ; ಉತ್ತಮ (೭-೨೦)
ಅನುಜೀವಿ : ಕಿಂಕರ ; ಸೇವಕ (೪-೨೫ ವ)
ಅನ್ನಪಾಕಕ : ಭೋಜನಶಾಲೆ (೯-೧೯೨ ವ)
ಅಪದಾನ : ಮಹಾಕಾರ್ಯ ; ಸಾಹಸ (೮-೫೪)
ಅಬುಧ : ತಿಳಿಗೇಡಿ, ಅಜ್ಞ (೨-೩೫)
ಅಮೋಘಂ : ಖಂಡಿತವಾಗಿ ; ನಿಶ್ಚಿತವಾಗಿ (೬-೩೪ ವ)
ಅಯಶ : ಅಪಕೀರ್ತಿ ; ಅಪವಾದ (೪-೭೮)
ಅಯ್ಯಗೊಡೆ : ಅರಸುಗೊಡೆ ; ರಾಜಚ್ಛತ್ರ (೮-೨೩ ವ)
ಅರ್ವಿಸು : ಹೆಚ್ಚಾಗು ; ಅಧಿಕವಾಗು (೮-೨೯)
ಅೞಗಱಿಸು : ೧. ಪಡೆ ; ತಾಳು ; ಹೊಂದು (೩-೮ ; ೯-೧೦). ೨. ಬೆರಸು ; ಕೂಡಿಸು (೧೦-೨ ವ)
ಅವಚಱ : ಬೇಸರು ; ಜುಗುಪ್ಸೆ (೮-೧೦೪ ವ)
ಅವಟೆಯುಸ್ಸು : ಒಪ್ಪಿಸು ; ಅರ್ಪಿಸು ; ಕೊಡು (೯-೧೮೦)
ಅಸುರವಿಜಯಿ : ೧೦-೧೬೫ (ಅನುವಾದ) ನೋ. (೨-೩೫ ವ)
ಅಹಿನಿವಾಸ : ಸರ್ಪಲೋಕ ; ಪಾತಾಳ (೫-೧೫೪)
ಅಳವಡಿಸು : ಆರಿಸು ; ನಂದಿಸು ; ಪರಿಹರಿಸು (೯-೭೯)
ಅಳವಿ : ದರ್ಜೆ ; ಅಂತಸ್ತು ; ಯೋಗ್ಯತೆಯ ಮಟ್ಟ (೩-೧೧೩ ವ)
ಅಳವಿಗಳೆ : ಅಳತೆಗೆಡು ; ಮಿತಿಮೀರು (೭-೧೪೧)
ಅಳಿಪು : ವ್ಯಾಮೋಹ (೪-೧೦೪)
ಅಳುಪ : ವ್ಯಾಮೋಹಿ ; ಕಾಮುಕ (೫-೫೦)
ಅೞ್ಕಾಡು : ನಾಶವಾಗು (೪-೩೬)
ಆಕಾಶಸ್ಫಟಿಕ : ಸೂರ್ಯಕಾಂತ ಶಿಲೆ (೯-೨೧೪ ವ)
ಆಯರ್ : ಆಯುಷ್ಯ ; ಜೀವ (೧೦-೯೧)
ಆರ್ವ : ರಕ್ಷಣೆಯ ನೆಲೆ ; ಆಶ್ರಯ (೭-೯೪)
ಆವರ್ತಿಸು : ಕರೆ ; ಆಮಂತ್ರಿಸು (೩-೭೨)
ಆವ್ರೀಡ : ನಾಚಿದ ; ಲಜ್ಜಿತ (೮-೬೫ ವ)
ಆಶಾಂಬರ : ದಿಗಂಬರ ; ನಗ್ನದೀಕ್ಷೆಯ ಸಂನ್ಯಾಸಿ (೪-೬೩ವ)
ಆಳಿಗಟ್ಟು : ಸಾಲಾಗು ; ಸಾಲುಗಟ್ಟು (೧೦-೪೫)
ಆೞ್ಕೆ : ಮೇಲಿಂದ ಕೆಳವರೆಗಿನ ಅಳತೆ ; ಆಳ (೧೧-೬೦ ವನ
ಇಂದ್ರನಗ : ದೇವಪರ್ವತ ; ಮೇರುಗಿರಿ (೯-೧೪೭)
ಇಂದ್ರಸಿಂಧು = ದೇವನದಿ : ಗಂಗಾನದಿ (೬-೨):
ಇಂದ್ರಾಯುಧ : ೧. ಸಿಡಿಲು (೬-೨೯ ವ). ೨. ಕಾಮ) ಬಿಲ್ಲು (೭-೮)
ಇಟಿವಿಟಿ : ಕೆಡುಕು ; ಉಪದ್ರವ (೬-೧೦೨ ವ)
ಈಡಿತ : ಸ್ತುತ್ಯವಾದ ; ಪೂಜ್ಯ (೧-೩೨)
ಈಱಿಲ್ : ಹೆರಿಗೆ ; ಪ್ರಸೂತಿ (೬-೧೦೬)
ಉಗಿ : ಸೆಳೆ; ಮರುಳುಗೊಳಿಸು (೧೧-೩೩)
ಉಗಿಪಟಂಗೊಳ್ : ಹೊಡೆದಟ್ಟು ; ಓಡಿಸು (೪-೬೫)
ಉಡುಪ : ೧. ಚಂದ್ರ. ೨. ಕೈಸೋತವನು ; ಭಂಗಕ್ಕೊಳಪಟ್ಟವನು (೫-೮೮)
ಉರ್ಕೆ : ಉದ್ರೇಕ ; ಉತ್ಸಾಹ (೮-೧೦೦)
ಉರ್ಚು : ನೋಯಿಸು ; ಪೀಡಿಸು (೬-೪೧)
ಉಷುರ್ವು : ಹಬ್ಬುಗೆ ; ಹೆಚ್ಚಳ (೪-೮೨ ; ೪-೮೨ ವ)
ಉಱುವಾಱು : ಎಗ್ಗತನ ; ಅವಿವೇಕ (೧೧-೯೦)
ಎಡಱು : ಎದುರಾಗು ; ವಿರೋಧಿಸು (೩-೭೨)
ಎಡೆ : ಜೊತೆಗಾರ ; ಸಂಗಡಿಗ ; ಸಖ (೮-೧೧)
ಎಡೆಯಾಗು : ನಡುವೆ ನಿಂತುಹೋಗು ; ಸ್ಥಗಿತವಾಗು (೨-೭೭ ವ)
ಎಱಕ : ೧. ಬಾಗುವಿಕೆ ; ನಮಸ್ಕಾರ. ೨. ಪ್ರೀತಿ ; ಅನುರಾಗ (೧೧-೩೦)
ಎಱೆವಿಡಿ : ಮೊರೆಹೊಗು ; ಆಶ್ರಯಿಸು (೭-೮೪)
ಏಕಸಂಧಿ : ಏಕಪಾಠಿ (೬-೬೨ ವ)
ಏಖಂಡ : ಏನು ಪ್ರಯೋಜನ (೧೦-೧೧೭)
ಒಡಂಬಡಿಸು : ಸಮನ್ವಯಗೊಳಿಸು (೨-೭೦ ವ)
ಒಡದವು : ಜೊತೆಗೇ ನಾಶವಾಗು (೯-೧೧೮)

ಒಡವರೆಯ : ಸಮವಯಸ್ಸು ; ಓರಗೆ (೮-೧೧)
ಒಡ್ಡು : ಸ್ವರೂಪ ; ಸ್ಥಿತಿ ; ಮುದ್ರೆ (೨-೫೨)
ಒಣರ್ : ಒದಗು ; ಅನ್ವಯಿಸು (೮-೧೪೪)
ಒದವು : ಸಾಧಿಸು ; ಗೆಲ್ಲು (೬-೩ ವ)
ಒಕ್ಕ : ರತಿಕ್ರೀಡೆ ; ಸುರತ (೮-೯೧)
ಓಗಡಿಸು : ಹೊರಟುಹೋಗು ; ಕಳೆದುಹೋಗು ; ಕಳಚು (೫-೧೪೭)
ಓಸರಿಸು : ೧. ಸರಿಪಡಿಸು ; ನೇರ್ಪಡಿಸು (೫-೧೦೨). ೨. ಸಾವರಿಸು ; ಹಿಡಿದುಕೊಳ್ಳು (೬-೯)
ಓರೆ : ಓರಗೆ ; ಸಮವಯುವ ಸಂಗಡಿಗ (೨-೨೮ ವ)
ಕರಣ : ನಿಯೋಗಿ ; ಅಧಿಕಾರಿ (೨-೭೩)
ಕಷ್ಟಚೇಷ್ಟಿತ : ಹೀನವರ್ತನೆ ; ದುರಾಚಾರ (೩-೭೯)
ಕಟ್ಟಿಯೋರ್ : ಮಾರಕವಾದ ಗಾಯ (೭-೬೧) :
ಕಟ್ಟಿಯೋದು : ಸಮಗ್ರವಾಗಿ ಓದಿ ತಿಳಿ ; ನಿಷ್ಣಾತನಾಗು (೧೦-೧೮೧)
ಕಿರ್ಗಿದು: ಕಿರಿದು ; ಚಿಕ್ಕದು (೧೧-೨೯ ವ)
ಕಿಱುವಡಿಗಾಲ : ಚಿಕ್ಕಂದು ; ಬಾಲ್ಯಕಾಲ (೮-೧೧)
ಕಿಟ್ಮಣೆ : ಕೀಳಾಗು ; ಕೀಳೆನಿಸು (೧೦-೭೧)
ಕುಲವಟ್ : ಕುಲಪದ್ಧತಿ; ಕುಲಪರಂಪರೆ (೯-೫೩)
ಕೆಯ್ನೆಱ್ : ಕೈಯೆತ್ತು (೧೧-೭೬)
ಕೋಡು : ಕೊಡುಗೆ ; ಪ್ರಧಾನ (೮-೧೪೫)
ಕೋಶೋಪನತ : ಮಾಂಡಲಿಕ ; ಸಾಮಂತ (೧೧-೧೬೫ ವ)
ಗಂಧಾಗಂಧ : ಸುಳಿವು ; ಸಂಚಾರದ ಗುರುತು (೬-೧೦೨ ವ)
ಗದಾಂಗ : ವೈದ್ಯಶಾಸ್ತ್ರ (೧೧-೯೦ ವ)
ಗುಣಣೆಸಾಲೆ : ನರ್ತನಶಾಲೆ (೬-೧೧೬)
ಗೆಯ್ಯೊಗ : ಕ್ರಿಯೆ ; ಚೇಷ್ಟೆ ; ವರ್ತನೆ (೫-೧೦೫)
ಗೊಟ್ಟಂಗೊಟ್[3] : ಪೊಳ್ಳುಮಾಡು ; ಟೊಳ್ಳಾಗುವಂತೆ ಕೊರೆ (೭-೯೦)
ಚಿರಂತನ : ಹಿರಿಯ ; ವಯೋವೃದ್ಧ (೫-೨೦)
ಚೇತೋನಿಚಿತ : ಮನೋಗತ ; ಇಂಗಿತ (೨-೫೯)
ಜವಂಜವ : ಸಂಸಾರ ; ಹುಟ್ಟುಸಾವುಗಳ ಚಕ್ರ (೭-೪೨ ವ)
ಜಾತರೂಪ : ದಿಗಂಬರವ್ರತ ; ಸಂನ್ಯಾಸ (೭-೧೦೫)
ಜಿತಾತ್ಮ : ಜಿತೇಂದ್ರಿಯ ; ಸಂಯಮಿ (೩-೭೬)
ಜೀವಿತ : ಸಂಬಳ ; ವೇತನ (೭-೧೨೯)
ಜೋಹ : ಮೂರ್ತಿ ; ಪ್ರತಿಮೆ (೮-೮೮)
ತಣ್ಣಸ : ತಣಿವು ; ತೃಪ್ತಿ (೮-೯೭)
ತಲೆವಲ್ಲಿತು : ಬಲಿಷ್ಠ ; ಶ್ರೇಷ್ಠ (೧೦-೧೦೬)
ತಲೆವಿಲ್ : ಮುಂಚೂಣಿಯ ಬಿಲ್ಲು; ಮುಂದಳದ ಬಿಲ್ಲು (೫-೯೦)
ತಲ್ಪ : ಸಂಯೋಗ ; ಆಸ್ರವ (೯-೧೩೧)
ತಿಟ್ಟ : ಚಿತ್ರ
ತಿರಿಕ : ಸಂಚಾರಿ (೬-೨೪)
ತೆಗಟ್ : ಚಕ್ಕಂದ ; ಸರಸ (೭-೭೬)
ತೆಳ್ಪುವೆಱು : ಬೆಳ್ಳಗಾಗು ; ಶುಭ್ರವಾಗು (೯-೧೯೮)
ತೇಜ : ಗೌರವ ; ಶ್ರೇಯಸ್ಸು (೪-೭ ವ)
ತೊಡರ್ಪು : ೧. ನಂಟು ; ಸಂಬಂಧ (೭-೧೦೪). ೨. ತೊಡಕು ; ತೊಡರು (೯-೧೪)
ತೌಕಲ್ : ಮುಕ್ತಾಯ ; ಅಂತ್ಯ (೪-೭೧)
ತ್ರಿಪದಿ : (ಆನೆಯ) ಕಾಲ್ಗಟ್ಟು ; ಪಾದಬಂಧ (೧೧-೫)
ದರಿಗೊಳ್ : ಕೊರೆ ; ಗೀರು (೧೧-೧೮)
ದೊರೆ : ೧. ಯೋಗ್ಯವಾದುದು ; ತಕ್ಕುದು (೨-೫೧ ವ). ೨. ಶ್ರೇಷ್ಠವಾದುದು ; ಉತ್ತಮ (೫-೮೫) . ೩. ಸಾಟಿ ; ಸಮಾನ (೨-೭೭)
ದೊರೆವೆಱು : ಘನತೆಹೊಂದು : ಅಗ್ಗಳವಾಗು (೫-೮೪)
ದ್ವಾದಶರಾಜರ್ : ೧೦-೧೦೯ (ಅನುವಾದ) ನೋ. (೨-೩೫ ವ)
ನದಿಪು : ಆರಿಸು ; ನಂದಿಸು (೨-೯೩)
ನಾಯಕಸಾರ : ಶ್ರೇಷ್ಠವಾದ ರಸ ; ಪೇಯ (೭-೯೭)
ನಿಗ್ಫೆ : ನಿಯೋಗಿ ; ನೌಕರ (೭-೭೪)
ನಿಟ್ಟೆ : ನಿತ್ಯ ; ಶಾಶ್ವತ (೯-೩೬)
ನಿವಿರ್ : ಈಡೇರು ; ನೆರವೇರು (೭-೧೧)
ನಿರಯಜ : ನರಕವಾಸಿ ; ನಾರಕಿ (೭-೯೪ ವ)
ನಿರ್ವಿಸು : ಬಾಗು ; ಮಣಿ (೧೦-೧೨)
ನಿರ್ವಿನಿಸು : ಅಸಮಾಧಾನಗೊಳ್ಳು (೪-೮)
ನಿರ್ವಹಿಸು : ೧. ನಿತ್ತರಿಸು ; ನಿಭಾಯಿಸು (೩-೮೫). ೨. ಒದಗಿಸು ; ಪೂರೈಸು (೬-೧೧೪)
ನಿರ್ವೃತಿ : ನೆಮ್ಮದಿ ; ತೃಪ್ತಿ (೯-೯೧ ವ)
ನಿಸೃಷ್ಟಾರ್ಥ : ದೂತ (೨-೭೪)
ನಿಸ್ವತೆ : ಬಡತನ ; ದಾರಿದ್ರ್ಯ (೯-೮೩ ವ)
ನೀಚ : ನೀಚವಜ್ರವೆಂಬ ರತ್ನ ; ವೈಕ್ರಾಂತಮಣಿ (೬-೧೦೨)
ನುಗುಳ್ : ಹಾಯು ; ದಾಟು (೧೦-೧೪೪ ಅ-ವ)
ನೆರಪು : ೧. ಗಳಿಸು ; ಸಂಪಾದಿಸು (೧-೧೪). ೨. ಕೂಡಿಸು ; ಸಂವರಿಸು (೫-೪೬). ೩. ಜೊತೆಗೂಳಿಸು ; ಮದುವೆಮಾಡು (೫-೩೯ವ)
ನೆಱನೆತ್ತು : ಚುಚ್ಚಿ ಮಾತನಾಡು ; ಹಂಗಿಸು ; ಮೂದಲಿಸು (೭-೬೦ ವ)
ನೆಱೆ[3] : ೧. ತುಂಬು ; ಪೂರ್ಣವಾಗು (೩-೭೪). ೨. ಸಮರ್ಥವಾಗು (೨-೪೨). ೩. ಸಾಕಾಗು ; ಸಾಲು (೪-೮). ೪. ಚೆನ್ನಾಗಿ ; ಸಮಗ್ರವಾಗಿ (೭-೪೫)
ನೇರ್ : ಕತ್ತರಿಸು ; ತುಂಡರಿಸು (೪-೩೫)
ನೊಚ್ಚಿದಳ್ : ಹೀನ ; ಕ್ಷುದ್ರ (೪-೭೯ ವ)
ಪಂಚಾಂಗಮಂತ್ರ : ೫-೭೫ (ಅನುವಾದ) ನೋ. (೨-೨೮)
ಪಕ್ಕುವೆಱು : ಅವಕಾಶ ಪಡೆ (೭-೫೯)
ಪಡಂಗಲಸು : ತಡಬಡಿಸು ; ತತ್ತರಿಸು (೭-೯೧ ವ)
ಪಡೆ : ಪರಿವಾರ ; ಪರಿಜನ ಸಮೂಹ (೮-೬)
ಪಣ್ಣಿಗೆ : ಆಭರಣ ; ಆಯೋಗ (೫-೩೮)

ಪಣ್ಣು : ೧. ರಚಿಸು ; ನಿರ್ಮಿಸು (೯-೧೬೨). ೨. ಅಣಿಗೊಳಿಸು ; ಹೂಡು (೫-೩೮)
ಪತ್ತುಗೆ : ಸಂಬಂಧ ; ಋಣಾನುಬಂಧ (೬-೧೨೩)
ಪದಬಂಧ : ಕಾಲಿನ ಆಭರಣ ; ಪೆಂಡೆಯ (೭-೧೩ ವ)
ಪದವಡಿಸು : ನೆರವೇರಿಸು (೪ ೫೮)
ಪಪ್ಪವ : ಹೊಗಳುಭಟ್ಟ ; ವಂದಿಮಾಗಧ (೭-೭೪)
ಪರಿಚ್ಛೇದ : ನಿಶ್ಚಯ ; ನಿರ್ಧಾರ (೯-೧೦೫ ವ)
ಪರಿವಸ : ಸೇವೆ ; ಪರಿಚರ್ಯೆ (೭-೭೫)
ಪರೋಕ್ಷ : ತರುವಾಯ (೭-೧೦೩ ವ)
ಪವಣ್ಗಳೆ : ಮಿತಿಮೀರು (೧೦-೯೯)
ಪವಣ್ಗೋಱು : ಕೊನೆಗಾಣು ; ಮುಗಿ (೭-೨)
ಪಕ್ಷಪಾತ : ಹಾರಾಟ ; ಉಡ್ಡಯನ (೩-೧೪)
ಪ್ರಘಟ್ಟಕ : ಪ್ರಸಂಗ ; ಸಂದರ್ಭ (೧೧-೪೦)
ಪ್ರತಿರೂಪ : ಮೂರ್ತಿ ; ಪ್ರತಿಮೆ (೬-೨೯ ವ)
ಪಾರದರಿಗ : ಹಾದರಿಗ ; ಜಾರ (೫-೫೧)
ಪಾರಿಪ್ಲವ : ಅಸ್ತವ್ಯಸ್ತತೆ ; ಅವ್ಯವಸ್ಥೆ (೮-೧೩೮ ವ)
ಪಿಡಿಪೆಱು : ಸೆರೆಸಿಕ್ಕು ; ಬಂದಿಯಾಗು (೫-೧೩೪)
ಪುಗಲ್ : ೧. ಕೋಗಿಲೆಯ ಕೂಜಿತ. ೨. 'ಹೊಗಬೇಡ' ಎಂಬ ಮಾತು (೮-೩)
ಪುಗಿಲ್ : ಪ್ರವೇಶ ; ಆರಂಭ (೧೦-೧೪೧)
ಪುರುಷಭೈಕ್ಷೆ : ಪತಿಯನ್ನು ಉಳಿಸಿಕೊಡು ಎಂಬ ಬೇಡಿಕೆ (೯-೮೩ ವ)
ಪುೞುವಗೆ : ಹೀನಯೋಚನೆ ; ಕ್ಷುದ್ರವಿಚಾರ (೭-೧೧)
ಪೂಣ್ : ಗೊತ್ತುಪಡಿಸು ; ನಿಯಮಿಸು (೨-೮೦)
ಪೆರ್ಬಿಡಿ : ಹರಯದ ಹೆಣ್ಣಾನೆ (೭-೨೯)
ಪೆರ್ಮಾತು : ಪ್ರಶಸ್ತಿ ; ಪ್ರಸಿದ್ಧಿ (೯-೧೫೪)
ಪೆಳಱು : ಬೆದರಿಸು ; ಹೆದರಿಸು (೭-೧೩೭)
ಪೊಂಪುೞಿ : ಅತಿಶಯ ; ಆಧಿಕ್ಯ ; ಘನತೆ (೬-೫೯ವ)
ಪೊಗಸು : ಬೆಳಗು ; ಪ್ರಭಾತ ಕಾಲ (೧೧-೧೧೦)
ಪೊಱಪೆಚ್ಚ : ಮೇಲುಹೊದಿಕೆ (೬-೬೫)
ಪೊಱಮಾಱು : ಓಡಿಹೋಗು ; ಪಲಾಯನಮಾಡು (೭-೪೫)
ಪೊರಪು : ಸಂಪರ್ಕ ; ಸಂಸರ್ಗ (೧೧-೯೬)
ಪೋಗು : ಹಳತಾಗು ; ಜೀರ್ಣವಾಗು (೯-೩೩)
ಪೋರ್ತ : ಹೋರಾಟ ; ಕಾಳಗ (೨-೧೦೩)
ಬಂಹಿಮವತ್ : ದೀರ್ಘವಾದ ; ಘನವಾದ ; ಮಹತ್ವಾದ (೭-೭೮)
ಬಗೆ : ೧. ಮನಸ್ಸುಗೊಡು ; ಗಮನವಿಡು (೫-೨೧). ೨. ಬಯಸು (೫-೩೭)
ಬಗೆಗೊಳ್ : ೧. ಗಮನಿಸು ; ಚಿತ್ತಗೊಡು (೫-೬೮). ೨. ಮನಮೆಚ್ಚಿಸು (೫-೫೫)
ಬಱುವ : ಬರಿಗೈಯವನು ; ನಿರಾಯುಧ (೪-೫೧)
ಬಲ್ಲಾಳ್ತನ : ಒತ್ತಾಯ ; ಬಲಾತ್ಕಾರ (೬-೬೫ವ)
ಬಾಯ್ಕೇಳಿಸು : ವಶಪಡಿಸಿಕೊಳ್ಳು ; ಗೆದ್ದುಕೊಳ್ಳು (೯-೨ ವ)
ಬಾೞ್ಮೊದಲ್ : ಜನ್ಮಸ್ಥಾನ ; ತವರು (೭-೧೪೩)
ಬಿಚ್ಚತಿಕ್ಕೆ : ಉತ್ಕಂಠತೆ ; ಔತ್ಸುಕ್ಯ (೮-೯೧)
ಬಿತ್ತರಿಗೆ : ಒರಗುದಿಂಬು ; ಮೆತ್ತೆ (೨-೫)
ಬಿನ್ನಗೆ : ಕಳೆಗುಂದಿದ ; ಮ್ಲಾನವಾದ (೭-೭೯)
ಬಿಲ್ಗಲ್ಪಿ : ಧನುರ್ವಿದ್ಯೆ (೪-೪೨)
ಬೀೞ್ಗಂಡು : ಲಂಗರು (೧೭-೯೨ ವ)
ಬೆಸೆ : ಸೆಡೆ ; ವಿರೋಧಿಸು ; ಮೀರು (೧೦-೧೨೫)
ಬೇಗಯ್ಕೆ : ಚಳಕ ; ಶೀಘ್ರತೆ (೫-೬೦ ವ)
ಬೊಂದರಿಗೆ : ದಿಂಬು ; ಮೆತ್ತೆ (೮-೪)
ಭರ್ತೃಭೈಕ್ಷೆ : ಪುರುಷಭೈಕ್ಷೆ (೯-೮೨ ವ)
ಭವಪದ್ಧತಿ : ಜನ್ಮಾವಳಿ ; ಭವಾವಳಿ (೬-೮೫)
ಮಂಡಲಾಗ್ರ : ಅಡಾಯುಧ ; ಖಡ್ಗ (೬-೩೩ ವ)
ಮಂದಮನ : ಜಡವಾದ ಮನಸ್ಸು ; ನಿರುತ್ಸಾಹ (೮-೯೩)
ಮಣ್ಮೞಿ : ಮಣ್ಣುಪಾಲು ; ನಾಶ (೫-೫೬)
ಮಧ್ಯಸ್ಥತೆ : ಉದಾಸೀನತೆ ; ಅಲಕ್ಷ್ಯತೆ (೪-೧೦೨ ವ)
ಮನಂಗೊಳ್ : ೧. ಸಂತೋಷಗೊಳಿಸು (೭-೧೨೧). ೨. ಮೆಚ್ಚು ; ಒಪ್ಪು (೮-೮೫ ವ)
ಮರೀಚಿಮಾಳಿ : ಸೂರ್ಯ
ಮುಜಿ.ಕ : ಉತ್ಕಂಠೆ ; ಉದ್ವೇಗ (೭-೪೫)
ಮಹೀಗೃಹ : ನೆಲಮನೆ (೬-೧೧೬)
ಮಾಂದು : ನಿಂತುಹೋಗು ; ಮುಗಿ (೭-೧೩೩)
ಮಾರ್ತಲೆ : ಎದುರಾಳಿ ; ವಿರೋಧಿ (೧೧-೫೨)
ಮಾಯ್ದು : ತುಂಟ ; ದುಷ್ಟ (೮-೮೭)
ಮಾಸರಿಕ್ಕ : ಚೆಲುವು ; ಶೋಭೆ (೮-೨೨)
ಮಿಸುರ್ : ಮಿರುಗು ; ತಳತಳಿಸು (೭-೧೩೬)
ಮುಟ್ಟಲರ್ : ಮುಟ್ಟಾಗು ; ಬಹಿಷ್ಠೆಯಾಗು (೭-೧೩೬)
ಮುಡಿಗಿಕ್ಕು : ಕಾಣಿಕೆಯಿಕ್ಕು ; ಬಲಿಕೊಡು (೫-೫೫ ವ)
ಮುಡಿಗೆಯಿಕ್ಕು : ಮುಡಿಗಿಕ್ಕು (೬-೧೭)
ಮುದುಗಣ್ : ಮುದುಕ ; ಹಿರಿಯ (೭-೭೪)
ಮೂರ್ತಿಬಲ : ದೇಹಶಕ್ತಿ ; ಮೈಬಲ (೪-೩೦ ವ)
ಮೆಯ್ವೆಱು : ಕೈಗೂಡು ; ಲಭಿಸು (೫-೧೧೩)
ಮೆೞ್ಪಿಡಿಸು : ಮರುಳುಗೊಳಿಸು ; ಮೋಹಗೊಳಿಸು (೮-೮೦)
ಮೊಱೆ : ನಂಟು ; ಸಂಬಂಧ ; ಋಣಾನುಬಂಧ (೭-೯೮)
ಮೊೞ್ಗು : ಬಾಗು ; ಮಣಿ ; ನಮಿಸು (೯-೯೨)
ರುಚಿಗೆಡು : ಕಳೆಗುಂದು ; ನಿಸ್ತೇಜವಾಗು (೫-೮೮)
ವನಪ್ರಚಾರ : ವನಸಂಚಾರ (೮-೨೩ ವ)
ವನಿಗ : ತೋಟಗಾರ ; ವನಪಾಲಕ (೮-೨)
ವ್ರತತಿ : ಬಳ್ಳಿ ; ಲತೆ (೭-೭)
ವಾರವಾಣ : ಕಂಚುಕ (೧೧-೬೦)
ವಾವದೂಕ : ವಾಚಾಳ ; ವಾದಿ (೮-೧೪೭ ವ)
ವ್ಯಾಳತೆ : ಹಗೆತನ ; ವೈರ (೧೧-೨೭)

ವಿಗುರ್ವಣೆ : ಪೆಚ್ಚಳ ; ಅಧಿಕಗೊಳಿಸುವಿಕೆ (೧೦-೪೧)
ವಿಯದ್ಗಾಮಿ : ಖೇಚರ ; ವಿದ್ಯಾಧರ (೨-೬೬)
ವಿಶರಾರು : ಭಂಗುರ ; ನಶ್ವರ (೮-೧೪೨ ವ)
ವಿಷಮ : ಅಸಾಧಾರಣ ; ಅಸಾಮಾನ್ಯ (೭-೧೮ ವ)
ವಿಷ್ಕಿರ : ಪಕ್ಷಿ (೬-೧೦೨)
ವೃತ್ರಹಮಂತ್ರಿ : ಇಂದ್ರಮಂತ್ರಿ ; ಬೃಹಸ್ಪತಿ (೭-೧೧೮)
ವೃತ್ತಪಾಠಕ : ಹೊಗಳುಭಟ್ಟ ; ಸ್ತುತಿಪಾಠಕ (೭-೧೨೯)
ವೈಭಾವ : ದ್ವೇಷ ; ವೈರ (೯-೪೭)
ಶಾಸನೋಪನತ : ಆಜ್ಞಾಧೀನ (೧೧-೩ ವ)
ಶಾಳಿಗೋಪಿ : ಗದ್ದೆಯನ್ನು ಕಾಯುವವಳು (೧೦-೧೩೮)
ಶಿರಃಕಂಪ : ತಲೆದೂಗುವಿಕೆ (೧೦-೭೫ ವ)
ಶಿವಸುಖ : ಮೋಕ್ಷಸುಖ (೧೧-೯೧)
ಶೂರ್ಪಕವೈರಿ : ಕಾಮ ; ಮನ್ಮಥ (೭-೧೧೮)
ಸಂಗಡ : ಜೊತೆಗಾರ ; ಸಂಗಡಿಗ ; ಸಹಚರ (೭-೭೪)
ಸಂವೃತ : ಮುಚ್ಚಿದ ; ಅಡಗಿಸಿದ ; ಬಚ್ಚಿಟ್ಟ (೬-೩ ವ)
ಸಂವೃತಿ : ಮರೆಮಾಡುವಿಕೆ ; ಬಚ್ಚಿಡುವಿಕೆ (೮-೧೫೧ ವ)
ಸಬ್ಬವ : ೧. ವಿನೋದಕಾರ ; ನಗೆಗಾರ ; ಪರಿಹಾಸಕ (೭-೭೪). ೨. ವಿನೋದ ; ಪರಿಹಾಸ (೭-೭೬)
ಸಪ್ರಪಂಚಂ : ಆದ್ಯಂತವಾಗಿ ; ಸಮಗ್ರವಾಗಿ ; ವಿಸ್ತಾರವಾಗಿ (೨-೨೫ ವ)
ಸಮಯ : ೧. ಧರ್ಮ (೫-೧೩೨). ೨. ನಿಯಮ ; ತತ್ವ (೧೦-೯೦ ವ)
ಸಯ್ದ : ಸ್ಥಿರ ; ದೃಢ (೪-೨೧)
ಸರಘೆ : ಜೇನ್ನೊಣ (೧೧-೨೪)
ಸರಸೀರತ : ನೀರಾಟ ; ಜಲಕೇಳಿ (೫-೬೮)
ಸ್ಕಂಧಾವಾರ : ಸೈನ್ಯಶಿಬಿರ ; ಪಾಳೆಯ (೧೧-೭೪ ವ)
ಸ್ತಬ್ಧ : ಕಠಿನ ; ಕರ್ಕಶ (೧೧-೬೯)
ಸಾರಸ್ವತ : ಪಂಡಿತ (೨-೫೪)
ಸಾವಗಿಸು : ಅಣಿಗೊಳಿಸು ; ಸಂವರಿಸು (೫-೧೧೧)
ಸೂಟ್ : ಸಹವಾಸ ; ಸಾಹಚರ್ಯ ; ಸಂಯೋಗ (೫-೫೬)
ಸೇದೆಗಿಡು : ಆಯಾಸಪಡು ; ಶ್ರಮಪಡು (೨-೧೦೩ ; ೯-೧೫೦)
ಹಿಮ : ಚಳಿಗಾಲ (೬-೧೦೨)
ಹೇಳಾಸಾಧ್ಯ : ಸುಲಭ ; ಸುಕರ (೮-೧೩೮ ವ)

ಶುದ್ಧಿಪತ್ರಿಕ

[ಸೂಚನೆ : ಕೇವಲ ಸಂಖ್ಯೆ ಮೇಲಿನ ಪಾಠವನ್ನು ನಿರ್ದೇಶಿಸುತ್ತದೆ. "ಅನು." ಎಂಬುದು ಅನುವಾದ ಭಾಗ.]

ಪುಟ	ಪಂಕ್ತಿ	ಅಶುದ್ಧ	ಶುದ್ಧ
೩	ಅನು. ೪	ಸ್ವಾವಾರಣ	ಸ್ವವಾರಣ
೧೧	ಅನು. ೭	ವಲ್ಕ	ವಲ್ಕಲ
೧೬	ಅನು. ೧೬	ಸ್ಥಿಮಿತ	ಸ್ತಿಮಿತ
೩೬	ಅನು. ೭	ಅಸುರರನ್ನು ಗೆದ್ದವನು	ಅಸುರವಾಗಿ ಗೆಲ್ಲುವವನು
೪೦	ಅನು. ೨	ಅಸುರರನ್ನು ಸೋಲಿಸಿದವ	ಅಸುರವಾಗಿ ಸೋಲಿಸುವವ
೫೨	೧೫	ಸಾರ	ಸಾರಾ
೫೫	೨೧	ತಕಟಿ	ತಕ್ಕಟಿ
೫೭	೧೭	ನೋಂತಗ	ನೋಂತರು
೫೮	೫	ವಜೋ	ವಚೋ
೫೮	ಅನು. ೧	ಎಂಬಂದೆ	ಎಂಬಂತೆ
೬೦	ಅನು. ೬	ಲೋಕಕ್ಕೇ	ಖೇಚರಲೋಕಕ್ಕೇ
೬೨	ಅನು. ೧	ಆದ	ಅದು
೬೪	ಅನು. ೩	ಪ್ರಾಯಕರ	ಪ್ರಿಯಕರ
೮೩	ಅಡಿಟಿ. ೧	ಮುಂಚೆ	ಮುಂದೆ
೮೬	ಅನು. ೮	ರಾಜನೀತಿಜ್ಞರನ್ನು	ರಾಜರನ್ನು
೯೯	೧೧	ಧ್ವನಿ	ಧನ್ವಿ
೧೦೦	೧೨	ಬಂಧನವನ್ನು	ಕಂಡು ಬಂಧನವನ್ನು
೧೦೪	ಅನು. ೧	ಇಬ್ಬಗೆಯ	ಹೆಬ್ಬೆಟ್ಟದ
೧೧೧	೧೨	ಮಿತ್ರಾನಕಾರಿ	ಮಿತ್ರಾನುಕಾರಿ
೧೨೦	೬	ಪ್ರಪನ್ನೆ	ಪ್ರಪನ್ನೆ
೧೨೬	ಅನು. ೨	ಮುತ್ತಿಕೊಂಡುವು.	ಮುತ್ತಿಕೊಂಡುವು. ಆಗ
೧೨೯	ಅನು. ೬	ತುಂದು	ತಂದು
೧೩೫	ಅನು. ೪	ಸುಂದರವಾದ........ ಶಿಲಾತಳದಿಂದಲೂ	ಭದ್ರಶಾಲ, ನಂದನ, ಸೌಮನಸ ಮತ್ತು ಪಾಂಡುಕ ಎಂಬ ನಾಲ್ಕು ವನಗಳಿಂದ
೧೪೨	೧	ಆ ಕಿಜಿಯ	ಆ ಕಿಜಿಯ
೧೫೦	೧೦	ಸರಿಸಿಪಸಮುಕಟ್ಟಿ	ಪಸರಿಸಿ ಸಮುಕಟ್ಟೆ
೧೫೧	ಅನು. ೧೩	ಕಾರ್ಯವನ್ನು	ಶೌರ್ಯವನ್ನು
೧೫೭	೪	ಬಂದದು	ಬಂದುದು
೧೫೯	ಅನು. ೫	ಪರಿಮಳದಿಂದ	ಪರಿಮಳದಿಂದ.

ಪುಟ	ಪಂಕ್ತಿ	ಅಶುದ್ಧ	ಶುದ್ಧ
೧೬೦	೪	ನುಡಪನಾದಂ	ನುಡುಪನಾದಂ
೧೬೩	ಅನು. ೧೧	ರಾಸಾತಿಶಯು	ರಸಾತಿಶಯು
೧೬೬	ಅನು. ೮	ಮಾನಸರೋವರ	ಮಾನಸಸರೋವರ
೧೭೭	ಅನು. ೪	ಮಾಲೆಯನೆ	ಮಾಲೆಯನ್ನೆ
೧೮೦	೨	ಸಂವುತಾಕಾರ	ಸಂವೃತಾಕಾರ
೧೮೦	೭	ನಿವಾರಿತೋಷ್ಣಮೆ	ನಿವಾರಿತೋಷ್ಣಮು
೧೮೦	೧೪	ಅಕ್ಷ್ಯಂ	ಲಕ್ಷ್ಯಂ
೧೮೨	೫	ನೊಳ್ವಿತ	ನೊಳ್ಳಿತ
೧೮೬	೧೬	ನೈಮಿತ್ತ್ರಕ	ನೈಮಿತ್ತಿಕ
೧೮೭	ಅನು. ೫	ಕುಂಭಕಾರಕಟ	ಕುಂಭಕಾರಕಟಕ
೧೮೮	೪	ಧ್ವನಿ	ಧನ್ವಿ
೧೮೮	೭	ಬಟ್ಟಿ	ಬಿಟ್ಟಿ
೧೯೨	೧	ಅಂತಿಂದಜಾಲಗ	ಅಂತಿಂದ್ರಜಾಲಿಗ
೧೯೨	೭	ಬೀರು	ಭೀರು
೧೯೨	ಅನು. ೪	ಖೇಚರ ಭೂಚರ	ಖೇಚರ ಭೂಪನ
೧೯೪	೬	ನಿಸರ್ಗಾದಿಗಮಾಂ	ನಿಸರ್ಗಾಧಿಗಮಾಂ
೨೦೦	ಅನು. ೬	ವೃತಾಂತ	ವೃತ್ತಾಂತ
೨೦೨	ಅನು. ೨	ಅಡ್ಡೆಯಂತೆ	ಅಡ್ಡೆಯಂತೆ "ಸಕಳಾಶಯಹಾರಿ"
೨೦೫	ಅನು. ೭	ಬಳಿಯೆ	ಬಳಿಗೆ
೨೦೭	೫	ಚಕವರ್ತಿ	ಚಕ್ರವರ್ತಿ
೨೦೭	೭	ನೃಪಾಕಾಂತೆ	ನೃಪಕಾಂತೆ
೨೦೭	೯	ರಾಣಿಯರು	ರಾಣಿಯರು ಮತ್ತು ಮಕ್ಕಳು
೨೧೧	ಅನು. ೩	ಶ್ರೀಗಂಧದ	ಗಂಧದ
೨೧೨	ಅನು. ೧೩	ಭೂಮಿಯಲ್ಲಿ ಆರು	ಭೂಮಿಯಲ್ಲಿ ಜನರ ದೇಹದೆತ್ತರ ಆರು
೨೧೫	ಅನು. ೬	ವಾದ	ವಾದ್ಯ
೨೧೬	ಅನು. ೩	ದೀಪಗಳನು	ದೀಪಗಳನ್ನು
೨೧೭	ಅನು. ೧	ಪರರ	ಪರರ (?)
೨೨೧	ಅನು. ೮	ಏಲಾಲತೆ	ಎಳಲತೆ
೨೨೩	ಅನು. ೧೨	ಬಂದು	ಒಂದು
೨೨೪	ಅನು ೧೧	ಸುತ್ತಿಸುವ	ಸ್ತುತಿಸುವ
೨೨೬	ಅನು. ೧೨	ನಿಧಾನ	ನಿದಾನ
೨೩೧	೧೬	ಮನುಮುಂ	ಮನಮುಂ
೨೩೭	ಅನು. ೮	ಕುರಿತು	ಕಲಿತ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೨೩೯	ಅನು. ೨	ಜಯಾವಲೀ....... ಮೃಗಯಾವಲೀ	ಜಯಾವತೀ........ಮೃಗಯಾವತೀ
೨೪೦	೪	ಶಮದೊಳೆ	ಶ್ರಮದೊಳೆ
೨೪೪	೧೪	ವಿದಾನದಿಂ	ವಿಧಾನದಿಂ
೨೪೫	ಅನು. ೯	ಕನಶ್ರೀ	ಕನಕಶ್ರೀ
೨೪೯	ಅನು. ೭	ವನವನು	ವನವನ್ನು
೨೫೦	೩	ಸುರಳ್ವಿನೆಗಂ	ಸುರುಳ್ವಿನೆಗಂ
೨೫೧	೧	ವೃಗಾಯಾ	ವೃಗಯಾ
೨೫೧	ಅನು. ೧	ಪಾಕಕೆ	ಪಾಕಕ್ಕೆ
೨೫೪	ಅನು. ೧೦	ಪ್ರಮಾಣ	ಪ್ರಯಾಣ
೨೬೧	ಅನು. ೧	ಕೆಂದಳಿರ ಉರಿಯ	ಕೆಂದಳಿರೆ ಉರಿಯು
೨೬೧	ಅನು. ೬	ಅಚ್ಚ	ನಿಚ್ಚ
೨೬೨	೨	ಉದ್ಯನ್ಮದನ	ಉದ್ಯನ್ಮದನ
೨೬೨	ಅನು. ೬	ಮೂಲೆಯ	ಮೂಲೆಯೆ
೨೬೫	ಅನು. ೫	ಬಣ್ಣದಿಂದಲೆ	ಕೆಂಬಣ್ಣದಿಂದಳೆ
೨೬೭	ಅನು. ೩	ಮಗನು	ವನಿಗನು
೨೬೮	ಅನು. ೧೨	ಗುಂಜೀರವ	ಗುಂಜಾರವ
೨೭೧	ಅನು. ೧೫	ವ್ಯೆಬಣ್ಣ ಏಳು	ವ್ಯೆಬಣ್ಣದವಳು
೨೭೫	ಅನು. ೬	ಶ್ರಿಗಂಧ	ಶ್ರೀಗಂಧ
೨೭೫	ಅನು. ೧೦	ಧ್ವನಿಯು	ಧ್ವನಿಯೆ
೨೭೫	ಅನು. ೧೧	ಮುಖಕಮಲ........ಸೋತ	ಮುಖಕಮಲಗಳ ಸ್ಥಿರವಾದ ಶೋಭೆಗೆ ಕೊಳದ ಕಮಲಗಳ ಶೋಭೆ ಸೋತಿತು.
೨೭೫	ಅನು. ೧೩	ಕಮಲಗಳ....ಪರಿಮಳದೆದುರು	ಇವರ ಮುಖ (ಶ್ವಾಸ)ಗಳ ಪರಿಮಳದೆದುರು ಕಮಲಗಳ ಸುಗಂಧ ಅತಿ ಹೀನವೆನಿಸಿತು. "ಇವರು ಗೆದ್ದರು."
೨೭೬	ಅನು. ೩	ಪಕ್ಕದ	ಪಕ್ಕಾದ
೨೮೦	ಅನು. ೧೨	ಗುಂಪನ್ನು ಓಡಿ	ಗುಂಪನ್ನು ಬಿಟ್ಟು ಓಡಿ
೨೮೦	ಅನು. ೧೩	ಕೂಡಿಕೊಳ್ಳಲಾಗಿ	ಅಪ್ಪಿಕೊಳ್ಳಲಾಗಿ
೨೮೪	ಅನು. ೩	ಕುಮಾರರು	ಕುಮಾರನು
೨೮೪	ಅನು ೪	ಮಾಡಿದರೊ	ಮಾಡಿದನೊ
೨೮೫	ಅನು. ೭	ಅವಿಶ್ವಸದ	ವಿಶ್ವಾಸದ
೨೮೫	ಅನು. ೧೪	ಸೋಲದವನು. ಈ	ಸೋಲದವನು. ವಂದಿಗಳಿಗೆ ಕೊಟ್ಟು ಸೋಲದವನು. ಈ
೨೮೮	ಅನು. ೭	ಬಲಹೀನೆಯರಾಗಿರದ	ಬಲಹೀನೆಯರಾಗಿರದೆ
೨೮೯	ಅನು. ೯	ತೊಡಿಕೊಂಡು	ತೋಡಿಕೊಂಡು
೨೯೪	ಅನು. ೧೫	ಸ್ಥಿತೆ	ಸ್ಥಿತಿ

ಪುಟ	ಪಂಕ್ತಿ	ಅಶುದ್ಧ	ಶುದ್ಧ
೩೦೬	ಅನು. ೧	ಹೀಗೆಂದ	ಹೀಗೆಂದು
೩೦೬	ಅನು. ೫	ರತ್ನಸಂಚಯು	ರತ್ನಸಂಚಯುಪುರ
೩೧೪	ಅನು. ೧೭	ಸಮ್ಯಕ್ತ	ಸಮ್ಯಕ್ತ್ವ
೩೨೬	ಅನು. ೭	ತನು	ತನ್ನ
೩೨೬	ಅನು. ೮	ವಾದನ್ನ	ವಾದನು
೩೩೨	ಅನು. ೧೩	ಮುವತ್ತೊಂದು	ಮೂವತ್ತೊಂದು
೩೫೨	ಅನು. ೧೦	ತ್ರೀವರ್ಮ	ಶ್ರೀವರ್ಮ
೩೫೩	ಅನು. ೧೦	ಸೋಮುಲ	ಸೋಮು
೩೫೬	೩	ಮನುಪೇಕ್ಷೆ	ಮನುಪ್ರೇಕ್ಷೆ
೩೫೭	ಅನು. ೯	ಕಂಡದನ್ನೂ	ಕಂಡುದನ್ನೂ
೩೬೨	ಅನು. ೨	ಆಜ್ಞಾನಿಚಯ	ಆಜ್ಞಾವಿಚಯ
೩೬೮	೧೫	ದುಗ್ಗವಾರ್ಧಿ	ದುಗ್ಧವಾರ್ಧಿ
೩೮೦	ಅನು. ೧೨	ಚಾಂಡಲ	ಚಾಂಡಾಲ
೩೮೯	ಅನು. ೫	ವೆಚ್ಚಿ	ಬೆರಸಿ
೩೯೮	ಅನು. ೧೨	ಆಲೇಪ	ಆಲಾಪ
೪೨೧	ಅನು. ೧೩	ಪಡಿಸಿಕೊಂಡಿತು	ಪಡಿಸಿಕೊಳ್ಳುವುದು
೪೨೫	೭	ಪವನಪ್ರತಿ	ಮವನಪ್ರತಿ
೪೨೬	ಅನು. ೭	ಜನಾವಗಾಢ	ಜಾನಾವಗಾಢ
೪೩೩	ಅನು. ೧	ಪಾಜಿ	ಹಾಟಿ
೪೩೬	ಅನು. ೨	ಮಧ್ಯದಲ್ಲಿಯಾ	ಮಧ್ಯದಲ್ಲಿಯ
೪೩೬	ಅನು. ೬	ಅಸಾಧ್ಯವೆಂಬುವದು	ಅಸಾಧ್ಯರೆಂಬವರು
೪೩೭	೧೩	ಪಡಿದೆತ್ತಿ	ಪಿಡಿದೆತ್ತಿ
೪೩೮	ಅನು. ೩	ವಿಜಯ	ವಿಜಯಿ
೪೪೮	ಅನು. ೫	ಸ್ತಸ್ತ್ರಾಂಶುಕ	ಸ್ರಸ್ತ್ರಾಂಶುಕ
೪೫೧	ಅನು. ೭	ಸಾರಸ್ತ್ರಾಣಗಳನ್ನು ತೆಗೆದಿಟ್ಟರು	ಶಿರಃಪ್ರಾಣಗಳನ್ನು ರಕ್ಷಿಸಿಕೊಂಡರು
೪೫೮	೨೦	ದಾತಂ	ದಾತ್ರಂ
೪೭೯	ಅನು. ೧೦	ವೃಕ್ಷದಂತೆ	ವೃಕ್ಷವೆ
೪೯೦	ಅನು. ೧೧	ಎಡೆಮಾಡು	ಎಡೆಯಾಡು

ಪೊನ್ನ ಹಳಗನ್ನಡ ಕವಿಗಳಲ್ಲಿ ನತದೃಷ್ಟ. ತನ್ನ ಜೀವಿತ ಕಾಲದಲ್ಲೇನೋ ಅವನು 'ಉಭಯಕವಿ ಚಕ್ರವರ್ತಿ' ಬಿರುದು ಬಾವಲಿ ಪಡೆದು ಸುಖ ಜೀವನ ನಡೆಸಿದ. ಅನಂತರದಲ್ಲೂ ಅವನಿಗೆ ಜನಮನ್ನಣೆ, ಕವಿಸ್ಥಾನ ತಪ್ಪಲಿಲ್ಲ, ಕುಂದಲಿಲ್ಲ. ಆದರೆ ಈ ಶತಮಾನದಲ್ಲಿ ಮಾತ್ರ ಆಧುನಿಕ ವಿಮರ್ಶಕರು ಪೊನ್ನನಿಗೆ ನ್ಯಾಯವಾಗಿ ಸಲ್ಲಬೇಕಾದ ಕವಿಕೃತಿ ಗೌರವಗಳನ್ನು ತೋರಲಿಲ್ಲ. ಈ ಅನಾದರಕ್ಕೆ ಮುಖ್ಯ ಕಾರಣ ಪೊನ್ನನ ಕಾವ್ಯವನ್ನು ವಸ್ತುನಿಷ್ಠವಾದ ಸಂಪೂರ್ಣವಾದ ಅಧ್ಯಯನ ವಿಶ್ಲೇಷಣಕ್ಕೆ ಒಳಗಾಗಿಸದಿದ್ದುದು.

* * *

ಪೊನ್ನನ ಶಾಂತಿ ಪುರಾಣದಲ್ಲಿ ಚಾರಿತ್ರಿಕ ಧ್ವನಿಯೂ ಕಂಡು ಬರುತ್ತವೆ. ಲೌಕಿಕ ಕಾವ್ಯಗಳಲ್ಲಿ ಮಾತ್ರ ಚಾರಿತ್ರಿಕ ವ್ಯಕ್ತಿಗಳನ್ನು ಕಾವ್ಯದ ಪ್ರಧಾನ ಪಾತ್ರಗಳೊಡನೆ ಅಭೇದ ಕಲ್ಪಿಸಿ ಕಾವ್ಯ ಬರೆಯುವ ಪಂಪಾದಿಗಳ ಪ್ರಯತ್ನವನ್ನು ಇಲ್ಲಿ ಪೊನ್ನ ಆಗಮಿಕ ಕಾವ್ಯದಲ್ಲೂ ಮುಂದುವರಿಸಿದ್ದಾನೆ. ಇದು ಶಾಂತಿ ಪುರಾಣ ವಿಮರ್ಶೆಯಲ್ಲಿ ಗುರುತಿಸಬೇಕಾದ ಹೊಸ ಅಂಶವಾಗಿದೆ. ಭುವನೈಕ ರಾಮಾಭ್ಯುದಯದಲ್ಲಿ ಇಂಥ ಕೆಲಸವನ್ನು ಪೊನ್ನ ಮಾಡಿದ್ದರೂ, ಸವಣಕವಿಯಾಗಿ ಆತ ಪಾರಮಾರ್ಥಿಕ ಕಾವ್ಯ ಶಾಂತಿ ಪುರಾಣದಲ್ಲಿ ಮಾಡಿರುವುದು ಮಹತ್ವದ್ದಾಗಿದೆ. ಜಿನಧರ್ಮ ಮನೋಧರ್ಮ ಕೆಳಗಾಗಿ, ಕವಿಸ್ವಭಾವ ಇಲ್ಲಿ ಮೇಲುಗೈ ಸಾಧಿಸಿದೆ. ಇಡೀ ಶಾಂತಿ ಪುರಾಣದಲ್ಲಿ ಮೊದಲ ಮೂರು ಆಶ್ವಾಸಗಳು ಕಾವ್ಯದ ದೃಷ್ಟಿಯಿಂದ ಮೌಲಿಕವಾಗಿವೆ.

ಕುಂಪಣಾ

20/-